ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨

ಶಾಸ್ತ್ರ ಸಾಹಿತ್ಯ



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೨ : ಶಾಸ್ತ್ರ ಸಾಹಿತ್ಯ

[illegible] 1234

• ಕನ್ನಡ ಗ್ರಂಥಸಂಪಾದನಶಾಸ್ತ್ರ • [illegible] • [illegible]

• ಕನ್ನಡ ನಾಮವಿಜ್ಞಾನ • ಕನ್ನಡ ಸಂಶೋಧನಶಾಸ್ತ್ರ • [illegible]

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಬಿ. ವ್ಹಿ. ಶಿರೂರ

[illegible]

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಾಪುರ
೨೦೧೦

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧ : ಶಾಸ್ತ್ರಸಾಹಿತ್ಯ

❖

- ಕನ್ನಡ ಗ್ರಂಥಸಂಪಾದನಶಾಸ್ತ್ರ • ಪ್ರತಿಬಿಂಬ • ಸಾಹಿತ್ಯ ಸಂಪಾದನೆ
- ಕನ್ನಡ ನಾಮವಿಜ್ಞಾನ • ಕನ್ನಡ ಸಂಶೋಧನಶಾಸ್ತ್ರ • ಕನ್ನಡ ಹಸ್ತಪ್ರತಿಶಾಸ್ತ್ರ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಬಿ. ವ್ಹಿ. ಶಿರೂರ

ಹುಬ್ಬಳ್ಳಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 2 : SHASTARA SAHITYA

Edited by	:	**Dr. B.V. Shirur,** Hubli
Published by	:	**Dr. P.G. Halakatti Research Centre** B.L.D.E. Association, Vijayapura, Karnatak
©	:	Reserved
First Edition	:	2019
Pages	:	lx+720=780
Copies	:	1000
Price	:	Rs. 390/-

❖❖

Cover page design	:	K.K. Makali, Hampi.
Tyapset	:	**Dr. Hanumanth Melinamani, Dr. Sarswatidevi Bhagawati,** Dharwad.
Printed	:	**The Print Point,** No. 9/8 6th Cross, 4th Main, Rajajinagar, Industrial Town, Bengaluru-560 044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨ – ಶಾಸ್ತ್ರ ಸಾಹಿತ್ಯ

ಸಂಪಾದಕರು	:	**ಡಾ. ಬಿ. ವ್ಹಿ. ಶಿರೂರ, ಹುಬ್ಬಳ್ಳಿ**
ಪ್ರಕಾಶಕರು	:	**ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ** ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ	:	೨೦೧೯
ಪುಟಗಳು	:	lx+೭೨೦=೭೮೦
ಪ್ರತಿಗಳು	:	೧೦೦೦
ಬೆಲೆ	:	ರೂ.೩೯೦/-

❖❖

ಮುಖಪುಟ ವಿನ್ಯಾಸ	:	ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ	:	**ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ,** ಧಾರವಾಡ
ಮುದ್ರಣ	:	**ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ-ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ-ಪರಿಶ್ರಮ-ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ-ಮಾದರಿಯ-ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ-ನುಡಿಗಳಿಂದ ವಿದ್ಯಾರ್ಥಿಗಳ-ಸಹೋದ್ಯೋಗಿಗಳ ವಿಶೇಷ ಪ್ರೀತಿ-ವಿಶ್ವಾಸ-ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨-೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬-೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ–ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ–ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ–ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ– ೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ–ಸಂಶೋಧನೆ–ಸಮಾಜಸೇವೆ–ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ–ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ–ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ–ಸದಾಚಾರದ–ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ–೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ–ಧಾರ್ಮಿಕ–ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ–೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ–ವ್ಯಾಪ್ತಿ–ವಿಧಾನ–ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ

ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್.ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪಾ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಡಾ. ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೭ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ-೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ-೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ-೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ-೪

೨. ವಚನ ಸಂಕಲನ-೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ-೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ-೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ-೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ-೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ-೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ-೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ-೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ-೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ-೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು (ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ

ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ

ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ

ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ

ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ

ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು,

ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ

ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಡಾ. ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಡಾ. ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಮತ್ತು ಈ ಯೋಜನೆಯ ಕಾರ್ಯದರ್ಶಿಗಳೂ ಆದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಬಿ.ಸಿ. ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ತಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಬಿ. ವ್ಹಿ. ಶಿರೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಬಿ. ವ್ಹಿ. ಶಿರೂರ

೧೯೭೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗವು 'ಕನ್ನಡ ಅಧ್ಯಯನಪೀಠ'ವಾಗಿ ಪರಿವರ್ತನೆಗೊಂಡುದರಿಂದ ಅಲ್ಲಿ ಹೊಸಹೊಸ ಕ್ಷೇತ್ರಗಳ ಆವಿಷ್ಕಾರ ಉಂಟಾಯಿತು. ಭಾಷಾವಿಜ್ಞಾನ, ಜಾನಪದ ಮೊದಲಾದ ಮುಖ್ಯವಿಷಯಗಳಲ್ಲದೆ, ಶಾಸನ, ಸಂಶೋಧನೆ, ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ನಾಮವಿಜ್ಞಾನ ಮೊದಲಾದವನ್ನು ಕಲಿಸುವ ಅವಕಾಶವುಂಟಾಯಿತು. ಡಾ. ಕಲಬುರ್ಗಿ ಅವರ ಸ್ವಭಾವ ಯಾವಾಗಲೂ ಹೊಸದಕ್ಕೆ ತೆಕ್ಕೆಬೀಳುವುದು, ಹಲವು ಮುಖಗಳಲ್ಲಿ ಹರಿಯಬೇಕೆನ್ನುವುದು. ಸಂಶೋಧನೆ, ಗ್ರಂಥಸಂಪಾದನೆ, ನಾಮವಿಜ್ಞಾನಗಳಂಥ ಹೊಸಹೊಸ ವಿಷಯಗಳನ್ನು ಕಲಿಸಲು ತಾವೇ ಮುಂದೆ ಬಂದು, ಅವುಗಳಿಗೆ ಕನ್ನಡದಲ್ಲಿರುವ ಗ್ರಂಥಗಳ ಕೊರತೆಯನ್ನು ಅಥವಾ ಇರುವ ಗ್ರಂಥಗಳಲ್ಲಿಯ ಲೋಪ-ದೋಷಗಳನ್ನು ಕಂಡು, ತಾವೇ ವ್ಯಾಪಕವಾದ ಅಧ್ಯಯನ, ಅಧ್ಯಾಪನ, ಅನುಭಾವ ಮತ್ತು ಅನುಸಂಧಾನದಿಂದ ಸಾಕಷ್ಟು ಸಾಮಗ್ರಿಯನ್ನು ಸಂಗ್ರಹಿಸಿ, ಅವುಗಳಿಗೆ ಒಂದು ರೀತಿಯ ಶಾಸ್ತ್ರೀಯ ಚೌಕಟ್ಟನ್ನು ಕೊಟ್ಟು ರಚಿಸಿದ ಕೃತಿಗಳೇ ಕನ್ನಡ ಗ್ರಂಥಸಂಪಾದನಶಾಸ್ತ್ರ, ಪ್ರತಿಬಿಂಬ, ಸಾಹಿತ್ಯ ಸಂಪಾದನೆ, ಕನ್ನಡ ನಾಮವಿಜ್ಞಾನ, ಕನ್ನಡ ಸಂಶೋಧನಶಾಸ್ತ್ರ, ಕನ್ನಡ ಹಸ್ತಪ್ರತಿಶಾಸ್ತ್ರ.

I. ಕನ್ನಡ ಗ್ರಂಥಸಂಪಾದನಶಾಸ್ತ್ರ - ೧೯೭೨

ಸಂಶೋಧನೆಯಂತೆಯೇ ಗ್ರಂಥಸಂಪಾದನೆಯೂ ಡಾ. ಕಲಬುರ್ಗಿ ಅವರ ಬಹು ಅಚ್ಚುಮೆಚ್ಚಿನ ಕ್ಷೇತ್ರ. ಅದು ಅವರ ಸಂಶೋಧನೆಯ ಒಲವಿಗಿಂತ ಒಂದು ಗುಂಜಿ ಹೆಚ್ಚೆಂದರೂ ನಡೆಯುತ್ತದೆ. ಅವರು ಮೊದಲು ಗ್ರಂಥಸಂಪಾದನಶಾಸ್ತ್ರವನ್ನು ಬರೆದು(೧೯೭೨) ಆಮೇಲೆ ಸಂಶೋಧನಶಾಸ್ತ್ರವನ್ನು ಬರೆದರು(೧೯೯೨). ಅಲ್ಲದೆ ಅವರೇ ಎಷ್ಟೋಸಲ 'ನನ್ನ ಎಲ್ಲ ಕೃತಿಗಳಲ್ಲಿ ಗ್ರಂಥಸಂಪಾದನಶಾಸ್ತ್ರ ನನಗೆ ತೃಪ್ತಿ ತಂದ ಕೃತಿ' ಎಂದು ಹೇಳಿದ್ದೂ ಉಂಟು. ಸುಮಾರು ೪೦ ಕೃತಿಗಳನ್ನು, ನೂರಾರು ಶಾಸನಗಳನ್ನು ಉಪಯೋಗಿಸಿಕೊಂಡು ಈ ಕೃತಿ ರಚಿಸಿದ್ದಾರೆ.

ಆದರೆ ಈ ಕೃತಿಯನ್ನು ರಚಿಸುವಾಗ ಡಾ. ಕಲಬುರ್ಗಿ ಅವರ ಮುಂದಿದ್ದ ಒಂದು ದೊಡ್ಡ ಸವಾಲು ಆ ಪೂರ್ವದಲ್ಲಿ ಅದೇ ವಿಷಯವನ್ನು ಕುರಿತು ಸಾಹಿತ್ಯ ದಿಗ್ಗಜ ಡಾ. ಡಿ. ಎಲ್. ನರಸಿಂಹಾಚಾರ್ ಅವರು ರಚಿಸಿದ್ದ 'ಕನ್ನಡ ಗ್ರಂಥಸಂಪಾದನೆ" ಎಂಬ ಕೃತಿ. "ಶ್ರೇಷ್ಠ ವಿದ್ವಾಂಸರೊಬ್ಬರು ಬರೆದಿರುವ ಗ್ರಂಥ ಮತ್ತೊಂದಿರುವಾಗ ಬೇರೊಂದು ಗ್ರಂಥರಚನೆ ಸಾಹಸದ ಮಾತಾದೀತು. ಈ ಗ್ರಂಥ ಪೂರ್ವಗ್ರಂಥಕ್ಕೆ ಪ್ರತಿಸ್ಪರ್ಧಿಯಲ್ಲ, ಪೂರಕ" ಎಂದು ಡಾ. ದೇಜಗೌ ಅವರು ಮುನ್ನುಡಿಯಲ್ಲಿ ಹೇಳಿರುವ ಮಾತು ಔಚಿತ್ಯಪೂರ್ಣ. ಡಿ. ಎಲ್. ಎನ್. ಅವರು ತಮ್ಮ ಕಾಲದಲ್ಲಿ ಇನ್ನೂ ರೂಪುಗೊಳ್ಳದೆ ಇದ್ದ ಈ ಶಾಸ್ತ್ರವನ್ನು ಇಂಗ್ಲಿಷ ಮೊದಲಾದ ಸಾಹಿತ್ಯವನ್ನು ಅಭ್ಯಾಸ ಮಾಡಿ, ಈ ಗ್ರಂಥ ರಚಿಸಿ, ಆ ಶಾಸ್ತ್ರಕ್ಕೊಂದು ಭದ್ರ ಬುನಾದಿ ಹಾಕಿದರು. ಅದನ್ನು ಡಿ.ಎಲ್.ಎನ್. ಅವರೇ 'ಗ್ರಂಥಸಂಪಾದನೆಗೆ ಸಂಬಂಧಿಸಿದ ತತ್ವಗಳನ್ನೂ ಇತರ ಅಂಶಗಳನ್ನೂ ಆ(ಪಾಶ್ಚಾತ್ಯ) ಶಾಸ್ತ್ರಜ್ಞರ ಅಭಿಪ್ರಾಯನುಸಾರವಾಗಿ ಇಲ್ಲಿ ಹೇಳಲು ಯಥಾಮತಿಯಾಗಿ ಪ್ರಯತ್ನಿಸಿದೆ . . . ನನಗೆ ದೊರೆತ ಗ್ರಂಥಗಳನ್ನು ಆಶ್ರಯಿಸಿ ಈ ನಿರೂಪಣೆಯನ್ನು ಮಾಡಲಾಗಿದೆ. ಹೊಸದಾಗಿ ನಾನು ಏನನ್ನೂ ಹೇಳಲು ಸಾಧ್ಯವಾಗಿಲ್ಲ. ಈ ಶಾಸ್ತ್ರದ ಸಾಮಾನ್ಯ ತತ್ವಗಳನ್ನು ಕನ್ನಡ ಗ್ರಂಥಗಳಿಗೆ ಅನ್ವಯಿಸುವದು ಎಷ್ಟೋ ಅಷ್ಟೇ ನನ್ನ ಕೆಲಸ ಇಲ್ಲಿ'(ಪ್ರವೇಶ) ಎಂದು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ.

ಡಾ. ಕಲಬುರ್ಗಿ ಅವರು 'ಡಿ.ಎಲ್.ಎನ್. ಮತ್ತು ಕತ್ರೆ ಅವರ ಕೃತಿಗಳನ್ನು ಓದುತ್ತ, ಓದಿಸುತ್ತ ಹೋದ ಹಾಗೆ ಈ ವಿಷಯವನ್ನು ಕುರಿತ ಹೊಸ ಗ್ರಂಥವನ್ನು ಬರೆಯುವ ಹಂಬಲ ಹುಟ್ಟಿತು' ಎಂದು ಹೇಳಿ ತಮ್ಮ ಅಗಾಧವಾದ ಪಾಂಡಿತ್ಯ, ಪ್ರತಿಭೆ, ಪರಿಶ್ರಮ ಮತ್ತು ಹಸ್ತಪ್ರತಿಗಳ ನಿರಂತರ ಒಡನಾಟದಿಂದ ಕನ್ನಡದ ಗಾರೆ, ಕಲ್ಲುಗಳನ್ನು ಬಳಸಿ, ಅದರ ಮೇಲೆ ಒಂದು ಸುಂದರವಾದ ಸೌಧವನ್ನು ಕಟ್ಟಿದ್ದಾರೆ. ಇದನ್ನು ಡಾ. ಕಲಬುರ್ಗಿ ಅವರೇ ಅರಿಕೆಯಲ್ಲಿ 'ನನ್ನ ಅಧ್ಯಯನ, ಅಧ್ಯಾಪನ, ಅನುಭವ, ಅನುಸಂಧಾನಗಳೇ ಈ ಗ್ರಂಥರಚನೆಗೆ ಆಧಾರ. ಇದೊಂದು ನವೀನ ಸೃಷ್ಟಿ, ಸ್ವತಂತ್ರ ಪ್ರಯೋಗ. ಮೊದಲು ಬಂದವುಗಳಿಗಿಂತ ಈ ಪುಸ್ತಕ ಪರಿಭಾಷೆ ನಿರೂಪಣೆ ಇತ್ಯಾದಿಗಳಲ್ಲಿ ಬೇರೆಯಾಗಿದೆ' ಎಂದು ಹೇಳಿಕೊಂಡಿದ್ದಾರೆ. ಅವರೇ ಮತ್ತೊಂದೆಡೆಗೆ 'ಕನ್ನಡವನ್ನು ಗುರಿಯಿಟ್ಟು ಬರೆದ ಈ ಎರಡೂ ಗ್ರಂಥ(ಡಿ.ಎಲ್.ಎನ್. ಅವರ ಕನ್ನಡ ಗ್ರಂಥಸಂಪಾದನೆ, ಡಾ. ಕಲಬುರ್ಗಿ ಅವರ ಕನ್ನಡ ಗ್ರಂಥಸಂಪಾದನಶಾಸ್ತ್ರ)ಗಳಲ್ಲಿ ಸಾಮ್ಯಕ್ಕಿಂತ ವೈಷಮ್ಯದ ಪ್ರಮಾಣವೇ ಅಧಿಕವಾಗಿರು'ವವು (ಮಾರ್ಗ : ಸಂಪುಟ ೭ / ಪ್ರಬಂಧ. ಪು. ೨೦೮) ಎಂದಿರುವ ಮಾತು ಗಮನಾರ್ಹವಾಗಿದೆ. ಈಗ ಈ ಎರಡೂ ಕೃತಿಗಳಲ್ಲಿ ಕಂಡು ಬರುವ ಸಾಮ್ಯ ವೈಷಮ್ಯಗಳನ್ನು ತುಲನಿಸಿ, ಡಾ. ಕಲಬುರ್ಗಿ ಅವರ ಕೃತಿಯ ವೈಶಿಷ್ಟ್ಯವೇನು ಎಂಬುದನ್ನು ಅವಲೋಕಿಸಬಹುದು.

ಡಿ.ಎಲ್.ಎನ್. ಅವರು ತಮ್ಮ ಗ್ರಂಥದ ವಿಷಯಾನುಕ್ರಮಣಿಕೆಯನ್ನು – ೧. ಗ್ರಂಥಸಂಪಾದನೆಯ ಚರಿತ್ರೆ, ೨. ಲೇಖನ ಸಾಮಗ್ರಿಗಳು, ೩. ಲಿಪಿಕಾರರು ಮತ್ತು ಆದರ್ಶ, ೪. ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆ, ೫. ಪಾಠಾಂತರ ಸಂಕಲನ, ೬. ಅಕ್ಷರಸ್ಖಾಲಿತ್ಯ, ೭. ಇತರ ಸ್ಖಾಲಿತ್ಯಗಳು, ೮. ಹಸ್ತಪ್ರತಿಗಳ ಪರಸ್ಪರ ಸಂಬಂಧ, ೯. ಪಾಠಪರಿಷ್ಕರಣ, ೧೦. ಗ್ರಂಥಸಂಪಾದಕರಿಗೆ ಕೆಲವು ಸೂಚನೆಗಳು, ೧೧ ಮುದ್ರಿತ ಗ್ರಂಥಗಳ ಸಂಪಾದನೆ, ೧೨ ಇತರ ವಿಷಯಗಳು ಎಂದು ಕೊಟ್ಟಿದ್ದಾರೆ. ಡಾ. ಕಲಬುರ್ಗಿ ಅವರು – ೧. ಇತಿಹಾಸಕಾಂಡ – ಅ. ಪ್ರಾಚೀನ ಇತಿಹಾಸ, ಆ. ಆಧುನಿಕ ಇತಿಹಾಸ. ೨. ಲೇಖನಕಾಂಡ – ಅ. ಲೇಖನ ಸಾಮಗ್ರಿ, ಆ. ಲಿಪಿಕಾರರು. ೩.

ಸ್ಖಾಲಿತ್ಯಕಾಂಡ – ಅ. ಸ್ಖಾಲಿತ್ಯದ ಕಾರಣ, ಆ. ಸ್ಖಾಲಿತ್ಯದ ಸ್ವರೂಪ, ೪. ಹಸ್ತಪ್ರತಿಕಾಂಡ, ಅ. ಹಸ್ತಪ್ರತಿಯ ಬಗೆಗಳು, ಆ. ಹಸ್ತಪ್ರತಿಗಳ ವಂಶಸಂಬಂಧ. ೫. ಸಂಪಾದನಕಾಂಡ – ಅ. ಸಂಪಾದನ ಕಾರ್ಯವಿಧಾನ, ಆ. ಸಂಕೇತಗಳು, ಸಂಕ್ಷೇಪಗಳು. ೬. ಶೇಷಕಾಂಡ – ಅ. ಸಂಪಾದಕನ ವ್ಯಾಸಂಗ ವ್ಯಾಪ್ತಿ, ಆ. ಸಂಪಾದನೆಯ ಮಹತ್ವ, ಅನುಬಂಧ– ಮಸಿ ಸಿದ್ಧಪಡಿಸುವ ವಿಧಾನ ಎಂಬ ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಇದನ್ನು ನೋಡಿದರೆ ಡಿ.ಎಲ್.ಎನ್. ಅವರದು ನೇರ ನಿರೂಪಣೆ ಎನ್ನಿಸಿದರೆ ಡಾ. ಕಲಬುರ್ಗಿ ಅವರದು ಅದನ್ನೊಂದು ಶಾಸ್ತ್ರೀಯ ಚೌಕಟ್ಟಿಗೆ ತರಲು ಮಾಡಿದ ಪ್ರಯತ್ನ ಎನ್ನಿಸುತ್ತಿದೆ.

ಡಿ.ಎಲ್.ಎನ್. ಅವರು ಒಂದನೆಯ ಅಧ್ಯಾಯದಲ್ಲಿ ಲಿಪಿಯ ಉಗಮದೊಂದಿಗೆ ೧೨ನೆಯ ಶತಮಾನದಿಂದ ಭಾರತೀಯರ ಗ್ರಂಥಸಂಪಾದನೆಯ ಚರಿತ್ರೆಯನ್ನು ಹೇಳಿ, ಮುಂದೆ ಗ್ರೀಸ್, ರೋಮ, ಹಿಬ್ರೂ ಭಾಷೆಗಳಲ್ಲಿ ಕ್ರಿ.ಪೂ. ೬೦೦ರಿಂದ ೩೦೦ರವರೆಗೆ ಬೆಳೆದುಬಂದ ಬಗೆಯನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಅದನ್ನೇ ಡಾ. ಕಲಬುರ್ಗಿ ಅವರು ಇತಿಹಾಸಕಾಂಡ ಅಧ್ಯಾಯದಲ್ಲಿ ಭಾರತದಲ್ಲಿ ಧನ್ಯಕಟಕ, ನಲಂದ, ವಿಕ್ರಮಶೀಲ ವಿಶ್ವವಿದ್ಯಾಲಯಗಳ ಜೊತೆಗೆ ಕಾವ್ಯ, ಶಾಸನಗಳಲ್ಲಿ ಪ್ರಾಚೀನ ಕರ್ನಾಟಕದ ಜೈನ, ಬ್ರಾಹ್ಮಣ, ವೀರಶೈವ ಗ್ರಂಥಭಾಂಡಾರಗಳು ಬೆಳೆದುಬಂದ ಬಗೆಯನ್ನು ವಿವರಿಸಿದ್ದಾರೆ. ಗ್ರಂಥಲೇಖನ ಕಲೆ–ದಾನ, ಅಧ್ಯಯನ, ಅಧ್ಯಾಪನ, ಪ್ರಯೋಜನಾರ್ಥರೂಪದಲ್ಲಿ ಬೆಳೆದು ಬಂದಿತೆಂದು ಹೇಳಿದ್ದಾರೆ. ಗ್ರಂಥರಕ್ಷಣೆ, ಪಾಠರಕ್ಷಣೆ, ಪಾಠಸಂಗ್ರಹ, ಪಾಠನಿರ್ಣಯಗಳಲ್ಲಿ ನಮ್ಮ ಪ್ರಾಚೀನರಿಗಿರುವ ಜ್ಞಾನವನ್ನು ಭಾರತೀಯ ಮತ್ತು ಕನ್ನಡದ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಗ್ರಂಥಸಂಸ್ಕರಣಕ್ಕೆ ಒಂದು ಶಾಸ್ತ್ರೀಯವಿಧಾನವನ್ನು ರೂಪಿಸಿಕೊಳ್ಳದೆ ಹೋದರೂ ಗ್ರಂಥರಕ್ಷಣೆ, ಗ್ರಂಥಲೇಖನ, ಪಾಠರಕ್ಷಣೆ, ಪಾಠಸಂಗ್ರಹ ಮತ್ತು ಪಾಠನಿರ್ಣಯ ಈ ಎಲ್ಲ ಅಂಶಗಳ ಅರಿವು ಭಾರತೀಯರಿಗೆ, ಭಾರತೀಯ ಹಿನ್ನೆಲೆಯಲ್ಲಿ ಬದುಕುತ್ತಿರುವ ಕನ್ನಡಿಗರಿಗೆ ತೀರ ಪ್ರಾಚೀನಕಾಲದಿಂದಲೂ ಇತ್ತು ಎಂಬುದನ್ನು ಹಲವಾರು ಉದಾಹರಣೆಗಳ ಮೂಲಕ ವಿವರಿಸಿರುವುದು ಇಲ್ಲಿಯ ವೈಶಿಷ್ಟ್ಯ. ಜೊತೆಗೆ ಆಧುನಿಕ ಇತಿಹಾಸವನ್ನು ಹಸ್ತಪ್ರತಿಸಂಗ್ರಹ, ಗ್ರಂಥಸಂಪಾದನೆಗಳ ರೂಪದಲ್ಲಿ ಮೆಕೆಂಜಿಯಿಂದ ಹಿಡಿದು ಈಗಿನ ವಿಶ್ವವಿದ್ಯಾಲಯಗಳು ಮಾಡಿರುವ, ಮಾಡುತ್ತಿರುವ ಕಾರ್ಯದ 'ಇನ್ನೆಲ್ಲಿಯೂ ಸಿಗದ ಇತ್ತೀಚಿನ ಮಾಹಿತಿಗಳೆಲ್ಲ ಇಲ್ಲಿರುವುದು' ಇನ್ನೊಂದು ವಿಶೇಷತೆ.

ಎರಡನೆಯ 'ಲೇಖನ ಸಾಮಗ್ರಿಗಳು' ಎಂಬ ಅಧ್ಯಾಯದಲ್ಲಿ ಡಿ.ಎಲ್.ಎನ್. ಅವರು ಕನ್ನಡಲಿಪಿಯ ಪ್ರಾಚೀನತೆ, ಗ್ರಂಥ ಪದದ ಅರ್ಥ ಹೇಳಿ, ಲೇಖನಕ್ಕಾಗಿ ಬೇರೆಬೇರೆ ದೇಶಗಳಲ್ಲಿ ಬಳಸುತ್ತಿದ್ದ ಲೋಹವಸ್ತುಗಳಲ್ಲಿ – ಕಬ್ಬಿಣ, ಚಿನ್ನ ಮತ್ತು ಬೆಳ್ಳಿ, ಹಿತ್ತಾಳೆ, ಕಂಚು, ತಾಮ್ರ, ಲೋಹೇತರವಸ್ತುಗಳಾದ ಮಣ್ಣು, ಸ್ಫಟಿಕ, ಚರ್ಮ, ಮರ, ಭೂರ್ಜ್ವಪತ್ರ, ತಾಳಪತ್ರ, ಕಡತ, ಶಿಲೆ, ಕಾಗದಗಳ ವಿವರವನ್ನು ಕೊಟ್ಟಿದ್ದಾರೆ. ಜೊತೆಗೆ ಮಸಿ ಮತ್ತು ಲೇಖನಿಗಳ ಮಾಹಿತಿಯನ್ನೂ ಇತ್ತಿದ್ದಾರೆ. ಇದನ್ನು ಡಾ. ಕಲಬುರ್ಗಿ ಅವರು ೨ನೆಯ ಲೇಖನಕಾಂಡದಲ್ಲಿ ತಾಳಪತ್ರ, ಕಾಗದ ಮತ್ತು ಕಡತಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದ ವಿಧಾನ ಹಾಗೂ ಬಳಸಿಕೊಳ್ಳುತ್ತಿದ್ದ ರೀತಿಗಳನ್ನು ಸಂಕ್ಷೇಪವಾಗಿ ಹೇಳಿ, ಕನ್ನಡ ಉದಾಹರಣೆಯ ಮೂಲಕ ವಿವರಿಸಿದ್ದಾರೆ. ಜೊತೆಗೆ ಗದಾಯುದ್ಧ, ವಡ್ಡಾರಾಧನೆಯಲ್ಲಿ ಬಂದ ಮಸಿಯ ಪ್ರಸ್ತಾಪದೊಂದಿಗೆ ಜ್ವಾಲಾಮಾಲಿನಿಕಲ್ಪದ ಒಂದು ತಾಳೆಪ್ರತಿಯ ಕೊನೆಯಲ್ಲಿ ಮಸಿಯನ್ನು ಸಿದ್ಧಪಡಿಸುವ ವಿಧಾನವನ್ನು ಕೊಟ್ಟಿರುವುದು ಅಪರೂಪದ್ದೆನಿಸಿದೆ. ಅಲ್ಲಿ ಅದಕ್ಕೆ 'ಹಸ್ತಾಂಜಲಿ' ಎಂದು ಕರೆದಿರುವುದನ್ನು ಸ್ಪಷ್ಟಪಡಿಸಿದ್ದಾರೆ

ಡಿ.ಎಲ್.ಎನ್. ಅವರ ಮೂರನೆಯ ಅಧ್ಯಾಯದ 'ಲಿಪಿಕಾರರು ಮತ್ತು ಅವರ ಆದರ್ಶ' ಎಂಬ ಭಾಗವನ್ನು ಡಾ. ಕಲಬುರ್ಗಿ ಅವರು ಎರಡನೆಯ ಅಧ್ಯಾಯದಲ್ಲಿ 'ಲಿಪಿಕಾರರು, ಲೇಖನ ಪರಿಣಿತಿ' ಎಂಬ ವಿಭಾಗದಲ್ಲಿ ವಿವರಿಸಿದ್ದಾರೆ. ಡಾ. ಕಲಬುರ್ಗಿ ಅವರು ಲಿಪಿಕಾರರನ್ನು ನಿಯುಕ್ತ ಲಿಪಿಕಾರರು, ವೃತ್ತಿಲಿಪಿಕಾರರು, ಹವ್ಯಾಸಿಲಿಪಿಕಾರರು ಎಂದು ಪ್ರತ್ಯೇಕವಾಗಿ ವಿಭಾಗಿಸಿ ಮೈಸೂರು ಹಸ್ತಪ್ರತಿಸೂಚಿಗಳನ್ನು ಬಳಸಿಕೊಂಡು ಸಾಕಷ್ಟು ಉದಾಹರಣೆಗಳನ್ನು ಕೊಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯ. ಡಿ.ಎಲ್.ಎನ್. ಅವರು 'ಕೆಲವರು ಕಸಬಿನಿಂದ ಲಿಪಿಕಾರರಿರಬಹುದು. . . ಕೆಲವರು ತಮ್ಮ ಮಕ್ಕಳ ಅಭ್ಯಾಸಕ್ಕಾಗಿ ತಾವೇ ಪ್ರತಿಯನ್ನು ಮಾಡಿಕೊಡುತ್ತಿದ್ದರು. . . . ಅರಮನೆ ಗುರುಮನೆಗಳಲ್ಲಿ ಲಿಪಿಕಾರರಿದ್ದು ಅವಶ್ಯಕವಾದ ಗ್ರಂಥಗಳನ್ನು ಪ್ರತಿಮಾಡುತ್ತಿದ್ದರು' ಎಂದು ಹೇಳಿ ಮೈ. ಓ. ಲೈ. ಯ ಪ್ರತಿಗಳಿಂದ ಮತ್ತು ಕೆಲವು ಶಾಸನಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಹಾಗೆಯೇ ಲಿಪಿಕಾರರ ಪ್ರಶಸ್ತಿಗಳಿಂದ ತಿಳಿದುಬರುವ ಅವರ ಚರಿತ್ರೆ, ವಿದ್ವತ್ತು, ಲೇಖನ ಮಿತಿ, ಬರವಣಿಗೆಯ ಪರಿಣಿತಿ, ಸೌಂದರ್ಯಪ್ರಜ್ಞೆ, ಆದರ್ಶಗಳನ್ನು ಕೆಲವು ಉದಾಹರಣೆಗಳಮೂಲಕ ಡಿ.ಎಲ್.ಎನ್. ಅವರು ವಿವರಿಸಿದ್ದರೆ, ಡಾ. ಕಲಬುರ್ಗಿ ಅವರು ಹಲವಾರು ಹೊಸ ಉದಾಹರಣೆಗಳ ಮೂಲಕ ಈ ವಿಭಾಗವನ್ನು ಇನ್ನೂ ವಿಸ್ತಾರಗೊಳಿಸಿದ್ದಾರೆ. ವೀರಶೈವಾಮೃತಪುರಾಣ ಮತ್ತು ವೀರಮಾಹೇಶ್ವರಾಚಾರಸಂಗ್ರಹಗಳ ಪ್ರತಿಕಾರರ ಪ್ರಶಸ್ತಿಗಳನ್ನು ಕೊಟ್ಟು, ಅಂದು ಹಸ್ತಪ್ರತಿ ಬರೆಯುವಾಗಿನ ರೀತಿ-ರಿವಾಜು, ನಡೆಸುತ್ತಿದ್ದ ಪೂಜೆ ಪುನಸ್ಕಾರ, ಇದ್ದ ಸ್ಥಿತಿಗತಿಗಳನ್ನು ಸಮಗ್ರವಾಗಿ ಪರಿಚಯಿಸಿದ್ದಾರೆ. ಇಂಥ ಪ್ರತಿಕಾರರ ೨೦ಸಾವಿರದಷ್ಟು ಕಟ್ಟುಗಳು, ೧ ಲಕ್ಷದಷ್ಟು ನಕಲು ಗ್ರಂಥಗಳು ಉಳಿದುಬಂದಿರುವುದು ನಮ್ಮ ಭಾಗ್ಯ ಎಂದಿದ್ದಾರೆ.

ಡಿ.ಎಲ್.ಎನ್. ಅವರು ನಾಲ್ಕನೆಯ 'ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆ' ಎಂಬ ಅಧ್ಯಾಯದಲ್ಲಿ, ಕವಿಯ ಹಸ್ತಾಕ್ಷರಪ್ರತಿ, ಏಕೈಕ ಹಸ್ತಪ್ರತಿ, ಮಾತೃಕೆ, ಪರಂಪರಾಗತ ಪ್ರತಿ, ಶುದ್ಧಸಂತಾನ ಪ್ರತಿ, ಅಶುದ್ಧಸಂತಾನ ಪ್ರತಿ, ಏಕೈಕಪ್ರತಿ, ಸಂರಕ್ಷಿತಪ್ರತಿ ಎಂದು ವಿಭಾಗಮಾಡಿ, ಪಾಠಾಂತರಗಳು ಉಂಟಾಗಲು ಕಾರಣ ಹೇಳಿ ಹಸ್ತಪ್ರತಿಗಳ ವಂಶಸಂಬಂಧವನ್ನು ವಿಸ್ತೃತವಾಗಿ ವಿವೇಚಿಸಿದ್ದಾರೆ. ಜೊತೆಗೆ ಹಸ್ತಪ್ರತಿಗಳಲ್ಲಿ ಕಂಡು ಬರುವ ಸ್ಖಾಲಿತ್ಯಗಳನ್ನು 'ಹಸ್ತಪ್ರತಿಗಳ ಪರಸ್ಪರ ಸಂಬಂಧ ಮತ್ತು ಪೀಳಿಗೆ' ಎಂಬ ೮ನೆಯ ಅಧ್ಯಾಯದಲ್ಲಿ - ವಿಶಿಷ್ಟ ಸ್ಖಾಲಿತ್ಯ, ವಿಚ್ಛೇದನ ಸ್ಖಾಲಿತ್ಯ, ಸಂಯೋಜಕ ಸ್ಖಾಲಿತ್ಯ ಎಂದು ವಿಭಜಿಸಿ ಹಸ್ತಪ್ರತಿಗಳ ಸಂಬಂಧವನ್ನು ಗುರುತಿಸಲು ಅವು ಹೇಗೆ ಸಹಾಯವಾಗುತ್ತಿವೆಯೆಂಬುದನ್ನು ವಿವರಿಸಿದ್ದಾರೆ. ಈ ಎರಡೂ ಅಧ್ಯಾಯಗಳ ವಿಷಯವನ್ನು ಡಾ. ಕಲಬುರ್ಗಿ ಅವರು ೪ನೆಯ 'ಹಸ್ತಪ್ರತಿಕಾಂಡ'ದಲ್ಲಿ ಹಸ್ತಪ್ರತಿಯ ಬಗೆಗಳು- ಮೂಲಪ್ರತಿ, ಪರಂಪರಾಗತ ಪ್ರತಿ, ಶುದ್ಧಸಂತಾನಪ್ರತಿ, ಅಶುದ್ಧಸಂತಾನಪ್ರತಿ, ಏಕೈಕ ಹಸ್ತಪ್ರತಿ, ಸಂರಕ್ಷಿತ ಹಸ್ತಪ್ರತಿ, ಹಸ್ತಪ್ರತಿಗಳ ವಂಶಸಂಬಂಧ ಎಂಬ ವಿಭಾಗ ಮಾಡಿ, ಅವುಗಳ ವಂಶಸಂಬಂಧವನ್ನು ಸಮಾನಸ್ಖಾಲಿತ್ಯ, ಸಂಯೋಜಕಸ್ಖಾಲಿತ್ಯ, ವಿಚ್ಛೇದಕ ಸ್ಖಾಲಿತ್ಯ, ವಿಶಿಷ್ಟ ಸ್ಖಾಲಿತ್ಯಗಳ ಮೂಲಕ ಹೇಗೆ ಗುರುತಿಸಬಹುದು ಎಂಬುದನ್ನು ಬಹಳಷ್ಟು ಉದಾಹರಣೆಗಳೊಂದಿಗೆ ಚಾರ್ಟ ಮೂಲಕ ಸವಿಸ್ತಾರವಾಗಿ ವಿವರಿಸಿದ್ದಾರೆ. ಇಬ್ಬರೂ ಸಂರಕ್ಷಿತ ಹಸ್ತಪ್ರತಿಯಲ್ಲಿ ಧವಲಾ, ಜಯಧವಲಾ, ಮಹಾಧವಲಾಗಳನ್ನು ಸಂರಕ್ಷಿಸಲು ಪಟ್ಟ ಪ್ರಯತ್ನವನ್ನು ವಿವರಿಸಿದ್ದಾರೆ.

ಡಿ.ಎಲ್.ಎನ್. ಅವರು ೫ನೆಯ ಅಧ್ಯಾಯದ ಪಾಠಾಂತರ ಸಂಕಲನ ಮತ್ತು ೯ನೆಯ

ಅಧ್ಯಾಯದ ಪಾಠಪರಿಷ್ಕರಣದಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನೆಲ್ಲ ಸೇರಿಸಿ ಡಾ. ಕಲಬುರ್ಗಿ ಅವರು ೫ನೆಯ ಅಧ್ಯಾಯವಾಗಿ 'ಸಂಪಾದನಕಾಂಡ' ಎಂದಿದ್ದಾರೆ. ಡಿ.ಎಲ್.ಎನ್. ಅವರು 'ಎಲ್ಲ ಪ್ರತಿಗಳ ಪಾಠಾಂತರಗಳನ್ನು ಒಂದು ಪ್ರತಿಯಲ್ಲಿ ಒಟ್ಟಾಗಿ ಕೂಡಿಸುವುದಕ್ಕೆ 'ಪಾಠಾಂತರ ಸಂಕಲನ' ಎಂದು ಹೆಸರು. . . ಮುಂದಿನ ಸಂಪಾದನ ಕಾರ್ಯಗಳಿಗೆಲ್ಲ ಇದು ಭದ್ರವಾದ ತಳಪಾಯ' ಎಂದಿದ್ದಾರೆ. ಪಾಠಪರಿಷ್ಕರಣದಲ್ಲಿ ಪಾಠಪುನರ್ರಚನೆ ನಾಲ್ಕು ತೆರನಾಗಬಹುದು-ಅತ್ಯತ್ಕೃಷ್ಟವಾದ ಪಾಠಸಂಯೋಜನೆ, ಪುನಸ್ಸಂಯೋಜನೆ, ಓದಿ ತಿಳಿಯಲು ಸುಲಭವಾಗಿರುವ ಪಾಠರಚನೆ, ಅಸಹನೀಯ ಪಾಠಯೋಜನೆ ಎಂದು ಹೇಳಿ ಮೊದಲನೆಯದನ್ನು ಕವಿಪಾಠವೆಂದೇ ಸ್ವೀಕರಿಸಬಹುದು ಎಂದಿದ್ದಾರೆ. ಇದನ್ನು ಮತ್ತೆ ಅಂತಸ್ಸಂಭಾವ್ಯತೆ, ಲಿಪಿಕಾರ ಲೇಖನ ಸಂಭಾವ್ಯತೆ, ಊಹಾತ್ಮಕ ಪರಿಷ್ಕರಣ, ಪಾಠಗ್ರಂಥಿ (ಪರಿಷ್ಕರಣೆಗೆ ನಿಲುಕದ ಪಾಠ)ಗಳು ಎಂದು ವಿಭಾಗಿಸಿ, ಗ್ರಂಥಸಂಪಾದಕನಿಗೆ ಇರಬೇಕಾದ ವಿವಿಧ ಜ್ಞಾನಗಳನ್ನು ಹಲವಾರು ಉದಾಹರಣೆಗಳ ಮೂಲಕ ತಿಳಿಸಿದ್ದಾರೆ. ಪಾಠಾಂತರಗಳ ಮೂಲಕ ಪೀಳಿಗೆಗಳನ್ನು ಗುರುತಿಸುವದನ್ನೂ ವಿವರಿಸಿದ್ದಾರೆ. ಇದನ್ನು ಡಾ. ಕಲಬುರ್ಗಿ ಅವರು ೫ನೆಯ ಸಂಪಾದನಕಾಂಡದಲ್ಲಿ ಸಾಮಗ್ರಿ ಸಂಕಲನ, ವಂಶಾವಳಿ ನಿರ್ಣಯ, ಪಾಠಸಂಕಲನ, ಪಾಠಪರಿಷ್ಕರಣ-ಲೇಖನ ಸಂಭಾವ್ಯತೆ, ಅಕ್ಷರಗಳ ಧ್ವನಿ ಸಾದೃಶ್ಯ ಸಂಭಾವ್ಯತೆ, ರೀತಿ ದೋಷ ಸಂಭಾವ್ಯತೆ, ಸ್ವೀಕರಣ ಮತ್ತು ವರ್ಜನ, ಸಂದೇಹ ಮತ್ತು ಪರಿಷ್ಕರಣ-ನಿಷ್ಪ್ರಯೋಜಕ ಪಾಠಗಳಿರುವುದು, ಭಿನ್ನಪಾಠವಿಲ್ಲದಿರುವುದು, ಪಾಠ ತೃಟಿತವಾಗಿರುವುದು, ಪಾಠ ಕೈಬಿಟ್ಟು ಹೋಗಿರುವುದು ಎಂಬ ಹೊಸ ರೀತಿಯ ವಿಭಾಗ ಮಾಡಿ ಪ್ರತಿಯೊಂದಕ್ಕೂ ಯಾವ ಪಾಠ ತಪ್ಪು, ಅದು ಹೇಗಿದ್ದರೆ ಸರಿ ಎಂಬುದನ್ನು ಪ್ರಾಚೀನ ಗ್ರಂಥಗಳಿಂದ, ವಚನ ಸಾಹಿತ್ಯದಿಂದ ಸಾಕಷ್ಟು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಡಾ. ಕಲಬುರ್ಗಿ ಅವರ ಆಳವಾದ ಅಧ್ಯಯನ, ಪಾಠನಿಷ್ಕರ್ಷೆಯಲ್ಲಿ ತೋರುವ ಜಾಣ್ಮೆ ಬೆರಗುಗೊಳಿಸುತ್ತಿದೆ. ಅವರ ನಿಜವಾದ ವಿದ್ವತ್ತು ಇಲ್ಲಿ ಪ್ರಕಟಗೊಂಡಿದೆ. ಡಾ. ಕಲಬುರ್ಗಿ ಅವರು ಹೀಗೆಯೇ ಪ್ರಾಚೀನ ಗ್ರಂಥಗಳನ್ನೆಲ್ಲ ಪರಿಷ್ಕರಿಸಿದ್ದರೆ ಎಷ್ಟು ಚೆನ್ನಾಗಿತ್ತು ಅನ್ನಿಸುತ್ತದೆ. ಡಿ. ಎಲ್. ಎನ್. ಅವರು ಹೇಳಿರುವ ಪಾಠಗ್ರಂಥಿಯನ್ನೂ ಇಲ್ಲಿ ವಿವರಿಸಿದ್ದಾರೆ.

ಉನ್ನತ ವಿಮರ್ಶೆಯಲ್ಲಿ ಪಾಠವಿಮರ್ಶೆ, ಸಾಹಿತ್ಯ ವಿಮರ್ಶೆಗಳೆರಡನ್ನೂ ನಿರ್ವಹಿಸಬೇಕಾದ ಅಗತ್ಯತೆಯನ್ನು ವಿವರಿಸುತ್ತ, ಸಂಪಾದಕ ಇಲ್ಲಿ ಸಾಹಿತ್ಯ ಮೀಮಾಂಸಕನೂ ಆಗಬೇಕಾಗುತ್ತದೆ ಎಂದಿದ್ದಾರೆ. ದೇಜಗೌ ಅವರು ಹೇಳಿದ ಹಾಗೆ 'ಅವನು ಮಹಾಪಂಡಿತನೂ ಅಹುದು, ಕವಿಯೂ ಅಹುದು, ಉತ್ತಮ ವಿಮರ್ಶಕನೂ ಅಹುದು. ಈ ತ್ರಿಮೂರ್ತಿತ್ವ ಏಕತ್ರ ಸಂಭವಿಸದಿದ್ದರೆ ಉತ್ತಮ ಸಂಪಾದಕ ಇಲ್ಲವಾಗುತ್ತಾನೆ'. ಅದಕ್ಕಾಗಿ ಡಾ. ಕಲಬುರ್ಗಿ ಅವರು 'ಉನ್ನತ ವಿಮರ್ಶೆಯ ಭಾಗವನ್ನು ಮತ್ತಷ್ಟು ಲಂಬಿಸಿದ್ದರೆ, ವ್ಯಾಪಕವಾಗಿ ವಿಷಯವನ್ನು ಚರ್ಚಿಸಿದ್ದರೆ ಅದರ ಉಪಯುಕ್ತತೆ ಬಹುಮಡಿಯಾಗುತ್ತಿತ್ತು'(ಮುನ್ನುಡಿ).

ಡಾ. ಕಲಬುರ್ಗಿ ಅವರ ಇಡೀ ಗ್ರಂಥದಲ್ಲಿಯೇ ದೀರ್ಘವಾದ 'ಸ್ಖಾಲಿತ್ಯಕಾಂಡ'ದಲ್ಲಿ ಸ್ಖಾಲಿತ್ಯದ ಕಾರಣ, ಸ್ಖಾಲಿತ್ಯದ ಸ್ವರೂಪ ಎಂದು ಎರಡು ವಿಭಾಗ ಮಾಡಿದ್ದಾರೆ. ಸ್ಖಾಲಿತ್ಯದ ಕಾರಣದಲ್ಲಿ ಉದ್ದೇಶಿತ, ಅನುದ್ದೇಶಿತ ಎಂದು ಎರಡು ವಿಭಾಗ ಮಾಡಿದ್ದಾರೆ. ಉದ್ದೇಶಿತ ಸ್ಖಾಲಿತ್ಯದಲ್ಲಿ ಕವಿ, ಸಹೃದಯ ಮತ್ತು ಲಿಪಿಕಾರರು ಮಾಡಿದ ಸ್ಖಾಲಿತ್ಯಗಳನ್ನು ಉದಾಹರಿಸಿದ್ದಾರೆ. ಅನುದ್ದೇಶಿತ

ಸ್ಖಾಲಿತ್ಯದಲ್ಲಿ – ಅನ್ಯಜ್ಞಾನಮೂಲ ಸ್ಖಾಲಿತ್ಯ, ಅದರಲ್ಲಿ ಅಕ್ಷರರೂಪಸಾದೃಶ್ಯ, ಅಕ್ಷರಗಳ ಧ್ವನಿಸಾದೃಶ್ಯ, ಬರವಣಿಗೆಯ ರೀತಿ ದೋಷ, ಅವಸ್ಥಾಭೇದ–ಪ್ರಾಂತಭೇದ, ಅನುದ್ದೇಶಿತ ಸ್ಖಾಲಿತ್ಯದಲ್ಲಿ ಅನವಧಾನಮೂಲಸ್ಖಾಲಿತ್ಯ, ಅಜ್ಞಾನಮೂಲಸ್ಖಾಲಿತ್ಯ ಎಂದು ವಿಭಾಗ ಮಾಡಿ ಹಲವಾರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಲೋಪ, ಆಗಮ, ಆದೇಶಗಳ ರೂಪದಲ್ಲಿ ಉಂಟಾಗುವ ಸ್ಖಾಲಿತ್ಯಗಳಿಗೆ ಹಲವಾರು ಉದಾಹರಣೆಗಳನ್ನು ಕೊಟ್ಟು ವಿವರಿಸಿದ್ದಾರೆ. ಇತರ ಸ್ಖಾಲಿತ್ಯದಲ್ಲಿ ಒಂದು ವೃತ್ತ ಇನ್ನೊಂದು ವೃತ್ತವಾದುದು, ಪದ್ಯ ಗದ್ಯವಾದುದು, ಕೃತಿ ಸಂಕ್ಷೇಪವಾದುದು, ಕೃತಿ ವಿಸ್ತರಣೆಯಾದುದು, ಅನೇಕ ಗ್ರಂಥಗಳು ಏಕವಾದುದು ಎಂದು ಹೇಳಿ ಕೊಟ್ಟಿರುವ ಉದಾಹರಣೆಗಳು ಡಾ. ಕಲಬುರ್ಗಿ ಅವರ ಅಪಾರ ಜ್ಞಾನವನ್ನು ಎತ್ತಿ ಹೇಳುತ್ತಿವೆ. ಇಲ್ಲೆಲ್ಲ ಮತ್ತೆ ಡಾ. ಕಲಬುರ್ಗಿ ಅವರ ವ್ಯಾಪಕವಾದ ಅಧ್ಯಯನದ ಹೊಳವು ಕಂಡುಬರುತ್ತಿದೆ. ಒಂದು ಕೃತಿಯನ್ನು ಸಂಪಾದಿಸುವಲ್ಲಿ ಶುದ್ಧಸಂತಾನದ ಹಸ್ತಪ್ರತಿಯನ್ನು ಆರಿಸಿಕೊಂಡು, ವಂಶಾವಳಿ ನಿರ್ಣಯಿಸುವುದು ಸಂಪಾದಕ ಮಾಡಬೇಕಾದ ಮೊದಲ ಕರ್ತವ್ಯ ಎಂದಿದ್ದಾರೆ. ಇದನ್ನೇ ಡಿ.ಎಲ್.ಎನ್. ಅವರು ೬ನೆಯ ಅಧ್ಯಾಯ 'ಅಕ್ಷರ ಸ್ಖಾಲಿತ್ಯಗಳು', ೭ನೆಯ ಅಧ್ಯಾಯ 'ಇತರ ಸ್ಖಾಲಿತ್ಯಗಳು' ಗಳಲ್ಲಿ– ಇರುವುದನ್ನು ಬಿಡುವುದು ಲೋಪ, ಹೊಸದಾಗಿ ಸೇರಿಸುವುದು ಪ್ರಕ್ಷೇಪ, ಇರುವುದನ್ನು ಮಾರ್ಪಡಿಸುವುದು ವ್ಯತ್ಯಾಸ ಎಂದು ಹಲವಾರು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

೧೦ನೆಯ ಅಧ್ಯಾಯದಲ್ಲಿ ಡಿ.ಎಲ್.ಎನ್. ಅವರು 'ಗ್ರಂಥಸಂಪಾದಕನಿಗೆ ಕೆಲವು ಸೂಚನೆಗಳು' ಎಂಬಲ್ಲಿ ಪ್ರತಿಗಳಿಗೆ ಸಂಬಂಧಪಟ್ಟಹಾಗೆ ದೊರೆಯುವ ಎಲ್ಲ ಮಾಹಿತಿಯನ್ನು ಕೊಡಬೇಕು ಎಂದು ಹೇಳಿ, ಪಾಲ್ಮಸ್ ಮತ್ತು ತೀ.ನಂ.ಶ್ರೀ. ಅವರು ಬಳಸಿದ ಸಂಕೇತ ಚಿಹ್ನೆಗಳನ್ನು ವಿವರಿಸಿದ್ದಾರೆ. ಡಾ. ಕಲಬುರ್ಗಿ ಅವರು 'ಸಂಪಾದನಕಾಂಡ'ದಲ್ಲಿಯೇ ಪಾಶ್ಚಾತ್ಯರಲ್ಲಿದ್ದ ಚಿಹ್ನೆಗಳ ಬಗೆಗೆ ವಿವರಿಸಿ, ಸಂಕೇತಗಳು–ಸಂಕ್ಷೇಪಗಳ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಇವುಗಳನ್ನು ಎಲ್ಲರೂ ಒಂದೇರೀತಿ ಬಳಸಿದರೆ ಒಳ್ಳೆಯದು ಎಂದಿದ್ದಾರೆ.

ಡಿ.ಎಲ್.ಎನ್.ಅವರು ಕೊನೆಯ ೧೨ನೆಯ ಅಧ್ಯಾಯದಲ್ಲಿ 'ಇತರ ವಿಷಯಗಳು' ಎಂದು ಗ್ರಂಥಸಂಪಾದನೆಗೂ ವಿಮರ್ಶೆ, ನಿಘಂಟು, ವ್ಯಾಕರಣಕ್ಕೂ ಇರುವ ಸಂಬಂಧ, ಗ್ರಂಥಸಂಪಾದನೆ ಶಾಸ್ತ್ರವೋ ಕಲೆಯೋ ಎಂಬ ವಿಷಯಗಳನ್ನು ಚರ್ಚೆ ಮಾಡಿದ್ದರೆ, ಡಾ. ಕಲಬುರ್ಗಿ ಅವರು 'ಶೇಷಕಾಂಡ' ಎಂಬ ೬ನೆಯ ಅಧ್ಯಾಯದಲ್ಲಿ ಹಲವರ ಒಡೆತನಕ್ಕೆ ಸೇರಿರುವ ಹಸ್ತಪ್ರತಿಯನ್ನು ಸಂಗ್ರಹಿಸುವಲ್ಲಿ ಪ್ರಯತ್ನಶೀಲತೆ, ಹಸ್ತಪ್ರತಿಗಳನ್ನು ಓದುವಲ್ಲಿ ಸಹನಶೀಲತೆ, ವಂಶಾವಳಿ ನಿರ್ಣಯಿಸುವಲ್ಲಿ ಸಾವಧಾನ ಪ್ರವೃತಿ, ಪಾಠಸಂಕಲನದಲ್ಲಿ ಪ್ರಾಮಾಣಿಕತೆ, ಪಾಠನಿರ್ಣಯದಲ್ಲಿ ತೂಕಪ್ರಜ್ಞೆ, ಇವು ಸಂಪಾದಕನಿಗಿರಬೇಕಾದ ಮೂಲಭೂತಗುಣಗಳು ಎಂದಿದ್ದಾರೆ, ಇವುಗಳೊಂದಿಗೆ ಬಹುಶ್ರುತತ್ವ ಸಂಪಾದಕನಿಗಿರಬೇಕಾದ ಬಹುಮುಖ್ಯ ಅರ್ಹತೆ. ಪಾಠಪರೀಕ್ಷಣೆಯಲ್ಲಿ ಒಂದು ಅಕ್ಷರ ತಪ್ಪು ಓದಿದರೆ ಸಾಕು ಅರ್ಥ ವಿಪರೀತಗೊಳ್ಳುತ್ತದೆ, ಕೆಲವು ಸಲ ಇತಿಹಾಸವೇ ಬದಲಾಗಿ ಬಿಟ್ಟಿರುವುದನ್ನು ಕಾವ್ಯ–ಶಾಸನಗಳ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ವ್ಯಾಕರಣ, ಛಂದಸ್ಸು, ವೈದ್ಯಶಾಸ್ತ್ರ, ಲೋಕೋಪಕಾರ ಮೊದಲಾದವುಗಳ ಅಭ್ಯಾಸಕ್ಕೆ ದುಷ್ಟಪಾಠಗಳು ಹೇಗೆ ಕಂಟಕವಾಗುತ್ತಿವೆ ಎಂಬುದರ ವಿವೇಚನೆಯೂ ಇಲ್ಲಿದೆ. ಅನ್ಯಭಾಷೆಯ ಅನುವಾದಿತ ಕೃತಿಗಳನ್ನು ಸಂಪಾದಿಸುವಾಗ ಆ ಮೂಲಗ್ರಂಥದ, ಆ ಮೂಲಭಾಷೆಯ ಜ್ಞಾನವೂ ಅವಶ್ಯ ಎಂಬುದನ್ನು ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಇದನ್ನು ಡಿ.ಎಲ್.ಎನ್. ಅವರು ೯ನೆಯ

'ಪಾಠಪರಿಷ್ಕರಣ' ಎಂಬ ಅಧ್ಯಾಯದ ಪ್ರಾರಂಭದಲ್ಲಿ ಸಂಪಾದಕನಿಗೆ ಇರಬೇಕಾದ ಯೋಗ್ಯತೆಯನ್ನು ಹಲವಾರು ಉದಾಹರಣೆಯ ಮೂಲಕ ವಿವರಿಸಿದ್ದಾರೆ.

ಈ ಗ್ರಂಥದ ಇನ್ನೊಂದು ವಿಶೇಷತೆ ಎಂದರೆ ಸೊಗಸಾದ ಶೈಲಿ. ಅಲ್ಲಲ್ಲಿ ಹಲವಾರು ನುಡಿಗಟ್ಟುಗಳನ್ನು ಸೇರಿಸಿ, ಕೇಶಿರಾಜನು ಶಬ್ದಮಣಿದರ್ಪಣವನ್ನು ಆಕರ್ಷಕಗೊಳಿಸಿದ ಹಾಗೆ ಡಾ. ಕಲಬುರ್ಗಿ ಅವರು ಇದನ್ನೊಂದು ಆಕರ್ಷಕ ಶಾಸ್ತ್ರಗ್ರಂಥವಾಗಿಸಿದ್ದಾರೆ. ಉದಾಹರಣೆಗೆ–'ಈ ಕಾಲದ ಸಾಧ್ಯವಿದ್ದ ಎಲ್ಲ ಆಧಾರಸಾಮಗ್ರಿಯನ್ನು ಬಳಸಿ, ಪರಿಷ್ಕರಣ ವಿಧಾನಗಳನ್ನೆಲ್ಲ ಅವಲಂಬಿಸಿದರೂ ಮೂಲೆ ಮುಕ್ಕಾಗದ ಕಾಡುಶಿಲೆಯಂಥ ಪಾಠವಿದು'. 'ಇಂಥ ಕೆಲವು ಪಾಠಗ್ರಂಥಿಗಳು ಪ್ರಾಚೀನ ಗ್ರಂಥಗಳಲ್ಲಿ 'ಎನಿತು ಕಾಲ ಕಲ್ಲು ನೀರಳೊಗಿದ್ದರೇನು?' ಎಂಬಂತೆ ಮಿದುಗೊಳ್ಳದೆ ನಿಂತಿವೆ'. (ಪು.೧೬೧). 'ಒಂದು ಒಳ್ಳೆಯ ಕೃತಿಯ ಮೇಲೆ ಹೆಸರು ಕವಿಯದಿದ್ದರೂ ಒಳಗೆ ಉಸಿರು ಆ ಜನಾಂಗದ್ದಿರುತ್ತದೆ'(ಪು.೧೬೪) ಮೊದಲಾದವು

ಡಾ. ಕಲಬುರ್ಗಿ ಅವರೇ 'ನನ್ನ ನುಡಿ'ಯಲ್ಲಿ 'ಮೊದಲು ಬಂದ ಗ್ರಂಥ ಎಂಬ ಕಾರಣದಿಂದ ಅದು (ಡಿ.ಎಲ್.ಎನ್. ಅವರ 'ಕನ್ನಡ ಗ್ರಂಥ ಸಂಪಾದನೆ') ಆದಿ ಪ್ರಯತ್ನ, ಇದು ಅಭಿನವ ಪ್ರಯತ್ನ. ಇಷ್ಟನ್ನು ಬಿಟ್ಟರೆ ನವೀನ ಸೃಷ್ಟಿಯಾದ ಈ ಗ್ರಂಥವೂ ಆದಿ ಪ್ರಯತ್ನ, ಸ್ವತಂತ್ರ ಪ್ರಯೋಗವೆಂದು ವಿನಮ್ರನಾಗಿ ಹೇಳಬಯಸುತ್ತೇನೆ' ಎಂಬಲ್ಲಿಯ ಕೊನೆಯ ಮಾತನ್ನು ಬದಿಗಿಟ್ಟು, ಅವರೇ ಮುಂದುವರೆದು 'ಗ್ರಂಥಸಂಪಾದನೆಯನ್ನು ಕುರಿತು ಈ ಮೊದಲು ಬಂದವುಗಳಿಗಿಂತ ಈ ಪುಸ್ತಕ ಪರಿಭಾಷೆ, ನಿರೂಪಣೆ ಇತ್ಯಾದಿಗಳಲ್ಲಿ ಬೇರೆಯಾಗಿರುವುದೇ ಇದಕ್ಕೆ ನಿದರ್ಶನ' ಎಂದು ಹೇಳಿರುವ ಮಾತನ್ನು ಸಮಗ್ರವಾಗಿ ಒಪ್ಪಿಕೊಳ್ಳಬಹುದಾಗಿದೆ. ದೇ. ಜವರೇಗೌಡ ಅವರು ಹೇಳುವ "ಈ ಗ್ರಂಥವನ್ನು ಓದಿ ಮುಗಿಸಿದ ನಂತರ ಒಟ್ಟಿನಲ್ಲಿ ಕೆಲವು ಗುಣಗಳು ಎದ್ದು ಕಾಣುತ್ತವೆ. ಈ ವಿಷಯದ ಬಗ್ಗೆ ಗ್ರಂಥಕರ್ತರು ಪಡೆದಿರುವ ಪ್ರಭುತ್ವ, ಅವರ ದೀರ್ಘ ವ್ಯಾಸಂಗದ ಹಾಗೂ ಅನುಭವದ ಫಲಶ್ರುತಿ, ಸಾಮಗ್ರಿ ಸಂಗ್ರಹದಲ್ಲಿ ಕಾಣುವ ತಿತಿಕ್ಷೆ ಹಾಗೂ ಶ್ರಮ, ಲೇಖನಕಾರ್ಯದಲ್ಲಿ ಕಂಡುಬರುವ ಸಾಹಸೋತ್ಸಾಹಗಳು, ಮೇಲಾಗಿ ಶಾಸ್ತ್ರೀಯ ಪ್ರಜ್ಞೆ–ಇವು ಈ ಗ್ರಂಥದಲ್ಲಿ ಪ್ರತಿಫಲನಗೊಂಡಿವೆ. . . . . ಇಂಥ ಕಲಶಕೃತಿಯನ್ನು ಕನ್ನಡಿಗರಿಗೊದಗಿಸಿ, ಶಾಸ್ತ್ರೀಯ ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಹಾಗು ಉಜ್ವಲವಾದ ಕೊಡುಗೆಯನ್ನು ನೀಡಿರುವ ಪ್ರೊ. ಕಲಬುರ್ಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ" ಎಂಬ ಮಾತಿಗೆ ನಮ್ಮ ಮಾತನ್ನೂ ಸೇರಿಸಬಹುದು.

II. ಪ್ರತಿಬಿಂಬ – ೧೯೭೮

ಡಾ. ಕಲಬುರ್ಗಿ ಅವರು ಈ ಕೃತಿಯ 'ಎರಡು ಮಾತು'ವಿನಲ್ಲಿ 'ಶಬ್ದಮಣಿದರ್ಪಣವನ್ನು, ಅದರ ಮೇಲೆ ಆಗಿರುವ, ಆಗಬೇಕಿರುವ ಕೆಲಸ ಈ ಎಲ್ಲವನ್ನೂ ತಿಳಿದುಕೊಳ್ಳಬಯಸುವವರಿಗೆ ಈ ಪುಸ್ತಕ ಸಾಕಷ್ಟು ಮಾಹಿತಿ ಒದಗಿಸುತ್ತದೆ' ಎಂದಿದ್ದಾರೆ. ಅದರ ಅಂಗವಾಗಿ ಇಲ್ಲಿ ಅಧ್ಯಾಯ ೧: ಪ್ರವೇಶ, ಅಧ್ಯಾಯ ೨ : ಕೇಶಿರಾಜ, ಅಧ್ಯಾಯ ೩ : ಕೇಶಿರಾಜನ ಕೃತಿಗಳು, ಅಧ್ಯಾಯ ೪ : ಶಬ್ದಮಣಿದರ್ಪಣಂ, ಅಧ್ಯಾಯ ೫ : ಶಬ್ದಮಣಿದರ್ಪಣದ ಅಭ್ಯಾಸ ಪರಂಪರೆ, ಅನುಬಂಧ : ಶಬ್ದಮಣಿದರ್ಪಣ ಗ್ರಂಥಸೂಚಿ ಎಂಬ ವಿಭಾಗಗಳಿವೆ.

ಮೊದಲಿನ ಮೂರು ವಿಭಾಗಗಳು 'ಶಬ್ದಮಣಿದರ್ಪಣ ಸಂಗ್ರಹ'ದಿಂದ ಆಯ್ದುಕೊಂಡವು. ಶಬ್ದಮಣಿದರ್ಪಣಂ ಎಂಬ ಲೇಖನದ ಪ್ರಾರಂಭದಲ್ಲಿ ಆ ಕೃತಿರಚನೆಗೆ ಕಾರಣವನ್ನು ಹೇಳಿದ್ದಾರೆ. ಮುಂದೆ ಶಬ್ದಮಣಿದರ್ಪಣ ರಚನೆಯಲ್ಲಿ ಕಾಣುವ ಮುಖ್ಯ ಶಾಖೆಗಳು ಎರಡು–ಒಂದು ಕಿಟೆಲ್ ಮೊದಲಾದವರ ಪರಿಷ್ಕರಣೆಗಳು, ಎರಡು : ಸೂತ್ರಕ್ರಮ, ಸೂತ್ರಸಂಖ್ಯೆ, ವೃತ್ತಿರೂಪ, ವ್ಯಾಖ್ಯಾನ, ಪ್ರಯೋಗ ಸಂಖ್ಯೆ ಈ ಐದು ಭಿನ್ನ ವೈಶಿಷ್ಟ್ಯಗಳಿಂದ ಕೂಡಿದ ಹೈದರಾಬಾದ ದರ್ಪಣ. ಇವುಗಳಲ್ಲಿ ಮೊದಲಿನ ವರ್ಗ ಮೂಲವೆಂದೂ , ಎರಡನೆಯದು ವ್ಯಾಖ್ಯಾನಕಾರನೊಬ್ಬನ ಮರುರಚನೆಯೆಂದೂ ಹೇಳಬಹುದು ಎಂದಿದ್ದಾರೆ. ಇವುಗಳನ್ನು ಸೂತ್ರ, ವೃತ್ತಿ, ಪ್ರಯೋಗ, ಟೀಕೆ ಎಂಬ ನಾಲ್ಕು ಅಂಶಗಳಲ್ಲಿ ಕಂಡುಬರುವ ವ್ಯತ್ಯಾಸವನ್ನೂ, ಸೂತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳಾದ–೧. ಸೂತ್ರಗಳ ಕ್ರಮ, ೨. ಸೂತ್ರಗಳ ಆಧಿಕ್ಯ, ೩. ಸೂತ್ರಗಳ ಪಾಠಗಳಲ್ಲಿ ಕಂಡುಬರುವ ವ್ಯತ್ಯಾಸವನ್ನೂ ಮೇಲಿನ ಕೃತಿಗಳನ್ನು ಮುಂದಿಟ್ಟುಕೊಂಡು ಸಮಗ್ರವಾಗಿ ವಿವೇಚಿಸಿದ್ದಾರೆ. ಹಾಗೆಯೇ ದರ್ಪಣಕ್ಕೆ ಬರೆದ ನಾಲ್ಕು ವೃತ್ತಿಗಳ ವಿವೇಚನೆಯೂ ಇಲ್ಲಿದೆ.

ಶಬ್ದಮಣಿದರ್ಪಣದಲ್ಲಿ ಸೂತ್ರವನ್ನು ವಿವರಿಸುವುದಕ್ಕಾಗಿ ಉಪಯೋಗಿಸಿದ ಪ್ರಯೋಗಗಳು ಕೆಲವು ಪೂರ್ಣರೂಪದಲ್ಲಿ, ಇನ್ನು ಕೆಲವು ಅಪೂರ್ಣ ರೂಪದಲ್ಲಿ ದೊರೆಯುತ್ತಿವೆ. ಇವುಗಳ ಸಂಖ್ಯೆ ಸುಮಾರು ೮೫೦. ತಾನು ನಿರೂಪಿಸಿರುವ ಲಕ್ಷಣಗಳ ಸಮರ್ಥನೆಗೆ ಉದಾಹರಣೆಗಳ ಒರೆಗಲ್ಲು ಅತ್ಯವಶ್ಯಕವೆಂಬ ಸ್ಪಷ್ಟ ಅಭಿಪ್ರಾಯ ಕೇಶಿರಾಜನದು. ಇದನ್ನು ಮನದಂದು ಹಿಂದಣ ಸುಪ್ರಸಿದ್ಧ ಹಳಗನ್ನಡ ಕೃತಿಗಳಾದ ಕಾವ್ಯಾವಲೋಕನ, ಸೂಕ್ತಿಸುಧಾರ್ಣವ, ಕಾವ್ಯಸಾರಗಳಲ್ಲದೆ ಪಂಪಭಾರತ, ಗದಾಯುದ್ಧ, ಯಶೋಧರಚರಿತೆ, ಆದಿಪುರಾಣ, ಮಲ್ಲಿನಾಥಪುರಾಣ, ಪಂಪರಾಮಾಯಣ ಮೊದಲಾದವುಗಳಿಂದ ಉತ್ತಮೋತ್ತಮ ಉದಾಹರಣೆಗಳನ್ನು ಕೆಲವೊಮ್ಮೆ ಪೂರ್ಣರೂಪದಲ್ಲಿ, ಕೆಲವೊಮ್ಮೆ ಅಪೂರ್ಣರೂಪದಲ್ಲಿ ಆಯ್ದುಕೊಂಡಿರುವುದನ್ನು ಡಾ. ಕಲಬುರ್ಗಿ ಅವರು ಗುರುತಿಸಿ, ತರುವಾಯದ ಅಭ್ಯಾಸಿಯ ಅಭಿರುಚಿ, ಸ್ಥಳಪರಿಮಿತಿ, ಲೇಖನ ಸ್ಖಾಲಿತ್ಯ, ಮತೀಯ ಮನೋಭಾವ ಕಾರಣವಾಗಿ ಈ ಪ್ರಯೋಗಗಳು ಲೋಪ, ಆಗಮ, ಆದೇಶ, ಪಲ್ಲಟ, ಸಂಕ್ಷೇಪ, ವಿಸ್ತರಣ ರೂಪದ ವ್ಯತ್ಯಾಸಕ್ಕೆ ಕಾರಣವಾಗಿವೆ ಎಂಬುದನ್ನು ಇಲ್ಲಿ ಎತ್ತಿ ಹೇಳಿದ್ದಾರೆ. ಇಲ್ಲಿಯ ಬಹಳಷ್ಟು ಪ್ರಯೋಗಗಳ ಆಕರಗಳನ್ನು ಗುರುತಿಸಿರುವಲ್ಲಿ ಡಾ. ಕಲಬುರ್ಗಿ ಅವರ ಆಳವಾದ ಅಧ್ಯಯನ ಗೋಚರವಾಗುತ್ತದೆ. ಇನ್ನು ಕೆಲವುಗಳ ಆಕರ ದೊರೆಯುತ್ತಿಲ್ಲ. ಕೇಶಿರಾಜನೇ ಇವೆಲ್ಲವುಗಳ ಆಕರ ಹೇಳಿದ್ದರೆ ಕಳೆದುಹೋದ ಕನ್ನಡಸಾಹಿತ್ಯದ ಸ್ಥೂಲರೂಪವನ್ನು ಉಳಿಸಿದಂತಾಗುತ್ತಿತ್ತು ಎಂದಿದ್ದಾರೆ (ಪು.೩೩).

'ಶಬ್ದಮಣಿದರ್ಪಣದ ಅಭ್ಯಾಸ ಪರಂಪರೆ' ಎಂಬ ಲೇಖನದಲ್ಲಿ ನಿಟ್ಟೂರ ನಂಜಯ್ಯ, ಮತ್ತು ಮೂಡಬಿದರೆ ಹಸ್ತಪ್ರತಿಕಾರರು ಟೀಕೆ ಬರೆದರೆ, ಕವಿಗಳು, ಶಾಸ್ತ್ರಕಾರರು, ಅಭ್ಯಾಸಿಗಳು ಇದನ್ನು ಪ್ರಮಾಣಗ್ರಂಥ, ಆಧಾರಗ್ರಂಥವೆಂದು ಅಂಗೀಕರಿಸಿದ್ದಾರೆ ಎಂಬುದನ್ನು ಈಶ್ವರಕವಿ, ರಾಮಚಂದ್ರಗುರು ಶಿಷ್ಯ, ಪದ್ಮಣಾಂಕ ಮೊದಲಾದವರಿಂದ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಭಟ್ಟಾಕಳಂಕ, ಭಾಷಾಭೂಷಣದ ವ್ಯಾಖ್ಯಾನಕರ್ತೃ, ನಿಘಂಟುಕಾರರು, ಅಲಂಕಾರಿಕರು, ಛಾಂದಸಿಗರು, ಮೊದಲಾದವರು ದರ್ಪಣದಿಂದ ಪಡೆದ ಸಹಾಯವನ್ನು ಇಲ್ಲಿ ವಿವರಿಸಲಾಗಿದೆ. ಕೊನೆಯಲ್ಲಿ ದರ್ಪಣವನ್ನು ಕುರಿತು ಬಂದಿರುವ ಪರಿಷ್ಕರಣಗಳು ವಿಮರ್ಶಾಗ್ರಂಥಗಳು, ಸಂಗ್ರಹಗಳು, ಬಿಡಿಬರಹಗಳ ಪಟ್ಟಿಯನ್ನೊಳಗೊಂಡ

'ಶಬ್ದಮಣಿದರ್ಪಣಂ : ಗ್ರಂಥ-ಲೇಖನ ಸೂಚಿ'ಯನ್ನು ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರಿ ಅವರ 'ಶಬ್ದಮಣಿದರ್ಪಣಂ' ಕೃತಿಯಿಂದ ಆಯ್ದುಕೊಡಲಾಗಿದೆ.

ಈ ಎಲ್ಲ ಲೇಖನಗಳನ್ನು ನೋಡಿದರೆ ಡಾ. ಕಲಬುರ್ಗಿ ಅವರ ಮೇಲೆ ಕೇಶಿರಾಜ ಎಷ್ಟೊಂದು ಪ್ರಭಾವ ಬೀರಿದ್ದಾನೆ ಎಂಬುದು ಸ್ಪಷ್ಟವಾಗುತ್ತಿದೆ. ಅವರಿಗೆ ಕೇಶಿರಾಜನನ್ನು ಎಷ್ಟು ವಿಧವಾಗಿ ಅಭ್ಯಾಸ ಮಾಡಿದರೂ ತೃಪ್ತಿ ಇಲ್ಲ ಎಂಬುದು ಗೋಚರವಾಗುತ್ತಿದೆ.

III. ಸಾಹಿತ್ಯ ಸಂಪಾದನೆ – ೧೯೭೯

ಡಾ. ಎಂ. ಎಂ. ಕಲಬುರ್ಗಿ ಅವರು ೧೯೭೯ರಲ್ಲಿ ಮದರಾಸಿನ ಮದರಾಸು ವಿಶ್ವವಿದ್ಯಾಲಯದಲ್ಲಿ ಮಾಡಿದ ಮೂರು ಉಪನ್ಯಾಸಗಳ ಸಂಕಲನ ಈ ಕೃತಿ. ಇಲ್ಲಿ ೧. ಗ್ರಂಥಸಾಹಿತ್ಯ ಸಂಪಾದನೆ, ೨. ಶಾಸನಸಾಹಿತ್ಯ ಸಂಪಾದನೆ, ೩. ಜಾನಪದಸಾಹಿತ್ಯ ಸಂಪಾದನೆ ಎಂಬ ಮೂರು ಲೇಖನಗಳಿವೆ. ಪ್ರಾರಂಭದಲ್ಲಿ ಸಂಪಾದನೆ, Textual Criticism ಮತ್ತು Editing ಶಬ್ದಗಳ ಅರ್ಥವನ್ನು ಸ್ಪಷ್ಟಪಡಿಸಿ ಬಾಯೊಳಗೆ ಬೆಳೆದುಬಂದುದು ಜನಪದಸಾಹಿತ್ಯ, ಬರವಣಿಗೆಯಲ್ಲಿ ನಿಂತುದು ಶಿಷ್ಟಸಾಹಿತ್ಯ ಎಂದು ಹೇಳಿ, ಶಿಷ್ಟಸಾಹಿತ್ಯವನ್ನು ಮತ್ತೆ ಗ್ರಂಥಸಾಹಿತ್ಯ, ಶಾಸನಸಾಹಿತ್ಯ ಎಂದು ವಿಭಾಗ ಮಾಡಿದ್ದಾರೆ. ಇವುಗಳನ್ನು ಸಂಪಾದಿಸುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಗ್ರಂಥಸಾಹಿತ್ಯ ಸಂಪಾದನೆ :

ಗ್ರಂಥಸಾಹಿತ್ಯ ಸಂಪಾದನೆಯನ್ನು ಕುರಿತು ಈಗಾಗಲೇ ಒಂದು ಗ್ರಂಥವನ್ನೇ ಬರೆದಿದ್ದು, ಅಲ್ಲಿಯ ವಿಚಾರಗಳೆಲ್ಲ ಇಲ್ಲಿ ಸಂಕ್ಷೇಪಗೊಂಡು ಬಂದಿವೆ, ಬಸವರಾಜದೇವರ ರಗಳೆ, ಬಸವಣ್ಣನವರ ವಚನಗಳ ವಿಶ್ಲೇಷಣೆಯಂಥ ಕೆಲವೊಂದು ಹೊಸ ಉದಾಹರಣೆಗಳು ಸೇರ್ಪಡೆಯಾಗಿವೆ. ಪ್ರಾಚೀನಕಾಲದಲ್ಲಿ ಈ ಗ್ರಂಥಸಾಹಿತ್ಯ ಮೊದಲು ಆಶ್ರಮದಲ್ಲಿ, ಆಮೇಲೆ ಅರಮನೆಯಲ್ಲಿ, ತರುವಾಯ ಗುರುಮನೆಯಲ್ಲಿ ಸೃಷ್ಟಿಪಡೆಯಿತು ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಗ್ರಂಥೋತ್ಪಾದನೆ ರಾಷ್ಟ್ರದ ಉತ್ಪಾದನೆಗಳಲ್ಲಿ ಒಂದು ಎಂದು ನಮ್ಮ ರಾಜವರ್ಗ ಭಾವಿಸಿದ್ದರಿಂದ ಬಹಳಷ್ಟು ಮೌಲಿಕ ಗ್ರಂಥಗಳ ಜನನಕ್ಕೆ ಕಾರಣವಾಯಿತು. ಹೀಗೆ ಹುಟ್ಟಿಬಂದ ಸಾಹಿತ್ಯಕ್ಕೆ ನಿಯುಕ್ತಲಿಪಿಕಾರರು, ವೃತ್ತಿಲಿಪಿಕಾರರು, ಹವ್ಯಾಸಿಲಿಪಿಕಾರರು ಮರುಜನ್ಮಕೊಡುವ ಕಾರ್ಯ ಮಾಡಿದರು. ಹೀಗೆ ಇವರು ಪ್ರತಿ ಮಾಡುವಾಗ ಆಗುವ ದೋಷಗಳನ್ನು ೧. ಉದ್ದೇಶಿತ ಸ್ಖಾಲಿತ್ಯ ೨. ಅನುದ್ದೇಶಿತ ಸ್ಖಾಲಿತ್ಯ(ಅಕ್ಷರದ ರೂಪಸಾದೃಶ್ಯ, ಅಕ್ಷರದ ಧ್ವನಿಸಾದೃಶ್ಯ, ಬರವಣಿಗೆಯ ರೀತಿದೋಷ, ಅವಸ್ಥಾಭೇದ-ಪ್ರಾಂತಭೇದ, ತಾಳಲಯದ ಪ್ರಭಾವ, ಅನವಧಾನಿತಸ್ಖಾಲಿತ್ಯ) ಎಂದು ಗುರುತಿಸಿದ್ದಾರೆ. ಸಾಮಗ್ರಿ ಸಂಕಲನ, ವಂಶಾವಳಿನಿರ್ಣಯ, ಪಾಠಸಂಕಲನ, ಪಾಠಪರಿಷ್ಕರಣಗಳ ಮೂಲಕ ಕವಿಯ ಆಶಯ, ಸಂದೇಶಗಳನ್ನು ಸರಿಯಾದರೂಪದಲ್ಲಿ ಜನತೆಗೆ ಮುಟ್ಟುವಂತೆ ಮಾಡುತ್ತಾನೆ ಸಂಪಾದಕ, ಇಂಥ ಸಂಪಾದಕ ಭಾಷೆ, ಛಂದಸ್ಸು, ಅಲಂಕಾರಗಳ ಜ್ಞಾನ ಹೊಂದಿರಬೇಕು ಎಂದಿದ್ದಾರೆ.

ಶಾಸನಸಂಪಾದನೆ :

ಜನಾಂಗದ ಇತಿಹಾಸವನ್ನು ರಚಿಸುವಲ್ಲಿ-ಅವಶೇಷಗಳು, ಬರವಣಿಗೆಗಳು, ವದಂತಿಗಳು, ಆಚರಣೆಗಳು ಪ್ರಮುಖವಾದವು. ಅವುಗಳಲ್ಲಿ ಅವಶೇಷಗಳು ಮೂಕ ವಸ್ತು, ವದಂತಿ-ಆಚರಣೆಗಳು

ನೀರಕ್ಷೀರದ ತೊರೆ, ಬರವಣಿಗೆ ಅದರಲ್ಲಿಯೂ ಶಾಸನ ಬರವಣಿಗೆ ಅಕ್ಷರರೂಪದಲ್ಲಿ ಮಾತನಾಡುವ ಐತಿಹಾಸಿಕ ಘಟನೆ. ಹೀಗಾಗಿ ಗತಕಾಲವನ್ನು ಅರ್ಥಮಾಡಿಕೊಳ್ಳಲು ಶಾಸನಗಳು ಪ್ರಾಮಾಣಿಕ ಆಧಾರಗಳು ಎಂದಿದ್ದಾರೆ.

ಕರ್ನಾಟಕದಲ್ಲಿ ಅಶೋಕನ ಕಾಲದಿಂದ ಶಾಸನಗಳು ದೊರೆಯುತ್ತಿವೆ. ಇವುಗಳನ್ನು ಸಂಪಾದಿಸುವ ಕಾರ್ಯವೂ ನಡೆದಿದೆ. ಆದರೆ ಅದು ಅಷ್ಟು ತೃಪ್ತಿಕರವಾಗಿಲ್ಲ. ಕವಿ, ಲಿಪಿಕಾರ, ರೂವಾರಿ, ನಿಸರ್ಗಪ್ರಕೋಪ, ಪಡಿಯಚ್ಚುಗಾರರ ಪ್ರಮಾದ, ವ್ಯಕ್ತಿಗಳ ಅಜ್ಞಾನ–ಅಸೂಯೆ, ಸಂಪಾದಕರ ಅವಸರದ ವಾಚನಪ್ರವೃತ್ತಿ, ಲಿಪಿ ಮತ್ತು ಭಾಷೆಗಳ ಅವಸ್ಥಾಭೇದ–ಪ್ರಾಂತಭೇದಗಳ ಅಜ್ಞಾನಗಳಿಂದ ತೋರಿರುವ ಹಲವಾರು ಪ್ರಮಾದಗಳನ್ನು ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಜೊತೆಗೆ ಶಾಸನಗಳನ್ನು ಸಂಪಾದಿಸುವಾಗ ಬಳಸಬೇಕಾದ ಹಲವಾರು ಸಂಕೇತಗಳ ಮಾಹಿತಿಯನ್ನೂ ಕೊಟ್ಟಿದ್ದಾರೆ. ಶಾಸನಸಂಪಾದನೆಯೊಂದಿಗೆ ಶಾಸನಪರಿಚಯ ಅಂದರೆ ಅದು ಇರುವ ಊರು, ನಿಂತ ಸ್ಥಳ, ಉದ್ದಗಲ ಪ್ರಮಾಣ, ಸ್ಥಿತಿ, ಅಕ್ಷರಸ್ವರೂಪ, ಪಾಠವಿನ್ಯಾಸ ಇತ್ಯಾದಿಗಳ ವಿವರವನ್ನೂ ಸಂಪಾದಕ ಕೊಡಬೇಕಾಗುತ್ತದೆ. ಅಲ್ಲದೆ ವೀರಗಲ್ಲು, ಮಾಸ್ತಿಗಲ್ಲು, ನಿಷಧಿಕಲ್ಲು ಮೊದಲಾದವುಗಳ ಪಾಠದಷ್ಟೇ ಅವುಗಳ ಚಿತ್ರವೂ ಅವಶ್ಯವಾಗಿರುತ್ತದೆ. ಕೆಲವು ಸಲ ವೇಷಭೂಷಣ, ಭಾವ–ಭಂಗಿ ಮೊದಲಾದ ಕಲಾಜೀವನ ಮತ್ತು ಯುದ್ಧ, ದೇವಪೂಜೆ, ವಾಚನ ಮೊದಲಾದ ಜನಜೀವನ ಅಭ್ಯಾಸಕ್ಕೋಸುಗ ಪಾಠಕ್ಕಿಂತ ಚಿತ್ರವೆ ಪ್ರಧಾನವಾಗಿರುತ್ತದೆ. ಈ ಬಗ್ಗೆ ಇನ್ನುಮೇಲಾದರೂ ಲಕ್ಷ್ಯಕೊಡಬೇಕು ಎಂದಿದ್ದಾರೆ.

ಶಾಸನಸಂಪಾದನೆಯಲ್ಲಿ ಪ್ರಸ್ತಾವನೆಯೂ ಮಹತ್ವಪೂರ್ಣವಾದುದು. ಈ ವರೆಗಿನ ಸಂಪಾದನೆಗಳ ಪ್ರಸ್ತಾವನೆ ಲಿಪಿವಾಚನಕ್ಕೆ, ರಾಜಕೀಯ ಚರಿತ್ರೆಗೆ ಸೀಮಿತಗೊಂಡಿದೆ. ಅಲ್ಲಿಯ ಲಿಪಿ, ಚರಿತ್ರೆ, ಭಾಷೆ, ಸಾಹಿತ್ಯ, ಸಂಸ್ಕೃತಿ, ಲಲಿತಕಲೆ, ವಿಜ್ಞಾನ ಮೊದಲಾದ ಶಾಸನಸ್ಥ ಸರ್ವಕ್ಷೇತ್ರಗಳನ್ನೂ ಅಧ್ಯಯನಕ್ಕೆ ಒಳಪಡಿಸಬೇಕು. ಅನುಬಂಧವು ಕೇವಲ ನಾಮಪದಕೋಶ ಮಾತ್ರವಿರದೆ, ಶಾಸನಗಳ ರಾಜಕೀಯ, ಪ್ರಾದೇಶಿಕ, ಭಾಷಿಕ ವಿವರಣೆಯನ್ನೂ, ಪರಿಭಾಷೆಗಳಿಗೆ ಬರೆದ ಟಿಪ್ಪಣಿಗಳನ್ನೂ ಒಳಗೊಂಡಿರಬೇಕು ಎಂದಿದ್ದಾರೆ.

ಈಗ ತುರ್ತಾಗಿ ನಡೆಯಬೇಕಾದ ಕಾರ್ಯವೆಂದರೆ ಇನ್ನೂ ಸರ್ವೇ ಆಗದೇ ಇರುವ ಶಾಸನಗಳನ್ನು ಸರ್ವೆ ಮಾಡುವುದು, ಕಾರ್ಯಾಲಯದಲ್ಲಿ ಒಟ್ಟಿರುವ ಶಾಸನಗಳನ್ನು ಪ್ರಕಟಿಸುವುದು, ಪ್ರಕಟವಾದ ಶಾಸನಗಳ ಮರು ಪರಿಷ್ಕರಣೆ ಮಾಡುವುದು, ಎಲ್ಲ ಸಂಪುಟಗಳಿಗೆ ಯೋಗ್ಯವಾದ ಪ್ರಸ್ತಾವನೆ, ಅನುಬಂಧಗಳನ್ನು ಕೊಡುವುದು ಇದರಿಂದ ರಾಜಕೀಯ, ಸಾಮಾಜಿಕ, ಭಾಷಿಕದ ಪರಿಪೂರ್ಣ ಇತಿಹಾಸದ ರಚನೆ ಸಾಧ್ಯವಾಗುತ್ತದೆ ಎಂಬುದು ಡಾ. ಕಲಬುರ್ಗಿ ಅವರ ಅಭಿಪ್ರಾಯ.

ಜನಪದಸಾಹಿತ್ಯ ಸಂಪಾದನೆ :

ಡಾ. ಕಲಬುರ್ಗಿ ಅವರ ಇನ್ನೊಂದು ಆಸಕ್ತಿಯ ಕ್ಷೇತ್ರ ಜಾನಪದ. ಅದಕ್ಕೆ ಸಂಬಂಧಿಸಿ ಅವರು ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ(೧೯೭೭) ಮತ್ತು ಜಾನಪದ ಮಾರ್ಗ (೧೯೮೫) ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಉಪನ್ಯಾಸದಲ್ಲಿ ಜನಪದಸಾಹಿತ್ಯ ಸಂಪಾದನೆ ಕುರಿತು ವಿವರಿಸಿದ್ದಾರೆ.

ಪ್ರಾರಂಭದಲ್ಲಿ ಜನಪದ ಸಾಹಿತ್ಯಕ್ಕಿರುವ ಬೇರೆಬೇರೆ ಹೆಸರುಗಳನ್ನು ಪ್ರಸ್ತಾಪಿಸಿ, ಮುಂದೆ 'ಜನಪದ ಸಾಹಿತ್ಯ' ಎಂಬ ಸಮಸ್ತಪದ, 'ಜಾನಪದ ಸಾಹಿತ್ಯ' ಎಂಬ ವಿಗ್ರಹಪದಗಳು ಬಳಕೆಯಾಗುತ್ತ ಬಂದಿರುವುದನ್ನು ವಿವರಿಸಿದ್ದಾರೆ. ಜೊತೆಗೆ ವಿಲಿಯಂ ಥಾಮ್ಸ್ ಬಳಸಿದ ಫೋಕಲೋರ್ ಶಬ್ದದ ವಿಶ್ಲೇಷಣೆಗೆ ತೊಡಗಿ, ಹಾ. ಮಾ. ನಾಯಕರು 'ಜನಪದ ಒಂದು ಶಾಖೆಯನ್ನು ಸೂಚಿಸಿದರೆ ಜಾನಪದ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತದೆ' ಎಂದು ಹೇಳಿದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಕಲಬುರ್ಗಿಯವರು 'ಜಾನಪದ'ವೇ ಒಂದು ಶಾಖೆಯನ್ನು ಸೂಚಿಸಿದರೆ 'ಜನಪದ'ವೇ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತದೆ ಎಂದು ಹೇಳಬೇಕಾಗುತ್ತದೆ ಎಂದಿದ್ದಾರೆ.

ಜಾನಪದ ಸಾಹಿತ್ಯವನ್ನು ರಿಚರ್ಡ ಎಂ ಡಾರ್ಸನ್, ಆರ್. ಎಸ್. ಬಾಗ್ಸ್, ಹಾ.ಮಾ.ನಾಯಕ ಮೊದಲಾದವರು ವರ್ಗೀಕರಿಸಿದ ರೀತಿಯಿಂದ ಭಿನ್ನವಾದ ೧.ಕಾಯಿಕಬಗೆ, ೨. ವಾಚಿಕಬಗೆ, ೩. ಮಾನಸಿಕಬಗೆ ಎಂದು ವಿಭಾಗಿಸಿದ್ದಾರೆ. ಮುಂದುವರೆದು 'ಜಾನಪದಸಾಹಿತ್ಯ'ದ ಲಕ್ಷಣಗಳನ್ನು ಹೀಗೆ ಗುರುತಿಸಿದ್ದಾರೆ: ೧. ನಿಸರ್ಗನಿಯಂತ್ರಿತ ಜನಾಂಗದಲ್ಲಿ 'ಮಾನವನ ಪ್ರಾಕೃತಿಕ ಪ್ರವೃತ್ತಿ'ಗಳು ದಟ್ಟವಾಗಿರುತ್ತವೆ. ೨. ಅವರ ಅನುಭವಕ್ಕೆ 'ಸಾಮುದಾಯಿಕತೆ' ಸಂಪ್ರಾಪ್ತವಾಗಿರುತ್ತದೆ. ೩. ಇವರ ಸಾಹಿತ್ಯದಲ್ಲಿ 'ಸಂವಹನತೆ ಪ್ರಧಾನ, ಕಲಾತ್ಮಕತೆ ಗೌಣ' ೪. ಇದು 'ಅನುಸೃಷ್ಟಿ'ಯಾಗಿ ಹುಟ್ಟಿ 'ಪುನಸೃಷ್ಟಿ'ಯಾಗಿ ಬೆಳೆಯುತ್ತದೆ. ೫. ಧ್ವನಿಶರೀರಿಯಾಗಿ ಹುಟ್ಟಿ ಧ್ವನಿಶರೀರಿಯಾಗಿ ಪ್ರವಹಿಸುತ್ತದೆ. ಈ ಐದು ಲಕ್ಷಣಗಳಲ್ಲಿ ಜಾನಪದಸಾಹಿತ್ಯದ ಅಂತರಂಗ ಬಹಿರಂಗಗಳ, ಹುಟ್ಟು ಬದುಕು ಬೆಳವಣಿಗೆಗಳ ಸಮಗ್ರತೆಯನ್ನು ಕಾಣಬಹುದಾಗಿದೆ ಎಂದಿರುವಲ್ಲಿ ಡಾ. ಕಲಬುರ್ಗಿ ಅವರು ಆ ಕ್ಷೇತ್ರದಲ್ಲಿ ಹೊಂದಿರುವ ಪ್ರಬುದ್ಧತೆಯನ್ನು ಎತ್ತಿ ತೋರುತ್ತಿದೆ.

ಕಳೆದ ಒಂದು ನೂರು ವರ್ಷಗಳಲ್ಲಿ ಜಾನಪದಸಾಹಿತ್ಯ ಸಂಪಾದನಕಾರ್ಯ ಹಲಸಂಗಿ ಗೆಳೆಯರಿಂದ ಹಿಡಿದು ಗದ್ದಗಿಮಠ ಅವರ ವರೆಗೆ 'ಫೋಕಸಾಂಗ' ಸಂಪಾದನೆಯ ಘಟ್ಟ, ಆಧುನಿಕ ಘಟ್ಟ 'ಫೋಕಲಿಟ್ರೇಚರ್' ಸಂಪಾದನೆಯ ಘಟ್ಟ ಎಂದು ಗುರುತಿಸಿ, ಇಲ್ಲಿಯವರೆಗಿನ ಸಂಪಾದಿತ ಕೃತಿಗಳಲ್ಲಿ ಸಂಪಾದನೆಯ ಹೊಸತನ ಇಲ್ಲ ಎಂದಿದ್ದಾರೆ.

ಮೌಖಿಕಸಾಹಿತ್ಯವನ್ನು ಜಾನಪದಸಾಹಿತ್ಯ, ಜಾಣಪದಸಾಹಿತ್ಯ ಎಂದು ಗುರುತಿಸಿ, ಅದರಲ್ಲಿ ಮತ್ತೆ ಆಂತರಿಕ ಸ್ತರಗಳನ್ನು ಗುರುತಿಸಿದ್ದಾರೆ. ಕೆಳವರ್ಗದಿಂದ ಮೇಲುವರ್ಗಕ್ಕೆ ಹೋದಂತೆ ಜಾನಪದ ಶಿಷ್ಟಮುಖಿಯಾಗುತ್ತ ಹೋಗುತ್ತದೆ ಎಂಬುದನ್ನು ಆಧಾರ ಸಹಿತ ವಿವರಿಸಿದ್ದಾರೆ. ಅಲ್ಲದೆ ಜಾನಪದ ಸಾಹಿತ್ಯವು ಪ್ರದೇಶಬದ್ಧ-ಸಮಾಜಬದ್ಧ-ಕಾಲಬದ್ಧವಾಗಿರುತ್ತದೆ. ಜೊತೆಗೆ ಸಂದರ್ಭ ಮತ್ತು ವ್ಯಕ್ತಿಯೂ ಪ್ರಮುಖವಾಗುತ್ತಿವೆ. ಹೀಗಾಗಿ ಯಾವುದೇ ಜನಪದಸಾಹಿತ್ಯದ ಪ್ರಕಾರವನ್ನು ಈ ಐದು ಅಂಶಗಳಿಂದ ಹೊರಗಿಟ್ಟು ಸಂಪಾದಿಸಬಾರದು ಎಂದಿದ್ದಾರೆ. ಇವುಗಳ ಜೊತೆಗೆ ಪಾಠಾಂತರ ಮತ್ತು ರೂಪಾಂತರಗಳ ಬಗೆಗೂ ಸಂಪಾದಕನಿಗೆ ಕಲ್ಪನೆ ಇರಬೇಕು ಎಂದಿದ್ದಾರೆ.

ಜಾನಪದಸಾಹಿತ್ಯದಲ್ಲಿ ಕಾಣುವ ಪಾಠಾಂತರಗಳು ಶುದ್ಧಪಾಠಾಂತರಗಳು, ಅಶುದ್ಧಪಾಠಾಂತರಗಳು ಎಂದು ಎರಡು ಬಗೆಯಾಗಿದ್ದು, ಶುದ್ಧಪಾಠಾಂತರಗಳು ಉದ್ದೇಶಿತ ಅನುದ್ದೇಶಿತ ಎಂದೂ, ಅಶುದ್ಧ ಪಾಠಾಂತರಗಳು ಅಮಾನ್ಯ, ಮಾನ್ಯ ಎಂದೂ ಎರಡು ತೆರನಾಗಿವೆ ಎಂದಿದ್ದಾರೆ. ಅವುಗಳನ್ನು ಮೇಲಿನ ಐದು ಸೂತ್ರಗಳ ಒರೆಗಲ್ಲಿಗೆ ಹಚ್ಚಿ ಸ್ವೀಕರಣ, ವರ್ಜನ,

ಪರಿಷ್ಕರಣ, ಸಂದೇಹ ಈ ನಾಲ್ಕು ವಿಧಾನಗಳಲ್ಲಿ ಮಾಡುವ ಸಂಪಾದನೆ ಶಾಸ್ತ್ರೀಯ ಸಂಪಾದನೆ ಎನ್ನಿಸುತ್ತಿದೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ. ಇನ್ನು ಈ ಸಾಹಿತ್ಯವನ್ನು ಸಂಪಾದಿಸುವಾಗಲೂ ಕೈಗೆ ಸಿಕ್ಕದ್ದನ್ನು ಸಿಕ್ಕ ಹಾಗೆ ಪ್ರಕಟಿಸದೆ, ಒಂದೊಂದು ವಿಷಯಕ್ಕೆ ಸಂಬಂಧಿಸಿದುದನ್ನು ವರ್ಗೀಕರಣಗೊಳಿಸಿ ಪ್ರಕಟಿಸಬೇಕು ಎಂಬ ಸಲಹೆಯನ್ನೂ ನೀಡಿದ್ದಾರೆ.

ಗ್ರಂಥದ ಕೊನೆಯಲ್ಲಿ ಇರಬೇಕಾದುದು ಅನುಬಂಧ. ಅಲ್ಲಿ ನಿರೂಪಕನ ಪರಿಚಯ, ವೈಶಿಷ್ಟ್ಯಗಳನ್ನು, ಸಂದರ್ಭ-ಸಂಪ್ರದಾಯಗಳನ್ನು, ಟಿಪ್ಪಣಿ ಪದಕೋಶ ಇತ್ಯಾದಿಗಳನ್ನು ಒಳಗೊಂಡಿರಬೇಕು ಎಂದಿದ್ದಾರೆ.

ಜಾನಪದಸಾಹಿತ್ಯವು ಸಾಹಿತ್ಯ, ಭಾಷಾಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮೊದಲಾದವುಗಳ ವಸ್ತುವಾಗಿರುವುದರಿಂದ ಸಂಪಾದಕನಿಗೆ ಇವುಗಳ ಆಳವಾದ ಜ್ಞಾನವೂ ಅವಶ್ಯ ಎಂಬುದನ್ನು ಒತ್ತಿಹೇಳಿದ್ದಾರೆ.

IV. ಕನ್ನಡ ನಾಮವಿಜ್ಞಾನ – ೧೯೮೯

'ಭಾಷಿಕ ಸ್ತರದಲ್ಲಿ ಪ್ರಾರಂಭವಾಗಿ ಚಾರಿತ್ರಿಕ, ಭೌಗೋಲಿಕ ಸ್ತರಗಳನ್ನು ತಬ್ಬಿಕೊಂಡು ಸಾಂಸ್ಕೃತಿಕ ಸ್ತರದಲ್ಲಿ ಈ ಅಧ್ಯಯನ ವಿರಮಿಸುತ್ತದೆ. ಹೀಗಾಗಿ, ನಾಮವಿಜ್ಞಾನ ಅನಿವಾರ್ಯವಾಗಿ ಶಾಸ್ತ್ರ, ಶಾಸ್ತ್ರೇತರವೆಂಬ ಸಂಯುಕ್ತ ಅಭ್ಯಾಸವಾಗಿ ಪರಿಣಮಿಸುತ್ತದೆ' ಎಂದು ನಾಮವಿಜ್ಞಾನದ ಮಹತ್ವವನ್ನು, ಅಭ್ಯಾಸದ ವ್ಯಾಪ್ತಿಯನ್ನು ಅರಿಕೆಯಲ್ಲಿ ಹೇಳಿ, ಮುಂದೆ ನಾಮವಿಜ್ಞಾನದ ವಿವರಣೆಗೆ ತೊಡಗಿದ್ದಾರೆ.

ಹೆಸರಿನ ಮುಖ್ಯ ಉದ್ದೇಶವು ಸಮೂಹದಿಂದ ವಸ್ತುವನ್ನು ವ್ಯಕ್ತಿಯನ್ನು ಪ್ರತ್ಯೇಕಿಸಿ ಗುರುತಿಸಿಕೊಳ್ಳುವುದು. ಈ 'ಹೆಸರು ಕೇವಲ ಹೆಸರಲ್ಲ, ಅವು ನಮ್ಮ ಸಂಸ್ಕೃತಿಯ ಪ್ರತೀಕಗಳು. ಅಖಂಡ ಮಾನವ ಸಂಸ್ಕೃತಿಯ ಘಟಕಗಳು' ಎಂದು ತಿಳಿದಿರುವ ಡಾ. ಕಲಬುರ್ಗಿ ಅವರು, ಶಾಸನ, ಗ್ರಂಥಗಳು, ಜಾನಪದ, ಆಧುನಿಕ ದಾಖಲೆಗಳು ಮೊದಲಾದವುಗಳನ್ನೆಲ್ಲ ಹೆಕ್ಕಿತೆಗೆದು, ಅಲ್ಲಿ ಬರುವ ನಾಮಗಳನ್ನೆಲ್ಲ ಸಂಗ್ರಹಿಸಿ ಅವುಗಳ ಹಿಂದೆ ಅಡಗಿರುವ ಸಂಸ್ಕೃತಿಯ ಸುಳುಹನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾರೆ. ಅಭ್ಯಾಸದ ಸೌಲಭ್ಯದ ದೃಷ್ಟಿಯಿಂದ ಅವನ್ನು ವರ್ಗವಾಚಿ, ಘಟಕವಾಚಿ ಎಂದು ವಿಂಗಡಿಸಿದ್ದಾರೆ. ವರ್ಗವಾಚಿ ರೂಢನಾಮಗಳಾದರೆ, ಘಟಕವಾಚಿ ಅನ್ವರ್ಥಕ ಮತ್ತು ಅಂಕಿತನಾಮವಾಗಿವೆ. ನಾಮವಿಜ್ಞಾನವು ಘಟಕವಾಚಿನಾಮಗಳನ್ನು ವಿವೇಚಿಸುವ ಶಾಸ್ತ್ರವಾಗಿದೆ ಎಂಬುದನ್ನು ಮೊದಲಿಗೆ ಸ್ಪಷ್ಟಪಡಿಸಿದ್ದಾರೆ. ಅದನ್ನು ವ್ಯಕ್ತಿನಾಮ, ಕುಟುಂಬನಾಮ, ಗ್ರಾಮನಾಮ ಎಂದು ಮೂರು ಬಗೆಯಾಗಿ ವಿಭಜಿಸಿ ಈ ಅಧ್ಯಯನವನ್ನು ಮಾಡಿದ್ದಾರೆ.

ವ್ಯಕ್ತಿನಾಮ :

ವ್ಯಕ್ತಿನಾಮದ ಅಧ್ಯಯನವು ಎರಡು ಶತಮಾನಗಳ ಇತಿಹಾಸ ಹೊಂದಿದ್ದು, ಬಾರ್ನೆಟ್, ಫ್ಲೀಟ್, ರೈಸ್, ಪಿ. ಬಿ. ದೇಸಾಯಿ, ಶಂ. ಬಾ. ಜೋಶಿ, ಡಿ. ಎಲ್. ನರಸಿಂಹಾಚಾರ್, ರಾಚಣ್ಣ ರುದ್ರಪ್ಪ ಕುಬಸದ ಮೊದಲಾದವರಿಂದ ನಡೆದಿದ್ದರೂ ಅದು ಆಧುನಿಕ ದೃಷ್ಟಿಯ ಅಧ್ಯಯನವಾಗಿರಲಿಲ್ಲ. ಡಾ. ಎಂ. ಚಿದಾನಂದಮೂರ್ತಿ ಅವರ 'ಕರ್ನಾಟಕದ ವ್ಯಕ್ತಿನಾಮಗಳು' ಎಂಬ ವಿಸ್ತಾರವಾದ ಲೇಖನವು ವ್ಯಕ್ತಿನಾಮವನ್ನು ಸಂಸ್ಕೃತಿ ದೃಷ್ಟಿಯಿಂದ ನೋಡಿದ ಮೊದಲ ಪ್ರಯತ್ನವಾಯಿತು.

ಅದನ್ನು ಬಿಟ್ಟರೆ ಡಾ. ಕಲಬುರ್ಗಿ ಅವರ 'ಕನ್ನಡ ನಾಮವಿಜ್ಞಾನ'ದ 'ವ್ಯಕ್ತಿನಾಮ' ಭಾಗ ಕನ್ನಡದಲ್ಲಿ ಆಧುನಿಕ ದೃಷ್ಟಿಯ ವ್ಯಾಪಕ ಅಧ್ಯಯನವಾಗಿದೆ.

ಇಲ್ಲಿ ವ್ಯಕ್ತಿನಾಮದ ಇತಿಹಾಸ, ಆಕರಸಾಮಗ್ರಿ, ನಾಮನಿಷ್ಪತ್ತಿ, ನಾಮಕರಣ ನಡೆದುಬಂದ ದಾರಿ, ನಾಮಕರಣ, ನಾಮದ ರಾಚನಿಕ ಸ್ವರೂಪ, ಸೀಮಾರೇಖೆ, ನಾಮ ವ್ಯತ್ಯಾಸ-ರೂಪಾಂತರ, ಭಾಷಾಂತರ, ನಾಮಾಂತರ, ಪ್ರಾಚೀನ ನಾಮಗಳು, ಆಧುನಿಕ ನಾಮಗಳು ಸಮಾರೋಪ ಎಂಬ ಅಧ್ಯಾಯಗಳಿವೆ.

ವ್ಯಕ್ತಿನಾಮ ಅಧ್ಯಯನಕ್ಕೆ ಶಾಸನ, ಪ್ರಾಚೀನ ಕಾವ್ಯಗಳು, ವಚನಸಾಹಿತ್ಯ, ಆಧುನಿಕ ಕಾಲಕ್ಕೆ ಬಂದರೆ ಶಾಲಾ ರಜಿಸ್ಟರ್, ರೆವಿನ್ಯೂ ದಾಖಲೆಗಳು ಪ್ರಮುಖ ಆಕರಗಳು. ನಾಮಕರಣ ನಡೆದುಬಂದ ದಾರಿಯನ್ನು ಗುರುತಿಸುತ್ತ ಹೆಸರಿಡದ ಕಾಲಾವಧಿ(ಬೇಟೆ ಸಂಸ್ಕೃತಿ), ದೊಡ್ಡವರಾದ ಮೇಲೆ ಹೆಸರಿಡುವ ಕಾಲಾವಧಿ (ಕೃಷಿ ಸಂಸ್ಕೃತಿ), ಹುಟ್ಟಿದ ಸಂದರ್ಭದಲ್ಲಿ ಹೆಸರಿಡುವ ಕಾಲಾವಧಿ(ವ್ಯಕ್ತಿಗೆ ಹೆಸರು ಇನ್ನೂ ಅನಿವಾರ್ಯವೆನ್ನಿಸಿದಾಗ ಪ್ರಾರಂಭವಾದ ಕಾಲ) ಎಂದು ವಿಭಜಿಸಿದ್ದಾರೆ.

ನಾಮದ ರಾಚನಿಕ ಸ್ವರೂಪದಲ್ಲಿ ಪೂರ್ವ ಮತ್ತು ಉತ್ತರ ಎಂಬ ಎರಡು ಘಟಕಗಳಿರುವವು ಎಂದು ಹೇಳಿ, ಲಿಂಗಪ್ಪ ಹೆಸರಿನ ಪೂರ್ವ ಘಟಕ(ಲಿಂಗ)ವನ್ನು 'ನಿರ್ದಿಷ್ಟ' ಎಂದೂ, ಉತ್ತರ ಘಟಕ(ಅಪ್ಪ)ವನ್ನು 'ವಾರ್ಗಿಕ' ಎಂದೂ ಕರೆಯುವುದಾಗಿ ಹೇಳಿದ್ದಾರೆ. ನಿರ್ದಿಷ್ಟವೇ ವ್ಯಕ್ತಿನಾಮ. ಅದು ಆ ಮನೆತನಗಳ ಧರ್ಮ-ದೈವಗಳ ಕೋಶವಾಗಿರುತ್ತದೆ. ವ್ಯಕ್ತಿನಾಮ ಉಚ್ಚಾರಸೌಲಭ್ಯ, ಪ್ರಾಂತಭೇದ, ಮತ್ತು ಅವಸ್ಥಾಭೇದ ಕಾರಣವಾಗಿ ಕೆಲವುಸಲ ಸಹಜ ವ್ಯತ್ಯಾಸಕ್ಕೆ ಕಾರಣವಾದರೆ (ಶ್ರೀನಿವಾಸ>ಶೀನಿ, ಗುರುಲಿಂಗ>ಗುನ್ನ), ಇನ್ನು ಕೆಲವುಸಲ ವೈಯಕ್ತಿಕ ಪ್ರೀತಿ, ದ್ವೇಷ, ಸಾಮಾಜಿಕ ಸ್ಥಾನ-ಮಾನಗಳಿಂದ ಬದಲುಗೊಳ್ಳುತ್ತವೆ(ರಾಮು, ಪರಿಶ್ಯಾ). ಸ್ತ್ರೀನಾಮಗಳ ಕೊನೆಯಲ್ಲಿ ಬರುವ 'ಬಾಯಿ' ಆಕೃತಿಮಾ ೧೨ನೆಯ ಶತಮನದಷ್ಟು ಹಳೆಯದಾಗಿದ್ದು, ಜೋಡು ವಿಶೇಷಣದ (ಅಬ್ಬೆ+ಅವ್ವೆ>ಅಬ್ಬವ್ವೆ>ಅಬ್ಬಾಯಿ>ಬಾಯಿ) ಮೂಲಕ ಸ್ತ್ರೀಪ್ರತಿಷ್ಠೆಯ ಸಂಕೇತವಾಗಿರುವುದು ಗಮನಾರ್ಹವಾಗಿದೆ ಎಂದು ಹೇಳಿರುವಲ್ಲಿ ಡಾ. ಕಲಬುರ್ಗಿ ಅವರ ಚಿಕಿತ್ಸಕ ಬುದ್ಧಿ, ಅಂತರ್‌ಶಿಸ್ತೀಯ ಅಧ್ಯಯನ ಕೆಲಸಮಾಡಿದೆ.

ವಾರ್ಗಿಕಗಳು-೧. ಸ್ತ್ರೀ-ಪುರುಷ ಸೂಚಿಗಳಾಗಿವೆ. ೨. ಅವುಗಳನ್ನು ಸಂಬಂಧವಾಚಿ(ಅಪ್ಪ-ಅವ್ವ), ವೃತ್ತಿವಾಚಿ(ರಾಜ, ಗೌಡ, ರಾಣಿ), ಗೌರವವಾಚಿ(ದೇವ, ಸ್ವಾಮಿ, ರಾಸಿ, ಗೊರವಿ, ಕಂತಿ) ಎಂದು ವಿಭಜಿಸಬಹುದು. ೩. ಇವುಗಳನ್ನು ಬೇಕಾದ ಹೆಸರಿಗೆ ಹಚ್ಚಬಹುದು(ಕೃಷ್ಣ+ಅಪ್ಪ, ಭರಮ+ಗೌಡ). ನಿರ್ದಿಷ್ಟವು ಕೆಲವೊಮ್ಮೆ ವಾರ್ಗಿಕವಾಗಬಹುದು. (ಇಂದ್ರ+ಅಣ್ಣ), ವಾರ್ಗಿಕವು ಕೆಲವೊಮ್ಮೆ ನಿರ್ದಿಷ್ಟವಾಗಬಹುದು(ಅಣ್ಣ+ಅಪ್ಪ), ೪. ನಿರ್ದಿಷ್ಟದ ಮುಂದೆ ನಿರ್ದಿಷ್ಟ ಬರಬಹುದು (ಶಿವದೇವ), ವಾರ್ಗಿಕದ ಮುಂದೆ ವಾರ್ಗಿಕ ಬರಬಹುದು(ಅಣ್ಣಪ್ಪ). ಈ ನಿರ್ದಿಷ್ಟ ಹಾಗೂ ವಾರ್ಗಿಕಗಳು ಕಾಲ, ದೇಶ, ಶ್ರೇಣಿಗೆ ತಕ್ಕಂತೆ ಪ್ರಯೋಗ ಹಾಗೂ ಬದಲಾವಣೆ ಹೊಂದುವುದನ್ನು ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಜೊತೆಗೆ ಪ್ರಾಚೀನ ನಾಮಗಳ ಮತ್ತು ಆಧುನಿಕ ನಾಮಗಳ ವಿಶ್ಲೇಷಣೆಯನ್ನೂ ಇಲ್ಲಿ ಮಾಡಿದ್ದಾರೆ.

ಒಂದು ಜನಾಂಗದ ಸಾಂಸ್ಕೃತಿಕ ಚರಿತ್ರೆಯನ್ನು ಘಟ್ಟಘಟ್ಟವಾಗಿ ಕಟ್ಟಲು ಹೆಸರುಗಳು ಸಹಾಯ

ನೀಡುತ್ತವೆ ಎಂದು ಗೌತಮಿಪುತ್ರ ಶಾತವರ್ಣಿ ಮೊದಲಾದ ಹೆಸರುಗಳು ಕಳೆದುಹೋದ ಮಾತೃಪ್ರಧಾನ ಪದ್ಧತಿಯನ್ನು ಸೂಚಿಸುವ ಅಪೂರ್ವ ಆಧಾರವೆನ್ನಿಸಿವೆ ಎಂದಿದ್ದಾರೆ. ಹಾಗೆಯೇ ಸರಕ್ಕೆಲ್ಲ ಭಟರಿ ರಾಜಕೀಯ, ಭಾಷಿಕ ದೃಷ್ಟಿಯಿಂದ ತುಂಬ ಮಹತ್ವಪೂರ್ಣವಾದುದು ಎಂದಿದ್ದಾರೆ. ಅದೇರೀತಿ ಮಹಾಕವಿ ಪಂಪ, ಎಲ್ಲಮ್ಮ ಮೊದಲಾದ ಹೆಸರುಗಳ ಅಧ್ಯಯನ ಸಂಸ್ಕೃತಿಗೆ ಎಂಥ ಕೊಡುಗೆಗಳು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಕುಟುಂಬನಾಮ :

ಸಮೂಹದಿಂದ ವ್ಯಕ್ತಿಯನ್ನು ಪ್ರತ್ಯೇಕಿಸಿಕೊಡುವುದೇ ಈ ಅಡ್ಡಹೆಸರಿನ ಉದ್ದೇಶ. ಇವು ಗ್ರಾಮ, ಕುಟುಂಬ, ವಂಶ, ವ್ಯಕ್ತಿ, ವೃತ್ತಿ, ಜಾತಿಗಳನ್ನು ಪ್ರತಿನಿಧಿಸುತ್ತಿದ್ದು ಅವುಗಳ ಸದಸ್ಯರನ್ನು ಮಾನಸಿಕವಾಗಿ ಬೆಸೆಯುತ್ತವೆ ಎಂದಿದ್ದಾರೆ. ಮುಂದೆ ಅವುಗಳ ಬಳಕೆಯ ವಿಧಾನ, ಪ್ರಕಾರ, ವೈವಿಧ್ಯ, ಇತರ ಸಂಗತಿಗಳ ವಿವರವಿದೆ. ಉತ್ತರಕರ್ನಾಟಕದಲ್ಲಿ ಕುಟುಂಬನಾಮ ಪ್ರಧಾನವಾಗಿದ್ದರೆ(ಆರ್. ಸಿ ಹಿರೇಮಠ), ದಕ್ಷಿಣ ಕರ್ನಾಟಕದಲ್ಲಿ ವ್ಯಕ್ತಿನಾಮ (ಜಿ. ಎಸ್. ಶಿವರುದ್ರಪ್ಪ) ಪ್ರಧಾನವಾಗಿರುತ್ತದೆ ಎಂದು ಹೇಳಿ, ಉತ್ತರಕನಾಟಕದವರು ಪ್ರಾಚೀನತಾಪ್ರಿಯರೂ ಜನಪದೀಯರೂ ಆಗಿರುವ, ದಕ್ಷಿಣಕರ್ನಾಟಕದವರು ವರ್ತಮಾನನಿಷ್ಠರೂ ಶಿಷ್ಟಪದೀಯರೂ ಆಗಿರುವ ಮೂಲಭಿನ್ನತೆಯ ಸಂಗತಿಯನ್ನು ಬಯಲು ಮಾಡುತ್ತಾರೆ.

ಕುಟುಂಬನಾಮವನ್ನು ಗ್ರಾಮನಾಮವಾಚಿ(ಎಸ್.ಎಸ್.ಮಾಳವಾಡ), ವೃತ್ತಿನಾಮವಾಚಿ(ಕುಂಬಾರ ಗುಂಡಯ್ಯ), ವಸ್ತುನಾಮವಾಚಿ(ಕದಂಬ ಮಯೂರವರ್ಮ), ಇತರ ನಾಮವಾಚಿ(ರಡ್ಡಿ, ರಜಪೂತ) ಎಂದು ವಿಭಜಿಸಿದ್ದಾರೆ. ಕುಟುಂಬಗಳು ವಲಸೆಹೋದ ಚಲನವಲನವನ್ನು ಕೆಲವು ಗ್ರಾಮನಾಮವಾಚಿ ಅಡ್ಡಹೆಸರುಗಳು ಹೇಳುತ್ತಿವೆ. ಮಾನ್ವಿ, ಮಾಗಾವಿ ಮೊದಲಾದ ಗ್ರಾಮಗಳು ನಿಜಾಂ ಪ್ರಾಂತದವು. ಆ ಅಡ್ಡಹೆಸರಿನ ಅನೇಕ ಕುಟುಂಬಗಳು ಬಹುಶಃ ಮುಸಲ್ಮಾನರ ಆಡಳಿತಕ್ಕೆ ಬೇಸತ್ತು ಮೇಲೆ ಹೇಳಿದ ಗ್ರಾಮ ಬಿಟ್ಟು ಉತ್ತರಕರ್ನಾಟಕಕ್ಕೆ ಬಂದಿರಬಹುದು ಎಂಬ ಊಹೆ ಮಾಡಿದ್ದಾರೆ. ಇನ್ನು ವೃತ್ತಿಯನ್ನು ಅಡ್ಡಹೆಸರಾಗಿ ಬಳಸಿಕೊಳ್ಳುವ ರೂಢಿ ಉತ್ತರಕರ್ನಾಟಕದಲ್ಲಿ ಹೆಚ್ಚಾಗಿದ್ದು, ಇದು ಬಹುಶ; ಶರಣರ ಪ್ರಭಾವದಿಂದಾಗಿರಬೇಕು. ಶಾಸನಗಳಲ್ಲಿ ಬರುವ ಗವರೆಗಳು ಎತ್ತು (ಕವಿಲೆ>ಕವರೆ>ಗವರೆ) ಮತ್ತು ಗಾತ್ರಿಗಳು(ಗಾತ್ರಿಗ>ಕತ್ತೆ) ಕತ್ತೆಯ ಮೇಲೆ ವ್ಯಾಪಾರ ಮಾಡುವ ವೃತ್ತಿಯವರು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದೇರೀತಿ ಕೋರಿ, ಗೌರಿ, ಕವಲಿ, ಕವದಿ(ಕೌದಿ), ಕತ್ತಿ, ಚಿನಿವಾಲ, ವಾರದ, ಪಸಾಯಿತ, ಪಟ್ಟಣಶೆಟ್ಟಿ ಅಡ್ಡಹೆಸರುಗಳ ವೃತ್ತಿಗಳನ್ನು ಒಂದೂ ಬಿಡದಂತೆ ಸಂಗ್ರಹಿಸಿದರೆ ಕರ್ನಾಟಕದ ಉದ್ಯೋಗ, ವೃತ್ತಿಗಳ ಮೇಲೆ ಹೊಸಬೆಳಕು ಬೀಳುವುದರಲ್ಲಿ ಸಂದೇಹವಿಲ್ಲ ಎಂದಿದ್ದಾರೆ.

ಉತ್ತರಕರ್ನಾಟಕದ ದಾನಮ್ಮನವರ, ಕೆಂಚವ್ವಗೋಳ ಸ್ತ್ರೀವಾಚಿ ಅಡ್ಡಹೆಸರುಗಳು ದ್ರಾವಿಡ ಮಾತೃಪ್ರಧಾನ ಕುಟುಂಬಗಳಾಗಿರುವುದನ್ನು ಗುರುತಿಸಿದ್ದಾರೆ. ಮಹಾರಾಷ್ಟ್ರದ ಸಾಳುಂಕೆ ಅಡ್ಡಹೆಸರಿನವರು ಚಾಳುಕ್ಯರೊಂದಿಗೆ, ಆಂಧ್ರಪ್ರದೇಶದ ರಡ್ಡಿಗಳು ರಾಷ್ಟ್ರಕೂಟರೊಂದಿಗೆ, ಬಲ್ಲಾಳರು ಹೊಯ್ಸಳರೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುತ್ತಿರುವುದನ್ನು ಎತ್ತಿ ಹೇಳಲಾಗಿದೆ. ಹೀಗೆ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಲಕ್ಷೋಪಲಕ್ಷ ಅಡ್ಡಹೆಸರುಗಳ ಪಟ್ಟಿಮಾಡಿ, ಬಳಸುವ ವಿಧಾನ–

ಸ್ವರೂಪ ಇತ್ಯಾದಿ ದೃಷ್ಟಿಗಳಿಂದ ಅವುಗಳನ್ನು ವರ್ಗೀಕರಿಸಿ ವಿವೇಚಿಸಿದಲ್ಲಿ, ಅವು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಜನಾಂಗ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ. ನಮ್ಮ ಸಂಸ್ಕೃತಿಯ ಅಧ್ಯಯನವೂ ಆಗತ್ತದೆ (ಪು. ೪೫). ಹೀಗೆ ನಾಡವರ ಚರಿತ್ರೆ, ಸಂಸ್ಕೃತಿಯನ್ನು ತಿಳಿಯಲು, ಕಳಚಿಹೋದ ಇತಿಹಾಸದ ಕೊಂಡಿಗಳನ್ನು ಬೆಸೆಯಲು ಅಡ್ಡಹೆಸರುಗಳು ಬಹಳಷ್ಟು ಸಹಾಯವಾಗುತ್ತಿವೆ ಎನ್ನಲಾಗಿದೆ.

ಈ ಸ್ಥಳನಾಮಗಳ ಅಧ್ಯಯನದ ಮಹತ್ವವನ್ನು ಮೊದಲು ಗುರುತಿಸಿದವ ಗತ್ ಫ್ರೀಡ್ ವಿಲ್ಹೆಲ್ಮ(೧೭೬೮). ಆದ್ದರಿಂದ ಇವನನ್ನು ಸ್ಥಳನಾಮಶಾಸ್ತ್ರದ ಮೂಲಪುರುಷನೆಂದು ಕರೆಯಲಾಗುತ್ತಿದೆ. ಇಂಗ್ಲಂಡ್, ಫ್ರಾನ್ಸ್, ಜರ್ಮನಿ, ಅಮೆರಿಕಾ, ಸ್ಕಾಟಲ್ಯಾಂಡ ಮೊದಲಾದ ರಾಷ್ಟ್ರಗಳಲ್ಲಿ ಈ ವ್ಯಾಸಂಗ ದಿನೇದಿನೇ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ಸ್ಥಳನಾಮ ಅಧ್ಯಯನ ನಡೆದುದು ನಿನ್ನೆ ಮೊನ್ನೆ. ಸಿ. ಹಯವದನರಾವ್, ಆರ್. ಸಿ. ಹಿರೇಮಠ, ಶ್ರೀ ಕೆಮ್ಮೂತ್ತೂರು ರಘುಪತಿಭಟ್ಟ, ಡಾ. ಜವರೇಗೌಡ, ಡಾ. ಚಿದಾನಂದಮೂರ್ತಿ, ವಿ. ಗೋಪಾಲಕೃಷ್ಣ ಮೊದಲಾದವರ, ಪ್ಲೇಸ ನೇಮ ಸೋಸಾಯಿಟಿ ಇನ್ ಇಂಡಿಯಾ, ಅನೇಕ ವಿಶ್ವವಿದ್ಯಾಲಯಗಳ ಪ್ರಯತ್ನದಿಂದ ಇದು ಇಂದು ಹೊಸ ಆಕರ್ಷಣೆಯ ಕ್ಷೇತ್ರವಾಗಿ ಬೆಳೆಯುತ್ತಲಿದೆ.

ಯಾವುದೇ ಶೋಧಕ್ಕೂ ಮುಖ್ಯವಾಗಿ ಬೇಕಾದವು ಆಕರಗಳು. ಗ್ರಾಮನಾಮ ಅಧ್ಯಯನಕ್ಕೆ ಸಮರ್ಪಕವಾದ ಗ್ರಾಮನಾಮಸೂಚಿ ಮಹತ್ವದ್ದು. ಶಾಸನ, ಕಾವ್ಯ, ಸ್ಥಳಪುರಾಣ, ಐತಿಹ್ಯ, ವದಂತಿ ಮೊದಲಾದವುಗಳನ್ನು ಅವಲಂಬಿಸಿ ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿ ಮತ್ತು ನಿಜ ನಿಷ್ಪತ್ತಿಗಳು ರೂಪುಗೊಳ್ಳುತ್ತವೆ. ಇವುಗಳಲ್ಲಿ ನಿಜನಿಷ್ಪತ್ತಿಯೇ ಮುಖ್ಯವಾದುದು. ಉದಾ : ಒಂದೆಡೆಯಿಂದ ಕಿತ್ತಿ ಬಂದ ಊರು ಕಿತ್ತೂರು ಎಂಬುದು ಪಾಮರ ನಿಷ್ಪತ್ತಿ, 'ಕೀರ್ತಿಪುರ" ಕಿತ್ತೂರಾಯಿತೆನ್ನುವುದು ಪಂಡಿತ ನಿಷ್ಪತ್ತಿ. ಆದರೆ ಅದು ಕಿರಿದು>ಕಿತ್+ಊರು=ಕಿತ್ತೂರು(ಸಣ್ಣ ಊರು). ಇದು ನಿಜ ನಿಷ್ಪತ್ತಿ. ಪಾಮರನಿಷ್ಪತ್ತಿ ಹಿಂದೆ ಮುಗ್ಧಕಲ್ಪನಾವಿಲಾಸವಿದ್ದರೆ, ಪಂಡಿತನಿಷ್ಪತ್ತಿಯಲ್ಲಿ ಸಂಸ್ಕೃತ ಇಲ್ಲವೆ ಪುರಾಣ ಹಿನ್ನೆಲೆ ಇರುತ್ತದೆ. ನಿಜನಿಷ್ಪತ್ತಿ ಸತ್ಯವಾಗಿರುತ್ತದೆ ಎನ್ನಲಾಗಿದೆ.

ಗ್ರಾಮಗಳ ನಾಮಕರಣದ ಹೆಜ್ಜೆಗಳು ತೀರ ಪ್ರಾಚೀನವಾದವು. ಅಲ್ಲಿನ ಭೌಗೋಲಿಕ ಪರಿಸರವನ್ನು ಸೂಚಿಸುವ ನಿಸರ್ಗವಾಚಿ (ಕಲ್ಲೂರು, ಮಣ್ಣೂರು), ಆ ಮೇಲಿನವು ಅಲ್ಲಿ ವಾಸಿಸುವ ಜನಾಂಗದ ಇತಿಹಾಸವನ್ನು ಹೇಳುವ ಜನಾಂಗವಾಚಿ (ಯರಂಬರು ವಾಸಿಸುತ್ತಿದ್ದ ನಾಡು ಯರಂಬರಿಗೆ>ಯಲಬುರ್ಗಿ), ತರುವಾಯದವು ಗ್ರಾಮನಿರ್ಮಾತೃವಿನ ಅಥವಾ ಅವನ ಸಂಬಂಧಿಯ ವಿಷಯವನ್ನು ತಿಳಿಸುವ ವ್ಯಕ್ತಿವಾಚಿ (ಸೊನ್ನಲ+ಕೆಯ್=ಸೊನ್ನಲಿಗೆ). ಇತ್ತೀಚಿನವು ಆದರ್ಶವಾಚಿನಾಮ (ಶಾಂತ+ಗಿರಿ)ಗಳು ಎಂದು ಗುರುತಿಸಿದ್ದಾರೆ. ಕರಾವಳಿತೀರದಲ್ಲಿ ನಿಸರ್ಗವಾಚಿನಾಮಗಳು ಅಧಿಕ(ಕಲ್ಲಡ್ಕ, ಕುಂಚಜಿಬೆಟ್ಟು), ಉತ್ತರಕರ್ನಾಟಕದಲ್ಲಿ ಜನಾಂಗವಾಚಿ ನಾಮಗಳು ಅಧಿಕ (ಕಲಂಬರಿಗೆ, ಹಿಪ್ಪರಿಗೆ), ದಕ್ಷಿಣಕರ್ನಾಟಕದಲ್ಲಿ ವ್ಯಕ್ತಿವಾಚಿಗ್ರಾಮನಾಮಗಳು ಅಧಿಕ (ಚಾಮರಾಜನಗರ, ಚೆನ್ನರಾಯಪಟ್ಟಣ). ಮಧ್ಯಕರ್ನಾಟಕದಲ್ಲಿ ಸ್ತ್ರೀವಾಚಿಗ್ರಾಮನಾಮಗಳು ವಿಪುಲ ಸಂಖ್ಯೆಯಲ್ಲಿವೆ. ಅಲ್ಲಿ ಆಳಿದ ಹೊಯ್ಸಳ ಅರಸರು ಶೃಂಗಾರಪ್ರಿಯರು, ವಿಜಯನಗರದ ಪಾಳೆಯಗಾರರು ವಿಷಯಲೋಲುಪರಾಗಿದ್ದರಿಂದ ಇವರು ಸಹಜವಾಗಿ ತಮ್ಮ ಪತ್ನಿ, ಪ್ರೇಯಸಿಯರ ಹೆಸರಿನಲ್ಲಿ ಈ ಗ್ರಾಮಗಳನ್ನು ರಚಿಸಿದಂತಿದೆ, ಪುನರ್‌ನಾಮಕರಣ ಮಾಡಿದಂತಿದೆ ಎಂದು ಹೇಳಿರುವಲ್ಲಿ ಡಾ. ಕಲಬುರ್ಗಿ ಅವರ ವ್ಯಾಪಕ ಅಧ್ಯಯನ, ಸೂಕ್ಷ್ಮದೃಷ್ಟಿ ಗೋಚರವಾಗುತ್ತದೆ.

ಸಾಮಾನ್ಯವಾಗಿ ಗ್ರಾಮನಾಮಗಳು ಕೂಡುನುಡಿಗಳಾಗಿರುತ್ತವೆ. ಅವುಗಳ ಪೂರ್ವ ಘಟಕ(ನಿರ್ದಿಷ್ಟ–ವಿಜಯ) ಮತ್ತು ಉತ್ತರ ಘಟಕ(ವಾರ್ಗಿಕ–ಪುರ) ಎಂದು ಎರಡು ವಿಭಾಗ ಮಾಡಲಾಗುತ್ತಿದೆ. ಇಲ್ಲಿ ನಿದಿಷ್ಟ ಮಾತ್ರ ಆ ಊರನ್ನು ನಿರ್ದಿಷ್ಟವಾಗಿ ಸೂಚಿಸುತ್ತದೆ ಎಂದಿದ್ದಾರೆ.

ಗ್ರಾಮನಾಮಗಳು ಕಾಲಕ್ರಮದಲ್ಲಿ ರೂಪಾಂತರ(ಕೊಳನೂರು>ಕೊಣ್ಣೂರು, ಕಲಂಬರಗೆ> ಗುಲಬರ್ಗಾ), ಭಾಷಾಂತರ(ಧಾರವಾಡ=ತಂತುಪುರಿ, ಧಾರಾನಗರಿ, ಹುಬ್ಬಳ್ಳಿ–ಭ್ರೂಲತಾಪುರ. ಇದರ ನಿಜರೂಪ ಪೂರ್ವದಹಳ್ಳಿ), ನಾಮಾಂತರ(ಕಲ್ಲಹಳ್ಳಿ>ದೇವಲಾಪುರ)ಹೊಂದಿ ವ್ಯತ್ಯಾಸಗೊಂಡಿರುವುದರಿಂದ ಇಲ್ಲೆಲ್ಲ ಭಾಷಾವಿಜ್ಞಾನಿ ತುಂಬಾ ಎಚ್ಚರದಿಂದ ಕಾರ್ಯನಿರ್ವಹಿಸ ಬೇಕಾತ್ತದೆ ಎಂದು ಎಚ್ಚರಿಸಿರುವರು.

ಗ್ರಂಥದ ಕೊನೆಯಲ್ಲಿ ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ೧೨೨ ಹಳ್ಳಿಗಳ ಸ್ವರೂಪ ಮತ್ತು ವರ್ಗೀಕರಣದ ಕೇಸ್‌ಸ್ಟಡಿಯನ್ನು ಕೊಟ್ಟಿದ್ದು ಅದು ಮುಂದೆ ಅಭ್ಯಾಸ ಮಾಡಬಯಸುವ ನಾಮವಿಜ್ಞಾನಿಗಳಿಗೆ ಮಾರ್ಗದರ್ಶಿ ಎನ್ನುವ ಹಾಗಿದೆ.

ಒಟ್ಟಾರೆ ಡಾ. ಕಲಬುರ್ಗಿ ಅವರು ನಾಮವಿಜ್ಞಾನವನ್ನು ಅತ್ಯಂತ ಶಾಸ್ತ್ರೋಕ್ತವಾಗಿ ವಿಂಗಡಿಸಿ ಅಧ್ಯಯನ ಮಾಡಿರುವುದಕ್ಕೆ ಪ್ರತಿ ಅಧ್ಯಾಯವನ್ನು–ಪೀಠಿಕೆ, ಅಧ್ಯಯನದ ವಿಧಾನ, ಅಧ್ಯಯನದ ಇತಿಹಾಸ, ಆಕರಸಾಮಗ್ರಿ, ನಾಮನಿಷ್ಪತ್ತಿ, ನಾಮಕರಣ ನಡೆದುಬಂದ ದಾರಿ, ನಾಮಕರಣ, ನಾಮದ ರಾಚನಿಕ ಸ್ವರೂಪ ಹೀಗೆ ವಿಭಜಿಸಿ, ಮತ್ತೆ ಅವುಗಳಲ್ಲಿ ಉಪವಿಭಾಗಗಳನ್ನು ಮಾಡಿ, ಅವುಗಳಗೆ ಪುಷ್ಟಿಯನ್ನು ನೀಡುವ ಹಲವಾರು ಉದಾಹರಣೆಗಳನ್ನು ಕೊಟ್ಟಿರುವುದು ನಿದರ್ಶನವಾಗಿದೆ. ನಾಮಗಳ ನಿಷ್ಪತ್ತಿಯನ್ನು ಹೇಳುವಾಗ ತಮಗೆ ಖಚಿತವಿರುವ ನಿಷ್ಪತ್ತಿಯನ್ನು ಖಚಿತವೆಂದೂ, ಖಚಿತವಿಲ್ಲದ ಕಡೆ 'ಸರಿಯಾದ ಅರ್ಥ ಹೇಳುವುದು ಕೊಂಚ ತೊಂದರೆ'(ಪು.೨೮), ಸಂದೇಹ ಹುಟ್ಟುತ್ತದೆ(ಪು.೨೭) ಎಂದೂ ಹೇಳಿರುವುದು ಡಾ. ಕಲಬುರ್ಗಿ ಅವರ ಪ್ರಾಮಾಣಿಕತೆಯನ್ನು ಸೂಚಿಸುತ್ತದೆ. ಒಂದೆರಡು ಕಡೆ 'ಕೇಶಿರಾಜನು ತದ್ಧಿತ ಪದಗಳಿಂದ ಈ ಪ್ರತ್ಯಯಗಳನ್ನು ಸರಿಯಾಗಿ ಬಿಡಿಸಿಕೊಂಡಿಲ್ಲವೆನಿಸುತ್ತದೆ' ಎಂದು'ಹಾವಾಡಿಗ ಪದವನ್ನು ಕೇಶಿರಾಜ ಹಾವು+ಅಡಿಗ ಎಂದು ಬಿಡಿಸಿದುದು ತಪ್ಪು'(ಪು. ೪೯) ಎಂದು ಹೇಳಿರುವುದು ಅವರ ಭಾಷಾಪ್ರಭುತ್ವವನ್ನು ಸೂಚಿಸುತ್ತದೆ.

V. ಕನ್ನಡ ಸಂಶೋಧನಶಾಸ್ತ್ರ – ೧೯೯೨

ಸಂಶೋಧನೆ ಡಾ. ಎಂ. ಎಂ. ಕಲಬುರ್ಗಿ ಅವರ ಮಹತ್ವಾಕಾಂಕ್ಷೆಯ ಕ್ಷೇತ್ರ. ಸುಮಾರು ೨೫ ವರ್ಷಗಳಿಂದ ಸಂಶೋಧನೆಯ ಎಲ್ಲ ಕ್ಷೇತ್ರಗಳಲ್ಲಿ ಸಾಧನೆಯ ಶಿಖರವನ್ನು ಏರಿದವರು. ಆದರೂ ಅವರೇ 'ಕನ್ನಡ ಸಂಶೋಧನಶಾಸ್ತ್ರ'ದ ಪ್ರಾರಂಭಕ್ಕೇ 'ಸಂಶೋಧನೆ ಮಾಡುವುದು ಕಷ್ಟ, ಸಂಶೋಧನೆಯ ಬಗ್ಗೆ ಬರೆಯುವುದು ಇನ್ನೂ ಕಷ್ಟ' ಎಂದಿದ್ದಾರೆ. ಬಹುಶಃ 'ಕನ್ನಡದಲ್ಲಿ ಈ ವರೆಗೆ ಇಂಥ ಪುಸ್ತಕಗಳು ಪಾಶ್ಚಿಮಾತ್ಯ ಸಂಶೋಧನಶಾಸ್ತ್ರದ ವಿಚಾರಗಳನ್ನು ಬೆರಸಿ, ವಿಜ್ಞಾನ–ಸಮಾಜವಿಜ್ಞಾನ ನಿಕಾಯುಗಳಿಗೆ ಸಂಬಂಧಿಸಿದ ಸಂಶೋಧನವಿಧಾನಗಳನ್ನು ಬಳಸಿ ಗೋಜಲುಗೊಳಿಸಿವೆ' ಎಂಬ ಚಿಂತನೆಯೆ ಅವರ ಈ ಉದ್ಗಾರಕ್ಕೆ ಕಾರಣವಾಗಿರಬೇಕು. 'ಇಂಥ ಗೊಂದಲಗಳಿಂದ ದೂರ ಉಳಿದು, ಕಲಾನಿಕಾಯದ ಪರಿಧಿಗೆ ಒಳಪಡುವ ಭಾಷೆ, ಸಾಹಿತ್ಯ,

ಸಂಸ್ಕೃತಿ, ಜನಪದ, ಶಾಸನ ಕ್ಷೇತ್ರಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು' ಕೃತಿ ರಚಿಸುವ ಹಂಬಲ ಅವರದು. ಅಲ್ಲದೆ 'ನಾನು ಕಳೆದ ೨೫ ವರ್ಷಗಳಿಂದ ಸಂಶೋಧನಕಾರ್ಯದಲ್ಲಿ ನಿರತನಾಗಿದ್ದೇನೆ. ಈ ವರೆಗಿನ ನನ್ನ ಅನುಭವಗಳನ್ನೇ ನಿಯಮ ಮಾಡಿಕೊಂಡು, ಮುಖ್ಯವಾಗಿ ನನ್ನ ಸಂಶೋಧನೆಯನ್ನೇ ನಿದರ್ಶನ ಮಾಡಿಕೊಂಡು ಈ ಪುಸ್ತಕ ರಚಿಸಿದ್ದೇನೆ. ಹೀಗಾಗಿ ಬಹಳಷ್ಟು ಸಲ ಇಲ್ಲಿ ನಿಯಮವೂ ನಾನೇ, ನಿದರ್ಶನವೂ ನಾನೇ ಆಗಿದ್ದೇನೆ' ಎಂದಿದ್ದಾರೆ.

ಆದರೆ ಸಂಶೋಧನೆಯೆನ್ನುವುದು ಒಂದು ಶಾಸ್ತ್ರ. ಯಾವುದೇ ಶಾಸ್ತ್ರ ರೂಪಗೊಳ್ಳುವಾಗಲೇ ಅದು ತನ್ನದೇ ಆದ ನೀತಿ–ನೇಮಗಳನ್ನು ಅಳವಡಿಸಿಕೊಂಡೇ ಬಂದಿರುತ್ತದೆ. ಇವು ಎಲ್ಲ ಭಾಷೆಗೂ, ಎಲ್ಲ ನಿಕಾಯಕ್ಕೂ ಬೇಕಾದವೇ. ಸಿಂಗಭೂಪಾಲನು 'ರಸಾರ್ಣವಸುಧಾಕರ' ಎಂಬ ಕೃತಿಯಲ್ಲಿ 'ಅದೇ ಪದಸಮೂಹ, ಅದೇ ಅರ್ಥಸಂಪತ್ತು, ಆದರೂ ಕಟ್ಟುವ ಕೌಶಲದಿಂದ ಕಾವ್ಯವಾಗುತ್ತದೆ' ಎಂಬ ಮಾತನ್ನೇ ಸಂಶೋಧನೆಗೂ ಅನ್ವಯಿಸಬಹುದು. ಡಾ. ಕಲಬುರ್ಗಿ ಅವರೇ 'ಕನ್ನಡ ಗ್ರಂಥಸಂಪಾದನ ಶಾಸ್ತ್ರ'ದ ಕೊನೆಯಲ್ಲಿ 'ಎಲ್ಲ ಭಾಷೆಗಳಿಗೂ ಸಾಮಾನ್ಯವಾಗಿರುವ ಗ್ರಂಥಸಂಪಾದನೆಯ ಮೂಲತತ್ವಗಳಿರುತ್ತವೆ' ಎಂಬುದನ್ನು ಗ್ರಂಥಸಂಪಾದನೆಯ ಹಿನ್ನೆಲೆಯಲ್ಲಿ ಒಪ್ಪಿಕೊಂಡಿದ್ದಾರೆ(ಪು.೧೮೭). ಹಾಗೆಯೇ ಸಂಶೋಧನೆಗೂ ಎಲ್ಲ ಭಾಷೆ, ನಿಕಾಯುಗಳಿಗೂ ಸಾಮಾನ್ಯವಾಗಿರುವ ಮೂಲತತ್ವಗಳಿರುತ್ತವೆ. ಆದ್ದರಿಂದ ಡಾ. ಕಲಬುರ್ಗಿ ಅವರ ಮೇಲಿನ ಮಾತಿನಲ್ಲಿಯ 'ನಿಯಮವೂ ನಾನೇ' ಎನ್ನುವುದನ್ನು ಬಿಟ್ಟು 'ನಿದರ್ಶನವೂ ನಾನೆ' ಎಂಬ ಮಾತನ್ನು ಮಾತ್ರ ಒಪ್ಪಿಕೊಳ್ಳಬಹುದಾಗಿದೆ.

ಪ್ರಾರಂಭದಲ್ಲಿ ಸಂಶೋಧನೆಯ ಅರ್ಥ ಹೇಳಿ, ಡಿಸ್‌ಕವರಿ, ಇನ್‌ವೆನ್‌ಶೆನ್‌ಗಳಂತೆ ರಿಸರ್ಚ ಎಂಬುದು ಒಂದು ಸಂಶೋಧನ ಪ್ರಕಾರವಲ್ಲ, ಅವುಗಳ ಹಿಂದೆ ನಡೆಯುವ ಒಂದು ಪ್ರಕ್ರಿಯೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಡಿಸ್ಕವರಿ ಹಿಂದೆ ನಡೆಯುವ ಶೋಧ ಪ್ರಕ್ರಿಯೆ 'ಅನ್ವೇಷಣಾತ್ಮಕ ಸಂಶೋಧನೆ,' ಇನ್‌ವೆನ್‌ಶೆನ್ ದ ಹಿಂದೆ ನಡೆಯುವ ಶೋಧಪ್ರಕ್ರಿಯೆ 'ಆವಿಷ್ಕಾರಾತ್ಮಕ ಸಂಶೋಧನೆ' ಎಂದು ಹೇಳಿ, ಅನ್ವೇಷಣೆ, ಆವಿಷ್ಕಾರ ಎಂಬ ಪದಗಳಿಗೆ ಹೊಸ ಅರ್ಥವನ್ನು ಕಲ್ಪಿಸಿದ್ದಾರೆ. ಹಾಗೆಯೇ ಶಾಸ್ತ್ರ ಮತ್ತು ವಿಜ್ಞಾನದ ಜಿಜ್ಞಾಸೆಗೆ ತೊಡಗಿ, 'ರಿಸರ್ಚ ಮೆಥಡಾಲಜಿ'ಗೆ ಆನ್ವಯಿಕ–ಸೈದ್ಧಾಂತಿಕಗಳ ಸಂಗಮವಾದ ಬರವಣಿಗೆಯನ್ನು'ಸಂಶೋಧನ ವಿಧಾನಶಾಸ್ತ್ರ' ಎಂಬ ಹೆಸರಿನಿಂದ ಕರೆಯುವುದು ಸೂಕ್ತ, ಆದರೆ ನಿತ್ಯ ಬಳಕೆಯ ದೃಷ್ಟಿಯಿಂದ 'ಸಂಶೋಧನಶಾಸ್ತ್ರ'ಯೆಂಬ ಹೆಸರೇ ಯೋಗ್ಯ ಎಂದಿದ್ದಾರೆ. ಮುಂದೆ ಎಲ್ಲ ಸಂಶೋಧಕರಂತೆಯೇ ಕನ್ನಡ ಸಂಶೋಧಕರಲ್ಲಿಯೂ – ಕುತೂಹಲ, ಪ್ರಾಮಾಣಿಕತೆ, ಧೈರ್ಯ, ವ್ಯುತ್ಪತ್ತಿ, ಪ್ರತಿಭೆ ಅವಶ್ಯ ಎಂಬುದನ್ನು ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಆಕರಗಳು ಎಂಬ ಎರಡನೆಯ ಅಧ್ಯಾಯದಲ್ಲಿ ಕೆಲವು ಸಲ ಆಕರಗಳ ಕರ್ತೃವಾರೋ ತಿಳಿಯುವುದಿಲ್ಲ, ಮೂಲತಃ ಧಾರ್ಮಿಕ ಆಕರಗಳ ಹಾಗೆ ಲೌಕಿಕ ಆಕರಗಳು ಸಿಗುವುದು ದುರ್ಲಭ. ಇದಕ್ಕೆ ಮತಮತ್ಸರ, ರಾಜ್ಯಮತ್ಸರಗಳು ಕಾರಣವಿರಬಹುದು. ಇವುಗಳಿಂದ ಪಾಠಾಂತರ, ರೂಪಾಂತರ ಸಾಧ್ಯ ಎಂದಿದ್ದಾರೆ. ಮುಂದುವರೆದು ಆಕರ ಪ್ರಕಾರಗಳಲ್ಲಿ ೧. ವಸ್ತುಸಾಮಗ್ರಿ ೨. ಭಾಷಾಸಾಮಗ್ರಿ, ೩. ಕ್ರಿಯಾಸಾಮಗ್ರಿ, ೪. ಜ್ಞಾನಸಾಮಗ್ರಿ ಎಂಬ ನವೀನ ರೀತಿಯ ವರ್ಗೀಕರಣ ಮಾಡಿರುವುದನ್ನು ಕಾಣುತ್ತೇವೆ. ವಸ್ತು ಸಾಮಗ್ರಿಯಲ್ಲಿ–ಪುರಾತತ್ವಶೋಧವು ಭೂಮಿಯ ಮೇಲಿನ ವಸ್ತುಗಳು, ಭೂಮಿಯ ಒಳಗಿನ ವಸ್ತುಗಳೆಂದೂ, ಭಾಷಾಸಾಮಗ್ರಿಯನ್ನು–ಲಿಖಿತ ಸಾಮಗ್ರಿ, ಮೌಖಿಕ ಸಾಮಗ್ರಿಯೆಂದೂ,

ಕ್ರಿಯಾಸಾಮಗ್ರಿಯಲ್ಲಿ-ದೈನಂದಿನ ಕ್ರಿಯೆ, ಆಚರಣಾತ್ಮಕ ಕ್ರಿಯೆ, ಘಟಿತ ಕ್ರಿಯೆ ಎಂದೂ, ಜ್ಞಾನಸಾಮಗ್ರಿಯನ್ನು ವಿಶಿಷ್ಟ ಮತ್ತು ಅನುಸರಣಾತ್ಮಕ ಎಂದೂ ವಿಭಜನೆ ಮಾಡಿ, ಇಡೀ ಸಾಮಗ್ರಿಯನ್ನು ಒಂದು ಚೌಕಟ್ಟಿನಲ್ಲಿ ತರಲು ಪ್ರಯತ್ನಿಸಿದ್ದಾರೆ. ಜೊತೆಗೆ- ಪ್ರಾಮಾಣಿಕ ಆಕರ-ಅಪ್ರಾಮಾಣಿಕ ಆಕರ, ಪ್ರಧಾನ ಆಕರ-ಪೋಷಕ ಆಕರ-ಪೂರಕ ಆಕರ; ಪ್ರತ್ಯಕ್ಷ-ಪರೋಕ್ಷ ಆಕರ ಎಂದು ವಿಭಜಿಸಿ ಅವುಗಳ ವಿವರವನ್ನಿತ್ತಿದ್ದಾರೆ. ಅಪ್ರಾಮಾಣಿಕ ಆಕರದಲ್ಲಿ ಶಿಲಾಶಾಸನಗಳಿಗಿಂತ ತಾಮ್ರಶಾಸನಗಳು ಜಾಸ್ತಿ. ಆಸ್ತಿ ಇಲ್ಲವೆ ವಸ್ತುವಿನ ಆಸೆಗಾಗಿ ಕೃತಕವಾಗಿರುವದನ್ನು ಗಂಗರ ೬೮ ತಾಮ್ರಶಾಸನಗಳಲ್ಲಿ ೧೯ ಕೂಟಶಾಸನಗಳಾಗಿರುವ ಸ್ಫೋಟಕ ಮಾಹಿತಿಯನ್ನು ಇಲ್ಲಿ ಇತ್ತಿದ್ದಾರೆ. ಹಾಗೆಯೆ ೩೦೦ ಜನ ನಿಜ ವಚನಕಾರರಿದ್ದರೆ, ೧೧೦ ಜನ ಪ್ರಕ್ಷಿಪ್ತ ವಚನಕಾರರಿರುವುದನ್ನೂ ಬಹಿರಂಗಪಡಿಸಿದ್ದಾರೆ.

ಇಲ್ಲಿಯೇ ಆಕರದ ನೆಲೆಗಳಲ್ಲಿ ಕೇಂದ್ರೀಯ ನೆಲೆಗಳು ಮತ್ತು ಕ್ಷೇತ್ರೀಯ ನೆಲೆಗಳನ್ನು ವಿವರಿಸಿದ್ದಾರೆ. ಕೇಂದ್ರೀಯ ನೆಲೆಗಳಲ್ಲಿ ಪ್ರಾಚೀನ ಮತ್ತು ಆಧುನಿಕ ಹಸ್ತಪ್ರತಿಭಾಂಡಾರಗಳನ್ನು ವಿವರಿಸಿ, ಕ್ಷೇತ್ರೀಯ ನೆಲೆಯಲ್ಲಿ ಕ್ಷೇತ್ರಕಾರ್ಯವು ಪ್ರತ್ಯಕ್ಷವಾಗಿರಬಹುದು, ಪರೋಕ್ಷವಾಗಿರಬಹುದು ಎಂದಿದ್ದಾರೆ. ಪ್ರತ್ಯಕ್ಷ ಕ್ಷೇತ್ರಕಾರ್ಯವು ಮತ್ತೆ ಪೂರ್ವಸಿದ್ಧತೆ ಮತ್ತು ಕ್ಷೇತ್ರಕಾರ್ಯವೆಂಬ ಎರಡು ಹಂತಗಳಲ್ಲಿ ನಡೆಯುವುದನ್ನು ಹೇಳಿದ್ದಾರೆ. 'ಆಕರ ಶೋಧಕ್ರಿಯೆ' ಯಲ್ಲಿ ಆಕರಗಳು ಸಂಶೋಧನಕಟ್ಟಡಕ್ಕೆ ಕಲ್ಲು, ಮಣ್ಣು, ಇಟ್ಟಿಗೆ ಸಂಗ್ರಹಿಸುವ ಕೆಲಸ. ಸಾಮಗ್ರಿ ದುರ್ಬಲವಾಗಿದ್ದರೆ, ಕೊರತೆಯಿಂದ ಕೂಡಿದ್ದರೆ, ಕಟ್ಟಡ ಅಷ್ಟರಮಟ್ಟಿಗೆ ದುರ್ಬಲ, ಅಸಮರ್ಪಕವಾದಂತೆಯೇ. ಆದ್ದರಿಂದ ಎಲ್ಲ ಮೂಲ ಆಕಗಳನ್ನು ಶೋಧಿಸುವುದು ಸಂಶೋಧಕನ ಪ್ರಥಮ ಕರ್ತವ್ಯ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಒಂದು ಆಕರ, ಇನ್ನೊಂದು ಆಕರಕ್ಕೆ ಸೂಚನೆ ನೀಡುತ್ತ ಸಂಶೋಧಕನನ್ನು ಇಲ್ಲಿಂದ ಅಲ್ಲಿಗೆ ಮುನ್ನಡೆಸುತ್ತದೆ ಎಂಬುದಕ್ಕೆ ತಾವು ಸವದತ್ತಿ ಎಲ್ಲಮ್ಮನನ್ನು ಕುರಿತು ಕವಿಸಾಹಿತ್ಯ, ಶಾಸನಸಾಹಿತ್ಯ, ಜನಪದಸಾಹಿತ್ಯ, ವದಂತಿ, ಪುರಾಣ, ಇತಿಹಾಸ, ಆಚರಣೆ, ನಂಬಿಕೆ ಹೀಗೆ ಅನೇಕ ಆಕರಗಳಿಂದ ಶೋಧಿಸಿದ ಕುತೂಹಲಕಾರಿ ಸಂಗತಿಯನ್ನು ವಿವರಿಸಿದ್ದಾರೆ.

'ಸಂಶೋಧನ : ಕ್ರಿಯೆ ಪ್ರಕಾರ' ಎಂಬ ಅಧ್ಯಾಯದಲ್ಲಿ ಸಂಶೋಧನೆ ಪ್ರಾರಂಭವಾಗುವುದು 'ಮೂಲ ಊಹನ'ದಿಂದ ಎಂದು ಹೇಳಿ, ಕವಿಯದು 'ಪ್ರತ್ಯುನ್ನಮತಿ'ಯಾದರೆ, ಸಂಶೋಧಕನದು 'ಪ್ರಶ್ನೋತ್ಪನ್ನಮತಿ'. ಇವನ ಕಣ್ಣು, ಕಿವಿ, ಮನಸ್ಸು, ಪ್ರಜ್ಞೆ ಸದಾ ಜಾಗ್ರವಾಗಿರಬೇಕು. ಸಂಶೋಧನೆಯ ಪ್ರಥಮ ಹಂತದಲ್ಲಿ ಒಂದು ಅಸ್ಪಷ್ಟ 'ಮೂಲ ಊಹನ' ಮೂಡುತ್ತದೆ. ಆಮೇಲೆ ಅದನ್ನು 'ಸಂಭಾವ್ಯತೆ'ಯ ಹಂತಕ್ಕೆ, ಕೊನೆಗೆ 'ಸತ್ಯ'ದ ಹಂತಕ್ಕೆ ಒಯ್ಯಬೇಕಾಗುತ್ತದೆ. ಈ ರೀತಿ ಪ್ರಾಥಮಿಕ ಹಂತದಲ್ಲಿ ಹೊಳೆಯುವ ಅಸ್ಪಷ್ಟವಿಷಯವನ್ನು ಇಂಗ್ಲೀಷಿನಲ್ಲಿ 'ಹೈಪೋಥಿಸ್' ಎಂದು ಕರೆಯುತ್ತಾರೆ ಎಂದಿದ್ದಾರೆ. ಊಹೆ ಎನ್ನುವುದು ಮೂಲ ಊಹೆ, ಅನುಮಾನ ಮತ್ತು ಸಂಭಾವ್ಯ ಎಂಬ ಮೂರು ರೂಪಗಳಲ್ಲಿ, ಮೂರು ಹಂತಗಳಲ್ಲಿ ಪಾತ್ರವಾಡುವ ಸಾಧ್ಯತೆಯನ್ನು ಇಲ್ಲಿ ಬಿಚ್ಚಿ ಇಟ್ಟಿದ್ದಾರೆ. ಹೀಗೆ ಇಲ್ಲಿ ಸಾಂಪ್ರದಾಯಿಕ ವಿವರಣೆಯಿದ್ದರೂ ಉದಾಹರಣೆಗಳ ಹೊಸತನವಿದೆ.

ಮುಂದೆ ಆಕರ-ಆಕರಸಾಮಗ್ರಿ-ದತ್ತಸಾಮಗ್ರಿಗಳ ಸಂಗ್ರಹಣ, ವಿಶ್ಲೇಷಣಕ್ರಿಯೆ-ವ್ಯಾಖ್ಯಾನಕ್ರಿಯೆ, ಸಂಭಾವ್ಯಸಂಶೋಧನೆ-ಸತ್ಯ ಸಂಶೋಧನೆ ಎಂಬ ವಿಭಾಗಗಳನ್ನು ಮಾಡಿದ್ದಾರೆ.

ಸಂಶೋಧನೆಯ ಪ್ರಕಾರಗಳನ್ನು–ವಿಷಯನಿಷ್ಠ ಪ್ರಕಾರ, ಉದ್ದೇಶನಿಷ್ಠ ಪ್ರಕಾರ, ವಿಧಾನನಿಷ್ಠ ಪ್ರಕಾರ, ಸ್ವರೂಪನಿಷ್ಠಪ್ರಕಾರ ಎಂದು ವಿಭಜಿಸಿರುವಲ್ಲಿ ಹೊಸತನವನ್ನು ಕಾಣುತ್ತೇವೆ. ಮುಂದಿನ ಆನ್ವಯಿಕ ಸಂಶೋಧನೆ/ಬಹುಶಿಸ್ತೀಯ ಸಂಶೋಧನೆ/ಸಂಖ್ಯಾನಿಷ್ಠ ಸಂಶೋಧನೆ/ಮಾದರಿನಿಷ್ಠ ಸಂಶೋಧನೆ/ಘಟಕನಿಷ್ಠ ಸಂಶೋಧನೆ/ಸಾಂಸ್ಕೃತಿಕ ಸಂಶೋಧನೆ ಎಂಬ ವಿಭಾಗಗಳು ಎಲ್ಲ ನಿಕಾಯಗಳಿಗೂ ಅನ್ವಯವಾಗುತ್ತಿದ್ದು, ಅವುಗಳಿಗೆ ಹೊಸಹೊಸ ಕನ್ನಡದ ಉದಾಹರಣೆಗಳನ್ನು ಕೊಟ್ಟಿರುವಲ್ಲಿ ಡಾ. ಕಲಬುರ್ಗಿ ಅವರ ಅಪಾರವಾದ ಅಧ್ಯಯನದ ಹಿನ್ನೆಲೆಯನ್ನು ಕಾಣುತ್ತೇವೆ. ಉದಾಹರಣೆಗೆ ಪಂಪನ 'ಒತ್ತಿ ತರುಂಬಿ ನಿಂದ . . .' ಈ ಪದ್ಯವನ್ನು ಪಾಠಪರಿಷ್ಕರಣ, ಕಾವ್ಯಸೌಂದರ್ಯ, ಸಮಕಾಲೀನ ಜೀವನಮೌಲ್ಯ ಹಾಗೂ ಜಾನಪದ ನಂಬಿಕೆ ಮುಂತಾದ ಅನ್ಯಶಿಸ್ತುಗಳಿಂದ ವಿವರಿಸಿರುವಲ್ಲಿ ಡಾ. ಕಲಬುರ್ಗಿ ಅವರ ನಿಶಿತಮತಿ ಗೋಚರವಾಗುತ್ತಿದೆ. ಕೊನೆಯಲ್ಲಿ ಸಾಂಸ್ಕೃತಿಕ ಸಂಶೋಧನೆ ಕುರಿತು " ಈವರೆಗೆ ಆಕರ ಸಾಮಗ್ರಿಯನ್ನು ವಿಶ್ಲೇಷಣಾತ್ಮಕವಾಗಿ ಅಭ್ಯಸಿಸಿ ಒಂದು ವಿಷಯದ ಅಥವಾ ಸಮಗ್ರ ಬದುಕಿನ 'ರೂಪನಿಷ್ಠ ಶೋಧ' ನಡೆಸಿದ್ದೇವೆಯೇ ಹೊರತು, ವ್ಯಾಖ್ಯಾನಾತ್ಮಕವಾಗಿ ಅಭ್ಯಸಿಸಿ 'ಗುಣನಿಷ್ಠ ಶೋಧ' ನಡೆಸುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಅಂದರೆ ಪ್ರಾಚೀನ ಕಾಲದಲ್ಲಿ ಸತಿಪದ್ಧತಿ, ವೀರಮರಣಗಳು ಪ್ರಚಲಿತವಿದ್ದವೆಂಬುದನ್ನು ತೋರಿಸಿಕೊಟ್ಟಿದ್ದೇವೆ. ಅವುಗಳ ಆಚರಣೆಯ ವಿಧಾನ–ಐತಿಹಾಸಿಕ ಬೆಳವಣಿಗೆ–ಪ್ರಾದೇಶಿಕ ಪ್ರಸಾರಗಳನ್ನು ಪ್ರಕಟಿಸಲು ಕೆಲವೊಮ್ಮೆ ಪ್ರಯತ್ನಿಸಿದ್ದೇವೆ. ಆದರೆ ಈ ಪದ್ಧತಿಗಳು ಅಸ್ತಿತ್ವಕ್ಕೆ ಬರಲು ಇದ್ದ ಒತ್ತಡಗಳು, ಜನರು ಅವುಗಳಿಗೆ ತೋರಿಸುತ್ತಲಿದ್ದ ಪ್ರತಿಕ್ರಿಯೆಗಳು, ಅವುಗಳ ಒಳಿತು–ಕೆಡುಕುಗಳು ಇತ್ಯಾದಿಯಾಗಿ 'ಸಾಮಾಜಿಕನ್ಯಾಯ'ದ ದೃಷ್ಟಿಯಿಂದ ಸಂಬಂಧಪಟ್ಟ ಆಕರಗಳನ್ನು ವ್ಯಾಖ್ಯಾನಿಸಿಲ್ಲ. ಮೊದಲು ವಿಶ್ಲೇಷಿಸಿ ಆ ಮೇಲೆ ವ್ಯಾಖ್ಯಾನಿಸಿದರೆ ಮಾತ್ರ ಈ ಅಧ್ಯಯನಕ್ಕೆ ಪೂರ್ಣತೆ ಒದಗುತ್ತದೆ. ಈ ದಿಸೆಯಲ್ಲಿ ನಮ್ಮ 'ಸಾಂಸ್ಕೃತಿಕ ಅಧ್ಯಯನ' ಮುಂದುವರೆಯಬೇಕಾಗಿದೆ' ಎಂದಿದ್ದಾರೆ.

'ಪ್ರಬಂಧ' ಎಂಬ ನಾಲ್ಕನೆಯ ಅಧ್ಯಾಯದ ಪ್ರಾರಂಭದಲ್ಲಿ – ಲೇಖನರೂಪದ್ದು ಸಂಪ್ರಬಂಧ, ಗ್ರಂಥರೂಪದ್ದು ಮಹಾಪ್ರಬಂಧ. ಸಂಪ್ರಬಂಧದಲ್ಲಿ ಸಂಶೋಧಕನೇ ನೇರ ಹೊಣೆಯಾದರೆ ಮಹಾಪ್ರಬಂಧದಲ್ಲಿ ಸಂಶೋಧಕ ಹೊಣೆಗಾರನಾದರೂ ಮಾರ್ಗದರ್ಶಕ ಪ್ರಬಂಧದುದ್ದಕ್ಕೂ ನೆರವಾಗುತ್ತಾನೆ ಎಂದಿದ್ದಾರೆ. ಸಂಶೋಧಕ ವಿಷಯದ ಆಯ್ಕೆಯಲ್ಲಿ ಹೆಚ್ಚು ಜಾಗ್ರತನಾಗಿರಬೇಕು, ಅದು ಸಂ+ಶೋಧನೆ ಹೆಸರಿಗೆ ತಕ್ಕುದಾಗಿರಬೇಕು, ಅದು ಪ್ರಕರಣ–ಉಪಪ್ರಕರಣಗಳನ್ನು ಒಳಗೊಂಡಿರಬೇಕು, ಅವತರಣಿಕೆಗಳನ್ನು ಸರಿಯಾಗಿ ನಮೂದು ಮಾಡಬೇಕು, ಅಡಿಟಿಪ್ಪಣಿಯಲ್ಲಿ ಏಕತಾನತೆ ಇರಬೇಕು, ಗ್ರಂಥವಿವರಕ, ಗ್ರಂಥಪೂರಕ ಎಂಬ ಅನುಬಂಧವಿರಬೇಕು ಮುಂತಾದ ಎಲ್ಲ ಪ್ರಬಂಧಗಳಿಗೂ ಅನ್ವಯವಾಗುವ ಮಾಹಿತಿಯನ್ನು ಕೊಟ್ಟಿದ್ದಾರೆ.

೫ನೆಯ 'ಪೂರಕ ವಿಚಾರಗಳು' ಎಂಬ ಅಧ್ಯಾಯದಲ್ಲಿ 'ಸೃಜನ ಕರ್ತೃಪ್ರಧಾನ, ಸಂಶೋಧನ ವಸ್ತುಪ್ರಧಾನ, ವಿಮರ್ಶನ ಉಭಯಪ್ರಧಾನ' ಎಂದು ಸೂತ್ರೀಕರಿಸಿದ್ದಾರೆ. 'ಮಹಾಪ್ರಬಂಧದ ಭಾಷೆ ವಾಚ್ಯಪಾತಳಿಯದ್ದೆ ಇರಬೇಕು' (ಪು.೮೬) ಎಂದು ಹೇಳಿ, ಮತ್ತೊಂದೆಡೆಗೆ 'ನಾವು ಯಾವ ಪ್ರದೇಶದ, ಯಾವ ಸಮಾಜದ ವಿಷಯವನ್ನು ಕುರಿತು ಬರೆಯತ್ತೇವೆಯೋ ಅದು ಆ ಪ್ರದೇಶಕ್ಕೆ, ಆ ಸಮಾಜಕ್ಕೆ ಗೊತ್ತಾಗದಿದ್ದರೆ ಅಂಥ ಸಂಶೋಧನೆಯ ಪ್ರಯೋಜನವೇನು ? ಆದುದರಿಂದ ಸಂಶೋಧನೆಯನ್ನು ಸೃಜನ, ವಿಮರ್ಶನ ಸಾಹಿತ್ಯದಂತೆ ಜನಪ್ರಿಯ ಇಲ್ಲವೆ ಸರಳ ಶೈಲಿಯಲ್ಲಿ

ಬರೆಯುವುದು, ಜನಾಭಿಮುಖಿಗೊಳಿಸುವುದು ನಮ್ಮ ಸದ್ಯದ ಅಗತ್ಯವಾಗಿದೆ' (ಪು.೧೦೫) ಎಂಬ ಅಭಿಪ್ರಾಯ ವಿಚಾರಾರ್ಹವಾಗಿದೆ.

ಹಾಗೆಯೇ ವೈಯಕ್ತಿಕ ಸಂಶೋಧನೆ–ಜಂಟಿ ಸಂಶೋಧನೆ–ಸಾಂಸ್ಥಿಕ ಸಂಶೋಧನೆ ಕುರಿತು ಚರ್ಚಿಸಿದ್ದಾರೆ. ಸಂಶೋಧನೆಗೆ ದೊರೆಯುವ ಸಹಾಯದ ವಿವರವನ್ನೂ ಇಲ್ಲಿ ಕೊಡಲಾಗಿದೆ. ಸಂಶೋಧನೆಯ ಆವಶ್ಯಕತೆ ಕುರಿತು 'ಉಪೇಕ್ಷೆಯಿಂದಾಗಿ ಕಳೆದುಹೋಗಿರುವ ಪರಂಪರೆಯನ್ನು ಶೋಧಿಸಿ, ಜನತೆಯ ಮುಂದೆ ಮಂಡಿಸುವುದಾಗಿದೆ ಮತ್ತು ಅವರ ಪರಂಪರೆಯ ಅವಜ್ಞೆಯ ಸ್ಥಾನದಲ್ಲಿ ಪ್ರಜ್ಞೆಯನ್ನು ಸ್ಥಾಪಿಸುವುದಾಗಿದೆ. ಆ ಬೆಳಕು ಖಂಡಿತವಾಗಿಯೂ ವರ್ತಮಾನದ ಬದುಕನ್ನು ತಿದ್ದುತ್ತದೆ, ಉದ್ದೀಪನಗೊಳಿಸುತ್ತದೆ. ಒಟ್ಟಿನಲ್ಲಿ ಗತಕಾಲದ ಶೋಧವೆನ್ನುವುದು ವರ್ತಮಾನಕಾಲದ ತಿದ್ದುವಿಕೆಗಾಗಿ–ನಿರ್ಮಾಣಕ್ಕಾಗಿ ಎಂದೇ ಹೇಳಬೇಕು' ಎಂದು ಸಂಶೋಧನೆಯ ಪ್ರಯೋಜನವನ್ನು ಎತ್ತಿಹೇಳಿದ್ದಾರೆ.

ಕೊನೆಯ ೬ನೆಯ ಅಧ್ಯಾಯದಲ್ಲಿ 'ಕನ್ನಡ ಶೋಧನೆಯ ಇತಿಹಾಸ'ವಿದೆ. ರೈಸ್, ಫ್ಲೀಟ್ ಮೊದಲಾದವರು ಮಾಡಿದ ಕೆಲಸವನ್ನು ಆಕರಶೋಧವೆಂದೂ, ಡಿ.ಎಲ್.ಎನ್. ಮೊದಲಾದವರು ಮಾಡಿದ ಶೋಧವನ್ನು ಆಕರಗಳ ರೂಪನಿಷ್ಠಶೋಧವೆಂದು ಕರೆದಿದ್ದಾರೆ. ಆಕರಗಳನ್ನು ಯಜಮಾನಪರದೃಷ್ಟಿಯಿಂದ ನೋಡದೆ ಜನಪರದೃಷ್ಟಿಯಿಂದ ಶೋಧಿಸುವ ಕ್ರಿಯೆಯನ್ನು ಗುಣನಿಷ್ಠಶೋಧ ಎಂದೂ ವಿಭಜನೆ ಮಾಡಿ ವಿಶ್ಲೇಷಿಸಿದ್ದಾರೆ. ಜೊತೆಗೆ ಜಾನಪದ, ನಾಮವಿಜ್ಞಾನಗಳ ಬೆಳವಣಿಗೆಯನ್ನೂ ಪ್ರಸ್ತಾಪಿಸಿದ್ದಾರೆ. ಕೊನೆಯಲ್ಲಿ ಕನ್ನಡ ಸಂಶೋಧನೆಯ ಭವಿಷ್ಯ ಕುರಿತು ಚಿಂತಿಸುತ್ತ 'ಸಂಶೋಧನೆಯ ವಿಧಾನದಲ್ಲಿ ಹೊಸ ದೃಷ್ಟಿಕೋನ ಮೂಡಬೇಕಾಗಿದೆ. ಬಹುಶಿಸ್ತೀಯ ಅಧ್ಯಯನದ ಕಡೆ ಗಮನ ಕೊಡಬೇಕಾಗಿದೆ. ಆಗಿರುವ ಶೋಧಗಳು ಪರಿಷ್ಕರಣೆಗೊಳ್ಳಬೇಕಿದೆ, ಅದಕ್ಕಾಗಿ ಪತ್ರಿಕೆಗಳು ಬೇಕು' ಎಂಬ ವಿಚಾರಗಳನ್ನು ಮಂಡಿಸಿದ್ದಾರೆ.

ಡಾ. ಕಲಬುರ್ಗಿ ಅವರೇ ಒಂದೆಡೆ 'ವ್ಯಾಕರಣ, ಛಂದಸ್ಸು, ಕಾವ್ಯಶಾಸ್ತ್ರಗಳಿಗಿಂತ ಸಂಶೋಧನಶಾಸ್ತ್ರದಲ್ಲಿ ಪರಿಭಾಷೆಯ ನಿಬಿಡತೆ ಕಡಿಮೆ. ಅಲ್ಲಿ ಆಕರ, ಊಹೆ, ಅಡಿಟಿಪ್ಪಣೆ ಇತ್ಯಾದಿ ಅರೆತಾಂತ್ರಿಕ ಪದಗಳನ್ನು ಮಾತ್ರ ಬಳಸಬೇಕಾಗಿರುವುದರಿಂದ ಇಲ್ಲಿ ಪರಿಭಾಷಾ ದಾಳಿ ಬಹಳ ಕಡಿಮೆ. ಹೀಗಾಗಿ ಸಂಶೋಧನಶಾಸ್ತ್ರ ಭಾಷೆ ತಾಂತ್ರಿಕವೆನಿಸುವುದಿಲ್ಲ'(೮೬) ಎಂದಿದ್ದರೂ ಈ ಕೃತಿಯಲ್ಲಿ ಡಾ. ಕಲಬುರ್ಗಿ ಅವರೇ ಕಟ್ಟಿದ ಹಲವು ನುಡಿಗಟ್ಟಿನ ರೂಪದ ಪದಗಳು ನಿಬಿಡವಾಗಿದ್ದು (ಉದಾ. ವಸ್ತು ಭಾಷೆ ಕ್ರಿಯೆ ಜ್ಞಾನ ನಾಲ್ಕು ಬಗೆಯ ಕ್ಷೇತ್ರಗಳು, ಸಂಶೋಧನೆಯನ್ನು ರೂಪನಿಷ್ಠ, ಗುಣನಿಷ್ಠವಾಗಿ ಮುನ್ನಡೆಸಬಹುದು. ಸಂಶೋಧನ ಬರವಣಿಗೆ ಆಶಯ, ಆಕೃತಿ ದೃಷ್ಟಿಯಿಂದ ಸಹಜವಾಗಿಯೇ ಏಕಮುಖತೆ ಪ್ರಾಪ್ತವಾಗುತ್ತದೆ (ಪು.೮೭) , ವಸ್ತು ಸಂಬಂಧಿ ಸಂಶೋಧನೆ, ಭಾಷಾಸಂಬಂಧಿ ಸಂಶೋಧನೆ, ಕ್ರಿಯಾಸಂಬಂಧಿ ಸಂಶೋಧನೆ, ಜ್ಞಾನಸಂಬಂಧಿ ಸಂಶೋಧನೆ ; ಉದ್ದೇಶನಿಷ್ಠ ಪ್ರಕಾರ, ವಿಧಾನನಿಷ್ಠಪ್ರಕಾರ, ಸ್ವರೂಪನಿಷ್ಠ ಪ್ರಕಾರ) ಅವು ಸಾಮಾನ್ಯ ಓದುಗನನ್ನು ದಿಗ್ಭ್ರಾಂತಿಗೊಳಿಸುತ್ತವೆ.

ಇನ್ನು ಕೆಲವು ಕಡೆ ಅನಾವಶ್ಯಕ ವಿವರಣೆ, ಅಚಾತುರ್ಯಗಳು ನುಸುಳಿಕೊಂಡಿವೆ. ಉದಾಹರಣೆಗೆ– 'ಅರಿಕೆ'ಯಲ್ಲಿಯ ಸಂಶೋಧನ 'ಶಾಸ್ತ್ರ'ದ ವಿವರ ಮತ್ತೆ 'ಸಂಶೋಧನೆಯ ಅರ್ಥ'ದಲ್ಲಿಯೂ ಬಂದಿದೆ(ಪು.೮). ಸಂಶೋಧನೆಯ ವ್ಯಾಪ್ತಿ ಎಂಬ ಭಾಗದಲ್ಲಿ ಪ್ರಾಚ್ಯಶೋಧ, ಪುರಾತತ್ವಶೋಧ,

ಜಾನಪದ ಎಂಬ ಪಾರಿಭಾಷಿಕ ಪದಗಳ ವಿವರಣೆ (ಪು. ೫-೭)ಅನಾವಶ್ಯಕವೆನ್ನಿಸಿದೆ. ಪು. ೨೪ ರ ಮೌಖಿಕಸಾಮಗ್ರಿ ವಿಭಾಗದಲ್ಲಿಯೇ ಪು. ೨೭ರಲ್ಲಿಯ ಜನಪದ ಸಾಹಿತ್ಯದ ವಿವರಣೆ ಸೇರಿಸಬಹುದಿತ್ತು. ಪು. ೨೬ರಲ್ಲಿಯ ನಾಮದ ವಿವರಣೆ ನಾಮವಿಜ್ಞಾನಕ್ಕೆ ಸೇರಬಹುದಾದುದು. ೪ನೆಯ ಅಧ್ಯಾಯ 'ಪ್ರಬಂಧ' ದಲ್ಲಿ 'ಕನ್ನಡ ಪಿಎಚ್.ಡಿ. ಮಹಾಪ್ರಬಂಧ ರಚನೆಗೆ ಹಲವು ದಶಕಗಳ ಇತಿಹಾಸವಿದೆ'(ಪು.೭೬-೭೭) ಎಂದು ಕೊಟ್ಟಿರುವ ವಿವರಣೆ ೬ನೆಯ ಅಧ್ಯಾಯದ 'ಕನ್ನಡ ಸಂಶೋಧನೆ' ಯಲ್ಲಿಯೆ ಸೇರಬಹುದಿತ್ತು. ಪುಟ ೨೬ ರಲ್ಲಿ 'ಸ್ಥಳೀಯ ಐತಿಹ್ಯಕ್ಕೆ ಬೆಳ್ಗೊಳ ಬೆಟ್ಟದ ತ್ಯಾಗದ ಬ್ರಹ್ಮದೇವರ ಕಂಬದ ಬಗ್ಗೆ ಕೇಳಿಬರುವ ಗಳ್ಳೇಕಾಯಜ್ಜಿಯ ಕಥೆ' ಎಂಬಲ್ಲಿ ಆ ಕಂಬ ಚಾವುಂಡರಾಯನಿಗೆ ಸಂಬಂಧಿಸಿದುದು, ಗುಳ್ಳೇಕಾಯಜ್ಜಿಗಲ್ಲ,' ಪುಟ ೫೭ರಲ್ಲಿ 'ಡಾ. ಚಿದಾನಂದಮೂರ್ತಿಯವರ 'ಕನ್ನಡಶಾಸನಗಳ ಸಾಸ್ಕೃತಿಕ ಅಧ್ಯಯನ' ರೂಪನಿಷ್ಠ ಅಧ್ಯಯನಕ್ಕೆ ಉದಾಹರಣೆಯಾಗಿದೆ. ಇಂಥ ಅಧ್ಯಯನ 'ಗುಣನಿಷ್ಠ'ವೂ ಆಗಬೇಕು. ಅಂದರೆ ಅಲ್ಲಿ ಜನಪರ ವಿವೇಚನೆ ನಡೆಯಬೇಕು. ಆಗ ಮಾತ್ರ 'ಸಾಂಸ್ಕೃತಿಕ ಅಧ್ಯಯನ'ವೆಂದು ಕರೆಯುವುದು ಸೂಕ್ತವೆನಿಸುತ್ತದೆ' ಎಂದು ಹೇಳಿ, ಮುಂದೆ ಪುಟ ೭೧ ರಲ್ಲಿ 'ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ' (ಚಿದಾನಂದಮೂರ್ತಿ) ಇತ್ಯಾದಿ ರೀತಿಯಲ್ಲಿ ಇನ್ನೂ ವ್ಯಾಪಕವಾಗಿ ನಡೆದ ಸಂಶೋಧನೆಗಳೂ ಸಾಂಸ್ಕೃತಿಕ ಅಧ್ಯಯನವೆನಿಸುತ್ತವೆ' ಎಂಬಲ್ಲಿ ವಿರೋಧಾಭಿಪ್ರಾಯ ಕಾಣುತ್ತಿದೆ. ಪುಟ ೯೮ ರಲ್ಲಿ 'ಆಕರಗಳ ರೂಪನಿಷ್ಠ ಶೋಧ'ದ ಬಗ್ಗೆ ಹೇಳುತ್ತ ಭಾಷಾಶಾಸ್ತ್ರದ ಅಧ್ಯಯನ, ಗ್ರಂಥಸಂಪಾದನ ಕೃತಿಗಳು, ಹಸ್ತಪ್ರತಿಗೆ ಸಂಬಂಧಿಸಿದ ಅಧ್ಯಯನ ಮೊದಲಾದವುಗಳ ವಿವರಣೆ ಕೊಟ್ಟಿರುವುದು(ಪುಟ ೯೯) ಅನಾವಶ್ಯಕವೆನ್ನಿಸುತ್ತಿದೆ.

ಗ್ರಂಥದ ತುಂಬ ಡಾ. ಕಲಬುರ್ಗಿ ಅವರು 'ಸಂಶೋಧನೆ'ಯನ್ನು ಕುರಿತು, ಸಂಶೋಧಕನನ್ನು ಕುರಿತು ಹೇಳಿರುವ ಕೇಲವು ಮಾತುಗಳು ನುಡಿಗಟ್ಟುಗಳಂತೆ ಪ್ರಚಲಿತವಾಗಿವೆ. ಉದಾಹರಣೆಗೆ- 'ನಿಜವಾದ ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'(ಪು.೧೨), ಸಂಶೋಧನೆಯು ಅಂಕುರಿಸಿ, ಚಿಗುರಿ, ಹೂವು ಹಣ್ಣು ಬಿಡುವುದೇ ವ್ಯುತ್ಪತ್ತಿ ಎಂಬ ನೀರು ಗೊಬ್ಬರಗಳ ಭೂಮಿಕೆಯಲ್ಲಿ (೧೪), ದೇವಾಲಯದ ಆಸ್ತಿ ಅರ್ಚಕರ ಕುಟುಂಬದಲ್ಲಿ, ಮಠದ ಆಸ್ತಿ ಸ್ವಾಮಿಯ ಕುಟುಂಬದಲ್ಲಿ ಕರಗಿಹೊದವು (೧೮), ಪ್ರಾಚೀನ ಕಾಲದಲ್ಲಿ ಪ್ರಜಾಶೋಷಣೆಗಾಗಿ ಬೆಳೆದಿದ್ದ ದಾನವನ್ನು ನಿರಾಕರಿಸಲು ವೀರಶೈವದಲ್ಲಿ 'ದಾಸೋಹ' ಹುಟ್ಟಿಕೊಂಡಿತೆಂಬುದೂ 'ಜ್ಞಾನಸಂಬಂಧಿಶೋಧವೇ' ಆಗಿದೆ (ಪು.೫೮). ಧಾರ್ಮಿಕರ ಪುರಾಣದೃಷ್ಟಿ ಮತ್ತು ಪವಾಡದೃಷ್ಟಿ, ಪಂಡಿತರ ಉತ್ಪ್ರೇಕ್ಷಾದೃಷ್ಟಿ ಗ್ರಾಮೀಣರ ಐತಿಹ್ಯದೃಷ್ಟಿ ಮತ್ತು ವದಂತಿದೃಷ್ಟಿಗಳಿಂದಾಗಿ ನಮ್ಮ ಇತಿಹಾಸದ ಆತ್ಮ ನಾಶವಾಯಿತೆಂದೇ ಹೇಳಬೇಕು(೨೦), ಸಂಶೋಧನೆಗಾಗಿ ಸಂಶೋಧನೆ'ಯಾಗಿರಬಾರದು. 'ಸಾಮಾಜಿಕ ಪರಿವರ್ತನೆಗಾಗಿ 'ಸಂಶೋಧನೆ'ಯಾಗಿರಬೇಕು. (ಪು್೨). 'ಭೂತ, ವರ್ತಮಾನ, ಭವಿಷತ್ತುಗಳು ನೋಡಲಿಕ್ಕೆ ಮೂರು ಪ್ರತ್ಯೇಕ ಕಾಲಖಂಡಗಳಾಗಿ ಕಂಡರೂ ಅವು ಮೂಲತಃ ಒಂದು ಅಖಂಡ ಕಾಲಪ್ರವಾಹ. ಇಲ್ಲಿ ಭೂತದ ಮಗುವಾದ ವರ್ತಮಾನ, ಭವಿಷ್ಯದ ತಂದೆಯಾಗಿದೆ' (ಪು್೨), ಸಂಶೋಧಕನಿಗಿಂತ ಸತ್ಯ ದೊಡ್ಡದು. ಸಂಶೋಧಕನ ಮೊದಲ-ಕೊನೆಯ ಗುರಿ ಸತ್ಯಶೋಧ. ಸಂಶೋಧನೆ ಎನ್ನುವುದು ಹಿರಿಯರು ಇಟ್ಟ ಪ್ರಶ್ನಾರ್ಥಕ, ಅಲ್ಪವಿರಾಮ, ಅರ್ಧವಿರಾಮ ಚಿಹ್ನೆಗಳನ್ನು ದಾಟಿ ಪೂರ್ಣವಿರಾಮದ ಕಡೆಗೆ ಸಾಗುವ ಹೆಜ್ಜೆ. ಸಂಶೋಧಕ ಸತ್ಯ ಹೇಳುವಾಗ ಸಣ್ಣ ಸಣ್ಣ ಶಿಲುಬೆ ಏರಬೇಕಾಗುತ್ತದೆ, ಸಂಶೋಧನೆ ಹೂವಿನ ಹಾಸಿಗೆಯಲ್ಲ; ಅದು ಶರಶಯ್ಯೆ, ಮುಳ್ಳಾವುಗೆ ಮೊದಲಾದ ವಾಕ್ಯಗಳು

ಡಾ. ಕಲಬುರ್ಗಿ ಅವರ ವಾಕ್ಯಗಳೇ ಎಂದು ಗುರುತಿಸುವಷ್ಟರಮಟ್ಟಿಗೆ ತಿದ್ದಿ ತೀಡಿ ಬರೆದ ವಾಕ್ಯಗಳು ಇಡೀ ಕೃತಿತುಂಬ ಕಂಡುಬರುತ್ತಿವೆ.

VI. ಕನ್ನಡ ಹಸ್ತಪ್ರತಿಶಾಸ್ತ್ರ – ೧೯೯೩

'ಖನಿಜ ಸಂಪತ್ತು, ಅರಣ್ಯ ಸಂಪತ್ತು, ಪ್ರಜಾಸಂಪತ್ತುಗಳಂತೆಯೇ ಹಸ್ತಪ್ರತಿಗಳೂ ಕೂಡಾ ರಾಷ್ಟ್ರದ ಸಂಪತ್ತು' ಎಂದು ನಂಬಿದ ಡಾ. ಕಲಬುರ್ಗಿ ಅವರು ಈ ಸಂಪತ್ತನ್ನು ಸಂರಕ್ಷಿಸಲು, ಇದನ್ನೊಂದು ಶೈಕ್ಷಣಿಕ ಶಿಸ್ತನ್ನಾಗಿಸಲು ಮಾಡಿದ ಪ್ರಯತ್ನದ ಫಲವೇ ಈ ಕೃತಿ. ಡಾ. ಕಲಬುರ್ಗಿ ಅವರೇ ಈ ಗ್ರಂಥದ ಹುಟ್ಟನ್ನು ಕುರಿತು '೧೯೭೨ರಲ್ಲಿ ನಾನು ಬರೆದ 'ಕನ್ನಡ ಗ್ರಂಥಸಂಪಾದನಶಾಸ್ತ್ರ'ದ ಒಡಲಲ್ಲಿ 'ಹಸ್ತಪ್ರತಿಶಾಸ್ತ್ರ'ದ ಬೀಜ ಬಿತ್ತಲಾಗಿದ್ದಿತು. ೧೯೮೧ ರಲ್ಲಿ ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನ ಯೋಜಿಸಿದ್ದ ವಿಚಾರಸಂಕಿರಣದಲ್ಲಿ ಮಂಡಿಸಿದ್ದ 'ಹಸ್ತಪ್ರತಿಶಾಸ್ತ್ರ : ವಿವಿಧ ಮುಖಗಳು' ಹೆಸರಿನ ನನ್ನ ಲೇಖನದಲ್ಲಿ 'ಈ ಶಾಸ್ತ್ರದ ಭ್ರೂಣ ಆಕಾರ ಪಡೆದಿದ್ದಿತು. ಅದು ಈಗ ಸ್ವತಂತ್ರ ಕೃತಿ ರೂಪದಲ್ಲಿ ಅವತರಿಸುತ್ತಿದೆ. ಇದರಿಂದ "ಈ ವರೆಗೆ (ಹಸ್ತಪ್ರತಿ) ಶಾಸ್ತ್ರರೂಪದ ಪೂರ್ಣಪ್ರಮಾಣದ ಗ್ರಂಥ ಪ್ರಕಟಗೊಂಡಿಲ್ಲ" ಎಂಬ ವಿದ್ವಾಂಸರ ವಿಷಾದಕ್ಕೆ ಉತ್ತರವಾಗಿ ಹೊರಬರುತ್ತಲಿರುವ ಈ ಕೃತಿ, ಕನ್ನಡದಲ್ಲಿ ಪ್ರಥಮ ಪ್ರಯತ್ನವೆಂದೇ ಹೇಳಬೇಕು' ಎಂದಿದ್ದಾರೆ.

ಇಲ್ಲಿ ಪೀಠಿಕೆ. ೧. ಉತ್ಪಾದನ, ೨. ಪ್ರಸರಣ, ೩. ಸಂಗ್ರಹಣ, ೪. ವ್ಯವಸ್ಥಾಪನ, ೫. ಪ್ರಯೋಜನ ಎಂಬ ಅಧ್ಯಾಯಗಳಿವೆ.

ಪೀಠಿಕೆಯಲ್ಲಿ 'ಹಸ್ತಪ್ರತಿ'ಯ ಅರ್ಥ ಹೇಳಿ, 'ಹಸ್ತಪ್ರತಿಶಾಸ್ತ್ರ' ಇತ್ತೀಚಿಗೆ ಸೃಷ್ಟಿಯಾದುದು ಎಂದಿದ್ದಾರೆ. ಇದು ಮೊದಲು ಗ್ರಂಥಸಂಪಾದನಶಾಸ್ತ್ರದ ಭಾಗವಾಗಿ ಬೆಳೆಯಿತು. ಇದನ್ನು ಇತ್ತೀಚಿಗೆ ಪ್ರತ್ಯೇಕವಾಗಿ ಗುರುತಿಸಲಾಗಿದೆ. 'ಪ್ರತಿ'ಯ ಅಧ್ಯಯನ ಹಸ್ತಪ್ರತಿಶಾಸ್ತ್ರದ ವಿಷಯವಾದರೆ, 'ಕೃತಿ'ಯ ಅಧ್ಯಯನ ಗ್ರಂಥಸಂಪಾದನಶಾಸ್ತ್ರವಾಗಿದೆ. 'ಪ್ರತಿ'ಯ ಉತ್ಪಾದನೆ, ಪ್ರಸರಣ, ಸಂಗ್ರಹಣ, ವ್ಯವಸ್ಥಾಪನ, ಪ್ರಯೋಜನ ಈ ದಿಕ್ಕಿನಲ್ಲಿ ಹಸ್ತಪ್ರತಿಶಾಸ್ತ್ರ ಬೆಳೆದರೆ, 'ಕೃತಿಯ ಭಿನ್ನ ಪಾಠಸ್ವರೂಪ, ಸಂಕಲನ, ಅವುಗಳ ನಿಜಪಾಠನಿರ್ಣಯ ಇತ್ಯಾದಿ ದಿಕ್ಕಿನಲ್ಲಿ ಗ್ರಂಥಸಂಪಾದನಶಾಸ್ತ್ರ ಬೆಳೆಯಬೇಕಾಗುತ್ತದೆ' ಎಂದು ಹಸ್ತಪ್ರತಿಶಾಸ್ತ್ರಕ್ಕೂ ಗ್ರಂಥಸಂಪಾದನಶಾಸ್ತ್ರಕ್ಕೂ ಇರುವ ಅಂತರವನ್ನು ಬಹುಸೂಕ್ಷ್ಮವಾಗಿ ವಿಂಡಿಸಿ ವಿವರಿಸಿದ್ದಾರೆ.

ಕನ್ನಡ ಗ್ರಂಥಸಂಪಾದನಶಾಸ್ತ್ರದ ಲೇಖನಕಾಂಡದ ವಿಷಯವೆಲ್ಲ ಇಲ್ಲಿಯ ಮೊದಲ 'ಉತ್ಪಾದನ' ಎಂಬ ಅಧ್ಯಾಯದ ಅಲೇಖನ ಹಂತ, ಲೇಖನಹಂತ ಎಂಬ ಉಪವಿಭಾಗದ ಆಧಾರ, ಆಧೇಯ, ಲೇಪನ ವಸ್ತುಗಳ ವಿವರದಲ್ಲಿ ಅಡಕವಾಗಿವೆ. 'ಅಲೇಖನ ಹಂತ'ದ ಆಧಾರದಲ್ಲಿ ಮೊದಲು ಬರುವುದು ತಾಡವೋಲೆಯ ವಿವರಣೆ. 'ಕನ್ನಡ ಗ್ರಂಥಸಂಪಾದನೆ'ಯಲ್ಲಿ ಇರುವ ಭೂರ್ಜ್ವಪತ್ರದ ಪ್ರಸ್ತಾಪ ಇಲ್ಲಿ ಇಲ್ಲ. ಇಲ್ಲಿ ತಮಿಳುನಾಡನ್ನು ತಾಳೆಮರಗಳ ತೊಟ್ಟಿಲು ಎಂದಿದ್ದು ಅದು ಕವಿರಾಜಮಾರ್ಗದ ಕಾಲದಿಂದಲೂ ಉಲ್ಲೇಖವಿರುವುದನ್ನು ಹೇಳಿದೆ. ಅದನ್ನು ಮಾರಾಟ ಮಾಡುವವರು ಬರವಣಿಗೆಗೆ ಸಿದ್ಧಪಡಿಸುತ್ತಿದ್ದ ವಿಧಾನವನ್ನು ವಿವರಿಸಿದೆ. ಕ್ರಿ.ಶ. ೧೦೨ರಲ್ಲಿ ತ್ಸಾಯ್‌ಲುಪ್ ಎಂಬ ಚೀನಿ ವಿಜ್ಞಾನಿಯಿಂದ ಕಂಡುಹಿಡಿಯಲ್ಪಟ್ಟ ಕಾಗದ ೧೪ನೆಯ ಶತಮಾನದಲ್ಲಿ ಕರ್ನಾಟಕ ಪ್ರವೇಶಿಸಿದ್ದನ್ನು ಪ್ರಸ್ತಾಪಿಸಿದೆ. ಅವುಗಳಲ್ಲಿ ಕೋರಿ ಕಾಗದ, ನೀಲಿಕಾಗದಗಳ ವಿವರವೂ ಇದೆ.

ಹಾಗೆಯೇ ಅರಿವೆ, ಹಲಗೆ, ಚರ್ಮಗಳನ್ನೂ ಬರೆಯಲು ಬಳಸಿಕೊಂಡ ವಿವರವಿದೆ. ಆದರೆ 'ಗ್ರಂಥಸಂಪಾದನೆ'ಯಲ್ಲಿಯ ಕಡತ, ಕಟ್ಟಿಗೆಗಳ ವಿವರ ಇಲ್ಲಿ ಇಲ್ಲ. ಇನ್ನು 'ಲೇಖನ ಹಂತ'ದಲ್ಲಿ ಮೇಲಿನ ವಸ್ತುಗಳ ಮೇಲೆ ಬರೆಯಲು ಬಳಸುವ ಕಂಟ, ಲೇಖನಿಗಳ ವಿವರವಿದೆ. ಕಪ್ಪು, ಮಸಿ ತಯಾರಿಕೆ ಕುರಿತು–ಅಲ್ಲಿಯ ವಡ್ಡಾರಾಧನೆಯ ಉಲ್ಲೇಖಗಳನ್ನು ಬಿಟ್ಟು, ಇಲ್ಲಿ ಶಾಂತಿಪುರಾಣ, ಬಸವಪುರಾಣ ಮೊದಲಾದವುಗಳ ವಿವರವಿದೆ.

ಲಿಪಿಕಾರರನ್ನು–ನಿಯುಕ್ತ, ವೃತ್ತಿ, ಹವ್ಯಾಸಿ ಲಿಪಿಕಾರರು ಎಂದು ವಿಭಾಗಿಸಿದ್ದಾರೆ. ನಿಯುಕ್ತ ಲಿಪಿಕಾರರು ಸಂಬಳದ ಮೇಲೆ ಕಾರ್ಯನಿರ್ವಹಿಸುವವರು. ವೃತ್ತಿಲಿಪಿಕಾರರು ಬರವಣಿಗೆಯನ್ನು ಉಪಜೀವನದ ಸಾಧನ ಮಾಡಿಕೊಂಡವರು. ಹವ್ಯಾಸಿ ಲಿಪಿಕಾರರು ಸ್ವಪ್ರಯೋಜನ, ಪರಪ್ರಯೋಜನಕ್ಕಾಗಿ ಬರವಣಿಗೆ ಕಾರ್ಯ ಮಾಡುವವರು ಎಂಬುದನ್ನು ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಇವರಲ್ಲಿ ಸ್ತ್ರೀಲಿಪಿಕಾರರು, ಅದರಲ್ಲಿಯೂ ನಾಯಕಸಾನಿ ಕಂಪಿಯ ಮಗಳು ನಂಜಿಯಂಥವರೂ ಇರುವುದನ್ನು ಪ್ರಸ್ತಾಪಿಸಿರುವುದು ವಿಶೇಷ. ಇವರು ಸಾಮಾನ್ಯವಾಗಿ ತಮ್ಮತಮ್ಮ ಧರ್ಮದ ಕೃತಿಗಳನ್ನೇ ಲಿಪಿಸಿದ್ದುಂಟು. ಗ್ರಂಥದ ಕೊನೆಯಲ್ಲಿ ಇವರು ತಮ್ಮ ಬಗ್ಗೆ ಹೇಳಿಕೊಳ್ಳುವದುಂಟು. ಇದರಿಂದ ಅವರು ಪ್ರತಿ ಮಾಡಲು ಬಳಸಿಕೊಂಡ ಪ್ರತಿ, ಪ್ರತಿಯನ್ನು ಮಾಡುವಲ್ಲಿ ಇದ್ದ ಪರಿಣಿತಿ, ಲಿಪಿಯ ಸೌಂದರ್ಯದ ಬಗೆಗೆ ಇದ್ದ ವ್ಯಾಮೋಹ, ಲಿಪಿಯ ಐತಿಹಾಸಿಕ ಬೆಳವಣಿಗೆ, ಬರೆಯಲು ಬಳಸಿದ ತಿಗಳಾರಿ, ಮೋಡಿ ಮೊದಲಾದ ಬೇರೆಬೇರೆ ಲಿಪಿಗಳು ಮೊದಲಾದವುಗಳ ವಿವರ ತಿಳಿದುಬರುವುದಾಗಿ ಹೇಳಿದ್ದಾರೆ. ಗ್ರಂಥಸಂಪಾದನೆಯಲ್ಲಿ ಹಸ್ತಪ್ರತಿಗಳನ್ನು ಸಾಧ್ಯವಿರುವಷ್ಟೂ ಶುದ್ಧವಾಗಿ ಬರೆಯಬೇಕೆಂಬ ಉದ್ದೇಶವಿದ್ದರೂ ಕಣ್–ಕಿವಿ–ಕೈ ತಪ್ಪಿನಿಂದಾಗುವ ದೋಷಗಳನ್ನು ಕ್ಷಮಿಸುವಂತೆ ಲಿಪಿಕಾರರು ಕೇಳಿರುವ ಸುಮಾರು ೩೬ ಉದಾಹರಣೆಗಳನ್ನು ಕನ್ನಡ 'ಗ್ರಂಥಸಂಪಾದನೆ'ಯಿಂದ ಕೈಬಿಡಲಾಗಿದೆ. ಹಾಗೆಯೇ ಸುಂದರ ಬರವಣಿಗೆಯ ಹವ್ಯಾಸವುಳ್ಳ ಶಾಸನಕಾರರ ಸುಮಾರು ೩೪ ಪ್ರಸ್ತಾವಗಳು 'ಗ್ರಂಥಸಂಪಾದನೆ'ಯಲ್ಲಿದ್ದು ಅವನ್ನೂ ಇಲ್ಲಿ ಕೈಬಿಡಲಾಗಿದೆ.

'ಉತ್ಪಾದನೆ'ಯ ಕೊನೆಯ ಲಕ್ಷಣ– ಗ್ರಥನ ವಿನ್ಯಾಸ. ಇದರಲ್ಲಿ ಬರೆದ ಪತ್ರಗಳ ಜೋಡಣೆ, ಕಂಬಿ ಅಳವಡಿಸುವಿಕೆ, ದಾರ ಪೋಣಿಸುವಿಕೆ, ಫಲಕಗಳ ಸಿದ್ಧತೆ, ಫಲಕಗಳ ಮೇಲೆ ಚಿತ್ರ ಬಿಡಿಸುವಿಕೆ, ಬಣ್ಣ ಲೇಪಿಸುವಿಕೆ, ಗರಿ–ಕಾಗದ ಪುಟಗಳ ಮೇಲೆ ಚಿತ್ರ ಬಿಡಿಸುವಿಕೆ, ವಸ್ತ್ರ ಹೊದಿಸುವಿಕೆ ಇತ್ಯಾದಿ ಚಟುವಟಿಕೆಗಳ ವಿವರವಿದೆ.

ಈ ಅಧ್ಯಾಯದ ಕೊನೆಯಲ್ಲಿ ಹಸ್ತಪ್ರತಿಗಳ ಪ್ರಾಚೀನತೆಯ ಪ್ರಸ್ತಾಪವಿದೆ. ೧೬೧೪ರಲ್ಲಿ ಬರೆದ ಪಂಚಬಾಣನ ಭುಜಬಲಿಚರಿತೆ ಈಗಿನ ಮಟ್ಟಿಗೆ ಕನ್ನಡದ ಪ್ರಾಚೀನತಮ ಕವಿಹಸ್ತಾಕ್ಷರಪ್ರತಿ. ೧೩೪೨ರಲ್ಲಿ ಪ್ರತಿಮಾಡಿರಬಹುದಾದ ರನ್ನನ ಗದಾಯುದ್ಧದ ತಾಳೆಪ್ರತಿಯೇ ಪ್ರಾಚೀನ ಪ್ರತಿ. ಕಾಗದ ವಿಷಯಕ್ಕೆ ಬಂದರೆ ೧೫೫೭ರಲ್ಲಿ ಬರೆದ ನಾಗವರ್ಮನ ವರ್ಧಮಾನಪುರಾಣವೇ ಪ್ರಾಚೀನ ಪ್ರತಿ ಎಂಬ ವಿವರವನ್ನಿತ್ತಿದ್ದಾರೆ.

ಎರಡನೆಯ ಅಧ್ಯಾಯ 'ಪ್ರಸರಣ'. ಇದನ್ನು ಗ್ರಂಥೋತ್ಪಾದನೆಯ ಉದ್ದೇಶ ಎಂದೂ ಇಟ್ಟುಕೊಳ್ಳಬಹುದು ಎಂದಿದ್ದಾರೆ. ಇಲ್ಲಿ ಹಸ್ತಪ್ರತಿಗಳ ಐತಿಹಾಸಿಕ ಬೆಳವಣಿಗೆ, ಭೌಗೋಲಿಕ ಪ್ರಸಾರ ಚಟುವಟಿಕೆ, ಹಸ್ತಪ್ರತಿಸೃಷ್ಟಿಕಾರ್ಯದ ಸಂಘಟನೆ–ವಿಘಟನೆ ಎಂದು ಅವಲೋಕಿಸಲಾಗಿದೆ.

ಐತಿಹಾಸಿಕ ಬೆಳವಣಿಗೆಯಲ್ಲಿ- ಗ್ರಂಥ ಬರೆದವನಿಗಿಂತ ಅದನ್ನು ರಕ್ಷಿಸಿದವನು ಪುಣ್ಯಶಾಲಿ. ಅದನ್ನು ರಕ್ಷಿಸುವಲ್ಲಿ ಪ್ರಮುಖರು ನಿಯುಕ್ತ, ಹವ್ಯಾಸಿ ಮತ್ತು ವೃತ್ತಿಲಿಪಿಕಾರರು ಪ್ರಮುಖರು. ಇವರನ್ನು ಸ್ವಪ್ರಯೋಜನಾರ್ಥ ಬರೆದುಕೊಳ್ಳುವವರು, ಪರಪ್ರಯೋಜನಾರ್ಥ ಬರೆದುಕೊಳ್ಳುವವರು, ಪರಪ್ರಯೋಜನಾರ್ಥ ಬರೆದುಕೊಡುವವರು ಎಂದು ಗುರುತಿಸಬಹುದು ಎಂದಿದ್ದಾರೆ. ಪರಪ್ರಯೋಜನಾರ್ಥ ಬರೆದುಕೊಡುವವರು ಸಾಮಾನ್ಯವಾಗಿ ಅಭ್ಯಾಸಿಗಳಿಗೆ, ಮೋಕ್ಷಾಪೇಕ್ಷಿಗಳಿಗೆ, ಧರ್ಮಾಧಿಕಾರಿಗಳಿಗೆ, ಧರ್ಮಾಭಿಮಾನಿಗಳಿಗೆ, ರಾಜಕೀಯ ವ್ಯಕ್ತಿಗಳಿಗೆ, ಉಪಾಧ್ಯಾಯರಿಗೆ, ವಿದ್ಯಾರ್ಥಿಗಳಿಗೆ ಬರೆದುಕೊಟ್ಟಿರುವುದನ್ನು ಪ್ರಸ್ತಾಪಿಸಿದ್ದಾರೆ. ಈ ಬಗೆಯ ಲೇಖನ ಚಟುವಟಿಕೆ ಕಾರಣವಾಗಿ ಹಸ್ತಪ್ರತಿಗಳು ಬೆಳೆದು ವೈಯಕ್ತಿಕ-ಸಾರ್ವಜನಿಕ ಗ್ರಂಥಭಂಡಾರಗಳು ಅಸ್ತಿತ್ವಕ್ಕೆ ಬಂದವು. ಸಾರ್ವಜನಿಕ ಭಂಡಾರಗಳಲ್ಲಿ ವೈದಿಕ, ಜೈನ, ವೀರಶೈವ ಧರ್ಮಗಳಿಗೆ ಸಂಬಂಧಪಟ್ಟ ಗ್ರಂಥಭಂಡಾರಗಳು ಬೆಳೆದು ಬಂದವು, ವೈದಿಕರಿಗೆ ಕನ್ನಡ ಅಸ್ಪೃಶ್ಯಭಾಷೆಯಾಗಿದ್ದುದರಿಂದ ಇವರು ಮೊದಲು ಕನ್ನಡ ಹಸ್ತಪ್ರತಿಗಳನ್ನು ನಕಲು ಮಾಡಲಿಲ್ಲ ಕಾಣುತ್ತದೆ. ಜೈನರಲ್ಲಿ ಚತುರ್ವಿಧದಾನ, ಕರ್ಮೋಪಶಮನ, ಚಾತುರ್ಮಾಸ ನಿಮಿತ್ತ ಹಸ್ತಪ್ರತಿಗಳು ಬೆಳೆದು ಬಂದವು. ವೀರಶೈವರಲ್ಲಿಯೂ ಗ್ರಂಥದಾನ, ಮಠಾಧೀಶರ ದೀಕ್ಷಾಪ್ರಸಂಗ, ೧೨ನೆಯ ಶತಮಾನದ ಶರಣರ ಚಳುವಳಿಗಳಲ್ಲದೆ, ಲಕ್ಕಣ್ಣದಂಡೇಶ, ತೋಂಟದ ಸಿದ್ಧಲಿಂಗಯತಿ ಮೊದಲಾದವರು ಕಾರಣವಾಗಿ ನೂರಾರು ಹಸ್ತಪ್ರತಿಗಳು ತಯಾರಾದವು. ವೀರಶೈವಮಠಗಳು ಕರ್ನಾಟಕದ ತುಂಬ ಗ್ರಂಥೋತ್ಪಾದನೆಯಲ್ಲಿ ತೊಡಗಿದವು ಎಂದಿದ್ದಾರೆ.

ಇನ್ನು ಭೌಗೋಲಿಕ ಪರಿಚಲನೆಯ ದೃಷ್ಟಿಯಿಂದಲೂ ಜೈನಕವಿಗಳು ಸಾಮಾನ್ಯವಾಗಿ ರಾಜಾಶ್ರಯದಲ್ಲಿಯೇ ಬೆಳೆದುಬಂದರು. ಪ್ರಾಚೀನ ರಾಜಮನೆತನಗಳು ಉತ್ತರಕರ್ನಾಟಕಕ್ಕೆ ಸಂಬಂಧಿಸಿದವು, ಹೀಗಾಗಿ ಹಸ್ತಪ್ರತಿಗಳು ಉತ್ತರಕರ್ನಾಟಕದಲ್ಲಿಯೆ ಮೊದಲು ವಿಪುಲವಾಗಿ ಬೆಳೆದುಬಂದಿರಬೇಕು. ಆಮೇಲೆ ಬಂದ ವೀರಶೈವ, ಇನ್ನೂ ಆ ಮೇಲೆ ಬಂದ ಬ್ರಾಹ್ಮಣರ ಚಟುವಟಿಕೆಗಳು ಉತ್ತರಕರ್ನಾಟಕದ ಕೊಡುಗೆಗಳೇ ಆಗಿವೆ. ಈ ಮೂರೂ ಧರ್ಮಗಳಿಗೆ ಸಂಬಂಧಪಟ್ಟ ಹಸ್ತಪ್ರತಿಗಳು ಮೊದಲು ಉತ್ತರಕರ್ನಾಟಕದಲ್ಲಿಯೇ ಕಣ್ಣುತೆರೆದವೆಂದು ಹೇಳಬಹುದು. ಆ ಮೇಲೆ ಗಂಗ, ಹುಳ್ಳ, ಭರತ ಮೊದಲಾದವರ ಆಶ್ರಯ ಬಯಸಿ ಜೈನರು ದಕ್ಷಿಣಕರ್ನಾಟಕ, ಕರಾವಳಿತೀರ, ಪಶ್ಚಿಮಕರ್ನಾಟಕಕ್ಕೆ ವಲಸೆ ಹೋಗಿರಬಹುದು. ಇಂದಿಗೂ ಬೆಳ್ಗೊಳ, ಹುಂಬಜ, ಕಾರ್ಕಳ, ಮೂಡಬಿದರೆ, ಕೊಲ್ಲಾಪುರ ಮೊದಲಾದೆಡೆ ಜೈನ ಹಸ್ತಪ್ರತಿಗಳು ವಿಪುಲವಾಗಿ ದೊರೆಯುತ್ತಿವೆ. ಹಾಗೆಯೆ ವೀರಶೈವರು ಮುಸಲ್ಮಾನ ದಾಳಿ, ವೈಷ್ಣವ ಸಾಳ್ವ-ತುಳು ಅರಸರ ನಿಮಿತ್ತವಾಗಿ ಗುಮ್ಮಳಾಪುರ, ಗುಬ್ಬಿ, ಎಡೆಯೂರುಗಳಿಗೆ ನಡೆದರು. ಬ್ರಾಹ್ಮಣರ ದಾಸಸಾಹಿತ್ಯ ಸಾಳ್ವ-ತುಳು ಅರಸರಿಂದ ಹಂಪೆಯಲ್ಲಿ ಹಬ್ಬಿ ಆ ಮನೆತನದ ಅವನತಿ ತರುವಾಯ ರಾಯಚೂರು ಪಾಳೇಗಾರರ ಆಶ್ರಯ ಪಡೆಯಿತು ಎಂದಿದ್ದಾರೆ.

ಹೀಗೆ ಸಂಗ್ರಹಗೊಂಡ ಜೈನ ಹಸ್ತಪ್ರತಿಗಳು ಶ್ರವಣಬೆಳ್ಗೊಳ, ಮೂಡಬಿದರೆ. ಕಾರ್ಕಳ, ಹೊಂಬುಜ, ಕೊಲ್ಲಾಪುರ ಮಠಗಳಲ್ಲಿ, ವೀರಶೈವ ಹಸ್ತಪ್ರತಿಗಳು ಚಿತ್ರದುರ್ಗ, ಗದಗ, ಹುಬ್ಬಳ್ಳಿ ಮೊದಲಾದ ಮಠಗಳಲ್ಲಿ ಭಾಂಡಾರರೂಪ ಪಡೆದುದನ್ನು ಹೇಳಲಾಗಿದೆ. ವೈಯಕ್ತಿಕವಾಗಿಯೂ ಹಲವರು ಹಸ್ತಪ್ರತಿಗಳನ್ನು ಹೊಂದಿದ್ದು ಅವರಲ್ಲಿ ಬೆಳ್ಗೊಳದ ರಾಜೇಂದ್ರಕುಮಾರ, ಮೂಡಬಿದರೆಯ ನೇಮಿರಾಜಶೆಟ್ಟಿ ಮೊದಲಾದವರು ಪ್ರಮುಖರು ಎಂದಿದ್ದಾರೆ.

ಕೊನೆಯಲ್ಲಿ ಹಸ್ತಪ್ರತಿಗಳ ವಿಷಯಸಂಪತ್ತನ್ನು ವಿವೇಚಿಸಲಾಗಿದೆ. ದೊರೆತಿರುವ ಹಸ್ತಪ್ರತಿಗಳ ಸಂಖ್ಯೆ ಸುಮಾರು ೨೫೦೦೦. ಹುಡುಕಿದರೆ ಇನ್ನೂ ೧೫೦೦೦ ಸಿಗಬಹುದು. ಅವುಗಳಲ್ಲಿ ಧಾರ್ಮಿಕ ಕೃತಿಗಳಿಗೇ ಪ್ರಾಧಾನ್ಯತೆ. ಲೌಕಿಕ ಕಾವ್ಯಗಳಿಗೆ ಅದರಲ್ಲೂ ಶಾಸ್ತ್ರಕೃತಿಗಳಾದ ವೈದ್ಯ, ಕೃಷಿ, ಪಾಕ, ಕಾಮ, ಶಿಲ್ಪ ಮೊದಲಾದವುಗಳಿಗೆ ಅಷ್ಟು ಪ್ರಾಧಾನ್ಯತೆ ಇಲ್ಲ ಎಂಬುದನ್ನು ಆದಿಪುರಾಣದ ಹೆಚ್ಚಿನ ಪ್ರತಿಗಳು ದೊರೆತುದು, ಪಂಪಭಾರತದ ಒಂದೂವರೆ ಪ್ರತಿಮಾತ್ರ ದೊರೆತುದರ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ದೊರೆಯುವ ಎಲ್ಲ ಪ್ರತಿಗಳನ್ನು ಸಂಗ್ರಹಿಸಿ ಒಮ್ಮೆಯಾದರೂ ಪ್ರಕಟಿಸುವ ವಿಚಾರ ಮಾಡಬೇಕು ಎಂಬುದು ಡಾ. ಕಲಬುರ್ಗಿ ಅವರ ಸ್ಪಷ್ಟ ವಿಚಾರ.

ಈ ಗ್ರಂಥದ ೩ನೆಯ ಅಧ್ಯಾಯ ಸಂಗ್ರಹಣ. ಈ ಮೊದಲು ಸಿಗದಿದ್ದ ಕೃತಿಯ ಹುಡುಕುವಿಕೆಗೆ 'ಶೋಧ' ಪದವನ್ನು, ಈ ಮೊದಲು ಸಿಕ್ಕ ಕೃತಿಯ ಹುಡುಕುವಿಕೆಗೆ 'ಸಂಗ್ರಹ' ಪದವನ್ನು ಬಳಸುವುದು ಲೇಸು. ಆದುದರಿಂದ ಹಸ್ತಪ್ರತಿ ಕ್ಷೇತ್ರಕಾರ್ಯವು ಶೋಧ ಮತ್ತು ಸಂಗ್ರಹಗಳ ಸಂಯುಕ್ತ ಕ್ರಿಯೆಯಾಗಿದೆ ಎಂದಿದ್ದಾರೆ. ಹಸ್ತಪ್ರತಿಯ ಕ್ಷೇತ್ರಕಾರ್ಯವು– ಕ್ಷೇತ್ರಕಾರ್ಯ, ಹಸ್ತಪ್ರತಿ ಮತ್ತು ಹಸ್ತಪ್ರತಿಗಳ ಒಡೆಯ ಈ ಮೂರು ಘಟಕಗಳನ್ನೊಳಗೊಂಡಿದೆ ಎಂಬುದನ್ನು ತ್ರಿಕೋನದ ಮೂಲಕ ವಿವರಿಸಿ ಕ್ಷೇತ್ರಕಾರ್ಯಕರ್ತನ ಗುಣವಿಶೇಷಣಗಳನ್ನು ವಿವರಿಸಿದ್ದಾರೆ. ಹಸ್ತಪ್ರತಿ ಕ್ಷೇತ್ರಕಾರ್ಯವೆಂದರೆ ಕೇವಲ ಪಠ್ಯವನ್ನು ಸಂಗ್ರಹಿಸುವುದಾಗಿರದೆ ಅದರ ಪರಿಸರದ ವಿವರವನ್ನೂ ಸಂಗ್ರಹಿಸುವುದೂ ಮಹತ್ವದ್ದು ಎಂದಿದ್ದಾರೆ. ಅಂದರೆ ಹಸ್ತಪ್ರತಿಗಳನ್ನು ಇಟ್ಟ ಸ್ಥಳ, ಕಟ್ಟಲು ಉಪಯೋಗಿಸಿದ ವಸ್ತ್ರಗಳ ಅವಲೋಕನೆಯೊಂದಿಗೆ, ಹಸ್ತಪ್ರತಿಗಳನ್ನು ಸ್ನಾನ ಮಾಡಿಯೇ ಮುಟ್ಟಬೇಕು, ಮಳೆ ಬರಲೆಂದು ಐರಾವತ ನೋಂಪಿ, ವಿರಾಟಪರ್ವ, ರೇವಣಸಾಂಗತ್ಯ ಓದಿಸಬೇಕು, ಜ್ಞಾನಸಿಂಧುವನ್ನು ವೃದ್ಧರು ಮಾತ್ರ ಓದಬೇಕು ಎಂದಿರುವ ನಂಬಿಕೆಗಳನ್ನೂ ಕ್ಷೇತ್ರಕಾರ್ಯಕರ್ತ ಗಮನಿಸಬೇಕು ಎನ್ನಲಾಗಿದೆ. ಇಲ್ಲಿಯೇ ಕರ್ನಾಟಕದಲ್ಲಿ ಹಸ್ತಪ್ರತಿ ಸಂಗ್ರಹ ಕಾರ್ಯ ನಡೆದುದನ್ನು ವಿವರಿಸಲಾಗಿದೆ. ಜೊತೆಗೆ ಈ ಸಂಗ್ರಹಾಲಯಗಳಿಂದ ಈ ವರೆಗೆ ಪ್ರಕಟವಾದ ಹಸ್ತಪ್ರತಿಸೂಚಿಗಳ ಪಟ್ಟಿಯನ್ನೂ ಕೊಡಲಾಗಿದೆ.

ಈ ಗ್ರಂಥದ ಬಹು ಮಹತ್ವಪೂರ್ಣವಾದ ಅಧ್ಯಾಯ ವ್ಯವಸ್ಥಾಪನ. ಹಸ್ತಪ್ರತಿಗಳನ್ನು ಸಂಗ್ರಹಿಸುವಷ್ಟೇ ಮುಖ್ಯವಾದುದು ಅವುಗಳ ವ್ಯವಸ್ಥಾಪನ. ಹಸ್ತಪ್ರತಿಗಳ ರಕ್ಷಣೆಯ ನೆಲೆಗಳಲ್ಲಿ ಭಾಂಡಾರಗಳ ಪಾತ್ರ ಮಹತ್ವದ್ದು. ಇವನ್ನು ವೈಯಕ್ತಿಕ ಸಂಸ್ಥೆ, ಸಾರ್ವಜನಿಕ ಸಂಸ್ಥೆ ಮತ್ತು ಸರಕಾರಿ ಸಂಸ್ಥೆ ಎಂದು ವರ್ಗೀಕರಿಸಿದ್ದಾರೆ. ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಸಂಸ್ಥೆ, ಮಠ–ಮಾನ್ಯಗಳ ಹಸ್ತಪ್ರತಿಭಾಂಡಾರಗಳು ವೈಯಕ್ತಿಕ ಸಂಸ್ಥೆಗಳಾದರೆ, ಕನ್ನಡ ಸಾಹಿತ್ಯ ಪರಿಷತ್ತು, ಬಸವಸಮಿತಿ ಮೊದಲಾದವು ಸಾರ್ವಜನಿಕ ಸಂಸ್ಥೆಗಳಾಗಿವೆ. ವಿಶ್ವವಿದ್ಯಾಲಯ, ಪ್ರಾಚ್ಯವಿದ್ಯಾಸಂಸ್ಥೆಗಳು ಸರಕಾರಿ ಸಂಸ್ಥೆಗಳಾಗಿವೆ ಎಂದು ಇವುಗಳ ಕಾರ್ಯವೈಖರಿಯನ್ನು ವಿವರಿಸಿದ್ದಾರೆ.

'ಹಸ್ತಪ್ರತಿಭಂಡಾರದ ಕಟ್ಟಡ' ಹೇಗಿರಬೇಕು ಎಂಬುದರ ನೀಲನಕ್ಷೆಯನ್ನೇ ಡಾ. ಕಲಬುರ್ಗಿ ಇಲ್ಲಿ ಕೊಟ್ಟಿದ್ದಾರೆ. ೧. ಆಕರಣ ವಿಭಾಗ, ೨. ತಾಂತ್ರಿಕ ವಿಭಾಗ, ೩. ಸಂರಕ್ಷಣ ವಿಭಾಗ, ೪. ಗ್ರಂಥಸಂಪಾದನ ವಿಭಾಗ, ೫. ಗ್ರಂಥಪರಿಚಲನ ವಿಭಾಗ, ೬. ಅಧ್ಯಯನವಿಭಾಗ, ೭. ಗ್ರಂಥಾಲಯ ವಿಭಾಗ, ೮. ಯಂತ್ರೋಪಕರಣ ವಿಭಾಗ, ೯. ಪ್ರದರ್ಶನ ವಿಭಾಗ, ೧೦. ಸಮಾಲೋಚನ ವಿಭಾಗ, ೧೧. ಸಭಾಗೃಹ ವಿಭಾಗ ಮತ್ತು ೧೨. ವಿಶ್ರಾಂತಿ ವಿಭಾಗ ಈ ಅನುಕೂಲತೆಗಳನ್ನು

ಒಳಗೊಂಡುದು ಪರಿಪೂರ್ಣ 'ಹಸ್ತಪ್ರತಿ ವಾಸ್ತು' ಎನಿಸುತ್ತದೆ ಎಂದಿದ್ದಾರೆ. ಇವುಗಳಲ್ಲಿ ಅತಿ ಮಹತ್ವದ್ದು ಆಕರಣ ವಿಭಾಗ. ಬೇರೆಬೇರೆ ಪ್ರದೇಶಗಳಿಂದ ಸಂಗ್ರಹಿಸಿ ತಂದ ಹಸ್ತಪ್ರತಿಗಳನ್ನು ಗ್ರಂಥಭಂಡಾರಕ್ಕೆ ಸ್ವೀಕರಿಸುವ ವಿಭಾಗ ಇದು. ಇಲ್ಲಿ ಪ್ರತಿಗಳನ್ನು ಎಣಿಸಿ ತೆಗೆದುಕೊಂಡು ಅವುಗಳ ಮೇಲೆ ಕೊಟ್ಟವರ-ತಂದವರ ವಿಳಾಸ, ದಿನಾಂಕಗಳನ್ನು ದಾಖಲಿಸಿಕೊಳ್ಳಬೇಕು. ಪುಟಗಳನ್ನು ಸರಿಯಾಗಿ ಜೋಡಿಸಬೇಕು. ಹೊಸ ದಾರ ಹೊಸ ಫಲಕಗಳನ್ನು ಅಳವಡಿಸಬೇಕು. ಧೂಳು, ಬೂಷ್ಟ, ಕ್ರಿಮಿಗಳನ್ನು ದೂರಮಾಡುವ ಕ್ರಿಮಿನಾಶಕ ತೈಲವನ್ನು ಅಳವಡಿಸಬೇಕು. ಒಟ್ಟಾರೆ ಹಸ್ತಪ್ರತಿಯ ಜೀರ್ಣೋದ್ಧಾರಕಾರ್ಯ ಇಲ್ಲಿ ನಡೆಯಬೇಕು ಎಂದಿದ್ದಾರೆ.

ಹಸ್ತಪ್ರತಿವಿಭಾಗದ ನಿಜವಾದ ಜೀವಸತ್ವ ಇರುವುದು 'ತಾಂತ್ರಿಕ ವಿಭಾಗದಲ್ಲಿ' ಹಸ್ತಪ್ರತಿಯ ಎಲ್ಲ ಪುಟಗಳನ್ನು ಬಿಚ್ಚಿ, ಕೃತಿನಾಮ, ವಿಷಯ, ಪ್ರಕಾರ, ಕವಿ, ಕಾಲ; ಪ್ರತಿಗೆ ಬಳಸಿದ ವಸ್ತು, ಆಕಾರ, ಪುಟಸಂಖ್ಯೆ, ಲಿಪಿಸ್ವರೂಪ, ಆದಿ-ಅಂತ್ಯ ವಿವರಗಳನ್ನು ಬಹಳ ಕಾಳಜಿಯಿಂದ ಗುರುತಿಸಿ ಸೂಚೀಕರಣ ಮಾಡಬೇಕು. ಅದರಲ್ಲಿ-ಸೂಚೀ, ವಿವರಣಾತ್ಮಕಸೂಚಿ, ಸಮಗ್ರಸೂಚಿ ಎಂಬ ಮೂರು ಬಗೆಗಳು. ಇವುಗಳಿಂದ ಆ ಗ್ರಂಥಭಂಡಾರದಲ್ಲಿ ಇರುವ ಕೃತಿಗಳ ಪರಿಚಯವಾಗುತ್ತದೆ. ಹಸ್ತಪ್ರತಿಯಲ್ಲಿ ಸೂಚೀಕರಣ ತಪ್ಪಿದರೆ ಅಭ್ಯಾಸಿಗೆ ಅಡ್ಡದಾರಿ ತೋರಿಸಿದಂತಾಗುತ್ತದೆ. ಅದ್ದರಿಂದ ಬಹುಜಾಗರೂಕತೆಯಿಂದ ಈ ಸೂಚೀಕಾರ್ಯವನ್ನು ಮಾಡಬೇಕು ಎಂದಿದ್ದಾರೆ. ಇನ್ನು ವರ್ಗೀಕರಣದಲ್ಲಿ ಪ್ರತಿಯನ್ನು-ತಾಳೆಪ್ರತಿ, ಕಾಗದ ಪ್ರತಿ; ಪ್ರತಿಯ ಕಾಲ, ಯಾವ ಧರ್ಮದ ಕೃತಿ ಎಂಬಿವನ್ನೆಲ್ಲ ಲಕ್ಷಿಸಿ ವರ್ಗೀಕರಣ ಮಾಡಬಹುದು ಎಂದಿದ್ದಾರೆ.

'ಸಂರಕ್ಷಣವಿಭಾಗ' ಇದು ಹಸ್ತಪ್ರತಿಭಾಂಡಾರದ ಇನ್ನೊಂದು ಮಹತ್ವದ ವಿಭಾಗ. ಹಸ್ತಪ್ರತಿಗಳನ್ನು ಜೋಪಾನವಾಗಿ ನೋಡಿಕೊಳ್ಳುವುದು ಈ ವಿಭಾಗದವರ ಕರ್ತವ್ಯ. ಅವನ್ನು ಗಾಳಿ, ಮಳೆಗಳಿಂದ, ಕ್ರಿಮಿ-ಕೀಟಗಳಿಂದ, ಕಳ್ಳಕಾಕರಿಂದ ರಕ್ಷಿಸಬೇಕು. ವ್ಯಕ್ತಿಗಳ ವಶದಲ್ಲಿರುವ ಅಪೂರ್ವಪ್ರತಿಗಳ ನಕಲುಪ್ರತಿಗಳು, ಮೈಕ್ರೋಫಿಲ್ಮಪ್ರತಿ, ಫೋಟೋಸ್ಟ್ಯಾಟಪ್ರತಿ, ಝೇರಾಕ್ಸಪ್ರತಿ ಬೆರಳಚ್ಚುಪ್ರತಿಗಳನ್ನು ಇಲ್ಲಿ ಸುರಕ್ಷಿತವಾಗಿಡಬೇಕು. ಹಸ್ತಪ್ರತಿಗಳನ್ನು ಕೇವಲ ಸಂರಕ್ಷಿಸುವುದಷ್ಟೇ ಅಲ್ಲ, ಅವುಗಳಲ್ಲಿ ಮಹತ್ವಪೂರ್ಣವಾದವುಗಳನ್ನು ಸಂಪಾದಿಸುವ ಕಾರ್ಯವನ್ನೂ ಮಾಡಬೇಕು. ಅದರಿಂದ ಆ ಗ್ರಂಥಭಾಂಡಾರಗಳ ಗೌರವ ಹೆಚ್ಚುತ್ತದೆ ಎಂಬುದನ್ನು ಕೌಟಿಲ್ಯನ ಅರ್ಥಶಾಸ್ತ್ರವನ್ನು ಪ್ರಕಟಿಸಿ, ಪ್ರಸಿದ್ಧಿ ಪಡೆದ ಮೈಸೂರಿನ ಓರಿಯಂಟಲ್ ರಿಸರ್ಚ ಇನ್ಸ್ಟಿಟ್ಯೂಟ ಮೊದಲಾದವುಗಳನ್ನು ಉದಾಹರಿಸಿದ್ದಾರೆ. ಅದಕ್ಕಾಗಿ ಸಂಪಾದಕ ವಿದ್ವಾಂಸರು, ಹಸ್ತಪ್ರತಿಕಾರರು, ಪಾಠಸಂಗ್ರಹ-ಪಾಠನಿರ್ಣಯ ನಿರ್ಣಯ ಮಾಡುವವರು, ಪ್ರೆಸ್‌ಕಾಪಿ ಸಿದ್ಧಪಡಿಸುವವರು, ಕರಡಚ್ಚು ತಿದ್ದುವವರು ತುಂಬ ದಕ್ಷರಾಗಿರಬೇಕಾಗುತ್ತದೆ ಎಂದಿದ್ದಾರೆ.

ಗ್ರಂಥಪರಿಚಲನ ವಿಭಾಗವು ಹಸ್ತಪ್ರತಿಗಳನ್ನು ಜಾಗರೂಕತೆಯಿಂದ ನೋಡುವುದಾಗಿದೆ. ಒಂದುಕಡೆಯಿಂದ ಗ್ರಂಥಭಂಡಾರ, ಇನ್ನೊಂದು ಕಡೆಯಿಂದ ವಾಚಕವರ್ಗ ಸಂಧಿಸುವ ಕೇಂದ್ರಸ್ಥಾನವಿದು. ಹಸ್ತಪ್ರತಿ ಪೂರೈಕೆ, ಹಸ್ತಪ್ರತಿಯ ನಕಲು ಪೂರೈಕೆ, ಹಸ್ತಪ್ರತಿಯ ಎರವಲು ಪೂರೈಕೆ, ಅನ್ಯಸ್ಥಳದ ಹಸ್ತಪ್ರತಿ ತರಿಸಿಕೊಡುವಿಕೆ ಈ ಕಾರ್ಯಗಳು ಇಲ್ಲಿ ನಡೆಯಬೇಕು.

'ಅಧ್ಯಯನವಿಭಾಗ'ವು ಹಸ್ತಪ್ರತಿಯನ್ನು ಪಡೆದು, ಅಭ್ಯಾಸಿಯು ಅಧ್ಯಯನಕ್ಕೆ ಕುಳಿತುಕೊಳ್ಳುವ ಜಾಗವಿದು. ಇಲ್ಲಿ ಗಾಳಿ-ಬೆಳಕು, ಶಾಂತವಾತಾವರಣ, ಒಳ್ಳೆಯ ಪೀಠೋಪಕರಣ ಮೊದಲಾದವುಗಳಿರಬೇಕು.

ಅಭ್ಯಾಸಿ ಹಸ್ತಪ್ರತಿಗಳನ್ನು ತುಂಬಾ ಕಾಳಜಿಯಿಂದ ಉಪಯೋಗಿಸಬೇಕು. ಎರವಲು ಬೇಕಾದರೆ ಇಲ್ಲಿಯೇ ಕೇಳಿ ಪಡೆಯಬೇಕು. ಮುದ್ರಿತಗ್ರಂಥಗಳ ಭಾಂಡಾರವೂ ಇಲ್ಲಿರಬೇಕು. ಅದರಲ್ಲಿ ಸಂಪಾದಿತ ಕೃತಿ, ಹಸ್ತಪ್ರತಿಸೂಚಿಗಳು ಇರಬೇಕು. ಬೇಕಾದ ಪ್ರತಿಯ ಕಾಪಿ ಮಾಡಿಕೊಳ್ಳುವ ಯಂತ್ರೋಪಕರಣಗಳ ವ್ಯವಸ್ಥೆಯೂ ಇಲ್ಲಿರಬೇಕು. ಜೊತೆಗೆ ಅಪರೂಪದ ಹಸ್ತಪ್ರತಿಗಳು, ಅವುಗಳಲ್ಲಿರುವ ಚಿತ್ರಗಳು, ಬರವಣಿಗೆಯ ಪ್ರಾಚೀನ ಸಾಧನಗಳು ಇಲ್ಲಿ ಪ್ರದರ್ಶನಗೊಳ್ಳಬೇಕು. ಅಲ್ಲದೆ ವಿದ್ವಾಂಸ ವಿದ್ವಾಂಸರಲ್ಲಿ ಸಂಪರ್ಕ ಕಲ್ಪಿಸುವ ಕೇಂದ್ರವೂ ಇದಾಗಬೇಕು. ಜೊತೆಗೆ ಸಭಾಗೃಹ, ವಿಶ್ರಾಂತಿ ವಿಭಾಗಗಳೂ ಇಲ್ಲಿರಬೇಕು. ಹೀಗೆ ಹಸ್ತಪ್ರತಿಗಳ ವ್ಯವಸ್ಥೆ ಮತ್ತು ಅಭ್ಯಾಸಿಗಳ ವ್ಯಾಸಂಗ ಕ್ರಿಯೆಗಳಿಗೆ ತಕ್ಕ ನೆಲೆಯಾಗಬೇಕು ಹಸ್ತಪ್ರತಿಭಾಂಡಾರ ಎಂದಿದ್ದಾರೆ. ಒಟ್ಟಾರೆ ತಾಂತ್ರಿಕ ವಿಭಾಗ, ಪರಿಚಲನ ವಿಭಾಗ, ಸಂಪಾದನ ವಿಭಾಗಗಳು ಜಾಗ್ರತವಾಗಿದ್ದಷ್ಟೂ ಗ್ರಂಥಾಲಯದ ಪ್ರಯೋಜನ, ಪ್ರಸಿದ್ಧಿ ಬೆಳೆಯುತ್ತದೆ ಎಂದಿದ್ದಾರೆ.

ಪ್ರಯೋಜನ ಎಂಬ ೫ನೆಯ ಅಧ್ಯಾಯದಲ್ಲಿಯ 'ಸಾರ್ಥಕ ಸೇವೆ' ಎಂಬುದು ವ್ಯವಸ್ಥಾಪನವಿಭಾಗದ ಕೆಲವು ಅಂಶಗಳೊಂದಿಗೆ ಹೆಚ್ಚಿನ ವಿವರಣೆಯನ್ನೊಳಗೊಂಡಿದೆ. ಮುಂದೇನು ಎಂಬಲ್ಲಿ 'ಹಸ್ತಪ್ರತಿಗಳು ಸರಕಾರದ ಆಸ್ತಿ' ಎಂದು ಘೋಷಿಸಿ, ವ್ಯಕ್ತಿಗಳ ವಶದಲ್ಲಿರುವ ಹಸ್ತಪ್ರತಿಗಳನ್ನೆಲ್ಲ ಸಂಗ್ರಹಿಸಬೇಕು, ಬೇರೆ ಬೇರೆ ಸಂಸ್ಥೆಗಳಲ್ಲಿರುವ ಹಸ್ತಪ್ರತಿಗಳ ಪ್ರತಿಗಳನ್ನು ಮಾಡಿಸಬೇಕು, ಪ್ರಾಚೀನ ಕೃತಿಗಳನ್ನು ಒಂದೂ ಬಿಡದಂತೆ ಅಚ್ಚಿಸಬೇಕು. ಹಸ್ತಪ್ರತಿಗಳ ಕೊನೆಯಲ್ಲಿರುವ ಪ್ರಶಸ್ತಿಗಳನ್ನು ಸಂಗ್ರಹಿಸಿ ಆ ಕಾಲದ ಸಾಹಿತ್ಯಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಚರಿತ್ರೆಯ ಅಭ್ಯಾಸ ಮಾಡಬೇಕು, ಹಸ್ತಪ್ರತಿ ಭಾಂಡಾರಗಳನ್ನು ನವೀಕರಿಸಬೇಕು, ಹಸ್ತಪ್ರತಿ ಅಧ್ಯಯನ ತರಬೇತಿಯನ್ನು ಪ್ರಾರಂಭಿಸಬೇಕು, ಹಸ್ತಪ್ರತಿ ಇಲಾಖೆಯನ್ನು ತೆರೆಯಬೇಕು ಮುಂತಾದ ಸಲಹೆಗಳನ್ನು ಕೊಟ್ಟಿದ್ದಾರೆ

ಇಷ್ಟೆಲ್ಲ ವಿವರಣೆಕೊಡಲು ಸಾಧ್ಯವಾದುದು ಡಾ. ಕಲಬುರ್ಗಿ ಅವರು ಕೆಲವು ದಿವಸ ಹಸ್ತಪ್ರತಿಭಾಂಡಾರದಲ್ಲಿ ಕೆಲಸ ಮಾಡಿದುದು, ಜೊತೆಗೆ ಹಸ್ತಪ್ರತಿಗಳ ಮೇಲೆ ಗಾಢವಾದ ಪ್ರೀತಿ ಹೊಂದಿದುದು. ಹೀಗಾಗಿ ಹಸ್ತಪ್ರತಿಗೆ ಸಂಬಂಧಿಸಿದ ಒಂದೂ ಅಂಶವನ್ನೂ ಬಿಡದೆ ಇಲ್ಲಿ ಪ್ರಸ್ತಾಪಿಸಲು ಸಾಧ್ಯವಾಗಿರುವುದು.

❖❖

[illegible]

*

ಪರಿವಿಡಿ

ಕನ್ನಡ ಗ್ರಂಥಸಂಪಾದನಶಾಸ್ತ್ರ

"ವಿದ್ವತ್ತು, ಪಾಂಡಿತ್ಯ ಇವು ನಮ್ಮೊಂದಿಗೇ ಕೊನೆಗಾಣುತ್ತವೆಂದು ಭಾವಿಸಿರುವ ಜನ ಇನ್ನೂ ಇರುವಾಗಲೇ ನೀವು ಇಂಥ ಪುಸ್ತಕವನ್ನು ಪ್ರಕಟಿಸಿರುವುದು ಅಭಿಮಾನದ ಮಾತು"

– ಡಾ. ಹಾ. ಮಾ. ನಾಯಕ, ೧೯೭೨

ಕನ್ನಡ ಗ್ರಂಥಸಂಪಾದನಶಾಸ್ತ್ರ

ಡಾ. ಎಂ. ಎಂ. ಕಲಬುರ್ಗಿ

೧೯೭೨

ಸಿರಿಗನ್ನಡ ಪ್ರಕಾಶನ

ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ–೩

ಅರ್ಪಣೆ

ಯಾರು ಗ್ರಂಥಸಂಪಾದನಶಾಸ್ತ್ರವನ್ನು
ಕಾವ್ಯಾಸಕ್ತಿಯಿಂದ ಆಲಿಸುವುದರ ಮೂಲಕ
ಈ ಪುಸ್ತಕ ಬರವಣಿಗೆಗೆ ಕಾರಣರಾದರೋ
ಆ ನನ್ನ ವಿದ್ಯಾರ್ಥಿಲೋಕಕ್ಕೆ

*

ಮುನ್ನುಡಿ

ಮೊತ್ತ ಮಾತ್ರವೆ ಅಲ್ಲ, ಮಟ್ಟದ ದೃಷ್ಟಿಯಿಂದಲೂ, ಹಿಂದೆಂದೂ ನಡೆಯದ, ಇನ್ನೆಲ್ಲಿಯೂ ಕಾಣದ ಸೃಜನ ಹಾಗೂ ಸಂಶೋಧನ ಕಾರ್ಯ ಕರ್ಣಾಟಕದ ಮೂರು ವಿಶ್ವವಿದ್ಯಾನಿಲಯಗಳಲ್ಲಿ ತೀವ್ರಗತಿಯಿಂದ ಸಾಗುತ್ತಿರುವುದು ನಾಡಿನ ಭಾಗ್ಯವಾಗಿದೆ. ಕನ್ನಡ ಇಲಾಖೆಗಳು ಜೇನುಗೂಡುಗಳಂತೆ ಸದಾ ಕಾರ್ಯನಿಮಗ್ನವಾಗಿರುತ್ತವೆ. ಪಾಲುಮಾರಿಕೆಗಾಗಲಿ, ರಾಜಕೀಯಕ್ಕಾಗಲಿ ಅಲ್ಲಿ ಜಾಗವಿಲ್ಲ. "ಬರೆ ಅಥವಾ ಬಯಲಾಗು" ಎನ್ನುವ ಸೂತ್ರ ಪ್ರತಿಯೊಬ್ಬ ವ್ಯಕ್ತಿಯ ಜೀವನಮಂತ್ರವಾಗಿದೆ. ಕಾಯಕದ ಗುಟ್ಟನ್ನರಿತ ಜನ ಅವರು. ಅವರಲ್ಲಿ ಕರ್ಣಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ವಿದ್ವಾಂಸರಾದ ಡಾ. ಎಂ.ಎಂ.ಕಲಬುರ್ಗಿಯವರೊಬ್ಬರು. 'ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೆ' ಎನ್ನುವ ಪ್ರಾಜ್ಞರ ನುಡಿಗೆ ಅವರು ಜೀವಂತ ನಿದರ್ಶನವಾಗಿದ್ದಾರೆ. ಅವರಲ್ಲಿ ತಾರುಣ್ಯವನ್ನು ಮೀರಿದ ವಿದ್ವತ್ತಿದೆ, ಪ್ರತಿಭಾವಂತಿಕೆಯಿದೆ; ಜತೆಗೆ ವಯೋನುಗುಣವಾದ ದಿಟ್ಟ ಸಾಹಸತನ ಹಾಗೂ ಕ್ರಿಯಾಶೀಲವಾದ ಉತ್ಸಾಹವಿದೆ. ಮಹಾಪಂಡಿತರ ಮುಂದೆಯೂ ಸೋಲರಿಯದ, ಅವರಿಗೆ ಸವಾಲಾಗಿರುವ ಪಾಂಡಿತ್ಯ ಅವರದು. ಈಗಾಗಲೇ ಅವರ ಕುಶಾಗ್ರಮತಿ ಮತ್ತು ಸತ್ಯನಿಷ್ಠೆಗಳು ಅವರ ಅನೇಕ ಸಂಶೋಧನ ಲೇಖನ ಮತ್ತು ಗ್ರಂಥಗಳಲ್ಲಿ ಸುವ್ಯಕ್ತಗೊಂಡಿವೆ.

ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ, ಹಲವು ಹಸ್ತಪ್ರತಿಗಳ ಸಹಾಯದಿಂದ ಶುದ್ಧಪಾಠಗಳನ್ನು ನಿರ್ಣಯಿಸುವುದೇ ಗ್ರಂಥಸಂಪಾದನೆ. ಹಸ್ತಪ್ರತಿಗಳು ಹಸ್ತಾಂತರವಾಗುವಾಗ ಒದಗುವ ಲೋಪದೋಷ ಸ್ಖಾಲಿತ್ಯಗಳು ಮೂಲಕವಿಯ ಆಶಯಗ್ರಹಣಕ್ಕೂ ಕಾವ್ಯಾಸ್ವಾದನಕ್ಕೂ ಅಡ್ಡಿಯಾಗುವುದರಿಂದ ಈ ಪರಿಷ್ಕರಣ ಅತ್ಯಗತ್ಯವಾಗುತ್ತದೆ. ಕ್ರಿಸ್ತಶಕೆಯ ಆದಿಯಿಂದಲೂ ನಾನಾದೇಶಗಳಲ್ಲಿ ಈ ಸಂಪಾದನಕಾರ್ಯ ಕ್ರಮಬದ್ಧವಾಗಿ ನಡೆದು, ಗ್ರಂಥಸಂಪಾದನೆ ಒಂದು ಉಪಯುಕ್ತ ಶಾಸ್ತ್ರವಾಗಿ ಪರಿಣಮಿಸಿದೆ. ಎರಡು ಸಾವಿರ ವರ್ಷ ಪ್ರಾಚೀನತೆಯುಳ್ಳ ಕನ್ನಡದಲ್ಲಿ ವಿಪುಲವಾದ ಗ್ರಂಥರಾಶಿಯಿದೆ. ಅವುಗಳ ಸಂಗ್ರಹಕಾರ್ಯವನ್ನು ವ್ಯವಸ್ಥಿತವಾಗಿ ಮೊಟ್ಟಮೊದಲು ಕೈಕೊಂಡವರು ಬಿ.ಎಲ್. ರೈಸ್ ಅವರು. ಅಲ್ಲಿಂದೀಚೆಗೆ ಈ ಸಂಗ್ರಹಕಾರ್ಯ ಕುಂಟಿಕೊಂಡೊ ತೆವಳಿಕೊಂಡೊ ನಡೆಯುತ್ತಿದೆ. ಈಗಾಗಲೇ ಹಲವಾರು ಸಾವಿರ ಹಸ್ತಪ್ರತಿಗಳು ಲಭ್ಯವಾಗಿದ್ದರೂ, ಲಭಿಸಬೇಕಾದ ರಾಶಿ ಅಷ್ಟೇ ಪ್ರಮಾಣದಲ್ಲಿದೆ. ಅಸಂಖ್ಯಾತ ಹಸ್ತಪ್ರತಿಗಳು ಒರಲೆಗುಣಿಸಾಗಿಯೊ ಹುಳುಗಳಿಗೆ ತಿನಿಸಾಗಿಯೊ ಬೂಷ್ಟಕ್ಕೆ ಬಲಿಯಾಗಿಯೊ ತಿಪ್ಪೆಗೆ ಗೊಬ್ಬರವಾಗಿಯೊ ವಿನಷ್ಟವಾಗಿರುವುದು ದುರ್ದೈವದ ಸಂಗತಿಯಾಗಿದೆ.

ಹಸ್ತಪ್ರತಿಗಳ ಪೂಜೆಯಲ್ಲಿ ಆಸಕ್ತರಾಗಿರುವ ಅನೇಕ ಸಂಪ್ರದಾಯ ಶರಣರ ಸೆರೆಯಲ್ಲಿರುವ ಪ್ರತಿಗಳನ್ನು ಸಂಗ್ರಹಿಸಿ, ಆ ಮೂಲಕ ಅಸಗ ಪೊನ್ನ ಕೇಶಿರಾಜ ಮೊದಲಾದವರ ಹಲವು ಕೃತಿಗಳು ಬೆಳಕು ಕಾಣುವುದಾದರೆ ಕನ್ನಡಿಗರ ಪುಣ್ಯಕ್ಕೆ ಎಣೆಯಿಲ್ಲದಂತಾಗುತ್ತದೆ; ಕರ್ಣಾಟಕ ಸಂಸ್ಕೃತಿಯ ಸಂಪತ್ತು ಮುಗಿಲು ಮುಟ್ಟುತ್ತದೆ. ಪ್ರಾಚೀನ ವಸ್ತು ಸಂರಕ್ಷಣೆಯ ಕಾನೂನನ್ನು ಸರ್ಕಾರ ತೀವ್ರವಾಗಿ ಈ ಕ್ಷೇತ್ರಕ್ಕೂ ವಿಸ್ತರಿಸದಿದ್ದರೆ ಮುಂದೆ ಆಗುವ ನಷ್ಟವನ್ನು ತುಂಬಲಾಗುವುದಿಲ್ಲ.

ಕನ್ನಡ ಲಿಪಿಯಲ್ಲಿರುವ ಅತ್ಯಂತ ಪ್ರಾಚೀನ ಹಸ್ತಪ್ರತಿಯೆಂದರೆ ಮೂಡಬಿದರೆ ಜೈನಮಂದಿರದಲ್ಲಿರುವ “ಧವಲಾ” ಗ್ರಂಥ. ಅದರ ಭಾಷೆ ಅರ್ಧಮಾಗಧಿ. ಈಗ ದೊರಕಿರುವ ಕನ್ನಡ ಭಾಷೆಯ ಹಸ್ತಪ್ರತಿಗಳಲ್ಲಿ ಕ್ರಿ.ಶ. ೯೪೧ರ ಆದಿಪುರಾಣವೇ ಪ್ರಾಚೀನತಮವಾದದ್ದು. ಅದು ಶ್ರವಣಬೆಳ್ಗೊಳದಲ್ಲಿದೆ; ಅದರ ಕಾಲ ೧೩೭೯. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಗುಣವರ್ಮನ ಪುಷ್ಪದಂತಪುರಾಣ ಅನಂತರದ್ದು. ೧೪೫೬ ನೆಯ ಇಸವಿಯದು. ಇಷ್ಟಾದರೂ ಯಾವ ಕವಿಯ ಹಸ್ತಪ್ರತಿಯೂ ಸಿಕ್ಕಿದಂತೆ ತೋರುವುದಿಲ್ಲ. ಮುದ್ದಣ್ಣ ಕವಿಯ ‘ಅದ್ಭುತ ರಾಮಾಯಣದ’ ಮೂಲಪ್ರತಿ ಮಾತ್ರ ಡಿ.ಎಲ್.ನರಸಿಂಹಾಚಾರ್ಯರ ಗ್ರಂಥಾಲಯದಲ್ಲಿದೆ. ಆಧುನಿಕ ಸಾಹಿತಿಗಳ ಹಸ್ತಪ್ರತಿಗಳೂ ಸಹ ದೊರೆಯುವುದು ಕಷ್ಟ.

ಕನ್ನಡದಲ್ಲಿ ಪರಿಷ್ಕರಣಗೊಂಡು ಅಚ್ಚಾಗಬೇಕಾದ ಪ್ರಾಚೀನ ಗ್ರಂಥರಾಶಿ ಸಾಕಷ್ಟಿದೆ. ಕೆಲವೊಮ್ಮೆ ಊಹಾತ್ಮಕ ಪರಿಷ್ಕರಣದ ಮೂಲಕ ಶಾಸನವನ್ನು ಸಂಪಾದಿಸಬೇಕಾಗುತ್ತದೆ. ಜಾನಪದ ಸಾಹಿತ್ಯಕ್ಕಂತೂ ಗ್ರಂಥಸಂಪಾದನೆಯ ಸೂತ್ರಗಳನ್ನು ಅನಿವಾರ್ಯವಾಗಿ ಅನ್ವಯಿಸಬೇಕಾಗುತ್ತದೆ. ಹಾಡುಗಳು ಬಾಯಿಂದ ಬಾಯಿಗೆ ಬರುವಾಗ ನಾನಾ ರೂಪಾಂತರಗಳನ್ನು ಪಡೆಯುವುದರಿಂದ ಪರಿಷ್ಕರಣ ಅತ್ಯಗತ್ಯ, ಕವಿಯ ಹಸ್ತಪ್ರತಿಯ ದೋಷದಿಂದಲೋ, ಮೊಳೆ ಜೋಡಿಸುವವನ ಅಥವಾ ಕರಡು ತಿದ್ದುವವನ ಅಜಾಗರೂಕತೆಯಿಂದಲೋ, ಮುದ್ರಿತಗ್ರಂಥಗಳಲ್ಲಿಯೂ ತಪ್ಪು ನುಸುಳುತ್ತವೆ. ಅಷ್ಟೇ ಅಲ್ಲ, ಕವಿಯೇ ಪುನಃ ಪುನಃ ಪಾಠಗಳನ್ನು ತಿದ್ದಬಹುದು. ಈ ಕಾರಣಗಳಿಂದಾಗಿ ಮುದ್ರಿತ ಗ್ರಂಥಗಳ ಪರಿಷ್ಕರಣ ಅವಶ್ಯವಾಗುತ್ತದೆ. ಇದರಿಂದ ಗ್ರಂಥಸಂಪಾದನಶಾಸ್ತ್ರದ ಅಧ್ಯಯನ, ಅಧ್ಯಾಪನಗಳ ಪ್ರಾಮುಖ್ಯವನ್ನು ಒತ್ತಿ ಹೇಳಬೇಕಾಗಿಲ್ಲ. ಕನ್ನಡನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳೂ ಇದರ ವ್ಯಾಸಂಗವನ್ನು, ಎಂ.ಎ. ತರಗತಿಯ ಪಠ್ಯಕ್ರಮದಲ್ಲಿ ಅಳವಡಿಸಿರುವುದು ಸಮುಚಿತವಾಗಿದೆ.

ಕಳೆದ ಶತಮಾನದ ಕೊನೆಯ ಪಾದದಿಂದ ಕನ್ನಡದ ಪ್ರಾಚೀನ ಗ್ರಂಥಗಳು ಸಂಪಾದನಗೊಳ್ಳುತ್ತಿದ್ದರೂ ಇತ್ತೀಚೆಗೆ ಅದರ ವ್ಯಾಸಂಗ ಪ್ರಾರಂಭವಾಗಿದ್ದರೂ ೧೯೬೪ರ ತನಕ ಈ ವಿಷಯದ ಮೇಲೆ ಕನ್ನಡದಲ್ಲಿ ಪ್ರೌಢ ಪಠ್ಯಪುಸ್ತಕ ಒಂದಾದರೂ ಇರಲಿಲ್ಲ. ಡಿ.ಎಲ್.ನರಸಿಂಹಾಚಾರ್ಯ ಅವರ “ಕನ್ನಡ ಗ್ರಂಥಸಂಪಾದನೆ” ಈ ಕ್ಷೇತ್ರದಲ್ಲಿ ಶಿಖರಕೃತಿಯಾಗಿದ್ದು, ಆ ಕೊರತೆಯನ್ನು ನೀಗಿಸಿದ್ದುಂಟು. “ಒಬ್ಬ ಮಗ ಮಗನಲ್ಲ, ಒಂದು ಕಣ್ಣು ಕಣ್ಣಲ್ಲ” ಎಂಬ ಗಾದೆಯಂತೆ ಯಾವ ಕ್ಷೇತ್ರದಲ್ಲಾದರೂ ಒಂದೇ ಒಂದು ಪುಸ್ತಕ ಎಲ್ಲ ಬೇಡಿಕೆಗಳನ್ನೂ ಅವಶ್ಯಕತೆಗಳನ್ನೂ ಪೂರೈಸಲಾರದು. ಅಷ್ಟೇ ಅಲ್ಲ, ಅದು ಇನ್ನೂ ಬೆಳೆಯುವ ಶಾಸ್ತ್ರ. ವರ್ಷೇ ವರ್ಷೇ ಹೊಸ ಹೊಸ ಗ್ರಂಥಗಳು ಸಂಪಾದನೆಗೊಂಡು ಹೊರಬರುವಾಗ ಹೊಸಹೊಸ ಸಮಸ್ಯೆಗಳೂ ಪರಿಹಾರಗಳೂ ತಲೆದೋರುವುದುಂಟು; ಹೊಸಹೊಸ ಸಂಶೋಧನೆಗಳಿಂದ ಹೊಸ ಹೊಸ ಆವಿಷ್ಕಾರಗಳು

ಬೆಳಕು ಕಾಣುವುದುಂಟು. ಅವುಗಳನ್ನೆಲ್ಲ ಒಳಗೊಳ್ಳುವ ಗ್ರಂಥಗಳು ಮೇಲಿಂದ ಮೇಲೆ ಬರಬೇಕಾಗುತ್ತವೆ. ಹೀಗೆ ನೂತನ ವಿಚಾರಗಳ ಸುಗ್ಗಿ ಮರೆಯಾಯಿತೆಂದರೆ ಶಾಸ್ತ್ರದ ಬೆಳವಣಿಗೆ ನಿಂತಂತೆಯೇ ಸರಿ. 'ಕನ್ನಡ ಗ್ರಂಥಸಂಪಾದನೆ' ಹೊರಬಂದ ನಂತರ ನಾಲ್ಕು ವರ್ಷಗಳಲ್ಲಿ (೧೯೬೮) "ಭಾರತೀಯ ಗ್ರಂಥಸಂಪಾದನೆ ಪರಿಚಯ" ಪ್ರಕಟವಾಯಿತು. ಇದು ಡಾ. ಎಸ್.ಎಂ.ಕತ್ರೆಯವರ 'Introduction to Indian Textual Criticism' ಎಂಬ ಆಂಗ್ಲಭಾಷೆಯ ಗ್ರಂಥದ ಅನುವಾದ. ಇದನ್ನು ಭಾಷಾಂತರಿಸಿದವರು ಶ್ರೀ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು. ಅದು ಬಂದ ನಾಲ್ಕು ವರ್ಷಗಳಲ್ಲಿಯೇ ಮತ್ತೊಂದು ಸ್ವತಂತ್ರ ಗ್ರಂಥ ಬರುತ್ತಿರುವುದು ಈ ಶಾಸ್ತ್ರದ ಜೀವಂತಿಕೆಯ ಹಾಗೂ ಆಧಿಕ್ಯದ ಕುರುಹಾಗಿದೆ.

ಇದೊಂದು ನವೀನ ಸೃಷ್ಟಿಯೆಂದೂ ಸ್ವತಂತ್ರ ಪ್ರಯೋಗವೆಂದೂ "ಈ ಮೊದಲು ಬಂದವುಗಳಿಗಿಂತ ಈ ಪುಸ್ತಕ ಪರಿಭಾಷೆ ನಿರೂಪಣೆ ಇತ್ಯಾದಿಗಳಲ್ಲಿ" ಬೇರೆಯಾಗಿದೆಯೆಂದೂ ಗ್ರಂಥಸಂಪಾದಕರು "ನನ್ನ ನುಡಿ"ಯಲ್ಲಿ ಹೇಳಿಕೊಂಡಿರುವುದು ಜಂಬದ ಮಾತಾಗಿರದೆ, ಆತ್ಮಪ್ರಯತ್ನದ ಹಾಗೂ ಯಥಾರ್ಥತೆಯ ಮಾತಾಗಿದೆ. ಈ ಗ್ರಂಥ ಇತಿಹಾಸಕಾಂಡ, ಲೇಖನಕಾಂಡ. ಸ್ಖಾಲಿತ್ಯಕಾಂಡ, ಹಸ್ತಪ್ರತಿಕಾಂಡ, ಸಂಪಾದನಕಾಂಡ ಮತ್ತು ಶೇಷಕಾಂಡ–ಎಂದು ಆರು ಕಾಂಡಗಳಲ್ಲಿ ವ್ಯಾಪ್ತಿ ಪಡೆದಿದೆ. "ಕನ್ನಡ ಗ್ರಂಥಸಂಪಾದನೆ"ಯಲ್ಲಿ ಪಾಶ್ಚಾತ್ಯ ಗ್ರಂಥಸಂಪಾದನೆಯ ಇತಿಹಾಸ ದೀರ್ಘವಾಗಿ ಉಲ್ಲೇಖಗೊಂಡರೆ, ಭಾರತೀಯ ಮತ್ತು ಕನ್ನಡ ಗ್ರಂಥಸಂಪಾದನೆಯ ಇತಿಹಾಸ ಇಲ್ಲಿ ವಿಸ್ತಾರವಾಗಿ ನಿರೂಪಣೆಗೊಂಡಿದೆ. ಪ್ರಾಚೀನ ಗ್ರಂಥಭಂಡಾರಗಳ ವಿವರಣೆ ಹಾಗೂ ಅವುಗಳ ಬಗೆಗೆ ದೊರೆಗಳು ತೋರುತ್ತಿದ್ದ ಆಸಕ್ತಿ, ಇಲ್ಲಿ ಸಾಧಾರವಾಗಿ ಹಾಗೂ ಪ್ರಾಮಾಣಿಕವಾಗಿ ವರ್ಣಿತವಾಗಿವೆ. ಇನ್ನೆಲ್ಲಿಯೂ ಸಿಗದ 'ಕನ್ನಡ ಗ್ರಂಥಸಂಪಾದನೆಯ ಇತಿಹಾಸ'ದಲ್ಲಿ ಇತ್ತೀಚಿನ ವಿವರಗಳೆಲ್ಲ ಸೇರ್ಪಡೆಯಾಗಿವೆ. ಲೇಖನಕಾಂಡದಲ್ಲಿ ಬರುವ ಲೇಖನ ಸಾಮಗ್ರಿಗಳು ಹಳೆಯವಾದರೂ ಅವುಗಳ ಬಳಕೆಗೆ ಕೆಲವು ಹೊಸ ಆಧಾರಗಳನ್ನು ಕ್ರೋಡೀಕರಿಸಿದ್ದಾರೆ. ಲಿಪಿಕಾರರನ್ನು ನಿಯುಕ್ತಲಿಪಿಕಾರರು, ವೃತ್ತಿಲಿಪಿಕಾರರು ಮತ್ತು ಹವ್ಯಾಸಿಲಿಪಿಕಾರರು ಎಂದು ವರ್ಗೀಕರಿಸಿ ವಿವರಿಸಿರುವುದು ಇಲ್ಲಿಯ ವೈಶಿಷ್ಟ್ಯಗಳಲ್ಲೊಂದು. ಸ್ಖಾಲಿತ್ಯಕಾಂಡದಲ್ಲಿ ಬರುವ ಪರಿಭಾಷೆ "ಕನ್ನಡ ಗ್ರಂಥಸಂಪಾನೆ'ಯ ಪರಿಭಾಷೆಗಿಂತ ತೀರ ಭಿನ್ನವಾದುದು, ಇವುಗಳಲ್ಲಿ ಯಾವುದು ತ್ಯಾಜ್ಯ, ಯಾವುದು ಗ್ರಾಹ್ಯವೆನ್ನುವ ಅಂಶ ಮುಂದೆ ನಿರ್ಣಯವಾಗಬೇಕಾಗಿದೆ. ಅವಸ್ಥಾಭೇದ ಪ್ರಾಂತಭೇದಗಳಿಂದಾಗುವ ಸ್ಖಾಲಿತ್ಯಗಳನ್ನು ಗುರುತಿಸಿರುವುದು ಮಹತ್ತರವಾದ ವೈಶಿಷ್ಟ್ಯಗಳಲ್ಲೊಂದಾಗಿದೆ.

ಹಸ್ತಪ್ರತಿಯ ಬಗೆಗಳು, ಅವುಗಳ ಪರಸ್ಪರ ಸಂಬಂಧ ನಿರ್ಣಯ, ಇವೇ ಮೊದಲಾದ ಅಂಶಗಳು ಹಸ್ತಪ್ರತಿಕಾಂಡದಲ್ಲಿ ಚರ್ಚೆಗೊಂಡಿವೆ. ಮೂಲ ಹಸ್ತಪ್ರತಿ ದೊರೆಯದಿದ್ದಾಗ, ಅದಕ್ಕೆ ಹತ್ತಿರವೆನ್ನಬಹುದಾದ ಹಸ್ತಪ್ರತಿಯನ್ನು ಆಯ್ಕೆಮಾಡಿಕೊಂಡಾಗ ಸಂಪಾದಕನ ಶ್ರಮ ಸಾರ್ಥಕವಾಗುತ್ತದೆ. ಆಗಲೂ ಆ ಹಸ್ತಪ್ರತಿಯಲ್ಲಿ ಅನೇಕ ಲೋಪದೋಷಗಳು ಕಾಣಬಹುದು. ಅದನ್ನು ಇತರ ಹಸ್ತಪ್ರತಿಗಳ ಸಹಾಯದಿಂದ, ಕೊನೆಗೆ ಊಹೆಯಿಂದ ಪರಿಹರಿಸಿಕೊಳ್ಳಬೇಕಾಗುತ್ತದೆ. ಹೀಗೆ ಸಂಪಾದನಕಾರ್ಯವಿಧಾನ ಐದು ಮಜಲಿನಲ್ಲಿ ಸಾಗುತ್ತದೆ : ಸಾಮಗ್ರಿ ಸಂಕಲನ, ವಂಶಾವಳಿ ನಿರ್ಣಯ, ಪಾಠಸಂಕಲನ, ಪಾಠಪರಿಷ್ಕರಣ ಮತ್ತು ಉನ್ನತ ವಿಮರ್ಶೆ. ಸಂಪಾದನಕಾರ್ಯ

ಸುಲಭವಾದದ್ದಲ್ಲ; ಯಾಂತ್ರಿಕವೂ ಅಲ್ಲ. ಸಹನೆ, ತಾಳ್ಮೆ, ದೃಢತೆ, ಪ್ರತಿಭೆ, ಕಲ್ಪನಾಸಾಮರ್ಥ್ಯ, ವಿಚಾರಶಕ್ತಿ, ಪರಕಾಯಪ್ರವೇಶನೈಪುಣ್ಯ ಇವು ಅವನು ಹೊಂದಿರಬೇಕಾದ ಗುಣಗಳು. ಪಾಲುಮಾರಿಕೆ, ಅವಜ್ಞೆ, ಬೇಸರ ಇವು ಅವನಿಂದ ದೂರವಾಗಿರಬೇಕು. ತನಗೆ ಸರಿಯೆಂದು ತೋರಿದ ಪಾಠವನ್ನು ನಿರ್ಣಯಿಸಿ ಗ್ರಂಥದ ಮೈಯಲ್ಲಿ ನಮೂದಿಸಬಹುದಾದರೂ ತನ್ನ ಕಣ್ಮುಂದಿರುವ ಎಲ್ಲ ಪಾಠಾಂತರಗಳನ್ನು ಅಡಿಯಲ್ಲಿ ಪಟ್ಟಿ ಮಾಡುವುದೊಳ್ಳೆಯದು. ಗ್ರಂಥ ಜನಪ್ರಿಯವಾದಷ್ಟು ಪಾಠಾಂತರಗಳು ಅಧಿಕಪ್ರಮಾಣದಲ್ಲಿ ದೊರೆಯುತ್ತವೆ. ಬಸವೇಶ್ವರ, ಅಕ್ಕಮಹಾದೇವಿಯವರ ವಚನಗಳು, ಹರಿಶ್ಚಂದ್ರಕಾವ್ಯ, ಕುಮಾರವ್ಯಾಸಭಾರತ, ಪುರಂದರ-ಕನಕದಾಸರ ಕೀರ್ತನೆಗಳು ಈ ಸಾಲಿನಲ್ಲಿ ಬರುತ್ತವೆ. ಭಿನ್ನ ಭಿನ್ನ ಪಾಠಾಂತರಗಳನ್ನು ಸೂಚಿಸುವಾಗ ಸರಿಯಾದ ಸಂಕೇತ ಸಂಕ್ಷೇಪಗಳನ್ನು ಬಳಸದಿದ್ದರೆ ಗೊಂದಲವಾಗುತ್ತದೆ. ಈ ಕಾಂಡದ ಕೊನೆಯಲ್ಲಿ ಇವುಗಳ ಬಗೆಗೆ ಸಾಕಷ್ಟು ಸಾಮಗ್ರಿಯನ್ನೊದಗಿಸಿ ಸಂಪಾದಕರಿಗೆ ಉಪಕಾರ ಮಾಡಿದ್ದಾರೆ. ಉನ್ನತ ವಿಮರ್ಶೆಯ ಭಾಗವನ್ನು ಮತ್ತಷ್ಟು ಲಂಬಿಸಿದ್ದರೆ, ವ್ಯಾಪಕವಾಗಿ ವಿಷಯಗಳನ್ನು ಚರ್ಚಿಸಿದ್ದರೆ ಅದರ ಉಪಯುಕ್ತತೆ ಬಹುಮಡಿಯಾಗುತ್ತಿತ್ತು.

ಶೇಷಕಾಂಡದಲ್ಲಿ ಸಂಪಾದಕನ ಅರ್ಹತೆಗಳನ್ನು ನಿರೂಪಿಸಿದ್ದಾರೆ. ಅವನು ತಿಳಿದುಕೊಂಡಿರಬೇಕಾದ ವಿಷಯಗಳ ವ್ಯಾಪ್ತಿ ಅಪಾರವಾದದ್ದು. ಅವನು ದಶರಥನಾದರೆ ಸಾಲದು, ಸಹಸ್ರರಥನಾಗಿರಬೇಕು. ಅವನಲ್ಲಿ ವ್ಯುತ್ಪತ್ತಿಯಿರಬೇಕು, ಬಹುಶ್ರುತತ್ವ ಇರಬೇಕು; ತೂಕಪ್ರಜ್ಞೆ ಇರಬೇಕು, ಜತೆಗೆ ಪ್ರತಿಭೆ ಇರಬೇಕು. ಅಂದಮೇಲೆ ಅವನು ಮಹಾಪಂಡಿತನೂ ಅಹುದು. ಕವಿಯೂ ಅಹುದು, ಉತ್ತಮ ವಿಮರ್ಶಕನೂ ಅಹುದು. ಈ ತ್ರಿಮೂರ್ತಿತ್ವ ಏಕತ್ರ ಸಂಭವಿಸದಿದ್ದರೆ ಉತ್ತಮ ಸಂಪಾದಕ ಇಲ್ಲವಾಗುತ್ತಾನೆ. ಅವನೊಬ್ಬ ಪುನಸ್ಸೃಷ್ಟಿಕರ್ತ. ಸಂಪಾದಕನ ಈ ಎಲ್ಲ ಅರ್ಹತೆಗಳನ್ನು ಗ್ರಂಥಕರ್ತರು ಕೂಲಂಕಷವಾಗಿ ವಿವರಿಸಿದ್ದಾರೆ. ಬೇರೆ ಬೇರೆ ಗ್ರಂಥಗಳಲ್ಲಿ ದುರ್ಲಭವಾದ ಹಲವಾರು ವಿಷಯಗಳು ಇಲ್ಲಿ ಸುಲಭವಾಗಿ ದೊರೆಯುತ್ತವೆ.

ಈ ಗ್ರಂಥವನ್ನೋದಿ ಮುಗಿಸಿದ ನಂತರ ಒಟ್ಟಿನಲ್ಲಿ ಕೆಲವು ಗುಣಗಳು ಎದ್ದು ಕಾಣುತ್ತವೆ. ಈ ವಿಷಯದ ಬಗ್ಗೆ ಗ್ರಂಥಕರ್ತರು ಪಡೆದಿರುವ ಪ್ರಭುತ್ವ, ಅವರ ದೀರ್ಘವ್ಯಾಸಂಗದ ಹಾಗೂ ಅನುಭವದ ಫಲಶ್ರುತಿ, ಸಾಮಗ್ರಿ ಸಂಗ್ರಹದಲ್ಲಿ ಕಾಣುವ ತಿತಿಕ್ಷೆ ಹಾಗೂ ಶ್ರಮ, ಲೇಖನಕಾರ್ಯದಲ್ಲಿ ಕಂಡುಬರುವ ಸಾಹಸೋತ್ಸಾಹಗಳು, ಮೇಲಾಗಿ ಶಾಸ್ತ್ರೀಯಪ್ರಜ್ಞೆ-ಇವು ಈ ಗ್ರಂಥದಲ್ಲಿ ಪ್ರತಿಫಲನಗೊಂಡಿವೆ. ಶ್ರೇಷ್ಠವಿದ್ವಾಂಸರೊಬ್ಬರು ಬರೆದಿರುವ ಗ್ರಂಥ ಮತ್ತೊಂದಿರುವಾಗ ಬೇರೊಂದು ಗ್ರಂಥರಚನೆ ಸಾಹಸದ ಮಾತಾದೀತು. ಈ ಗ್ರಂಥ ಪೂರ್ವಗ್ರಂಥಕ್ಕೆ ಪ್ರತಿಸ್ಪರ್ಧಿಯಲ್ಲ; ಪೂರಕ ಎಂದು ನನಗೆ ಮನದಟ್ಟಾಗಿದೆ. ವಿಷಯ ಸಂಗ್ರಹದಲ್ಲಿ, ನಿರೂಪಣ ವಿಧಾನದಲ್ಲಿ, ಸಾಮಗ್ರಿ ಸಂಪತ್ತಿನಲ್ಲಿ ಇದು ಅದಕ್ಕಿಂತ ಭಿನ್ನವಾಗಿದ್ದು, ಇದರ ಅವಶ್ಯಕತೆ ಅದರಷ್ಟೇ ಅನಿವಾರ್ಯವೆಂಬ ಭಾವನೆಯೂ, ಇದೊಂದು ಸ್ವತಂತ್ರ ಗ್ರಂಥವೆಂಬ ಸಂತೃಪ್ತಿಯೂ ಓದುಗರಲ್ಲಿ ಉಂಟಾಗದಿಲ್ಲ. ಇಂಥ ಕಲಶಕೃತಿಯನ್ನು ಕನ್ನಡಿಗರಿಗೊದಗಿಸಿ, ಶಾಸ್ತ್ರೀಯ ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಹಾಗು ಉಜ್ವಲವಾದ ಕೊಡುಗೆಯನ್ನು ನೀಡಿರುವ ಪ್ರೊ.ಕಲಬುರ್ಗಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಕಲಬುರ್ಗಿಯವರು ಪ್ರವೃತ್ತಿಯಿಂದ ಸಾಹಿತಿ, ವೃತ್ತಿಯಿಂದ ಅಧ್ಯಾಪಕರು ಹಾಗೂ ಸಂಶೋಧಕರು. ನಾನು ಅಧ್ಯಾಪಕರನ್ನು ನಾಲ್ಕು ವರ್ಗವಾಗಿ ವಿಂಗಡಿಸುತ್ತೇನೆ. ಉತ್ತಮ, ಮಧ್ಯಮ, ಅಧಮ, ಅಧಮಾಧಮ. ತಾನು ಓದಿದ್ದನ್ನು ಗ್ರಹಿಸದೆ, ವಿದ್ಯಾರ್ಥಿಗಳಿಗೂ ಅರ್ಥವಾಗುವಂತೆ ಬೋಧಿಸದೆ, ಅಪ್ರಾಮಾಣಿಕವಾಗಿ, ನೀತಿಬಾಹಿರನಾಗಿ ವರ್ತಿಸುವ, ಸದಾ ರಾಜಕೀಯದಲ್ಲಿಯೇ ತಲ್ಲೀನನಾಗಿರುವ ಅಧ್ಯಾಪಕ ಅಧಮಾಧಮರ ಗುಂಪಿಗೆ ಸೇರಿದವನು. ಅನ್ಯರ ಎಂಜಲಿಗಾಗಿ ಸದಾ ನಾಲಗೆಯೊಣಗಿಸಿಕೊಳ್ಳುತ್ತ, ತಿಂದದ್ದನ್ನು ಜೀರ್ಣಮಾಡಿಕೊಳ್ಳದೆ ಮಕ್ಕಳಿಗೆ ಗಿಣಿಪಾಠವೊಪ್ಪಿಸುವ ಅಧ್ಯಾಪಕ ಅಧಮ. ಆಹಾರ ಬೇರೆಯವರಿಂದ ಪಡೆದದ್ದಾದರೂ ಜೀರ್ಣಿಸಿಕೊಂಡು ತ್ರಿಕರಣಶುದ್ಧಿಯಾಗಿ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಪಾಠ ಹೇಳುವವನು ಮಧ್ಯಮ. ಬೇರೆತನದ ಮೇಲೆ ತನ್ನತನವನ್ನು ಬೆಳೆಸಿಕೊಂಡು ವಿಚಾರಾಲೋಚನೆ, ಪ್ರಯೋಗ, ಸಂಶೋಧನೆ, ವೀಕ್ಷಣೆಗಳಿಂದ ಜ್ಞಾನದ ದಿಗಂತವನ್ನು ವಿಸ್ತರಿಸುತ್ತ, ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಿಯಾಗಿ ಅವರ ಚೈತನ್ಯವನ್ನು ಹಿರಿದಾಗಿಸುತ್ತ, ತನ್ನ ಶೀಲವಂತಿಕೆಯಿಂದ ವಿದ್ಯಾರ್ಥಿವೃಂದದಲ್ಲಿ ನೈತಿಕ ಜಾಗೃತಿಯುಂಟು ಮಾಡುವವನೇ ಉತ್ತಮ, ಅವನೇ ಆದರ್ಶ ಅಧ್ಯಾಪಕ. ಒಳ್ಳೆಯ ಅಧ್ಯಾಪಕನ ಸಾಮರ್ಥ್ಯ ಅವನ ಅಧ್ಯಾಪನದಿಂದ ಬೆಳಗುತ್ತದೆ, ಉತ್ತಮೋತ್ತಮ ಅಧ್ಯಾಪಕನ ಮಹತ್ವ ಅವನ ಗ್ರಂಥಗಳಿಂದ ಸ್ಪಷ್ಟವಾಗುತ್ತದೆ. ಕೆರೆ ತುಂಬಿದಾಗ ಕೋಡಿ ಹರಿಯುತ್ತದೆ; ಅಥವಾ ನಲ್ಲಿಯಲ್ಲಿ ನೀರು ಬರುತ್ತದೆ; ಇಲ್ಲವಾದರೆ ಕೋಡಿಯೂ ಇಲ್ಲ, ನಲ್ಲಿಯಲ್ಲಿ ನೀರೂ ಇಲ್ಲ. ಅವನ ಕೃತಿಗಳೇ ಅಧ್ಯಾಪಕನ ಆದರ್ಶವ್ಯಕ್ತಿತ್ವಕ್ಕೆ ಸಾಕ್ಷಿ. ಸಾಹಿತಿಯೂ ಶ್ರೇಷ್ಠ ಅಧ್ಯಾಪಕನೆನ್ನುವುದನ್ನು ಮರೆಯಬಾರದು. ಶ್ರೀಮಾನ್ ಕಲಬುರ್ಗಿಯವರು ಆದರ್ಶ ಅಧ್ಯಾಪಕರ ಗುಂಪಿಗೆ ಸೇರಿದವರೆಂದು ನಾನು ಪ್ರಾಮಾಣಿಕವಾಗಿ ನಂಬಿಕೊಂಡಿದ್ದೇನೆ. ಇಂಥ ಅವರ ಗ್ರಂಥಗಳು ನನ್ನ ಹೇಳಿಕೆಗೆ ಸಾಕ್ಷಿಯಾಗಿವೆ. ಇಂಥ ಮಹನೀಯರಿಂದ ನಾಡುನುಡಿಗಳಿಗೆ ಅಪಾರ ಸೇವೆ ಸಲ್ಲುವ ಸಲುವಾಗಿ, ಅವರಿಗೆ ಎಲ್ಲವೂ ಒಳ್ಳೆಯದಾಗಲೆಂದು ಹಾರೈಸುತ್ತೇನೆ.

ಕುಲಪತಿ ಭವನ — **–ದೇ. ಜವರೇಗೌಡ**

ಮೈಸೂರು–೫ — ೧೬ ಎಪ್ರಿಲ್ ೧೯೭೨

❖❖

*

ನನ್ನ ನುಡಿ

"ಕನ್ನಡದಲ್ಲೇ ಏನು, ನಮ್ಮ ದೇಶದ ಬೇರೆ ಭಾಷೆಗಳಲ್ಲಿಯೂ ಇಂಥ ಬರವಣಿಗೆ ಈ ವರೆಗೆ ಬಂದಂತಿಲ್ಲ" ಎಂಬ ಖ್ಯಾತಿಗಳಿಸಿದ ಡಾ. ಡಿ.ಎಲ್.ಎನ್.ಅವರ 'ಕನ್ನಡ ಗ್ರಂಥಸಂಪಾನೆ' ಪ್ರಕಟವಾಗಿ (೧೯೬೪) ಇಂದಿಗೆ ಏಳು ವರ್ಷಗಳು ಗತಿಸಿದವು. ಆ ಗ್ರಂಥದ ಅಭ್ಯಾಸದಿಂದಾಗಿ ತೃಪ್ತಿ-ಅತೃಪ್ತಿ ಕಾರಣವಾಗಿ, ಅದರ ಬೆನ್ನು ಹಿಂದೆಯೇ ಈ "ಕನ್ನಡ ಗ್ರಂಥಸಂಪಾದನಶಾಸ್ತ್ರ" ಬರುತ್ತಲಿದೆ.

ಮೊದಲು ಬಂದ ಗ್ರಂಥವೆಂಬ ಕಾರಣದಿಂದ ಅದು ಆದಿಪ್ರಯತ್ನ, ಇದು ಅಭಿನವ ಪ್ರಯತ್ನ. ಇಷ್ಟನ್ನು ಬಿಟ್ಟರೆ ನವೀನ ಸೃಷ್ಟಿಯಾದ ಈ ಗ್ರಂಥವೂ ಆದಿಪ್ರಯತ್ನ, ಸ್ವತಂತ್ರ ಪ್ರಯೋಗವೆಂದು ವಿನಮ್ರನಾಗಿ ಹೇಳಬಯಸುತ್ತೇನೆ.

೧೯೬೯ನೆಯ ವರ್ಷದಿಂದ ಎಂ.ಎ. ವಿದ್ಯಾರ್ಥಿಗಳಿಗೆ "ಗ್ರಂಥಸಂಪಾದನೆ"ಯನ್ನು ಬೋಧಿಸುವ ಪ್ರಸಂಗ ನನಗೆ ಒದಗಿತು. ಆಗ ಡಾ.ಡಿ.ಎಲ್.ಎನ್.ಅವರ "ಕನ್ನಡ ಗ್ರಂಥಸಂಪಾದನೆ"ಯನ್ನೂ ಶ್ರೀ ಎಂ.ಎಸ್.ಕತ್ರೆ ಅವರ "ಭಾರತೀಯ ಗ್ರಂಥಸಂಪಾದನ ಪರಿಚಯ" (ಕನ್ನಡ ಅನುವಾದ)ವನ್ನೂ ಓದುತ್ತ ಓದಿಸುತ್ತ ಹೋದಹಾಗೆ, ಈ ವಿಷಯವನ್ನು ಕುರಿತು ಹೊಸ ಗ್ರಂಥವೊಂದನ್ನು ಬರೆಯುವ ಹಂಬಲ ಹುಟ್ಟಿತು. ಕೆಲವು ದಿನ ನೂರಾರು ಕಾವ್ಯಗಳನ್ನು, ಕಾವ್ಯಗಳ ಅಡಿಟಿಪ್ಪಣಿಗಳನ್ನು, ಹಸ್ತಪ್ರತಿಸೂಚಿ ಗ್ರಂಥಗಳನ್ನು ಓದಿದೆ; ಹಲವಾರು ಹಸ್ತಪ್ರತಿಗಳನ್ನೂ ಅಭ್ಯಸಿಸಿದೆ. ಇದೆಲ್ಲವನ್ನು ನನ್ನ ಚಿಂತನೆಯ ಚಿತೆಯಲ್ಲಿ ಕಾಸಿದೆ, ಸೋಸಿದೆ, ಪುಸ್ತಕದ ಪಡಿಯಚ್ಚಿನಲ್ಲಿ ಎರಕಹೊಯ್ದೆ.

ಈ ಗ್ರಂಥ ಒಂದು ಪ್ರಯೋಗ. ನನ್ನ ಅಧ್ಯಯನ-ಅಧ್ಯಾಪನ, ಅನುಭವ-ಅನುಸಂಧಾನಗಳೇ ಇದಕ್ಕೆ ಆಧಾರ. ಹರಿಯುವ ತೊರೆ ತನ್ನ ದಾರಿಯನ್ನು ತಾನು ಹುಡುಕಿಕೊಳ್ಳುವಂತೆ ಬರೆಯುತ್ತ ಹೊರಟ ನಾನು, ನನ್ನ ಆಲೋಚನೆ-ಅನುಭವಗಳನ್ನು ಸಿದ್ಧಾಂತಗೊಳಿಸುತ್ತ, ಸಿದ್ಧಾಂತಗಳನ್ನು ಒಂದು ಕ್ರಮದಲ್ಲಿ ಮುನ್ನಡೆಸುತ್ತ ಹೋಗಿದ್ದೇನೆ. ನನಗೆ ತೃಪ್ತಿಯಾಗುವ ವರೆಗೆ ಹತ್ತುಸಲ ಮುರಿದು ಮತ್ತೆ ಮತ್ತೆ ಕಟ್ಟಿದ್ದೇನೆ. ಒಂದು ತರ್ಕಕ್ಕೆ. ಒಂದು ಕ್ರಮಕ್ಕೆ ಒಳಪಟ್ಟಿತು ಎಂದು ಸಮಾಧಾನವೆನಿಸಿದಾಗ, ಮುರಿಯುವದನ್ನು ಬಿಟ್ಟು ಬರೆಯುವುದನ್ನು ಕೈಕೊಂಡಿದ್ದೇನೆ. ಗ್ರಂಥಸಂಪಾದನೆಯನ್ನು ಕುರಿತು ಈ ಮೊದಲು ಬಂದವುಗಳಿಗಿಂತ ಈ ಪುಸ್ತಕ ಪರಿಭಾಷೆ, ನಿರೂಪಣೆ ಇತ್ಯಾದಿಗಳಲ್ಲಿ ಬೇರೆಯಾಗಿರುವುದೇ ಇದಕ್ಕೆ ನಿದರ್ಶನ.

ಗ್ರಂಥಸಂಪಾದನಾಶಾಸ್ತ್ರ, ಭಾರತೀಯ ಮಿಕ್ಕ ಪ್ರಾಂತಭಾಷೆಗಳಂತೆ ಕನ್ನಡದಲ್ಲಿಯೂ ಇದೀಗ ರೂಪ ಪಡೆಯುತ್ತಿರುವ ಹೊಸದಾರಿ. ನೂರು ಜನ ವಿದ್ವಾಂಸರು ತಮತಮಗೆ ಸರಿ ಕಂಡಂತೆ ಪ್ರಾಮಾಣಿಕವಾಗಿ ತುಳಿಯುವುದರ ಮೂಲಕ ಎಲ್ಲರಿಗೂ ಸರಿಹೋಗುವ ಹೆದ್ದಾರಿಯೊಂದನ್ನು ನಿರ್ಮಿಸಬೇಕಾಗಿದೆ. ಆ ಹೆದ್ದಾರಿಯ ಹೊಳಹು ಈ ಗ್ರಂಥದಲ್ಲಿದ್ದರೆ ನನ್ನ ಶ್ರಮ ಸಾರ್ಥಕವೆಂದು ಬಗೆಯುತ್ತೇನೆ.

ನನ್ನ ದೀರ್ಘಚಿಂತನ, ವಿದ್ವಾಂಸರ ವಿಧಾಯಕ ಪ್ರತಿಕ್ರಿಯೆಗಳಿಂದಾಗಿ ಈಗ ರೂಪಿಸಿರುವ ಸಿದ್ಧಾಂತಗಳನ್ನು ನಾನೇ ಕೈಯಾರೆ ಮುರಿದು ಮತ್ತೆ ಕಟ್ಟಬೇಕಾಗಬಹುದು ಎಂಬ ಅರಿವು ನನಗಿದೆ. ಲೇಸಿನತ್ತ ನಡೆಸುವ ಏಸು ಪ್ರತಿಕ್ರಿಯೆಗಳು ಬಂದರೂ ಅವುಗಳನ್ನು ಸ್ವಚ್ಛ ಮನಸ್ಸಿನಿಂದ ಸ್ವೀಕರಿಸುತ್ತೇನೆ.

ಈ ಪ್ರಸಂಗದಲ್ಲಿ ಸಮರ್ಥ ಸಂಪಾದಕರಾದ ಡಾ.ಆರ್.ಸಿ.ಹಿರೇಮಠ ಅವರನ್ನು ನೆನೆಯುವುದು ನನ್ನ ಕರ್ತವ್ಯ. ಕಳೆದ ಎಂಟು ವರ್ಷಗಳಿಂದಲೂ ತೀರ ಹತ್ತಿರ ನಿಲ್ಲಿಸಿಕೊಂಡು, ಸಂಪಾದನೆಯ ಎಲ್ಲ ಹಂತಗಳಲ್ಲಿ ದುಡಿಸಿ, ನನ್ನಲ್ಲಿ ಈ ವಿಷಯದ ಬಗೆಗೆ ಆಸಕ್ತಿ ಅಭಿರುಚಿಗಳನ್ನು ಬೆಳೆಸಿದ್ದಾರೆ. ಅವರಿಗೆ ನನ್ನ ಪ್ರಣಾಮಗಳು.

ದುಡಿಯುತ್ತಿರುವ ಕನ್ನಡ ಸಾಹಿತಿಗಳೆಂದರೆ, ಕುಲಪತಿ ದೇ.ಜವರೇಗೌಡ ಅವರಿಗೆ ತುಂಬ ಅಭಿಮಾನ. ಇಂಥ ಭಾವನೆಯಿಂದ ಈ ಕೃತಿಗೆ ಅಭ್ಯಾಸಪೂರ್ಣ ಮುನ್ನುಡಿಯನ್ನು ಬರೆದು ನನಗೆ ಅಭಿಮಾನದ ಗರಿ ಮುಡಿಸಿದ್ದಾರೆ. ಮಾನ್ಯ ಕುಲಪತಿಗಳಿಗೆ ನನ್ನ ನಮಸ್ಕಾರಗಳು.

ಈ ಗ್ರಂಥವನ್ನು ಬರೆದವನು ನಾನು, ಬರೆಸಿದವರು ನನ್ನ ವಿದ್ಯಾರ್ಥಿಗಳು. ಅವರ ಒಲುವೆ-ಒತ್ತಾಯಗಳಿಲ್ಲದಿದ್ದರೆ ಈ ಕಾರ್ಯ ಬೇಗ ಮುಗಿಯುತ್ತಿರಲಿಲ್ಲ. ಈ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಿಶ್ವಾಸಕ್ಕೆ ನನ್ನ ಕೃತಜ್ಞತೆಗಳು.

ಇಲ್ಲಿ ಅವಶ್ಯ ಸ್ಮರಿಸಬೇಕಾದ ಇನ್ನೊಬ್ಬ ಮಿತ್ರರು ಸಂಯುಕ್ತ ಕರ್ನಾಟಕದ ಅಚ್ಚಿನ ವಿಭಾಗದ ಮ್ಯಾನೇಜರರಾದ ಶ್ರೀ.ಎಮ್.ಎಚ್.ಬೆಳಗಾಂವಕರ. ಇವರು ಮನಸ್ಸು ಮಾಡಿರದಿದ್ದರೆ ಈ ಪುಸ್ತಕ ಪ್ರಕಟವಾಗುತ್ತಿರಲೇ ಇಲ್ಲ. ಈ ಔದಾರ್ಯಕ್ಕಾಗಿ ಅವರಿಗೂ, ಈ ಶಾಸ್ತ್ರಗ್ರಂಥದ ಕ್ಲಿಷ್ಟ ಅಚ್ಚಿನಕಾರ್ಯವನ್ನು ಸಹನೆಯಿಂದ ನಿರ್ವಹಿಸಿದ ಅಚ್ಚಿನ ವಿಭಾಗದ ಸಿಬ್ಬಂದಿ ವರ್ಗಕ್ಕೂ ನನ್ನ ಕೃತಜ್ಞತೆಗಳು.

ಕನ್ನಡ ಅಧ್ಯಯನಪೀಠ — ಎಂ.ಎಂ.ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೦-೩-೧೯೭೨

❖❖

*

ಪರಿವಿಡಿ

❖❖

೧

ಇತಿಹಾಸಕಾಂಡ

❖

ಪ್ರಾಚೀನ ಇತಿಹಾಸ

ಆಧುನಿಕ ಇತಿಹಾಸ

ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯೇತ್

*

ಪ್ರವೇಶ

ಕವಿ, ವಿಮರ್ಶಕ, ಸಹೃದಯ–ಈ ತ್ರಿಪಥದಲ್ಲಿ ಹುಟ್ಟಿ ಪ್ರವಹಿಸುತ್ತದೆ, ಸಾಹಿತ್ಯವಾಹಿನಿ. ಇವರಲ್ಲಿ ಕವಿ ಸೃಜನ, ವಿಮರ್ಶಕ ವಿಮರ್ಶನ, ಸಹೃದಯ ರಸಾಸ್ವಾದನ ಕ್ರಿಯಾನಿಷ್ಠರಾಗುತ್ತಾರೆ. ಇಲ್ಲಿ ಒಬ್ಬನ ಸೃಷ್ಟಿ, ಇನ್ನಿಬ್ಬರಿಗೆ ಸೊತ್ತು. ಹೀಗಾಗಿ ದೈಹಿಕವಾಗಿ ಅಳಿದು ಗ್ರಾಂಥಿಕವಾಗಿ ಉಳಿದ, ಕವಿಯ ಅಳಿವು–ಉಳಿವು ಈ ಸಹೃದಯ ಮತ್ತು ವಿಮರ್ಶಕರನ್ನು ಅವಲಂಬಿಸಿರುತ್ತದೆ. ಅಂದರೆ ಕವಿ ನಿರ್ಮಿಸಿದ ಕೃತಿ ಅಲಕ್ಷಿಸಿದಷ್ಟು ಹೆಚ್ಚು ತೀವ್ರ ನಾಶವಾಗುತ್ತದೆ;[೧] ಅಭ್ಯಸಿಸಿದಷ್ಟು ಹೆಚ್ಚು ದೀರ್ಘ ಬದುಕುತ್ತದೆ. ಹೀಗೆ ಬದುಕಿ ಬಂದ ಪ್ರಾಚೀನ ಕೃತಿಗಳು ಪ್ರಕೃತಿಯ ಪ್ರಕೋಪಕ್ಕೆ ತುತ್ತಾಗಿ, ಜನತೆಯ ಉದ್ದೇಶಿತ ಮತ್ತು ಅನುದ್ದೇಶಿತ ಪಾಠವ್ಯತ್ಯಾಸಗಳಿಗೆ ಗುರಿಯಾಗಿ ವಿರೂಪಗೊಳ್ಳುವುದು ಸಹಜ. ವ್ಯವಸ್ಥಿತ ವಿಧಾನಗಳನ್ನವಲಂಬಿಸಿ, ಈ ವಿರೂಪವನ್ನು ಒರೆಸಿ ಹಾಕಿ, ಅವುಗಳನ್ನು ಮತ್ತೆ ಮೂಲರೂಪಕ್ಕೆ ತಿರುಗಿಸಬೇಕು, ಶುದ್ಧಗೊಳಿಸಬೇಕು. ಈ ಶುದ್ಧೀಕರಣಕ್ರಿಯೆ ಗ್ರಂಥಸಂಪಾದನೆ, ಶುದ್ಧೀಕರಣಕ್ರಿಯಾಶೀಲ ಗ್ರಂಥಸಂಪದಕ, ಶುದ್ಧೀಕರಣ ವಿಧಾನಗಳನ್ನು ನಿರೂಪಿಸುವ ಕೃತಿ, ಗ್ರಂಥಸಂಪಾದಶಾಸ್ತ್ರ.

ಪ್ರಾಚೀನ ಇತಿಹಾಸ

ಗ್ರಂಥಸಂಪಾದನೆ, ಒಂದು ಶಾಸ್ತ್ರವಾಗಿ ಭಾರತಕ್ಕೆ ನಡೆದು ಬಂದುದು ಪಶ್ಚಿಮ ರಾಷ್ಟ್ರಗಳಿಂದ. ಆ ರಾಷ್ಟ್ರಗಳಲ್ಲಿ ಅದು ಉಗಮಿಸಿ ಉದಿತೋದಿತಗೊಂಡ ರೀತಿ ಹೀಗಿದೆ: "ಸುಮಾರು ಕ್ರಿ.ಪೂ. ೬೦೦–೩೦೦ರ ವರೆಗೆ ಗ್ರೀಸಿನ ಮುಖ್ಯ ನಗರವಾದ ಅಥೆನ್ಸಿನಲ್ಲೂ ಕ್ರಿ.ಪೂ.೩೦೦–ಕ್ರಿ.ಶ. ೧ರ ವರೆಗೆ ಅಲೆಕ್ಸಾಂಡ್ರಿಯ ನಗರದ ಪುಸ್ತಕಭಂಡಾರದಲ್ಲೂ ಗ್ರೀಕ್‌ಭಾಷೆಯಲ್ಲಿನ ಗ್ರಂಥಗಳ ಹಸ್ತಪ್ರತಿಗಳ ಸಂಗ್ರಹಣಕಾರ್ಯವೂ ಅವುಗಳನ್ನು ಪರಿಷ್ಕರಿಸುವ ಕಾರ್ಯವೂ ನಡೆದುವು. ಕ್ರಿ.ಪೂ. ೧೬೮–ಕ್ರಿ.ಶ.೫೩೦ರ ವರೆಗೆ ರೋಮನ್ ದೇಶದಲ್ಲಿ ಲ್ಯಾಟಿನ್‌ಭಾಷೆಯ ಗ್ರಂಥಗಳನ್ನು ಹಸ್ತಪ್ರತಿಗಳ ಮೂಲಕ ಸಂರಕ್ಷಿಸಲಾಯಿತು; ಅದೇ ದೇಶದಲ್ಲಿ ಕ್ರಿ.ಶ. ೧೫೩೦ರ ವರೆಗೆ ಪೂರ್ವ ರೋಮನ್ ಚಕ್ರಾಧಿಪತ್ಯವಾದ ಬಿಜಾಂಟಿಯಂ ಪ್ರದೇಶದಲ್ಲಿ ಗ್ರೀಕ್ ಲ್ಯಾಟಿನ್ ಭಾಷೆಗಳ ಗ್ರಂಥಗಳ ಅಧ್ಯಯನವೂ ಹಸ್ತಪ್ರತಿ ಲೇಖನಗಳೂ ವಿಪುಲವಾಗಿ ನಡೆದುವು. ೧೩೫೦ರಿಂದೀಚೆಗೆ ೧೫೨೧ರ ವರೆಗೆ ಯುರೋಪಿನಲ್ಲಿ ವಿದ್ಯಾಪುನರುಜ್ಜೀನ ಕಾಲವಾಗಿತ್ತು; ಇದು ಇಟಲಿದೇಶದಲ್ಲಿ ಆರಂಭವಾಗಿ ಆನಂತರ ಯುರೋಪಿನ

---

೧. "ಕಲೌಯುಗೇ ಜನಾನಾಮಲ್ಪಮತಿತ್ವಾದಲಸತ್ವಾಚ್ಚ ಶತಕೋಟಿಸಂಖ್ಯಾಕಾಃ ಮೂಲರಾಮಾಯಣ ಪಂಚರಾತ್ರಾದ್ಯಾ: ಪ್ರಾಯಶಃ ಉತ್ಸನ್ನಾಃ ಪ್ರವಮತ್ಸಂತಾ (?)" (ಕಲಿಯುಗದ ಜನರ ಅಲ್ಪಮತಿ ಮತ್ತು ಆಲಸ್ಯಗಳಿಂದಾಗಿ ಶತಕೋಟಿ ಸಂಖ್ಯೆಯ ಮೂಲರಾಮಾಯಣ, ಪಂಚರಾತ್ರ ಮೊದಲಾದುವು ಹಾಳಾಗಿವೆಯೆಂದು ತಿಳಿದುಬರುತ್ತದೆ) –ಎಂದು ಮಧ್ವಾಚಾರ್ಯರ "ಮಹಾಭಾರತ ತಾತ್ಪರ್ಯನಿರ್ಣಯ"ಕ್ಕೆ ವಾದಿರಾಜತೀರ್ಥರು ವ್ಯಾಖ್ಯಾನ ಬರೆಯುತ್ತ ಹೇಳಿದ ಮಾತನ್ನು ಇಲ್ಲಿ ಗಮನಿಸಬೇಕು. (Woolner Commemoration Volume P.106-108-Textual Criticism in the Thirteenth Century: by P.K.Gode)

ಇತರ ದೇಶಗಳಿಗೆ ವ್ಯಾಪಿಸಿತು. ೧೫೨೧ರಿಂದ ಮುಂದಿನ ಕಾಲವನ್ನು ವಿದ್ವತ್ತಿನ ಚರಿತ್ರೆಯಲ್ಲಿ ಆಧುನಿಕ ಯುಗವೆಂದು ಕರೆದಿದೆ. ಫ್ರಾನ್ಸ, ಹಾಲೆಂಡ್, ಇಂಗ್ಲೆಂಡು, ಜರ್ಮನಿ ಮುಂತಾದ ಐರೋಪ್ಯ ದೇಶಗಳಲ್ಲೂ ಅಮೇರಿಕಾ ದೇಶದಲ್ಲೂ ಪ್ರಾಚೀನ ಗ್ರೀಕ್ ಲ್ಯಾಟಿನ್ ಹಿಬ್ರೂ ಸಾಹಿತ್ಯಗಳ ವ್ಯಾಸಂಗ, ಗ್ರಂಥಸಂಪಾದನೆಗಳು ಸತತವಾಗಿ ನಡೆಯುತ್ತಿವೆ."[೨]

ಹೀಗೆ, ಈ ಶಾಸ್ತ್ರ ಸರ್ವತೋಮುಖ ಬೆಳೆದು ಗದ್ಯ, ಪದ್ಯ, ನಾಟಕ ಇತ್ಯಾದಿ ಪ್ರಕಾರಗಳಲ್ಲಿ ಪ್ರಯೋಗಿಸಲ್ಪಟ್ಟು, ಒಂದು ಖಚಿತ ಸ್ವರೂಪ ಪಡೆದು, ೧೯ನೆಯ ಶತಮಾನದಲ್ಲಿ ಭಾರತವನ್ನು ಪ್ರವೇಶಿಸಿತು. ಮ್ಯಾಕ್ಸಮ್ಯುಲರ್, ಬ್ಯೂಲರ್, ಪೀಟರಸನ್, ಓಪರ್ಟ, ಕೋಲಬ್ರುಕ್, ಯಾಕೋಬಿ ಮೊದಲಾದ ವಿದೇಶೀ ವಿದ್ವಾಂಸರ, ಭಂಡಾರಕರ, ಪಿ.ಎಲ್.ವೈದ್ಯ ಮೊದಲಾದ ಸ್ವದೇಶೀ ವಿದ್ವಾಂಸರ ಕೈಯಲ್ಲಿ ಶಾಸ್ತ್ರಶುದ್ಧ ರೂಪಧರಿಸಿ, ಕ್ರಮೇಣ ಈ ದೇಶವನ್ನೆಲ್ಲ ವ್ಯಾಪಿಸಿತು. ಜರ್ಮನಿಗೆ ಹೋಗಿ ಈ ವಿಷಯವನ್ನು ಅಭ್ಯಾಸಮಾಡಿ ಬಂದ ಡಾ. ಸುಕ್ತನಕರ ಅವರು ಭಾರತದಲ್ಲಿಯೂ ಇದಕ್ಕೆ ಶಾಸ್ತ್ರಮರ್ಯಾದೆ ಸಿಗುವಂತೆ ಮಾಡಿದರು. ಇವರಿಂದ ಸ್ಫೂರ್ತಿ ಪಡೆದ ಡಾ.ಎಸ್.ಎಂ. ಕತ್ರೆಯವರು ಭಾರತೀಯ ಹಿನ್ನೆಲೆಯಲ್ಲಿ ಬರೆದ 'Introduction to Indian Textual Criticism' ಎಂಬ ಗ್ರಂಥದಲ್ಲಿ[೩] ಈ ಶಾಸ್ತ್ರ ಕೃತಿರೂಪಕ್ಕಿಳಿದು, ನಮ್ಮ ದೇಶದ ಪಂಡಿತರ ಪ್ರಶಂಸೆ ಗಳಿಸಿತು. ಬೇರೆ ಬೇರೆ ಪ್ರಾಂತಗಳ ಸಂಪಾದನಶಾಸ್ತ್ರಜ್ಞರಿಗೆ ದಾರಿದೀಪವೆನಿಸಿತು.

ಹೀಗೆ, ಪಶ್ಚಿಮದ ಮೂಲಕ ಗ್ರಂಥಸಂಪಾದನೆ ಭಾರತಕ್ಕೆ ನಡೆದು ಬಂದಿತು. ಇದರರ್ಥ ಗ್ರಂಥದ ಶುದ್ಧಿ-ಅಶುದ್ಧಿ ಪ್ರಜ್ಞೆ ಈ ಮೊದಲು ಭಾರತೀಯರಿಗೆ ಇರಲಿಲ್ಲವೆಂದಲ್ಲ. ಗ್ರಂಥಸಂಸ್ಕರಣಕ್ಕೆ ಒಂದು ಶಾಸ್ತ್ರೀಯ ವಿಧಾನವನ್ನು ರೂಪಿಸಿಕೊಳ್ಳದೆ ಹೋದರೂ ಗ್ರಂಥರಕ್ಷಣೆ, ಗ್ರಂಥಲೇಖನ, ಪಾಠರಕ್ಷಣೆ, ಪಾಠಸಂಗ್ರಹ ಮತ್ತು ಪಾಠನಿರ್ಣಯ ಈ ಎಲ್ಲ ಅಂಶಗಳ ಅರಿವು ಭಾರತೀಯರಿಗೆ, ಭಾರತೀಯ ಹಿನ್ನೆಲಯಲ್ಲಿ ಬದುಕುತ್ತಿರುವ ಕನ್ನಡಿಗರಿಗೆ ತೀರ ಪ್ರಾಚೀನ ಕಾಲದಿಂದಲೂ ಇದ್ದಿತು. ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

ಗ್ರಂಥರಕ್ಷಣೆ :

ಪ್ರಾಚೀನ ಕಾಲದಿಂದಲೂ ಭಾರತದ ವ್ಯಕ್ತಿ, ಕುಟುಂಬ ಮತ್ತು ಸಮಾಜಗಳ ದೃಷ್ಟಿಯಲ್ಲಿ ಗ್ರಂಥಗಳು ದೈವೀಸ್ವರೂಪವನ್ನು ಪಡೆದಿದ್ದವು. ಗ್ರಂಥಲೇಖನ, ಗ್ರಂಥವಾಚನ ಕಾರ್ಯಗಳು ಇಂದಿಗೂ ಪೂಜೆಯಿಂದ ಪ್ರಾರಂಭವಾಗುತ್ತಿರುವುದು ಇದಕ್ಕೆ ನಿದರ್ಶನ. ನೀತಿಸಾರ ಸಮುಚ್ಚಯದ

ಜೀರ್ಣಂ ಜಿನಗೃಹಂ ಬಿಂಬಂ । ಪುಸ್ತಕಂ ಶ್ರಾದ್ಧಮೇವವಾ ।
ಉದ್ಧಾರ್ಯ ಸ್ಥಾಪನಂ ಪೂರ್ವ । ಪುಣ್ಯತೋಧಿಕಮುಚ್ಯತೇ ॥[೪]

---

೨. ಕ.ಗ್ರ.ಸಂ. ೧೧-೧೨

೩. ಈ ಗ್ರಂಥವನ್ನು "ಭಾರತೀಯ ಗ್ರಂಥಸಂಪಾದನ ಪರಿಚಯ" ಎಂಬ ಹೆಸರಿನಿಂದ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ ಅವರು ಕನ್ನಡಕ್ಕೆ ಅನುವಾದಿಸಿರುವರು. (೧೯೬೮)

೪. ಮಹಸೂ III-೩೭೪. ನೀತಿಸಾರ ಸಮುಚ್ಚಯ.

ಎಂಬ ಶ್ಲೋಕವನ್ನು ಗಮನಿಸಿದರೆ, ಭಾರತೀಯನ ಭಾವನೆಯಲ್ಲಿ ಪುಸ್ತಕ ಗಳಿಸಿದ ದೈವೀಸ್ವರೂಪ ವ್ಯಕ್ತವಾಗದಿರದು. ಎರಡನೆಯದಾಗಿ, ಅಣ್ಣ-ತಮ್ಮಂದಿರು ತಮ್ಮ ಪಿತ್ರಾರ್ಜಿತ ಆಸ್ತಿಯೊಂದಿಗೆ ಮನೆಯಲ್ಲಿಯ ಹಸ್ತಪ್ರತಿಗಳನ್ನು ಹಂಚಿಕೊಂಡ ಹೇರಳ ಉದಾಹರಣೆಗಳು ಮೊನ್ನೆಮೊನ್ನೆಯ ವರೆಗೂ ಸಿಗುವುದರಿಂದ, ಪ್ರಾಚೀನ ಭಾರತೀಯನ ದೃಷ್ಟಿಯಲ್ಲಿ ಅವು ಸಂಪತ್ತಿನ ಒಂದು ಮುಖ್ಯಭಾಗವೆನಿಸಿದ್ದುವೆಂದು ತಿಳಿದುಬರುತ್ತದೆ. ಈ ಕಾರಣಗಳಿಂದಾಗಿ ಅವುಗಳ ರಕ್ಷಣೆ ಮತ್ತು ಸಂಗ್ರಹಗಳ ಬಗ್ಗೆ ಅವರು ಹೆಚ್ಚು ಆಸ್ಥೆವಹಿಸಿದರು.

ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಥಿಲ ಬಂಧನಾತ್ ।

ಮೂರ್ಖಹಸ್ತೇ ನದಾತವ್ಯಮೇವಂ ವದತಿ ಪುಸ್ತಕಂ ॥

ಎಣ್ಣೆಯಿಂದ ರಕ್ಷಿಸಬೇಕು, ನೀರಿನಿಂದ ರಕ್ಷಿಸಬೇಕು, ಸಡಿಲು ಕಟ್ಟುವಿಕೆಯಿಂದ ರಕ್ಷಿಸಬೇಕು, ಮೂರ್ಖರ ಕೈಯಲ್ಲಿ ಕೊಡಬಾರದು ಎಂದು ಪುಸ್ತಕ ಕೇಳಿಕೊಳ್ಳುತ್ತದೆ.

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ ।

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥[೬]

ಪುಸ್ತಕ ವನಿತೆ ಹಣ-ಈ ಮೂರು ಅನ್ಯರ ಕೈಸೇರಿದರೆ ಹೋಗಿಯೇ ಬಿಡುತ್ತವೆ. ಇಲ್ಲವೆ(ಪುಸ್ತಕ) ಜೀರ್ಣರೂಪದಲ್ಲಿ, (ವನಿತೆ) ಭ್ರಷ್ಟಸ್ಥಿತಿಯಲ್ಲಿ, (ಹಣ) ಅಲ್ಪಪ್ರಮಾಣದಲ್ಲಿ ಹಿಂದಿರುಗುತ್ತವೆ.

"..............ಪುತ್ರಿಕೆಯೆಂದು ತೆಕ್ಕೊಂಡಂದಾವರು ಶಿವಭಕ್ತರಾದರು XX ತಂಮ ಕುಲದೈವ ಮನೆದೈವಕ್ಕೆ ಅಳುಪಿದ ಹಾಗೆ XXಗುರುಪತ್ನಿ ಗುರುವಿಗೆ ಅ X X X"[೭]

ಈ ಮಾತುಗಳು, ಗ್ರಂಥರಕ್ಷಣೆಯ ಬಗ್ಗೆ ಭಾರತೀಯರಿಗೆ ಇದ್ದ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಈ ಭಾವನೆಯ ಫಲವೆನ್ನುವಂತೆ ಹಲವು ವೈಯಕ್ತಿಕ ಗ್ರಂಥಸಂಗ್ರಹಗಳು ಮತ್ತು ಸಾರ್ವಜನಿಕ ಗ್ರಂಥಾಲಯಗಳು ಪ್ರಾಚೀನ ಕಾಲದಲ್ಲಿ ಆಸ್ತಿತ್ವಕ್ಕೆ ಬಂದವು. ತಕ್ಷಶಿಲಾ ನಾಲಂದಗಳಂಥ ವಿದ್ಯಾಸಂಸ್ಥೆಯಲ್ಲಿಯ ವಾಚನಾಲಯಗಳೂ ಕಾಶಿ ಶ್ರವಣಬೆಳಗೊಳದಂಥ ಧರ್ಮಕ್ಷೇತ್ರಗಳ, ಶೃಂಗೇರಿ ಚಿತ್ರದುರ್ಗದಂಥ ಗುರುಮಠಗಳ, ಮೈಸೂರು ತಂಜಾವೂರು ಅರಮನೆಗಳ ಗ್ರಂಥಭಾಂಡಾರಗಳೂ ಮತ್ತು ಸಮಾಜದ ಪಂಡಿತವ್ಯಕ್ತಿಗಳಲ್ಲಿರುವ ಗ್ರಂಥಸಂಗ್ರಹಗಳೂ ಉಲ್ಲೇಖನೀಯವೆನಿಸಿವೆ.

ಮೂರು, ಏಳು ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಕ್ರಮವಾಗಿ ವೈಭವದಿಂದ ಮೆರೆದ ಧನ್ಯಕಟಕ, ನಲಂದ, ವಿಕ್ರಮಶೀಲ ವಿಶ್ವವಿದ್ಯಾಲಯಗಳು ಸಮೃದ್ಧ ಗ್ರಂಥಭಾಂಡಾರಗಳನ್ನು ಹೊಂದಿದ್ದವು. ರತ್ನಸಾಗರ, ರತ್ನೋದಧಿ ಮತ್ತು ರತ್ನರಂಜಕ ಈ ಹೆಸರಿನ ಮೂರು ಗ್ರಂಥಾಲಯಗಳನ್ನೊಳಗೊಂಡಿದ್ದಿತು, ನಲಂದ ವಿದ್ಯಾಪೀಠ. ಇವುಗಳಲ್ಲಿ ಒಂಬತ್ತು ಅಂತಸ್ತುಗಳ

---

೫. ಈ ಪದ್ಯ ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳ ಕೊನೆಗೆ ಕಂಡುಬರುತ್ತದೆ.
೬. ಈ ಪದ್ಯ ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳ ಕೊನೆಗೆ ಕಂಡುಬರುತ್ತದೆ.
೭. ಮೈಹಸೂ IV-೧೫೫೫ ವೀರಮಾಹೇಶ್ವರಾಚಾರ ಸಂಗ್ರಹದ ವ್ಯಾಖ್ಯಾನ

ರತ್ನೋದಧಿ ತಾಂತ್ರಿಕ ವಾಙ್ಮಯದ ದೊಡ್ಡ ಸಂಗ್ರಹವೆನಿಸಿತ್ತು. ರತ್ನಸಾಗರ ಗ್ರಂಥಭಾಂಡಾರಕ್ಕೆ ಗ್ರಂಥಗಳನ್ನು ಕೊಂಡುಕೊಳ್ಳಲು ದೇವಪಾಲನೆಂಬವನು ಐದು ಹಳ್ಳಿಗಳನ್ನು ದಾನನೀಡಿದ್ದನು. ತುರುಷ್ಕರಿಂದ ಹಾಳಾದ ಈ ಭಾಂಡಾರಗಳು ಮುದಿತಭದ್ರನೆಂಬ ಸನ್ಯಾಸಿಯಿಂದ ಜೀರ್ಣೋದ್ಧಾರಗೊಂಡವು.

ಧಾರಾನಗರದ ಭೋಜರಾಜನ ಸುಪ್ರಸಿದ್ಧ ಗ್ರಂಥಭಾಂಡಾರವನ್ನು, ಮಾಳವವನ್ನು ಗೆದ್ದ ಸಿದ್ಧರಾಜ ಜಯಸಿಂಹನು (೧೦೯೬-೧೧೪೩) ಅನಹಿಲವಾಡಕ್ಕೆ ಕೊಂಡೊಯ್ದನು. ಗುಜರಾಥದ ಪಾಲ ಅರಸು ಕುಮಾರಪಾಲನು (ಕ್ರಿ.ಶ.೧೧೪೦) ಇಪ್ಪತ್ತೊಂದು ಗ್ರಂಥಭಾಂಡಾರಗಳನ್ನು, ವೀರಧವಲನ ಮಂತ್ರಿ ವಸ್ತುಪಾಲನು ಮೂರು ಗ್ರಂಥಭಾಂಡಾರಗಳನ್ನು ಸ್ಥಾಪಿಸಿದ್ದರು. ಮೊದಲನೆಯ ಅಮೋಘವರ್ಷನ ಆಳಿಕೆಯಲ್ಲಿ ಭದ್ರವಿಷ್ಣು ಎಂಬುವನು ಕನ್ಹೇರಿಯ ಬೌದ್ಧವಿಹಾರಕ್ಕೆ ಗ್ರಂಥಗಳನ್ನು ಕೊಳ್ಳಲು ದತ್ತಿ ನೀಡಿದ್ದನು. ಮೊದಲನೆಯ ಜಟಾವರ್ಮ ಸುಂದರಪಾಂಡ್ಯನ ಹದಿಮೂರನೆಯ ವರ್ಷದ ಒಂದು ಶಾಸನದಲ್ಲಿ, ಗ್ರಂಥಭಾಂಡಾರಿಗಳ ವಸತಿಗೆ ಭೂಮಿಯನ್ನು ಖರೀದಿಸಿದ ವಿಷಯ ಬರುತ್ತದೆ.[೮]

"ಬೂಲರ್‌ಗೆ ಕ್ಯಾಂಬೇಯ ಎರಡು ಜೈನ ಪುಸ್ತಕಭಂಡಾರಗಳಲ್ಲಿ ೩೦,೦೦೦ ಹಸ್ತಪ್ರತಿಗಳೂ ಮತ್ತು ತಂಜಾವೂರಿನ ಅರಮನೆ ಪುಸ್ತಕಭಂಡಾರದಲ್ಲಿ ೧೨,೦೦೦ಕ್ಕಿಂತ ಹೆಚ್ಚು ಗ್ರಂಥಗಳೂ ಕಂಡುಬಂದವು. ವಿದ್ಯಾಧರನು ನೈಷಧೀಯ ಕಾವ್ಯಕ್ಕೆ ಪ್ರಥಮ ವ್ಯಾಖ್ಯಾನ ರಚಿಸಿದ್ದಾನಷ್ಟೇ. ಅದಕ್ಕೆ ಬಳಸಿದ ಆ ಕಾವ್ಯದ ಪ್ರತಿಯನ್ನೂ ಯಶೋಧರನ ಜಯಮಂಗಲ ಟೀಕೆಗೆ ಆಧಾರವಾದ ಕಾಮಸೂತ್ರದ ಹಸ್ತಪ್ರತಿಯನ್ನೂ ಚಾಳುಕ್ಯ ವಿಶಾಲದೇವನ (೧೨೪೨-೬೨) ಪುಸ್ತಕ ಭಂಡಾರವು ಒದಗಿಸಿತೆಂದು ಹೇಳಲಾಗಿದೆ. ಬಾನ್ (Bonn) ವಿಶ್ವವಿದ್ಯಾನಿಲಯದ ಗ್ರಂಥಾಗಾರದಲ್ಲಿರುವ ರಾಮಾಯಣದ ಒಂದು ಹಸ್ತಪ್ರತಿಯು ವಿಶಾಲದೇವನ ಸಂಗ್ರಹದಲ್ಲಿದ್ದ ಮಾತೃಕೆಯೊಂದರಿಂದ ಬಂದುದು."[೯] ಇಂಥ ಉದಾಹರಣೆಗಳಿಗೆ ಕರ್ನಾಟಕದಲ್ಲಿ ಕೊರತೆಯಿಲ್ಲ:

೧. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಾಗಾವಿ ಒಂದು ಸುಪ್ರಸಿದ್ಧ ಘಟಿಕಾಸ್ಥಾನವಾಗಿತ್ತು. ಇಲ್ಲಿಯ ಒಂದು ಶಾಸನ ದತ್ತಿ ಕೊಟ್ಟುದನ್ನು ವಿವರಿಸುತ್ತ ಉಪಾಧ್ಯಾಯರ ಜೊತೆ "ಸರಸ್ವತಿ ಭಣ್ಡಾರಿಗೆ ಮತ್ತ[ರು] ೩೦" ಎಂದು ಉಲ್ಲೇಖಿಸುತ್ತದೆ.[೧೦] ಇದರ ಕಾಲ ಕ್ರಿ.ಶ. ೧೦೫೮.

೨. ಶೃಂಗೇರಿ, ವೈದಿಕಧರ್ಮದ ಕೇಂದ್ರಪೀಠ. ನರಸಿಂಹಭಾರತಿ ಒಡೆಯರ ಆದೇಶದ ಮೇರೆಗೆ ಇಲ್ಲಿ "ಪೊಸ್ತಕ ಭಂಡಾರದ ಸಂರಕ್ಷಣಾರ್ಥವಾಗಿ" ಬೆಳಂಜಿ ಗ್ರಾಮದ ಉತ್ಪನ್ನವನ್ನು, ಕವಿ ಕೃಷ್ಣಭಟ್ಟನಿಗೆ ದತ್ತಿಯಾಗಿ ಕೊಟ್ಟರೆಂದು ಪೆರ್ದೂರಿನ ಒಂದು ಶಾಸನ ಹೇಳುತ್ತದೆ.[೧೧] ಬುಕ್ಕರಾಯನ ಆಳಿಕೆಗೆ ಸಂಬಂಧಪಟ್ಟ ಈ ಶಾಸನದ ಕಾಲ ಕ್ರಿ.ಶ. ೧೪೦೬.

---

೮. Libraries in ancient and mediaeval India-N. Subramania Sastri (Journal of Sri Venkatesvara Oriental Institute, Tirupati. Vol X-I) ಎಂಬ ಲೇಖನವನ್ನೂ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (ಪು.೨೩೮) ಗ್ರಂಥವನ್ನೂ ನೋಡಬಹುದು.

೯. ಭಾಗ್ರಪ. ೨೨

೧೦. AP.G.A.S.No.-3. Gb. 2.ನಾಗಾವಿ ಶಾಸನ ಕ್ರಿ.ಶ. ೧೦೫೮

೧೧. ARSIE. 283 (1936-37) ಈ ಶಾಸನದ ಪಾಠವನ್ನು ಒದಗಿಸಿದ ಡಾ.ಬಿ.ಆರ್.ಗೋಪಾಲ ಅವರಿಗೆ ಕೃತಜ್ಞ.

ಈ ಎರಡು ಉಲ್ಲೇಖಗಳು ಕನ್ನಡನಾಡಿನ ವೈದಿಕರ ಗ್ರಂಥರಕ್ಷಣೆಯ ಮನೋಭಾವನೆಯನ್ನು ವ್ಯಕ್ತಗೊಳಿಸುತ್ತವೆ.

೩. "ಇಂತು ಮಹಾಧವಲ ಸಿದ್ಧಾಂತಮಂ ರಚಿಸಿರ್ದ ಪುಸ್ತಕಕಂಗಳಂ ರಕ್ಷಿಲು ಸಿದ್ಧಾಂತ ಬಸ್ತಿಯಂ ಮಾಡಿಸಿ, ಅಲ್ಲಿ ಸ್ಥಾಪಿಸಿ ಪೂಜಿಸುತ್ತಂ"[೧೨] ಎಂಬ ದೇವಚಂದ್ರನ ಹೇಳಿಕೆ, ಗ್ರಂಥರಕ್ಷಣೆಗಾಗಿಯೇ ಮೂಡಬಿದರೆಯಲ್ಲಿ ಒಂದು ಬಸದಿಯನ್ನು ನಿರ್ಮಿಸಿದ ಕರ್ನಾಟಕದ ಜೈನರ ಗ್ರಂಥರಕ್ಷಣೆಯ ಪರಮಾವಧಿ ಮನೋಧರ್ಮವನ್ನು ಸೂಚಿಸುತ್ತದೆ.

೪. ಬಂದ ಭಕ್ತರು ದರ್ಶನ ನೀಡದೆ ತಿರುಗಿ ಹೋಗಲು, ಬಸವಣ್ಣನವರ ಪ್ರಾಣಜಲ ಬತ್ತಿಹೋಯಿತು. ಆ ಪ್ರಸಂಗದಲ್ಲಿ

ಇಂದಿನೀಶಾರ್ಚನೆಯುಚಿತವೇ

ನೆಂದು ತಿಳಿಯಿರೆ ಗೀತದವಸರ

ವಿಂದಜೆಯಿರೇ ವಚನಭಂಡಾರದ ಕವಳಿಗೆಗಳ ।

ತಂದು ನೋಡಿರೆ ಭಾಷೆಗಳನೇ

ನೆಂದು ನುಡಿದನು ತದ್ವ್ರತಂಗಳ

ನಿಂದು ಹಿಡಿದ ಕ್ರಮವದಾವುದಿದಂ ವಿಚಾರಿಸಿರೆ ॥[೧೩]

ಎಂದು ಮಿಕ್ಕ ಶರಣರು ತಲ್ಲಣಗೊಂಡು ನುಡಿದರೆಂದು, ಬಸವಪುರಾಣ ಮೊದಲಾದ ವೀರಶೈವಕೃತಿಗಳು ಹೇಳುತ್ತವೆ. ಇಲ್ಲಿ ಕವಳಿಗೆಗಳನ್ನೊಳಗೊಂಡ 'ವಚನಭಾಂಡಾರ'ದ ಉಲ್ಲೇಖ ವೀರಶೈವರ ಗ್ರಂಥರಕ್ಷಣೆಗೆ ಸಾಕ್ಷಿ ನುಡಿಯುತ್ತಿದೆ.[೧೪]

ಹೀಗೆ ಕಾವ್ಯ, ಶಾಸನಗಳಲ್ಲಿ ಪ್ರಾಚೀನ ಕರ್ನಾಟಕದ ಜೈನ, ಬ್ರಾಹ್ಮಣ ಮತ್ತು ವೀರಶೈವರ ಗ್ರಂಥಭಾಂಡಾರಗಳ ಸೂಚನೆ ಬರುತ್ತದೆ. ಇದಲ್ಲದೆ

"ಚಂದ್ರಸಾಗರವರ್ಣಿ ಬರೆದು ಬೆಳ್ಗುಳದ ಮಠಕ್ಕೊಪ್ಪಿಸಿದ ಭವ್ಯಜನ ಚಿನ್ತಾಮಣಿ ಸಂಪೂರ್ಣಂ ......"[೧೫]

---

೧೨. ರಾಜಾವಳೀ ಕಥೆ (K.R.I. ಪ್ರತಿ ನಂ.೨೦) ಪು.೧೫೪

೧೩. ಬ.ಪು.ಸಂ. ೩೪. ಪ.೪೫.

೧೪. ಶಿವಶರಣರು "ವಚನ ಭಾಂಡಾರ" ಹೆಸರಿನ ಒಂದು ಗ್ರಂಥಭಾಂಡಾರವನ್ನು ಸ್ಥಾಪಿಸಿದ್ದರೆಂದೂ ವಚನಭಾಂಡಾರಿ ಶಾಂತರಸನು ಅದರ ಅಧಿಕಾರಿಯಾಗಿದ್ದನೆಂದೂ ತಿಳಿದುಬರುತ್ತದೆ.

೧೫. ಮೈಹಸೂ iii ೧೧೩೧. ಭವ್ಯಜನ ಚಿಂತಾಮಣಿ.

“ಕಲಿಕಾಲಗಣಧರರುಮಪ್ಪ ಶ್ರೀಮಲ್ಲಲಿತಕೀರ್ತಿ ಮಲಧಾರಿದೇವರ ಪ್ರಿಯ ಗುಡ್ಡ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನ ದತ್ತಾವಧಾನನುಂ, ಜಿನಗಂಧೋದಕ ಪವಿತ್ರೀಕೃತೋತ್ತಮಾಂಗನುಂ, ಜಿನಮುನಿಪದಾಂಭೋಜಾತಭೃಂಗನುಮಪ್ಪ ಭಂಡಾರಿ ದೇವರುಸೆಟ್ಟಿ, ತನಗೆ ಕೇವಲಜ್ಞಾನ ಪರಿಪ್ರಾಪ್ತಿ ನಿಮಿತ್ತವಾಗಿ ಕಾರಕಳದ ಶಾಂತಿನಾಥಸ್ವಾಮಿಗಳ ಬಸ್ತಿಗೆ ಬರಸಿಕೊಟ್ಟ ಧರ್ಮನಾಥಪುರಾಣಕ್ಕೆ ಮಂಗಳ ಮಹಾ”[೧೬] ಎಂಬಂತಹ ಮಾತುಗಳು ಆ ಆ ಮತಕ್ಕೆ ಸಂಬಂಧಿಸಿದ ದೇವಾಲಯ, ಮಠಗಳ ಗ್ರಂಥಭಾಂಡಾರಗಳು ಬೆಳೆಯುತ್ತಿದ್ದ ಬಗೆಯನ್ನು ಸೂಚಿಸುತ್ತಿವೆ. ಈ ದಿಕ್ಕಿನಲ್ಲಿ ಬೆಳೆದ ಶ್ರವಣಬೆಳ್ಗೊಳ, ಹುಮ್ಮಚ, ಕಾರ್ಕಳ, ಮೂಡಬಿದಿರೆ, ವರಾಂಗ, ಕೊಲ್ಲಾಪುರ, ಆರಾಗಳಲ್ಲಿಯ ಪ್ರಾಚೀನ ಜೈನಗ್ರಂಥಭಾಂಡಾರ; ಚಿತ್ರದುರ್ಗ, ಕವಲೆದುರ್ಗ, ಬಸವತೀರ್ಥ. ಹುಬ್ಬಳ್ಳಿ, ಗದಗ, ಗುಬ್ಬಿಗಳಲ್ಲಿಯ ಪ್ರಾಚೀನ ವೀರಶೈವ ಗ್ರಂಥಭಾಂಡಾರ; ಉಡುಪಿ, ಶೃಂಗೇರಿ, ಗೋಕರ್ಣಗಳಲ್ಲಿಯ ಪ್ರಾಚೀನ ಬ್ರಾಹ್ಮಣ ಗ್ರಂಥಭಾಂಡಾರಗಳನ್ನು ಇಲ್ಲಿ ಹೆಸರಿಸಬಹುದು. “ದಾನಾತ್ ಶ್ರೇಯೋನುಪಾಲನಮ್” ಎಂಬ ಭಾವದಿಂದ ಇವರು ಗ್ರಂಥರಾಶಿಯನ್ನು ರಕ್ಷಿಸುತ್ತಿದ್ದರು. “ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ। ಗುರುಗಳಂಥವರಾಡುತಿಹರು” ಎಂದು ರತ್ನಾಕರವರ್ಣಿಯು ಆಡಂಬರಕ್ಕಾಗಿ ಪುಸ್ತಕಗಳನ್ನು ಸಂಗ್ರಹಿಸುತ್ತಿದ್ದ ಪಂಡಿತನಲ್ಲದ ಭವಸೇನಗುರುವನ್ನು ಗೇಲಿಯಾಡಿರುವನು. ಅದೇನೇ ಇರಲಿ, ವಿದ್ವಾಂಸವ್ಯಕ್ತಿಗಳು ತಮ್ಮ ಮನೆಗಳಲ್ಲಿ ಗ್ರಂಥಭಾಂಡಾರವನ್ನು ಬೆಳೆಸುತ್ತಿದ್ದುದಕ್ಕೆ ಕೆಲವು ಉದಾಹರಣೆಗಳು ಸಿಗುತ್ತವೆ.

“ಈ ಪುಸ್ತಕವನ್ನು ಜೋಗನಹಳ್ಳಿ ವಿರಕ್ತದೇವರು ತಮ್ಮ ಮನೆಗೆ ಪುಸ್ತಕವಾಗಿರಲೆಂದು ಕಾರ್ಯದ ಮಹಾಂತಸ್ವಾಮಿಗಳ ಬಳಿಯಲ್ಲಿದ್ದ ಪ್ರತಿಯ ತಂದು ಪ್ರತಿಯಿದ್ದ ಮೇರೆಗೆ ಬರೆದಿರಿಸಿದನು”.[೧೭]

“ಬೊಮ್ಮರಸಪಂಡಿತನು ನಮ್ಮ ಶಾರದಾಭಂಡಾರಕ್ಕ (?) ಪುಸ್ತಕವಾಗಬೇಕೆಂದು ಬರೆದಂಥ ಸನತ್ಕುಮಾರ ಕೃತಿಯ ಪುಸ್ತಕಕ್ಕೆ ಭದ್ರಂ ಭೂಯಾತ್”[೧೮] ಎಂಬ ಉಲ್ಲೇಖಗಳು ವ್ಯಕ್ತಿಗತ ಗ್ರಂಥಭಾಂಡಾರಗಳು ಬೆಳೆಯುತ್ತಿದ್ದ ರೀತಿಯನ್ನು ತಿಳಿಸಿಕೊಡುತ್ತವೆ.[೧೯]

ರಾಜನ ಏಳು ಬಗೆಯ ಧರ್ಮಕಾರ್ಯಗಳಿಗೆ “ಸಪ್ತಸಂತಾನ”ವೆಂದು ಹೆಸರು. ಇವುಗಳಲ್ಲಿ “ಗ್ರಂಥರಚನೆ”ಗೆ ಪ್ರೋತ್ಸಾಹ ನೀಡುವುದೂ ಒಂದು. ಹೀಗೆ ಗ್ರಂಥರಚನೆಗಾಗಿ ಕವಿಗಳಿಗೆ ಆಶ್ರಯ ಕೊಟ್ಟ ನಮ್ಮ ಅರಸರು ಸಾರ್ವಜನಿಕ ಗ್ರಂಥಭಾಂಡಾರಗಳನ್ನು ಬೆಳೆಸಿದ ನೇರ ಉಲ್ಲೇಖಗಳು ಅಷ್ಟಾಗಿ ಕಂಡುಬರುವುದಿಲ್ಲವಾದರೂ “ಮಹಾನಾಡಪ್ರಭು ಬಿಜ್ಜವರದ ಇಮ್ಮಡಿ ಚಿಕ್ಕಪ್ಪಗೌಡರಯ್ಯನವರ ಶಾರದಾ ಭಾಂಡಾರಕ್ಕೆ” ಪುಸ್ತಕ ಬರೆಯಿಸಿಕೊಂಡ ಉಲ್ಲೇಖ ಸಿಗುತ್ತದೆ.*

---

೧೬. ಮೈಹಸೂ II-೨೦೪. ಧರ್ಮನಾಥ ಪುರಾಣ

೧೭. ಮೈಹಸೂ II–೮೧೭ ಪಂಚಬ್ರಹ್ಮೋದಯಭಾಷ್ಯ

೧೮. ಮೈಹಸೂ III-೪೨೦. ಸನತ್ಕುಮಾರನ ಚರಿತೆ.

೧೯. ಕಾಶೀ ವಿದ್ವಾಂಸನಾದ ಕವೀಂದ್ರಾಚಾರ್ಯ (ಕ್ರಿ.ಶ.೧೬೫೬)ನ ಗ್ರಂಥಭಾಂಡಾರಕ್ಕೆ ಸಂಬಂಧಪಟ್ಟ ಪುಸ್ತಕಗಳ ಒಂದು ದೊಡ್ಡ ಯಾದಿ ಲಭಿಸಿದೆ (ಭಾಗ್ರಪ ೨೮). ಜೈಮಿನಿ ಭಾರತದ ಒಂದು ಓಲೆಯ ಪ್ರತಿಯಲ್ಲಿ “೬೦೦ ಗ್ರಂಥಗಳ ಹೆಸರುಗಳಿರುವ ಸೂಚೀ (Catalogue)ವೊಂದು ಇದೆ” ಎಂದು ಮಹಸೂ V–೯೫೬ ದಿಂದ ತಿಳಿದುಬರುತ್ತದೆ.

* ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಪೀಠಿಕೆ. XXIII

ಗ್ರಂಥಲೇಖನ :

ಲೇಖನ ಕಲೆ, ಗ್ರಂಥಲೇಖನ ಕಲೆ ಭಾರತದಲ್ಲಿ ಉಗಮಗೊಂಡ ಕಾಲ ಇನ್ನೂ ರಹಸ್ಯವಾಗಿ ಉಳಿದಿದ್ದರೂ ಕ್ರಿಸ್ತನಿಗೆ ಹಲವು ನೂರು ವರ್ಷ ಪೂರ್ವದಲ್ಲಿ ಎಂಬುದನ್ನು ಮಾತ್ರ ಎಲ್ಲರೂ ಒಪ್ಪುತ್ತಾರೆ. ಅಂದಿನಿಂದ ಸಮಾಜದ ವಿವಿಧ ವರ್ಗದ ಪ್ರಜೆಗಳು ೧. ದಾನ ೨. ಅಧ್ಯಯನ ೩. ಅಧ್ಯಾಪನ ಪ್ರಯೋಜನಾರ್ಥ ಗ್ರಂಥಗಳನ್ನು ಬರೆದಿರುವವರು; ಬರೆಸಿರುವವರು. ಕನ್ನಡಿಗರಲ್ಲಿಯೂ ಈ ಪ್ರವೃತ್ತಿ ಇದ್ದುದಕ್ಕೆ ಅನೇಕ ಉದಾಹರಣೆಗಳುಂಟು :

೧. "ಆಹಾರಾಭಯ ಭೈಷಜ್ಯ ಶಾಸ್ತ್ರದಾನವಿನೋದೆಯುಂ"[೨೦] "ಆಹಾರ ಅಭಯ ಭೃಷಜ್ಯ ಶಾಸ್ತ್ರದಾನ ದತ್ತಾವಧಾನನುಂ"[೨೧] ಎಂಬ ಹೇಳಿಕೆಗಳ ಪ್ರಕಾರ, ಕನ್ನಡಿಗರಿಗೆ ಆದರ್ಶವೆನಿಸಿದ್ದ ದಾನಚತುಷ್ಟಯದಲ್ಲಿ ಶಾಸ್ತ್ರದಾನವೂ ಒಂದು. ಹೀಗಾಗಿ ಕೆಲವರು ಗ್ರಂಥಗಳನ್ನು ಬರೆದು, ಇನ್ನು ಕೆಲವರು ಬರೆಸಿ ದಾನಮಾಡುತ್ತಿದ್ದರು.

"ಶ್ರೀ ಹೇವಳಂಬಿ ಸಂವತ್ಸರ ಭಾದ್ರಪದ ಶು ೧೩ಲೂ ದೊಡಸಾಮಿಗೆ ಶಾಸ್ತ್ರದಾನವಾಗಿ ಬರೆದುಕೊಟ್ಟರು. ಅಗಳೀ ಪಾಯಂಣಗಳೂ ಲಕ್ಷ್ಮೀಸೇನದೇವರ ಶಿಷ್ಯರು ಆಗಳೀ ಲಕ್ಷ್ಮೀಸೇನದೇವ x x x x x x"[೨೨]

"ಸರ್ವಾಚಾರ ಸಂಪನ್ನ, ಏಕಲಿಂಗ ನಿಷ್ಠಾಪರ, ವೀರಶೈವ ಸಂಪನ್ನ, ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ವಿರಕ್ತ ಸಿದ್ಧಲಿಂಗದೇವರಿಗೆ, ಹದಿನಾಡ ಯೆಳವಂದೂರ ಅರಸು ಚೆಂನೊಡೆಯರು ಈ ಶೂನ್ಯಸಂಪಾದನೆಯ ವಚನ ಸಂಗ್ರಹವನ್ನು ಬರಿಸಿ ಶಿವಾರ್ಪಿತವಾಗಿ ನಮಸ್ಕರಿಸಿದರು."[೨೩]

ಈ ಗ್ರಂಥದಾನದ ಒಂದು ಉತ್ತಮ ಉದಾಹರಣೆ, ಜೈನ ಪ್ರಭಾವಕಚರಿತೆಯಲ್ಲಿ ಹೀಗೆ ಬರುತ್ತದೆ. ತನ್ನ ವಿನಂತಿಯ ಮೇರೆಗೆ ವ್ಯಾಕರಣ ಬರೆಯಲು ನಿರತನಾದ ಹೇಮಚಂದ್ರನಿಗೆ ಸಿದ್ಧರಾಜ ಜಯಸಿಂಹನು ಈ ಹಿಂದಣ ಎಂಟು ವ್ಯಾಕರಣಗಳ ಹಸ್ತಪ್ರತಿಗಳನ್ನು ಕಾಶ್ಮೀರದ ಸರಸ್ವತಿ ಭಾಂಡಾರದಿಂದ ತರಿಸಿಕೊಟ್ಟನು. ಇವುಗಳ ನೆರವಿನಿಂದ ಹೇಮಚಂದ್ರನು ರಚಿಸಿದ "ಸಿದ್ಧಹೇಮಚಂದ್ರ" ವ್ಯಾಕರಣದ ಹಸ್ತಪ್ರತಿಗಳನ್ನು ಸಿದ್ಧಪಡಿಸಲು ೩೦೦ ಜನ ಲಿಪಿಕಾರರನ್ನು ೩

---

೨೦. EC II. 143. ಕ್ರಿ.ಶ. ೧೧೩೧

೨೧. ಮೈಹಸೂ II. ೭೦೪. ಧರ್ಮನಾಥ ಪುರಾಣ

ಧರಣಿಯೊಳನಂತ ದಿವ್ಯಯತಿ ಸಂತತಿಗನ್ನಮನ್+ಆದ ಭೀತಿಯಿಂ
ಬರೆ ಪಲರಂಜದೆಂಬಭಯ ವಾಕ್ಯಮನ್+ಆತುರರಾಗಿ ಬೇರ್ಪವ
ರ್ಗಿರದೆ ಶರೀರ ರಕ್ಷಣಮನ್+ಓದಲು ಶಾಸ್ತ್ರಮನೀವ ಪೆಂಪಿನಿಂ
ಹರಿಯವೆ ತಾಳಿದಳು ಪರಹಿತೋಕ್ತ ಚತುರ್ವಿಧ ದಾನಶಕ್ತಿಯ ॥

(E.C.V. Mg 22. AD 1129) ಎಂಬ ಪದ್ಯವನ್ನು ಇಲ್ಲಿ ಅವಲೋಕಿಸಬಹುದು.

೨೨. ಮೈಹಸೂ I.-೪೬೨. ಚಂದನಾಂಬಿಕೆಯ ಕಥೆ

೨೩. ಸಿದ್ಧ ವ. ಮುನ್ನುಡಿ ೯೬

ವರ್ಷಗಳ ವರೆಗೆ ನಿಯಮಿಸಿದ್ದನು. ಇವರು ಸಿದ್ಧಪಡಿಸಿದ ಹೇರಳ ಹಸ್ತಪ್ರತಿಗಳಲ್ಲಿ ತನ್ನ ರಾಜ್ಯದ ಪ್ರತಿಯೊಂದು ಮತದ ಗ್ರಂಥಾಲಯಕ್ಕೆ ಒಂದೊಂದನ್ನು, ಅನ್ಯಗ್ರಂಥಾಲಯಗಳಿಗೆ ಮಿಕ್ಕವುಗಳನ್ನು ನೀಡಿದನು. ಸಾಲದುದಕ್ಕೆ ಭಾರತದ ಹೊರಗಣ ಪರ್ಶಿಯಾ, ಸಿಲೋನ, ನೇಪಾಳಗಳಿಗೂ ಈ ಪ್ರತಿಗಳನ್ನು ಕಳಿಸಿದನು.[೨೪] ಇಂತಹ ಇನ್ನೊಂದು ಉದಾಹರಣೆ ಕರ್ನಾಟಕದ ದಾನಚಿಂತಾಮಣಿ ಅತ್ತಿಮಬ್ಬೆಯ ಶಾಸ್ತ್ರದಾನ ಪ್ರಸಂಗ.

ಎಸೆಯದೆ ಪೂಟ್ಟು ಕೆಟ್ಟಪುದು ಶಾಂತಿಪುರಾಣಮದಂ ನೆಗಚ್ಚುವೆಂ ।
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೆಂದು ಸಹಸ್ರಪುಸ್ತಕ ।
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇಟ್ಟಿ ಪೆಂ ।
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥[೨೫]

ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಸಿ ದಾನಮಾಡಿದುದನ್ನು ಹೇಳುತ್ತದೆ, ಈ ಪದ್ಯ. ಪರೋಪಕಾರದೃಷ್ಟಿಯಿಂದ ಇಷ್ಟು ಸಂಖ್ಯೆಯಲ್ಲಿ ಗ್ರಂಥ ಬರೆಯಿಸಿದ, ಗ್ರಂಥದಾನ ಮಾಡಿದ ಸ್ತ್ರೀ ಬಹುಶಃ ಜಗತ್ತಿನಲ್ಲಿ ಇನ್ನೂ ಹುಟ್ಟಿಲ್ಲ.

ಇಂತಹ ಇನ್ನೊಂದು ಗಮನಾರ್ಹ ಸಂಗತಿ ಕೆಳದಿ ಬಸವರಸನ ಗ್ರಂಥದಾನ. "ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ್ಗೆ ನಾನಾವಿಧ ಭಕ್ಷ್ಯ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾಪದಾರ್ಥಂಗಳಂ ನೀಡಿಸಿ, ಸಂತುಷ್ಟಿವಡಿಸಿಯವರ್ಗೆ ನಾನಾವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿಯಾಧಾರ ಭಸ್ಮರುದ್ರಾಕ್ಷಿ **ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ** ಪಾವಡ ಛತ್ರ ಪಾದುಕೆ ಹಸ್ತಾಧಾರದಂಡ ಮುಂತಾದ ಇಚ್ಛಾಪದಾರ್ಥಂಗಳಂ ಕೊಡಿಸಿ, ಪೇಟೆಯಲ್ಲಿ ಆರಾಧನಾಪೂರ್ವಕಂ ಮಹೋತ್ಸವ ಮೆರೆವಣಿಗೆಗಳಂ ಮಾಡಿಸಿ, ಶಾಶ್ವತ ಧರ್ಮಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯ್ಯುತಿರ್ದ ಬಸವನರೇಂದ್ರಂ"[೨೬]

ಇಲ್ಲಿ ಬಸವರಸನು ನೀಡಿದ ಹಲವು ವಸ್ತುಗಳಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ 'ಆಗಮ ಶಿವಶಾಸ್ತ್ರಲಿಖಿತ ಪುಸ್ತಕ' ದಾನ, ಪ್ರಾಚೀನ ಕನ್ನಡಿಗರ ಗ್ರಂಥದಾನಕ್ಕೆ ಒಂದು ಪರಮನಿದರ್ಶನವೆನಿಸಿದೆ.

---

೨೪. Libraries in Ancient and mediaval India (Journal of Sri Venkatesvar Oriental Institute Vol X-I.P.3)

೨೫. ಶಾಂ.ಪು.ಪರಿಶಿಷ್ಟ ೧.

(ತೌಂಗ್ದ್ವಿನ್ ಮತ್ತು ಅವನ ಹೆಂಡತಿ ಬೌದ್ಧಸಂಘಕ್ಕೆ ದನವಾಗಿ ಕೊಟ್ಟ ೨೯೫ ಪುಸ್ತಕಗಳ ಹೆಸರುಗಳು ಬರ್ಮಾದೇಶದ ಪೆಗುವಿನಲ್ಲಿ ಸಿಕ್ಕ ಕ್ರಿ.ಶ. ೧೪೪೨ರ ಶಾಸನವೊಂದರಲ್ಲಿ ಉಲ್ಲೇಖಗೊಂಡಿವೆ. ಭಾ ಗ್ರ ಪ.೨೮)

೨೬. ಕೆಳದಿ ನೃಪವಿಜಯ ೧೧-೩೫ ಗ

೨. ಕೆಲವರು ತಮ್ಮ ಅಧ್ಯಯನಕ್ಕೆಂದು ಗ್ರಂಥಗಳನ್ನು ಬರೆದುಕೊಳ್ಳುತ್ತಿದ್ದರು.[೨೭] ಬರೆಸಿಕೊಳ್ಳುತ್ತಿದ್ದರು:

"ಶ್ರೀ ಶಾಲಿವಾಹನ ಶಕ ೧೬೫೭ನೆಯ ರಾಕ್ಷಸಸಂವತ್ಸರದ ಕಾರ್ತಿಕ ಬ ೧೦ ಬುಧವಾರ ಸೂರ್ಯನು ಪೂರ್ವ್ವಪ್ರತಿಷ್ಠೆಯಾದ ಧನುರ್ಲಗ್ನದಲ್ಲು, ವುಮತ್ತೂರ ಹಳೆ ಬಸದಿಯ ಕಳಿಲೆಸೂರಿ ಪಂಡಿತರ ಮಗನು, ಪಂಡಿತನು ತನಗೆ ಬೇಕಾಗಿ ಬರೆದ ಆಬ್ದಿಕಲ್ಪಕ್ಕೆ ಮಂಗಲ ಮಹಾಶ್ರೀ"[೨೮]

"ಬಸವತೀರ್ಥ ಸಿಂಹಾಸನ ಶಿವಾನುಭಾವ ಚರಮೂರ್ತಿಗಳು ಚೆನ್ನಬಸವಸ್ವಾಮಿಗಳು ತಮ್ಮ ಲೀಲಾವಿನೋದದಿಂದ ಬರೆಸಿದರು. ಬರೆದವರು ದಾರೆಂದರೆ ಶಿರೂರಮಠದ ವಿಶ್ವನಾಥ ದೊಡ್ಡಯ್ಯನು. ಸ್ವಾಮಿಗಳ ಲೀಲಾವಿನೋದಕ್ಕೆ ಬರೆದನು."[೨೯]

೩. ಕೆಲವರು ಇನ್ನೊಬ್ಬರಿಗೆ ಓದಲು ಮತ್ತು ಓದಿಸಲು ಗ್ರಂಥಗಳನ್ನು ಲಿಪಿಸುತ್ತಿದ್ದರು :

"ಹಂಣೆಹಾಳ ಗ್ರಾಮದಲ್ಲಿರುವ ವಾಲ್ಮೀಕರ ಕಾಡಪ್ಪಗೆ ಹೋದಿಕೊಳ್ಳುವುದಕ್ಕೆ

[ಬರೆದ ಪುಸ್ತಕ]"[೩೦]

"ಕೆಸ್ತೂರು ಉಪಾಧ್ಯರ ಮಗ ರಂಗಪ್ಪ ಬರದು ಕೊಟದು. ತಳಕಾಡು ನಾಯಿಕಶ್ಯಾನಿ ಕೆಂಪಿ ಮಗಳು ನಂಜಿಗೆ ಬರದು ಕೊಟ್ಟದ್ದು ...."[೩೧]

"ಅಮರೇಂದ್ರವಂದಿತ ಶ್ರೀ ಸುಕುಮಾರನ ಚಾರುಚರಿತದ ಪ್ರತಿಯನೂ ಜಿನಚಂದ್ರನು ತನ್ನ ಪುತ್ರಿತ್ರಯಂಗಳನೋದಿಸಲೆಂದು ಬರೆದನು."[೩೨]

"ಚೆನ್ನಪಟ್ಟಣಕ್ಕೆ ವಳಿತವಾದ ಹೊಂಗನೂರು ನಾರಣ್ಯೆನು ತನ್ನ ಮಗನಿಗೆ ಬರೆದುಕೊಟ್ಟ, ಮೂಲಪ್ರತಿಯನ್ನು ನೋಡಿ ಬರದದ್ದು."[೩೩]

ಹೀಗೆ ಅರಸನಿಂದ ಪ್ರಜೆಗಳ ವರೆಗಿನ ವಿವಿಧ ಶ್ರೇಣಿಯ ವ್ಯಕ್ತಿಗಳು, ವಿವಿಧ ಉದ್ದೇಶಗಳಿಂದ ಗ್ರಂಥಗಳನ್ನು ಪ್ರತಿಮಾಡಿದರು, ಪ್ರತಿಮಾಡಿಸಿದರು, ಇವರು ಕಾರಣವಾಗಿ ಈ ವರೆಗೆ ಸಿಕ್ಕ ಮತ್ತು ಇನ್ನು ಮುಂದೆ ಸಿಗಬಹುದಾದ ಒಟ್ಟು ಇಪ್ಪತ್ತು ಸಾವಿರ ಕನ್ನಡ ಹಸ್ತಪ್ರತಿಯ ಕಟ್ಟುಗಳು, ಇವುಗಳಲ್ಲಿ ಅಡಕವಾಗಿರುವ ಸುಮಾರು ಒಂದು ಲಕ್ಷ ಕನ್ನಡ ಕೃತಿಗಳು, ಕನ್ನಡಿಗರ ಗ್ರಂಥಲೇಖನ ಆಸಕ್ತಿಗೆ ನಿದರ್ಶನವೆನಿಸಿವೆ.

---

೨೭. ಬ್ರಹ್ಮಸೂತ್ರಕ್ಕೆ "ಶ್ರೀಭಾಷ್ಯ" ಹೆಸರಿನ ಭಾಷ್ಯ ಬರೆಯಲು ಪ್ರಾರಂಭಿಸಿದ ರಾಮಾನುಜಾಚಾರ್ಯರಿಗೆ 'ಬೋಧಾಯನವೃತ್ತಿ'ಯನ್ನು ನೋಡುವುದು ಅವಶ್ಯವೆನಿಸಿತು. ಆಗ ಶಿಷ್ಯರೊಂದಿಗೆ ಕಾಶ್ಮೀರಕ್ಕೆ ಹೋಗಿ, ಅಲ್ಲಿಯ ಸರಸ್ವತಿ ಭಾಂಡಾರಕ್ಕೆ ಸಂಬಂಧಪಟ್ಟ ಬೋಧಾಯನವೃತ್ತಿಯನ್ನು ಅಭ್ಯಸಿಸಿ ಬಂದರು. (Libraries in ancient and Mediaeval India-(Journal of Sri Venketeshavar Oriental Institute Vol X-I.P. 3)

೨೮. ಮೈಹಸೂ I-63 ಅಬ್ಧಿಕಲ್ಪ

೨೯. ಸಿದ್ಧ. ವ ಮನ್ನುಡಿ ೯೭

೩೦. ಕ ಗ್ರ ಸಂ ೫೦

೩೧. ಮೈಹಸೂ I–೧೮೭. ಐರಾವತ

೩೨. ಮೈಹಸೂ IV-೧೯೩೨. ಸುಕುಮಾರ ಚರಿತ್ರೆ

೩೩. ಮೈಹಸೂ III-೧೪೭೦ ರುಕ್ಮಾಂಗದ ಚರಿತ್ರೆ

ಪಾಠರಕ್ಷಣೆ :

ಗ್ರಂಥರಕ್ಷಣೆ, ಗ್ರಂಥಲೇಖನಗಳಿಗಿಂತ ಭಾರತೀಯರ ಪಾಠರಕ್ಷಣಾಪ್ರಜ್ಞೆ ವೈಶಿಷ್ಟ್ಯಪೂರ್ಣವಾದುದು, ಉಲ್ಲೇಖನಾರ್ಹವಾದುದು. ಈ ಪ್ರಜ್ಞೆ ವೇದಗಳಷ್ಟು ಪುರಾತನ. ವೇದಗಳ ಕಾಲ ಕ್ರಿಸ್ತನಿಗೆ ಕೆಲವು ನೂರು ವರ್ಷ ಪ್ರಾಚೀನ. ಅಂದಿನಿಂದ ಕೋಟಿ ಕೋಟಿ ಭಾರತೀಯರು, ಉಚ್ಚಾರರಕ್ಷಣೆಯ ನಿಷ್ಠೆ ಇಲ್ಲವೆ ಲಿಪಿಯ ಅಭಾವ ಕಾರಣವಾಗಿ, ಪಠನರೂಪದಲ್ಲಿ ಅವುಗಳ ಪಾಠವನ್ನು ಕಾಪಾಡಿಕೊಂಡು ಬಂದರು.

ದುಷ್ಟಃ ಶಬ್ದಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋನ ತಮರ್ಥ ಮಾಹ ।

ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋऽಪರಾಧಾತ್ ॥[೩೪]

ಈ ಭಯ, ವೇದಗಳ ಬಗ್ಗೆ ಅವರಲ್ಲಿ ಭಕ್ತಿ ಹುಟ್ಟಿಸಿತು. "ವೇದಾನಾಂ ಲೇಖಕಾಃ" ಅಂದರೆ ವೇದಗಳನ್ನು ಲಿಖಿಸುವವರು ನರಕವನ್ನು ಪ್ರವೇಶಿಸುವರೆಂದು ವ್ಯಾಸಭಾರತ ಎಚ್ಚರ ನೀಡಿತು. ಹೀಗಾಗಿ ಕ್ರಮಪಾಠ, ಪದಪಾಠ, ಜಟಾಪಾಠ, ಘನಪಾಠ ಮೊದಲಾದ ಎಂಟು ವಿಧಾನಗಳಿಂದ ಅವುಗಳನ್ನು ಭಾರತೀಯರು ಮುಖಪಾಠ ಮಾಡಿದರು. ಇದರಿಂದ ಅವುಗಳ ಪದ, ಪ್ರತ್ಯಯ, ವರ್ಣ, ಉಚ್ಚಾರಗಳು ಮೂಲೆ ಮುಕ್ಕಾಗದಂತೆ ಇಂದಿಗೂ ಉಳಿದು ಬಂದವು.

ಈ ವೇದಯುಗದ ತರುವಾಯ ಪುರಾಣ-ಇತಿಹಾಸಯುಗ, ಇದರ ತರುವಾಯ ಕಾವ್ಯ-ಶಾಸ್ತ್ರಯುಗಗಳು ಅಡಿಯಿಟ್ಟು ನಡೆದುಬಂದವು. ನಮ್ಮ ವಾಙ್ಮಯದ ಈ ಮೂರು ಸ್ತರಗಳ ಬಗ್ಗೆ ಪ್ರಭು, ಮಿತ್ರ, ಕಾಂತೆಯೆಂಬ ಭಾವ ಬೆಳೆದು, ಭಕ್ತಿ ಮೈತ್ರಿಯಲ್ಲಿ, ಮೈತ್ರಿ ಸಲುಗೆಯಲ್ಲಿ ಸಡಿಲುಗೊಂಡಿತು. ಪಾಠರಕ್ಷಣೆಯ ನಿಷ್ಠುರಪ್ರಜ್ಞೆ, ಶಿಥಿಲಗೊಂಡಿತು. ಇದಲ್ಲದೆ ಪುರಾಣ-ಇತಿಹಾಸ, ಕಾವ್ಯ-ಶಾಸ್ತ್ರಗಳ ಕ್ಷೇತ್ರ ನೆನಪಿಗೆ ನಿಲುಕದಷ್ಟು ವಿಸ್ತಾರವೆಂಬ ಕಾರಣದಿಂದಲೋ, ಈ ಕಾಲಕ್ಕೆ ಬರವಣಿಗೆ ವಿಧಾನ ರೂಢಗೊಂಡ ಕಾರಣದಿಂದಲೋ ಸಾಹಿತ್ಯ ಕಂಠಪಾಠವನ್ನು ತೊರೆದು ಲೇಖನ ರೂಪಕ್ಕಿಳಿಯಿತು. ವಸುಕ್ರನೆಂಬ ಕಾಶ್ಮೀರ ವಿದ್ವಾಂಸನು (೮-೯ ನೆಯ ಶತಮಾನ) ವೇದಗಳನ್ನು ಮೊದಲು ಬರಹಕ್ಕಿಳಿಸಿದನೆಂದು ಅಲ್ಬೆರುನಿಯ ಹೇಳಿಕೆ.[೩೫] ಬ್ರಾಹ್ಮಣರ ಅಭ್ಯಾಸಕ್ಕೋಸುಗ ಗೂಳಿಗವೆಜೆಸಾಗನೆಂಬುವನು ವೇದವನ್ನು ಪ್ರತಿಮಾಡಿಕೊಟ್ಟ ಉಲ್ಲೇಖ ಕನ್ನಡ ನಾಡಿನ ೯೫೧-೫೨ರ ಶಾಸನದಲ್ಲಿ ಬರುತ್ತದೆ.[೩೬]

ಬರುಬರುತ್ತ ಲಿಪಿಕಾರರ ಅನವಧಾನದಿಂದಾಗಿ ಅಪಪಾಠಗಳು ತಲೆಯೆತ್ತಲಾರಂಭಿಸಿದವು. ಸಾಹಿತ್ಯ, ಪಂಡಿತರ ಪರಿಸರದಿಂದ ಪಾಮರರ ಪರಿಸರಕ್ಕಿಳಿ ದಾಗಲಂತೂ ಈ ದುಷ್ಟಪಾಠಗಳೊಂದಿಗೆ

---

೩೪. ಪಾತಂಜಲಿ ಮಹಾಭಾಷ್ಯ I

೩೫. Education in Ancient India Altekar P. 147 (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೨೩೭)

೩೬. IA. XII P ೨೫೭. (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೨೩೭) ಡಾ. ಎಂ.ಚಿದಾನಂದಮೂರ್ತಿಗಳ ಈ ಹೇಳಿಕೆಯನ್ನು ಪರೀಕ್ಷಿಸುವುದು ಅಗತ್ಯವಿದೆ.

ಅಪ್ರಾಮಾಣಿಕ ಸಹೃದಯರಿಂದ ಕೂಟಕೃತಿಗಳು ಕಣ್ಣು ತೆರೆಯಲಾರಂಭಿಸಿದವು. ಪರಿಶುದ್ಧ ಪಾಠಜಲ ಕ್ರಮೇಣ ಕದಡುತ್ತ ಬಂದಿತು. ಇಂಥ ಪರಿಸ್ಥಿತಿಯಲ್ಲಿಯೂ ವ್ಯಕ್ತಪಡಿಸಿದ

ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ ।

ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ।[೩೭]

ತಪ್ಪಂ ಬರೆದವ ಕಡುಜಡ ।

ನಪ್ಪಾತಂ ಬರೆದನೆಂದು ಬಯ್ಯಲ್ ಬೇಡಿಂ ।

ತಪ್ಪಿಲ್ಲ ಶುದ್ಧಮಕ್ಕುಂ ।

ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆದೆಂ ।[೩೭]

ಎಂಬ ಲಿಪಿಕಾರನ ಪ್ರಾಮಾಣಿಕ ಅಭಿಪ್ರಾಯ ಭಾರತೀಯರ, ಕನ್ನಡಿಗರ ಪಾಠರಕ್ಷಣೆಯ ಮನೋಧರ್ಮವನ್ನು ಪ್ರಕಟಪಡಿಸುತ್ತದೆ.

ಈ ಪ್ರಾಮಾಣಿಕತೆಯ ಕೊರತೆ, ಮರಹು, ಆಲಸ್ಯ ಮತ್ತು ಅಜ್ಞಾನಗಳಿಂದ ಭಿನ್ನಪಾಠಗಳು ಹುಟ್ಟುತ್ತವೆಯೆಂಬುದರ ಕಲ್ಪನೆ ಭಾರತೀಯರಿಗಿದ್ದಿತು. ದೇವರಾಜ ಯಜ್ವನ್‌ನು ಯಾಸ್ಕಾಚಾರ್ಯನ ನಿಘಂಟುವಿಗೆ ವಾಖ್ಯಾನ ಬರೆಯುವಲ್ಲಿ, ತಾನು ಸಂಗ್ರಹಿಸಿದ ಹಸ್ತಪ್ರತಿಗಳನ್ನು ಕುರಿತು,

"ತೇಷು ಚ ಕೇಷುಚಿದರ್ಥೇಷು ಲೇಖಕಪ್ರಮಾದಾದಿಭಿಃ ಕಾನಿಚಿತ್ಪದಾನ್ಯಧಿಕಾನ್ಯಾಸನ್ ಅನ್ಯೇಷು ಚ ಕಾನಿಚಿದ್ ನ್ಯೂನಾನಿ । ಅಪರೇಷು ಚ ಕಾನಿಚಿದಪಹಾಯ ಕಾನಿಚಿದ್ ವಿಶ್ರಸ್ತಾನಿ । ಅಕ್ಷರಾಣಿ ಚ ವಿಪರ್ಯಸ್ತಾನಿ"[೩೮] ಎಂದು ನುಡಿದಿರುವನು. ಲಿಪಿಕಾರರ ಪ್ರಮಾದದಿಂದಾಗಿ ಕೆಲವೆಡೆಗಳಲ್ಲಿ ಹೆಚ್ಚಿನ ಪದಗಳು ಸೇರಿಕೊಂಡಿವೆ. ಇನ್ನು ಕೆಲವೆಡೆಗಳಲ್ಲಿ ಕೆಲವು ಪದಗಳು ಬಿಟ್ಟುಹೋಗಿವೆ. ಬೇರೆ ಕೆಲವೆಡೆಗಳಲ್ಲಿ ಕೆಲವು ಪದಗಳ ಬದಲು ಬೇರೆ ಪದಗಳು ಬಂದು ಸೇರಿವೆ. ಮತ್ತೆ ಕೆಲವೆಡೆಗಳಲ್ಲಿ ಅಕ್ಷರಗಳು ವಿಪರ್ಯಾಸಗೊಂಡಿವೆಯೆಂದು ಇದರ ಅರ್ಥ.

ಮಧ್ವಾಚಾರ್ಯ ಕೃತ "ಮಹಾಭಾರತ ತಾತ್ಪರ್ಯನಿರ್ಣಯ" ಗ್ರಂಥದಲ್ಲಿ ಬರುವ

ಕ್ವಚಿತ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ

ಕುರ್ಯುಃ ಕ್ವಚಿಚ್ಚವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥

ಅನುತ್ಸನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ

ಸತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಪಿ ನ ವರ್ತತೇ ॥

ಎಂಬ ಶ್ಲೋಕಗಳಿಗೆ ಬರೆದ ವಾದಿರಾಜತೀರ್ಥರ ವ್ಯಾಖ್ಯಾನ ಹೀಗಿದೆ:

---

೩೭. ಈ ಎರಡು ಪದ್ಯಗಳು ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳ ಕೊನೆಗೆ ಕಂಡುಬರುತ್ತವೆ.

೩೮. ಕ ಗ್ರ ಸಂ ೬

"ಭಾರತಾದಯೋಪಿ ದುರ್ವಿದಗ್ಧ ಕುತ್ಸಿತ ವಿದ್ವಜ್ಜನ ಕೌಟಿಲ್ಯಾದುತ್ಸನ್ನ ಪ್ರಾಯಾ ಆಸನ್ ಅತೋಸ್ಮಾಭಿರೇವ ಹರಿಕೈಂಕರ್ಯಧುರಂಧರ್ಯೈಃ ಪ್ರಯತಿತವ್ಯಮಿತಿ ಭಾವೇನಾಹ; ಕ್ವಚಿದಿತ್ಯಾದಿನಾ ಗ್ರಂಥಾತ್ ಸ್ವಸ್ವಮತಾನುಕೂಲ ಸ್ವಕಪೋಲ ಕಲ್ಪಿತ ಶ್ಲೋಕಾನ್ ಕ್ವಚಿತ್ ಮೂಲಗ್ರಂಥಸ್ಯ ಭಾಗೇ ಪ್ರಕ್ಷಿಪಂತಿ; ಕ್ವಚಿತ್ ಸ್ವ ಪ್ರತಿಕೂಲ ಶ್ಲೋಕಾನ್ ಅಂತರಿತಾನ್ ಅಂತರ್ಧಾನ ಪ್ರಾಪ್ತಾನ್ ಕುರ್ವಂತಿ ತ್ವಜಂತೀತ್ಯರ್ಥಃ; ಅಸ್ಮದ್ಗ್ರಂಥೇನಾಸ್ತೀತಿ ವಕ್ತುಮುತ್ಸಾದಯಂತೀತ್ಯರ್ಥಃ ವ್ಯತ್ಯಾಸಂ ಉಕ್ತ ಹರಿಮಹಿಮ ಸಂಬಂಧ ಶ್ಲೋಕಾನ್ ಕಥಾವಿಚ್ಛೇದಾಯ ಅನ್ಯತ್ರ ನಿಕ್ಷಿಪಂತಿ; ಏತತ್ಕಥಾನುಕೂಲಂ ಶ್ಲೋಕಾನ್ ಇಹ ಲಿಖಂತಿ; ಕ್ವಚಿತ್ ಸಾಧವೋಪಿ ಪ್ರಮಾದಾತ್ ಸಾಜ್ಞಾನಾತ್ ಅನ್ಯಥಾಭಿ ಸಂಧೇನಾನ್ಯಥಾಕುರ್ಯುಃ"[೩೯]

ಭಾರತಾದಿ ಗ್ರಂಥಗಳಲ್ಲಿ ಕೆಲವು ಕುತ್ಸಿತ ಬುದ್ಧಿಯ ವಿದ್ವಾಂಸರು, ತಮ್ಮ ತಮ್ಮ ಮತಗಳಿಗೆ ಅನುಕೂಲವಾಗುವಂತಹ ಶ್ಲೋಕಗಳನ್ನು ತಾವೇ ರಚಿಸಿ ಮೂಲಗ್ರಂಥದಲ್ಲಿ ಸೇರಿಸಿಬಿಡುತ್ತಾರೆ. ಇನ್ನು ಕೆಲವೆಡೆ ತಮ್ಮ ಮತಕ್ಕೆ ವಿರೋಧವಾಗುವ ಮೂಲಶ್ಲೋಕಗಳನ್ನು ಬಿಟ್ಟುಬಿಡುತ್ತಾರೆ. ಈ ಪ್ರಯತ್ನದಿಂದ ಮೂಲಗ್ರಂಥದಲ್ಲಿ ಆ ಶ್ಲೋಕಗಳೇ ಇರಲಿಲ್ಲವೆಂಬ ಕಲ್ಪನೆಯನ್ನು ಹುಟ್ಟಿಸಲಿಕ್ಕೂ ಪ್ರಯತ್ನಿಸುತ್ತಾರೆ. ಕೆಲವು ಶ್ಲೋಕಗಳನ್ನು ಕಥೆಗೆ ಹೊಂದದಂತೆ ಬೇರೆಡೆಗೆ ಜೋಡಿಸುತ್ತಾರೆ. ಕಥೆಗೆ ಅನುಕೂಲವಾಗುವ ಶ್ಲೋಕಗಳನ್ನು ಇಲ್ಲಿ ಸೇರಿಸುತ್ತಾರೆ. ಎಷ್ಟೋ ಸಲ ಸಜ್ಜನರು ಸಹ ತಪ್ಪು ತಿಳುವಳಿಕೆಯಿಂದಲೋ, ಅಜ್ಞಾನದಿಂದಲೋ, ಅರ್ಥಭೇದದಿಂದಲೋ ಈ ರೀತಿ ಮಾಡುತ್ತಾರೆ. ಇದನ್ನು ಹರಿಸೇವಕಧುರಂಧರರಾದ ನಾವು ಸರಿಪಡಿಸಲೇ ಬೇಕಾಗಿದೆ – ಎಂದು ಇದರ ಅರ್ಥ.

ಮಹಾಮಹೋಪಾಧ್ಯಾಯ ಮಲ್ಲಿನಾಥನು (ಕ್ರಿ.ಶ.೧೪೦೦) 'ಮೇಘದೂತ'ದಲ್ಲಿಯ ಪೂರ್ವಮೇಘದ ೩೧ನೆಯ ಪದ್ಯದ ತರುವಾಯ ಬರುವ "ಹಾರಾಂ ಸ್ತಾರಾಂ ಸ್ತರಲ ಗುಟಿಕಾನ್" "ಪ್ರದ್ಯೋತಸ್ಯಪ್ರಿಯ ದುಹಿತರಂ" "ಪತ್ರಶ್ಯಾಮಾ ದಿನಕರಹಯಸ್ಪರ್ಧಿನೋ" ಎಂದು ಆರಂಭವಾಗುವ ಮೂರು ವೃತ್ತಗಳನ್ನು "ಇತಃ ಪರಂ ಪ್ರಕ್ಷಿಪ್ತಮಪಿ ಶ್ಲೋಕಕತ್ರಯಂ ವ್ಯಾಖ್ಯಾಯತೇ" ಎಂದು ಕರೆಯುವಲ್ಲಿ ಇವು ಪ್ರಕ್ಷಿಪ್ತಗಳೆಂದು ಗುರುತಿಸಿರುವನು. ಇದೇ ರೀತಿ ಉತ್ತರಮೇಘದಲ್ಲಿಯೂ ಎರಡನೆಯ ಪದ್ಯದ ತರುವಾಯ ಎರಡು ಪ್ರಕ್ಷಿಪ್ತ ವೃತ್ತಗಳು ಗೋಚರಿಸುತ್ತವೆ.[೪೦]

ಈ ವಿವರಣೆಗಳು ಭಾರತೀಯರು ಗಮನಿಸಿದ್ದ ಭಿನ್ನಪಾಠ, ಪ್ರಕ್ಷಿಪ್ತಭಾಗಗಳನ್ನು ತಿಳಿಸಿಕೊಡುತ್ತವೆ. ಇನ್ನು ಕನ್ನಡದಿಂದ ಇಂಥ ಉದಾಹರಣೆಗಳನ್ನು ನೋಡಬಹುದು.

ಗುರುರಾಜ ಚಾರಿತ್ರದ ಒಂದು ಬಿಡಿ ಓಲೆಯಲ್ಲಿ "ಬಸವ ಪುರಾಣದ ಪ್ರತಿಗಳಲ್ಲಿ ಷಟ್ಪದಂಗಳು ಸೂತ್ರ ತಪ್ಪಿ ಹಿಂಚುಮುಂಚಾಗಿಯೂ, ಪೂರ್ವಾರ್ಧಾಪರಾರ್ಧಗಳು ಹಿಂಚುಮುಂಚಾಗಿಯೂ, ಕಥೆಯೂ ಕಾಂಡಗಳೂ ಹಿಂಚುಮುಂಚಾಗಿಯೂ ಇವೆ. ಕಾಂಡಗಳಲ್ಲಿ ಬಂದ ನಾಂದಿಯೇ ಪುನರಪಿ ಬಂದಿದೆ. ಕೆಲವು ಪದ್ಯಗಳು ಹೆಚ್ಚಿಗೆ. ಅಂತು ಕಾಂಡ ೮ಕ್ಕೆ ಸಂಧಿ ೬೦ಕ್ಕೆ ಪದ ೩೬೭೧ಕ್ಕಂ ಹೆಚ್ಚಾಗಿದ್ದರೆ ಹೆಚ್ಚಿಗೆ ಎಂದು ತಿಳಿವುದು. ಕಡಿಮೆಯಾಗಿದ್ದರೆ ಲೇಖನದೋಷವೆಂದರಿವುದು. ಕೆಲವು ಪದ್ಯಗಳನ್ನು ಸರ್ವಲಕ್ಷಣ ಪೂರ್ಣವಾಗಿ ತಿರ್ದಿ

---

೩೯. "Woolner Commemoration Volume" P.106-108. (Textual criticism in the thirteenth century:by P.K.Gode).

೪೦. ಕ ಗ್ರ ಸಂ ೬

ನೇರ್ಪಡಿಸಿದವರು ನೀಲಕಂಠಾಚಾರ್ಯರು"[೪೧] ಎಂಬ ಹೇಳಿಕೆಯಿಂದ ಒಂದು ಗ್ರಂಥದ ನಿರ್ದಿಷ್ಟ ವ್ಯಾಪ್ತಿಯ ವಿಷಯವಾಗಿ ಅಂದಿನ ವಿದ್ವಾಂಸರೂ ಆಲೋಚಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ. "ಶಿವಷಣ್ಮುಖ ಸಂವಾದ"ದ ಕೊನೆಯ ಗರಿಯಲ್ಲಿ ಹೀಗೆ ಬರುತ್ತದೆ :

"ಅಂತು ಪ್ರಕರಣ ೪೫ಕ್ಕಂ ಮಂಗಳಮಹ । ಮುಂದೆ ನಾಲ್ವತ್ತೇಳನೆ ಪ್ರಕರಣಾಯಂಬುದಾಗಿ । ಲೆಖ್ಖಯಿಕ್ಕಿ ಅಧಾನೆ ....। ವಾಲಿ ಹೋಗಿದ್ದಾಗ್ಯೂ । ಪ್ರಕರಣದ ಲೆಖ್ಖವಷ್ಟಕ್ಕೆ । ಯರಡು ಮೂರು ಪ್ರತಿಯಲ್ಲಿ ಸರಿ ನೋಡಿದಾಗ್ಯೂ । ಮುಂದಣ ಪ್ರಕರಣ ನಾಲ್ವತ್ತಾರನೇದೆ ಸಂಧಿ ಆಗಿ ಅದೆ । ಬರವವ ಲೆಖವ ತಪ್ಪಿಕ್ಕಿದ್ದಲ್ಲದೆ । ನೆರೆ ಪ್ರತಿಗೆ ಕುಂದಾಗಿಯಿಲ್ಲ."[೪೨] ತಾನು ನಕಲು ಮಾಡುತ್ತಿರುವ 'ಶಿವಷಣ್ಮುಖವಾದ' ಹೆಸರಿನ ಪ್ರತಿಯಲ್ಲಿ ನಲ್ವತ್ತೈದನೆಯ ಪ್ರಕರಣದ ತರುವಾಯ ನಲವತ್ತೇಳನೆಯ ಪ್ರಕರಣ ಎಂದು ಬರೆದುದು ಈ ಲಿಪಿಕಾರನ ಗಮನಕ್ಕೆ ಬಂದಿದೆ. ಮಧ್ಯದ ಪುಟಗಳು ಕಳೆದಿರಬಹುದು ಎಂದು ಸಂದೇಹ ಹುಟ್ಟಲು, ಈ ಕೃತಿಯ ಬೇರೆ ೨-೩ ಪ್ರತಿಗಳೊಂದಿಗೆ ತಾಳೆ ನೋಡಿ, ನಾಲ್ವತ್ತಾರನೆಯ ಪ್ರಕರಣಕ್ಕೆ ಬದಲು ಬರೆದ ನಲವತ್ತೇಳನೆಯ ಪ್ರಕರಣ ಎಂಬುದು ತಪ್ಪು, ಎಂದು ಈತನು ನಿಶ್ಚಯಮಾಡಿಕೊಂಡಿರುವನು. ಒಂದು ಕೃತಿಯ ಒಟ್ಟು ದೇಹದ ಬಗ್ಗೆ ಇದ್ದ ದೃಷ್ಟಿಯನ್ನಲ್ಲದೆ, ೨-೩ ನಕಲು ಪ್ರತಿಗಳನ್ನು ಸಂಗ್ರಹಿಸಿದುದನ್ನು ಇಲ್ಲಿ ಗಮನಿಸಬಹುದು.

ಶಬ್ದಮಣಿದರ್ಪಣದಲ್ಲಿ, ಕರ್ಮಣಿರೂಪವನ್ನು ಕುರಿತ ೨೬೩ನೆಯ ಸೂತ್ರಕ್ಕೆ ಪ್ರಕ್ಷಿಪ್ತಸೂತ್ರ ಅರ್ಥದ 'ಅನುಕ್ತ ಸೂತ್ರಂ' ಎಂಬ ಶೀರ್ಷಿಕೆ ಬಹಳಷ್ಟು ಹಸ್ತಪ್ರತಿಗಳಲ್ಲಿ ಸಿಗುತ್ತದೆ.[೪೩] ಇದರಿಂದ ಒಂದು ಗ್ರಂಥದ ಮೂಲಪಾಲು ಮತ್ತು ಪ್ರಕ್ಷಿಪ್ತಪಾಲುಗಳ ನಿರ್ಣಯದೃಷ್ಟಿಯನ್ನು ಕನ್ನಡಿಗರು ಪಡೆದಿದ್ದರೆಂದು ವೇದ್ಯವಾಗುತ್ತದೆ.

---

೪೧. ಕಕಚ ೪೮೨. (೧೯೬೧)

ಬಸವ ಪುರಾಣದ ಕೆಲವು ಸಂಧಿಗಳ ಪ್ರಕ್ಷಿಪ್ತ ಸಂಗತಿಯನ್ನು ಹಲವು ಜನ ಅಭ್ಯಾಸಿಗಳು ಗುರುತಿಸಿದಂತಿದೆ :

೧. ಪದ ವಿನಾಶನ ಭೀತಿಯಿಂದಂ

ಪದದ ಬಾಹುಲ್ಯದುರು ಭಯದಿಂ
ತ್ರಿದಶ ಶತಮುಂಮೆಂಬ ಪದನುಂ ಮುನ್ನ ಭೀಮಕವಿ।
ಪದದೆ ಪೇಳ್ದನದೆ ಪ್ರಮಾಣಂ
ಪದದ ಸಂಖ್ಯೆಗೆ ನಿರಿಸಿ ಕೂಡಲ್
ಮುದದೆ ಮುಚ್ಚಾಸಿರದ ಮೂವತ್ತೊಂದು ಪದನಾಯ್ತು ॥

೨. ಅಂತು ಕಾಂಡವು ೮ಕ್ಕಂ ಸಂಧಿ ೫೦ಕ್ಕಂ ಪದನು ೩೦೫೨ಕ್ಕಂ ಯಿದಕ್ಕೆ ಸ್ತೋತ್ರಪದ ಆಶೀರ್ವಾದ ಪದಗಳಿಂದ ೨೧ ಪದನ ಕಳೆದು ಕಥಾಲಾಪಣೆಗೆಗೆ ೩೦೩೧ ಪದನು ಭೀಮಕವಿ ಪ್ರೋಕ್ತಂಗಳು. ಗುರುಭಕ್ತನ ಕಥೆ ಮೊದಲಾದವುತ್ತ್ರೇಕ್ಷಿಪ್ತಂಗಳು. ಆ ಕಥೆಗೆ ಸೇರಲಾದ ಸಂಧಿ ೧೦ಕ್ಕಂ ಪದನು ೫೭೬ಕ್ಕಂ ಅಂತು ವುಭಯಂ ಕೂಡಿ ಸಂಧಿ ೬೦ಕ್ಕಂ ಪದನು ೩೬೧೬ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ.

(ಬಸವ ಪುರಾಣ, ಪ್ರಸ್ತಾವನೆ ೧೦೯-೧೧೦ ಆರ್.ಸಿ.ಹಿರೇಮಠ ೧೯೭೦)

೪೨. ಮೈಹಸೂ vi, ೧೭೫೪. ಶಿವಷಣ್ಮುಖವಾದ

೪೩. 'ಈ ಸೂತ್ರ ವೃತ್ತಿ ಪ್ರಯೋಗ ವ್ಯಾಖ್ಯಾನುಗಳು (ಕಖ) ಪ್ರತಿಗಳಲ್ಲಿಲ್ಲ' (ಶಮದ ೧೯೬೪ ಪು.೨೭೭. ಅ.ಟಿ.) ಎಂಬ ಹೇಳಿಕೆಯನ್ನೂ 'ಅಮುಮೆಂದುಸಿರ್ವ.....' ಎಂಬ ೧೩೩ನೆಯ ಸೂತ್ರಕ್ಕೆ ಕಿಟೆಲ್ ಅವರು 'ಅನುಕ್ತಸೂತ್ರವೆಂದು' ಕರೆದು 'A sutra not uttered by the author himself' ಎಂದು ಹೇಳಿದುದನ್ನೂ ಇಲ್ಲಿ ಗಮನಿಸಬೇಕು.

ಪಾಠಸಂಗ್ರಹ :

ಲಿಪಿಕಾರರು, ಪಂಡಿತವಾಚಕರು ಕಾರಣವಾಗಿ ಒಂದು ಕೃತಿಗೆ ಭಿನ್ನಪಾಠಗಳು ಬೆಳೆಯುತ್ತ ಹೋಗುತ್ತವೆ. ಆ ಕೃತಿಯ ಪ್ರಾಮಾಣಿಕ ಅಭ್ಯಾಸ ಮಾಡಬಯಸುವ ಸಹೃದಯರು, ಬೇರೆ ಬೇರೆ ಪ್ರತಿಗಳಲ್ಲಿ ಸಿಗುವ ಇಂಥ ಎಲ್ಲ ಭಿನ್ನಪಾಠಗಳನ್ನು ಅವಲೋಕಿಸಬೇಕಾಗುತ್ತದೆ. ಟೀಕೆ, ವ್ಯಾಖ್ಯಾನ ಬರೆಯುವ ವಿದ್ವಾಂಸರಿಗಂತೂ ಇದು ಅತ್ಯವಶ್ಯ.

ದೇವರಾಜ ಯಜ್ವನ್‌ನು ಯಾಸ್ಕನ ನಿಘಂಟುವಿಗೆ ವ್ಯಾಖ್ಯಾನವನ್ನು ಬರೆಯುತ್ತ "ಶ್ರೀ ವೆಂಟಾಚಾರ್ಯತನಸ್ಯ ಮಾಧವಸ್ಯ ಭಾಷ್ಯಕೃತೌ ನಾಮಾನು ಕ್ರಮಣ್ಯಾ ಆಖ್ಯಾತಾನುಕ್ರಮಣ್ಯಾ ಸ್ವರಾನುಕ್ರಮಣ್ಯಾ ನಿಪಾತಾನುಕ್ರಮಣ್ಯಾ ನಿಬಂಧಾನುಕ್ರಮಣ್ಯಾಸ್ತದೀಯಸ್ಯ ಭಾಷ್ಯಸ್ಯ ಚ ಬಹುಶಃ ಪರ್ಯ್ಯಾಲೋಚನಾತ್ ಬಹುದೇಶ ಸಮಾನೀತಾನ್ ಬಹುಕೋಶ ನಿರೀಕ್ಷಣಾಚ್ಚ ಪಾಠಃ ಸಂಶೋಧಿತಃ'[೪೪] ಅಂದರೆ ವೆಂಕಟಾಚಾರ್ಯರ ಮಗ ಮಾಧವನು ಭಾಷ್ಯ ಬರೆಯುವಾಗ ನಾಮ, ಆಖ್ಯಾತ, ಸ್ವರ, ನಿಪಾತ, ನಿಬಂಧ ಇವುಗಳ ಅನುಕ್ರಮಣಿಕೆಯನ್ನು ಸಿದ್ಧಗೊಳಿಸುವಲ್ಲಿ ಬೇರೆ ಬೇರೆ ಪ್ರಾಂತಗಳ ಹಸ್ತಪ್ರತಿಗಳನ್ನು ಸರಿಯಾಗಿ ಸಮಾಲೋಚಿಸಿ, ಅನೇಕ ಕೋಶಗಳಿಂದ ಪರೀಕ್ಷಿಸಿ, ಶುದ್ಧವಾದ ಪಾಠವನ್ನು ಸಂಶೋಧಿಸಿದನು – ಎಂದು ಹೇಳಿರುವನು.

೧೭ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ನೀಲಕಂಠನು ಮಹಾಭಾರತಕ್ಕೆ 'ಭಾರತ ಭಾವದೀಪ' ಹೆಸರಿನ ವ್ಯಾಖ್ಯಾನವನ್ನು ಬರೆಯುತ್ತ

ಬಹೂನ್ ಸಮಾಹೃತ್ಯ ವಿಭಿನ್ನದೇಶಾನ್ಕೋಶಾನ್ವಿನಿಶ್ಚಿತ್ಯ ಚ ಪಾಠಮಧ್ಯಮ್ ।

ಪ್ರಾಚಾಂ ಗುರೂಣಾಮನುಸೃತ್ಯ ವಾಚಮಾರಭ್ಯತೇ ಭಾರತ ಭಾವದೀಪಃ ॥[೪೫]

ಎಂದು ಹೇಳಿದುದು ಗಮನಾರ್ಹವಾಗಿದೆ. ಬೇರೆ ಬೇರೆ ಪ್ರಾಂತಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅನೇಕ ಕೋಶಗಳ ಸಹಾಯದಿಂದ ಪಾಠಗಳನ್ನು ನಿಶ್ಚಯಿಸಿ, ಪೂರ್ವ ಗುರುಪರಂಪರೆಗೆ ಅನುಸಾರವಾಗಿ, "ಭಾರತ ಭಾವದೀಪ" ಗ್ರಂಥವನ್ನು ಪ್ರಾರಂಭಿಸುತ್ತೇನೆ ಎಂದು ಇದರ ಅರ್ಥ. ಪ್ರಾಚೀನ ಭಾರತೀಯರು ಭಿನ್ನಪಾಠಗಳನ್ನು ಸಂಗ್ರಹಿಸುತ್ತಿದ್ದುದಕ್ಕೆ ನಿದರ್ಶನವಿದು. ಈ ಪ್ರವೃತ್ತಿ ಕನ್ನಡಿಗರಲ್ಲಿಯೂ ಕಂಡುಬರುತ್ತದೆ.

ಪ್ರೊ. ಕುಂದಣಗಾರರು, ಆದಿಪುರಾಣ ಪರಿಷ್ಕರಣಕಾರ್ಯಕ್ಕೆ ಉಪಯೋಗಿಸಿದ ಮೂಡಬಿದರೆ ಹಸ್ತಪ್ರತಿಗಳನ್ನು ಕುರಿತು "ಪ್ರತಿ ಓಲೆಯ ಮಾರ್ಜನ್ನಿನಲ್ಲಿ ಪಾಠಾಂತರಗಳೂ ಶಬ್ದಾರ್ಥಗಳೂ ಕೊಡಲಾಗಿರುವುದರಿಂದ ...."[೪೬] ಎಂದು ಮುಂತಾಗಿ ಹೇಳಿರುವರು.

---

೪೪. ಕಗ್ರಸಂ ೭

೪೫. ಕಗ್ರಸಂ ೧೦

೪೬. ಆದಿಪು. ಉಪೋದ್ಘಾತ ೧

ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರು ಶಬ್ದಮಣಿದರ್ಪಣಕ್ಕೆ ಬಳಸಿದ 'ಕ' ಪ್ರತಿಯನ್ನು ಕುರಿತು "ಕೆಲವು ಕಡೆಗಳಲ್ಲಿ ಇತರ ಪ್ರತಿಗಳ ಪಾಠವನ್ನು ಓಲೆಯ ಅಂಚಿನಲ್ಲಿ ಬರೆದಿರುವದು ಕಾಣುತ್ತದೆ"[೪೭] ಎಂದು ತಿಳಿಸಿರುವರು. ಈ ಪ್ರತಿಯಲ್ಲಿ ಕಂಡುಬರುವ "ತಳಿರಂತೆಂದು ಪಾಠಂ, ಬಲ್ಲಿದರೊಳರೆ ಎಂದು ಪಾಠಂ, ಕೆಂಪಲರ್ದುದು ಮಲರ್ಗೆ ಎಂದು ಪಾಠಾಂತರಂ, ಸತೃಣಾಭ್ಯವಹಾರಿಗಳೆಂದು ಪಾಠಂ"[೪೮] ಎಂಬ ಭಿನ್ನಪಾಠಗಳನ್ನು ಈ ಅಭ್ಯಾಸಿಯು ಒಂದು ಇಲ್ಲವೆ ಹಲವು ಹಸ್ತಪ್ರತಿಗಳಿಂದ ಗುರುತಿಸಿಕೊಂಡಿರುವನು. ಪಂಪಭಾರತದ ಆರಾ ಹಸ್ತಪ್ರತಿಯ ಪುಟ ಪುಟಗಳಲ್ಲಿಯೂ ಇಂಥ ಭಿನ್ನಪಾಠಗಳು ಕಂಡುಬರುತ್ತವೆ.[೪೯] ಹುಡುಕಿದರೆ ಭಿನ್ನಪಾಠಗಳನ್ನೊಳಗೊಂಡ ಅನೇಕ ಹಸ್ತಪ್ರತಿಗಳು ಅಲ್ಲಲ್ಲಿ ಸಿಗಬಹುದಾಗಿದೆ. ಇದು ಪ್ರಾಚೀನ ಕನ್ನಡಿಗರಿಗಿದ್ದ ಭಿನ್ನಪಾಠ ಮತ್ತು ಅವುಗಳ ಸಂಗ್ರಹಪ್ರಜ್ಞೆಯ ಗುರುತು.

ಪಾಠನಿರ್ಣಯ :

ಹಲವು ಬಗೆಗಳಲ್ಲಿ ಕಂಡುಬರುವ ಪಾಠಗಳನ್ನು ಸಂಗ್ರಹಿಸಿ ಅವುಗಳಲ್ಲಿ ಕವಿಪಾಠವನ್ನು, ಕೊನೆಯ ಪಕ್ಷ ಮೂಲಕ್ಕೆ ಸಮೀಪವಾದ ಇಲ್ಲವೆ ಅರ್ಥಕ್ಕೆ ಯೋಗ್ಯವಾದ ಪಾಠವನ್ನು ನಿರ್ಣಯಿಸುವುದು ಸಂಪಾದಕನ ಕರ್ತವ್ಯ.

ದೇವಗಿರಿ ಯಾದವರ ಮಂತ್ರಿಯಾಗಿದ್ದ ಹೇಮಾದ್ರಿಯು (ಕ್ರಿ.ಶ. ೧೨೭೧–೧೩೦೯) ಅಷ್ಟಾಂಗಹೃದಯ ಎಂಬ ವೈದ್ಯಗ್ರಂಥಕ್ಕೆ 'ಆಯುರ್ವೇದ ರಸಾಯನ' ಎಂಬ ವ್ಯಾಖ್ಯಾನವನ್ನು ಬರೆಯುವಲ್ಲಿ ಅವನಿಗೆ "ಕಟೂಷ್ಣೋ ವಾತಕಫಹಾ ಪಿಂಡಾಲುಃ ಪಿತ್ತವರ್ಧನಃ" ಎಂಬ ವಾಕ್ಯದ 'ಪಿಂಡಾಲುಃ" ಪದಕ್ಕೆ 'ವಕ್ಟಾಲುಃ' ಎಂಬ ಬೇರೊಂದು ಪಾಠ ಎದುರಾಗಿದೆ. ಆಗ ಪಿಂಡಾಲು ಮತ್ತು ವಕ್ಟಾಲು ಎಂಬಿವು ಒಂದು ಗಡ್ಡೆಗೆ ಇರುವ ಎರಡು ಹೆಸರುಗಳೆಂದು ಖಚಿತ ಮಾಡಿಕೊಂಡು 'ಪಿಂಡಾಲು' ಪದವನ್ನು ಸ್ವೀಕರಿಸಿರುವನು. ಹೀಗೆ ಖಚಿತ ಮಾಡಿಕೊಡುವಲ್ಲಿ "ಉಕ್ತಂ ಹಿ ಆಯುರ್ವೇದ ಪ್ರಕಾಶೇ ಪಂಡಿತ ಕೇಶವೇನ' ಎನ್ನುತ್ತ 'ವಾರಾಹೀಕಂದಃ ಪಿಂಡಾಲುಸ್ತಥಾ ಶಾಬರ ಕಂದಕಃ । ಪ್ರೋಕ್ತೋ ಮೂಲಕ ಮೂಲಾಭೋ ವಕ್ಟಾಲುಸ್ತ್ವಕ್ಛದಸ್ತಥಾ" ಎಂಬ ಮಾತನ್ನು ಉದ್ಧರಿಸಿ ಹೇಳಿರುವನು.[೫೦]

ಮೇಘದೂತದ "ವೇಣಿಭೂತಪ್ರತನುಸಲಿಲಾ ಸಾವತೀತಸ್ಯ ಸಿಂಧುಃ" (ಪೂರ್ವ ೨೯) ಎಂಬ ಪದ್ಯಭಾಗಕ್ಕೆ 'ಸಲಿಲಾಂ ತಾಮತೀತಸ್ಯ ಸಿಂಧುಂ' ಎಂಬ ಪಾಠವಿದೆ. ಈಗ "ತಾಮತೀತಸ್ಯ ಇತಿ ಪಾಠಮಾಶ್ರಿತ್ಯ ಸಿಂಧುರ್ನಾಮ ನದ್ಯಂತರಮಿತಿ ವ್ಯಾಖ್ಯಾತಂ; ಕಿಂತು ಸಿಂಧುರ್ನಾಮ ಕಶ್ಚಿನ್ನದಃ ಕಾಶ್ಮೀರ ದೇಶೇಸ್ತಿ; ನದೀತು ಕುತ್ರಾಪಿ ನಾಸ್ತೀತ್ಯಪೇಕ್ಷ್ಯಮಿತ್ಯಾಚಕ್ಷತೇ" ಎಂದು ನುಡಿದು, ತಾನು ಗ್ರಹಿಸಿದ ಪಾಠಾಂತರವನ್ನು ಸಮರ್ಥಿಸಿಕೊಂಡಿರುವನು.[೫೧]

---

೪೭. ಶಮದ ಪ್ರಸ್ತಾವನೆ XII (೧೯೬೪)

೪೮. ಶಮದ (೧೯೬೪) ಸೂ ೩೪, ೫೫, ೭೦.

೪೯. ಪಂಭಾ. ಉಪೋದ್ಘಾತ ೧೦–೧೩

೫೦. Woolner Commemoration volume, P.106-108 ("Textual Criticism in the thirteenth Century"-by P.K.Gode)

ಒಂದು ಗ್ರಂಥವನ್ನು ಅಭ್ಯಸಿಸುವವನಿಗಿಂತ, ಟೀಕೆ ಬರೆಯುವವನ ಹೊಣೆ ಗುರುತರವಾದುದು. ಕವಿಪಾಠವನ್ನು ನಿರ್ಣಯಿಸದೆ ಬರೆದ ಟೀಕೆಗೆ ಯಾವುದೋ ಒಂದು ಹಸ್ತಪ್ರತಿಗೆ ಬರೆದ ಟೀಕೆಯೆಂಬ ಬೆಲೆಯೇ ಹೊರತು ಮೂಲಗ್ರಂಥಕ್ಕೆ ಬರೆದ ಟೀಕೆಯೆಂಬ ಬೆಲೆ ಸಲ್ಲದು. ಇದಲ್ಲದೆ ವ್ಯಾಕರಣ ಛಂದಸ್ಸುಗಳ ತಪ್ಪು ಪಾಠಕ್ಕೆ ಬರೆದ ಟೀಕೆ ನಂಬಿಸಿ ಅಡ್ಡದಾರಿ ತೋರಿದರೆ, ಓಷಧಶಾಸ್ತ್ರದ ತಪ್ಪು ಪಾಠಕ್ಕೆ ಬರೆದ ಟೀಕೆ ಪ್ರಾಣವನ್ನೇ ತೆಗೆದುಕೊಳ್ಳುತ್ತದೆ. ಈ ಅಂಶವನ್ನು ಮನಗಂಡ ನಿಟ್ಟೂರ ನಂಜಯ್ಯನು ಶುದ್ಧಪಾಠವನ್ನು ನಿರ್ಣಯಿಸಿ ಟೀಕೆ ಬರೆಯಬೇಕೆಂಬ ಆಶೆಯಿಂದ ದರ್ಪಣದ ಹಲವು ಪ್ರತಿಗಳನ್ನು ಸಂಗ್ರಹಿಸಿದಂತಿದೆ. ಸೂ ೧೧೦ಲಕ್ಕೆ ಟೀಕೆ ಬರೆಯುತ್ತ "ಮುಂದರಕ್ಕುಮತ್ವಾಂತ ಲಿಂಗದೊಳ್ವಿಧಿಲೋಪಂ ಎಂದು ಪಾಠಾಂತರಂ" ಎಂದು ಈ ವರೆಗೆ ಯಾವ ಹಸ್ತಪ್ರತಿಯಲ್ಲಿಯೂ ಸಿಗದ ಭಿನ್ನಪಾಠವನ್ನು ಸೂಚಿಸಿದುದು ಈ ಮಾತಿಗೆ ಸಾಕ್ಷಿ.

ಇನ್ನು ವೀರಶೈವರಲ್ಲಿ ಸಂಕಲನಸಾಹಿತ್ಯ ಹುಲುಸಾಗಿ ಬೆಳೆದಿದೆ. ಇದು ವಚನಗಳ ಒಡಲಿನಿಂದ ಸಂಗ್ರಹ ಮತ್ತು ಸಂಪಾದನ ತತ್ವದಲ್ಲಿ ಅರಳಿದ ವಿಶಿಷ್ಟ ಸಾಹಿತ್ಯ. ಸಿಂಗಿರಾಜಪುರಾಣದಲ್ಲಿಯು ಪ್ರಭುಸಂಪಾದನೆ, ಕ್ರಿಯಾಸಂಪಾದನೆ, ಸರ್ವಪುರಾತನರ ವಚನಗಳ ಕಟ್ಟಿನಲ್ಲಿಯ ಪ್ರಭುದೇವ-ಚನ್ನಬಸವಣ್ಣನವರ ಸಂಪಾದನೆ, ಮೋಳಿಗಯ್ಯಗಳ ಸಂಪಾದನೆಗಳಲ್ಲಿ ಸುಳಿಬಿಚ್ಚಿ; ಪ್ರಸಾದಿ ಮಹಾದೇವಯ್ಯ, ಕೆಂಚವೀರಣ್ಣೊಡೆಯ, ಗುಮ್ಮಳಾಪುರ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣರಲ್ಲಿ ತೆನೆತುಂಬಿದ ಶೂನ್ಯಸಂಪಾದನಾ ಕೃತಿಗಳೂ, ಲಿಂಗಲೀಲಾವಿಲಾಸ ಚಾರಿತ್ರ, ವಿಶೇಷಾನುಭವ ಷಟ್ಸ್ಥಲ, ಚಿದೈಶ್ವರ್ಯ ಚಿದಾಭರಣ, ಲಿಂಗಚಿದಮೃತ ಬೋಧೆ, ಏಕೋತ್ತರ ಶತಸ್ಥಲ, ಗಣಭಾಷಿತ ರತ್ನಮಾಲೆ, ಪರಮ ಮೂಲಜ್ಞಾನ ಷಟ್‌ಸ್ಥಲ ಇತ್ಯಾದಿ ಇನ್ನೊಂದು ರೀತಿಯ ಸಂಪಾದನಗ್ರಂಥಗಳೂ, ಬ್ರಹ್ಮಾದ್ವೈತಸಿದ್ಧಾಂತ ಷಟ್‌ಸ್ಥಲಾಭರಣ, ವೀರಶೈವ ಚಿಂತಾಮಣಿ, ಗಣವಚನ ರತ್ನಾವಳಿ, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು, ವೀರಶೈವ ಸಾರೋದ್ಧಾರ ಸಂಪಾದನೆಯ ವಚನ, ಅನುಭವ ಜ್ಞಾನಸಾರಾಮೃತ ಸಂಪಾದನ ಸ್ತೋತ್ರದ ವಚನಗಳು, ಮುಕ್ತಿಕಂಠಾಭರಣ, ಷಟ್ ಪ್ರಕಾರ ಸಂಗ್ರಹ, ಅದ್ವೈತಾನಂದದ ವಚನ, ಪ್ರಸಾದಿಸ್ಥಲದ ವಚನ, ಮಿಶ್ರಸ್ತೋತ್ರದ ವಚನ, ಶಿವಮಹಿಮಾಸ್ತೋತ್ರದ ವಚನ, ಅಷ್ಟಾವರಣ ಸ್ತೋತ್ರದ ವಚನ, ಲಿಂಗವಿಕಳಾವಸ್ಥೆಯ ವಚನ, ಆಚರಣೆಯ ವಚನ, ಸಂಬಂಧದ ವಚನ, ಆಚರಣೆಯ ಸಂಬಂಧದ ವಚನಗಳೆಂಬ ಬೇರೊಂದು ರೀತಿಯ ಸಂಪಾದನೆಗಳೂ, ಸರ್ವಪುರಾತನರ ವಚನ, ಸರ್ವಪುರಾತನರ ಬೆಡಗಿನ ವಚನ, ಸರ್ವಪುರಾತನರ ಕಾಲಜ್ಞಾನ ವಚನ, ಸೃಷ್ಟಿಯ ವಚನ, ವಚನಸಾರಗಳೆಂಬ ವಚನಸಂಗ್ರಹ ಗ್ರಂಥಗಳೂ ಕಲ್ಯಾಣಕ್ರಾಂತಿಗೆ ೩೦೦ ವರುಷಗಳ ತರುವಾಯ ವಿಶೇಷವಾಗಿ ಬೆಳೆದವು. ಈ ಅವಧಿಯಲ್ಲಿ ವಚನಗಳಿಗೆ ಭಿನ್ನಪಾಠ, ನಷ್ಟಸ್ಥಿತಿಯುಂಟಾಗಿರುವದು ಸಹಜ. ಇಂಥ ಪರಿಸ್ಥಿತಿಯಲ್ಲಿ ನೂರು ಕಡೆಗಳಿಂದ ವಚನಕಟ್ಟುಗಳನ್ನು ಸಂಗ್ರಹಿಸುವುದು, ಆ ಕಟ್ಟುಗಳಿಂದ ಉಚಿತ ವಚನಗಳನ್ನು ಆಯ್ದುಕೊಳ್ಳುವುದು, ಬಹುಶಃ ಆಯ್ದುಕೊಂಡ ವಚನಗಳ ಪಾಠಶುದ್ಧಿಯನ್ನು ಪರೀಕ್ಷಿಸುವುದು ಮತ್ತು ಒಂದು ತತ್ವದ ತಳಗಟ್ಟಿನಲ್ಲಿ ಹೊಂದಿಸುವುದು-ಈ ಎಲ್ಲ ಕಾರ್ಯಗಳು ಆಧುನಿಕ ಗ್ರಂಥಸಂಪಾದಕನ ಶ್ರಮ, ಧೋರಣೆಗಳನ್ನು ಕೆಲಮಟ್ಟಿಗೆ ಹೋಲುತ್ತವೆ.[೫೨]

---

೫೧. ಕ ಗ್ರ ಸಂ ೯.

೫೨. ಚನ್ನಪ್ಪ ಉತ್ತಂಗಿಯವರು ಮುಕ್ತಕವಾಗಿದ್ದ ಸರ್ವಜ್ಞನ ವಚನಗಳನ್ನು ಸಂಪಾದಿಸಿದಂತೆ ಇವರು ಶರಣರ ವಚನಗಳನ್ನು ಸಂಪಾದಿಸಿರುವರೆಂದು ಊಹಿಸಿಕೊಳ್ಳಬಹುದು.

ಆದರೆ ಈ ಕಾರ್ಯದಲ್ಲಿ ಇವರು ಅನುಸರಿಸಿದ ವಿಧಾನ ಮುಂತಾದ ಅಂಶಗಳು ತಿಳಿದು ಬಂದಿದ್ದರೆ ಜಾಗತಿಕ ಗ್ರಂಥಸಂಪಾದನ ಶಾಸ್ತ್ರಕ್ಕೆ ವೀರಶೈವರದು ದೊಡ್ಡ ಕೊಡುಗೆಯಾಗುತ್ತಿತ್ತು. ಅದು ತಿಳಿದುಬಾರದ ಕಾರಣ ಜಾಗತಿಕ ಗ್ರಂಥಸಂಪಾದನ ಕ್ಷೇತ್ರಕ್ಕೆ ಇವರ ಕೊಡುಗೆ "ಹೆಸರಿಡಬಾರದ ಹೆಸರು" ಎಂಬ ರೀತಿಯಲ್ಲಿ ಸಂದಿದೆ ಎನ್ನಬಹುದು. ೧೫ನೆಯ ಶತಮಾನದ ತರುವಾಯ ಈ ವೀರಶೈವ ಸಂಪಾದನಕಾರ್ಯ ಕಾಯಕದ ಮಟ್ಟಕ್ಕೇರಿ "ಸಂಪಾದನ ಸಮಯ" ಎಂಬ ಹೆಸರಿನಲ್ಲಿ ವಂಶಪಾರಂಪರ್ಯವಾಗಿ ಈ ರೀತಿ ಬೆಳೆದು ಬಂದಿತು.

ತೋಂಟದ ಸಿದ್ಧಲಿಂಗ[೫೩]
|
ಬೋಳಬಸವ
|
ಸಂಪಾದನೆಯ (ಹರತಾಳ) ಚೆನ್ನಂಜೆದೇವ
|

ಸಂಪಾದನೆಯ ಪರ್ವತೇಂದ್ರ	ಸಂಪಾದನೆಯ (ಎಳೆಮಲೆಯ) ಗುರುಶಾಂತೇಶ
ಸಂಪಾದನೆಯ ವಿರಕ್ತ ತೋಂಟದಾರ್ಯ	ಸಂಪಾದನೆಯ ಸಿದ್ಧವೀರಣಾಚಾರ್ಯ
ಸಂಪಾದನೆಯ ಬೋಳಬಸವ	ಸಂಪಾದನೆಯ ಚೆನ್ನಮಲ್ಲಿಕಾರ್ಜುನದೇವ
ಸಂಪಾದನೆಯ ಗುರುಲಿಂಗದೇವ	ಸಂಪಾದನೆಯ ಪರ್ವತೇಶ

ಈ ಪರಂಪರೆ ಪ್ರಾಚೀನ ಇಜಿಪ್ತದ ಸುಪ್ರಸಿದ್ಧ ಗ್ರಂಥಸಂಪಾದಕರಾದ ಜೀನೋಡೋಟಸ್, ಶಿಷ್ಯ ಅರಿಸ್ಟೋಫೇನಿಸ್, ಶಿಷ್ಯ ಅರಿಷ್ಟಾರ್ಕಸ್ ಎಂಬ ಗುರು-ಶಿಷ್ಯ ಪರಂಪರೆಯನ್ನು,[೫೪] ವೀರಶೈವ ಓಲೆಯ ಮಠ, ಸಂಪಾದನ ಸಮಯದ ಮಠಗಳು ಗ್ರಂಥಲೇಖನ ಚಟುವಟಿಕೆಯಲ್ಲಿ ತೊಡಗಿದ್ದ ಪ್ರಾಚೀನ ಬಿಜಾಂಟಿಯಂ ಪ್ರದೇಶದ ಕ್ರೈಸ್ತಮಠಗಳನ್ನು[೫೫] ನೆನಪಿಗೆ ತರುತ್ತವೆ. ಇವರಲ್ಲದೆ

---

೫೩. ಈ ವಂಶಾವಳಿಯನ್ನು ಹಲವು ಮೂಲಗಳಿಂದ ರಚಿಸಲಾಗಿದೆ.

೫೪. ಕ ಗ್ರ ಸಂ ೧೪-೧೫-೧೬

೫೫. ಕ ಗ್ರ ಸಂ ೨೦-೨೧

"ಸಂಪಾದನೆಯ ಸಣ್ಣಬರಹದ ಗುರುಬಸವರಾಜದೇವರು ಸೇರಿಸಿದ ಶರಣ ಚಾರಿತ್ರ್ಯದ ವಚನ"[೫೬]

"ಸಂಪಾದನೆಯ ಕೆಂಪಿನ ಚೆನ್ನವೀರಸ್ವಾಮಿಗೆ ಮೂರುಸಾವಿರ ಬಿರುದು ಮುಗಿಯಿತ್ತು."[೫೭]

"ಸಂಪಾದನೆಯ ಮುದೆಯ (ಮುದ್ದಯ್ಯ ?) ಸೇರಿಸಿದ ಆಚರಣ ಸಂಬಂಧದ ವಚನ."[೫೮]

ಇತ್ಯಾದಿ ಉಲ್ಲೇಖಗಳು ವೀರಶೈವ ಸಂಪಾದನಕಾರ್ಯ ತಲೆಮಾರಿನಿಂದ ತಲೆಮಾರಿಗೆ ನೂರು ಮುಖಗಳಲ್ಲಿ ಮುನ್ನಡೆದುದನ್ನು ತಿಳಿಸಿಕೊಡುತ್ತವೆ. ಇಷ್ಟು ವಿಸ್ತಾರವಾಗಿ ವೈವಿಧ್ಯಮಯವಾಗಿ, ಸುದೀರ್ಘಕಾಲ ವಚನ ಸಂಗ್ರಹ ಮತ್ತು ಸಂಪಾದನಕಾರ್ಯ ಕೈಕೊಂಡ, ಸಂಪಾದನಶಾಸ್ತ್ರ ರಚನೆಗೆ ಬೇಕಾಗುವ ವಿಪುಲ ಸಾಮಗ್ರಿಯನ್ನೊಳಗೊಂಡ ಇವರು ಮನಸ್ಸು ಮಾಡಿದ್ದರೆ ಗ್ರಂಥಸಂಪಾದನೆಯ ಸರ್ವಸಾಮಾನ್ಯ ತತ್ವಗಳನ್ನು ರೂಪಿಸಿ, ಅದನ್ನು ಒಂದು ಶಾಸ್ತ್ರಮಟ್ಟಕ್ಕೆ ತರಲು ಸಾಧ್ಯವಿತ್ತು. ಆದರೆ ಇವರು ಸಂಪಾದನಕಾರ್ಯ ಮಾಡಿದರೇ ಹೊರತು, ಕಾರ್ಯವಿಧಾನಗಳನ್ನು ಬರೆದಿಡಲಿಲ್ಲ. ಹೀಗಾಗಿ ಈ ವಿಧಾನಗಳನ್ನು ನಮ್ಮ ದೇಶದಲ್ಲಿ ಪ್ರಯೋಗಿಸಿ ತೋರಿಸಿದ ಪ್ರಥಮಕೀರ್ತಿ ಪಶ್ಚಿಮ ಪಂಡಿತರಿಗೆ ಸಲ್ಲಬೇಕಾಯಿತು.

ಆಧುನಿಕ ಇತಿಹಾಸ

ಭಾರತದ ಇತರ ಪ್ರಾಂತಗಳಂತೆ ಪಾಶ್ಚಿಮಾತ್ಯರು ಕರ್ನಾಟಕದಲ್ಲಿಯೂ ಹಸ್ತಪ್ರತಿ ಸಂಗ್ರಹ ಮತ್ತು ಗ್ರಂಥಪರಿಷ್ಕರಣ ಕಾರ್ಯಗಳನ್ನು ಏಕಕಾಲಕ್ಕೆ ನಡೆಸಿಕೊಂಡು ಬಂದರು. ಆದುದರಿಂದ ಗ್ರಂಥಸಂಪಾದನೆಯ ಇತಿಹಾಸ ಪ್ರಸಂಗದಲ್ಲಿ ಈ ಎರಡರ ಇತಿಹಾಸವನ್ನು ಅವಲೋಕಿಸಬೇಕಾಗುತ್ತದೆ.

ಹಸ್ತಪ್ರತಿ ಸಂಗ್ರಹ :

ಕನ್ನಡ ಹಸ್ತಪ್ರತಿಗಳ ಸಂಗ್ರಹಕಾರ್ಯವನ್ನು ಕೈಕೊಂಡ ಪ್ರಥಮವ್ಯಕ್ತಿ ಕರ್ನಲ್ ಮೆಕೆಂಝಿ. ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಹುದ್ದೆಗಳನ್ನು ವಹಿಸಿಕೊಂಡು ದುಡಿದ, ಈತನ ಪ್ರಾಚೀನವಸ್ತು ಮತ್ತು ಪ್ರಾಚೀನಗ್ರಂಥ ಸಂಗ್ರಹ ವೈವಿಧ್ಯಮವಾಗಿತ್ತು. ೧೪ ಭಾಷೆ, ೧೭ ಲಿಪಿಗಳಲ್ಲಿ ಬರೆಯಲ್ಪಟ್ಟ ಹಲವಾರು ವಿಷಯಗಳ ಗ್ರಂಥ ಮತ್ತು ಶಾಸನಗಳಲ್ಲದೆ ವಿಗ್ರಹ, ನಾಣ್ಯ, ಭೂಪಟಗಳನ್ನೊಳಗೊಂಡ ಈತನ ಸಂಗ್ರಹ ಸಂಪತ್ತು ೧೮೨೩, ೧೮೨೫ ಮತ್ತು ಇನ್ನೊಮ್ಮೆ ಹೀಗೆ ಮೂರು ಸಲ ಮದ್ರಾಸ ಬಂದರದಿಂದ ಇಂಗ್ಲೆಂಡಕ್ಕೆ ಹೋಯಿತು.[೫೯] ಅಳಿದುಳಿದ ಸಂಪತ್ತು

---

೫೬. ಧಾ.ವ.ಭಾಂ. ೩೨೩B '(ಸಣ್ಣ ಬರಹದ ಗುರುಬಸವರಾಜದೇವರ ಶ್ರೀಪಾದ ಕಟಾಕ್ಷದಿಂದ ಶಿವಲಿಂಗದೇವರಿಗೆ ಟೀಕು'. ಧಾ.ವ.ಭಾಂ. ೩೨೮. ಈ ಮಾತನ್ನು ಗಮನಿಸಬಹುದು.)

೫೭. ಚೆ.ಬ.ವ. ಮುನ್ನುಡಿ ೧೬

೫೮. ಹೈ.ಹ.ಸೂ. ೭. ಆಚರಣೆ ಸಂಬಂಧದ ವಚನ

೫೯. Mackenzie Collection, A descriptive Catalogue of the oriental manuscripts-by H.H.Wilson Vol. I. 1828.

ಎಂದರೆ ಬೇರೆ ಬೇರೆ ಭಾಷೆಗೆ ಸೇರಿದ ಸುಮಾರು ೮೦೦೦ ಗ್ರಂಥಗಳು ೧೮೨೮ರಲ್ಲಿ ಮದ್ರಾಸ ಪ್ರೆಸಿಡೆನ್ಸಿ ಕಾಲೇಜ ಲೈಬ್ರರಿಯನ್ನು ಸೇರಿದುವು. ತರುವಾಯ ೧೮೫೮ ರಲ್ಲಿ ಸ್ಥಾಪನೆಗೊಂಡ ಗವರ್ನ್ಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ ಲೈಬ್ರರಿಯ ವಶಕ್ಕೆ ಹೋಯಿತು. ಇವುಗಳಲ್ಲಿ ಕನ್ನಡ ಗ್ರಂಥಗಳು ಹಲವು ನೂರು.[೬೦] ಈ ಸಂಖ್ಯೆ ಸಿ.ಪಿ.ಬ್ರೌನ್, ಲೇಡನ್ ಮೊದಲಾದವರಿಂದ ಬೆಳೆದು ೧೮೪೦ನ್ನು ಮುಟ್ಟಿತು. ಈ ಸಂಸ್ಥೆಯಿಂದ ಪ್ರಕಟವಾದ ಕೆಳಗಣ ಗ್ರಂಥಸೂಚಿಗಳು ಈ ಹಸ್ತಪ್ರತಿಗಳ ವಿಷಯವನ್ನು ತಿಳಿಸಿಕೊಡುತ್ತವೆ.

1. Mackenzie collection, A descriptie catalogue of the oriental manuscripts-by H.H.Willson Vol. I. 1828.

2. Alphabetical index of Manuscripts in the Government Oriental manuscripts library Madras-(Sanskriti, Telugu, Tamil, Kanarese, Malayalam, Marathi, Uriya, Arabic, Persian and Hindustani) - 1893. ಇದರಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಮೂರು ಪ್ರಕರಣಗಳಿವೆ. ಒಂದು: ಶಿರೋನಾಮೆ ಸೂಚೀ, ಎರಡು: ವಿಷಯ ಸೂಚೀ, ಮೂರು: ಕೈಫಿಯತ್ತು ಇತ್ಯಾದಿ ಸೂಚೀ.

3. An alphabetical index of Kanarese manuscripts in the Government Oriental manucripts libratry Madras-೧೯೨೯, ಸಂಪಾದಕರು ಕುಪ್ಪುಸ್ವಾಮಿಶಾಸ್ತ್ರಿ. ೧೫೪೦ ಹಸ್ತಪ್ರತಿಗಳ ಶಿರೋನಾಮೆ ಸೂಚಿ ಇದು.

4. An alphabetical index of the Kannada manuscripts in the Government manucripts library Madras. Meckenzie collection-೧೯೫೨ ಸಂ: ಟಿ. ಚಂದ್ರಶೇಖರ.[೬೧]

5. A descriptive Cataloge of the Kannada Manuscripts in the Oriental Manucripts Library, Madras.

Volume i (ಹಸ್ತಪ್ರತಿ ೧–೧೩೮)–೧೯೩೪	ಸಂ: ಕುಪ್ಪುಸ್ವಾಮಿಶಾಸ್ತ್ರಿ
Volume ii (ಹಸ್ತಪ್ರತಿ ೧೩೯–೩೧೬)–೧೯೩೭	ಸಂ: ಕುಪ್ಪುಸ್ವಾಮಿಶಾಸ್ತ್ರಿ ಪಿ.ಪಿ.ಎಸ್.ಶಾಸ್ತ್ರಿ
Volume iii (ಹಸ್ತಪ್ರತಿ ೩೧೭–೪೭೬)–೧೯೩೯	ಪಿ.ಪಿ.ಎಸ್.ಶಾಸ್ತ್ರಿ
Volume iv (ಹಸ್ತಪ್ರತಿ ೪೭೭–೮೨೫)–೧೯೪೬	ಸಂ: ಎ.ಶಂಕರನ್

---

೬೦. ಮದ್ರಾಸ್ ಪ್ರಾಚ್ಯಗ್ರಂಥಶಾಲೆ. ಕ.ಸಾ.ಪ. ೧೧–೩

೬೧. ಇದರಲ್ಲಿ ಶಾಸನ ಕೈಫಿಯತ್ತುಗಳೇ ಅಧಿಕವಾಗಿವೆ.

Volume v (ಹಸ್ತಪ್ರತಿ ೮೨೬–೧೦೩೮)–೧೯೫೧ ಸಂ: ಟಿ.ಚಂದ್ರಶೇಖರನ್

Volume vi (ಹಸ್ತಪ್ರತಿ ೧೦೩೯–೧೨೬೧)–೧೯೫೨ ಸಂ: ಟಿ.ಚಂದ್ರಶೇಖರನ್

Volume vii (ಹಸ್ತಪ್ರತಿ ೧೨೬೨–೧೪೦೫)–೧೯೫೮ ಸಂ: ಟಿ.ಚಂದ್ರಶೇಖರನ್

ಹೀಗೆ ಮದ್ರಾಸ ಗವ್ಹರ್ನಮೆಂಟ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿಯಲ್ಲಿಯ ಹಸ್ತಪ್ರತಿಗಳ ಗ್ರಂಥಸೂಚಿಗಳು ಪ್ರಕಟವಾಗಿವೆ. ಇಷ್ಟು ಪರಿಪೂರ್ಣ ಗ್ರಂಥಸೂಚಿಗಳನ್ನು ಕರ್ನಾಟಕದ ಯಾವ ಮ್ಯಾನುಸ್ಕ್ರಿಪ್ಟ ಲೈಬ್ರರಿಗಳೂ ರಚಿಸಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕೆಲವು ವರ್ಷಗಳ ಹಿಂದೆ ಈ ಹಸ್ತಪ್ರತಿಗಳನ್ನು ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಹಂಚಿಕೊಡಲಾಯಿತು.

ಮೈಸೂರು ಸೀಮೆಯಲ್ಲಿ ಕನ್ನಡ ಹಸ್ತಪ್ರತಿಗಳ ಸಂಗ್ರಹಕಾರ್ಯವನ್ನು ವ್ಯವಸ್ಥಿತವಾಗಿ ಕೈಕೊಂಡುದು, ಕ್ರಿ.ಶ. ೧೮೮೪ರಲ್ಲಿ ಸ್ಥಾಪಿತವಾದ ಮೈಸೂರು ಸರ್ಕಾರ ಪುರಾತತ್ವ ಇಲಾಖೆ. ಈ ಸಂಸ್ಥೆಯ ಪ್ರಥಮ ಡೈರೆಕ್ಟರ್ ಬಿ.ಎಲ್.ರೈಸ್ ಅವರು ಕುದುರೆ ಸವಾರಿ ಮಾಡಿ, ಆ ಭಾಗವನ್ನೆಲ್ಲ ಸಂಚರಿಸಿ, ಹಸ್ತಪ್ರತಿಗಳನ್ನು ಸಂಗ್ರಹಿಸಿದರು. Annual Report of the Mysore Archaeological Departmentಗಳಲ್ಲಿ ಅವುಗಳ ಪರಿಚಯ ಪ್ರಕಟವಾಗತೊಡಗಿತು.

೧೮೯೧ರಲ್ಲಿ 'ಪುರಾತತ್ವ ಇಲಾಖೆ' ಮತ್ತು 'ಓರಿಯಂಟಲ್ ಲೈಬ್ರರಿ' ಪ್ರತ್ಯೇಕಗೊಂಡವು. ಈ ಓರಿಯಂಟಲ್ ಲೈಬ್ರರಿ ೧೯೨೩ರಲ್ಲಿ "ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ" (Mysore oriental Research institute) ಎಂಬ ಹೆಸರು ಹೊಂದಿ, ಮೈಸೂರು ವಿಶ್ವವಿದ್ಯಾಲಯದ ಒಂದು ಅಂಗವಾಗಿ ನಿಂತಿತು. ಈ ಸಂಸ್ಥೆಯ ಡೈರೆಕ್ಟರ್‌ರಾಗಿದ್ದ ಎ.ಮಹಾದೇವಶಾಸ್ತ್ರಿ, ಆರ್. ರಾಘವೇಂದ್ರಾಚಾರ್, ಆರ್.ಶಾಮಾಶಾಸ್ತ್ರಿ, ಡಿ.ಶ್ರೀನಿವಾಸಾಚಾರ್, ಶ್ರೀ ಎಂ.ಎಸ್.ಬಸವಲಿಂಗಯ್ಯ, ಶ್ರೀ ಎಚ್.ಆರ್.ರಂಗಸ್ವಾಮಿ ಅಯ್ಯಂಗಾರ್, ಶ್ರೀ ಎಚ್. ದೇವೀರಪ್ಪ ಮೊದಲಾದವರಿಂದ ಸಂಸ್ಕೃತ, ಉರ್ದು, ಪರ್ಶಿಯನ್ ಜೊತೆ ೩೦೦೦ ಕನ್ನಡ ಹಸ್ತಪ್ರತಿಗಳು ಇಲ್ಲಿ ಸಂಗ್ರಹವಾದವು. ಇವುಗಳ ಸೂಚಿ ನಿರ್ಮಾಣಕಾರ್ಯ ಹೀಗೆ ನಡೆದಿದೆ :

೧. ಮೈಸೂರು ಗೌರ್ನಮೆಂಟ ಓರಿಯಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರಹದ ಕರ್ಣಾಟಕ ಪುಸ್ತಕಗಳ ಪಟ್ಟಿ. (೧೯೨೧)

೨. ಮೈಸೂರು ಗೌರ್ನಮೆಂಟ ಓರಿಯಂಟಲ್ ಲೈಬ್ರರಿ ೧೯೨೨ ರಿಂದ ೧೯೨೯ರ ವರೆಗಿನ ಅವಧಿಯಲ್ಲಿ ಸಂಗ್ರಹಿಸಿದ ಅಚ್ಚಿನ ಮತ್ತು ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ (೧೯೩೦)

೩. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚಿ ೧೮೯೧–೧೯೫೧ರ ವರೆಗೆ (೧೯೫೫)

೪. ಮೈಸೂರು ಯುನಿವ್ಹರ್ಸಿಟಿ ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟದಲ್ಲಿ ೧೯೪೧ರಿಂದ ೧೯೫೪ರ ವರೆಗೆ ಸಂಗ್ರಹಿಸಿರುವ ಕೈಬರಹದ ಪುಸ್ತಕಗಳ ಪಟ್ಟಿ (೧೯೫೫)

೫. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ– ಸಂ.ಬಿ.ಎಸ್.ಸಣ್ಣಯ್ಯ.

ಪ್ರಥಮ ಸಂಪುಟ ಅ.ಚಾ ಹಸ್ತಪ್ರತಿ ೧–೪೯೭ (೧೯೬೨)

ದ್ವಿತೀಯ ಸಂಪುಟ ಚಿ–ಪ ಹಸ್ತಪ್ರತಿ ೪೯೮–೧೦೦೧(a) (೧೯೬೨)

ತೃತೀಯ ಸಂಪುಟ ಬ–ಲೋ ಹಸ್ತಪ್ರತಿ ೧೦೦೨–೧೫೧೫೫ (೧೯೬೩)

ಚತುರ್ಥ ಸಂಪುಟ ವ.ಹೋ ಹಸ್ತಪ್ರತಿ ೧೫೧೬–೨೦೬೩ (೧೯೬೩)

೧೯೫೪ರ ವರೆಗೆ ಸಂಗ್ರಹಿಸಿದ ಹಸ್ತಪ್ರತಿಗಳು ಸೂಚಿಗಳಿವು. ಈ ತರುವಾಯ ಈ ಸಂಸ್ಥೆಯ ಕನ್ನಡ ಹಸ್ತಪ್ರತಿಗಳು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟವು.[೬೨] ಅಲ್ಲಿಯೂ ಈ ಸೂಚಿಕಾರ್ಯ ಮುಂದುವರಿದು ೯ನೆಯ ಸಂಪುಟದ ವರೆಗೆ ಅವು ಪ್ರಕಟವಾಗಿವೆ.

೧೯೭೧ರಲ್ಲಿ ಅಸ್ತಿತ್ವಕ್ಕೆ ಬಂದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಹಸ್ತಪ್ರತಿ ಶಾಖೆ ಈ ವರೆಗೆ ಅದರ ನಿರ್ದೇಶಕರಾದ ಶ್ರೀ ಎಸ್.ಶಿವಣ್ಣ ಅವರ ಪ್ರಯತ್ನದಿಂದಾಗಿ ೧೫೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಈಗಾಗಲೇ ೪೪೯ ಕೃತಿಗಳ ಸೂಚಿ(೧೯೭೨)ಯೊಂದು ಪ್ರಕಟವಾಗಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸುಮಾರು ೨೦೦೦ ಕಟ್ಟುಗಳನ್ನು, ಮಂಗಳೂರ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸುಮಾರು ೩೦೦ ಕಟ್ಟುಗಳನ್ನು ಸಂಗ್ರಹಿಸಿವೆ.

ಇದಲ್ಲದೆ ಮೈಸೂರು ಅರಮನೆಯ ಗ್ರಂಥಭಾಂಢಾರದಲ್ಲಿಯ ೩೦೦ ಕನ್ನಡ ಹಸ್ತಪ್ರತಿಗಳ "A classified catalogue of Sanskrit and Kannada manuscripts in the Sarasvati Bhandaram (Palace Sanskrit Library) of H.H. the Maharaja of Mysore. Collection of 1900-1905" ಎಂಬ ಹೆಸರಿನ ಸೂಚಿ ಬಹುದಿನಗಳ ಹಿಂದೆ ಅಚ್ಚಾಗಿದೆ.[೬೩] ಆ ಮೇಲೆ "ದಿ ಲಿಸ್ಟ ಆಫ್ ದಿ ಅನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಪ್ಯಾಲೇಸ್ ಸಂಸ್ಕೃತಿ ಭಾಂಡಾರ" ಹೆಸರಿನಿಂದ ೧೦೩ ಹಸ್ತಪ್ರತಿಗಳ ಸೂಚಿಯೊಂದು ೧೯೪೩ರಲ್ಲಿ ಅಚ್ಚಾಗಿದೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಮೇಲುಕೋಟೆಯ ದಿ ಅಕಾಡೆಮಿ ಆಫ್ ಸಂಸ್ಕೃತ ರೀಸರ್ಚ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನಗಳಲ್ಲಿ ಕೆಲವು ಹಸ್ತಪ್ರತಿಗಳ ಸಂಗ್ರಹವಿದೆ.

ಶ್ರವಣಬೆಳ್ಗೊಳದ ಜೈನಮಠದಲ್ಲಿ ೫೮೪ ಹಸ್ತಪ್ರತಿಗಳಿವೆ. ದೇವಕುಮಾರ ಶಾಸ್ತ್ರೀ ಅವರು ಇವುಗಳ ಸೂಚಿ(೧೯೮೦)ಯನ್ನು ಪ್ರಕಟಿಸಿದ್ದಾರೆ. ಇತ್ತೀಚೆ (೧೯೯೧) ಶ್ರೀ ಎಸ್.ಶಿವಣ್ಣನವರು

---

೬೨. ಈಗ ಅಲ್ಲಿ ಸುಮಾರು ೪೦೦೦ ಕಟ್ಟುಗಳಿವೆ.

೬೩. ಈ ವಿಷಯವನ್ನು ತಿಳಿಸಿದ ಶ್ರೀ ಶಿವಣ್ಣನವರಿಗೆ ಕೃತಜ್ಞ.

ಚಿತ್ರದುರ್ಗದ ಶ್ರೀ ಮುರುಘಾಮಠದಲ್ಲಿರುವ ಹಸ್ತಪ್ರತಿಗಳ ಸೂಚಿಯನ್ನು “ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ-ಸಂಪುಟ-೧” ಹೆಸರಿನಿಂದ ಪ್ರಕಟಿಸಿದ್ದಾರೆ.

ವೈಯಕ್ತಿಕ ಸಂಗ್ರಹಗಳಲ್ಲಿ ಬಿ.ಶಿವಮೂರ್ತಿಶಾಸ್ತ್ರಿಗಳ ಸಂಗ್ರಹವು ಈಗ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸೇರಿ ಹೋಗಿದೆ. ಸಿ.ಮಹಾದೇವಪ್ಪ, ಪಿ.ಎಂ.ಗಿರಿರಾಜು ಮೊದಲಾದವರ ಸಂಗ್ರಹಗಳು ಇಲ್ಲಿ ಉಲ್ಲೇಖನಾರ್ಹವೆನಿಸಿವೆ. ಒಟ್ಟಿನಲ್ಲಿ ತುಂಗಭದ್ರೆಯ ದಕ್ಷಿಣಕ್ಕೆ ಹಸ್ತಪ್ರತಿ ಸಂಗ್ರಹಕಾರ್ಯ ಬಹುಮಟ್ಟಿಗೆ ತೃಪ್ತಿದಾಯಕವಾಗಿ ನಡೆದಿದೆ.

ತುಂಗಭದ್ರೆಯ ಉತ್ತರ ಅಂದರೆ ಹಳೆಯ ಮುಂಬೈ ಕರ್ನಾಟಕದಲ್ಲಿ ಈ ಕಾರ್ಯ ಕುಂಟುತ್ತ ಸಾಗಿದೆ. ಬೀಲರ್, ಭಂಡಾರಕರ, ಪೀಟರ್‌ಸನ್ ಮೊದಲಾದವರ ನೇತೃತ್ವದಲ್ಲಿ ಹಸ್ತಪ್ರತಿಸಂಗ್ರಹ ಕಾರ್ಯವನ್ನು ಆಗಿನ ಮುಂಬೈ ಸರಕಾರ ಕೈಕೊಂಡಿತು. ಇವರ ಗಮನವೆಲ್ಲ ಮುಖ್ಯವಾಗಿ ಸಂಸ್ಕೃತ, ಪ್ರಾಕೃತ, ಹಸ್ತಪ್ರತಿಗಳತ್ತ. ಆದರೂ ಅನ್ವೇಷಣೆಗೆ ಹತ್ತಿಕೊಂಡು ಬಂದ ಕೆಲವು ಕನ್ನಡ ಹಸ್ತಪ್ರತಿಗಳು ಭಂಡಾರಕರ ಸಂಶೋಧನ ಸಂಸ್ಥೆಯಲ್ಲಿ ಇರುವುದಾಗಿ ತಿಳಿದುಬಂದಿದೆ.[೬೪] ಡಾ. ಫ್ಲೀಟ್ ಅವರು ಆಗಿನ ಮುಂಬೈ ಕರ್ನಾಟಕದಲ್ಲಿ ಪುರಾತತ್ವ ಕ್ಷೇತ್ರದಲ್ಲಿ ದುಡಿದರೂ ಇವರ ಮುಖ್ಯ ಗುರಿ ಶಾಸನದತ್ತ. ಹೀಗಾಗಿ ಹಳ್ಳಿಪಳ್ಳಿಗಳಲ್ಲಿ ಸಿಗುತ್ತಿದ್ದ ಹಸ್ತಪ್ರತಿಗಳನ್ನು ಬಿಟ್ಟು, ಶಾಸನಗಳನ್ನು ಮಾತ್ರ ಸಂಗ್ರಹಿಸಿದರು. ೧೮೯೧ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘದ ಉದ್ದೇಶ ಸಾಂಸ್ಕೃತಿಕ ಚಟುವಟಿಕೆ, ೧೯೨೦ರಲ್ಲಿ ಸ್ಥಾಪಿತವಾದ ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ ಉದ್ದೇಶ ಇತಿಹಾಸ ರಚನೆ, ಹೀಗಾಗಿ ಉತ್ತರ ಕರ್ನಾಟಕದ ಈ ಹಳೆಯ ಸಂಸ್ಥೆಗಳಿಂದ ಹಸ್ತಪ್ರತಿ ಸಂಗ್ರಹಕಾರ್ಯ ನಡೆಯಲಿಲ್ಲ.

೧೯೩೯ರಲ್ಲಿ ಮುಂಬೈ ಸರಕಾರ ಪ್ರಾಚ್ಯವಸ್ತು ಸಂಗ್ರಹಕ್ಕಾಗಿ ಕನ್ನಡ ಸಂಶೋಧನ ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸಿತು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ ಭಾಗವಾಗಿ ನಿಂತ ಈ ಸಂಸ್ಥೆಯ ಮೂಲಕ ಹಸ್ತಪ್ರತಿ ಸಂಗ್ರಹಕಾರ್ಯ ಉದ್ದಿಷ್ಟವಾಗಿ ನಡೆಯಿತಾದರೂ ಇದರ ಡೈಯರೆಕ್ಟರರೆಲ್ಲ ಸಾಮಾನ್ಯವಾಗಿ ಇತಿಹಾಸ ಪ್ರಾಧ್ಯಾಪಕರು, ಇತಿಹಾಸದತ್ತ ಒಲವು ಇದ್ದವರು ಆಗಿದ್ದ ಕಾರಣ ಶಾಸನ, ವಿಗ್ರಹ, ನಾಣ್ಯ ಸಂಗ್ರಹಕಾರ್ಯ ಹೆಚ್ಚುಗೊಂಡು ಹಸ್ತಪ್ರತಿ ಸಂಗ್ರಹ ತೃಪ್ತಿಕರವಾಗಿ ನಡೆಯಲಿಲ್ಲ. ಈ ಸಂಸ್ಥೆ ಈ ವರೆಗೆ ೩೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. “A descriptive Catalogue of manuscripts in Kannada research institute, Dharwar” ಎಂಬ ಹೆಸರಿನ ಸೂಚಿಯನ್ನು ಹದಿಮೂರು ಸಂಪುಟದಲ್ಲಿ ಹೀಗೆ ಪ್ರಕಟಿಸಿದೆ.

i. ಹ.ಪ್ರ. ೧-೫೭ (೧೯೫೩) – ಆರ್.ಎಸ್.ಪಂಚಮುಖಿ, ಎ.ಎಂ.ಅಣ್ಣಿಗೇರಿ

ii. ಹ.ಪ್ರ. ೧-೪೪ (೧೯೫೫) – ಎಸ್.ಎಸ್.ಮಾಳವಾಡ, ಬಿ.ಎಸ್.ಕುಲಕರ್ಣಿ

iii. ಹ.ಪ್ರ. ೧-೪೮ (೧೯೫೭) – ಎ.ಎಂ.ಅಣ್ಣೀಗೇರಿ, ಎಸ್.ಬಿ.ಪುರೋಹಿತ

---

೬೪. ಪಂಪಭಾರತದ ಪರಿಷ್ಕರಣಕ್ಕೆ ಉಪಯೋಗಿಸಿದ ಒಂದು ಹಸ್ತಪ್ರತಿ ಈ ಸಂಸ್ಥೆಗೆ ಸಂಬಂಧಿಸಿದುದು.

iv. ಹ.ಪ್ರ. ೧–೮೦ (೧೯೬೪) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

v. ಹ.ಪ್ರ. ೧–೮೫ (೧೯೬೫) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

vi. ಹ.ಪ್ರ. ೧–೮೩ (೧೯೬೭) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

vii. ಹ.ಪ್ರ. ೧–೭೮ (೧೯೬೮) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

viii. ಹ.ಪ್ರ. ೧–೭೨ (೧೯೭೦) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

xi. ಹ.ಪ್ರ. ೧–೫೧ (೧೯೭೬) – ಬಿ.ಎಸ್.ಕುಲಕರ್ಣಿ, ಎಸ್.ಬಿ.ಪುರೋಹಿತ

x. ಹ.ಪ್ರ. ೧–೬೫ (೧೯೮೭) – ಬಿ.ಎಸ್.ಕುಲಕರ್ಣಿ

xi. ಹ.ಪ್ರ. ೧–೬೮ (೧೯೮೨) – ಬಿ.ಎಸ್.ಕುಲಕರ್ಣಿ

xii. ಹ.ಪ್ರ. ೧–೬೮ (೧೯೮೩) – ಬಿ.ಎಸ್.ಕುಲಕರ್ಣಿ

xiii. ಹ.ಪ್ರ. ೧–೮೨ (೧೯೯೨) – ಸಿ.ಎಸ್.ಕಡಕೋಳ, ಕೆ.ಪಿ.ಈರಣ್ಣ

ಒಟ್ಟು ೮೮೮ ಹಸ್ತಪ್ರತಿಗಳ ವಿವರಗಳನ್ನೊಳಗೊಂಡಿವೆ, ಈ ಸಂಪುಟಗಳು. ಈ ಸಂಸ್ಥೆಯ ಹಸ್ತಪ್ರತಿಗಳು ೧೯೯೨ರಲ್ಲಿ ಕನ್ನಡ ಅಧ್ಯಯನಪೀಠಕ್ಕೆ ವರ್ಗಾಯಿಸಲ್ಪಟ್ಟವು.

೧೮೮೩ರಲ್ಲಿ ಅಸ್ತಿತ್ವಕ್ಕೆ ಬಂದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಅಂಗವಾಗಿ ೧೯೨೯ರಲ್ಲಿ ಸಾಹಿತ್ಯಶಾಖೆ ಪ್ರಾರಂಭವಾಯಿತು. ಶಿ.ಶಿ.ಬಸವನಾಳ, ಹಾಲಭಾವಿ, ಬುದ್ಧಯ್ಯ ಪುರಾಣಿಕ, ಶಿ.ಚೆ.ನಂದಿಮಠ ಇವರ ಅಭಿರುಚಿ, ಪರಿಶ್ರಮ ಕರಣವಾಗಿ ನೂರಾರು ಹಸ್ತಪ್ರತಿಗಳು ಇಲ್ಲಿ ಸಂಗ್ರಹವಾದವು.[೬೫] ೧೯೦೮ ರಲ್ಲಿ ಸ್ಥಾಪನೆಗೊಂಡ ಶಿವಯೋಗಮಂದಿರದ "ವಿಜಯ ಮಹಾಂತೇಶ ಗ್ರಂಥಾಲಯ"ದಲ್ಲಿ ಹಲವು ವಿದ್ವಾಂಸರ ಪ್ರಯತ್ನದಿಂದ ಸುಮಾರು ೨೦೦೦ ಹಸ್ತಪ್ರತಿಗಳು ರಾಸಿಗೊಂಡವು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ೧೯೬೨ರಲ್ಲಿ ಅಸ್ತಿತ್ವಕ್ಕೆ ಬಂದ "ವಚನವಾಙ್ಮಯ ಸಂಶೋಧನ, ಸಂಸ್ಕರಣ ಮತ್ತು ಪ್ರಕಟನ ವಿಭಾಗ" ಈ ವರೆಗೆ ೪೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ೧೯೯೨ರಲ್ಲಿ ಸಂಪುಟ–೧, ೬, ೭, ೮, ೯, ೧೦ ಹೀಗೆ ಒಟ್ಟು ೬ ಹಸ್ತಪ್ರತಿ ಸೂಚಿಸಂಪುಟಗಳನ್ನು ಇದು ಪ್ರಕಟಿಸಿದೆ. ಗದುಗಿನ ತೋಂಟದಾರ್ಯ ಮಠದಲ್ಲಿ ೧೧೪೧ ಕೃತಿಗಳನ್ನೊಳಗೊಂಡ ೪೩೩ ಹಸ್ತಪ್ರತಿ ಕಟ್ಟುಗಳಿವೆ. ಇವುಗಳ ಸೂಚಿಯನ್ನು ಎಸ್.ಶಿವಣ್ಣ ಅವರು ೧೯೮೫ರಲ್ಲಿ ಪ್ರಕಟಿಸಿದ್ದಾರೆ.

ಈ ಭಾಗದ ವೈಯಕ್ತಿಕ ಸಂಗ್ರಹದ ಬಗ್ಗೆ ಹೆಸರಿಸಬೇಕಾದ ವ್ಯಕ್ತಿ ಡಾ. ಫ.ಗು.ಹಳಕಟ್ಟಿ, ಕ್ರಿ.ಶ. ೧೯೨೦ಕ್ಕೆ ಮೊದಲು ಸಂಗ್ರಹಕಾರ್ಯ ಕೈಕೊಂಡ ಇವರು ಕೂಡಿಸಿದ ಹಸ್ತಪ್ರತಿ ಸಂಖ್ಯೆ ೧೦೦೦ಕ್ಕೆ ಹೆಚ್ಚು. ಈ ಸಂಗ್ರಹ ಈಗ ಧಾರವಾಡದ "ವಚನ ವಾಙ್ಮಯ ಸಂಶೋಧನ, ಸಂಸ್ಕರಣ

---

೬೫. ಕೈಬರಹದ ಗ್ರಂಥಗಳ ಶೋಧನೆಯು. ಶಿವಾ ೭–೧

ಮತ್ತು ಪ್ರಕಟನ ವಿಭಾಗ"ಕ್ಕೆ ಸೇರಿದೆ. ಇಲ್ಲಿ ಹೆಸರಿಸಬೇಕಾದ ಇನ್ನೊಬ್ಬ ವಿದ್ವಾಂಸರು ಬಾಗಿಲುಕೋಟೆಯ ಪ್ರೊ. ಜಿ.ಎಂ.ಉಮಾಪತಿಶಾಸ್ತ್ರಿಗಳು. ಇವರ ವಶದಲ್ಲಿದ್ದ ಸುಮರು ೧೦೦೦ಕ್ಕೆ ಮೇಲ್ಪಟ್ಟು ಹಸ್ತಪ್ರತಿಗಳು ಈಗ ಧರ್ಮಸ್ಥಳದ "ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ"ಕ್ಕೆ ವರ್ಗಾಹಿಸಲ್ಪಟ್ಟಿವೆ. ಹೀಗೆ ಸಂಸ್ಥೆ ಮತ್ತು ವ್ಯಕ್ತಿಗಳ ಮೂಲಕ ಕಾರ್ಯ ನಡೆದಿದ್ದರೂ ಹಳೆಯ ಮೈಸೂರು ಪ್ರದೇಶದಲ್ಲಿ ನಡೆದಷ್ಟು ಸಂಗ್ರಹಕಾರ್ಯ ಇಲ್ಲಿ ನಡೆದಿಲ್ಲವೆಂದೇ ಹೇಳಬೇಕು.

ನಿಜಾಮ ಸರಕಾರದ ಹಿಡಿತದಲ್ಲಿದ್ದ ಹೈದರಾಬಾದ ಕರ್ನಾಟಕದ ಗುಲ್ಬರ್ಗಾ, ಬೀದರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯ ಇನ್ನೂ ಅಲಕ್ಷಿಸಲ್ಪಟ್ಟಿದೆ. ರಾಯಚೂರ ಜಿಲ್ಲೆಯ ಲಿಂಗಸೂರಿನಲ್ಲಿ ಶ್ರೀ ಗೋರೆಬಾಳ ಹಣಮಂತರಾಯರು ದಾಸಸಾಹಿತ್ಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳನ್ನು ಸಂಗ್ರಹಿಸಿರುವರು.

ಮೂಡಬಿದಿರೆಯ ಜೈನಮಠ, ಜೈನಭವನ, ಕಾರ್ಕಳದ ಜೈನಮಠ, ಅಲಿಯೂರ ಅದಿನಾಥ ದೇವಾಲಯ ಇವುಗಳ ಗ್ರಂಥಭಾಂಡಾರದಲ್ಲಿಯ ಸಾವಿರಾರು ಹಸ್ತಪ್ರತಿಗಳ ಸೂಚಿಯೊಂದು "ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ" (ಸಂ: ಕೆ. ಭುಜಬಲಿಶಾಸ್ತ್ರೀ ೧೯೪೮) ಎಂಬ ಹೆಸರಿನಿಂದ ಅಚ್ಚಾಗಿದೆ. ಹುಮ್ಮಚ, ವರಾಂಗಗಳ ಪ್ರತಿಯೊಂದು ಭಾಂಡಾರದಲ್ಲಿ ಕೆಲವು ನೂರು ಹಸ್ತಪ್ರತಿಗಳಿದ್ದು, ಇವುಗಳ ಸೂಚಿ ಇನ್ನೂ ಬೆಳಕು ಕಂಡಿಲ್ಲ.

ಇನ್ನು ಕರ್ನಾಟಕದ ಹೊರಗೆ ವಿಚಾರಿಸಿದರೆ, ಅಲ್ಲಲ್ಲಿ ಕನ್ನಡದ ಹಸ್ತಪ್ರತಿಗಳ ಸಂಗ್ರಹಗಳಿವೆ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿರುವ ೨೯೪ ಹಸ್ತಪ್ರತಿಗಳನ್ನಾಧರಿಸಿ "ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಕನ್ನಡ ಮ್ಯಾನುಸ್ಕ್ರಿಪ್ಟ್ ಇನ್ ದಿ ಉಸ್ಮಾನಿಯಾ ಯುನಿವರ್ಸಿಟಿ ಲೈಬ್ರರಿ" ಹೆಸರಿನ ಸೂಚಿಯನ್ನು ೧೯೬೬ರಲ್ಲಿ ಬಿ.ರಾಮಚಂದ್ರರಾವ್ ಮತ್ತು ಟಿ.ವಿ.ವೆಂಕಟಾಚಲಶಾಸ್ತ್ರಿ ಪ್ರಕಟಿಸಿದ್ದಾರೆ. ಬಿಹಾರದ ಆರಾ ಪಟ್ಟಣದ ದೇವಕುಮಾರ ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟದಲ್ಲಿ ೧೫೦೦ ಕನ್ನಡ ಜೈನ ಹಸ್ತಪ್ರತಿಗಳಿದ್ದು, ದೇವನಾಗರಿಯಲ್ಲಿ "A catalogue of Sanskirt, Prakrita and Hindi works in the Jain Siddhanta Bhavana Arrah (Ed. By Suparswa Das Gupta-1911)" ಎಂಬ ಹೆಸರಿನ ಸೂಚೀ ಸಹ ಅಚ್ಚಾಗಿದೆ.[೬೬] ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಬಸದಿಯಲ್ಲಿ ೬೪೬ ಕನ್ನಡ ಹಸ್ತಪ್ರತಿಗಳಿವೆ. ಇಲ್ಲಿಯ ಹಸ್ತಪ್ರತಿಗಳ ಸೂಚಿ (೪೦ ಪುಟ)ಯೊಂದು ದೇವನಾಗರಿಲಿಪಿಯಲ್ಲಿ ಬಹು ದಿನಗಳ ಹಿಂದೆ ಅಚ್ಚಾಗಿದ್ದಿತು. ಇತ್ತೀಚೆ "ಕೊಲ್ಲಾಪುರ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಬಸದಿಯ ಹಸ್ತಪ್ರತಿಸೂಚಿ" ಹೆಸರಿನ ಸೂಚಿ ಪ್ರಕಟವಾಗಿದೆ.

ಹೀಗೆ ಮದ್ರಾಸ, ಹಳೆಯ ಮೈಸೂರು, ಮುಂಬೈ ಕರ್ನಾಟಕ, ಹೈದ್ರಾಬಾದ ಕರ್ನಾಟಕ ಮತ್ತು ಕರ್ನಾಟಕದ ಹೊರಗೆ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಆದರೆ ಹಸ್ತಪ್ರತಿಗಳು ರಾಷ್ಟ್ರದ ಸಂಪತ್ತು ಎಂದು ಭಾವಿಸಿ, ನಮ್ಮ ರಾಜ್ಯ ಸರಕಾರ ಅವುಗಳನ್ನು ವ್ಯವಸ್ಥಿತವಾಗಿ, ಆಮೂಲಾಗ್ರವಾಗಿ

---

೬೬. ಈ ಸೂಚಿ ಹೆಸರನ್ನು ತಿಳಿಸಿದ ಶ್ರೀ ಎಸ್.ಶಿವಣ್ಣನವರಿಗೆ ಕೃತಜ್ಞ.

ಸಂಗ್ರಹಿಸಬೇಕಾದ ಕಾರ್ಯ ಇನ್ನೂ ಉಳಿದಿದೆ. ಈ ಕಾರ್ಯ ಪೂರ್ತಿಯಾದರೆ ಒಟ್ಟು ೨೦,೦೦೦ ಹಸ್ತಪ್ರತಿಗಳು, ಒಂದೊಂದು ಕಟ್ಟಿನಲ್ಲಿ ೫ ಪ್ರತಿಗಳು ಎಂದು ಹಿಡಿದರೆ ಒಂದು ಲಕ್ಷ ಪ್ರತಿಗಳು ಸಿಗಬಹುದು.

ಗ್ರಂಥಸಂಪಾದನೆ:

ಹಸ್ತಪ್ರತಿ ಸಂಗ್ರಹದೊಂದಿಗೆ, ಈ ಪ್ರಾಂತದಲ್ಲಿ ಪುಸ್ತಕ ಮುದ್ರಣ ಮತ್ತು ಗ್ರಂಥ ಸಂಪಾದನಕಾರ್ಯಗಳೂ ಪ್ರಾರಂಭವಾಗಿವೆ. ವಿದ್ವಾಂಸರ ಅಭಿಪ್ರಾಯದಂತೆ ಕನ್ನಡದಲ್ಲಿ ಮುದ್ರಣಕಾರ್ಯ ಪ್ರಾರಂಭವಾದುದು ೧೯ನೆಯ ಶತಮಾನದ ಮೊದಲ ಪಾದದಲ್ಲಿ. ಕ್ರಿ.ಶ. ೧೮೧೭ರಲ್ಲಿ ವಿಲಿಯಂ ಕ್ಯಾರಿ ಎಂಬವನು 'A grammar of the Karnata Language' ಎಂಬ ಗ್ರಂಥವನ್ನು ಪ್ರಕಟಿಸಿದನು. ಇದು ಕನ್ನಡದ ಪ್ರಥಮ ಮುದ್ರಿತ ಕೃತಿ.[೬೭] ಅಲ್ಲಲ್ಲಿ ಕನ್ನಡದ ಪದ, ವಾಕ್ಯಗಳನ್ನೊಳಗೊಂಡ ೧೪೫ ಪುಟಗಳ ಈ ವ್ಯಾಕರಣ, ಬಂಗಾಲದ ಶ್ರೀರಾಮಪುರದಲ್ಲಿ ಈತನೇ ಸ್ಥಾಪಿಸಿದ್ದ 'ಮಿಶನ್ ಪ್ರೆಸ್'ದಲ್ಲಿ ಅಚ್ಚಾಯಿತು.

ಇದೇ ಪ್ರೆಸ್ಸಿನಲ್ಲಿ ಕ್ರಿ.ಶ. ೧೮೨೦ ರಂದು ಜಾನ್ ಹ್ಯಾಂಡ್ಸ್‌ನ ಕನ್ನಡ ಬೈಬಲ್ ಅಚ್ಚಾಯಿತು. ಕ್ರಿ.ಶ. ೧೮೨೦ರಂದು ಜಾನ್ ಮೆಕರಲ್ ಎಂಬವನು 'A grammar of canarese language' ಎಂಬ ೨೧೧ ಪುಟಗಳ ವ್ಯಾಕರಣ, ಮದ್ರಾಸದ ಫೋರ್ಟ ಸೇಂಟ್ ಜಾರ್ಜ ಕಾಲೇಜ ಪ್ರೆಸ್ಸಿನ ಮುಖಾಂತರ ಪ್ರಕಟಿಸಿದನು. ನಾಲ್ಕಡಿ ಜಾರ್ಜ ದೊರೆಗಳಿಗೆ ಅರ್ಪಿಸಿದ ಈ ಕೃತಿ ರಚನೆಗೆ ಶಬ್ದಮಣಿದರ್ಪಣದ ನೆರವನ್ನು ಪಡೆದುದಾಗಿ ಹೇಳಿರುವನು.

ಕ್ರಿ.ಶ. ೧೮೨೪ರಂದು ರೀವ್ಹ ಅವರ ೨೫೦೦ ಶಬ್ದಗಳ ೮೫೦ ಪುಟಗಳ English-Kannada Dictionary ಅಚ್ಚಾಯಿತು. ಮುಂದೆ ಕ್ರಿ.ಶ. ೧೮೩೨ರಲ್ಲಿ ಇವರ ೧೪೩೦ ಪುಟಗಳ Karnataka -English Dictionary ಪ್ರಕಟವಾಯಿತು. ಚತುರಾಸ್ಯ ನಿಘಂಟು, ಶಬ್ದಮಂಜರಿ, ಅಮರಕೋಶ, ಕಬ್ಬಿಗರ ಕೈಪಿಡಿಗಳನ್ನು ಬಳಸಿಕೊಂಡು ಬರೆದ ಈ ಕೋಶದ ಬೆಲೆ ಆ ಕಾಲಕ್ಕೆ ಹನ್ನೆರಡು ರೂಪಾಯಿ. ೧೮೩೮ರಲ್ಲಿ ಶ್ರೀರಂಗಪಟ್ಟಣ ಕೃಷ್ಣಮಾಚಾರಿಯವರು "ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು" ಎಂಬ ಕೃತಿಯನ್ನು ಪ್ರಕಟಿಸಿದರು. ಭಾರತೀಯನು ಬರೆದ ಹೊಸಪದ್ಧತಿಯ ಪ್ರಥಮ ಕನ್ನಡ ವ್ಯಾಕರಣವಿದು.

ಜರ್ಮನಿಯ ಬಾಸೆಲ್ ನಗರದ ಮೂರುಜನ ಮಿಶನರಿಗಳು ಕ್ರಿ.ಶ. ೧೮೩೪ರಂದು ಮಂಗಳೂರಿನಲ್ಲಿ 'ಬಾಸೆಲ್ ಮಿಶನ್' ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆಯ ಮುದ್ರಣಾಲಯದಿಂದ ಮೋಗ್ಲಿಂಗ್‌ರ ಮೂಲಕ ಜೈಮಿನಿ ಭಾರತ (೧೮೪೮), ಬಸವ ಪುರಾಣ (೧೮೫೦), ದಶಪರ್ವ ಭಾರತ (೧೮೫೧), ಚನ್ನಬಸವ ಪುರಾಣ (೧೮೫೧), ರಾಜೇಂದ್ರನಾಮೆ (೧೮೫೭), ಕನ್ನಡ ಗಾದೆಗಳು (೧೮೫೯), ದಾಸರಪದ (೧೮೬೦) ಮತ್ತು ರಾವಣದಿಗ್ವಿಜಯ (ಯಕ್ಷಗಾನ) ಗಳು ಪ್ರಕಟವದವು. ಇವರ ಮಾದರಿಯಲ್ಲಿ ಪೂರ್ವ–ಪಶ್ಚಿಮಗಳ ವಿದ್ವಾಂಸರು ಅನೇಕ ಕಲ್ಲಚ್ಚಿನ ಪ್ರಕಟನೆಗಳನ್ನು ಬೆಳಕಿಗೆ ತಂದರು.

---

೬೭. ೧೮೧೨ರಲ್ಲಿ ಜರ್ಮನ್ ಮಿಶನರಿಗಳು 'ಕನ್ನಡ ಸಮಾಚಾರ' ಎಂಬ ಪತ್ರಿಕೆಯನ್ನು ಬಳ್ಳಾರಿಯಲ್ಲಿ ಪ್ರಾರಂಭಿಸಿದ್ದರೆಂಬ ಶ್ರೀ ನಾಡಿಗ ಅವರ ಹೇಳಿಕೆಯನ್ನು ಶ್ರೀನಿವಾಸ ಹಾವನೂರ ಅಲ್ಲಗಳೆಯುತ್ತಾರೆ. (ಕಸ್ತೂರಿ: ೧೯೬೮ ಮೇ)

ಇದೇ ಕಾಲಕ್ಕೆ ಬಳ್ಳಾರಿ, ಬೆಂಗಳೂರು ಸೆಟ್ಟರು ವಿದ್ವಾಂಸರಿಂದ ಟೀಕೆ, ಟಿಪ್ಪಣಿ ಬರೆಯಿಸಿ ಪ್ರಕಟಿಸಿದ ನೂರಾರು ಪ್ರಾಚೀನಕೃತಿಗಳು ಕರ್ನಾಟಕದ ಮನೆಮನೆಗಳಲ್ಲಿ ಶೋಭಿಸಿದವು. ಲಾಭ ದೃಷ್ಟಿಯಿಂದ ಮಾಡಿದ್ದರೂ ಅವರ ಈ ಸೇವೆಗೆ ಕನ್ನಡ ಗ್ರಂಥಸಂಪಾದನೆಯ ಇತಿಹಾಸದಲ್ಲಿ ವಿಶಿಷ್ಟ ಮರ್ಯಾದೆ ಸಲ್ಲುತ್ತದೆ.

ಈ ಕಲ್ಲಚ್ಚಿನ ಪ್ರಕಟನೆಗಳು ಮತ್ತು ಬೆಂಗಳೂರು, ಬಳ್ಳಾರಿ ಸೆಟ್ಟರ ಜನಪ್ರಿಯ ಕೃತಿಗಳು ನಮ್ಮ ಗ್ರಂಥಸಂಪಾದನೆಯ ಪ್ರಥಮ ಘಟ್ಟವನ್ನು ರೂಪಿಸಿದವು. ಇವುಗಳನ್ನು ಸಂಪದನೆಗಳೆನ್ನುವುದಕ್ಕಿಂತ ಮುದ್ರಣಗಳೆನ್ನುವುದು ಯೋಗ್ಯ.

ಕಲ್ಲಚ್ಚಿನ ಬಾಯಿಯಿಂದ ಮುದ್ರಣಯಂತ್ರದ ಬಾಯಿಗೆ, ಸೆಟ್ಟರ ಕೈಯಿಂದ ವಿದ್ವಾಂಸರ ಕೈಗೆ ಇಳಿದು ಬರುವಲ್ಲಿ ಗ್ರಂಥಸಂಪಾದನೆಯ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ಈ ಘಟ್ಟದಲ್ಲಿ ನಿಂತು ತಕ್ಕಮಟ್ಟಿನ ಶಾಸ್ತ್ರೀಯ ಹಿನ್ನೆಲೆಯಲ್ಲಿ 'ಶಬ್ದಮಣಿದರ್ಪಣ' 'ಛಂದೋಂಬುಧಿ'ಗಳನ್ನು ಪ್ರಕಟಿಸಿದ ಡಾ. ಕಿಟೆಲ್ ಅವರಿಗೆ "ಕನ್ನಡ ಗ್ರಂಥಗಳ ಶಾಸ್ತ್ರೀಯ ಪರಿಷ್ಕರಣದ ಪ್ರಥಮವ್ಯಕ್ತಿ" ಎಂಬ ಕೀರ್ತಿ ಸಲ್ಲುತ್ತದೆ. ೧೮೭೨ರಲ್ಲಿ ೬ ಹಸ್ತಪ್ರತಿಗಳ ನೆರವಿನಿಂದ ಇವರು ಶಬ್ದಮಣಿದರ್ಪಣವನ್ನು ಸಂಪಾದಿಸಿದರು. ಆರಂಭದ ಉಪೋದ್ಘಾತದಲ್ಲಿ ಕವಿ-ಕೃತಿ ವಿವೇಚನೆಯನ್ನು, ಅಂತ್ಯದ ಪರಿಶಿಷ್ಟದಲ್ಲಿ ಪಾಠಾಂತರವನ್ನು ಕೊಟ್ಟಿರುವರು. ೧೮೭೫ರಲ್ಲಿ ೧೧ ಹಸ್ತಪ್ರತಿಗಳನ್ನು ಬಳಸಿಕೊಂಡು ನಾಗವರ್ಮನ ಛಂದೋಂಬುಧಿಯನ್ನು ಪರಿಷ್ಕರಿಸಿದರು. ಅಡಿಯಲ್ಲಿ ಭಿನ್ನಪಾಠ, ಕೊನೆಯ ಪರಿಶಿಷ್ಟದಲ್ಲಿ ಹೆಚ್ಚಿನ ಪದ್ಯ, ಮುನ್ನುಡಿಯಲ್ಲಿ ಕವಿ-ಕೃತಿಚರಿತ್ರೆ ಇತ್ಯಾದಿ ವಿವರಗಳಿವೆ. ಇದೆಲ್ಲವನ್ನು ಗಮನಿಸಿದರೆ ಕನ್ನಡದ ಅಚ್ಚುಕಾರ್ಯ ಶ್ರೀರಾಂಪುರ, ಮದ್ರಾಸಗಳಲ್ಲಿ, ಆಗೀಗ ಬಳ್ಳಾರಿ ಬೆಂಗಳೂರುಗಳಲ್ಲಿ ಪ್ರಾರಂಭವಾದರೂ ಅದಕ್ಕೆ ಸ್ವರೂಪಮುದ್ರೆ ಹಾಕಿದವರು, ಕನ್ನಡ ಗ್ರಂಥಸಂಪಾದನೆಗೆ ಶ್ರೀಕಾರ ಹಾಕಿದವರು ಮಂಗಳೂರು ಪ್ರದೇಶದ ಪಾದ್ರಿಗಳೆಂದು ಸ್ಪಷ್ಟವಾಗುತ್ತದೆ.[೬೮]

ಮೈಸೂರು ಪ್ರದೇಶದಲ್ಲಿ, ಮುದ್ರಣ ಮತ್ತು ಪ್ರಾಚೀನ ಗ್ರಂಥಪ್ರಕಟನ ಕಾರ್ಯ ಕೈಕೊಂಡ ಪ್ರಥಮ ವ್ಯಕ್ತಿ, ಜೆ.ಗೆರೆಟ್. ವೆಸ್ಲಿಯನ್ ಮಿಶನ್‌ಕ್ಕೆ ಸಂಬಂಧಿಸಿದ ಈತನು ೧೮೪೦ರಂದು ಮೈಸೂರಿನಲ್ಲಿ ಅಚ್ಚುಕೂಟ ಹೂಡಿದನು. ಇವನ ಪ್ರಕಟನೆಗಳು ಪಂಚತಂತ್ರ(೧೮೬೫) ಮತ್ತು ಶಬ್ದಮಣಿದರ್ಪಣ(೧೮೬೮). ಈ ಪ್ರಾಂತದಲ್ಲಿ ಹೆಸರಿಸಬೇಕಾದ ಇನ್ನೊಬ್ಬ ಪ್ರಮುಖವ್ಯಕ್ತಿ ಬಿ.ಎಲ್.ರೈಸ್. ತಮ್ಮ 'Bibliotheca Carnatica' ಮಾಲೆಯ ಮುಖಾಂತರ ಅಮರಕೋಶ (೧೮೭೩), ಪಂಪರಾಮಾಯಣ(೧೮೮೭), ಕರ್ನಾಟಕ ಭಾಷಾಭೂಷಣ(೧೮೮೪), ಶಬ್ದಾನು ಶಾಸನ(೧೮೯೦), ಪಂಪಭಾರತ(೧೮೯೮) ಹೀಗೆ ಕನ್ನಡದ ಉತ್ತಮೋತ್ತಮ ಗ್ರಂಥಗಳನ್ನು ಸಂಪಾದಿಸಿದರು. ಪಂಪರಾಮಾಯಣಕ್ಕೆ ಮೂರು, ಪಂಪಭಾರತಕ್ಕೆ ಎರಡೂವರೆ ಹಸ್ತಪ್ರತಿಗಳನ್ನು ಬಳಸಿ, ಅಡಿಯಲ್ಲಿ ಕ್ವಚಿತ್ತಾಗಿ ಪಾಠಕೊಟ್ಟಿರುವರು-ಭೂಷಣ ಮತ್ತು-ಶಾಸನಗಳ ಮುನ್ನುಡಿಯಲ್ಲಿ ಕನ್ನಡ ಕವಿಚರಿತ್ರೆ ಬಿತ್ತರಗೊಂಡಿದೆ. ಇದೇ ಮಾಲೆಯಲ್ಲಿ ಶ್ರೀ ಪಾಠಕ ಅವರು ಕವಿರಾಜಮಾರ್ಗವನ್ನು

---

೬೮. ಬಳ್ಳಾರಿ ಬೆಂಗಳೂರುಗಳ ಶೆಟ್ಟರ ಪ್ರಕಟಣೆಗಳ ಸಮಗ್ರ ಅಭ್ಯಾಸ ಇನ್ನೂ ಆಗಬೇಕಾಗಿದೆ.

ಸಂಪಾದಿಸಿದರು. ಶ್ರೀ ರೈಸ್ ಅವರು ಇದಕ್ಕೆ ಕಳಸವಿಟ್ಟಂತೆ ಮಾಡಿದ ಕಾರ್ಯ, ಶಾಸನ ಸಂಪಾದನೆ. 'Epigraphia Carnatica' ಎಂಬ ಹೆಸರಿನ ೧೨ ಸಂಪುಟಗಳಲ್ಲಿ ಒಂಬತ್ತು ಸಾವಿರ ಕನ್ನಡ ಶಾಸನಗಳನ್ನು ಪ್ರಕಟಿಸಿದುದು, ಕನ್ನಡ ಸಂಪಾದನ ಸಾಹಿತ್ಯೇತಿಹಾಸದಲ್ಲಿ ಮೇರುಸದೃಶ ಕಾರ್ಯ. ರೈಸ್ ಅವರ ಸಮಕಾಲೀನರಾಗಿ ಸಂಪಾದನಕಾರ್ಯ ನಿರ್ವಹಿಸಿದ ಕನ್ನಡಗರು ವೇಲಸಾಡು ಸುಬ್ರಹ್ಮಣ್ಯಶಾಸ್ತ್ರಿ, ಸೋಸಲೆ ಅಯ್ಯಾಶಾಸ್ತ್ರಿ, ಎನ್.ಆರ್.ಕರಿಬಸವಶಾಸ್ತ್ರಿ, ಪಿ.ಆರ್.ಕರಿಬಸವಶಾಸ್ತ್ರಿ, ನರಸಿಂಹಯ್ಯ ಹೊಳೆಕಲ್ಲ, ಕೆ.ಬಿ.ಪಾಠಕ ಮತ್ತು ಬಿ.ಮಲ್ಲಪ್ಪ. ಇವರ ಪ್ರಯತ್ನದಿಂದ ವೈವಿಧ್ಯಪೂರ್ಣ ಪ್ರಾಚೀನಕಾವ್ಯಗಳು ಜನರ ಕಣ್ಣು ಮುಂದೆ ಸುಳಿದು ನಿಂತವು.

ಇಲ್ಲಿಂದ ಮುಂದೆ ಈ ಸಂಪಾದನಕಾರ್ಯವನ್ನು ಹೆಚ್ಚು ತೀವ್ರಗೊಳಿಸಿದವರು ಎಂ.ಎ.ರಾಮಾನುಜೈಯ್ಯಂಗಾರ್ ಮತ್ತು ಎಸ್.ಜಿ.ನರಸಿಂಹಾಚಾರ್. ೧೮೯೨ರಲ್ಲಿ ಇವರು ಪ್ರಾರಂಭ ಮಾಡಿದ 'ಕರ್ನಾಟಕ ಕಾವ್ಯಮಂಜರಿ' ಮಾಸಪತ್ರಿಕೆಯು 'ಕರ್ನಾಟಕ ಕಾವ್ಯಕಲಾನಿಧಿ'ಯಾಗಿ ಮಾರ್ಪಟ್ಟು, ಇದರ ಮುಖಾಂತರ ಅನೇಕ ಗ್ರಂಥಗಳ ಬೆಳಕುಕಂಡವು. ಅವು: ೧ ಪಂಪಾಶತಕಂ (ಹರಿಹರ), ೨ ಭಾವಚಿಂತಾರತ್ನಂ (ಗುಬ್ಬಿ ಮಲ್ಲಣಾರ್ಯ), ೩ ವಚನ ಕಾದಂಬರಿ, ೪ ವರ್ಷವರ್ಧಂತೀ ಶತಕಂ (ಶ್ರೀನಿವಾಸ ಕವಿ), ೫. ಚಂದ್ರಪ್ರಭ ಪುರಾಣ (ಅಗ್ಗಳ), ೬ ರಾಮಾಶ್ವಮೇಧ (ಮುದ್ದಣ) ೭. ಚಿಕದೇವರಾಯ ವಂಶಾವಳಿ ೮. ಚಿಕದೇವರಾಜವಿಜಯಂ (ತಿರುಮಲಾರ್ಯ) ೯.ಕವಿಕಂಠಹಾರ (ಸೂರ್ಯಕವಿ), ೧೦. ಅಭಿನವ ದಶಕುಮಾರಚರಿತ್ರೆ (ಚೌಂಡರಸ), ೧೧ ಲೀಲಾವತೀ ಪ್ರಬಂಧ (ನೇಮಿಚಂದ್ರ), ೧೨, ಶಾಂತೀಶ್ವರ ಪುರಾಣಂ (ಕಮಲಭವ), ೧೩ ಶ್ರೀರಾಮ ಪಟ್ಟಾಭಿಷೇಕಂ (ಮುದ್ದಣ) ೧೪ ಸುಭಾಷಿತ ಮುಕ್ತಿಶತಕಂ, ೧೫ ಹದಿಬದೆಯ ಧರ್ಮ (ಹೊನ್ನಮ್ಮ), ೧೬ ಮೋಹನ ತರಂಗಿಣಿ (ಕನಕದಾಸ), ೧೭, ಅರ್ಧನೇಮಿಪುರಾಣ (ನೇಮಿಚಂದ್ರ) ೧೮ ಚಿಕ್ಕದೇವರಾಜ ಬಿನ್ನಪಂ (ಚಿಕ್ಕದೇವರಾಜ), ೧೯. ಕರ್ಣವೃತ್ತಾಂತ ಕಥೆ (ತಿರುಮಲಾರ್ಯ), ೨೦. ಪಂಚತಂತ್ರ (ದುರ್ಗಸಿಂಹ), ೨೧. ಗಯ ಚರಿತ್ರೆ (ಕೋನಯ್ಯ) ೨೨. ಜಯನೃಪ ಕಾವ್ಯ (ಮಂಗರಸ), ೨೩ ಆದಿಪುರಾಣಂ (ಪಂಪ). ಒಂದು ಸಂಸ್ಥೆಮಾಡುವ ಕಾರ್ಯವನ್ನು ಈ ಇಬ್ಬರು ಮಾಡಿದರು. ೧೯ನೆಯ ಶತಮಾನದ ಪ್ರಕಟನೆಗಳಿಂದ ಸ್ಫೂರ್ತಿ ಪಡೆದು ೨೦ನೆಯ ಶತಮಾನದ ಸಂಪಾದನೆಗಳಿಗೆ ಮಾರ್ಗದರ್ಶನ ಮಾಡಿದ ಇವರು, ಹಳೆಯ ಹೊಸತುಗಳ ಮಧ್ಯ ಸೇತುವೆಯಾಗಿ ನಿಂತರು. ಇದೇ ಕಾಲದಲ್ಲಿ ಆರ್. ನರಸಿಂಹಾಚಾರ್, ಬೆಳ್ಳಾವೆ ವೆಂಕಟನಾರಣಪ್ಪ ಮೊದಲಾದವರು ಕಾರ್ಯಮಾಡಿದ್ದರೂ ಈ ಉಭಯರ ವ್ಯಾಪಕ ಪ್ರಕಟನೆ ಎಲ್ಲರನ್ನೂ ಮೀರಿ ನಿಂತಿತು. ಈ ಬೆಳೆಯನ್ನೊಳಗೊಂಡ ಕಾಲಾವಧಿಯನ್ನು ಎರಡನೆಯ ಘಟ್ಟವೆಂದು ಭಾವಿಸಬಹುದು.

ಮೂರನೆಯ ಘಟ್ಟ "ಹೊಸಗನ್ನಡದ ಅಶ್ವಿನೀದೇವತೆ" ಗಳೆನಿಸಿದ ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ ಮತ್ತು ಎಸ್.ಎಸ್.ಬಸವನಾಳ ಅವರಿಂದ ಪ್ರಾರಂಭಗೊಳ್ಳುತ್ತದೆ. ಉಪಲಬ್ಧ ಇತಿಮಿತಿಯಲ್ಲಿ ಗ್ರಂಥಗಳನ್ನು ಅಚ್ಚುಕಟ್ಟಾಗಿ ಸಂಪಾದಿಸುವ ದಾರಿ ತೋರಿದವರು, ಇವರು. ಟಿ.ಎಸ್.ವೆಂಕಣ್ಣಯ್ಯನವರು ಬಸವರಾಜದೇವರ ರಗಳೆ (೧೯೩೦), ಸಿದ್ಧರಾಮ ಚಾರಿತ್ರ[೬೯] ಗಳನ್ನು,

---

೬೯. ಸಹ ಸಂಪಾದಕರು : ಡಿ.ಎಲ್.ನರಸಿಂಹಾಚಾರ್.

ಎ.ಆರ್.ಕೃಷ್ಣಶಾಸ್ತ್ರಿ ಅವರು ಕವಿಜಿಹ್ವಾಬಂಧನ(೧೯೫೨)ವನ್ನು, ಇಬ್ಬರೂ ಕೂಡಿ ಹರಿಶ್ಚಂದ್ರಕಾವ್ಯಸಂಗ್ರಹ(೧೯೩೧)ವನ್ನು ಸಂಪಾದಿಸಿದರು. ಇವು ಗಾತ್ರದಲ್ಲಿ ಸಣ್ಣ ಗ್ರಂಥಗಳಾದರೂ ಪ್ರಾಮಾಣಿಕತೆ, ಪರಿಶುದ್ಧಿ ದೃಷ್ಟಿಯಿಂದ ಗಮನಾರ್ಹವೆನಿಸಿವೆ. ತೀ.ನಂ.ಶ್ರೀ. ಅವರ ನಂಬಿಯಣ್ಣನ ರಗಳೆ(೧೯೪೧), ಗದಾಯುದ್ಧ ಸಂಗ್ರಹ (೧೯೪೬), ಡಿ.ಎಲ್.ಎನ್ ಅವರ ಸಿದ್ಧರಾಮಚಾರಿತ್ರ ಸಂಗ್ರಹ(೧೯೫೧), ವಡ್ಡಾರಾಧನೆ (೧೯೪೯), ಪಂಪರಾಮಾಯಣ ಸಂಗ್ರಹ, ಶಬ್ದಮಣಿದರ್ಪಣ(೧೯೫೪)ಗಳು ಬಹುಕಾಲ ನಿಲ್ಲಬಲ್ಲ ಪರಿಷ್ಕರಣಗಳು. ಇವರಲ್ಲದೆ ಡಿ.ಚಂಪಾಬಾಯಿ, ಆರ್.ಶಾಮಾಶಾಸ್ತ್ರಿ, ಬಸವಲಿಂಗಯ್ಯ, ಬಿ.ಶಿವಮೂರ್ತಿಶಾಸ್ತ್ರಿ, ಎಚ್, ದೇವೀರಪ್ಪ, ಎನ್.ಅನಂತರಂಗಾಚಾರ್, ಕೆ.ವೆಂಕಟರಾಮಪ್ಪ, ದೇಜಗೌ, ಎನ್.ಎಸ್. ಕೃಷ್ಣಜೋಯಿಸ್ ಅವರೂ, ಹೊಸ ತಲೆಮಾರಿನಲ್ಲಿ ಎಲ್. ಬಸವರಾಜು, ಎನ್.ಬಸವಾರಾಧ್ಯ, ಬಿ.ಎಸ್.ಸಣ್ಣಯ್ಯ ಮೊದಲಾದವರೂ ಈ ಕಾರ್ಯವನ್ನು ನಿರ್ವಹಿಸಿದ್ದು, ಇವರಲ್ಲಿ ಎದ್ದು ಕಾಣುತ್ತಿರುವ ವ್ಯಕ್ತಿ ಡಾ. ಎಲ್.ಬಸವರಾಜು.

ಉತ್ತರಕರ್ನಾಟಕದಲ್ಲಿ ಮುದ್ರಣಕಾರ್ಯ ಮತ್ತು ಗ್ರಂಥಪ್ರಕಟನೆ ಕ್ರಿ.ಶ. ೧೮೪೯ರಷ್ಟು ಹಿಂದೆಯೇ ನಡೆದಿದ್ದರೂ ಗೆರೆಟ್, ಬಿ.ಎಲ್.ರೈಸ್ ಅವರಂಥ ವಿದೇಶೀಯರಾಗಲಿ, ವೇಲನಾಡು ಸುಬ್ರಹ್ಮಣ್ಯಶಾಸ್ತ್ರಿ, ಬಿ.ಮಲ್ಲಪ್ಪನವರಂಥ ದೇಶೀ ಪಂಡಿತರಾಗಲೀ ತಲೆದೋರದ ಕಾರಣ, ೧೯ನೆಯ ಶತಮಾನದಲ್ಲಿ ಪ್ರಾಚೀನಗ್ರಂಥ ಪ್ರಕಟನೆ ಇಲ್ಲಿ ಅಷ್ಟಾಗಿ ನಡೆದಿಲ್ಲವೆಂದು ಹೇಳಬೇಕು. ಗಂಗಾಧರ ಮಡಿವಾಳೇಶ್ವರ ತೂರಮರಿ, ಗುರುಬಸಪ್ಪ ಹಳಕಟ್ಟಿ, ಗುರುಬಸಪ್ಪ ಗುಬ್ಬಿ, ಗುಂಡೋ ಕೃಷ್ಣ ಚುರಮರಿ, ಡೆಪ್ಯೂಟಿ ಚನ್ನಬಸಪ್ಪ, ಜಿಗ್ಲರ್, ತಮ್ಮಣ್ಣಪ್ಪ ಚಿಕ್ಕೋಡಿ, ಧೋಂಡೋ ನರಸಿಂಹ ಮುಳಬಾಗಿಲ, ಶಾಂತಕವಿಗಳು, ರಾಮಚಂದ್ರ ದೇಶಪಾಂಡೆ, ವಲ್ಲಭ ಮಹಾಲಿಂಗ ತಟ್ಟಿ, ವೆಂಕಟ ರಂಗೋ ಕಟ್ಟಿ, ಶಾಂತವೀರ ಕಿತ್ತೂರ ಮೊದಲಾದವರು ವಿಪುಲ ಸಾಹಿತ್ಯ ಸೇವೆಗೆಯ್ದರೂ ಗ್ರಂಥಸಂಪಾದನೆಯತ್ತ ಇವರು ಗಮನ ಹರಿಬಿಡಲಿಲ್ಲ, ಆದರೂ ಇಲ್ಲಿ ತೂರಮರಿಯವರ ಕೈವಲ್ಯಪದ್ಧತಿ ಟೀಕೆ, ರಾಜಶೇಖರ ವಿಳಾಸ (ಪ್ರಥಮಾಶ್ವಾಸದ ಟೀಕೆ), ರಾಜಶೇಖರ ವಿಳಾಸ (ಚತುರ್ಥಾಶ್ವಾಸದ ಟೀಕೆ), ಶಬ್ದಮಂಜರಿ; ವೆಂಕಟ ರಂಗೋ ಕಟ್ಟಿ ಅವರ ಜೈಮಿನಿ ಭಾರತ (೧-೪ ಸಂಧಿ ಸಟೀಕೆ), ಸೋಮೇಶ್ವರ ಶತಕ(ಸಟೀಕ); ಶಾಂತವೀರ ಕಿತ್ತೂರ ಅವರ ರಾಜಶೇಖರ ವಿಳಾಸ(ಟೀಕೆ ೧೮೬೭) ಗಳನ್ನು ಹೆಸರಿಸಬಹುದು. ಮುಂದೆ ೨೦ನೆಯ ಶತಮಾನದ ಮೊದಲ ಪಾದದಲ್ಲಿ ಗಳಗನಾಥ, ಕೆರೂರ ವಾಸುದೇವಾಚಾರ್ಯ, ಆಲೂರ ವೆಂಕಟರಾಯ ಮೊದಲಾದವರು ಕೈದಣಿ ಸಾಹಿತ್ಯ ನಿರ್ಮಿಸಿದರೂ ಸಂಪಾದನಸಾಹಿತ್ಯ ಅವರಿಂದ ಬೆಳೆದುಬರಲಿಲ್ಲ. ಆದುದರಿಂದ ಈ ಕಾರ್ಯವನ್ನು ಕೈಗೆತ್ತಿಕೊಂಡವರಲ್ಲಿ ಫ.ಗು.ಹಳಕಟ್ಟಿ ಅವರ ಹೆಸರು ಮೊದಲು ಕೇಳಿಬರುತ್ತದೆ. ವಚನ, ರಗಳೆ, ಚರಿತ್ರೆ, ಕಾವ್ಯ, ಗೀತೆ ಎಂದು ಇವರ ಸಂಪಾದನೆಗಳನ್ನು ವರ್ಗೀಕರಿಸಬಹುದು. ೧೯೨೬ರಲ್ಲಿ "ಶ್ರೀ ಬಸವೇಶ್ವರನ ವಚನಗಳು" ಎಂಬ ಗ್ರಂಥದ ಮೂಲಕ ಸಂಪಾದನಕಾರ್ಯವನ್ನು ಆರಂಭಿಸಿ, ಸುಮಾರು ೨೦ಕ್ಕೆ ಮೇಲ್ಪಟ್ಟು ವಚನ ಸಂಪುಟಗಳನ್ನಲ್ಲದೆ, ಏಕೋತ್ತರಶತಸ್ಥಲ, ಶೂನ್ಯ ಸಂಪಾದನೆಗಳಂಥ ವಚನ ಸಂಕಲನ ಗ್ರಂಥಗಳನ್ನು; ಹರಿಹರನ ರಗಳೆಗಳ ೭ ಸಂಪುಟಗಳನ್ನಲ್ಲದೆ ವೀರಶೈವ ರಗಳೆ, ತೋಂಟದಾರ್ಯ ರಗಳೆಯಂಥ ರಗಳೆ ಕೃತಿಗಳನ್ನು; ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ, ನಿರಂಜನ ವಂಶರತ್ನಾಕರ, ಕೆಳದಿ ಸಂಸ್ಥಾನದ ರಾಜರ ವಂಶಾವಳಿಯಂಥ ಚರಿತ್ರೆ ಗ್ರಂಥಗಳನ್ನು;

ಆದಿಶೆಟ್ಟಿ ಪುರಾಣ, ಹರಳಯ್ಯನ ತ್ರಿಪದಿಗಳಂಥ ಕಾವ್ಯಗಳನ್ನು; ಮೈಲಾರ ಬಸಪ್ಪನವರ ಶಿವಾನುಭವ ದರ್ಪಣದಂಥ ಗೀತಸಂಪುಟಗಳನ್ನು ಇವರು ಸಂಪಾದಿಸಿದರು. ತಮ್ಮ "ಶಿವಾನುಭವ ಗ್ರಂಥಮಾಲೆ" ಯಿಂದ ಈ ಎಲ್ಲ ಸುಮಾರು ೧೦೦ ಗ್ರಂಥಗಳನ್ನು ಪ್ರಕಟಿಸಿದ ಸಾಹಸ ಪವಾಡವೆನಿಸುತ್ತದೆ. ಇವರ ಪ್ರಕಟನೆ ಅಷ್ಟು ಶಾಸ್ತ್ರೀಯ ಮತ್ತು ಶುದ್ಧವಾಗಿರಲಿಲ್ಲವಾದರೂ ಮೈಸೂರು ಸೀಮೆಯಲ್ಲಿ "ಕಾವ್ಯಕಲಾನಿಧಿ" ಪ್ರಕಾಶನಕ್ಕೆ ಸಮಾನವಾದ ಕಾರ್ಯವನ್ನು ಈ "ಶಿವಾನುಭವ ಗ್ರಂಥಮಾಲೆ" ಮಾಡಿತೆನ್ನಬಹುದು.

ಹಳಕಟ್ಟಿಯವರ ಬಳಿಕ ಹೆಸರಿಸಬೇಕಾದವರು ಎಸ್.ಎಸ್.ಬಸವನಾಳ. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಮೂಲಕ ಇವರು ಚೆನ್ನಬಸವ ಪುರಾಣ (೧೯೩೪), ಪ್ರಭುಲಿಂಗಲೀಲೆ (೧೯೩೮), ಶಬರಶಂಕರ ವಿಳಾಸ (೧೯೩೯), ಪಂಪಾಶತಕ–ರಕ್ಷಾಶತಕ (೧೯೪೩), ಬಸವಣ್ಣನವರ ವಚನಗಳನ್ನೂ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಕಾವ್ಯಾವಲೋಕನಂ (೧೯೩೯), ಶಬ್ದಾನುಶಾಸನಂ(೧೯೪೧)ಗಳನ್ನೂ, ಮುರುಘಾಮಠದ ಮೂಲಕ ಕೈವಲ್ಯಕಲ್ಪವಲ್ಲರಿ (೧೯೪೮), ಕೈವಲ್ಯ ದರ್ಪಣ (೧೯೪೩) ಕೃತಿಗಳನ್ನೂ ಸಂಪಾದಿಸಿದರು. ಶಾಸ್ತ್ರೀಯ ಪರಿಷ್ಕರಣ, ಬೆಲೆಯುಳ್ಳ ಮುನ್ನಡಿ, ತೂಕದ ಟಿಪ್ಪಣಿಗಳಿಂದ ಕೂಡಿದ ಇವರ ಸಂಪಾದನೆಗಳು ಮುಂದಿನವರಿಗೆ ಮಾರ್ಗದರ್ಶಿಯಾಗಿವೆ. ಆದುದರಿಂದ ಉತ್ತರ ಕರ್ನಾಟಕದಲ್ಲಿ ಶಾಸ್ತ್ರೀಯ ಗ್ರಂಥಸಂಪಾದನೆಯನ್ನು ಪ್ರಯೋಗಿಸಿ ತೋರಿಸಿದ ಪ್ರಥಮವ್ಯಕ್ತಿ ಇವರು.

೧೯೪೦ರಂದು ಪ್ರಾರಂಭವಾದ ಧಾರವಾಡದ ಶ್ರೀ ಮುರುಘಾಮಠದ "ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ" ಸಂಪಾದನಕಾರ್ಯದಲ್ಲಿ ಎದ್ದು ಕಾಣುವ ಪಾತ್ರವಹಿಸಿದೆ. ಸುಬೋಧಸಾರ, ಮೈಲಾರ ಬಸವಲಿಂಗಶರಣರ ಕೃತಿಗಳು, ಶಿವಾನುಭವಸೂತ್ರ, ಕೈವಲ್ಯದರ್ಪಣ, ಆದಯ್ಯನ ವಚನ, ಅಖಂಡೇಶ್ವರನ ವಚನ, ವಿಶೇಷಾರ್ಥ ಪ್ರಕಾಶಿಕೆ, ಗುರುರಾಜ ಚಾರಿತ್ರ, ಷಟ್‌ಸ್ಥಲ ಜ್ಞಾನಸಾರಾಮೃತ, ಶತಕತ್ರಯ, ಗುರುಬಸವನ ಸಪ್ತಕಾವ್ಯಗಳು, ಗಣಭಾಷಿತರತ್ನಮಾಲೆ, ಪದ್ಮರಾಜಪುರಾಣ. ರಾಘವಾಂಕಚರಿತ್ರ, ಪ್ರೌಢರಾಯನಕಾವ್ಯ, ಅನುಭವಮುದ್ರೆ, ಬಸವಪುರಾಣ, ಚೋರಬಸವ ಚರಿತ್ರೆ ಮೊದಲದ ವೀರಶೈವಕೃತಿಗಳು ಈ ಮಾಲೆಯಿಂದ ಬೆಳಕುಕಂಡಿವೆ. ಈ ಕಾರ್ಯದಲ್ಲಿ ವೀರಶೈವ ವಿದ್ವಾಂಸರಾದ ಶ್ರೀ ಬಸವನಾಳ, ಎಸ್.ಎಸ್.ಭೂಸನೂರಮಠ, ಎಸ್.ಎಸ್.ಮಾಳವಾಡ, ಆರ್.ಸಿ.ಹಿರೇಮಠ, ಎಂ.ಎಸ್. ಸುಂಕಾಪುರ ಅವರು ಸಲ್ಲಿಸಿದ ಸೇವೆ ಸ್ಮರಣಾರ್ಹವೆನಿಸಿದೆ.

೧೯೩೯ರಂದು ಅಸ್ತಿತ್ವಕ್ಕೆ ಬಂದ ಕನ್ನಡದ ಸಂಶೋಧನಸಂಸ್ಥೆ ಶಾಸನ, ವಿಗ್ರಹ, ನಾಣ್ಯ, ಹಸ್ತಪ್ರತಿಗಳನ್ನು ಸಂಗ್ರಹಿಸುತ್ತ ಮದನತಿಲಕ, ಕವಿಜಿಹ್ವಾಬಂಧನ, ಸಮಯಪರೀಕ್ಷೆ ಮೊದಲಾದ ಗ್ರಂಥಗಳನ್ನು ಪರಿಷ್ಕರಿಸಿದೆ. ಇವುಗಳಲ್ಲಿ ಶಾಸ್ತ್ರೀಯ ದೃಷ್ಟಿ ಸ್ವಲ್ಪ ಕಡಿಮೆ. ಹೀಗಾಗಿ ಪ್ರಕ್ಷಿಪ್ತ ಪದ್ಯಗಳು, ದೋಷಪಾಠಗಳು ಇಲ್ಲಿ ಸ್ವೀಕೃತವಾಗಿವೆ. ಅಚ್ಚುದೋಷಗಳು ಅಧಿಕ ಪ್ರಮಾಣದಲ್ಲಿವೆ.

೧೯೪೯–೫೦ರಂದು ಈ ಭಾಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ತಲೆಯೆತ್ತುವುದಕ್ಕೂ ೧೯೫೧ ರಂದು ಡಾ. ಆರ್.ಸಿ.ಹಿರೇಮಠ ಅವರು ಕನ್ನಡ ಪೀಠವೇರುವದಕ್ಕೂ ಸರಿಹೋಯಿತು. ವಿಶ್ವವಿದ್ಯಾಲಯದ ಉದಾರ ನೆರವು, ಡಾ. ಹಿರೇಮಠ ಅವರ ಕಾರ್ಯತತ್ಪರತೆಗಳಿಂದಾಗಿ "ಕನ್ನಡ

ಕಾವ್ಯಮಾಲೆ" ಎಂಬ ಹೆಸರಿನಲ್ಲಿ ರಾಜಶೇಖರ ವಿಳಾಸ ಸಂಗ್ರಹ ಮೊದಲು ಪ್ರಕಟಗೊಂಡಿತು. ಮುಂದೆ ಸೋಮನಾಥ ಚಾರಿತ್ರ, ತ್ರಿಷಷ್ಠಿ ಪುರಾತನರ ಚಾರಿತ್ರ, ಬಸವರಾಜ ವಿಜಯಂ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ೧-೨, ಪುರಾತನರ ಆರು ರಗಳೆಗಳು ಪ್ರಕಟವಾದವು. ಇವುಗಳಲ್ಲಿ ಹಲವು ಪರಿಷ್ಕರಣಗಳ ಸಹಸಂಪಾದಕರು ಡಾ. ಎಮ್.ಎಸ್. ಸುಂಕಾಪುರ ಅವರು. ಇಲ್ಲಿ ೧೯೬೬ರಂದು ಪ್ರಾರಂಭವಾದ ಜೈನ, ವೀರಶೈವ, ೧೯೬೭ರಂದು ಪ್ರಾರಂಭವಾದ ಬ್ರಾಹ್ಮಣ ಸಾಹಿತ್ಯಶಾಖೆಗಳ ಸಂಪಾದನ ಕಾರ್ಯ ಉತ್ಸಾಹದಿಂದ ನಡೆಯಿತು. ಇದಲ್ಲದೆ ೧೯೭೨ರಲ್ಲಿ ಅಸ್ತಿತ್ವಕ್ಕೆ ಬಂದ "ವಚನವಾಙ್ಮಯ ಸಂಶೋಧನ ಸಂಪಾದನ ಪ್ರಕಟನ ಯೋಜನೆ"ಯ ಅಂಗವಾಗಿ ಚನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ (ಸಮಗ್ರ ಸಂಪುಟ), ಬಸವಣ್ಣನವರ ವಚನ ಇತ್ಯಾದಿ ಗ್ರಂಥಗಳನ್ನು ಡಾ. ಆರ್.ಸಿ.ಹಿರೇಮಠ ಅವರು ಪರಿಷ್ಕರಿಸಿದರು.[೭೦] ಡಾ. ಸುಕ್ತನಕರ ಅವರ ಮಹಾಭಾರತ ಪರಿಷ್ಕರಣ ಯೋಜನೆಯಂಥ ಬೃಹತ್ ಯೋಜನೆ ಹಾಕಿಕೊಂಡು, ಬೆಲೆಯುಳ್ಳ ಗ್ರಂಥಗಳನ್ನು ಶಾಸ್ತ್ರಶುದ್ಧವಾಗಿ ಬೆಳಕಿಗೆ ತಂದರು. ಬಸವನಾಳರ ತರುವಾಯ ಬಂಜೆಯಾಗಿದ್ದ ಸಂಪಾದನಕ್ಷೇತ್ರವನ್ನು ಹಸಿರುಗೊಳಿಸಿದರು.

ಹೀಗೆ ಮೈಸೂರು ಮತ್ತು ಧಾರವಾಡ ಪ್ರದೇಶಗಳಲ್ಲಿ ಭರದಿಂದ ನಡೆದು ಬರುತ್ತಲಿದ್ದ ಈ ಸಂಪಾದನಕಾರ್ಯ, ಒಂದು ಕಡೆ ಟಿ.ಎಸ್.ವೆಂಕಣ್ಣಯ್ಯನವರ, ಇನ್ನೊಂದು ಕಡೆ ಎಸ್.ಎಸ್.ಬಸವನಾಳರ ಮಟ್ಟದಲ್ಲಿಯೇ ವ್ಯವಹರಿಸುತ್ತಿರುವಾಗ, ಆ ಕಡೆ ಡಾ. ಎಲ್. ಬಸವರಾಜು, ಈ ಕಡೆ ಡಾ. ಆರ್.ಸಿ.ಹಿರೇಮಠ ಅವರು ಈ ಕ್ಷೇತ್ರದಲ್ಲಿ ಕೆಲಮಟ್ಟಿನ ಹೊಸ ಸಾಹಸ, ಹೊಸ ತಂತ್ರಗಳನ್ನು ರೂಢಿಸಿದರು. ಡಾ. ಹಿರೇಮಠ ಅವರು ಚನ್ನಬಸವಣ್ಣನವರ ಎಲ್ಲ ೧೫೫೪ ವಚನಗಳಿಗೆ ಅಡಿಯಲ್ಲಿ ಪಾಠ ಕೊಡುವುದರ ಜೊತೆ, ಮುನ್ನುಡಿಯಲ್ಲಿ ಪ್ರತಿಯೊಂದು ವಚನದ ಒಟ್ಟು ಆಕರಪ್ರತಿಗಳನ್ನು ತಾಳೆಪ್ರತಿ, ಕಾಗದಪ್ರತಿ, ಅಚ್ಚಿನ ಪ್ರತಿ ಎಂದು ವಿವರವಾಗಿ ಸೂಚಿಸಿದುದು (೭೫ ಪುಟಗಳಷ್ಟು) ಒಂದು ಹೊಸ ವಿಧಾನ. ಎರಡನೆಯದಾಗಿ ಬಸವಣ್ಣನವರ ವಚನ, ಶಿವಶರಣೆಯರ ವಚನಗಳ ಸಂಪಾದನೆಯಲ್ಲಿ ಪ್ರತಿಯೊಂದು ಪುಟದ ಮೇಲೆ ಮೂರು ಸ್ತರಗಳನ್ನು ಕಲ್ಪಿಸಿಕೊಂಡು, ಮೇಲಣ ಸ್ತರದಲ್ಲಿ ಪಠ್ಯವನ್ನು, ಎರಡನೆಯ ಸ್ತರದಲ್ಲಿ ಪ್ರತಿಯೊಂದು ವಚನದ ಪಾಠಾಂತರಗಳನ್ನು, ಮೂರನೆಯ ಸ್ತರದಲ್ಲಿ ಪ್ರತಿಯೊಂದು ವಚನದ ಒಟ್ಟು ಆಕರ ಪ್ರತಿಗಳ ಸೂಚನೆಯನ್ನು ಕೊಟ್ಟುದೂ ಒಂದು ಹೊಸ ವಿಧಾನ. ಕೊನೆಗೆ, ಸಿದ್ಧರಾಮನ ವಚನಗಳನ್ನು ಸಂಪಾದಿಸುವಲ್ಲಿ ಮೇಲಣ ಎರಡೂ ವಿಧಾನಗಳನ್ನು ಇಟ್ಟುಕೊಂಡರು. ಎಲ್. ಬಸವರಾಜು ಅವರು ಶಿವದಾಸ ಗೀತಾಂಜಲಿಯ ಪ್ರಸ್ತಾವನೆ ಮತ್ತು ಪರಿಶಿಷ್ಟಗಳಲ್ಲಿ, ಮಹದೇವಯ್ಯಗಳ ಶೂನ್ಯಸಂಪಾದನೆಯಲ್ಲಿ ಮತ್ತು ಎಲ್ಲ ಶೂನ್ಯಸಂಪಾದನೆಗಳ ಸಾದೃಶ್ಯ-ವೈದೃಶ್ಯ ಸಂದರ್ಭದಲ್ಲಿ ತೋರಿಸಿದ ಅವರ ಹೊಸ ಹೊಸ ಸಾಹಸಗಳನ್ನು ಕಾಣಬಹುದು.

ಉತ್ತರ ಕರ್ನಾಟಕದಲ್ಲಿ ಡಾ. ಆರ್.ಸಿ.ಹಿರೇಮಠರ ತರುವಾಯ ವೈಯಕ್ತಿಕ ಮತ್ತು ಸಾಂಘಿಕ ಮಟ್ಟದಲ್ಲಿ ದುಡಿದು, ಗ್ರಂಥಸಂಪಾದನ ಪರಂಪರೆಯನ್ನು ಮುಂದುವರಿಸಿದವರು ಎಂ.ಎಂ.ಕಲಬುರ್ಗಿ.

---

೭೦. ಇವುಗಳಲ್ಲದೆ ವೀರಶೈವ ಚಿಂತಾಮಣಿ, ಲಿಂಗಚಿದಮೃತಬೋಧೆ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ವಿಶೇಷಾನುಭವ ಷಟ್‌ಸ್ಥಲ, ಮುಕ್ತಿಕಂಠಾಭರಣ, ಎಲ್ಲ ಪುರಾತನರ ವಚನಗಳು-೧. ಬಾಲಸಂಗಯ್ಯನ ವಚನಗಳು, ಪ್ರಸಾದಿ ಮಹದೇವಯ್ಯ ಮತ್ತು ಗುಮ್ಮಳಾಪುರದ ಸಿದ್ಧಲಿಂಗಯತಿಗಳ ಶೂನ್ಯ ಸಂಪಾದನೆಗಳು ಪ್ರಕಟವಾಗಿವೆ.

ಈ ಅವಧಿಯಲ್ಲಿ ಎದ್ದು ಕಾಣುವ ತರುಣ ಹೆಸರು ವ್ಹಿ.ಬಿ.ರಾಜೂರ, ಬಿ.ಆರ್.ಹಿರೇಮಠ, ಬಿ.ವ್ಹಿ.ಶಿರೂರ, ದಕ್ಷಿಣ ಕರ್ನಾಟಕದಲ್ಲಿ ಎಲ್.ಬಸವರಾಜು ಅವರ ಬಳಿಕ ಎಸ್.ಶಿವಣ್ಣ, ವಿದ್ಯಾಶಂಕರ, ಜಿ.ಎ.ಶಿವಲಿಂಗಯ್ಯ, ಪಿ.ಎಂ.ಗಿರಿರಾಜು. ಎಸ್.ಉಮಾಪತಿ, ಜಿ.ಜಿ.ಮಂಜುನಾಥ, ವೈ.ಸಿ.ಭಾನುಮತಿ ಈ ಕೆಲಸವನ್ನು ನಿಷ್ಠೆಯಿಂದ ಮುಂದುವರಿಸಿದ್ದಾರೆ.

ಈ ಸಂದರ್ಭದಲ್ಲಿ ಗದುಗಿನ ಶ್ರೀ ತೋಂಟದಾರ್ಯಮಠದ "ವೀರಶೈವ ಅಧ್ಯಯನ ಸಂಸ್ಥೆ"ಯ ಕೆಲಸ ಎತ್ತಿ ಹೇಳುವಂತಹದು. ಹಸ್ತಪ್ರತಿ ಸಂಗ್ರಹದೊಂದಿಗೆ "ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನ ಮಾಲೆ"ಯನ್ನು ಆರಂಭಿಸಿ, ಕೆಲವೇ ವರ್ಷಗಳಲ್ಲಿ ೨೦ ಗ್ರಂಥಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ವೀರಶೈವ ಸ್ವರವಚನ ಕೃತಿಗಳ ಸಂಖ್ಯೆ ಅಧಿಕವಾಗಿರುವುದು ಒಂದು ವಿಶೇಷ. ಈ ಸಂಸ್ಥೆಯ ಪ್ರಯತ್ನದಿಂದಾಗಿ ಗಣವಚನ ರತ್ನಾವಳಿ, ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಮೊದಲಾದ ಅನುಪಲಬ್ಧ ಕೃತಿಗಳು ಬೆಳಕಿಗೆ ಬಂದುದು ಇನ್ನೂ ವಿಶೇಷ.

ಮದ್ರಾಸ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮತ್ತು ಮದ್ರಾಸ ವಿಶ್ವವಿದ್ಯಾಲಯಗಳು ಮಾಡಿದಷ್ಟು ಕನ್ನಡ ಸಾಹಿತ್ಯಸೇವೆ, ಹೊರಗಿನ ಯಾವ ಸಂಸ್ಥೆಗಳೂ ಮಾಡಿಲ್ಲ. ಮದ್ರಾಸ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಇಲಾಖೆಯು 'Madras Government Oriental Series' ಎಂಬ ಮಾಲೆಯಲ್ಲಿ ಲೋಕೋಪಕಾರಂ, ಅಟ್ಟಮತಂ, ಅಶ್ವಶಾಸ್ತ್ರಂ, ವಿವಿಧ ವೈದ್ಯ ವಿಷಯಗಳು, ಸಂಗೀತ ರತ್ನಾಕರ, ಸೂಪಶಾಸ್ತ್ರ, ವೈದ್ಯ ಸಾರಸಂಗ್ರಹ ಭಾಗ ೧ ಮತ್ತು ೨, ಸದ್ಗುರುರಹಸ್ಯ, ಬಿಜ್ಜಳರಾಯ ಚರಿತ್ರೆ, ಮನ್ಮಥವಿಜಯ ಮತ್ತು ವೆಂಕಾಮಾತ್ಯನ ರಾಮಾಯಣಗಳನ್ನು ಬೆಳಕಿಗೆ ತಂದಿದೆ. ಈ ಕಾರ್ಯದಲ್ಲಿ ದುಡಿದವರು ಎಚ್. ಶೇಷಯ್ಯಂಗಾರ್, ಪಿ.ಶ್ರೀನಿವಾಸರಾವ್ ಮೊದಲಾದವರು.

ಇಂದಿಗೂ ಕನ್ನಡ ವಿಭಾಗವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿರುವ ಮದ್ರಾಸ ವಿಶ್ವವಿದ್ಯಾಲಯವು 'Madras University Kannad Series' ಎಂಬ ಮಾಲೆಯ ಮೂಲಕ ಶಬ್ದಮಣಿದರ್ಪಣ (ಲಿಂಗಣಾರಾಧ್ಯ ವ್ಯಾಖ್ಯಾನ), ಕವಿರಾಜಮಾರ್ಗಂ, ಪುಷ್ಪದಂತಪುರಾಣ, ಶಾಂತಿಪುರಾಣ (ಪೊನ್ನ), ಅಭಿಧಾನರತ್ನಮಾಲಾ ಕರ್ಣಾಟಟೀಕಾ (ನಾಗವರ್ಮ), ಔಷಧಿಕೋಶಂ, ನೇಮಿನಾಥ ಪುರಾಣಂ (ಕರ್ಣಪಾರ್ಯ), ಖಗೇಂದ್ರಮಣಿದರ್ಪಣ, ಅಭಿನವಾಭಿಧಾನ, ಜಾತಕತಿಲಕಂ, ಶ್ರೀ ವಿಷ್ಣುಪುರಾಣ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದೆ. ವಿಸ್ತಾರವಾದ ಮುನ್ನುಡಿ, ಉಪಯುಕ್ತ ಪರಿಶಿಷ್ಟಗಳ ಮೂಲಕ ಈ ಆವೃತ್ತಿಗಳಿಗೆ ಒಂದು ತೂಕ ಬಂದಿದೆ. ಎ.ವೆಂಕಟರಾವ್ ಎಚ್. ಶೇಷಯ್ಯಂಗಾರ ಮತ್ತು ಎಂ. ಮರಿಯಪ್ಪ ಭಟ್ಟರು ಮಾಡಿದ ಇಲ್ಲಿಯ ಪರಿಷ್ಕರಣಕಾರ್ಯ ಶ್ಲಾಘನೀಯವಾಗಿದೆ.

ಹೀಗೆ ಕರ್ನಾಟಕದ ಒಳಹೊರಗೆ ಸಂಪಾದನಕಾರ್ಯ ದಿನದಿಂದ ದಿನಕ್ಕೆ ಶಾಸ್ತ್ರ ಶುದ್ಧವಾಗಿ ಬೆಳೆಯುತ್ತಿದ್ದರೂ ಅವುಗಳಿಗೆ ಬೆಲೆಯುಳ್ಳ ಸಂಶೋಧನಾತ್ಮಕ ಮತ್ತು ವಿಮರ್ಶನಾತ್ಮಕ ಮುನ್ನುಡಿಗಳ, ಪರಿಪೂರ್ಣ ಅನುಬಂಧಗಳ, ಉತ್ಕಟ ಪ್ರಮಾಣಿಕತೆಯ ಕೊರತೆ ಇನ್ನೂಯಿದೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ವಿದ್ವಾಂಸರಿಂದ ದುಡಿಮೆಯನ್ನು ನಿರೀಕ್ಷಿಸಬೇಕಾಗಿದೆ.

❖❖

೨

ಲೇಖನಕಾಂಡ

❖

ಲೇಖನ ಸಾಮಗ್ರಿ

ಲಿಪಿಕಾರರು

ಬಳಸಿ ಬರೆಯಲು ಕಂಟಪತ್ರದ ಉಲುಹುಗೆಡದಗ್ಗಳಿಕೆ

*

ಲೇಖನ ಸಾಮಗ್ರಿ

ಬರೆವಣಿಗೆಗೆ ಪ್ರಾಚೀನರು ಬಳಸಿದ ಲೇಖನಸಾಮಗ್ರಿಗಳು ಫಲಕ–ಪತ್ರ–ವಸ್ತ್ರ–ಚರ್ಮ, ಉಳಿ–ಕಂಟ–ಲೆಕ್ಕಣಿಕೆ–ಕುಂಚ ಮತ್ತು ಮಸಿ. ಇವುಗಳಲ್ಲಿ ಫಲಕವು ಲೋಹ, ಲೋಹೇತರ ಎಂದು ಎರಡು ಬಗೆಯಾಗಿದೆ. ಚಿನ್ನ ಬೆಳ್ಳಿ ಕುಂಚು ಹಿತ್ತಾಳಿ ಕಬ್ಬಿಣ ಮತ್ತು ತಾಮ್ರದ ಹಲಗೆಗಳು ಲೋಹಫಲಕ, ಇಟ್ಟಂಗಿ ಮಡಕೆ ಸ್ಫಟಿಕ ಕಲ್ಲು ಕಟ್ಟಿಗೆಗಳು ಲೋಹೇತರ ಫಲಕ. ಎಲೆ ಕಾಗದಗಳು ಪತ್ರ. ಕಡತವನ್ನು ಸಿದ್ಧಗೊಳಿಸುವುದಕ್ಕೆ ಬಿಟ್ಟರೆ ವಸ್ತ್ರದ ಉಪಯೋಗ ಕ್ವಚಿತ್. ಚರ್ಮದ ಉಪಯೋಗ ಇನ್ನೂ ಕ್ವಚಿತ್.[೧] ಸಾಹಿತ್ಯಕೃತಿಗಳಿಗಾಗಿ ಲೋಹ, ಲೋಹೇತರ ಫಲಕಗಳನ್ನು ಬಳಸಬಹುದಾದರೂ[೨] ಉಳಿತಾಯ ಮತ್ತು ಅನುಕೂಲ ದೃಷ್ಟಿಯಿಂದ ತತ್ಕಾಲದ ಬರವಣಿಗೆಗೆ ಅರಿವೆಯ ಕಡತ ಕಟ್ಟಿಗೆಯ ಹಲಗೆಗಳನ್ನು, ಬಹುಕಾಲದ ಬರವಣಿಗೆಗೆ ಪತ್ರವರ್ಗದ ಎಲೆ ಕಾಗದಗಳನ್ನು ಉಪಯೋಗಿಸುತ್ತಿದ್ದರು. ಇಷ್ಟು ವಿವರಗಳೊಂದಿಗೆ ಸಾಹಿತ್ಯಕೃತಿಗಳಿಗಾಗಿ ಕನ್ನಡಿಗರು ಬಳಸುತ್ತ ಬಂದ (೧) ತಾಳೆಪತ್ರ–ಕಾಗದ (೨) ಕಂಟ (೩) ಮಸಿಗಳನ್ನು ಕುರಿತು ವಿವೇಚಿಸಬಹುದು:

೧. ಭೂರ್ಜಪತ್ರ ಮತ್ತು ತಾಳೆಪತ್ರ, ಇವು ಬರೆವಣಿಗೆಗೆ ಉಪಯೋಗಿಸುವ ಪರ್ಣಜಾತಿಗಳು. ಭೂರ್ಜವೃಕ್ಷ ಉತ್ತರ ಹಿಂದುಸ್ತಾನದಲ್ಲಿ, ತಾಳೆಮರ ಸಮಸ್ತ ಭಾರತದಲ್ಲಿ ಬೆಳೆಯುವ ಕಾರಣ ಔತ್ತರೇಯರು ವಿಶೇಷವಾಗಿ ಭೂರ್ಜಪತ್ರಗಳನ್ನು[೩] ಕ್ವಚಿತ್ತಾಗಿ ತಾಳೆಪತ್ರಗಳನ್ನು ಬಳಸಿದರೆ, ದಾಕ್ಷಿಣಾತ್ಯರು ಮಾತ್ರ ಕೇವಲ ತಾಳಪತ್ರಗಳನ್ನು ಬಳಸಿದರು. ಕರ್ನಾಟಕದ ಮಟ್ಟಿಗೆ ಹೇಳುವುದಾರೆ

---

೧. 'ಸುಬಂಧುವಿನ 'ವಾಸವದತ್ತಾ' ಗ್ರಂಥದಲ್ಲಿ ನಕ್ಷತ್ರಗಳನ್ನು ವರ್ಣಿಸುವಾಗ "ವಿಶ್ವಂಗಣಯತೋ ಧಾತುಶ್ಯಶಿಕಠಿನೀ ಖಂಡೇನ ತಮೋ ಮಷೀ ಶ್ಯಾಮೇ ಅಜಿನ ಇವ ವಿಯತಿ ಸಂಸ್ಕಾರಸ್ಯಾತಿ ಶೂನ್ಯತ್ವಾತ್ ಶೂನ್ಯ ಬಿಂದವ ಇವ ವಿಲಿಖಿತಾಃ .... ತಾರಾವ್ಯರಾಜನ್ತ" ಎಂದು ಹೇಳಿದೆ (ಕ.ಗ್ರ.ಸಂ.೩೬)

೨. 'ನರ್ಮದೆಯ ದಡದ ಮೇಲಿರುವ ಮಾಂಧಾತಾ ಎಂಬಲ್ಲಿನ ಅಮರೇಶ್ವರ ದೇವಸ್ಥಾನದ ಮುಂದಿರುವ ಕಲ್ಲುಗಳ ಮೇಲೆ ಹಲಾಯುಧನ ಮಹಿಮ್ನಸ್ತೋತ್ರವನ್ನು ಕೆತ್ತಲಾಗಿದೆ. ಇದರ ಪಾಠವೇ ಹಸ್ತಪ್ರತಿಗಳ ಪಾಠಕ್ಕಿಂತ ಹೆಚ್ಚು ವಿಶ್ವಸನೀಯವಾದುದು. ಧಾರ್‌ಮಾಂಡು ಮತ್ತು ಅಜ್ಮೀರ ಶಾಸನಗಳಲ್ಲಿ ಪರಿಜಾತ ಮಂಜರಿ, ಹರಕೇಲೀ ನಾಟಕ, ಲಲಿತ ವಿಗ್ರಹರಾಜ ನಾಟಕ ಮುಂತಾದ ನಾಟಕಗಳೂ, ಕೂರ್ಮಾಷ್ಟಕ, ಕೋದಂಡಕಾವ್ಯ ಮುಂತಾದ ಕಾವ್ಯಗಳೂ ಇವೆ. ಇವುಗಳಿಗೆ ಬೇರೆ ಹಸ್ತಪ್ರತಿಗಳೇ ಇಲ್ಲ. ಇದೇ ಧಾರ್ ಎಂಬ ಸ್ಥಳದಲ್ಲಿ ವ್ಯಾಕರಣಶಾಖೆಯ ಒಂದು ಭಾಗದಲ್ಲಿ ಸಂಸ್ಕೃತ ವರ್ಣಮಾಲೆಯನ್ನೂ, ಕಾತಂತ್ರದಲ್ಲಿರುವ ಅಖ್ಯಾತ ಪ್ರತ್ಯಯಗಳ ಪಟ್ಟಿಯನ್ನೂ ಕೆತ್ತಲಾಗಿದೆ. ಚಿತ್ತೂರಿನ ಜಯಸ್ತೂಪದ ಮೇಲೆ ವಾಸ್ತುಶಿಲ್ಪಶಾಸ್ತ್ರದ ಗ್ರಂಥವೊಂದರ ಭಾಗವನ್ನು ಕೆತ್ತಲಾಗಿದೆ. ದೇವಗಡದ ಒಂದು ಶಿಲಾಫಲಕದ ಮೇಲೆ ಹದಿನೆಂಟು ಭಾಷೆಗಳನ್ನೂ ಅವುಗಳ ಲಿಪಿಗಳ ಮಾದರಿಯನ್ನೂ ಕೆತ್ತಲಾಗಿದೆ. ಇನ್ನೊಂದು ಬಹಳ ಕುತೂಹಲಜನಕ ಶಾಸನವೆಂದರೆ ಕುಡಿಮಿಯಾಮಲೈಯ ಶಾಸನ. ಮದರಾಸಿನ ಪುದುಕೋಟೆಗೆ ಸಮೀಪದಲ್ಲಿರುವ ಕುಡಿಮಿಯಾಮಲೈ ಎಂಬ ಬೆಟ್ಟದ ಮೇಲಿನ ಈ ಶಾಸನವು 'ಪ್ರಪಂಚದಲ್ಲಿ ಸ್ವರಪ್ರಸ್ತಾರವಿರುವ ಸಂಗೀತದ ಏಕೈಕ ಪ್ರಸ್ತರ ಶಾಸನ' (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೩೦–೩೧).

೩. 'ಕಾಳಿದಾಸನ ವಿಕ್ರಮೋರ್ವಶೀಯ ನಾಟಕದಲ್ಲಿ ಭೂರ್ಜಪತ್ರದ ಲಿಖಿತವೊಂದು ಗಾಳಿಗೆ ಹಾರಿಕೊಂಡು ಬಂದು ಬೀಳುತ್ತದೆ' (ಕ.ಗ್ರ.ಸಂ. ೩೭).

"ಪಡುವಣ ದೆಸೆಯಿಂದೊಪ್ಪುತ್ತಿರ್ದ ಲವಣಾಂಬುಧಿಗೆ ಪುರ್ಬುಂ ಪುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದಜೆದ ಮಂಡೆ ಮೌನವ್ರತದಿಂದೊಪ್ಪುತ್ತಿರ್ದ ದಿವ್ಯ ತಾಳಪತ್ರಮಂ ತಂದು" ಎಂಬ ಮಾತಿನಿಂದ ಇವು ಪಶ್ಚಿಮಘಟ್ಟದಲ್ಲಿ ವಿಶೇಷವೆಂದು ತಿಳಿದುಬರುತ್ತದೆ.[೪] ಭೂರ್ಜಪತ್ರದ ಮೇಲೆ ಅಕ್ಷರಗಳನ್ನು ಮಸಿಯಿಂದ ಬರೆದರೆ, ಈ ತಾಳಪತ್ರದ ಮೇಲೆ ಅಕ್ಷರಗಳನ್ನು ಕೊರೆದು ತರುವಾಯ ಮಸಿಯನ್ನು ಲೇಪಿಸುತ್ತಾರೆ.

ತಾಡಪತ್ರಂ ದೃಢಂ ಸೌಮ್ಯಂ ಋಜುಸಾಗ್ರಂ ದ್ವಿಧಾಕೃತಂ।
ಮೃದುಲಂ ಯತ್ಪ್ರಶಸ್ತಂ ತತ್ ಮತಂ ಲೇಖಾವಿಲೇಖನೇ॥

ಕರ್ಕಶಂ ಕಲ್ಮಷಂ ವಕ್ರಂ ಹೀನಾಗ್ರಂ ಸ್ಫುಟಿತಂ ಯುಗಂ ।
ತಾಲಪತ್ರಂ ನ ತತ್ ಶ್ರೇಷ್ಠಂ ಮತಂ ಲೇಖಾವಿಲೇಖನೇ ॥[೫]

ಎಂಬ ಶ್ಲೋಕಗಳು ಬರೆಹಕ್ಕೆ ಯೋಗ್ಯವಾಗಿರುವ ಮತ್ತು ಯೋಗ್ಯವಾಗಿರದ ಓಲೆಯ ಸ್ಥಿತಿ, ಸ್ವರೂಪಗಳನ್ನು ವಿವರಿಸುತ್ತವೆ. ಈ ಓಲೆಗಳನ್ನು ಬರೆಯಲು ಯೋಗ್ಯವಾಗುವಂತೆ ಮಾಡುವ ವಿಧಾನವನ್ನು ಕುರಿತು "ತಾಳಯ ಗರಿಗಳನ್ನು ಹಸಿದಾಗಿರುವಾಗ ಕುದಿನೀರಿನಲ್ಲಿ ಬೇಯಿಸಿ, ನೆರಳಲ್ಲಿ ಒಣಗಿಸಿ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿ ಮೃದುವಾಗಿ ಮಾಡುತ್ತಾರೆ. ಅದರ ಎರಡು ಪಕ್ಕಗಳೂ ಸಮತಲವಾಗುತ್ತವೆ. ಬರಹಕ್ಕೆ ಯೋಗ್ಯವಾಗುತ್ತದೆ"[೬] ಎಂದು ಶ್ರೀ ಡಿ. ಎಲ್. ಎನ್. ಹೇಳುವರು. ಇದರ ಆಯುಷ್ಯ ಸುಮಾರು ಒಂದು ಸಾವಿರ ವರ್ಷ. ಕರ್ನಾಟಕದ ತಾಳೆಪ್ರತಿಗಳನ್ನು ಕುರಿತು "ಇದು ವರೆಗೆ ನನ್ನ ಗಮನಕ್ಕೆ ಬಂದಿರುವ ಅತ್ಯಂತ ಪ್ರಾಚೀನ ಓಲೆಯ ಪ್ರತಿ ಕ್ರಿ.ಶ.೧೩೯೮ರಲ್ಲಿ ಲಿಖಿತವಾದದ್ದು.[೭] ಇದು ಪಂಪನ ಆದಿಪುರಾಣದ ಒಂದು ಪ್ರತಿ. ೧೯ನೆಯ ಶತಮಾನದಲ್ಲಿ ಕೂಡ ತಾಳಪತ್ರಗಳ ಮೇಲೆ ಬರೆಯುವದು ನಿಂತುಹೋಗಿರಲಿಲ್ಲ. ಕ್ರಿ.ಶ. ೧೮೨೨ರಲ್ಲಿ ಶ್ರೀ ರಾಮಾಚಾರ್ಯನಿಂದ ಕರ್ನಾಟಕ ಕಾದಂಬರಿಯ ಓಲೆಯ ಪ್ರತಿ ಲಿಖಿತವಾದಂತೆ ತಿಳಿದುಬರುತ್ತದೆ. ಅಚ್ಚಾದ ಗ್ರಂಥಗಳನ್ನು ಕೂಡ ಓಲೆಗಳ ಮೇಲೆ ಬರೆದಿರುವುದು ಕಂಡುಬರುತ್ತದೆ. ಶ್ರೀಮತ್ ಚನ್ನಪುರೀ

---

೪. ಮೈಹಸೂ–I ಪೀಠಿಕೆ X ('ಓಲೆಯ ಹೇಜೆಂಗೆ ಓಲೆಯ ಸೂಡೆರಡು ಆ ಹೊಜೆಗೆ ಸೂಡೊಂದು' ಎಂಬ ಬೆಳಗಾವಿ ಶಾಸನದ (ಶಾಸನ ಸಾಹಿತ್ಯ ಸಂಚಯ ಪು.೧೫೨) ವಾಕ್ಯದಿಂದ ಪ್ರಚೀನ ಕಾಲದಲ್ಲಿ ಬರೆಯುವ ಸಾಧನವಾಗಿದ್ದ ಓಲೆಯ ಗರಿಗಳನ್ನು ಪೇಟೆಯಲ್ಲಿ ಮಾರುತ್ತಿದ್ದರೆಂದು ತಿಳಿದು ಬರುತ್ತದೆ).

೫. ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಮೇಲ್ಮೆ (ಪ್ರ.ಕ.೪೭–೨).

೬. ಕ ಗ್ರ ಸಂ. ೩೮.

೭. ಗದಾಯುದ್ಧದ ಒಂದು ಪ್ರತಿಯ (ಮೈಹಸೂ–I ೩೮೭) ಕೊನೆಯಲ್ಲಿ 'ಸಕಸಮ ಗತಿ ರುತುಯುಗಶಶಿ ನಿಕರಾಂಕಂ ಚಿತ್ರಭಾನು ಕಾರ್ತಿಕ ಶಿತ ಸಪ್ತಮಿ ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ . . . ಕವಿರನ್ನ ವಿರಚಿತ ಚಾಳುಕ್ಯಚಕ್ರವರ್ತಿ ಸಾಹಸ ಭೀಮಸೇನಕಾವ್ಯಮಿದಂ ಶಕವರುಷ ೧೨೬೪ನೇ ಚಿತ್ರಭಾನು ಸಂವತ್ಸರದಲ್ಲಿ ಮಾಡಿದ ಕಾವ್ಯ" ಎಂಬ ಉಲ್ಲೇಖ ಬರುತ್ತದೆ. ನಕಲು ಪ್ರತಿಯ ಮಿತಿಯಾಗಿರಬಹುದಾದ ಇದು ಕ್ರಿ.ಶ.೧೩೪೨ಕ್ಕೆ ಸಮಾನವಾಗಿದೆ. ಹೀಗಾಗಿ ಈಗ ತಿಳಿದ ಮಟ್ಟಿಗೆ ಗದಾಯುದ್ಧದ ಈ ಹಸ್ತಪ್ರತಿಯೇ ತೀರ ಪ್ರಾಚೀನವಾದುದೆಂದು ಹೇಳಬಹುದು. ನಾಮ ಲಿಂಗಾನು ಶಾಸನದ ಟೀಕೆ (ಮೈಹಸೂ–II ೭೬೮) ಯ ಕೊನೆಗೆ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಸಕವರ್ಷ ೧೦೫೩ನೆಯ (೬–೨–೧೧೩೦) ಸೌಮ್ಯಸಂವತ್ಸರದ ಮಾಘ ಬಹುಳ ಏಕಾದಶಿ ಗುರುವಾರದಲ್ಲು ಶ್ರೀಮನ್ನಮ್ರಾಮರ x x x" ಎಂಬ ಉಲ್ಲೇಖವಿದೆ. ಇದು ಗ್ರಂಥ ನಕಲಿನ ಮಿತಿಯೊ ಗ್ರಂಥ ರಚನೆಯ ಮಿತಿಯೊ ಸ್ಪಷ್ಟವಾಗುವದಿಲ್ಲ.

(ಮದ್ರಾಸ) ಹಿಂದುಭಾಷಾ ಸಂಜೀವಿನೀ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾದ ಜೈಮಿನೀಭಾರತದ ಒಂದು ಪ್ರತಿಯನ್ನು ತಾಳಪತ್ರದ ಮೇಲೆ ಎರಡು ಸಂಪುಟಗಳಲ್ಲಿ ಲಿಖಿಸಿದೆ. ಮುದ್ರಣ ಕಲೆ ಬೆಳೆದು ಹೆಚ್ಚು ಹೆಚ್ಚಾಗಿ ರೂಢಿಗೆ ಬಂದ ಹಾಗೆಲ್ಲ ಓಲೆಗಳಲ್ಲಿ ಬರೆದು ನಕಲುಮಾಡುವುದು ನಿಂತುಹೋಯಿತು"[೮] ಎಂಬ ಡಿ.ಎಲ್.ಎನ್.ಅವರ ಮಾತುಗಳನ್ನು ಗಮನಿಸಬೇಕು. ಹೀಗೆ ೧೯ನೆಯ ಶತಮಾನದಲ್ಲಿ ನಿಂತುಹೋದ ತಾಳೆಗರಿಯು ಪ್ರಾಚೀನ ಕನ್ನಡಿಗರ ಬರವಣಿಗೆಯ ವಿಶೇಷ ವಸ್ತುವಾಗಿತ್ತು.

"ಬರೆಬರೆದೋಲೆಗಳಂ ಕಿಡಿಸುವಂತು ತಾಟಿೊಳ್ ಪಗೆಯೇ"[೯]

"ತಾಳೆವೋಲೆಗಳಜೆವವೇ ಲಿಪಿಭೇದವ"[೧೦]

ಎಂಬ ಹೇಳಿಕೆಗಳನ್ನು ಇಲ್ಲಿ ನೆನೆಯಬಹುದು.

ಅಭಿನವ ಮಂಗರಾಜನ (೧೩೯೮) "ಪತ್ತಳಿಕೆಯೆನಲು ಕಾಗದಮಕ್ಕು, ದೌತಿ ಮಸಿಪಾತ್ರೆಯಕ್ಕು, ಕಲಾಮು ಲೇಖನಿಯಕ್ಕು"[೧೧] ಎಂಬ ಮಾತಿನಂತೆ, ಕರ್ನಾಟಕದಲ್ಲಿ ಕಾಗದದ ಬಳಕೆ ಕ್ರಿ.ಶ.೧೩೯೮ರಷ್ಟು ಹಿಂದೆ ಹೋಗುತ್ತದೆ. 'ಕಾಗಜ್' ಪದದ ಇನ್ನೊಂದು ರೂಪವಾಗಿರುವ ಇದು ಮಹಮ್ಮದೀಯರಿಂದ ಕರ್ನಾಟಕಕ್ಕೆ ಬಂದಿರಬಹುದು. ಆರಂಭದಲ್ಲಿ ರಟ್ಟಿನಂತಹ ದಪ್ಪನೆಯ, ತಿಳಿಕಪ್ಪು ಬಣ್ಣದ ಕಾಗದಗಳಿದ್ದವು. ಅವುಗಳಿಗೆ ಪ್ರಾಚೀನರು ಕರೆಯುತ್ತಿದ್ದ ಹೆಸರು 'ಕೋರಿ ಕಾಗದ'. ನಮ್ಮ ಹಸ್ತಪ್ರತಿ ಸಂಪತ್ತನ್ನು ತಾಳೆಪ್ರತಿಗಳು, ಕಾಗದಪ್ರತಿಗಳು ಎಂದು ಬೇರಳಿಟ್ಟು ವಿಭಾಗಿಸುವಷ್ಟು ಪ್ರಮಾಣದಲ್ಲಿ ಕೋರಿಕಾಗದ ಗ್ರಂಥಗಳು ಹುಟ್ಟಿಕೊಂಡಿವೆ. ಈ ಓಲೆ, ಕಾಗದಗಳು ಬಹುಕಾಲ ಬಾಳುವ ವಸ್ತುಗಳು.[೧೨] ಕಾತ್ಯಾಯನ ಧರ್ಮಶಾಸ್ತ್ರದಲ್ಲಿ ಕರಡುಪ್ರತಿಗೆ ಪಾಂಡುಲಿಪಿಯೆಂದೂ, ಶುದ್ಧ ಪ್ರತಿಗೆ ಹಸ್ತಲಿಪಿಯೆಂದೂ ಕರೆಯಲಾಗಿದೆ.

ಇನ್ನು ತತ್ಕಾಲದ ಬರೆವಣಿಗೆಗೆ ಉಪಯೋಗವಾಗುವ ವಸ್ತುಗಳೆಂದರೆ ಅರಿವೆಯಿಂದ ಸಿದ್ಧವಾಗುವ ಕಡತ, ಕಟ್ಟಿಗೆಯಿಂದ ಸಿದ್ಧವಾಗುವ ಹಲಗೆ. "ಸ್ವಲ್ಪ ಮಟ್ಟಿಗೆ ಮಂದವಾಗಿರುವ ಹತ್ತಿಯ ಬಟ್ಟೆಗೆ ಹುಣಸೇ ಬೀಜದ ಚರಿಯನ್ನು ಸಮತಲವಾಗಿ ಮೆತ್ತಿ, ನಯವಾದ ಗಾರೆಕಲ್ಲಿನಿಂದ ಉಜ್ಜಿ ಹದವಾಗಿ ಒಣಗಿಸಿ, ಅದಕ್ಕೆ ಇದ್ದಲ ಪುಡಿಯನ್ನೋ ದೀಪದ ಕಾಡಿಗೆಯನ್ನೋ ಬಳಿದು, ಕಡತಗಳನ್ನು ಸಿದ್ಧಪಡಿಸುತ್ತಿದ್ದರು."[೧೩] ಅಳಿಸಿ ಮತ್ತೆ ಬರೆಯಲು ಅನುಕೂಲವಾಗುತ್ತಿದ್ದ ಇದರ ಉಲ್ಲೇಖ ಕರ್ನಾಟಕದಲ್ಲಿ ಮಧ್ಯಯುಗದಷ್ಟು ಪ್ರಾಚೀನ. ಉದಾ:

---

೮. ಕಗ್ರಸಂ ೩೮–೩೯

೯. ಹರಿವಂಶಾಭ್ಯುದಯ (ಕಕಚ–೧೯೬೮–ಪು.೩೩೯)

೧೦. ಜಿನದತ್ತರಾಯ ಚರಿತೆ ೬–೬೩

೧೧. ಅಭಿಧಾ ೧೦೫–೧೫.

೧೨. ಕ್ರಿ.ಶ.೧೦೨ ರಲ್ಲಿ ತ್ಸಾಯ್‌ಲುನ್ ಎಂಬ ಚೀನೀಯನು ಕಾಗದವನ್ನು ಕಂಡುಹಿಡಿದನೆಂದು ತಿಳಿದು ಬರುತ್ತದೆ (ಭಾಗ್ರಪ ಪು.೧೯ ಅ.ಟಿ.)

೧೩. ಕ.ಗ್ರಂ. ೩೯–೪೦

"ಕಡತಕ್ಕೇಱೆತ್ತು ನಾಲ್ಕುಂ ಕಡಲ ಕಡೆವರಂ ಧಾತ್ರಿ"[೧೪]

"ಚೇರಮನ ಚೋಳನ ಪಾಂಡ್ಯನ ನಾಡೆ ಕೈಗೆವಂದುದು
ಕಡತಕ್ಕಮುಂಡಿಗೆಗಮೋಲೆಗಮೀ ಶುಭತುಂಗದೇವನಾ"[೧೫]

ಇದಲ್ಲದೆ ಶಾಸನಗಳಲ್ಲಿ ಕಾಣಸಿಗುವ "ಕಡತವಗ್ಗಡೆ"[೧೬] ಎಂಬ ಆಡಳಿತ ಪರಿಬಾಷೆ, ಕಡತದಲ್ಲಿ ರಾಜ್ಯದ ಲೆಕ್ಕಪತ್ರಗಳನ್ನು ಬರೆಯುವ ಅಧಿಕಾರಿಗಳನ್ನು ಸೂಚಿಸುತ್ತಿರಬೇಕು. ತಕ್ಕಷ್ಟು ಅಗಲವಿರುವ, ಸಾಕಷ್ಟು ಉದ್ದವಿರುವ, ಇದನ್ನು ಬಟ್ಟೆಯ ಗಳಿಗೆಯಂತೆ ಮಡಿಸುತ್ತಿದ್ದರು, ಇಲ್ಲದೆ ಸುತ್ತುತ್ತಿದ್ದರು. ಪ್ರಾಚೀನ ಮಠ ಮತ್ತು ಅರಮನೆಗಳಲ್ಲಿ ಇವು ನೋಡಲು ಇನ್ನೂ ದೊರೆಯುತ್ತವೆ.

ಕಡತದಂತೆ ಉಪಯೋಗವಾಗುತ್ತಿದ್ದ ಇನ್ನೊಂದು ವಸ್ತು, ಕಟ್ಟಿಗೆಯ ಹಲಗೆ. ತೆಳ್ಳನೆಯ ನುಣುಪಾದ ಕಟ್ಟಿಗೆಯ ಮೇಲೆ ಕಪ್ಪು ಬಣ್ಣವನ್ನು ಲೇಪಿಸಿ ಬಳಪದಿಂದ ಬರೆಯುತ್ತಿದ್ದರು. ಕಾವ್ಯವನ್ನು ಓಲೆಗೆ ಇಳಿಸುವ ಮೊದಲು ಬರೆದು ಅಳಿಸಲು ಅನುಕೂಲವಾಗುತ್ತಿದ್ದ ಇದರ ಮೇಲೆ ಪದ್ಯಗಳನ್ನು ಹೊಸೆಯುತ್ತಿರಬೇಕು. ಪಂಪನ "ಬರೆಪಕಾಱರ ಕೈಗಳ ಕೇಡು ನುಣ್ಣನಪ್ಪಳಕದ ಕೇಡು",[೧೭] ಕುಮಾರವ್ಯಸನ "ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ"[೧೮] ಎಂಬ ಮಾತುಗಳು ಇದರ ಬಳಕೆಯನ್ನು ಸೂಚಿಸುವಂತಿವೆ.

೨. ಕಲ್ಲು, ಲೋಹಗಳಿಗೆ ಉಳಿಯನ್ನೂ ಭೂರ್ಜಪತ್ರಕ್ಕೆ ಲಾಳದ ಕಡ್ಡಿ, ಬಿದಿರಿನ ಗಲಗು, ನವಿಲುಗರಿಯ ಕಾಂಡ, ಮುಳ್ಳುಹಂದಿಯ ಮುಳ್ಳುಗಳನ್ನೂ ತಾಳೆಪತ್ರಗಳಿಗೆ ದಬ್ಬಣದಂತಹ ಉಕ್ಕಿನ ಕಂಟಗಳನ್ನೂ ಉಪಯೋಗಿಸುತ್ತಿದ್ದರು. ಕರ್ನಾಟಕದಲ್ಲಿ ಓಲೆಯ ಮೇಲೆ ಬರೆಯಲು ಸಾರ್ವತ್ರಿಕ ಉಪಯೋಗಿಸುತ್ತಿದ್ದ ವಸ್ತು, ಕಂಟ.

"ಕಂಟಮೊನೆ ಬಾಳ್ಮೊನೆಯಾಗಿರೆ"[೧೯]

"ನಾಲ್ದೆಸೆಯೋಳ್ ನಾಲ್ವರು ಕಂಟದೊಳ್ ಬರೆಯೆ ಕಬ್ಬಂಬೇಟ್ಸ್ಪೊ"[೨೦]

"ಮಾಯದ ಕೈಯಲ್ಲಿ ಓಲೆ ಕಂಟವ ಕೊಟ್ಟರೆ ಲಗುನ ವಿಗುನವ
ಬರೆಯಿತ್ತು ನೋಡಾ"[೨೧]

"ಬಳಸಿ ಬರೆಯಲು ಕಂಟಪತ್ರದ ಉಲುಹುಗೆಡದಗ್ಗಳಿಕೆ"[೨೨]

---

೧೪. SII IX-i 343 (1226).

೧೫. ಸೂಕ್ತಿ ೫–೭

೧೬. EC.VI.MG. 7.

೧೭. ಪಂಭಾ ೧–೧೨

೧೮. ಕುಭಾ ೧–೧೫

೧೯. ಅನಂತನಾಥ ಪುರಾಣಂ ೨–೨೪

೨೦. ಕವಿಕಾಮನ ಶೃಂಗಾರರತ್ನಾಕರ (ಕ ಕ ಚ ೩೫೫)

೨೧. ಅವಚಂ ೧೬

೨೨. ಕು ಭಾ ೧–೧೫

"ಬಾಲಿ ಸರಸ್ವತಿ ಕೈಯ ಕಂಟವು । ತಾಳಪತ್ರದ ಮೇಲೆ ಬರೆವುತ ।
ಬಾಲ ಶಿವಕವಿ ಮಲ್ಲ ಬೇಡಿದ ವರನ ಕೃಪೆಮಾಡು ॥"[೨೩]

"ರಾಮಚಂದ್ರಾನುಗ್ರಹದಿಂದ ಕರದೊಳ್ ಕಂಟಮಂ ಪಿಡಿದು, ಈ
ಸಂಚಿಕೆಯೊಳ್ ಬರೆದ ಬರಹವು ಸಂಪೂರ್ಣಂ"[೨೪]

ಈ ಮಾತುಗಳು ಓಲೆಯ ಮೇಲೆ ಬರೆಯಲು ಬಳಸುತ್ತಿದ್ದ ಕಂಟದ ವಿಷಯವನ್ನು ತಿಳಿಸುತ್ತವೆ. ಈ ಕಂಟ ಅಲಂಕೃತವಾಗಿಯೋ ಅಭಿರುಚಿಗೆ ತಕ್ಕಂತೆ ಸುಳುಹು ಸಾಲಂಕೃತವಾಗಿಯೋ ಉಲಿವ ಗೆಜ್ಜೆಯುತವಾಗಿಯೋ[೨೫] ಇರುತ್ತದೆ. ಬರೆಯಲು ಯೋಗ್ಯವಾಗುವಂತೆ ಇದರ ಒಂದು ಇಲ್ಲವೆ ಎರಡೂ ತುದಿಗಳನ್ನು ಮೊನಚುಗೊಳಿಸಿರುತ್ತಾರೆ. ಬರೆಯದ ಸಮಯದಲ್ಲಿ ಬಿದಿರಿನ ಕೊಳವೆಗಳಿಂದ ಮುಚ್ಚಿ, ಈ ಮೊನಚುಗಳನ್ನು ರಕ್ಷಿಸುತ್ತಾರೆ.

೩. ಸಂಸ್ಕೃತದ 'ಮಷಿ' ಪದದ ತದ್ಭವ ಮಸಿ, ಗದಾಯುದ್ಧದ "ಶರಮೊಂದಂ ತೆಗೆದು ನಿಜೋದರದಿಂ ಲೆಕ್ಕಣಿಕೆ ಮಾಡಿ, ಗಜಮದಮಸಿಯಂ ತರಿಸಿ, ಪತಾಕಾಪಟದೊಳ್ ಬರೆದಟ್ಟಿದನ್",[೨೬] ವಡ್ಡಾರಾಧನೆಯ "ಉಪಾಧ್ಯಾಯಂ ಶಾಲಿ ಕೂರಂ ಚ ಮಶೀಂ ಘೃತಂ ದತ್ವಾ ಕುಮಾರಮಧ್ಯಾಪಯೇತ್"[೨೭] ಎಂಬ ಮಾತುಗಳು ಕನ್ನಡಿಗರಿಗಿದ್ದ ಮಸಿಯ ಪರಿಚಯದ ಪ್ರಾಚೀನತೆಯನ್ನು ವ್ಯಕ್ತಗೊಳಿಸುತ್ತವೆ. "ಮಸಿಯನ್ನು ಮಾಡುವ ವಿಧಾನಗಳು ಬಗೆಬಗೆಯಾಗಿವೆ. ರಾಗಿಯನ್ನು ಹುರಿದು ಸೀಯಿಸಿ ಪುಡಿಮಾಡಿ ನೀರಿನಲ್ಲಿ ಕಲಸಿ ಅದಕ್ಕೆ ಗೋಂದನ್ನೋ ಸಕ್ಕರೆಯನ್ನೋ ಅಂಟಿಗಾಗಿ ಸ್ವಲ್ಪ ಮಿಶ್ರಮಾಡಿ ಅದನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದರು. ಇದಕ್ಕೆ ರಾಗಿಮಸಿ ಎಂದು ಹೆಸರು. ಕಾಗದದ ಮೇಲೆ ಬರೆಯಲು ಇದನ್ನು ಬಳಸುತ್ತಿದ್ದರು. ಅಳಲೆಕಾಯಿ ಅನ್ನಭೇದಿ ಮುಂತಾದವುಗಳಿಂದ ಮಸಿಯನ್ನು ತಯಾರಿಸುತ್ತಿದ್ದರು. ಇದೇ ಅಳಲೆಕಾಯಿ ಮಸಿ. ಮಸಿಯೆಂಬರ್ಥದಲ್ಲಿ ಮೇಲಾ ಎಂಬೊಂದು ಸಂಸ್ಕೃತ ಶಬ್ದವಿದೆ. ಇದನ್ನು ಸುಬಂಧು ತನ್ನ ಗ್ರಂಥದಲ್ಲಿ ಪ್ರಯೋಗಿಸಿದ್ದಾನೆ. ಈ ಶಬ್ದದ ಪ್ರಾಕೃತ ರೂಪ ಮಯಿಲಾ; ಅರ್ಥ ಕರಿಯದು, ಕೊಳಕಾದುದು ಎಂದು. ಇದಕ್ಕೆ ಬಹುಶಃ ಮಯಿಲ ತುತ್ತವನ್ನು (Copper Sulphate) ಸ್ವಲ್ಪ ಬೆರಕೆ ಮಾಡುತ್ತಿದ್ದಿರಬಹುದು. ಬರಿ ಇದ್ದಲಿನ ಪುಡಿಯನ್ನು ವಸ್ತ್ರಗಾಲಿತಮಾಡಿ ಅದಕ್ಕೆ ನೀರು, ಗೋಂದು, ಸಕ್ಕರೆ ಮುಂತಾದುವನ್ನು ಹದವರಿತು ಬೆರಸಿ ಮಸಿಯನ್ನು ಮಾಡುತ್ತಿದ್ದುದೂ ಉಂಟು. ಇದಲ್ಲದೆ ಬಗೆಬಗೆಯ ಬಣ್ಣದ ಮಸಿಗಳೂ ಇದ್ದವು. ಚಂದ್ರ, ಹಿಂಗುಲ, ಅರಿದಾಳ ಮುಂತಾದವುಗಳಿಂದ ಬಣ್ಣದ ಮಸಿಗಳಾಗುತ್ತಿದ್ದವು"[೨೮] ಎಂದು ಡಾ. ಡಿ.ಎಲ್.ಎನ್.ಹೇಳುತ್ತಾರೆ. ಆದರೆ ತಾಳೆಗರಿಗೆ

---

೨೩. ರೇವಣಸಿದ್ಧೇಶ್ವರ ಕಾವ್ಯ-ಕವಿ ಮಲ್ಲ (KRI.II. 35)

೨೪. ಮ ಹ ಪ್ರ iii ೩೮೩. ಪದ್ಮಾವತೀ ಚರಿತ್ರೆ.

೨೫. ಗೆಜ್ಜೆಯ ಕಂಟವೊಂದು ಕನ್ನಡ ಅಧ್ಯಯನ ಪೀಠ, ಧಾರವಾಡ ಸಂಗ್ರಹದಲ್ಲಿದೆ. ಕುಮಾರವ್ಯಾಸನ "ಬಳಸಿ ಬರೆಯಲು ಕಂಟ ಪತ್ರದ ಉಲುಹುಗೆಡದಗ್ಗಳಿಕೆ" ಎಂಬ ಮಾತು ಇಂಥ ಗೆಜ್ಜೆಕಂಟದ ಉಲುಹನ್ನು ಸೂಚಿಸುತ್ತಿರಬಹುದೇ ?

೨೬. ಗದಾಯು. ೬-೨

೨೭. ವಡ್ಡಾ, ೭೫.

೨೮. ಕಗ್ರ ಸಂ. ೪೩-೪೪

ಲೇಪಿಸುವ ಮಸಿಯನ್ನು ಸಿದ್ಧಗೊಳಿಸುವ ವಿಧಾನವನ್ನು ಕುರಿತು ಯಾರೂ ಹೇಳಿಲ್ಲ. ಇಂದ್ರನಂದಿಯ ಜ್ವಾಲಾಮಾಲಿನೀಕಲ್ಪದ ಒಂದು ತಾಳೆಪ್ರತಿಯ ಕೊನೆಯಲ್ಲಿ ಮಾತ್ರ "ಶ್ರೀಮತು ದೇವೇಂದ್ರಕೀರ್ತಿ ಹಸ್ತಾಂಜನ। ಬಿಳಿಯ ದಾಸಿವಾಣದ ಬಡಗ ಹರಿದ ಬೇರಂ ತಂದು ತೇದು, ಹೊಸ ಹಂಚಿಗೆ ವೂಡಿ, ಅಲತಗೆಯ ಬತ್ತಿಯ ಮಾಡಿ ಆಮದಮ(ನು?)ಡಿ ಕಾಳಿ ಆವಿನ ತುಪ್ಪದಲ್ಲಿ ಕಾಡಿಗೆವಿಡಿದು, ಮದು ಕರ್ಪುರದಿಂದಮರ್ದಿ x x x x x"[೨೯] ಎಂಬ ಅಶುದ್ಧ ಮತ್ತು ತ್ರುಟಿತ ವಾಕ್ಯವಿದ್ದುದು ನನ್ನ ಕಣ್ಣಿಗೆ ಬಿದ್ದಿತು. ಇಲ್ಲಿ ಹೇಳಿದ ಓಲೆಗರಿಗಳಿಗೆ ಲೇಪಿಸುವ ಮಸಿಯನ್ನು ಸಿದ್ಧಮಾಡುವ ವಿಧಾನ ಅಪರೂಪವಾದುದು. ಜೊತೆಗೆ 'ಹಸ್ತಾಂಜನ' ಎನ್ನುತ್ತ, ಮಸಿಲೇಪಿಸಿದವನ ಉಲ್ಲೇಖ ಬಂದುದೂ ತುಂಬ ಅಪರೂಪವಾದುದು.

ಈ ಮಸಿಲೇಪನವನ್ನು ಪ್ರಾಚೀನಕಾಲದಲ್ಲಿ "ಕಪ್ಪನಿಡು" ಎಂದು ಕರೆಯುತ್ತಿರಬಹುದು. "ಯಿ ಪುಸ್ತಕದಲ್ಲಿ ಬರೆದು ಕಪ್ಪನಿಟ್ಟುಯಿರುವ ವಾಲೆ ೨೫೩ ನಿದಾನವಾಗಿದೆ"[೩೦] ಎಂಬ ಹೇಳಿಕೆ ಇದನ್ನು ಸಮರ್ಥಿಸುತ್ತದೆ.

ಬಾಣ ಪೇಟಿದ ಕಾದಂಬರಿ ಕಾವ್ಯವ। ಕ್ಷೋಣಿಯಜಿಕೆಯೊಳು ಸುಡಿಸಿ।
ಮಾಣದೆ ಲೀಲಾವತಿಗೆ ಕಪ್ಪಿಡಿಸಿದ। ಜಾಣ ನೇಮಿಯ ಬಲಗೊಂಬೆ॥[೩೧]

ಸುಡಿಸಿ ಕಾದಂಬರಿಯನು ಲೀಲಾವತಿ। ಗಿಡಿಸಿ ಕಪ್ಪನು ಕೀರ್ತಿ ಜಗವ।
ಎಡೆಗೊಂಡ ನೇಮಿಚಂದ್ರನ ಚಮತ್ಕೃತಿ ಬಂ।ದೆಡೆಗೊಳ್ಳುವದೆನ್ನ ಚಿತ್ತದೊಳು॥[೩೨]

ಎಂಬ ಪದ್ಯಗಳಲ್ಲಿಯ ದಂತಕಥೆಗಳಲ್ಲಿ ಬರುವ "ಕಪ್ಪನಿಡು" ಎಂಬುದಕ್ಕೆ ತಿಲಕ ಹಚ್ಚು ಎಂಬ ಅರ್ಥವಿರದೆ, ಗರಿಗಳ ಮೇಲೆ ಕಾಡಿಗೆ ಲೇಪಿಸು ಅರ್ಥವೇ ಇರಬಹುದು.

ಲಿಪಿಕಾರರು

'ಲೇಖಕ' ಸಂಸ್ಕೃತದಲ್ಲಿ ತುಂಬ ಹಳೆಯ ಪದ. 'ಲಿಪಿಕಾರ' ಅದಕ್ಕಿಂತ ಇತ್ತೀಚಿನ ಪದ. ಅಶೋಕನ ಶಾಸನಗಳಲ್ಲಿ ಬರುವ ಲಿಪಿ, ಲಿಬಿ, ದಿಪಿ ಎಂಬ ಪದಗಳಿಗೆ ಮೂಲವಾಗಿರುವ 'ದಿಪಿ' ಪಾರಸೀ ಪದವಿದ್ದು, ಕ್ರಿ.ಶ.ಪೂ. ೫೦೦ಕ್ಕೆ ಭಾರತವನ್ನು ಪ್ರವೇಶಿಸಿದೆಯಂತೆ.[೩೩] ಕನ್ನಡಗರು 'ಲೇಖನ' ಅರ್ಥದಲ್ಲಿ 'ಬರೆಪ' 'ಬರೆಹ' ಪದಗಳನ್ನು ಬಳಸಿರುವರು. ಪ್ರಾಚೀನ ಶಾಸನಗಳಲ್ಲಿ ಬರುವ

---

೨೯. ಜ್ವಾಲಾಮಾಲಿನೀ ಕಲ್ಪದ ಅಂತ್ಯ (KRI ಪ್ರತಿ ೮೫೧)
೩೦. ಮೈಹಸೂ. I ೨೭೬ ಕಾಲಜ್ಞಾನ.
೩೧. ದೊಡ್ಡಯ್ಯನ ಚಂದ್ರಪ್ರಭ ಚರಿತೆ (ಕಕಚ. ೨೯೨)
೩೨. ಬಾಹುಬಲಿಯ ನಾಗಕುಮಾರ ಚರಿತೆ (ಕಕಚ ೨೬೧). ದೇವಚಂದ್ರನ ರಾಜಾವಳೀ ಕಥೆಯಲ್ಲಿಯ "ಕಾದಂಬರಿ ಕಾವ್ಯ ಪುಸ್ತಕಮಂ ಸುಟ್ಟು ಲೀಲಾವತಿಗೆ ಕಪ್ಪನಿಡುವಲ್ಲಿ ... " ಎಂಬ ವಾಕ್ಯವನ್ನು ಇಲ್ಲಿ ಲಕ್ಷಿಸಬೇಕು.

"ಸಿರಿಗಾವುಣ್ಡನ ಎಟ್ಟು ಪುದಿದುದು" "ಛಲಭೂಷನನ್ ಎಟ್ತ್" ಎಂಬ ವಾಕ್ಯಗಳಲ್ಲಿಯ 'ಎಟ್ಟು' ಪದಕ್ಕೆ 'ಲೇಖನ' ಎಂದು ಅರ್ಥ. ಇದರ ಜ್ಞಾತಿಪದಗಳಾದ ಎಟುತ್ತು ಎಂಬುದು ತಮಿಳು ಮಲಯಾಳಂ ಭಾಷೆಗಳಲ್ಲಿ, ಎಳ್ಥ್ ಎಂಬುದು ಕೋತ ಭಾಷೆಯಲ್ಲಿ ಕಂಡುಬರುತ್ತವೆ.[೩೪]

ಅಶೋಕನ ಬ್ರಹ್ಮಗಿರಿ ಶಾಸನದ ಕೊನೆಯಲ್ಲಿ "ಚಪಡೇನ ಲಿಖಿತಂ ಲಿಪಿಕರೇಣ" ಎಂಬ ವಾಕ್ಯವಿದೆ. ಇದರ ಮೊದಲೆರಡು ಪದಗಳನ್ನು ಬ್ರಾಹ್ಮಿಯಲ್ಲಿ, ಕೊನೆಯ ಪದವನ್ನು ಖರೋಷ್ಠಿಯಲ್ಲಿ ಬರಯಲಾಗಿದೆ. ವೃತ್ತಿಯಿಂದ ಲಿಪಿಕಾರನಾಗಿರಬಹುದಾದ, ಉತ್ತರ ಹಿಂದುಸ್ತಾನದಿಂದ ಬಂದಿರಬಹುದಾದ ಈ ಉಭಯಲಿಪಿ ಬಲ್ಲಿದ ಚಪಡನು ಕನ್ನಡನಾಡಿನಲ್ಲಿ ಕಾಣುವ ಪ್ರಥಮ ಲಿಪಿಕಾರ.[೩೫] ಇಲ್ಲಿಂದ ಮುಂದೆ ಕರ್ನಾಟಕದ ಶಾಸನ ಮತ್ತು ಹಸ್ತಪ್ರತಿಗಳಲ್ಲಿ ಹಲವು ವೃತ್ತಿಯ, ಹಲವು ಮನೋವೃತ್ತಿಯ ಲಿಪಿಕಾರರು ಕಂಡುಬರುತ್ತಾರೆ. ಇವರನ್ನು

೧. ನಿಯುಕ್ತ ಲಿಪಿಕಾರರು (Appointed Writers)

೨. ವೃತ್ತಿ ಲಿಪಿಕಾರರು (Professional Writers)

೩. ಹವ್ಯಾಸಿ ಲಿಪಿಕಾರರು (Amateur Writers)

ಎಂದು ವರ್ಗೀಕರಿಸಬಹುದಾಗಿದೆ.

ನಿಯುಕ್ತ ಲಿಪಿಕಾರರು :

ಸಂಧಿವಿಗ್ರಹಿ, ಮಹಾಸಂಧಿವಿಗ್ರಹಿ, ಕರಣ, ಶ್ರೀಕರಣ, ಕುಳಕರಣಿ, ಸೇನಬೋವ, ಶಾಸನಿಕ, ಧರ್ಮಲೇಖಿನ್ ಎಂಬ ವಿಶೇಷಣವುಳ್ಳ ವ್ಯಕ್ತಿಗಳು ಶಾಸನ ಬರೆದಿದ್ದು; ಇವರಲ್ಲಿ ಕೆಲವರು ಲೇಖನಕಾರ್ಯಕ್ಕಾಗಿಯೇ ನಿಯಮಿಸಲ್ಪಟ್ಟ ಅಧಿಕಾರಿಗಳೆಂದು ತಿಳಿದುಬರುತ್ತದೆ. ಇವರಿಗೆ ಸಂಬಳ, ವರ್ಷಾಸನ ಇಲ್ಲವೆ ಉಂಬಳಿಗಳಿರಬಹುದು. ಆಡಳಿತ ವಿಭಾಗಕ್ಕೆ ಸೇರಿದ ಇವರ ಸೇವೆ ಸಾಹಿತ್ಯಕೃತಿಗಳನ್ನು ಲಿಪಿಗೆಯ್ಯುವಲ್ಲಿ ಅಷ್ಟಾಗಿ ಸಂದಿಲ್ಲ. ವಸ್ತುಸ್ಥಿತಿ ಹೀಗಿದ್ದರೂ

"ಆದಿತ್ಯ ಪುರಾಣ ಬರೆಯುವುದಕ್ಕೆ ನಿರ್ವಿಘ್ನಮಸ್ತು . . . . ಅರಮನೆ ಲೇಖರೀ ಕಾನಕಾನಹಳ್ಳಿ ದಾಸಪ್ಪನ ಬರಹಾ"[೩೬]

"ಸುಬೇದಾರ ವೀರಣ್ಣನವರ ರಾಯಸ್ತ ವೆಂಕಟರಮಣಯ್ಯನ ಕೈಲಿ ಬರೆಸಿದ ಅಂಬಿಕಾವಿಜಯಕೆ ನಿತ್ಯ ಜಯಮಂಗಳ ಮಹ"[೩೭]

---

೩೩. ಕಗ್ರಸಂ. ೪೬-೪೭

೩೪. ಕಗ್ರಸಂ. ೩೨

೩೫. ಕಗ್ರಸಂ. ೪೭

೩೬. ಮೈಹಸೂ I ೧೨೨. ಆದಿತ್ಯ ಪುರಾಣ

೩೭. ಮಹಸೂ II ೧೯೯. ಅಂಬಿಕಾ ವಿಜಯ

"..............ಪದುಮಣಯ್ಯನವರಿಗೆ ಅನಂತ ಶೇನಭೋವನು ಬರೆದ ರುಕ್ಮಾಂಗದ ಚರಿತ್ರೆಗೆ ಶುಭಮಸ್ತು"[೩೮]

ಈ ಉದ್ಧರಣೆಗಳಲ್ಲಿ ಕಂಡುಬರುವ ಲೇಖರಿ, ಸೇನಬೋವ, ರಾಯಸ್ತದವರು ಹಸ್ತಪ್ರತಿಗಳ ನಕಲುಕಾರ್ಯ ಮಾಡಿದುದನ್ನು ಗಮನಿಸಬಹುದು.

ವೃತ್ತಿ ಲಿಪಿಕಾರರು :

ಸಮಾಜದ ಕೆಲವು ಅಕ್ಷರಜ್ಞರಿಗೆ ಲೇಖನವೃತ್ತಿ ಉಪಜೀವನದ ಅಧಾರವಾಗಿರಲು ಸಾಧ್ಯ. "ಶಾಸನವ ಬರೆದ ಸೇನಬೋಗ ದಯಣಂಗೆ ವೃತ್ತಿ"[೩೯] ಎಂಬ ವಾಕ್ಯ ಶಾಸನ ಲಿಪಿಕಾರನಿಗೆ ಸಂದ ಪ್ರತಿಫಲವನ್ನು ಹೇಳುತ್ತದೆ. ಗ್ರಂಥಲಿಪಿಕಾರನಿಗೂ ಇದೇ ರೀತಿಯ ಪ್ರತಿಫಲ ದೊರೆಯುತ್ತಿರಬಹುದು. ತೊರವೆ ರಾಮಾಯಣದ ಒಂದು ಓಲೆಪ್ರತಿಯ ಕೊನೆಯಲ್ಲಿ ಬರುವ "ಈ ರಾಮಾಯಣ ಪುಸ್ತಕ ಕಿದುವಿನ ಕೋಟೆ ಗೋಪಾಲಯ್ಯನ ತಮ್ಮ ನೀಲಯ್ಯನಿಗೆ ಬರೆದು, ಕಾಣಿಕೆ ತೆಗೆದುಕೊಂಡು ಕೊಟ್ಟೆನು"[೪೦] ಎಂಬ ಮಂಜೇಶ್ವರದ ಲಿಪಿಕಾರ ಲಿಂಗಣ್ಣ ಮಾತನ್ನು ಇಲ್ಲಿ ಗಮನಿಸಬಹುದು. "ಚಿನ್ನವರದ ಬಸವಪ್ಪಯ್ಯನವರಿಗೆ ಪ್ರಸಾದಿ ಮಹದೇವಯ್ಯನ ಶೂನ್ಯ ಸಂಪಾದನೆಯನ್ನು ಬರೆದುಕೊಟ್ಟ ಗುಮ್ಮಹಾಳಪುರದ ಬರಹದ ಬಸವಣ್ಣೊಡೆಯ"[೪೧] "ಬಿದರೆಯ ಅಂತಣ್ಣಗಳಾದ ಜೀಯನವರುಗಳಿಗೆ ಪೊನ್ನನ ಶಾಂತಿಪುರಾಣವನ್ನು ಬರದುಕೊಟ್ಟ ಬೆಳತಂಗಡಿಯ ಬರೆಹದ ಶೆಟ್ಟಿ ಶಾಂತು"[೪೨] ವಾಕ್ಯಗಳಲ್ಲಿ ಬರುವ 'ಬರಹದ' ಎಂಬ ವಿಶೇಷಣವುಳ್ಳ ವ್ಯಕ್ತಿಗಳೂ ವೃತ್ತಿಲಿಪಿಕಾರರಾಗಿರಬಹುದು.

ಹವ್ಯಾಸಿ ಲಿಪಿಕಾರರು :

ಕೆಲವು ಅಕ್ಷರಜ್ಞರು ಸ್ವ-ಪರ ಪ್ರಯೋಜನಕ್ಕೋಸುಗ ಗ್ರಂಥಗಳನ್ನು ಪ್ರತಿಮಾಡುತ್ತಿದ್ದರು. ತಮಗಾಗಿ, ಸಮಾಜದ ಬಗೆಬಗೆಯ ವ್ಯಕ್ತಿಗಳಿಗಾಗಿ ಪ್ರತಿ ಬರೆದ ಇವರಲ್ಲಿ ಅಭ್ಯಾಸಿ, ಗುರು, ಉಪಾಧ್ಯಾಯ, ವಿದ್ಯಾರ್ಥಿ, ಅರಸು ಇತ್ಯಾದಿ ವರ್ಗಗಳಿಗೆ ಸೇರಿದವರಿದ್ದಾರೆ. ಇವರಲ್ಲಿ ಮಹಿಳೆಯರಿಗಾಗಿ ಬರೆದ, ಮಹಿಳೆಯರೇ ಬರೆದ ಕೆಲವು ಉದಾಹರಣೆಗಳು ಹೀಗಿವೆ :

"ಕೆಸ್ತೂರು ಉಪಾಧ್ಯರ ಮಗ ರಂಗಪ್ಪ ಬರೆದುಕೊಟ್ಟದು. ತಳಕಾಡು ನಾಯಿಕಶಾನಿ ಕೆಂಪಿ ಮಗಳು ನಂಜಿಗೆ ಬರದುಕೊಟ್ಟದ್ದು"[೪೩]

"ಅಕ್ಕನೂರ ಸಿರಗಪನು ಮುಂಡಿಗೆಯ ಪಾಯಣನ ಮಗಳು ಪದುಮಾಯಿಗೆ ಬರೆದುಕೊಟ್ಟ ಸುಕುಮಾರಚರಿತ್ರೆಯು"[೪೪]

---

೩೮. ಮಹಸೂ II ೨೨೭ ರುಕ್ಮಾಂಗದ ಚರಿತೆ

೩೯. Inscriptions from Nanded district-39: by S.H.Ritti

೪೦. ಮಹಸೂ I ೧೨೬. ತೊರವೆ ರಾಮಾಯಣ

೪೧. ಮಹಾದೇವಯ್ಯಗಳ ಶೂನ್ಯಸಂಪಾದನೆ, ಪ್ರಸ್ತಾವನೆ ೧೦೧

೪೨. ಶಾಂಪು. ಪರಿಶಿಷ್ಟ ಪು. ೩೩

೪೩. ಮೈಹಸೂ I ೧೮೭, ಐರಾವತ

೪೪. ಮೈಹಸೂ iv ೧೯೩೨ ಸುಕುಮಾರ ಚರಿತೆ

“ಅಮರೇಂದ್ರವಂದಿತ ಶ್ರೀ ಸುಕುಮಾರನ ಚಾರುಚರಿತದ ಪ್ರತಿಯನೂ ಜಿನಚಂದ್ರನು ತನ್ನ ಪುತ್ರಿತ್ರಯಂಗಳನೋದಿಸಲೆಂದು ಬರದನು”[೪೫]

“ರಾಮನ ಸಾಂಗತ್ಯವ ಬರೆದವಳು ಓದಿಸುವ ಗುರುಬಸವಪ್ಪದೇವರ ಮಗಳು ಸಿಂಗಮ್ಮ ....”[೪೬]

“ಸಿಗ್ಗಾವಿಯ ಚನ್ನಗವುಡರ ಸೊಸಿ ಭೈರಾಜಿ ತಂಮ ಶ್ರೀಗುರುವಿನ ಕೃಪೆಯಿಂದ ಲಿಂಗಲೀಲಾವಿಲಾಸದ ಪುಸ್ತಕವನು ಪ್ರತಿಮಾಡಿ ಮಹಾಗಣಂಗಳು ಕೇಳಿ ಓದಿ ನಂಮ ಕೃತಾರ್ಥ ಮಾಡಿ(ರಿ) ಎಂದು ಮಹಾಗಣಂಗಳಿಗೆ ಪ್ರತಿ ಮಾಡುತ್ತಿರ್ದೆನು. ಮಹಾಗಣಂಗಳಿಗೆ ಸ್ತುತಿಮಾಡುತ್ತಿರ್ದೆನು. ತಪ್ಪುಳ್ಳೊಡೆ ತಿದ್ದಿ, ಬಲ್ಲ ವೀರಮಾಹೇಶ್ವರರು ಓದಿಕೊಳ್ಳುವುದು ....”[೪೭]

ಇಲ್ಲಿ ಹೆಣ್ಣುಮಕ್ಕಳಿಗೆ ಓದಲು ಮತ್ತು ಓದಿಸಲು ರಂಗಪ್ಪ, ಅಕ್ಕನೂರ ಸಿರಗಪ, ಜಿನಚಂದ್ರರು ಕಾವ್ಯಗಳನ್ನು ನಕಲು ಮಾಡಿಕೊಟ್ಟರೆ; ಸಿಂಗಮ್ಮ ರಾಮನ ಸಾಂಗತ್ಯವನ್ನು, ಭೈರಾಜಿ ಲಿಂಗಲೀಲಾವಿಲಾಸ ಚಾರಿತ್ರವನ್ನು ತಮಗೆ ನಕಲು ಮಾಡಿಕೊಂಡಿದ್ದಾರೆ. ಉಪಾಧ್ಯಾಯರು ಬರೆದುದಕ್ಕೆ ಕೆಲವು ಉದಾಹರಣೆಗಳು ಹೀಗಿವೆ :

“ಅನುಭವಾಂಮೃತವನ್ನು ಜವಳಿ ಅಂಗಡಿ ಕಾಳಿದಾಸ್ಯೆಯ್ಯನಿಗೆ ವುಪಾದ್ಯ ವೆಂಕಟ್ಯೆಯ್ಯನು ಬರೆದುಕೊಟ್ಟಂತಾ ಪುಸ್ತುಕಾ”[೪೮]

“ಭೋಗೋದಿಮಠದ ಪಚ್ಚೆಕಂತೆದೇವರಿಗೆ ತಗಡೂರ ಬಸವರಸ ವುಪಾಧ್ಯಾಯರ ಮಗ ತಮ್ಮಪ್ಪನು ಬರದು ಮುಗಿಸಿದ ದಶಗ್ರಂಥಿ.”[೪೯]

ಇಲ್ಲಿ ನಕಲುಕಾರ್ಯ ಮಾಡಿದವರು ಉಪಾಧ್ಯಾಯ ಮತ್ತು ಉಪಾಧ್ಯಾಯರ ಮಗ. ಕೆಲವೊಮ್ಮೆ ರಕ್ತಸಂಬಂಧ, ಗುರುಶಿಷ್ಯ ಸಂಬಂಧ ಕಾರಣವಾಗಿ ನಕಲುಕಾರ್ಯ ನಡೆದುದಕ್ಕೆ ಸಿಗುವ ಉದಾಹರಣೆಗಳು ಹೀಗಿವೆ :

“ಚೆನ್ನಪಟ್ಟಣಕ್ಕೆ ವಳಿತವಾದ ಹೊಂಗನೂರು ನಾರಣ್ಯೆಯ್ಯನು ತನ್ನ ಮಗನಿಗೆ ಬರೆದುಕೊಟ್ಟ; ಮೂಲಪ್ರತಿಯನ್ನು ನೋಡಿ ಬರೆದದ್ದು”[೫೦]

“ವಿಜಯಾಪುರದ ರುಮ್ಮೆಖಾನ ಬಜಾರದೊಳಗೆ ಇದ್ದವರು, ಮಳೆಯ ಬಗೆಯ ಶ್ರೀ ನಿರ್ಣಾಮೇಶ್ವರದೇವರ ಕರಸಂಜೋದ್ಭವನಾದ ಪುರಾಣದ ಕಲ್ಲಯ್ಯದೇವರು ಕುಮಾರನಾದ ಗುರುವರ್ಯದೇವರು, ತಮ್ಮ ಸ್ವಹಸ್ತದಿಂದ ತಮ್ಮ ತಂದೆಗೆ ಈ ಶಾಸ್ತ್ರ ಬರೆದುಕೊಟ್ಟ”[೫೧]

---

೪೫. ಮೈಹಸೂ iv ೧೯೩೨ ಸುಕುಮಾರ ಚರಿತೆ

೪೬. ಮೈಹಸೂ v ೯೧೬ ರಾಮನ ಸಾಂಗತ್ಯ

೪೭. ಧಾವಭಾ ೧೪೦೩ (ತಾ ಪ್ರ) ಲಿಂಗಲೀಲಾ ವಿಲಾಸಚಾರಿತ್ರ

೪೮. ಮೈಹಸೂ i ೫೬ ಅನುಭವಾಮೃತ

೪೯. ಮೈಹಸೂ ii ೬೬೪ ದಶಗ್ರಂಥಿ

೫೦. ಮೈಹಸೂ iii ೧೪೭೦ ರುಕ್ಮಾಂಗದ ಚರಿತ್ರೆ.

೫೧. ಮಹಸೂ vi ೬೦೮ ವಿವೇಕ ಚಿಂತಾಮಣಿ

"ಹಂಜಿಗೆ ರುದ್ರಮುನಿದೇವರೂ ಚೆಂನರಾಯಪಟ್ಟಣದ ಹೊಸಬಂಡಿ ಜಕ್ಕಪ್ಪನವರ ಪುತ್ರನಾದಾ ತಿಪ್ಪಂಣಗೆ ಧನಕನಕ ವಸ್ತುವಾಹನ ಪುತ್ರರು ಸಮ್ರುದಿಯಾಗಿ ಸುಕದಲ್ಲಿ ಬೆಳಲೆಂದು ಹರಿಸಿ ಬರಕೊಟ್ಟ."[೩೨]

"ಶ್ವೇತಪುರದ ದೊಡ್ಡಮಠದಲ್ಲಿಯೂ ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಂಜನ ಪರಂಜ್ಯೋತಿ ಸ್ವರೂಪರಾದಂಥಪೂರ್ವತೇಜೋಮಯರಾದಂಥ ಯನ್ನನ್ನುದ್ಧರಿಸಿದಂಥ ಆಧಾರಾದಿ ಪಶ್ಚಿಮಾಂತ್ಯವಾದ ಥಲಂಗಳಲ್ಲಿ ತಾನೆತಾನಾದ ಎನ್ನ ಸರ್ವಾಂಗದಲ್ಲಿ ಸಂಪೂರ್ಣನಾದಂಥ ಶ್ರೀ ಗುರುವಿನ ಚರಣಾರವಿಂದಗಳಿಗೆ ಲೇಖನ ಸಮರ್ಪಣೆಯಾಯಿತು"[೩೩]

ಇಲ್ಲಿ ತಂದೆ ಮಗನಿಗೆ, ಮಗ ತಂದೆಗೆ, ಗುರು ಶಿಷ್ಯನಿಗೆ, ಶಿಷ್ಯ ಗುರುವಿಗೆ ನಕಲು ಮಾಡಿಕೊಟ್ಟಿರುವರು. ಇದಲ್ಲದೆ ಗೆಳೆಯನಿಗೆ ಅರಸನಿಗೆ ಬರೆದುಕೊಟ್ಟ, ತನಗಾಗಿ ಬರೆದುಕೊಂಡ ಉದಾಹರಣೆಗಳೂ ಉಂಟು. ಉದಾ :

"ಅರಳಗುಪ್ಪಿ ವೆಂಕಟನ ಮಗ ದಾಸಪ್ಪನು ಸ್ನೇಹಾರ್ಥವಾಗಿ ಬರಕೊಟ್ಟ ಶಂಕರ ರಾಮಾಯಣ."[೩೪]

"ಚಿಕ್ಕೇಂದ್ರ ಭೂಮೀಶಂಗೆಂಥಾ ಲಕ್ಷ್ಮಾಖ್ಯಬುಧೋತ್ತಮಂ ಬರೆದುಕೊಟ್ಟ"[೩೫]

"ಬರೆದಾತ ಮಹೀಶೂರ ನಗರದ ಲಕ್ಷ್ಮೀರಮಣಸ್ವಾಮಿಯವರ ದೇವಸ್ಥಾನದ ಸ್ಥಾನಿಕ ಲಕ್ಷ್ಮೀರಮಣಪ್ಪನವರ ಮಗ ಕೃಷ್ಣಯ್ಯನು, ತಾನು ತನಗೆ ಬರೆದ ಭಾರತ ಪುಸ್ತಕ"[೩೬]

ಸಾಲುದುದಕ್ಕೆ ಅರಸು ವರ್ಗದವರೂ ಗ್ರಂಥಲೇಖನ ಕಾರ್ಯಮಾಡಿದುದಕ್ಕೆ "ಕಳಲೇ ರಾಜಯ್ಯ ಅರಸಿನವರ ಪ್ರಪೌತ್ರರಾದ ಲಕ್ಷ್ಮೀಕಾಂತಯ್ಯ ಅರಸನವರ ಪುತ್ರರಾದ ಕಾಂತಯ್ಯ ಅರಸಿನವರ ಸ್ವಹಸ್ತಾಕ್ಷರ"[೩೭] ಇತ್ಯಾದಿ ವಾಕ್ಯಗಳು ಉದಾಹರಣೆಯಾಗಿವೆ.

ಗ್ರಂಥಪರಿಷ್ಕರಣ ಪ್ರಸಂಗದಲ್ಲಿ, ಹಸ್ತಪ್ರತಿಗಳನ್ನು ನಕಲುಗೊಳಿಸಿದ ಈ ಲಿಪಿಕಾರರ ಚರಿತ್ರೆ, ವಿದ್ವತ್ತು, ಲೇಖನಮಿತಿ ಮೊದಲಾದ ಅಂಶಗಳನ್ನು ಅವಶ್ಯ ಲಕ್ಷಿಸಬೇಕಾಗುತ್ತದೆ, ಸಂಪಾದಕ. ಈ ಮಹತ್ವಪೂರ್ಣ ಅಂಶಗಳನ್ನು ಹಸ್ತಪ್ರತಿಗಳ ಮೊದಲು ಮತ್ತು ಕೊನೆಯಲ್ಲಿರುವ ಪ್ರಶಸ್ತಿಭಾಗಗಳಿಂದ ಅರಿಯಬಹುದಾಗಿದೆ. ಇಲ್ಲಿ ಎರಡು ಪ್ರಶಸ್ತಿಗಳನ್ನು ಕೊಡಬಹುದು :

---

೩೨. ಮೈಹಸೂ iii ೧೪೪೦ ರಾಘವಾಂಕ ಚರಿತ್ರೆ

೩೩. ಮೈಹಸೂ iii ೧೩೦೧ ಲಿಂಗಾಚಾರ ರಚನಾಗಮ

೩೪. ಮೈಹಸೂ iv ೧೬೬೮ ಶಂಕರರಾಮಾಯಣ

೩೫. ಮೈಹಸೂ i ೨೮ ಅಜಿತನಾಥ ಪುರಾಣ

೩೬. ಮಹಸೂ i ೬೦ ಭಾರತ ಕಥಾಮಂಜರಿ

೩೭. ಕಗ್ರಸಂ ೫೧

೧. ಶಾಲಿವಾಹನ ಶಖ ೧೮೦೨ ವಿಕ್ರಮನಾಮ ಸಂವತ್ಸರದ । ಆಶ್ವಿನ ಕ್ರುಷ್ಣಪಕ್ಷ ೧೪ ಚತುರ್ದಶಿ ಯಿಂದುವಾರ ದಿವಸ ಸಮಾಪ್ತಿಯಾದುದು. ಮಂಗಳ ಮಹಾ ಶ್ರೀ ಶ್ರೀ. ಶ್ರೀ ಗುರು ಬಸವಲಿಂಗಾಯನಮಃ ॥ ಈ ವೀರಶೆಯಿವಾಮ್ರುತ ಪುರಾಣವಂನು ಬರೆಸಿದವರಾರೆಂದೊಡೆ॥ ಅಯಿವತ್ತಾರು ದೇಶವೆಂಬ ಸ್ತ್ರೀಯ್ಯಳ ಮುಖಕ್ಕೆ ತಿಲಕ ಸಮಾನವಾದ। ಕರ್ನಾಟದೇಶ ಮಧ್ಯದಲ್ಲಿ ಮಹಾಶೃಂಗಾರ ಸೊಬಗಿನಿಂದೆಸವ । ಪರಯಾಯಂತೆಂದೊಡೆ । ಮಾಮರುಗಳು । ಬೆಳವಲು । ನೀರಲು । ಹಲಸು । ತೆಂಗುಗಳಿಂದ ಕದಳಿ ದ್ರಾಕ್ಷಿಗಳಿಂದ । ಅಂಜೂರ ದಾಳಿಂಬ ವೃಕ್ಷದಿಂ । ಬಕುಲ ಚಂಪಕ । ಸಂಪಿಗೆ । ಮೊಲ್ಲೆ ಮಲ್ಲಿಗೆಗಳಿಂದ । ಕಮಲಗಳ ಕಾಸಾರದಿಂದ ಅನಂತ ಮನುಹರವಾದ । ಅಲ್ಲಿಗಲ್ಲಿಗೆ ಕೆರೆಬಾವಿಗಳಿಂದ । ಅಲ್ಲಲ್ಲಿ ಕವಳ ಗದ್ದೆಗಳಿಂದ ॥ ಅನಂತ ಕಾವಲೆಗಳಿಂದ । ಅಲ್ಲಲ್ಲಿಗೆ ಶೋಭಿಸುವ ಶಿವಾಲಯದ ಗುಡಿಗಳಿಂದ । ಮಹಾಸಂಭ್ರಮದ ಕೋಟೆ ಕೊತ್ತಳಗಳಿಂದ । ಹುಲಿಮುಖ ಬುರುಜುಗಳಿಂದ। ಅಗುಳತ ಅಳ್ವೆರಿಗಳಿಂದ । ಷಟುಸ್ಥಲಬ್ರಂಮ್ಹಿಗಳ ಮಟಗಳಿಂದ । ಅಲ್ಲಲ್ಲಿಗೆ ಮಹಾಪಂಡಿತರಾದ ವಿದ್ವಜ್ಜನರ ಆಲಯಗಳಿಂದ । ಮಹಾಭಕ್ತಿಯಲ್ಲಿ ಆಚರಿಸುವ । ಅನಂತ ಶಿವಾಚಾರ ಶೀಲಸಂಪಂನರಾದ ಶಿವಭಕ್ತರ ಮನೆಗಳಿಂದ । ಅನಂತ ಪರಿಯಾದ ವಂದೊಂದೊ ನಾಟಕ ವಿದ್ಯದಲ್ಲಿ ರಾಜಿಸುವ ಅನಂತ ಮಂಡಲಗಳಿಂದ । ಆನಿ ಕುದರಿ ರಥಗಳಿಂದ । ಮಹಾಶೊಬಗಿನಿಂದೆ । ವಾದ್ಯ ಹಲಗೆ ಕೊಂಬು ಕಹಳೆ ಕರ್ನಿಯ ವಾದ್ಯರಭಸದಿಂದೆ । ಯೀ ಪರಿಯಾದ ಅನಂತ ಶ್ರುಂಗಾರದಿಂದ । ಮಹಾಸೊಬಗಿನಿಂದ । ಆಯಿಶ್ವರ್ಯವಾಂತು ಅನಂತ ಜನಮಂಡಳಿಯಿಂದ । ಅನಂತ ರಾಜರುಗಳಿಂದ । ಅನಂತ ವಾರುವನಿತೆಯರಿಂದೆ । ನೋಡುವವರ ಕಂಣಿಗೆ ಯಿಂದ್ರನಗರವು ಸಮವಲ್ಲವೆಂಬೋ ಹಾಂಗೆ ಗಂಭೀರದಿಂ ತೋರುವಂತಾ । ಮುದ್ದೆಬಾಳವೆಂಬ ನಗರದಲ್ಲಿ ಶೋಭಿಸುವ । ಸೂರ್ಯಬೀದಿ ಚೆಂದ್ರಬೀದಿಯ ಮಧ್ಯದಲ್ಲಿ ವಾಸವಾದ । ಮರುಳಸಿದ್ಧೇಶ್ವರನ ಗೋಪುರದ ವಾಮಭಾಗದಲ್ಲಿ ರಾಜಿಸುವ । ಅಷ್ಟಯಿಶ್ವರ್ಯದಲ್ಲಿ ಕೂಡಿರುವ । ಶಿವಭಕ್ತಶಿರೋಮಣಿಯಾದ । ವೀರಸಂಗಪ್ಪ ಚಿನಿವಾಲರ । ಯಿವರ ಹೃದಯಕಮಲೋದ್ಭವನಾದಂತಾ ಮಹಾದೇವನ ಕರುಣದಿಂದ । ಭುವನಕವತರಿಸಿದಂತಾ । ಗುರುಶೇವದಲ್ಲಿ ನಿಪುಣನಾದ । ಲಿಂಗಪೂಜೆಯಲ್ಲಿ ಮಹಾಬಂಧುರವಾದಂತಾ । ಜಂಗಮಪಾದದಲ್ಲಿ ಮಹಾನೈಷ್ಟೆವುಳ್ಳಂತಾ । ವಿಭೂತಿ ರುದ್ರಾಕ್ಷಿ ಪಾದೋದಕ ಪ್ರಸಾದ ಮಂತ್ರಗಳಲ್ಲಿ ಮಹಾಭಕ್ತಿಯಿಂದ ವೀರಶೈವಾಚರಣೆಯುಳ್ಳಂತಾ । ದುರ್ಗುಣಕ್ಕೆ ದೂರನಾದಂತಾ । ಸದ್ಗುಣ ಸಮುದ್ರನಾದ । ಅಂನ್ಯಮತಕ್ಕೆ ದೂರವಾದ । ಶಿವಮತದಲ್ಲಿ ಶ್ರೇಷ್ಟನಾದ ಭೋಗದಲ್ಲಿ ಇಂದ್ರ ಸರಿಯಾದ । ತ್ಯಾಗದಲ್ಲಿ ಕರ್ಣನಾದಂತಾ । ಶಾಂತಿಯಲ್ಲಿ ಚೆಂದ್ರನಾದಂತಾ । ವ್ಯಾಚಕ ಜನಮಂಡಳಿಗೆ ಕಲ್ಪವೃಕ್ಷನಾದ । ಬಸವಂಣನ ಸಾಂಪ್ರದಾಯಕನಾದ । ಗುರುಲಿಂಗಜಂಗಮಭಕ್ತಿಯಲ್ಲಿ ಲೋಲುಪ್ತನಾದಂತಾ । ಮಹಾಪುಣ್ಯನಿಧಿ ಯಾದಂತಾ । ಚಿನಿವಾಲರದ ರುದ್ರಪ್ಪಂಣನವರ । ಅಗ್ರಜನಾದ ಅಂದಾನ್ಯಪ್ಪನವರ ತನುಭವನಾದ। ದಾನಪ್ಪನವರು ॥ ಯೀ ವೀರಶೈವಾಮ್ರುತ ಪುರಾಣವಂನು । ಶಿವಭಕ್ತ ಗಣ ಮಂಡಳಿ ಮೊದಲಾದ ಶಿವಾಚಾರ ಸಂಪಂನರುಗಳು । ಯೀ ಪುರಾಣದ ಮಹಾತ್ಮೆಯಂನು । ವೋದಿಕೊಂಡು । ಶಿವಮಹಾತ್ಮೆಯಂನು ಅರಿತು । ನಿತ್ಯಮುಕ್ತರಾಗಲೆಂದು ಮನಸಂತೋಷದಿಂ। ಮಹಾಭಕ್ತಿಯಿಂದ ಬರಸಿದ ವೀರಶೈವಾಮ್ರುತ ಮಹಾಪುರಾಣವು ಯಿಲ್ಲಿಗೆ ಸಮಾಪ್ತಿ ಮಂಗಲ ಮಹಾ ಶ್ರೀ ಶ್ರೀ ಶ್ರೀ .... ಈ ವೀರಶೈವಾಂಮ್ರುತ ಮಹಾಪುರಾಣವು ಬಹು ಜಾಗ್ರತಿಯಿಂದೆ । ಕಾಂಡ ಕಾಂಡಕ್ಕೆ ಗಣಾರಾಧನೆಯಿಂದೆ

। ಆದ್ಯ ಆದ್ಯಕ್ಕೆ ಕರ್ಪೂರ ಕಾಯಿಗಳಿಂದ ನಂದಾಜ್ಯೋತಿಯಿಂದೆ । ಮಹಾಶಾಂತಿಯಿಂದ ಸಮಾಪ್ತವಾಗಿರುವದು."೫೮

೨. "ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುದಿಗೆ ಪುರ್ಬು ಪುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕ ಪಾದಚರ, ಕೆದಜೆಿದ ಮಂಡೆ, ಮೌನವ್ರತದಿಂದೊಪ್ಪುತ್ತಿರ್ದ ದಿವ್ಯ ತಾಳಪತ್ರಮಂ ತಂದು, ದ್ವಿತಿಯ ರಂಧ್ರವಂ ಮಾಡಿ, ಬಿಂಗದ ಹೊರೆಯಂತೊಂದೊಂದು ಪೊಂದಿಸಿಕ್ಕೆಲದಲುಬಯಂ ಪಲಗೆಯಪ್ಪ ಲೋವೆಯಪ್ಪ ಮೂಲೆಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ನಿರ್ಮಿಸಿದಂತಿರಬಾರದೆಂದು, ಬಿಂದು ವಿಸರ್ಗಂ ದಡ್ಡತೆ ಹೊಂದಿದಾವೃತೋರ್ಧ್ವ ರೇಫೆ ದೀರ್ಘ ಹೃಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತಿಗಳಂ ಲೇಖನಂ ಮಾಡೆಂದು, ಚಿಕ್ಕಯ್ಯನವರು ದಿವ್ಯ ಆಲೇಖಮಂ ಷಟ್ಸ್ಥಲಜ್ಞಾನಸಂಪನ್ನರಾದ ವಿರಕ್ತ ಅನ್ನದಾನದೇವರ ಹಸ್ತದಲ್ಲಿ ಪಾಲಿಸಲು, ಯಿಂತೀ ಶಿವಗಣಂಗಳ ನಿರೂಪವಂ ಕೈಗೊಂಡು ಬರುವುದಕ್ಕೆ ಯನ್ನ ಕಂಗಳು ಜಿಹ್ವೆ ಕರ ಕರ್ನಂಗಳು ಗತಿಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳೇ ಕರ್ತ್ತರಾದ ಕಾರಣ, ಯಿಂತಿವರ ಕರುಣ ಪ್ರಸಾದಮಂ ಕೈಕೊಂಡು, ಈ ವೀರಮಾಹೇಶ್ವರಾಚಾರ ಸಂಗ್ರಹವ ಬರದೆನಲ್ಲದೆ ನನ್ನಿಚ್ಛೆಯೊಳಂ ನಾ ಬರುದುದಿಲ್ಲ.

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ ।
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ।

ಇಂತೆಂದುಂದಾಗಿ ಈ ಪುಸ್ತಕವಂ ಬರದ ಸ್ಥಿತಿಯೆಂತೆಂದೆಡೆ–ಸ್ವಸ್ತಿಶ್ರೀ ಜಯಾಭ್ಯುದಯ ವಿಧಿಷ್ಪಶಕ ವಿಕ್ರಮಶಕಯೋ ದ್ವಿತೀಯ ಶಕ ಸಂದದು ೪೦೦೦ ವರುಷ । ಶಾಲಿವಾಹನಶಕ ಸಂದದು ೧೫೮೩ ವರುಷ ಸಂದು ವರ್ತಮಾನವಾದ ಶಾರ್ವರಿ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅನ್ನದಾನದೇವರು, ಆಚಾರ್ಯ ಚಿಕ್ಕೆಯದೇವಗೆ ನೀಲಕಂಠ ನಾಗನಾಥಾಚಾರ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನವಾಯಿತ್ತು । ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ಣಮಸ್ತು । ಆಯುರಾರೋಗ್ಯಮಸ್ತು ಚಂದಾರ್ಕತಾರಾನಭವುಳ್ಳನಕಂ ಸ್ಥಾಯಿಯಸ್ತು ॥

ಭಗ್ನಪೃಷ್ಠ ಕಟಿಗ್ರೀವಾ । ಬದ್ಧದೃಷ್ಟಿರಥೋಮುಖಂ
ಕಷ್ಟೇನ ಲಿಖಿತಂ ಶಾಸ್ತ್ರಂ । ಯತ್ನೇನ ಪರಿಪಾಲಯ ॥

ಇಂತೆಂದುದಾಗಿ ಈ ಪುಸ್ತಕವಂ ಬಗವರ್ಗಂ ಓದುವರ್ಗಂ ಶಿವಾನುಭಾವವಂ ನಿರೂಪಿಸು ವರ್ಗಂ ಲಾಲಿಸುವರ್ಗಂ ಸಹಶ್ರಕೋಟಿ ನಮಸ್ಕಾರವಂ ಮಾಡುತ್ತಿದ್ದೇನೆ. ಎನ್ನ ಬಿಂನಪವನವಧರಿಸಿ, ಯಿದಂ ಬರದ ನಿಂಮ ಕರುಣದ ಕಂದನಿಗೆ ನಿಮ್ಮ ಕೃಪಾಮೃತ ರಸವನೆಱದು, ನೋಡಿ, ಸಲಹಿ ನಿಂಮ ಶ್ರೀಪಾದಪದ್ಮಾರಾಧನೆಯ ಯೆಂದೆಂದು ಪಿಂಗದಂತೆ ಮಾಡಯ್ಯ ಲಿಂಗತಂದೆ, ಶರಣು ಶರಣಾರ್ತ್ತಿ

---

೫೮. ಧಾವಭಾಂ ೧೩೩೭. ವೀರಶೈವಾಮೃತ ಮಹಾಪುರಾಣ

। ಪುಸ್ತಕಂ ವನಿತಾ ವಿತ್ತಂ ಪರಹಸ್ತಂ ಗತಂ ಗತಂ ।

ಆಯಾತಂ ಪುನರಾಯಾತಂ ಭ್ರಷ್ಟಭ್ರಷ್ಟಾ ಚ ಭ್ರಷ್ಟಯೋ ॥

ಜಲಾದ್ರಕ್ಷ ತೈಲಾದ್ರಕ್ಷದ್ರಕ್ಷಮಸ್ಲಾಗ್ಯ ಬಂಧನಾತ್ ।

ಅವಸ್ಯಯಾಚಕದ್ರಕ್ಷ ಮಮ ರಕ್ಷಂತು ಪುಸ್ತಕಂ ॥

ನೀಲಕಂಠ ನಾಗನಾಥಾಚಾರ್ಯ ವಿರಚಿತಂ ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳ ಮಹಾಶ್ರೀ ॥[೫೯]

ಈ ಎರಡು ಪ್ರಶಸ್ತಿಗಳಿಂದ ಲಿಪಿಕಾರರ ಚರಿತ್ರೆ, ಮನೋಭಾವ, ಲೇಖನೋದ್ಯಮದ ಪರಿಸರಗಳನ್ನು ಅರಿಯಬಹುದು. ಇದಲ್ಲದೆ

"ಈ ಪುಸ್ತಕವ ದೇವರ ದಾಸ್ಯೆಯ್ಯನ ಸಂಪ್ರದಾಯಕ ಚಿತ್ತಾಪುರದ ಅಮಾತಪ್ಪನವರಿಗೆ .... ಬರದು ಕೊಟ್ಟ ಪಂಚತಂತ್ರದ ಕಥೆ ॥[೬೦]

"ಈ ಕಥಾಗರ್ಭವನ್ನು ಬರೆದವನು ಕಲ್ಯಾಣದ ಕಲಬುರ್ಗಿಯ ನಡುಮಧ್ಯದ ಗ್ರಾಮವಾದ ಗೌಡನಹಳ್ಳಿಯ ಕಿನ್ನರಿ ಬ್ರಹ್ಮಯ್ಯನ ಸಾಂಪ್ರದಾಯಕರಾದ ಮಲ್ಲಪ್ಪನವರ ಪುತ್ರನಾದ ಬಸವಪ್ಪನು ಬರೆದ ಹಸ್ತಾಕ್ಷರ ...."[೬೧]

"ಬಸವಣ್ಣನ ಸಾಂಪ್ರದಾಯಕನಾದ ಗುರುಲಿಂಗಜಂಗಮಭಕ್ತಿಯಲ್ಲಿ ಲೋಲು ಪ್ತನಾದಂತಾ । ಚಿನಿವಾರ .... ದಾನಪ್ಪನವರು ....ಬರಸಿದ ವೀರಶೈವಾಮೃತ ಮಹಾಪುರಾಣವು"[೬೨]

ಈ ಹೇಳಿಕೆಗಳು ವೀರಶೈವ ಶರಣರ ಸಂಪ್ರದಾಯದ ಇತಿಹಾಸವನ್ನು ಸೂಚಿಸುವಂತಿವೆ. ಇವಲ್ಲದೆ ನಕಲುಕಾರ್ಯ ಯಾವ ಗ್ರಾಮದಲ್ಲಿ, ಯಾವ ಮನೆ ಇಲ್ಲವೆ ಮಠದಲ್ಲಿ ನಡೆಯಿತೆಂಬ ಹೇಳಿಕೆಗಳು ಪ್ರಾದೇಶಿಕ ಮತಸಂಪ್ರದಾಯವನ್ನು ಅರಿಯಲು; ಯಾರಿಂದ? ಎಂಥ ವ್ಯಕ್ತಿತ್ವದವನಿಂದ? ನಕಲುಕಾರ್ಯ ನಡೆಯಿತೆಂಬ ಹೇಳಿಕೆಗಳು ನಕಲು ಪ್ರತಿಯ ಶುದ್ಧಿಪ್ರಮಾಣವನ್ನು ಅರಿಯಲು ನೆರವಾಗುತ್ತವೆ. ಇದಕ್ಕೆ ಕೆಲವು ಉದಾಹರಣೆಗಳು :

"ಸಂಕ್ಕಿಗಟ್ಟದ ಶ್ರೀ ವೀರವರ್ಧಮಾನಸ್ವಾಮಿಯ ಸಂನಿಧಿಯಲ್ಲಿ ಸಂಪೂರ್ಣ ಮಾಡಿ"[೬೩]

"ಪಟ್ಟಣದ ಆದೀಶ್ವರಸ್ವಾಮಿಯವರ ಚೈತ್ಯಾಲದ ಮುಂದಣ ಮಾನಸ್ತಂಭದ ಜಗತಿ ಮೇಲೆ ಉತ್ತರಾಭಿಮುಖವಾಗಿ ಪ್ರಾರಂಭ, ಆ ಬಳಿಯಲ್ಲೆ ಗ್ರಂಥವು ಪೂರ್ಣವಾಯಿತು"[೬೪]

---

೫೯. ಮೈಹಸೂ I ಪೀಠಿಕೆ. X

೬೦. KRI iii ೨೬ ಪಂಚತಂತ್ರ ಟೀಕೆ

೬೧. ಮಹಸೂ IV ೫೧೧ ಭೈ. ಕಾ.ಕ.ಸೂ. ರತ್ನಾಕರ

೬೨. ಧಾವಭಾಂ. ೧೩೩೭ ವೀರಶೈವಾಮೃತ ಮಹಾಪುರಾಣ

೬೩. ಮೈಹಸೂ II ೫೫೭ ಜಿನದತ್ತರಾಯನ ಚರಿತ್ರೆ

೬೪. ಮೈಹಸೂ II ೫೫೭ ಜೀವಸಂಬೋಧನೆ

"ಬಲ್ಲಾಳಪುರದ ಬಸ್ತಿಯಲ್ಲಿ ಪದ್ಮಪ್ರಭತೀರ್ಥಂಕರ ಚರಣಸಂನಿಧಿಯಲ್ಲಿ ದೊಡ್ಡ ಶಾಮಿಗೆ ಲಕ್ಷಿಸೇನದೇವರು ನೋಂಪಿಕತೆಯ ಬರೆದುಕೊಟ್ಟರು ...."[೬೫]

"ಮೈಸೂರ ಶಾಂತೀಶ್ವರಸ್ವಾಮಿಯವರ ಬಸದಿಯಲ್ಲಿ ಬರೆದು ಸಂಪೂರ್ಣವಾದುದಕ್ಕೆ ಜಯಮಂಗಳ ...."[೬೬]

"ಹಾಸನದ ಶ್ರೀ ಪಾರೀಶ್ವನಾಥಸ್ವಾಮಿಯ ಸಂನಿಧಿಯಲ್ಲಿ ದೊಡಹೊಂನಣಂ ಸೆಟ್ಟರಿಗೆ ಉಪಾಧ್ಯ ಚಿಕ್ಕಂಣನು .... ಬರಕೊಟ್ಟಂಥಾ ಶ್ರೀಪಾಲನಚರಿತೆ ...."[೬೭]

"ಉಮತ್ತೂರ ಹೊಸಬಸ್ತಿಯ ವರ್ಧಮಾನಸ್ವಾಮಿಯ ಸನ್ನಿಧಿಯಲ್ಲಿ ವರ್ಧಮಾನ ಶಿಕಾವಳಿ (?) ಜೋಯಿಸರ ಸೂರಯ್ಯನು ಬರೆದ ತ್ರಿಪುರದಹನ ಸಾಂಗತ್ಯ ಗುರುದತ್ತನ ಚರಿತ್ರೆ ಸಮಾಪ್ತ"[೬೮]

"ವೇಣುಪುರದ ತ್ರಿಭುವನಚೂಡಾಮಣಿ ಬಸದಿಯ ಶ್ರೀ ಚಂದ್ರನಾಥಸ್ವಾಮಿ ಸನ್ನಿದಾನದಲ್ಲಿ ತತ್ಪತ್ತನಸ್ಥ ಬಂಗರಬಳಿಯ ಚಂದಯ್ಯಧ್ಯಾಪ(ಕ)ನು ಬರೆದುಕೊಟ್ಟ"[೬೯]

"ಸುರಾಲ ಚಂದಯರಸರು ಬರಸುವಾಗ ಹೊಸಬಸ್ತಿ ಚಂದ್ರನಾಥ ಸನ್ನಿಧಿಯಲ್ಲು ಬರೆದನು."[೭೦]

"ಶ್ರೀ ಸವಳ್ಯಾಳ ಚಂದ್ರನಾಥನ ಚೈತ್ಯಾಲಯದಲ್ಲಿ ಬರದು ಮುಗಿಯಿತು."[೭೧]

"ಕನಕಪುರದ ವರ್ಧಮಾನಸ್ವಾಮಿ ಚೈತ್ಯಾಲಯದಲ್ಲಿ ಬರದು ಸಂಪೂರ್ಣ"[೭೨]

"ಶಿರಮೂಲಪುರದ ಶ್ರೀ ಶಾಂತೀಶ್ವರಸ್ವಾಮಿ ಚೈತ್ಯಾಲಯದಿ ಸಂಪೂರ್ನವಾಗಿ ಬರೆದ ರಾಮವಿಜಯ"[೭೩]

"ವಿರುಪಾಪುರ ಗ್ರಾಮದ ಶ್ರೀಮೂರ್ತ್ಯಾತ್ಮಕ ಅಶುವಥ(ಅಶ್ವತ್ಥ)ನಾರಾಯಣ ಸನ್ನಿಧಿಯಲ್ಲು ಪದ್ಮಾವತೀ ಚರಿತ್ರೆ ಸಂಪೂರ್ಣಂ"[೭೪]

"ಓದಿಸುವ ಬಿದರಳ್ಳಿಮಠದಲ್ಲಿ ಕುಳಿತು ಮುಗಿಯ ಬರದ ಮಲ್ಲಪ್ಪದೇವರ ಹಸ್ತಾಂತರ"[೭೫]

---

೬೫. ಮೈಹಸೂ II ೮೦೦ ನೋಂಪಿಯ ಕಥೆಗಳು

೬೬. ಮೈಹಸೂ IV ೧೭೦೪ ಶಬ್ದಾನುಶಾಸನ

೬೭. ಮೈಹಸೂ iv ೧೭೯೫ ಶ್ರೀಪಾಲಚರಿತ

೬೮. ಮೈಹಸೂ iii ೩೨೮ ಗುರುದತ್ತ ಚರಿತ್ರೆ

೬೯. ಮಹಸೂ iii ೩೫೪ ತ್ರಿಷಷ್ಟಿಲಕ್ಷಣ ಮಹಾಪುರಾಣ

೭೦. ಮಹಸೂ iii ೩೮೦ ಪದ್ಮಾವತೀ ಚರಿತ್ರೆ

೭೧. KRI vii ೨೮ ಧರ್ಮಾಮೃತ

೭೨. KRI viii 30 ನಾಗಕುಮಾರ ಚರಿತ್ರೆ

೭೩. KRI vii 64 ರಾಮವಿಜಯ

೭೪. ಮಹಸೂ iii ೩೮೩ ಪದ್ಮಾವತೀ ಚರಿತ್ರೆ

೭೫. ಮೈಹಸೂ iii ೧೨೩೨ ಭೈರವೇಶ್ವರ ಕಾವ್ಯದ ಕಥೆಗಳು

"ಬಡಗಣ ಬಾಗಿಲಮನೆ ಪಡಸಾಲೆಯಲ್ಲಿ ಶ್ರೀಮಲೆಯೂರಾಧೀಶ್ವರ ಸ್ವಾಮಿಪಾದಸ್ಮರಣೆಯಿಂ ರಾಮಕಥಾವತಾರಮಂ ಬರೆದು"[೭೬]

"ಅರಕೆರೆ ದೊಂಕೇರಿ ಗುಡಿಸಲಲ್ಲಿ ಮುಲ್ಲಿಲಿಂಗನ ಗದ್ದೆ ಉಳಿಸುವ ನಿಮಿತ್ತ ಕುಳಿತುಕೊಂಡು ಬರೆದು ಸಂಪೂರ್ಣವಾದ ಪುಸ್ತಕ."[೭೭]

ಈ ಹೇಳಿಕೆಗಳಿಂದ ಲಿಪಿಕಾರನ ಗ್ರಾಮವಲ್ಲದೆ ಲಿಪಿಗೆಯ್ದ ಸ್ಥಳಗಳೂ ತಿಳಿದು ಬಂದು, ಹಸ್ತಪ್ರತಿಗಳ ಪ್ರಾದೇಶಿಕತೆ ಸ್ಪಷ್ಟವಾಗುತ್ತದೆ.

ಒಂದು ಹಸ್ತಪ್ರತಿಯಲ್ಲಿ ಉಲ್ಲೇಖಿಸಲ್ಪಟ್ಟ ಮಿತಿಯು ಆ ಕಾಲದ ಲಿಪಿಯ ಸ್ವರೂಪವನ್ನು, ಅಲ್ಪಮಟ್ಟಿಗೆ ಭಾಷೆಯ ಸ್ವರೂಪವನ್ನು ವೇದ್ಯಗೊಳಿಸುತ್ತದೆ. ಅದರಲ್ಲಿಯೂ

"ಸ್ವಸ್ತಿಶ್ರೀ ವಿಜಯಾಭ್ಯದಯ ಶಾಲೀವಾಹನಶಕ ವರುಷಂಗಳು ೧೭೬೩ನೇ ಸಂದ ವರ್ತಮಾನ ಶಾರ್ವರಿ ಸಂವತ್ಸರದ ಪುಷ್ಯ ಶುದ್ಧ ೩ಯಲ್ಲು ಮಹಾಭಾರತ ಬರೆಯುವುದಕ್ಕೆ ಶುಭಮಸ್ತು", "ಸುಭಕೃತನಾಮ ಸಂವತ್ಸರರಕಂ ಕಾರ್ತಿಕ ಶುಧ ೧ಯು ಶುಕ್ರವಾರಂ ಮಹಾಭಾರತಂ ದಶಪರ್ವಂ ಸಂಪೂರ್ನಾ"[೭೮] –ಇಂಥ ಜೋಡು ಹೇಳಿಕೆಗಳು ಒಂದು ಕೃತಿಯನ್ನು ನಕಲುಗೊಳಿಸಲು ಹಿಡಿದ ಕಾಲಾವಧಿಯನ್ನು ತಿಳಿಸಿ ಕೊಡುತ್ತವೆ. ಈ ಪ್ರಸಂಗದಲ್ಲಿ "ಯೀ ಕವಿಕಂಠಹಾರ ನಿಘಂಟನ್ನು ೨ ದಿವ್ಸದಲ್ಲಿ ನಿಶ್ಚಯವಾಗಿ ಪೂರೈಸಿಯಿರುತ್ತೇನೆ"[೭೯] ಎಂಬಂಥ ಅಭಿಮಾನದ ಮಾತುಗಳನ್ನು, ಐರಾವತದ ಲಿಪಿಕಾರನೊಬ್ಬನ "ಓಲೆಯಿಲ್ಲದರಿಂದ ಕಿರಿದರಲ್ಲಿಯೆ ಮೂಲಪ್ರತಿಯಲ್ಲಿ ಇದ್ದ ಹಾಗೆ ಬರೆದೆನು"[೮೦] ಎಂಬ, ಅನುಭವಾಮೃತದ ಲಿಪಿಕಾರನೊಬ್ಬನ "ಹಳೆವಾಲೆ ಕಂಟಿ ಹುಳುತದೆ, ವಳ್ಳೇ ಸಂಚಿಕೆಯಾನೆಲಿತೀರೆ ದೊರಕದೆ ಯೀ ತರದ ವಾಲೆಯಲ್ಲೆ ಬರಿವದಕ್ಕೆ ಕಾರಣವಾಯಿತ್ತು"[೮೧] ಎಂಬ ವಿಶೇಷ ಉಕ್ತಿಗಳನ್ನು ಭಾವಿಸಬೇಕು.

* * *

ಈ ಚರಿತ್ರೆ, ಪರಿಸರಗಳಲ್ಲದೆ ನಮ್ಮ ಪ್ರಾಚೀನ ಲಿಪಿಕಾರರ ಲೇಖನಪರಿಣತಿ ಮತ್ತು ಸೌಂದರ್ಯಪ್ರಜ್ಞೆಗಳಿಗೆ ಹೇರಳ ಉದಾಹರಣಗೆಗಳು ದೊರೆಯುತ್ತವೆ.[೮೨] ಹಸ್ತಪ್ರತಿ ಮತ್ತು ಶಾಸನಗಳಲ್ಲಿ ಕಣ್ಣಿಗೆ ಬೀಳುವ ಈ ಉದಾಹರಣೆಗಳಿಂದ ಅವರ ಸುಂದರ ಲೇಖನ, ಅಲಂಕಾರ ಲೇಖನ, ಶೀಘ್ರಲೇಖನ, ಬಹುಲಿಪಿ ಲೇಖನ, ಸಣ್ಣಲಿಪಿ ಲೇಖನಗಳ ವ್ಯವಸಾಯ ಮತ್ತು ಅಭಿರುಚಿಗಳನ್ನು ಹೀಗೆ ಅರಿಯಬಹುದಾಗಿದೆ :

---

೭೬. ಮೈಹಸೂ iii ೧೪೩೧ ರಾಮಕಥಾವತಾರ
೭೭. ಮಹಸೂ vi ೧೨೧೫ ಸಾರಂಗಧರನ ಚರಿತ್ರೆ
೭೮. ಮೈಹಸೂ III ೧೧೫೭ ಭಾರತ
೭೯. ಮೈಹಸೂ I ೨೬೧ ಕವಿಕಂಠಹಾರ
೮೦. ಮಹಸೂ V ೮೮೩ ಐರಾವತ
೮೧. KRI VI ೧೫ ಅನುಭವಾಮೃತ

ಸುಂದರ ಲೇಖನ : ಪ್ರತಿಯೊಂದು ಭಾಷೆಯ ಲಿಪಿಗೂ ವಿಶಿಷ್ಟ ಅಂಗರಚನೆ ಇರುತ್ತದೆ. ಕನ್ನಡ ಅಕ್ಷರಗಳ ಒಲವು ವರ್ತುಳದತ್ತ. ಇದನ್ನು ಮತ್ತು ಇವುಗಳ ಅವಯವ ಜ್ಞಾನ, ಅವಯವ ಪ್ರಮಾಣಜ್ಞಾನಗಳನ್ನು ಅರಿತು ಕನ್ನಡ ಅಕ್ಷರಗಳನ್ನು ಬರೆಯಬೇಕು. ಈ ಅಂಶವನ್ನು ಅರಿತ ಒಬ್ಬ ಶಾಸನ ರೂವಾರಿ

ಪೊಕ್ಕಳು ತಲೆಕಟ್ಟುಮನ ।
ನಕ್ಕರದವಯವಮನಱಿದು ಖಂಡರಿಸಲುಕೀ ।
ಇಕ್ಕುಡನೆ ಬಲ್ಲನಱಿಯ ।
ಮಿರ್ಕ್ಕವರೆನ್ದೊಸೆದು ಧರಣಿ ಬಣ್ಣಿಸುತ್ತಿಕ್ಕುಂ ॥[೮೩]

ಎಂಬ ಪದ್ಯದಲ್ಲಿ, ಕನ್ನಡ ಅಕ್ಷರಗಳ ಅಂಗತ್ರಯವನ್ನು ಪೊಕ್ಕಳು(=ಅಕ್ಷರದ ಮುಖ್ಯಭಾಗ), ತಲೆಕಟ್ಟು ಮತ್ತು ಅದರ ಅವಯವ ಎಂದು ಶಾಸ್ತ್ರೀಯವಾಗಿ ಬಿಡಿಸಿ ಹೇಳಿರುವನು. ಇನ್ನೊಬ್ಬ ರೂವಾರಿ

ಬಹುರೇಖೆಯಾಗಿ ಬಾರದೆ ।
ಯತಿ ನಿಬಿಡಂ ನೋರ್ಪ(ನೇರ್ಪ)ಡೆಲ್ಲರುಂ ಹೊಗಳಲುಕೀ ।
ವಸ್ಮತಿ (ವಸುಮತಿ)ಯೊಳು ಕಣ್ಗೊಳಿಸಲು ।
ಕತಿಬಲ್ಲಂ ದಾಸೋಜಗ್ರತನಯಮ್ಮಸಣಂ ॥[೮೪]

ಎಂಬ ಪದ್ಯದಲ್ಲಿ, ಬಹುರೇಖೆಯಾಗಿ ಬಾರದೆ ಅಂದರೆ ರೇಖೆ ಬಳಸಿ ಬರುವಂತೆ, ಯತಿ ನಿಬಿಡಂ ನೇರ್ಪಡೆ ಅಂದರೆ ಮಧ್ಯಮಧ್ಯ ಯೋಗ್ಯ ಸ್ಥಳವಿರುವಂತೆ ಅಕ್ಷರಗಳನ್ನು ಬರೆಯಬೇಕು ಎಂದು ಹೇಳಿರುವನು. ಹೀಗೆ ಕನ್ನಡ ವರ್ಣಸ್ವರೂಪಕ್ಕೆ ಸಂಬಂಧಿಸಿದ ಅಕ್ಷರಗಳ ಆಕಾರಜ್ಞಾನ, ಅಕ್ಷರಗಳ ವಿನ್ಯಾಸಗಳೆಂಬ ಮೂಲಭೂತ ತತ್ವಗಳನ್ನು ಇವರು ಹೇಳಿರುವರು. ಇದನ್ನು ಅರ್ಥಮಾಡಿಕೊಂಡು ಬರೆದರೆ ಕನ್ನಡ ಅಕ್ಷರಗಳಿಗೆ ಮುತ್ತಿನ ಮೆರಗು ಬರುತ್ತದೆ. ಇದಕ್ಕೆ ಕೆಲವುಉದಾಹರಣೆಗಳು :

---

೮೨. i ತನ್ನ ಸುಂದರ ಅಕ್ಷರಗಳನ್ನು ಪ್ರೇಮಪತ್ರ ಬರೆಯಲು ಸ್ತ್ರೀಯರು ಬಯಸುತ್ತಿದ್ದರೆಂದೂ ಸೋಮದೇವಸೂರಿಯ ಯಶಸ್ತಿಲಕಚಂಪುವನ್ನು ಪ್ರತಿಮಾಡಿದ ರಚ್ಚುಕನು ಹೇಳುತ್ತಾನೆ. Yashashtilak and Indian Culture, P.I.

ii ಪರಿಕಿಪೊಡೆಲ್ಲರಕ್ಕರಮುಮಕ್ಕರಮೇ ಪ್ರತಿಕಣ್ಣ ಚನ್ದನ
ಕ್ಕರಮೆ ನೆಗರ್ತೆಯಕ್ಕರಮನೇಕರುಮಂ ಪೊರೆವಕ್ಕರಂ ಮಹೀ
ಶ್ವರರ ಸಭಾನ್ತರಾಳಮನಳಂಕರಿಪಕ್ಕರಮೆನ್ತುಮಾಳ್ದನಂ
ಪಿರಿಯದಗುನ್ತಿಯೊಳ್ನಿಲಿಸುವಕ್ಕರಮುಪ್ಪರವಟ್ಟದಕ್ಕರಂ
(SII XI P. ೧೭೮. ಚಿಕ್ಕಹಂದಿಗೊಳ ಶಾಸನ)

೮೩. EC XI-ದಾವಣಗೆರೆ ೧೪೯. ಕೊಡಗನೂರು.

೮೪. EC. V-ii ಅರಸಿಕೆರೆ ೧೨೭ ತಳಲೂರು

೧ "ಬರೆದ xxx ಮುತ್ತಿನ। ಸರಮಂ ಸಮೆದನ್ತೆ ಶಾನ್ತನೊ[ಳ್]ಕ್ಕರಮಂ"[೮೫]

೨ "ಸರಸತರಮಾದುವೆನ್ದ। ಕ್ಕರಿಗರ್ಬ್ಬಣ್ಣಿಪಿನಮೀ ಶಿಳಾಶಾಸನಮಂ xx |
xxxx ಮುತ್ತಿನ । ಸರಿಗೆಯನನುಕರಿಸೆ ಕನ್ನಪಯ್ಯಂ ಬರೆದಂ ॥"[೮೬]

೩ "x ನಿಗಿತ್ತ ಪೊಸಮುತ್ತುಗಳೆಂxಪರಿಣತೆಯಿಂ ದೇಪ ಬರೆದ ...."[೮೭]

೪ "ಸರಸ್ವತಿಯ ಕೊರಳ ಮುತ್ತುಮೊ।ಲಿರೆ ವೃತ್ತಂ ಕೋಮಲಂ ಸುಭದ್ರಂ......"[೮೮]

೫ ಸುಲಲಿತಕೆಯೆನಲು ವಾ ।
ಗ್ಲಲನೆಯ ಹಾರದವೊಲೊಪ್ಪಿ ಬರೆದಂ ಭೂದೇ ॥
ವಲಲಾಮಂ ಕಿಸುವಾಯರ ।
ಕುಳತಿಳಕಂ ರೂಪರ್ಝುಷಕಪತಾಕಂ ತೀಕಂ ॥[೮೯]

೬ ಶರನಿಧಿಯೊಳ್ನೆಲೆ[ಸಿ][ದು]ವಂ ।
ಸರಸಿಜಭವನಾಯ್ದುಕೊಣ್ಡು ವಾಗ್ದೇವಿಗೆ ಬಿ ।
ತ್ತರದಿಂದೆ ಸಮೆದ ಮುತ್ತಿನ ।
ಸರಿಗೆಯನನುಕರಿಪುವಲ್ತೆ ಬಲ್ಲೆಯ ಲಿಖಿತಂ ॥[೯೦]

ಈ ಪದ್ಯಗಳಲ್ಲಿಯ ಮುತ್ತಿನ ಉಪಮೆಗಳು ಮುತ್ತಿನಂತಹ ಕನ್ನಡ ವರ್ಣಗಳಿಗೆ ಚೆನ್ನಾಗಿ ಒಪ್ಪುತ್ತವೆ. ಇಂಥ ಒಬ್ಬ ಸುಪ್ರಸಿದ್ಧ ಹಸ್ತಪ್ರತಿ ಲೇಖಕನೆಂದರೆ ಪುಷ್ಪದಂತ ಪುರಾಣವನ್ನು ಪ್ರತಿ ಮಾಡಿದ ನವಿಲಗುಂದದ ಮಾದಿರಾಜ. ಈತ ತನ್ನ ಬಗೆಗೆ

---

೮೫. KI. V ೩೮. ಚಿಕ್ಕಹಂದಿಗೋಳ
೮೬. SII. XI-i-೩ ಸೊರಟೂರು
೮೭. EC.XI ಹೊಳಲಕೆರೆ ೧೨೪ ಚಿಕ್ಕಯಗಟೆ
೮೮. EC. V-ii ಅರಸಿಕೆರೆ ೧೨೩ ಹಾರನಹಳ್ಳಿ
೮೯. KI.V. ೨೬ ನರಗುಂದ
೯೦. K.I.V-8 ತಳುವಳ್ಳಿ

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು ಮಾತ್ರೆಯೊಳ್ ।
ನಿಂದ ಬೆಡಂಗು ಬಳ್ಳಿಯೊಳೊಡಂಬಡತಿರ್ಪ ನಯಂ ವಿಸರ್ಗದೊ ।
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜ ವಿಬುಧಂ ವಿಬುಧೋದಿತ ನವ್ಯಕಾವ್ಯಮಂ ॥[೯೧]

ಎಂದು ಹೇಳಿಕೊಂಡುದನ್ನು ಇಲ್ಲಿ ಗಮನಿಸಬಹುದು.

ಅಲಂಕಾರ ಲೇಖನ : ಕನ್ನಡ ಅಕ್ಷರಗಳನ್ನು ಮುತ್ತಿನಂತೆ ಬರೆದು ಕೆಲವರು ಅನಲಂಕೃತ ಸೌಂದರ್ಯವನ್ನು ಪ್ರಕಟಿಸಿದರೆ, ಅಕ್ಷರಗಳಲ್ಲಿ ಪ್ರಾಣಿಪಕ್ಷಿ ಪುಷ್ಪಗಳನ್ನು ಬಿಡಿಸಿ ಸಾಲಂಕೃತ ಸೌಂದರ್ಯವನ್ನು ಆರೋಪಿಸಿದ್ದಾರೆ, ಕೆಲವು ಶಾಸನ ಲಿಪಿಕಾರರು.

ಆನೆಯ ಸಿಂಘದ ಗಿಳಿಗಳ ।
ನಾನಾ ರೂಪುಗಳನಕ್ಕರಂಗಳೊಳೆಸೆಯಲು ।
ತಾನಳವಡಿಸುವನೆಂದಡ ।
ದೇನೆ x x ಮರುಳೆ ತೊಡರ್ದಪ್ಪೈ ರೂವಣನೊಳ್ ॥[೯೨]

ದಿ x x ಗಳ್ ಹಸ್ತಿ ಸಿಂಗಂ ।
ಹರಿಣಿಯ ರೂಹಗೆಯಕ್ಕರಾವಳಿಯಿಂದಂ ।
ಬರೆಯ x x ದಡೆ
ಪುರದಿ[ಡಿ]ಸವೇಡೆಲವೋ ರೇವಣಾರ್ಯನೊಳೆಂದುಂ ॥
ದೆಂಟೆಣೆ x x ನೆಲೆ
x ತಕ್ಕ ನಿನ್ನಳವೊ ಚಿತ್ರದ ಕರದೊಳ್ಪಂ ।
ಕಂಟ್ಠದೊಳ್ ಬರೆವ ರೇವನ ।
ಕಂಟ್ಠಕೆಳೆ x ಣಸಿ ನೋರ್ಪೊಡೆಂದೇಕೈಕಂ ॥[೯೩]

ಎಂಬ ಪದ್ಯಗಳಲ್ಲಿ ರೂವಣ ಮತ್ತು ರೇವಣರ ಹಸ್ತಕೌಶಲಸಿದ್ಧಿ ವ್ಯಕ್ತಗೊಂಡಿದೆ. ಇಂಥ ಪಕ್ಷಿ ಪುಷ್ಪ ಪ್ರಾಣಿಚಿತ್ರಯುತ ಅಕ್ಷರಗಳನ್ನು ಹಸ್ತಪ್ರತಿ ಲೇಖನಕ್ಕೆ ಬಳಸದಿದ್ದರೂ, ನಮ್ಮ ಪ್ರಾಚೀನ ಲಿಪಿಕಾರರ ಲಿಪಿಸೌಂದರ್ಯ ಪ್ರಜ್ಞೆಗೆ ಇವು ನಿದರ್ಶನವೆನಿಸಿವೆ.

---

೯೧. ಕ.ಕ.ಚ.೪೬೨

೯೨. E.C. XI ಚಿತ್ರದುರ್ಗ ೪೭ ಭೀಮಸಮುದ್ರ

೯೩. SII IX-i ೧೩೨ ಬಾಗಳಿ

ಶೀಘ್ರ ಲೇಖನ : ಶೀಘ್ರ ಲೇಖನ, ನಮ್ಮ ಪ್ರಾಚೀನರು ಮೆಚ್ಚಿದ ಬರವಣಿಗೆಯ ಇನ್ನೊಂದು ವಿಧಾನ.

'ಬಹುಬೆಳ್ಳಂಘನ ಶೀಘ್ರಲಿಖಿತಂ'[೯೪]

'ಸುಜನಮಿತ್ರಪವಿತ್ರಂ ರೇಚಣನ ಶೀಘ್ರಲಿಖಿತಂ'[೯೫]

'ಶ್ರೀರಂಗದೇವನ ಶೀಘ್ರಲಿಖಿತಂ'[೯೬]

'ನಾಗನಾರ್ಯನ ಶೀಘ್ರಲಿಖಿತಂ'[೯೭]

'ಬ್ರಹ್ಮೇಶ್ವರಜೀಯರ ಸೀಘ್ರಲಿಕಿತಂ'[೯೮]

'ಕಾವನ ಸೀಘ್ರಲಿಕಿತಂ'[೯೯]

ಎಂದು ಶಾಸನ ಲೇಖಕರು ತಮ್ಮನ್ನು ಕರೆದುಕೊಂಡಿರುವರು. ಹಸ್ತಪ್ರತಿಯಲ್ಲಿಯೂ ಈ ಕಲೆಯನ್ನು ಸಾಧ್ಯಮಾಡಿ ತೋರಿಸಿದ ಲಿಪಿಕಾರರಿರಬಹುದು.

ಬಹುಲಿಪಿ ಲೇಖನ : ನಮ್ಮ ಕವಿಗಳು ಬಹುಭಾಷಾ ಬಲ್ಲಿದರಿದ್ದಂತೆ ಬಹುಲಿಪಿ ಬಲ್ಲಿದರೂ ಆಗಿದ್ದರು. ಕಬ್ಬಿಗರ ಕೈಪಿಡಿಯ ಲಿಂಗಮಂತ್ರಿಯು "ಸರಸ ಸಂಗೀತ ನಿಪುಣಂ ಬಹುಲಿಪಿಜ್ಞ ಭೂಸುರವರ ವಿರೂಪಾಕ್ಷಸುತ ಲಿಂಗಮಂತ್ರಿಪಂ"[೧೦೦] ಎಂದು ತನ್ನನ್ನು ಕರೆದುಕೊಂಡುದು ಇದಕ್ಕೆ ಸಾಕ್ಷಿ. ಶಾಸನಗಳಲ್ಲಿ ಇಂಥ ಕೆಲವು ಬಹುಲಿಪಿಜ್ಞರು ಕಂಡುಬರುತ್ತಾರೆ.

".. ಪದ್ಮಗ ।
ರ್ಭನುಮೇಂ ಬಲ್ಲನೆ ಪೇಳಿಮಿನ್ನು ಬರೆಯಲ್ಕೆಂಬನ್ನೆಗಂ ತಾನೆ ನೆ ।
ಟ್ಟನೆ ಬಲ್ಲಂ ಬರೆಯಲ್ಕನೇಕ ಲಿಪಿಯಂ ಶ್ರೀ ವಿಪ್ರವಿದ್ಯಧರಂ"[೧೦೧]

"ಛಪ(ಂ)ನ ದೇಶ ಚಿತ್ರಲಿಪಿಕೋವಿದಂ......ರಾಯಸ್ತ ಕೊಂಡಮರಸಯ್ಯ"[೧೦೨]

---

೯೪. EC III ನಂಜನಗೂಡು ೧೮೩ ದೊಡ್ಡಹೊಮ್ಮ

೯೫. EC.V-II ಬೇಲೂರ ೨೦೦ ದಬ್ಬೆಗ್ರಾಮ

೯೬. EC.V-ii ಅರಸಿಕೆರೆ ೧೩೦ ತಳಲೂರು

೯೭. SII. XI-i ೪೨ ಸವಡಿ

೯೮. SII.IX-i ೮೯ ನಂದಿಬೇವೂರ

೯೯. EC VII ಶಿಕಾರಿಪುರ ೧೧ ಗ್ರಾಮಗ್ರಾಮ

೧೦೦. ಕ ಕ ಚ II ೨೧೬

೧೦೧. EI XII P 278 ಐವೂರು

೧೦೨. SII IX-ii 507 ಚೋಳಸಮುದ್ರ

"................................ನಿಜಾಂಕಮಾಲೆಯಂ ।
ಮಾನವಮನ್ಮಥಂ ಬರೆದನಾದರದಿಂ ವಿಟಚಕ್ರವರ್ತಿ ಧಾ ।
ಶ್ರೀನುತಮಾಗಿ ತಿಲು ತಿವುಳ ಕಂನಡ ನಾಗರದಕ್ಕರಂಗಳಂ ॥[೧೦೩]

"ಚತುರ್ಭಾಷಾ ಲಿಖಿತ್ಥಕ ವಿದ್ಯಾಧರಂ । ಸನ್ಧಿವಿಗ್ರಹಿ ಶ್ರೀಮನ್ನ
ಕುಳಾರ್ಯ್ಯಂ ಬರದಂ."[೧೦೪]

ಇಲ್ಲಿ ಒಬ್ಬ ಅನೇಕ ಲಿಪಿಕೋವಿದ, ಇನ್ನೊಬ್ಬ ಛಪ್ಪನ್ನದೇಶ ಚಿತ್ರಲಿಪಿ ಕೋವಿದ, ಮತ್ತೊಬ್ಬ ತಿಲು(ತೆಲಗು) ತಮಿಳ ಕನ್ನಡ ಸಂಸ್ಕೃತ ಭಾಷೆಗಳ ಅಕ್ಷರಬಲ್ಲಿದ, ಕೊನೆಯಾತ ಚತುರ್ಭಾಷಾಲಿಪಿ ನಿಪುಣ. ಇವು ಇವರ ಬಹುಲಿಪಿ ವ್ಯಾಮೋಹವನ್ನು ವ್ಯಕ್ತಗೊಳಿಸುತ್ತವೆ.

ಸಣ್ಣಲಿಪಿ ಲೇಖನ : ಪುಟಗಳ ಉಳಿತಾಯ ದೃಷ್ಟಿಯಿಂದ ಸಣ್ಣಲಿಪಿಯನ್ನು ಬಳಸುವರಾದರೂ ಇದನ್ನು ಒಂದು ಕಲೆಯಾಗಿ ಬೆಳಸಿಕೊಂಡು ಬಂದವರೂ ಇದ್ದಂತೆ ತೋರುತ್ತದೆ.

"ಸಂಪಾದನೆಯ ಸಂಣ ಬರಹದ ಗುರುಬಸವರಾಜದೇವರು ಸೇರಿಸಿದ ಶರಣ ಚಾರಿತ್ರದ ವಚನ."[೧೦೫]

"ಸಂಣ ಬರಹದ ಗುರುಬಸವರಾಜದೇವರ ಶ್ರೀಪಾದ ಕಟಾಕ್ಷದಿಂದ ಶಿವಲಿಂಗ ದೇವರಿಗೆ ಟೀಕು ಯೋಕೋತ್ತರ ಸಮಾಪ್ತಿ."[೧೦೬]

ಈ ಎರಡು ಹೇಳಿಕೆಗಳು ಗುರುಬಸವರಾಜದೇವರ 'ಸಣ್ಣ ಬರಹ'ಕಲೆಯನ್ನು ತಿಳಿಸುತ್ತವೆ. ಇವಲ್ಲದೆ

"ಘಂಟೆಯಂಮನ ಸುಹಸ್ತದ ಬರಹ"[೧೦೭]

"ಸ್ವಸ್ತಿಶ್ರೀ ಭರತಯ್ಯನ ದಿವ್ಯಲಿಖಿತಂ"[೧೦೮]

"ಬರವರಾಚಾರ್ಯಂ ಸೂರ್ಯಣಂ ಬಿರುದಲೇಖ ಮದನಮಹೇಶ್ವರಂ"[೧೦೯]

---

೧೦೩. SII IX-i P 96 ಹಿರೇಹಡಗಲಿ
೧೦೪. EC V-ii ಅರಕಲಗೂಡು, ಸೋಮವಾರ ಗ್ರಾಮ
೧೦೫. ಧಾವಭಾಂ. ೩೨೭ ಪು.೩೧
೧೦೬. ಧಾವಭಾಂ. ೩೨೮
೧೦೭. EC.VIII-ii ತೀರ್ಥಹಳ್ಳಿ ೯೮ ಕವಲೆದುರ್ಗ
೧೦೮. EC. VIII-iii ಸೊರಬ ೨೧೬ ಕೆರೆಹಳ್ಳಿ
೧೦೯. EC. V-ii ಬೇಲೂರ ೧೭೨ ವೀರದೇವರಹಳ್ಳಿ

"ಆದಿಮಧ್ಯಾವಸಾನಂಬರಂ ನಿರ್ವಿಘ್ನದಿಂದಂ ಬರೆದಂ....... ನರಸಿಂಗದೇವ"[೧೧೦]

ಸಮವೃತ್ತಶ್ಲೋಕಂಗಳು ।
ಸಮಸ್ತ ಸಂಪತ್ಕರಂಗಳತಿ ನಿಬಿಡಂಗಳು ।
ಕಮನೀಯ ಮೃದು ಸುರೇಖಾ ।
ರಮಣಂಗಳು ನೆಗಟ್ಟಿ ಬಸವರಾಜನ ಬರಪಂ ॥[೧೧೧]

ಒಂದೊಂದು ಪೊರಳ್ಚಿ ಕರಂ ।
ಮನ್ದಂ ಸಂಚ್ಛನ್ನವೆನಿಸಿ ಬರೆಯದೆ ಪಲರ್ಗಂ ।
ಸನ್ದೆಹಮಲ್ಲದನ್ತಿರೆ ।
ಜಿನಭಕ್ತಂ ಮುದ್ದಿಗಾಂಕಂ ಬರೆಗುಂ ॥[೧೧೨]

ಮುನ್ನೀರ್ಬಳಸಿರೆ ಧರಣಿಯೊ ।
ಳಿ[ನ್ನುಂ] ಮಾಧುರ್ಯ ಸುಕರ ಚಾತುರ್ಯ್ಯಗುಣ ।
ಪ್ರೋನ್ನತರಿಲ್ಲೆನೆ ಸಾಸನ ।
ಮನ್ನಿದೆ ಚೆಲ್ವಾಗೆ ಸಾಮಿಯಣ್ಣಂ ಬರೆದೋಂ ॥[೧೧೩]

ಬರೆಪದ ಬಲ್ಮಗ(ಗೆ) ವಾದ್ಯದ
ಪರಿಣತಿಕೆಗೆ ಕವಿತೆಗಿವನೊಳೀ x x x।
x x ಯೆನಿಪ ಸಾಮಿಯಣ್ಣಂ ।
ಬರೆದೊಂ ಶಾಸನಮನೆಸೆವ ಜಸ ಸಾಸನಮಂ ॥[೧೧೪]

ಅನುಪಮತರಾಕ್ಷರಂ ಬುಧ ।
ಜನಮಂ ಜೀಯೆನಿಸೆ ಸಕಳವಿದ್ಯಾನಿಳಯ(ಂ) ।

---

೧೧೦. KI-ii 16 ಅಕ್ಕಲಕೋಟ
೧೧೧. EC. VI-ii. ಅರಸಿಕೆರೆ ೭೧ ಅರಸಿಕೆರೆ
೧೧೨. EC.-XI ದಾವಣಗೆರೆ ೧೪೯ ಕೊಡಗನೂರು
೧೧೩. SII, XI-i No. ೪೧ ನಾಗಾವಿ
೧೧೪. SII XV. No. ೩೫೨ ಮುಳಗುಂದ

ಮನುಮುನಿ ಚಾರಿತ್ರನೀ ಸಾ ।

ಸನಮಂ ಮನ್ನೆಯರ ಬಸವಣಯ್ಯಂ ಬರೆದಂ ॥[೧೧೫]

"ಬಮ್ಮಿಕನ ಬರಪಮುಮದೇನಪೂರ್ವಮೋ ಜಗದಲು"[೧೧೬]

ಎಂಬ ಹೇಳಿಕೆಯಲ್ಲಿ ಶಾಸನ ಲಿಪಿಕಾರರು ತಮ್ಮ ವೈಶಿಷ್ಟ್ಯ, ಪ್ರತಿಷ್ಠೆಗಳನ್ನು ಉದ್ಘೋಷಿಸಿರುವರು. ಇದಲ್ಲದೆ "ಉಭಯಹಸ್ತ ಲೇಖನಕುಶಲನವಧಾನಚಕ್ರವರ್ತಿ ಶ್ರೀಕರಣದ ವಿಶ್ವನಾಥ ಬರೆದ"[೧೧೭] ಎಂಬ ಮಾತು ಕೇವಲ ಆಶ್ಚರ್ಯಹುಟ್ಟಿಸುತ್ತದೆ. ಒಂದು ಕೈ ಸೋತಾಗ ಇನ್ನೊಂದು ಕೈಯನ್ನು ದುಡಿಸಿಕೊಳ್ಳುವ ಇಲ್ಲವೆ ಎರಡೂ ಕೈಗಳನ್ನು ಏಕಕಾಲಕ್ಕೆ ದುಡಿಸಿಕೊಳ್ಳುವ ಅನುಕೂಲವುಳ್ಳ ಇವನ ಶಕ್ತಿ ನಿಜಕ್ಕೂ ದೊಡ್ಡದು. ಇವನಿಗಿಂತ ದೊಡ್ಡ ಶಕ್ತಿಯ ವ್ಯಕ್ತಿ ಮಲ್ಲಿದೇವ.

ಪರಕಿಸೆ ಮಲ್ಲಿದೇವ ವಿಭುಗಾರ್ಸಮನಿರ್ಬರುಮಿರ್ಕೆಲಂಗಳೊಳ್ ।

ಬರೆದುದನಂತ್ಯದಿಂ ಬರೆವ .... ಮತಿಪ್ರಭಾವದೊಳ್ ।[೧೧೮]

ಎಂದು ತನ್ನ ಬಗೆಗೆ ಈತ ಹೇಳಿಕೊಂಡಿದ್ದಾನೆ. ಉಭಯ ಹಸ್ತಗಳನ್ನು ಏಕಕಾಲಕ್ಕೆ ದುಡಿಸಿಕೊಳ್ಳುತ್ತ, ಅದೂ ಅಂತ್ಯದಿಂದ ಬರವಣಿಗೆಯನ್ನು ಮುಂದುವರಿಸುತ್ತ ಒಂದೆ ಪಟ್ಟಿಗೆ ಎರಡು ಪ್ರತಿಗಳನ್ನು ಸಿದ್ಧಮಾಡಿಕೊಡುವ ಈತನ ವಿಪರೀತ ಸಾಮರ್ಥ್ಯ ನಿಜಕ್ಕೂ ಕುತೂಹಲ ಹುಟ್ಟಿಸುತ್ತದೆ.

ಹೀಗೆ ವೈವಿಧ್ಯಪೂರ್ಣ ಬರವಣಿಗೆಯನ್ನು ಕಲೆಯಾಗಿ ಬೆಳೆಸಿಕೊಂಡು ಬಂದ ಕನ್ನಡಿಗರ ಕೈಯಿಂದ, ಸಾವಿರಾರು ಹಸ್ತಪ್ರತಿಗಳು ಜನ್ಮ ತಳೆದಿವೆ. ಒಟ್ಟು ಪ್ರತಿಯ ಮೇಲೆ ಕಣ್ಣಾಡಿಸಿದಾಗ ಲಿಪಿಕಾರನ ಭಾಷಾಜ್ಞಾನ, ಲಿಪಿಪರಿಣತಿ, ಓರಣದ ಒಲವು, ಸೌಂದರ್ಯ ಪ್ರಜ್ಞೆಗಳೂ, ಕೆಲವೊಮ್ಮೆ ಇವುಗಳಿಗೆ ವ್ಯತಿರಿಕ್ತವಾದ ಗುಣಗಳೂ ಕಂಡು ಬಂದು, ದೈಹಿಕವಾಗಿ ಗತಿಸಿಹೋದ ಲಿಪಿಕಾರರ ವ್ಯಕ್ತಿತ್ವ ಹಸ್ತಪ್ರತಿಯ ಮೂಲಕ ಅರಿತಕ್ಕೆ ಬರುತ್ತದೆ. ಅವನ ಬದುಕಿನ ಶಿಸ್ತು-ಅಶಿಸ್ತು, ಹೊಣೆಗಾರಿಕೆ-ಹೊಣೆಗೇಡಿತನ, ಗಂಭೀರ-ಲಘು ಸ್ವಭಾವಗಳೆಲ್ಲ ವೇದ್ಯವಾಗುತ್ತವೆ. ಆದುದರಿಂದ ಒಂದರ್ಥದಲ್ಲಿ ಹಸ್ತಪ್ರತಿಗಳ ಅಭ್ಯಾಸವೆಂದರೆ ಪ್ರಾಚೀನ ಲಿಪಿಕಾರರ ಮನೋಧರ್ಮದ ಅಭ್ಯಾಸವೆನಿಸುತ್ತದೆ. ಈ ಲಿಪಿಕಾರರ ಪರಿಶ್ರಮದ ಫಲವಾಗಿ ನಮಗೆ ಸುಮಾರು ೨೦ ಸಾವಿರ ಕಟ್ಟುಗಳು ಅಂದರೆ ಒಂದು ಲಕ್ಷ ನಕಲು ಗ್ರಂಥಗಳು ಉಳಿದು ಬಂದುದು ಅವರು ನಮ್ಮ ಮೇಲೆ ಮಾಡಿದ ದೊಡ್ಡ ಉಪಕಾರ, ಅವರು ನಮಗೆ ನೀಡಿದ ಒಂದು ಶ್ರೀಮಂತ ಭಾಂಡಾರ.

ಗ್ರಂಥವನ್ನು ಸ್ಖಾಲಿತ್ಯವುಂಟಾಗದಂತೆ ಲಿಪಿಸಬೇಕೆಂದು ಇವರು ಇಟ್ಟುಕೊಂಡ ಆದರ್ಶ. ಈ ಆದರ್ಶನಿಷ್ಠೆ ಹಲವು ಲಿಪಿಕಾರರಿಂದ ಹೀಗೆ ಅಭಿವ್ಯಕ್ತಗೊಂಡಿದೆ :

---

೧೧೫. SII XI-i P. ೯೪ ಮುಳಗುಂದ

೧೧೬. EC. XII ತಿಪಟೂರ ೧೦೫ ಬೆಳೆಗೆರೆ

೧೧೭. EC.V-ii ಅರಸಿಕೆರೆ ೧೫೩ ಹಾರನಹಳ್ಳಿ

೧೧೮. ಕಕಚ ೧೩೫

ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ।[೧೧೯]

ತಪ್ಪಂ ಬರೆದಾತಂ ಕಡು ಜಡ ।
ನಪ್ಪಾತನೆಂದು ಬಯ್ಯಲ್ ಬೇಡಿಂ ।
ತಪ್ಪಿಲ್ಲ ಶುದ್ಧಮಕ್ಕುಂ ।
ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆದೆಂ ॥[೧೨೦]

ಪ್ರತಿ ಶುದ್ಧವಲ್ಲ ನೋಳ್ಪಡೆ
ಕೃತಿಯಂ ತಿದ್ದುವಡೆ ವರ್ಮ ಕರ್ಮವನರಿಯೆಂ
ಮತಿವಂತರು ಬಯ್ಯದಿರಾಂ
ಪ್ರತಿಯೊಳಗೆಂತಿರ್ದುದಿರ್ದ ಪರಿಯಲೆ ಬರೆದೆಂ ॥[೧೨೧]

ಬಲ್ಲ ಪುರುಷರು ನೋಡಿ ಗ್ರಂಥದ ।
ಸೊಲ್ಲು ತಪ್ಪೇಕೆಂದು ಬರದನ ।
ಹೊಳ್ಳುಗಳೆಯದೆ ನೀತಿಯಲಿ ತಿದ್ದೂದು ಮನವೊಲಿದು ।
ಬಲ್ಲವನು ತಾನಲ್ಲ ಪ್ರತಿಯೊಳ ।
ಗುಳ್ಳುದನು ನೋಡುತ್ತ ಬರೆದೆನು ।
ಸಲ್ಲದಾವುದು ಸಲುವುದಾವುದುಯೆಂದು ನಾನರಿಯೆ ॥[೧೨೨]

ಈ ಪದ್ಯಗಳಲ್ಲಿ ನಮ್ಮ ಲಿಪಿಕಾರರ ಪ್ರಾಮಾಣಿಕ ಮನೋಭಾವ ಪ್ರತಿಧ್ವನಿಸುತ್ತದೆ. ತಮ್ಮ ಹಸ್ತಪ್ರತಿಯಲ್ಲಿಯ ತಪ್ಪು ಒಪ್ಪುಗಳಿಗೆ ಕಾರಣ ಮೂಲಪ್ರತಿಯೇ ಹೊರತು ತಾವಲ್ಲವೆಂಬ ಮಾತು ಅವರ ಸ್ವಚ್ಛಮನಸ್ಸನ್ನು ಪ್ರತಿನಿಧಿಸುತ್ತದೆ. ಹೀಗೆ ಎಚ್ಚರವಹಿಸಿದರೂ ಮರಹು ಆಲಸ್ಯಗಳೆಂಬ ಅನಿವಾರ್ಯ ಕಾರಣಗಳಿಂದ ಲಿಪಿದೋಷವುಂಟಾಗುವದು, ಮನುಷ್ಯ ಸಹಜ ಕಣ್–ಕಿವಿ–ಕೈ ತಪ್ಪಿ ಕೆಲವು ದೋಷಗಳು ಹಣಕಿ ಹಾಕುವುದು ಸ್ವಾಭಾವಿಕ. ಆದುದರಿಂದ

೧೧೯. ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳ ಕೊನೆಗೆ ಈ ಶ್ಲೋಕ ಬರುತ್ತದೆ.
೧೨೦. ಸಿದ್ಧವ ಮುನ್ನುಡಿ ೮೭
೧೨೧. ಧಾ.ವ.ಭಾಂ. ೧೩೮
೧೨೨. KRI. IV ೬೨ ಭಾಗವತ

ಬಿಂದು ದುರ್ಲಿಪಿ ವಿಸರ್ಗ ವೀಥಿಕಾ । ಶೃಂಗ ಪಙ್ಕ್ತಿಪದಭೇದ ದೂಷಣಂ ।
ಹಸ್ತವೇಗ ಜವಬುದ್ಧಿ ಪೂರ್ವಕಂ । ಕ್ಷಂತುಮರ್ಹತಿ ಸಮೀಕ್ಷ್ಯ ಸಜ್ಜನಾಃ ॥[೧೨೩]

ಕರವೇಗದೊಳಗಾಲಸ್ಯದಿ ।
ಭರದೊಳು ಉರು ಮದದಿಂ ಹಂಕಾರದಿ ।
ಬರೆದ ಲಿಪಿಯೊಳು ತಪ್ಪಿ ।
ದ್ದರಿದನು ಕೂಡಿ ನೆರೆ ತಿದ್ದಿ ಮೆರೆವುದು ಸುಜನರು ॥[೧೨೪]

ವಿಲಸತ್ಕೃತಿಯಂ ಲಿಖಿಪಾ ।
ಗಲಸಿಕೆಯಿಂದುದಿತಮಾದ ದೋಷಮನೀಗ ।
ಳ್ಗಲೆ ಸತ್ಪ್ರೌಢರು ತಿರ್ದಿಯೆ ।
ನಲವಿಂ ಬುಧಕರ್ಣ್ನಕತುಳ ಕೌತುಕ ಮಾಳ್ಪುದು ॥[೧೨೫]

ಲವಲೇಶ ತಪ್ಪ ಕಾಣುತೆ ।
ಕವಿ ಬರಹಕ್ಕೂಣೆಯೆಂದು ಬಯ್ಯಲ್ ಬೇಡಾ ।
ಎವೆ ಹಳಚಲೊಡನೆ ಮರಹಂ ।
ನವರಸಿಕರು ಓದಿ ತಿದ್ದಿ ನಿಮ್ಮಯ ಗುಣದಿಂ ॥[೧೨೬]

ಕರ ಮಱಹು ಪ್ರತಿಮೋಸ ತಪ್ಪುಗ ।
ಳಿರಲು ತಿದ್ದುವುದೋದಿ ನೆರೆ ಸ ।
ತ್ಪುರುಷರಾಗಿಹ ಜಾಣ ವಿದ್ವತ್ಪ್ರೌಢಿಯುಳ್ಳವರು ।
ಬರೆದನಿದನೇನೆಂದುಯೆನ್ನನು ।
ಜಱೆದು ನೀಕರಿಸದೆ ಗುಣಂಗಳ ।
ಮೆಱೆದು ಬಹುಮಾನವನು ಮಾಳ್ಪುದು ಬಲ್ಲ ಸುಜನಜನ ॥[೧೨೭]

---

೧೨೩. KRI.V. ೨೬ ಅರ್ಧನೇಮಿ ಪುರಾಣ
೧೨೪. ಮಹಸೂ V ೧೦೧೫ ಮದನಮೋಹಿನೀ ಕಥೆ
೧೨೫. ಮೈಹಸೂ III ೧೪೮೯ ರಾಜಶೇಖರ ವಿಳಾಸ
೧೨೬. ಕಗ್ರಸಂ ೪
೧೨೭. ಮಹಸೂ II ೧೬೯ ಭಾಗವತ

ತಪ್ಪಂ ಬರೆದಿರ್ದೆನಾದಡೆ ।
ತಾತ್ಪರ್ಯರು ತಿದ್ದಿ ಬರೆದು ಓದುತೆ ಮುದದಿಂ ।
ಭೃತ್ಯನುಯೆಂದು ಈ ಕಾವ್ಯವ ।
ಅರ್ತಿಯೋಳು ಲಾಲಿಸುವುದು ಸಜ್ಜನ ಪುರುಷರು ॥[೧೨೮]

ತಪ್ಪಂ ಬರೆದವ ಕಡು ಜಡ ।
ನಪ್ಪಾತಂ ಬರೆದನೆಂದು ಬಯ್ಯಲ್ ಬೇಡಿಂ ।
ತಪ್ಪಕ್ಕು ಶುದ್ಧಮಕ್ಕುಂ ।
ತಪ್ಪುಳ್ಳೊಡೆ ತಿದ್ದಿಕೊಂಬುದುತ್ತಮ ಪುರುಷರ್॥[೧೨೯]

ತಪ್ಪಂ ಬರೆಯದರ್‍ಯಾರಿಲ್ಲಂ ।
ತುಪ್ಪೋಗರವುಂಣೆಂಬ ಹಿರಿಯರಿಲ್ಲಂ ।
ಸರ್ಪಕೆ ಹೆದರದರ್‍ಯಾರಿಲ್ಲಂ ।
ಸುಪ್ರಹುಡವೋದಿ ತ್ತಿದಿ(?) ಪಂಡಿತರಾಗರ್ ॥[೧೩೦]

ತುಪ್ಪಂ ತುಂಬಿರ್ದಗಲೊಳು ।
ಕಪ್ಪಿರ್ದುದ ತೆಗೆದು ಭುಂಜಿಪ ತೆರದಿಂ ।
ತಪ್ಪೆನ್ನದೆ ಕೃತಿಯೊಳಗಣ ।
ತಪ್ಪಂ ತಿದ್ದುವುದು ಪಂಡಿತರ್ ಭಾವಜ್ಞರ್ ॥[೧೩೧]

ಒಪ್ಪುವುದು ಬಲ್ಲ ರಸಿಕರ್ ।
ತಪ್ಪುಳ್ಳರೆ ತಿದ್ದಿ ಬಾಲ ಕಿಂಕರ್ಬರಹವ ।
ತಪ್ಪಂ ತಪ್ಪನೆ ಸಾಧಿಪ ।
ರೊಪ್ಪಾಗಿ ತಾವಿರಲಿ ಶಿವಸುಖಸಂತರ್ ॥[೧೩೨]
ಶಶಿಧರನ ಲೀಲಾಮೃತವನಾ ।

---

೧೨೮. ಧಾವಭಾಂ ೮೪
೧೨೯. ಕ ಗ್ರ ಸಂ ೫೪
೧೩೦. ಧಾವಭಾಂ ೧೩೦೮ ಕೈವಲ್ಯಪದ್ಧತಿ
೧೩೧. ಕ ಗ್ರ ಸಂ ೫೪
೧೩೨. ಕ ಗ್ರ ಸಂ ೫೪

ಬಸವರಾಜನ ಕರುಣವಡೆಯಲು ।
ಪಸರಿಸಿದ ಪ್ರತಿ ನೋಡಿ ಬರೆದೆನು ತಪ್ಪುವೊಪ್ಪುಗಳಾ ।
ಬೆಸಗೆಯನು ಬುಧರು ನೀವ್ ಕೋ ।
ಪಿಸದೆ ತಪ್ಪನು ತಿದ್ದಿವೋದುವ ।
ಹಸನ ದಯಮಾಡಲಿಕೆ ನಿಂಮಡಿಗಳಿಗೆ ಶರಣಾರ್ತಿ ॥[೧೩೩]

ಎಪ್ಪತ್ತುನಾಲ್ಕು ವರುಷದ ।
ಮುಪ್ಪಿನವಂ ಬರದ ಬರಹವಿದರೊಳಗೊಂದರೆ ।
ತಪ್ಪು ತಡೆಯಿದ್ದರೆಲ್ಲವ ।
ನೊಪ್ಪದಿ ತಿದ್ದುವುದು ನೋಡಿ ವಿದ್ಯಾವಂತರು ॥[೧೩೪]

ಭಗ್ನಪೃಷ್ಠ ಕಟಿಗ್ರೀವಾ । ಬದ್ಧದೃಷ್ಟಿರಧೋಮುಖಂ ।
ಕಷ್ಟೇನ ಲಿಖಿತಂ ಶಾಸ್ತ್ರಂ । ಯತ್ನೇನ ಪರಿಪಾಲಯನ್ ॥[೧೩೫]

ಎಂಬ ಪದ್ಯಗಳ ಮೂಲಕ, ನಕಲುಕಾರ್ಯದಲ್ಲಿ ಎಡೆವಾಯ್ದು ಬಂದಿರಬಹುದಾದ ಅನಿವಾರ್ಯ ದೋಷಗಳನ್ನು ಕ್ಷಮಿಸಬೇಕೆಂದೂ ಸಾಧ್ಯವಾದರೆ ತಿದ್ದಿಕೊಳ್ಳಬೇಕೆಂದೂ ಕೇಳಿಕೊಂಡಿರುವರು. ಈ ಹೇಳಿಕೆಗಳ ಹಿಂದಿರುವ ಪ್ರಾಮಾಣಿಕ ಹಂಬಲ ಅನನ್ಯವಾಗಿದೆ. ಆದರೂ ಈ ಕವಿ ಸಹೃದಯ ಲಿಪಿಕಾರರಿಂದ ಉದ್ದೇಶಿತ ಸ್ಖಾಲಿತ್ಯಗಳು, ಲಿಪಿಕಾರರಿಂದ ಅನುದ್ದೇಶಿತ ಸ್ಖಾಲಿತ್ಯಗಳು ಹಸ್ತಪ್ರತಿಗಳಲ್ಲಿ ಶತಮಾನದಿಂದ ಶತಮಾನಕ್ಕೆ ಸಾಗಿಬಂದವು.

❖❖

---

೧೩೩. ಮೈಹಸೂ II ೯೭೧ ಪ್ರಭುಲಿಂಗಲೀಲೆ
೧೩೪. ಮೈಹಸೂ II ೬೪೨ ತೊರವೆ ರಾಮಾಯಣ
೧೩೫. KRI. V ೨೬ ಅರ್ಧನೇಮಿ ಪುರಾಣ

೩

ಸ್ಖಾಲಿತ್ಯಕಾಂಡ

❖

ಸ್ಖಾಲಿತ್ಯದ ಕಾರಣ
ಸ್ಖಾಲಿತ್ಯದ ಸ್ವರೂಪ

ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ

*

ಸ್ಖಾಲಿತ್ಯದ ಕಾರಣ

ಸ್ಖಾಲಿತ್ಯಗಳು ಕವಿಯ ಹಸ್ತಪ್ರತಿಯೊಂದಿಗೆ ಹುಟ್ಟಿ ಅದರ ನಕಲು, ಪ್ರತಿ ನಕಲು, ಬಳಿ ನಕಲುಗಳೊಂದಿಗೆ ಬೆಳೆದುಬರುತ್ತವೆ. ಜನತೆಯ ಅಲಕ್ಷ ಮತ್ತು ನಿಸರ್ಗದ ಪರಿಣಾಮಗಳನ್ನು ಬಿಟ್ಟರೂ ಈ ಸ್ಖಾಲಿತ್ಯಗಳಿಗೆ ಹೊಣೆಗಾರರು ಕವಿ, ಸಹೃದಯ ಮತ್ತು ಲಿಪಿಕಾರ. ಇವರಿಂದಾಗಿ ಕವಿಪ್ರತಿ ಮತ್ತು ಲಭ್ಯಪ್ರತಿಗಳ ಮಧ್ಯ ಸ್ಖಾಲಿತ್ಯಗಳ ಪೀಳಿಗೆ ಜಾಳಿಗೆಯಂತೆ ಹಬ್ಬಿಬಂದಿರುತ್ತದೆ. ಈ ಸ್ಖಾಲಿತ್ಯಗಳಲ್ಲಿ ಉದ್ದೇಶಪೂರ್ವಕ ಹುಟ್ಟಿದುವು ಕೆಲವು; ಉದ್ದೇಶರಹಿತ ಉಂಟಾದವು ಕೆಲವು. ಇಲ್ಲಿ ಉದ್ದೇಶಿತ ಸ್ಖಾಲಿತ್ಯಗಳಿಗೆ ಕವಿ ಸಹೃದಯ ಮತ್ತು ಲಿಪಿಕಾರರು, ಅನುದ್ದೇಶಿತ ಸ್ಖಾಲಿತ್ಯಗಳಿಗೆ ಕೇವಲ ಲಿಪಿಕಾರರು ಕಾರಣರಾಗುತ್ತಾರೆ.

ಉದ್ದೇಶಿತ ಸ್ಖಾಲಿತ್ಯ

ಸಾಮಾನ್ಯವಾಗಿ ಕಾವ್ಯವನ್ನು ಉತ್ತಮ, ಸರಳ ಇಲ್ಲವೆ ಕೀಳುಗೊಳಿಲು ಕವಿ, ಸಹೃದಯರು; ಶ್ರಮ ಉಳಿಸಿಕೊಳ್ಳಲು ಲಿಪಿಕಾರರು ಉದ್ದೇಶಿತ ಸ್ಖಾಲಿತ್ಯಗಳನ್ನುಂಟುಮಾಡುತ್ತಾರೆ. ಈ ಮೂವರಿಂದ ಘಟಿಸುವ ಸ್ಖಾಲಿತ್ಯಗಳನ್ನು ಇಲ್ಲಿ ಕ್ರಮವಾಗಿ ವಿವೇಚಿಸಬಹುದು.

೧. ಕವಿ :

ಮನುಷ್ಯಸಹಜ ಮರಹು ಆಲಸ್ಯಗಳ ಮೂಲಕ ಕವಿಯ ಸ್ವಹಸ್ತಪ್ರತಿಯಲ್ಲಿಯೂ ಪಾಠದೋಷ ಉಂಟಾಗುವುದು ಅನಿವಾರ್ಯ. ಈ ಅನಿವಾರ್ಯಮೂಲ ಜನಿತ ಅನುದ್ದೇಶಿತ ಭಿನ್ನಪಾಠಗಳನ್ನು ಬಿಟ್ಟರೂ ಹಲವು ರೀತಿಯ ಉದ್ದೇಶಿತ ಭಿನ್ನಪಾಠಗಳು ಕವಿಯಿಂದ ಹುಟ್ಟಿಕೊಳ್ಳುತ್ತವೆ.

ಒಂದು ಕೃತಿಯನ್ನು ಬರೆದು ಸಾರ್ವಜನಿಕರ ಅಭ್ಯಾಸಕ್ಕೆ ಅನುಮತಿ ನೀಡಿ, ತರುವಾಯ ಇನ್ನೂ ಲೇಸುಗೊಳಿಸಬೇಕೆಂಬ ಆಸೆಯಿಂದ, ಬದುಕಿರುವ ವರೆಗೆ ಅಲ್ಲಿಯ ಪಾಠಗಳನ್ನು ಕವಿಯೇ ತಿದ್ದುತ್ತ ಹೋಗಬಹುದು. ಇದರಿಂದ ಮೊದಲು ಪ್ರಚಾರಕ್ಕೆ ಬಿಟ್ಟ ಪ್ರತಿಯ ಪೀಳಿಗೆಗಳಲ್ಲಿ ಒಂದು ಪಾಠ, ತಿದ್ದಿದ ಪ್ರತಿಯ ಪೀಳಿಗೆಗಳಲ್ಲಿ ಮತ್ತೊಂದು ಪಾಠ ಬೆಳೆದುಬರುವ ಸಂಭವವಿದೆ. ಇದಕ್ಕೆ ಪಂಪನ ಆದಿಪುರಾಣದ ಒಂದು ಉದಾಹರಣೆ :

> "ಬಳಸಿದ ಪೊನ್ನಕೋಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್
> ಬಳಸಿದ ಪೊನ್ನ[೧] ಕಾಂಡಪಟ[೧]ದಂತಿರೆ ...."[೧]
> (ಪಾಠಾಂತರ : ೧–೧ ಕನ್ನವಡ)

---

೧. ಆದಿಪು ೧–೭೧

ಸುತ್ತುವರಿದ ಕೋಟೆ, ಸಿಂಗರಿಸಿಕೊಳ್ಳುತ್ತಿರುವ ಪುರಲಕ್ಷ್ಮಿಗೆ ಬಳಸಿದ ತೆರೆ(ಕಾಂಡಪಟ)ಯಂತೆ ಇದ್ದುದಾಗಿ 'ಆದಿಪುರಾಣ'ದಲ್ಲಿ ಪಂಪನು ವರ್ಣಿಸಿರುವನು. ಇಲ್ಲಿ 'ಕನ್ನವಡ' ಎಂಬ ಬೇರೊಂದು ಪಾಠವಿದೆ. ಕನ್ನವಡವೆಂದರೆ ಕನ್ನಡಿಯಿಂದ ಕೂಡಿದ ಗೋಡೆ. ಇಂಥ ಗೋಡೆಗಳ ಮಧ್ಯನಿಂತ ಹೆಣ್ಣಿಗೆ ತನ್ನ ಶರೀರದ ಯಾವುದೇ ಭಾಗವನ್ನು ಸಿಂಗರಿಸಿಕೊಳ್ಳಲು ಅನುಕೂಲವಾಗುತ್ತದೆ. ಆದುದರಿಂದ ಏಕಾಂತವನ್ನುಂಟುಮಾಡುವ ತೆರೆ(ಕಾಂಡಪಟ)ಗಿಂತ, ಏಕಾಂತದ ಜೊತೆ ಮೈಯನ್ನೆಲ್ಲ ಸಿಂಗರಿಸಿಕೊಳ್ಳಲು ಅನುವುಮಾಡಿಕೊಡುವ ಕನ್ನಡಿಗೋಡೆ (ಕನ್ನವಡ) ಹೆಚ್ಚು ಪ್ರಯೋಜಕ. ಆದಿಪುರಾಣವನ್ನು ಪೂರ್ಣಗೊಳಿಸಿ ಆಮೇಲೆ ಬರೆಯತೊಡಗಿದ ಭಾರತದಲ್ಲಿ, ಪರಾಶರಮುನಿ ಮತ್ತು ಮತ್ಸ್ಯಗಂಧಿಯರ ಮಿಲನ ಪ್ರಸಂಗವನ್ನು ಚಿತ್ರಿಸಬೇಕಾಗಿದೆ, ಕವಿಗೆ. ಮತ್ಸ್ಯಗಂಧಿಯೊಡನೆ ದೋಣಿಯಲ್ಲಿ ಕುಳಿತು ಯಮುನೆಯನ್ನು ದಾಟುತ್ತಿದ್ದ ಪರಾಶರನಿಗೆ, ಅವಳಲ್ಲಿ ವ್ಯಾಮೋಹ ಹುಟ್ಟಿತು. ಅವಳಿಗೆ ಯೋಜನ ಗಂಧತ್ವವನ್ನು ದಯಪಾಲಿಸಿ "ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂಜನ್"[೨] ಅವಳೊಡನೆ ಕೂಡಿದ. ಇದನ್ನು ಬರೆಯುತ್ತಿದ್ದಂತೆ ಪಂಪನಿಗೆ ಈಮೊದಲು ತಾನು ಆದಿಪುರಾಣದಲ್ಲಿ "ಕಾಂಡಪಟದಂತಿರೆ" ಎಂದು ಬರೆದುದು ನೆನಪಾಗಿರಬೇಕು. ಈಗ ಎರಡೂ ಪ್ರಸಂಗಗಳನ್ನು ತೂಗಿನೋಡಿ ಮುಸುಕು ಅರ್ಥದ 'ಕಾಂಡಪಟ' ಆದಿಪುರಾಣದಲ್ಲಿ ಉಚಿತವಲ್ಲವೆನಿಸಿ, ಅದನ್ನು 'ಕನ್ನವಡ'ವೆಂದು ಆಮೇಲೆ ತಿದ್ದಿಕೊಂಡಿರಬೇಕು. "ಇಂಥ ವ್ಯತ್ಯಾಸವನ್ನು ಪಂಡಿತನಾಗಲಿ ಲಿಪಿಕಾರನಾಗಲಿ ಮಾಡುವುದು ಶಕ್ಯವಿಲ್ಲ. ಕವಿಯೇ ಕಾರಣವಾಗಿ ಇಲ್ಲಿ ಎರಡು ಪಾಠಗಳುಂಟಾಗಿರುವುದು ಹೆಚ್ಚು ಸಂಭವನೀಯ."[೩] ಪ್ರಾಚೀನ ಕಾವ್ಯಗಳಲ್ಲಿಯ ಕೆಲವು ಭಿನ್ನಪಾಠಗಳಿಗೆ ಕವಿಯೂ ಕೆಲಮಟ್ಟಿಗೆ ಹೊಣೆಗಾರನೆಂಬುದಕ್ಕೆ ನಿದರ್ಶನವಿದು. ಇಂಹ ಬೇರೆ ಕೆಲವು ಉದಾಹರಣೆಗಳನ್ನು ಆಧುನಿಕ ಸಾಹಿತ್ಯದಿಂದ ಕೊಡಬಹುದು.

ನಾಡಗೀತೆಯನ್ನಾಗಿಸುವರೆಂಬ ಕಾರಣದಿಂದ ಕುವೆಂಪು ಅವರು "ಜಯ ಹೇ ಕರ್ಣಾಟಕ ಮಾತೆ" ಎಂಬ ತಮ್ಮ ಕವನವನ್ನು ನಲವತ್ತು ವರ್ಷಗಳ ತರುವಾಯ ಮುರಿದು ಕಟ್ಟಿದರು.[೪] ಚೆನ್ನವೀರ ಕಣವಿಯವರ "ನಮ್ಮ ಮಧ್ಯ ಇವನಿದ್ದನೆಂದರೆ ನಂಬುವೆಯಾ?"[೫] ಶೀರ್ಷಿಕೆಯ ಕವನದಲ್ಲಿ 'ಬ್ಯಾಂಡು ಬಜಂತ್ರಿಯನಿರಿಸಿ ಕೈಮುಗಿದು ನಡೆದ' ಎಂಬ ಒಂದು ಚರಣವಿದೆ. ಈ ಶೀರ್ಷಿಕೆಯನ್ನು 'ಲಾಲಬಹಾದ್ದೂರ ಶಾಸ್ತ್ರಿ' ಎಂದೂ, ಚರಣವನ್ನು "ಬಾಜಾಬಜಂತ್ರಿಯನಿರಿಸಿ ಸಹಜ ತಂತಿಯ ಮಿಡಿದ" ಎಂದೂ, ಉದ್ದೀಪನಗೊಳಿಸುವ ಉದ್ದೇಶದಿಂದ ಅವರೇ ತಿದ್ದುಪಡಿಮಾಡಿದರು.[೫]

ಈ ಸಮಯಾನುವರ್ತನ ಮತ್ತು ಉದ್ದೀಪನಗಳಲ್ಲದೆ ಇನ್ನೂ ಹಲವು ಕಾರಣಗಳು, ಕವಿಗೆ ತನ್ನ ಕಾವ್ಯವನ್ನು ತಾನೇ ತಿದ್ದಲು ಹಚ್ಚುತ್ತವೆ. ರಾಘವಾಂಕನು ತಾನು ಈ ಮೊದಲು ರಚಿಸಿದ್ದ ಹರಿಶ್ಚಂದ್ರಕಾವ್ಯದ ಸುಂದರ ಪದ್ಯಗಳನ್ನು ಧಾರ್ಮಿಕ ಕಾರಣಕ್ಕಾಗಿ ಹೊರತೆಗೆದು ಸೋಮನಾಥಚಾರಿತ್ರದಲ್ಲಿ ಸೇರಿಸಿದನೆಂಬ ಹೇಳಿಕೆಯನ್ನು ಇಲ್ಲಿ ಸ್ಮರಿಸಬಹುದು.[೬]

---

೨. ಪಂ.ಭಾ ೧-೭೦

೩. ಕ ಗ್ರ ಸಂ. ೬೭

೪. ಕೊಳಲು (೧೯೩೦) ಮತ್ತು ಕನ್ನಡನುಡಿ (೧೯೭೧ ಫೆಬ್ರುವರಿ) ನೋಡಿರಿ

೫. 'ಶಾಂತಿದೂತ ಶಾಸ್ತ್ರೀಜಿ' ಪು. ೮, ಮತ್ತು 'ಎರಡು ದಡ' ಪು. ೨೫

೬. "......ಹರಿಶ್ಚಂದ್ರ ಕಾವ್ಯದ ಪದಗಳಂ ತೆಗೆದು ಜಗ ಪೊಗಳಲು ॥ ಕ್ಷೋಣಿಯೊಳು ಸೋಮನಾಥನ ಕಾವ್ಯಮಂ ಪೇಳ್ದು । ಊಣೆಯವನಿತ್ತನಾ ಕಾವ್ಯಕೆ ...." (ರಾಚ ೧೩-೭೫)

ಇದಲ್ಲದೆ ಒಂದು ಕೃತಿಯನ್ನು ಬರೆದು ಪ್ರಚಾರಕ್ಕೆ ಬಿಟ್ಟು, ಅದನ್ನು ಮತ್ತೆ ವಿಸ್ತಾರಗೊಳಿಸಿ ಪ್ರಚಾರಕ್ಕೆ ಬಿಟ್ಟಾಗ, ಅದಕ್ಕೆ ಸಂಬಂಧಪಟ್ಟಂತೆ ಎರಡು ಪೀಳಿಗೆಗಳು ಬೆಳೆದು ಬರುವುದು ಸಹಜ. ಇದಕ್ಕೆ ಒಳ್ಳೆಯ ಉದಾಹರಣೆ ತೆಂಬಳೂರುನಾಮಾಚಾರ್ಯನ ಚೂಡಾಮಣಿ ಟೀಕೆ.

ಅಥ ತೆಂಬಲೂರನಾಮಾಚಾರ್ಯೋಽಭೂತ್ತೆಂಬಲೂರ ಸದ್ಗ್ರಾಮೇ
ಷಷ್ಠೇನ ವಿನಾ ಖಂಡೇನ ಸೋಽಪಿ ಸಿದ್ಧಾಂತಯೋರುಭಯೋಃ ॥೧೬೫॥

ಚತುರಧಿಕಾಶೀತಿ ಸಹಸ್ರ ಗ್ರಂಥ ರಚನಯಾ ಯುಕ್ತಾಮ್
ಕರ್ಣಾಟಭಾಷಯಾ ಕೃತಾಮಹತೀಂ ಚೂಡಾಮಣಿ ವ್ಯಾಖ್ಯಾಮ್ ॥೧೬॥
ಸಪ್ತಸಹಸ್ರ ಗ್ರಂಥಾಂ ಷಷ್ಠಸ್ಯ ಚ ಪಂಚಿಕಾಂ ಪುನರಕಾರ್ಷೀತ್[೭]

ತೆಂಬಲೂರು ಗ್ರಾಮನಿವಾಸಿಯಾದ ತೆಂಬಲೂರುನಾಮಾಚಾರ್ಯನು ಉಭಯ ಸಿದ್ಧಾಂತ (ಕಷಾಯಪ್ರಾಭೃತ, ಷಟ್ಖಂಡಾಗಮ)ಕ್ಕೆ ಆರನೆಯ ಖಂಡವನ್ನು ಹೊರತುಪಡಿಸಿ, ೮೪೦೦ ಗ್ರಂಥಪ್ರಮಾಣದ 'ಚೂಡಾಮಣಿ' ಹೆಸರಿನ ವ್ಯಾಖ್ಯಾನವನ್ನು ಬರೆದನು. ತರುವಾಯ ಈ ಮೊದಲು ಬಿಟ್ಟಿದ್ದ ೬ ನೆಯ ಖಂಡಕ್ಕೆ ೭೦೦೦ ಗ್ರಂಥ ಪ್ರಮಾಣದ ಪಂಚಿಕೆಯನ್ನು ಹೊಸದಾಗಿ ರಚಿಸಿದನು ಎಂದು ಈ ಉದ್ಧರಣೆಯ ಅಭಿಪ್ರಾಯ. ಇದರಿಂದ ಈ ವ್ಯಾಖ್ಯಾನ ೮೪೦೦೦ ಗ್ರಂಥಪ್ರಮಾಣ ಮತ್ತು ೯೧೦೦೦ ಗ್ರಂಥಪ್ರಮಾಣ–ಹೀಗೆ ಎರಡು ಗಾತ್ರಗಳಲ್ಲಿ ಪ್ರಸಾರಗೊಂಡಿರಲು ಸಾಧ್ಯವಿದೆ. "ತುಂಬಲೂರು ನಾಮಾಚಾರ್ಯರ್ ಎಂಬತ್ತುನಾಲ್ಕುಸಾವಿರ ಗ್ರಂಥಕರ್ತೃಗಳಾಗಿ ಕರ್ಣಾಟಕ ಭಾಷೆಯಿಂದ ಚೂಡಾಮಣಿ ವ್ಯಾಖ್ಯಾನಂ ಮಾಡಿದರ್"[೮] ಎಂಬ ದೇವಚಂದ್ರನ ಮಾತನ್ನು ಗಮನಿಸಿದರೆ ೯೧೦೦೦ ಗ್ರಂಥಪ್ರಮಾಣದ ಪೀಳಿಗೆ ಈತನ ಗಮನಕ್ಕೆ ಬಂದಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

೨. ಸಹೃದಯ :

ಕವಿನಿರ್ಮಿತ ಕಾವ್ಯದ ರಸಗ್ರಹಣ ಮತ್ತು ವಿಮರ್ಶೆ ಸಹೃದಯನ ಕರ್ತವ್ಯ. ಈ ಕರ್ತವ್ಯಕ್ಕೆ ಸೀಮಿತರಾಗಿ ನಿಲ್ಲದೆ, ಕೆಲವರು ತಮ್ಮ ಇಚ್ಛೆ ಬಂದಂತೆ ಹಸ್ತಪ್ರತಿಯನ್ನು ತಿದ್ದುವ ಪಾಪಕಾರ್ಯಕ್ಕೆ ತೊಡಗುತ್ತಾರೆ. ಇವರಿಂದುಂಟಾದುವು, ಉದ್ದೇಶಿತ ಪಾಠಾಂತರಗಳು, ಈ ಉದ್ದೇಶದ ಹಿಂದೆ ಉತ್ತಮಗೊಳಿಸಬೇಕು, ಸರಳಗೊಳಿಸಬೇಕು, ಅಧಮಗೊಳಿಸಬೇಕು ಎಂಬ ಮೂರು ಭಾವನೆಗಳಿರುತ್ತವೆ.

---

೭. ಇಂದ್ರನಂದಿಯ ಶ್ರುತಾವತಾರ
೮. ರಾಜಾವಳೀ ಕಥೆ (KRI ಪ್ರತಿ ನಂ.೨೦) ಪು. ೧೫೩

ಉತ್ತಮಗೊಳಿಸಬೇಕೆಂಬ ಮನೋಭಾವದ ಸಹೃದಯನು ತನ್ನ ಅಭಿರುಚಿಗೆ ತಕ್ಕಂತೆ, ಒಂದು ಕಾವ್ಯದಲ್ಲಿ ಲೋಪ, ಆಗಮ, ಆದೇಶ ರೂಪದ ಪಾಠಗಳನ್ನು ಮಾಡುತ್ತಾನೆ. ಈತನು ಒಂದು ಕೃತಿಯ ಪದ್ಯ ಇಲ್ಲವೆ ಗದ್ಯಭಾಗವನ್ನು ಅದೇ ಕೃತಿಯ ಇನ್ನೊಂದು ಸಂದರ್ಭಕ್ಕೆ ಸಾಗಿಸಬಹುದು. "ಮುಳಿದು ಮನಃಪ್ರಿಯಂ" ಎಂಬ ಪದ್ಯ ಆದಿಪುರಾಣದ ಕೆಲವು ಹಸ್ತಪ್ರತಿಗಳಲ್ಲಿ ೧೨ನೆಯ ಆಶ್ವಾಸದ ೧೩ನೆಯ ಪದ್ಯವಾಗಿ, ಇನ್ನು ಕೆಲವು ಹಸ್ತಪ್ರತಿಗಳಲ್ಲಿ ಅದೇ ಆಶ್ವಾಸದ ೩೪ನೆಯ ಪದ್ಯವಾಗಿ ತೋರಿಬಂದರೆ, ಬೇರೆ ಕೆಲವು ಹಸ್ತಪ್ರತಿಗಳಲ್ಲಿ ಎರಡೂ ಕಡೆ ಸಿಗುತ್ತದೆ. ಇದು ರತಿ ವಿಲಾಸದ ಯಾವ ಸಂದರ್ಭದಲ್ಲಾದರೂ ಇರಬಹುದು. ಇದೇ ರೀತಿ ಸಿಂಗಿರಾಜ ಪುರಾಣದ ೨೫-೨೦ನೆಯ ಪದ್ಯ ೪೫ರಲ್ಲಿ, ಪುಷ್ಪದಂತ ಪುರಾಣದ ೮-೬೨ನೆಯ ಪದ್ಯ ೮-೭೦ರಲ್ಲಿ ಸಿಗುತ್ತವೆ.

ಇನ್ನು, ಒಬ್ಬ ಕವಿಯ ಒಂದು ಕಾವ್ಯದ ಪದ್ಯಗಳನ್ನು ಅದೇ ಕವಿಯ ಇನ್ನೊಂದು ಕಾವ್ಯಕ್ಕೆ ಸಾಗಿಸಿರಬಹುದು. ಇದಕ್ಕೆ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಅನೇಕ ಪದ್ಯಗಳು ಸೋಮನಾಥ ಚಾರಿತ್ರ್ಯದಲ್ಲಿ, ಆದಿಪುರಾಣದ "ಎಡೆಗೋದಿರದಿರಿ......." ಎಂಬ ಪದ್ಯ (೯-೬) ವಿಕ್ರಮಾರ್ಜುನವಿಜಯದಲ್ಲಿ (೧೪-೨೨) ದೊರೆಯುವುದನ್ನು ನೆನೆಯಬಹುದು.

ಒಬ್ಬ ಕವಿಯ ಒಂದು ಕಾವ್ಯದ ಪದ್ಯಗಳನ್ನು ಇನ್ನೊಬ್ಬ ಕವಿಯ ಇನ್ನೊಂದು ಕಾವ್ಯಕ್ಕೆ ಸಾಗಿಸಿದ ಉದಾಹರಣೆಗಳೂ ಉಂಟು. ಪಂಪಭಾರತದ ಕೊನೆಯ ಆಶ್ವಾಸದ ಕೆಲವು ಪದ್ಯಗಳು ರನ್ನ ಗದಾಯುದ್ಧದ ಕೊನೆಯ ಆಶ್ವಾಸದಲ್ಲಿ, "ಕರಮೆಸೆದತ್ತು ...." ಎಂಬ ಪದ್ಯ ಹರಿಹರನ ಗಿರಿಜಾಕಲ್ಯಾಣ (೪-೯೫) ಮತ್ತು ನಾಗರಾಜನ ಪುಣ್ಯಾಸ್ರವಗಳಲ್ಲಿ, "ಈಕೆಯ ಲೋಚನಂ........" ಎಂಬ ಪದ್ಯ ಸೋಮರಾಜನ ಉದ್ಭಟಕಾವ್ಯ (೮-೪೨) ಮತ್ತು ವೃತ್ತವಿಲಾಸನ ಧರ್ಮಪರೀಕ್ಷೆ (೩-೩೨)ಗಳಲ್ಲಿ ಲಭಿಸುತ್ತವೆ.[೯] ಕವಿರಾಜಮಾರ್ಗ, ಛಂದೋಂಬುಧಿ ಮತ್ತು ಕವಿಜಿಹ್ವಾಬಂಧನಗಳಲ್ಲಿಯಂತೂ ಈ ಸಾಗಾಟ ಮೇರೆದಪ್ಪಿದೆ. ಇಂಥ ಪ್ರಸಂಗಗಳಲ್ಲಿ ಆ ಪದ್ಯ ಇಲ್ಲವೆ ಗದ್ಯಭಾಗ ಮೂಲತಃ ಯಾವ ಸಂದರ್ಭಕ್ಕೆ, ಯಾವ ಕಾವ್ಯಕ್ಕೆ ಸೇರಿದುದೆಂದು ನಿರ್ಧರಿಸುವುದು ಕೆಲವು ಸಲ ಕಠಿಣವಾಗುತ್ತದೆ.

ಗದ್ಯ ಇಲ್ಲವೆ ಪದ್ಯಗಳ ಈ ಬಗೆಯ ಸಾಗಾಟವಲ್ಲದೆ ಅಭಿರುಚಿ, ಅಭಿಮತಗಳಿಗೆ ತಕ್ಕಂತೆ ಪಾಠಗಳನ್ನು ವ್ಯತ್ಯಾಸಗೊಳಿಸಿದುದು, ಹೊಸಹೊಸ ಪಾಠಗಳನ್ನು ಸೃಷ್ಟಿಸಿದುದು ಕಂಡುಬರುತ್ತದೆ. ದೇವರ ದಾಸಿಮಯ್ಯನ ಮೂರು ವಚನಗಳನ್ನು ಕುರಿತು "ಇಳೆ ನಿಮ್ಮ ದಾನ ....' 'ಎತ್ತು ನಿಮ್ಮ ದಾನ......' ಮತ್ತು 'ಕಾಯ ನಿಮ್ಮ ದಾನ.......' ಎಂಬ ಮೇಲಣ ಮೂರು ವಚನಗಳು ಹಳಕಟ್ಟಿ ಮತ್ತು ಮೂರುಸಾವಿರ ವಚನಗಳ ಕಟ್ಟುಗಳಲ್ಲಿ ಪ್ರತ್ಯೇಕವಾಗಿಯೇ ಸಿಗುವವು. ಆದರೆ ಬಿರುದಾವಳೀ ಸ್ತೋತ್ರದ ವಚನಗಳು ಎಂಬ ವಚನ ಸಂಕಲನವೊಂದರಲ್ಲಿ ಆ ಮೂರು ವಚನಗಳು ಒಂದೇ ವಚನವೆಂಬಂತೆ ಉಲ್ಲಿಖಿತವಾಗಿವೆ. ಅಲ್ಲಿ ಆ ಮೂರನ್ನೂ ಒಂದೆಂಬಂತೆ ಸಮಾಹಾರಗೊಳಿಸುವಲ್ಲಿ

---

೯. ಈ ಪದ್ಯ ರಸರತ್ನಾಕರ ೧-೧೩ ಮತ್ತು ಸೂಕ್ತಿಸುಧಾರ್ಣವದ ಕೆಲವು ಪ್ರತಿಗಳಲ್ಲಿ ಸಿಗುತ್ತದೆ.

“ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥ” ಎಂಬ ಪಲ್ಲವಿಯಂತಹ ಮಾತನ್ನು ಮಧ್ಯೆ ಬಿಟ್ಟು, ನುಡಿಗಳನ್ನೆಲ್ಲ ಒಗ್ಗೂಡಿಸಿ ಕೊಟ್ಟಂತೆ ಕಾಣುವುದು” ಎಂದು ಡಾ.ಎಲ್.ಬಸವರಾಜು ಹೇಳುತ್ತಾರೆ.[೧೦] ಇಲ್ಲಿ ವಚನಗಳನ್ನು ಹೊಂದಿಸಿ ಗೀತ ಮಾಡಿದುದಕ್ಕೆ ಅಭ್ಯಾಸಿಯ ಅಭಿರುಚಿ ಕಾರಣ.

“ಗುಬ್ಬಿ ಹೆರವರ ಮನೆಯ ತನ್ನ ಮನೆ ಎನುವಂತೆ........” “ನೆಜಿ ನಂಬೋ ನೆಜಿ ನಂಬೋ......” “ಭಕ್ತಿಯೆಂಬ ಪಿತ್ತ ನೆತ್ತಿಗೇರಿ ....” ಮೊದಲಾದ ೧೫೫ ವಚನಗಳು ಕೂಡಲ ಸಂಗಮದೇವ, ಕೂಡಲ ಚೆನ್ನಸಂಗಮದೇವ ಎಂಬ ಹೋಲಿಕೆ ರೂಪದ ಮುದ್ರಿಕೆಗಳಿಂದಾಗಿ ಬಸವಣ್ಣ, ಚೆನ್ನಬಸವಣ್ಣ–ಈ ಇಬ್ಬರ ಹೆಸರುಗಳಲ್ಲಿ ಸಿಗುತ್ತವೆ. ಈ ಹೋಲಿಕೆ ರೂಪದ ಮುದ್ರಿಕೆಗಳ ಪರಸ್ಪರ ಬದಲಾವಣೆ ಇನ್ನೂ ಬೆಳೆದು, ಯಾರೊಬ್ಬರ ವಚನ ಯಾರೊಬ್ಬರ ಮುದ್ರಿಕೆ ಪಡೆದಿವೆ. “ಊರ ಸೀರೆಗೆ ಅಸಗ ......” ವಚನ ಬಸವಣ್ಣ ಮತ್ತು ಅಕ್ಕಮಹಾದೇವಿಯರ ಮುದ್ರಿಕೆಗಳಲ್ಲಿ, “ಅರೆವೆನಯ್ಯ ಸಣ್ಣವಹನ್ನಕ್ಕ.....” ವಚನ ಬಸವಣ್ಣ ಮತ್ತು ಜೇಡರದಾಸಿಮಯ್ಯಗಳ ಮುದ್ರಿಕೆಗಳಲ್ಲಿ;“ದೇವನೊಳ್ಳಿದನೆಂದು ಮುಯ್ಯಾನಲು ಬೇಡ.......” ವಚನ ಬಸವಣ್ಣ ಮತ್ತು ಸತ್ಯಕ್ಕಗಳ ಮುದ್ರಿಕೆಗಳಲ್ಲಿ ಲಭಿಸುತ್ತಿರುವುದನ್ನು ಈಮಾತಿಗೆ ಉದಾಹರಣೆಯಾಗಿ ಕೊಡಬಹುದು. ಇದಲ್ಲದೆ

“ಸ್ಥಲದಲ್ಲಿ ನಿಂದು ನಿಷ್ಕಲನಾಗಿ ಶುದ್ಧ ಕೇ ।
ವಲ[೧] ರೂಪನಾಗಿರ್ದ ಚೆನ್ನಬಸವೇಶ್ವರನ ಚರಣಾಂಬುಜಕ್ಕೆ ಶರಣು[೧]”[೧೧]
(೧–೧ ಬೋಧರೂಪನಾಗಿರ್ದ ಬಸವೇಶ್ವರನ ಚರಣಾಂಬುಜಕ್ಕೆ ಶರಣು)

“ಹೇಳು ವಿಶ್ವಾಮೃತ್ಯವಾದೆ ವಿಶ್ವಾಮಿತ್ರ ಎನುತಿರ್ದರು”[೧೨]
(ಹೇಳು ವಿಶ್ವಾಮಿತ್ರ ಮುನಿನಾಥ ಎಂದುದಾ ಪೌರಜನರು)

“ಅಬ್ಧಿಗಡಿಮಿತಿಯುಂಟು ಬುದ್ಧಿಗಡಿಮಿತಿಯಿಲ್ಲ”[೧೩]
(ಅಬ್ಧಿಗಡಿಮಿತಿಯಿಲ್ಲ ಬುದ್ಧಿಗಡಿಮಿತಿಯುಂಟು)

“ಸತಿ ಕೆಡಗು[೧] ಸ್ವಾತಂತ್ರ್ಯದಲಿ ಭೂಪಾಲ[೧] ಕೇಳೆಂದ”[೧೪]
(೧–೧ ಪರಭವನದೊಳಗವನೀಶ)

---

೧೦. ದೇವರ ದಾಸಿಮಯ್ಯನ ವಚನಗಳು. ಪು. ೨೨. ಅ.ಟಿ.
೧೧. ಶಿವತತ್ವ ಚಿಂತಾಮಣಿ ೪೮–೪
೧೨. ಹಕಾ, ೯–೭
೧೩. ಕಂಠೀರವ ನರಸರಾಜ ವಿಜಯಂ. ಸಮಾಪ್ತ ವಾಕ್ಯ
೧೪. ಕು.ಭಾ.ಉ. ೩–೧೧೩

"ಮಧುಕೇಶ್ವರನ ಸಂ[೧]ಭೋ[೧]ಗಿಸಿಯೆ ಬಂದಳೊ ಪೇಳೆನಲ್
ಮೆಱೆದಿರ್ದಳಾ ಮಾಯೆ"[೧೫] (೧-೧ ಯೋ)
"ಕಡೆಯಲಿ ಹೊಗುವಿರ್ಕೆ ನೀವಿಬ್ಬರಪ[೧]ಕೀರಿತಿಯ ಹಾದರಕೆ[೧]"[೧೬]

(೧-೧ ಕೀರ್ತ್ಯಂಗನೆಯ ಮನೆಯ, ಕೀರಿತಿಯ ಸಾಗರವ, ಕೀರಿತಿಯ ಪರಿಣಯಕೆ)
"ಕಣುಮನಕೆ ಕಲ್ಯಾಣವೇ ತಾನಾಯ್ತು [೧]ಕಲ್ಯಾಣ[೧]"[೧೭] (೧-೧ ಕೈಲಾಸ)

ಈ ಎಲ್ಲ ವ್ಯತ್ಯಾಸಗಳಿಗೆ ಅಭ್ಯಾಸಿಯ ಅಭಿಮತ ಕಾರಣವಾಗಿರುತ್ತದೆ. ಈ ಅಭಿರುಚಿ ಅಭಿಮತಗಳಿಗೆ ಒಳಗಾಗಿ ಪಾಠವ್ಯತ್ಯಾಸವಾದುದಕ್ಕೆ ಒಂದು ಆಧುನಿಕ ಉದಾಹರಣೆಯನ್ನು ಕೊಡಬಹುದು.

ಉದಯವಾಗಲಿ ನಮ್ಮ ಕರ್ನಾಟ ತಾಯ್‌ನಾಡು ॥
ಬದುಕು ಬಾಳ್ವೆಯ ನಿಧಿಯು ಸದಭಿಮಾನದ ಗೂಡು।
ರಾಜನ್ಯರಿಪು ಪರಶುರಾಮನಮ್ಮನ ನಾಡು ।
ಆ ಜಲಧಿಯನೆ ಜಿಗಿದ ಹನುಮ ಪುಟ್ಟಿದ ನಾಡು ।
ಓಜೆಯಿಂ ಮೆರೆದರಸುಗಳ ಸಾಹಸದ ಸಿವುಡು ।
ತೇಜವನ್ನೀ ತೆರದಿ ಕೊಡುವಳಾವಳು ನೋಡು ॥೧॥

ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದೀ ನಾಡು ।
ಜಕ್ಕಣನ ಶಿಲ್ಪಕಲೆಯದ್ಭುತದ ಕರುಗೋಡು ।
ಚೊಕ್ಕ ಮತಗಳ ಸಾರ್ದರೆಲ್ಲರುದಿಸಿದ ಬೀಡು ।
ಬೊಕ್ಕಸದ ಕಣಜವೈ ವಿದ್ವತ್ತೆಗಳ ಕಾಡು ॥೨॥

ಪಾವನರು ನಿರುತ ಕಾವೇರಿ ಗೋದೆಯ ಕಾಡು ।
ತಾಳವನು ತೊಳೆಯುವರು ನಡುವೆ ಕೃಷ್ಣೆಯ ಜೋಡು ।
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು ।
ಕಾವ ಗದುಗಿನ ವೀರನಾರಾಯಣನ ಬೀಡು ॥೩॥

---

೧೫. ಪ್ರಲೀ ೪-೫೦
೧೬. ಕು.ಭಾ.ಉ I -೩೦
೧೭. ಪ್ರಲೀ ೨೨-೧೦

ಶ್ರೀ ಹುಯಿಲಗೋಳ ನಾರಾಯಣರಾಯರು ರಚಿಸಿದ ನಾಡಗೀತೆಯ ಮೂಲಪಾಠವಿದು.[೧೮] ಈಗ ಪ್ರಚಾರದಲ್ಲಿರುವ ಪಾಠದೊಂದಿಗೆ ಇದನ್ನು ತುಲನಿಸಿದರೆ, ಇತ್ತೀಚಿನ ವರ್ಷಗಳಲ್ಲಿ ಸಹೃದಯರಿಂದುಂಟಾದ ಪಾಠಭೇದದ ಸ್ವರೂಪ ಸ್ಪಷ್ಟವಾಗುತ್ತದೆ.

ಇಂಥ ಇನ್ನೊಂದು ಕಾರಣ ಮತಾಭಿಮಾನ. ಶಬ್ದಮಣಿದರ್ಪಣದ "ಗೊರವನಲ್ಲದೆ ಪೊಗಟೆಂ"[೧೯] ಎಂಬುದಕ್ಕೆ ಬದಲು ಹಲವು ಪ್ರತಿಗಳಲ್ಲಿ "ದೇವರಲ್ಲದೆ ಪೊಗಟೆಂ" ಎಂಬ ಪಾಠವಿದೆ. "ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲ ಕಣ್ಣಿಂ ಸ್ಮರಂ ನಂದೆ ಪೊಯ್ವಂ"[೨೦] ಎಂಬ ಶಿವನಿಂದೆಯ ಉದಾಹರಣೆಯನ್ನು ವೀರಶೈವ ಲಿಂಗಣಾರಾಧ್ಯ ಕೈಬಿಟ್ಟಿರುವನು. "ಸಾಲದೆ ಹೇಳೋಂ ನಮೋ ಜಿನಾಯೆಂಬ ಪದಂ"[೨೧] ಪಾಠ ದರ್ಪಣದ 'ಕ ಪ್ರತಿ'ಯಲ್ಲಿ ಮಾತ್ರವಿದೆ. ಅನಂತನಾಥ ಪುರಾಣದ "ಜೈನೇಂದ್ರಾಲಯಂಗಳ್ಗೆಸೆದುದಸದಳಂ ಧೂಪವೇಳಾ ವಿಳಾಸಂ"[೨೨] ಎಂಬುದರ ಮೊದಲಿನ ಮೂರು ಅಕ್ಷರಗಳಿಗೆ ಬದಲು 'ದೇವೋತ್ತಾ' ಎಂಬ ಪಾಠವಿದೆ. "ಹರಹರಾ ಶ್ರೀ ಚೆನ್ನಸೋಮೇಶ್ವರಾ" ಮುದ್ರಿಕೆಗೆ "ನರನೆಲಾ ಕೇಳ್ದಿಪ್ಪುದೀ ಬುದ್ಧಿಯಾ" ಎಂಬ, "ಪಾಲಿಸಯ್ಯ ಪಾರ್ವತೀಶ್ವರಾ" ಪಲ್ಲವಿಗೆ "ಪಾಲಿಸಯ್ಯ ಕರುಣಸಾಗರಾ"[೨೩] ಎಂಬ, ಗೀತಾಭಾರತದ "ನಮ್ಮ ಪಂಡರಿವರದ ವಿಠ್ಠಲರಾಯ ರಕ್ಷಿಪುದು" ಚರಣಕ್ಕೆ "ನಮ್ಮ ಪಂಪಾಧೀಶ ಗುರು ವಿರುಪಾಕ್ಷ ರಕ್ಷಿಪುದು"[೨೪] ಎಂಬ ಪಾಠಗಳು ಸಿಗುತ್ತವೆ. 'ಚೆನ್ನಮಲ್ಲಿಕಾರ್ಜುನಾ' ಮುದ್ರಿಕೆಯ "ಅಂಬಿಗ ನಾ ನಿಮ್ಮ ನಂಬಿದೆ" ಎಂಬ ಮಹದೇವಿಯಕ್ಕನ ಗೀತ 'ಪುರಂದರ ವಿಠಲಾ' ಮುದ್ರಿಕೆಯೊಂದಿಗೆ ಪ್ರಚಾರವಾಗಿದೆ.[೨೫] ಇವುಗಳಿಗೆ ಮೂಲವಾದುದು ಸ್ವಧರ್ಮ ವ್ಯಾಮೋಹ.

ಜನತೆಯ ಸಂಪರ್ಕದಿಂದ ಹಸ್ತಪ್ರತಿಗಳು ದೋಷಮಯ ಮತ್ತು ತ್ರುಟಿತಮಯವಾದಾಗ ಅದನ್ನು ತಮಗೆ ಸರಿಕಂಡಂತೆ ತುಂಬಿಕೊಂಡ ಹಲವು ಉದಾಹರಣೆಗಳು ಸಿಗುತ್ತವೆ. ಬಸವಪುರಾಣವನ್ನು ಕುರಿತು ಹೇಳಿದ "ಕೆಲವು ಪದ್ಯಗಳನ್ನು ಸರ್ವಲಕ್ಷಣ ಪೂರ್ಣವಾಗಿ ತಿರ್ದಿನೇರ್ಪಡಿಸಿದರು ನೀಲಕಂಠಾಚಾರ್ಯರು"[೨೬] ಎಂಬ ಮಾತನ್ನು ಇಲ್ಲಿ ಗಮನಿಸಿಸಬೇಕು. ಇಂಥ ತಿದ್ದುಪಡಿಯನ್ನು ಕೆಲವರು ತಮ್ಮ ದೊಡ್ಡಸ್ತಿಕೆಯ ದ್ಯೋತಕವೆಂದು ಬಗೆದಂತೆ ತೋರುತ್ತದೆ.

ತಪ್ಪಿರೆ ತಿದ್ದಲ್ ಬಲ್ಲಂ ।
ಒಪ್ಪುವ ಪಳೆಗವಿಗಳುಸಿರ್ದ ಕನ್ನ(ಡ)ಗಬ್ಬದಿ ।

---

೧೮. ಜಯಕರ್ನಾಟಕ ೩-೨ ಪು.೧೫೩. ಡಿಶಂಬರ ೧೯೨೪
೧೯. ಶಮದ ಸೂ. ೫೭
೨೦. ಶಮದ ಸೂ. ೮೩
೨೧. ಶಮದ ಸೂ. ೬೨ ಅ ಟಿ.
೨೨. ಸೂಕ್ತಿ ೮-೫೪
೨೩. ಶಬರಶಂಕರ ವಿಳಾಸ, ಪೀಠಿಕೆ ೩೩-೩೪
೨೪. ಮಹಸೂ ii ೩೦೮ ಗೀತಾಭಾರತ
೨೫. ಶಿವದಾಸ ಗೀತಾಂಜಲಿ ಪು. ೧೩೧
೨೬. ಕ ಕ ಚ I. 482

ತಿಪ್ಪಣಾಖ್ಯಂ ಲೇಖರಿ ।
ಯಪ್ಪಂ ಸೇನಾನಿ ದೇವರಾಯ ನಿಕಟದೋಳ್ ॥[೨೭]

ಶ್ರೀಮತ್ಕನ್ನಡ ಸಮ್ಯ ।
ತ್ಕೌಮುದಿ ಕಥೆಯಂ ಪರಿಷ್ಕರಿಸಿ ಲಿಖಿಸಿದೆ ನಾಂ ।
ಆಮುತ್ತ್ರೈಹಿಕ ಫಲಮಂ ।
ಕಾಮಿಸಿ ಮಲೆಯೂರ ಪದ್ಮರಾಜೋಪಾಧ್ಯಂ ॥[೨೮]

ಪ್ರಾಚೀನ ಕೃತಿಗಳನ್ನು ತಮ್ಮ ಮನಸ್ಸಾಕ್ಷಿಯ ಆಧಾರವಿಡಿದು ಕಾಲಕಾಲಕ್ಕೆ ಸಹೃದಯರು ತಿದ್ದಿದುದನ್ನು ಸೂಚಿಸುತ್ತವೆ; ಈ ಮಾತುಗಳು. ಇಂಥವರ ಕೈಯಲ್ಲಿ ಸಿಕ್ಕ ಹಲವು ಕೃತಿಗಳಿಗೆ ಭಿನ್ನಪಾಠಗಳು ಸಮುದ್ಭವಿಸಿರುವುದು ಸಹಜ.

ಕೆಲವು ಸಲ ಪಂಡಿತನಾದ ಸಹೃದಯನು ಕ್ಲಿಷ್ಟಪದಗಳಿಗೆ ಬರೆದ ಅರ್ಥರೂಪದ ಸರಳಶಬ್ದಗಳು, ಪಾಠಗಳೆಂಬಂತೆ ಸೇರಿಕೊಂಡುದಕ್ಕೆ ಹೇರಳ ಉದಾಹರಣೆಗಳು ಸಿಗುತ್ತವೆ :

ಬಡವನ ಕೋಪ **ಅವುಡಿಗೆ** ಮೃತ್ಯುವಾದಂತೆ [ಬವ ೬೪೫] (ದವಡಿಗೆ)
ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತ **ಸನ್ನಿಯೆಂಬರು** [ಬವ೪೧೩] (ಸಾರೆಂ,ಸಾಗಿಯೆಂ)
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು [ಅಕ್ಕ ೧೬೭] (ಮೂವತ್ತೆರಡು)
ಹೊತ್ತಿರ್ದ **ಚೋಹ**ಮುಮನಿಳಿಹಿ ನಿಜದೊಳು ತೊಳಗೆ [ಪುರ ೨೮' (ವೇಷ)
ಏಱುಂಜವ್ವನಂ ಶಿವಪೂಜೆಗೆಂದರಳಲಿರ್ದ ಪರಿಮಳದ ಮೊಗ್ಗೆಯಂತಿರ್ದಪುದು
[ನಂಬಿ ೨೩] (ಪೆಚ್ಚುವ)
ಕೀರಂಗೆ ಕುಟುಕನಿಕ್ಕೆಂಬ [ನಂಬಿ ೧೦೮] (ಸುಕಂಗೆ)
ಬೇನೆಯಱಿಯದ ನೀರಸರನೇಕೆ ಪುಟ್ಟಿಸಿದ**ನಬುಜಭವನು** [ಸೋ ಚಾ ೧-೧೪] (ನೋ ಬೊಮ್ಮನು)
ದುಮ್ಮಾನ ಒಡಲಂ **ತೀವಿ** ತುಳುಕಾಡುತಿರಲು [ಹಕಾ ೬-೫೮] (ತುಂಬಿ)
ತನತ್ತು ಬಿಲ್ಲಾನದನಂತೆ **ಕೀಸುಗುಂ** [ಭಾ ಭೂ ೬೮] (ಕೆತ್ತುಗುಂ)[೨೯]
ಹಾಲು ಹಯನುಳ್ಳಲ್ಲಿ ಹಬ್ಬವ ಹೇಳದೆಯು ಕೇಳದೆಯು **ಸವೆವುದು** [ಪ್ರಲೀ ೧೬-೧೨] (ಮಾಳ್ಪದು)
ನೊಸಲಗಣ್ಣನು ತೋರುವವರಿಗೆ । ವಿಷಮತರದಂಗಾಲಕಣ್ಣನು ।
ಪಸರಿಸುವರುಂಟಕಟ ಮರುಳೇ ನಿನ್ನ **ಹವಣೇನು** [ಪ್ರಲೀ ೧೩-೩೪] (ಪಾಡೇನು)

---

೨೭. ಮಹಸೂ III ೩೫೨ ತ್ರಿಲೋಕ ಶತಕ
೨೮. ಮೈಹಸೂ IV ೧೮೭೮ ಸಮ್ಯಕ್ತ್ವ ಕೌಮುದಿ
೨೯. "ಕೆತ್ತುಗುಂ" ಪಾಠ ಭಾಷಾಭೂಷಣದ (ಆರ್.ನರಸಿಂಹಾಚಾರ್ ಆವೃತ್ತಿ) ೧೮೧ನೆಯ ಸೂತ್ರದ ಕೆಳಗಣ ಪ್ರಯೋಗದಲ್ಲಿದೆ.

ಈ ಒಲವು ಇನ್ನೂ ಬೆಳೆದು ಎಷ್ಟೋ ಸಲ ತಪ್ಪು ಅರ್ಥದ ಪಾಠಗಳೂ ಪ್ರಾಚೀನ ಕಾವ್ಯಗಳಲ್ಲಿ ತಲೆದೋರಿವೆ :

ಹತ್ತು **ಮತ್ತರ** ಭೂಮಿ ಬತ್ತದ ಹಯನು ನಂದಾದೀವಿಗೆಯ ನಡಸಿಹೆವೆಂಬುವರ

ಮುಖವ ನೋಡಲಾಗದು [ಬವ ೨೨೫] (ಮಾರ)

ಹಾವು **ತಿಂದವರ** ನುಡಿಸಬಹುದು [ಬವ ೧೩೨] (ನುಂಗಿದವರ)

ಕೊಳನ ತಡಿಯಲೊಂದು **ಹೊಜಿಸು** ಕುಳ್ಳಿರ್ದಡೇನು? ಕಳಹಂಸಿಯಾಗಲ್ಲದೆ [ಬವ ೯೮] (ಬಕ)

ನಡೆವರೆಡಹದೆ **ಬಱುಬರೆಡಹುವರೆ** [ಹಕಾ ೧-೨೩] (ಬರೆವ)

ವಿಧು ನಾಂದು ನೆನೆದು ಹಿಮಕರನಾದಂ [ಸೂಕ್ತಿ ३-೧೫] (ರವಿ)

ಈ ತಪ್ಪು ಅರ್ಥದ ಪಾಠಗಳು ಅಭ್ಯಾಸಿಯೊಬ್ಬನು ಮಾರ್ಜನ್ನಿನಲ್ಲಿ ಬರೆದುಕೊಂಡುದರಿಂದ ಸಿದ್ಧವಾಗಿ, ಮುಂದೆ ಕೃತಿಯ ಒಡಲಲ್ಲಿ ಸೇರಿಕೊಂಡಿರಬಹುದು.

ಇವುಗಳಿಗಿಂತ ಘೋರವಾದುದು ಒಂದು ಕೃತಿಯನ್ನು ದುಷ್ಟಬುದ್ಧಿಯಿಂದ ಕೀಳುಗೊಳಿಸುವುದು. "ಭಾರತಾದಯೋऽಪಿ ದುರ್ವಿದಗ್ಧ ಕುತ್ಸಿತ ವಿದ್ವಜ್ಜನ ಕೌಟಲ್ಯಾದುತ್ಸನ್ನ ಪ್ರಾಯಾ ಆಸನ್ ಅತೋಸ್ಮಾಭಿರೇವ ಹರಿಕೈಂಕರ್ಯಧುರಂಧರೈಃ ಪ್ರಯತಿ ತವ್ಯಮಿತಿ ಭಾವೇನಾಹ"[೩೦] ಎಂಬ ಮಾತು ಕುತ್ಸಿತ ವಿದ್ವಜ್ಜನರಿಂದ ಮಹಾಭಾರತದ ಪಾಠ ರೂಪಗೆಟ್ಟುದನ್ನು ಸೂಚಿಸುತ್ತದೆ.

ರುದ್ರನ ಕೃತಿಯೊಳು ಬಿದ್ದ ತಪ್ಪುಗಳನು
ತಿದ್ದಲು ದೋಷ ನಾಶನವು ॥
ಕ್ಷುದ್ರದಿಂ ಕೃತಿಯಾನಬದ್ಧ ಮಾಡಲು ಆಗ
ಹೊದ್ದಿ ಬಿಡದು ಭವಭವದಿ ॥[೩೧]

ಎಂಬ ಹೇಳಿಕೆ ಇಂಥ ದುಷ್ಟರಿಗೆ ಶಾಪವನ್ನು ಸೂಚಿಸುತ್ತದೆ. ಬ್ರಹ್ಮಶಿವನಂತೂ

ಅನುಪಮ ಸಮ್ಯಗ್ದೃಷ್ಟಿಯ
ನನುಪಮ ಸಮಭಾವನಪ್ಪನಿಂ ಬರೆಯಿಪುದೀ ।
ಜಿನಧರ್ಮಾಮೃತಮಂ ದು ।
ರ್ಜನನಿಂದಂ ಬರೆಯಿಸಲ್ಕೆ ಬೇಡಿದನಜಿವಂ ॥

ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಈ ಮಾತ್ಸರಕ್ಕೆ ತುತ್ತಾಗಿ ಹಲವು ಕೃತಿಗಳು ವಿಕಾರಗೊಂಡಿರಲು ಸಾಧ್ಯವಿದೆ.[೩೨] ಹೀಗೆ ಸಹೃದಯನಿಂದ ಬಗೆಬಗೆಯ ಭಿನ್ನಪಾಠಗಳು ಉಂಟಾಗುತ್ತವೆ.

---

೩೦. Woolner Commemoration Volume P. 106-108. (Textual Criticism in the Thirteenth Century ; by P.K.Gode)

೩೧. ಮೈಹಸೂ I ೨೩೨ ಕರಸ್ಥಲದ ನಾಗಲಿಂಗದೇವರ ಚಾರಿತ್ರ

೩೨. ಚಾಮರಸನ ಭಾರತವನ್ನು ಕುಮಾರವ್ಯಾಸ ಸುಟ್ಟು ಹಾಕಿದ, ಕಾದಂಬರಿಯನ್ನು ಸುಡಿಸಿ ಲೀಲಾವತಿಗೆ ಕಪ್ಪಿಡಿಸಿದ ದಂತಕಥೆಗಳನ್ನು ಇಲ್ಲಿ ನೆನೆಯಬೇಕು.

೩. ಲಿಪಿಕಾರ :

ಹಸ್ತಪ್ರತಿಯನ್ನು ಯಥಾವತ್ ನಕಲುಗೊಳಿಸಬೇಕಾದುದು ಲಿಪಿಕಾರನ ವೃತ್ತಿಧರ್ಮ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ಮೈಗಳ್ಳರು ಅಕ್ಷರ, ಪದ, ಪದ್ಯಗಳನ್ನು ಲೋಪಿಸುತ್ತಾರೆ; ಇವರು ಹೊಣೆಗೇಡಿ ಲಿಪಿಕಾರರು. ಇನ್ನು ಕೆಲವರು ಲೋಪಿಸುವುದರೊಂದಿಗೆ ಆಗಮ ಆದೇಶ ಕಾರ್ಯಗಳನ್ನು ಮಾಡುತ್ತಾರೆ; ಹಸ್ತಪ್ರತಿಯೊಂದಿಗೆ ಲಘುವಾಗಿ ವ್ಯವಹರಿಸುತ್ತಾರೆ; ಇವರು ಕಿಡಿಗೇಡಿ ಲಿಪಿಕಾರರು. ಹೊಣೆಗೇಡಿ ಲಿಪಿಕಾರನಿಗೆ ಶ್ರಮ ಉಳಿಸಿಕೊಳ್ಳುವ ಉದ್ದೇಶವಿದ್ದರೆ, ಕಿಡಿಗೇಡಿ ಲಿಪಿಕಾರನಿಗೆ ಹಸ್ತಪ್ರತಿಯನ್ನು ಮಾರ್ಪುಗೊಳಿಸುವ ಕೀಳು ಅಭಿರುಚಿ ಇರುತ್ತದೆ. ಈ ಇಬ್ಬರೂ ಲಿಪಿಕಾರರಿಂದ ನಕಲು ಮಾಡಿಸದಿರುವುದು ಕ್ಷೇಮ. ಕುಮಾರವ್ಯಾಸ ಭಾರತದಂತಹ ವಿಸ್ತಾರವಾದ, ಸರ್ವಜ್ಞನ ವಚನದಂತಹ ಜನಪ್ರಿಯವಾದ ಕಾವ್ಯಗಳಲ್ಲಿ ಇವರ ಚೆಲ್ಲಾಟಕ್ಕೆ ಹೆಚ್ಚು ಅವಕಾಶವಿರುತ್ತದೆ.

ಅನುದ್ದೇಶಿತ ಸ್ಖಾಲಿತ್ಯ

ಲಿಪಿಕಾರನ ೧. ಅನ್ಯಥಾಜ್ಞಾನ, ೨. ಅನವಧಾನ ೩. ಅಜ್ಞಾನ ಕಾರಣವಾಗಿ ಅನುದ್ದೇಶಿತ ಸ್ಖಾಲಿತ್ಯಗಳು ಘಟಿಸುತ್ತವೆ. ಸಾಮಾನ್ಯವಾಗಿ ಒಳ್ಳೆಯ ಲಿಪಿಕಾರ ಅರ್ಥಮಾಡಿಕೊಳ್ಳುವುದು ಅಕ್ಷರಗಳನ್ನು, ಪ್ರತಿಮಾಡುವುದು ಪದಗಳನ್ನು. ಸಾಮಾನ್ಯ ಲಿಪಿಕಾರ ಮಾತ್ರ ಅಕ್ಷರಗಳನ್ನು ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ನಿಂತು ಬಿಡುತ್ತಾನೆ. ಹೀಗಾಗಿ ಅಸ್ಪಷ್ಟ, ಅಶುದ್ಧ ಮತ್ತು ಅಪರಿಚಿತ ಅಕ್ಷರಗಳನ್ನು ಸಾಮ್ಯಭ್ರಾಂತಿಯಿಂದ ಬೇರೊಂದನ್ನಾಗಿ ಆತ ಓದಿಕೊಂಡರೆ ಸುಷ್ಟಪಾಠ ಮುಳುಗಿ ದುಷ್ಟಪಾಠ ತೇಲಿ ಬರುತ್ತದೆ. ಇದು ಲಿಪಿಕಾರನ ಅನ್ಯಥಾಜ್ಞಾನಮೂಲ ಸ್ಖಾಲಿತ್ಯ :

೧. ಅನ್ಯಥಾಜ್ಞಾನಮೂಲ ಸ್ಖಾಲಿತ್ಯ :

೧. ಅಕ್ಷರಗಳ ರೂಪಸಾದೃಶ್ಯ, ೨. ಅಕ್ಷರಗಳ ಧ್ವನಿಸಾದೃಶ್ಯ, ೩. ಬರವಣಿಗೆಯ ರೀತಿದೋಷ ೪. ಅವಸ್ಥಾಭೇದ–ಪ್ರಾಂತಭೇದಗಳಿಂದಾಗಿ ಲಿಪಿಕಾರನ ಅನ್ಯಥಾಜ್ಞಾನಮೂಲವಾದ ಅನುದ್ದೇಶಿತ ಸ್ಖಾಲಿತ್ಯ ಹೀಗೆ ಜರುಗುತ್ತದೆ :

೧. ಅಕ್ಷರಗಳ ರೂಪಸಾದೃಶ್ಯ : ಪ್ರತಿಯೊಂದು ಅಕ್ಷರಕ್ಕೆ ರೂಪ, ಧ್ವನಿ ಎಂಬ ಎರಡು ಮುಖಗಳುಂಟು. ರೂಪದೃಷ್ಟಿಯಿಂದ ಕನ್ನಡದ ಕೆಲವು ಮೂಲಾಕ್ಷರ, ಕಾಗುಣಿತ, ಕಾಗುಣಿತ ಗುರುತು ಮತ್ತು ಒತ್ತು–ಇವುಗಳ ಅಂಗರಚನೆಯಲ್ಲಿ ಪರಸ್ಪರ ಹೋಲಿಕೆ ಇದೆ. ಹೀಗಾಗಿ ಒಂದು ಮೂಲಾಕ್ಷರ ಇನ್ನೊಂದು ಮೂಲಾಕ್ಷರವಾಗಿ (ಅ>ಲ, ಕ>ತ), ಒಂದು ಕಾಗುಣಿತ ಇನ್ನೊಂದು ಕಾಗುಣಿತವಾಗಿ (ಲೌ>ತೌ,ಚೆ>ಬೆ), ಒಂದು ಮೂಲಾಕ್ಷರ ಕಾಗುಣಿತವಾಗಿ (ಘ>ಘು), ಒಂದು ಕಾಗುಣಿತ ಮೂಲಾಕ್ಷರವಾಗಿ (ಲು>ಉ), ಒಂದು ಒತ್ತು ಇನ್ನೊಂದು ಒತ್ತಾಗಿ (‿ > ೃ), ಒಂದು ಕಾಗುಣಿತ ಗುರುತು ಇನ್ನೊಂದು ಕಾಗುಣಿತ ಗುರುತಾಗಿ (ಾ>ು) ಸಾದೃಶ್ಯಭ್ರಾಂತಿಯನ್ನು ಹುಟ್ಟಿಸುತ್ತವೆ. ಅಂದರೆ ಈ ಸಾದೃಶ್ಯ ವಿಷಯವು ಅಕ್ಷರ, ಒತ್ತು ಮತ್ತು ಕಾಗುಣಿತ ಗುರುತುಗಳಿಗೆ ಸಂಬಂಧಿಸಿದ್ದು, ಇವುಗಳಿಗೆ ಉದಾಹರಣೆ :

ಅ, ಆ :

ನಾನು ಷಟ್‌ಸ್ಥಲವ ನೋಡಿ ಏನ ಮಾಡುವೆನಯ್ಯ. **ಅ**ವಗುಣಂಗಳೆನ್ನ ಬೆನ್ನ ಬಿಡದನ್ನಕ್ಕರ ? [ಬವ ೯೮೨] (ಆ)

ಶಾಸನ ಮರ್‍ಯಾದೆಯಿಂ ಕೊಟ್ಟ ಕರಿಯ ನೆಲಂ ಮರ್ತ ನೂಱು,

ಅಂಕದೊಳಂ ಮತ್ತ ೧೦೦ (APGS iii–೨೬) (ಲ)

ಲಿಂಗದಿಂದ ಉದಯಿಸಿ **ಅ**ಂಗವಿಡಿದವರ ಇಂಗಿತವನೇನೆಂಬೆನಯ್ಯ [ಚೆಬವ ೭೯೪] (ಲಿಂ)

ಆಳಿತನದ ಮನ ತಲೆ ಕೆಳಗಾಯಿತ್ತು [ಅಕ್ಕ ೭೧] (ಅ)

ಇ. ಈ :

ಇಕಾರವು ಇ ಮತ್ತು ಣ ಅಕ್ಷರಗಳ ಭ್ರಾಂತಿಯನ್ನು ಹುಟ್ಟಿಸಲು ಸಾಧ್ಯವಿದೆ. ಉದಾಹರಣೆ ಲಭ್ಯವಿಲ್ಲ.

ಉ, ಊ :

ಉಂತುಂ ನಿನಗಾಂ ಮುನಿಯಲೇಕೆ [ನೇಮ ೩–೨೮ವ] (ಎಂ)

ಹಾಳೂರೊಳಗೆ ನರಿ ಗುಳ್ಳೆಯ ತಿಂದು **ಉ**ಗುಳಿದಂತೆ [ಚಬವ ೩೯೬] (ಬ)

ನಿಮಿಷದ **ಉ**ದಾಸೀನ ಕೆಡಿಸಿತ್ತು [ಬವ ೩೮೨] (ಲು)

ಋ, ೠ :

ಇವು ಬು ಬೂ ಮತ್ತು ಖು ಖೂ ಗಳ ಭ್ರಾಂತಿಯನ್ನುಂಟುಮಾಡಬಹುದು.

ಎ,ಏ, ಐ :

ಎಡೆ ನಾಣ್ಮುಚ್ಚದ ನಾಗವಟ್ಟಣಿಗೆ [ಸೂಕ್ತಿ ೮–೨೮೪] (ಉ)

ಏಡಿಸಿ ಕಾಡಿತ್ತು ಶಿವನ ಮಾಯೆ [ಚೆಬವ ೬೫೦] (ಪೀ)

ಐದು ಗುಣವನೆ ಅಳಿದು, ಐದು ಗುಣವನೆ ಹಿಡಿದು (ಶಿವ ೨೪೫] (ಇಂದು)

ಒ, ಓ, ಔ :

ಒಗೆದಂ ಶ್ರೀಗಂಗಾಚಕ್ರಾಯುಧಂ [ಶಮದ ೨೨೮] (ಬ)[೩೩]

---

೩೩. ವರುಣಂ ವಾರ್ಧಿಯಿನಬ್ಜಜಂ ಕಮಲದಿಂ ದೈತ್ಯಾಲಯಸ್ತಂಭದಿಂ ।
ನರಸಿಂಹಂ ಘಟದಿಂ ಘಟಾತ್ಮಜನಿನಂ ಪೂರ್ವಾದ್ರಿಯಿಂ ತಿಂಗಳಿಂ ।
ಕಿರಣಂ ಧಾರಿಣಿಯಿಂ ಫಣೀಂದ್ರನೊಗೆವಂತುತ್ಸಾಹದಿಂ ಲೋಕಮಂ ।
ಪೊರೆಯಲ್ಕೆಂದಸಹಾಯಶೂರನೊಗೆದಂ ಶ್ರೀಗಂಗಚಕ್ರಾಯುಧಂ ॥ (ಕಸಾಪ ೩೬೧)

ಓಕಾರವು ಜಕಾರದ, ಔಕಾರವು ಜಾ ಮತ್ತು ಔ ವರ್ಣಗಳ ಭ್ರಾಂತಿಯನ್ನುಂಟು ಮಾಡಬಹುದು.

ಕ :

ಮಜ್ಜನಕ್ಕೆಚಿವಡೆ ಭೂತ ವಿ**ಕಾ**ರ [ಅವ-೫೨೧] (ಚಾ)
ಸುಗ್ಗಿಯೊಳಾದ ಕಿತ್ತನಿವಂ [ಪಂಭಾ ೪-೯೭] (ಚಿ)
ಸುರತದ ಮು**ಜುಕಂ** ಪೊಸತಾಯ್ತು ಜಕ್ಕವಕ್ಕಿಯ ಪೊಣರೊಳ್
[ಸೂಕ್ತಿ ೯೫೧] (ಜಿತಂ)
ಪಥಿ**ಕಾಂ**ಗನಾಜನಮನಂಜಿಸುವಂತಿರೆ [ಕಮಾ ೧-೧೨೪] (ತಾಂ)
ಕಠಾರಿಯ ಕೋಲಿಂ ಮುಂದಣ ರತ್ನಸ್ತಂಭಮಂ **ಕಿ**ಜಿಹಿ [ನಂಬಿ ೨೭] (ತಿ)
ಕಾಲಾಗ್ನಿಯಂ **ಕೀ**ಡಿ ಸುತ್ತುವಂತೆ [ಪಂಭಾ ೧೨-೧೧೮ ಗ] (ತೀ)
ಕುಸುಮಾಸ್ತ್ರನಿದಿರಿನ **ಕು**ಜೆಗಳೆನಿಸುವ ನೋಟಕರ [ಪ್ರಲೀ ೪-೩೨] (ತುರು)
ಪುಳಕಾಂಕುರ ಸಂಕುಳದಿಂದೆ ನಲ್ಲನಂ **ಕೂಂ**ಕಿದಳ್ (ಸೂಕ್ತಿ ೬-೯೫] (ತೂ)
ಉಲಿವ ಮಾಯೆಯ **ಕೇಜು**ವಂತೆ ಕೈಗಳು ನಡುಗೆ [ಪುರ ೧೪] (ತೇರು)
ಕೊನೆವನಿ ಸೂಸೆ ಸಣ್ಣವನಿ ಕೆಂದಳದೊಳ್ ಸರಿಗೂಡೆ [ಸೂಕ್ತಿ ೪-೮೨] (ತೊ)
ಬೇಟದ ಸುಗ್ಗಿ ನಾಲ್ಕು ದಿನವಾದಿನದೊಳ್ ಬಸಮಾದ ಗಂಡರೊಳ್ ಕೂಟವೆ **ಕೋ**ಟಿ
[ಸೂಕ್ತಿ ೮-೪೫೯] (ತೋ)
ಭೂಪಾಲ**ಕ**ರ ಮನೆಗಳಲಿ ನಡೆದವು ಪೂರ್ವವೇದಿಗಳು
[ತೊರಾ, ಬಾಲಕಾಂಡ ೧೬-೩೫]

(ರ)

ಸತಿಯರ ಸರಸಪಾಶಕೆ ತೊಡ**ಕಿ**ಬೀಳದ ಮಹಿಮನಿವನಾರೊ [ಪ್ರಲೀ ೫-೫೩] (ರಿ)
ಜಕ್ಕಿಯ ಕೂಟಮೆ ಕೂಟದೇಟ್ಗಿಯೊಳ್ ಸುರಕೆನಬಾರದು [ಸೂಕ್ತಿ ೮೪-೬೩] (ರೂ)
ಬಾಣಸಿನ **ಕ**ರಣಕ್ಕೆ ನಿರೂಪಣಂಗೆಯ್ದಂ [ಪಂಭಾ ೮-೫೪ ಗ] (ಶ)

ಖ :

ಸಾರಸು**ಖಾ**ಮರ ಗೇಹಗಂಧಿ ಗಂಧಿಳವಿಷಯಂ [ನೇಪು ೧-೬೩] (ಚಾ)
ಸತ್ಕೃತಿಯ ಮುಂದೆ ಸು**ಖಾ**ಬ್ಧಿಯ ಮುಂದೆ [ಗಿಕ ೧-೨೪] (ದಾ)
ವಿಸ್ತರಿತ ಸು**ಖಾ**ಬ್ಧಿಯಂ ಸುಖದೊಳೀಸುತೆ ಬಂದ [ಗಿಕ ೪-೧೧೪] (ಧಾ)
ನಮ್ಮ ಸೈನ್ಯಮಿಂತೊರ್ವರೊರ್ವರೊಳ್ ಸೆಣಸಿ **ಖ**ಳವ್ಯಸನದೊಳೆ ಕೆಟ್ಟುದು
[ಪಂಭಾ ೧೨-೪೨]

(ಬ)

ಬಂದರಾಗಳಂತಃಪುರದಿಂದಂಬುಜಮುಖಿಯರ್ [ಧಪು ೪-೩೪] (ಬಿ)

ಗ :

ಪಾಲ್ಗಳಂ ಮಡಗಿ ಮುದ್ರಿಸಿದಂತೆ [ನೇಪು ೨-೨೪] (ದಿ)

ಸೊಬಗಿಂಗೆತ್ತಿದ ತೋರಣಗಂಬಂಬೊಲಿರ್ದುವಾಕೆಯ ತೊಡೆಗಳ್

[ಕ ಕಾ ೬೧]

(ದೆ)

ಪಿರಿಯರ್ಗೆಡೆಗೊಟ್ಟು ಬಾಳ್ವರ್ (ಕ ಕಾ ೧೦] (ದೊ)
ದೇವಾಂಗವಸ್ತ್ರಮಂ ದೇವರ್ಗೆಯೀವುತಂ [ಪುರ ೯೮] (ನ)
ರಸಾಳಗೀತದ ಗಾಯಕರ ವೈತಾಳಿಕರ [ತೊರಾ, ಬಾಲಕಾಂಡ ೧೬-೩೯] (ನಾ)
ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯ [ಬವ ೨೬೯] (ನಿ)
ಪದವಿಲ್ ಕಟ್ಟಿದ ಗೇಣ [ಸೂಕ್ತಿ ೩-೧೦೨] (ನೇ)
ತುಂಬಿಯ ನಾರಿ ಬೇಗದಿಂ ಪಱಿಯದೆ [ಕಕಾ ೧೮೧] (ರ)
ಅಱಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು [ಶಿವ ೩೩೭] (ರಿ)
ಬಸವನ ಗೀತಿ ಗೀತಿ ಬಸವಣ್ಣನ ನಿರ್ಮಲ ರೂಪು ರೂಪು [ಬರ ೮-೨] (ರೀ)
ಸರ್ಪನ ಶಿರ ಕಂಠದಲ್ಲಿ ಮೂಗುತಿಯಾಯಿತ್ತು [ಶಿವ ೨೦೧] (ರು)
ಏಳು ಬಾವಿಯಲ್ಲಿ ನೆಗೆಯ, ಎರಡು ಬಾವಿಯಲ್ಲಿ ಉಣ್ಣ [ಚೆಬವ ೧೩೦೬] (ರೆ)
ತಪೋಧನರ ಕೈಯೊಳೆ ಶಾಖಿಗಳುಂ ನಗೇಂದ್ರದಾ [ಪಂಭಾ ೧-೧೧೬] (ರೇಂ)
ನವಲತಾಗೃಹದೊಳ್ ಸೊಗಮಿರ್ಪ ಭೋಗಿವಾನಸರ್ (ಧಪು ೨-೩೯] (ಸ)
ಬಿಗುಪೇಱುತಿರ್ಪುದು ವಿಳಾಸದ ಕೈತವಂ [ಸೂಕ್ತಿ ೬-೧೦೪] (ಸು)

ಘ :

ಘಟವು ಸ್ವಯವಾದಲ್ಲದೆ ಕಕ್ಷೆಯಲ್ಲ [ಚೆಬವ ೧೧೮೮] (ಪ)
ಘನ ಕುಂಜರ ಎಂದೆಂಗುಮೆ [ಗದಾ ೩-೨೯] (ಪು)
ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಘನವೇನೋ [ಅವ ೧೫೨] (ಫ)
ಆನೆತ್ತ ಬಲ್ಲೆನಯ್ಯ ನಿಮ್ಮ ಭಕ್ತಿಯ ಘನವ (ಬವ ೯೮೩] (ಮ)

ಜ :

ಇದು ಓಕಾರ ಭ್ರಾಂತಿಯನ್ನುಂಟು ಮಾಡಬಹುದು. ಉದಾಹರಣೆ ಲಭ್ಯವಿಲ್ಲ.

ಚ :

ಸೀಗುರಿ **ಚಾಪಿ** ನಾಣ್ಬುಣಿದು ಮೆಟ್ಟುವ ಗುಜ್ಜರಿಗಟ್ಟಿ [ಪಂಭಾ ೪-೮೭] (ಕಾ)

ತನು ಬತ್ತಲೆಯಿದ್ದಡೇನೋ ಮನ **ಶುಚಿ**ಯಾಗದನ್ನಕ್ಕರ [ಅವ ೫೨೯] (ಸುಖಿ)

ವೈರ ಮಟ್ಟುಳಿ ತೋಹು ಬೆದರು ಬೆಚ್ಚರ ಕಷ್ಟನಿಷ್ಠುರಂ [ಜೈಭಾ ೧-೪] (ಜ್ಜ)

ಚಾರು ಕವಿತೆಯ ಬಳಕೆಯಲ್ಲ [ಕುಭಾ ೧-೧-೬] (ಜಾರ)

ನಂಬಿ ಪಲಕೆಲವು ವತ್ಸರವರ್**ಚಿ**ಸುತ್ತಮಿರೆ [ಪುರ ೧೪] (ರ್ಜಿ)

ನೀವಿರ್ದುದೇ **ಚ**ಲಂ ನೀವಿರ್ದುದೆ ಬಲಂ [ನಂಬಿ ೧೦೦] (ತ)

ಚಳದೊಳ್ತರ್ಜುನಂ (ನೇಪು ೪-೧೦೫] (ಬ)

ಇಂದ್ರಿಯಂಗಳ **ಚಿಟ್ಟು**ಮುಜೆಯಾಟದಲಿ ಮನಸಂತುಷ್ಟನಾಗಿ [ಕುಭಾ. ಉ.೪-೧೨] (ಬಿಟ್ಟು)

ತವೆ **ಚೀಱು**ತಿರ್ಪ ಚಿನ್ನ ಕಿನ್ನರಿಗಳಲ್ಲಿ [ಪುರ ೪೨] (ಬೀ)

ಮಿಟ್ಟೆಗೊಂಡ **ಚಿಟ್ಟೆ**ಯ ತೆಱದಿಂ [ಪಂಭಾ ೭-೩೮] (ಬೆ)

ಚೊಕ್ಕಳವಪ್ಪ ಬಿಲ್ವನೊಳಕೊಂಡಿರೆ [ಕಕಾ ೨೬೫] (ಬೊ)

ದಯೆಗೆಯ್ಗೆ **ಚಾ**ಗಚತುರ್ಭುಜಂ ಗರುಡಧ್ವಜಂ [ಕಾಲೋ ೩೫೮] (ಭಾ)

ಹರಣವುಳ್ಳನ್ನಕ್ಕ ನಿಮ್ಮ **ಚರಣವ** ನೆನೆವುದ ಮಾಣೆ [ಬವ ೬೯೨] (ಶರಣರ)

ಛ :

ರೂಹಿಲ್ಲದ ನಾರಿಯರು ಬೀಜವಿಲ್ಲದ ಅಕ್ಕಿಯ **ಛ**ಳಿಸುತ್ತಲಿ [ಅಲಿ ೬೩೪] (ಥ)

ಛಂದಸು [ನೇಪು ೪-೭೭ ಅ.ಟಿ.] (ಧ)

ಮದ್ವಿರೋಧಿಯಂ **ಛೇ**ದಿಸಲಾನೆ ಸಾಲ್ವೆಂ [ಪಂಬಾ ೧೩-೪೩] (ಭೇ)

ಜ :

ಬಿಳಿಯರಳೆಯಂತೆ ಗಂ**ಗಾಜ**ಳದಂತೆ [ಅಜಿ ೧೨-೬] (ಧಾಚ)

ಜಾರಚೋರರ್ಕಳಡಗದಿರ್ದಪರೆ ಪೇಳೆನಲ್ಕಿಂದು ಮೆರೆದನಂದು
[ಜೈಭಾ ೨೪-೧೬] (ಚಾ)

ಮೊರೆವ ಮದಾಳಿ ಕೂ**ಜಿ**ಸುವ ಕೋಗಿಲೆ [ಸೂಕ್ತಿ ೪-೪೧] (ಚಿ)

ಪ**ಜ್ಜೆ**ಯಂ ತಾವರೆಯೆಲೆವ**ಜೆ**ಯೊಳ್ ನೋಡಿ [ಸೂಕ್ತಿ ೮-೩೦] (ಚ್ಚೆ)

ಪರಮ ಹೋ**ಜೇ**ಶ್ವರನಿರಲ್ ಕಂಡೆವು [ಸೋಚಾ ೧-೧೧೭] (ಚೇ)

ಮೈ **ಜೋ**ಗೇಜಿದಂತೆ [ಸೋಚಾ ೪-೧೦] (ಚೌ)

ನಿಧಿ ದೊರೆಕೊಂಡೊಡೇಂ **ಜ**ರಗುಗರ್ಚುವರೇ [ನೇಪು ೧-೪೯] (ಬ)

ಬಟಿಲ್ಕೆಯಂ **ಜಾ**ರಿಸಲೆಂದು ನಿಂದ ಪಥಿಕರ್ [ಸೂಕ್ತಿ ೪-೧೩] (ಬಾ)

ಝ :

ಸಾಮಾನ್ಯವಾಗಿ ಇದು ಯಾವ ವರ್ಣದ ಭ್ರಾಂತಿಯನ್ನೂ ಉಂಟುಮಾಡದು. ಉದಾಹರಣೆ ಲಭ್ಯವಿಲ್ಲ.

ಞ :

ಇದು ಇಕಾರ ಮತ್ತು ಣಕಾರವಾಗಿ ಕಾಣುವ ಸಾಧ್ಯತೆಯಿದೆ. ಉದಾಹರಣೆ ಲಭ್ಯವಿಲ್ಲ.

ಟ :

ಪವನ ಪಾಟಳ **ಪಟೀ**ರಾದಿ ಮೇದಿನಿರುಹಂಗಳ್ [ಧಪು ೨-೬೧೪] (ಚೇ)

ಬಾಸೆಯೊಳಂ**ಟು**ಗೊಂಡ ಕಣ್ (ಕಕಾ ೬೩ ಗ] (ಡು)

ಕಣ್ಮಾಯದ **ಟೌ**ಳಿಗಳೆನಿಪುವು [ಧಪು ೩ ೭೯] (ತೌ)

ಸತಿ ಕಂ**ಟಿ**ಸಿ ಕಾಡುವಳೆಂದು [ಸೂಕ್ತಿ ೩-೧೪೦] (ಪಿ)

ಠ :

ಅಳಿಗಳಾಡುಂಬೊಲಂ ಗಿಳಿಗಳೋದುವ **ಮಠಂ** [ಸೋಚಾ ೨-೭೩] (ರಂ)

ಡ :

ಕರ್ಣಂಗೊ**ಡ್ಡಿ**ತ್ತು ದಲ್ ಭಾರತಂ [ಪಂಭಾ ೧೨-೧೦೪] (ಟ್ಟಿ)

ಎರಡು ಯೋಗ ಉಂಟು ಅಲ್ಲಿ, ಅಳಿದು ಕೂಡುವದೊಂದು ಯೋಗ,

ಅಳಿಯದೆ ಕೂಡುವುದೊಂದು ಯೋಗ [ಅವ ೨೫೭] (ಎಂಟು)

ಕುಂಡಲಿಗನೊಂದುಕೀ**ಡೆ**ಯ ತಂದು ತನ್ನಂತೆಮಾಡಿತ್ತಲ್ಲಾ [ಬವ ೧೨೬೦] (ಟೆ)

ದಶಕಂಠನನಕ್ಕಟ ಕೊಂ**ಡ** ಪೆರ್ಮರುಳ್ [ಪಂಭಾ ೬-೩೩] (ದ)

ಪೂಣ್ದುದನೆಯ್ದೆ ಪೂಣ್ದು ಪಗೆಯಂ ಕೊಂ**ಡಾ**ಡದಂ ಗಂಡನೆ

[ಪಂಭಾ ೧೨-೧೬೦]

(ದಾ)

ನೆಲ್ಲುಂ ಮೊಸರುಂ ಗು**ಡಿ**ದಂತೆ [ಕಮಾ ೨-೪] (ದಿ)

ಬೆಂಡು ಮುಗುಱ್ದುವು ಮೀಂಗಳ್ [ಪಂಭಾ ೫-೬೫] (ದು)

ಅ**ಡೆ**ವೊತ್ತದೆ ಕಿಱಿಕಿಱಿದನೆ ಸುಡದೆ [ಪಂಭಾ ೩-೫] (ದೆ)

ಭೀಮಂ ಪ್ರತಿಜ್ಞೆಯಂ ಮಾ**ಡು**ತ್ತಿರಲು [ಜೈಭಾ ೧-೫೭] (ರು)

ಬಿದಿರ ಸಿ**ಡು**ಂಬಿನೊಳ್ ಗಜಱೆ [ಸೂಕ್ತಿ ೩-೧೩೯] (ಖು)

ಥ :

ಇದು ಥಕಾರದ ಭ್ರಾಂತಿಯನ್ನುಂಟು ಮಾಡಬಹುದು. ಉದಾಹರಣೆ ಲಭ್ಯವಿಲ್ಲ.

ಣ :

ಇದು ಇ, ಈ ಗಳಂತೆ ಕಾಣಬಹುದಾಗಿದೆ. ಉದಾಹರಣೆ ಲಭ್ಯವಿಲ್ಲ.

ತ :

ಸತ್ಯವೆಂಬ ಕೂರಲಗನೆ **ತ**ಳೆದುಕೊಂಡು ಸದ್ಭಕ್ತರು ಗೆದ್ದರು
[ಬವ ೬೭೭ ಬಸವನಾಳ] (ಕ)
ತಾಳವಟ್ಟದ ಬಿಲ್ಲಂ ಕೆಂದಳದೊಳಮರೆ ನೀವಿ [ಪಂಭಾ ೧೨-೧೩೫ಗ] (ಕಾ)
ಬತ್ತೀಸ ರಾಗವ ಹಾಡಯ್ಯ [ಬ ವ ೪೯೮ ಬಸವನಾಳ] (ಕ್ತಿ)
ಪೂವಿನಂಬು **ತೀ**ವಿದ ದೊಣೆ ತೀವಿ ತನ್ನನಿಸೆ [ಪಂಭಾ ೪-೪೧] (ಕೀಜೆ)
ತುಡುಗೆ ನಿಚ್ಚಲುಂ ಪಂಚರತ್ನಂಗಳುಂ [ಪಂಭಾ ೧೪-೫೫] (ಕು)
ಕುರುಭೂಭೃದ್ಬಲ [**ತೂಲಕಾ**]ಲ ಪವನಂ [ಗದಾ ಸಂ ೨-೧] (ಕೂಲತೂ)
ಕೂರ್ಗಣೆಗಳಂ ಗಜೆವೆರಸು **ತೊ**ಱೆದು ಕಳೆದು [ಪಂಭಾ ೧೨-೭೪ ಗ] (ಕೊ)
ನೆರೆದಿಸುತಿರೆ **ತೋ**ಲ್ವುಲ್ಲೆಯನಿರದದು ಬಿಳ್ದೊಡೆ [ಪಂಭಾ ೨-೫೧] (ಕೋ)
ನರ್ತಿಸಿದತ್ತು ಮಾಲೆಗುಡಿ [ಸೂಕ್ತಿ ೭-೫೯] (ರ್ಚ)
ತನಿತು ತೊಡಂಬೆವಿಟ್ಟುದು [ಸೂಕ್ತಿ ೪-೧೨] (ಪ)
ಸೇಸಿಕ್ಕಲ್ಗಂಧಶಾಲ್ಯಂ ಕ್ಷತಶ**ತ**ಮನಿಶಂ [ನೇಪು ೧-೭೦] (ರ)
ಬಯಸಿ ಬಾಯ್ ತೇರೈಸಿ ಸೈ**ತಿ**ಪ್ಪೆನೆ [ಪಂಭಾ ೭-೫೮] (ರಿ)
ಪೂ**ತೋ**ತ್ತಮಂ ದಿವ್ಯಗಂಧಂ [ನೇಪು ೧-೭೦] (ರೋ)
ಮಾತಿನ **ಮಾತಿನೊಳಗೆ** ಅಱಿವೆಂಬುದುಂಟೆ [ಅವ ೫೧೮] (ಮಾಲೆಯೊಳಗೆ)
ಹೇಮ **ತಾ**ಮರಸಮನಾನನಾಂಬುರುಹಕೆ [ಧಪು ೩-೧೪೪] (ಲೌ)
ಒಸೆದು ರ**ತಿ** ನಿಟ್ಟಿಸುವ ಕನ್ನಡಿಯೊ [ಸೋಚಾ ೨-೧೨] (ವಿ)
ಇವರ ಕೋವಣಕಿಂತು **ತೊ**ಳ್ತುಮಾಡಿದೆ ತಂದೆ [ಪುರ ೧೧೨] (ವೊ)
ಅರ್ಪಿತ ದಪ್ಪ **ತ**ಲೆಗೇಱಿದಲ್ಲಿ ನೀ ಮುಂತಾಗಿರ್ದೆ [ಚೆಬವ ೮೦೯] (ಶ)
ಪಾಪಮುಂಟೆನಿಪುದಂ ಪರಿಭಾವಿಸು ನೀಂ ಮಹಾಮ**ತೀ** [ಧಪು ೫-೧೭೫] (ಶೀ)
ಬಿರಯಿಗಳಂಜಿ **ತಾ**ಱೆ [ಕಕಾ ೪೫] (ಸಾ)

ಥ :

ಶೈವ ಸೈವೆಱಗಾದ ಪಾಶುಪತಿ **ಪಥ**ವಜೆಯ [ಚೆಬವ ೫೪೫] (ದ)

ಅ**ರ್ಥ**ದೊಳ್ ಸಂಬಂಧ ವ್ಯವಧಾನಮಾದೊಡಕ್ಕುಂ [ಕಮಾ ೧-೯೦] (ರ್ಧ)

ದ :

ಕರ್ಪೂವೆತ್ತ ಕೇಸಂ**ದ**ಳವಾದ ಕಟ್ಟಿಲೆಯನೇಟಿಸೆ [ಕಕಾ ೧೦೩] (ಗ)

ಪುಳಕಕೆ ಕಂಟಕವೆಸರಂ ಕೊಟ್ಟಜನ ಸುಜನತೆಗೆ ಬೆಱಗಾ**ದೆಂ** (ಸೂಕ್ತಿ ೮-೪೭೪] (ಗಂ)

ಸಕಲದೇವರ **ದೇ**ವ [ತೊರಾ. ಬಾಲಕಾಂಡ ೮-೫೨] (ಜೀ)

ಇನ್ನೆನ್ನನೆಲೆಲೆ ಕೊಂದರ್ಕೊಂ**ದ**ರೆಂದೆನುತೆ [ಪುರ ೮೮] (ಡ)

ಸಾಮಂತ ಸೀಮಂತಿನಿಯರ್ ಮುಂ**ದಾ**ಡೆ [ಪಂಭಾ ೧೪-೧೮] (ಡಾ)

ದ್ವೈತಾದ್ವೈತವನೋ**ದಿ** ಏನ ಮಾಡುವಿರಯ್ಯಾ [ಬವ ೧೯೧] (ಡಿ)

ಕಂ**ದು** ಕಲೆಯ ಕಳೆವ ತಂದೆ ನೀನಿರುತ್ತಿರಲು [ಬವ ೧೧೧೬] (ಡು)

ಲಿಂಗವಜೆತೆನೆಂದು ಶರಣರ ಸಂಗವ ಬಿಟ್ಟರೆ ಅದು ಎ**ದೆ**ಯಲ್ಲಿ ನಿಂದ ನಂಜು

[ಗೂಶೂ ೩೧೪] (ಡೆ)

ಧರಣೀನಾರಿ ಯಾರೊಡನೊಕ್ಕತನವಿದ್ದಾರ ಮೆಚ್ಚಿ**ದ**ಳಾರ ಸಂಗಡವುರಿಯ ಹಾಯಿದಳು

[ಕುಭಾ. ಉ, ೧-೨೮]

(ಪ)

ದೂಸರಮಾದ ಚೊಲ್ಲೆಯದ ಕಂಪಿನೊಳೋಕುಳಿಯಾಡೆ [ಕಕಾ ೭೨] (ಮಾ)

ಸರಸಿರುಹಂಗಳಿಂದಿಟಿವ ಮತ್ತ ಮ**ದಾ**ಳಿಗಳಂತೆ (ಸೂಕ್ತಿ ೧೧-೨೧] (ರಾ)

ಹೊಱಗೆ ಮೆಱೆದುದು ವೇಷವೊಳಗೆ ಬೆಳೆದುದು **ದೋ**ಷ [ಪುರ ೭೦] (ರೋ)

ಬಲೀಂದ್ರನಧ್ವರ**ದ** ಹೋಮವನು ಕೆಡಿಸಿದನು [ತೊರಾ. ಬಾಲಕಾಂಡ ೧೧-೪] (ವ)

ಕಡಿದಂ ತಲೆಯುಮನದೊಂದು **ದಾ**ರುಣ ಶರದಿಂ [ಪಂಭಾ ೧೨-೬೪] (ವಾ)

ಶೈವಾಳದೊಳ್ ಸೋ**ದಿ**ಸಿ [ಸೂಕ್ತಿ ೮-೩೦] (ವಿ)

ಇಂತು **ದೈ**ವಾರ್ಚನೆಯ ಮಾಡಿ ದಂಬಂ ಮೆಱೆದು (ಪುರ ೭೨] (ಶೈ)

ಮಲ್ಲಿಕಾಮೋ**ದ**ವಾಹಂ [ನೇಪು ೩-೧೧] (ಹ)

ಧ :

ಅಟೆದರ**ಧಿ**ಕರ್ ಭೀಷ್ಮದ್ರೋಣಾಂಗನಾಯಕರ್ [ಪಂಭಾ ೧೩-೨೨] (ಥಿ)

ದು**ರ್ಧ**ರದ ಶಿಖರಖಂಡನವನೆಮ್ಮಯ ಸರಳಮೊನೆಯಲ್ಲಿ ತೋಱಿಸುವೆವು

[ತೊರಾ.ಬಾಲಕಾಂಡ ೮-೬೬] (ಭ)

ನ :

ಪ್ರತಿಭಾನಂ ಶಕ್ತಿ ಲೋಕಾಗಮ ಸಕಲಕಲಾವೇದನಂ [ಕಾಲೋ ೪೨೪' (ಗಂ)
ಒಕ್ಕ ಸೆಱಂಗಿನಿಂ ಮೊಲೆಯನಾಳಿಸಿ [ನೇಮಿ ೬-೧೦] (ಗಾ)
ನುಣ್ಪುವೆತ್ತು ಸೋಲಿಪ ಚೆಲ್ವಿಂ [ಕಕಾ ೬೧] (ಗು)
ಪೊಟ್ಟನೊಡೆವಂತೆವೊಲಾದುದಜಾಂಡ ಮಂಡಲಂ [ಪಂಭಾ-೧೪೫] (ಗೊ)
ಇಂತಲ್ಲದವರ ಉರಿಲಿಂಗಪೆದ್ದಿಗಳರಸ ನಕ್ಕು ಕಳೆವನವ್ವಾ [ಶಿವ ೩೪೯] (ವ)
ಚಕ್ರನಿಘಾತದಿನಿಕ್ಕಿ [ಪಂಭಾ ೧೨-೨೦೮] (ವಿ)
ಅರಾತಿನಾಯಕರ ಪಟ್ಟನೆ ಪಾಱಿಸೆ [ಪಂಭಾ ೧೪-೫೦] (ವೆ)
ಪಸಿಯ ನೇತ್ರವಂ ಪಚ್ಚವಡಿಸಿದಂತೆ [ಪಂಭಾ ೭-೨೫ ಗ] (ವೇ)
ಅಂಬುಧಿಯನಂಬುಜಾನನೆ ಕಂಡಳ್ [ಸೂಕ್ತಿ ೭-೪೫] (ಸ)
ಲಿಂಗಪದಾರ್ಥವನಂಗಮುಖವ ಮಱೆದು ನಿಮಗೆ ನೀಡುವೆ [ಬವ ೧೨೫೪] (ಸಂ)
ನಳಿನನಾಭನ ಕರುಣದಳತೆಗೆ ನಿಲುಕದಿಹುದೇನುಂಟು [ಕುಭಾ. ಉ.೨-೩೨] (ಸಿ)
ನೀಳ್ದಮಾವಿನ ಪೋಟಂದದ ಕಣ್ಗೆ ಬಾಷ್ಪಜಲಮಂ [ಪಂಭಾ ೪-೪೬] (ಸೀ)
ಮುಳಿಸಿಂ ಪೋರ್ದಾನೆಮೆಯ್ಯಾತನಾ ತೊವಲಂ ಮೇಲ್ವೊದೆ ಮಾಡಿ
[ಕಕಾ ೧೨೩] (ಸೆ)

ಪ :

ತಲೆಗಳ್ ತೊಡರ್ದಿರ್ದ ಜೇನಪುಟ್ಟಿಗಳನೆ ಪೋಲ್ತುವು [ಪಂಭಾ ೧೦-೮೦] (ಫ)
ಬಾಣಪಾತದೊಳಮವನ ರಥಮಂ ಶತಚೂರ್ಣಂ ಮಾಡಿ [ಪಂಭಾ ೭-೩೧ಗ] (ಫಾ)
ಧನದ ಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ [ಪಂಭಾ ೧-೫೮] (ಟ)
ಪಿಂಬೇರ ಮೈಲಿಗ ಮೇಳವಾಡುತ್ತಿದ್ದ ಕಾಣಾ [ಬವ ೫೬೭ ಬಸವನಾಳ] (ತಿ)
ಪಟವಗೆಗಳಾಱುಮಂ (ಕಕಾ ೧೭೯] (ದ)
ಕರ್ಣಾಟೀಕರ್ಣಪೂರನ ಪಾಲೆಗಳುಂ ಸರಸ್ವತಿಯಾಡುವ ಲೀಲಾಂದೋಳ
ದಂತಾದುವು [ಪಂಭಾ ೨-೩೯ ಗ] (ವಾ)
ಕೇಶವೆಂಬ ಸೀರೆ ಅಂಗಕ್ಕೆ ಮಱೆಯಾಯಿತ್ತು, ಅಪಮಾನವೆಂತು ಹರಿಯಿತ್ತು
[ಅವ ೧೨೨೫] (ಸ)
ಪಾಶುಪತಮಂ ಪಿಡಿಯಲ್ ಪಾರ್ವುದುಂ [ಪಂಭಾ ೧೧-೨೩] (ಸಾ)
ಸಿರಿಯೊಳ್ ಪಿರಿಯರ್ [ಕಕಾ ೧೦] (ಸಿ)
ಕಿವಿಗಳ್ ಕಿಱಿಪುತ್ತಿರೆ [ಸೂಕ್ತಿ ೩-೭೨] (ಸು)

ಫ :

ಪಯೋಧರವೊಯ್ಯನೆ ಸೋಂಕೆ ಫೇನಮಾಲಾಧರಮುಣ್ಮೆ [ಧಪು ೫-೯] (ಫೇ)

ಬ :

ಬರಲಿ ಕರೆ ಕೈತವದ ಶಿಕ್ಷಾಗುರುವ [ಕುಭಾ.ಉ.೮-೫೨] (ಒ)
ಚರ್ಮಚಿತ್ರಾಂಬರ ಬಂಧಂ ಕೂಡಿ [ಸೂಕ್ತಿ ೮-೨೧೪] (ಖಂಡಂ)
ಕಾಗೆ ನವಿಲಿಬ್ಬಾಯ ಗುಬ್ಬಿ ಪಾರಿವ [ಸೋಚಾ ೩-೯] (ಖ್ಯಾ)
ಬಿನ್ನವಾದ ಮೊಗದಂದಮಂ ಕಂಡು [ಪಂಭಾ ೨-೨ ಗ] (ಖಿ)
ಸಾರಮಾದುದು ಬಿಟ್ಟಗ್ರಹಾರಮಾ ಬಚ್ಚೆಸಾಸಿರದೊಳಂ [ಪಂಭಾ ೧೪-೫೬] (ಚ)
ಬಾಳಬಟ್ಟಂ ತೂಂತಿಟ್ಟಂತೆ [ಪಂಭಾ ೧೦-೫೭] (ಚಾ)
ಬಿತ್ತೆಲ್ಲಾ ಜೀವ, ಅದಱೊಪ್ಪದ ತೆಱ ಎನಗೆ [ಅಕ್ಕ ೨೮] (ಚಿ)
ಉರ್ಬಿ ಬಾಹುಪಾಶದೊಳೆ ತೊಡರ್ಚಿದಳ್ [ಸೂಕ್ತಿ ೧೪-೬೮] (ರ್ಚಿ)
ಉರಮಂ ಬಿಕ್ಕನೆ ಬಿರಿಯಿಱಿದು [ಪಂಭಾ ೧೨-೧೫೩] (ಚೆ)
ಬೆಂಗದಿರ್ಗಂ ತಣ್ಗದಿರ್ಗಂ [ಕಕಾ ೧೮೧ ಗ] (ಚೆಂ)
ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ [ಬವ ೪೪೬ ವಿಹಾರಿ] (ಜಿಂ)
ಕಾಯದ ಮೇಲೆ ಕಲ್ಲು ಬೀಳಲಿಕ್ಕೆ ಬೇವ ಆ ಠಾವನಱಿದು [ಅವ ೧೨೦] (ಜೀ)
ಗೊಬ್ಬೂರ ಬಿಬ್ಬಿಬಾಚಯ್ಯಗಳು ಪ್ರಸಾದದಿಂದ ಗೊಬ್ಬೂರ ಸುಟ್ಟುದಿಲ್ಲವೆ ?
[ಚೆಬವ ೭೫೮] (ಟ್ಟಿ)
ಬೇಹ ಧರ್ಮದ ಬೀಡು ಕರ್ಮಸಮೂಹದಾಗರ [ಪ್ರಲೀ ೨೦-೨೯] (ದೇ)
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ [ಬವ ೨೨೪] (ಪಿ)
ನಿಧಾನವ ಕಾಯ್ದಿರ್ದ ಬೆಂತಱನಂತೆ [ಬವ ೯೯] (ಪೆಂ)
ಇಹದಲ್ಲಿ ಪರದಲ್ಲಿ ಇರಸಬಾರದ ಭಾಷೆ [ಶಿವ ೩೫೫] (ಲಾ)

ಭ :

ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ [ಅವ ೪೬೭] (ಖ)
ಪೇಟ್ರಿಂ ಸಭೆ ಝೋಂಕರಿಸೆ [ಧರ್ಮಾ ೧೦-೨೫೦] (ಖೆ)
ಮುನ್ನಿನ ಭೋಗಿಗಳಾವೆಡೆ [ಧರ್ಮಾ ೧೧-೮೭] (ಚಾ)
ಎಸೆದುದು ವಸುಧಾಧರನ ಭುವನ ಭುಂಭಕ ತೇಜಂ [ಧಪು ೨-೫] (ಚುಂ)
ಈ ಉಭಯವ ಭೇದಿಸಿದಡೆ ಕುಣಿಕೆಯ ಮಣಿ ತಲಪಿಗೇಱಿತ್ತು [ಶಿವ ೩೧೦] (ವೇ)

ಮ :

ಸಮಶೀಲ ಸಮಗುಣಂ ಸಮವಾದ ಕನ್ಯೆಯಂ ಮದುವೆಯಂ ಮಾಡಿದರು

[ಸೋಚಾ ೧-೯೨] (ದು)

ಮಹಾರತ ಸಂಭ್ರ**ಮ**ಮೊಂದು ತಾಣದೊಳ್ [ಸೂಕ್ತಿ ೧೪-೪೫] (ದೊಂ)

ತಿರಿಗಿ ಛಟಲೆನೆ ಹೊಡೆದು ತಗ್ಗಿಸುತೆ **ಮ**ಗ್ಗಿಸುತೆ [ಪುರ ೪೬] (ನು)

ಬೆಂಕಿಯೊ[ಳಾ]ಡಿಸಿದರ್ **ಮೊ**ಗಮನಮರಸುಂದರಿಯರ್ಕಳ್

[ಪಂಭಾ ೧೨-೧೮೮] (ನೊ)

ಪೊಸ**ಮಾ**ಮರಂಗಳೊಳ್ [ಕಕಾ ೫೪] (ಪೂ)

ತಲೆಗಳ ಬಟ್ಟಲಿಂ **ಮೊ**ಗೆದು ನೆತ್ತರನಾಗಳೆ ಈಂಟಿ [ಕಕಾ ೨೨೩] (ಪೊ)

ಮೊಮ್ಮನೋ ಮಗನ ದಾಯಿಗನೋ ಬುಧಸೇವ್ಯನಂದನಾ [ಗದಾ ೧-೩೬] (ಬೊ)

ಬನಂಗಳೊಳೆಯ್ದೆ ಬಳ್ಳಿ **ಮ**ಲ್ಲಿಗೆಗಳ ಕಂಪು [ಧಪು ೫-೪೦] (ಯ)

ಆಕಾಶದ **ಮಾ**ವಿನ ಫಲವೆಂದಡೇನು? ಕೊಯ್ಯಲಿಲ್ಲ ಮೆಯ್ಯಲಿಲ್ಲ

[ಬವ ೧೨೨] (ಹೂ)

ಯ :

ವನೇಚರಿಯ ಬಿಳಿ**ಯ** ಕಣ್ಣ ಬೆಳಗಿಂ ಬನದೊಳ್ [ನೇಪು ೩-೫೮] (ದು)

ಖಳರಿಗಾಶ್ರ**ಯ**ವಾಯ್ತು, ನಮ್ಮಾಶ್ರಮಕೆ ಹಗೆಯಾಯ್ತು

[ತೊರಾ. ಬಾಲಕಾಂಡ ೧೦-೩]

(ಮ)

ಪುಸಿ**ಯಾ**ಡಿ ಕಾಡಲೆನಗೇಂ ದೊರೆಯೇ [ಪಂಭಾ ೮-೪] (ಮಾ)

ಯುಕ್ತಿಯ ಕೇಳಿದರೆ ಭಕ್ತಿಯ ತೋಱಿದ [ಗೂ ಶೂ ೧೯೮] (ಮು)

ಮಧುಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭ**ಯ**ವ

[ಕುಭಾ. ಉ.೧೦-೩]

(ವ)

ಅಱಿ**ಯಿ**ರೆ ನೀಮುಮಾಮುವೊಡನೋದಿದೆವೆಂಬುದನಣ್ಣ [ಪಂಭಾ ೨-೪೮] (ವಿ)

ರ :

ಮಾನಸಿಕೆ ದೊರೆಗಿಡೆ ನೀರ್ ಮಾನಸನೆನೆ [ಪಂಭಾ ೧೩-೭೯] (ಂ)

ಶ್ರೀಯುವತಿಯನಾ ವೀರಶ್ರೀಯುವತಿಗೆ ಸವತಿ ಮಾಟ್ಪೆನೆಂದ**ರಿ** ನೃಪರ

[ಪಂಭಾ ೧೧-೧] (ಂ)

ನರಮಹಿತಾ ನಿನಗೇನಹಿತರುಮೊಳರೇ [ಕಮಾ ೮-೮೨] (ನಂ)

ಅಱಸುವ ಬಳ್ಳಿ ಕಾಲ ತೊಡರಿದಂತಾಯಿತ್ತು [ಬವ ೧೧೭೮] (ಕಿ)

ಮಂದರವೊಂದನೆ ತಂದೋರಂದದಿನೆಸೆವಂತಿರೇಳು ನೆಲೆ ಪಡೆದು

[ಧಪು ೨-೧೩೯] (ಕೇ)

ಅಂತಕನ ಪಟ್ಟಣದ ದಾರವಟ್ಟದ ಕದಂದೆರಯಿಸುವೆ [ಸೋಚಾ ೪-೫೮ ಅ.ಟಿ.] (ಗ)

ನೆಗೆದುರಿವ ತಲೆಯ ಕಿಚ್ಚಿನೊಳ್ [ಕಕಾ ೧೧೮] (ಗಿ)

ಜಾತ್ಯರುಣಾಧರಾಂಶು ಪಲ್ಲವಮನೆ [ನೇಪು ೩-೫೯] (ಗು)

ಸೊಬಗು ರೂಢಿವಡೆದ ನೆಲೆಯ [ಕಕಾ ೨೬೮] (ಗೂ)

ನೀರಲೊಗೆದ ಮರಕ್ಕೆ ಕಾಣಬಾರದ ನೆಳಲು [ಅವ ೮೧೩] (ಠ)

ನಾಟಕಕ್ಕಳವಟ್ಟು ರೀತಿಯೊಳೊಪ್ಪಿ ಸೋವಲದೇವಿ ನಡೆ ತಾರೌ

[ಬಪು ೧೧-೪೩]

(ಠೀ)

ಗಜಾಸುರನ ಚರ್ಮವ ಬಿಚ್ಚಿ ಅಜಾರಿ ಹೊದೆವಲ್ಲಿ [ಶಿಶೂ ೧೨೩] (ತಿ)

ಸೋದರರ ಮನ ಕದಡಿದವು ದಾಯಾದ ವಿಷಯದೊಳ್ (ಕುಭಾ.ಉ.೧-೨೭] (ದ)

ನವಪುಷ್ಪ ನಿಕರದಿಂ ಹೊರೆದು ಪರಿಮಳವುಂಡು [ಪುರ ೯೬] (ದೆ)

ಮೇರು ಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ [ಅವ ೧೦೩] (ಲ)

ಚೆನ್ನೆಯ್ದಿಲುರಿಯೆಂದು ಪುಗಲನುಗೆಯ್ದುದು ಪೆಣ್ಬಕ್ಕಿ (ಸೂಕ್ತಿ ೮-೨೯] (ಲಿ)

ಮೇರುಗಿರಿಯಾಕಳನೆ ಕಱೆದು, ಕ್ಷೀರದಲ್ಲಿ ಅಡಿಗೆಯ ಮಾಡಿ [ಚೆಬವ ೯೪೬] (ಲು)

ಯುಧಿಷ್ಠಿರನಿಳೆಯ ಸೋತನು ಜೂಜುಗಾಱರ ಮೇರೆ ಮಾರ್ಗದಲಿ

[ಕುಭಾ.ಉ.೧-೬] (ಲೆ)

ಆನಂದಚಂದ್ರ ವಿರುದ್ಧ ಸ್ಥಿತಿಯಂ [ನೇಪು ೧೦೮] (ಶು)

ಲ :

ಮಿಸುಪಲ್ ತೋಳಮೊದಲ್, ತುಳುಂಕೆ ಮೊಲೆ [ಸೂಕ್ತಿ ೧೨-೩೨] (೦)

ಸುರಕುಜದ ನೆಟಿಲೊಳಂಗಣದೊಳೇನುಮಲಪಿಲ್ಲದೆ ಕಟ್ಟಿರೆ ಕಾಮಧೇನು

[ಪಂಭಾ ೪-೧೦] (೦)

ಹೊಱಗಣೆಲೆಯನೆ ಮೆಲಿದುವು [ಬವ ೫೯೬] (೯)

ಉಪ್ಪರಗುಡಿಯನೆತ್ತಿ ಮಾಡುವ ಭಕ್ತನ ಮನೆ ಅಟ್ಟಿಕ್ಕುವ ಲಂದಣಗಿತ್ತಿಯ ಮನೆ

[ಚೆಬವ ೭೦೮ ಅ.ಟಿ]

(ಅಂ)

ತನ್ನ ವಚನ ತನಗೆ ಹಗೆಯಾದಡೆ ಅದೇ ಪ್ರಳಯವಲ್ಲಾ ! ಇಂಥ ಪ್ರಳಯ ನಿನ್ನಲ್ಲುಂಟೆ ಗುಹೇಶ್ವರ? [ಅವ ೬೫೫] (ಉ)

ಸೋಂಕಿನ ಸೋಜಿಗವೆಂಬ ಪರಿಣತೆ ಫಲಿಸಬೇಕು [ಅವ ೪೮೮] (ಠಿ)

ಮಿಸುಪ ಜಗಲಿಗಳ [ತೊರಾ. ಬಾಲಕಾಂಡ ೧೩–೮] (ತಿ)

ಲೆಪ್ಪದ ಜಲದ ಪಾದಘಾತದಂತೆ ಕರ್ತೃತ್ವವೆಲ್ಲಿಯದೋ [ಅವ ೨೬೩] (ತೆ)

ಸಾರಮನಂಗಜಂಗಮಲತಾಲತಾಂಗಿಯರಿಂದಮಲ್ತೆ ಸಂಸಾರಂ [ಪಂಭಾ ೧–೧೧೪] (ತೆ)

ಕೇಳಲೊಡಂ ಕಿವಿ ಸವಿಯೊಳಗಾಳದೊಡಂ [ಗಿಕ ೧–೨೧] (ದೊ)

ಅಣಂ ಮಿಡುಕಲಾಗಡೆ ಶಾಪಮನೀಗುಂ [ಪಂಭಾ ೧೪–೪೩] (ರಾ)

ಆಲಿಕಲ್ಲ ಕೊಡನಲ್ಲಿ ಮುತ್ತು ಮಾಣಿಕವ ತುಂಬಿ ಎತ್ತುವರಿಲ್ಲದೆ ಸಖಿಯನಜಿಸುತ್ತಿಪ್ಪೆ
[ಶಿವ ೩೪೯ ಅ.ಟಿ] (ರಿ)

ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ ತಲೆಯ ಕೊಂಬ [ಬವ ೬೩೯] (ರೆಯೆಂ)

ಮಾರಯ್ಯಪ್ರಿಯ ಅಮಲೇಶ್ವರ ಲಿಂಗವಿದ್ದ ಠಾವೆ ಕೈಲಾಸ [ಶಿವ ೩೩೩] (ರೇ)

ನಾಗಲೋಕ ವಿಭವಂಗಳನಾಲಿಸಿ [ಪಂಭಾ ೪–೧೭ ಅ.ಟಿ.] (ಜೆ)

ಮನ ಮೇರೆದಪ್ಪಿ ನಿರ್ವಯಲಾದ ಸುಖವ ಶೂನ್ಯ ನಿಶ್ಯೂನ್ಯವೆಂದು ನುಡಿಯಲುಂಟೆ?
[ಶಿವ ೩೫೩] (ವಾ)

ಪೊಡವಿಯಡಿಯಲಿ ಫಣಿಪನೆಂಬ ಕೊಳ್ಳಿಯನಡಸಿ [ಸೋಚಾ ೩–೫೭] (ವಿ)

ಕಡಲಿನ ತಂಪಂ ಪತ್ತುದು [ಸೂಕ್ತಿ ೧೦–೧೪೮] (ವಿನ ಕಂ)

ಸಭಾಸದರೆಲ್ಲಮೆಲೆ ಮಿಡುಕದೆ [ಪಂಭಾ ೬–೫೯ ಗ] (ವೆ)[೩೫]

ವ :

ಕೇಳ್ದು ಕಡೆಗಂಡವನಾವನುಮಿಲ್ಲೆನಲ್ [ಪಂಭಾ ೧–೫] (ದ)

ಕನಕ ಕಮಂಡಲುವಿನ ತೀರ್ಥೋದಕಂಗಳಿಂದ [ಪಂಭಾ ೬–೧೧ ಗ] (ದಿ)

ಕಡೆಗೋಡಿವರಿದುವೊಡ್ಡೋಲಗದೊಳ್ [ಕಕಾ ೧೦೨] (ದೊ)

ಕಾಳಗದೊಳ್ ಕೂವಕಂಭದಂತಿರೆ ನಿಂದಂ [ಧರ್ಮಾ ೧೩–೧೬೦] (ನ)

ನಿಗಮ ನಿಕರಗಳೆಡಹಿ ವಾಚಿಸಿದಡೆಯು ನಿನ್ನಯ ನುಡಿಗೆ ಹೊದ್ದದು
[ತೊರಾ, ಬಾಲಕಾಂಡ ೯–೨೬]

---

೩೫. 'ಸಂಪಾದಕನ ವ್ಯಾಸಂಗವ್ಯಾಪ್ತಿ' ಎಂಬ ಮುಂದಣ ಪ್ರಕರಣದಲ್ಲಿ ಈ ವಾಕ್ಯದ ಚರ್ಚೆ ನೋಡಿರಿ.

(ನಾ)

ಬಸವ–ಪ್ರಭುವೆಂಬ ಎರಡು ಭಾವಭ್ರಾಂತಿಯಳಿದುಳಿದು ವಿಭ್ರಾಂತಿ ಎಡೆಗೊಂಡಿತ್ತು [ಅವ ೮೯೮] (ನಿ)

ನಿತ್ಯವೆಂಬ ಭಕ್ತನ ಮನೆಗೆ ಘನಚೈತನ್ಯವೆಂಬ ಜಂಗಮ ಬಂದರೆ [ಗೂಶೂ ೨೪೪] (ನೆ)

ಲಂಚ ವಂಚನಕ್ಕೆ ಕೈಯಾನದ ಭಾಷೆ [ಶಿವ ೫೫೬] (ಪಂ)

ಕಪ್ಪಂಗವಿಯಾಗಿ ಕವಿದ ದ್ರುಪದ ವಿಳಯಾನಳನಂ [ಪಂಭಾ ೧೨–೨೦] (ರಿ)

ಪೂವಿನಂಬು ತೀವಿದ ದೊಣೆ ತೀವಿ ತನ್ನನಿಸೆ [ಪಂಭಾ ೪–೪೧] (ಕೀಜಿ)

ಕವಿಗೆ ಕೇಡಿಲ್ಲೆಂತುಂ [ಶಮದ ೧೨೩] (ಲಿ)

ಅಳವಿಲ್ಲದ ಸ್ನೇಹಕ್ಕೆ ಮರಣವೇ ಮಹಾನವಮಿ [ಅವ ೫೪೬] (ಲಿ)

ಅನಿಮಿಷನಾಗಿ ನೋಡುವ ದೃಷ್ಟಿಗೆ ಎವೆಯ ಮಱೆಯ ಮಾಡಿಕೊಂಡು ಕಣ್ಣ ಮುಚ್ಚಲೇಕೆ [ಚೆಬವ ೬೮೩] (ಲೆ)

ಹಂಪೆಯ ವಿರೂಪಾಕ್ಷನನವರತವೊಪ್ಪಿದಂ [ಪುರ ೨೯] (ಲೊ)

ದೇವನಾಮ ಸೊಗಸದು ಲಿಂಗಾಯತಂಗೆ [ಚಬವ ೧೨೭೫] (ಹ)

ಶ :

ಶರಣ ತತಿಗಿಲ್ಲೆನ್ನದುಪ್ಪರಗುಡಿಯನೆತ್ತಿ [ಪು ೪೪] (ಕ)

ಸೋಮಕ ಶ್ರೀಜಯ ಪ್ರಮುಖ ನಾಯಕರ್ [ಪಂಭಾ ೧೧–೩೯] (ತ್ರಿ)

ಗಗನದೊಳ್ಮಶಿಯೊಗೆವ ತೆಱದಿನೊಗೆದಂ [APGS.ix-೨೩] (ರೆ)

ಶಿವಕೋಟ್ಯಾಚಾರ್ಯರ್ಪೇೞ್ದ ವಡ್ಡಾರಾಧನೆಯ ಕವಚವೆಂಬದಿಕಾರಉ [ವಡ್ಡಾ. ಅಂತ್ಯಪ್ರಶಸ್ತಿ] (ರೇವಾ)

ಷ:

ಶ್ರೇಯಂ ಶ್ರೇಯಂ ದ್ವಿಷದವಸಾಯಕ [ಕಾಲೋ ೫೪೯] (ಪ)

ಕೊ[ಲ್ವ]ಳ್ವ ಭೀಷುವಾದುವು [ಸೂಕ್ತಿ ೮–೨೬೭] (ಭೀಕ್ಷು)

ಸ :

ಬೀಸುವೊಂದೆಲರೆ ಬೀಸುವುದಾಗಿರೆ [ಪಂಭಾ ೨–೧೫] (ಗು)

ಕಾಟ್ಟಿಬ್ಬಂಗಳಂ ಬಂಟಸಾಮಿಗಳಂ ಕೇಳಿಸಿ [ಸೂಕ್ತಿ ೧–೫೦] (ನಾ)

ಬುದ್ಧಿಯೊಳು ಸಿದ್ಧಿಯೊಳು ವಿವರಮಂ ಕಾಣದೆ [ಸೋಚಾ ೩–೪೬] (ನಿದ್ದೆ)

ಸಿಡಿವ ಸೀರ್ಮುತ್ತುಗಳೋ ತಡೆಯದೆ ವಿಚಾರಿಸೆನೆ ತಾರಾಳಿಯೆಸೆದುವು [ಹಕಾ ೩–೮೯] (ನೀ)

ಮಿಸುಗುವ ತರಂಗದ ನಿಜೆಯ ನಿಜೆಗೆಗಳ [ಪ್ರಲೀ ೩-೫೦] (ನು)
ಪದ್ಮಸದ್ಮೆಯಂ ಸರಸ್ವತಿಯಂ ಪೂಜಾಪೂರ್ವಕಮಧಿವಾಸಿಸಿ [ಆದಿ ೮-೫೮೧] (ಪ)
ಮೃಗವೆಂದು **ಸಾ**ರ್ದು ನೆಱನಂ ನಡೆ ನೋಡಿ (ಪಂಭಾ ೧-೧೧೧) (ಪಾ)
ಆದಿಮಯ್ಯನ ಜಸಂ **ಸು**ಳಿಯತೊಡಗಿತ್ತಿಳೆಯೊಳು [ಸೋಚಾ ೫-೬೬] (ಪು)
ಸೂಡಿದ ಬಾಸಿಗಮಾಗಳಂತೆ ದಳ್ಳುರಿ ತಗುಳ್ದಂದದಿಂ ಕಱದುದು[ಕಕಾ ೨೪೫] (ಪೂ)
ಸೋರ್ಕಾನೆ ಮುಳಿದು ಬೆಳ್ದಾವರೆಯಂ ಮುಱದುದು [ಕಕಾ ೨೪೫] (ಪೊ)
ನುಡಿಯಿಸಿದಂ ತನಗೆ **ಸೋ**ಲ್ತ ವಾಕ್ಕನ್ನಿಕೆಯಂ [ನೇಮ ೨-೩೨] (ಪೋ)
ಪ್ರಕಟ ಪಾಂ**ಸು**ಳಮಾದುದು ಮೇಘಕಾಲದೊಳ್ [ಪಂಭಾ ೭-೨೨] (ಮ)
ಮನೋಭವನ **ಸೃ**ಷ್ಟಿವೊಲಾದುದದೊಂದು ಕಾರ್ಮೊಗಂ [ಸೂಕ್ತಿ ೧೦-೨೧೩] (ವೃ)

ಹ :

ಅತಿಶಯ ಸಮಾಧಿವಾ**ಹ**ಕ ಯತಿಜನ (ನೇಮ ೨-೧೮] (ದ)
ಮಾಂಸಾ**ಹಾ**ರಿಗೆ ಲಿಂಗಸಾಹಿತ್ಯವ ಮಾಡಿದಾತನ ವಂಶಕ್ಷಯವಹುದು
[ಚೆಬವ ೪೦೭] (ಧಾ)
ಸುಂದರತರಂ ಸಮಾ**ಹಿ**ತ [ಕಮಾ ೨-೭೩] (ಧಿ)

ಳ :

ದಾಳಿಕಾಱಂಗೆ ಧರ್ಮವುಂಟೆ ? ಕಂಗಳಿಗೆ ಕರು**ಳು**ಂಟೆ ? [ಅವ ೧೩೪] (ವು)

ಱ :

ಮಿಂದೆ**ಱೆ**ಯುಪನಾ**ಱೆ**ದಪ್ಪನಸಗಂ ಮಡಿದಾರನೆ [ಸೂಕ್ತಿ ೮-೧೩೪] (ಡಿ)
ಒ**ಱೆ**ಯಾವಿನ ಹಾಲನಾರಯ್ಯ ಕಱೆವರು [ಅವ ೩೬೫] (ದೆ)
ಕೊಳನ ತಡೆಯಲೊಂದು ಹೊ**ಱ**ಸು ಕುಳ್ಳಿರ್ದಡೇನು ಕಳಹಂಸಿಯಾಗಬಲ್ಲುದೆ
[ಬವ ೯೮] (ಲ)
ನೆ**ಱೆ**ಯಱಿತು ಮಱೆಯಬಲ್ಲಡೆ (ಶಿವ ೩೪೯] (ಲೆ)
ಕೊಳನೆ ಪೊಕ್ಕುಱು, ಕೆ**ಱೆ** ಕಣ್ [ನೇಮ ೨-೬೩] (ಱೆ)

ೞ :

ಪ**ೞ**ಂಗಾಸಿನ ಪೊನ್ನ ಪುಂಜಿಯವೊಲ್ [ಪಂಭಾ ೩-೯೧] (ದಂ)[೩೬]
ಮಹಾಸತಿಯಿರ್ದ ಮಂಡಲಂ ಬೆಳವುದು, ಬೇಡಿದಂತೆ ಮ**ೞೆ** ಕೊಳ್ವುದು
[ಅಜಿ ೧-೬೫] (ೞೆ)

---

೩೬. 'ಪೞಂಗಾಸು' (ಪ್ರಕ ೪೨-೨) ನೋಡಿರಿ.

ಅಭ್ಯಾಸ ಇನ್ನೂ ವ್ಯಾಪಕವಾದಂತೆ, ಸೂಕ್ಷ್ಮವಾದಂತೆ ಇಂಥ ನೂರಾರು ಉದಾಹರಣೆಗಳು ಸಿಕ್ಕು, ನಮ್ಮ ಲಿಪಿಕಾರರು ಭ್ರಾಂತಿಸಿಕೊಂಡ ಅಕ್ಷರಗಳಾವುವು ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

* * *

ಇನ್ನು ಒತ್ತುಗಳ ಸಾದೃಶ್ಯಗಳನ್ನು ನೋಡಬಹುದು. ಕನ್ನಡದ ಕೆಲವು ಒತ್ತುಗಳು ಒಂದು ಇನ್ನೊಂದನ್ನು ಹೋಲುತ್ತವೆ. ಕೆಲವಕ್ಕೆ ನಿರ್ದಿಷ್ಟ ಏಕರೂಪವಿಲ್ಲ. ಹೀಗಾಗಿ ಒಂದು ಒತ್ತು ಇನ್ನೊಂದು ಒತ್ತಿನ ಭ್ರಮೆಯನ್ನು ಹುಟ್ಟಿಸುತ್ತದೆ. ಉದಾ :

ನೆಗೆದಹಿಗೃಹಮಂ ಪೀರ್ದು [ನೇಮಿ ೫–೮೫] (ಗ್ರ)
ವ್ಯೋಮಗಂಗಾವೃತ ಜಟಾರಾಮ ಸೋಮಯ್ಯ [ಸೋಚಾ ೧–೨] (ವ್ಯ)
ಕುಜಿತು ತ್ರಜಿಸಲ್ಗೆ ಬುಧರ್ [ಕಮಾ ೨–೬೮] (ಲ್ಲೆ)
ನದೀ ನದಂಗಳ ಜಲಂಗಳೆ ಕಾಯ್ದೆಸರೆಣ್ಣೆಯಂದದಿಂ ಬಜಿತುವು
[ಸೂಕ್ತಿ ೧೦–೧೨೬] (ಯ್ವೆ)
ಸುಪುಷ್ಪದೃಷ್ಟಿಯನೊಡಂಬಡೆ ತಾಳ್ದಿಯುಂ [ಪಂಭಾ ೧–೧] (ಷ್ಟ)
ಬೇಟ್ಟಿನಿತನೆ ಮಾಡಿ ತೊಟ್ಟು ಕರವೊಪ್ಪಿದಳಾಕೆ [ಪಂಭಾ ೨–೧೬] (ಚೆಲ್ವ)
ಅಭಿಮತ ಶಬ್ದ ಸಂಸ್ಮರಣದಿಂ ಜನಮಂ ತಿಳಿವಂತು ಮಾಡಿ [ಕಾಲೋ ೪೨೩] (ಸ್ಕ)
ಜೀರ್ಣಪರ್ಣ ರವಿರಶ್ಮಿನ್ಯಾಯದಂತೆ [ಅವ ೧೧೬೮] (ರಸ್ನಿ)
ಚಿನ್ಮಯಾರ್ಜಿತ ತತ್ವವೇತ್ತನ [ಬಪು ೨೯–೨ ಅಟಿ] (ನ್ನ)
ಆಳ್ವ ಮುನ್ನಿನ ನೆಲಮಂ ಕೊಟ್ಟು [ಪಂಭಾ ೯–೪೦] (ಳ್ಪ)
ಹರಳಿಗಂ ಕದ್ದೊಯ್ವನೇನಿರ್ದೊಡಂ ತನಗಿಂಬಿಲ್ಲದೆ ಗೆಯ್ವಂ
[ಸೂಕ್ತಿ ೮–೪೫೭] ((ಯ್ಯಂ)
ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳಂ [ಪಂಭಾ ೯–೬೭] (ಳ್ಕೊ)

* * *

ಕೆಲವು ಸಲ ಕನ್ನಡದ ಕಾಗುಣಿತ ಗುರುತುಗಳು ಒಂದು ಅಕ್ಷರಕ್ಕೆ ಇನ್ನೊಂದು ಅಕ್ಷರದ ಭ್ರಾಂತಿಯನ್ನು ಹುಟ್ಟಿಸುತ್ತವೆ. ಉದಾ :

೧. ┘ · > , ೨

ಅ ಇ(ಈ) ಎ (ಏ)

ತೀವಿದ ಬಂಡು ಬಂದು ನೆರೆಯುತ್ತಿರೆ [ಕಕಾ ೬೮] (ಬಿಂ)
ಗುಹೇಶ್ವರ ನಿಮ್ಮ ಪೂಜಿಸಿ ಸಾವಡೆ ನಿಮ್ಮಿಂದ ಹೊಜಿಗಣ ಜವನೆ ಸಾಲದೆ
[ಅವ ೬೬] (ಜೀ)

ನೊರೆಯಿವಲ್ಲವು ತಳ್ತ ಶಂಖದ ಬಳ್ಳಗಳ್ [ಸೂಕ್ತಿ ೨-೩೨] (ವೆ)

('ಅ' ಗುರುತು 'ಏ' ಗುರುತಿನ ಭ್ರಾಂತಿ ಹುಟ್ಟಿಸಬಹುದು)

೨. ಾ > ು ೋ ೌ ಂ

ಆ ಊಊ ಒ(ಓ) ಔ

ಕಾಲದಿಂದೆ ಸವೆದಡೆ ಲಿಂಗಪ್ರಾಣಿಯಲ್ಲ [ಚೆಬವ ೧೨೬೭] (ಕು)

ಮಾಜಿಂಕನಿಜೆವಲ್ಲಿ ಘಾಯ ಕಂಡಿಯ ತೋಜೆದಾತನೆ ತೆತ್ತಿಗೆ

[ಗೂಶೂಈ ೧೧೧] (ಮೂ)

ನಾಲಗೆಯ ರುಚಿಯ ನಾಣಕ್ಕೆ ತಂದು [ಬವ ೧೦೬೭] (ನೊ)

ಕರ್ಮವೆಂಬ ಗಂಡನ ಬಾಯ ಟೊಣೆದು ಹಾದರವನಾಡುವೆನು ಹರನ ಕೂಡೆ

[ಅಕ್ಕ ೨೮೩] (ಹೋ)

ಚಾರಬೀಜ ಎಂಬತ್ತು ಖಂಡುಗ [ಬವ ೧೦೬೭] (ಚೌ)

ಅಧಮರಾ ಪೊಲ್ಲ ಮಾನಸರಾ ದುರ್ಜನರಾ ಜಾರಜಾತರಾ

[ವಡ್ಡಾ ೮-೧೪ ಗ] (ರಂ)

೩. ಿ > ು ೆ

ಇ(ಈ) ಅ ಉ ಎ(ಏ)

ಕಲ್ಲ ಹೊಕ್ಕಡೆ ಕಲ್ಲ ಬಿರಿಸಿದೆ [ಅಕ್ಕ ೨೧] (ಬ)

ಕುಸುಮಾಸ್ತ್ರನಿದಿರಿನ ಕುಜೆಗಳೆನಿಸುವ ನೋಟಕರ [ಪ್ರಲೀ ೪-೩೨] (ತುಋ)

('ಈ' ಗುರುತು 'ಉ' ಗುರುತಿನ ಭ್ರಾಂತಿ ಹುಟ್ಟಿಸಬಹುದು).

ತೂಜಿಕೊಂಡ ಜೋಳದಂತಿರೆ ಪಡಲ್ವಡಿಸಿದಾಗಳ್ [ಪಂಭಾ ೧೧-೯೩ಗ] (ಜಿ)

('ಇ' ಗುರುತು 'ಏ' ಗುರುತಿನ, 'ಈ' ಗುರುತು 'ಎ' ಗುರುತಿನ ಭ್ರಾಂತಿ ಹುಟ್ಟಿಸಬಹುದು).

ಕೀಳು ಮಾಂಸದ ಸವಿಗೆ ಗಂಟಲಗಾಳವನು ಮಿಗೆ ಕಚ್ಚಿ [ಪ್ರಲೀ ೧೩-೭೧] (ಕೇ)

೪. ು > ಾ ಿ ಂ

ಉ ಆ ಇ(ಈ)

ಪ್ರಸಾದದ ಮದ್ದನಿಕ್ಕಿ ಸಲಹು ಕೂಡಲಸಂಗಮದೇವ [ಬವ ೩೮೭] (ಹಾ)

ಸುಯೋಧನನಲ್ಲಿ ನೂರ್ವರುಂ ತನ್ನನುಜರ್ಕಳ್ ಸಾಯೆ ಬಾಬ್ವುದಂ ನಂಬಿದಿರೆ

[ಪಂಭಾ ೧೩-೧೬] (ಬ್ಬಿ)

('ಉ' ಗುರುತು 'ಈ' ಗುರುತಿನ ಭ್ರಾಂತಿ ಹುಟ್ಟಿಸಬಹುದು).

ಕುಡುವೋಲಗಮೆಂದು [ನೇಪು ೫-೨ ಗ] (ಕಂ)

೫. ು > ೊ ಂ

ಊ ಒ(ಓ)

ಸೂನೆಗಾಱನ ಮನೆಯಲ್ಲಿ ಹೆಣ ಹೋಗಿ ಅಳುವಂತೆ [ಅವ ೧೨೨] (ಸೊ)

ಆವಳ ಕಯ್ಯ ಪುಸ್ತಕದೊಳಿರ್ಪುವು ಲೋಕದ ಸಾರ**ಸೂ**ಕ್ತಿಗಳ್ [ಸೂಕ್ತಿ ೧-೬] (ಸೋ)

ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೇ ? [ಶಿವ ೩೮೮] (ತುಂ)

೬. ೆ > ಿ ು

ಎ(ಏ) ಅ ಇ(ಈ) ಉ

('ಎ' ಗುರುತು 'ಅ' ಗುರುತಿನ ಭ್ರಾಂತಿ ಹುಟ್ಟಿಸಬಹುದು)

ಮಱು**ಜೀ**ವಣಿಯ ಹೆಣ್ಣ ಮೆದ್ದು ಮರಣವಾಯಿತ್ತ ಕಂಡೆ [ಅವ ೪೫೬] (ಜ)

ಸ್ಮರವೀರನ ಮಸೆದ **ಸೆಂ**ಡುಗೋಲ್ [ಸೂಕ್ತಿ ೧೦-೮] (ಸಿಂ)

('ಎ' ಗುರುತು 'ಈ' ಗುರುತಿನ ಭ್ರಾಂತಿ ಹುಟ್ಟಿಸಬಹುದು)

ಈ ಒಡಲಬ್ಬೆ ಪೇಟಿಮನ**ಗೇಂ** ಕಲ್ಪಾಂತರ ಸ್ಥಾಯಿಯೇ [ಪಂಭಾ ೯-೮೪] (ಗಿಂ)

ನೆರೆ ಪಱೆದೋಡೆ **ಕೇ**ರಿ ಪೊಱಗಿಕ್ಕೆ [ಸೂಕ್ತಿ ೮-೪೬೩] (ಕೀಜೆ)

ಮುದ್ದಿಂ ಮರುಳಾಗದ **ಹೆಣ್ಣೆ** ಮರುಳಿಳಾಮಂಡಳದೊಳ್ [ಸೂಕ್ತಿ ೭-೨೧] (ಣ್ಣು)

('ಏ' ಗುರುತು 'ಉ' ಗುರುತಿನ ಭ್ರಾಂತಿಗೆ ಕಾರಣವಾಗಬಹುದು)

೭ ೈ > ೃ ್ಯ

ಐ ಋ ಕಾರದ ಒತ್ತು ಯಕಾರದ ಒತ್ತು

(ಇವುಗಳಿಗೆ ಉದಾಹರಣೆ ಸಿಗಲು ಸಾಧ್ಯವಿದೆ).

೮. ೊ > ಾ ು ೂ

ಒ(ಓ) ಆ ಉ ಊ

ಕುಡಿಗೈಗಳಿ**ನೊ**ಯ್ದು ತಂದು [ಸೂಕ್ತಿ ೩-೧೭೩] (ನಾ)

ನಡು **ಕೋ**ಲ್ವರಂ ನಟ್ಟ ಕೂರ್ಗಣೆಗಳಂ [ಪಂಭಾ ೧೨-೭೪ ಗ] (ಕಾ)

ಮೃಗಲಕ್ಷ್ಮಂ ಸಂಜೆಗೆಂಪಂ **ಪೊ**ದೆದುದಯಿಸಿ [ಸೂಕ್ತಿ ೮-೨೪೫] (ಪುದಿ)

('ಓ' ಗುರುತು 'ಉ' ಗುರುತಿನ ಭ್ರಾಂತಿ ಹುಟ್ಟಿಸಬಹುದು).

ತಮ್ಮ **ತೊಂ**ತಗವಿತೆ ತೂಂಬನುರ್ಚಿ [ಹಕಾ ೧-೨೯] (ತೂ)

ಯಮಸುತನುಂ ಸುರೇಂದ್ರಸುತನುಂ.......ಮುಕ್ಕಿ **ತೋ**ಱರೇ[ಪಂಭಾ ೪-೭] (ತೂ)

೯. ೌ > ಾ

ಔ ಆ

ಹಿಂಡೆದ್ದ ವನಿತೆಯರ **ಸೌ**ರಂಭ ಸಹಿತೆ [ಸೋಚಾ ೪-೧೮] (ಸಾ)

೧೦. ೯ > ಲಿ, ಂ, ಃ

ಹೊಱಗಣೆಲೆಯನೆ **ಮೇ**ದುವು [ಬವ ೫೯೬] (ಮೆಲಿ)

ಕೊಳದೋಳಗೇನಂ ನೋೞ್ಪೆಗ [ಕಮಾ ೧-೮೯] (ಗೆಂ)

ಪ್ರಮಿತಗ್ರಾಮ್ಯೋಜಸ್ವೀ [ಕಮಾ ೨-೫೪] (ಸ್ವಿಃ)

೧೧. ೦ > ರ್, ರಿ, ಲಿ, ಾ

ನಿಮ್ಮಿರ್ವರ ದೊರೆಗಂ ಬಗೆವೊಡಗ್ಗಳಂ ನರರೊಳರೇ [ಪಂಭಾ ೧೨-೧೨೩] (ಳರ್)

ತಳದ ಬೇರಂ ಬಲ್ಲವಂಗೆಲೆಯನಱುಪುವರೆ[ಹಕಾ ೮-೩೮] (ರಿ)

ಇಂಗಡಲಣುಗನ ಕೂಡಿದ ಪತಂಗನು ತಾಮಸ ದಿವಸವ ಮಱೆದಂತೆ

[ಚೆಬವ ೧೦೫೭] (ಇಲಿ)

ಪೋಲ್ತುದು ವಾರಿಧಿ ವಾರಿಜಾಕ್ಷನಂ [ಸೂಕ್ತಿ ೨-೨೬] (ನಾ)

೧೨. ಃ > ರಿ

ವಾಃ ಪ್ರವೇಶಮನಾಲೇಪನ ಕಂಪಮಂ [ಸೂಕ್ತಿ ೧೨-೧] (ವಾರಿ)

೨. ಅಕ್ಷರಗಳ ಧ್ವನಿಸಾದೃಶ್ಯ : ಅಕ್ಷರದ ಒಂದು ಮುಖ ರೂಪವಾದರೆ, ಇನ್ನೊಂದು ಮುಖ ಧ್ವನಿ. ಈ ವರೆಗೆ ನೋಡಿದ ರೂಪಸಾದೃಶ್ಯವುಳ್ಳ ಅಕ್ಷರಗಳಂತೆ ಧ್ವನಿಸಾದೃಶ್ಯವುಳ್ಳ ಅಕ್ಷರಗಳನ್ನೂ ತಪ್ಪಾಗಿ ನಕಲುಗೊಳಿಸಿದುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಸ್ವರ ಮತ್ತು ವ್ಯಂಜನ ಎರಡರಲ್ಲಿಯೂ ತೋರಿಬರುವ ಈ ಪ್ರಕ್ರಿಯೆಯನ್ನು ಹೀಗೆ ವಿವರಿಸಬಹುದು.

(ಅ) ಯಶ್ರುತಿ : ಇ ಈ ಸ್ವರಗಳ ಸ್ಥಾನದಲ್ಲಿ ಕೆಲವು ಸಲ 'ಯಿ' 'ಯೀ' ವ್ಯಂಜನಗಳೂ, ಎ ಏ ಸ್ವರಗಳ ಸ್ಥಾನದಲ್ಲಿ 'ಯ' 'ಯೆ' / 'ಯೇ' ವ್ಯಂಜನಗಳೂ ಎಡೆ ಪಡೆಯುತ್ತವೆ. ಇದಕ್ಕೆ 'ಯಶ್ರುತಿ' ಎಂದು ಹೆಸರು, ಉದಾ:

ಇ : ಇದಿರೊಳಾದಯ್ಯ ಗೀದಯ್ಯನೆಂಬಂ [ಸೋಚಾ ೪-೫೭] (ಯಿ)

ಇಟ್ಟ ಕತ್ತುರಿಯ ತಿಳಕದ [ಸೂಚಾ ೨-೮೨] (ಯಿ)

ಈ : **ಈ** ಮುನಿಯ ಚಾರಿತ್ರದೊಳು ಗಂಗೆ ಹುಟ್ಟದಿರಳ್ [ಸೋಚಾ ೩-೨೭] (ಯೀ)

ಈ ವನಂ ಶುಕಪಿಕದ ಜೀವನಂ [ಸೂಚಾ ೨-೮೨] (ಯೀ)

ಎ : ಎದೆಯ ಸೆರೆ ಹಸುರೇಱೆ (ಸೋಚಾ ೧-೭೨] (ಯ)

ಎಳಸಿ ಸಿಂಹದ ಮರಿಯ ಸಾಕುವಾನೆಗಳಂತೆ [ಸೋಚಾ ೨-೭೦] (ಯ)

ಎಳಸಿ ದುರ್ಜನರೊಳಗೆ ಸಜ್ಜನರು ಹೊಕ್ಕು [ಸೋಚಾ ೩-೭೨] ಕ(ಯೆ)

ಎಮಗೆ ಮಲಧಾರಿಸಿದ್ಧಾಂತ ಮುನೀಶ್ವರ [ಆದಿ ೧-೧೩] (ಯೆ)

ಏ : ಏನಿದತಿ ಚೋದ್ಯವೀ ಬಸದಿ [ಸೋಚಾ ೪-೪೪] (ಯೇ)

ಏಗೈದು ಈಸೊಂದು ದನಿಯುಳ್ಳ ಗೂಳಿ [ಸೋಚಾ ೫-೨೪] (ಯೇ)

ಇದಕ್ಕೆ ವಿರುದ್ಧವೆಂಬಂತೆ ಯಕಾರವು ಯ>ಎ, ಯ>ಯೆ, ಯಿ>ಇ, ಯೀ>ಈ, ಯೆ>ಎ, ಯೇ>ಏ – ಇಷ್ಟು ಬಗೆಯ ಭ್ರಾಂತಿಯನ್ನು ಉಂಟುಮಾಡಬಹುದು. ಕೆಲವು ಉದಾ :

ಯತಿಯೆಂಬುದುಸಿರ್ವ ತಾಣಂ [ಕಮಾ ೧–೭೧] (ಎ)

ಯತಿವೇಷದಗಜಾರಮಣನು [ಸೋಚಾ ೩–೨೯] (ಯೆ)

ಪರಮಜಿನೇಂದ್ರವಾಣಿ**ಯೆ** ಸರಸ್ವತಿ [ಆದಿ ೧–೯] (ಯ)

(ಆ) ವಶ್ರುತಿ : ಉ ಊ ವರ್ಣಗಳ ಸ್ಥಾನದಲ್ಲಿ ಕೆಲವು ಸಲ '**ವು**' '**ವೂ**' 'ಒ' ಓವರ್ಣಗಳ ಸ್ಥಾನದಲ್ಲಿ '**ವ**' '**ವೋ**' ಎಡೆ ಪಡೆಯುತ್ತವೆ. ಇದಕ್ಕೆ '**ವಶ್ರುತಿ**' ಎಂದು ಹೆಸರು ಉದಾ :

ಉ : **ಉ**ರಿವುರಿವು ಬಿಸಿಲೊಳಗೆ [ಸೋಚಾ ೩–೦] (ವು)

ಉಳಿಯ ಬಾಯ್ ಖಿಳಿಲೆಂದು ಸಿಡಿಯೆ [ಸೋಚಾ ೪–೪೯] (ವು)

ಊ : **ಊ**ಜಿ ನಡೆನಡೆದು ಕೈಗಳು ಸುಲಿದು ಸುಲಿದು [ಸೋಚಾ ೩–೫೯] (ವೂ)

ಒ : **ಒ**ಂದು ತಿಂಗಳ್ಗೆ ಸೌರಾಷ್ಟ್ರಪತಿ ಸೋಮನಂ [ಸೋಚಾ ೩–೮೯] (ವ)

ಒಪ್ಪಿ ಕರುಡನ ಕೈಯ ಕೋಲು [ಸೋಚಾ ೧–೯೯] (ವ)

ಒಜೆಯಾವಿನ ಹಾಲನಾರಯ್ಯ ಕಜೆವರು [ಅವ ೩೬೫] (ವೊ)

ಒಸೆದು ಜಯವಧು ತೆಗೆದ ನಖರೇಖೆಯಂತೆ [ಸೋಚಾ ೫–೫೪] (ವೊ)

ಓ : **ಓ**ವಿ ಹೀಲಿಯನುಟ್ಟು [ಸೋಚಾ ೩–೧೬] (ವೋ)

ಓರಣದ ತೋರಣದ [ಸೋಚಾ ೨–೨೧] (ವೋ)

ಇದಕ್ಕೆ ವಿರುದ್ಧವೆಂಬಂತೆ ವಕಾರವು ವ>ಒ, ವ>ವೊ, ವು>ಉ, ವೂ>ಊ, ವೊ>ಒ, ವೊ>ವ, ವೋ>ಓ – ಇಷ್ಟು ಬಗೆಯ ಭ್ರಾಂತಿಯನ್ನು ಹುಟ್ಟಿಸಲು ಸಾಧ್ಯವಿದೆ. ಕೆಲವು ಉದಾ:

ವರ ವಸ್ತು **ಸಂ**ಕಲ್ಪವಾ ಪೊತ್ತು [ಸೋಚಾ ೫–೨೧](ವೊ)

ಸಸಿನೆ ಮಾಡು**ವು**ದು ತಿದ್ದು**ವು**ದು [ಸೋಚಾ ಪ್ರಸ್ತಾವನೆ XX](ಉ)

(ಇ) ಋ>ರು: ಈ ಉಭಯ ವರ್ಣಗಳಲ್ಲಿಯ ಧ್ವನಿಸಾಮ್ಯದ ಮೂಲಕ '**ಋ**' ಸ್ವರದ ಸ್ಥಾನದಲ್ಲಿ '**ರು**' ವ್ಯಂಜನ ಬರುವುದುಂಟು.

ನಿನ್ನ ನಚ್ಚಿನ **ಋ**ಷಿಯಗಸ್ತ್ಯನಾಶ್ರಮಂ [ಸೋಚಾ ೧–೪೦](ರು)

ಹಲವು ಬಂಜೆಯರ ನಡುವಣ **ಋ**ತುಪ್ರಭೆಯಂತೆ [ಸೋಚಾ ೪–೧೫](ರು)

(ಈ) ಅಲ್ಪಪ್ರಾಣ–ಮಹಾಪ್ರಾಣ: ಕನ್ನಡ ಸಮಾಜದ ನಾಲಗೆಯ ಮೇಲೆ ಮಹಾಪ್ರಾಣಗಳು ಅಲ್ಪಪ್ರಾಣದಂತೆ ಉಚ್ಚಾರಗೊಳ್ಳುತ್ತವೆ. ಮಹಾಪ್ರಾಣಗಳನ್ನು ಉಚ್ಚರಿಸಿದಂತೆ ಬರೆಯಬೇಕಾದ

ಕನ್ನಡಿಗರು, ಕೆಳಗೆ ಲಂಬ ಗೆರೆ ಎಳೆಯುವ ಮೂಲಕ ರೂಪಗೊಳ್ಳುವ ಮಹಾಪ್ರಾಣಗಳನ್ನು (ಢ, ಧ, ಫ, ಭ) ಮಾತ್ರ ಅಲ್ಪಪ್ರಾಣದಂತೆ ಬರೆಯುತ್ತಾರೆ. ಸಂದರ್ಭ ನೋಡಿ ಅವುಗಳನ್ನು ಮಹಾಪ್ರಾಣದಂತೆ ಉಚ್ಚರಿಸಬೇಕಾಗುತ್ತದೆ. ಉದಾ:

ಢ : ನಿರ್ಮಳಾಂಗ ಪ್ರತ್ಯಾಜೂ**ಢ** [ಸೋಚಾ–೧–೧೦೯](ಡ)

ಕಲಾಪ್ರೌ**ಢಿ** ಸದ್ಗುಣಸ್ತೋಮವೆಲ್ಲಂ ಕೂಡಿ ರೂಪಾದುದು [ಸೋಚಾ ೧–೧೦] (ಡಿ)

ಧ : ಬಂ**ಧು** ಶೋಕದೊಳೆ ಪೊರ್ದಿದ ಬಂ**ಧು** ಜನಕ್ಕೆ [ಗದಾ ೫–೪೯] (ದು)

ಜಯವ**ಧು** ತೆಗೆದ ನಖರೇಖೆಯಂತೆ [ಸೋಚಾ ೫–೫೪] (ದು)

ಫ : ಪತ್ತಿ ಪ್ರಮಾದ**ಫ**ಲಕಮಂ [ಕಮಾ ೨–೩೬] (ಪ)

ಹಂದಿಗೆ ಚಂದವನ ಹೊಸೆ **ಫ**ಲವಾವುದು [ಸೋಚಾ ೨–೬೩] (ಪ)

ಭ : **ಭೇರುಂಡ** ಬಾಯಿವಡೆದಂತೆ ಇಪ್ಪರ ಭಕ್ತರೆಂತೆಂಬೆ [ಚೆಬವ ೭೧೯] (ಬೇರುಂಡು)

ರಸಜೀವ **ಭಾ**ವವೊಡಲರ್ಥವವಯವ [ಸೋಚಾ ೧–೨೦] (ಬಾ)

(ಉ) ಚ, ಜ ವರ್ಣ: ಈ ವರ್ಣಗಳು ಅಕಾರಾಂತ ಎಕಾರಾಂತವಾಗಿರುವ ಸಂದರ್ಭಗಳಲ್ಲಿ ಧ್ವನಿಸಾಮ್ಯ ಭ್ರಾಂತಿಯನ್ನುಂಟು ಮಾಡುತ್ತದೆ. ಉದಾ:

ಪಾವನೀಯ **ಚ**ರಿತನೆನಾದೆಂ [ಕಮಾ ೨–೬೯] (ಚೆ)

ರಾಗದಿಂ ರಣವಿ**ಜ**ಯರೈತಂದು [ಸೋಚಾ ೫–೬೧] (ಜೆ)

ಕೂಡಲ **ಚೆ**ನ್ನಸಂಗಮದೇವ [ಚೆನ್ನಬಸವಣ್ಣನ ಮುದ್ರಿಕೆ] (ಚ)

(ಜೆಕಾರವು ಜಕಾರವಾದ ಉದಾಹರಣೆ ಲಭಿಸಬಹುದು).

(ಊ) ಶ, ಷ, ಸ ವರ್ಣ: ಇಂದಿನ ಬರವಣಿಗೆಯಲ್ಲಿಯೂ ತಲೆದೋರುವ ಈ ವರ್ಣಗಳ ಪರಸ್ಪರ ವ್ಯತ್ಯಾಸಕ್ರಿಯೆ, ಪ್ರಾಚೀನ ಹಸ್ತಪ್ರತಿಗಳಲ್ಲಿಯೂ ಕಂಡುಬರುತ್ತದೆ. ಉದಾ:

ಶ>**ಷ** : ವಸುಧಾವಲಯ ವಿಲೀನ ವಿ**ಶ**ದ ವಿಷಯವಿಶೇಷಂ [ಕಮಾ ೧–೩೬](ಷ)

ಭೂತೇ**ಶ**ನಂ ಲಜ್ಜೆಗೆಡಿಸಿತ್ತು [ಸೋಚಾ ೩–೪೬] (ಷ)

ಶ>ಸ : **ಶೈ**ವಸಮಯಕ್ಕೆರಡು ಕಣ್ಮೂಡುವಂತೆ [ಸೋಚಾ ೪–೬೪] (ಸೈ)

ಶಮಲಕ್ಷ್ಮಿಯ ಮೈಯ ಮೃಗೋದ್ಭವಂ [ನೇಪು ೧–೮೨] (ಸ)

ಷ>ಶ : ದುರ್ಜನರು ಮೆಚ್ಚದಿರಲು ನಾಗಭೂ**ಷ**ಣನ ಕಾವ್ಯಂ ಕೆಡುವುದೆ

[ಸೋಚಾ ೧–೨೫]

(ಶ)

ಯತಿವೇಷದಗಜಾರಮಣನು [ಸೋಚಾ ೩-೩೯] (ಶ)

ಸ>ಶ : ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ **ಸ**ಸಿಗಳಂ [ಪುರ ೫೪] (ಶಶಿ)

ಶಾಸ್ತ್ರವೆಂಬುದು ಸಂತೆಯ **ಸು**ದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ

[ಅವ ೧೬೫] (ಶು)

ಸ>ಷ : ಹಂ**ಸೆ** ರಾಜಹಂಸೆಗಳೆಸೆದುವಾ ವನದೊಳು [ಸೋಚಾ ೨-೮೧] (ಷಿ)

ವಿಸ್ಮಯಂ ಮಿಕ್ಕಾರುಹತರೆಲ್ಲ ಗುಜಗುಜಿಸಿ [ಸೋಚಾ ೪-೩೯] (ಷ್ಮ)

ಕೆಲವು ಸಲ ಇಲ್ಲಿಯ ಒಂದು ಅಕ್ಷರಕ್ಕೆ ಇನ್ನುಳಿದ ಎರಡು ಅಕ್ಷರಗಳು ಕಂಡುಬರುತ್ತವೆ.

ಅರಸ ಬಂದನು ಭಾಗವತಜನ **ಪರುಸ** ಬಂದನು

[ಕುಭಾ, ಉ.೮-೫೮] (ಪರಶು, ಪುರುಷ)

(ಏ) ೞ-ಳ, ಱ-ರ ವರ್ಣ: ಈ ವರ್ಣಗಳಲ್ಲಿ ಕೇಶಿರಾಜನಿಗೆ ಮೊದಲು 'ೞ' ಕಾರವು '**ಳ**'ಕಾರವಾಗಿ, ಕೇಶಿರಾಜನಿಗೆ ತರುವಾಯ 'ಱ'ಕಾರವು 'ರ'ಕಾರವಾಗಿ ಪರಿವರ್ತನಗೊಂಡವು. ಪ್ರಾಚೀನ ಹಸ್ತಪ್ರತಿಗಳಲ್ಲಿ ಇದಕ್ಕೆ ನಿದರ್ಶನಗಳಿದ್ದು, ಜೊತೆಗೆ ಳ ಕಾರವನ್ನು ೞಕಾರದಂತೆ ರಕಾರವನ್ನು ಱಕಾರದಂತೆ ಬರೆದ ಉದಾಹರಣೆಗಳೂ ಸಿಗುತ್ತವೆ. ಉದಾ:

ೞ>**ಳ**: ಪ**ೞ**ಗನ್ನಡಮಂ ಪೊಲಗೆಡಿಸಿ ನುಡಿವರ್ [ಕಮಾ ೧-೪೮] (ಳ)

ಮುತ್ತು **ಮೆೞ**ಸುಂ ಕೋದಂತಿರ್ಕು [ಕಮ ೨-೫] (ಳ)

ಱ>ರ: ವಾಸುಗಿಯುಮ**ಱೆ**ಯಲಾ**ಱ**ದೆ ಬೇಸ**ಱು**ವಂ [ಕಮಾ ೧-೪೬] (ರಿ,ರ,ರು)

ಎರಡಕ್ಕೆ ಬಿಟ್ಟ **ಕಱು**ವಂ ಪೋಲ್ಕುಂ [ಕಮಾ ೨-೯] (ರು)

ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ [ಕಮಾ ೧೦೫೮] (ರು)

ಕೂಸಿನ ತಲೆಯೊಳ್ ಬೆಣ್ಪೊ**ಱೆ**ಯನಿಟ್ಟವೊಲಸುಖಕರಂ [ಕಮಾ೨-೬](ರೆ)

ಳ<ೞ: ಪಳಿಯಂ ಕಟ್ಟಿದೆಯೊ ಭೂಪರನಿಬರ ಕೊರಳೊಳ್ [ಪಂಭಾ ೬-೪೬] (ೞಿ)

ಚೋೞಕುೞ ವಿೞಯಕಾೞಂ

ಕಾೞಾಮುಖ ಪ್ರಾಹಿತೋದ್ಧತಾಹಿತಮಾೞಂ।

ಮಾೞವ ರಾಜಕ ಸೂೞಂ

ಸೂೞಿಯುವ ಚರಣಕಮೞ ಭ್ರಿಂಗಂ ಸಿಂಗಂ (SII XX-80)

(ಈ ಪದ್ಯದ ತುಂಬ ಬಳಸಿದ 'ೞ' ಕಾರಗಳನ್ನು ಗಮನಿಸಬೇಕು)

ರ>ಱ: ಸಿರಿಸರಸ್ವತಿರಂಭೆ ಮೊದಲಾದ ಸುರವನಿತೆ [ಸೋಚಾ ೧-೩೩] (ಱಂ)

ಜಡೆಯ ಮೇಲಣ ಗಂಗೆ ನೀನು ಕೇಳಾ, ತೊಡೆಯ ಮೇಲಣ ಗೌರಿ ನೀನು ಕೇಳಾ"

ಗುಹೇಶ್ವರನೆಂಬ ಲಿಂಗವು ಎನ್ನ ಕೈಯಲ್ಲಿ ಸತ್ತದೆ **ರಂಡೆಗೂಳನುಂಬುದು** ನಿಮಗೆ ಲೇಸೆ

[ಅವ ೨೪೩]

(ಱಂ)

ಹೀಗೆ ಸ್ವರ ಮತ್ತು ವ್ಯಂಜನಗಳಲ್ಲಿಯ ಧ್ವನಿಸಾಮ್ಯತೆ, ಕೆಲವು ಸಲ ಅಕ್ಷರಸ್ಖಾಲಿತ್ಯಕ್ಕೆ ಎಡೆಮಾಡಿಕೊಡುತ್ತದೆ. ಆದುದರಿಂದ ಇವುಗಳ ಧ್ವನಿವೈಶಿಷ್ಟ್ಯವನ್ನೂ ಧ್ವನಿಸೂಕ್ಷ್ಮತೆಯನ್ನೂ ತಿಳಿದಿರಬೇಕಾದುದು ಲಿಪಿಕಾರರ ಕರ್ತವ್ಯ.

೩. **ಬರವಣಿಗೆಯ ರೀತಿದೋಷ:** ಹಸ್ತಪ್ರತಿಗಳನ್ನು ಓದುವಲ್ಲಿ ಎದುರಾಗುವ ಹಲವು ತೊಡಕುಗಳಲ್ಲಿ ಅವುಗಳ ಬರವಣಿಗೆಯ ರೀತಿಯೂ ಒಂದು. ಕನ್ನಡದ ಮಟ್ಟಿಗೆ ಹೇಳುವುದಾದರೆ ಪ್ರಾಚೀನ ಬರವಣಿಗೆಯ ರೀತಿ ಅಥವಾ ಪದ್ಧತಿಯಲ್ಲಿ ಕೆಲವು ಮೂಲಭೂತ ದೋಷಗಳಿವೆ. ಹ್ರಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ ಮತ್ತು ಒತ್ತು ಚಿಹ್ನೆ ಮೊದಲಾದವುಗಳಿಗೆ ಸಂಬಂಧಪಟ್ಟಂತೆ ಅವು ಹೀಗಿವೆ:

(ಅ) ಹ್ರಸ್ವ-ದೀರ್ಘ: ಸ್ವರಗಳ ಮಟ್ಟಿಗೆ ಹ್ರಸ್ವ ಮತ್ತು ದೀರ್ಘಗಳನ್ನು ಪ್ರಾಚೀನರು ಶುದ್ಧವಾಗಿಯೇ ಬರೆಯುತ್ತಾರೆ. ವ್ಯಂಜನಗಳಲ್ಲಿ ದೀರ್ಘ ಎರಡು ಬಗೆಯಾಗಿದೆ, ಒಂದು: ಅಕ್ಷರದ ಅಂಗವಾಗಿ ಬರುವ ದೀರ್ಘ (ಉದಾ: ಮಾ). ಇದು ಪ್ರಾಚೀನ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಶುದ್ಧರೂಪದಲ್ಲಿ ಬರೆಯಲ್ಪಡುತ್ತದೆ (ಮಾವು). ಇನ್ನೊಂದು : ಅಕ್ಷರದ ಹೊರಗೆ ಬರುವ ದೀರ್ಘ (ಉದಾ: ಬೇ). ಇದು ಪ್ರಾಚೀನ ಹಸ್ತಪ್ರತಿಗಳಲ್ಲಿ ಶುದ್ಧವಾಗಿ ಬರೆಯಲ್ಪಡುತ್ತಿರಲಿಲ್ಲ (ಬೆವು>ಬೇವು). ಇಂಥ ಅಶುದ್ಧಗಳನ್ನು ಸಂದರ್ಭ ಬಲದಿಂದ ಅರಿಯಬೇಕಾಗುತ್ತದೆ. ಇದು ಕಾಣುವುದು ಈ ಏ ಓಕಾರಂತ ವ್ಯಂಜನಗಳಲ್ಲಿ ಮಾತ್ರ. ಉದಾ:

ಈ : ಕಾಲಾಗ್ನಿಯಂ **ಕೀಡಿ** ಸುತ್ತುವಂತೆ [ಪಂಭಾ ೧೨-೧೧೮ ಗ] (ಕಿಡಿ)

ತಿರುನಾಳ **ಬೀಯಕ್ಕೆ** ಕೊಡದ ದೇವರ ಪುರಕೆ [ನಂಬಿ ೭೮] (ಬಿಯಕ್ಕೆ)

ಏ : **ಮೇಲ್ವಾಡುಂ** ರೂಢಿಯ ಬೆದಂಡೆಗಬ್ಬಮುಂ [ಕಾಲೋ ೯೫೪] (ಮೆಲ್ವಾಡು)

ನಿಂದರೇಂ ತಪ್ಪುದೊ ಪೇಟಿಮಯ್ಯ ನೊಸಲೊಳ್ ಬರದಕ್ಕರಮಾ ವಿಧಾತ್ರನಾ

[ಪಂಭಾ ೧೩-೧೯] (ನಿಂದರೆಂತಪ್ಪುದೊ)

ಓ : ಕಹಿ **ಸೋರೆಯ** ಕಾಯ ತಂದು ವಿಭೂತಿಯ ತುಂಬಿದೊಡೆ ಸಿಹಿಯಾಗದೆ ಮೂಱು ದಿವಸಕ್ಕೆ [ಬವ ೭೩-ಬಸವನಾಳ](ಸೊರೆ)

ಬಸವನ **ಕೋಡನ**ಣಕಿಸಿ ಮಾರಯಂ ಮೇಱಿದ [ಬಮು ೨೯-೦] (ಕೊಡನ)

(ಆ) ಅಲ್ಪಪ್ರಾಣ–ಮಹಾಪ್ರಾಣ: ಕನ್ನಡ ಲಿಪಿಯಲ್ಲಿ ಮಹಾಪ್ರಾಣ ಎರಡು ತೆರನಾಗಿದೆ. ಒಂದು: ಅಕ್ಷರದ ಅಂಗವಾಗಿ ಬರುವ ಮಹಾಪ್ರಾಣ (ಖ, ಘ, ಛ, ಝ, ಠ, ಥ). ಪ್ರಾಚೀನ ಕಾಲದಲ್ಲಿ ಇದು ಸಾಮಾನ್ಯವಾಗಿ ಶುದ್ಧರೂಪದಲ್ಲಿ ಬರೆಯಲ್ಪಡುತ್ತದೆ (ಖಳ). ಇನ್ನೊಂದು ಕೆಳಗೆ ಲಂಬ ಗೆರೆ ಎಳೆಯುವುದರಿಂದ ರೂಪಗೊಳ್ಳುವ ಮಹಾಪ್ರಾಣ (ಢ, ಧ, ಫ, ಭ). ಪ್ರಾಚೀನ ಕಾಲದಲ್ಲಿ ಇದು ಶುದ್ಧವಾಗಿ ಬಳಸಲ್ಪಟ್ಟಿಲ್ಲ, (ಸಪಲ < ಸಫಲ). ಉದಾಹರಣೆಗಳಿಗಾಗಿ ಪುಟ ೮೯–೯೦ ನೋಡಬಹುದು.

(ಇ) ಒತ್ತು ಚಿಹ್ನೆ: ಕನ್ನಡದ ಕೆಲವು ಪ್ರಾಚೀನ ಒತ್ತು ಅನೇಕ ರೂಪಗಳಲ್ಲಿ ಸಿಗುತ್ತವೆ. ಉದಾ: ್ಮ ಮತ್ತು ್, ್ಯ ಮತ್ತು ಲ. ಅಲ್ಪಪ್ರಾಣಗಳ ಸಜಾತಿಯ ದ್ವಿತ್ವವು ಮಹಾಪ್ರಾಣದ ಬಳಕೆಯಿಂದ ಮತ್ತು ಕೆಳಗೆ ಚುಕ್ಕೆ ಇಡುವಿಕೆಯಿಂದ (ದಿಠ<ದಿಟ್ಟ, ದಿಟ<ದಿಟ್ಟ), ಮಹಾಪ್ರಾಣದ ಸಜಾತಿಯ ದ್ವಿತ್ವವು ಕೆಳಗೆ ಚುಕ್ಕೆ ಇಡುವಿಕೆಯಿಂದ (ಲೆಖ<ಲೆಖ್ಖ) ಸೂಚಿತವಾಗುತ್ತವೆ. ಅನುನಾಸಿಕದ ಹಿಂದೆ ಬಿಂದುವನ್ನಿಟ್ಟು ಪೂರೈಸಬಹುದಾದ ದಿತ್ವಕಾರ್ಯವನ್ನು (ಅಂಣ, ತಂಮ) ಅಜ್ಞಾನ ಕಾರಣವಾಗಿ ಅನುನಾಸಿಕವಿಲ್ಲದಲ್ಲಿಯೂ ಇಟ್ಟು ಪೂರೈಸುತ್ತಾರೆ. ಉದಾ: ಸುಮತಿಯೆಂಬ **ಹತ್ತಿ**ಯ ಕೊಂಡು .... ದೃಢವೆಂಬ ಬತ್ತಿಯ ತೀವಿ

[ಚೆಬವ ೧೧೮೬] (ಹಂತಿ)

ಕಬ್ಬಿಸಿಲುಂಡ ಅರಸಿನದಂತೆ ..... ಇಪ್ಪ ನಿಲವು [ಶಿವ ೩೪೫] (ಕಂಬಿ)

ಕಡ್ಡುವಂದ ದೊಡ್ಡರೆಲ್ಲಂ ಮುಸುಟೆ[ಪಂಭಾ ೩–೬೧ ಗ] (ಕಂಡು)

ಕಾಳ್ಗಬ್ಬಂಗಳಂ **ಬಟ್ಟ**ಸಾಮಿಗಳಂ ಕೇಳಿಸಿ [ನೇಮಿ ೧–೩೫] (ಬಂಟ)

ಪುಷ್ಪ**ದತ್ತಾ**ಖ್ಯನನಿಳೆಯಜೆಯಲ್ [ನಂಬಿ ೧] (ದಂತಾ)

ಕಲ್ಲ ತಾಗಿದ **ಮಿಟ್ಟೆ**ಯಂದದಲೆಲ್ಲ ಮುರಿದುವು [ಪ್ರಲೀ ೧೩–೩೩] (ಮಿಂಟೆ)

ಪ್ಯಾಟೆ **ಸುಬ್ಬಣ್ಣ** ಬರೆದ ಪ್ರಹ್ಲಾದಚರಿತ್ರೆ [ಮೈ II ೯೮೦] (ಸುಂಬಂಣ)

ಕೆಲವು ಸಲ ಇದಕ್ಕೆ ವ್ಯತಿರಿಕ್ತವಾಗಿ ಬಿಂದುವಿರಬೇಕಾದಲ್ಲಿ ಒತ್ತು ಕೊಟ್ಟುದೂ ಉಂಟು. ಉದಾ:

ಹಾವಿನ **ಡೊಂಕು** ಹುತ್ತಕ್ಕೆ ಸಸಿನ [ಬವ ೧೪೪] (ಡೊಕ್ಕು)

(ಈ) ಲಿಪಿಯ ಅನೇಕರೂಪತೆ: ಕನ್ನಡ ಹಲವು ಅಕ್ಷರಗಳು ಪ್ರಾದೇಶಕವಾಗಿ ಬೇರೆ ಬೇರೆ ರೂಪಗಳಲ್ಲಿ ಬರೆಯಲ್ಪಟ್ಟುದು ಹಸ್ತಪ್ರತಿಗಳಲ್ಲಿ ಕಂಡುಬರುತ್ತದೆ. ಉದಾ: ಆ–ಅ, ಮೀ–ಮಿೂ, ಯಿ–ಯೊ, ಕೈ–ಕೆ. ಈ ವಿಭಿನ್ನ ರೂಪಗಳು ಕೆಲವರಿಗೆ ಬೇರೊಂದಕ್ಷರದ ಭ್ರಾಂತಿಯನ್ನುಂಟುಮಾಡಬಹುದು. ಕೆಲವು ವೇಳೆ ಬಿಂದುವನ್ನು ಮೇಲೆ ಇಲ್ಲವೆ ಮಗ್ಗಲು ಬಳೆಸುವುದುಂಟು (ಸ೦ತೆ>ಸಂತೆ). ಇದರಿಂದಲೂ ಪದವನ್ನು ತಪ್ಪಾಗಿ ಓದುವ ಸಂಭವವುಂಟು.

(ಉ) ಪದವಿನ್ಯಾಸ ಮತ್ತು ವಿರಾಮಚಿಹ್ನೆ: ಅರ್ಥವಾಗುವಂತೆ ಪದಗಳನ್ನು ಬಿಡಿಸಿ ಕೂಡಿಸಿ ಬರೆಯುವುದು ಪ್ರಾಚೀನ ಕಾಲದಲ್ಲಿ ಅಚ್ಚುಕಟ್ಟಾಗಿ ಪಾಲಿಸಲ್ಪಟ್ಟಿಲ್ಲ. ವಿರಾಮಚಿಹ್ನ ರೂಪದ ದಂಡವನ್ನು

ಕ್ವಚಿತ್ ಬಳಸಿದ್ದರೂ ಶುದ್ಧ ಬಳಕೆ ಕಂಡುಬರುವುದಿಲ್ಲ. ಹೆಸರಿಸದೆ ಮತ್ತು ಚರಣ ಮುರಿಯದೆ ಪದ್ಯಗಳನ್ನು ಬರೆದುದುಂಟು. ಇದರಿಂದ ಪದಗಳನ್ನು, ವಾಕ್ಯಗಳನ್ನು ತಪ್ಪು ಅರ್ಥ ಬರುವಂತೆ ಓದಲು ಸಾಧ್ಯವಿದೆ. ಉದಾ:

೧. ಸಾಕು ಕೌರವನಾಯಮಾತನದೇಕೆ ಚಿತ್ತೈಸುವಿರಿ? [ಕುಭಾ.ಉ.೨-೪೧)

ಸಾಕು ಕೌರವ ನಾಯಮಾತನದೇಕೆ ಚಿತ್ತೈಸುವಿರಿ?

೨. ರೀತಿ, ವಿನೂತನವಸ್ತುಕೃತಿಗೊಪ್ಪುವ ಮೆಯ್ (ಕಾಲೋ ೭೮೦)

ರೀತಿ, ವಿನೂತನವಸ್ತು, ಕೃತಿಗೊಪ್ಪುವ ಮೆಯ್

೩. ಮೇರು, ಗುಣವನಜಿಸುವುದೆ ಕಾಗೆಯಲ್ಲಿ? (ಬವ ೬೭)

ಮೇರುಗುಣವನಜಿಸುವುದೆ ಕಾಗೆಯಲ್ಲಿ?

೪. ಆಳ್ದನ ನಂಟರತ್ತಣಿಂದವದಳಮಾಯ್ತು ಪೊಯ್ತು ರವಣಂ (ಶಮದ ೧೨೬)

ಆಳ್ದನ ನಂಟರತ್ತಣಿಂದವದಳಮಾಯ್ತು ಪೊಯ್ತುರವಣಂ

೫. ನೆತ್ತಮನಾಡಿ ಭಾನುಮತಿ, ಸೋಲ್ತಡೆ ಸೋಲಮನೀವುದೆಂದು ಕಾಡುತ್ತಿರೆ [ಪಂಭಾ ೯-೬೯]

ನೆತ್ತಮನಾಡಿ ಭಾನುಮತಿ ಸೋಲ್ತಡೆ, ಸೋಲಮನೀವುದೆಂದು ಕಾಡುತ್ತಿರೆ

೬. ಮಾತಿನಂತುಟಲ್ಲ ಶಿವಾಚಾರದ ಸರಿದೊಡಕು ಕಾಣಿರಣ್ಣ [ಅವ ೫೦೦]

ಮಾತಿನಂತುಟಲ್ಲ ಶಿವಾಚಾರ ದಸರಿದೊಡಕು ಕಾಣಿರಣ್ಣ

ಇಲ್ಲಿ ಬಿಡಿಸಿ ಕೂಡಿಸಿ ಬರೆದ ಪದಗಳಿಂದಾಗಿ ಅರ್ಥವ್ಯತ್ಯಾಸವಾಗುವುದನ್ನು ಗಮನಿಸಬೇಕು. ಇದಕ್ಕೆ ಅಕ್ಷರಸಾದೃಶ್ಯ, ಅನ್ಯಥಾಜ್ಞಾನ ಇತ್ಯಾದಿಗಳಿಂದುಂಟಾದ ಪಾಠಾಂತರಗಳು ಕೂಡಿದರಂತೂ ಅರ್ಥ ಇನ್ನೂ ಹದಗೆಡುತ್ತದೆ. ಉದಾ:

ಕೆಂದಿದ ಮೀ**ನಂ ತಳ್ತಾಡ**ದಿರ್ದ ಮಡವಂ ಪೊಲ್ತಂ [ಪಂಭಾ ೮-೧೩] (ನಂತಳ್ಕಾಡ)

ಭಾನುವೆ ಸಾಲದೆ **ಪಗಲೆನಿತಾನುಂ** ದೀವಿಗೆಗಳುರಿದೊಡೇಂ ನಂದಿದೊಡೇಂ

[ಪಂಭಾ ೧೩-೧೧] (ಪಗಲೆನೆ ತಾನುಂ)

ವೆಂಗಿ **ವಿಷಯಮಂ ತ್ರಿಕಳಿಂಗಂ**] ಬೆರಸೊತ್ತಿಕೊಂಡು [ಪಂಭಾ ೧-೨೧]

(ವಿಷಯ ಮಂತ್ರಿಗಳಿಂ, ವಿಷಯ ಮಂತ್ರಿಗಳಿಂದಂ)

ಅನಲಂ ಪರ**ಸುತ್ತುಮಾಲಯ**ಕ್ರೀಡೆಯೊಳ್ [ಪಂಭಾ೫-೮೫]

(ಸುತ್ತೆ ಮಾಲೆಯ, ಸುತ್ತ ಮಾಲೆಯ)

ತನು ಅಲ್ಲಮನಲ್ಲಿ ಸಿಲುಕಿತ್ತು [ಬವ ೯೯೧] (ತನುವೆಲ್ಲಾ ಮನದಲ್ಲಿ)

ಶ್ರೀಗಿರಿಜಾಸ್ಯಾಂಬುಜ ದಿನನಾಯಕ [ಕುಸಾ ೧೮೫]

(ಶ್ರೀಗಿರಿಜೇಶ್ವರ ಭುಜದಿಂದ ನಾಯಕ, ಶ್ರೀಗಿರಿಜಾ ಶಂಭು ಜಗದೀಶ ನಾಯಕ, ಶ್ರೀ ಗಿರಿಜಾಧೀಶ ಶಂಭುವಧಿನಾಯಕ)

ಇನ್ನು ಪದ್ಯಗಳನ್ನು ಹೆಸರಿಸದೆ, ಚರಣಗಳನ್ನು ಮುರಿಯದೆ, ದಂಡ ಬಳಸದೆ ಬರೆದುದಕ್ಕೆ ಉದಾಹರಣೆಗಳನ್ನು ನೋಡಬಹುದು:

ಕಪ್ಪೆ ಅರಭಟ್ಟನ್ ಶಿಷ್ಟಜನ ಪ್ರಿಯನ್
ಕಷ್ಟಜನ ವರ್ಜಿತನ್ ಕಲಿಯುಗ ವಿಪರೀತನ್
ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಂಡನಮ್
ಮೃತ್ಯುಸ್ತಕ್ಷಣಿಕೋದುಖಃಮ್ಮಾನಭಂಗನ್ದಿದೇ ದಿನೇ
ಸಾಧುಗೆ ಸಾಧು ಮಾಧುರ್ಯ್ಯನ್ಗೆ ಮಾಧುರ್ಯ್ಯಂ ಬಾಧಿಪ್ಪ
ಕಲಿಗೆ ಕಲಿಯುಗ ವಿಪರೀತನ್ಮಾಧವನೀತನ್ಪೆರನಲ್ಲ
ಒಳ್ಳಿತ್ತ ಕೊಯ್ವೊರಾರ್ಪ್ಪೊಲ್ಲದುಮದಱನ್ತೆ ಬಲ್ಲಿತ್ತು ಕಲಿಗೆ
ವಿಪರೀತಾ ಪುರಾಕೃತಮಿಲ್ಲಿ ಸನ್ದಿಕ್ಕುಮದುಬನ್ದು
ಕಟ್ಟಿದ ಸಿಂಘಮನ್ಕೆಟ್ಟೊಡೇನೆಮಗೆನ್ದು ಬಿಟ್ಟುವೊಲ್ಕಲಿಗೆ ವಿ
[ಪ]ರೀತಂಗಹಿತರ್ಕ್ಕಳ್ಕೆಟ್ಟವರ್ಮೇಣ್ಣುತ್ತರವಿಚಾರಮ್.[೩೭]

ಸಂಸ್ಕೃತ, ಕನ್ನಡ–ಹೀಗೆ ಎರಡು ಭಾಷೆ ಮತ್ತು ಗದ್ಯ, ಶ್ಲೋಕ, ತ್ರಿಪದಿ–ಹೀಗೆ ಮೂರು ಪ್ರಕಾರಗಳಿಂದ ಕೂಡಿದ ಈ ಶಾಸನವನ್ನು ಮೇಲೆ ಸೂಚಿಸಿದ ರೀತಿಯಲ್ಲಿ ಗದ್ಯದಂತೆ ಬರೆಯಲಾಗಿದೆ. ಇಲ್ಲಿ ಪದ್ಯವಿಭಜನೆಯ ದಂಡವಿಲ್ಲ, ಪಾದವಿಭಜನೆಯ ದಂಡವಿಲ್ಲ, ವೃತ್ತನಾಮ ಸೂಚನೆಯಿಲ್ಲ. ಈ ಕೊರತೆಗಳಿಂದಾಗಿ ವಾಕ್ಯಗಳನ್ನು ವಿಂಗಡಿಸಿಕೊಳ್ಳುವುದು, ಪದ್ಯಗಳನ್ನು ಪ್ರತ್ಯೇಕಿಸಿಕೊಳ್ಳುವುದು, ಗದ್ಯವೋ ಪದ್ಯವೋ ಎಂದು ನಿರ್ಣಯಿಸಿಕೊಳ್ಳುವುದು ಕೆಲವು ಸಲ ಸಮಸ್ಯೆಯೆನಿಸುತ್ತದೆ. ಈ ರೀತಿಯ ಬರವಣಿಗೆಯಿಂದಾಗಿ ಹಸ್ತಪ್ರತಿಗಳಲ್ಲಿ ಒಂದು ವೃತ್ತ ಮತ್ತೊಂದು ವೃತ್ತವಾಗಿ, ಪದ್ಯ ಕೆಟ್ಟು ಗದ್ಯವಾಗಿ ನಿಂತಿವೆ.

ಗದಾಯುದ್ಧದಲ್ಲಿ ಬರುವ "ಪದ್ಯರಚನೆಯೊಳ್ ಕಾಳಿದಾಸನುಂ, ಗದ್ಯರಚನೆಯೊಳ್ ಬಾಣನುಂ ಮುಂ ಕವಿಗಳಿರ್ವರುಂ ನೆಗೞ್ದಿರದಱಿಂ ಸತ್ಕವಿಗಳಿರ್ವರೆಮಗಭಿವಂದ್ಯರ್"[೩೮] ಎಂಬ ಪಾಠವು ಪದ್ಯವೆಂಬುದು ಸುನಿಶ್ಚಿತ, ಆದರೆ ಕೆಲವರು ತ್ರಿಪದಿಯೆಂದು, ಇನ್ನು ಕೆಲವರು ಕಂದವೆಂದು ಸಂದೇಹಪಟ್ಟಿರುವರು. ಈ ಸಂದೇಹಕ್ಕೆ ಮೂಲ ಕಾರಣ ಪದ್ಯದ ಪಾದಗಳನ್ನು ವಿಂಗಡಿಸುವ ಗೆರೆ

---

೩೭. ಬಾದಾಮಿ ಶಾಸನ, I.A.X.P 61.
೩೮. ಗದಾಯುದ್ಧ ೧–೯.

ಹಾಕದಿರುವದು. ಇಂಥ ಅಲಕ್ಷ್ಯದಿಂದಾಗಿ ಪದ್ಯವು ಗದ್ಯವಾಗಿ ನಿಂತುದಕ್ಕೆ ಪಂಪಭಾರತದಿಂದ ಒಂದು ಉದಾಹರಣೆಯನ್ನು ಕೊಡಬಹುದು:

"ವ ॥ ಅದಂತೆನೆ – ಸ[ಮುನ್ಮಿಷ] ದ್ವಿವಿಧರತ್ನಮಾಲಾಪ್ರಭಾಭೀಲಾರುಣ ಜಲಪ್ಲ[ವಾ]ವಿಳ ವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂಬೂದ್ವೀಪದೊಳಗುಂಟು ನಾಡು ಕುರುಜಾಂಗಣ ನಾಮದಿಂ" ಎಂಬ ಗದ್ಯವನ್ನು ಪಂಪಭಾರತದ 'ಫ' ಪ್ರತಿಯಲ್ಲಿ "ಪೃಥ್ವಿ" ಎಂಬ ವೃತ್ತ ಸೂಚನೆಯೊಂದಿಗೆ ಹೀಗೆ ಬರೆಯಲಾಗಿದೆ.

ಅದೆಂತೆನೆ ಸ[ಮುನ್ಮಿಷ] ದ್ವಿವಿಧ ರತ್ನಮಾಲಾ ಪ್ರಭಾ
ಭಿದಾರುಣ ಜಲಪ್ಲ[ವಾ]ವಿಳ ವಿಳೋಳ ವೀಚೀರಯ
ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂ
[ಬುದೀವಿಯೊ]ಳಗುಂಟು ನಾಡು ಕುರುಜಾಂಗಣಂ ನಾಮದಿಂ॥[೩೯]

ಈ ಉದಾಹರಣೆಗಳನ್ನು ನೋಡಿದರೆ ಪ್ರಾಚೀನ ಕಾಲದ ಬರವಣಿಗೆಯ ದೋಷದಿಂದಾಗಿ ಲಿಪಿಕಾರ ಮತ್ತು ವಾಚಕರು ಹಸ್ತಪ್ರತಿಗಳನ್ನು ತಪ್ಪಾಗಿ ಓದಿರುವ, ತಪ್ಪಾಗಿ ನಕಲು ಮಾಡಿರುವ ಸಂಭವವಿದೆಯೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಹಸ್ತಪ್ರತಿಗಳನ್ನು ಓದಬಯಸುವವರು ರೂಢಮೂಲವಾಗಿರುವ ಇಂಥ ಬರವಣಿಗೆಯ ದೋಷಗಳನ್ನು ಗೃಹೀತವಾಗಿಟ್ಟುಕೊಳ್ಳಬೇಕಾಗುತ್ತದೆ.

೪. ಅವಸ್ಥಾಭೇದ–ಪ್ರಾಂತಭೇದ: ಒಂದು ಭಾಷೆಯ ಒಂದು ಅವಸ್ಥೆ ಇನ್ನೊಂದು ಅವಸ್ಥೆಯನ್ನು ಪಡೆಯುವಾಗ, ಅದು ಅನಿವಾರ್ಯವಾಗಿ ಆ ಅವಸ್ಥೆಯ ವೈಶಿಷ್ಟ್ಯಗಳನ್ನೂ ಮೈಗೂಡಿಸಿಕೊಳ್ಳುತ್ತದೆ. ಭಾಷೆಗೆ ಸಂಬಂಧಪಟ್ಟ ಈ ಅವಸ್ಥೆ ಮತ್ತು ಪ್ರಾದೇಶಿಕತೆಗಳ ಪ್ರಭಾವದಿಂದ ಹೊರಗುಳಿಯುವುದು ವ್ಯಕ್ತಿಗೆ ಸಾಧ್ಯವಿಲ್ಲ. ಹೀಗಾಗಿ ಎಷ್ಟೇ ಲಕ್ಷ್ಯವಹಿಸಿದರೂ ಈ ಇಬ್ಬಗೆಯ ಪ್ರಭಾವ ಲಿಪಿಕಾರನ ನಕಲುಕಾರ್ಯದಲ್ಲಿ ಅವನಿಗರಿಯದಂತೆ ನುಗ್ಗಿ ಬಂದು ನಿಲ್ಲುತ್ತದೆ.

ಪೂರ್ವದ ಹಳಗನ್ನಡ, ಹಳಗನ್ನಡ ಮತ್ತು ನಡುಗನ್ನಡಗಳೆಂಬ ಮೂರು ಅವಸ್ಥೆಗಳಲ್ಲಿ ಹಾಯ್ದು ಬಂದ ಕನ್ನಡ ಭಾಷೆಯ ಪೂರ್ವದ ಹಳಗನ್ನಡ ಕೃತಿಗಳು ನಮ್ಮ ಕೈಗೆ ಉಳಿದುಬಂದಿಲ್ಲ. ಹಳಗನ್ನಡ ಕೃತಿಗಳು ಮಾತ್ರ ನಡುಗನ್ನಡ ಲಿಪಿಕಾರರ ಕೈಯಲ್ಲಿ ಬದುಕು ಮಾಡಿವೆ. ಹೀಗಾಗಿ ವ್ಯಂಜನಾಂತಪದ>ಸ್ವರಾಂತಪದ, ಪ>ಹ, ಮ>ವ, ೞ>ಳ, ಱ>ರ, ಎಯ್>ಐ, ರಳದ್ವಿತ್ವ>ರೇಫೆದ್ವಿತ್ವ>ಸಜಾತೀಯ ದ್ವಿತ್ವ ಪರಿವರ್ತನೆಗಳೂ; ವಿಭಕ್ತಿ, ಆಖ್ಯಾತ ಮತ್ತು ಇತರ ಪ್ರತ್ಯಯಗಳ ವ್ಯತ್ಯಾಸಗಳೂ, ಕೆಲವು ಪದಗಳ ಪರಿವರ್ತಿತ ರೂಪಗಳೂ ಹಸ್ತಪ್ರತಿಗಳಲ್ಲಿ ಹಣಿಕಿ ಹಾಕಿವೆ. ಹಳಗನ್ನಡ ಕೃತಿಗಳನ್ನೂ ಪರಿಷ್ಕರಿಸುವಲ್ಲಿ ಲಿಪಿಕಾರರ ಮುಖಾಂತರ ಸೇರಿಕೊಂಡ ಈ ಮತ್ತು ಇಂಥ ಪ್ರಕ್ರಿಯೆಗಳನ್ನು ಒರೆಸಿ ತೆಗೆಯಬೇಕು.

ಇನ್ನು ಹಳಗನ್ನಡ ನಡುಗನ್ನಡ ಸಾಹಿತ್ಯದ ಹಸ್ತಪ್ರತಿಗಳಲ್ಲಿ ಆ ಪ್ರಾಂತಭಾಷೆಯ ವೈಶಿಷ್ಟ್ಯಗಳು, ಆಡುನುಡಿಯ ಪ್ರಕ್ರಿಯೆಗಳು ಸೇರಿಕೊಂಡುದನ್ನು ನೋಡಬಹುದು.

---

೩೯. ಪಂಭಾ ೧–೫೧ ಗ.

ಎನ್ನ ಭಕ್ತಿ ಸಾವಿರ ನೋಂಪಿಯ ನೋಂತು **ಹಾ**ದರರದಲ್ಲಿ ಅಳಿದಂತಾಯಿತ್ತಯ್ಯಾ [ಬವ ೯೫೪]

(ಆ)

ಎನ್ನ ಚಿತ್ತವು **ಅ**ತ್ತಿಯ ಹಣ್ಣು ನೋಡಯ್ಯಾ [ಬವ ೨೯] (ಹ)

ನೀರನೀ**ಸು**ವನ ದೇಹ ಬಳಲುವುದಲ್ಲದೆ ನೀರು ಬಳಲುವುದೆ [ಅವ ೧೧೯] (ಜು)

ಬಚ್ಚಿಸಿದ ಬ**ಣ್ಣಂ**ಗಳಂ [ಕಕಾ ೬೬೧] (ನ್ನಂ)

ಜ್ಞಾನವಿಲ್ಲಜೆವು ಹುಗದಾಚಾರವಡಿಯಿಡದು [ಸೋಚಾ ೧-೪೩] (ಗ್ನಾ)

ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ [ಬವ ೧೬೩] (ಣಿ)

ಪರುಷ ಗುಣವನಱಿಸುವುದೆ **ಕಬ್ಬು**ನದಲ್ಲಿ [ಬವ ೬೭] (ಕಬ್ಬಿಣ)

ಬೆಲ್ಲವ ತಿಂದ ಕೋಡಗದಂತೆ **ಸಿ**ಹಿಯ ನೆನೆಯದಿರಾ ಮನವೇ [ಬವ ೨೭೩] (ಸೀಹ, ಸಿಂಹ)

ಆನೆಯ ಚೋಹವ ತೊಟ್ಟು ನಾಯಾಗಿ **ಬೊ**ಗಳುವ ಮಾನವರನೇನೆಂಬೆ ಗುಹೇಶ್ವರ [ಅವ ೪೭೪]

(ಬ)

ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ [ಬವ ೪] (ಲ್ಮ)

ಚಂ**ದ್ರ**ಮನಂತೆ ಕಳೆ ಸಮನಿಸಿತ್ತೆನಗೆ [ಬವ ೯] (ದ್ರಾ)

ನೀನೊಲಿಡೆ ಕೊರಡು **ಕೊನರುವುದಯ್ಯಾ** [ಬವ ೬೬] (ಕೊನರೂದಯ್ಯಾ)

ಕೋಡಗವ ಹುಲ್ಲಲಿ ಮುಸುಂಕಿದಂತೆ, ಕೂಡಲಸಂಗಮದೇವಾ ನಿನ್ನ ಪರಿ **ಬೇ**ರೆ [ಬವ ೭೩೯] (ಬ್ಯಾರೆ)

ಹಳಗನ್ನಡ ನಡುಗನ್ನಡ ಸಾಹಿತ್ಯಕೃತಿಗಳನ್ನು ಪರಿಷ್ಕರಿಸುವಲ್ಲಿ ಇಂಥ ಪ್ರಯೋಗಗಳ ಬಗ್ಗೆ ಎಚ್ಚರ ವಹಿಸಬೇಕು. ಹಸ್ತಪ್ರತಿಯ ಕಾಲನಿರ್ಣಯಕ್ಕೆ ಅದರಲ್ಲಿಯ ಭಾಷಾ ಅವಸ್ಥೆ, ಹಸ್ತಪ್ರತಿಯ ಪ್ರದೇಶನಿರ್ಣಯಕ್ಕೆ ಅದರಲ್ಲಿಯ ಭಾಷಾಸ್ವರೂಪ ನೆರವಾಗುತ್ತಿದ್ದರೂ, ತರುವಾಯ ಸೇರಿಕೊಂಡ ಇಂಥ ಪ್ರಕ್ರಿಯೆಗಳನ್ನು ತಳ್ಳಿಹಾಕಬೇಕು.

* * *

ಹೀಗೆ ಉದ್ದೇಶಿತ ಸ್ಖಾಲಿತ್ಯ ಮತ್ತು ಅನ್ಯಥಾಜ್ಞಾನಮೂಲವಾದ ಅನುದ್ದೇಶಿತ ಸ್ಖಾಲಿತ್ಯಗಳ ಜೊತೆಗೆ ಹೆಚ್ಚಿನದಾಗಿ ಲಿಪಿಕಾರನ ಅನವಧಾನ, ಅಜ್ಞಾನಗಳಿಂದುಂಟಾದ ಸ್ಖಾಲಿತ್ಯಗಳೂ

ಸೇರಿಕೊಂಡರೆ ಈ ಸ್ಖಾಲಿತ್ಯವಲಯ ಇನ್ನೂ ವಿಸ್ತಾರವಾಗುತ್ತದೆ. ಉದ್ದೇಶಿತ ಸ್ಖಾಲಿತ್ಯ ತಿಳಿದೂ ತಿಳಿದೂ ಪಾಠವ್ಯತ್ಯಾಸ ಮಾಡುವುದು, ಅನುದ್ದೇಶಿತ ಸ್ಖಾಲಿತ್ಯ ಬಲವಾದ ಯಾವುದೋ ಅನ್ಯಕಾರಣದಿಂದ ಪಾಠವ್ಯತ್ಯಾಸ ಮಾಡುವುದಾದರೆ, ಕೆಳಗೆ ವಿವರಿಸಲಿರುವ ಅನವಧಾನಮೂಲ ಸ್ಖಾಲಿತ್ಯಕ್ಕೆ ನಿರ್ದಿಷ್ಟ ಕಾರಣವಿರುವುದಿಲ್ಲ. ಯಾವುದೇ ಪಾಠ ಏನೂ ಕಾರಣವಿಲ್ಲದೆ ಯಾವುದೇ ರೂಪ ಪಡೆಯಬಹುದು.

೧. **ಅನವಧಾನಮೂಲ ಸ್ಖಾಲಿತ್ಯ:** ವೃತ್ತಿಯಿಂದ ಲಿಪಿಕಾರನಾಗಿರುವವನದು ಕೇವಲ ನಕಲು ಕಾರ್ಯ. ಕೆಲವೊಮ್ಮೆ ಮನುಷ್ಯ ಸಹಜ ಮರಹು ಅಲಸ್ಯಗಳ ಮೂಲಕ ಈತನು ಕೈತಪ್ಪು ಕಣ್ತಪ್ಪು ಕಿವಿತಪ್ಪುಗಳಿಗೆ ಒಳಗಾಗಿ ತಪ್ಪು ಓದುವುದು, ತಪ್ಪು ಕೇಳುವುದು, ತಪ್ಪು ಬರೆಯುವುದು ಸ್ವಾಭಾವಿಕ. ಇದರಿಂದ ಅಕ್ಷರ ಪದ ಪದ್ಯಗಳ ಲೋಪ ಆಗಮ ಆದೇಶ ಪಲ್ಲಟ ಮಟ್ಟಿನ ಸ್ಖಾಲಿತ್ಯಗಳು ತಲೆದೋರುತ್ತವೆ. ಇದು ಲಿಪಿಕಾರನ ಅನವಧಾನ. ಈ ಅನವಧಾನದಿಂದ ಹುಟ್ಟಿದ ಹನಿಯಷ್ಟು ತಪ್ಪು, ಕ್ರಮೇಣ ಹಳ್ಳದಷ್ಟು ಬೆಳೆದುನಿಂತಾಗ ದೋಷ ಗಮನಕ್ಕೆ ಬರುತ್ತದೆ. ಇಂಥ ಅನವಧಾನಕ್ಕೆ ಪಂಪಭಾರತದಿಂದ ಒಂದು ಉದಾಹರಣೆಯನ್ನು ಕೊಡಬಹುದು.

ಪಂಪನ ತಂದೆಯ ಹೆಸರು ಈ ವರೆಗೆ ನಾವು ಭಾವಿಸಿದಂತೆ 'ಅಭಿರಾಮದೇವರಾಯ'. ಪಂಪಭಾರತದ 'ಫ' ಪ್ರತಿಯಲ್ಲಿ 'ನೀಕಪರಂ ಭೀಮನಾಮದೇಯಂ ತನಯಂ' ಎಂಬ ಪಾಠವಿದೆ,[೪೦] ಇದರ ಶುದ್ಧ ರೂಪ 'ನೀಕಪರಂ ಭೀಮನಾಮಧೇಯಂ ತನಯಂ'. ಇದು ಪಂಪನ ನಾಲಗೆಯಿಂದ ಇಳಿದ ಪಾಠ. ಪ್ರಾಚೀನ ಬರವಣಿಗೆ ಪದ್ಧತಿಯಲ್ಲಿ ಮಹಾಪ್ರಾಣ ಮತ್ತು ದೀರ್ಘಸಂಕೇತಗಳಿಲ್ಲದುದರಿಂದ ಇದರ ಭಾಗವನ್ನು 'ಬಿಮನಾಮದೆಯಂ' ಎಂದು ಮೊದಲ ಲಿಪಿಕಾರ ಬರೆದಿರಬಹುದು. ಮುಂದೆ ಅಕ್ಷರದ ರೂಪಸಾದೃಶ್ಯದಿಂದ ಬಿಮನಾಮದೆಯಂ > ಬಿಮರಾಮದೆಯಂ / ಬಿಮರಾಮದೆವಂ ರೂಪಗಳು ಹುಟ್ಟಿದವು. ಆಮೇಲೆ ಅನವಧಾನದಿಂದಾಗಿ ಇಲ್ಲಿಯ ಮೊದಲ 'ಮ' ಅಕ್ಷರಲೋಪಗೊಳ್ಳಲಾಗಿ 'ಬಿರಾಮದೆವಂ' ಎಂಬ ಅಪಪಾಠ ಸಿದ್ಧವಾಯಿತು. ಈಗ ಛಂದಸ್ಸಿಗೂ ಅರ್ಥಕ್ಕೂ ಹೊಂದುವ ಸಲುವಾಗಿ 'ನೀಕಪರಂ' ಎಂಬುದನ್ನು 'ನೀಕರನ' ಎಂದು ತಿದ್ದಿಕೊಳ್ಳಲಾಯಿತು. ಬಳಿಕ ಬಿ.ಎಲ್.ರೈಸ್ ಆವೃತ್ತಿಯಲ್ಲಿ ಅದು "ನೀಕರನಭಿರಾಮದೇವರಾಯಂ ತನಯಂ" ಎಂಬ ರೂಪದಿಂದ ಬಂದು ಸೇರಿತು. ಇದನ್ನು ಎಲ್ಲರೂ ಈ ವರೆಗೆ ಒಪ್ಪುತ್ತ ಬಂದಿದ್ದರು. ಕೆಲವು ವರುಷಗಳ ಹಿಂದೆ ಲಭಿಸಿದ ಗಂಗಾಧರಂ ಶಾಸನದಲ್ಲಿ 'ಭೀಮಪಯ್ಯ' ಹೆಸರಿರುವುದರಿಂದ ಈಗ ಅಭಿರಾಮ ದೇವರಾಯ ಎಂಬ ಹೆಸರನ್ನು ಕೈಬಿಡಬೇಕಾಗಿದೆ.[೪೧] ಇದು ಅನವಧಾನಮೂಲದ ಸ್ಖಾಲಿತ್ಯಕ್ಕೆ ಉದಾಹರಣೆ.

ಈ ಸ್ಖಾಲಿತ್ಯದಲ್ಲಿ ಲೋಪ, ಆಗಮ ಆದೇಶ ಪಲ್ಲಟರೂಪದ ವ್ಯತ್ಯಾಸಗಳು ಘಟಿಸಬಹುದು. ಈ ಕ್ರಿಯೆ ಅಕ್ಷರ, ಪದ, ವಾಕ್ಯ ಯಾವುದೇ ರೂಪದಲ್ಲಿ ಕಾಣಿಸಿ ಕೊಳ್ಳಬಹುದು.[೪೨]

---

೪೦. ಪಂಭಾ ೧೪-೪೭ ಅ ಟಿ

೪೧. ಗಂಗಾಧರಂ ಶಾಸನ-ಕೆಲವು ಹೊಸ ವಿಚಾರಗಳು: (ಕನು. ೩೨-೧೧)

೪೨. ಉದಾಹರಣೆಗಳಿಗಾಗಿ 'ಸ್ಖಾಲಿತ್ಯ ಸ್ವರೂಪ' ಪ್ರಕರಣವನ್ನು ನೋಡಬಹುದು.

೨. ಅಜ್ಞಾನಮೂಲಸ್ಖಾಲಿತ್ಯ: ಆಧಾರಪ್ರತಿಯ ನಷ್ಟಭಾಗಗಳನ್ನು ಬಿಡದೆ ಬರೆಯುವುದು, ಮಾರ್ಜಿನದಲ್ಲಿಯ ಅರ್ಥರೂಪದ ಪದಗಳನ್ನು – ಟಿಪ್ಪಣಿಗಳನ್ನು ಪಠ್ಯವೆಂದು ಭಾವಿಸುವುದು, ತಾನು ಲಿಪಿಸುತ್ತಿರುವ ಕೃತಿಯಲ್ಲಿಯ ಅನ್ಯಭಾಷೆಯ ಉದ್ಧರಣೆಗಳನ್ನು ಗಮನಿಸದಿರುವುದು, ಸಂಕೇತ ಮತ್ತು ಸೂಚನೆಗಳನ್ನು ಮೂಲಪಾಠವೆಂದು ಭಾವಿಸುವುದು, ಈತನು ಮಾಡುವ ಇತರ ತಪ್ಪುಗಳು. ಇವು ಲಿಪಿಕಾರನ ಅಜ್ಞಾನಮೂಲ ಸ್ಖಾಲಿತ್ಯಗಳು. ಉದಾ:

೧. "ನೀತಿನಿರಂತರಾನುಗತ ವೃತ್ತಿ ವಿ[ಕಲ್ಪಿ]ತಮಂ" [ಕವಾ೨-೧೦೧]. ಕವಿರಾಜಮಾರ್ಗದ ಒಂದು ಹಸ್ತಪ್ರತಿ(೧೧೦)ಯಲ್ಲಿ ಅಕ್ಷರದ ಅಸ್ಪಷ್ಟತೆ ಇಲ್ಲವೆ ತ್ರುಟಿತತೆ ಕಾರಣವಾಗಿ ಚೌಕಕಂಸಿನ ಭಾಗದಷ್ಟು ಜಾಗವನ್ನು ಬಿಟ್ಟು ಬರೆಯಲಾಗಿದೆ. ಆದರೆ ಈ ಹಸ್ತಪ್ರತಿಯ ನಕಲು ಎಂದು ಹೇಳಬಹುದಾದ ಇನ್ನೊಂದು ಹಸ್ತಪ್ರತಿ (೧೭೫) ಯಲ್ಲಿ "ನೀತಿ ನಿರಂತಾರಾನುತ ವೃತ್ತಿ ವಿತಮಂ" ಎಂದು ಸ್ಥಳ ಬಿಡದೇ ಬರೆಯಲಾಗಿದೆ.

೨. ಹಮ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು [ಬವ ೯೨]

(ಹನ್ನೆರಡು ವರುಷ ಸಂವತ್ಸರ)

ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ [ಬವ ೭೩೫] (ದಯದಾಕ್ಷಿಣ್ಯ).

ಇಲ್ಲಿಯ ವರುಷ=ಸಂವತ್ಸರ, ದಯ=ದಾಕ್ಷಿಣ್ಯ ಎಂಬ ಸಮಾನಾರ್ಥಕ ಪದಗಳಲ್ಲಿ ಒಂದು ಬಹುಶಃ ಮಗ್ಗುಲಲ್ಲಿ ಬರೆದ ಅರ್ಥರೂಪದ ಪದವಿದ್ದು, ಲಿಪಿಕಾರನ ಅಜ್ಞಾನದಿಂದ ಪಠ್ಯಭಾಗದಲ್ಲಿ ಮೂಲಪಾಠದಂತೆ ಸೇರಿಕೊಂಡಿರಬಹುದು. "ಒರೆದು ನೋಡುವ ಸುವರ್ಣದ ಚಿನ್ನದಂತೆ" "ಉಷ್ಣ ತೃಷ್ಣೆ ಹೆಚ್ಚೆ ಕಡಲೇಳು ಸಮುದ್ರವ ಕುಡಿದು ನೀರಡಿಸಿ ಅಱಲುಗೊಂಡು ಬೆರಗಾದ" [ಶಿಶೂ ೬] ಎಂಬಿವೂ (ಸುವರ್ಣ = ಚಿನ್ನ, ಕಡಲ=ಸಮುದ್ರ) ಇಂಥ ಅಜ್ಞಾನದಿಂದ ಹುಟ್ಟಿದ ಪಾಠಗಳಾಗಿರಬಹುದೇನೋ.

೩. "ಎರಡುಂ ಪದಮುಂ ತದ್ಭವಮನೆಯ್ದುವಲ್ಲಿಯೊಂದು ಪದಮನುೞಿಪಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ:

ತರವೇೞ್ ಮಾಣಿಕ್ಯ ಭಂಡಾರದ ಪುಡಿಕೆಗಳಂ...........

ಇಲ್ಲಿ ಮಾಣಿಕ್ಯ ಶಬ್ದಮನುೞಿದು ಮಾಣಿಕಭಂಡಾರಮೆನೆ ಶುದ್ಧಂ. [ಇದು ತಪ್ಪಲ್ಲ, ಕೇಶವನಱಿಯದೆ ತಪ್ಪೆಂದಂ. ಭಂಡಾರಮೆಂದು ಸಂಸ್ಕೃತ ಶಬ್ದಮುಂಟು, ಅಭಿಧಾನಜ್ಞರು ವಿಚಾರಿಸಿಕೊಂಬುದು. ಮಹಾಕವಿಗಳ ಪ್ರಯೋಗಂಗಳ್ ಕೆಲವೊಳವು.

ಅಪೂರ್ವಃ ಕೋಪಿ ಭಂಡಾರೋ ವಿದ್ಯತೇ ತವ ಭಾರತಿ

ಅವ್ಯಯೇ ವ್ಯಯಮಾಯತಿ ವ್ಯಯೇ ಯಾತಿ ಸುವಿಸ್ತರಂ]"[೪೩]

---

೪೩. ಶಮದ ೩೦೪.

ಇಲ್ಲಿಯ ಚೌಕ ಕಂಸಿನೊಳಗಿನ ಭಾಗ ಶ್ರೀ ಡಿ.ಎಲ್.ಎನ್. ಬಳಸಿದ ಶಬ್ದಮಣಿ ದರ್ಪಣದ 'ಕ' ಪ್ರತಿಯಲ್ಲಿ ಕಂಡುಬರುತ್ತದೆ. ಅಭ್ಯಾಸಿಯೊಬ್ಬನು ಬರೆದಿರಬಹುದಾದ ಈ ಟಿಪ್ಪಣಿ, ಲಿಪಿಕಾರನ ಅಜ್ಞಾನದಿಂದಾಗಿ ಪಠ್ಯದ ಒಡಲಲ್ಲಿ ಸೇರಿದೆ.

"..... ಕಾಡುಗಿಚ್ಚೆದ್ದು ಕರಡವ ಸುಟ್ಟಂತೆ **ಪ್ರಾಕ್‌ಪ್ರಧ್ವಂಸಾನೋನ್ಯ** ಭಾವತ್ರಯವುಂಟೇ?" [ಅವ ೧೧೭೦] (ಪ್ರಾಣಗುಣ ಪ್ರಧ್ವಂಸಕಂಗೆ)

ಈ ಭಾಗದಲ್ಲಿದ್ದುದು ಸಂಸ್ಕೃತ ನುಡಿಗಟ್ಟು ಎಂದು ಅರ್ಥಮಾಡಿಕೊಳ್ಳದೆ, ಲಿಪಿಕಾರರು ಮನಬಂದಂತೆ ತಿದ್ದಿದರು; ಕನ್ನಡ ರೂಪಕೊಡಲು ಪ್ರಯತ್ನಿಸಿದರು.

೪. **ಪ್ರ**ದುಗ್ಧಾಬ್ಧಿ ವ್ರತಶಯನ ದಲಿತ ಪುಂಡರೀಕ ನಯನ

ಆಸೋಮೇಶ್ವರದೇವ ವಿರಚಿತೇಯಮೇಲಾ ರೇಖಾವತೀ

ಮೇಲಕ್ಷ್ಮೀಕಾಂತ ಜಯಜಯದೇವ ನಾರಾಯಣಾ॥[೪೪]

ಮಾನಸೋಲ್ಲಾಸದ ಈ ಮೂರು ಚರಣಗಳ ಪ್ರಾರಂಭದ ಪ್ರ, ಆ, ಮೇ ಎಂಬಿವು ಪ್ರಯೋಗ, ಆಭೋಗ, ಮೇಲಾಪಕ ಎಂಬ ಸಂಗೀತಪರಿಭಾಷೆಯ ಸಂಕೇತಗಳಾಗಿದ್ದು, ಲಿಪಿಕಾರನ ಅಜ್ಞಾನದಿಂದಾಗಿ ಮೂಲಪಾಠದಂತೆ ಬರಯಲಾಗಿದೆ.

೫. ಚುರ್ಚಿದವೊಲ್ ಬಿಸಿಲಳುರೆ ಕಿ

ಮುಟ್ಟಿದ ಲತೆಯಂತೆ ನೊಂದು ಗುಣನಂದಿ (ಶಮದ ಸೂ. ೩೪)

ಶಬ್ದಮಣಿದರ್ಪಣದ ಈ ಉದಾಹರಣೆಯ ಕೊನೆಯಲ್ಲಿರುವ 'ಗುಣನಂದಿ' ಎಂಬುದು ಆಕರಸೂಚನೆಯಾಗಿರಬಹುದು. ಆದರೆ ಈಗ ಎಲ್ಲ ಹಸ್ತಪ್ರತಿಗಳಲ್ಲಿ ಮೂಲಪಾಠದಂತೆ ದೊರೆಯುತ್ತದೆ.

ಈ ವರೆಗೆ ವಿವೇಚಿಸಿದ ಸ್ಖಾಲಿತ್ಯಗಳನ್ನು ನಕ್ಷೆಯ ಮೂಲಕ ಹೀಗೆ ರೇಖಿಸಬಹುದು.

ಸ್ಖಾಲಿತ್ಯ

- ಉದ್ದೇಶಿತ ಸ್ಖಾಲಿತ್ಯ
  - ೧. ಕವಿ
  - ೨. ಸಹೃದಯ
- ಅನುದ್ದೇಶಿತ ಸ್ಖಾಲಿತ್ಯ
  - ಅನ್ಯಥಾಜ್ಞಾನಮೂಲ ಸ್ಖಾಲಿತ್ಯ
  - ಅನವಧಾನಮೂಲ ಸ್ಖಾಲಿತ್ಯ
  - ಅಜ್ಞಾನಮೂಲ ಸ್ಖಾಲಿತ್ಯ

---

೪೪. ಕಗ್ರಸಂ. ೧೨೩.

೩. ಲಿಪಿಕಾರ ೧. ಅಕ್ಷರಗಳ ರೂಪಸಾದೃಶ್ಯ

(ಅಕ್ಷರ, ಒತ್ತು, ಕಾಗುಣಿತ)

೨. ಅಕ್ಷರಗಳ ಧ್ವನಿಸಾದೃಶ್ಯ

(ಯಶ್ರುತಿ, ವಶ್ರುತಿ, ಋ>ರು, ಅಲ್ಪಪ್ರಾಣ,–ಮಹಾಪ್ರಾಣ, ಚ–ಜ, ಶ–ಷ–ಸ, ೞ–ಳ, ಱ–ರ,

೩. ಬರವಣಿಗೆಯ ರೀತಿದೋಷ

(ಹ್ರಸ್ವ–ದೀರ್ಘ, ಅಲ್ಪಪ್ರಾಣ–ಮಹಾಪ್ರಾಣ, ಒತ್ತು ಚಿಹ್ನೆ, ಲಿಪಿಯ ಅನೇಕ ರೂಪತೆ, ಪದವಿನ್ಯಾಸ ಮತ್ತು ವಿರಾಮಚಿಹ್ನೆ)

೪. ಅವಸ್ಥಾಭೇದ–ಪ್ರಾಂತಭೇದ.

ಈ ವರೆಗೆ ವಿವೇಚಿಸಿದ ಉದ್ದೇಶಿತ ಮತ್ತು ಅನುದ್ದೇಶಿತ ಸ್ಖಾಲಿತ್ಯಗಳು ಒಂದು ಪಾಠದ ಮೇಲೆ ಕಾಲಕಾಲಕ್ಕೆ ಒಂದೊಂದಾಗಿ ದಾಳಿಮಾಡುತ್ತ ಬಂದಿರುತ್ತವೆ. ಉದಾ:

೧. ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿಯಂತೆ ತನುಕರಗಿ ನೆರೆವ ಸುಖವ ನಾನೇನೆಂಬೆ"
[ಬವ ೮೪೭] (ವಾರಿ, ಅರಿ, ಹರಿ, ಅರಿ)

ಆಲಿಕಲ್ಲ
|
ಆರಿಕಲ್ಲ (ಅಕ್ಷರಗಳ ರೂಪಸಾದೃಶ್ಯ)

(ಅಕ್ಷರಗಳ ರೂಪಸಾದೃಶ್ಯ) ಅರಿಕಲ್ಲ ವಾರಿಕಲ್ಲ (ಅನ್ಯಥಾಜ್ಞಾನದೋಷ)
|
(ಪ್ರಾಂತಭೇದ) ಹರಿಕಲ್ಲ

೨. "ನೆರೆದ ಕಾವಲಿಗಳೊಳಗೊಂದು ಕನ್ನಡಿಯನು ಅಲಸದಱಸುವ ಮರುಳರಂದದಿಂ"
[ಸೋಚಾ ೧–೧೧೬] (ಕರಿನಡೆ)

ಕನ್ನಡಿ
|
ಕಂನಡಿ (ಬರವಣಿಗೆಯ ರೀತಿದೋಷ)
|
ಕರಿನಡಿ (ಅಕ್ಷರಗಳ ರೂಪಸಾದೃಶ್ಯ)
|
ಕರಿನಡೆ (ಅನ್ಯಥಾಜ್ಞಾನ ದೋಷ)

ಇಲ್ಲಿ ಅಕ್ಷರಗಳ ರೂಪಸಾದೃಶ್ಯ, ಅನ್ಯಥಾಜ್ಞಾನ, ಬರವಣಿಗೆಯ ರೀತಿದೋಷ ಪ್ರಾಂತಭೇದಗಳೆಂಬ ಅಂಶಗಳು ಒಂದರ ಮೇಲೊಂದರಂತೆ ದಾಳಿಮಾಡಿ, ಬೇರೆ ಬೇರೆ ಸ್ಖಾಲಿತ್ಯಗಳು ಹುಟ್ಟಲು ಕಾರಣವಾದುದನ್ನು ಗಮನಿಸಬೇಕು. ಹೀಗೆ ಒಂದು ಪಾಠ ಹಲವು ದಾಳಿಗಳಿಗೆ ತುತ್ತಾಗಿ ಕಾಲಕಾಲಕ್ಕೆ ತನ್ನ ರೂಪವನ್ನು ಬದಲಿಸುತ್ತ ಬಂದಿರುತ್ತದೆ. ಆದುದರಿಂದ ಒಂದು ದೋಷಪಾಠದ ಹಿಂದೆ ಹಲವು ಕಾರಣಗಳ ಕೈವಾಡವಿರುವುದನ್ನು ತಿಳಿದಿರಬೇಕು.

ಕೆಲವೊಮ್ಮೆ ಈ ಸ್ಖಾಲಿತ್ಯಗಳಿಂದಾಗಿ ಒಂದು ಪದ ಎಷ್ಟೇ ಹೆಚ್ಚು ಕೆಟ್ಟಿದ್ದರೂ ಅದರ ಮೂಲ ಅರ್ಥ ಉಳಿದುಕೊಂಡಿರುತ್ತದೆ. ಉದಾ: ಸಂಸಾರವೆಂಬ ರಾಹು ಸರ್ವ**ಗ್ರಾಸಿ**ಯಾಗಿ ನುಂಗಿತ್ತಯ್ಯಾ [ಬವ ೯] (ಗ್ರಾಹಿ, ಗ್ರಹಿ, ಗ್ರಸಿ, ಗ್ರಹಿಸಿ, ಗ್ರಾಹಿಸಿ, ಗ್ರಾಹಸಿ)

ಅಂದಣವನೇಟಿದ **ಸೊಣಗ**ನಂತೆ [ಬವ ೪೦]

(ಸುನಕ, ಶುನಕ, ಶುನಗ, ಸುನುಗ)

ನೀರಿಂಗೆ **ನೈದಿಲೆ**ಯೆ ಶೃಂಗಾರ [ಬವ ೪೭]

(ನೆಯಿದಲು, ನೈದಿಲು, ನೈದಿಲೆ, ನೈದೆಲೆ, ನೈದೆಲೆಯೆ, ನೈದಲೆ, ನೈಯ್ದಿಲು)

ದಯವಿಲ್ಲದ ಧರ್ಮ**ವದೇವುದಯ್ಯ** [ಬವ ೨೪೭]

(ವುದಾವುದಯ್ಯ, ವದಾವುದಯ್ಯ, ವಿದಾವುದಯ್ಯ, ವಾವುದಯ, ಇದೇನಯ್ಯ)

ಕರುಣಾಕರ, **ಅಭಯಕರ, ವರದ** ನೀ ಕರುಣಿಸಯ್ಯ [ಬವ ೬೯]

(ಆಭೆಯಕರ, ಆಭೆಯಾಕರ, ಆ ಭಯಾಕರ, ಆ ಭಯಕರ, ಅಭಯಾಕರ, ಆಭೆಯಾಕರ, ಆ ಭಯಾಕರಾ, ಆ ಭಯಕರಾ, ವರದಾನಿ, ವರದಾ ನೀ, ವರಧಾನಿ, ವರದಾಗಿ)

ಇನ್ನು ಕೆಲವು ಸಲ ಒಂದು ಪದ ಎಷ್ಟೇ ಕಡಿಮೆ ಕೆಟ್ಟಿದ್ದರೂ ಮೂಲ ಅರ್ಥ ಮರೆಯಾಗಿ ಬಿಡುತ್ತದೆ. ಉದಾ: ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯ– ರೇವಾಕೋಟ್ಯಾಚಾರ್ಯ, ಕಬ್ಬಿಗರ ಕಾವದ ಕರ್ತೃ ಅಂಡಯ್ಯ–ಆಂಡಯ್ಯ–ಆಡಯ್ಯ[೪೫] ಗಳಲ್ಲಿಯ ಕೇವಲ ಒಂದು ಅಕ್ಷರ ಮಟ್ಟಿನ ಭಿನ್ನಪಾಠ ಕರ್ತೃವಿನ ಹೆಸರುಗಳನ್ನೇ ಸಂದೇಹದಲ್ಲಿ ನಿಲ್ಲಿಸಿದೆ. ಇಂತಹ ಇನ್ನೊಂದು ಉದಾಹರಣೆ ಕುಮಾರರಾಮನ ಸಾಂಗತ್ಯದ ಕರ್ತೃವಿಷಯ. "ಆಧಾರವಿಡಿದು ಪೇಳಿದ ನಾಗಸಂಗಯ್ಯ" ಎಂಬ ವಾಕ್ಯವನ್ನು ಗಮನಿಸಿ ಹುಲ್ಲೂರ ಶ್ರೀನಿವಾಸ ಜೋಯಿಸರು ಇದರ ಕರ್ತೃ 'ನಾಗಸಂಗಯ್ಯ'ನೆಂದರೆ, ಶ್ರೀ ಜಿ.ವರದರಾಜರಾವ್ ಅವರು 'ಆಧಾರವಿಡಿದು ಪೇಳಿದನಾಗ ಸಂಗಯ್ಯ' ಎಂದು ಬಿಡಿಸಿ ಓದಿ, ಇದರ ಕರ್ತೃ 'ಸಂಗಯ್ಯ' ಇಲ್ಲವೆ 'ಗಂಗಯ್ಯ' ನೆಂದು ಹೇಳುತ್ತಾರೆ.[೪೬]

---

೪೫. ಶಮದ ಪಾಠಾಂತರಗಳು

೪೬. ಕುಸಾ ೯೬–೯೭

ಒಂದು ನಕಲುಪ್ರತಿಯಲ್ಲಿಯ ಇಂಥ ಸ್ಖಾಲಿತ್ಯಪ್ರಮಾಣ, ಅದರ ಆಧಾರಪ್ರತಿಯ ಪರಿಸ್ಥಿತಿ ಮತ್ತು ಲಿಪಿಕಾರನ ಜ್ಞಾನಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಅಂದರೆ ಆಧಾರ ಪ್ರತಿ ಪರಿಶುದ್ಧ ಮತ್ತು ಪರಿಸ್ಫುಟವಾದಷ್ಟು, ಲಿಪಿಕಾರ ಅಕ್ಷರಸ್ವರೂಪ ಮತ್ತು ಭಾಷಾಸ್ವರೂಪ ಬಲ್ಲಿದನಾದಷ್ಟು, ನಕಲುಪ್ರತಿ ಊರ್ಜಿತಗೊಳ್ಳುತ್ತದೆ. ಆದುದರಿಂದ ಒಂದು ಕೃತಿಯನ್ನು ನಕಲು ಮಾಡಿಕೊಳ್ಳುವವನು ಒಳ್ಳೆಯ ಆಧಾರ ಪ್ರತಿ, ಒಳ್ಳೆಯ ಲಿಪಿಕಾರನನ್ನು ಆರಿಸಿಕೊಳ್ಳಬೇಕು.

ಹೀಗೆ ಕವಿ, ಸಹೃದಯ, ಲಿಪಿಕಾರರಿಂದ ಉದ್ದೇಶಿತ ಸ್ಖಾಲಿತ್ಯಗಳು; ಲಿಪಿಕಾರನಿಂದ ಅನುದ್ದೇಶಿತ ಸ್ಖಾಲಿತ್ಯಗಳು ತಲೆದೋರಿ ಕಾಲಕಾಲಕ್ಕೆ ಬೆಳೆಯುತ್ತ ಹೋಗುತ್ತವೆ. ನೂರಕ್ಕೆ ನೂರು ಶುದ್ಧವಿರುವ ಒಂದು ಹಸ್ತಪ್ರತಿಯನ್ನು ನಕಲುಗೊಳಿಸುವಲ್ಲಿ ೧೦ ತಪ್ಪುಗಳುಂಟಾದರೆ ಈ ನಕಲುಪ್ರತಿಯ ಶುದ್ಧಿ ಪ್ರಮಾಣ ೯೦ ಆಗುತ್ತದೆ. ಇದನ್ನು ಮರುನಕಲುಗೊಳಿಸುವಲ್ಲಿ ಮತ್ತೆ ೧೦ ತಪ್ಪುಗಳಾದರೆ ಈ ಮರು ನಕಲುಪ್ರತಿಯ ಶುದ್ಧಿಪ್ರಮಾಣ ೮೦ ಅಲ್ಲ, ೮೧ ಆಗುತ್ತದೆ. ಇದೇ ಪ್ರಮಾಣದಂತೆ ಮುಂದಣ ಹಸ್ತಪ್ರತಿಗಳಲ್ಲಿ ಸ್ಖಾಲತ್ಯಗಳು ಬೆಳೆದು, ಅವುಗಳ ಒಂದು ಅರಣ್ಯವೇ ಸೃಷ್ಟಿಗೊಳ್ಳುತ್ತದೆ.

ಸ್ಖಾಲಿತ್ಯದ ಸ್ವರೂಪ

ಸತ್ಯಕ್ಕೆ ದಾರಿ ಒಂದು, ಅಸತ್ಯಕ್ಕೆ ದಾರಿ ನೂರು. ಈ ನೂರು ದಾರಿಗಳಲ್ಲಿ ನಡೆದು ಬರುವ ಉದ್ದೇಶಿತ ಮತ್ತು ಅನುದ್ದೇಶಿತ ಪಾಠದೋಷಗಳು ಅಕ್ಷರ, ಪದ, ಪಾದ, ಪದ್ಯ, ಸಂಧಿ–ಹೀಗೆ ಬೇರೆ ಬೇರೆ ಪ್ರಮಾಣದಲ್ಲಿ ಗೋಚರಿಸುತ್ತವೆ. ಹಿಂದೆ ಹೇಳಿದ ಪ್ರಕಾರ ಈ ಒಂದೊಂದು ಸ್ಖಾಲಿತ್ಯಕ್ಕೆ ಕಾರಣ, ಉದ್ದೇಶಿತವೋ? ಅನುದ್ದೇಶಿತವೋ? ಉದ್ದೇಶಿತದಲ್ಲಿ ಕವಿ, ಸಹೃದಯ ಮತ್ತು ಲಿಪಿಕಾರರಲ್ಲಿ ಯಾರು ಮಾಡಿದುದು? ಅನುದ್ದೇಶಿತದಲ್ಲಿ ಲಿಪಿಕಾರ ಮಾಡಿದ್ದರೂ ಅಕ್ಷರದ ರೂಪಸಾದೃಶ್ಯ, ಅಕ್ಷರದ ಧ್ವನಿಸಾದೃಶ್ಯ, ಬರವಣಿಗೆಯ ರೀತಿದೋಷ, ಅವಸ್ಥಾಭೇದ–ಪ್ರಾಂತಭೇದ ಮೂಲವಾದ ಅನ್ಯಥಾಜ್ಞಾನ ಮತ್ತು ಅನವಧಾನ, ಅಜ್ಞಾನ ಇವುಗಳಲ್ಲಿ ಯಾವುದು ಕಾರಣವಾಗಿರಬಹುದು? ಎಂದು ಬೆರಳಿಟ್ಟು ಸೂಚಿಸುವುದೂ, ಇವೆಲ್ಲವುಗಳನ್ನು ಸೂತ್ರವ್ಯವಸ್ಥೆಯಲ್ಲಿ ಹೊಂದಿಸಿ ಹೇಳುವುದೂ ಅಸಾಧ್ಯ ಇಲ್ಲವೆ ಕಷ್ಟಸಾಧ್ಯವೆಂದು ಹೇಳಬೇಕು. ಹೀಗಾಗಿ ಕಣ್ಣಿಗೆ ಕಾಣುವ ಎಲ್ಲ ಸ್ಖಾಲಿತ್ಯಗಳನ್ನು ಸ್ವರೂಪದೃಷ್ಟಿಯಿಂದ ಲೋಪ, ಆಗಮ, ಆದೇಶ, ಪಲ್ಲಟ, ಇತರ ಎಂದು ವರ್ಗೀಕರಿಸಿ ಸಾಧ್ಯವಾದಲ್ಲೆಲ್ಲ ಸ್ಖಾಲಿತ್ಯದ ಕಾರಣಗಳನ್ನು ಸೂಚಿಸಬಹುದಾಗಿದೆ.

ಲೋಪ:

ಕವಿರಚಿತ ಪಾಠದ ಅಲ್ಪ ಇಲ್ಲವೆ ಅಧಿಕ ಭಾಗ ಕಾಣದಾಗುವುದು ಲೋಪ. ಹಸ್ತಪ್ರತಿಗಳಲ್ಲಿ ಅಕ್ಷರ, ಪದ, ಪಾದ, ಪದ್ಯ, ಸಂಧಿಗಳ ಮಟ್ಟಿಗೆ ಕಂಡುಬರುವ ಈ ಲೋಪಕ್ರಿಯೆಗೆ ಕೆಲವು ಉದಾಹರಣೆಗಳನ್ನು ನೋಡಬಹುದು.

ಅಕ್ಷರ; ಅಕ್ಷರ ಸಮೂಹ:

೧. ನುತ ಶಬ್ದಾಳಂಕಾರದೊಳತಿಶಯ[ಮೀ] ಕನ್ನಡಕ್ಕೆ ಸತತಂ ಪ್ರಾಸಂ [ಕಮಾ ೨–೩೦]

ಧರ್ಮಪುತ್ರನಬ್ಜ[ಜ]ಪುತ್ರನಂ ಮುಂದಿಟ್ಟೊಡಗೊಂಡು [ಪಂಭಾ ೬–೧೧ ಗ]

ಬಸವನೆ ಬಿಲ್ಲ[ಳಾ]ಗಿ, ಹೊಸ ಭಕ್ತಿ ಅಂಬಾಗಿ, ಎಸೆದನಯ್ಯಾ ಆ ಲಿಂಗವನು ಗುಜೆಮಾಡಿ [ಚೆಬವ ೫೧]

ಅಂಗಯ್ಯ ಒಳಗೊಂದು ಅ[ರ]ಳ್ದ ತಲೆಯ ಹಿಡಿದುಕೊಂಡು ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ [ಶಿಶೂ ೨೧]

ಕಾಯ[ಕ]ವೆ ಕೈಲಾಸ [ಗೂಶೂ ೨೫೯]

ಬಜಿ[ಲು]ಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು [ಅಕ್ಕ ೪೯]

ಪದ್ಮಾವತಿ [ವಿ]ರಾಜಿಸಿದಳಮಮ ಕಾಮನ ಕೈಯ ಸರಳಿನಂತೆ [ಸೋಚಾ ೨-೪೬]

ಕಾಣದಂತೆಂದು[ಂ] ಕಣ್ಗಳ್ ತಮ್ಮ ಕಾಡಿಗೆಯಂ [ಕಮಾ ೧-೪]

ಮು[ಂ]ಡಿಗೆಯನೆತ್ತಿರೋ ಭ್ರಷ್ಟ ಭವಿಗಳಿರಾ [ಶಿವ ೪೦೫]

ಆ[ತ್ಮ*]ನ ಕಳೆಯ ತಿಳಿವಲ್ಲಿ [ಶಿವ ೩೦೪]

ಜ್ಞಾನವೆಂಬ ದರ್ವಿಯಲ್ಲಿ ಘ[ಟ್ಟಿ*]ಸಿ ಪಕ್ವಕ್ಕೆ ತಂದು [ಚೆಬವ ೯೭೨]

ಘಟ ಸಂ[ಸ್ಕಾ*]ರದಲ್ಲಿ ಪಟಲ ಹಜೆವುದೇ? [ಚೆಬವ ೧೧೧೧]

ಶೋಕದಲಿ ಹಳವಿಸಲಿಕದು ತಾ [ಶ್ಲೋ*]ಕ ಪದ್ಧತಿಯಾಗಲ್

[ತೊರಾ, ಬಾಲಕಾಂಡ ೨-೧೬]

೨. ಛಂದಕ್ಕೆ ಬಾರದೆಂದಜೆ[**ದೊಂ**]**ದೊಂ**ದಜೊಳೊಂದಿ [ಕಮಾ ೧-೯೫]

ಸ್ವರಾದಿಕ [**ಕ**]ಳಾಗುಣಂ ಚತುಃಷಷ್ಟಿವಿಧಂ [ಕಮಾ ೧-೧೦೭]

ಅನಿಲಾಹ**ತ** [**ಕೇತ**]ನಾಳಿ ಸೊಗಯಿಸುತಿರ್ಕು [ಕಮಾ ೧-೯೬]

ರಘುಕು[**ಲ**] ಲಲಾಮ ಲಕ್ಷ್ಮೀಧರನೊಳ್ [ಕಮಾ ೨-೯೩]

ಅಜಗಣ್ಣನಿಕ್ಕಿ**ದ** [**ದ**]ಸರಿದೊಡಕಿಂಗೆ ಬೆಜಗಾದೆ [ಶಿವ ೩೪೦]

೩. ಕಿಚ್ಚಿನ ಕಿ[ೀ]ಡಿಯಂದದೆ [ಕಾದಂಬರಿ ೯-೨೨]

ಇದು ಸಿ[ೀ]ತಕರನಾಡಿ ಬೆಳೆದ ನಿಳಯವೊ [ಸೋಚಾ ೧-೧೧೦]

ಅಂಕೊ[ೀ]ಲೆಯ ಬೀಜ ತರುವನಪ್ಪುವಂತೆ ಅಪ್ಪುವರಯ್ಯಾ [ಚೆಬವ ೭೪೯]

ಗಾಂಗೇಯನ ಮಾತಂ ಮನದೆ[ೀ]ಗೊಂಡು [ಪಂಭಾ ೬-೪೧ ಗ]

ಈ ಚೌಕ ಕಂಸಗಳಲ್ಲಿಯ ಅಕ್ಷರ, ಒತ್ತು, ದೀರ್ಘಗಳು ಕೆಲವು ಹಸ್ತಪ್ರತಿಗಳಲ್ಲಿ ಲೋಪವಾಗಿವೆ. ೧, ೨, ೩ನೆಯ ಗುಂಪುಗಳಲ್ಲಿಯ ಇಂಥ ಲೋಪಗಳಿಗೆ ಕ್ರಮವಾಗಿ ಅನವಧಾನ, ಅಕ್ಷರ ಸಾದೃಶ್ಯ, ಬರವಣಿಗೆಯ ರೀತಿದೋಷಗಳು ಕಾರಣವೆನಿಸಿವೆ.

ಪದ, ಪದಸಮೂಹ:

೧. ಕಾವೇರಿಯಿಂದಮಾ ಗೋದಾವರಿ [ವರ]ಮಿರ್ದ ನಾಡದಾ ಕನ್ನಡದೊಳ್

[ಕಮಾ ೧–೩೬]

ಈಗಳ್ ನೀನಿರ್ದು ನೋನಿಸೆ [ನೋಂತು] ಮಹಾಬಲಂ [ಆದಿ ೨–೪೪]

ನೆಱೆ ನಂಬಿದೆಯಾದಡೆ ತನ್ನನೀವ ಕೂಡಲ [ಚೆನ್ನ]ಸಂಗಮದೇವ [ಚೆಬವ ೪೧೫]

೨. ಜರದ್ವಧೂವಿಷಯ ಸುರ[ತ ರಸರ]ಸಿಕತೆವೋಲ್ [ಕಮಾ ೧–೫೦]

ದುಷ್ಕರ[ಮೆ ವಿರುದ್ಧಾರ್ಥ]ಮೆಂಬುದಾದಂ ದೋಷಂ [ಕಮಾ ೧–೮೧]

ಮತ್ತಗಜಂ ಪರಿತಂದು [ಬಲವಂದು] ನಿಂದು [ನಂಬಿ ೧೦]

ಮುನಿಜನದ ಪರಮಾನುರಾಗಮಂ ಪೆರ್ಚಿಸಿ [ಕಾಮಾನುರಾಗಮಂ ಬೆರ್ಚಿಸಿ]

ತದಾಶ್ರಮದೊಳ್ [ಪಂಭಾ ೧–೧೧೬ ಗ]

ಎಲ್ಲಿಯುಂ ಪರಿವ ಪೆರ್ದೊರೆಯಿಂದ [ಕೆರೆಯಿಂದ]ಲೆಲ್ಲಿಯುಂ [ಜೈಭಾ ೩–೨]

೩. ಪಂಡಿತಜನಮೆಲ್ಲಂ ಮೆಚ್ಚಿ [ಬಿಚ್ಚಳಿಸಿ] ಪೊಗೞ್ದೊಡೆ [ವಡ್ಡಾ ೪]

ಕೆಲದ ಕೇರಿಯ [ಸಕ್ಕಜದ] ಮಕ್ಕಳೊಡನೊಕ್ಕಲಿಕ್ಕ [ನಂಬಿ ೯]

ಮಕುಟವರ್ಧನರ [ಮಂತಣದ] ನಡುವೋಲಗಂಗೊಟ್ಟು ಕುಳ್ಳಿರ್ದ [ನಂಬಿ ೧೦]

ಈ ಚೌಕ ಕಂಸಗಳಲ್ಲಿಯ ಪದ, ಪದಸಮೂಹಗಳು ಕೆಲವು ಹಸ್ತಪ್ರತಿಗಳಲ್ಲಿಲ್ಲ. ೧, ೨, ೩ ನೆಯ ಗುಂಪುಗಳಲ್ಲಿಯವು ಕ್ರಮವಾಗಿ ಅನವಧಾನ, ಅಕ್ಷರಸಾದೃಶ್ಯ, ಅರ್ಥಕಾಠಿನ್ಯ ಕಾರಣವಾಗಿ ಲೋಪಗೊಂಡಿವೆ.

ಪಾದ, ಪಾದಸಮೂಹ:

೧. ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂ

ಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರನಂದನಾ

[ವಳಿಗಳೆ ನಂದನಾವಳಿಗಳಂ ಬಳಸಿರ್ದ ಮದಾಳಿ ಸಂಕುಲಂ

ಗಳೆ ವಿಷಯಂಗನಾ ಲುಳಿತ ಕುಂತಳದಂತೆವೊಲೊಪ್ಪಿ ತೋಱುಗುಂ॥

ಲಿಳಿತ ವಿಚಿತ್ರ ಪತ್ರ ಫಲ ಪುಷ್ಪಯುತಾಟವಿ ಸೊರ್ಕಿದಾನೆಯಂ

ಬೆಳೆವುದು ದೇವಮಾತೃಕಮೆನಿಪ್ಪ ಪೊಲಂ ನವಗಂಧಶಾಳಿಯಂ]

ಬೆಳೆವುದು ರಮ್ಯನಂದನವನಾಳಿ ವಿಯೋಗಿ ಜನಕ್ಕೆ ಬೇಟದಿಂ
ಬೆಳೆವುದು ನಾಡಕಾಡ ಬೆಳಸಿಂ ಬೆಳಸಾ ವಿಷಯಾಂತರಾಳದೊಳ್॥

[ಪಂಭಾ ೧-೫೩, ೫೪]

ಓವಿ ನಿರ್ಗುಣಿಯಾಗಿ ಸಗುಣವ
ನೀವನಂ ಪ್ರಣವಾತ್ಮನಾಗೆ ಸ
ದಾವಯವದಿಂದೊಂದಿದವನಂ ಕಂಡು ಶರಣೆನುತ।
[ದೇವ ಮಮ ಗುರುಲಿಂಗಜಂಗಮ
ದೇವಯೆನುತಂ ಬಸವನಾ ಪ್ರಭು
ದೇವರ ಶ್ರೀಪಾದ ಪದ್ಮಕ್ಕರ್ಚನೆಯ ಮಾಡಿ]॥ [ಬಪು ೭-೧೩]

[ಸುಖವನಱಿಯದ ಹೆಣ್ಣು ಸೂಳೆಯಾದಳು
ಲಿಂಗವನಱಿಯದಾತ ಶೀಲವಂತನಾದ].
ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ.
ಮಾಡಲಾಗದು ನೇಮವ ನೋಡಲಾಗದ ಶೀಲವ
ಸತ್ಯ ಸಹಜವೇ ಸತ್‌ಶೀಲ ಗುಹೇಶ್ವರನನಱಿಯ ಬಲ್ಲವಂಗೆ. [ಅವ ೩೫೮]

೨. "ವಿಸ್ತೀರ್ಣ ಗುಹೆಯುಂಟದಱ ಬಾಗಿಲಂ ಮುಚ್ಚಿರ್ದ ಪಿರಿಯ ಶಿಲೆಯಂ ಕಳೆದ ದಱೊಳಗೆ ಪೊಕ್ಕು ಹಾರಮಂ ಕೊಂಡು [ಪೊಟಲ ಜನಮೆಲ್ಲಮನೆಂದಂ ನಿಮ್ಮ ನಿಮ್ಮ ಕಸವರಮಪ್ಪುದನಾರಯ್ದು ಪಲ್ಲಟಿಸಲೀಯದೆ ನೋಡಿಕೊಳ್ಳಿಮೆಂದು ತೋಱಿದೊಡವರುಂ ತಂತಮ್ಮ ಕಸವರಮನೆಲ್ಲಮನಾರಯ್ದು ಕೊಂಡರ್ ಮತ್ತೆ ವಿದ್ಯುಚ್ಚೋರನುಂ ಹಾರಮಂ ಕೊಂಡು] ಪೋಗಿಯರಸಂಗೊಪ್ಪಿಸಿದೊಡೆ [ವಡ್ಡಾ ೧೨೬]

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ,
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ,
[ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ] ಕೂಡಲಸಂಗಮದೇವಾ." [ಬವ ೧೫೫]

ಈ ಚೌಕ ಕಂಸಗಳಲ್ಲಿಯ ಪಾದ, ಪಾದಸಮೂಹ ಕೆಲವು ಹಸ್ತಪ್ರತಿಗಳಲ್ಲಿಲ್ಲ. ಇಲ್ಲಿಯ ೧ ಮತ್ತು ೨ನೆಯ ಗುಂಪಿನ ಲೋಪಗಳಿಗೆ ಕ್ರಮವಾಗಿ ಅನವಧಾನ, ಅಕ್ಷರಸಾದೃಶ್ಯ ಕಾರಣವೆನಿಸಿವೆ.

ಪದ್ಯ, ಪದ್ಯಸಮೂಹ:

೧. [ಉರದೊಳ್ ಫಣಿ ಕರದೊಳ್ ಬಿಲ್

ಶಿರದೊಳ್ (ತೊ)ಱ್ ತೊಱೆಯ ಕೆಲದೊಳೆಸೆದಿರೆ ಪೆಱ್ ಮುಂ।

ಗೊರಲೊಳ್ ಕಱ್ ಮಱೆಯಿಲ್ಲದೆ

ದೊರೆಕೊಳೆ ಮೃಡನಡಿಗೆ ಹರಿಗನೆಱಗಿದನಾಗಳ್]॥

ವ। ಅಂತೆಱಗಿ ಪೊಡವಟ್ಟು [ಪಂಭಾ ೮–೨೪]

೨. ಬಳೆದ ನಿತಂಬದೆ ಕಾಂಚೀ

ಕಳಾಪಮಂ ಕಟ್ಟಲಮಣಮೆ ನೆಱೆಯದಿದೆಂದ।

ಗ್ಗಳಿಸಿ ಕುಳಿಕೆಗಳಿನೇಂ ಕ

ಣ್ಗೊಳಿಸಿದುದೋ ಸುಭಗೆಯಾದ ಸುದತಿಯ ಗರ್ಭಂ॥

[ವ। ಅಂತು ತೆಕ್ಕನೆ ತೀವಿದ ಮೈಯೊಳಲರ್ದ ಸಂಪಗೆಯರಲಂತೆ ಬೆಳರ್ತ

ಬಣ್ಣಂ ಗುಣಾರ್ಣವಂಗೆ ಮಾಡಿದ ಬಣ್ಣದಂತೆ ಸೊಗಯಿಸಿ ಬಳೆದು,

ತುಡಗೆಗಳೊಳ್ ಸರಿಗೆಯುಮಂ

ಕಡುವಿಣ್ಣಿತ್ತೆನಿಸಿ ನಡೆದುಮೋರಡಿಯನಣಂ।

ನಡೆಯಲುಮಾಱದೆ ಕೆಮ್ಮನೆ

ಬಿಡದಾರಯ್ವನಿತುಮಾಗೆ ಬಳೆದುದು ಗರ್ಭಂ]॥

ವ। ಅಂತಾ ಬಳೆದ ಗರ್ಭದೊಳ್ ಸಂಪೂರ್ಣ ಪ್ರಸವಸಮಯಂ

ದೊರಕೊಳೆ.......... [ಪಂಭಾ ೧–೧೪೩, ೧೪೪]

ಈ ಚೌಕ ಕಂಸಗಳಲ್ಲಿಯ ಭಾಗ ಕೆಲವು ಪ್ರತಿಗಳಲ್ಲಿಲ್ಲ. ಇಲ್ಲಿಯ ೧ನೆಯ ಗುಂಪಿನ ಲೋಪಗಳಿಗೆ ಅನವಧಾನ, ೨ನೆಯ ಗುಂಪಿನ ಲೋಪಗಳಿಗೆ ಅಕ್ಷರದ ರೂಪಸಾದೃಶ್ಯ ಕಾರಣವಾಗಿವೆ. ಇವಲ್ಲದೆ ತನಗೆ ಅನವಶ್ಯವೆನಿಸಿದ ಕೆಲವು ಪದ್ಯಗಳನ್ನೂ ಅಭ್ಯಾಸಿ ಕೈಬಿಡಬಹುದು. ಈ ಮಾತಿಗೆ ಶಬ್ದಮಣಿದರ್ಪಣದ ಹಲವು ಹಸ್ತಪ್ರತಿಗಳಲ್ಲಿ ಕಂಡುಬಾರದ

'ನಡೆದುದೆ ಮಾರ್ಗಂ..........'

'ಸಿರಿಗೀಕ್ಷಿಪ ರಸಚಿತ್ರಂ.........'

'ಆರ್ಯನ ಯಾದವಕಟಕಾಚಾರ್ಯನ...............'

'ಗಮಕ ಸಮಾಸದಿಂ ....'

ಎಂಬ ಪ್ರಶಸ್ತಿ ಪದ್ಯಗಳನ್ನು ಹೆಸರಿಸಬಹುದು.

ಸಂಧಿ, ಸಂಧಿಸಮೂಹ:

ಪಾಠಲುಪ್ತತೆಯ ಪರಮಾಧಿ ನಿದರ್ಶನವಿದು. ಕುಮಾರವ್ಯಾಸ ಭಾರತ ಮತ್ತು ಗಂಗನ ಕುಮಾರರಾಮನ ಸಾಂಗತ್ಯ ಮೊದಲಾದ ಜನಪ್ರಿಯ ಮತ್ತು ಬೃಹತ್ ಕೃತಿಗಳಲ್ಲಿ ಇಂಥ ಲೋಪ ಕಾಣುತ್ತದೆ. ಕೆಲವು ಸಲ ತಮ್ಮ ಅವಶ್ಯಕತೆಗನುಗುಣವಾಗಿ ಒಂದು ಕೃತಿಯ ಕೆಲಭಾಗವನ್ನು ಬಿಟ್ಟು ಬರೆದುಕೊಳ್ಳಬಹುದು. ಇದಕ್ಕೆ ಉದಾಹರಣೆಯಾಗಿ ಶಬ್ದಮಣಿದರ್ಪಣದ ಕೆಲವು ಹಸ್ತಪ್ರತಿಗಳಲ್ಲಿ 'ಧಾತು ಪ್ರಕರಣ' ಇಲ್ಲದಿರುವುದನ್ನು ಹೇಳಬಹುದು.

ಆಗಮ:

ಮೂಲಪಾಠವನ್ನು ಧಕ್ಕೆಗೊಳಿಸದೆ ಬಂದು ಸೇರುವ ಹೆಚ್ಚಿನ ಪಾಠ ಆಗಮ. ಅನವಧಾನ, ಅನ್ಯಥಾಜ್ಞಾನ, ಅರ್ಥಸ್ಪಷ್ಟತೆ ಮತ್ತು ಪುನರ್ಲೇಖಗಳ ಮೂಲಕ ಇದು ಅಕ್ಷರ, ಪದ, ಪಾದ, ಪದ್ಯ, ಸಂಧಿಗಳ ಪ್ರಮಾಣದಲ್ಲಿ ತಲೆದೋರುತ್ತದೆ.

ಅಕ್ಷರ, ಅಕ್ಷರಸಮೂಹ:

೧. ಗುಣಾರ್ಣವನ ಪುಟ್ಟಿದೊಸಗೆಯೊಳಗೆ[ಗೆ] ಮರುಳ್ಗೊಂಡು [ಪಂಭಾ ೨-೧೧]

ಮುತ್ತು[ಂ] ಪವಳಂ ಬೆರಸಿದವೊಲಾಯ್ತು [ಪಂಭಾ ೬-೧೦]

ಆವನ ವಿ[ದ]ನೋದ ಮಾತ್ರದೊಳೀ ಸಮಸ್ತ ಭುವನಾವಳಿಗಳ್ {ಜೈಭಾ ೪-೬೨]

೨. ಧೃಷ್ಟದ್ಯುಮ್ನನ ಕ[ವ]ಚ ನಿಗ್ರಹ ಕರವಿಲುಳಿತ ಮೌಳಿಯಾಗಿರ್ದ

ಭಾರದ್ವಾಜನಿರವಂ ರಾಜರಾಜಂ ನೋಡಿ [ಗದಾ ೪-೪೮ ಗ]

ಭೂಪತಿಗೆ ಕಪ್ಪ[ರ]ವನಿತ್ತು [ಕಮಾ ೧-೧೧೫]

ಅಱಿಯದವರಿಗೆ ಒಳ್ಳೆ[ಯ] ಹೆಡೆಯನೆತ್ತಿ ತೋಱುವಂತೆ ಬೊಳ್ಳೆಗನ ಭಕ್ತಿ [ಬವ ೧೧೧೮]

ಓದಿತ್ತು ಕಾಣಿರೋ ಶು[ನ]ಕನು [ಬವ ೧೪೩]

ಅಂಗದ ನೋಟವು ಸಿಂಗ[ರ]ದ ಗಾತ್ರ [ಬವ ೪೨]

ಬಡಪಶು ಪಂಕ[ಜ]ದಲ್ಲಿ ಬಿದ್ದರೆ [ಬವ ೫೩]

೩. ಸಂತೆಯ ಗುಡಿ[ಸ]ಲ ಸೂಳೆಗೆ ಕೊಂತವಳವಡುವುದೆ [ಬವ ೧೦೦]

ಮೇಲಣ ಮೂರೂ ಗುಂಪಿನ ಚೌಕ ಕಂಸಗಳಲ್ಲಿಯ ಪಾಠಗಳು, ಕ್ರಮವಾಗಿ ೧ ಅನವಧಾನ, ೨ ಅನ್ಯಥಾಜ್ಞಾನ, ೩ ಅರ್ಥಸ್ಪಷ್ಟತೆ ಕಾರಣವಾಗಿ ಉಂಟಾದ ದೋಷರೂಪದ ಆಗಮಗಳು.

ಪದ, ಪದಸಮೂಹ:

೧. ಮುಗಿಲಂ ಮುಟ್ಟುವ [ಮುಟ್ಟುವ] ಪೆರ್ಮೆ [ಧರ್ಮ ೫-೪]

ಮಹಿಯ[ಮಹಿಯ]ನಿಂತಾಳ್ದಡಂ ಜಸಂ ಕಾಯದು [ಜೈಭಾ ೧-೧೯]

೨. ಕಂಬಳಿಯಲ್ಲಿ ಕಣಕವ ನಾದಿ [ಕೂದಲನಜಿಸುವಂತೆ] ದಂತೆ [ಬವ ೨೬೦]

ಹುಲಿಯ ಹಾಲು ಹುಲಿ[ಯ ಮರಿ]ಗಲ್ಲದೆ [ಬವ ೬೬೫]

ನಾ ಹೊತ್ತ ಹುಳ್ಳಿಯ[ಹೊರೆಯ]ನಂಬಲಿಗೆ ಕೊಂಬುವರಿಲ್ಲ. [ಬವ ೪೭೦]

[ಬೀಜವ] ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ [ಬವ ೩೯೮]

ಏತ[ದ ಗಣಿ] ತಲೆವಾಗಿದಡೇನು ಗುರುಭಕ್ತನಾಗಬಲ್ಲುದೆ? [ಬವ ೧೨೫]

ಹಗಹದಲ್ಲಿ ಬಿದ್ದವರ ಮೇಲೆ ಒರಳ [ಕಲ್ಲು] ನೂಕುವರೆ? [ಬವ ೩೧೬]

ಬತ್ತೀಸರಾಗವ ಹಾಡಯ್ಯ, ಉರದಲೊತ್ತಿ ಬಾರಿಸು [ನಿನ್ನ ಜಯಗಾನವನ್ನು]

ಕೂಡಲಸಂಗಮದೇವ [ಬವ ೪೯೮].

ತಂದೆ ನೀನು [ಎನಗೆ] ತಾಯಿ ನೀನು [ಎನಗೆ]

ಬಂಧು ನೀನು [ಎನಗೆ] ಬಳಗ ನೀನು [ಎನಗೆ] [ಬವ ೪೮೦].

[ಎನ್ನ] ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ

[ಎನ್ನ] ನಯನದಲ್ಲಿ ನಿಮ್ಮ ಮೂರುತಿ ತುಂಬಿ

[ಎನ್ನ] ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ

[ಎನ್ನ] ಮನದಲ್ಲಿ ನಿಮ್ಮ ನೆನಹು ತುಂಬಿ[ಬವ ೪೯೧]

ಇಲ್ಲಿಯ ಎರಡೂ ಗುಂಪಿನ ಚೌಕ ಕಂಸಿನೊಳಗಣ ಪದಗಳು ಕ್ರಮವಾಗಿ ೧ ಅನವಧಾನ, ೨ ಅರ್ಥಸ್ಪಷ್ಟತೆ ಕಾರಣವಾಗಿ ಉಂಟಾದ ದೋಷರೂಪದ ಆಗಮಗಳು.

ಪಾದ, ಪಾದಸಮೂಹ:

ಕೂಡಲ ಚೆನ್ನಸಂಗಯ್ಯ [ಸಾವಿರಕೊಬ್ಬ ಸತ್ಯ], ಲಕ್ಷಕೊಬ್ಬ ಭಕ್ತ,

ಕೋಟಿಗೊಬ್ಬ ಶರಣ [ಚೆಬವ ೮೭೭]

[ಊರಿಗೆಯಾರವೆಯೆ ಶೃಂಗಾರ] ನೀರಿಂಗೆ ನೈದಿಲೆಯೆ ಶೃಂಗಾರ [ಬವ ೭೪]

ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲಯ್ಯಾ

ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲಯ್ಯಾ

[ಅಭಿಷೇಕಪ್ರಿಯ ಶಿವನೆಂಬರು ಅಭಿಷೇಕಪ್ರಿಯ ಶಿವನಲ್ಲವಯ್ಯಾ][ಬವ ೧೮೧]

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ

ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ

ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ

ಛಲಬೇಕು ಶರಣಂಗೆ ಲಿಂಗಜಂಗಮ ಒಂದೇ ಎಂಬ

ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ

[ಛಲಬೇಕು ಶರಣಂಗೆ ಪರನಾರಿ ನಿಗ್ರಹವೆಂಬ

ಛಲಬೇಕು ಶರಣಂಗೆ ಜಂಗಮಕ್ಕೆ ನೀಡಬೇಕೆಂಬ]

ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ [ಬವ ೬೭೬]

ಇಲ್ಲಿಯ ಚೌಕ ಕಂಸಗಳೊಳಗಿನವು ವಿಷಯ ವಿಸ್ತರಣೆ, ವಿಷಯಸ್ಪಷ್ಟತೆ ದೃಷ್ಟಿಯಿಂದ ಮಾಡಿಕೊಂಡ ಆಗಮಗಳು. ಸಾಮಾನ್ಯವಾಗಿ ಈ ಪಾದ, ಪಾದಸಮೂಹ ರೂಪದ ಆಗಮವು ವಚನ ಕೀರ್ತನೆ ರಗಳೆ ಮತ್ತು ಗದ್ಯದಲ್ಲಿ ಹೆಚ್ಚು; ಪದ್ಯದಲ್ಲಿ ಇಲ್ಲವೆನ್ನುವಷ್ಟು ಕಡಿಮೆ.

ಪದ್ಯ, ಪದ್ಯಸಮೂಹ:

ಪದ್ಯ, ಪದ್ಯಸಮೂಹ ರೂಪದ ಆಗಮ ಜನಪ್ರಿಯ ಕನ್ನಡಕಾವ್ಯಗಳಲ್ಲಿ ಸಹಜಕ್ರಿಯೆ. ವರ್ಣನಾ ವಿಭಾಗದಲ್ಲಿ ಇದಕ್ಕೆ ಹೆಚ್ಚು ಅವಕಾಶ. ಕುಮಾರವ್ಯಾಸ ಭಾರತ, ಕುಮಾರ ವಾಲ್ಮೀಕಿ ರಾಮಾಯಣ, ಹರಿಶ್ಚಂದ್ರ ಕಾವ್ಯ, ಕುಮರರಾಮನ ಸಾಂಗತ್ಯಗಳು ಇದಕ್ಕೆ ನಿದರ್ಶನ. ಮುಕ್ತಕ, ಬಿಡಿಗೀತಗಳಲ್ಲಿಯೂ ಈ ಪ್ರಕ್ರಿಯೆ ಅಧಿಕ. ಸರ್ವಜ್ಞನ ವಚನ, ಸುಭಾಷಿತಗಳು, ಸೂಕ್ತಿ ಸುಧಾರ್ಣವ, ಶರಣರ ವಚನ. ದಾಸರ ಕೀರ್ತನೆಗಳು ಇದಕ್ಕೆ ಉದಾಹರಣೆ.

ಹರಿಶ್ಚಂದ್ರಕಾವ್ಯದ ಚಂದ್ರಮತಿಪ್ರಳಾಪ ಸಂದರ್ಭದಲ್ಲಿ ಬರುವ ರಗಳೆಯ ಮಾದರಿಯಲ್ಲಿ ಯಾರೋ ಕಟ್ಟಿದ ಒಂದು ರಗಳೆ, ಕುಮಾರವ್ಯಾಸ ಭಾರತದ ಕ್ರಿ.ಶ. ೧೫೫೪ರ ಒಂದು ಹಸ್ತಪ್ರತಿಯಲ್ಲಿ ಸಿಗುತ್ತದೆ. ಸೂಕ್ತಿಸುಧಾರ್ಣವ, ಛಂದೋಂಬುಧಿಗಳಲ್ಲಿ ಆಮೇಲೆ ಬಂದ ಕವಿಗಳ ಪದ್ಯ ಸೇರಿಕೊಂಡಿವೆ. ಹರಿಶ್ಚಂದ್ರಕಾವ್ಯ–ಸೋಮನಾಥ ಚಾರಿತ್ರ, ಕುಸುಮಾವಳಿ–ಶಾಂತೀಶ್ವರ ಪುರಾಣ, ಕವಿರಾಜಮಾರ್ಗ–ಛಂದೋಂಬುಧಿ–ಕವಿಜಿಹ್ವಾಬಂಧನಗಳಲ್ಲಿ ಆಗಮ ಮತ್ತು ನಿರ್ಗಮ ರೂಪದ ಪರಸ್ಪರ ಪದ್ಯ ಸಾಗಾಟ ಎದ್ದುಕಾಣುತ್ತಿದೆ. ಕೆಲವು ಸಲ

ಒಂದು ಸಾವಿರದೊಂದು ಶತಹ

ನ್ನೊಂದು ಪದವೆಂದೆಂಬ ಪರುಷದ

ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯೆಂಬ।[೪೭]

ಎಂದು ಮುಂತಾಗಿ ಕವಿ, ತನ್ನ ಕೃತಿಯ ಪದ್ಯ ಸಂಖ್ಯೆಯನ್ನು ನಿರ್ದಿಷ್ಟವಾಗಿ ಎಣಿಸಿ ಹೇಳಿದ್ದರೂ, ಅಲ್ಲಿ ಆಗಮರೂಪದ ಪದ್ಯಗಳು ಸೇರಿಕೊಂಡಿವೆ. ಸಾಲದುದಕ್ಕೆ ಅಷ್ಟಕ, ಶತಕಗಳಲ್ಲಿ ಪದ್ಯ ಸಂಖ್ಯೆ ಎಂಟು ಮತ್ತು ನೂರಕ್ಕೆ ನಿಲ್ಲದೆ, ಪರಿವರ್ಧಿಸಿದುದಕ್ಕೆ ನೂರೆಂಟು ಉದಾಹರಣೆಗಳು ಸಿಗುತ್ತವೆ.

---

೪೭. ಪ್ರಲೀ ೨೫–೨೫

ಸಂಧಿ, ಸಂಧಿಸಮೂಹ:

ಸಂಧಿಗಟ್ಟಲೆ ನಿರ್ಗಮಕ್ರಿಯೆ ನಡೆವಂತೆ, ಆಗಮಕ್ರಿಯೆಯೂ ನಮ್ಮ ಕೃತಿಗಳಲ್ಲಿ ನಡೆದುದುಂಟು. ವಿಸ್ತಾರವಾದ ಕಾವ್ಯಗಳಲ್ಲಿ ಇದಕ್ಕೆ ಅವಕಾಶ ಹೆಚ್ಚು. ಗದುಗಿನ ಭಾರತದ ಪೌಲೋಮವರ್ಪ – ಆಸ್ತೀಕಪರ್ವ–ಐರಾವತ ಸಂಧಿಗಳು, ಭರತೇಶ ವೈಭವದ ಸ್ತ್ರೀರತ್ನಸಂಭೋಗ ಸಂಧಿ–ಇವು ಕ್ರಮವಾಗಿ ಕುಮಾರವ್ಯಾಸ ಮತ್ತು ರತ್ನಾಕರವರ್ಣಿಕೃತವಾಗಿರದೆ ತರುವಾಯ ಸೇರಿಕೊಂಡವು ಎಂದು ಕೆಲವು ವಿದ್ವಾಂಸರ ಮತ.

ಇದೇ ರೀತಿ ಸಿಂಗಿರಾಜ ಪುರಾಣದ"ಜ" ಪ್ರತಿಯಲ್ಲಿ ಮಾತ್ರ ಸಿಗುವ ಅನುಬಂಧ ೩ ಮತ್ತು ೪ ರಲ್ಲಿಯ ಎರಡು ಸಂಧಿಗಳು, ಕುಮಾರವ್ಯಾಸ ಭಾರತದ ವಿರಾಟಪರ್ವದಲ್ಲಿ ಬರುವ ಜಟ್ಟಿಗಳ ಕಾಳಗವನ್ನು ವರ್ಣಿಸುವ ಒಂದು ಸಂಧಿ[೪೮]–ಇವು ಪ್ರಕ್ಷಿಪ್ತಗಳೆಂದು ಸಂಪಾದಕರ ಊಹೆ.

ಆದೇಶ:

ಒಂದು ಕೃತಿಯ ಮೂಲಪಾಠಕ್ಕೆ ಪ್ರತಿಯಾಗಿ ಹೊಸಪಾಠ ಪ್ರತಿನಿಧಾನವಾಗುವುದು ಆದೇಶ. ಈ ಪ್ರತಿನಿಧಾನ ಕ್ರಿಯೆ ಅಕ್ಷರ, ಪದ, ಪಾದ, ಪದ್ಯ ಮತ್ತು ಸಂಧಿ ಪ್ರಮಾಣದಲ್ಲಿ ತಲೆದೋರಬಹುದು.

ಅಕ್ಷರ, ಅಕ್ಷರಸಮೂಹ :

೧. ಎನಿತಳವುಳ್ಳೊಡಂ ದ್ವಿಜನ ಗಂಡಗುಣಕ್ಕಗಿವನ್ನರಾರೊ [ಪಂಭಾ ೧೨–೪೧] (ಜೆ)

ಕಂದರ್ಪ ಮದಾಂಧ ಸಿಂಧುರದ ವಿಸಟಂಬರಿಯಿಂ [ಧರ್ಮ ೨–೧೧೨೭] (ಯಂ)

ರಜನಿಯೊಳ್ ಬಳಿಕ ರತ್ನಪುರವಂ ಪೊಕ್ಕು [ಜೈಭಾ ೨೫–೨] (ಅ)

೨. ಜಲದೇವತೆಗಳ್ ನಿಜೆವಿಡಿದುಡಲ್ ನಿಮಿರ್ಚಿದ ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್ [ಪಂಭಾ ೫–೫೬](ದ)

ನೋಟದ ಸುಖ ತಾಗಿ ಕೋಟಲೆಗೊಂಡೆನು [ಅವ ೧೪೬] (ಕಾ)

ನಾ ಹಿಡಿದ ಬಂದಿ ಒಡಬಂದಿಯಾಯಿತ್ತು [ಅವ ೪೭೬] (ಡಿ)

ಹಸಿವುಳ್ಳಾತ ಭಕ್ತನಲ್ಲ, ಬಾಧೆಯುಳ್ಳಾತ ಜಂಗಮನಲ್ಲ [ಅವ ೫೨೭] (ಹು) (ಬೋ)

ಅಳವಱಿಯದ ಭಾಷೆ [ಅವ ೧೩೦] (ಆ)

ಬಱಿಯ ಮಾತಿನ ಬಳಕೆಯ ತೂತಜ್ಞಾನವ ಬಿಟ್ಟು [ಬವ ೧೨೧೫] (ಕ)

ಕೂಡಲಸಂಗನ ಶರಣರ ಸಂಗ ಕರಗಸದ ಬಾಯ ಧಾರೆಯಂತೆ ಅತಿ ಬಿರಿದಯ್ಯಾ [ಬವ ೧೧೫೯] (ರಿ)

---

೪೮. ಕುಭಾ (ಜನಪ್ರಿಯ ಆವೃತ್ತಿ ೧೯೫೮) ತೋರಣ ನಾಂದಿ. ಪು. ೨೮.

೩.	ಕುಪ್ಪಕುಜಿಯಾಡುವ ಮಕ್ಕಳಂತೆ [ಧರ್ಮಾ ೧೩-೭೭] (ರಿ)

ಇಕ್ಕಿದ **ಜೂಟಳ** ತುಂಬುತ್ತ ಕೆಡಹುತ್ತಲಿದ್ದಿತ್ತು [ಚೆಬವ ೧೨೫೮] (ರಾ)

ಪೊನ್ನನ **ಪಂ**ಪನ ಸುಜನೋತ್ತಂಸನ [ಶಮದ ಸೂ ೫](ಹೊ) (ಹಂ)

ಇಲ್ಲಿಯ ಮೂರು ಗುಂಪುಗಳಲ್ಲಿ ಕ್ರಮವಾಗಿ ಅನವಧಾನ, ಅಕ್ಷರಸಾದೃಶ್ಯ, ಅವಸ್ಥಾಭೇದ ಕಾರಣವಾಗಿ, ಒಂದು ಅಕ್ಷರದ ಸ್ಥಾನದಲ್ಲಿ ಇನ್ನೊಂದು ಅಕ್ಷರ ಎಡೆಪಡೆದಿದೆ.

ಪದ, ಪದಸಮೂಹ:

೧.	ದಿಟದ **ನಾಗರ** ಕಂಡರೆ ಕೊಲ್ಲೆಂಬರಯ್ಯಾ [ಬವ ೧೯೪] (ಹಾವು)

ಬಸುಜಿಒಳಗಣ **ಶಿಶು** ಬಸುಜಿ ಮುಟ್ಟದಂತೆ [ಚೆಬವ ೧೦೦೩] (ಕೂಸು)

ತೋಡುವ ಹೆಗ್ಗಣ ಮಾಳಿಗೆ ಎಂದಡೆ **ಮಾಣ**ದಯ್ಯ [ಬವ ೭೮] (ಬಿಡ)

ಸರ್ಪ **ದಷ್ಟ**ವಾದಡೆಯೂ ಸಾಯರು ನಿಶ್ಯಂಕಿತರಾದವರು [ಬವ ೭೭೧] (ಮುಟ್ಟಿ)

ಸುಣ್ಣದ ಕಲ್ಲ **ಮಡಿಲ**ಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ [ಬವ ೬೬೧] (ಒಡಲ)

ಶಿವಪ್ರೇಮವೆಂಬ ಅಂಜನವ**ನೆಚ್ಚಿ**ಕೊಂಬರು [ಬವ ೨೪೩] (ಹಚ್ಚಿ)

ವ್ರತಿಯಾದೊಡೆ **ಅಂಗನೆಯರು** ಮೆಚ್ಚಬೇಕು [ಬವ ೬೭೧] (ಯತಿ)(ಸ್ತ್ರೀಯರುಗಳು)

ವನಿತೆ ನಾನಿನ್ನೊಂದು ಕೇಳುವೆನೆನಗೆ **ಮಾಜದೆ** ಹೇಳು [ಪ್ರಲೀ ೭-೧೬] (ಮುಚ್ಚದೆ)

ವಸಂತಮೇನೆಸೆದುದೋ ಸಂಪೂರ್ಣ **ಸೋಮೋ**ದಯಂ [ಸೂಕ್ತಿ ೮-೨೩೩](ಚಂದ್ರೋ)

೨.	ಕರ್ಮದ ಕತ್ತಲೆಗೆ ಸಿಲ್ಕುವರ ಸೀಮೆಯ **ಹೊಲಬು** ತಾನಲ್ಲ [ಪ್ರಲೀ ೧-೧೩] (ಮಾತು)

ಸಸಿಯ ಮೇಲೆ ಸಾಗರವರಿದಂತಾಯಿತ್ತು [ಬವ ೩೭೭] (ಸಾಸುವೆಯ)

ಲೋಗರ ಮಕ್ಕಳನಿಕ್ಕಿ ನೆಲೆಯ ನೋಡಿಹೆನೆಂದಡೆ [ಚೆಬವ ೮೪೮] (ಒಬ್ಬರ)

ಬಿಲ್ವ ಬೆಳವಲಕಾಯಿ ಒಂದಾಗಿ ಹಿಡಿಯಲು ಬರದಯ್ಯಾ [ಶಿವ ೬೦] (ಬಿಲ್ಲು) [೪೯]

ಮಲಯಜದ **ತಂ**ಗಾಳಿ ಸೋಂಕಿನಲುಳಿದ ಮರ ಪರಿಮಳಿಸುವಂತಿರೆ

[ಪ್ರಲೀ ೯-೩೧] (ಮರ)

ಆಕಾಶವನಡರುವಂಗೆ **ಅಟ್ಟಗೋಲ** ಹಂಗೇಕೆ [ಶಿಶೂ ೧೫೨] (ನಿಚ್ಚಣಿಗೆಯ)

ಸಂತೆಯೊಳಗುಂಟೇ **ಸಮಾಧಿಯ** ಸಂತತಾನಂದದ ಸುಖೋದಯ

[ಪ್ರಲೀ ೬-೧೭] (ಸುಬೋಧೆಯ)

---

೪೯. ಅಕ್ಕನ ವಚನಗಳು (ಎಲ್.ಬಸವರಾಜು) ೧೧೪

ಹಾವಿನಡಿಯನು ಹಾವುಗಳು ನೆಱೆ **ಬಲ್ಲು**ವಲ್ಲದೆ [ಪ್ರಲೀ ೧-೧೨] (ಕಾಂಬು)

ಸರಸ್ವತೀ **ಶಿರೋವ್ಯ**ಥೆಯನದೇಕೆ ಮಾಡುವರೊ ದುಷ್ಕವಿಗಳ್ [ಸೂಕ್ತಿ ೧೭೩] (ಮನೋ)

ಓವಿದ **ಹುಣ್ಣ** ಕಾಗೆ ಕದುಕಿತ್ತು [ಹಕಾ ೧೨-೫೨] (ಹಣ್ಣ, ಕಣ್ಣ)

೩. ಶರ್ಕರೆ ನಾಲಗೆ ನೃಪರೆರ್ದೆ **ಕತ್ತ**ರಿಯೆಂಬುದು [ನೇಮ ೫-೯] (ತ್ತು)

ಹಳ್ಳದೊಳಗೆ **ಹುಳ್ಳಿ** ಬರುತ್ತಿರಲು ತೆರೆನೊರೆಗಳು ತಾಗದಿಪ್ಪುವೆ [**ಶಿಶೂ** ೫] (ಹುಲಿ)

ಇವು ಕ್ರಮವಾಗಿ ೧. ಸುಲಭ ಅರ್ಥ, ೨. ಯೋಗ್ಯ ಅನ್ಯಾರ್ಥ, ೩. ದೋಷಾರ್ಥ ರೂಪದ ಪದಗಳ ಮಟ್ಟಿನ ಆದೇಶಗಳು.

ಪಾದ, ಪಾದಸಮೂಹ:

ತಾಳಿದೆ ಕೊಡಲಿಯ ಕರದಲಿ ನಿಜದಿಂ [ಹಕಾ ೧೨ ರಗಳೆ] (ಕೋಲಕೊಡಲಿಯನು ಪಿಡಿದೆಯೊ ನಿಜದಿಂ, ತಾಳಿದೆ ಕೊಡಲಿಯನೇ ನೀಂ ಭರದಿಂ)

ಸುರಪಭೋಗಾಂತರವನೆಯ್ದದಿಂತುರಿಯೊಳಳಿವಂತಾದುದೇ ಎಂದನು
[ಹಕಾ ೧೦-೧೪] (ತರಣಿಮಂಡಲದುರಿಯೊಳೊಱಗದೀವುರಿಯೊಳಡಗುವ ಬಾಧೆಯಾಯ್ತೆಂದನು)

ಗಟಿಯಿಸಿದರ್ಥಂ ಸಲೆ ಪಾಂ
ಗಟಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ।
^1^ಮೆಟಿಸುಂ ಕೋದಂತಿರ್ಕ್ಕುಂ
ಕಟಲ್ಚಿ ಕಳೆಗೊಂದಿ ಮುಂದೆಬಾರದ ಪದಮಂ^1^॥ [ಕಮಾ ೨-೫]
(^1-1^ಮೆಟಿಸುಂ ಕೋದಂತಿರೆ ಪೇಟ್ವಳಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ)[೫೦]

ನಗೆಗಣ್ ಸೂಸೆ ವಿಲಾಸಮಂ ನಗೆಮೊಗಂ ಲಾವಣ್ಯಮಂ ಬೀಱೆ ಸೀ
ವಗಿಸುತ್ತಂ ಕಚಬಂಧಮಂ ಶಿಥಿಲ ನೀವೀಬಂಧಮಂ ಕಾಂಚಿಯೊಳ್
^1^ತೆಗೆಯುತ್ತುಂ ಪ್ರಣಯಾನುಬಂಧಮಖಿಲೋರ್ವೀಶಂಗೆ ಶೃಂಗಾರಚೇ
ಷ್ಟೆಗಳಿಂ ಕಣ್ಗೆಸೆದಿರ್ದುದೆರ್ದು ಕೆಲದೊಳ್ ನಿಂದಿರ್ದ ಕಾಂತಾಜನಂ [ಸೂಕ್ತಿ ೮-೪೧೨]
(^1-1^ ನೆಗಪುತ್ತುಂ ಸ್ಮರಮಂತ್ರದೇವತೆಯವೊಲ್ ಬಾಹಾಲತಾಂದೋಳನಂ ಬಗೆಯಂ ಬಲ್ಸೆರೆಗೆಯ್ಯೆ ಬಾಲೆ ಮೆಱೆದಳ್ ಲೀಲಾಪದನ್ಯಾಸಮಂ)

ಇಲ್ಲಿ ಪಾದಗಳ ಮಟ್ಟಿನ ಆದೇಶರೂಪದ ಭಿನ್ನಪಾಠಗಳನ್ನು ಲಕ್ಷಿಸಬೇಕು.

---

೫೦. ಶಮದ ಪಾಠಾಂತರಗಳು ಪು. ೪೩.

ಪದ್ಯ, ಪದ್ಯಸಮೂಹ:

ಕವಿಲಿಖಿತ ಪದ್ಯಗಳಿಗೆ ಪ್ರತಿಯಾಗಿ ಬೇರೆ ಪದ್ಯಗಳನ್ನು ಪ್ರತಿನಿಧಾನ ಮಾಡಿದುದಕ್ಕೆ ಅನೇಕ ಉದಾಹರಣೆಗಳನ್ನು ಕನ್ನಡಕೃತಿಗಳಿಂದ ಸಂಗ್ರಹಿಸಬಹುದು. ಇದಕ್ಕೆ ಹೊಣೆ ಸಹೃದಯ. ವರ್ಣನಾ ವಿಭಾಗದಲ್ಲಿ ನಡೆದ ಈ ದಾಳಿ, ಕೆಲವು ಸಲ ಕಥನ ವಿಭಾಗಕ್ಕೂ ಪಸರಿಸಿದೆ.

ಗದಾಯುದ್ಧದ "ಪದಘಾತಕ್ಕಗಿದಳ್ಕಿ ಬಳ್ಕಿ......" ಎಂಬ ಪದ್ಯಕ್ಕೆ ಬದಲು (೮-೧೦) "ಪದಘಾತಕ್ಕವನೀತಳಂ ಕಳಲೆ......" ಎಂಬ, ಕಾವ್ಯವಲೋಕನದ "ಓಹೋ ಇರಲಿಂ......" ಎಂಬ ಪದ್ಯ(೫೦)ಕ್ಕೆ ಬದಲು "ಒಂದೆರಡು ಮೂಱು ನಾಲ್ಕು ......" ಎಂಬ, ಪ್ರಭುಲಿಂಗಲೀಲೆಯ "ಇರುತಲೊಂದಾನೊಂದು ದಿನ...."(೨-೩೦) "ಮದನನೊಂದು ನವೀನ...."(೪-೧೩) ಎಂಬ ಪದ್ಯಗಳಿಗೆ ಬದಲು ಕ್ರಮವಾಗಿ "ಹರನ ವಾಮಾಂಗಲಿ......" "ಇದುವೆ ಸೋಜಿಗ......." ಎಂಬ ಪದ್ಯಗಳು ಕಂಡುಬರುತ್ತವೆ. ಈ ಆದೇಶರೂಪದ ಕ್ರಿಯೆ ಮಂಗಲಪದ್ಯಕ್ಕೂ ಮೈಚಾಚಿದೆ. ಶಬರಶಂಕರ ವಿಳಾಸದ "ಶ್ರೀಮತ್ಕಲ್ಯಾಣರೂಪಂ....." ಎಂಬ ಮಂಗಲಪದ್ಯಕ್ಕೆ ಪ್ರತಿಯಗಿ "ಶ್ರೀಮತ್ಪದ್ಮಾಕ್ಷ........." ಕಂಡುಬರುವುದು ಇದಕ್ಕೆ ನಿದರ್ಶನ.

ಸಂಧಿ, ಸಂಧಿಸಮೂಹ:

ಒಂದು ಕಾವ್ಯದ ಸಂಧಿಗಳನ್ನು ಹೊರತೆಗೆದು ಅವುಗಳ ಸ್ಥಾನದಲ್ಲಿ ಹೊಸ ಸಂಧಿಗಳನ್ನು ಸೇರಿಸಲು ಸಾಧ್ಯವಿದೆ, ಇದು ಮತೀಯ ಕಾವ್ಯಗಳಲ್ಲಿ ನಡೆಯಬಹುದಾದ ಸಹಜಕ್ರಿಯೆ.

ಪಲ್ಲಟ:

ಮೂಲಪಾಠದಲ್ಲಿ ಒಂದರ ಸ್ಥಾನವನ್ನು ಇನ್ನೊಂದು ಪರಸ್ಪರ ಆಕ್ರಮಿಸುವುದು ಪಲ್ಲಟ. ಅಕ್ಷರ, ಪದ, ಪಾದ, ಪದ್ಯ ಮತ್ತು ಸಂಧಿಗಳ ಮಟ್ಟಿಗೆ ಈ ಪಲ್ಲಟಕ್ರಿಯೆ ಕನ್ನಡ ಕೃತಿಗಳಲ್ಲಿ ತಲೆದೋರಿದೆ.

ಅಕ್ಷರ, ಅಕ್ಷರಸಮೂಹ:

ಹುಸಿ ಆಱಿಲೆಯಾಯ್ತು **ಅಗಸ**ನಲ್ಲಿ [ಚಬಲ ೨೨೯] (ಅಸಗ)

ಅಳಿ**ಯಲರಂ** ಗಿಳಿ ಪಣ್ಣಂ [ಶವ ೧-೨೩] (ಯರಲಂ)

ಅರ್ಥಕ್ಕೆ ಧಕ್ಕೆ ತರದ ಈ ಅಗಸ - ಅಸಗ, ಅಲರ-ಅರಲಗಳಲ್ಲದೆ ನಾಳೀಕೇರ-ನಾರೀಕೇಳ, ವಾರಣಾಸಿ-ವಾಣರಾಸಿ ಇತ್ಯಾದಿ ವರ್ಣಪಲ್ಲಟಗಳು ಕನ್ನಡದಲ್ಲಿ ತೀರ ಸಾಮಾನ್ಯ. ಈ ಕ್ರಿಯೆ ಮುಂದುವರಿದು ಅನ್ಯರ್ಥಕ, ಅನರ್ಥಕ ಪಾಠಗಳಿಗೆ ದಾರಿ ಮಾಡಿಕೊಟ್ಟಿದೆ. ಉದಾ:

ಕವಿ **ಜನತಾ** ಪ್ರಯೋಗ ಸಂಬಂಧನದಿಂದ [ಕಮಾ ೧-೭೬] (ತಾ ಜನ)

ಅಂಗಮೆಂಬುದು ನಾಡಲ್ಲಿ **ಚಂಪಾನ**ಗರವೆಂಬುದು ಪೊಟಲ್ [ವಡ್ಡಾ ೧೦೬-೧೧] (ಪಂಚಾ)

ದಾರಕ **ರೂಪ**ದೆ ಜಿನವೃಂದಾರಕನೊಡನೊಡನೆ [ಅಜಿ ೫-೭೨] (ಪೂರ)

ಉರಿವ ಅನಲಂಗೆ ಶತ **ಡೊಂಕು,** ಸಸಿನವೆಂಬುದುಂಟೆ [ಅವ ೧೨೦೨] (ಕೊಂಡು)

ಮೇರುಮಂದಿರದೊಳಗಿದ್ದು **ಜರಗ** ತೊಳೆವ ಚಿಂತೆಯೇಕೆ [ಅವ ೧೦೩] (ಜಗರ)

ಕೂಡಲ ಸಂಗನ ಶರಣರನುಭಾವ **ಗಜವೈದ್ಯವ**ಯ್ಯಾ [ಬವ ೨೪೩–ಬಸವನಾಳ] (ಜಗ)

ಮನೆಗಂಡನ ಮನೆವಾರ್ತೆಯನೇನ ಹೇಳುವೆನವ್ವಾ, ಅಂಗ**ವಿದ್ಯೆಯ**ನೊಲ್ಲ, [ಬವ ೯೧೧] (ದಿವ್ಯವ)

ಬರ್ಪಂ ಗರುಡಧ್ವಜನಸುರಮರ್ದನಂ **ಕೇಳರಸಾ** [ಗಿಕ ೬–೬೫] (ಕೇಳಸುರಾ)

ಭ್ರಮೆಗೊಳಗಾದ **ಮರ್ಕಟ**ಮನದ ಪರಿಯ ನೋಡಾ [ಚೆಬವ ೬೮೩] (ಕರ್ಮಟ)

ನಾದಮೂರ್ತಿಗೆ ಶಿವಜ್ಞಾನಿಗೆ **ವೇದ** ಶಿಖಾಮಣಿಗೆ [ಗಿಕ. ಪು. ೨೨೫] (ದೇವ)

ನವ ಪಲ್ಲವಮೆಟಿಲುತ್ತಿರೆ [ನೇಪು ೫–೫೬] (ವನ

ನಾಗರಕಂ **ರತ** ಕೋವಿದಂ [ಸೂಕ್ತಿ ೮–೩೦೮] (ತರ)

ನಿನ್ನ ವೇಳೆ**ಗಾಯ**ದ ...... ಪಗೆವರೆಂಬವರಿಲ್ಲಿಂದುವರಂ [ಕಕಾ ೧೧೪] (ಯಾಗ)

ಎಮ್ಮೊಳೇತಕೆ ಮನ**ಕತವ** ನೀ ಮಾಡತಿಹೆ [ಪ್ರಲೀ ೭–೮೨] (ತವಕ)

ಭೃಂಗೀಶನುಗ್ರಂ **ಪಿಕ**ಮುಖನಸಿತಗ್ರೀವ ಸುಗ್ರೀವಂ [ಗಿಕ ೧೦–೭೫] (ಕಪಿ)

ಪದ, ಪದಸಮೂಹ:

ಕೂಡಿರ್ದ ಪಂಚೇಂದ್ರಿಯಂಗಳೊಳು **ನಾಲ್ಕಧಮವೊಂದಧಿಕವೇ** [ಹಕಾ ೭–೧೯] (ನಾಲ್ಕಧಿಕವೊಂದಧಮವೇ)

ಕೂಡಲ ಸಂಗಮದೇವಾ **ನೀನೆನಗೆ** ಚಿಕ್ಕ ತಮ್ಮ [ಬವ ೯೦೪] (ನಾ ನಿನಗೆ)

ಕರ್ಣಾಟಕ **ಕವಿಚೂತವನಚೈತ್ರ** [ಜೈಭಾ ೧೫೧೧] (ಚೈತ್ರವನಚೂತ)

ಕಾಲ್ವಿಡಿದೋಪ**ನೋಪಳಂ** ತಿಳಿಪುವುದು [ಸೂಕ್ತಿ ೮–೪೭೮] (ಳೋಪನಂ)

ಅಮಳ್ಗಳ್ **ನಯವಿಕ್ರಮ ಗುಣ**ದಮಳ್ಗಳ್ [ಕಾಲೋ ೫೩೪ ಮೈಸೂರ ಆವೃತ್ತಿ ೧೯೬೭] (ನಯಗುಣ ವಿಕ್ರಮ)

ಸಂಗವೆರಡುಂಟು: **ಒಂದು ಹಿಡಿ, ಒಂದು ಬಿಡು** [ಬವ ೧೩೪] (ಒಂದು ಬಿಡು, ಒಂದು ಹಿಡಿ)

ಜೋಳದ ಪಾಟಿಜೆಯಂ ಬಗೆದರಿಲ್ಲಾ **ದ್ರೌಣಿಯುಂ ದ್ರೋಣನುಂ** [ಕಾಲೋ ೧೪೬] (ದ್ರೋಣನುಂ ದ್ರೌಣಿಯುಂ)

ಗುರು ನುಡಿದನು ಕುಮಾರರಿಗೆ [ಕುಭಾ ೧–೭–೫೯] (ನುಡಿದನು ಗುರು)

ತಳಿರೊಳ್ ನೀನೆ ಬೆಡಂಗನ್ನೆ ನನೆಗಳೊಳ್ ನೀಂ **ನೀಜನ್ನೆ** ಪುಷ್ಪಸಂ

ಕುಳದೊಳ್ ನೀನೆ ವಿಲಾಸಿಯ್ಯೆ ಮಿಡಿಗಳೊಳ್ ನೀಂ **ಚೆಲ್ವನೈ**........
[ಆದಿ ೧೧–೯೬](ಇಲ್ಲಿ ನೀಜನ್ನೈ, ಚೆಲ್ವನ್ನೈ ಪರಸ್ಪರ ಪಲ್ಲಟಗೊಂಡಿವೆ).

೩. ಪಾದ, ಪಾದಸಮೂಹ:

ದೆಸೆಗೆ ಪರ್ವಿದ ವಿಷಂ ಪಶುಪತಿಯ ಕರದೊಳಗೆ

ರಸೆಯನಂಜಿಪ ಗರಳವಹಿಧರನ ಕರದೊಳಗೆ

ಈ ಚರಣಗಳು ನಂಬಿಯಣ್ಣನ ರಗಳೆ[ಪು ೨]ಯ ಒಂದು ಪ್ರತಿ(ಕ)ಯಲ್ಲಿ ಹಿಂದು ಮುಂದಾಗಿವೆ.

"ನೀತನೇ ಸತ್ಯಣ್ಣನೆಂಬಾತನೆಲೆ ಸಿದ್ಧರಾಮೇಶ ಕೇಳೆಂದನು"

"ನೀತನರುವಿನ ಮಾರಿತಂದೆ ಕೇಳೀತಂ ಪ್ರಸಾದಿ ಭೋಗಣ್ಣ ತಂದೆ"

ಚೆನ್ನಬಸಪುರಾಣದ ೬೬೯ನೆಯ ಪುಟದ ಮೇಲಣ ೫೬, ೫೭ ನೆಯ ಪದ್ಯಗಳ ಕೊನೆಯ ಚರಣಗಳಿವು. ಕೆಲವು ಪ್ರತಿಗಳಲ್ಲಿ ಇವು ಪರಸ್ಪರ ಪಲ್ಲಟಗೊಂಡಿವೆ.

"ಹೂವ ಕೊಯ್ಯ ಹೋಗಿ ಕರಡಗೆಯ ಮಱೆದೆ, ಪೂಜಿಸ ಹೋಗಿ ಲಿಂಗವ ಮಱೆದೆ"
(ಅವ ೮೭೦)

ಈ ಎರಡು ವಾಕ್ಯಗಳು ಕೆಲವು ಹಸ್ತಪ್ರತಿಗಳಲ್ಲಿ ಹಿಂದು ಮುಂದಾಗಿವೆ.

"ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ" [ಅವ ೭೧೯].

ಇಲ್ಲಿ ಮೊದಲಿನ ಎರಡು ವಾಕ್ಯಗಳು ಪಲ್ಲಟಗೊಂಡಿವೆ.

ಪದ್ಯ, ಪದ್ಯ ಸಮೂಹ :

ಒಂದು ಸಂದರ್ಭದ ಇಲ್ಲವೆ ಬೇರೆ ಬೇರೆ ಸಂಬರ್ಧಗಳ ಪದ್ಯ ಇಲ್ಲವೆ ಪದ್ಯ ಸಮೂಹಗಳು ಪರಸ್ಪರ ಪಲ್ಲಟಗೊಳ್ಳಬಹುದು.

ವನರದಹಳದಯನೇ ನೀ। ನ್ನನೆ ನೆನೆನೆನೆದಿರುಳೊ(ಳಗೊ)ಱಗದಿರೆ ಕಡೆಗಣ್ಗಳ್ ।
ಮುನಿಸನಭಿನಯಿಪವೊಲ್। ಕೆಮ್ಮನೆ ರಕ್ತಾಂಭೋಜರುಚಿಯನಿಟ್ಟುಕಿಗೊಳ್ಳುಂ॥

ಮೊದಲ ಪದಂ ನ್ಯೂನಾಕ್ಷರ। ಮದಱಿಂದೆ ಬಱಿಕ್ಕಮ(ರ್ಧ)ಮಧಿಕಾಕ್ಷರಮಿಂ॥
ತಿದಱಿಂ ಛಂಧೋಭಂಗಂ। ಪದನಱಿದದನಿಂತು ಸಮಱಿ ಪೇೞ್ವೊಡೆ ಚೆಲ್ವಂ॥

ಕವಿರಾಜಮಾರ್ಗದ ಈ ಎರಡು ಪದ್ಯ [೧–೯೩, ೯೪]ಗಳು ಮೂರು ಹಸ್ತಪತ್ರಿಗಳಲ್ಲಿ [ನಂ. ೧೧೦, ೧೨೫, ೧೭೫] ಹಿಂದುಮುಂದಾಗಿವೆ. ಇದೇ ರೀತಿ ನೇಮಿನಾಥ ಪುರಾಣದ ೩–೫ ಮತ್ತು ೩–೬ ನೆಯ ಪದ್ಯಗಳೂ ಪರಸ್ಪರ ಸ್ಥಾನಪಲ್ಲಟಗೊಂಡಿವೆ. ಇಂಥ ಅನುಕ್ರಮಭಂಗ ದರ್ಪಣಸೂತ್ರಗಳಲ್ಲಿಯೂ ತಲೆದೋರಿದೆ :

	ಪರಿಷತ್	ಡಿ.ಎಲ್.ಎನ್.	ಮದ್ರಾಸ	ಕಿಟೆಲ್
೧. ಉರ್ದುಂ ಬಿರ್ದುಂ	I	I	II	I
ನರ್ಗಿದುದೆನೆ	II	II	I	II
ಇರ್ಪುಂ ತೋರ್ಪುಂ	III	IV	III	III
ಆರ್ದಂ ಸಾರ್ದಂ	IV	III	IV	IV
ಊರ್ಗಳ್ ಕೇರ್ಗಳ್	V	V	V	V
೨. ಭೂತಭವಿಷತ್	I	I	I	I
ವಿನುತಕ್ರಿಯಾತ್ಮಕ	II	II	III	II
ಸಮುತಾಪ್ತಕ್ರಿಯೆ	III	III	II	III
ಕ್ಷಿತಿಯೊಳೆ ರೂಥನ್ವಯ	IV	IV	IV	IV

ಈ ಪಟ್ಟಿಕೆಯೊಂದಿಗೆ "೩೩೦ ರಿಂದ ೩೩೩ ವರೆಗಿನ ಸೂತ್ರಗಳ ಆನುಪೂರ್ವಿ (ಕಿ)ದಲ್ಲಿ ೩೩೨, ೩೩೦, ೩೩೩, ೩೩೧ ಆಗಿದೆ" ಎಂಬ ಡಿ.ಎಲ್.ಎನ್. ಹೇಳಿಕೆಯನ್ನು ಜೋಡಿಸಿಕೊಂಡರೆ ದರ್ಪಣದ ಸೂತ್ರಗಳ ಕ್ರಮಪಲ್ಲಟ ವೇದ್ಯವಾಗುತ್ತದೆ.

ಸಂಧಿ, ಸಂಧಿಸಮೂಹ :

ಪಾಂಚಾಳಗಂಗನ ಚೆನ್ನರಾಮನ ಸಾಂಗತ್ಯದ ಹಸ್ತಪ್ರತಿಗಳನ್ನು ಕುರಿತು ಹೇಳಿದ "ಕುಮಾರರಾಮನ ಕಥೆಯ ಪೂರ್ವಾರ್ಧದಲ್ಲಿ ಬರುವ ಹುಳಿಯಾರು ಮಾರಭೂಪಾಲನ ಯುದ್ದ, ಬಲ್ಲಾಳನ ಕಾಳಗ, ನೇಮಿಯ ಮೊದಲನೆಯ ಯುದ್ಧ ಮುಂತಾದ ಸಂಗತಿಗಳು ಒಂದೇ ಕ್ರಮವಾಗಿಲ್ಲ. "ಗಂಗ ೧" ರಲ್ಲಿ ಇವು ಮೊದಲನೆಯ ಸಂಧಿಯಲ್ಲಿಯೇ ಬರುತ್ತವೆ. "ಗಂಗ ೨" ಮತ್ತು "ಗಂಗ ೩" ರಲ್ಲಿ ನೇಮಿಯ ಸೋಲಾಗಲು ಅವನು ಬಲ್ಲಾಳನನ್ನು ಎತ್ತಿ ಕಟ್ಟಿದನೆಂದೂ ಹೇಳಿದೆ. ಹುಳಿಯಾರು ಮಾರಭೂಪಾಲನ ಪ್ರಸಂಗ ಬೊಲ್ಲನ ಸಂಗತಿಯಾದ ಬಳಿಕ ಚಿತ್ರಿತವಾಗಿದೆ. "ಗಂಗ ೫" ರಲ್ಲಿ ಬಲ್ಲಾಳನ ಪರಾಜಯದ ವಿಷಯ ಮೂರನೆಯ ಸಂಧಿಯಲ್ಲಿಯೇ ಸೂಚಿತವಾಗಿದೆ."[೫೧] ಎಂಬ ಮಾತುಗಳನ್ನು ಗಮನಿಸಿದರೆ ಈ ಕೃತಿಯಲ್ಲಿ ಸಂಧಿಗಳ ಪಲ್ಲಟ ಕಾರ್ಯ ಎಷ್ಟು ದೂರ ಹೋಗಿದೆಯೆಂಬುದು ತಿಳಿದುಬರುತ್ತದೆ.

ಇತರ :

ಈ ವರೆಗೆ ವಿವೇಚಿಸಿದ ಲೋಪ, ಆಗಮ, ಆದೇಶ ಮತ್ತು ಪಲ್ಲಟಗಳಿಗೆ ಹೊರತಾದ ಬೇರೆ ಸ್ವರೂಪದ ಕೆಲವು ಸ್ಖಾಲಿತ್ಯಗಳು ಪ್ರಾಚೀನ ಹಸ್ತಪ್ರತಿಗಳಲ್ಲಿ ಗೋಚರಿಸುತ್ತವೆ. ಇವುಗಳನ್ನು 'ಇತರ' ವಿಭಾಗದಲ್ಲಿ ವಿವೇಚಿಸಬಹುದು.

---

೫೧. ಕುಸಾ ೧೦೧-೧೦೨

ಒಂದು ವೃತ್ತ ಇನ್ನೊಂದು ವೃತ್ತವಾದುದು :

[೧]ಪೋರೆ[೧] ಪೊರಲ್ವಲವ್ವಳಿಪ ತೇಂಕುವ ತೇಂಕದೆ ಸುಯ್ವ ಸುಯ್ಯದೆ ।
[೨]ರ್ದಾರೆ[೨] ಜನಂ ಜವಂಗಿಡುವ ನೂರ್ಮಡಿಯಪ್ಪ ಬೆಮರ್ತು ಮಲ್ಲರಂ ।
[೩]ಗಾರುಣ[೩] ರೇಣುವಂ ತೊಡೆವ ಮೆಯ್ಬೆಮರೇಱದ ಭಂಗಿ ಕಣ್ಗೆ ಚಾ ।
[೪]ಣೂರನ[೪] ಸೋಲುಮಂ ಹರಿಯ ಗೆಲ್ಲಮನೇಂ ಪಿಸುಣಾಡುತಿರ್ದುದೋ ॥

ನೇಮಿನಾಥ ಪುರಾಣದ ಈ (೮-೧೦೫) ಉತ್ಪಲಮಾಲೆ ಕೆಲವು ಹಸ್ತಪತ್ರಿಗಳಲ್ಲಿ ಚಂಪಕಮಾಲೆಯ ರೂಪದಲ್ಲಿ ಸಿಗುತ್ತವೆ. ಆಗ ೧-೧ಪೊರೆದು, ೨-೨ರ್ದರೆ ಜಡಿವಂ, ೩-೩ಗುರುಗುಣ, ೪-೪ಣುರನುರು ಎಂಬ ಪಾಠಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಇನ್ನು ಚಂದ್ರರಾಜನ ಮದನತಿಲಕದಲ್ಲಿ "ಸರೋಗ(ಜ) ಚೌಪದಿಗೆಯುಮಕ್ಕುಂ" ಎಂದು ಹೇಳಲಾದ

ರತಿ ಹೀನಂ ಪೆಳವಂ ಕುಬ್ಜಂ ।
ಮತಿವಂತಂ ಕೃಶನತ್ಯಂತಂ ।
ನೃತವಾಕ್ಯಂ ಸತಿಯ ಕಾಯ
ಲ್ಕತಿ ಶಿಷ್ಟಂ ಪೆರತೇಂ ಶ್ರೇಷ್ಠಂ ।

ಎಂಬ ಪದ್ಯ ಸೂಕ್ತಿಸುಧಾರ್ಣವ [೮-೧೮೯]ದಲ್ಲಿ

ರತಿಹೀನ ಪೆಟಿವ ಕುಬ್ಜಂ ।
ಮತಿವಂತಂ ನಾಡೆ ವೃದ್ಧ ಕೃಶಗರ್ಹಿತನುಂ ।
ಸತಿಯಂ ಕಾಯಲ್ಕಕ್ಕುಂ ।
ರತಿರಾಗಿಗಳುಟಿದ ಕಾಪಿನಿಂ ನಿಂದಪರೇ ॥

ಎಂದು ಕಂದರೂಪದಲ್ಲಿ ಸಿಗುತ್ತದೆ. ಇಂಥ ಹಲವು ಉದಾಹರಣೆಗಳಲ್ಲದೆ ತಪ್ಪಾಗಿ ಬರೆದ ವೃತ್ತಗಳ ಹೆಸರೂ ಪ್ರಾಚೀನ ಕೃತಿಯಲ್ಲಿ ದೊರೆಯುತ್ತವೆ. ಉದಾ: ಸ್ವಾಗತ> ಪೃಥ್ವಿ>ದಂ (ಥಂ)ದಸು (ನೇಮಿ ೪-೭೭), ಮಂದಾನಿಲರಗಳೆ> ಛಂದ>ಚಂದಸು (ನೇಮಿ ೬-೮), ತ್ರಿವಿದಿ>ತ್ರಿಪದಿ(ನೇಮಿ ೮-೮).

ಪದ್ಯ ಗದ್ಯವಾದುದು :

"ವ॥ ಭರತಯತಿಪತಿಯ ತದನಂತರದೊಳ್ ತದ್ವೃಷಭಸೇನಗಣನಾಥ ಪುರಸ್ಸರಂ ಪುರುತನಯರಾ ಕ್ರಮದೊಳ್ ಪರಮಸುಖಾಸ್ಪದಮನನಿಬರುಂ ಕೈಕೊಂಡರ್". ಆದಿಪುರಾಣ (೧೬-೭೫ಗ)ದಲ್ಲಿ ಗದ್ಯವೆಂದು ಭಾವಿಸಿ ಸಾಲುಗಟ್ಟಿ ಮುದ್ರಿಸಲಾದ ಈ ಭಾಗ ಮೂಲತಃ

ಭರತಯತಿಪತಿಯ ತದನಂ ।
ತರದೊಳ್ ತದ್ವೃಷಭಸೇನ ಗಣನಾಥಪುರ ।

ಸ್ಸರ ಪುರುತನಯ[ರ್] ಕ್ರಮದೊಳ್ ।

ಪರಮಸುಖಾಸ್ಪದಮನನಿಬರುಂ ಕೈಕೊಂಡರ್॥

ಎಂಬ ಕಂದಪದ್ಯವೆಂಬುದು ಸ್ಪಷ್ಟ. ಇದೇ ರೀತಿ ಪಂಪಭಾರತ(೧-೧೫೧)ದ ಗದ್ಯಭಾಗವೊಂದು ಮೂಲತಃ 'ಪೃಥ್ವಿ' ಎಂಬ ವೃತ್ತವಾಗಿರಬಹುದೆಂದು ಅಡಿ ಟಿಪ್ಪಣಿಯಿಂದ ತಿಳಿದುಬರುತ್ತದೆ.

ಸಂಧಿವಿಭಜನೆಯಲ್ಲಿ ವ್ಯತ್ಯಾಸವಾದುದು :

ಮೂಲದಲ್ಲಿ ಕವಿ ಗೆಯ್ದ ಸಂಧಿವಿಭಜನೆಯನ್ನು ಅಳಿಸಿ, ಸಹೃದಯರು ಮರು ವಿಭಜನೆ ಗೆಯ್ದುದುಂಟು. ಹರಿಶ್ಚಂದ್ರಕಾವ್ಯದ ಹಸ್ತಪ್ರತಿಗಳಲ್ಲಿ ೧೪, ೧೫, ೧೬ ಇಲ್ಲವೆ ೧೭ ಸಂಧಿಗಳು, ಸೋಮನಾಥಚಾರಿತ್ರದ ಹಸ್ತಪ್ರತಿಗಳಲ್ಲಿ ೫ ಇಲ್ಲವೆ ೬ ಸಂಧಿಗಳು, ಸಿದ್ಧರಾಮಚಾರಿತ್ರದ ಹಸ್ತಪ್ರತಿಗಳಲ್ಲಿ ೮ ಇಲ್ಲವೆ ೯ ಸಂಧಿಗಳು ಕಂಡು ಬರುತ್ತವೆ.[೫೨]

ಚೆನ್ನಬಸವಪುರಾಣದ ೩೬ನೆಯ ಸಂಧಿ ಕೆಲವು ಹಸ್ತಪ್ರತಿಗಳಲ್ಲಿ ೩೭ನೆಯ ಸಂಧಿಯ ೨೫ನೆಯ ಪದ್ಯದ ತರುವಾಯ ಮುಗಿಯುತ್ತದೆ. ಬಸವಪುರಾಣದ ಕೊನೆಯ ಪದ್ಯಕ್ಕೆ

೧. ತ್ರಿದಶಶತ ಷಟ್‌ಶತ ತ್ರಿವಿಂಶತಿ ।
ವಿದಿತ ಸಂಖ್ಯಾಯುಕ್ತದಿಂ ಷಟ್ ।
ಪದಿಗಳೆಂಟಾಶ್ವಾಸದಿಂದಱುವತ್ತು ಸಂಧಿಗಳಿಂ।

೨. ತ್ರಿದಶಶತಮುಂ ಪಂಚಶತ ಪಂ ।
ಚದಶ ಪಂಚಕಯುಕ್ತದಿಂ ಷಟ್ ।
ಪದಿಗಳೆಂಟಾಶ್ವಾಸದಿಂದಱುವತ್ತು ಸಂಧಿಗಳಿಂ ॥

ಎಂಬ ಎರಡು ಪಾಠಗಳು ಸಿಗುತ್ತಿದ್ದು, ಈ ಪುರಾಣದಲ್ಲಿ ೮ ಕಾಂಡ, ೬೦ ಸಂಧಿ, ೩೬೨೩ ಪದ್ಯ ಇಲ್ಲವೆ ೮ ಕಾಂಡ: ೬೦ ಸಂಧಿ, ೩೫೫೪ ಪದ್ಯ ಇರಬಹುದೆಂದು ತಿಳಿದುಬರುತ್ತದೆ. ಸಾಲದುದಕ್ಕೆ ಕವಿಚರಿತೆಕಾರರು ನೋಡಿದ ಬಸವಪುರಾಣದಲ್ಲಿ ೬೧ ಸಂಧಿಗಳಿದ್ದರೆ, ಧಾರವಾಡದ ಲಿಂಗಾಯುತ ವಿದ್ಯಾಭಿವೃದ್ಧಿ ಸಂಸ್ಥೆಯ ಜನಪ್ರಿಯ ಆವೃತ್ತಿಯಲ್ಲಿ 'ದಱುವತ್ತು' ಎಂಬುದಕ್ಕೆ ಬದಲು "ತ್ರಿಷಷ್ಟಿ" ಎಂಬ ಪದವಿದ್ದು ಅಲ್ಲಿ ೬೩ ಸಂಧಿಗಳು ಕಂಡುಬರುತ್ತವೆ.[೫೩]

ಕೃತಿ ಸಂಕ್ಷೇಪನ :

ಇದರಲ್ಲಿ ಎರಡು ವಿಧ. ಒಂದು: ಕಥೆಗೆ ಧಕ್ಕೆ ಬರದಂತೆ ಇಡಿ ಕೃತಿಯನ್ನು ಸಂಕ್ಷೇಪಿಸುವುದು. ಎರಡು: ಕೃತಿಯನ್ನು ಭಾಗಶಃ ಬರೆದುಕೊಳ್ಳುವುದು. ಕನ್ನಡದಲ್ಲಿ ಈ ಎರಡೂ ಬಗೆಗಳು ಕಂಡುಬರುತ್ತವೆ.

---

೫೨. ಡಿ.ಎಲ್.ಎನ್. ಸಂಪಾದಿತ ಸಿದ್ಧರಾಮ ಪುರಾಣದಲ್ಲಿ ೯ ಸಂಧಿಗಳಿವೆ. ನನ್ನ ಹತ್ತಿರ ಇರುವ ಸಿದ್ಧರಾಮ ಪುರಾಣದ ಹಸ್ತಪ್ರತಿಯಲ್ಲಿ ೮ ಸಂಧಿಗಳಿವೆ.

೫೩. ಬಸವಪುರಾಣದ (ಮುರುಘಾಮಠ, ಧಾರವಾಡ, ಪ್ರಕಟನೆ ೧೯೭೦) ಪ್ರಸ್ತಾವನೆ (೧೦೫-೧೧೧) ಯಲ್ಲಿ ಈ ವಿಷಯದ ಚರ್ಚೆಯನ್ನು ನೋಡಿರಿ.

ಸಂಸ್ಕೃತದಲ್ಲಿ ಅಸಗ ಕವಿಯ ಶಾಂತೀಶ್ವರಪುರಾಣವು ಸಂಕ್ಷೇಪಗೊಂಡು "ಲಘು ಶಾಂತೀಶ್ವರ ಪುರಾಣ" ಎಂಬ ಹೆಸರಿನಿಂದ ಪ್ರಸಾರವಾಗಿದೆ. ಇದೇ ರೀತಿ ಐದು ಸಾವಿರಕ್ಕೆ ಹೆಚ್ಚು ಸಾಂಗತ್ಯ ಪದ್ಯಗಳನ್ನುಳ್ಳ ಗಂಗಕೃತ ಚೆನ್ನರಾಮನ ಸಾಂಗತ್ಯದ ಸಂಕ್ಷೇಪ ಸಂಪುಟ ಸುಮಾರು ಒಂದು ಸಾವಿರ ಪದ್ಯಗಳನ್ನೊಳಗೊಂಡಿದೆ.[೫೪] ಕುಮಾರವ್ಯಾಸ, ಕುಮಾರವಾಲ್ಮೀಕಿಗಳ ಭಾರತ ಮತ್ತು ರಾಮಾಯಣಗಳು ಸಂಗ್ರಹ ರೂಪದಲ್ಲಿ "ಕಿಂಚಿತ್ ಭಾರತ" "ಕಿಂಚಿತ್ ರಾಮಾಯಣ"[೫೫] "ಸಂಕ್ಷೇಪ ಭಾರತ" "ಸಂಕ್ಷೇಪ ರಾಮಾಯಣ"[೫೬] ಎಂಬ ಹೆಸರಿನಿಂದ ಸಿಗುತ್ತವೆ.

ಎರಡನೆಯದಾಗಿ ಒಂದು ಕೃತಿಯನ್ನು ಭಾಗಶಃ ಬರೆದುಕೊಂಡು ಸ್ವತಂತ್ರಕೃತಿಯೆಂಬ ಭಾವನೆಯನ್ನುಂಟುಮಾಡಿದ ಉದಾಹರಣೆಗಳೂ ಇವೆ. ಜಯಬಂಧುನಂದನ ಕೃತವೆಂದು ಪ್ರಚಾರವಾಗಿದ್ದ "ಸೂಪಶಾಸ್ತ್ರ"ವು ಚಾವುಂಡರಾಯನ ಲೋಕೋಪಕಾರದ ಎಂಟನೆಯ ಅಧಿಕಾರವೆಂದು ಬಹುಕಾಲದ ತರುವಾಯ ಗೊತ್ತಾದುದನ್ನು ಇಲ್ಲಿ ಸ್ಮರಿಸಬೇಕು. ಇದೇ ರೀತಿ ಗದುಗಿನ ಭಾರತದ ವಿದುರನೀತಿ, ವಿಭೀಷಣ ನೀತಿಗಳು, ತೊರೆವ ರಾಮಾಯಣದ ಅಂಗದ ಸಂಧಾನ ಮತ್ತು ಶಬ್ದಮಣಿದರ್ಪಣದ ಧಾತುಪ್ರಕರಣ ಇವು ಸ್ವತಂತ್ರ ಕೃತಿರೂಪದಲ್ಲಿ ಲಭಿಸುತ್ತವೆ.

ಕೃತಿ ವಿಸ್ತರಣೆ :

ಇದರಲ್ಲಿ ಎರಡು ವಿಧ. ಒಂದು: ಕೃತಿಗೆ ಹೆಚ್ಚಿನ ಅಧ್ಯಾಯಗಳನ್ನು ಜೋಡಿಸುವುದು. ಎರಡು: ಮಧ್ಯಮಧ್ಯ ಪಾಠಗಳನ್ನು ಸೇರಿಸುತ್ತ ಹೋಗುವುದು. ಈ ಎರಡು ವಿಧಗಳಿಗೆ ಉದಾಹರಣೆಗಳನ್ನು ನೋಡಬಹುದು.

ಒಂದು ಕೃತಿಗೆ ಹೆಚ್ಚಿನ ಅಧ್ಯಾಯಗಳನ್ನು ಕವಿ ಇಲ್ಲವೆ ಸಹೃದಯ ಕೂಡಿಸಬಹುದು. ಕವಿ ಸೇರಿಸಿದುದಕ್ಕೆ ತೆಂಬಳೂರಾಚಾರ್ಯನ ಅನುಪಲಬ್ಧ "ಚೂಡಾಮಣಿ"ಯನ್ನು, ಸಹೃದಯ ಸೇರಿದುದಕ್ಕೆ ಕುಮಾರವ್ಯಾಸ ಭಾರತದ ಪೌಲೋಮಪರ್ವ, ಆಸ್ತೀಕಪರ್ವ, ಐರಾವತಸಂಧಿ ಇತ್ಯಾದಿಗಳನ್ನು ಹೇಳಬಹುದು.

ಎರಡನೆಯದಾಗಿ ಒಂದು ಕೃತಿಯ ಮಧ್ಯಮಧ್ಯ ಪಾಠಗಳನ್ನು ಸೇರಿಸುತ್ತ ಹೋದುದಕ್ಕೆ ನಯಸೇನನ ಧರ್ಮಾಮೃತ, ಹರಿಹರನ ನಂಬಿಯಣ್ಣನ ರಗಳೆಗಳನ್ನು, ಮಧ್ಯಮಧ್ಯ ಪದ್ಯಗಟ್ಟಲೆ ಸೇರಿಸುತ್ತ ಹೋದುದಕ್ಕೆ ಸಾಮಾನ್ಯವಾಗಿ ಕನ್ನಡದ ಜನಪ್ರಿಯ ಕಾವ್ಯಗಳನ್ನೆಲ್ಲ ಉದಾಹರಣೆಯಾಗಿ ಕೊಡಬಹುದು.

ಅನೇಕ ಗ್ರಂಥಗಳು ಏಕ ಗ್ರಂಥವಾದುದು :

ಒಂದು ವಸ್ತುವನ್ನು ಕುರಿತು, ಒಂದೇ ಬಗೆಯ ಛಂದಸ್ಸಿನಲ್ಲಿ ಬರೆದ ಹಲವು ಗ್ರಂಥಗಳು ಒಂದುಗೂಡುವ ಸಂಭವವಿದೆ.

---

೫೪. ಕುಸಾ ೯೧.
೫೫. ಮೈಹಸೂ I ೩೦೨, ೩೦೩, ೩೦೪.
೫೬. ಮೈಹಸೂ IV ೧೮೩೪-೧೮೪೨. ೧೮೪೩-೧೮೪೮

ಕುಮಾರರಾಮನನ್ನು ಕುರಿತು ಪಾಂಚಾಗಳಗಂಗ, ನಂಜುಂಡ ಮೊಲಾದವರು ಬರೆದ ಸಾಂಗತ್ಯ ಕೃತಿಗಳು, ಪ್ರತ್ಯೇಕಿಸಲು ಬಾರದ ರೀತಿಯಲ್ಲಿ ಒಂದರೊಳಗೊಂದು ಹೆಣೆದುಕೊಂಡಿವೆ. ಹೀಗಾಗಿ ಈ ಮಿಶ್ರಣದ ಪಾಲುಗಳನ್ನು ಗುರುತಿಸುವುದು ಇಂದಿಗೂ ನಿಲುಕದೆ ನಿಂತಿದೆ.

ಇಂದಹದೇ ಇನ್ನೊಂದು ಕೃತಿ ಛಂದೋಂಬುಧಿ. ಮೂರು ಪರಿಷ್ಕರಣಗಳನ್ನು ಕಂಡರೂ ಅದರ ನಿಜಪಾಠ ನಿರ್ಣಯ ಇನ್ನೂ ಸಾಧ್ಯವಾಗಿಲ್ಲ.

"ಇದು ಸಕಲ ಸುರಾಸುರೇಂದ್ರ ಮಣಿಮುಕುಟಘಟಿತ ಶ್ರೀಮತ್ಪರಮೇಶ್ವರ ಚಾರುಚರಣಾರವಿಂದ ಮಕರಂದಮಧುಕರಾಯಮಾಣ ವಿಬುಧಜನಮನಃಪದ್ಮಿನೀ ರಾಜಹಂಸ ಶ್ರೀಮತ್ಕವಿರಾಜಹಂಸ ವಿರಚಿತಮಪ್ಪ........"

"ಇದು ಸಕಲ ಸುರಾಸುರೇಂದ್ರ ಮಕುಟಘಟಿತ ಭಗವದ್ಭವಾನೀ ವಲ್ಲಭಪಾದಾರವಿಂದ ದ್ವಂದ್ವ ಮಕರಂದ ಮತ್ತ ಮಧುಕರರಾಯಮಾಣ ಸುಕವಿಜನಸಂಸ್ತೂಯಮಾನ.... ನಾಗವರ್ಮ ವಿರಚಿತಪ್ಪ....."

"ಇದು ಪರಮೇಶ್ವರ ಚರಣಾರವಿಂದದ್ವಂದ್ವಮಧುಕರಾಯಮಾಣ ವಿಬುಧ..................ರಾಜಹಂಸ ವಿರಚಿತ"

"ಇದು ಸಕಲ ಸುರಾಸುರೇಂದ್ರ ಮುನೀಂದ್ರ ಮಣಿಮುಕುಟ ಘಟಿತ ಶ್ರೀಮದ್ಭಗವದರ್ಹತ್ಪರಮೇಶ್ವರ ಪಾದಾರವಿಂದ ದ್ವಂದ್ವ............... ನಾಗವರ್ಮ......... ವಿರಚಿತಮಪ್ಪ..........."

ಇವು ಛಂದೋಂಬುಧಿಯ (ರಾಮಸ್ವಾಮಿ ಅಯ್ಯಂಗಾರ ಅವೃತ್ತಿ,. ೧೯೪೬) ಅಂತ್ಯ ಪ್ರಶಸ್ತಿಗಳು. ಇಲ್ಲಿ ಮೊದಲಿನ ಮೂರು ಪ್ರಶಸ್ತಿಗಳು ಶಿವಪರವಾಗಿದ್ದರೆ ಕೊನೆಯದು ಜಿನಪರವಾಗಿದೆ. ಆದುದರಿಂದ ಈಗಿರುವ ಛಂದೋಂಬುಧಿಯಲ್ಲಿ ಶೈವ ಮತ್ತು ಜೈನ ಛಾಂದಸಿಗರ ಎರಡು ಕೃತಿಗಳು ಮಿಶ್ರಣಗೊಂಡಿರಲು ಸಾಧ್ಯ. ದುರ್ಗೆಯ ಸುತ್ತಿಯಿಂದ ಪ್ರಾರಂಭವಾಗುವ ಛಂದೋಬುಧಿಯಲ್ಲಿ ಜಿನಪರವಾದ "ಗುರುಗಳ್ ನೆಗಟ್ದಜಿತಸೇನ ಪಂಡಿತದೇವರ್" ಇತ್ಯಾದಿ ಪದ್ಯಗಳಿರುವುದು ಇದನ್ನು ಪೋಷಿಸುತ್ತದೆ. ಸಾಲದುದಕ್ಕೆ ಕಾವ್ಯಾವಲೋಕನದ ಕರ್ತೃ ನಾಗವರ್ಮನ ಛಂದೋವಿಚಿತಿಯೂ ಇದರಲ್ಲಿ ಸೇರಿಕೊಂಡಿರ ಬಹುದೆಂದು ಕೆಲವು ವಿದ್ವಾಂಸರ ಮತ.

ಕರ್ನಾಟಕದ ಹಸ್ತಪತ್ರಿಗಳಲ್ಲಿ ತಲೆದೋರಿದ ಸ್ಖಾಲಿತ್ಯಸ್ವರೂಪಗಳ ಕೆಲವು ಮಾದರಿಗಳಿವು. ಈ ವಿವರಣೆಯನ್ನು ನೋಡಿದರೆ ಪ್ರಾಚೀನ ಹಸ್ತಪ್ರತಿಗಳಲ್ಲಿ ಹೆಡೆಯಾಡಿಸಿದ ಸ್ಖಾಲಿತ್ಯಸರ್ಪ ಸಂಪಾದಕನನ್ನು ಧೈರ್ಯಗೆಡಿಸುತ್ತದೆ.

❖❖

೪

ಹಸ್ತಪ್ರತಿಕಾಂಡ

❖

ಹಸ್ತಪ್ರತಿಯ ಬಗೆಗಳು
ಹಸ್ತಪ್ರತಿಗಳ ವಂಶಸಂಬಂಧ

ಮೂರ್ಖಹಸ್ತೇ ನ ದಾತವ್ಯಂ ಏವಂ ವದತಿ ಪುಸ್ತಕಂ

*

ಹಸ್ತಪ್ರತಿಯ ಬಗೆಗಳು

ಕನ್ನಡಿಗರು ಹಸ್ತಪ್ರತಿಗೆ ಬಳಸಿದ ವಸ್ತು–ತಾಳೆಗರಿ ಮತ್ತು ಕೋರಿಕಾಗದ. ಈಗ ಉಪಲಬ್ಧವಾಗಿರುವ ಪ್ರಕಾರ ಇವುಗಳ ಸಂಖ್ಯಾಪ್ರಮಾಣ ೭೦:೩೦. ತಾಳೆ ಗ್ರಂಥಗಳಿಗೆ ಬಳಸಿದ ಗರಿಗಳು ಉದ್ದ ಒಂದು ಅಂಗುಲದಿಂದ ನಾಲ್ಕು ಅಡಿಯ ವರೆಗೆ, ಅಗಲ ಅರ್ಧ ಅಂಗುಲದಿಂದ ನಾಲ್ಕು ಅಂಗುಲದ ವರೆಗೆ ಬೇಕಾದ ಪ್ರಮಾಣದಲ್ಲಿರುತ್ತವೆ. ದಾರ ಪವಣಿಸಿ ಕಟ್ಟುವ ಅನುಕೂಲತೆಗೆಂದು ಹಸ್ತಪ್ರತಿಯ ಆಕಾರ ಸಣ್ಣದಿದ್ದರೆ ಒಂದು, ಮಧ್ಯಮವಿದ್ದರೆ ಎರಡು, ದೊಡ್ಡದಿದ್ದರೆ ಮೂರು ರಂಧ್ರಗಳನ್ನು ಎಲೆಯ ಮಧ್ಯ ಸಮಾನ ಅಂತರದಲ್ಲಿ ಕೊರೆದಿರುತ್ತಾರೆ. ಕಾಲಕ್ರಮದಲ್ಲಿ ಅಗಲವಾಗುವುದರಿಂದ ಈ ರಂಧ್ರಗಳ ಸುತ್ತು ತಕ್ಕಷ್ಟು ಸ್ಥಳಬಿಟ್ಟು ಬರೆಯಲಾಗುತ್ತದೆ. ಪ್ರತಿಯೊಂದು ಗರಿಯ ಒಂದು ಇಲ್ಲವೆ ಎರಡೂ ಅಂಚುಗಳಲ್ಲಿ ಇಲ್ಲವೆ ಮಧ್ಯದ ರಂಧ್ರಗಳ ಬದಿಯಲ್ಲಿ ಪುಟಸಂಖ್ಯೆ ಹಾಕಲಾಗುತ್ತದೆ. ಕೆಲವು ಸಲ ಹಸ್ತಪ್ರತಿಗಳ ಮೊದಲ ಮತ್ತು ಕೊನೆಯ ಓಲೆಗಳನ್ನು, ಪ್ರತಿಯೊಂದು ಸಂಧಿಯ ಪ್ರಾರಂಭದ ಪುಟವನ್ನು ಸುಳುಹು ಚಿತ್ರಗಳಿಂದ ಸಿಂಗರಿಸುತ್ತಾರೆ. ಇದಲ್ಲದೆ ಕಥಾಸಂದರ್ಭವನ್ನು ವ್ಯಕ್ತಗೊಳಿಸುವ ಚಿತ್ರಗಳೂ ಹಸ್ತಪ್ರತಿಗಳ ಒಡಲಲ್ಲಿ ಆಗಾಗ ತೋರಿಬರುತ್ತವೆ.[೧] ಮೊದಲ ಮತ್ತು ಕೊನೆಯಲ್ಲಿ ರಕ್ಷಾಪುಟಗಳು, ಆದಿಯಲ್ಲಿ ಕ್ವಚಿತ್ತಾಗಿ ಪರಿವಿಡಿ ಪುಟ, ಆದಿ ಇಲ್ಲವೆ ಅಂತ್ಯದಲ್ಲಿ ಶೋಧನ ಪುಟ(=ಒಪ್ಪೋಲೆ)ಗಳು[೨] ಕಂಡುಬರುತ್ತವೆ.

ಕಟ್ಟಲು ಅನುಕೂಲವಾಗುವಂತೆ ಕಾಗದಪ್ರತಿಗೂ ಮಧ್ಯ ಒಂದು ರಂಧ್ರ ಮಾಡಿರುತ್ತಾರೆ, ಇಲ್ಲವೆ ಒಂದು ಮಗ್ಗುಲಿಗೆ ಹೊಲಿಗೆ ಹಾಕಿರುತ್ತಾರೆ. ಕೆಲವು ಸಲ ಎರಡು ಹಾಳೆಗಳನ್ನು ಅಂಟಿಸಿ ಒಂದು ಮಾಡಿರುತ್ತಾರೆ. ತಾಳೆಗ್ರಂಥಗಳ ಹಾಗೆ ಪುಟ ಸಂಖ್ಯೆ, ಸುಳುಹು ಚಿತ್ರ, ರಕ್ಷಾಪುಟ, ಪರಿವಿಡಿಪುಟ, ಶೋಧನಪುಟಗಳು ಇವುಗಳಲ್ಲಿಯೂ ಇರುತ್ತವೆ. ಹೀಗೆ ರೂಪದೃಷ್ಟಿಯಿಂದ ಕರ್ನಾಟಕದ ಹಸ್ತಪ್ರತಿಗಳು ತಾಳೆಗರಿಪ್ರತಿ ಮತ್ತು ಕೋರಿಕಾಗದಪ್ರತಿ ಎಂದು ಎರಡು ಬಗೆಯಾಗಿವೆ.

ಇನ್ನು ಈ ಹಸ್ತಪ್ರತಿಗಳನ್ನು ಆನುವಂಶಿಕ ದೃಷ್ಟಿಯಿಂದಲೂ ವರ್ಗೀಕರಿಸಬಹುದಾಗಿದೆ. ಕವಿಯ ಹಸ್ತದಿಂದ ಒಂದು ಪ್ರತಿ ಮೊದಲು ಸಿದ್ಧವಾಗುತ್ತದೆ. ಇದು 'ಮೂಲಪ್ರತಿ.' ಇದರಿಂದ ಕಾಲಕ್ರಮದಲ್ಲಿ ಹತ್ತಾರು ಪ್ರತಿಗಳು, ನೂರಾರು ಮರುಪ್ರತಿಗಳು ಹುಟ್ಟುತ್ತವೆ. ಇವು 'ಪರಂಪರಾಗತಪ್ರತಿ'ಗಳು.

---

೧. ಕನ್ನಡ ಅಧ್ಯಯನಪೀಠದ (ಧಾರವಾಡ) ವಚನಭಾಂಡಾರದಲ್ಲಿ ರಾಘವಾಂಕ ಚಾರಿತ್ರದ (ನಂ.೧೧೭೪) ಒಂದು ಕಾಗದ ಪ್ರತಿ ಇದೆ. ಇದರಲ್ಲಿ ಪ್ರಭುದೇವ–ಸಿದ್ಧರಾಮ, ರಾಘವಾಂಕ–ಹರಿಹರ, ಚಿಕ್ಕನಂಜಾರ್ಯ–ಚೆನ್ನವೀರಾಂಬಿಕೆ, ಮಹಾದೇವ–ರುದ್ರಾಣಿ, ಮೂರು ಮಂದಿ ಕವಿಗಳು–ಪ್ರತಾಪರುದ್ರ, ವಿರೂಪಾಕ್ಷಪಂಡಿತ. ಕೆರೆಯ ಪದ್ಮರಸ ಮೊದಲಾದವರ ಮೂವತ್ತೊಂದು ಸುಂದರ ತೈಲಚಿತ್ರಗಳಿದ್ದು, ರಾಘವಾಂಕ ಚಾರಿತ್ರದ ಪ್ರತಿಯೊಂದು ಘಟನೆಯನ್ನೂ ಚಾಕ್ಷುಷಗೊಳಿಸುತ್ತವೆ.

ಮೂಲಪ್ರತಿ :

'ಕವಿಹಸ್ತಾಕ್ಷರಪ್ರತಿ' ಎಂದು ಇದಕ್ಕೆ ಇನ್ನೊಂದು ಹೆಸರು. ಒಂದು ಕೃತಿಯ ಎಲ್ಲ ಹಸ್ತಪ್ರತಿಗಳಿಗೂ ಇದು ಆದಿಮಾತೆ. ನಮಗೆ ಸಿಕ್ಕ ಒಂದು ಗ್ರಂಥದ ಹಲವು ಹಸ್ತಪ್ರತಿಗಳಲ್ಲಿ ದೈವವಶಾತ್ ಈ ಮೂಲಪ್ರತಿಯೂ ಸೇರಿಕೊಂಡಿರಬಹುದು. ಅಧಿಕೃತ ಹೇಳಿಕೆಗಳಿಲ್ಲದಿದ್ದರೆ ಅದನ್ನು ಗುರುತಿಸುವದು ಕಷ್ಟ. ಗುರುತಿಸಿದರೆ ಸಂಪಾದನಕಾರ್ಯ ತೀರ ಸುಲಭ. ಮುದ್ದಣ, ಬಸಪ್ಪಶಾಸ್ತ್ರಿ ಇಂಥ ಕೆಲವರನ್ನು ಬಿಟ್ಟರೆ ೧೯ನೆಯ ಶತಮಾನದ ಮಿಕ್ಕ ಕವಿಗಳ ಸ್ವಹಸ್ತಾಕ್ಷರಪ್ರತಿಗಳು ಸಿಗುವದಿಲ್ಲವೆಂದ ಮೇಲೆ, ಈ ಹಿಂದಣ ಕವಿಗಳ ಸ್ವಹಸ್ತಾಕ್ಷರ ಪ್ರತಿಗಳನ್ನು ಬಯಸುವದು ವ್ಯರ್ಥ ಆಸೆ. ೧೯ನೆಯ ಶತಮಾನದಿಂದ ಹಿಂದೆ ಹೋದಂತೆ, ಇಂಥ ಪ್ರತಿಗಳು ಸಿಗುವ ಭರವಸೆ ಕ್ರಮೇಣ ಕರಗುತ್ತ ಹೋಗಿ, ತೀರ ಪ್ರಾಚೀನ ಕವಿಗಳ ಸ್ವಹಸ್ತಪ್ರತಿಯ ಬಗೆಗೆ ಆಸೆಯೇ ಉಳಿಯುವುದಿಲ್ಲ. "ಆನಂದ ಸಂವತ್ಸರದ ಮಾರ್ಗಶಿರ ಸು. ೫ ಬುಧವಾರ ಬೆಳುಗುಳದ ಸ್ಥಾನಿಕ ಚೆನ್ನಪ್ಪಯ್ಯನ ಮಗ ಕವಿ ಪಂಚಬಾಣನು ಕವಿತ್ವವ ಹೇಟಿ ತನ್ನ ಸ್ವಹಸ್ತದಲ್ಲಿ ಬರೆದ ಪುಸ್ತಕಕ್ಕೆ ಮಂಗಳಮಹಾಶ್ರೀ[೩] ಎಂಬ ಮಾತಿನಿಂದ ೧೬೧೪ರಲ್ಲಿ ಲಿಪಿಸಲ್ಪಟ್ಟ ಭುಜಬಲಿಚರಿತೆ ಈಗಿನ ಮಟ್ಟಿಗೆ ಕನ್ನಡದ ಪ್ರಾಚೀನತಮ ಕವಿ ಹಸ್ತಾಕ್ಷರಪ್ರತಿಯೆಂದು ತಿಳಿದುಬರುತ್ತದೆ.

ಒಂದು ಕೃತಿಯು, ಶಿಲೆ ಇಲ್ಲವೆ ಲೋಹದ ಮೇಲೆ ಕೆತ್ತಲ್ಪಟ್ಟಿದ್ದರೂ ಸಾಹಿತ್ಯ ಒದಗಿಸಿದ ಕವಿಯ ಕೈಯಿಂದ ಲಿಪಿಕಾರನ ಕೈಗೆ, ಲಿಪಿಕಾರನ ಕೈಯಿಂದ ರೂವಾರಿಯ ಕೈಗೆ ಅದರ ಪಾಠ ಸಾಗಿಬಂದಿರುವುದರಿಂದ, ಅದು ಸಹ ಎರಡು ಕೈಗಳನ್ನು ದಾಟಿಬಂದ ಪ್ರತಿಯೆನಿಸುತ್ತದೆ. (ಉದಾ : ಜಂನಯ್ಯನ ಕವಿತೆ, ದಾವಣ್ಣನ ಬರಪ, ಮಲ್ಲೋಜನ ಕಂಡರಣೆ).[೪] ಒಂದುವೇಳೆ ಕವಿಯು ಲಿಪಿಕಾರನ ಕಾರ್ಯಮಾಡಿದ್ದರೆ (ಉದಾ : ಸಂಧಿವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇೞ್ದು ಬರೆದಂ),[೫] ಲಿಪಿಕಾರನು ರೂವಾರಿಯ ಕಾರ್ಯಮಾಡಿದ್ದರೆ (ಉದಾ : ಹುಲಿಗೆಱೆಯ ಬಮ್ಮೋಜ ತಾನೆ ಬರೆದು ಕಂಡರಿಸಿದ)[೬] ಅದು ಸಹ ಒಂದು ಕೈಯಿಂದ ದಾಟಿಬಂದ ಪ್ರತಿಯೆನಿಸುತ್ತದೆ. ಈ ಮೂರು ಕಾರ್ಯಗಳನ್ನು ಒಬ್ಬನೇ ಮಾಡಿದ್ದರೆ ಮಾತ್ರ, ಅದು ಕವಿಯ ಸ್ವಹಸಾಕ್ಷರ ಪ್ರತಿಯ ಬೆಲೆ ಪಡೆಯುತ್ತದೆ. ಇಂಥ ಶಾಸನಗಳು ಇನ್ನೂ ಲಭಿಸಿಲ್ಲ. ಹೀಗಾಗಿ ಕವಿಯೇ ಎಲೆಯ ಮೇಲೆ ಬರೆದ ತೀರ ಪ್ರಾಚೀನ ಹಸ್ತಪ್ರತಿಗಳಾಗಲಿ, ಶಿಲೆಯ ಮೇಲೆ ಬರೆದು ಕೊರೆದ ಪ್ರಾಚೀನ ಶಾಸನಗಳಾಗಲಿ ಇನ್ನೂ ದೊರೆತಿಲ್ಲವೆಂದು ಹೇಳಬಹುದು.

ಪರಂಪರಾಗತ ಪ್ರತಿ :

ಕವಿಯ ಸ್ವಹಸ್ತಾಕ್ಷರ ಪ್ರತಿಯನ್ನು ಬಿಟ್ಟರೆ, ಅದರ ಪುನಃಪುನಃ ನಕಲುಗಳಾಗಿ ಈವರೆಗೆ ಬೆಳೆದುಬಂದ ಎಲ್ಲ ಹಸ್ತಪ್ರತಿಗಳೂ ಪರಂಪರಾಗತ ಪ್ರತಿಗಳು. ಇವು ಬೇರೆಬೇರೆ ಕಾಲ, ಬೇರೆಬೇರೆ

---

೨. 'ಶೋಧನ ಪುಟ'ಕ್ಕೆ 'ತಿಳಿಪುಟ' ಎಂದೂ ಕರೆಯುತ್ತಾರೆ. (ಮೈಹಸೂ III ೧೦೪೯ ಭಕ್ತಿರಸ ಸೋನೆ)

೩. ಕಕಚ. (೧೯೭೩) II ಪು. ೩೧೧

೪. EC- V - ii ಚನ್ನರಾಯಪಟ್ಟಣ ೧೭೯ ಆನೆಕೆರೆ

೫. ಕಕಚ ೧೦೭

೬. SII XX. 76 ಬಾಳಂಬೀಡ

ಲಿಪಿಕಾರ, ಬೇರೆಬೇರೆ ಪ್ರದೇಶಗಳಲ್ಲಿ ಒಂದು ಎರಡಾಗಿ, ಎರಡು ಹಲವಾಗಿ, ಹಲವು ಮತ್ತೆ ಹಲವಾಗಿ ಹುಟ್ಟಿ ಬಂದಿರುತ್ತವೆ. ಈ ಪೀಳಿಗೆ ಜಾಳಿಗೆಯಂತೆ ಹಬ್ಬಿರುತ್ತದೆ. ಹೀಗೆ ಅನಂತಮುಖವಾಗಿ ಹುಟ್ಟಿಬಂದ ಈ ಪ್ರತಿಗಳನ್ನು ಸ್ಖಾಲಿತ್ಯಪ್ರಮಾಣವನ್ನವಲಂಬಿಸಿ ಶುದ್ಧಸಂತಾನ, ಅಶುದ್ಧಸಂತಾನವೆಂದು ವರ್ಗೀಕರಿಸಬೇಕಾಗುತ್ತದೆ.

ಶುದ್ಧಸಂತಾನ ಪ್ರತಿ : ಒಂದು ಕೃತಿಯ ಪೀಳಿಗೆಪರಂಪರೆ ಮೂಲಕ್ಕೆ ಪ್ರಾಮಾಣಿಕವಾಗಿದ್ದರೆ ಅದು ಶುದ್ಧಸಂತಾನ. ಮುಖ್ಯವಾಗಿ ಒಂದು ಕೃತಿಯ ಬೇರೊಂದು ಪೀಳಿಗೆಯೊಂದಿಗೆ ಬೆರೆಯದ ಪ್ರತಿಗಳಿವು. ಇವುಗಳಲ್ಲಿ ಬಹಳವೆಂದರೆ ಅನುದ್ದೇಶಿತ ಸ್ಖಾಲಿತ್ಯ ಮಾತ್ರ ಇರುತ್ತದೆ. ನಮಗೆ ಸಿಗುವ ಈ ವರ್ಗದ ಹಸ್ತಪ್ರತಿ ಎಷ್ಟೇ ಕೆಟ್ಟರೂ ಮುಕ್ಕಾಲಿಗಿಂತ ಹೆಚ್ಚು ಪಾಠ ಸುಭದ್ರವಿರುತ್ತದೆ.

ಶುದ್ಧಸಂತಾನ ಪ್ರತಿಯನ್ನು ಕಂಡುಹಿಡಿಯಲು ಒಂದಕ್ಕಿಂತ ಹೆಚ್ಚು ಪ್ರತಿಗಳಿದ್ದರೆ ಲೇಸು. ಸಂಪಾದನ ಕಾರ್ಯಕ್ಕೆ ಈ ಪೀಳಿಗೆಯನ್ನು ಆಯ್ದುಕೊಳ್ಳುವುದರಿಂದ ಪರಿಷ್ಕರಣ ಹೆಚ್ಚು ಪ್ರಾಮಾಣಿಕವಾಗುತ್ತದೆ.

ಅಶುದ್ಧಸಂತಾನ ಪ್ರತಿ : ಒಂದು ಕೃತಿಯ ಪೀಳಿಗೆಪರಂಪರೆ ಮೂಲಕ್ಕೆ ಪ್ರಾಮಾಣಿಕವಾಗಿರದ ಪಕ್ಷದಲ್ಲಿ ಅದು ಅಶುದ್ಧಸಂತಾನ. ಮುಖ್ಯವಾಗಿ ಒಂದು ಕೃತಿಯ ಹಲವು ಪೀಳಿಗೆಗಳ ಮಿಶ್ರಣದಿಂದ, ಹಲವು ಲಿಪಿಕಾರರು ಕೂಡಿ ಬರೆಯುವದರಿಂದ, ಉದ್ದೇಶಿತ ಮತ್ತು ಅನುದ್ದೇಶಿತ ಲೋಪ, ಆಗಮ, ಆದೇಶ ಮತ್ತು ಪಲ್ಲಟಗಳ ಅಧಿಕ ಪ್ರಮಾಣದಿಂದ ಸಿದ್ಧವಾದ ಸಂತಾನವಿದು. ಉದಾ:

"ಯರಡು ಮೂಲಪ್ರತಿಗಳನ್ನು ಇಟ್ಟುಕೊಂಡು ಸಮಗ್ರವಾಗಿ ಬರೆಯಲ್ಪಟ್ಟಿದೆ ॥ಕವಿಕುಂಜರ ಲೀಲಾವತಿ ಸಂಪೂರ್‍ನ್ನ."॥[೭]

"ವೀರಶೈವ ಶಿಖಾರತ್ನವನು ಬರದಾತ ತೂಕದ ದೊಡ್ಡ ವೀರೈಯ್ಯನ ಕೊಮಾರ ಮುದಂಣ । ಮುದಂಣನ ಆತ್ಮಭವ"[೮]

"... ಮುಂದೆ ಯಿಂನು ನಾಲ್ಕುದ ನೆಲೆಯಿಥೆಯಂತೆ, ಯಲ್ಲಿ ಆದರು ಮಾತ್ರಕೆ ಶಿಕ್ಕಿದರೆ ಬರೆಯಬೇಕು"[೯]

"ಕಟ್ಟಿಗೆ ಲಕ್ಷಮಯ್ಯನವರ ಮನೆಪ್ರತಿ, ಹೋಗಿ ಬಂದು ಯಿದ್ದುದಕ್ಕೆ ೩ ಪರ್ವವಂನು ಚವಡಪ್ಪ ಬರದು ಶೇರಿಸಿಯಿರುವುದಕ್ಕೆ ನಿವಿಗ್ಣಮಸ್ತು"[೧೦]

ಈ ಮಾತುಗಳು ಅಶುದ್ಧಸಂತಾನದ ಉಗಮಕ್ಕೆ ಉದಾಹರಣೆಯನಿಸಿವೆ. ಪೊನ್ನನ ಶಾಂತಿಪುರಾಣದ ಆರಾ ಹಸ್ತಪ್ರತಿಯ ನಾಲ್ಕು ಆಶ್ವಾಸಗಳನ್ನು "ಸೇನಗಣದ ಸಮನ್ತಭದ್ರದೇವರ

---

೭. ಮೈಹಸೂ iii 1508 ಲೀಲಾವತಿ
೮. ಮೈಹಸೂ iv 1599 ವೀರಶೈವ ಶಿಖಾರತ್ನ
೯. ಮೈಹಸೂ iv 1753 ಶಿವಷಣ್ಮುಖ
೧೦. ಮೈಹಸೂ iii 1192 ಭಾಗವತ

ಶಿಷ್ಯ ಅಂತಣ್ಣಗಳುಜಿಯ್ಯನ ಗುಡ್ಡ ಚಂದ್ರಮ", ಮುಂದಿನ ಆಶ್ವಾಸಗಳನ್ನು "ಬಿದಿರೆಯ ಅಂತಣ್ಣಗಳಾದ ಜೀಯವನರುಗಳಿಗೆ ಬೆಳತಂಗಡಿಯ ಬರೆಹದ ಸೆಟ್ಟಿಶಾಂತು"[೧೧] ಕೂಡಿ ಬರೆದುದುದನ್ನು ಇಲ್ಲಿ ಗಮನಿಸಬೇಕು.


ನಮಗೆ ಸಿಗುವ ಹಸ್ತಪ್ರತಿಗಳಲ್ಲಿ ಈ ಅಶುದ್ಧಸಂತಾನಗಳ ಸಂಖ್ಯೆ ಕಡಿಮೆಯಿದ್ದರೂ ಗ್ರಂಥಸಂಪಾದನಕಾರ್ಯಕ್ಕೆ ಇವುಗಳ ಬಳಕೆಯಿಂದ ಹಾನಿ ಹೆಚ್ಚು. ಅದು 'ಮಱುಗುವ ಪಾಲ್ಗೆ ಅಳೆಯ ಪನಿಗಳಂ ಬೆರಸಿದ" ಹಾಗೆ. ಆದುದರಿಂದ ಇವುಗಳನ್ನು ಉಪಯೋಗಿಸಲೇಬಾರದು. ಒಂದು ವೇಳೆ ಉಪಯೋಗಿಸಿದರೂ ವೈದ್ಯಕ್ಕೆ ಬಳಸುವ ವಿಷದಂತೆ ಎಚ್ಚರಿಕೆಯಿಂದ ಬಳಸಬೇಕು.

ಒಂದು ಕೃತಿಯ ಹಲವು ಪ್ರತಿಗಳು ಸಿಕ್ಕರೆ ಶುದ್ಧಸಂತಾನದಿಂದ ಈ ಅಶುದ್ಧ ಸಂತಾನವನ್ನು ಬೆರಳಿಟ್ಟು ಹೇಳುವುದು ಸುಲಭ. ಒಂದು ಪ್ರತಿ ಸಿಕ್ಕರೆ ಕಷ್ಟ. ಆದರೂ ಭಾಷೆ ಶೈಲಿಗಳ ಅನೈಕ್ಯತೆ, ಕಥೆಯ ವಿರೂಪತೆಗಳನ್ನಾಧರಿಸಿ ಹೇಳಲು ಕೆಲವು ಸಲ ಸಾಧ್ಯವಾಗಬಹುದು.

ಗ್ರಂಥಸಂಪಾದನೆಗೆ ಬೇಕಾಗುವ ಹಸ್ತಪ್ರತಿ ಸಾಮಗ್ರಿಯೆಂದರೆ ಸಾಮಾನ್ಯವಾಗಿ ಈ ಪರಂಪರಾಗತ ಪ್ರತಿಗಳೇ. ಒಂದು ಕೃತಿಯನ್ನು ಸಂಪಾದಿಸಲು ಕಲೆ ಹಾಕಿದ ಇವು ತಮತಮಗೆ ಒಂದೋ ಎರಡೋ ಕುಟುಂಬಗಳಾಗಿ ನಿಲ್ಲುತ್ತವೆ. ಇವುಗಳ ಬಾಂಧವ್ಯ ಮಾತೃಕಾಪ್ರತಿ ಪುತ್ರಿಕಾಪ್ರತಿ, ಸೋದರಪ್ರತಿ, ಸದಸ್ಯಪ್ರತಿಯೆಂದು ಇರಬಹುದು.

ಅ, ಬ ಎಂಬ ಎರಡು ಪ್ರತಿಗಳಲ್ಲಿ 'ಅ' ದಿಂದ 'ಬ' ಬಂದಿದ್ದರೆ, 'ಅ' ಮಾತೃಕಾಪ್ರತಿ, 'ಬ' ಪುತ್ರಿಕಾಪ್ರತಿ. ಇವುಗಳ ಸಂಬಂಧ ಅ > ಬ. ಇನ್ನು 'ಬ' ದಿಂದ 'ಅ' ಬಂದಿದ್ದರೆ, 'ಬ' ಮಾತೃಕಾಪ್ರತಿ, 'ಅ' ಪುತ್ರಿಕಾಪ್ರತಿ. ಇವುಗಳ ಸಂಬಂಧ ಬ > ಅ.

ಒಂದು ಕೃತಿಯನ್ನು ಪರಿಷ್ಕರಿಸುವ ನಮಗೆ ಅದರ ಅ.ಬ.ಕ. ಎಂಬ ಮೂರು ಹಸ್ತಪ್ರತಿಗಳು ಲಭಿಸಿವೆಯೆಂದು ಭಾವಿಸೋಣ. ಇವುಗಳ ಸಂಬಂಧ ಹೀಗೆ ಇರಬಹುದು :



ಇಲ್ಲಿ 'ಅ' ಮತ್ತು 'ಬ' ಸೋದರಪ್ರತಿಗಳು, 'ಕ' ಸದಸ್ಯಪ್ರತಿ. ಈ ವರೆಗಣ ವಿವೇಚನೆಯನ್ನು ಹೀಗೆ ರೇಖಿಸಬಹುದು :

---

೧೧. ಶಾಂಪು. ಪರಿಶಿಷ್ಟ ಪು. ೩೩.

೧. ಮೂಲಪ್ರತಿ
೨. ಪರಂಪರಾಗತಪ್ರತಿ
- ಶುದ್ಧಸಂತಾನಪ್ರತಿ
  - ಮಾತೃಕಾಪ್ರತಿ
  - ಪುತ್ರಿಕಾಪ್ರತಿ
  - ಸೋದರಪ್ರತಿ
  - ಸದಸ್ಯಪ್ರತಿ
- ಅಶುದ್ಧಸಂತಾನಪ್ರತಿ
  - ಮಾತೃಕಾಪ್ರತಿ
  - ಪುತ್ರಿಕಾಪ್ರತಿ
  - ಸೋದರಪ್ರತಿ
  - ಸದಸ್ಯಪ್ರತಿ

ಕೆಲವು ಸಲ ಈ ಮೂಲಪ್ರತಿ, ಶುದ್ಧಸಂತಾನದ ಪರಂಪರಾಗತ ಪ್ರತಿ ಮತ್ತು ಅಶುದ್ಧ ಸಂತಾನದ ಪರಂಪರಾಗತಪ್ರತಿಗಳು 'ಏಕೈಕ ಹಸ್ತಪ್ರತಿ' 'ಸಂರಕ್ಷಿತ ಹಸ್ತಪ್ರತಿ' ರೂಪದಲ್ಲಿ ದೊರೆಯಬಹುದು.

ಏಕೈಕ ಹಸ್ತಪ್ರತಿ : ಒಂದು ಕೃತಿಯ ಕೆಲವೇ ಹಸ್ತಪ್ರತಿಗಳು ದೊರೆಯವುದಕ್ಕೆ ಅದು ಜನಪ್ರಿಯವಲ್ಲದುದು, ಸುಲಭ ಲಭ್ಯವಾಗದುದು ಮುಖ್ಯ ಕಾರಣಗಳು. ಇದರಿಂದಾಗಿ ಹಿಂಡನಗಲಿದ ಗಜದಂತೆ ಕೆಲವು ಗ್ರಂಥಗಳ ಒಂದೊಂದೇ ಹಸ್ತಪ್ರತಿ ಲಭಿಸಬಹುದು. ಹೀಗೆ ದೊರೆತ ಈ ಏಕಮಾತ್ರ ಹಸ್ತಪ್ರತಿಯು ಮೂಲಪ್ರತಿ ಇಲ್ಲವೆ ಶುದ್ಧಸಂತಾನದ ಪರಂಪರಾಗತಪ್ರತಿ ಇಲ್ಲವೆ ಅಶುದ್ಧ ಸಂತಾನದ ಪರಂಪರಾಗತ ಪ್ರತಿಯಾಗಿರಬಹುದು. ಕನ್ನಡದಲ್ಲಿ ನಾಗವರ್ಮನ ಕರ್ಣಾಟಕ ಕಾದಂಬರಿ, ಚೌಂಡರಸನ ನಳಚರಿತ್ರೆ, ಮಧುರನ ಧರ್ಮನಾಥಪುರಾಣ, ಮಹಲಿಂಗಸ್ವಾಮಿಯ ಬಾಲರಾಮನ ಸಾಂಗತ್ಯ, ಲಿಂಗಣಾರಾಧ್ಯನ ವೃತ್ತಿಯನ್ನೊಳಗೊಂಡ ಶಬ್ದಮಣಿದರ್ಪಣ ಮುಂತಾದವುಗಳ ಹಸ್ತಪ್ರತಿ ಒಂದೊಂದು ಮಾತ್ರ ಸಿಕ್ಕಿವೆ. ಇವು ಶುದ್ಧ ಸಂತಾನದ ಪರಂಪರಾಗತ ಪ್ರತಿಗಳೆಂದು ಅಭ್ಯಾಸಬಲದಿಂದ ಹೇಳಬಹುದಾಗಿದೆ. ಆದರೂ ಇವುಗಳಲ್ಲಿ ಅನಿವಾರ್ಯ ಲೇಖನಸ್ಖಾಲಿತ್ಯಗಳು ಎಡೆ ಪಡೆದಿರಲು ಸಾಕು.

ಏಕೈಕ ಹಸ್ತಪ್ರತಿಗಳನ್ನವಲಂಬಿಸಿ ಗ್ರಂಥಸಂಪಾದನೆ ಮಾಡುವುದು ಸಾಕ್ಷಿಗಳಿಲ್ಲದೆ ಆತ್ಮಸಾಕ್ಷಿಯ ಬಲದಿಂದ ತೀರ್ಪು ನೀಡುವಂತಹ ತುಂಬ ಜವಾಬ್ದಾರಿಯ ಕಾರ್ಯ. ಈ ಅಸಿಧಾರಾವ್ರತಕ್ಕೆ ಅಂಜಿ ಸಂಪಾದನ ಕಾರ್ಯವನ್ನು ಬಿಟ್ಟುಕೊಟ್ಟರೆ ಇದ್ದೊಂದೂ ಪ್ರತಿ ನಾಶಗೊಳ್ಳಬಹುದು. ಆದುದರಿಂದ ಅದರಲ್ಲಿಯ ಭಾಷಿಕ ದೋಷಗಳನ್ನು ಮಾತ್ರ ತಿದ್ದಿ, ಕ್ಲಿಷ್ಟಪಾಠಗಳನ್ನು ಹಾಗೆಯೇ ಇಟ್ಟು ಅಚ್ಚಿಡುವುದು ಕ್ಷೇಮಕರ. ಈ ಪ್ರಸಂಗದಲ್ಲಿ ಕರ್ಣಾಟಕ ಕಾದಂಬರಿಯನ್ನು ಸಂಪಾದಿಸಿ ಪ್ರಕಟಿಸಿದ ಬಿ. ಮಲ್ಲಪ್ಪನವರ ಕಾರ್ಯ ತುಂಬ ಸ್ತುತ್ಯವೆನಿಸಿದೆಯೆಂದು ಪಂಡಿತರ ಅಭಿಪ್ರಾಯ.[೧೨]

೧೨."ಗ್ರಂಥಪಾಥದಿಂದ ಕಥಾಸಂದರ್ಭವು ಕೆಟ್ಟಿದ್ದ ಕಡೆಗಳಲ್ಲಿ ಸಂಸ್ಕೃತ ಕಾದಂಬರಿಯ ಅರ್ಥವನ್ನು ಬಿಡದೆ ನಾಗವರ್ಮನ ವಾಕ್ಸರಣಿಗೆ ಸಮಾನವಾದ ವಾಕ್ಸರಣಿಯಿಂದ ಪದ್ಯಗಳನ್ನು ರಚಿಸಿಕೊಟ್ಟು ಗ್ರಂಥ ಪರಿಷ್ಕರಣ ವಿಷಯದಲ್ಲಿಯೂ ಆಗಾಗ್ಗೆ ಸಹಾಯ ಮಾಡಿದ ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದು ಗತಿಸಿದ ಬಸವಪ್ಪ ಶಾಸ್ತ್ರಿಗಳಿಗೂ ಆಸ್ಥಾನ ಪಂಡಿತರಾಗಿರುವ ಸೋಸಲೆ ಅಯ್ಯಶಾಸ್ತ್ರಿಗಳಿಗೂ ಇಂಗ್ಲೀಷ್ ಕಾಲೇಜು ಕನ್ನಡ ಪಂಡಿತರಾಗಿರುವ

ಒಂದು ವೇಳೆ ಪ್ರಕಟನೆ ಅಸಾಧ್ಯವಾಗಿದ್ದರೆ ಅಂಥ ಪ್ರತಿಗಳ ಯಂತ್ರಪ್ರತಿಗಳನ್ನಾದರೂ ಮಾಡಿಕೊಳ್ಳಬೇಕು.

ಸಂರಕ್ಷಿತ ಹಸ್ತಪ್ರತಿ : ಪಾಠರಕ್ಷಣೆಯ ದೃಷ್ಟಿಯಿಂದ ಸರ್ಪಕಾವಲಿಟ್ಟು ರಕ್ಷಿಸಿಕೊಂಡು ಬಂದ ಪ್ರತಿಗಳಿವು. ಪ್ರಾಚೀನ ಗ್ರೀಕ ಸರಕಾರದಿಂದ ರಕ್ಷಿಸಲ್ಪಡುತ್ತಿದ್ದ ಲ್ಯಾಟಿನ್ ಹಸ್ತಪ್ರತಿಗಳು ಈ ವರ್ಗಕ್ಕೆ ಸೇರಿರುತ್ತವೆ. ಸರಕಾರದಿಂದ ಮನ್ನಣೆ ಪಡೆದ ಯೋಗ್ಯ ಲಿಪಿಕಾರರು, ಅದೂ ಗ್ರಂಥಕರ್ತನ ಇಲ್ಲವೆ ವಿದ್ವಾಂಸನ ಮೇಲ್ವಿಚಾರಣೆಯಲ್ಲಿ ಇವುಗಳನ್ನು ಪ್ರತಿ ಮಾಡಿಕೊಳ್ಳಬಹುದಿತ್ತು. ಇದರಿಂದ ಆ ಕಾವ್ಯಗಳ ಪಾಠ ಭದ್ರವಾಗಿ ಉಳಿಯಿತು. ಹೊಣೆಗೇಡಿ ಲಿಪಿಕಾರರ ಕಾಟ ಕಡಿಮೆಯಾಯಿತು. ಅವಸರವಸರವಾಗಿ ನಕಲು ಮಾಡುವ ವ್ಯಾಪಾರೀ ಮನೋಭಾವದವರಿಗೆ ಆಸ್ಪದ ನಿಂತುಹೋಯಿತು. ವ್ಹರ್ಜಿಲ್‌ನ 'ಏನಿಡ್' ಮಹಾಕಾವ್ಯದ ಮತ್ತು ಇವನ ಬೇರೆ ಕಾವ್ಯಗಳ ಹಸ್ತಪ್ರತಿಗಳು ಹೀಗೆ ರಕ್ಷಿಸಲ್ಪಟ್ಟವು. ಇಂಥ ಹಸ್ತಪ್ರತಿಗಳು 'ಸಂರಕ್ಷಿತ ಹಸ್ತಪ್ರತಿ'ಗಳು ಇಲ್ಲವೆ 'ಅಧಿಕೃತ ಹಸ್ತಪ್ರತಿ'ಗಳೆಂದು ಕರೆಯಲ್ಪಡುತ್ತವೆ.

ಕನ್ನಡದಲ್ಲಿ ಇಂಥ ನಿಯಂತ್ರಣ ಕ್ರಮವನ್ನು ನಮ್ಮ ಸರಕಾರ ಯಾವ ಕಾಲದಲ್ಲಿಯೂ ಕೈಕೊಳ್ಳದ ಕಾರಣ, ಕನ್ನಡ ಹಸ್ತಪ್ರತಿಗಳಿಗೆ ಹೇರಳ ಪಾಠಗಳು ಹುಟ್ಟಿಕೊಂಡವು. ಇದಕ್ಕೆ ಅಪವಾದ, ಮೂಡಬಿದರೆಯ ಸಿದ್ಧಾಂತಬಸದಿಯಲ್ಲಿ ಸಂರಕ್ಷಿಸಲ್ಪಟ್ಟ ಧವಲಾ, ಜಯಧವಲಾ, ಮಹಾಧವಲಾ ಎಂಬ ಜೈನಸಿದ್ಧಾಂತ ಗ್ರಂಥಗಳು. ಕನ್ನಡ ಲಿಪಿ, ಅರ್ಧಮಾಗಧಿ ಭಾಷೆಯ ಈ ಹಸ್ತಪ್ರತಿಗಳಲ್ಲಿ ಕ್ರಮವಾಗಿ ೭೭೭, ೫೧೮, ೨೧೯ ಓಲೆಗಳಿವೆ. ಚಾವುಂಡರಾಯನ ಗುರು ನೇಮಿಚಂದ್ರಸಿದ್ಧಾಂತಿಗಳು "ಇಂತು ಮಹಾಧವಲಸಿದ್ಧಾಂತಮಂ ರಚಿಸಿರ್ದ ಪುಸ್ತಕಂಗಳಂ ರಕ್ಷಿಸಲು ಸಿದ್ಧಾಂತ ಬಸ್ತಿಯಂ ಮಾಡಿಸಿ, ಅಲ್ಲಿ ಸ್ಥಾಪಿಸಿ ಪೂಜಿಸುತ್ತಂ"[೧೩] ಎಂಬ ದೇವಚಂದ್ರನ ಹೇಳಿಕೆಯಿಂದ ೧೦ನೆಯ ಶತಮಾನದಲ್ಲಿ ಈ ಗ್ರಂಥಗಳು ಶ್ರವಣಬೆಳ್ಗೊಳದಿಂದ ಮೂಡಬಿದರೆಗೆ ಸಾಗಿಸಲ್ಪಟ್ಟವೆಂದು ಊಹಿಸಬಹುದಾಗಿದೆ. ಅಂದಿನಿಂದ ಇವು ಸಮಸ್ತ ಭಾರತದಲ್ಲಿಯೇ ಏಕಮಾತ್ರ ಹಸ್ತಪ್ರತಿಗಳಾಗಿ ರಕ್ಷಿಸಲ್ಪಟ್ಟವು. ಸಿದ್ಧಾಂತಬಸದಿಯ ಶಾಸ್ತ್ರಭಂಡಾರದಲ್ಲಿ ಭದ್ರವಾದ ಬೀಗಮುದ್ರೆ ಹಾಕಿಸಿಕೊಂಡು, ಜನರ ಭಕ್ತಿ ಕಾಣಿಕೆಗಳನ್ನು ಸ್ವೀಕರಿಸುತ್ತ ದೈವೀಸ್ವರೂಪದಲ್ಲಿ ಪೂಜೆಗೊಳ್ಳಹತ್ತಿದವು.

ಕ್ರಿ. ಶ. ೧೮೮೩ರಲ್ಲಿ ಗ್ರಂಥಗಳ ದರ್ಶನಾರ್ಥ ಬಂದ ಮುಂಬೈಯ ಸೇಠ ಜೆ. ಪಿ. ಮಾಣಿಕಚಂದ ಇವರ ಇಚ್ಛೆಯಂತೆ, ಸೋಲಾಪೂರದ ಸೇಠ ಹೀರಾಚಂದ ನೇಮಿಚಂದ ಸೋನಿ ಅವರ ಪ್ರಯತ್ನದಿಂದ ಈ ಗ್ರಂಥಗಳ ನಕಲು ಕಾರ್ಯ ಪ್ರಾರಂಭವಾಯಿತು. ದೇವನಾಗರಿ ಲಿಪಿಯಲ್ಲಿ ನಕಲುಕಾರ್ಯವನ್ನು ಪ್ರಾರಂಭಿಸಿದ ಬ್ರಹ್ಮಸೂರಿ ಶಾಸ್ತ್ರಿಗಳು ತೀರಿಕೊಳ್ಳಲು, ಗಜಪತಿ ಉಪಾಧ್ಯಾಯರು ಅದನ್ನು ಮುಂದುವರಿಸಿ ಪೂರ್ಣಗೊಳಿಸಿದರು. ಒಟ್ಟಿನಲ್ಲಿ ೧೪ ಸಾವಿರ ರೂಪಾಯಿ ವೆಚ್ಚದಿಂದ ೧೬ ವರ್ಷ ಪ್ರಯತ್ನಿಸಿದರೂ ಧವಲಾ, ಜಯಧವಲಾ ಮಾತ್ರ ನಕಲುಗೊಂಡವು.

—ಕರಿಬಸವಪ್ಪಶಾಸ್ತ್ರಿಗಳಿಗೂ ನನ್ನ ವಂದನೆಗಳನ್ನು ಸಮರ್ಪಿಸುವೆನು. ಪೂರ್ವಕಾದಂಬರಿಯಲ್ಲಿ ೬೦೩ನೆಯ ಪದ್ಯದಿಂದ ೬೧೪ನೆಯ ಪದ್ಯದವರೆಗೂ ೭೨೧-೭೨೭ರ ವರೆಗೂ ಬಸವಪ್ಪಶಾಸ್ತ್ರಿಗಳು, ಉತ್ತರಕಾದಂಬರಿಯಲ್ಲಿ ೫೭೦-೫೮೭ವರೆಗೆ ಅಯ್ಯಶಾಸ್ತ್ರಿಗಳೂ, ೭೮ನೆಯ ಪದ್ಯದಿಂದ ೭೩೫ನೆಯ ಪದ್ಯದವರೆಗೆ ಕರಿಬಸವಪ್ಪಶಾಸ್ತ್ರಿಗಳೂ ರಚಿಸಿರುತ್ತಾರೆ." (ಕಾದಂಬರಿ ೧೮೯೨ ಪೀಠಿಕೆ vi) ಈ ಮಾತುಗಳನ್ನು ಗಮನಿಸಬೇಕು.

೧೩. ರಾಜಾವಳೀ ಕಥೆ (KRI ಹಸ್ತಪ್ರತಿ ನಂ ೨೦), ಪು. ೧೫೪

ಭಂಡಾರದಲ್ಲಿ ಉಳಿದ ಮಹಾಧವಲಾ ಕೃತಿಯೊಂದಿಗೆ, ಸುರಕ್ಷಿತ ದೃಷ್ಟಿಯಿಂದ ಅದರ ಒಂದು ನಕಲುಪ್ರತಿಯೂ ಅಲ್ಲಿರುವುದು ಅವಶ್ಯವೆಂದು ಮನಗಂಡರು, ಸೇಠ ಹೀರಾಚಂದರು. ಅವರ ಪ್ರಯತ್ನಪೂರ್ವಕ ಆದೇಶದಂತೆ ಶ್ರೀ ಲೋಕನಾಥಶಾಸ್ತ್ರಿಗಳಿಂದ ದೇವನಾಗರಿ ಲಿಪಿಯಲ್ಲಿ ನಕಲುಕಾರ್ಯ ಪ್ರಾರಂಭವಾಯಿತು. ಈ ಕಾರ್ಯ ಕ್ರಿ.ಶ. ೧೯೧೮ರಿಂದ ೧೯೨೨ ಅಂದರೆ ನಾಲ್ಕು ವರುಷಗಳ ವರೆಗೆ ನಡೆಯಿತು.

ನಕಲುಗೊಂಡು ಭಂಡಾರದಲ್ಲುಳಿದ ಮಹಾಧವಲವನ್ನು ಅಚ್ಚಿಸಲು ೧೯೩೬ರಿಂದ ಪ್ರಯತ್ನ ನಡೆದು, ಸಮಿತಿ ನೇಮಕಗೊಂಡು, ಸಂಧಾನ ವಿಫಲವಾಗಿ, ನ್ಯಾಯಾಲಯಕ್ಕೂ ಹೋಗುವ ವಿಚಾರವೂ ಸುಳಿದು, ಏನೆಲ್ಲ ಫಲಿಸದೆ ಹೋದವು. ೧೯೪೯ರಲ್ಲಿ ಸೇಠ ಹುಕುಮಚಂದ, ಮಂಜಯ್ಯ ಹೆಗ್ಗಡೆ, ರಘುಚಂದ್ರ ಬಲ್ಲಾಳರ ಮಧ್ಯಸ್ಥಿಕೆಯಿಂದ ಇದನ್ನು ನಕಲುಗೊಳಿಸಿಕೊಳ್ಳಲು ಸುಮೇರಚಂದ ದಿವಾಕರ ಅವರಿಗೆ ಒಪ್ಪಿಗೆ ದೊರೆಯಿತು. ಲೋಕನಾಥ ಶಾಸ್ತ್ರಿಗಳಿಂದ ೧೯೫೧ ಡಿಸೆಂಬರ ೩೦ರಂದು ಪ್ರಾರಂಭವಾದ ನಕಲುಕಾರ್ಯ ೧೯೫೨ ಡಿಸೆಂಬರ ೩೦ಕ್ಕೆ ಮುಗಿದು, ೧೯೫೨ರಲ್ಲಿ ಅದು ಪ್ರಕಟವಾಯಿತು.[೧೫]

ಈ ಮೂರು ಕೃತಿಗಳೂ ಸಂರಕ್ಷಿತ ಹಸ್ತಪ್ರತಿಗಳು. ಸಾವಿರ ವರುಷದಿಂದಲೂ ಭಂಡಾರದ ಬೀಗಮುದ್ರೆಯಲ್ಲಿ ಬಂಧಿತವಾಗಿ ಹೊಣೆಗೇಡಿ ಲಿಪಿಕಾರರ ಹಾವಳಿಯಿಂದ ದೂರವುಳಿದ, ದುಷ್ಪಪಾಠಗಳಿಂದ ತಪ್ಪಿಸಿಕೊಂಡ ಶುದ್ಧಪ್ರತಿಗಳಿವು.

ಕಲಬುರ್ಗಿ ಜಿಲ್ಲೆಯ ಕೊಡೆಕಲ್ಲ ಗ್ರಾಮದ ಬಸವೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಹೊರತೆಗೆದು ಓದಲ್ಪಡುವ, ದೇವರಂತೆ ಗದ್ದುಗೆಯ ಮೇಲೆ ಪೂಜೆಗೊಳ್ಳುತ್ತಿರುವ ವಚನ ಗ್ರಂಥಗಳಿವೆ. ಇವೂ ಸಂರಕ್ಷಿತ ಹಸ್ತಪ್ರತಿಗಳು.

ಹಸ್ತಪ್ರತಿಗಳ ವಂಶಸಂಬಂಧ

ಒಂದು ಗ್ರಂಥವನ್ನು ಸಂಪಾದಿಸಲು ಹಲವು ಹಸ್ತಪ್ರತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಇವು ಹಿಂದೆ ಹೇಳಿದ ಮೂಲಪ್ರತಿ (ಮಾತೃಕಾಪ್ರತಿ, ಏಕೈಕ ಹಸ್ತಪ್ರತಿ, ಸಂರಕ್ಷಿತ ಹಸ್ತಪ್ರತಿ), ಪರಂಪರಾಗತ ಪ್ರತಿ (ಶುದ್ಧಸಂತಾನ ವರ್ಗದ ಪ್ರತಿ, ಅಶುದ್ಧ ಸಂತಾನ ವರ್ಗದ ಪ್ರತಿ, ಏಕೈಕ ಹಸ್ತಪ್ರತಿ, ಸಂರಕ್ಷಿತ ಹಸ್ತಪ್ರತಿ)ಗಳಾಗಿರಬಹುದು. ಕನ್ನಡದ ಮಟ್ಟಿಗೆ ಹೇಳುವುದಾದರೆ ಇವುಗಳಲ್ಲಿ ಮೂಲಪ್ರತಿ ಹೋಗಲಿ, ಪರಂಪರಾಗತಪ್ರತಿ ವರ್ಗಕ್ಕೆ ಸಂಬಂಧಿಸಿದ ಮೂಲದ ಸದ್ಯಃಪ್ರತಿ (Immediate copy) ಸಹ ಸಿಗದೆ, ದೂರಪ್ರತಿಗಳು (Distant copy) ಮಾತ್ರ ಸಿಗುತ್ತವೆ.

೧೯ನೆಯ ಶತಮಾನದ ಮುದ್ದಣ ಮತ್ತು ಬಸವಪ್ಪಶಾಸ್ತ್ರಿ ಮೊದಲಾದವರ ಸ್ವಹಸ್ತಪ್ರತಿಗಳನ್ನು ಬಿಟ್ಟರೆ, ನನ್ನ ಗಮನಕ್ಕೆ ಬಂದ ಮೂಲದ ಸದ್ಯಃಪ್ರತಿಗಳೆಂದರೆ ಪದ್ಮಣ ಪಂಡಿತ (ಕ್ರಿ.ಶ.೧೬೨೭)ನ ಹಯಶಾಸ್ತ್ರ, ಕವಿ ಸದಾಶಿವ (ಕ್ರಿ.ಶ.೧೬೫೫)ನ ರಾಮನಾಥ ವಿಲಾಸ.

---

೧೫. ಈ ವಿಷಯವನ್ನು ಮಹಾಬಂಧೋ (೧) ಭಾರತೀಯ ಜ್ಞಾನಪೀಠ (೧೯೫೭)ದ ಮುನ್ನುಡಿಯಿಂದ ಸಂಗ್ರಹಿಸಲಾಗಿದೆ.

"ಬರೆದಾತಂ ಪದ್ಮಣಪಂಡಿತಾರ್ಯನಳಿಯ ಪದ್ಮರಸಂ"[೧೫] ಎಂದು ಹೇಳುತ್ತ, ಮಾವ ಪದ್ಮಣಪಂಡಿತನ ಹಯಶಾಸ್ತ್ರ(ಕ್ರಿ.ಶ. ೧೬೨೭)ವನ್ನು ಅಳಿಯ ಪದ್ಮರಸನು ನಕಲುಗೆಯ್ದಿರುವನು. ಈತನು ಪದ್ಮಣಪಂಡಿತನ ಲಿಪಿಕಾರನಾಗಿ ಬರೆದಿದ್ದರೆ[೧೬]- ಇದು ಮೂಲಪ್ರತಿಯೆನಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಮೂಲದ ಸದ್ಯಃಪ್ರತಿಯೆನಿಸಿಕೊಳ್ಳುತ್ತದೆ.

"ಸಲೆ ರಸಾದ್ರ್ಯಬ್ಧೀಂದು ಸಂಖ್ಯ ಶಕ ಸಮುಚಯಂ ಸಲುತಿರಲ್ಕಾನಂದ ವತ್ಸರಂ"[೧೭] ಅಂದರೆ ಕ್ರಿ.ಶ. ೧೫೫೪ರಂದು ನಿರ್ಮಾಣಗೊಂಡ ಸದಾಶಿವಕೃತ ರಾಮನಾಥವಿಲಾಸವನ್ನು "ಗಿರಿನಗವಾರಿಧಿ ಚಂದ್ರಂ । ನಿರುತಂ ಶಕವರ್ಷ ರಾಕ್ಷಸಾಬ್ದಂ" ಅಂದರೆ ಕ್ರಿ.ಶ. ೧೫೫೫ ರಂದು ಬ್ರಹ್ಮ ಎಂಬ ಲಿಪಿಕಾರನು ಪ್ರತಿಮಾಡಿರುವನು. ಕವಿಕೃತಿ ಹುಟ್ಟಿ ಒಂದು ವರ್ಷ ಕಳೆಯುವುದರೊಳಗಾಗಿ ನಕಲುಗೊಂಡ ಮೂಲದ ಸದ್ಯಃಪ್ರತಿಯಿದು. ಇಂಥ ಸದ್ಯಃಪ್ರತಿಗಳು ಸಿಕ್ಕರೆ ಸಂಪಾದನಕಾರ್ಯ ಸುಗಮಗೊಳ್ಳುತ್ತದೆ. ಆದರೆ ಈ ಬಗೆಯ ಅವಕಾಶ ಕನ್ನಡದಲ್ಲಿ ತೀರ ಅಪರೂಪ.[೧೮]

ಭಾರತದಲ್ಲಿ ಪ್ರತಿಯೊಂದು ಕೃತಿಯ ನಕಲು, ಮರುನಕಲು, ಬಳಿನಕಲುಗಳ ಕ್ರಮವಾದ ಇತಿಹಾಸವನ್ನು ಯಾರೂ ಬರೆದಿಲ್ಲ. ಅದು ಹೋಗಲಿ, ಯಾರ ಒಡೆತನಕ್ಕೆ ಸಂಬಂಧಪಟ್ಟ ಹಸ್ತಪ್ರತಿಯನ್ನು ನೋಡಿ, ತಮ್ಮ ಪ್ರತಿಯನ್ನು ಬರೆದುಕೊಂಡೆವೆಂಬುದನ್ನು ಸಹ ಬಹಳ ಜನ ಲಿಪಿಕಾರರು ಹೇಳಿಲ್ಲ, "ವಿದ್ಯಾಧರನು ನೈಷಧೀಯ ಕಾವ್ಯಕ್ಕೆ ಪ್ರಥಮವ್ಯಾಖ್ಯಾನ ರಚಿಸಿದ್ದಾನಷ್ಟೆ, ಅದಕ್ಕೆ ಬಳಸಿದ ಆ ಕಾವ್ಯದ ಪ್ರತಿಯನ್ನೂ, ಯಶೋಧರನ ಜಯಮಂಗಲಟೀಕೆಗೆ ಆಧಾರವಾದ ಕಾಮಸೂತ್ರದ ಹಸ್ತಪ್ರತಿಯನ್ನೂ ಚಾಳುಕ್ಯ ವಿಶಾಲದೇವನ (ಕ್ರಿ.ಶ. ೧೨೪೨-೬೨) ಪುಸ್ತಕ ಭಾಂಡಾರವು ಒದಗಿಸಿತೆಂದು ಹೇಳಲಾಗಿದೆ. ಬಾನ್ (Bonn) ವಿಶ್ವವಿದ್ಯಾನಿಲಯದ

೧೫. iv ೨೦೦೮. ಹಯಶಾಸ್ತ್ರ

೧೬. ಕವಿಗಳ ಹತ್ತಿರ ಲಿಪಿಕಾರರಿದ್ದುದಕ್ಕೆ ಹಲವು ಉದಾಹರಣೆಗಳು ಸಿಗುತ್ತವೆ.

i) ನಿರುಪಹತಿಸ್ಥಲಂ ಮೃದುತರಾಸನಮೊಳ್ನುಣಿಸಿಂಪುದಂಬುಲಂ
ನೆರಪಿದ ಪುಸ್ತಕಪ್ರತಿ ಲೇಖಕ ವಾಚಕ ಸಂಗ್ರಹಂ ನಿರಂ।
ತರಗೃಹ ನಿಶ್ಚಿತಸ್ಥಿತಿ ವಿಚಾರಕ ಸಂಗತಿ ಸತ್ಕಳತ್ರಸಾ
ದರತೆಯನುಳ್ಳ ಸತ್ಕವಿಯುಮೀಸುವೊಡಾಗದೆ ಕಾವ್ಯವಾರ್ಧಿಯಂ ॥ [ಸೂಕ್ತಿ ೧-೭೦]

ii) ನಿರುಪಹತಿಸ್ಥಲಂಬು ರಮಣೀ ಪ್ರಿಯದೂತಿ ಕತೆಚ್ಚೆಯಿಚ್ಚುಕ
ಪ್ಪುರವಿಡೆಮಾತ್ಮ ಕಿಂಪಯಿನ ಭೋಜದ ಮುಯ್ಯೆಲ ಮಂಚಮೊಪ್ಪುತ
ಪ್ಪುರಯು ರಸಜ್ಞ ಊಹತೆಲಿಂಗಲ ಲೇಖಕ ಪಾಠಕೋತ್ತಮುಲ್
ದೊರಕಿನಗಾಕಯೂರಕಕೃತುಲ್ ರಚಿಯೆಂಪುಮನಂಗಶಕ್ಯಮೇ. [ಪ್ರಕ ೪೨-೨ ಪು. ೧೯೩]

iii) "ಬಾಣಕವಿ (ಸು.ಕ್ರಿ.ಶ. ೬೨೦) ಒಬ್ಬ ವಾಚಕನನ್ನು ನೇಮಿಸಿಕೊಂಡಿದ್ದನೆಂದು ತಿಳಿದುಬರುತ್ತದೆ." (ಭಾಗ್ರಪ ೨೭)

iv) "ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ" ಎಂಬ ಮಾತು ಕವಿ ನೇಮಿಸಿಕೊಳ್ಳುತ್ತಿದ್ದ ಲಿಪಿಕಾರರನ್ನು ಸೂಚಿಸುತ್ತದೆ. ಪಂಡಿತರ ಬರೆವಣಿಗೆ ಅಸ್ಪಷ್ಟವೆಂದು ("ಪ್ರಯತ್ನ ಲಿಖಿತಾನ್ಯಪ್ಯಸ್ಪಷ್ಟಾನ ವೈದಿಕಾಕ್ಷರಾಣಿ") ಮುದ್ರಾರಾಕ್ಷಸ ನಾಟಕ ಹೇಳುತ್ತದೆ.

೧೭. ಮಹಸೂ vi. ೧೧೪೫ ರಾಮನಾಥ ವಿಲಾಸ.

೧೮. ಚೆನ್ನಬಸವಪುರಾಣ ಪರಿಷ್ಕರಣಕ್ಕೆ ಬಳಸಿಕೊಂಡ 'ಪ' ಪ್ರತಿಯನ್ನು ಕುರಿತು "ಇದು ಕಾಗದದ ಮೇಲಿನ ಪ್ರತಿಯಾದರೂ ಇದನ್ನು ಬರೆದ ಕಾಲವು ಶಾಲಿವಾಹನ ಶಕ ೧೫೩೨ (ಕ್ರಿ.ಶ. ೧೬೧೦) ಎಂದರೆ ಕಾವ್ಯರಚನೆಯಾದ ೨೫ ನೆಯ ವರ್ಷದಲ್ಲಿ ಎಂದು ಹೇಳಿದುದನ್ನು ಇಲ್ಲಿ ನೆನೆಯಬೇಕು." (ಜೆಬಪು. ಪ್ರಸ್ತಾವನೆ ೧೬)

ಗ್ರಂಥಾಗಾರದಲ್ಲಿರುವ ರಾಮಾಯಣದ ಒಂದು ಹಸ್ತಪ್ರತಿಯು ವಿಶಾಲದೇವನ ಸಂಗ್ರಹದಲ್ಲಿದ್ದ ಮಾತೃಕೆಯೊಂದರಿಂದ ಬಂದದ್ದು"[೧೯] ಎಂಬ ಶ್ರೀ ಕತ್ರೆ ಅವರ ಹೇಳಿಕೆಯು ಆಧಾರಪ್ರತಿಗೆ ಸಂಬಂಧಪಟ್ಟ ತೀರ ಅಪರೂಪ ಶೋಧನೆ. ಇಂಥ ಕೆಲವು ಉದಾಹಣೆಗಳು ಕನ್ನಡದಲ್ಲಿಯೂ ಇವೆ.

"ಯೀ ಬಸವಚರಿತ್ರೆಯಲ್ಲಿದೊ ತಿಳಿಯಲಿಲ್ಲವಾದರಿಂದ ಜಾಗ್ರತೆಯಾಗಿ ಬರದುಯಿದೇನೆ"[೨೦] ಎಂದು ಹೇಳುವಲ್ಲಿ ಈ ಲಿಪಿಕಾರನಿಗೆ ತನ್ನ ಆಧಾರ ಪ್ರತಿಯ ಒಡೆತನ ತಿಳಿದುಕೊಳ್ಳುವ ಪ್ರಜ್ಞೆಯಿದ್ದಿತೆಂದು ಸ್ಪಷ್ಟವಾಗುತ್ತದೆ. ಇಂಥವರನ್ನು ಬಿಟ್ಟರೆ ಆಧಾರಪ್ರತಿಯ ಒಡೆತನವನ್ನು ಕೆಲವರು ಹೀಗೆ ಸೂಚಿಸಿದ್ದಾರೆ :

"ಕಟ್ಟಿಗೆ ಲಕ್ಷುಮಯ್ಯನವರ ಮನೆಪ್ರತಿ, ಹೋಗಿ ಬಂದುಯಿದ್ದುದಕ್ಕೆ ೩ ಪರ್ವವಂನು ಚವಡಪ್ಪ ಬರೆದು ಶೇರಿಸಿಯಿರುವುದಕ್ಕೆ ನಿವಿಗ್ನಮಸ್ತು"[೨೧]

"ಈ ಪುಸ್ತಕ ಬರೆದ [ಶೇನ] (ಶಾನು)ಭೋಗರು ಬದನೆಹಾಳು ಕುಲಕ[ರುಣಿ] (ರ್ಣಿ) ನಾರಣಪ್ಪನ ಪುತ್ರ ಗೋವಿಂದಯ್ಯನ [ಸು](ಸ್ವ) ಹಸ್ತಬರಹ. ಇದರ ಪ್ರತಿ ನೋಡಿ ಬರುವುದಕೆ ತಂದಿದ್ದ ಪುಸ್ತಕ ಕನಕಗಿರಿ ಕುಲಕರುಣಿ ಹಿರೆಕೆಂಚಪ್ಪನ ಪುತ್ರ ನರಸಿಂಗರಾಯನು ಬರದ ಪ್ರತಿ, ಈ ಪ್ರತಿ ಮೇಲೆ ಬರೆದಿದೆ."[೨೨]

"ಚಿಕ್ಕಬೇವೂರ ತಂಮಡಿ ಹಲಗಪ್ಪನ ಮನೆ ಪ್ರತಿ, ಸಮಾನವಾಗಿ ಬರೆದ ಪುಸ್ತಕಕ್ಕೆ ಮಂಗಳ ಮಹಾಶ್ರೀ"[೨೩]

"ಯೀ ಪುಸ್ತಕವನ್ನು ಜೋಗಪಳ್ಳಿ ವಿರಕ್ತದೇವರು ತಮ್ಮ ಮನೆಗೆ ಪುಸ್ತುಕವಾಗಿರಲೆಂದು, ಕಾರ್ಯದ ಮಹಂತಸ್ವಾಮಿಗಳ ಬಳಿಯಲ್ಲಿದ್ದ ಪ್ರತಿಯ ತಂದು ಪ್ರತಿಯಿದ್ದ ಮೇರೆಗೆ ಬರೆದಿರಿಸಿದೆನು"[೨೪]

ಕನಿಷ್ಠ ಪಕ್ಷ ಹೀಗೆ ಪ್ರತಿಯೊಬ್ಬನೂ ತನ್ನ ಆಧಾರ ಪ್ರತಿಯನ್ನು ಸೂಚಿಸಿದ್ದರೆ ಒಂದೊಂದು ಕೃತಿಯ ಎಲ್ಲ ನಕಲು ಪ್ರತಿಗಳ ವಂಶಾವಳಿಯನ್ನು ಪುನರ್‌ರಚಿಸಲು ಸಾಧ್ಯವಾಗುತ್ತಿತ್ತು. ಆದರೆ ನಮಗೆ ಸಿಗುವ ಪ್ರತಿಗಳು ಯಾವುದೋ ಶಾಖೆಯ ಎಷ್ಟನೆಯದೋ ನಕಲುಗಳಾಗಿರುತ್ತವೆ. ಸಂಪಾದಕ ಇಂಥ ಚದುರಿದ ಪ್ರತಿಗಳನ್ನು ಕಲೆಹಾಕಿ, ಸಂಪಾದನಕಾರ್ಯದ ಸುಗಮತೆಗಾಗಿ ಅವುಗಳ ಪರಸ್ಪರ ಸಂಬಂಧವನ್ನು ಮೊದಲು ರಚಿಸಬೇಕಾಗುತ್ತದೆ. ಇದಕ್ಕೆ ಆತನು ಸಂಯೋಜಕ, ವಿಚ್ಛೇದಕ ಎಂಬ ಇಬ್ಬಗೆಯ ಸ್ಖಾಲಿತ್ಯಗಳನ್ನು ಅವಲಂಬಿಸಬೇಕು.

ಯಾವುದೇ ಒಂದು ಹಸ್ತಪ್ರತಿಯಲ್ಲಿ ಕವಿಪಾಠ ಮತ್ತು ಸ್ಖಾಲಿತ್ಯಪಾಠ ಒಟ್ಟುಗೂಡಿರುತ್ತವೆ. ಇವುಗಳಲ್ಲಿ ಸಾಮಾನ್ಯವಾಗಿ ಕವಿಪಾಠದ ಪ್ರಮಾಣ ಅಧಿಕ, ಸ್ಖಾಲಿತ್ಯ ಪಾಠದ ಪ್ರಮಾಣ ಕಡಿಮೆ.

---

೧೯. ಭಾಗ್ರಪ ೨೨.

೨೦. ಮೈಹಸೂ III. ೧೦೧೬ ಬಸವ ಚರಿತ್ರೆ

೨೧. ಮೈಹಸೂ iv ೧೧೯೨ ಭಾರತ

೨೨. ಮಹಸೂ i ಭಾರತ ಕಥಾಮಂಜರಿ

೨೩. KRI, V-3 ಅಕ್ಷರ ಪ್ರಶ್ನೆ

೨೪. ಮೈಹಸೂ ii ೮೧೭ ಪಂಚಬ್ರಹ್ಮೋದಯ ಭಾಷ್ಯ

ಅವಳಿಮಕ್ಕಳನ್ನು ಪ್ರತ್ಯೇಕಿಸುವಲ್ಲಿ ಸಮಾನವಾಗಿರುವ ಅಂಗರೂಪವನ್ನು ಬಿಟ್ಟು, ಸಮಾನವಾಗಿರದ ಅಂಗರೂಪವನ್ನು ಅವಲಂಬಿಸುವಂತೆ, ಬಳಸಿಕೊಂಡ ಒಂದು ಕೃತಿಯ ಹಲವು ಹಸ್ತಪ್ರತಿಗಳ ಪರಸ್ಪರ ಸಂಬಂಧವನ್ನು ಗುರುತಿಸುವಲ್ಲಿ ಅವಲಂಬಿಸಬೇಕಾದುದು ಅವುಗಳಲ್ಲಿ ಸಮಾನವಾಗಿರುವ ಅಧಿಕ ಪ್ರಮಾಣದ ಕವಿಪಾಠವನ್ನಲ್ಲ, ಸಮಾನವಾಗಿರದ ಅಲ್ಪ ಪ್ರಮಾಣದ ಸ್ಖಾಲಿತ್ಯಪಾಠವನ್ನು.

ಹಸ್ತಪ್ರತಿಗಳಲ್ಲಿ ಸ್ಖಾಲಿತ್ಯಗಳು ಪರಸ್ಪರ ಹೋಲಿಕೆಯ ರೂಪದಲ್ಲಿದ್ದರೆ ಅವು ಆ ಹಸ್ತಪ್ರತಿಗಳಲ್ಲಿ ಸಂಯೋಜನೆಯನ್ನುಂಟುಮಾಡುವುದರಿಂದ, ಅಂಥವು ಸಂಯೋಜಕ ಸ್ಖಾಲಿತ್ಯಗಳು. ಪರಸ್ಪರ ಹೋಲಿಕೆಯ ರೂಪದಲ್ಲಿರದಿದ್ದರೆ ಹಸ್ತಪ್ರತಿಗಳಲ್ಲಿ ವಿಚ್ಛೇದನೆಯನ್ನುಂಟುಮಾಡುವುದರಿಂದ, ಅಂಥವು ವಿಚ್ಛೇದಕ ಸ್ಖಾಲಿತ್ಯಗಳು. ಈವರೆಗೆ ಲಭಿಸಿದ ಕವಿರಾಜಮಾರ್ಗದ ೪ ಹಸ್ತಪ್ರತಿಗಳಿಂದ ಇವುಗಳಿಗೆ ಉದಾಹರಣೆಯನ್ನು ಕೊಡಬಹುದು.

೧. ಬಿಸ ವಿಷದ ವರ್ಣೆಯಂ (ತಾ. ಪ್ರ ೧೧೦)
ಬಿಸ ವಿಶದ ವರ್ಣೆಯಂ (ತಾ. ಪ್ರ ೧೨೫)
ಬಿಸ ವಿಷದ ವರ್ಣೆಯಂ (ಕಾ. ಪ್ರ ೧೭೫)
ಬಿಸ ವಿಶದ ವರ್ಣೆಯಂ (ಕಾ. ಪ್ರ ೨೮೮)

ಇವು ಕವಿರಾಜಮಾರ್ಗದ ಉದಾಹರಣೆಗಳು (೨-೪೦). ಇಲ್ಲಿ ನಂ.೧೧೦ ನಂ. ೧೭೫ ಗಳಲ್ಲಿ 'ಷ' ಎಂಬುದು ಸಮಾನವಾದ ದೋಷಪಾಠವಾಗಿದೆ. ಈ ಸಮಾನತೆ ಇವುಗಳಲ್ಲಿ ಒಂದು ಕುಟುಂಬವನ್ನು ಕಲ್ಪಿಸುವುದರಿಂದ, ಇದು ಸಂಯೋಜಕ ಸ್ಖಾಲಿತ್ಯ. ಇನ್ನು ವಿಚ್ಛೇದಕ ಸ್ಖಾಲಿತ್ಯಕ್ಕೆ ಉದಾ :

೨. ಕಿಸುವೊಳೆಲಾ ವಿದಿತ ಮಹಾಕೊಪಣನಗರದಾ (೧೧೦)
ಕಿಸುವೊಳಲಾ ವಿದಿತ ಮಹಾಕೊಪಣನಗರದಾ (೧೨೫)
ಕಿಸುವೊಳೆಲಾ ವಿದಿತ ಮಹಾಕೊಪಣನಗರದಾ (೧೭೫)
ಕಿಸುವೊಳಲಾ ವಿದಿತ ಮಹಾಕೊಪಣನಗರದಾ (೨೮೮)

ಇವು ಕವಿರಾಜಮಾರ್ಗದ ಉದಾಹರಣೆಗಳು (೧-೩೨). ಇಲ್ಲಿ ಇರಬೇಕಾದ ನಿಜಪಾಠ 'ಕಿಸುವೊೞಲಾ'. ಹೀಗಾಗಿ ಇಲ್ಲಿ ಒಂದು ಕುಟುಂಬಕ್ಕೆ ಸಂಬಂಧಿಸಿದ ನಂ. ೧೧೦, ೧೭೫ರ ಪಾಠ 'ಳೆ' ದೋಷ. ಇದೇ ರೀತಿ ಇನ್ನೊಂದು ಕುಟುಂಬಕ್ಕೆ ಸಂಬಂಧಿಸಿದ ನಂ ೧೨೫, ೨೮೮ರ ಪಾಠ 'ಳ' ದೋಷ. ಈ ದೋಷಗಳು ನಂ.೧೧೦, ೧೭೫ನೆಯ ಪ್ರತಿಗಳನ್ನು ನಂ. ೧೨೫, ೨೮೮ ನೆಯ ಪ್ರತಿಗಳಿಂದ ಪ್ರತ್ಯೇಕಿಸುತ್ತವೆ. ಇದು ವಿಚ್ಛೇದಕ ಸ್ಖಾಲಿತ್ಯ.

ಒಬ್ಬ ಲಿಪಿಕಾರನು ನಕಲು ಮಾಡಿಕೊಳ್ಳುತ್ತಿರುವ ಆಧಾರಪ್ರತಿಯ ಎಲ್ಲ ಸ್ಖಾಲಿತ್ಯಗಳನ್ನು ಬರೆದುಕೊಳ್ಳುತ್ತ, ತಾನೂ ಕೆಲವು ಹೆಚ್ಚಿನ ಸ್ಖಾಲಿತ್ಯಗಳನ್ನು ಮಾಡುತ್ತಾನೆ. ಈ ಹೆಚ್ಚಿನ ಸ್ಖಾಲಿತ್ಯಗಳು ವಿಶಿಷ್ಟ ಸ್ಖಾಲಿತ್ಯಗಳು. ಇದಕ್ಕೆ ಕವಿರಾಜಮಾರ್ಗದಿಂದಲೇ ಉದಾಹರಣೆಗಳನ್ನು ಕೊಡಬಹುದು.

೧.   ವಾಸುಗಿಯುಮರಿಯಲಾರದೆ ಬೇಸರುಗುಂ (ತಾ. ಪ್ರ ೧೧೦)

ವಾಸುಗಿಯುಮಮರಿಯಲಾರದೆ ಬೇಸರುಗುಂ (ಕಾ.ಪ್ರ ೧೭೫)

೧೧೦ರಲ್ಲಿ ಎಲ್ಲ ಶಕಟರೇಫಗಳಿಗೆ ಬದಲು ರೇಫೆ ಇದ್ದುದು ದೋಷ. ಈ ದೋಷಗಳನ್ನೂ ಜೊತೆಗೆ 'ಮ' ಆಗಮರೂಪದ ಹೆಚ್ಚಿನ ದೋಷವನ್ನೂ ೧೭೫ರ ಪ್ರತಿಕಾರ ಮಾಡಿರುವನು. ಇದು ಈತನ ವಿಶಿಷ್ಟಸ್ಖಾಲಿತ್ಯ. ೨೮೮ನೆಯ ಪ್ರತಿ ೧೨೫ರ ಸ್ಖಾಲಿತ್ಯಗಳೊಂದಿಗೆ ಹೆಚ್ಚಿನ ಸ್ಖಾಲಿತ್ಯ ಮಾಡಿಕೊಂಡುದಕ್ಕೆ ಉದಾಹರಣೆಯನ್ನು ನೋಡಬಹುದು.

೨.   ಪಳಗನ್ನಡಮಂ ಪೊಲಗೆಡಿಸಿ ನುಡಿವರ್ (ತಾ. ಪ್ರ ೧೨೫)


ಪಳಗನ್ನಡಮಂ ಪೊಲನಿಡಿಸಿ ನುಡಿವರ್ (ಕಾ.ಪ್ರ ೨೮೮)

೧೨೫ರಲ್ಲಿ 'ಟ'ದ ಬದಲು 'ಳ' ಬಂದುದು ದೋಷ. ಈ ದೋಷದೊಂದಿಗೆ 'ಪೊಲನಿಡಿಸಿ' ಎಂಬ ಹೆಚ್ಚಿನ ದೋಷವನ್ನು ೨೮೮ನೆಯ ಪ್ರತಿಕಾರ ಮಾಡಿರುವನು. ಇದು ಈತನ ವಿಶಿಷ್ಟ ಸ್ಖಾಲಿತ್ಯ.


ಈ ವರೆಗಿನ ವಿವೇಚನೆಯಿಂದ ೧೧೦ ಮತ್ತು ೧೭೫ ಒಂದು ಕುಟುಂಬಕ್ಕೆ, ಇದೇ ರೀತಿ ೧೨೫ ಮತ್ತು ೨೮೮ ಇನ್ನೊಂದು ಕುಟುಂಬಕ್ಕೆ ಸಂಬಂಧಿಸಿವೆಯೆಂದು ತಿಳಿದುಬರುತ್ತದೆ. ಈಗ ಈ ಸಂಬಂಧವು. ಮಾತೃ–ಪುತ್ರಿ, ಸೋದರ–ಸದಸ್ಯಗಳಲ್ಲಿ ಯಾವುದು? ಎಂಬ ಪ್ರಶ್ನೆ ಎದುರಾಗುತ್ತದೆ. ಇದನ್ನು ಬಿಡಿಸುವಲ್ಲಿ ವಿಶಿಷ್ಟಸ್ಖಾಲಿತ್ಯ ನೆರವು ನೀಡುತ್ತದೆ.

೧೭೫ನೆಯ ಪ್ರತಿಯು ೧೧೦ರಲ್ಲಿಯ ಎಲ್ಲ ಸ್ಖಾಲಿತ್ಯಗಳನ್ನೂ ಹೆಚ್ಚಿನದಾಗಿ ವಿಶಿಷ್ಟ ಸ್ಖಾಲಿತ್ಯಗಳನ್ನೂ ಒಳಗೊಂಡಿರುವುದರಿಂದ ೧೧೦ರಿಂದ ೧೭೫ ಬಂದಿದೆಯೆಂದು ಸ್ಪಷ್ಟವಾಗುತ್ತದೆ. ಅಂದರೆ ೧೧೦ ಮಾತೃ, ೧೭೫ ಪುತ್ರಿ. ಈ ಸಂಬಂಧ ೧೧೦>೧೭೫. ಇದೇ ರೀತಿ ೨೮೮ನೆಯ ಪ್ರತಿಯು ೧೨೫ರ ಎಲ್ಲ ಸ್ಖಾಲಿತ್ಯಗಳನ್ನೂ ಹೆಚ್ಚಿನದಾಗಿ ವಿಶಿಷ್ಟ ಸ್ಖಾಲಿತ್ಯಗಳನ್ನೂ ಒಳಗೊಂಡಿರುವುದರಿಂದ ೧೨೫ರಿಂದ ೨೮೮ ಬಂದಿದೆಯೆಂದು ಸ್ಪಷ್ಟವಾಗುತ್ತದೆ. ಅಂದರೆ ೧೨೫ ಮಾತೃ, ೨೮೮ ಪುತ್ರಿ. ಈ ಸಂಬಂಧ ೧೨೫>೨೨೮. (೧೧೦, ೧೨೫ ತಾಳೆ ಪ್ರತಿ; ೧೭೫, ೨೮೮ ಕಾಗದ ಪ್ರತಿಯಾಗಿರುವುದೂ ಈ ಅಂಶವನ್ನು ದೃಢಪಡಿಸುತ್ತದೆ).

ಇನ್ನು ಸೋದರ, ಸದಸ್ಯ ಸಂಬಂಧದ ಅರಿತಕ್ಕೆ ಒಂದು ಕಾಲ್ಪನಿಕ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅ, ಬ ಎರಡು ಹಸ್ತಪ್ರತಿಗಳಿವೆಯೆಂದು ಭಾವಿಸೋಣ. 'ಅ'ದಲ್ಲಿಯ ಸ್ಖಾಲಿತ್ಯಗಳು 'ಬ'ದಲ್ಲಿಯೂ ಇದ್ದು, ಎರಡೂ ತಮ ತಮಗೆ ಮತ್ತೆ ವಿಶಿಷ್ಟ ಸ್ಖಾಲಿತ್ಯಗಳನ್ನು ಒಳಗೊಂಡಿದ್ದರೆ ಅ, ಬ ಗಳು ಅಲಬ್ಧಮೂಲದಿಂದ ಬಂದ ಸೋದರ ಪ್ರತಿಗಳೆಂದು ಭಾವಿಸಬೇಕು. ಈ ಸಂಬಂಧ ಹೀಗೆ :




ಅ ಮತ್ತು ಬ ಗಳಲ್ಲಿ ಸಂಯೋಜಕ ಸ್ಖಾಲಿತ್ಯಗಳಲ್ಲದೆ ವಿಚ್ಛೇದಕ ಸ್ಖಾಲಿತ್ಯಗಳೇ ಇದ್ದರೆ, ಇವೆರಡೂ ತಮತಮಗೆ ಯಾವುದೋ ಸ್ವತಂತ್ರ ಮೂಲದಿಂದ ಬಂದ ಸದಸ್ಯಪ್ರತಿಗಳೆಂದು ಭಾವಿಸಬೇಕು. ಈ ಸಂಬಂಧ ಹೀಗೆ ಇರಬಹುದು:



ಈ ರೀತಿ ಸಂಯೋಜಕ ಸ್ಖಾಲಿತ್ಯ, ವಿಚ್ಛೇದಕ ಸ್ಖಾಲಿತ್ಯ ಮತ್ತು ವಿಶಿಷ್ಟ ಸ್ಖಾಲಿತ್ಯಗಳ ನೆರವಿನಿಂದ ಹಸ್ತಪ್ರತಿಗಳ ಸಂಬಂಧ(ಮಾತೃ–ಪುತ್ರಿ, ಸೋದರ–ಸದಸ್ಯ)ವನ್ನು ಹೇಳಲು ಸಾಧ್ಯವಾಗುತ್ತದೆ.

ಇನ್ನು ಗ್ರಂಥಸಂಪಾದನೆಗೆ ಎರಡು ಹಸ್ತಪ್ರತಿಗಳನ್ನು ಬಳಸಿದರೆ ಸಾಧ್ಯತೆಯ ದೃಷ್ಟಿಯಿಂದ ಸಂಬಂಧಗಳು ನಾಲ್ಕು ತೆರನಾಗಿರುತ್ತವೆ.



ಇವುಗಳಲ್ಲಿ ಅ ದಿಂದ ಬ ಬಂದಿದ್ದರೆ ಬ ನಿಷ್ಪ್ರಯೋಜಕ. ಬ ದಿಂದ ಅ ಬಂದಿದ್ದರೆ ಅ ನಿಷ್ಪ್ರಯೋಜಕ. ಅ, ಬ ಒಂದೇ ಮೂಲದಿಂದ ಬಂದಿದ್ದರೆ ಎರಡರ ಪ್ರಯೋಜನ ಸಮಾನ. ಅ, ಬ ಬೇರೆಬೇರೆ ಮೂಲದಿಂದ ಬಂದಿದ್ದರೆ ಅವುಗಳಿಗೆ ಎರಡು ಹಸ್ತಪ್ರತಿಗಳ ಸ್ವತಂತ್ರ ಬೆಲೆ ಸಂದು, ಸಂಪಾದನೆಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಹೀಗೆ ಎರಡು ಹಸ್ತಪ್ರತಿಗಳು ಸಾಧ್ಯತೆಯ ದೃಷ್ಟಿಯಿಂದ ನಾಲ್ಕು ತೆರನಾದರೆ, ಮೂರು, ನಾಲ್ಕು, ಐದು .... ಹೀಗೆ ಹಸ್ತಪ್ರತಿಗಳಿದ್ದರೆ ಅವುಗಳ ಸಾಧ್ಯತೆ, ಗುಣಕ ರೀತಿಯಲ್ಲಿ ಬೆಳೆದು ಕ್ಷಿಪ್ರದಲ್ಲಿ ಸಾವಿರವನ್ನು ಮೀರುತ್ತದೆ. ಹೀಗಾಗಿ


ಹೆಚ್ಚು ಹಸ್ತಪ್ರತಿಗಳಿದ್ದರೆ ಈ ಸಂಖ್ಯೆ ಬೆಳೆಬೆಳೆದು ಅವುಗಳ ಸಂಬಂಧವೂ ತೀರ ತೊಡಕಾಗುತ್ತದೆಯೆಂದು ಹೇಳಬಹುದು.

ಇನ್ನು ಹಸ್ತಪ್ರತಿಗಳ ಸಂಬಂಧನಿರ್ಣಯಕ್ಕೆ ತಕ್ಕಮಟ್ಟಿನ ಒಂದು ನಿರ್ದಿಷ್ಟ ಉದಾಹರಣೆಯನ್ನು ಕೊಡಬಹುದು. ಡಾ. ಡಿ.ಎಲ್.ಎನ್.ಅವರು ವಡ್ಡಾರಾಧನೆಯನ್ನು ಸಂಪಾದಿಸುವಲ್ಲಿ ಕ ಖ ಗ ಘ ಚ ಛ ಜ ಎಂಬ ಸಂಕೇತದ ಏಳು ಹಸ್ತಪ್ರತಿಗಳನ್ನು ಬಳಸಿರುವರು. ಅವುಗಳ ಕೆಲವು ಪಾಠ ಹೀಗಿವೆ :

೧. ಕ. ದ್ರೊರ್ವಣಕ್ಕೆ	೨. ಕ. ಮಱಲುಂದಿದಲ್ಲಿಗೆ
ಖ. ದ್ರ್ಪಾಪಣಕ್ಕೆ	ಖ. ಮಱಲುಂದಿದಲ್ಲಿಗೆ
ಗ. ದೊರ್ವಣಕ್ಕೆ	ಗ. ಮಱಲುಂದಿದಲ್ಲಿಗೆ
ಘ. ನಿರ್ದಾಯೆಡೆಗೆ	ಘ. ಪಟ್ಟಿರ್ದಲ್ಲಿಗೆ
ಚ. ನಿರ್ದಾಯೆಡೆಗೆ	ಚ. ಪಟ್ಟಿರ್ದಲ್ಲಿಗೆ
ಛ. ನಿರ್ದಾಯೆಡೆಗೆ	ಛ. ಪಟ್ಟಿರ್ದಲ್ಲಿಗೆ
ಜ. ನಿರ್ದಾಯೆಡೆಗೆ	ಜ. ಪಟ್ಟಿರ್ದಲ್ಲಿಗೆ

ಇಲ್ಲಿ ಸಂಯೋಜಕ ಸ್ಖಾಲಿತ್ಯದ ಆಧಾರದಿಂದ ಕ ಖ ಗ ಒಂದು ಗುಂಪು, ಘ ಚ ಛ ಜ ಇನ್ನೊಂದು ಗುಂಪು ಎಂದು ಸ್ಪಷ್ಟವಾಗಿ ಹೇಳಬಹುದು. ಮೊದಲ ಗುಂಪಿನ ಪ್ರತಿಗಳಲ್ಲಿ ಓಲೆಪ್ರತಿ 'ಕ' ದಿಂದ ಕಾಗದ ಪ್ರತಿ 'ಗ' ನಕಲುಗೊಂಡಿದೆಯೆಂದು 'ಗ' ಪ್ರತಿಯ ಅಂತ್ಯ ಪ್ರಶಸ್ತಿಯಲ್ಲಿ ಹೇಳಲಾಗಿದೆ. ಆದುದರಿಂದ 'ಕ' ಮಾತೃಕೆ, 'ಗ' ಪುತ್ರಿಕೆ. ಈ ಸಂಬಂಧ ಹೀಗೆ : ಕ > ಗ.

ಇನ್ನು 'ಖ'ದಲ್ಲಿರುವ 'ದ್ರ್ಪಾಪಣಕ್ಕೆ' ಎಂಬ ಶುದ್ಧಪಾಠ 'ಕ'ದಲ್ಲಿ 'ದ್ರೊರ್ವಣಕ್ಕೆ' ಎಂದು ಅಶುದ್ಧ ರೀತಿಯಲ್ಲಿ ನಕಲುಗೊಂಡಿರಬಹುದು ಎಂದು ಹೇಳಬಹುದಾದರೂ ಒಟ್ಟಾಗಿ ನೋಡಿದರೆ ಎರಡರಲ್ಲಿಯೂ ಹೇರಳ ವಿಶಿಷ್ಟಸ್ಖಾಲಿತ್ಯಗಳಿರುವುದರಿಂದ 'ಖ'ದ ಪುತ್ರಿಕೆ 'ಕ' ಅಲ್ಲವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಎರಡೂ ಸ್ವತಂತ್ರ ಪ್ರತಿಗಳು, ಈ ಸಂಬಂಧ ಹೀಗೆ :




ಇನ್ನು ಎರಡನೆಯ ಗುಂಪಿನ ಘ ಚ ಛ ಜ ಗಳ ವಿಚಾರ. ಸಂಯೋಜಕ ಸ್ಖಾಲಿತ್ಯ ದೃಷ್ಟಿಯಿಂದ ಒಂದು ಗುಂಪಾಗಿ ನಿಂತ ಇವು "ಪರಸ್ಪರ ಸ್ವತಂತ್ರಗಳೆಂದೂ, ಸಮಾನ ಮೂಲದಿಂದ ಬಂದುವೆಂದೂ

---


* ಅವರ್ಗೀಯ ಅಕ್ಷರಗಳನ್ನು ಅಲಬ್ಧ ಹಸ್ತಪ್ರತಿಗಳ ಸಂಕೇತಕ್ಕಾಗಿ ಬಳಸಲಾಗಿದೆ.

ಅವುಗಳಲ್ಲಿಯ ಸಮಾನ ಸ್ಖಾಲಿತ್ಯಗಳು, ವಿಚ್ಛೇದಕ ಸ್ಖಾಲಿತ್ಯಗಳು ಮತ್ತು ವಿಶಿಷ್ಟ ಸ್ಖಾಲಿತ್ಯಗಳು ಇವುಗಳ ಆಧಾರದಿಂದ ತೀರ್ಮಾನಿಸಲು ಸಾಧ್ಯವಿದೆ. ಇವುಗಳ ಪೀಳಿಗೆ:




ಎಂದು"[೨೫] ಸಂಪಾದಕರಾದ ಡಾ. ಡಿ. ಎಲ್. ಎನ್. ತೀರ್ಮಾನಿಸಿರುವರು.

ಇನ್ನು ಮೊದಲನೆಯ ಗುಂಪಿನ ಎಲ್ಲ ಪ್ರತಿಗಳಲ್ಲಿರುವ 'ಮಱಲುಂದು' ಮುಂತಾದ ಅಪರೂಪ ಪದಗಳಿಗೆ ಬದಲು ಎರಡನೆಯ ಗುಂಪಿನ ಎಲ್ಲ ಪ್ರತಿಗಳಲ್ಲಿ 'ಪಟ್ಟಿರ್ದಲ್ಲಿಗೆ' ಮುಂತಾದ ಸಮಾನ ಸುಲಭ ಪದಗಳನ್ನು ಬಳಸಲಾಗಿದೆ. ಒಂದೇ ವಿಧವಾದ ಈ ಪದಗಳನ್ನು ನಾಲ್ಕೂ ಪ್ರತಿಗಳ ಲಿಪಿಕಾರರು ಸ್ವತಂತ್ರವಾಗಿ ಬಳಸುವುದು ಅಸಂಭವ. ಹೀಗಾಗಿ ಇವುಗಳಿಗೆ ಮೂಲವಾಗಿರುವ 'ವ*' ಪ್ರತಿಯಲ್ಲಿಯೇ ಈ ಸುಲಭ ಪದಗಳಿರಬಹುದು. ತನಗೆ ಆಧಾರಪ್ರತಿಯಾಗಿದ್ದ 'ಲ*' ಪ್ರತಿಯ ಮಾರ್ಜನ್ನಿನಲ್ಲಿ ಟಿಪ್ಪಣಿರೂಪದಲ್ಲಿರಬಹುದಾದ ಈ ಸುಲಭ ಪದಗಳನ್ನು 'ವ*' ಪ್ರತಿ ಲಿಪಿಕಾರನು ಕೃತಿಯ ಒಡಲಲ್ಲಿ ಸೇರಿಸಿಕೊಂಡಿರಬಹುದು. ಇದು ನಿಜವಿದ್ದರೆ ಈ ಸಂಬಂಧ ಹೀಗೆ ಸಿದ್ಧವಾಗುತ್ತದೆ.



ಈಗ ಏಳೂ ಪ್ರತಿಗಳ ಒಟ್ಟು ಸಂಬಂಧ ಹೀಗಾಗುತ್ತದೆ:



ಹಸ್ತಪ್ರತಿಗಳ "ಸಂಬಂಧ ವಿಧಾನ" ವನ್ನು ಅರಿಯಬೇಕೆನ್ನುವವರಿಗೆ ಇದೊಂದು ಉಪಯುಕ್ತ ಉದಾಹರಣೆ. ಹೀಗೆ ಪರಸ್ಪರ ಸಂಬಂಧವನ್ನು ಕಂಡು ಹಿಡಿಯುವಾಗ ಬಳಸಿದ ಪ್ರತಿಗಳಲ್ಲಿ ಅಶುದ್ಧಸಂತಾನಕ್ಕೆ ಸಂಬಂಧಿಸಿದ ಮಿಶ್ರಪ್ರತಿ ಸೇರದಂತೆ ಎಚ್ಚರವಹಿಸಬೇಕು. ಇಲ್ಲದಿದ್ದರೆ ಪೀಳಿಗೆ ರಚನೆ ತಪ್ಪಾಗಿ, ಪರಿಷ್ಕರಣ ಮೂಲಕ್ಕೆ ಸಮೀಪ ಹೋಗದೆ, ಬೇರೊಂದು ಹಸ್ತಪ್ರತಿಯ ಬೆಲೆ ಪಡೆಯುತ್ತದೆ. ಇದಕ್ಕೆ ಉದಾಹರಣೆ ಡಾ. ಡಿ. ಎಲ್. ಎನ್. ಸಂಪಾದಿತ ಶಬ್ದಮಣಿದರ್ಪಣ.

---

* ಅವರ್ಗೀಯ ಅಕ್ಷರಗಳನ್ನು ಅಲಬ್ಧ ಹಸ್ತಪ್ರತಿಗಳಿಗಾಗಿ ಬಳಸಲಾಗಿದೆ.

೨೫. ಕ.ಗ್ರ.ಸಂ. ೧೫೭

ಶಬ್ದಮಣಿದರ್ಪಣದ ಪಾಠಕ್ಕೆ ಅಧಿಕ ಚ್ಯುತಿ ಬಂದುದು ಸೂತ್ರ ವಿಭಾಗದಲ್ಲಿ ಅಲ್ಲ; ವೃತ್ತಿ ಮತ್ತು ಪ್ರಯೋಗ ವಿಭಾಗದಲ್ಲಿ. ಕೇಶಿರಾಜನ ವೃತ್ತಿ ಮತ್ತು ಪ್ರಯೋಗಗಳ ಮೂಲಭೂತ ಸ್ವರೂಪವನ್ನು ಅರ್ಥಮಾಡಿಕೊಳ್ಳದೆ ಸಂಪಾದನೆಗೆ ಕೈಹಾಕಿದರೆ ಸಂಪಾದನೆಯ ಶುದ್ಧಿ ಕೆಡುವ ಸಂಭವವಿದೆ. ಬೇರೊಂದೆಡೆ ನಾನು ವಿವೇಚಿಸಿದಂತೆ[೨೬] ದರ್ಪಣದ ಮೂಲವೃತ್ತಿಗಳು ಗುಣದೃಷ್ಟಿಯಿಂದ 'ಅರ್ಥವೃತ್ತಿ', ಸ್ವರೂಪದೃಷ್ಟಿಯಿಂದ 'ಸಂಗ್ರಹವೃತ್ತಿ'. ಆದರೆ ಡಿ. ಎಲ್.ಎನ್. ಅವರು ತಾವು ಬಳಸಿದ 'ಕ' ಪ್ರತಿಯನ್ನು ಕುರಿತು 'ಒಂದಕ್ಕಿಂತ ಹೆಚ್ಚಾದ ವ್ಯಾಕರಣ ಪ್ರಕ್ರಿಯೆಗಳು ವೃತ್ತಿಯಲ್ಲಿ ಪ್ರತಿಪಾದಿತವಾಗಿದ್ದಾಗ ಅವುಗಳನ್ನು ಹೇಳುವ ವಾಕ್ಯಗಳನ್ನು ಬೇರ್ಪಡಿಸಿ, ಒಂದೊಂದರ ಕೆಳಗೆ ಅದಕ್ಕೆ ಕೊಟ್ಟಿರುವ ಪ್ರಯೋಗಗಳನ್ನು ಬರೆದಿರುವುದು ಇಲ್ಲಿ ಕಾಣುತ್ತೇವೆ. ಈ ಪ್ರತಿಯ ಬಹುಸಂಖ್ಯಾಕ ವೃತ್ತಿಗಳಲ್ಲಿ ಈ ಕ್ರಮವನ್ನು ಅನುಸರಿಸಿದೆ"[೨೭] ಎಂದು ಹೇಳುವಲ್ಲಿ 'ಕ' ಪ್ರತಿಯ ವೃತ್ತಿಸಂಪ್ರದಾಯ 'ಸಂಗ್ರಹವೃತ್ತಿ'ಯದಲ್ಲ, 'ಮಿಶ್ರಣವೃತ್ತಿ'ಯದೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ "ಅಚ್ಚಿನ ಪ್ರತಿಗಳನ್ನಾಗಲಿ ಅವಕ್ಕೆ ಮಾತೃಕೆಗಳಾದ ಪ್ರತಿಗಳಲ್ಲಾಗಲಿ ದೊರೆಯದಿರುವ ಕಾರಣದಿಂದ, ಹೊಸದಾಗಿ ಯಾರೋ ಸೇರಿಸಿದ್ದೆಂದು ಹೇಳಬಹುದಾದ ವೃತ್ತಿಭಾಗಗಳೂ ಪ್ರಯೋಗಗಳೂ ಇಲ್ಲಿವೆ"[೨೮] ಎನ್ನುತ್ತ "ಉಸ್ಮಾನಿಯಾ ವಿಶ್ವವಿದ್ಯಾಲಯದ ಶಬ್ದಮಣಿದರ್ಪಣದ ಪ್ರತಿಗೂ ಇದಕ್ಕೂ ಕೆಲವೆಡೆಗಳಲ್ಲಿ ಸಾದೃಶ್ಯವಿದೆ, ಆ ಪ್ರತಿಯಲ್ಲಿ ಸೂ. ೧೬೫ (ಇಲ್ಲಿ ೧೭೬)ರ ಕೆಳಗೆ ಕಾಣುವ 'ಅಂಗಯ್ ಮೇಂಗಯ್...' ಎಂಬ ಪದ್ಯವೂ, ಸೂತ್ರ ೧೬೮ (ಇಲ್ಲಿ ೧೭೯) ರ ಕೆಳಗೆ ಇರುವ 'ಎಸೆವಮೃತಂ...' ಎಂಬ ಪದ್ಯವೂ ಇದರಲ್ಲಿ ದೊರೆಯುತ್ತವೆ. ಎರಡನೆಯದು ಲಿಂಗಣಾರಾಧ್ಯನ ಪ್ರತಿಯಲ್ಲೂ ಸೂಚಿತವಾಗಿದೆ"[೨೯] ಎಂದು ಹೇಳಿದ್ದಾರೆ. ಹೀಗಾಗಿ ಇವರು ಬಳಸಿದ 'ಕ' ಪ್ರತಿ ಬಹುಶಃ ಅಶುದ್ಧ ಸಂತಾನದ ಪ್ರತಿಯೆಂಬ ಭಾವನೆ ಹುಟ್ಟುತ್ತದೆ. ಇದನ್ನು ಇನ್ನಷ್ಟು ಸ್ಪಷ್ಟಪಡಿಸಬಹುದು.

೧. "ವಿಭಕ್ತಿಗಳಾವುವೆಂದೊಡೆ ಮ್, ಅಮ್ ಮೊದಲಾದ ನಾಮಾಖ್ಯಾತ ವಿಭಕ್ತಿಗಳುಮಂ ಪ್ರತ್ಯಯಮೆನಲಕ್ಕುಂ" – ಡಿ. ಎಲ್. ಎನ್. ದರ್ಪಣ (ಸೂ ೪೫)ದ ವೃತ್ತಿ.

"ಆ ವಿಭಕ್ತಿಯುಂ ಪ್ರತ್ಯಯಮೆನಲಕ್ಕುಂ. ಅವಾವುವೆಂದಡೆ ಮ್, ಅಮ್ ಮೊದಲಾದ ನಾಮಾಖ್ಯಾತ ವಿಭಕ್ತಿಗಳ್" – ಕಿಟೆಲ್ ದರ್ಪಣದ ವೃತ್ತಿ.

ಇಲ್ಲಿ ಡಿ.ಎಲ್.ಎನ್. ವೃತ್ತಿಯು ಕಿಟೆಲ್ ವೃತ್ತಿಯಿಂದ ಭಿನ್ನವಾಗಿದೆಯೆಂಬುದು ಸ್ಪಷ್ಟ.

೨. "ಆ ವಿಭಕ್ತಿಗಳ ಪಿಂದಿರ್ಪ ಪ್ರಕೃತಿ,[೩೦] ಲಿಂಗಮಂ ಧಾತುವಂ ಪ್ರಕೃತಿಯೆನಲಕ್ಕುಂ" – ಡಿ. ಎಲ್. ಎನ್. ದರ್ಪಣ(ಸೂ ೪೫)ದ ವೃತ್ತಿ.

"ವಿಭಕ್ತಿಗಳ ಪಿಂದಿರ್ದುದು ಪ್ರಕೃತಿ. ಲಿಂಗಮಂ ಧಾತುವಂ ಪ್ರಕೃತಿಯೆನಲಕ್ಕುಂ"–ಮದ್ರಾಸ ದರ್ಪಣದ ವೃತ್ತಿ.

---

೨೬. ಶಬ್ದಮಣಿದರ್ಪಣದ ಅರ್ಥವೃತ್ತಿ – ಅನ್ವಯವೃತ್ತಿ (ಕ. ಭಾ I - I)
೨೭. ಶಮದ, ಪ್ರಸ್ತಾವನೆ XVIII
೨೮. ಶಮದ, ಪ್ರಸ್ತಾವನೆ XIX
೨೯. ಶಮದ, ಪ್ರಸ್ತಾವನೆ XIX
೩೦. ಇಲ್ಲಿ ನಿಜವಾಗಿ ಇರಬೇಕಾದುದು 'ಪಿಂದಿರ್ದುದು ಪ್ರಕೃತಿ' ಎಂಬ ಪಾಠ.

ಇಲ್ಲಿ ರೂಪ ಕೆಡಿಸಿಕೊಂಡಿದ್ದರೂ ಡಿ. ಎಲ್. ಎನ್. ವೃತ್ತಿಯು, ಮದ್ರಾಸವೃತ್ತಿಯನ್ನು ಹೋಲುತ್ತದೆಂಬುದು ಸ್ಪಷ್ಟ. ಈ ಎಲ್ಲ ವೃತ್ತಿಗಳನ್ನು ಪರೀಕ್ಷಿಸಿದರೆ ಡಿ. ಎಲ್. ಎನ್. ದರ್ಪಣದ ವೃತ್ತಿ, ಕಿಟೆಲ್ ದರ್ಪಣದ ವೃತ್ತಿಯಿಂದ ದೂರವಾಗಿ, ಮದ್ರಾಸ ದರ್ಪಣದ ವೃತ್ತಿ ಪ್ರಭಾವಕ್ಕೆ ಒಳಗಾಗಿದೆಯೆಂದು ಖಚಿತವಾಗುತ್ತದೆ. ಹೀಗಾಗಿ ಅವರು ಬಳಸಿದ ಕ ಪ್ರತಿ (ಕೆಲವೊಮ್ಮೆ ಖ ಪ್ರತಿ ಕೂಡ) ಎರಡು ಶಾಖೆಗಳ ಮಿಶ್ರಸಂತಾನವೆಂದೂ ಇದರ (ಇವುಗಳ)ಬಳಕೆಯಿಂದಾಗಿ ಮೊದಲೇ ವಿರೂಪಗೊಂಡ ದರ್ಪಣದ ವೃತ್ತಿವಿಭಾಗವು ಡಿ.ಎಲ್.ಎನ್. ಆವೃತ್ತಿಯಲ್ಲಿ ಇನ್ನಷ್ಟು ವ್ಯತ್ಯಸ್ತವಾಗಿದೆಯೆಂದೂ ಹೇಳಬಹುದು. ಆದುದರಿಂದ ಒಂದು ಕೃತಿಯನ್ನು ಸಂಪಾದಿಸುವಲ್ಲಿ ಶುದ್ಧಸಂತಾನದ ಹಸ್ತಪ್ರತಿಗಳನ್ನು ಆರಿಸಿಕೊಂಡು ವಂಶಾವಳಿ ನಿರ್ಣಯಿಸುವುದು ಸಂಪಾದಕ ಮಾಡಬೇಕಾದ ಪ್ರಥಮಕಾರ್ಯ.

ವಸ್ತುಸ್ಥಿತಿ ಹೀಗಿರುವಾಗ ವಂಶಾವಳಿನಿರ್ಣಯ ವ್ಯರ್ಥಪರಿಶ್ರಮವೆಂದೂ ಅಪ್ರಯೋಜಕವೆಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಪಾಠಾಂತರಗಳಲ್ಲಿ ಒಂದು ವ್ಯವಸ್ಥೆ ಇದ್ದರೆ ಮಾತ್ರ ಕ್ರಮಬದ್ಧ ವಂಶಾವಳಿ ರಚನೆಗೊಂಡು ಪಾಠನಿರ್ಣಯಕ್ಕೆ ಅನುಕೂಲವಾಗಬಹುದು. ಪಾಠಾಂತರಗಳಲ್ಲಿ ಅವ್ಯವಸ್ಥೆ ಸುರಿಮಳೆಯಂತೆ ಸುರಿದಿದ್ದರೆ ವಂಶನಿರ್ಣಯ ಜಟಿಲವೂ ಅಡ್ಡದಾರಿ ತೋರಿಸುವಂಥದೂ ನಿಷ್ಪ್ರಯೋಜಕವೂ ಎನಿಸುತ್ತದೆ–ಎಂದು ಇವರ ಅಭಿಮತ.

ಕನ್ನಡದ ಮಟ್ಟಿಗೆ ಹೇಳುವುದಾದರೆ ಗದ್ಯಕ್ಕಿಂತ ಪದ್ಯಕಾವ್ಯಗಳಲ್ಲಿ, ನಡುಗನ್ನಡಕಾವ್ಯಗಳಿಗಿಂತ ಹಳಗನ್ನಡ ಕಾವ್ಯಗಳಲ್ಲಿ ಪಾಠಾಂತರ ಹೆಚ್ಚು ವ್ಯವಸ್ಥಿತ ವಾಗಿರುವುದರಿಂದ, ಒಂದೊಂದು ಹಸ್ತಪ್ರತಿಯ ಪ್ರಾಮಾಣಿಕತೆ–ಅಪ್ರಾಮಾಣಿಕತೆ ಮನದಟ್ಟಾಗಿ, ಅವುಗಳ ಯೋಗ್ಯಾಯೋಗ್ಯತೆಯನ್ನು ತಿಳಿದು ಬಳಸಲು ಈ ವಂಶಾವಳಿ ನಿರ್ಣಯದಿಂದ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅಪ್ರಮಾಣಿಕ ಪ್ರತಿಗಳಿಗೂ ಪ್ರಾಮಾಣಿಕ ಪ್ರತಿಗಳ ಸಮಾನ ಸ್ಥಾನ ಸಂದು, ಕೆಲವೊಮ್ಮೆ ಹೆಚ್ಚಿನ ಸ್ಥಾನ ಸಂದು, ಪರಿಷ್ಕರಣದ ಶುದ್ಧಿ ಹಾಳಾಗುತ್ತದೆ.

ಎರಡನೆಯದಾಗಿ ಒಂದು ಗ್ರಂಥವನ್ನು ಸಂಪಾದಿಸಲು ಸಂಗ್ರಹಿಸಿದ ಹಸ್ತಪ್ರತಿಗಳಲ್ಲಿ ಒಂದು ಇನ್ನೊಂದರ ನಕಲು ಪ್ರತಿಯಾಗಿರಬಹುದು. ಮಾತೃಕೆಯೇ ಸಿಕ್ಕರೆ ಈ ಪುತ್ರಿಕೆಯನ್ನು ಬಳಸುವುದು ವ್ಯರ್ಥಶ್ರಮ. ವಂಶಾವಳಿ ನಿರ್ಣಯಿಸಿದಾಗ ಮಾತ್ರ ಈ ಮಾತೃ–ಪುತ್ರಿ ಸಂಬಂಧ ವೇದ್ಯವಾಗುವುದರಿಂದ ಶ್ರಮವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದಾದರೂ ಪೀಳಿಗೆ ರಚನೆ ಮಾಡಿಕೊಳ್ಳುವುದು ವಿಹಿತ. ಅದಕ್ಕಾಗಿ "ಪೀಳಿಗೆಯ ರಚನೆಯಲ್ಲಿ ಒಂದು ತೆರನಾದ ಯಾಂತ್ರಿಕತೆಯನ್ನು ತರುವ ಪ್ರಯತ್ನಗಳು ನಡೆದಿವೆಯೆಂದೂ ಅವು ಜಯಪ್ರದವಾಗಿಲ್ಲವೆಂದೂ ಅತ್ಯಂತ ತೃಪ್ತಿಕರವಾದ ಪೀಳಿಗೆ ರಚನೆ ಸಂಪಾದನಕಾರ್ಯವನ್ನು ಉತ್ತಮಗೊಳಿಸುತ್ತದೆಂಬ ಭರವಸೆಯೇನೂ ಇಲ್ಲವೆಂದೂ"[೩೧] ಹೇಳುವವರ ಮಾತು ಬಹುಮಟ್ಟಿಗೆ ಅಸತ್ಯವೆನ್ನಬೇಕಾಗುತ್ತದೆ. "ಮಾತೃಕೆಗಳ ಉಪಯೋಗದಲ್ಲಿ ಒಂದು ಶಾಸ್ತ್ರೀಯವಾದ ತಂತ್ರವೆ ಈಗ ಏರ್ಪಟ್ಟಿದೆಯಾದರೂ

---

೩೧. ಕಗ್ರಸಂ. ೧೯೫

ಅದರ ಅನುಸರಣದಿಂದ ಕೆಲವೊಂದು ವಿಶಿಷ್ಟ ಬಗೆಯ ತೊಡಕುಗಳು ನಿವಾರಣೆಯಾಗಬಹುದೇ ಹೊರತು, ಎಲ್ಲ ತೊಡಕುಗಳೂ ಬಯಲಾಗುವಂತಿಲ್ಲ"[೩೨] ಎಂದು ಶ್ರೀ ಬಸವನಾಳರು ಹೇಳುವ ಮಾತಿನಲ್ಲಿಯ "ಕೆಲವೊಂದು ವಿಶಿಷ್ಟ ಬಗೆಯ ತೊಡಕುಗಳು ನಿವಾರಣೆಯಾಗಬಹುದು" ಎಂಬ ವಾಕ್ಯವನ್ನು ಗಮನಿಸಬೇಕು. ಇದಲ್ಲದೆ ಸಂಪಾದನಕಾರ್ಯದಲ್ಲಿ ವಂಶಾವಳಿ ನಿರ್ಣಯ ವಿಧಾನಕ್ಕಿಂತ ಉತ್ತಮವಾದ ಬೇರೆ ಯಾವ ವಿಧಾನವೂ ಸಧ್ಯಕ್ಕೆ ತೋರಿಬರದ ಕಾರಣ, ಮೇಲಣ ಆಕ್ಷೇಪಣೆಯನ್ನು ಕೈಬಿಡಬೇಕಾಗುತ್ತದೆ.

❖❖

---

೩೨. ಬವ, (ಬಸವನಾಳ ಆವೃತ್ತಿ) ಪ್ರಸ್ತಾವನೆ vii

ಶ್ರೀ

ಸಂಪಾದನಕಾಂಡ

❖

ಸಂಪಾದನ ಕಾರ್ಯವಿಧಾನ

ಸಂಕೇತಗಳು – ಸಂಕ್ಷೇಪಗಳು

ತಪ್ಪುಳ್ಳೊಡೆ ತಿದ್ದಿಕೊಂಬುತ್ತಮಪುರುಷರ್

*

ಸಂಪಾದನ ಕಾರ್ಯವಿಧಾನ

ಒಂದು ಗ್ರಂಥವನ್ನು ಪರಿಷ್ಕರಿಸುವ ಸಂಪಾದಕನು ಆ ಕಾರ್ಯದ ಎಲ್ಲ ಹಂತಗಳಲ್ಲಿ ಎಚ್ಚರವಹಿಸಬೇಕಾಗುತ್ತದೆ. ಹೀಗೆ ಎಚ್ಚರವಹಿಸಿ, ಕಳೆದುಹೋದ ಮೂಲಪಾಠವನ್ನು, ಕೊನೆಯ ಪಕ್ಷ ಮೂಲಕ್ಕೆ ಸಮೀಪವಾದ ಪಾಠವನ್ನು ತಿರುಗಿ ಪಡೆಯಬೇಕಾಗುತ್ತದೆ. ಈ ಕಾರ್ಯವಿಧಾನದಲ್ಲಿ ಐದು ಹಂತಗಳಿವೆ.

೧. ಸಾಮಗ್ರಿ ಸಂಕಲನ

೨. ವಂಶಾವಳಿ ನಿರ್ಣಯ

೩. ಪಾಠ ಸಂಕಲನ

೪. ಪಾಠ ಪರಿಷ್ಕರಣ

೫. ಉನ್ನತ ವಿಮರ್ಶೆ

ಈ ಒಂದೊಂದು ಹಂತಗಳ ಕಾರ್ಯವಿಧಾನ, ಕಾರ್ಯಸ್ವರೂಪಗಳನ್ನು ಈಗ ನೋಡಬಹುದು.

ಸಾಮಗ್ರಿ ಸಂಕಲನ :

ಗ್ರಂಥಸಂಪಾದಕನು ತಾನು ಸಂಪಾದಿಸುತ್ತಿರುವ ಕೃತಿಗೆ ಸಂಬಂಧಿಸಿದ ಇತರ ಸಾಹಿತ್ಯವನ್ನು ಮತ್ತು ಹಸ್ತಪ್ರತಿಗಳನ್ನು ಮೊದಲು ಸಂಗ್ರಹಿಸಬೇಕು. 'ಇತರ ಸಾಹಿತ್ಯ'ದಲ್ಲಿ ಅದೇ ಕವಿಯ ಬೇರೆ ಕೃತಿ, ಆ ಕೃತಿಯ ಮಾತೃಕೆ, ಅನುವಾದ, ವ್ಯಾಖ್ಯಾನ ಮತ್ತು ಆ ವಸ್ತುವನ್ನು ಕುರಿತ ಅನ್ಯರ ಕೃತಿಗಳು ಒಳಗೊಳ್ಳುತ್ತವೆ.

ಇನ್ನು ಹಸ್ತಪ್ರತಿಗಳು ಕನಿಷ್ಠ ಪಕ್ಷ ಒಂದಕ್ಕಿಂತ ಎರಡು, ಎರಡಕ್ಕಿಂತ ಮೂರು ಇದ್ದರೆ ಲೇಸು. ಇವು ಒಂದರ ನಕಲು ಇನ್ನೊಂದಾಗಿರದೆ ಭಿನ್ನ ಕುಟುಂಬಕ್ಕೆ ಸಂಬಂಧಿಸಿರಬೇಕು. ಮೂರಕ್ಕಿಂತ ಹೆಚ್ಚು ಪ್ರತಿಗಳಿದ್ದರೆ ಇನ್ನೂ ಲೇಸು. ಮಹಾಭಾರತ ಪರಿಷ್ಕರಣಕ್ಕೆ ಡಾ. ಸುಕ್ತನಕರ ಅವರು ೭೦ ಪ್ರತಿಗಳನ್ನು, ಚೆನ್ನಬಸವಣ್ಣನವರ ವಚನ ಪರಿಷ್ಕರಣಕ್ಕೆ ಡಾ. ಆರ್.ಸಿ. ಹಿರೇಮಠ ಅವರು ೮೦ ಪ್ರತಿಗಳನ್ನು ಬಳಸಿದ್ದುದನ್ನು ಇಲ್ಲಿ ನೆನೆಯಬಹುದು.[೧] ದೂರದಲ್ಲಿದ್ದ ಪ್ರತಿಗಳನ್ನು

---

೧. ಮಹಾಭಾರತ, ವಚನಸಾಹಿತ್ಯಗಳಂಥ ಜನಪ್ರಿಯ ಕೃತಿಗಳಿಗಾಗಿ ಹೆಚ್ಚು ಹಸ್ತಪ್ರತಿ ಬಳಸಿದಷ್ಟು ಪಾಠಶುದ್ಧಿ ಹೆಚ್ಚು ಕೆಡುವ ಸಂಭವವಿದೆ.

ಪಡೆಯುವುದು ಅಸಾಧ್ಯವಿದ್ದರೆ ಮೈಕ್ರೊಫಿಲ್ಮ ಪ್ರತಿಮಾಡಿಸಿ ತರಿಸಬೇಕು. ಇಲ್ಲವೆ ಅದರ ನಕಲು ಮಾಡಿಸಿ, ಅದನ್ನು ಒಮ್ಮೆ ಮೂಲದೊಂದಿಗೆ ತುಲನಿಸಿ ತರಿಸಬೇಕು.

ಒಂದು ಪ್ರದೇಶದಲ್ಲಿ ಸಾಮಾನ್ಯವಾಗಿ ಒಂದು ಕುಟುಂಬದ ಪ್ರತಿ-ಮರುಪ್ರತಿಗಳು ಪ್ರಸಾರದಲ್ಲಿರುವುದರಿಂದ, ಇವುಗಳಿಂದ ಮೂಲಗ್ರಂಥದ ಒಂದು ಶಾಖೆ ಮಾತ್ರ ಸಿದ್ಧಪಡುತ್ತದೆ. ಆದುದರಿಂದ ಬೇರೆ ಬೇರೆ ಪ್ರದೇಶಗಳನ್ನು ಪ್ರತಿನಿಧಿಸುವ ಹಸ್ತಪ್ರತಿಗಳನ್ನು ಸಂಗ್ರಹಿಸಬೇಕು. ಇದು ಪ್ರತಿ ಲಭಿಸಿದ ಸ್ಥಳ ಮತ್ತು ಪ್ರತಿಯ ಕೊನೆಗೆ ಲಿಪಿಕಾರನು ಸೂಚಿಸಿರುವ ತನ್ನ ಗ್ರಾಮದ ಮೂಲಕ ಗೊತ್ತಾಗುತ್ತದೆ.

ಸಾಮಾನ್ಯವಾಗಿ ಹಸ್ತಪ್ರತಿಗಳು ಪ್ರಾಚೀನವಿದ್ದಷ್ಟು ಹೆಚ್ಚು ಶುದ್ಧ, ಅರ್ವಾಚೀನವಿದ್ದಷ್ಟು ಹೆಚ್ಚು ಅಶುದ್ಧವಾಗಿರುತ್ತವೆ. ಇವುಗಳಲ್ಲಿ ಸಂಪಾದಕ ಸಂಗ್ರಹಿಸಬೇಕಾದುದು ಪ್ರಾಚೀನತಮವಾದ ಶುದ್ಧಪ್ರತಿಗಳನ್ನು. ಗ್ರಂಥದ ಕೊನೆಯಲ್ಲಿ ಲಿಪಿಕಾರ ಹೇಳಿದ ಮಿತಿ, ಭಾಷೆ, ಅಕ್ಷರಗಳ ಸ್ವರೂಪ ಮತ್ತು ಱ ಮತ್ತು ೞ ಗಳ ಶುದ್ಧ ಬಳಕೆಗಳ ಮೂಲಕ ಇದನ್ನು ಅರಿಯಬಹುದಾಗಿದೆ.

ಬಳಸಬೇಕಾದ ಹಸ್ತಪ್ರತಿಯ ಭಾಷಾಶುದ್ಧಿ ಮತ್ತು ಸಂತಾನುಶುದ್ಧಿಗಳು ಗಮನಿಸಬೇಕಾದ ಅಂಶಗಳು. ಮೊದಲಿನ ೨೦-೨೫ ಪುಟಗಳ ಓದುವಿಕೆಯಿಂದ ಭಾಷಾಶುದ್ಧಿಯನ್ನು ತಿಳಿದುಕೊಳ್ಳಲು ಸಾಧ್ಯವಿದೆ.

ಕೊನೆಯದಾಗಿ ಸಂಗ್ರಹಿತ ಹಸ್ತಪ್ರತಿ ತ್ರುಟಿತ, ಲುಪ್ತಪುಟ ಮತ್ತು ಅಸ್ಪಷ್ಟವಾಗಿರಕೂಡದು. ಸಂಪೂರ್ಣ, ಸುಭದ್ರ ಮತ್ತು ಸುಸ್ಪಷ್ಟವಿದ್ದಷ್ಟು ಸಂಪಾದನಕಾರ್ಯ ಸಾಂಗವಾಗಿ ಸಾಗುತ್ತದೆ.

ಒಟ್ಟಿನಲ್ಲಿ, ಪ್ರಾದೇಶಿಕತೆ ದೃಷ್ಟಿಯಿಂದ ವೈವಿಧ್ಯ, ಕಾಲದೃಷ್ಟಿಯಿಂದ ಪ್ರಾಚೀನ, ಭಾಷಾ ದೃಷ್ಟಿಯಿಂದ ದೋಷರಹಿತ, ಸಂತಾನ ದೃಷ್ಟಿಯಿಂದ ಶುದ್ಧ, ಸ್ವರೂಪ ದೃಷ್ಟಿಯಿಂದ ಪರಿಪೂರ್ಣ ಮತ್ತು ಪರಿಸ್ಫುಟವಾಗಿರಬೇಕು.

ವಂಶಾವಳಿ ನಿರ್ಣಯ :

ಹಸ್ತಪ್ರತಿಗಳ ಅಭ್ಯಾಸ ಗಾಢವಾದಷ್ಟು ಅವುಗಳ ಸತ್ವ, ಸಾದೃಶ್ಯ-ವೈದೃಶ್ಯಗಳು ಅರಿತಕ್ಕೆ ಬರುತ್ತವೆ. ಅದಕ್ಕಾಗಿ ಪ್ರತಿಯೊಂದು ಹಸ್ತಪ್ರತಿಯ ಒಲವು-ನಿಲುವುಗಳ, ಗುಣ-ದೋಷಗಳ ಸಮಗ್ರ ಅಭ್ಯಾಸ ಸಂಪಾದಕನಿಗೆ ಅವಶ್ಯ. ಇಷ್ಟು ಹಿನ್ನೆಲೆಯಲ್ಲಿ ಸಂಯೋಜಕ, ವಿಚ್ಛೇದಕ ಮತ್ತು ವಿಶಿಷ್ಟ ಸ್ಖಾಲಿತ್ಯಗಳ ಒರೆಗೆ ಹಚ್ಚಿ, ಅವುಗಳ ಮಾತೃಕಾ-ಪುತ್ರಿಕಾ, ಸೋದರ-ಸದಸ್ಯ ಸಂಬಂಧವನ್ನು ನಿರ್ಣಯಿಸಬೇಕು. ತರುವಾಯ ನಕಲು ಎನಿಸುವ ಪುತ್ರಿಕಾಪ್ರತಿ, ಊರ್ಜಿತವಾಗಿರದ ಸೋದರಪ್ರತಿಗಳನ್ನು ಬಿಟ್ಟು, ಒಂದೊಂದು ಕುಟುಂಬದ ಮಾತೃಕಾಪ್ರತಿ ಮತ್ತು ಊರ್ಜಿತವಾಗಿರುವ ಸದಸ್ಯ ಪ್ರತಿಗಳನ್ನು ಮಾತ್ರ ಆಯ್ದುಕೊಳ್ಳಬೇಕು. ಹೀಗೆ ಮಾಡುವುದರಿಂದ ಶ್ರಮ ಕಡಿಮೆ, ಫಲ ಹೆಚ್ಚು. ಇಲ್ಲದಿದ್ದರೆ ಫಲ ಅಷ್ಟೇ ಉಳಿದು, ಶ್ರಮ ಮಾತ್ರ ಹೆಚ್ಚುತ್ತದೆ. ಹೀಗೆ ಆರಿಸಿಕೊಂಡು, ಉಪಯುಕ್ತ ಹಸ್ತಪ್ರತಿಗಳಿಗೆ ಸಂಕೇತಕೊಟ್ಟು, ಅವುಗಳಲ್ಲಿಯೇ ತೀರ ಉತ್ತಮವಾದ ಒಂದು ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಮಿಕ್ಕವುಗಳನ್ನು ಪೂರಕಪ್ರತಿಗಳನ್ನಾಗಿ ಬಳಸಿಕೊಳ್ಳಬೇಕು.

ಪಾಠ ಸಂಕಲನ :

ಪರಿಷ್ಕರಣಕಾರ್ಯಕ್ಕೆ ಆಯ್ದುಕೊಂಡ ಹಸ್ತಪ್ರತಿಗಳು ತಮತಮಗೆ ಭಿನ್ನ ಪಾಠಗಳನ್ನೊಳಗೊಂಡಿರುತ್ತವೆ. ಈ ಎಲ್ಲ ಭಿನ್ನಪಾಠಗಳನ್ನು ಒಂದೆಡೆ ಸಂಗ್ರಹಿಸುವುದು ಪಾಠ ಸಂಕಲನ. ಈ ಸಂಕಲನ ವಿಧಾನ ಅನೇಕ ಬಗೆಯಾಗಿದೆ.

ಚೌಕ ಮನೆಗಳ ಹಾಳೆಯನ್ನು ತೆಗೆದುಕೊಂಡು ಅದರ ಮೇಲ್ಭಾಗದ ಸಾಲಿನ ಪ್ರತಿಯೊಂದು ಮನೆಯಲ್ಲಿ ಉತ್ತಮಪ್ರತಿಯ ಒಂದೊಂದು ಅಕ್ಷರವನ್ನು ಬರೆಯಬೇಕು. ಈ ಒಂದೊಂದು ಅಕ್ಷರದ ಕೆಳಗೆ ಬೇರೆ ಪ್ರತಿಗಳ ಒಂದೊಂದು ಅಕ್ಷರವನ್ನು ಬರೆಯುತ್ತ ಹೋಗಬೇಕು. ಈ ಹಾಳೆಯ ಒಂದು ಮಗ್ಗುಲಿನಲ್ಲಿ ಪ್ರತಿಗಳ ಸಂಕೇತ ಇಲ್ಲವೆ ನಂಬರ ಮತ್ತು ಸಂಧಿ-ಪದ್ಯಗಳನ್ನೂ ಇನ್ನೊಂದು ಮಗ್ಗುಲಿನಲ್ಲಿ 'ಇತರ ವಿಷಯ'ಗಳನ್ನೂ ಬರೆಯಬೇಕು. ಇದಕ್ಕೆ ಮಾದರಿಯಾಗಿ ಕವಿರಾಜಮಾರ್ಗದ ಒಂದು ಮಣಿಭೂಷಣವೃತ್ತವನ್ನು ನೋಡಬಹುದು.

ಹಸ್ತಪ್ರತಿ ನಂ.	ಪದ್ಯ	ಪಾಠ															ಇತರ ವಿಷಯ
೧೧೦	೧–೧೩೧	ತೂ	ರಿ	ಪಿಂ	ಗಿ	ಸು	ವ	ವೊ	ಲ್ಸ	ಲೆ	ನೆ	ಲ್ಲಿ	ರೆ	ಪಾ	ಳ್ಗ	ಳಂ	ಪ್ರಕ.
೧೨೫		ತೋ	ಜಿ														೪೪–೨
೧೭೫														ಪೊ			ನೋಡಿ
೨೮೮		ತೋ							ಲ್ಪೊಸ	–			ಪೊ				

ಸಾಮಾನ್ಯವಾಗಿ ಗದ್ಯಕ್ಕಿಂತ ಪದ್ಯ, ಅದರಲ್ಲಿಯೂ ಅಂಶವೃತ್ತಕ್ಕಿಂತ ಮಾತ್ರಾವೃತ್ತ, ಮಾತ್ರಾವೃತ್ತಕ್ಕಿಂತ ಅಕ್ಷರವೃತ್ತಗಳ ಪರಿಷ್ಕರಣಕ್ಕೆ ಈ ಗೆರೆಮನೆ ಹೆಚ್ಚು ಪ್ರಯೋಜಕ. ಅಕ್ಷರವೃತ್ತಗಳಲ್ಲಿ ಹ್ರಸ್ವದ ಕೆಳಗೆ ಹ್ರಸ್ವ, ದೀರ್ಘದ ಕೆಳಗೆ ದೀರ್ಘ ಬಂದು ಪ್ರತಿಯೊಂದು ಚರಣದ ಒಟ್ಟು ಅಕ್ಷರ ಸಂಖ್ಯೆ ಸಮನಾಗಿ ಬರುವುದರಿಂದ, ಈ ಗೆರೆಮನೆ ಅದರ ಛಂದಸ್ಸನ್ನು ಸರಿಪಡಿಸಲೂ ನೆರವಾಗುತ್ತದೆ.

'ಇತರ ವಿಷಯ' ವಿಭಾಗದಲ್ಲಿ ಪ್ರಕ್ಷೇಪ-ವಿಕ್ಷೇಪಗಳಂಥ ಪಾಠಕ್ಕೆ ಸಂಬಂಧಿಸಿದ ವಿವರಗಳನ್ನೋ ಆಕರ, ಪ್ರಭಾವ, ಪುನರುಕ್ತಿ ಮೊದಲಾದ ಸೂಚನೆಗಳನ್ನೋ ಬರೆಯಬೇಕು. ಭಿನ್ನಪಾಠ ವಿಸ್ತಾರವಾಗಿದ್ದರೆ ಈ ಹಾಳೆಯ ಬೆನ್ನಮೇಲೆ ಬರೆಯಬಹುದು ಇಲ್ಲವೆ ಬೇರೊಂದು ಹಾಳೆಯ ಮೇಲೆ ಬರೆದು ಲಗತ್ತಿಸಬಹುದು.

ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿದ್ದರೆ ಇಂತಹ ಗೆರೆಮನೆ ಹಾಳೆ ಆವಶ್ಯಕ ಮತ್ತು ಪ್ರಯೋಜಕ. ಕೆಲವೇ ಇದ್ದರೆ ಕಾಗದ ಮತ್ತು ಹಣದ ಅಪವ್ಯಯವೆನಿಸುವುದರಿಂದ ಆಗ ಉತ್ತಮಪ್ರತಿಯ ಪಠ್ಯವನ್ನು ಪ್ರತಿಯೊಂದು ಚರಣದ ನಡುವೆ ಯೋಗ್ಯ ಸ್ಥಳಬಿಟ್ಟು ಬರೆದು, ಮಿಕ್ಕ ಹಸ್ತಪ್ರತಿಗಳ ಭಿನ್ನಪಾಠಗಳನ್ನು ಬೇರೆ ಬೇರೆ ಬಣ್ಣದ ಸೀಸಕಡ್ಡಿಯಿಂದ ಬರೆಯಬೇಕು. ಹಾಗೆ ಮಾಡುವಾಗ ಪಾಠಾಂತರಕ್ಕೆ ಗುರಿಯಾದ ಪಠ್ಯ ಭಾಗವನ್ನು ಸಂಕೇತಗಳಿಂದ ಗುರುತಿಸಬೇಕು. ಅಂಕಿಯಿಂದ

ಗುರುತಿಸುವುದು ಇನ್ನೂ ಮೇಲು. ಭಿನ್ನಪಾಠ ವಿಸ್ತಾರವಾಗಿದ್ದರೆ ಆ ಹಾಳೆಯ ಬೆನ್ನ ಮೇಲೆ ಬರೆಯಬಹುದು ಇಲ್ಲವೆ ಬೇರೊಂದು ಹಾಳೆಯಲ್ಲಿ ಬರೆದು ಅಂಟಿಸಬಹುದು.

ಈ ಪಾಠಸಂಕಲನಕ್ಕೆ ಭಾಷಾಬಲ್ಲಿದರೂ, ಸಾಹಿತ್ಯಪ್ರವೀಣರೂ, ಲಿಪಿಸೂಕ್ಷ್ಮಜ್ಞರೂ, ಪ್ರಾಮಾಣಿಕರೂ, ಶ್ರಮಸಹಿಷ್ಣುಗಳೂ ಆದ ಪಂಡಿತರು ಅವಶ್ಯ. ಹಸ್ತಪ್ರತಿಗಳು ಕಡಿಮೆ ಇದ್ದರೆ ಈ ಕಾರ್ಯವನ್ನು ಒಬ್ಬನೇ ಮಾಡಬಹುದಾದರೂ ಇಬ್ಬರು ಲೇಸು, ಒಬ್ಬ ಪಾಠವಾಚಕ, ಇನ್ನೊಬ್ಬ ಪಾಠಾಂತರ ಲೇಖಕ. ಒಮ್ಮೆ ಸಂಕಲಿಸಿದ ಪಾಠವನ್ನು ವಾಚಕ ಲೇಖಕನಾಗಿ, ಲೇಖಕ ವಾಚಕನಾಗಿ ಇನ್ನೊಮ್ಮೆ ತಾಳೆ ನೋಡಬೇಕು.

ದೂರ ಪ್ರದೇಶದ ಹಸ್ತಪ್ರತಿಯನ್ನು ಪಡೆಯಲು, ಇಲ್ಲವೆ ಅಲ್ಲಿಗೆ ಹೋಗಲು ಸಾಧ್ಯವಾಗದಿದ್ದರೆ ಸಂಪಾದಕನು ತನ್ನ ಆಧಾರಪ್ರತಿಯನ್ನು ಅಲ್ಲಿಗೆ ಕಳುಹಿ, ಅದಕ್ಕೆ ಭಿನ್ನಪಾಠಗಳನ್ನು ಗುರುತು ಹಾಕಿಸಿ ತರಿಸಿಕೊಳ್ಳಬೇಕು.

ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಪಾಠಾಂತರ ಸಂಕಲನ ಕಾರ್ಯವನ್ನು ಸಿಬ್ಬಂದಿಗಳು, ಪರಿಷ್ಕರಣ ಕಾರ್ಯವನ್ನು ಸಂಪಾದಕರು ಮಾಡುವ ಪದ್ಧತಿಯಿರುವುದರಿಂದ ಗ್ರಂಥಸಂಪಾದನ ಕಾರ್ಯದ ಮೂಲಮೃತ್ತಿಕೆಯಾದ ಹಸ್ತಪ್ರತಿಗಳಿಗೂ ಸಂಪಾದಕರಿಗೂ ಸಂಪರ್ಕ ಬಂದಿರುವುದಿಲ್ಲ. ಹಸ್ತಪ್ರತಿಗಳ ಒಡನಾಟ ಅಧಿಕವಾದಷ್ಟು, ಸ್ಖಾಲಿತ್ಯಗಳ ಪರಿಚಯ ಪ್ರಗಾಢವಾದಷ್ಟು, ಕವಿ–ಲಿಪಿಕಾರರ ಮನೋಭಾವವನ್ನು ಹೆಚ್ಚು ಅರಿತಷ್ಟು, ಪರಿಷ್ಕರಣ ಉತ್ತರೋತ್ತರಗೊಳ್ಳುವ ಕಾರಣ, ಸಂಪಾದಕನು ಹಸ್ತಪ್ರತಿಗಳ ವಂಶನಿರ್ಣಯ, ಪಾಠಸಂಕಲನ ಮೊದಲಾದ ಹಂತಗಳಲ್ಲಿ ಮನಮುಟ್ಟಿ ದುಡಿಯಬೇಕು. ಇದರಿಂದ ಆತನ ಸಂಪಾದನೆ ಊರ್ಜಿತವಾಗುತ್ತದೆ, ಉತ್ಕೃಷ್ಟಗೊಳ್ಳುತ್ತದೆ.

ಪಾಠಪರಿಷ್ಕರಣ :

ಭಿನ್ನಪಾಠಗಳನ್ನು ಕಣ್ಣೆದುರು ಹರಡಿಕೊಂಡು, ಎದುರು ಎದ್ದುಬರುವ ದುಷ್ಟ ಪಾಠಗಳ ತೆರೆಯನ್ನು ಒಂದೊಂದಾಗಿ ವರ್ಜಿಸುತ್ತ, ಅದರ ಒಳ ಪದರಿನೊಳಗೆ ಅನ್ವೇಷಣೆಯನ್ನು ಮುಂದುವರಿಸಿ, ಶಿಷ್ಟಪಾಠಗಳನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಪಾಠಾಂತರಗಳ ಸಹಾಯದಿಂದ ನಡೆಸಿದ ಈ ಅನ್ವೇಷಣಯಾತ್ರೆಯಲ್ಲಿ ಸಂಪಾದಕನು ಎರಡು ವಿಧಾನಗಳನ್ನು ಅವಲಂಬಿಸಬೇಕು. ಒಂದು : ಲಿಪಿಕಾರನ ಲೇಖನ ಸಂಭಾವ್ಯತೆ, ಎರಡು: ಕೃತಿಕಾರನ ಅಂತಸ್ಸಂಭಾವ್ಯತೆ. ಈ ಎರಡೂ ಸಂಭಾವ್ಯತೆಗಳ ಅಂತಿಮಫಲ ಮೂಲಪಾಠಶೋಧನೆ, ಕೊನೆಯ ಪಕ್ಷ ಅರ್ಥವತ್ತಾದ ಪಾಠನಿರ್ಣಯ.

ಲೇಖನ ಸಂಭಾವ್ಯತೆ : ಅಕ್ಷರಗಳ ರೂಪಸಾದೃಶ್ಯ, ಅಕ್ಷರಗಳ ಧ್ವನಿಸಾದೃಶ್ಯ, ಬರವಣಿಗೆಯ ರೀತಿದೋಷ, ಅವಸ್ಥಾಭೇದ – ಪ್ರಾಂತಭೇದಗಳ ಬಲದಿಂದ ಲಿಪಿಕಾರನು ನಿರ್ದಿಷ್ಟವಾದ ವಿಧಾನದಲ್ಲಿ ಅನುದ್ದೇಶಿತ ಸ್ಖಾಲಿತ್ಯಗಳನ್ನುಂಟು ಮಾಡಿರುತ್ತಾನೆ. ಒಂದು ಹಸ್ತಪ್ರತಿಯ ಆಳವಾದ ವ್ಯಾಸಂಗದಿಂದ ಇಂಥ ಸ್ಖಾಲಿತ್ಯಗಳ ಒಲವು–ನಿಲುವುಗಳು ಮನದಟ್ಟಾಗುತ್ತವೆ. ಈ ಮನದಟ್ಟಿನ ಹಿನ್ನೆಲೆಯಲ್ಲಿ ಆ ಸ್ಖಾಲಿತ್ಯಗಳನ್ನು ಋಜುಗೊಳಿಸುವ ಸಾಧ್ಯತೆ ಅಥವಾ ಸಂಭಾವ್ಯತೆ ಇರುತ್ತದೆ. ಇದು ಲೇಖನ ಸಂಭಾವ್ಯತೆ. ಈ ಸಂಭಾವ್ಯತೆಯ ಬಲದಿಂದ ಆ ಸ್ಖಾಲಿತ್ಯಗಳನ್ನು ಅಳಿಸುತ್ತ ಹಿಂದೆ ಹೋಗಿ, ಮೂಲಪಾಠವನ್ನು ಅರಿಯಬೇಕು. ಹೀಗೆ ಮಾಡುವಲ್ಲಿ ಲಿಪಿಕಾರನು ಯಾವ ಲಿಪಿಯನ್ನು ಯಾವ

ಲಿಪಿಯಂತೆ, ಯಾವ ಧ್ವನಿಯನ್ನು ಯಾವ ಧ್ವನಿಯಂತೆ, ಯಾವ ರೀತಿಯ ಬರವಣಿಗೆಯನ್ನು ಯಾವ ರೀತಿಯಂತೆ ಬರೆಯುವನು? ಯಾವ ಶಬ್ದಗಳನ್ನು ಯಾವ ಪ್ರಾಂತಭೇದ, ಯಾವ ಅವಸ್ಥಾಭೇದಗಳಿಗೆ ಗುರಿಪಡಿಸುವನು? ಎಂದು ಅರಿತರೆ ಮಾತ್ರ ಕಣ್ಣೆದುರಿಗಿರುವ ಅಪಪಾಠಗಳ ಗುಂಪಿನಿಂದ ಮೂಲದ ಶುದ್ಧಪಾಠವನ್ನು ಹುಡುಕಲು ಸಾಧ್ಯವಾಗುತ್ತದೆ, ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

ಪುಲಿಕರ ಪುರಾಧೀಶ ಶೋಮೇಸನು [ಸೋಚಾ ೫-೮೨]

ನಿಜ ವೇಸಮಂ ತೋರಲ್ [ಸೋಚಾ ೪-೧]

ಸಸಿದವನೆ ನೀನಾರ ಮಗಳು [ಸೋಚಾ ೨-೫೬]

ದೂಶಕರ ಮೂದಲಿಸು [ಸೋಚಾ ೨-೧೨೦]

ಶ, ಷ, ಸ ಗಳ ಧ್ವನಿವ್ಯತ್ಯಾಸ ಜ್ಞಾನವಿಲ್ಲದ ಮೂಲಕ ಸೋಮನಾಥ ಚಾರಿತ್ರಕ್ಕೆ ಬಳಸಿದ 'ಮ' ಪ್ರತಿಕಾರನು ಇವು ಬಂದಲ್ಲೆಲ್ಲ ತಪ್ಪುತ್ತ ಹೋಗಿರುವನು. ಇಂಥ ಪ್ರಸಂಗಗಳಲ್ಲೆಲ್ಲ ಈ ಲಿಪಿಕಾರನ ಭಾಷಾದೋಷವನ್ನು ಗೃಹೀತವಾಗಿಟ್ಟುಕೊಂಡು ಪಾಠವನ್ನು ತಿದ್ದಿ ಶುದ್ಧಗೊಳಿಸಿಕೊಳ್ಳಬಹುದು. ಇದೇ ರೀತಿ ಱ-ರ, ೞ-ಳ ಅಕ್ಷರಗಳ ಬಗ್ಗೆ ಲಕ್ಷ್ಯವಹಿಸಬೇಕು. ಇದು ಲೇಖನ ಸಂಭಾವ್ಯತೆಗೆ ಸಂಬಂಧಪಟ್ಟ **ಅಕ್ಷರಗಳ ಧ್ವನಿಸಾದೃಶ್ಯ ಸಂಭಾವ್ಯತೆ.**

ಎಂದು ಮರೀಚಿಕಾಜಲಮನೀಸುವನ್ [ಧಪು. ೫-೯೯] (ಬಿ)

ಹೇಮ **ತಾ**ಮರಸಮನಾನನಾಂಬುರುಹಕೆ

[ಧಪು. ೩-೧೪೪] (ಲೌ)

ಕಾರಕ ಸಂಪದಮಂ ತಗುಳ್ಚುಗುಂ [ಕಮಾ ೧-೧೨೧] (ತಾ)

ಸುಪು**ಷ್ಪ**ದೃಷ್ಟಿಯನೊಡಂಬಡೆ ತಾಳ್ದಿಯುಂ [ಪಂಭಾ ೧-೧] (ಷ್ಟ)

ಬಂದ ಮಾವಿನ **ಕಂ**ಪಿಂದಮೆ ಪೂಸುತುಂ ವಿರಹಿಯಂ [ಸೂಕ್ತಿ ೧೦-೧೪] (ಕೆಂ)

ಪ್ರಿ**ಯ**ದಿನಪ್ಪುವ ಚಂಪಕಮಾಲೆ [ಧಪು ೩-೯೫] (ಮ)

ನೆಲೆ ಮೊಲೆ ಪೊನ್ನ ಸೊನ್ನಲಿಗೆಯಾಗೆ [ಕಾಲೋ ೬೮೭] (ರಿ)

ಅತಿ ಹುಸಿ**ವ** ಯತಿ ಹೊಲೆಯ [ಹಕಾ ೧೪-೧೦] (ದ)

ಈ ಭಿನ್ನಪಾಠಗಳಲ್ಲಿಯ ಚಿ-ಬಿ, ತಾ-ಲೌ, ಕಾ-ತಾ, ಷ್ಪ-ಷ್ಟ, ಕಂ-ಕೆಂ, ಯ-ಮ, ಲಿ-ರಿ, ವ-ದಗಳ ಲಿಪಿಸಾದೃಶ್ಯ ಸಾಧ್ಯತೆಯನ್ನವಲಂಬಿಸಿ, 'ಮರೀಚಿಕಾಜಲ' 'ತಾಮರಸ' 'ಕಾರಕ' 'ಸುಪುಷ್ಪ' 'ಕಂಪಿದಂ' 'ಪ್ರಿಯ' 'ಸೊನ್ನಲಿಗೆ' 'ಹುಸಿವ'ಗಳು ಯೋಗ್ಯಪಾಠವೆಂದು ಸುಲಭವಾಗಿ ಹೇಳಬಹುದು. ಇದು ಲೇಖನಸಂಭಾವ್ಯತೆಗೆ ಸಂಬಂಧಿಸಿದ **ಅಕ್ಷರಗಳ ರೂಪಸಾದೃಶ್ಯ ಸಂಭಾವ್ಯತೆ.**

ಪುಣ್ಯ ಪದವಿಯ ಬಯಸಿದಡೆ ಭವಮಾಲೆಯ **ಭ**ರವು ತಪ್ಪದು

[ಬವ ೧೨೮] (ಬ)

ಗಾಂಗೇಯನ ಮಾತಂ ಮನ**ದೇ**ಗೊಂಡು [ಪಂಭಾ ೬-೪೧ ಗ] (ದೆ)

ಹೊಲಮೇರೆಯ **ಹೊಂದೆ** ಹೊಲನ ಬಿಟ್ಟೋಡುವೆ [ಬವ ೪೪೭] (ಹೊದ್ದೆ)

ಮಹಾಪ್ರಾಣ, ದೀರ್ಘ, ಒತ್ತುಗಳ ಬಳಕೆಯ ಬರೆವಣಿಗೆಯ ರೀತಿದೋಷದ ಮೂಲಕ ಉಂಟಾದ ವ್ಯತ್ಯಾಸಗಳಿವು. ಇದಲ್ಲದೆ

ಮುನ್ನೀರು **ಮುಂತಾಗಿ**.... ಪರಿವ ಬೆಳ್ಪೊವನಲ್ [ಜೈಭಾ ೧೯-೪]

(ಮುನ್ನೀರು ಮುಂ ತಾಗಿ.... ಪರಿವ ಬೆಳ್ಪೊವನಲ್)

ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ, ಅಗಿದು ಕಳೆದೆನಯ್ಯ ಭ್ರಾಂತಿನ ಬೇರೊಡೆದು, ಸಂಸಾರದ ಹೆಂಟೆಯ ಬಗಿದು, ಬಿತ್ತಿದೆನಯ್ಯ ಬ್ರಹ್ಮಬೀಜವ....[ಅವ ೮೧೨]

(ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ, ಅಗಿದು ಕಳೆದೆನಯ್ಯ ಭ್ರಾಂತಿನ ಬೇರ, ಒಡೆದು ಸಂಸಾರ ಹೆಂಟೆಯ, ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ...)[ಗೂಶೂ ೧೦]

ಕೆರುಗಲ್ಲನಿಕ್ಕಿ, ಧರೆ ಮೇರುವ ನೆಲೆಗೊಳಿಸಿ [ಚೆವ ೪] (ನಿಕ್ಕಿದರೆ)

ಎಂಬ ಪ್ರಯೋಗಗಳಲ್ಲಿ ಪದವಿನ್ಯಾಸದ ತಪ್ಪು, ಅರ್ಥವ್ಯತ್ಯಾಸವನ್ನುಂಟು ಮಾಡಿದೆ. ಇದನ್ನು ಅರಿತು ಪಾಠನಿರ್ಣಯಿಸುವುದು ಲೇಖನ ಸಂಭಾವ್ಯತೆಗೆ ಸಂಬಂಧಿಸಿದ **ಬರೆವಣಿಗೆಯ ರೀತಿದೋಷ ಸಂಭಾವ್ಯತೆ**.

ಪೊನ್ನನ **ಪಂ**ಪನ ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ

[ಶಮದ ೧-೫] (ಹೊ, ಹಂ)

ಹಲ್ಲ ಸುಲಿದಂತೆ ಕನ್ನಡಿಯ ನೋಡಿದಂತೆ [ಶಿವ ೨೩೩] (ಅ)

ಒಱೆಯ ಕಟ್ಟಿ ಇಱೆಯದಿದ್ದಡೆ ಲೋಕ ಮೆಚ್ಚುವುದೇ [ಬವ ೧೧೧೮] (ಹೊ) ಅವಸ್ಥಾಭೇದ – ಪ್ರಾಂತಭೇದದಿಂದುಂಟಾದ ಈ ದೋಷ, ಲೇಖನ ಸಂಭಾವ್ಯತೆಗೆ ಸಂಬಂಧಿಸಿದ **ಪ್ರಾಂತಭೇದ –ಅವಸ್ಥಾಭೇಧ ಸಂಭಾವ್ಯತೆ.**

ಹೀಗೆ ಅಕ್ಷರಗಳ ರೂಪ, ಅಕ್ಷರಗಳ ಧ್ವನಿ, ಬರವಣಿಗೆಯ ರೀತಿ, ಅವಸ್ಥಾಭೇದ–ಪ್ರಾಂತಭೇದಗಳಿಂದುಂಟಾದ ದೋಷಗಳ ಸಾಧ್ಯತೆಯ ಬಲದಿಂದ ದುಷ್ಟಪಾಠವನ್ನು ಶಿಷ್ಟಪಾಠಕ್ಕೆ ತಿರುಗಿಸುವುದು ಲೇಖನಸಂಭಾವ್ಯತೆ.

ಅಂತಸ್ಸಂಭಾವ್ಯತೆ : ಕಣ್ಣೆದುರಿಗಿರುವ ಹಲವು ಪಾಠಾಂತರಗಳಲ್ಲಿ ನಿಜಪಾಠವನ್ನು ನಿರ್ಣಯಿಸುವುದು ಲೇಖನಸಂಭಾವ್ಯತೆಯಿಂದ ಸಾಧ್ಯವಾಗದಿದ್ದರೆ ಕವಿಯ ಮನೋಧರ್ಮ, ಕಾವ್ಯದ ಯೋಗ್ಯತೆಗಳಿಗೆ ಒಪ್ಪುವಂತೆ ಸಂದರ್ಭ, ಛಂದ, ಶೈಲಿ, ಭಾಷೆಗಳನ್ನವಲಂಬಿಸಿ ಯೋಗ್ಯಪಾಠವನ್ನು

ಹುಡುಕಬೇಕಾಗುತ್ತದೆ. ಇದು ಅಂತಸ್ಸಂಭಾವ್ಯತೆ. ಲೇಖನಸಂಭಾವ್ಯತೆ ನಿಂತಲ್ಲಿಂದ ಈ ಅಂತಸ್ಸಂಭಾವ್ಯತೆ ಮುಂದುವರಿಯುತ್ತದೆ. ಲೇಖನಸಂಭಾವ್ಯತೆಯು ಲಿಪಿಕಾರನಿಂದುಂಟಾದ ಲಿಪಿ, ಧ್ವನಿ, ಬರವಣಿಗೆ ರೀತಿ ಇತ್ಯಾದಿ ದೋಷಸಾಧ್ಯತೆಗೆ ಮಾತ್ರ ಮೀಸಲಾಗಿದ್ದರೆ, ಈ ಅಂತಸ್ಸಂಭಾವ್ಯತೆ ಕವಿಯ ಮನಸ್ಸನ್ನು ಅರಿತು ನಿಜಪಾಠವನ್ನು ನಿರ್ಣಯಿಸುವ ಸಾಧ್ಯತೆಯಾಗಿರುತ್ತದೆ. ಲೇಖನ ಸಂಭಾವ್ಯಕ್ಕಿಂತ ಗಹನವಾದ ಇದು ಸಂಪಾದಕನ ಬುದ್ಧಿಮತ್ತೆ ಸೂಕ್ಷ್ಮವಿದ್ದಷ್ಟು, ಅಭ್ಯಾಸ ವಿಶಾಲವಿದ್ದಷ್ಟು, ಕಲ್ಪನಾಶಕ್ತಿ ನವನವೋನ್ಮೇಷ ಶಾಲಿನಿಯಿದ್ದಷ್ಟು ಹೆಚ್ಚು ಸಾರ್ಥಕತೆ ಪಡೆಯುತ್ತದೆ. ಉದಾ :

ಫಲಿತ ಚೂತದ ಮರನ ಸಿರಿ ಕೋ ।

ಗಿಲೆಗೆ ನೆಟ್ಟನೆ ಹಾಲು ಹಂಸೆಗೆ ।

ಲಲಿತ ಕುಸುಮದ ಕಂಪು ತುಂಬಿಗೆ ಸವಿಯನೀವಂತೆ ।

ಉಳಿದ ೧ಖಗ೧ ಕಡುದುರುಗಳಿಗೆ ಸುಖ ।

ವಳವಡುವುದೆ ಸದಾಶಿವಂಗೀ ।

ಲಲನೆಯಲ್ಲದೆ ನರರಿಗುಚಿತವೆ ಭೂಪ ಕೇಳಿಂದ[೨] ॥ [೧-೧ ಬಕ]

ಈ ಪದ್ಯದ ಪಾಠನಿರ್ಣಯ ಪ್ರಸಂಗದಲ್ಲಿ ಲೇಖನಸಂಭಾವ್ಯತೆಗಿಂತ ಅಂತಸ್ಸಂಭಾವ್ಯತೆಗೆ ಹೆಚ್ಚು ಅವಕಾಶವಿದೆ. ಮಾಮರ, ಹಾಲು ಮತ್ತು ಹೂವುಗಳು ಕೋಗಿಲೆ, ಹಂಸೆ ಮತ್ತು ತುಂಬಿಗಳಿಗೆ ಭೋಗಯೋಗ್ಯಗಳೇ ಹೊರತು ಇತರ ಹಕ್ಕಿ, ಕಡುದುರುಗಳಿಗಲ್ಲ. ಇದೇ ರೀತಿ ಮಾಯಾದೇವಿ ಶಿವನಿಗೆ ಮಾತ್ರ ಮೀಸಲು, ಅನ್ಯರಿಗಲ್ಲ – ಎಂದು ಈ ಪದ್ಯದ ಅರ್ಥ. ಒಟ್ಟು ಸಂದರ್ಭಕ್ಕೆ ಈ ಅರ್ಥ ಹೊಂದಿಕೊಂಡು ಹೋಗುತ್ತಿದ್ದರೂ ಕವಿ ಇಟ್ಟ ಮೂಲಪಾಠ ಇನ್ನೂ ಯೋಗ್ಯ ಅರ್ಥದ್ದಿರಬೇಕು. ಅದು "ಕ್ರಮಾಲಂಕಾರ" ಮೂಲವಾದ ಪಾಠವೆಂದು ಅರಿತರೆ ಮಾತ್ರ "ಉಳಿದ ಖಗ ಬಕ ಕಡುದುರುಗಳಿಗೆ । ಯಳವಡುವುದೆ" ಎಂದು ಪಾಠನಿರ್ಣಯಿಸಿಕೊಳ್ಳಬೇಕಾಗುತ್ತದೆ. ಇದರಿಂದ ಮಾಮರ, ಹಾಲು ಮತ್ತು ಹೂವುಗಳೆಂಬ ಭೋಗವಸ್ತುಗಳು ಕೋಗಿಲೆ, ಹಂಸ ಮತ್ತು ತುಂಬಿಗಳೆಂಬ ಭೋಗಿಗಳಿಗೆ ಯೋಗ್ಯವೇ ಹೊರತು ಹಕ್ಕಿ, ಬಕ ಮತ್ತು ಕಡುದುರುಗಳೆಂಬ ಕುಭೋಗಿಗಳಿಗಲ್ಲ –ಎಂಬ ತೃಪ್ತಿಕರವಾದ ಅರ್ಥ ಹೊರಡುತ್ತದೆ. ಮೂರು ಭೋಗವಸ್ತು; ಮೂರು ಸುಭೋಗಿ, ಮೂರು ಕುಭೋಗಿ – ಹೀಗೆ ಒಂದು ಕ್ರಮ ಸಾಧ್ಯವಾಗಿ ಅರ್ಥಕ್ಕೆ ಮೆರಗು ಬರುತ್ತದೆ, ಕವಿಗೆ ಮುಖ್ಯವಾಗಿರುವ ಈ "ಅಲಂಕಾರ"ವನ್ನು ಅರ್ಥ ಮಾಡಿಕೊಳ್ಳದಿದ್ದರೆ ಪಾಠನಿರ್ಣಯ ತಪ್ಪುತ್ತದೆ. ಇಂಥದನ್ನು ಅರಿತು ಪಾಠನಿರ್ಣಯಿಸುವುದಕ್ಕೆ ಅಂತಸ್ಸಂಭಾವ್ಯತೆಯೆಂದು ಹೆಸರು.

ಒಂದು ಪಾಠವನ್ನು ಒಪ್ಪಿಕೊಳ್ಳುವಲ್ಲಿ ಅದು ಈ ಲೇಖನಸಂಭಾವ್ಯತೆ ಮತ್ತು ಅಂತಸ್ಸಂಭಾವ್ಯತೆಗಳೆರಡರಿಂದಲೂ ಪುಷ್ಟಿ ಪಡೆಯಬೇಕು. ಇದಕ್ಕೆ ಎರಡು ಉದಾಹರಣೆಗಳನ್ನು ನೋಡಬಹುದು.

---

೨. ಪ್ರ .ಲೀ. ೩–೪೨.

ಲಿಂಗ ಜಂಗಮ ಒಂದೇ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ.
ಅಲ್ಲಿಯೂ ಮೇಳ ಇಲ್ಲಿಯೂ ಮೇಳ ಚೌಡೇಶ್ವರಿಯಲ್ಲಿಯೂ ಮೇಳ?
ಮೊ[೧]ಲೆಯುಂಬ[೧] ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ನಮ್ಮ ಕೂಡಲಸಂಗಮದೇವ.[೩]

[೧–೧ ಲೆಯಂಬ (ಟ, ಠ, ತ, ನ, ಬ), ರೆಯೆಂಬ (ಥ, ಗ್ರಂಥ), ಲ್ಲೆ ಯೆಂಬ (ಧ), ಲೆಯೆಂಬ (ಎ, ತಾಪ್ರ), ಮಾತೆಯೆಂಬ (ಧ)]

ಇಲ್ಲಿ ಮೊರೆಯೆಂಬ, ಮೊಲೆಯಂಬ, ಮೊಲೆಯೆಂಬ, ಮೊಲ್ಲೆಯೆಂಬ ಪಾಠಗಳಿಂದ ಅರ್ಥ ಹೊರಡುವುದಿಲ್ಲ. 'ಮಾತೆಯೆಂಬ' ಪಾಠ ಅರ್ಥಕೊಡುತ್ತಿದ್ದರೂ ವಚನಗಳಲ್ಲಿ ಸಹಜಪ್ರಾಸ ಬೆಡಗಿನಿಂದ ಬರುವ ಕಾರಣ 'ಮೊಲೆಯುಂಬ' ಎಂಬುದೇ ಉಚಿತವೆನಿಸಿ, "ತಲೆಯ ಕೊಂಬ" ಎಂಬುದಕ್ಕೆ ಮಧುರ ಅನುಪ್ರಾಸವಾಗಿ ನಿಂತು, ಹೆಚ್ಚು ಅರ್ಥಸ್ಫುರಿಸುತ್ತದೆ. ಆದುದರಿಂದ ಅಂತಸ್ಸಂಭಾವ್ಯತೆಯ ದೃಷ್ಟಿಯಿಂದ 'ಮೊಲೆಯುಂಬ' ತೀರ ಯೋಗ್ಯಪಾಠ. ಇದು ಮುಂದೆ ಲಿಪಿಕಾರರ ಕೈಯಲ್ಲಿ ಅಕ್ಷರ ಸಾದೃಶ್ಯದಿಂದಾಗಿ 'ಮಾತೆಯೆಂಬ' ರೂಪ ತಾಳಿರುವುದೂ ಸ್ವಾಭಾವಿಕ. ಹೀಗಾಗಿ ಲೇಖನಸಂಭಾವ್ಯತೆಯೂ ಇದನ್ನು ಪೋಷಿಸುತ್ತದೆ. ಇನ್ನೊಂದು ಉದಾ:

ನರವಿಂಧ್ಯದೊಳಗೆನ್ನ[೧] ಹುಲುಗಿಳಿ[೧]ಯ ಮಾಡಿ ಸಲಹುತ್ತ
ಶಿವಶಿವಾಯೆಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವಾ.[೪] (೧–೧ ಹುಲ್ಲಿಗೆಣೆ, ಹುಲುಗಿಣಿ)

ಎನಗಿಂತ ಕಿರಿಯರಿಲ್ಲವೆಂಬ ಮನೋಧರ್ಮದ ಬಸವಣ್ಣನವರ ವಚನವಿದು. ಈ ಮನೋಧರ್ಮವನ್ನು ಪ್ರತಿನಿಧಿಸಲು "ನರವಿಂಧ್ಯದೊಳಗೆನ್ನ ಹುಲ್ಲಿಗೆಣೆ ಮಾಡಿ" ಎಂಬುದು ಮೊದಲ ನೋಟಕ್ಕೆ ಯೋಗ್ಯಪಾಠವೆನಿಸುತ್ತದೆ. ಆದರೆ "ಶಿವಶಿವಾಯೆಂದೋದಿಸು" "ಭಕ್ತಿಯೆಂಬ ಪಂಜರ" ಎಂಬ ಮಾತುಗಳನ್ನು ನೆನೆದಾಗ, 'ಹುಲುಗಿಳಿ' ಎಂಬುದೇ ಯೋಗ್ಯಪಾಠವೆಂದೂ ಗಿಳಿಯ ರೂಪಕ ಚಿತ್ರಣ ಬಸವಣ್ಣನವರ ಉದ್ದೇಶವೆಂದೂ ತಿಳಿದು ಬಂದು, ಅಂತಸ್ಸಂಭಾವ್ಯತೆ ಪುಷ್ಟಿ ಪಡೆಯುತ್ತದೆ. ಹುಲುಗಿಳಿ > ಹುಲುಗಿಣಿ > ಹುಲ್ಲಿಗೆಣೆ ಎಂಬ ಲೇಖನಸಂಭಾವ್ಯತೆಯೂ ಇದನ್ನು ಬೆಂಬಲಿಸುತ್ತದೆ. ಹೀಗೆ ಉಭಯ ಸಂಭಾವ್ಯತೆಗಳಿಂದ ಸಮ್ಮತಿ ಪಡೆದ ಈ ಪಾಠ ಮಾತ್ರ ಸ್ವೀಕಾರಯೋಗ್ಯವೆನಿಸುತ್ತದೆ.

---

೩. ಬವ ೬೩೯.
೪. ಬವ ೫೮.

ಒಟ್ಟಿನಲ್ಲಿ ಲಿಪಿಕಾರನ ಲೇಖನಸಂಭಾವ್ಯತೆಯು ಕೃತಿಕಾರನ ಅಂತಸ್ಸಂಭಾವ್ಯತೆಗೆ ಸಂಬಂಧಿಸಿರುವುದಿಲ್ಲ. ಕೃತಿಕಾರನ ಅಂತಸ್ಸಂಭಾವ್ಯತೆಯು ಲಿಪಿಕಾರನ ಲೇಖನಸಂಭಾವ್ಯತೆಗೆ ಸಂಬಂಧಿಸಿರುವುದಿಲ್ಲ. ಆದರೆ ಒಂದು ಪಾಠವನ್ನು ನಿರ್ಣಯಿಸುವಲ್ಲಿ ಅದಕ್ಕೆ ಈ ಎರಡರ ಸಮರ್ಥನೆ, ಸಮ್ಮತಿ ಬೇಕು.

ಹೀಗೆ ಲೇಖನಸಂಭಾವ್ಯತೆ ಅಂತಸ್ಸಂಭಾವ್ಯತೆಗಳನ್ನಾಧರಿಸಿ ನಿಜಪಾಠವನ್ನು ಒಪ್ಪಿಕೊಳ್ಳುವಲ್ಲಿ ಇನ್ನೂ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು.

೧. ಏಕೈಕ ಹಸ್ತಪ್ರತಿಯಿದ್ದರೆ ಅನಿವಾರ್ಯವಾಗಿ ಲೇಖನಸಂಭಾವ್ಯತೆ, ಅಂತಸ್ಸಂಭಾವ್ಯತೆಗಳನ್ನು ಮಾತ್ರ ಆಧರಿಸಿ ದೋಷಪಾಠವನ್ನು ಗುಣಕ್ಕೆ ತಿರುಗಿಸಬೇಕು. ಉದಾ:

ಕೊಳದೊಳ್ತಾವರೆ ಗಗನ ।
ಸ್ಥಳದೊಳ್ಶರೆಯೊಗೆವ ತೆಱದಿನೊಗೆದಂ ನಿಜ ನಿ ।
ರ್ಮ್ಮಳ ಯಶಮೆಸೆಯೆ ಸುಪುತ್ರಃ ।
ಕುಳದೀಪಕನೆನಿಸಿ ಪೊಗಳೆ ಧರೆ ಕಲಿದೇವ[ಂ] ॥[೫]

ಇದು ಒಂದು ಶಿಲಾಶಾಸನದ ಪದ್ಯ. ಇಲ್ಲಿ "ಗಗನಸ್ಥಳದೊಳ್ಶರೆಯೊಗೆವ ತೆಱದಿಂ" ಎಂಬುದು ಬೇರೆ ಪಾಠಗಳಿಲ್ಲದ, ಅರ್ಥವಾಗದ ಪಾಠ. ಸಂದರ್ಭಬಲವೆಂಬ ಅಂತಸ್ಸಂಭಾವ್ಯತೆ ಮತ್ತು 'ರೆ' 'ಶಿ'ಗಳಲ್ಲಿಯ ಅಕ್ಷರಸಾದೃಶ್ಯವೆಂಬ ಲೇಖನಸಂಭಾವ್ಯತೆ ಇವುಗಳ ಬಲದಿಂದ ಇದನ್ನು "ಗಗನಸ್ಥಳದೋಳ್ಶಶಿಯೊಗೆವ ತೆಱದಿಂ" ಎಂದು ಶುದ್ಧಗೊಳಿಸಬಹುದು.

೨. ಬೇರೆ ಬೇರೆ ಪರಂಪರೆಗಳಿಗೆ ಸಂಬಂಧಿಸಿದ ಎರಡು ಹಸ್ತಪ್ರತಿಗಳಲ್ಲಿ ಒಂದೇ ಬಗೆಯ ಮತ್ತು ಅಪ್ರಯೋಜಕ ಪಾಠಗಳಿದ್ದರೆ, ಈ ದೋಷಸಾಮ್ಯ ಆಕಸ್ಮಿಕವಾಗಿರದೆ ಈ ಎರಡೂ ಪರಂಪರೆಗಳಿಗೆ ತಾಯಿಯಾಗಿದ್ದ ಹಸ್ತಪ್ರತಿಯಲ್ಲಿಯೇ ಇದು ಇರಬಹುದೆಂದು ಭಾವಿಸಬೇಕು. ಸಾಧ್ಯವಿದ್ದರೆ ಅಂತಸ್ಸಂಭಾವ್ಯತೆ ಮತ್ತು ಲೇಖನಸಂಭಾವ್ಯತೆಗಳ ಬಲದಿಂದ ಅದನ್ನು ಶುದ್ಧಗೊಳಿಸಬೇಕು. ಉದಾ:

ಶಶಲಕ್ಷ್ಮದಂತೆ ಕರೆಯಂತಕ್ಕುಂ (ಕಮಾ ೧-೯೮)

ಕವಿರಾಜಮಾರ್ಗದ ೧೧೦, ೧೭೫, ೧೨೫, ೨೮೮ ಈ ಎಲ್ಲ ಹಸ್ತಪ್ರತಿಗಳಲ್ಲಿ ಮೇಲಣ ದೋಷಪೂರಿತ ಪಾಠಗಳಿವೆ. ಈ ದೋಷ ಆಕಸ್ಮಿಕವಾಗಿರದೆ ಈ ಎರಡೂ ಕುಟುಂಬ (೧೧೦, ೧೭೫ ಮತ್ತು ೧೨೫, ೨೮೮) ಗಳಿಗೆ ಮೂಲವಾಗಿದ್ದ ಮಾತೃಕೆಯಲ್ಲಿಯೇ ಇದ್ದಿರಬೇಕು. ಉಭಯ ಸಂಭಾವ್ಯತೆಯ ಬಲದಿಂದ ಇವುಗಳನ್ನು 'ಶಶಲಕ್ಷ್ಮದಂತೆ ಕ[ಱೆ]ಯಂ ತಕು[ೃ]ಂ' ಎಂದು ತಿದ್ದಿಕೊಳ್ಳಬಹುದು.

೩. ಬೇರೆಬೇರೆ ಪರಂಪರೆಗಳಿಗೆ ಸಂಬಂಧಿಸಿದ ಎರಡು ಹಸ್ತಪ್ರತಿಗಳಲ್ಲಿ ಭಿನ್ನ ಮತ್ತು ಪ್ರಯೋಜಕ ಪಾಠಗಳಿದ್ದರೆ ಸ್ವೀಕಾರನಿರ್ಣಯ ಸಂಪಾದಕನಿಗೆ ಬಿಟ್ಟ ವಿಷಯ. ಉದಾ :

---

೫. Andhrapradesh Govt. Archaeological Series IX No. 23.

ಹೊಲದಲಿ ಗೂಳಿಯಂ ಹುಲಿ **ಕೊಂದೊಲಾಯಿತ್ತು** [ಬಪು ೧೭-೭೦]
(ಕೊಂದ ತೆರನಾಯ್ತು, ಕೊಂದವೋಲಾಯ್ತು)

ನೃಪ ಚಿತ್ತವೃತ್ತಿ **ಸಂಚಲ**ಮದರಿಂದಮೋಲಗಿಸಿ ಬಾಬ್ವುದೆ ಕಷ್ಟಮಿಳಾಧಿ
ನಾಥರಂ [ಪಂಭಾ ೧೨-೯೨] (ಚಂ)

ಹಡಿಕೆಗೆ ಮಚ್ಚಿದ ಸೊಣಗ ಅಮೃತದ **ರುಚಿಯ** ಬಲ್ಲುದೆ [ಬವ ೩೧೩] (ಸವಿ)

ಪಡಲ್ವಟ್ಟುವು ಕಾಳಿಂಗರಾಜ **ಸಮರ**ಗಜಂಗಳ್ [ಗದಾ ೩-೪] (ಸಮದ)

ಕೆಯ್ಮುಗಿದು ಬೇಡಿದನಂಧನೃಪಾಲ ಪುತ್ರನಂ [ಗದಾ ೩-೮೫] (ಕಾಲ್ವಿಡಿದು)

ಶರ**ಸಂಧಾನ**ಮನನ್ಯ ಸೈನ್ಯದೊಡಲೊಳ್ [ಗದಾ ೪-೫೧] (ಸಂದೋಹ)

ಮುಂ ತೆಗೆವ **ದಕ್ಷಿಣಮುಷ್ಟಿಯೆ** ಕರ್ಣಮೂಲದೊಳ್ [ಗದಾ ೪-೧೦]
(ಮುಷ್ಟಿಯೆ ದಕ್ಷಿಣ)

ಪೊಸಜವ್ವನಮಂ ಸ್ವದಾರ **ಸಂತೋಷದೆ** [ಗದಾ ೫-೨೨] (ಸಂಭೋಗಕೆ) ಹುತ್ತಿನೊಳಗಣ
ಹೊಳ್ಳು ಹಾವಿಂಗೆತ್ತ ಹೋದೊಡೆ **ಸುಸರ.**
[ಪ್ರಲೀ ೨೧-೨೮] (ಸಸಿನ)

ಇವುಗಳಲ್ಲಿ ಯಾವುದನ್ನಿಟ್ಟುಕೊಂಡರೂ ಅಷ್ಟೇ. ಅರ್ಥ, ಛಂದ ಯಾವುದೇ ದೃಷ್ಟಿಯಿಂದ ಹಾನಿಯಿಲ್ಲ.

೪. ಬೇರೆಬೇರೆ ಪರಂಪರೆಗಳಿಗೆ ಸಂಬಂಧಿಸಿದ ಎರಡು ಹಸ್ತಪ್ರತಿಗಳಲ್ಲಿ ಭಿನ್ನ ಮತ್ತು ಅಪ್ರಯೋಜಕ ಪಾಠಗಳಿದ್ದರೆ, ಆ ಆ ಕುಟುಂಬಗಳ ಮಾತೃಕೆಯಲ್ಲಿಯೇ ಈ ವಿಶಿಷ್ಟ ದೋಷಗಳಿವೆಯೆಂದು ಭಾವಿಸಿ, ಸಾಧ್ಯವಿದ್ದರೆ ಅಂತಸ್ಸಂಭಾವ್ಯತೆ ಮತ್ತು ಲೇಖನ ಸಂಭಾವ್ಯತೆಗಳ ಬಲದಿಂದ ಅವನ್ನು ಶುದ್ಧಗೊಳಿಸಬೇಕು. ಉದಾ:[೭]

I ನರೇಂದ್ರನಿಂ ಧರಣೀನಾಥ (ಹಪ್ರ. ೧೧೦)
ನರೇಂದ್ರನಿಂ ಧರಣೀನಾಥ (ಹಪ್ರ. ೧೭೫)

II ನರೇಂದ್ರನಿಂ ಧರಣಿ ಸನಾಥ (ಹಪ್ರ. ೧೨೫)
ನರೇಂದ್ರನಿಂ ಧರಣಿ ಸನಾಥ (ಹಪ್ರ ೨೮೮)

ಇಲ್ಲಿ ಅರ್ಥ ಸ್ಫುಟಗೊಳ್ಳದ ಕಾರಣ ಎರಡೂ ಕುಟುಂಬಗಳ ಪಾಠ ಅಪ್ರಯೋಜಕ. ಈಗ ಇವುಗಳ ಮಾತೃಕೆಗಳಲ್ಲಿಯೇ ದೋಷವಿದೆಯೆಂದು ಭಾವಿಸಿ, ಉಭಯ ಸಂಭಾವ್ಯತೆಯ ಬಲದಿಂದ 'ನರೇಂದ್ರನಿಂ ಧರಣಿ ಸನಾ[ಥೆ]' ಎಂದು ತಿದ್ದಿಕೊಳ್ಳಬಹುದು.

---

೭. ಕಮಾ ೧-೧೧೫.

೫. ಬೇರೆಬೇರೆ ಪರಂಪರೆಗೆ ಸಂಬಂಧಿಸಿದ ಎರಡೂ ಹಸ್ತಪ್ರತಿಗಳಲ್ಲಿ ಒಂದು ಪ್ರಯೋಜಕ, ಇನ್ನೊಂದು ಅಪ್ರಯೋಜಕವೆಂದು ಖಚಿತವಾದರೆ ಪ್ರಯೋಜಕವನ್ನು ಸ್ವೀಕರಿಸಿ ಅಪ್ರಯೋಜಕವನ್ನು ವರ್ಜಿಸಬೇಕು. ಉದಾ:[೮]

I ಪಥಿತಾಂಗನಾ ಜನಮನಂಜಿಸುವಂತಿರೆ (ಹಪ್ರ. ೧೧೦)

ಪಥಿತಾಂಗನಾ ಜನಮನಂಜಿಸುವಂತಿರೆ (ಹಪ್ರ. ೧೬೫)

II ಪಥಿಕಾಂಗನಾ ಜನಮನಂಜಿಸುವಂತಿರೆ (ಹಪ್ರ. ೧೨೫)

ಪಥಿಕಾಂಗನಾ ಜನಮನಂಜಿಸುವಂತಿರೆ (ಹಪ್ರ ೨೮೮)

ಈ ಎರಡರಲ್ಲಿ ಒಂದನೆಯ ಪೀಳಿಗೆಯದು ಅಯೋಗ್ಯಪಾಠವೆಂದೂ, ಎರಡನೆಯ ಪೀಳಿಗೆಯದು ಯೋಗ್ಯಪಾಠವೆಂದೂ ಸಹಜ ತಿಳಿಯುವುದರಿಂದ, ಯೋಗ್ಯಪಾಠವನ್ನು ಸ್ವೀಕರಿಸಿ ಅಯೋಗ್ಯವನ್ನು ವರ್ಜಿಸಬಹುದು.

೬. ಬೇರೆಬೇರೆ ಪರಂಪರೆಗೆ ಸಂಬಂಧಿಸಿದ ಎರಡಕ್ಕಿಂತ ಹೆಚ್ಚು ಪ್ರತಿಗಳಿದ್ದು ಭಿನ್ನಪಾಠಗಳೆಲ್ಲ ಸ್ವೀಕಾರಯೋಗ್ಯವಾಗಿದ್ದರೆ, ಸಾಮಾನ್ಯವಾಗಿ ಅವುಗಳ ಬಹುಮತದ ಆಧಾರದ ಮೇಲೆ ಪಾಠವನ್ನು ಅಂಗೀಕರಿಸಬೇಕು. ಉದಾ:

'ಉದಾರಮಹೇಶ್ವರನೀಗೆ **ಭೋಗಮಂ**' [ಪಂಭಾ ೧–೨] (ರಾಗ. ಘ ಪ್ರತಿ)

ಇಲ್ಲಿ ಭೋಗ, ರಾಗ ಎರಡೂ ಗ್ರಾಹ್ಯ, ಆದರೆ ಪಂಪಭಾರತಕ್ಕೆ ಬಳಸಿದ ಘ ಪ್ರತಿ ಬಿಟ್ಟು, ಖ ಗ ಘs ಪ್ರತಿಗಳಲ್ಲಿ "ಭೋಗ"ವಿರುವುದರಿಂದ ಬಹುಪ್ರತಿಗಳಲ್ಲಿಯ ಪಾಠವನ್ನು ಸ್ವೀಕರಿಸಲಾಗಿದೆ.

೭. ಹಸ್ತಪ್ರತಿಯಲ್ಲಿಯ ಸುಲಭ ಪದಗಳನ್ನು ಕಠಿಣಗೊಳಿಸಿದುದು ಇಲ್ಲವೆನ್ನುವಷ್ಟು ಕಡಿಮೆ. ಮೂಲದ ಕಠಿಣ ಪದಗಳನ್ನು ಸುಲಭಗೊಳಿಸುವುದು ತೀರ ಸಹಜ. ಈ ವಿಧಾನ ಅಪರಿಚಿತವಾದ ದೇಶಿ, ಗಹನವಾದ ಮಾರ್ಗ ಪದಗಳಿಗೆ ಪ್ರತಿಯಾಗಿ ತಪ್ಪು ಅಥವಾ ಸರಿ ಅರ್ಥದ ಸುಲಭಪದಗಳನ್ನು ಬಳಸುವಲ್ಲಿ ಕಂಡುಬರುತ್ತದೆ. ದೇಶೀ ಪದಗಳಿಗೆ ತಪ್ಪು ಅರ್ಥ ಬರೆದುದಕ್ಕೆ ಉದಾ :

ಉಪಾಧ್ಯಾಯಂಗೆ ಕಳಮೆಯ ಕೂಳುಂ ತುಪ್ಪಮುಂ

ತೊವೆಯುಮನುಣಲ್ಕೊಟ್ಟು [ವಡ್ಡಾ ೬೫] (ತೋಯ)

ಬಂಡಿಯ **ಮುಂಕಣಿ**ಯಂ ಪಿಡಿದು [ನಂಬಿ] (ಮುಂದಂ)

ಇದಿರುತ್ತರವೇಕೆ **ಸಿಂಬಕಂ**ಗೆ [ಬವ ೪೭೭] (ಶುನಕಂ)

ನಡೆವರೆಡಹದೆ **ಬರುಬ**ರೆಡಹುವರೆ [ಹಕಾ ೧–೨೩] (ಬರೆವ)

---

೮. ಕಮಾ ೧–೧೨೪.

ಕೂಡಲಸಂಗನ ಶರಣರ ಮನೆಯ ಧರ್ಮದ **ಕವಿಲೆಯಾನಯ್ಯಾ**

[ಬವ ೮೫] (ಕಾವಲೆ)

ಕಪ್ಪಡಿ ವೇಷದಿಂದಾನು ಬಂದಾಡುವೆ [ಬವ ೩೪೧] (ಕಪಟ)

ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ **ಏಡಿಸಿ** ಕಾಡಿತ್ತು ಶಿವನ ಡಂಗುರ

[ಬವ ೨೩೪] (ವೇಧಿಸಿ)

ಎನ್ನ ಕರಸ್ಥಲಕ್ಕೆ ಬಂದು **ಚುಳುಕಾದಿರಯ್ಯಾ** [ಬವ ೭೪೩] (ಸೂಕ್ಷ್ಮವಾದೆಯಯ್ಯಾ)

ಗುಡ್ಡಿ ಹಸು ಬಿಡೆ ಕರದ ಹಾಲು ಕಹಿಯಪ್ಪುದೇ [ಹಕಾ ೧-೨೧] (ಗೊಡ್ಡಿ)

ಇಲ್ಲಿ ತೊವೆ, ಮುಂಕಣಿ, ಸಿಂಬಕ, ಬರುಬ, ಕವಿಲೆ, ಕಪ್ಪಡಿ, ಏಡಿಸಿ, ಚುಳುಕ, ಗುಡ್ಡಿ ಅಚ್ಚ ದೇಸೀ ಪದಗಳು. ಅರ್ಥ ತಿಳಿಯದ ಮೂಲದ ಇವುಗಳನ್ನು ಸರಳಗೊಳಿಸಲು ಹೋಗಿ ತಪ್ಪು ಅರ್ಥದ ಪದಗಳನ್ನು ಹುಟ್ಟಿಸಿದರು. ಇನ್ನು ದೇಶೀಪದಗಳಿಗೆ ಸರಿ ಅರ್ಥ ಬರೆದುದಕ್ಕೆ ಉದಾ :

ಸಂಗನ ಶರಣರಿಗೆ ಆನು ಸರಿಯೆಂದು **ಗಳಹ**ಲುಬಹುದೆ [ಬವ ೩೨೮] (ಹೇಳ)

ಬಲ್ಲವರೊಡನೆ ಸಂಗವ ಮಾಡಿದಡೆ ಮೊಸರ **ಹೊಸೆದು** ಬೆಣ್ಣೆಯ ತೆಗೆದು ಕೊಂಬಂತೆ

[ಅಕ್ಕ ೮೭] (ಕಡೆದು)

ಹರೆಯ **ಹೊಯಿಸಿ** ಕುರುಹ ಪೂಜಿಸುವರ ಮೆಚ್ಚ ಕೂಡಲಸಂಗಮದೇವ

[ಬವ೨೦೬] (ಬಾರಿಸಿ)

ತಂದೆಯ **ಮರಲುಂದಿದಲ್ಲಿಗೆ**ವೋಗಿ [ವಡ್ಡಾ ೧೭] (ಪಟ್ಟಿರ್ದಲ್ಲಿಗೆ)

ಕೊಂತಿ ಬೇಡೆ **ಬೆಗಡದೆ** ಕೊಟ್ಟೆ ಹುರಿಗಣೆಯಂ [ಗದಾ ೫-೨೩] (ಬೆಚ್ಚದೆ)

ಶ್ರೀಗಂಧದ ಮರನ **ತರಿದು** ಬೇವಿಂಗೆ ಅಡೆಯನಿಕ್ಕುವರೆ [ಬವ ೫೯೩] (ಕಡಿದು)

ನಿಮ್ಮ **ಮಂಡೆಗೆ** ಹೂವ ತಹೆನಲ್ಲದೆ ಹುಲ್ಲು ತಾರೆನು [ಅಕ್ಕ ೩೨೧] (ತಲೆಗೆ)

ಇಲ್ಲಿ ಗಳುಹು, ಹೊಸೆ, ಹೊಯಿಸು, ಮರಲುಂದು, ಬೆಗಡು, ತರಿ, ಮಂಡೆ ಅಚ್ಚ ದೇಸೀ ಪದಗಳು, ಕಠಿಣ ಅರ್ಥದ ಮೂಲದ ಇವುಗಳಿಗೆ ಪ್ರತಿಯಾಗಿ ಸರಿ ಅರ್ಥದ ಸರಳ ಪದಗಳನ್ನು ಬಳಸಿರುವರು. ಇನ್ನು ಮಾರ್ಗಪದಗಳಿಗೆ ತಪ್ಪು ಅರ್ಥ ಬರೆದುದಕ್ಕೆ ಉದಾ:

ಜಲವೊಂದೆ **ಶೌಚಾಚಮನಕ್ಕೆ** [ಬವ ೮೭೮] (ಶೌಚಮಜ್ಜನಕ್ಕೆ)

ಘನಗಂಭೀರವಾರಿಧಿಯೊಳಗೆ ತೋರುವ **ವೀಚಿಗಳು** ಆ ವಾರಿಧಿಯ ಬಿಟ್ಟು

ತೋರಬಲ್ಲವೆ [ಬವ ೧೨೧೭] (ವಿಚಾರಂಗಳು, ವಿಕಾರಂಗಳು)

ಎನ್ನ **ವಾಮಕ್ಷೇಮ** ನಿಮ್ಮದಯ್ಯಾ [ಬವ ೬೦] (ಯೋಗ)

ಇಲ್ಲಿ ಆಚಮನ, ವೀಚಿ, ವಾಮ ಗಹನವಾದ ಮಾರ್ಗಪದಗಳು. ಅರ್ಥ ತಿಳಿಯದ ಮೂಲದ ಇವುಗಳನ್ನು ಸರಳಗೊಳಿಸಲು ಹೋಗಿ ತಪ್ಪು ಅರ್ಥದ ಪದಗಳನ್ನು ಹುಟ್ಟಿಸಿದರು. ಇನ್ನು ಮಾರ್ಗ ಪದಗಳಿಗೆ ಸರಿ ಅರ್ಥ ಬರೆದುದಕ್ಕೆ ಉದಾ:

ಮರವೆಯಿಂದ ದಕ್ಷ **ಶಿರವ** ನೀಗಿ ಕುರಿದಲೆಯಾದುದನರಿಯಿರೆ[ಬವ ೧೦೮೫] (ತಲೆಯ)

ಆಡಿ ಹುಸಿಯೆನೆನ್ನ **ಜಿಹ್ವೆ**ಯಲ್ಲಿ [ಬವ ೭೫೬] (ನಾಲಗೆ)

ದರಹಸಿತವದನಾರವಿಂದನಾಗಿ ದಶಶತಕರತನೂಜನಿಂತೆಂದಂ

[ಪಂಭಾ ೧೨-೧೭೬ ಗ] (ಮುಗುಳ್ನಗೆ ನಕ್ಕು)

ಶಿರದ ಲಿಖಿತವ ಕಂಡು ಮರುಳ ತಂಡಗಳು ಓದಿ ನೋಡಲು।

[ಬವ ೫೩೭] (ಹಣೆಯ ಬರಹವ)

ಬೇನೆಯರಿಯದ ನೀರಸರನೇಕೆ ಪುಟ್ಟಿಸಿದ**ನಬುಜಭವನು**।

[ಸೋಚಾ ೧-೧೪] (ನೋ ಬೊಮ್ಮನು)

ಓಹಿಲನ ಮೆರೆದ ಸೌರಾಷ್ಟ್ರ **ಮಂಡಲ**ದಲ್ಲಿ [ಬವ ೬೮೩] (ದೇಶ)

ಇಲ್ಲಿ ಶಿರ, ಜಿಹ್ವೆ, ದರಹಸಿತವದನಾರವಿಂದನಾಗಿ, ಶಿರದ ಲಿಖಿತ, ಅಬುಜಭವ, ಮಂಡಲ ಗಹನವಾದ ಮಾರ್ಗಪದಗಳು. ಕಠಿಣ ಅರ್ಥದ ಮೂಲದ ಇವುಗಳಿಗೆ ಬದಲು ಸರಳ ಅರ್ಥದ ಪದಗಳನ್ನು ಬಳಸಿರುವರು. ಈ ವರೆಗಣ ವಿವೇಚನೆಯಿಂದ ಸುಲಭ ಪಾಠಕ್ಕಿಂತ ಕಠಿಣ ಪಾಠ ಸ್ವೀಕಾರಯೋಗ್ಯವೆಂದು ತಿಳಿದುಬರುತ್ತದೆ.

೮. ಭಿನ್ನ ಪರಂಪರೆಯ ಹಸ್ತಪ್ರತಿಗಳಲ್ಲಿ ಪ್ರಾಚೀನತಮವಾದುದು ಮೂಲಕ್ಕೆ ಸಮೀಪವೆಂದು ಭಾವಿಸಿ ಅದರ ಪಾಠಗಳಿಗೆ ಮನ್ನಣೆ ಕೊಡಬೇಕು. ಉದಾ:

ಚೆನ್ನಬಸವಪುರಾಣದ ಸಂಸ್ಕರಣಕಾರ್ಯಕ್ಕೆ ಬಳಸಿಕೊಂಡ ೧೦ ಪ್ರತಿಗಳಲ್ಲಿ (೫ ಅಚ್ಚಿನ ಪ್ರತಿ. ೫ ಕೈಬರಹದ ಕಾಗದ ಪ್ರತಿ) ಒಂದಾದ 'ಪ' ಪ್ರತಿಯನ್ನು ಕುರಿತು "ಇದು ಕಾಗದದ ಮೇಲಿನ ಪ್ರತಿಯಾದರೂ ಇದನ್ನು ಬರೆದ ಕಾಲವು ಶಾಲಿವಾಹನಶಕ ೧೫೩೨ (ಕ್ರಿ.ಶ. ೧೬೧೦) ಎಂದರೆ ಕಾವ್ಯ ರಚನೆಯಾದ ೨೫ನೆಯ ವರ್ಷದಲ್ಲಿ. ಈ ಕಾರಣದಿಂದ ಇದನ್ನೇ ಮುಖ್ಯಾಧಾರವಿಟ್ಟುಕೊಂಡು ಗ್ರಂಥ ಶೋಧನೆಯನ್ನು ಮಾಡಲಾಗಿದೆ." (ಪ್ರಸ್ತಾವನೆ ೧೬) ಎಂಬ ಸಂಪಾದಕರ ಮಾತನ್ನು ಇಲ್ಲಿ ಉದಾಹರಣೆಗಾಗಿ ಕೊಡಬಹುದು.

ಹೀಗೆ ಸಂಕಲಿತ ಪಾಠಗಳಲ್ಲಿಯ ಸತ್ಯಪಾಠವನ್ನು ಗುರುತಿಸುವ ವಿಧಾನಗಳನ್ನು ಅರಿತ ತರುವಾಯ, ಸಂಪಾದಕ ನಾಲ್ಕು ಮಾರ್ಗಗಳಲ್ಲಿ ಕಾರ್ಯಪ್ರವೃತ್ತನಾಗಬೇಕಾಗುತ್ತದೆ.

೧. ಸ್ವೀಕರಣ (Acceptance)

೨. ವರ್ಜನ (Rejection)

೩. ಸಂದೇಹ (Doubt)

೪. ಪರಿಷ್ಕರಣ (Alteration)

ಕವಿಯ ಕೈಯಿಂದ ಇಳಿದುಬಂದುದು ಎಂದು ಒಪ್ಪಿಕೊಳ್ಳುವ ಪಾಠ ಸ್ವೀಕರಣ. ಕವಿಯ ಕೈಯಿಂದ ಇಳಿದುಬಂದುದಾಗಿರದೆ ಸಹೃದಯ ಮತ್ತು ಲಿಪಿಕಾರರ ಕೈವಾಡದಿಂದಾದುದು ಎಂದು ಕೈಬಿಡುವ ಪಾಠ ವರ್ಜನ. ಇವುಗಳಲ್ಲಿ ಒಂದು ಸತ್ಯ, ಇನ್ನೊಂದು ಅಸತ್ಯ. ಈ ಸತ್ಯ-ಅಸತ್ಯಗಳ ಮಧ್ಯ ಜೋಲಿ ಹೊಡೆಯುವ ಪಾಠ ಸಂದೇಹ. ಒಂದು ಸಂದೇಹ ಪಾಠವನ್ನು ಆವಶ್ಯಕ ತಿದ್ದುಪಡಿಯೊಂದಿಗೆ ಸ್ವೀಕರಿಸುವುದು ಪರಿಷ್ಕರಣ. ಇವುಗಳಿಗೆ ಉದಾಹರಣೆ ನೋಡಬಹುದು.

ಸ್ವೀಕರಣ ಮತ್ತು ವರ್ಜನ : ಇವು ಪರಸ್ಪರ ವಿರೋಧಿಗಳು. ಸ್ವೀಕರಣ ವರ್ಜನಕ್ಕೆ ಕಾರಣವಾದರೆ, ವರ್ಜನ ಸ್ವೀಕರಣಕ್ಕೆ ಕಾರಣವಾಗುವುದರಿಂದ ಇವು ಒಂದನ್ನೊಂದು ಪೋಷಿಸುತ್ತವೆ. ಲಭ್ಯವಿರುವ ಪಾಠಗಳಲ್ಲಿಯೇ ನಡೆಯುವ ಈ ಕ್ರಿಯೆಯಲ್ಲಿ ಒಂದು ಸ್ವೀಕರಣ ಪಾಠ, ಮಿಕ್ಕುವು ವರ್ಜನ ಪಾಠಗಳು. ಇಲ್ಲಿ ಆಯ್ಕೆ ಮಾತ್ರ ಮುಖ್ಯ. ತಿದ್ದುಪಡಿಗೆ ಅವಕಾಶವಿಲ್ಲ.

ಮಾನಸಿಕೆಯ ದೊರೆಗಿಡೆ **ನೀಂ** ।
ಮಾನಸನೆನೆ ನೀರೊಳೆಲವೊ ನೀನುಂ ಮೀನೆಂ ।
ಬೀ ನೆವದಿರ್ದೆಯಿದೇನಭಿ ।
ಮಾನದ ಕಲಿತನದ ಪರಮಪದಮೆಯ್ದಿದೆಯೋ॥[೯] (ನೀರ್ವಾನಿಸ)

ಈ ಪದ್ಯದ ಪ್ರತಿಯೊಂದು ಪದಗಳ ಅರ್ಥ ಸ್ಪಷ್ಟವಿದ್ದರೂ ಪೂರ್ವಾರ್ಧದ ಒಟ್ಟು ಅರ್ಥ ಅಸ್ಪಷ್ಟವೆನಿಸುತ್ತದೆ. ನೀಂ-ನೀರ್‌ಗಳಲ್ಲಿ ಲೇಖಸಂಭಾವ್ಯತೆಯಿರುವುದನ್ನು ಗಮನಿಸಿ, ಅಡಿಪಾಠ ನೀರ್ವಾನಿಸವನ್ನು ಸ್ವೀಕರಿಸಿದರೆ "ಗೌರವ ಚ್ಯುತಿಗೊಳ್ಳುವ ರೀತಿಯಲ್ಲಿ, ನೀರಮನುಷ್ಯನೆಂಬಂತೆ, ನೀನು ನೀರೊಳಗೆ ಮೀನಿನ ಹಾಗೆ ಇರುವಿ...." ಎಂದು ಮುಂತಾಗಿ ಯೋಗ್ಯ ಅರ್ಥ ಹೊರಡುತ್ತದೆ. ಆದುದರಿಂದ ಈಗ 'ನೀರ್ವಾನಿಸ', ಸ್ವೀಕರಣವೆನಿಸಿ, 'ನೀಂ ಮಾನಸ' ವರ್ಜನವೆನಿಸುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆ:

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣಾ
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ
ಅಘಟಿತ ಘಟಿತರು ವಿಪರೀತ ಚರಿತರು,
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ.[೧೦] (ಸೆಳೆ, ಬೇಡಿ)

---

೯. ಪಂಭಾ ೧೩-೭೯.
೧೦. ಬವ ೪೩೪.

ಇಲ್ಲಿ ಸೀಳಿ, ಸೆಳೆ, ಬೇಡಿ ಎಂಬ ಪಾಠಗಳಿವೆ. 'ಭಕ್ತಿ ಪರೀಕ್ಷೆಯ' ಹಿನ್ನೆಲೆಯಲ್ಲಿ ಈ ಮೂರರಲ್ಲಿ ಬೇಕಾದ ಒಂದು ಪಾಠ ಸರಿಹೊಂದಬಹುದಾದರೂ ಜೇಡರದಾಸಿಮಯ್ಯನ ವಸ್ತ್ರದಾನ ಪ್ರಸಂಗವನ್ನು ಉಲ್ಲೇಖಿಸುವ 'ದಾಸನ ವಸ್ತ್ರವ ಬೇಡಿದಾತನೀ ದೇವ' 'ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ'[೧೧] ಎಂಬ ಬಸವಣ್ಣನವರ ಬೇರೆ ವಚನವಾಕ್ಯಗಳನ್ನು ಗಮನಿಸಿದಾಗ, 'ಬೇಡಿ' ಎಂಬುದೇ ಯೋಗ್ಯಪಾಠವೆನಿಸುತ್ತದೆ. ಹಾಗಿದ್ದರೆ ಸೆಳೆ, ಸೀಳಿ ಎಂಬ ಪಾಠಗಳೇಕೆ ಹುಟ್ಟಿಕೊಂಡವು? ಎಂಬ ಪ್ರಶ್ನೆ ಹುಟ್ಟುತ್ತದೆ, ಇದರ ನಿವಾರಣೆಗೆ ಜೇಡರದಾಸಿಮಯ್ಯನ "ವಸ್ತ್ರಪವಾಡ"ದ ಮೂಲಘಟನೆಯನ್ನು ಅರಿಯಬೇಕಾಗುತ್ತದೆ. ಜೇಡರದಾಸಿಮಯ್ಯ ಒಂದು ಅಮೂಲ್ಯ ವಸ್ತ್ರವನ್ನು ನೆಯ್ದು ಮಾರಲು ಸಂತೆಗೆ ಹೋಗುತ್ತಾನೆ. ಸಾವಿರ ಹೊನ್ನಿಗೆ ಕೇಳಿದರೂ ಕೊಡದೆ, ಜಂಗಮರೂಪಿ ಶಿವ ಬಂದು ಕೇಳಿದರೆ ಹಣವಿಲ್ಲದೇ ಸಂತೋಷದಿಂದ ಕೊಟ್ಟ. ಪಡೆದ ಶಿವನು ಉಟ್ಟಿದ್ದರೆ ಭಕ್ತನಿಗೆ ತೃಪ್ತಿ ತುಂಬಿ ಬರುತ್ತಿತ್ತು. ಇದಕ್ಕೆ ಬದಲು ಪಡೆದದ್ದೇ ತಡ, ಎದುರಿನಲ್ಲಿಯೇ ಶಿವ ಅದನ್ನು ಹರಿದು ಹಾಕಿದ. ಸೀಳಿ ಸೀಳಿ ಒಗೆದ. ಇದನ್ನು ಕಂಡ ದಾಸಿಮಯ್ಯ ಚಿತ್ತಸಮತೆಯನ್ನು ಕಳೆದುಕೊಳ್ಳಲಿಲ್ಲ. ಇಷ್ಟು ನೆನೆದರೆ ಸಾಕು. "ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ" ಹೆಚ್ಚು ಯೋಗ್ಯಪಾಠವೆನಿಸುತ್ತದೆ. "ಹಜೆಯನೆ ದಾಸನ ವಸ್ತ್ರವ" ಎಂಬ ಬಸವಣ್ಣನವರ ಇನ್ನೊಂದು ಮಾತೂ ಇದನ್ನು ಪುಷ್ಟಿಸುತ್ತದೆ. ಆದುದರಿಂದ ಇಲ್ಲಿಯ ಮೂರು ಪಾಠಗಳಲ್ಲಿ ಸತ್ಯಪಾಠವಾದ 'ಸೀಳಿ' ಸ್ವೀಕರಣ. ಅದರ ಅಕ್ಷರಸಾದೃಶ್ಯ ಭ್ರಾಂತಿಯಿಂದ ಹುಟ್ಟಿದ ಸೆಳೆ (ಸೀಳಿ > ಸಿಳಿ > ಸೆಳೆ) ಮತ್ತು ಅರ್ಥದೃಷ್ಟಿಯಿಂದ ತಲೆಯೆತ್ತಿದ 'ಬೇಡಿ'ಗಳು ವರ್ಜನ.

ಸಂದೇಹ ಮತ್ತು ಪರಿಷ್ಕರಣ : ಆ ಕಡೆ ವರ್ಜನಕ್ಕೆ, ಈ ಕಡೆ ಸ್ವೀಕರಣಕ್ಕೆ ಮನಸ್ಸಿಲ್ಲ, ಪರಿಷ್ಕರಣಕ್ಕೂ ಸಾಧ್ಯವಿಲ್ಲವೆನಿಸಿದಾಗ ಅಂಥ ಪಾಠ ಸಂದೇಹಸ್ಥಿತಿಯಲ್ಲಿ ನಿಲ್ಲುತ್ತದೆ. ಈ ಸಂದೇಹಪಾಠವನ್ನು ವಕ್ರಕಂಸಿನಲ್ಲಿ ಪ್ರಶ್ನೆಚಿಹ್ನೆಯನ್ನಿಟ್ಟು ಸ್ವೀಕರಿಸಬೇಕು. ಉದಾ:

೧. ನುಡಿಗೆಲ್ಲಂ **ಸಲ್ಲದ** (?) ಕ ।
ನ್ನಡದೊಳ್ ಚೆತ್ತಾಣಮುಂ ಬೆದಂಡೆಯುಮೆಂದೀ ।
ಗಡಿನ ನೆಗಟ್ಟೆಯ ಕಬ್ಬದೊ ।
ಳೊಡಂಬಂಡಂ ಮಾಡಿದರ್ ಪುರಾತನ ಕವಿಗಳ್ ॥[೧೩] (ಸಕ್ಕದ)

೨. ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ।
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ ।
ತ್ಮೀಯ **ಸುಪುಷ್ಪವೃಷ್ಟಿಯ**(?)ನೊಡಂಬಡೆ ತಾಳ್ದಿಯುಮಿಂತುದಾತ್ತನಾ ।
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ॥[೧೪] (ಸುಪುಷ್ಪ ದೃಷ್ಟಿಯ)

---

೧೧. ಬವ ೧೪೭.
೧೨. ಬವ ೪೩೪.
೧೩. ಕಮಾ ೧–೩೫.
೧೪. ಪಂಭಾ ೧–೧.

೩.	ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೇ ।
ಳ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀಸಂಗಮೇ ।
ಶನ ಪುತ್ರಂ ಬಸವಯ್ಯ **ಬಂಕ(?)**ನದರಿಂ ಶಿವಮುದ್ದುದೇವಂ ಜಗ ।
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವೆಂ ।[೧೫]

ಈ ಮೂರೂ ಪದ್ಯಗಳಲ್ಲಿಯ ಸಲ್ಲದ, ಸುಪುಷ್ಪವೃಷ್ಟಿ, ಬಂಕ ಶಬ್ದಗಳ ಅರ್ಥ ಸ್ಪಷ್ಟವಾಗದ ಕಾರಣ, ಪರಿಷ್ಕರಣವೂ ಸಾಧ್ಯವಾಗದ ಕಾರಣ ಸಂದೇಹವೆಂದೇ ಭಾವಿಸಿ, ಪ್ರಶ್ನೆ ಚಿಹ್ನೆಯೊಂದಿಗೆ ಇದ್ದರೀತಿಯಲ್ಲಿಯೇ ಪ್ರಶ್ನೆಚಿಹ್ನೆಯೊಂದಿಗೆ ಇಲ್ಲಿ ಇಟ್ಟುಕೊಳ್ಳಲಾಗಿದೆ. ಸಂದೇಹವು ಒಂದರ್ಥದಲ್ಲಿ ಪಾಠಗ್ರಂಥಿಯಾಗಿದ್ದರೂ ಅಲ್ಲಿ ಜಟಿಲತೆಯ, ಅವ್ಯವಸ್ಥೆಯ ಪ್ರಮಾಣ ಹೆಚ್ಚು, ಇಲ್ಲಿ ಕಡಿಮೆ. ಅಲ್ಲಿ ಸಾಂದರ್ಭಿಕ ಅರ್ಥವೂ ಸಾಧ್ಯವಿಲ್ಲ, ಇಲ್ಲಿ ಸಾಧ್ಯವಿರಬಹುದು.

ಹಲವು ಪಾಠಗಳಿದ್ದರೂ ಅವು ನಿಷ್ಪ್ರಯೋಜಕವಾಗಿದ್ದರೆ, ಭಿನ್ನ ಪಾಠಗಳೇ ಇಲ್ಲದಿದ್ದರೆ, ಗ್ರಂಥ ತ್ರುಟಿತವಾಗಿದ್ದರೆ, ಮೂಲದಲ್ಲಿಯೇ ಪಾಠ ಕೈಬಿಟ್ಟು ಹೋಗಿದ್ದರೆ ಈ ನಾಲ್ಕು ಸಂದರ್ಭಗಳಲ್ಲಿ ನಡೆಸುವ ಕ್ರಿಯೆ ಪರಿಷ್ಕರಣ. ಇಲ್ಲಿ ಮುಖ್ಯವಾಗಿ ಅವಲಂಬಿಸಬೇಕಾದುದು ಅಂತಃಸಂಭಾವ್ಯತೆ. ಇಲ್ಲಿ ಒಂದು ಇಲ್ಲವೆ ಹಲವು ನಿಷ್ಪ್ರಯೋಜಕ ಪಾಠಗಳಿರುವಾಗ ಮಾತ್ರ ಲೇಖನ ಸಂಭಾವ್ಯತೆಯನ್ನೂ ಗಮನಿಸಬೇಕಾಗುತ್ತದೆ. ಈಗ ನಾಲ್ಕೂ ಸಂದರ್ಭಗಳಲ್ಲಿ ಜರುಗುವ ಪರಿಷ್ಕರಣಕ್ರಿಯೆಯನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಉದಾ:

**(೧)	ನಿಷ್ಪ್ರಯೋಜಕ ಪಾಠಗಳಿರುವುದು :**

ತುಱು[**ಗಳವೊಳ್**] ಪೆಣ್ಬುಯ್ಯಲೊ ।
ಳೆಱವೆಸದೊಳ್ನಂಟನೆಡಱಿಕೊಳೂರಟಿವಿನೊಳಂ ।
ತಱಿಸಂದು ಗಂಡುತನಮನೆ ।
ನೆಱಪದವಂ ಗಂಡನಲ್ಲನೆಂತುಂ ಷಂಡಂ ॥[೧೬] [ಗೊಳ್ಳಲ್, ಗಳೊಳಂ]

ಇಲ್ಲಿಯ ಎರಡೂ ಪಾಠಗಳು ಅಪ್ರಯೋಜಕವೆಂದು ಭಾವಿಸಿ, ಸಂಪಾದಕರಾದ ರಾಮಾನುಜಯ್ಯಂಗಾರ್ ಅವರು 'ತುರು[ಗಳವೊಳ್]' ಎಂಬ ಹೊಸಪಾಠವನ್ನು ಊಹಿಸಿದ್ದು, ಇವೆಲ್ಲವನ್ನೂ ಪರೀಕ್ಷಿಸಬಹುದು. ಸಂಪಾದಕರು ಊಹಿಸಿರುವ ತುಱು[ಗಳವೊಳ್] ವ್ಯಾಕರಣ ಸಮ್ಮತ ಸಪ್ತಮಿ ಪ್ರಯೋಗವಲ್ಲ, ತುಱು[ಗಳೊಳಂ] ಎಂಬುದು ಸರಿಯಾದ ಸಪ್ತಮಿ ಪ್ರಯೋಗ. ಆದರೆ ಇದು ಪೆಣ್ಬುಯ್ಯಲೊಳ್, ಎಱವೆಸದೊಳ್, ನಂಟನೆಡಱಿಕೊಳ್, ಊರಟಿವಿನೊಳ್ ಎಂಬ ಸಪ್ತಮಿ ವಿಭಕ್ತಿ ರೂಪಗಳ ಜೊತೆ ಹೊಂದಿಕೊಳ್ಳುವುದಾದರೂ, ಇಲ್ಲಿ ಪುಯ್ಯಲ್, ಬೆಸ, ಎಡಱ್, ಅಟಿವು ಎಂಬಂತಹ ಗಂಡಾಂತರ ಸೂಚಕ ಪದ ಕಂಡುಬರದ ಕಾರಣ, ಇದನ್ನೂ ಕೈಬಿಡಬೇಕಾಗುತ್ತದೆ.

೧೫.	ಚೌಡದಾನಪುರ ಶಾಸನ, ಶಿವದೇವ ವಿಜಯಂ. ಅನುಬಂಧ.
೧೬.	ಗದಾ ೨-೨೪. (೧೯೨೫, ರಾಮಾನುಜೈಯ್ಯಂಗಾರ್ ಆವೃತ್ತಿ)

ಒಟ್ಟಾರೆ ಹಸ್ತಪ್ರತಿಗಳಲ್ಲಿ ಸಿಗುವ ಎರಡು ಪಾಠಗಳೂ ಸಂಪಾದಕರು ಊಹಿಸಿದ ಮೂರನೆಯ ಪಾಠವೂ ಇಲ್ಲಿ ಅಪ್ರಯೋಜಕವೆನಿಸುತ್ತವೆ. ಇಲ್ಲಿ ತೀ.ನಂ. ಶ್ರೀ ಊಹಿಸಿದ 'ತುರು[ಗೋಳೊಳ್]' ಎಂಬ ಪಾಠ ಯೋಗ್ಯವಾದುದು. ಇದರಿಂದ 'ಕೋಳ್' (=ಸೆರೆಹಿಡಿ) ಎಂಬ ಗಂಡಾಂತರಸೂಚೀಪದ, 'ಒಳ್' ಎಂಬ ಸಪ್ತಮಿಗಳೆರಡೂ ಸಾಧ್ಯವಾಗುತ್ತವೆ. ಮೇಲಾಗಿ 'ತುರುಗೋಳ್' ಎಂಬುದನ್ನು 'ಗೋಗ್ರಹಣ' ಎಂಬ ಅರ್ಥದಲ್ಲಿ ಪ್ರಾಚೀನ ಕರ್ನಾಟಕದ ಅನೇಕ ಕಾವ್ಯ, ಶಾಸನಗಳು ಬಳಸಿವೆ. ಹಲವು ಪಾಠಗಳಿದ್ದರೂ ಅವು ನಿಷ್ಪ್ರಯೋಜಕವೆನಿಸಿದಾಗ ಮಾಡಿದ ಪರಿಷ್ಕರಣವಿದು. ಇನ್ನೊಂದು ಉದಾಹರಣೆ :

ಕಡೆಗೆ ಬಂದುದು ಬರಲಿ ಮುನಿವವರು ಮುನಿಗೆ ಸ ।
ತ್ತಡೆ ಸಾವೆನಲ್ಲದೆಡೆಯೊಳು ಬಿಡೆಂ ಬಿಡೆನೆಂಬ ।
ಮಡದಿಯೊಡನೊಲಿದೆಂದನೊಂದರಿಂದಹುದೊಂದರಿಂದಾಗದೆಂತೆಂಬೊಡೆ ।
ಮೃಡಭಕ್ತೆಯಾಗೆಂದುದಂ ಮಾಳ್ಪೆನಾಗದಿ
ರ್ದೊಡೆವೊಲ್ಲೆನೆನೆ **ಕಾಣವಾಗ** ಬಾಯಂ ತೆರೆದು ।
ಕಡಿವಾಣವಾದೊಡಾನೊಲ್ಲೆನ್ನಬಹುದೆ ಕರುಣಂ ಮಾಡಿಸೇಳೆಂದಳು ॥[೧೭]

[ಕಾರಣವಾಗೆ, ಬಾಣವಾಜಿ]

"ಶಿವದೀಕ್ಷೆ ಪಡೆದರೆ ನಿನ್ನ ಕೈ ಹಿಡಿವೆ" ಎಂದು ನುಡಿದ ಆದಯ್ಯನಿಗೆ ಪರಿಶುದ್ಧ ಪ್ರೇಮದ ಪದ್ಮಾವತಿ "ಕಾಣವಾಗ ಬಾಯಂ ತೆರೆದು ಕಡಿವಾಣವಾದೊಡಾನೊಲ್ಲೆನ್ನಬಹುದೆ?" ಎಂದು ಉತ್ತರಿಸಿದಳು. ಇಲ್ಲಿ ಸಾಂದರ್ಭಿಕ ಅರ್ಥ ಸ್ಪಷ್ಟವಿದ್ದರೂ ಪದಶಃ ಅರ್ಥ, ಸಂದೇಹ. 'ಕಾಣವಾಗ'ದೊಂದಿಗೆ 'ಕಾರಣವಾಗೆ' ಬಾಣವಾಜಿ' ಎಂಬ ಬೇರೆ ಪಾಠಗಳೂ ಅಪ್ರಯೋಜಕ. ಈ ಪ್ರಸಂಗದಲ್ಲಿ

ಕಾಣಕ್ಕೆ ತೆಗೆವ ಬಾಯ್ ಕಡಿ ।
ವಾಣಕಂ ತೆಗೆಯಬೇಡವೆ ಸುಖಂ ಬಂದಡೆ ಸ ।
ಪ್ರಾಣಿಸುವೆ ದುಃಖ ಬಂದಡೆ ।
ತ್ರಾಣಂಗೆಡುವೆಂ ಪ್ರಸನ್ನಶಂಕರಲಿಂಗಾ ॥[೧೮]

ಎಂಬ ಕಂದವನ್ನೂ, ತಮಿಳಿನಲ್ಲಿ 'ಕಾಣಂ' ಎಂದರೆ ಹುರಳಿ ಎಂಬ ದ್ವಿದಲಧಾನ್ಯವೆಂಬುದನ್ನೂ ನೆನೆಸಿಕೊಂಡರೆ, 'ಕಾಣವಾ[ಗೆ]' ಎಂಬುದು ಯೋಗ್ಯಪಾಠವೆಂದು ಸ್ಪಷ್ಟವಾಗುತ್ತದೆ. ಈಗ, ತಿನ್ನಲು ಹುರುಳಿಗೆ ಬಾಯಿ ತೆರೆದು ಕಡಿವಾಣಕ್ಕೆ ಒಲ್ಲೆನೆನ್ನಬಹುದೇ? ಎಂಬ ಸರಿಯಾದ ಅರ್ಥ ಹೊರಡುತ್ತದೆ. ಇಲ್ಲಿ ಅಕ್ಷರಸಾದೃಶ್ಯದಿಂದ ಹುಟ್ಟಿದ ದೋಷರೂಪವನ್ನು 'ಕಾಣವಾ[ಗೆ]'ಯೆಂದು ತಿದ್ದುಪಡಿಗೊಳಿಸಿದರೆ ಅಂತಸ್ಸಂಭಾವ್ಯತೆ ಮತ್ತು ಲೇಖನ ಸಂಭಾವ್ಯತೆಗಳೆರಡೂ ಸಾರ್ಥಕತೆ ಪಡೆಯುತ್ತವೆ.

---

೧೭. ಸೋಚಾ ೨-೫೯.
೧೮. ಶಂಕರದೇವರ ಕಂದ (೧೯೫೮) ಪದ್ಯ ೨೫.

(೨) **ಭಿನ್ನಪಾಠವಿಲ್ಲದಿರುವುದು :**

ವಾಕ್ಕಿನೊಳಿಲ್ಲ ಮೇಣ್ ಪರಿಚಯಂ ಬಗೆ [೧]ಮೊ[೧]ಕ್ಕಳಮಂತು[೨]ಟ[೨]ಲ್ತೆ ಗಂ ।
ಟಿಕ್ಕುವರೆಂಜಲಾದ [೩]ಬ[೩]ರುಮಾತುಗಳಂ ಪಳಗಬ್ಬಮೆಲ್ಲಮಂ ।
ಠಕ್ಕಿಸಿ ತಿಂದು ಕುಂಬಳದ ಮಾಳ್ಕೆಯ ಮಾಡುವೆನೆಂಬ ಸಾಸಿಗಂ ।
ಗಕ್ಕಟ ಪೂಣ್ದು ನಿರ್ವಹಿಪುದೇನರಿದಾ[೪]ಯ್ತೆ[೪] ಮಹಾಪ್ರಬಂಧಮಂ ॥[೧೯]
[೧–೧ ಪೊ, ೨–೨ ಮ, ೩–೩ ಬಿ, ೪–೪ ಯ್ತು]

ಕಬ್ಬಿಗಗಳ್ಳರನ್ನು, ಕೃತಿಚೋರರನ್ನು ಕುರಿತು ಹೇಳಿದ ಪದ್ಯವಿದು. ಇದಕ್ಕೆ ೪ ಎಡೆಗಳಲ್ಲಿ ಭಿನ್ನಪಾಠಗಳಿವೆ. ಸಂಪಾದಕರು ಯೋಗ್ಯಪಾಠಗಳನ್ನು ಸ್ವೀಕರಿಸಿರುವರು. ಹೀಗಿದ್ದೂ 'ಠಕ್ಕಿಸಿ ತಿಂದು ಕುಂಬಳದ ಮಾಳ್ಕೆ' ಎಂಬ ಭಾಗ ಅರ್ಥವಾಗುವುದಿಲ್ಲ. ಇದಕ್ಕೆ ಒಂದೂ ಭಿನ್ನಪಾಠವಿಲ್ಲ. ಈ ಪ್ರಸಂಗದಲ್ಲಿ ಸಂಪಾದಕರು ಅಡಿಯಲ್ಲಿ ಊಹಿಸಿದ 'ರಕ್ಕಸಿ ತಿಂದ(?)' ಪಾಠ ಗಮನಾರ್ಹವೆನಿಸಿದೆ. 'ರಕ್ಕಸಿ ತಿಂದ ಕುಂಬಳ' ಎಂಬುದಕ್ಕೆ ಒಂದು ಜಾನಪದ ನಂಬುಗೆಯ ಅರ್ಥವಿದೆ. ರಕ್ಕಸಿ ಕುಂಬಳವನ್ನು ಮೂಸಿದರೆ ಸಾಕು, ಮೇಲಣ ಕವಚ ಹಾಗೆಯೇ ಉಳಿದು, ಒಳಗಣ ತಿರುಳು ಮಾಯವಾಗುತ್ತದೆ. ಹೀಗಾಗಿ ಕೃತಿಚೌರ್ಯ ಮಾಡುವ ಕಬ್ಬಿಗಗಳ್ಳರನ್ನು ಕುರಿತು "[ರಕ್ಕ]ಸಿ ತಿಂ[ದ] ಕುಂಬಳದ ಮಾಳ್ಕೆಯ ಮಾಡುವೆನೆಂಬ ಸಾಸಿಗಂ'' ಎಂದು ಕವಿ ಸೂಚಿಸಿದುದು ಯೋಗ್ಯಪಾಠವೆನಿಸುತ್ತದೆ. ಇಲ್ಲಿ, ಪಂಪಭಾರತದ ದುರ್ಯೋಧನನು, ದೂತನಾಗಿ ಬಂದ ಕೃಷ್ಣನ ಔಪಚಾರಿಕ ಮಾತನ್ನು ಕೇಳಿ "ಪೋಜಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಳ್ಕೆವೊಲಾಗಿರೆ ಮಾಡದಿರ್ಪಿರೇ"[೨೦] ಎಂದು ಉತ್ತರಿಸಿದುದನ್ನು ನೆನೆದರೆ, ಮೇಲೆ ನಾವು ಊಹಿಸಿದ '[ರಕ್ಕ]ಸಿ ತಿಂ[ದ]' ಪಾಠಕ್ಕೆ ಬದಲು '[ರಕ್ಕ]ಸಿ [ಕಂಡ]' ಇನ್ನೂ ಯೋಗ್ಯಪಾಠವೆನಿಸುತ್ತದೆ. ಇನ್ನೊಂದು ಉದಾ :

ಬಡಬಾಗ್ನಿಯಂಡಲೆಗೆ ಮುನ್ನೊಬ್ಬ ಮುನಿ ಮೊಗೆದು ।
ಕುಡಿದ ಕೋಟಲೆಗಂಜಿ ಶಿವನ ಮೊರೆಹೊಕ್ಕು ಹಿಂ ।
ದಡಗಿದಂತೆಸೆದಿರ್ದುದೊಮ್ಮೆ ಮತ್ತೊಮ್ಮೆ ಧರೆಯರಿಯಲ್ಕೆ ತನ್ನೊಳುಳ್ಳ ।
ಜಡವೆಸರ ಸಾರತ್ವದಘತತಿಗಳೆಲ್ಲ ನೆರೆ ।
ಕಡಲು ಲಿಂಗಾರ್ಚನಂಗೈವಂತೆ ಸೌರಾಷ್ಟ್ರ ।
ದೊಡೆಯನ ನಿವಾಸದೊತ್ತಿನೊಳಬ್ಧಿ ಮೆರೆದುದಾ ಪೂಜೆಯೆಂತೆನೆ ಪೇಳ್ವೆನು ॥[೨೧]

ಸಮುದ್ರವರ್ಣನೆಯ ಈ ಷಟ್ಪದಿಯಲ್ಲಿ ಕಡಲು, ಅಬ್ಧಿಯೆಂಬ ಎರಡು ಕರ್ತೃಪದಗಳು ಬಂದು ಇದರ ಅರ್ಥ ಉತ್ತರಾರ್ಧದಲ್ಲಿ ತೊಡಕುಗೊಂಡಿದೆ. 'ಕಡಲು' ಎಂಬುದಕ್ಕೆ ಬದಲು '[ಕೆ]ಡಲು'

---

೧೯. ಸೂಕ್ತಿ ೧–೩೬.
೨೦. ಪಂಭಾ ೯–೪೮.
೨೧. ಸೋಚಾ ೧–೬೧ (೧೯೬೧).

ಎಂಬ ಪಾಠವನ್ನು ಇಟ್ಟರೆ ಅರ್ಥದ ತೊಡಕು ಮಾಯವಾಗಿ, ತನ್ನಲ್ಲಿ 'ಜಡ' ಎಂಬ ಹೆಸರಿನ ಮೂಲಕ ಸೇರಿಕೊಂಡ ಪಾಪ ಸಮೂಹವೆಲ್ಲ ಕೆಡಬೇಕೆಂದು (=[ಕೆ]ಡಲು) ಲಿಂಗಾರ್ಚನೆ ನಡೆಸಿದಂತೆ ಸೌರಾಷ್ಟ್ರ ಸೋಮನ ಒತ್ತಿನಲ್ಲಿ ಸಮುದ್ರ ಶೋಭಿಸಿತು – ಎಂದು ಮುಂತಾಗಿ ಯೋಗ್ಯ ಅರ್ಥ ಹೊರಡುತ್ತದೆ. ಉಭಯ ಸಂಭಾವ್ಯತೆಗಳೂ ಈ ಪಾಠವನ್ನು ಸಮರ್ಥಿಸುತ್ತವೆ. ಇನ್ನೂ ಒಂದು ಉದಾ :

ತಿಂದು ಗಾದೆಯ ಮೇಲೆ । ಬಂದು ಗುರು ಬೀಳ್ವಂತೆ ।
ಬಂದ ಪ್ರಸ್ತಾಪಕ್ಕೊದಗಿದರಾ ಮಾತ ।
ನೊಂದೆನ್ನಬಹುದೆ ಸರ್ವಜ್ಞ ।[೨೨]

ಒಂದೂ ಭಿನ್ನಪಾಠವಿಲ್ಲದ ತ್ರಿಪದಿಯಿದು. ಸಮಯೋಚಿತ ಮಾತಿನ ಮಹತ್ವವನ್ನು ಹೇಳುವಲ್ಲಿ ಬಳಸಿದ "ತಿಂದು ಗಾದೆಯ ಮೇಲೆ ಬಂದು ಗುರು ಬೀಳ್ವಂತೆ" ಎಂಬ ಈ ಉಪಮೆಯ ಔಚಿತ್ಯ ಸ್ಪಷ್ಟವಾಗುವುದಿಲ್ಲ. ಈಗ "ತಿಂಬ ಗಂದೆಯ ಮೇಲೆ ಉಗುರು ಬಿದ್ದಂತಾಯಿತ್ತು" (ಅವ ೧೦೬೩)* ಮೊದಲಾದ ಹಳಗನ್ನಡ ವಾಕ್ಯಗಳನ್ನು ನೆನಪಿಸಿಕೊಳ್ಳಬೇಕು. ಆಗ "ತಿಂ[ದ] [ಗಂ]ದೆಯ ಮೇಲೆ ಬಂದುಗುರು ಬೀಳ್ವಂತೆ" ಎಂಬ ಯೋಗ್ಯಪಾಠ ಸಿದ್ಧವಾಗುತ್ತದೆ.

(೩) ಪಾಠ ತ್ರುಟಿತವಾಗಿರುವುದು :

ಶ್ರವಣಬೆಳ್ಗೊಳದ ಇಂದ್ರಗಿರಿಯ ಮೇಲಣ ಬಾಹುಬಲಿ ಬಸದಿ ಸಮೀಪದ ಒಂದು ವೀರಗಲ್ಲಿನಲ್ಲಿ ಕೆಲವು ಸಾಲುಗಳು ಹೀಗಿವೆ.[೨೩]

೨೪ x xವೆತ್ತ	೩೦ ಪಲರುಂ ತೊ
೨೫ x xಯಬ್ಬೆ	೩೧ ಲಗಿದರಾಯ
೨೬ ಸಾಯಲೆನ್ದು	೩೨ ದಚಲಮ
೨೭ ಪೆಂಡತಿಯೆ	೩೩ ಸಲಬಳಗಿ
೨೮ x x ವೊತ್ತ	೩೪ ಗನ್ದಿನಿಪ್ಪ
೨೯ ಣ್ನಳೊಗಳೆ	೩೫ ಪೆಣ್ದತಿಯಿನ್

ಇದು ಸಾವಿಯಬ್ಬೆಯ ಯುದ್ಧಮರಣವನ್ನು ಸಾರುವ ವೀರಗಲ್ಲು. ಸಂದರ್ಭಬಲದಿಂದ ೨೫ನೆಯ ಚರಣದ ಎರಡು ಅಕ್ಷರಗಳನ್ನು ತುಂಬಿಕೊಂಡು '[ಸಾವಿ]ಯಬ್ಬೆ'ಯೆಂಬ ಪಾಠವನ್ನು ಸಿದ್ಧಗೊಳಿಸಬಹುದು. ಆದರೆ ಮಿಕ್ಕ ಎರಡು ಒಡಕು (ಚರಣ ೨೪, ೨೮)ಗಳನ್ನು ತುಂಬುವುದು ಇಷ್ಟು ಸುಲಭವಲ್ಲ. ಇದಕ್ಕೆ ಅಜಿತಪುರಾಣದ

---

೨೨. ರೆವರೆಂಡ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು – ಪು. ೫೫.
* ಈ ವಾಕ್ಯ ಬಸವಣ್ಣನವರ ವಚನ(೧೧೧೬)ದಲ್ಲಿಯೂ ಇದೆ.
೨೩. E. C. II. 139 ಶ್ರವಣಬೆಳಗೊಳ.

ಕಲಿಯೆನೆ ನೆಗಳ್ದಳ್ ಕಸವರ ।
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್ ॥
ಮೊಲೆವೆತ್ತ ತೈಲಜನನಿಯ ।
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ ॥[೨೪]

ಎಂಬ ಪದ್ಯವನ್ನು ನೆನಪಿಸಿಕೊಂಡರೆ ಸಾಕು, "[ಮೊಲೆ]ವೆತ್ತ [ಸಾವಿ]ಯಬ್ಬೆ ಸಾಯಲೆನ್ದು ಪೆಂಡತಿಯೆ [ಮೀಸೆ]ವೊತ್ತಣ್ಣಳೊಗಳೆ..." ಎಂದು ಮುಂತಾಗಿ ಪಾಠ ಸಿದ್ಧವಾಗುತ್ತದೆ.[೨೫] ಗ್ರಂಥಪಾತವಾದ ಸಂದರ್ಭದಲ್ಲಿ ಅಂತಸ್ಸಂಭಾವ್ಯತೆಯನ್ನು ಮಾತ್ರ ಅವಲಂಬಿಸಿ ಮಾಡಿದ ಪರಿಷ್ಕರಣವಿದು.

(೪) ಪಾಠ ಕೈಬಿಟ್ಟು ಹೋಗಿರುವುದು :

"ಆಗಳಾ ಪಿಡಿದ ಬಿಲ್ಲೆ ಕರ್ಬಿನ ಬಿಲ್ಲಾಗೆಯುಮಂಬುಗಳೆ ಪೂವಿನಂಬುಗಳಾಗೆ ಯುಮೆಚ್ಚ ಮೀನೆ [ಮೀನ]ಕೇತನಮಾಗೆಯುಂ ಸಹಜಮನೋಜನಂ ಮನೋಜನೆಂದೆ ಬಗೆದು" [ಪಂಭಾ ೩–೬೩ ಗ].

"ಅಂಗಜನೆಂಬಜಂ ಪಡೆದನಂತಾ ಕಾಂತೆಗೀ ಕಾಂ[ತಿಯಂ] [ಪಂಭಾ ೪–೭೫]. ಇಲ್ಲಿಯ ಚೌಕ ಕಂಸಿನೊಳಗಣ ಭಾಗ, ಎಲ್ಲ ಹಸ್ತಪ್ರತಿಗಳಲ್ಲಿಯೂ ಬಿಟ್ಟುಹೋಗಿದೆ. ಸಂಪಾದಕರು ಮಾಡಿದ ಈ ಊಹೆಗಳು ಯೋಗ್ಯವೆಂದು ತೋರುತ್ತದೆ. ವಿಸ್ಮೃತಿ ಕಾರಣವಾಗಿ ಮೂಲದಲ್ಲಿಯೇ ಪಾಠ ಕೈಬಿಟ್ಟು ಹೋದ ಸಂದರ್ಭದಲ್ಲಿ ಮಾಡಿದ ಪರಿಷ್ಕರಣವಿದು.

* * *

ಪರಿಷ್ಕರಣ ಕಾರ್ಯದಲ್ಲಿ ಕೆಲವು ಸಲ ಸಂಪಾದಕ ತನ್ನ ಸಂಪಾದನ ಶಕ್ತಿ ಸರ್ವಸ್ವವನ್ನೂ ಬಳಸಬೇಕಾಗುತ್ತದೆ. ಈ ಮಾತಿಗೆ ಮಾನಸೋಲ್ಲಾಸದಿಂದ ಮೂರು ಉದಾಹರಣೆ:

೧. "ಮೇದನೀ ವರ್ಣೇ ಸಲ್ಲೂಕಾದಿಯಣು ಮೀನಾಗಿ ವೇದವೊತ್ತಗೇಯ ।
ಗಿಪನೇಲತದೇಕದವನ ಪಾದಂಗಲಿಗೇಮಹಿಮೇಯಮ್" ಇದರ ಪರಿಷ್ಕೃತಪಾಠ:

ಮೇದಿನಿ ವರ್ಣಿಸಲ್ಕಾದಿಯೊಳ್ಮೀನಾಗಿ ।
ವೇದವೊತ್ತಗೆಯ ವೊತ್ತವನ । ದೇವನ ।
ಪಾದಂಗಳೀಗೆ ಮಹಿಮೆಯಂ ॥

೨. "ಗಡಣದಿ ತುರಗನ ಮೇಡೆ ಚರ್ಣಿಗಲ ದೀಪ್ತಿ ಃ
ಗೇಡೆಗೊಂಡ ತಮಗೇಶ್ಚಿಚಾರತಿಯಾ ಸೋದಿರ್ಗಗಲ ಪೋಲೇ ।
ಪಾತುಲಗಡತೋ ಲಿಹೀ ವಿಷುಕ ಇತಿಕೇನ ಮಂಗಿಸ್ವ ಸಂಸಿದ್ಧಿಯ"

---

೨೪. ಅ. ಜಿ. ಪು. ೧–೬೫.

[ಪಾಠಾಂತರ: ಗಡಣದಿಂದುರಗಣ ಪೇಡೆ ವರ್ಣಿಗಲ ದೀಪ್ತಿ। ಗೇಡೆಗೋಂಡು ತಮಗೇತ್ತುವಾರತಿಥಾ ಸೋಡಿರ್ಗಲ ಪಾಲಿಪಾಲು ಗಡಲೋಲಿರ್ದಾ ವಿಷ್ಣುಕು ಇತಿಕ್ಕೆ ನಮಗ್ಗಿಸ್ತ ಸಂಸಿದ್ದಯ] ಇದರ ಪರಿಷ್ಕೃತಪಾಠ :

ಗಡಣದಿಂದುರಗನ ।
ಪೆಡೆಮಣಿಗಳ ದೀಪ್ತಿ ।
ಗೆಡೆಗೊಂಡು ತಮಗೆತ್ತುವಾರತಿಯ ।
ಸೊಡರ್ಗಳ ಪೋಲೆ ಪಾ ।
ಲ್ಗಡಲೊಳಿರ್ದಾ ವಿಷ್ಣು ।
ಕುಡುತಿಕ್ಕೆ ನಮಗಿಷ್ಟ ಸಂಸಿದ್ಧಿಯಂ ॥

೩. "ಕೌಸ್ತುಭ ರುಚಿಯನ್ತಂನ್ಕ್ಯರದೋಲುಕೇಃಣುಗಿಲ ಪೋಣೇರೆಯ ವಿದ್ಯಾಚವಿಯಂ ನಿರೇಪತ ರಂಜಿಯ ಸುರುಗುರು ಪರಿವ್ಯಂದನೇಮಗಿಗೆ ವಿಷ್ಣುರ್ಬಡಿದಚರಮೀ" [ಪಾಠಾಂತರ: ಸಿರಿ ಕಾಸ್ತುಭ ರುಚಿಯಂತ ತ್ರೋರದೋಲು ಕೋಸ್ಫುಲಿಂಗಯೋ ರಪವಿದ್ಯಾಥವಿಯಂತಿ । ರಪರಿ ರಂಜಿಷ ಮರಗಣ ಪರದ್ಯಡಳಮಗೀಗೆ ವೇಷು ವೇಡಿದವರಮಾ] ಇದರ ಪರಿಷ್ಕೃತ ಪಾಠ :

ಸಿರಿ ಕಾಸ್ತುಭ ರುಚಿಯಂ ತ ।
ಳ್ತುರದೊಳ್ ಕಾರ್ಮುಗಿಲ ಪೊಣರ ವಿದ್ಯುಚ್ಛವಿಯಂ ॥
ತಿರೆ ಪರಿರಂಜಿಪ ಸುರಗಣ ।
ಪರಿವೃಢನೆಮಗೀಗೆ ವಿಷ್ಣು ಬೇಡಿದ ವರಮಂ ॥[೨೬]

ಇವು ಕ್ರಮವಾಗಿ ಮಾನಸೋಲ್ಲಾಸದಲ್ಲಿಯ ತ್ರಿಪದಿ, ಷಟ್ಪದಿ ಮತ್ತು ಕಂದ ಪದ್ಯಗಳು. ಕನ್ನಡ ಪದ್ಯಗಳೆಂದು ಗುರುತು ಸಿಗದ ಮಟ್ಟಿಗೆ ನಿಷ್ಪ್ರಯೋಜಕವಾಗಿರುವ ಸಂದರ್ಭದಲ್ಲಿ ಮಾಡಿದ ಪರಿಷ್ಕರಣವಿದು.

ಒಟ್ಟಿನಲ್ಲಿ ಪಾಠಪರಿಷ್ಕರಣ ಕೃತಿಕಾರನ ಅಂತಸ್ಸಂಭಾವ್ಯತೆ, ಲಿಪಿಕಾರನ ಲೇಖನಸಂಭಾವ್ಯತೆಗಳಿಂದ ಸಮರ್ಥನೆ ಪಡೆಯಬೇಕು. ಸಂಪಾದಕನ ವಿಶಾಲ ವ್ಯಾಸಂಗ, ಆಳವಾದ ಪಾಂಡಿತ್ಯ, ಪ್ರಖರಪ್ರತಿಭೆ ಏನೆಲ್ಲವುಗಳ ಫಲವಾಗಿ ಮೂಡಿ ಬರುವ ಈ ಫಲಿತಾಂಶ ಕವಿಯ ಪಾಠವೇ ಇದು ಎಂಬ ಮೆಚ್ಚುಗೆ ಗಳಿಸಬೇಕು. ಇದನ್ನು ಚೌಕ ಕಂಸಿನಲ್ಲಿ ಇಡಬೇಕು.

ಈ ಪರಿಷ್ಕರಣಕ್ಕೂ ಒಂದು ಮಿತಿಬೇಕು. ಅವಶ್ಯವಿದ್ದಲ್ಲಿ ಇದನ್ನು ಮಾಡುವುದಕ್ಕಿಂತ, ಸಾಧ್ಯವಿದ್ದಲ್ಲಿ ಮಾತ್ರ ಮಾಡಬೇಕು. ಆದರೆ

---

೨೫. ನೋಡಿರಿ, ಶ್ರವಣಬೆಳಗೊಳ ಶಾಸನದ ಮೇಲೆ ರನ್ನನ ಪ್ರಭಾವ. (ಕನು. ೩೨–೧೦).
೨೬. ಮಾನಸೋಲ್ಲಾಸದಲಿ ಛಂದಸ್ಸು – ಡಿ.ಎಲ್.ಎನ್. (ಪ್ರಕ : ೪೫–೨).

ಓಳಿಕೊಳೆ ಪೊಳೆವ ಕಣ್ಗ[ಳ್] ।

ನೀ[ಳಿ]ಮನವ[ಜಂ]ಗ[ಳೋ]ಳಿ ಕೊಳ್ಳದು[ವುಂ] ತಾ ॥

ಮೋಳಿಕೊ[ಳಲಂ]ತೆ ಗಣಿಕೆಯ ।

ರೋಳಿಯೊಳೆ ಮಡಲ್ತ ಲತೆಗಳಿರ್ಪಂತಿರ್ದರ್ ॥ [ಪಂಭಾ ೧೪-೨೩]

ಎಂಬ ಕಂದದಲ್ಲಿಯಂತೆ ಅಧಿಕ ಪರಿಷ್ಕರಣ ಕೂಡದು. "ಒಟ್ಟು ಗ್ರಂಥದಲ್ಲಿ ನಮ್ಮ ಊಹೆಯಿಂದ ಹಾಕಿರುವ ಪಾಠಗಳು ಸುಮಾರು ೬೦೦ ಇರುವವು. ಇವುಗಳಲ್ಲಿ ಅನೇಕ ಪಾಠಗಳು ಮ॥ರಾ॥ ಕಡಬದ ನಂಜುಂಡಶಾಸ್ತ್ರಿಗಳಿಂದಲೇ ಮೊದಲು ಊಹಿಸಲ್ಪಟ್ಟುವು" ಎಂಬ ಪಂಪಭಾರತದ ಉಪೋದ್ಘಾತದಲ್ಲಿಯ ಮಾತನ್ನು ಗಮನಿಸಬಹುದು. ಪರಿಷ್ಕರಣ ಇಷ್ಟು ದೂರ ಹೋದರೆ ಕೆಲವು ಸಲ ಕವಿಯನ್ನು ಕೈಬಿಟ್ಟಂತಾಗಬಹುದು. ಅದಕ್ಕಾಗಿ ಇದ್ದ ಪಾಠಗಳಲ್ಲಿಯೇ ಸುಷ್ಠವಾದುದನ್ನು ಆಯ್ದುಕೊಳ್ಳಲು ಪ್ರಯತ್ನಿಸುವುದು ವಿಹಿತ.

ಈ ಪರಿಷ್ಕರಣ ತೀರ ಊಹೆಯಿಂದ ಕೂಡಿದ್ದರೆ ಅದನ್ನು ಊಹಾತ್ಮಕ ಪರಿಷ್ಕರಣವೆಂದು ಕರೆಯುವರಾದರೂ ಪರಿಷ್ಕರಣದಲ್ಲಿಯೂ ಊಹೆಯೇ ಇರುವುದರಿಂದ ಇವೆರಡರ ಮಧ್ಯದ ಅಂತರವನ್ನು ಹೇಳುವುದು ಕಷ್ಟವಾಗುತ್ತದೆ. ಆದುದರಿಂದ ಊಹಾತ್ಮಕ ಪರಿಷ್ಕರಣವೆಂಬ ಪಾರಿಭಾಷಿಕ ಪದವನ್ನು ಇನ್ನು ಮುಂದೆ ಈ ಕ್ಷೇತ್ರದಿಂದ ಕೈಬಿಡುವುದು ಲೇಸು.

* * *

ಪರಿಷ್ಕರಣಕ್ಕೂ ನಿಲುಕದೆ ನಿಂತ ಪಾಠಕ್ಕೆ "ಪಾಠಗ್ರಂಥಿ" ಎಂದು ಹೆಸರು. ಭಿನ್ನಪಾಠಗಳು ಇದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ. ತನ್ನ ಗುಟ್ಟನ್ನು ಬಿಟ್ಟು ಕೊಡದ 'ಕಗ್ಗಂಟು' ಇದು. ಲಿಪಿಕಾರ ಮತ್ತು ಸಹೃದಯರ ಕೈಯಲ್ಲಿ ಕೆಟ್ಟು, ಮತ್ತೂ ಕೆಟ್ಟು, ಇನ್ನೂ ಕೆಟ್ಟು ನಿಂತ ದುಷ್ಟಪಾಠವಿದು. ಈ ಕಾಲದ ಸಾಧ್ಯವಿದ್ದ ಎಲ್ಲ ಆಧಾರ ಸಾಮಗ್ರಿಯನ್ನು ಬಳಸಿ, ಪರಿಷ್ಕರಣ ವಿಧಾನಗಳನ್ನೆಲ್ಲ ಅವಲಂಬಿಸಿದರೂ ಮೂಲೆ ಮುಕ್ಕಾಗದ ಕಾಡುಶಿಲೆಯಂಥ ಪಾಠವಿದು. ಇಂಥ ಕೆಲವು ಪಾಠಗ್ರಂಥಿಗಳು ಪ್ರಾಚೀನಗ್ರಂಥಗಳಲ್ಲಿ "ಎನಿತು ಕಾಲ ಕಲ್ಲು ನೀರೊಳಿದ್ದರೇನು?" ಎಂಬಂತೆ ಮಿದುಗೊಳ್ಳದೆ ನಿಂತಿವೆ. ಕವಿರಾಜಮಾರ್ಗ, ಪಂಪಭಾರತ, ಗದಾಯುದ್ಧ, ಮದನತಿಲಕ, ಛಂದೋಂಬುಧಿ, ಸೂಕ್ತಿಸುಧಾರ್ಣವ ಮೊದಲಾದ ಗ್ರಂಥಗಳಲ್ಲಿ ಈ ಗ್ರಂಥಿಗಳು ತಕ್ಕ ಪ್ರಮಾಣದಲ್ಲಿ ಸಿಗುತ್ತವೆ. ಕವಿರಾಜಮಾರ್ಗ ಮತ್ತು ಪಂಪಭಾರತಗಳಿಂದ ಉದಾ:

೧. ಪೊಡವಿಪತಿ ಗೊರವ[೧]ನೆನೆ ಬೆ[೨] ।

ಟ್ಟಿ[೩]ಡೆಯದು ವಧೆ[೪]ಕರಿಸಿ ಕಬ್ಬಿಗ[೫]ದ್ದೂರೆನೆ[೫]ಯುಂ[೬] ।

ಹಡು[೭] ವಸು[೮] ಮರ್[೯] ಸೆ[೧೦] ಟ್ಟಿಸು[೧೧] ಗೆಂ ।

ಮುಡಿಯೊಳ[೧೨] ಮಾರ್ಗೆಂದು ನುಡಿವ ಪಟಿಗನ್ನಡಮಂ ॥[೨೭]

---

೨೭. ಕಮಾ ೧-೪೯ (ಕವಿರಾಜಮಾರ್ಗದ ಹಪ್ರ. ನಂ. ೧೧೦, ೧೨೫, ೧೭೫, ೨೮೮ಗಳಿಗೆ ಕ್ರಮವಾಗಿ ಅ, ಬ, ಕ, ಡ ಎಂದು ಇಲ್ಲಿ ಸಂಕೇತ ಕೊಡಲಾಗಿದೆ).

[೧ ವ (ಡ), ೨ ಪೇ (ಡ), ೩ (ಳ್ವ), ೪ ದೇ (ಬ.ಡ), ೫–೫ ದೂರ (ಡ), ದೊಳಿ (ಬ), ೬ ಯಂ (ಡ), ೭ ಡ (ಡ), ೮ ಸ (ಡ), ೯ ರೆ (ಬ), ೧೦ ಸಿ (ಡ), ೧೧ ಟ್ಠ (ಕ), ೧೨ ಳೆ (ಡ)]

೨. ಎರಡುಂ[೧] ಪಕ್ಕಮನೆಱಗಿದ ।
ಕರಿಗ[೨][ಳ್] ಪಾ[೩][ರ್ದೆಯ್ದೆವೇಟ್ದಿ][೪] ಕೊರಲ[ಸರಂ]ಬೆ ॥
ತ್ತಿರೆ ಮುರಿವಿ[೫][ಟ್ಟೀ][೬] ಹೇಷಾ ।
ಸ್ವರಮಂ[೭] ತೋಱಿದಪುವಲ್ಲಿ ನೃಪತುರಗಂಗಳ್ ॥[೨೮]

[೧ ಬಕ್ಕ (ಗ, ಫ), ವಿಕ್ರ (ಖ), ೨ ಳ (ಸ), ೩ ಯ್ದರ್ದೆಯ ಪೋಳ್ವ (ಕ),ಯಿರ್ದೆವೆಳ್ದು (ಖ), ಯೆರ್ದೆವೆಳ್ದು (ಗ.ಫ), ೪ ವೋಲ್‌ಬಿತ್ತಿ....॥ (ಕ), ಲೊಳ್ ಕಬತ್ತಿರೆ (ಖ), ಲೊಳ್ ಕಬತ್ತಿ (ಗ), ಲೊಳ್ ಕಂಬ ॥ ತ್ತಿರೆ (ಫ), ಕೊರಲಂಲೋಳ್ ಕಂಬೆತ್ತಿರೆ (ಫS), ೫ ಟ್ಟ (ಸ), ೬ ಪಾಶಸತ್ವಂ (ಕ), ಪಾಶಾಸ್ವತಮಂ (ಖ), ಪಾಸಾಸ್ವತಮಂ (ಗ.ಫ), ಹೇಷಾರವ ಸ್ವರಮಂ (ಫS). ೭ ತೀರಿದಪುವಿಂತಿಲ್ಲಿ (ಕ), ತೋರಿದಪುವಿಲ್ಲ (ಖಗಫ), ೮ ತಿ ಚತುರಂ (ಕ)].

ವೃತ್ತದೃಷ್ಟಿಯಿಂದ ಕೆಲಮಟ್ಟಿಗೆ ಸ್ಥಿರವಾಗಿ ಉಳಿದಿದ್ದರೂ ಅರ್ಥದೃಷ್ಟಿಯಿಂದ ಹದಗೆಟ್ಟ ಗ್ರಂಥಿಗಳಿವು. ಇದಕ್ಕೆ ವಿರುದ್ಧವಾಗಿ ಅರ್ಥದೃಷ್ಟಿಯಿಂದ ಕೆಲಮಟ್ಟಿಗೆ ಸ್ಥಿರವಾಗಿ ಉಳಿದು ವೃತ್ತದೃಷ್ಟಿಯಿಂದ ರೂಪಗೆಟ್ಟ ಕೆಲವು ಗ್ರಂಥಿಗಳಿವೆ. ಗದಾಯುದ್ಧದಿಂದ ಉದಾ :

೧. ಪದ್ಯ ರಚನೆಯೊಳ್ಕಾಳಿದಾಸನುಂ
ಗದ್ಯ ರಚನೆಯೊಳ್ ಬಾಣನುಂ ಮುಂ ಕವಿಗಳಿರ್ವರುಂ ।
ನೆಗೞ್ದಿರದಱಿಂ ಸತ್ಕವಿಗಳಿರ್ವರುಮೆಮಗಭಿವಂದ್ಯರ್ ॥[೨೯]

೨. ಹಾ ! ಕುರುಕುಲ ಮೂಲಸ್ತಂಭಾ ।
ಹಾ ! ಕುರು [ನೃಪ]ಕುಲಮೃಗರಾಜಾ ।
ಹಾ ! ಕುರುನೃಪವತ್ಸಾ [ಹಾ ! ಸು]ಹೃದ್ವ್ಯಸನ ಭಂಜನಾ ।
ಹಾ ! ಕುಂಭ[ಕ] ಸಂಭವಶಿಷ್ಯಾ ।
ಹಾ ! [ಕೃಪ ಚರಣಾನತಮಕುಟಾ] ।
ಹಾ ! [ಕುಲನೃಪಪೂಜಿತ ಧೃತಮಕುಟ] ಪನ್ನಗಕೇತೂ ॥[೩೦]

ಇನ್ನು ಕೆಲವು ಸಲ ಒಂದು ಪದ್ಯ ಕೆಟ್ಟು, ಇನ್ನೊಂದು ಪದ್ಯವಾದುದಕ್ಕೂ ಉದಾಹರಣೆಗಳು ದೊರೆಯುತ್ತವೆ. ಲೋಕೋಪಕಾರದಿಂದ ಉದಾ :

---

೨೮. ಪಂಭಾ ೧೨-೧೦೭.
೨೯. ಗದಾ ೧-೯.
೩೦. ಗದಾ ೯-೨೧.

ತಿಗಡೆ ಶುಂಠಿ ಶಿವೆ ಬೆಲ್ಲವೆಂಬ ಮ ।
ರ್ದುಗಳನಕ್ಕೆ ಪುರಿದಿರ್ದ ಕಟ್ಟವ ।
ತ್ತಿಗೆಯ ಬಿತ್ತುಗಳನಕ್ಕೆ ತಿಂಗೆ ಮಾ ।
ಡುಗುಮದಾರ್ಗಮಧಿಕಂ ವಿರೇಕಮಂ ।[೩೧]

ಇದು ರಥೋದ್ಧತವೆಂಬ ಅಕ್ಷರವೃತ್ತ, ಒಂದು ಪ್ರತಿಯಲ್ಲಿ ಈ ವೃತ್ತ

ಶಿವೆ ತಿಗಡೆ ಶುಂಠಿಗಳ ಚೂ ।
ರ್ಣವ ಮಾಡಿಯೆ ಬೆಲ್ಲದಲ್ಲಿ ಮೇಲೆ ಪುರಿದಿಹ ಕ ।
ಟ್ಟವತ್ತಿಗೆಯ ಬೀಜಮಂ ತಿಂ ।
ಗೆ ವಿರೇಚನವಧಿಕಮಕ್ಕು ಚೌಂಡನಮತದಿಂ ।

ಎಂದು ಕಂದರೂಪದಲ್ಲಿ ಸಿಗುತ್ತದೆ. ನೇಮಿನಾಥಪುರಾಣದ (೮–೧೦೫) ಒಂದು ಉತ್ಪಲಮಾಲೆಯು ಚಂಪಕಮಾಲೆಯ ರೂಪದಲ್ಲಿ; ಮದನತಿಲಕದ (೮–೦೯) ಒಂದು ಚೌಪದಿಯು ಸೂಕ್ತಿಸುಧಾರ್ಣವದಲ್ಲಿ (೭–೧೦೯) ಕಂದರೂಪದಲ್ಲಿ ದೊರೆಯುವುದನ್ನು ಇಲ್ಲಿ ನೆನೆಯಬಹುದು.

ಕೆಲವು ಸಲ ಪದ್ಯವೋ ಗದ್ಯವೋ ಎಂದು ನಿರ್ಣಯಿಸಲು ಕಠಿಣವೆನಿಸುವ ಉದಾಹರಣೆಗಳೂ ಕಂಡುಬರುತ್ತವೆ. ಪಂಪಭಾರತದ (೧–೫೧ ಗ) "ವ॥ ಅದೆಂತೆನೆ–ಸ [ಮುನ್ಮಿಷ] ದ್ವಿವಿಧ ರತ್ನಮಾಲಾ ಪ್ರಭಾಭೀ[ಲಾ]ರುಣ ಜಲಪ್ಲ[ವಾ]ವಿಳವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂಬೂದ್ವೀಪದೊಳಗುಂಟು ನಾಡು ಕುರುಜಾಂಗಣ ನಾಮದಿಂ" ಎಂಬ ಭಾಗವನ್ನು ಎಲ್ಲ ಪ್ರತಿಗಳೂ 'ವಚನ' ಎಂದು ಸೂಚಿಸಿದ್ದರೆ, 'ಘ' ಪ್ರತಿ ಮಾತ್ರ 'ಪೃಥ್ವಿ' ಎಂದು ಸೂಚಿಸಿದೆ. ಅದು ಹೀಗಿರಬಹುದು :

ಅದೆಂತೆನೆ ಸ[ಮುನ್ಮಿಷ] ದ್ವಿವಿಧ ರತ್ನಮಾಲಾ ಪ್ರಭಾ ।
ಭಿದಾರುಣ ಜಲಪ್ಲ[ವಾ]ವಿಳ ವಿಳೋಳ ವೀಚೀರಯ ।
ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂ ।
[ಬುದೀವಿಯೊ]ಳಗುಂಟು ನಾಡು ಕುರುಜಾಂಗಣ[ಂ] ನಾಮದಿಂ ॥

ಕುಮುದೇಂದುವಿನ ರಾಮಾಯಣ, ಕಲ್ಯಾಣಕೀರ್ತಿಯ ಜ್ಞಾನಚಂದ್ರಾಭ್ಯುದಯಗಳು ಇಡಿ ಕೃತಿಯೇ ಛಂದೋದೃಷ್ಟಿಯಿಂದ ಪಾಠಗ್ರಂಥಿಗಳು. ಹೀಗೆ ಛಂದೋದೃಷ್ಟಿಯಿಂದ ವಿದ್ವಾಂಸರ ತಲೆ ತಿನ್ನುತ್ತಿರುವ ಕೆಲವು ಗ್ರಂಥಿಗಳು ಕನ್ನಡದಲ್ಲಿ ಉಳಿದು ನಿಂತಿವೆ. ಪ್ರಾಮಾಣಿಕವಾದ ಹಸ್ತಪ್ರತಿಗಳು ಇಲ್ಲವೆ ಹಸ್ತಪ್ರತಿಗಳ ನಕಲು ಕಾರ್ಯದ ಇತಿಹಾಸ ಲಭಿಸಿದಾಗ ಈ ಗಂಟುಗಳು ಸಡಿಲುಗೊಳ್ಳಬಹುದು. ಅಲ್ಲಿಯ ವರೆಗೆ ಇವು ಸಾಹಿತ್ಯಲೋಕದಲ್ಲಿ ನೆನೆಗುದಿಗೆ ಬಿದ್ದ ಧಾನ್ಯಗಳಾಗಿ ಉಳಿಯುತ್ತವೆ.

---

೩೧. ಲೋಕೋಪಕಾರಂ ೯–೩೫.

ಹೀಗೆ ಎತ್ತಿಕೊಂಡ ಯಾವುದೇ ಒಂದು ಪಾಠ ಸ್ವೀಕರಣ, ಸಂದೇಹ, ಪರಿಷ್ಕರಣ, ಪಾಠಗ್ರಂಥಿಗಳಲ್ಲಿ ಒಂದಾಗಿರಬಹುದು. ಇವುಗಳಿಗೆ ಬಾಹ್ಯವಾಗಿದ್ದರೆ ವರ್ಜನೆಯಾಗಿರಬಹುದು.

ಉನ್ನತ ವಿಮರ್ಶೆ :

'ಕೃತಿಸಂಪಾದನೆ'ಯು ಪಾಠವಿಮರ್ಶೆ, ಸಾಹಿತ್ಯವಿಮರ್ಶೆ ಮತ್ತು ಅನುಬಂಧ ರಚನೆಗಳನ್ನೊಳಗೊಳ್ಳುವಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತದೆ. ಈ ಮೂರನ್ನೂ ಒಳಗೊಂಡ ಕ್ರಿಯೆಯನ್ನು 'ಉನ್ನತ ವಿಮರ್ಶೆ' ಎಂದು ಕರೆಯುತ್ತಾರೆ. 'ಪಾಠವಿಮರ್ಶೆ' ವಿಭಾಗಕ್ಕೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲ ಈ ವರೆಗೆ ವಿವೇಚಿಸಿದ ನಾವು, ಈಗ ಸಾಹಿತ್ಯವಿಮರ್ಶೆ ಮತ್ತು ಅನುಬಂಧರಚನೆಗಳ ವಿವೇಚನೆಯನ್ನು ಕೈಗೆತ್ತಿಕೊಳ್ಳಬಹುದು.

"ಸಾಹಿತ್ಯವಿಮರ್ಶೆ"ಯು ಚಾರಿತ್ರಿಕ ವಿಮರ್ಶೆ, ರಸವಿಮರ್ಶೆ ಮತ್ತು ದರ್ಶನವಿಮರ್ಶೆ ಎಂದು ಮೂರು ತೆರನಾದುದು. ಇವುಗಳಲ್ಲಿ ಚಾರಿತ್ರಿಕ ವಿಮರ್ಶೆಯು ಕವಿಯ ಕಾಲ, ದೇಶ, ಪರಿಸರಗಳ ಶೋಧವಾಗಿದೆ; ಜೊತೆಗೆ ಕಾವ್ಯದಲ್ಲಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಂಶಗಳ ಅಭ್ಯಾಸವಾಗಿದೆ. ಒಬ್ಬ ಉತ್ತಮಕವಿಯ ಮೂಲಕ ಒಂದು ಯುಗ, ಒಂದು ಜನಾಂಗ ತನ್ನನ್ನು ಪ್ರಕಟಿಸಿಕೊಂಡಿರುತ್ತದೆ. ಇದನ್ನು ನೆನೆದರೆ ಕವಿಚರಿತ್ರೆ ಮತ್ತು ಕಾವ್ಯೋಕ್ತ ಚಾರಿತ್ರಿಕ-ಸಾಂಸ್ಕೃತಿಕ ಅಂಶಗಳ ಅಧ್ಯಯನದ ಅವಶ್ಯಕತೆ ವೇದ್ಯವಾಗದಿರದು. ಈ ಸತ್ಯಶೋಧನೆಯ ಪ್ರಸಂಗದಲ್ಲಿ ಸತ್ಯ ಊಹೆಯಾಗದಂತೆ, ಊಹೆ ಕಲ್ಪನೆಯಾಗದಂತೆ ಎಚ್ಚರವಹಿಸಬೇಕು. ಕವಿರಾಜಮಾರ್ಗದ "ಶ್ರೀವಿಜಯ ಕವೀಶ್ವರ ಪಂಡಿತ"ರೆಂದರೆ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ ಎಂಬ,[೩೨] ಕವಿರಾಜಮಾರ್ಗವನ್ನು 'ಶ್ರೀ' ಹೆಸರಿನ ಹೆಂಡತಿ, 'ವಿಜಯ' ಹೆಸರಿನ ಗಂಡ ಕೂಡಿ ಬರೆದರೆಂಬ[೩೩] ಹೇಳಿಕೆಗಳು ಈ ರೀತಿಯವು. ಕವಿಚರಿತ್ರೆ ಬರೆಯುವಾಗ ಇಂಥವುಗಳನ್ನು ದೂರವಿಟ್ಟಷ್ಟು ಲೇಸು.

ಇನ್ನು ಕಾವ್ಯದಲ್ಲಿಯ ಚಾರಿತ್ರಿಕ ಅಂಶಗಳನ್ನು ವಿವೇಚಿಸಿವುದೂ ವಿಮರ್ಶೆಯ ಒಂದು ಅಂಗ. ಪಂಪಭಾರತದಲ್ಲಿ "ಮಚ್ಚರದೊಳೆ ಮಾಣದೊಡ್ಡಿದನಸುಂಗೊಳೆ ಕಕ್ಕರ ಸಂಜೆ ಸಂಜೆಯೊಳ್" ಎಂಬ ವಾಕ್ಯವಿದೆ. ಇಲ್ಲಿಯ ಕಕ್ಕರ(ಮಾಸಲ ಬಣ್ಣ)ವು ಸಂಧಿಗೊಂಡ ಸಂಜೆಯಲ್ಲಿ ಎಂಬ ಅರ್ಥದ "ಕಕ್ಕರ ಸಂಜೆ ಸಂಜೆಯೊಳ್" ಎಂಬ ವಾಕ್ಯವನ್ನು ಕಕ್ಕರಸ+ಅಂಜೆ ಎಂದು ಬಿಡಿಸಿ, ಇಲ್ಲಿಯ 'ಕಕ್ಕ' ಎಂಬ ಒಂದು ಪದದಿಂದ ಕಕ್ಕ ಅಥವಾ ಕಕ್ಕಲ ಎಂಬ ರಾಜನ ಹೆಸರನ್ನು ಊಹಿಸಿ, ಆತ ಸುಯೋಧನನ ಪಾತ್ರದಲ್ಲಿ ಸಮಾವೇಶಗೊಂಡ 'ಕಕ್ಕಲ'ನೇ ಆಗಿರಬಹುದೇ? ಎಂದು ದಿ. ಮುಳಿಯವರು ಭಾವಿಸುತ್ತಾರೆ.[೩೪] ಇತಿಹಾಸದ ನೆಲಗಟ್ಟು ಇಲ್ಲದ ಚಮತ್ಕಾರಪೂರ್ಣ ಊಹೆ ಇದು. ಕಾವ್ಯದ ಅಂಗಾಂಗಗಳಲ್ಲೆಲ್ಲ ಚಾರಿತ್ರಿಕ ಅಂಶಗಳನ್ನು ಕಂಡೇ ತೀರಬೇಕೆಂದು ಹೊರಟರೆ ಇಂಥ ದೋಷಗಳು ತೇಲಿಬರುತ್ತವೆ.

---

೩೨. ಸಮಂತಭದ್ರನೇ ಶ್ರೀವಿಜಯನಿರಬಹುದೆ? ಪ್ರ ಕ : ೧೯-೧.
೩೩. ಕವಿರಾಜಮಾರ್ಗದ ಕವಿಯಾರು? ಜೀವನ. ೧೫-೯.
೩೪. ನಾಡೋಜ ಪಂಪ ಪು. ೧೭೯.

ಒಂದು ಒಳ್ಳೆಯ ಕೃತಿಯ ಮೇಲೆ ಹೆಸರು ಕವಿಯದಿದ್ದರೂ ಒಳಗೆ ಉಸಿರು ಆ ಜನಾಂಗದ್ದಿರುತ್ತದೆ. ಅಲ್ಲಿಯ ಅಭಿಪ್ರಾಯಗಳಿಗೆ ಜನತೆಯೇ ಹೊಣೆಯಾಗಿರುತ್ತದೆ. ಆದುದರಿಂದ ಒಂದು ಕೃತಿಯ ಅಭ್ಯಾಸವೆಂದರೆ ಆ ಜನಾಂಗದ ಸಂಸ್ಕೃತಿಯ ಅಭ್ಯಾಸ. ಇದನ್ನು ಮನದಂದು "India as known to panini" "ಹರ್ಷಚರಿತ ಏಕ ಸಾಂಸ್ಕೃತಿಕ ಅಧ್ಯಯನ" ಮೊದಲಾದ ಕೃತಿಗಳು ಹುಟ್ಟಿಕೊಂಡಿವೆ. ಈ ಮಾದರಿಯಲ್ಲಿ ಕನ್ನಡ ಕಾವ್ಯಗಳ ಅಭ್ಯಾಸ ನಡೆದಿಲ್ಲ. ಪಂಪ, ಹರಿಹರ, ಕುಮಾರವ್ಯಾಸ, ನಂಜುಂಡ, ಸರ್ವಜ್ಞ ಮೊದಲಾದ ಕವಿಗಳನ್ನು ಈ ದೃಷ್ಟಿಯಿಂದ ಅಭ್ಯಸಿಸುವುದು ಅವಶ್ಯವಿದೆ. ಆದರೆ ಪ್ರತಿಯೊಂದು ಕಾವ್ಯದ ಪ್ರತಿಯೊಂದು ಮಾತಿನಲ್ಲಿ ಈ ಅಂಶವನ್ನು ಗುರುತಿಸಲು ಹೋದರೆ ಆಭಾಸ ತಲೆ ಎತ್ತುವ ಸಂಭವವಿದೆ. ಹೀಗಾಗಿ ಉಪಲಬ್ಧ ಸಾಮಗ್ರಿಯ ಹಿನ್ನೆಲೆಯಲ್ಲಿ ಕವಿಚರಿತ್ರೆಯನ್ನೂ ಕಾವ್ಯೋಕ್ತ ಚಾರಿತ್ರಿಕ–ಸಾಂಸ್ಕೃತಿಕ ಸಂಗತಿಗಳ ಚಿತ್ರವನ್ನೂ ಒದಗಿಸುವ ಪ್ರಾಮಾಣಿಕ ಪ್ರಯತ್ನ ನಡೆಯಬೇಕು.

ಕಾವ್ಯಸೌಂದರ್ಯಕ್ಕೆ ಸಂಬಂಧಿಸಿದ ರಸವಿಮರ್ಶೆಯೆಂದರೆ ಕಥೆ, ವಸ್ತು, ಪಾತ್ರ, ತಂತ್ರ ಮೊದಲಾದ ದೃಷ್ಟಿಕೋನಗಳಿಂದ ಕಾವ್ಯವನ್ನು ನಿಕಷವಿಟ್ಟು, ಅದರ ಮೌಲ್ಯವನ್ನು ನಿರ್ಣಯಿಸುವುದು. ಈ ನಿರ್ಣಯ ನಿಷ್ಪಕ್ಷಪಾತ, ನೇರ, ಖಚಿತವಾಗಿರಬೇಕೇ ಹೊರತು ಮುದ್ದಣನನ್ನು ಕುರಿತು "....ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ, ಷೇಕ್ಸಪಿಯರ್‌ಗಿಂತ ಬಹಳ ಕಡಿಮೆಯಾದವನಲ್ಲ"[೩೫] ಎಂಬ ಪಕ್ಷಪಾತದ ಹೇಳಿಕೆ, ಹರಿಹರನನ್ನು ಕುರಿತು "ಈ ವ್ಯಕ್ತಿತ್ವದಲ್ಲಿ ಸಮಗ್ರತೆಯಿದೆ, ಸಮತೂಕವಿಲ್ಲ; ಉತ್ಸಾಹವಿದೆ, ನಿಗ್ರಹವಿಲ್ಲ; ಇದರಲ್ಲಿಯೆ ಇದರ ಸೊಗಸಿದೆ"[೩೬] ಎಂಬಂಥ ಅಡ್ಡ ಗೋಡೆಯ ಮೇಲಣ "ದೀಪ ನುಡಿ"ಗಳು ಎಡೆ ಪಡೆಯಬಾರದು.

ಚಾರಿತ್ರಿಕ ವಿಮರ್ಶೆ, ರಸವಿಮರ್ಶೆಗಳ ಕೃಷಿಯನ್ನು ತಕ್ಕಮಟ್ಟಿಗೆ ಬೆಳೆಸಿಕೊಂಡು ಬಂದಿರುವ ನಮ್ಮ ಬಹಳಷ್ಟು ಜನ ಸಂಪಾದಕರು 'ದರ್ಶನ' ವಿಮರ್ಶೆಯತ್ತ ಕಣ್ಣೆತ್ತಿ ನೋಡಿಲ್ಲ. ಹರಿಹರದೇವ, ಚಾಮರಸ, ಕುಮಾರವ್ಯಾಸ ಮೊದಲಾದ ದಾರ್ಶನಿಕ ಕವಿಗಳ 'ದರ್ಶನ'ವನ್ನು ನಮ್ಮ ಸಂಪಾದಕರು ಚಿತ್ರಿಸುವ ಗೋಜಿಗೆ ಹೋಗಿಲ್ಲ. ಈ ಬಗೆಯ ವಿಮರ್ಶೆಯ ಕೊರತೆಯನ್ನು ತುಂಬಿಕೊಳ್ಳಬೇಕಾಗಿದೆ.

ಒಟ್ಟಿನಲ್ಲಿ ಚಾರಿತ್ರಿಕ ವಿಮರ್ಶೆಯಲ್ಲಿ ಕವಿಚರಿತ್ರೆಗೆ ಗಮನಕೊಟ್ಟಿದ್ದೇವೆ, ಕಾವ್ಯದಲ್ಲಿ ನೆಲೆಗೊಂಡ ಚಾರಿತ್ರಿಕ, ಸಾಂಸ್ಕೃತಿಕ ಚಿತ್ರಣಕ್ಕೆ ಕೊಟ್ಟಿಲ್ಲ. ವಿಮರ್ಶೆಯಲ್ಲಿ ರಸವಿಮರ್ಶೆಗೆ ಗಮನಕೊಟ್ಟಿದ್ದೇವೆ, ದರ್ಶನ ವಿಮರ್ಶೆಗೆ ಕೊಟ್ಟಿಲ್ಲವೆಂದು ತೋರುತ್ತದೆ.

ಈ ಪ್ರಸ್ತಾವನೆಯ ಮಗ್ಗುಲಲ್ಲಿ ಬರುವ ಇನ್ನೊಂದು ವಿಷಯ 'ಹಸ್ತಪ್ರತಿಗಳ ಪರಿಚಯ'. ಸಂಪಾದನೆಗೆ ಬಳಸಿದ ಹಸ್ತಪ್ರತಿಗಳ ಒಡೆತನ, ಭಾಷೆ, ಅಕ್ಷರಗಳ ಸ್ವರೂಪ ಮತ್ತು ಶುದ್ಧಿ, ಸ್ಥಿತಿ, ಆಕಾರ, ಲಿಪಿಕಾರ ರಚಿತ ಅಂತ್ಯಪ್ರಶಸ್ತಿ ಇತ್ಯಾದಿಗಳ ವಿವರಣೆ ಇಲ್ಲಿಯ ವಿಷಯ.

---

೩೫. ವಿಮರ್ಶೆಯ ಪೂರ್ವ–ಪಶ್ಚಿಮ (ಪು. ೧೩೪)ದಲ್ಲಿ ಉದ್ಧರಿಸಿದುದು.
೩೬. ಕನ್ನಡ ಸಾಹಿತ್ಯ ಚರಿತ್ರೆ (೧೯೬೦) ಪು. ೧೭೬.

"ಅನುಬಂಧ"ದ ಮಹತ್ವ ತಿಳಿದುಬಂದಂತೆ, ಅದರ ವಿಭಾಗಗಳು ಈಗ ದಿನದಿಂದ ದಿನಕ್ಕೆ ಹೆಚ್ಚುತ್ತ ನಡೆದಿವೆ. ಒಂದು ಕೃತಿಯ ಅಂಗಾಂಗಗಳನ್ನು ತೆರೆದು ತೋರಿಸುವ ಕೀಲಿಕೈಗಳಿವು. ಅದರ ಅಂತರಂಗದ ವಿಷಯಸಂಪತ್ತಿಯತ್ತ ಬೆರಳು ನೀಡುವ ದರ್ಶಕ ಫಲಕಗಳಿವು ಎಂಬ ಅಂಶ ಅಭ್ಯಾಸಿಯ ಗಮನಕ್ಕೆ ಬಂದುದು ಇದರ ಮಹತ್ವಕ್ಕೆ ಕಾರಣ.

ಸಾಮಾನ್ಯವಾಗಿ ಈ 'ಅನುಬಂಧ' ಗ್ರಂಥವಿವರಕ ಮತ್ತು ಗ್ರಂಥಪೂರಕ ಎಂದು ಎರಡು ಬಗೆಯಾಗಿರುತ್ತದೆ. ಗ್ರಂಥವಿವರಕದಲ್ಲಿ ಗ್ರಂಥಸ್ಥ ಮುಖ್ಯಪದಗಳ ಅಕಾರಾದಿ, ಉದ್ಧರಣೆ, ಪಾರಿಭಾಷಿಕ ಪದ, ವ್ಯಕ್ತಿ–ಸ್ಥಳ ನಾಮಸೂಚಿ, ಗಮನಾರ್ಹ ಪದಸೂಚಿ, ಶಬ್ದಕೋಶ, ಗ್ರಂಥಋಣ, ಸಂಕ್ಷೇಪ ಮತ್ತು ಸಂಕೇತಸೂಚಿ ಇತ್ಯಾದಿ ವಿಭಾಗಗಳು ಸಮಾವೇಶಗೊಳ್ಳುತ್ತವೆ. 'ಗ್ರಂಥಪೂರಕ'ದಲ್ಲಿ ಪಠ್ಯವಿಭಾಗಕ್ಕೆ ಪೂರಕವಾಗಬಹುದಾದ ಆಕರ ಕೃತಿಯ, ಸಮಾನ ಕೃತಿಗಳ ಸಾಮ್ಯ–ವೈಷಮ್ಯಗಳ ವಿವರಣೆ, ಪ್ರಭಾವ ಬೀರಿದ–ಪ್ರಭಾವ ಪಡೆದ ಗ್ರಂಥಗಳ ಪದ್ಯ ಇಲ್ಲವೆ ಗದ್ಯಭಾಗಗಳ ಸೂಚನೆ ಇತ್ಯಾದಿ ಸಂಗತಿಗಳೆಲ್ಲ ಎಡೆಪಡೆಯಬೇಕು. ಒಟ್ಟಿನಲ್ಲಿ ಒಂದು ಕೃತಿಯ ಅಂತರಂಗ–ಬಹಿರಂಗ ವಲಯಗಳ ಅಭ್ಯಾಸಕ್ಕೆ ಅದೊಂದು ಯೋಗ್ಯ ದಿಕ್ಸೂಚಿಯೆನಿಸಬೇಕು.[೩೭]

ಸಂಕೇತಗಳು – ಸಂಕ್ಷೇಪಗಳು

ಪಾಠಪರಿಷ್ಕರಣ ಪ್ರಸಂಗದಲ್ಲಿ ಸಂಪಾದಕನು ಕೆಲವು ಸಂಕೇತ ಮತ್ತು ಸಂಕ್ಷೇಪಗಳನ್ನು ಬಳಸುವುದು ಈಗ ತೀರ ಅನಿವಾರ್ಯವಾಗಿ ಬಿಟ್ಟಿದೆ. ಸಂಪಾದನಕ್ಷೇತ್ರದಲ್ಲಿ ಹಳೆಯ ಕಾಲದಿಂದಲೂ ನಡೆದುಬಂದ ಪದ್ಧತಿಯಿದು. ಇಜಿಪ್ತದ ವಿದ್ಯಾಪ್ರಿಯ ದೊರೆ ಟಾಲಿಮಿಯು (ಕ್ರಿ.ಶ. ಪೂ. ೩೨೩–೨೮೫) ರಾಜಧಾನಿ ಅಲೆಕ್ಝಾಂಡ್ರಿಯಾದಲ್ಲಿ ಸ್ಥಾಪಿಸಿದ್ದ ಗ್ರಂಥಭಂಡಾರದ ವರಿಷ್ಠ ಅಧಿಕಾರಿಯೂ, ಆತನ ಆಸ್ಥಾನ ವಿದ್ವಾಂಸನೂ ಆಗಿದ್ದ ಜಿನೊಡೋಟಸನು ಹೋಮರನ ಕಾವ್ಯಗಳನ್ನು ಸಂಪಾದಿಸುವಲ್ಲಿ ಪ್ರಕ್ಷಿಪ್ತ ಪಂಕ್ತಿಸೂಚನೆಗೆ ಕಠಾರಿ (INSERT SYMBOL) ಗುರುತನ್ನು ಬಳಸಿದ. ಇವನ ಶಿಷ್ಯ ಅರಿಸ್ಟೊಫೆನಿಸ್‌ನು (ಕ್ರಿ.ಶ. ಪೂ. ೨೫೭–೧೮೦) ಹೋಮರನ ಮತ್ತು ಪಿಂಡಾರ್ ಕವಿಯ ಕಾವ್ಯಗಳನ್ನು ಸಂಪಾದಿಸುವಾಗ ನಕ್ಷತ್ರವನ್ನು (*), ಪೂರ್ಣ ಅರ್ಥಕೊಡದ ಪಂಕ್ತಿಗಳಿಗೆ ಬಾಣವನ್ನು (>) ಪುನರುಕ್ತಗಳಿಗೆ ಬಳಸಿದನು. ಇವನ ಶಿಷ್ಯನೂ, ನಾಲ್ವತ್ತು ವಿದ್ಯಾರ್ಥಿಗಳಿಗೆ ವ್ಯಾಕರಣ ಮತ್ತು ಗ್ರಂಥಸಂಪಾದನಶಾಸ್ತ್ರಗಳನ್ನು ಕಲಿಸಲು ಅಲೆಕ್ಝಾಂಡ್ರಿಯಾದಲ್ಲಿ ಒಂದು ಪಾಠಶಾಲೆಯನ್ನು ನಡೆಸುತ್ತಿದ್ದವನೂ ಆದ ಅರಿಸ್ಟಾರ್ಕಸ್ (ಕ್ರಿ.ಶ. ಪೂ. ೨೨೦–೧೪೫) ನು ಹೋಮರನ ಕೃತಿಗಳನ್ನು ಪರಿಷ್ಕರಿಸುವಲ್ಲಿ

ಪ್ರಕ್ಷಿಪ್ತ ಪಂಕ್ತಿ ತಿಳಿಸಲು (   ) ಕಠಾರಿ

ಭಾಷೆ ಮತ್ತು ವಿಷಯಗಳ ಗಮನಾರ್ಹ ಅಂಶ ತಿಳಿಸಲು (>) ಬಾಣ

---

೩೭. ಈ 'ಉನ್ನತ ವಿಮರ್ಶೆ'ಯನ್ನು ಬರೆಯುವಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ವಿಮರ್ಶೆಯ ಪೂರ್ವ–ಪಶ್ಚಿಮ ಎಂಬ ಗ್ರಂಥದ ನೆರವನ್ನು ಪಡೆದಿದ್ದೇನೆ.

ಜಿನೊಡೋಟಸ್ ಮತ್ತು ಅರಿಸ್ಟೊಫೆನಿಸ್‌ರ ಭಿನ್ನಪಾಠ ತೋರಿಸಲು (>) ಚುಕ್ಕೆ ಬಾಣ

ಪುನರುಕ್ತ ಪಾದಗಳನ್ನು ಸೂಚಿಸಲು (*) ನಕ್ಷತ್ರ

ಪ್ರಕ್ಷಿಪ್ತವೆಂಬ ಸಂದೇಹ ಸೂಚಿಸಲು (Σ) Sigma

ಪದಪಲ್ಲಟ ತಿಳಿಸಲು (   ) Anti-sigma

ಸಂಕೇತಗಳನ್ನು ಬಳಸಿದನು. ಹೀಗೆ ಈ ಮೂವರು ಗ್ರಂಥಸಂಪಾದನ ಕ್ಷೇತ್ರದಲ್ಲಿ ಸಂಕೇತಗಳ ತಂತ್ರವಿನ್ಯಾಸವನ್ನು ರೂಢಿಗೆ ತಂದರು.[೩೮]

ಈ ತಂತ್ರ ಪಶ್ಚಿಮರಾಷ್ಟ್ರಗಳಲ್ಲಿ ಕ್ರಮೇಣ ಬೆಳೆದು, ಒಂದು ವ್ಯವಸ್ಥೆ ಪಡೆದು ೧೯ನೆಯ ಶತಮಾನದಲ್ಲಿ ಪಶ್ಚಿಮಪಂಡಿತರ ಮೂಲಕ ನಮ್ಮಲ್ಲಿ ತಲೆದೋರಿತು. ಪ್ರಾಚೀನ ಕರ್ನಾಟಕದ ಲಿಪಿಕಾರರು ಮರೆತುದನ್ನು ಸೇರಿಸಲು ಸೂಚಿಸುವಲ್ಲಿ ಹಂಸಪಾದ, ಕತ್ತರಿ ಗುರುತುಗಳನ್ನು; ತಪ್ಪಾದುದನ್ನು ಬಿಡಲು ಸೂಚಿಸುವಲ್ಲಿ ಅಷ್ಟು ಭಾಗದ ಮೊದಲು ಕೊನೆಗೆ ಕಂಸ, ಕೆಳಗೆ ಅಥವಾ ಮೇಲೆ ಸಣ್ಣಸಣ್ಣ ಚುಕ್ಕೆ ಇಲ್ಲವೆ ಗೆರೆಗಳನ್ನು ಬಳಸುತ್ತಿದ್ದರು. ಇವು ಮೇಲಿನ ಅರ್ಥದ ಸಂಕೇತಗಳಲ್ಲ. ಇನ್ನು ಅಭ್ಯಾಸಿಯು ತನ್ನ ಹಸ್ತಪ್ರತಿಯ ಮಗ್ಗುಲಲ್ಲಿ ಭಿನ್ನಪಾಠಗಳನ್ನು ಬರೆದುಕೊಳ್ಳುತ್ತಿದ್ದರೂ ಆ ಸಂದರ್ಭದಲ್ಲಿ ಅವರು ಬಳಸಿದ ಸಂಕೇತವೆಂದರೆ ಕತ್ತರಿ ಗುರುತು ಮಾತ್ರ. ಆದುದರಿಂದ ಆಧುನಿಕ ಅರ್ಥದ ಸಂಕೇತ ಬಳಕೆಯ ಇತಿಹಾಸ ಕರ್ನಾಟಕದಲ್ಲಿ ೧೯ನೆಯ ಶತಮಾನದ ಹಿಂದೆ ಹೋಗದೆಂದು ಕಾಣುತ್ತದೆ.

ಕನ್ನಡ ಗ್ರಂಥಸಂಪಾದನ ಇತಿಹಾಸದ ಪ್ರಥಮಘಟ್ಟದಲ್ಲಿ ದುಡಿದ ಮಂಗಳೂರು ಬೆಂಗಳೂರು ಮೊದಲಾದ ಸ್ಥಳಗಳ ಪಾದ್ರಿಗಳು ಸಂಕೇತಗಳನ್ನು ಬಳಸಿದಂತಿಲ್ಲ. ಶಾಸನ ಸಂಪಾದನೆಯಲ್ಲಿ ಅನಿವಾರ್ಯವೆನಿಸಿದ ಇದು, ಕಿಟೆಲ್ ರೈಸ್‌ರ ಕೃತಿಸಂಪಾದನೆಗಳಲ್ಲಿ ಪ್ರಾರಂಭವಾಗಿ, ಕಾವ್ಯಕಲಾನಿಧಿಯವರಲ್ಲಿಯೂ ತಲೆದೋರಿ, ತರುವಾಯ ಹಲವು ಮುಖಗಳಲ್ಲಿ ಮುನ್ನಡೆದು ಬಂದಿದೆ.

ಈಗ ಸಂಪಾದನಕಾರ್ಯದಲ್ಲಿ ಸಂಕೇತಗಳ ಬಳಕೆ ಅನಿವಾರ್ಯವಾಗಿದೆ. ಆದರೆ ಎಲ್ಲ ಸಂಪಾದಕರ ಬಳಕೆಯಲ್ಲಿ ಏಕತೆಯಿಲ್ಲ, ವ್ಯವಸ್ಥೆಯಿಲ್ಲ. ಉದಾಹರಣೆಗಾಗಿ ಸುಪ್ರಸಿದ್ಧ ಸಂಪಾದಕರಾದ ಡಾ. ಎಲ್. ಬಸವರಾಜು ಅವರು ಒಂದು ಕೃತಿಯ ಏನೆಲ್ಲ ಭಿನ್ನಪಾಠಗಳನ್ನು ಕೊಡುವ ಸಾಹಸ ಮಾಡುವವರಾದರೂ, ಇವುಗಳಿಗೆ ಬಳಸುವ ಅಂಕಿ, ನಕ್ಷತ್ರ, ಬಾಣ, ತ್ರಿಕೋನ, ಕತ್ತರಿ, ಹಲವು ರೀತಿಯ ಕಂಸ, ಪ್ರಶ್ನೆಚಿಹ್ನೆ ಇವುಗಳ ಒಂದು ಮಿಶ್ರಣ ಕಂಡುಬಂದು ಸಂಕೇತಗಳ ಬಳಕೆಯಲ್ಲಿ ಒಂದು ಗೊಂದಲ ಎದ್ದು ಕಾಣುತ್ತದೆ. ಅವರು ಸಂಪಾದಿಸಿದ ಅಕ್ಕನ ವಚನದಿಂದ ಕೆಲವು ಉದಾಹರಣೆಗಳನ್ನು ನೋಡಬಹುದು :

---

೩೮. ಕಗ್ರಸಂ. ೧೪, ೧೫, ೧೬.

೧.	ಮೂಲ ಶಿಖಿರಂಧ್ರದ (?) ಕಾಮನ ಸುಟ್ಟು
ಶುದ್ಧ ಸ್ಫಟಿಕ ಸ್ವಯಂಜ್ಯೋತಿಯನು
ಸುನ್ನಾಳ [= ಸುಷುಮ್ನಾ ನಾಳ?]ದಿಂದ
ಹರಿಕ್ಷಾಯ[?]ವೆಂಬೆರಡಕ್ಷರವ
ಸ್ವಯಾನುಭಾವ ಭಕ್ತಿ ನಿರ್ವಾಣವಾದ [+ ವರ] ನೆನಗೊಮ್ಮೆ
ತೋರಿದೆ, ಶ್ರೀಗಿರಿ ಚೆನ್ನಮಲ್ಲಿಕಾರ್ಜುನ* (೩೦೪)

೨.	ಭಕ್ತಿಯೆಂ[ಬುದು ?] ಬಾಜಿಗಾರರಾಟ ! (೩೦೫)

೩.	ಹರ[$_+$ದ?]ನಂತೆ ಹೇಸಿಯಾಗಿದ್ದರೆ ವಿರಕ್ತನೆ?.....
ಚೆನ್ನಮಲ್ಲಿಕಾರ್ಜುನಾ?   [೩೦೯]

೪.	$_A$[ಗಿರಿಯಲಲ್ಲದೇ]$_A$
ಹುಲುಮೊರಡಿಯಲಾಡುವುದೇ ನವಿಲು ?
^{೪}[ಕೊಳನನಲ್ಲದೆ]^{೪} ಕಿರುವಳ್ಳಕೆಳಸುವುದೇ ಹಂಸೆ? (೩೧೫)

೫.	"............^{೬}ಚೆನ್ನಮಲ್ಲಿಕಾರ್ಜುನ[ಯ್ಯ !]^{೬} (೩೧೬)

೬.	$_A$ಬಂಜೆ ^{೧೨}[ಬೇನೆಯನರಿವಳೇ ?]^{೧೨} (೩೧೯).

೭	ತೊಲಗು ತೊಲಗಿನ್ನೆನ್ನಾಸೆಯಳಿದು Δ (೩೪೮).

೮.	ಈ ಸಾವ ಕೆಡುವ ಗಂಡರನೊಯ್ದು ^{೬}[ಒಲೆಯೊಳಗಿಕ್ಕುತಾಯೆ]^{೬}A (೨೮೩).

೯.	ಅಗಲಿದ್ದು ಫಲವೇನು $_A$[ಬಾನ]$_A$ ವಿಲ್ಲದನ್ನಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ?
ಚೆನ್ನಮಲ್ಲಿ^{೩}ಕಾರ್ಜುನ !^{೩} (೧೨೫)

೧೦.	A ಲಿಂಗ^{೩}ಸುಖ^{೩} ಸಂಗದಲ್ಲಿ ಮನವೇದ್ಯವಾಯಿತು !
^{೪}೧೨ ಇನ್ನೆಲ್ಲಿಯದಯ್ಯ ೧೨^{೪} ಎನಗೆ $_B$ನಿಮ್ಮಲ್ಲಿ$_B$ ನಿರವಯವು !?
^{೪}೧೩ ಇನ್ನೆಲ್ಲಿಯಯ್ಯ ೧೩^{೪} ನಿಮ್ಮಲ್ಲಿ$_D$ ಕೂಡುವುದು !?
ಪರಮಸುಖ ಪರಿಣಾಮ ^{೩}ಮನ^{೩} ಮೇರೆದಪ್ಪಿ$_D$
ನಾನು ^{೫}ನಿಜವನೈದುವ ಠಾವ^{೫} ಹೇಳಾ ಚೆನ್ನಮಲ್ಲಿಕಾರ್ಜುನಯ್ಯ !^{೬}

ಇಲ್ಲಿಯ ಹಲವು ರೀತಿಯ ಸಂಕೇತಗಳನ್ನು ಗಮನಿಸಬಹುದು. ದಿಕ್ಕುಗೆಡಿಸುವ ಪಾಠಾಂತರಗಳ ಅರಣ್ಯದಲ್ಲಿ ನಿಂತ ಅವರಿಗೆ, ಇದು ಅನಿವಾರ್ಯವೆನಿಸಬಹುದಾದರೂ ಓದುಗರಿಗೆ ಸಂಕೇತಗಳ ಬಳಕೆಯಲ್ಲಿ ಓರಣ ಅವಶ್ಯ ಬೇಕೆನಿಸುತ್ತದೆ.

ಕನ್ನಡಸಾಹಿತ್ಯದ ಸ್ವರೂಪ ಮತ್ತು ಹಸ್ತಪ್ರತಿಗಳ ಸ್ಥಿತಿ ಇತ್ಯಾದಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕನ್ನಡಕ್ಕೆ ಅವಶ್ಯವೆನಿಸುವ ಸಂಕೇತಗಳನ್ನು ಹೀಗೆ ಸೂಚಿಸಬಹುದು :

೧. ಸ್ವೀಕೃತ ಮತ್ತು ವರ್ಜಿತ ಪಾಠಗಳ ಪರಸ್ಪರ ಸಂಬಂಧ ಸೂಚನೆಗೆ ಕೇವಲ ಅಂಕಿಗಳನ್ನು, ಅದರಲ್ಲಿಯೂ ಸ್ಥಳದ ಮಿತವ್ಯಯ ಮತ್ತು ಮುದ್ರಣ ಸೌಂದರ್ಯದ ದೃಷ್ಟಿಯಿಂದ ಇಂಗ್ಲಿಷ್ ಅಂಕಿಗಳನ್ನು ಬಳಸಿದಷ್ಟು ಉತ್ತಮ.

೨. ಸಂದೇಹ, ಪರಿಷ್ಕರಣಗಳಿಗೆ ಕ್ರಮವಾಗಿ (?), [ ] ಈ ಚಿಹ್ನೆಗಳನ್ನು ಬಳಸಬಹುದು.

೩. ಅಡಿಯಲ್ಲಿ ಕೊಡಬೇಕಾದ ಹೆಚ್ಚಿನ ಪಾಠಕ್ಕೆ '+' (ಅಧಿಕ), ಲುಪ್ತ ಪಾಠಕ್ಕೆ '–' (ಉಣೆ) ಗುರುತುಗಳನ್ನು ಬಳಸಬಹುದು. ಈ ಲುಪ್ತಪಾಠಕ್ಕೆ ವಿಸ್ಮೃತಿ, ತ್ರುಟಿತತೆ, ಸ್ಥಳಬಿಟ್ಟು ಬರೆಯುವಿಕೆ ಇವುಗಳಲ್ಲಿ ಯಾವುದು ಕಾರಣವೆಂಬುದನ್ನು ಬರೆದು ಸೂಚಿಸಬೇಕು. ಬಹುಶಃ ಇಷ್ಟು ಚಿಹ್ನೆಗಳು, ಸೂಚನೆಗಳು ಕನ್ನಡ ಗ್ರಂಥಸಂಪಾದನೆಗೆ ಸಾಕೆಂದು ತೋರುತ್ತದೆ. ಸಂಕೇತಗಳನ್ನು ಹೆಚ್ಚು ಬಳಸಿದಂತೆ ಸಂಪಾದನ ತೊಡಕು ತೊಡಕಾಗಿ ಕೃತಕಸ್ಥಿತಿಗಿಳಿದು, ಓದುಗನ ಪಠನಕಾರ್ಯ ಕ್ಲೇಶಗೊಳ್ಳುತ್ತದೆ. ಹೀಗಾಗಿ ಸಾಧ್ಯವಿದ್ದಷ್ಟು ಕಡಿಮೆ ಸಂಕೇತಗಳನ್ನು ಬಳಸುವದು ಲೇಸು.

ಪಾಠಪ್ರಸಂಗದಲ್ಲಿ ಸಂಕೇತಗಳನ್ನು ಬಳಸಿದರೆ, ಹಸ್ತಪ್ರತಿ ಮತ್ತು ಸಹಾಯಕ ಕೃತಿ ಸೂಚನೆಗಾಗಿ ಸಂಕ್ಷೇಪಗಳನ್ನು ಬಳಸಬೇಕು. ಈ ಸಂಕ್ಷೇಪಗಳು ಕಿರುಗಾತ್ರದಲ್ಲಿರಬೇಕು, ಅರ್ಥವತ್ತಾಗಿರಬೇಕು. ಹಸ್ತಪ್ರತಿಗಳಿಗೆ ಸಾಮಾನ್ಯವಾಗಿ ಅವು ದೊರೆತ ಸ್ಥಳ, ಇಲ್ಲವೆ ಪೂರೈಸಿದ ವ್ಯಕ್ತಿಗಳನ್ನು ಸೂಚಿಸುವ ಸಂಕ್ಷೇಪಗಳನ್ನು ಬಳಸಬೇಕು. ಉದಾ : ಧಾರವಾಡದ ಹಸ್ತಪ್ರತಿ = ಧಾ, ಮೈಸೂರಿನ ಹಸ್ತಪ್ರತಿ= ಮೈ, ಹಳಕಟ್ಟಿಯವರ ಹಸ್ತಪ್ರತಿ = ಹ, ನರಸಿಂಹಾಚಾರ್ಯರ ಹಸ್ತಪ್ರತಿ = ನ ಇತ್ಯಾದಿ.

ಸಹಾಯಕ ಕೃತಿಗಳಿಗೆ ಅವುಗಳ ಶಿರೋನಾಮೆಯ ಸಂಕ್ಷಿಪ್ತ ರೂಪಗಳನ್ನು ಬಳಸಬೇಕು. ಇವು ನೋಡಿದ ಕೂಡಲೇ ಇಡೀ ಶಿರೋನಾಮೆಯನ್ನು ನೆನಪಿಸುವಂತಿರಬೇಕು. ಉದಾ : EC = Epigraphia Carnatica, SII = South Indian Inscriptions, ಪಂಭಾ= ಪಂಪಭಾರತಂ, ಶಮದ = ಶಬ್ದಮಣಿ ದರ್ಪಣಂ ಇತ್ಯಾದಿ.

ಈ ಸಂಕ್ಷೇಪ ಒಂದು ಅಕ್ಷರಯುಕ್ತವಾಗಿದ್ದರೆ ಕೃತಿಯ ಶಿರೋನಾಮೆ ತಟ್ಟನೆ ನೆನಪಿಗೆ ಬಾರದ ಕಾರಣ, ಸಾಮಾನ್ಯವಾಗಿ ಎರಡು ಅಕ್ಷರಯುಕ್ತವಾಗಿರಬೇಕು. ಎರಡಕ್ಕೆ ಹೆಚ್ಚಾಗುತ್ತ ಹೋದಂತೆ ಅದರ ಸಂಕ್ಷೇಪಗುಣ ಕಡಿಮೆಯಾಗುತ್ತ ಹೋಗುತ್ತದೆ. ಕೆಲವು ಕೃತಿಗಳಿಗೆ ೨ ಅಕ್ಷರಗಳ, ಇನ್ನು ಕೆಲವು ಕೃತಿಗಳಿಗೆ ೩, ೪, ೫ ಅಕ್ಷರಗಳ ಸಂಕ್ಷೇಪಗಳನ್ನು ಬಳಸಿದರೆ, ಮುದ್ರಣಸೌಂದರ್ಯ ಕೆಡುತ್ತದೆ. ಮುದ್ರಣ ಸೌಂದರ್ಯ ಕೆಡುವುದಿರಲಿ; ಪುಸ್ತಕದ ಹೆಸರಿನ ಬಗ್ಗೆ ಸಂದೇಹ ಮೂಡುತ್ತದೆ. ಉದಾಹರಣೆಗಾಗಿ ಡಾ. ಎಲ್. ಬಸವರಾಜು ಅವರು 'ದೇವರದಾಸಿಮಯ್ಯನ ವಚನ'ವನ್ನು ಸಂಪಾದಿಸುವಲ್ಲಿ ಉಪಯೋಗಿಸಿಕೊಂಡ ಗಣಭಾಷಿತ ರತ್ನಮಾಲೆ, ಲಿಂಗಲೀಲಾ ವಿಲಾಸ ಚಾರಿತ್ರಗಳಿಗೆ ಬಳಸಿದ ಸಂಕ್ಷೇಪಗಳನ್ನು ನೋಡಬಹುದು.

೧.	(ಗ. ಭಾ. ರ. ಮಾಲೆ)

(ಗ. ಭಾ. ರ. ಮಾಲೆ – ಪು. ೨೦೧)

(ಗ. ಭಾ. ರ. ಮಾಲೆ – ಪುಟ ೨೭೫)

(ಗ. ಭಾ. ರ. ಮಾಲೆ – ಪುಟ ೨೦೧)

(ಗಣಭಾಷಿತ ರತ್ನಮಾಲೆ)

೨.	(ಲಿ)

(ಲಿಂ)

(ಲಿಂ. ಲೀ. ವಿ. ಚಾರಿತ್ರ)

(ಲಿಂ. ಲೀ. ವಿ. ಚಾರಿತ್ರ ಪುಟ ೧೪೧)

(ಲಿಂಗಲೀಲಾ ವಿಲಾಸ ಚಾರಿತ್ರ)

(ಲಿಂಗಲೀಲಾ ವಿಲಾಸ ಚಾರಿತ್ರ ಪು. ೧೧೭).

ಇಲ್ಲಿ ಒಂದೊಂದು ಕೃತಿಗೆ ೫ ಇಲ್ಲವೆ ೬ ಬಗೆಯ ಸಂಕ್ಷೇಪಗಳನ್ನು ಬಳಸಿದುದನ್ನು ಕಾಣಬಹುದು. ಇಂಥ ಪದ್ಧತಿಯಿಂದ ಓದುಗನಿಗೂ ಸಂದೇಹ, ಮುದ್ರಣ ಸೌಂದರ್ಯಕ್ಕೂ ಧಕ್ಕೆ. ಹೀಗಾಗಿ ಇವುಗಳ ಬಳಕೆಯಲ್ಲಿ ಅಚ್ಚುಕಟ್ಟುತನ, ಏಕರೂಪತೆ, ಸಂಕ್ಷೇಪತೆ ಅವಶ್ಯ ಬೇಕೆನಿಸುತ್ತದೆ. ಒಟ್ಟಿನಲ್ಲಿ ಶ್ರಮ ಉಳಿತಾಯ ಮತ್ತು ಅರ್ಥಸೌಕರ್ಯಕ್ಕಾಗಿ ರೂಢಿಸಿಕೊಂಡ ಇವು, ಸಂದೇಹ ಗೊಂದಲಗಳನ್ನುಂಟುಮಾಡದಿದ್ದರೆ ಸಾಕು. ಕೊನೆಯದಾಗಿ, ಸಂಪಾದಿತ ಕೃತಿಯ ಮೊದಲ ಇಲ್ಲವೆ ಕೊನೆಯ ಪುಟಗಳಲ್ಲಿ ಈ ಸಂಕೇತ ಮತ್ತು ಸಂಕ್ಷೇಪಗಳಿಗೆ ವಿವರಣೆ ಅವಶ್ಯ.

❖❖

೬

ಶೇಷಕಾಂಡ

❖

ಸಂಪಾದಕನ ವ್ಯಾಸಂಗವ್ಯಾಪ್ತಿ
ಸಂಪಾದನೆಯ ಮಹತ್ವ

ಅಬ್ಧಿಗಡಿ ಮಿತಿಯುಂಟು ಬುದ್ಧಿಗಡಿ ಮಿತಿಯಿಲ

*

ಸಂಪಾದಕನ ವ್ಯಾಸಂಗವ್ಯಾಪ್ತಿ

ಹಲವರ ಒಡೆತನದ ಹಿಡಿತಕ್ಕೆ ಸಿಕ್ಕಿರುವ ಹಸ್ತಪ್ರತಿಗಳನ್ನು ಸಂಗ್ರಹಿಸುವಲ್ಲಿ ಪ್ರಯತ್ನಶೀಲತೆ, ಹಸ್ತಪ್ರತಿಗಳನ್ನು ಓದುವಲ್ಲಿ ಸಹನಶೀಲತೆ, ವಂಶಾವಳಿನಿರ್ಣಯಿಸುವಲ್ಲಿ ಸಾವಧಾನವ ಪ್ರವೃತ್ತಿ, ಪಾಠಸಂಕಲನದಲ್ಲಿ ಪ್ರಾಮಾಣಿಕತೆ, ಪಾಠನಿರ್ಣಯದಲ್ಲಿ ತೂಕಪ್ರಜ್ಞೆ–ಇವು ಸಂಪಾದಕನಿಗೆ ಇರಬೇಕಾದ ಮೂಲಭೂತ ಗುಣಗಳು.

ಹಸ್ತಪ್ರತಿಗಳ ಸ್ವರೂಪದ ಅರಿವು, ಪ್ರಾಚೀನ ಅಕ್ಷರಗಳ ನಿಕಟ ಪರಿಚಯ, ಆ ಕಾಲದ, ಆ ಪ್ರದೇಶದ, ಆ ಕವಿಯ ಭಾಷೆ–ನುಡಿಗಟ್ಟುಗಳ ಪ್ರಗಾಢ ಪರಿಜ್ಞಾನ, ಬಳಸಿದ ಛಂದಸ್ಸು–ಶೈಲಿಗಳ ಸೂಕ್ಷ್ಮ ಅಭ್ಯಾಸ, ಅನ್ಯಭಾಷೆ–ಅನ್ಯಸಾಹಿತ್ಯಗಳ ವ್ಯಾಸಂಗ, ಕಾವ್ಯವಸ್ತುವಿನ ಸ್ಪಷ್ಟ ತಿಳಿವಳಿಕೆ ಇವೂ ಸಂಪಾದಕನಿಗೆ ಅತ್ಯವಶ್ಯ.

ಸಮಾಜದ ಗರ್ಭದಿಂದ ಕವಿ, ಕವಿಯ ಗರ್ಭದಿಂದ ಕೃತಿ ಮೂಡಿಬಂದಿರುತ್ತದೆ. ಹೀಗಾಗಿ ಒಂದು ಮಹಾಕೃತಿಯ ಅಭ್ಯಾಸವೆಂದರೆ ಕವಿಯ ಮನಸ್ಥಿತಿಯ ಮತ್ತು ಜನಾಂಗದ ಪರಿಸ್ಥಿತಿಯ ಅಭ್ಯಾಸವೆನಿಸುವುದರಿಂದ, ಆ ಕಾಲದ ಬದುಕಿನ ವಿವಿಧ ಸ್ತರಗಳನ್ನು ಸಂಪಾದಕ ನೇರವಾಗಿ ಅರಿಯಬೇಕಾಗುತ್ತದೆ. ಕವಿ ಸಂದರ್ಭೋಚಿತವಾಗಿ ಊಟ–ಉಡುಗೆ, ವೇಷ–ಭೂಷಣ, ಹಬ್ಬ–ಹುಣ್ಣಿಮೆ, ಆಚಾರ–ವಿಚಾರ, ಶಾಸ್ತ್ರ–ಕಲೆ ಇತ್ಯಾದಿ ಲೋಕದ ಸಮಸ್ತವನ್ನು ತನ್ನ ಕಾವ್ಯದಲ್ಲಿ ತುಂಬಿರುತ್ತಾನೆ. ಇವುಗಳ ಅರಿತ ಅಧಿಕವಾದಷ್ಟು, ಆ ಅರಿತ ಹೆಚ್ಚು ಜಾಗ್ರತವಿದ್ದಷ್ಟು ಸಂಪಾದನಕಾರ್ಯ ಸಮುಜ್ವಲಗೊಳ್ಳುತ್ತದೆ. ಇವುಗಳಿಗೆ ಮೂಲಧನವೆನ್ನುವಂತೆ ಸಂಪಾದಕನಿಗೆ ಗ್ರಂಥಸಂಪಾದನ ಕಾರ್ಯದಲ್ಲಿ ಅಭಿರುಚಿ, ಪರಿಣತಿಗಳು ಅವಶ್ಯ ಬೇಕು. ಕೆಲವು ಉದಾಹರಣೆಗಳೊಂದಿಗೆ ಈ 'ಬೇಕು'ಗಳನ್ನು ಅರಿಯಬಹುದು.

ಪಾಠನಿರ್ಣಯದಲ್ಲಿ ಸಂಪಾದಕ ಹತ್ತು ಸಲ ವಿಚಾರಿಸಿ, ಹತ್ತೂ ಕಡೆ ದೃಷ್ಟಿ ಹರಿಸಿ ಮುನ್ನಡೆಯಬೇಕು. ಇಲ್ಲದಿದ್ದರೆ ತಪ್ಪಿ ಇಟ್ಟ ಹೆಜ್ಜೆ ಕೆಲವು ಸಲ ಅವನನ್ನು ಬಹುದೂರ ಒಯ್ಯುತ್ತದೆ. ಉದಾ :

೧. ಬೇಱೆವೇಱೆರೆ ವಿಕಲ್ಪ ಸಮುಚ್ಚಯ ಯುಗ್ಮದೊಳ್ ।
ತೋಱುವೆಂ ಕ್ರಮವಿಕಲ್ಪನೆಯಿಂ ಗುಣದೋಷಮಂ ।
ಕೀಱೆಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ ।
ತೋಱೆ ಪಿಂಗಿಸುವವೊಲ್ ಪೊಸ ನೆಲ್ಲಿರೆ ಪೋಟ್ಟಿಳಂ ॥[೧]

---

೧. ಕಮಾ ೧–೧೩೧.

"ಈ ಪದ್ಯದ ಆಶಯ : ಹಲವು ಬೇರೆಬೇರೆ ಶಬ್ದಗಳು ಒಟ್ಟಿಗೆ ವಾಕ್ಯದಲ್ಲಿ ಸಮುಚ್ಚಯ ಸಂಬಂಧದಲ್ಲಿ ಬಂದಾಗ ಪ್ರತಿಯೊಂದು ಶಬ್ದಕ್ಕೂ ಸಮುಚ್ಚಯಸೂಚಕ ಪ್ರತ್ಯಯಗಳನ್ನು ಸೇರಿಸಬೇಕು. ಹೀಗಿಲ್ಲದೆ ಕೆಲವಕ್ಕೆ ಹತ್ತಿಸಿ ಕೆಲವಕ್ಕೆ ಬಿಟ್ಟರೆ ಅದು ದೋಷವಾಗುತ್ತದೆ. ಇಂಥ ದೋಷಗಳನ್ನು ಕಳೆದು ಹಾಕಿ ಗುಣವನ್ನು ಎಂದರೆ ಸಮುಚ್ಚಯ ಸೇರಿಸುವುದನ್ನು ಗ್ರಹಿಸಬೇಕು, ಹೊಸ ಬತ್ತವಿರಲು ಪೋಳುಗಳನ್ನು ಹೇಗೆ ತೆಗೆದು ಹಾಕಬೇಕೋ ಹಾಗೆ. ಇಲ್ಲಿ ಹೋಳುಗಳನ್ನು ಎಂದರೆ ಯಾವ ಹೋಳುಗಳನ್ನು? ಹೊಸ ಬತ್ತದಲ್ಲಿ ಹೋಳುಗಳು ಎಂದರೇನು? ಇಲ್ಲಿ ಅರ್ಥವ್ಯಕ್ತಿ ಇಲ್ಲ. ಆದ್ದರಿಂದ ಈ ರೀತಿ ಅರ್ಥ ಮಾಡುವುದು ಸಮರ್ಪಕವಾಗಲಾರದು.... ಇದು 'ಪುಳ್ಗಳಂ' ಎಂಬ ಶಬ್ದಕ್ಕೆ ಪ್ರತಿಕಾರರ ಕೈಯಲ್ಲಿ ಉಂಟಾಗಿರುವ ಸ್ಖಾಲಿತ್ಯ. 'ಪುಳ್ಗಳಂ' ಎಂಬಂತೆ ತಿದ್ದಿಕೊಂಡು ಅರ್ಥ ಮಾಡಿದರೆ 'ಹೊಸ ಬತ್ತವಿರಲು ಹಕ್ಕಿಗಳನ್ನು ಎಬ್ಬಿಸುವ ಹಾಗೆ' ಎಂಬ ಅಭಿಪ್ರಾಯ ಬರುತ್ತದೆ. ಬತ್ತದ ತೆನೆ ಹಾಲುತುಂಬಿ ಬಲಿಯುವಾಗ ಹಕ್ಕಿಗಳು ಹಿಂಡಾಗಿ ಬಂದು ತೆನೆಯ ಕಾಳುಗಳನ್ನೆಲ್ಲ ತಿಂದುಬಿಡುತ್ತವೆ. ಇವುಗಳನ್ನು ಓಡಿಸಬೇಕಾದದ್ದು ಅವಶ್ಯ ಕರ್ತವ್ಯ. ಈ ಸಂದರ್ಭದಲ್ಲಿ ಪಂಪರಾಮಾಯಣದ

ಬಳಸಿ ಸುಳಿದಾಡಿ ಕಾಲ್ವಿಡಿ ।
ದೆಳಸಿ ಕಲಾಲಾಪಮೊದವೆ ಜನನಿಯ ಮೊಲೆವಾ ।
ಲ್ಗಳನುಂಬ ಶಿಶುಗಳಂತಿರೆ ।
ಕಳವೆಯ ಪಾಲ್ದೆನೆಯ ಪಾಲನುಂಡವು ಗಿಳಿಗಳ್ ॥

ಎಂಬ ಪದ್ಯವನ್ನು ನೆನೆದುಕೊಳ್ಳಬಹುದು." ಎಂದು ಮುಂತಾಗಿ ಸುದೀರ್ಘ ವಿವರಣೆ ನೀಡಿ ಈ ಪದ್ಯದ ಪೋಟ್ಗಳಂ (< ಪುಳ್ಗಳಂ) ಪದಕ್ಕೆ ಹಕ್ಕಿಗಳನ್ನು ಎಂದು ಅರ್ಥ ಹಚ್ಚಿ, 'ಪುಳ್' ಎಂಬುದು ಪಕ್ಷಿ > ಹಕ್ಕಿಗೆ ಸಮಾನವಾದ ಅಚ್ಚಗನ್ನಡ ಪದವೆಂದು ಹೇಳಿರುವರು, ಡಾ. ಡಿ.ಎಲ್.ಎನ್. ಅವರು.[೨] ಆದರೆ ಈ ಪದ್ಯದ ಕೊನೆಯ ಚರಣಕ್ಕೆ ತೂರಿ < ತೂಚಿ (೧೧೦), ಪೊಳ್ಗಳಂ (೧೭೫, ೨೮೮) ಎಂಬ ಭಿನ್ನಪಾಠಗಳಿವೆ. ಇವನ್ನು ಸ್ವೀಕರಿಸಿದರೆ 'ಹೊಸನೆಲ್ಲು ಇಟ್ಟುಕೊಂಡು ಪೊಳ್ಳುನೆಲ್ಲು (ಜೊಳ್ಳುನೆಲ್ಲು)ಗಳನ್ನು ತೂರಿ ಕಳೆಯುವ ಹಾಗೆ' ಎಂಬ ಸುಂದರ ಅರ್ಥ ಹೊರಡುತ್ತದೆ. ಈ ಭಿನ್ನಪಾಠಗಳನ್ನು ಅಲಕ್ಷಿಸಿದ ಸಲುವಾಗಿ ಡಾ. ಡಿ.ಎಲ್.ಎನ್. ಅವರು ಈ ಪದ್ಯಕ್ಕೆ ಎರಡು ಪುಟಗಳ ಭಾಷ್ಯ ಬರೆಯಬೇಕಾಯಿತು, ಹೀಗೆ ಪಾಠ ಸ್ವೀಕರಣೆಯಲ್ಲಿ ಸ್ವಲ್ಪ ತಪ್ಪಿದರೆ ಸಾಕು, ದೊಡ್ಡ ದೋಷ ತಲೆಯೆತ್ತುತ್ತದೆ.

೨. "ಶಬ್ದಾವತಾರಕಾರ ದೇವಭಾರತಿ ನಿವದ್ಧ ಬೃಹತ್ಪಥಃ
ಕಿರಾತಾರ್ಜುನೀಯ ಪಞ್ಚದಶಸರ್ಗ ಟೀಕಾಕಾರ ದುರ್ವಿನೀತನಾಮಮಯಃ"[೩]

---

೨. ಪಕ್ಷಿ > ಹಕ್ಕಿಗೆ ಸಮಾನ ಕನ್ನಡ ಶಬ್ದ (ಪ್ರ. ಕ. ೪೪-೨).
೩. E.C. XII ತುಮಕೂರು ೨೩, ಹೆಬ್ಬೂರ ಶಾಸನ.

ಡಾ. ಬಿ.ಎಲ್.ರೈಸ್ ಅವರು ಕ್ರಿ.ಶ. ೧೮೯೦ರಲ್ಲಿ ಓದಿದ ಹೆಬ್ಬೂರ ಶಾಸನದ ಪಾಠವಿದು. ದುರ್ವಿನೀತನನ್ನು ವರ್ಣಿಸುವ ಈ ವಾಕ್ಯದಲ್ಲಿಯ "ಶಬ್ದಾವತಾರಕಾರ ದೇವಭಾರತಿ ನಿವದ್ಧ ಬೃಹತ್ಪಥಃ" ಎಂಬುದನ್ನು Restricting himself to the path of greatness through the instruction of the divine who was author of the Sabdavatar" ಎಂದು ಅರ್ಥೈಸಿಕೊಂಡು, ಶಬ್ದಾವತಾರದ ಕರ್ತೃ ಪೂಜ್ಯಪಾದನು ದುರ್ವಿನೀತನ ಗುರು ಎಂದು ಸಾರಿದರು.[೪] ಈ ಗುರು-ಶಿಷ್ಯ ಸಂಬಂಧವನ್ನು ಬಹುಕಾಲದ ವರೆಗೆ ಎಲ್ಲ ವಿದ್ವಾಂಸರೂ ಒಪ್ಪುತ್ತ ಬಂದರು; ಈ ಇಬ್ಬರೂ ಸಮಕಾಲೀನರೆಂದು ಭಾವಿಸಿದರು. ೨೨ ವರ್ಷಗಳ ತರುವಾಯ ಅಂದರೆ ೧೯೧೨ರಲ್ಲಿ ಡಾ. ಆರ್. ನರಸಿಂಹಾಚಾರ್ ಅವರು ತಾವು ಶೋಧಿಸಿದ ಗುಮ್ಮರೆಡ್ಡಿಪುರ ಶಾಸನದಲ್ಲಿ ಬರುವ "ಶಬ್ದಾವತಾರಕಾರೇಣ ದೇವಭಾರತೀ ನಿಬದ್ಧ ವಡ್ಡಕಥೇನ" ಎಂಬ ವಾಕ್ಯದ ಬಲದಿಂದ, ಮೇಲಣ ಹೆಬ್ಬೂರ ಶಾಸನದ "ದೇವಭಾರತೀ ನಿವದ್ಧ ಬೃಹತ್ಪಥಃ" ಎಂಬುದನ್ನು 'ದೇವಭಾರತೀ ನಿವದ್ಧ ಬೃಹತ್ಕಥಃ' ಎಂದು ಸರಿಯಾಗಿ ಓದಿ, ದುರ್ವಿನೀತನು 'ಶಬ್ದಾವತಾರ' ಹೆಸರಿನ ಕೃತಿ ಬರೆದಿರುವನೆಂದು ಶಾಸನಗಳು ಹೇಳುವವೇ ಹೊರತು, ಶಬ್ದಾವತಾರವನ್ನು ಬರೆದವನ (ಪೂಜ್ಯಪಾದನ) ಶಿಷ್ಯನೆಂದು ಹೇಳುವದಿಲ್ಲವೆಂದು ಸಾರಿ, ಈ ಗುರು-ಶಿಷ್ಯ ಸಂಬಂಧವನ್ನು ಮುರಿದು ಹಾಕಿದರು.[೫] ಆದರೂ ರೈಸ್ ಅವರು ಬಿತ್ತಿದ ದುರ್ವಿನೀತನು ಪೂಜ್ಯಪಾದನ ಶಿಷ್ಯನೆಂಬ ಹಳೆಯ ಅಭಿಪ್ರಾಯ ವಿದ್ವಾಂಸರ ಮನದಲ್ಲಿ ಇನ್ನೂ ಜೀವ ಹಿಡಿದು ಕುಳಿತಿದೆ. ರೈಸ್ ಅವರು ಒಂದೇ ಒಂದು ಅಕ್ಷರವನ್ನು ತಪ್ಪಾಗಿ ಓದಿದುದರ ಫಲವಿದು. ಇದರಿಂದ ಐತಿಹಾಸಿಕವಲ್ಲದ ವಿಷಯ ಇತಿಹಾಸವಾಗಿ ನಿಂತಿತು.

೩. ಕೆಲವು ವರ್ಷಗಳ ಹಿಂದೆ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಗಂಗಾಧರಂ ಗ್ರಾಮದ ಬಳಿಯ ಬೊಮ್ಮಲಗುಟ್ಟ ಎಂಬ ಬೆಟ್ಟದಲ್ಲಿ ಪಂಪನ ವಿಷಯವನ್ನೊಳಗೊಂಡ ಒಂದು ಶಾಸನ ಲಭಿಸಿತು, ಸಂಪಾದಕರು "....ಗುಂಡಿಕಱ ನಿಡುಂಗೊಣ್ಡೆಯಭಿಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನ ಬೊಳ್ಳೊವಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ[ಂ] ವಬ್ಬಣಬ್ಬೆಯ ಮಗಂ.... ಜಿನವಲ್ಲಭಂ" ಎಂಬ ಪಾಠವನ್ನು ಪ್ರಕಟಿಸಿದರು.[೬] ಆದರೆ ವ್ಯಾಕರಣದ ಬಲದಿಂದ ಬಿಂದು ಸಹಿತ ಚೌಕಕಂಸವನ್ನು ತೆಗೆದುಹಾಕಿ, 'ವಬ್ಬಣಬ್ಬೆ'ಯಲ್ಲಿರುವ ವಕಾರವು ಳಕಾರವಾಗಿರಬೇಕೆಂದು ನಾನು ಊಹಿಸಿದೆನು. ಇದರಿಂದ ಜಿನವಲ್ಲಭನು ಜೋಯಿಸಸಿಂಘನ ಮಗಳಮಗನೆಂಬ ಸಂಪಾದಕರ ಅಭಿಪ್ರಾಯ ಬಿದ್ದುಹೋಗಿ, ಜೋಯಿಸಸಿಂಘನ ಮೊಮ್ಮಗಳ ಮಗನು ಎಂಬ ಅಭಿಪ್ರಾಯ ಅಧಿಷ್ಠಾನಗೊಂಡಿತು. ಜಿನವಲ್ಲಭನ ತಾಯಿಯ ಹೆಸರು ವಬ್ಬಣಬ್ಬೆಯಲ್ಲ ಅಬ್ಬಣಬ್ಬೆಯೆಂದು ಸ್ಪಷ್ಟವಾಯಿತು. ಒಂದು ಅಕ್ಷರದ ಮಟ್ಟಿನ ಈ ತಪ್ಪು ಓದು ೩-೪ ಜನ ವಿದ್ವಾಂಸರನ್ನು ಸುತ್ತುಗೊಂಡು ೮-೧೦ ಲೇಖನಗಳು ಹೊರಬರಲು ಪ್ರಚೋದನೆ ನೀಡಿತು.[೭] ಕೊನೆಗೆ 'ಮರ್ಮಳಬ್ಬಣಬ್ಬೆ' ಎಂಬ ನನ್ನ ವಾದ ಸ್ಥಿರಗೊಂಡಿತು.

---

೪. Early History of Kannada Literature - B.L. Rice (JRAS. XXII 1890).

೫. MAR 1919, P. 31 ಮತ್ತು 35 ನೋಡಿರಿ.

೬. ಭಾರತಿ, ೧೯೬೭ ಮಾರ್ಚ (ತೆಲಗು ಪತ್ರಿಕೆ).

೭. ಕನು ೧೯೬೮ ಮೇ, ೧೯೬೮ ಆಗಸ್ಟ, ೧೯೬೯ ಫೆಬ್ರುವರಿ, ೧೯೬೯ ಎಪ್ರಿಲ್-ಮೇ, ೧೯೬೯ ಜೂನ್-ಜುಲೈ, ೧೯೬೯ ಆಗಸ್ಟ, ೧೯೬೯ ಸೆಪ್ಟೆಂಬರ್, ೧೯೬೯ ನವೆಂಬರ್, ಪ್ರಕ, ೫೦-೪, ಪ್ರಜಾವಾಣಿ ೮-೧೨-೬೮.

೪. ಆತಕೂರ ಶಾಸನದ ಒಂದು ವಾಕ್ಯವನ್ನು ಡಾ. ಬಿ. ಎಲ್. ರೈಸ್ ಅವರು "ಬೂತುಗಂ ರಾಜಾದಿತ್ಯನಂ ಬೆಸಗೆಯೆ ಕಳ್ಳನಾಗಿ" ಕೊಂದನೆಂದು (E.C. II. P. 21.ಅ.ಟಿ. 1889), ಡಾ. ಫ್ಲೀಟ್ ಅವರು "ಬೂತುಗಂ ರಾಜಾದಿತ್ಯನಂ ಬಿಸುಗೆಯ ಕಳ್ಳನಾಗಿ" ಕೊಂದನೆಂದು (E.C. II. P. 167. 1894) ಓದಿದರು. ಇವರು ಮೊದಲುಗೊಂಡು ಹಲವು ವಿದ್ವಾಂಸರು ಬೂತುಗನು ಕಳ್ಳನಂತೆ ಹೋಗಿ, ಮೈತ್ರಿ ನಟಿಸಿ ಮೋಸದಿಂದ ರಾಜಾದಿತ್ಯನನ್ನು ಇರಿದನೆಂದು ಇದಕ್ಕೆ ಅರ್ಥ ಹೇಳುತ್ತಬಂದರು. ಮುಂದೆ ೧೯೦೯ರಲ್ಲಿ ಆರ್. ನರಸಿಂಹಾಚಾರ್ ಅವರು ಈ ಪಾಠವನ್ನು "ಬಿಸುಗೆಯೆ ಕಳನಾಗಿ" ಎಂದು ಸರಿಯಾಗಿ ಓದಿ, ಅಂಬಾರಿಯನ್ನೇ ರಣಭೂಮಿಯನ್ನಾಗಿ ಮಾಡಿ ಕೊಂದನೆಂದು ಅರ್ಥ ಹೇಳಿದರು.[೮] ಹೀಗೆ ಮೂಲಪಾಠವನ್ನು ತಪ್ಪಾಗಿ ಓದಿದ ಕಾರಣ ಬೂತುಗನಿಗೆ ಹತ್ತಿದ್ದ ಕಳಂಕ ಕಳೆದುಹೋಗಲು ೨೦ ವರ್ಷ ಹಿಡಿಯಿತು.

ಈ ರೀತಿ ಒಂದು ಅಕ್ಷರವನ್ನು ತಪ್ಪು ಓದಿದರೆ ಸಾಕು, ಅರ್ಥ ವೀಪರೀತಗೊಳ್ಳುತ್ತದೆ, ಇತಿಹಾಸ ಬದಲಾಗುತ್ತದೆ; ಕವಿಯ ಉದ್ದೇಶ ವಿಫಲಗೊಳ್ಳುತ್ತದೆ. ಅದಕ್ಕಾಗಿ "ಒಂದು ಮಾತಿನ ಗೆಲ್ಲಕ್ಕೆ ಸೋಲಕ್ಕೆ ಹಿಡಿದು ಹೋರುವೆ"[೯] ಎಂಬ ಪ್ರಜ್ವಲಿಸುವ ಪ್ರಜ್ಞೆಯಿಂದ ಸಂಪಾದಕನು ಪಾಠಸಂಕಲನ, ಪಾಠನಿರ್ಣಯ ಕಾರ್ಯದಲ್ಲಿ ನಿಮಗ್ನನಾಗಬೇಕು.

ಅನ್ಯಭಾಷೆಯಿಂದ ಅನುವಾದಿತ ಇಲ್ಲವೆ ಪ್ರಭಾವಿತವಾಗಿರುವ ಕೃತಿಯನ್ನು ಸಂಪಾದಿಸುವ ಗ್ರಂಥಸಂಪಾದಕನಿಗೆ ಆ ಮೂಲಗ್ರಂಥದ ಪರಿಚಯ, ಆ ಮೂಲಭಾಷೆಯ ಜ್ಞಾನ ಅತ್ಯವಶ್ಯ ಬೇಕು. ಸಾಲದುದಕ್ಕೆ ತನ್ನ ಭಾಷೆಯ ಮೇಲೆ ಪ್ರಭಾವ ಮಾಡಿದ ಭಾಷೆ ಮತ್ತು ತನ್ನ ಪ್ರಾಂತದ ನೆರೆಹೊರೆಯ ಭಾಷೆಗಳ ಪರಿಚಯವೂ ಬೇಕು. ಇದರಿಂದ ಎಷ್ಟೋ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ. ಉದಾ :

೧. ದೇಶಂ ವರರಾಷ್ಟ್ರಾದಿ ನಿ
ವೇಶಾಂತಂ ....॥[೧೦]

ಈ ಪದ್ಯಭಾಗಕ್ಕೆ 'ಬ' ಪ್ರತಿಯಲ್ಲಿರುವ 'ವರನಾಷ್ಟ್ರಾದಿ' ಎಂಬ ನಿಷ್ಪ್ರಯೋಜಕ ಪಾಠವನ್ನು ಬಿಟ್ಟುಕೊಟ್ಟು, ಈ ವರೆಗೆ ಮೂರು ಜನ ಸಂಪಾದಕರು ಮೇಲಣ ಪಾಠವನ್ನು ಒಪ್ಪುತ್ತ ಬಂದಿರುವರು. ಕವಿರಾಜಮಾರ್ಗದ ಈ ವಾಕ್ಯಕ್ಕೆ ಮಾತೃಕೆ ದಂಡಿಯ ಕಾವ್ಯಾದರ್ಶದಲ್ಲಿಯ "ದೇಶೋऽದ್ರಿವನರಾಷ್ಟ್ರಾದಿಃ"[೧೧] ಎಂಬುದು. ಇದರ ಆಧಾರದಿಂದ ಈಗ ಕವಿರಾಜಮಾರ್ಗದ ಪಾಠವನ್ನು "ದೇಶಂ ವನರಾಷ್ಟ್ರಾದ್ರಿ ನಿವೇಶಾಂತಂ" ಎಂದು ತಿದ್ದಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಕಾವ್ಯಾದರ್ಶವನ್ನು ನೋಡದಿದ್ದರೆ ಲೇಖನ ಸ್ಖಾಲಿತ್ಯದಿಂದುಂಟಾದ ಈ ದೋಷಪಾಠಕ್ಕೆ ಪರಿಹಾರ ಸಾಧ್ಯವಾಗುತ್ತಿರಲಿಲ್ಲ.

---

೮. The Ganga Prince Butuga II(JRAS. New-Volume 41).
೯. ಬವ ೨೫೬.
೧೦. ಕಮಾ ೧-೧೧೦.
೧೧. ಕಾವ್ಯಾದರ್ಶ ೩-೧೬೨.

೨. ಸ್ವಸ್ತಿಶ್ರೀ ಓಂ ಜಯಪರಮೇಶ್ವರ ಪರಮಾತ್ಮ
ಈಶ್ವರನುರ್ವೀ ಪರ್ವಿಯಡಂಗಿಕೊಂಡಿಪ್ಪನು
ಓರ್ವಂ ಮಿಗೆಯಾಗಿ ಯೋಗಿಗಳ ಮನದ ಕೊನೆಯ ಜ್ಯೋತಿಶ್ವರನುಂ.....[೧೨]

ಸಿದ್ಧರಾಮನ ಎಲ್ಲ ಶಾಸನಗಳಲ್ಲಿ ತಪ್ಪದೇ ಬರುವ ಫಲಶ್ರುತಿ ವಾಕ್ಯದ ಭಾಗವಿದು. ಮೇಲಣದು ಬುಡರಸಿಂಗಿ[೧೩] ಶಾಸನ ಪಾಠ. ಇಲ್ಲಿಯ 'ಓರ್ವಂ ಮಿಗೆ' ಪದದಿಂದ ಅರ್ಥ ಹೊರಡದ ಕಾರಣ ಇದರ ಸಂಸ್ಕೃತ ರೂಪವಾದ ಈ ಕೆಳಗಿನ ಟಾಕಳಿ[೧೪] ಶಾಸನದ ನೆರವನ್ನು ಪಡೆಯಬೇಕಾಗುತ್ತದೆ.

"ಓಂ ಜಯತು ಪರಮೇಶ್ವರಃ ಪರಮಾತ್ಮೇಶ್ವರಃ
ಸಹರ್ಷಸೋತ್ಸವಃ ಸುಸೂಕ್ಷ್ಮ ಏಕವರ್ಣ್ಯೋರ್ಭೂತ್ವಾ
ಯೋಗಿನಾಂ ಮಾನಸಾಗ್ರೇಯೋ ವಿಶ್ವರೂಪೋ...."

ಇಲ್ಲಿಯ 'ಏಕವರ್ಣ್ಯೋರ್ಭೂತ್ವಾ' ಎಂಬುದರ ಆಧಾರದಿಂದ ಕನ್ನಡ ಪಾಠವನ್ನು 'ಒಬ್ಬಂಣಿಗೆಯಾಗಿ' ಎಂದು ತಿದ್ದಿಕೊಳ್ಳಬೇಕಾಗುತ್ತದೆ. ತಡವಳ ಮೊದಲಾದ ಕನ್ನಡ ಶಾಸನಗಳಲ್ಲಿ 'ವೊಬ್ಬಣ್ಣಿಗೆ' ಪಾಠವಿದೆ.

೩. ಪೊಳೆವಲರಮರ್ದಿನ ಕಪ್ಪುರ ।
ವಳುಕಿನ ಕತ್ತುರಿಯ ಕೊಟಿತ [ದೂ]ರ್ವಾಭರಣಂ ।
ಗಳ ಪೊಳೆವ ಮಾಣಿಕಂಗಳ ।
ಬೆಳಗಿದೆ ಸೂಚಿಸಿತು ಭರತನಂತಃಪುರವಂ ॥

ಇದು ಆದಿಪುರಾಣದ (೧೧–೪೩) ಪದ್ಯ.[೧೫] ಕುಂದಣಗಾರರ ಆವೃತ್ತಿಯಲ್ಲಿ '[ಕೊಳೆದ]' ಎಂಬ ಊಹಿತ ಪಾಠವಿದೆ. ಈ ಎರಡೂ ಪಾಠಗಳಿಂದ ಸಮರ್ಪಕ ಅರ್ಥ ಹೊರಡದು. ಇದರ ಸರಿಯಾದ ರೂಪ ಕೊಟಿತ. ಎಳೆಯ, ಹೊಸ ಎಂದು ಇದರ ಅರ್ಥ. ಈ 'ಕೊಟಿತ' ಪದ ತೆಲುಗಿನಲ್ಲಿ 'ಕ್ರೊತ್' ಆಗಿದೆ. ಇದರಿಂದ ಸಿದ್ದವಾದ 'ಕುಟಿನ್ದೈ' (=ಶಿಶು) ಮೊದಲಾದ ಪದಗಳು ತಮಿಳಿನಲ್ಲಿವೆ. ಈ ಹಿನ್ನೆಲೆಯಲ್ಲಿ "ಕೊಟಿತ [ದೂ]ರ್ವಾಭರಣ"ವೆಂದರೆ ಎಳೆಯ ಗರಿಕೆಯ ಆಭರಣ ಎಂದು ಸಮರ್ಪಕ ಅರ್ಥ ಹೇಳಬಹುದು.[೧೬] ಇದೇ ರೀತಿ.

"ಅಂಬಿಕಾಪ್ರಿಯ ಚಿತ್ತಪ್ರಿಯನೆಂಬ ತಂಬಿರಾಂತೋಳನೆಂಬ, ಕಡು ಸಲುಗೆಯ ಬಿರುದಿನ"[೧೭]
[ತಂಬಿರಾಂದೊಳ, ಕಂಬಿರಾದೊಳ, ತಂಬಿರಾಂತೊಳ, ತಂಬಿರತೊಳ್]

"ಮಗನೆ ಕಡುಗುದುರೆಯುಂ ಬಡ ಬಿಚ್ಚಿಯುಂ ಸಮಂ"[೧೮] [ವಜ್ಜಿ, ಬಿಜ್ಜೆ] ಎಂಬ ನಂಬಿಯಣ್ಣನ ರಗಳೆಯ ಈ ವಾಕ್ಯಗಳಿಗೆ ಅರ್ಥ ಹೇಳಲು ತಮಿಳಿನ ನೆರವು ಅತ್ಯವಶ್ಯ.

---

೧೨. ಶಾಸನಗಳಲ್ಲಿ ಶಿವಶರಣರು ೭೩.
೧೩. KUJ. VI 1962.
೧೪. SII.XX. 118. ಟಾಕಳಿ.
೧೫. ಎಸ್.ಜಿ. ನರಸಿಂಹಾಚಾರ್ ಆವೃತ್ತಿ, ೧೯೦೦.
೧೬. ಜ್ಞಾನೋಪಾಸಕ, ಮುನ್ನುಡಿ ೨.
೧೭. ನಂಬಿ ೮. ಸಾಲು ೧೨೩.

ಹೀಗೆ ಕನ್ನಡದ ರಾಮಾಯಣ-ಭಾರತಗಳಿಗೆ ವ್ಯಾಸಭಾರತ-ವಾಲ್ಮೀಕಿ ರಾಮಾಯಣಗಳ, ಹರಿಹರನ ಅರವತ್ತು ಮೂವರ ರಗಳೆಗಳಿಗೆ ತಮಿಳು ಕೃತಿಗಳ, ಜೈನಗ್ರಂಥಗಳಿಗೆ ಸಂಸ್ಕೃತ-ಪ್ರಾಕೃತ ಗ್ರಂಥಗಳ ಅರಿತ ಅತ್ಯವಶ್ಯ. ನಮ್ಮ ಛಂದಸ್ಸು ಅಲಂಕಾರ ಮೊದಲಾದ ಶಾಸ್ತ್ರಕೃತಿಗಳ ಸಂಪಾದನೆಗಂತೂ ಸಂಸ್ಕೃತದ ಹಿನ್ನೆಲೆ ಅವಶ್ಯ ಬೇಕು.

ಒಂದು ಭಾಷೆಯ ಹಿರಿಯ ಮತ್ತು ಜನಪ್ರಿಯ ಕೃತಿಗಳ ಪ್ರಭಾವಕ್ಕೆ ಮಿಕ್ಕುವು ಒಳಗಾಗುವುದು ಸಹಜ, ಹೀಗಾಗಿ ಒಂದು ಕೃತಿಯ ಸಂಪಾದನ ಕಾರ್ಯದಲ್ಲಿ ಹಲವು ಕೃತಿಗಳ ಅಭ್ಯಾಸಸಂಪತ್ತಿ ಅವಶ್ಯವೆನಿಸುತ್ತದೆ. ಉದಾ :

೧. ಊರ ಸೀರೆಗೆ ಅಸಗ **ತಡಬಡಗೊಂಬಂತೆ**
ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು ಎಂದು ನೆನೆನೆನೆದು,
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯ ಚೆನ್ನ ಮಲ್ಲಿಕಾರ್ಜುನಯ್ಯ.[೧೯]

೨. ಊರ ಸೀರೆಗೆ ಅಸಗ **ತಡಬಡಿವಡೆದಂತೆ**
ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು ಎಂದು ಮರುಳಾದೆ
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವ.[೨೦]

ಈ ಎರಡರಲ್ಲಿ ಬಸವಣ್ಣನವರ ವಚನಕ್ಕೆ "ತಡಬಡಗೊಂಬಂತೆ" "ಬಡಿವಡದಂತೆ" "ಬಡಬಡಿ ಹಡದಂತೆ" ಎಂಬ ಮೂರು ಪಾಠಗಳಿವೆ. ಈ ವಚನದ ಕರ್ತೃ ಅಕ್ಕನೋ? ಅಣ್ಣನೊ? ಎಂಬ ಸಮಸ್ಯೆಯನ್ನು ಬಿಟ್ಟರೂ ಇವುಗಳಲ್ಲಿ ಯಾವುದು ಸತ್ಯಪಾಠ? ಅದರ ಅರ್ಥವೇನು? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಸಂಗದಲ್ಲಿ

ಇದು ಸತ್ಯಮೊಗೆದ ಕೆಯ್ಯಾವುದು ತೋಱೆಂದಸಗನೆರಡು ಕೆಯ್ಯಂ ಮುಱಿದಿ।
ಕ್ಕಿದನೂರ ಸೀರೆಗಸಗಂ।ತದೆವಡೆದನೆನಿಪ್ಪ ನಾಡುನುಡಿ ಪರೆವಿನೆಗಂ।[ನೇಪು ೮-೮೦]
ದನುಜೇಂದ್ರನ ಮಡಿವರ್ಗಮ।ನೆನಗೀಯದೊಡೂರ ಸೀರೆಗಸಗಂ ಬಡಿವೆ।
ತ್ತನೆನಿಪ್ಪ ಜನದ ನಾಣ್ನುಡಿ। ನಿನಗಾಗಲ್ಕಸಗವೊಯ್ಲು ಸವಿಯಂ ತೋರ್ಪೆಂ ॥
[ಜ.ವಿ. ೬-೬]

ಈ ಎರಡು ಪದ್ಯಗಳನ್ನು ಗಮನಿಸಬೇಕು. ಇಲ್ಲಿ ಊರ ಸೀರೆ - ಅಸಗ - ತದೆವಡೆಯುವಿಕೆ ಇವುಗಳಿಗೆ ಸಂಬಂಧಪಟ್ಟಂತೆ ಒಂದು ನಾಣ್ಣುಡಿ ಆ ಕಾಲದಲ್ಲಿ ಪ್ರಚಾರದಲ್ಲಿರಬೇಕು. ನಾಣ್ಣುಡಿಯೊಂದು ಹುಟ್ಟಲು ಒಂದು ಘಟನೆ ಅಥವಾ ಒಂದು ಸಮಷ್ಟಿ ಅನುಭವ ಹಿನ್ನೆಲೆಯಾಗಿರುವುದರಿಂದ, ಅನ್ಯರ ಸೀರೆಗಳನ್ನು ಒಗೆಯಲು ಒಯ್ದು, ಉಟ್ಟು ಮೆರೆದ ಒಬ್ಬ ಅಗಸನು ಅದರ ಒಡೆಯರಿಂದ ಏಟು

---

೧೮. ನಂಬಿ ೧೯, ಸಾಲು ೧೧೯.

೧೯. ಅಕ್ಕನ ವಚನಗಳು ೩೧:

೨೦. ಬವ ೩೨೯ (ಬಸವನಾಳ ಆವೃತ್ತಿಯಲ್ಲಿ 'ತಡಬಡಿಹಡೆದಂತೆ, ಬಡಿಹಡೆದಂತೆ, ತಡಬಡಗೊಂಬಂತೆ' ಎಂಬ ಪಾಠಗಳಿವೆ.)

ತಿಂದ ಘಟನೆಯನ್ನವಲಂಬಿಸಿ ಈ ನಾಣ್ಣುಡಿ ಹುಟ್ಟಿರಬೇಕು. ಅನ್ಯವಾಗಿರುವ ಹೆಣ್ಣು, ಹೊನ್ನು ಮಣ್ಣುಗಳಿಗಾಗಿ ಮೈಮನ ನುಗ್ಗುಗೊಳಿಸಿಕೊಳ್ಳುವ ನಮ್ಮದೂ ಆ ಅಗಸನ ರೀತಿಯೇ. ಇದನ್ನು ಮನದಂದು ಮೇಲಣ ವಚನದಲ್ಲಿ ಅಗಸನಿಗೆ ಸಂಬಂಧಪಟ್ಟ ನಾಣ್ಣುಡಿಯನ್ನು ಬಳಸಿದಂತಿದೆ. ಆದುದರಿಂದ ಅಲ್ಲಿಯ ಮೂರು ಪಾಠಗಳಲ್ಲಿ 'ಬಡಿ (= ಏಟು)ವ[ಡೆ]ದಂತೆ' ಇದಕ್ಕಿಂತ 'ತದೆ(=ಹೊಡೆ)ವ[ಡೆ]ದಂತೆ' ಎಂಬುದು ಯೋಗ್ಯಪಾಠವೆನಿಸುತ್ತದೆ.[೨೧]

೨. "ವ॥ ಆಗಳ್ ಸಭಾಸದರೆಲ್ಲಮೆವೆಮಿಡುಕದೆ ಪಂದೆಯಂ ಪಾವಡರ್ದ

ವೊಲುಸಿರದಿರೆ" (ಲ್ಲಂ ಮೇರೆ, ಲಂ ಮೆಲೆ) [ಪಂಭಾ ೬-೫೯ ಗ]

ಪಂಪಭಾರತದ ಶಿಶುಪಾಲವಧೆಯ ಪ್ರಸಂಗವಿದು. ಶ್ರೀಕೃಷ್ಣನನ್ನು ಹೀಯಾಳಿಸುತ್ತ ಶಿಶುಪಾಲನು ಕೋಪದ ಕೆಂಡನಾದ ಸಂದರ್ಭವು ಸಭೆಯ ಮೇಲೆ ಮಾಡಿದ ಪರಿಣಾಮವನ್ನು ಇದು ವರ್ಣಿಸುತ್ತದೆ. ಕನ್ನಡ ಕಾವ್ಯಾಂಜಲಿ ಸಂಪುಟ – ೨ರ ಸಂಪಾದಕರು ಇದನ್ನು "ಸಭಾಸದರೆಲ್ಲಮೆಲೆ ಮಿಡುಕದೆ" ಎಂದು ಪರಿಷ್ಕರಿಸಿದ್ದಾರೆ. ರೆಪ್ಪೆ ಬಡೆಯದೆ ಎಂಬ ಅರ್ಥದ 'ಎವೆ ಮಿಡುಕದೆ' ಎಂಬುದು ಸಂದರ್ಭೋಚಿತವೂ, ಅರ್ಥಯುತವೂ ಎನಿಸಿ ಓದುಗರಿಗೆ ಇದೇ ಮೂಲಪಾಠವಾಗಿರಬೇಕೆಂಬ ಭಾವನೆ ಹುಟ್ಟುತ್ತದೆ. ಸಾಮಾನ್ಯವಾಗಿ ಸ್ಖಾಲಿತ್ಯ ಹುಟ್ಟುವುದು ಕಠಿಣಪಾಠಕ್ಕೆ. ಈ 'ಎವೆ ಮಿಡುಕದೆ'ಯಾದರೋ ಕಠಿಣ ಪಾಠವಲ್ಲ. ಅಕ್ಷರ ಸಾದೃಶ್ಯದಿಂದ ಬೇರೆ ಸ್ಖಾಲಿತ್ಯಗಳುಂಟಾಗಿದ್ದರೂ ಸಂದರ್ಭ ಬಲದಿಂದ ತಟ್ಟನೇ ಸತ್ಯವನ್ನು ಕಂಡುಹಿಡಿಯ ಬಹುದಾದ ಪರಿಚಿತ ನುಡಿಗಟ್ಟು ಇದು. ಹೀಗಾಗಿ ಈ ಪಾಠಕ್ಕೆ ಸ್ಖಾಲಿತ್ಯವೇಕೆ ಉಂಟಾಯಿತು? ಉಂಟಾಗಿದ್ದರೂ ಯಾವೊಬ್ಬನು ಸಹಜ ತಿದ್ದಿಕೊಳ್ಳಬಹುದಿತ್ತು ಎನಿಸಿ, ಮಿಕ್ಕ ಎರಡು ಪಾಠಗಳತ್ತ ದೃಷ್ಟಿಹರಿಸಲು ಆತುರ ಹುಟ್ಟುತ್ತದೆ. ಈ ಸಂದರ್ಭದಲ್ಲಿ

ಎಲೆ ದೇವರೆ ಪುತ್ತುಂ ಬ ।
ತ್ತಲೆಯುಂ ಬಱಿದಿಲ್ಲವೆಂಬರದು ಕಾರಣದಿಂ ॥
ನೆಲೆಯಾಂದೆಯನಚ್ಚಿದವೋ ।
ಲೆಲೆ ಮಿಡುಕದೆ ನೆನೆಯುತಿರ್ದಿರೇನಂ ಮನದೊಳ್ ॥ [ಯಶೋ ೪–೨]

ಒಳಗೆ ತೊಳಲಿಕೆಯುಕ್ಕಡಕೆ ಕಳ
ವಳಿಸಿ ಹಾಯಿದರೊಮ್ಮೆ ಮತ್ತಂ
ತೆಲೆಮಿಡುಕದಾಲಿಸಿ ನಿಧಾನಿಸಿ ಸಾರಿದರು ಮರನಾ ॥ [ಕುಭಾ. ಗರ್ದಾ–೩]

ಎಂಬ ಜನ್ನನ ಯಶೋಧರ ಚರಿತೆ ಮತ್ತು ಕುಮಾರವ್ಯಾಸನ ಭಾರತಗಳಿಗೆ ಸಂಬಂಧಿಸಿದ ಈ ಪದ್ಯಗಳನ್ನು ನೆನಪಿಸಿಕೊಳ್ಳಬೇಕು. "ಎಲೆ ಮಿಡುಕದೆ ನೆನೆ" "ಎಲೆ ಮಿಡುಕದಾಲಿಸು" ಮತ್ತು ಪಂಪನ "ಎಲೆ ಮಿಡುಕದೆ ಪಂದೆಯಂ ಪಾವಡರ್ದವೊಲುಸಿರದಿರೆ"ಗಳು ಬೆರಗು ಭಾವವನ್ನು

---

೨೧. ಊರಸೀರೆ ಮತ್ತು ಅಸಗ, ಪ್ರ. ಕ. ೫೦–೯.

ವ್ಯಕ್ತಗೊಳಿಸುವ ಪದಗಳು, ಮೇಲಾಗಿ 'ಎಲೆ ಮಿಡುಕದೆ' (ಎಲೆಯಂತೆ ಅಲ್ಲಾಡದೆ) ಎಂಬುದು ಸ್ತಬ್ಧಭಾವದ ಉತ್ಕಟತೆಗೆ ತೀರ ಯೋಗ್ಯ ದೇಶೀ ರೂಪಕ. ಪಂಪ ಮಾತನಾಡುವುದು ಇಂಥ ರೂಪಕಗಳ ಮೂಲಕ. ಆತನ ಮಾತಿನ ರೀತಿಗೂ ಒಪ್ಪುವ ಪದವಿದು. ಅದಕ್ಕಾಗಿ 'ಸಭಾಸದರೆಲ್ಲಮೆವೆ ಮಿಡುಕದೆ' ಮತ್ತು 'ಸಭಾಸದರೆಲ್ಲಂ ಮೇರೆ ಮಿಡುಕದೆ' ಎಂಬಿವು ಅಕ್ಷರ ಸಾದೃಶ್ಯದಿಂದ ಹುಟ್ಟಿದ ದುಷ್ಟಪಾಠಗಳೆಂದು ಹೇಳಬಹುದು.[೨೨] ಹೀಗೆ ಒಂದು ಪಾಠವನ್ನು ನಿರ್ಣಯಿಸುವಲ್ಲಿ ಅದರ ಬೇರೆ ಬೇರೆ ಆಕರಗಳನ್ನು ಸಂಪಾದಕನು ಗಮನಿಸಬೇಕಾಗುತ್ತದೆ.

೩. ಒಂದು ಪದ್ಯ ಇಲ್ಲವೆ ಗದ್ಯಭಾಗವನ್ನು ಪರಿಷ್ಕರಿಸುವಲ್ಲಿ ಬೇರೆಡೆಗೆ ಇದ್ದ ಅಂಥ 'ರಚನೆ'ಗಳನ್ನು ಸಂಪಾದಕ ಅರಿತಿರಬೇಕು. ಕವಿಚಕ್ರವರ್ತಿ ಜನ್ನ ನಿರ್ಮಿತ ಅಮೃತಾಪುರ ಶಾಸನದ

ಕಳದೊಳ್, ಕಟ್ಟಂಕದೊಳ್, ಬಂದಡಸಿದ ಬಯಲೊಳ್, ಭಾಸೆಯೊಳ್, ಕೋಟೆಯೊಳ್, ದೋ। ರ್ವಳದೊಳ್, ತಳ್ತಾಂಕೆಯೊಳ್, ಕೈದೆಗೆಯದ ಭರದೊಳ್, ಪೂಣ್ಕೆಯೊಳ್, ನಚ್ಚಿನಾಳ್, ಮಾ। ಬ್ಬಳದೊಳ್ ಕಣ್ಣುಳ್ಳುವಾಳ್, ಹೊಯ್ಸಳನ ಕಟಕದೊಳ್ತಾನೆ ಸಂದಗ್ಗದಾಳ ।
ಗ್ಗಳದಾಳ್ ಬಲ್ಲಾಳದೇವಂಗಮಿತನ ಬಸವಂ ದಂಡನಾಥತ್ರಿಣೇತ್ರಂ ॥[೨೩]

ಈ ಪದ್ಯವನ್ನು

"ಕಳದೊಳ್ ಕಟ್ಟಂಕ[ದಾ]ಳ್, ಬಂದಡಸಿದ ಬಯಲೊಳ್ ಭಾಸೆ[ಯಾಳ್ ಕೋಟೆಯೊಳ್ ದೋರ್ವಳ[ದಾ]ಳ್, ತಳ್ತಾಂಕೆಯೊಳ್ ಕೈದೆಗೆಯದ ಭರ[ದಾ]ಳ್......."

ಎಂದು ತಿದ್ದಬೇಕೆಂದು ತೋರುತ್ತದೆ. ಈ ತಿದ್ದುಪಡಿಗೆ ಆಧಾರ

ಗುರು ದೀಕ್ಷಾವಿಧಿಗಳ್ಗೆ, ಮಂತ್ರಿ ಹಿತಕಾರ್ಯಾಲೋಚನಕ್ಕಾಳ್ದನು ।
ರ್ವರೆಯಂ ಕಾವಗುಣಕ್ಕೆ, ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್ ।
ಗುರುಭಾರಕ್ಕಿಱಿವಾಳ್ ರಣಕ್ಕೆ, ತುಱಿಲಾಳ್ ಕಟ್ಟಾಯದೊಳ್, ಮೇಳದಾಳ್
ಪರಿಹಾಸಕ್ಕೆನಿಸಿರ್ದನೆಂತು ಮಱಿವಂ ದುರ್ಯೋಧನಂ ಕರ್ಣನಂ ॥[೨೪]

ಎಂಬ ಗದಾಯುದ್ಧದ ಪದ್ಯ. ಹೀಗೆ ಒಬ್ಬ ಕವಿಯ ಒಂದು 'ರಚನೆ'ಯ ಬಲದಿಂದ ಹೋಲಿಕೆ ರೂಪದ ಬೇರೆ 'ರಚನೆ'ಗಳನ್ನು ತಿದ್ದಲು ಸಾಧ್ಯವಾಗುತ್ತದೆ.

೪. ಸೂಕ್ತಿಸುಧಾರ್ಣವದಂತಹ ಸಂಕಲನ ಗ್ರಂಥ, ದರ್ಪಣದಂತಹ ಪ್ರಾಚೀನ ಪ್ರಯೋಗಯುತ ಗ್ರಂಥಗಳ ಪದ್ಯಗಳನ್ನು ಪರಿಷ್ಕರಿಸುವಲ್ಲಿ ಅವುಗಳ ಆಕರವನ್ನು ಅವಶ್ಯ ನೋಡಬೇಕು. ಉದಾ :

---

೨೨. ಪಂಪಭಾರತದ ಕೆಲವು ಪದ ಪಾಠಗಳು. ಪ್ರ.ಕ. ೫೦-೨.
೨೩. EC. VI, ತರೀಕೆರೆ ೪೫, ಅಮೃತಾಪುರ.
೨೪. ಗದಾ ೫-೩೫.

ಅ. ತಟಿತಟಿನೆ ನೇಸರ್ಮೂಡಿದುದು ಕಟ್ಟಿಲೆಗೆ ಮಿಟ್ಟು ಮೂಡುವ

ತೆಱದಿಂ [ಶಮದ ೨೦೪-ಖ ಪ್ರತಿ] [ಬಕಂಗೆ-ಪಂ. ಭಾ ೩-೨೭]

ಬ. ಬಗೆದಂ ಶ್ರೀಗಂಗ ಚಕ್ರಾಯುಧಂ [ಶಮದ ೨೨೮]

[ಲೋಕಮಂ ಪೊರೆಯಲ್ಕೆಂದಸಹಾಯ ಶೌರ್ಯನೊಗೆದಂ ಶ್ರೀಗಂಗ ಚಕ್ರಾಯುಧಂ ಕಾಸಾ, ೩೬೧]

ಕ. ಇರು ಮರುಳೆ ಶುಷ್ಕವೈಯಾ ।
ಕರಣಂಗಕ್ಕುಮೆ ನವೀನ ಕಾವ್ಯಾರಂಭಂ... [ಶಮದ ೨೪೧-ಖ ಪ್ರತಿ]
ಇರು ಮರುಳೆ ಶುಷ್ಕ ವೈಯಾ ।
ಕರಣಂಗಂ ಶುಷ್ಕ ತಾರ್ಕಿಗಂಗಂ ಬೆಳ್ಳ ।
ಕ್ಕರಿಗಂಗಂ ವಿಷಯಮೆ ಕಾ ।
ವ್ಯರತ್ನಮತಿ ಚತುರಕವಿಕದಂಬಕ ವಿಷಯಂ ॥ [ಆದಿ ೧-೨೪]

ದರ್ಪಣದ ಪ್ರಯೋಗಗಳಿಗೂ ಅವುಗಳ ಮೂಲಕ್ಕೂ ಇರುವ ವ್ಯತ್ಯಾಸವನ್ನಿಲ್ಲಿ ಕಾಣಬಹುದು.

ಶಾಸನಗಳು ನಮ್ಮ ಸಾಹಿತ್ಯದ ಒಂದು ಅಂಗ. ಅವುಗಳ ಅಭ್ಯಾಸವು ಸಂಪಾದನ ಕಾರ್ಯದಲ್ಲಿ ಅನೇಕ ತೊಡಕುಗಳನ್ನು ಬಿಡಿಸಿಕೊಡುತ್ತದೆ. ಉದಾ :

೧. ಪಿರಿಯಂ ಬೂತುಗನಾತನಿಂ ಮಮಳನಾತಂಗಂ ನೊಳಂಬಾಂತಕಂ ।
ಪಿರಿಯಂ ನೆಟ್ಟನೆ ದಾನ ಧರ್ಮದೆಡೆಯೊಳ್ ಚಾವುಂಡರಾಯಂ ಕರಂ ।
ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿ ।
ತ್ತರಿಸುತ್ತಿರ್ಪುದಱಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ ॥[೨೫]

ಈ ಪದ್ಯದ ಮೊದಲ ಚರಣದಲ್ಲಿ 'ಪಿರಿಯಂ ಬೂತುಗನಾತನಿಂ ಮಮಳ' ಎಂಬ ಪದಗಳಿವೆ. (ದಾನದಲ್ಲಿ) ಬೂತುಗ ಹಿರಿಯನು. ಆತನಿಗಿಂತ ಮಮಳ (ಹಿರಿಯನು) ಎಂದು ಇದರ ಅರ್ಥ. ಪ್ರಾಚೀನ ಕಾಲದಲ್ಲಿ ಬಿಂದುವಿಗೆ ಬದಲು ಕೆಲವು ಸಲ ಒತ್ತು ಕೊಡುವುದರಿಂದ 'ಪಿರಿಯಂ ಬೂತುಗನಾತನಿಮ್ಮಮಳ' ಎಂದು ಓದಿದರೆ (ದಾನದಲ್ಲಿ) ಬೂತುಗ ಹಿರಿಯನು, ಆತನಿಗಿಂತ ಅಮಳ (ಹಿರಿಯನು) ಎಂದು ಓದಲು ಮನಸ್ಸಾಗುತ್ತದೆ. ಈ ಮಮಳ, ಅಮಳಗಳಲ್ಲಿ ಯಾವುದು ಸರಿ? ಈ ಮಹಾದಾನಿ ಯಾರು? ಎಂಬುದನ್ನು ಅರಿಯಲು ಶಾಸನಗಳ ಮೊರೆಹೊಗಬೇಕು. ಗಂಗಮನೆತನದಲ್ಲಿ ಬೂತುಗ, ಬೂತುಗನ ಮಗ ಮರುಳ, ಮರುಳನ ಚಿಕ್ಕಪ್ಪ ನೊಳಂಬಾಂತಕ, ನೊಳಂಬಾಂತಕನ ಮಂತ್ರಿ ಚಾವುಂಡರಾಯ ಸುಪ್ರಸಿದ್ಧ ವ್ಯಕ್ತಿಗಳು. ರನ್ನನು ಮೇಲಣ ಪದ್ಯದಲ್ಲಿ ಈ ಎಲ್ಲ ವ್ಯಕ್ತಿಗಳ ಹೆಸರನ್ನು ಬಳಸಿರುವುದರಿಂದ ಅಲ್ಲಿ ಬರುವ ಅಮಳ ಇಲ್ಲವೆ ಮಮಳನೆಂಬ ವ್ಯಕ್ತಿಯು ಈ ಸಮೂಹದ ಮರುಳನಾಗಿರಬೇಕು ಹೀಗಾಗಿ "ಪಿರಿಯಂ ಬೂತುಗನಾತನಿಂ

೨೫. ಅಜಿ, ಪು. ೧೨-೯ (ಕಾವ್ಯಕಲಾನಿಧಿ ಆವೃತ್ತಿ).

ಮ[ರು]ಳನಾತಂಗಂ ನೊಳಂಬಾಂತಕಂ" ಎಂದು ಅಜಿತಪುರಾಣದ ಈ ಪಾಠವನ್ನು ತಿದ್ದಿಕೊಳ್ಳಬೇಕಾಗುತ್ತದೆ.

೨. ಕಳಶಜನನಿಂತು ಕೊಲಿಸಿದ ।
ಖಳನೆ ಗಡಂ ಧರ್ಮನಂದನಂ ಕ್ರೂರದಿನಂ ।
ಗಳ ಪೆಸರಂ ಮಱೆಯಿಸಿ ಮಂ ।
ಗಳವಾರಂ **ಕಡ್ಡವಾರ**ವೆಂಬಂತೆ ವಲಂ ॥

ಗದಾಯುದ್ಧದ ಈ ಪದ್ಯ (೩-೨೮) ಕ್ಕೆ 'ವಡ್ಡವಾರ' ಎಂಬ ಪಾಠವಿದೆ. ಶಾಸನಗಳನ್ನು ಅವಲಂಬಿಸಿದಲ್ಲಿ ಸತ್ಯಪಾಠ ನಿರ್ಣಯ ಸಾಧ್ಯವಾಗಬಹುದಾಗಿದೆ.

ಅ – "ಶಕವರ್ಷ ೧೧೧೦ನೆಯ ಪ್ಲವಂಗ ಸಂವತ್ಸರದ ಪುಷ್ಯ ಬಹುಳ ೧೦
ವಡ್ಡವಾರವುತ್ತರಾಯಣಸಂಕ್ರಮಣವ್ಯತೀಪಾತದ...." (ತೊರಗಲ್ಲ ಶಾಸನ)

ಬ – "ಶಕವರ್ಷಮುಲು ೧೦೮೪ವುನೇಂಟ ಚಿತ್ರಭಾನು ಸಂವತ್ಸರ ಮಾಘ
ಶುದ್ಧ ೧೩ ವಡ್ಡವಾರಮುನಾಡು...." (ಅನಮಕೊಂಡ ಶಾಸನ)

ಕ – "ಶಕವರ್ಷದ ೧೧೨೭ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಶುದ್ಧ ಬಿದಿಗೆ
ವಡ್ಡವಾರದೊಳಾದ ಸಂಕ್ರಮಣ ಸಮಯದೊಳು–" (ಬೆಳಗಾಮೆ ಶಾಸನ)

ಈ ಮೊದಲಾದ ಶಾಸನಗಳಲ್ಲಿ 'ವಡ್ಡವಾರ' ಎಂಬ ಪದ ಬರುತ್ತದೆ. ಇದು ಬುಧವಾರ ಇಲ್ಲವೆ ಗುರುವಾರವೆಂದು ಫ್ಲೀಟ, ಬಿ.ಎಲ್. ರೈಸ್ ಮತ್ತು ಬಾರ್ನೆಟ್ ಹೇಳುತ್ತಾರೆ. ಈ ಹೇಳಿಕೆಗಳನ್ನು ಗಮನಿಸಿ ಮಾಘನ ಶಿಶುಪಾಲವಧೆಯ ಒಂದು ಪದ್ಯವನ್ನು ವಿವೇಚಿಸುತ್ತ ಡಾ. ಡಿ.ಎಲ್.ಎನ್. ಅವರು ವಡ್ಡವಾರವೆಂದರೆ ಶನಿವಾರವೆಂಬ ನಿರ್ಣಯವನ್ನು ತಲುಪಿದ್ದಾರೆ (ಕನು ೩೦-೧೦). ಇದರಿಂದ ಶನಿವಾರದ ಇನ್ನೊಂದು ಹೆಸರು 'ವಡ್ಡವಾರ'ವೆಂದೂ ಗದಾಯುದ್ಧದಲ್ಲಿಯ 'ಕಡ್ಡವಾರ'ವೆಂಬುದು ಕೈಬಿಡಬೇಕಾದ ದುಷ್ಟಪಾಠವೆಂದೂ ಶಾಸನಗಳಿಂದ ನಿರ್ಣಯಿಸಬಹುದಾಗಿದೆ.[೨೬]

ಇದಲ್ಲದೆ ಶೂದ್ರಕಕಾವ್ಯದ ಸಮುದ್ರವರ್ಣನೆಯ ಪದ್ಯ ನಾಲ್ಕು ಶಾಸನಗಳಲ್ಲಿ,[೨೭] ಆದಿಪುರಾಣದ ಒಂದು ಪದ್ಯ ಹಳೆಬೀಡಿನ ಶಾಸನದಲ್ಲಿ,[೨೮] ಅಜಿತಪುರಾಣದ ಪದ್ಯಗಳು ಲಕ್ಕುಂಡಿ

೨೬. "ಶನಿವಾರದ ದಿನ ಭಿಕ್ಷೆ ಬೇಡಲು ಬಂದ ಹಳ್ಳಿಯ ಹೆಂಗಸೊಬ್ಬಳು 'ಬುದ್ಧಿ, ವಡ್ಡವಾರ ಅಕ್ಕಿ ಕೊಡಿ' ಎಂದು ಹೇಳಿದ್ದನ್ನು ಕೇಳಿ ಅಚ್ಚರಿಯುಂಟಾಯಿತು" ಎಂಬ ಡಾ. ಡಿ.ಎಲ್.ಎನ್. ಅವರ ಅನುಭವಕ್ಕೆ ಬಂದ ಒಂದು ದೃಷ್ಟಾಂತವನ್ನು ಇಲ್ಲಿ ನೆನೆಯಬಹುದು. (ಶಬ್ದವಿಹಾರ ೧೧).

೨೭. SII IX-i No. 333 ಮಗಲ ಗ್ರಾಮ. (ಬಳ್ಳಾರಿ ಜಿಲ್ಲೆ)
SII IX-i No. 343 ಬೆಣ್ಣೆಕಲ್ಲ ಗ್ರಾಮ.
SII IX-i No. 360 ಸೋಗಿ.
E.C. V-ii ಚೆನ್ನರಾಯ ಪಟ್ಟಣ ೧೯೭ ಶಿವರ ಗ್ರಾಮ.

೨೮. E.C. XV ಬೇಲೂರ ೩೩೫.

ಶಾಸನದಲ್ಲಿ,[೨೯] ನಾಗಚಂದ್ರನ ಪದ್ಯಗಳು ವಿಜಾಪುರ, ಬೆಳ್ಗೊಳ ಶಾಸನಗಳಲ್ಲಿ,[೩೦] ಸೂಕ್ತಿಸುಧಾರ್ಣವದ ಹತ್ತಾರು ಪದ್ಯಗಳು ಹಲವು ಶಾಸನಗಳಲ್ಲಿ,[೩೧] ಕಾವ್ಯಾವಲೋಕನ ಶಬ್ದಮಣಿದರ್ಪಣಗಳಲ್ಲಿಯ 'ನುಡಿದನೇ ಕಾವುದನೇ' ಎಂಬ ಪದ್ಯ ಶ್ರವಣಬೆಳ್ಗೊಳ ಶಾಸನದಲ್ಲಿ[೩೨]–ಹೀಗೆ ಕೆಲವು ಗ್ರಂಥಗಳ ಪದ್ಯಗಳು ಶಾಸನಗಳಲ್ಲಿ ನೆಲೆನಿಂತಿವೆ. ಈ ಗ್ರಂಥಗಳ ಪರಿಷ್ಕರಣ ಕಾರ್ಯದಲ್ಲಿ ಶಾಸನಗಳಲ್ಲಿಯ ವಿಶ್ವಸನೀಯ ಪ್ರಾಚೀನ ಪಾಠಗಳ ನೆರವು ತೀರ ಅವಶ್ಯ.

ಪೌರಾಣಿಕ ಕಥೆ ಮತ್ತು ಘಟನೆಗಳು ನುಡಿಗಟ್ಟುಗಳಾಗಿ, ಕಾವ್ಯಗಳಾಗಿ ಬಳಕೆಗೊಂಡ ಸಂದರ್ಭಗಳೂ ಹಲವುಂಟು. ಮೂಲಕಥೆ ಮತ್ತು ಘಟನೆಗಳ ಪರಿಚಯವಿಲ್ಲದಿದ್ದರೆ ಕೆಲವು ಸಲ ಪಾಠನಿರ್ಣಯ ಸಂದೇಹವೊಡ್ಡುತ್ತದೆ. ಉದಾ :

೧. ಕನಕನ ಬೇಳ್ವೆ ತಗುಳ್ದುದು ಕನಕನನೆಂಬೊಂದು ಮಾತು ಧರೆಗೆಸೆಯೆ

[ಪಂಭಾ ೮–೪೪]

ಕನಕನ ಬೇಳ್ವೆಯಿಂದೊಗೆದ ಕೀರ್ತಿಗೆಯಿಂ [ಪಂಭಾ ೮–೪೮]

೨. ಭಗವತಿಯೇಱುವೇಟ್ವ ತೆರದಿಂ ಕಥೆಯಾಯ್ತಿವರೇಱು [ಪಂಭಾ ೧೦–೧೬]

೩. ಈ ವೃದ್ಧ ಬ್ರಾಹ್ಮಣನನೀ ಮುಪ್ಪಿನ ಮರುಳನನೀ ಗೌತಮನ

ಗೋವನನೀ ಬ್ರಹ್ಮೇತಿಕಾಱನಂ [ನಂಬಿ ೬–೫೧] (ಗೋವನೀ)

೪. ಕಾಳಿಯ ಕಂಕಾಳದಿಂದ ಮುನ್ನ [ಬವ ೨] (ಕಂಕಾಣ, ಕಂಕಣ)

೫. ಕಾಲಾಗ್ನಿರುದ್ರನ ಮೇಳಾಪವನಱಿಯದವರು ಕಾಳು ಬೇಳೆನುತಿಪ್ಪರಯ್ಯಾ [ಬವ ೨೨೭]

೬. ನಿಮ್ಮ ಹೇಳಿದ ಹೇಳಿಕೆಯಿಂದ ತಿಂಬೆಱ ಮೈಲಗೆ ಮೇಳವಾಡುತ್ತಿದ್ದ ಕಾಣಾ

[ಬವ ೫೬೫]

---

೨೯. SII XI-i 52-53 ಲಕ್ಕುಂಡಿ ಶಾಸನಗಳು.

೩೦. E.C. II 64 = ಪಂರಾ ೧–೨೪, ೨೫ E. C II 72 = ಪಂರಾ ೧–೧೫
E.C. II 127 = ಪಂರಾ ೧–೨೦ E.C.II. 140 = ಪಂರಾ ೧–೨೯, ೨೦=ಮಲ್ಲಿ ೧–೨೧,
E.C.II. 140 = ಪಂರಾ ೧–೨೬. ೨೭, E.C.II. 158=ಪಂರಾ ೧–೧೮(=ಮಲ್ಲಿ ೧–೨೦)

೩೧. ಸೂಕ್ತಿ ಪು. ೨, ೩, ೪.

೩೨. E.C, II. 59 ಶ್ರವಣಬೆಳಗೊಳ. (ಶಬ್ದ ಮಣಿದರ್ಪಣದಲ್ಲಿಯ "ಸಿಡಿಲನ್ನಂ ಸಿಂಗದನ್ನಂ" ಸೂ. ೧೭೧ ಎಂಬ ಪದ್ಯ E.C.II. 325. 345. E.C. V-ii. ಚನ್ನರಾಯಪಟ್ಟಣ ೨೬೫, ಅರಕಲಗೂಡು–೬೯, E.C.XII, ತಿಪಟೂರು ೪೨ ಮತ್ತು MAR 1926 P. 10. ಇವುಗಳಲ್ಲಿ ಕಂಡುಬರುತ್ತದೆ).

೭. ಆ[೧]ಮಿಹಿ[೨]ಲಾಳು ಭೋಜ ದೇವು[೩]ಲಾಳು [ಬವ ೨೨೭]

[೧ ಆನು, ೨ + ಳಾ, ೩ವ,]

೮. [೧]ತರುಣಿ[೨]ಹರಿಣಿಯು[೩]ಪದೇಶದಿಂದೆ[೪]ಗತಿಪಥ ಮುಕ್ತಿಯ ಪಡೆದು

ಬಟ್ಟೆಯ ಹತ್ತನೆ[೫]ವಿನಾಶಕ್ತಿರಾಯನು [ಬವ ೬೫೪]

[೧–೨ X, + ಯ; ೩ಯ ಹಿತೋ. ೪–೫ ಸುಪಥವನ್ನೈದನೆ?, ಸುರಪದವನ್ನೈದನೆ?]

೯. ಒಂದು ಗೀಜಗನ ಉಪದೇಶದಿಂದೆ ಪೌಲಸ್ತ್ಯನಂದು ಹಡೆಯನೆ ದಶ

[೧]ಮುಖನ[೨][ಬವ ೬೫೪] (೧–೨ ಮುಖವ)

ಈ ಹೇಳಿಕೆಗಳಿಗೆ ಯಾವ ಪುರಾಣದ, ಯಾವ ಇತಿಹಾಸದ ಯಾವ ಮೂಲೆಯಲ್ಲಿ ಆಧಾರವಿದೆಯೆಂದು ಗೊತ್ತಾಗದೆ ಪಾಠನಿರ್ಣಯ ಅಸಾಧ್ಯವಾಗುತ್ತದೆ.

ಯುಗಧರ್ಮಪ್ರಜ್ಞೆಯು ಕವಿಗೆ ತನ್ನ ಕಾಲದ ಪ್ರತಿಯೊಂದು ವಸ್ತುವೂ ಕಾವ್ಯೋಪಯೋಗಿಯಾಗಿರುತ್ತದೆ. ಹೀಗಾಗಿ ಆ ಕಾಲದ ಎಷ್ಟೋ ಉಪಕರಣಗಳು ಕಾವ್ಯದಲ್ಲಿ ಬಳಕೆಯಾಗಿರುತ್ತವೆ. ಈಗ ಬಳಕೆಯಲ್ಲಿಲ್ಲದ ಆ ವಸ್ತುಗಳ ಹೆಸರು, ಸ್ವರೂಪಗಳನ್ನು ಆ ಕಾಲದಷ್ಟು ಹಿಂದೆ ಹುಡುಕಬೇಕಾಗುತ್ತದೆ. ಉದಾ :

೧. ಮದನನವತಾರಮಂ ಕನ ।

ಕದಂಡ ಚಾಮರಮನುನ್ಮದೇಭಮನುತ್ತುಂ ।

ಗದ ಛತ್ತಗಾವೆಯಂ ಪಡೆ ।

ದುದಾತ್ತ ಕವಿತಿಲಕನೆನಿಸಿದಂ ಕವಿರತ್ನಂ ॥[೩೩] [ಮದನಾವತಾರಮಂ]

ಚಕ್ರವರ್ತಿ ತೈಲಪನು ಕವಿ ರನ್ನನಿಗೆ ದಯಪಾಲಿಸಿದ ವಸ್ತುಗಳಿವು. ಇಲ್ಲಿಯ 'ಮದನನವತಾರ' 'ಮದನಾವತಾರ'ಗಳಲ್ಲಿ ಯಾವುದು ಯೋಗ್ಯಪಾಠ? ಇದಕ್ಕೆ ಅರ್ಥವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಂಸ್ಕೃತ, ಕನ್ನಡ ಭಾಷೆಯ ಯಾವ ನಿಘಂಟುಗಳೂ ಈ ಪ್ರಶ್ನೆಗೆ ಉತ್ತರ ಹೇಳುವುದಿಲ್ಲ. ಈ ಸಂದರ್ಭದಲ್ಲಿ ಗಂಗ ಮಾರಸಿಂಹನ ಕೂಡಲೂರ ತಾಮ್ರಪಟ (ಕ್ರಿ.ಶ. ೯೬೩) ನೆರವಾಗಿ ನಿಲ್ಲುತ್ತದೆ. ಅಲ್ಲಿ ಬರುವ

ಸಸ್ನೇಹಾತ್ಸಕಲ ಮಹೀಶ ಕೃಷ್ಣಭೂಪೋ

ಭೂನಾಥಃ ಖಲು ಮದನಾವತಾರ ಸಂಜ್ಞಾ

ಛತ್ರಂ ತನ್ನರಪತಿಭಿರ್ನ್ನಕೈಶ್ಚಿದಾಪ್ತ

ಸ್ಸಂಪ್ರಾಪ್ತೋ ಮರುಳ ಇತಿ ಪ್ರತೀತನಾಮಾ ।[೩೪]

---

೩೩. ಅಜಿ. ಪು. (೧೨–೪೯ ಕಾವ್ಯಕಲಾನಿಧಿ ಆವೃತ್ತಿ)

೩೪. MAR. 1921. P. 12; A.D. 963 ಮತ್ತು EC VIII ನಗರ ೩೫ ಹುಮ್ಮ ಚ (೧೦೭೭).

ಎಂಬ ಭಾಗದಲ್ಲಿ "ಮದನಾವತಾರ ಸಂಜ್ಞಾ ಛತ್ರಂ" ಎಂದಿರುವುದರಿಂದ ಮದನಾವ ತಾರವೆಂಬುದು ಒಂದು ಛತ್ರ (ಕೊಡೆ) ವಿಶೇಷವೆಂದು ಸ್ಪಷ್ಟವಾಗಿ, ಅಜಿತ ಪುರಾಣದ 'ಮದನನವತಾರ'ವೆಂಬ ದುಷ್ಟಪಾಠವನ್ನು ತ್ಯಜಿಸಬೇಕಾಗುತ್ತದೆ. ಗಂಗ ಬೂತುಗನ ಹಿರಿಯ ಮಗನಾದ ಮರುಳನಿಗೆ ಹೆಣ್ಣು ಕೊಟ್ಟ ಮಾವನಾದ ರಾಷ್ಟ್ರಕೂಟ ಮೂರನೆಯ ಕೃಷ್ಣನು, ಅಪರೂಪ(ನಕ್ಕೈಶ್ಚಿದಾಪ್ತಂ)ವಾದ ಈ ಛತ್ರವನ್ನು ನೀಡಿದನೆಂದು ಈ ಶಾಸನದ ಅರ್ಥ. ಇಂಥ ರಾಜಮರ್ಯಾದೆ ರನ್ನನಿಗೂ ದೊರೆತುದು ಕವಿಯ ಘನತೆಯ ದ್ಯೋತಕ.[೩೫]

೨. "ರಾಜರಾಜಂ ಸಿಂಧುಜನರವುನೆಗೆ ಬಂದು ವಾಹನದಿಂದಮಿಳಿದು ಕುರುಪಿತಾಮಹಂಗೆರಗಿ ಪೊಡೆವಡುವುದುಂ, ಪರಸಿ ಮಂಚದೊಳೇಱಿಲ್ ಕರೆದೊಡೊಲ್ಲೆಂ ಮಹಾಪ್ರಸಾದಮಿಂತಿರ್ಪೆನೆಂದು ಮಣಿಮಯ **ಹೇಮಾಸನದೊಳ್** ಕುಳ್ಳಿರ್ದನಂ ನೋಡಿ"[೩೬] [ಲೋಹಾಸನ].

ಇಲ್ಲಿ ಹೇಮಾಸನ, ಲೋಹಾಸನ ಎಂಬ ಎರಡು ಪಾಠಗಳಿವೆ. ಲೋಹಕ್ಕಿಂತ ಹೇಮ ಬೆಲೆಯುಳ್ಳುದು ಎಂಬ ಭಾವನೆಯಿಂದ ಸಂಪಾದಕರು ಹೇಮಾಸನವನ್ನು ಮೂಲಪಾಠವೆಂದು ಒಪ್ಪಿಕೊಂಡಂತಿದೆ. ಇದು ನಿಜವಿದ್ದರೆ ದುರ್ಯೋಧನನ ರಾಜ ವ್ಯಕ್ತಿತ್ವಕ್ಕೆ ಒಪ್ಪುವ ಬೆಲೆಯುಳ್ಳ 'ಹೇಮಾಸನ' ಪದವನ್ನು ಬಿಟ್ಟು ಪ್ರಾಚೀನ ಅಭ್ಯಾಸಿ 'ಲೋಹಾಸನ' ಪಾಠವನ್ನೇಕೆ ಸೃಷ್ಟಿಸಿಕೊಂಡ? ಎಂಬ ಪ್ರಶ್ನೆ ಹುಟ್ಟುವುದು ಸ್ವಾಭಾವಿಕ. ಆದರೆ ವಸ್ತುಸ್ಥಿತಿಯೇ ಬೇರೆಯಿದೆ. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ ಹೇಳುವ ಹಲವು ಆಸನಗಳಲ್ಲಿ 'ಲೋಹಾಸನ'ವೂ ಒಂದು.

> ಪಂಚಭಿಸ್ಸಪ್ತಭಿರ್ವಾಪಿ ನವಭಿರ್ಲೋಹಜೈಃ ಪದೈಃ ।
> ಲೋಹಪಟ್ಟ ಕೃತಾಧಾರೈಃ ಲೋಹಜಾಲಕ ಮೂರ್ಧನಿ ।
> ಪಟ್ಟಿಕಾ ಪಟ್ಟಗರ್ಭಸ್ಥಮ್ ಕಾರ್ಪಾಸೇನ ವಿನಿರ್ಮಿತಂ ।
> ಲೋಹಾಸನಮಿದಮ್ ಪ್ರೋಕ್ತಮುಪರಿಷ್ಟಾಸ್ತು ಕೀಲಿತಮ್ ॥[೩೭]

"ಐದು, ಏಳು ಅಥವಾ ಒಂಭತ್ತು ಲೋಹಗಳ ಮಿಶ್ರಣದಿಂದ ರಚಿಸಿದ ಕಾಲುಗಳುಳ್ಳ, ಆ ಲೋಹದ ಪಟ್ಟಿಗಳಿಂದಲೇ ಹೆಣೆಯಲ್ಪಟ್ಟ ಒಂದು ಪೀಠವಿಶೇಷವೇ ಲೋಹಾಸನ..." ಎಂದು ಸರ್ವಜ್ಞ ಸೋಮೇಶ್ವರನು ವಿವರಣೆ ನೀಡುತ್ತಾನೆ. ಇದೊಂದು ಗೌರವಪೂರ್ಣ ಪೀಠ. ಅದಕ್ಕಾಗಿ ಅರ್ಜುನನ ಪಟ್ಟಬಂಧ ಸಂದರ್ಭದಲ್ಲಿ

---

೩೫. ಮದನಾವತಾರ (ಡಿ.ಎಲ್. ನರಸಿಂಹಾಚಾರ್) : ಪ್ರಕ. ೩೮–೪.
೩೬. ಪಂಭಾ ೧೦–೫ ಗ.
೩೭. ಮಾನಸೋಲ್ಲಾಸ ೯–೩, ೪೨, ೪೩.

ಸಾರ್ಚಿದ ಲೋಹಾಸನದೊಳ ।
ಮರ್ಚಿದ ಬೊಂದರಿಗೆ ಪಳಿಯ ಬಿತ್ತರಿಗೆ ಕರಂ ।
ಪೆರ್ಚುವ ಮಹಿಮೆಯನೆಯ್ದೆ ನಿ ।
ಮಿರ್ಚೆ ಮಹಾಮಕುಟಬದ್ಧರೋಳಿಯೊಳಿರ್ದರ್ ।[೩೮]

ಎಂದು ಹೇಳುತ್ತ ಮಹಾಮಕುಟಬದ್ಧರ ಆಸನ ಪ್ರಸಂಗದಲ್ಲಿ 'ಲೋಹಾಸನ'ವನ್ನು ಕಲ್ಪಿಸಿದ್ದಾನೆ, ಪಂಪ. ಇದು ಪಂಪನ ಕಾಲದಲ್ಲಿ ರೂಢಿಯಲ್ಲಿದ್ದ ವಿಶೇಷ ಆಸನ. ಈ ವಿಶಿಷ್ಟಪದ ಅರ್ಥವಾಗದ ಕಾರಣ ಅಭ್ಯಾಸಿಯೊಬ್ಬನು ಉದ್ದೇಶಪೂರ್ವಕವಾಗಿ 'ಹೇಮಾಸನ' ಪದವನ್ನು ಸೃಷ್ಟಿಸಿಕೊಂಡಿರುವನು. ಈ ವಿವೇಚನೆಯಿಂದ ಈಗ ಪಂಪಭಾರತದಲ್ಲಿ ಅಂಗೀಕರಿಸಲ್ಪಟ್ಟ 'ಹೇಮಾಸನ'ವನ್ನು ತ್ಯಜಿಸಿ 'ಲೋಹಾಸನ' ಸ್ವೀಕರಿಸಬೇಕೆಂದು ಸ್ಪಷ್ಟವಾಗುತ್ತದೆ.[೩೯] ಹೀಗೆ ಆ ಕಾಲದ ವಸ್ತು ಉಪಕರಣಗಳ ಪರಿಚಯ ಸಂಪಾದಕನಿಗೆ ಬೇಕು. ಇದಕ್ಕಾಗಿ ಪ್ರಾಚೀನ ವಿಶ್ವಕೋಶಗಳ ಅಭ್ಯಾಸ ತೀರ ಅವಶ್ಯ.

ಪ್ರಾಚೀನ ಉಪಕರಣಗಳ ಜೊತೆಗೆ ಆ ಕಾಲದ ಆಚರಣೆ, ಆಟ-ಪಾಠಗಳನ್ನೂ ಅರಿಯಬೇಕಾಗುತ್ತದೆ. ಉದಾ :

ಅನುಶ್ರುತವ ಮಾಡಿಹೆನೆಂದು ಉಪ್ಪರಗುಡಿಯನೆತ್ತಿ
ಮಾಡುವ ಭಕ್ತನ ಮನೆ ಅಟ್ಟಿಕ್ಕುವ ರಂದಣಗಿತ್ತಿಯ ಮನೆ.
ಸರ್ವಜೀವರೊಳಗೆ ಚೈತನ್ಯಾತ್ಮಕ ಶಿವನೆಂದು ಮಾಡುವುದು
ಭೂತದಯಕಿಕ್ಕುವುದು ಸಯಧಾನದ ಕೇಡು.
ಸೂಳೆಯ ಮಗ **ಮಹಳವ** ಮಾಡಿದಡೆ ತಾಯ ಹೆಸರಾಯಿತ್ತು
ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ

(ಮಾಳ, ಮೇಳ) ಚ. ಬ. ವ. ೮೦೮.

ವಹಾಲಯ>ಮಹಾಲ>ಮಹಲ>ಮಹಳ>ಮಾಳ ಎಂದರೆ ಶ್ರಾದ್ಧ ಎಂದು ಇದಕ್ಕೆ ನಿಷ್ಪತ್ತಿ ಮತ್ತು ಅರ್ಥ ಹೇಳಬಹುದು. ಆದುದರಿಂದ ಇಲ್ಲಿ 'ಮಹಳ', 'ಮಾಳ' ಎರಡೂ ಯೋಗ್ಯಪಾಠ 'ಮೇಳ' ದೋಷಪಾಠ. ಉತ್ತರಕರ್ನಾಟಕದಲ್ಲಿ ಮಾಳ ಎಂಬ ಆಚರಣೆ, ಶಬ್ದದೊಂದಿಗೆ ಇನ್ನೂ ಬಳಕೆಯಲ್ಲಿದೆ. ಯುಗಾದಿ ಇಲ್ಲವೆ ಭಾದ್ರಪದ ತಿಂಗಳಲ್ಲಿ ಇದನ್ನು ಆಚರಿಸುತ್ತಾರೆ.[೪೦] ಇದೇ ರೀತಿ.

---

೩೮. ಪಂಭಾ ೧೪–೨೪.("ಇಕ್ಕಿದ ಲೋಹಾಸನಂಗಳೊಳಂ, ಮಣಿಖಚಿತ ಕನಕಪೀಠಂಗಳೊಳಂ, ಕಟ್ಟಿದ ಬೊಂದರಿಗೆಯೊಳಂ" – ಪಂಭಾ ೯–೨೮ ಗ ನೋಡಿರಿ. ಮತ್ತು SII IX-i.67 (984), E.C. VIII No. 35 (1077) ನೋಡಿರಿ).

೩೯. The Eastern Chalukyas of Vengi P. 100 ನೋಡಿರಿ.

೪೦. ಧಾರವಾಡದ ಹರಿಜನರು ಕ. ಭಾ. ೨–೧.

ಸಿಂಹಮಾಡುವರ ಬಾಲಮನಾಡಿದರೆಂಬ ಮಾಱ್ಕೆಯಿಂ [ಪಂಭಾ ೬–೬೯] (ಜಿಹ್ಮ, ಜಿಂಹ)

ಬಂದು **ನಿಂದು ಮೊಲೆ**ನೀರ ಮಿಂದವರೆಲ್ಲರು ಹೆಂಡತಿಯರಾಗಬಲ್ಲರೆ? [ಗೂಶೂ ೩೮೦] (ನಿಂದ ಮೇಲೆ)

ಮಿಕ್ಕುಮಿಗೆ ಸಾಸುವೆಯ ರಾಶಿಯ[೧]ನೊ[೧]ಕ್ಕಿದೆತ್ತಿಗೆ[೨]ಮೇದು[೨] ಮೆಲುಕಿಱಿ

ವಕ್ಕಱುಂಟೇ [ಪ್ರಲೀ ೭–೬೫] [೧–೧ ಸೊ ೨–೨ ಮೆದ್ದು)

ಇತ್ಯಾದಿ ಮಾತುಗಳಲ್ಲಿಯ ಆಚರಣೆ, ಲೋಕಾನುಭವಗಳನ್ನು ತಿಳಿದಿರಬೇಕು. ಇಲ್ಲದಿದ್ದರೆ ಪಾಠ ಆಯ್ಕೆ ತಪ್ಪುವ ಸಂಭವವಿದೆ.

ದೇಸಿಯನ್ನು ಹದವರಿತು ಬಳಸಿದಷ್ಟೂ ಕಾವ್ಯಕ್ಕೆ ಕಸುವು ಮೂಡುತ್ತದೆ, ಕಾವ್ಯದ ಪರಿಣಾಮ ನಿಖರಗೊಳ್ಳುತ್ತದೆ ಎಂಬ ಅಂಶ ನಮ್ಮ ಕವಿಗಳ ಗಮನಕ್ಕೆ ಬಂದಿತ್ತು. ಅವರು ಬಳಸಿದ ಈ ದೇಸಿ 'ಬೇಱೆವೇಱೆಪ್ಪುದಱಿಂ' ಸಂಪಾದಕ ಈ ವೈಶಿಷ್ಟ್ಯಗಳನ್ನು ತಕ್ಕಮಟ್ಟಿಗಾದರೂ ಅರಿಯುವುದು ಅಗತ್ಯ. ಉದಾ :

ಬಳೆದ ತಮವೆಂಬ ಕರಡಮ(?) ।

ನಕವಲ್ಲದೆ ಸುಟ್ಟು ಕೆಡಿಸಲೆಂದಜನುದಯಾ ।

ಚಳದೊಳ್ ತಗುಳ್ಚೆ ತಳ್ತೊಡ ।

ನಳರ್ವ ದವಾಗ್ನಿಯವೊಲರ್ಕನುದಯಂಗೆಯ್ದಂ ॥[೪೧]

ಇಲ್ಲಿ 'ಕರಡಮಂ' ಪಾಠವನ್ನು ಮೈಸೂರು ಪ್ರದೇಶದ ಸಂಪಾದಕರು ಸಂದೇಹದಲ್ಲಿ ನಿಲ್ಲಿಸಿರುವರು. ಒಂದು ಕಿಡಿ ಬಿದ್ದರೆ ಸಾಕು ಭುಗಿಲ್ಲೆಂದು ಸುಟ್ಟು ಹೋಗುವ ಹುಲ್ಲುಜಾತಿ, ಕರಡ. ಉತ್ತರ ಕರ್ನಾಟಕದಲ್ಲಿ ಈಗಲೂ ಬಳಕೆಯಲ್ಲಿರುವ ಪದವಿದು.

೨. ನೋಡಲಾಗದು ನುಡಿಸಲಾಗದು ಪರಸ್ತ್ರೀಯ ಬೇಡ ಕಾಣಿರೋ,

ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ ಕಾಣಿರೋ,

ಒಂದಾಸೆಗೆ ಸಾಸಿರ ವರುಷ ನರಕದೊಳಗದ್ದುವ

ಕೂಡಲಸಂಗಮದೇವ. [ಬವ ೬೪೧]

ಈ ವಚನಕ್ಕೆ "ಹೆಣ್ಣಿನ ಹಿಂದೆಯೇ ಸುಳಿದಾಡುವ ವಿಷಯಾಸಕ್ತಿ, ಟಗರು ಬೆನ್ನಲಿ ಸುಳಿವ ಸೊಣಗನಂತೆ, ಟಗರನ್ನು ಕಾಯುವ ಕುರುಬ ಹೊಡೆದಾನು ಎಂದೂ ಅದಕ್ಕೆ ಚಿಂತೆಯಿಲ್ಲ"[೪೨] ಎಂದು

---

೪೧. ಕಾವ್ಯಸಾರ, ಸೂರ್ಯೋದಯ ವರ್ಣನೆ ೮೭೧.

೪೨. ಬಸವಣ್ಣನವರ ವಚನದಲ್ಲಿ ಪ್ರಾಣಿರೂಪಕ, ಪ್ರಕ. ೪೨–೨.

ವಿದ್ವಾಂಸರೊಬ್ಬರು ವಿವರಣೆ ನೀಡಿರುವರು. ಆದರೆ ಎಣ್ಣೆ ಬಸಿಯುವ ಒಂದು ಖಾದ್ಯವೆಂಬ ಅರ್ಥದ ತಗರ (<ತರಗ) ಎನ್ನುವುದು ಕೃಷ್ಣೆಯ ಎಡಬಲದ ಕನ್ನಡಿಗರ ಮನೆಮಾತು. ಬಸವಣ್ಣನವರು ಬಳಸಿದುದು ಈ ಅರ್ಥದ ಪದವೆಂದು ಕಾಣುತ್ತದೆ. ಇದೇ ರೀತಿ ಪ್ರತಿಯೊಬ್ಬ ಕವಿಯು ಭಾಷೆಯ ಮೂಲಕ ತನ್ನ ಪ್ರದೇಶವನ್ನು ಪ್ರತಿನಿಧಿಸಿರುತ್ತಾನೆ. ಭಾಷೆಗೆ ಸಂಬಂಧಪಟ್ಟ ಈ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಸಂಪಾದಕ ಅರಿತಷ್ಟು ಮೇಲು.

ಇವೆಲ್ಲವುಗಳಿಗೆ ಮಿಗಿಲಾಗಿ ಸಂಪಾದಕನಿಗೆ ತಾನು ಸಂಪಾದಿಸುತ್ತಿರುವ ಕೃತಿಗೆ ಸಂಬಂಧಪಟ್ಟ ಭಾಷೆಯ ಸಾಹಿತ್ಯಚರಿತ್ರೆ, ಸಾಹಿತ್ಯಪ್ರಕಾರಗಳ ಹಿನ್ನೆಲೆಯೊಂದಿಗೆ ಕಾವ್ಯ ಪರಿಕರಗಳಾದ ಛಂದಸ್ಸು, ವ್ಯಾಕರಣ ಇತ್ಯಾದಿಗಳ ನೇರ ಪರಿಜ್ಞಾನ ಅಗತ್ಯ. ಇವು ಭಾಷೆಯಿಂದ ಭಾಷೆಗೆ ಭಿನ್ನವಾಗಿರುವುದರಿಂದ ಎಲ್ಲ ಭಾಷೆಗಳಿಗೂ ಸಾಮಾನ್ಯವಾಗಿರುವ ಗ್ರಂಥ ಸಂಪಾದನೆಯ ಮೂಲತತ್ವಗಳೊಂದಿಗೆ ಈ ಹೆಚ್ಚಿನ ಭಿನ್ನ ಅಂಶಗಳನ್ನೂ ಸಂಪಾದಕ ಅರಿತಿರಬೇಕಾಗುತ್ತದೆ. ಉದಾಹರಣೆಗಾಗಿ ಇಲ್ಲಿ ಕನ್ನಡವನ್ನೇ ತೆಗೆದುಕೊಳ್ಳಬಹುದು.

ಕನ್ನಡ ಸಾಹಿತ್ಯದಲ್ಲಿ ಉದ್ದಕ್ಕೂ ದೇಸಿ–ಮಾರ್ಗಗಳ ಸೀಳು ಎದ್ದು ಕಾಣುತ್ತದೆ. ಜನಪ್ರಿಯ ದೇಸಿಕಾವ್ಯಗಳನ್ನು ಜನತೆ ತಮ್ಮ ಇಷ್ಟ ಬಂದಂತೆ ಓದಿ, ಬರೆದು, ಹಾಡಿ ಜನರ ಮಧ್ಯ ಜೀವಂತವಾಗಿಟ್ಟಿರುವುದು ನಿಜ. ಆದರೆ ತಮ್ಮ ಅಭಿರುಚಿ ಅನುಕೂಲಗಳಿಗೆ ತಕ್ಕಂತೆ ತಿದ್ದುವುದರ ಮೂಲಕ ಅವುಗಳಲ್ಲಿ ಲೋಪ, ಆಗಮ, ಆದೇಶಗಳನ್ನುಂಟು ಮಾಡಿದರು.

ಮಾರ್ಗಕಾವ್ಯಗಳು, ಪಂಡಿತರ ರುಚಿವಿಶೇಷ. ಜನಪ್ರಿಯತೆಯ ದೃಷ್ಟಿಯಿಂದ ಅರ್ಧದಷ್ಟು ವಾಚಕರನ್ನು ಕಳೆದುಕೊಂಡ ಇವು ಪಾಠಾಂತರ ದಾಳಿಯಿಂದ ಅಷ್ಟರ ಮಟ್ಟಿಗೆ ದೂರ ಉಳಿದವು. ಮಿಕ್ಕರ್ಧ ಜನರಲ್ಲಿ ವ್ಯವಹರಿಸುವ ಈ ಕಾವ್ಯಗಳನ್ನು ಕಾಠಿಣ್ಯದ ಮೂಲಕ ಲಿಪಿಕಾರರು ಅಷ್ಟಾಗಿ ತಿದ್ದುವ ಗೋಜಿಗೆ ಹೋಗಲಿಲ್ಲ. ಇದರಿಂದಾಗಿ ಮಾರ್ಗಕಾವ್ಯಗಳ ಪಾಠ ಕೆಲಮಟ್ಟಿಗೆ ಸುರಕ್ಷಿತ ಉಳಿಯಿತು. ಆದುದರಿಂದ ಮಾರ್ಗಕಾವ್ಯಗಳ ಸಂಪಾದನೆಗಿಂತ ದೇಸಿಕಾವ್ಯಗಳ ಸಂಪಾದನೆ ಜಟಿಲವೆಂಬ ಅಂಶ ಸಂಪಾದಕನಿಗೆ ಗೊತ್ತಿರಬೇಕು. ಈ ದೇಸಿ–ಮಾರ್ಗಗಳ ಹಿನ್ನೆಲೆಯಲ್ಲಿ, ಕವಿ ಬಳಸಿರಬಹುದಾದ ಕಾವ್ಯಭಾಷೆಯ ವೈಶಿಷ್ಟ್ಯಗಳನ್ನು ಗ್ರಹಿಸುವ ಪರಿಜ್ಞಾನವೂ ಅವನಿಗೆ ಬೇಕು. ಉದಾ:

ಹುತ್ತವ ಬಡಿದಡೆ **ಹಾವು** ಸಾಯಬಲ್ಲುದೆ? [ಬವ ೧೧೭] (ಉರಗ)

ಮಗಳು ಮದ್ದಳೆಯವನ **ಬೆನ್ನಲಿ** ಜಗುಳಿ ಹೋದುದ ಕೇಳಿ [ಪ್ರಲೀ ೮–೩] (ಸಂಗಡ)

ಗುರುವನಱಸುವೆನೆಂದು **ತಿಱನೆ** ತಿರುಗಿದಳು ಗಿರಿಗಹ್ವರಂಗಳ[ಪ್ರಲೀ ೧೭–೨] (ತೊಟ್ಟನೆ)

ಹುಲಸರವಿ ಹಾವಹುದು ಹುತ್ತಿನ **ತಲೆಯ**ಲಿರಲಜ್ಞರಿಗೆ

[ಕುಭಾ. ಉ. ೧೦–೨೪] (ಬಳಿಯ)

ಇಲ್ಲಿ ಬಸವ, ಚಾಮರಸ, ಕುಮಾರವ್ಯಾಸರ ಭಾಷಾಧರ್ಮವನ್ನು ಅರಿತವರು ಈಗ ಸ್ವೀಕರಿಸಿದ ಪಾಠಗಳೇ ಯೋಗ್ಯವೆಂದು ಹೇಳದಿರಲಾರರು.

ಛಂದೋನಿರ್ಬಂಧವಿಲ್ಲದ ಗದ್ಯದಲ್ಲಿ ಸ್ಖಾಲಿತ್ಯ ಹೆಚ್ಚು, ಛಂದೋನಿರ್ಬಂಧವಿರುವ ಪದ್ಯದಲ್ಲಿ ಕಡಿಮೆ. ಆದುದರಿಂದ ಗದ್ಯಕ್ಕಿಂತ ಪದ್ಯಪರಿಷ್ಕರಣ ಸುಲಭ. ಪದ್ಯಗಳಲ್ಲಿಯೇ ಅಂಶವೃತ್ತಕ್ಕಿಂತ ಮಾತ್ರಾವೃತ, ಮಾತ್ರಾವೃತ್ತಕ್ಕಿಂತ ಅಕ್ಷರವೃತ್ತ ಇನ್ನೂ ಸುಲಭ. ಇವುಗಳಲ್ಲಿ ನಿರ್ಬಂಧದ ಪ್ರಮಾಣ ಕ್ರಮವಾಗಿ ಹೆಚ್ಚು ಇರುವುದೇ ಕಾರಣ. ಪದ್ಯಗಳ ಪಾಠನಿರ್ಣಯವೆಂದರೆ ಈ ಛಂದಸ್ಸು ಮತ್ತು ಪ್ರಾಸಗಳ ನಿರ್ಣಯವೆಂಬಷ್ಟರ ಮಟ್ಟಿಗೆ ಕನ್ನಡದಲ್ಲಿ ಅವು ಪ್ರಮುಖವಾಗಿವೆ. ಇವುಗಳ ಮೇಲೆ ಹಿಡಿತ ಸಾಧಿಸದಿದ್ದರೆ ಪಾಠನಿರ್ಣಯ ಜೋಲಿ ಹೊಡೆಯುತ್ತದೆ. ಛಂದಸ್ಸಿಗೆ ಉದಾ :

ಉದದೊಳುಪ್ಪಿನ ಪೊಟ್ಟಣವನಿರಿ

ಸಿದ ತೆಱದಿ ಕರ್ಪುರವನುರಿಯ

ಪ್ಪಿದವೊಲಂಬುಧಿಯೊಳು ಘನೋಪಲ ವೃಷ್ಟಿ ಕಱೆದಂತೆ [ಬಪು ೭–೬೦]
(ಉದಕದೊಳಗುಪ್ಪಿನ)

ಇಲ್ಲಿ ಎರಡು ಪಾಠಗಳಿವೆ. ಅರ್ಥದೃಷ್ಟಿಯಿಂದ ಎರಡೂ ಯೋಗ್ಯ. ಆದರೆ ಪಾಠ ದೃಷ್ಟಿಯಿಂದ 'ಉದದೊಳುಪ್ಪಿನ' ಯೋಗ್ಯವೆಂದು ನಿರ್ಣಯಿಸಿ ಕೊಟ್ಟುದು ಛಂದಸ್ಸು. ಛಂದಸ್ಸಿಗೆ ಇನ್ನೊಂದು ಉದಾ :

ನಡೆದು [ಪಸಾಯಿತಂ] ಪತಿಗೆ ದಟ್ಟಡಿಯೊಳ್ ತೊದಳಿಲ್ಲೆನಲ್ ತೊದಲ್ ।

ನುಡಿದು [ಪಸಾಯಿತಂ] ಪತಿಗೆ ಬಾಲ್ಯದೊಳನ್ಯನೃಪಂಗೆ ಭಂಗಮಂ ।

ಪಡೆದು [ಪಸಾಯಿತಂ] ಪತಿಗೆ ಜವ್ವನದೇಳ್ಗೆಯೊಳೆಂದೊಡೆಲ್ಲಿಯುಂ ।

ಬಿಡದೆ [ಪಸಾಯಿತಂ] ಸಲೆ [ಪಸಾಯಿತ] ಲಕ್ಕಣ ದಂಡನಾಯಕಂ ॥

ಧಾರವಾಡ ತಾಲೂಕಿನ ನರೇಂದ್ರದ (EI XIV ಪು ೩೨೦) ಶಾಸನಪದ್ಯವಿದು. ಶಾಸನದಲ್ಲಿ ಮೂಲಪಾಠ "ಪಸಾಯ್ತ" ಎಂದು ಇದೆ. ಇದನ್ನು ಬಿಟ್ಟು ಸಂಪಾದಕನು 'ಪಸಾಯಿತಂ' ರೂಪವನ್ನು ಸ್ವೀಕರಿಸಬೇಕೆಂದು ಛಂದಸ್ಸು ಹೇಳಿಕೊಡುತ್ತದೆ. ಆದಿ ಪ್ರಾಸಕ್ಕೆ ಒಂದು ಉದಾ:

ಅಣ್ಣ ಕೆಳುದಕದಲಿ ಮಳುಗಿದ

ಸುಣ್ಣ ಕಲ್ಲಂತಾಗಿ ಕುದಿಯುತೆ

ಬಣ್ಣವಳಿದಳು ಮಾಯೆ ಕಾಣುತ ನಿನ್ನ ಬೇಟದಲಿ ।

[ಪ್ರಲೀ ೫–೬೮] (ಬನ್ನಬಟ್ಟಳು)

ಇಲ್ಲಿ ಛಂದಸ್ಸು ಮತ್ತು ಅರ್ಥದೃಷ್ಟಿಯಿಂದ ಯೋಗ್ಯವಾಗಿರುವ ಎರಡೂ ಪಾಠಗಳಲ್ಲಿ "ಬಣ್ಣವಳಿದಳು" ತೀರ ಯೋಗ್ಯಪಾಠವೆಂದು ನಿರ್ಣಯಿಸಿ ಕೊಡುವುದು ಆದಿಪ್ರಾಸ. ಆದಿ ಪ್ರಾಸಕ್ಕೆ ಇನ್ನೊಂದು ಉದಾ :

ಆ ಕಮನೀಯವಪ್ಪ ವಿಷಯಕ್ಕೆ ವಿಭೂಷಣವಾಗಿ ತೋರ್ಪ ಕುಂ ।
ದೂರನದೊಂದು ನಾಲಗೆಯ ಮಾನವನೇವೊಗಳ್ವಪ್ಪನೆಯ್ದೆ ಕೈ ।
ವಾರದೊಳಾ ನೆಗರ್ತೆಯಮರಾವತಿ ಮಿಕ್ಕಳಕಾಪುರಂ ಜಗ ।
ತ್ಸಾರವೆನಿಪ್ಪ ಭೋಗವತಿ ತಾನೆನಿಕುಂ ವಸುಧಾಂತರಾಳದೊಳ್ ॥[೪೩]

ಧಾರವಾಡ ತಾಲೂಕಿನ ನರೇಂದ್ರದ ಶಾಸನ ಪದ್ಯವಿದು. ಪ್ರಾಸಸ್ಥಾನದಲ್ಲಿ 'ಕ' 'ರ' ಅಕ್ಷರಗಳು ಬಂದು ಕನ್ನಡದ ಪ್ರಾಸತತ್ವಕ್ಕೆ ಇಲ್ಲಿ ಚ್ಯುತಿಬಂದಿದೆ. ಅದಕ್ಕಾಗಿ "ಆ ಕಮನೀಯಪ್ಪ" ಎಂಬುದನ್ನು "ಆ ರಮಣೀಯವಪ್ಪ" ಎಂದು ತಿದ್ದಿಕೊಳ್ಳಬೇಕೆಂದು ಆದಿಪ್ರಾಸ ತಿಳಿಸಿಕೊಡುತ್ತದೆ. ಇನ್ನು ಅನುಪ್ರಾಸಕ್ಕೆ ಉದಾ :

"ಹೊನ್ನನೀಗಳೆ ಬಿತ್ತಿಸುವೆನೀ ಬೀದಿ ಬೀದಿಯಲಿ" [ಬಪು ೨೭-೧೯] (ಕೇರಿ ಕೇರಿ)

"ಹಣೆಯ ಕಣ್ಣಿನ ಕಿಡಿಯ ಕೆದಱುವೆನೆಂದ ರಾಮಯ್ಯ" [ಪ್ರಲೀ ೧೩-೨೮]
(ಕಿಚ್ಚ ತೋಱು)

"ಹಸನ ಮಾಡಿಯೆ ಹರಗಿ ಹೊಲನಲಿ
ಕಸವ ಬಿತ್ತುವ ಮರುಳನಂತಿರೆ" [ಪ್ರಲೀ ೧೩-೫೮] (ದಿಳೆಯೊಳು)

ಇಲ್ಲಿ ಎರಡೂ ಪಾಠಗಳು ಅರ್ಥ, ಛಂದಸ್ಸು ದೃಷ್ಟಿಯಿಂದ ಯೋಗ್ಯ. ಆದರೆ "ಬೀದಿ ಬೀದಿಯಲಿ", "ಕಿಡಿಯ ಕೆದಱುವೆ" ಅಥವಾ "ಕಿಚ್ಚ ಕೆದಱುವೆ", "ಹೊಲನಲಿ" ಯೋಗ್ಯಪಾಠಗಳೆಂದು ನಿರ್ಣಯಿಸಿಕೊಟ್ಟುದು ಅನುಪ್ರಾಸ. ಹೀಗೆ ಗ್ರಂಥಸಂಪಾದಕನಿಗೆ ಛಂದಸ್ಸು, ಆದಿಪ್ರಾಸ, ಅನುಪ್ರಾಸಗಳ ಪರಿಜ್ಞಾನ ಅವಶ್ಯಬೇಕು. ಇಲ್ಲದಿದ್ದರೆ ಸಂಪಾದನೆಗೆ ಚ್ಯುತಿ ಬರುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆ:

ಕಂ ॥ ಬಟ್ಟುದು ಬಳ್ಳವಾಡಿ ನೆಱೆ ನಂ ।
ಬಿರ್ದುದಾರುಹತಂ ಜನೇಂದ್ರನಂ ।
ತಿರ್ದ ಮಹಾನುಭಾವರ್....." [ಪರಿಷತ್ ಅವೃತ್ತಿ][೪೪]

[ತ್ರಿವಿದಿ]॥ ಬಟ್ಟುದು ಬಳ್ಳವಾಡಿ ನೆಱೆ ನಂ ।
ಬಿರ್ದುದಾರ್ಹತಮಂ ಜಿನೇಂದ್ರನಂ ।
ತಿರ್ದ ಮಹಾಪುರಾಣಕವಿಗಳ್......." [ಮದ್ರಾಸ ಆವೃತ್ತಿ]

ಹೀಗೆ ಈ ಪದ್ಯದ ಛಂದಸ್ಸಿನ ಬಗೆಗೆ ಎರಡೂ ಆವೃತ್ತಿಗಳ ಸಂಪಾದಕರು ಭಿನ್ನ ಅಭಿಪ್ರಾಯ ತಾಳಿದ್ದಾರೆ. ಆದರೆ ಇದು

---

೪೩. EI. XIV ಪು. ೩೦೧-ನರೇಂದ್ರ ಪಾಸನ.
೪೪. ಶಮದ ಸೂ. ೩೪.

"ಬಟ್ಟುದು ಬಳ್ಳವಾಡಿ ನೆಜಿ ನಂಬಿರ್ದುದಾರುಹತಂ ಜಿನೇಂದ್ರನಂ ।

ತಿರ್ದ್ದ ಮಹಾಪುರಾಣಕವಿಗಳ್........"

ಎಂದು ಮುಂತಾಗಿ ಉತ್ಪಲಮಾಲೆಯಾಗಿದೆ.[೪೫] ಲಿಪಿಕಾರನು ವೃತ್ತನಾಮವನ್ನು ಸೂಚಿಸದಿರುವುದೇ ಈ ಗೊಂದಲಕ್ಕೆ ಕಾರಣ. ಕೆಲವು ಸಲ ಸೂಚಿಸಿದರೂ ಲಿಪಿಕಾರರಿಂದ ಛಂದೋಭಂಗಗೊಂಡ ಅನೇಕ ಪದ್ಯಗಳು ಕನ್ನಡದಲ್ಲಿವೆ. ಇಂಥವುಗಳನ್ನು ಸಂಪಾದಿಸುವಲ್ಲಿ ಸಂಪಾದಕ ಛಂದಸ್ಸಿನ ಮೇಲೆ ಹಿಡಿತ ಸಾಧಿಸಿರಬೇಕಾದುದು ಅತ್ಯವಶ್ಯ.

ಪೂರ್ವದ ಹಳಗನ್ನಡದ ಅನುಪಲಬ್ಧ ಕೃತಿಗಳನ್ನು ಬಿಟ್ಟರೂ ಹಳಗನ್ನಡ, ನಡಗನ್ನಡ ಕೃತಿಗಳ ಸಂಖ್ಯೆ ನಮ್ಮಲ್ಲಿ ಅಧಿಕ. ಈ ಘಟ್ಟಗಳಿಗೆ ಸಂಬಂಧಿಸಿದ ಭಾಷೆಯ ಅವಸ್ಥಾಭೇದ, ಪ್ರಾಂತಭೇದಗಳ; ಲಿಪಿಯ ಅವಸ್ಥಾಭೇದ, ಪ್ರಾಂತಭೇದಗಳ ಒರೆಗಲ್ಲಿನ ಮೇಲೆ ಇವುಗಳ ಪರಿಷ್ಕರಣ ನಡೆಯಬೇಕು. ಉದಾ :

ಎಟ್ಪೋಗು ದೂತನಪ್ಪನ । ಬೆಟ್ಟಿನ ನುಡಿಗೇಳ್ದು ಮುಳಿಯಲಾಗದು ನೀನುಂ ।

ಮೆಟ್ಟಿಟ್ಟು ವಿದುರನೆಂಬೀ । ತೊಟ್ಟುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ ॥[೪೬]

ಈ ಕಂದದ ಪ್ರತಿ ಪಾದದ ಮೊದಲ ಅಕ್ಷರಗಳು ಒಂದು ಹಸ್ತಪ್ರತಿಯಲ್ಲಿ ದೀರ್ಘವಾಗಿವೆ. ಆ ದೀರ್ಘತೆಯಿಂದ ಛಂದೋಭಂಗವಾಗದಿದ್ದರೂ ಪಾಠನಿರ್ಣಯಿಸುವಲ್ಲಿ ಸಂಪಾದಕನ ವ್ಯಾಕರಣ ಜ್ಞಾನ, ನಿಘಂಟುಗಳ ಜ್ಞಾನಗಳ ಸತ್ವಪರೀಕ್ಷೆ ನಡೆಯುತ್ತದೆ. ಇನ್ನೊಂದು ಉದಾ :

ಬರೆಪಕಾಱಿರ ಕೈಗಳ ಕೇಡು [ಪಂಭಾ ೧-೧೨] (ಬರಹಕಾಱಿರ)

ಕಡೆಗಣಿಸಲಾ**ಗದೆ**ಮಗೀಗಡೆ ಬೇಗಂ ಬಿಡಿಸಿ ತರ್ಪುದು [ಪಂಭಾ ೭-೩೭] (ಗ ನ)

ಪೊನ್ನನ ಪಂಪನ ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ

[ಶಮದ ಸೂ ೫] (ಹೊನ್ನನ ಹಂಪನ)

ಪಂಪಭಾರತ, ಶಬ್ದಮಣಿದರ್ಪಣಗಳಿಗೆ ಸಂಬಂಧಪಟ್ಟ ಈ ವಾಕ್ಯಗಳ ಪಾಠವನ್ನು ಆ ಕಾಲದ, ಆ ಕವಿಗಳ ಭಾಷೆಯ ಅಭ್ಯಾಸದಿಂದ ನಿರ್ಣಯಿಸಬೇಕಾಗುತ್ತದೆ. ಈ ಪ್ರಸಂಗದಲ್ಲಿ "ಕೃತಿ ನೆಗಟ್ದಿ ಗದಾಯುದ್ಧಂ ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ" ಎಂಬುದಕ್ಕೆ ಪಾಠಾಂತರಗಳಿಲ್ಲದಿದ್ದರೂ 'ಕೃತಿಗೀಶಂ' ಎಂದು ತೀ.ನಂ. ಶ್ರೀಯವರು ಭಾಷಾದೃಷ್ಟಿಯಿಂದ ಯೋಗ್ಯವಾಗಿ ತಿದ್ದಿದುದನ್ನು ನೆನೆಯಬೇಕು.[೪೭] ಮತ್ತೊಂದು ಉದಾ :

ಕಾರಮುಗಿಲಿನ ಗರ್ಜನೆಯ ಕಿವಿಯಾರೆ ಕೇಳುವ ಸೋಗೆಯಂತಿರೆ

[ಪ್ರಲೀ ೫-೧೦] (ಮೇಘದ)

೪೫. ಶಮದ ಪಾಠಾಂತರಗಳು ೫೩.

೪೬. ಪಂಭಾ ೯-೫೮.

೪೭. ಗದಾಯುದ್ಧ ಸಂಗ್ರಹಂ ೧-೮ (ಟಿಪ್ಪಣಿ)

ಇಲ್ಲಿ 'ಕಾರಮೇಘದ' ಪಾಠ ಹೊಂದುತ್ತಿದ್ದರೂ ಕನ್ನಡಕ್ಕೆ ಬಾಹಿರವಾದ ಅರಿಸಮಾಸ ದೋಷ ಘಟಿಸುವುದೆಂಬ ಅಂಶವನ್ನರಿತ ಸಂಪಾದಕ ಮಾತ್ರ 'ಕಾರಮುಗಿಲಿನ' ಪಾಠವನ್ನು ಸ್ವೀಕರಿಸುತ್ತಾನೆ. ಹೀಗೆ ಒಂದು ಭಾಷೆಯ ಅವಸ್ಥಾಭೇದಗಳಿಗೆ, ಪ್ರಾಂತಭೇದಗಳಿಗೆ ಸಂಬಂಧಪಟ್ಟ ಸೂಕ್ಷ್ಮ ಅಂಶಗಳನ್ನು, ಆ ಭಾಷೆಯ ಮೂಲಭೂತ ಗುಣಧರ್ಮವನ್ನು ಸಂಪಾದಕ ಅರಿತಿರಬೇಕು.

ಯಾವುದೇ ಸಾಹಿತ್ಯದಲ್ಲಿ ಪಾಠಾಂತರಕೋಟಿ ಹುಟ್ಟಲು ಲಿಪಿಸೂಕ್ಷ್ಮಜ್ಞತೆಯ ಅಭಾವ ದೃಷ್ಟಿ ಮುಖ್ಯ ಕಾರಣ. ಈ ಅಭಾವದೊಂದಿಗೆ ದೀರ್ಘ, ಮಹಾಪ್ರಾಣ, ವಿರಾಮ, ಬಿಂದುಗಳ ಬಳಕೆಯ ಬಗ್ಗೆ ಇರುವ ಉದಾಸೀನತೆಯೂ ಸೇರಿ, ನಮ್ಮ ಲಿಪಿಕಾರನನ್ನು ಇನ್ನೂ ತಪ್ಪುದಾರಿಗೆ ಎಳೆದಿದೆ. ಹೀಗಾಗಿ ಶಿವಕೋಟ್ಯಾಚಾರ್ಯ – ರೇವಾಕೋಟ್ಯಾಚಾರ್ಯ, ಆಡಯ್ಯ–ಆಂಡಯ್ಯ–ಅಂಡಯ್ಯ, ನಿಟ್ಟೂರ ನಂಜಯ್ಯ–ನಿಟ್ಟೂರ ಸಂಜಯ್ಯ ಮೊದಲಾದ ಪ್ರಮುಖ ದೋಷಗಳು ತಲೆ ಎತ್ತಿದವು. ಇದನ್ನು ಸರಿಪಡಿಸುವ ಸಂಪಾದಕ ಲಿಪಿಯ ಒಲವು–ನಿಲುವುಗಳನ್ನು, ಋಜು–ವಕ್ರಗಳನ್ನು ಅರಿತಿರಬೇಕಾಗುತ್ತದೆ.

ಕೊನೆಯದಾಗಿ, ತಾನು ಪರಿಷ್ಕರಿಸುತ್ತಿರುವ ಕೃತಿಯ ಸಾಹಿತ್ಯಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಸಂಪಾದಕನ ಮುಖ್ಯ ಕರ್ತವ್ಯ. ಕನ್ನಡದ ವಿಶಿಷ್ಟ ಪ್ರಕಾರಗಳಾದ ವಚನಗಳ ಮೈಕಟ್ಟು, ಕೀರ್ತನೆಗಳ ಚೌಕಟ್ಟು, ಅವುಗಳ ಮುದ್ರಿಕೆ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳದಿದ್ದರೆ ಸಂಪಾದನೆಗೆ ಚ್ಯುತಿ ಬರುವ ಸಂಭವವಿದೆ. ಅಷ್ಟಾದಶ ವರ್ಣನೆಯ ನಿರೂಪಣೆ, ಕೈಲಾಸದಿಂದ ಕೈಲಾಸಕ್ಕೆ ನಡೆವ ರಗಳೆ, ಪಟ್ಟದಿಕೃತಿಗಳ ಸಂಧಿಯ ಪ್ರಾರಂಭದ ಅರ್ಧಪದ್ಯ ಮೊದಲಾದ ವೈಶಿಷ್ಟ್ಯಗಳು ಸಂಪಾದಕನಿಗೆ ಗೊತ್ತಿರಬೇಕು.

ಇನ್ನು ಕವಿಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳದೆ ಸಂಪಾದನೆಗೆ ಕೈಹಾಕಿದರೆ ವಿಫಲತೆ ಹೆಚ್ಚು. ಉದಾಹರಣೆಗೆ ಕಬ್ಬಿಗರ ಕಾವ ಮತ್ತು ಶಬ್ದಮಣಿದರ್ಪಣದ ವೃತ್ತಿ ಇವುಗಳನ್ನು ನೋಡಬಹುದು. ಅಚ್ಚಗನ್ನಡ ಕೃತಿಯಾದ ಕಬ್ಬಿಗರ ಕಾವದಲ್ಲಿ ಮಹಾಪ್ರಾಣ ತ್ಯಾಜ್ಯ, ಇದರ ತಿಳಿವಳಿಕೆ ಇಲ್ಲದ ಲಿಪಿಕಾರರಿಂದ ಕೆಲವು ಮಹಾಪ್ರಾಣಯುಕ್ತ ಪದಗಳು ಇದರಲ್ಲಿ ನುಗ್ಗಿ ಬರುವ ಸಂಭವವಿದೆ, ನುಗ್ಗಿ ಬಂದಿವೆ. ಈ ಅಂಶ ಹೊಳೆದಿದ್ದರೆ ಈವರೆಗೆ ಅಚ್ಚಾದ ಎಲ್ಲ ಆವೃತ್ತಿಗಳ ಸಂಪಾದಕರು ಭಂಡಿ, ಭಂಡಣ ಪದಗಳನ್ನು ಇಡುತ್ತಿರಲಿಲ್ಲವೇನೋ.

ಶಬ್ದಮಣಿದರ್ಪಣಕ್ಕೆ ಹಲವು ವೃತ್ತಿಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಕೇಶಿರಾಜನ ವೃತ್ತಿಸ್ವರೂಪವನ್ನು ಖಚಿತ ಮಾಡಿಕೊಳ್ಳದೆ ಹೋದರೆ ಸಂಪಾದನೆಯ ಸ್ವರೂಪ ಹಾಳಾಗುವ ಸಂಭವವುಂಟು. ಕೇಶಿರಾಜನ ವೃತ್ತಿಯು ಗುಣದಲ್ಲಿ 'ಅನ್ವಯವೃತ್ತಿ'ಯಾಗಿರದೆ 'ಅರ್ಥವೃತ್ತಿ'ಯಾಗಿದೆಯೆಂದೂ, ಸ್ವರೂಪದಲ್ಲಿ 'ಮಿಶ್ರಣವೃತ್ತಿ'ಯಾಗಿರದೆ 'ಸಂಗ್ರಹವೃತ್ತಿ' ಯಾಗಿರದೆಯೆಂದೂ ಅದರ ಸಂಪಾದಕರು ಅರಿಯದ ಕಾರಣ, ಈ ವರೆಗೆ ಸಂಪಾದಿಸಲ್ಪಟ್ಟ ದರ್ಪಣದ ವೃತ್ತಿವಿಭಾಗಕ್ಕೆ ಕೆಲಮಟ್ಟಿಗೆ ಚ್ಯುತಿ ಬಂದಿದೆ. ಈ ಇಂಥ ಮೂಲಭೂತ ತತ್ವಗಳನ್ನು ಅರಿತು ಸಂಪಾದಕರು ಕಾರ್ಯ ನಿರ್ವಹಿಸಬೇಕಾಗುತ್ತದೆ.

ಒಂದು ಶಬ್ದದ ಹಲವು ರೂಪಗಳಲ್ಲಿ ಒಮ್ಮೆ ಒಂದನ್ನು, ಇನ್ನೊಮ್ಮೆ ಮತ್ತೊಂದನ್ನು ಕೈಗೆ ಬಂದಂತೆ ಬಳಸದೆ ಒಂದೇ ರೂಪವನ್ನು ಕೊನೆಯ ವರೆಗೂ ಬಳಸಬೇಕು. ಇದಕ್ಕೆ ಗೂಳೂರ ಶೂನ್ಯಸಂಪಾದನೆಯಿಂದ[೪೮] ಒಂದೆರಡು ಉದಾಹರಣೆ :

೧. ಹುಸಿ ಹುಂಡನೆ ಮಾಡಿ (ಪು ೯೧)

ಹೂಸಿ ಹುಂಡನೆ ಮಾಡಿ (ಪು. ೧೦೭)

೨. ಮರಣವುಳ್ಳವರಿಗೆ ಮರುಜವಣಿ ಸಿಕ್ಕುವುದೆ? (ಪು. ೧೩೪)

ಮರುಜವಣೆಯ ಹಣ್ಣ ಮೆದ್ದು ಮರಣವಾಯಿತ್ತ ಕಂಡೆ (ಪು. ೪೪೮)

ಇಂಥ ಪ್ರಸಂಗಗಳಲ್ಲಿ ಏಕರೂಪತೆಯತ್ತ ಸಂಪಾದಕ ಲಕ್ಷ್ಯವಹಿಸಬೇಕು.

ಹೀಗೆ ಸಂಪಾದನಕಾರ್ಯದಲ್ಲಿ, ಒಂದು ಕೃತಿಯು ಇಡೀ ಸಾಹಿತ್ಯದ ಮತ್ತು ಸಾಹಿತ್ಯ ಪ್ರಕಾರದ ಅವಿಭಾಜ್ಯ ಘಟಕವೆಂದು ಪರಿಶೀಲಿಸುತ್ತ, ಅದನ್ನು ಬಿಡಿಯಾಗಿ ಪರಿಷ್ಕರಿಸಬೇಕಾಗುತ್ತದೆ. ಸಂಪಾದಕನ ವ್ಯಾಸಂಗ ಇತಿ–ಮಿತಿ ಇಲ್ಲದಷ್ಟು ವೈವಿಧ್ಯಪೂರ್ಣವಾಗಿ ಬೆಳೆದು, ಪರಿಷ್ಕರಣ ಪಥದಲ್ಲಿ ಎದುರು ಬರುವ ಎಲ್ಲ ಪ್ರಶ್ನೆಗಳಿಗೆ ಆತನು ಸಮಾಧಾನಕರ ಉತ್ತರ ಹೇಳಿ, ಮುಂದುವರಿಯಬೇಕಾಗುತ್ತದೆ, "To know a word is to know the truth" ಎಂಬ ಭಾವದಿಂದ ಪ್ರತಿಯೊಂದು ಪದವನ್ನು ಅರಿತು ಅಡಿಯಿಡಬೇಕಾಗುತ್ತದೆ.

ಸಂಪಾದನೆಯ ಮಹತ್ವ

ಸಾಹಿತ್ಯದ ಎರಡು ಸ್ಪಷ್ಟ ಮುಖಗಳಾದ ಗದ್ಯ–ಪದ್ಯಗಳಲ್ಲಿ ಪದ್ಯ ಪ್ರಧಾನ, ಗದ್ಯ ಅಪ್ರಧಾನವೆಂದೂ ಪದ್ಯಕವಿ ಶ್ರೇಷ್ಠ, ಗದ್ಯಕವಿ ಗೌಣನೆಂದೂ ಸಾಮಾನ್ಯ ತಿಳಿವಳಿಕೆ. ಇದೇ ರೀತಿ ವಿಮರ್ಶೆಯ ಎರಡು ಸ್ಪಷ್ಟಮುಖಗಳಾದ ಸಾಹಿತ್ಯವಿಮರ್ಶೆ ಮತ್ತು ಪಾಠವಿಮರ್ಶೆಗಳಲ್ಲಿ ಸಾಹಿತ್ಯವಿಮರ್ಶೆ ಪ್ರಮುಖ, ಪಾಠವಿಮರ್ಶೆ ಅಪ್ರಮುಖವೆಂಬ ಭಾವನೆ ಕೆಲವರಿಗಿದೆ. ನ್ಯಾಯವಾಗಿ ನೋಡಿದರೆ ಯುಗದ ಅಭಿರುಚಿ, ಜನತೆಯ ಅಜ್ಞಾನ ಮತ್ತು ಲೌಕಿಕ ಪ್ರಯೋಜನ ಕಾರಣವಾಗಿ ಒಂದು ಯುಗದಲ್ಲಿ ಎದ್ದು ಕಾಣುವ ಒಂದು ಕ್ಷೇತ್ರ, ಇನ್ನೊಂದು ಯುಗದಲ್ಲಿ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳಬಹುದೇ ಹೊರತು, ಜ್ಞಾನಸಂಪಾದನೆಯ ಎದುರು ಜ್ಞಾನದ ಎಲ್ಲ ಕ್ಷೇತ್ರಗಳೂ ಸಮಾನ.

ಒಂದು ಕಾಲದ ಬಹುಜನರ ಅನುಸರಣೆ ಆ ಯುಗದ ಅಭಿರುಚಿಯೆನಿಸಿಕೊಳ್ಳುತ್ತದೆ. ಪಶ್ಚಿಮದ ರುಚಿಗಳನ್ನು ಅನುಸರಿಸುತ್ತಿರುವ ನಾವು ಪಾಶ್ಚಿಮಾತ್ಯರಂತೆ ಸಾಹಿತ್ಯವಿಮರ್ಶೆ, ಪಾಠವಿಮರ್ಶೆಗಳೆರಡನ್ನೂ ಗೌರವಿಸದೆ ಪಾಠವಿಮರ್ಶೆ (ಗ್ರಂಥಸಂಪಾದನೆ)ಯನ್ನು ಕಡೆಗಣಿಸಿದ್ದೇವೆ. ಇದಕ್ಕೆ ಜನತೆಯಂತೆ ಈ ಕ್ಷೇತ್ರದಲ್ಲಿ ದುಡಿಯುವವರೂ ಹೊಣೆ ಎನ್ನಬೇಕಾಗಿದೆ. ಪ್ರಾರಂಭದಲ್ಲಿ

---

೪೮. ಗೂಶೂ (ಶ್ರೀ ಭೂಸನೂರಮಠ ಸಂಪಾದಿತ).

ಬಹಳಷ್ಟು ಸಂಪಾದಕರು, ಪರಿಷ್ಕರಣವೆಂದರೆ ಹಳೆಯ ಗ್ರಂಥಗಳನ್ನು ಅಚ್ಚಿಸುವ ಸುಲಭಕಾರ್ಯವೆಂಬ ಅಭಿಪ್ರಾಯವನ್ನು ಮೂಡಿಸಿದ್ದರು. ವಿಶೇಷ ಪರಿಶ್ರಮ, ವಿದ್ವತ್ತುಗಳಿಲ್ಲದಿದ್ದರೂ ಅಚ್ಚಿನ ಸೌಕರ್ಯವಿದ್ದವರು ಮಾಡಬಹುದಾದ ಕೆಲಸವೆಂಬ ಮಟ್ಟಕ್ಕೆ ಇಳಿಸಿದ್ದರು."[೪೯] ಇತ್ತೀಚೆ ಎತ್ತರದ ವ್ಯಕ್ತಿಗಳ ಸಾಧನೆಯಿಂದ ಈ ತಪ್ಪು ಭಾವನೆ ಕ್ರಮೇಣ ಕರಗುತ್ತಲಿದ್ದರೂ ಇನ್ನೂ ಎತ್ತರದ ವ್ಯಕ್ತಿಗಳು ಈ ಕಾರ್ಯದ ಕರ್ಣಧಾರಿತ್ವವಹಿಸಿ, ಈ ಕ್ಷೇತ್ರಕ್ಕೆ ಯೋಗ್ಯ ಬೆಲೆ ಸಿಗುವಂತೆ ಮಾಡಬೇಕಾಗಿದೆ. ಏಕೆಂದರೆ ಒಂದು ಜ್ಞಾನಕ್ಷೇತ್ರದ ಪ್ರಸಿದ್ಧಿಗೆ ಅದರಲ್ಲಿ ದುಡಿಯುವ ಮೇಧಾವಿಗಳು ಹೊಣೆ. ಪದ್ಯಸಾಹಿತ್ಯಕ್ಕೆ ಅಗ್ರಪೂಜೆ ಸಲ್ಲುತ್ತಿದ್ದ ಕಾಲದಲ್ಲಿ ಗದ್ಯಕ್ಕೂ ಗದ್ದುಗೆ ಸಿಗುವಂತೆ ಮಾಡಿದ ಬಾಣ, ದಂಡಿ ಮೊದಲಾದವರು 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಹಿರಿಮೆಯನ್ನು ಅದಕ್ಕೆ ತಂದುಕೊಟ್ಟರು. ಇದೇ ರೀತಿ ಗ್ರಂಥ ಸಂಪಾದನಕ್ಷೇತ್ರಕ್ಕೂ ಪ್ರಾಮಾಣಿಕ ದುಡಿಮೆಗಾರರು ಹೆಚ್ಚಿ, ಗ್ರಂಥಸಂಪಾದನೆಯ ಮಹತ್ವ ಮತ್ತು ಪ್ರಯೋಜನಗಳನ್ನು ಜನತೆಯ ಲಕ್ಷ್ಯಕ್ಕೆ ತಂದು, ಅದರ ಬಗ್ಗೆ ಹೆಚ್ಚಿನ ಆಕರ್ಷಣೆ, ಯೋಗ್ಯ ಅಭಿಪ್ರಾಯಗಳನ್ನು ಮೂಡಿಸಬೇಕಾಗಿದೆ. ಗ್ರಂಥಸಂಪಾದನೆಯೆನ್ನುವುದು ಕವಿಪಾಠದ ಸತ್ಯ ಸಾಕ್ಷಾತ್ಕಾರಕ್ಕೆ ನಡೆಸಿದ ಒಂದು ಜ್ಞಾನಯಾತ್ರೆಯೆಂಬ, ಹತ್ತು ಹಸ್ತಪ್ರತಿಗಳನ್ನು ಇಟ್ಟುಕೊಂಡು ಹನ್ನೊಂದನೆಯ ಮಿಶ್ರಪ್ರತಿಯನ್ನು ಸಿದ್ಧಪಡಿಸುವುದಾಗಿರದೆ, ಮೂಲಪ್ರತಿಯನ್ನು ರೂಪಿಸಿಕೊಡುವುದಾಗಿದೆಯೆಂಬ ಭಾವನೆಯನ್ನು ಮೂಡಿಸಬೇಕಾಗಿದೆ. ಆಗ ಷೇಕ್ಸಪಿಯರ್‌ನ ಗ್ರಂಥಗಳನ್ನು ಪರಿಷ್ಕರಿಸಿದ 'ಬೆಂಟ್ಲಿ' ಎಂಬವನನ್ನು "ಕತ್ತೆ ಹಾಲಿನಿಂದ ಬೆಳೆದ ಬುದ್ಧಿಯುಳ್ಳವನು" ಎಂದು ಅಪಹಾಸ್ಯ ಮಾಡಿದ ಪೋಪನು, ಮುಂದೆ ಈ ಪರಿಷ್ಕರಣ ಕಾರ್ಯದಿಂದ ಅವನಿಗೆ ಬಂದ ಕೀರ್ತಿನ್ನೂ ಹಣವನ್ನೂ ನೋಡಿ ತಾನೂ ಆ ಕಾರ್ಯ ಪ್ರಾರಂಭಿಸಿದಂತೆ, ಈಗ ಮೂಗು ಮುರಿಯುವವರೆಲ್ಲರೂ ನಿಜವಾದ ತಿಳವಳಿಕೆ ಉಂಟಾದಾಗ ಸಂಪಾದನೆಯ ಬಗ್ಗೆ ಗೌರವ ತೋರಿಸಬಹುದು. ಇಷ್ಟಾಗಿಯೂ ಗೌರವ ತೋರಿಸದಿದ್ದರೆ ಅವರಿಗೆ ಆ ವಿಷಯದ ಬಗ್ಗೆ ಇರುವ ಅಜ್ಞಾನವೇ ಕಾರಣವೆನ್ನಬೇಕಾಗುತ್ತದೆ. ಇಲ್ಲವೆ ತನಗೆ ರುಚಿಸದ ಅಥವಾ ತಾನು ನಿಲುಕಿಸಿಕೊಳ್ಳಲಾಗದ ವಸ್ತುವನ್ನು ದೂಷಿಸುವುದು ಮನುಷ್ಯ ಸಹಜವೆಂದು ಭಾವಿಸಬೇಕಾಗುತ್ತದೆ.

---

೪೯. i ಸಂತೆಯ ಹೊತ್ತಿಗೆ ಮೂರುಮೊಳ ನೇಯುವ "ಸಮರ್ಪಣ ಗ್ರಂಥ" "ಸಮಾರಂಭ ಸಂಚಿಕೆ"ಗಳ ಸಂಪಾದಕರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಲಿದೆ. ತಾನು ಸಂಪಾದಿಸುತ್ತಲಿರುವ ಪ್ರತಿಯೊಂದು ಲೇಖನದ ತೂಕ ಹೇಳುವ ಶಕ್ತಿ ಇದ್ದವರು, ಪ್ರತಿಯೊಂದು ಲೇಖನದ ಆಳವನ್ನು ಅಳೆದು ತೋರಿಸುವ ನಿಲುವುಳ್ಳವರು ಮಾತ್ರ ನಿರ್ವಹಿಸಬೇಕಾದ ಕಾರ್ಯವಿದು. ಆದರೆ ಯಾರವೋ ಲೇಖನಗಳನ್ನು ಸಂಗ್ರಹಿಸಿ, ಯಾರದೋ ಹಣದಿಂದ ಮುದ್ರಿಸಿ, ಮುಖಪುಟದ ಮೇಲೆ ಹೆಸರು ಬರೆದುಕೊಳ್ಳುವ ಚಾಪಲ್ಯ ಕೈಲಾಗದ ಸಾಹಿತಿಗಳಲ್ಲಿ, ಆಡಳಿತಾಧಿಕಾರಿಗಳಲ್ಲಿ, ರಾಜಕಾರಣಿಗಳಲ್ಲಿ ಈಗ ಮಹಾಪೂರಗೊಳ್ಳುತ್ತಲಿರುವುದು ವ್ಯಸನದ ಸಂಗತಿ.

ii ಕೆಲವು ಸಂಸ್ಥೆಗಳಲ್ಲಿ ಸಂಪಾದನಕೃತಿಗಳನ್ನು ಪುನಃ ಮುದ್ರಿಸುವಾಗ ಮೂಲ ಸಂಪಾದಕನ ಹೆಸರನ್ನು ಕೈಬಿಟ್ಟು, ಆ ಆ ಕಾಲದ ಅಧಿಕಾರಿಗಳು ತಮ್ಮ ಹೆಸರನ್ನು ಅಚ್ಚಿಸಿಕೊಳ್ಳುವುದುಂಟು. ಉದಾ : ನಾಗವರ್ಮನ ಕಾವ್ಯಾವಲೋಕನ (ಮೈಸೂರ ಪರಿಷ್ಕರಣಗಳು) ಮತ್ತು ಭೀಮಕವಿಯ ಬಸವಪುರಾಣ (ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಪರಿಷ್ಕರಣಗಳು).

ಬದುಕಿನಲ್ಲಿ ಪ್ರಯೋಜನವಿಲ್ಲದ ವಸ್ತು ಜನತೆಯ ಅನಾದರಕ್ಕೆ ಗುರಿಯಾಗುತ್ತದೆ. ಕಾವ್ಯಪ್ರಯೋಜನವನ್ನೂ ಪಟ್ಟಿಮಾಡಿದ ಮಾನವಸ್ವಭಾವ, ಗ್ರಂಥಸಂಪಾದನೆಯ ಪ್ರಯೋಜನವನ್ನು ಅಪೇಕ್ಷಿಸುವುದು ಸಹಜ. ಆದರೆ ವೈದ್ಯ, ಕಟ್ಟಡ ಶಾಸ್ತ್ರಗಳಂತೆ ಇದರಿಂದ ಭೌತಿಕ ಪ್ರಯೋಜನವನ್ನು ಬಯಸಲು ಎಡೆಯಿಲ್ಲ. ವಿಮರ್ಶಾಶಾಸ್ತ್ರದಂತೆ ಬೌದ್ಧಿಕ ಪ್ರಯೋಜನವನ್ನು ಮಾತ್ರ ನಿರೀಕ್ಷಿಸಬಹುದಾಗಿದೆ. ಸೃಜನರೂಪದ ಸಾಹಿತ್ಯವನ್ನು 'ಕಾವ್ಯಾಲಾಪಾಂಶ್ಚ ವರ್ಜಯೇತ್' ಎಂದು ವಿರೋಧಿಸಿದ ಲೌಕಿಕ ಪ್ರಯೋಜನಾಭಿಲಾಷಿಗಳಿಗೆ ಈ ವಿಮರ್ಶನ ರೂಪದ ಗ್ರಂಥಸಂಪಾದನೆ ಇನ್ನೂ ಅಪ್ರಯೋಜಕವಾಗಿ ಕಾಣಬಹುದು. ಆದರೆ ಸಾಹಿತ್ಯವಿಮರ್ಶೆಯಲ್ಲಿ ಪ್ರಯೋಜನವನ್ನು ಕಾಣುವವರು ಪಾಠವಿಮರ್ಶೆಯಲ್ಲಿ ಪ್ರಯೋಜ ಕಾಣದಿರುವುದು ವ್ಯಸನದ ಸಂಗತಿ. ಹಾಗೆ ನೋಡಿದರೆ ಈ ಉಭಯ ವಿಮರ್ಶಕರು ಅವಳಿ ಬಂಧುಗಳು. ಒಬ್ಬನದು ಪಾಠವಿಮರ್ಶೆ, ಇನ್ನೊಬ್ಬನದು ರಸವಿಮರ್ಶೆ. ಒಬ್ಬನು ಬಯಸುವುದು ರಚನಾಶುದ್ಧಿ, ಇನ್ನೊಬ್ಬನು ಬಯಸುವುದು ರಚನಾರಮ್ಯತೆ. ಈ ರಚನಾ ರಮ್ಯತೆಯ ಮೌಲ್ಯನಿರ್ಣಯವು, ರಚನಾಶುದ್ಧಿಯನ್ನವಲಂಬಿಸಿರುತ್ತದೆ. ಅಂದರೆ ಶುದ್ಧಿಕಾರ್ಯವನ್ನು ಸಂಪಾದಕ ಪೂರೈಸಿಕೊಟ್ಟರೆ ಮಾತ್ರ ರಮ್ಯತೆಯ ಮೌಲ್ಯನಿರ್ಣಯಕ್ಕೆ ಅರ್ಥವಿದೆ, ಕವಿಕೃತಿಯ ವಿಮರ್ಶೆ ಎಂಬ ಬೆಲೆಯಿದೆ. ಇಲ್ಲದಿದ್ದರೆ ಅದು ಮುದ್ರಣಗೊಂಡ ಯಾವುದೋ ಒಂದು ಹಸ್ತಪ್ರತಿಯ ವಿಮರ್ಶೆ ಎನಿಸುತ್ತದೆ; ಅಪ್ರಾಮಾಣಿಕ ಪ್ರತಿಯನ್ನು ಗಮನಿಸಿ ಆಡಿದ ಅಪ್ರಾಮಾಣಿಕ ಮಾತು ಎನಿಸುತ್ತದೆ.

೧. ಆ ಸುದತಿಯ ಮೃದುಪದ ವಿನ್ಯಾಸಮುಮಂ ಶೇಷನಾನಲಾಱದೆ ಸುಯ್ದಂ

[ಪಂಭಾ ೧-೧೨೬] (ವಿಶೇಷಮುಮನಾನಲಾಱದೆ ಸುಯ್ದಳ್)

೨. ಕೆಂದಿದ **ಮೀನಂ ತಳ್ತಾಡ**ದಿರ್ದ ಮಡುವಂ ಪೋಲ್ತಂ [ಪಂಭಾ ೮-೧೩] (ಮೀನಂತಳ್ತಾ)

೩. ಪಾಟಿಸುವೆನೊಯ್ಯೊನೆ ಮುಳ್ಳೊಳೆ ಮುಳ್ಳಂ [ಪಂಭಾ ೯-೬೭] (ಳ್ಳೊ)

೪. ಎನ್ನ ನುಡಿ **ಟಾಠಡಾಢಣಂ** [ಪಂಭಾ ៦-೨೬] (ಯೆರಡಾದಡಂ)

ಕವಿತ್ವದ ಘನೀಭೂತವೆನಿಸುವ ಈ ವಾಕ್ಯಗಳ ಪಾಠಸ್ಥಾನದಲ್ಲಿ ದೋಷಪಾಠಗಳನ್ನು ಸ್ವೀಕರಿಸಿದರೆ ಕವಿಯ ಶಾಬ್ದಿಕತಪಸ್ಸು ಹೊಳೆಯಲ್ಲಿ ಹುಣಿಸೆ ತೊಳೆದಂತೆ. ಇಂಥ ದೋಷಪಾಠಗಳನ್ನಾಶ್ರಯಿಸಿ ಮಾಡಿದ ವಿಮರ್ಶೆ, ಕವಿಗೆ ಅಪಚಾರ ಮಾಡಿದಂತೆ. ಪುಣ್ಯಕ್ಕೆ "ನೀರೊಳಗಿರ್ದುಂ ಬೆಮರ್ತನುರಗಪಾತಕಂ", "ನಡೆದು ಸಂಧಿಯ ಮಾಡಿ ಮುರರಿಪು। ಕೊಡಿಸು ನಾಲ್ಕೂರುಗಳನವರಿಗೆ । ತಡೆಯದೆರಡೂರುಗಳ ಕೊಂಬೆನು ಕೌರವೇಂದ್ರನಲಿ", "ದೇವದಾನವ ಮಾನವರುಗಳ । ಡಾವಣಿಯ ದನವಾಗಿ ಕಟ್ಟುವ ಭಾವೆ ಮಾಯಾದೇವಿ ಹುಟ್ಟಿದಳ್" ಮೊದಲಾದ ಉತ್ತಮೋತ್ತಮ ಭಾಗಗಳಿಗೆ ಪಾಠಾಂತರಗಳು ಹುಟ್ಟಿಕೊಂಡಿಲ್ಲ. ಹುಟ್ಟಿಕೊಂಡಿದ್ದ ಪಕ್ಷದಲ್ಲಿ ಸಂಪಾದಕ ನಿರ್ವಹಿಸಬೇಕಾಗುತ್ತಿದ್ದ ಪಾತ್ರವನ್ನು ನೆನೆದಾಗ ಗ್ರಂಥಸಂಪಾದನೆಯ ಮಹತ್ವ ವೇದ್ಯವಾಗಿರದು. ಇದೇ ರೀತಿ ಹಲವು ಕಾವ್ಯಗಳಲ್ಲಿ ಕಂಡುಬರುವ ಪ್ರಕ್ಷಿಪ್ತ ಪದ್ಯಗಳನ್ನು, ಶರಣರ ವಚನ-ದಾಸರ ಹಾಡು-ಸರ್ವಜ್ಞನ ತ್ರಿಪದಿಗಳಲ್ಲಿಯ ಪ್ರಕ್ಷೇಪಗಳನ್ನು ಸೋಸಿ, ವಚನ ಕೀರ್ತನೆಗಳಲ್ಲಿಯ ಮುದ್ರಿಕೆ ಪಲ್ಲಟ, ಕಾವ್ಯ-ಕಾವ್ಯಗಳಲ್ಲಿಯ ಪದ್ಯ ಸಮಾನತೆಗಳ ತೊಡಕನ್ನು ಬಗೆಹರಿಸಿ, ನೀರು-ಕ್ಷೀರಗಳನ್ನು ಬಿಡಿಸಿ

ತೋರಿಸಬೇಕಾಗುತ್ತದೆ, ಸಂಪಾದಕ. ಹೀಗೆ ಪಾಠನಿರ್ಣಯಿಸಿ ಸಂಪಾದಕ ಬರೆಯಬೇಕಾದುದು ರಸವಿಮರ್ಶೆ ಮೊದಲಾದವುಗಳನ್ನೂ ಒಳಗೊಳ್ಳುವ ಉನ್ನತ ವಿಮರ್ಶೆಯನ್ನು. ಅದಕ್ಕಾಗಿ ಗ್ರಂಥ ಸಂಪಾದನೆಯು ರಸವಿಮರ್ಶೆಯನ್ನೂ ಮೀರಿದ ವಿಸ್ತಾರವುಳ್ಳುದೆಂದು ಹೇಳಬೇಕಾಗುತ್ತದೆ.

ಹೀಗೆ ರಸವಿಮರ್ಶಕನಿಗೆ ನೆರವಾಗುವ ಸಂಪಾದಕನ ಸಹಾಯಹಸ್ತ ಮಿಕ್ಕ ಸಂಶೋಧಕ, ಶಾಸ್ತ್ರಜ್ಞ ಮೊದಲಾದವರಿಗೂ ಅತ್ಯವಶ್ಯ. ಉದಾ :

೧. ಶಕವರ್ಷದ ಸಾವಿರದ ನೂಱಱೊಳು ।
ತ್ಸಕಲವಾದಾಱು ವತ್ಸರದ ॥
ಪ್ರಕಟಿತ ಪುತ್ರವರುಷ ಮಾಘ ಶುದ್ಧದಿ ।
ಯಕಲಂಕ ಪಾಡ್ಯದೊಳಾಯ್ತು ॥[೫೦]

[ಶಕವರ್ಷದ ಸಾವಿರದ ನಾನೂಱಱೊಳ್ವಿಕಲವಾದಾಱುವತ್ಸರದ]

೨. ಜನನಾಥೋತ್ತಮ ಸೋಮರಾಜನುಸಿರ್ದೀ ಕಾವ್ಯಂ ವಲಂ ಶಾಲಿವಾ
ಹನಶಾಕಾಬ್ದಮದ್ಯೆದೆ ಸಾಸಿರದ ನೂಱೆಂ ಸಂದ ನಾಲ್ವತ್ತನಾ ।
ಲ್ಕನೆಯಾ ರಂಜಿತ ಚಿತ್ರಭಾನುವ ವರಾಶ್ವೀಜೋತ್ಸಿತೈಕಾದಶೀ ।
ವನಜಾರಾತಿತನೂಜ ವಾಸರದೊಳಾದತ್ತಲ್ಲಮಂಗರ್ಪಿತಂ ।[೫೧]

ಕೃತಿರಚನೆಯ ಕಾಲಸೂಚನೆಯನ್ನೊಳಗೊಂಡ ಮಹತ್ವದ ಪದ್ಯಗಳಿವು. ಸಾಹಿತ್ಯಚರಿತ್ರೆ ಬರೆಯಲು ನೇರ ಆಧಾರವೆನಿಸಿದ ಇವು, ತೀರ ಕೆಟ್ಟಿರುವ ಪ್ರಸಂಗದಲ್ಲಿ ಚರಿತ್ರೆಕಾರ ಸಂಪಾದಕನನ್ನು ಆಶ್ರಯಿಸದೆ ಗತಿಯಿಲ್ಲ. ಈಗ ಹಲವು ಪ್ರತಿಗಳನ್ನು ಕಲೆಹಾಕಿ, ವಂಶಾವಳಿಯನ್ನು ನಿರ್ಣಯಿಸಿ, ಶುದ್ಧ-ಅಶುದ್ಧಗಳನ್ನು ತೂಗಿ, ಸಂಪಾದಕ ತೀರ್ಪು ನೀಡಿದಾಗ ಕವಿಚರಿತ್ರೆಕಾರ ಮುಂದುವರಿಯಬೇಕಾಗುತ್ತದೆ. ಇದೇ ರೀತಿ ಕವಿಗಳ ಕಾಲನಿರ್ಣಯಕ್ಕೆ ನೆರವಾಗುವ ಸೂಕ್ತಿ ಸುಧಾರ್ಣವ, ಶಬ್ದಮಣಿದರ್ಪಣಗಳಂತಹ ಕೃತಿಗಳಲ್ಲಿಯ ಮೂಲಪಾಲು ಮತ್ತು ಪ್ರಕ್ಷಿಪ್ತಪಾಲುಗಳನ್ನು ನಿರ್ಣಯಿಸುವುದು ಅತ್ಯವಶ್ಯವೆನಿಸಿದೆ. ಗಿರಿಜಾಕಲ್ಯಾಣದ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿರುವುದರಿಂದ ಹರಿಹರನು ಮಲ್ಲಿಕಾರ್ಜುನನಿಗೆ ಪ್ರಾಚೀನನೆನ್ನುವವರ ಮಾತನ್ನು, ಪ್ರಕ್ಷೇಪದ ಆಧಾರದಿಂದ ಕೆಲವರು ತಳ್ಳಿ ಹಾಕುತ್ತಾರೆ. ಇಂಥ ಪ್ರಸಂಗಗಳಲ್ಲಿ ಸಂಪಾದಕ ಮಧ್ಯಸ್ಥಿಕೆ ವಹಿಸಬೇಕಾಗುತ್ತದೆ.

ವ್ಯಾಕರಣ, ಛಂದಸ್ಸು ಇತ್ಯಾದಿ ಶಾಸ್ತ್ರಗಳಿಗೆ ಬಂದರೆ ಅವುಗಳ ಶುದ್ಧಪಾಠ ಅಭ್ಯಾಸಿಗಳಿಗೆ ಅವಶ್ಯಬೇಕು. ಹತ್ತಾರು ಸಂಖ್ಯೆಯಲ್ಲಿ ಸಿಗುವ ಛಂದೋಂಬುಧಿಯ ಎರಡು ಪ್ರತಿಗಳು ಒಂದನ್ನೊಂದು ಹೋಲುವುದಿಲ್ಲ. ಇಷ್ಟು ಹದಗೆಟ್ಟ ಕೃತಿಯನ್ನು ಅಭ್ಯಸಿಸುವುದೆಂದರೆ "ನೆಲ್ಲುಂ ಮೊಸರುಂ" ಗುಡಿದಂತೆ.

---

೫೦. ಕುಸಾ. ೧-೨.

೫೧. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ. ೨೧೯.

ಉದಾಹರಣೆಗೆ ಹೇಳುವುದಾದರೆ ಛಂದೋಂಬುಧಿಯಿಂದ ಕೈಪಿಡಿಯಲ್ಲಿ ಎತ್ತಿಕೊಳ್ಳಲಾದ ಮೂಲಷಟ್ಪದಿಯ ಲಕ್ಷಣ ಪದ್ಯವು ಲಕ್ಷ್ಯಪದ್ಯವಾಗಿಲ್ಲ. ಕೈಪಿಡಿ ಹಲವು ಆವೃತ್ತಿಗಳನ್ನು ಕಂಡರೂ ಪರಿಷ್ಕಾರಗೊಳ್ಳದೆ ಉಳಿದ ಈ ಪದ್ಯವನ್ನು, ಸಮರ್ಥ ಸಂಪಾದಕರಾದ ತೀ.ನಂ.ಶ್ರೀ. ಅವರು ೩೦ ವರ್ಷಗಳ ತರುವಾಯ ಋಜುಗೊಳಿಸಿ ಕೊಟ್ಟರು.[೫೨] ಇಂಥ ಸಂದೇಹಗಳು ಗೀತಿಕೆ, ಛಂದೋವಂತಸ ಮೊದಲಾದ ವೃತ್ತಗಳ ವಿಷಯದಲ್ಲಿ ಒಟ್ಟಿ ನಿಂತಿವೆ.

"ಕ್ಷಳಸೂತ್ರ"ಕ್ಕೆ ಬರೆದ ನಿಟ್ಟೂರ ನಂಜಯ್ಯನ ಟೀಕೆಯು ಕಿಟೆಲ್ ದರ್ಪಣದಲ್ಲಿ "ವಿಕಲ್ಪಂ = ಕುಳಪ್ರಾಸಿಂಗೆವಿಕಲ್ಪ" ಎಂದೂ, ಪರಿಷತ್‌ದರ್ಪಣದಲ್ಲಿ "ವಿಕಲ್ಪಂ = ಲಾಕ್ಷರ ವಿಕಲ್ಪಂ" ಎಂದೂ ಇದೆ. ೨೮ನೆಯ ಸೂತ್ರಕ್ಕೆ "ಅಂಗೀಕೃತ ಪದಲತ್ವಕ್ಕೆ ಸಮನೆ ಸಲ್ಲದ ಕುಳನುಂ' "ಅಂಗೀಕೃತ ಪದಲತ್ವಕ್ಕೆ ಸನೇಮ ಸಲ್ಲದ ಕುಳನುಂ' 'ಅಂಗೀಕೃತ ಪದಲತ್ವಕ್ಕೆ ಬೆಟ್ಟಿತ್ತೆನಿಸಿದ ಕುಳನುಂ' ಎಂಬ ಮೂರು ಪಾಠಗಳಿವೆ. ಇಂಥ ಪ್ರಸಂಗಗಳಲ್ಲಿ ಶುದ್ಧಪಾಠವನ್ನು ನಿರ್ಣಯಿಸಿ ಭಾಷಾಭ್ಯಾಸಿಗಳಿಗೆ ದಾರಿ ತೋರಿಸುವವನು ಸಂಪಾದಕ.

ಈ ಶಾಸ್ತ್ರಗಳಿಗಿಂತ ಹೆಚ್ಚು ಜವಾಬುದಾರಿಯದು ವೈದ್ಯಶಾಸ್ತ್ರ. ಲೋಕೋಪಕಾರ ಮೊದಲಾದ ಗ್ರಂಥಗಳ ಮೈತುಂಬ ತಲೆಯೆತ್ತಿದ ಭಿನ್ನಪಾಠಗಳನ್ನು ಲಕ್ಷಿಸದೆ ನೀಡಿದ ಔಷಧ, ವಿಷವಾಗಿ ಪರಿಣಮಿಸಬಹುದು. ಹೀಗೆ ವ್ಯಾಕರಣ, ಛಂದಸ್ಸು, ಅಲಂಕಾರ ಮಿಕ್ಕ ಶಾಸ್ತ್ರಗಳಲ್ಲಿ ದೋಷಪಾಠ ತಲೆದೋರಿ ಸಿದ್ಧಾಂತಗಳಿಗೆ ಆಗಾಗ ಚ್ಯುತಿ ಬಂದಿರುತ್ತದೆ. ಈ ದೋಷಪಾಠಗಳನ್ನು ನೆರೆನಂಬಿ ಮುನ್ನಡೆದರೆ ಸಿದ್ಧಾಂತದಿಂದ ವಿವಂಚಿತರಾಗಬೇಕಾಗುತ್ತದೆ.

ಕಾವ್ಯಗಳ ಕರ್ತೃ, ಕವಿಗಳ ಕೃತಿಸಂಖ್ಯಾನಿರ್ಣಯ ಮೊದಲಾದ ಕವಿಚರಿತ್ರೆಯ ಮೂಲಭೂತಪ್ರಶ್ನೆಗಳನ್ನು ಸಮರ್ಪಕವಾಗಿ ಬಿಡಿಸಲು ಸಂಪಾದನಶಾಸ್ತ್ರ ನೆರವು ನೀಡುತ್ತದೆ. ಕರ್ತೃನಿರ್ದೇಶನವಿಲ್ಲದ ಬಸವರಾಜದೇವರ ರಗಳೆ ಹರಿಹರನದೆಂದು ನಿರ್ಣಯಿಸಲು ದಿ.ಟಿ.ಎಸ್. ವೆಂಕಣ್ಣಯ್ಯನವರು ಬಳಸಿದ ಆಧಾರಗಳಲ್ಲಿ ಗ್ರಂಥಸಂಪಾದನ ವಿಧಾನ ಪ್ರಮುಖವೆಂಬುದನ್ನು ಇಲ್ಲಿ ನೆನೆಯಬೇಕು. ದುರ್ವಿನೀತನ ಮೂರೂ ಕೃತಿಗಳನ್ನು ಉಲ್ಲೇಖಿಸುವ ಶಾಸನವನ್ನು ತಪ್ಪು ಓದಿ ಕಿರಾತಾರ್ಜುನೀಯವೊಂದು ಮಾತ್ರ ಅವನ ಕೃತಿಯೆಂದು ಹೇಳಲಾಗಿತ್ತು. ಅದೇ ವಾಕ್ಯವನ್ನು ಸರಿಯಾಗಿ ಓದಿ ಬೃಹತ್ಕಥೆ, ಶಬ್ದಾವತಾರಗಳೂ ಅವನ ಕೃತಿಗಳೆಂದು ಸಂಪಾದಕರಾದ ದಿ.ಆರ್. ನರಸಿಂಹಾಚಾರ್ ಹೇಳಲು ಇಪ್ಪತ್ತು ವರ್ಷ ಬೇಕಾದವು.[೫೩] ಇನ್ನು ಸಮಸ್ತ ಭಾರತದೇಶದಲ್ಲಿ ವ್ಯಾಸೋಕ್ತ, ಕಾಳಿದಾಸೋಕ್ತವೆನಿಸಿದ ಕೃತಕ ಕೃತಿಗಳ ಸಂಖ್ಯೆ ಹೇರಳ. ಹರಿಹರ, ರತ್ನಾಕರ, ಕುಮಾರವ್ಯಾಸ, ಸರ್ವಜ್ಞ, ಶರಣ–ದಾಸರ ಹೆಸರಿನಲ್ಲಿ ಸಿಗುವ ಕೆಲವು ಕೃತಿಗಳನ್ನು ವಿಮರ್ಶಕರು ಇದೇ ಸಂದೇಹದಿಂದ ನೋಡುತ್ತಲಿದ್ದಾರೆ. ಹೊಣೆಗಾರಿಕೆಯಿಂದ ಅಧಿಕೃತ ತೀರ್ಮಾನ ನೀಡಿ, ಈ ಸಂದೇಹಗಳನ್ನು ನಿವಾರಿಸಿ, ಸಾಹಿತ್ಯ ಚರಿತ್ರೆಯ ದಾರಿಯನ್ನು ಸುಗಮಗೊಳಿಸುವವನು, ಸಂಪಾದಕ.

---

೫೨. ಸಮಾಲೋಕನ ಪು. ೨೨೭, ೪೯. ಶಮದ ಸೂ. ೧೫.
೫೩. MAR 1912. para 108.

ಸಮಾಜ ಮತ್ತು ಸಾಹಿತ್ಯಗಳಲ್ಲಿದ್ದುದು ಬಿಂಬ ಪ್ರತಿಬಿಂಬ ಭಾವ. ಸಾಹಿತ್ಯಕೃತಿಗಳಲ್ಲಿ ಕ್ರಮೇಣ ತಲೆಯೆತ್ತಿದ ದುಷ್ಪಾಠಗಳಿಂದಾಗಿ ಈ ಅನ್ಯೋನ್ಯಭಾವ ತಪ್ಪಿ ಹೋಗಿರುತ್ತದೆ. ಇಂಥ ದುಷ್ಪಾಠಗಳನ್ನು ಋಜುಗೊಳಿಸುವ ಸಂಪಾದನಕಾರ್ಯವೆಂದರೆ ಸಾಹಿತ್ಯ ಮತ್ತು ಸಮಾಜಗಳ ಬಿಂಬ ಪ್ರತಿಬಿಂಬ ಬಾಂಧವ್ಯವನ್ನು ಪುನರ್ರಚಿಸಲು ಮಾಡುವ ಒಂದು ಪ್ರಾಮಾಣಿಕ ಪ್ರಯತ್ನ. ಕೆಲವು ಉದಾಹರಣೆಗಳಿಂದ ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು:

"ಕಾಡಟಿದೇವರ ನೋಂಪಿಗಿಟ್ಟ ಮಣ್ಣಾನೆಯ ಮಾಟ್ಕೆಯಿಂ"[೫೪] (ತೆ)
"ಮಂಗಳವಾರಂ **ಕಡ್ಡ**ವಾರವೆಂಬಂತೆ"[೫೫] (ವಡ್ಡ)
"ಸೂಳೆಯ ಮಗ **ಮಹಳ**ವ ಮಾಡಿದಡೆ ತಾಯ ಹೆಸರಾಯ್ತು,
ತಂದೆಯ ಹೆಸರಿಲ್ಲ"[೫೬] (ಮಾಳ, ಮೇಳ)
"ಠಕ್ಕಿಸಿ ತಿಂದು ಕುಂಬಳದ ಮಾಟಿಕ್ಕಿ"[೫೭]
"ಸಿಂಹಮಾಡುವರ ಬಾಲಮನಾಡಿದರ್"[೫೮]
"ಊರ ಸೀರೆಗೆ ಅಸಗ ತಡಬಡಗೊಂಬಂತೆ"[೫೯]
"ತಗರ ಬೆನ್ನಲಿ ಹರಿವ ಸೊಣಗನಂತೆ"[೬೦]
"ತುಱು[ಗೋಳೊಳ್] ಪೆಣ್ಬುಯ್ಯಲೊ ।
ಳೆಱವೆಸದೊಳ್ ನಂಟನೆಡಱೊಳೂರಟಿವಿನೊಳಂ ।
ತಱಿಸಂದು ಗಂಡುತನವನೆ ।
ನೆಱಪದವಂ ಗಂಡನಲ್ಲನೆಂತು ಷಂಡಂ ॥"[೬೧]
"ಕನಕನ ಬೇಳ್ವೆ ತಗುಳ್ದುದು ಕನಕನಂ"[೬೨]
"ಬಲಿ ಜೋಕೋವರನಂತಿರೇಟು ದಿವಸದರಸುತನಮಂ
ಬೇಡಿ ಪಡೆದನ್" (ಕಾ)[೬೨A]

---

೫೪. ಸೂಕ್ತಿ ೧೦-೧೦೮.
೫೫. ಗದಾಯುದ್ಧ ೩-೨೬.
೫೬. ಚೆಬವ ೭೦೮.
೫೭. ಸೂಕ್ತಿ, ೧-೩೬.
೫೮. ಪಂಭಾ ೬-೬೯.
೫೯. ಅಕ್ಕನ ವಚನಗಳು ೩೧. ಬವ ೩೦೯.
೬೦. ಬವ ೬೪೧.
೬೧. ಗದಾಯುದ್ಧ ಸಂಗ್ರಹ, ೨-೨೪.
೬೨. ಕನಕನ ಬೇಳ್ವೆ – ಪ್ರ. ಕ. ೪೪-೪.

ಎಲೆ ಮಿಡುಕು,[೬೩] ಪಳಂಗಾಸು,[೬೪] ಕಾರೋಹಣದ ಪಳಿ,[೬೫] ಡಂಗಹಾಕು,[೬೬] ರಪಣ,[೬೭] ಲೋಹಾಸನ,[೬೮] ಮದನಾವತಾರ,[೬೯] ಮೇಗಾಳಿ–ಕಿಗ್ಗಾಳಿ,[೭೦] ಜೋಳವಾಟಿ–ವೇಳೆವಾಟಿ– ಲೆಂಕವಾಟಿ,[೭೧] ಫೈಸಾಸ,[೭೨] ಭಗವತಿಯೇಱು,[೭೩] ಗೊರವರ ಡುಂಡುಚಿ.[೭೪] ಚಕ್ಕಣಂ[೭೫] ಇತ್ಯಾದಿಗಳು ನಮ್ಮ ಸಂಸ್ಕೃತಿಯ ಆಚಾರ–ವಿಚಾರಗಳ ವಚೋರೂಪಗಳು. ಇವುಗಳಿಗೆ ಉಂಟಾದ ದುಷ್ಪಪಾಠ, ಸಂಸ್ಕೃತಿಯ ಚರಿತ್ರೆಗೆ ಅಂಟಿದ ಕಿಲ್ಬಿಷ. ಈ ಕಿಲ್ಬಿಷವನ್ನು ತೆಗೆದುಹಾಕಿ ಬದುಕಿನ ಮೌಲ್ಯ, ಜನಾಂಗದ ಸಂಸ್ಕೃತಿಗಳನ್ನು ಸಾಕ್ಷಾತ್ಕಾರಗೊಳಿಸಿಕೊಡುತ್ತದೆ, ಗ್ರಂಥಸಂಪಾದನೆ. "ಕವಿಪಾಠವನ್ನು ಕಂಡುಹಿಡಿಯುವುದೇ ಗ್ರಂಥಸಂಪಾದನೆಯ ಪರಮೋದ್ದೇಶವಲ್ಲ.... ಸಾಹಿತ್ಯ, ಜನಜೀವನಗಳ ನಿಕಟ ಪರಿಚಯವನ್ನು ಮಾಡಿಕೊಡುವುದಕ್ಕೆ ಅದೊಂದು ಸಾಧನ"[೭೬] ಎಂಬ ಸುಪ್ರಸಿದ್ಧ ಸಂಪಾದಕ ಜಾನ್ ನಿಕೋಲೊ ಮಾಡ್ವಿಗ್‌ನ ಅಭಿಪ್ರಾಯ ಇದನ್ನು ಸಮರ್ಥಿಸುತ್ತದೆ. ಆದುದರಿಂದ ಭಾಷಾಶಾಸ್ತ್ರ ಮೊದಲಾದವುಗಳಂತೆ ಗ್ರಂಥಸಂಪಾದನಶಾಸ್ತ್ರವೂ ಸಂಸ್ಕೃತಿ ಅಭ್ಯಾಸದ ಒಂದು ಸಾಧನವೆನ್ನಬಹುದು.

ಇದೆಲ್ಲವನ್ನು ಗಮನಿಸಿದರೆ ಸಂಪಾದಕನ ಮಹತ್ವ, ಅದರಲ್ಲಿಯೂ ಪಾಠರಕ್ಷಣಾ ಪ್ರಜ್ಞೆ ಮತ್ತು ಇತಿಹಾಸಪ್ರಜ್ಞೆಗಳ ಅಭಾವದಿಂದ ಕೂಡಿದ ಭಾರತದಲ್ಲಿ ಮಿಕ್ಕ ದೇಶಗಳಿಗಿಂತ ಮಿಗಿಲೆಂದು ಮನವರಿಕೆಯಾಗದಿರದು. ಗ್ರಂಥಸಂಪಾದನೆಯು ಅದೃಶ್ಯ ರೂಪದ ಪಾಠದೇವತೆಯನ್ನು ಸಾಕ್ಷಾತ್ಕರಿಸಿಕೊಳ್ಳಲು ಮಾಡುವ ಒಂದು ತಪಸ್ಸು, ಕುಡಿಯನ್ನು ಕೊಡವಿ ಪಾಠಜ್ಯೋತಿಯನ್ನು ಬೆಳಗಿಸು ಒಂದು ಪುಣ್ಯಕಾರ್ಯವೆನಿಸದಿರದು.

❖❖

೬೨.A.ನೇಪು ೬–೨೯ ಗ.

೬೩. ಪಂಪಭಾರತದ ಕೆಲವು ಪದಪಾಠಗಳು. (ಪ್ರ. ಕ. ೫೦–೨).

೬೪. ಪಟಿಂಗಾಸು (ಪ್ರ.ಕ. ೪೨–೨).

೬೫. ಕಾರೋಹಣದ ಪಟಿ. (ಪ್ರ. ಕ. ೪೨–೩).

೬೬. ಶಬ್ದವಿಹಾರ ೭೧.

೬೭. ಅಭಿವಂದನೆ ಪು. ೩೧೧.

೬೮. The Eastern Chalukyas of Vengi P. 100.

೬೯. ಪ್ರ. ಕ. ೩೮–೪.

೭೦. ಶಬ್ದವಿಹಾರ ೬.

೭೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ೩೦೨.

೭೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ೨೨೫.

೭೩. ಭಗವತಿಯೇಱುವೇೞ್ವ ತೆಱದಿ ಕಥೆಯಾಯ್ತುವರೇಱು (ಪ್ರ, ಕ. ೪೪–೨).

೭೪. ಗೊರವರ ಡುಂಡುಚಿ (ಪ್ರ. ಕ. ೪೩–೪)

೭೫. ಚಕ್ಕಣಂ (ಪ್ರ.ಕ. ೪೩–೩).

೭೬. ಕಗ್ರಸಂ ೩೦.

ಅನುಬಂಧ

ಮಸಿ ಸಿದ್ಧಪಡಿಸುವ ವಿಧಾನ

"ಪುರಾಣ ಪುಂತಾದ ಯಾವುದಾದರೂ ಬಹುದಿನದ ಪುಸ್ತಕವನ್ನು ಬರೆಯಲಪೇಕ್ಷಿಸುವವರಿಗೆ ಸೂಚನೆ: ಮೊದಲು ಪಟಕದ ನೀರಿನಲ್ಲಿ [ಓಲೆಗಳನ್ನು] ಎದ್ದಿ ಒಣಗಿಸಬೇಕು. ನಂತರ ಒಂದೊಂದು ಓಲೆಗೆ ಎಷ್ಟೆಷ್ಟು ವಳಿಗಳನ್ನು ಬರೆಯಬೇಕೊ ಅಷ್ಟು ದಾರದ ಸುತ್ತುಗಳನ್ನು ವಾಲಿಗೆ ಸರಿಯಾದ ಹಲಗೆಯಲ್ಲಿ ಸುತ್ತಿ, ಆ ದಾರ ಸುತ್ತಿದ ಹಲಗೆಯ ಮೇಲೆ ಎಳೆಯಬೇಕು (ವತ್ತಬೇಕು). ಅಂದರೆ ಗೆರೆಗಳು ಮೂಡುವವು. ಆ ಗೆರೆಗಳ ಮೇಲೆ ಬರೆದರೆ ವಳಿಗಳು ಸೊಟ್ಟಾಗುವುದಿಲ್ಲ. ಪಟಕದ ನೀರಿನಲ್ಲಿ ತೋಯಿಸುವದರಿಂದ ವಾಲಿಗಳಿಗೆ ಎಷ್ಟು ದಿವಸಗಳಾದರೂ ನುಶಿ ಮುಟ್ಟುವುದಿಲ್ಲ. ನಂತರ ಅಲತೆಯ ಮಸಿಯಿಂದ ಬರೆಯಬೇಕು. ಅಂದರೆ ಅಕ್ಷರಗಳು ತೊಳೆದರೆ ಸಹ ಹೋಗುವುದಿಲ್ಲ.

ಅಲತೆಯ ಮಸಿಯನ್ನು ಮಾಡುವ ಕ್ರಮ :

ಆರು ದುಡ್ಡಿನ ತೂಕ ಕಡ್ಡಿ ಅರಗು (ಬಂಗಾರದ ಅರಗು ಅಲ್ಲ), ಎರಡು ಪೈ ತೂಕ ಅಲೀಕನ ತೊಪ್ಪಲ, ಒಂದು ಪೈ ತೂಕ ಪೂರ್ತಿ ಬಳಿಗಾರ – ಇವು ಮೂರು ಜೀನಸುಗಳನ್ನು ಬೇರೆ ಬೇರೆ ಸಣ್ಣಾಗಿ ಅರೆದು, ಬೇರೆಬೇರೆಯಾಗಿ ಇಟ್ಟು, ಒಂದೂವರೆ (ದೀಡು) ಸೇರು ನೀರನ್ನು ಕುದಿಯಲಿಕ್ಕೆ ಇಡಬೇಕು. ಒಂದು ಉಕ್ಕು ಚೆನ್ನಾಗಿ ಬಂದನಂತರ ಅದರಲ್ಲಿ ಮೊದಲು ಅರಗಿನ ಪುಡಿಯನ್ನು ಹಾಕಿ ಕಡಚಿಗೆಯಿಂದ ತಿರುವಬೇಕು. ಕೂಡಲೇ ಅಲೀಕನ ತಪ್ಪಲು ಹಾಕಿ ತಿರುವಬೇಕು. ಮತ್ತು ಅದರ ಹಿಂದೆ ಪೂರ್ತಿ ಬಳಿಗಾರದ ಪುಡಿ ಹಾಕಿ ತಿರುವಬೇಕು. ಈ ಪ್ರಕಾರ ಮೂರು ಜೀನಸುಗಳನ್ನು ಒಂದರ ಹಿಂದೊಂದು ಹಾಕಿ ತಿರುವಿದ ನಂತರ, ಮತ್ತೊಂದು ಕುದಿ ಬರುವ ವರೆಗೆ ಉರಿ ಹಚ್ಚಬೇಕು. ಕುದಿ ಬಂದ ನಂತರ ಇಳುಹಿ ಕಂಬಳಿಯಲ್ಲಿ ಹಾಕಿ ಸೋಸಬೇಕು. ಅಂದರೆ ಕೆಂಪು ಸಾದಾ ಆಗುವುದು. ಅದಕ್ಕೆ ಕಾಡಿಗೆಯನ್ನು ತಕ್ಕಷ್ಟು ತಿಕ್ಕಿದರೆ ಮಸಿ ಆಗುವುದು. ಇನ್ನು ಮಸಿ ಹೆಚ್ಚು ಬೇಕಾದಲ್ಲಿ ಮೇಲೆ ಬರೆದ ಪ್ರಮಾಣದಂತೆ ಎಲ್ಲ ಜೀನಸುಗಳನ್ನು ಹೆಚ್ಚಿಗೆ ಹಾಕಿದರೆ ತೀರಿತು.

ಇನ್ನು ಪಟಕದ ನೀರು ಅಂದರೆ ಪಾವಸೇರು ಪಟಕವನ್ನು ಒಂದು ಧಡೆ ನೀರಿನಲ್ಲಿ ಪುಡಿಮಾಡಿ ಹಾಕಬೇಕು. ಆ ನೀರನ್ನು ಪರಾತದಲ್ಲಿ ಹಾಕಿ ಹಾಳಿಯನ್ನು ಎದ್ದಿ ತೆಗೆದು ಒಣಗಿಸಬೇಕು. ಈ ನೀರನ್ನು ಹೆಚ್ಚಿಗೆ ಬೇಕಾದರೆ ಈ ಪ್ರಮಾಣದಂತೆ ಹೆಚ್ಚಿಗೆ ಮಾಡಿಕೊಳ್ಳಬೇಕು."

❖❖

ಸಂಕ್ಷೇಪಗಳು

ಅಕ್ಕ	ಮಹಾದೇವಿಯಕ್ಕನ ವಚನಗಳು
ಅಜಿ (ಅಜಿ,ಪು)	ಅಜಿತತೀರ್ಥಕರ ಪುರಾಣತಿಲಕಂ
ಅಭಿಧಾ	ಅಭಿನವಾಭಿಧಾನ
ಅವ (ಅವಚ)	ಅಲ್ಲಮನ ವಚನಚಂದ್ರಿಕೆ
ಆದಿ (ಆದಿ, ಪು.)	ಆದಿಪುರಾಣಂ
ಕಕಚ	ಕರ್ಣಾಟಕ ಕವಿಚರಿತೆ
ಕಕಾ	ಕಬ್ಬಿಗರ ಕಾವಂ
ಕಗ್ರಸಂ	ಕನ್ನಡ ಗ್ರಂಥಸಂಪಾದನೆ
ಕನು	ಕನ್ನಡ ನುಡಿ
ಕಮಾ	ಕವಿರಾಜಮಾರ್ಗಂ
ಕಸಾಪ	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಕಾಲೋ	ಕಾವ್ಯಾವಲೋಕನಂ
ಕಾಸಾ	ಕಾವ್ಯ ಸಾರಂ
ಕುಭಾ	ಕುಮಾರವ್ಯಾಸ ಭಾರತಂ
ಕುಸಾ	ಕುಮಾರರಾಮನ ಸಾಂಗತ್ಯಗಳು
ಗದಾ	ಗದಾಯುದ್ಧಂ
ಗ. ಯುದ್ಧ ಸಂಗ್ರಹ	ಗದಾಯುದ್ಧ ಸಂಗ್ರಹಂ
ಗಿಕ	ಗಿರಿಜಾ ಕಲ್ಯಾಣಂ
ಗೂಶೂ	ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ
ಚೆಬಪು	ಚೆನ್ನಬಸವ ಪುರಾಣಂ
ಚೆಬವ	ಚೆನ್ನಬಸವಣ್ಣನವರ ವಚನಗಳು
ಜೈಭಾ	ಜೈಮಿನಿ ಭಾರತಂ
ತೊರಾ	ತೊರವೆ ರಾಮಾಯಣಂ
ಧಪು (ಧರ್ಮ)	ಧರ್ಮನಾಥ ಪುರಾಣಂ
ಧರ್ಮಾ	ಧರ್ಮಾಮೃತಂ
ಧಾವಭಾ	ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ವಚನ ಭಾಂಡಾರ
ನಂಬಿ	ನಂಬಿಯಣ್ಣನ ರಗಳೆ
ನೇಪು	ನೇಮಿನಾಥಪುರಾಣಂ (ನೇಮಿಚಂದ್ರ)

ಪಂಭಾ	ಪಂಪಭಾರತಂ
ಪುರಾ	ಪುರಾತನರ ರಗಳೆಗಳು
ಪ್ರಕ	ಪ್ರಬುದ್ಧ ಕರ್ಣಾಟಕ
ಪ್ರಲೀ	ಪ್ರಭುಲಿಂಗಲೀಲೆ
ಬಪು	ಬಸವಪುರಾಣಂ
ಬವ	ಬಸವಣ್ಣನವರ ವಚನಗಳು
ಭಾಗ್ರಪ	ಭಾರತೀಯ ಗ್ರಂಥಸಂಪಾದನ ಪರಿಚಯ
ಮಹಸೂ	A descriptive Catalogue of the Kannada Manuscripts in the Goverment Oriental Manuscripts Library Madras.
ಮೈಹಸೂ	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ
ವಡ್ಡಾ	ವಡ್ಡಾರಾಧನೆ
ಶಮದ	ಶಬ್ದಮಣಿದರ್ಪಣಂ
ಶವಿ	ಶಬರಶಂಕರ ವಿಳಾಸಂ
ಶಾಂಪು	ಶಾಂತಿಪುರಾಣಂ (ಪೊನ್ನ)
ಶಿವ	ಶಿವಶರಣೆಯರ ವಚನಗಳು
ಶಿಶೂ	ಶಿವಗಣಪ್ರಸಾದಿ ಮಹದೇವಯ್ಯಗಳ ಶೂನ್ಯಸಂಪಾದನೆ
ಸಿದ್ಧವ	ಸಿದ್ಧರಾಮೇಶ್ವರ ವಚನಗಳು
ಸೂಕ್ತಿ	ಸೂಕ್ತಿಸುಧಾರ್ಣವಂ
ಸೋಚಾ	ಸೋಮನಾಥ ಚಾರಿತ್ರಂ
ಹಕಾ	ಹರಿಶ್ಚಂದ್ರ ಕಾವ್ಯಂ
APGS (APAS)	Andhrapradesh Government Archaeological series
ARSIE	Annual Report on South Indian Epigraphy
EC	Epigraphia carnatica
EI	Epigraphia Indica
JRAS	Journal of Royal Asiatic Society
KI	Karnatak Inscriptions
KRI	Descriptive Catalouge of Kannada Manuscripts In The Kannada Research Institute, Dharwad
KUJ	Journal of Karnataka University, Dharwad
MAR	Mysore Archaeological Report
SII	South Indian Inscriptions

❖❖

ಪ್ರತಿಬಿಂಬ

[ಶಬ್ದಮಣಿದರ್ಪಣ ವಿವೇಚನೆ]

ಎಂ. ಎಂ. ಕಲಬುರ್ಗಿ

೧೯೭೮

ಸತೀಶ ಪ್ರಕಾಶನ, ಗುಲಬರ್ಗಾ

ಶಬ್ದಮಣಿದರ್ಪಣದ ಪ್ರತಿಬಿಂಬವಾಗಿರುವ
ನನ್ನ ವಿದ್ಯಾಗುರು
ಪ್ರೊ. ಬಿ. ಟಿ. ಸಾಸನೂರ
ಅವರಿಗೆ

*

ಎರಡು ಮಾತು

ಕರ್ನಾಟಕ ಕಾಲೇಜದಲ್ಲಿ ಪ್ರಾಧ್ಯಾಪಕನಾಗಿದ್ದ ನಾಲ್ಕು ವರ್ಷಗಳ (೧೯೬೨ ರಿಂದ ೧೯೬೬) ಅವಧಿಯಲ್ಲಿ, ನನ್ನಿಂದ ಒಂದು ಲೇಖನ ಕೂಡ ಪ್ರಕಟವಾಗಲಿಲ್ಲ. ನನ್ನ ಅಧ್ಯಾಪನಕ್ಕೆ ಒಂದು ವ್ಯವಸ್ಥಿತವಾದ, ಗಟ್ಟಿಮುಟ್ಟಾದ ತಳಪಾಯವನ್ನು ಹಾಕಿಕೊಳ್ಳಲು ತಡವಾದ ಕಾರಣವಾಗಿ ಆ ನಾಲ್ಕು ವರ್ಷಗಳು ಓದಿನಲ್ಲಿಯೇ ಸರಿದವು. ಹೀಗಾಗಿ ಬರವಣಿಗೆ ದೃಷ್ಟಿಯಿಂದ ಬಂಜೆ ಎನಿಸಿದರೂ ಅಧ್ಯಯನ ದೃಷ್ಟಿಯಿಂದ ನನ್ನ ಜೀವನದಲ್ಲಿಯೇ ಅವು ಬೆಲೆಯುಳ್ಳ ದಿನಗಳಾಗಿವೆ. ಆಗ ನನ್ನ ಪಾಲಿಗೆ ಬಹು ದೊಡ್ಡ ಭಾಗ್ಯವಾಗಿ ಬಂದಿತು, ಕರ್ನಾಟಕ ಕಾಲೇಜಿನ ಕೇಂದ್ರ ಗ್ರಂಥಾಲಯ. ಅಲ್ಲಿಯ ಪ್ರತಿಯೊಂದು ಪುಸ್ತಕದ ಮೇಲೆ ಕಣ್ಣಾಡಿಸಿ, ಕೈಯಾಡಿಸಿ ಗಳಿಸಿಕೊಂಡ ವಿಷಯ ಪರಿಜ್ಞಾನ, ಬರೆದುಕೊಂಡ ಟಿಪ್ಪಣಿಗಳು ಇಂದಿಗೂ ನಾನು ಬರೆಯುತ್ತಲಿರುವ ಹಲವು ಪುಸ್ತಕಗಳಿಗೆ ಸಾಮಗ್ರಿಯನ್ನು ಒದಗಿಸುತ್ತಲಿವೆ. ಈ ಸಾಮಗ್ರಿಯ ಬಲದಿಂದ ಅಂದೇ ಬಹುಪಾಲು ರೂಪುಗೊಂಡ ಪುಸ್ತಕ “ಪ್ರತಿಬಿಂಬ”

ಇಂದು ಕರ್ನಾಟಕ ರಾಜ್ಯದ ಲೋಕಸೇವಾ ಆಯೋಗದ ಸದಸ್ಯರಾಗಿರುವ ಪ್ರೊ. ಬಿ.ಟಿ. ಸಾಸನೂರ ಅವರ ವಿದ್ಯಾರ್ಥಿಯಾದುದು ನನ್ನ ಜೀವನದ ಬಹುಮುಖ್ಯ ತಿರುವು. ಸಾಹಿತ್ಯಿಕವಾಗಿ ಅವರ ವಿದ್ವತ್ತನ್ನು ಕನ್ನಡಿಗರು ಬಳಸಿಕೊಳ್ಳದಿದ್ದುದನ್ನು ನೆನೆದಾಗಲೆಲ್ಲ, ನನಗೆ ವಿಜಾಪುರದ ಕೋಟೆಯ ಮೇಲೆ ಉಪಯೋಗಿಸಿಕೊಳ್ಳದೇ ಇಟ್ಟ ಇತಿಹಾಸ ಪ್ರಸಿದ್ಧ “ಮಲಿಕ್ ಮೈದಾನ ತೋಫು” ನೆನಪಾಗುತ್ತದೆ. ಶಬ್ದಮಣಿದರ್ಪಣದ ಮಟ್ಟಿಗಂತೂ ಅವರು ‘ವೇದಪ್ರಮಾಣ’. ಹೀಗಾಗಿ ಅವರ ಮೂಲಕ ಶಬ್ದಮಣಿದರ್ಪಣ ನನ್ನನ್ನು ಸೂಜಿಗಲ್ಲಾಗಿ ಸೆಳೆಯಿತು; ಸೂತ್ರ, ವೃತ್ತಿ, ಪ್ರಯೋಗ– ಹೀಗೆ ಒಳಗಿನಿಂದ ಒಳಗೆ ಕರೆದೊಯ್ಯಿತು. ಅಂದಿನಿಂದ ನಾನು ದರ್ಪಣದಲ್ಲಿ ಕಂಡ ಅನೇಕ ಮುಖಗಳಲ್ಲಿ ಒಂದು ಮುಖ ಈ “ಪ್ರತಿಬಿಂಬ”.

‘ಶಬ್ದಮಣಿದರ್ಪಣ’ದ ಪರಿಷ್ಕರಣ ಮತ್ತು ಅಧ್ಯಯನ ಕಾರ್ಯಗಳು ನಡೆದಷ್ಟು ಕಡಿಮೆಯೇ. ಹೀಗೆ ಹಲವು ಆಹ್ವಾನಗಳಿಗೆ ಎದೆಯೊಡ್ಡಿ ನಿಂತ ಮಹಾಕೃತಿ ಇದು. ಇದರ ಅಧ್ಯಯನದ ಒಂದು ಮುಖವಾದ ‘ಪಾಠವಿವೇಚನೆ’ಯನ್ನು ಕೇಂದ್ರವಾಗಿಟ್ಟುಕೊಂಡು ಆದಿಯಲ್ಲಿ ‘ಕವಿ–ಕೃತಿ ವಿಚಾರ’, ಅಂತ್ಯದಲ್ಲಿ ‘ದರ್ಪಣದ ಅಭ್ಯಾಸ ಪರಂಪರೆ’ಗಳನ್ನು ಇಲ್ಲಿ ಜೋಡಿಸಲಾಗಿದೆ. ಶ್ರೀ ಡಿ.ಕೆ.ಭೀಮಸೇನರಾಯರ ‘ಶಬ್ದಮಣಿದರ್ಪಣದ ಪಾಠಾಂತರಗಳು’ ಎಂಬ ಕೃತಿ ಅವರಿಗೆ ಲಭಿಸಿದ

ಒಂದು ಹಸ್ತಪ್ರತಿಯ ಪಾಠವನ್ನು ಪ್ರಚಲಿತ ದರ್ಪಣ ಪಾಠದೊಂದಿಗೆ ತಾಳೆ ನೋಡಿದ ಪ್ರಯತ್ನವಾಗಿದ್ದರೆ, ಈ ಗ್ರಂಥ ಈವರೆಗೆ ಗಮನಕ್ಕೆ ಬಂದ ದರ್ಪಣದ ಸರ್ವ ಪಾಠಾಂತರ–ರೂಪಾಂತರಗಳನ್ನು ಕಣ್ಣೆದುರಿಗಿಟ್ಟುಕೊಂಡು ನಡೆಸಿದ ಅಧ್ಯಯನವಾಗಿದೆ.

ಪ್ರಸ್ತುತ ಗ್ರಂಥವನ್ನು ನನ್ನ "ದರ್ಪಣ ವಿದ್ಯಾಗುರು" ಗಳಾದ ಪ್ರೊ. ಬಿ.ಟಿ. ಸಾಸನೂರ ಅವರಿಗೆ ಅರ್ಪಿಸುವಲ್ಲಿ "ಕೆರೆಯ ನೀರ ಕೆರೆಗೆ ಚೆಲ್ಲಿ ವರವ ಪಡೆದ' ಧನ್ಯತೆ ನನಗುಂಟಾಗಿದೆ. ಅರ್ಪಿಸಿಕೊಳ್ಳಲು ಒಪ್ಪಿದುದಕ್ಕಾಗಿ ಅವರಿಗೆ ನನ್ನ ವಂದನೆಗಳು. ಇದರ ಹಸ್ತಪ್ರತಿ ಬರವಣಿಗೆ ಮತ್ತು ಮುದ್ರಣ ಕಾರ್ಯಗಳಲ್ಲಿ ನೆರವಾದ ಪ್ರೊ. ಬಿ.ಆರ್. ಹಿರೇಮಠ ಮತ್ತು ನರಗುಂದ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಶ್ರೀನಿವಾಸ ಕುಲಕರ್ಣಿ ಅವರಿಗೆ ತಮ್ಮ 'ಸತೀಶ ಪ್ರಕಾಶ'ನದ ಮೂಲಕ ಪ್ರಕಟಿಸುತ್ತಲಿರುವ ಶ್ರೀ ಈ.ಎಸ್. ಭಾವಿಕಟ್ಟಿ ಅವರಿಗೆ, ಅಲ್ಪಾವಧಿಯಲ್ಲಿ ಅಂದವಾಗಿ ಮುದ್ರಿಸಿದ ವಿದ್ಯಾವಾಹಿನಿ ವಿದ್ಯುನ್ಮುದ್ರಣದ ಒಡೆಯರಾದ ಶ್ರೀ ಫ.ಶಿ. ಭಾಂಡಗೆಯವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

೨೮ ನವ್ಹೆಂಬರ್ ೧೯೭೮ —ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

ಅಧ್ಯಾಯ : ೧

❖

ಪ್ರವೇಶ

ಇಂದ್ರಶ್ಚಂದ್ರಃ ಕಾಶಕೃತ್ಸ್ನಾಪಿಶಲೀ ಶಾಕಟಾಯನಃ।
ಪಾಣಿನ್ಯಮರಜೈನೇಂದ್ರಾಃ ಜಯಂತ್ಯಷ್ಟಾದಿಶಾಬ್ದಿಕಾಃ॥[೧]

ಈ ಶ್ಲೋಕದಲ್ಲಿ ಇಂದ್ರ, ಚಂದ್ರ, ಕಾಶಕೃತ್ಸ್ನ, ಆಪಿಶಲಿ, ಶಾಕಟಾಯನ, ಪಾಣಿನಿ, ಅಮರ, ಜೈನೇಂದ್ರ–ಎಂಬ ಸಂಸ್ಕೃತದ ಎಂಟು ಸುಪ್ರಸಿದ್ಧ ವ್ಯಾಕರಣ ಪಂಥಗಳ ಉಲ್ಲೇಖವಿದೆ. ಇದೇ ರೀತಿ ಕನ್ನಡದಲ್ಲಿಯೂ ಶಂಖವರ್ಮ, ಗುಣವರ್ಮ ಮತ್ತು ನಾಗವರ್ಮ ಪ್ರವರ್ತಿತ ಮೂರು ವ್ಯಾಕರಣಪಂಥಗಳಿದ್ದರಬಹುದೆಂದು ಹಲವರ ಮತ. ಇವರಿಗೆ ಆಧಾರವೆಂದರೆ ಕಾವ್ಯಾವಲೋಕನದ

ಪ್ರಣುತಗುಣರೆನಿಪ ವಿಬುಧಾ।
ಗ್ರಣಿಗಳ್ ಕೆಯ್ಕೊಂಡು ಪೊಗಳೆ ಸಲೆ ನೆಗಳ್ದುವು ಧಾ॥
ರಿಣಿಯೊಳಗೆ ಶಂಖವರ್ಮನ ॥
ಗುಣರ್ಮನ ನಾಗವರ್ಮನಧ್ವಾನಂಗಳ್ ॥[೨]

ಎಂಬ ಪದ್ಯಕ್ಕೆ ಆರ್. ನರಸಿಂಹಾಚಾರ್ ಅವರು ಊಹಿಸಿದ "Nagavarma, Gunavarma and Shankhavarm were the leaders of three famous schools (of composition or Grammar) in Kannada"[೩] ಎಂಬ ವಿವರಣೆ. ಆದರೆ ಮುಂದಣ ವೈಯಾಕರಣರಾಗಲೀ, ಕವಿಗಳಾಗಲೀ, ಈ ಪಂಥಗಳನ್ನು ಉಲ್ಲೇಖಿಸಿಲ್ಲ. 'ವರ್ಮ' ಪದಾಂತ್ಯದವರೇ ಈ

---

೧. ವೋಪದೇವಕೃತ ಕವಿಕಲ್ಪದ್ರುಮ. ಶ್ಲೋಕ–೨
೨. ಕಾಲೋ. ಪ. ೧೮೫
೩. ಕಾಲೋ (೧೯೦೩) ಮುನ್ನುಡಿ, ಪು. ೪೭–೪೮

ಪಂಥಪ್ರವರ್ತಕರಾಗಿರುವುದು ಅಸಹಜ. ಮೇಲಾಗಿ ಯಾವುದೋ ಅನುಪಲಬ್ಧ ಕೃತಿಯ ಪೀಠಿಕಾ ಪ್ರಕರಣಕ್ಕೆ ಸಂಬಂಧಿಸಿರಬಹುದಾದ ಈ ಪದ್ಯದಲ್ಲಿ ಮೂರುಜನ ಕವಿಗಳ ಕಾವ್ಯಮಾರ್ಗ (ಅಧ್ವಾನ=ಮಾರ್ಗ)ವನ್ನು ಕೀರ್ತಿಸಿರುವ ಸಂಭವವಿದೆ. ಕಾರಣ ಈ ಪಂಥಗಳ ಅಸ್ತಿತ್ವದ ಬಗ್ಗೆ ಸಂದೇಹ ತಾಳಬೇಕಾಗುತ್ತದೆ.

ಈ ವ್ಯಾಕರಣ ಪಂಥಗಳನ್ನು ಬಿಟ್ಟರೆ ಗಮನಿಸಬೇಕಾದುವು, ವ್ಯಾಕರಣ ಗ್ರಂಥಗಳು. ಕನ್ನಡಸಾಹಿತ್ಯದ ಪ್ರಾಚೀನತೆಯಂತೆ ಕನ್ನಡ ಭಾಷೆಗೆ ಬರೆದ ಪ್ರಾಚೀನ ವ್ಯಾಕರಣಗಳ ವಿಷಯವೂ ರಹಸ್ಯದ ಗರ್ಭದಲ್ಲಿ ನಿಂತಿದೆ. ಗಂಗರ ಶಾಸನಗಳು ದುರ್ವಿನೀತನನ್ನು (೬ನೆಯ ಶತಮಾನ) 'ಶಬ್ದಾವತಾರಕಾರ' ಎಂದು ಕರೆದಿವೆ.'[೪] ಈ ದುರ್ವಿನೀತನ ಗುರು(?) ಪೂಜ್ಯಪಾದನ ಹೆಸರಿನಲ್ಲಿಯೂ ಪಾಣಿನೀಯಕ್ಕೆ ಬರೆದ ಟೀಕೆಯಾದ 'ಶಬ್ದಾವತಾರ' ಹೆಸರಿನ ಗ್ರಂಥೋಲ್ಲೇಖ ಬರುತ್ತದೆ. ಹೀಗಾಗಿ ಇವು ಒಂದೇ ಹೆಸರಿನ ಬೇರೆ ಬೇರೆ ಕೃತಿಗಳೇ? ಒಬ್ಬನ ಹೆಸರಿನಲ್ಲಿ ಇನ್ನೊಬ್ಬ ಬರೆದನೆ? ಒಬ್ಬನ ಕೃತಿಯನ್ನು ಇನ್ನೊಬ್ಬನು ಅನುವಾದಿಸಿದನೆ? ಎಂಬ ಸಂದೇಹ ಉಂಟಾಗುತ್ತದೆ. ಡಾ. ಸಾಲೆತೊರೆಯವರು ಹೇಳುವ, ಪೂಜ್ಯಪಾದನ ಸಂಸ್ಕೃತಕೃತಿಯನ್ನು ದುರ್ವಿನೀತನು ಕನ್ನಡಿಸಿದನೆಂಬ[೬] ಮಾತಿಗೆ ಆಧಾರಗಳಿಲ್ಲ. ಹೆಸರೇ ಸೂಚಿಸುವಂತೆ 'ಶಬ್ದಾವತಾರ'[೭]ವೊಂದು ವ್ಯಾಕರಣಗ್ರಂಥ. ಆದರೆ ಕನ್ನಡ ಭಾಷೆಯನ್ನು ಕುರಿತು ಬರೆದುದೆ? ಕನ್ನಡ ಭಾಷೆಯಲ್ಲಿ ಬರೆದುದೆ? ಸಂದೇಹ.

'ಕವಿರಾಜಮಾರ್ಗ' ಕನ್ನಡದ ಒಂದು ವಿಶಿಷ್ಟಕೃತಿ. ೯ನೆಯ ಶತಮಾನದ ಈ ಶಾಸ್ತ್ರಕೃತಿಯಲ್ಲಿ ವ್ಯಾಕರಣವಿಷಯ, ವ್ಯಾಪ್ತಿದೃಷ್ಟಿಯಿಂದ ಅಲಂಕಾರಕ್ಕೆ ಎರಡನೆಯ ಸ್ಥಾನ ಪಡೆದಿದ್ದರೂ ಸ್ವಂತಿಕೆ ದೃಷ್ಟಿಯಿಂದ ಪ್ರಥಮಸ್ಥಾನ ಪಡೆದಿದೆ. ಇದರ ಮೂರೂ ಪರಿಚ್ಛೇದಗಳಲ್ಲಿ ಕನ್ನಡ ಭಾಷೆಯ ಜೀವಸೂತ್ರಗಳನ್ನು ಸಂಗ್ರಹಿಸಲಾಗಿದೆ. ಈ ಭಾಷೆಯಿಕ ಬೀಜಗಳನ್ನು ಮುಂದಣ ನಾಗವರ್ಮ, ಕೇಶಿರಾಜಾದಿಗಳು ಉತ್ತಿ ಬಿತ್ತಿದರು, ಬಿತ್ತಿ ಬೆಳೆದರು. ಹೀಗಾಗಿ ಕನ್ನಡದ ಪ್ರಾಚೀನತಮ ಅಲಂಕಾರ ಗ್ರಂಥವಾದ ಇದು ಪ್ರಾಚೀನ ವ್ಯಾಕರಣಗ್ರಂಥವೂ ಹೌದು.

ಜನ್ನನು "ರನ್ನಂ ವೈಯಾಕರಣಂ ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ"[೯] ಎನ್ನುತ್ತ ರನ್ನನಿಗೆ ವೈಯಾಕರಣತ್ವವನ್ನು ಆರೋಪಿಸುತ್ತಾನೆ. ಅಜಿತ ಪುರಾಣದಲಭಿಮತ ಜೈನೇಂದ್ರವಚೋ।

---

೪. "ಶಬ್ದಾವತಾರಕಾರ ದೇವಭಾರತಿನಿವದ್ಧ ಬೃಹತ್ಕಥಃ ಕಿರಾತಾರ್ಜುನೀಯ ಪಂಚದಶಸರ್ಗ ಟೀಕಾಕಾರ ದುರ್ವಿನೀತ ನಾಮಮಯಃ" EC XII ತುಮಕೂರ ೨೩, ಹೆಬ್ಬೂರ ಶಾಸನ. "ಶಬ್ದಾವತಾರಕಾರೇಣ ದೇವಭಾರತಿನಿಬದ್ಧ ವಡ್ಡಕಥೇನ ಕಿರಾತಾರ್ಜುನೀಯೇ ಪಂಚದಶಸರ್ಗ ಟೀಕಾಕಾರೇಣ" MAR ೧೯೧೨ p. 35

೫. "ಪಾಣಿನೀಯಕ್ಕೆ ಟೀಕಂ ಬರೆದಂ... ಪೂಜ್ಯಪಾದವ್ರತೀಂದ್ರಂ" ಧರ್ಮಪರೀಕ್ಷೆ. "ಪಾಣಿನೀಯಸ್ಯ ಭೂಯೋನ್ಯಾಸಂ ಶಬ್ದಾವತಾರ ಕೃತ್ವಾ" EC VIII ನಗರ ೪೬ ಹುಮ್ಮಚ ಶಾಸನ.

೬. Mediaeval Jainism, p. ೨೩

೭. ಈ ಹೆಸರನ್ನು ಹೋಲುವ 'ರೂಪಾವತಾರ' ಎಂಬ ಬೌದ್ಧವ್ಯಾಕರಣವೊಂದು ಸಂಸ್ಕೃತದಲ್ಲಿ ಸುಪ್ರಸಿದ್ಧವಾಗಿದೆ. ಈ ರೂಪಾವತಾರದ ಉಲ್ಲೇಖ, ತಾಳಗುಂದ ಶಾಸನ (EC VII sk 185), ಕೊಂಡುಗುಳಿ ಶಾಸನ (EI XXXVII-IV), ಚೋಳ ವೀರಕೇಸರಿವರ್ಮನ ತಮಿಳು ಶಾಸನ (EI XXXVII. p. 190)ಗಳಲ್ಲಿ ಬರುತ್ತದೆ.

೮. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೮೯ ನೋಡಿರಿ.

೯. ಅನಂತನಾಥ ಪುರಾಣಂ ೧೪–೭೭

ವಿಭವಂ ಶಬ್ದಾನುಶಾಸನಪ್ರಭವವಚೋ ।
ವಿಭವವೊಡನೆಸೆಯೆ ರಂಜಿಪ ।
ನುಭಯವ್ಯಾಕರಣಪರಿಣತಂ ಕವಿರತ್ನಂ ॥[೧೦]

ಎಂಬ ಪದ್ಯವೂ ಮೇಲಿನ ಅಭಿಪ್ರಾಯವನ್ನು ಪೋಷಿಸುತ್ತದೆ. ಹೀಗಾಗಿ ನಿಘಂಟು ಬರೆದ ಶಾಸ್ತ್ರಮತಿಯ ರನ್ನ, ವ್ಯಾಕರಣವನ್ನೂ ಬರೆದಿರಬಹುದೆಂಬ ಅನುಮಾನಕ್ಕೆ ಅವಕಾಶವಿದೆ.

ನಯಸೇನನೊಬ್ಬ ವೈಯಾಕರಣಿಯೆಂದು ಕರ್ಣಾಟಭಾಷಾಭೂಷಣದ "ದೀರ್ಘೋಕ್ತಿರ್ನಯಸೇನಸ್ಯ"[೧೧] ಎಂಬ ಮಾತಿನಿಂದ ತಿಳಿದುಬರುತ್ತದೆ. ನಯಸೇನನ ಮತದಂತೆ (ಸಂಬೋಧನೆಯಲ್ಲಿ) ದೀರ್ಘವುಂಟಾಗುತ್ತದೆ ಎನ್ನುತ್ತ ಇಲ್ಲಿ 'ದೇವಾ ಬಿನ್ನಪಂ' ಎಂಬ ಉದಾಹರಣೆ ಕೊಡುತ್ತಾನೆ ನಾಗವರ್ಮ. ಮುಳಗುಂದದ ಶಾಸನದಲ್ಲಿ ನಯಸೇನೆಂಬವನ ವರ್ಣನೆ ಹೀಗೆ ಬರುತ್ತದೆ.

ನಿನಗೇನೆಂಬೆನೊ ಶಾಕಟಾಯನಮುನೀಶನ್ತಾನೆ ಶಬ್ದಾನುಶಾ ।
ಸನದೊಳ್ ಪಾಣಿನಿ ಪಾಣಿನೀಯದೊಳೆ ಚನ್ದ್ರಂ ಚಾನ್ದ್ರದೊಳ್ ತಜ್ಜನೇ ।
ನ್ದ್ರನೆ ಜೈನೇಂದ್ರದೊಳಾ ಕುಮಾರನೆ ಗಡಂ ಕೌಮಾರದೊಳೋಲ್ಪರೆ ।
ನ್ತೆನೆ ಪೋಲರ್ನ್ನಯಸೇನಪಣ್ಡಿತರೊಳನ್ಯರ್ವ್ವಾರ್ದ್ಧಿವೀತೋರ್ವ್ವಿಯೊಳ್ ॥[೧೨]
ವ। ಇಂತು ಸಮಸ್ತ ಶಬ್ದ ಪಾರಾವಾರಪಾರಗರ್ನಯಸೇನಪಣ್ಡಿತದೇವರ್

ಈತನು ಧರ್ಮಾಮೃತದ ನಯಸೇನನ ಗುರುವಿನ ಗುರುವಾಗಿರಬೇಕು. ನಾಗವರ್ಮ ಹೇಳುವ ಈತನ ವ್ಯಾಕರಣಗ್ರಂಥ ಇನ್ನೂ ಲಭಿಸಿಲ್ಲ.

ನಾಗವರ್ಮ ಎಂಬ ಹೆಸರು ಕನ್ನಡ ಸಾಹಿತ್ಯದ ಜಟಿಲಸಮಸ್ಯೆಗಳಲ್ಲಿ ಒಂದು. ಪಂಡಿತರ ಅಭಿಮತದಂತೆ ವ್ಯಾಕರಣ ಕ್ಷೇತ್ರಕ್ಕೆ ಸಂಬಂಧಿಸಿದವನು ಇಮ್ಮಡಿ ನಾಗವರ್ಮ. ಕಾವ್ಯಾವಲೋಕನ, ಕರ್ಣಾಟಭಾಷಾಭೂಷಣ, ಅಭಿದಾನ ವಸ್ತುಕೋಶ, ಹಲಾಯುಧ ಟೀಕೆ, ಛಂದೋವಿಚಿತಿ (ಅನುಪಲಬ್ಧ) ಹೆಸರಿನ, ಅಲಂಕಾರ ವ್ಯಾಕರಣ ನಿಘಂಟು ಛಂದಸ್ಸು-ಗ್ರಂಥಗಳನ್ನು ಬರೆದ ಈತನೊಬ್ಬ ಸಮಷ್ಟಿಶಾಸ್ತ್ರಜ್ಞ. ಮಲೆಯಾಳಂ ಭಾಷೆಯ 'ಲೀಲಾತಿಲಕ'ವೆಂಬ ವ್ಯಾಕರಣದ ಮೇಲೆ ದಟ್ಟ ಪ್ರಭಾವ ಬೀರಿದ ಈತನ ಕಾವ್ಯಾವಲೋಕನದ ಮೊದಲ ಪ್ರಕರಣವಾದ 'ಶಬ್ದಸ್ಮೃತಿ' ಮತ್ತು 'ಕರ್ಣಾಟಭಾಷಾ ಭೂಷಣ'ಗಳು ಕನ್ನಡ ಭಾಷೆಯನ್ನು ಕುರಿತ ವ್ಯಾಕರಣ ಗ್ರಂಥಗಳು. ಇವುಗಳಲ್ಲಿ ಒಂದು ಕನ್ನಡ, ಇನ್ನೊಂದು ಸಂಸ್ಕೃತ. ಶಬ್ದಸ್ಮೃತಿಯಲ್ಲಿ ಸಂಜ್ಞಾ-ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ ಎಂಬ ೫ ಪ್ರಕರಣ, ೯೬ ಸೂತ್ರ, ಉದಾಹರಣೆ ಸೂತ್ರ ಕೂಡಿ ಒಟ್ಟು ೪೨೩ ಪದ್ಯಗಳಿವೆ. ಸೂತ್ರಕ್ಕೆ ಟೀಕೆ, ಅನ್ವಯ, ವೃತ್ತಿ ಯಾವುದೂ ಇಲ್ಲ. ಕರ್ಣಾಟಭಾಷಾಭೂಷಣದಲ್ಲಿ ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ, ನಿಪಾತ ಎಂದು ೧೦ ಪ್ರಕರಣ,

---

೧೦. ಅಜಿತಪುರಾಣ ೧೨-೪೩

೧೧. ಕರ್ಣಾಟ ಭಾಷಾಭೂಷಣಂ (೧೮೮೪) ಸೂ. ೭೪

೧೨. ಈ ನಯಸೇನನ ವ್ಯಾಕರಣ ಪಾಂಡಿತ್ಯವನ್ನು ಲಕ್ಷ್ಮೇಶ್ವರ (EI XVI p.೫೮) ಮತ್ತು ಮೋಟೇ ಬೆನ್ನೂರ (ಅಪ್ರಕಟಿತ) ಶಾಸನಗಳೂ ಉದ್ಘೋಷಿಸುತ್ತವೆ.

೨೬೯ ಸೂತ್ರಗಳು ಇವೆ. ಇದಕ್ಕೆ ನಾಗವರ್ಮನೇ ಬರೆದಿರಬಹುದಾದ ವೃತ್ತಿಯಿದೆ; ಬೇರೊಬ್ಬನು ಬರೆದ ಟೀಕೆಯೂ ಇದೆ.[೧೩] ಆ ಕಾಲದಲ್ಲಿ ಸರ್ವಪ್ರಜಾಮಾನ್ಯವಾಗಿದ್ದ ಸಂಸ್ಕೃತದ ಮೂಲಕ ಕನ್ನಡ ಭಾಷಾತತ್ತ್ವಗಳನ್ನು ತಿಳಿಸಲು ಮಾಡಿದ ಸಾಹಸ, ಈ ಗ್ರಂಥ.

'ಕಟಕಾಚಾರ್ಯ' ಎಂಬುದು ಇಮ್ಮಡಿ ನಾಗವರ್ಮ, ಕೇಶಿರಾಜ, ಸುಮನೋ ಬಾಣರಿಗೆ ಇರುವ ಬಿರುದು. ಅದಕ್ಕಾಗಿ ಇಮ್ಮಡಿ ನಾಗವರ್ಮ, ಕೇಶಿರಾಜರಂತೆ ಸುಮನೋಬಾಣನೂ ವೈಯಾಕರಣಿಯಾಗಿರಬಹುದೆಂಬುದು ಶ್ರೀ ಚೆನ್ನಕೇಶವ ಅಯ್ಯಂಗಾರ ಅವರ ಮತ.[೧೪] "ಜನನಾಥಂ ಜಗದೇಕನಲ್ಲಿ...." ಪದ್ಯದಲ್ಲಿಯ 'ಇದಾನೀಂತನ ಶರ್ವವರ್ಮ" ಬಿರುದನ್ನು ಸುಮನೋಬಾಣನಿಗೆ ಅರೋಪಿಸಿ, ಈತನು ಒಂದು ವ್ಯಾಕರಣಗ್ರಂಥವನ್ನೇ ಬರೆದಿರಬೇಕೆಂದು ಶ್ರೀ ವೆಂಕಟಸುಬ್ಬಯ್ಯ ಅವರು ಹೇಳುತ್ತಾರೆ.[೧೫] ಇವು ತೀರ ದುರ್ಬಲ ಊಹೆಗಳು.

"ರನ್ನಂ ವೈಯಾಕರಣಂ ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ"[೧೬] 'ನವ ವೈಯಾಕರಣಂ'[೧೭] ಎಂದು ಹೇಳಿಕೊಳ್ಳುತ್ತಾನೆ, ಜನ್ನ. ಈ ವೈಯಾಕರಣಿಯ ವ್ಯಾಕರಣಕೃತಿಯ ಬಗ್ಗೆ ಇನ್ನೂ ಸಂದೇಹ.

ಕವಿ ಸುಮನೋಬಾಣನ ಮಗಳ ಮಗನೂ, ಮಲ್ಲಿಕಾರ್ಜುನನ ಮಗನೂ ಆದ ಕೇಶಿರಾಜನ ವ್ಯಾಕರಣಗ್ರಂಥ 'ಶಬ್ದಮಣಿದರ್ಪಣಂ'. ನಾಗವರ್ಮನ ಶಬ್ದಸ್ಮೃತಿಯ ವಿಸ್ತೃತರೂಪವೆನ್ನಬಹುದಾದ ಇದು, ಈವರೆಗೆ ಅನೇಕ ಸಲ ಪ್ರಕಟವಾಗಿದೆ.[೧೮] ಆದರೂ ಪ್ರಮಾಣಭೂತ ಪರಿಷ್ಕರಣದ ಕೊರತೆ ಇಂದಿಗೂ ಉಳಿದಿದೆ.

"ಸಕಲಶಾಬ್ದಿಕಜನಚೇತನಶ್ಚಮತ್ಕಾರಿಯಪ್ಪ ಕರ್ಣಾಟಕ ಶಬ್ದಾನುಶಾಸನ"ವನ್ನು ರಚಿಸುತ್ತ, ಕನ್ನಡ ಭಾಷೆಗೆ ಅನುಶಾಸನಾರ್ಹತೆಯಿದೆಯೆಂದು ಘೋಷಿಸಿದ ಭಟ್ಟಾಕಳಂಕದೇವ, ಸಂಸ್ಕೃತ–ಕನ್ನಡ ಉಭಯಭಾಷೆಗಳ ಉದ್ದಾಮ ಪಂಡಿತ. ನಾಲ್ಕು ಪಾದ, ೫೯೨ ಸೂತ್ರಗಳ ಈ ಕನ್ನಡ ವ್ಯಾಕರಣ ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ. ಕರ್ಣಾಟ ಭಾಷಾಭೂಷಣದ ವಿಸ್ತೃತರೂಪವೆನ್ನಬಹುದಾದ ಇದಕ್ಕೆ 'ಭಾಷಾಮಂಜರಿ' ಹೆಸರಿನ ವೃತ್ತಿ, 'ಮಂಜರಿ ಮಕರಂದ' ಹೆಸರಿನ ವ್ಯಾಖ್ಯಾನಗಳಿವೆ.

ಹೀಗೆ ಕನ್ನಡದಲ್ಲಿ ವ್ಯಾಕರಣಗ್ರಂಥಗಳ ಸೃಷ್ಟಿಕಾರ್ಯ ಸಾಗಿಬಂದಿದೆ. ಇದರ ಜೊತೆಗೆ ವ್ಯಾಕರಣದ ಅಧ್ಯಯನವೂ ಇಲ್ಲಿ ನಿರಂತರ ನಡೆದುಬಂದಿದೆ.

---

೧೩. 'ಕರ್ಣಾಟಭಾಷಾಭೂಷಣಂ'(೧೯೦೩) ನೋಡಿರಿ.

೧೪. ಶಬ್ದಮಣಿದರ್ಪಣಂ (ಮದ್ರಾಸ ಅವೃತ್ತಿ ೧೯೭೩) ಅವತರಣಿಕೆ ಪು. ೫ ಅ.ಟಿ.

೧೫. ಕೆಕಜೀಕಾ (೧೯೨೭) ಪು. ೧೩೩

೧೬. ಅನಂತನಾಥ ಪುರಾಣಂ ೧೪–೭೭

೧೭. ಯಶೋಧರಚರಿತೆ ಸಂಗ್ರಹ ಪು. ೫೮.

೧೮. ಶಬ್ದಮಣಿದರ್ಪಣ ಸಂಗ್ರಹ (೧೯೭೫) ಅರಿಕೆ ನೋಡಿರಿ.

"ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನಸ್ಥಾನಂ"[೧೯]

"ಶಬ್ದಶಾಸ್ತ್ರದೆಡೆಯೊಳ್ಬುವನಸ್ತುತ ಪೂಜ್ಯಪಾದರೆಂಬುದು"[೨೦]

"ವ್ಯಾಕರಣೇ ಶಾಕಟಾಯನೋ"[೨೧]

"ಅಕ್ಷರ ವ್ಯಾಕರಣ ರೂಪವತಾರಮಿಂತನಿತುಂ ಪೇರ್ದು ವಾ(ಬಾ)ಲಶಿಕ್ಷೆಯಂ ಮಾರ್ಪ ಉಪಾಧ್ಯಾಯರ್ಗೆ" [೨೨]

"ಶಬ್ದಶಾಸ್ತ್ರರೂಪಾವತಾರನ್ಯಾಸ"[೨೩]

"ಶಬ್ದೇ ಪಾಣಿನಿಪಂಡಿತೋ"[೨೪]

ಈ ಉಲ್ಲೇಖಗಳೊಂದಿಗೆ ನಯಸೇನನನ್ನು ಕುರಿತ ಮುಳಗುಂದು ಶಾಸನವನ್ನೂ ಗಮನಿಸಿದರೆ ಚಾಂದ್ರ, ಜೈನೇಂದ್ರ, ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನು ಶಾಸನ, ರೂಪಾವತಾರ ವ್ಯಾಕರಣಗಳ ಅಭ್ಯಾಸ ಈ ನಾಡಿನಲ್ಲಿ ನಡೆಯುತ್ತಿದ್ದುದು ವ್ಯಕ್ತವಾಗುತ್ತದೆ.

ಇದರ ಫಲವೆನ್ನುವಂತೆ ಮೇಲಿನ ಕೆಲವರು ಕನ್ನಡ ಭಾಷೆಯನ್ನು ಕುರಿತು ಕೃತಿಗಳನ್ನು ರಚಿಸಿದರು, ಇವರಲ್ಲಿ ಮೊದಲಿನಿಂದಲೂ ಅಭ್ಯಾಸಿಗಳನ್ನು 'ದರ್ಪಣ'ದ ಮೂಲಕ ತನ್ನತ್ತ ಆಕರ್ಷಿಸಿದ ವ್ಯಕ್ತಿ, ಕೇಶಿರಾಜ.

❖❖

೧೯. EC VII ಶಿಕಾರಿಪುರ ೧೦೨ ಬಳ್ಳಿಗಾವಿ (೧೧೬೨)
೨೦. EC VII ಶಿಕಾರಿಪುರ ೧೨೪ ಬಳ್ಳಿಗಾವಿ(೧೦೭೭)
೨೧. BKI-I-i ಡೋಣಿ (೧೦೯೭) ಧಾರವಾಡ ಜಿಲ್ಲೆ.
೨೨. EI XXXVII-iv ಕೊಂಡಗುಳಿ (೧೧೩೨) ವಿಜಾಪುರ ಜಿಲ್ಲೆ.
೨೩. EC VII ಶಿಕಾರಿಪುರ ೧೮೫ ತಾಳಗುಂದ.
೨೪. EC VII ಶಿಕಾರಿಪುರ ೯೨ ಬಳ್ಳಿಗಾವಿ.

ಅಧ್ಯಾಯ : ೨

❖

ಕೇಶಿರಾಜ

ಕವಿಸುಮನೋಬಾಣನ ಯಾ ।
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ ।
ಕವಿಕೇಶವನೆಂ ಯೋಗಿ ।
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ।[೨೫]

ಈ ಪದ್ಯದ ಪ್ರಕಾರ ಕೇಶಿರಾಜನ ತಂದೆ ಯೋಗಿಪ್ರವರನಾದ ಮಲ್ಲಿಕಾರ್ಜುನ; ತಾಯಿಯ ತಂದೆ, ಕವಿಯೂ ಯಾದವಕಟಕಾಚಾರ್ಯನೂ ಆಗಿದ್ದ ಕವಿ ಸುಮನೋಬಾಣ.

ಇವರಲ್ಲಿ ಸುಮನೋಬಾಣನನ್ನು, ತರುವಾಯದ ಅನೇಕ ಕವಿಗಳು ಸ್ತುತಿಸಿದ್ದಾರೆ. ಕೃತಿಗಳು ಲಭ್ಯವಿಲ್ಲ. "ಇವರಲ್ತೆ ಜಿನೇಂದ್ರ ಪುರಾಣಕರ್ತೃಗಳ್"[೨೬] ಎನ್ನುತ್ತ ಜನ್ನನು ಸೂಚಿಸುವ ಪುಷ್ಪಬಾಣನು ಸುಮನೋಬಾಣನೇ ಆಗಿದ್ದ ಪಕ್ಷದಲ್ಲಿ ಜೈನಮತೀಯ ನಾದ ಇವನ ಕೃತಿ, ಒಂದು ಜೈನಪುರಾಣವೆನ್ನಬೇಕಾಗುತ್ತದೆ. ಜೈನನಾದ ಜಗದ್ದಳ ಸೋಮನಾಥನ 'ಕಲ್ಯಾಣಕಾರಕ'ವನ್ನು ತಿದ್ದಿ, ಒಪ್ಪಗೊಳಿಸಿದವನೀತ.[೨೭] ಅನಂತನಾಥಪುರಾಣದ

ಜಗನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ ।
ರ್ಮನಿದಾನೀಂತನಶರ್ಮವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ।
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ ।
ಕ್ತಿನವೀನೋಜ್ವಳಬಾಣನಪ್ಪ ಸಮನೋಬಾಣಂ ಕವಿಶ್ರೇಷ್ಠರೊಳ್ ॥[೨೮]

---

೨೫. ಶಮದ ಸೂ. ೨

೨೬. ಅನಂತನಾಥಪುರಾಣ ೧-೩೫

೨೭. ಕಕಚ I (೧೯೬೧) ೩೦೨

೨೮. ಅನಂತನಾಥಪುರಾಣಂ ೧-೩೪.

ಈ ಪದ್ಯಕ್ಕೆ "ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿರುವ ನಾಗವರ್ಮನು ಜನ್ನನ ಗುರು, ಕವಿ ಸುಮನೋಬಾಣನು (ಹೊಯ್ಸಳ) ನರಸಿಂಹನ ಕಟಕೋಪಾಧ್ಯಾಯನು"[೨೯] ಎನ್ನುವ ಶ್ರೀ ಆರ್. ನರಸಿಂಹಾಚಾರ್ಯರ ಅರ್ಥಕ್ಕಿಂತ "ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದ ನಾಗವರ್ಮನಂತೆ, (ಹೊಯ್ಸಳ) ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿರುವ ಸುಮನೋಬಾಣನು ಜನ್ನನ ಗುರು"[೩೦] ಎನ್ನುವ ಎ. ವೆಂಕಟಸುಬ್ಬಯ್ಯನವರ ಅರ್ಥವೇ ಸಮಂಜಸವೆನಿಸು ವುದರಿಂದ, ಜನ್ನನು ನಾಗವರ್ಮನ ಶಿಷ್ಯನಲ್ಲ, ಈ ಸುಮನೋಬಾಣನ ಶಿಷ್ಯನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಪ್ರಸಂಗದಲ್ಲಿ ಅಡ್ಡಬರುವ "ಭಾಳಲೋಚನಂ (=ಜನ್ನ) ಕವಿಸುಮನೋಬಾಣನ ಮಗನೆಂದಖಿಳಕ್ಷೋಣಿಗೆ ಪೆಸರಾಯ್ತು' ಎಂಬ ವಾಕ್ಯಕ್ಕೆ ಕವಿಚರಿತೆ ಕಾರರಂತೆ 'ಜನ್ನನು ಸುಮನೋಬಾಣನ ಮಗನು' ಎಂಬ ವಾಚ್ಯಾರ್ಥ ಹಚ್ಚದೆ, ಎ. ವೆಂಕಟಸುಬ್ಬಯ್ಯನವರಂತೆ "ಜನ್ನನು ಸುಮನೋಬಾಣನ ಶಿಷ್ಯ (ಮಗ)ನು"[೩೧] ಎಂಬ ವಿಶೇಷಾರ್ಥವನ್ನೇ ಭಾವಿಸಬೇಕು. ಇಷ್ಟೇ ಏಕೆ

ವಾಣೀ ಪಾರ್ವತಿ ಮಾಡಿದ ।

ಜಾಣೆಂತುಟೊ ಭಾಳಲೋಚನಂ ಕವಿ ಸುಮನೋ ।

ಬಾಣನ ಮಗನೆಂದಖಿಳ ।

ಕ್ಷೋಣಿಗೆ ಪೆಸರಾಯ್ತು ಕೂರ್ಮೆಗಿದು ಕೌತುಕಮೇ ॥ [೩೨A]

ಈ ಪದ್ಯದಲ್ಲಿ ಬರುವ "ಕೂರ್ಮೆಗಿದು ಕೌತುಕಮೇ" ಎಂಬುದನ್ನು ಮಗ ಹೇಳುವುದು ಕೃತಕ, ಶಿಷ್ಯ ಹೇಳುವುದು ಸಹಜವೆನಿಸುವುದರಿಂದ ಇವರು ಗುರು ಶಿಷ್ಯರೆಂದೇ ಒಪ್ಪಬೇಕಾಗುತ್ತದೆ.


ಸೂಕ್ತಿಸುಧಾರ್ಣವದ ಮಲ್ಲಿಕಾರ್ಜುನ ಈ 'ಯಾದವಕಟಕಾಚಾರ್ಯ ಸುಕವಿ ಸುಮನೋಬಾಣನ ಜಾಮಾತೃ (=ಮಗಳ ಗಂಡ)[೩೩] ಎಂದು, ಈ "ಕವಿಸುಮನೋ ಬಾಣನ ದೌಹಿತ್ರ" (=ಮಗಳ ಮಗ)ನಾದ ಶಬ್ದಮಣಿದರ್ಪಣದ ಕೇಶಿರಾಜ "ಮಲ್ಲಿಕಾರ್ಜುನ ಸುತಂ" ಎಂದು ಹೇಳಿಕೊಂಡಿದ್ದಾರೆ. ಇದರಿಂದ ಸುಮನೋಬಾಣನ ಅಳಿಯನಾದ ಮಲ್ಲಿಕಾರ್ಜುನನು ಕೇಶಿರಾಜನ ತಂದೆಯೆಂದು ಸ್ಪಷ್ಟವಾಗುತ್ತದೆ. ಸೂಕ್ತಿಸೂಧಾರ್ಣವದಲ್ಲಿ "ಮುನಿಗಳ ಸಭೆಯೊಳ್ ಪರಮಮುನಿ"[೩೪] ಎಂದು ಹೇಳಿಕೊಂಡು, ಶಬ್ದಮಣಿದರ್ಪಣದಲ್ಲಿ "ಯೋಗಿಪ್ರವರಚಿದಾನಂದ" ಎಂದು ಹೊಗಳಿಸಿಕೊಂಡ ಈತನು ಪರಮಧಾರ್ಮಿಕನಾಗಿರಬೇಕು. ಮಂಡ್ಯ ಜಿಲ್ಲೆಯ ಬಸುರಾಳ ಶಾಸನದ ಕೊನೆಯ

---

೨೯. ಕಕಚ (೧೯೬೧) ೩೦೧
೩೦. ಕೆಕಜೀಕಾ (೧೯೨೭) ೧೩೩
೩೧. ಯಶೋಧರ ಚರಿತೆ (ಸಂಗ್ರಹ) ಅನುಬಂಧ I, ಪ. ೨೧
೩೨. ಕೆಕಜೀಕಾ (೧೯೨೭) ೧೩೩.
೩೨A. ಯಶೋಧರ ಚರಿತೆ (ಸಂಗ್ರಹ) ಅನುಬಂಧ I, ಪ. ೨೧
೩೩. ಸೂಕ್ತಿಸುಧಾರ್ಣವದ ಆಶ್ವಾಸಾಂತ್ಯ ಗದ್ಯ
೩೪. ಸೂಕ್ತಿಸುಧಾರ್ಣವ, ೧–೮.

ಧರೆ ಪೊಗಳೆ ಚಿದಾನಂದಂ ।
ವಿರಚಿಸಿದಂ ಸತ್ಕವೀಶ್ವರಂ ಶಾಸನಮಂ ।
ಪರಮಪ್ರಕಾಶಯೋಗೀ ।
ಶ್ವರ ತನಯಂ ಬ್ರಹ್ಮವಿದ್ಯೆಗಾಸ್ಪದರೂಪಂ ॥ [೩೫]

ಎಂಬ ಪದ್ಯದ 'ಬ್ರಹ್ಮವಿದ್ಯೆಗಾಸ್ಪದರೂಪಂ' ಎನಿಸಿದ ಚಿದಾನಂದನೂ ಶಬ್ದಮಣಿ ದರ್ಪಣದ 'ಯೋಗಿಪ್ರವರ' ಎನಿಸಿದ ಚಿದಾನಂದಮಲ್ಲಿಕಾರ್ಜುನನೂ ಒಬ್ಬನೇ ಎಂದು ಪಂಡಿತರು ಹೇಳುವುದು ನಿಜವೆಂದು ತೋರುತ್ತದೆ. "ಸರಸಕವೀಶ್ವರ ಸಭೆಯೊಳ್ ಸರಸಕವೀಶಂ"[೩೬] ಎನಿಸಿದ ಈತನ ಸಂಕಲನ ಗ್ರಂಥವಾದ ಸೂಕ್ತಿ ಸುಧಾರ್ಣವವನ್ನು ಬಿಟ್ಟರೆ, ಬೇರೆ ಗ್ರಂಥಗಳಿದ್ದ ಬಗ್ಗೆ ಒಂದೂ ಸೂಚನೆಯಿಲ್ಲ. ಈ ವರೆಗಿನ ವಿವೇಚನೆಯಿಂದ ವ್ಯಕ್ತವಾಗುವ ವಂಶ ಚಿತ್ರವಿದು:



ದರ್ಪಣದ ಆರಂಭದಲ್ಲಿ[೩೭] ಸುಮನೋಬಾಣನನ್ನು, ಅಂತ್ಯದಲ್ಲಿ[೩೮] ತನ್ನನ್ನು "ಯಾದವ ಕಟಕಾಚಾರ್ಯ" ಎಂದು ಕರೆದುಕೊಂಡಿದ್ದಾನೆ, ಕೇಶಿರಾಜ. ದರ್ಪಣ ರಚನೆಯ ಆರಂಭ ಕಾಲದಲ್ಲಿ ಇಮ್ಮಡಿ ನರಸಿಂಹನ ಕಟಕಾಚಾರ್ಯನಾಗಿದ್ದ ಸುಮನೋಬಾಣನ ನಿವೃತ್ತಿ ಇಲ್ಲವೆ ಮರಣ ಕಾರಣವಾಗಿ ಕೇಶಿರಾಜನು ದರ್ಪಣ ರಚನೆಯ ಮುಕ್ತಾಯ ಕಾಲದಲ್ಲಿ ಆ ಅಧಿಕಾರವನ್ನು ವಹಿಸಿಕೊಂಡಿರಬೇಕು.

ಕೇಶಿರಾಜ ಜೈನನೆಂದು ಈಗ ಎಲ್ಲ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆದರೆ ಸ್ವತಃ ಕೇಶಿರಾಜನ ಕೃತಿಗಳು ಈ ಬಗ್ಗೆ ವಿಶೇಷ ಬೆಳಕು ಚೆಲ್ಲುವುದಿಲ್ಲ. ನಿರಾಕಾರ ರೂಪದ ಸರಸ್ವತಿಸ್ತುತಿ, ಶ್ರೀವಿಜಯಾದಿ ಜೈನಕವಿಗಳ ಪ್ರಯೋಗ, ಕಾತಂತ್ರವೆಂಬ ಜೈನ ವ್ಯಾಕರಣದ ಅನುಸರಣೆ[೩೯]–ಇವು ಕೇಶಿರಾಜನ ಜೈನತ್ವವನ್ನು ಪೋಷಿಸುವ ನೇರವಾದ ಆಧಾರಗಳಲ್ಲ.

---

೩೫. ECIII-i ಮಂಡ್ಯ ೧೨೨ ಬಸುರಾಳ (೧೨೩೭).
೩೬. ಸೂಕ್ತಿಸುಧಾರ್ಣವ, ೧–೮.
೩೭, ೩೮. ಶಮದ ಸೂ. ೨ ಮತ್ತು ೨೬೪
೩೯. ಶಮದ (ಮದ್ರಾಸ ಆವೃತ್ತಿ–೧೯೭೩) ಅವತರಣಿಕೆ–೭

ನಿಟ್ಟೂರ ನಂಜಯ್ಯ ಹೇಳುವ "ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇಳ್ದಪರ್"[೪೦] ಎಂಬುದು ಇತ್ತೀಚಿನ ಬಾಹ್ಯಪ್ರಮಾಣವೇ ಹೊರತು ಆಂತರಿಕ ಪ್ರಮಾಣವಲ್ಲ. ಹೀಗೆ ತನ್ನ ಕೃತಿಗಳಲ್ಲಿ ಕೇಶಿರಾಜ ಜೈನನಾಗಿ ತೋರುವುದಿಲ್ಲ.

ತಂದೆಯ ಹೆಸರು ಮಲ್ಲಿಕಾರ್ಜುನ. ಅವನ ವಿಶೇಷಣಗಳಾದ 'ಚಿದಾನಂದ, ಬ್ರಹ್ಮವಿದ್ಯೆಗಾಸ್ಪದರೂಪಂ' ಎಂಬಿವು ಜೈನವಲ್ಲದ ಪರಿಭಾಷೆಗಳು. ಮಲ್ಲಿಕಾರ್ಜುನನ ತಂದೆಯ 'ಪರಮಪ್ರಕಾಶಯೋಗೀಶ್ವರ' ಎಂಬುದೂ ಜೈನವಲ್ಲದ ಹೆಸರು. ಹೀಗೆ ಪಿತೃಸಂಬಂಧದ ಹಿನ್ನೆಲೆಯಲ್ಲಿ ಕೇಶಿರಾಜ ಅಜೈನನಾಗಿಯೇ ತೋರುತ್ತಾನೆ.

ಇಂಥ ಪ್ರಸಂಗದಲ್ಲಿ ಕೇಶಿರಾಜನ ಜೈನತ್ವವನ್ನು ಬೆಂಬಲಿಸುವವರಿಗೆ ಆತನ ಮಾತೃಸಂಬಂಧವೇ ಬಲವಾದ ಆಧಾರ. ಆದರೆ ಇತ್ತೀಚಿನ ಸಂಶೋಧನೆಯ ಪ್ರಕಾರ ಜೈನಕವಿ ಜನ್ನನು, ಕೇಶಿರಾಜನ ಅಜ್ಜನಾದ ಸುಮನೋಬಾಣನ ಮಗನಲ್ಲ, ಶಿಷ್ಯ.[೪೧] ಇದರಿಂದ ಜನ್ನ – ಕೇಶಿರಾಜರ ಸೋದರಮಾವ–ಸೋದರಳಿಯ ಸಂಬಂಧವೇ ಸಡಿಲಾಗಿ ಕೇಶಿರಾಜನ ಜೈನತ್ವದ ಪ್ರಬಲ ಆಧಾರವೇ ಕುಸಿದುಬಿದ್ದಿದೆ. "ಜಿನೇಂದ್ರ ಪುರಾಣಕರ್ತೃ"ಗಳ ಸಾಲಿನ "ಪುಷ್ಪಬಾಣ"ನು ಕವಿ ಸುಮನೋಬಾಣನಾಗದೆ ಮನಸಿಜನಾಗಿದ್ದರೆ, ಮಾತೃ ಸಂಬಂಧದ ಹಿನ್ನೆಲೆಯಲ್ಲಿಯೂ ಕೇಶಿರಾಜ ಅಜೈನನಾಗಿ ತೋರುತ್ತಾನೆ.

ಹೀಗೆ ಸ್ವಂತಕೃತಿ, ಪಿತೃ ಪರಂಪರೆ, ಮಾತೃ ಪರಂಪರೆಗಳ ಬಲದಿಂದ ನಿರ್ಣಯಿಸಲು ಸಾಧ್ಯವಾಗದ ಕೇಶಿರಾಜನ ಮತ, ಜೈನವೋ ಅಜೈನವೋ ಎಂಬುದು ಅನ್ಯ ಆಧಾರಗಳನ್ನು ಬಯಸುತ್ತದೆ.

ಕೇಶಿರಾಜನ ಕಾಲನಿರ್ಣಯ, ಆತನ ಮತನಿರ್ಣಯದಷ್ಟು ಜಟಿಲವಾಗಿಲ್ಲ. ಸುಮನೋಬಾಣನ ಕಿರಿಯ ಸಮಕಾಲೀನರು, ಶಿಷ್ಯ ಜನ್ನ ಮತ್ತು ಅಳಿಯ ಮಲ್ಲಿಕಾರ್ಜುನ. ಇವರ ಕಿರಿಯ ಸಮಕಾಲೀನ ಕೇಶಿರಾಜ. ಹೊಯ್ಸಳ ಅರಸರ ಆಶ್ರಯದಲ್ಲಿ ನಿಂತು ಇವರು ಪೂರೈಸಿದ ಮಿತಿ, ನಿರ್ದೇಶಿತ ಕೆಲವು ಘಟನೆಗಳೊಂದಿಗೆ ಹೊಯ್ಸಳರ ವಂಶಚಿತ್ರವನ್ನು ಹೀಗೆ ಬರೆಯಬಹುದು :

೪೦. ಶಮದ ಸೂ ೯, ವಿಚಾರಂ

ನರಸಿಂಹ I (೧೧೫೨–೬೩)

೧೧೯೦–ಜನ್ನನ ಆನೆಕೆರೆ ಶಾಸನ[೪೨] — ಬಲ್ಲಾಳ I (೧೧೭೦–೧೨೨೦)

೧೧೯೬ – ಜನ್ನನ ಅಮೃತಾಪುರ ಶಾಸನ[೪೩] — "ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯ"[೪೬]

೧೨೦೯ – ಜನ್ನನ ಯಶೋಧರ ಚರಿತೆ

೧೨೩೦ – ಜನ್ನನ ಅನಂತನಾಥ ಪುರಾಣ — ನರಸಿಂಹ II (೧೨೨೦–೩೮)

೧೨೩೫ – ಮಲ್ಲಿಕಾರ್ಜುನನ ಬಸುರಾಳ ಶಾಸನ[೪೪] — "ಚೋಳಕುಲೈಕರಕ್ಷಕ"[೪೭]

೧೨೩೭ – ಮಲ್ಲಿಕಾರ್ಜುನನ ಬಸುರಾಳ ಶಾಸನ[೪೫] — ಸೋಮೇಶ್ವರ (೧೨೩೩–೬೭)

ನರಸಿಂಹ III (೧೨೫೪–೧೨೯೭) — ರಾಮನಾಥ (೧೨೫೪–೧೨೯೫)

ಈ ಹಿನ್ನೆಲೆಯಲ್ಲಿ ಮೇಲಿನ ಕವಿಗಳ ಕಾಲವನ್ನು ಹೀಗೆ ನಿರ್ಣಯಿಸಬಹುದು.

೧. **ಕವಿಸುಮನೋಬಾಣ:** ಈ ವಿದ್ವತ್ಸಮೂಹದಲ್ಲಿ ಹಿರಿಯನಾದವ ಸುಮನೋ ಬಾಣ. ಜನ್ನನು ಇಮ್ಮಡಿ ನರಸಿಂಹನ ಆಸ್ಥಾನದಲ್ಲಿ ಅನಂತನಾಥಪುರಾಣ (೧೨೩೦) ಬರೆಯುತ್ತ 'ಇಂದು ನೃಪಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯಂ ಸುಮನೋ ಬಾಣಂ' ಎಂದು ಹೇಳಿದ ವರ್ತಮಾನಸೂಚೀ ಮಾತು ಸುಮನೋಬಾಣನು ಇಮ್ಮಡಿ ನರಸಿಂಹನ ಆಳಿಕೆಯಲ್ಲಿ ಕಟಕೋಪಾಧ್ಯಾಯನಾಗಿದ್ದನೆಂಬುದನ್ನು ಧ್ವನಿಸುತ್ತದೆ. ಈ ಹಿಂದಿನ ಬಲ್ಲಾಳನ ಆಳಿಕೆಯಲ್ಲಿ ಶಿಷ್ಯ ಜನ್ನನು ಯಶೋಧರ ಚರಿತ್ರೆಯನ್ನು ಪೂರೈಸಿದ್ದಾನೆ. ಗುರು ಸುಮನೋಬಾಣನೂ ಆ ಬಲ್ಲಾಳನ ಆಳಿಕೆಯಲ್ಲಿಯೇ ಕಟಕೋಪಾಧ್ಯಾಯತ್ವವನ್ನು ಪ್ರಾರಂಭಿಸಿರಬೇಕು.

---

೪೧. ನಾಗವರ್ಮನು ಜನ್ನನ ಗುರುವಲ್ಲ : ಕ. ಭಾ ೭–೧

೪೨. ECV-ii ಚೆನ್ನರಾಯಪಟ್ಟಣ ೧೭೯ ಆನೆಕೆರೆ (೧೧೯೦).

೪೩. ECVI ತರೀಕೆರೆ ೪೫ ಅಮೃತಾಪುರ (೧೧೯೬).

೪೪. ECIII-i ಮಂಡ್ಯ ೧೨೧ ಬಸುರಾಳ (೧೧೩೫).

೪೫. ECIII-ii ಮಂಡ್ಯ ೧೨೨ ಬಸುರಾಳ (೧೨೩೭).

೪೬,೪೭. ಕರ್ನಾಟಕದ ಪರಂಪರೆ I, ಪು. ೪೭೨

೨. **ಜನ್ನ:** ೧೧೯೦ ರಿಂದ ೧೨೩೦ರ ವರೆಗೆ ಬದುಕಿದ್ದನೆಂದು ನಮಗೆ ನಿಶ್ಚಿತ ಗೊತ್ತಾಗುತ್ತದೆ.[೪೮] ಈ ಸಮಯವ್ಯಾಪ್ತಿಯಲ್ಲಿ ಈತನು ಬಲ್ಲಾಳ I, ನರಸಿಂಹ II ಈ ಇಬ್ಬರ ಆಳಿಕೆಯನ್ನು ಕಂಡನೆಂದು "ಮನ್ನಿಸಿ ಬಲ್ಲಾಳಂ ಕುಡೆ ಜನ್ನಂ ಕವಿ ಚಕ್ರವರ್ತಿವೆಸರಂ ಪಡೆದಂ" 'ನರಸಿಂಹ ಚೋಳಕುಲೋದ್ಧರಣನ.... ಓಲಗದೊಳ್... ಕವಿಜನಾರ್ಥನದೇವಂ' ಎಂಬ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳಲ್ಲಿಯ ಮಾತುಗಳು ಸಾಕ್ಷಿ ಹೇಳುತ್ತವೆ.

೩. **ಮಲ್ಲಿಕಾರ್ಜುನ:** ಸುಮನೋಬಾಣನಿಗೆ ಜನ್ನ ಶಿಷ್ಯ, ಮಲ್ಲಿಕಾರ್ಜುನ ಅಳಿಯ. ಇವರಲ್ಲಿ ಬಹುಶಃ ಜನ್ನನಿಗಿಂತ ಮಲ್ಲಿಕಾರ್ಜುನ ಸ್ವಲ್ಪ ಸಣ್ಣವ. ಜನ್ನನು ಬಲ್ಲಾಳ, ನರಸಿಂಹ IIರ ಕಾಲದಲ್ಲಿದ್ದರೆ, ಮಲ್ಲಿಕಾರ್ಜುನನು ನರಸಿಂಹ II, ಸೋಮೇಶ್ವರರ ಕಾಲದಲ್ಲಿದ್ದನು.

೪. **ಕೇಶಿರಾಜ :** ಈತನ ಕಾಲನಿರ್ಣಯಕ್ಕೆ ನೇರ ಆಧಾರಗಳೆಂದರೆ ಕೃತಿ ಚೋಳ ಪಾಲಚರಿತೆ ಮತ್ತು ಮಲ್ಲಿಕಾರ್ಜುನ. ಮೇಲಿನ ಶಾಸನಗಳನ್ನು ನೋಡಿದರೆ ಬಲ್ಲಾಳ, ನರಸಿಂಹ II ಇಬ್ಬರಿಗೂ 'ಚೋಳಪಾಲ' ಹೆಸರು ಅನ್ವಯವಾಗುವಂತಿದೆ. ತಂದೆಯಾದ ಮಲ್ಲಿಕಾರ್ಜುನನೇ ನರಸಿಂಹ II ಮತ್ತು ಸೋಮೇಶ್ವರರ ಅವಧಿಯಲ್ಲಿ ಬದುಕಿರುವುದರಿಂದ ಮಗ ಕೇಶಿರಾಜನ ಚೋಳಪಾಲ ಚರಿತೆಯ ಕಥಾನಾಯಕ, ಹಿಂದಿನ ಬಲ್ಲಾಳನಾಗಿರದೆ ಇಮ್ಮಡಿ ನರಸಿಂಹನೇ ಆಗಿರಬೇಕು. ಮಗ ಕೇಶಿರಾಜ ಇಮ್ಮಡಿ ನರಸಿಂಹನ ಆಳಿಕೆಯಲ್ಲಿ ಚೋಳಪಾಲ ಚರಿತೆಯನ್ನು ಬರೆದರೆ, ತಂದೆ ಮಲ್ಲಿಕಾರ್ಜುನನು ಮುಂದಿನ ತಲೆಮಾರಿನ ಸೋಮೇಶ್ವರನ ಆಳಿಕೆಯಲ್ಲಿ ಸೂಕ್ತಿ ಸುಧಾರ್ಣವವನ್ನು ರಚಿಸಿದುದರಲ್ಲಿ ತೋರಬಹುದಾದ ವಿರೋಧಾಭಾಸವನ್ನು ಸೂಕ್ತಿಸುಧಾರ್ಣವವು ಮಲ್ಲಿಕಾರ್ಜುನನ ಇಳಿವಯಸ್ಸಿನ ಕೃತಿಯೆಂದು ಭಾವಿಸುವುದರ ಮೂಲಕ ತಪ್ಪಿಸಬಹುದು. ಅಂದರೆ ಮಲ್ಲಿಕಾರ್ಜುನನು ಬದುಕಿನ ಬಹುಭಾಗವನ್ನು ನರಸಿಂಹ IIನಲ್ಲಿ, ಅಲ್ಪಭಾಗವನ್ನು ಸೋಮೇಶ್ವರನಲ್ಲಿ ಕಳೆದರೆ, ಕೇಶಿರಾಜನು ಚೋಳ ಪಾಲಚರಿತೆ ಮೊದಲಾದವುಗಳನ್ನು ಬರೆಯುತ್ತ, ಬದುಕಿನ ಅರ್ಧಭಾಗ ನರಸಿಂಹ IIನಲ್ಲಿ, ಮಿಕ್ಕರ್ಧಭಾಗ ಸೋಮೇಶ್ವರನಲ್ಲಿ ಕಳೆದಿರಬಹುದು. ಬಹುಶಃ ಶಬ್ದಮಣಿ ದರ್ಪಣ ನರಸಿಂಹ IIನ ಆಳಿಕೆಯ ಕೊನೆಯಲ್ಲಿ ಹುಟ್ಟಿರದೆ, ಸೋಮೇಶ್ವರನ ಆಳಿಕೆಯ ಆರಂಭದಲ್ಲಿ ಸೂಕ್ತಿಸುಧಾರ್ಣವದ ಸಮಯಕ್ಕೆ ಹುಟ್ಟಿರಲು ಸಾಧ್ಯವಿದೆ. ಕಾರಣ ಕೇಶಿರಾಜನ ಕಾಲ ಕ್ರಿ.ಶ. ೧೨೬೦ ಎನ್ನುವ ಕವಿ ಚರಿತೆಕಾರರ ಹೇಳಿಕೆಯನ್ನು–ನರಸಿಂಹನ ಆಳಿಕೆಯಲ್ಲಿ ಮಾಡಿದ ಗಣ್ಯ ಕಾವ್ಯವ್ಯವಸಾಯವನ್ನು ಗಮನದಲ್ಲಿಟ್ಟು ಕೊಂಡು–ಸ್ವಲ್ಪ ಹಿಂದೆ ಸರಿಸುವುದು ಸೂಕ್ತವೆನಿಸುತ್ತದೆ.

❖❖

---

೪೮. ಕ್ರಿ.ಶ. ೧೯೯೦ರಲ್ಲಿ ಆನೆಕೆರೆ ಶಾಸನ, ೧೨೩೦ರಲ್ಲಿ ಅನಂತನಾಥ ಪುರಾಣಗಳು ಇವನಿಂದ ರಚಿಸಲ್ಪಟ್ಟವು.

ಅಧ್ಯಾಯ : ೩

❖

ಕೇಶಿರಾಜನ ಕೃತಿಗಳು

ದೊರೆವಡೆದ ಚೋಳಪಾಲಕ ।
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ ।
ಹರಣಂ ಪ್ರಬೋಧಚಂದ್ರಂ !
ಕಿರಾತಮಿವು ಕೇಶಿರಾಜ ಕವಿ ವಿರಚಿತಗಳ್ ॥[೪೯]

ಈ ಪದ್ಯದಲ್ಲಿ ಹೇಳಿದ ಐದು ಮತ್ತು ಶಬ್ದಮಣಿದರ್ಪಣ – ಹೀಗೆ ಒಟ್ಟು ಆರು ಕೃತಿಗಳು ಕೇಶಿರಾಜನ ಸಾರಸ್ವತ ಸಂಪತ್ತು. ಶ್ರೀಚಿತ್ರಮಾಲೆ ಮತ್ತು ಕಿರಾತಗಳ ವಸ್ತು ರೂಪವಾಗಲೀ, ಕಾವ್ಯಸ್ವರೂಪವಾಗಲೀ ತಿಳಿದುಬಂದಿಲ್ಲ. ಸುಭದ್ರಾಹರಣಂ, ಪ್ರಬೋಧ ಚಂದ್ರೋದಯಂ ನಾಟಕಗಳಾಗಿರಬಹುದೆಂದು ಶ್ರೀ ಗೋವಿಂದ ಪೈಗಳ ಮತ.[೫೦] 'ಚೋಳಪಾಲಚರಿತೆ' ಮಾತ್ರ 'ಚೋಳಕುಲೈಕರಕ್ಷ' ಬಿರುದಿನ ನರಸಿಂಹ IIನನ್ನು ಕುರಿತ ಕೃತಿಯೆಂಬುದು ಒಪ್ಪತಕ್ಕ ಮಾತು. ಸೂಕ್ತಿಸುಧಾರ್ಣವದ ಚಂದ್ರೋದಯ ವರ್ಣನೆಯಲ್ಲಿ ಬರುವ

ಭಾವಿಪ ಸೇವಿಪಾದರಿಪ ಪೇಳಿಪ ಮೇಳಿಪೊನಲ್ವ ಗೆಲ್ವ ಸೋ ।
ಲ್ವಾವರಿಪೇವಮಂ ಪಡೆವ ಪೊತ್ತಿಪ ಜೊತ್ತಿಪಳಲ್ವ ನೇಲ್ವ ಮಾ ।
ಯಾವಿಗಳಪ್ಪ ಮುತ್ತು ಮುದಿಗುಂಟಣಿಯರ್ಕಳ ಕೃತ್ರಿಮಂಗಳಂ ।
ಭಾವಕಚಕ್ರವರ್ತಿ ಕವಿಕೇಶವದೇವನೆ ಬಲ್ಲನುರ್ವಿಯೊಳ್[೫೧] ॥

---

೪೯. ಶಮದ ಸೂ. ೩೩೯
೫೦. ಸಾಪ. ೩೧–೨ (ಕನ್ನಡ ನಾಟಕದ ಹಳಮೆ)
೫೧. ಸೂಕ್ತಿಸುಧಾರ್ಣವ, ಪು. ೧೯೯

ಈ ಪದ್ಯ ಮತ್ತು ಇದರ ಎಡಬಲದ ಪದ್ಯಗಳು ಕೇಶಿರಾಜ ಕೃತ (ಚೋಳಪಾಲ ಚರಿತೆಯಲ್ಲಿಯವು)ವೆಂದು ಶ್ರೀ ಎನ್. ಅನಂತರಂಗಾಚಾರ್ ಊಹಿಸುತ್ತಾರೆ.[೫೨] ಇವರು ಕವಿಮಲ್ಲಕೃತ ಕಾವ್ಯಸಾರವನ್ನು ಕುರಿತು, ಇದರಲ್ಲಿ "ನರಸಿಂಹ ಮತ್ತು ಸೋಮಶೇಖರ (ಶಶಿಶೇಖರ, ಚಂದ್ರಶೇಖರ)ರ ವಿಷಯವಾಗಿ ಅನೇಕ ಪದ್ಯಗಳು ಸಿಕ್ಕುವುವು. ಸೋಮಶೇಖರ, ಚಂದ್ರಶೇಖರ, ಶಶಿಶೇಖರ ಎಂಬಿವು ಸೋಮೇಶ್ವರನ ಪರ್ಯಾಯ ನಾಮಗಳಾಗಿರಬಹುದು. ಈ ಪದ್ಯಗಳೆಲ್ಲವೂ ಕೇಶಿರಾಜನ ಚೋಳಪಾಲ ಚರಿತೆಯಿಂದ ಉದ್ಧೃತವಾಗಿರಬಹುದು."[೫೩] "ಮುಗ್ಧಮೋಹನ, ವಿಕ್ರಮ ತಿಮಿಂಗಲ, ಭಲದಂಕಮಲ್ಲ, ಅಕಳಂಕಮಲ್ಲ, ನಿಗಳಂಕಮಲ್ಲ, ಜಗದೇಕಮಲ್ಲ, ಅರುಹಂತದೇವ, ಸುಚರಿತ್ರಕೋವಿದ ಮೊದಲಾದ ಅಂಕಿತಗಳಿಂದ ಮುಗಿಯುವ ಪದ್ಯಗಳು ಮಧ್ಯ ಮಧ್ಯ ದೊರೆಯುವವು. ಇವುಗಳಲ್ಲಿ ಕೆಲವಾದರೂ ನರಸಿಂಹ, ಸೋಮೇಶ್ವರನ ಬಿರುದು ಗಳಿರಬೇಕು. (ಸೂಕ್ತಿಸುಧಾರ್ಣವದ ೫–೨೬ರಲ್ಲಿ ಮಲ್ಲಿಕಾರ್ಜುನನು ಸೋಮೇಶ್ವರನನ್ನು 'ಭಲದಂಕರಾಮ ಸೋಮನೃಪಾಲಂ' ಎಂದು ಸಂಬೋಧಿಸಿರು ವುದನ್ನು ನೋಡಿ)"[೫೪] ಎಂದು ಹೇಳುತ್ತಾರೆ. "ನರಸಿಂಹನ ಅಥವಾ ದಕ್ಷಿಣ ಚಕ್ರವರ್ತಿಯ ಪ್ರಶಂಸಾರೂಪವಾಗಿರುವ ಸೂಕ್ತಿಸೂಧಾರ್ಣವದಲ್ಲಿ ದೊರೆಯುವ ಕೆಲವು ಪದ್ಯಗಳು ಕೇಶಿರಾಜಕೃತ ಚೋಳಪಾಲಕ ಚರಿತೆಗೆ ಸೇರಿದುವಾಗಿರ ಬಹುದು"[೫೫] "ಸ್ವಕೀಯ ಕಾವ್ಯಗಳಿಂದ ಕೇಶಿರಾಜನು ಪ್ರಯೋಗಗಳನ್ನು ತೆಗೆದು ಕೊಂಡಿಲ್ಲವೆಂದೂ ಹೇಳುವ ಹಾಗಿಲ್ಲ. ಆಕರಗಳು ಗೊತ್ತಿಲ್ಲದ ಅವೆಷ್ಟೋ ಪ್ರಯೋಗಗಳಲ್ಲಿ ಕನಿಷ್ಠಪಕ್ಷ ಒಂದೆರಡಾದರೂ ಅವನ ಕಾವ್ಯಗಳಿಂದ ಬಂದಿರಬಹುದು"[೫೬] ಎಂದು ಡಾ. ಡಿ.ಎಲ್.ಎನ್. ಹೇಳಿಕೆ. ಹೀಗಾಗಿ ಸೂಕ್ತಿ ಸೂಧಾರ್ಣವ ಮತ್ತು ಶಬ್ದಮಣಿದರ್ಪಣಗಳು ಕೇಶಿರಾಜನ ಎಲ್ಲ ಕೃತಿಗಳ, ಕೊನೆಯಪಕ್ಷ ಚೋಳಪಾಲ ಚರಿತೆಯ ಪದ್ಯಗಳನ್ನು ಬಳಸಿಕೊಂಡಿರುವ ಸಾಧ್ಯತೆಯಿದೆ.

ಕೇಶಿರಾಜನ ಸಾಹಿತ್ಯ ಸಮುದಾಯದಲ್ಲಿ ಈ ಕಾವ್ಯ ಕೃತಿಗಳೆಲ್ಲ ಕಳೆದುಹೋಗಿ ಶಾಸ್ತ್ರಕೃತಿಯಾದ ಶಬ್ದಮಣಿದರ್ಪಣ ಮಾತ್ರ ಈಗ ಉಳಿದಿದೆ. ಒಂದರ್ಥದಲ್ಲಿ ಕೇಶಿರಾಜನ ಮಹಾಕಾವ್ಯವೆನಿಸಿದ ಇದು, ಕನ್ನಡ ಸಾಹಿತ್ಯದ ಅಮೂಲ್ಯ ಆಸ್ತಿಗಳಲ್ಲಿ ಒಂದು. ಹಳಗನ್ನಡ ಭಾಷಾವ್ಯಾಸಂಗಕ್ಕೆ ಪ್ರಮಾಣ ಗ್ರಂಥವೆನಿಸಿದ ಈ ಆಚಾರ್ಯ ಕೃತಿಯನ್ನು ಕಳೆದ ೨೦೦ ವರ್ಷಗಳ ಕಾಲಾವಧಿಯಲ್ಲಿ ಶಾಸ್ತ್ರಕುತೂಹಲಿಗಳು ಅಭ್ಯಾಸಕ್ಕೆ ಅಳವಡಿಸಿಕೊಂಡು, ಅರಿತೋ ಅರಿಯದೆಯೋ ಭಿನ್ನಪಾಠಗಳನ್ನು ಹುಟ್ಟಿಸಿದರು. ಶಾಸ್ತ್ರಪಾರಂಗತರು ಸಹಾಯಕ ಸಾಹಿತ್ಯವನ್ನು ಜೋಡಿಸಿದರು. ಇದೆಲ್ಲವನ್ನು ಸಂಪಾದನೆ, ಸಂಶೋಧನೆ ದೃಷ್ಟಿಯಿಂದ ಅಭ್ಯಸಿಸುವುದು ಅತ್ಯವಶ್ಯವಾಗಿದೆ.

❖❖

೫೨. ಸೂಕ್ತಿಸುಧಾರ್ಣವ, ಮುನ್ನುಡಿ p.xvi
೫೩. ಸೂಕ್ತಿಸುಧಾರ್ಣವ, ಮುನ್ನುಡಿ, p.xix ಅ.ಟಿ.
೫೪. ಸೂಕ್ತಿಸುಧಾರ್ಣವ, ಮುನ್ನುಡಿ, p.xix ಅ.ಟಿ.
೫೫. ಶಮದ (೧೯೬೮) ಪ್ರಸ್ತಾವನೆ, p.xxviii ಅ.ಟಿ.
೫೬. ಶಮದ (೧೯೬೮) ಪ್ರಸ್ತಾವನೆ, p.xxxi ಅ.ಟಿ.

ಅಧ್ಯಾಯ : ೪

❖

ಶಬ್ದಮಣಿದರ್ಪಣಂ

ಊಹಿತ ಮತ್ತು ಅನುಪಲಬ್ಧ ವ್ಯಾಕರಣಪಂಥ, ವ್ಯಾಕರಣಗ್ರಂಥಗಳನ್ನು ಬಿಟ್ಟರೆ, ಉಪಲಬ್ಧ ಕವಿರಾಜಮಾರ್ಗದಲ್ಲಿ ವ್ಯಾಕರಣದ ಎಳೆಗಳಿದ್ದರೂ ಅವು ತೀರ ಪ್ರಾಸಂಗಿಕ. ನಾಗವರ್ಮನ ಶಬ್ದಸ್ಮೃತಿ ಕೇವಲ ೯೬ ಸೂತ್ರಗಳ ಒಂದು ಪ್ರಕರಣ. ಕರ್ಣಾಟಕ ಭಾಷಾಭೂಷಣ ಸಂಸ್ಕೃತ ಬಲ್ಲವರಿಗಾಗಿ ಬರೆದ ಕನ್ನಡ ವ್ಯಾಕರಣ. ಹೀಗಾಗಿ ಕನ್ನಡದಲ್ಲಿ ವಿಸ್ತಾರವಾದ ವ್ಯಾಕರಣ ರಚನೆ ಕೇಶಿರಾಜನ ಕಾಲದ ವರೆಗೂ ಕೈಗೂಡಿರಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಸಾಮರ್ಥ್ಯವನ್ನು ಕೇಶಿರಾಜನಲ್ಲಿ ಗುರುತಿಸಿದ ಆ ಕಾಲದ ಲಾಕ್ಷಣಿಕರು 'ಶಬ್ದಮಣಿದರ್ಪಣ' ಹೆಸರಿನ 'ಕರ್ಣಾಟಕ ಲಕ್ಷಣ ಶಬ್ದಶಾಸ್ತ್ರ'ವನ್ನು ರಚಿಸಲು ಕೇಳಿಕೊಂಡರು. ಕೇಶಿರಾಜ, ಇವರ ಬಿನ್ನಹವನ್ನು ಮನ್ನಿಸಿ ಬರೆದ ಕೃತಿಯೇ "ಶಬ್ದಮಣಿದರ್ಪಣಂ."

ಮಹಾಪೂರದಂತೆ ತುಂಬಿಬರುತ್ತಿದ್ದ ಹಳಗನ್ನಡ ಜೈನಸಾಹಿತ್ಯ, ಶರಣರ ನಡುಗನ್ನಡ ಸಾಹಿತ್ಯದ ಬಲವಾದ ಪ್ರತಿಕ್ರಿಯೆಯ ಎದುರು ಬಲಗುಂದಿತು. ಅಷ್ಟರಲ್ಲಿ ಬಂದ ಹರಿಹರನ ರಗಳೆ, ರಾಘವಾಂಕನ ಷಟ್ಪದಿಗಳು ಆ ಹಳಗನ್ನಡ ಕಾವ್ಯಗಳನ್ನು ಇನ್ನೂ ಮರೆಯಿಸಿದವು. ಇದರಿಂದ ಜೈನನಿರ್ಮಿತ ಹಳಗನ್ನಡ ಕೃತಿಗಳ, ಇವುಗಳಿಗೆ ಮಾಧ್ಯಮವಾದ ಹಳಗನ್ನಡ ಭಾಷೆಯ ಅಭ್ಯಾಸ ಕ್ರಮೇಣ ಕಡಿಮೆಯಾಗುತ್ತ ನಡೆದಿರಬೇಕು. ಆ ಕೃತಿಗಳತ್ತ ಜನತೆಯ ಒಲವನ್ನು ಮತ್ತೆ ತಿರುಗಿಸಲು ತಂದೆ ಮಲ್ಲಿಕಾರ್ಜುನನು ಅವುಗಳಿಂದ ರುಚಿಯಾದ ಪದ್ಯಗಳನ್ನು ಸಂಕಲಿಸಿದರೆ, ಅವುಗಳನ್ನು ಆಧಾರವಾಗಿಟ್ಟುಕೊಂಡು ಹಳಗನ್ನಡ ವ್ಯಾಕರಣವನ್ನು ಬರೆದಂತಿದೆ ಕೇಶಿರಾಜ. ಹೀಗೆ ಸಾಹಿತ್ಯದ ಮೂಲಕ ಧರ್ಮವನ್ನು ಕಾಪಾಡುವ ಭಾವನೆಯೂ ದರ್ಪಣದ ಸೃಷ್ಟಿಗೆ ಕಾರಣವಾಗಿರಲು ಸಾಧ್ಯವಿದೆ.[೧]

---

೧. ಕೇಶಿರಾಜ ಜೈನನಾಗಿರಬಹುದು ಎಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಬರೆಯಲಾಗಿದೆ.

ಈ ವ್ಯಾಕರಣದಲ್ಲಿ ಸಂಧಿ,[೨] ನಾಮ, ಸಮಾಸ, ಅಖ್ಯಾತ, ಧಾತು, ತದ್ಧಿತ, ಅಪಭ್ರಂಶ, ಅವ್ಯಯ ಎಂದು ೮ ಪ್ರಕರಣ, ೩೪೩ ಸೂತ್ರಗಳಿವೆ,* ಕಂದದಲ್ಲಿ ಸೂತ್ರ, ಗದ್ಯದಲ್ಲಿ ವೃತ್ತಿಯಿದೆ; ಪ್ರಾಚೀನ ಕವಿಪದ್ಯಗಳನ್ನು ಪ್ರಯೋಗಗಳೆಂದು ಬಳಸಲಾಗಿದೆ. ಕಾಲಕ್ರಮದಲ್ಲಿ ಈ ಕೃತಿಗೆ ಹಲವರು ಟೀಕೆ, ವಾಖ್ಯಾನಗಳನ್ನು ಬರೆದಿದ್ದಾರೆ.

ಈಗ ಲಭ್ಯವಿರುವ ಹಸ್ತಪ್ರತಿಗಳನ್ನು ಪರೀಕ್ಷಿಸಿದರೆ ಶಬ್ದಮಣಿದರ್ಪಣದ ಶರೀರ ರಚನೆಯಲ್ಲಿ ಕಾಣುವ ಮುಖ್ಯ ಶಾಖೆಗಳು ಎರಡು. ಒಂದು: ಕಿಟೆಲ್ ಮೊದಲಾದವರ ಪರಿಷ್ಕರಣಗಳು, ಎರಡು: ಸೂತ್ರಕ್ರಮ, ಸೂತ್ರಸಂಖ್ಯೆ, ವೃತ್ತಿರೂಪ, ವ್ಯಾಖ್ಯಾನ, ಪ್ರಯೋಗ ಸಂಖ್ಯೆ– ಈ ಐದು ಭಿನ್ನವೈಶಿಷ್ಟ್ಯಗಳಿಂದ ಕೂಡಿರುವ ಹೈದ್ರಾಬಾದ ದರ್ಪಣ. ಇವುಗಳಲ್ಲಿ ಮೊದಲಿನ ವರ್ಗವು ಮೂಲವೆಂದೂ, ಎರಡನೆಯದು ವ್ಯಾಖ್ಯಾನಕಾರನೊಬ್ಬನ ಮರುರಚನೆಯೆಂದೂ ಹೇಳಬಹುದು. ಈ ಪ್ರಮುಖ ವಿಷಯವಲ್ಲದೆ ದರ್ಪಣದ ಸೂತ್ರ, ವೃತ್ತಿ, ಪ್ರಯೋಗ, ಟೀಕೆ ಎಂಬ ನಾಲ್ಕು ಅಂಶಗಳು ವಿವೇಚನಾರ್ಹವೆನಿಸಿವೆ.

ಸೂತ್ರ

ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳೆಂದರೆ ೧. ಸೂತ್ರಗಳ ಕ್ರಮ ೨. ಸೂತ್ರಗಳ ಆಧಿಕ್ಯ ೩. ಸೂತ್ರಗಳ ಪಾಠ. ಇವುಗಳ ವಿವೇಚನೆ ಹೀಗಿದೆ :

ಸೂತ್ರಗಳ ಕ್ರಮ: ಹೈದ್ರಾಬಾದ ದರ್ಪಣಕಾರನು ಕಿಟೆಲ್‌ವರ್ಗದ ದರ್ಪಣ ಸೂತ್ರಕ್ರಮವನ್ನು ಮುರಿದು, ಇನ್ನೊಂದು ಕ್ರಮದಲ್ಲಿ ಹೊಂದಿಸಿರುವನು, ಸಂಜ್ಞಾಪ್ರಕರಣದಲ್ಲಿ ಆ ಕ್ರಮ ಹೀಗಿದೆ:

ಪರಿಷತ್ ಆವೃತ್ತಿ: ೧, ೨, ೩, ೪, ೫, ೬, ೭, ೮, ೯, ೧೦, ೧೧, ೧೨, ೧೩, ೧೪, ೧೫, ೧೬, ೧೭, ೧೮, ೧೯.

ಹೈದ್ರಾಬಾದ ಪ್ರತಿ: ೧, ೨, ೩, ೪, ೫, ೩೧, ೭, ೮, ೯, ೧೦, ೧೩, ೧೪, ೧೫, ೧೬, ೧೭, ೧೧, ೧೨, ೩೨, ೩೩.

ಇಲ್ಲಿ "ಸ್ವರಪ್ರಕರಣ, ವರ್ಗಪ್ರಕರಣ, ಅವರ್ಗಪ್ರಕರಣ ಇವು ಕ್ರಮವಾಗಿ ಉಕ್ತವಾಗಿ, ಯೋಗವಾಹಗಳಲ್ಲಿ ಬಿಂದು ವಿಸರ್ಗ ಜಿಹ್ವಾಮೂಲೀಯ ಉಪಧ್ಮಾನೀಯಗಳನ್ನು ಹೇಳಿದೆ"[೩] ಎಂಬ ಪ್ರೊ. ಡಿ.ಕೆ.ಭೀ ಅವರ ಹೇಳಿಕೆ ಹೈದ್ರಾಬಾದ ಪ್ರತಿಯ ಸೂತ್ರಕ್ರಮ ವ್ಯವಸ್ಥೆಯನ್ನು ಎತ್ತಿಹೇಳುತ್ತದೆ. ಆದರೆ ಸೂತ್ರದ ಮರುಜೋಡಣೆಯ ಕಾರ್ಯದಲ್ಲಿ ಮೊದಮೊದಲು ತೋರಿದ ಉತ್ಸಾಹ ಹೈದರಾಬಾದ ಪ್ರತಿಯಲ್ಲಿ ಮುಂದೆ ಕಂಡುಬರುವುದಿಲ್ಲ.

ಇನ್ನು, ಒಂದೇ ಬಗೆಯ ಆನುಪೂರ್ವಿಯನ್ನೊಳಗೊಂಡ ಕಿಟಲ್ ವರ್ಗದ ದರ್ಪಣಗಳಲ್ಲಿಯೂ ಕೆಲವು ಸೂತ್ರಗಳ ಕ್ರಮ ಹಿಂದುಮುಂದಾಗಿದೆ.

---

೨. ಸಂಧಿಪ್ರಕರಣದ ಪೂರ್ವಾರ್ಧವೇ ಸಂಜ್ಞಾ ಪ್ರಕರಣ.

* "ಪ್ರಯೋಗಸಾರ" ಪ್ರಕರಣದ ತಲೆಯ ಮೇಲಿನ ಪದ್ಯವನ್ನೂ ಒಳಗೊಂಡಿದೆ ಈ ಸಂಖ್ಯೆ.

೩. ಶಮದ, ಪಾಠಾಂತರಗಳು (೧೯೫೧) ಪು. ೭

	ಪರಿಷತ್	ಡಿ.ಎಲ್.ಎನ್.	ಮದ್ರಾಸ	ಕಿಟೆಲ್
ಅ. ಉರ್ದುಂ ಬಿರ್ದುಂ ತರ್ದುಂ	I	I	I	I
ನುರ್ಗಿದುದೆನೆ ತರ್ಗಿದುದೆನೆ	II	II	I	II
ಇರ್ಪುಂ ತೋರ್ಪುಂ	III	IV	III	III
ಆರ್ದಂ ಸಾರ್ದಂ ಪಾರ್ದಂ	IV	III	IV	IV
ಊರ್ಗಳ್ ಕೇರ್ಗಳ್	V	V	V	V
ಆ. ಭೂತಭವಿಷತ್ಕ್ರಿಯೆಗಳ್	I	I	I	I
ವಿನುತಕ್ರಿಯಾತ್ಮಕಂಗಳುಂ	II	II	III	II
ಸಮುಪಾತ್ತಕ್ರಿಯೆಯುಂ	III	III	II	III
ಕ್ಷಿತಿಯೊಳೆ ರೂಢಾನ್ವಯಾರ್ಥ	IV	IV	IV	IV

ಈ ಯಾದಿಯಿಂದ 'ಅ' ಗುಂಪಿನಲ್ಲಿ ಪರಿಷತ್[೪] ಕಿಟೆಲ್, ಡಿ. ಎಲ್. ಎನ್. ಮದ್ರಾಸ ಎಂಬ ಮೂರು ಭಿನ್ನ ಕ್ರಮಗಳು; 'ಆ' ಗುಂಪಿನಲ್ಲಿ ಮದ್ರಾಸ ಮತ್ತು ಇತರ ಎಂಬ ಎರಡು ಭಿನ್ನಕ್ರಮಗಳು ಗೋಚರಿಸುತ್ತವೆ. ಈ ಪ್ರಸಂಗದಲ್ಲಿ "೩೩೦ ರಿಂದ ೩೩೩ರ ವರೆಗಿನ ಸೂತ್ರಗಳ ಅನುಪೂರ್ವಿ (ಕಿ)ದಲ್ಲಿ ೩೩೨, ೩೩೦, ೩೩೩, ೩೩೧ ಆಗಿದೆ"[೪] ವಿಚಾರ ಎಂಬ ಡಾ. ಡಿ.ಎಲ್.ಎನ್. ಹೇಳಿಕೆಯನ್ನೂ ಗಮನಿಸಬಹುದು.

ಸೂತ್ರಗಳ ಆಧಿಕ್ಯ: ಹೈದ್ರಾಬಾದ ದರ್ಪಣದಲ್ಲಿ ಕಿಟೆಲ್‌ವರ್ಗದ ದರ್ಪಣಗಳಿಗಿಂತ ಸುಮಾರು ೬೦ ಸೂತ್ರಗಳು ಹೆಚ್ಚಿಗಿವೆ. ಇವುಗಳಲ್ಲಿ ಕವಿರಾಜಮಾರ್ಗ, ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳಿಗೆ ಸಂಬಂಧಿಸಿದುವು ಕೆಲವು. ಪ್ರಾಸ, ಅಟಿ, ಸಂಧಿದೋಷ, ಸಮಸಂಸ್ಕೃತ ಪ್ರಸಂಗಗಳಲ್ಲಿ ಎತ್ತಿಕೊಂಡ ಕವಿರಾಜಮಾರ್ಗದ ಸೂತ್ರಗಳನ್ನು 'ಮತಾಂತರಸೂತ್ರಂ' ಎಂದು ಕರೆದಿರುವನು. "ಕವಿರಾಜಮಾರ್ಗದ ಸೂತ್ರಗಳಿ ಗಾದರೋ ಅವು ಬಂದಲ್ಲೆಲ್ಲ ವೃತ್ತಿ ದೊರೆಯುತ್ತದೆ".[೫]

'ಮತಾಂತರಸೂತ್ರಂ' ಎಂಬ ಹೆಸರಿನಲ್ಲಿ ಶಬ್ದಸ್ಮೃತಿಯಿಂದ ಸ್ವೀಕರಿಸಿದ ಕೆಲವು ಸೂತ್ರ ಗಳಿದ್ದು, ಒಂದೆರಡಕ್ಕೆ ವೃತ್ತಿ ಸಿಗುತ್ತವೆ. 'ಮತಾಂತರಸೂತ್ರಂ' ಎಂಬ ಶೀರ್ಷಿಕೆಯಲ್ಲಿ ಭಾಷಾಭೂಷಣದ ಸೂತ್ರಗಳನ್ನು ಸ್ವೀಕರಿಸಿದ್ದರೂ ಅವುಗಳ ಸಂಖ್ಯೆ ಕಡಿಮೆ.

---

೪. ಶಮದ, (೧೯೬೮) ಪು. ೩೫೬

೫. ಶಮದ, ಪಾಠಾಂತರಗಳು, (೧೯೫೧) ಪು. ೩೬

ಇಷ್ಟನ್ನು ಬಿಟ್ಟರೆ 'ಮತಾಂತರಸೂತ್ರಂ' ಎಂಬ ಹೆಸರಿನಲ್ಲಿ ಸಿಗುವ ಕೆಲವು ಸೂತ್ರ ಗಳಿಗೆ ಉಪಲಬ್ಧ ವ್ಯಾಕರಣಗ್ರಂಥಗಳಲ್ಲಿ ಆಕರ ಸಿಗದ ಕಾರಣ, ಇವು ಕಳೆದುಹೋದ ವ್ಯಾಕರಣ(ಗಳ) ಸೂತ್ರಗಳಿರಲು ಸಾಧ್ಯವಿದೆ; ಕೆಲವನ್ನು ಈತನೇ ಕೈಮುಟ್ಟಿ ಕಟ್ಟಿರಲೂಬಹುದು.

ಶಬ್ದಮಣಿದರ್ಪಣದ ಇನ್ನೊಂದು ಸಂಪ್ರದಾಯಕ್ಕೆ ಸೇರಿದುದು ಕಿಟೆಲ್ ವರ್ಗದ ಆವೃತ್ತಿಗಳು. ಇಲ್ಲಿಯ ಕೆಲವು ಸೂತ್ರಗಳ ಕರ್ತೃತ್ವವೂ ಸಂದೇಹಪೂರ್ಣವಾಗಿದೆ. ಕರ್ಮಣಿ ಪ್ರಯೋಗವನ್ನು ಕುರಿತ ೨೬೩ನೆಯ (ಅನುಕ್ತ)ಸೂತ್ರ ನಿಟ್ಟೂರ ನಂಜಯ್ಯ ಕೃತವಾಗಿರಬಹುದು. "ಅಮುಮೆಂದುಸಿರ್ವ" ಎಂಬ ೧೩೩ ನೆಯ ಸೂತ್ರಕ್ಕೆ ಕಿಟೆಲ್ ಅವರು 'ಅನುಕ್ತಸೂತ್ರ' ಎಂದು ಕರೆದು, ಅಡಿಯಲ್ಲಿ "A Sutra not uttered by the author himsilf, in our best manuscript and M. B. however, this, remark is not found" ಎಂದಿದ್ದಾರೆ. 'ಪುದಿಗುಮದಂತ.....' ಎಂಬ ೧೩೨ ನೆಯ ಸೂತ್ರ. ಡಾ. ಡಿ.ಎಲ್.ಎನ್ ಬಳಸಿದ ಕ. ಖ. ಪ್ರತಿಗಳಲ್ಲಿಲ್ಲ. ಸಾಹಿತ್ಯ ಪರಿಷತ್ತು ಬಳಸಿದ ಕ, ಖ ಪ್ರತಿಗಳಲ್ಲಿಯೂ ಕಿಟೆಲ್ ಬಳಸಿದ ಕೆಲವು ಪ್ರತಿಗಳಲ್ಲಿಯೂ ಈ ಸೂತ್ರವಿಲ್ಲ. 'ಸ್ಫಟಿಕಂ ಪೇಟಿಕೆ' ಎಂಬ ೩೨ನೆಯ ಸೂತ್ರ. ಡಾ. ಡಿ.ಎಲ್.ಎನ್. ಬಳಸಿದ 'ಖ' ಪ್ರತಿಯಲ್ಲಿಲ್ಲ. ಹೀಗಾಗಿ ಕಿಟೆಲ್ ವರ್ಗದ ಆವೃತ್ತಿಗಳಲ್ಲಿಯ ಈ ೩೨, ೧೩೨, ೧೩೩, ೨೬೩ ನೆಯ ಸೂತ್ರಗಳ ಮೂಲದ ಬಗೆಗೆ ಸಂದೇಹ ಹುಟ್ಟುತ್ತದೆ.

ಡಾ. ಡಿ.ಎಲ್.ಎನ್. ಬಳಸಿದ 'ಕ' ಪ್ರತಿಯಲ್ಲಿ ಮಾತ್ರ ಸೂತ್ರದಂತೆ ಕಾಣುವ "ಅಂಗಯ್ಮ್ಮಂಗಯ್...."[೬] ಎಂಬ ಕಂದ, ಹೈದ್ರಾಬಾದ ದರ್ಪಣದಲ್ಲಿಯೂ ಇದೆ. ಸಾಮಾನ್ಯವಾಗಿ ಎಲ್ಲ ಪ್ರತಿಗಳಲ್ಲಿ ಪಟ್ಟಿರೂಪದಲ್ಲಿರುವ ನಿಜಬಿಂದು, ವಿಕಲ್ಪಬಿಂದು ಯುಕ್ತ ಪದಗಳು ಹೈದ್ರಾಬಾದ ಪ್ರತಿಯಲ್ಲಿ ಕಂದಪದ್ಯಗಳಾಗಿ ನಿಂತು, ಸೂತ್ರವೆಂದು ಪರಿಗಣಿತವಾಗಿವೆ. ಆಖ್ಯಾತ ಪ್ರಕರಣದ ಕೊನೆಯ 'ಅವಿಚಲಿತ...' ಎಂಬ ಪದ್ಯ, ಡಾ. ಡಿ.ಎಲ್.ಎನ್. ಆವೃತ್ತಿಯಲ್ಲಿ ಮಾತ್ರ,[೭] ಕೊನೆಯ ಕವಿ ಪ್ರಶಸ್ತಿಯ 'ನಡೆಯಿಸುವ...' 'ನಿಲವಿನನಿರ್ಪು....' 'ಅದನೇವೇಳ್ವುದೋ...' ಎಂಬ ಹೆಚ್ಚಿನ ಪದ್ಯಗಳು ಮದ್ರಾಸ ಆವೃತ್ತಿ[೮]ಯಲ್ಲಿ ಮಾತ್ರ ಕಂಡುಬರುತ್ತವೆ. ಪೀಠಿಕಾಪ್ರಕರಣದ 'ಪ್ರಾಸಚ್ಛಂದೋನ್ವಯ ವಿನ್ಯಾಸ...' ಎಂಬ ಪದ್ಯ ಪ್ರಕ್ಷಿಪ್ತವಾಗಿರಬಹುದು.[೯] ಗ್ರಂಥಾಂತ್ಯದ 'ನಡೆದುದೆ ಮಾರ್ಗಂ' 'ದೊರೆವಡೆದ ಚೋಳಪಾಲಚರಿತಂ...' 'ಸಿರಿಗೀಕ್ಷಿಪರಸಚಿತ್ರಂ...' 'ಆರ್ಯನ ಯಾದವಕಟಕಾಚಾರ್ಯನ...' 'ಗಮಕಸಮಾಸದಿಂ...' ಇವು ಕೆಲವು ಹಸ್ತಪ್ರತಿಗಳಲ್ಲಿಲ್ಲ.[೧೦]

ಸೂತ್ರಗಳ ಪಾಠ: ಕನ್ನಡದ ಮಿಕ್ಕ ಗ್ರಂಥಗಳೊಂದಿಗೆ ಹೋಲಿಸಿದರೆ, ದರ್ಪಣ ಸೂತ್ರಗಳಿಗೆ ಭಿನ್ನಪಾಠಗಳು ಕಡಿಮೆಯೆಂದೇ ಹೇಳಬೇಕು. ಅಧಿಕ ಅರ್ಥವ್ಯತ್ಯಾಸ ವನ್ನುಂಟುಮಾಡುವ ಭಿನ್ನಪಾಠಗಳನ್ನೊಳಗೊಂಡ ಸೂತ್ರಗಳು (೨೮, ೧೬೬, ೨೨೦, ೨೫೨ ಇತ್ಯಾದಿ) ಐದನ್ನು ಮಿಕ್ಕಲಾರವು. ಅದಕ್ಕಾಗಿ ಸೂತ್ರಗಳ ಪಾಠ ಬಹುಮಟ್ಟಿಗೆ ಶುದ್ಧವಾಗಿ ಉಳಿದಂತಿದೆ.

---

೬. ಶಮದ, ಪು. ೧೮೨ ಅ.ಟಿ.

೭. ಶಮದ, (೧೯೬೮) ಪು. ೨೭೯

೮. ಶಮದ, ಮದ್ರಾಸ (೧೯೭೮) ಪು. ೩೧೪

೯. ಕಸಾಪ, ೨೬–೧ (ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ.)

೧೦. ಶಮದ, (೧೯೬೮) ಪು. ೩೫೯ ಅ.ಟಿ.

ವೃತ್ತಿ:

ದರ್ಪಣಕ್ಕೆ ಸಂಬಂಧಪಟ್ಟ ಜಟಿಲ ಸಮಸ್ಯೆಗಳಲ್ಲಿ ವೃತ್ತಿ ಮುಖ್ಯವಾದುದು. ಈಗ ತಿಳಿದಮಟ್ಟಿಗೆ ದರ್ಪಣಕ್ಕೆ ಬರೆದ ವೃತ್ತಿಗಳು ನಾಲ್ಕು:

೧. ಕೆಲವು ವೃತ್ತಿಗಳು ಸೂತ್ರಕ್ಕೆ ವ್ಯತಿರಿಕ್ತವಾಗಿ ತೋರುವುದರಿಂದ 'ಶಬ್ದಮಣಿ ದರ್ಪಣದ ವೃತ್ತಿ ಕೇಶಿರಾಜನದಲ್ಲ' ಎಂದು ಕೆಲವರ ಅಭಿಪ್ರಾಯ. ಕೇಶಿರಾಜನೇ ವೃತ್ತಿ ಬರೆದಿದ್ದರೆ ತರುವಾಯ ಹಲವು ವೃತ್ತಿಗಳು ಹುಟ್ಟುವ ಅವಶ್ಯಕತೆಯೇನಿತ್ತು? ಎಂದು ಇವರ ವಾದ. 'ಸೂತ್ರಕ್ಕರ್ಥವೃತ್ತಿ ವರ್ತಿಸೆ ಬರೆದೆಂ' ಎಂಬ ಪ್ರತಿಜ್ಞಾವಾಕ್ಯ ರೂಪದ ಸೂತ್ರವೂ ವೃತ್ತಿಕಾರನೊಬ್ಬನ ಸೃಷ್ಟಿಯೆಂದು ಇವರ ಸಿದ್ಧಾಂತ. ಆದರೆ 'ಸೂತ್ರಕಾರನಾದ ಕವಿಕೇಶವಂ ತಾಂ ಮಾಡಿದ ಶಬ್ದಮಣಿ ವೃತ್ತಿಯೊಳ್ ಸಂಧಿದೋಷಮಕ್ಕುಮೆಂದು ತಾಂ ಬರೆದಂ' ಎಂಬ ಮದ್ರಾಸ ದರ್ಪಣೋಕ್ತ (ಸೂ.೬೧) ಮಾತಿನಿಂದಲೂ ಪರಂಪರಾಗತ ನಂಬಿಕೆಯಿಂದಲೂ ದರ್ಪಣಕ್ಕೆ ಕೇಶಿರಾಜನೇ ಮೂಲದಲ್ಲಿ ವೃತ್ತಿ ಬರೆದನೆಂದು ಹೇಳಬೇಕಾಗುತ್ತದೆ.

೨. "....ಸರೇಫಮಿದಿರಾಗೆ ದೋಷಮಿಲ್ಲಂ ಎಂದು ಕಂ....ಸಪ್ಪ ತಾಂ ಮಾಡಿದ ಶಬ್ದಮಣಿದರ್ಪಣ ವ್ಯಾಖ್ಯಾನದೊಳ್ ಬರೆದಂ, ಅದು ಪೊಲ್ಲ" ಎಂದು ಮದ್ರಾಸ ದರ್ಪಣದ (ಸೂ.೬೧) ವೃತ್ತಿಸಂದರ್ಭದಲ್ಲಿ ಹೇಳಲಾಗಿದೆ. ಕಂ.....ಸಪ್ಪನ ಚರಿತ್ರೆಯಾಗಲೀ, ಈತನ ವ್ಯಾಖ್ಯಾನವಾಗಲೀ ಇನ್ನೂ ಲಭಿಸಿಲ್ಲ.

೩. ಶ್ರೀ ಡಿ.ಕೆ.ಭೀ. ಅವರಿಗೆ ದೊರೆತ ಹೈದ್ರಾಬಾದ ದರ್ಪಣಕ್ಕೆ ವಾಖ್ಯಾನವಿದೆ. ಇದು ಕಂ...ಸಪ್ಪನ ವ್ಯಾಖ್ಯಾನಕ್ಕಿಂತ ಭಿನ್ನವಾದುದು.*

೪. ಮದ್ರಾಸ ದರ್ಪಣಕ್ಕೆ ಲಿಂಗಣಾರಾಧ್ಯನು ಬೇರೊಂದು ವೃತ್ತಿ ಬರೆದಿರುವುದು ಅಭ್ಯಾಸಿಗಳಿಗೆ ಗೊತ್ತಿರುವ ವಿಷಯ.

ಹೀಗೆ ಈ ವರೆಗೆ ದರ್ಪಣಕ್ಕೆ ನಾಲ್ಕು ವೃತ್ತಿ-ವ್ಯಾಖ್ಯಾನಗಳು ಹುಟ್ಟಿವೆ. ಇವುಗಳಲ್ಲಿ ಕಂ...ಸಪ್ಪನದು ಲಭಿಸಿಲ್ಲ. ಅದರ ಸ್ವರೂಪ ಮಾತ್ರ ವ್ಯಾಖ್ಯಾನವೆಂದು ತಿಳಿದುಬಂದಿದೆ. ಮಿಕ್ಕ ಮೂರು ಲಭಿಸಿವೆ. ಇವುಗಳಲ್ಲಿ ಕೇಶಿರಾಜನದು ಅರ್ಥವೃತ್ತಿ, ಲಿಂಗಣಾರಾಧ್ಯನದು ಅನ್ವಯವೃತ್ತಿ,ಹೈದ್ರಾಬಾದ ದರ್ಪಣಕಾರನದು ವ್ಯಾಖ್ಯಾನವೃತ್ತಿ.

೧. ಕೇಶಿರಾಜನ ಅರ್ಥವೃತ್ತಿ: ಶಬ್ದಮಣಿದರ್ಪಣದ ಪೀಠಿಕಾ ಪ್ರಸಂಗದಲ್ಲಿ ಬರುವ ಒಂದು ಪದ್ಯ ಹೀಗಿದೆ:

ಪ್ರಾಸಚ್ಛಂದೋನ್ವಯ ವಿ।
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ।
ವ್ಯಾಸಂ ತದ್ವ್ಯಾಕುಳಮೆಂ।
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇಳ್ದೆಂ ॥ [೧೧]

---

* ಶಮದ ಪಾಠಾಂತರಗಳು (೧೯೫೧) ಪು. ೬೫

೧೧. ಶಮದ (೧೯೬೮) ಸೂ. ೬

ಇಲ್ಲಿಯ 'ಸೂತ್ರಕ್ಕೆ ಅರ್ಥವೃತ್ತಿವರ್ತಿಸೆ ಪೇಳ್ದೆಂ' ಎಂಬ ಮಾತು, ಕೇಶಿರಾಜನದು 'ಅರ್ಥವೃತ್ತಿ' ಎಂದು ಸ್ಪಷ್ಟಪಡಿಸುತ್ತದೆ. ಛಂದಸ್ಸು, ಪ್ರಾಸಗಳ ಪಾಲನೆಗಾಗಿ ಪದಗಳು ಹಿಂದುಮುಂದು ಬಿದ್ದು, ಆಶಯದ ಅರಿತ ಕ್ಲೇಶವಾಗುವುದರಿಂದ ಸೂತ್ರಗಳ ಅರ್ಥಸ್ಪಷ್ಟತೆಗಾಗಿ ಬರೆದ ವೃತ್ತಿಯೇ ಅರ್ಥವೃತ್ತಿ. ಇದಕ್ಕೆ ಒಂದು ಉದಾಹರಣೆ :

ಎರಡುಂ ರೇಫೆಗಳಂ ತಂ ।
ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ ।
ಬರೆ ಸಂಧಿ ಮಾಡಲಾಗದು
ಕರಡೆಯ ಗಿರುಗಟೆಯ ದನಿಯವೊಲಮರವವೆಂದುಂ ।[೧೨]

ವೃತ್ತಿ: "ಪದಂಗಳೆರಡಱಂತರಾಳ ರೇಫಂಗಳಂ ಕೂಡಿದಂತೆ ಶ್ರುತಕಷ್ಟಮಾಗಿ ಸಂಧಿಯಂ ಮಾಡಲಾಗದು. ಕರಡೆಯ ಗಿರುಗಟೆಯ ದನಿಯಂತೆ ನೇರ್ಪಡವು"

(ಈ ಅರ್ಥವೃತ್ತಿಯನ್ನು ಮುಂದೆ ಇದೇ ಸೂತ್ರಕ್ಕೆ ಬರೆದ ಅನ್ವಯ ವೃತ್ತಿಯೊಂದಿಗೆ ತುಲನಿಸಿ ನೋಡಿರಿ).

ಕೇಶಿರಾಜನ ಇಂಥ ಅರ್ಥವೃತ್ತಿಗಳು ಹಲವು ಸ್ವರೂಪ(Form)ಗಳಲ್ಲಿ ಸಿಗುತ್ತವೆ. ಉದಾ:

ವಿದಿತ ಸ್ವರದಿನನಾದೇ ।
ಶದ ಸಹಜವ್ಯಂಜನಂಗಳಿಂ ಪರದ ಪವ ।
ರ್ಗದ ನೆಲೆಗಕ್ಕುಂ ವತ್ವಂ ।
ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ ।[೧೩]

ವೃತ್ತಿ ೧: "ಸ್ವರಂಗಳಿರ್ದೊಡಂ ಆದೇಶರಹಿತಮಪ್ಪ ವ್ಯಂಜನಂಗಳಿರ್ದೊಡಂ ಪರದೊಳಿರ್ದ ಪವರ್ಗಕ್ಕೆ ಸಮಾಸವಿಷಯದೊಳ್ ವತ್ವಮಕ್ಕುಂ, ಬಹುಳತೆಯಿಂ ವಾಕ್ಯದೊಳಮಕ್ಕುಂ".

ವೃತ್ತಿ ೨: ಸಮಾಸಂಗಳೊಳ್ ಪ್ರಸಿದ್ಧಿಯಿಂ ಪೂರ್ವಪದಾಂತ್ಯದೊಳಿರ್ದ ಸಹಜ ಸ್ವರಂಗಳ್ಗೆಯುಂ, ಆದೇಶಮಂ ಬೇರ್ಕೆಯ್ದು ತೊಲಗಿನಿಂದ ನಿಜವ್ಯಂಜನಂ ಗಳ್ಗೆಯುಂ ಪರಮಾಗಿ ಪರಪದಪೂರ್ವದೊಳ್ ನಿಂದ ಪವರ್ಗಸ್ಥಾನಕ್ಕೆ ಬಹುಳತೆಯಿಂ ವತ್ವಮಕ್ಕುಂ. ಮತ್ತಂ ಕೆಲವು ವಿಭಕ್ತ್ಯಂತಮಾಗಿ ನಿಂದ ಕಕಾರಕ್ಕೆ ಪರದೊಳಿರ್ದ ಕ್ರಿಯಾವಾಚಕಂಗಳ ಮೊದಲೊಳಿರ್ದ್ದ ಪಕಾರಕ್ಕೆ ವತ್ವಾದೇಶಂ ಪ್ರಚುರತೆಯಿಂ ಸವನಿಸುವುದು."[೧೪]

ಒಂದೇ ಸೂತ್ರಕ್ಕೆ ಬರೆದ ಈ ಅರ್ಥವೃತ್ತಿಗಳು ಸ್ವರೂಪದಲ್ಲಿ ಎರಡು ಬಗೆಯಾಗಿವೆ. ಒಂದು: ಸಂಗ್ರಹ, ಇನ್ನೊಂದು: ವಿಸ್ತೃತ. ಈಗ ಇನ್ನೊಂದು ಸೂತ್ರಕ್ಕೆ ಬರೆದ ಎರಡು ವೃತ್ತಿಗಳನ್ನು ನೋಡಬಹುದು:

---

೧೨. ಶಮದ (೧೯೬೮) ಪು. ೭೩
೧೩. ಶಮದ (೧೯೬೮) ಸೂ. ೭೩
೧೪. ಶಮದ (೧೯೬೮) ಪ್ರಸ್ತಾವನೆ p. xvii

ಎಳದು ಪಳದೆಂಬ ಶಬ್ದಂ ।
ಗಳ ಮಧ್ಯಕುಂಟೆಕಾರಮುತ್ವಂ ಬಱಿದೆಂ ।
ದೊಟಿರುವ ಱಿಕಾರದೊಳ್ ನೀಂ ।
ತಿಳಿ ಪೊಸತಱ ಕಡೆಗೆ ಬಿಂದುವೆರಸು ಬಕಾರಂ ॥[೧೫]

ವೃತ್ತಿ ೧: "ಎಳದು ಪಳದು ಎಂಬ ಶಬ್ದಂಗಳ್ಗೆ ಪುಲ್ಲಿಂಗದಕಾರಂ ಬರೆ ಮಧ್ಯಕ್ಕೆ ಹ್ರಸ್ವಮಪ್ಪೆತ್ವಮಕ್ಕುಂ. ಬಱಿದೆಂಬ ಶಬ್ದ ಱಿಕಾರಕ್ಕೆ ಉಕಾರಾದೇಶಂ ಪೊಸತೆಂಬುದರ ತುಕಾರಕ್ಕೆ ಬಿಂದುವೆರಸು ಬಕಾರಾದೇಶಮಕ್ಕುಂ."

ವೃತ್ತಿ ೨: "ಎಳದು ಪಳದಿವೆಂಬುದಕ್ಕೆ ಪುಲ್ಲಿಂಗದಕಾರಂ ಬರೆ ಮಧ್ಯಾಕ್ಷರಕ್ಕೆ ಹ್ರಸ್ವೇತ್ವಮಕ್ಕುಂ. ಎಳೆಯಂ। ಪಳೆಯಂ। ಪಳೆಯರೆಂದು ಸ್ತ್ರೀಲಿಂಗದಳ್ ಎಂಬುದು ಪಱಿಮಾದೊಡಕ್ಕುಂ। ಎಳೆಯಳ್. ಎಳೆಯಳಿರುತೆನ್ನ ಪಕ್ಕದೊಳೆಳಿಸಿ ಮನೋಜಾ ರೂಪ ತಾನೆ। ಅಲ್ಲದೆಯುಂ ಸ್ತ್ರೀಲಿಂಗದಳ್ ಪಱಿಮಾದೊಡೆ ಗುಣವಚನದು ಕಾರದೊಳ್ ತದ್ಧಿತದೊಳ್ ಲೋಪಮುಂಟಾಗಿ ಕಿಱಿಯಳ್। ಪಿರಿಯಳ್। ಅಸಿಯಳ್। ನಿಡಿಯಳೆಂದುಂಟು। ಬಱಿದುಯೆಂಬ ಶಬ್ದದ ಱಿಕಾರಕ್ಕುರಾದೇಶಮಾಗಿ ಬರುವನೆಂದಾಯ್ತು । ಪೊಸತೆಂಬುದರ ತುಕಾರಕ್ಕೆ ಬಿಂದುವೆರಸು ಬಕಾರಾದೇಶಂ। ಪೊಸಂಬನೆಂದೂ ಪ್ರಯೋಗಂ। ವಿಚಾರಿಸದುಂತೆ ಪೊಸಂಬರೊತ್ತೆಯಂ ಕೊಳ್ವದು ತಕ್ಕುದಲ್ತು । ಬಹುಳ ಗ್ರಹಣದಿಂ ಪೊಸಬನೆಂದುಂಟು. ಪೊಸಬನಿದಾವನಾದವನೊ ಕಂಡಱಿದಂತೆ ವೊಲೆಂದು ಕಂಡೆನೀ।".[೧೬]

ಒಂದೇ ಸೂತ್ರಕ್ಕೆ ಬರೆದ ಈ ಅರ್ಥವೃತ್ತಿಗಳೂ ಎರಡು ಬಗೆಯಾಗಿವೆ. ಒಂದು: ಸಂಗ್ರಹ; ಇನ್ನೊಂದು: (ಪ್ರಯೋಗ)ಮಿಶ್ರಣ. ಇದರಿಂದ ಅರ್ಥವೃತ್ತಿಗಳು ಮೂರು ಭಿನ್ನಸ್ವರೂಪಗಳಲ್ಲಿ ದೊರೆಯುವವೆಂದಾಯಿತು. ಅವು: ೧. ಸಂಗ್ರಹ ವೃತ್ತಿ, ೨. ವಿಸ್ತೃತ ವೃತ್ತಿ, ೩. ಮಿಶ್ರಣವೃತ್ತಿ. ಸಣ್ಣ ಪುಟ್ಟ ಪಾಠವ್ಯತ್ಯಾಸಗಳು ಕಂಡುಬರುತ್ತಿದ್ದರೂ ಸ್ಥೂಲವಾಗಿ ಈ ಮೂರು ಸ್ವರೂಪಗಳನ್ನೇ ಇಟ್ಟುಕೊಳ್ಳಬಹುದು.

ಈ ಮೂರರಲ್ಲಿ ಕೇಶಿರಾಜನಿಗೆ ಸಂಬಂಧಿಸಿದುದು ಯಾವುದು? ಕಿಟೆಲ್ ಅವರು ಮಾತ್ರ "Another sign of its originality and probably antiqutiy is that, least often the different rules of gloss, unlike those of the glosses of other manuscripts (except M and MB) are not compressed into one sentence but given separately as headings to the instances"[17] ಎಂದು ಬರೆಯುತ್ತ ಮಿಶ್ರಣವೃತ್ತಿಯೇ ಪ್ರಾಚೀನತಮವೆಂದೂ, ಮೂಲವೆಂದೂ ಅಭಿಪ್ರಾಯ ಪಟ್ಟಿರುವರು. ಒಂದು ವೇಳೆ ಒಂದು ಪ್ರತಿಯಲ್ಲಿ ಕೇವಲ ಸಂಗ್ರಹ,

---

೧೫. ಶಮದ (೧೯೬೮) ಸೂ. ೧೬೪
೧೬. ಶಮದ (೧೯೬೮) ಪ್ರಸ್ತಾವನೆ p.xvii
೧೭. ಶಮದ (೧೮೭೨) Preface p. iii

ಮತ್ತೊಂದು ಪ್ರತಿಯಲ್ಲಿ ಕೇವಲ ವಿಸ್ತೃತ, ಬೇರೊಂದು ಪ್ರತಿಯಲ್ಲಿ ಕೇವಲ ಮಿಶ್ರಣವೃತ್ತಿಗಳು ಕಂಡು ಬರುತ್ತಿದ್ದರೆ ಮಾತ್ರ ಮೂವರು ಭಿನ್ನವ್ಯಕ್ತಿಗಳಿಂದ ಮೂರು ಭಿನ್ನವೃತ್ತಿಗಳು ಹುಟ್ಟಿ ಬೆಳೆದುಬಂದಿವೆಯೆಂದೂ, ಇವುಗಳಲ್ಲಿ ಒಂದು ಪರಂಪರೆ ಮಾತ್ರ ಕೇಶಿರಾಜನದೆಂದೂ ಹೇಳಬಹುದಿತ್ತು. ನಿಜಸ್ಥಿತಿ ಹಾಗಿರದೆ ಕೇಶಿರಾಜನೋ ಮುಂದಣ ಅಭ್ಯಾಸಿಗಳೋ ಕಾರಣವಾಗಿ ಒಂದೇ ಪ್ರತಿಯಲ್ಲಿ ಈ ಮೂರೂ ಸ್ವರೂಪದ ವೃತ್ತಿಗಳು ತೋರಿಬರುವುದರಿಂದ ಕಿಟೆಲ್‌ರ ಅಭಿಪ್ರಾಯವನ್ನು ಒಪ್ಪುವುದು ಕಷ್ಟವಾಗುತ್ತದೆ.

ಯಾವುದೇ ಹಸ್ತಪ್ರತಿಯನ್ನು ತೆಗೆದುಕೊಂಡರೂ ಅಲ್ಲಿಯ ಬಹಳಷ್ಟು ಸೂತ್ರ ಗಳಿಗೆ ಸಂಗ್ರಹವೃತ್ತಿಗಳು ಕಂಡುಬರುವುದರಿಂದ, ಇಂಥ ಪ್ರತಿಗಳೇ ಬಹುಸಂಖ್ಯೆಯಲ್ಲಿ ಲಭಿಸುವುದರಿಂದ ಕೇಶಿರಾಜನ ವೃತ್ತಿಸ್ವರೂಪ ಸಾಮಾನ್ಯವಾಗಿ 'ಸಂಗ್ರಹ'ವೆನ್ನ ಬೇಕಾಗುತ್ತದೆ. ಅದಕ್ಕಾಗಿ ಯಾವುದೇ ಒಂದು ಸೂತ್ರಕ್ಕೆ ಸಂಗ್ರಹ, ವಿಸ್ತೃತ ಮತ್ತು ಮಿಶ್ರಣ ಈ ಮೂರು ಬಗೆಯ ವೃತ್ತಿಗಳು ಸಿಕ್ಕರೆ, ಸಂಗ್ರಹವೃತ್ತಿಯೇ ಕೇಶಿರಾಜ ನದೆಂದು ಇಟ್ಟುಕೊಳ್ಳಬಹುದು. ಒಂದುವೇಳೆ ಕೆಲವು ಸೂತ್ರಗಳಿಗೆ ಸಂಗ್ರಹವೃತ್ತಿ ಸಿಗದೆ, ಕೇವಲ ವಿಸ್ತೃತ ಇಲ್ಲವೆ ಮಿಶ್ರಣವೃತ್ತಿಯೇ ಎಲ್ಲ ಹಸ್ತಪ್ರತಿಗಳಲ್ಲಿ ಲಭಿಸಿದರೆ ಅನಿವಾರ್ಯವಾಗಿ ಅವುಗಳನ್ನೇ ಕೇಶಿರಾಜನ ವೃತ್ತಿಗಳೆಂದು ಸ್ವೀಕರಿಸಬೇಕು.

ಕೆಲವುಸಲ "ಇದರ್ಕಿದುವೆ ವೃತ್ತಿ" (ಸೂ. ೧೮೨) ಎಂಬಂತಹ ಹೇಳಿಕೆಗಳಿವೆ. "ಬಗೆಯದೆ ಸತೃಣಾಭ್ಯವಹಾರಿ..."[೧೮] ಮೊದಲಾದ ಸೂತ್ರಗಳಿಗೆ ಕಿಟೆಲ್ ಆವೃತ್ತಿಯಲ್ಲಿ ವೃತ್ತಿಯಿಲ್ಲ. ಇವುಗಳಿಗೆ ಡಾ. ಡಿ.ಎಲ್.ಎನ್. ಆವೃತ್ತಿಯಲ್ಲಿ ಒಂದು ಬಗೆಯ, ಅವರು ಬಳಸಿದ 'ಖ' ಪ್ರತಿಯಲ್ಲಿ ಬೇರೊಂದು ಬಗೆಯ ವೃತ್ತಿಗಳಿವೆ. 'ಕವಿಮಾರ್ಗಗತ...' ಸೂತ್ರ (೨೦೭)ಕ್ಕೆ 'ಖ' ಪ್ರತಿಯಲ್ಲಿ ಮಾತ್ರ ವೃತ್ತಿಯಿದೆ. ಹೀಗೆ ಕೇಶಿರಾಜನ ಅರ್ಥವೃತ್ತಿಗಳ ವಿಷಯ ತೊಡಕು ತೊಡಕಾಗಿದೆ.

೨. **ಲಿಂಗಣಾರಾಧ್ಯನ ಅನ್ವಯವೃತ್ತಿ :** "ಸಂಸ್ಕೃತ ಕರ್ಣಾಟಕ ಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯರತ್ನಮಾಲೆಯೆನಿಪ್ಪ ಶಬ್ದಮಣಿದರ್ಪಣ (ವೃತ್ತಿಯೊಳ್) ನಾಮಾಧ್ಯಾಯಂ ಸಮಾಪ್ತಂ"[೧೯] ಎಂಬ ಪ್ರಕರಣಾಂತ್ಯ ಗದ್ಯದಲ್ಲಿ (ಸೂತ್ರ+ಅನ್ವಯ+ರತ್ನಮಾಲೆ) ತನ್ನದು 'ಅನ್ವಯವೃತ್ತಿ' ಎಂದು ಸೂಚಿಸಿದ್ದಾನೆ, ಲಿಂಗಣಾರಾಧ್ಯ.

ಕೇಶಿರಾಜನು ಅರ್ಥವೃತ್ತಿಯನ್ನು ಬರೆಯುವಲ್ಲಿ ಸೂತ್ರಕ್ಕೆ ಅರ್ಥವಿವರಣೆ ನೀಡಿದರೆ, ಲಿಂಗಣಾರಾಧ್ಯನು ಅನ್ವಯವೃತ್ತಿಯನ್ನು ಬರೆಯುವಲ್ಲಿ ಸೂತ್ರಕ್ಕೆ ಅನ್ವಯ ಸ್ವರೂಪ ಕೊಟ್ಟುಬಿಡುತ್ತಾನೆ. ಹೀಗೆ ಸೂತ್ರವನ್ನು ಮುರಿದು, ಅನ್ವಯ ಕ್ರಮದಲ್ಲಿ ಹೊಂದಿಸಿದ ವೃತ್ತಿಯೇ ಅನ್ವಯವೃತ್ತಿ. ಇದಕ್ಕೆ ಒಂದು ಉದಾಹರಣೆ :

---

೧೮. ಶಮದ (೧೯೬೮) ಸೂ. ೭೦
೧೯. ಶಮದ (ಮದ್ರಾಸ, ೧೯೨೯) ನಾಮಪ್ರಕರಣಾಂತ್ಯ ಗದ್ಯ.

ಎರಡುಂ ರೇಫೆಗಳಂ ತಂ ।
ದುರವಣೆಯಿಂ ಕೂಡಿದಂತೆವೊಲ್ ಶ್ರುತಿಕಷ್ಟಂ ।
ಬರೆ ಸಂಧಿ ಮಾಡಲಾಗದು ।
ಕರಡೆಯ ಗಿರುಗಟೆಯ ಧ್ವನಿಯವೊಲಮರವವೆಂದುಂ ॥[20]

ವೃತ್ತಿ: "ಉರವಣೆಯಿಂ ಎರಡುಂ ರೇಫೆಗಳಂ ಕೂಡಿದಂತೆವೋಲ್ ಶ್ರುತಿ ಕಷ್ಟಂ ಬರೆ ಸಂಧಿ ಮಾಡಲಾಗದು. ಅವು ಕರಡೆಯ ಗಿರುಗಟೆಯ ದನಿಯವೋಲ್ ಎಂದುಂ ಅಮರವು" (ಇದೇ ಸೂತ್ರಕ್ಕೆ ಬರೆದ ಅರ್ಥವೃತ್ತಿಯೊಂದಿಗೆ ಈ ಅನ್ವಯ ವೃತ್ತಿಯನ್ನು ತುಲನಿಸಿರಿ). ಇಲ್ಲಿ ಸೂತ್ರದ ಅನ್ವಯವೇ ವೃತ್ತಿಯಾಗಿ ನಿಂತಿದೆ. ಲಿಂಗಣಾರಾಧ್ಯನಲ್ಲಿ ಇಂಥ ವೃತ್ತಿಗಳು ನೂರಕ್ಕೆ ಎಂಬತ್ತೈದರಷ್ಟಿವೆ. ವೃತ್ತಿ ಬರವಣಿಗೆಯಲ್ಲಿ ಆತನು ಇಟ್ಟುಕೊಂಡ ಉದ್ದೇಶವೇ ಇದಕ್ಕೆ ಕಾರಣ.

ಸೂತ್ರಗಳಿಗೆ ಅನ್ವಯರೂಪ ಕೊಡುವುದರಿಂದ ಲಿಂಗಣಾರಾಧ್ಯನವು ಸ್ವರೂಪ ದೃಷ್ಟಿಯಿಂದ ಸಾಮಾನ್ಯವಾಗಿ 'ಸಂಗ್ರಹವೃತ್ತಿ'ಗಳೇ ಆಗಿವೆ. ಹೀಗಿದ್ದರೂ 'ಮಿಶ್ರಣವೃತ್ತಿ'ಗಳು ಅಲ್ಲಿ ಕಾಣಸಿಗುತ್ತವೆ. ಉದಾ :

ಪುದಿಗುಂ ನಿರ್ಧಾರಣದ ।
ಲ್ಲದೆಯೆಂಬ ದೆಕಾರದೆಡೆಗೆ ಪಿರಿದುಂ ಲೋಪಂ ।
ಪುದಿಯದು ಲೋಪಂ ಪ್ರತಿಷೇ।
ಧದೊಳಲ್ಲದುವೆಂಬ ಪದನನಲ್ತೆನಲಕ್ಕುಂ ॥[21]

ವೃತ್ತಿ: ನಿರ್ಧಾರಣಮಂ ಪೇಳ್ವ ಅಲ್ಲದೆ ಎಂಬ ದೆಕಾರದೆಡೆಗೆ ಲೋಪಂ ಪಿರಿದುಂ ಪುದಿಗುಂ.

ಪ್ರಯೋಗಂ: ದೇವರನಲ್ಲದೆ ಪೊಗಟೆಂ ಎಂಬಲ್ಲಿ ದೇವರನಲ್ಲ ಪೊಗಟೆಂ ಎಂದು ಪ್ರಯೋಗಮುಂಟು.

ವೃತ್ತಿ: ಅಲ್ಲದುವೆಂಬ ಪ್ರತಿಷೇಧದ ದಕಾರಕ್ಕೆ ಲೋಪಮಿಲ್ಲಾಗಿ ಅಲ್ಲೆನಲಾಗದು. ಅಲ್ಲದೆಂಬುದನಲ್ತೆಂದು ವಿಕಲ್ಪದಿನೆನಲಕ್ಕುಂ. ಅದರ್ಕೆ ಲಿಂಗವಚನದಿಂ ವಿಶೇಷ ಭಾವಮಿಲ್ಲ.

(ಅದ)ರ್ಕೆ ಲಕ್ಷ್ಯಂ: ಅವನಲ್ತು, ಅವಳಲ್ತು, ಅದಲ್ತು.

ಅವರ್ಕೆ ಪ್ರಯೋಗಂ: ೧. ಓರ್ವನೆ ಗಂಡನಲ್ತೆ ಜಗತೀತಳದೊಳ್ ।

೨. ಇರ್ಬರೆ ತೋಳ್ಗಳಲ್ತೆ ನೃಪತಿಗೆ ರಣದೊಳ್

೩. ಕಂ ॥ ...... ತೇಜೋಧಿಕ ಕವಿ ।

(ನಿ)ಳಯದೊಳೀಷತ್ಪ್ರಭರ್ ಮಹಾಪ್ರಭರಲ್ತೇ ॥

---

೨೦. ಶಮದ ಮದ್ರಾಸ (೧೯೭೩) ಸೂ. ೬೫
೨೧. ಶಮದ ಮದ್ರಾಸ (೧೯೭೩) ಸೂ. ೫೦

ಒಂದಕ್ಕಿಂತ ಹೆಚ್ಚು ವ್ಯಾಕರಣ ವಿಚಾರಗಳನ್ನೊಳಗೊಂಡ ಈ ವೃತ್ತಿ, ಇಲ್ಲಿ ಪ್ರಯೋಗದೊಂದಿಗೆ ಮಿಶ್ರಣವಾಗುತ್ತ ಹೋಗಿದೆ. (ಕಿಟೆಲ್ ಆವೃತ್ತಿಯಲ್ಲಿ ಇದು ಪ್ರಯೋಗದೊಂದಿಗೆ ಮಿಶ್ರಣಗೊಳ್ಳದೆ ತನ್ನ ಸ್ಥಾನದಲ್ಲಿ ಸ್ವತಂತ್ರವಾಗಿ ನಿಂತು ಕೊಂಡಿದೆ). ಲಿಂಗಣಾರಾಧ್ಯನಲ್ಲಿ ದೊರೆಯುವ ಇಂಥ ಮಿಶ್ರಣವೃತ್ತಿಗಳಿಗಾಗಿ ಸೂತ್ರ ೧೪, ೧೬, ೧೦೮, ೨೦೬, ೨೦೮, ೨೬೮ ಮತ್ತು ೨೮೯ ಇತ್ಯಾದಿ ನೋಡಬಹುದು.

ಹೀಗೆ ಸಂಗ್ರಹ ಮತ್ತು ಮಿಶ್ರಣರೂಪಗಳಲ್ಲಿ ತೋರಿಬರುವ ಅನ್ವಯವೃತ್ತಿ, ವಿಸ್ತೃತರೂಪದಲ್ಲಿ ಕಂಡುಬರುವುದಿಲ್ಲ. ಆದರೆ ಆಗಾಗ "ಅವಂ ವಿನುತಕ್ರಿಯಾತ್ಮ ಕಂಗಳೆನಿಸುವ ಸಂಸ್ಕೃತದ ಭಾವವಚನಂಗಳಂ ಆಯ್ದು ಅನಿತರ್ಕಂ ಇಸು ಪ್ರತ್ಯಯ ಮನೆ ಪತ್ತಿಸಿ ನಿಜೆಸೆ ಅಲ್ಲಿ ಕೃಲ್ಲಿಂಗಂ ಬರ್ಕುಂ" ಎಂದು ಕೇವಲ ಅನ್ವಯವೃತ್ತಿಯನ್ನು ಬರೆದು, ಪ್ರಯೋಗ ಕೊಟ್ಟು, ತರುವಾಯ "ಸಂಸ್ಕೃತ ಭಾವಕ್ಕೆ

ಶ್ಲೋಕ :

ಸನ್ಮಾತ್ರಂ ಭಾವಲಿಂಗಂ ಸ್ಯಾದಸ್ಪೃಷ್ಟಂ ಯಚ್ಚಕಾರಕೈ಼ ಃ ।
ಧಾತ್ವರ್ಥಃ ಕೇವಲಶ್ಶುದ್ಧೋಭಾವ ಇತ್ಯಭಿಧೀಯತೇ ॥

ವೃತ್ತಿ: ಯತ್ = ಆವುದು; ಕಾರಕೈಃ = ಷಟ್ಕಾರಕಂಗಳಿಂದ; ಅಸ್ಪೃಷ್ಟಂ = ಮುಟ್ಟಲ್ಪಡವುದು, ಸನ್ಮಾತ್ರಂ ಚ = ಉಂಟೆಂಬನಿತುಳ್ಳುದು. (ಅಪ್ಪುದೋ ಅದು), ಭಾವಲಿಂಗಂ ಸ್ಯಾತ = ಭಾವಲಿಂಗಮಪ್ಪುದು, ಶುದ್ಧ ಃ = ಶಾದ (ಶುದ್ಧ)ವಾದುದು?; ಕೇವಲಃ ಧಾತ್ವರ್ಥಂ = ಏನುಂ ಹೊದ್ದದ ಧಾತ್ವರ್ಥಂ, ಭಾವಃ [ಇತ್ಯಭಿಧೀಯತೇ ಭಾವ ಎಂದು ಹೇಳಲ್ಪಡುತ್ತದೆ]"[೨೨] ಎಂಬ ವ್ಯಾಖ್ಯಾನ ಜೋಡಿಸಲ್ಪಡುತ್ತದೆ. ಲಿಂಗಣಾರಾಧ್ಯನಲ್ಲಿ ಹತ್ತೆಂಟು ಸಂಖ್ಯೆಯಲ್ಲಿ ಮಾತ್ರ ಸಿಗುವ ಇಂಥ ವೃತ್ತಿಗಳಿಗಾಗಿ ಸೂತ್ರ ೧೮, ೩೩, ೮೪, ೧೮೫ ಮತ್ತು ೨೨೮ ವೃತ್ತಿಗಳನ್ನು ನೋಡಬಹುದು.

ಹೀಗೆ ಲಿಂಗಣಾರಾಧ್ಯನ ಅನ್ವಯವೃತ್ತಿಯು ಸ್ವರೂಪದೃಷ್ಟಿಯಿಂದ ಮೂರು ಬಗೆಯಾಗಿವೆ.

ಅವು : ೧. ಸಂಗ್ರಹವೃತ್ತಿ
೨. ಮಿಶ್ರಣವೃತ್ತಿ
೩. ವಾಖ್ಯಾನವೃತ್ತಿ

ತಾನು ಬರೆಯುತ್ತಿರುವ ಅನ್ವಯವೃತ್ತಿಯು, ಅರ್ಥಸ್ಪಷ್ಟತೆಗೆ ಅಸಮರ್ಪಕವೆನಿಸಿದರೆ ಲಿಂಗಣಾರಾಧ್ಯನು ಅರ್ಥವೃತ್ತಿಯನ್ನು ಬಳಸುತ್ತಾನೆ. ಇಂಥ ಅರ್ಥವೃತ್ತಿಗಳು ಆತನಲ್ಲಿ ಎರಡು ಬಗೆಯಾಗಿವೆ. ಒಂದು: ಸ್ವರಚಿತ, ಇನ್ನೊಂದು: ಕೇಶಿರಾಜನಿಂದ ಸ್ವೀಕೃತ.

---

೨೨. ಶಮದ ಮದ್ರಾಸ (೧೯೭೩) ಸೂ. ೭೭

ಸ್ವರಚಿತ ಅರ್ಥವೃತ್ತಿ: "ದೇಶೀಯಮುಮಯ್ದು ನೀಂ ತಿಳಿ. ಱ, ೞ, (ಕು)ಳ, ಎ, ಒ ಇವು ದೇಶಿಯಂಗಳ್. ಇವಂ ಕೂಡಿದೊಡೆ ೫೭ ಅಕ್ಕರಂಗಳ್. ಋ, ೠ ವರ್ಣ, ಶ, ಷ, ವಿಸರ್ಗ, ೱ, ೲ, ಕ್ಷಳನಂ ನೀಂ ಕಳೆ. ಅಚ್ಚಗನ್ನಡಕ್ಕೆ ಯೀ ಕ್ರಮದಿಂ ಶುದ್ಧಗೆ ನಾಲ್ವತ್ತೇೞಾಯಿತ್ತೆಂದಳೆ."[೨೩]

"ಕನ್ನಡದೊಳ್ ದೇಶೀಯಮೈದು ತೆಱಂ. ಪಿಂತಣೈವತ್ತೆರಡಕ್ಕರಂಗಳ್ ಕೂಡೆ ಐವತ್ತೇೞಕ್ಕರಂಗಳ್. ಅವಱೊಳಗೆ ಋ, ೠ, ಌ ೡ, ಶ, ಷ ವಿಸರ್ಗ, ೱ, ೲ, ಕ್ಷಳಂಗಳೆಂಬ ಪತ್ತಂ ಕಳೆಯಲ್ ಅಚ್ಚಗನ್ನಡೞಿದೊಕ್ಕರಂ ಶುದ್ಧಗೆ ನಾಲ್ವತ್ತೇೞು ವಿಧಂ. ನಿಸರ್ಗಮಾಗಿ ವಿಸರ್ಗಮಿಲ್ಲ"[೨೪] ಇದು ಕೇಶಿರಾಜ ವಿರಚಿತ ಅರ್ಥವೃತ್ತಿ.

ಕೇಶಿರಾಜ ಬರೆದ ಅರ್ಥವೃತ್ತಿಯಿಂದ ಭಿನ್ನವಾಗಿರುವ ಲಿಂಗಣಾರಾಧ್ಯನ ಇಂಥ ಅರ್ಥವೃತ್ತಿಗಳಿಗೆ ಸೂತ್ರ ೩೮, ೫೧ ನೋಡಬಹುದು.

ಕೇಶಿರಾಜನಿಂದ ಸ್ವೀಕೃತ ಅರ್ಥವೃತ್ತಿ : ಅನ್ವಯವೃತ್ತಿ ಬರೆಯುವ ಉದ್ದೇಶದಿಂದ ಹೊರಟ ಲಿಂಗಣಾರಾಧ್ಯನು ಮೇಲೆ ಹೇಳಿದಂತೆ ಕೆಲವು ಸಲ ಅರ್ಥವೃತ್ತಿಗಳನ್ನು ತಾನೇ ನಿರ್ಮಿಸುವನಲ್ಲದೆ, ಕೆಲವುಸಲ ನೇರವಾಗಿ ಕೇಶಿರಾಜನಿಂದಲೇ ಸ್ವೀಕರಿಸುತ್ತಾನೆ. ಉದಾ :

"ಕುಳಪ್ರಾಸಮಾಗಿ ಪೇೞ್ದ ಕಬ್ಬಂ ಕ್ಷಳನಂ ಸೆಱೆಗೆಯ್ವುದಾಗಿ ಲಕಾರಮಂ ವಿಕಲ್ಪಂ ಮಾಡಬಾರದು. ಲಕಾರಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿಂದಿರಿ ಸಲ್ಬಾರ(ದು)ದಾಗಿಯದು(ವು)ಮಾಗದು. ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಂ ಪೇೞಲ್ಬಾರ(ದು)ದಾಗಿ ಕ್ಷಳನನಿದಱೊಳೆ ಬೆರಸಿ ಪೇೞ್ವೆಂ."[೨೫] ಲಿಂಗಣಾರಾಧ್ಯನಲ್ಲಿ ಕಾಣುವ ಈ ಅರ್ಥವೃತ್ತಿ, ಕೊಂಚ ಪಾಠಾಂತರಗಳಿಂದ ಕೂಡಿದ್ದರೂ ಕೇಶಿರಾಜನದೇ ಆಗಿದೆ. "ಪಿರಿಯರ್ ಸಲಿಪರ್..." ಮುಂತಾದ ಸೂತ್ರ (೪೩)ಗಳ ಅರ್ಥವೃತ್ತಿಗಳು ಈ ವರ್ಗಕ್ಕೆ ಸೇರುತ್ತವೆ. ಇದರಿಂದ ಕೇಶಿರಾಜನ ಅರ್ಥವೃತ್ತಿಯುಕ್ತ ಶಬ್ದಮಣಿದರ್ಪಣವು ಲಿಂಗಣಾರಾಧ್ಯನ ಕೈಯ್ಯಲ್ಲಿದ್ದುದು ಸ್ಪಷ್ಟವಾಗುತ್ತದೆ. ಲಿಂಗಣಾರಾಧ್ಯನಲ್ಲಿ ಈ ಅರ್ಥವೃತ್ತಿ (ಸ್ವರಚಿತ ಮತ್ತು ಕೇಶಿರಾಜನಿಂದ ಸ್ವೀಕೃತ)ಗಳು ಕೆಲವೇ ಇರುವ ಕಾರಣ, ಅವುಗಳ ಸ್ವರೂಪವಿವೇಚನೆಯನ್ನು ಬಿಟ್ಟುಕೊಟ್ಟು, ಆತನ ವೃತ್ತಿಗಳನ್ನು ಗುಣ ಮತ್ತು ಸ್ವರೂಪ ದೃಷ್ಟಿಯಿಂದ ಹೀಗೆ ರೇಖಿಸಬಹುದು.

ಲಿಂಗಣಾರಾಧ್ಯನ ವೃತ್ತಿಗಳು

- **ಅನ್ವಯವೃತ್ತಿ**
  - **ಸಂಗ್ರಹವೃತ್ತಿ**
  - **ಮಿಶ್ರಣವೃತ್ತಿ**
  - **ವ್ಯಾಖ್ಯಾನವೃತ್ತಿ**
- **ಅರ್ಥವೃತ್ತಿ**
  - **ಸ್ವರಚಿತವೃತ್ತಿ**
  - **ಕೇಶಿರಾಜನಿಂದ ಸ್ವೀಕೃತವೃತ್ತಿ**

೨೩. ಶಮದ (ಮದ್ರಾಸ ೧೯೭೩) ಸೂ. ೩೬
೨೪. ಶಮದ (೧೯೨೦) ಸೂ. ೪೩
೨೫. ಶಮದ (ಮದ್ರಾಸ ೧೯೭೩) ಸೂ. ೮

ಇಲ್ಲಿ ಕೇಶಿರಾಜನಿಂದ ಸ್ವೀಕರಿಸಿದ ಅರ್ಥವೃತ್ತಿಗಳನ್ನು ಬಿಟ್ಟರೆ, ಮಿಕ್ಕ ಸ್ವರಚಿತ ಅರ್ಥವೃತ್ತಿ ಮತ್ತು ಅನ್ವಯವೃತ್ತಿಗಳಲ್ಲಿ ಲಿಂಗಣಾರಾಧ್ಯನ ಸ್ವಂತಿಕೆ ಕಂಡುಬರುತ್ತದೆ.

೩. ಹೈದ್ರಾಬಾದ ದರ್ಪಣದ ವ್ಯಾಖ್ಯಾನವೃತ್ತಿ: ಲಿಂಗಣಾರಾಧ್ಯನಂತೆ ದರ್ಪಣದ ಮೂಲವೃತ್ತಿಯಿಂದ ಭಿನ್ನವಾದ ಬೇರೊಂದು ವೃತ್ತಿಯನ್ನು ಬರೆದಿದ್ದಾನೆ, ಹೈದ್ರಾಬಾದದ ಪ್ರತಿಕಾರ. ಈತನವು ಗುಣದಲ್ಲಿ ಅರ್ಥವೃತ್ತಿ ಮತ್ತು ವ್ಯಾಖ್ಯಾನ ವೃತ್ತಿಗಳಾಗಿದ್ದು ಸ್ವರೂಪದಲ್ಲಿ ಸಂಗ್ರಹ, ವಿಸ್ತೃತ ಮತ್ತು ಮಿಶ್ರಣ ವೃತ್ತಿಗಳಾಗಿವೆ. ಇವುಗಳಲ್ಲಿ ಮಿಶ್ರಣವೃತ್ತಿಯನ್ನು ಕುರಿತು "ಇಂಥ ಸಂದರ್ಭಗಳಲ್ಲಿ ಮಾತ್ರವೇ ಲಿಂಗಣಾರಾಧ್ಯನ ಪ್ರತಿಗೂ ಹೊಸ ಪ್ರತಿಗೂ ಹೋಲಿಕೆ ಇದೆ"[೨೬] ಎಂದು ಪ್ರೊ. ಡಿ.ಕೆ. ಭೀಮಸೇನರಾಯರು ಹೇಳುತ್ತಾರೆ.

ಹಳಗನ್ನಡ ಭಾಷೆಯನ್ನು ಸೂತ್ರಗಳ ಮೂಲಕ, ಸೂತ್ರಗಳನ್ನು ವೃತ್ತಿಯ ಮೂಲಕ ಅರ್ಥಮಾಡಿಕೊಡಲು ಕೇಶಿರಾಜ ಹೊರಟರೆ, ಇವೆರಡನ್ನೂ ವ್ಯಾಖ್ಯಾನದ ಮೂಲಕ ಸ್ಪಷ್ಟಪಡಿಸಲು ಹೈದ್ರಾಬಾದ ದರ್ಪಣಕಾರ ಪ್ರಯತ್ನಿಸಿರುವನು. ಇದು ದರ್ಪಣಾಭ್ಯಾಸದಲ್ಲಿ ಇವನು ಇಟ್ಟುಕೊಂಡ ಮೂಲ ಉದ್ದೇಶ. ಈ ಉದ್ದೇಶವನ್ನು ಈಡೇರಿಸುವಲ್ಲಿ ಈತನು ಕೆಲವುಸಲ ಕೇಶಿರಾಜನಿಗಿಂತ ಸೂಕ್ಷ್ಮಕ್ಕಿಳಿಯುತ್ತಾನೆ. ಉದಾ: "ರೇಫಂ ರೇಫೆಯೊಡನೆ, ಱಕಾರಂ (ಶಕಟರೇಫೆ) ಱಕಾರದೊಡನೆ, ಡಕಾರಂ ಡಕಾರದೊಡನೆ, ೞಟಂ ೞಟದೊಡನೆ, ಕುಳಂ ಕುಳದೊಡನೆ, ಕ್ಷಳಂ ಕ್ಷಳದೊಡನೆ, ೞಟಸಂದೇಹಂ ೞಟಸಂದೇಹದೊಡನೆ, ಲಕಾರಂ ಲಕಾರದೊಡನೆ ಪ್ರಾಸಂ"[೨೭] ಎಂಬಲ್ಲಿ ಈತನ ನಿಷ್ಠುರಮತಿ ಗೊತ್ತಾಗುತ್ತದೆ.

"ಮಿಳಿರ್ ಉಡನೇ ಎಂಬ ಧಾತು ಕುಳಂ, ಮಿಳಿರ್ದೆಳವಳ್ಳಿವಾಲವಲರ್ದೊಂಗ ಲೆಂಬಲ್ಲಿಯುಂ ಕೆಳರ್ದ್ದು ಮಿಳಿರ್ದ್ದು ತಳರ್ದ್ದತ್ತಾಗಳೆಂಬಲ್ಲಿಯುಂ ಕುಳಪ್ರಯೋಗಂ. ಘಳಿಲನೆ ನುಡಿಯೆಂದು ಸಾರಥಿಯನೆಂದು ೞಟಪ್ರಯೋಗಂ. ಕೂಜಿತಾವಳಿ ಎಂಬಲ್ಲಿ ಕ್ಷಳಂ, ಕಣ್ಗೊಳ್ ದರ್ಶನೀಯೇ ಎಂಬ ಧಾತು ಕುಳಮಿಂತು ಬೆರಸಿ ಪೇೞ್ದುದಬದ್ಧಂ"[೨೮] ಎಂದು, 'ತಪ್ಪಾದುದರ್ಕ್ಕೆ ಕಮಳಭವನ ಶಾಂತಿಪುರಾಣದ ಪ್ರಯೋಗಂ'[೨೯] ಎಂದು ಹೇಳುವಲ್ಲಿ ಈತನ ಸಾಧಾರವಾಣಿ ಎದ್ದು ಕೇಳುತ್ತದೆ. ಆದರೆ ಈ ವಿವರಣೆಯನ್ನು ಬರೆಯುವಲ್ಲಿ ಕೆಲವು ದೋಷಗಳೂ ಹತ್ತಿಕೊಂಡು ಬಂದಿವೆ. ಉದಾ: "ಪ್ರಾಸಮಲ್ಲದಲ್ಲಿಯುಂ ಸಕ್ಕದದ ಲಕಾರಕ್ಕೆ ಕ್ಷಳನನಲ್ಲದೆ ವಿಕಲ್ಪಮಾಗಿ ಲಕಾರಂ ಪೇೞ ಸಲ್ಲ"[೩೦] "ದೇಶೀಯದಾ ಕುಳನುಂ ಕ್ಷಳನುಮೇಕಸ್ಥಾನೀಯಗಳಾದ ಕಾರಣಂ ಕ್ಷಳಮನದಱೊಳ್ ಬೆರಸಿ ಪೇೞ್ದಿಂ"[೩೧] ಎಂಬಿವು ಸೂತ್ರಾಭಿಪ್ರಾಯಕ್ಕೆ ವಿರುದ್ಧವಾಗಿವೆ. ಅನ್ಯಥಾಜ್ಞಾನದಿಂದ ಇಂಥ ದೋಷಗಳು ತಲೆಯೆತ್ತಿದ್ದರೂ ಮೂಲ ವೃತ್ತಿಯನ್ನು ವಾಖ್ಯಾನರೂಪಕ್ಕೆ ಇಳಿಸಲು ಮಾಡಿದ ಸಾಹಸ ಮೆಚ್ಚುವಂತಹುದು. ಇದಕ್ಕೆ ಬಣ್ಣವಿಡುವಂತೆ ತಾನು ಬಳಸಿದ ಕವಿರಾಜಮಾರ್ಗದ ಎಲ್ಲ

---

೨೬. ಶಮದ ಪಾಠಾಂತರ (೧೯೫೧) ಪು. ೫೯
೨೭. ಶಮದ ಪಾಠಾಂತರ (೧೯೫೧) ಪು. ೪೦
೨೮. ಶಮದ ಪಾಠಾಂತರ (೧೯೫೧) ಪು. ೪೭
೨೯. ಶಮದ ಪಾಠಾಂತರ (೧೯೫೧) ಪು. ೪೭
೩೦. ಶಮದ ಪಾಠಾಂತರ (೧೯೫೧) ಪು. ೧೬
೩೧. ಶಮದ ಪಾಠಾಂತರ (೧೯೫೧) ಪು. ೧೬

ಸೂತ್ರಗಳಿಗೆ ಕಾವ್ಯಾವಲೋಕನದ ಒಂದೆರಡು ಸೂತ್ರಗಳಿಗೆ ವೃತ್ತಿ ಬರೆದಿರುವನು. ಆದರೆ ಸಂಜ್ಞಾ ಪ್ರಕರಣ ಮುಗಿದ ತರುವಾಯ ಈ ಸಾಹಸ ಕ್ರಮೇಣ ಕಡಿಮೆಯಾಗುತ್ತ ನಡೆದಿದೆ.

೪. ಕ. ಸಪ್ಪನ ವ್ಯಾಖ್ಯಾನವೃತ್ತಿ : ಕ.. ಸಪ್ಪನು, ವ್ಯಾಖ್ಯಾನವೃತ್ತಿ ಬರೆದುದಾಗಿ ಮದ್ರಾಸ ದರ್ಪಣದ ಸೂತ್ರ ೬೧೧ರ ವೃತ್ತಿಯಿಂದ ತಿಳಿಯುತ್ತದೆ. ಪ್ರೊ. ಡಿ.ಕೆ. ಭೀಮಸೇನರಾಯರ ಪ್ರಕಾರ ಹೈದ್ರಾಬಾದ ವ್ಯಾಖ್ಯಾನವೃತ್ತಿಗಿಂತ ಭಿನ್ನವಾಗಿರುವ[೨೨] ಈ ವ್ಯಾಖ್ಯಾನವೃತ್ತಿ ಇನ್ನೂ ಸಿಕ್ಕಿಲ್ಲ. ಕೇಶಿರಾಜಕೃತ ಮೂಲವೃತ್ತಿಯನ್ನು ಬಿಟ್ಟರೆ ದರ್ಪಣಕ್ಕೆ ಬರೆದ ಪ್ರಾಚೀನತಮ, ಅಂದರೆ ಲಿಂಗಣಾರಾಧ್ಯವೃತ್ತಿ, ಹೈದ್ರಾಬಾದ ಪ್ರತಿಯ ವೃತ್ತಿಗಳಿಗಿಂತ ಪೂರ್ವದ ವೃತ್ತಿಯಿದಾಗಿರಬಹುದು. ಹಸ್ತಪ್ರತಿ ಸಿಗುವ ವರೆಗೂ ಈ ವೃತ್ತಿಯ ಬಗೆಗೆ ಏನೂ ಹೇಳಲು ಸಾಧ್ಯವಿಲ್ಲ.

ಒಟ್ಟಿನಲ್ಲಿ ಕಂ.. ಸಪ್ಪನ ವ್ಯಾಖ್ಯಾನವೃತ್ತಿ ಇನ್ನೂ ಸಿಕ್ಕಿಲ್ಲ. ಲಿಂಗಣಾರಾಧ್ಯ ಮತ್ತು ಹೈದ್ರಾಬಾದ ದರ್ಪಣದ ವ್ಯಾಖ್ಯಾತೃಗಳ ಹಸ್ತಪ್ರತಿ ಸಿಕ್ಕುದು ಒಂದೊಂದೇ. ಕೇಶಿರಾಜಕೃತ ವೃತ್ತಿಯ ಹಸ್ತಪ್ರತಿಗಳು ಹೇರಳ ಸಂಖ್ಯೆಯಲ್ಲಿ ಸಿಗುತ್ತವೆ. ಈ ಹೇರಳ ಪ್ರತಿಗಳನ್ನು ಸಂಗ್ರಹಿಸಿ, ಒಂದು ದೊಡ್ಡ ಯೋಜನೆಯನ್ನು ಹಮ್ಮಿಕೊಂಡು, ವೃತ್ತಿಗಳ ನಿಜಪಾಠ ನಿರ್ಣಯದ ಮಹಾಕಾರ್ಯವೊಂದು ನಡೆಯಬೇಕಾಗಿದೆ.

ಪ್ರಯೋಗ :

ಶಬ್ದಮಣಿದರ್ಪಣದ ವೃತ್ತಿಯಷ್ಟೇ ತೊಡಕಿನದು, ಪ್ರಯೋಗ ವಿಭಾಗ. ಪೂರ್ಣ ಮತ್ತು ಅಪೂರ್ಣ ಪದ್ಯ(ಗದ್ಯ)ರೂಪದಲ್ಲಿ ಸಿಗುವ ಇವುಗಳ ಸಂಖ್ಯೆ ಶ್ರೀ ಡಿ.ಎಲ್.ಎನ್. ಆವೃತ್ತಿಯ ಪ್ರಕಾರ ಸುಮಾರು ೮೫೦. ತಾನು ನಿರೂಪಿಸಿರುವ ಲಕ್ಷಣಗಳ ಸಮರ್ಥನೆಗೆ ಉದಾಹರಣೆಗಳ ಒರೆಗಲ್ಲು ಅತ್ಯಾವಶ್ಯಕವೆಂಬ ಸ್ಪಷ್ಟ ಅಭಿಪ್ರಾಯ ಕೇಶಿರಾಜನದು. ಇದನ್ನು ಮನದಂದು ತನ್ನ ಹಿಂದಣ ಸುಪ್ರಸಿದ್ಧ ಹಳಗನ್ನಡ ಕೃತಿಗಳಿಂದ ಉತ್ತಮೋತ್ತಮ ಉದಾಹರಣೆಗಳನ್ನು ಆಯ್ದುಕೊಂಡಿರುವನು. ಆದರೆ ತರುವಾಯದ ಅಭ್ಯಾಸಿಯ ಅಭಿರುಚಿ, ಸ್ಥಳಪರಿಮಿತಿ, ಲೇಖನ ಸ್ಖಾಲಿತ್ಯ, ಮತೀಯ ಮನೋಭಾವ ಕಾರಣವಾಗಿ ಈ ಪ್ರಯೋಗಗಳು ಲೋಪ, ಆಗಮ, ಆದೇಶ, ಪಲ್ಲಟ, ಸಂಕ್ಷೇಪ, ವಿಸ್ತರಣರೂಪದ ಪಾಠವ್ಯತ್ಯಾಸಕ್ಕೆ ಗುರಿಯಾಗಿವೆ. ಅಭ್ಯಾಸಿಯು ತನ್ನ ಅಭಿರುಚಿಗೆ ತಕ್ಕಂತೆ ಅಪೂರ್ಣಪದ್ಯವನ್ನು ಪೂರ್ಣಗೊಳಿಸಿದನೋ ಸ್ಥಳ ಮಿತವ್ಯಯಕ್ಕೆ ತಲೆಬಾಗಿ ಪೂರ್ಣ ಪದ್ಯಗಳನ್ನು ಅಪೂರ್ಣಗೊಳಿಸಿದನೋ ಹೇಳುವುದು ಕಷ್ಟ. ಆದರೆ ಈ ಎರಡೂ ಕ್ರಿಯೆಗಳು ಹಸ್ತಪ್ರತಿಗಳಲ್ಲಿ ಕಂಡುಬರುತ್ತವೆ.

ಲೇಖನಸ್ಖಾಲಿತ್ಯ ಹಸ್ತಪ್ರತಿಗಳಲ್ಲಿ ಅನಿವಾರ್ಯವಾದುದು. ಅದರಲ್ಲಿಯೂ ಕೃತಿ ಹೆಚ್ಚು ಪ್ರಚುರವಿದ್ದರೆ ಈ ಸ್ಖಾಲಿತ್ಯಪ್ರಮಾಣ ವರ್ಧಿಸುತ್ತ ಬಂದಿರುತ್ತದೆ. ಇದರಿಂದಾಗಿಯೂ

---

೩೨. ಶಮದ ಪಾಠಾಂತರ (೧೯೫೧) ಪು. ೬೫

‘ನೋಟಕ್ಕೊಡೆಳ್ಳಂ ಕೊದಳಿವೆರಸು ತಿಂಬಂತೆ’ (ಡಿ. ಎಲ್. ಎನ್.)

‘ಬೇಳ್ಪರೆಳ್ಳಂ ಕೊದಳಿವೆರಸು ತಿಂದಂತೆ ಮುನ್ನಾಗದೇ’ (ಖ)

‘ಬೇಳ್ಪರೆಳ್ಳಂ ಕೊದಳಿವೆರಸು ತಿಂಬಂ ನಾಗದೇವಂ’ (ಕಿ. ಪ.)

ಎಂಬಂತಹ ನೂರಾರು ವ್ಯತ್ಯಸ್ತ ಪಾಠಾಂತರಗಳು ಸಿಗುತ್ತವೆ.[೩೩]

ಕೊನೆಯದಾಗಿ ಮತೀಯ ಮನೋಭಾವನೆ, ಪಾಠಾಂತರಗಳನ್ನುಂಟು ಮಾಡಿದುದಕ್ಕೆ ಹಲವು ಉದಾಹರಣೆಗಳು ಇಲ್ಲಿವೆ. ಗಿರಿಜಾಕಲ್ಯಾಣದ ‘ಮೂವರ್ರಾಯರನೆ ಮಾರುವಂತೆಸೆದಿರ್ಕುಂ’[೩೪] ಎಂಬ ಪ್ರಯೋಗ ಕೆಲವು ಪ್ರತಿಗಳಲ್ಲಿ (ಕ.ಖ) ಇಲ್ಲ. ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದುದೆಂದು ಹೇಳಲಾಗುವ ‘ಎಣ್ಣೆಯೊಳರನೇರಿಲ ತನಿವಣ್ಣಂ’[೩೫] ಎಂಬ ಪದ್ಯ ಈಗ ಪ್ರಕಟವಾದ ಗಿರಿಜಾಕಲ್ಯಾಣ ಆವೃತ್ತಿಗಳಲ್ಲಿಲ್ಲ. “ಗೊರವನಲ್ಲದೆ ಪೊಗಳೆಂ”[೩೬], “ಭಾವಿಸು ಸಾಲದೆ ಪೇಳೋನ್ನಮಃ ಶಿವಾ ಎಂಬ ಪದಂ” (ಹೈದ್ರಾಬಾದ, ಮದ್ರಾಸ ಆವೃತ್ತಿ)[೩೭] ಶಿವಪರ ಪ್ರಯೋಗಗಳಿಗೆ ಬದಲು “ದೇವರಲ್ಲದೆ ಪೊಗಳೆಂ” (ಕ), “ಸಾಲದೆ ಹೇಳೋಂ ನಮೋಜಿನಾಯೆಂಬ ಪದಂ” (ಕ) ಎಂಬ ಭಿನ್ನಪಾಠಗಳು ದೊರೆಯುತ್ತವೆ. ‘ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಂ ಸ್ಮರಂ ನಂದೆ ಪೊಯ್ವಂ’ ಎಂಬ ಶಿವನಿಂದೆಯ ಪ್ರಯೋಗ ವೀರಶೈವ ಲಿಂಗಣಾರಾಧ್ಯನ ಆವೃತ್ತಿಯಲ್ಲಿಲ್ಲ.[೩೮] ಹೀಗಾಗಿ ಮತೀಯ ಪ್ರಭಾವವೂ ದರ್ಪಣಪಾಠಾಂತರಕ್ಕೆ ಕಾರಣವಾದಂತಿದೆ. ಹೀಗೆ ಹಲವು ದೃಷ್ಟಿಗಳಿಂದ ದರ್ಪಣದ ಪ್ರಯೋಗಗಳು ಪಾಠಾಂತರಕ್ಕೆ ಒಳಗಾಗಿವೆ.

ಪಾಠದೃಷ್ಟಿಯಿಂದ ಲಿಂಗಣಾರಾಧ್ಯನ, ಹೈದ್ರಾಬಾದ ವೃತ್ತಿಕಾರನ ಮತ್ತು ಕಿಟೆಲ್ ವರ್ಗದ ಆವೃತ್ತಿಗಳ ಪ್ರಯೋಗಗಳು ಪರಸ್ಪರ ಗಣನೀಯ ವ್ಯತ್ಯಾಸಹೊಂದಿವೆ. ಇಷ್ಟೇ ಏಕೆ ಕಿಟೆಲ್ ವರ್ಗದ ಆವೃತ್ತಿಗಳ ಅಂದರೆ, ಕಿಟೆಲ್, ಪರಿಷತ್ ಮತ್ತು ಡಿ.ಎಲ್.ಎನ್. ಆವೃತ್ತಿಗಳ ಪ್ರಯೋಗಗಳಲ್ಲಿಯೇ ಕೆಲಮಟ್ಟಿನ ಪಾಠಭಿನ್ನತೆ ಎದ್ದುತೋರುತ್ತದೆ.

ಲಿಂಗಣಾರಾಧ್ಯನ ದರ್ಪಣ ಸಂಪಾದಕರು “ಕೇಶಿರಾಜನು ಕೊಟ್ಟಿರುವ ಉದಾಹರಣೆ ಗಳಲ್ಲಿ ಕೆಲವನ್ನು ಲಿಂಗಣಾರಾಧ್ಯನು ಮಾರ್ಪಡಿಸಿರುವನು; ಕೆಲವನ್ನು ಹೆಚ್ಚಾಗಿ ಕೊಟ್ಟಿರುವನು; ಕೆಲವನ್ನು ಬಿಟ್ಟಿರುವನು”[೩೯] ಎಂದು ಹೇಳಿದ್ದಾರೆ. ಈ ಮಾತಿಗೆ–

---

೩೩. ಶಮದ (೧೯೬೮) ಸೂ. ೭೯

೩೪. ಶಮದ (೧೯೬೮) ಸೂ. ೭೩

೩೫. ಶಮದ (೧೯೬೮) ಸೂ. ೭೯

೩೬. ಶಮದ (೧೯೬೮) ಸೂ. ೫೭

೩೭. ಶಮದ ಪಾಠಾಂತರಗಳು (೧೯೫೧) ಪು. ೬೦ ಶಮದ (ಮದ್ರಾಸ) ಸೂ. ೫೪, ಶಮದ (೧೯೬೮) ಸೂ. ೬೨

೩೮. ಶಮದ (ಮದ್ರಾಸ) ಸೂ. ೭೫

೩೯. ಶಮದ (ಮದ್ರಾಸ) ಅವತರಣಿಕೆ, ೪

ಸಾತಿಶಯಾರ್ಥಮುಮಂ ಮೆ ।
ಲ್ವಾತುಮನೊಸೆದಿತ್ತರೊಲ್ದು ತಮಗಿಲ್ಲದುದಂ ।
ಖ್ಯಾತಂಗೆ ಸುಕವಿ ನೇಮಿಗೆ ।
ಭೂತಭವಿಷ್ಯಾದಿ ಕವಿಗಳೇನೊಳ್ಳಿದರೋ ॥[೪೦]

ಎಂದು ಪೂರ್ಣಗೊಳಿಸಿದ ಪದ್ಯವನ್ನು ನೋಡಬಹುದು. ಇಂತಹ ಪೂರ್ಣಪದ್ಯ ಗಳಿಗಾಗಿ ಸೂತ್ರ ೧೯೩ರ "ಸಾಸಿರ ಯೋಜನ....", ಸೂತ್ರ ೨೨ರ "ಕರೆಯಂ ನೆರೆವಂ..." ಮೊದಲಾದ ಪದ್ಯಗಳನ್ನು ನೋಡಬಹುದು.

ಹೈದ್ರಾಬಾದ ದರ್ಪಣವನ್ನು ಕುರಿತು "ವ್ಯಾಖ್ಯಾನಕಾರನು ಅನೇಕ ಕಾವ್ಯಗಳನ್ನು ಓದಿ, ಅವುಗಳಲ್ಲಿಯ ಸಾಧು ಪ್ರಯೋಗಗಳನ್ನು ಆರಿಸಿ ಉದಾಹರಿಸಿದ್ದಾನೆ. ಕೆಲವು ಜನ ಕವಿಗಳು ವಿರುದ್ಧ ಪ್ರಯೋಗಗಳನ್ನು ಮಾಡಿದ್ದಾರೆ. ವ್ಯಾಖ್ಯಾನಕಾರನು ಅವುಗಳನ್ನು ಕೊಟ್ಟು ಇವು ಸರಿಯಾದ ಪ್ರಯೋಗಗಳಲ್ಲವೆಂದು ನಿಷೇಧಿಸಿದ್ದಾನೆ. ಶಬ್ದಮಣಿದರ್ಪಣದಲ್ಲಿ ಕೆಲವೆಡೆಗಳಲ್ಲಿ ಬರಿಯ ಪದ್ಯಭಾಗಗಳನ್ನಷ್ಟೇ ಕೊಟ್ಟಿರುವು ದರಿಂದ ಅವುಗಳ ಅರ್ಥವು ಸರಿಯಾಗಿ ಹೊರಡುವದಿಲ್ಲ... ಇಂಥ ಎಡೆಗಳಲ್ಲಿ ಈ ಹೊಸಪ್ರತಿಯಲ್ಲಿ ಆದಷ್ಟು ಮಟ್ಟಿಗೆ ಪೂರ್ಣಪದ್ಯಗಳನ್ನು ಕೊಟ್ಟಿರುವುದರಿಂದ ಅರ್ಥವೂ ಸ್ಪಷ್ಟವಾಗಿ ಗೋಚರಿಸುತ್ತದೆ... ಆಕರಗಳನ್ನು ಕಂಡುಹಿಡಿಯಲು ಇವುಗಳಿಂದ ಸಹಾಯವೂ ಒದಗುತ್ತದೆ"[೪೧] ಎಂದು ಪ್ರೊ. ಡಿ.ಕೆ. ಭೀಮಸೇನ ರಾಯರು ಹೇಳುತ್ತಾರೆ. ಈ ವರೆಗೆ ಅಚ್ಚಾದ ಆವೃತ್ತಿಗಳಲ್ಲಿ ಇರದ ಬೇರೆ ಪ್ರಯೋಗ ಗಳನ್ನು ಈತನು, ಪುಣ್ಯಾಸ್ರವ, ಜೀವಸಂಬೋಧನೆ, ರಾಮಚರಿತ, ಕಬ್ಬಿಗರ ಕಾವ, ಕಂತಿ– ಹಂಪರ ಸಮಸ್ಯೆಗಳು, ಶಾಂತೀಶ್ವರ ಪುರಾಣ (ಕಮಲಭವ) ಗಳಿಂದ ಎತ್ತಿಕೊಂಡಿರುವನು. ಕೆಲವುಸಲ "ಶ್ರೀ ವಿಜಯನ ಪ್ರಯೋಗಂ,"[೪೨] "ನೃಪತುಂಗನ ಪ್ರಯೋಗಂ"[೪೩], "ಕಮಳಭವನ ಶಾಂತಿಪುರಾಣದ ಪ್ರಯೋಗಂ"[೪೪] ಎಂದು ಆಕರ ಹೇಳಿರುವನು. ಸಾಲದುದಕ್ಕೆ ಝೊಮ್ಮಣಾರ್ಯನೆಂಬ ಅಜ್ಞಾತಕವಿಯ ಹೆಸರು, ಸಂಗರ ವಿಜಯ, ಚೇರಮರನ್ನು ಕುರಿತ ಒಂದೊಂದು ಪದ್ಯ, ರನ್ನನ ಪರಶುರಾಮಚರಿತೆಗೆ ಸೇರಿರಬಹುದಾದ ಎರಡು ಪದ್ಯಗಳು ಇಲ್ಲಿ ಕಂಡುಬರುತ್ತವೆ.[೪೫] ಹೀಗೆ ಅಪೂರ್ಣ ಪದ್ಯಗಳನ್ನು ಸಾಧ್ಯವಾದಷ್ಟು ಪೂರ್ಣಗೊಳಿಸಿ, ಹೊಸಪ್ರಯೋಗಗಳನ್ನು ಸೇರಿಸಿ ತನ್ನ ಅಭ್ಯಾಸದ ವ್ಯಾಪ್ತಿಯನ್ನು ಮೆರೆದಿರುವನು.

ಇನ್ನು, ಕೇಶಿರಾಜನ ಬಹುಪಾಲು ಮೂಲಧನವನ್ನೊಳಗೊಂಡ ಕಿಟೆಲ್ ಇತ್ಯಾದಿ ಆವೃತ್ತಿಗಳ ಪ್ರಯೋಗಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳಿವೆ. ಅವುಗಳನ್ನು ೧. ಪೂರ್ಣಾಪೂರ್ಣ ಪದ್ಯಗಳು ೨. ಪುನರುಕ್ತ ಪದ್ಯಗಳು ೩. ಅಧಿಕ ಪದ್ಯಗಳು ೪. ಮೂಲ ಆಕರಲಭ್ಯ ಪದ್ಯಗಳು ಎಂದು ವರ್ಗೀಕರಿಸಿ ಅಭ್ಯಸಿಸಬಹುದು.

---

೪೦. ಶಮದ (ಮದ್ರಾಸ) ಸೂ. ೭೭ (ಲೀಲಾವತಿ ೧–೭೮)
೪೧. ಶಮದ ಪಾಠಾಂತರ (೧೯೫೧) ಪು. ೩೮
೪೨. ಶಮದ ಪಾಠಾಂತರ (೧೯೫೧) ಪು. ೪೩
೪೩. ಶಮದ ಪಾಠಾಂತರ (೧೯೫೧) ಪು. ೫೧
೪೪. ಶಮದ ಪಾಠಾಂತರ (೧೯೫೧) ಪು. ೪೭
೪೫. ಶಮದ ಪಾಠಾಂತರ (೧೯೫೧) ಪು. ೫೯, ೪೬, ೬೭ ಮತ್ತು ೬೩, ೭೨

ಶಬ್ದಮಣಿದರ್ಪಣದ ಹಸ್ತಪ್ರತಿಗಳು ಪೂರ್ಣಪದ್ಯ ಮತ್ತು ಬೇರೆ ಬೇರೆ ಉದ್ದಳತೆಯ ಅಪೂರ್ಣಪದ್ಯಗಳನ್ನೊಳಗೊಂಡಿವೆ. ಎಲ್ಲ ಹಸ್ತಪ್ರತಿಗಳಲ್ಲಿ ಕೆಲವಾದರೂ ಒಂದೇ ಬಗೆಯ ಪೂರ್ಣ ಮತ್ತು ಅಪೂರ್ಣ ಪದ್ಯಗಳಿದ್ದರೆ, ಇವು ಕೇಶಿರಾಜನ ಮೂಲಪ್ರಯೋಗಗಳು; ಅವು ದರ್ಪಣಾಭ್ಯಾಸಿಯ ಕೈವಾಡಕ್ಕೆ ಗುರಿಯಾದುವು ಎಂದು ನಿರ್ಣಯಿಸಲು ಸಾಧ್ಯವಿತ್ತು. ವಸ್ತುಸ್ಥಿತಿ ಹೀಗಿರದ ಕಾರಣ, ಕೇಶಿರಾಜನು ಬರೆದ ಪೂರ್ಣ ಪದ್ಯಗಳನ್ನು ಮಿತವ್ಯಯ ದೃಷ್ಟಿಯಿಂದ ಪ್ರತಿಕಾರ ಮೊಟಕುಗೊಳಿಸಿ ದವನೇ? ಕೇಶಿರಾಜ ಬರೆದ ಅಪೂರ್ಣಪದ್ಯಗಳನ್ನು ರಸಿಕ ಲಿಪಿಕಾರ ಸಾಧ್ಯ ವಾದಷ್ಟು ಪೂರ್ಣಗೊಳಿಸಿದನೇ? ಕೇಶಿರಾಜನೇ ಮಾಡಿರಬಹುದಾದ ಪುರ್ಣಾಪೂರ್ಣ ಪದ್ಯ ಬಳಕೆಯ ಉಪಕ್ರಮವನ್ನು ಲಿಪಿಕಾರರು ತಮ್ಮ ಮನಬಂದಂತೆ ಮುಂದುವರಿಸಿ ಕೊಂಡು ಬಂದರೇ? ಎಂಬ ಸಂದೇಹಗಳಿಗೆ ಉತ್ತರಿಸಲು ಈಗ ಅಸಾಧ್ಯವಾಗಿದೆ.

ದರ್ಪಣದಲ್ಲಿ ಕೆಲವು ಪ್ರಯೋಗಗಳು ಪುನರುಕ್ತಗೊಳ್ಳುವುದರ ಜೊತೆಗೆ, ಒಂದು ಪದ್ಯದ ಕೆಲವು ಭಾಗ ಒಂದು ಸೂತ್ರದ ಕೆಳಗೆ ಇನ್ನು ಕೆಲವು ಭಾಗ ಮತ್ತೊಂದು ಸೂತ್ರದ ಕೆಳಗೆ ಕಂಡುಬರುತ್ತದೆ. ಪ್ರಾಚೀನಕಾವ್ಯ ಮತ್ತು ಕಾವ್ಯಾವಲೋಕನಗಳ ಸಹಾಯದಿಂದ ಇವನ್ನು ಹೀಗೆ ಗುರುತಿಸಬಹುದು:

* ೧೮-೩=೨೪೦-೪=೨೪೩-೩=೨೪೫-೩

೨೦ - ೨ = ೬೬ - ೧೧	೨೧ - ೨ = ೨೪೮- ೪
೩೪ - ೩ = ೨೭೫- ೧	೬೩ - ೭ = ೨೪೫- ೭
೬೩ -೧೫= ೨೪೧- ೭	೬೫ - ೨ = ೧೧೮- ೪
೬೫ - ೬ = ೧೧೪- ೨	೬೬ - ೮ = ೧೬೩- ೩
೭೬ - ೧ = ೧೧೧- ೨	೭೬ - ೬ = ೧೯೪- ೨
೭೭ -೧೪= ೧೭೫- ೨	೭೯ - ೭ = ೨೨೯-೧
೮೨ - ೫ = ೨೦೯-೧	೮೨ -೧೧= ೧೯೭-೧
೮೫ - ೨= ೧೮೫-	೧೦೦-೨= ೧೯೯-೫
೧೦೬-೧= ೧೨೦-೧	೧೦೮-೩= ೨೦೨-೧
೧೦೮-೧೧= ೨೧೦-೨	೧೨೧-೨= ೧೬೨-೫
೧೨೬-೩= ೧೪೬-೨	೧೩೩-೫= ೨೨೨-೧
೧೩೬-೪= ೨೩೫-೫	೧೩೬-೭= ೨೪೯-೧೨
೧೪೫-೧= ೧೭೪-೧	೧೯೪-೧= ೧೯೮-೩
೨೦೯-೨= ೨೫೩-೫	೨೩೬-೨= ೨೫೦-೫

---

* ಮೊದಲನೆಯ ಅಂಕಿ ಸೂತ್ರ ಸಂಖ್ಯೆಯನ್ನು, ಎರಡನೆಯ ಅಂಕಿ ಪ್ರಯೋಗ ಸಂಖ್ಯೆಯನ್ನು ಸೂಚಿಸುತ್ತವೆ. ಶಮದ (೧೯೬೮) ಆಧಾರಿತ.

೨೪೬-೧= ೨೪೬-೨
೨೪೯-೩=೨೫೨-೬
೨೪ - ೧ = ೭೮-೪
೬೩ -೧೪= ೨೪೯-೫
೬೫ - ೩ =೧೧೮-೨
೭೧ - ೬ =೨೫೩-೬
೭೬ - ೯ =೧೯೪-೪
೭೯ -೧೦=೧೯೧-೧
೮೨ -೧೨=೧೭೯-೬
೧೦೦ -೪=೧೧೮-೩
೧೦೮ -೪=೧೬೩-೨
೧೨೬ -೨=೧೪೬-೧
೧೩೬ -೩=೨೨೮-೬
೧೩೭ -೧=೨೫೬-೫
೧೯೪ -೫=೨೦೪-೪
೨೪೧· -೩=೨೪೪-೧
೨೪೯ -೨=೨೫೨-೭

೨೪೮-೧೦= ೨೫೨-೧೫
೨೦ - ೩ = ೬೬-೧೨
೩೬ - ೬ = ೨೫೦-೩
೬೩ -೧೭=೧೬೩-೧
೬೬ - ೨ =೨೫೩-೬
೭೬ - ೩ =೧೯೮-೧
೭೯ - ೧ =೧೫೪
೮೨ - ೬ =೧೮೭-೧
೧೦೦ -೧=೧೩೬-೧
೧೦೭ -೩=೨೫೨-೧೨
೧೧೪ -೩=೧೧೬-೧
೧೨೬ -೪=೧೪೬-೩
೧೩೬ -೬=೨೪೧-೨
೧೬೨ -೩=೨೮೬-೧
೨೩೨ -೬=೨೩೨-೧೨
೨೪೭ -೩=೨೪೭-೪
೨೫೧ -೭=೨೫೨-೮

ಕೆಲವು ಪ್ರತಿಗಳಲ್ಲಿ ಬೇರೆಡೆ ಕಾಣಸಿಗದ ಪ್ರಯೋಗ ಪದ್ಯಗಳಿವೆ. ಪ್ರತಿಗಳ ಬಹುಮತ ದೃಷ್ಟಿಯಿಂದ ನೋಡಿದರೆ ಇವು, ಆಮೇಲೆ ಸೇರಿದ ಪದ್ಯಗಳೆನಿಸುತ್ತವೆ. ಉದಾ:

ಅಂಗಯ್ಮುಂಗಯ್ ಮೇಂಗಾ ।
ಲ್ಮುಂಗಾಲಂಗಾಲ್ ಪೊದಳ್ದ ಪಿಂಬೊಳ್ತು ಕರಂ ।
ಸಿಂಗಟಿ಼ ಕಿಟ್ಕಿರೆ ಪಿತ್ತಿಲ್ ।
ಬೆಂಗಾರ್ ಬೆಂಬಿಸಿಲವವ್ಯಯೀಭಾವಾಖ್ಯಂ ॥[೪೬]

ಎಸೆವಮೃತಂ ಮೂಲೋಕಂ ।
ಬಸವಪ್ಪುದಿದಾವ ಗಹನಮೆಲೆ ಭವ್ಯನೆ ಕೇಳ್ ।
ಒಸೆದು ಸಲೆ ಪಿರಿಯ ಗುರುಗಳ್ ।
ಬೆಸಸಿದವೊಲ್ ನಡೆದೊಡಿದುವೆ ಗಮಕಸಮಾಸಂ ॥[೪೭]

---

೪೬. ಶಮದ (೧೯೬೮) ಪು. ೧೮೨ ಅ. ಟ.
೪೭. ಶಮದ (೧೯೬೮) ಪು. ೧೮೬ ಅ. ಟ.

ತಡೆಯದೆ ನಿನಗಪ್ಪುದನೀ ।
ಗಡೆ ಬಗೆ ಬೇಳ್ಪಡದಿರೆಂಬುದಂ ನೀಮಿನಿತಂ ।
ನುಡಿಯದಿರ್ ಮೂದಲಿಸದಿರೇಂ
ತಡೆವೆನೆ ಕಟ್ಟಿದುದೆ ಸುರಗಿ ಮೆಟ್ಟಿದುದೆ ಕುಳಂ ।[೪೮]

ಗಗನಾಧ್ವರ್ ಶರಣಾಗಿಮಾಗಿಮಮರರ್ ಬಂದಾನಿಮಾನಿಂ ದಿಶಾ ।
ೞಿಗಧೀಶರ್ ನೆರೆದೊಡ್ಡಿಮೊಡ್ಡಿಮುರಗರ್ ಬಂದೆಯ್ದಿಮೆಯ್ದಿಂ ಮನ ।
ಸ್ವಿಗಳೀ ದೈತ್ಯನನಿಕ್ಕಿಮಿಕ್ಕಿಮದಟರ್ ಪೂಣ್ದಣ್ಮಿಮಣ್ಮಿಂ ಯಶೋ ।
ರ್ಥಿಗಳೆನ್ನಂ ನೆಲೆಗುಯ್ಯಿಮುಯ್ಯಿಯೆನುತಂ ತನ್ವಂಗಿ ಪುಯ್ಯಲ್ಚಿದಳ್॥[೪೯]

ಬಲ್ದಲೆಯಂ ಕಾರೆಳ್ಳಿನ ।
ಗಲ್ದುರಮಂ ಬಟ್ಟದೊಡೆಯುವಂ ಕೆಂಬಣ್ಣಂ ।
ನೇಲ್ದ ಕಿವಿಯುಳ್ಳನೆನಿಸುವ ।
ನೊಲ್ದೊಲಿಸುವನೆಸೆವ ಬೀರಸಿರಿಯಂ ಧರೆಯಂ ॥[೫೦]

ಈ ಪದ್ಯಗಳಲ್ಲದೆ ಎಷ್ಟೋ ತುಣುಕು ಪ್ರಯೋಗಗಳು ಕಾಲಕ್ರಮದಲ್ಲಿ ಪ್ರವೇಶ ಪಡೆದಿವೆ. ಈ ಆಗಮದೊಂದಿಗೆ ಲೋಪ, ಆದೇಶಕ್ರಿಯೆಯೂ ನಡೆದಿರುವ ಸಂಭವವಿದೆ.

ಕೇಶಿರಾಜ ಬಳಸಿರುವ ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟರ ಒಂದೂ ಕೃತಿ ಗೊತ್ತಿಲ್ಲ. ಶ್ರೀವಿಜಯನ 'ಕವಿರಾಜಮಾರ್ಗ', ರಘುವಂಶಮಹಾ ಪುರಾಣ[೫೧]ಗಳಲ್ಲಿ ಕೊನೆಯದು ದೊರಕಿಲ್ಲ. ಹರಿವಂಶ, ಶೂದ್ರಕ, ಭುವನೈಕವೀರ (?)[೫೨]ಗಳು ಗುಣವರ್ಮನ ಕೃತಿಗಳೆಂದು ಗೊತ್ತಾಗಿದ್ದರೂ ಸಿಕ್ಕಿಲ್ಲ. ಪೊನ್ನ, ಸುಜನೋತ್ತಂಸರ ಬೇರೆ ಗ್ರಂಥಗಳು ಉಳಿದುಬಂದಿಲ್ಲ. ಹೀಗಾಗಿ ದರ್ಪಣೋಕ್ತ ಪ್ರಯೋಗಗಳಿಗೆ ಆಕರ ಹೇಳುವುದು ದುಸ್ತರವಾಗಿದೆ.

ಕೇಶಿರಾಜ ಬಳಸಿದ ಬಹಳಷ್ಟು ಪ್ರಯೋಗಗಳು ಕಾವ್ಯಾವಲೋಕನ ಮತ್ತು ಸೂಕ್ತಿ ಸುಧಾರ್ಣವಗಳಲ್ಲಿ ಸಿಗುವುದರಿಂದ, ನಾಗವರ್ಮ, ಮಲ್ಲಿಕಾರ್ಜುನರು ಬಳಸಿದ ಮೂಲಕಾವ್ಯಗಳನ್ನು ಈತನು ಪ್ರತ್ಯಕ್ಷ ಕಂಡಿಲ್ಲವೆನ್ನುವಂತಿಲ್ಲ. ಆದಿಪುರಾಣದ "ಅವತಂಸೋತ್ಪಲತಾಡನಂ..."[೫೩] ಮೂವರಲ್ಲಿಯೂ ಇದೆ. "ಅಱುದಿಂಗಳಾ ಯುವುಂಟೆನೆ..."[೫೪]

೪೮. ಶಮದ (೧೯೬೮) ಪು. ೨೩೫ ಅ. ಟ.
೪೯. ಶಮದ (೧೯೬೮) ಪು. ೨೪೯ ಅ. ಟ.
೫೦. ಶಮದ (೧೯೬೮) ಪು. ೨೦೫ ಅ. ಟ.
೫೧. ರಘುವಂಶ ಮಹಾಪುರಾಣವು ಶ್ರೀ ವಿಜಯನ ಕೃತಿಯೆಂದು ಇತ್ತೀಚೆ ಲಭಿಸಿದ ಇಮ್ಮಡಿ ನಾವರ್ಮನ ವರ್ಧಮಾನ ಪುರಾಣದಿಂದ ತಿಳಿದುಬಂದಿದೆ.
೫೨. ಈ ಮೂರು ಗ್ರಂಥಗಳಿಗಾಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ–ಪು. ೧೭೯ ನೋಡಿರಿ.
೫೩. ಆದಿ ೧೨–೪೭; ಕಾಲೋ ೭೯೧; ಸೂಕ್ತಿ. ಪು. ೩೩೩, ಶಮದ ಸೂ. ೧೫೩
೫೪. ಆದಿ ೯–೫೦; ಕಾಲೋ ೨೭೦; ಶಮದ ಸೂ. ೨೦೦

ನಾಗವರ್ಮ, ಕೇಶಿರಾಜರಲ್ಲಿದೆ. “ಇರು ಮರುಳೆ ಶುಷ್ಕ ವೈಯಾಕರಣಂಗಂ...”[೫೫] ಮಲ್ಲಿಕಾರ್ಜುನ, ಕೇಶಿರಾಜರಲ್ಲಿದೆ. “ಕುಡುಮಿಂಚಂ ಮಸೆದನ್ನರಪ್ಪ...”[೫೬] ಎಂಬುದು ನಾಗವರ್ಮ, ಮಲ್ಲಿಕಾರ್ಜುನರಲ್ಲಿಲ್ಲದೆ, ಕೇಶಿರಾಜನಲ್ಲಿ ಮಾತ್ರ ಇದೆ. ಹೀಗಾಗಿ ಕಾವ್ಯಾವಲೋಕನ, ಸೂಕ್ತಿಸುಧಾರ್ಣವಗಳನ್ನೂ ಅವರು ನೋಡಿದ ಕಾವ್ಯಗಳನ್ನೂ ಜೊತೆಗೆ ಹೆಚ್ಚಿನ ಕಾವ್ಯಗಳನ್ನೂ ಈತನು ನೋಡಿದ್ದಾನೆಂದು ಸ್ಪಷ್ಟವಾಗಿ ಹೇಳಬಹುದು.

“ಚುರ್ಚಿದವೊಲ್ ಬಿಸಿಲಳುಕಿರೆ ಕಿಮುಳ್ಚಿದ ಲತೆಯಂತೆ ನೊಂದು ಗುಣನಂದಿ”[೫೭] “ಈಂದ ಪುಲಿಯಾವೊಲಿರ್ದಳೆಂದು ಗುಣವರ್ಮನ ಹರಿವಂಶ ಪ್ರಯೋಗಂ”[೫೮] “ಎರಡುಂ ಪದಮುಂ ತದ್ಭವಮನೆಯ್ದುವಲ್ಲಿಯೊಂದು ಪದಮನುಱುಪಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ: ತರವೇಳ್ ಮಾಣಿಕ್ಯ ಭಂಡಾರದ ಪುಟಿಕೆಗಳಂ”[೫೯] ಎಂಬಿವುಗಳನ್ನು ಬಿಟ್ಟರೆ, ಕೇಶಿರಾಜನು ಮಿಕ್ಕ ಪ್ರಯೋಗಗಳಿಗೆ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಆಕರ ಹೇಳಿದ್ದರೆ ಕಳೆದುಹೋದ ಕನ್ನಡಸಾಹಿತ್ಯದ ಸ್ಥೂಲರೂಪವನ್ನು ಉಳಿಸಿದಂತಾಗುತ್ತಿತ್ತು. ಈಗ ಸಾಧ್ಯವಿದ್ದಷ್ಟು ಆಕರಗಳನ್ನು ಹೀಗೆ ಗುರುತಿಸಬಹುದು:

ಪ್ರಯೋಗಗಳ ಅಕಾರಾದಿ	ಶಮದ	ಕಾಲೋ	ಸೂಕ್ತಿ	ಕಾಸಾ	ಮೂಲ
ಅಕ್ಕಟಾ ಮರುಳ್ದಂಬಿ	೧೨೭.೪		೧೩೮		
ಅಚ್ಚಡಕಿಲ್ ಕುಱುಗಯ್	೧೯೫.೧				
ಅಡಪವಳಂ ಪಡೆವಳ್ಳಂ	೮೨.೫		೩೨೬		
ಅಡು ಪಣ್ಣಿಡು	೨೪೩.೧೦				ವಿಕ್ರ ೩.೧೨
ಅಣಿಯರಮೆಸೆದೊಪ್ಪಿ	೨೧೦. ೨		೩೨೮		
ಅಣ್ಪಂ ಬೆರಲಂಟಿವು	೨೫೨.೧೬				
ಅತಿಚತುರನೆಂ	೨೩೧. ೮				
ಅತಿರಥಮಹಾರಥರ್ಕಳ್	೨೪೦. ೨				
ಅತ್ತಣನಿತ್ತಣಂ	೧೨೧. ೨				
ಅತ್ತಲ್ ದೇವೇಂದ್ರಂ	೧೨೯.೭				
ಅದಱಿಲ್ಲಿ ಮೂಷೆಯಿಟ್ಟೆ	೧೨೦. ೨		೨೯.೩೦		

೫೫. ಆದಿ ೧–೨೪; ಸೂಕ್ತಿ. ಪು. ೧೦; ಶಮದ ಸೂ. ೨೪೧

೫೬. ಆದಿ ೩–೧೨; ಶಮದ ಸೂ ೧೯೫

೫೭. ಶಮದ ಸೂ. ೩೪

೫೮. ಶಮದ ಸೂ. ೧೨೮

೫೯. ಶಮದ ಸೂ. ೩೦೪

೬೦. ‘ಶಮದ’ (೧೯೬೮) ಕೆಳಗಿನ ಅಂಕಿಗಳು ಸೂತ್ರ – ಪ್ರಯೋಗ ಸಂಖ್ಯೆಯನ್ನು, ‘ಕಾಲೋ’ ಕೆಳಗಿನ ಅಂಕಿ ಪದ್ಯಸಂಖ್ಯೆಯನ್ನು, ‘ಸೂಕ್ತಿ’ (೧೯೪೭) ಕೆಳಗಿನ ಅಂಕಿಗಳು ಪುಟ ಪದ್ಯ ಸಂಖ್ಯೆಯನ್ನು, ‘ಕಾಸಾ’ ಕೆಳಗಿನ ಅಂಕಿ ಪದ್ಯಸಂಖ್ಯೆಯನ್ನು ಸೂಚಿಸುತ್ತವೆ.

ಅವರ್ಣವಾದಕ್ಕೆಡೆ	೧೯.೧	೧೩			
ಅವಳ ಕರುಳ್ಗಳ್ಗೆ	೧೨೩.೮				
ಅವು ಪಿರಿಯವು	೧೦೫.೩	೯೦			
ಅಸವಸದಿಂ ಪಟಿಗೆಯ್ಯಂ	೨೩೮.೧	೪೫೪			
ಅಸಿಯ ಒಜ಼ಿ ಬೆಸದ	೭೨.೩	೪೪೦			
ಅಸಿಯಂತೆವೊಲ್	೨೩೧.೫				
ಅಸಿಯ ನಡು ಪಸಿಯ	೧೭೯.೩				
ಅಸುಂಗೊಳೆ ಸುರರ್	೧೭೮.೬				
ಅಹಿಂಸಾ ಪರಮೋಧರ್ಮ	೮೫:೪				ತ್ರೈಚೂ.೨೭
ಅಳಿಕುಳನೀಳಕುಂತಳೆಯೆ	೧೩೫.೧				
ಅಳಿದಿಬ್ಬಂಬಿಡಿವಂತೆ	೨೩೨.೫				
ಅಂಜಿಸಿದಪಂ ಮೂಲೋಕಂ	೨೩.೨೯				
ಅದಜೆಂದವರನಾ	೧೦೦.೩				
ಅಂದಿನ ನಿಜಭುಜ	೧೨೨.೧	೩೬೪			
ಅಂಬಿಕೆ ಬೆರ್ಚಿ	೨೧.೧				
ಅಃ ಸಂದೆಯಮಿಲ್ಲ	೨೧.೩				
ಆ ಇರ್ವರೆ ತೋಳ್ಗಳ್	೫೭.೨				
ಆಕೆಗೆ ಕಡಿಲೆಂದಾತಂ	೧೨೩.೪				
ಆಗಳಿನ ಕಜ್ಜಮಂ	೧೧೯.೫				
ಆಗಳೆ ಗಂಡುಡುಗೆ	೨೪೯.೯				
ಆಟಪಾಟ ಕೂಟಂಗಳ	೧೭೬.೧				
ಆಡಿದಪೊಲನುಂಡ	೧೭೯.೫				ಯಶೋ ೧.೫೨ ಅನಂತ ೫.೯
ಆಡಿದನಿಂದ್ರನ	೮೨.೧೫	೩೮೭			
ಆತಂಗಮಾಕೆಗಂ	೧೨೩.೨	೧೧೬			
ಆತಂ ದುರ್ಯೋಧನನ್	೧೬೧.೧				
ಆತನಯೆ ತೋರದೊಡೆ	೬೩.೧೭	೪೩			
ಆತನುಂ ನೀನುಮಾನುಂ	೨೩೪.೧				
ಆತನುಂ ನೀನುಂ ಕೂಡಿ	೨೩೪.೫				

ಆತನುಮಾನುಂ ನೀನುಂ	೨೦೪.೩				
ಆರ್ತೋರ್ಪುದಾರ್ತೋರ್ಪುದೆ	೨೦೬.೧				
ಆದ ವಿಷ್ಣು ವಿಜಯಾದಿತ್ಯಂ	೧೭೯.೬				
ಆದ್ಯರುಮಕ್ಕುಮದ್ಯತನ	೧೦೮.೯				
ಆನಱಿಯೆನಾತಂ ಮುಟ್ಟೆ	೨೫೯.೩				
ಆನಱಿವೆಂ ಪೃಥೆಯಱಿ	೨೩೫.೬				ಗದಾ ೫.೧೮
ಆನಾ ನಿಮ್ಮಡಿಯಾ	೬೭.೮				
ಆ ನಾಡು ಸಿರಿಯ	೭೭.೧೭		೬೬.೬(ಪಾ)		
ಆನುಂ ನೀನುಮಾತನುಂ	೨೩೪.೪				
ಆ ನೃಪತಿ ನಾಡೆ	೨೩೨.೮				
ಆನೆಯೊ ಅದ್ರಿಯೊ	೬೬.೯				ಭಾಭೂ೨೬
ಆನೆಯ ಮೇಲೆಯುಂ	೧೩೦.೧				ಭುವನೈ(?)
ಆ ಪುರದೊಳಿರ್ಪನ್	೨೪೩.೧				
ಆಂಪೆಂ ಪೆಱನೆನೆಂದು	೨೩೧.೬				
ಆ ಬನಮೀಬನಂ	೧೮೦.೪				
ಆ ಮನೆ ಸಿರಿಯ ತವರ್ಮನೆ	೧೮೦.೧				
ಆಮಱಿವೊಡಮುಸಿರ	೨೩೫.೭		೩೬೫.೭		
ಆ ಮುನೀಶ್ವರಂ ಶಾಂತ	೨೨೫.೪				
ಆಯಿರ್ದ ಮಾಟ್ಕೆ	೧೧೪.೪	೩೮			ಆದಿ ೨.೫೩
	೬೩.೧				
ಆಯುಂ ಸಿರಿ ತಾಯುಂ	೧೫೬.೫				
ಆಯ್ತುಬ್ಧಿಯೆ	೨೫೩.೫				
	೨೦೯.೨				
ಆರಕ್ತಮಾಗಿ	೧೫೬.೧	೫೦೮			
ಆರಯ್ದಾರುಂ ಸಾರಲಿಂ	೨೪೫.೧				
ಆರ್ತೀತುರಂಗಂ	೧೬೦.೨				
ಆರ್ಮೆಯ್ದೋರ್ಪರ್	೧೬೨.೨				
ಆಲಿವರಲ್ಗಳು	೧೨೬.೩		೨೬೭.೧೮೫		ಪಂಪಾ ೭.೧೪೬
	೧೪೬.೨				ಮಲ್ಲಿ ೮.೮೬
					ಅನಂತ ೯.೧೨

ಆವಂ ಜಗಮಂ ನೀಂ	೧೩೭.೭				
ಆವಂ ಮುರನಂ ಕೊಂದಂ	೧೬೨.೧				
ಆವ ರಾವುತರಾವ	೧೭೯.೨				
ಆವ ರೀತಿ ಪೇೞೆಂದೊಡೆ	೧೧೯.೬	೭.೩೫(ಪಾ)			
ಆವರ್ಕೆಯ್ದೆ ಕವಲ್ಕವಲ್ತು	೧೦೦.೨	೨೬೬			ಆದಿ ೧೧.೯೫
ಆವುದು ಸಂಕಟಂ ನಿನಗೆ	೧೨೩.೬				
ಆವೆಡರ್ಗಳುಮಂ ತೀರ್ದು	೫೨.೪				
ಆವೆಡ ಹಂಸೆಗೀ ನಡೆ	೧೨೧ಅ.ಟಿ.				
ಆ ವೇಶ್ಯಾವಾಟದೊಳ್	೮೩.೫	೮೬.೧೨೪			ಮಲ್ಲಿ ೨.೫೬
ಆಳಾಳೋಳಿಯ ಮಾನಸಂಗೆ	೭೯.೨೦				
ಆಳ್ದನ ನಂಟರತ್ತಣಿಂ	೧೨೬. ೧		೧೧೮		
ಇಡುಕುಂಗಬ್ಬಂ	೧೮೧. ೧		೯೫೧		
ಇದಿರ್ಚಿದಿರ್ಚೆನೆ	೨೦೬. ೫		೨೮೮		
ಇದೆ ಇದೆ ಸಾರ್ಕೆ	೨೦೬. ೭				
ಇನಂ ತುಹಿನಾ	೩೩೨. ೧೨	೨೫೫.೧೨೧			ಪಂರಾ೭.೯೮
ಇನಿಯನೆ ಬೆಲ್ಲದಿಂ	೬೬.೮		೫೨		
	೧೬೩. ೩				
ಇನಿಯವು ವಿಷಯಸುಖಂ	೧೦೫. ೪		೧೦೨		ಆದಿ ೧೪.೧೨೫
ಇನ್ನಾವುದು ಕಜ್ಜಮೆಂದು	೭೯. ೨೫				ಮಲ್ಲಿ ೮.೮೦
ಇನ್ನೆವರಂ ಗುಜೆಯಾದು	೨೫೯. ೨	೩೯. ೯೪			
ಇಮ್ಮಾವು ಬಳ್ಳಿಯೆಲ್ಲಂ	೮೨. ೭		೮೧		
ಇರದೆ ಗರ್ಜಿಸಿಬೊಪ್ಪಲಂ	೭೧. ೩				
ಇರು ಮರುಳೆ ಶುಷ್ಕ	೨೪೧. ೫	೧೦. ೫೪			ಆದಿ ೧. ೨೪
ಇರುಳ ಸರೋಜವಾದುದ	೧೧೯. ೩				
ಇರಿಯಲ್ ತಕ್ಕಳವರ್ಥಿಗಳ್ಗೆ	೨೪೫. ೬				
ಇರಿದಪ್ಪಂ ಮಗಧೇಶನಂ	೨೪೪. ೧	೩೮೩. ೧೪			
ಇರ್ಕೋಡಿಯಂ ತೀವಿ	೭೬. ೪				
ಇರ್ತಡಿಯ ಪೂಮರಂ	೧೯೮. ೨				
ಇರ್ತಲೆಗೋಜಂ	೭೬. ೫		೨೧೧		

ಇರ್ಬಾಳ ಮೂವಾಳ್	೧೭೫. ೨	೨೦೭			
	೭೭. ೧೪				
ಇವಳಂ ಶೃಂಗಾರ	೧೧೪. ೨	೪೨			
ಇವಳ್ದಿ ರೊಳಿವಂದಿರಂ	೧೦೭. ೬	೯೪			
ಇಂದಿನ ದಿನದೊಳ್	೨೩೯. ೩				
ಇಂದು ಬಿಂಬದ ಮೊಲಂ	೮೨. ೧೬		೪೪. ೧೨೩		
ಇಂದ್ರಂಬೊಲ್ ವಿಭವ	೨೨೫. ೬				
ಈಯಲ್ಬಂದತ್ತು	೨೪೫. ೭	೧೮೭			ಆದಿ ೯. ೧೩೨
	೬೩. ೭				
ಈಯಲಿಜೆಯಲ್	೭೯. ೧೯				ಗದಾ ೨. ೧೬
ಈ ಯೋಗದೊಳಾವ	೨೩೯. ೧				
ಈರಯ್ದು ಗತಿಯೊಳ್	೮೨. ೮				
ಈವುದು ಕರ್ಣಂಗೆ	೨೩೬. ೪				
ಈಶ್ವರನ ಮನಮ್	೨೩೭. ೨	೩೯೬			
ಈಶ್ವರ ಶಿರಃಕೋಟಿ	೨೩೭. ೩				
ಈಂಗಡಲೊಪ್ಪುವೆತ್ತ	೧೯೧. ೨				
ಈಂಚರದಿನಾಣತಿ	೭೮. ೨				
ಈಂದ ಪುಲಿಯಾವೊಲ್	೧೨೮. ೩				ಹರಿವಂಶ
ಉಣ್ಬು ಭುಜಾಬಲಂ	೨೫೫. ೧	೯೩. ೫			
ಉಣ್ಬು ಮಾಡಿದಂ	೨೫೫. ೨				
ಉದಯಾಸ್ತೋನ್ನತಶೈಲ	೧೬೭. ೧	೧೭೩			ರಸ ೧೦೪
					ಭುರಾ ?
ಉದಯಿಪ್ಪಂ ಗಂಡ	೨೪೩. ೮				
ಉದ್ದದೆ ನೆಗೆವನ್ನಂ	೨೫೭. ೩				
ಉದ್ದಮಾಗಿ ಬೀಗಿದ	೧೭೭. ೧				
ಉರಗಂ ಕೊಂಡಲ್ಲಿಗೆ	೨೦೦. ೧	೨೬೮			
ಉರದ ಬಲಂ ಮುಂಗೈಗೆ	೮೨. ೧೦				
ಉಱಿಮಂಜೆಮೆ ಬೆರ್ಚೆಮೆ	೧೫೬. ೪				
ಉಬ್ಬಿಯದು ವಿಭವಂ	೨೫೫. ೩				

ಉಟ್ಟಿಂ ಮಾಳವದೇಶಮಂ	೨೫೨. ೧೨				
ಊರೂರೊಳ್ ಕೇರಿಕೇರಿ	೨೦೬. ೩				
ಎಡರಿದನಟ್ಟಿ ಮೋದುವ	೧೮. ೨				
ಎಡಜಿದನೋ ಅವನ	೬೭. ೩				
ಎಣ್ಣಿಯೊಳರನೇಜಿಲ	೭೯. ೫	೫೮. ೨೦೪			ಗಿಕ*
ಎತ್ತಿದ ಕೆಯ್ಯೊಳ್	೧೨೯. ೫				
ಎತ್ತಿ ನಡೆದಂ ವೈರೀಭ	೨೮೮. ೨				
ಎತ್ತುಂಗೋಲುಂ ವಿರಹಿಗೆ	೧೮. ೧	೨೪೮. ೮೦			
ಎತ್ತುವೇತದಾಡುಂದೊಲೆ	೧೮೧. ೨				
ಎನಗೆ ಬಲ್ಲಿದರಾಗದಿರ್ಪರೆ	೧೦೮. ೧೦				
ಎನಿತುಂ ಕಾಯ್ದು	೧೯೩. ೩	೨೩೫			ವಿಕ್ರ ೯, ೩೮(ಹೋ)
ಎನಿತ್ತೆನಿತ್ತೆಂಬುಜಪತ್ರ	೧೨೮. ೨	೩೫೯	೫೮. ೨೦೩	೧೯೧	ಭು.ವೀರ?
ಎನಿತುಮನಿತುಮಂ	೨೪೯. ೪				ವಿಕ್ರ೬. ೪೦
ಎಂತೆಂತೋ ಅಃ ಕಬ್ಬ	೬೭. ೧				
ಎನ್ನ ಮಾತಿನೊಳ್	೭೯. ೪				
ಎನ್ನಿರೆ ಎನ್ನಿನಿಯಂ	೬೬. ೧೦				
ಎನ್ನೆವರಂ ಸಿರಿ	೨೫೯. ೧				
ಎಮಗೀಗಳ್ ಸೂಚಿಸು	೨೩೮. ೪				
ಎರಲೆಯ ಭಾವಮಂ ನೃಪತಿ	೮೨. ೨		೪೫. ೧೨೮		
ಎರಟ್ಮಾತಾಗೆ	೧೯೪–೧	೨೬೧			
	೧೯೫–೩				
ಎರ್ದೆಗಾಣ್ಮನೆನ್ನರಸ	೧೪೭. ೧	೧೨೩			ಆದಿ ೩. ೧೫
ಎಲವೋ ನೀನೆನ್ನ	೧೪೫. ೩				
ಎಲೆಎಲೆ ರಂಭೆಯೂರ್ವಶಿ	೧೩೪. ೫		೮೭.೧೨೭ (ಹೋ)		
ಎಲೆಕನ್ನಡಿ ಕಳಶಮೆ	೧೩೭. ೩				
ಎಲೆ ಗಟಿಪ ಎಂಬ	೧೩೪. ೪				

* ಇದು ಗಿರಿಜಾಕಲ್ಯಾಣದ ಪದ್ಯವೆಂದು ಡಿ. ಆರ್. ನರಸಿಂಹಾಚಾರ್ ಹೇಳುತ್ತಾರೆ. ಉಪಲಬ್ಧ ಹಸ್ತಪ್ರತಿಗಳಲ್ಲಿ ಸಿಗುವದಿಲ್ಲ.

ಎಲೆ ಸರ್ವೇಶ	೧೩೭. ೬				
ಎಲೆ ಇದಲ್ತೆ ತುಹಿನ	೬೬. ೨	೪೮			
ಎಲ್ಲವರಂತೆವೊಲ್	೧೦೯. ೧				
ಎಲ್ಲಂಗಮೆಲ್ಲಧನ	೧೮೬. ೧,	೨೫೩			
	೧೬೨. ೩				
ಎಲ್ಲರುಮಾ ಕರ್ಣ	೧೬೨ .೬				
ಎಲ್ಲಾ ರತ್ನಂಗಳು	೧೮೬. ೨	೨೫೨			
ಎಸೆಗುಂ ಋಜ್ವಾಗತಂ	೭೧. ೧೦	೪೧೮			
ಎಳಮಾವೇ ತಳಿರ್	೧೩೫. ೩	೧೨೯			ಅಜಿ ೨–೪೫
ಎಳವೆಱ ದಾಡೆ ಕೆಂದಳಿರೆ	೭೭. ೧	೬೪	೨೩೫. ೫		ಅಜಿ ೬. ೨೩
					ರಸ ೨. ೪೬
ಎಳೆಯಳಿರುತೆನ್ನ	೧೬೪. ೧				ರಸ ೧. ೨೭
ಏಕೆ ನಿರ್ವಹಣಕ್ಕೆ	೧೫೬. ೨				
ಏಕೆಂದಱಿಯೆಂ	೧೨೨. ೫				ಆದಿ ೬. ೩೦
ಏಗೈವಂ ಪೇಳಿಮ್	೨೪೦. ೬				
ಏತಱ ಮಾತೋ ೧೮ ಅ.ಟಿ.	೧೨೨. ೬	೫೩			
ಏತರ್ಕೆ ಮುಳಿಸೆಂದು	೧೨೨. ೪				
ಏನಾಗಿಯುಮೇನೊ	೧೨೨. ೨				ವಿಕ್ರ೪. ೨೯
ಏನೆಂಬ ಪೆಂಪೊ	೧೫೫. ೨				
ಏನೇನೊ ಓದಿನ ಪರಿ	೬೭. ೨				
ಏಱುಂ ಜವ್ವನದೊಳ್	೧೮೧. ೫				
ಏರ್ಪೆತ್ತರೇರ್ಪೆತ್ತರಂ	೭೬. ೯				
	೧೯೪. ೪				
ಏವಂದರೇವೋದರೆನ್ನದೆ	೧೮೮. ೫				
ಏವೇೞ್ವೆನವನ	೧೮೮. ೪				
ಏಳಿದಂಗೆಯಲಿಮೀಗಳೆ	೧೮. ೩	೩೧೪			ರಸ ೧೮೮
	೨೪೫. ೩				
ಏಳಿದಿಕೆಗಂಡು ಬಿಸುಟ್ಟಿನೆ	೨೪೩. ೩	೫೨			
ಏಳುಂ ಬಸನಮುಮಂ	೧೮. ೪				

* ಈ ಪದ್ಯ ಕಾವ್ಯಸಾರದ ಒಂದು ಹಸ್ತಪ್ರತಿಯಲ್ಲಿ ಇದೆ (ನೋಡಿ ಕ. ಭಾ. ೬–೪ ಪು.೧೫೫)

ಕಟ್ಟಕಡೆ ಪೆರ್ವಟ್ಟೆ	೨೦೪. ೭				
ಕಟ್ಟಿದ ಪೊಂಜುರಿಗೆ	೭೮. ೩	೭೬	ಆದಿ ೪. ೩೬		
ಕಡುಗಲಿ ಸೆಣಸುವ	೧೫೬. ೬				
ಕಡೆಯಿಸಿದಂ ಸುರರ್	೨೪೨. ೩				
ಕಣ್ಣಿಂ ಕವಿಯಳ್	೭೯. ೩				
ಕಣ್ಣಿಂ ಕಾಣೆಂ	೧೧೪. ೫				ಗದಾ ೫. ೩೬
ಕಣ್ಗೆರವಿನ ಮೆಲ್ದುಟಿ	೭೫. ೩				
ಕಣ್ಸೋಲಮನಜೆಯಂ	೭೮. ೬	೭೫			
ಕತ್ತುರಿಮಿಗಮೆ ಮಿಗಂ	೭೭. ೧೮		೨೬. ೧೩		
ಕಪಿಧ್ವಜಂ ನಿಳ್ಕಿ	೨೪೭. ೫				
ಕಬ್ಬಿಗಗಳ್ಳರೆಂದು	೨೦೮. ೧				ಶಾಂತಿ ೧೨. ೭೭
ಕಮ್ಮಂಗಣೆಯಿಂದೆ	೧೮೭. ೨				
ಕಯ್ಸುರಿಗೆಯಂ ಪಿಡಿ	೭೮. ೧೦				
ಕರೆದುದು ಕಣ್ಣ ಬೆಳ್ಪ	೨೩೬. ೧		೧೨೩. ೨೭		
ಕರೆಯಂ ನೆರವಂ ವಂಶಂ	೨೯. ೭				
ಕಱು ತಡೆದತ್ತು	೧೮೦. ೩		೧೫೮. ೧೩೪		
ಕರ್ತೃವಾದಂದಿನಿತತಿಶಯ	೬೫. ೬	೪೨			
ಕಲಿ ದಲಿವಂ ಜವನಲ್ಲಿ	೭೯. ೨೧	೮೨			
ಕಲಿಯಾರ್ ನಿಷ್ಕಾಮಿ	೬೩. ೪				
ಕಲ್ಲೆಲ್ಲಂ ಕಿಸುಗಲ್	೭೯. ೬	೮೧			
ಕವಕ್ಕವ ಎಲೆ ಊ ಊ	೭೧. ೮				
ಕವಿಗಳ್ ಕೃತಿಬಂಧ	೨೨೮. ೩				ಲೀಲಾ ೧. ೧೧
ಕವಿಗೆ ಕೇಡಿಲ್ಲೆಂತುಂ	೧೨೩. ೩				
ಕವಿ ಪೊಱಗಿರೆ	೧೨೯. ೮				ಶಮದಪಾ.೭೬
ಕಳೆಯಲ್ಕಾಗದು ನರಪತಿ	೭೭. ೫				
ಕಳ್ಳವೆಳ್ಳಿವಟ್ಟಲ್ ಶೂದ್ರಕ?	೨೫೦. ೬		೩೨೨. ೬		
ಕಳ್ಸವಿಗೆ ಕುಡಿದು	೭೮. ೮				
ಕೞಿಲೆ ನುಡಿದಳಲೆ	೨೯. ೨	೨೬			

ಕಟ್ಟೆಯಿಂದಮುಟ್ಟಿಂ	೨೪೯. ೮				
ಕಃ ಕೇನಾರ್ಥೀ ಕೋ	೭೧. ೬				ವಿಕ್ರ ೬. ೪೦
ಕಾದದಿರ್ದಂದು	೨೫೨. ೧೩				
ಕಾಮ ಕರಂ ಕರಮಡಂಗಿ	೨೫೭. ೧				
ಕಾಮನ ಗರವಟಿಗೆವರ್ಪಂತೆ	೭೭. ೨೧		೭೩. ೪೬		
ಕಾಯಲುಂ ಬಲಗರ್ವದಿಂ	೬೩. ೨	೩೫೮			
ಕಾರ್ಗಾಲದ ಮಿಂಚಿನಂತೆ	೧೯೫. ೬				
ಕಾರ್ಯವಿಚಾರಕೋವಿದ	೧೦೮. ೧				
ಕಾಲಿಂದೆಯುಂ ಕೈಯಿಂದೆ	೧೩೩. ೪				
ಕಾವೇರಿಯ ಕಾಲನಾ	೧೭೮. ೩				
ಕಾಳಾಗ್ನಿರುದ್ರನೆನಿಸಿದುದು	೧೨೭. ೩				
ಕಾಟ್ಗಿಚ್ಚು ತಗುಳೆ	೭೬. ೧೦	೨೯೮			ರಸ ೧೮೬
ಕಾಟ್ಟುರು ಮಸಗಿದ ಪೋಲ್	೭೬. ೧೧				
ಕಾಟ್ಟುರಮಾಗೆ ಕಾವ್ಯರಸ	೭೬. ೧೨	೨೯೯	೧೨. ೬೭		ರಸ ೨೩೬
ಕಿಡೆ ಮೂಗೋಱಂ ಬೋಟಿಸಿ	೧೯೯. ೪				
ಕಿಱಿದುಱಿಕೊಟೀ ಪಿರಿದುಮರ್ಥ	೧೨೦. ೩				ಕವಿ ೧. ೧೫
ಕಿಱುಗೂಸಾಗಿಯುಂ	೧೭೫. ೧				
ಕಿಳಿರೆ ಹಯಂಗಳ್	೧೫. ೧				
ಕಿಟ್ಟೊಡೆ ರಸಭಾವಮಿರ್ಪೆಡೆ	೭೭. ೧೩				
ಕೀಱಿ ಪುಗಲನೆಯುಂ	೨೦೦. ೨	೨೬೯			
ಕುಕ್ಕೂಕ್ಕೂ ಎಂದು	೨೦-೨	೧೧			
	೬೬-೧೧				
ಕುಡುವಿಲ್ಲನೆಚ್ಚ	೮೨-೧೧	೨೦೯			
	೧೯೭-೧				
ಕುಡುಮಿಂಚಂ ಮಸೆದನ್ನ	೧೯೫. ೪				ಆದಿ ೩. ೧೨
ಕುಡುವುದು ಕೂರ್ಮೆಯಲ್ಲಿ	೬೫. ೧			೯೯೭	ಅನಂತ ೮. ೫೫
ಕುಡುವೆರೆಯಂತೆ ತೋರ್ಪ	೧೯೫. ೩				
ಕುತ್ತಡಿ ಸಿಲ್ಕುತಿರ್ಕೆ	೧೭೪. ೨				
ಕುರುಕುಲಾಧಿಪಂ ನುಡಿಯ	೨೫೭. ೬				

ಕುರುಪತಿಯಂ ವಿಷ್ಣು	೭೪. ೩				
ಕುರುಪ್ರಭು ಕಂಡಂ ಶರ	೨೫೨.	೧೦			ಗದಾ ೪. ೪೭
ಕುಲಮಂ ಚಲಮಂ	೧೧೪. ೩,	೧೯೭			
	೧೧೬. ೧				
ಕುಲವೃದ್ಧರಿರ್	೨೩೧. ೩				
ಕೂಡಿದಂಗೆರಡಂ ತಾಂ ಬಗೆ	೮೨. ೪				
ಕೂರಿದನುಂ ನೇರಿದನುಂ	೧೬೩. ೪				
ಕೂರಿದರಿರ್ ಕಾಳೆಗದೊಳೆ	೨೩೧. ೧				
ಕೂರ್ತಳಿಪಿಂದಮನ್ಯವಧು	೨೪೯. ೧೧				
ಕೃತಿಮಾರ್ಗದೊಳ್	೨೦೮. ೩				
ಕೃಪನುಂ ಸಂಗ್ರಾಮದೊಳ್	೨೨೮. ೯	೩೮೫			
ಕೆದಜಿದ ಮಾಂಸದಿಂದೆ	೧೧೭ ಅ.ಟಿ.				
ಕೆದಜುತ್ತುಂ ಮಣಲಂ	೨೪೭. ೪	೪೮೯	೨೬೦.೧೪೪		
ಕೆಂದಳಿರ್ ಮಿಸುಪ	೨೫೩. ೩				ಪುಷ್ಪದಂ೮.೮೧
ಕೇಲಂ ಮಾಡುವ ತಿಗುರಿ	೭೯. ೧೫		೪೫.೧೩೦	೧೧೧೩	ಶೂದ್ರಕ
ಕೇಸುರಿಯನುಗುಳ್ವುದೋ ೨೮	೧೯೩. ೮			(ಹೋ)	ಲೀಲಾ ೧೧.
ಕೇಳ ಮಾಧವ	೧೩೪. ೩	೧೩೨			
ಕೊಂದಂ ಕೊಲ್ವಂತೆ	೨೪೮. ೭				
ಕೊಂದರ್ ಕೀಚಕರಂ	೧೦೮. ೭				
ಕೊಂಬಳಿಸಿದ ಮರದಿಂದ	೨೫೩. ೨				
ಕೊಳಗಳ್ ದಳಿತಾಬ್ಜಂಗಳ್	೧೦೫. ೨	೬೨೩			
ಕೊಳ್ಕೊಳ್ಳೆಂದೊಡನೆಯೆ	೨೪೮. ೬	೪೧೬			
ಕೋಗಿಲೆಯುಲಿಗುಂ	೨೩೮. ೫				
ಕೋಡದಿಜಿದಿಂದ್ರರಾದರ್	೨೯. ೫				
ಗಜಹಯರೂಢಿಯೊಳ್	೧೮೦. ೭				
ಗತಿಯಂ ಪಡೆದೇತಜಾತನೆ	೧೨೨. ೩				
ಗರಡಿಯ ಬಳಸಿಂ	೧೧೭. ೧				
ಗಳಗಳನೆ ಕಣ್ಣನೀರ್ ಸುರಿ	೨೦೪. ೫				ವಿಕ್ರ ೩. ೨೫

ಗಟಿಗೂಸಾಡುವರಿಂದ್ರನಂ	೭೫. ೨		೮೭. ೧೩೧		
ಗಿರಿಯಂತೆ ಬಿಣ್ಪಿದಂ	೨೨೫. ೨				
ಗಿರಿಯುಂ ಕರಿಯುಂ ನಿಲ್ಲವು	೨೨೫. ೫				
ಗಿಳಿಯೊಡನೋದಿಯೋದಿ	೨೦೬. ೨	೨೯೦	೮೭. ೧೩೦		
ಗುಣಕ್ಕೆ ನಲ್ಲ ಗಣೇಶಂ	೮೫. ೨				
ಗುರು ನೆಟಿಲೊಳೆ	೨೫೦. ೪				
ಗುಹಾಗಹ್ವರದೊಳಗಿನ	೧೯೯. ೪				ಆದಿ ೩. ೬೮
ಗುಟುಗುಟುಗಟಿಗಟಿ	೩೩. ೪೬		೬೪. ೨		
ಗೆಯಂಗಕ್ಕೆ ತಾನೆ ಸೋಲ್ವ	೧೨೮. ೧	೧೬೭			
ಗೆಲ್ದು ಬೆಳಪ್ಪನಿಗೇ	೨೪೩. ೯				
ಗೇಣ್ವಾಯ್ಗೆವೀಟಿದೆ	೭೭. ೧೧				
ಗೋವರ್ಕಳಿದಿರ್ಚಿದ	೧೧೧. ೨	೫೮			
ಗಂಗೆಯ ಮಡುಗಳನಡ	೨೫೭. ೫	೪೧೦			
ಗಂದಿಗನೇರಣಿಗಂ	೨೦೮. ೨	೩೨೩			
ಘೃತಾಹುತಿವಡೆದನಲನಂತೆ	೨೪೨. ೨				
ಚಂದ್ರನೇ ಕೊಳನೇ	೧೩೫. ೪				
ಚಲದಿಂ ಮುಯ್ಯೇಟು	೧೯೯. ೬				
ಚಲದೊಳಮಾಚಾರದೊಳಂ	೧೩೩. ೮				
ಚಳಚಳನೆ ಮಿಂಚಿತ್ತು	೨೦೪. ೬				
ಚಿತ್ತಭವಗ್ರಹದ ಸೋಂಕೆ	೧೪೫. ೨				ಸುಜನೋತ್ತಂಸನ ಕಾವ್ಯ ?
ಚುರ್ಚಿದವೊಲ್ ಬಿಸಿಲ	೩೪. ೨				ಗುಣನಂದಿಯ ಕಾವ್ಯ ?
ಚೋಳನ ತಲೆ ನಾಳೆ	೧೯೯. ೨				
ಚಿಃ ಗತಿಯೆಂಬುದೇತಜಿ	೧೨೨ ಅ.ಟಿ				
ಛಮ್ಮೆಂಬ ಛಟಚ್ಛಟೆಂಭ	೭೧. ೯	೨೮			
ಜಗುನೆಯ ತಡಿಯಲ್ಲಿ	೨೪೨. ೪				
ಜನೋದಯಂಗಿದಂ	೨೨೮. ೭				ಶೂದ್ರಕ
ಜಲನಿಧಿನಿಭೋರಃ ಸ್ಥಳ	೮೨. ೧೨				
ಜಲನಿಧಿವೋಲ್ ಗಂಭೀರಂ	೨೨೫. ೧	೬೬೭			
ಜವದಿಂದಗಮಲೆಯಂ	೨೪೯. ೭				

ಜವನೇಜಿದೊಂದು	೧೮೩. ೨				ಭುರಾ?
ಜವಂ ಮೃಡನೊಳ್	೧೭೮. ೭				
ಜಳನಿಧಿ ಜಳಚರಚಯಮಂ	೮೪. ೧	೨೪೯			
ಜಳಧಿದ್ವೀಪಾಂತರಾಳಂ	೧೩೬. ೮				ಆದಿ ೧೩. ೪೪
ಜಾತವೇದಂ ಪಟು ಕಪಟ	೨೫೧. ೧				
ಜಾದಿಯತ್ತಣಿಂದೆಯುಂ	೧೩೩. ೭				
ಜಂತ್ರದ ಕೀಲಂ ಕಳೆದಂತಿ	೭೯. ೧೬				
ಟಿಕ್ಕೆಯ ಕಲ್ಗಮೀ	೧೭೮. ೨				
ತಕ್ಕರಂ ಮಿಕ್ಕರದೇಕೆ	೨೫೨. ೧				
ತಕ್ಕಿಂದಿಜೀವೆಡೆಯೊಳ್	೨೫೦. ೧				
ತಡಗಾಲಿಂ ಪೊಯ್ದನಂದು	೧೮೪. ೨				
ತಡೆದಳ್ ಬಾಸಿಗವಿಕ್ಕು	೨೩೭. ೪				
ತಡೆಯದೆ ನಿನಗಪ್ಪು	೨೨೮ ಅ.ಟಿ.				ರಸ ೨೧೭
ತಡೆವಂತೇಂ ಕಾರಣಂ	೧೩೪. ೭	೧೩೩			
ತಣ್ಬುಟಿಲ ತಳದೊಳ್	೭೫. ೬	೫೭			
ತತ್ಪರಿಜನಂಗಳಾಲಾಪಂ	೮೯. ೧				
ತದ್ಧಾರಾಪುರ ಸ್ತ್ರೀಯರಂ	೧೦೭. ೩				
ತನುಗೆ ಭೂಷಣಂ ಪೊರೆಯ	೧೨೩. ೫				
ತನುಜನ ಬಳವಿಯನೆ	೨೨೯. ೫				
ತನ್ನಂಬೆಗೆ ಪೇೞ್ದುದಂ	೨೪೭. ೭				
ತನ್ನ ನೀಳ್ದ ಜಸದಿಂ	೮೨. ೧				ಅನಂತ ೫. ೯೯
ತಪ್ಪಂ ತನ್ನೊಳ್	೨೫೧. ೭				
	೨೫೨. ೮				
ತಮರೂರ್ಗೆವೋಪ ಕುಲ	೭೭. ೧೯	೨೭೨			
ತಮತಮಗೆ ಭಯಂಗೊಂಡ	೨೫೬. ೨				
ತಮ್ಮಿಂದಿರ್ವರುಂ	೧೦೮. ೨	೧೪೬			ಗದಾ ೨.೧೧
ತಂತಮ್ಮನೆ ಕೊಂದರೆಂದು	೨೪೮. ೧				
ತಂತಮ್ಮ ರಾಜ್ಯಚಿಹ್ನಂ	೧೮೮. ೩				ವಿಕ್ರ ೩. ೪೩
ತರವೇೞ್ ಮಾಣಿಕ್ಯ	೩೦೪. ೧	೨೮೪			ಹಂಸರಾಜನ ಕಾವ್ಯ

ತರವೇಟ್ ಸನ್ನದ್ಧವಾಜಿ	೨೪೬. ೨	೪೧೩			
ತರ್ದುಗಳಟೆಗುಂ	೨೭೫. ೨				
ತಳಿಯ ಕೂಟಿ	೩೩. ೫೮				
ತಳಿರೇ ತಾವರೆಯೇ	೧೩೭. ೪				ಪಂರಾ ೯. ೧೧೮
ತಳಿರ್ವಾಸಿನಿಂದೆ	೧೧೮. ೧				
ತಱತಱನೆ ನೇಸರ್ಮೂಡಿ	೨೦೪.೪				ವಿಕ್ರ ೩. ೨೬ (ಹೋ)
ತಾಂ ಮಸಗೆ ತಾಗಿದ	೩೪೩. ೫೩				
ತಾನೆ ಗಡಳಿಪಂ ಮೂರ್ಖಂ	೭೯. ೧೨	೧೫೪			
ತಾನೆಚ್ಚಂ ಪೊಚ್ಚಮಲ್ಲದ	೨೩೫. ೧				
ತಾಯೊರ್ವಳ್ ತಂದೆ ಬೇಱ್	೭೯. ೧೭				
ತಾಱುಂಬಳೆಯೆಟ್ಟಿ ಚಂಚು	೧೮೩. ೧		೩೩೯. ೭೦		ಚಂದ್ರಪ್ರ ೮. ೭೨
ತಾವಾ ಸವ್ಯಸಾಚಿಯೊಳ್	೨೩೫. ೨				
ತಾಳಿದಮಕ್ಕುಮೋ	೧೧೪ ಅ.ಟಿ.				
ತಿರಿದುಣ್ಬಂ ಹರಂ	೨೪೩. ೧೧				
ತಿರ್ದಿ ನವನುದ್ದಮಿಸೆ	೨೪೭. ೧				
ತಿಳಿಗೊಳದಿಂದೆ	೧೨೬. ೪				
	೧೪೬. ೩				
ತುರಗದ ವಾಹಳಿಯಂ	೧೧೨. ೨				
ತುಱುಗಳ ಪೆಂಡಿರ ಪಾರ್ವರ	೧೦೭. ೨				
ತುಱುಗಳ ರೋಮಂ	೨೫೫. ೬				
ತೆಗೆದಯ್ ಮೋಕ್ಷದ	೨೨೮. ೪				ಲೀಲಾ ೩. ೮೫
ತೆಂಕನಾಡ ಮಱೆಯಲ್ಕಿನ್ನೇಂ	೧೪೫. ೪				ವಿಕ್ರ ೪. ೩೧
ತೆಂಕವಂಕದೊಳಸಂಖ್ಯ	೧೭೪. ೧	೧೨೨			
ತೆಂಗಾಳಿ ಭೃಂಗಾಳಿ	೮೨. ೬				
	೧೮೭. ೧				
ತೇಜೋನಿಧಿ ಕವಿನಿಳಯ	೫೭. ೩				
ತೊಟ್ಟಂ ಸಮ್ಮೋಹ	೨೪೯. ೩	೩೮೦			
	೨೫೨. ೬				
ತೊಡೆ ಸಂಕಲೆಯಿಕ್ಕಿದ	೧೧೭. ೪				

ತೊಡೆಗಳ್ ರಂಭಾಸ್ತಂಭದ	೧೦೫. ೧				
ತೊಪ್ಪತೊಪ್ಪನೆ ಮರುಳ್	೨೦೪. ೨				
ತೊಂಬತ್ತೊಂಬೈಸಾಸಿರ	೨೦೧. ೧	೨೭೪			ಆದಿ ೭. ೬೪
ತೊಂಬತ್ತೊಂಬಯ್ಯಾಸಿರ	೨೦೧. ೧	೨೭೪			ಆದಿ ೭. ೬೩
ತೊಱೆಯಂ ಪಾಯ್ದೆತ್ತಿ	೬೩. ೧೩				
ತೊಳಪ ದಂತಮರೀಚಿ	೨೪೩. ೫	೮೭೯			
ತೋಳಬಾಳಕಾಂತಿ	೧೧೯ ಅ.ಟಿ.				
ತೋಳ್ಗೊಪ್ಪುವನಾಳ್ದನ	೮೫. ೧				
ದಾನಿ ದಯಾಪರನತ್ಯಭಿಮಾನಿ	೮೬. ೧				
ದಿವದಿಂ ಕೆಲಸಕ್ಕೆ ವರ್ಪ	೭೭. ೨೦				
ದೆಸೆಗಲನಳುರ್ದು ಸುಡಲ್ಕೆ	೨೯. ೩	೨೩			
ದೆಸೆಯೆತ್ತಾಗಸಮೆತ್ತಣ್ತು	೧೬೦. ೧				
ದೇವತಾದ್ವಾರದೇಶದೊಳಿರ್ದು	೨೦. ೧				
ದೇವ ಬಿನ್ನಪಂ	೧೩೪. ೧	೭೪			ಭಾಭೂ
ದೇವರೆ ಕರುಣಿಸಿದಿರೆ	೧೩೫. ೬				
ದೇವತೆಯರ್ ಮೆಚ್ಚಿಬರಮನ್	೯೮. ೫				
ದೇವಾಸುರಮಂ ಕೇಳಿರೆ	೨೩೫. ೫				
ದೊರೆಯೆನಿಸಿತ್ತು ಭಾರತದೆ	೧೨೭. ೨				ಗದಾ ೧೦. ೨
ದ್ರೋಣಂಗಂ	೨೨೨. ೧				
	೧೩೩. ೫				
ಧನಮುಳ್ಳನ್ ಆವನ್	೬೬. ೬	೫೩			
ಧರೆಯೊಳ್ ವೀರದ ಪೆಂಪಿಂ	೭೭. ೧೫	೭೦			
ಧುರದೊಳ್ ಪರಿಮರಿ	೨೯. ೪				
ಧೃತರಾಷ್ಟ್ರಂ ನುಡಿದಾರ್ತನೇ	೧೫೬. ೩				ವಿಕ್ರಮಾ ೧೦. ೧೦
ನಗೆಮೊಗದೊಳುಗಿದು	೨೫೧. ೪				
ನಗೆವಡಿಕಾರರಿಂ	೨೧೦. ೧	೩೨೫			
ನಡುಮಾಳಂ ಮುಂದೆ	೧೯೨. ೧				ಸಪ ೧೫. ೮೨
ನಡುವಣ ಕರ್ಪುಂ	೭೭. ೩	೧೫೦			
ನಡೆತಂದು ಮೇರೆದಪ್ಪಿ	೨೪೮. ೨				

ನಡೆದುದು ತಲೆನವಿರ್ಗೂಟಂ	೫೨. ೩				
ನಡೆದುದು ಹಂಸೆ	೧೪೯. ೧				
ನಡೆನಡೆಯೆಂದು	೨೦೬. ೬				
ನಡೆನಡೆಯೆಂದೇಂ	೬೩. ೧೫	೨೯೪			
	೨೪೧. ೭				
ನಂಟರ ನಲ್ಲರ ಮಾತುಗೇಳ	೧೦೭. ೫		೨೦೧. ೩೯೨		
ನದಿಯೆಲ್ಲಂ ಸುರಸಿಂಧುವೆ	೬೫. ೧೦				
ನ ದೇವ ಚರಿತಂ ಚರೇತ್	೭೧. ೭				ಆದಿ ೧೩. ೮೪
ನರನಾ ತೆಱದಿಂ ಪೆರ್ಚಿಕ್ಕೆ	೨೪೦. ೩				
ನರನೆಂಬಾತಂ ಪೆಱನಲ್ಲ	೧೬೩. ೧	೪೩			
ನರನುಂ ನರನಂದನನುಂ	೧೩೩. ೩				ಗದಾ ೩. ೫೦
ನಲ್ಲಳೆ ನಿನ್ನ ಕಾಲ್ವಿಡಿದಪೆಂ	೧೩೭. ೨				
ನಾಣಂ ಪಿಂಗಿಸಿ ಮುಗ್ದೆಗೆ	೭೯. ೧೪				
ನಾಸಿಕವಡ್ಡಂ ಬಂದಂದಮ	೧೧೪. ೭				ಕಮಾ೩.೨೩೩*
					ಲೀಲಾ ೩. ೪೧
ನಾಳಿನ ದಿನದೊಳ್ ನೀನು	೨೩೪. ೬				
ನಿಜತೇಜಂ ನೀಳ್ದ	೨೨೫. ೫				
ನಿಜಸೈನ್ಯ ಭಾರದಿಂದೆಣ್ದೆಸೆ	೨೦೦. ೫				
ನಿನಗೆ ತನಗೆನಗೆ	೧೫೭. ೨				
ನಿನತು ಚಲಮೆನತು	೧೫೮. ೧				
ನಿನ್ನ ಬೆಗಟ್ಟಿ ಭಂಗಿ	೧೯೪. ೩				
ನಿನ್ನೊಡನೊಂದು ಭಾಗಮಂ	೨೪೩. ೭				
ನಿಮಗಕ್ಕೆಮ ಅಬ್ಜಗರ್ಭ	೬೭. ೫				
ನಿಮಗೆ ಸಖಂ ಕಮಲಸಖಂ	೯೫. ೨				
ನಿಮಿರ್ದುವು ಪೊಳೆದುವು	೨೩೬. ೩				ರಸ ೨೮
ನಿಱಿದಲೆ ನೀಳ್ದುವೆತ್ತ	೭೫. ೫				

* ಮದ್ರಾಸ ಆವೃತ್ತಿ.

ನಿಲ್ತಂ ಬೆನ್ನೊಳ್ ಗಾಂಡೀವಿ	೨೪೮.೧೦				
ನಿಶ್ಶಂಕೆಯಿಂ ನೃಪನ ಪೇಟೆ	೧೪೫. ೧	೧೨೨			
ನೀನಾಗಾನಾರ್ಗೆ	೧೫೭. ೧				
ನೀನುಮಾತನುಮಾನುಂ	೨೩೪. ೨				
ನೀನುಳ್ಳೊಡುಂಟು	೧೩೭. ೧,		೨೫೬. ೫		
ಗದಾ ೫. ೨೦					
ನೀಮಿರೆ ಮತ್ತವಾರಣಮು	೨೩೫. ೪				
ನೀರ್ವಾನಸೆಯಂತೆ ವಿಜಯ	೧೯೫. ೫				
ನೀರ್ವೂಗಳನಟ್ಟಿಕೊಂಡು	೭೭. ೯	೭೧			
ನೀಲಗ್ರೀವನುಮಾರ್ತನಿಲ್ಲ	೨೫೬. ೭				
ನುಂಗುವುವುಮೊಳವುದಧಿ	೨೫೬. ೬				
ನುಡಿಗೆಲ್ಲಂ ಸಲ್ಲದ ಕನ್ನಡ	೧೦೮. ೮				ಕಮಾ ೧. ೩೩
ನುಡಿದನೆ ಕಾವುದನೇ	೬೬. ೫	೪೯			ಶ್ರಬೆ ೩೮
ನುಡಿನುಡಿಯೆಂಬ ಚಲಂ	೨೪೧. ೧		೨೦೯. ೪೪೩		
ನುಣ್ಚರದ ತಿಣ್ಪು ಘನ	೭೮. ೧	೭೪			
ನೂರ್ಛಾಸಿರಂಗಳವೊಲಾ	೭೮. ೫	೨೭			
ನೆನೆದಂ ಹಿರಣ್ಯಕನ	೧೮೦. ೫	೭೧೬			
ನೆನೆಯದೆ ಕಜ್ಜದ ಬಿಣ್ಪಂ	೨೪೦. ೫	೪೦೪			
ನೆರೆದರಸುಗಳನಿಬರುಮಂ	೧೦೯. ೩				
ನೆಲದೊಳಗೆ ಪಗೆ ಪುಗೆ	೨೯. ೬				
ನೆಲನದಿರೆ ನೋಟಕರ್	೨೫೭. ೭				
ನೆಲ್ಲುಂ ಕೌಂಗುಂ	೭೯.೭ ೨೨೯.೧		೭೩. ೫೧		
ನೇಸಜ್ ಮೂಡಿದುದು	೧೯೪. ೫				ವಿಕ್ರ ೩. ೨೭
ನೊಪ್ಪನೊಪ್ಪನೆ ತೂಕವನೆ	೨೦೪. ೩				
ನೋಳ್ದಿಕೊಂಡಂತೆ	೨೫೨. ೧೫				
ನೋಳ್ಪೊಡೆಳ್ಳಂ ಕೊದಳಿ	೭೯. ೧೧				
ಪಗಲಂತಿರ್ದಚ್ಚವೆಳ್ದಿಂಗಳ	೧೧೯. ೧		೧೮೧. ೨೭೫		ಆದಿ ೧೨. ೯
ಪಗಲಿನ ರವಿ ಕಿರಣಂಗಳೆ	೧೧೯. ೨				

ಪಾಱುಂಬಳೆ ನಾರಾಚಂ	೧೮೧. ೪		೨೧೪. ೪೭		
ಪಾಲಾ ಅಮರ್ದಾ	೬೭. ೭				
ಪಾಲಿಕ್ಕುಂ ಜಗಮನೆಲ್ಲಮಂ	೨೩೯. ೪				
ಪಾಳಿಸುತಿರ್ಕೆ ವಿಷ್ಣು	೨೪೦. ೧				
ಪ್ರಾಯಂ ಕೂಸಾದೊಡೆ	೨೫೪. ೪				
ಪಿಂಗೆ ಪೂಸಿದ ಭಸ್ಮಪರಾಗಂ	೧೭೯. ೭	೮೦೪			
ಪಿಡಿಯೆಂದಸಿತಾಳ	೬೩.೬				
	೨೫೦. ೩				
ಪಿರಿದೀವಂ ನಿಲೆ ನುಡಿವಂ	೮೨. ೧೩				
ಪಿರಿಯರೆವೆಂದು ಧಿಕ್ಕರಿಸಿ	೨೩೧. ೨				
ಪುಲಿಗಂಜಿ ಪುತ್ತನೇಱಿದೊಡೆ	೧೪೧. ೧				
ಪುಲಿಯ ಬಾಯಿಂ ಬಟ್ಟುಂ	೩೩.೧೫೭				
ಪುಂಸ್ಕೋಕಿಲ ಧ್ವನಿ	೨೫೩. ೭				
ಪೂಱವಕೆಯಂ ತರವೇಳೆನೆ	೭೨. ೨				
ಪೂವಿನ ಬಿಲ್ಲಕೊಪ್ಪ	೧೧೮. ೨,		೬೫. ೩		ಮಲ್ಲಿ ೧೪. ೨೭
ಪೆಡಮೆಟ್ಟಿಂ ಬರ್ಪ	೧೮೪. ೩				
ಪೆಡಂ ಮೆಟ್ಟದೆ ಸೂಟಿ	೧೮೪. ೧				ಭುರಾ?
ಪೆಱತೊಂದನಣಂ	೨೪೫. ೪	೪೧೨			
		(ಹೋ)			
ಪೆಱಱುಮನ್ನರಿನಿ	೧೬೩.೨	೯೫			
	೧೦೮. ೪				
ಪೆಱವಱ ಧರ್ಮಂ	೧೦೬. ೧	೫೧೯			
	೧೨೦. ೧				
ಪೆರ್ಮರನಡರ್ದ	೧೯೨.೨೮.ಟಿ.				
ಪೆರ್ವಲೆ ಬಡಿಕೋಲ್	೧೯೨. ೨				
ಪೇಱಿದಿರ್ಪತ್ತು ತೋಳುಂ	೭೬.೬	೩೦೧			
ಪೇಟನಿತರ್ಕಮೊಳಂ	೨೫೬. ೩				
ಪೇಟವೆ ಧರ್ಮನಂದನ	೧೦೮. ೨				
ಪೊಕ್ಕನಂದು ನಿಜಮಂದಿರ	೨೫೦. ೨				ವಿಕ್ರ ೫. ೧೦೫

ಪೊನ್ನುಳ್ಳವನೆ ಕುಲೀನಂ	೭೯. ೧	೮೦			
ಪೊಮ್ಮರಿವೊಲ್ ಪೊಳೆದು	೨೫೩. ೧				
ಪೊಱಮಾಱದೆ ಸೈತು	೨೫೪. ೨				
ಪೊಲನಱಿಯದ ನೆಲನಱಿ	೧೧೪. ೧		೩೯. ೮೯		
ಪೊಲ್ಲಮಾನಸರ	೧೮೮. ೧				ರಸ ೧೪೪
ಪೊಸಬನಿದಾವನಾದ	೧೬೪ ಅ.ಟಿ.				ಲೀಲಾ ೨. ೫೧
ಪೋಕೆ ಬರ್ಕೆ ಮುಳಿಸಿಲ್ಲ	೨೫೪. ೧				
ಪೋಗಲೀಯದಡಸಿ	೨೫೩. ೮				
ಪೋಪಂಗೆ ಬರ್ಪಂಗನಾ	೨೫೩. ೯				
ಪೋ ಪೋಗು ಕಾಡುತ್ತೆ	೨೪೭.೬				
ಪೋಲ್ತಂ ಕಿಸುಸಂಜೆ	೧೯೩. ೫				
ಬಗೆದಂತಾಗೆ ಸುರೇಂದ್ರರಿಂ	೧೧೭. ೫	೧೧೧			ಆದಿ ೩. ೮೦
ಬಗೆದಂ ಶ್ರೀಗಂಗಚಕ್ರಾ	೨೨೮.೧				
ಬಗೆಪೊಯ್ತಿಗಳೆಲೇ	೨೫೩. ೬	೪೮			
ಬಗೆವೊಡಮಿನಿಸಿನಿಸಿರಿ	೭೧. ೧				
ಬಟ್ಟೆಯಿರ್ದಸೆಯರಗಾವುದ	೧೨೦. ಅ.ಟಿ.				
ಬಡವರ ಪಿತರರಂತೆ	೯೫. ೧	೧೮೧			ವಿಕ್ರ ೭. ೩೩೧ (ಹೋ)
ಬಡವಾದಿರರಸ	೧೧೨. ೨				
ಬಣ್ಣಿಪೆನಾಂ ಜಯದಂಕ	೨೨೮. ೮				
ಬನದೊಳ್ ಪುಗಿಲ್ ಪುಗಿ	೨೪೫. ೫				
ಬನದೊಳಗೆ ಪೋಗಿ	೭೧. ೫	೬೨೨			
ಬಂದಂ ಫಲ್ಗುಣನಿಲ್ಲಿ	೨೧. ೨				
	೨೪೮. ೪				
ಬಂದಂ ನರಂ	೨೪೮. ೫				
ಬಂದನೀಗಳ್ ಪೆಱನಲ್ಲಂ	೮೩. ೩				ವಿಕ್ರ ೧೩. ೭೭
ಬಂದರ್ರಾಮರ್	೭೩.೧				ಶದಪಾ ೬೬
ಬಂದಿವಿಡಿದಂ ಬಿಂಬಾಧರ	೩೧೩. ೨		೩೨೯. ೯		
ಬನ್ನಿಯ ತರು ಡಕ್ಕೆಗೆ	೭೨. ೧				
ಬಯಲ್ಗೆವಂದಪರೋ	೧೨೪. ೧				

ಬರಲೊಡನೆ ಕೊಟ್ಟಂ	೨೫೭. ೮				
ಬರವೇೞೆಂಬುದುಂ	೨೫೭. ೨				ವಿಕ್ರ ೯. ೩೧
ಬರಿಸಿ ಪ್ರಧಾನರಂ	೬೯. ೧				ಕ.ಮಾ ೨. ೭(ಹೋ)
ಬೞುವಾತುಗುಟ್ಟಿ	೧೭೮. ೫				
ಬರ್ಪ್ಪಂಬಂ ನಿಶಿತವಿಶಿಖದಿಂ	೨೪೨. ೫				
ಬಲನಾರಾಯಣರಿರ್ವರುಂ	೨೩೮. ೭				
ಬಲಿಯಂ ಬೇಡುಗುಮೆಂದು	೬೩. ೫				
ಬಲ್ಲಂದಿಕಾಜಿನ ವೋಲ್	೩೧೩. ೧	೪೬. ೧೩೩			
ಬಹುತಾಪಕ್ಕೆ ಬಿಗುರ್ತು	೨೩೨. ೬	೨೫೫. ೧೨೧			ಭಾಭೂ ೯೩ ಪಂರಾ ೭. ೯೮
ಬಿಟ್ಟುದು ಬಳ್ಳವಾಡಿ	೩೪. ೧				
ಬಾದುಂಟೆನೆ ಪತ್ತನೆಯ	೨೫೨. ೧೭				
ಬಾಯಂ ತೆಱೆದೊಡೆ	೨೦೩. ೨				
ಬಾಯೊಳ್ ಪದಿನಾಲ್ಕು	೭೯. ೧೮				
ಬಾಯ್ಸವಿಗೆ ಮೆಯ್ಸವಿ	೭೮. ೯				
ಬಾರ ಮರಾಳಿಕಾ	೧೩೬. ೭ ೨೪೯. ೧೨	೨೧೩. ೪೬೪			
ಬಾರಿಸಿದುವು ಬಿಡದೆ	೯೮. ೬				ಆದಿಪು ೯. ೯೩
ಬಾಲವಣಂ ಬೇಡುವ	೮೩. ೪				
ಬಾೞ್ದಿನೆಂದು ಮದನಂ	೮೩. ೧				
ಬಿಗಿವಂ ಕಣ್ಬು ಮುಟ್ವಂ	೨೩೨. ೧೩				
ಬಿಜ್ಜಮ್ಬೆತ್ತೆಸೆವ	೨೫. ೧	೧೮			
ಬಿಡುಮುಡಿ ಬೆನ್ನನಪ್ಪಳಿಸೆ	೭೯. ೨				
ಬಿಣ್ಣೊಗ್ಗೆಯಿಂ ತುಱುಗಿ	೧೯೦.ಅ.ಟಿ.	೨೧೮			
ಬಿತ್ತರಿಸಲ್ಕೆವೇೞ್	೨೪೬. ೧	೪೧೩			
ಬಿರಯಿಗಳ ಸುಯ್ಯಗ್ಗಳೊಡನೆ	೧೦೬. ೩	೬೧೫			
ಬಿಲ್ಲೆಱೆಯನೆಂದುದೆ	೨೪೫. ೨				
ಬಿಸುನೆತ್ತರ ಧಾರೆಗೆ	೧೯೩. ೬				
ಬೀದಿಗಾ ಪೊಟಲಿಚರ್	೧೮೦. ೬				

ಬೀಸುವ ಬಿಜುಗಾಳಿ	೧೯೫. ೨				
ಬುಧರ್ಕಳಿರ ನಿಮ್ಮಗುಣ	೧೩೬. ೨				
ಬೆಕ್ಕಸಂಬಟ್ಟು ಬಾಯಂ	೨೫೨. ೫				ಪಂರಾ. ೭. ೧೩೯ ಮಲ್ಲಿ ೮. ೫೩
ಬೆಟ್ಟವೇಸಗೆಯ	೧೮೯. ೧				
ಬೆಟ್ಟಿದುವೆನಿಪ್ಪ ಲೋಹ	೧೦೭. ೧				
ಬೆಮರ್ಗಳನೂದಿ	೫೨. ೨		३४೦. ७५		
ಬೆಸೆಯದಿರ್ ಕುಸುಮ	೧೩೪. ೨				
ಬೆಳಗಿದುವೆಂಟುಂದೆಸೆ	೧೯೫. ೭				
ಬೆಳೆಗಳ್ ಕಳನಂ	೨೨೯. ೨				
ಬೆಳೆಗೆಯ್ಗಳೊಳಿರ್ದು	೨೦೬. ೮	೨೯೩			ಭಾಭೂ. ೧೯೭ (ಹೋ)
ಬೆಳೆವೊಲನೆತ್ತಲುಂ	೭೭. ೨				
ಬೇಟಮಂ ಹಡೆದನೆ	೭೭. ೧೨				
ಬೇಡ ಗಡಾ ಬೇಡ ಗಡಾ	೧೨೭. ೫				
ಬೇಡರವೋಲ್ ಮಸಗಿ	೨೪೮. ೮				
ಬೇಡಿದನಿಷ್ಟಮಂ	೮೨. ೩				
ಬೇರ್ವರಸಿ ಕಾಯ್ತು	೭೭. ೮				
ಬೇಟ್ಟರಿದಿರೊಳ್	೨೪೯. ೬				
ಬೈಗಿನ ಕೆಂಬಿಸಿಲ್	೨೬೦. ೨				ಕಾದಂ ೨೭೫
ಭಟ್ಟರೆ ಬಂದಿರೇ	೧೩೫. ೫				
ಭಯದಿಂದಂ ಮುಳಿಸಿಂದಂ	೧೧೭.೩	೧೧೦			
ಭೀತನದಾತನ	೯೪. ೧				
ಭೀತನಿಕಾಯಕ್ಕೆ	೯೪. ೩				
ಭೀಮಭೀಮಗದೆಯಿಂ	೨೨೮. ೫				ಗದಾ ೫. ೫
ಭೀಷಣಮಾಯ್ತು ಸೈನ್ಯಂ	೨೫೩. ೫				
ಭುವನತ್ರೀಣೇತ್ರ	೨೫೨. ೧೧ ೨೫೬. ೧				
ಭೂವಳಯಾಧಿಪಂ ನುಡಿ	೨೩೮. ೨	೮೭೯			
ಭೋಂಕನೆ ದೇವಸ್ತ್ರೀಯ	೬೩. ೧೬				

ಭೋರ್ಭೋರೆನೆ ಪಾಯ್ವುದು	೨೦೬.೪	೨೯೨			
ಮಡಿವಳ್ಳನಡಪವಳ್ಳಂ	೨೦೯. ೧	೩೨೬(ಪಾ)			
ಮಣಿಗಾಱಿರ ಕಂಚಗಾಱಿರ	೧೦೮.೧೧	೩೨೮			
ಮಣಿಯದೆ ಕುಣಿದಿದಿರನ	೨೫೨. ೩				
ಮಣಿಯುಡೆದೊವಲುಂ	೭೫. ೪				
ಮಂಡಲವ್ಯೂಹಮನೊಡ್ಡಿ	೨೪೮. ೯				
ಮಣ್ಣೊಳೆ ಜೀವಿಸುವ	೨೧೨. ೧				
ಮತ್ತ ಹಸ್ತಿಗಳ	೧೨೬. ೨	೧೧೯			
	೧೪೬. ೧				
ಮತ್ತಿನ ಮತ್ತಿನ	೧೦೦. ೪				ಸುಜನೋತ್ತಂಸನ
	೧೧೮. ೩				ಕಾವ್ಯ
ಮದಗಜವೆರಡಱ	೮೩. ೨				ರಸ ೧೯೦. ಹರಿವಂಶ?
ಮದನಮಹೇಶ್ವರನಾರ್ತೀವಂ	೭೬.೭				ಭಾಭೂ. ೧೮೭
ಮನದಿಂ ಬೇಗಂಮುಟ್ಟಿ	೧೧೬. ೨	೧೦೬			
ಮನದೊಳ್ ದಯೆಯಿಲ್ಲದನ	೭೯. ೪				
ಮನಸಿಜನೆನ್ನ ನಿನ್ನಂ	೧೭೧. ೨				
ಮನುವೇ ನಿನ್ನಯ ಮಾರ್ಗಂ	೧೩೫. ೨				
ಮನುವಿನ ಮಾರ್ಗಂ	೬೫. ೨	೧೧೩			
	೧೧೮. ೪				
ಮರಗಿಡುಬಳ್ಳಿ	೮೨. ೯				
ಮರಣಕ್ಕೆನ್ನಿಂದೆ ನೀಂ	೨೩೫. ೩				ಗದಾ ೫. ೭
ಮರದ ಹರಿಯಣದೊಳು	೨೫೨. ೯				
ಮರನಿರ್ದುದು ಮರನಂ	೧೦೩.೧				
ಮರವಣಿಗೆಗಂ ಬೀಣೆಗಂ	೭೭. ೪	೬೫			
ಮರುತ್ತರಂಗಿಣಿಯನಂದಾ	೨೩೨.೧೧		೨೫೬. ೧೨೧		ಪಂ.ರಾ ೭. ೯೮
ಮರಳ ಬಾಯ್ವುಱ್	೭೭. ೬ ೬೬				
ಮಱಿಸೊಂದಿದ ಪುಲಿಯಂ	೨೫೨.೧೪	೪೪೮			
ಮಱುಗುವಿನಂ ಮಾಣದೆ	೨೪೯. ೧				
ಮಟಲಬೇಂಟೆಯಂ	೩೪೩.೧೯೦				

ಮಹೇಂದ್ರ ಮಹದೈಶ್ವರ್ಯ	೧೪೮				ಆದಿ ೧೦. ೬೬
ಮಾಡಿದಪಂ ಖಳ ಸಮಿತಿಗೆ	೨೩೨. ೪	೩೮೮			
ಮಾತುಗುಟ್ಟದೆ ಮೂಗು	೧೭೮. ೪				
ಮಾತೆಲ್ಲಂ ಹೊಲೆಸೂರುಳ್	೬೫. ೮		೨೧೧. ೪೫೨ (ಹೋ)		೧೦೦೦ ಲೀಲಾ೨.೧೦೨(ಹೋ)
ಮಾದಾನಿ ಶೌರ್ಯಧನಂ	೧೮೬. ೩	೨೫೪			
ಮಾದೇವನುಮಂ ಮೂಱು	೨೩೮. ೩				
ಮಾನಾಮಿಯ ಸಾಣಿ	೧೮೬. ೪				
ಮಾಂಧಾತನ ದೊರೆಯಪ್ಪ	೯೪. ೨				
ಮಾಮರನಲ್ಲದಿಲ್ಲ	೭೪. ೧		೬೬. ೯		
ಮಾಮರನದೆ ಇನಿದಪ್ಪ	೭೪. ೨				
ಮಾಱಾಂತೆಚ್ಚಂ ಮಹಾರಥ	೨೫೦. ೭				
ಮಾಱಾಳಿಯುಮೋದಾಳಿ	೨೧೪. ೧	೩೫೩			
ಮಾರ್ತಾಪ ತೆರೆಗಳಿಂ	೭೬. ೮				
	೨೫೧. ೬				
ಮಾರ್ಪಡೆಗೆ ತೋಳಬಾಳ	೨೪೩. ೨				
ಮಾಲೆವೂಗಳೆಲ್ಲವಱ	೧೦೬. ೨				
ಮಾವಿನೊಳ್ ಮಸಗುತು	೭೮.೧೧		೭೧. ೩೪		
ಮಿದುಳಳಜಿಂದಮೊಕ್ಕ	೧೧೭ಅ.ಟಿ.				
ಮಿಂದುಂಡು ಕುಡಿದು	೨೪೭. ೨				
ಮಿಱುಗುತ್ತಿರ್ಪ ತ್ರಿಶೂಲ	೬೯. ೨				
ಮಿಟ್ಟುಗೆ ಮಾರಿಗೆ ಪಚ್ಚರ್	೨೫೨. ೪				
ಮೀನಾಗಿಯುಮೆಸಡಾಗಿಯು	೭೯. ೧೩				
ಮುಕ್ಕೊಡೆ ಪುಷ್ಪವೃಷ್ಟಿ	೧೯೯.೩	೨೬೪			
ಮುಗಿಲಂ ಮಾಱಾನೆ	೨೪೯.೨				
	೨೫೨.೭				
ಮುಟ್ಟಿತು ಮುಟ್ಟಿದು	೨೩೭. ೧	೩೯೫			
ಮುತ್ತಿದನೊಂದೆ ತೇರೊಳ್	೧೬೨. ೫				
ಮುತ್ತಿದನೋ ಇಂದೆ	೬೭. ೪				

ವಿಧುವಿಲ್ಲದಿರುಳ್	೬೫. ೧೧	೪೧			ರಸ ೮೮ (ಹೋ).
ವಿನೋದದ ಮೊದಲೆಲ್ಲಿದಂ	೧೨೧. ೧	೧೨೩			ಆದಿ ೩. ೧೫
ವಿಪುಲ ಕಲಾಪಕೋಪಶಿಖಿ	೨೫೫. ೪				
ವಿಹಂಗಮವಿದೆಂದೇಕಬ್ಬೆ	೧೩೬. ೩	೩೧೮			
	೨೨೮. ೯				
ವೀರನುದಾರಂ	೧೫೧. ೧				
ವೇದದೊಳೋದಿದಾಯು	೨೫೪. ೩	೪೦೧			
ವೇದವಿದಂ ಕಾಲತ್ರಯ	೧೧೫. ೧		೩೬೩. ೫೩		
ಶರೀರಭೋಗಮಂ ತೊಱೆ	೧೨೪. ೨				
ಶೌಚವಣ್ಮು ಪೆರ್ಮಾತು	೧೧೪. ೬	೫೩			
ಶ್ರೀಮತ್ಸಮಂತಭದ್ರ	೧೧೨. ೧				ಆದಿ ೧. ೧೧
ಶ್ರೀಯಂ ಪೂರ್ವಾರ್ಜಿತ	೬೩. ೮				
ಶ್ರುತದೇವಿ ವಾಣಿವಾಕ್	೯೬. ೧				ವಸ್ತು ೧. ೭
ಸಂಗತ ಸತ್ವರ್	೧೫೧. ೨	೧೪೧			ವಿಕ್ರ ೩. ೬೧
ಸತ್ಯಮಂ ನುಡಿಗಡಾ	೧೩೭. ೬				
ಸತ್ತರ್ ಕಾದಿ ನಿನ್ನುಳ್ಳ	೨೫೧. ೫				
ಸದಭಿಮತಕಾವ್ಯ ಪದವಿಧಿ	೧೧೧. ೧				ಕಮಾ ೧. ೮೩
ಸಪ್ಪಸಪ್ಪನೆ ರಸಂ	೨೦೪. ೧				
ಸಭೆಯೊಳ್ ನುಡಿದಂ	೧೨೯. ೧				
ಸಮನಿಸುಗೆ ಜಗಕ್ಕೆಲ್ಲಿಯುಂ	೧೪೧. ೨				ವಸ್ತು ೯೬. ೩
ಸರಣಾರುಮೊಳರೆ	೭೯. ೨೨	೮೩			
ಸರಸಮೃಜುವೀರನೆಂದಾ	೭೧. ೧೧				
ಸರಸ್ವತಿ ಕೈನೆರವಾಗೆ	೯೮. ೩				
ಸವಣಂ ಬಳಪಂಗೊಳೆ	೧೭೮. ೮				
ಸವನಿಕುಮಾಕಾರಂ	೨೩೯. ೨	೩೭			
ಸಹೋದರರೆಂದೊಸೆದು	೨೩೧. ೪				
ಸಾತಿಶಯಾರ್ಥಮುಂ	೭೭. ೧೦				ಲೀಲಾ ೧. ೭೮
ಸಾಧಿಸಿದಪನಿಂತು	೨೩೨. ೧೦				
ಸಾಯಲೆವೇಡಿ ನೆಲನಂ	೬೩. ೩				

ಸಾರಲ್ ಸಲ್ಲದು	೨೦೩. ೧	೨೭೭			
ಸಾಸಿರ್ವರ್ ವನಿತೆಯರ	೨೦೨. ೨	೨೮೧			ಆದಿ ೬. ೫
ಸಾಳಭಂಜಿಕೆ ಗೆತ್ತು	೨೫೧. ೨				
ಸಿಂಗಮಕ್ಕೆಮ ಅಂಜೆಂ	೬೭. ೬				
ಸಿಡಿಲನ್ನಂ ಸಿಂಗದನ್ನಂ	೧೭೧. ೧				EC-II ೩೨೭ EC -IVಚಿ.ಮ ೧೦೪,೧೪೭
ಸಿರಿ ನೆಲೆಗೊಂಡುದಲ್ಲಿ	೧೨೯. ೨		೬೯. ೨೬		
ಸಿರಿಯೊಂದಾಗದೊಡ	೯೮. ೨				ಸುಜನೋತ್ತಂಸನ ಕಾವ್ಯ?
ಸಿರಿಯೊಲ್ವಳೆ ಹೃದ್ಯವಿದ್ಯರಂ	೯೮. ೧				
ಸುಖಸಂಪದಮಂ ಮಾಟ್ಬು	೧೩೪.೬				
ಸುರಗಿಜಿದೊಱಗಿದ	೨೯. ೧				
ಸುರತರುನಂದನಂ	೧೦೦.೧ ೧೩೬.೧	೧೩೦			ಆದಿ ೩. ೪
ಸೂಸುತುಂ ನದನದ್ಯಚ್ಛ	೨೪೭. ೩	೪೦೯			
ಸೊರ್ಕಾನೆಗಳ್ಗಾಲಾನಂ	೮೫. ೩				
ಸೊಗಯಿಸುಗುಮೆ	೧೯೭. ೨	೨೫೭			
ಸೊವಡೊಂದೊಯ್ಯನೆ	೬೫. ೯	೩೪			
ಸೋನೆಯ ಕೆಸರ್ಕಟಿ	೭೮. ೨				
ಸೈತಿರು ಕಿವಿಗಳ್ಗೆ	೧೨೩. ೭				
ಸೈರಿಸು ಹೃದಯಮೆ	೧೩೭. ೫				
ಸ್ತ್ರೀಯೆಂಬನಾಥೆಯೆಂಬ	೬೩. ೯	೪೦			
ಹರಿ ಕೇಳ್ ಧೂಮ	೨೪೧. ೩		೩೮೩. ೧೪		
ಹಾ ರಾಽಮಾ ಎಂದು	೨೦.೩				ಪಂ.ರಾ.೯. ೧೧೩(ಪಾ)
ಹಿಮಕರಬಿಂಬದಿಂ	೧೩೭ಅ.ಟಿ.				
ಹುಲ್ಲುಂ ಹುಟ್ಟುಗೆಯುಂ	೭೯. ೮				
ಹೊರವನೆ ಇಂದ್ರಂ	೬೬. ೭				
ಹೋತೃವೆಯಾನ್	೬೬. ೫	೧೭೭			ಭಾ.ಭೂ ೨೬ (ಹೋ)

ಕೇಶಿರಾಜನೇ ಹೇಳಿರುವಂತೆ

ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ ।
ವಿಜಯರ ಪೊನ್ನನ ಪಂಪನ ।
ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ ॥[೬೧]

"ಈ ಕವಿಗಳಾದಿಯಾಗಿ ಮತ್ತಂ ಪಲಂಬರ್ ಪ್ರಸಿದ್ಧ ಕವಿಗಳುದಾಹರಣಂಗಳು ಮಿದಱೊಳೊಳವು" ಎಂಬ ಮಾತು ಮೇಲಿನ ಉದಾಹರಣೆಗಳಿಗೆ ಸಂಬಂಧಪಟ್ಟ ಆಕರಗಳ ಸ್ಥೂಲಪಟ್ಟಿಯನ್ನು ವ್ಯಕ್ತಪಡಿಸುತ್ತದೆ.

ಈ ಪ್ರಸಂಗದಲ್ಲಿ ಈತನಿಗೆ ಅತಿ ದೊಡ್ಡ ನೆರವು ನೀಡಿದವ ಇಮ್ಮಡಿ ನಾಗವರ್ಮ. ಕೇಶಿರಾಜನ ಒಟ್ಟು ಪ್ರಯೋಗಗಳಲ್ಲಿ ೧೭೪ ಕಾವ್ಯಾವಲೋಕನ ಮತ್ತು ಕರ್ಣಾಟಕ ಭಾಷಾಭೂಷಣಗಳಿಂದ ಸ್ವೀಕರಿಸಿದುವು.

ಇದಲ್ಲದೆ ರನ್ನ, ಹರಿಹರ, ಆದಿನಾಗವರ್ಮ, ನೇಮಿಚಂದ್ರ, ಬ್ರಹ್ಮಶಿವ, ಜನ್ನ, ಕವಿ ಹಂಸರಾಜ, ನಾಗಚಂದ್ರರಿಂದ ಉದಾಹರಣೆ ಪಡೆದ ಬಗ್ಗೆ ಆಧಾರಗಳು ಲಭಿಸುತ್ತವೆ. ಸುಮನೋಬಾಣನ ಕೃತಿಗಳಿಂದಲೂ ಸ್ವಂತ ಕೃತಿಗಳಿಂದಲೂ ಶಾಸನಗಳಿಂದಲೂ ಸಹಾಯ ಪಡೆದಿರುವ ಸಂಭವವಿದೆ. ಹೀಗೆ ಹುಡುಕಿ ಹೇಳಿದರೂ ಒಟ್ಟು ೭೫೦ರಲ್ಲಿ ೪೫೦ಕ್ಕೆ ಮಿಕ್ಕಿ ಅನಾಮಧೇಯ ಪ್ರಯೋಗಗಳು ಉಳಿಯುತ್ತವೆ. ಇವುಗಳಿಗೆ ಆಕರ ಹುಡುಕುವುದು ಭವಿಷತ್ತಿನ ಸಂಶೋಧನೆಯನ್ನವಲಂಬಿಸಿದೆ.

ಕೇಶಿರಾಜನ ಈ ಪ್ರಯೋಗನಿಧಿಯ ಬಾಹುಳ್ಯಕ್ಕೆ ಬೆರಗಾದ ವಿದ್ವಾಂಸರು ಶಬ್ದಮಣಿ ದರ್ಪಣದಲ್ಲಿ ಕಾವ್ಯಾಂಶ ವೆಗ್ಗಳವಾಗಿ ಪ್ರವಹಿಸಿದೆಯೆಂದು ಪ್ರಶಂಸಿಸಿದ್ದಾರೆ. ಆ ಮಾತಿನ ವಿಮರ್ಶೆ ಇಲ್ಲಿ ಅವಶ್ಯ.

ಕವಿಗಳ ಪ್ರತಿಭಾವಿಲಾಸಕ್ಕೆ ಶಾಸ್ತ್ರ ತಕ್ಕ ವೇದಿಕೆಯೇ ಅಲ್ಲ. ಎಂಥ ಮಹಾ ಕವಿಯಿದ್ದರೂ ಶಾಸ್ತ್ರಭೂಮಿಯನ್ನು ಪ್ರವೇಶಿಸಿದ ಕೂಡಲೇ ಶುಷ್ಕನಾಗಬೇಕಾಗುತ್ತದೆ. ಅದಕ್ಕಾಗಿ ಪಂಚಕಾವ್ಯ ನಿರ್ಮಾತೃ ಕವಿ ಕೇಶಿರಾಜನ ದರ್ಪಣದ ಸಾಹಿತ್ಯಮೌಲ್ಯವನ್ನು ಶಂಕಿಸಬೇಕಾಗುತ್ತದೆ. ಇಲ್ಲಿಯ ಸೂತ್ರ ಶರೀರದಲ್ಲಿ ನೆಲೆನಿಂತ 'ಕಹಳೆಯ ಪಾಂಗಿನ ವೋಲ್', 'ಕವೆಯಾರಮಂ ಬೀಸಿದಂತೆ', 'ಕುಮಾರಿಸ್ತನಯುಗಲ', 'ಕಱು ತಾಯ ಬಟಿಯನುಟಿಯದ ತೆಱದಿಂ'[೬೨] ಎಂಬಿವು ಬಹುಶಃ ಪ್ರಾಚೀನಶಾಸ್ತ್ರ ಕೃತಿಗಳಿಂದ ಆಯ್ದುಕೊಂಡಿರಬಹುದಾದ ಸಾಧಾರಣೋಪಮೆಗಳು. 'ಕರಡೆಯ ಗಿರ್ಗಟದ ದನಿಗಳವೊಲ್', 'ಕಡಲುಡುಗೆಯಾದ ಮೊಡವಿ', 'ಸತ್ಯಣಾಭ್ಯವ್ಯವಹಾರಿ'[೬೩]

೬೧. ಶಮದ (೧೯೬೮) ಸೂ. ೫
೬೨. ಶಮದ (೧೯೬೮) ಸೂ. ೯, ೨೭, ೧೭೩
೬೩. ಶಮದ (೧೯೬೮) ಸೂ. ೭೩, ೧೪, ೭೦

ಎಂಬಿವುಗಳಿಗೆ ಕೇಶಿರಾಜ ಪ್ರಾಚೀನರಿಗೆ ಖಂಡಿತ ಋಣಿ. "ತನು ವಾದ್ಯಂ ನಾಲಗೆ ವಾದನದಂಡಂ ಕರ್ತೃವಾತ್ಮಂ"[೬೪] ಎಂಬ ಸೊಗಸಾದ ಉಕ್ತಿಯೂ ಕೇಶಿರಾಜ ಕೃತವಾಗಿರಲಿಕ್ಕಿಲಲ್ಲ.

'ವರ್ಣಂಗಳ ಪಾಠಕ್ರಮಮರ್ಣವವೃತ ಧಾತ್ರಿಯೊಳ್ ಪ್ರಸಿದ್ಧಂ', 'ಪಂಚಕ ಪಂಚಕಂಗಳಿಂ ಪಂಚಕಮಕ್ಕುಂ', 'ಒಳವು ಮಹಾಪ್ರಾಣಂಗಳ್ ವಿಳಸತ್ಕರ್ಣಾಟ ಭಾಷೆಯೊಳ್', 'ನಿಸರ್ಗಮಾಗಿ ವಿಸರ್ಗಮಿಲ್ಲ', 'ಚೊಕ್ಕಳಿಕೆಯಿನಚ್ಚಗನ್ನಡಂ ಪೇೞ್ವರ ಕೆಯ್ವೊಕ್ಕ ನಿಧಿಯೆನಿಪಪಭ್ರಂಶಂ"[೬೫] ಎಂಬಿವುಗಳಲ್ಲಿ ಕಾವ್ಯೋಚಿತ ಭಾಷೆ ಬಳಕೆಯಾಗಿದ್ದರೂ ಈ ೮ – ೧೦ನ್ನು ಬಿಟ್ಟರೆ ಮಿಕ್ಕವೆಲ್ಲ ಶುಷ್ಕಸೂತ್ರಗಳು.

ಇನ್ನು ಪ್ರಯೋಗಗಳ ಒಡಲಲ್ಲಿ ಕಾವ್ಯಾಂಶವೇನೋ ವೆಗ್ಗಳವಾಗಿ ಪ್ರವಹಿಸಿದೆ. ಅದು ಆತನ ಸಹೃದಯ ಪ್ರತೀಕವೇ ಹೊರತು ಕವಿಹೃದಯ ದ್ಯೋತಕವಲ್ಲ. ಆರಿಸಿಕೊಂಡ ಪ್ರಯೋಗಗಳಲ್ಲಿ ತುಣುಕುಗಳೇ ಅಧಿಕವಾಗಿರುವುದರಿಂದ ಓದುಗರಿಗೆ ಆಗಾಗ ರಸಭಂಗವುಂಟಾಗುತ್ತದೆ. ಈ ದೃಷ್ಟಿಯಿಂದ ಸುಮಾರು ೭೦೦ ಪೂರ್ಣ ಪದ್ಯಗಳ ಬಳಕೆಯಿಂದ ರಸತೃಪ್ತಿ ನೀಡುವ ಕಾವ್ಯಾವಲೋಕನ ಮೇಲು. ಒಂದರ್ಥದಲ್ಲಿ ಅದು ಕನ್ನಡದ ಪ್ರಥಮ ಸೂಕ್ತಿಸುಧಾರ್ಣವ.

ಈ ಸಾಹಿತ್ಯಾಭಿರುಚಿ, ಶಾಸ್ತ್ರಪಾಂಡಿತ್ಯ ಕೇಶಿರಾಜನಿಗೆ ಕೇವಲ ಸ್ವಾರ್ಜಿತ ಸಂಪತ್ತು ಅಲ್ಲ; ಪಿತ್ರಾರ್ಜಿತ ಸಂಸ್ಕಾರ. ಕೇಶಿರಾಜ ಹುಟ್ಟಿದ್ದು ಪಂಡಿತವಂಶದಲ್ಲಿ; ಬೆಳೆದದ್ದು ಸೂಕ್ತಿ ಸುಧಾರ್ಣವದ ಸಾಹಿತ್ಯಸಮುದಾಯದಲ್ಲಿ. ತಂದೆ ಕವಿ, ತಾಯಿಯ ತಂದೆ ಕವಿ; ಈ ಎರಡು ಸಾಹಿತ್ಯ ಕುಟುಂಬಗಳ ಫಲ ಕೇಶಿರಾಜ. ಇದು ಆತನ ಪಿತ್ರಾರ್ಜಿತ ಸಾಹಿತ್ಯ ಸಂಪತ್ತಿ.

ಸೂಕ್ತಿಸುಧಾರ್ಣವ ಸಂಯೋಜನೆಗಾಗಿ ತಂದೆ ವಿಪುಲ ಗ್ರಂಥರಾಶಿಯನ್ನೇ ಸಂಕಲಿಸಿದ್ದ. ಕಾವ್ಯ, ಶಾಸ್ತ್ರ, ಪುರಾಣ, ಶಿಲಾಶಾಸನ, ಒಂದೇ? ಎರಡೇ? ಅವರ ನಿಲಯ ಗ್ರಂಥಾಲಯವಾಗಿತ್ತು. ಪಂಪಭಾರತ, ಭುವನೈಕ್ಯರಾಮಾಭ್ಯುದಯ, ಶೂದ್ರಕ, ಕಾದಂಬರಿ, ಧರ್ಮಾಮೃತ, ಪಂಚತಂತ್ರ, ಯಶೋಧರಚರಿತೆ, ಲೀಲಾವತಿ ಮೊದಲಾದ ಕಾವ್ಯಗಳು; ಆದಿಪುರಾಣ, ಹರಿವಂಶ, ಶಾಂತಿಪುರಾಣ, ಅಜಿತನಾಥ ಪುರಾಣ, ಅನಂತನಾಥಪುರಾಣ, ಚಂದ್ರಪ್ರಭಪುರಾಣ, ಪುಷ್ಪದಂತಪುರಾಣ, ವರ್ಧಮಾನ ಪುರಾಣ ಇತ್ಯಾದಿ ಪುರಾಣಗ್ರಂಥಗಳು; ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ, ಮದನತಿಲಕ, ಲೋಕೋಪಕಾರಂ, ಶೃಂಗಾರರತ್ನಾಕರ ಮೊದಲಾದ ಶಾಸ್ತ್ರಗ್ರಂಥಗಳು; ಸಾಲದುದಕ್ಕೆ ಗಿರಿಜಾಕಲ್ಯಾಣ, ಜಗನ್ನಾಥವಿಜಯ, ಕುಸುಮಾವಳಿ ಮೊದಲಾದ ವೀರಶೈವ–ಬ್ರಾಹ್ಮಣ ಗ್ರಂಥಗಳು; ಹೆಚ್ಚಿನದಾಗಿ ನಾಗಮಂಗಲ, ಮಂಡ್ಯ, ಅರಸಿಕೆರೆ, ಕಣಿಕಟ್ಟೆ ಗ್ರಾಮಗಳಿಗೆ ಸೇರಿದ ಶಾಸನಸಾಹಿತ್ಯ; ಇನ್ನೂ ಯಾವ ಯಾವ ಗ್ರಂಥಗಳೊ ಏನೋ, ಅದೊಂದು ದೀರ್ಘಪಟ್ಟಿಯೇ ಆದೀತು. ಕೂಸು ಕೇಶಿರಾಜ ಬೆಳೆದುದು ಈ ಸಾಹಿತ್ಯದ ಮಧ್ಯದಲ್ಲಿ. ಮನೆಯಲ್ಲಿಯ ಈ ಸಾಹಿತ್ಯಕ ವಾತಾವರಣ, ಮೇಲಾಗಿ ಹೊಯ್ಸಳ ಆಸ್ಥಾನದ ವಿದ್ವಜ್ಜನರ ಸಂಪರ್ಕ

---

೬೪. ಶಮದ (೧೯೬೮) ಸೂ. ೪೪

೬೫. ಶಮದ (೧೯೬೮) ಸೂ. ೧೪, ೨೩, ೨೫, ೪೩, ೩೧೪

ಪಡೆದ ಕೇಶಿರಾಜ ಒಂದೊಂದರಂತೆ ಕಾವ್ಯಪಂಚಕವನ್ನು ಬರೆದ, ತರುವಾಯ ದರ್ಪಣ ರಚನೆಗೆ ತೊಡಗಿರಬೇಕು. ಈಗ ಪ್ರಯೋಗನಿಧಿಗಾಗಿ ಹಳಗನ್ನಡ ಸಾಹಿತ್ಯವನ್ನೇ ಪುಟ ಪುಟವಾಗಿ ಓದಬೇಕಾಯಿತು. ಹೀಗಾಗಿ ಕರಿಯು ಕನ್ನಡಿಯೊಳ್ ಅಡಗಿದಂತೆ ಪ್ರಾಚೀನ ಕಾಲದ ಕಾವ್ಯನಿಧಿಯೆಲ್ಲ ದರ್ಪಣದಲ್ಲಿ ಪ್ರಯೋಗ ರೂಪದಿಂದ ಪ್ರವೇಶಿಸಿತು.

ಟೀಕೆ :

ದರ್ಪಣಕ್ಕೆ ಟೀಕೆ ಬರೆದವನು ನಿಟ್ಟೂರ ನಂಜಯ್ಯನೊಬ್ಬನೇ ಎಂದು ಈವರೆಗೆ ತಿಳಿದುಬಂದಿದ್ದರೂ ಡಾ. ಡಿ.ಎಲ್.ಎನ್. ಅವರು ಜೆ. ಗೆರೆಟ್ ಆವೃತ್ತಿಯನ್ನು ಕುರಿತು ನೀಡಿದ "ಇಲ್ಲಿರುವ ಟೀಕೆ ನಿಟ್ಟೂರ ನಂಜಯ್ಯನ ಟೀಕೆಯನ್ನು ಬಲುಮಟ್ಟಿಗೆ ಹೋಲುತ್ತದೆ."[೬೬] ಎಂಬ ಹೇಳಿಕೆಯಿಂದ ಕೆಲಮಟ್ಟಿಗೆ ಭಿನ್ನವಾಗಿದೆಯೆಂಬ ಧ್ವನಿ ಹೊರಡುತ್ತದೆ. ಇದರಿಂದ ದರ್ಪಣಕ್ಕೆ ಇನ್ನೊಬ್ಬನು ಟೀಕೆ ಬರೆದಿರಬಹುದೆಂಬ ಭಾವನೆ ಹುಟ್ಟುವುದು ಸಹಜ. ಇದಕ್ಕೆ ಆಧಾರವೆನ್ನುವಂತೆ ಕ್ಷಳ ಸೂತ್ರಕ್ಕೆ ಸಿಗುವ ಇಬ್ಬಗೆಯ ಟೀಕೆಗಳನ್ನು ನೋಡಬಹುದು.

(೧)......ವಿಕಲ್ಪಂ = ಕುಳಪ್ರಾಸಿಂಗೆ ವಿಕಲ್ಪಂ, ಕ್ಷಳನಲ್ಲದೆ = ಕ್ಷಳ ಳಕಾರಮಲ್ಲದೆ, ಇಲ್ಲ=ಲಕಾರದ ವಿಕಲ್ಪಮಿಲ್ಲ, ಅದಱಿಂ=ಅದು ಕಾರಣದಿಂದೆ, ಸಂಸ್ಕೃತದೊಳ್= ಸಂಸ್ಕೃತದಲ್ಲಿ, ಆ ಲಕಾರಕ್ಕೆ=ಆ ಸಂಸ್ಕೃತದಲ್ಲಿರ್ದ ಲಕಾರಕ್ಕೆ, ಕ್ಷಳನಂ=ಕ್ಷಳನೆಂಬ ಳಕಾರಮಂ, ಪೇೞ್ದಿಂ=ಹೇೞ್ದಿಂ.[೬೭]

(೨).....ಕ್ಷಳನಿಲ್ಲದೆ=ಕ್ಷಳಮೆಂಬ ಳಕಾರಮಿಲ್ಲದೆ, ವಿಕಲ್ಪಂ=ಲಾಕ್ಷರ ವಿಕಲ್ಪಂ, ಇಲ್ಲ, ಸಂಸ್ಕೃತದೊಳ್=ಸಂಸ್ಕೃತದಲ್ಲಿ, ಆ ಲಕಾರಕ್ಕೆ=ಸಂಸ್ಕೃತದಲ್ಲಿರ್ದ ಆ ಲಕಾರಕ್ಕೆ, ಅದಱಿಂ= ಅದು ಕಾರಣದಿಂದೆ, ಕ್ಷಳನಂ=ಕ್ಷಳಮೆಂಬ ಳಕಾರಮಂ, ಪೇೞ್ದಿಂ=ಹೇೞ್ದಿಂ.[೬೮]

ಈ ಎರಡು ಬಗೆಯ ಟೀಕೆಗೆ ಪಂಡಿತ ಲಿಪಿಕಾರ ಕಾರಣನಾಗಿರಬಹುದು. ಇಲ್ಲವೆ ದರ್ಪಣಕ್ಕೆ ಇಬ್ಬರು ಸ್ವತಂತ್ರ ಟೀಕೆ ಬರೆದಿರಬಹುದು. ಕಿಟೆಲ್ ಅವರು "The commentator on Kesiraja's work in the Mudabidaru manuscript is not Nisthur Sanjayya (or Nanjayya)"[69] ಎಂದು ಹೇಳಿ ನಿಟ್ಟೂರ ನಂಜಯ್ಯನಲ್ಲದೆ ಬೇರೊಬ್ಬನೂ ಟೀಕೆ ಬರೆದಿರುವನೆಂದು ಸ್ಪಷ್ಟಪಡಿಸಿರುವರು. ಟೀಕೆ ರಹಿತ ಕೆಲವು ಸೂತ್ರಗಳಿಗೆ ಕೆಲವು ಹಸ್ತಪ್ರತಿಗಳಲ್ಲಿ ಟೀಕೆ ದೊರೆಯುವುದೂ ಈ ಅಭಿಪ್ರಾಯವನ್ನು ಪೋಷಿಸುತ್ತದೆ. ಹೀಗೆ ದರ್ಪಣಕ್ಕೆ ಇಬ್ಬರು ಟೀಕೆ ಬರೆದಿರ ಬಹುದು. ಇವರಲ್ಲಿ ಒಬ್ಬನ ಹೆಸರು ಯಾರಿಗೂ ಗೊತ್ತಿಲ್ಲ. ಇನ್ನೊಬ್ಬ ನಿಟ್ಟೂರ ನಂಜಯ್ಯನೆಂದು ಎಲ್ಲರಿಗೂ ಗೊತ್ತಿದೆ.

೧೮೬೮ರಲ್ಲಿ ಟೀಕೆಯುಕ್ತ ದರ್ಪಣವನ್ನು ಪ್ರಕಟಿಸಿದ ಜಿ. ಗೆರೆಟ್ ಅವರು ಟೀಕಾ ಕರ್ತೃವಿನ ಹೆಸರು ಹೇಳದ ಕಾರಣ, ಕ್ರಿ.ಶ. ೧೮೭೨ರಲ್ಲಿ ದರ್ಪಣ ಪ್ರಕಟನೆಯ ಮೂಲಕ ನಿಟ್ಟೂರ

---

೬೬. ಶಮದ (೧೯೬೮) ಪ್ರಸ್ತಾವನೆ vii

೬೭. ಶಮದ (೧೯೬೮) ಸೂ. ೧೫

೬೮. ಶಮದ (ಪರಿಷತ್)

೬೯. ಶಮದ (೧೮೯೭) Preface

ನಂಜಯ್ಯನನ್ನು ಕನ್ನಡಿಗರಿಗೆ ಮೊದಲು ಪರಿಚಯ ಮಾಡಿ ಕೊಟ್ಟವರು ಶ್ರೀ ಕಿಟೆಲ್.[೨೦] ಕೇಶಿರಾಜನಿರ್ಮಿತ ಸೂತ್ರವೃತ್ತಿ ಪ್ರಯೋಗಗಳನ್ನು ಬಿಟ್ಟರೆ ದರ್ಪಣದಲ್ಲಿ ಸಾಮಾನ್ಯವಾಗಿ ಪದಚ್ಛೇದ, ಅನ್ವಯ, ಟೀಕೆ, ವಿಚಾರ – ಈ ನಾಲ್ಕು ಅಂಶಗಳು ಗೋಚರಿಸುತ್ತವೆ. ಕೆಲವೊಮ್ಮೆ ಕೇವಲ ಟೀಕೆ, ಇಲ್ಲವೆ ಟೀಕೆಯೊಂದಿಗೆ ಇವುಗಳಲ್ಲಿ ಒಂದೆರಡು ವಿಚಾರ ಕಂಡುಬರುವುದರಿಂದ ಟೀಕೆ ಬರೆದ ನಿಟ್ಟೂರ ನಂಜಯ್ಯನೇ ಈ ನಾಲ್ಕು ಅಂಶಗಳನ್ನು ಬರೆದ ಬಗ್ಗೆ ಮೇಲುನೋಟಕ್ಕೆ ಸಂದೇಹ ಮೂಡುತ್ತದೆ. ಆದರೆ ಪದಚ್ಛೇದ, ಅನ್ವಯ, ಟೀಕೆ–ಈ ಮೂರರ ಪಾಠ ಒಂದೇ ಇರುವುದೂ ಅನ್ವಯ ಕ್ರಮವೇ ಟೀಕೆಯಲ್ಲಿ ಇಳಿದುಬಂದುದೂ ಪದಚ್ಛೇದ, ಅನ್ವಯಗಳನ್ನು ಬರೆದವನೇ ಟೀಕೆಯನ್ನು ಬರೆದಿರುವನೆಂದು ಖಚಿತಪಡಿಸುತ್ತವೆ. ಅದಕ್ಕಾಗಿ ದರ್ಪಣದ ಪದಚ್ಛೇದ, ಅನ್ವಯ, ಟೀಕೆ, ವಿಚಾರ–ಇಷ್ಟು ಪಾಲು ನಿಟ್ಟೂರ ನಂಜಯ್ಯನಿಗೇ ಸೇರಿದುದಾಗಿದೆ.

ಕನ್ನಡ ಭಾಷೆಯ ಸೂಕ್ಷ್ಮ ಪದರು, ದರ್ಪಣಸೂತ್ರದ ಒಳದನಿಗಳನ್ನು ಅರ್ಥ ಮಾಡಿಕೊಳ್ಳದೆ ಮಾಡಿದ ಪದಚ್ಛೇದ, ಅರ್ಥಸಂದೇಹಕ್ಕೆ ಎಡೆನೀಡುತ್ತದೆ. ಉದಾ: ಸೂತ್ರ ೩೫೪ರ 'ನೆಗಟಿಲ್ದೊಂದುಳಿ' ಎಂಬ ಪದವನ್ನು ನಿಟ್ಟೂರ ನಂಜಯ್ಯನು 'ನೆಗಟ್ದಿ ಒಂದುಳಿ' ಎಂದು, ಡಿ.ಎಲ್.ಎನ್. ಬಳಸಿದ 'ಕ' ಪ್ರತಿಕಾರ 'ನೆಗಟಿ್ ದೊಂದುಳಿ' ಎಂದು ವಿಗ್ರಹಿಸಿರುವರು. ಇಲ್ಲಿ 'ಕ' ಪ್ರತಿಕಾರನದು ದೋಷವಿಗ್ರಹ. ಇಂಥ ದೋಷಗಳು ತಲೆದೋರದಂತೆ ನಂಜಯ್ಯ ಪದಚ್ಛೇದ ಕಾರ್ಯವನ್ನು ಪೂರೈಸಿರುವನು.

ಅನ್ವಯ ಅಕ್ರಮವಾಗಿದ್ದರೆ ಅರ್ಥಕ್ಕೆ ಕೇಡು. ಉದಾಹರಣೆಗೆ ಕಿಟೆಲ್, ಪರಿಷತ್, ಹೈದ್ರಾಬಾದ ಆವೃತ್ತಿಗಳ ಕ್ಷಳಸೂತ್ರದ ಅನ್ವಯವನ್ನು ನೋಡಬಹುದು.

ಕಿಟೆಲ್: ವಿಕಲ್ಪಂ ಕ್ಷಳಂ ಅಲ್ಲದೆ ಇಲ್ಲ. ಅದಜಿಂ ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳನಂ ಪೇಟ್ದಿಂ.

ಪರಿಷತ್: ಕ್ಷಳನಿಲ್ಲದೆ ವಿಕಲ್ಪಂ ಇಲ್ಲ. ಸಂಸ್ಕೃತದೊಳ್ ಆ ಲಕಾರಕ್ಕೆ ಅದಜಿಂ ಕ್ಷಳನಂ ಪೇಟ್ದಿಂ.

ಹೈದ್ರಾಬಾದ್: ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ಅಲ್ಲದೆ ವಿಕಲ್ಪಂ ಇಲ್ಲ. ಅದಜಿಂ ಕ್ಷಳನಂ ಪೇಟ್ದಿಂ[೨೧]

ಒಂದೇ ಬಗೆಯಾಗಿರದ ಈ ಮೂರೂ ಅನ್ವಯಗಳು ದೋಷಪೂರ್ಣ ವಾಗಿದ್ದು,[೨೨] ನಂಜಯ್ಯನಲ್ಲಿ ಇಂಥ ದೋಷ ಇಲ್ಲವೆನ್ನುವಷ್ಟು ಕಡಿಮೆ. ಕೆಲವು ಸಲ ಸೂತ್ರವು ಅನ್ವಯಕ್ರಮದಲ್ಲಿದ್ದರೆ 'ಯಥಾನ್ವಯಂ' ಎಂದು, ಇನ್ನು ಕೆಲವು ಸಲ ಅನ್ವಯವನ್ನು ಕೊಂಚ ಹೇಳಿ 'ಉಳಿದುದು ಯಥಾನ್ವಯಂ' (ಸೂ. ೨೮೮ ಇತ್ಯಾದಿ) ಎಂದು ಹೇಳಿ ದಾಟುತ್ತಾನೆ.

---

೨೦. ಆದರೆ ಈತನ ಹೆಸರು ನಿಷ್ಠೂರ ಸಂಜಯ್ಯ ಎಂದು ಹೇಳಿದರು

೨೧. ಶಮದ ಪಾಠಾಂ (೧೯೫೧) ಪು. ೧೬. ಮೇಲಿನ ವಾಕ್ಯ ವ್ಯಾಖ್ಯಾನಕಾರನ ಅಭಿಪ್ರಾಯದ ಹಿನ್ನಲೆಯಲ್ಲಿ ರೂಪಿಸಿಕೊಂಡುದು.

೨೨ ಈ ಸೂತ್ರದ ನಿಜವಾದ ಅನ್ವಯ ಇದು : "ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ. ವಿಕಲ್ಪ ಕ್ಷಳನಲ್ಲದಿಲ್ಲ ಸಂಸ್ಕೃತದೊಳಾ ಲಕಾರಕ್ಕೆ. ಅದಜಿಂ (ಮೇಲಿನ ಸೂತ್ರದಲ್ಲಿ) ಕ್ಷಳನಂ ಪೇಟ್ದಿಂ"

ನಿಟ್ಟೂರ ನಂಜಯ್ಯನ ಪರಮೋದ್ದೇಶ ಟೀಕೆ. ಅನ್ವಯಕ್ರಮದಲ್ಲಿಯೇ ಶಬ್ದಗಳಿಗೆ ಒರಸೆಯಾಗಿ ಅರ್ಥ ಬರೆಯುತ್ತಾನೆ. ಈ ಟೀಕೆಯಿಂದ ಪ್ರತಿಯೊಂದು ಪದಗಳ ಪದಶಃ ಅರ್ಥ ತಿಳಿಯುವುದಲ್ಲದೆ ದೋಷಂ=ಅಷ್ಟಾದಶ ದೋಷಂ;[೭೩] ಸಂಬಂಧಂ=ಪ್ರಕೃತಿ ಪ್ರತ್ಯಯ ಸಂಬಂಧ, ಲಕ್ಷ್ಯಲಕ್ಷಣ ಸಂಬಂಧ, ವಿಶೇಷ್ಯವಿಶೇಷಣ ಸಂಬಂಧ, ಕರ್ತೃಕರ್ಮಕ್ರಿಯಾಪದ ಸಂಬಂಧಮೆಂದು ಪೊರ್ದುಗೆಗೆ ನಿಮಿತ್ತಂ"[೭೪]; ಅಜಿಕೆಯ=ಉಪಾಂತ್ಯದ ಅಕ್ಷರಕ್ಕೆ ಲೋಪಮಾಗಿ ಅಕಾರವಂ ಪಡೆವುದೆಂಬ ಅಜಿಕೆಯ[೭೫] ಎಂಬಂತಹ ಗುಪ್ತ ಅರ್ಥಗಳು ಪ್ರಕಟವಾಗಿ ಸೂತ್ರಾರ್ಥ ಬಿಚ್ಚಿ ನಿಲ್ಲುತ್ತದೆ. ಕೆಲವು ಸಲ "ಆ ಸಂಹಿತೆಯೊಳೆಂಬುದನುವರ್ತನೆ....."[೭೬] "ದದಪಂಗಳ್ಪರಮಾದ ಎಂಬುದನು ವರ್ತನೆ"[೭೭] ಎಂದು ಮುಂತಾಗಿ ಹೇಳುವಲ್ಲಿ ಇವುಗಳ ಹಿಂದಿನ ಸೂತ್ರದ ಸಂಬಂಧ ವೇದ್ಯವಾಗುತ್ತದೆ. ಹೀಗೆ ಈತನ ಟೀಕೆಯಿಂದ ಸೂತ್ರದ ಪ್ರತಿಯೊಂದು ಪದಗಳಲ್ಲದೆ ಕೆಲವು ಅಧ್ಯಾಹೃತ ಪದಗಳೂ ತಿಳಿದುಬಂದು, ಪೂರ್ಣ ಅರ್ಥ ಅರಿತಕ್ಕೆ ಬರುತ್ತದೆ. ಈ ಲೇಸಿನೊಂದಿಗೆ ಕೆಲವು ದೋಷಗಳೂ ಇಲ್ಲಿ ಉಳಿದುಕೊಂಡಿವೆ. ಉದಾ:

ಸೂತ್ರ: ಜಟಿನಾಗದನು । ಚ್ಚರಿಸಲ್ಕಾಗಿರ್ದ ತೆಜದಿನಂತದು ಶುದ್ಧಂ[೭೮]

ವೃತ್ತಿ : ಆ ದಡ್ಡಕ್ಕರದ ರೇಫೆಯಂ ಜಟಿನಾಗದನುಚ್ಚರಿಸಲ್ಕಾಗದು, ನಿಸರ್ಗದಿನದು ಶುದ್ಧಂ.

ಟೀಕೆ : ಜಟಿನಾಗಿ=ಜಟಿಪ್ರಾಸವಾಗಿ, ಅದಂ=ಆ ರೇಫೆವೆರಸಿದ ದ್ವಿತ್ವಾಕ್ಷರಮಂ, ಉಚ್ಚರಿಸಲ್ಕೆ=ಓದುವುದರ್ಕೆ, ಆಗಿರ್ದ ತೆಜದಿಂ=ಸಲುವಳಿಯಾಗಿರ್ದ ರೀತಿಯಿಂದೆ, ಅಂತು=ಹಾಗೆ, ಅದು=ಅದು ತಾಂ, ಶುದ್ಧಂ= ಶುದ್ಧವಪ್ಪುದು.

ಇಲ್ಲಿ ಕೇಶಿರಾಜನ ಸೂತ್ರವೃತ್ತಿಗಳು "ರೇಫೆವೆರಸಿದ ದಡ್ಡಕ್ಕರವನ್ನು ಜಟಿನಾಗಿ ಉಚ್ಚರಿಸಬಾರದು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ನಂಜಯ್ಯನ ಟೀಕೆ "ರೇಫೆವೆರಸಿದ ದಡ್ಡಕ್ಕರವು ಜಟಿನಾಗಿ ಓದುವುದಕ್ಕೆ ಸಲುವಳಿಯಾಗುತ್ತದೆ"–ಎಂದು ವಿರುದ್ಧ ಅರ್ಥವನ್ನು ಕೊಡುತ್ತದೆ. ಇನ್ನೊಂದು ಉದಾಹರಣೆ:

ಸೂತ್ರ : ಮಾರ್ಗದೊಳುಳ್ಳ ಸಂಧಿಯಂ ಕಿಡಿಪುದುಮಾಗದು ತಾಂ ಯಥೇಷ್ಟಮೆಂದಜೆವುಳ್ಳರ್[೭೯]

---

೭೩. ಶಮದ (೧೯೬೮) ಸೂ. ೪
೭೪. ಶಮದ (೧೯೬೮) ಸೂ. ೭
೭೫. ಶಮದ (೧೯೬೮) ಸೂ. ೬೮
೭೬. ಶಮದ (೧೯೬೮) ಸೂ. ೬೩
೭೭. ಶಮದ (೧೯೬೮) ಸೂ. ೨೯೪
೭೮. ಶಮದ (೧೯೬೮) ಸೂ. ೩೪
೭೯. ಶಮದ (೧೯೬೮) ಸೂ. ೭೨

ವೃತ್ತಿ : ಸಂಧಿ ಯಥೇಷ್ಟಮೆಂದು ರೂಢಮಪ್ಪ ಸಂಧಿಯಂ ಕಿಡಿಸಿ ವಿಸಂಧಿಯಂ ಮಾಡಲಾಗದು.

ಟೀಕೆ: ಮಾರ್ಗದೊಳ್=ಕವಿಮಾರ್ಗದಲ್ಲಿ, ಉಳ್ಳ ಸಂಧಿಯಂ=ರೂಢಮಾಗಿ ಉಳ್ಳ ಸಂಧಿಯಂ, ಕಿಡಿಪುದುಂ=ಸ್ವರಲೋಪಸಂಧಿಯಂ ಮಾಡಿ ಕೆಡಿಸುವುದುಂ, ಆಗದು=ಸಲುವಳಿಯಾಗದು.

ಇಲ್ಲಿ ಕೇಶಿರಾಜನ ವೃತ್ತಿಯು 'ವಿಸಂಧಿದೋಷ'ವನ್ನು ಗುರಿಯಿಟ್ಟು, ನಂಜಯ್ಯನ ಟೀಕೆಯು 'ಸಂಧಿದೋಷ'ವನ್ನು ಗುರಿಯಿಟ್ಟು ಸೂತ್ರವನ್ನು ಅರ್ಥ ಮಾಡಿಕೊಂಡಿವೆ. ಹೀಗೆ ತಪ್ಪುಗ್ರಹಿಕೆಯಿಂದ ಒಂದೆರಡು ದೋಷಗಳುಂಟಾಗಿದ್ದರೂ ಆತನಿಗಿದ್ದ ದರ್ಪಣದ ಪ್ರಗಾಢ ಪರಿಜ್ಞಾನ, ಪರಿಶ್ರಮ ಪ್ರವೃತ್ತಿಗಳಿಗೆ ಸಾಕ್ಷಿ ಹೇಳುತ್ತದೆ, ಟೀಕೆ.

ಪದಚ್ಛೇದ, ಅನ್ವಯ, ಟೀಕೆಗಳಿಗಿಂತ 'ವಿಚಾರಂ' ವಲಯದಲ್ಲಿ ಮಾತ್ರ ನಿಟ್ಟೂರ ನಂಜಯ್ಯನ ವ್ಯಾಸಂಗವ್ಯಾಪ್ತಿ, ಸ್ವಂತವಿಚಾರಗಳು ಹೆಚ್ಚು ಎದ್ದುಕಾಣುತ್ತವೆ. 'ಶಬ್ದಾನು ಶಾಸನಸೂತ್ರಂ'[೮೦] ಎಂಬ ಹೆಸರಿನಿಂದ ಭಟ್ಟಾಕಳಂಕನ ಕೃತಿಯನ್ನು, 'ಮೋನುಸ್ವಾರಃ'[೮೧] 'ಅಂತ್ಯಾತ್ ಪೂರ್ವಮ್ ಉಪಧಾ'[೮೨] ಎಂಬ ಪಾಣಿನೀಯ ಸೂತ್ರಗಳನ್ನು, ಸಾಲದುದಕ್ಕೆ 'ಲಳಯೋರಭೇಧಃ'[೮೩] 'ಸ್ರೋರ್ವಿಸರ್ಗಃ'[೮೪] ಎಂಬ ಅನ್ಯವ್ಯಾಕರಣ ಸೂತ್ರಗಳನ್ನೂ ಈ ಪ್ರಸಂಗದಲ್ಲಿ ಬಳಸಿರುವನು. ಇಲ್ಲಿರುವ ಒಟ್ಟು ೨೩ 'ವಿಚಾರಂ'ಗಳಲ್ಲಿ ಆಗಾಗ ವ್ಯಾಕರಣದ ಪರಿಭಾಷೆಗಳಿಗೆ

೧. ಕುಳಮೆಂದೊಡೆ ಕನ್ನಡ ಶಬ್ದದಲ್ಲಿ ಇರ್ದ ಳಕಾರಂ; ಕ್ಷಳಮೆಂದೊಡೆ ಸಂಸ್ಕೃತದಲ್ಲಿ 'ಲಳಯೋರಭೇದಃ'ಎಂದು ಉಂಟಾಗಿ ಲಕಾರ ಳಕಾರಂಗಳ್ಗೆ ಭೇದವಿಲ್ಲದ ಳಕಾರ ವೆಂದಱಿವುದು.[೮೫]

೨. ವರ್ಣಸಂಜ್ಞೆ ಎಂತೆಂದೊಡೆ ಅವರ್ಣಂ, ಇವರ್ಣಂ ಉವರ್ಣಂ ಎಂಬಂತೆ ಇವಂ ತಿಳಿವುದು.[೮೬]

೩. ಸಂಧ್ಯಕ್ಷರಗಳೆಂದೊಡೆ ಸಂಸ್ಕೃತ ವ್ಯವಹಾರದಲ್ಲಿ ಅಕ್ಷರಂಗಳೆಂದಱಿವುದು.[೮೭]

೪. ಅನುಸಾಸಿಕವೆಂದೊಡೆ ಮುಖನಾಸಿಕದೊಡನೆ ಕೂಡಿ ಉಚ್ಚರಿಪುದು.[೮೮]

---

೮೦. ಶಮದ (೧೯೬೮) ಸೂ. ೯೬, ೨೪೧. ೨೪೮. ೨೫೨ ಇತ್ಯಾದಿ
೮೧. ಶಮದ (೧೯೬೮) ಸೂ. ೨೨
೮೨. ಶಮದ (೧೯೬೮) ಸೂ. ೪೯
೮೩. ಶಮದ (೧೯೬೮) ಸೂ. ೧೫
೮೪. ಶಮದ (೧೯೬೮) ಸೂ. ೨೨
೮೫. ಶಮದ (೧೯೬೮) ಸೂ. ೧೫
೮೬. ಶಮದ (೧೯೬೮) ಸೂ. ೧೮
೮೭. ಶಮದ (೧೯೬೮) ಸೂ. ೨೦
೮೮. ಶಮದ (೧೯೬೮) ಸೂ. ೨೫

೫. ಆದೇಶಮೆಂದೊಡೆ ಮೊದಲಿರ್ದುದಂ ತೊಲಗಿಸಿ ಬರ್ಪುದೆಂದಱಿವುದು.[೫೯]

೬. ವಿಕಲ್ಪಮೆಂದೊಡೆ ಎರಡು ತೆರನುಂಟೆಂಬರ್ಥಂ.[೬೦]

೭. ಉಪಧೆಯೆಂದೊಡೆ ವ್ಯಾಕರಣಂಗಳಲ್ಲಿ 'ಅಂತ್ಯಾತ್ ಪೂರ್ವಮ್ ಉಪಧಾ' ಎಂಬ ಸಂಜ್ಞಾಸೂತ್ರದಿಂ ಅಂತ್ಯದತ್ತಣಿಂ ಮೊದಲು ಉಪಧೆಯು ಎಂದರು.[೬೧]

ಎಂದು ವಿವರಣೆ ನೀಡಿರುವನು. ಇದಲ್ಲದೆ ಶಬ್ದಾನುಶಾಸನದಿಂದ ೧೭ ಸೂತ್ರಗಳನ್ನು (ಶ.ಮ.ದ. ಸೂ. ೬೫ = ಶ. ಶಾ. ಸೂ. ೧-೩೮; ೯೬ = ೨-೩೪, ೩೫ ಮತ್ತು ೩೬; ೨೪೧ =೪-೨೪, ೨೫, ೨೬, ೨೭, ೨೯, ೩೦; ೨೪೮=೪೫೦, ೫೧; ೨೫೨=೪-೬೬; ೨೬೩=೪-೨,೩,೩೯,೯೧) ಬಳಸಿರುವನು. ಇವುಗಳಲ್ಲಿ ಸೂತ್ರ ೯೬, ೨೪೧ಗಳಿಗೆ ಪ್ರಯೋಗಸಹಿತ ಬರೆದ 'ವಿಚಾರಂಗಳು' ಈತನ ಪರಿಶ್ರಮಕ್ಕೆ ನಿದರ್ಶನವೆನಿಸಿದೆ. ಇದಲ್ಲದೆ "ಶಬ್ದದ್ರವ್ಯಮೆಂದೊಡೆ ಘಟಕ್ಕೆ ಮೃತ್ತಿಕೆಯೆಂತಂತೆ ಅಕ್ಷರಾತ್ಮಕವಾದ ಶಬ್ದಂಗಳ್ ಪುಟ್ಟುವುದರ್ಕೆ ಉಪಾದಾನ ಕಾರಣವಾದ ವಸ್ತುವೆಂದಱಿವುದು. ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇೞ್ದಪರ್"[೬೨] ಎಂಬ ವಿಶೇಷ ವಿಚಾರಗಳೂ ಕಂಡುಬರುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಈತನ 'ವಿಚಾರಂ' ವಿಭಾಗದಲ್ಲಿ ಸ್ವಂತಿಕೆ ತುಂಬಿ ನಿಂತಿದೆ.

❖❖

---

೫೯. ಶಮದ (೧೯೬೮) ಸೂ. ೩೧

೬೦. ಶಮದ (೧೯೬೮) ಸೂ. ೩೯

೬೧. ಶಮದ (೧೯೬೮) ಸೂ. ೪೯

೬೨. ಶಮದ (೧೯೬೮) ಸೂ. ೯

ಅಧ್ಯಾಯ : ೫

❖

ಶಬ್ದಮಣಿದರ್ಪಣದ ಅಭ್ಯಾಸ ಪರಂಪರೆ

ಕನ್ನಡದ ವಿದ್ವತ್‌ಪ್ರಪಂಚದಲ್ಲಿ ಶಬ್ದಮಣಿದರ್ಪಣದ ಅಭ್ಯಾಸ ನಿಲ್ಲದೇ ನಡೆದು ಬಂದಿದೆ. ಕರ್ನಾಟಕದ ಬೇರೆಬೇರೆ ಪ್ರದೇಶಗಳಲ್ಲಿ ಸಿಗುತ್ತಿರುವ ಹೇರಳ ಹಸ್ತಪ್ರತಿಗಳೇ ಇದಕ್ಕೆ ನಿದರ್ಶನ. ಈ ಪರ್ಯಟನ ಪ್ರಸಂಗದಲ್ಲಿ ಅದಕ್ಕೆ ಕಂ...... ಸಪ್ಪ, ಲಿಂಗಣಾರಾಧ್ಯ, ಹೈದ್ರಾಬಾದ ದರ್ಪಣಾಭ್ಯಾಸಿ ಇವರು ವೃತ್ತಿ ವ್ಯಾಖ್ಯಾನಗಳನ್ನು ಬರೆದರು; ನಿಟ್ಟೂರ ನಂಜಯ್ಯ ಮತ್ತು ಮೂಡಬಿದರೆ ಹಸ್ತಪ್ರತಿಕಾರರು ಟೀಕೆ ಬರೆದರು. ಇದಕ್ಕೂ ಮಿಗಿಲಾಗಿ ಕವಿಗಳು, ಶಾಸ್ತ್ರಕಾರರು, ಅಭ್ಯಾಸಿಗಳು ಇದನ್ನು ಪ್ರಮಾಣಭೂತ ಗ್ರಂಥವೆಂದು, ಆಧಾರಗ್ರಂಥವೆಂದು ಹೀಗೆ ಅಂಗೀಕರಿಸಿದರು:

ನಿರುತಂ ಕರ್ಣಾಟಕದೊಳ್ ।
ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕ ।
ಕ್ಕರಿದಲ್ತೆ ಭಾಪು ಕವಿಕುಂ ।
ಜರ ಕೇಶವರಾಜ ಗೋಚರಿಸು ಮನ್ಮನದೊಳ್॥[೧]

ಲಕ್ಷಣ ಶಿಕ್ಷಾಚಾರ್ಯ ಸು ।
ಲಕ್ಷಣ ಕೇಶವನ ಶಬ್ದಮಣಿದರ್ಪಣಮ ।
ನೀಕ್ಷಿಸಿ ಶಿಕ್ಷಿಸಲೀಶ್ವರ ।
ಸಾಕ್ಷಾತ್ತಭಿನವನು ಕೇಶಿರಾಜಂ ಮುಸಿಯೇ॥ [೨]

ಶಬ್ದಮಣಿ ಮೊದಲಾದ ಶಾಸ್ತ್ರದ ।
ಹೊದ್ದಿಕೆಯು ಸಾಹಿತ್ಯಕಲ್ಲದೆ ।
ಹೃದ್ಯ ಷಟ್ಪದಿ ಹಾಡುಗಬ್ಬಗಳಿಂಗೆ ಬೇಡೆಂದ॥[೩]

---

೧. ಮನ್ಮಥ-ವಿಜಯ (೧೯೫೪) ೧-೧೦
೨. ಕವಿಜಿ (೧೯೫೦) ೧-೯
೩. ರಾಮಚಂದ್ರ ಗುರುಶಿಷ್ಯ (೧೫೫೦) : ಆದಿತ್ಯ ಪುರಾಣ

ಕವಿಮಲ್ಲ (೧೪೦೦), ಈಶ್ವರ ಕವಿ (೧೫೦೦), ರಾಮಚಂದ್ರಗುರುಶಿಷ್ಯರ (೧೫೦೦) ಈ ಹೇಳಿಕೆಗಳು ಕೇಶಿರಾಜನ ಹಿರಿಮೆಗೆ ಸಾಕ್ಷಿ. ಪದ್ಮರಾಜ ಪುರಾಣದ ಪದ್ಮಣಾಂಕ –

ಸತಿಸಪ್ತಮಿಯ ಭೇದಮಂ ರಳಕುಳಕ್ಷಳಮ ।
ನತಿಶಯದ ಗಮಕಕ್ರಿಯಾಸಮಾಸಂಗಳಂ ।
ಶ್ರುತಿಸಹ್ಯಸಂಧಿಯಂ ತದ್ಧಿತಪದಮನಪಭ್ರಂಶ ದೇಶೀಯಂಗಳಂ ।
ನುತಮಾಗೆ ಯೋಗಿಪ ಸಮಾಸಮಂ ಸುಸಮಸಂ ।
ಸ್ಕೃತಮಂ ವಿರಹಿತಾವ್ಯಯೋರುಸಂಸ್ಕೃತಲಿಂಗ ।
ತತಿ ಶಿಥಿಲಪದಮುಖಾದ್ಯುಕ್ತ ಲಕ್ಷಣಮಜೆವ ಚತುರರೀ ಕೃತಿಗೊಲಿಯರೇ ॥[೪]

ಎಂದು ದರ್ಪಣದ "ಗಮಕಸಮಾಸಮಂ....." ಎಂಬ ಪದ್ಯವನ್ನೇ ಗುರಿಯಿಟ್ಟು ನಡೆದಿರುವನು.

ಸತಿಸಪ್ತಮಿಗಳ ಸಮಸಂಸ್ಕೃತಂಗಳನು ತದಿ ।
ಹಿತಮಂ ಕ್ರಿಯಾಗಮಕ ವರಸಮಾಸಂಗಳಂ ।
ಕೃತಜಾತಿ ಭಾವಾದ್ಯಲಂಕಾರಮಂ ವಿನುತ ಮುಖ್ಯ ಸತ್ಪ್ರಾಸಂಗಳಂ ॥
.........ನೋಡಿ ತಪ್ಪಿರೆ ತಿದ್ದಿ ....।

(ಚೇರಮ ಕಾವ್ಯ ೧೨೧)

ಱಟಿ ಕುಳ ಕ್ಷಳತ್ವ ರೇಫೋ।
ಜ್ವಳ ಱಕಾರಪ್ರಾಸಭೇದಂ ।
ಗಳ ಸ್ವರವ್ಯಂಜನ ವಿಭಕ್ತಿ ಸಮಾಸ ಶಿಥಿಲಗಳ ।
ಪಟಿಯನೇನುಂ ಪಾಡುಗವಿತೆಗ ।
ಳೊಳು ವಿಚಾರಿಸಸಲ್ಲದೆಂಬ ।
ಗ್ಗಳದ ಪಟಗಬ್ಬಿಗರ ಪೇಟ್ಕೆಯ ತೆಱದಿ ವಿರಚಿಸಿದೆಂ ॥ (ಸಾಳ್ವಭಾರತ ೧–೪೫)

ರಳಕುಳ ಶಿಥಿಲ ಸಮಾಸ ಮುಂತಾದವ ।
ರೊಳಗಿಲ್ಲಿ ಕೆಲವುಳ್ಳೊಡುಂಟು ।
ಕೆಲವಿಲ್ಲವೇಕಿಲ್ಲವೆಂದರಿಯದರ ಕೋ ।
ಟಲೆಯೇಕೆ ಹಾಡುಗಬ್ಬದೊಳು ॥

ಎಂಬ ಚೇರಮಾಂಕ (೧೫೨೬), ಸಾಳ್ವ (೧೫೫೦), ರತ್ನಾಕರವರ್ಣಿಗಳ ಉಕ್ತಿಗಳಲ್ಲಿ ದರ್ಪಣದ ನಿರ್ಬಂಧನೆಗಳ ಬಗ್ಗೆ ಭೀತಿ–ನಿರ್ಭೀತಿಗಳು ತೋರಿಬರುತ್ತವೆ. ಖಗೇಂದ್ರ ಮಣಿದರ್ಪಣದ ಮಂಗರಾಜನ–

---

೪. ಪದ್ಮರಾಜ ಪುರಾಣಂ (೧೯೫೮) ೧–೩೯

ನರರ್ಗರುಜತೆ ಭೇಷಜದಿಂ ।
ದರುಜತೆಯಿಂ ದೇಹ ದೇಹದಿಂದಂ ಜ್ಞಾನಂ ॥
ಪರಮಜ್ಞಾನದೆ ಮೋಕ್ಷಂ ।
ದೊರೆಕೊಳ್ಗುಮದೆಂದು ಪೇೞ್ದಪೆಂ ಭೇಷಜಮಂ ॥[೪೨]

ಎಂಬ ಪದ್ಯ ದರ್ಪಣದ "ವ್ಯಾಕರಣದಿಂದೆ ಪದಮಾ ವ್ಯಾಕರಣದ ಪದದಿನರ್ಥಂ...." ಎಂಬ ಪದ್ಯದ ನೇರ ಅನುಕರಣೆಯಾಗಿದೆ.

ಸಾಸಲ ಚಿಕ್ಕಣಾರಾಧ್ಯ (೧೪೫೦)ನು ತನ್ನ "ಪಂಚಬ್ರಹ್ಮೋದಯಭಾಷ್ಯ"ದಲ್ಲಿ ದರ್ಪಣದಿಂದ ಸೂತ್ರಗಳನ್ನು ಸ್ವೀಕರಿಸಿರುವನು. ಚೆನ್ನವೀರ(೧೫೦೦)ನು ತನ್ನ "ಸಾರಸ್ವತ ವ್ಯಾಕರಣ" ವ್ಯಾಖ್ಯಾನಕ್ಕೆ ಇಟ್ಟ ಹೆಸರು 'ಶಬ್ದಮಣಿ'. ಇವರನ್ನು ಬಿಟ್ಟರೆ ವ್ಯಾಕರಣ, ಛಂದಸ್ಸು, ನಿಘಂಟುಕರ್ತೃಗಳು ದರ್ಪಣದಿಂದ ಪಡೆದ ಪ್ರಯೋಜನವನ್ನು ಹೀಗೆ ಸಂಗ್ರಹಿಸಬಹುದು.

ಭಟ್ಟಾಕಲಂಕದೇವ

"ಸಕಲ ಶಾಬ್ದಿಕಜನ ಚೇತನಶ್ಚಮತ್ಕಾರಕಾರಿಯಪ್ಪ ಕರ್ಣಾಟಕ ಶಬ್ದಾನುಶಾಸನ" ನಿರ್ಮಾಣದಿಂದ ಕನ್ನಡ ಭಾಷೆಗೆ ಅನುಶಾಸನದ ಅರ್ಹತೆಯನ್ನು ಸಾರಿದ ಭಟ್ಟಾಕಲಂಕದೇವ ಸಂಸ್ಕೃತ – ಕನ್ನಡ ಉಭಯ ಭಾಷೆಗಳ ಉದ್ದಾಮ ಪಂಡಿತ. ಈ ಮಾತಿಗೆ ಆತನ 'ಕರ್ಣಾಟಕ ಶಬ್ದಾನುಶಾಸನ' ಪರಮ ನಿದರ್ಶನ. ಅಲ್ಲಿ ಸಂಸ್ಕೃತದ ಪಾಣಿನೀಯ, ಶಾಕಟಾಯನೀಯ, ಕಾತಂತ್ರ, ಜೈನೇಂದ್ರ, ಸಾರಸ್ವತ ಮೊದಲಾದ ವ್ಯಾಕರಣಗಳಿಂದ ವಾರ್ತಿಕ, ಮಹಾಭಾಷ್ಯ, ಅಮೋಘವೃತ್ತಿ, ನ್ಯಾಸ ಮೊದಲಾದ ವ್ಯಾಖ್ಯಾನ ಟೀಕೆಗಳಿಂದ ಉದ್ಧೃತ ಮತ್ತು ಅನುವಾದಿತ ಪ್ರಮಾಣ ವಚನಗಳು[೫] ದೊರೆಯುವಂತೆ ಕನ್ನಡದ ಶಬ್ದಮಣಿದರ್ಪಣವೊಂದರಿಂದ ಮಾತ್ರ ಸೂತ್ರ ಪ್ರಯೋಗಗಳು ಲಭಿಸುತ್ತವೆ. ಇದು ಭಟ್ಟಾಕಲಂಕದೇವನು ಪಾಣಿನಿ, ಶಾಕಟಾಯನರ ಸಾಲಿನಲ್ಲಿ ಕೇಶಿರಾಜನನ್ನು ಗೌರವಿಸಿದುದರ ದ್ಯೋತಕ. ಇದರ ಫಲವಾಗಿ ತನ್ನ ವ್ಯಾಕರಣದಲ್ಲಿ ಕೇಶಿರಾಜನಿಂದ ಸ್ವೀಕರಿಸಿದ ೧೪ ಸೂತ್ರಗಳಲ್ಲಿ ಹನ್ನೆರಡನ್ನು ಸೂತ್ರಗಳಂತೆಯೂ ಇನ್ನೆರಡನ್ನು ಪ್ರಯೋಗದಂತೆಯೂ ಬಳಸಿದ್ದಾನೆ. ಅವು:

೧. ಅತಿ ಪೀಡನದಿಂ... (ಸೂ.೨೮)

೨. ಅಮರಯಿರೆನೆವುಗಳಕ್ಕುಂ....(ಸೂ. ೨೨೮)

೩. ಅತ್ತಣಿನೆಂದು ನಿಮಿರ್ಚುವರ್....... (ಸೂ೧೨೯)

೪. ಆತ್ವದಿನಿವರ್ಣದಿಂ..... (ಸೂ. ೬೩)

೫. ಇವು ವರ್ಣಾವೃತ್ತಿಗೆ ಸಲ್ಲುವು.... (ಸೂ. ೨೯)

---

೪೨. ಖಗೇಂದ್ರಮಣಿದರ್ಪಣಂ, ೧–೬೫
೫. ಶಬ್ದಾನುಶಾಸನ (೧೯೨೩) ಅನುಬಂಧ ನೋಡಿರಿ,

೬. ಏಕ ದ್ವಿತ್ವ ಬಹುತ್ವ ......(ಸೂ. ೧೦೪)

೭. ಕೃತಿಮಾರ್ಗದೊಳುಂಟು....(ಸೂ. ೩೧)

೮. ಕೆಲವು ನಿಜಬಿಂದುಗಳ್......(ಸೂ.೪೬)

೯. ನಿನತೆನತು ತನತೆನಿಪ್ಪವು (ಸೂ. ೧೫೮)

೧೦. ಪರಪದಪೂರ್ವಂ ದ್ವಿತ್ವಾ......(ಸೂ. ೬೯)

೧೧. ವಿದಿತಮೆನಿಪ್ಪವ್ಯಯಮುಂ.......(ಸೂ. ೯೧)

೧೨. ಸ್ವರಮಿದಿರೊಳಿರೆ ವಿಭಕ್ತಿ......(ಸೂ. ೬೨)

೧೩. ಅವಧರಿಪುದು ವಿಬುಧರ್......(ಸೂ. ೪)

೧೪. ಅವಧಾರಣೆಯನಿಯೋಗ........(ಸೂ. ೭೪)

ಭಟ್ಟಾಕಳಂಕನು ಬಳಸಿದ ಈ ಹದಿನಾಲ್ಕು ಸೂತ್ರಗಳ ತಲೆಯ ಮೇಲೆ 'ಯದ್ಯಪಿ ದರ್ಪಣ ಕೃತಾನ್ಯಷೇಧಿ' 'ಯದಾಹಂ ದರ್ಪಣಕಾರಃ' 'ಅತ್ರ ದರ್ಪಣಕೃತಾ' 'ಉಕ್ತಂ ಚ ತಥಾ ದರ್ಪಣಕಾರೇಣ' 'ತದುಕ್ತಂ ಕೇಶವೇನಾಪಿ' 'ತದುಕ್ತಂ ಕೇಶಿರಾಜೇನ' 'ಯತೋ ನಿಷೇಧತಿಸ್ಮ ಕೇಶವಃ' 'ತದುಕ್ತಂ ಕೇಶಿರಾಜೇನ' ಎಂದು ಆಕರ ಸೂಚಿಸುತ್ತಾನೆ. ಅಲ್ಲಲ್ಲಿ ಆತನ ಹೇಳಿಕೆಯ ಮೇಲೆ ಸೊಗಸಾದ ವಿಮರ್ಶೆ ನಡೆಸುತ್ತಾನೆ. ಪ್ರಯೋಗ ಭಾಗಕ್ಕೆ ಬಂದರೆ ಕೇಶಿರಾಜನ ಹದಿನೆಂಟು ಪ್ರಯೋಗ ಪದ್ಯಗಳು ಇಲ್ಲಿ ಹೀಗೆ ಕಂಡುಬರುತ್ತವೆ.

೧. ಇಂದ್ರಂಬೋಲ್ ವಿಭವಯುತಂ ಚಂದ್ರಂಬೋಲ್

೨. ಇರು ಮರುಳೆ ಶುಷ್ಕ ವೈಯಾಕರಣಿ

೩. ಇ(=ಅ)ವಳ್ದಿರೊಳಿ(=ಳ)ವಂದಿರಂ

೪. ಎನಿತ್ತೆನಿತ್ತಂಬುಜಪತ್ರನೇತ್ರೆಯಾ

೫. ಒರ್ಕ್ಕುಡಿತೆ ನೀರ್ಗೆ ಪರಿಪಟ್ಟೆರ್ಕೆಯ

೬. ಕಃ ಕೇನಾರ್ಥೀ ಕೋ ದರಿದ್ರಃ

೭. ಚುರ್ಚಿದವೊಲ್ ಬಿಸಿಲಳುರೆ ಕಿಮುಟ್ಚಿದ

೮. ದಿವದಿಂ ಕೆಲಸಕ್ಕೆವರ್ಪ ದಿವಿಜಾಂಗನೆಯರ್

೯. ಧೀರನುದಾರಂ ಕಲಿ ಗಂಭೀರಂ

೧೦. ನೆಲನಂ ಪುಗೆ ಫಣಿಯವೋಲ್

೧೧. ಪಾಡುವ ತುಂಬಿ ಕೋಡುವ ಪುಟಿಲ್

೧೨. ಬಡವಾದಿರರಸ ಕಾಲೊಳ್ ನಡೆದಪಿರೊಡನಾರುಮಿಲ್ಲ

೧೩. ಬರಿಸಿ ಪ್ರಧಾನರಂ ಕುಳ್ಳಿರಿಸಿ ಪ್ರಿಯಕುಶಲ

೧೪. ಬಳ್ದುದು ಬಳ್ಳವಾಡಿ ನೆರೆ ನಂಬಿರ್ದು

೧೫. ಬಾರ ಮರಾಳಿಕಾಗಮನೆ ನೋಡ ಚಕೋರ

೧೬. ಬಿಜ್ಜಮ್ಮೆತ್ತೆಸೆವಜ್ಜೆಯ ಸಜ್ಜುಳಮುಂ

೧೭. ವರಸಂಧ್ಯಕ್ಷರದಂತಿರೆ ಗುರುದೀರ್ಘಂ

೧೮. ಸವಣಂ ಬಳಪಂಗೊಳೆ ಗಾಂಡಿವಿ ಬಿಲ್ಗೊಳೆ

ಇದೆಲ್ಲವನ್ನು ಅವಲೋಕಿಸಿದರೆ ಭಟ್ಟಾಕಳಂಕನು ದರ್ಪಣವನ್ನು ಶ್ರದ್ಧೆಯಿಂದ ಅಭ್ಯಾಸಮಾಡಿದುದು ತಿಳಿದುಬರುತ್ತದೆ. ಇಷ್ಟೇ ಏಕೆ ಅಪ್ರತ್ಯಕ್ಷವಾಗಿ ಕನ್ನಡದ ಇತರ ವ್ಯಾಕರಣಗಳನ್ನು ಬಳಸಿಕೊಂಡಿದ್ದರೂ ಪ್ರತ್ಯಕ್ಷವಾಗಿ ದರ್ಪಣವೊಂದನ್ನು ಬಳಸಿರುವುದು ಈತನು ದರ್ಪಣಕ್ಕೆ ಕೊಟ್ಟ ಮನ್ನಣೆಯ ದ್ಯೋತಕವಾಗಿದೆ.

ಭಾಷಾಭೂಷಣದ ವ್ಯಾಖ್ಯಾನಕರ್ತೃ :

ನಾಗವರ್ಮಕೃತ 'ಕರ್ನಾಟಕ ಭಾಷಾಭೂಷಣ'ಕ್ಕೆ ಪ್ರಾಚೀನ ವಿದ್ವಾಂಸನೊಬ್ಬ ಟೀಕೆ – ವ್ಯಾಖ್ಯಾನ ರಚಿಸಿದ್ದಾನೆ.[೬] ಈತನು ಸೂತ್ರಕ್ಕೆ ಕನ್ನಡದಲ್ಲಿ ಪ್ರತಿಪದಾರ್ಥ ಟೀಕೆ ಬರೆಯುತ್ತ, ವಿಷಯ ಸ್ಪಷ್ಟನೆಗಾಗಿ ಕಾವ್ಯಾವಲೋಕನ, ನಯಸೇನ ವ್ಯಾಕರಣ ಗಳೊಂದಿಗೆ ಶಬ್ದಮಣಿದರ್ಪಣದ ಸೂತ್ರ, ವೃತ್ತಿ, ಪ್ರಯೋಗಗಳನ್ನು ಬಳಸಿಕೊಂಡಿದ್ದಾನೆ. 'ಅನ್ಯವ್ಯಾಕರಣ ಸೂತ್ರಂ' ಎಂಬ ಶಿರೋನಾಮೆಯಿಂದ ಹೀಗೆ ಬಳಸಿದ ದರ್ಪಣದ ಸೂತ್ರಗಳ ಸಂಖ್ಯೆ ೧೪. ಇವುಗಳ ಬಳಕೆಯಿಂದ ವಿಷಯ ಸ್ಪಷ್ಟನೆ ಸಾಧ್ಯವಾಗಿದೆ.[೭] ಉದಾ: ಕೇಶಿರಾಜನ 'ಪಲವುಂ ವರ್ಣಂ ಪರಸ್ಪರ ಕೂಡುವಂದಮದೆ ಸಂಧಿ' ಎಂಬ ಸಂದಿಗ್ಧ 'ಸಂಧಿ'ವ್ಯಾಖ್ಯೆಯನ್ನು "ಅಕಾರಾಂತಮಪ್ಪ ನಪುಂಸಕಲಿಂಗದ ಮುಂದೆ ದ್ವಿತಿಯೈಕ ವಚನದ ಅಮ್ ಇರೆ ವಿಕಲ್ಪದಿಂ ಆ ಅಮ್ ಶಬ್ದದ ಆದಿಯಲ್ಲಿ ಮಕಾರ ನಕಾರಂಗಳಪ್ಪುವು"– ಮರ+ಮ್+ಅಮ್ ಅಥವಾ ಮರ+ನ್+ಅಮ್– ಎಂದರೆ ಅಸ್ವರಮಪ್ಪ ವ್ಯಂಜನಂ ಪರದೊಳಿರ್ಪ ಸ್ವರಮಂ ಕೂಡುವ ಲಕ್ಷಣ ಸೂತ್ರಂ–

ಎರಡುಂ ಪಲವುಂ ವರ್ಣಂ ।
ಪರಸ್ಪರಂ ಕೂಡುವಂದಮದೆ ಸಂಧಿ ವಲಂ ।
ಸ್ವರರಹಿತವ್ಯಂಜನಮವು ।
ಪರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್ ।[೮]

---

೬. ನೋಡಿ, ಕರ್ಣಾಟಕ ಭಾಷಾಭೂಷಣಂ (೧೯೦೩ರ ಆವೃತ್ತಿ)
೭. ನೋಡಿ ಕರ್ಣಾಟಕ ಭಾಷಾಭೂಷಣಂ (೧೯೦೩ರ ಆವೃತ್ತಿ)
೮. ಕರ್ಣಾಟಕ ಭಾಷಾಭೂಷಣಂ (೧೯೦೩) ಸೂ. ೩೯

ಎಂದು ವಿವರಣೆ ನೀಡಿ ಮುಂದೆ ಹೋಗುತ್ತಾನೆ. ಹೀಗೆ ಈ ವ್ಯಾಖ್ಯಾನಕಾರನು ಭಾಷಾಭೂಷಣದ ಒಡಲಲ್ಲಿ ದರ್ಪಣದ ಅಭಿಪ್ರಾಯಗಳನ್ನು ನೆಯ್ದಿದ್ದಾನೆ.

ಜಗನ್ನಾಥವಿಜಯದ ಪಂಚಪಾಷಾಣ ವ್ಯಾಖ್ಯಾನ :

ರುದ್ರಭಟ್ಟನ ಜಗನ್ನಾಥವಿಜಯ ಕನ್ನಡಸಾಹಿತ್ಯದ ಕ್ಲಿಷ್ಟಕಾವ್ಯಗಳಲ್ಲಿ ಒಂದು. ಇದರ ಪ್ರಾರಂಭದ ೫ ಪದ್ಯಗಳಿಗೆ ಅನಾಮಧೇಯನೊಬ್ಬ ಸಂಸ್ಕೃತದಲ್ಲಿ 'ಪಂಚ ಪಾಷಾಣ ವ್ಯಾಖ್ಯಾನಂ' ಹೆಸರಿನ ಟೀಕೆ ಬರೆದುದುಂಟು. ಇಲ್ಲಿ ಮೊದಲನೆಯ ಪದ್ಯಕ್ಕೆ ಟೀಕೆ ಬರೆಯುತ್ತ "ಏಕೇನೈವೇಂದ್ರಿಯೇಣ ಪಂಚೇಂದ್ರಿಯ ಸುಖಾನುಭವನಂ ಚ ಸಂಭವತೀತಿ ಕವಿಕೇಶವೇನಾಪ್ಯುಕ್ತಮಸ್ತಿ" ಎಂದು ಹೇಳಿ "ಶ್ರೀ ವಾಗ್ದೇವಿಗೆ ಶಬ್ದದಿನಾವಾವಿಂದ್ರಿಯದ...." ಎಂಬ ಪ್ರಥಮ ಪದ್ಯವನ್ನು ಉದಾಹರಿಸಿದ್ದಾನೆ.

ಬಸವಣ್ಣನವರ ಟೀಕಿನ ವಚನಗಳು :

ಬಸವಣ್ಣನವರ "ಷಟ್ಸ್ಥಲದ ವಚನ"ಗಳಿಗೆ ಅನಾಮಧೇಯನೊಬ್ಬ ಪ್ರತಿ ಪದಾರ್ಥದ ಟೀಕೆ ಬರೆಯುವಲ್ಲಿ ಮಧ್ಯಮಧ್ಯ "ಬದುಕು ಬಾಳು ಜೀವನೇ", "ಅಂಡಲೆ ಆಸನ್ನಪೀಡಾಯಾಂ", "ನುಂಗು ಗಿಳನೇ", "ಮುಚಿಲ್ ಮೊಚನೇ", "ಬಳಲು ಬಹುದುಃಖೇ", "ಅಳಲು ಕ್ಲೇಶೇ", "ಕೊಲ್ಲು ಸಂಹಾರೇ", "ಪೊರೆ ಪೋಷಣೇ", "ಬೀಳು ಪತನೇ", "ಮುನಿ ಕೋಪೇ ತಪಸೇ ಚ", "ಜಱಿ ಧಿಕ್ಕಾರೇ" "ಉಡು ವಸ್ತ್ರ, ಮೃಗಭೇದೇ ಚ", "ಅಳೆ ಪ್ರಮಾಣೇ", "ಒಲಿ ಪ್ರಸನ್ನೇ", "ಬಿದಿರು ದಾನೇ", "ಓಡು ಪಲಾಯನೇ", "ಮುಸುಕು ಆವರಣೇ" ಇತ್ಯಾದಿ ಶಬ್ದಾರ್ಥಗಳನ್ನು ಬಳಸಿದ್ದಾನೆ. ಇವು ಶಬ್ದಮಣಿ ದರ್ಪಣಕ್ಕೆ ಸಂಬಂಧಿಸಿದ ಸಂಪತ್ತು ಎಂಬುದು ಮೇಲು ನೋಟಕ್ಕೇ ವ್ಯಕ್ತವಾಗುತ್ತದೆ.

ಮುದ್ದಣನ ರಾಮಾಶ್ವಮೇಧ

ಮುದ್ದಣನ ರಾಮಾಶ್ವಮೇಧ ಕೇಶಿರಾಜನ ದಟ್ಟಪ್ರಭಾವಕ್ಕೆ ಒಳಗಾದ ಕೃತಿ. ಅಲ್ಲಿಯ ಅನೇಕ ವಾಕ್ಯಗಳು ದರ್ಪಣದಿಂದ ನೇರವಾಗಿ ಇಲ್ಲವೆ ವ್ಯತ್ಯಾಸರೂಪದಿಂದ ಎತ್ತಿತಂದುವು. ಈ ಮಾತಿಗೆ "ಹಾ ರಾಮಾ ಎಂದು ಸೀತೆ ಬಾಯಟಿದಟ್ಟಿಳ್" 'ಪ್ರಾಯಂ ಕೂಸಾದೊಡೇನೀ ಸಾಯಕಂ ಕೂಸಕ್ಕಮೇ' ಮೊದಲಾದುವು ನಿದರ್ಶನವೆನಿಸಿವೆ.

ನಿಘಂಟುಕಾರರು :

'ಅತಿಸಮರ್ಥಶಬ್ದಾರ್ಥ ವಾಗ್ವಿಲಾಸಂ'[೯] ಎನಿಸಿದ ಕೇಶಿರಾಜನ ಘನ ಶಬ್ದ ಶಾಸ್ತ್ರವು ಲಘು ಶಬ್ದಕೋಶವೂ ಎನಿಸಿದೆ. 'ಏಕದ್ವಿತ್ರಿಚತುಃ ಪಂಚಾಕಲಿತಾರ್ಥಂ ಗಳಾಗಿ'[೧೦] ತಲೆದೋರುವ ೧೮೧ರಳಯುಕ್ತ ಪದಕೋಶ, ಯಾದವ ಕಟಕಾಚಾರ್ಯ ನಿನಾದುದು ಕರ್ಣಾಟಕ ಧಾತು ಕವಿಕೇಶವನಿಂ'[೧೧] ಎಂಬಲ್ಲಿ ಹೇಳಿದ ೯೮೫ ಧಾತುಪದಕೋಶ, 'ಪುರಾಣಕವೀಂದ್ರರಖಿಳಕಾವ್ಯ'[೧೨]

೯. ಶಮದ (೧೯೬೮) ಪು. ೨೭೯ ಅ.ಟಿ.
೧೦. ಶಮದ (೧೯೬೮) ಪು. ೨೮-೩೩
೧೧. ಶಮದ (೧೯೬೮) ಪು. ೨೮೦-೩೧೧
೧೨. ಶಮದ (೧೯೬೮) ಪು. ೩೬೧-೩೬೬

ಗಳಿಂದ ಆಯ್ದುಕೊಂಡ ೨೩೩ ನಿಗೂಢ ಪದಕೋಶ, 'ಅಚ್ಚಗನ್ನಡಂ ಪೇಳ್ವರ ಕೈವೊಕ್ಕನಿಧಿಯೆನಿಪ'[೧೩] ಅಪಭ್ರಂಶ ಪ್ರಕರಣದ ಪದನಿಧಿ, ಆಗಾಗ 'ಅಲ್ಲಣಿಗೆಯೆಂದು ಮೇಳಂ'[೧೪], 'ನೆಲಕಲಂ ಎಂದು ಲೋಭಿ'[೧೫], 'ದ್ರೋಣವೆಂದು ನಾಗೊಳಗುಮುಂ ದ್ರೋಣಾಚಾರ್ಯನುಮಕ್ಕಂ'[೧೬] ಎಂದು ಮುಂತಾಗಿ ವೃತ್ತಿ–ಪ್ರಯೋಗಗಳ ಒಡಲಲ್ಲಿ ಹೇಳಿದ ಪದಸ್ತೋಮ– ಹೀಗೆ ಈ ಶಬ್ದಶಾಸ್ತ್ರದ ಗರ್ಭದಲ್ಲಿ ಶಬ್ದಕೋಶವೊಂದು ಅಡಗಿದೆ. ಹಳಗನ್ನಡ ಶಬ್ದಗಳಿಗೆ ಅಧಿಕೃತ ಅರ್ಥಕೊಡುವ ಈ ಅಪೂರ್ವ ಪದಕೋಶ ಮುಂದೆ ಬಂದ ಅನೇಕ ನಿಘಂಟುಕಾರರ ಗಮನವನ್ನು ಹೀಗೆ ಸೆಳೆದಿದೆ:

೧. **ಶೃಂಗಾರ ಕವಿ** : (೧೩೬೯ –೮೦) 'ರಸಿವಾಟಿಜಿಯ ಬೊಂಮರಸನಾಯಕನ ಸುತ'[೧೭]ನಾಗಿರುವ ಈತನ ಕಾಲ ರೈಸ ಅವರ ಪ್ರಕಾರ ಕ್ರಿ.ಶ. ೧೩೬೯–೧೩೮೦ ಮಧ್ಯ.[೧೮] ಕೃತಿ, ರಳಕುಳಕ್ಷಳಯುಕ್ತ ಪದಗಳಿಗೆ ಅರ್ಥ ಹೇಳುವ 'ಕರ್ನಾಟಕ ಸಂಜೀವನಂ' ಹೆಸರಿನ ನಿಘಂಟು. ಶಬ್ದಮಣಿದರ್ಪಣದ ಬಿಚ್ಚುಪದ ಮತ್ತು ಸೂತ್ರಪದ್ಯಗಳನ್ನು ವಾರ್ಧಕ ಷಟ್ಪದಿ ರೂಪದಲ್ಲಿ ಜೋಡಿಸುವಲ್ಲಿ ಕೇಶಿರಾಜನ ಹೆಜ್ಜೆಯೊಳಗೆ ಹೆಜ್ಜೆಯಿಟ್ಟು ನಡೆದಿದ್ದಾನೆ.

"ಏಕದ್ವಿತ್ರಿಚತುಃಪಂಚಾಕಲಿತಾರ್ಥಂಗಳಾಗಿ ಱಟಿನೊಳವು"[೧೯] ಎಂಬ ದರ್ಪಣೋಕ್ತಿಗೆ ಸಮಾನವಾಗಿ "ಱಟಿಕುಳದ ಶಬ್ದಂಗಳೊಳಗಯ್ದು ಸೂಳಿನೆ ಗಮರ್ಥಂ"[೨೦] ಎಂದು ನುಡಿಯುತ್ತ, ಕೃತಿ ಪ್ರಾರಂಭದಲ್ಲಿಯೇ ಕೇಶಿರಾಜನ ಪ್ರಭಾವ ಕ್ಕೊಳಗಾಗಿದ್ದಾನೆ. ತರುವಾಯ "ಱಟಿಕ್ಕೆ ಪ್ರಯೋಗಂ, ಱಟಿನಲ್ಲಿ ಯುಗಳಾರ್ಥ ಶಬ್ದಕ್ಕೆ ಪ್ರಯೋಗಂ, ಮೂಱಱ ವ್ಯಾಖ್ಯಾನದಿಂ ಱಟಿಕ್ಕೆ ಪ್ರಯೋಗಂ" ನಾಲ್ಕರ್ಥದಿಂದ ಱಟಿಕ್ಕೆ ಪ್ರಯೋಗಂ, ಅಯ್ದರ್ಥದಲ್ಲಿ ಱಟಿಕ್ಕೆ ಪ್ರಯೋಗಂ"[೨೧] ಎಂದು ವಿಷಯವನ್ನು ಮುನ್ನಡೆಸುವಲ್ಲಿ ಸಾಮಾನ್ಯವಾಗಿ ಕೇಶಿರಾಜನ ಪದಗಳನ್ನೇ ಪದ್ಯರೂಪದಲ್ಲಿ ಬಳಸಿಕೊಂಡು ಆತನು ನಿಂತಲ್ಲಿ ತಾನೂ ನಿಂತುಬಿಟ್ಟಿದ್ದಾನೆ. ಇದು ಱಟಿಶಬ್ದಕೋಶ.

ಆದೇಶ ಱಟಿಕೋಶವನ್ನು ನಿರ್ಮಿಸುವಲ್ಲಿ ಕೇಶಿರಾಜನ 'ಕೃತಿಮಾರ್ಗದೊಳುಂಟು' ಎಂಬ ೩೧ನೆಯ ಸೂತ್ರವನ್ನೂ 'ಡಕಾರಕ್ಕಾದೇಶಮಾದ ಱಟಿಕ್ಕಂ ಪ್ರಯೋಗಂ' ಎಂಬಲ್ಲಿ (ಸೂ. ೨೯) ಹೇಳಿದ ಪದಪುಂಜವನ್ನೂ ಬಳಸಿಕೊಂಡಿದ್ದಾನೆ.

ಆಮೇಲೆ 'ಝುಳಕಂ ಝುಳಪಿಸಿದಂ...', 'ಇಳಿದಿಳಿಯನೇಳಿದಂ...' ಮತ್ತು 'ಆಳಿಸಿದಂ ಪೇಳಿಸಿದಂ...' ಎಂಬ ಮೂರು ಸೂತ್ರ (೩೫, ೩೬, ೩೭)ಗಳನ್ನನುಸರಿಸಿ 'ಸಹಜಕುಳ' ಪದ ಪಟ್ಟಿಯನ್ನೂ, 'ಸ್ಫಟಿಕಂ ಪೇಟಿಕೆ...', 'ದಾಡಿಮಮಾ ಕೂಷ್ಮಾಂಡಂ...' ಎಂಬ ಎರಡು ಸೂತ್ರ (೩೨,೩೦)ಗಳನ್ನಾಧರಿಸಿ 'ಆದೇಶಕುಳ' ಪದ ಪಟ್ಟಿಯನ್ನೂ ರಚಿಸಿ ಅರ್ಥ ಬರೆದಿದ್ದಾನೆ.

---

೧೩. ಶಮದ (೧೯೬೮) ಪು. ೩೦೨–೩೪೮
೧೪. ಶಮದ (೧೯೬೮) ಸೂ. ೨೬
೧೫. ಶಮದ (೧೯೬೮) ಸೂ. ೨೬
೧೬. ಶಮದ (೧೯೬೮) ಸೂ. ೨೭೫
೧೭. ಕರ್ಣಾಟಕ ಸಂಜೀವನಂ (೧೮೯೬) ಪದ್ಯ ೧
೧೮. ಕರ್ಣಾಟಕ ಸಂಜೀವನಂ (೧೮೯೬) ಪದ್ಯ ೧ ಅ. ಟಿ.
೧೯. ಶಮದ (೧೯೬೮) ಸೂ. ೩೩
೨೦. ಕರ್ಣಾಟಕ ಸಂಜೀವನಂ (೧೮೯೬) ಪದ್ಯ ೧
೨೧. ಕರ್ಣಾಟಕ ಸಂಜೀವನಂ (೧೮೯೬) ಪದ್ಯ ೧, ೪, ೫, ೭

ಹೀಗೆ ಸಹಜ ಟಬಿ, ಆದೇಶ ಱಬಿ, ಸಹಜ ಕುಳ, ಆದೇಶ ಕುಳಯುಕ್ತ ಪದಕೋಶ ನಿರ್ಮಾಣದಲ್ಲಿ ಕೇಶಿರಾಜನ ದರ್ಪಣವೇ ಆಧಾರವಾಗಿದೆ. ಇದಲ್ಲದೆ ಅನ್ಯ ವಿಚಾರ ಗಳಿಗೂ ಬಹಳ ಸಲ ಕೇಶಿರಾಜನೇ ಆದರ್ಶವೆನಿಸಿದ್ದಾನೆ.

೧. ಕೇಶಿರಾಜ

ಬೆಳೆಯೆಂಬ ಧಾತು ಸಸ್ಯಾ । ವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂ॥
ಗಳಿಕುಂ ತಿಳಿಯಲ್ಬರ್ಪುದು । ಬೆಳೆ ಬಳವಿಗಳೆಂಬ ಭಾವವಚನ ದ್ವಯದೊಳ್ ॥ [೨೨]

ಶೃಂಗಾರಕವಿ

ಅಚರಂಗಳಲ್ಲಿ ಬೆಳೆದುದು ಬೆಳಸೆನಿಕ್ಕುಮಾ
ಸಚರನರರಲ್ಲಿ ಬಳೆದಂ ಬಳವಿಗೆಯೆ ರುಚಿರಮಕ್ಕುಂ.........[೨೩]

೨. ಕೇಶಿರಾಜ

.......ಸಂಸ್ಕೃತ ಶ। ಬ್ದನಿಯುಕ್ತ ಲಕಾರದ ನೆಲೆ ।
ಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್[೨೪]

ಶೃಂಗಾರಕವಿ

ಕ್ಷಳವೆಂಬುದೊಂದುಂಟು ಸಂಸ್ಕೃತದ ಲಾ
ಕ್ಷರಸ್ಥಳಮಂ ಳಕಾರಮಾಗುಚ್ಚರಿಪುದು[೨೫]

೩. ಕೇಶಿರಾಜ

......ಕ್ಷಳಕಮಪಭ್ರಂ। ಶತೆಯೊಳ್ ಸುಕವೀಂದ್ರರಿಂದೆ
ಱಬಿದಾದೇಶಂ । [೨೬]

ಶೃಂಗಾರಕವಿ

ಕ್ಷಳನೊಳಂ ಱಬಿನುಮುಂಟು [೨೬]

೪. ಕೇಶಿರಾಜ

ಪಿರಿಯರ್ ಸಲಿಪರ್ ದಡ್ಡ। ಕ್ಕರದ ಱಬಿಕ್ಕೆಯ್ದೆ ರೇಫೆವೆರೆಸಿದ ದಡ್ಡ ।
ಕ್ಕರಮಂ......[೨೭]

---

೨೨. ಕರ್ಣಾಟಕ ಸಂಜೀವನಂ (೧೮೯೬) ಪು. ೧೫–೧೬
೨೨. ಶಮದ (೧೯೬೮) ಸೂ. ೨೨೯
೨೩. ಕರ್ಣಾಟಕ ಸಂಜೀವನಂ (೧೮೯೬) ಪು. ೯
೨೪. ಶಮದ (೧೯೬೮) ಸೂ. ೧೬
೨೫. ಕರ್ಣಾಟಕ ಸಂಜೀವನಂ (೧೮೯೬) ಪು. ೧೦
೨೬. ಶಮದ (೧೯೬೮) ಸೂ. ೩೧
೨೬ಎ. ಕರ್ಣಾಟಕ ಸಂಜೀವನಂ (೧೮೯೬) ಪು. ೧೦
೨೭. ಶಮದ (೧೯೬೮) ಸೂ. ೩೪

....ದ್ವಿತ್ವ ಱಟನೊಳಡಿ
ವೇಳ್ದೆಡೆಗೆ ಸಲೆ ಱಕಾರಂ ತಳ್ತ ದಡ್ಡಕ್ಕರಂ ಪ್ರಾಸಮಕ್ಕುಮೊಳ್ಪಿಂ ॥[೨೮]

೫. ಕೇಶಿರಾಜ
ಕುಳದ ನಿಯಾಮದೊಳೆಂದುಂ। ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ....[೨೯]

ಶೃಂಗಾರಕವಿ
ಅ. ಕುಳನುಂ ಕ್ಷಳಮೊಂದು ನಿಯಮದಿಂ ಸಲ್ಗುಂ.........
ಕುಳ ಪಾದದೆಡೆಯೊಳ್ ಕ್ಷಳನುಮಂಲಕಾ
ರದಿಂ ಪ್ರಾಸಮೆಂದೊಡೆ ದೋಷಂ ......[೩೦]

ಬ. ಕುಳಂ ಕ್ಷಳನೆರಡು ಬೆರಸೆ
ಸೌಖ್ಯೋದಯಂ[೩೧]

ಹೀಗೆ ಶೃಂಗಾರಕವಿಗೆ ಶಬ್ದಕೋಶ ರಚಿಸುವಲ್ಲಿ ಕೇಶಿರಾಜನೇ ಪ್ರೇರಕ, ಪೋಷಕ. ಆತನ ಕರ್ಣಾಟಕಸಂಜೀವಿನಿಯು ಶಬ್ದಮಣಿದರ್ಪಣದ ಒಡಲಿನಿಂದ ಹೊರತೆಗೆದ ನಿಘಂಟು.

೨. ಮಿಕ್ಕ ನಿಘಂಟುಕಾರರು: ಶೃಂಗಾರಕವಿಯ ಕರ್ಣಾಟಕ ಸಂಜೀವಿನಿಯು ಕೇಶಿರಾಜನ ರಳ, ಕುಳ, ಕ್ಷಳ ವಲಯವನ್ನು ಸೂರೆಮಾಡಿದ್ದರೆ, ವಚನ ರೂಪದ 'ಕರ್ಣಾಟಕ ಶಬ್ದಸಾರಂ', ಸೂರ್ಯಕವಿಯ 'ಕವಿಕಂಠಹಾರಂ', ತೋಂಟದಾರ್ಯನ 'ಶಬ್ದಮಂಜರಿ', ಚತುರಾಸ್ಯಕವಿಯ 'ಚತುರಾಸ್ಯ ನಿಘಂಟು' ಎಂಬ ನಾಲ್ಕು ನಿಘಂಟುಗಳು ಪ್ರಾಸಂಗಿಕವಾಗಿ ಅ) ಅಪಭ್ರಂಶ ಪದವಿಚಾರ, ಆ) ತತ್ಸಮಪದ ವಿಚಾರ, ಇ) ಇತರ ವ್ಯಾಕರಣ ವಿಚಾರಗಳನ್ನು ದರ್ಪಣದಿಂದ ಸ್ವೀಕರಿಸಿವೆ.**ಅ. ಅಪಭ್ರಂಶ ಪದವಿಚಾರ:** ಬಹುಮಟ್ಟಿಗೆ ಪರಸ್ಪರ ಹೋಲುವ ವಚನರೂಪದ 'ಕರ್ಣಾಟಕ ಶಬ್ದಸಾರ' ಮತ್ತು ಸೂರ್ಯಕವಿಯ 'ಕವಿಕಂಠಹಾರ'ಗಳಲ್ಲಿ ಕೇಶಿರಾಜನ ಅಪಭ್ರಂಶ ಪ್ರಕರಣದ ಪ್ರಭಾವ ಹೀಗೆ ಎದ್ದುತೋರುತ್ತದೆ:

ಕರ್ನಾಟಕ ಶಬ್ದಸಾರಂ:

ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ– ಈ ೩ ಶ್ರೀದ್ವಾರಕ್ಕೆ ಪೆಸರ್.
ವಂಕದರಂ, ವಂಕದಾರಂ, ವಂಕಬಾರಂ – ಈ ೩ ವಕ್ರದ್ವಾರಕ್ಕೆ ಪೆಸರ್.
ಪಾಣಿಯದರಂ, ಪಾಣಿಯದಾರಂ, ಪಾಣಿಯಬಾರಂ – ಈ ೩ ಪಾನೀಯ
ದ್ವಾರಕ್ಕೆ ಪೆಸರ್. ಕಂಟಿಯಬಾರಂ ಎಂದು ಕಂಟಕದ್ವಾರಂ.[೩೨]

---

೨೮. ಕರ್ಣಾಟಕ ಸಂಜೀವನಂ (೧೮೯೬) ಪು. ೧೦
೨೯. ಶಮದ (೧೯೬೮) ಸೂ. ೧೫
೩೦. ಕರ್ಣಾಟಕ ಸಂಜೀವನಂ (೧೮೯೬) ಪು. ೧೦
೩೧. ಕರ್ಣಾಟಕ ಸಂಜೀವನಂ (೧೮೯೬) ಪು. ೧೧
೩೨. ಕರ್ಣಾಟ ಶಬ್ದಸಾರಂ (೧೮೯೭) ಪು.೧೫–೧೬

ಕವಿಕಂಠಹಾರಂ:

"ಸಿರಿಯದರ ಸಿರಿಯಬಾರಂ ।
ನೆರೆ ತಾಂ ಶ್ರೀದ್ವಾರ ವಂಕದರಮುಂ ನೋಡ ।
ಲ್ಕುರು ವಂಕಬಾರ ಬುಧರಿಂ ।
ಪರಿಕಿಸೆ ತಾಂ ವಂಕದಾರ ವಕ್ರದ್ವಾರಂ।
ಕಂಟಿಯಬಾರಮೆನಲ್ಕದು ।
ಕಂಟಕಮಹ ಬಾಗಿಲಕ್ಕುಂ......[೩೩]

ಈ ಹೇಳಿಕೆಗಳಿಗೆ ಕೇಶಿರಾಜನ "ದರದಾರಬಾರಮಕ್ಕುಂ...." ಎಂಬ ಸೂತ್ರವೇ ಪ್ರೇರಕವೆಂದು ದರ್ಪಣೋಕ್ತ,

ಶ್ರೀದ್ವಾರಂ – ಸೀಯದರಂ, ವಿಕಲ್ಪದಿಂ ಸಿರಿಯದಾರಂ, ಸಿರಿಯಬಾರಂ.

ವಕ್ರದ್ವಾರಂ – ವಂಕದರಂ, ವಂಕದಾರಂ, ವಂಕಬಾರಂ.

ಪಾನೀಯದ್ವಾರಂ – ಪಾಣಿಯದರಂ, ಪಾಣಿಯದಾರಂ, ಪಾಣಿಯಬಾರಂ.

ಕಂಟಕದ್ವಾರಂ – ಕಂಟಿಯಬಾರಂ [೩೪]

ಎಂಬ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಆ. ತತ್ಸಮಪದವಿಚಾರ: ಕೇಶಿರಾಜನ ದೃಷ್ಟಿಯಲ್ಲಿ ತತ್ಸಮಗಳೆಂದರೆ 'ಸಂಸ್ಕೃತಕ್ಕಂ ಕನ್ನಡಕ್ಕಂ ಸರಿ'ಯೆನಿಸಿದ

ಮಣಿಮಂಚಂ ಪಟ್ಟಂ ತೋ ।
ರಣಮಟ್ಟಂ ಗೋಣಿಸಬಳಮಂಕಂ ಲತೆ ಕಂ ।
ಕಣಮೆಸೆವ ಕೋಂಟೆ ಬಲವಂ ।
ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ ।
ಗಲ್ಲಂ ಮಲ್ಲಂ ತಳಮಿಂ ।
ತೆಲ್ಲಂ ತತ್ಸಮಂ......[೩೫]

ಎಂಬ ೨೧ ಪದಗಳು. ಇವುಗಳನ್ನು ಕರ್ಣಾಟಕ ಶಬ್ದಮಂಜರಿ, ಚತುರಾಸ್ಯ ನಿಘಂಟು, ಕವಿಕಂಠಹಾರ ಕೃತಿಗಳು ಹೀಗೆ ಸ್ವೀಕರಿಸಿವೆ:

---

೩೩. ಕವಿಕಂಠಹಾರ (೧೯೦೨) ಪು. ೨೧
೩೪. ಶಮದ (೧೯೬೮) ಸೂ. ೩೧೧
೩೫. ಶಮದ (೧೯೬೮) ಸೂ. ೩೧೨, ೩೧೩

ಕರ್ಣಾಟಕ ಶಬ್ದಮಂಜರಿ:

ಮಣಿಮಂಚಪಟ್ಟವಟ್ಟಂ ಘಟ್ಟಸಬಳ ವಂ ।
ಗಣಗೋಣಿ ಗಾಳಗಂಡ ಮಾಲೆ ಬಂದಿತೋ ।
ರಣ ಬಿಲಂ ಕಾಲವಂಕಲತೆ ಕೋಟೆಗಲ್ಲಂ ಮಲ್ಲಕಂಕಣ ತಳಂ।
(ಎ)ಣಿಸಲಿವು ತತ್ಸಮವೆನಿಪ್ಪ ಶಬ್ದಂಗಳ್ ।[೩೬]

ಚತುರಾಸ್ಯ ನಿಂಘಟು:

ಕಂಕಣಮಾ ಕೋಂಟೆ ಬಿಲಂ ।
ಸಂಕೆಯದೇಂ ಗೋಣಿ ಸಬಳವಂಕಣಮೆಂಬೀ ।
ಬಿಂಕದ ಶಬ್ದಂ ಸಂಸ್ಕೃತ ।
ಕನ್ನಡಕಂ ಸಮಾನಮೆಲೆ ಚತುರಾಸ್ಯ ।
ಗಲ್ಲಂ ಮಲ್ಲಂ ತೋರಣ ।
ಮಲ್ಲಣಿಯುಮಂಕಪಟ್ಟವೆಯೆಂಬಿವು ಸಂಸ್ಕೃತ (?) ।
ದಲ್ಲಿಯುಮೀ ಕರ್ಣಾಟಕ।
ದಲ್ಲಿಯುಮೊಂದೆ ಸಮಾನಮೆಲೇ ಚತುರಾಸ್ಯ ।[೩೭]

ಕವಿಕಂಠಹಾರಂ:

ಗಲ್ಲಮಣಿಪಟ್ಟ ತೋರಣ।
ಮಲ್ಲಂ ತಾನೆನಲಿವಿನಿತು ಸತ್ಕವಿವರರಿಂ ।
ಸಲ್ಲಲಿತಮೆನಿಪ್ಪ ಶಬ್ದಮಿ ।
ವೆಲ್ಲಿಯು ತಾಂ ತತ್ಸಮಕ್ಕೆ ಸಲ್ಗುಂ ಧರೆಯೊಳ್ । [೩೮]

ಈ ಹೋಲಿಕೆ ತೋಂಟದಾರ‍್ಯ, ಚತುರಾಸ್ಯ ಮತ್ತು ಸೂರ‍್ಯಕವಿಗಳ ದರ್ಪಣಾಭ್ಯಾಸಕ್ಕೆ ಹಿಡಿದ ಕನ್ನಡಿಯೆನಿಸಿವೆ.

೩. ಇತರ ವ್ಯಾಕರಣ ವಿಚಾರ: ಮೇಲೆ ನಿರ್ದೇಶಿಸಿದ ಎಲ್ಲ ನಿಘಂಟುಕಾರರು ಆಗಾಗ ಕೇಶಿರಾಜನಿಂದ ಅನ್ಯ ವಿಚಾರಗಳನ್ನು ಸ್ವೀಕರಿಸಿದ್ದು, ಅವು:

೧. ಕವಿಕಂಠಹಾರಂ : "ಅಲ್ಲವೆಂಬರ್ಥಮನಲ್ತೆನ।
ಲೆಲ್ಲಾಯೆಂಬರ್ಥಮಪ್ಪುದಲ್ಲೆನ್ನಲ್ ತಾಂ।[೩೯]

---

೩೬. ಕರ್ಣಾಟಕ ಶಬ್ದಮಂಜರಿ (೧೮೯೫) ಪು. ೫೩
೩೭. ಚತುರಾಸ್ಯ ನಿಘಂಟು (೧೮೯೩) ೫೩ – ೫೪
೩೮. ಕವಿಕಂಠಹಾರಂ (೧೯೦೭) ಪು. ೩೯
೩೯. ಕವಿಕಂಠಹಾರಂ (೧೯೦೭) ಪು. ೩೯

ಚತುರಾಸ್ಯ ನಿಂಘಟು: ಅಲ್ತೆನನಲ್ಲೆಂಬರ್ಥಮ।
ದಲ್ತೆಂದೆನಲಲ್ಲದೆನಿಪ ತೆರಂ"[೪೦]

ಶಬ್ದಮಣಿದರ್ಪಣ : "ಪುದಿಯದು ಲೋಪಂ ಪ್ರತಿಷೇ।
ಧದೊಳಲ್ಲದುವೆಂಬ ಪದನನಲ್ತೆನಲಕ್ಕುಂ।[೪೧]
"ಸವನಿಸುವುದೆಲ್ಲ ಶಬ್ದ।
ಕ್ಕೆ ವಿಕಲ್ಪದೆ ದೀರ್ಘವಿಧಿ...."[೪೨]

೨. ಕವಿಕಂಠಹಾರಂ : ನಿನತೆಂದು ನಿನ್ನದಕ್ಕುಂ।
ತನತೆಂದುಂ ತನ್ನದಕ್ಕು ಸತ್ಕವಿವರರಿಂ।
ಉನತೆಂದುಮುನ್ನದಕ್ಕುಮ।
ದನಿಶಂ ಬಹುವಚನಕಕ್ಕು ನತ್ವಂ ಮತ್ವಂ ॥[೪೩]

ಕರ್ನಾಟಕ ಶಬ್ದಸಾರಂ: ನಿನತೆಂದುಂ, ನಿನತ್ತೆಂದುಂ, ನಿನ್ನದು.
ತನತೆಂದುಂ, ತನತ್ತೆಂದುಂ, ತನ್ನದು.
ಎನತೆಂದುಂ, ಎನತ್ತೆಂದುಂ, ಎನ್ನದು.
ಉನತೆಂದುಂ, ಉನತ್ತೆಂದುಂ, ಉನ್ನದು.
ಇವರ ಬಹುವಚನಕ್ಕೆ ಮಕಾರಮಂ ಪತ್ತಿಸಿಕೊಳ್ವುದು. [೪೪]

ಶಬ್ದಮಣಿದರ್ಪಣ:

ನಿನತೆನತು ತನತೆನಿಪ್ಪುವು।
ಜನಿಯಿಸುಗುಂ ನಿನ್ನದೆನ್ನದುಂ ತನ್ನದೆನಿ।
ಪ್ಪಿನಿತಱೊಳಂ ಮೇಣ್ ದ್ವಿತ್ವದಿ।
ನನೇಕವಚನದೊಳ್ ನತ್ವದೆಡೆಗೆ ಮತ್ವಂ ಬರೆಯುಂ।[೪೫]

೩. ಚತುರಾಸ್ಯ ನಿಘಂಟು:

ಅಱಿ ನೀಂ ಲಿಂಗತ್ರಯದೊಳ್।
ಪೆಱತು ಪೆಱಂ ಪೆಱಳೆನಿಪ್ಪುದನ್ಯಾರ್ಥಂ [೪೬]

---

೪೦. ಚತುರಾಸ್ಯ ನಿಘಂಟು (೧೮೯೩) ೨೬
೪೧. ಶಮದ (೧೯೬೮) ಸೂ. ೫೭
೪೨. ಶಮದ (೧೯೬೮) ಸೂ. ೧೮೬
೪೩. ಕವಿಕಂಠಹಾರಂ (೧೯೦೨) ಪು. ೩೨
೪೪. ಕರ್ಣಾಟಕ ಶಬ್ದಸಾರಂ (೧೮೯೭) ಪು. ೨೬
೪೫. ಶಮದ (೧೯೬೮) ಸೂ. ೧೫೮
೪೬. ಚತುರಾಸ್ಯ ನಿಘಂಟು (೧೮೯೩) ೮೯

ಶಬ್ದಮಣಿದರ್ಪಣ:

ಬಗೆ......ಗುಣವಚನ ಸರ್ವನಾಮ..... ಸಂಖ್ಯೆಗಳುಂ ಸಲೆ ವಾಚ್ಯ
ಲಿಂಗಮೆಂದು–ಎಂಬ ಸೂತ್ರದ ಕೆಳಗೆ ಸರ್ವನಾಮಕ್ಕೆ ಕೊಟ್ಟ ಪೆಱಂ–
ಪೆಱಳೆ, ಪೆಱತು, ಎಂಬುದನ್ನು ಹೋಲಿಸಿರಿ. [೪೭]

೪. ಕವಿಕಂಠಹಾರಂ:

ಅನ್ನೆವರಮನ್ನೆವರೆಗಂ।
ಅನ್ನೆಗಮೆಂದಿನ್ನೆವರೆಗಮಿನ್ನೆಗಮೆಂದುಂ।
ಇನ್ನೆವರಮೆಂದು ಧರೆಯೊಳ।
ಗುನ್ನೆವರಮೆಂದು ಉನ್ನೆಗವರವೆನುತುಂ ಕವಿಗಳ್॥
ಉನ್ನೆಗಮೆನಲಕ್ಕುಂ.....[೪೮]

ಕರ್ನಾಟಕ ಶಬ್ದಸಾರಂ:

ಅನ್ನೆಗಂ, ಅನ್ನೆವರಂ, ಅನ್ನೆವರೆಗಂ
ಇನ್ನೆಗಂ, ಇನ್ನೆವರಂ, ಇನ್ನೆವರೆಗಂ
ಉನ್ನೆಗಂ, ಉನ್ನೆವರಂ, ಉನ್ನೆವರೆಗಂ–ಇವು ಸೀಮಾಪ್ರಮಾಣ ಶಬ್ದಂಗಳ್ [೪೯]

ಶಬ್ದಮಣಿದರ್ಪಣ:

ಅನ್ನೆಗಮಿನ್ನೆಗಮೆನ್ನೆಗ।
ಮೆನ್ನದೆ ಕಡೆಗುಂಟು ಲೋಪಮಿದಿರೊಳ್ ಸೀಮೋ।
ತ್ಪನ್ನಂ ವರಂ ವರೆಗಮಿರೆ........[೫೦]

೫. ಕರ್ನಾಟಕ ಶಬ್ದಸಾರಂ:

ಅನಿತು, ಇನಿತು, ಎನಿತು–ಎಂಬಿವು ಪ್ರಮಾಣ ಸೂಚಕಂಗಳ್[೫೧]

ಶಬ್ದಮಣಿದರ್ಪಣ:

"ಅನಿತಿನಿತೆಂದು ಪವಣಂ ಪೇಟ್ವ ಶಬ್ದಂಗಳ್"[೫೨]

೬. ಕವಿಕಂಠಹಾರಂ:

ಅನ್ನನಂತಪ್ಪನಂತಹ।
ನಿನ್ನನುಮಿಂತಪ್ಪನಿಂತಹಂ ತಾನೆಂದುಂ।
ಉನ್ನಮುಂತಪ್ಪನುಂತಹಂ।[೫೩]

---

೪೭. ಶಮದ (೧೯೬೮) ಸೂ. ೯೯
೪೮. ಕವಿಕಂಠಹಾರಂ (೧೯೦೨) ಪು. ೩೨
೪೯. ಕರ್ಣಾಟಕ ಶಬ್ದಸಾರಂ (೧೯೯೭) ಪು. ೨೬
೫೦. ಶಮದ (೧೯೬೮) ಸೂ. ೨೫೯
೫೧. ಕರ್ಣಾಟಕ ಶಬ್ದಸಾರಂ (೧೮೯೭) ಪು. ೨೬
೫೨. ಶಮದ (೧೯೬೮) ಸೂ. ೧೧೦
೫೩. ಕವಿಕಂಠಹಾರಂ (೧೯೦೨) ಪು. ೩೨

ಚತುರಾಸ್ಯ ನಿಘಂಟು:

"ಅಂತಹನಿಂತಹನೆಂತಹ
ನಿಂತೀ ನುಡಿಯನ್ನನಿನ್ನನೆನ್ನನೆನಿಕ್ಕುಂ...." [೫೪]

ಶಬ್ದಮಣಿದರ್ಪಣ:

"ಅಂತಹನಿಂತಹನುಂತಹ।
ನೆಂತಹನೆಂದಿಂದು ಪದ್ವಿರುಕ್ತಿಗೆ ಹತ್ವಂ।
ಭ್ರಾಂತೇಂ ಗಡಾರ್ಥದೊಳಮೇ।
ಣಂತವಱೆಡೆಗನ್ನನಿನ್ನನುನ್ನನುಮೆನ್ನಂ॥"[೫೫]

೭ ಕವಿಕಂಠಹಾರಂ:

................ಎತ್ತಣ್ತೆನ್ನಲ್।
ಸನ್ನುತ ಸತ್ಕವಿವರರಿಂ।
ಕನ್ನಡಿಕುಂ ಜಗದೊಳೆಲ್ಲಮೆತ್ತಣದೆನುತುಂ। [೫೬]

ಕರ್ಣಾಟಕ ಶಬ್ದಸಾರಂ:

'ಎತ್ತಣ್ತೆಂದು ಎತ್ತಣೆಂಬರ್ಥಂ
ಆರ್ತೆನೆಂದು ಆರದೆಂಬರ್ಥಂ' [೫೭]

ಶಬ್ದಮಣಿದರ್ಪಣ:

ಎತ್ತಣದೆಂಬೀ ಶಬ್ದಮ।
ನೆತ್ತಣ್ತೆಂದಿಂತು ಕೂಡಿ ನುಡಿಯಲ್ಕಕ್ಕುಂ।
ಮತ್ತಾರದೆಂಬುದಂ ವಿಬು।
ಧೋತ್ತಮರಾರ್ತೆಂದು ಕೂಡಿ ನುಡಿಯಲ್ಕಕ್ಕುಂ॥[೫೮]

೮. ಕರ್ಣಾಟಕ ಶಬ್ದಸಾರಂ:

ಆರ್ತುದೆಂದು ಆಱುತುದು [೫೯]

ಶಬ್ದಮಣಿದರ್ಪಣ:

ಆಱು ಎಂಬುದರ್ಕೆ ಆರ್ತಂ, ವಿಕಲ್ಪದಿಂ ಆಱುತನೆಂದುಮುಂಟು[೬೦]

---

೫೪. ಚತುರಾಸ್ಯ ನಿಘಂಟು (೧೮೯೩) ೬೮
೫೫. ಶಮದ (೧೯೬೮) ಸೂ. ೧೭೧
೫೬. ಕವಿಕಂಠಹಾರಂ (೧೯೦೨) ಪು. ೩೨
೫೭. ಕರ್ಣಾಟಕ ಶಬ್ದಸಾರಂ (೧೮೯೭) ಪು. ೨೬
೫೮. ಶಮದ (೧೯೬೮) ಸೂ. ೧೬೦
೫೯. ಕರ್ಣಾಟಕ ಶಬ್ದಸಾರಂ (೧೮೯೭) ಪು. ೨೬
೬೦. ಶಮದ (೧೯೬೮) ಸೂ. ೨೫೧

೯. ಕರ್ಣಾಟಕ ಶಬ್ದಸಾರಂ:

ಒರ್ಮೆ, ಇರ್ಮೆ, ಮೂರ್ವೆ, ಸಾಸಿರ್ಮೆ, ಪಲರ್ಮೆ–ಇವು
ಎಣಿಸುವ ಸೂಟಿಯೊಳೆ ವರ್ತಿಪುವು.[೬೧]

ಶಬ್ದಮಣಿದರ್ಪಣ:

"......ಮೆಯೆಂಬುದಕ್ಕುಮೆಣಿಸುವ ಸೂಟಿಯೊಳ್"

–ಒರ್ಮೆ, ಇರ್ಮೆ, ಮೂರ್ಮೆ, ಸಾಸಿರ್ಮೆ, ಪಲರ್ಮೆ,[೬೨]

ಪ್ರಾಚೀನ ನಿಘಂಟುಕಾರರು ದರ್ಪಣವನ್ನು ಅಭ್ಯಸಿಸಿದುದಕ್ಕೆ, ಪರಮ ಪ್ರಮಾಣವೆಂದು ಸ್ವೀಕರಿಸಿದುದಕ್ಕೆ ಮೇಲಣ ಉದಾಹರಣೆಗಳು ನಿದರ್ಶನಗಳೆನಿಸಿವೆ.

ಆಲಂಕಾರಿಕರು, ಛಾಂದಸಿಗರು:

ಕನ್ನಡ ಕೋಶಕಾರರಂತೆ, ಆಲಂಕಾರಿಕರೂ ಛಾಂದಸಿಗರೂ ದರ್ಪಣವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದ್ದಾರೆ. ಅದರ ಪರಿಣಾಮವಾಗಿ ಅವರ ಕೃತಿಗಳು ದರ್ಪಣದ ಪ್ರಭಾವಕ್ಕೊಳಗಾಗಿವೆ. ಅವು: ಕವಿಜಿಹ್ವಾಬಂಧನ ಮತ್ತು ನರಪತಿಚರಿತ.

ಕವಿಜಿಹ್ವಾಬಂಧನ: ಈ ಛಂದೋಗ್ರಂಥದ ಕರ್ತೃ ಈಶ್ವರ ಕವಿ. ಈತನಿಗೆ ಕೇಶಿರಾಜನ ಬಗೆಗೆ ಅಪಾರ ಗೌರವ.

ಲಕ್ಷಣ ಶಿಕ್ಷಾಚಾರ್ಯ ಸು ।
ಲಕ್ಷಣಿ ಕೇಶವನ ಶಬ್ದಮಣಿದರ್ಪಣಮ ।
ನ್ನೀಕ್ಷಿಸಿ ಶಿಕ್ಷಿಸಲೀಶ್ವರ ।
ಸಾಕ್ಷಾತ್ತಭಿನವನು ಕೇಶಿರಾಜಂ ಪುಸಿಯೇ ॥[೬೩]

ಎಂಬ ಪದ್ಯದಲ್ಲಿ ಕೇಶಿರಾಜನನ್ನು 'ಲಕ್ಷಣ ಶಿಕ್ಷಾಚಾರ್ಯ, ಸುಲಕ್ಷಣಿ' ಎಂದು ಹೊಗಳಿ, 'ಶಬ್ದಮಣಿದರ್ಪಣಮನೀಕ್ಷಿಸಿ ಶಿಕ್ಷಿಸಲ್' ಸಮರ್ಥನಾಗಿರುವ ತಾನು 'ಅಭಿನವ ಕೇಶಿರಾಜ', 'ಅಭಿನವಕೇಶವಂ', 'ನವಕೇಶಿರಾಜ', 'ನವೀನ ಕೇಶವಂ'– ಎಂದು ಹೇಳಿಕೊಂಡಿರುವನು. ಇದರ ಫಲವೆನ್ನುವಂತೆ ಕವಿಜಿಹ್ವಾಬಂಧನದಲ್ಲಿ ಕಂಡುಬರುವ

೧. ಕೊರಳುಂ ಜಿಹ್ವಾಮೂಲಮು ।
ಮುರಮುಂ ತಾಳುಗೆಯಮೋಷ್ಠಮುಂ ನಾಸಿಕಮುಂ ।
ಶಿರಮುಂ ದಂತಮುಮೆಂದ ।
ಕ್ಕರಮುದಯಿಪ ತಾಣಮಾದುವೀ ಪೇಳ್ದೆಂಟುಂ ॥[೬೪]

---

೬೧. ಕರ್ಣಾಟಕ ಶಬ್ದಸಾರಂ (೧೮೯೭) ಪು. ೨೬
೬೨.ಶಮದ (೧೯೬೮) ಸೂ. ೨೧೮
೬೩.ಕವಿಜಿ (೧೯೫೦) ೧–೯
೬೪. ಕವಿಜಿ (೧೯೫೦) ೩–೨೭

೨. ತನುವಾದ್ಯಂ ನಾಲಗೆ ವಾ।
ದನ ದಂಡಂ ಕರ್ತೃವಾತ್ಮನವನ ಮನೋವ್ಯ।
ತ್ತಿ ನಿಮಿತ್ತಮಾಗೆ ಶಬ್ದಂ।
ಜನಿಯಿಸುಗುಂ ಧವಳವರ್ಣಮಕ್ಷರರೂಪಂ ॥[೬೫]

ಈ ಎರಡು ಪದ್ಯಗಳು ನೇರವಾಗಿ ದರ್ಪಣದಿಂದ ಎತ್ತಿಕೊಂಡವುಗಳೇ ಆಗಿವೆ. ಇದಲ್ಲದೆ

೧. "ಅರಿ ಲಿಂಗಗಳೊಂಬತ್ತುಂ ...." [೬೬]

೨. "ಭೂತವತಿ ವರ್ತಮಾನ...." [೬೬]

ಎಂಬಿವು ದರ್ಪಣದ "ಲಿಂಗಮೊಂಬತ್ತು ತೆಱಂ...." "ಭೂತಭವಿಷ್ಯ ತ್ಕ್ರಿಯೆಗಳ್..." ಎಂಬ ಹೇಳಿಕೆಗಳಿಗೆ ಋಣಿಯಾಗಿವೆ.

ನರಪತಿಚರಿತಂ : ಮೈಸೂರು ಅರಸುಬಳಗಕ್ಕೆ ಸೇರಿದ ಲಿಂಗರಾಜ ಇದರ ಕರ್ತೃ. ಈ ಅಲಂಕಾರ ಗ್ರಂಥದಲ್ಲಿ ದರ್ಪಣದಿಂದ ಮೂರು ಸೂತ್ರಗಳನ್ನು ಉದಾಹರಿಸಲಾಗಿದೆ:

೧. ಧರ್ಮವಾಚಕ ಲುಪ್ತೋಪಮೆಗಾಗಿ ಹೇಳಿದ ಲಕ್ಷ್ಯಪದ್ಯದ 'ಮಯಣುಗ' ಎಂಬ ಪದಸಿದ್ಧಿಯನ್ನು ಕುರಿತು ವಿವೇಚಿಸುವಲ್ಲಿ,[೬೭]

"ವೃತ್ತಿ ॥ ಇದರೊಳ್ಮಯಣುಗನೆಂಬಲ್ಲಿ ಶಬ್ದಮಣಿದರ್ಪಣದ ತದ್ಧಿತ ಪ್ರಕರಣದ

೮ನೆಯ ಸೂತ್ರಂ ॥ ಕಂ ॥ ವ್ಯವಹರಣ ತದಾಚರಣ ।

ಪ್ರವಣನೊಳಕ್ಕುಂ ಸಮಂತು ಗ ಪ್ರತ್ಯಯಂ ॥

ಎಂಬ ಸೂತ್ರಾನುಸಾರಮಾಗಿ ಮಯಣನವೊಲಾಚರಿಪನೆಂದರ್ಥಂ..." ಎಂದು ಹೇಳಿದ್ದಾನೆ.

೨. ವಾಚಕೋಪಮೇಯ ಲುಪ್ತೆಯ ಲಕ್ಷ್ಯಪದ್ಯದಲ್ಲಿ ಬಳಸಿದ "ಕಡಲಣುಗಿತಿ" ಎಂಬ ಪದಸಿದ್ಧಿಗಾಗಿ,[೬೮]

"ವೃತ್ತಿ॥ ಸೂತ್ರಂ ॥ ಪರಿನಿರ್ಮಿಪ ಮಾರಾಡುವ ।
ದೊರೆವಡೆದ ನಿಯೋಗದನೃತದಜೆತದ ಋಣದಾ ।
ಚರಣದ ಶಿಲ್ಪದ ಮೂಲದ ।
ನರನಂ ಪೇೞ್ವಲ್ಲಿ ಮಾೞ್ಕಿಗ ಪ್ರತ್ಯಯಮಂ ॥

೬೫. ಕವಿಜಿ (೧೯೫೦) ೩-೨೮
೬೬. ಕವಿಜಿ (೧೯೫೦) ೪-೧೨ ಮತ್ತು ೧೩
೬೭. ನರಚ (೧೮೯೯) ಪು. ೧೨

ಎಂಬ ಸೂತ್ರದಿಂ ಕಡಲಣುಗಿಯೆಂಬಲ್ಲಿ ಆಚಾರಾರ್ಥದೊಳಿಗ ಪ್ರತ್ಯಯಂ ಪತ್ತೆ ಕಡಲಣುಗಿಗ ಎಂದಾದುದು. ಅನಂತರಂ–ಸೂತ್ರಂ॥ "ಕಾಂತಾವಿಷಯದೊಳಾದ ಮದಂತಕ್ಕಿತಿಯುಂ ತದಾದಿ ಲೋಪಮುಮಕ್ಕುಂ" ಎಂಬುದರಿಂ ಸ್ತ್ರೀಲಿಂಗದೊಳಿತಿ ಪ್ರತ್ಯಯಂ ಪತ್ತಿ, ಪಿಂತಣಿಗ ಪ್ರತ್ಯಯಂ ಲೋಪಮಾಗಿ ಕಡಲಣುಗಿತಿ ಎಂದಾದುದು" –ಎಂದು ಹೇಳಿದ್ದಾನೆ. ಹೀಗೆ ಪದಶುದ್ಧಿ ನಿರ್ಣಯಕ್ಕೆ ದರ್ಪಣ ಪ್ರಮಾಣ ಗ್ರಂಥವಾಗಿದೆ, ಲಿಂಗರಾಜನಿಗೆ.

ಈ ಪ್ರಮುಖ ಪ್ರಭಾವವಲ್ಲದೆ ಕೆಲವು ವ್ಯಕ್ತಿಗಳು ದರ್ಪಣವನ್ನು ಅಣು ಅಣುವಾಗಿ ಅಭ್ಯಸಿದುದು ಹೀಗೆ ಕಂಡುಬರುತ್ತದೆ.

'ಕ' ಪ್ರತಿಯ ವಿದ್ಯಾರ್ಥಿ

ಶ್ರೀ ಡಿ.ಎಲ್.ಎನ್.ರು ತಾವು ಬಳಸಿದ 'ಕ' ಪ್ರತಿಯನ್ನು ಕುರಿತು "ಈ ಪ್ರತಿಯ ಲೇಖಕ ವೃತ್ತಿಯಿಂದ ಲಿಪಿಕಾರನಲ್ಲವೆಂದೂ ಒಂದೇ ಪಟ್ಟಿಗೆ ಕುಳಿತು ಬರೆಯದೆ ಭಾಗಶಃ ಗ್ರಂಥವನ್ನು ಬರೆದನೆಂದೂ ಸ್ವಂತ ಉಪಯೋಗಕ್ಕಾಗಿ ಅಂದಂದಿನ ಪಾಠಕ್ಕೆ ಎಷ್ಟು ಬೇಕೋ ಅಷ್ಟನ್ನು ಬರೆದುಕೊಂಡ ವಿದ್ಯಾರ್ಥಿಯೆಂದೂ ಊಹಿಸಬಹುದು"[೬೯] ಎನ್ನುತ್ತಾರೆ. ಗುರುವಿನ ಸನ್ನಿಧಿಯಲ್ಲಿ ಕುಳಿತು ಈ ಪ್ರತಿಕಾರನು ದರ್ಪಣವನ್ನು ವಿದ್ಯಾರ್ಥಿಯಂತೆ ಅಭ್ಯಾಸ ಮಾಡಿದಂತಿದೆ. ತತ್ಫಲವಾಗಿ ಪ್ರತಿಯೊಂದು ಗರಿಗಳ ಅಂಚಿನಲ್ಲಿ ಕಠಿಣಶಬ್ದಗಳಿಗೆ ಅರ್ಥ, ಭಿನ್ನಪಾಠ, ಟಿಪ್ಪಣಿಗಳನ್ನು ಬರೆದುಕೊಂಡಿದ್ದಾನೆ.

ಶಬ್ದಾರ್ಥ: ದರ್ಪಣದ ವೃತ್ತಿ–ಪ್ರಯೋಗಗಳ ಒಡಲಲ್ಲಿ ಕೆಲವು ಸಲ ಶಬ್ದಾರ್ಥಗಳು ಕಂಡುಬರುತ್ತಿದ್ದು, ಅವು ಮೂಲದಲ್ಲಿದ್ದ ಇಲ್ಲವೇ ಈಚಿನ ಅಭ್ಯಾಸಿಗಳು ಸೇರಿಸಿದ ಪಾಠಗಳಾಗಿರಬಹುದು. ಉದಾ:

ವೃತ್ತಿ : ಸ್ಫೋಟಕಕ್ಕಾದ ಹೋಳಿಗೆಯೆಂಬುದುಂ ಲಂಪಟ ಶಬ್ದಕ್ಕಾದ ಲಂಪಳ ಮೆಂಬುದುಂ ಜಿಟಿಕ್ಕೆ ಸಂದೇಹಂ.[೨೦]

ಪ್ರಯೋಗ: ನೌವನೇಜಿಿದಂ, ನೌವೆಂದು ನಾವೆ, ಗ್ಲೌವಂ ನೋಡಿದಂ, ಗ್ಲೌವೆಂದು ಚಂದ್ರಂ.[೨೧] ನೆಲಕಲಂ ಎಂದು ಲೋಭಿ;[೨೨] ನಾಟಿಗೆಯೆಂದು ಗಟಿಗೆ.[೨೩]

ಹೀಗೆ ವೃತ್ತಿ ಪ್ರಯೋಗಗಳ ಒಡಲಲ್ಲಿಯಲ್ಲದೇ 'ಕ' ಪ್ರತಿಯ ಅಭ್ಯಾಸಿಯೊಬ್ಬನು ಗರಿಯ ಅಂಚಿನಲ್ಲಿ ಶಬ್ದಾರ್ಥಗಳನ್ನು ಬರೆದಿರುವುದು ಕಂಡುಬರುತ್ತದೆ. ಹಳಗನ್ನಡದ ಕೆಲವು ಅಪೂರ್ವ ಪದಗಳಿಗೆ ಬರೆದ ಈ ಶಬ್ದಾರ್ಥಗಳು ಹೀಗಿವೆ.

---

೬೮. ನರಚ (೧೮೯೯) ಪು. ೧೩
೬೯. ಶಮದ (೧೯೬೮) ಪ್ರಸ್ತಾವನೆ
೨೦. ಶಮದ (೧೯೬೮) ಸೂ. ೩೨
೨೧. ಶಮದ (೧೯೬೮) ಸೂ. ೬೫
೨೨. ಶಮದ (೧೯೬೮) ಸೂ. ೨೬

ತಮಾಳಂ–ಪುಸಿ, ಸೂಕಳಿ–ಜಡತೆ, ಬಳಸಿಗ–ಕುಪ್ಪಸಿಗ, ಇಳಿಲೆ–ಸತಿ, ಮಾಳಂ–ಬಯಲ್, ಇರುಕುಳಿ–ನಾಲಗೆಮೊದಲ್, ಸತ್ಯಣಾಭ್ಯವ್ಯವಹಾರಿಗಳ್–ಪಸುಗಳ್ಗೆ ಸಮಾನರ್, ಅರೋಚಿ–ನಿಷ್ಪನ್ನಕವಿಗಳ್, ಮಾರ್ಕೊರಲ ಭೈರವಂ–ಪ್ರತಿಧ್ವನಿಯ ಮಾಡುವ ಕ್ರಮ, ಒಂದೆಗೊಂದೆಗಂ–ಒಂದೆತ್ತಿಗೆ, ಬೀಟಿಕ್ಕರಂ–ವ್ಯಂಜನನಾಮ, ತವುಂಕಲ್>ತೌಂಕಲ್–ಅರೆಮಿದಿದ ಬತ್ತ, ಟೆಪ್ಪರಂ–ಜಟ್ಟಿಗಳ ಸಾಧನೆ, ಕುತ್ತುಂಗಜಿ–ಗಜಿಗಟ್ಟಿದ ಈಟಿ, ಕರ್ಚುಂಗಲ್ ಎಂದು ಸೂಜಿಗಲ್ಲು, ಇಡಕುಂಗಬ್ಬಂ ಎಂದು ದೊಡ್ಡ ಕಾವ್ಯಂ, ತೂಗುಂದೊಲೆ ಎಂದು ಏತದ ಮರ, ದಕ್ಕುಂದಲೆ ಎಂದು ಹೆಟ್ಟುತಲೆ, ಬಾನಲಾದ ಬೊಟ್ಟು–ಆರ್ದ್ರವಾದುದು ಮಸುಳಿದ ಬೊಟ್ಟು, ಜಕ್ಕಂದೊಳಲಿ–ಯಮನ ಕೋಣ, ಮೀನುಂಬುಳ್–ಬಕಪಕ್ಷಿ, ಬಾನಂಗುಳಿಗೆ–ನಕ್ಷತ್ರ, ಅಂಗೊಳಗು–ಆವಿನ ಕೊಳಗು, ಬೆಂಗಲಂ ಎಂದು ಮಡಕೆ, ಉಕ್ಕೆವ–ಉಬ್ಬಸ, ಕುಱುದಡಿ–ಡೊಣೆ, ನೀರ್ಗಿಚ್ಚು–ವಡಬಾನಳ, ನೀರ್ವಾನಸೆ–ಲಕ್ಷ್ಮಿ, ಅಱಗುಲಿ–ಅನ್ಯಾಯದಿಂದ ಕೊಲ್ಲುವವ, ಮೆಯ್ವಚ್ಚ–ಆಭರಣ, ಸರವಂದಿಗ–ಸರಸವಾಡುವವ, ಏರಣಿಗ–ಅಕ್ಕಸಾಲೆ, ಕರಹಟಿಗಂ –ಪಹರಿಯವರು, ಡಂಗಾಯ್ತ–ತಳವಾರ, ತಟ್ಟುಕ–ತ್ರಾಸು, ಏತಂ–ಎರಗಿದ ಭಾವಂ, ದೂಸಜಿಕೆ–ಮನೋಹರಭಾವಂ, ಮಱ–ಕುಱುಹಿನ ಮಣಿ, ಕಳಂತಿಗೆ–ಅಗ್ಗಷ್ಟಿಗೆ, ಗಜವರ್ತಿ>ಗಜವತ್ತಿ–ಆನೆವಂಜಿ, ಕಂಜಕಂ>ಕಜಕಂ–ಗಿಲಿಕೆ, ಕಪಿಂಜು>ಕವಿಂಜು–ಎಣೆವಕ್ಕಿ, ವಾಸಂತಿ>ಬಾಸಂತಿ–ಬಾಗಡಿ ಪುಷ್ಪ, ಇತ್ಯಾದಿ ಸುಮಾರು ೪೫ ಪದಗಳಿಗಲ್ಲದೆ ಇನ್ನೂ ೬೦ ಕಠಿಣ ಪದಗಳಿಗೆ ಗ್ರಂಥದ ಎಲೆಯ ಮಗ್ಗುಲಲ್ಲಿ ಈಗಿನ ವಿದ್ಯಾರ್ಥಿಗಳು ಪುಸ್ತಕದ ಅಂಚಿನಲ್ಲಿ ಶಬ್ದಕ್ಕೆ ಅರ್ಥ ಬರೆದುಕೊಳ್ಳುವಂತೆ ಅರ್ಥ ಬರೆದಿದ್ದಾನೆ. ದರ್ಪಣದಲ್ಲಿಯ ಉಟಿಯುಕ್ತ ೧೮೧ ಪದ, ಧಾತು ಪ್ರಕರಣದ ೧೦೦೦ ಪದ, ಪ್ರಯೋಗಸಾರದ ೨೩೩ ಪದ, ವೃತ್ತಿ ಪ್ರಯೋಗಗಳ ಒಡಲಲ್ಲಿಯ ಸುಮಾರು ೫೦ ಪದಗಳೊಂದಿಗೆ ಈತನ ಸುಮಾರು ೧೦೦ ಪದಗಳನ್ನು ಕೂಡಿಸಿದರೆ ಒಂದು ಅರ್ಥಕೋಶ ಸಿದ್ಧವಾಗುತ್ತದೆ. ಬೇಕಿದ್ದರೆ ಇವುಗಳೊಂದಿಗೆ ನಿತ್ಯಬಿಂದು, ವಿಕಲ್ಪ ಬಿಂದು, ನಿತ್ಯದ್ವಿತ್ವ, ವಿಕಲ್ಪದ್ವಿತ್ವ, ಶಿಥಿಲದ್ವಿತ್ವಗಳಿಗೆ ಸಂಬಂಧಿಸಿದ ೨೦೦ ಪದ ಮತ್ತು ಅಪಭ್ರಂಶ ಪ್ರಕರಣದ ಸಾವಿರಾರು ಪದಗಳನ್ನು ಜೋಡಿಸಿದರೆ ಹಳಗನ್ನಡ ಶಬ್ದಗಳಿಗೆ ಅಪೂರ್ವ ಅರ್ಥಕೊಡುವ ಒಂದು ಅಧಿಕೃತ ಶಬ್ದಕೋಶ ರೂಪಗೊಳ್ಳುತ್ತದೆ.

ಭಿನ್ನಪಾಠ: ವಿದ್ಯಾರ್ಥಿಯಾಗಿ ಪಾಠ ಹೇಳಿಸಿಕೊಳ್ಳುವ ಈ ಅಭ್ಯಾಸಿಗೆ ಬಹುಶಃ ಗುರುವಿನಿಂದ ಕೆಲವು ಭಿನ್ನಪಾಠಗಳು ಲಭಿಸಿವೆ. ಅವುಗಳನ್ನು 'ತಳಿರಂತೆಂದು ಪಾಠಂ'[೭೪]'ಬಲ್ಲಿದರೊಳರೆ ಎಂದು ಪಾಠಂ'[೭೫] ಕೆಂಪಲರ್ದುದು ಮಲರ್ಗೆಯೆಂದು ಪಾಠಾಂತರಂ'[೭೬] 'ಸತ್ಯಣಾಭ್ಯವಹಾರಿಗಳೆಂದು ಪಾಠಂ'[೭೭] 'ಕ್ಕೆಲಿಂಗಂ'[೭೮] ಎಂದು ಓಲೆಗಳ ಅಂಚಿನಲ್ಲಿಯೇ ಬರೆದುಕೊಂಡಿರುವನು. ಇಂಥ ಭಿನ್ನಪಾಠಗಳು ಒಂದು ಇಲ್ಲವೆ ಹಲವು ಪ್ರತಿಗಳಿಂದ ಬಂದಿರಬಹುದು.

---

೭೩. ಶಮದ (೧೯೬೮) ಸೂ. ೨೯
೭೪.ಶಮದ (೧೯೬೮) ಸೂ. ೩೪
೭೫.ಶಮದ (೧೯೬೮) ಸೂ. ೩೪
೭೬. ಶಮದ (೧೯೬೮) ಸೂ. ೫೫

ಟಿಪ್ಪಣಿ: ದರ್ಪಣಪಾಠ ಹೇಳಿಸಿಕೊಳ್ಳುವಲ್ಲಿ ತಲೆದೋರಿದ ಕೆಲವು ಸಂದೇಹಗಳ ನಿವಾರಣೆಗಾಗಿ ಅಲ್ಲಲ್ಲಿ ಸೂತ್ರ, ವೃತ್ತಿ ಮತ್ತು ಪ್ರಯೋಗಗಳಿಗೆ ಟಿಪ್ಪಣಿಗಳನ್ನು ಬರೆದು ಕೊಂಡಿದ್ದಾನೆ, 'ಕ' ಪ್ರತಿಯ ವಿದ್ಯಾರ್ಥಿ. ಉದಾ: 'ಕುಳದ ನಿಯಾಮದೊಳೆಂದುಂ...' ಎಂಬ ಸೂತ್ರ (೧೫)ದಲ್ಲಿ 'ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತದೊಳಾ ಲಕಾರಕ್ಕೆ' ಎಂದು ಈ ಮೊದಲು ಹೇಳಿದ್ದರೂ ಮತ್ತೊಮ್ಮೆ ಯ,ವ,ಲವರ್ಣಗಳ ಸಾನುನಾಸಿಕತ್ವ, ನಿರನುನಾಸಿಕತ್ವಗಳನ್ನು ವಿವೇಚಿಸುತ್ತ, 'ಆ ಸಂಸ್ಕೃತ ಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದು ಕ್ಷಳನೆಂಬರ್' (ಸೂ. ೨೬) ಎಂದು ಹೇಳಿರುವಲ್ಲಿ ಈ ವಿದ್ಯಾರ್ಥಿಗೆ ಪುನರುಕ್ತದೋಷದ ಸಂದೇಹ ಹುಟ್ಟಿಕೊಂಡಿದೆ, ಆಗ ಸಂದೇಹ ಪರಿಹಾರಾರ್ಥವಾಗಿ ಗುರು ಹೇಳಿದ 'ಕ್ಷಳಸಂಜ್ಞೆ ಮುಂ ಪೇಳೆಪಟ್ಟಿತ್ತು. ಇದೇಕೆಂದೊಡೆ ಅನುನಾಸಿಕ ನಿರನುನಾಸಿಕಂಗಳಂ ಹೇಳುವಲ್ಲಿ ಸಂಸ್ಕೃತ ಲಕಾರಕ್ಕೆ ಅನುನಾಸಿಕಸಂಜ್ಞೆ ಬಂದೀತೆಂದು ಮರಳಿ ಕ್ಷಳನಂ ಪ್ರಯೋಗಿಸಿದೆಂ' ಎಂಬ ಮಾತನ್ನು ಟಿಪ್ಪಣಿಸಿದ್ದಾನೆ. ಯೋಗವಾಹಗಳನ್ನು ವಿವರಿಸುವ ಸೂತ್ರ (೨೭)ಕ್ಕೆ 'ಉಚ್ಚರಿತ ಪ್ರಧ್ವಂಸಿನೋ ಹ್ಯನುಬಂಧಾ' ಎಂಬ ಸಂಸ್ಕೃತ ವಾಕ್ಯವನ್ನೂ ಪೂರಕವೆಂಬಂತೆ ಬಳಸಿರುವನು.

ಇನ್ನು ಕೆಲವು ಸಲ ಪ್ರಯೋಗಪದ್ಯಗಳಿಗೆ ಗುರುವಿನಿಂದ ಅರ್ಥ ಹೇಳಿಸಿಕೊಳ್ಳುತ್ತ ತಾತ್ಪರ್ಯವನ್ನೇ ಬರೆದುಕೊಂಡಿರುವನು. ಉದಾ: 'ಮರವಣೆಗಂ ಬೀಣೆಗಮಂ। ತರವಾವುದೋ॥' ಎಂಬುದಕ್ಕೆ 'ಕರಿಯಾಲಿಯ ಮರದ ಮಣೆಗಂ, ಮರದ ಘಂಟೆಯೆಂಬುದು ತಾತ್ಪರ್ಯಂ'(೧೮) ಎಂದು, 'ಏರ್ಪೆತ್ತರೇರ್ಪೆತ್ತರಂ ಪದುಳಂ...' ಎಂಬುದಕ್ಕೆ 'ಘಾಯವಡೆದವರು ಘಾಯವಡೆದವರನು ಕ್ಷೇಮವನು'[೨೯] ಎಂದೂ, 'ಬಾಲವಣಂ ಬೇಡುವನೊಂದೆ–'ಎಂಬುದಕ್ಕೆ 'ಬಾಲಕ್ಕೆ ಒಂದು ಹಣವ ಬೇಡುವ'[೩೦] ಎಂದು ಸಾರಾಂಶವನ್ನೇ ಲಿಖಿಸಿರುವನು. ಇದೆಲ್ಲ ದರ್ಪಣಾಧ್ಯಯನದಲ್ಲಿ ಆ ವಿದ್ಯಾರ್ಥಿಯಿಟ್ಟ ಶ್ರದ್ಧೆಗೆ ದ್ಯೋತಕ. ಇದರಿಂದ ಪ್ರಾಚೀನ ಕಾಲದಲ್ಲಿ ದರ್ಪಣವನ್ನು ಓದಿಸುವ ಮತ್ತು ಓದುವ ಪದ್ಧತಿಯೂ ತಿಳಿದುಬರುತ್ತದೆ. ಈ ಅಭ್ಯಾಸಿಗಳಲ್ಲಿ ಕೆಲವರು ಕೇಶಿರಾಜನ ಒಂದೆರಡು ವಿಚಾರಗಳನ್ನು ಖಂಡಿಸಿ ಅದನ್ನು ದರ್ಪಣದ ಒಡಲಲ್ಲಿಯೇ ಸೇರಿಸಿದ್ದಾರೆ. ಉದಾ: "ಎರಡುಂ ಪದಮುಂ ತದ್ಭವಮನೆಯ್ದುವಲ್ಲಿ ಯೊಂದು ಪದಮನುಳಿಪಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ: ತರವೇಟ್ ಮಾಣಿಕ್ಯಭಂಡಾರದ ಪುಟಿಕೆಗಳಂ. ಇಲ್ಲಿ ಮಾಣಿಕ್ಯ ಶಬ್ದಮನುಳಿದು ಮಾಣಿಕ ಭಂಡಾರಮೆಂದೊಡೆ ಶುದ್ಧಂ" ಎಂಬ ಕೇಶಿರಾಜನ ಹೇಳಿಕೆಯನ್ನು "ಇದು ತಪ್ಪಲ್ಲ. ಕೇಶವಜೆಯದೆ ತಪ್ಪೆಂದಂ. ಮಾಣಿಕಮೆಂದು ಸಂಸ್ಕೃತ ಶಬ್ದಮುಂಟು. ಅಭಿಧಾನಜ್ಞರು ವಿಚಾರಿಸಿಕೊಂಬುದು. ಮಹಾಕವಿಗಳ ಪ್ರಯೋಗಂಗಳೆ ಕೆಲವೊಳವು.

ಅಪೂರ್ವಃ ಕೋऽಪಿ ಭಂಡಾರೋ ವಿದ್ಯತೇ ತವ ಭಾರತಿ ।
ಅವ್ಯಯೇ ವ್ಯಯಮಾಯತಿ ವ್ಯಯೇ ಯಾತಿ ಸುವಿಸ್ತರಂ ॥

---

೭೭. ಶಮದ (೧೯೬೮) ಸೂ. ೭೧
೭೮. ಶಮದ (೧೯೬೮) ಸೂ. ೭೭
೭೯. ಶಮದ (೧೯೬೮) ಸೂ. ೭೬
೮೦. ಶಮದ (೧೯೬೮) ಸೂ. ೮೨

ಎಂದು ಕೇಶಿರಾಜನನ್ನೇ ಖಂಡಿಸಿ ಬರೆದಿದ್ದಾನೆ.[೮೧] ಹಂಸರಾಜನ ದೋಷವನ್ನು ತೋರಿಸ ಹೊರಟ ಕೇಶಿರಾಜನಲ್ಲಿಯೇ ದೋಷವನ್ನು ಹುಡುಕಿದ್ದಾನೆ, ಈ ಅಭ್ಯಾಸಿ. ಇದು ಆತನ ಸೂಕ್ಷ್ಮಾಧ್ಯಯನದ ಕುರುಹು. ಈ ಖಂಡನೆಯ ಪಾಠ 'ಕ' ಪ್ರತಿಯಲ್ಲಿ ಕಂಡುಬರುವುದರಿಂದ ಈ ಮೊದಲೇ ಇದು ಹಸ್ತಪ್ರತಿಯಲ್ಲಿ ಸೇರಿದಂತೆ ತೋರುತ್ತದೆ.

ಸಮುಚ್ಚಯ ವಿವರಣೆ: ದರ್ಪಣಾಭ್ಯಾಸದ ಇನ್ನೊಂದು ಪ್ರಾಚೀನ ಉದಾಹರಣೆ ಯೆಂದರೆ ಸಮುಚ್ಚಯ ಸಂಗ್ರಹ. ಉಂ, ಅಂ, ಆದಂ, ಪೀನಂ, ಪಿರಿದುಂ, ಬಹುಳಂ, ಮೇಣ್– ಇವುಗಳನ್ನು ಸೂತ್ರಶರೀರದಲ್ಲಿ ಬಳಸಿ, ಇವುಗಳ ಆಧಾರದಿಂದ ವೃತ್ತಿಯಲ್ಲಿ ಹೆಚ್ಚಿನ ವಿಚಾರಗಳನ್ನು ಸೇರಿಸುವುದು ಕೇಶಿರಾಜ ಇಟ್ಟುಕೊಂಡ ಪದ್ಧತಿ. ಆದರೆ ಈ ಬಗೆಯ ಇನ್ನೂ ಕೆಲವು ಪ್ರಸಂಗಗಳಲ್ಲಿ ಆತನು ಏನನ್ನೂ ಹೇಳದೇ ಮೌನದಿಂದ ದಾಟಿಹೋಗಿದ್ದಾನೆ. ಇದನ್ನು ಗಮನಿಸಿದ ಓರ್ವ ದರ್ಪಣಾಭ್ಯಾಸಿ ಸೂತ್ರಗಳಲ್ಲಿಯ ಇನ್ನೂ ೮೦ ಸಮುಚ್ಚಯಗಳಿಗಿರುವ ಅರ್ಥವಿಶೇಷವನ್ನು ಹೀಗೆ ವಿವರಿಸಿದ್ದಾನೆ:[೮೨]

ಕ್ರಮದಿಂದೆ ಸಂಧಿನಾಮಮೆಂಬ ಸಮುಚ್ಚಯವಶದಿಂ ಸಂಜ್ಞಾಪ್ರಕರಣ ಗೂಢ ಪದಪ್ರಕರಣಮುಂಟು[೧] – ಸೂತ್ರ ೮.

ಅಕ್ಕರಮುಂ ವರ್ಣಮುವೆಂಬ ಸಮುಚ್ಚಯದಿಂ ಶುದ್ಧಗೆ ಮೊದಲಾದ ನಾಮಮುಂಟು–ಸೂತ್ರ ೧೨.

ಕುಳದ ನಿಯಾಮದೂಳೆಂದುಮೆಂಬ ಸಮುಚ್ಚಯದಿಂ ಲಕಾರಕ್ಕೆ ಕ್ಷಳವಿಕಲ್ಪಮಿಲ್ಲ–ಸೂತ್ರ ೧೫.

ಬಿಂದುವನುಸ್ವಾರಮೆಂಬ ಸಮುಚ್ಚಯದಿಂ ಶೂನ್ಯ ಮೊದಲಾದ ನಾಮಮುಂಟು–ಸೂತ್ರ ೨೧.

ಸ್ವರಪರದೊಳಿರ್ಪ ತೆಱದಿನೆಂಬ ಸೂತ್ರದ ಸಮುಚ್ಚಯದಿಂ[೨] ಸಂಖ್ಯಾಂಗ ಮುಂಟು–ಸೂತ್ರ ೨೨.

ವರ್ಗದ್ವಿತೀಯ ವರ್ಣಮೆಂಬ ಸೂತ್ರದ ಸಮುಚ್ಚಯದಿಂ ಕರ್ಣಾಟಕದ ಭಾಷೆ ಯೊಳಂ ಮಹಾಪ್ರಾಣಂಗಳುಂಟೆಂದುದಱ ಮುಂದಣ ಸೂತ್ರಮುಂಟು–ಸೂತ್ರ ೨೪.

ಸಮಸಂದಿರ್ದ x ಮುಂ ೲ ಮುಮೆಂಬ ಸಮುಚ್ಚಯದಿಂ[೨] ಕ್ಷ ಎಂದುಂಟು–ಸೂತ್ರ ೨೭.

ಅತಿಪೀಡನದಿನೆಂಬ ಸೂತ್ರದ ಸಮುಚ್ಚಯದಿಮಲ್ಪಪ್ರಾಣಂ ಮಹಾಪ್ರಾಣಕ್ಕಂ ಶ ಷ ಸಂಗಳ್ಗಂ ಪ್ರಾಸಮಾಗವು –ಸೂತ್ರ ೨೮.

---

೮೧. ಶಮದ (೧೯೬೮) ಸೂ. ೩೦೪

೮೨. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಭಾಂಡಾರದ ತಾಳೆಗರಿ ಪ್ರತಿ ನಂ. ೫೭೮

೧. ಗೂಢಪದ ಪ್ರಕರಣವೆಂದರೆ ಶ.ಮ.ದರ್ಪಣದ ಕೊನೆಯಲ್ಲಿರುವ 'ಪ್ರಯೋಗಸಾರವೆಂಬ ಶಬ್ದಾರ್ಥನಿರ್ಣಯಂ' ಎಂಬ ಪ್ರಕರಣ.

೨. 'ಷ'ಎಂಬ ಇನ್ನೊಂದು ಹೆಚ್ಚಿನ ಅಕ್ಷರ ಇಲ್ಲಿ ಅಸ್ಪಷ್ಟವಾಗಿ ಕಾಣುತ್ತದೆ.

ಕೃತಿಮಾರ್ಗದೊಳುಂಟೆಂಬ ಸೂತ್ರದ ಸಮುಚ್ಚಯದಿಂ ಡಕಾರಕ್ಕೆ ಮುನ್ನಮೆ ಯುಂಟು–ಸೂತ್ರ ೩೧.

ತಿಳಿ ದೇಶಿಯಮುಮೆಂಬ ಸಮುಚ್ಚಯದಿಂ ಱಟಿ, ಱ, ಕುಳ, ಎ, ಒ ಯೆಂಬಲ್ಲಿ ಕ್ಷಳನುಮುಂಟು–ಸೂತ್ರ ೪೩.

ಮರಲರಲೆರಲೆಂಬ ಸೂತ್ರದ ಸಮುಚ್ಚಯದಿಂದಂತ್ಯ ಲತ್ವಕ್ಕೆ ರೇಫಮುಮಾಗಿ ಮಲರಲರೆಲರೆಂದು ವಿಕಲ್ಪದಿನಕ್ಕುಂ–ಸೂತ್ರ ೩೯.

ಪದದರ್ಥಮಮೆಂಬ ಸೂತ್ರದ ಸಮುಚ್ಚಯದಿಂ ಕಾರಕದ ನಾಮಕ್ಕಂ ವಿಭಕ್ತಿಗಂ ಪದಮುಂಟು. ಕ್ರಿಯಾನಾಮಕ್ಕಂ ಕ್ರಿಯಾವಿಭಕ್ತಿಗಂ ಪದಮುಂಟು–ಸೂತ್ರ ೪೫.

ಕೆಲವು ನಿಜಬಿಂದುಗಳೆಂಬ ಸೂತ್ರದ ಸಮುಚ್ಚಯದಿಂ ಬರ್ದಿಲಮೆಂಬ ಸೂತ್ರಮುಂಟು–ಸೂತ್ರ ೪೬.

ನರವುಂ ನೆರವುಮೆಂಬ ಸೂತ್ರದ ಸಮುಚ್ಚಯದಿಂ ಎರವು ತರವು ಕೆಲವು ಪಲವುಮೆಂದನೇಕಮುಂಟು–ಸೂತ್ರ ೫೬.

ಪುದಿಗುಂ ನಿರ್ಧಾರಣದಮೆಂಬ ಸೂತ್ರದ ಸಮುಚ್ಚಯದಿಂ ಅಲ್ಲಂ ಎಂದುಂಟು–ಸೂತ್ರ ೫೭.

ಶ್ರೀ ಶ್ರೀ ಶ್ರೀ

ಸ್ವರ ಪರದೊಳಿರೆ ವಿಭಕ್ತಿಸ್ವರಕಮೆಂಬ ಸಮುಚ್ಚಯದಿಂ ಸಮಾಸದೊಳಾಗ ಮಕ್ಕಂ ಲೋಪಮುಂಟು. ಎರಡರೊಳಮೆಂಬ ಸಮುಚ್ಚಯದಿಂ ಪ್ರಾಕೃತ ವೈಶಾಂತಕ್ಕಂ(?) ತಿಳಿವುದು–ಸೂತ್ರ ೬೨.

ಸದಮಳ ಸಂಸ್ಕೃತಮೆಂಬ ಸೂತ್ರದ ಸಮುಚ್ಚಯದಿಂ ಈ ಸೂತ್ರದಲ್ಲಿ ಆಗಮ ಮಾಗಿಯುಂ ಯತ್ವಮುಂಟು. ಆದೇಶಮಾಗಿಯುಂ ಯತ್ವಸಂಧಿಯುಂಟು. ಆಯ್ತಬ್ಧಿಯೆ ಘೂರ್ಮಿಸು ವಂತಾಯ್ತರಮನೆಯೊಳಗೆಯೆಂಬಂತೆ –ಸೂತ್ರ ೬೪.

ಅವತರಿಸಿರ್ಕುಮುವರ್ಣದ ಎಂಬ ಸೂತ್ರದ ಎಂದಮೆಂಬ ಸಮುಚ್ಚಯದಿಂ ಇ ಈ ಎಂಬೊರ್ಕಂ ವತ್ವಂ. ಇದು ಇದು ಇದುವಿದು – ಸೂತ್ರ ೬೫.

ಅವಿಕೃತಿಗಳವರ್ಣಮೆಂಬ ಸೂತ್ರದ ಸಮುಚ್ಚಯದಿಂ ಮುಂದಣ ಸೂತ್ರ. ಆ ಸೂತ್ರದ ಸಮುಚ್ಚಯಕ್ಕದಱ ಮುಂದಣ ಸೂತ್ರಮುಂಟದಱಲ್ಲಿ ಆವುದು ನಿಲೆಯುಂ ಎಂಬ ಸಮುಚ್ಚಯದಿಂ; ಅಸಿಯ ಒರೆ ಬೆಸದ ಪೆಟ್ಟಿಗೆ ಮಿಸುಗುವ ಅರಂ ಪೊನ್ನ ಅಂದಳಂ ಎಂಬವರ್ಕಂ; ಪೋಲ್ ಅಂತೆವೋಲೆಂಬವ್ಯಯಕ್ಕಂ ಸಂಧಿಯಿಲ್ಲ–ಸೂತ್ರ ೬೬.

ಒಂದೆರಡರ್ಕೆಯೆಂಬ ಸೂತ್ರದ ಸಮುಚ್ಚಯದಿಂ ಕೆಳಗಣ್ಗಾದೇಶಮಾದ ಱಟಕ್ಕಂ ತೃತೀಯತ್ವಮಿಲ್ಲ. ಕಿಟ್ಕೆಱೆಯೆಂಬಂತೆ–ಸೂತ್ರ ೭೬.

ಧಾತುಗಲುಂ ಪರಮೆಂಬ ಸಮುಚ್ಚಯದಿಂದೇಕಾರಾದಿ ಸ್ವರಂ ಪರಮಾದೊಡಂ ದ್ವಿತ್ವಮಿಲ್ಲ ಎನೆ, ಕೊಲೆ, ಉಣಲೊಡಂ, ಕಳಲೊಡಂ ಎಂಬಂತೆ–ಸೂತ್ರ ೮೦.

ಶ್ರೀ ಶ್ರೀ

ಭೂತ ಭವಿಷತ್ಕ್ರಿಯೆಗಳೆಂಬ ಸೂತ್ರದ ಸಮುಚ್ಚಯದಿಂ ಪ್ರತಿಷೇಧ ಕ್ರಿಯೆಗಂ ನಾಮವಿಭಕ್ತಿಯಿಲ್ಲ–ಸೂತ್ರ ೮೩.

ಸಮುಪಾತ್ತ ಕ್ರಿಯೆಯುಂ ವಾಕ್ಯಮಾಲೆಯುಮೆಂಬ ಸಮುಚ್ಚಯದಿಂದ ವ್ಯಯಲಿಂಗಮುಂಟು–ಸೂತ್ರ ೮೫.

ವಿದಿತಮೆನಿಪ್ಪವ್ಯಯಮುಮೆಂಬ ಸಮುಚ್ಚಯದಿಂ ಮುಂದಣ ಸೂತ್ರಮುಂಟು–ಸೂತ್ರ ೯೧.

ಅತ್ವಾಂತಮ[ಮು]ಮಿತ್ವಾಂತಮುಮುತ್ವಾಂತಮುಮಾ ಋದಂತಮುಮೆಂಬ ಸಮುಚ್ಚಯದಿಂ ಯುಗಪತ್ ಶ್ರುತೇವಾಕ್ ಭಾಷೆ ಗೀರ್ ಗಿರಿಯೆಂದುಂಟು–ಸೂತ್ರ ೯೪.

ದೊರೆವಡೆದವ್ಯಯಲಿಂಗಮೆಂಬ ಸೂತ್ರದ ಸಮುಚ್ಚಯದಿಂ ಸಂಖ್ಯೆಯೊಳ ಮುಂಟು. ಒಂದಾನುಮೆರಡಾನುಮೆಂಬಂತೆ –ಸೂತ್ರ ೧೦೦.

ಸಮನಿಸುಗುಮಾ ವಿಭಕ್ತಿಗಳ ಎಂಬ ಸೂತ್ರದ ಸಮುಚ್ಚಯದಿಂ ಒಳ ಎಂಬ ಧಾತುಗವುಮುಂಟು–ಸೂತ್ರ ೧೦೫.

ಸಂಗಡಿಸಿ ಸರ್ವನಾಮದ ಎಂಬ ಸೂತ್ರದ ಸಮುಚ್ಚಯದಿಂ ತದ್ಧಿತ ಸ್ತ್ರೀ ವಿವಕ್ಷೆಯೊಳಾದ್ಯಾಂತಕ್ಷರಕಂ ಲೋಪಮುಂಟು–ಸೂತ್ರ ೧೦೬.

ಬರೆ ಪುಂಸ್ತ್ರೀಲಿಂಗಮುಮೆಂಬ ಸೂತ್ರದ ಸಮುಚ್ಚಯದಿಂ ಪ್ರಥಮಪುರಷದ ಬಹುವಚನಕ್ಕಂ ಅರ್ ಉಂಟು. ಅವ್ಯಯದಲ್ಲಿಯುಂ ಕಮ್ಮಿದರ್ ಎಂದುಂಟು–ಸೂತ್ರ ೧೦೮.

ಪವಣೊಳಮೆಂಬ ಸೂತ್ರದ ಸಮುಚ್ಚಯದಿಂ ಅದು ಇದು ಉದುಗೆ ವತ್ವಮುಂಟು. ಬಶ್ರುತಿಯುಮೆಂಬಲ್ಲಿ ಉಪಮಾನಾರ್ಥದೊಳಂ ಬತ್ವಮುಂಟು. ಇಂದ್ರಂಬೊಲ್ ಚಂದ್ರಂಬೊಲ್ ಎಂಬಂತೆ–ಸೂತ್ರ ೧೦೯.

ವಿಕಲಂ ಪೆಱವಱೊಳೆಂಬ ಸೂತ್ರದ ಸಮುಚ್ಚಯದಿಂ ಇರ್ ಅರ್‌ಗೆ ವಿಕಲ್ಪದಿಂ ಗಳಾಗಮಮುಂಟು. ತೊಟ್ಟಿರ್ ತೊಟ್ಟರ್ ತೊಟ್ಟುಗಳ್, ದೇವತೆಯರ್ ದೇವತೆಗಳ್ ಎಂಬಂತೆ–ಸೂತ್ರ ೧೧೧.

ಸವನಿಪುದಯತ್ನಕೃತ ಎಂಬ ಸೂತ್ರದ ಸಮುಚ್ಚಯದಿಂ ಅಕ್ಕುಂ ಜಾತಿಯೊಳೇಕತ್ವಕ್ಕೆಯೆಂಬ ಸೂತ್ರಮುಂಟು–ಸೂತ್ರ ೧೧೨.

ಪರದೊಳ್ಸ್ವರಮಿರೆಯೆಂಬ ಸೂತ್ರದ ಸಮುಚ್ಚಯದಿಂ ಸರ್ವನಾಮದ ಅದು ಇದು ಉದುಗಂ ವತ್ವಮುಂಟು–ಸೂತ್ರ ೧೧೪.

ಬಿಂದುವದಂತಕ್ಕುಳಿದೆಡೆಗೆಂದುಂ ಎಂಬ ಸಮುಚ್ಚಯದಿಂ ಸಂಬುದ್ಧಿಯೊಳ್ ಪ್ರಥಮೈಕವಚನಲೋಪಮುಂಟು–ಸೂತ್ರ ೧೧೫.

ವಿದಿತಮುವರ್ಣಮೆಂಬ ಸೂತ್ರದ ಸಮುಚ್ಚಯದಿಂ ಮುಂದಣ ಸೂತ್ರ. ಮುಂಟು–ಸೂತ್ರ ೧೧೮.

ಒದವುವುದದಂತ ಪುಲ್ಲಿಂಗದೊಳ್ಗೆಯೆಂದಾದಿಬಿಂದುಮೆಂಬಲ್ಲಿಲ್ಲಂ ಎಂಬ ವಿಕಲ್ಪದಿಂದಿ ಕಾರಾಂತಕ್ಕೆವುಂಟು. ಗುರುವಿಂಗೆಯೆಂಬಂತೆ–ಸೂತ್ರ ೧೨೩.

ಅಮರ್ದಿರದು ತೃತೀಯತ್ವಮೆಂಬ ಸೂತ್ರದಲ್ಲಿ ಚತುರ್ಥಿಗೆಲ್ಲಂ ಎಂಬುದಜೆಂ ಎಂತಕ್ಕೆಂದುಂಟು–ಸೂತ್ರ ೧೨೪.

ಅವಿಶೇಷದಿನಾ ದೀರ್ಘಮೆಂಬ ಸೂತ್ರದ ಸಮುಚ್ಚಯದಿ ಆಮಂತ್ರಣದಲ್ಲಿ ಯುಂಟು. ಸಮಾಸದಲ್ಲಿ ಮಹಾಚ್ಛಬ್ಧ ಎಲ್ಲಶಬ್ದಕ್ಕುಂಟು–ಸೂತ್ರ ೧೨೮.

ಸವನಿಪುದು ಮುಂದು ಪಿಂದೆಂಬ ಸೂತ್ರದ ಸಮುಚ್ಚಯದಿಂ ಸಪ್ತಮಿಗೆ ಒಳೆಯೆಂದುಂಟು–ಸೂತ್ರ ೧೩೦.

ಮೊದಲೆರಡು ವಿಭಕ್ತಿಯೊಳಂ ಪೊಗಳ್ಗುಮಲ್ ಎಂಬಲ್ಲಿ ವಿಭಕ್ತಿ ಕಾಲವಾಚಕಕ್ಕಂ ದಿಗ್ವಾದೇಶಣ್ಗೆ (?)–ಸೂತ್ರ ೧೩೧.

ಅಮುಮೆಂದುಸಿರ್ವ ಸಮುಚ್ಚಯಮೆಂಬ ಸೂತ್ರದ ಸಮುಚ್ಚಯದಿಂ ಷಷ್ಠಿ ಯಲ್ಲಿಯುಮಿಲ್ಲ. ಸಂಬುದ್ಧಿಯಲ್ಲಿಯುಂ ಧಾತುವಿಭಕ್ತಿಯಲ್ಲಿಯುಮಿಲ್ಲ–ಸೂತ್ರ ೧೩೩

ಎಲ್ಲಿಯುಮಾಮಂತ್ರಣಮೆಂಬ ಸಮುಚ್ಚಯದಿಂ ಬಿಂದುವದಂತಕ್ಕುಟಿ ದೆಡೆಯೆಂಬ ಸೂತ್ರಮುಂಟು–ಸೂತ್ರ ೧೩೪.

ಪ್ರವಿದಿತ ತತ್ಕರ್ಮಮೆಂಬ ಸೂತ್ರದ ಸಮುಚ್ಚಯದಿಂ ಮುಂದಣ ಸೂತ್ರ ಮುಂಟು–ಸೂತ್ರ ೧೩೮.

ತೊಡರ್ದಿಷ್ಟಾನಿಷ್ಟದೊಳೆಂಬ ಸೂತ್ರದ ಸಮುಚ್ಚಯದಿಂ ಸಂಯೋಗದೊಳ ಮುಂಟು. ಸಂಗಡದಿಂ ಬಂದನೆಂಬಂತೆ–ಸೂತ್ರ ೧೪೭.

ಪ್ರವಿದಿತ ಹೇತುವಿನೊಳೆಂಬ ಸೂತ್ರದ ಸಮುಚ್ಚಯದಿಂ ಜನನದೊಳಮುಂಟು. ಆತಂಗೆಯೊ ಯೀತಂ ಪುಟ್ಟಿದಂ–ಸೂತ್ರ ೧೪೯.

ಪತಿಕುಲಜಾತ್ಯವಯವ ಎಂಬ ಸೂತ್ರದ ಸಮುಚ್ಚಯದಿಂ ಶೇಷದೊಳಂ ವಸ್ತುವಿಕಾರದೊಳಮುಂಟು. ಬಳ್ಳದಟಿ, ಅದಜಿಮಜಿ, ಪೊನ್ನಕೋಲ್–ಸೂತ್ರ ೧೪೩.

ಇಂತೀ ಪೇಟ್ದ ವಿಭಕ್ತಿಯೆಂಬ ಸೂತ್ರದ ಸಮುಚ್ಚಯದಿಂ ಪ್ರಥಮೆ ದ್ವಿತೀಯೆ ಯಲ್ಲಿಯುಂ ಷಷ್ಠಿಯುಂಟು. ಷಷ್ಠಿಯಲ್ಲಿಯುಂ ಪ್ರಥಮೆ ದ್ವಿತೀಯೆಯುಂಟ–ಸೂತ್ರ ೧೪೫.

ಸ್ವಾರ್ಥಂ ಪ್ರಥಮಾರ್ಥಮೆಂಬ ಸೂತ್ರದ ಸಮುಚ್ಚಯದಿಂ ಪಂಚಮಿಯೊಳ್ ದ್ವಿತೀಯೆಯುಂಟು. ಮಾಣವಕನತ್ತಣಿಂ ಕಾರ್ಯಮಂ ಬೆಸಗೊಂಡನೆಂಬಲ್ಲಿ ಮಾಣವಕನಂ ಕಾರ್ಯಮಂ ಬೆಸಗೊಂಡಂ–ಸೂತ್ರ ೧೪೬.

ಕೃತಿಯುಕ್ತ ಷಷ್ಠಿಯೊಳಮೆಂಬ ಸಮುಚ್ಚಯದಿಂ ಒಂದೊಂದಱಲ್ಲಿ ಬೞದುಂಟು–ಸೂತ್ರ ೧೪೭.

ಅಕ್ಕುಂ ಜಾತಿಯೊಳೇಕತ್ವಮೆಂಬ ಸೂತ್ರದ ಸಮುಚ್ಚಯದಿಂ ಯುಗಳಾರ್ಥದ ಬಹುವಚನಮೆಂಬ ಸೂತ್ರಮುಂಟು –ಸೂತ್ರ ೧೪೮.

ಕೂಡಿನುಡಿವೆಡೆಯೊಳೆಂದುಮೆಂಬ ಸಮುಚ್ಚಯದಿಂ ಆಖ್ಯಾತದೊಳ್ ಪುರುಷತ್ರಯಮುಂ ಸ್ವಾರ್ಥೋಚ್ಚರಿತಂಗಳೆಂಬ ಸೂತ್ರಮುಂಟು –ಸೂತ್ರ ೧೫೨.

ಸಾರಮದಧ್ಯಾರೋಪಮೆಂಬ ಸೂತ್ರದ ಸಮುಚ್ಚಯದಿಂ ವಿಭಕ್ತಿಗಳಲ್ಲಿ ಯುಮುಂಟು–ಸೂತ್ರ ೧೫೬.

ನಿನತೆನತು ತನತೆಂಬುದಱ ಸಮುಚ್ಚಯದಿಂ ಆಮ್ ತಾಮ್ ನೀಮ್, ನಿಮ್ಮ ಎಮ್ಮ ತಮ್ಮ ಎಂದುಂಟು–ಸೂತ್ರ ೧೫೮.

ಅದುವಿದುವುದುವೆಂಬಿವಱಂತ್ಯದೊಳೆಂಬ ಸೂತ್ರದ ಸಮುಚ್ಚಯದಿಂ ನಪುಂಸಕದಲ್ಲಿಯು ಆ ದೀರ್ಘಮು ಆಗಳ್ ಈಗಳ್ ಊಗಳ್ ಎಂದು–ಸೂತ್ರ ೧೬೧.

ಕೆಲಕೆಲವು ಸಕ್ಕದದ ಮೂಱುಲಿಂಗಮುಮೆಂಬ ಸಮುಚ್ಚಯದಿಂ ಪ್ರಾಕೃತ ಪೈಶಾಚಿಕದ ಲಿಂಗತ್ರಯವು ಕನ್ನಡದಲ್ಲಿ ನಪ್ಪು. ಸಜ್ಜನ ಶಬ್ದ ಸ್ತ್ರೀವಾಚಕವಾದಲ್ಲಿಯುಂ ಜನಶಬ್ದ ಲೋಕಶಬ್ದ ಪುರುಷವಾಚಕವಾಗಿಯು ಪುನ್ನಪುಂಸಕಮೆಯಕ್ಕುಂ–ಸೂತ್ರ ೧೬೬.

ಪದಮಧ್ಯ ವತ್ವಯತ್ವಮೆಂಬ ಸೂತ್ರದ ಸಮುಚ್ಚಯದಿಂ ಅವಿಶೇಷದಿನಾ ದೀರ್ಘವ್ಯವಹೃತಿಯೆಂಬ ಸೂತ್ರಮುಂಟು–೧೬೮.

ಅಸಮಾಸದೊಳಮೆಂಬ ಸೂತ್ರದ ಸಮುಚ್ಚಯದಿಂ ಣಕಾರಕ್ಕೆ ಪರಮಾಗಿ ಟಕಾರ ಡಕಾರವಿರ್ದೊಡಂ ದುಷ್ಕರಂ–ಸೂತ್ರ ೧೬೯.

ಶ್ರೀ ಶ್ರೀ ಶ್ರೀ

ಜನಿಯಿಸುಗುಂ ಸಂಖ್ಯಾಯೆಂಬ ಸೂತ್ರದ ಸಮುಚ್ಚಯದಿಂ ಗಮಕಸಮಾಸವೆ ತತ್ಪುರುಷಮಪ್ಪುದು–ಸೂತ್ರ ೧೭೯.

ಅದುವಿದುವುದುಗಾಯೀಯೂ ಎಂಬ ಸೂತ್ರದ ಸಮುಚ್ಚಯದಿಂ ಉತ್ತರ ಸ್ವರದೊಳಮುಂಟು. ಆ ಮಱೆ ಬರ್ಪುದು–ಸೂತ್ರ ೧೮೦.

ಸುಡುಗಾಡಿಡುಗಿಚ್ಚುವೆಂಬ ಸೂತ್ರದ ಸಮುಚ್ಚಯದಿಂ ಉದಂತದಲ್ಲಿಯುಂ ಬಿಂದುವಿಲ್ಲ. ಕ್ರಿಯಾಸಮಾಸದಲ್ಲಿಯುಂ ಕೆಲವು ಬಿಂದುವಿಲ್ಲ. ಅದೆ ಬಂದಂ, ಇದೆ ಬಂದಂ, ಆ ಬಂದನೀ ಬಂದ_ಸೂತ್ರ ೧೮೨.

ಅಕ್ಕುಂ ಪದಾಂತ್ಯಲೋಪವೆಂಬುದಱ ಸಮುಚ್ಚಯದಿಂ ನೆಲೆಗೊಳ್ಗುಂ ಪೂರ್ವ ಪದಾಂತ್ಯಲೋಪಮೆಂಬ ಸೂತ್ರಮುಂಟು–ಸೂತ್ರ ೧೮೮.

ಕಿಱಿದರ್ಕಾದೇಶಮೆಂಬುದಱ ಸಮುಚ್ಚಯದಿಂ ಅಸಮಾಸ ಸಮಾಸದೊಳ್ ರೇಫೆಗದ್ವಿತ್ವಮುಂಟು–ಸೂತ್ರ ೧೯೫.

ದೊರೆಕೊಳ್ವುದಖಿಳ ವೈಯಾಕರಣರಿನೆಂಬ ಸೂತ್ರದ ಸಮುಚ್ಚಯದಿಂ ಎರಡೆಂಬ ಡಕಾರಕ್ಕಂ ಟಕಾರಾದೇಶಮುಂಟು–ಸೂತ್ರ ೧೯೮.

ಪತ್ತರ್ಕೆ ಪ[ಯಿ]ನ್ನೆನಿಕ್ಕುಮೆಂಬ ಸೂತ್ರದಲ್ಲಿ ಎಲ್ಲಂ ಎಂಬ ವಿಕಲ್ಪದಿಂ ಪತ್ತೊಂಬತ್ತರ್ಕೆ ನಕಾರ ವಿಧಿಯಿಲ್ಲ–ಸೂತ್ರ ೨೦೨.

ಶ್ರೀ ಶ್ರೀ ಶ್ರೀ

ವಿನುತಗುಣವಚನಮೆಂಬುದಱ ಸಮುಚ್ಚಯದಿಂ ಕವಿಕೇಶವನೆಂ ಮಲ್ಲಿಕಾರ್ಜುನ ಸುತನೆಂ–ಸೂತ್ರ ೨೩೦.

ದ ದಪ ವಕಾರಂಗಳೆಂಬ ಸಮುಚ್ಚಯದಿಂ ಕೂಡಿ ನುಡಿವೆಡೆಯೊಳೆಂಬ ಸೂತ್ರಮುಂಟು–ಸೂತ್ರ ೨೩೨.

ಉದುವುವುವೆಂಬಾದೇಶಮೆಂಬುದಱ ಸಮುಚ್ಚಯದಿಂ ಸತಿಸಪ್ತಮಿಯೊಳು ದುವುಂಟು. ವಿದ್ಯರ್ಥದೊಳಮುಂಟು. ರಕ್ಷಿಪ್ಪುದು ಅವಧರಿಪುದು ಎಂದು –ಸೂತ್ರ ೨೩೬.

ದಪದ ಪಕಾರಂಕ್ಕಂ ಎಂಬ ಸಮುಚ್ಚಯದಿಂ ಹಿಂದಣ ನೆಗಟ್ದಿರ್ದ ರೇಫಮೆಂಬ ಸೂತ್ರಮುಂಟು. ನೋಗಂ ಎಂಬ ಸಮುಚ್ಚಯದಿಂ ಬೇಯೆಂಬ ಧಾತುಗಮೀ ತೆಱಂ –ಸೂತ್ರ ೨೪೪.

ಸಂದಿಪುದಲ್ವಿನ ಪರದೊಳೆಂಬ ಸೂತ್ರದ ಸಮುಚ್ಚಯದಿಂ ಇರಿಯಿಸುವೆ ತಂದೆ ಮಕ್ಕಳಂ ಎಂದುಂಟು –ಸೂತ್ರ ೨೪೬.

ಱಾಂತದೊಳಂ ಮೃತಿದಾನಾರ್ಥದೊಳಮೆಂಬ ಸಮುಚ್ಚಯದಿಂ ಕಾಣ್ ಎಂಬ ಧಾತುವಿಗೆ ಹ್ರಸ್ವಮಾಗಿ ಕಂಡೌ ಎಂದಾಯ್ತು –ಸೂತ್ರ ೨೫೧.

ನೆಗಟ್ಟುಂ ಲೋಪಂ ಪೋಗಾಗುಗಳ ಗಕಾರಕ್ಕೆ ದದಪಮಿರೆಯುಮೆಂಬ ಸಮುಚ್ಚಯದಿಂ ಭವಿಷ್ಯಂತಿಯ ವಕಾರಮಿರ್ದೊಡಂ ಗಕಾರಲೋಪಮುಂಟು. ಪೋಗಲೀಯದಡಸಿ ತಾಪಂ ಎಂದುಂ ಜೋದರೆಲ್ಲಂ. ಪೋಪಂಗೆ ಬರ್ಪಂಗನಾಕುಳಮೆಂದುಂಟು–ಸೂತ್ರ ೨೫೩.

ಶ್ರೀ ಶ್ರೀ ಶ್ರೀ

ವರಜಯತಡ ವರ್ಣಮೆಂ ಎಂಬ ಸೂತ್ರದಲ್ಲಿಯ ಆದಮೆಂಬ ವಿಕಲ್ಪದಿಂ ದಕಾರಕ್ಕೆ ಬತ್ವಮುಂಟು. ದ್ವಿತೀಯ = ಬಿದಿಗೆ–ಸೂತ್ರ ೨೮೧.

ಪುದಿದುತ್ವಕ್ಕಿತ್ವಮುಮೆಂಬ ಸಮುಚ್ಚಯದಿಂ ಇತ್ವಕ್ಕುತ್ವಮುಂಟು ಸ್ಫಟಿಕಂ=ಪಳುಕು_ಸೂತ್ರ ೨೮೭.

ಪದಮಧ್ಯದೇತ್ವದೊಳಮೀತ್ವದೊಳಮೆಂಬ ಸಮುಚ್ಚಯದಿಂ ಇತ್ವಕ್ಕಮತ್ವ ಮುಂಟು. ಘಟಿಕಂ=ಗಡಿಗೆ–ಸೂತ್ರ ೨೮೮.

ಸವನಿಸುಗುಂ ಗತ್ವಂ ಶಬ್ದಮಧ್ಯ ಮತ್ವಕ್ಕಮಂತೆ ಳತ್ವಕ್ಕಮೆಂಬ ಸಮುಚ್ಚಯದಿಂ ವತ್ವಕ್ಕಂ ಗತ್ವಮುಂಟು. ತುವರಿ=ತೊಗರೆ–ಸೂತ್ರ ೨೮೦.

ಮಹಿ ಪೊಗಟ್ಬಾಶ್ಚರ್ಯಮೆಂಬ ಸೂತ್ರದ ಸಮುಚ್ಚಯದಿಂ ಕೆಲವು ಶಬ್ದಕ್ಕೆ ಶಬ್ದಾದೇಶಮುಂಟು. ಜೋತಿಷಂ=ಜೋಯಿಸಂ. ಸ್ತಂಭ=ಕಂಬಂ, ಶಿಲ್ಪಿಕಂ=ಚಿಪ್ಪಿಗಂ. ಅಪ್ಸರಸಿ=ಅಚ್ಚರಸಿ. ದಂಷ್ಟ್ರಂ=ದಾಡೆ. ಸಂಸ್ಕೃತಂ=ಸಕ್ಕದಂ. ಪಾಡಳಂ=ಪಾದರಿ. ವ್ಯಾಹಾಳಿ=ವೈಹಾಳಿ. ಪ್ರಸಾದಕಂ=ಪಸದನಂ. ಜಳೂಕಂ=ಜಿಗಳೆ. ಪುಳಿನಂ=ಪುಟಿಲೆ. ಘೋಟಾರೂಢಂ=ಗೋಳಾಯಿಲಂ. ಝುಂಝುಂ=ಜಂಜು. ವಿದ್ಯಾಧರಂ=ಬಿಜ್ಜೋದರಂ. ಸಮೋಘಂ=ಸವಗಂ. ಆಂದೋಳಂ=ಅಂದಳಂ–ಸೂತ್ರ ೨೯೪.

ರತ್ವಕ್ಕ[ಂ] ಳಳಮುಮೆಂಬ ಸಮುಚ್ಚಯದಿಂ ಲತ್ವಕ್ಕಂ ಳತ್ವಕ್ಕಂ ರತ್ವಂ. ಳತ್ವಕ್ಕಂ ಲತ್ವಂ. ಲತ್ವಕ್ಕಂ ಳತ್ವಮುಂಟು. ಚೇಲಂ=ಸೀರೆ. ಪಾಟಳಂ=ಪಾದರಿ. ವಾಳಂ=ಬಾಲಂ. ಕುದ್ದಾಳಂ=ಗುದ್ದಲಿ. ಅಲೇಖಂ=ಅಳಕಂ ಎಂಬಂತೆ ನೋಡಿಕೊಳ್ವುದು–ಸೂತ್ರ ೨೯೭.

ಈ ಎಲ್ಲ ಸಮುಚ್ಚಯ ವಿವರಣೆಗಳ ಶುದ್ಧಪಾಠ ನಿರ್ಣಯ, ಗುಣ–ದೋಷ ವಿವೇಚನೆ ನಡೆಯಬೇಕಾಗಿದೆ.

ದರ್ಪಣದ ಕೊನೆಯಲ್ಲಿ 'ಪ್ರಯೋಗಸಾರಂ' ಎಂಬ ಅಪರೂಪ ಪದಕೋಶ ವಿದ್ದುದು ಸರ್ವವಿದಿತ. ಲಿಂಗಣಾರಾಧ್ಯನ ದರ್ಪಣಪ್ರತಿಯಲ್ಲಿ ಇದರ ಜೊತೆ "ಪುರಾತನ ಗ್ರಂಥಗಳಲ್ಲಿಯ ಕಠಿಣ ಪದಗಳಿಗೆ ಅರ್ಥ" ಎಂಬ ಶೀರ್ಷಿಕೆಯಲ್ಲಿ ೧೬೪ ಪದ್ಯಗಳ ಇನ್ನೊಂದು ಕೋಶ ಕಂಡುಬರುತ್ತದೆ.[೮೩] ಇದರ ಕರ್ತೃ ಗೊತ್ತಿಲ್ಲದಿದ್ದರೂ ದರ್ಪಣದ ಮಹತ್ವವನ್ನು ಹೆಚ್ಚಿಸಲು ಇಂಥ ಅಪರೂಪ ಭಾಗವನ್ನು ಅಭ್ಯಾಸಿ ಜೋಡಿಸಿದಂತಿದೆ.

ಹೀಗೆ, ಈ ನಾಡಿನಲ್ಲಿ ದರ್ಪಣವನ್ನು ಪ್ರಮಾಣಗ್ರಂಥವೆಂದು ತಪ್ಪದೇ ಅಭ್ಯಸಿಸುತ್ತ ಬಂದಿರುವರು. ಇವರಲ್ಲಿ ನಿಟ್ಟೂರ ನಂಜಯ್ಯ, ಲಿಂಗಣಾರಾಧ್ಯ, ಈಶ್ವರ ಕವಿ, ಕವಿಮಲ್ಲ, ತೋಂಟದಾರ್ಯ ಮೊದಲಾದವರ ಹೆಸರು ಎದ್ದುಕಾಣುವ ಕಾರಣ, ದರ್ಪಣದ ಕರ್ತೃ ಜೈನನಾಗಿದ್ದರೂ ಅದರ ವಿಶೇಷ ಅಭ್ಯಾಸಿಗಳು ವೀರಶೈವರೆಂದು ಹೇಳಬಹುದು. ಬ್ರಾಹ್ಮಣ

---

೮೩. ಶಮದ (ಮದ್ರಾಸ, ೧೯೭೩) ಪು. ३०४

ಜನಾಂಗದ ಸಂಸ್ಕೃತ ವ್ಯಾಮೋಹ, ಜೈನ ಜನಾಂಗದ ಇಳಿಮುಖದಿಂದಾಗಿ ಕನ್ನಡದ ಮೂಲಕ ಮೋಕ್ಷ ಸಾಧಿಸಬಯಸಿದ ಈ ವೀರಶೈವರಿಂದ ದರ್ಪಣ ಹೆಚ್ಚು ಪ್ರಚಾರಪಡೆಯಿತು. "ಶಬ್ದಮಣಿದರ್ಪಣ ಮಠ" ಹೆಸರಿನ ವೀರಶೈವ ಮಠವೊಂದು ಇರುವುದಾಗಿ ಡಾ. ಬಿ. ಎಸ್. ಗದ್ದಿಗಿಮಠ ಅವರು ಹೇಳುವುದನ್ನು ಇಲ್ಲಿ ನೆನೆಯಬಹುದು.* ಆದುದರಿಂದ ಜೈನರು, ಬ್ರಾಹ್ಮಣರು, ವಿಶೇಷವಾಗಿ ವೀರಶೈವರು ಈ ಕೃತಿಯನ್ನು ಅಭ್ಯಸಿಸುವಲ್ಲಿ "ಸೂರ್ಯೇಂದು ಮೇರುವಾರಿಧಿ ಪರ್ಯಂತಂ ಪರಿದು ನಿಲ್ಕೆ' ಎಂಬ ಕೇಶಿರಾಜನ ಹಾರೈಕೆ ಕೈಗೂಡಿತೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

❖❖

---

* Studies in education & Culture-Kayaka System of education (Dr. B.S.Gaddagimath) p.260.

ಶಬ್ದಮಣಿದರ್ಪಣಂ : ಗ್ರಂಥ-ಲೇಖನ ಸೂಚಿ*

ಪರಿಷ್ಕರಣಗಳು

೧. ಗಂಗಾಧರೇಶ್ವರ ಮಡಿವಾಳೇಶ್ವರ ತೂರಮರಿ - ಜೂನ್ ೧೮೬೬-೧೮೭೭ ಮಠಪತ್ರಿಕೆ, ಧಾರವಾಡ (ವ್ಯಾಖ್ಯಾನ ಸಹಿತ : ಅಸಮಗ್ರ?)

೨. ಜೆ.ಗ್ಯಾರೆಟ್ -೧೮೬೮ Government Press, Bangalore

೩. ಎಫ್. ಕಿಟ್ಟೆಲ್ -೧೮೭೨ C.Stolz, Basel Mission Book and Tract Depository, Mangalore

೪. ಎಫ್.ಕಿಟ್ಟೆಲ್-೧೮೯೯ Basel Mission Book and Tract Depository, Mangalore (Second and revised edition); reprint by Asian Educational Services, New Delhi, Madras -1990

೫. ಎಫ್. ಕಿಟ್ಟೆಲ್ (ಪರಿಸ್ಕೃತ : ಪಂಜೆ ಮಂಗೇಶರಾವ್)-೧೯೨೦ Kanarese Mission Book and tract depository, Mangalore (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ; ನಾಲ್ಕನೆಯ ಮುದ್ರಣ : ಪ್ರ.ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರಣಿ, ಧಾರವಾಡ ೧೯೫೫)

೬. ಪರಿಷತ್ಪಂಡಿತರು - ೧೯೨೦, ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು (ಎರಡನೆಯ ಪರಿಷ್ಕೃತ ಮುದ್ರಣ; ೧೯೭೭, ಸಂ.ಟಿ.ವಿ. ವೆಂಕಟಾಚಲ ಶಾಸ್ತ್ರೀ ; ೨೦೦೭ ಮೂರನೆಯ ಮುದ್ರಣ)

೭. ಎ.ವೆಂಕಟರಾವ್ ಮತ್ತು ಎಚ್. ಶೇಷಅಯ್ಯಂಗಾರ್- ೧೯೩೯ (ಅವತರಣಿಕೆ: ಎಚ್. ಚನ್ನಕೇಶವ ಅಯ್ಯಂಗಾರ್) ಮುದ್ರಾಸ್ ವಿಶ್ವವಿದ್ಯಾನಿಲಯ, ಮದ್ರಾಸ್, (ಪುನರ್ ಮುದ್ರಣ - ೧೯೭೩)

೮. ಡಿ.ಎಲ್. ನರಸಿಂಹಾಚಾರ್ -೧೯೫೫, ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪, (ಪರಿಷ್ಕೃತಮುದ್ರಣ : ನಿಟ್ಟೂರ ನಂಜಯ್ಯನ ಟೀಕೆಯೊಡನೆ ೧೯೬೪, ಪುನರ್ ಮುದ್ರಣಗಳು ೧೯೬೮, ೧೯೭೧, ೧೯೭೩, ೧೯೮೯, ೧೯೯೩, ಡಿ.ವಿ.ಕೆ ಮೂರ್ತಿ ಮೈಸೂರು ೧೯೯೯, ೨೦೦೧, ೨೦೦೩, ೨೦೦೯, ೧೨ನೆಯ ಮುದ್ರಣ)

---

* ಶಬ್ದಮಣಿದರ್ಪಣಂ: ಸಂ. ಡಾ. ಟಿ.ವ್ಹಿ. ವೆಂಕಟಾಚಲಶಾಸ್ತ್ರಿ.(೨೦೦೦)

೯. ತ.ಸು.ಶಾಮರಾಯ ಮತ್ತು ಎಚ್. ನಂಜೇಗೌಡ –೧೯೭೫, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು (ಪುನರ್ ಮುದ್ರಣಗಳು : ೧೯೮೬, ೧೯೮೮, ೧೯೯೯)
೧೦. ಭುವನಹಳ್ಳಿ ಪದ್ಮನಾಭ ಶರ್ಮ–೧೯೭೬, ಪದ್ಮಾಂಬ ಪ್ರಕಾಶನ, ಬಸವನಗುಡಿ, ಬೆಂಗಳೂರು (ನಲ್ನುಡಿಗನ್ನಡ ವ್ಯಾಖ್ಯಾನಸಹಿತ)
೧೧. ಡಿ.ಕೆ. ಭೀಮಸೇನರಾವ್ –೧೯೭೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು.
೧೨. ಎಲ್. ಬಸವರಾಜು–೧೯೮೬, ಶ್ರೀ ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ (ದ್ವಿತೀಯ ಮುದ್ರಣ: ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ –೨೦೦೯)
೧೩. ಟಿ.ವಿ.ವೆಂಕಚಾಲಶಾಸ್ತ್ರೀ–೧೯೯೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು (ದ್ವಿತೀಯ ಪರಿಷ್ಕೃತ ಮುದ್ರಣ –೨೦೦೮, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು)
೧೪. ಎಚ್. ನಂಜೇಗೌಡ –೧೯೯೫, ಚೇತನ ಬುಕ್ ಹೌಸ್, ಮೈಸೂರು.
೧೫. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ–೧೯೯೯, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ (ಕೇಶಿರಾಜದರ್ಪಣ ವ್ಯಾಖ್ಯಾನಸಹಿತ) ಸಂ. ಪಾದೇಕಲ್ಲು ವಿಷ್ಣುಭಟ್ಟ
೧೬. ತ.ಸು. ಶಾಮರಾಯ –೨೦೦೮, ತ.ವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು

ವಿಮರ್ಶ ಗ್ರಂಥಗಳು

೧. ಆಲೋಕ (ಕೇಶಿರಾಜನ ಶಬ್ದಮಣಿದರ್ಪಣದ ವ್ಯಾಖ್ಯಾನ) ಭಾಗ ೧ ಎಚ್.ಎಸ್. ಬಿಳಿಗಿರಿ, ಅಕ್ಷರ ಪ್ರಕಾಶನ, ಸಾಗರ, ೧೯೬೯; ದ್ವಿತೀಯ ಮುದ್ರಣ ಕಾಮಧೇನು ಪ್ರಕಾಶನ, ಬೆಂಗಳೂರು ೧೯೯೬
೨. ಕೇಶಿರಾಜ, ಎಂ. ಮರಿಯಪ್ಪ ಭಟ್ಟ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೭೬
೩. ಕೇಶಿರಾಜ, ಎಸ್. ಶ್ರೀನಿವಾಸನ್, ಡಿ.ವಿ.ಕೆ. ಮೂರ್ತಿ, ಮೈಸೂರು –೧೯೭೧
೪. ಕೇಶಿರಾಜಕೃತ ಶಬ್ದಮಣಿದರ್ಪಣದ ದಿಗ್ದರ್ಶನ, ದೊಡ್ಡಸ್ವಾಮಿ, ದುಂಡನಹಳ್ಳಿ, ಮದ್ದೂರು ತಾಲ್ಲೂಕು–೧೯೬೯
೫. ಕೇಶಿರಾಜನ ಗರಡಿಯಲ್ಲಿ, ಸಾ.ಶಿ. ಮರುಳಯ್ಯ, ಶಾಲಿನಿ ಪ್ರಭು, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು –೧೯೯೭
೬. ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರಸಾರ (ನಾಮಪ್ರಕರಣ), ಟಿ.ಶಂಭು ಲಿಂಗಪ್ಪ, ಚಿತ್ರದುರ್ಗ ಪ್ರಕಾಶನ, ಚಿತ್ರದುರ್ಗ –೧೯೭೬
೭. ದರ್ಪಣ ವಿವರಣ, ಟಿ.ವಿ.ವೆಂಕಟಾಚಲ ಶಾಸ್ತ್ರೀ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು –೨೦೦೧
೮. ಶಬ್ದಮಣಿದರ್ಪಣ, ಕ.ವೆಂ. ರಾಘವಾಚಾರ್ಯ, ವಿನೋದ, ವ್ಯಾಕರಣಗಳು (ಸಂ.) ವಿ. ಸೀತಾರಾಮಯ್ಯ, ಐಬಿ.ಎಚ್. ಪ್ರಕಾಶನ, ಬೆಂಗಳೂರು ೧೯೭೭ ಪು. ೨೪–೫೮
೯. ಶಬ್ದಮಣಿದರ್ಪಣ ಕುರಿತ ಸಾಹಿತ್ಯ, ಎಂ.ವೈ. ಪಾಟೀಲ
೧೦. ಶಬ್ದಮಣಿದರ್ಪಣ ಕೈಪಿಡಿ, ವೆಂಕಟೇಶ ಶರ್ಮ –೧೯೬೮–೬೯

೧೧. ಶಬ್ದಮಣಿದರ್ಪಣದ ಪಾಠಾಂಶಗಳು ಮತ್ತು ಅನುಭವಾಮೃತವೂ ಹರಿಕಥಾ ಮೃತಸಾರವೂ, ಡಿ.ಕೆ. ಭೀಮಸೇನರಾವ್, ಕನ್ನಡ ಸಂಶೋಧನೆ ಸಂಸ್ಥೆ, ಧಾರವಾಡ –೧೯೫೧–೧೯೭೨
೧೨. ಶಬ್ದಮಣಿದರ್ಪಣದಲ್ಲಿ ಗ್ರಾಂಥಿಕ – ವ್ಯಾವಹಾರಿಕ ಶೈಲಿಗಳು, ವಿ. ಶಿವಾನಂದ, ಶ್ರೀ ಶಿವಕುಮಾರ ಏಜೆನ್ಸಿ, ಗದಗ ೧೯೯೨
೧೩. ಶಬ್ದಮಣಿದರ್ಪಣ ದೀಪಿಕೆ, ಜಿ. ಅಬ್ದುಲ್ ಬಷೀರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೯(ದ್ವಿತೀಯ ಮುದ್ರಣ)
೧೪. ಶಬ್ದಮಣಿದರ್ಪಣ ಪರಾಮರ್ಶೆ, ಎಸ್. ಎಂ. ಹಿರೇಮಠ ೧೯೯೨
೧೫. ಶಬ್ದಮಣಿದರ್ಪಣ ಪ್ರತಿಫಲನ, ಶ್ರೀಮತಿ ಎಚ್.ಎಂ. ಬೀಳಗಿ, ಸಮಾಜ ಪುಸ್ತಕಾಲಯ, ಧಾರವಾಡ –೨೦೦೦, ೪ನೇ ಮುದ್ರಣ ೨೦೦೭, ೫ನೇ ಮುದ್ರಣ.
೧೬. ಶಬ್ದಮಣಿದರ್ಪಣ ಮತ್ತು ಲೀಲಾತಿಲಕ : ಒಂದು ತೌಲನಿಕ ಅಧ್ಯಯನ, ಬಿ.ಕೆ. ತಿಮ್ಮಪ್ಪ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಲಾದ ಪಿಎಚ್.ಡಿ ನಿಬಂಧ –೧೯೭೬ (ಅಪ್ರಕಟಿತ)
೧೭. ಶಬ್ದಮಣಿದರ್ಪಣವಿಳಾಸ, ವಿ. ಶಿವಾನಂದ ವಿಜಯ ಪುಸ್ತಕಭಂಡಾರ ಮತ್ತು ಪ್ರಕಾಶನ, ಗದಗ –೧೯೭೨–೧೯೭೪(ಪರಿಷ್ಕೃತ)
೧೮. ಶಬ್ದಮಣಿದರ್ಪಣಾಂತರಂಗ, ಎಸ್. ಎಂ. ಹಿರೇಮಠ, ೧೯೯೦
೧೯. ಸರಳ ಶಬ್ದಮಣಿದರ್ಪಣ, ಎಸ್.ಎಸ್. ಅಂಗಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೪
20. A Descriptive Study of Keshiraja's Sabdamanidarpana, J.S. Kulli, Karnataka University, Dharawada -1976
21. Nannul and Sabdamanidarpanam, K.D.Nilakanthan, Ph.D. Thesis (Unpublished)
22. Tolkappiam and Sabdamanidarpanam – A comparative study, R. Madhivanan (Unpublished)
23. Sabdamanidarpana of Keshiraja (English Translation), A. Shankara Kedilaya, Annals of Oriental Research, Oriental Research Institute, University of Madras 18-2, 1963-27-1, 2.1972.

ಸಂಗ್ರಹಗಳು

೨೪. ಶಬ್ದಮಣಿದರ್ಪಣ ಸಂಗ್ರಹ, ಎಸ್. ಆರ್. ಮಳಗಿ, ಮಧು ಪ್ರಕಾಶನ, ಬೆಂಗಳೂರು, ೧೯೭೦
೨೫. ಶಬ್ದಮಣಿದರ್ಪಣ ಸಂಗ್ರಹ, ಬಿ.ಟಿ. ಸಾಸನೂರು, ಎಂ.ಎಂ.ಕಲ್ಬುರ್ಗಿ, ಸಮಾಜ ಪುಸ್ತಕಾಲಯ, ಧಾರವಾಡ –೧೯೭೫, ರವಿಚಂದ್ರ ಪ್ರಕಾಶನ, ಧಾರವಾಡ–೧೯೮೫
೨೬. ಶಬ್ದಮಣಿದರ್ಪಣದ ನೂರೊಂದು ಸೂತ್ರಗಳು (ವ್ಯಾಖ್ಯಾನ ಸಹಿತ), ಎ.ಎಸ್. ಜಯರಾಮ್–ಕ.ಪು.ಮಹಾದೇವಪ್ಪ, ಅನುರಣನ ಪ್ರಕಾಶನ, ಮೈಸೂರು–೧೯೯೫, ೧೯೯೭, ೨೦೦೧, ೨೦೦೨

೨೭. ಶಬ್ದಮಣಿದರ್ಪಣಂ ಸಂಗ್ರಹ, ಎಚ್.ವಿ. ಶ್ರೀನಿವಾಸ ಶರ್ಮ, ಎಂ.ವಿ. ಶ್ರೀನಿವಾಸಮೂರ್ತಿ, ಜಿ.ವೆಂಕಟಸುಬ್ಬಯ್ಯ, ಬೆಂಗಳೂರು ವಿಶ್ವವಿದ್ಯಾಲಯ.

ಬಿಡಿಬರಹಗಳು

೧. ಆದೇಶ ಸಂಧಿ /ವ್ಯಂಜನಸಂಧಿಯನ್ನು ಕುರಿತು, ಕ.ನಂ. ನಾಗರಾಜ, ಅಂಕಣ ೩–೩, ಜನವರಿ ೧೯೮೨, ಪುಟ. ೨೨–೨೩

೨. ಆದೇಶ ಸಂಧಿ/ವ್ಯಂಜನಸಂದಿಯನ್ನು ಕುರಿತು, ಕೃಷ್ಣರಮೇಶ್ವರ ಭಟ್ಟ, ಅಂಕಣ ೩–೫, ಮೇ–ಜುಲೈ ೧೯೮೨, ಪು. ೩೭–೩೯

೩. ಅಲೋಕಾವಲೋಕನ : ಒಂದು ಪ್ರತಿಕ್ರಿಯೆ, ಎಂ. ರಾಜಗೋಪಾಲಾಚಾರ್ಯ, ಸಾಕ್ಷಿ –೧೦–ಪು. ೮೯–೯೨

೪. ಅವಿಷ್ಟಲಿಂಗ, ಬಸವರಾಜು, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೬೩–೧, ಜೂನ್ ೧೯೭೮, ಪು. ೬೫–೬೯

೫. ಅವಿಷ್ಟಲಿಂಗ, ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಸಾಧನೆ ೮–೪, ೧೯೭೯, ಪು. ೮೧–೯೨ಮ ಶಾಸ್ತ್ರ ಕುತೂಹಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೦೩, ಪು. ೧೨೯–೧೩೯

೬. 'ಎ' ಪ್ರತ್ಯಯ, ಉಪ್ಪಂಗಳ ರಾಮಭಟ್ಟ, ಸಾಧನೆ ೧೪–೩, ಜುಲೈ–ಸೆಪ್ಟೆಂಬರ್ ೧೯೮೨

೭. ಒಂದು ಊಹಾತ್ಮಕ ಟಿಪ್ಪಣಿ : 'ಪಸೆಯಿರ್ದಂ ಗರುಡವೇಗನೃಪ ನಂದನೆಯೊಳ್' ಎಸ್. ಶಿವಣ್ಣ, ಕನ್ನಡ ನುಡಿ. ೨೮–೨ ಬಿಡಮುತ್ತು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು –೨೦೦೪, ಪು., ೨೯೦–೨೯೧

೮. ಕನ್ನಡದ ರನ್ನಗನ್ನಡಿ ಶಬ್ದಮಣಿದರ್ಪಣ, ನಂ. ತಪಸ್ವೀಕುಮಾರ್, ಸುಧಾ ೨೨–೧೨–೧೯೬೮, ಪು. ೪೨

೯. ಕನ್ನಡದಲ್ಲಿ ಅನುನಾಸಿಕ ನಿರನುನಾಸಿಕಗಳು, ವಿಲ್ಯಂ ಮಾಡ್ತ, ಪ್ರಬುದ್ಧ ಕರ್ಣಾಟಕ, ೫೬–೧, ೧೯೭೪

೧೦. ಕನ್ನಡದಲ್ಲಿ ಯೋಗವಾಹಗಳು, ಎಂ.ಎಸ್. ಸುಂಕಾಪುರ, ಕರ್ನಾಟಕ ಭಾರತಿ ೧–೧, ನವೆಂಬರ್ ೧೯೬೮, ಪು. ೭೩–೭೯

೧೧. ಕನ್ನಡ ಬಾಸೆಗೆ ಅಕ್ಕರಂಗಳೆನಿತು?, ಕಬ್ಬಿಗರಾಯ, ಪ್ರಹ್ಲಾದ, ರಂಗಾಚಾರ್ಯ, ಜಯಕರ್ನಾಟಕ ೬–೨, ೭–೪, ೬

೧೨. ಕನ್ನಡ ವರ್ಣಮಾಲೆಯಲ್ಲಿ ಬಿಂದುವಿಚಾರ, ಕೆ. ಸತ್ಯನಾರಾಯಣ, ಕನ್ನಡ ನುಡಿ, ೨೨–೧೨, ೧೯೫೯. ಪು. ೨೨೩

೧೩. ಕನ್ನಡ ವ್ಯಾಕರಣವಿಚಾರ (ಶಬ್ದಮಣಿದರ್ಪಣದ ದೋಷವಿಮರ್ಶೆ), ಕೂಡ್ಲಿ ಸುಬ್ರಹ್ಮಣ್ಯ ಶಾಸ್ತ್ರ, ವಿದ್ಯಾದಾಯಿನಿ ೮–೧, ೧೯೦೦, ಪು ೬–೧೧

೧೪. ಕರ್ಣಾಟಕ ವರ್ಣಸಮಾಮ್ನಾಯಂ, ತೋಗೆರೆ ನಂಜುಡಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೫–೩, ೧೯೨೦ ಪು. ೧೯೬–೨೧೦

೧೫. ಕರ್ನಾಟಕ ಧಾತುಗಳು, ಎಚ್. ನಾರಾಯಣ ರಾವ್, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೧-೩ ೧೯೧೬ ಪು. ೨೪೯-೪೯೧

೧೬. ಕವಿ ಭೀಮನು ಯಾರು?, ಎ.ಎನ್. ನರಸಿಂಹಯ್ಯ, ಸಂಭಾವನೆ (ಬಿ.ಎಂ.ಶ್ರೀ. ಅವರಿಗೆ ಅರ್ಪಿಸಲಾದ ಸಂಭಾವನಗ್ರಂಥ) -೧೯೪೧, ಪು. ೧೮೩-೧೯೧

೧೭. ಕಾವ್ಯಾವಲೋಕನ -ಶಬ್ದಮಣಿದರ್ಪಣಗಳಲ್ಲಿಯ ಒಂದು ಕ್ಲಿಷ್ಟ ಲಕ್ಷ್ಯ ಪದ್ಯದ ಅರ್ಥ, ಟಿ.ವಿ.ವೆಂಕಟಾಚಲಶಾಸ್ತ್ರೀ, ಪ್ರಬುದ್ಧ ಕರ್ಣಾಟಕ. ೭೧-೩,೪, ೧೯೮೯ -೧೯೯೦ ಪು. ೧೬೭-೧೭೪ ಶ್ರೀಮುಖ (ಟಿ.ವಿ. ವೆಂಕಟಾಚಲ ಶಾಸ್ತ್ರೀಯ ಅವರ ಅಭಿನಂದನ ಗ್ರಂಥ) ಮೈಸೂರು ೧೯೯೭, ಪು. ೪೫೬-೪೬೩, ಶಾಸ್ತ್ರೀಯ -೧ ಸಪ್ನ ಬುಕ್ ಹೌಸ್, ಬೆಂಗಳೂರು ೧೯೯೯ ಪು. ೯೦-೯೩

೧೮. ಕುಳ ಕ್ಷಳ ನಿಯಮ, ಎನ್. ತಿಮ್ಮಣ್ಣ ಭಟ್ಟ್, ಪ್ರಬುದ್ಧ ಕರ್ನಾಟಕ, ೪೫-೪, ೧೯೬೪, ಪು. ೧೩೪-೧೪೬

೧೯. ಕೃಷ್ಣವಿಷ್ಣುಲಿಂಗ, ಎಂ.ವಿ. ಶ್ರೀನಿವಾಸಮೂತಿ, ಶ್ರೀಕಂಠತೀರ್ಥ (ತೀನಂ.ಶ್ರೀ ಸಂಸ್ಮರಣ ಗ್ರಂಥ, ಸಂ. ಎಂ. ಚಿದಾನಂದಮೂರ್ತಿ ಮತ್ತು ಇತರರು), ೧೯೭೬ ಪು. ೫೪೯-೫೬೩

೨೦. ಕೇಶಿರಾಜ, ಪಿ. ಶ್ರೀಕೃಷ್ಣಭಟ್, ರತ್ನಮಂಜೂಷ (೫೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷಸಂಪುಟ) ಧರ್ಮಸ್ಥಳ ೧೯೭೯

೨೧. ಕೇಶಿರಾಜ, ಎನ್.ಎಸ್. ತಾರಾನಾಥ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಸಂ.ಟಿ.ವಿ.ವೆಂಕಟಾಚಲ ಶಾಸ್ತ್ರೀ) ಸಂಪುಟ -೪ ಭಾಗ -೨, ೧೯೭೭, ಪು. ೧೬೩೩-೪೫

೨೨. ಕೇಶಿರಾಜ, ವಿಜಯ ಮೊಳೆಯಾರ, ಸಾರ್ಥಕ (ಪ್ರೊ. ಎಂ. ಮರಿಯಪ್ಪ ಭಟ್ಟ ಸಂಸ್ಮರಣ ಗ್ರಂಥ) ಸಂ. ಶ್ರೀಕೃಷ್ಣಭಟ್ ಅರ್ತಿಕಜೆ. ಪ್ರೊ. ಎಂ. ಮರಿಯಪ್ಪ ಭಟ್ಟ ಸಂಸ್ಮರಣ ಸಮಿತಿ, ಮದ್ರಾಸ್ - ೧೯೯೫, ಪು. ೨೧೦-೨೧೨

೨೩. ಕೇಶಿರಾಜ, ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್, ಹೌಸ್, ಮೈಸೂರು-೨೦೦೨ (೧೧ನೆಯ ಮುದ್ರಣ) ಪು. ೧೯೩-೧೯೪

೨೪. ಕೇಶಿರಾಜ, ಟಿ.ವಿ.ವೆಂಕಟಾಚಲ ಶಾಸ್ತ್ರೀ, ಕನ್ನಡ ವಿಶ್ವಕೋಶ, ಸಂಪುಟ-೫, ಮೈಸುರು ವಿಶ್ವವಿದ್ಯಾನಿಲಯ -೧೯೭೨, ಪು. ೨೬೦-೨೬೧

೨೫. ಕೇಶಿರಾಜ, ಕೆ.ಜಿ.ಶಾಸ್ತ್ರೀ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ ಸಂಪುಟ -೩ ಪು. ೫೮೭-೬೦೦

೨೬. ಕೇಶಿರಾಜ, ಸೀತಾರಾಮ ಜಾಗೀರದಾರ್, ಕನ್ನಡ ವಿಷಯ ವಿಶ್ವಕೋಶ; ಕರ್ನಾಟಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ-೧೯೭೯. ಪು ೩೭೬-೩೭೭

೨೭. ಕೇಶಿರಾಜ, ಆರ್. ಸಿ. ಹಿರೇಮಠ, ಜಯಂತಿ ೨೪-೭

೨೮. ಕೇಶಿರಾಜ, ಎಂ. ಮರಿಯಪ್ಪ ಭಟ್ಟ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಭಾರತೀ ಪ್ರಕಾಶನ, ಮೈಸೂರು ೧೯೬೦-ಪು. ೧೫೫-೧೫೭

೨೯. ಕೇಶಿರಾಜ, ತ.ಸು. ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು –೨೦೦೧, ಪು. ೧೧೩

೩೦. ಕೇಶಿರಾಜ ಕಂಡ ಅನುಪಲಬ್ದ ಭಾರತಗಳು, ಎಂ.ಎಂ. ಕಲಬುರ್ಗಿ, ಪ್ರಬುದ್ಧ ಕರ್ನಾಟಕ, ೫೪–೪, ೧೯೭೩ ಪುಟ. ೩–೧೪ಮಾರ್ಗ–೧ ನರೇರ್ಶ ಅಂಡ್ ಕಂಪನಿ, ಬೆಂಗಳೂರು ೧೯೭೭, ಪು. ೧೪೦–೧೫೪

೩೧. ಕೇಶಿರಾಜನ ಎರಡು ಸೂತ್ರಗಳು, ಆರ್. ಎಸ್. ಪಂಚಮುಖಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೨೭–೧, ೧೯೪೨ ಪು. ೧೧–೧೭

೩೨. ಕೇಶಿರಾಜನ ಶಬ್ದಮಣಿದರ್ಪಣದ ಮತ್ತೊಂದು ರೂಪದ ಪ್ರತಿ, ಜಿ.ಎ. ಶಿವಲಿಂಗಯ್ಯ, ಕರ್ನಾಟಕ ಲೋಚನ ೯–೧, ಜೂನ್ ೧೯೯೭, ಪು ೫೬–೬೬

೩೩. ಕೇಶಿರಾಜನ ಕಾಲದ ಕನ್ನಡ, ರಾ.ಯ.ಧಾರವಾಡಕರ, ಪ್ರಜಾಮತ (ದೀಪಾವಳಿ ಸಂಚಿಕೆ) ೧೯೪೬. ಪು. ೧೧೭

೩೪. ಕೇಶಿರಾಜನ ದೃಷ್ಟಾಂತಗಳು, ರಾ.ಯ. ಧಾರವಾಡಕರ, ಕರ್ಮವೀರ (ದೀಪಾವಳಿ ಸಂಚಿಕೆ) ೧೯೫೮. ಪು. ೨

೩೫. ಕೇಶಿರಾಜನ ಪ್ರಯೋಗಗಳ ಆಕರಗಳು, ಎಸ್. ಶಿವಣ್ಣ ಪ್ರಬುದ್ಧ ಕರ್ನಾಟಕ ೫೨–೪, ೧೯೭೦, ಪು. ೧೨೭–೧೪೨

೩೬. ಕೇಶಿರಾಜನ ರಸಿಕತೆ, ಟಿ.ವಿ. ವೆಂಕಟಾಚಲ ಶಾಸ್ತ್ರೀ, ಜೀವನ ೧೪–೩, ಜುಲೈ ೧೯೫೩, ಪು. ೯೫–೯೭

೩೭. ಕೇಶಿರಾಜನ ಶಬ್ದಮಣಿದರ್ಪಣ, ಎಂ.ಆರ್. ವರದಾಚರ್ಯ AIOC, Vol, ೮, ೧೯೩೫, p. ೮೧೯

೩೮. ಕೇಶಿರಾಜನು ಜೈನನಲ್ಲ, ಬ್ರಾಹ್ಮಣನು, ಕೆ.ಜಿ. ಕುಂದಣಗಾರ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೧೯–೧ ಏಪ್ರಿಲ್ ೧೯೩೪, ಪು. ೩೦–೩೭ ಪ್ರೊ. ಕೆ.ಜಿ. ಕುಂದಣಗಾರ ಅವರ ಲೇಖನ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳುರು ೧೯೯೯– ಪು. ೫೮೮–೫೯೬

೩೯. ಕೇಶಿರಾಜನು ಜೈನನಲ್ಲ, ಬ್ರಾಹ್ಮಣನು, ಶ್ರೀನಿವಾಸ ರಂಗಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್, ಪತ್ರಿಕೆ, ೧೭–೩ ಅಕ್ಟೋಬರ್ ೧೯೩೨, ಪು. ೨೦೫–೨೨೫

೪೦. ಕೇಶಿರಾಜನು ಜೈನನೇ?, ಕೆ.ಜಿ.ಕುಂದಣಗಾರ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ೧೮–೧, ಏಪ್ರಿಲ್ ೧೯೩೩, ಪು. ೫೯–೭೫, ಪ್ರೋ. ಕೆ.ಜಿ.ಕುಂದಣಗಾರ ಅವರ ಲೇಖನ ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು –೧೯೯೯, ಪು. ೫೭೬–೫೮೭

೪೧. ಕೇಶಿರಾಜನು ಜೈನನೇ?, ಜಯಂತ ಸುರತ್ಕಲ್, ಕನ್ನಡ ನುಡಿ, ೧೪–೫, ಮೇ ೧೯೫೧, ಪು. ೧೫೪

೪೨. ಕೇಶಿರಾಜ ಮತ್ತು ಶಬ್ದಮಣಿದರ್ಪಣ, ಹಂಪ, ನಾಗರಾಜಯ್ಯ, ವೀರಭಾರತಿ ೩–೧೨, ೧೯೬೧

೪೩. ಕ್ಷಳಸೂತ್ರ, ಎಂ.ಎಂ. ಕಲಬುರ್ಗಿ ಮಾರ್ಗ–೨, ನರೇಶ್ ಅಂಡ್ ಕಂಪನಿ, ಬೆಂಗಳೂರು– ೧೯೮೮, ಪು. ೫೮೧–೫೯೬

೪೪. ಗಮಕಸಮಾಸ, ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ಕನ್ನಡ ನುಡಿ, ೨೮-೪, ಏಪ್ರಿಲ್ ೧೯೬೫ ಪು. ೯-೧೨, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. ೫೨-೧, ಜೂನ್ ೧೯೬೭ ಪು. ೧೪-೨೧

೪೫.ಗಮಕಸಮಾಸ, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಕನ್ನಡ ನುಡಿ. ೨೯-೮, ಆಗಸ್ಟ್ ೧೯೬೬ ಪು. ೧೧-೧೮

೪೬. ಗಮಕಸಮಾಸ, ಸೇಡಿಯಾಪು ಕೃಷ್ಣಭಟ್ಟ, ವಿಚಾರಪ್ರಪಂಚ, ಕರ್ನಾಟಕ ಸಂಘ, ಪುತ್ತೂರು ೧೯೯೨ (ಸಂ.) ಪಾದೇಕಲ್ಲು ವಿಷ್ಣುಭಟ್ಟ; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ -೨೦೦೨ (ದ್ವಿತೀಯ ಮುದ್ರಣ), ಪು. ೨೪೮-೨೭೫

೪೭. ಗಮಕಸಮಾಸ : ಒಂದು ಟಿಪ್ಪಣಿ, ಎನ್. ರಂಗನಾಥ ಶರ್ಮ, ವ್ಯಾಕರಣಗಳು (ಸಂ.) ವಿ. ಸೀತಾರಾಮಯ್ಯ ಐಬಿಎಚ್. ಪ್ರಕಾಶನ, ಬೆಂಗಳೂರು ೧೯೭೭ ಪು. ೧೯೬-೧೯೮

೪೮. ಗಮಕಸಮಾಸ : ಒಂದು ಸಮೀಕ್ಷೆ, ಎನ್. ರಂಗನಾಥ ಶರ್ಮ, ಲೋಚನ, ೩-೧, ೧೯೮೫, ಪುಟ, ೧೭.ವ್ಯಾಕರಣಶಾಸ್ತ್ರದ ಪರಿವಾರ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ-೨೦೦೨, ಪು. ೧೪೬-೧೬೩

೪೯. ಗಮಕ ಸಮಾಸವು ಸಮಾಸವೇ, ಅಲ್ಲದಿದ್ದರೆ?, ಎಚ್. ಎಸ್. ಬಿಳಿಗಿರಿ, ಲೋಚನ, ೩-೨, ೧೯೮೫, ಪು. ೩; ವರಸೆಗಳು, ಕ್ರೈಸ್ತ ಕಾಲೇಜು, ಬೆಂಗಳೂರು -೧೯೯೫ ಪು. ೯೩-೧೧೧

೫೦. ದರ್ಪಣದ ಕೆಲವು ಸಮಸ್ಯೆಗಳು, ಬಿ. ಪದ್ಮನಾಬ ಸೋಮಯಾಜಿ, ಶ್ರದ್ಧಾಂಜಲಿ, ಪುಟ, ೧೪೬, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೬-೧, ಪು. ೧೫೦-೫೩

೫೧. ದರ್ಪಣದಲ್ಲಿ ನೇಯ, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಪ್ರದೀಪಿಕೆ (ವೆಂಕಟರಾಯಾಚಾರ್ಯ ಸಂಭಾವನ ಗ್ರಂಥ) - ೧೯೭೯

೫೨. ದರ್ಪಣಾವಲೋಕನ, ಎಂ.ಎ.ಕಲಬುರ್ಗಿ, Journal of the Karnataka University-9, 1965, p. 220-45, Journal of the Karnataka University -10, 1966, p. 124-135

೫೩. ದರ್ಪಣಾವಲೋಕನ, ಕೆ.ಕುಶಾಲಪ್ಪ ಗೌಡ, ಪ್ರಬುದ್ಧ ಕರ್ಣಾಟಕ ೪೩-೩

೫೪. ದರ್ಪಣಾವಲೋಕನ : ಒಂದು ಪ್ರತಿವಿಮರ್ಶೆ, ಹಂಪ, ನಾಗರಾಜಯ್ಯ, ಕನ್ನಡ ನುಡಿ, ೩೦-೧೧ ನವೆಂಬರ್ ೧೯೬೭ ಪು. ೨-೮, ೩೦-೩೬, ೪೦

೫೫. ನಿಯೋಗಾರ್ಥದ ವಳ್ಳ (ವಳ) ಪ್ರತ್ಯಯವು, ಶಂ. ಬಾ. ಜೋಶಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೩೬-೧, ೨, ೧೯೪೧ ಪು. ೬೨-೬೫, ೧೯೫-೧೯೬

೫೬. ಮಲ್ಲಿಕಾರ್ಜುನ ಮತ್ತು ಅವನ ಮಗನಾಥ ಕೇಶಿರಾಜ ಇವರು ಜೈನರೇ, ಸ್ಮಾರ್ತ ಬ್ರಾಹ್ಮಣರಲ್ಲ, ಅಣ್ಣಾರಾವ ಫಡೆಪ್ಪಾ ಚೌಗಲೆ, ಪ್ರಬುದ್ಧ ಕರ್ಣಾಟಕ, ೩೧-೩, ೪, ೧೯೫೦, ಪು. ೧೫೧-೧೬೦(ಸಮಾಧಾನದ ಮರುಮಾತು-ಎನ್. ಅನಂತ ರಂಗಾಚಾರ್, ಪೂರ್ವೋಕ್ತ, ಪು. ೧೬೧-೧೬೨)

೫೭. ಮಹಾಪ್ರಾಣಗಳು - ಒಂದು ಟಿಪ್ಪಣಿ, ಮ.ಗು.ವಾರಿ, ಸಾಧನೆ ೧೧-೩ ಜುಲೈ-ಸೆಪ್ಟೆಂಬರ್ ೧೯೮೨, ಪು. ೧೩೪-೧೩೬

೫೮. ಮೂರು ಟಿಪ್ಪಣಿಗಳು ಮತ್ತು ಆರು ಅಡಿಟಿಪ್ಪಣಿಗಳು, ಎಚ್. ಎಸ್. ಬಿಳಿಗಿರಿ, ಸಾಕ್ಷಿ -೧೦, ೧೧೭-೧೨೦

೫೯. ರೇಫ–ಶಕಟರೇಫ, ಹಂಪ. ನಾಗರಾಜಯ್ಯ, ಕನ್ನಡ ನುಡಿ, ೨೮–೧೦, ೧೯೬೫
೬೦. ಱ–ಕುಳ–ಕ್ಷರ ವಿಚಾರ, ಸ.ಸ. ಮಾಳವಾಡ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೨೬–೨, ಡಿಸೆಂಬರ್ ೧೯೪೧, ಪು. ೧೯೭–೨೦೩
೬೧. ಲಿಂಗಮೊಂಬತ್ತು ತೆಱಂ, ಕೆ. ಕುಶಾಲಪ್ಪ ಗೌಡ, ಶ್ರೀಕಂಠತೀರ್ಥ [ತೀ.ನಂ.ಶ್ರೀ. ಸಂಸ್ಮರಣ ಗ್ರಂಥ (ಸಂ.) ಎಂ. ಚಿದಾನಂದಮೂರ್ತಿ ಮತ್ತು ಇತರರು] ಬೆಂಗಳೂರು –೧೯೮೬, ಪು. ೫೭೦–೫೯೪
೬೨. ಲಿಂಗಮೊಂಬತ್ತು ತೆಱಂ, ಮ.ಗು. ವಾರಿ, ಅಂಕಣ, ೬–೫, ಮೇ–ಜೂನ್ ೧೯೮೫, ಪು. ೨೪–೨೬
೬೩. ವಚನಪಲ್ಲಟ, ರಂ.ಶ್ರೀ, ಮುಗಳಿ, ಶ್ರೀಕಂಠತೀರ್ಥ [ತೀ.ನಂ.ಶ್ರೀ ಸಂಸ್ಮರಣ ಗ್ರಂಥ (ಸಂ.) ಎಂ. ಚಿದಾನಂದಮೂರ್ತಿ ಮತ್ತು ಇತರರು] ೧೯೭೬, ಪು. ೫೩೪–೫೪೪
೬೪. ವಳ–ವಳ್ಳ ಪ್ರತ್ಯಯ, ಪಿ. ರಾಮಭಟ್, ಕರ್ನಾಟಕ ಭಾರತೀ, ೧೦–೨, ೧೯೭೭ ಪು ೬–೧೩
೬೫. ವೈಯಾಕರಣನ ವೈಶಿಷ್ಟ್ಯ, ಎಸ್. ರತ್ನಮ್ಮ, ಸವಿನೆನಪು (ಟಿ.ಎಸ್. ವೆಂಕಣ್ಣಯ್ಯ ಸಂಸ್ಮರಣಸಂಪುಟ) ಮೈಸೂರು, ೧೯೮೬, ಪು. ೭೬೩
೬೬. ವೈಯಾಕರಣ ಭೀಮ ಅಥವಾ ಭೀಮಸೇನ, ಕೆ.ಜಿ. ಕುಂದಣಗಾರ, ಶಿವಾನುಭವ ೧೫–೬, ಮಾರ್ಚ್ ೧೯೪೧, ಪು. ೨೧೭–೨೨೦, ಕುಂದಣ, ಪು. ೧೦೧–೧೦೪, ಪ್ರೊ. ಕೆ.ಜಿ.ಕುಂದಣಗಾರ ಅವರ ಲೇಖನ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೯ ಪು. ೫೬೫–೫೬೮
೬೭. ಶಬ್ದಮಣಿದರ್ಪಣಂ, ಡಿ.ಎಲ್. ನರಸಿಂಹಾಚಾರ್, ಪೀಠಿಕೆಗಳು ಲೇಖನಗಳು, ಡಿ.ವಿ.ಕೆ ಮೂರ್ತಿ ಮೈಸೂರು –೧೯೭೧, ೨೦೦೫, ಪು. ೨೦೪–೨೨೫
೬೮. ಶಬ್ದಮಣಿದರ್ಪಣ, ಮಲ್ಲೇಪುರ ಜಿ. ವೆಂಕಟೇಶ್, ಪುಸ್ತಕಮಾಹಿತಿ, ಆಗಸ್ಟ್ ೧೯೯೪, ಕನ್ನಡ ಮೇರು (ಟಿ.ವಿ.ವೆಂಕಟಾಚಲ ಶಾಸ್ತ್ರೀ ಅಭಿನಂದನ ಗ್ರಂಥ) ೨೦೦೮, ಪು. ೨೪೧–೨೪೨
೬೯. ಶಬ್ದಮಣಿದರ್ಪಣ, ರಂ.ಶ್ರೀ. ಮುಗಳಿ, ಜೀವನ ೩–೧೨, ಪು. ೫೬೫–೭೧, ೪–೧ ಪು. ೪೦–೪೧೫
೭೦. ಶಬ್ದಮಣಿದರ್ಪಣ, ಜಿ. ವರದರಾಜರಾವ್, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ [(ಸಂ) ಟಿ.ವಿ. ವೆಂಕಟಾಚಲ ಶಾಸ್ತ್ರೀ] ಸಂಪುಟ–೪ ಭಾಗ–೨, ೧೯೭೭, ಪು. ೧೬೪೫–೪೭, ಡಾ. ಜಿ.ವರದರಾಜರಾವ್ ಅವರ ಆಯ್ದ ಲೇಖನಗಳು [(ಸಂ) ಎಸ್.ಎಸ್. ಭಗವತಿ, ಎಚ್.ಎಸ್. ಮೇಲಿನಮನೆ] ವಿದ್ಯಾನಿಧಿ ಪ್ರಕಾಶನ, ಗದಗ–೨೦೦೬ ಪು. ೫೩೬–೫೪೯
೭೧. ಶಬ್ದಮಣಿದರ್ಪಣ ಜಿಜ್ಞಾಸೆ, ರಾ.ಯ. ಧಾರವಾಡಕರ ಮತ್ತು ಇತರರು, ಜೀವನ ೨–೭, ೧೨
೭೨. ಶಬ್ದಮಣಿದರ್ಪಣದ ಅರ್ಥವೃತ್ತಿ ಮತ್ತು ಅನ್ವಯವೃತ್ತಿ, ಎಂ.ಎಂ. ಕಲಬುರ್ಗಿ, ಕರ್ನಾಟಕ ಭಾರತೀ, ೧–೧ ನವೆಂಬರ್ ೧೯೬೮ ಪು. ೧೫೩–೧೪೬, ಮಾರ್ಗ–೨ ನರೇಶ್ ಆಂಡ್ ಕಂಪನಿ, ಬೆಂಗಳೂರು–೧೯೮೮, ಪು. ೫೬೬–೫೭೩

೭೩. ಶಬ್ದಮಣಿದರ್ಪಣದ ಒಂದು ಪ್ರಯೋಗದ ಆಕರ, ಎಸ್. ಶಿವಣ್ಣ, ಸಾಧನೆ, ೧೧-೪, ೧೯೮೨ ಪು. ೧೫೭-೧೫೮, ಬಿಡುಮುತ್ತು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೪ ಪು. ೩೦೨

೭೪. ಶಬ್ದ ಮಣಿದರ್ಪಣದ ಒಂದು ಪ್ರಯೋಗದ ಆಕರ: ಪ್ರತಿಕ್ರಿಯೆ, ಕೆ.ಎಸ್. ಮಧುಸೂದನ, ಸಾಧನೆ, ೧೯-೩, ೪.೧೯೯೦, ಪು. ೨೧೯-೨೨೦

೭೫. ಶಬ್ದಮಣಿದರ್ಪಣದ ಒಂದು ಲಕ್ಷ್ಯಪದ್ಯದ ಅವಿದಿತ ಆಕರ, ಟಿ.ವಿ. ವೆಂಕಟಾಚಲ ಶಾಸ್ತ್ರೀ, ಶಾಸ್ತ್ರೀಯ-೧ ಸಪ್ನ ಬುಕ್ ಹೌಸ್, ಬೆಂಗಳೂರು -೧೯೯೯ ಪು. ೧೩೮-೧೩೯

೭೬. ಶಬ್ದಮಣಿದರ್ಪಣದ ತದ್ಧಿತಪ್ರಕರಣ, ಎಂ.ಎಂ. ಕಲಬುರ್ಗಿ, ಮಾರ್ಗ -೪ ಸಪ್ನ ಬುಕ್ ಹೌಸ್, ಬೆಂಗಳೂರು -೨೦೦೪, ಪು. ೫೧೪-೫೧೬

೭೭. ಶಬ್ದಮಣಿದರ್ಪಣ ಪ್ರಯೋಗದ ಆಕರ, ಎಚ್. ವಿ. ಶ್ರೀನಿವಾಸ ಶರ್ಮ, ಸಾಧನೆ ೨೨-೩, ೪ ಜುಲೈ-ಡಿಸೆಂಬರ್ ೧೯೯೩, ಪು. ೧೫೪-೧೫೫

೭೮. ಶಬ್ದಮಣಿದರ್ಪಣದ ಒಂದು ವೃತ್ತಿಯ ಪಾಠ ಮತ್ತು ಅರ್ಥವಿಚಾರ, ಎಸ್. ಎಸ್. ಅಂಗಡಿ, ಕನ್ನಡ ಗ್ರಂಥಸಂಪಾದನೆ ಬಂಧ- ವಿನ್ಯಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು -೨೦೦೭, ಪು. ೪೨-೪೪

೭೯. ಶಬ್ದಮಣಿದರ್ಪಣದ ಮೂರು ಉದಾಹರಣೆಗಳು ಹಾಗೂ ಕವಿ ಸರಸ್ವತೀ ಮಣಿಹಾರ ಸೀತಾರಾಮ ಜಾಗೀರದಾರ್, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೬೨-೧, ೨, ಜೂನ್-ಡಿಸೆಂಬರ್ ೧೯೬೭, ಪು. ೭೫-೮೧

೮೦. ಶಬ್ದಮಣಿದರ್ಪಣದ ಶೃಂಗಾರ, ಅಪ್ಪಾಜಿಗೌಡ, ವಿಮರ್ಶಾಸುಧೇ -೧೯೭೯

೮೧. ಶಬ್ದಮಣಿದರ್ಪಣದಲ್ಲಿ ವೈದ್ಯಕೀಯ ವಿಷಯ, ಸುಬ್ಬಣ್ಣ ಅಂಬೆಸಂಗೆ, ಕನ್ನಡ ನುಡಿ, ೫೧-೩-೪, ೧೯೮೮ ಪು. ೨

೮೨. ಶಬ್ದಮಣಿದರ್ಪಣದ ನೂರಿಪ್ಪತ್ತೊಂಬತ್ತನೆಯ ಸೂತ್ರ : ಒಂದು ವಿವರಣೆ ಎಂ.ಎಲ್. ಲಲಿತಮ್ಮ, ಸಾಧನೆ ೨-೧, ೧೯೭೩ ಪು. ೯೧-೧೦೨

೮೩. ಶಬ್ದಮಣಿದರ್ಪಣದ ಮಂಗಲಶ್ಲೋಕದ ಒಂದು ವ್ಯಾಕರಣಾಂಶ, ಟಿ.ವಿ. ವೆಂಕಟಾಚಲ ಶಾಸ್ತ್ರೀ, ಹೊಯ್ಸಳಸಂಪದ (ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಸಂಪುಟ) ಹಾಸನ -೧೯೯೬, ಪು. ೭೪೧-೭೪೩, ಶಾಸ್ತ್ರೀಯ -೧, ಸಪ್ನ ಬುಕ್ ಹೌಸ್, ಬೆಂಗಳೂರು -೧೯೯೯, ಪು. ೩೭೯-೩೮೧

೮೪. ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ, ವಿ. ರಾಮಶರ್ಮಾ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೬-೧, ಜೂನ್ ೧೯೪೧, ಪು. ೫೬-೬೧

೮೫. ಶಬ್ದಮಣಿದರ್ಪಣದ ವೈಶಿಷ್ಟ್ಯ, ಎಸ್. ಎಸ್. ಬ್ಯಾತನಾಳ, ಆರತಿ, ಪು. ೧೨೬

೮೬. ಶಬ್ದಮಣಿದರ್ಪಣದ ಸಮುಚ್ಚಯಗಳು, ಎಂ.ಎಂ. ಕಲಬುರ್ಗಿ, Journal of the Karnataka University-೧೨, ೧೯೬೯, ೮.೨೧೭-೨೨೩ ಮಾರ್ಗ-೨ ನರೇಶ್ ಅಂಡ್ ಕಂಪನಿ, ಬೆಂಗಳೂರು -೧೯೮೮ ಮ ಪು. ೫೭೪-೫೮೦

೮೭. ಶಬ್ದಮಣಿದರ್ಪಣ ಮತ್ತು ಉತ್ತರಕಾಲೀನ ಸಾಹಿತ್ಯ, ಟಿ.ವಿ. ವೆಂಕಟಾಲಶಾಸ್ತ್ರೀ, ಬೆಳ್ವೊಲ (ಆರ್. ಸಿ. ಹಿರೇಮಠ ಅಭಿನಂದನ ಗ್ರಂಥ) ಧಾರವಾಡ –೧೯೮೧, ಪು. ೩೩೫–೩೪೩, ಶಾಸ್ತ್ರೀಯ–೧ ಸಪ್ನ ಬುಕ್ ಹೌಸ್, ಬೆಂಗಳೂರು–೧೯೯೯, ಪು. ೪೦೦–೪೦೭

೮೮. ಶಬ್ದಮಣಿದರ್ಪಣ ದಿಗ್ದರ್ಶನ, ಟಿ. ಕೇಶವಭಟ್ಟ, ಕನ್ನಡ ನುಡಿ, ೧೬–೨–೧೯೭೦ (ವಿಮರ್ಶೆ)

೮೯. ಶಬ್ದಮಣಿದರ್ಪಣ ಸಂಗ್ರಹ, ಟಿ. ಕೇಶವಭಟ್ಟ, ಕನ್ನಡಪ್ರಭ, ೮–೩–೧೯೭೧ (ವಿಮರ್ಶೆ)

೯೦. ಶಬ್ದಮಣಿದರ್ಪಣಸಂಗ್ರಹ, ಟಿ. ಕೇಶವಭಟ್ಟ, ಕನ್ನಡಪ್ರಭ, ೧೫–೬–೧೯೭೭ (ವಿಮರ್ಶೆ)

೯೧. ಶಬ್ದಮಣಿದರ್ಪಣ ವಿಲಾಸ, ಎಂ. ಚಿದಾನಂದಮೂರ್ತಿ, ಸಾಹಿತ್ಯ ವಾರ್ಷಿಕ, ಬೆಂಗಳೂರು ವಿಶ್ವವಿದ್ಯಾಲಯ–೧೯೭೨, ಮಿಡುಕು ಹುಡುಕು, ಚಿದಾನಂದ ಸಮಗ್ರ ಸಂಪುಟ–೬ ಸಪ್ನ ಬುಕ್ ಹೌಸ್, ಬೆಂಗಳೂರು–೨೦೦೪, ಪುಟ. ೧೪೮–೧೪೯ (ವಿಮರ್ಶೆ)

೯೨. ಶಬ್ದಮಣಿದರ್ಪಣಂ ಒಂದು ಅಪೂರ್ವಪ್ರತಿ, ಉಪ್ಪಂಗಳ ರಾಮಭಟ್ಟ, ಸಾರ್ಥಕ, (ಪ್ರೊ. ಎಂ.ಮರಿಯಪ್ಪ ಭಟ್ಟ ಸಂಸ್ಮರಣ ಗ್ರಂಥ)(ಸಂ.) ಶ್ರೀಕೃಷ್ಣಭಟ್ ಅರ್ತಿಕಜೆ, ಪ್ರೊ. ಎಂ. ಎರಿಯಪ್ಪ ಭಟ್ಟ ಸಂಸ್ಮರಣ ಸಮಿತಿ, ಮದ್ರಾಸ್–೧೯೯೫, ಪು. ೩೯೩–೪೦೧

೯೩. ಶಬ್ದಮಣಿದರ್ಪಣಂ ಹಾಗೂ ಕೆಲವು ಐತಿಹಾಸಿಕ ಸಂಗತಿಗಳ ಸಂಶೋಧನೆ, ಸೀತಾರಾಮ ಜಾಗೀರದಾರ್, ಪ್ರಬುದ್ಧ ಕರ್ಣಾಟಕ, ೮೨, ೨೦೦೬ ಪು.೧–೨೨

೯೪. ಶಬ್ದಮಣಿದರ್ಪಣದಲ್ಲಿ ಕಾವ್ಯಬಿಂಬ, ಉಪ್ಪಂಗಳ ರಾಮಭಟ್ಟ, ಉಡುಪಿ–೧೯೯೬, ಪು. ೨೩–೩೧

೯೫. ಶಾಸನಗಳಲ್ಲಿ ಱ್ ಸ್ವನಿಮಕ್ಕೆ ಸಂಬಂಧಿಸಿದ ಒಂದು ಲಿಪಿಸಮಸ್ಯೆ ಮತ್ತು ಕೇಶಿರಾಜ, ಎಂ. ಚಿದಾನಂದಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೬೨–೧, ೨ ಜೂನ್–ಡಿಸೆಂಬರ್ ೧೯೭೭, ಪು. ೧೩೦–೧೪೩ ವಾಗರ್ಥ, ಬಾಪ್ಕೋ ಪ್ರಕಾಶನ, ಬೆಂಗಳೂರು ೧೯೮೧ ಪು. ೮೨–೯೩, ಭಾಷಾವಿಜ್ಞಾನ ಮತ್ತು ಛಂದಸ್ಸು, ಚಿದಾನಂದ ಸಮಗ್ರ ಸಂಪುಟ–೨, ಸಪ್ನ ಬುಕ್ ಹೌಸ್, ಬೆಂಗಳೂರು –೨೦೦೨, ಪು. ೬೩–೭೨

೯೬. ಸತಿಸಪ್ತಮಿ, ವಿ. ಕೃಷ್ಣಸ್ವಾಮಿ ಅಯ್ಯಂಗಾರ್ ಕನ್ನಡ ನುಡಿ, ೫೮–೭ ಜುಲೈ ೧೯೬೫ ಪು. ೧೦

೯೭. ಸಂಧ್ಯಕ್ಷರಗಳು, ಪಿ. ರಾಮಭಟ್

98. A note on Gamaka Compound in Kannada, G. Varadaraj Rao, 3rd All India Conference on Dravidian Linguistics, Dharwar-1976

99. Co-existent Phonemic systems and an old Kannada Grammar, H.M. Nayak, Kannada Studies 1-1,Mysore, 1965, p.87-92

100. Contribution of Sabdamanidarpana towards an under standing of the history of Kannada Language, D. Javare Gowda, Kannada Studies 1-1 Mysore, 1965, p. 87-92

101. Diphthongs, U. Ramabhatt, The journal of the Institute of Indian Studies, Vol. 2, 1979

102. Keshiraja, G. Varadaraja Rao, Encyclopedia of Indian Literature, Volume -3, Sahitya Akademi, New Delhi -1989, p2061-2062
103. Life and work of Keshiraja –R. Shamasastry, QJMS 22-1, 1931, p88-96 Vibrant India, (Ed. T.V. Venkatachala Sahitry, B.S. Pranatartiharan) Samudaya Adhyayana Kendra, Mysore -2009, p. 397-405
104. Linguistic Approach To Traditional Grammars of Kannada, G.S.Gai, Studies in History, Epigraphy and culture, Shri Hari Prakashana, Dharwad-1992, p.315-319
105. Problem of Loan words in sabdamanidarpana, M. Chidananda Murthy, Kannada Studies 3-1, Mysore p.6-25
106. Sabdamanidarpana as A Descriptive Grammar of Old Kannada(Seminar Shashtri, Annamalai University -1965)

❖❖

Madras University Kannada Series : 19

General Editer
PROF. K. KUSHALAPPA GOWDA
Head of the Department of Kannada

SĀHITYA SAMPĀDANE

Author
Dr. M.M.KALBURGI

UNIVERSITY OF MADRAS
1979

ಮದರಾಸು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥ ಮಾಲೆ : ೧೯

ಪ್ರಧಾನ ಸಂಪಾದಕರು
ಕೆ. ಕುಶಾಲಪ್ಪಗೌಡ
ಮುಖ್ಯಸ್ಥರು, ಕನ್ನಡ ವಿಭಾಗ

ಸಾಹಿತ್ಯ ಸಂಪಾದನೆ

ಲೇಖಕರು
ಎಂ. ಎಂ. ಕಲಬುರ್ಗಿ

ಮದರಾಸು ವಿಶ್ವವಿದ್ಯಾನಿಲಯ, ಮದರಾಸು
೧೯೭೯

*

ಮುನ್ನುಡಿ

ಡಾ. ಎಂ. ಎಂ. ಕಲಬುರ್ಗಿಯವರು, ಗ್ರಂಥ ಸಾಹಿತ್ಯ, ಶಾಸನಸಾಹಿತ್ಯ ಮತ್ತು ಜಾನಪದ ಸಾಹಿತ್ಯಗಳ ಸಂಪಾದನೆಯ ಬಗ್ಗೆ ೧೯೭೮ನೆಯ ಜನವರಿ ತಿಂಗಳು ೧೯, ೨೦ ಮತ್ತು ೨೧ನೇ ದಿನಾಂಕಗಳಲ್ಲಿ ಕೊಟ್ಟ ಮೂರು ಉಪನ್ಯಾಸಗಳ ಲಿಖಿತ ರೂಪವಾಗಿ ಈ ಪುಸ್ತಕ ಈಗ ಪ್ರಕಟವಾಗುತ್ತಿರುವುದು ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಕ್ಕೆ ಸಂತೋಷಕರ ವಿಷಯ. ಇದುವರೆಗೆ ಕನ್ನಡದಲ್ಲಿ ಉಪಯುಕ್ತ ಪುಸ್ತಕಗಳನ್ನು ಈ ವಿಭಾಗ ಪ್ರಕಟಿಸಿದೆಯೆಂಬುದು ಕನ್ನಡ ವಿದ್ವಾಂಸರಿಗೆಲ್ಲ ಮನವರಿಕೆಯಾಗಿರಬಹುದೆಂದು ನಂಬುತ್ತೇವೆ. ಸಾಹಿತ್ಯ ಚಟುವಟಿಕೆಗೆ ಮೂಲಭೂತವಾದುದು ಸಂಪಾದನಕಾರ್ಯ. ಅದನ್ನು ಹೇಗೆ ಮಾಡಬೇಕು, ಸಂಪಾದಕ ಎದುರಿಸುವ ಸಮಸ್ಯೆಗಳೇನು, ಅಂತಹ ಸಮಸ್ಯೆಗಳಿಗೆ ಪರಿಹಾರಗಳೇನು-ಎಂಬ ವಿಷಯಗಳನ್ನು ಕುರಿತು ಮಿತ್ರರಾದ ಕಲಬುರ್ಗಿಯವರು ಈ ಕಿರುಹೊತ್ತಿಗೆಯಲ್ಲಿ ಶಾಸ್ತ್ರೀಯವಾಗಿ ವಿವೇಚಿಸಿದ್ದಾರೆ. ಇದರಿಂದ ಕನ್ನಡ ವಿದ್ವಜ್ಜನರಿಗೆ ಪ್ರಯೋಜನವಾಗುತ್ತದೆಂಬ ನಂಬಿಕೆ ನಮಗಿದೆ.

ಇದನ್ನು ವಿಭಾಗದ ಮೂಲಕ ಪ್ರಕಟಿಸಲು ಒಪ್ಪಿಕೊಂಡ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ನನ್ನ ವಂದನೆಗಳು ಸಲ್ಲುತ್ತವೆ. ದೂರದ ಮದರಾಸಿಗೆ ಉತ್ಸಾಹದಿಂದ ಬಂದು, ಮೂರು ದಿನಗಳೂ ಪಾಂಡಿತ್ಯಪೂರ್ಣ ಭಾಷಣ ಕೊಟ್ಟು, ಜಡವಾದ ಕಲ್ಲೂ ಶಿಲ್ಪಿಯ ಕೈಯಲ್ಲಿ ಚೇತನ ಪಡೆಯುವಂತೆ ಶುಷ್ಕ ಶಾಸ್ತ್ರವೂ, ಕಲ್ಪನಾವಿಲಾಸ ಬೆರೆತ ಪಾಂಡಿತ್ಯದೊಡನೆ ಮೇಳೈಸಿದರೆ, ರಸಮಯವಾಗಬಹುದೆಂದು ಡಾ. ಕಲಬುರ್ಗಿಯವರು ತೋರಿಸಿಕೊಟ್ಟರು. ಈಗ ಅವರ "ಸಾಹಿತ್ಯ ಸಂಪಾದನೆ"ಯನ್ನು ನಮ್ಮ ವಿಭಾಗದ ಪ್ರಕಟಣೆಗೆ ಔದಾರ್ಯದಿಂದ ಒಪ್ಪಿಸಿದ್ದಾರೆ. ಅವರಿಗೆ ವಿಭಾಗದ ಪರವಾಗಿ ನನ್ನ ಕೃತಜ್ಞತೆಗಳು. ಮತ್ತೆ ಈ ಪುಸ್ತಕದ ಅಚ್ಚಿನ ಕಾರ್ಯದಲ್ಲಿ ನನ್ನ ಎಳೆಯ ಸಹೋದ್ಯೋಗಿಗಳು ಹಸನ್ಮುಖದಿಂದ ಇದಕ್ಕೆ ಸಂಬಂಧಿಸಿದ ಎಲ್ಲ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆಂದು ಹೆಮ್ಮೆಪಡುತ್ತೇನೆ. ಸುಂದರವಾಗಿ ಮುದ್ರಿಸಿದ ರತ್ನಂ ಪ್ರೆಸ್, ಮದರಾಸು-೧ ಇವರಿಗೆ ನಮ್ಮ ವಿಶ್ವಾಸದ ನೆನವರಿಕೆಗಳು.

ಅಚ್ಚಿನ ತಪ್ಪುಗಳು ಉಳಿಯಬಾರದೆಂದು ಎಷ್ಟು ಪ್ರಯತ್ನಪಟ್ಟರೂ, ಕೆಲವೊಂದು 'ಎಡೆವಾಯ್ದು' ಬಂದ ತಪ್ಪುಗಳು ಉಳಿದುಕೊಂಡುವು. ಮುಖ್ಯವಾದವುಗಳನ್ನು ಒಪ್ಪೋಲೆಯಲ್ಲಿ ಕೊಡಲಾಗಿದೆ. ಓದುಗರು ಇವನ್ನು ಮೊದಲು ಗಮನಿಸಿಕೊಳ್ಳಬೇಕಾಗಿ ವಿನಂತಿ.

ಮದರಾಸು
೨೦-೮-೧೯೭೮

-ಕೆ. ಕುಶಾಲಪ್ಪಗೌಡ

*

ಗ್ರಂಥಕರ್ತರ ಮಾತು

"ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ" ಪ್ರತಿವರ್ಷ ಕೆಲವರನ್ನು ರಾಷ್ಟ್ರೀಯ ಉಪನ್ಯಾಸಕರೆಂದು ಮನ್ನಿಸಿ ಅವರು ಬೇರೆ ಬೇರೆ ವಿದ್ಯಾಸಂಸ್ಥೆಗಳಲ್ಲಿ ಎರಡು ಇಲ್ಲವೆ ಮೂರು ವಿಶೇಷ ಉಪನ್ಯಾಸಗಳನ್ನು ನೀಡುವ ಅವಕಾಶಗಳನ್ನು ಒದಗಿಸಿಕೊಡುತ್ತದೆ. ೧೯೭೭-೭೮ನೆಯ ವರ್ಷದಲ್ಲಿ ಈ ಅವಕಾಶ ನನಗೆ ಪ್ರಾಪ್ತವಾಗಿದ್ದಿತು. ಇದರ ಅಂಗವಾಗಿ ನಾನು ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ೧೯, ೨೦, ೨೧ ಜನವರಿ, ೧೯೭೮ ರಂದು ನೀಡಿದ 'ಸಾಹಿತ್ಯ ಸಂಪಾದನೆ' ಎಂಬ ಉಪನ್ಯಾಸದ ಲೇಖನ ರೂಪ ಈ ಪುಸ್ತಕ.

ಪ್ರಾಚೀನ ಕನ್ನಡ ಸಾಹಿತ್ಯದ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂಪಾದನಕಾರ್ಯವನ್ನು ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಮತ್ತು ಪ್ರಾಚ್ಯ ಹಸ್ತಪ್ರತಿ ಭಾಂಡಾರಗಳು ತುಂಬ ಹಿಂದೆಯೇ ಕೈಕೊಂಡು ಬೆಲೆಯುಳ್ಳ ಗ್ರಂಥಗಳನ್ನು ಪ್ರಕಟಿಸಿವೆ. ಈ ಹಿನ್ನೆಲೆಯಲ್ಲಿ ನಿಂತು "ಸಾಹಿತ್ಯ ಸಂಪಾದನೆ"ಯೆಂಬ ವಿಷಯವನ್ನು ಕುರಿತು ನಾನು ಮಾತನಾಡಿದುದು ಒಂದು ಯೋಗಾಯೋಗವಾಗಿದೆ. ಮದರಾಸು ವಿಶ್ವವಿದ್ಯಾನಿಲಯವು ಕನ್ನಡ "ಗ್ರಂಥಸಂಪಾದನ ಕ್ಷೇತ್ರ"ಕ್ಕೆ ಸಲ್ಲಿಸಿದ ಸೇವೆಗೆ ಕರ್ನಾಟಕದ ಪರವಾಗಿ ನಾನು ಸಮರ್ಪಿಸುವ ಕೃತಜ್ಞತೆಯಾಗಿದೆ.

ಭಾರತದ ಬೇರೆ ಪ್ರಾಂತ್ಯ ಭಾಷೆಗಳಲ್ಲಿ "ಸಾಹಿತ್ಯ ಸಂಪಾದನೆ"ಯನ್ನು ಕುರಿತು ಅಷ್ಟಾಗಿ ಗ್ರಂಥಗಳು ಲೇಖನಗಳು ಪ್ರಕಟವಾಗಿಲ್ಲ. ಈ ದೃಷ್ಟಿಯಿಂದ ಕನ್ನಡವೇ ಮೇಲು. ಇಲ್ಲಿ "ಗ್ರಂಥಸಾಹಿತ್ಯ ಸಂಪಾದನೆ"ಯ ಬಗೆಗೆ ಒಂದಿಷ್ಟು ಕೆಲಸವಾಗಿದ್ದರೂ, "ಶಾಸನ ಸಾಹಿತ್ಯ ಸಂಪಾದನೆ" ಹಾಗೂ "ಜಾನಪದ ಸಾಹಿತ್ಯ ಸಂಪಾದನೆ"ಗಳ ಬಗೆಗೆ ಶಾಸ್ತ್ರೀಯ ಬರೆವಣಿಗೆ ತುಂಬ ಅಲಕ್ಷಿತವಾಗಿದೆ. ಪ್ರಸ್ತುತ ಗ್ರಂಥ ಆ ಕೊರತೆಯನ್ನು ತುಂಬಿಕೊಡುವ ಪ್ರಥಮ ಪ್ರಯತ್ನವೆಂದು ವಿನಮ್ರವಾಗಿ ಸೂಚಿಸುತ್ತೇನೆ.

ಈ ಉಪನ್ಯಾಸಗಳನ್ನು ನೀಡಲು ನನ್ನನ್ನು ಮದರಾಸಿಗೆ ಎಳೆದು ತಂದುದು ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ. ಕೆ. ಕುಶಾಲಪ್ಪಗೌಡ ಅವರ ಗಟ್ಟಿ ಸ್ನೇಹ; ಗಟ್ಟಿ ವಿದ್ವತ್ತು. ಕನ್ನಡ ಮತ್ತು ಇತರ ವಿಭಾಗಗಳ ಪ್ರಾಧ್ಯಾಪಕ-ವಿದ್ಯಾರ್ಥಿಗಳನ್ನು, ಮದರಾಸು ಪಟ್ಟಣದ ಕನ್ನಡ ಸಾಹಿತ್ಯ ಕುತೂಹಲಿಗಳನ್ನು ಒಂದೆಡೆ ಸೇರಿಸಿ ಈ ಉಪನ್ಯಾಸಗಳಿಗೆ ವೇದಿಕೆಯನ್ನು ಕಲ್ಪಿಸಿಕೊಟ್ಟ ಮಾನ್ಯ ಮಿತ್ರರಾದ ಡಾ. ಕೆ. ಕುಶಾಲಪ್ಪಗೌಡ ಅವರಿಗೆ ನನ್ನ ವಂದನೆಗಳು.

ಮೂರೂ ದಿವಸ ಈ ಶುಷ್ಕಶಾಸ್ತ್ರವನ್ನು ಕಾವ್ಯಾಸಕ್ತಿಯಿಂದ ಕೇಳಿದ, ಬಿಚ್ಚು ಮನಸ್ಸಿನಿಂದ ಚರ್ಚಿಸಿದ ಶ್ರೋತೃವರ್ಗಕ್ಕೂ, ಈ ಉಪನ್ಯಾಸಗಳನ್ನು ಪ್ರಕಟಿಸುತ್ತಿರುವ ಮದರಾಸು ವಿಶ್ವವಿದ್ಯಾನಿಲಯಕ್ಕೂ, "ರಾಷ್ಟ್ರೀಯ ಉಪನ್ಯಾಸಗಳ" ಅವಕಾಶ ಮಾಡಿಕೊಟ್ಟ "ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ"ಕ್ಕೂ ನನ್ನ ವಂದನೆಗಳು.

ಧಾರವಾಡ

೧೪-೭-೭೯

–ಎಂ. ಎಂ. ಕಲಬುರ್ಗಿ

❖❖

*

<u>ಪರಿವಿಡಿ</u>

[illegible]

[illegible]

[illegible]

[illegible]

[illegible]

[illegible]

[illegible]

೧

❖


ಗ್ರಂಥಸಾಹಿತ್ಯ ಸಂಪಾದನೆ

ಸಾಹಿತ್ಯ ಸಂಪಾದನೆ

'ಸಂಪಾದನೆ' ಎಂಬ ಪದಕ್ಕೆ ಸಾಹಿತ್ಯಿಕ ಸಂದರ್ಭದಲ್ಲಿ "ಬೇರೊಬ್ಬರ ಬರವಣಿಗೆಗೆ ಸರಿಯಾದ ರೂಪಮುದ್ರೆ ಕೊಡುವುದು" ಎಂದು ಅರ್ಥ. ಈ 'ಸಂಪಾದನೆ' ಹೆಸರಿನಲ್ಲಿ ಸಮಾವೇಶಗೊಳ್ಳುವ ಕವನ, ಲೇಖನ ಸಂಪಾದನೆಗಳಿಗಿಂತ, ತಲೆತಲಾಂತರ ಸಾಗಿಬಂದ ಲಿಖಿತ ಸಾಹಿತ್ಯ ಮತ್ತು ವಾಚಿಕ ಸಾಹಿತ್ಯಗಳನ್ನು ಸಂಪಾದಿಸುವುದು ಭಿನ್ನವಾಗಿದ್ದು ಇವುಗಳನ್ನು ಸಂಪಾದಿಸಲು ಬೇಕಾಗುವ ಮಾರ್ಗದರ್ಶಿ ಸೂತ್ರಗಳನ್ನೊಳಗೊಂಡ ಶಾಸ್ತ್ರಕ್ಕೆ Textual Criticism ಎಂದು ಹೆಸರು. 'ಪಾಠವಿಮರ್ಶೆ' ಎಂಬುದು ಇದರ ಕನ್ನಡ ಸಂವಾದಿ. ಇದಕ್ಕೆ ಪರ್ಯಾಯವಾಗಿ ಪಾಠಪರಿಶೋಧನೆ, ಪಾಠಪರಿಷ್ಕರಣ, ಪಾಠಸಂಸ್ಕರಣ ಮೊದಲಾದ ಪದಗಳು ನಮ್ಮಲ್ಲಿ ಬಳಕೆಯಲ್ಲಿದ್ದರೂ ಸಾಮಾನ್ಯವಾಗಿ Editing ಅರ್ಥದ 'ಸಂಪಾದನೆ' ಎಂಬ ಪದವನ್ನೇ ವ್ಯಾಪಕವಾಗಿ ಬಳಸುತ್ತಲಿದ್ದೇವೆ. ಈ ಸಂಪಾದನೆಗೆ ಸಂಬಂಧಿಸಿದ ಶಾಸ್ತ್ರ, ಇತ್ತೀಚೆಗೆ ಸಾಹಿತ್ಯಾಭ್ಯಾಸದ ಪರಿಕರಗಳಾದ ವ್ಯಾಕರಣ, ನಿಘಂಟು, ಛಂದಸ್ಸು, ಅಲಂಕಾರ ಶಾಸ್ತ್ರಗಳಷ್ಟೇ ಪ್ರಮುಖವಾದ ಜ್ಞಾನಶಾಖೆಯಾಗಿ ನಮ್ಮಲ್ಲಿ ಬೆಳೆಯುತ್ತಲಿದೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸಾಹಿತ್ಯವನ್ನು ಸೃಷ್ಟಿಸುತ್ತ, ಸೃಷ್ಟಿಯಾದ ಸಾಹಿತ್ಯವನ್ನು ಅಕ್ಷರ ರೂಪದಲ್ಲಿ ಪ್ರತಿಗೊಳಿಸುತ್ತ ಇಲ್ಲವೆ ಧ್ವನಿರೂಪದಲ್ಲಿ ಪಾಠಮಾಡುತ್ತ ಬರಲಾಗಿದೆ. ಆದರೆ ಈ ಬರುವಿಕೆಯಲ್ಲಿ ಪಾಠರಕ್ಷಣೆಯ ಬಗ್ಗೆ ಅವರಿಗಿದ್ದ ಪ್ರಜ್ಞೆ ಎಂತಹುದು ? ಪಾಠರಕ್ಷಣಾಕಾರ್ಯದಲ್ಲಿ ಅನುಸರಿಸುತ್ತಿದ್ದ ವಿಧಾನಗಳಾವುವು ? ಸ್ಖಲಿತವಾಗಿದ್ದ ಪಾಠವನ್ನು ತುಂಬಿಕೊಳ್ಳುವಲ್ಲಿ ಅವಲಂಬಿಸುತ್ತಿದ್ದ ರೀತಿಗಳಾವುವು ? ಇತ್ಯಾದಿ ಪ್ರಶ್ನೆಗಳಿಗೆ ನಮ್ಮ ಪ್ರಾಚೀನರಿಂದ ಸ್ಪಷ್ಟವಾದ ಉತ್ತರಗಳಿಲ್ಲ. ಕಾರಣ ಪಶ್ಚಿಮದೇಶಗಳಲ್ಲಿ ಬಹು ಕಾಲದಿಂದಲೂ ಪ್ರಚುರವಾಗಿದ್ದ, ಇತ್ತೀಚೆಗೆ ಇನ್ನೂ ವ್ಯವಸ್ಥಿತವಾಗುತ್ತಲಿರುವ ಈ ಶಾಸ್ತ್ರವನ್ನು ಭಾರತೀಯರು ಈಗ ಅಭ್ಯಸಿಸುತ್ತಲಿದ್ದಾರೆ, ಅನುಷ್ಠಾನಗೊಳಿಸುತ್ತಲಿದ್ದಾರೆ. ಆದರೆ ಭಾರತೀಯ ಸಾಹಿತ್ಯ ಪರಿಸರಕ್ಕೆ ಹೊಂದುವಂತೆ, ಸಾಹಿತ್ಯ ಶಾಖೆಗಳಿಗೆ ತಕ್ಕಂತೆ ಅದನ್ನು ಬಳಸಬೇಕಾಗಿದೆ, ಬೆಳೆಸಬೇಕಾಗಿದೆ.

ಸಾಹಿತ್ಯವೆನ್ನುವುದು ಭಾಷಾ ಮಾಧ್ಯಮದ ಕಲೆಯಾಗಿದೆ. ಭಾಷೆಗೆ ಇರುವ ಬರಹ ಮತ್ತು ಉಚ್ಚಾರ ಎಂಬ ಎರಡೂ ಸಾಧ್ಯತೆಗಳನ್ನು ಬಳಸಿಕೊಂಡು ಯಾವುದೇ ದೇಶದ ಸಾಹಿತ್ಯ ಕ್ರಮವಾಗಿ ಬರವಣಿಗೆಯಲ್ಲಿ ಇಳಿದು ಬಂದಿರುತ್ತದೆ, ಬಾಯೊಳಗೆ ಬೆಳೆದು ಬಂದಿರುತ್ತದೆ. ಇವುಗಳಲ್ಲಿ ಒಂದು ಶಿಷ್ಟಪದ ಸಾಹಿತ್ಯ, ಇನ್ನೊಂದು ಜನಪದ ಸಾಹಿತ್ಯ. ಈ ಶಿಷ್ಟಪದ ಸಾಹಿತ್ಯವನ್ನು ಪ್ರತಿ, ಮರು ಪ್ರತಿಯಾಗುತ್ತ ಬಂದ ಗ್ರಂಥ ಸಾಹಿತ್ಯ, ಏಕೈಕ ಪ್ರತಿಯಾಗಿ ನಿಂತ ಶಾಸನ ಸಾಹಿತ್ಯವೆಂದು ಮತ್ತೆ ವರ್ಗೀಕರಿಸಬೇಕಾಗುತ್ತದೆ. ಈವರೆಗಿನ ವಿವೇಚನೆಯ ರೇಖಾಚಿತ್ರ ಹೀಗೆ :



ಚಾಕ್ಷುಷ ರೂಪಿಗಳಾಗಿದ್ದರೂ ಪ್ರತಿ, ಮರುಪ್ರತಿಗಳ ಮೂಲಕ ಪಾಠಾಂತರಗಳನ್ನು ಬೆಳೆಸಿಕೊಂಡು ಬರುವ ಗ್ರಂಥ ಸಾಹಿತ್ಯ ಮತ್ತು ಏಕೈಕ ಪ್ರತಿಯಾಗಿ ನಿಂತು ಮೂಲ ಪಾಠವನ್ನು ಉಳಿಸಿಕೊಂಡು ಬರುವ ಶಾಸನ ಸಾಹಿತ್ಯಗಳನ್ನು ಸಂಪಾದಿಸುವಲ್ಲಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಕೇವಲ ಶ್ರವಣರೂಪಿಯಾಗಿರುವ ಜನಪದ ಸಾಹಿತ್ಯವನ್ನು ಸಂಪಾದಿಸುವಲ್ಲಿ ಇನ್ನೂ ಬೇರೆ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಕಾರಣ

೧. ಗ್ರಂಥಸಾಹಿತ್ಯ ಸಂಪಾದನೆ

೨. ಶಾಸನಸಾಹಿತ್ಯ ಸಂಪಾದನೆ

೩. ಜನಪದಸಾಹಿತ್ಯ ಸಂಪಾದನೆ

ಎಂದು ಬಿಡಿಸಿಕೊಂಡು ಈ ಮೂರು ಕ್ಷೇತ್ರಗಳ ಸಂಪಾದನೆಯ ವಿಧಿ-ವಿಧಾನಗಳನ್ನು ಅಭ್ಯಾಸ ಮಾಡಬಹುದು.

ಗ್ರಂಥಸಾಹಿತ್ಯ ಸಂಪಾದನೆ

ಗ್ರಂಥಸಾಹಿತ್ಯಕ್ಕೆ ಶಿಷ್ಟಪದಸಾಹಿತ್ಯ, ಲಿಖಿತಸಾಹಿತ್ಯ ಎಂಬಿವು ಪರ್ಯಾಯ ನಾಮಗಳು. ಲೇಖನಕಲೆ ಅಸ್ತಿತ್ವಕ್ಕೆ ಬಂದ ತರುವಾಯ ಉಗಮಗೊಂಡ ಸಾಹಿತ್ಯ ಪ್ರಕಾರವಿದು. ಈಗಿನ ಮಟ್ಟಿಗೆ ಭಾರತದಲ್ಲಿ ಇದರ ಉಗಮ ವೇದದಷ್ಟು ಪ್ರಾಚೀನ. ಹುಟ್ಟುವಾಗಲೇ ಅಕ್ಷರ ವ್ಯವಸ್ಥೆಗೆ ಒಳಪಡುವುದರಿಂದ, ಇದು ಭಾಷೆಯ ಚಾಕ್ಷುಷ ರೂಪನಿಷ್ಠ ಸಾಹಿತ್ಯವೆನಿಸಿದೆ. ಹೀಗಾಗಿ ಇದರ ರಕ್ಷಣೆಯೆಂದರೆ ಅಕ್ಷರಗಳ ಧ್ವನಿರಕ್ಷಣೆಗಿಂತ, ರೂಪರಕ್ಷಣೆಯೇ ಆಗಿರುವುದರಿಂದ ಅಕ್ಷರದ ರೂಪ ಉಳಿಸಿಕೊಂಡು ಧ್ವನಿಯನ್ನು ಕಳೆದುಕೊಳ್ಳುವ ಅಪಾಯ ಈ ಸಾಹಿತ್ಯದಲ್ಲಿದೆ. ಉದಾ: ಕನ್ನಡದ ಱ ೞ. ಈ ಅಪಾಯವನ್ನು

ತಪ್ಪಿಸುವುದಕ್ಕಾಗಿಯೇ, ಶಿಷ್ಟಸಾಹಿತ್ಯ ವರ್ಗಕ್ಕೆ ಸೇರುತ್ತಿದ್ದರೂ ವೇದಗಳನ್ನು ಉಚ್ಚಾರದಲ್ಲಿ ಉಳಿಸಿಕೊಳ್ಳಲು ನಮ್ಮ ಪೂರ್ವಜರು ಪ್ರಯತ್ನಿಸಿದಂತಿದೆ.

ಪ್ರಾಚೀನ ಕಾಲದಲ್ಲಿ ಈ ಗ್ರಂಥಸಾಹಿತ್ಯ ಮೊದಲು ಆಶ್ರಮದಲ್ಲಿ, ಆಮೇಲೆ ಅರಮನೆಯಲ್ಲಿ, ತರುವಾಯ ಗುರುಮನೆಯಲ್ಲಿ ಸೃಷ್ಟಿ ಪಡೆಯಿತು. ಈ ಮೂರು ಕ್ಷೇತ್ರದವರು ತಮ್ಮ ಜೀವಿತ ಕರ್ತವ್ಯದ ಒಂದು ಅಂಗವೆಂಬಂತೆ ಈ ಕಾರ್ಯವನ್ನು ನಡೆಸಿಕೊಂಡು ಬಂದರು. ಸಪ್ತ ಸಂತಾನವೆನಿಸಿದ ರಾಜನ ಧರ್ಮಕಾರ್ಯಗಳಲ್ಲಿ 'ಗ್ರಂಥೋತ್ಪಾದನೆ'ಯೂ ಸಮಾವೇಶವಾದುದು ಇದಕ್ಕೆ ನಿದರ್ಶನ. ತಾನು ಬರೆವುದಲ್ಲದೆ ಬರೆಯುವವರಿಗೆ ಆಶ್ರಯ ನೀಡುವುದರ ಮೂಲಕ ಗ್ರಂಥೋತ್ಪಾದನೆ ರಾಷ್ಟ್ರದ ಉತ್ಪಾದನೆಗಳಲ್ಲಿ ಒಂದು ಎಂದು ನಮ್ಮ ರಾಜವರ್ಗ ಭಾವಿಸಿದ್ದುದು ತುಂಬ ಬೆಲೆಯುಳ್ಳ ವಿಚಾರವಾಗಿದೆ.

ಸೃಷ್ಟಿಯಾದ ಸಾಹಿತ್ಯ ಪ್ರಚಾರಕ್ಕೆ, ಲೇಖನವ್ಯವಸಾಯ ತುಂಬ ಅವಶ್ಯವಾದುದು. ಪ್ರಾಚೀನ ಕಾಲದಿಂದಲೂ ತಾಳೆಗರಿಯನ್ನು, ಮುಸಲ್ಮಾನರೊಂದಿಗೆ ಬಂದ ಕಾಗದವನ್ನು ಕನ್ನಡಿಗರು ಬರವಣಿಗೆಗೆ ಬಳಸಿದ್ದಾರೆ. ಹೀಗಾಗಿ ನಮ್ಮ ಹಸ್ತಪ್ರತಿಗಳನ್ನು ತಾಳೆಗರಿಪ್ರತಿ ಮತ್ತು ಕಾಗದಪ್ರತಿಯೆಂದು ವರ್ಗೀಕರಿಸಬಹುದು. ಬರವಣಿಗೆಯ ಇತರ ಸಾಮಗ್ರಿಗಳೆಂದರೆ ಲೋಹದ ಕಂಟ ಮತ್ತು ಮಸಿ. ತಾಳಪತ್ರದಲ್ಲಿ ಬರೆದು ಮಸಿಲೇಪನ ಮಾಡುವುದಕ್ಕೆ 'ಕಪ್ಪನಿಡು' ಎಂದು ಕರೆಯುತ್ತಿದ್ದರು. ಬಾಣಕಾದಂಬರಿಯನ್ನು ಸುಡಿಸಿ ಲೀಲಾವತಿಗೆ ಕಪ್ಪನಿಟ್ಟರೆಂಬುದಕ್ಕೆ ಇದೇ ಅರ್ಥವಿರಬೇಕು.

ಈ ಪತ್ರ, ಕಂಠ, ಮಸಿಗಳನ್ನು ಉಪಯೋಗಿಸಿಕೊಂಡು ನಮ್ಮ ಪ್ರಾಚೀನ ಲಿಪಿಕಾರರು ಸಾವಿರ ಸಾವಿರ ಹಸ್ತಪ್ರತಿಗಳನ್ನು ಉತ್ಪಾದಿಸಿದ್ದಾರೆ. ಇವರನ್ನು ಅರಮನೆ – ಗುರು ಮನೆಗಳಲ್ಲಿಯ ನಿಯುಕ್ತ ಲಿಪಿಕಾರರು (Appointed Writers), ಊರೂರುಗಳಲ್ಲಿ ಬರವಣಿಗೆಯನ್ನು ಉಪಜೀವನದ ಸಾಧನೆ ಮಾಡಿಕೊಂಡಿದ್ದ ವೃತ್ತಿಲಿಪಿಕಾರರು (Professional Writers) ಮತ್ತು ಸ್ವಸಂತೋಷಕ್ಕಾಗಿ ಬರೆಯುತ್ತಿದ್ದ ಹವ್ಯಾಸಿ ಲಿಪಿಕಾರರು (Ameture Writers) ಎಂದು ವರ್ಗೀಕರಿಸಬಹುದು. ಓದಿಸುವ ಗುರುಬಸವಪ್ಪದೇವರ ಮಗಳು ಸಿಂಗಮ, ಸಿಗ್ಗಾವಿಯ ಚೆನ್ನೇಗೌಡರ ಸೊಸೆ ಭೈರಾಜಿಯಂಥ ಒಬ್ಬಿಬ್ಬರು ಸ್ತ್ರೀಯರನ್ನು ಬಿಟ್ಟರೆ ಈ ಲಿಪಿಕಾರರೆಲ್ಲ ಸಾಮಾನ್ಯವಾಗಿ ಪುರುಷರೇ ಆಗಿದ್ದಾರೆ.

ಯಾವುದೇ ವ್ಯಕ್ತಿ ಹಸ್ತಪ್ರತಿಯನ್ನು ತನಗಾಗಿ ಬರೆದುಕೊಳ್ಳುತ್ತಿದ್ದ ಅಥವಾ ಇನ್ನೊಬ್ಬರಿಗಾಗಿ ಬರೆದುಕೊಡುತ್ತಿದ್ದ. "ಕೆಸ್ತೂರ ಉಪಾಧ್ಯರ ಮಗ ರಂಗಪ್ಪ ಬರೆದು ಕೊಟ್ಟುದು. ತಳಕಾಡು ನಾಯಕಶಾನಿ ಕೆಂಪಿ ಮಗಳು ನಂಜಿಗೆ ಬರೆದುಕೊಟ್ಟಿದು", "ಅಕ್ಕನೂರು ಸೆರಗಪನು ಮುಂಡಿಗೆಯ ಪಾಯಣ್ಣನ ಮಗಳು ಪದುಮಾಯಿಗೆ ಬರೆದುಕೊಟ್ಟ ಸುಕುಮಾರಚರಿತ್ರೆಯು." ಪುರುಷರನ್ನು ಬಿಟ್ಟರೆ ಹೀಗೆ ಸ್ತ್ರೀಯರೂ ಅಭ್ಯಾಸಕ್ಕಾಗಿ ಬರೆಸಿಕೊಂಡ ಅಪರೂಪದ ಉದಾಹರಣೆಗಳಿವು. ಪುಣ್ಯಕಾರ್ಯಗಳಲ್ಲಿ ಗ್ರಂಥದಾನವೂ ಸಮಾವೇಶಗೊಂಡಿದ್ದ ಕಾರಣ ಅನೇಕರು ಇದಕ್ಕಾಗಿ ಗ್ರಂಥವನ್ನು ಬರೆದುದುಂಟು, ಬರೆಸಿದುದುಂಟು. ಪ್ರಾಚೀನ ಕರ್ನಾಟಕದ ಆದರ್ಶ ಮಹಿಳೆ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ದಾನಕ್ಕೋಸುಗ ಬರೆಯಿಸಿದುದು ಒಂದು ಜಾಗತಿಕ ದಾಖಲೆ ಎಂದೇ ಹೇಳಬೇಕು.

ಈ ಎಲ್ಲ ಕಾರಣಗಳ ಫಲವಾಗಿ ನಮ್ಮ ನಾಡಿನಲ್ಲಿ ಹುಟ್ಟಿದ್ದ ಅನೇಕ ಹಸ್ತಪ್ರತಿಗಳಲ್ಲಿ ಈಗ ಸುಮಾರು ಇಪ್ಪತ್ತೈದುಸಾವಿರ ಹಸ್ತಪ್ರತಿಗಳು ಅಂದರೆ ಒಂದು ಲಕ್ಷ ಕೃತಿಗಳು ಉಳಿದು ಬಂದಿವೆ. ಇವುಗಳಲ್ಲಿ ಹೇರಳ ಪಾಠದೋಷಗಳು ಇಳಿದು ಬಂದಿದ್ದರೂ,

ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ ।
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ॥

ಎಂಬುದು ನಮ್ಮ ಲಿಪಿಕಾರರ ಆದರ್ಶವಾಗಿದ್ದಿತು.

ಹೀಗೆ ಹುಟ್ಟಿದ ಹಸ್ತಪ್ರತಿಗಳನ್ನು ಸಂರಕ್ಷಿಸುವಲ್ಲಿ ಘಟಿಕಾಸ್ಥಾನಗಳಂಥ ವಿದ್ಯಾಸಂಸ್ಥೆಗಳೂ, ಅರಮನೆ-ಗುರುಮನೆಗಳಂಥ ಅಭ್ಯಾಸಕೇಂದ್ರಗಳೂ ಪುಸ್ತಕಪ್ರಿಯ ವ್ಯಕ್ತಿಗಳೂ ಮಹತ್ವದ ಪಾತ್ರವಹಿಸುತ್ತಿದ್ದರು. ಕರ್ನಾಟಕದಲ್ಲಿ ಇಂಥ ಸಾರ್ವಜನಿಕ ಮತ್ತು ವೈಯಕ್ತಿಕ ಗ್ರಂಥ ಸಂಗ್ರಹಗಳಿಗೆ ಸರಸ್ವತೀ ಭಾಂಡಾರ, ಶಾರದಾ ಭಾಂಡಾರ ಎಂದು ಕರೆಯುತ್ತಿದ್ದರು. ಮದ್ರಾಸ್ ಓರಿಯೆಂಟಲ್ ಲಾಯಬ್ರರಿಗೆ ಸಂಬಂಧಿಸಿದ ಜೈಮಿನಿಭಾರತ ಹಸ್ತಪ್ರತಿಯ ಒಂದು ಓಲೆಯಲ್ಲಿರುವ "೬೦೦ ಗ್ರಂಥಗಳ ಹೆಸರುಗಳಿರುವ ಸೂಚಿಯೊಂದು ಇದೆ" ಎಂಬ ಹೇಳಿಕೆ ಬಹುಶಃ ಆ ಕಾಲದ ವೈಯಕ್ತಿಕ ಭಾಂಡಾರಗಳ ಗ್ರಂಥಸಂಪತ್ತಿನ ಗಾತ್ರವನ್ನು ಸೂಚಿಸುತ್ತದೆ. ಇದಲ್ಲದೆ ಗ್ರಂಥಭಂಡಾರಗಳ ಸಂರಕ್ಷಣಾರ್ಥ ದತ್ತಿಗಳನ್ನು ನೀಡಿದ ಉಲ್ಲೇಖ ಕೆಲವು ಶಾಸನಗಳಲ್ಲಿ ಬರುವುದುಂಟು.

ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ॥
ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ ।
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥

ಎಂಬ ಪದ್ಯಗಳಲ್ಲಿ ನಮ್ಮ ಪ್ರಾಚೀನರ ಗ್ರಂಥರಕ್ಷಣಾ ಪ್ರಜ್ಞೆ ಎದ್ದು ಕಾಣುತ್ತಿದ್ದರೂ ಅವು ಅಲಕ್ಷ್ಯಕ್ಕೆ ಗುರಿಯಾದುದೇ ಹೆಚ್ಚು. ಸಾಮಾನ್ಯ ಪ್ರಜೆಗಳು ಹೋಗಲಿ ಪ್ರಜಾಸಂಪತ್ತು, ನಿಸರ್ಗಸಂಪತ್ತುಗಳಂತೆ ಹಸ್ತಪ್ರತಿಗಳೂ ರಾಷ್ಟ್ರದ ಸಂಪತ್ತು ಎಂಬ ಭಾವನೆಯಿಂದ ಅವುಗಳನ್ನು ಸಂರಕ್ಷಿಸುವ ಕಾನೂನುಬದ್ಧ ವ್ಯವಸ್ಥೆಯನ್ನು ಅಂದಿನ ಸರಕಾರ ಮಾಡಿರಲಿಲ್ಲ. ಇಂದಿನ ಸರಕಾರವೂ ಮಾಡಿಲ್ಲ.

ಆಧುನಿಕ ಕಾಲಕ್ಕೆ ಬಂದರೆ ಅಲ್ಲಲ್ಲಿ ಕೆಲವು ಸಂಸ್ಥೆಗಳು, ವ್ಯಕ್ತಿಗಳು ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ಪೂರೈಸುತ್ತಲಿವೆ. ಹಳೆಯ ಮದ್ರಾಸ್ ಕರ್ನಾಟಕ, ಮೈಸೂರು ಕರ್ನಾಟಕ, ಮುಂಬೈ ಕರ್ನಾಟಕಗಳಲ್ಲಿ ಈ ಕಾರ್ಯ, ಕ್ರಮವಾಗಿ ನಡೆಯಿತು; ಹೈದ್ರಾಬಾದ ಕರ್ನಾಟಕದಲ್ಲಿ ಇನ್ನೂ ನಡೆಯಬೇಕಾಗಿದೆ. ಈವರೆಗೆ ಸುಮಾರು ೧೫ ಸಾವಿರ ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟಿದ್ದು ನಾಗವರ್ಮನ ವರ್ಧಮಾನ ಪುರಾಣ, ರನ್ನನ ರನ್ನ ನಿಘಂಟು, ಸಿದ್ಧನಂಜೇಶಕೃತ ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ, ವಜ್ರಭಟ್ಟನ ವೀರಾವಳಿ ಮತ್ತು ಕೊಂಡಗುಳಿ ಕೇಶಿರಾಜನ ಕೃತಿಗಳು ಇತ್ತೀಚಿನ ಕೆಲವು ಗಮನಾರ್ಹ ಹಸ್ತಪ್ರತಿಶೋಧನಗಳೆನಿಸಿವೆ. ಹುಡುಕಿದರೆ ಇನ್ನೂ ಹತ್ತುಸಾವಿರ ಪ್ರತಿಗಳು ಸಿಗುವ ಸಂಭವವಿದೆ.

ಸಂಗ್ರಹಿಸಿದ ಹಸ್ತಪ್ರತಿಗಳ ಸಂಪಾದನಕಾರ್ಯ ೧. ಮಿಶನರಿಗಳ ಮತ್ತು ಶೆಟ್ಟರಯುಗ, ೨. ಕಿಟೆಲ್-ರೈಸ್ ಮತ್ತು ಕಾವ್ಯಕಲಾನಿಧಿಯುಗ, ೩. ಟಿ. ಎಸ್. ವೆಂಕಣ್ಣಯ್ಯ-ಎಸ್. ಎಸ್. ಬಸವನಾಳ ಯುಗ, ೪. ಆಧುನಿಕ ಯುಗ-ಈ ರೀತಿ ಬೆಳೆದುಬಂದಿದೆ. ಈ ಎಲ್ಲ ಘಟ್ಟಗಳಲ್ಲಿ ಅನೇಕ ವ್ಯಕ್ತಿಗಳೂ ವಿದ್ಯಾಸಂಸ್ಥೆ-ಧಾರ್ಮಿಕಸಂಸ್ಥೆ-ಪ್ರಕಾಶನಸಂಸ್ಥೆಗಳೂ ಪಾತ್ರವಹಿಸಿದುದನ್ನು ಅವಶ್ಯ ಸ್ಮರಿಸಬೇಕು. ಹೀಗಿದ್ದೂ ಸುಮಾರು ಮೂರು ಸಾವಿರ ಕೃತಿಗಳು ಒಮ್ಮೆಯೂ ಪರಿಷ್ಕರಣಗೊಳ್ಳದೆ, ಪ್ರಕಟವಾಗದೆ ಉಳಿದುದು ವಿಷಾದದ ಸಂಗತಿಯಾಗಿದೆ.

ಪ್ರಾಚೀನಕೃತಿಗಳನ್ನು ಪರಿಷ್ಕರಿಸುವಲ್ಲಿ ಸಂಪಾದಕನು ವಿದೂರಗೊಳಿಸಬೇಕಾದುದು, ಹಸ್ತಪ್ರತಿಗಳ ತುಂಬ ಕಾಲಕಾಲಕ್ಕೆ ಹಬ್ಬಿಕೊಂಡಿರುವ ಪಾಠಸ್ಖಾಲಿತ್ಯಗಳನ್ನು. ಈ ಸ್ಖಾಲಿತ್ಯಗಳುಂಟಾಗಲು ಕಾರಣಗಳು ಮೂರು. ಒಂದು ಉದ್ದೇಶಿತ, ಇನ್ನೊಂದು ಅನುದ್ದೇಶಿತ, ಮತ್ತೊಂದು ಅನವಧಾನಿತ. ಸಂಪಾಕದನು ತಿಳಿದಿರಬೇಕಾದ ಈ ಮೂರು ಬಗೆಯ ಸ್ಖಾಲಿತ್ಯ ಸ್ವರೂಪಗಳನ್ನು ಇಲ್ಲಿ ಚರ್ಚಿಸಬಹುದು.

೧. ಉದ್ದೇಶಿತ ಸ್ಖಾಲಿತ್ಯ : ಈ ಸ್ಖಾಲಿತ್ಯಕ್ಕೆ ಕವಿ, ಸಹೃದಯ ಮತ್ತು ಲಿಪಿಕಾರರು ಹೊಣೆಯಾಗುತ್ತಾರೆ. ಒಬ್ಬ ಕವಿ ತನ್ನ ವಶದಲ್ಲಿರುವ ತನ್ನ ಕೃತಿಯ ಮೂಲ ಪ್ರತಿಯನ್ನು ಜೀವನದುದ್ದಕ್ಕೂ ತಿದ್ದುತ್ತಲೇ ಇರುವುದರಿಂದ, ಅದರಿಂದ ಆಗಾಗ ಹುಟ್ಟಿದ ಒಂದೊಂದು ನಕಲುಪ್ರತಿಗಳಲ್ಲಿ ಒಂದೊಂದು ಬಗೆಯ ಪಾಠಗಳು ತಲೆದೋರುತ್ತ ಹೋಗುತ್ತವೆ. ತೆಂಬಳೂರಾಚಾರ್ಯನು ಉಭಯ ಸಿದ್ಧಾಂತಗಳಿಗೆ ೮೪೦೦೦ ಗ್ರಂಥಪ್ರಮಾಣದ ಟೀಕೆ ಬರೆದು ಕಾಲಾಂತರದಲ್ಲಿ ಅದಕ್ಕೆ ೭೦೦೦ ಗ್ರಂಥ ಪ್ರಮಾಣದ ಭಾಗವನ್ನು ಜೋಡಿಸಿದನೆಂಬ, ರಾಘವಾಂಕನು ಹರಿಶ್ಚಂದ್ರ ಕಾವ್ಯದ ಉತ್ತಮೋತ್ತಮ ಪದ್ಯಗಳನ್ನು ಹೊರತೆಗೆದು ಸೋಮನಾಥ ಚರಿತ್ರೆಗೆ ಸೇರಿಸಿದನೆಂಬ ಹೇಳಿಕೆಗಳು ಸ್ವತಃ ಕವಿಯೇ ಗ್ರಂಥಗಾತ್ರವನ್ನು, ಗ್ರಂಥಪಾಠಗಳನ್ನು ವ್ಯತ್ಯಾಸ ಮಾಡಿದುದಕ್ಕೆ ಉದಾಹರಣೆಯೆನಿಸಿದೆ. ಪ್ರಥಮಾವೃತ್ತಿ, ತಿದ್ದಿದ ದ್ವಿತೀಯಾವೃತ್ತಿ, ತಿದ್ದಿ ಬೆಳೆದ ತೃತೀಯಾವೃತ್ತಿ ಇತ್ಯಾದಿಗಳೆಲ್ಲ ಕವಿಯಿಂದಾಗುವ ಪಾಠಭೇದಕ್ಕೆ ಇಂದಿನ ಉದಾಹರಣೆಯಾಗಿದೆ.

ಸಹೃದಯನು ಬೇಕುಬೇಡೆಂಬ ರುಚಿಜ್ಞಾನವುಳ್ಳ ವ್ಯಕ್ತಿ. ಹೀಗಾಗಿ ಒಂದು ಕೃತಿಯಲ್ಲಿ ಲೋಪ, ಆಗಮ, ಆದೇಶ, ಪಲ್ಲಟರೂಪದ ಪಾಠಭೇದಗಳು ಹುಟ್ಟಲು ಈತನು ಕಾರಣೀಭೂತನಾಗುತ್ತಾನೆ. ಒಂದು ಕೃತಿಯನ್ನು ಭಾಗಶಃ ಇಲ್ಲವೆ ಅಲ್ಲಲ್ಲಿ ಬರೆದುಕೊಳ್ಳುವುದರಿಂದ ಈತನು ಲೋಪಕಾರ್ಯವನ್ನೂ ಮಾಡಬಹುದು. ಭಾಗಶಃ ಬರೆದುಕೊಂಡ ಇಲ್ಲವೇ ತನಗೆ ಬೇಕಾದ ಪ್ರಕರಣಗಳನ್ನು ಬರೆದುಕೊಂಡ ಶಬ್ದಮಣಿದರ್ಪಣದ ಪ್ರತಿಗಳು ಇದಕ್ಕೆ ನಿದರ್ಶನಗಳೆನಿಸಿವೆ. ಈತನು ಅದೇ ಕವಿಯ ಬೇರೆ ಕಾವ್ಯದ, ಬೇರೆ ಕವಿಯ ಇಲ್ಲವೆ ತಾನೇ ಸೃಷ್ಟಿಸಿದ ಪಾಠಗಳ ಬಲದಿಂದ ಆಗಮ, ಆದೇಶರೂಪದ ಪಾಠಭೇದಗಳನ್ನೂ ಸೃಷ್ಟಿಸಬಹುದು. ಇಲ್ಲವೆ ಒಂದು ಕಾವ್ಯದಲ್ಲಿಯೇ ಪದ್ಯಗಳ ಸ್ಥಾನಪಲ್ಲಟ ಮಾಡಬಹುದು. ಸಿಂಗಿರಾಜಪುರಾಣದ ೨೫-೨೦ನೆಯ ಪದ್ಯ ೪೫-೮ ರಲ್ಲಿ ಮತ್ತೆ ಸಿಗುವುದು, ಪಂಪರಾಮಾಯಣದ ಸು. ೭೦ ಪದ್ಯಗಳು ಮಲ್ಲಿನಾಥ ಪುರಾಣದಲ್ಲಿರುವುದು. ಹರಿಶ್ಚಂದ್ರ ಕಾವ್ಯದ "ಏವೆನು ಏವೆನು ಮಗನೆ ಮಗನೆ" ಎಂಬ ರಗಳೆ ಕುಮಾರವ್ಯಾಸಭಾರತದ ಸುಭದ್ರಾಪ್ರಳಾಪ ಸಂದರ್ಭದಲ್ಲಿ ದೊರೆಯುವುದು. ಶರಣರ ಕೆಲವು ವಚನಗಳು ದಾಸರ ಉಗಾಭೋಗಗಳಾಗಿ ಮಾರ್ಪಟ್ಟುದು, "ಮುಳಿದು ಮನಃ ಪ್ರಿಯಂ" ಎಂಬ ಪದ್ಯ ಆದಿಪುರಾಣದ ಕೆಲವು ಹಸ್ತಪ್ರತಿಗಳಲ್ಲಿ

೧೨-೧೩ನೆಯ ಪದ್ಯವಾಗಿ ಇನ್ನು ಕೆಲವು ಹಸ್ತಪ್ರತಿಗಳಲ್ಲಿ ಅದೇ ಆಶ್ವಾಸದ ೩೪ನೆಯ ಪದ್ಯವಾಗಿ ಬೇರೆ ಕೆಲವು ಪ್ರತಿಗಳಲ್ಲಿ ಎರಡೂ ಕಡೆಗಳಲ್ಲಿ ಸಿಗುವುದು ಸಹೃದಯನ ಕೈವಾಡವೆಂದೇ ಹೇಳಬೇಕು. ಇದಕ್ಕೆ ಅವನ ಅವಶ್ಯಕತೆ, ಅಭಿಮಾನ, ಅಭಿರುಚಿ, ತ್ರುಟಿತಭಾಗದ ಪೂರೈಕೆ, ಮಾತ್ಸರ್ಯ ಇತ್ಯಾದಿಗಳು ಕಾರಣವೆನಿಸುತ್ತದೆ. ದರ್ಪಣದ 'ಗೊರವನಲ್ಲ ಪೊಗಳೆಂ' ಎಂಬುದಕ್ಕೆ 'ದೇವರಲ್ಲ ಪೊಗಳೆಂ' 'ಜಿನನಲ್ಲ ಪೊಗಳೆಂ' ಎಂಬ, 'ಹರಹರಾ ಶ್ರೀಚನ್ನಸೋಮೇಶ್ವರಾ' ಎಂಬುದಕ್ಕೆ 'ನರನೆಲಾ ಕೇಳ್ದಿಪ್ಪುದೀ ಬುದ್ಧಿಯಂ' ಎಂಬ ಪಾಠಾಂತರಗಳುಂಟಾಗಲು ಮತಾಭಿಮಾನ ಕಾರಣವೆಂಬುದು ಸ್ಪಷ್ಟ. ಹೀಗೆ ಯಾವುದು ಯಾವುದೋ ಮನಸ್ಸು ಇದಕ್ಕೆ ಕಾರಣವಾಗಿ ನಿಲ್ಲುತ್ತದೆ.

ಉದ್ದೇಶಪೂರ್ವಕ ಪಾಠಾಂತರ ಸೃಷ್ಟಿಗೆ ಲಿಪಿಕಾರರೂ ಕಾರಣರಾಗುತ್ತಾರೆ. ಸಹೃದಯನಿಗೆ ಒಳ್ಳೆಯದೋ ಕೆಟ್ಟದೋ ಒಂದು ಉದ್ದೇಶವಿರುತ್ತಿದ್ದರೆ ಲಿಪಿಕಾರನಿಗೆ ಶ್ರಮ ಉಳಿಸಿಕೊಳ್ಳಲು ಪದಗಳನ್ನೋ ಪದ್ಯಗಳನ್ನೋ ಲೋಪಿಸುವ, ಇಲ್ಲವೆ ಆದೇಶ, ಆಗಮ ಮತ್ತು ಪಲ್ಲಟ ರೂಪದ ಪಾಠಭೇದ ಮಾಡುವ ಅಂದರೆ ಹಸ್ತಪ್ರತಿಯೊಂದಿಗೆ ಹಗುರವಾಗಿ ನಡೆದುಕೊಳ್ಳುವ ಕೀಳುಪ್ರವೃತ್ತಿ ಇರುತ್ತದೆ. ಅಥವಾ ನಷ್ಟಭಾಗವನ್ನು ಆತ್ಮಸಾಕ್ಷಿಯಿಂದ ತಿದ್ದುವ ಕುರುಡು ಧೈರ್ಯ ಇರುತ್ತದೆ. ಇಂಥ ಪಾಪಿಗಳಿಂದ ಪಾಠಾಂತರದಂತಹ ಪಾಪಕಾರ್ಯ ಸಲೀಸಾಗಿ ನಡೆದುಹೋಗುತ್ತದೆ. ಇವರು ಹೊಣೆಗೇಡಿಗಳಷ್ಟೇ ಅಲ್ಲ ಕಿಡಿಗೇಡಿಗಳೂ ಹೌದು.

೨. ಅನುದ್ದೇಶಿತ ಸ್ಖಾಲಿತ್ಯ : ನಕಲುಗೊಳಿಸುವ ಕಾರ್ಯದಲ್ಲಿ ಆಧಾರಪ್ರತಿಗೆ ಪ್ರಾಮಾಣಿಕವಾಗಿ ನಡೆದುಕೊಳ್ಳುವುದು ಲಿಪಿಕಾರನ ವೃತ್ತಿಧರ್ಮ. ಇದಕ್ಕೆ ಬದ್ಧವಾಗಿ ಎಷ್ಟೇ ಎಚ್ಚರವಹಿಸಿದರೂ ಅವನಿಂದ ಭಿನ್ನ ಪಾಠಗಳು ಹುಟ್ಟುತ್ತವೆ. ಇವು ಅನುದ್ದೇಶಿತ ಸ್ಖಾಲಿತ್ಯಗಳು.

ಒಂದು ಪ್ರತಿಯನ್ನು ನೋಡುತ್ತ, ಇನ್ನೊಬ್ಬರು ಓದಿ ಹೇಳುವುದನ್ನು ಕೇಳುತ್ತ ನಕಲು ಮಾಡುವುದರಿಂದ ಕ್ರಮವಾಗಿ ಅಕ್ಷರದ ರೂಪಸಾದೃಶ್ಯ, ಅಕ್ಷರದ ಧ್ವನಿಸಾದೃಶ್ಯಗಳು ಕಾರಣವಾಗಿ ಈ ಸ್ಖಾಲಿತ್ಯಗಳು ಹುಟ್ಟುತ್ತವೆ. ಇವಲ್ಲದೆ ಬರವಣಿಗೆಯ ರೀತಿದೋಷ, ಅವಸ್ಥಾ ಭೇದ-ಪ್ರಾಂತಭೇದಗಳೂ ಸೇರಿ ಲಿಪಿಕಾರನಿಂದುಂಟಾಗುವ ಅನುದ್ದೇಶಿತ ಸ್ಖಾಲಿತ್ಯಗಳ ಆಧಿಕ್ಯಕ್ಕೆ ಇನ್ನೂ ದೊಡ್ಡ ದಾರಿಮಾಡಿಕೊಡುತ್ತದೆ.

ಅಕ್ಷರದ ರೂಪಸಾದೃಶ್ಯ: "ಯಾವುದೇ ಒಂದು ಭಾಷೆಯ ಕೆಲವು ಅಕ್ಷರಗಳು ಒಂದನ್ನೊಂದು ಹೋಲುತ್ತವೆ. ಕನ್ನಡಕ್ಕೆ ಬಂದರೆ ಪ್ರಾಚೀನ ಹಸ್ತಪ್ರತಿಗಳಲ್ಲಿ ಕಾಣುವ ಮೂಲಾಕ್ಷರ-ಮೂಲಾಕ್ಷರ, ಕಾಗುಣಿತ-ಕಾಗುಣಿತ, ಮೂಲಾಕ್ಷರ-ಕಾಗುಣಿತಗಳ ಮತ್ತು ಒತ್ತಕ್ಷರ ಗುರುತು, ಕಾಗುಣಿತ ಗುರುತುಗಳ ಹೋಲಿಕೆ ಹೀಗಿದೆ.

ಅಕ್ಷರಗಳ ಪರಸ್ಪರ ಹೋಲಿಕೆ

ಅ-ಆ-ಲ

ಆ-ಅ-ಲ

ಇ-ಞ-ಖ

ಈ–ಕ

ಉ–ಎ–ಬ–ಲು–ವ–ಟಿ

ಊ–ಲೂ

ಋ–ಬು–ಖು

ಎ–ಏ–ಉ

ಏ–ಎ–ಉ

ಐ–ಎ–ಇ

ಒ ಬ

ಓ ಜ

ಔ–ಜಾ–ಜೌ–ಬಾ–ಬೌ–ಚಾ–ಚೌ

ಕ–ಚ ತ–ರ–ಶ

ಖ–ಚ–ಬ

ಗ–ದ–ನ–ರ–ಸ

ಘ–ಫ–ಮ–ಛ

ಜ–ಓ

ಚ–ಕ–ಖ–ಜ–ಶ–ಬ–ಶ

ಛ–ಫ–ಧ–ಭ

ಜ–ಚ–ಬ

ಝ–ರು–ಭ

ಞ–ಇ–ಣ

ಟ–ಚ–ಡ–ತ–ಪ

ಠ–ರ–ಥ

ಡ–ಟ

ಢ–ಧ–ಥ

ಣ–ಞ–ಇ

ಶ–ಕ–ಚ–ಠ–ಲ–ಶ

ಥ–ಧ–ಢ

ದ–ಗ–ಡ–ಪ–ಮ–ರ–ವ–ಹ

ಧ–ಥ–ಬ

ನ–ಗ–ವ–ಸ

ಪ–ಫ–ಟ–ತ–ದ–ಮ–ವ–ಸ

ಫ–ಘ–ಛ

ಬ–ಒ–ಖ–ಚ–ಜ–ಟ–ದ–ಲ

ಭ–ಖ–ಚ–ಮ–ವ

ಮ–ದ–ನ–ಪ–ಬ–ಯ–ಹ–ದ–ಯ–ವ

ಯ–ಮ–ವ

ರ–ಂ–ಕ–ಗ–ಠ–ತ–ದ–ಲ–ಶ

ಲ–ಂ–ೀ–ಅ–ಉ–ಠ–ತ–ರ–ಟಿ–ವ

ವ–ದ–ನ–ಪ–ಲ–ಹ

ಶ–ಕ ತ–ರ

ಷ–ಪ–ಕ್ಷ

ಸ–ಗ–ನ–ಪ–ಮ–ವ

ಹ–ದ

ಱ–ಅ ದ–ಲ

ಟಿ–ಲ–ದ–ಉ

ಒತ್ತಕ್ಷರಗಳ ಗುರುತುಗಳ ಪರಸ್ಪರ ಹೋಲಿಕೆ

್ಶ – ್ಚ – ್ಲ

್ಗ – ್ಣ

್ದ – ್ವ – ್ಬ – ್ಟ – ್ಲ

್ಪ – ್ಕ – ್ತ

ಕಾಗುಣಿತ ಗುರುತುಗಳ ಪರಸ್ಪರ ಹೋಲಿಕೆ

೧. ು ೃ ಿ ೆ

ಅ > ಇ (ಈ) ಎ (ಏ)

೨. ಾ ು – ೌ ೌ

ಆ > ಉ ಒ (ಓ) ಔ ಂ

೩. ಿ ೆ ು ೆ

ಇ (ಈ) > ಅ ಉ ಎ (ಏ) ಂ

೪. ು ಾ ಿ

ಉ > ಆ ಇ (ಈ) ಂ

೫. ೂ > ೆ ಂ

ಊ ಒ ೂ (ಓ)

೬. ೆ ು ಿ ು

ಎ (ಏ) > ಅ ಇ (ಈ) ಉ

೭ ೃ > ು ೃ

ಡ

೮. – ಾ ು ೂ

ಒ (ಓ) > ಆ ಉ ಊ

೯. ೌ ಾ

ಔ > ಆ

೧೦.ೕ > ಲಿ, ಂ, ಃ

೧೧.ಂ > ರ್, ಠಿ, ಲಿ, ಾ

೧೨.ಃ > ಠಿ

ನಮ್ಮ ಕೈಗೆ ಇಳಿದು ಬಂದ ಹಸ್ತಪ್ರತಿಗಳಲ್ಲಿ ಕಾಣುವ ಸ್ಖಾಲಿತ್ಯಗಳಿಗೆ ಪ್ರಮುಖ ಕಾರಣ ಈ ಅಕ್ಷರದ ರೂಪಸಾದೃಶ್ಯವೇ ಆಗಿದೆ. ಸುಪುಷ್ಪದೃಷ್ಟಿ–ಸುಪುಷ್ಪದೃಷ್ಟಿ, ನೀರ್ ಮಾನಸ – ನೀಂ ಮಾನಸ, ಜೂಬಿಂಗಂಜುವೆ–ಜೂಜಿಂಗಂಜುವೆ ಮೊದಲಾದ ಪದ ವಾಕ್ಯಗಳಲ್ಲಿಯ, ಶಿವಕೋಟ್ಯಾಚಾರ್ಯ

– ರೇವಾಕೋಟ್ಯಾಚಾರ್ಯ, ಅಂಡಯ್ಯ – ಆಂಡಯ್ಯ, ನಿಟ್ಟೂರ ನಂಜಯ್ಯ – ನಿಟ್ಟೂರ ಸಂಜಯ್ಯ ಮುಂತಾದ ಅಂಕಿತನಾಮುಗಳಲ್ಲಿಯ ಸುಪ್ರಸಿದ್ಧ ಪಾಠಭೇದಗಳು ಇದಕ್ಕೆ ಉದಾಹರಣೆ.

ಅಕ್ಷರದ ಧ್ವನಿಸಾದೃಶ್ಯ : ಅಕ್ಷರದ ರೂಪಸಾದೃಶ್ಯದಂತೆ ಧ್ವನಿಸಾದೃಶ್ಯವೂ ಸ್ಖಾಲಿತ್ಯಗಳಿಗೆ ಕಾರಣವಾಗುತ್ತದೆ. ಅವು : ಇ ಈ ಕಾರಗಳ ಸ್ಥಾನದಲ್ಲಿ ಕೆಲವು ಸಲ ಯಿ ಯೀ ಗಳೂ, ಎ ಏ ಕಾರಗಳ ಸ್ಥಾನದಲ್ಲಿ ಯೆ–ಯೆ, ಯೇ ಎಡೆಪಡೆಯುತ್ತವೆ. ಇದಕ್ಕೆ 'ಯಶ್ರುತಿ'ಯೆಂದು ಹೆಸರು. ಉ ಊ ಕಾರಗಳ ಸ್ಥಾನದಲ್ಲಿ ವು ವೂ ಗಳೂ ಒ, ಓ ಕಾರಗಳ ಸ್ಥಾನದಲ್ಲಿ ವ–ವೊ, ವೋ ಕಾರಗಳೂ ಎಡೆಪಡೆಯುತ್ತವೆ. ಇದಕ್ಕೆ 'ವಶ್ರುತಿ' ಎಂದು ಹೆಸರು. ಇವಲ್ಲದೆ ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವ – ದೀರ್ಘ, ಋ – ರು, ಷ–ಶ–ಸ, ಱ–ರ, ೞ–ಳ, ಚ–ಚೆ, ಜ–ಜೆ ವರ್ಣಗಳು ಧ್ವನಿಸಾದೃಶ್ಯದಿಂದಾಗಿ ಸ್ಥಾನಪಲ್ಲಟಗೊಳ್ಳುತ್ತವೆ. ಉದಾ:

ಭೇರುಂಡ ಬಯಿವಡೆದಂತೆ ಇಪ್ಪರ ಭಕ್ತರೆಂತೆಂಬೆ (ಚೆಬವ ೭೧೯) (ಬೇರುಂಡ)

ಪರಮಜಿನೇಂದ್ರವಾಣಿಯೆ ಸರಸ್ವತಿ (ಆದಿಪು ೧–೯) (ಯ)

ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ (ಪುರ ೫೪) (ಶಶಿ)

ಇತ್ಯಾದಿ ಕಂಸಿನಲ್ಲಿರುವ ಸ್ಖಾಲಿತ್ಯಗಳು ಧ್ವನಿಸಾದೃಶ್ಯದಿಂದ ಹುಟ್ಟಿದುವು.

ಬರವಣಿಗೆಯ ರೀತಿದೋಷ : ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾದ ಅಕ್ಷರಗಳ ಮತ್ತು ಒತ್ತುಗಳ ಅನೇಕ ರೂಪತೆ (ಆ–ಲಾ, ಮೀ–ಮಿಾ, ಯಿ–ಯ, ೃ – ೄ ು – ೂ ಬಿಂದುವಿನ ಅನೇಕ ವಿನ್ಯಾಸ (ಸಂತೆ–ಸನ್ತೆ–ಸಂತೆ), ಒತ್ತುಗಳ ಅನೇಕ ವಿಧಾನ (ದಿಟ್ಟ–ದಿಟ–ದಿಠ, ಅಣ್ಣ–ಅಂಣ) ಈ ವರ್ಗಕ್ಕೆ ಸೇರುತ್ತವೆ. ಕೆಲವು ಸಲ ಹಿಂದೆ ಬಿಂದುವಿಟ್ಟು ಮಾಡಬಹುದಾದ ಅನುನಾಸಿಕ ದ್ವಿತ್ವವನ್ನು ಭ್ರಾಂತಿಯಿಂದ ಅನುನಾಸಿಕವಲ್ಲದಲ್ಲಿಯೂ (ಸುಮತಿಯೆಂಬ ಹತ್ತಿಯಕೊಂಡು ಸಮತಿಯೆಂಬ ಹಂತಿಯಕೊಂಡು (ಚೆಬವ. ೧೧೮೬) ಪುಷ್ಪದತ್ತ–ಪುಷ್ಪದಂತ (ನಂಬಿ. ೧)] ಮಾಡಿದುದುಂಟು.

ಪ್ರಾಚೀನಕಾಲದಲ್ಲಿ ವ್ಯಂಜನಗಳಿಗೆ ಸಂಬಂಧಿಸಿದಂತೆ ಅಕ್ಷರದ ಅಂಗವಾಗಿ ಬರುವ ದೀರ್ಘವನ್ನು ಸರಿಯಾಗಿ ಬರೆದರೆ (ಮಾವು) ಅಕ್ಷರದ ಹೊರಗೆ ಬರುವ ದೀರ್ಘವನ್ನು ಹೃಸ್ವವಾಗಿಯೇ (ಬೇವು–ಬೆವು) ಬರೆಯುತ್ತಿದ್ದರು. ಉದಾ: ಕಾಲಾಗ್ನಿಯಂ ಕೀಡಿ ಸುತ್ತುವಂತೆ – ಕಿಡಿ ಸುತ್ತುವಂತೆ (ಪಂಭಾ. ೧೨–೧೧೮). ಇದೇ ರೀತಿ ಅಕ್ಷರದ ಅಂಗವಾಗಿ ಬರುವ ಮಹಾಪ್ರಾಣವನ್ನು ಸರಿಯಾಗಿ ಬರೆದು (ಖಳ), ಅಕ್ಷರದ ಹೊರಗೆ ಬರುವ ಮಹಾಪ್ರಾಣವನ್ನು ಅಲ್ಪಪ್ರಾಣವಾಗಿಯೇ (ಭರ–ಬರ) ಬರೆಯುತ್ತಿದ್ದರು. ಇದಾ: ಬಂಧು ಶೋಕದೊಳೆ ಪೊರ್ದಿದ–ಬಂದು ಶೋಕದೊಳೆ ಪೊರ್ದಿದ (ಗದಾ. ೫–೯). ವಿರಾಮ ಚಿಹ್ನೆ ಬಳಸದಿರುವುದು, ಪದಗಳನ್ನು ಕೂಡಿಸಿ ಬಿಡಿಸಿ ಬರೆಯುವುದು, ಹೆಸರಿಸದೆ ಚರಣ ಮುರಿಯದೆ ಪದ್ಯಗಳನ್ನು ಬರೆಯುವುದು ಮೊದಲಾದವು ಎಷ್ಟೋ ಪಾಠಭೇದಗಳನ್ನು ಹುಟ್ಟಿಸಿವೆ. ಉದಾ: ೧. ಮೇರು ಗುಣವನಱಿಸುವುದೆ ಕಾಗೆಯಲ್ಲಿ–ಮೇರುಗುಣವನಱಿಸುವುದೆ ಕಾಗೆಯಲ್ಲಿ, (ಬ, ವ ೬೭), ೨. ನೆತ್ತಮನಾಡಿ ಭಾನುಮತಿ, ಸೋಲ್ತಡೆ ಸೋಲಮನೀವುದೆಂದು ಕಾಡುತ್ತಿರೆ – ನೆತ್ತಮನಾಡಿ ಭಾನುಮತಿ ಸೋಲ್ತಡೆ, ಸೋಲಮನೀವುದೆಂದು

ಕಾಡುತ್ತಿರೆ – ನೆತ್ತಮನಾಡಿ ಭಾನುಮತಿ ಸೋಲ್ತಡೆ, ಸೋಲಮನೀವುದೆಂದು ಕಾಡುತ್ತಿರೆ, (ಪಂ. ಭಾ. ೯–೬೯). ಗದಾಯುದ್ಧದಲ್ಲಿ ಬರುವ "ಪದ್ಯರಚನೆಯೊಳ್ ಕಾಳಿದಾಸನುಂ ಗದ್ಯ ರಚನೆಯೊಳ್ ಬಾಣನುಂ ಮುಂ ಕವಿಗಳಿರ್ವರುಂ ನೆಗಟ್ದಿರದಜೆಂ ಸತ್ಕವಿಗಳಿರ್ವರು ಮೆಮಗಭಿವಂದ್ಯರ್." ಪದ್ಯನಾಮ ಹೆಸರಿಸದ ಕಾರಣ, ಚರಣ ಮುರಿಯದ ಕಾರಣ ಈ ಬಂಧದ ಹೆಸರು ವಿದ್ವಾಂಸರಲ್ಲಿ ಗೊಂದಲವನ್ನುಂಟುಮಾಡಿದೆ. ಕೆಲವು ಸಲ ಈ ಕ್ರಿಯೆ ಇನ್ನೂ ದೂರ ಹೋಗಿ ಬರೆವಣಿಗೆಯೊಂದು ಗದ್ಯವೋ ಪದ್ಯವೋ ಎಂಬ ಸಂದೇಹಕ್ಕೆ ಎಡೆಮಾಡಿಕೊಡುತ್ತದೆ. ಉದಾ: ವ ॥ ಅದೆಂತೆನೆ – ಸ [ಮುನ್ಮಿಷ] ದ್ವಿವಿಧರತ್ನಮಾಲಾ ಪ್ರಭಾಬಿದಾರುಣ ಜಲಪ್ಲ (ವಾ) ವಿಳವಿಳೋಳ ವೀಚೀರಯ ಪ್ರದಾರಿತ ಕುಳಾಚಲೋದ ಧಿಪರೀತವಮಾಗಿರ್ದ ಜಂಬೂದ್ವೀಪದೊಳಗುಂಟು ನಾಡು ಕುರುಜಾಂಗಣನಾಮದಿಂ ॥ ಎಂಬ ಗದ್ಯಭಾಗ ಪಂಪಭಾರತದ 'ಫ' ಪ್ರತಿಯಲ್ಲಿ 'ಪೃಥ್ವಿ' ಎಂಬ ಹೆಸರಿನ ವೃತ್ತವಾಗಿ ನಿಂತಿದೆ.

ಅವಸ್ಥಾಭೇದ – ಪ್ರಾಂತಭೇದ : ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ನಡೆಯುವುದು ಭಾಷೆಯ ಗುಣಧರ್ಮವಾಗಿದೆ. ಈ ಪ್ರಕ್ರಿಯೆಯಿಂದ ಹೊರಗುಳಿಯುವುದು ಸಾಧ್ಯವಾಗದುದರಿಂದ ಯಾವುದೇ ಲಿಪಿಕಾರ ತನಗರಿಯದಂತೆ ತನ್ನ ಕಾಲ–ದೇಶಗಳ ಭಾಷೆಯನ್ನು ನಕಲು ಪ್ರತಿಯಲ್ಲಿ ಸೇರಿಸಿಬಿಡುತ್ತಾನೆ. "ಪೊನ್ನನ ಪಂಪನ ಸುಜನೋತ್ತಂಸನ" – "ಹೊನ್ನನ ಹಂಪನ ಸುಜನೋತ್ತಂಸನ" (ದರ್ಪಣ), "ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ" – "ಎನ್ನ ಚಿತ್ತ ಹತ್ತಿಯ ಹಣ್ಣು ನೋಡಯ್ಯ" (ಬವ ೨೯). "ನೀರನೀಸುವನ ದೇಹ ಬಳಲುವುದಲ್ಲದೆ ನೀರು ಬಳಲುವುದೆ ? "ನೀರನೀಜುವನ ದೇಹ ಬಳಲುವುದಲ್ಲದೆ ನೀರು ಬಳಲುವುದೇ?" (ಅವ. ೧೧೯), "ಬಚ್ಚಿಸಿದ ಬಣ್ಣಂಗಳಂ" – "ಬಚ್ಚಿಸಿದ ಬನ್ನಂಗಳಂ" (ಕಕಾ ೬೬೧), "ಜ್ಞಾನವಿಲ್ಲರಿವು ಹುಗದು" – "ಗ್ನಾನವಿಲ್ಲರಿವು ಹುಗದು" (ಸೋಚಾ. ೧–೪೩) ಇತ್ಯಾದಿಗಳು ಅವಸ್ಥಾಭೇದ, ಪ್ರಾಂತಭೇದಕ್ಕೆ ಉದಾಹರಣೆ.

ತಾಳಲಯದ ಪ್ರಭಾವ : ಪದ್ಯಗಳನ್ನು ಹಾಡುವಾಗ ತಾಳಲಯದ ವ್ಯವಸ್ಥೆಗೆ ತಕ್ಕಂತೆ ಪದಗಳ ಸಂಘಟನೆ ವಿಘಟನೆ, ಅಕ್ಷರಗಳ ಧ್ವನಿ ವ್ಯತ್ಯಾಸ ತಲೆದೋರಿ ಹಾಡುತ್ತ ಬರೆವ, ಹಾಡುವುದನ್ನು ಕೇಳುತ್ತ ಬರೆವ ಲಿಪಿಕಾರರಿಂದಲೂ ಸ್ಖಾಲಿತ್ಯಗಳುಂಟಾಗುತ್ತವೆ. ಉದಾ: "ಮೊಲೆ ಮುಡಿ ಬಂದರೆ ಹೆಣ್ಣೆಂಬರು .... " ಇದನ್ನು ಅಂಶಲಯದ ಪ್ರಕಾರ ಹಾಡುವಾಗ ಎರಡನೆಯ ಅಂಶವಾದ "ಮು" ಗುರುವ್ಯಾಪ್ತಿಗೆ ಹಿಗ್ಗುವುದು ಸಹಜ. ಆಗ 'ಮೊಲೆ ಮೂಡಿ ಬಂದರೆ' ಎಂಬ ಪಾಠ ಹುಟ್ಟಿಕೊಳ್ಳಬಹುದಾಗಿದೆ. "।ಆಧಾರ। ವಿಡಿದು ಪೇ। ಳಿದನಾಗ । ಸಂಗಯ್ಯ" ಈ ಸಾಂಗತ್ಯ ಸಾಲು ತಾಳ ಲಯಕ್ಕೆ ಗುರಿಯಾಗುವಲ್ಲಿ ಬಹುಶಃ "ನಾಗಸಂಗಯ್ಯ" ಎಂಬ ಹೆಸರಿಗೆ ಬದಲು 'ಸಂಗಯ್ಯ' ಎಂಬ ಪಾಠ ಹುಟ್ಟಿಕೊಳ್ಳುತ್ತದೆ.

ಅನವಧಾನಿತಸ್ಖಾಲಿತ್ಯ : ಉದ್ದೇಶಿತ ಸ್ಖಾಲಿತ್ಯ ತಿಳಿದು ತಿಳಿದೂ ಪಾಠ ವ್ಯತ್ಯಾಸ ಮಾಡುವುದು, ಅನುದ್ದೇಶಿತ ಸ್ಖಾಲಿತ್ಯ ಬಲವಾದ ಯಾವುದೋ ಅನ್ಯ ಕಾರಣದಿಂದ ಪಾಠ ವ್ಯತ್ಯಾಸ ಮಾಡುವುದಾದರೆ ಈ ಅನವಧಾನಿತ ಸ್ಖಾಲಿತ್ಯಕ್ಕೆ ನಿರ್ದಿಷ್ಟ ಕಾರಣವಿರುವುದಿಲ್ಲ. ಯಾವುದೇ ಪಾಠ ಏನೂ ಕಾರಣವಿಲ್ಲದೆ ಯಾವುದೇ ರೂಪ ಪಡೆಯಬಹುದು. ಬರೆದುದನ್ನೇ ಬರೆಯುವ : (ಪುಟ್ಟಿದೊಸಗೆಯೊಳಗೆ [ಗೆ]

ಮರುಳುಗೊಂಡು), ಇದ್ದುದನ್ನು ಬಿಡುವ : (ಕಾಯ[ಕ]ವೇ ಕೈಲಾಸ), ಇದ್ದುದನ್ನು ಬಿಟ್ಟು ಇಲ್ಲದುದನ್ನು ಬರೆಯುವ : (ಮದಾಂಧ ಸಿಂಧುರದ ವಿಸಟಂ [ಯಂ] ಬರಿಯಂ), ಇದ್ದುದನ್ನು ಪಲ್ಲಟಿಸಿ ಬರೆಯುವ : (ಶರಣರನು ಭಾವ ಗಜ [ಜಗ] ವೈದ್ಯವಯ್ಯಾ), ಮಾರ್ಜನ್ನಿನಲ್ಲಿ ಬರೆದುದನ್ನು ಸೇರಿಸಿಕೊಳ್ಳುವ : (ಹಮಿ ಹನ್ನೆರಡು [ವರುಷ] ಸಂವತ್ಸರ ಹಿಂದಾಯಿತ್ತು) ದೋಷಗಳನ್ನು ಲಿಪಿಕಾರರು ಇಲ್ಲಿ ಮಾಡುತ್ತಾರೆ. ಹೀಗೆ ಲಿಪಿಕಾರ ಒಮ್ಮೆ ಸ್ವಲ್ಪ ತಪ್ಪಿದರೆ ಸಾಕು. ಆ ಅಲ್ಪ ತಪ್ಪು ಪ್ರತಿ, ಮರು ಪ್ರತಿ, ಬಳಿಪ್ರತಿಗಳಲ್ಲಿ ಬೇರೆ ಬೇರೆ ಕಾರಣಗಳಿಗೆ ಒಳಗಾಗಿ ತಪ್ಪು ತಪ್ಪಾಗುತ್ತಲೇ ಹೋಗುತ್ತದೆ. ಅಂದರೆ ಒಂದು ತಪ್ಪಿನ ಹಿಂದೆ ಅನೇಕ ಬಗೆಯ ಕಾರಣಗಳಿರುತ್ತವೆ. ಉದಾ: ಆಲಿಕಲ್ಲ ಹರಳಿನಂತೆ (ವಾರ, ಅರಿ, ಹರಿ, ಆರಿ).

ಆಲಿಕಲ್ಲ

ಆರಿಕಲ್ಲ (ಅಕ್ಷರದ ರೂಪಸಾದೃಶ್ಯ)

(ಅಕ್ಷರದ ರೂಪಸಾದೃಶ್ಯ) ಅರಿಕಲ್ಲ — ವಾರಿಕಲ್ಲ (ಅನ್ಯಥಾಜ್ಞಾನದೋಷ)

(ಪ್ರಾಂತಭೇದ) ಹರಿಕಲ್ಲ

ಹೀಗೆ ಒಂದು ಪಾಠ ಹಲವು ಬಗೆಯ ದಾಳಿಗಳಿಗೆ ತುತ್ತಾಗಿ ಕಾಲಕಾಲಕ್ಕೆ ತನ್ನ ರೂಪವನ್ನು ಬದಲಿಸುತ್ತ ಬಂದಿರುತ್ತದೆ. ಸಂಪಾದಕನಿಗೆ ಪರಿಷ್ಕರಣಕಾರ್ಯಕ್ಕೆ ಒದಗುವ ಹಸ್ತಪ್ರತಿಗಳೆಂದರೆ ಇಂತಹ ದೋಷಯುಕ್ತ ಪಾಠಗಳನ್ನೊಳಗೊಂಡುವು.

ಒಂದು ಕೃತಿಯನ್ನು ಕುರಿತು ಹುಟ್ಟಿರಬಹುದಾದ ಹಸ್ತಪ್ರತಿಗಳನ್ನು ಮೂಲಪ್ರತಿ ಮತ್ತು ಪರಂಪರಾಗತಪ್ರತಿಗಳೆಂದು ವಿಂಗಡಿಸಬಹುದು. ಕವಿಯ ಕೈಯಿಂದ ಇಲ್ಲವೆ ಕವಿಯ ಮೇಲ್ವಿಚಾರಣೆಯಲ್ಲಿ ಬರೆಯಲ್ಪಟ್ಟುದು ಮೂಲಪ್ರತಿ. ಇದರ ನಕಲು–ಬಳಿನಕಲು–ಮರುನಕಲುಗಳೆಲ್ಲ ಪರಂಪರಾಗತ ಪ್ರತಿಗಳು. ಕನ್ನಡದ ಮಟ್ಟಿಗೆ ಹೇಳುವುದಾದರೆ ಸಂಪಾದನ ಕಾರ್ಯಕ್ಕೆ ಸಾಮಾನ್ಯವಾಗಿ ಮೂಲಪ್ರತಿ ದೊರೆಯುವುದೇ ಇಲ್ಲ. ಸಿಗುವುವೆಲ್ಲ ಪರಂಪರಾಗತ ಪ್ರತಿಗಳೇ. ಈ ಪರಂಪರಾಗತ ಪ್ರತಿಗಳಲ್ಲಿ ಮೂಲಕ್ಕೆ ಪ್ರಾಮಾಣಿಕವಾದುವು ಶುದ್ಧಸಂತಾನ, ಪ್ರಾಮಾಣಿಕವಲ್ಲದುವು ಅಶುದ್ಧ ಸಂತಾನ. ಸಂಪಾದನಕಾರ್ಯವನ್ನು ಸಫಲಗೊಳಿಸುವುವು ಶುದ್ಧಸಂತಾನಪ್ರತಿಗಳು. ಒಂದು ಕೃತಿಯ ಮೂಲಪ್ರತಿಯೇ ಆಗಲಿ ಪರಂಪರಾಗತ ಪ್ರತಿಯೇ ಆಗಲಿ ಒಂದೇ ಒಂದು ಲಭಿಸಿದಲ್ಲಿ "ಏಕೈಕ ಹಸ್ತಪ್ರತಿ" ಎನಿಸಿಕೊಳ್ಳುತ್ತದೆ. ಕನ್ನಡದಲ್ಲಿ ನಾಗವರ್ಮನ ಕರ್ನಾಟಕ ಕಾದಂಬರಿ, ಮಧುರನ ಧರ್ಮನಾಥಪುರಾಣ ಮೊದಲಾದವುಗಳಿಗೆ ಸಿಕ್ಕವು "ಏಕೈಕ ಹಸ್ತಪ್ರತಿ"ಗಳು. ಕೆಲವು ವೇಳೆ ಒಂದು ಕೃತಿಯ ಮೂಲಪ್ರತಿಯೇ ಆಗಲಿ ಒಂದು ಕಾಲದಲ್ಲಿ ಯಾವುದೋ ಕಾರಣದಿಂದ ರಕ್ಷಿಸಲ್ಪಟ್ಟು ಪಾಠಾಂತರದ ದಾಳಿಯಿಂದ ದೂರವುಳಿದಿದ್ದ ಪಕ್ಷದಲ್ಲಿ "ಸಂರಕ್ಷಿತ ಹಸ್ತಪ್ರತಿ"ಯೆನಿಸಿಕೊಳ್ಳುತ್ತದೆ.

ಮೂಡಬಿದಿರೆ ಶ್ರುತಭಾಂಡಾರದಲ್ಲಿನ ಧವಲಾ, ಜಯಧವಲಾ, ಮಹಾಧವಲಾ, ಗ್ರಂಥಗಳು ಇದಕ್ಕೆ ಉದಾಹರಣೆ.

ಸಂಪಾದಕನು ಈ ಹಿಂದೆ ಹೇಳಿದ ಸ್ಖಾಲಿತ್ಯ ಸ್ವರೂಪ, ಹಸ್ತಪ್ರತಿಸ್ವರೂಪಗಳ ಸ್ಪಷ್ಟ ತಿಳಿವಳಿಕೆಯ ಹಿನ್ನೆಲೆಯಲ್ಲಿ ಸಂಪಾದಕನ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಈ ಕಾರ್ಯವಿಧಾನದಲ್ಲಿ ಐದು ಹಂತಗಳಿವೆ : ೧. ಸಾಮಗ್ರಿಸಂಕಲನ, ೨. ಹಸ್ತಪ್ರತಿಗಳ ವಂಶಾವಳಿ ನಿರ್ಣಯ, ೩. ಪಾಠಸಂಕಲನ, ೪. ಪಾಠಪರಿಷ್ಕರಣ, ೫. ಉನ್ನತವಿಮರ್ಶೆ. ಈ ಐದೂ ಘಟ್ಟಗಳಲ್ಲಿ ಸಂಪಾದಕ ತುಂಬ ಎಚ್ಚರದಿಂದ ನಡೆದಷ್ಟೂ, ಸಂಪಾದನ ಕಾರ್ಯ ಸಮುಜ್ವಲಗೊಳ್ಳುತ್ತದೆ.

೧. ಸಾಮಗ್ರಿ ಸಂಕಲನ : ಈ "ಸಾಮಗ್ರಿ ಸಂಕಲನ"ವು ಸಂಪಾದಿಸಬಯಸಿದ ಕೃತಿಯ 'ಹಸ್ತಪ್ರತಿ'ಗಳು, ಸಂಪಾದನೆಗೆ ನೆರವಾಗುವ 'ಇತರ ಕೃತಿ'ಗಳು ಎಂದು ಎರಡು ತೆರನಾಗಿದೆ.

ಸಂಪಾದಕನಿಗೆ ಮೂಲಪ್ರತಿ ಸಿಕ್ಕರೆ ಸಂಪಾದನಕಾರ್ಯ ತುಂಬ ಸುಲಭ. ಆದರೆ ಸಿಗುವುವೆಲ್ಲ ಪರಂಪರಾಗತ ಪ್ರತಿಗಳೇ. ಇವು ಪ್ರಾದೇಶಿಕ ದೃಷ್ಟಿಯಿಂದ ವೈವಿಧ್ಯ, ಕಾಲದೃಷ್ಟಿಯಿಂದ ಪ್ರಾಚೀನ, ಭಾಷಾದೃಷ್ಟಿಯಿಂದ ದೋಷರಹಿತ, ಸಂತಾನದೃಷ್ಟಿಯಿಂದ ಶುದ್ಧ, ಸ್ವರೂಪ ದೃಷ್ಟಿಯಿಂದ ಪರಿಪೂರ್ಣ ಮತ್ತು ಪರಿಸ್ಫುಟವಾಗಿರಬೇಕು.

'ಇತರ ಕೃತಿ'ಗಳಲ್ಲಿ ಸಂಪಾದಿಸುತ್ತಿರುವ ಕೃತಿಯ ವಸ್ತುಮಾತ್ರಕ್ಕೆ, ಅನುವಾದ, ವ್ಯಾಖ್ಯಾನ, ಅದೇ ಕವಿಯ ಅನ್ಯ ಕೃತಿಗಳು, ಅದೇ ವಸ್ತುವನ್ನಿಟ್ಟುಕೊಂಡ ಅನ್ಯರ ಕೃತಿಗಳು ಒಳಗೊಳ್ಳುತ್ತವೆ.

೨. ವಂಶಾವಳಿಯ ನಿರ್ಣಯ : ಒಂದು ಕೃತಿಯ ನಕಲುಗಳು ಬೆಳೆಬೆಳೆದಂತೆ ಹಸ್ತಪ್ರತಿಗಳಲ್ಲಿ ಅನೇಕ ಕುಟುಂಬಗಳು ಏರ್ಪಡುತ್ತವೆ. ಸಂಪಾದಕನು ಈ ಎಲ್ಲ ಕುಟುಂಬಗಳ ಒಂದೊಂದು ಪ್ರಾತಿನಿಧಿಕ ಪ್ರತಿಯನ್ನು ಆರಿಸಿಕೊಳ್ಳಬೇಕೆಂದು ವಿದ್ವಾಂಸರು ಹೇಳುತ್ತಾರೆ. ಮಾರ್ಗಸಾಹಿತ್ಯದ ಹಸ್ತಪ್ರತಿಗಳ ಪಾಠಾಂತರದಲ್ಲಿ ಒಂದು ವ್ಯವಸ್ಥೆ ಇರುವುದರಿಂದ ಬೇರೆ ಬೇರೆ ಕುಟುಂಬದ ಪ್ರಾತಿನಿಧಿಕ ಪ್ರತಿಗಳ ಮೂಲಕ ಮೂಲಪಾಠವನ್ನು ಗೊತ್ತುಹಚ್ಚಲು ಅನುಕೂಲವಾಗುತ್ತದೆ. ಆದರೆ ದೇಶೀಸಾಹಿತ್ಯದ ಹಸ್ತಪ್ರತಿಗಳ ಪಾಠಾಂತರದಲ್ಲಿ ಅವ್ಯವಸ್ಥೆಯ ಅರಣ್ಯವೇ ತಲೆದೋರಿರುವುದರಿಂದ ಬೇರೆಬೇರೆ ಕುಟುಂಬದ ಪ್ರಾತಿನಿಧಿಕ ಪ್ರತಿಗಳು ಮೂಲ ಪಾಠವನ್ನು ಗೊತ್ತು ಹಚ್ಚುವಲ್ಲಿ ದಿಕ್ಕುತಪ್ಪಿಸುತ್ತವೆ. ಹೀಗಾಗಿ ಮಾರ್ಗಸಾಹಿತ್ಯಕ್ಕೆ ಮಾತ್ರ ಒಂದೊಂದು ಕುಟುಂಬದ ಒಂದೊಂದು ಪ್ರಾತಿನಿಧಿಕ ಪ್ರತಿಗಳನ್ನೂ ದೇಶಿಸಾಹಿತ್ಯಕ್ಕೆ ಒಂದೇ ಕುಟುಂಬದ ಪ್ರಾತಿನಿಧಿಕ ಪ್ರತಿಗಳನ್ನೂ ಆರಿಸಿಕೊಳ್ಳುವುದು ವಿಹಿತ. ಹೀಗೆ ಆಯ್ದುಕೊಳ್ಳುವಲ್ಲಿ "ಹಸ್ತಪ್ರತಿ ವಂಶಾವಳಿ ನಿರ್ಣಯ" ವಿಧಾನವನ್ನು ಅನುಸರಿಸಬೇಕಾಗುತ್ತದೆ. ಒಂದು ಕುಟುಂಬದ ಹಸ್ತಪ್ರತಿಗಳಲ್ಲಿ ಒಂದರ ನಕಲು ಇನ್ನೊಂದಿದ್ದರೆ ಅವು ಮಾತೃಕಾ ಪ್ರತಿ ಪುತ್ರಿಕಾಪ್ರತಿ. ಒಂದು ಮೂಲದಿಂದ ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಪ್ರತಿ ಹುಟ್ಟಿದ್ದರೆ ಅವು ಸೋದರ ಪ್ರತಿಗಳು. ಮೂಲದಿಂದ ಎಂದೋ ಸಿಡಿದು ಹೋಗಿದ್ದರೆ ಅವು ಸದಸ್ಯಪ್ರತಿಗಳು. ಈ ರೀತಿ ಇರುವ ಹಸ್ತಪ್ರತಿಗಳ ವಂಶಸಂಬಂಧವನ್ನು ನಿರ್ಣಯಿಸಲು 'ಸಂಯೋಜಕ ಸ್ಖಾಲಿತ್ಯ' ಮತ್ತು 'ವಿಚ್ಛೇದಕ ಸ್ಖಾಲಿತ್ಯ' ಎಂಬ ಎರಡು ವಿಧಾನಗಳನ್ನು ಅವಲಂಬಿಸಬೇಕು. ಸಂಪಾದನೆಗೆ ಆಯ್ದುಕೊಂಡ ಹಸ್ತಪ್ರತಿಗಳಲ್ಲಿಯ ಸ್ಖಾಲಿತ್ಯ ಪಾಠಗಳು ಪರಸ್ಪರ ಹೋಲಿಕೆ ರೂಪದಲ್ಲಿದ್ದರೆ 'ಸಂಯೋಜಕ

ಸ್ಖಾಲಿತ್ಯ'ಗಳೆಂದು ಕರೆಯಿಸಿಕೊಳ್ಳುವ ಅವು ಆ ಹಸ್ತಪ್ರತಿಗಳಲ್ಲಿ ಸಂಯೋಜನೆಯನ್ನುಂಟು ಮಾಡುತ್ತವೆ. ಪರಸ್ಪರ ಹೋಲಿಕೆ ರೂಪದಲ್ಲಿರದಿದ್ದರೆ ವಿಚ್ಛೇದಕ ಸ್ಖಾಲಿತ್ಯಗಳೆಂದು ಕರೆಯಿಸಿಕೊಳ್ಳುವ ಅವು ಹಸ್ತಪ್ರತಿಗಳಲ್ಲಿ ವಿಚ್ಛೇದನೆಯನ್ನುಂಟುಮಾಡುತ್ತವೆ. ಈ ಸಂಯೋಜಕ ಹಾಗೂ ವಿಚ್ಛೇದಕ ಸ್ಖಾಲಿತ್ಯಗಳ ಬಲದಿಂದ ಹಸ್ತಪ್ರತಿಗಳ ಕುಟುಂಬಗಳನ್ನು ನಿರ್ಣಯಿಸಬೇಕು. ಈ ಬಗೆಯ ಕುಟುಂಬನಿರ್ಣಯದಿಂದ ಉಪಯುಕ್ತವಲ್ಲದ ಹಸ್ತಪ್ರತಿಗಳನ್ನು ನಿರಾಕರಿಸಿ ಉಪಯುಕ್ತ ಹಸ್ತಪ್ರತಿಗಳನ್ನು ಆಯ್ದುಕೊಳ್ಳುವುದು ಸಾಧ್ಯವಾಗುತ್ತದೆ. ಹೀಗೆ ಮಾಡುವುದರಿಂದ ಸಂಪಾದನಕಾರ್ಯದಲ್ಲಿ ಶ್ರಮ ಕಡಿಮೆ, ಲಾಭ ಅಧಿಕ. ಇಲ್ಲದಿದ್ದರೆ ಕಣ್ಣುತಪ್ಪಿ ಸೇರಿಕೊಂಡ ಒಂದೇ ಒಂದು ಕುಲಗೆಟ್ಟ ಪ್ರತಿ ಸಂಪಾದಕನ ಕಾರ್ಯದುದ್ದಕ್ಕೂ ತೊಂದರೆಕೊಡುತ್ತದೆ. ಸಮಯಸಾಧಿಸಿ ಸಂಪಾದನಶುದ್ಧಿಯನ್ನೂ ಹಾಳುಮಾಡುತ್ತದೆ.

೩. ಪಾಠಸಂಕಲನ : ಯಾವುದೇ ಕೃತಿಯ ಮೂಲಮಾತೃಕೆಯೆಂದರೆ ಪಾಠ. ಆಯ್ದುಕೊಂಡ ಹಸ್ತಪ್ರತಿಗಳಲ್ಲಿ ಒಂದು ಕೃತಿಗೆ ಸಿಗುವ ಎಲ್ಲ ಭಿನ್ನಪಾಠಗಳನ್ನು ಸಂಗ್ರಹಿಸುವುದೇ ಪಾಠಸಂಕಲನ. ಈ ಕಾರ್ಯ ತುಂಬ ಶ್ರಮದಾಯಕ, ಬೇಸರದಾಯಕ. ಸಾಮಾನ್ಯ ನೋಟಕ್ಕೆ ಅಪ್ರಯೋಜಕವೆನಿಸಬಹುದಾದ ಪಾಠವೇ ತುಂಬ ಪ್ರಯೋಜಕವೆನಿಸುವ ಸಾಧ್ಯತೆಯಿರುವುದರಿಂದ ಒಂದು ಬಿಡದಂತೆ ಭಿನ್ನಪಾಠಗಳನ್ನು ಸಂಗ್ರಹಿಸಬೇಕು. ಉದಾ: ಕವಿ ರನ್ನನಿಗೆ ಚಕ್ರವರ್ತಿ ತೈಲಪನು ನೀಡಿದ ಗೌರವವಸ್ತುಗಳ ಸಾಲಿನಲ್ಲಿ "ಮದನನವತಾರ"ದ ಉಲ್ಲೇಖ ಬರುತ್ತದೆ. ಇದಕ್ಕೆ ಇರುವ 'ಮದನಾವತಾರ' ಎಂಬ ಪಾಠವನ್ನು ನಿರುಪಯುಕ್ತವೆಂಬಂತೆ ಅಜಿತಪುರಾಣದ ಅಡಿಟಿಪ್ಪಣಿಯಲ್ಲಿ ಕೊಡಲಾಗಿದೆ. ಆದರೆ 'ಮದನಾವತಾರ'ವು ಒಂದು ಛತ್ರವಿಶೇಷವೆಂದು ಕೂಡಲೂರ ತಾಮ್ರಪಟ ಹೇಳುವುದರಿಂದ ನಿರಾಕೃತಪಾಠವಾದ 'ಮದನಾವತಾರ'ವೇ ಸ್ವೀಕಾರಯೋಗ್ಯವೆಂದು ಈಗ ಹೇಳಬೇಕಾಗುತ್ತದೆ.

ಕೆಲವು ಸಲ ಒಂದು ಪಾಠ ಪ್ರಸ್ತುತಕ್ಕೆ ಅಪ್ರಯೋಜಕವೆನಿಸಿದರೂ ಅದಕ್ಕೆ ಯಾವುದೋ ಒಂದು ಪ್ರಯೋಜಕ–ಭಾಷಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಬೆಲೆ ಇರುತ್ತದೆ. ಪಂಪಭಾರತದ ಎಲ್ಲ ಹಸ್ತಪ್ರತಿಗಳಲ್ಲಿ ಸಿಗುವ 'ಬರೆಹಕಾಱರ ಕೈಗಳ ಕೇಡು' ಎಂಬಲ್ಲಿಯೆ 'ಹ' ಕಾರಕ್ಕೆ ಎಂಥ ಐತಿಹಾಸಿಕ ಬೆಲೆಯಿದೆಯೆನ್ನುವುದು ಭಾಷಾವಿಜ್ಞಾನಿಗಳಿಗೆ ಗೊತ್ತು. ಆದುದರಿಂದ ಎಲ್ಲ ಸಣ್ಣದೊಡ್ಡ ಪಾಠಗಳನ್ನು ಸಂಗ್ರಹಿಸುವುದು ಲೇಸು. ಪ್ರತಿಗಳು ಬಹಳವಿದ್ದಲ್ಲಿ ಚೌಕ ಮನೆಯ ಹಾಳೆಗಳನ್ನು ಉಪಯೋಗಿಸಿ ಹೆಚ್ಚು ಯೋಗ್ಯಪ್ರತಿಯ ಒಂದೊಂದು ಅಕ್ಷರವನ್ನು ಒಂದೊಂದು ಮನೆಯಲ್ಲಿ ಬರೆದು ಮಿಕ್ಕ ಪ್ರತಿಗಳಲ್ಲಿಯ ಭಿನ್ನಪಾಠಗಳನ್ನು ಮಾತ್ರ ತತ್ಸಂಬಂಧ ಪಾಠಗಳ ಕೆಳಗೆ ಬರೆಯಬೇಕು. ಪ್ರತಿಗಳು ಬಹಳವಿದ್ದಲ್ಲಿ ಭಿನ್ನ ಪಾಠಗಳನ್ನು ಮಾರ್ಜನ್ನಿನಲ್ಲಿ ಬೇರೆ ಬೇರೆ ಬಣ್ಣದ ಪೆನ್ಸಿಲ್ಲಿನಿಂದ ಗುರುತಿಸಬೇಕು.

೪. ಪಾಠಪರಿಷ್ಕರಣ : ಪಾಠಸಂಕಲನದ ಮುಂದಿನ ಹೆಜ್ಜೆ ಪಾಠಪರಿಷ್ಕರಣ. ಸಂಪಾದಕನ ಅಗ್ನಿಪರೀಕ್ಷೆಯ ಪ್ರಸಂಗವಿದು. ಇಲ್ಲಿ ಮೇಲೆ ಹೇಳಿದ ಉದ್ದೇಶಿತ, ಅನುದ್ದೇಶಿತ ಮತ್ತು ಅನವಧಾನಿತ ಸ್ಖಾಲಿತ್ಯಗಳಿಂದುಂಟಾದ ಸಾಮಾನ್ಯ ದೋಷಗಳನ್ನು ಸರಿಪಡಿಸಬಹುದಾಗಿದ್ದರೆ ಅದು 'ಲೇಖನಸಂಭಾವ್ಯತೆ', ಅಸಾಮಾನ್ಯ ದೋಷಗಳನ್ನು ಸರಿಪಡಿಸಬಹುದಾಗಿದ್ದರೆ ಅದು 'ಅಂತಃ ಸಂಭಾವ್ಯತೆ' ಉದಾ : (೧) ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ

ಗೋಷ್ಠಿ (ಅವ. ೪೬೫ ಶುದ್ಧಿ) (೨) ಕೆಸರುಗಲ್ಲನಿಕ್ಕಿ ಧರೆಮೇರುವ ನೆಲೆಗೊಳಿಸಿ (ಚೆವ ೪ ನಿಕ್ಕಿದರೆ).

ಇಲ್ಲಿ ಒಂದು ಲೇಖನಸಂಭಾವ್ಯತೆಗೆ, ಇನ್ನೊಂದು ಅಂತಃಸಂಭಾವ್ಯತೆಗೆ ಉದಾಹರಣೆಗಳೆನಿಸಿವೆ. ಲೇಖನಸಂಭಾವ್ಯತೆ ಲಿಪಿಕಾರಮನೋಧರ್ಮವನ್ನರಿತು ಮಾಡುವ ತಿದ್ದುಪಡಿಯಾದರೆ, ಅಂತಃಸಂಭಾವ್ಯತೆ ಕವಿಮನೋಧರ್ಮವನ್ನು ಅರಿತು ಮಾಡುವ ತಿದ್ದುಪಡಿಯಾಗಿದೆ. ಹೀಗಾಗಿ ಲೇಖನಸಂಭಾವ್ಯತೆ ನಿಂತಲ್ಲಿಂದ ಅಂತಃಸ್ಸಂಭಾವ್ಯತೆ ಮುಂದುವರಿಯುತ್ತಿದ್ದರೂ ಶುದ್ಧಪಾಠವನ್ನು ನಿರ್ಣಯಿಸುವಲ್ಲಿ ಇವೆರಡರ ಬೆಂಬಲ ಅವಶ್ಯ.

ಹೀಗೆ ಸತ್ಯಪಾಠವನ್ನು ಗುರುತಿಸುವ ವಿಧಾನವನ್ನು ಅರ್ಥಮಾಡಿಕೊಂಡ ತರುವಾಯ ಸಂಪಾಕದನು ನಾಲ್ಕು ಮಾರ್ಗಗಳಲ್ಲಿ ಕಾರ್ಯಪ್ರವೃತ್ತನಾಗಬೇಕು. ೧. ಸ್ವೀಕರಣ, ೨. ವರ್ಜನ, ೩. ಸಂದೇಹ, ೪. ಪರಿಷ್ಕರಣ. "ಕವಿಯ ಕೈಯಿಂದ ಇಳಿದು ಬಂದುದು ಎಂದು ಒಪ್ಪಿಕೊಳ್ಳುವ ಪಾಠ ಸ್ವೀಕರಣ, ಕವಿಯ ಕೈಯಿಂದ ಇಳಿದುಬಂದುದಾಗಿರದೆ ಸಹೃದಯ ಮತ್ತು ಲಿಪಿಕಾರರ ಕೈವಾಡದಿಂದಾದುದು ಎಂದು ಕೈಬಿಡುವ ಪಾಠ ವರ್ಜನ. ಇವುಗಳಲ್ಲಿ ಒಂದು ಸತ್ಯ, ಇನ್ನೊಂದು ಅಸತ್ಯ. ಈ ಸತ್ಯ–ಅಸತ್ಯಗಳ ಮಧ್ಯ ಜೋಲಿ ಹೊಡೆಯುವ ಪಾಠ ಸಂದೇಹ. ಒಂದು ಸಂದೇಹ ಪಾಠವನ್ನು ಅವಶ್ಯಕ ತಿದ್ದುಪಡಿಯೊಂದಿಗೆ ಸ್ವೀಕರಿಸುವುದು ಪರಿಷ್ಕರಣ."

ಸ್ವೀಕರಣ–ವರ್ಜನಗಳು ಪರಸ್ಪರ ವಿರೋಧಿಗಳು. ಸ್ವೀಕರಣ ವರ್ಜನಕ್ಕೆ ಕಾರಣವಾದರೆ, ವರ್ಜನ ಸ್ವೀಕರಣಕ್ಕೆ ಕಾರಣವಾಗುತ್ತದೆ. "ಕೊಳನ ತಡಿಯಲೊಂದು ಹೊಱಸು ಕುಳ್ಳಿರ್ದಡೇನು ಕಳಹಂಸಿಯಾಗಬಲ್ಲುದೆ? (ಬವ, ೯೮–ಹೊಲಸು). ಈ ಪಾಠಗಳಲ್ಲಿ 'ಹೊಱಸು' ಸ್ವೀಕರಣ, 'ಹೊಲಸು' ವರ್ಜನ. ಈಗ ಸ್ವೀಕರಣವನ್ನು ಮೇಲೆ ವರ್ಜನವನ್ನು ಅಡಿಯಲ್ಲಿ ಇಟ್ಟು ಅವುಗಳ ಸಂಬಂಧವನ್ನು ಅಂಕಿಯಿಂದ ಸೂಚಿಸಬೇಕು.

ಆ ಕಡೆ ವರ್ಜನಕ್ಕೆ, ಈ ಕಡೆ ಸ್ವೀಕರಣಕ್ಕೆ ಮನಸ್ಸಿಲ್ಲ, ಪರಿಷ್ಕರಣಕ್ಕೂ ಸಾಧ್ಯವಿಲ್ಲವೆನಿಸಿದ ಪಾಠ ಸಂದೇಹವೆನಿಸಿಕೊಳ್ಳುತ್ತದೆ. ಇಂಥ ಪಾಠವನ್ನು ವಕ್ರಕಂಸಿನಲ್ಲಿ ಪ್ರಶ್ನೆ ಚಿಹ್ನೆಯನ್ನಿಟ್ಟು ಸ್ವೀಕರಿಸಬೇಕು. ಉದಾ:

ನುಡಿಗೆಲ್ಲಂ ಸಲ್ಲದ ಕ । ನ್ನಡ(?)ದೊಳ್ ಚತ್ತಾಣಮುಂ ಬೆದಂಡೆಯುಮೆಂದೀ ।
ಗಡಿನ ನೆಗಳ್ತೆಯ ಕಬ್ಬದೊ । ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ॥

'ಸಂದೇಹ'ವು ಜಟಿಲವಾಗಿದ್ದಲ್ಲಿ 'ಪಾಠಗ್ರಂಥಿ' ಎನಿಸಿಕೊಳ್ಳುತ್ತದೆ. ಅಂದರೆ ಸಂದೇಹದಲ್ಲಿ ಸಾಂದರ್ಭಿಕ ಅರ್ಥಸಾಧ್ಯವಿರಬಹುದು. ಪಾಠಗ್ರಂಥಿಯಲ್ಲಿ ಅದೂ ಸಾಧ್ಯವಿರುವುದಿಲ್ಲ. ಕನ್ನಡದಲ್ಲಿ ಪದರೂಪ, ಛಂದೋರೂಪಗಳಿಗೆ ಸಂಬಂಧಪಟ್ಟಂತೆ ಎಷ್ಟೋ ಪಾಠಗ್ರಂಥಿಗಳು "ಎನಿತು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೆ" ಎಂಬಂತೆ ನೆನೆಗುದಿಗೆ ಬಿದ್ದ ಧಾನ್ಯದಂತೆ ಸಂಪಾದಕನಿಗೆ ಸವಾಲಾಗಿ ಉಳಿದುಕೊಂಡಿವೆ.

ಕಣ್ಣೆದುರಿಗಿರುವ ಎಲ್ಲ ಪಾಠಗಳಲ್ಲಿಯೇ ಸ್ವಲ್ಪ ಉತ್ತಮವೆನಿಸುವ ಪಾಠವನ್ನು ತಿದ್ದುಪಡಿ ಮಾಡಿಕೊಳ್ಳುವುದು ಇಲ್ಲವೆ ಇದ್ದೊಂದು ನಿಷ್ಪ್ರಯೋಜಕಪಾಠವನ್ನು ಅಥವಾ ನಷ್ಟವಾಗಿರುವ ಪಾಠವನ್ನು

ಲೇಖನಸಂಭಾವ್ಯತೆ ಮತ್ತು ಅಂತಃಸಂಭಾವ್ಯತೆಗಳ ಬಲದಿಂದ ತಿದ್ದುಪಡಿಮಾಡಿಕೊಳ್ಳುವುದು "ಪರಿಷ್ಕರಣ." ಇದನ್ನು ಚೌಕಕಂಸಿನಲ್ಲಿಡಬೇಕು. ಉದಾ: "ತಿಂದು ಗಾದೆಯ ಮೇಲೆ ಬಂದು ಗುರು ಬೀಳ್ವಂತೆ" ಎಂಬುದನ್ನು "ತಿಂ[ದ ಗಂ]ದೆಯ ಮೇಲೆ ಬಂದುಗುರು ಬೀಳ್ವಂತೆ" ಎಂದು ಪರಿಷ್ಕರಿಸಬಹುದು. ಇದೇ ರೀತಿ "ಆ ಸೂಳೆಗೇರಿಯ ಕೆಲಬಲದೊಳು ನಾಗ। ಕೇರಿಯೊಪ್ಪಿಹವು" ಎಂಬುದನ್ನು ಛಂದಸ್ಸು, ಆದಿಪ್ರಾಸ, ಅರ್ಥದೃಷ್ಟಿಯಿಂದ "ನಾಗ[ವಾಸದ]" ಎಂದು ತಿದ್ದಿಕೊಳ್ಳಬಹುದು. ಹೀಗೆ ಇದ್ದ ಅಕ್ಷರವನ್ನು ತಿದ್ದುಪಡಿ ಮಾಡುವ, ಇಲ್ಲದ ಅಕ್ಷರವನ್ನು ತುಂಬಿಕೊಳ್ಳುವ ಕಾರ್ಯ ಇಲ್ಲಿ ನಡೆಯುತ್ತದೆ. ಈ ಪರಿಷ್ಕರಣ ತೀರ ಊಹೆಯಿಂದ ಕೂಡಿದ್ದರೆ ಅದನ್ನು 'ಊಹಾತ್ಮಕಪರಿಷ್ಕರಣ'ವೆಂದು ಕರೆಯುವರಾದರೂ ಪರಿಷ್ಕರಣದಲ್ಲಿಯೂ ಊಹೆಯೇ ಇರುವುದರಿಂದ ಇವುಗಳ ಮಧ್ಯದ ಅಂತರವನ್ನು ಹೇಳುವುದು ಕಷ್ಟವಾಗುತ್ತದೆ. ಆದುದರಿಂದ ಊಹಾತ್ಮಕಪರಿಷ್ಕರಣ ಎಂಬ ಪಾರಿಭಾಷಿಕಪದವನ್ನು ಈ ಕ್ಷೇತ್ರದಿಂದ ಇನ್ನು ಮೇಲೆ ದೂರವಿಡುವುದು ಲೇಸು.

ಇಲ್ಲಿಗೆ ಪಾಠವಿಮರ್ಶೆಯ ಕಾರ್ಯ ಮುಗಿಯುವುದಾದರೂ ಇಷ್ಟೇ ಮುಖ್ಯವಾದುವು, ಆದಿಯಲ್ಲಿ ಸಾಹಿತ್ಯ ವಿಮರ್ಶೆಯನ್ನು, ಅಂತ್ಯದಲ್ಲಿ ಅನುಬಂಧಗಳನ್ನು ಜೋಡಿಸುವುದು. ಆಗ ಮಾತ್ರ "ಪಾಠವಿಮರ್ಶೆ"ಯು 'ಉನ್ನತವಿಮರ್ಶೆ' ಎನಿಸಿಕೊಳ್ಳುತ್ತದೆ. ಕನ್ನಡದ ಸಂಪಾದಿತ ಕೃತಿಗಳಿಗೆ ಮೊದಮೊದಲು ಚಾರಿತ್ರಿಕ ವಿಮರ್ಶೆ ಪ್ರಧಾನವಾದ, ಆಮೇಲೆ ರಸವಿಮರ್ಶೆ ಪ್ರಧಾನವಾದ ಉಪೋದ್ಘಾತಗಳನ್ನು ಬರೆದಿರುವರು. ಈಗ ಸಾಂಸ್ಕೃತಿಕ ವಿಮರ್ಶೆ ಮತ್ತು ದರ್ಶನ ವಿಮರ್ಶೆಗಳತ್ತ ನಮ್ಮ ಸಂಪಾದಕರು ಗಮನ ಹರಿಸುವುದು ಅವಶ್ಯವಿದೆ. ಕೃತಿಯ ಕೊನೆಯಲ್ಲಿ ಜೋಡಿಸಬೇಕಾದ ಅನುಬಂಧಗಳು ಆ ಗ್ರಂಥದ ಅಂಗಾಂಗಗಳನ್ನು ತೆರೆದುತೋರಿಸುವ ಕೀಲಿಕೈಗಳು. ಹೆಚ್ಚಿನ ಅಭ್ಯಾಸಕ್ಕೆ ದಿಕ್ಕು ತೋರಿಸುವ ತೋರುಗೈಗಳು (Sign board). ಇವು 'ಗ್ರಂಥವಿವರಕ' 'ಗ್ರಂಥಪೂರಕ' ಎಂದು ಎರಡು ಬಗೆಯಾಗಿವೆ. ಗ್ರಂಥ ವಿವರಕದಲ್ಲಿ ಗ್ರಂಥಸ್ಥ ಪದ್ಯಗಳ ಅಕಾರಾದಿ, ಉದ್ಧರಣೆ, ಪಾರಿಭಾಷಿಕಪದ, ವ್ಯಕ್ತಿನಾಮ, ಸ್ಥಳನಾಮಕೋಶ, ಗಮನಾರ್ಹ ಪದಸೂಚಿ, ಶಬ್ದಕೋಶ, ಗ್ರಂಥಋಣ, ಸಂಕ್ಷೇಪ–ಸಂಕೇತ ಸೂಚಿ ಇತ್ಯಾದಿ ವಿಭಾಗಗಳು ಒಳಗೊಳ್ಳುತ್ತವೆ. 'ಗ್ರಂಥಪೂರಕ'ದಲ್ಲಿ ಗ್ರಂಥದ ಅಭ್ಯಾಸಕ್ಕೆ ಪೂರಕವಾಗಬಹುದಾದ ಆಕರ ಕೃತಿಯ ಮತ್ತು ಸಮಾನ ಕೃತಿಗಳ ಸಾಮ್ಯ–ವೈಷಮ್ಯಗಳ ವಿವರಣೆ, ಪ್ರಭಾವಮಾಡಿದ ಮತ್ತು ಪ್ರಭಾವ ಪಡೆದ ಕೃತಿಗಳ ಪದ್ಯ ಇಲ್ಲವೆ ಗದ್ಯಭಾಗಗಳ ಸೂಚನೆ ಇತ್ಯಾದಿ ಸಂಗತಿಗಳು ಎಡೆಪಡೆಯಬೇಕು. ಒಟ್ಟಿನಲ್ಲಿ ಒಂದು ಕೃತಿಯ ಅಂತರಂಗ–ಬಹಿರಂಗ ವಲಯಗಳ ಅಭ್ಯಾಸಕ್ಕೆ ಈ ಉಪೋದ್ಘಾತ ಮತ್ತು ಅನುಬಂಧಗಳು ಯೋಗ್ಯ ದಿಕ್ಸೂಚಿಯಾಗಬೇಕು. ಇದರಿಂದ ಗ್ರಂಥಗೌರವ ಅಧಿಕವಾಗುತ್ತದೆ.

ಪಾಠಪರಿಷ್ಕರಣ ಪ್ರಸಂಗದಲ್ಲಿ ಸಂಪಾದಕನು ಕೆಲವು ಸಂಕೇತ ಮತ್ತು ಸಂಕ್ಷೇಪಗಳನ್ನು ಬಳಸುವುದು ಈಗ ತೀರ ಅವಶ್ಯವೆನಿಸಿದೆ. ಪ್ರಾಚೀನ ಹಸ್ತಪ್ರತಿಗಳಲ್ಲಿ ಮರೆತುದನ್ನು ಸೇರಿಸಿದುದರ ಸೂಚನೆಗೆ ಹಂಸಪಾದ, ಕತ್ತರಿಗುರುತುಗಳನ್ನೂ ತಪ್ಪಾದುದನ್ನು ಬಿಡಲು ಸೂಚಿಸುವಲ್ಲಿ ಅಷ್ಟು ಭಾಗದ ಆದ್ಯಂತಕ್ಕೆ ವಕ್ರಕಂಸ. ಕೆಳಗೆ ಅಥವಾ ಮೇಲೆ ಚುಕ್ಕೆ ಇಲ್ಲವೆ ಗೆರೆಗಳನ್ನೂ ಬಳಸುತ್ತಿದ್ದರು. ಆಧುನಿಕ ಸಂಕೇತಗಳು ಇವುಗಳಿಗಿಂತ ತೀರ ಬೇರೆಯಾಗಿ ಬೆಳೆದಿವೆ. ಪಶ್ಚಿಮದ ಪಂಡಿತರು ಶಾಸನಸಂಪಾದನೆಯಲ್ಲಿ ಬಳಸಲಾರಂಭಿಸಿದ್ದ ಈ ಚಿಹ್ನೆಗಳನ್ನು, ಪ್ರಾರಂಭದಲ್ಲಿ ತಾವು ಸಂಪಾದಿಸಿದ

ಗ್ರಂಥಗಳಿಗೆ ಅವರು ಅನ್ವಯಿಸಿಕೊಳ್ಳಲಿಲ್ಲವೆಂದು ತೋರುತ್ತದೆ. ಸಂಪಾದನೆಯ ಇತಿಹಾಸದ ಎರಡನೆಯ ಘಟ್ಟದಲ್ಲಿ ಕೆಲಸಮಾಡಿದ ಕಿಟಲ್, ರೈಸ್ ಮತ್ತು ಕಾವ್ಯಕಲಾನಿಧಿಗಳಿಂದ ಪ್ರಾರಂಭಿಸಲ್ಪಟ್ಟ ಈ ಬಳಕೆ, ಈವರೆಗೆ ಬೆಳೆಯುತ್ತ ಬಂದಿದೆ. ಆದರೆ ಕೆಲವರು ಅಂಕಿ, ಕತ್ತರಿ, ತ್ರಿಕೋನ, ಬಾಣ, ನಕ್ಷತ್ರ, ಹಲವು ಬಗೆಯ ಕಂಸ ಚಿಹ್ನೆ – ಪ್ರಶ್ನೆ ಚಿಹ್ನೆಗಳನ್ನು ಕೈಗೆ ಬಂದಂತೆ ಬಳಸಿ ಸಂಪಾದನೆಯನ್ನು ಜಟಿಲಗೊಳಿಸುತ್ತಲಿದ್ದಾರೆ. ಇದರಿಂದ ಅಭ್ಯಾಸಿಗೆ ವಾಚನಕ್ಲೇಶತೆಯುಂಟಾಗುತ್ತಲಿದೆ. ಇದಲ್ಲದೆ ಸಾಮಾನ್ಯವಾಗಿ ಪಾಠಸಂಬಂಧಸೂಚನೆಗೆ ಅಂಕಿಯನ್ನು, ಸಂದೇಹಕ್ಕೆ ಪಾಠದ ಮುಂದೆ ಕಂಸಾಂತರ್ಗತ ಪ್ರಶ್ನೆ ಚಿಹ್ನೆಯನ್ನು, ಪರಿಷ್ಕರಣಕ್ಕೆ ಪಾಠವನ್ನೊಳಗೊಂಡ ಚೌಕಕಂಸವನ್ನು ಬಳಸುತ್ತಲಿದ್ದರೂ ಗಣಿತಶಾಸ್ತ್ರದ ಚಿಹ್ನೆಗಳಂತೆ ಇವುಗಳನ್ನು ಎಲ್ಲರೂ ಒಂದೇ ಅರ್ಥದಲ್ಲಿ ಬಳಸುವುದಿಲ್ಲ. ಎರಡನೆಯದಾಗಿ ಇಷ್ಟು ಚಿಹ್ನೆಗಳು ಸಾಲುವುದಿಲ್ಲವಾದುದರಿಂದ ಇಂದು ಕೆಲವು ಹೊಸ ಚಿಹ್ನೆಗಳನ್ನು ಒಮ್ಮತದಿಂದ ರೂಢಿಗೆ ತರುವ ಅವಶ್ಯಕತೆ ಇದೆ.

ಇನ್ನು ಹಸ್ತಪ್ರತಿ ಮತ್ತು ಸಹಾಯಕ ಗ್ರಂಥಗಳ ಸೂಚನೆಗಾಗಿ ಸಂಕ್ಷೇಪ (Abbreviations) ಗಳನ್ನು ಬಳಸುತ್ತಾರೆ. ಕಿರುಗಾತ್ರ, ಅರ್ಥವತ್ತಾಗಿರಬೇಕಾದ ಇವು ಸಾಮಾನ್ಯವಾಗಿ ಹಸ್ತಪ್ರತಿ ದೊರೆತ ಸ್ಥಳ, ಹಸ್ತಪ್ರತಿ ಒಡೆಯರ ಹೆಸರುಗಳನ್ನು ಸೂಚಿಸುತ್ತಿರಬೇಕು. ಉದಾ: ಮೈಸೂರು ಪ್ರತಿ=ಮೈ, ಹಳಕಟ್ಟಿಯವರ ಪ್ರತಿ=ಹ ಇತ್ಯಾದಿ. ಸಹಾಯಕ ಗ್ರಂಥದ ನಾಮಸಂಕ್ಷೇಪಗಳು ನೋಡಿದ ತಕ್ಷಣ ಗ್ರಂಥನಾಮವನ್ನು ನೆನಪಿಸುವಂತಿರಬೇಕು. ಉದಾ: ಪಂಭಾ ; ಶಮದ– ಇತ್ಯಾದಿ. ಈ ಸಂಕ್ಷೇಪ ಉದ್ದಕ್ಕೂ ಒಂದೇ ಬಗೆಯಾಗಿರಬೇಕೇ ಹೊರತು ಒಂದು ಪುಸ್ತಕಕ್ಕೆ ಬೇರೆ ಬೇರೆ ಸಂಕ್ಷೇಪಗಳನ್ನು ಬಳಸುತ್ತ ಹೋಗಬಾರದು. ಹಾಗೆ ಮಾಡಿದರೆ ಅಚ್ಚುಕಟ್ಟುತನ ಹಾಳಾಗುವುದಲ್ಲದೆ ಗ್ರಂಥನಾಮದ ಬಗ್ಗೆ ಸಂದೇಹ ಮೂಡುತ್ತದೆ. ಒಟ್ಟಿನಲ್ಲಿ ಓದುಗನಿಗೆ ಇವು ಗೊಂದಲವನ್ನುಂಟು ಮಾಡುವಂತಿರಬಾರದು.

ಈವರೆಗೆ ವಿವರಿಸಿದ ಸರ್ವಸಂಗತಿಗಳ ಆಧಾರದಿಂದ ಸಂಪಾದನಕಾರ್ಯವನ್ನು ಪೂರೈಸುವ ಸಂಪಾದಕನ ವ್ಯಾಸಂಗವ್ಯಾಪ್ತಿ ಮಿಗಿಲಾಗಿರಬೇಕು. ಸಮಾಜದ ಗರ್ಭದಿಂದ ಕವಿ, ಕವಿಯ ಗರ್ಭದಿಂದ ಕೃತಿ ಮೂಡಿಬಂದಿರುವುದರಿಂದ ಸಮಾಜದ ಪರಿಸ್ಥಿತಿ, ಕವಿಯ ಮನಸ್ಥಿತಿ ಮತ್ತು ಕೃತಿಯ ಮಹತಿಗಳ ಅರಿವಿನ ಹಿನ್ನೆಲೆಯಲ್ಲಿಯೇ ಆತನು ಕಾವ್ಯವನ್ನು ಸಂಪಾದಿಸಬೇಕು. ಒಳ್ಳೆಯ ಕಾವ್ಯ ಸಮಕಾಲೀನ ಮೌಲ್ಯಗಳ, ಸಾರ್ವಕಾಲಿಕ ಆದರ್ಶಗಳ ಕಲಾತ್ಮಕ ಸೃಷ್ಟಿಯಾದುದರಿಂದ ಅಲ್ಲಿ ಅಂದಿನ ಯುಗವೇ ಮಾತನಾಡುತ್ತಿರುತ್ತದೆ. ಇಂಥ ಕಾವ್ಯವನ್ನು ಸಂಪಾದಿಸುವುದೆಂದರೆ ಯುಗವೆಂಬ ಅಖಂಡಶಿಲಾಗರ್ಭದಿಂದ ಗ್ರಂಥಗೊಮ್ಮಟನನ್ನು ಕಂಡರಿಸಿ ತೆಗೆದಂತೆ. ಕಂಡರಣೆ ಪ್ರಸಂಗದಲ್ಲಿ ಕೈತಪ್ಪಿ ಬಿದ್ದ ಉಳಿಯ ಏಟು ಮೂರ್ತಿಯ ಮಾಟವನ್ನೇ ಭಗ್ನಗೊಳಿಸುವ ಹಾಗೆ, ಕಣ್ತಪ್ಪಿ ಮಾಡಿದ ಸಂಪಾದನೆ ಗ್ರಂಥಗೌರವವನ್ನೇ ಹಾಳುಮಾಡುತ್ತದೆ. ಸಮಾಜ ಮತ್ತು ಸಾಹಿತ್ಯಗಳಲ್ಲಿದ್ದುದು ಬಿಂಬ–ಪ್ರತಿಬಿಂಬ ಭಾವ. ಸಾಹಿತ್ಯದಲ್ಲಿ ಕ್ರಮೇಣ ತಲೆಯೆತ್ತಿದ ದುಷ್ಪಪಾಠಗಳಿಂದಾಗಿ ಈ ಅನ್ಯೋನ್ಯಭಾವ ತಪ್ಪಿ ಹೋಗಿರುತ್ತದೆ. ಇಂಥ ದುಷ್ಪಪಾಠಗಳನ್ನು ಋಜುಗೊಳಿಸುವುದೆಂದರೆ ಸಾಹಿತ್ಯ ಮತ್ತು ಸಮಾಜಗಳ ಬಿಂಬ–ಪ್ರತಿಬಿಂಬ ಬಾಂಧವ್ಯವನ್ನು ಪುನಃ ಸ್ಥಾಪಿಸಲು ಮಾಡುವ ಒಂದು ಪ್ರಯತ್ನವಾಗಿದೆ. ದುಷ್ಪಪಾಠಗಳಿಂದಾಗಿ ಯುಗಕ್ಕೆ ಎರವಾದ ಕೃತಿಯನ್ನು ಮತ್ತೆ ಆ ಯುಗಕ್ಕೆ ಆಹ್ವಾನಿಸಿಕೊಳ್ಳುವುದಾಗಿದೆ.

ಉದಾ: ಬಸವರಾಜದೇವರ ರಗಳೆಯಲ್ಲಿ "ಕಂಬಳಿಯ ನಾಗಿದೇವನೆಂಬ ಹಿರಿಯ ಮಾಹೇಶ್ವರನ ಮನೆಯಂ ಪೊಕ್ಕು" ಎಂಬ ವಾಕ್ಯವೊಂದು ಬರುತ್ತದೆ. ಸಂಪಾದಕರು 'ಕಂಬಳಿ' ಎಂಬುದನ್ನು ಸ್ವೀಕರಿಸಿ 'ಸಂಬೋಳಿ' ಎಂಬುದನ್ನು ನಿರಾಕರಿಸಿದ್ದಾರೆ. ಆದರೆ ಹಿಂದಿನ ಕಾಲದಲ್ಲಿ ಹೊಲೆಯರು ಊರನ್ನು ಪ್ರವೇಶಿಸಬೇಕಾದರೆ 'ಸಂಬೋಳಿ, ಸಂಬೋಳಿ' ಎಂದು ಕೂಗುತ್ತ ಬರುವುದು ಸಾಮಾಜಿಕ ವ್ಯವಸ್ಥೆಯಾಗಿದ್ದಿತು. ಇದನ್ನು ಮನದಂದರೆ ಇಲ್ಲಿ 'ಕಂಬಳಿ ನಾಗಿದೇವ'ಕ್ಕೆ ಬರಲು 'ಸಂಬೋಳಿ ನಾಗಿದೇವ'ವೇ ಸತ್ಯಪಾಠವೆಂದು ಮನವರಿಕೆಯಾಗುವುದಲ್ಲದೆ ಆ ಕಾಲದ ಸ್ಪೃಶ್ಯಾಸ್ಪೃಶ್ಯ ಪದ್ಧತಿಯ ಬಗ್ಗೆ ಹೆಚ್ಚಿನ ತಿಳಿವಳಿಕೆ ಮೂಡುತ್ತದೆ. ಹೀಗೆ ಪರಿಷ್ಕರಣ ಮಾಡುವುದೆಂದರೆ ಪ್ರಾಚೀನ ಜನಾಂಗದ ಸಂಸ್ಕೃತಿಯನ್ನು ತೋರಿಸುವ ಒಂದು ಗವಾಕ್ಷಕ್ಕೆ ಆವರಿಸಿದ್ದ ತೆರೆಯನ್ನು ಸರಿಸಿದಂತೆಯೇ ಸರಿ.

ಎಂತಕ್ಕೆ ಎಂತಕ್ಕೆ
ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು ಓ !
ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣು ಓ !
ಮರಳಿ ಭವಕ್ಕೆ ಬಹೆ ಬಾರದಿಹೆ !
ಕರ್ತೃ ಕೂಡಲಸಂಗಂಗೆ ಶರಣೆನ್ನು ಓ !

"ಹೇಗೋ ಪುಣ್ಯವಶಾತ್ ಪಡೆದ ಕಾಯವನ್ನು, ನಾಶವಾಗುವ ಮೊದಲೇ ಪ್ರಸಾದ ಕಾಯವನ್ನಾಗಿ ಮಾಡಿಕೋ; ಸಾಮಗ್ರಿ ಇದ್ದಾಗಲೇ ಅಡಿಗೆ ಮಾಡಿಕೊಳ್ಳುವವನಂತೆ. ನೀನು ಮರಳಿ ಭವಕ್ಕೆ ಬರಬಹುದು ಬರಲಿಕ್ಕಿಲ್ಲ. ಕೂಡಲಸಂಗನಿಗೆ ಶರಣೆನ್ನು" ಎಂದು ಈ ವಚನದ ಅಭಿಪ್ರಾಯ. ಇಲ್ಲಿಯ 'ಮರಳಿ ಭವಕ್ಕೆ ಬಹೆ – ಬಾರದಿಹೆ' ಈ ವಾಕ್ಯ "ನೀನು ಮರಳಿ ಭವಕ್ಕೆ ಬಂದರಂತೂ ಒಳ್ಳೆಯದೆ, ಒಂದು ವೇಳೆ ಬರದೇ ಹೋಗಬಹುದು" ಎಂಬ ಧ್ವನಿಯನ್ನು ವ್ಯಕ್ತಪಡಿಸುತ್ತದೆ. ಆದರೆ ಮರಳಿ ಭವಕ್ಕೆ ಬರಬಾರದೆಂಬ ವೀರಶೈವತತ್ತ್ವದ ಪರಮೋದ್ದೇಶಕ್ಕೆ ಇದು ವಿರುದ್ಧವಾಗಿದೆ. ಆದುದರಿಂದ "ಮರಳಿ ಭವಕ್ಕೆ ಬರದಿಹೆ ಕರ್ತೃ ಕೂಡಲಸಂಗಂಗೆ ಶರಣೆನ್ನು ಓ" ಎಂದು ತಿದ್ದಿಕೊಳ್ಳಬೇಕು. ಆಗ "ಮರಳಿ ಮರ್ತ್ಯಕ್ಕೆ ಬರಬಾರದಿದ್ದರೆ ಒಡೆಯ ಕೂಡಲಸಂಗಯ್ಯನಿಗೆ ಶರಣೆನ್ನು" ಎಂಬ ತತ್ವಮಾನ್ಯ ಅರ್ಥ ಹೊರಡುತ್ತದೆ. ಹೀಗೆ ಮಾಡುವುದರಿಂದ ಮಂಜು ಸರಿದು ತತ್ವಸೂರ್ಯ ಪ್ರತ್ಯಕ್ಷವಾದ ಅನುಭವವಾಗುತ್ತದೆ. ಧೂಳು ತೊಡೆದು ಕನ್ನಡಿಯಲ್ಲಿ ಸ್ವಸ್ವರೂಪದರ್ಶನ ಮಾಡಿಕೊಂಡಂತಾಗುತ್ತದೆ.

ಇದೆಲ್ಲವನ್ನು ಗಮನಿಸಿದರೆ, ಒಂದು ಜನಾಂಗದ ಸಾಮಾಜಿಕ ಧಾರ್ಮಿಕ ಮೌಲ್ಯಗಳ ಅಭ್ಯಾಸಕ್ಕೆ ಭಾಷಾಶಾಸ್ತ್ರ ಮೊದಲಾದವುಗಳಂತೆ ಗ್ರಂಥಸಂಪಾದನಶಾಸ್ತ್ರವೂ ಒಂದು ಸಾಧನವಾಗಬಲ್ಲದು ಎನಿಸುತ್ತದೆ. "ಕವಿಪಾಠವನ್ನು ಕಂಡುಹಿಡಿಯುವುದೇ ಗ್ರಂಥಸಂಪಾದನೆಯ ಪರಮೋದ್ದೇಶವಲ್ಲ....... ಸಾಹಿತ್ಯ–ಜನಜೀವನಗಳ ನಿಕಟಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಅದೊಂದು ಸಾಧನ" ಎಂದು ಸುಪ್ರಸಿದ್ಧ ಸಂಪಾದಕ ಜಾನ್ ನಿಕೋಲೋ ಮಾಡ್ವಿಗ್ ಹೇಳಿದುದು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

ಹೀಗೆ, ಸಂಪಾದನೆಯ ಮೂಲಕ ಕವಿಯ ಆಶಯ, ಸಂದೇಶಗಳು ಸರಿಯಾದ ರೂಪದಲ್ಲಿ ಜನತೆಗೆ ಮುಟ್ಟುವಂತೆ ಮಾಡುತ್ತಾನೆ, ಸಂಪಾದಕ. ಈ ಆಶಯ ಸರಿಯಾಗುವುದು ಆಕಾರವನ್ನು

ಸರಿಪಡಿಸುವುದರಿಂದ. ಕಾರಣ ಸಂಪಾದಕ ಕೃತಿಯ ಆಕಾರಕ್ಕೆ ಸಂಬಂಧಪಟ್ಟ ಭಾಷಾ ಅವಸ್ಥೆ, ಛಂದೋರೂಪಗಳ ಪರಿಜ್ಞಾನವುಳ್ಳವನಾಗಿರಬೇಕು. ಒಂದು ಕೃತಿಯನ್ನು ಸಂಪಾದಿಸುವಲ್ಲಿ ಅದರ ಭಾಷಾ ಅವಸ್ಥೆ ಉಳಿದುಕೊಳ್ಳುವ ರೀತಿಯಲ್ಲಿ ಉಳಿ ಹಚ್ಚಬೇಕಾಗುತ್ತದೆ. ಸಂಪಾದಕ. ವಡ್ಡಾರಾಧನೆಯನ್ನು ಪೂರ್ವದ ಹಳಗನ್ನಡ ಅವಸ್ಥೆಯಲ್ಲಿಯೇ ಕೆತ್ತಿ ತೆಗೆಯಬೇಕು. ಅಂದರೆ ಮೂಲದ ಭಾಷಾರೂಪವನ್ನು ತರುವಾಯದ ಭಾಷಾರೂಪಕ್ಕೆ ತಿರುಗಿಸಬಾರದು. ಉದಾ: "ಅಧಮರಾ ಪೊಲ್ಲಮಾನಸರಾ ದುರ್ಜನರಾ ಜಾರಜಾತರಾ" – "ಅಧಮರ ಪೊಲ್ಲಮಾನಸರ ದುರ್ಜನರ ಜಾರಜಾತಕ." ಒಂದು ಕೃತಿ ಲಿಪಿಕಾರನಿಂದ ಆಧುನಿಕ ರೂಪ ತಾಳಿದ್ದಾದರೆ ಅದನ್ನು ಕೃತಿಕಾಲದ ರೂಪಕ್ಕೆ ಒಯ್ಯಬೇಕು. ಉದಾ: "ಹೊನ್ನನ ಹಂಪನ ಸುಜನೋತ್ತಂಸನ" – "ಪೊನ್ನನ ಪಂಪನ ಸುಜನೋತ್ತಂಸನ." ಇದೇ ರೀತಿ ದೇಶಿ–ಮಾರ್ಗವೆಂದು ನಮ್ಮಲ್ಲಿ ಶೈಲಿಗಳ ಎರಡು ಸೀಳು ಉದ್ದಕ್ಕೂ ಗೋಚರಿಸುತ್ತಿದ್ದು ಅನೇಕ ಕೃತಿಗಳು ಆಯಾ ಶೈಲಿಗಳನ್ನುಂಡು ಬೆಳೆದಿವೆ. ಸಂಪಾದನ ಪ್ರಸಂಗದಲ್ಲಿ ಈ ಶೈಲಿಯ ರಕ್ಷಣೆ ಅತ್ಯವಶ್ಯವೆಂಬುದು ಬಸವಣ್ಣ – ರಾಘವಾಂಕರ

"ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ" [ಉರಗ]

"ಹೊತ್ತಿರ್ದ ಚೋಹಮನಿಳುಹಿ ನಿಜದೊಳು ತೊಳಗೆ" [ವೇಷ]

ಈ ವಾಕ್ಯಗಳನ್ನು ನೋಡಬಹುದು. ಇದಕ್ಕೆ ಪೂರಕವಾಗಿ ಬಳಸಿದ ಛಂದಸ್ಸು, ಅಲಂಕಾರ ಇತ್ಯಾದಿಗಳ ಬಗ್ಗೆಯೂ ಗಮನಕೊಡಬೇಕಾಗುತ್ತದೆ. ಕಾರಣ 'ನಿಮಿಷದ ಉದಾಸೀನ ವರುಷವ ಕೆಡಿಸಿತ್ತು' ಎಂಬ ಮಾತನ್ನು ಧ್ಯಾನಿಸುತ್ತ ಎಚ್ಚರವಹಿಸಿ ಸಂಪಾದನ ಕಾರ್ಯವನ್ನು ಪೂರೈಸಬೇಕು. "ಒಂದು ಮಾತಿನ ಸೋಲ ಗೆಲ್ಲಕ್ಕೆ ಹೋರುವೆ" ಎಂಬಂತೆ ಒಂದು ಪದ ಪ್ರತ್ಯಯ ಪ್ರಸಂಗದಲ್ಲಿಯೂ ಉದಾಸೀನನಾಗದೆ ಸತ್ಯಪಾಠಕ್ಕಾಗಿ ಹೋರಾಟ ನಡೆಸಬೇಕು. ಆಗ ಮಾತ್ರ "To know a word is to know the truth" ಎಂಬ ಮಾತು ಇಲ್ಲಿಯೂ ಅರ್ಥಪಡೆಯುತ್ತದೆ, ಸತ್ಯಪಾಠದ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ.

ಪಾಠವಿಮರ್ಶಕನದು ಇಷ್ಟು ಶ್ಲಾಘನೀಯ ಕಾರ್ಯವಾಗಿದ್ದರೂ ರಸವಿಮರ್ಶಕನಿಗಿರುವ ಆದರ ಅವನಿಗಿಲ್ಲ. ಇದಕ್ಕೆ ಸಹೃದಯರಂತೆ ಈ ಕ್ಷೇತ್ರದಲ್ಲಿ ದುಡಿಯುವ ವಿದ್ವಾಂಸರೂ ಹೊಣೆ ಎನ್ನಬೇಕಾಗಿದೆ. ಪ್ರಾರಂಭದಲ್ಲಿ ಬಹಳಷ್ಟು ಸಂಪಾದಕರು, ಪರಿಷ್ಕರಣವೆಂದರೆ ಹಳೆಯ ಗ್ರಂಥಗಳನ್ನು ಅಚ್ಚಿಸುವ ಸುಲಭಕಾರ್ಯವೆಂಬ ಅಭಿಪ್ರಾಯವನ್ನು ಮೂಡಿಸಿದ್ದರು. ವಿಶೇಷ ಪರಿಶ್ರಮ, ವಿದ್ವತ್ತುಗಳಿಲ್ಲದಿದ್ದರೂ ಅಚ್ಚಿನ ಸೌಕರ್ಯವಿದ್ದವರು ಮಾಡಬಹುದಾದ ಕೆಲಸವೆಂಬ ಮಟ್ಟಕ್ಕೆ ಇಳಿಸಿದ್ದರು. ಇತ್ತೀಚೆಗೆ ಪ್ರತಿಭೆ–ಪಾಂಡಿತ್ಯಗಳು ಮೇಳವಿಸಿದ ಎತ್ತರದ ವ್ಯಕ್ತಿಗಳ ಸಾಧನೆಯಿಂದಾಗಿ ಈ ತಪ್ಪು ಭಾವನೆ ಕ್ರಮೇಣ ಕರಗುತ್ತಲಿದ್ದರೂ ಇನ್ನೂ ಎತ್ತರದ ವ್ಯಕ್ತಿಗಳು ಈ ಕಾರ್ಯದ ಕರ್ಣಧಾರತ್ವ ವಹಿಸಿ, ಈ ಕ್ಷೇತ್ರಕ್ಕೆ ಯೋಗ್ಯ ಬೆಲೆ ಸಿಗುವಂತೆ ಮಾಡಬೇಕಾಗಿದೆ. ಏಕೆಂದರೆ ಒಂದು ಜ್ಞಾನಕ್ಷೇತ್ರದ ಪ್ರಸಿದ್ಧಿಗೆ ಅದರಲ್ಲಿ ದುಡಿಯುವ ಮೇಧಾವಿಗಳು ಹೊಣೆ. ಪದ್ಯ ಸಾಹಿತ್ಯಕ್ಕೆ ಅಗ್ರಪೂಜೆ ಸಲ್ಲುತ್ತಿದ್ದ ಕಾಲದಲ್ಲಿ ಗದ್ಯಕ್ಕೂ ಗದ್ದುಗೆ ಸಿಗುವಂತೆ ಮಾಡಿದ ಬಾಣ, ದಂಡಿ ಮೊದಲಾದವರು 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಹಿರಿಮೆಯನ್ನು ಅದಕ್ಕೆ ತಂದುಕೊಟ್ಟರು. ಇದೇ ರೀತಿ ಗ್ರಂಥಸಂಪಾದನ ಕ್ಷೇತ್ರಕ್ಕೂ ಪ್ರಾಮಾಣಿಕ ದುಡಿಮೆಗಾರರು ಹೆಚ್ಚಿ, ಗ್ರಂಥಸಂಪಾದನೆಯ ಮಹತ್ವ

ಮತ್ತು ಪ್ರಯೋಜನಗಳನ್ನು ಜನತೆಯ ಲಕ್ಷ್ಯಕ್ಕೆ ತಂದು ಅದರ ಬಗ್ಗೆ ಹೆಚ್ಚಿನ ಆಕರ್ಷಣೆ, ಯೋಗ್ಯ ಅಭಿಪ್ರಾಯಗಳನ್ನು ಮೂಡಿಸಬೇಕಾಗಿದೆ. ಗ್ರಂಥಸಂಪಾದನೆಯೆನ್ನುವುದು ಕವಿಪಾಠದ ಸತ್ಯ ಸಾಕ್ಷಾತ್ಕಾರಕ್ಕೆ ನಡೆಸಿದ ಒಂದು ಜ್ಞಾನಯಾತ್ರೆಯೆಂಬ, ಹತ್ತು ಹಸ್ತಪ್ರತಿಗಳನ್ನು ಇಟ್ಟುಕೊಂಡು ಹನ್ನೊಂದನೆಯ ಮಿಶ್ರಪ್ರತಿಯನ್ನು ಸಿದ್ಧಪಡಿಸುವುದಾಗಿರದೆ ಮೂಲಪ್ರತಿಯನ್ನು ರೂಪಿಸಿಕೊಡುವ ಪ್ರಯತ್ನವಾಗಿದೆಯೆಂಬ ಭಾವನೆಯನ್ನು ಮೂಡಿಸಬೇಕಾಗಿದೆ. ಷೇಕ್ಸಪಿಯರ್‌ನ ಗ್ರಂಥಗಳನ್ನು ಪರಿಷ್ಕರಿಸಿ ಬೆಂಟ್ಲಿ ಎಂಬುವನನ್ನು "ಕತ್ತೆಹಾಲಿನಿಂದ ಬೆಳೆದ ಬುದ್ಧಿಯುಳ್ಳವನು" ಎಂದು ಹಾಸ್ಯ ಮಾಡಿದ ಪೋಪನು, ಮುಂದೆ ಈ ಪರಿಷ್ಕರಣ ಕಾರ್ಯದಿಂದ ಅವನಿಗೆ ಬಂದ ಕೀರ್ತಿಯನ್ನೂ ಹಣವನ್ನೂ ನೋಡಿ ತಾನೂ ಆ ಕಾರ್ಯ ಪ್ರಾರಂಭಿಸಿದನಂತೆ. ಇದೇ ರೀತಿ ಈಗ ಮೂಗು ಮುರಿಯುವವರೆಲ್ಲರೂ ನಿಜವಾದ ತಿಳಿವಳಿಕೆ ಉಂಟಾದಾಗ ಸಂಪಾದನೆಯ ಬಗ್ಗೆ ಗೌರವತೋರಿಸಬಹುದು. ಇಷ್ಟಾಗಿಯೂ ಗೌರವತೋರಿಸದಿದ್ದರೆ ಅವರಿಗೆ ಆ ವಿಷಯದ ಬಗ್ಗೆ ಇರುವ ಅಜ್ಞಾನಕ್ಕೆ ಮರುಕಪಡಬೇಕಾಗುತ್ತದೆ. ಇಲ್ಲವೆ ತನಗೆ ರುಚಿಸದ ಅಥವಾ ತಾನು ನಿಲುಕಿಸಿಕೊಳ್ಳಲಾಗದ ವಸ್ತುವನ್ನು ದೂಷಿಸುವುದು ಮನುಷ್ಯ ಸಹಜವೆಂದು ಭಾವಿಸಬೇಕಾಗುತ್ತದೆ.

ಕೊನೆಯ ಮಾತು : ನಮ್ಮ ನಾಡಿನಲ್ಲಿ ಸಾಹಿತ್ಯ ಸಂಪಾದನಕಾರ್ಯ ಒಂದು ಶತಮಾನದಿಂದ ನಡೆಯುತ್ತಲಿದ್ದರೂ ಈ ವಿಷಯವನ್ನು ಕುರಿತು ಅಲ್ಲಲ್ಲಿ ಬಂದ ಎರಡು ಮೂರು ಲೇಖನಗಳನ್ನು ಬಿಟ್ಟರೆ ಗ್ರಂಥರೂಪದ ಪ್ರಯತ್ನಗಳೆಂದರೆ ಡಿ. ಎಲ್. ನರಸಿಂಹಾಚಾರ್ ಅವರ "ಕನ್ನಡ ಗ್ರಂಥ ಸಂಪಾದನೆ" ಮತ್ತು ಪ್ರಸ್ತುತ ಲೇಖಕನ "ಕನ್ನಡ ಗ್ರಂಥ ಸಂಪಾದನಶಾಸ್ತ್ರ." ಗ್ರಂಥಾಲಯ ವಿಜ್ಞಾನ (Library Science) ಮೊದಲಾದ ಆಧುನಿಕ ವಿಜ್ಞಾನಗಳ ಬಗ್ಗೆ ಪ್ರತಿವರ್ಷ ಅನೇಕ ಗ್ರಂಥಗಳು ಹುಟ್ಟುತ್ತಲಿದ್ದರೂ "ಗ್ರಂಥಸಂಪಾದನಾಶಾಸ್ತ್ರ"ದ ಬಗೆಗೆ ಕೇವಲ ಎರಡು ಗ್ರಂಥಗಳು ಹುಟ್ಟಿದುದು ತುಂಬ ವಿಷಾದದ ಸಂಗತಿ. ಅದು ಹೋಗಲಿ ಕನ್ನಡವನ್ನು ಗುರಿಯಿಟ್ಟು ಬರೆದ ಈ ಎರಡೂ ಗ್ರಂಥಗಳಲ್ಲಿ ಸಾಮ್ಯಕ್ಕಿಂತ ವೈಷಮ್ಯದ ಪ್ರಮಾಣವೇ ಅಧಿಕವಾಗಿರುವುದರಿಂದ ವೈಜ್ಞಾನಿಕ ದೃಷ್ಟಿಯಿಂದ ಅವುಗಳ ಸರಿತಪ್ಪುಗಳನ್ನು ಅದೂ ವಿಶ್ವವಿದ್ಯಾಲಯದ ವೇದಿಕೆಯ ಮೇಲೆ ಪಠ್ಯವಾಗಿ ಬೋಧಿಸುವವರು ಎತ್ತಿ ಹೇಳದುದು ಈ ಶಾಸ್ತ್ರದ ಬಗ್ಗೆ ಇರುವ ವಿದ್ವಾಂಸರ ಉಪೇಕ್ಷೆಯನ್ನು ತೋರಿಸುತ್ತದೆ.

❖❖

೨

❖

ಶಾಸನಸಾಹಿತ್ಯ ಸಂಪಾದನೆ

ಒಂದು ಜನಾಂಗದ ಇತಿಹಾಸವನ್ನು ರಚಿಸುವಲ್ಲಿ ಪ್ರಾಚೀನಕಾಲದಿಂದ ಉಳಿದು ಬಂದ ಸರ್ವಸಾಮಗ್ರಿಗಳೂ ಪರಂಪರೆಯಾಗಿ ನಡೆದು ಬಂದ ಸಂಪ್ರದಾಯ ವಿಶೇಷಗಳೂ ಪ್ರಯೋಜಕವೆನಿಸುತ್ತವೆ. ಭೂಮಿಯ ಮೇಲೆ ಹರಡಿರುವ, ಭೂಮಿಯ ಒಳಗೆ ಅಡಗಿರುವ ಈ ಸಾಮಗ್ರಿಯನ್ನು–

೧. ಅವಶೇಷಗಳು (Antiquities)

೨. ಬರವಣಿಗೆಗಳು (Writings)

೩. ವದಂತಿಗಳು (Hear says)

೪. ಆಚರಣೆಗಳು (Rituals)

ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಅವಶೇಷಗಳು ಮೂಕವಸ್ತು, ವದಂತಿ–ಆಚರಣೆ ನೀರಕ್ಷೀರದ ತೊರೆ, ಬರವಣಿಗೆ ಅದರಲ್ಲಿಯೂ ಶಾಸನ ಬರವಣಿಗೆ ಮಾತ್ರ ಅಕ್ಷರರೂಪದಲ್ಲಿ ಮಾತನಾಡುವ ಐತಿಹಾಸಿಕ ಘಟನೆ. ಹೀಗಾಗಿ ಗತಕಾಲವನ್ನು ಅರ್ಥಮಾಡಿಕೊಳ್ಳುವವರಿಗೆ ಶಾಸನಗಳಷ್ಟು ಪ್ರಾಮಾಣಿಕ ಆಧಾರ ಮತ್ತೊಂದು ಸಿಗುವುದಿಲ್ಲ.

ಭಾರತ, ಶಾಸನಗಳ ಶ್ರೀಮಂತಭಾಂಡಾರ. ಅದಕ್ಕೆ ಈ ಖ್ಯಾತಿಯನ್ನು ಒದಗಿಸಿ ಕೊಟ್ಟ ಪ್ರಾಂತಗಳಲ್ಲಿ ಕರ್ನಾಟಕಕ್ಕೆ ಅಗ್ರಪಂಕ್ತಿ ಸಲ್ಲುತ್ತದೆ. ಕ್ರಿ. ಶ. ಪೂ. ೩ನೆಯ ಶತಮಾನದ ಅಶೋಕನ ಶಾಸನಗಳೇ ಈ ನಾಡಿನ ಪ್ರಾಚೀನತಮ ಬರವಣಿಗೆ. ಅಂದಿನಿಂದ ಭಾಷೆ, ಲಿಪಿ, ಸಾಹಿತ್ಯ, ಸ್ವರೂಪದೃಷ್ಟಿಯಿಂದ ಹಲವು ಘಟ್ಟಗಳನ್ನು ರೂಪಿಸಿಕೊಂಡು ಸುಮಾರು ೨೫ ಸಾವಿರ ಶಾಸನಗಳು ಕರ್ನಾಟಕದಲ್ಲಿ ಹೀಗೆ ಬೆಳೆದು ಬಂದಿವೆ.[೧]

---

೧. ಶಾಸನವ್ಯಾಸಂಗ–I ಪು : ೧೩೦ (ಎಂ. ಎಂ. ಕಲಬುರ್ಗಿ) ನೋಡಿರಿ.

೧. ಪ್ರಾಕೃತಶಾಸನ ಯುಗ – ಕ್ರಿ. ಶ. ಪೂ. ೩೦೦ – ಕ್ರಿ. ಶ. ೪೫೦.

೨. ಕವಿರಾಜಮಾರ್ಗಪೂರ್ವಯುಗ – ಕ್ರಿ. ಶ. ೪೫೦ – ೮೫೦.

೩. ಸಂಕ್ರಮಣಯುಗ – ಕ್ರಿ. ಶ. ೮೫೦ – ೯೭೫.

೪. ಸುವರ್ಣಯುಗ – ಕ್ರಿ. ಶ. ೯೭೫ – ೧೩೩೬.

೫. ಸಾಮಾನ್ಯಯುಗ – ಕ್ರಿ. ಶ. ೧೩೩೬ – ೧೮೫೦.

ಹೀಗೆ ಬೆಳೆದುಬಂದ ನಮ್ಮ ನಾಡಿನ ಶಾಸನಗಳ ಪರಿವೀಕ್ಷಣೆ ಮತ್ತು ವಾಚನಕಾರ್ಯವನ್ನು ಮೊದಲು ಕೈಕೊಂಡವ ಕರ್ನಲ್ ಮೆಕೆಂಝಿ. ಅಂದಿನಿಂದ ಕರ್ನಾಟಕದ ಶಾಸನಗಳ ಅಧ್ಯಯನದಲ್ಲಿ

೧. ಕರ್ನಲ್ ಮೆಕೆಂಝಿ ಯುಗ.

೨. ವಾಲ್ಟರ್ ಇಲಿಯಟ್ ಯುಗ.

೩. ರೈಸ್ – ಫ್ಲೀಟ್‌ಯುಗ.

ಎಂಬ ಮೂರು ಘಟ್ಟಗಳು ತಲೆದೋರಿವೆ.[2] ಈ ಮೂರು ಘಟ್ಟಗಳಲ್ಲಿ ಅನೇಕ ವ್ಯಕ್ತಿಗಳು, ಸರಕಾರಿ – ಸಾರ್ವಜನಿಕ ಸಂಸ್ಥೆಗಳು ದುಡಿಯುತ್ತ ಬಂದಿವೆ. ದಕ್ಷಿಣ ಕರ್ನಾಟಕದಲ್ಲಿ ಬಹುಮಟ್ಟಿಗೆ ಪೂರ್ಣವಾಗಿ ಉತ್ತರ ಕರ್ನಾಟಕದಲ್ಲಿ ಅಪೂರ್ಣವಾಗಿ ನಡೆದ ಇವುಗಳ ಪರಿವೀಕ್ಷಣ ಕಾರ್ಯ ಹೊರನಾಡಿನಲ್ಲಿ ತುಂಬ ಅಲಕ್ಷಿಸಲ್ಪಟ್ಟಿದೆ. ಇದಕ್ಕೆ ಹೊಂದಿ ಅವುಗಳ ಪರಿಷ್ಕರಣ ಕಾರ್ಯವೂ ಅಷ್ಟು ತೃಪ್ತಿದಾಯಕವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕಾರಣ ಶಾಸನಸಂಪಾದನೆಯ ಬಗ್ಗೆ ಆಲೋಚಿಸುವುದು ಇಂದು ತೀರ ಅವಶ್ಯವಿದೆ.

ಪಾಠಪರಿಷ್ಕರಣ ವಿಧಾನಗಳು ಭಾಷೆಯಿಂದ ಭಾಷೆಗೆ ಕೆಲಮಟ್ಟಿಗೆ ಭಿನ್ನವಾಗಿರುವಂತೆ ಗ್ರಂಥಗಳ ಪಾಠಪರಿಷ್ಕರಣ ವಿಧಾನಕ್ಕಿಂತ ಶಾಸನಗಳ ಪಾಠಪರಿಷ್ಕರಣ ವಿಧಾನವೂ ಕೆಲಮಟ್ಟಿಗೆ ಭಿನ್ನವಾಗಿದೆ. ಅಂದರೆ ಕಳೆದುಹೋದ ಮೂಲಪಾಠವನ್ನು ಹಲವು ಹಸ್ತಪ್ರತಿಗಳ ಬಲದಿಂದ ಗುರುತಿಸುವುದು ಗ್ರಂಥಸಂಪಾದನೆಯಾಗಿದ್ದರೆ, ಶಾಸನಸ್ಥ ಪಾಠವನ್ನು ಸರಿಯಾಗಿ ಓದುವುದೇ ಶಾಸನ ಸಂಪಾದನೆಯಾಗಿದೆ. ಅವಶ್ಯವೆನಿಸಿದರೆ ಮಾತ್ರ ಅಶುದ್ಧ ಮತ್ತು ನಷ್ಟಭಾಗಗಳಲ್ಲಿ ಶುದ್ಧಪಾಠವನ್ನು ಊಹಿಸುವುದಕ್ಕೆ ಇಲ್ಲಿ ಅವಕಾಶವಿರುತ್ತದೆ.

ಕವಿ, ಲಿಪಿಕಾರ, ರೂವಾರಿಗಳ ಬುದ್ಧಿಮಟ್ಟವನ್ನವಲಂಬಿಸಿ ಪ್ರತಿಯೊಂದು ಶಾಸನ, ನಿರ್ಮಾಣಪ್ರಸಂಗದಲ್ಲಿ ಶುದ್ಧವೋ, ಅಶುದ್ಧವೋ ಆದ ಒಂದು ಪಾಠವನ್ನು ಧರಿಸಿರುತ್ತದೆ. ನಿರ್ಮಾಣೋತ್ತರಕಾಲದಲ್ಲಿ ಅದು ಹಲವು ಅಪಘಾತಗಳಿಗೆ ಗುರಿಯಾಗುತ್ತ ಬಂದು ಸಂಪಾದಕನು ಪಡಿಯಚ್ಚು ತೆಗೆದುಕೊಳ್ಳುವ ಹೊತ್ತಿಗೆ ಇನ್ನೊಂದು ಪಾಠ ಧರಿಸಿನಿಂತಿರುತ್ತದೆ. ಪಡಿಯಚ್ಚು ತೆಗೆದುಕೊಳ್ಳುವಾಗ, ತೆಗೆದುಕೊಂಡ ಪಡಿಯಚ್ಚನ್ನು ಪ್ರಕಟಿಸುವಾಗ ಇನ್ನೂ ಒಂದು ಪಾಠ ಧರಿಸುವ

೨. ಶಾಸನವ್ಯಾಸಂಗ I ಪು : ೧೩೧ (ಎಂ. ಎಂ. ಕಲಬುರ್ಗಿ) ನೋಡಿರಿ.

ಸಂಭವವಿದೆ. ಈ ಮೂರು ಪ್ರಸಂಗಗಳಲ್ಲಿ ತಲೆದೋರುವ ಪ್ರಮಾದಗಳ ಕಾರಣ ಮತ್ತು ಸ್ವರೂಪಗಳನ್ನು ಮೊದಲು ಅವಲೋಕಿಸಬಹುದು.

೧. ಶಾಸನ ನಿರ್ಮಾಣಪ್ರಸಂಗ: ಒಂದು ಶಾಸನ ನಿರ್ಮಾಣಕಾರ್ಯದಲ್ಲಿ ಕವಿ, ಲಿಪಿಕಾರ, ಮತ್ತು ರೂವಾರಿ ಹೀಗೆ ಸಾಮಾನ್ಯವಾಗಿ ಮೂವರ ಕೈವಾಡವಿರುತ್ತದೆ. ಕವಿಯೇ ಈ ಮೂರು ಕಾರ್ಯ ಮಾಡಿದ್ದರೆ ಇಲ್ಲವೆ ಕವಿಯ ನೇತೃತ್ವದಲ್ಲಿ ಈ ಕಾರ್ಯ ಕೈಗೂಡಿದ್ದರೆ ಶಾಸನದಲ್ಲಿ ನಿರ್ದಿಷ್ಟಪಾಠ ನೆಲೆಗೊಳ್ಳುತ್ತದೆ. ಆ ಶಾಸನಕ್ಕೆ ಕವಿಹಸ್ತಾಕ್ಷರಪ್ರತಿ ಇಲ್ಲವೆ ಮೂಲಪ್ರತಿಯೆಂಬ ಬೆಲೆ ಸಲ್ಲುತ್ತದೆ. ಆದರೆ "ಮಾರಮರಸಂ ಹೇಳ್ದು ತಾನೆ ಬರೆದ ಶಾಸನಂ"[೩] ಎಂಬಂತೆ ಕವಿಯೇ ಲಿಪಿಕಾರನ ಕಾರ್ಯವನ್ನು, "ಹುಲಿಗೆರೆಯ ಬಮ್ಮೋಜ ತಾನೆ ಬರೆದು ತಾನೆ ಕಂಡರಿಸಿದಂ"[೪] ಎಂಬಂತೆ ರೂವಾರಿಯೇ ಲಿಪಿಕಾರನ ಕಾರ್ಯಮಾಡಿದ್ದರೆ ಅದಕ್ಕೆ ಎರಡನೆಯ ನಕಲುಪ್ರತಿಯೆಂಬ ಬೆಲೆ ಸಲ್ಲುತ್ತದೆ. "ಜನ್ನಯ್ಯನ ಕವಿತೆ, ದಾವಣ್ಣನ ಬರೆಪ, ಮಲ್ಲೋಜನ ಕಂಡರಣೆ"[೫] ಎಂಬಂತೆ ಮೂರು ಕಾರ್ಯಗಳು ಒಬ್ಬೊಬ್ಬರಿಂದ ನಡೆದಿದ್ದರೆ ಅದು ಮೂರನೆಯ ನಕಲುಪ್ರತಿಯೆನಿಸಿಕೊಳ್ಳುತ್ತದೆ. ಹೀಗಾಗಿ ಈ ಮೂವರಿಂದ ಕೆಳಗಣ ರೀತಿಯ ದೋಷಗಳು ಬೆಳೆದುಬರುತ್ತದೆ.

೧. ಶಾಸನಕ್ಕೆ ಬರವಣಿಗೆಯನ್ನು ಒದಗಿಸಿಕೊಡುವವರನ್ನು ನಿಯುಕ್ತಲೇಖಕ, ಹವ್ಯಾಸಿಲೇಖಕ ಎಂದೂ, ಹವ್ಯಾಸಿಲೇಖಕರನ್ನು ವಿದ್ವಾಂಸ ಮತ್ತು ಸಾಮಾನ್ಯ ಎಂದೂ ವರ್ಗೀಕರಿಸಬಹುದು. ನಿಯುಕ್ತಲೇಖಕರು ಅರಸನಿಂದ ನಿಯಮಿಸಲ್ಪಟ್ಟವರು. ಶಾಸನಗಳಲ್ಲಿ ಕಂಡು ಬರುವ ಶ್ರೀಕರಣ, ಪತ್ತಳಾಧಿಕರಣ, ಕರಣಿಕ, ಶಾನುಭೋಗ ಮೊದಲಾದವರು ಈ ವರ್ಗಕ್ಕೆ ಸೇರುತ್ತಾರೆ. ಇವರು ಒದಗಿಸುವ ಶಾಸನಪಾಠ ಪೂರ್ವಸಿದ್ಧವಿದ್ದು ಘಟನೆಯ ಮಟ್ಟಿಗೆ ವ್ಯತ್ಯಾಸವಾಗಿರುತ್ತದೆ. ವಿಜಯನಗರ ಅರಸರಾದ ಕೃಷ್ಣದೇವರಾಯ, ಅಚ್ಯುತರಾಯರ ಕಾಲದ ಸಭಾಪತಿ, ಅಚ್ಯುತರಾಯ, ಸದಾಶಿವರಾಯ, ತಿರುಮಲರಾಯರ ಕಾಲದ ಸ್ವಯಂಭಾ, ವೆಂಕಟಪತಿರಾಯನ ಕಾಲದ ಕಾಮಕೋಟಿ, ರಂಗರಾಯನ ಕಾಲದ ರಾಮ–ಇವರು ಒಬ್ಬನ ಮಗ ಇನ್ನೊಬ್ಬನಾಗಿದ್ದು ಆನುವಂಶಿಕವಾಗಿ "ಶಾಸನಕವಿವೃತ್ತಿ"ಯನ್ನು ನಡೆಸಿಕೊಂಡು ಬಂದದ್ದನ್ನು ಇಲ್ಲಿ ನೆನೆಯಬೇಕು.

ಕೆಲವು ಸಲ ಹವ್ಯಾಸಿಗಳೆಂಬಂತೆ ಆಸ್ಥಾನದ ಇಲ್ಲವೆ ಆಯಾ ಗ್ರಾಮದ ವಿದ್ವಾಂಸ ಕವಿಗಳೂ ಪಾಠವನ್ನು ಪೂರೈಸುವುದುಂಟು. ಜನ್ನ, ಶಾಂತಿನಾಥ ಮೊದಲಾದವರು ಇದಕ್ಕೆ ಉದಾಹರಣೆಯೆನಿಸಿದ್ದಾರೆ. ಹಳ್ಳಿಯಲ್ಲಿ ಜರುಗಿದ ಒಂದು ಸಾಮಾನ್ಯ ಘಟನೆಗೆ ನಿಯುಕ್ತಲೇಖಕನಿಂದಾಗಲೀ, ವಿದ್ವಾಂಸಕವಿಯಿಂದಾಗಲೀ ಪಾಠವನ್ನು ಪಡೆಯುವುದು ಸಾಧ್ಯವಾಗುವುದಿಲ್ಲ. ಆಗ ಅಲ್ಲಿಯ ಸಾಮಾನ್ಯ ಅಕ್ಷರಜ್ಞನೇ ಆ ಕಾರ್ಯವನ್ನು ಪೂರೈಸಿಕೊಡುತ್ತಾರೆ. ಈ ಮೂವರಲ್ಲಿ (ನಿಯುಕ್ತಕವಿ, ವಿದ್ವಾಂಸಕವಿ, ಸಾಮಾನ್ಯ ಅಕ್ಷರಜ್ಞ) ಮೊದಲಿನ ಇಬ್ಬರು ಗ್ರಂಥಸ್ಥ ಭಾಷೆಯಲ್ಲಿ, ಮೂರನೆಯವನು ಆಡುಭಾಷೆಯಲ್ಲಿ ಪಾಠವನ್ನು ರಚಿಸುತ್ತಾರೆ. ಹೀಗಾಗಿ ನಮ್ಮ

---

೩. ಕ.ಕ.ಚ. ೧. ಪು. ೫೨೮. ಹಂಪೆಯ ಶಾಸನ (ಕ್ರಿ. ಶ. ೧೧೯೯)
೪. S.I.I. XX. ಪುಟ ೯೫ ಬಾಳಂಬೀಡ, ಧಾರವಾಡ ಜಿಲ್ಲೆ (ಕ್ರಿ. ಶ. ೧೧೧೮).
೫. E.C. V-ii. ಚನ್ನರಾಯಪಟ್ಟಣ, ೧೭೯–ಆನೇಕೆರೆ (ಕ್ರಿ. ಶ. ೧೧೯೦)

ಶಾಸನಗಳನ್ನು ಭಾಷಾದೃಷ್ಟಿಯಿಂದ ಗ್ರಂಥಸ್ಥಭಾಷೆಯ ಶಾಸನ ಮತ್ತು ಆಡುಭಾಷೆಯ ಶಾಸನ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಒಂದರೊಳಗೆ ಭಾಷಾದೋಷ ಕಡಿಮೆ, ಇನ್ನೊಂದರಲ್ಲಿ ಭಾಷಾದೋಶ ಅಧಿಕ. ಈ ದೋಷಗಳನ್ನು ಬರವಣಿಗೆಯ ರೀತಿದೋಷ (ಹ್ರಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ, ಒತ್ತು ವಿಧಾನ, ಪದವಿನ್ಯಾಸ), ಉಚ್ಚಾರ ರೀತಿದೋಷ (ನಡೆದು ಪಸಾಯ್ತಂ ಪತಿಗೆ ದಟ್ಟಡಿಯೊಳ್),[೬] ಅನವಧಾನದೋಷ (ಲೋಪ : ಸ್ಮರರಾಜಧಾನಿಯೊ-ಸ್ವರರಾಜ ರಾಜಧಾನಿಯೊ,[೭] ಆಗಮ : ಪಲಸಿಗೆ ಪಲಸಿಗೆ ಪನ್ನಿರ್ಚ್ಛಾಸಿರಮುಮಂ,[೮] ಆದೇಶ : ಶ್ರೀ ಸಂಗಮೇಶನ ಪುತ್ರ ಬಸವಯ್ಯ ಬಂಕನದಜೆಂ)[೯] ಎಂದು ಬಿಡಿಸಿ ಹೇಳಬಹುದು. ಇಂಥವೇ ದೋಷಗಳನ್ನು ಲಿಪಿಕಾರನೂ ಮಾಡಬಹುದು.

೨. ಕವಿಯಿಂದ ಪಡೆದ ಪಾಠವನ್ನು ಲಿಪಿಕಾರ ಕಲ್ಲ ಮೇಲೆ ಬರೆದುಕೊಡುತ್ತಾನೆ. ಸಾಮಾನ್ಯವಾಗಿ ಈತನು ಲಿಪಿತಜ್ಞ, ಹೀಗಾಗಿ ಅಕ್ಷರಮಾತ್ರ ಅಂದವಾಗಿದ್ದು ಭಾಷೆ ಅಶುದ್ಧವಾಗಿರುವ ಸಾಧ್ಯತೆಯಿರುವುದರಿಂದ ಕವಿ ಬರೆದುಕೊಟ್ಟ ಶುದ್ಧಪಾಠವನ್ನು ಅಶುದ್ಧವಾಗಿ ಬರೆವ ಸಂಭವವಿದೆ. ಕೆಲವು ಸಲ ಕವಿಯ ಅಂದವಲ್ಲದ ಅಕ್ಷರಗಳು ಇವನಿಂದ ತಪ್ಪುಗಳನ್ನು ಮಾಡಿಸುತ್ತವೆ. ಇದಲ್ಲದೆ ಕವಿ ಮಾಡಬಹುದಾದ ಮೇಲಿನ ಎಲ್ಲ ಬಗೆಯ ಲೋಪ, ಆಗಮ, ಆದೇಶ ದೋಷಗಳನ್ನು ಈತನೂ ಮಾಡುವ ಸಾಧ್ಯತೆಯಿದೆ.

೩. ಈ ಮೂವರಲ್ಲಿ ನಿರಕ್ಷರಿಯೆಂದರೆ ರೂವಾರಿ. ಭಾಷಾಶುದ್ಧಿ-ಲಿಪಿ ಸ್ವರೂಪಗಳಿಗೂ ಈತನಿಗೂ ತುಂಬ ದೂರ. ಹೀಗಾಗಿ ಲಿಪಿಕಾರ ಬರೆದುದನ್ನು ತನಗೆ ಕಂಡಂತೆ ಕಂಡರಿಸುವಾಗ ಹೇರಳ ಪಾಠದೋಷಗಳು ಅವತರಿಸುತ್ತವೆ. ಅಕ್ಷರಜ್ಞನಲ್ಲದ ಕಾರಣ ಇವನಿಂದ ಸಣ್ಣಪುಟ್ಟ ಸಂಜ್ಞೆಗಳ ಲೋಪ (ಕಾಗುಣಿತ ಗುರುತು, ಅನುಸ್ವಾರ ಇತ್ಯಾದಿ), ಒಂದು ಅಕ್ಷರಕ್ಕೆ ಬದಲು ಇನ್ನೊಂದು ಅಕ್ಷರ ಕೆತ್ತುವ ಆದೇಶ (ಪ-ವ, ಕ-ತ-ಇತ್ಯಾದಿ) ಉಂಟಾಗುತ್ತವೆಯೇ ಹೊರತು, ಆಗಮವಾಗುವುದಿಲ್ಲ. ಕವಿ-ಲಿಪಿಕಾರರು ಶಬ್ದವನ್ನು ಬರೆಯುತ್ತಿದ್ದರೆ ಈತನು ಕುರುಡು ಅನುಸರಣೆಯಿಂದ ಅಕ್ಷರವನ್ನು ಕೊರೆಯುತ್ತಾನೆ. ಇದಕ್ಕೆ ಹೆಚ್ಚಿನದಾಗಿ ಉಳಿಯ ಹೊಡೆತದಿಂದ ಚೆಕ್ಕೆಹಾರಿ ಅಕ್ಷರದ ರೂಪ ವಿರೂಪವಾಗಬಹುದು. ಇಲ್ಲವೆ ಬೇರೊಂದು ಅಕ್ಷರದ ರೂಪಪಡೆಯಬಹುದು. (ಉದಾ: ಆ ಸಾಗರಮಂ ದಾಂಟ ಮಹೀಸಂತೆಯಂ ಕಂಡು ಲಂಕೆಯಂ ಸುಟ್ಟು .....).[೧೦] ಯಾವುದೋ ಕಾರಣಕ್ಕಾಗಿ ಈತನು ಶಾಸನವನ್ನು ಅರ್ಧಕೊರೆದು ಬಿಟ್ಟಿರುತ್ತಾನೆ (ಉದಾ: ಮುಗದ ಶಾಸನ)[೧೧] ಇದರಿಂದಾಗಿ ಮಿಕ್ಕರ್ಧ ಬಣ್ಣದ ಬರವಣಿಗೆ ಉಳಿದುಕೊಂಡಿರುವ ಕೆಲವು ಶಾಸನಗಳು ಅಲ್ಲಲ್ಲಿ ಸಿಗುತ್ತವೆ.[೧೨] ಹೀಗೆ ಕವಿ, ಲಿಪಿಕಾರ, ರೂವಾರಿಗಳು ಕಾರಣವಾಗಿ ಶಾಸನಗಳಲ್ಲಿ ದೋಷಗಳು ತಲೆದೋರುತ್ತವೆ.

---

೬. E. I. XVI. ಪುಟ ೩೨೦ ನರೇಂದ್ರ - ಧಾರವಾಡ ಜಿಲ್ಲೆ (ಕ್ರಿ. ಶ. ೧೧೨೩-೨೬).
೭. S.I.I. IX -i ಪು. ೩೨೨. ಕುರುಗೋಡ-ಬಳ್ಳಾರಿ ಜಿಲ್ಲೆ (ಕ್ರಿ. ಶ. ೧೧೭೭).
೮. ತಂಬೂರ ಶಾಸನಗಳು (ಆರ್. ಎನ್. ಗುರವ) ಸಾಧನೆ. ೬-೧. ಒಉಟ ೮೭.
೯. ಶಾಸನಗಳಲ್ಲಿ ಶಿವಶರಣರು (ಪ್ರಥಮಾವೃತ್ತಿ) ಪುಟ ೬೨.
೧೦. S.I.I. XI -ii ಪು. ೧೫೪. ಕುರ್ತಕೋಟಿ - ಧಾರವಾಡ ಜಿಲ್ಲೆ (ಕ್ರಿ. ಶ. ೧೨೫೭)
೧೧. ಧಾರವಾಡ ತಾಲೂಕಿನ ಶಾಸನಗಳು. ನಂ. ೫೮.
೧೨. ಕೊಪ್ಪಳ, ಕ. ಭಾ.

ದ್ವಿಪ್ರತಿ ಇರಲಿಯೆಂಬ ದೃಷ್ಟಿಯಿಂದಲೋ ಮೊದಲಿನದು ಒಡೆದು ಹೋದುದಕ್ಕಾಗಿಯೋ ಕೆಲವು ಶಾಸನಗಳು ಅದೇ ಕಾಲದಲ್ಲಿ ಕಾಲಾಂತರದಲ್ಲಿ ಮತ್ತೊಮ್ಮೆ ನಕಲುಗೊಳ್ಳುತ್ತವೆ. ಉದಾ: ಬುಕ್ಕರಾಯನ ನ್ಯಾಯಶಾಸನ ಶ್ರವಣಬೆಳ್ಗೊಳ ಮತ್ತು ಕಲ್ಯ ಊರುಗಳಲ್ಲಿ ಕೆಲವು ಪಾಠಭೇದಗಳೊಂದಿಗೆ ಸಿಗುತ್ತದೆ.[೧೩] ಇದು ದ್ವಿಪ್ರತಿಶಾಸನ. ಅತ್ತಿಮಬ್ಬೆಯನ್ನು ಕುರಿತ ಲಕ್ಕುಂಡಿಯ ಶಾಸನ ಒಡೆದುಹೋಗಲು ತಿದ್ದಿಬೆಳೆಸಿದ ಆವೃತ್ತಿರೂಪದ ಬೇರೊಂದು ಶಾಸನ ಬರೆಯಲಾಗಿದ್ದು ಎರಡೂ ಶಾಸನಗಳಲ್ಲಿಯ ಪಾಠಭೇದವನ್ನು ತೀ. ನಂ. ಶ್ರೀ ಎತ್ತಿ ತೋರಿಸಿರುವರು.[೧೪] ತಾಮ್ರಶಾಸನವನ್ನು ಶಿಲಾಶಾಸನಗೊಳಿಸಿದುದಕ್ಕೆ "ಶ್ರೀ ಮನ್ಮಹಾಸ್ಥಾನಂ ಕೊಳನೂರು ಮಹಾಪ್ರಭು ಪುಲಿಯಮರಸರುಂ ಮೂಱುಪುರ ಪಂಚಮಠ ಸ್ಥಾನಂಗಳುಂ ತಾಮ್ರಶಾಸನಮಂ ನೋಡಿ ಬರೆಯಿಮೆನಲ್ಕಾಶಾಸನದೊಳೆಂತಿರ್ದುದಂತೀ ಶಿಳಾಶಾಸನಮಂ ಶ್ರೀ ವೀರನಂದಿಸೈದ್ಧಾಂತಿಕ ಚಕ್ರವರ್ತಿಗಳು ಬರೆಯಿಸಿದರು" ಎಂಬ ಕೊಣ್ಣೂರ ಶಾಸನದ ಈ ಪೀಠಿಕೆಯನ್ನು ನೋಡಬಹುದು.[೧೫] "ಎಂತಿರ್ದುದಂತೆ" ಬರೆಯಬೇಕೆಂಬ ಇಚ್ಛೆ ಇದ್ದರೂ ದೋಷಗಳು ಹುಟ್ಟುವುದು ಸ್ವಾಭಾವಿಕ. ಹೀಗೆ ಶಾಸನ ನಿರ್ಮಾಣ ಪ್ರಸಂಗದಲ್ಲಿಯೇ ಮೇಲಿನ ಕಾರಣಗಳಿಂದಾಗಿ ಪಾಠಾಂತರಗಳು ತಲೆದೋರುತ್ತವೆ.

ಶಾಸನ ನಿರ್ಮಾಣೋತ್ತರಪ್ರಸಂಗ : ವೀರಗಲ್ಲು, ಸತಿಕಲ್ಲು ಮತ್ತು ನಿಷಧಿ ಕಲ್ಲುಗಳನ್ನು ಬಹುಶಃ ಸಮಾಧಿಯ ಮೇಲೆ ಬಯಲಲ್ಲಿ ನಿಲ್ಲಿಸಿದರೆ, ದೇವ ದ್ವಿಜರಿಗೆ ನೀಡಿದ ದಾನ ದಾಖಲೆಗಳಾದ ದತ್ತಿ ಶಾಸನಗಳನ್ನು ದೇವಾಲಯದ ಒಳಗೆ ಇಲ್ಲವೆ ಹೊರಗೆ ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿರುತ್ತಾರೆ. ಹೀಗಾಗಿ ಮಳೆ ಗಾಳಿ ಬಿಸಿಲುಗಳೆಂಬ ನೈಸರ್ಗಿಕ ಆಘಾತಗಳಿಂದ ವೀರ, ಸತಿ ಮತ್ತು ನಿಷಧಿಗಲ್ಲುಗಳು ಹೆಚ್ಚು, ದಾನಶಾಸನಗಳ, ಕಡಿಮೆ ಸವಕಳಿಹೊಂದಿವೆ. ಸಾಲದುದಕ್ಕೆ ಜನತೆಯ ಅಲಕ್ಷ್ಯ ಮತ್ತು ಮೂಢನಂಬಿಕೆಗಳೆಂಬ ತಿಳಿಗೇಡಿತನ, ವ್ಯಕ್ತಿವೈರ, ಮತ–ಮತ್ಸರಗಳೆಂಬ ಕಿಡಿಗೇಡಿತನ ಕಾರಣವಾಗಿ ಶಾಸನಗಳು ಕಚ್ಚುಗೊಳ್ಳುತ್ತವೆ, ನಾಶವಾಗುತ್ತವೆ.

ನಿಧಿಯಾಸೆಗಾಗಿ ಶಾಸನಗಳನ್ನು ಕಿತ್ತಾಡುವ, ಭೂಮಿ ಬೆಳೆಯದೆಂದು ಹೊಲದಲ್ಲಿಯ ಶಾಸನಗಳನ್ನು ಒಡೆದುಹಾಕುವ ಪ್ರವೃತ್ತಿ ಜನರಲ್ಲಿ ಸರ್ವಸಾಮಾನ್ಯವಾಗಿದೆ. ಹೊಲಮನೆ ಕಟ್ಟಡಕ್ಕೆ, ಕೊಡಲಿ ಕುಡುಗೋಲು ಮಸೆಯಲಿಕ್ಕೆ, ಮಕ್ಕಳ ಜಾರುಬಂಡೆಯಾಟಕ್ಕೆ ಎಷ್ಟೋ ಶಾಸನಗಳು ತುತ್ತಾಗಿವೆ, ಮತಮುಗ್ಧರ ಎಣ್ಣೆಗಿಣ್ಣಗಳ ಅಭಿಷೇಕಕ್ಕೆ ಬಲಿಯಾಗಿವೆ. ಇದರಿಂದಾಗಿ ಬಹುಪಾಲು ಶಾಸನಗಳು ಪಾಠ ಹಾಳುಮಾಡಿಕೊಂಡಿವೆ; ಇಲ್ಲವೆ ನಾಶವಾಗಿವೆ. ಕೆಳಗಣ ಕೆಲವು ಉದಾಹರಣೆಗಳಿಂದ ಈ ಹೇಳಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಬಹುದು.

---

೧೩. E. C. II, ಪು. ೧೪೫. ಶ್ರ. ಬೆ. E. C. IX. ಮಾಗಡಿ ೧೮, ಕಲ್ಯ (ಕ್ರಿ. ಶ. ೧೩೯೮).
೧೪. ಸಮಾಲೋಕನ, ಪು. ೧೫೪.
೧೫. ಕನ್ನಡನಾಡಿನ ಶಾಸನಕವಿಗಳು (೧೯೭೪), ಪು.೭.

ಸಂಗನ ಬಸವನ ಅಗ್ರ x
ಘಿ ಂಗೈಕಂ ದೇವರಾಜಮುನಿಪನ ತನಯಂ ।
ಜಂಗಮಪರುಸಂ ರ ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥[೧೬]

ಬಸವಣ್ಣನವರಿಗೆ ಸಂಬಂಧಪಟ್ಟ ಅಪರೂಪ ವಿಷಯಗಳನ್ನು ಒದಗಿಸುವ ಅರ್ಜುನವಾಡ ಶಾಸನದ ಕಂದಪದ್ಯವಿದು. ಈ ಪದ್ಯದ ಎರಡು ಮುಖ್ಯ ಸ್ಥಳಗಳಲ್ಲಿ ಅಕ್ಷರ ನಷ್ಟವಾಗಿದೆ. ಇದಕ್ಕೆ ಕಾರಣ ಪ್ರಕೃತಿಯ ಆಘಾತ ಇಲ್ಲವೆ ಜನತೆಯ ಅಜ್ಞಾನ. ಈ ಕ್ರಿಯೆ ಇನ್ನೂ ಬೆಳೆದು ಎಷ್ಟೋ ಶಾಸನಗಳು ಸಂಪೂರ್ಣ ಸವಕಳಿಗೊಂಡಿವೆ, ಒಡೆದುಹೋಗಿವೆ; ನಾಮ ಶೇಷವಾಗಿವೆ.

ಕೆಲವು ಅಸೂಯಾಪರರು, ಶಾಸನವನ್ನು ಒಡೆದು ನುಚ್ಚುನೂರು ಮಾಡುತ್ತಾರೆ. ಅಲ್ಲಲ್ಲಿ ಇಲ್ಲವೆ ಇಡಿಯಾಗಿ ಶಾಸನ ಬರಹವನ್ನು ಕೆತ್ತಿಹಾಕುತ್ತಾರೆ. ಯುದ್ಧದಲ್ಲಿ ಮಡಿದ ಇಬ್ಬರು ಶೂರರ ಸ್ಮಾರಕವಾಗಿ ನೆಟ್ಟ ವೀರಗಲ್ಲನ್ನು ನೊಳಂಬರು ಸುಟ್ಟ ವಿಷಯ ರಾಷ್ಟ್ರಕೂಟರ ಶಾಸನವೊಂದರಲ್ಲಿ ಬರುವುದನ್ನು ಗಮನಿಸಬೇಕು.[೧೭] ಕಲ್ಲೇದೇವರಪುರ ಶಾಸನದ (ಕ್ರಿ. ಶ. ೧೨೭೯) ಮುಖ್ಯವ್ಯಕ್ತಿಯಾದ 'ಪ್ರಸಾದಿದೇವ'ನ ಹೆಸರನ್ನು ಎರಡು ಕಡೆಗಳಲ್ಲಿ ಅಳಿಸಿದ್ದಾರೆ.[೧೮] ಬನವಾಸಿ ಮಧುಕೇಶ್ವರ ದೇವಾಲಯದಲ್ಲಿರುವ ಶಿಲಾಸ್ತಂಭದ ಮೇಲಣ ಇಡಿ ಶಾಸನ ಬರಹವನ್ನು ಉಳಿಯಿಂದ ಹೊಡೆದು ಉದ್ದೇಶಪೂರ್ವಕವಾಗಿ ಕೆತ್ತಿ ಹಾಕಿದ್ದಾರೆ.

ಹೀಗೆ ಕವಿ, ಲಿಪಿಕಾರ, ರೂವಾರಿಗಳ ಮೂಲಕ ಹುಟ್ಟುವಾಗಲೇ ದೋಷಮುಕ್ತವೋ ದೋಷಯುಕ್ತವೋ ಆದ ಪಾಠವನ್ನು ಧರಿಸಿಕೊಂಡ ಶಾಸನಗಳು ಕಾಲಕ್ರಮದಲ್ಲಿ ನಿಸರ್ಗದ ಆಘಾತ, ವ್ಯಕ್ತಿಗಳ ಅಜ್ಞಾನ ಮತ್ತು ಅಸೂಯೆಗಳಿಂದಾಗಿ ಇನ್ನೂ ದೋಷಗೊಂಡಿರುತ್ತವೆ. ಇಂಥ ಶಾಸನಗಳನ್ನು ಪರಿಷ್ಕರಿಸಬೇಕಾಗುತ್ತದೆ, ಸಂಪಾದಕ.

ಶಾಸನ ಸಂಪಾದನ ಪ್ರಸಂಗ: ಸಂಪಾದಕನ ಕೈಗೆ ಸಿಗುವುವು ಮೇಲೆ ಹೇಳಿದ ಎರಡು ಘಟ್ಟಗಳಲ್ಲಿ ಪಾಠಾಂತರದ ದಾಳಿಗೆ ಗುರಿಯಾದ ಶಾಸನಗಳು. ಇವುಗಳಲ್ಲಿ ಎಣ್ಣೆ-ಮಣ್ಣು ಸೇರಿದ ಮತ್ತು ಆಳವಲ್ಲದ ಅಕ್ಷರಗಳ, ಕುಂಚದಿಂದ ಸರಿಯಾಗಿ ಬಡಿಯದ, ಅಚ್ಚುಕಟ್ಟಾಗಿ ಮಸಿ ಲೇಪಿಸದ, ಅಂಚು ಮತ್ತು ತ್ರುಟಿತ ಭಾಗಗಳನ್ನು ಸರಿಯಾಗಿ ಮೂಡಿಸಿಕೊಳ್ಳದ ಶಾಸನ ಪಡಿಯಚ್ಚುಗಳ ವಾಚನಕಾರ್ಯ ತುಂಬ ಕ್ಲೇಶಕರವಾಗುತ್ತದೆ, ಇಲ್ಲವೆ ತಪ್ಪುಪಾಠ ಒದಗಿಸುತ್ತದೆ. ಒಡೆದುಹೋದ ಶಾಸನದ ತುಂಡುಗಳನ್ನು ಸರಿಯಾಗಿ ಹೊಂದಿಸದಿದ್ದರೆ ಪಾಠ ಅಸ್ತವ್ಯಸ್ತವಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸಂಪಾದನ ಕಾರ್ಯದಲ್ಲಿ ಅವಲಂಬಿಸಬೇಕಾದುದು ಈ ಪಡಿಯಚ್ಚುಗಳನ್ನಾದುದರಿಂದ ಇವುಗಳನ್ನು ಸರ್ವಸಮರ್ಪಕವಾಗಿ ಮುದ್ರಿಸಿಕೊಳ್ಳಬೇಕು.

---

೧೬. ಶಾಸನಸಂಪದ (ದ್ವಿತೀಯಾವೃತ್ತಿ), ಪು. ೯೮.
೧೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೫೦.
೧೮. E. C. XI. ಜಗಳೂರು. ೩೦. ಕಲ್ಲೇದೇವರಪುರ, (ಕ್ರಿ. ಶ. ೧೨೭೯)

ದಾನ, ವೀರಮರಣ, ಮಾಸ್ತಿಮರಣ, ನಿಷಿಧಿಮರಣ ಇವುಗಳಿಗೆ ತಕ್ಕಂತೆ ಶಾಸನಗಳ ವಿಷಯ ವಿನ್ಯಾಸ, ಲೇಖನಪದ್ಧತಿ ಬೇರೆ ಬೇರೆಯಾಗಿರುತ್ತವೆ. ಇದಕ್ಕೆ ಹೆಚ್ಚಿನದಾಗಿ ಗದ್ಯ ಪದ್ಯಗಳ ಸಾಲುಗಟ್ಟಿ ಬರೆಯುವಿಕೆ (ಉದಾ : ಕಪ್ಪೆ ಅರಭಟ್ಟನ ಶಾಸನ), ದಂಡದ ವಿಕಲ್ಪ ಬಳಕೆ, ಗದ್ಯ-ಪದ್ಯವೆಂಬ ಸೂಚನೆಯ ಐಚ್ಛಿಕತೆ, ಕೆಳಗಿನ ಸಾಲಿಗೆ ಒತ್ತುಸೇರುವಿಕೆ. ಮರೆತ ಅಕ್ಷರವನ್ನು ಸಾಲಿನ ಮೇಲೆ ಕೆಳಗೆ ಇಲ್ಲವೆ ಮಗ್ಗುಲಲ್ಲಿ ಕೆತ್ತುವಿಕೆ "ಶ್ರೀರೂಪಲೀಲಾ ವಿಭವಮಹಾರಾಶಿಗಳ್ ನಿಲ್ಲವಾರ್ಗಂ"[೧೯] (ಇಲ್ಲಿಯ 'ಶಿ' ಮಗ್ಗುಲಲ್ಲಿ ಕೆತ್ತಲಾಗಿದೆ), ಸ್ಥಳ ಸಾಲದಿದ್ದರೆ ಕೊನೆಯ ಸಾಲುಗಳನ್ನು ಮಗ್ಗುಲಲ್ಲಿ (ಹಲ್ಮಿಡಿ ಶಾಸನ) ಇಲ್ಲವೆ ಮೇಲೆ (ಬಾಬಾನಗರ ಶಾಸನ) ಬರೆಯುವುದು ಶಾಸನಗಳಲ್ಲಿ ಸಾಮಾನ್ಯ. ಕಾರಣ ಶಾಸನ ಸಂಪಾದಕನಿಗೆ ಪೂರ್ವಭಾವಿಯಾಗಿ ಶಾಸನ ಲೇಖನ ಪದ್ಧತಿಯ ತಿಳಿವಳಿಕೆ ಗಾಢವಾಗಿದ್ದಷ್ಟೂ ಅವನ ವಾಚನಕಾರ್ಯ ಸುಭಗವಾಗುತ್ತದೆ. ಸಂಪಾದನ ಪರಿಷ್ಕರಣ ಪ್ರಸಂಗದಲ್ಲಿ ಸಂಪಾದಕನು ಶಾಸನದ ಮೂಲ ಅಕ್ಷರ ಮತ್ತು ತರುವಾಯ ಉಂಟಾದ ಕಚ್ಚುಗಳನ್ನು ಮೊದಲು ಬೇರ್ಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅಕ್ಷರ ತಪ್ಪಾಗಿ ಕಂಡು ಅರ್ಥಹಾನಿಗೆ ಕಾರಣವಾಗುತ್ತದೆ. ಉದಾ: ಪಂಪನನ್ನು ಕುರಿತ ಗಂಗಾಧರಂ ಶಾಸನ ಪಾಠ "ಗುಂಡಕಜಿನಿಡುಂಗೊಂಡೆಯಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಜೀಯ ಜೋಯಿಸ ಸಿಂಘನ ವರ್ಮ[ಂ] ವಬ್ಬಣಬ್ಬೆಯ ಮಗಂ...ಜಿನವಲ್ಲಭಂ" ಎಂದು ಪ್ರಥಮ ಸಲ ಪ್ರಕಟವಾಯಿತು. ಇಲ್ಲಿ ಸಂಪಾದಕರು ಊಹಿಸಿರುವ ಚೌಕಕಂಸಿನೊಳಗಣ ಬಿಂದುವನ್ನು ಬಿಟ್ಟರೆ 'ವರ್ಮವಬ್ಬಣಬ್ಬೆ' ಎಂಬ ಪಾಠ ಉಳಿಯುತ್ತದೆ. ಆದರೆ ಇಲ್ಲಿಯ ಸತ್ಯಪಾಠ "ಮರ್ಮಳಬ್ಬಣಬ್ಬೆ" ಇಲ್ಲಿಯ 'ಳ' ಕಾರದ ಮೇಲೆ ಕಚ್ಚು ಬಿದ್ದು ಅದು ವಕಾರ ಭ್ರಾಂತಿಯನ್ನು ಹುಟ್ಟಿಸಿದೆ. ಈ ಕಚ್ಚನ್ನು ಮೂಲ ಅಕ್ಷರದಿಂದ ಬೇರ್ಪಡಿಸಿ ನೋಡದ ಕಾರಣ ದೋಷಪಾಠ ಪ್ರಕಟವಾಗಿ ವಿದ್ವಾಂಸರನೇಕರ ಚರ್ಚೆಗೆ ಗುರಿಯಾಯಿತು.[೨೦]

ಅವಸರ ವಾಚನಪ್ರವೃತ್ತಿ ಶಾಸನಸಂಪಾದನೆಗೆ ಸಲ್ಲದು. 'ಒಂದು ಮಾತಿನ ಸೋಲ ಗೆಲ್ಲಕ್ಕೆ ಹೋರುವೆ' ಎಂಬಂತೆ ಆತನು ಒಂದೇ ಒಂದು ಅಕ್ಷರವನ್ನು ಸರಿಯಾಗಿ ಓದುವಲ್ಲಿ ಅನೇಕ ದಿನಗಳನ್ನು ಕಳೆಯಬೇಕಾಗುತ್ತದೆ. ಆಗ ಸಹನೆ ಕಳೆದುಕೊಂಡರೆ ತಪ್ಪಾಗಿ ಓದುವ ಇಲ್ಲವೆ ಅಸ್ಪಷ್ಟವೆಂದು ಸೂಚಿಸಿ ಮುಂದೆ ಸಾಗುವ ಸಾಧ್ಯತೆಯಿರುತ್ತದೆ. ಉದಾ: ದುರ್ವಿನೀತನನ್ನು ಕುರಿತ ಹೆಬ್ಬೂರ ಶಾಸನದ "ಶಬ್ದಾವತಾರಕಾರ ದೇವಿಭಾರತೀ ನಿವದ್ಧ ಬೃಹತ್ಪಥಃ ಕಿರಾತಾರ್ಜುನೀಯ ಪಞ್ಚದಶಸರ್ಗಟೀಕಾಕಾರ ದುರ್ವಿನೀತ ನಾಮಮಯಃ" ಎಂಬಲ್ಲಿಯೆ ಬೃಹತ್ವಥಃ ಎಂಬುದನ್ನು 'ಬೃಹತ್ಕರ್ಥಃ' ಎಂದು ೨೨ ವರ್ಷಗಳ ತರುವಾಯ ಸರಿಯಾಗಿ ಓದಲಾಯಿತು. ಕೆಲವು ಸಲ ಅವಸರ ಪ್ರವೃತ್ತಿಯಿಂದಾಗಿ ಅಸ್ಪಷ್ಟವೆಂದು ಚುಕ್ಕಿ ಇಟ್ಟು ಸಾಗುವುದು ಪಾಠವನ್ನು ತಪ್ಪು ತಪ್ಪು ಓದುವುದು ಸಂಪಾದಕನಿಗೆ ಎಷ್ಟೂ ಶೋಭಿಸದು. ಉದಾ: "ಪಾತ್ರಮ । ರ್ಪಣಿ ಬಾ ..... ದಯೆ ಶುಭಲಕ್ಷಣಲಕ್ಷಿತಾ[ಂಗಿ] ರಾ...ಮೃದುವಚನರಚನಾ ಚತುರ ಕಳಾರಂಜಿತಂ ಪ್ರ...... ಪಾತ್ರಮುಖದರ್ಪಣೆ. ಚಾಳುಕ್ಯರಾಯರಾಜ್ಯಾಭ್ಯುದಯ ಶುಭಲಕ್ಷಣಲಕ್ಷಿತಾಂ[ಗಿ] ರಾಯ ಸರ್ಬಜ್ಞರ್ದ್ಧಾಂಗಿ,

---

೧೯. E. C. II, ಶ್ರವಣಬೆಳ್ಗೊಳ, ೮೮. (ಕ್ರಿ. ಶ. ೭೦೦).
MAR. 1936. No. 16 ಹಲ್ಮಿಡಿ, ಹಾಸನ ಜಿಲ್ಲೆ (ಕ್ರಿ. ಶ. ೪೫೦)

೨೦. ಕನ್ನಡನುಡಿ, ೧೯೬೮ ಮೇ, ೧೯೬೮ ಅಗಸ್ಟ್, ೧೯೬೯ ಫೆಬ್ರವರಿ, ೧೯೬೯ ಏಪ್ರಿಲ್-ಮೇ, ೧೯೬೯ ಜೂನ್-ಜುಲೈ, ೧೯೬೯ ಅಗಸ್ಟ್, ೧೯೬೯ ಸೆಪ್ಟೆಂಬರ್, ೧೯೬೯ ನವೆಂಬರ್, ಪ್ರ. ಕ. ೫೦-೪ ಪ್ರಜಾವಾಣಿ ೮-೩-೬೮.

ಮೃದುಮಧುರವಚನ ರಚನ ಚತುರ ಕಳಾಪೆ ರತ್ನಪ್ರದೀಪೆ."[೨೧] ಓದುವ ಭರದಲ್ಲಿ ಒಂದು ಶಬ್ದವನ್ನೋ ವಾಕ್ಯವನ್ನೋ ಚರಣವನ್ನೋ ಸಂಪಾದಕ ಕೈಬಿಡುವ ಸಂಭವವಿರುತ್ತದೆ. ಕೋಗಳಿಯ ಒಂದು ಶಾಸನದಲ್ಲಿ ಬರುವ 'ತೋಮರರಗಳೆ'ಯ "ದೇಸೀಯಗಣಕುಮುದವನಸರಚ್ಚಂದ್ರನಂ" ಪಾದದ ತರುವಾಯದ "ಭಾಸುರಗುಣಾಢ್ಯನಂ ಕೋಕಳಿ-ಪುರೀಂದ್ರನಂ" ಎಂಬ ಚರಣ ಯಾವುದೋ ಹಂತದಲ್ಲಿ ಸಂಪಾದಕರ ಕಣ್ತಪ್ಪಿ ಅಥವಾ ಕೈತಪ್ಪಿ ಹೋಗಿದೆ.[೨೨] ಅಗ್ರಹಾರ ಬಾಚಹಳ್ಳಿ, ಕೊಲ್ಲಾಪುರ, ಗೊಜ್ಜಿಹಳ್ಳಿ ಶಾಸನಗಳಲ್ಲಿ ಒಂದೊಂದು ಸಾಲು ಮರೆತು ಬಿಟ್ಟರೆ ಗೊಜ್ಜಿಹಳ್ಳಿಯ ಇನ್ನೊಂದು ಶಾಸನದಲ್ಲಿ ಎರಡು ಸಾಲುಗಳನ್ನು ಮರೆತಿದ್ದಾರೆ ಸಂಪಾದಕರು.[೨೩]

ಲಿಪಿ ಮತ್ತು ಭಾಷೆಗಳು ಅವಸ್ಥಾಭೇದ ಮತ್ತು ಪ್ರಾಂತಭೇದಗಳಿಂದ ಶೋಭಿಸುತ್ತವೆ. ಹೀಗಾಗಿ ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಂಡ ಲಿಪಿ-ಭಾಷೆಗಳ ಸ್ಪಷ್ಟ ತಿಳಿವಳಿಕೆ ಶಾಸನಸಂಪಾದಕನಿಗೆ ಊರುಗೋಲು, ದಾರಿದೀಪ. ಇದಲ್ಲದೆ ಒಂದೇ ಕಾಲದ ಒಂದೇ ಪ್ರದೇಶದ ಕೆಲವು ಲಿಪಿಗಳಲ್ಲಿ ರೂಪಸಾದೃಶ್ಯ ತೋರಬಂದು, ಒಂದು ಅಕ್ಷರ ಇನ್ನೊಂದು ಅಕ್ಷರದ ಭ್ರಾಂತಿಯನ್ನುಂಟುಮಾಡುತ್ತದೆ. ಉದಾ: ಬಿ. ಎಲ್. ರೈಸ್ ಅವರು ಚಿತ್ರದುರ್ಗದ ಪ್ರಾಚೀನ ಹೆಸರು ಬಂದಲ್ಲೆಲ್ಲ ಅದನ್ನು "ಬೆಮ್ಮತ್ತನ ಕಲ್ಲು" ಎಂದು ಓದಿದ್ದಾರೆ. ಆದರೆ ಇದು 'ಚಿಮ್ಮತ್ತನ ಕಲ್ಲು' ಇದ್ದಿರಬಹುದು. ದುರ್ಗ ರಚನೆಯಿಂದಾಗಿ ಇದೇ ಮುಂದೆ 'ಚಿಮ್ಮತ್ತನ ಕಲ್ಲುದುರ್ಗ' ಎಂದು ಹೆಸರು ಪಡೆದು ಉಚ್ಚಾರ ಸುಭಗತೆ ಮತ್ತು ಸಂಸ್ಕೃತೀಕರಣ ರೂಪ ಕಾರಣವಾಗಿ ಚಿಂತನಕಲ್ಲು - ಚಿಂತಕಲ್ಲು - ಚಿಂತ್ರಕಲ್ಲು + ದುರ್ಗ ಎಂಬ ರೂಪ- ಪಡೆದಿರಬಹುದು. ಚಿ. ಬೆಂಗಳಲ್ಲಿಯ ರೂಪವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಳ್ಳದುದೇ ಇದಕ್ಕೆ ಕಾರಣ. ಇಬ್ಬರು ವಿದ್ವಾಂಸರು ಓದಿದರೆ ತಲೆದೋರಬಹುದಾದ ಭಿನ್ನಪಾಠಗಳಿಗೆ ಕೆಲವು ಉದಾಹರಣೆಗಳನ್ನು ನೋಡಬಹುದು. ಕಾಡಿಯೂರುಮಂ-ಕೋಟೆಯೂರುಮಂ,[೨೪] ಗುರಿಗಿಜೆದು-ಸುರಿಗಿಱುದು, ಕೋಣೆಮೆ-ಕಾಣಿಮೆ,[೨೫] ಸ್ಥಾನದಾಳು-ಸ್ಥಾನದೊಳು,[೨೬] ಮುನಿಪಶೋದು-ಮುನಿಪರೋದು,[೨೭] ಸುಖಾಲಯಮಾ-ಸುಖಾಲಯಮಂ, [೨೮] ಮುಕ್ತಿಯೊಳ್ಬೆರೆಯವೆನ್ದಿರ್ಪ-ಮುಕ್ತಿಯೊಳ್ದರೆಯವೆನ್ದಿರ್ಪ,[೨೯] ನಿನಗಿತ್ತನೆನ್ನೊಡೆ-ನಿನಗಿತ್ತೆನೆನ್ನೊಡೆ,[೩೦] ನಡಪಿದ ತಾಯಿಂ-ನಡೆಪಿದ ತೋಯಂ,[೩೧] ಚೂಡಾರಾಮನಂ-

---

೨೧. K. I. V. No. ೧೬.
೨೨. S.I.I. IX-I, ೧೧೭, ಕೋಗಳಿ (ಕ್ರಿ. ಶ. ೧೦೫೫)
೨೩. E. C. IV. ಕೃಷ್ಣರಾಜಪೇಟೆ ೯, (ಕ್ರಿ. ಶ. ೧೭೫೭) ; K. I. V. No. 28 K. I. V. No. 33 & 64.
೨೪. ಶಾಸನಸಾಹಿತ್ಯಸಂಚಯ, ಪು. ೧೭.
೨೫. ಶಾಸನಸಾಹಿತ್ಯಸಂಚಯ, ಪು. ೧೭.
೨೬. ಶಾಸನಸಾಹಿತ್ಯಸಂಚಯ, ಪು. ೧೪೨.
೨೭. ಶಾಸನಸಾಹಿತ್ಯಸಂಚಯ, ಪು. ೨೧.
೨೮. ಶಾಸನಸಾಹಿತ್ಯಸಂಚಯ, ಪು. ೨೨.
೨೯. ಶಾಸನಸಾಹಿತ್ಯಸಂಚಯ, ಪು. ೨೨.
೩೦. ಶಾಸನಸಾಹಿತ್ಯಸಂಚಯ, ಪು. ೨೪.
೩೧. ಶಾಸನಸಾಹಿತ್ಯಸಂಚಯ, ಪು. ೨೬.

ಭೂತಾರಾಮನಂ,[೩೨] ಸೂಟಿಸ್ಸೊಲೊಳೆತಿ–ಸೂಟಿಸ್ಸೊಯೊಳೆತ್ತಿ,[೩೩] ಮಠಮ ಮಾಡಿಸಿ–ಮಠಮಂ ಮಾಡಿಸಿ[೩೪] ಸರಸ್ವತೀಭಂಡಾರಿ ಗರಾರ್ವ್ವರ್ಗಂ–ಸರಸ್ವತೀಭಂಡಾರಿಗರೊರ್ವರ್ಗಂ,[೩೫] ಶೌಚಪ್ರತ–ಶೌಚವ್ರತ[೩೬]–ಇವು ಅಕ್ಷರದ ರೂಪಸಾದೃಶ್ಯಭ್ರಾಂತಿ ಕಾರಣವಾಗಿ ಸಂಪಾದಕನಿಂದ ಹುಟ್ಟಿದ ಅಪಪಾಠಗಳು. ಇದಕ್ಕೆ ಹೆಚ್ಚಿನದಾಗಿ ಲಿಪಿಕಾರನ ವ್ಯಕ್ತಿ ವಿಶಿಷ್ಟ ಅಕ್ಷರಶೈಲಿಯನ್ನೂ ಅಂದರೆ ಆ ಕಾಲದ ಅಕ್ಷರ ಶಿಲ್ಪದ ಹಿನ್ನೆಲೆಯಲ್ಲಿ ಅವನ ಲಿಪಿವೈಶಿಷ್ಟ್ಯವನ್ನೂ ಸಂಪಾದಕನು ಅರ್ಥಮಾಡಿಕೊಳ್ಳಬೇಕು.

ಶಾಸನಸಂಪಾದನೆಗೆ ಸಂಬಂಧಿಸಿದಂತೆ ಅಕ್ಷರ ಸ್ವರೂಪದಷ್ಟೇ ಮುಖ್ಯವಾದುದು ಭಾಷಾ ಸ್ವರೂಪ ತಿಳಿವಳಿಕೆ. ಇಲ್ಲಿ ಸಾಮಾನ್ಯವಾಗಿ ದೀರ್ಘ ಮತ್ತು ಮಹಾಪ್ರಾಣಗಳನ್ನು ಬಳಸುವುದಿಲ್ಲ. ಸಂದರ್ಭ ಬಲದಿಂದ ಇವುಗಳನ್ನು ಊಹಿಸಬೇಕು. ಉದಾ: ಬೆಳಗಾವ ಜಿಲ್ಲೆಯ ಗೋಕಾಕ ತಾಲೂಕಿನ ಕಲ್ಲಹೊಳೆ ಶಾಸನದಲ್ಲಿ ಬರುವ "ಓಲೆಯ ಹೊಜಿ ಮಾಜಿ ತಕ್ಕೊಂಡಂ ಕಟ್ಟೋಲೆ" ಎಂಬ ಭಾಗದಲ್ಲಿಯ 'ಓಲೆ' ಎಂಬುದನ್ನು ಡಾ. ಫ್ಲೀಟ ಅವರು 'ಒಲೆ' ಎಂದು ಓದಿ 'ಈಡಿಜ ತಿಠ್ಠಜ' ಎಂದು ಅರ್ಥ ಬರೆದಿದ್ದಾರೆ.[೩೭] ಲಕ್ಕುಂಡಿ ಶಾಸನದ 'ಆಹವಮಲ್ಲದೇವನಿಂ ಪೇಳ್' ಎಂಬುದು 'ಆಹವಮಲ್ಲ ದೇವ ನೀಂ ಪೇಳ್' ಎಂದು ಇರಬೇಕು.[೩೮] ಇದೇ ರೀತಿ ಮಹಾಪ್ರಾಣಗಳನ್ನೂ ಹಲವುಸಲ ಸಂದರ್ಭ ಬಲದಿಂದ ಭಾವಿಸಬೇಕಾಗುತ್ತದೆ. ಕೆಲವು ವೇಳೆ ಶಬ್ದ ದಾರಿದ್ರ್ಯ ಕಾರಣವಾಗಿ ಅಥವಾ ಅನ್ಯಥಾ ಜ್ಞಾನ ಕಾರಣವಾಗಿ ಸಂಪಾದಕರು ಶಾಸನ ಪದಗಳನ್ನು ತಪ್ಪಾಗಿ ಭಾವಿಸುತ್ತಾರೆ. ಉದಾ: ನರಸಂಸರ್ಗ–ನರಸಂಸ್ವರ್ಗ,[೩೯] ತವೆ ನೋಂತು–ತಾವೆ ನೋಂತು.

ಶತಮಾನದಿಂದ ಶತಮಾನಕ್ಕೆ ಹುಟ್ಟಿ ಬಂದ ನಮ್ಮ ಶಾಸನಗಳಲ್ಲಿ ಗ್ರಂಥಸ್ಥ ಭಾಷೆಯವು ಅಧಿಕ. ಆಡುಭಾಷೆಯವು ಕಡಿಮೆ. ಇವುಗಳಲ್ಲಿ ಗ್ರಂಥಸ್ಥಭಾಷೆಯವು ಅವಸ್ಥಾಭೇದಯುಕ್ತವಾದ ಆಡುಭಾಷೆಯವು ಅವಸ್ಥಾಭೇದ ಮತ್ತು ಪ್ರಾಂತಭೇದಯುಕ್ತವಾದ ಲಾವಣ್ಯವನ್ನು ಹೊತ್ತು ನಿಂತಿವೆ. ಯಾವುದೇ ಶಾಸನವನ್ನು ಸಂಪಾದಿಸುವಾಗ ಈ ಲಾವಣ್ಯಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು. ಉದಾ: 'ಕೊಣ್ಡೊನ್' "ಮೆಚ್ಚದೊರಾರ್ಸ್ಸಗರತ್ರಿಣೇತ್ರನಂ"[೪೦] ಎಂಬ ಪೂರ್ವದ ಹಳಗನ್ನಡ ರೂಪವನ್ನು 'ಕೊಣ್ಡಂ,' "ಮೆಚ್ಚದರಾರ್ಸ್ಸಗರತ್ರಿಣೇತ್ರನಂ" ಎಂದು ಹಳಗನ್ನಡಕ್ಕೆ ತಿರುಗಿಸುವುದಾಗಲೀ, ಹಳಗನ್ನಡ ಭಾಷೆಯನ್ನು ನಡುಗನ್ನಡಕ್ಕೆ ತಿರುಗಿಸುವುದಾಗಲೀ ಸಲ್ಲದು. ಕೆಲವು ಸಲ ಮೇಲುನೋಟಕ್ಕೆ ಆ ಕಾಲಕ್ಕೆ ಬಾಹ್ಯವಾದ ರೂಪ ಕಾಣಿಸಬಹುದು. ಉದಾ: ಕ್ರಿ. ಶ. ೭೦೦ರ ಮಹಾಕೂಟ ಶಾಸನದ "ಕುಚಿಪೊಟಿಗಳವರಾ ಮಗಳು ವಿನಾಪೋಟಗಳ್." ಇಲ್ಲಿಯ 'ಮಗಳು' ಎಂಬುದನ್ನು 'ಮಗಳ್' ಎಂದು ಪರಿವರ್ತಿಸಲಾಗದು.[೪೧]

---

೩೨. ಶಾಸನಸಾಹಿತ್ಯಸಂಚಯ, ಪು. ೬೩.
೩೩. ಶಾಸನಸಾಹಿತ್ಯಸಂಚಯ, ಪು. ೨೬.
೩೪. ಶಾಸನಸಾಹಿತ್ಯಸಂಚಯ,ಪು. ೩೦.
೩೫. ಶಾಸನಸಾಹಿತ್ಯಸಂಚಯ, ಪು. ೪೩.
೩೬. ಶಾಸನಸಾಹಿತ್ಯಸಂಚಯ, ಪು. ೫೨.
೩೭. ಕನ್ನಡನಾಡಿನ ಶಾಸನಕವಿಗಳು (೧೯೭೪), ಪು. ೨೩೩.
೩೮. ಶಾಸನಸಂಪದ (೧೯೭೪), ಪು. ೩೩.
೩೯. ಶಾಸನಸಾಹಿತ್ಯಸಂಚಯ, ಪು. ೨೮ & ೩೧.
೪೦. ಶಾಸನಸಾಹಿತ್ಯಸಂಚಯ, ಪು. ೧೬.
೪೧. ಶಾಸನಸಾಹಿತ್ಯಸಂಚಯ, ಪು. ೪.

ಶಾಸನ ಭಾಷೆಯಲ್ಲಿ ಪ್ರಾದೇಶಿಕ ವೈಶಿಷ್ಟ್ಯ ದಟ್ಟವಾಗಿ ತೋರದಿದ್ದರೂ ದಕ್ಷಿಣಕನ್ನಡ ಉತ್ತರಕನ್ನಡ ಜಿಲ್ಲೆಯ ಶಾಸನಗಳು ಮತ್ತು ಹೈದರಾಲಿ ಕಾಲದ ದಕ್ಷಿಣಕರ್ನಾಟಕದ ಶಾಸನಗಳು ಪ್ರಾಂತಭೇದವನ್ನು ತೋರಿಸುತ್ತಿದ್ದು ಸಂಪಾದನೆಯಲ್ಲಿ ಈ ಭೇದಮುದ್ರೆಯನ್ನು ಕಾಯ್ದುಕೊಳ್ಳಬೇಕು. ದೇಸಿಯನ್ನು ತಿದ್ದಿ ಮಾರ್ಗಗೊಳಿಸುವುದು, ತದ್ಭವವನ್ನು ತಿದ್ದಿ ತತ್ಸಮಗೊಳಿಸುವುದು (ಸಂತೋಸ–ಸಂತೋಷ[೪೨], ಬರವಣಿಗೆಯ ರೀತಿಯನ್ನು ಬದಲಿಸುವುದು ರಟ್ಟಕನ್ದರ್ಪ್ಪದೇವಂ–ರಟ್ಟಕಂದರ್ಪದೇವಂ)[೪೩] ಆಗದು. ಹೀಗೆ ಭಾಷಾ ಸ್ವರೂಪವನ್ನು ಉಳಿಸಿಕೊಳ್ಳುವುದು ಅತ್ಯವಶ್ಯವಾಗಿದ್ದರೂ ಅಜ್ಞಾನಮೂಲ ಲೇಖನದೋಷಗಳನ್ನು ಮಾತ್ರ ತಿದ್ದಿಕೊಳ್ಳಬೇಕು. ಉದಾ: "ಶಂಕರ ಶಯಂಭು ಸುವರ್ಣಮಹಾಕ್ಷಿದೇವ"[೪೪] "ಗೋತ್ರರತ್ನನೆಂಬುದು ಸಖಳಾವನೀತಳದೊಳ್"[೪೫] ಎಂಬಲ್ಲಿಯ ಶಯಂಭು, ಸಖಳಗಳನ್ನು 'ಸ್ವಯಂಭು'. 'ಸಕಳ' ಎಂದು ತಿದ್ದಿ ಯೋಗ್ಯ ಚಿಹ್ನೆಯೊಂದಿಗೆ ಸ್ವೀಕರಿಸಬೇಕು.

ಛಂದಸ್ಸು, ಪ್ರಾಸಗಳು ಪದ್ಯದ ಪ್ರಾಣಪದಕಗಳು. ಇವುಗಳ ಆಳವಾದ ಅಭ್ಯಾಸ ಪಾಠನಿರ್ಣಯದಲ್ಲಿ ತುಂಬ ನೆರವಾಗುತ್ತವೆ.

.... ಭವ್ಯಕೋ ।

ಟಿಯ ಮನಮೆಚ್ಚುಮಚ್ಚುವೊಲನೆಂಬನ್ನೆನ್ನೆಗಂ ಸೊಗಯಿಪ್ಪುದೀ ಧರಿ ।

ತ್ರಿಯೊಳ್... ।[೪೬]

ಈ ಮತ್ತೇಭವಿಕ್ರೀಡಿತದಲ್ಲಿ ತಲೆದೋರಿದ ದೋಷವನ್ನು 'ನೆಂಬಿನೆಗಂ' ಎಂದು ಛಂದಸ್ಸಿನ ಬಲದಿಂದ ತಿದ್ದಬಹುದು. ಇದೇ ರೀತಿ

ಸ್ಥಿರಗಂಭೀರ ಉದಾತ್ತ ಸದ್ಗುಣ ಸದಾಚಾರತ್ವಮೆಂಬೀಗುಣೋ ।

ನ್ನತಿಯಂ ತಾಳ್ದಿ ....[೪೭]

ಇಲ್ಲಿಯೆ ಮೊದಲಸಾಲಿನ 'ರ' ಕಾರವನ್ನು ಪ್ರಾಸಸ್ಥಾನ ಬಲದಿಂದ 'ತ' ಕಾರವಾಗಿ ಸಹಜವಾಗಿ ತಿದ್ದಬಹುದು. ಇಂಥ ಪ್ರಸಂಗಗಳು ಶಾಸನಗಳಲ್ಲಿ ಅನೇಕಸಲ ಬರುತ್ತವೆ.

ಶಾಸನಗಳನ್ನು ಓದಿದ, ಸಂಪಾದಿಸಿದ ಅನುಭವಗಳು ಸಂಪಾದಕನಿಗೆ ಹೊಸ ಶಾಸನವನ್ನು ಸಂಪಾದಿಸುವಲ್ಲಿ ತುಂಬ ನೆರವಾಗಿ ನಿಲ್ಲುತ್ತವೆ. ಏಕೆಂದರೆ ಶಾಸನಗಳಲ್ಲಿ ಎಷ್ಟೋ ಪದ್ಯಗಳು, ಬಿರುದುಗಳು, ಗದ್ಯವಾಕ್ಯಗಳು ಪುನರುಕ್ತಗೊಂಡಿರುತ್ತವೆ. "ಇದಿರಾದರಿ ಭೂಪಾಳರ.." ಎಂಬ ಹೊಯ್ಸಳ ನರಸಿಂಹನ ವರ್ಣನೆಯ ಪದ್ಯ ಐದು ಶಾಸನಗಳಲ್ಲಿ,[೪೮] "ದಕ್ಷಿಣ ಹೆಮ್ಮನ ಮಮ್ಮ"

೪೨. ಶಾಸನಸಾಹಿತ್ಯಸಂಚಯ, ಪು. ೯೫.
೪೩. ಶಾಸನಸಂಪದ (೧೯೭೪), ಪು. ೧೪.
೪೪. ಶಾಸನಸಂಪದ (೧೯೭೪), ಪು. ೨೦.
೪೫. ಶಾಸನಸಂಪದ (೧೯೭೪), ಪು. ೩೪.
೪೬. ಕನ್ನಡನಾಡಿನ ಶಾಸನ ಕವಿಗಳು (೧೯೭೪), ಪು. ೨೬೦.
೪೭. ಕನ್ನಡನಾಡಿನ ಶಾಸನ ಕವಿಗಳು (೧೯೭೪), ಪು. ೧೪೫.
೪೮. ಶಾಸನವ್ಯಾಸಂಗ ೧, ಪು. ೧೭.

ಎಂಬ ಶಾಂತಿನಾಥಕವಿಯ ವರ್ಣನೆಯ ಪದ್ಯ ಮೂರು ಶಾಸನಗಳಲ್ಲಿ,[೪೯] "ಆದಿಯಾಗಿ ಪರ್ವದಾರ್ಹತ ಸಮಯಕ್ಕೆ," "ಗಂಗವಾಡಿಯ ಬಸದಿಗಳೆನಿತು" ಎಂಬ ಎರಡೂ ಪಿರಿಯಕ್ಕರಗಳು ಎರಡು ಶಾಸನಗಳಲ್ಲಿ ಕಂಡುಬರುತ್ತವೆ.[೫೦] ಶಾಸನಗಳಲ್ಲಿ ನೂರು ಸಂಖ್ಯೆಯಲ್ಲಿ ಸಿಗುವ ಇಂಥ ಪುನರುಕ್ತ ಪದ್ಯಗಳು ಯಾವುದೇ ಶಾಸನದಲ್ಲಿಯ ಇಂಥ ಪದ್ಯವನ್ನು ತಿದ್ದಲು ನೆರವಾಗುತ್ತವೆ. ಬೇಲೂರ ತಾಲೂಕಿನ ಮಾರೇನಹಳ್ಳಿ ಶಾಸನದಲ್ಲಿ ಪ್ರಾರಂಭದ ೧೪ ಪದ್ಯ (೨ ಸಂಸ್ಕೃತ ಪದ್ಯಗಳೂ ಸೇರಿ) ಗಳು ಬೇರೊಬ್ಬನ ರಚನೆಗಳಾಗಿದ್ದು, ಕೊನೆಯ ೩ ಪದ್ಯಗಳನ್ನು ಮಾತ್ರ ಈ ಶಾಸನಕವಿ ಬಾಚಯ್ಯ ಬರೆದಿರುವನು. ಸೋಜಿಗವೆಂದರೆ ಈ ೩ ರಲ್ಲಿ ೨ ಪದ್ಯಗಳು ಚಿಕ್ಕನಾಯಕನಹಳ್ಳಿ ೩೨ರ ಶಾಸನದಲ್ಲಿ ದೊರೆಯುತ್ತವೆ.[೫೧] ಹೀಗೆ ಬೇರೆ ಬೇರೆ ಶಾಸನಗಳಲ್ಲಿ ಏಕೆ, ಕಡೂರಿನ ಒಂದೇ ಶಾಸನದಲ್ಲಿ "ಪರಸೆ ಮಹಾಪ್ರಸಾದದೊಳೆ" ಎಂಬ ಒಂದು ಪದ್ಯ ಎರಡು ಸಲ ಬಂದಿದೆ.[೫೨] ಇಂಥ ಪುನರುಕ್ತಗಳೂ ಹೋಲಿಕೆರೂಪದ ಪದ್ಯಗಳೂ ನಷ್ಟಭಾಗವನ್ನು ತುಂಬಲು, ದೋಷ ಪಾಠಗಳನ್ನು ತಿದ್ದಲು ನೆರವಾಗುತ್ತವೆ.

ಶಾಸನಸಾಹಿತ್ಯ ನಿರ್ಮಿತಿಯಲ್ಲಿ ಗ್ರಂಥಸಾಹಿತ್ಯದ ಕವಿಗಳ ಪಾಲು, ಪ್ರಭಾವ ಆಗಾಗ ಕಂಡು ಬರುತ್ತದೆ. ಅನೇಕ ಗ್ರಂಥಕವಿಗಳು ಶಾಸನಗಳನ್ನು ಬರೆದುದಲ್ಲದೆ ಲಕ್ಕುಂಡಿಶಾಸನದಲ್ಲಿ ಅಜಿತ ಪುರಾಣದ ಪದ್ಯ,[೫೩] ಕರೀಂನಗರ ಶಾಸನದಲ್ಲಿ ವಿಕ್ರಮಾರ್ಜುನವಿಜಯದ ಪದ್ಯ[೫೪], ಮಗಲ, ಬೆಣ್ಣೆಕಲ್ಲು, ಸೋಗಿ, ಶಿವರಗ್ರಾಮ ಶಾಸನಗಳಲ್ಲಿ ಆದಿಗುಣವರ್ಮನ ಅನುಪಲಬ್ಧ ಶೂದ್ರಕದ ಪದ್ಯಗಳು ಎಡೆಪಡೆದಿವೆ.[೫೫] ಬೇಲೂರು ಶಾಸನದಲ್ಲಿ ಆದಿಪುರಾಣದ ಪದ್ಯ,[೫೬] ಶ್ರವಣಬೆಳ್ಗೊಳ ಶಾಸನದಲ್ಲಿ ಅಜಿತಪುರಾಣದ ಪದ್ಯ,[೫೭] ವಿಜಾಪುರ, ಬೆಳ್ಗೊಳ, ಕನಬರ ಶಾಸನಗಳಲ್ಲಿ ನಾಗಚಂದ್ರನ ಪಂಪರಾಮಾಯಣದ ಪದ್ಯ,[೫೮] ವಿಜಾಪುರ ಶಾಸನದಲ್ಲಿ ಚಂದ್ರರಾಜನ ಮದನತಿಲಕದ ಪದ್ಯಗಳು,[೫೯] ಅಲ್ಪ ವ್ಯತ್ಯಾಸದಿಂದ ಸೇರಿಕೊಂಡಿವೆ. ಇವುಗಳ ಅಭ್ಯಾಸ, ಸಂಪಾದನಕಾರ್ಯದಲ್ಲಿ ಎಂಥ ನೆರವು ನೀಡಬಲ್ಲುದೆಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು. ಶ್ರವಣಬೆಳ್ಗೊಳದ ಒಂದು ಶಾಸನದಲ್ಲಿ ಸಾವಿಯಬ್ಬೆಯೆಂಬವಳ ವೀರಮರಣವನ್ನು ಹೇಳುವ ಪದ್ಯವೊಂದು ಹೀಗಿದೆ:[೬೦]

---

೪೯. ಶಾಸನವ್ಯಾಸಂಗ ೧, ಪು. ೧೭.
೫೦. ಕರ್ನಾಟಕ ಭಾರತಿ ೧೦–೪.
೫೧. ಕರ್ನಾಟಕ ಭಾರತಿ ೧೦–೪.
೫೨. ಕರ್ನಾಟಕ ಭಾರತಿ ೧೦–೪.
೫೩. S. I. I. XI-I No. 52 & 53.
೫೪. ಶಾಸನವ್ಯಾಸಂಗ ೨, ಪು. ೧೧.
೫೫. ಶಾಸನವ್ಯಾಸಂಗ ೨, ಪು. ೪.
೫೬. ಶಾಸನವ್ಯಾಸಂಗ ೨, ಪು. ೮.
೫೭. ಶಾಸನವ್ಯಾಸಂಗ ೨ ಪು. ೪೫.
೫೮. ಕ.ಕ.ಚ., (೧೯೬೧) ಮತ್ತು ೧೨೧.
೫೯. ಶಾಸನವ್ಯಾಸಂಗ ೨ ಪು. ೧೧೧.
೬೦. ಶಾಸನವ್ಯಾಸಂಗ ೨, ಪು. ೪೫.

೨೪. ವೆತ್ತ ೩೦. ಪಲರುಂ ತೊ

೨೫. ಯಬ್ಬೆ ೩೧. ಲಗದ ರಾಯ

೨೬. ಸಾಯಲೆನ್ದು ೩೨. ದ ಚಲಮ

೨೭. ಪೆಂಡತಿಯೆ ೩೩. ಸಲಬಳಗಿ

೨೮. ವೊತ್ತ ೩೪. ಗನ್ದಿನಿಪ್ಪ

೨೯. ಣ್ಣಳೊಗಳೆ ೩೫. ಪೆಣ್ಡತಿಯಿನ್

ಸಂದರ್ಭಬಲದಿಂದ ೨೫ನೆಯ ಚರಣದ ಎರಡು ಅಕ್ಷರಗಳನ್ನು ತುಂಬಿಕೊಂಡು '[ಸಾವಿ?]ಯಬ್ಬೆ' ಎಂಬ ಪಾಠವನ್ನು ಸಿದ್ಧಗೊಳಿಸಿಕೊಳ್ಳಬಹುದು. ಆದರೆ ಮಿಕ್ಕ ಎರಡು ಒಡಕುಗಳನ್ನು (ಚರಣ ೨೪, ೨೮) ತುಂಬಲು ಅಜಿತಪುರಾಣದ

ಕಲಿಯನೆ ನೆಗಟ್ದಳ್ ಕಸವರ ।
ಗಲಿಯನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್ ।
ಮೊಲೆವೆತ್ತ ತೈಲಜನನಿಯ ।
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ ॥[೬೧]

ಎಂಬ ಪದ್ಯವನ್ನು ನೆನೆದರೆ ಸಾಕು, "[ಮೊಲೆ ?] ವೆತ್ತ [ಸಾವಿ ?] ಯಬ್ಬೆ ಸಾಯಲೆನ್ದು ಪೆಂಡತಿಯೆ [ಮೀಸೆ ?] ವೊತ್ತಣ್ಣಳೊಗಳೆ" ಎಂದು ಮುಂತಾಗಿ ಪಾಠ ಸಿದ್ಧವಾಗುತ್ತದೆ. ಹೀಗೆ ಎಷ್ಟೋ ಗ್ರಂಥಪದ್ಯಗಳು ನಷ್ಟಪಾಠವನ್ನು ತುಂಬಿಕೊಳ್ಳಲು ನೆರವಾಗುವಂತೆ ದುಷ್ಟಪಾಠಗಳನ್ನು ತಿದ್ದಿಕೊಳ್ಳಲು ಮಾರ್ಗದರ್ಶಿಯಾಗುತ್ತವೆ. ಉದಾ: ಚೌಡದಾನಪುರ ಶಾಸನದಲ್ಲಿ ಬರುವ ಒಬ್ಬ ವ್ಯಕ್ತಿಯ ಹೆಸರನ್ನು ವಾಲ್ಟರ್ ಇಲಿಯಟ್ ಅವರು 'ಬೇಲಾಳ' ಎಂದು ಓದಿರುವರು. ಆದರೆ ವೀರಶೈವಾಮೃತ ಮಹಾಪುರಾಣದ ಆಧಾರದಿಂದ ಇದನ್ನು 'ಚೀಲಾಳ' ಎಂದು ತಿದ್ದಿಕೊಳ್ಳಬೇಕಾಗುತ್ತದೆ.[೬೨]

ಯಾವುದೇ ಶಾಸನದ ಬರವಣಿಗೆ ಎಷ್ಟೇ ಸಂಪ್ರದಾಯಬದ್ಧವಾಗಿದ್ದರೂ, ಒಂದು ಘಟನೆಯ ಧ್ವನಿಯಾದುದರಿಂದ ಅಲ್ಲಿ ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಅಂಶಗಳು ಸೇರಿಕೊಂಡಿರುತ್ತವೆ. ಇವುಗಳ ತಿಳಿವಳಿಕೆಯಿಲ್ಲದೆ ಹೋದರೆ ತಪ್ಪು ಪಾಠಗಳನ್ನು ಪರಿಭಾವಿಸುವ ಅಪಾಯವಿರುತ್ತದೆ. ಉದಾ: ಗಂಗ ಮಾರಸಿಂಹನು ರಾಷ್ಟ್ರಕೂಟ ಮೂರನೆಯ ಕೃಷ್ಣನನ್ನು ವಿರೋಧಿಸಿದ 'ಅಲ್ಲ'ನ ಅಹಂಕಾರವನ್ನು ಮುರಿದನೆಂದು ಶ್ರವಣಬೆಳ್ಗೊಳ ಶಾಸನದಲ್ಲಿ ಹೇಳಲಾಗಿದ್ದು, ಈ 'ಅಲ್ಲ'ನು ಯಾರೆಂಬುದು ತಿಳಿಯದೆಂದು ಫ್ಲೀಟ್ ಹೇಳುತ್ತಾರೆ. ಮುಂದೆ ಇದನ್ನು ರೈಸ್ ಅವರು 'ದಲ್ಲ' ಎಂದು ಓದಿದರಾದರೂ, ಫ್ಲೀಟ್‌ರು ಲಕ್ಕುಂಡಿ ಶಾಸನ ಮತ್ತು ಅಜಿತ ಪುರಾಣಗಳನ್ನು ನೋಡಿದ್ದರೆ

---

೬೧. ಅಜಿತ ಪುರಾಣ, ೧-೬೫.
೬೨. Prof. P. B. Desai feliciatation volume P.83-84.

ಈ ಹೆಸರನ್ನು ಅಂದೇ 'ದಲ್ಲ' ಎಂದು ಓದುವ ಸಾಧ್ಯತೆಯಿದ್ದಿತು.[೬೩] ಸುತ್ತೂಕಡೆ ಕಣ್ಣಾಡಿಸಿ ರಾಜಕೀಯ ಅಂಶಗಳನ್ನು ಗಮನಿಸಿದ್ದ ಹಿನ್ನೆಲೆ ಇಂಥ ಪ್ರಸಂಗಗಳಲ್ಲಿ ಸಂಪಾದಕನಿಗೆ ತುಂಬ ನೆರವಾಗುತ್ತದೆ. ಶಾಸನಗಳಲ್ಲಿ ಆಯಾ ಕಾಲದ ಸಮಾಜಕ್ಕೆ ಸಂಬಂಧಿಸಿದ ಅನೇಕ ಸಂಪ್ರದಾಯಗಳು ದಾಖಲೆಗೊಂಡಿರುತ್ತವೆ. ಇವುಗಳನ್ನು ಅರಿತಷ್ಟೂ ವಾಚನಕಾರ್ಯ ವೇಗಗೊಂಡು ಸಂಪಾದನೆ ಅರ್ಧದಷ್ಟು ಹಗುರಾಗುತ್ತದೆ. ಉದಾ: "ಬಾಳ್ಗ (ಟ್ಗ ?) ಬ್ಚು (ಚ್ಚು)" ಎನ್ನುವುದು ಶಾಸನಗಳಲ್ಲಿ ಮಾತ್ರ ಕಂಡುಬರುವ ಪರಿಭಾಷೆ. ಇದರ ಪರಿಚಯವಿಲ್ಲದ ಕಾರಣ ಸುಪ್ರಸಿದ್ಧ ಆತಕೂರು ಶಾಸನದ ಪಾಠವನ್ನು 'ಬಾಲ್ಗ[ಂ] [ಮೆ]ಚ್ಚು ಗೊಟ್ಟುಂ" ಎಂದು ಸಂಪಾದಕರು ಊಹಾತ್ಮಕ ಪರಿಷ್ಕರಣ ಮಾಡಿದುದನ್ನು ಕೈಬಿಡಬೇಕಾಗುತ್ತದೆ.[೬೪] ಇಂಥ ನೂರಾರು ಸಾಮಾಜಿಕ ಸಂಪ್ರದಾಯಗಳ ಪರಿಚಯ ಸಂಪಾದಕನಿಗಿರಬೇಕು.

ಶಾಸನ ವಾಚನದಲ್ಲಿ ಒಂದೊಂದಾಗಿ ಅಕ್ಷರಗಳನ್ನು ಓದಬೇಕಾಗುತ್ತಿದ್ದರೂ ಸಂಪಾದಕನು ಮಾಡಬೇಕಾದುದು ಅಕ್ಷರಗಳನ್ನು ಸಾಲುಗಟ್ಟಿ ಸಂಪಾದಿಸುವುದಲ್ಲ, ಶಬ್ದಗಳನ್ನು ವಾಕ್ಯಗಳನ್ನು ರೂಪಿಸುವುದು. ಈ ಕಾರ್ಯದಲ್ಲಿ ನಮ್ಮ ಸಂಪಾದಕರು ಎಡಹುವ ಸಾಧ್ಯತೆಯಿದೆ. ಉದಾ: ಎಂ. ಎಚ್. ಕೃಷ್ಣ ಮೊದಲು ಮಾಡಿ ಎಲ್ಲ ವಿದ್ವಾಂಸರು ಹಲ್ಮಿಡಿ ಶಾಸನದ ಒಂದು ವಾಕ್ಯವನ್ನು "ಪಶುಪತಿನಾಮಧೇಯನಾಸರಕ್ಕೆಲ್ಲ ಭಟರಿಯಾ" ಎಂದು ಸಾಂದ್ರವಾಗಿ ಓದಿ "ಪಶುಪತಿ ನಾಮಧೇಯನ + ಆಸರಕ್ಕೆ + ಎಲ್ಲಭಟರಿಯಾ" ಎಂದು ಬಿಡಿಸಿ ಅರ್ಥೈಸುತ್ತಾರೆ. ಆದರೆ ಮೂಲಪಾಠ "ಪಶುಪತಿನಾಮಧೇಯನಾ ಸರಕ್ಕೆಲ್ಲಭಟರಿಯಾ" ಎಂದು ಇರಬೇಕೆಂದು ತೋರುತ್ತದೆ.[೬೫] ಇದೇ ರೀತಿ ಮಡಕಶಿರಾ ಶಾಸನದ ಪಾಠ ಈಗ ಅಚ್ಚಾಗಿರುವಂತೆ "ಕಿಜೆಯ ಪೊನ್ನಯ್ಯಬಲ್ಲಹನ ಬೆಸದಾಳು, ಗಜಾಂಕುಸ ಜೋಳನ ಮೇಗೆ ದಂಡು ಪೋಗಲು" ಅಲ್ಲ. "ಕಿಜೆಯ ಪೊನ್ನಯ್ಯ, ಬಲ್ಲಹನ ಬೆಸದಾಳು ಗಜಾಂಕುಸ, ಜೋಳನ ಮೇಗೆ ದಂಡು ಪೋಗಲು" ಎಂದು ಅಚ್ಚಾಗಬೇಕು.[೬೬] ಹೀಗೆ ಪದಸಂಯೋಜನೆ, ವಾಕ್ಯಸಂಯೋಜನೆಯ ಅನ್ಯಥಾಜ್ಞಾನ ಅನೇಕ ತಪ್ಪು ನಿರ್ಣಯಗಳಿಗೆ ದಾರಿಮಾಡಿಕೊಡುವ ಸಂಭವವಿರುತ್ತದೆ. ಇವುಗಳಿಗೆ ಹೆಚ್ಚಿನದಾಗಿ ತಾನು ಸಂಪಾದಿಸುತ್ತಿರುವ ಶಾಸನ ಸತ್ಯವೋ ಕೃತಕವೋ ಎಂದು ನಿರ್ಧರಿಸುವುದು ಈ ಎಲ್ಲ ಎಚ್ಚರಿಕೆಗಳನ್ನು ಕಣ್ಣಮುಂದಿಟ್ಟುಕೊಂಡು ಶಾಸನ ಸಂಪಾದನೆಗೆ ಕೈಹಾಕಬೇಕಾಗುತ್ತದೆ. ಈ ಕಾರ್ಯದಲ್ಲಿ ಅವನಿಗೆ ಅನೇಕ ಸಂಕೇತಗಳ ಬಳಕೆ ಅನಿವಾರ್ಯ. ಈಗ ಸಾಮಾನ್ಯವಾಗಿ

೧. ಮೂಲದಲ್ಲಿದ್ದು ನಷ್ಟವಾಗಿರುವ ಪಾಠ ಸೂಚನೆಗೆ........

೨. ಮೂಲದಲ್ಲಿ ಇದ್ದು ಸಂದೇಹವಾಗಿರುವ ಪಾಠ ಸೂಚನೆಗೆ [ ]

---

೬೩. ದಲ್ಲಪ್ಪ-ಗೋವಿಂದರ, ಪ್ರ. ಕ. ೪೧-೨.

೬೪. ಶಾಸನಸಂಪದ (೧೯೭೪), ಪು. ೨೬.

೬೫. ಶಾಸನಸಂಪದ (೧೯೭೪), ಪು. ೧.

೬೬. ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ, ಪು. ೨೫೧-೫೨.

೬೭. ಶಾಸನಸಂಪದ (೧೯೭೪), ಪು. ೧೬.

೩. ಮೂಲದಲ್ಲಿಲ್ಲದ ಪಾಠ ಸೂಚನೆಗೆ [*]

೪. ಮೂಲದಲ್ಲಿದ್ದು ತಿದ್ದುಪಡಿಮಾಡಿದ ಪಾಠಸೂಚನೆಗೆ ( )

ಇಷ್ಟು ಚಿಹ್ನೆಗಳು ಬಳಕೆಯಾಗುತ್ತವೆ. ಉದಾ: "ಸನಯಾ ..... ಳೋಕನನವರಂ (ರ)ಶ್ಮಿ [ಜಾ*]ಳಕಂ । [ಕನ*] ತ್ಕನಕಧಾರಾ[ವರ್ಷಂ]."[೬೭] ಇಷ್ಟಿದ್ದೂ, ಸಮರ್ಪಕ ಸಂಪಾದನೆಗೆ ಇನ್ನೂ ಕೆಲವು ಚಿಹ್ನೆಗಳನ್ನು ಬಳಸುವ ಅವಶ್ಯಕತೆ ತೋರಿಬರುತ್ತದೆ. ತಿದ್ದುಪಡಿಮಾಡಿದ ಪಾಠವನ್ನು ಮಗ್ಗುಲಲ್ಲಿಯೇ ವಕ್ರಕಂಸಿನಲ್ಲಿ ಬಳಸುವುದು ವಾಚನಕಾರ್ಯವನ್ನು ಕ್ಲೇಶಗೊಳಿಸುತ್ತದೆ. ಚಿಹ್ನೆಗಳ ಬಳಕೆಯಲ್ಲಿ ಒಂದು ಕಟ್ಟುನಿಟ್ಟು ಇಲ್ಲದುದು ಅಂದರೆ ಒಬ್ಬೊಬ್ಬರು ಒಂದೊಂದು ಬಗೆಯ ಚಿಹ್ನೆ ಬಳಸುತ್ತಿರುವುದು ಅಭ್ಯಾಸಿಗಳನ್ನು ಗೊಂದಲಕ್ಕೆ ಕೆಡಹುತ್ತದೆ. ಹೀಗಾಗಿ ಎಲ್ಲ ಪ್ರಸಂಗಗಳಿಗೂ ಉಪಯೋಗ ಬೀಳುವ ಎಲ್ಲರಿಗೂ ಮಾನ್ಯವಾಗುವ ಇನ್ನಷ್ಟು ಚಿಹ್ನೆಗಳನ್ನು ಬಳಸುವುದು, ಅವುಗಳನ್ನು ಕಟ್ಟುನಿಟ್ಟಾಗಿ ಉಪಯೋಗಿಸುವುದು, ಫ್ಲೀಟ್ ರೈಸ್ ಮೊದಲಾದವರು ರೂಪಿಸಿಕೊಟ್ಟ ಹಳೆಯ ಸಂಪಾದನಾ ವಿಧಾನಗಳನ್ನು ನವೀಕರಿಸುವುದು ಈಗ ತೀರಾ ಅವಶ್ಯವಿದೆ. ಗ್ರಂಥಸಾಹಿತ್ಯ ಸಂಪಾದನೆಗೆ ಚಿಹ್ನವ್ಯವಸ್ಥೆ ಬೇರೆ. ಶಾಸನ ಸಾಹಿತ್ಯ ಸಂಪಾದನೆಗೆ ಚಿಹ್ನ ವ್ಯವಸ್ಥೆ ಬೇರೆಯಾಗಿರುವುದು ನಿಂತು, ಸಾಧ್ಯವಾದಷ್ಟು ಎರಡಕ್ಕೂ ಸಮಾನವಾದ ಚಿಹ್ನೆಗಳು ರೂಢವಾಗಬೇಕಲ್ಲದೆ ಅವುಗಳಿಗೆ ಗಣಿತ ಚಿಹ್ನೆಗಳಂತೆ ಸಾರ್ವತ್ರಿಕ ಮಾನ್ಯತೆ ಲಭ್ಯವಾಗಬೇಕು.

ಶಾಸನಪರಿಚಯ ಅಂದರೆ ಅದು ಇರುವ ಊರು, ನಿಂತ ಸ್ಥಳ, ಉದ್ದಗಲ ಪ್ರಮಾಣ, ಸ್ಥಿತಿ, ಅಕ್ಷರಸ್ವರೂಪ, ಪಾಠವಿನ್ಯಾಸ ಇತ್ಯಾದಿ ಅವಶ್ಯ ವಿವರಣೆಗಳು ಸಂಪಾದನೆಗೆ ಪೂರ್ವಭಾವಿಯಾಗಿ ಬರಬೇಕು. ವೀರಗಲ್ಲು, ಮಾಸ್ತಿಕಲ್ಲು, ನಿಷಧಿಕಲ್ಲು ಮೊದಲಾದವುಗಳ ಪಾಠದಷ್ಟೇ ಅವುಗಳ ಚಿತ್ರವೂ ಅವಶ್ಯವಾಗಿರುತ್ತದೆ. ಕೆಲವು ಸಲ ವೇಷಭೂಷಣ, ಭಾವ-ಭಂಗಿ ಮೊದಲಾದ ಕಲಾಜೀವನ ಮತ್ತು ಯುದ್ಧ, ದೇವಪೂಜೆ, ವಾಚನ, ಮೊದಲಾದ ಜನಜೀವನ ಅಭ್ಯಾಸಕ್ಕೋಸುಗ ಪಾಠಕ್ಕಿಂತ ಚಿತ್ರವೇ ಪ್ರಧಾನವಾಗಿರುತ್ತದೆ. ಸಂಪಾದನಕಾರ್ಯದಲ್ಲಿ ಈವರೆಗೆ ತೀರ ಕಡೆಗಣಿಸಲ್ಪಟ್ಟ ಈ ಸಂಗತಿಯನ್ನು ಇನ್ನು ಮೇಲಾದರೂ ತುಂಬಿಕೊಳ್ಳಬೇಕು.

ಯಾವುದೇ ಶಾಸನವನ್ನು ಅದರ ಭಾಷಾಲಿಪಿಯಲ್ಲಿ ಮತ್ತು ರೋಮನ್ ಲಿಪಿಯಲ್ಲಿ ಪ್ರಕಟಿಸುವುದು ಆಂಗ್ಲ ವಿದ್ವಾಂಸರು ಮೊದಲಿನಿಂದಲೂ ಹಾಕಿಕೊಟ್ಟ ರೂಢಿ. ಆದರೆ ಅಕ್ಷರ ಓದುವುದರಿಂದ ಭಾಷೆ ಓದಿದಂತಾಗುವುದಿಲ್ಲವಾದ ಕಾರಣ ರೋಮನ್ ಲಿಪಿಯಲ್ಲಿಯೂ ಪ್ರಕಟಿಸುವುದು ಈಗ ಅಷ್ಟು ಅವಶ್ಯವಾಗಿ ತೋರುವುದಿಲ್ಲ. ಒಂದು ವೇಳೆ ಪ್ರಕಟಿಸುತ್ತಿದ್ದರೂ, ರೋಮನ್‌ಲಿಪಿ ಸಂದರ್ಭದಲ್ಲಿ ಬಳಸುವ ಡಯಕ್ರಿಟಿಕಲ್ ಗುರುತುಗಳ ಬಗ್ಗೆ ಎಚ್ಚರವಹಿಸಬೇಕು. ಎಪಿಗ್ರಾಫಿಯಾ ಇಂಡಿಕಾ, ಎಪಿಗ್ರಾಫಿಯಾ ಕರ್ನಾಟಿಕ ಮೊದಲಾದ ಸಂಪುಟಗಳಲ್ಲಿ ಬಳಸಿದ ಡಯಾಕ್ರಿಟಿಕಲ್ ಗುರುತುಗಳಲ್ಲಿ ಕೆಲಮಟ್ಟಿನ ವ್ಯತ್ಯಾಸ ತೋರಿಬರುತ್ತದೆ. ಇಂಥ ಅನೈಕ್ಯತೆ ದೂರವಾದಷ್ಟೂ ಶಾಸನಸಂಪಾದನೆಗೆ 'ಶಾಸ್ತ್ರಶುದ್ಧಿ' ಪ್ರಾಪ್ತವಾಗುತ್ತದೆ. ಇನ್ನು ಕೆಲವು ಸಲ ಶಾಸನವೊಂದರ ಪಾಠ ಆ ಶಾಸನದ ಭಾಷಾಲಿಪಿಯಲ್ಲಿ ಒಂದು ತೆರನಾಗಿದ್ದರೆ; ರೋಮನ್ ಲಿಪಿಯಲ್ಲಿ ಇನ್ನೊಂದು ತೆರನಾಗಿರುವುದು ವಿಷಾದದ ಸಂಗತಿ. ಉದಾ: "ಧರಾ ಭಾರಧಾರೇಯದುಕ್ಕುಂಜರನುಂ"-"ದುರಾಚಾರಧಾರೇಯದಿಕ್ಕುಂಜರನುಂ", "ಮೋವನಿಗೆಯುಮೊನಕೆವಾಡುಮಾದುದೆ ಪೇಟ್ಸಿಗಂ" "ಮೋವನಿಗೆಯ್ದೆ ಮೋನಕೆವಾಡುಮಾದುದೆ

ಪೇಳ್ಗು" (ಕನ್ನಡಪಾಠ). ರೈಸ್ ಸಂಪಾದಿಸಿದ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳಿಂದ ಮೇಲಿನಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು.

ಶಾಸನಸಂಪುಟಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಮತ್ತು ಅನುಬಂಧಗಳು ನಮ್ಮಲ್ಲಿ ಇನ್ನೂ ವ್ಯವಸ್ಥಿತವಾಗಿ, ಪರಿಪೂರ್ಣವಾಗಿ ರೂಪುಗೊಂಡಿಲ್ಲ. ಶಾಸನವು ಇತಿಹಾಸ, ಸಾಹಿತ್ಯ, ಭಾಷೆ, ಸಂಸ್ಕೃತಿಗಳನ್ನೊಳಗೊಂಡ ಸಂಯುಕ್ತಕ್ಷೇತ್ರ. ಆದರೆ ಸಾಮಾನ್ಯವಾಗಿ ಈವರೆಗೆ ಇವುಗಳನ್ನು ಓದಿದವರು ಲಿಪಿತಜ್ಞರು, ಅರ್ಥೈಸಿದವರು ಇತಿಹಾಸತಜ್ಞರು. ಇದರಿಂದಾಗಿ ಶಾಸನ ಸಂಪಾದನೆಯಲ್ಲಿ, ಹಾಗೆಯೇ ಪ್ರಸ್ತಾವನೆಯ ಬರವಣಿಗೆಯಲ್ಲಿ ಅನುಬಂಧಗಳ ಜೋಡಣೆಯಲ್ಲಿ ಒಂದು ಬಗೆಯ ಕೊರತೆ ಎದ್ದು ಕಾಣುತ್ತದೆ. ಅಂದರೆ ಇಲ್ಲಿಯ ಸಂಪಾದನೆ ಲಿಪಿವಾಚನಕ್ಕೆ, ಪ್ರಸ್ತಾವನೆ ರಾಜಕೀಯ ಚರಿತ್ರೆಗೆ ಸೀಮಿತಗೊಂಡಿದೆ. ಕಾರಣ ಶಾಸನಸ್ಥ ಸರ್ವಕ್ಷೇತ್ರಗಳನ್ನು ತೆಕ್ಕೆಯಲ್ಲಿ ಹಿಡಿಯುವ ಸಾಮರ್ಥ್ಯವುಳ್ಳ ಲಿಪಿ. ಚರಿತ್ರೆ, ಭಾಷೆ, ಸಾಹಿತ್ಯ, ಸಂಸ್ಕೃತಿ, ಲಲಿತಕಲೆ, ವಿಜ್ಞಾನ ಮೊದಲಾದ ಕ್ಷೇತ್ರಗಳ ವಿದ್ವಾಂಸರು ಶಾಸನಸಂಪಾದನ ಕಾರ್ಯದಲ್ಲಿ ತೊಡಗಬೇಕಾಗಿದೆ.

ಅನುಬಂಧಗಳು ಕೇವಲ ನಾಮಪದಕೋಶಕ್ಕೆ ಸೀಮಿತವಾಗದೆ ಗಮನಾರ್ಹ ಪದಕೋಶವನ್ನೂ ಶಾಸನಗಳ ರಾಜಕೀಯ, ಪ್ರಾದೇಶಿಕ, ಭಾಷಿಕ ವಿವರಣೆಗಳನ್ನೂ ಪರಿಭಾಷೆಗಳಿಗೆ ಬರೆದ ಟಿಪ್ಪಣಿಗಳನ್ನೂ ಒಳಗೊಳ್ಳಬೇಕು. ಒಟ್ಟಿನಲ್ಲಿ ನಮ್ಮ 'ಶಾಸನಸಂಪಾದನೆ' ಫ್ಲೀಟ್–ರೈಸ್ ರೂಪಿಸಿಕೊಟ್ಟ ಹಳೆಯ ವಿಧಾನಗಳಲ್ಲಿ 'ಶಾಪಗ್ರಸ್ತ ಅಜಗರ'ನಂತೆ ಜಡರೂಪಿಯಾಗಿ ಮುಂದುವರಿಯುತ್ತಲಿದೆ. ಬ್ರಿಟಿಶರ ನಿರ್ಗಮನದ ತರುವಾಯವೂ ಭಾರತದ ತುಂಬ ಶಾಸನ ಸಂಪಾದನ ಕ್ಷೇತ್ರದಲ್ಲಿ ಒಂದು ಬಗೆಯ ಪಟ್ಟಭದ್ರ ಗುರು–ಶಿಷ್ಯ ಪರಂಪರೆ ಬೆಳೆದುಬರುತ್ತಲಿದೆ. ಅಂದರೆ ತಲೆಮಾರಿನಿಂದ ತಲೆಮಾರಿಗೆ ಒಂದು ಪಂಥ (School)ದವರೇ ಮುಂದುವರಿದಿದ್ದಾರೆ. ಇದರಿಂದಾಗಿ ಶಾಸನಸಂಪಾದನೆ ಸಂಪ್ರದಾಯದ ದಾರಿಯಲ್ಲಿ ಜಾರುತ್ತಲಿದೆಯೇ ಹೊರತು ಪರಂಪರೆಯ ದಾರಿಯಲ್ಲಿ ನಡೆಯುತ್ತಿಲ್ಲ. ಒಟ್ಟಿನಲ್ಲಿ ಈ "ಗುರು–ಶಿಷ್ಯವರ್ಗ" ಅನ್ಯರಿಗೆ ಅವಕಾಶಮಾಡಿಕೊಟ್ಟ "ಶಾಸನಸಂಪಾದನೆ"ಯೆಂಬ ಮಲೆತ ನೀರು ತಿಳಿಯಾಗುವಂತೆ ನೋಡಿಕೊಳ್ಳಬೇಕು.

ಈಗ ನಮ್ಮ ಕಣ್ಣಮುಂದಿರುವ ಕಾರ್ಯವೆಂದರೆ ಈವರೆಗೆ ಉಪೇಕ್ಷಿತವಾಗಿರುವ ಶಾಸನಗಳನ್ನು ಪರಿವೀಕ್ಷಣೆಮಾಡುವುದು, ಪರಿವೀಕ್ಷಣೆಮಾಡಿ ಕಾರ್ಯಾಲಯಗಳಲ್ಲಿ ಒಟ್ಟಿರುವಂಥವುಗಳನ್ನು ಪ್ರಕಟಿಸುವುದು, ಸಾಧ್ಯವಾದರೆ ಪ್ರಕಟವಾದ ಶಾಸನಗಳ ಮರುಪರಿಷ್ಕರಣ ನಡೆಸಿ, ಎಲ್ಲ ಸಂಪುಟಗಳಿಗೆ ಯೋಗ್ಯವಾದ ಪ್ರಸ್ತಾವನೆಗಳನ್ನೂ ಪ್ರಯೋಜನಕವಾದ ಅನುಬಂಧಗಳನ್ನೂ ಜೋಡಿಸುವುದು. ಈ ಎಲ್ಲ ಪ್ರಾಥಮಿಕ ಕಾರ್ಯಗಳು ಕೈಗೂಡಿದಾಗ ಮಾತ್ರ ಶಾಸನಗಳ ಸಹಾಯದಿಂದ ಪ್ರಾಚೀನ ರಾಜಕೀಯ, ಸಾಮಾಜಿಕ, ಭಾಷಿಕ ಇತಿಹಾಸದ ಪುನರ್ರಚನೆಯ ಕಾರ್ಯ ಸಮರ್ಪಕವಾಗುತ್ತದೆ. ಇಲ್ಲದಿದ್ದರೆ ಕೆಲವೇ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ತಪ್ಪು ಪಾಠಗಳನ್ನು ನಂಬಿಕೊಂಡು ಬರೆದ ಇಂಥ ಇತಿಹಾಸ ಅಸಮರ್ಪಕವಾಗುತ್ತದೆ.

❖❖

೩

❖

ಜಾನಪದಸಾಹಿತ್ಯ ಸಂಪಾದನೆ

'ಜನಪದ' ಎಂಬ ಶಬ್ದಕ್ಕೆ ಹಳ್ಳಿಗಾಡು, ಪ್ರಾಂತ ಎಂದು ವಾಚ್ಯಾರ್ಥ. ಅನೇಕ ಸಲ ಹಳ್ಳಿಗಾಡಿನ ಜನತೆ, ಪ್ರಾಂತದ ಜನಾಂಗ ಎಂಬ ಲಕ್ಷ್ಯಾರ್ಥಪಡೆದೂ, ಇದು ಪ್ರಾಚೀನ ಸಾಹಿತ್ಯದಲ್ಲಿ ಬಳಕೆಯಾಗಿದೆ. ಈ 'ಜನಪದ'ದ ತದ್ಧಿತವಿಶೇಷಣರೂಪವೇ "ಜಾನಪದ."

ಹೀಗೆ ಪ್ರಾಚೀನಕಾಲದಿಂದಲೂ ಪ್ರದೇಶವಾಚಿ, ಪ್ರಜಾವಾಚಿ ಅರ್ಥಗಳನ್ನು ಪ್ರತಿನಿಧಿಸುತ್ತ ಬಂದಿದ್ದ ಈ ಪದ, ೧೯೩೦ರಲ್ಲಿ 'ಗರತಿಯ ಹಾಡು' ಪ್ರಕಟವಾದಂದಿನಿಂದ ಸಾಮಾನ್ಯರ ಸಾಹಿತ್ಯಕ್ಕೆ ವಿಶೇಷಣಪದವೆಂಬಂತೆ ಬಳಕೆಯಾಗತೊಡಗಿತು. ಈ ಸಾಮಾನ್ಯರ (ಗೀತ) ಸಾಹಿತ್ಯವನ್ನು ಕನ್ನಡಿಗರು ಮೊದಮೊದಲು 'ಹಳ್ಳಿಯ ಹಾಡು' ಎಂದು, ಆಮೇಲೆ ನಾಡಪದ, ಜನತಾಗೀತೆ, ಲೋಕಗೀತೆ ಎಂದು ಕರೆದರೂ, ಭಾರತದ ಬೇರೆ ಬೇರೆ ಪ್ರಾಂತದಲ್ಲಿ ಇನ್ನೂ ಗ್ರಾಮಸಾಹಿತ್ಯ, ಪಲ್ಲಿಗೀತ್, ಲೋಕಗೀತೆ, ಲೋಕಸಾಹಿತ್ಯ, ಜನಸಾಹಿತ್ಯ ಎಂದು ಕರೆಯುತ್ತಲಿದ್ದರೂ ಕರ್ನಾಟಕದಲ್ಲಿ ಮಾತ್ರ ಯಾರೋ ಒಬ್ಬರು ಪ್ರಯೋಗಿಸಿದ 'ಜನಪದಸಾಹಿತ್ಯ' ಎಂಬುದು ತಟ್ಟನೆ ಪ್ರಚಾರಪಡೆದು ಚಲಾವಣೆಯಲ್ಲಿ ಬಂದುಬಿಟ್ಟಿದೆ. ಬಹುಶಃ ಇದು ಧಾರವಾಡದ ಗೆಳೆಯರ ಗುಂಪಿನ ಸೃಷ್ಟಿಯೆಂದೂ, ಜಯಕರ್ನಾಟಕ ಪತ್ರಿಕೆಯ ಮುಖಾಂತರ ಪ್ರಚಾರಪಡೆದುದೆಂದೂ ತೋರುತ್ತದೆ. ಒಟ್ಟಿನಲ್ಲಿ 'ಜಯಪದಸಾಹಿತ್ಯ'ದಂತೆ 'ಜನಪದಸಾಹಿತ್ಯ' ಎಂಬ ಪದವೂ ಅನಾಮಧೇಯ ಸೃಷ್ಟಿಯಾಗಿರುವುದು ಒಂದು ಕುತೂಹಲಕಾರಿ ಯೋಗಾಯೋಗವಾಗಿದೆ. ಅಂದಿನಿಂದ 'ಜನಪದಸಾಹಿತ್ಯ' ಎಂಬ ಸಮಸ್ತಪದ, 'ಜಾನಪದ ಸಾಹಿತ್ಯ' ಎಂಬ ವಿಗ್ರಹ ಪದಗಳು ನಮ್ಮಲ್ಲಿ ಬಳಕೆಯಾಗುತ್ತ ಬಂದುವು.

'Folklore' ಪರಿಕಲ್ಪನೆಯ ಇಂದಿನ ಸಂದರ್ಭದಲ್ಲಿ ಈ ಪದ ಇನ್ನೂ ವಿಶಿಷ್ಟ ಅರ್ಥ ಪಡೆದು ಬಳಕೆಯಾಗುತ್ತಲಿದೆ. Folk ಎಂದರೆ ಸಾಮಾನ್ಯರ ಸಮೂಹ. ಈ ಸಾಮಾನ್ಯರ ಜೀವನದಲ್ಲಿ ಕಾಣುವ "ಸಾಂಪ್ರದಾಯಿಕ ಅಂಶಗಳ ಮೊತ್ತ"ಕ್ಕೆ ವಿಲಿಯಂ ಥಾಮ್ಸ್ ೧೮೪೬ರಲ್ಲಿ Folklore ಎಂಬ ಪದವನ್ನು ಬಳಸಿದನು.[೧]

---

೧. ಜನಜೀವನದ ಮೊತ್ತಕ್ಕೂ Folklore ಎಂದು, ಇದನ್ನು ಅಭ್ಯಸಿಸುವ ಶಾಸ್ತ್ರಕ್ಕೂ Folklore ಎಂದು ಬಳಸುತ್ತಲಿದ್ದಾರೆ. ಆದರೆ ಒಂದನ್ನು Folklore ಎಂದು ಇನ್ನೊಂದನ್ನು Science of Folklore ಎಂದು ಕಟ್ಟುನಿಟ್ಟಾಗಿ ಕರೆಯುವುದು ಯೋಗ್ಯ.

ಈ Folklore ಎಂಬುದು ಸಾಮಾನ್ಯರ ಜೀವನದ ಸರ್ವಸ್ತರಗಳನ್ನು ಆವರಿಸಿಕೊಂಡು ಕಾಲದಿಂದ ಕಾಲಕ್ಕೆ ಕೈಚಾಚುತ್ತಲೇ ಹೋಗುತ್ತದೆ. ಇದನ್ನು ಅನುಮೋದಿಸುವ "Folklore is a Lively fossil which refuses to die" ಎಂಬ "Folklore is an echo of the past at the same time, it is also the vigorous voice of the present" ಎಂಬ ಮಾತುಗಳನ್ನು ಇಲ್ಲಿ ಲಕ್ಷಿಸಬೇಕು. ಅಂದರೆ Folklore ಎಂಬುದು ಸಾಯುವುದೇ ಇಲ್ಲ, ಅದಕ್ಕೆ ಸಾವೆಂಬುದೇ ಇಲ್ಲ. ಬಹಳೆಂದರೆ ರೂಪಾಂತರ ಹೊಂದುತ್ತದೆ; ಇಲ್ಲವೆ ಜನ್ಮಾಂತರ ಹೊಂದುತ್ತದೆ.

Folkloreಗೆ ಸಂವಾದಿಪದವನ್ನು ಹುಡುಕಿಕೊಳ್ಳುವುದು ಭಾರತೀಯ ವಿದ್ವಾಂಸರನ್ನು ಬಹುಮಟ್ಟಿಗೆ ಕಾಡಿದೆ; ಕಾಡುತ್ತಲಿದೆ. ಬೇರೆ ಬೇರೆ ಪ್ರಾಂತದವರು ಬೇರೆ ಬೇರೆ ಪದಗಳನ್ನು ಶೋಧಿಸಲು ನಿರತರಾದ ಸಮಯದಲ್ಲಿ ಹಾ. ಮಾ. ನಾಯಕ ಅವರು ತಮ್ಮದೇ ಆದ ವಿವರಣೆ ಕೊಟ್ಟು Folk =ಜನಪದ, Folklore=ಜಾನಪದ ಎಂಬ ಸಂವಾದಿಗಳನ್ನು ನಮ್ಮ ಮುಂದಿಟ್ಟರಲ್ಲದೆ, ಜನಪದಸಾಹಿತ್ಯ, ಜನಪದನೃತ್ಯ ಎಂಬಂತೆ 'ಜನಪದ' ಎಂಬುದನ್ನು ಒಂದು ಶಾಖೆಗಾಗಿ, 'ಜಾನಪದ' ಎಂಬುದನ್ನು ಸಾಮಾನ್ಯರ ಇಂಥ ಸರ್ವಶಾಖೆಗಳ ಸಮೂಹಕ್ಕಾಗಿ ಬಳಸಬೇಕೆಂದು ೧೯೬೬ರಲ್ಲಿ ಸೂಚಿಸಿದರು. ಇದನ್ನು ಒಪ್ಪುವಲ್ಲಿ ಒಂದೆರಡು ತೊಂದರೆಗಳುಂಟು : (೧) Lore ಅನ್ನು ಸೂಚಿಸುವ ಅಂಶ 'ಜಾನಪದ' ಶಬ್ದದಲ್ಲಿಲ್ಲ. (೨) ಜನಪದ ನಾಮವಾದರೆ ಜಾನಪದ ಅದರಿಂದ ನಿಷ್ಪನ್ನವಾದ ತದ್ಧಿತವಿಶೇಷಣ. ಇಂಥ ಸಂದರ್ಭದಲ್ಲಿ ವಿಶೇಷ್ಯಕ್ಕಿಂತ ವಿಶೇಷಣದ ವ್ಯಾಪ್ತಿ ಸಣ್ಣದು. ಆದುದರಿಂದ ಜನಪದ ಒಂದು ಶಾಖೆಯನ್ನು ಸೂಚಿಸಿದರೆ ಜಾನಪದ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತದೆಯೆಂಬ ಹಾ. ಮಾ. ನಾಯಕ ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಜಾನಪದವೇ ಒಂದು ಶಾಖೆಯನ್ನು ಸೂಚಿಸಿದರೆ ಜನಪದವೇ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತದೆಯೆಂದು ಹೇಳಬೇಕಾಗುತ್ತದೆ. ಹೀಗಾಗಿ ಜನಪದ, ಜಾನಪದಗಳಿಗೆ ಅವರು ಆರೋಪಿಸಿದ ಅರ್ಥವನ್ನು ನಿಷ್ಪತ್ತಿದೃಷ್ಟಿಯಿಂದ ಒಪ್ಪುವುದು ಕಷ್ಟವಾಗುತ್ತದೆ. (೩) ಹಾ. ಮಾ. ನಾಯಕ ಅವರ ಅಭಿಪ್ರಾಯದಲ್ಲಿ 'ಜನಪದಸಾಹಿತ್ಯ' ರೂಪ ಸರಿ; 'ಜಾನಪದಸಾಹಿತ್ಯ' ರೂಪ ತಪ್ಪು. ಆದರೆ ಸಂಸ್ಕೃತ ಭಾಷಾಮರ್ಯಾದೆಯಲ್ಲಿ 'ಜನಪದಸಾಹಿತ್ಯ' ಎಂಬುದು ಸಮಾಸಪದ. ಜಾನಪದ ಸಾಹಿತ್ಯವೆಂಬುದು ಅಸಮಾಸಪದವಾಗಿರುವುದರಿಂದ ಎರಡೂ ರೂಪಗಳು ಸರಿಯೆನಿಸುತ್ತವೆ. ಆದುದರಿಂದ Folk, Folkloreಗಳಿಗೆ ಸಂವಾದಿಗಳನ್ನು ನಿರ್ಧರಿಸುವ ಪ್ರಶ್ನೆಯನ್ನು ಇನ್ನೊಮ್ಮೆ ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

'ಜನ' ಎಂಬ ಶಬ್ದ ವ್ಯಾಕರಣದ ದೃಷ್ಟಿಯಿಂದ ಜಾತಿವಾಚಿಯೆನಿಸಿ (ಸಾಮಾನ್ಯರ) ಸಮೂಹವನ್ನೂ ಸೂಚಿಸುವುದರಿಂದ Folkಗೆ ಸಂವಾದಿಯಾಗಿ 'ಜನ' ಶಬ್ದವನ್ನು ಬಳಸಬಹುದು. ಈ ಶಬ್ದದಿಂದ ನಿಷ್ಪನ್ನವಾದ 'ಜನಪದ' ಎಂಬುದನ್ನು ಕುರಿತ "An important geographical term used by Panini is 'Janapada', which was both a state and Cultural unit, its Culture containing more than its geography. Its cultural integrity was reflected and preserved in the manners, customs and above all the dialect of its people"[೨] ಎಂಬ

೨. V. S. Agarawala : India as known to Panini (೧೯೫೩), P. ೪೮ ಮತ್ತು ಹಾ. ಮಾ. ನಾಯಕ ಜಾನಪದ ಸ್ವರೂಪ (೧೯೭೧), ಪು. ೧೭ ಅಡಿಟಿಪ್ಪಣಿ.

ವಿವರಣೆಯನ್ನು ನೋಡಿದರೆ 'ಜನಪದ' ಎಂಬುದು ಜನತೆಯ ಸಂಪ್ರದಾಯ, ಸಂಸ್ಕೃತಿ ಇತ್ಯಾದಿಗಳನ್ನೂ ಧ್ವನಿಸುವದರಿಂದ 'Folklore' ಮತ್ತು 'ಜನಪದ'ಗಳು ಸಂವಾದಿ ಶಬ್ದಗಳೆಂದು ಭಾವಿಸುವುದು ಸೂಕ್ತವೆನಿಸುತ್ತದೆ.

ಮೇಲೆ ವಿವೇಚಿಸಿದ ಮೇರೆಗೆ 'ಜಾನಪದ' ಎಂಬುದು ಒಂದು ಶಾಖೆಯನ್ನು ಸೂಚಿಸುವುದರಿಂದ Folk Literature, Folk dress ಇತ್ಯಾದಿ ಶಾಖೆಗಳಿಗೆ 'ಜಾನಪದಸಾಹಿತ್ಯ', 'ಜಾನಪದ ವೇಷ' ಇತ್ಯಾದಿ ಪದಗಳನ್ನು ಬಳಸಬಹುದು.

ಹಾ. ಮಾ. ನಾಯಕ ಹೇಳುವ 'ಜಾನಪದ'ದಲ್ಲಿಯಂತೆ loreಅನ್ನು ಸೂಚಿಸುವ ಪ್ರತ್ಯೇಕ ಪದ ನಾವು ಹೇಳುವ 'ಜನಪದ'ದಲ್ಲಿಯೂ ಇಲ್ಲ. ಆದರೆ ಪಾಣಿನಿಯ ಪ್ರಕಾರ 'ಜನಪದ' ಶಬ್ದದಲ್ಲಿಯೇ loreನ ಅರ್ಥ ತುಂಬಿದೆ. ಇದಲ್ಲದೆ ಜನಪದಕ್ಕಿಂತ ಜಾನಪದ ಸಣ್ಣ ವ್ಯಾಪ್ತಿಯನ್ನು ಸೂಚಿಸುವುದೆಂಬ ಸಂಗತಿಯನ್ನೂ ಇಲ್ಲಿ ಮರೆಯಬಾರದು. ಆದುದರಿಂದ ಇನ್ನು ಮೇಲೆ ಜನಪದ ವಿದ್ವಾಂಸರು Folk= (ಸಾಮಾನ್ಯ) ಜನ, Folklore=ಜನಪದ, Folk literature=ಜಾನಪದ ಸಾಹಿತ್ಯ ಎಂದು ಬಳಸುವುದೇ ಶಾಸ್ತ್ರಶುದ್ಧವೆಂದು ಸೂಚಿಸುತ್ತ ಪ್ರಸ್ತುತಲೇಖನದುದ್ದಕ್ಕೂ ಈ ರೀತಿಯನ್ನೇ ಅನುಸರಿಸ ಬಯಸುತ್ತೇನೆ.

ಹೀಗಿರುವಾಗ Folklore ಎಂಬುದು ಸಾಮಾನ್ಯರ ಮೌಖಿಕ ಸಂಪ್ರದಾಯಕ್ಕೆ (Oral tradition) ಮಾತ್ರ ತನ್ನ ಒಲವನ್ನು ತೋರಿಸುವುದರಿಂದ, ಇದಕ್ಕೆ ಬದಲು ಸಾಮಾನ್ಯರ ಮೌಖಿಕದೊಂದಿಗೆ ಇತರ ಸಂಪ್ರದಾಯಗಳನ್ನು ಒಳಗೊಳ್ಳುವ Folk life ಎಂಬ ವಿಶಾಲಾರ್ಥದ ಇನ್ನೊಂದು ಪದವನ್ನು ಜಾನಪದವಿಜ್ಞಾನಿಗಳು ಇತ್ತೀಚೆಗೆ ಬಳಸುತ್ತಲಿರುವರು. ಆದರೆ ಸಾಂಪ್ರದಾಯಿಕ ಅಂಶಗಳು ಕೇವಲ ಸಾಮಾನ್ಯ (Folk)ರ ಬದುಕಿನಷ್ಟೇ ಅಲ್ಲ; ಅನಾಗರಿಕ (ಆದಿವಾಸಿ), ಅರೆನಾಗರಿಕ (ಗ್ರಾಮವಾಸಿ), ನಾಗರಿಕ (ನಗರವಾಸಿ) ಹೀಗೆ ಯಾವುದೇ ಅಂತಸ್ತಿನ ಜನರ ಜೀವನವ್ಯಾಪಾರಗಳಲ್ಲಿಯೂ ತೋರಿ ಬರುತ್ತದೆ. ಕಾರಣ ಕೇವಲ Folk ಜೀವನವನ್ನು ಮಾತ್ರ ಪ್ರತಿನಿಧಿಸುವ Folk life ಎಂಬ ಪದವೂ ಅಸಮರ್ಪಕವೆನಿಸುತ್ತದೆ. ಈ ಅಭ್ಯಾಸ ಯಾವುದೇ ಅಂತಸ್ತಿನ ಜನರ ಜೀವನವ್ಯಾಪಾರದಲ್ಲಿ ಉಳಿದು ಬಂದು ಸಾಂಪ್ರದಾಯಿಕ ಎಳೆಗಳನ್ನು ಗುರುತಿಸುವುದಾದುರಿಂದ ಅಂಥ ಜೀವನವ್ಯಾಪಾರವನ್ನು ಸೂಚಿಸುವ ತ್ರಿವಿಕ್ರಮಪದವೊಂದು Folklore, Folk life ಗಳಿಗೆ ಬದಲು ಇಂಗ್ಲಿಷಿನಲ್ಲಿ ಅಂತೆಯೇ ಕನ್ನಡದಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿದೆ.[೩]

ಜಾನಪದ ಸಾಹಿತ್ಯ:

ಜನಪದ (Folklore) ವನ್ನು ರಿಚರ್ಡ್ ಎಂ. ಡಾರ್ಸನ್ ; ಆರ್. ಎಸ್. ಬಾಗ್ಸ್ ; ಹಾ. ಮಾ. ನಾಯಕ ಮೊದಲಾದವರು ಹಲವು ರೀತಿಗಳಲ್ಲಿ ವರ್ಗೀಕರಿಸುತ್ತಾರೆ. ಇವುಗಳಿಗಿಂತ

---

೩. ಅನಾಗರಿಕ, ಅರೆನಾಗರಿಕ, ನಾಗರಿಕರಲ್ಲಿ ಕಾಣುವ ಸಾಂಪ್ರದಾಯಿಕ ಜೀವನವ್ಯಾಪಾರಕ್ಕೆ 'Tradition' ಎಂದೂ ಇದನ್ನು ಕುರಿತ ವೈಜ್ಞಾನಿಕ ವಿವೇಚನೆಗೆ 'Science of tradition' ಅಥವಾ 'Traditionology' ಎಂದೂ ಕರೆಯಬಹುದು. ಕನ್ನಡದಲ್ಲಿ ಇವುಗಳಿಗೆ ಸಂಪ್ರದಾಯ, ಸಂಪ್ರದಾಯವಿಜ್ಞಾನ ಇಲ್ಲವೆ ರೂಢಿ, ರೂಢಿವಿಜ್ಞಾನ ಎಂದು ಕರೆಯಬಹುದು.

೧. ಕಾಯಿಕ ಬಗೆ — ೧. ಪ್ರಯೋಜಕ ಕಲೆ–ಕೈಗಾರಿಕೆ, ಕರಕುಶಲ, ಅಡಿಗೆ, ವೈದ್ಯ ಇತ್ಯಾದಿ.
೨. ಲಲಿತಕಲೆ–ಚಿತ್ರ, ಶಿಲ್ಪ, ನೃತ್ಯ ಇತ್ಯಾದಿ.

೨. ವಾಚಿಕ ಬಗೆ — ೧. ಭಾಷಿಕ ಬಗೆ.
೨. ಸಾಹಿತ್ಯಿಕ ಬಗೆ

೩. ಮಾನಸಿಕ ಬಗೆ – ಜನನ, ಮರಣ, ವಿವಾಹ, ಆರಾಧನೆ, ಮಾಟ, ಮಂತ್ರ, ಭವಿಷ್ಯ ಇತ್ಯಾದಿಗಳಿಗೆ ಸಂಬಂಧಪಟ್ಟ ನಂಬಿಕೆಗಳು.

ಹೀಗೆ ವರ್ಗೀಕರಿಸುವುದು ಸೂಕ್ತವೆನಿಸುತ್ತದೆ. ಇವುಗಳಲ್ಲಿ ಜಾನಪದ ವಾಙ್ಮಯವೆಂಬುದು oral folklore ಆಗಿದೆ. ಇದರ ಶಾಖೆಯಾದ 'ಜಾನಪದ ಸಾಹಿತ್ಯ'ವನ್ನು oral art of folklore ಎಂದು ಸರಳವಾಗಿ ಸೂತ್ರಗೊಳಿಸಬಹುದು. ಈ ಸೂತ್ರದ ಹಿನ್ನೆಲೆಯಲ್ಲಿ "ಜಾನಪದ ಸಾಹಿತ್ಯ"ದ ಲಕ್ಷಣವನ್ನು ಹೀಗೆ ವಿವರಿಸಬಹುದು :

೧. ಮಾನವ ಜನಾಂಗ ಯಾವ ಕಾಲಕ್ಕೂ ಪ್ರಾಕೃತಿಕ ಸ್ತರ ಮತ್ತು ನಾಗರಿಕ ಸ್ತರಗಳಲ್ಲಿ ಬದುಕು ನಡೆಸುತ್ತದೆ. ಇವುಗಳಲ್ಲಿ ಒಂದು ನಿಸರ್ಗನಿಯಂತ್ರಿತ, ಇನ್ನೊಂದು ನಗರ ನಿಯಂತ್ರಿತ, ನಗರನಿಯಂತ್ರಿತ ಜನಾಂಗಕ್ಕಿಂತ ನಿಸರ್ಗನಿಯಂತ್ರಿತ ಜನಾಂಗದಲ್ಲಿ "ಮಾನವನ ಪ್ರಾಕೃತಿಕ ಪ್ರವೃತ್ತಿ"ಗಳು ದಟ್ಟವಾಗಿ ನೆಲೆನಿಂತಿರುತ್ತವೆ.

೨. ಸಾಮಾನ್ಯವಾಗಿ ಗುಂಪುಗೂಡಿ ಬಾಳುವುದು ಪ್ರಾಣಿಗಳ ಮೂಲಪ್ರವೃತ್ತಿ. ಮನುಷ್ಯ ಪ್ರಾಣಿಗಳಲ್ಲಿ ಅದರಲ್ಲಿಯೂ ಹಳ್ಳಿಗರಲ್ಲಿ ಈ ಪ್ರವೃತ್ತಿ ಇನ್ನೂ ಹಸಿಹಸಿಯಾಗಿರುವದರಿಂದ ಅವರು ಭೌತಿಕವಾಗಿ, ಮಾನಸಿಕವಾಗಿ ಪರಸ್ಪರವನ್ನು ಅವಲಂಬಿಸಿ ಬದುಕುತ್ತಾರೆ. ಹೀಗಾಗಿ ಅವರ ಅನುಭವಕ್ಕೆ 'ಸಾಮುದಾಯಿಕತೆ' ಸಂಪ್ರಾಪ್ತವಾಗಿರುತ್ತದೆ.

೩. ಏನು ಹೇಳಬೇಕೆಂಬುದೇ ಮುಖ್ಯವಾಗಿ, ಹೇಗೆ ಹೇಳಬೇಕೆಂಬುದು ಅಮುಖ್ಯವಾಗಿರುವ ಕಾರಣ ಜಾನಪದ ಕೃತಿಯ ಅಂತರಂಗದ ಬೆಳವಣಿಗೆಯಲ್ಲಾಗಲೀ, ಬಹಿರಂಗದ ಬಂಧದಲ್ಲಾಗಲೀ ಸ್ವಲ್ಪ ಸಡಿಲುತನ, ತೋರಿಬರುವುದರಿಂದ "ಸಂವಹನತೆ ಪ್ರಧಾನ, ಕಲಾತ್ಮಕತೆ ಗೌಣ"ವಾಗಿರುವ ಸಾಹಿತ್ಯವಿದು.

೪. ಶಿಷ್ಟಪದಸಾಹಿತ್ಯದಂತೆ ಶಾಸ್ತ್ರದಮಾರ್ಗದರ್ಶನದಲ್ಲಿ ಹುಟ್ಟದೆ "ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ" ಎಂಬಂತೆ ಇದು ಈ ಮೊದಲು ಸೃಷ್ಟಿಯಾಗಿರುವ ಜಾನಪದ ರಚನೆಗಳನ್ನು ಅನುಸರಿಸಿ, ಅಲ್ಲಲ್ಲಿ ಸ್ವೀಕರಿಸಿ ತನ್ನ ಪ್ರಥಮ ಆಕಾರ ಪಡೆಯುತ್ತದೆ. ಆದುದರಿಂದ ಇದು 'ಅನುಸೃಷ್ಟಿ' ವರ್ಗಕ್ಕೆ ಸೇರುವ ಸಾಹಿತ್ಯವಾಗಿದೆ. ಹೀಗೆ ಹುಟ್ಟುವ ಈ ಸಾಹಿತ್ಯದ ಯಾವುದೇ ರಚನೆಯ ಪಾಲನ–ಪರಿಷ್ಕರಣದ ಹಕ್ಕನ್ನು ಕವಿ ಸಮಾಜಕ್ಕೆ ಒಪ್ಪಿಸಿ ಬಿಡುತ್ತಾನೆ.[೪] ಹೀಗಾಗಿ

---

೪. ಅ. ಶಿಷ್ಟಪದ ಕವಿಗಳು ತಮ್ಮ ರಚನೆಯ ಪಾಲಿನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ. ಪರಿಷ್ಕರಣ ಹಕ್ಕನ್ನು ಬಿಟ್ಟುಕೊಟ್ಟಿರುವುದಿಲ್ಲ. ಅನಿವಾರ್ಯವೆನಿಸಿದಲ್ಲಿ ಮಾಡಿದ ಪರಿಷ್ಕರಣಕ್ಕೆ ನಾವು ಚೌಕ ಕಂಸನ್ನು ಬಳಸುವದು ಈ ಕಾರಣಕ್ಕಾಗಿಯೇ.

ಅದು ಎತ್ತಿಕೊಂಡವರ ಮಗುವಾಗಿ ಅವರಿಂದ ಕಾಲ, ದೇಶ ಪರಿಸರಗಳಿಗೆ ತಕ್ಕಂತೆ ಹೊಸ ರೂಪಗಳನ್ನು ಹೊಂದುತ್ತ ಬರುತ್ತದೆ. ಈ ಅರ್ಥದಲ್ಲಿ ಮೂಲತಃ 'ಅನುಸೃಷ್ಟಿ'ಯಾಗಿದ್ದರೂ ಮುಂದೆ 'ಪುನಃಸೃಷ್ಟಿ'ಯಾಗುತ್ತ ಸಾಗಿಬರುವ ಇದು ಕಟ್ಟಿ ಮುಗಿಸಿದ ಸಾಹಿತ್ಯವಲ್ಲ; ಕಟ್ಟುತ್ತಲಿರುವ ಸಾಹಿತ್ಯವೆಂದೇ ಹೇಳಬೇಕು. ಹೀಗಾಗಿ 'ಅನುಸೃಷ್ಟಿ'ಯಾಗಿ ಹುಟ್ಟಿ 'ಪುನಃಸೃಷ್ಟಿ'ಯಾಗಿ ಬೆಳೆಯುವುದು ಇದರ ಇನ್ನೊಂದು ಲಕ್ಷಣವಾಗಿದೆ.

೫. ಶಿಷ್ಟಸಾಹಿತ್ಯದಂತೆ ಲಿಪಿಶರೀರಿಯಾಗಿ ಹುಟ್ಟಿ, ಲಿಪಿಶರೀರಿಯಾಗಿ ವ್ಯವಹರಿಸದೆ ಸಾಮಾನ್ಯವಾಗಿ "ಧ್ವನಿಶರೀರಿ"ಯಾಗಿ ಹುಟ್ಟಿ ಧ್ವನಿಶರೀರಿಯಾಗಿ ಪ್ರವಹಿಸುತ್ತದೆ.

ಮೇಲೆ ಹೇಳಿದ "ಜಾನಪದ ಸಾಹಿತ್ಯದ ಪಂಚಲಕ್ಷಣ"ಗಳಲ್ಲಿ ಅದರ ಅಂತರಂಗ ಬಹಿರಂಗಗಳ, ಹುಟ್ಟು ಬದುಕು ಬೆಳವಣಿಗೆಗಳ ಸಮಗ್ರತೆಯನ್ನು ಕಾಣಬಹುದಾಗಿದೆ.

ಕಳೆದ ಒಂದುನೂರು ವರ್ಷಗಳಿಂದ ಈ ಜಾನಪದ ಸಾಹಿತ್ಯದ ಸಂಪಾದನಕಾರ್ಯ ಕರ್ನಾಟಕದಲ್ಲಿ ಘಟ್ಟಗಳನ್ನು ಕಲ್ಪಿಸಿಕೊಂಡು ಹೀಗೆ ಬೆಳೆದು ಬಂದಿದೆ :

೧. ಹಲಸಂಗಿ ಗೆಳೆಯರ ಪೂರ್ವ ಘಟ್ಟ–೧೯೩೦ಕ್ಕೆ ಮೊದಲು.

೨. ಹಲಸಂಗಿ ಗೆಳೆಯರ ಘಟ್ಟ–೧೯೩೦–೧೯೫೦.

೩. ಗದ್ದಗಿಮಠ ಮತ್ತು ಕರಾಕೃ ಘಟ್ಟ–೧೯೫೦–೧೯೬೬.

೪. ಆಧುನಿಕ ಘಟ್ಟ–೧೯೬೬ ರಿಂದ ಮುಂದೆ.

ಇವುಗಳಲ್ಲಿ ಮೊದಲಿನ ಮೂರು, ಸಾಮಾನ್ಯವಾಗಿ Folk song ಸಂಪಾದನೆಯ ಘಟ್ಟವಾದರೆ ಕೊನೆಯದು Folk literature ಸಂಪಾದನೆಯ ಘಟ್ಟವೆನಿಸಿ ಗಾದೆ, ಒಗಟು, ಒಡಪು, ಶಿಶುಪ್ರಾಸ, ನಂಬಿಕೆ, ಕಥೆ, ನಾಟಕ ಮೊದಲಾದ ಪ್ರಕಾರಗಳನ್ನು ಬಿಚ್ಚಿಕೊಂಡುದು, ಜಾನಪದ ಸಾಹಿತ್ಯ ಸಂಪಾದನೆಯ ದೃಷ್ಟಿಯಿಂದ ಒಂದು ಸಾಧನೆಯೆಂದೇ ಹೇಳಬಹುದು. ಹೀಗೆ ಜಾನಪದ ಸಾಹಿತ್ಯ ಸಂಪಾದನೆ ಹೊಸ ಪ್ರಕಾರಗಳನ್ನು ತನ್ನ ತೆಕ್ಕೆಯಲ್ಲಿ ಅಳವಡಿಸಿಕೊಂಡು ಬೆಳೆಯುತ್ತಲಿದ್ದರೂ, 'ಸಂಪಾದನಕ್ರಮ'ದಲ್ಲಿ ಅಂಥ ಹೊಸತನವಾಗಲೀ ಪ್ರಗತಿಯಾಗಲೀ ಈವರೆಗೂ ಕಂಡುಬರಲಿಲ್ಲವೆಂದೇ ಹೇಳಬೇಕು. ಬಹಳವೆಂದರೆ ಪುಟ ಬಾಹುಳ್ಯದ ವೈಜ್ಞಾನಿಕ ಬಣ್ಣದ ಮುನ್ನುಡಿಗಳು, ಕ್ಷೇತ್ರಕಾರ್ಯದ ಪರದಾಟ–ಪರಿಶ್ರಮಗಳು ಮಾತ್ರ ಗೋಚರಿಸುತ್ತವೆ. ಅದಕ್ಕಾಗಿಯೇ ಸಂಪಾದನೆಯ ದೃಷ್ಟಿಯಿಂದ 'ಜನಪದವಿದ್ಯಾವ್ಯಾಸಂಗಿ'ಗಳ ಮತ್ತು 'ಜನಪದಹವ್ಯಾಸಿ'ಗಳ ಸಂಕಲನಗಳಲ್ಲಿ ಅಂಥ ವಿಶೇಷ ಅಂತರ ತೋರಿಬರುತ್ತಿಲ್ಲವೆಂಬ ಪ್ರತಿಕ್ರಿಯೆಗಳು ಆಗಾಗ ಕಿವಿಗೆ ಬೀಳುತ್ತಲಿವೆ. ಇಷ್ಟೇ ಏಕೆ ಜನಪದಕ್ಷೇತ್ರಕ್ಕೆ ಸಂಬಂಧಪಟ್ಟ ಗ್ರಂಥಗಳು, ಲೇಖನಗಳು ಪ್ರತಿವರ್ಷ ನೂರಾರು ಪ್ರಕಟವಾಗುತ್ತಲಿದ್ದರೂ 'ಜನಪದ

→ ಬ. ಜಾನಪದ ಕವಿ ತನ್ನ ಹೆಸರನ್ನು ಕೃತಿಗೆ ನಮೂದಿಸಿರುವುದು, ನಮೂದಿಸದಿರುವುದು ಅಮುಖ್ಯ. ಪರಿಷ್ಕರಣದ ಹಕ್ಕು ಬಿಟ್ಟುಕೊಟ್ಟಿರುವುದೇ ಮುಖ್ಯ. ಹೆಸರು ನಮೂದಿಸದಿರುವುದು ಜಾನಪದ ಸಾಹಿತ್ಯದ ಲಕ್ಷಣವೆಂದರೆ ಕವಿನಾಮನಿರ್ದೇಶವಿಲ್ಲದ ಪ್ರಭುಲಿಂಗಲೀಲೆ ಮೊದಲಾದವು ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳೆನ್ನಬೇಕಾದೀತು.

ಸಾಹಿತ್ಯ ಸಂಪಾದನೆ'ಯ ಬಗ್ಗೆ ಒಂದು ಸ್ವತಂತ್ರ ಗ್ರಂಥವಾಗಲೀ ಒಂದು ಸ್ವತಂತ್ರ ಲೇಖನವಾಗಲೀ ಪ್ರಕಟವಾಗದಿರುವುದು, ಸಂಪಾದಿತ ಕೃತಿಗಳ ಮುನ್ನುಡಿಯಲ್ಲಾದರೂ ಈ ಸಾಹಿತ್ಯ ಸಂಪಾದನೆಯ ಬಗ್ಗೆ ನಿರ್ದಿಷ್ಟ ನೀತಿ ನಿಯಮಗಳನ್ನು ಸೂಚಿಸದಿರುವುದು ತುಂಬ ಆಶ್ಚರ್ಯದ ಸಂಗತಿಯಾಗಿದೆ. 'ಮಲೆಯ ಮಾದೇಶ್ವರ', 'ಮದ್ದುಂಟೆ ಜನನ ಮರಣಕ್ಕೆ', 'ದಕ್ಷಿಣ ಕನ್ನಡ ಜನಪದ ಸಾಹಿತ್ಯ' ಗ್ರಂಥಗಳ ಮುನ್ನುಡಿಯಲ್ಲಿ ಕೆಲಮಟ್ಟಿನ ಚರ್ಚೆ ಬಂದಿದ್ದರೂ, ಮೂವರಲ್ಲಿಯೂ ಒಮ್ಮತವಿಲ್ಲ. ಇಷ್ಟು ಹಿನ್ನೆಲೆಯಲ್ಲಿ 'ಜಾನಪದ ಸಾಹಿತ್ಯ ಸಂಪಾದನೆ'ಯ ಬಗ್ಗೆ ವಿವೇಚಿಸಬಹುದು.

೨

ಜಾನಪದ ಸಾಹಿತ್ಯ ಯಾವುದೇ ಒಂದು ಜನಾಂಗದ ಆಸ್ತಿಯಲ್ಲದಿದ್ದರೂ ಅದು ಪ್ರದೇಶ ಭೇದನಿಷ್ಠವಾಗಿಯೂ ತೋರುತ್ತದೆ. ನದಿಬೆಟ್ಟಗಳೂ ಜಾತಿಜಾಲಗಳೂ ಧಾರ್ಮಿಕ ಕೇಂದ್ರಗಳೂ ಕಾರಣವಾಗಿ ಭಾಷೆಯಂತೆ ಈ ಸಾಹಿತ್ಯವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದಲ್ಲದೆ ಒಂದು ಪ್ರದೇಶದಲ್ಲಿಯೇ ಮತ್ತೆ ಸೀಮಾರೇಖೆಗಳನ್ನು ರೂಪಿಸಿಕೊಳ್ಳುತ್ತದೆ. ಕರ್ನಾಟಕಕ್ಕೆ ಬಂದರೆ ಭೌಗೋಲಿಕವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ಎಂದು ಮೂರು ಪ್ರಧಾನ ಜಾನಪದ ಪ್ರಾಂತಭೇದಗಳಿವೆ. ಇವುಗಳಲ್ಲಿಯೇ ಉಪಪ್ರಾಂತ ಭೇದಗಳನ್ನು ಕಲ್ಪಿಸಬಹುದಾಗಿದೆ.

ಈ ಪ್ರಧಾನ ಮತ್ತು ಉಪಪ್ರಧಾನ ಪ್ರಾಂತಭೇದಗಳ ಸೀಮಾರೇಖೆಗಳು ಪರಸ್ಪರ ಭೇದಿಸದೆ ಇಲ್ಲವೆ ಭೇದಿಸಿಕೊಂಡು ಹೋಗಬಹುದು. ಉದಾ: ದಕ್ಷಿಣ ಕರ್ನಾಟಕದ ಮಂಟೇದವರ ಕಂಸಾಳೆಯವರ ಜುಂಜಪ್ಪನವರ, ತೆಲುಗುಬಣಜಿಗರ ಭಾಗವಂತಿಕೆಯರ ಹಾಡುಗಳು, ಉತ್ತರ ಕರ್ನಾಟಕ ಜೋಕುಮಾರನ ಹಾಡು, ಗುಳ್ಳವ್ವನ ಹಾಡು, ಕುಡುಬಿಹಾಡುಗಳು, ಕರಾವಳಿ ಕರ್ನಾಟಕದ ತಾರಲೆಹಾಡು, ಪುಗಡಿಹಾಡು, ಗುಮ್ಮಟೆಪದ, ದೋಣಿ ಸಾಗಿಸುವಾಗಿನ ಅಂಬಿಗರ ಹಾಡುಗಳ ಸೀಮಾರೇಖೆಗಳು ಪರಸ್ಪರ ಭೇದಿಸುವುದಿಲ್ಲ. ಆದರೆ ಕಿಂದರಜೋಗಿಗಳ ಗೊರವರ ಚೌಡಕಿಯವರ ಗೊಂದಲಿಗರ ಹಾಡುಗಳ ಸೀಮಾರೇಖೆಗಳು ಪರಸ್ಪರ ಭೇದಿಸಿಕೊಂಡು ಹೋಗುತ್ತವೆ. ಹೀಗೆ ಭೇದಿಸಿಕೊಂಡು ಹೋದರೂ ಅವುಗಳಿಗೆ ಪ್ರಾಂತಭೇದದ ಮುದ್ರೆ ಇದ್ದೇ ಇರುತ್ತದೆಯೆಂಬುದನ್ನು ಮರೆಯಬಾರದು.

ಸಮಾಜವನ್ನು ಗಮನಿಸಿ ಭಾಷೆಯನ್ನು ಪ್ರಾಕೃತಿಕ ಭಾಷೆ, ಪ್ರತಿಷ್ಠಿತರ ಭಾಷೆ (ಕನ್ನಡದ ಮಟ್ಟಿಗೆ ಹೇಳುವುದಾದರೆ ಅಬ್ರಾಹ್ಮಣರ ಭಾಷೆ ಮತ್ತು ಬ್ರಾಹ್ಮಣರ ಭಾಷೆ) ಯೆಂದು ವರ್ಗೀಕರಿಸುವಂತೆ ಈ ಮೌಖಿಕ ಸಾಹಿತ್ಯದಲ್ಲಿಯೂ ಜಾನಪದಸಾಹಿತ್ಯ ಮತ್ತು ಜಾಣ ಪದಸಾಹಿತ್ಯವೆಂಬ ಸ್ತರಗಳನ್ನು ಗುರುತಿಸಬಹುದು.[೫] ಇವುಗಳಲ್ಲಿಯೇ ಮತ್ತೆ ಅಂತರಿಕ ಸ್ತರಗಳಿದ್ದು ಅವು,

---

೫. ಜಾನಪದಸಾಹಿತ್ಯ, ಕರ್ನಾಟಕ ಭಾರತಿ ೧೦-೧.



ಹೀಗೆ ಅಡಕಿಲು ರೂಪದಲ್ಲಿರುತ್ತವೆ. ಕೆಳವರ್ಗದಿಂದ ಮೇಲುವರ್ಗಕ್ಕೆ ಹೋದಂತೆ ಅವುಗಳ ಜಾನಪದತ್ವ ತಿಳಿಯಾಗುತ್ತ ಇಲ್ಲವೆ ಶಿಷ್ಟಮುಖಿಯಾಗುತ್ತ ನಡೆಯುತ್ತದೆ. ಉದಾ:

೧. ಒಂಬತ್ತ ತಿಂಗಳ ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡದೇನ । ಸೋ
ಹಂಬಲಿಸಿ ನಿನ್ನ ಹಡದೇನ ಚಿತ್ರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಯಾಂಗ ॥

೨. ಧಾರೆಯೆರೆದ ಕನಕಾಂಗಿಗೆ ಬಲರಾಮ
ಧೀರಪಾರ್ಥಗೆ ಸುಕುಮಾರಗಿವಳನು ॥ಪಲ್ಲ॥
ತೋರ ಹರಳವಂಕಿ ಬಾಜುಬಂದಿಗಳು
ಹೆರಳಿಗಾಭರಣವನಿಡಿಸಿದ ಮಗಳನು
ಬಂಗಾರದಂತೆ ಬಳಕುವಳು
ಶೃಂಗರಿಸುತಲ್ಲಿ ಭುಜಂಗವೇಣಿಯನು ॥

ಇವುಗಳನ್ನು ಓದಿದರೆ ಸಾಕು, ಜಾನಪದತ್ವ ಮತ್ತು ಜಾಣಪದತ್ವಗಳ ಅಂತರ ತಟ್ಟನೆ ಗಮನಕ್ಕೆ ಬರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಮಾರಂಭದ ಒಂದು ಸಂದರ್ಭವನ್ನೇ ಜನಪದರು ಹಾಡನ್ನಾಗಿ ಸೃಷ್ಟಿಸಿದರೆ, ಜಾಣಪದರು ಸಂದರ್ಭಕ್ಕೆ ತಕ್ಕ ಪೌರಾಣಿಕ ಘಟನೆಗಳನ್ನೇ ಹಾಡುತ್ತಾರೆ. ಹೀಗಾಗಿ ಜಾನಪದ ಹಾಡುಗಳಲ್ಲಿ ಕಾಣುವ ವಾತಾವರಣದ ಪ್ರತಿಬಿಂಬ ಜಾಣಪದ ಹಾಡುಗಳಲ್ಲಿ ತೋರಿಬರುವುದಿಲ್ಲ. ಅಂದರೆ ಒಂದೇ ಭಾಷೆಯನ್ನಾಡುವವರ ಜಾನಪದ ಸಾಹಿತ್ಯದಲ್ಲಿಯೂ ಜನಪದತ್ವ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ.

ಒಂದು ಪ್ರದೇಶದ ಒಂದು ಸಮಾಜದಂತೆ ಅಲ್ಲಿ ಆಗಾಗ ಹುಟ್ಟುವ ಸಾಹಿತ್ಯವೂ ಕಾಲಕ್ಕೆ ತಕ್ಕ ಸಂವೇದನೆಗಳನ್ನು ಮೈಗೂಡಿಸಿಕೊಳ್ಳುತ್ತ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಬರುತ್ತದೆ. ಇದೇ ರೀತಿ ಜನಪದರಲ್ಲಿಯೂ ಕಾಲಕ್ಕೆ ತಕ್ಕಂತೆ ಹೊಸಹೊಸ ಸಾಹಿತ್ಯ ಹುಟ್ಟುವುದರ ಜೊತೆ ಹಳೆಯ ಸಾಹಿತ್ಯವೂ ಹೊಸತಾಗುತ್ತ ನಡೆಯುವುದೊಂದು ವಿಶೇಷ. ಹೀಗಾಗಿ ಜಾನಪದ ಸಾಹಿತ್ಯದಲ್ಲಿ ಕಾಲವೂ ಪ್ರಧಾನಪಾತ್ರವಹಿಸುವುದೆಂದು ಹೇಳಬೇಕು. ಒಟ್ಟಿನಲ್ಲಿ ಪ್ರದೇಶಬದ್ಧ-ಸಮಾಜಬದ್ಧ-ಕಾಲಬದ್ಧವಾಗಿರುವುದು ಯಾವುದೇ ಜಾನಪದ ಸಾಹಿತ್ಯದ ಪ್ರಧಾನಲಕ್ಷಣವಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೂ ಎರಡು ಸಂಗತಿಗಳಿವೆ. ಅವು : ಸಂದರ್ಭ ಮತ್ತು ವ್ಯಕ್ತಿ.


ಸಂದರ್ಭ: ಜಾನಪದಸಾಹಿತ್ಯ ಸಂದರ್ಭದ ಮಧ್ಯದಲ್ಲಿ ಮಾತ್ರ ಸರಿಯಾದ ರೂಪದಿಂದ ಪ್ರಕಟವಾಗುತ್ತದೆ. ಅಂದರೆ ಉತ್ಸವ ಉತ್ಸಾಹ ಇತ್ಯಾದಿ ಸಂದರ್ಭಗಳ ಹೊರಗಿಟ್ಟು ಪದವನ್ನು ಹಾಡಿದರೆ, ಗದ್ಯವನ್ನು ಹೇಳಿದರೆ ಅವುಗಳ ಪರಿಣಾಮದಲ್ಲಿ ವ್ಯತ್ಯಾಸವಾಗಬಹುದು. ಉದಾ:

ಎಣ್ಣಿಯ ನೀ ಕೊಡಕ ಸಣ್ಣಿರಿವಿ ಕವದಂಗ
ತುಂಬೇತಿ ಹೆಣ್ಣಿನ ಬಳಗವು । ಸೋ
ತುಂಬೇತಿ ಹೆಣ್ಣಿನ ಬಳಗವು ಕಣ್ಣೀರ
ಸಣ್ಣ ಮುತ್ತಾಗಿ ಸುರದಾವ ।

ಮದುವೆಯ ಹಂದರದಲ್ಲಿ ಮಗಳನ್ನು ಧಾರೆ ಎರೆದು ಕೊಡುವ ಸಂದರ್ಭದಲ್ಲಿ ಕರುಳನ್ನು ಕಿತ್ತುತರುವ ಈ ಹಾಡು ಸಂದರ್ಭಬಾಹಿರವಾದಲ್ಲಿ ತನ್ನ ಶಕ್ತಿಯನ್ನು, ಅಭಿವ್ಯಕ್ತಿಯ ಪರಿಣಾಮವನ್ನು ಕಳೆದುಕೊಳ್ಳುವುದು ತೀರ ಸಹಜವೇ ಸರಿ.

ಕೆಲವು ಸಲ ಗೆಜ್ಜೆ, ವಾದ್ಯ, ಕೋಲು, ಕುಣಿತಗಳ ಪರಿಕರದೊಂದಿಗೆ ಮಾತ್ರ ಹಲವು ಹಾಡುಗಳು ಸಮಗ್ರ ಪರಿಣಾಮಬೀರುತ್ತವೆ. ಇಂಥವುಗಳನ್ನು ಪರಿಕರದಿಂದ ಹೊರಗಿಟ್ಟು ಸಂಗ್ರಹಿಸಿದರೆ ದಂಡಿ, ಬಾಸಿಂಗ, ಅರಿಷಿಣ, ಕುಂಕುಮವಿಲ್ಲದೆ ಮಾಡಿದ ಮದುವೆಯಂತೆ ಸೊಗಸು ಕಳೆದುಕೊಳ್ಳುತ್ತವೆ. ಕಾರಣ ಪರಿಸರ, ಪರಿಕರಗಳೆಂಬ ಅಂಶಗಳೂ ಸಂಪಾದನೆಯ ಸಮಯದಲ್ಲಿ ಪ್ರಮುಖವೆನಿಸುತ್ತವೆ.

ವ್ಯಕ್ತಿ : ಜಾನಪದ ಸಾಹಿತ್ಯಸಂಪಾದನೆಯ ಸಂದರ್ಭದಲ್ಲಿ ವ್ಯಕ್ತಿ ಅಂದರೆ ನಿವೇದಕ (Inforemant) ತುಂಬ ಮುಖ್ಯನಾದವನು. ಭಾರತೀಯ ಪರಂಪರೆಯಲ್ಲಿ ಸ್ತ್ರೀ, ಪುರುಷ, ಬಾಲಕ ಈ ಮೂರು ಘಟಕಗಳು ತೀರ ಪ್ರತ್ಯೇಕವಾಗಿ ನಿಂತು, ಸ್ವತಂತ್ರವಾಗಿ ಬೆಳೆಯುವುದರಿಂದ ಇವರ ಜೀವನದಂತೆ ಇವರ ಸಾಹಿತ್ಯವೂ ತೀರ ಪ್ರತ್ಯೇಕ ಗುಣನಿಷ್ಠವಾಗಿರುತ್ತದೆ. ಅಂದರೆ ಸ್ತ್ರೀನಿಷ್ಠ, ಪುರುಷನಿಷ್ಠ, ಬಾಲನಿಷ್ಠವಾಗಿ ಹುಟ್ಟುತ್ತದೆ. ಹೀಗಾಗಿ ಈ ವರ್ಗಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಮೂಲಕವೇ ಅವರ ಸಾಹಿತ್ಯದ ನಿಜಸ್ವರೂಪ ದರ್ಶನವಾಗುತ್ತದೆ. ಆದುದರಿಂದ ಇಲ್ಲಿ ಒಬ್ಬರ ಹಾಡನ್ನು ಇನ್ನೊಬ್ಬರಿಂದ ಸಂಗ್ರಹಿಸುವುದು ಅಸಮಂಜಸವೆನಿಸುತ್ತದೆ. ಉದಾ: ಸ್ತ್ರೀಯರಿಂದ ಹಂತಿಹಾಡು, ಪುರುಷರಿಂದ ಬೀಸುವ ಹಾಡು, ಇದಲ್ಲದೆ ಸ್ತ್ರೀಪುರುಷರಲ್ಲಿಯೇ ಕೆಲವರು ವಿಶಿಷ್ಟ ಹಾಡುಗಳನ್ನು ಮಾತ್ರ (ಪುರುಷರಲ್ಲಿ ಕುರುಬರು ಡೊಳ್ಳಿನ ಹಾಡು, ಸ್ತ್ರೀಯರಲ್ಲಿ ಕಬ್ಬಿಲರು ಜೋಕುಮಾರನ ಹಾಡು) ಹೇಳುತ್ತಿರುತ್ತಾರೆ. ಇಲ್ಲಿಯೂ ಒಂದು ವರ್ಗದ ಹಾಡನ್ನು ಹೇಳುವವರಿಂದ ಬೇರೊಂದು ವರ್ಗದ ಹಾಡನ್ನು ಪಡೆಯುವುದು ಸರಿಯೆನಿಸದು. ಈವರೆಗಿನ ವಿವೇಚನೆಯನ್ನು ಹೀಗೆ ಚಿತ್ರಿಸಬಹುದು.



ಹೀಗೆ 'ವ್ಯಕ್ತಿ'ಯು 'ಸಂದರ್ಭ'ನಿಷ್ಠವಾಗಿ ನಿಂತು ಕಾಲ, ದೇಶ, ಸಮಾಜಬದ್ಧನಾಗಿ ವ್ಯಕ್ತಪಡಿಸುವಲ್ಲಿ ಅಂದರೆ ಕಾಲ, ದೇಶ, ಸಮಾಜ, ಸಂದರ್ಭ, ವ್ಯಕ್ತಿ–ಈ 'ಐದು ಸೂತ್ರ"ಗಳು ಪರಸ್ಪರ ಭೇದಿಸುವಲ್ಲಿ ಒಂದು ಜಾನಪದ ರಚನೆಯ ಸತ್ಯರೂಪ ಸಾಕ್ಷಾತ್ಕಾರವಾಗುತ್ತದೆ. ಹೀಗಾಗಿ ಯಾವುದೇ ಜಾನಪದಸಾಹಿತ್ಯದ ಪ್ರಕಾರವನ್ನು ಈ ಐದು ಅಂಶಗಳಿಂದ ಹೊರಗಿಟ್ಟು ಸಂಪಾದಿಸ ಕೂಡದು. ಹಾಗೆ ಹೊರಗಿಟ್ಟು ಸಂಪಾದಿಸುವುದೆಂದರೆ ಲವಣ ರುಚಿಯನ್ನು ತೆಗೆದುಹಾಕಿ ಉಪ್ಪು ಸಂಗ್ರಹಿಸಿದಂತಾಗುತ್ತದೆ.

ಹೀಗೆ ಪಂಚಸೂತ್ರಗಳಿಗೆ ಬದ್ಧನಾಗಿ ಸಂಗ್ರಹಿಸುವಲ್ಲಿ ಸಂಪಾದಕನಿಗೆ ಕಾಡುವುವೆಂದರೆ ಪಾಠಾಂತರ (Variants) ಮತ್ತು ರೂಪಾಂತರಗಳು (Versions). ಇವುಗಳ ಪರಿಜ್ಞಾನವಿಲ್ಲದಿದ್ದರೆ ಅವನು ಸಂಪಾದನಕಾರ್ಯವನ್ನೇ ಕೆಡಿಸಿಬಿಡುತ್ತಾನೆ.

ಸಾಹಿತ್ಯ ಲಿಖಿತವೇ ಇರಲಿ, ಅಲಿಖಿತವೇ ಇರಲಿ ರೂಪಾಂತರ ಮತ್ತು ಪಾಠಾಂತರಗಳು ಅನಿವಾರ್ಯ. ಯಾವುದೇ ಭಾಷೆಯಲ್ಲಿ ಒಂದು 'ವಸ್ತು'ವನ್ನಾಶ್ರಯಿಸಿ ಹುಟ್ಟಿದ ಬೇರೆ ಬೇರೆ ರಚನಾವ್ಯತ್ಯಾಸಗಳು ರೂಪಾಂತರ, ಒಂದು 'ರಚನೆ'ಯನ್ನಾಶ್ರಯಿಸಿ ಹುಟ್ಟಿದ ಬೇರೆ ಬೇರೆ ಭಾಷಿಕವ್ಯತ್ಯಾಸಗಳು ಪಾಠಾಂತರ. ಜಾನಪದ ಸಾಹಿತ್ಯಸಂಪಾದಕನಿಗೆ ಇವುಗಳ ಸ್ಪಷ್ಟ ತಿಳುವಳಿಕೆ ಮೊದಲ ಅಗತ್ಯವಾಗಿದೆ. ಇಲ್ಲವಾದರೆ ವಸ್ತು ಸಾದೃಶ್ಯಭ್ರಾಂತಿಯಿಂದ ರೂಪಾಂತರಗಳನ್ನೂ ಪಾಠಾಂತರಗಳೆಂದು ಗ್ರಹಿಸಿ ಆ ಬೇರೆ ಬೇರೆ ರಚನೆಗಳನ್ನು ಮಿಶ್ರಗೊಳಿಸುವ ಅಪಾಯವಿದೆ. ಫಿನಲ್ಯಾಂಡಿನ ಜಾನಪದ ಮಹಾಕಾವ್ಯವಾದ 'ಕಲೇವಾಲ'ವನ್ನು ಎಲಿಯಾಸ್ ಲೋನಾರ್ಟ್ ಹೇಗೆ ಸಂಪಾದಿಸಿರುವನೋ ನನಗೆ ಸ್ಪಷ್ಟವಿಲ್ಲ. ಕನ್ನಡದಲ್ಲಿ ಹಲವು ಮೂಲಗಳಿಂದ ಒಂದೆರಡು ಜಾನಪದ ನೀಳ್ಗವನಗಳನ್ನು ಪುನರ್‌ರಚಿಸಿದ್ದು, ಅವು ಹತ್ತಾರು ತುಂಡುಗಳ ತೇಪೆವಸ್ತ್ರವಾಗಿರಲು ಸಾಧ್ಯವಿದೆ.

ಮಲೆಯ ಮಾದೇಶ್ವರ ಕಾವ್ಯದ ಸಂಪಾದನೆಯನ್ನು ಕುರಿತು "ಮಲೆಯ ಮಾದೇಶ್ವರ ಕಾವ್ಯದ ಹತ್ತು ಪಾಠಗಳ ಒಟ್ಟು ಸಾಲುಗಳ ಮೊತ್ತ ೭೫, ೬೦೦ ಸಾಲುಗಳಿಗೂ ಹೆಚ್ಚಾಗಿದ್ದು ಶುದ್ಧಪಾಠವೊಂದನ್ನು ಸಿದ್ಧಗೊಳಿಸಿದಾಗ ಸು.೨೫,೦೦೦ ಸಾಲುಗಳಷ್ಟಾಯಿತು."[೬] ಎಂಬ ಮಾತು ತುಂಬ ವಿಚಿತ್ರವಾಗಿ ತೋರುತ್ತದೆ. ಹೀಗಾಗಿ "ಒಂದು ಕಥೆ ದೇಶದಿಂದ ದೇಶಕ್ಕೆ ಕಾಲದಿಂದ ಕಾಲಕ್ಕೆ ಪ್ರಸಾರಗೊಳ್ಳುವಾಗ ಕಥೆಗಾರರ ವೈಯಕ್ತಿಕ ಅಭಿರುಚಿ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ನಿರಂತರವಾಗಿ ಬದಲಾವಣೆ ಹೊಂದುತ್ತದೆ. ಈ ಕಾರಣದಿಂದ ಒಂದೇ ಕಥೆಯ ಹಲವಾರು ಭಿನ್ನರೂಪವನ್ನು (Variants) ಗುರುತಿಸಲು ಸಾಧ್ಯ. ಈ ಭಿನ್ನ ರೂಪಗಳನ್ನು ಸಂಗ್ರಹಿಸಿ, ಚಾರಿತ್ರಿಕ-ಭೌಗೋಳಿಕ ವಿಧಾನದಿಂದ (Historic-Geographical method) ಜಾನಪದ ವಿದ್ವಾಂಸರು ಒಂದು ಕಥೆಯ ಮೂಲರೂಪ ಏನಿತ್ತು ಎಂಬುದನ್ನು ಗುರುತಿಸುತ್ತಾರೆ............ ಈ ವಿಧಾನದ ಮೂಲಕ ಕಂಡುಹಿಡಿದ ಒಂದು ಕಥೆಯ ಮೂಲರೂಪವನ್ನೇ (Arche type) ಕಥಾವರ್ಗ (tale type) ಎಂದು ಕರೆಯಲಾಗುತ್ತದೆ. ಕಥಾವರ್ಗವನ್ನು ಕಂಡುಹಿಡಿಯುವ ಕಾರ್ಯ ಗ್ರಂಥ ಸಂಪಾದನಶಾಸ್ತ್ರದಲ್ಲಿ ಪರಂಪರಾನುಗತ ಹಸ್ತಪ್ರತಿಗಳ ಸಹಾಯದಿಂದ ಮಾತೃಕೆ (exempler) ಯನ್ನು ಪುನರ್ರಚಿಸಿದಷ್ಟೇ ಕಷ್ಟದ ಕೆಲಸ ...... ಒಂದು ಕಥಾವರ್ಗವನ್ನು ನಿರ್ಧರಿಸಬೇಕಾದರೆ ಆ ಕಥೆಯ ಎಷ್ಟೆಷ್ಟು ಭಿನ್ನ ಪಾಠಗಳು ದೊರೆತರೆ ಅಷ್ಟು ಅನುಕೂಲ"[೭] ಎಂದು ಹೇಳುವ ಮಾತುಗಳು ನಮಗೆ ನಿರ್ದಿಷ್ಟ ನೆಲೆಯನ್ನು ಮುಟ್ಟಿಸುವುದು ಸಂದೇಹ.

ತ್ರಿಪದಿಯಂತಹ ಬಿಡಿ ಮುಕ್ತಕಗಳಿಗಿಂತ ನೀಳ್ಗವನಗಳಲ್ಲಿ ರೂಪಾಂತರ ರಚನೆಗಳು ಹೆಚ್ಚು. ಅಲ್ಲಿ ಒಂದು ಕಥೆ ಅಥವಾ ವಸ್ತುವಿಗೆ ಬೇರೆಬೇರೆಯವರಿಂದ ಅಖಂಡ ಹಾಡುಗಳು, ಖಂಡಹಾಡುಗಳು ಹುಟ್ಟಿರುತ್ತವೆ. ಇವು ಒಂದೇ ಛಂದೋಮಟ್ಟದಲ್ಲಿದ್ದರೆ ಅಖಂಡ+ಅಖಂಡ, ಅಖಂಡ+ಖಂಡ, ಖಂಡ+ಖಂಡ ಹಾಡುಗಳು ಪರಸ್ಪರ ಸೇರಿಕೊಳ್ಳಬಹುದು. ಇಲ್ಲವೆ ಒಂದೇ ಅಖಂಡ ಹಾಡು ಎರಡು ಇಲ್ಲವೆ ಹಲವು ಖಂಡಗಳಾಗಿ ವ್ಯವಹರಿಸಬಹುದು. ಕರ್ನಾಟಕದಲ್ಲಿ ಒಂದೇ ವಸ್ತುವಿನ ಸುತ್ತ ಹುಟ್ಟಿದ ಅನೇಕ ಖಂಡ ಇಲ್ಲವೆ ಅಖಂಡ ಹಾಡುಗಳು ಬಹಳಷ್ಟು ಸಿಗುತ್ತವೆ. ಉದಾ: ಬೆಟಗೇರಿ ಕೃಷ್ಣಶರ್ಮ ಶೋಧಿಸಿದ 'ಕೆರೆಗೆ ಹಾರ'ವು ಬಾವಿಗಾಗಿ ಸೊಸೆಯ ಬಲಿ, ಅಣಜಿ ಹೊನ್ನಮ್ಮ, ಒಡ್ಡರ ಬೋಯಿ, ಕುಣಿಗಲು ಕೆರೆ, ಹುಳಿಯಾರು ಕೆಂಚಮ್ಮ-ಹೀಗೆ ಈಗಿನ ಮಟ್ಟಿಗೆ ೬ ರೂಪಾಂತರಗಳಲ್ಲಿ ಸಿಗುತ್ತವೆ. ಡಿ. ಎಲ್. ನರಸಿಂಹಾಚಾರ್ಯ ಸಂಪಾದಿತ 'ಗೋವಿನಕಥೆ'ಯು ಗೋವಿನಹಾಡು, ಕೌಲೆಹಾಡು, ಆಕಳಹಾಡು, ಕವಲೆಹಾಡು, ಆಕಳಪದ, ಕವಲಿಹಾಡು, ಗೋಪ್ಯಮ್ಮ, ಕವಲಿಹಾಡು, ಗೋಪ್ಯಮ್ಮ-ಹೀಗೆ ಈಗಿನ ಮಟ್ಟಿಗೆ ೧೦ ರೂಪಾಂತರಗಳಲ್ಲಿ ಸಿಗುತ್ತದೆ.[೮]

ಇಂಥ ಹಾಡುಗಳನ್ನು ಸಂಪಾದಿಸುವಾಗ ಬೇರೆ ಬೇರೆ ರೂಪಾಂತರಗಳನ್ನು ಕಲೆಹಾಕಿ ಪಾಠಾಂತರದಂತೆ ಬಳಸಿಕೊಳ್ಳಬಾರದು. ಹಾಗಾದರೆ ಶಿಷ್ಟಪದ ಸಾಹಿತ್ಯ ಸಂಪಾದನೆಯಂತೆ ಒಂದು ರೂಪಾಂತರಕ್ಕೆ ಸಂಬಂಧಪಟ್ಟ ಬೇರೆ ಬೇರೆ ಪಾಠಾಂತರಗಳನ್ನು ಸಂಗ್ರಹಿಸಿ, ಅವುಗಳ ಬಲದಿಂದ

---

೬. ಮಲೆಯ ಮಾದೇಶ್ವರ-ಪ್ರಸ್ತಾವನೆ, ಪು. ೭೩.

೭. ಸಂಕೀರ್ಣ ಜನಪದ ಕಥೆಗಳು, ಮುನ್ನುಡಿ, XVIII.

೮. ಜನಪದ ಗೀತೆಗಳಲ್ಲಿ ಗೋವಿನಕಥೆ (ಶಾಲಿನಿ ಭಟ್), ಕರ್ನಾಟಕ ಭಾರತಿ ೧೦-೨.

ಯೋಗ್ಯವಾದ ಒಂದು ಪಾಠವನ್ನು ನಿರ್ಣಯಿಸಿ, ಮಿಕ್ಕವುಗಳನ್ನು ಆದಿಯಲ್ಲಿ ಕೊಡಬೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರ ಹೀಗೆ ಹೇಳಬಹುದು : ಮೇಲೆ ವಿವರಿಸಿದ ಐದೂ ಘಟಕಗಳ ಛೇದನದಲ್ಲಿ ಲಭ್ಯವಾದ ಪಾಠವೊಂದು ಅರ್ಥಯುಕ್ತವಾಗಿದ್ದರೆ ಇನ್ನೊಂದು ಪಾಠವನ್ನು ಸಂಗ್ರಹಿಸುವ ಗೋಜಿಗೆ ಹೋಗಬಾರದು. ಅದು ನಿವೇದಕಜನ್ಯ ಅಶುದ್ಧಪಾಠ, ಕೆಲವೊಮ್ಮೆ ಪ್ರದೇಶಮಾನ್ಯ ಅಶುದ್ಧ ಪಾಠವಿದ್ದರೆ ಮಾತ್ರ ಬೇರೊಂದು ಯೋಗ್ಯಪಾಠಕ್ಕಾಗಿ ಪ್ರಯತ್ನಿಸಬೇಕು.

೩

ಶಿಷ್ಟ ಸಾಹಿತ್ಯಕ್ಕಿಂತ ಜಾನಪದಸಾಹಿತ್ಯಕ್ಕೆ ಪಾಠಾಂತರ ಹೆಚ್ಚು. ಆ ಲಿಖಿತ ಸಾಹಿತ್ಯದಲ್ಲಿ ಪಾಠಾಂತರ ದೋಷವೆನಿಸುತ್ತಿದ್ದರೆ, ಈ ಅಲಿಖಿತ ಸಾಹಿತ್ಯದಲ್ಲಿ ಪಾಠಾಂತರಗಳಾಗುವುದೇ ಗುಣವೆನಿಸುತ್ತದೆ. ನೆಲದ ರುಚಿ ಜಲಕ್ಕೆ ಬರುವಂತೆ ಕಾಲದೇಶಾದಿಗಳ ಬಣ್ಣ ಮತ್ತು ನಿವೇದಕ ಜನಿತ ಶುದ್ಧ-ಅಶುದ್ಧ ಪಾಠಗಳು ಜಾನಪದ ಸಾಹಿತ್ಯಕ್ಕೆ ಉಂಟಾಗುತ್ತವೆ. ಅದರಲ್ಲಿಯೂ ಪದ್ಯ ಅಲ್ಪ ಪ್ರಮಾಣದಲ್ಲಿ ಪಾಠಾಂತರಗಳನ್ನು ತಾಳುತ್ತಿದ್ದರೆ, ಗದ್ಯ "ನಿದ್ದೆಗೊಮ್ಮೆ ನಿತ್ಯಮರಣ ಎದ್ದ ಸಲ ನವೀನ ಜನನ" ಎಂಬಂತೆ ಹುಟ್ಟುವಾಗಲೆಲ್ಲ ಹೊಸಸೃಷ್ಟಿ ಪಡೆಯುತ್ತದೆ.

ಜಾನಪದಸಾಹಿತ್ಯದಲ್ಲಿ ಕಾಣುವ ಎಲ್ಲ ಪಾಠಾಂತರಗಳು ಶುದ್ಧಪಾಠಾಂತರಗಳು, ಅಶುದ್ಧ ಪಾಠಾಂತರಗಳು ಎಂದು ಎರಡು ಬಗೆಯಾಗಿದ್ದು, ಶುದ್ಧಪಾಠಾಂತರಗಳು ಮತ್ತೆ ಉದ್ದೇಶಿತ ಮತ್ತು ಅನುದ್ದೇಶಿತವೆಂದು, ಅಶುದ್ಧ ಪಾಠಾಂತರಗಳು ಅಮಾನ್ಯ ಮತ್ತು ಮಾನ್ಯವೆಂದು ಎರಡು ತೆರನಾಗಿವೆ.

ಉದ್ದೇಶಿತ ಶುದ್ಧ ಪಾಠಾಂತರ : ಶಿಷ್ಟಪದ ಸಾಹಿತ್ಯದಲ್ಲಿ ಉದ್ದೇಶಿತ ಪಾಠಾಂತರ, ಪ್ರಮಾದವಾದರೆ ಇಲ್ಲಿ ಅದು ಅಪ್ರಮಾದ, ಅನಿವಾರ್ಯ, ಅತ್ಯವಶ್ಯ. ಅದಕ್ಕಾಗಿಯೇ ಜಾನಪದಸಾಹಿತ್ಯದಲ್ಲಿ ಐತಿಹಾಸಿಕ ಭೌಗೋಲಿಕ ಸಂಗತಿ, ದೇವತಾನಾಮ, ಪ್ರಾದೇಶಿಕ ವ್ಯಕ್ತಿನಾಮ-ಮೊದಲಾದವುಗಳನ್ನು ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಿಕೊಳ್ಳುವುದು ದೋಷವೆನಿಸುವುದಿಲ್ಲ. ಚೌರ್ಯವೆನಿಸುವುದಿಲ್ಲ. ಹೀಗಾಗಿ ಒಂದು ನಾಡಿನ ಒಂದು ಮೂಲೆಯಲ್ಲಿಯ ಹಾಡು ಇನ್ನೊಂದು ಮೂಲೆಯಲ್ಲಿ ಇಂಥ ವ್ಯತ್ಯಾಸಗಳಿಂದ ಬಳಕೆಯಾಗುತ್ತಿದ್ದರೆ ಅದಕ್ಕೆ ಯಾರದೂ ಅಭ್ಯಂತರವಿರಲಿಲ್ಲ; ಇರಬಾರದು. ಉದಾ:

ಬ್ಯಾಸಗಿ ದಿವಸಕ ಬೇವಿನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ । ಹಡದವ್ವ
ನೀ ತಂಪ ನನ್ನ ತವರೀಗಿ ॥

ಉತ್ತರ ಕರ್ನಾಟಕದಲ್ಲಿಯ ಈ ಹಾಡು,

ಬೇಸಗೆ ದಿವಸಕ ಬೇವಿನ ಮರ ತಂಪ
ವೇದವತಿಯೆಂಬ ಹೊಳೆತಂಪ । ಹಡದವ್ವ
ನೀ ತಂಪು ನನ್ನ ತವರೀಗಿ ॥

ಎಂದು ದಕ್ಷಿಣಕರ್ನಾಟಕವಲ್ಲಿ ಪಾಠಾಂತರದೊಂದಿಗೆ ಕೇಳಿಸುತ್ತಿರುವುದು ಅದೋಷವೆಂದೇ ಹೇಳಬೇಕು. ಇಂಥ ಮುಕ್ತಕಗಳು, ನೀಳ್ಗವನಗಳು ಪ್ರದೇಶದಿಂದ ಪ್ರದೇಶಕ್ಕೆ ಮನೆಯಿಂದ ಮನೆಗೆ ಉದ್ದೇಶಿತ ಪಾಠವ್ಯತ್ಯಾಸದಿಂದ ಚಲಿಸುತ್ತಿರುವುದು ಸರ್ವಮಾನ್ಯವೇ ಸರಿ. ಇಲ್ಲಿ ಭೀಮರತಿ, ವೇದವತಿ – ಹೀಗೆ ಪಾಠವ್ಯತ್ಯಾಸಗಳಿದ್ದ ಪದ್ಯಗಳು ಸಿಕ್ಕ ಮಾತ್ರಕ್ಕೆ ಅವುಗಳನ್ನು ಸ್ವತಂತ್ರ ರಚನೆಗಳೆಂದು ಪರಿಗಣಿಸುವುದು ಪ್ರಮಾದವಾಗುತ್ತದೆ. ಅನೇಕರ ಸಂಕಲನಗಳಲ್ಲಿ ಇಂಥ ಉದ್ದೇಶಿತ ಪಾಠಾಂತರಗಳಿಂದ ಶೋಭಿಸುವ ಪುನರುಕ್ತಪದ್ಯಗಳು ಗಣನೀಯ ಪ್ರಮಾಣದಲ್ಲಿ ಕಂಡು ಬರುವುದು ವಿಷಾದದ ಸಂಗತಿ. ಉದಾ:

ಊದಿಗಿ ದ್ಯಾವಮ್ಮ ನಾಡಿಗಿ ದೊಡ್ಡಾಕಿ ।
ನಾಗಳ ಗೋದಿ ಉಡಿಯಕ್ಕಿ । ಹಾಯ್ಕೊಂಡು
ನಾಗಯ್ಯಗ ಹಾಲ ಎರದಾಳೋ ॥
ನಾಗಾಯಿ ಯಲ್ಲಮ್ಮ ನಡುವಿರಲಿ ದೊಡ್ಡಾಕಿ ।
ನಾಗಳ ಗೋದಿ ಉಡಿಯಾಗ । ಹಾಕ್ಕೊಂಡು
ನಾಗರಿಗಿ ಹಾಲ ಎರಿದಾಳೊ ॥[೯]

ಇವುಗಳನ್ನು ಸ್ವತಂತ್ರ ರಚನೆಗಳೆಂದು ಭಾವಿಸಿ ಎರಡು ಬೇರೆ ಬೇರೆ ಪದ್ಯಗಳಂತೆ ಅಚ್ಚುಹಾಕಿಸುವುದಕ್ಕಿಂತ ಮೇಲೆ ಹೇಳಿದ ೫ ಸೂತ್ರಗಳಿಗೆ ಬದ್ಧವಾದ ಶುದ್ಧಪಾಠವೊಂದನ್ನು ಸ್ವೀಕರಿಸುವುದೇ ಇಲ್ಲಿ ಶಾಸ್ತ್ರೀಯವೆನಿಸುತ್ತದೆ. ಇಂಥ ಪ್ರಸಂಗಗಳಲ್ಲಿ ಭಿನ್ನಪಾಠಾಂತರದ ಪ್ರಶ್ನೆಯೇ ಬರುವುದಿಲ್ಲ.

ಅನುದ್ದೇಶಿತ ಶುದ್ಧಪಾಠಾಂತರ : ಜಾನಪದಸಾಹಿತ್ಯ ಪ್ರದೇಶದಿಂದ ಪ್ರದೇಶಕ್ಕೆ ಹೊರಳುವಾಗ ಅನುದ್ದೇಶಿತವಾಗಿ ಪ್ರಾದೇಶಿಕ ಭಾಷೆಯ ರೂಪ ಮತ್ತು ಧ್ವನಿಗಳನ್ನು ಮೈಗೂಡಿಸಿಕೊಳ್ಳುತ್ತದೆ. "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬಂತೆ ಪ್ರಾಂತಕ್ಕೆ ತಕ್ಕ ರೂಪಪಡೆಯುತ್ತದೆ. ಉದಾ:

ಅಡಗಿ ಮಾಡಂದರ । ಅರುವತ್ತು ಗಂಗಾಳ
ಬೆಳಗತೀನತ್ತೀ ಬೈಬ್ಯಾಡ । ತವರವರು
ಸರಮುತ್ತ ಮಾಡಿ ಸಲವ್ಯಾರ ॥
ಅಡಗಿ ಮಾಡಂದರ ಅರವತ್ತು ಪರಿಯಾನ ।
ಅರಿಯೆ ಕಾಣತ್ತೆ ಅಡಗೀಯ ನಮ್ಮಪ್ಪಾ
ಸರಮುತ್ತ ಮಾಡೀಯ ಕಳಗೀದಾ ॥

೯. ಉತ್ತರ ಕರ್ನಾಟಕದ ಹಂತಿಯ ಹಾಡುಗಳು, ಪು. ೧೩–೧೫.

ಈ ಎರಡೂ ಹಾಡುಗಳಿಗೆ "ಒಡಲೆರಡು, ಒಂದೆ ಜೀವ." ಹೀಗೆಯೇ ತಾಯಿಬೇರನ್ನು ಕತ್ತರಿಸಿಕೊಳ್ಳದೆ ತಂತುಬೇರನ್ನಾಶ್ರಯಿಸಿ ಬೇರೆ ಬೇರೆ ಪದ್ಯಬಳ್ಳಿಗಳು ಅನುದ್ದೇಶಿತ ಪಾಠಾಂತರ ಹೊಂದಿ ದೇಶದಿಗ್ದೇಶಗಳಲ್ಲಿ ಅಂಕುರಿಸಿ ಅರಳಿರುತ್ತವೆ.[೧೦]

ಪ್ರದೇಶನಿಷ್ಠ ಪಾಠಾಂತರದಂತೆ ಪ್ರದೇಶನಿಷ್ಠ ಧ್ವನಿಮಾಂತರವೂ ಅನುದ್ದೇಶಿತವಾಗಿ ಇಣುಕುತ್ತದೆಯೆಂಬುದು ಗಮನಿಸಬೇಕಾದ ಸಂಗತಿ. ಉದಾ: ಹಾದಿ ಹಿಡಿದು ಹೋಗತಾನ ಹಾಡ್ಯಾಡಿ ಅಳತಾನ-ಆದಿ ಇಡದು ಓಗತಾನ ಆಡ್ಯಾಡಿ ಅಳತಾನ. ಸಣ್ಣೆಳಿ ಸರಪಳಿ ಬಂಗಾರದ ಕೋಡಣಸು-ಸನ್ನೆಳಿ ಸರಪಳಿ ಬಂಗಾರದ ಕೋಡನಸು.

ಮೂರನೆಯದಾಗಿ ಜಾನಪದ ಸಾಹಿತ್ಯದ ಹಾಡುಗಾರಿಕೆ ಅಥವಾ ಹೇಳುಗಾರಿಕೆಗಳೂ ಅನುದ್ದೇಶಿತ ಪಾಠಾಂತರವನ್ನುಂಟು ಮಾಡುತ್ತವೆ. ಉದಾ:

೧. ಪುಂಡಾನ ಎತಗೋಳು । ಹಿಂಡೀನ ಮೆಯ್ದಾವ ।

೨. ಬೆಳ್ಳಾನ ಬಸವಣ್ಣ । ಎಲ್ಲೀಗಿ ಹೋಗಿದ್ದಿ ।
ಎಲ್ಲಾರ ನೆದರ ನಿನ ಮ್ಯಾಲ ।

೩. ಹಾಡ ಇಲ್ಲಿಗಿ ಸರುವ ನೀಡೊ ನಮ್ಮಗ ವರವ ।

೪. ಲಿಂಗಪೂಜಾನಾಗತಾದಣ್ಣ

೫. ನಿಂಬಿಯ ವನದನ್ನ ಅರಗಿಳೆಯೆ ।

ಇಂಥ ಅನುದ್ದೇಶಿತ ಪಾಠಾಂತರಗಳು ಆಯಾ ಪ್ರದೇಶಗಳಲ್ಲಿ ಮಾನ್ಯತೆ ಪಡೆದಿರುವುದರಿಂದ ಶುದ್ಧರೂಪಗಳೇ ಆಗಿದ್ದು, ೫ ಸೂತ್ರಗಳ ಒರೆಗಲ್ಲಿಗೆ ಹಚ್ಚಿ ಸ್ವೀಕರಿಸುವುದೇ ಇಲ್ಲಿ ಶಾಸ್ತ್ರೀಯವೆನಿಸುತ್ತದೆ. ಇಲ್ಲಿಯೂ ಭಿನ್ನ ಪಾಠಾಂತರದ ಪ್ರಶ್ನೆ ಉದ್ಭವಿಸುವುದಿಲ್ಲ.

ಒಟ್ಟಿನಲ್ಲಿ ಉದ್ದೇಶಿತ ಶುದ್ಧಪಾಠಾಂತರ, ಅನುದ್ದೇಶಿತ ಶುದ್ಧಪಾಠಾಂತರ ಪ್ರಸಂಗಗಳಲ್ಲಿ ಸಂಪಾದಕನಿಗೆ ವರ್ಜನ, ಸ್ವೀಕರಣ, ಪರಿಷ್ಕರಣ, ಸಂದೇಹದ ಚರ್ಚೆಗೆ ಅವಕಾಶವೇ ಇಲ್ಲ. ೫ ಸೂತ್ರಗಳಿಗೆ ಬದ್ಧವಾಗಿ ಬಂದ ಯಾವುದೇ ಒಂದು ಪಾಠ ಸ್ವೀಕಾರಾರ್ಹವೇ ಸರಿ. ಆದರೆ ವರ್ಜನ, ಸ್ವೀಕರಣ, ಪರಿಷ್ಕರಣ ಸಂದೇಹದ ಚಿಂತನೆ ನಡೆಯುವುದು ಅಶುದ್ಧಪಾಠ ಲಭ್ಯವಾದ ಪ್ರಸಂಗದಲ್ಲಿ. ಈ ಅಶುದ್ಧ ಪಾಠಾಂತರಗಳು ಅಮಾನ್ಯ ಅಶುದ್ಧ ಪಾಠಾಂತರಗಳು, ಮಾನ್ಯ ಅಶುದ್ಧ ಪಾಠಾಂತರಗಳು ಎಂದು ಎರಡು ತೆರನಾಗಿವೆ.

ಅಮಾನ್ಯ ಅಶುದ್ಧಪಾಠಾಂತರಗಳು : ನಿವೇದಕನಿಂದ ಮಾತ್ರ ಅರ್ಥ ಕೆಟ್ಟಿರುವ, ಪ್ರದೇಶದಿಂದ ಅಮಾನ್ಯವಾಗಿರುವ ಅನುದ್ದೇಶಿತಪಾಠಗಳಿವು. ಈಗ ಅರ್ಥವತ್ತಾದ ಪಾಠಕ್ಕೋಸುಗ ಇನ್ನೊಬ್ಬ ನಿವೇದಕನನ್ನು (ಇನ್ನೊಂದು ಹಸ್ತಪ್ರತಿಯನ್ನು ಬಳಸಿಕೊಳ್ಳುವಂತೆ) ಮೊರೆಹೋಗಬೇಕಾಗುತ್ತದೆ.

---

೧೦. ಕೆಲವು ಸಲ ಒಂದು ಪ್ರಾಂತಭೇದದಲ್ಲಿಯೇ ಒಂದು ರಚನೆಗೆ ಅನೇಕ ಅನುದ್ದೇಶಿತ ಪಾಠಾಂತರಗಳು ಸಿಗಬಹುದು. ಉದಾ: ಕೊಡಲಿ ಕಾವು ಕುಲಕ್ಕೆ ಸಾವು. ಕೊಡಲಿ ಕಾವು ಕುಲಕ್ಕೆ ಮೃತ್ಯು. ಕೊಡಲಿಯ ಕಾವು ಕುಲಕ್ಕೆ ಮೂಲ. ಈ ಗಾದೆ ಮಾತುಗಳನ್ನು ನೋಡಬಹುದು.

ಉದಾ:

ಗಜಮುಖ ಗಣಪತಿ ಮಾಡುವೆ ನಿಮಸ್ತುತಿ ।
ಪಾವನ ಮಾಡೊ ಪರಮೇಶ । ನಿನ ಮಗ
ಪಾರೋತಿಪುತ್ರ ಗಣಪತ್ಯೋ ॥[೧೧]

ಈ ಪದ್ಯದ ಅರ್ಥ ಸಂದೇಹದಿಂದ ಕೂಡಿದೆ. ಇಲ್ಲಿ 'ನಿನ ಮಗ'ದ ಸ್ಥಾನದಲ್ಲಿ 'ನೀ ನಮಗ' ಎಂಬ ಸ್ವೀಕಾರಯೋಗ್ಯ ಪಾಠಾಂತರ ಇನ್ನೊಬ್ಬನಿಂದ ಸಿಗುತ್ತದೆ. ಇವುಗಳಲ್ಲಿ ಒಂದು ಸ್ವೀಕರಣವೆನಿಸಿ ಮೇಲೆ, ಇನ್ನೊಂದು ವರ್ಜನವೆನಿಸಿ ಕೆಳಗೆ ಎಡೆಪಡೆಯುತ್ತದೆ. ಇಂಥ ಇನ್ನೊಂದು ಉದಾಹರಣೆ:

ಹಾದಿಗಿ ಕಲ್ಹಾಕಿ ಹಾಡಿ ಬೀಸಾಕಿನ್ಯಾರ
ಲಾಲಕುಂಕುಮದ ಹೆಣಗಳೊ । ಮರಿಯಮ್ಮ
ಹಾಡಿ ಬೀಸ್ಯಾಳೊ ಅರಿಷಿಣ ॥[೧೨]

ಮರಿಯಮ್ಮ ಇಲ್ಲಿ ಹೆಣಗಳನ್ನು ಬೀಸಿದಳೊ ? ಅರಿಷಿಣವನ್ನು ಬೀಸಿದಳೋ ? ಎಂಬ ಸಂದೇಹ ಹುಟ್ಟುತ್ತದೆ. ಆಗ ಬೇರೆ ನಿವೇದಕನನ್ನು ಅವಲಂಬಿಸಿ 'ಹೆಣಗಳೊ' ಎಂಬುದಕ್ಕೆ ಬದಲು 'ಹೆಣಮಗಳೊ' ಎಂಬ ಯೋಗ್ಯಪಾಠವನ್ನು ದೊರಕಿಸಿಕೊಂಡು ಇವುಗಳಲ್ಲಿ ಒಂದು ವರ್ಜನ, ಇನ್ನೊಂದು ಸ್ವೀಕರಣವೆಂದು ಭಾವಿಸಬೇಕು.

ಮಾನ್ಯ ಅಶುದ್ಧ ಪಾಠಾಂತರಗಳು: ಅರ್ಥಕೆಟ್ಟಿರುವ ಆದರೂ ಪ್ರದೇಶದಿಂದ ಮಾನ್ಯವಾಗಿರುವ ಅನುದ್ದೇಶಿತ ಪಾಠಗಳಿವು. ಇಲ್ಲಿ ಯಾವುದೇ ನಿವೇದಕನಿಂದ ಬೇರೆ ಯೋಗ್ಯ ಪಾಠಗಳು ಸಿಗುವುದಿಲ್ಲ. ಆಗ ಊಹೆಯಿಂದ ಇಂಥವನ್ನು ತಿದ್ದಿಕೊಳ್ಳಬೇಕಾಗುತ್ತದೆ. ಇದು ಪರಿಷ್ಕರಣ. ಈಗ ಪರಿಷ್ಕೃತ ಪಾಠವನ್ನು ಚೌಕಕಂಸಿನಲ್ಲಿ ಮೇಲೆ, ತಿರಸ್ಕೃತ ಪಾಠವನ್ನು ಕೆಳಗೆ ಇಡಬೇಕು. ಉದಾ:

ದೊಡವಿಯೊಳ್ ಕುಡುತನಯ
ಒಡೆಯ ಭೀಮೇಶನ ।

ಎಂಬುದು ಎಲ್ಲ ದೊಡ್ಡಾಟಗಳ ಸ್ತುತಿಪದ್ಯ. ಸಾರ್ವತ್ರಿಕವಾಗಿ ಹಾಡಲ್ಪಡುತ್ತಿರುವ, ಅರ್ಥವೇ ಹೊರಡದ ಈ ಪದದ ಪಾಠ ಎಲ್ಲಿಯೋ ಕೆಟ್ಟಿರಲು ಸಾಕು. ಬಳ್ಳಾರಿ ಜಿಲ್ಲೆಯ 'ಕುಡುತಿನಿ' ಎಂಬುದು ಬಯಲಾಟಗಳ ಜನ್ಮಭೂಮಿ ' ಅಲ್ಲಿಯ "ಭೀಮೇಶನ ಸ್ತುತಿ"ಯಿದು ಎಂಬಿವೇ ಮೊದಲಾದ ಇತಿಹಾಸ ಗೊತ್ತಿದ್ದರೆ ಮಾತ್ರ ಈ ಪಾಠವನ್ನು 'ಕುಡುತನಯ'ಕ್ಕೆ ಬದಲು 'ಕುಡು[ತಿನಿ]ಯ' ಎಂದು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಇಂಥ ಇನ್ನೊಂದು ಉದಾಹರಣೆ : ಶ್ರೀ. ಆರ್. ಜಿ. ಕುಲಕರ್ಣಿ ಅವರು ಸಂಪಾದಿಸಿದ "ಶ್ರೀಕೃಷ್ಣ ಪಾರಿಜಾತ"[೧೩] ಕೃತಿಯ ಮೊದಲ ಪಾದವಾದ "ಜಯಸಾಗರಾತ್ಮ ಜಯಕುಂಕುಮಾಂಕಿತ ವಕ್ಷ" ಇದನ್ನು "ಜಯಸಾಗರಾತ್ಮ[ಜೆ]ಯ ಕುಂಕುಮಾಂಕಿತ

---

೧೧. ಉತ್ತರಕರ್ನಾಟಕದ ಹಂತಿಯ ಹಾಡುಗಳು, ಪು. ೩.
೧೨. ಅದೇ ಪು. ೧೭.
೧೩. ಶ್ರೀ ಕೃಷ್ಣ ಪಾರಿಜಾತ (ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು), ಪು. ೧೧೭.

ವಕ್ಷ" ಎಂದೂ ಎರಡನೆಯ ಪಾದವಾದ "ಜಯ ಇಂದಿರಾ ಧಾರ ಅಮೃತಭಕ್ಷ" ಇದನ್ನು "ಜಯ ಇಂದಿರಾ[ಧ]ರ ಅಮೃತಭಕ್ಷ" ಎಂದೂ ಪರಿಷ್ಕರಿಸಿಕೊಳ್ಳುವುದು ಯೋಗ್ಯವಾದುದು. ಆದರೆ ಇಂಥ ಗೋಜಿಗೆ ಹೋಗದೆ,

೧. ಮುಂಗೋಡಿನ ಬಸವಣ್ಣ ಮೂರೇಣಿನ ಸರಪಳಿ ।
ಜಂಗ ಜಡಿಸ್ಯಾರೋ ಕೊರಳಿಗಿ । ಬಸವಣ್ಣ
ಮಾರಿಗಾಕ್ಯಾರೋ ಮುಖಮ್ಯಾಲೋ ।

೨. ಮುಂಗೋಡಿನೆತ್ತಿಗಿ ಮುರಗಿಯ ಸರಪಳಿ
ಜಂಗಮ ಜಡಿಸ್ಯಾರೋ ಕೊರಳಿಗೊ । ಬಸಪ್ಪನ
ಮಾರಿಗಾಕ್ಯಾರೋ ಮಕುಬಾರ ॥

೩. ಮುಂಗೋಡಿನೆತ್ತಿಗಿ ಮುರಗಿಯ ಸರಪಳಿ ।
ಜಂಗ ಜಡಿಸ್ಯಾರೊ ಕೊರಳಿಗೆ । ಬಸವಣ್ಣ
ಮಾರಿಗಚ್ಯಾರೊ ಮುಖಮಲೋ ॥[೧೪]

ಈ ರೀತಿ ಒಂದೇ ಸಂಕಲನದಲ್ಲಿ ಕೈಗೆಸಿಕ್ಕ ಒಂದೇ ಮೂಲದ ಮೂರು ಪದ್ಯಗಳನ್ನು ಒಟ್ಟುವುದು ಪುಟಗಳ ಅಪವ್ಯಯ.

ಹೀಗೆ ಸಂಪಾದಕನಿಗೆ ಪಾಠವನ್ನು ತಿದ್ದುವ ಸ್ವಾತಂತ್ರವಿದ್ದರೂ ಆತನು,

ನಿದ್ದಿಗಣ್ಣಲಿ ಕಂಡೆ । ಸದ್ದುಗುರುವಿನ ಪಾದ
ಎದ್ದುನೋಡಿದರ ನಿರಬಯಲು । ಗುರುರಾಯ
ರುದ್ದರನ ಮೈಮೆ ತಿಳಿಯಾವ ॥

ಎಂಬಂತಹ ಪದ್ಯಗಳಲ್ಲಿಯ ತದ್ಭವವನ್ನಾಗಲಿ, ಪ್ರಾಂತಭೇದವನ್ನಾಗಲಿ ತಿದ್ದುಪಡಿಮಾಡುವದು ತನ್ನ ಕರ್ತವ್ಯವೆಂದು ಭಾವಿಸಿ ಹಾಗೆ ಮಾಡಬಾರದು. ಹಾಗೆ ಮಾಡಿದರೆ ಜಾನಪದ ನವಿಲಿನ ಗರಿಗಳನ್ನು ಸರಿಗೊಳಿಸಲು ಬಯಸಿ ಕತ್ತರಿಸಿದಂತಾಗುತ್ತದೆ. ಆದುದರಿಂದ ಕೆಲವೊಮ್ಮೆ ಸಮಾಜಮಾನಿತ "ದೋಸಮನೆ ಗುಣದ ವೊಲುದ್ಭಾಸಿಸಿ"ಯೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದಲ್ಲದೆ ಇನ್ನು ಕೆಲವರು "ಸಕಲ ಲಕ್ಷಣಕಾಗಿ ಬಿರುಸು ಮಾಡುವ" ಪ್ರಯತ್ನಕ್ಕೂ ತೊಡಗಿದುದುಂಟು. ಉದಾ :

ತೊಟ್ಟಿಲ ಹೊತ್ಗೊಂಡು ತವರ್ಬಣ್ಣ ಉಟಗೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು । ತವರೂರ
ತಿಟ್ಟತ್ತಿ ತಿರಗಿ ನೋಡ್ಯಾಳ ॥

---

೧೪. ಉತ್ತರಕರ್ನಾಟಕದ ಹಂತಿಯ ಹಾಡುಗಳು, ಪು. ೩೮, ೫೨, ೧೭.

ಎಂಬ ತ್ರಿಪದಿಯನ್ನು ಪ್ರಾಸಪಾಲನೆಗಾಗಿ,

> ಉಟ್ಕಂಡ್ ತಾರ್ಬಣ್ಣ ಹೊತ್ಕಂಡ್ ತೊಟ್ಟಿಲ
> ಹೊಡ್ಕಂಡ್ ಅಪ್ಪ ಕೊಟ್ಟಿಮ್ಮಿ । ತವರೂರ
> ತಿಟ್ಟತ್ತಿ ನಿತ್ತು ನೋಡ್ಯಾಳು ॥[೧೫]

ಎಂದು ತಿದ್ದುಪಡಿ ಮಾಡಿದುದು ದೋಷಯುಕ್ತ ಸಂಪಾದನೆಯೆಂದೇ ಹೇಳಬೇಕು. ಏಕೆಂದರೆ ಎಷ್ಟೋ ಸುಂದರ ತ್ರಿಪದಿಗಳಲ್ಲಿ ಪ್ರಾಸವಿರುವದಿಲ್ಲ. ವಡಿಯೂ ಇರುವದಿಲ್ಲ. ಕಾರಣ ಇಂಥ ಪ್ರಯತ್ನಗಳು ಕುಂಬಳ ಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟಂತಾಗಬಹುದು. ಕೆಲವು ಸಲ ಎಷ್ಟು ಪ್ರಯತ್ನಿಸಿದರೂ ಸಮಾಜಮಾನಿತ ಒಂದು ಅಶುದ್ಧಪಾಠದ ಪರಿಷ್ಕರಣ ಸಾಧ್ಯವಾಗದಿದ್ದರೆ ಅದು 'ಸಂದೇಹ'ವೆನೆಸಿಕೊಳ್ಳುತ್ತದೆ. ಇಂಥ ಪಾಠದ ಮುಂದೆ ವರ್ತುಲ ಕಂಸಿನಲ್ಲಿ ಪ್ರಶ್ನೆಚಿಹ್ನೆ ಇಡಬೇಕು. ಉದಾ:

> ಮಂದೇನು ಕೊಟ್ಟೀತ । ಮನವೇನು ತಣದೀತ
> ಮುಂಜಾನದಾನ (?) ಗಿರಿಮಲ್ಲ । ಕೊಟ್ಟರ
> ಮನಿ ತುಂಬಿ ನಮ್ಮ ಮನ ತುಂಬಿ

ಸಂದೇಹಗಳನ್ನು ತೆಗೆದುಹಾಕಿ ಅರ್ಥವಾಗುವ ಹೊಸ ಪದಗಳನ್ನು ಸೇರಿಸಲು ಜನಪದರಿಗೆ ಸ್ವಾತಂತ್ರ್ಯವಿರುವುದರಿಂದ, ಅವರು ಹಾಗೆ ಮಾಡುವುದರಿಂದ ಜಾನಪದ ಸಾಹಿತ್ಯದಲ್ಲಿ ಸಂದೇಹಗಳು ಕಡಿಮೆಯೆಂದೇ ಹೇಳಬೇಕು.

ಹೀಗೆ ಸ್ವೀಕರಣ, ವರ್ಜನ, ಪರಿಷ್ಕರಣ, ಸಂದೇಹ–ಈ ನಾಲ್ಕು ವಿಧಾನಗಳಲ್ಲಿ ಈ ಸಂಪಾದನಕಾರ್ಯ ಮುನ್ನಡೆಯಬೇಕಾಗುತ್ತದೆ. ಒಟ್ಟಿನಲ್ಲಿ ಜಾನಪದ ಸಾಹಿತ್ಯವನ್ನು ಸಂಪಾದಿಸುವುದೆಂದರೆ ಪಂಚಸೂತ್ರ ಬದ್ಧವಾದ ಅರ್ಥಶುದ್ಧವಾದ ಪಾಠವನ್ನು ನಿರ್ಣಯಿಸುವುದೇ ಹೊರತು ಶಿಷ್ಟಪದ ಸಾಹಿತ್ಯ ಸಂಪಾದನೆಯಂತೆ ಮೂಲ ಪಾಠವನ್ನು ನಿರ್ಣಯಿಸುವುದಲ್ಲ, ಹಾಗೆ ನೋಡಿದರೆ ಜಾನಪದ ಸಾಹಿತ್ಯಕ್ಕೆ 'ಅಧಿಕೃತ ಪಾಠ'ವೇ ಇರಲಾರದು; ಇರಬಾರದು.

೪

ಸಂಪಾದನ ಕಾರ್ಯದಲ್ಲಿ ಪಾಠವನ್ನು ಹೇಗೆ ಸೋಸಿಕೊಳ್ಳಬೇಕೆಂದು ತಿಳಿದುಕೊಂಡ ತರುವಾಯ ಅದರ ಪ್ರಕಟನವಿಧಾನದ ಬಗ್ಗೆ ವಿಚಾರಿಸಬಹುದು. ಇಂದು ಜಾನಪದ ಸಾಹಿತ್ಯವನ್ನು ಬರವಣಿಗೆಯ ಮೂಲಕ ಪ್ರಕಟಿಸುತ್ತಲಿದ್ದೇವೆ. ಆದರೆ ಆಡು ಮಾತಿನ ಮಾಧ್ಯಮವಾಗಿರುವ ಜಾನಪದ ಸಾಹಿತ್ಯವನ್ನು ಬರವಣಿಗೆ ಮಾಧ್ಯಮಕ್ಕೆ ಇಳಿಸಿಕೊಳ್ಳುವ ಕಾರ್ಯವನ್ನು ಹೇಗೆ ನಿರ್ವಹಿಸುವುದು? ಇದು ಜಾನಪದ

---

೧೫. ಮದ್ದುಂಟೆ ಜನನ ಮರಣಕ್ಕೆ, ಪುಟ. ೩.

ಸಾಹಿತ್ಯ ಸಂಪಾದಕರನ್ನು ಕಾಡಿದ, ಕಾಡುತ್ತಲಿರುವ ಪ್ರಶ್ನೆಯಾಗಿದೆ. ಆಡುವ ಭಾಷೆ ಬರವಣಿಗೆಯಲ್ಲಿ ತನ್ನ ಕೆಲವು ಅಂಶಗಳನ್ನು ಕಳೆದುಕೊಳ್ಳುವಂತೆ ಹಾಡುವ ಅಥವಾ ಹೇಳುವ ಜಾನಪದ ಸಾಹಿತ್ಯವೂ ಬರವಣಿಗೆಯಲ್ಲಿ ಕೆಲವು ಅಂಶಗಳನ್ನು ಕಳೆದುಕೊಳ್ಳುತ್ತದೆ. ಒಂದು ಜಾನಪದ ರಚನೆಯನ್ನು ಹೇಳುವಾಗ ಅಥವಾ ಹಾಡುವಾಗ ವ್ಯಕ್ತಗೊಳ್ಳುವ ಧ್ವನಿಯ ಏರಿಳಿತ, ಆಂಗಿಕ ಹಾವಭಾವಗಳು ಅದಕ್ಕೆ ಪ್ರಭಾವಶಾಲಿ ವ್ಯಕ್ತಿತ್ವವನ್ನು ತುಂಬುತ್ತವೆ. ಅದೇ ರಚನೆಯನ್ನು ಬರವಣಿಗೆಗೆ ಇಳಿಸಿಕೊಂಡರೆ ಇವೆಲ್ಲ ಹೋಗಿ ಶಾಪಗ್ರಸ್ಥ ಅಜಗರನಂತೆ ನಿಶ್ಚೇಷ್ಟವಾಗುತ್ತದೆ. ಅದಕ್ಕಾಗಿಯೇ "ಜಾನಪದ ಸಾಹಿತ್ಯವನ್ನು ಕೇಳುವಾಗ ಸಿಗುವ ಸುಖ ಓದಿದಾಗ ಸಿಗುವುದಿಲ್ಲ"ವೆನ್ನುವುದು. ಈ ಆರೋಪದಿಂದ ಮುಕ್ತವಾಗಬೇಕಾದರೆ ಅದನ್ನು ಸಾಧ್ಯವಾದಷ್ಟು ಮೂಲ ರೂಪದಲ್ಲಿ ಸಮರ್ಪಕವಾಗಿ ಹಿಡಿದುಕೊಳ್ಳಬೇಕು.

ಇಲ್ಲಿಯ "ಹಿಡಿದುಕೊಳ್ಳಬೇಕು" ಎಂಬ ಮಾತು ಚಿಂತನೀಯವಾಗಿದೆ. ಸಾಹಿತ್ಯ, ಭಾಷೆಯಲ್ಲಿ ಹೊಡೆಬಿಚ್ಚುವ ಕಲೆಯಾದರೂ ಶಿಷ್ಟಪದ ಸಾಹಿತ್ಯ ಲಿಪಿವ್ಯವಸ್ಥೆಗೆ ಒಳಪಟ್ಟು ಹುಟ್ಟುತ್ತದೆ ; ಜಾನಪದ ಸಾಹಿತ್ಯ ಧ್ವನಿವ್ಯವಸ್ಥೆಗೆ ಒಳಪಟ್ಟು ಹುಟ್ಟುತ್ತದೆ. ಆದುದರಿಂದ ವಾಕ್ಸಂಪ್ರದಾಯತೆ ಮತ್ತು ನಿತ್ಯಪರಿವರ್ತನಶೀಲತೆಗಳು ಆಡುಭಾಷೆಯಂತೆ ಜಾನಪದ ಸಾಹಿತ್ಯಕ್ಕೂ ಲಕ್ಷಣಗಳಾಗಿರುವ ಕಾರಣ ಆಡುವಾತನ್ನು ಹಿಡಿದಿಡುವ ಎರಡು ವಿಧಾನಗಳಾದ ಲಿಪಿಬದ್ಧಗೊಳಿಸುವಿಕೆ ಮತ್ತು ಧ್ವನಿಮುದ್ರಣಗೊಳಿಸುವಿಕೆಗಳನ್ನು ಜಾನಪದ ಸಾಹಿತ್ಯಕ್ಕೂ ಅನ್ವಯಿಸಬಹುದು. ಅಂದರೆ ಆಡುಭಾಷೆಯನ್ನು ಹಿಡಿದಿಡುವಂತೆ ಜಾನಪದ ಸಾಹಿತ್ಯವನ್ನು ಹಿಡಿದಿಡುವುದೇ ಸೂಕ್ತಕ್ರಮವಾಗಿದೆ.

ಭಾಷಾವಿಜ್ಞಾನಿಗಳು ಭಾಷೆಯನ್ನು ಹಿಡಿದಿಡಲು ಧ್ವನ್ಯಾಲೇಖವನ್ನು (Phonetic transcription) ಬಳಸುತ್ತಾರೆ. ಧ್ವನ್ಯಾಲೇಖವು ಸ್ಥೂಲಧ್ವನ್ಯಾಲೇಖ (Broad phonetic transcription), ಸೂಕ್ಷ್ಮಧ್ವನ್ಯಾಲೇಖ (narrow phonetic transcription) ಎಂದು ಎರಡು ತೆರನಾಗಿದೆ. ಇವುಗಳಲ್ಲಿ ಒಂದು, ಭಾಷೆಯ ಸ್ಥೂಲರೂಪವನ್ನು ಹಿಡಿದರೆ ಇನ್ನೊಂದು ಸ್ಥೂಲದೊಂದಿಗೆ ಸೂಕ್ಷ್ಮರೂಪವನ್ನು ಹಿಡಿಯುತ್ತದೆ. ಇವುಗಳಲ್ಲಿ ಈ ಸೂಕ್ಷ್ಮ ಧ್ವನ್ಯಾಲೇಖದಿಂದ ಜಾನಪದ ಗದ್ಯವನ್ನು ಹಿಡಿಯಬಹುದು. ಆದರೆ ಪದ್ಯಕ್ಕೆ ಇನ್ನೂ ಹೆಚ್ಚಿನದಾಗಿ ಸ್ವರಪ್ರಸ್ತಾರದ ನೆರವು ಬೇಕಾಗುತ್ತದೆ. ಆದುದರಿಂದ ಇಲ್ಲಿ ಸ್ವರಪ್ರಸ್ತಾರವೆಂಬ ಹೆಚ್ಚಿನ ಸಂಕೇತಗಳನ್ನೂ ಬಳಸಬೇಕಾಗುತ್ತದೆ. ಕನ್ನಡ ಸೂಕ್ಷ್ಮಧ್ವನ್ಯಾಲೇಖವನ್ನು ನಾವು ಇನ್ನೂ ರೂಪಿಸಿಕೊಳ್ಳಬೇಕಾಗಿದೆ ಎಂಬುದನ್ನು ಬಿಟ್ಟರೂ ಈ ಸೂಕ್ಷ್ಮ ಧ್ವನ್ಯಾಲೇಖ ಮತ್ತು ಸ್ವರಪ್ರಸ್ತಾರಗಳ ಬಳಕೆ ತುಂಬ ಯಾಂತ್ರಿಕವಾಗಬಹುದೇನೋ ವಿಚಾರಿಸಬೇಕು.

ಹೀಗೆ ಸೂಕ್ಷ್ಮವನ್ನು ಹಿಡಿಯಬೇಕೆಂದು ಎಷ್ಟು ಪ್ರಯತ್ನಿಸಿದರೂ ಅತಿಸೂಕ್ಷ್ಮಗಳು ಉಳಿದುಕೊಂಡು ಬಿಡುತ್ತವೆ. ಕಾರಣ ಜಾನಪದಸಾಹಿತ್ಯದ ನಿಜವಾದ ಸಂಪಾದನಾಕಾರ್ಯವೆಂದರೆ (ಕೆಲಮಟ್ಟಿಗೆ ಇದೂ ಅಸಮರ್ಪಕ) ಧ್ವನಿಮುದ್ರಣಕಾರ್ಯವೇ ಆಗಿದೆ. ಇದರಿಂದ ಗದ್ಯಪಾಠವನ್ನು Supra segmental feature ಸಹಿತ, ಪದ್ಯಪಾಠವನ್ನು Supra segmental feature ಮತ್ತು ಧಾಟಿಸಹಿತ ರಕ್ಷಿಸಿಕೊಂಡತಾಗುತ್ತದೆ. ಒಟ್ಟಿನಲ್ಲಿ,

೧. ಕಾಲ, ದೇಶ, ಸಮಾಜ, ಸಂದರ್ಭ, ವ್ಯಕ್ತಿ–ಎಂಬ ಪಂಚಸೂತ್ರಮಾನಿತ ಮತ್ತು ಅರ್ಥವತ್ತಾದ ಪಾಠವನ್ನು ಸ್ವೀಕರಿಸಬೇಕು.

೨. ಈ ಸ್ವೀಕರಣವನ್ನು ಸರ್ವಸಮರ್ಪಕವಾದ ಮಾಧ್ಯಮದ (ಈಗಿನ ಮಟ್ಟಿಗೆ ಧ್ವನಿ ಮುದ್ರಿಕೆಯ) ಮೂಲಕ ಪ್ರಕಟಿಸಬೇಕು.


ಹೀಗೊಮ್ಮೆ ಸಂಪಾದಿಸಿದರೆ ಜಾನಪದಸಾಹಿತ್ಯ ಸಂಪಾದನೆಯ ಕಾರ್ಯ ಮುಗಿದೇಬಿಟ್ಟಿತೆನ್ನುವಂತಿಲ್ಲ. ಶಿಷ್ಟ ಸಾಹಿತ್ಯ ಅರ್ಥದೃಷ್ಟಿಯಿಂದ "ಇದು ನಿಚ್ಚಂ ಪೊಸತು" ಆಗಿದ್ದರೆ ಜಾನಪದ ಸಾಹಿತ್ಯ ಅರ್ಥ ಮತ್ತು ರೂಪವೆಂಬ ಉಭಯದೃಷ್ಟಿಯಿಂದಲೂ "ಇದು ನಿಚ್ಚಂ ಪೊಸತು" ಆಗುತ್ತಲಿರುತ್ತದೆ. ಕಾರಣ ಕೆಲವು ಮೈಲುಗಳ ಅಂತರದಲ್ಲಿಯೇ ಕೆಲವು ವರ್ಷಗಳ ಅಂತರದಲ್ಲಿಯೇ ಈ ಸಂಪಾದನಕಾರ್ಯ ಮತ್ತೆ ಮತ್ತೆ ನಡೆಯಬೇಕಾಗುತ್ತದೆ. ಇದಲ್ಲದೆ ಜಾನಪದ ಸಾಹಿತ್ಯಸಂಪಾದನಕಾರ್ಯವನ್ನು ಆಯಾ ಪ್ರದೇಶದ ಜನಪದವ್ಯಾಸಂಗಿಗಳಿಗೆ ಬಿಟ್ಟುಕೊಡದೆ ಒಂದೇ ಪ್ರದೇಶದವರು ಎಲ್ಲ ಪ್ರದೇಶಗಳ ಗುತ್ತಿಗೆ ಹಿಡಿದರೆ ಅಲ್ಲಲ್ಲಿಯೆ ಎಷ್ಟೋ ಸೂಕ್ಷ್ಮ ಸಲಕುಗಳು ಅವರ ಕಿವಿಗೆ ಕೇಳದೆ ಮನಸ್ಸಿಗೆ ಮುಟ್ಟದೆ ಹೋಗಬಹುದು. ಆದುದರಿಂದ ಜಾನಪದಸಾಹಿತ್ಯ ಸಂಪಾದನೆಯಲ್ಲಿ ಪಾಳೆಯಗಾರಿಕೆ ಅಪಾಯಕಾರಿಯೆಂದೇ ಹೇಳಬೇಕು.

ಕೊನೆಯದಾಗಿ ಪ್ರಕಟನ ವ್ಯವಸ್ಥೆಯ ಬಗೆಗೆ ಕೆಲವು ಮಾತುಗಳು. ಒಬ್ಬ ವ್ಯಕ್ತಿಯಿಂದಲೋ ಅನೇಕ ವ್ಯಕ್ತಿಗಳಿಂದಲೋ ಪಡೆದು ಪರಿಷ್ಕರಿಸಿದ ಜಾನಪದಸಾಹಿತ್ಯವನ್ನು ವರ್ಗೀಕರಣಗೊಳಿಸಿ ಬೇರೆಬೇರೆ ಪುಸ್ತಕಗಳ ಮೂಲಕ ಇಲ್ಲವೆ ಒಂದೇ ಪುಸ್ತಕದಲ್ಲಿ ಉಪಶೀರ್ಷಿಕೆ ಕೊಟ್ಟು ಪ್ರಕಟಿಸಬೇಕು. ಇದನ್ನು ಬಿಟ್ಟು ಕೈಗೆ ಸಿಕ್ಕ ಸಾಹಿತ್ಯವನ್ನು ಕಲಸುಮೇಲೋಗರದಂತೆ ಪ್ರಕಟಿಸಿದರೆ ಅಲ್ಲಿ ಒಂದು ಬಗೆಯ ಅವ್ಯವಸ್ಥೆ ಕಂಡು ಬಂದು ಅಭ್ಯಾಸಿಗೆ ತೊಂದರೆಯುಂಟಾಗುತ್ತದೆ. ಆದುದರಿಂದ ಸ್ಥೂಲ ಮಾರ್ಗದರ್ಶನಕ್ಕಾಗಿ ವಾಗ್ರೂಪದ ಜನಪದವನ್ನು ಹೀಗೆ ಬಿಡಿಸಿಹೇಳಬಹುದು. (ಇಲನೇ ಪುಟ ನೋಡಿ)

ಜಾನಪದಸಾಹಿತ್ಯ ಸಂಪಾದನೆಗೂ ಆದಿಯಲ್ಲಿ ಪ್ರಸ್ತಾವನೆ ಅಂತ್ಯದಲ್ಲಿ ಅನುಬಂಧಗಳು ಅತ್ಯವಶ್ಯ. ಆದರೆ ನಮ್ಮ ಬಹಳಷ್ಟು ಪ್ರಸ್ತಾವನೆಗಳು ಆತ್ಮಪ್ರಶಂಸೆಯ ಅತಿರೇಕಗಳೋ ಇಲ್ಲವೆ ಅನ್ಯಭಾಷೆಯ ಅನುಕರಣಗಳೋ ಎನಿಸಿಬಿಟ್ಟಿವೆ. "ಇವರಿಗೆ ಸ್ವಂತ ಆಲೋಚನೆಗಿಂತ ಇಂಗ್ಲೀಷ ವ್ಯಾಮೋಹ ಹೆಚ್ಚು. ಇಂಗ್ಲೀಷ Balladಗೆ ಮೊದಲು "ಲಾವಣಿ" ಎಂದು ತಪ್ಪಾಗಿ ಅನುವಾದಿಸಿಕೊಂಡು, ಇದನ್ನು ಉಳಿಸಿಕೊಳ್ಳುವುದಕ್ಕೆ ವ್ಯರ್ಥಸಾಹಸ ಮಾಡುತ್ತಿದ್ದಾರೆ."[೧೬] ಇವೇ ಮೊದಲಾದ ಆರೋಪಗಳನ್ನು ಇಲ್ಲಿ ಉದಾಹರಿಸಬಹುದು. ಹೀಗೆಯೇ ಅನೇಕ ಆತ್ಮಸ್ತುತಿ–ಪರನಿಂದೆ, ಅನ್ಯಪ್ರಭಾವಗಳು ಪ್ರಸ್ತಾವನೆಯ ಪುಟಗಳನ್ನು ತುಂಬಿದ್ದು ವಿಷಾದದ ಸಂಗತಿಯಾಗಿದೆ. ಕಾರಣ ಕನ್ನಡ ಜಾನಪದಸಾಹಿತ್ಯದ ಬಗ್ಗೆ ಸ್ವೋಪಜ್ಞ ಸಂಶೋಧನೆ (Original research) ಯನ್ನೊಳಗೊಂಡ ತಾತ್ವಿಕ ಗ್ರಂಥಗಳು ಹುಟ್ಟಿದಷ್ಟೂ ಈ ಭಾಗ ಬೆಲೆ ಪಡೆಯುತ್ತದೆ.

---

೧೬. ಕರ್ನಾಟಕ ಜನಪದ ಕಾವ್ಯಗಳು (ಡಿ. ಲಿಂಗಯ್ಯ), ಪು. ೩೭.



ವಾಗ್ರೂಪದ ಜನಪದ
ಜಾನಪದ ಭಾಷೆ
ಜಾನಪದ ಸಾಹಿತ್ಯ
ಶ್ರವ್ಯ
ದೃಶ್ಯ
ಗದ್ಯ
ಪದ್ಯ
ಹಗಲು
ರಾತ್ರಿ
ಹಿರಿಯ ಪ್ರಕಾರ
ಕಿರಿಯ ಪ್ರಕಾರ
ಗಂ. ಹಾಡು
ಹೆಂ. ಹಾಡು
ಮ. ಹಾಡು
ಸೂತ್ರ
ಛಾಯೆ
ವ್ಯಕ್ತಿ
ಕಥೆ
ಬಯಲಾಟದ ಮಾತು
ಗಾದೆ
ಒಗಟು
ಒಡಪು
ಉಪಜೀವನ
ಉತ್ಸವ
ಉತ್ಸಾಹ
ಮೂಡಲಪಾಯ
ಪಡುವಲಪಾಯ
ಪೌರಾಣಿಕ
ಐತಿಹಾಸಿಕ
ಸಾಮಾಜಿಕ
ಉಪಜೀವನ
ಉತ್ಸವ
ಉತ್ಸಾಹ
ಹಬ್ಬ
ಹುಣ್ಣಿವೆ
ಮಂಗಲ
ಪ್ರಸಂಗ
ದೊಡ್ಡಾಟ
ಸಣ್ಣಾಟ
ಸದರ ಮಾತು
ಸಂಭಾಷಣೆ ಮಾತು
ದುಡಿಮೆ
ವಿರಾಮ
ದುಡಿಮೆ
ವಿರಾಮ
ಯಕ್ಷಗಾನ
ಪ್ರಸಂಗ
ಬಡಗಪಾಯ
ತೆಂಕಪಾಯ
ಬಡಗತಿಟ್ಟು
ತೆಂಕತಿಟ್ಟು

"ಅನುಬಂಧ" ನಿರೂಪಕರ ಪರಿಚಯ ವೈಶಿಷ್ಟ್ಯಗಳನ್ನು, ಸಾಹಿತ್ಯದ ಸಂದರ್ಭ-ಸಂಪ್ರದಾಯಗಳನ್ನು, ಟಿಪ್ಪಣಿ ಪದಕೋಶ ಇತ್ಯಾದಿಗಳನ್ನು ಒಳಗೊಳ್ಳಬೇಕು. ಇಂಥ ಅನುಬಂಧಗಳು ಅಭ್ಯಾಸಿಗೆ ತುಂಬ ಸಹಾಯಕಾರಿಯೆಂದು ಬೇರೆ ಹೇಳಬೇಕಿಲ್ಲ.

ಜಾನಪದಸಾಹಿತ್ಯವು ಸಾಹಿತ್ಯ, ಭಾಷಾಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮೊದಲಾದವುಗಳ ವಸ್ತುವಾಗಿರುವುದರಿಂದ ಸಂಪಾದಕನಿಗೆ ಇವುಗಳ ಆಳವಾದ ಜ್ಞಾನ ಅವಶ್ಯವಿದೆ. ಅಂದರೆ ಶ್ರೇಷ್ಠಭಾಷಾವಿಜ್ಞಾನಿಗಳಾದ ಗ್ರೀಮ್ ಸಹೋದರರೂ ಶ್ರೇಷ್ಠ ಮಾನವಶಾಸ್ತ್ರಜ್ಞ ಜೇಮ್ಸ್ ಜಾರ್ಜ್ ಫ್ರೇಜರ್ ಮೊದಲಾದವರೂ ಜಾನಪದ ಕ್ಷೇತ್ರಕ್ಕೆ ಮೂಲಭೂತ ಕಾಣಿಕೆ ನೀಡಿರುವುದನ್ನು ನೆನೆದರೆ, ಜಾನಪದಸಾಹಿತ್ಯ ಸಂಪಾದನಕ್ಷೇತ್ರವನ್ನು ಸಾಹಿತಿಗಳ ಜೊತೆ ಇಂದು ಭಾಷಾವಿಜ್ಞಾನಿ, ಸಮಾಜಶಾಸ್ತ್ರಜ್ಞ ಮೊದಲಾದವರು ಪ್ರವೇಶಿಸುವುದು ಅವಶ್ಯವಿದೆಯೆನಿಸುತ್ತದೆ. ಈ ಜಿಜ್ಞಾಸುಗಳ ಸಂಯುಕ್ತ ದುಡಿಮೆಯಿಂದ 'ಸಂಪಾದನೆ'ಗಳು ಶಾಸ್ತ್ರಶುದ್ಧವಾಗುವುದರಲ್ಲಿ ಸಂದೇಹವಿಲ್ಲ.

❖❖

ಕನ್ನಡ ನಾಮವಿಜ್ಞಾನ

ಡಾ. ಎಂ. ಎಂ. ಕಲಬುರ್ಗಿ

೧೯೮೯

ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

*

ಮುನ್ನುಡಿ

ಬೆಂಗಳೂರು ವಿಶ್ವವಿದ್ಯಾಲಯವು ೧೯೭೭–೭೮ರಲ್ಲಿ 'ಪ್ರೊ. ಸ.ಸ. ಮಾಳವಾಡ ದತ್ತಿ ಉಪನ್ಯಾಸ' ಮಾಲೆಯನ್ನು ಪ್ರಾರಂಭಿಸಿತು. ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಪ್ರೊ. ಎಸ್. ಎಸ್. ಮಾಳವಾಡರ ಹೆಸರಿನಲ್ಲಿ ಪ್ರತಿ ವರ್ಷವೂ ದತ್ತಿಉಪನ್ಯಾಸವನ್ನು ಏರ್ಪಡಿಸಬೇಕೆಂದು ನಮ್ಮ ವಿಶ್ವವಿದ್ಯಾಲಯದಲ್ಲಿ ದತ್ತಿಯೊಂದನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಸದಾವಕಾಶವನ್ನು ವಿಶ್ವವಿದ್ಯಾಲಯದಕ್ಕೆ ಕಲ್ಪಿಸಿಕೊಟ್ಟಿದ್ದಕ್ಕಾಗಿ ವಿಶ್ವವಿದ್ಯಾಲಯ ಅವರಿಗೆ ಆಭಾರಿಯಾಗಿದೆ.

ಈ ದತ್ತಿ ನೀಡಿರುವವರ ಅಪೇಕ್ಷೆಯಂತೆ ಅಧ್ಯಾತ್ಮ, ಅನುಭಾವ, ಸಾಹಿತ್ಯ ವಿಮರ್ಶೆ, ವಿಚಾರಸಾಹಿತ್ಯ, ಸಂಸ್ಕೃತಿ, ಕಲೆ, ಭಾಷೆ ಇತ್ಯಾದಿ ವಿಷಯಗಳಲ್ಲಿ ಪ್ರತಿವರ್ಷವೂ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನು ಏರ್ಪಡಿಸುವ ವ್ಯವಸ್ಥೆ ಮಾಡಲಾಗಿದೆ. ಅನಂತರ ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಕೂಡ ಪ್ರಸಾರಾಂಗ ಪ್ರಕಟಿಸಿದೆ.

ಪ್ರಸ್ತುತ ದತ್ತಿಉಪನ್ಯಾಸ ಮಾಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಎಂ.ಎಂ. ಕಲಬುರ್ಗಿ ಅವರು ಜನವರಿ ೧೯೮೮ರಲ್ಲಿ ಉಪನ್ಯಾಸ ನೀಡಿದರು. ಆ ಉಪನ್ಯಾಸದ ಪುಸ್ತಕ ರೂಪವೇ ಪ್ರಸ್ತುತ ಕೃತಿ "ಕನ್ನಡ ನಾಮವಿಜ್ಞಾನ." ಕನ್ನಡ ಭಾಷಾಕ್ಷೇತ್ರಕ್ಕೆ ಇದೊಂದು ಮೌಲಿಕವಾದ ಕೊಡುಗೆಯಾಗಿದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತ ವಿದ್ವಾಂಸರಿಗೆ ಇದೊಂದು ಉಪಯುಕ್ತವಾದ ಕೃತಿಯಾಗುವುದರಲ್ಲಿ ಸಂಶಯವಿಲ್ಲ. ವಿಶ್ವವಿದ್ಯಾಲಯದಲ್ಲಿ ಈ ಉಪನ್ಯಾಸವನ್ನು ನೀಡಿ, ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುವು ಮಾಡಿಕೊಟ್ಟ ಪ್ರೊ. ಎಂ. ಎಂ. ಕಲಬುರ್ಗಿ ಅವರಿಗೆ ನನ್ನ ಅಭಿನಂದನೆಗಳು.

–ಡಾ. ಡಿ. ಎಂ. ನಂಜುಂಡಪ್ಪ

ಕುಲಪತಿ

✤✤

*

ಅರಿಕೆ

'ಕನ್ನಡ ನಾಮವಿಜ್ಞಾನ' (Kannada Onomastics) ಹೆಸರಿನ ವಿಶಿಷ್ಟ ಗ್ರಂಥವನ್ನು ವಿದ್ವತ್‌ಲೋಕದ ಮುಂದೆ ಮಂಡಿಸುತ್ತಿದ್ದೇನೆ. ೧೯೮೮ ಜನವರಿ ೨೭, ೨೮ರಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಆಶ್ರಯದಲ್ಲಿ ನೀಡಿದ ದತ್ತಿ ಉಪನ್ಯಾಸಗಳ ಲಿಖಿತರೂಪ, ಈ ಪುಸ್ತಕ.

ನಮ್ಮ ವಿಶ್ವವಿದ್ಯಾಲಯಗಳ ಕನ್ನಡವಿಭಾಗಗಳು ತಮ್ಮ ಅಧ್ಯಯನಕ್ಷೇತ್ರವನ್ನು ನವೀಕರಿಸಿಕೊಳ್ಳುತ್ತ, ವಿಸ್ತರಿಸಿಕೊಳ್ಳುತ್ತ ಬಂದುದು ಈ ಶತಮಾನದ ಒಂದು ಸಾಧನೆಯಾಗಿದೆ. ಇದಕ್ಕೆ ನಿದರ್ಶನವೆಂಬಂತೆ ಗ್ರಂಥಸಂಪಾದನಶಾಸ್ತ್ರ, ಸಂಶೋಧನಶಾಸ್ತ್ರ, ಭಾಷಾಶಾಸ್ತ್ರ ಮತ್ತು ಜನಪದಶಾಸ್ತ್ರಗಳು ಒಂದೊಂದಾಗಿ ಕನ್ನಡದಲ್ಲಿ ಕಣ್ಣುತೆರೆಯುತ್ತ ಬಂದಿವೆ. ಈಗ ಇವುಗಳ ಮಗ್ಗುಲಲ್ಲಿ ತಲೆಯೆತ್ತುತ್ತಲಿರುವ ಇನ್ನೊಂದು ನವೀನಶಾಖೆ ನಾಮವಿಜ್ಞಾನ. ಈ ಹೊಸ ಜ್ಞಾನಶಾಖೆಯನ್ನು ವಿಜ್ಞಾನಶಿಲ್ಪಕ್ಕೆ ಅಳವಡಿಸಲು ಮಾಡಿದ ಪ್ರಯತ್ನವೆನಿಸಿದೆ, ಪ್ರಸ್ತುತ ಪುಸ್ತಕ. ಈ ಕಾರಣದಿಂದಾಗಿ ಇದಕ್ಕೆ "ಕನ್ನಡ ನಾಮವಿಜ್ಞಾನ" (Kannada Onomastics) ಎಂದು ಹೆಸರಿಟ್ಟಿದ್ದೇನೆ.

ಈ ವಿಷಯವನ್ನು ಕುರಿತು ಕನ್ನಡದಲ್ಲಿ ಕೆಲವು ಲೇಖನಗಳು, ಗ್ರಾಮನಾಮವನ್ನು ಕುರಿತು ಒಂದೆರಡು ಗ್ರಂಥಗಳು ಹುಟ್ಟಿಕೊಂಡಿವೆ. ಆದರೆ ಒಟ್ಟು ನಾಮ ಸಮುದಾಯವನ್ನು ಕುರಿತು ಗ್ರಂಥರೂಪದ ಸಮಗ್ರ ವೈಜ್ಞಾನಿಕ ಅಧ್ಯಯನ ಈ ವರೆಗೆ ನಡೆಯಲಿಲ್ಲ. ಈ ಗ್ರಂಥದ ಮೂಲಕ ಅದು ಪ್ರಥಮ ಸಲ ಕೈಗೂಡುತ್ತಿರುವ ವಿಷಯ ನನಗೆ ಸಂತೋಷವನ್ನುಂಟುಮಾಡಿದೆ.

ಭಾಷಿಕ ಸ್ತರದಲ್ಲಿ ಪ್ರಾರಂಭವಾಗಿ, ಚಾರಿತ್ರಿಕ–ಭೌಗೋಲಿಕ ಸ್ತರಗಳನ್ನು ತಬ್ಬಿಕೊಂಡು, ಸಾಂಸ್ಕೃತಿಕ ಸ್ತರದಲ್ಲಿ ಈ ಅಧ್ಯಯನ ವಿರಮಿಸುತ್ತದೆ. ಹೀಗಾಗಿ 'ನಾಮವಿಜ್ಞಾನ' ಅನಿವಾರ್ಯವಾಗಿ ಶಾಸ್ತ್ರ–ಶಾಸ್ತ್ರೇತರವೆಂಬ ಸಂಯುಕ್ತ ಅಭ್ಯಾಸವಾಗಿ ಪರಿಣಮಿಸುತ್ತದೆ. ಈ ದೃಷ್ಟಿಕೋನದಿಂದ ಈ ಕೃತಿಯನ್ನು ನೋಡಬೇಕೆಂದು ಸೂಚಿಸುತ್ತೇನೆ.

"ಪ್ರೊ. ಸ.ಸ.ಮಾಳವಾಡ ದತ್ತಿ" ಆಶ್ರಯದಲ್ಲಿ ಜರುಗಿದ ಉಪನ್ಯಾಸವಿದು. ಪ್ರೊ. ಮಾಳವಾಡ ಅವರ ಬಗ್ಗೆ ನನಗೆ ಅಪಾರಗೌರವ. ಹೀಗಾಗಿ ಈ ಉಪನ್ಯಾಸದ ಮೂಲಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಧನ್ಯತೆ ನನ್ನದಾಗಿದೆ. ಈ ಉಪನ್ಯಾಸಕ್ಕೆ ಆಮಂತ್ರಿಸಿ, ಪ್ರಸ್ತುತ ಪುಸ್ತಕ ಹೊರಬರುವುದಕ್ಕೆ ಕಾರಣರಾದ ಆತ್ಮೀಯ ಮಿತ್ರರೂ ಪ್ರಸಾರಾಂಗದ ನಿರ್ದೇಶಕರೂ ಆಗಿದ್ದ ಡಾ. ಕೆ.ಮರುಳಸಿದ್ದಪ್ಪ

ಅವರಿಗೆ, ಎರಡೂ ದಿನ ಈ ಉಪನ್ಯಾಸಗಳನ್ನು ಆಸಕ್ತಿಯಿಂದ ಆಲಿಸಿದ ಬೆಂಗಳೂರು ವಿಶ್ವವಿದ್ಯಾಲಯದ ವಿದ್ವಾಂಸಮಿತ್ರರಿಗೆ, ವಿದ್ಯಾರ್ಥಿ ಸ್ನೇಹಿತರಿಗೆ ಕೃತಜ್ಞನಾಗಿದ್ದೇನೆ.

ಧಾರವಾಡ — **ಡಾ. ಎಂ.ಎಂ.ಕಲಬುರ್ಗಿ**

❖❖

*
ಪರಿವಿಡಿ

ಅಧ್ಯಯನದ ಇತಿಹಾಸ

ಆಕರ ಸಾಮಗ್ರಿ

ನಾಮನಿಷ್ಪತ್ತಿ

ಗ್ರಾಮ : ಸೃಷ್ಟಿ-ನಿರ್ಮಾಣ

ನಾಮಕರಣ ನಡೆದುಬಂದ ದಾರಿ

ನಾಮ ಸೀಮಾರೇಖೆ : ಕಾಲವಾಚಿ ಸೀಮಾರೇಖೆ, ದೇಶವಾಚಿ ಸೀಮಾರೇಖೆ, ಶ್ರೇಣಿವಾಚಿ ಸೀಮಾರೇಖೆ.

ನಾಮದ ರಾಚನಿಕ ಸ್ವರೂಪ: ನಿರ್ದಿಷ್ಟವಾಚಿನಾಮ, ನಿರ್ದಿಷ್ಟ-ವಾರ್ಗಿಕ ವಾಚಿನಾಮ, ವಿಸ್ತೃತ ನಿರ್ದಿಷ್ಟವಾಚಿನಾಮ, ವಿಸ್ತೃತ ನಿರ್ದಿಷ್ಟ-ಅವಿಸ್ತೃತ ವಾರ್ಗಿಕ ವಾಚಿನಾಮ, ಅವಿಸ್ತೃತ ನಿರ್ದಿಷ್ಟ-ವಿಸ್ತೃತ ವಾರ್ಗಿಕ ವಾಚಿನಾಮ, ವಿಸ್ತೃತ ನಿರ್ದಿಷ್ಟ-ವಿಸ್ತೃತ ವಾರ್ಗಿಕ ವಾಚಿನಾಮ

ನಾಮದ ಅರ್ಥಸ್ವರೂಪ : ನಿರ್ದಿಷ್ಟದ ಅರ್ಥಸ್ವರೂಪ, ವಾರ್ಗಿಕದ ಅರ್ಥಸ್ವರೂಪ.

ನಾಮವ್ಯತ್ಯಾಸ : ರೂಪಾಂತರ, ಭಾಷಾಂತರ, ನಾಮಾಂತರ.

ಸಮಾರೋಪ

❖❖

೧

❖

ನಾಮ

ಪೀಠಿಕೆ

'ನಾಮ' ಇಂದು ವ್ಯಾಕರಣ ಮತ್ತು ಕೋಶಗಳ ವ್ಯಾಪ್ತಿಯನ್ನು ಮೀರಿ, ಒಂದು ಜನಾಂಗದ ಸಾಂಸ್ಕೃತಿಕ ಅಧ್ಯಯನದ ಮಹತ್ವಪೂರ್ಣ ಸಾಧನವಾಗಿ ಪರಿಣಮಿಸಿದೆ. ನಾಮದ ರೂಪವ್ಯತ್ಯಾಸವು ಅರ್ಥವ್ಯತ್ಯಾಸಕ್ಕೆ ದಾರಿಮಾಡಿಕೊಡುತ್ತಿದ್ದು, ಹಾಗಾದ ಪಕ್ಷದಲ್ಲಿ ಸಂವಹನಕ್ಕೆ ತೊಂದರೆಯಾಗುವುದೆಂಬ ಭೀತಿ ಕಾರಣವಾಗಿ, ಅದರ ರೂಪ ಮತ್ತು ಅರ್ಥಗಳಿಗೆ ಚ್ಯುತಿ ಬರದಂತೆ ಜನತೆ ಎಚ್ಚರವಹಿಸುವುದು ಸಹಜವೇ ಆಗಿದೆ. ಆದುದರಿಂದ ನಾಮದ ರೂಪವನ್ನು ವ್ಯಾಕರಣ, ಅರ್ಥವನ್ನು ಕೋಶಗಳು ತಿಳಿಸಿಕೊಟ್ಟು, ನಿತ್ಯಜೀವನದಲ್ಲಿ ಸಂದೇಹ ಹುಟ್ಟದಂತೆ ನೋಡಿಕೊಳ್ಳುತ್ತವೆ. ಆದರೆ ಭಾಷೆಯ `Meaningful unit' ಆಗಿರುವ ಈ ನಾಮಗಳು ಆಯಾ ಸಂಸ್ಕೃತಿಯಲ್ಲಿ ಹೆಪ್ಪುಗಟ್ಟಿರುವ ಘಟಕಗಳೆಂಬ ಆಂಶ ಪ್ರಾಚೀನರಿಗೆ ಅಷ್ಟಾಗಿ ಹೊಳೆದಿರಲಿಲ್ಲ. ಹೊಳೆದಿದ್ದರೂ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಕೋನವಾಗಲೀ, ಆ ಅಧ್ಯಯನಕ್ಕೆ ನಾಮಗಳು ನೆರವಾಗುವವೆಂಬ ವಿಚಾರವಾಗಲೀ ಅವರಿಗೆ ತಿಳಿದಿರಲಿಲ್ಲ. ಆದುದರಿಂದ ಅವರು ನಾಮದ ರೂಪ ಮತ್ತು ಅರ್ಥಸ್ತರಗಳ ಅಧ್ಯಯನದಲ್ಲಿ ನಿರತರಾದರೇ ಹೊರತು, ಅರ್ಥದ ಹಿಂದೆ ಮಡುಗಟ್ಟಿರುವ ಸಂಸ್ಕೃತಿಯ ಅಧ್ಯಯನವೆಂಬ ಮೂರನೆಯ ಸ್ತರದ ಆಳಕ್ಕೆ ಇಳಿಯಲೇ ಎಲ್ಲ.

ಇತ್ತೀಚೆ ಮಾತ್ರ, ಪ್ರಾಚೀನ ಸಂಸ್ಕೃತಿಯನ್ನು ಪುನರ್ರಚಿಸುವಲ್ಲಿ ಶಾಸನ, ಕಾವ್ಯಗಳಂತೆ ನಾಮಗಳೂ ಸಹಾಯಕ ಸಾಮಗ್ರಿಗಳಾಗುತ್ತವೆಯೆಂದು ವಿದ್ವಾಂಸರು ಕಂಡುಕೊಂಡಿದ್ದಾರೆ. ಇವುಗಳ ಮೂಲಕ ಪ್ರಾಚೀನ ಜನಾಂಗದ ಭಾಷಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಜೀವನದ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಲಿದೆ. ಜೊತೆಗೆ ಇದರ ಅಭ್ಯಾಸ ಅನೇಕ ಹೊಸ ಕ್ಷೇತ್ರಗಳನ್ನು ಅನಾವರಣಗೊಳಿಸುತ್ತಲಿದೆ.

ನಾಮ ವೈವಿಧ್ಯಪೂರ್ಣವಾದ, ವಿಸ್ತಾರವಾದ ಪ್ರಪಂಚ. ಅದು ಹಲವು ಮನಸ್ಸು, ಹಲವು ಪ್ರಭಾವಗಳ ಸೃಷ್ಟಿಯಾಗಿದೆ. ಹಳೆಯ ನಾಮ ನಾಮಶೇಷವಾಗುವುದೂ, ಹೊಸ ನಾಮ ಹುಟ್ಟುವುದೂ,


ಕೆಲವೊಮ್ಮೆ ಹಳೆಯ ನಾಮ ಹೊಸ ರೂಪದಲ್ಲಿ ಮುಂದುವರಿಯುವುದೂ, ಸ್ವದೇಶಿನಾಮಗಳ ಜೊತೆ ವಿದೇಶಿನಾಮಗಳು ಸೇರಿಕೊಳ್ಳುವುದೂ, ಇವು ಒಂದರ ಪ್ರಭಾವಕ್ಕೆ ಇನ್ನೊಂದು ಗುರಿಯಾಗುವುದೂ ಇತಿಹಾಸದುದ್ದಕ್ಕೂ ನಡೆದೇ ಇದೆ. ಹೀಗಾಗಿ ನಾಮಸಮೂಹ ಸೃಜನಶೀಲವೂ ಸಂಕೀರ್ಣವೂ ಕುತೂಹಲಕಾರಿಯೂ ಆದ ಪ್ರಪಂಚವಾಗಿ ಬೆಳೆದಿದೆ. ಏನಿಲ್ಲೆಂದರೂ ಬಹಳಷ್ಟು ನಾಮಗಳಿಗೆ ಅನೇಕ ಸಾವಿರ ವರ್ಷಗಳ ಇತಿಹಾಸವಿದೆ. ಈ ಕಾಲವ್ಯಾಪ್ತಿಯಲ್ಲಿ ಅವು ಅವಸ್ಥಾಭೇದ, ಪ್ರಾಂತಭೇದ, ಪರಿಸರಭೇದಗಳ ಅನೇಕ ಅಗ್ನಿದಿವ್ಯಗಳನ್ನು ದಾಟಿ ಬಂದಿವೆ. ಬಾಹ್ಯದಲ್ಲಿ ಕೇವಲ ಶಬ್ದಗಳಾಗಿ ಕಂಡರೂ ಅವುಗಳಲ್ಲಿ 'ಆಕೃತಿ' ದೃಷ್ಟಿಯಿಂದ ಒಂದು ವೈಜ್ಞಾನಿಕ ರಚನೆ ಕಂಡುಬರುತ್ತದೆ; 'ಆಶಯ' ದೃಷ್ಟಿಯಿಂದ ಅವುಗಳಲ್ಲಿ ಸಾಂಸ್ಕೃತಿಕ ದ್ರವ್ಯ ತುಂಬಿಕೊಂಡಿರುತ್ತದೆ. ಪರಸ್ಪರ ಕೊಂಡಿ ಕಳಚಿಕೊಂಡಿದ್ದರೂ ಆಳವಾದ ಅಧ್ಯಯನದಿಂದ ಅವುಗಳ ರಾಚನಿಕ, ಸಾಂಸ್ಕೃತಿಕ ಕೊಂಡಿಯನ್ನು ಮತ್ತೆ ಜೋಡಿಸಬಹುದಾಗಿದೆ.

ಮನುಷ್ಯ ಸಮಾಸಜೀವಿ. ಆತನಿಗೆ ವ್ಯಕ್ತಿ, ವಸ್ತುಗಳ ಸಂಪರ್ಕ ಅನಿವಾರ್ಯ. ಅವುಗಳಲ್ಲಿ ಕೆಲವನ್ನಾದರೂ ಅವನು ಗುರುತಿಸಿಕೊಳ್ಳಲೇಬೇಕು. ಹೀಗೆ ಗುರುತಿಸಿಕೊಳ್ಳಲು ಮುಖ್ಯ ಸಾಧನವಾದುದು ಹೆಸರು. ಹೀಗಾಗಿ ಹೆಸರಿನ ಮುಖ್ಯ ಉದ್ದೇಶ ಸಮೂಹದಿಂದ ವಸ್ತುವನ್ನು, ವ್ಯಕ್ತಿಯನ್ನು ಪ್ರತ್ಯೇಕಿಸಿಕೊಳ್ಳುವುದು, ಗುರುತಿಸಿಕೊಳ್ಳುವುದಾಗಿದೆ. ನಮ್ಮ ಸುತ್ತಲಿನ ಪ್ರಪಂಚದಲ್ಲಿ ಅನೇಕ ವ್ಯಕ್ತಿಗಳಿದ್ದಾರೆ, ವಸ್ತುಗಳಿವೆ. ಅವುಗಳಲ್ಲಿ ಅವಶ್ಯವೆನಿಸಿದವುಗಳು ಮಾತ್ರ ನಮಗೆ ಪ್ರಮುಖವೆನಿಸುತ್ತಿದ್ದು, ಅಂಥವುಗಳಿಗೆ ಮಾತ್ರ ಹೆಸರನ್ನು ಅಂಟಿಸಲಾಗುತ್ತದೆ. ನಾವು ಎಲ್ಲ ನಾಯಿಗಳಿಗೆ ಹೆಸರಿಡುವುದಿಲ್ಲ. ನಮಗೆ ಅವಶ್ಯವಾಗಿರುವ ನಾಯಿಗೆ ಮಾತ್ರ ಹೆಸರಿಡುತ್ತೇವೆ. ಆ ಹೆಸರು ಅದನ್ನು ಮಿಕ್ಕ ನಾಯಿಗಳಿಂದ ಪ್ರತ್ಯೇಕಿಸಿಕೊಳ್ಳುವ ಸಾಧನವಾಗುತ್ತದೆ. ನದಿ-ಬೆಟ್ಟಗಳಲ್ಲಿ ಅವಶ್ಯವಾದವುಗಳಿಗೆ ಮಾತ್ರ ಹೆಸರಿಡಲಾಗಿದೆ, ಮನುಷ್ಯರಲ್ಲಿ ಪ್ರತಿಯೊಬ್ಬ ಒಂದಲ್ಲ ಒಂದುರೀತಿ, ಒಬ್ಬನಿಗಲ್ಲ ಇನ್ನೊಬ್ಬನಿಗೆ ಅವಶ್ಯ-ಮುಖ್ಯವೆನಿಸುವ ಕಾರಣ, ಎಲ್ಲ ವ್ಯಕ್ತಿಗಳಿಗೂ ಹೆಸರುಂಟು. ಹೀಗಾಗಿ ಆವಶ್ಯಕತೆ, ತನ್ಮೂಲಕವಾದ ಪ್ರಾಮುಖ್ಯತೆಗಳು ಹೆಸರಿಸುವುದರ ಹಿಂದೆ ಕೆಲಸ ಮಾಡುವ ಅಂಶಗಳಾಗಿವೆ.

'ನಾಮೋಲ್ಲೇಖಸ್ತು ವ್ಯವಹಾರ ಹೇತು:' ಅಂದರೆ ಹೆಸರಿನ ಉಲ್ಲೇಖ ಎಲ್ಲ ವ್ಯವಹಾರಗಳಿಗೂ ಮೂಲಕಾರಣವೆಂದು ಬ್ರಹಸ್ಪತಿ ಹೇಳುತ್ತಾನೆ. ನಮ್ಮ ವ್ಯಾಕರಣಗಳು ಸಮಾಜದಲ್ಲಿ ವ್ಯವಹರಿಸುವ ಈ ಹೆಸರುಗಳನ್ನು ರೂಢನಾಮ, ಅನ್ವರ್ಥಕನಾಮ, ಅಂಕಿತನಾಮವೆಂದು ವರ್ಗೀಕರಿಸಿ ವಿವೇಚಿಸಿವೆ. ಈ ಆದರ್ಶದಲ್ಲಿ ಕೇಶಿರಾಜ "ರೂಢನಾಮಂ ಪ್ರಸಿದ್ಧತರಮಾಗಿರ್ಪುದು, ಅನ್ವರ್ಥಕನಾಮಂ ಗುಣಕ್ಕ ಮರ್ಥಕ್ಕಮನುರೂಪಮಾರ್ಗಿರ್ಪುದು, ಅಂಕಿತನಾಮಂ ಪೆಸರನಿಡುವನಿಷ್ಟದಿಂದೆಂತಾ ನುಮಿರ್ಪುದು" ಎಂದು ಹೇಳುತ್ತಾನೆ.

ಆದರೆ ನಾಮಗಳನ್ನು ಆಧುನಿಕ ದೃಷ್ಟಿಯಿಂದ ಅಭ್ಯಾಸದ ಸೌಲಭ್ಯಕ್ಕಾಗಿ ಹೀಗೆ ವರ್ಗೀಕರಿಸಬಹುದಾಗಿದೆ : ನಾಮವು ಮೂಲತಃ ವರ್ಗವಾಚಿ, ಘಟಕವಾಚಿ ಎಂದು ಎರಡು ತೆರನಾಗಿದೆ. ಮನುಷ್ಯ, ನದಿ-ಹೀಗೆ ವರ್ಗಗಳನ್ನು ಸೂಚಿಸುವ ಹೆಸರುಗಳೆಲ್ಲ ವರ್ಗವಾಚಿ.ಮನುಷ್ಯ ವರ್ಗದ ದುಷ್ಯಂತ, ನದಿವರ್ಗದ ಗಂಗಾ-ಹೀಗೆ ಘಟಕವನ್ನು ಸೂಚಿಸುವ ಹೆಸರುಗಳೆಲ್ಲ ಘಟಕವಾಚಿ. ವರ್ಗವಾಚಿಯನ್ನು ನಮ್ಮ ವೈಯಾಕರಣರು ರೂಢನಾಮವೆಂದು, ಘಟಕವಾಚಿಯನ್ನು ಮತ್ತೆ

ವರ್ಗೀಕರಿಸಿ ಅನ್ವರ್ಥಕನಾಮ, ಅಂಕಿತನಾಮವೆಂದು ಕರೆದಿದ್ದಾರೆ. ನಾಮವಿಜ್ಞಾನವು ಘಟಕವಾಚಿ (ಅನ್ವರ್ಥಕ, ಅಂಕಿತ) ನಾಮಗಳನ್ನು ಮಾತ್ರ ವಿವೇಚಿಸುವ ಶಾಸ್ತ್ರವಾಗಿದೆ. ಈ ಘಟಕವಾಚಿಯಲ್ಲಿ ಸಮಾವೇಶವಾಗುವ ನಾಮಗಳನ್ನು ಮೊದಲು ವ್ಯಕ್ತಿನಾಮ, ಸ್ಥಳನಾಮವೆಂದೂ ಬಳಿಕ ವ್ಯಕ್ತಿನಾಮವನ್ನು ವ್ಯಕ್ತಿನಾಮ, ಕುಟುಂಬನಾಮ(ಅಡ್ಡ ಹೆಸರು)ವೆಂದೂ ಸ್ಥಳನಾಮಗಳನ್ನು ವಸತಿನಾಮ, ನಿರ್ವಸತಿನಾಮವೆಂದೂ ವರ್ಗೀಕರಿಸಬಹುದಾಗಿದೆ. ಈ ವರೆಗಿನ ವಿವೇಚನೆಯನ್ನು ಹೀಗೆ ರೇಖಿಸಬಹುದು.



ವರ್ಗದಿಂದ ಸಿಡಿದು ಘಟಕವಾಚಿಯಾಗುವಲ್ಲಿ ವಸ್ತುವಿಗೆ, ವ್ಯಕ್ತಿಗೆ ಪ್ರತ್ಯೇಕತೆ ಮತ್ತು ವಿಶಿಷ್ಟತೆಗಳು ಪ್ರಾಪ್ತವಾಗುತ್ತವೆ. ಇದಕ್ಕನುಗುಣವಾಗಿ ಅವುಗಳಿಗೆ ಇರುವ ಹೆಸರುಗಳಲ್ಲಿಯೂ ವಿಶಿಷ್ಟತೆ ತಲೆದೋರುತ್ತದೆ. ಹೀಗೆ ವಿಶಿಷ್ಟತೆಯಿಂದ ಕೂಡಿರುವ ಈ ಘಟಕವಾಚಿಗಳಿಗೆ ಹೆಸರಿಡುವ ಇತಿಹಾಸಕ್ರಮದಲ್ಲಿ "ಅನ್ವರ್ಥಕ ನಾಮಪದ್ಧತಿ"ಯೇ ಮೊದಲು ಹುಟ್ಟಿಕೊಂಡಿರಬೇಕು. ಅದರಲ್ಲಿಯೂ ರೂಪವಾಚಿ ಅನ್ವರ್ಥಕನಾಮಗಳು (ನಿಡುಮೂಗಿ, ಕುಸಿಗೊರಲ) ಮೊದಲು, ಗುಣವಾಚಿ ಅನ್ವರ್ಥಕನಾಮಗಳು (ದಾನಿ, ದಯಾಪರ) ತರುವಾಯ ಬೆಳೆದು ಬಂದಿರಬಹುದು.[೧] ಇಲ್ಲಿಯ ವಸ್ತು ಮತ್ತು ಹೆಸರು, ವ್ಯಕ್ತಿ ಮತ್ತು ಹೆಸರುಗಳಲ್ಲಿ ಬಿಂಬ–ಪ್ರತಿಬಿಂಬ ಭಾವವಿರುತ್ತದೆ. ಉದಾ : ಕಪ್ಪು ಬಣ್ಣದವನು ಕರಿಯಪ್ಪ. ಇಲ್ಲಿ ಹೆಸರಿನ ಅಭ್ಯಾಸವು ವಸ್ತುವಿನ ಇಲ್ಲವೆ ವ್ಯಕ್ತಿಯ ಅಭ್ಯಾಸವೇ ಆಗುತ್ತದೆ.

ನಾಮಕರಣ ಇತಿಹಾಸದ ಎರಡನೆಯ ಘಟ್ಟದಲ್ಲಿ ಬಿಂಬ–ಪ್ರತಿಬಿಂಬ ಭಾವವಿಲ್ಲದ ಅಂಕಿತನಾಮಗಳ ಪದ್ಧತಿ ಅಸ್ತಿತ್ವಕ್ಕೆ ಬಂದಿತು. 'ಅಂಕಿತ' ಎಂಬ ಪದವೇ ಇದರ ಉದ್ದೇಶ ಕೇವಲ ಗುರುತಿಸುವಿಕೆಗೆ ಸಂಬಂಧಿಸಿದೆ ಎಂಬುದನ್ನು ತಿಳಿಸುತ್ತದೆ. ಈ ಅಂಕಿತನಾಮಗಳ ಅಧ್ಯಯನ ಬಹಳೆಂದರೆ ಆ ಹೆಸರು ಇಟ್ಟವರ ಹಾರೈಕೆ, ಅಭಿಲಾಷೆಗಳನ್ನು ತಿಳಿದುಕೊಳ್ಳಲು ಸಹಾಯನೀಡುತ್ತದೆ.

೧. ಕೇಶಿರಾಜನು ಅನ್ವರ್ಥಕನಾಮದ ಪ್ರಭೇದಗಳಾದ ರೂಪವಾಚಿ, ಗುಣವಾಚಿಗಳನ್ನು ಕ್ರಮವಾಗಿ ಅರ್ಥವಾಚಿ, ಗುಣವಾಚಿಯೆಂದು ಕರೆದಿದ್ದಾರೆ.

ಇದೆಲ್ಲವನ್ನು ನೋಡಿದರೆ ಹೆಸರು ಕೇವಲ ಗುಂಪಿನಿಂದ ವಸ್ತು ಇಲ್ಲವೆ ವ್ಯಕ್ತಿಯನ್ನು ಗುರುತಿಸುವ ಸಾಧನವಲ್ಲ; ಆ ವಸ್ತು-ವ್ಯಕ್ತಿಗಳ ರೂಪ ಗುಣಗಳನ್ನೂ, ಹೆಸರಿಟ್ಟ ವ್ಯಕ್ತಿಗಳ ಭಾವನೆ ಉದ್ದೇಶಗಳನ್ನೂ ತಿಳಿಸಿಕೊಟ್ಟು ತನ್ಮೂಲಕ ಸಂಸ್ಕೃತಿಯನ್ನು ತೋರಿಸಿಕೊಡುವ ಗವಾಕ್ಷವೆನಿಸುತ್ತದೆ. ಈ ಮಾತು ಕುಟುಂಬನಾಮಕ್ಕಿಂತ ವ್ಯಕ್ತಿನಾಮ, ಗ್ರಾಮನಾಮಗಳಿಗೆ ಹೆಚ್ಚು ಅನ್ವಯವಾಗುತ್ತದೆ.

"ಯಾವುದೇ ಭಾಷೆಯ ಆರಂಭದ ಘಟಕಗಳು ನಾಮ"ಗಳೇ ಆಗಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಹಾಗಿದ್ದಲ್ಲಿ ಭಾಷೆಯ ಪ್ರಥಮ ಅವಸ್ಥೆಯಲ್ಲಿ ಕೇವಲ ಬಿಡಿನಾಮಗಳೇ ರೂಢಿಯಲ್ಲಿರಬೇಕು. ಇಂಥ ನಾಮಗಳ ಸಂಯೋಜನೆಯಿಂದ ಸಮಾಸನಾಮಗಳು, ಕ್ರಿಯಾಪದಗಳ ಸಹಾಯದಿಂದ ಕ್ರಿಯಾಸಮಾಸನಾಮಗಳು, ತದ್ಧಿತ ಪ್ರತ್ಯಯಗಳ ಸಹಾಯದಿಂದ ತದ್ಧಿತನಾಮಗಳು ಹುಟ್ಟುತ್ತ ಬಂದು, ನಾಮ ವರ್ಗ ಸಂಕೀರ್ಣಗೊಂಡಿದೆ. ಮೇಲಾಗಿ ಒಂದೊಂದು ದೇಶದ ಗ್ರಾಮನಾಮ, ಕುಟುಂಬನಾಮ, ವ್ಯಕ್ತಿನಾಮಗಳು ಪ್ರದೇಶ ವೈಶಿಷ್ಟ್ಯ, ಜಾತಿ ವೈಶಿಷ್ಟ್ಯ, ಸಾಮಾಜಿಕ ವೈಶಿಷ್ಟ್ಯದ ಮುದ್ರೆಯನ್ನು ಹೊತ್ತಿರುತ್ತವೆ. ನೋಡಿದ ತಕ್ಷಣ ಅದು ಯಾವ ದೇಶದ, ಯಾವ ಜಾತಿಯ, ಯಾವ ಸಾಮಾಜಿಕ ಪರಿಸರದ ನಾಮವೆಂದು ತಟ್ಟನೇ ಗೊತ್ತಾಗುತ್ತದೆ. ಇದು ಸಾಮಾನ್ಯವಾಗಿ ಕಂಡುಬರುವುದು ಸಾಂಪ್ರದಾಯಿಕ ಬದ್ಧಸಮಾಜದಲ್ಲಿಯೇ ಹೊರತು ಮುಕ್ತಸಮಾಜದಲ್ಲಲ್ಲ.

ಅಧ್ಯಯನದ ವಿಧಾನ-ಉದ್ದೇಶ :

ಯಾವುದೇ ನಾಮವು ವ್ಯಕ್ತಿ, ಕುಟುಂಬ, ಗ್ರಾಮಗಳಿಗೆ ಅಂಟಿಕೊಂಡು ಕ್ರಮೇಣ ಗಟ್ಟಿಯಾಗಿ ಬೆಸೆದುಕೊಳ್ಳುವುದು ಒಂದು ಹಂತವಾದರೆ, ಆ ತರುವಾಯ ಅದು ಕ್ರಮೇಣ ವ್ಯತ್ಯಾಸವಾಗುತ್ತ ಇಂದಿನ ರೂಪಧರಿಸುವುದು ಎರಡನೆಯ ಹಂತವೆನಿಸುತ್ತದೆ. ನಾಮವಿಜ್ಞಾನಿ ಇಂಥ ವ್ಯತ್ಯಸ್ತರೂಪಗಳನ್ನು ಕಣ್ಣು ಮುಂದೆ ಇಟ್ಟುಕೊಂಡು ಐದು ಘಟ್ಟಗಳಲ್ಲಿ ತನ್ನ ಅಧ್ಯಯನವನ್ನು ಮುನ್ನಡೆಸಬೇಕಾಗುತ್ತದೆ. (೧) ತಾನು ಅಧ್ಯಯನಕ್ಕೆ ಎತ್ತಿಕೊಂಡ ನಾಮದ ನಿಜರೂಪವನ್ನು ಮೊದಲು ಶೋಧಿಸಬೇಕು. ಉದಾ : ಬಾಗಿಲಕೋಟೆಯ ಹಳೆಯ ಹೆಸರು ಬಾಗಡಗೆ ಕೋಟೆ, ಇನ್ನೂ ಹಳೆಯ ಹೆಸರು ಬಾಗಡಗೆ. ಕೋರಿಸೆಟ್ಟಿ ಎಂಬುದರ ಹಳೆಯರೂಪ ಗವಱೆಶೆಟ್ಟಿ ಅಥವಾ ಕವಱೆಶೆಟ್ಟಿ. ಮೈಲಾರ ಎಂಬುದರ ಹಳೆಯರೂಪ ಮೈಲರ. ಹೀಗೆ ನಿಜರೂಪ ಶೋಧಿಸುವ ಕೆಲಸವನ್ನು ಅವನು ಅನೇಕ ಬಗೆಯ ಪ್ರಾಚೀನ ದಾಖಲೆಗಳ, ಜನವದಂತಿಯ ಸಹಾಯದಿಂದ ಇಲ್ಲವೆ ಭಾಷೆಯ ವೈಜ್ಞಾನಿಕ ತಿಳಿವಳಿಕೆಯಿಂದ ಮಾಡಬಹುದು. ಹೀಗೆ ಒಂದು ನಾಮದ ನಿಜರೂಪವನ್ನು ಕಂಡುಹಿಡಿದ ಬಳಿಕ ಅದರ ಅಂಗಗಳ ನಿಜರೂಪವನ್ನು ಸರಿಯಾಗಿ ಬಿಚ್ಚಿಕೊಳ್ಳಬೇಕು. ಏಕೆಂದರೆ ತಪ್ಪಾಗಿ ಬಿಚ್ಚಿಕೊಂಡರೆ ಅದರ ನಿರ್ದಿಷ್ಟ(ಪೂರ್ವಘಟಕ) ಮತ್ತು ವಾರ್ಗಿಕ (ಉತ್ತರ ಘಟಕ) ಎರಡೂ ವಿರೂಪಗೊಂಡು, ಅರ್ಥನಿರ್ಣಯದ ಗುರಿ ತಪ್ಪುತ್ತದೆ. ಉದಾ: ಹಾವೇರಿ ತಾಲೂಕಿನ ಹೊಮ್ಮರಡಿ ಗ್ರಾಮದ ಹಳೆಯ ಹೆಸರು ಒಮ್ಮರಡಿ. ಇದರ ವಾರ್ಗಿಕ ಮರಡಿಯೋ ವಾಡಿಯೋ ಸಂದೇಹ. ಇಲ್ಲೆಲ್ಲ ನಾಮವಿಜ್ಞಾನಿಯು ಭಾಷಾವಿಜ್ಞಾನಿಯಾಗಬೇಕಾಗುತ್ತದೆ. (೨) ಒಂದುವೇಳೆ ನಾಮದ, ಅದರ ಅಂಗಗಳ ನಿಜರೂಪವನ್ನು ಕಂಡುಹಿಡಿದರೂ ಅದರ ನಿಜವಾದ ಅರ್ಥನಿಷ್ಪತ್ತಿ ಕೆಲವೊಮ್ಮೆ ಗೊತ್ತಾಗುವುದಿಲ್ಲ. ಸಾಲೊಟಗಿಯ ನಿಜರೂಪ ಸಾಲೆಯ ಪಾವಿಟ್ಟಿಗೆ. ಇಲ್ಲಿ ಅಂಗಗಳೂ ಗೊತ್ತಾಗಿವೆ; ಆದರೆ ಪಾವಿಟ್ಟಿಗೆ ಎಂಬುದರ ನಿಷ್ಪತ್ತಿ ಗೊತ್ತಾಗಿಲ್ಲ. ನಾಮದ ನಿಷ್ಪತ್ತಿಯನ್ನು ಸಾಮಾನ್ಯವಾಗಿ

ಮೂರು ಬಗೆಯಲ್ಲಿ ಹೇಳಲು ಬರುತ್ತದೆ : ಪಾಮರನಿಷ್ಪತ್ತಿ, ಪಂಡಿತನಿಷ್ಪತ್ತಿ ಮತ್ತು ನಿಜನಿಷ್ಪತ್ತಿ. ಇಲ್ಲಿ ನಿಜನಿಷ್ಪತ್ತಿಯನ್ನು ಹೇಳುವುದರ ಮೂಲಕ ನಾಮವಿಜ್ಞಾನಿಯು ಕೋಶವಿಜ್ಞಾನಿಯಾಗಬೇಕಾಗುತ್ತದೆ. (೩) ಹೀಗೆ ನಿಷ್ಪತ್ತಿಯನ್ನು ಗುರುತಿಸಿ ಅರ್ಥವನ್ನು ಕಂಡುಹಿಡಿದ ಬಳಿಕ, ಅದು ಸ್ಪಂದಿಸುವ ಸಂಸ್ಕೃತಿಯ ಅಭ್ಯಾಸವನ್ನು ಮುಂದುವರಿಸಬೇಕು. ``To know a word is to know the truth" ಎಂಬ ಪ್ರಜ್ಞೆಯಿಂದ ಅರ್ಥದ ಹಿಂದೆ ಅಡಗಿರುವ ಆಶಯದ ಬೆಳಕನ್ನು ಶೋಧಿಸಬೇಕು. ಇಲ್ಲಿ ಭೌಗೋಲಿಕ, ಸಾಮಾಜಿಕ, ಚಾರಿತ್ರಿಕ ಅಂಶಗಳ ಅಂತರ್ಶಿಸ್ತೀಯ ಅಧ್ಯಯನ ಎಡೆಪಡೆಯುತ್ತಿದೆ. ಉದಾ : ಅಗರಖೇಡ, ಇದರ ಮೂಲರೂಪ ಅಗ್ರಹಾರಖೇಡವೆಂದು ತಿಳಿದ ಬಳಿಕ, ಅಗ್ರಹಾರ ಪದದ ಸಾಂಸ್ಕೃತಿಕ ಅರ್ಥವನ್ನೂ ಖೇಡ ಏನನ್ನು ಸೂಚಿಸುತ್ತದೆ ಎಂಬುದನ್ನೂ ಅರಿತುಕೊಳ್ಳಬೇಕು. ಈ ಗ್ರಾಮ ಅಗ್ರಹಾರವಾಗುವುದಕ್ಕೆ ಒದಗಿ ಬಂದ ಕಾರಣವೇನೆಂಬುದನ್ನೂ ಶೋಧಿಸಬೇಕು. (೪) ಒಂದು ನಾಮದ ರೂಪ–ಅರ್ಥ–ಆಶಯಗಳನ್ನು ಹೀಗೆ ಬಿಡಿಯಾಗಿ ಗುರುತಿಸಿದ ಬಳಿಕ, ಇದಕ್ಕೂ ಇಂಥ ಬೇರೆ ನಾಮಗಳಿಗೂ ಇರುವ ಸಾಮಾಜಿಕ, ಭೌಗೋಲಿಕ, ಚಾರಿತ್ರಿಕ, ಜಾನಾಂಗಿಕ ಸಂಬಂಧವನ್ನು ಗುರುತಿಸಿ, ಅವುಗಳ ಒಂದೊಂದು ವಲಯಗಳನ್ನು ಬರೆಯಬೇಕು. "ಕಾರ್ಕಳ ತಾಲ್ಲೂಕಿನಲ್ಲಿ ಕಾರ್, ಬಂಟವಾಳ–ಮಂಗಳೂರು ತಾಲ್ಲೂಕುಗಳಲ್ಲಿ 'ಉಳಿ', 'ಬಂಟವಾಳ ತಾಲ್ಲೂಕಿನಲ್ಲಿ ಮೊಗರು, ಉಡುಪಿ–ಮಂಗಳೂರು ತಾಲ್ಲೂಕುಗಳಲ್ಲಿ 'ಕುದುರು', ಕಾರ್ಕಳ–ಉಡುಪಿ–ಸುಳ್ಯ ತಾಲ್ಲೂಕುಗಳಲ್ಲಿ 'ಕುಶ' ಹಾಗೂ ಜಿಲ್ಲೆಯ ಆಗ್ನೇಯ ಹಾಗೂ ದಕ್ಷಿಣ ಭಾಗಗಳಲ್ಲಿ 'ಅಡ್ಡ' –ಹೀಗೆ ಸ್ಥಳನಾಮ ಘಟಕಗಳ ಆವೃತ್ತಿ ಒಂದು ಭೌಗೋಳಿಕ ಮೇರೆಯೊಳಗೆ ಮಾತ್ರ ವಿಶೇಷವಾಗಿ ಪ್ರವರ್ತಿಸುವುದನ್ನು ಗುರುತಿಸಬೇಕು" ಎಂಬ ಹೇಳಿಕೆ ಇಲ್ಲಿ ಗಮನಿಸತಕ್ಕುದಾಗಿದೆ.[೨] (೫) ಹೀಗೆ ನಾಮವಿಜ್ಞಾನಿ ಈ ಒಂದೊಂದು ವಲಯಗಳ ತೌಲನಿಕ ಅಭ್ಯಾಸ ನಡೆಸುತ್ತ ಕೊನೆಗೆ ಜಗತ್ತಿನ ಏಕ ಸಂಸ್ಕೃತಿಯನ್ನು ಗುರುತಿಸುವುದರತ್ತ ಸಾಗಬೇಕಾಗುತ್ತದೆ. ಅಂದರೆ ಜಗತ್ತಿನಲ್ಲಿ ``Persons are many, man is one" ಎಂಬ ತತ್ವವನ್ನು ಶೋಧಿಸುವುದರತ್ತ ಈ ಅಭ್ಯಾಸ ಮುನ್ನಡೆಯಬೇಕಾಗುತ್ತದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ನಾಮಗಳ ಸಹಾಯದಿಂದ ಆಯಾ ನಾಡಿನ ಸಾಮಾಜಿಕ, ಧಾರ್ಮಿಕ, ಭೌಗೋಳಿಕ ಸ್ವರೂಪವನ್ನು ಅರಿಯಲು ಬರುವಂತೆ, ಅಲ್ಲಿಯ ಸಾಮಾಜಿಕ, ಧಾರ್ಮಿಕ, ಭೌಗೋಳಿಕ ಪರಿಸರಗಳ ಸಹಾಯದಿಂದಲೂ ನಾಮವನ್ನು ಸರಿಯಾಗಿ ಅರ್ಥೈಸಲು ಸಾಧ್ಯವಾಗುತ್ತದೆ. ಹೀಗಾಗಿ ನಾಮಾಧ್ಯಯನವನ್ನು ಪರಿಸರದ ಹಿನ್ನೆಲೆಯಲ್ಲಿ ನಡೆಸುವುದು ಹೆಚ್ಚು ಪ್ರಯೋಜಕವೆನಿಸುತ್ತದೆ.

ಇಷ್ಟು ವಿವರಣೆಯೊಂದಿಗೆ ವ್ಯಕ್ತಿಗೆ ಹತ್ತಿಕೊಂಡು ಬರುವ ಹೆಸರು ಅಂದರೆ ವ್ಯಕ್ತಿನಾಮ (Personal name) ಮತ್ತು ಕುಟುಂಬನಾಮ ಅಡ್ಡಹೆಸರು (Sir name)ಗಳನ್ನು, ವಸತಿಯುಕ್ತ ಸ್ಥಳಗಳಿಗೆ ಸಂಬಂಧಿಸಿದ ಗ್ರಾಮನಾಮ (Village name)ಗಳನ್ನು ಈಗ ವಿವೇಚಿಸಬಹುದು.

❖❖

---

೨. ರಘುಪತಿ ಕೆಮ್ತೂರ–ಹರತಿ ಸಿರಿ, ಪು. ೪೧೬

೨

❖

ವ್ಯಕ್ತಿನಾಮ

ವ್ಯಕ್ತಿಯನ್ನು ಸಮೂಹದಿಂದ ಗುರುತಿಸಿಕೊಡುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು, ಪ್ರಮುಖವಾದುದು. ಇದನ್ನು ಮೀರಿಸುವ ಬೇರೊಂದು ಸಾಧನ ಇನ್ನೂ ಶೋಧವಾಗಿಲ್ಲವೆಂದೇ ಹೇಳಬೇಕು. ಗ್ರಾಮನಾಮ, ಕುಟುಂಬನಾಮ ಮತ್ತು ವ್ಯಕ್ತಿನಾಮ ಸಮುದಾಯದಲ್ಲಿ ವ್ಯಕ್ತಿನಾಮಗಳ ಸಂಖ್ಯೆ ವಿಪುಲವಾದುದು, ವೈವಿಧ್ಯಮಯವಾದುದು. ಇಂದು ವ್ಯಕ್ತಿನಾಮಗಳೆಲ್ಲ ಅಂಕಿತನಾಮಗಳೇ ಆಗಿರುವುದರಿಂದ ಅವುಗಳನ್ನು ಅಂಕಿತಗೊಳಿಸಿದ ಹಿರಿಯರ ವೈಯಕ್ತಿಕ ಬಯಕೆ ಹಾರೈಕೆಗಳೂ ಅವರ ಕೌಟುಂಬಿಕ ಪರಂಪರೆಗಳೂ ಅವುಗಳ ಒಡಲಲ್ಲಿ ಅಡಗಿರುತ್ತವೆ. ಹೀಗಾಗಿ ವ್ಯಕ್ತಿನಾಮದ ಅಧ್ಯಯನವು ಸಂಸ್ಕೃತಿ ಅಧ್ಯಯನದ ಮೌಲಿಕ ಸಾಧನವಾಗಿ ಪರಿಣಮಿಸಿದೆ.

ಅಧ್ಯಯನದ ಇತಿಹಾಸ :

ಪಾಶ್ಚಿಮಾತ್ಯರಲ್ಲಿ ವ್ಯಕ್ತಿನಾಮದ ಅಧ್ಯಯನಕ್ಕೆ ಎರಡು ಶತಮಾನಗಳ ಇತಿಹಾಸವಿದೆ. ನಮ್ಮ ನಾಡಿನಲ್ಲಿ ಮಾತ್ರ ಕೆಲವು ದಶಕಗಳ ಇತಿಹಾಸವೂ ಇಲ್ಲ. "ದ್ರಾವಿಡಭಾಷೆಯ ಹೆಸರುಗಳ ರಚನೆಯ ಅಧ್ಯಯನವು ಸ್ವಾರಸ್ಯವಾಗಿದೆ"[೧] ಎಂದು ಹಲವು ದಶಕಗಳ ಪೂರ್ವದಲ್ಲಿಯೇ ಬಾರ್ನೆಟ್ ಹೇಳಿದ್ದರೂ, ಇದು ನಾಮದ ರಚನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಆಡಿದ ಮಾತಾಗಿದೆ. ಆಮೇಲೆ ಕೆಲವರು ಶಾಸನ, ಕಾವ್ಯಗಳನ್ನು ಸಂಪಾದಿಸುತ್ತ ಪುಲಿಕೇಶಿ, ಪಂಪ, ಆಂಡಯ್ಯ, ಅಲ್ಲಮ ಮೊದಲಾದ ಹೆಸರುಗಳ ವಿವೇಚನೆ ಅಲ್ಲಲ್ಲಿ ಮಾಡಿದ್ದರೂ ಅದು ಕೋಶ – ವ್ಯಾಕರಣದೃಷ್ಟಿಯಿಂದ ಮಾಡಿದ ಪ್ರಯತ್ನವಗಿದೆ. ಈ ದಿಸೆಯಲ್ಲಿ ಫ್ಲೀಟ್, ರೈಸ್, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ಡಿ.ಎಲ್.ನರಸಿಂಹಾಚಾರ್ ಮೊದಲಾದವರು ಮಾಡಿದ ಪ್ರಯತ್ನಗಳು ಗಮನಾರ್ಹವಾಗಿದ್ದರೂ ಇವೆಲ್ಲ ಆ ಹೆಸರುಗಳ ವ್ಯಾಕರಣ, ಕೋಶ ದೃಷ್ಟಿಯ ಅಧ್ಯಯನಗಳೇ ಹೊರತು ಇನ್ನೂ ಆಳಕ್ಕೆ ಇಳಿದ ಸಾಹಸಗಳಲ್ಲ.

---

೧. EP. Ind.xiii. ಪುಟ 14

ಸ್ವಲ್ಪ ಹೆಚ್ಚು-ಕಡಿಮೆ ಇದೇ ಮಾದರಿಯಲ್ಲಿ ಹುಟ್ಟಿದ ಡಾ.ಎಂ. ಚಿದಾನಂದಮೂರ್ತಿ ಅವರ 'ಅಮ್ಮ, ಅಬ್ಬೆ, ಅಲ್ಲಮ, ಬಾದುಬ್ಬೆ', 'ತಮ್ಮ ಕೊನೆಯಲ್ಲಿರುವ ಹೆಸರುಗಳು', 'ಆದಯ್ಯ ಹೆಸರಿನ ನಿಷ್ಪತ್ತಿ ಮತ್ತು ಅದರಿಂದ ಹೊರಡುವ ಕೆಲವು ಧ್ವನಿಗಳು' ಎಂಬ ಬಿಡಿ ಲೇಖನಗಳೂ[೨] ನನ್ನ 'ಕಪ್ಪೆ ಅರಭಟ್ಟನ್', 'ಉಳಿಯು (ಹುಳಿಯ)ಮೇಶ್ವರ ಚಿಕ್ಕಯ್ಯನ ಶಾಸನ', 'ಅಂ+ಗಜೇಶ್ವರ ಮಸಣಯ್ಯ', 'ಸ್ತ್ರೀ ನಾಮಗಳ ಕೊನೆಯಲ್ಲಿ ಬರುವ - ಬಾಯಿ', 'ದೇವೂರ ದಾಸಿಮಯ್ಯ', 'ಪಾಂಡುರಂಗ ವಿಠ್ಠಲ-ಪುರಂದರ ವಿಠ್ಠಲ' ಶೀರ್ಷಿಕೆಯ ಲೇಖನಗಳೂ[೩] ಈ ವಿಷಯದ ಬಗ್ಗೆ ಕೆಲವು ಒಳನೋಟಗಳನ್ನು ಒದಗಿಸುತ್ತವೆ. ೧೯೫೫ರಲ್ಲಿ ರಾಚಣ್ಣ ರುದ್ರಪ್ಪ ಕುಬಸದ (ಹುಬ್ಬಳ್ಳಿ) ಅವರು ಬರೆದ 'ನಮ್ಮ ನಿಮ್ಮ ಹೆಸರುಗಳು' ಎಂಬ ಪುಸ್ತಕದಲ್ಲಿ ಹೆಸರುಗಳನ್ನು ಒಂದೆಡೆಗೆ ಸಂಗ್ರಹಿಸಿ ಮಾಡಿದ ಅಭ್ಯಾಸವಿದ್ದರೂ ಇವರ ದೃಷ್ಟಿ ಅವುಗಳ ಸ್ವಾರಸ್ಯವನ್ನು ವಿವರಿಸುವುದೇ ಹೊರತು, ಸಂಸ್ಕೃತಿಯನ್ನು ಪ್ರಕಟಿಸುವುದಲ್ಲ. ಹೀಗಾಗಿ ವ್ಯಕ್ತಿನಾಮವನ್ನು ಸಂಸ್ಕೃತಿ ದೃಷ್ಟಿಯಿಂದ ನೋಡುವ ಅಧ್ಯಯನ ತೀರ ಇತ್ತೀಚಿನದು. ಬಹುಶಃ ಈ ದಿಸೆಯ ಮುಖ್ಯ ಪ್ರಯತ್ನವೆಂಬ ಕೀರ್ತಿ ಡಾ. ಎಂ.ಚಿದಾನಂದಮೂರ್ತಿ ಅವರ 'ಕರ್ನಾಟಕದ ವ್ಯಕ್ತಿನಾಮಗಳು' ಹೆಸರಿನ ವಿಸ್ತಾರವಾದ ಲೇಖನಕ್ಕೆ ಸಲ್ಲುತ್ತದೆ.[೪] ಆಮೇಲೆ ಯಾರೂ ಮತ್ತೆ ಇಂಥ ಅಧ್ಯಯನಕ್ಕೆ ಕೈಹಾಕಿದಂತಿಲ್ಲ. ಹೀಗಾಗಿ ವ್ಯಕ್ತಿನಾಮದ ಬಗ್ಗೆ ಕನ್ನಡದಲ್ಲಿ ಆಧುನಿಕ ದೃಷ್ಟಿಯ ವ್ಯಾಪಕ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು.

ಆಕರ ಸಾಮಗ್ರಿ :

ವ್ಯಕ್ತಿನಾಮದ ಅಧ್ಯಯನಕ್ಕೆ ಕನ್ನಡದಲ್ಲಿ ಆಕರಸಾಮಗ್ರಿ ಅನೇಕ ಬಗೆಯಾಗಿದೆ. ನಮ್ಮ ನಾಡಿನ ಹಿಂದೂ ಜನತೆಯ ಹೆಸರುಗಳು ಆರ್ಯ ಮತ್ತು ದ್ರಾವಿಡ ಭಾಷೆಗಳಿಗೆ ಸಂಬಂಧಿಸಿವೆ. ಈ ಹೆಸರುಗಳನ್ನು ಒದಗಿಸುವ ಪ್ರಾಚೀನ ಆಕರಗಳೆಂದರೆ ಕಾವ್ಯ, ಪುರಾಣ ಮತ್ತು ಶಾಸನಗಳು. ಇವುಗಳಲ್ಲಿ ಆರ್ಯಕೃತಿಗಳ ಪ್ರಭಾವದಲ್ಲಿ ಹುಟ್ಟಿದ ನಮ್ಮ ಕಾವ್ಯಗಳು ಪ್ರಧಾನವಾಗಿ ಸಂಸ್ಕೃತ ಹೆಸರುಗಳನ್ನು ಒದಗಿಸುತ್ತಿದೆ. ವಚನಸಾಹಿತ್ಯ, ವೀರಶೈವ ಪುರಾಣ-ಚರಿತ್ರೆಗಳು ದ್ರಾವಿಡ ಹೆಸರುಗಳನ್ನು ಕೆಲಮಟ್ಟಿಗೆ ಪೂರೈಸುತ್ತವೆ. ಶಾಸನಗಳು ಆರ್ಯರಾದ ಬ್ರಾಹ್ಮಣರಿಗೆ ನೀಡಿದ ದಾನ ಮತ್ತು ಬ್ರಾಹ್ಮಣರ ಪ್ರಭಾವದಲ್ಲಿ ಬೆಳೆದ ರಾಜರ ದಾಖಲೆಗಳಾಗಿರುವ ಕಾರಣ ಮುಖ್ಯವಾಗಿ ಸಂಸ್ಕೃತ ಹೆಸರುಗಳನ್ನು ಒದಗಿಸುತ್ತಿದ್ದರೂ ಪ್ರಾಚೀನ ಕಾಲದ ಸಣ್ಣ ದೊಡ್ಡ ಅಧಿಕಾರಿಗಳು ಹೋರಾಡಿ ಸತ್ತ ಯೋಧರು ಹಳ್ಳಿಗಳಿಂದಲೇ ಬಂದಿರುವುದರಿಂದ ದ್ರಾವಿಡ ಹೆಸರುಗಳು ಅಲ್ಲಿ ವಿಪುಲವಾಗಿವೆ. ಹೀಗಾಗಿ ಪ್ರಾಚೀನ ಕರ್ನಟಕದ ಹೆಸರುಗಳನ್ನು ಅಭ್ಯಸಿಸುವಲ್ಲಿ ಕಾಲ್ಪನಿಕ ಹೆಸರುಗಳನ್ನು ಹೊಂದಿರುವ ಕಾವ್ಯಗಳಿಗಿಂತ ವಾಸ್ತವ ವ್ಯಕ್ತಿನಾಮಗಳನ್ನೇ ದಾಖಲಿಸಿಕೊಂಡಿರುವ ಶಾಸನಗಳು ಹೆಚ್ಚು ಪ್ರಾಮಾಣಿಕವೂ ವ್ಯಾಪಕವೂ ಆದ ಗಣಿಗಳೆನಿಸಿವೆ.

---

೨. ವಾಗರ್ಥ-ಪುಟ ೧೮೭, ೨೦೨, ೨೪೪

೩. ಕರ್ನಾಟಕ ಭಾರತಿ ೪-೩, ೧-೨, ೬-೨, ಸಾಧನೆ ೯-೨
ಅಂಕಣ ಜುಲೈ ೧೯೮೧, ಪ್ರಬುದ್ಧ ಕರ್ನಾಟಕ ೬೬-೪

೪. ಎಂ.ಚಿದಾನಂದಮೂರ್ತಿ-ವಾಗರ್ಥ, ಪುಟ ೪೪

ನಮ್ಮದು ಪುರುಷಪ್ರಧಾನ ಸಮಾಜವಾಗಿರುವುದರಿಂದ ಪ್ರಾಚೀನ ಯಾವುದೇ ರೂಪದ ಬರವಣಿಗೆಯಲ್ಲಿ ಸಂಖ್ಯಾದೃಷ್ಟಿಯಿಂದ ಸ್ತ್ರೀಯರ ಹೆಸರು ಕಡಿಮೆ, ಪುರುಷರ ಹೆಸರು ಹೆಚ್ಚು ಸಿಗುತ್ತವೆ.

ಆಧುನಿಕ ಕಾಲಕ್ಕೆ ಬಂದರೆ ಹೆಸರುಗಳ ಅಧ್ಯಯನಕ್ಕೆ ಶಾಲಾ ರಜಿಸ್ಟರ್‌ಗಳು, ರೆವಿನ್ಯೂ ದಾಖಲೆಗಳು, ಇವುಗಳಿಗಿಂತ ಮತದಾರರ ಯಾದಿಗಳು ದೊಡ್ಡ ನೆರವನ್ನು ನೀಡುತ್ತವೆ. ಇವೆಲ್ಲವುಗಳ ಬಲದಿಂದ ನಾಮಾಧ್ಯಯನಕ್ಕೆ ದಾರಿ ಸುಗಮವಾಗುತ್ತದೆ.

ನಾಮನಿಷ್ಪತ್ತಿ :

ಯಾವುದೇ ವ್ಯಕ್ತಿನಾಮ ಮೂಲರೂಪವನ್ನು ಉಸಿಳಿಕೊಂಡಿರುತ್ತದೆ, ಇಲ್ಲವೆ ಸವಕಳಿ ಹೊಂದಿರುತ್ತದೆ, ಇಲ್ಲವೆ ವಿಕಲಗೊಂಡಿರುತ್ತದೆ. ಇವುಗಳಲ್ಲಿ ಮೂಲರೂಪದಲ್ಲಿಯೇ ಸಿಗುವ ನಾಮಗಳ ಅರ್ಥನಿಷ್ಪತ್ತಿ ಹೇಳುವುದು ಸುಲಭ. ಸವೆದ, ವಿಕಲಗೊಂಡ ನಾಮಗಳ ನಿಷ್ಪತ್ತಿ ಹೇಳುವುದು ಕಠಿಣ. ಸವಕಳಿಕ್ರಿಯೆ ಗ್ರಾಮನಾಮದಲ್ಲಿ ಹೆಚ್ಚು, ಕುಟುಂಬನಾಮದಲ್ಲಿ ಕಡಿಮೆ, ವ್ಯಕ್ತಿನಾಮದಲ್ಲಿ ಇನ್ನೂ ಕಡಿಮೆ. ಏಕೆಂದರೆ ಗ್ರಾಮನಾಮ ಸಾರ್ವಜನಿಕ ಆಸ್ತಿಯಾಗಿರುವುದರಿಂದ ಅದರ ಬಗೆಗೆ ಕಾಳಜಿ ಕಡಿಮೆ. ಕುಟುಂಬನಾಮ ತಮ್ಮ ಕುಟುಂಬದ ಆಸ್ತಿಯಾಗಿರುವುದರಿಂದ ಅದರ ಬಗ್ಗೆ ಕಾಳಜಿ ಹೆಚ್ಚು. ವ್ಯಕ್ತಿನಾಮ ನೇರವಾಗಿ ಒಬ್ಬನ ಆಸ್ತಿಯಾಗಿರುವುದರಿಂದ ಅದರ ರೂಪಭದ್ರತೆಯ ಬಗ್ಗೆ ಅವನು ಯಾವಾಗಲೂ ಎಚ್ಚರವಹಿಸುತ್ತಾನೆ. ಅದು ಸವಕಳಿಯಾಗಲು ಆತ ಬಿಡುವುದಿಲ್ಲ. ಹೀಗಾಗಿ ವ್ಯಕ್ತಿನಾಮದ ನಿಷ್ಪತ್ತಿ ಹೇಳುವುದು ಮಿಕ್ಕ ನಾಮಗಳಿಗಿಂತ ಸುಲಭ.

ವ್ಯಕ್ತಿನಾಮಗಳ ವಿಕಲಕ್ರಿಯೆ ಬಾಲ್ಯಕಾಲದಲ್ಲಿ, ಸ್ನೇಹಿತರ ವಲಯದಲ್ಲಿ ಮಾತ್ರ ಸಾಧ್ಯ (ಕಲ್ಲಪ್ಪ>ಕಲ್ಯಾ, ಶಕುಂತಲಾ>ಶೇಕಿ). ಹರಿಜನ ಮತ್ತು ಕೆಳವರ್ಗದ ವ್ಯಕ್ತಿಗಳ, ಕೆಲವೊಮ್ಮೆ ಬ್ರಾಹ್ಮಣವರ್ಗದ ಸ್ತ್ರೀಪುರುಷರ ಹೆಸರುಗಳಲ್ಲಿ ಇಂಥ ವಿಕಲತೆ (ಸಿದ್ದ್ಯಾ, ಚಂಪಿ) ಕಂಡುಬರುತ್ತದೆ. ಹೀಗಿದ್ದೂ ಬಹಳಷ್ಟು ಸಲ ಈ ವಿಕಲತೆ ನಾಮದ ಕಾಂಡಕ್ಕೆ ಧಕ್ಕೆಮಾಡಿರುವುದಿಲ್ಲವಾದುದರಿಂದ ಇಲ್ಲಿಯೂ ನಿಷ್ಪತ್ತಿ ಹೇಳುವುದು ಸುಲಭ; ಮೇಲಾಗಿ ಹಳೆಯ ಶೈಲಿಯ ವ್ಯಕ್ತಿನಾಮಗಳನ್ನು ಬಿಟ್ಟು, ಹೊಸ ಶೈಲಿಯ ನಾಮಗಳನ್ನು ಇಡುತ್ತ ಬರುವುದರಿಂದ ಬಹಳಷ್ಟು ಸವಕಳಿಯಾಗದ ಅವುಗಳ ಅರ್ಥ ಹೇಳುವುದು ನಮಗೆ ಕಷ್ಟವೆನಿಸುವುದಿಲ್ಲ. ಆದರೆ ಪ್ರಾಚೀನತೆ (ಪುಲಿಕೇಶಿ), ಪ್ರಾದೇಶಿಕತೆ (ಓಬವ್ವ), ಸವಕಳಿ–ವಿಕಲತೆ (ತಿಮ್ಮ) ಕಾರಣವಾಗಿ ನಾಮದ ರೂಪ ಹೆಚ್ಚು ಬದಲಾಗಿದ್ದರೆ ನಿಷ್ಪತ್ತಿ ಹೇಳುವುದು ಅಲ್ಲಿಯೂ ತೊಂದರೆಯೆನಿಸುತ್ತದೆ.

ಒಟ್ಟಿನಲ್ಲಿ ವ್ಯಕ್ತಿನಾಮ ನಿಷ್ಪತ್ತಿ ಹೇಳುವುದು ಅಷ್ಟೇನು ಕಠಿಣವಲ್ಲದಿದ್ದರೂ ಇಲ್ಲಿಯೂ ನಿಜನಿಷ್ಪತ್ತಿಯ ಜೊತೆ ಪಂಡಿತನಿಷ್ಪತ್ತಿ, ಪಾಮರನಿಷ್ಪತ್ತಿಗಳಿಗೆ ಅವಕಾಶವುಂಟು. ಉದಾ : ಮೆದೆಕೆರೆನಾಯಕ>ಮದಕರಿನಾಯಕ–ಇದು ಪಂಡಿತನಿಷ್ಪತ್ತಿ, ಮೈಲಾರದೇವರು ಮೈಲಿಗೆ ಬಟ್ಟೆಯಲ್ಲಿ ಹುಟ್ಟಿದವನು–ಇದು ಪಾಮರನಿಷ್ಪತ್ತಿ. ಇವೆರಡೂ ನಿಷ್ಪತ್ತಿಗಳು ಶಬ್ದಾರ್ಥ ರೂಪದಲ್ಲಿರಬಹುದು. ಇಲ್ಲವೆ ಕಥಾವಿವರಣೆ ರೂಪದಲ್ಲಿರಬಹುದು. ಅಸತ್ಯಗಳಾಗಿರುವ ಇವುಗಳನ್ನು ಬಿಟ್ಟು ನಿಜನಿಷ್ಪತ್ತಿಯನ್ನು ನಾಮವಿಜ್ಞಾನಿ ಹೇಳಬೇಕು.

ನಾಮಕರಣ ನಡೆದುಬಂದ ದಾರಿ :

ವ್ಯಕ್ತಿಗೆ ಹೆಸರನ್ನು ಅಂಟಿಸುವ ಕ್ರಿಯೆ ಎಷ್ಟು ಪ್ರಾಚೀನ? ಎಂಬುದನ್ನು ಹೇಳಲು ಸಾಧ್ಯವಾಗದಿದ್ದರೂ ಈ ಕ್ರಿಯೆ ಅಸ್ತಿತ್ವಕ್ಕೆ ಬಂದುದರ ಆವಶ್ಯಕತೆ, ಬೆಳವಣಿಗೆ ಹೊಂದಿದ ಘಟ್ಟಗಳನ್ನು ಹೇಳಬಹುದಾಗಿದೆ. ವ್ಯಕ್ತಿಗೆ ಹೆಸರಿಡುವ ಇತಿಹಾಸದಲ್ಲಿ

೧. ಹೆಸರಿಡದ ಕಾಲಾವಧಿ

೨. ದೊಡ್ಡವರಾದ ಮೇಲೆ ಹೆಸರಿಡುವ ಕಾಲಾವಧಿ

೩. ಹುಟ್ಟಿದ ಸಂದರ್ಭದಲ್ಲಿ ಹೆಸರಿಡುವ ಕಾಲಾವಧಿ

ಎಂಬ ಮೂರು ಘಟ್ಟಗಳನ್ನು ಗುರುತಿಸಬಹುದು.

ಭೂಮಿಯ ಮೆಲೆ ಮಾನವಜನಾಂಗ ಅಸ್ತಿತ್ವಕ್ಕೆ ಬಂದ ಮೊದಲ ಘಟ್ಟದಲ್ಲಿ ವ್ಯಕ್ತಿಗಳಿಗೆ ಹೆಸರಿಟ್ಟು ಕರೆಯುವ ಪದ್ಧತಿ ರೂಢಿಯಲ್ಲಿರಲಿಕ್ಕಿಲ್ಲ. ಆಹಾರ-ನಿದ್ರೆ-ಮೈಥುನಗಳಲ್ಲಿ ಮಗ್ನನಾದ ವ್ಯಕ್ತಿಯು ಕುಟುಂಬ ಕಟ್ಟಿಕೊಂಡು ಆಹಾರಸಂಗ್ರಹಕ್ಕಾಗಿ ಸಂಚರಿಸುತ್ತಿದ್ದ ಕಲದಲ್ಲಿ ಅದರ ಗಾತ್ರ ಚಿಕ್ಕದೂ, ಅಲೆಮಾರಿತನದಿಂದಾಗಿ ಚಿಕ್ಕ ಗಾತ್ರವನ್ನು ಮುಂದುವರಿಸಿಕೊಂಡು ಬರುತ್ತಿದ್ದುದೂ ಆಗಿದ್ದುದರಿಂದ, ತಮ್ಮ ಕುಟುಂಬದಲ್ಲಿಯ ವ್ಯಕ್ತಿಗಳನ್ನು ಗುರುತಿಸುವುದು ಅವರಿಗೆ ತೊಂದರೆಯೆನಿಸಿರಲಿಕ್ಕಿಲ್ಲ. ಹೀಗಾಗಿ ಈ 'ಬೇಟೆ ಸಂಸ್ಕೃತಿ' ಸಂದರ್ಭದಲ್ಲಿ ಬಹುಶಃ ವ್ಯಕ್ತಿಗೆ ಹೆಸರಿಡುವುದು ಪ್ರಾರಂಭವಾಗಿರಲಿಕ್ಕಿಲ್ಲ.

ಆಮೇಲೆ ಕೃಷಿಯ ಮೂಲಕ "ಆಹಾರ ಉತ್ಪಾದನೆ"ಯನ್ನು ಕಂಡುಹಿಡಿದ ಎರಡನೆಯ ಘಟ್ಟದಲ್ಲಿ, ಕುಟುಂಬ ಒಂದೆಡೆ ನೆಲೆಯೂರುವುದು ಅನಿವಾರ್ಯವಾಯಿತು. ಆ ನೆಲೆಗೆ ಬೇರೆ ಕುಟುಂಬಗಳೂ ಬಂದು ಸೇರಿ ಕುಟುಂಬ ಬೆಳೆದು ಗ್ರಾಮವಾಗುವಲ್ಲಿ, ವ್ಯಕ್ತಿಗಳನ್ನು ಗುರುತಿಸುವುದು ಕಷ್ಟವಾಗುತ್ತ ಹೋಗಿರಬೇಕು. ಈ ಕಷ್ಟ ಪರಿಹರಕ್ಕಾಗಿಯೇ ವ್ಯಕ್ತಿಗೆ ಹೆಸರಿಟ್ಟು ಕರೆಯುವುದು ಪ್ರಾರಂಭವಾಗಿರಬೇಕು. ಹೀಗಾಗಿ ನಾಮನಿರ್ದೇಶನ ಪದ್ಧತಿ 'ಕೃಷಿಸಂಸ್ಕೃತಿ' ಅಸ್ತಿತ್ವಕ್ಕೆ ಬಂದುದರ ಪರಿಣಾಮವಾಗಿರಬಹುದು. ಈ ಘಟ್ಟದಲ್ಲಿ ಮೊದಮೊದಲು ದೈನಂದಿನ ವ್ಯವಹಾರಕ್ಕೆ ಉಪಯೋಗ ಬೀಳುವ ಪ್ರೌಢರನ್ನೇ ಹೆಸರಿಟ್ಟು ಕರೆಯಲು ಪ್ರಾರಂಭಿಸಿರಬೇಕೇ ಹೊರತು, ಪ್ರಯೋಜನಕ್ಕೆ ಬಾರದ ಬಾಲಕರನ್ನಲ್ಲ, ಶಿಶುಗಳನ್ನೆಲ್ಲ. ಅಂದರೆ ಆ ಕಾಲಘಟ್ಟದಲ್ಲಿ ವ್ಯಕ್ತಿಗಳು ದೊಡ್ಡವರಾದ ಮೇಲೆಯೇ ನಾಮನಿರ್ದೇಶನ ಮಾಡುತ್ತಿರಬಹುದು. ಆ ನಾಮಗಳು ವ್ಯಕ್ತಿಯ ರೂಪ-ಗುಣಗಳಿಗೆ ಅನುಗುಣವಾಗಿದ್ದಿರಬೇಕು. ಅಂದರೆ ಅನ್ವರ್ಥಕನಾಮಗಳಾಗಿರಬೇಕು. ಕಾಲ್ಪನಿಕ ಉದಾಹರಣೆಯನ್ನು ಕೊಡುವುದಾದರೆ ವ್ಯಕ್ತಿ ಆಕಾರದಲ್ಲಿ ದೊಡ್ಡವನಾಗಿದ್ದರೆ ದೊಡ್ಡಪ್ಪ, ಸಣ್ಣವನಾಗಿದ್ದರೆ ಸಣ್ಣಪ್ಪ, ಬಣ್ಣ ಕೆಂಪಾಗಿದ್ದರೆ ಕೆಂಚಪ್ಪ, ಕಪ್ಪು ಇದ್ದರೆ ಕರಿಯಪ್ಪ, ವೀರನಿದ್ದರೆ ಕಲಿಯಪ್ಪ- ಹೀಗೆ ಹೆಸರುಗಳು ಹುಟ್ಟಿಕೊಳ್ಳುತ್ತಿರಬಹುದು. ಇವುಗಳಲ್ಲಿಯೇ ಮೊದಮೊದಲು ರೂಪವನ್ನು ಆಮೇಲೆ ಗುಣವನ್ನು ಗಮನಿಸಿ ಹೆಸರಿಡುವ ಪದ್ಧತಿ ಬೆಳೆದಿರಬೇಕು. ಮಹಾಭಾರತದ ಮತ್ಸ್ಯಗಂಧಿ, ಭೀಮ[೫] ಹೆಸರುಗಳು

೫. ಭೀಮಂ ಭಯಂಕರಂ ಪೆಱ। ತೇ ಮಾತೀ ಕೂಸಿನಂದಮೀತನ ಪೆಸರುಂ ॥
ಭೀಮನೆ ಪೋಗೆನೆ ಮುನಿಜನ। ಮೀ ಮಾಱ್ಕೆಯಿನಾಯ್ತು ಶಿಶುಗೆ ಪೆಸರನ್ವರ್ಥಂ ॥ (ಪಂಪ.ಭಾ.೧-೨೬)
ಭೀಮ ಹುಟ್ಟಿದ ಕೂಡಲೆ ಆಶ್ರಮದ ಋಷಿಗಳು ಕೂಸಿನ ಸ್ಥೂಲಶರೀರವನ್ನು ಕಂಡವರೇ 'ಭೀಮ' ಎಂಬ ಹೆಸರಿಡಲು ಸೂಚಿಸಿದರೆಂದು ಮೇಲಿನ ಪದ್ಯ ತಿಳಿಸುತ್ತದೆ.

ಈ ಬಗೆಯವೆಂದು ತೋರುತ್ತದೆ. ಈ ಕಾಲದಲ್ಲಿ ಹೆಣ್ಣು ಗಂಡು ಭೇದವಿಲ್ಲದೆ ರೂಪ-ಗುಣಗಳನ್ನವಲಂಬಿಸಿ ಎಲ್ಲರಿಗೂ ಏಕಪ್ರಕಾರದ ಹೆಸರಿಡುತ್ತಿರಬಹುದು. ಹೀಗಾಗಿ ಈ ಕಾಲಾವಧಿಯ ವ್ಯಕ್ತಿನಾಮಗಳೆಲ್ಲ ಅನ್ವರ್ಥಕನಾಮಗಳೇ ಆಗಿರಬಹುದು. ಆದುದರಿಂದ ನಾಮದ ಇತಿಹಾಸದಲ್ಲಿ ಅನ್ವರ್ಥಕನಾಮಗಳೇ ಪ್ರಥಮ ಮತ್ತು ಪ್ರಾಚೀನವೆಂದು ತೋರುತ್ತದೆ.

ಮೂರನೆಯ ಘಟ್ಟದಲ್ಲಿ, ಅಂದರೆ ವ್ಯಕ್ತಿಗೆ ಹೆಸರು ಇನ್ನೂ ಅನಿವಾರ್ಯವೆನಿಸಿದಾಗ, ಕೂಸು ಹುಟ್ಟಿದ ಸಂದರ್ಭದಲ್ಲಿ ಹೆಸರಿಡುವುದು ಪ್ರಾರಂಭವಾಗಿರಬೇಕು. ಇದು ಕಡ್ಡಾಯವಾದಾಗ ಸಮಾರಂಭ ನೆರವೇರಿಸುವುದು ಅಸ್ತಿತ್ವಕ್ಕೆ ಬಂದಂತೆ ತೋರುತ್ತದೆ. ಈಗ ಹೆಸರಿನಲ್ಲಿ ಸ್ತ್ರೀವಾಚಿ, ಪುರುಷವಾಚಿಗಳು ತಲೆದೋರಿರುವ ಸಾಧ್ಯತೆಯಿದೆ. ಸತ್ತುಹೋದ ಪಿತೃಗಳ ಹೆಸರನ್ನು, ಕಲ್ಪಿಸಿಕೊಂಡ ದೇವತೆಗಳ ಹೆಸರನ್ನು, ಕೊನೆಗೆ ಹಾರೈಕೆ ರೂಪದ ಭಾವನಾಮಗಳನ್ನು ಈಗ ಇಡುತ್ತ ಬಂದಂತಿದೆ. ಈ ಘಟ್ಟದಲ್ಲಿ ವ್ಯಕ್ತಿಗೂ ಹೆಸರಿಗೂ ಇದ್ದ ಅನ್ವರ್ಥಕ ಸಂಬಂಧ ಕ್ರಮೇಣ ತಪ್ಪಿ ಹೋಯಿತು. ಈಗ ಹೆಸರು ವ್ಯಕ್ತಿಯನ್ನು ಗುರುತಿಸುವ ಒಂದು ಸಾಧನ ಮಾತ್ರವೆನಿಸಿ, ಅನ್ವರ್ಥಕ ನಾಮಪದ್ಧತಿಯ ಸ್ಥಾನದಲ್ಲಿ ಅಂಕಿತ ನಾಮಪದ್ಧತಿ ಅಸ್ತಿತ್ವಕ್ಕೆ ಬಂದಿತು. ವ್ಯಕ್ತಿಗೆ ತಕ್ಕಂತೆ ಅನ್ವರ್ಥಕ ನಾಮವಿಡುವುದರ ಬದಲು, ಅಂಕಿತ ನಾಮಕ್ಕೆ ತಕ್ಕಂತೆ ವ್ಯಕ್ತಿ ರೂಪಗೊಳ್ಳುವ ಅಭಿಲಾಷೆ ಪ್ರಧಾನವಾಯಿತು. ಆದರೆ ಹೀಗೆ ವ್ಯಕ್ತಿ ರೂಪಗೊಳ್ಳುವುದು ಸಾಮಾನ್ಯವಾಗಿ ಅಸಾಧ್ಯವೆನಿಸುವುದರಿಂದ ಈಗ ವ್ಯಕ್ತಿತ್ವ-ನಾಮತ್ವಗಳ ಮಧ್ಯ ಅರ್ಥಸಂಬಂಧ ತಪ್ಪಿ ಹೋಯಿತು. "ಹೆಸರು ಹಾಲಪ್ಪ ಮನೆಯಲ್ಲಿ ಮಜ್ಜಿಗೆ ಇಲ್ಲ" ಎಂಬಂಥ ವಿಪರ್ಯಾಸಗಳು ನಾಮಪ್ರಪಂಚದಲ್ಲಿ ತಲೆದೋರ ತೊಡಗಿದವು. ಇದನ್ನೇ ಗಮನಿಸಿ ಕೇಶಿರಾಜ "ಅಂಕಿತನಾಮಂ ಹೆಸರನ್ನಿಡುವವನಿಷ್ಟದಿನೆಂತಾದೊಡಮಿರ್ಪುದು, ಸಾರ್ಥಕಮಲ್ಲದದು" ಎಂದು ಹೇಳಬೇಕಾಯಿತು.

ನಾಮಕರಣ :

ವ್ಯಕ್ತಿಗೆ ಮಾತ್ರ ಹುಟ್ಟಿದ ಹೊಸದರಲ್ಲಿ ಹೆಸರಿಡುವ ಸಮಾರಂಭವನ್ನು ನೆರವೇರಿಸುತ್ತಾರೆ. ಇದು ಅವನ ಜೀವನದುದ್ದಕ್ಕೂ ಜರುಗುವ ಅನೇಕ ಬಗೆಯ ಸಂಸ್ಕಾರಗಳಲ್ಲಿ ಒಂದು.

ಸ್ಮೃತಿಗಳಲ್ಲಿ ನಾಮಕರಣ ಸಂಸ್ಕಾರದ ಬಗ್ಗೆ ವಿಸ್ತಾರವಾದ ವಿವರವಿದೆ. ಗಂಡು ಹೆಣ್ಣು ಶಿಶುಗಳಿಗೆ ಇಡಬೇಕಾದ ಹೆಸರಿನಲ್ಲಿ ಅಕ್ಷರ ಎಷ್ಟು ಇರಬೇಕು, ಎಷ್ಟು ಇರಬಾರದು-ಎಂಬುದನ್ನು ಅಲ್ಲಿ ಹೇಳಲಾಗಿದೆ. ಬಾಲಕರಿಗೆ ಸಮಸಂಖ್ಯೆ, ಬಾಲಿಕೆಯರಿಗೆ ವಿಷಮಸಂಖ್ಯೆಯ ಅಕ್ಷರಗಳ ಹೆಸರು ಇಡಬೇಕು. ಬ್ರಾಹ್ಮಣರ ಹೆಸರು ಜ್ಞಾನಸೂಚಿ, ಕ್ಷತ್ರಿಯರ ಹೆಸರು ಶೌರ್ಯಸೂಚಿ, ವೈಶ್ಯರ ಹೆಸರು ಸಂಪತ್‌ಸೂಚಿ, ಶೂದ್ರರ ಹೆಸರು ಸೇವಾಸೂಚಿಯಾಗಿರಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಕ್ರಮವಾಗಿ ಶರ್ಮ, ವರ್ಮ, ಗುಪ್ತ, ದಾಸಗಳಿಂದ ಕೊನೆಗೊಳ್ಳುವ ಹೆಸರುಗಳನ್ನು ಇಡಬೇಕು. ಇತ್ಯಾದಿ ವಿವರಗಳು ಅಲ್ಲಿ ಬಂದಿವೆ. ವ್ಯಕ್ತಿಗೆ ದೀಕ್ಷೆ ನೀಡುವ ಸಂದರ್ಭಧಲ್ಲಿ ಅವನು ಬ್ರಾಹ್ಮಣನಾಗಿದ್ದರೆ ಅವನ ಹೆಸರಿನ ಮುಂದೆ 'ಶಿವ' ಶಬ್ದವನ್ನು, ಕ್ಷತ್ರಿಯನಾಗಿದ್ದರೆ 'ಗಣ' ಶಬ್ದವನ್ನು, ವೈಶ್ಯನಾಗಿದ್ದರೆ 'ದೇವ' ಶಬ್ದವನ್ನು, ಶೂದ್ರ ಅಥವಾ ಸ್ತ್ರೀಯಾಗಿದ್ದರೆ 'ಶಕ್ತಿ' ಶಬ್ದವನ್ನು ಜೋಡಿಸಬೇಕೆಂದು ಆಗಮಗಳ ಚರ್ಯಾಪಾದದಲ್ಲಿ ಹೇಳಲಾಗಿದೆ. ಇಂದಿಗೂ ಪಟ್ಟಾಧಿಕಾರ ಸಂದರ್ಭದಲ್ಲಿ ಮಠಾಧೀಶರ ಹೆಸರನ್ನು ಬದಲಿಸಲಾಗುತ್ತದೆ.

ಹೆಸರಿನ ಆಯ್ಕೆ ಗ್ರಾಮೀಣ ಜನತೆಗೆ ಸಮಸ್ಯೆಯಲ್ಲ, ಅಜ್ಜನ ಹೆಸರು ಇಲ್ಲವೆ ಅಜ್ಜಿಯ ಹೆಸರು ಅನಾಯಾಸವಾಗಿ ಮೊಮ್ಮಕ್ಕಳಿಗೆ ಅಂಟಿಕೊಂಡು ಬಿಡುತ್ತದೆ. ಕೆಲವೊಮ್ಮೆ ಹಿರಿಯರ ಹೆಸರಲ್ಲದೆ ಗುರುವಿನ ಇಲ್ಲವೆ ದೇವರ ಹೆಸರನ್ನು ಇಟ್ಟುಬಿಡುತ್ತಾರೆ. ದೇವರ ಮತ್ತು ಗತಿಸಿಹೋದ ಹಿರಿಯ ಕಾಟದಿಂದ ಮುಕ್ತರಾಗಲು, ಅವರ ಕೃಪೆ ಗಳಿಸಿಕೊಳ್ಳಲು ಇಲ್ಲವೆ ನೆನಪು ಉಳಿಸಿಕೊಳ್ಳಲು ಈ ಹೆಸರುಗಳ ಮೊರೆಹೊಗುತ್ತಾರೆ. ಈ ಸಂದರ್ಭದಲ್ಲಿ ಅವಶ್ಯ ಬಿದ್ದರೆ ಸ್ತ್ರೀವಾಚಿನಾಮಗಳನ್ನು ಪುರುಷವಾಚಿಯಗಿ (ಎಲ್ಲಮ್ಮ-ಎಲ್ಲಪ್ಪ), ಪುರುಷವಾಚಿ ನಾಮಗಳನ್ನು ಸ್ತ್ರೀವಾಚಿಯಾಗಿ (ಕೃಷ್ಣ-ಕೃಷ್ಣವ್ವ) ಪರಿವರ್ತಿಸಿಕೊಳ್ಳುತ್ತಾರೆ. ಸಮಾಜದಲ್ಲಿ ಕೇಳಿಬರುವ ಸೀತಪ್ಪ, ರಾಮವ್ವ ಎಂಬ ಹೆಸರುಗಳೂ, ಶಾಸನದಲ್ಲಿ ಕಂಡುಬರುವ ಬಾಹುಬಲಿ ನಾಯಿಕಿತಿ[೬] ಎಂಬ ಹೆಸರೂ ತುಂಬ ಸೂಜಿಗವನ್ನುಂಟು ಮಾಡುತ್ತವೆ. ಕೆಳವರ್ಗದಲ್ಲಿ ಸ್ತ್ರೀದೇವತೆಗಳೇ ವಿಶೇಷ. ಮೇಲುವರ್ಗದಲ್ಲಿ ಪುರುಷ ದೇವತೆಗಳೇ ವಿಶೇಷ. ಹೀಗಾಗಿ ಸ್ತ್ರೀದೇವತೆಯ ಹೆಸರನ್ನು ಪುರುಷವಾಚಿ ಮಾಡಿಕೊಳ್ಳುವುದು ಕೆಳವರ್ಗದಲ್ಲಿ, ಪುರುಷದೇವತೆಯ ಹೆಸರನ್ನು ಸ್ತ್ರೀವಾಚಿ ಮಾಡಿಕೊಳ್ಳುವುದು ಮೇಲುವರ್ಗದಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಮೇಲೆ ಹೇಳಿದಂತೆ ಹೆಸರಿನ ಆಯ್ಕೆ ಗ್ರಾಮೀಣ ಜನತೆಗೆ ಸಮಸ್ಯೆಯೇ ಅಲ್ಲ; ನಾಗರಿಕರು ಮಾತ್ರ ದೊಡ್ಡ ಸಮಸ್ಯೆಯೆಂಬಂತೆ[೭] ನಾಮದ ಆಯ್ಕೆಗಾಗಿ ನಿಘಂಟು, ಸಹಸ್ರನಾಮಾವಳಿ, ಪುರಾಣ, ಕಾವ್ಯಗಳ ಮೊರೆಹೊಗುತ್ತಾರೆ. ಕೆಲವೊಮ್ಮೆ ವಿಶಿಷ್ಟ ಘಟನೆಯ ಹಿನ್ನೆಲೆಯಲ್ಲಿ ಹೆಸರನ್ನು ಹುಟ್ಟಿಸಿಕೊಳ್ಳುತ್ತಾರೆ. ೧೯೪೭ ಅಗಸ್ಟ್ ೧೫ ರಂದು ಹುಟ್ಟಿದವಳಿಗೆ ಸ್ವಾತಂತ್ರ್ಯದೇವಿ ಎಂಬ ಹೆಸರನ್ನಿಟ್ಟ ಉದಾಹರಣೆಯಿದೆ.

ಗ್ರಾಮನಾಮ, ಕುಟುಂಬನಾಮಗಳು ತಲೆಮಾರಿನಿಂದ ತಲೆಮಾರಿಗೆ ತಾವಾಗಿಯೇ ಸಾಗಿಬರುತ್ತವೆ. ವ್ಯಕ್ತಿನಾಮವನ್ನು ಮಾತ್ರ ಸಮಾರಂಭಪೂರ್ವಕ ಇಡಬೇಕಾಗುತ್ತದೆ. ಇಲ್ಲಿಯೂ ವ್ಯಕ್ತಿಯ ಹೆಸರು ಕುಟುಂಬದಲ್ಲಿ ಅನೇಕ ತಲೆಮಾರುಗಳ ವರೆಗೆ ಸಾಗಿಬರಬಹುದಾದರೂ ಬೇಡವಾದಲ್ಲಿ ಅದು ಯಾವುದೇ ತಲೆಮಾರಿಗೆ ನಿಂತುಹೋಗಬಹುದು.

ಬ್ರಾಹ್ಮಣರಲ್ಲಿ ತಂದೆ, ಬ್ರಾಹ್ಮಣೇತರರಲ್ಲಿ ಸೋದರಮಾವ, ಕೆಲವೊಮ್ಮೆ ಮನೆತನದ ಗುರು ಇಲ್ಲವೆ ಪುರೋಹಿತ ಸಮಾರಂಭಪೂರ್ವಕ ಹೆಸರಿಡುವುದು ರೂಢಿಯಲ್ಲಿದೆ. ಗುರುವಾಗಲಿ, ಪುರೋಹಿತನಾಗಲಿ ನಾಮಕರಣ ಸಮಾರಂಭದಲ್ಲಿ ತನ್ನ ಗುರುಪರಂಪರೆಯ ಇಲ್ಲವೆ ತನ್ನ ದೇವತಾಪರಂಪರೆಯ ಹೆಸರಿಡುತ್ತಾನೆ. ಇದರ ಹಿಂದೆ ಆತನಿಗೆ ತನ್ನ ಸಂಸ್ಕೃತಿ ಪ್ರಸಾರಮಾಡುವ ಉದ್ದೇಶವಿರುವುದೆಂದು ಬೇರೆ ಹೇಳಬೇಕಿಲ್ಲ. ಇಂಥವರು ಕಾರಣವಾಗಿಯೇ ಜಾನಪದರಲ್ಲಿ ಅವರ ಸಂಸ್ಕೃತಿಗೆ ಅನ್ಯವಾದ ಹೆಸರುಗಳು ಸೇರಿಕೊಳ್ಳುತ್ತವೆ ಮತ್ತು ಅವು ಮುಂದುವರಿಯುತ್ತವೆ. ನಾಮಕರಣ

---

೬. SII xviii-416 ಬಂಕಾಪುರ (ಕ್ರಿ.ಶ. ೧೪೭೭)

೭. ವೈಜ್ಞಾನಿಕ ಸಬ್ದಸಂತಾನಗಳಿಗೆ ಹೆಸರಿಡುವುದು, ಕೂಸಿಗೆ ಹೆಸರಿಡುವಷ್ಟೇ ಅಥವಾ ಅದಕ್ಕಿಂತ ಹೆಚ್ಚು ತ್ರಾಸದಾಯಕ. ಈ ಹೊಣೆಗಾರಿಕೆಯಿಂದ ಬಹುಸುಲಭವಾಗಿ ಮುಕ್ತನಾದವನೆಂದರೆ ಕೊಂಟಜನ್. ತಾನು ಕಂಡುಹಿಡಿದ ಅದೃಶ್ಯಕಿರಣಗಳನ್ನು ಅವನು 'X'-Ray ಎಂದು ನಾಮಕರಣಮಾಡಿ ನುಸುಳಿಕೊಂಡ. ಪ್ರಾಯಶಃ ಸಂಶೋಧನೆಯ ಚಿಂತನೆಗಿಂತ ಈ ನಾಮಕರಣದ ಚಿಂತೆ ಅವನ ಬೆಂಬತ್ತಿರಬೇಕು. (ಸಾಧನೆ. ೮.೧. ಪು.೬೮)

ಸಂದರ್ಭದಲ್ಲಿ ಮುಖ್ಯನಾಮದ ಜೊತೆ ದೇವರನಾಮ, ಹುಟ್ಟಿದ ನಕ್ಷತ್ರಕ್ಕೆ ಸಂಬಂಧಿಸಿದ 'ಜನ್ಮನಾಮ' ಕೂಡಿಸಿ ಒಟ್ಟು ಐದು ಹೆಸರುಗಳನ್ನು ಇಡುತ್ತಾರೆ. ಇವುಗಳಲ್ಲಿ ಕೊನೆಯ ವರೆಗೆ ಹೆಸರಾಗಿ ಉಳಿಯುವುದು ಮುಖ್ಯನಾಮ ಮಾತ್ರ. ಹೀಗಿದ್ದೂ ಭವಿಷ್ಯ, ಜಾತಕ ಇತ್ಯಾದಿಗಳನ್ನು ನೋಡುವುದರ ಸಲುವಾಗಿ 'ಜನ್ಮನಾಮ' ಶಾಶ್ವತವಾಗಿ ಉಳಿದುಕೊಳ್ಳುತ್ತದೆ.

ಒಮ್ಮೆ ಒಂದು ಹೆಸರು ಒಬ್ಬ ವ್ಯಕ್ತಿಯ ಮೂಲಕ ಒಂದು ಮನೆತನದಲ್ಲಿ ಸೇರಿಕೊಂಡಿತೆಂದರೆ ಅದನ್ನು ಹೊರಹಾಕುವುದು ಕಷ್ಟ; ಕುಟುಂಬದ ನಾಮ ಇನ್ನೂ ಕಷ್ಟ; ಗ್ರಾಮನಾಮ ಮತ್ತೂ ಕಷ್ಟ. ರಾಜಮನೆತನಗಳಲ್ಲಿ ಹೀಗೆ ಮುಂದುವರಿಯುವ ಹೆಸರುಗಳನ್ನು ಜನತೆ ಇಮ್ಮಡಿ ತೈಲಪ, ಮುಮ್ಮಡಿ ತೈಲಪ, ನಾಲ್ಮಡಿ ಕೃಷ್ಣರಾಜ ಎಂಬಂತೆ ಕರೆಯುತ್ತಾರೆ. ಇತಿಹಾಸ ಬರೆಯುವಲ್ಲಿ ಸಂದೇಹ ಉದ್ಭವಿಸಬಾರದೆಂಬ ಕಾರಣದಿಂದ ಹೀಗೆ ಕರೆಯುತ್ತಿದ್ದರೆಂದು ತೋರುವುದರಿಂದ, ಇತಿಹಾಸಯೋಗ್ಯ ವ್ಯಕ್ತಿಗಳಿಗೆ ಈ ಪದ್ಧತಿ ಸೀಮಿತವಾಗಿದೆ. ಪುರುಷರಂತೆ ಸ್ತ್ರೀಯರಲ್ಲಿಯೂ ಇತಿಹಾಸಯೋಗ್ಯ ವ್ಯಕ್ತಿಗಳು ಕೆಲವು ಮನೆತನಗಳಲ್ಲಿ ಆಗಿ ಹೋದುದುಂಟು. ಉದಾ: ರೇವಕನಿಮ್ಮಡಿ. ಪ್ರಾಚೀನ ರೇವಕ್ಕನಿಗೆ ಇಮ್ಮಡಿಯಾದವಳು ಎಂಬ ಅರ್ಥವನ್ನು ಕೆಲವರು ಇದಕ್ಕೆ ಹೇಳುತ್ತಾರೆ. ಹಾಗಿದ್ದಲ್ಲಿ ತಲೆಮಾರು ನಿರ್ದೇಶನಕ್ಕಾಗಿ ಪುರುಷರ ಹೆಸರಿಗೆ ಮೊದಲು, ಸ್ತ್ರೀಯರ ಹೆಸರಿಗೆ ತುದಿಯಲ್ಲಿ 'ಇಮ್ಮಡಿ' ಎಂಬುದನ್ನು ಜೋಡಿಸುತ್ತಿದ್ದರೆಂಬ ಕುತೂಹಲಕಾರಿ ಹೊಸರ ಅಂಶ ಗಮನಕ್ಕೆ ಬರುತ್ತದೆ. ಆದರೆ ನಿಮ್ಮಡಿ ಎಂಬುದಕ್ಕೆ ಪೂಜ್ಯಪಾದವೆಂಬ ಅರ್ಥವಿರುವುದರಿಂದ [೮] 'ರೇವಕನಿಮ್ಮಡಿ' ಎಂಬುದಕ್ಕೆ ರೇವಕ್ಕನೆಂಬ ಪೂಜ್ಯಳು ಎಂದೂ ಅರ್ಥ ಹೇಳಬಹುದಾಗಿದೆ. ಬಹುಶಃ ಇದೇ ಸರಿಯಾದ ಅರ್ಥ. ಲೋಕೇತಿನಿಮ್ಮಡಿ, ಸಾವಿನಿಮ್ಮಡಿ ಮೊದಲಾದುವನ್ನು ಇಲ್ಲಿ ನೆನೆಯಬಹುದು.

ಒಂದು ಮನೆಯಲ್ಲಿ ಒಂದೇ ಹೆಸರಿನ ಇಬ್ಬರು ವ್ಯಕ್ತಿಗಳಿದ್ದರೆ ಪ್ರತ್ಯೇಕಿಸುವ ದೃಷ್ಟಿಯಿಂದ ಸಣ್ಣಬಸಪ್ಪ, ದೊಡ್ಡಬಸಪ್ಪ ಎಂಬಂತೆ ವಿಶೇಷಣ ಜೋಡಿಸಿ ಕರೆಯುತ್ತಾರೆ. ಅವಳಿ ಮಕ್ಕಳಾದರೆ ರಾಮ–ಲಕ್ಷ್ಮಣ, ಭರತ–ಬಾಹುಬಲಿ ಎಂಬ ಪುರಾಣಪ್ರಸಿದ್ಧ ಸೋದರರ ಹೆಸರನ್ನಿಡುತ್ತಾರೆ. ಕೆಲವೊಮ್ಮೆ ಲಕ್ಷ್ಮಿ–ಸರಸ್ವತಿಯೆಂಬಂತೆ ಜೋಡಿ ಹೆಸರನ್ನಿಡುತ್ತಾರೆ. ಒಂದು ವೀರಶೈವ ಕುಟುಂಬದಲ್ಲಿ ಅವಳಿ ಮಕ್ಕಳಿಗೆ ಬಿಜ್ಜಳನನ್ನು ಕೊಂದ ಜಗದೇವ–ಮೊಲ್ಲೆಬೊಮ್ಮಣ್ಣ ಎಂಬ ಹೆಸರಿಟ್ಟುದು ಗಮನರ್ಹವಾಗಿದೆ. ಇತ್ತೀಚೆ ವಿನಯ–ವಿಜಯ ಎಂಬಂಥ ಪ್ರಾಸಯುಕ್ತ ಸುಂದರ ಹೆಸರುಗಳನ್ನಿಡುತ್ತಾರೆ.

ಮದುವೆಯಾದ ಬಹಳ ವರ್ಷಗಳ ಬಳಿಕ ಮಗು ಹುಟ್ಟಿದರೆ ಇಲ್ಲವೆ ಹುಟ್ಟಿದ ಕೂಡಲೇ ಮಕ್ಕಳು ಸಾಯುತ್ತಿದ್ದರೆ ಅಮಂಗಳಕರ ಹೆಸರನ್ನಿಡುವ ಪದ್ಧತಿ ರೂಢಿಯಯಲ್ಲಿದೆ. ಗುಂಡಪ್ಪ, ಕಲ್ಲಪ್ಪ ಇತ್ಯಾದಿ. ಆಗ ಮಗುವನ್ನು ಮೊರದಲ್ಲಿ ಒಯ್ದು ತಿಪ್ಪೆಯ ಮೇಲಿಟ್ಟು ತೆಗೆದುಕೊಂಡುಬಂದು ತಿಪ್ಪಣ್ಣ, ತಿಪ್ಪವ್ವ ಎಂಬ ಹೆಸರಿಡುತ್ತಾರೆ. ಕೆಲವೊಮ್ಮೆ ಭಿಕ್ಷುಕರ ಉಡಿಯಲ್ಲಿ ಹಾಕಿ ತಿರುಗಿ ಪಡೆಯುವುದೂ ಉಂಟು. ಮಕ್ಕಳಿಗೆ ಚೇಷ್ಟೆ ಮಾಡುವಾಗ 'ತೌಡುಕೊಟ್ಟು ಖರೀದಿಸಿದ್ದೇವೆ' ಎಂಬ ರೂಢಿಮಾತಿನ ಹಿಂದೆ ಯವುದೋ ಒಂದು ಸಂಪ್ರದಾಯವಿರಬಹುದೆನಿಸುತ್ತದೆ. ಹೆಣ್ಣು ಸಾಕಾದಾಗ ಸಾಕು ಎಂಬುದರ ಸೂಚನೆಯಾಗಿ ಹುಟ್ಟಿದ ಕೂಸಿಗೆ **ಸಾ**ವಿತ್ರಿ ಎಂದೂ, ಗಂಡು ಬೇಕಾದಾಗ ಬೇಕು ಎಂಬುದರ

---

೮. ಕರ್ಣಾಟಕ ಪಂಚತಂತ್ರ–ಪುಟ ೮೪

ಸೂಚನೆಯಾಗಿ ಹುಟ್ಟಿದ ಕೂಸಿಗೆ ಬೆನಕಪ್ಪ ಎಂದೂ ಹೆಸರಿಡುವುದುಂಟು. ಆದರೆ ಹೆಣ್ಣುಬೇಕೆಂಬ ಗಂಡು ಸಾಕೆಂಬ ಸೂಚನೆಯ ಹೆಸರುಗಳನ್ನಿಡುವ ಪದ್ಧತಿ ನಮ್ಮಲ್ಲಿ ಇಲ್ಲ. ಇದು ಪುರುಷಪ್ರಧಾನ ಸಮಾಜದ ಧೋರಣೆಯನ್ನು ಸೂಚಿಸುತ್ತದೆ.[೯]

ನಾಮದ ರಾಚನಿಕ ಸ್ವರೂಪ :

ವ್ಯಕ್ತಿನಾಮದಲ್ಲಿ ಪುರುಷನಾಮ, ಸ್ತ್ರೀನಾಮವೆಂದು ಎರಡು ವಿಧ. ಈ ಎರಡೂ ಬಗೆಯ ನಾಮಗಳ ರಾಚನಿಕ ಸ್ವರೂಪವನ್ನು ವಿವರಿಸುವ ಮೊದಲು ಒಂದು ವಿಷಯವನ್ನು ಸ್ಪಷ್ಟಪಡಿಸಕೊಳ್ಳಬೇಕು. ಸಾಮಾನ್ಯವಾಗಿ ನಾಮದಲ್ಲಿ ಪೂರ್ವ ಮತ್ತು ಉತ್ತರ ಎಂಬ ಎರಡು ಘಟಕಗಳಿರುತ್ತವೆ. ಉದಾ : ಲಿಂಗಪ್ಪ=ಲಿಂಗ+ಅಪ್ಪ, ಇಲ್ಲಿ ಪೂರ್ವಘಟಕವೇ ವ್ಯಕ್ತಿಯ ನಾಮ. ಉತ್ತರಘಟಕ ಯಾವುದೇ ವ್ಯಕ್ತಿಯ ಹೆಸರಿಗೆ ಅಂಟಿಕೊಳ್ಳಬಹುದು. ಉದಾ : ಶ್ರೀನಿವಾಸ+ಅಪ್ಪ, ಡೇನಿಯಲ್+ಅಪ್ಪ, ಹುಸೇನ+ಅಪ್ಪ. ಈ ಲಕ್ಷಣಗಳನ್ನು ಗಮನಿಸಿ ಪೂರ್ವಘಟಕವನ್ನು ನಿರ್ದಿಷ್ಟ (Generic)ವೆಂದು, ಉತ್ತರ ಘಟಕವನ್ನು ವಾರ್ಗಿಕ (Specific)ವೆಂದು ಕರೆಯುತ್ತಾರೆ.

ಈ ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ವ್ಯಕ್ತಿನಾಮದಲ್ಲಿ ಆರು ಬಗೆಯ ವಿನ್ಯಾಸ (Pattern)ಗಳು ಸಾಧ್ಯವಾಗುತ್ತವೆ :

೧. ನಿರ್ದಿಷ್ಟವಾಚಿನಾಮ : ರಾಮ

೨. ನಿರ್ದಿಷ್ಟ–ವಾರ್ಗಿಕವಾಚಿನಾಮ : ರಾಮ+ಅಪ್ಪ=ರಾಮಪ್ಪ

೩. ವಿಸ್ತೃತ ನಿರ್ದಿಷ್ಟವಾಚಿನಾಮ : ಸೀತಾ+ರಾಮ=ಸೀತಾರಾಮ

೪. ವಿಸ್ತೃತ ನಿರ್ದಿಷ್ಟ–ಅವಿಸ್ತೃತ ವಾರ್ಗಿಕವಾಚಿನಾಮ :
ಸೀತಾ+ರಾಮ+ಅಪ್ಪ=ಸೀತಾರಾಮಪ್ಪ

೫. ಅವಿಸ್ತೃತ ನಿರ್ದಿಷ್ಟ–ವಿಸ್ತೃತವಾರ್ಗಿಕವಾಚಿನಾಮ :
ರಾಮ+ಅಪ್ಪ+ಗೌಡ=ರಾಮಪ್ಪಗೌಡ

೬. ವಿಸ್ತೃತನಿರ್ದಿಷ್ಟ–ವಿಸ್ತೃತವಾರ್ಗಿಕವಾಚಿನಾಮ :
ಸೀತಾ+ರಾಮ+ಅಪ್ಪ+ಗೌಡ=ಸೀತಾರಾಮಪ್ಪಗೌಡ.

ಈ ನಿರ್ದಿಷ್ಟ ಮತ್ತು ವಾರ್ಗಿಕಗಳನ್ನು ಹೀಗೆ ವಿವೇಚಿಸಬಹುದು.

ನಿರ್ದಿಷ್ಟಗಳು :

೧. ನಿರ್ದಿಷ್ಟವೇ ವ್ಯಕ್ತಿನಾಮ. ಹೀಗಾಗಿ ವಾರ್ಗಿಕವನ್ನು ಕೈಬಿಟ್ಟರೂ ನಡೆಯುತ್ತದೆ. ಉದಾ : ರಾಮ+ಅಣ್ಣ, ರಾಮ+ಅಪ್ಪ. ಇಲ್ಲಿ ಅಣ್ಣ, ಅಪ್ಪ ಬಿಟ್ಟರೂ ಸರಿ. ರಾಮ ಬಿಡಲಿಕ್ಕೆ

---

೯. ದೇಜಗೌ : ಜಾನಪದ ಸೌಂದರ್ಯ– "ವ್ಯಕ್ತಿನಾಮಗಳು" ಪುಟ ೯೨. ಹೆಚ್ಚಿನ ವಿವರಗಳಿಗಾಗಿ ಈ ಲೇಖನ ನೋಡಬಹುದು.

ಬರುವುದಿಲ್ಲ. ವ್ಯಕ್ತಿಯ ಹೆಸರಿನ ಆಶಯವನ್ನು ತುಂಬಿಕೊಂಡ ಕಾಂಡವಾಗಿರುವ ನಿರ್ದಿಷ್ಟ ಆ ಮನೆತನದ ಧರ್ಮ, ದೈವಗಳ ಕೋಶವಾಗಿರುತ್ತದೆ. ಆ ವ್ಯಕ್ತಿಯ ವಯಸ್ಸು, ಅಧಿಕಾರಗಳಲ್ಲಿ ವ್ಯತ್ಯಾಸವಾದರೆ ಆಗ ವಾರ್ಗಿಕದಲ್ಲಿ ವ್ಯತ್ಯಾಸವಾಗುವುದೇ ಹೊರತು ಕಾಂಡವಾಗಿರುವ ಈ ನಿರ್ದಿಷ್ಟದಲ್ಲಲ್ಲ. ಉದಾ : ರಾಮಪ್ಪಗೌಡ ಅಥವಾ ರಾಮಣ್ಣಗೌಡ.

೨. ನಿರ್ದಿಷ್ಟವೇ ವ್ಯಕ್ತಿಯ ನಾಮವಾಗಿರುವುದರಿಂದ ವ್ಯಕ್ತಿನಾಮವನ್ನು ವಿಕಾರಗೊಳಿಸಬೇಕಾದರೆ ಇದರಲ್ಲಿಯೇ ವ್ಯತ್ಯಾಸಮಾಡಬೇಕು. ಇಲ್ಲಿ ಪುರುಷನಿದ್ದರೆ ಆ್ಯ, ಸ್ತ್ರೀ ಇದ್ದರೆ ಇ ಸೇರಿಸಬೇಕು. ಉದಾ : ರಾಮ್ಯಾ, ರಾಮಿ, ನಿರ್ದಿಷ್ಟವು ವಿಸ್ತೃತವಾಗಿದ್ದರೆ ಅವುಗಳಲ್ಲಿ ಮೊದಲಿನ ಘಟಕದ ಇಲ್ಲವೆ ಎರಡನೆಯ ಘಟಕದ ಕೊನೆಯನ್ನು ವಿಕಲಗೊಳಿಸಬಹುದು. ಉದಾ: ಪರಶುರಾಮ>ಪರಶ್ಯಾ, ಪರಶುರಾಮ್ಯಾ. ಇಲ್ಲಿ ಪರಶ್ಯಾ ರಾಮ್ಯಾ ಎಂದು ಎರಡು ವೈಕಲ್ಯಗಳಿಗೆ ಅವಕಾಶವಿರುವುದಿಲ್ಲ. ಪರಶ್ಯಾರಾಮ ಎಂದು ಮೊದಲನೆಯದನ್ನು ಮಾತ್ರ ವಿಕಲಗೊಳಿಸಲೂ ಇಲ್ಲಿ ಅವಕಾಶವಿರುವುದಿಲ್ಲ.

೩. ನಿರ್ದಿಷ್ಟವು ಸಾಮಾನ್ಯವಾಗಿ ಏಕಘಟಕವಾಗಿರುತ್ತದೆ. ಉದಾ : ಚಂದ್ರ, ಬಸವ. ಕೆಲವೊಮ್ಮೆ ವಿಸ್ತೃತವಾಗಿರುತ್ತಿದ್ದು ಸಮಾಸರೂಪದಲ್ಲಿರುತ್ತದೆ. ಉದಾ : ಚಂದ್ರಶೇಖರ, ಸಂಗನಬಸವ.

ವಾರ್ಗಿಕಗಳು :

೧. ಕನ್ನಡಭಾಷೆಯಲ್ಲಿ ಸಂಬಂಧವಾಚಿಗಳು ಮೂಲತಃ ಸ್ತ್ರೀ, ಪುರುಷ ಸೂಚಿಗಳಾಗಿವೆ. ಇವು ವಾರ್ಗಿಕಗಳಾಗಿ ಬಳಕೆಗೊಳ್ಳುತ್ತಿರುವುದು ಈ ಭಾಷೆಯ ವೈಶಿಷ್ಟ್ಯವಾಗಿದೆ. ಉದಾ : ಅಪ್ಪ- ಎಂಬುದು ಪುರುಷಸೂಚಿ. ಇದು ರಾಮ+ಅಪ್ಪ ಎಂಬಲ್ಲಿ ವಾರ್ಗಿಕವಾಗಿದೆ. ಆದರೆ ಸಂಸ್ಕೃತದಲ್ಲಿ ಸಂಬಂಧವಾಚಿಗಳು ಸ್ತ್ರೀ, ಪುರುಷಸೂಚಿಯಾಗಿ ಉಳಿಯುವವೇ ಹೊರತು ವಾರ್ಗಿಕವಾಗಿ ವ್ಯವಹರಿಸುವುದಿಲ್ಲ. ಉದಾ : ಪಿತಾ-ಇದು ಸಂಸ್ಕೃತ ಪುರುಷಸೂಚಿ. ರಾಮ+ಪಿತಾ ಎಂದು ವಾರ್ಗಿಕವಾಗಿ ವ್ಯವಹರಿಸುವುದಿಲ್ಲ.

೨. ಕನ್ನಡದಲ್ಲಿ ಬಳಕೆಯಾಗುವ ಎಲ್ಲ ವಾರ್ಗಿಕಗಳನ್ನು ಸಂಬಂಧವಾಚಿ, ವೃತ್ತಿವಾಚಿ, ಗೌರವಾಚಿಯೆಂದು ವರ್ಗಿಕರಿಸಬಹುದಾಗಿದೆ.

ಸಂಬಂಧವಾಚಿ :

ಪುರುಷ: ಅಪ್ಪ-ಅಪ, ಅಮ್ಮ-ಅಮ, ಅಣ್ಣ-ಅಣ, ತಮ್ಮ, ತಂದೆ, ಅಯ್ಯ,
ಅಜ್ಜ, ಅಚ್ಚ.

ಸ್ತ್ರೀ : ಅವ್ವ, ಅವ್ವೆ, ಅಮ್ಮ, ಆಯಿ, ಅಜ್ಜಿ, ಅಚ್ಚಿ, ಅಕ್ಕ, ತಾಯಿ,
ಅಬ್ಬೆ, ಬಾಯಿ.

ವೃತ್ತಿವಾಚಿ :

ಪುರುಷ : ರಾಜ, ಅರಸು, ಕ್ರಮಿತ, ಫೈಸಾಸ, ಗೌಡ, ನಾಯಕ ಇತ್ಯಾದಿ.

ಇವು ವೃತ್ತಿ, ಅಧಿಕಾರಸೂಚಿಗಳಾಗಿದ್ದು, ಸಂಬಂಧವಾಚಿಗಳನ್ನು ತಳ್ಳಿ (ಶಿವ+ಅಪ್ಪ+ಗೌಡ= ಶಿವಗೌಡ), ಇಲ್ಲವೆ ಇವುಗಳ ಮೇಲೆ (ಶಿವ+ಅಪ್ಪ+ಗೌಡ=ಶಿವಪ್ಪಗೌಡ) ಬರುತ್ತವೆ.

ಸ್ತ್ರೀ : ರಾಣಿ, ಅರಸಿ, ನಾಯಕಿ, ಗಾವುಂಡಿ, ಇತ್ಯಾದಿ. ಇವು ವೃತ್ತಿ, ಅಧಿಕಾರಸೂಚಿಗಳಾಗಿದ್ದು ಸಂಬಂಧವಾಚಿಗಳನ್ನು ತಳ್ಳಿ (ಶಿವ+ಅಮ್ಮ+ಗಾವುಂಡಿ =ಶಿವಗಾವುಂಡಿ), ಇಲ್ಲವೆ ಇವುಗಳ ಮೇಲೆ (ಶಿವ=ಅಮ್ಮ+ಗಾವುಂಡಿ= ಶಿವಮ್ಮಗಾವುಂಡಿ) ಬರುತ್ತವೆ.

ಗೌರವವಾಚಿ :

ಪುರುಷ : ದೇವ, ಸ್ವಾಮಿ, ರಾಸಿ, ಜೀಯ, ಭಟ್ಟ ಇತ್ಯಾದಿ. ಇವು ಸಂಬಂಧವಾಚಿಗಳನ್ನು ತಳ್ಳಿ (ಶಿವ+ಅಯ್ಯ+ದೇವ=ಶಿವದೇವ), ಇಲ್ಲವೆ ಅವುಗಳ ಮೇಲೆ (ಶಿವ+ಅಯ್ಯ+ಸ್ವಾಮಿ= ಶಿವಯ್ಯಸ್ವಾಮಿ) ಬರುತ್ತವೆ.

ಸ್ತ್ರೀ : ದೇವಿ, ಗೊರವಿ, ಕಂತಿ ಇತ್ಯಾದಿ. ಇವು ಸಂಬಂಧವಾಚಿಗಳನ್ನು ತಳ್ಳಿ (ಶಿವ+ಅಮ್ಮ+ದೇವಿ=ಶಿವದೇವಿ), ಇಲ್ಲವೆ ಇವುಗಳ ಮೇಲೆ (ಶಿವ+ಅಮ್ಮ+ದೇವಿ=ಶಿವಮ್ಮದೇವಿ) ಬರುತ್ತವೆ.

೩. ವಾರ್ಗಿಕಗಳು ವ್ಯಕ್ತಿಯ ನಾಮಗಳಲ್ಲವಾದುದರಿಂದ ಬೇಕಾದ ಹೆಸರಿಗೆ ಹಚ್ಚಬಹುದು. ಉದಾ : ಕೃಷ್ಣ+ಅಪ್ಪ, ಭರಮ+ಅಪ್ಪ, ಕೃಷ್ಣ+ಗೌಡ, ಭರಮ+ಗೌಡ, ಬೇಡವಾದಲ್ಲಿ ಬಿಡಬಹುದು. ಉದಾ : ಕೃಷ್ಣ, ಭರಮ, ಇವು ವ್ಯಕ್ತಿಯ ವಯಸ್ಸು, ಅಂತಸ್ತುಗಳಿಗನುಗುಣವಾಗಿ ವ್ಯತ್ಯಾಸವಾಗುತ್ತವೆ, ವರ್ಧಿಸುತ್ತವೆ. ಉದಾ : ಭರಮಪ್ಪ, ಭರಮರಾಜ, ಭರಮಜ್ಜ. ಆದರೆ ನಿರ್ದಿಷ್ಟವು ಈ ರೀತಿ ವ್ಯತ್ಯಾಸವಾಗುವುದಿಲ್ಲ, ವರ್ಧಿಸುವುದಿಲ್ಲ.

೪. ನಿರ್ದಿಷ್ಟವು ಕೆಲವೊಮ್ಮೆ ವಾರ್ಗಿಕವಾಗಬಹುದು. ಉದಾ : ಇಂದ್ರ+ಅಣ್ಣ=ಇಂದ್ರಣ್ಣ, ಮಲ್ಲ+ಇಂದ್ರ=ಮಲ್ಲೇಂದ್ರ. ವಾರ್ಗಿಕವು ಕೆಲವೊಮ್ಮೆ ನಿರ್ದಿಷ್ಟವಾಗಬಹುದು. ಉದಾ : ಸಂಬಂಧವಾಚಿ, ಅಣ್ಣ+ಅಪ್ಪ=ಅಣ್ಣಪ್ಪ, ಸಂಬಂಧೇತರವಾಚಿ, ಗೌಡ+ಅಪ್ಪ=ಗೌಡಪ್ಪ.

೫. ನಿರ್ದಿಷ್ಟದ ಮುಂದೆ ನಿರ್ದಿಷ್ಟ ಬರಬಹುದು. ಉದಾ : ಶಿವದೇವ, ವಾರ್ಗಿಕದ ಮುಂದೆ ವಾರ್ಗಿಕ ಬರಬಹುದು, ಉದಾ : ಅಮ್ಮಕ್ಕ, ಅಕ್ಕಮ್ಮ, ಅಪ್ಪಣ್ಣ, ಅಣ್ಣಪ್ಪ, ಅವ್ವಣ್ಣ ಇತ್ಯಾದಿ.

ನಾಮ ಸೀಮಾರೇಖೆ :

ನಾಮಗಳ ವಿಷಯವಾಗಿ ಕಾಲ, ದೇಶ ಮತ್ತು ಸಾಮಾಜಿಕ ಶ್ರೇಣಿಗಳ ಹಿನ್ನೆಲೆಯಲ್ಲಿ ಸೀಮಾರೇಖೆಯನ್ನು ಎಳೆಯಬಹುದಾಗಿದೆ. ಪ್ರಾಚೀನಕಾಲದಲ್ಲಿ ಬದ್ಧ ಸಮಾಜವ್ಯವಸ್ಥೆ ಕಾರಣವಾಗಿ ಈ ರೇಖೆಗಳು ಗಟ್ಟಿಯಾಗಿ ಉಳಿದುಕೊಳ್ಳುತ್ತಿದ್ದವು. ಇಂದಿನ ಮುಕ್ತ ಸಮಾಜದಲ್ಲಿ ಈ ರೇಖೆಗಳು ಅಳಿಸಿಹೋಗುತ್ತಲಿವೆ. ಆದರೆ ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಪಂಗಡಗಳು ಮಾತ್ರ ತಮ್ಮ ತಮ್ಮ

ರೇಖೆಗಳನ್ನು ದಾಟುವ ಧೈರ್ಯಮಾಡುತ್ತಿಲ್ಲ. ಈ ಸೀಮಾರೇಖೆಗಳನ್ನು ಕಾಲವಾಚಿ, ದೇಶಿವಾಚಿ, ಸಾಮಾಜಿಕ ಶ್ರೇಣಿವಾಚಿ ಎಂದು ಬಿಡಿಸಿ ನೋಡಬಹುದಾಗಿದೆ. ಇವುಗಳಲ್ಲಿಯೇ ನಿರ್ದಿಷ್ಟನಿಷ್ಠ ಸೀಮಾರೇಖೆ, ವಾರ್ಗಿಕನಿಷ್ಠ ಸೀಮಾರೇಖೆಯೆಂಬ ವರ್ಗೀಕರಣ ಮಾಡಲೂ ಅವಕಾಶವಿದೆ.

ಕಾಲವಾಚಿ ಸೀಮಾರೇಖೆ : ಪ್ರಾಚೀನ ಕರ್ನಾಟಕದಲ್ಲಿ ನಿರ್ದಿಷ್ಟಗಳಿಗಿಂತ ವಾರ್ಗಿಕಗಳು ಕಾಲವಾಚಿ ಸೀಮಾರೇಖೆ ಎಳೆಯಲು ಉತ್ತಮ ಸಾಮಗ್ರಿ ಎನಿಸಿವೆ. ಪುರುಷನಾಮಗಳ ಕೊನೆಯಲ್ಲಿ ಅಮ್ಮ, ಅಮ (ಭಿಲ್ಲಮ), ಸ್ತ್ರೀನಾಮಗಳ ಕೊನೆಯಲ್ಲಿ ಅಬ್ಬೆ (ದೇಕಬ್ಬೆ), ಅವ್ವೆ (ಕದಿರು ರೆಮ್ಮವ್ವೆ)ಗಳು ಗೋಚರಿಸುತ್ತವೆ. ಇವು ಮುಂದಿನ ಶತಮಾನಗಳಲ್ಲಿ ಕಾಣುವುದಿಲ್ಲವಾದುದರಿಂದ ಒಂದು ಅವಧಿಗೆ ನಿಷ್ಠವಾಗಿರುವ ಇವುಗಳ ವಿಷಯವಾಗಿ ಕಾಲವಾಚಿ ಸೀಮಾರೇಖೆ ಎಳೆಯಬಹುದಾಗಿದೆ.

ಪ್ರಾಚೀನ ಕಾಲದಲ್ಲಿ 'ತಮ್ಮ' ಕೊನೆಯಾಗುವ ಮಲ್ಲಿತಮ್ಮ, ಮಸಣಿತಮ್ಮ ಇತ್ಯಾದಿ ಹೆಸರುಗಳ ದಕ್ಷಿಣಕರ್ನಾಟಕದ ವಿಶಿಷ್ಟ ಪ್ರದೇಶದಲ್ಲಿ, ಅದೂ ಶಿಲ್ಪಿಗಳಿಗೆ ಮಾತ್ರ ಕಂಡುಬರುವುದರಿಂದ, ಇಲ್ಲಿ ಕಾಲವಾಚಿಯಂತೆ ದೇಶವಾಚಿ ಸೀಮಾರೇಖೆಯನ್ನೂ ಕಲ್ಪಿಸಬಹುದು. ಇದೇ ಪ್ರದೇಶದಲ್ಲಿ ಅಂದು ಬೇರೆ ಜನವರ್ಗದವರ ಹೆಸರುಗಳು ಭಿನ್ನವಾಗಿರುವುದು ಸಹಜವೇ ಆಗಿರುವುದರಿಂದ ಇಂಥ ಸಂದರ್ಭದಲ್ಲಿ ಹೆಚ್ಚಿನದಾಗಿ ಇನ್ನೂ ಒಂದು ಶ್ರೇಣಿವಾಚಿ ಸೀಮಾರೇಖೆಯನ್ನು ಇಲ್ಲಿ ಎಳೆಯಬಹುದಾಗಿದೆ.

ದೇಶವಾಚಿ ಸೀಮಾರೇಖೆ : ಕನ್ನಡದಲ್ಲಿ ದೇಶವಾಚಿ ಸೀಮಾರೇಖೆಯನ್ನು ನಿರ್ದಿಷ್ಟ ಮತ್ತು ವಾರ್ಗಿಕ ಎರಡನ್ನೂ ಅವಲಂಬಿಸಿ ಎಳೆಯಬಹುದಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಅಯ್ಯ (ಎಚ್.ನರಸಿಂಹಯ್ಯ), ಸ್ವಾಮಿ (ಮಲ್ಲಿಕಾರ್ಜುನಸ್ವಾಮಿ) ಎಂಬ ವಾರ್ಗಿಕಗಳು ಯಾವುದೇ ಜಾತಿಯವರಿಗೆ ಅಂಟಿಕೊಳ್ಳುತ್ತಿದ್ದರೆ, ಉತ್ತರ ಕರ್ನಾಟಕದಲ್ಲಿ ಬ್ರಾಹ್ಮಣ, ವೀರಶೈವ ಸಮಾಜಗಳ ಆಚಾರ್ಯವರ್ಗದವರಿಗೆ ಮಾತ್ರ ಅಂಟಿಕೊಳ್ಳುತ್ತವೆ. ಸ್ತ್ರೀಯರ ಹೆಸರುಗಳ ವಾರ್ಗಿಕದಲ್ಲಿ ಬರುವ ಅವ್ವ ಎಂಬುದು ಕೇವಲ ವಿಜಾಪೂರ, ಗುಲಬರ್ಗಾ ಪ್ರದೇಶಗಳಲ್ಲಿ, ಅಮ್ಮ ಎಂಬುದು ಮಿಕ್ಕ ಪ್ರದೇಶಗಳಲ್ಲಿ ಪ್ರಚಾರದಲ್ಲಿವೆ. ಇದು ದೇಶವಾಚಿ ಸೀಮಾರೇಖೆಗೆ ಉದಾಹರಣೆಯಾಗಿದೆ.

ಈ ವಾರ್ಗಿಕಗಳಿಗಿಂತ ನಿರ್ದಿಷ್ಟಗಳು ದೇಶವಾಚಿ ಸೀಮಾರೇಖೆಗಳನ್ನು ಅಧಿಕ ಸಂಖ್ಯೆಯಲ್ಲಿ ತೋರಿಸಿಕೊಡುತ್ತವೆ. ಉದಾ : ಉಡುಪಿ ಪ್ರದೇಶದಲ್ಲಿ ಕೃಷ್ಣ, ಕೊಟ್ಟೂರು ಪ್ರದೇಶದಲ್ಲಿ ಕೊಟ್ರಪ್ಪ, ಗುಲಬರ್ಗಾ ಪ್ರದೇಶದಲ್ಲಿ ಶರಣಬಸಪ್ಪ –ಹೀಗೆ ಸ್ಥಳೀಯ ದೇವತಾಪ್ರಭಾವದಿಂದಾಗಿ ಅಲ್ಲಲ್ಲಿ ದೇಶವಾಚಿ ಸೀಮಾರೇಖೆಗಳು ಕಂಡುಬರುತ್ತವೆ. ಉತ್ತರ ಕರ್ನಾಟಕದ ನಾಮಗಳಲ್ಲಿ ನಿರ್ದಿಷ್ಟದ ಜೊತೆಗೆ ಸಂಬಂಧವಾಚಿ ವಾರ್ಗಿಕವು ಒಂದು ರೀತಿ ಕಡ್ಡಾಯವಾಗಿ ಕಂಡುಬರುತ್ತದೆ. ಉದಾ : ಸಂಗಪ್ಪ, ಬಸಪ್ಪ. ದಕ್ಷಿಣ ಕರ್ನಾಟಕದಲ್ಲಿ ಈ ಸಂಬಂಧವಾಚಿ ವಾರ್ಗಿಕ ಐಚ್ಛಿಕವೆಂದರೂ ನಡೆದೀತು. ಈ ದೃಷ್ಟಿಯಿಂದಲೂ ದೇಶವಾಚಿ ಸೀಮಾರೇಖೆ ಎಳೆಯಬಹುದು. ಕೆಲವೊಮ್ಮೆ ಒಂದೇ ಹೆಸರು ದೇಶಭೇದ ಕಾರಣವಾಗಿ ರೂಪಭೇದದಿಂದ ವರ್ತಿಸುತ್ತದೆ. ಉದಾ : ದಕ್ಷಿಣ ಕರ್ನಾಟಕದ ಶಂಕರೇಗೌಡ ಮಲ್ಲೇಗೌಡ ಇತ್ಯಾದಿಗಳು ಉತ್ತರಕರ್ನಾಟಕದಲ್ಲಿ ಶಂಕರಗೌಡ, ಮಲ್ಲಗೌಡ ಎಂದು ವ್ಯವಹರಿಸುತ್ತವೆ.

ಶ್ರೇಣಿವಾಚಿ ಸೀಮಾರೇಖೆ : ಸಮಾಜದಲ್ಲಿ ವರ್ಣ, ವರ್ಗಗಳು ಶ್ರೇಣಿಯನ್ನು ಕಲ್ಪಿಸುತ್ತವೆ. ಇಲ್ಲಿ ಮೇಲು ವರ್ಣ–ಮೇಲು ವರ್ಗ, ಕೀಳು ವರ್ಣ–ಕೀಳು ವರ್ಗಗಳ ನಾಮನಿರ್ದೇಶನ ಪದ್ಧತಿ

ನಿರ್ದಿಷ್ಟ ಮತ್ತು ವಾರ್ಗಿಕ ದೃಷ್ಟಿಯಿಂದಲೂ ಭಿನ್ನವಾಗಿರುತ್ತದೆ. ಸಂಬಂಧವಾಚಿ ವಾರ್ಗಿಕಗಳು ಮೇಲು ವರ್ಣದ ಬ್ರಾಹ್ಮಣರಲ್ಲಿ ಬಹಳಷ್ಟು ಸಲ ಬಳಕೆಯಾಗುವುದಿಲ್ಲ. ಉದಾಹರಣೆ : ಭಾಸ್ಕರ, ಶ್ರೀನಿವಾಸ, ರುಕ್ಮಿಣಿ, ಕೆಳವರ್ಣದವರಲ್ಲಿ ಕಡ್ಡಾಯ ಬಳಕೆಯಾಗುತ್ತವೆ. ಉದಾ : ಕಲ್ಲಪ್ಪ, ಎಡಿಯೂರಪ್ಪ, ಬಸವ್ವ, ಒಂದುವೇಳೆ ಬ್ರಾಹ್ಮಣರಲ್ಲಿ ವಆರ್ಗಿಕವು ಬಳಕೆಯಾದರೂ ಅದು ಸಂಬಂಧವಾಚಿಯಲ್ಲ, ಗೌರವಸೂಚಿಯಾಗಿರುತ್ತದೆ. ಉದಾ : ಶ್ರೀನಿವಾಸ+ರಾವ್, ಕಮಲಾ+ದೇವಿ. ಹೀಗೆ ಸಂಬಂಧವಾಚಿಯನ್ನು ಹಚ್ಚಿಕೊಳ್ಳುವವರು ಅವಿಭಕ್ತ ಕುಟುಂಬ ಪದ್ಧತಿಯವರು, ಸಾಂಘಿಕ ಮನೋಧರ್ಮದವರೆಂಬುದನ್ನೂ ಹಚ್ಚಿಕೊಳ್ಳದವರು ವಿಭಕ್ತ ಕುಟುಂಬಪದ್ಧತಿಯವರು, ಸ್ವತಂತ್ರ ಮನೋಧರ್ಮದವರೆಂಬುದನ್ನೂ ಇದು ಸೂಚಿಸುತ್ತದೆ.

ಶ್ರೇಣಿವಾಚಿಗೆ ಸಂಬಂಧಿಸಿದ ಮೇಲುವರ್ಗ–ಮೇಲುವರ್ಣದ ಹೆಸರುಗಳು ತಮ್ಮ ಸೀಮಾರೇಖೆಯನ್ನು ಮುರಿದು ಕೆಳಗಿನ ವರ್ಗ–ವರ್ಣಗಳಲ್ಲಿ ವ್ಯವಹರಿಸುತ್ತವೆ. ಉದಾ : ಉಡುಪಿ ಪ್ರದೇಶದಲ್ಲಿ ಮೇಲುವರ್ಗದ ದೇವತೆಯಾದ ಕೃಷ್ಣನ ಹೆಸರನ್ನು ಕೆಳವರ್ಗದವರು ಇಟ್ಟುಕೊಳ್ಳಬಹುದು. ಆದರೆ ಅಲ್ಲಿಯ ಕೆಳವರ್ಗದ ದೇವತೆಯ ಹೆಸರನ್ನು ಕೆಳವರ್ಗದವರು ಮಾತ್ರ ಇಟ್ಟುಕೊಳ್ಳುತ್ತಾರೆ; ಮೇಲುವರ್ಗದವರು ಇಟ್ಟುಕೊಳ್ಳವುದಿಲ್ಲ. ಕೆಲವೊಮ್ಮೆ ಕೆಳವರ್ಗದವರು ಒಣಪ್ರತಿಷ್ಠೆಗಾಗಿ ಮೇಲುವರ್ಗದ ಹೆಸರನ್ನಿಟ್ಟುಕೊಳ್ಳುವುದು ಸ್ವಾಭಾವಿಕ. "ಅರಸಿನ ಹೆಸರಿಟ್ಟ ಅನಾಮಿಕನಂತೆ" ಎಂಬ ಬಸವಣ್ಣನವರ ವಚನಗಳಲ್ಲಿ ಇದರ ವಿಡಂಬನೆಯನ್ನು ಕಾಣಬಹುದು.

ಒಂದು ಹೆಸರು ಆ ಕುಟುಂಬದ ಸದಸ್ಯರು ಬೇರೆ ಪ್ರದೇಶಕ್ಕೆ ಹೋದರೂ, ಬೇರೆ ಮತ ಸ್ವೀಕರಿಸಿದರೂ ಒಂದೆರಡು ತಲೆಮಾರು ಮುಂದುವರಿಯಬಹುದು. ಇದಕ್ಕೆ ಉತ್ತಂಗಿ ಚೆನ್ನಪ್ಪ ಎಂಬುದು ಕ್ರೈಸ್ತ ಮತಾಂತರದ ಬಳಿಕವೂ ಮುಂದುವರಿದ ಪ್ರಸಿದ್ಧ ಉದಾಹರಣೆಯಾಗಿದೆ.

ನಾಮವ್ಯತ್ಯಾಸ :

ಹೆಸರು ಸಮೂಹದಿಂದ ವ್ಯಕ್ತಿಯನ್ನು ಗುರುತಿಸುವ ಸಾಧನವಾಗಿದ್ದರೂ ಅದರ ಮಹತ್ವ ಅಷ್ಟೇ ಅಲ್ಲ, ಅನೇಕ ವರ್ಷಗಳಿಂದ ಒಬ್ಬನಿಗೆ ಅಂಟಿಕೊಂಡಿರುವ ಅದು ಆತನ ವ್ಯಕ್ತಿತ್ವದ ಸಂಕೇತವಾಗಿ ನಿಲ್ಲುತ್ತದೆ. ವ್ಯಕ್ತಿತ್ವ ಹಾಳಾದರೆ ಹೆಸರು ಹಾಳಾಯಿತೆಂದೂ ವ್ಯಕ್ತಿತ್ವ ಬೆಳೆದರೆ ಹೆಸರು ಬೆಳೆಯಿತೆಂದೂ ನಾವು ಹೇಳುವುದನ್ನು ಇಲ್ಲಿ ಸ್ಮರಿಸಬಹುದು. ಹೀಗಾಗಿ "ವ್ಯಕ್ತಿತ್ವ=ಹೆಸರು" ಎಂಬ ಅರ್ಥ ಬಂದುಬಿಟ್ಟಿದೆ. ತನ್ನ ಅಭಿಧಾನ ತನ್ನ ಅಭಿಮಾನದ ಪ್ರತೀಕವೆಂದ ಭಾವ ವ್ಯಕ್ತಿಯಲ್ಲಿ ಗಟ್ಟಿಗೊಂಡಿದೆ. ಈ ಕಾರಣದಿಂದಾಗಿ ಹೆಸರಿನ ಬಗ್ಗೆ ಮನುಷ್ಯನಿಗೆ ಹೆಚ್ಚು ಎಚ್ಚರ, ಹೆಚ್ಚು ಅಭಿಮಾನ. "ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂಪೆನೇ" ಎಂಬ ರನ್ನನ ದುರ್ಯೋಧನನ ಮಾತನ್ನು ಇಲ್ಲಿ ನೆನೆಯಬಹುದು. ರುದ್ರಭಟ್ಟನೆಂಬ ವಿದ್ವಾಂಸನು ತನ್ನ ಹೆಸರಿನ 'ಭ' ಅಕ್ಷರವನ್ನು ಒತ್ತೆಯಿಟ್ಟು ಸಾಲ ಪಡೆದನೆಂದು, ಸಾಲ ಮುಟ್ಟಿಸುವ ವರೆಗೆ ರುದ್ರಟವೆಂಬ ಹೆಸರನ್ನು ಮಾತ್ರ ವ್ಯವಹಾರಕ್ಕೆ ಬಳಸಿದನೆಂದೂ ಒಂದು ಶಾಸನ ಹೇಳುತ್ತದೆ.[೧೦] ಹೆಸರಿನ ಬಗ್ಗೆ ಇಂಥ ಅಭಿಮಾನ, ಗೌರವಭಾವವನ್ನು ಬೆಳೆಸಿಕೊಂಡಿರುವುದರಿಂದಲೇ ಸಾಮಾನ್ಯವಾಗಿ ಹಿರಿಯರನ್ನು ಹೆಸರುಗೊಂಡು ಕರೆಯುವುದಿಲ್ಲ, ಗಂಡನ ಹೆಸರನ್ನು ಹೆಂಡತಿ ಉಚ್ಚರಿಸದ ಪದ್ಧತಿ

೧೦. JBBRAS. X. ಪುಟ ೨೬೦

ಇನ್ನೂ ನಮ್ಮಲ್ಲಿ ವ್ಯಾಪಕವಾಗಿ ರೂಢಿಯಲ್ಲಿದ್ದು, ಹಾಗೆ ಕರೆದರೆ ಗಂಡನ ಆಯುಷ್ಯ ಕಡಿಮೆಯಾಗುವುದೆಂಬ ನಂಬಿಕೆಯೂ ಇದೆ.

ಪುರುಷರು ಮದುವೆಯಾದ ಸ್ತ್ರೀಯರನ್ನು, ಸ್ತ್ರೀಯರು ಮದುವೆಯಾದ ಪುರುಷರನ್ನು ಹೆಸರು ಹಿಡಿದು ಕರೆಯುವುದಿಲ್ಲ. ಸಿಂಹದೊಡನೆ ಆಡುವ ಭರತನನ್ನು ನೋಡಿ "ಅವನ ತಾಯಿಯ ಹೆಸರನ್ನು ಕೇಳುವುದು ಸುಸಂಸ್ಕೃತ ಲಕ್ಷಣವಲ್ಲ" ಎನ್ನುತ್ತಾನೆ, ದುಶ್ಯಂತ, ಸ್ತ್ರೀಯರು ಅನ್ಯರ ಮಕ್ಕಳನ್ನು ರಾಧಾಬಾಯಿಯ ಮಗ, ಕಮಲವ್ವನ ಮಗ ಇತ್ಯಾದಿಯಾಗಿ ಕರೆಯುವುದು, ಅನ್ಯ ಗಂಡಂದಿರನ್ನು ಹೆಸರು ಹಿಡಿದು ಕರೆಯಬಾರದೆಂಬುದರ ದ್ಯೋತಕವಾಗಿದೆ.[೧೧]

ರಾಜನ, ಪ್ರಸಿದ್ಧವ್ಯಕ್ತಿಗಳ ಹೆಸರನ್ನೋ ಬಿರುದನ್ನೋ ತಾವು ಪಡೆಯುವುದು ಗೌರವವೆಂದು ಹಿಂದಿನವರು ಭಾವಿಸಿದ್ದರು. ಪಂಪನು ಅರಸನಾದ ಅರಕೇಸರಿಯ 'ಗುಣಾರ್ಣವ' ಬಿರುದನ್ನು 'ಕವಿತಾಗುಣಾರ್ಣವ' ರೂಪದಲ್ಲಿ ಪಡೆದುದು, ಪಂಪನ ಹೆಸರನ್ನು ನಾಗಚಂದ್ರನು 'ಅಭಿನವಪಂಪ' ರೂಪದಲ್ಲಿ ಪಡೆದುದು, ನಾಗಚಂದ್ರನ ಹೆಸರನ್ನು ಬೇರೊಬ್ಬ ಕವಿ 'ನೂತ್ನನಾಗಚಂದ್ರ' ರೂಪದಲ್ಲಿ ಪಡೆದುದು ಇಲ್ಲಿ ಲಕ್ಷಿಸತಕ್ಕ ಸಂಗತಿಗಳಾಗಿವೆ. ಹೀಗೆ ಹೆಸರಿನ ಮೌಲಿಕತೆಯ ಬಗ್ಗೆ ಪ್ರಜ್ಞೆಯುಳ್ಳ ಜನರು ಅದರ ಅಂತಸ್ತನ್ನು ಅಷ್ಟೇ ಅಲ್ಲ, ಅದರ ರೂಪವನ್ನೂ ರಕ್ಷಿಸಲು ಎಚ್ಚರವಹಿಸುವುದು ಸ್ವಾಭಾವಿಕ. ಹೀಗಿದ್ದೂ ನಾಮಕರಣ ಪ್ರಸಂಗದಲ್ಲಿ ಇಟ್ಟ ಹೆಸರು ರೂಪಾಂತರ, ಭಾಷಾಂತರ, ನಾಮಾಂತರ ರೀತಿಗಳಲ್ಲಿ ವ್ಯತ್ಯಾಸಗೊಳ್ಳುತ್ತದೆ.

ರೂಪಾಂತರ : ವ್ಯಕ್ತಿಯ ಹೆಸರು ಎರಡು ಬಗೆಗಳಲ್ಲಿ ರೂಪಾಂತರ ಪಡೆಯುತ್ತದೆ. ಒಂದು : ಅನುದ್ದೇಶಿತ, ಇನ್ನೊಂದು : ಉದ್ದೇಶಿತ.

ಅನುದ್ದೇಶಿತ : ಉಚ್ಚಾರ ಸೌಲಭ್ಯ, ಪ್ರಾಂತಭೇದ ಮತ್ತು ಅವಸ್ಥಾಭೇದ ಕಾರಣವಾಗಿ ವ್ಯಕ್ತಿನಾಮದಲ್ಲಿ ತಲೆದೋರುವ ವ್ಯತ್ಯಾಸವಿದು. ನಾರಾಯಣ>ನಾಣಿ, ಅಹೋಬಲ>ಓಬಲ, ಶ್ರೀನಿವಾಸ>ಸೀನ, ಗುರುಲಿಂಗ>ಗುನ್ನ, ಚೆನ್ನಬಸವಣ್ಣ>ಚೆಂಬಣ್ಣ, ತಿರುಮಲ/ತಿರುಅಮ್ಮ>ತಿಮ್ಮ, ಬಸವಣ್ಣಗೌಡ>ಬಸವನಗೌಡ>ಬಸಗೌಡ>ಬಸಗೊಂಡ, ಶಾಂತವೀರಯ್ಯ>ಸಾತೀರಯ್ಯ–ಇವು ಉಚ್ಚಾರಸೌಲಭ್ಯದಿಂದುಂಟಾದ ವ್ಯತ್ಯಾಸಗಳು. ಪಂಪನಗೌಡ>ಹಂಪನಗೌಡ ಅವಸ್ಥಾಭೇದಕ್ಕೆ, ಅಣ್ಣಪ್ಪ>ಅನ್ನಪ್ಪ ಪ್ರಾಂತಭೇದಕ್ಕೆ ಉದಾಹರಣೆಗಳಾಗಿವೆ. ನಾಮಗಳ ಸವಕಳಿ ಸಂದರ್ಭದಲ್ಲಿ ಯ, ವ ಅರ್ಧಸ್ವರಗಳ ಲೋಪಕ್ರಿಯೆ ಗಮನಿಸುವಂತಹುದು. ಉದಾ : ಬಸವ+ಅಪ್ಪ=ಬಸವಪ್ಪ>ಬಸಪ್ಪ, ರಾಮಯ್ಯ+ಗೌಡ=ರಾಮಯ್ಯಗೌಡ>ರಾಮೇಗೌಡ. ಮೇಲಿನ ಉದಾಹರಣೆಗಳಲ್ಲದೆ ಅನೇಕ ಹೆಸರುಗಳು ಅವುಗಳ ನಿಜರೂಪವನ್ನು ಪತ್ತೆ ಹಚ್ಚುವುದು ಕಷ್ಟವೆಂಬ ರೀತಿಯಲ್ಲಿ ಸವೆದುಹೋಗಿವೆ. ಉದಾ : ಅಪ್ಪಯ್ಯ>ಪೈ (?), ರಾಜ>ರಾವ್>ರೈ>ರೇ (?), ಪದ್ಮಪ್ಪ>ಪದ್ಮಪ>ಪಂಪ (?), ಆದಿತ್ಯಣ್ಣ> ಆಚಣ್ಣ (?).

ಉದ್ದೇಶಿತ : ವ್ಯಕ್ತಿನಾಮಗಳಲ್ಲಿ ಉದ್ದೇಶೀತ ವ್ಯತ್ಯಾಸವು (೧) ವೈಯಕ್ತಿಕ ಪ್ರೀತಿ–ದ್ವೇಷ (೨) ಸಾಮಾಜಿಕ ಸ್ಥಾನ–ಮಾನಗಳಿಂದಾಗಿ ತಲೆದೋರುತ್ತದೆ. ಹಿರಿಯರು ಕಿರಿಯರಿಗೆ ಪ್ರೀತಿವ್ಯಕ್ತಪಡಿಸುವ ಸಂದರ್ಭದಲ್ಲಿ ಹೆಸರಿಗೆ ಉಕಾರ ಸೇರಿಸಿ ಮಲ್ಲು, ನೀಲು, ಗಂಗು, ಬಸು

---

೧೧. ಬೆಂಗೇರಿಯವರ ಬರಹಗಳು (೧೯೮೫) ಪುಟ ೬–೭

ಎಂದು ಕರೆಯುತ್ತಾರೆ. ಸಮವಯಸ್ಕರು ಪರಸ್ಪರ ಪ್ರೀತಿಗಾಗಿ ಸ್ತ್ರೀ ಹೆಸರಿಗೆ ಇ, ಪುರುಷ ಹೆಸರಿಗೆ ಆ್ಯ ಸೇರಿಸಿ ಅವುಗಳನ್ನು ವಿರೂಪದಿಂದ ಬಳಸುವುದುಂಟು. ಉದಾ : ಕಮಲಿ, ರಾಮ್ಯಾ. ರನ್ನನು ತನ್ನ ತಾಯಿಯ ಹೆಸರನ್ನು ಅಬ್ಬಲಬ್ಬೆ ಎಂದು, ಮಗಳ ಹೆಸರನ್ನು ಅತ್ತಿಮಬ್ಬೆ ಎಂದು ಹೇಳಿ, ಹೆಂಡಂದಿರ ಹೆಸರನ್ನು ಜಕ್ಕಿ, ಶಾಂತಿ ಎನ್ನುತ್ತಾನೆ. ಇದು ಪ್ರೀತಿಯ ದ್ಯೋತಕವೋ, ಸ್ತ್ರೀ ಉಪೇಕ್ಷಾ ದ್ಯೋತಕವೋ ಆಗಿರಬೇಕು. ಇಂದಿಗೂ ಉತ್ತರ ಕರ್ನಾಟಕದ ಪುರುಷರು ಲಗ್ನ ಮೊದಲಾದ ಸಂದರ್ಭಗಳಲ್ಲಿ, ಒಮ್ಮೊಮ್ಮೆ ದೈನಂದಿನ ವ್ಯವಹಾರಗಳಲ್ಲಿ ಹೆಂಡತಿಯ ಹೆಸರನ್ನು ಅಂದಗೆಡಿಸಿ ಬಳಸುವುದನ್ನು ನೋಡಿದರೆ, ಈ ರೂಢ ರನ್ನನಷ್ಟು ಪ್ರಾಚೀನವೆನಿಸುತ್ತದೆ. (ರನ್ನನು ಉತ್ತರ ಕರ್ನಾಟಕದ ಮುಧೋಳದವನು). ಇ ಮತ್ತು ಆ್ಯ ಗಳು ದ್ವೇಷ-ಕೋಪ ಸಂದರ್ಭದಲ್ಲಿಯೂ ಹೆಸರುಗಳಿಗೆ ತಗಲುತ್ತವೆ, ಉದಾ : ಸಂಗ್ಯಾ, ಸಂಗಿ.

ವಯಸ್ಸು, ಅಧಿಕಾರ, ಪೂಜ್ಯತೆಯಿಂದಾಗಿ ವ್ಯಕ್ತಿಗೆ ಸಾಮಾಜಿಕ ಗೌರವಗಳು, ಇವುಗಳ ಕೊರತೆಯಿಂದಾಗಿ ಅಗೌರವಗಳು ಪ್ರಾಪ್ತವಾಗುತ್ತಿದ್ದು, ಇದಕ್ಕೆ ಅನುಗುಣವಾಗಿ ವ್ಯಕ್ತಿನಾಮಗಳಲ್ಲಿ ವ್ಯತ್ಯಾಸ ತಲೆದೋರುತ್ತದೆ. ಉದಾ : ಚಂದಿಯಕ್ಕ (ಚಂದಿ+ಅಕ್ಕ)> ಚಂದಿಕಬ್ಬೆ (ಚಂದಿ+ಅಕ್ಕ+ಅಬ್ಬೆ). ಇವು ಕ್ರಮವಾಗಿ ಒಬ್ಬ ಸ್ತ್ರೀಯ ಪ್ರೌಢ, ವಾರ್ಧಕ ಅವಸ್ಥೆಗಳನ್ನು ಸೂಚಿಸುತ್ತವೆ. ಇವಳು ಗಾವುಂಡ ಇತ್ಯಾದಿ ಪ್ರತಿಷ್ಠಿತನನ್ನು ಮದುವೆಯಾದರೆ ಈ ಹೆಸರು ಚಂದಿಕಬ್ಬೆಗಾವುಂಡಿ ರೂಪ ತಾಳುತ್ತದೆ. ಇದಕ್ಕೆ ವಿರುದ್ಧವಾಗಿ ಕೆಳವರ್ಣದ ಸ್ತ್ರೀಪುರುಷರ ಹೆಸರುಗಳನ್ನು ವಿರೂಪಗೊಳಿಸುವುದು ಸಾಮಾನ್ಯ. ಇಂದಿಗೂ ಹಳ್ಳಿಗಳಲ್ಲಿ ಈ ರೂಢಿಯನ್ನು ನೋಡಬಹುದು. ಕೆಲವು ವರ್ಷಗಳ ಹಿಂದೆ ಕೆಳವರ್ಣದವರ ಹೆಸರುಗಳನ್ನು ಸರಕಾರಿ ದಾಖಲೆಗಳಲ್ಲಿ ನಿಂಗ್ಯಾ ತಂದಿ ಬಸ್ಯಾ ಹೊಲೇರ, ಕೆಂಚಿ ಗಂಡ ಬಸ್ಯಾ ಮಾದರ ಎಂದೇ ಬರೆಯುತ್ತಿದ್ದರು.

ಬ್ರಾಹ್ಮಣ ಸಮಾಜದಲ್ಲಿ ಸ್ತ್ರೀಯರ ಹೆಸರನ್ನು ವಿರೂಪಗೊಳಿಸುವುದು ಕೆಲವೊಮ್ಮೆ ಕಂಡುಬರುತ್ತದೆ. ಅಲ್ಲಿ ಮಿಕ್ಕವರು ಹೋಗಲಿ ಮಕ್ಕಳೂ ಚಂಪಾ ಎಂಬ ತಾಯಿಯ ಹೆಸರನ್ನು ಚಂಪಿ ಎಂದು ಬಳಸುವುದುಂಟು. ಬಹುಶಃ ಆ ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನವನ್ನು ಅದು ಸೂಚಿಸುತ್ತಿರಬಹುದು. ಹೀಗೆ ವ್ಯಕ್ತಿನಾಮ ಸಮಾಜಿಕ ಅಂತಸ್ತುಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತಿದ್ದು, ಈ ವ್ಯತ್ಯಸ್ತರೂಪ ಅವನ ವರ್ಗ, ವರ್ಣಗಳ ಸ್ತರವನ್ನು ಸೂಚಿಸುತ್ತದೆ.[೧೨]

---

೧೨. ಒಂದು ಹೆಸರು ಸಾಮಾಜಿಕ ಶ್ರೇಣಿಗಳಿಗನುಗುಣವಾಗಿ ವ್ಯತ್ಯಾಸವಾಗುವುದನ್ನು ಈ ಪದ್ಯ ಧ್ವನಿಸುತ್ತದೆ.

ಅಯ್ಯನಾರ ಹುಡುಗ
'ಬಸಯ್ಯ' ಅಂತ.
ಗೌಡರ ಹುಡುಗ
'ಬಸನಗೌಡ' ಅಂತ.
ಬಣಜಗೇರು (ಉಳಿದ ಲಿಂಗಾಯಿತ) ಹುಡುಗ
'ಬಸವರಾಜ' ಅಂತ.
ಆ ಕುರುಬರ ಹುಡುಗ
'ಬಸಪ್ಪ'ಅಂತ.
ನಾ 'ಬಸ್ಯಾ' ಅಂತ,
ಯಾಕಂದ್ರ ನಾ ಹೊಲ್ಯಾ ಅಂತ. ಸಿದ್ಧನಗೌಡ ಪಾಟೀಲ-ನಾ ಬಸ್ಯಾ ಅಂತ (೧೯೮೩) ಪುಟ ೨೩.

ಇದೆಲ್ಲವನ್ನು ನೋಡಿದರೆ ವ್ಯಕ್ತಿನಾಮದ ರೂಪದಲ್ಲಿ ಅನುದ್ದೇಶಿತ ವ್ಯತ್ಯಾಸ ಕಡಿಮೆ, ಆದರೆ ಯಾವುದೇ ವ್ಯಕ್ತಿಯ ವ್ಯಕ್ತ ಇಲ್ಲವೆ ಮೌನಸಮ್ಮತಿ ಇದ್ದರೆ ಮಾತ್ರ ಉದ್ದೇಶಿತ ವ್ಯತ್ಯಾಸ ಹೆಚ್ಚು ಎಂದು ಸ್ಪಷ್ಟವಾಗುತ್ತದೆ.

ಭಾಷಾಂತರ : ವ್ಯಕ್ತಿನಾಮದಲ್ಲಿ ಭಾಷಾಂತರ ಕಡಿಮೆ. ಹೀಗಿದ್ದೂ ಪ್ರಾಚೀನ ಕಾವ್ಯಗಳಲ್ಲಿ ರನ್ನ-ರತ್ನ, ಕಾಮ-ಮನಸಿಜ, ಚಂದ್ರ-ಅಂಬುಜಾರಿ, ಅಸಗ-ರಜಕ ಎಂಬಂಥ ಭಾಷಾಂತರಿತ ಹೆಸರುಗಳು ಸಿಗುತ್ತವೆ.

ನಾಮಾಂತರ : ಹುಟ್ಟಿದ ಕೂಡಲೇ ಗಂಡು ಇಲ್ಲವೆ ಹೆಣ್ಣು ಕೂಸಿಗೆ ಇಟ್ಟ ಹೆಸರಿನ ಮುಂದೆ ಅದರ ತಂದೆಯ ಹೆಸರು, ಅಡ್ಡ ಹೆಸರುಗಳು ಬರುತ್ತವೆ. ದತ್ತಕ ಹೋದರೆ ತಂದೆಯ ಹೆಸರು ಮತ್ತು ಅಡ್ಡ ಹೆಸರುಗಳಲ್ಲಿ ಬದಲಾವಣೆ ಸಂಭವಿಸುತ್ತದೆ. ಹೆಣ್ಣು ಮದುವೆಯಾದ ಬಳಿಕ ಅವಳ ಹೆಸರಿನ ಮುಂದೆ ತಂದೆಯ ಹೆಸರಿಗೆ ಬದಲು ಗಂಡನ ಹೆಸರು, ತಂದೆಯ ಅಡ್ಡ ಹೆಸರಿಗೆ ಬದಲು ಗಂಡನ ಅಡ್ಡ ಹೆಸರು ಸೇರಿಕೊಳ್ಳುತ್ತವೆ. ಇದು ಪೂರ್ಣನಾಮ ವಿನ್ಯಾಸದಲ್ಲಿ (ಹೆಸರು, ತಂದೆಯ ಹೆಸರು, ಅಡ್ಡ ಹೆಸರು) ಜರುಗುವ ವ್ಯತ್ಯಾಸಕ್ರಿಯೆ. ಕೆಲವು ಸಲ ವ್ಯಕ್ತಿನಾಮದಲ್ಲಿಯೇ ವ್ಯತ್ಯಾಸಕ್ರಿಯೆ ಹೀಗೆ ಜರುಗುತ್ತವೆ :

ಒಬ್ಬ ವ್ಯಕ್ತಿಗೆ ಅಧಿಕೃತ ಹೆಸರಲ್ಲದೆ ಬೇರೆ ಅನಧಿಕೃತ ಹೆಸರುಗಳೂ ರೂಢಿಯಲ್ಲಿರಬಹುದು. ಅಂದರೆ ಶಾಲೆಯಲ್ಲಿ ಅಧಿಕೃತ ಹೆಸರು, ಮನೆಯಲ್ಲಿ ಪ್ರೀತಿಯ ಹೆಸರು, ಸಮಾಜದಲ್ಲಿ ಚೇಷ್ಟೆಯ ಹೆಸರು ಇಲ್ಲವೆ ಗೌರವದ ಹೆಸರು ಬಳಕೆಯಲ್ಲಿರುವುದು ಅಸಂಭವವೇನಲ್ಲ. ಉದಾ : ಸೊಲ್ಲಾಪುರದ ವಾರದ ಮಲ್ಲಪ್ಪನವರಿಗೆ ಜನತೆ ಅಪ್ಪಾ ಸಾಹೇಬ ಎಂದು ಗೌರವ ಸೂಚಕವಾಗಿ ಕರೆಯುತ್ತಿದ್ದರು.

ಪ್ರಾಚೀನಕಾಲದಲ್ಲಿ ಸ್ತ್ರೀಯಾಗಿದ್ದರೆ ಮದುವೆ ಸಂದರ್ಭದಲ್ಲಿ, ಪುರುಷನಾಗಿದ್ದರೆ ಪಟ್ಟಬಂಧ ಸಂದರ್ಭದಲ್ಲಿ ವ್ಯಕ್ತಿನಾಮ ವ್ಯತ್ಯಾಸವಾಗುತ್ತಿರಬಹುದು. ಹೆಣ್ಣಿಗೆ ತವರು ಮನೆಯವರು ಇಟ್ಟ ಹೆಸರನ್ನು ಕೈಬಿಟ್ಟು ಗಂಡನ ಮನೆಯವರು ಮದುವೆಯಲ್ಲಿ ಬೇರೊಂದು ಹೆಸರನ್ನು ಅಂಟಿಸುವ ಪದ್ಧತಿ ಈಗಲೂ ಇರುವಂತೆ ಕ್ವಚಿತ್ತಾಗಿ ಪ್ರಾಚೀನಕಾಲದಲ್ಲಿಯೂ ಇರಬಹುದು. ಬಸವಣ್ಣ ಹೆಂಡತಿ ನೀಲಾಂಬಿಕೆಗೆ ತವರು ಮನೆಯವರು ಇಟ್ಟಿದ್ದ ಹೆಸರು ಬಹುಶಃ ಮಾಯಿದೇವಿ. ಕೆಲವು ಸಲ ಅಂಕಿತನಾಮಕ್ಕೆ ಬದಲು ರಾಣಿಯರ ವಂಶನಾಮಗಳೇ ಗಂಡನ ಮನೆಯಲ್ಲಿ ಅವರಿಗೆ ಮುಂದುವರಿದಿವೆ. ನೊಳಂಬಮಹಾದೇವಿ, ಪಲ್ಲವಮಹಾದೇವಿ, ಹೊಯ್ಸಳ ಮಹಾದೇವಿಯರು ನೊಳಂಬ, ಪಲ್ಲವ, ಹೊಯ್ಸಳ ಮನೆತನಗಳಿಂದ ಬಂದವರೆಂಬುದನ್ನು ಇಲ್ಲಿ ನೆನೆಯಬಹುದು. ಗಂಡನ ಹೆಸರನ್ನೇ ಸ್ತ್ರೀವಾಚಿಗೊಳಿಸಿ ಹೆಂಡತಿಗೆ ಮದುವೆಯಲ್ಲಿ ಪುನರ್ನಾಮಕರಣ ಮಾಡುತ್ತಿದ್ದುದಕ್ಕೆ ಶಾಸನಗಳಲ್ಲಿ ಉದಾಹರಣೆಗಳು ಸಿಗುತ್ತವೆ, ಉದಾ : "ಕಾಡವಟ್ಟಿಗೆ ವಿವಾಹಮಹೋತ್ಸವಮಂ ಮಾಡಿ, ಚಟ್ಟಲದೇವಿಗೆ ಕಾಡವಮಹಾದೇವಿ ಪಟ್ಟಮುಂ ಕಟ್ಟಿ", "ವೀರದೇವಂಗಂ ಕಂಚಲ ಮಹಾದೇವಿಯು ಮೆನಿಸಿಯುಮೆರಡನೆಯ ಪೆಸರಂ ತಾಳ್ದಿದ ವೀರಮಹಾದೇವಿಗಂ"[೧೩] ಎಂಬ ಉದಾಹರಣೆಗಳನ್ನು ನೋಡಿದರೆ ಮದುವೆಯ ಸಂದರ್ಭದಲ್ಲಿ ಸ್ತ್ರೀಯ ಹೆಸರನ್ನು ಗಂಡನ ಹೆಸರಿಗೆ ಸಮಾನವಾಗಿ

---

೧೩. ೧, ೨, ೩. ೪. E C VIII ನಗರ ೩೫, ಹುಂಚ (ಕ್ರಿ.ಶ.೧೦೭೭)

ಬದಲಿಸುತ್ತಿದ್ದರೆಂದು ವೇದ್ಯವಾಗುತ್ತದೆ. ಶಾಸನದಲ್ಲಿ ಸಿಗುವ ಬೊಪ್ಪದೇವ–ಬೊಪ್ಪಿಯಕ್ಕ, ತಿಪ್ಪಯ್ಯ–ತಿಪ್ಪವ್ವೆ, ಬೊಮ್ಮಗಾವುಂಡ–ಬೊಮ್ಮಗಾವುಂಡಿ ಎಂಬ ದಂಪತಿಗಳ ಸಮಾನ ಹೆಸರುಗಳು ಹೀಗೆ ಬದಲಿಸಿಕೊಂಡವುಗಳಾಗಿರುವ ಸಂಭವವೂ ಇದೆ. ಮದುವೆ ಸಂದರ್ಭದಲ್ಲಿ ಸ್ತ್ರೀಯ ಹೆಸರನ್ನು ಬದಲಿಸುವುದಕ್ಕೆ ಅವಳು ಮಾನಸಿಕವಾಗಿಯೂ ತವರನ್ನು ಮರೆತು, ತಮ್ಮ ಪರಿಸರದ ವ್ಯಕ್ತಿಯಾಗಿ ಬೆಳೆಯಲೆಂಬುದೇ ಕಾರಣವಾಗಿರಬಹುದು. ಗಂಡ ಹೆಂಡತಿಯ ಹೆಸರು ಹೀಗೆ ಒಂದೇ ಬಗೆಯಲ್ಲಿ ಇದ್ದವರು ಏಲಕ್ಕಿ ತಿಂದು ಕಣ್ಣಲ್ಲಿ ಊದಿದರೆ ಕಣ್ಣುಬೇನೆ ವಾಸಿಯಾಗುತ್ತದೆ ಎಂಬ ನಂಬಿಕೆಯಿದೆ.

ಪ್ರಾಚೀನಕಾಲದಲ್ಲಿ ಪುರುಷರಿಗೆ ಅದರಲ್ಲಿಯೂ ರಾಜಮನೆತನದ ಪುರುಷರಿಗೆ ಅಧಿಕೃತವಾಗಿಯೇ ಎರಡು ಹೆಸರುಗಳಿರುತ್ತಿದ್ದವೆಂದು ತೋರುತ್ತದೆ. ರಾಜಪುರುಷರು ಸಿಂಹಾಸನವೇರುವಾಗ ಈ ನಾಮಾಂತರಕ್ರಿಯೆ ಜರುಗುತ್ತಿರಬಹುದು. "ಶ್ರೀಪುರುಷದೇವಂ ಶ್ರೀವಲ್ಲಭನೆನಿಪ್ಪನ್ವರ್ಥಕ ನಾಮಮಂ ತಾಳ್ದಿ", "ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ" ಎಂಬ ಶಾಸನೋಲ್ಲೇಖಗಳು ಗಂಗಮನೆತನದಲ್ಲಿ ಜೋಡು ಹೆಸರು ಬಳಕೆಯಲ್ಲಿದ್ದುದನ್ನು ಸೂಚಿಸುತ್ತವೆ. ಈ ಪದ್ಧತಿ ಇವರ ಸಂಬಂಧಿಕರಾದ ಶಾಂತರಸರಲ್ಲಿಯೂ ಕಂಡುಬರುತ್ತದೆ. ಈ ಮನೆತನದ ತೈಲನು ಭುಜಬಳಶಾನ್ತರ, ಗೊಗ್ಗಿಯು ನನ್ನಿಶಾನ್ತರ, ಒಡ್ಡುಗನು ವಿಕ್ರಮಶಾನ್ತರ ಎಂದು "ಎರಡನೆಯ ಪೆಸರಂ" ಹೊತ್ತು ಬಾಳಿದ್ದಾರೆ.[೧೪] ಇವು ಬಿರುದುಗಳಾಗಿರದೆ ಹೆಸರುಗಳೇ ಆಗಿರಬಹುದು. ಹೀಗೆ ಎರಡು ಹೆಸರುಗಳನ್ನಿಡುವುದರ ಹಿಂದಿರುವ ಉದ್ದೇಶ, ನಂಬಿಕೆಗಳು ಶೋಧನೀಯವೆನಿಸಿವೆ.

ಪ್ರಾಚೀನ ನಾಮಗಳು :

ಕರ್ನಾಟಕದ ಪ್ರಾಚೀನ ದಾಖಲೆಗಳಲ್ಲಿ, ಅದರಲ್ಲಿಯೂ ಶಾಸನಗಳಲ್ಲಿ ಪ್ರಾಚೀನ ಕನ್ನಡಿಗರ ಲಕ್ಷೋಪಲಕ್ಷ ಹೆಸರುಗಳು ಸಿಗುತ್ತವೆ. ಇವುಗಳ 'ನಿರ್ದಿಷ್ಟ' ಮತ್ತು 'ವಾರ್ಗಿಕ'ಗಳ ಅಧ್ಯಯನದ ಮೂಲಕ ಇವು ಧ್ವನಿಸುವ ಸಂಸ್ಕೃತಿಯನ್ನು, ಅಲ್ಲಿ ಉಳಿದುಕೊಂಡಿರುವ ಸಮಸ್ಯೆಗಳನ್ನು ಜೊತೆ ಜೊತೆಯಾಗಿ ಅಭ್ಯಸಿಸಿದರೆ ಅನೇಕ ಉಪಯುಕ್ತ ಅಂಶಗಳು ಪ್ರಕಟವಾಗಬಹುದಾಗಿದೆ. ಪುರುಷನಾಮ, ಸ್ತ್ರೀನಾಮವೆಂದು ವರ್ಗೀಕರಿಸಿ ಈ ಮೊತ್ತವನ್ನು ಅಭ್ಯಸಿಸಬಹುದು.

ಪ್ರಾಚೀನ ಪುರುಷನಾಮ : ಪ್ರಾಚೀನ ಪುರುಷನಾಮಗಳಲ್ಲಿ ಅಪ್ಪ, ಅಯ್ಯ, ಅಪಯ್ಯ (ಭೀಮಪಯ್ಯ) ತಂದೆ, ಅಣ್ಣ (ಅಜಗಣ್ಣ), ತಮ್ಮ (ಮಲ್ಲಿತಮ್ಮ) ಎಂಬ ಸಂಬಂಧವಾಚಿ ವಾರ್ಗಿಕಗಳೂ, ಶಕ್ತಿ, ರಾಸಿ, ಪಂಡಿತವೆಂಬ ಶೈವಸೂಚಿ ವಾರ್ಗಿಕಗಳೂ, ಭಟ್ಟ ಭಟ್ಟೋಪಾಧ್ಯಾಯ ಎಂಬ ಬ್ರಾಹ್ಮಣಸೂಚಿ ವಾರ್ಗಿಕಗಳೂ; ಚಂದ್ರ, ನಾಥ, ಕೀರ್ತಿಗಳೆಂಬ ಜೈನಸೂಚಿ ವಾರ್ಗಿಕಗಳೂ ಅಲ್ಲದೆ ಕೇಶಿ, ರ, ಗ, ಮಾರ, ಮುದ್ದ, ಪುಲಿ, ಕೆಲ್ಲ ಎಂಬ ಸಾಮಾನ್ಯವಾರ್ಗಿಕಗಳು ವಿಪುಲ ಸಂಖ್ಯೆಯಲ್ಲಿ ಕಂಡುಬರುತ್ತವೆ. ಕಪ್ಪೆ ಅರಭಟ್ಟ, ಪುಲಿಕೇಶಿ ಎಂಬಂಥವು ಇಂದಿಗೂ ಸಮಸ್ಯೆಯಾಗಿ ಉಳಿದಿವೆ. ಕನ್ನರ, ಬೂತುಗ ಇತ್ಯಾದಿಗಳು ಅಭ್ಯಾಸಯೋಗ್ಯವೆನಿಸಿವೆ.

---

೧೪. ೧, ೨, ೩. ೪. E C VIII ನಗರ ೩೭, ಹುಂಚ (ಕ್ರಿ.ಶ.೧೧೪೭)

'ಕಪ್ಪೆಯರು' ಎಂದರೆ ಸನ್ಯಾಸಿಗಳು, ಈ ವರ್ಗದ ಅರಭಟ್ಟನೇ ಕಪ್ಪೆ ಅರಭಟ್ಟನೆಂದು ನಾನು ಒಂದೆಡೆ ಚರ್ಚಿಸಿದ್ದೇನೆ.[೧೫] ಪುಲಿಕೇಶಿ, ಪೋಲಕೇಶಿ, ಪೊಲೆಕೇಶಿ ಇಂದಿಗೂ ಸಮಸ್ಯೆಯಾಗಿ ಉಳಿದಿದೆ. ಈ ಬಗ್ಗೆ ಡಾ. ಫ್ಲೀಟ್, ಡಾ. ಕೆ.ಎ.ನೀಲಕಂಠಶಾಸ್ತ್ರಿ ಮೊದಲಾದವರು ಚರ್ಚಿಸಿದ್ದರೂ ನಿಜವಾದ ನೆಲೆ ಇನ್ನೂ ಸಿಕ್ಕಿಲ್ಲವೆಂದೇ ಹೇಳಬೇಕು.[೧೬] ಹುಲಿ, ಹೊಲೆ=(=ಮೈಲಿಗೆ, ಅನಿಷ್ಟ)ಗಳ ಹಿನ್ನೆಲೆಯಲ್ಲಿ ಹೇಳಿದ ಅರ್ಥಗಳು ಇನ್ನೂ ಸರ್ವಸಮ್ಮತವೆನಿಸಿಲ್ಲ. ಕ್ಯಾಸನೂರ ಶಾಸನದಲ್ಲಿ ಪೊಲೆಗ ಹೆಸರಿನ ವ್ಯಕ್ತಿಯ ಉಲ್ಲೇಖವಿದೆ (EI.XV-I ೨೮೫). ಕೇಸಿ ಕೊನೆಯಾಗುವ ಬೆಣ್ಣೆಗೇಸಿ, ಬಾದುಗೇಸಿ ಎಂಬ ಹೆಸರುಗಳು ಶಾಸನದಲ್ಲಿ[೧೭] ಸಿಗುತ್ತಿದ್ದು, ಈ ಗೇಸಿ, ಕೇಸಿಗಳು ಕೆಯ್ ಎಂಬ ಧಾತುವಿನತ್ತ ಬೆರಳು ನೀಡುತ್ತವೆ. ಈ ದಿಸೆಯಲ್ಲಿ ಪೊಲಕೇಶಿ(ಕೇಸಿ) ಎಂಬುದನ್ನು ವಿಚಾರಿಸುವುದು ಅಗತ್ಯವಿದೆ.

ಕನ್ನರ ಎಂಬುದನ್ನು ಎರಡು ರೀತಿಗಳಲ್ಲಿ ಅರ್ಥೈಸಬಹುದಾಗಿದೆ. ಕೃಷ್ಣ+ನೃಪ>ಕನ್ನ+ನರಪ>ಕನ್+ನರಅ=ಕನ್ನರ. ಕೃಷ್ಣ+ಅರಸು=ಕನ್ನ+ಅರ=ಕನ್ನರ. ಈ ರೀತಿಯಲ್ಲಿ ಗೋವಿಂದರ ಎಂಬಂಥ ನಾಮಗಳು ಪ್ರಾಚೀನ ಶಾಸನಗಳಲ್ಲಿ ಸಿಗುತ್ತವೆ.

ಇಂಥದೇ ಇನ್ನೊಂದು ಪುರುಷನಾಮ ಬೂತುಗ. ಇದನ್ನು ಬೂತು+ಗ ಎಂದು ಬಿಡಿಸಬೇಕು. ಇಲ್ಲಿಯ 'ಗ' ಎಂಬುದು ತದ್ಧತಪ್ರತ್ಯಯ. 'ಘನವಾಗಿ ವರ್ತಿಸುವನೀತನಿವರ್ಜೊಳೆಂಬಲ್ಲಿ ಕುಟಿಗ, ಗ ಪ್ರತ್ಯಯಮುಂಟು' ಎಂದು ಶಬ್ದಮಣಿದರ್ಪಣ ಹೇಳುತ್ತದೆ. ಈ ನಿಯಮದಂತೆ 'ಬೂತುಗ' ಎಂಬುದಕ್ಕೆ ಬಹುಶಃ ಬೂತುಗಳೊಡನೆ ವಾಸಿಸುವವ, ಶಿವ ಎಂಬ ಅನ್ವರ್ಥನಾಮವಾಚಿ ಅರ್ಥವನ್ನು ಹೇಳಬಹುದಾಗಿದೆ. ಆದರೆ ಬರುಬರುತ್ತ ಈ 'ಗ' ತದ್ಧಿತಪ್ರತ್ಯವನ್ನು ಅಗತ್ಯವಿಲ್ಲದಲ್ಲಿಯೂ ಹೆಸರುಗಳಿಗೆ ಹಚ್ಚುವುದು ರೂಢಿಯಾದಂತಿದೆ. ಪಂಪಭಾರತದಲ್ಲಿ ಅರಿಕೇಸರಿಯ ಪೂರ್ವಜನಿಗೆ ಭದ್ರದೇವ, ಬದ್ದೆಗ ಎಂಬ ಎರಡೂ ಹೆಸರುಗಳನ್ನು ಬಳಸಲಾಗಿದೆ. ಭದ್ರ>ಬದ್ದೆ ಮಾಡಿಕೊಂಡು ಅದರ ಮುಂದೆ 'ಗ' ಪ್ರತ್ಯಯವನ್ನು ಅರ್ಥವಿಲ್ಲದೆ ಹಚ್ಚಿರಬೇಕು. ಬಸವಣ್ಣನವರ ವಚನಗಳಲ್ಲಿ ಬರುವ ಕಾಟುಗ, ಕೆತ್ತುಗ, ಪೋಲುಗಗಳು ಅನ್ವರ್ಥರೂಪದ ತದ್ಧಿತನಾಮಗಳು. ಆದರೆ ಅಲ್ಲಿಯ ಬ್ರಹ್ಮಗ, ನಾರುಗ, ಜಿನುಗ, ಭೈರುಗ ಎಂಬ ಹೆಸರುಗಳಲ್ಲಿ ಮತ್ತು ಶಾಸನೋಕ್ತ ರಾಜಿಗ, ಎರಗ, ಆನೆಗ, ಬಪ್ಪುಗ, ಬಿಕ್ಕಿಗ, ಕತ್ತಿಗ, ಕಲಿಗ, ನಾಕಿಗ, ಬೆಟ್ಟಿಗ, ನನ್ನಿಗ ಎಂಬ ಹೆಸರುಗಳಲ್ಲಿ 'ಗ' ಅನಗತ್ಯ ಸೇರ್ಪಡೆಯೇ ಸರಿ. ಈ 'ಗ' ಎಂಬುದು 'ಗಿ' ಆದುದಕ್ಕೆ ಧನ್ನುಗಿ, ಆಚುಗಿ, ಅಮ್ಮುಗಿ ಉದಾಹರಣೆಯಾಗಿವೆ. ಈ ಮಾಲಿಕೆಯ 'ಕಚ್ಚೆಗ' ಎಂಬುದಕ್ಕೆ ಸರಿಯಾದ ಅರ್ಥ ಹೇಳುವುದು ಕೊಂಚ ತೊಂದರೆ. ಬಹುಶಃ ಕಚ್ಚೆ ಗಟ್ಟಿಯಿದ್ದವ ಅಂದರೆ 'ಶುಚಿ' ಎಂಬ ಅರ್ಥ ಇದಕ್ಕೆ ಇರಬಹುದು ಇಲ್ಲವೆ ಕಚ್ಚೆ (ಕಂಚಿನಗರ) ಗೆದ್ದವನೆಂಬ ಅರ್ಥವಿರಬಹುದು.

---

೧೫. ಕರ್ನಾಟಕ ಭಾರತಿ ೪-೩

೧೬. ವಾಗರ್ಥ-ಪು.೫೯-೬೧.

೧೭. E.C. VI ಚಿಕ್ಕಮಗಳೂರು ೩ (೮೯), ವಿಜಾಪುರ ಜಿಲ್ಲೆಯ ಶಾಸನಸೂಚಿ, ಪು.೩೪,೩೫ ಬಾದಾಮಿ ಶಾಸನ

'ಶಿವಮಾರ' ಎಂಬ ಹೆಸರು ಗಂಗರಲ್ಲಿ ಕಂಡುಬರುತ್ತದೆ. ೬೩ ಪುರಾತನರಲ್ಲಿ ಸೋಮಾಸಿಮಾರ, ಇಳೆಯಾಂಡಗುಡಿಮಾರ ಎಂಬ ಹೆಸರು ಬರುತ್ತಿದ್ದು, ಇವುಗಳ ಬೆಳಕಿನಲ್ಲಿ ಶಿವಮಾರವನ್ನು ಅರ್ಥೈಸಬೇಕಾಗಿದೆ. ಪ್ರಾಚೀನ ಕಾಲದಲ್ಲಿ 'ಮುದ್ದ'ದಿಂದ ಕೊನೆಗೊಳ್ಳುವ ಕುಲಮುದ್ದ, ಶಿವಮುದ್ದ ಎಂಬ ಹೆಸರುಗಳು ಸಿಗುತ್ತವೆ. 'ಪುಲಿ'ಯೆಂದು ಅಂತ್ಯಗೊಳ್ಳುವ ವಾದಪುಲಿ, ನಾಗಪುಲಿಯೆಂಬಂಥ ಹೆಸರುಗಳು ಕೆಲವೆಡೆ ಲಭಿಸುತ್ತವೆ. ಇದೇರೀತಿ ಗೆಲ್ಲ, ಕೆಲ್ಲಗಳು ಅಂತ್ಯದಲ್ಲಿರುವ ಸಿಯಗೆಲ್ಲ. ಅರಕೆಲ್ಲ ಎಂದಂಥ ಹೆಸರುಗಳು ಶಾಸನಗಳಲ್ಲಿವೆ. ಈ ಅರಕೆಲ್ಲದ ಹಳೆಯ ರೂಪ ಹಲ್ಮಿಡಿ ಶಾಸನದ ಸರಕ್ಕೆಲ್ಲ ಎಂದು ನಾನು ಬೇರೆಡೆ ತೋರಿಸಿದ್ದೇನೆ.[೧೮] ಇಲ್ಲಿಯ ಕೆಲ್ಲ ಎಂಬುದು ಮನೆತನದ ನಾಮವಾಗಿದೆ. –ತಮ್ಮ ಕೊನೆಯಾಗುವ ಮಲ್ಲಿತಮ್ಮ, ಮಸಣಿತಮ್ಮ, ಮಾಯಿತಮ್ಮ ಎಂಬ ಹೆಸರುಗಳು ದಕ್ಷಿಣ ಕರ್ನಾಟಕದ ಕೆಲವು ಶಾಸನಗಳಲ್ಲಿವೆ. ಇಂದಿಗೂ ಹಾಸನ, ಹೆಗ್ಗಡದೇವನಕೋಡೆ ತಾಲೂಕುಗಳ ಹರಿಜನರು ಇಂಥ ಹೆಸರುಗಳನ್ನಿಟ್ಟುಕೊಳ್ಳುತ್ತಾರೆಂದು ಡಾ. ಚಿದಾನಂದಮೂರ್ತಿ ತಿಳಿಸುತ್ತಾರೆ.[೧೯] ಇದೇ ರೀತಿ ತಂದೆ ಎಂದು ಕೊನೆಯಾಗುವ ಮಾಚಿತಂದೆ, ಮಾರಿತಂದೆ, ರಾಮಿತಂದೆ ಹೆಸರುಗಳು ಸಿಗುತ್ತಿದ್ದು, ಇವು ಮಾಚಯ್ಯ+ತಂದೆ= ಮಾಚಯತಂದೆ>ಮಾಚೀತಂದೆ>ಮಾಚಿತಂದೆ ಎಂಬ ರೀತಿಯಲ್ಲಿ ಬಂದುವಾಗಿವೆ. ತಮ್ಮ, ತಂದೆ ಕೊನೆಯಲ್ಲಿ ಉಳ್ಳ ಈ ಪ್ರಯೋಗ ತುಂಬ ಅಪರೂಪವೆಂದೇ ಹೇಳಬೇಕು. ಬಸವರಾಜದೇವರ ರಗಳೆಯಲ್ಲಿ 'ಬಸವಿದೇವ' ಎಂಬ ರೂಪವಿದೆ. ಇದು ಬಸವಯ್ಯದೇವ>ಬಸವೇದೇವ/ಬಸವಿದೇವ ಎಂದಾಗಿದೆ.

ಕಾಳಾಮುಖ ಗುರುಗಳ ಹೆಸರಿನ ಮುಂದೆ ಶಕ್ತಿ, ಜೀಯ, ರಾಸಿ, ಪಂಡಿತ ಪದಗಳು ಕಂಡುಬರುತ್ತವೆ. ಉದಾ : ಕ್ರಿಯಾಶಕ್ತಿ, ಕೇತಜೀಯ, ಅಮೃತರಾಸಿ, ವಾಮದೇವ ಪಂಡಿತ. ಬ್ರಾಹ್ಮಣ ಹೆಸರುಗಳು ಸಂಸ್ಕೃತಮಯವಾಗಿರುತ್ತವೆ. ಅವರ ಹೆಸರಿನ ಮುಂದೆ ಭಟ್ಟ, ಭಟ್ಟೋಪಾಧ್ಯಾಯ ಇತ್ಯಾದಿಗಳು ಹುತ್ತುತ್ತವೆ. ಜೈನ ಹೆಸರುಗಳೂ ಸಾಮಾನ್ಯವಾಗಿ ಸಂಸ್ಕೃತಮಯವಾಗಿದ್ದು, ಕೊನೆಗೆ ಚಂದ್ರ, ನಾಥ, ಕೀರ್ತಿ ಇತ್ಯಾದಿಗಳು ಸೇರಿಕೊಳ್ಳುತ್ತವೆ.

ರಾಜಮನೆತನದಲ್ಲಿ ಒಂದು ಹೆಸರು ಪದೇ ಪದೇ ಕಾಣಿಸಿಕೊಂಡಾಗ ಆ ಹೆಸರಿಗೆ ಮೊದಲು ಇಮ್ಮಡಿ, ಮುಮ್ಮಡಿ ಇತ್ಯಾದಿ ವಿಶೇಷಣಗಳನ್ನು ಬಳಸಲಾಗಿದೆ. ಉದಾ: ಇಮ್ಮಡಿ ತೈಲಪ.

ಪ್ರಾಚೀನ ಸ್ತ್ರೀನಾಮ : ಪ್ರಾಚೀನ ಸ್ತ್ರೀನಾಮಗಳಲ್ಲಿ ಅಬ್ಬೆ (ಅತ್ತಿಮಬ್ಬೆ, ಗುಂಡಮಬ್ಬೆ), ಅವ್ವೆ (ಗುಡ್ಡವ್ವೆ, ರೇಕವ್ವೆ)ಗಳಿಂದ ಕೊನೆಗೊಳ್ಳುವ ಹೆಸರು ಸಾಮಾನ್ಯ. ಬಹುಶಃ ತಾರುಣ್ಯದಲ್ಲಿ ಸ್ತ್ರೀನಾಮಕ್ಕೆ ಅಕ್ಕ ಎಂಬುದನ್ನು ಅಂಟಿಸಿ ಚಂದಿಯಕ್ಕ, ಮಹಾದೇವಿಯಕ್ಕ ಎಂಬಂಥ ರೂಪಗಳನ್ನು ರೂಢಿಸುತ್ತಿದ್ದರು. ತಂಗಿಯೆಂಬುದನ್ನು ವಾರ್ಗಿಕವಾಗಿ ಅಂಟಿಸಿದ ರೂಪ ಲಭ್ಯವಿಲ್ಲ. ಪುರುಷವಾಚಿಯ ಮುಂದೆ ಸ್ತ್ರೀಸೂಚಿವಾರ್ಗಿಕ ಜೋಡಿಸಿರುವುದೂ ಉಂಟು. ಉದಾ : ಗುಂಡಮ–ಇದು ಪುರುಷನಾಮ.

---

೧೮. ಅಧ್ಯಯನ (ಶಂ.ಬಾ. ಜೋಶಿ ಗೌರವಗ್ರಂಥ) ಪು. ೩೫೯

೧೯. ವಾಗರ್ಥ : ಪು.೨೦೨

ಇದಕ್ಕೆ–ಅಬ್ಬೆ ಸೇರಿಸಿ ಗುಂಡಮಬ್ಬೆ ರೂಪವನ್ನು ಸಿದ್ಧಿಸಲಾಗಿದೆ. ಅತ್ತಿಮಬ್ಬೆ ಇದೇ ರೀತಿಯ ರಚನೆಯಾಗಿದೆ.* ಒಮ್ಮೊಮ್ಮೆ ಚಂದಿಕಬ್ಬೆ(ಚಂದಿ+ಅಕ್ಕ+ಅಬ್ಬೆ), ಚಂದಿಕವ್ವೆ (ಚಂದಿ+ಅಕ್ಕ+ಅವ್ವೆ) ಎಂಬಂಥ ಜೋಡು ಸಂಬಂಧವಾಚಿಗಳಿಂದ ಕೊನೆಗೊಳ್ಳುವ ಹೆಸರುಗಳು ಕಾಣಸಿಗುತ್ತವೆ. ಅವ್ವೆ>ಆಯಿ ಆಗಿದೆ (ಚಿಕ್ಕವ್ವೆ>ಚಿಕ್ಕಾಯಿ. ಕಮಳವ್ವೆ>ಕಮಳಾಯಿ).

ಇಂದಿಗೂ 'ಬಾಯಿ' ಎಂಬ ಆಕೃತಿಮಾದಿಂದ ಕೊನೆಗೊಳ್ಳುವ ಹೆಸರುಗಳು ಬಳಕೆಯಲ್ಲಿದ್ದು, ಇದು ಮರಾಠಿ ಪ್ರಭಾವವೆಂದೂ ಇತ್ತೀಚಿನವೆಂದೂ ಕೆಲವರು ಭಾವಿಸಿದ್ದಾರೆ. ಆದರೆ ಜಸಮಬಾಯಿ, ಮಲ್ಲುಬಾಯಿ, ಹೀರುಬಾಯಿ ಎಂಬಂಥ ಹೆಸರುಗಳು ೧೨ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಕನ್ನಡ ಶಾಸನಗಳಲ್ಲಿ ಕಾಣಿಸಿಕೊಂಡಿವೆ. ಇಲ್ಲಿ ಅಬ್ಬೆ+ಅವ್ವೆ>ಅಬ್ಬೆ+ಆಯಿ>ಅಬ್ಬಾಯಿ>ಬಾಯಿ ಎಂದಾಗಿದೆ. ಕಾರಣ ಇದು ಮೂಲತಃ ಕನ್ನಡ ರೂಪವೇ ಆಗಿದೆ. 'ಅಬ್ಬೆ' ಎಂಬುದು ಹೆಸರಿನ ಭಾಗವೆಂದು ಭ್ರಮಿಸಿ ಅವ್ವೆ ಎಂಬ ಇನ್ನೊಂದು ಸಂಬಂಧವಾಚಿ ವಾರ್ಗಿಕವನ್ನು ಜೋಡಿಸಿದ, ಇಲ್ಲವೆ ಅಬ್ಬೆ+ಅವ್ವೆಯೆಂದು ಜೋಡು ವಿಶೇಷಣ ಬಳಸಿದ ಪರಿಣಾಮವಿದು. ಜೋಡು ವಿಶೇಷಣ ಹಚ್ಚುವುದು ಆ ಸ್ತ್ರೀಯ ಪ್ರತಿಷ್ಠೆಯ ಸಂಕೇತವಾಗಿದೆ. ಈ ಕಾರಣದಿಂದಲೇ 'ಬಾಯಿ' ಎಂಬುದನ್ನು ಸ್ತ್ರೀಯರು ಪ್ರತಿಷ್ಠೆಯ ಸಂಕೇತವೆಂದು ಈಗಲೂ ಭಾವಿಸುವಂತಿದೆ.

ಸಾಮಾನ್ಯವಾಗಿ ಏಚಲಾ, ಬಾಚಲಾ ಎಂಬಂಥ 'ಲಾ' ಕೊನೆಯಾಗಿರುವ ಸ್ತ್ರೀನಾಮಗಳು ಶಾಸನದಲ್ಲಿ ಹೆಚ್ಚು. ಈ 'ಲಾ' ಏನನ್ನು ಸೂಚಿಸುತ್ತದೆ ? ಹೇಳುವುದು ಕಷ್ಟ. ಏಚಲಾ, ಬಾಚಲಾಗಳಂತೆ ಸಂಸ್ಕೃತದಲ್ಲಿ ಮೃದುಲಾ (ಮೃದು+ಲಾ) ಇತ್ಯಾದಿ ಪ್ರಯೋಗಗಳಿವೆ. ಹೀಗಾಗಿ ಸಂಸ್ಕೃತದ ಪ್ರಭಾವದಿಂದ ಕನ್ನಡ ಸ್ತ್ರೀನಾಮಗಳಿಗೂ 'ಲಾ' ಅಂಟಿಕೊಂಡಿರಬಹುದು. ಇಲ್ಲವೆ ಸ್ತ್ರೀಯನ್ನು ಸೂಚಿಸುವ ಅಣ್ (>ಅಣ) ಅಥವಾ ಅಲ್ (>ಅಲ) ಅಥವಾ ಅಳ್ (>ಅಳ)ದಿಂದ ಈ ಲಾ ಬಂದಿರಬಹುದು. ಶಾಸನದಲ್ಲಿ ಅಬ್ಬಣ+ಅಬ್ಬೆ, ಅಬ್ಬಲ+ಅಬ್ಬೆ, ಅಬ್ಬಳ+ಅಬ್ಬೆ ಎಂಬ ರೂಪಗಳು ಸಿಗುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬಹಳಷ್ಟು ಸಲ ಕಂಡು ಬರುವ ಮಾಳಿಗೌಡಿ, ಮಾಚವೆನಾಯಕಿತಿ, ಸುಗ್ಗಿಯಬ್ಬರಿಸಿ ಇತ್ಯಾದಿ ಹೆಸರುಗಳ ಕೊನೆಯ ಗೌಡಿ, ನಾಯಕಿತಿ, ಅರಸಿ ಎಂಬಿವು ಇವರ ಆಡಳಿತದ ಸೂಚನೆಗಳಾಗಿರದೆ ಇವರ ತಂದೆ ಇಲ್ಲವೆ ಗಂಡನ ಆಡಳಿತವನ್ನು ಸೂಚಿಸುತ್ತವೆ. ಇಲ್ಲಿ ಪುರುಷವಾಚಿವೃತ್ತಿಯ ಕೊನೆಯನ್ನು ಇಕಾರಗೊಳಿಸುವುದು (ಗಾವುಂಡ>ಗಾವುಂಡಿ), ಕೊನೆಯಲ್ಲಿ ಇತಿ ಆರೋಪಿಸುವುದು (ಗಾವುಂಡ>ಗಾವುಂಡಿತಿ) ಕಂಡುಬರುತ್ತದೆ. ಇದೇ ರೀತಿ ನಾಯಕ> ನಾಯಕಿ>ನಾಯಕಿತಿ, ಅರಸ>ಅರಸಿ?ಅರಸಿತಿ ಎಂಬಂಥ, ಸಾಮಾಜಿಕ ವೃತ್ತಿಸೂಚಿ ಪ್ರಸಂಗದಲ್ಲಿ ಗಾಣಿಗಿತಿ, ಗಾಣಿಗಿತ್ತಿ ಎಂಬಂಥ ಎರಡು ರೂಪಗಳು ಕಂಡುಬರುತ್ತವೆ. ಗಾಣಿಗ+ಸ್ತ್ರೀ ಎಂದು ಇದನ್ನು ಬಿಡಿಸುವಂತೆ ಗಾಣ>ಗೇತಿ(=ಮಾಡುವವಳು) ಎಂದೂ ಬಿಡಿಸಲು ಬರುವಂತಿದೆ. ಇದರ ಪುಲ್ಲಿಂಗರೂಪ ಗಾಣಗೇತ ಇರಬಹುದೆ?

---

* ಅತ್ತಿಯಬ್ಬೆ ರೂಪಗಳೂ ಸಿಗುತ್ತವೆ.

ಸ್ತ್ರೀನಾಮಗಳ ಕೊನೆಗೆ ನಾಯಕಿತಿ, ನಾಗತಿ, ನೇತಿ ಎಂಬ ಪದಗಳು ಬಳಕೆಯಾಗಿವೆ. ಉದಾ : ಅಬೆನಾಗತಿ (ಅಬ್ಬೆ+ನಾಯಕಿತಿ>ನಾಗತಿ). ಅಪ್ಪಾವಿನೇತಿ (ಅಪ್ಪವ್ವೆ> ಅಪ್ಪಾವಿ+ ನಾಯಕಿತಿ> ನಾಯತಿ>ನಾಯಿತಿ>ನೇತಿ).

ತೀರ ಪ್ರಾಚೀನಕಾಲದ ಅಂದರೆ ಬಾದಾಮಿ ಚಾಲುಕ್ಯರ ಕಾಲದ ಸೂಳೆಯರಿಗೆ ಬಾದಿಪೊಡ್ಡಿ, ವಿನಾಪೋಟಿ ಎಂಬಂಥ ಹೆಸರುಗಳಿದ್ದು, ಇಲ್ಲಿಯ ಉತ್ತರ ಆಕೃತಿಮಾಗಳು ಸೂಳೆ ಅರ್ಥದ ಈಗಿನ 'ಬೊಡ್ಡಿ' ಎಂಬುದನ್ನು ಸೂಚಿಸುತ್ತವೆ.

ಪ್ರತಿಷ್ಠಿತ ಮನೆತನದ ಸ್ತ್ರೀನಾಮದ ಕೊನೆಗೆ –ದೇವಿ, –ಮತಿ ಇತ್ಯಾದಿಗಳು, ಸಾಮಾನ್ಯ ಮನೆತನದ ಸ್ತ್ರೀನಾಮದ ಕೊನೆಗೆ–ಅವ್ವೆ,–ಅಬ್ಬೆ ಇತ್ಯಾದಿಗಳು ಹತ್ತುತ್ತಿದ್ದವು.

ಆಧುನಿಕ ನಾಮಗಳು :

ಇಪ್ಪತ್ತನೆಯ ಶತಮಾನ ಯಂತ್ರಯುಗ, ಇದರಿಂದಾಗಿ ಆಂತರಿಕ ಭಾವನೆಯಲ್ಲಿ, ಬಾಹ್ಯಜೀವನದಲ್ಲಿ ವೇಗವಾದ ಬದಲಾವಣೆಗಳು ಸಂಭವಿಸುತ್ತಲಿವೆ. ಇದರ ಪರಿಣಾಮ ಸಹಜವಾಗಿ ಹೆಸರಿನ ಮೇಲೂ ಆಗುತ್ತಲಿದೆ. ಹೀಗಾಗಿ (೧) ಹೆಸರಿಡುವ ದೃಷ್ಟಿಕೋನದಲ್ಲಿ ಬದಲಾವಣೆ, (೨) ಇಟ್ಟ ಹೆಸರಿನ ಸುಧಾರಣೆ. (೩) ಇಟ್ಟ ಹೆಸರಿನ ಬದಲಾವಣೆ ಎಂಬ ಅಂಶಗಳು ಹೀಗೆ ಒಡೆದು ಕಾಣುತ್ತಲಿವೆ :

೧. ತಂದೆಯ ಹೆಸರು ಕಲ್ಲಪ್ಪ–ಮಗಳ ಹೆಸರು ಕಲ್ಪನಾ, ಅಕ್ಕನ ಹೆಸರು ಭರಮವ್ವ– ತಂಗಿಯ ಹೆಸರು ಭಾವನಾ ಹೀಗೆ ಕುಟುಂಬದಲ್ಲಿ ನಾಗರಿಕತೆಯ ಮಿಶ್ರಣವೆಂಬಂತೆ ನಾಮಮಿಶ್ರಣ ಕಂಡುಬರುತ್ತಲಿದೆ, ಇದಕ್ಕೆ ಹೆಸರಿಡುವ ದೃಷ್ಟಿಕೋನದಲ್ಲಾದ ಬದಲಾವಣೆ ಕಾರಣವಾಗಿದೆ.

೨. ಹೆಸರುಗಳಲ್ಲಿ ಸುಧಾರಣೆ ತೀರ ಸಲೀಸಾಗಿ ಇಂದು ನಡೆದಿದೆ. ಸಂಬಂಧವಾಚಿ ವಾರ್ಗಿಕಗಳನ್ನು ಕಳಚಿಹಾಕಿ, ನಾಮದಲ್ಲಿ ಸುಧಾರಣೆ ಮಾಡಿಕೊಳ್ಳುವ ಪ್ರವೃತ್ತಿ ವ್ಯಾಪಕವಾಗಿ ಕಾಣುತ್ತದೆ. ಬಸಪ್ಪ–ಬಸವರಾಜ–ಬಸವಪ್ರಭು, ಗೋವಿಂದಪ್ಪ–ಗೋವಿಂದರಾಜ, ಈಶ್ವರಪ್ಪ–ಈಶ್ವರನ್, ಗುರವ್ವ–ಗುರುದೇವಿ ಇತ್ಯಾದಿ.

೩. ಎಷ್ಟು ಪ್ರಯತ್ನಿಸಿದರೂ ತಮ್ಮದು ಸುಧಾರಣೆಯಾಗದ ಹೆಸರಾಗಿದ್ದರೆ ಇಡಿಯಾಗಿ ಬದಲಾವಣೆ ಮಾಡಿಕೊಳ್ಳುವುದುಂಟು. ಉದಾ : ಕುಂಟ ಸಿಂಗ್ರಿಗೌಡ–ಕೃಷ್ಣಕುಮಾರ. ಇಂಥ ಬದಲಾವಣೆ ಉತ್ತರ ಕರ್ನಾಟಕಕ್ಕಿಂತ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು.

ಇಂದು ಜಾತಿಯು ಮೌಲ್ಯ ಕಳೆದುಕೊಳ್ಳುತ್ತಿರುವುದರಿಂದ ಜಾತಿವಾಚಿನಾಮಗಳಲ್ಲಿ ಬದಲಾವಣೆ ಮಾಡಿಕೊಳ್ಳುವ, ಸುಧಾರಣೆ ಮಾಡಿಕೊಳ್ಳುವ ಇಲ್ಲವೆ ಅಂಥವುಗಳನ್ನು ಇಟ್ಟುಕೊಳ್ಳದೆ ಇರುವ ಧೋರಣೆ ಬೆಳೆಯುತ್ತಲಿದೆ. ಉತ್ತರ ಕರ್ನಾಟಕದಲ್ಲಿ ಹೆಸರು ಸಾಮಾನ್ಯವಾಗಿ ಜಾತಿಯನ್ನು ಸೂಚಿಸುತ್ತಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಅಷ್ಟಾಗಿ ಸೂಚಿಸುವುದಿಲ್ಲ. ಸ್ವಾಮಿ, ಅಯ್ಯ ಉತ್ತರ ಕರ್ನಾಟಕದಲ್ಲಿ ಪುರೋಹಿತ ವರ್ಗದವರ ಹೆಸರಿನ ಕೊನೆಗೆ, ದಕ್ಷಿಣ ಕರ್ನಾಟಕದಲ್ಲಿ ಯಾವುದೇ ಜಾತಿಯ ನಾಮದ ಕೊನೆಗೆ ಕಾಣಿಸಿಕೊಳ್ಳುತ್ತವೆ. ಮುಂಬೈ ಕರ್ನಾಟಕದಲ್ಲಿ ರಾವ್ ಎಂಬುದು

ಬ್ರಾಹ್ಮಣ ಹೆಸರುಗಳ ಕೊನೆಗೆ, ಹೈದ್ರಾಬಾದ್ ಕರ್ನಾಟಕದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ವ್ಯಕ್ತಿನಾಮಗಳ ಕೊನೆಗೆ ಕಾಣಿಸಿಕೊಳ್ಳುತ್ತದೆ.

ನವೋದಯ ಮತ್ತು ಭಾರತ ಸ್ವಾತಂತ್ರ್ಯ ಚಳುವಳಿಗಳು ಜೊತೆ ಜೊತೆಯಾಗಿಯೇ ನಮ್ಮಲ್ಲಿ ಅಸ್ತಿತ್ವಕ್ಕೆ ಬಂದ ಕಾರಣ ಮನೋಹರ, ಮೋಹನ, ಸುಶೀಲಾ, ಸುಕನ್ಯಾ ಎಂಬ ರಮ್ಯ ಹೆಸರುಗಳೂ ಅರವಿಂದ, ವಿವೇಕಾನಂದ, ಪರಮಹಂಸ, ರವೀಂದ್ರ ಎಂಬಂಥ ನೇತಾರರ ಹೆಸರುಗಳೂ ಕೆಲವು ದಶಕಗಳ ಹಿಂದೆ ತುಂಬ ಪ್ರಚಾರದಲ್ಲಿದ್ದವು.

ಇತ್ತೀಚೆ ಭಾವನಾಮಗಳು ಹೆಚ್ಚು ಬಳಕೆಗೊಳ್ಳುತತಲಿವೆ. ಉದಾ : ವಂದನಾ, ಶ್ರುತಿ, ಶಿಲ್ಪಾ, ಶ್ವೇತಾ, ಸ್ಮಿತಾ, ಸೌಮ್ಯ, ಕ್ಷಮಾ ಇತ್ಯಾದಿ.

ದೇವರು ಮತ್ತು ಆರಾಧನೆಗಳು ಸಮಾಜದಿಂದ ದೂರ ಸರಿಯುತ್ತಲಿರುವ ಇಂದಿನ ಕಾಲದಲ್ಲಿ ಮಕ್ಕಳಿಗೆ ದೇವರ ಹೆಸರಿಡುವುದು ಕಡಿಮೆಯಾಗಿದೆ. ಅಲ್ಲದೆ ನಾಮಕರಣವು ಆಚರಣೆಯ ಪಾವಿತ್ರ್ಯ ಕಳೆದುಕೊಂಡು, ಸಂತೋಷಕೂಟದ ಬಣ್ಣ ತಳೆಯುತ್ತಲಿದೆ. ದ್ರಾವಿಡ ಹೆಸರುಗಳು ವೇಗವಾಗಿ ಅವಸಾನದತ್ತ ನಡೆದಿದ್ದು, ಸಂಸ್ಕೃತ ಹೆಸರುಗಳು ಹೆಚ್ಚು ಪ್ರಭಾವಶಾಲಿಯಾಗಿ ಪ್ರವೇಶಗೊಳ್ಳುತ್ತಲಿವೆ. ಹಿಂದುಗಳಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣ ಹೆಸರುಗಳನ್ನು ಸಾಮಾನ್ಯವಾಗಿ ನಿಸ್ಸಂಕೋಚವಾಗಿ ಇಟ್ಟುಕೊಳ್ಳುತ್ತಾರೆ. ಬ್ರಾಹ್ಮಣರು ಮಾತ್ರ ಬ್ರಾಹ್ಮಣೇತರ ಹೆಸರುಗಳನ್ನು ಬಹುಶಃ ಇಟ್ಟುಕೊಳ್ಳುವುದಿಲ್ಲ. ಜೈನರು ಹಿಂದುಗಳ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಹಿಂದುಗಳು ಜೈನ ಹೆಸರುಗಳನ್ನು ಇಟ್ಟುಕೊಳ್ಳುವುದಿಲ್ಲ. ಮುಸ್ಲಿಂ. ಕ್ರಿಶ್ಚಿಯನ್ ಮತ್ತು ಹಿಂದುಗಳು ತಮ್ಮ ತಮ್ಮ ಹೆಸರುಗಳನ್ನು ಕಟ್ಟು ನಿಟ್ಟಾಗಿ ಬಳಸುತ್ತಾರೆ. ಕ್ರೈಸ್ತಮತ ಸ್ವೀಕರಿಸಿದ ಹಿಂದೂಗಳು ಕೆಲವೊಮ್ಮೆ ಹಳೆಯ ಹೆಸರಿನಿಂದಲೇ ಮುಂದುವರಿಯುತ್ತಾರೆ. ಉದಾ : ಉತ್ತಂಗಿ ಚೆನ್ನಪ್ಪ. ಹೆಸರು ಬದಲಿಸಿಕೊಂಡರೂ ಅದಕ್ಕೆ ಕನ್ನಡ ಸಂಬಂಧವಾಚಿ ಹಚ್ಚಿಕೊಂಡಿದ್ದಾರೆ. ಉದಾ : ಡೇನಿಯಲ್>ದಾನಿಯೇಲಪ್ಪ.

ವೀರಶೈವರಲ್ಲಿ ಭಾಗಶಃ ಮುಸಲ್ಮಾನವಾಗಿರುವ ಫಕೀರಪ್ಪ, ಪೀರಪ್ಪ, ಅಮೀನಪ್ಪ, ಸಾಹೇಬಗೌಡ, ಹಸನಪ್ಪ ಎಂಬ ಹೆಸರುಗಳೂ, ಭಾವಸಾರ ಕ್ಷತ್ರಿಯರಲ್ಲಿ ನಾರಾಯಣಸಾ ಎಂಬಂಥ ಸಾ ಅಂತ್ಯವುಳ್ಳ ಹೆಸರುಗಳೂ ಸಿಗುತ್ತವೆ. ಮುಸಲ್ಮಾನರು ಮಾತ್ರ ಹಿಂದೂ ಹೆಸರಿನ ನಿದಿಷ್ಟಗಳನ್ನು ಸ್ವೀಕರಿಸಿಲ್ಲ. ಸಂಬಂಧವಾಚಿ ವಾರ್ಗಿಕ (ಇಮಾಮಸಾಹೇಬ> ಇಮ್ಮಣ್ಣ, ಹುಸನಬಿ>ಹುಸನವ್ವ), ಸಂಬಂಧೇತರವಾಚಿ ವಾರ್ಗಿಕ (ಕಾಶಿಮ+ಗೌಡ)ಗಳನ್ನು ಸ್ವೀಕರಿಸಿದ್ದಾರೆ.

ಸಮಾರೋಪ :

ವ್ಯಕ್ತಿಗೆ ಹೆಸರಿಡುವುದರ ಹಿಂದೆ ಬಲವತ್ತರವಾದ ಒಂದು ಕಾರಣವಿರುತ್ತದೆ. ಜನಾಂಗದ ಸಂಸ್ಕೃತಿ ಬದಲಾಗುತ್ತ ಬಂದಂತೆ ಅಲ್ಲಿಯ ಹೆಸರುಗಳೂ ಬದಲಾಗುತ್ತ ಬರುವುದರಿಂದ ಯಾವುದೇ ಜನಾಂಗದ ಸಾಂಸ್ಕೃತಿಕ ಚರಿತ್ರೆಯನ್ನು ಘಟ್ಟಘಟ್ಟವಾಗಿ ಕಟ್ಟುವುದಕ್ಕೆ ಹೆಸರುಗಳು ಸಹಾಯ ನೀಡುತ್ತವೆ.

ಶಾತವಾಹನ, ಚುಟು ಮೊದಲಾದ ಪ್ರಾಚೀನತಮ ಅರಸರ ಹೆಸರುಗಳು ಗೌತಮೀಪುತ್ರ ಸಾತಕರ್ಣಿ ಎಂದು ಮುಂತಾಗಿ ಕಂಡುಬರುತ್ತವೆ. ಈ ಹೆಸರಿನ ಹಿಂದೆ ತಂದೆಯ ಹೆಸರಿಗೆ ಬದಲು

ತಾಯಿಯ ಹೆಸರಿದೆ. ಇದು ಈ ಕುಟುಂಬಗಳಲ್ಲಿದ್ದ ಮಾತೃಪ್ರಧಾನ ಪದ್ಧತಿಯನ್ನು ಸೂಚಿಸುತ್ತಿರಬೇಕು. ಈ ಅರಸರು ಘಟ್ಟ-ಬೆಟ್ಟಗಳ ಬನವಾಸಿ ಪ್ರದೇಶದವರು. ಬಯಲು ನಾಡಿಗಿಂತ ಘಟ್ಟ-ಬೆಟ್ಟಗಳ ನಾಡಿನಲ್ಲಿ ಬದುಕಿನ ಪ್ರಾಚೀನ ಅಂಶಗಳು ಹೆಚ್ಚು ಜೀವಂತವಾಗಿರುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಈ ಘಟ್ಟದ ಪ್ರದೇಶದಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಉದ್ದಕ್ಕೂ ಜೀವಂತವಾಗಿದ್ದುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ. ಅಳಿಯ ಸಂತಾನಕಟ್ಟು ಅಲ್ಲಿ ೧೯ನೆಯ ಶತಮಾನದ ವರೆಗೆ ಜೀವಂತವಿದ್ದುದನ್ನು ಇಲ್ಲಿ ನೆನೆಯಬಹುದು. ಹೀಗಾಗಿ ಮೇಲೆ ಸೂಚಿಸಿದ ಗೌತಮೀಪುತ್ರ ಸಾತಕರ್ಣಿ ಎಂಬಂಥ ಹೆಸರುಗಳು ಕೇವಲ ಹೆಸರುಗಳಾಗಿರದೆ ಕಳೆದುಹೋದ ಮಾತೃಪ್ರಧಾನ ಕುಟುಂಬ ಪದ್ಧತಿಯನ್ನು ಸೂಚಿಸುವ ಅಪೂರ್ವ ಆಧಾರವೆನಿಸಿವೆ ಮತ್ತು ಈ ಕುಟುಂಬ ಪದ್ಧತಿಯಲ್ಲಿ ವ್ಯಕ್ತಿಯ ಹೆಸರನ್ನು ತಾಯಿಯ ಹೆಸರಿನಿಂದ ಪ್ರಾರಂಭಿಸುತ್ತಿದ್ದರೆಂಬ ಅಂಶವನ್ನು ತಿಳಿಸುತ್ತವೆ. ರಾಮನನ್ನು ದಾಶರಥಿ (ದಶರಥನ ಮಗ) ಎಂದು, ಲಕ್ಷ್ಮಣನ್ನು ಸೌಮಿತ್ರಿ (ಸುಮಿತ್ರೆಯ ಮಗ) ಎಂದು ನಮ್ಮ ಕಾವ್ಯಗಳು ಕರೆದಿವೆ. ಬಹುಶಃ ದಶರಥನ ಪತ್ನಿಯರಲ್ಲಿ ಕೌಶಲ್ಯ ಆರ್ಯಮೂಲದ ಸ್ತ್ರೀ. ಸುಮಿತ್ರಾ ದ್ರಾವಿಡಮೂಲದ ಸ್ತ್ರೀಯಾಗಿರುವುದೇ ಹೀಗೆ ಕರೆಯುವುದಕ್ಕೆ ಕಾರಣವಾಗಿರಬಹುದೆಂದು ಶ್ರೀ ಬೆಂಗೇರಿ ಊಹಿಸುತ್ತಾರೆ.[೨೦]

ಹಲ್ಮಿಡಿ ಶಾಸನದ ವಿಜಾಅರಸನ ತಂದೆಯ ಹೆಸರು ಈವರೆಗೆ ಭಾವಿಸಿದಂತೆ ಎಲ್ಲಬಟರಿ ಅಲ್ಲ, ಸರಕ್ಕೆಲ್ಲ ಬಟರಿ. ಈ ಹೆಸರು ರಾಜಕೀಯ, ಭಾಷಿಕ ದೃಷ್ಟಿಯಿಂದ ತುಂಬ ಮಹತ್ವಪೂರ್ಣವಾದುದು. ೬ನೆಯ ಶತಮಾನದ ಹೊನ್ನಾವರ ಶಾಸನದ ಮಹಾಕೆಲ್ಲ, ೯ನೆಯ ಶತಮಾನದ ಉದಯಾವರ ಶಾಸನದ ಅರಕೆಲ್ಲ, ಪೊಳಲಿ ಶಾಸನದ ಸೇವ್ಯ ಅರಕೆಲ್ಲ, ೧೨ನೆಯ ಶತಮಾನದ ವೇಣೂರ ಮತ್ತು ಉಳಿಪಾಡಿ ಶಾಸನಗಳ ಸೇವ್ಯಗೆಲ್ಲ ಎಂಬ ವ್ಯಕ್ತಿನಾಮಗಳೂ ಹಲ್ಮಡಿಶಾಸನದ ಸರಕ್ಕೆಲ್ಲ ಎಂಬುದೂ ಪ್ರಾಚೀನ ಕೆಲ್ಲ ಹೆಸರಿನ ರಾಜವಂಶದ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಕೈಕಯ ಅರಸನಾದ ಚಿತ್ರಸೇನನು ತನ್ನನ್ನು ಕೆಲ್ಲ, ಮಹಾಕೆಲ್ಲ ಎಂದು ಕರೆದುಕೊಂಡಿರುವುದರಿಂದ ಇವರೆಲ್ಲ ಕೆಲ್ಲವಂಶೀಯರೆಂದು ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಕಂಡುಬರುವ ಬಂಕಾಪುರದ ಚೆಲ್ಲಕೇತ ಹೆಸರಿನ ರಾಜವಂಶಕ್ಕೂ ಈ ರಾಜ ವಂಶಕ್ಕೂ ಇರಬಹುದಾದ ಸಂಬಂಧ ಶೋಧನೀಯವೆನಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಕೆಲ್ಲ ಹೆಸರಿನ ಮನೆತನಗಳಿವೆಯೆಂದು ತಿಳಿದುಬರುತ್ತದೆ. ಇನ್ನು ಭಾಷಿಕವಾಗಿ ನೋಡಿದರೆ ಇಲ್ಲಿಯ 'ಸರಕ್ಕೆಲ್ಲ' ಮುಂದಿನ ಶಾಸನಗಳಲ್ಲಿ ಅರಕೆಲ್ಲ ರೂಪದಿಂದ ಸಿಗುತ್ತದೆ. ಏಕೆಂದರೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಆದಿತಾಲವ್ಯ ಸಕಾರ ಲೋಪವಗುತ್ತದೆ. ಉದಾ : ಸಾಸಿರ>ಆಯಿರ. ಸುಪ್ಪು>ಉಪ್ಪು (ಪಂಪಭಾರತದಲ್ಲಿ ಲವಣಾಂಶ ಪ್ರಧಾನವಾಗಿರುವ ಅಡಿಗೆಗೆ ಸುಪ್ಪಲ್ ಎಂದು ಕರೆಯಲಾಗಿದೆ. ೧೨-೧೬೦). ಹೆಚ್ಚಿನದಾಗಿ ಪ್ರಾಚೀನರೂಪವಾದ ಸರಕ್ಕೆಲ್ಲ ಎಂಬುದರ ಮಧ್ಯದಲ್ಲಿ ದ್ವಿತ್ವವಿದೆ. ದ್ರಾವಿಡಭಾಷೆಗಳಲ್ಲಿ ಎರಡು ಸ್ವರಗಳ ನಡುವಿನ ಅಘೋಷ ವರ್ಣ ಘೋಷಕ್ಕೆ ತಿರುಗುವುದು ಸಹಜ. ಈ ಅಂಶವನ್ನು ತಪ್ಪಿಸುವುದಕ್ಕೋಸುಗ ಇಲ್ಲಿ 'ಕ' ವರ್ಣಕ್ಕೆ ದ್ವಿತ್ವ ಕಲ್ಪಿಸಿರಬೇಕು. ಒಂದು ಹೆಸರು ಇಷ್ಟೆಲ್ಲ ಸಂಗತಿಗಳತ್ತ ನಮ್ಮ ಗಮನ ಸೆಳೆಯುವುದು ಅಪರೂಪವೆಂದು ಬೇರೆ ಹೇಳಬೇಕಿಲ್ಲ.

---

೨೦. ಬೆಂಗೇರಿಯವರ ಬರಹಗಳು. ಪು.೬

ಈ ತರುವಾಯ ಕಂಡುಬರುವ -ಗ ಕೊನೆಯುಳ್ಳ ಬೂತುಗ, ಬದ್ದೆಗ. ಕಚ್ಚೆಗ ಹೆಸರುಗಳು, -ಮಾರ ಕೊನೆಯುಳ್ಳ ಶಿವಮಾರದಂಥ ಹೆಸರುಗಳು, -ಕೇಶಿ ಕೊನೆಯುಳ್ಳ ಪುಲಕೇಶಿಯಂಥ ಹೆಸರುಗಳು-ಲಾ ಕೊನೆಯುಳ್ಳ ಸ್ತ್ರೀನಾಮಗಳು ಯಾವುದೋ ಒಂದು ವಿಶೇಷತೆಯತ್ತ ನಮ್ಮ ಕುತೂಹಲವನ್ನು ಕೆರಳಿಸುತ್ತವೆ.

ಮಹಾಕವಿ ಪಂಪನ ಹೆಸರು ಒಂದು ಧಾರ್ಮಿಕ ಪರಂಪರೆಯನ್ನೇ ಬಿಚ್ಚಿ ತೋರಿಸುತ್ತದೆ. ಈತ ಹುಟ್ಟಿದುದು ಅಣ್ಣಿಗೇರಿಯಲ್ಲಿ. ಪಂಪ ಎಂಬುದು ಬಹುಶಃ ಪದ್ಮಪ ಎಂಬುದರ ಸವೆದ ರೂಪ. ಇದು ೧೦ನೆಯ ಶತಮಾನದ ಹೊತ್ತಿಗೆ ಜೈನರಲ್ಲಿ ಪ್ರಬಲವಾಗಿದ್ದ ಪದ್ಮಾವತಿಯಕ್ಷಿಯ ಹೆಸರಿನಿಂದ ಪ್ರೇರಿತವಾಗಿರಬಹುದು. ಬಹುಶಃ ಪಂಪ ಹುಟ್ಟಿದುದು ತಾಯಿಯ ತವರುಮನೆ ಅಣ್ಣಿಗೇರಿಯಲ್ಲಿ. ಇದರಿಂದ ಅಣ್ಣಿಗೇರಿಯು ಸಮೀಪ ಪದ್ಮಾವತಿಯು ಆರಾಧನೆ ಪ್ರಧಾನವಾಗಿರಬೇಕೆನಿಸುತ್ತದೆ. ಬಹುಶಃ ಈಕೆ ಸಮೀಪದ ಪ್ರಸಿದ್ಧ ಜೈನಕೇಂದ್ರವಾದ ಲಕ್ಕುಂಡಿಯ ಪದ್ಮಾವತಿಯೇ ಆಗಿರಬೇಕು. ಲಕ್ಕುಂಡಿಯ ಮೂಲರೂಪ ಲೊಕ್ಕಿಗುಂಡಿ, ಲೊಕ್ಕಿ ಎಂದರೆ ಪದ್ಮಾವತಿ. ಈ ಊರಿನ ಕೆರೆಯ (ಕುಂಡ>ಗುಂಡಿ) ತೀರದ ಮೇಲಿದ್ದ ಪದ್ಮಾವತಿಯ ಹೆಸರನ್ನೇ ಪಂಪನಿಗೆ ಇಟ್ಟಿರುವ ಸಾಧ್ಯತೆಯಿದೆ. ಇಲ್ಲವೆ ಪಂಪನ ವಂಶೀಯರಾಗಿರಬಹುದಾದ ಇಂದಿನ ಅಣ್ಣಿಗೇರಿಯ ದೇಶಪಾಂಡೆ ಹೆಸರಿನ ಜೈನ ಕುಟುಂಬದಲ್ಲಿ ಸವದತ್ತಿ ಎಲ್ಲಮ್ಮನ ಪೂಜೆಗೆ ಪ್ರಧಾನಸ್ಥಾನವಿದೆ. ಈ ಎಲ್ಲಮ್ಮ ಪದ್ಮಾವತಿಯಕ್ಷಿಯೆಂದು ನಾನು ಬೇರೆಡೆ ತೋರಿಸಿದ್ದೇನೆ (ಕರ್ನಾಟಕ ಭಾರತಿ ೧೭-೩). ಸವದತ್ತಿಯ ಈ ಪದ್ಮಾವತಿಯೇ ಕವಿ ಪಂಪನ ಹೆಸರಿಗೆ ಕಾರಣವಾಗಿರಬಹುದು. ಇದೆಲ್ಲವನ್ನು ನೋಡಿದರೆ ಅಣ್ಣಿಗೆರೆ ಪರಿಸರದಲ್ಲಿ ಪದ್ಮಾವತಿ ಸಂಪ್ರದಾಯ ಜಾಗ್ರತವಾಗಿದ್ದಿತೆಂದೂ, ಇದು ಕಾರಣವಾಗಿ ಕವಿ ಪಂಪನಿಗೆ ಆ ಹೆಸರಿಡಲಾಗಿದೆಯೆಂದೂ ಹೇಳಬೇಕೆನಿಸುತ್ತದೆ.

ಎಕ್ಕಲಮ್ಮ ಹೆಸರಿನ ದೇವತೆ ಕಾವ್ಯ, ಶಾಸನಗಳಲ್ಲಿ ಸಿಗುತ್ತದೆ. ಇದು ಜೈನಯಕ್ಷಿ ಮತ್ತು ಸವದತ್ತಿ ಎಲ್ಲಮ್ಮ ಸಂಪ್ರದಾಯಗಳನ್ನು ಜೋಡಿಸುವ ಕೊಂಡಿಯಾಗಿರುವುದನ್ನು ನಾನು ಬೇರೆಡೆ ತೋರಿಸಿದ್ದೇನೆ (ಕರ್ನಾಟಕ ಭಾರತಿ ೧೭-೦). ಎಲ್ಲಮ್ಮನ ಭಕ್ತರ 'ಎಕ್ಕಲದೋ ಉಧೋ' ಎಂಬ ಉಗ್ಗಡಣೆಯಲ್ಲಿ ಎಕ್ಕಲದೇವಿ ಎಂಬ ರೂಪ ಮಿಂಚುವುದನ್ನು ಗಮನಿಸಬಹುದು. 'ಆದಯ್ಯ' ಎಂಬ ವೀರಶೈವ ಶರಣನ ಹೆಸರು, ಆತನು ಮೂಲತಃ ಜೈನನಾಗಿರುವ ಸಾಧ್ಯತೆಯತ್ತ ನಮ್ಮ ಗಮನ ಸೆಳೆಯುತ್ತದೆ (ವಾಗರ್ಥ ೧೮೭). ಶಿವಶರಣರಲ್ಲಿ ಮಡಿವಾಳ ಮಾಚಿತಂದೆ, ನಗೆಯ ಮಾರಿತಂದೆ ಎಂಬ ಹೆಸರುಗಳು ಸಿಗುತ್ತವೆ. ಹೆಸರಿನ ಕೊನೆಗೆ ಅಪ್ಪ ಎಂಬುದಕ್ಕೆ ಬದಲು ತಂದೆ ಎಂಬುದನ್ನೂ ಅಂದು ಜೋಡಿಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ದಕ್ಷಿಣ ಕರ್ನಾಟಕದ ಕೆಲವು ಶಾಸನಗಳಲ್ಲಿ ಮಲ್ಲಿತಮ್ಮ, ಮಸಣಿತಮ್ಮ ಎಂಬ ಹೆಸರುಗಳು 'ತಮ್ಮ' ಎಂಬುದರಿಂದ ಕೊನೆಗೊಳ್ಳುತ್ತವೆ. ಇಂದಿಗೂ ಹಾಸನ, ಹೆಗ್ಗಡದೇವನಕೋಟೆ ತಾಲ್ಲೂಕುಗಳ ಕೆಳವರ್ಗದವರಲ್ಲಿ ಈ ಪದ್ಧತಿ ರೂಢಿಯಲ್ಲಿದೆಯೆಂದು ತಿಳಿದುಬರುತ್ತದೆ. ಈಗಲೂ 'ಅಣ್ಣ'ದಿಂದ ಮುಕ್ತಾಯವಾಗುವ ಬಸಣ್ಣ, ಈರಣ್ಣ ಹೆಸರುಗಳು ಚಲಾವಣೆಯಲ್ಲಿವೆ. 'ಅವ್ವ'ದಿಂದ 'ಅಕ್ಕ'ದಿಂದ ಮುಕ್ತಾಯವಾಗುವ ಹೆಸರುಗಳಂತೂ ಸಾಮಾನ್ಯ. ಅಪರಿಚಿತ ಹುಡುಗ, ಹುಡುಗಿಯರನ್ನು ಮಾತನಾಡಿಸುವಾಗ ಏ ತಮ್ಮಾ, ಏ ತಂಗಿ ಎಂದೂ, ಪ್ರೌಢರನ್ನು ಏ ಅಣ್ಣಾ, ಏ ಅಕ್ಕಾ ಎಂದೂ, ಇನ್ನೂ ವಯಸ್ಸಾದವರನ್ನು

ಕುರಿತು ಏ ಅಮ್ಮಾ, ಏ ಅಪ್ಪಾ, ಎಂದೂ ನುಡಿಯುತ್ತೇವೆ. ಈ ಸಂಬಂಧವಾಚಿಗಳ ಬಳಕೆಯ ಬಾಹುಳ್ಯವು ಕನ್ನಡಿಗರ ಅವಿಭಕ್ತ ಕುಟುಂಬ, ಅವಿಭಕ್ತ ಸಮಾಜಪ್ರಜ್ಞೆಯನ್ನು ಸೂಚಿಸುತ್ತದೆ.

ಪಂಪನ ತಂದೆಯ ಹೆಸರು ಭೀಮಪಯ್ಯ. ಬ್ರಾಹ್ಮಣನಾಗಿದ್ದ ಇವನು ಜೈನ ಮತ ಸ್ವೀಕರಿಸಿದ. ಹೀಗಾಗಿ ಈ ಜೈನ ಮನೆತನಕ್ಕೆ ಭೀಮಪಯ್ಯನೇ ಮೂಲ ಪುರುಷನಾಗುತ್ತಾನೆ. ಇಂದಿಗೂ ಪಂಪನ ತಾಯಿಯ ತವರೂರಾದ ಅಣ್ಣಿಗೆರೆಯಲ್ಲಿರುವ ಸುಪ್ರಸಿದ್ಧ ಜೈನ ದೇಶಪಾಂಡೆ ಮನೆತನದಲ್ಲಿ ಭೀಮಪಯ್ಯ ಎಂಬ ಹೆಸರನ್ನು ತಲೆಮಾರಿನಿಂದ ತಲೆಮಾರಿಗೆ ಇಡುತ್ತ ಬರಲಾಗಿದೆ. ಬಿಜ್ಜಳನನ್ನು ಕೊಂದ ಜಗದೇವನ ವಂಶಸ್ಥರೆಂದು ಸಿಂದಗಿ ತಾಲೂಕಿನ ಆಲಮೇಲ ದೇಶಮುಖರು ಹೇಳಿಕೊಳ್ಳುತ್ತಾರೆ. ಈ ಮನೆತನದಲ್ಲಿದ್ದ ಅಡಕಿಲು ಏರಿಸದ, ಪ್ರತಿದಿನ ಹೊರಗಿನಿಂದ ಕಲ್ಲು ತಂದು ಒಲೆಹೂಡಿ ಅಡಿಗೆ ಮಾಡುವ, ತಮ್ಮ ಹೊಲಗಳ ರಾಶಿಯನ್ನು ಇನ್ನೊಬ್ಬರ ಮನೆಯಲ್ಲಿ ಇಡುವ ಪದ್ಧತಿಗಳು ಇತ್ತೀಚಿನ ವರೆಗೆ ಇದ್ದವು. ಇವು ಶರಣರ ದಾಸೋಹತತ್ವದ ಅವಶೇಷಗಳಾಗಿವೆ. ಈಗಿರುವ ದೇಶಮುಖರು ತಮ್ಮ ಅವಳಿ ಮಕ್ಕಳಿಗೆ ಜಗದೇವ–ಮಲ್ಲಿಬೊಮ್ಮಣ್ಣ ಎಂದು ಹೆಸರಿಟ್ಟಿದ್ದಾರೆ. ಬಸವಣ್ಣನ ವಂಶಜರೆಂದು ಹೇಳಿಕೊಳ್ಳುವ ಬಾಗೇವಾಡಿಯಲ್ಲಿರುವ ಬ್ರಾಹ್ಮಣ ಕುಟುಂಬದಲ್ಲಿ ಇಂದಿಗೂ ಮಾದರಸ ಎಂಬ ಹೆಸರನ್ನು ಇಡುತ್ತ ಬಂದಿದ್ದಾರೆ. ಹೀಗೆ ಚಲಾವಣೆಯಲ್ಲಿರುವ ಹೆಸರುಗಳು ಕಳೆದುಹೋದ ಇತಿಹಾಸವನ್ನು ಕಟ್ಟಲು ನೆರವಾಗುತ್ತವೆ.

ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವ ಹೆಸರುಗಳು ಅಲ್ಲಿಯ ದೇವತಾ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಬೋರೇಗೌಡ, ಬೋರಯ್ಯ, ಬೋರಲಿಂಗಯ್ಯ ಎಂಬಿವು ಮೈಸೂರು ಪ್ರದೇಶದ ಹೆಸರುಗಳು. ಅಲ್ಲಿ ಭೈರವ ಸಂಪ್ರದಾಯ ಪ್ರಬಲವಾಗಿದ್ದುದರ ದ್ಯೋತಕವಿದು. ಆದಿಚುಂಚನಗಿರಿ ಮೊದಲಾದುವು ಈ ಹಿಂದೆ ಪ್ರಸಿದ್ಧ ಭೈರವಸಂಪ್ರದಾಯದ ಕಾಪಾಲಿಕ ಕೇಂದ್ರಗಳಾಗಿದ್ದುವೆಂಬುದನ್ನು ಇಲ್ಲಿ ನೆನೆಯಬಹುದು. ಉತ್ತರ ಕರ್ನಾಟಕದಲ್ಲಿಯೂ ಒಂದು ಕಾಲಕ್ಕೆ ಈ ಸಂಪ್ರದಾಯ ಗಾಢವಾಗಿದ್ದುದಕ್ಕೆ ಅನೇಕ ನಗ್ನ ಭೈರವವಿಗ್ರಹಗಳು ಅಲ್ಲಲ್ಲಿ ಸಿಗುತ್ತವೆ. ಇಲ್ಲಿಯ ಕೆಲವು ಸ್ತ್ರೀಯರ ಹೆಸರುಗಳು ಭೌರವ್ವ ಎಂದಿದ್ದು ಇವು ಭೈರವನನ್ನೇ ಸೂಚಿಸುತ್ತಿರಬೇಕು. ಈ ಹೆಸರನ್ನು ಕೆಲವರು ಭ್ರಮರಾಂಬಾ ಎಂದು ಸಂಸ್ಕೃತರೂಪಕ್ಕೆ ತಿರುಗಿಸಿಕೊಂಡಂತಿದೆ. ಜುಂಜಪ್ಪ ಹೆಸರು ಮೈಸೂರು ಪ್ರದೇಶದಲ್ಲಿ ತುಂಬ ಪ್ರಚಾರದಲ್ಲಿದೆ. ಚುಂಚ>ಜುಂಜ ಎಂದಾಗುವುದರಿಂದ (ಆದಿ)ಚುಂಚನಗಿರಿಗೂ ಇದಕ್ಕೂ ಸಂಬಂಧವಿರಬಹುದು. ಜುಂಜಪ್ಪ ಮೈಲಾರನ ಹಿರಿಯಮಗ, ಆದಿಚುಂಚನಗಿರಿ ಭೈರವಸಂಪ್ರದಾಯದ ಕೇಂದ್ರ. ಹೀಗಾಗಿ ಮೈಲಾರನು ಮೂಲತಃ ಭೈರವಸಂಪ್ರದಾಯದ ದೇವತೆಯೆಂದು ಹೇಳಬೇಕಾಗುತ್ತದೆ. ಮಂಟೇಸ್ವಾಮಿ, ಮೈಲಾರ ಕೇವಲ ಹೆಸರುಗಳಲ್ಲ. ನಮ್ಮ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ದೊಡ್ಡ ವಾಹಕಗಳು. ಇವುಗಳನ್ನು ಅತ್ಯಂತಿಕವಾಗಿ ಬಿಚ್ಚಿ, ಸರಿಯಾಗಿ ಅರ್ಥೈಸಿದಲ್ಲಿ ಇವುಗಳ ಹಿಂದಿರುವ ನಮ್ಮ ಆದಿಸಂಸ್ಕೃತಿಯ ಅತಿ ದೊಡ್ಡ ಬೆಳಕನ್ನು ಕಾಣಬಹುದಾಗಿದೆ. ಇದೇ ರೀತಿ ಶಾಸನಗಳಲ್ಲಿ ಕಂಡುಬರುವ ಬಾದುಬ್ಬೆ ಹೆಸರು ಇನ್ನೂ ತನ್ನ ರಹಸ್ಯವನ್ನು ಬಿಟ್ಟುಕೊಟ್ಟಿಲ್ಲ.

ಶಾಸನಗಳಲ್ಲಿ ಕಾಳಾಮುಖ ಗುರುಗಳಿಗೆ 'ರಾಸಿ' ಎಂಬ ಪದ ಹೆಸರಿನ ಕೊನೆಯಲ್ಲಿ ಸೇರಿಕೊಳ್ಳುತ್ತದೆ. ಉದಾ : ಅಮೃತರಾಸಿ. ಈಗಲೂ ಲಿಂಗವಂತ ಹೂಗಾರ ಹೆಣ್ಣುಮಕ್ಕಳು

ಗಂಡನ ಹೆಸರು ಹೇಳುವಾಗ 'ರಾಸಿ' ಸೇರಿಸುತ್ತಾರೆ. ಉದಾ : ಸಂಗಪ್ಪ>ಸಂಗರಾಸಿ. ಸವದತ್ತಿ ಸಮೀಪದ ಉಗರಗೋಳದಲ್ಲಿರುವ ಸವದತ್ತಿ ಎಲ್ಲಮ್ಮನ ಅರ್ಚಕರ ಹೆಸರಿನ ಮುಂದೆಯೂ ರಾಸಿ ಸೇರಿಸುವುದನ್ನು ಇಂದಿಗೂ ನೋಡಬಹುದು. ಶಿವಾಜಿ, ಸಂಬಾಜಿಗಳು ಶಿವಜೀಯ, ಶಂಭುಜೀಯ ಎಂಬಿವುಗಳ ಆಧುನಿಕ ರೂಪಗಳಾಗಿವೆ. ಇಂಥ ನಾಮಾಧ್ಯಯನ ಸಂಸ್ಕೃತಿಗೆ ಎಂಥ ಕೊಡುಗೆಯೆಂದು ಬೇರೆ ಹೇಳಬೇಕಿಲ್ಲ.

ಇವುಗಳನ್ನು ಬಿಟ್ಟರೂ ಅಲ್ಲಲ್ಲಿ ಬಳಕೆಯಲ್ಲಿರುವ ಬುಳ್ಳಪ್ಪ, ಕ್ಯಾತಪ್ಪ, ಬೂತಯ್ಯ, ಸತ್ಯವ್ವ (ಸತಿ+ಅವ್ವ?), ಮಾಳವ್ವ(ಮಾಳಚಿ), ನೆಟ್ಟಕಲ್ಲಪ್ಪ, ಬೀರಪ್ಪ, ಮಾಳಿಂಗರಾಯ, ಏಳುಕೋಟೆಪ್ಪ, ಮಾಗುಂಡಪ್ಪ, ಜಕ್ಕಪ್ಪ, ಉಡಚವ್ವ-ಇವು ತುಂಬ ಹಳೆಯ ಹೆಸರುಗಳಾಗಿದ್ದು, ನಮ್ಮ ಪರಂಪರೆಯ ಒಂದೊಂದು ಶಾಖೆಯ ಪ್ರತಿನಿಧಿಗಳಾಗಿವೆ. ಸೂರ್ಯ, ಚಂದ್ರ, ಕಾಡು, ಬೆಟ್ಟ ಇತ್ಯಾದಿ ನಿಸರ್ಗವಾಚಿಗಳು, ಸತ್ಯ, ತ್ಯಾಗ, ಸೌರ್ಯ ಇತ್ಯಾದಿ ಸದ್ಗುಣಗಳು, ಕಪ್ಪು, ಬಿಳಿಪು, ಎತ್ತರ, ಗಿಡ್ಡ ಇತ್ಯಾದಿ ಆಕಾರಗಳೂ ಎಲ್ಲರಿಗೂ ಸಾಮಾನ್ಯ ವಾಗಿರುವುದರಿಂದ ಜಗತ್ತಿನ ಎಲ್ಲ ಪ್ರದೇಶಗಳ ಜನತೆಗೆ ಇವು ನಾಮಗಳೆಂಬಂತೆ ಅಂಟಿಕೊಳ್ಳುತ್ತವೆ. ಇದೆಲ್ಲವನ್ನು ಗಮನಿಸಿದರೆ ಹೆಸರು ಕೇವಲ ಹೆಸರಲ್ಲ. ಅವು ನಮ್ಮ ಸಂಸ್ಕೃತಿಯ ಪ್ರತೀಕಗಳು, ಅಖಂಡ ಮಾನವಸಂಸ್ಕೃತಿಯ ಘಟಕಗಳು -ಎಂದು ಹೇಳಬೇಕಾಗುತ್ತದೆ.

❖❖

೩

❖

ಕುಟುಂಬನಾಮ

ಸಮೂಹದಿಂದ ಒಬ್ಬ ವ್ಯಕ್ತಿಯನ್ನು ಸರಿಯಾಗಿ ಪ್ರತ್ಯೇಕಿಸಿಕೊಡಲು ಅವನ ಹೆಸರು ಅಸಮರ್ಥವಾದಲ್ಲಿ ಜೊತೆಗೆ ತಂದೆಯ ಹೆಸರನ್ನು, ಅದೂ ಅಸಮರ್ಥವಾದಲ್ಲಿ ಹೆಚ್ಚಿನದಾಗಿ ಇನ್ನೊಂದು ಹೆಸರನ್ನು ಸೇರಿಸುವುದು ಚಲಾವಣೆಯಲ್ಲಿ ಬಂದಿರಬೇಕು. ಆದುದರಿಂದ ಒಬ್ಬನನ್ನು ಗುರುತಿಸುವಲ್ಲಿ ಬಳಸುವ ವ್ಯಕ್ತಿನಾಮ, ಪಿತೃನಾಮಗಳಲ್ಲದ ಮೂರನೆಯ ನಾಮವೇ ಕುಟುಂಬನಾಮ ಅಥವಾ ಅಡ್ಡಹೆಸರು–ಎಂದು ವ್ಯಾಖ್ಯಾನಿಸಬಹುದು. ಸಮೂಹದಿಂದ ವ್ಯಕ್ತಿಯನ್ನು ಪ್ರತ್ಯೇಕಿಸಿ ಕೊಡುವುದೇ ಈ ಮೂರನೆಯ ಹೆಸರಿನ ಮುಖ್ಯ ಉದ್ದೇಶವಾಗಿದ್ದರೂ ಅದು ಆ ವ್ಯಕ್ತಿಯ ಇಲ್ಲವೆ ಆತನ ಪೂರ್ವಜರ ನೆಲೆ, ವೃತ್ತಿ ಇಲ್ಲವೆ ಚಿತ್ತವೃತ್ತಿಗಳನ್ನು ಪ್ರತಿನಿಧಿಸುತ್ತದೆ.

'ಅಡ್ಡಹೆಸರು' ಎಂಬ ಪದ 'ನೇರವಲ್ಲದ ಹೆಸರು' ಎಂಬ ಅರ್ಥದಲ್ಲಿ ಬಂದಿರಬಹುದು. ಇಲ್ಲವೆ ಅರ್ಧ ಹೆಸರು>ಅಡ್ಡಹೆಸರು ಆಗಿರಬಹುದು. ಬಹುಶಃ ಎರಡನೆಯದೇ ಸರಿಯೆಂದು ಕಾಣುತ್ತದೆ. ತಮಿಳುನಾಡಿನಲ್ಲಿ ಈ ಮೂರನೆಯ ಹೆಸರಿನ ಬಳಕೆ ಇಲ್ಲವೆನ್ನುವಷ್ಟು ಕಡಿಮೆ. ಅಡ್ಡಹೆಸರು ಎಂಬುದರ ಸಮಾನಾರ್ಥ ಪದವು ಆ ಕೋಶದಲ್ಲಿಲ್ಲ. ಮರಾಠಿಯ ಅಡನಾವ್, ಕನ್ನಡದ ಅಡ್ಡಹೆಸರುಗಳಲ್ಲಿಯ ಧ್ವನಿಸಾಮ್ಯ, ರೂಢಿಸಾಮ್ಯಗಳು ನಮ್ಮ ಗಮನ ಸೆಳೆದರೂ ಯಾವುದರಿಂದ ಯಾವುದು ಪ್ರಭಾವಿತವಾಯಿತು ? ಹೇಳುವುದು ಕಷ್ಟ.. ಇದಕ್ಕೆ ಸಮಾನವಾದ ಪದ ತೆಲುಗಿನಲ್ಲೆ 'ಇಂಟಿಪೇರು'. ಇಂಟಿಪೇರುಯೆಂದರೆ ಮನೆತನದ ಹೆಸರು. ಹಿಂದಿಯಲ್ಲಿ 'ಉಪನಾಮ' ಎಂಬುದು ಅಡ್ಡಹೆಸರಿನ ಪರ್ಯಾಯ ಪದ.

'ಅಡ್ಡಹೆಸರು' ಎಂಬ ಪದವನ್ನು ಉತ್ತರ ಕರ್ನಾಟಕದಲ್ಲಿ sur-name ಎಂಬುದಕ್ಕೆ, ದಕ್ಷಿಣ ಕರ್ನಾಟಕದಲ್ಲಿ Nick-name ಎಂಬುದಕ್ಕೆ ಪರ್ಯಾಯವಾಗಿ ಭಾವಿಸಲಾಗುತ್ತಿದೆ. ಒಬ್ಬ ವ್ಯಕ್ತಿಯ ಗುಣ, ರೂಪ, ಕ್ರಿಯೆ (ಸುಳ್ಳು ಹೇಳುವವ ಸಪಟೆ, ದೊಡ್ಡ ಹೊಟ್ಟೆಯುಳ್ಳವ ಡೊಳ್ಳ, ನಾಯಿ ನೋಡಿಕೊಳ್ಳುವ ಕೆಲಸ ಮಾಡುವವ ನಾಯುಪ್ಪ ಇವು ಒಂದು ರೀತಿ ಅನ್ವರ್ಥಕನಾಮಗಳೇ)ಗಳನ್ನು ಗಮನಿಸಿ ಇಟ್ಟ ಚೇಷ್ಟೆಯ ಹೆಸರು, ಅಥವಾ ಅವನನ್ನು ಇನ್ನೂ ನಿರ್ದಿಷ್ಟವಾಗಿ ಗುರುತಿಸಲು (ಕೆಂಪಹನುಮಯ್ಯ) ಬಳಸಿದ ಹೆಸರು Nick-name ಎಂದು

ಹೇಳಬಹುದು. ಹೀಗಾಗಿ sur-name ಇಡೀ ಕುಟುಂಬಕ್ಕೆ ಅನ್ವಯಿಸಿದರೆ, Nick-name ವ್ಯಕ್ತಿಗೆ ಮಾತ್ರ ಅನ್ವಯಿಸುತ್ತದೆ. ಅದು ತಲೆತಲಾಂತರ ಸಾಗಿಬಂದರೆ, ಇದು ವ್ಯಕ್ತಿಯ ತಲೆಮಾರಿಗೆ ನಿಂತುಬಿಡುತ್ತದೆ. ಅತಿ ಬಳಕೆಯಿಂದ Nick-nameವು ಹೆಸರೇ ಎಂಬಂತಾದರೆ ಮುಂದುವರಿಯಬಹುದು. ಉದಾ : ಕರಿಸಿದ್ದಪ್ಪ, ಗುಂಡಬಸಪ್ಪ ಈ ಹೆಸರುಗಳು ಹಿಂದಿನ ತಲೆಮಾರಿನವರಿಗೆ ಅನ್ವರ್ಥಕನಾಮವಾಗಿದ್ದರೆ, ಮುಂದಿನ ತಲೆಮಾರಿಗೆ ಅಂಕಿತನಾಮದಂತೆ ಬಳಕೆಯಾಗುತ್ತವೆ.

ದಕ್ಷಿಣ ಕರ್ನಾಟಕದಲ್ಲಿ sur-name ಅರ್ಥದ ಅಡ್ಡಹೆಸರಿನ ಬಳಕೆ ಇಲ್ಲವೆಂದು ಮೇಲುನೋಟಕ್ಕೆ ಕಂಡುಬಂದರೂ ಅಲ್ಲಿ ಕೆಲವು ಸಲ ವ್ಯಕ್ತರೂಪದಲ್ಲಿ (ಎಲೆ ಮಲ್ಲಪ್ಪ ಶೆಟ್ಟರು), ಬಹಳಷ್ಟು ಸಲ ಸಂಕ್ಷಿಪ್ತರೂಪದಲ್ಲಿ ಎಸ್.ನಿಜಲಿಂಗಪ್ಪ (ಸಿದ್ದವ್ವನಹಳ್ಳಿ ನಿಜಲಿಂಗಪ್ಪ), ಕೆ.ಹನುಮಂತಯ್ಯ (ಕೆಂಗಲ್ಲು ಹನುಮಂತಯ್ಯ), ಎಂ.ಚಿದಾನಂದಮೂರ್ತಿ (ಮಠದ ಚಿದಾನಂದಮೂರ್ತಿ) ಇತ್ಯಾದಿಯಾಗಿ ಬಳಕೆಯಲ್ಲಿದೆಯೆಂದೇ ಹೇಳಬೇಕು. ಆದರೆ ಈ ಅಡ್ಡಹೆಸರು ಉತ್ತರ ಕರ್ನಾಟಕದಲ್ಲಿ ತಲೆಮಾರಿನಿಂದ ತಲೆಮಾರಿಗೆ ಒಂದು ಪರಂಪರೆಯಾಗಿ ಸಾಗಿಬರುತ್ತಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ತಲೆಮಾರಿನಿಂದ ತಲೆಮಾರಿಗೆ ವ್ಯತ್ಯಾಸವಾಗುವ ಸಾಧ್ಯತೆಯಿದೆ. ಉದಾ: ಎಸ್.ನಿಜಲಿಂಗಪ್ಪ ಇವರ ಮಗ ಎನ್.ಉಮಾಕಾಂತ.

ಅಡ್ಡಹೆಸರುಗಳು ಗ್ರಾಮ, ಕುಟುಂಬ, ವಂಶ, ವ್ಯಕ್ತಿ, ಜಾತಿಗಳನ್ನು ಪ್ರತಿನಿಧಿಸುತ್ತಿದ್ದು, ಸಾಮಾನ್ಯವಾಗಿ ಇವು ಆಯಾ ಕುಟುಂಬ, ವಂಶ, ವ್ಯಕ್ತಿ, ಜಾತಿಗಳ ಎಲ್ಲ ಸದಸ್ಯರನ್ನು ಮಾನಸಿಕವಾಗಿ ಬೆಸೆಯುತ್ತವೆ. ಅವರಲ್ಲಿ ಸಾಂಘಿಕ ನಿಷ್ಠೆಯನ್ನು ಪ್ರೇರೇಪಿಸುತ್ತವೆ. ವ್ಯಕ್ತಿ ವ್ಯಕ್ತಿಗಳ ಸಂಬಂಧವನ್ನು ದೃಢಪಡಿಸುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಇತ್ಯಾದಿ ಅರಸುಮನೆತನಗಳ ಹೆಸರುಗಳೆಲ್ಲ ಈ ಬಗೆಯವು. ಜೊತೆಗೆ ಶಾಸನಗಳಲ್ಲಿ ಬರುವ ನಾವಿದ ಧೋರ (೧೦೮೭), ತೆಲ್ಲಿಗರ ಜಕ್ಕಿಯವ್ವೆ (೧೯೯೧), ಧನಗರ ಕಂಚಿಕಬ್ಬೆ (೯೩೦), ಹುರ್ವಿನ ಗೋವರ್ಧನ (೧೧೬೧), ಆನೆಯ ಕೇಶಿರಾಜ (೧೧೪೭), ಸೀರೆಯ ಕಾಳಿಸೆಟ್ಟಿ (೧೧೧೫) ಇತ್ಯಾದಿ ಅಡ್ಡಹೆಸರುಗಳು ಸಾಮಾನ್ಯರ ವಿಷಯದಲ್ಲಿಯೂ ಕ್ವಚಿತ್ತಾಗಿ ತೋರಿಬರುತ್ತಿದ್ದು, ಈ ಪದ್ಧತಿಯ ಪ್ರಾಚೀನತೆಯನ್ನು ಸೂಚಿಸುತ್ತದೆ.

ಇಂದು ಕರ್ನಾಟಕದಲ್ಲಿ ಹೆಸರಿನೊಂದಿಗೆ ಅಡ್ಡಹೆಸರನ್ನು ಬಳಸಲಾಗುತ್ತಿದ್ದು, ಇವುಗಳನ್ನು ೧. ಬಳಕೆಯ ವಿಧಾನ, ೨. ಪ್ರಕಾರ ವೈವಿಧ್ಯ, ೩. ಇತರ ಸಂಗತಿ ಎಂದು ಮೂರು ಬಗೆಗಳಲ್ಲಿ ವಿವೇಚಿಸಬಹುದು.

೧. ಬಳಕೆಯ ವಿಧಾನ :

ಅಡ್ಡಹೆಸರುಗಳು ಕರ್ನಾಟಕದ ಉತ್ತರ ದಕ್ಷಿಣ ಭಾಗಗಳಲ್ಲಿ ಭಿನ್ನರೀತಿಯಲ್ಲಿ ಬಳಕೆಯಾಗುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಉತ್ತರದ ಆರ್.ಸಿ.ಹಿರೇಮಠ ಅವರು ದಕ್ಷಿಣದಲ್ಲಿದ್ದರೆ ಎಚ್.ಸಿ.ರುದ್ರಯ್ಯ ಇಲ್ಲವೆ ಎಚ್.ರುದ್ರಯ್ಯ ಆಗುತ್ತಿದ್ದರು. ದಕ್ಷಿಣ ಜಿ.ಎಸ್.ಶಿವರುದ್ರಪ್ಪ ಉತ್ತರದಲ್ಲಿದ್ದರೆ ಎಸ್.ಎಸ್.ಗುಗ್ಗರಿ ಇಲ್ಲವೆ ಶಿವರುದ್ರಪ್ಪ ಗುಗ್ಗರಿ ಆಗುತ್ತಿದ್ದರು. ಇದನ್ನು ಅನುಲಕ್ಷಿಸಿ ಅಡ್ಡ ಹೆಸರಿನ ಬಳಕೆಯ ವಿಧಾನವನ್ನು –

೧. ಅಡ್ಡ ಹೆಸರು ಪ್ರಧಾನ–ಹೆಸರು ಅಪ್ರಧಾನ ಪದ್ಧತಿ.

೨. ಹೆಸರು ಪ್ರಧಾನ–ಅಡ್ಡ ಹೆಸರು ಅಪ್ರಧಾನ ಪದ್ಧತಿ.

೩. ಅಡ್ಡ ಹೆಸರು ಪ್ರಧಾನ– ಹೆಸರು ಪ್ರಧಾನ ಪದ್ಧತಿ.

ಎಂದು ಮೂರು ರೀತಿಯಲ್ಲಿ ವಿಂಗಡಿಸಿ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಅಡ್ಡಹೆಸರು ಪ್ರಧಾನ, ಹೆಸರು ಅಪ್ರಧಾನ, ಉದಾ : ಫ.ಗು.ಹಳಕಟ್ಟಿ, ದಕ್ಷಿಣ ಕರ್ನಾಟಕದಲ್ಲಿ ಅಡ್ಡಹೆಸರು ಅಪ್ರಧಾನ. ಹೆಸರು ಪ್ರಧಾನ, ಉದಾ : ತೀ.ನಂ.ಶ್ರೀಕಂಠಯ್ಯ, ಇಂಗ್ಲೀಷ್ ಪ್ರಭಾವದಿಂದ ಇವು ಪಿ.ಜಿ.ಹಳಕಟ್ಟಿ, ಟಿ.ಎನ್.ಶ್ರೀಕಂಠಯ್ಯ ಎಂದೂ ಬಳಕೆಯಾಗುತ್ತವೆ, ಇಲ್ಲಿ ಒಂದು ಕಡೆ ಅಡ್ಡ ಹೆಸರು ವ್ಯಕ್ತಿನಾಮದ ಕೊನೆಗೆ ಪ್ರಧಾನವಾಗಿ ಬಂದರೆ, ಇನ್ನೊಂದು ಕಡೆ ವ್ಯಕ್ತಿನಾಮಕ್ಕೆ ಮೊದಲು ಅಪ್ರಧಾನವಾಗಿ ಬರುತ್ತದೆ. ಹೀಗಿದ್ದೂ ಈ ನಾಡಿನಲ್ಲಿ ಮೊದಮೊದಲು ವ್ಯಕ್ತಿನಾಮ ಹಿಡಿದು ಕರೆಯುವುದೇ ರೂಢಿಯಲ್ಲಿದ್ದಿತೆಂದು ತೋರುತ್ತದೆ. ಉದಾ : ಶಿವಲಿಂಗಪ್ಪ (ಬಸವನಾಳ), ನಿಜಲಿಂಗಪ್ಪ (ಸಿದ್ದವನಹಳ್ಳಿ). ಈಗಲೂ ಹಳ್ಳಿಯಲ್ಲಿ ವ್ಯಕ್ತಿಯನ್ನು ಹೆಸರು ಹಿಡಿದೇ ಕರೆಯುವುದು, ಮಾತನಾಡುವುದು ಈ ಆಭಿಪ್ರಾಯವನ್ನು ಸಮರ್ಥಿಸುತ್ತದೆ. ಮನೆಯಲ್ಲಿಯಂತೂ ಈ ರೂಢಿ ಅನಿವಾರ್ಯವೇ ಸರಿ. ಆದರೆ ಸುಶಿಕ್ಷಿತರೊಂದಿಗೆ, ಹಿರಿಯರೊಂದಿಗೆ ವ್ಯವಹರಿಸುವಾಗ ಮಾತ್ರ ಉತ್ತರ ಕರ್ನಾಟಕದಲ್ಲಿ 'ಬಸವನಾಳ' ಎಂಬಂತೆ ಅಡ್ಡ ಹೆಸರನ್ನು ಬಳಸಿದರೆ, ದಕ್ಷಿಣ ಕರ್ನಾಟಕದಲ್ಲಿ 'ನಿಜಲಿಂಗಪ್ಪ' ಎಂಬಂತೆ ಹೆಸರನ್ನು ಬಳಸುವುದು ಇಂದಿನ ರೂಢಿಯಾಗಿದೆ.

ಹೆಸರು, ಅಡ್ಡ ಹೆಸರುಗಳೆರಡನ್ನೂ ಪ್ರಧಾನವಾಗಿ ಬಳಸುವುದು ಸಾಮಾನ್ಯವಾಗಿ ಹೆಣ್ಣುಮಕ್ಕಳಲ್ಲಿ ಹೆಚ್ಚು. ಉದಾ : ಲೀಲಾವತಿ ಮಾಗಡಿ, ಸರೋಜನಿ ಮಹಿಷಿ. ಇದಕ್ಕೆ ಕಾರಣ ತಾನು ಸ್ತ್ರೀಯೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು ಮತ್ತು ಸ್ತ್ರೀನಾಮಗಳು ಸುಂದರವಾಗಿರುವುದು. ಇತ್ತೀಚೆ ಪುರುಷರಲ್ಲಿಯೂ ಈ ಪ್ರವೃತ್ತಿ ತೋರಬರುತ್ತಿದೆ. ಉದಾ : ಪಾಟೀಲ ಪುಟ್ಟಪ್ಪ, ಕಡಿದಾಳ ಮಂಜಪ್ಪ.

೨. ಪ್ರಕಾರ ವೈವಿಧ್ಯ :

ಈಗ ಪ್ರಚಲಿತವಿರುವ ಅಡ್ಡ ಹೆಸರುಗಳನ್ನು ಪ್ರಕಾರ ದೃಷ್ಟಿಯಿಂದ ನಾಲ್ಕು ರೀತಿಯಲ್ಲಿ ವರ್ಗೀಕರಿಸಬಹುದು.

೧. ಗ್ರಾಮನಾಮವಾಚಿ : ಮಾಳವಾಡ (ಎಸ್.ಎಸ್.), ಕುಪ್ಪಳ್ಳಿ (ಪುಟ್ಟಪ್ಪ) ಇತ್ಯಾದಿ.

೨. ವೃತ್ತಿನಾಮವಾಚಿ : ಕುಂದಣಗಾರ (ಕೆ.ಜಿ.), ಪುರೋಹಿತ (ತಿ.ನ) ಇತ್ಯಾದಿ.

೩. ವಸ್ತುನಾಮವಾಚಿ : ಕಂಬಳಿ (ಸಿದ್ದಪ್ಪ), ಎಲೆ (ಮಲ್ಲಪ್ಪಶೆಟ್ಟರು) ಇತ್ಯಾದಿ.

೪. ಇತರ ನಾಮವಾಚಿ : ರಡ್ಡಿ, ಬಂದಮ್ಮನವರ, ಪಂಡಿತ ಇತ್ಯಾದಿ.

ಈಗ ಈ ನಾಲ್ಕೂ ಬಗೆಗಳ ಸ್ವರೂಪ ವಿಶೇಷವನ್ನು ಅಭ್ಯಸಿಸಬಹುದು.

ಗ್ರಾಮನಾಮವಾಚಿ : ಅಡ್ಡ ಹೆಸರುಗಳಲ್ಲಿ ಇದು ಪ್ರಧಾನವರ್ಗ. ಮಂಡಗೆಯ ಮಾದಿರಾಜ, ಮಾರುಡಿಗೆ ನಾಚಯ್ಯ, ಹಾವಿನಹಾಳ ಕಲ್ಲಯ್ಯ ಇತ್ಯಾದಿ ಪ್ರಾಚೀನನಾಮಗಳಲ್ಲಿ ಗ್ರಾಮಸೂಚನೆ ಕಂಡುಬರುವುದರಿಂದ ಈ ಪದ್ಧತಿ ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು. ಇಂದು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಲ್ಲಿ ವ್ಯಕ್ತಿನಾಮದೊಂದಿಗೆ ಗ್ರಾಮನಾಮಗಳು ಬಳಕೆಯಾಗುತ್ತಿದ್ದರೂ ಒಬ್ಬರಲ್ಲಿ ಬಿಟ್ಟು ಬಂದ ಊರಿನ ಸೂಚನೆ, ಇನ್ನೊಬ್ಬರಲ್ಲಿ ಸಧ್ಯ ವಾಸವಾಗಿರುವ ಊರಿನ ಸೂಚನೆಯಿರುತ್ತದೆ; ಅಲ್ಲದೆ ಬಳಕೆಯಾಗುವ ರೀತಿಯೂ ಬೇರೆ ಬೇರೆಯಾಗಿರುತ್ತದೆ. ಉದಾ : ಉತ್ತರ ಕರ್ನಾಟಕದ ಎಸ್.ಎಸ್.ಮಾಳವಾದ ಹೆಸರಿನ ನಿಜರೂಪ, ಸಂಗಪ್ಪ, ಸಂಗನಬಸಪ್ಪ, ಮಾಳವಾಡ, ದಕ್ಷಿಣ ಕರ್ನಾಟಕದ ಕೆ.ವಿ.ಪುಟ್ಟಪ್ಪ ಹೆಸರಿನ ನಿಜರೂಪ ಕುಪ್ಪಳ್ಳಿ (ವೆಂಕಟಪ್ಪನವರ ಮಗ) ಪುಟ್ಟಪ್ಪ. ಇಲ್ಲಿ (೧) 'ಮಾಳವಾಡ' ಪೂರ್ವಜರು ವಾಸವಾಗಿದ್ದ ಊರನ್ನು ಸೂಚಿಸಿದರೆ, 'ಕುಪ್ಪಳ್ಳಿ' ಸಧ್ಯ ವಾಸವಾಗಿರುವ ಊರನ್ನು ಸೂಚಿಸುತ್ತದೆ. ಇದು 'ಉತ್ತರ ಕರ್ನಾಟಕದವರು ಪ್ರಾಚೀನತೆಯ ಪ್ರಿಯರು, ದಕ್ಷಿಣ ಕರ್ನಾಟಕದವರು ವರ್ತಮಾನನಿಷ್ಠರು' ಎಂಬುದರ ಸೂಚನೆಯಾಗಿದೆ. (೨) ಉತ್ತರ ಕರ್ನಾಟಕದಲ್ಲಿ ಕುಟುಂಬನಾಮ ಪ್ರಧಾನವಾಗಿ ನಿಂತು, ವ್ಯಕ್ತಿನಾಮ ಮತ್ತು ಪಿತೃನಾಮ ಸಂಕ್ಷೇಪಗೊಂಡರೆ, ದಕ್ಷಿಣ ಕರ್ನಾಟಕದಲ್ಲಿ ವ್ಯಕ್ತಿನಾಮ ಪ್ರಧಾನವಾಗಿ ನಿಂತು, ಕುಟುಂಬನಾಮ ಮತ್ತು ಪಿತೃನಾಮಗಳು ಸಂಕ್ಷೇಪಗೊಳ್ಳುತ್ತವೆ. ಇದು, ಉತ್ತರ ಕರ್ನಾಟಕದವರ ದೃಷ್ಟಿಯಲ್ಲಿ 'ಕುಟುಂಬ ಪ್ರಧಾನ, ವ್ಯಕ್ತಿ ಅಪ್ರಧಾನ'ವಾಗಿದ್ದರೆ, ದಕ್ಷಿಣ ಕರ್ನಾಟಕದವರ ದೃಷ್ಟಿಯಲ್ಲಿ 'ವ್ಯಕ್ತಿ ಪ್ರಧಾನ, ಕುಟುಂಬ ಅಪ್ರಧಾನ'ವೆಂಬುದನ್ನು ಸೂಚಿಸುತ್ತದೆ. ಈ ಎರಡೂ ಅಂಶಗಳು (I . ಪ್ರಾಚೀನತಾಪ್ರಿಯತೆ–ಕುಟುಂಬಪ್ರಧಾನತೆ II. ವರ್ತಮಾನನಿಷ್ಠತೆ–ವ್ಯಕ್ತಿಪ್ರಧಾನತೆ) ಉತ್ತರ ಕರ್ನಾಟಕದವರು ಹೆಚ್ಚು ಜಾನಪದೀಯರು, ದಕ್ಷಿಣ ಕರ್ನಾಟಕದವರು ಹೆಚ್ಚು ಶಿಷ್ಟಪದೀಯರೆಂಬುದನ್ನು ತಿಳಿಸುತ್ತವೆ. ಪ್ರಾಚೀನ ಅರಸರಲ್ಲಿ ಗಂಗರು 'ಕುವಳಾಲ ಪುರವರಾಧೀಶ್ವರ' ಎಂದು, ರಾಷ್ಟ್ರಕೂಟರು 'ಲತ್ತಲೂರು ಪುರವರಾಧೀಶ್ವರ' ಎಂದು, ಶಿಲಾಹಾರರು 'ತಗರ ಪುರವರಾಧೀಶ್ವರ' ಎಂದು ತಮ್ಮ ಪೂರ್ವಜರ ಗ್ರಾಮನಾಮವನ್ನು ಬಳಸುತ್ತಿದ್ದ ವಿಧಾನದ ಮುಂದುವರಿಕೆಯೆಂಬಂತೆ ಉತ್ತರ ಕರ್ನಾಟಕದವರು ತಮ್ಮ ಪೂರ್ವಜರ ಗ್ರಾಮವನ್ನು ಅಡ್ಡ ಹೆಸರಾಗಿ ಬಳಸುವರೆಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಗ್ರಾಮನಾಮವಾಚಿ ಅಡ್ಡಹೆಸರುಗಳಾದ ಘೋಡಕೆ, ಘೋಡಸೆ, ಗೊಡಚಿ, ಕುಡಚಿ ಇವೆಲ್ಲ ಒಂದೇ ಮೂಲದವು.

ವೃತ್ತಿನಾಮವಾಚಿ : ಅಡ್ಡ ಹೆಸರಿನಲ್ಲಿ ಇದೂ ಒಂದು ಪ್ರಧಾನವರ್ಗ. ನಮ್ಮಲ್ಲಿ ವೃತ್ತಿ ಬೆಳೆದು ಜಾತಿಯಾಗಿರುವುದರಿಂದ ವೃತ್ತಿವಾಚಿ ಅಡ್ಡಹೆಸರುಗಳು ಜಾತಿವಾಚಿಯೂ ಆಗಿದ್ದು, ಇಂಥ ಅಡ್ಡಹೆಸರುಗಳಿಂದ ಅವರ ವೃತ್ತಿ ಮತ್ತು ಜಾತಿ ಎರಡನ್ನೂ ತಟ್ಟನೆ ಗುರುತಿಸಬಹುದು. ಉದಾ : ಸಮಗಾರ, ಪುರೋಹಿತ. ವೃತ್ತಿ ನಾಮವನ್ನು ವ್ಯಕ್ತಿನಾಮಕ್ಕೆ ಅಂಟಿಸಿಕೊಳ್ಳುವ ರೂಢಿಯು ಶರಣರ ಕಾಲದಲ್ಲಿ ಇನ್ನೂ ದಟ್ಟವಾಗಿ ಬಳಕೆಗೆ ಬಂದಿತೆಂದು ತೋರುತ್ತದೆ. ಸಮಾಜದಲ್ಲಿ ಕಾಯಕಮೌಲ್ಯ ಸ್ಥಾಪನೆಯಾಗುತ್ತಲೇ ತಮ್ಮನ್ನು ಕಾಯಕ (ವೃತ್ತಿ)ದಿಂದ ಗುರುತಿಸಿಕೊಳ್ಳುವುದು ಶರಣರಿಗೆ ದೊಡ್ಡ ಹೆಮ್ಮೆ ಎನಿಸಿರಬೇಕು. ಧನಗರ ಕಂಚಿಯಬ್ಬೆ (೯೮೦), ನಾವಿದ ಧೋರ (೧೦೮೭) – ಹೀಗೆ ವ್ಯಕ್ತಿನಾಮದೊಂದಿಗೆ ಅಡ್ಡಹೆಸರು ಬಸವಪೂರ್ವಯುಗದಲ್ಲಿ ಕಂಡುಬರುತ್ತಿದ್ದರೂ

ಮಾದರ ಚೆನ್ನಯ್ಯ, ಜೇಡರ ದಾಸಿಮಯ್ಯ, ಮೇದರ ಕೇತಯ್ಯ, ಮಡಿವಾಳ ಮಾಚಿದೇವ, ಆಯ್ದಕ್ಕಿ ಲಕ್ಕಮ್ಮ, ಎಲೆಗಾರ ಕಾಮಣ್ಣ, ಗಾಣದ ಕನ್ನಪ್ಪ, ತಳವಾರ ಕಾಮಿದೇವ ಎಂಬಂತಹ ಹೆಸರುಗಳು ಬಸವಯುಗದಲ್ಲಿ ಒಮ್ಮೆಲೇ ಹಿಂಡುಹಿಂಡಾಗಿ ಕಾಣುತ್ತಿರುವುದು ಇದಕ್ಕೆ ಉದಾಹರಣೆಯಾಗಿದೆ. ಶರಣರಿಗೆ ತಾವು ಮಾಡುವ ಉದ್ಯೋಗ ವೃತ್ತಿಸ್ತರದಲ್ಲಿ ನಿಂತು ಕಾಡದೆ, ಕಾಯಕಸ್ತರದಲ್ಲಿ ನಿಂತು ಪೂಜ್ಯವೆನಿಸಿತು; ತಮ್ಮನ್ನು ಕಾಯಕದಿಂದ ಗುರುತಿಸಿಕೊಳ್ಳುವುದು ಹೆಮ್ಮೆಯೆನಿಸಿತು. ಹೀಗಾಗಿ ವೃತ್ತಿಯನ್ನು ಅಡ್ಡ ಹೆಸರಿನಂತೆ ಅಂಟಿಸಿಕೊಳ್ಳುವುದು ಈ ಕಾಲದಲ್ಲಿ ವ್ಯಾಪಕವಾಗಿ ಬೆಳೆದು ಬಂದಿತು. ವೃತ್ತಿಯನ್ನು ಅಡ್ಡಹೆಸರಿನಂತೆ ಬಳಸಿಕೊಳ್ಳುವ ಪದ್ಧತಿ ಉತ್ತರ ಕರ್ನಾಟಕದಲ್ಲಿ ಹೇರಳ, ದಕ್ಷಿಣ ಕರ್ನಾಟಕದಲ್ಲಿ ಇಲ್ಲವೆನ್ನುವಷ್ಟು ವಿರಳ. ಉತ್ತರ ಕರ್ನಾಟಕ ಶರಣರ ಆಂದೋಲನದ ಕೇಂದ್ರಭೂಮಿಯಾಗಿದ್ದುದೇ ಇದಕ್ಕೆ ಕಾರಣವಾಗಿರಬೇಕು. ಸಾವಂತ, ಪ್ರಧಾನಿ, ಪೂಜಾರಿ, ಅರ್ಚಕ, ಪಟ್ಟಣಶೆಟ್ಟಿ, ಮಾದರ, ಹೂಗಾರ ಇತ್ಯಾದಿಗಳು ಈ ವೃತ್ತಿವರ್ಗಕ್ಕೆ ಸೇರುವ ಅಡ್ಡ ಹೆಸರುಗಳಾಗಿವೆ. ಮುಂದೆ ಇದು ಜಮಾದಾರ, ಮುಲ್ಲಾ, ಪೋಲೀಸ ಇತ್ಯಾದಿ ಹೊಸ ಹೊಸ ವೃತ್ತಿಗಳನ್ನು ಅಡ್ಡ ಹೆಸರಾಗಿ ಇಟ್ಟುಕೊಳ್ಳುವುದಕ್ಕೆ ದಾರಿಮಾಡಿಕೊಟ್ಟಿತು. ಈ ವರ್ಗದ ಕಮ್ಮಾರ, ಜಾಡರ, ಹಡಪದ ಇತ್ಯಾದಿಗಳು ಸಮೂಹವಾಚಿ ಅಡ್ಡ ಹೆಸರುಗಳಾಗಿದ್ದರೆ, ಬಳ್ಳೊಳ್ಳಿ, ಉಳ್ಳಾಗಡ್ಡಿ, ಕುದರಿ ಇತ್ಯಾದಿಗಳು ಆಯಾ ಕೃಷಿ-ವ್ಯಾಪಾರವೃತ್ತಿಗಳ ಹಿನ್ನೆಲೆಯಲ್ಲಿ ಹುಟ್ಟಿಬಂದ ಸಮೂಹವಾಚಿಯಲ್ಲದ ಅಡ್ಡ ಹೆಸರುಗಳಾಗಿವೆ.

ವಸ್ತುನಾಮವಾಚಿ : ಕೆಲವು ವಸ್ತುಗಳು ಸಂಬಂಧ ಮತ್ತು ಬಳಕೆಗಳಿಂದಾಗಿಯೂ ಅವು ವ್ಯಕ್ತಿಗೆ ಅಡ್ಡ ಹೆಸರುಗಳಂತೆ ಅಂಟಿಕೊಂಡಿರುತ್ತವೆ. ಅಂದರೆ ಒಂದು ಕುಟುಂಬಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ಯಾವುದು ಪ್ರಧಾನವಾಗಿ ಜನರ ಗಮನ ಸೆಳೆಯುವುದೇ ಅದು ಅವರ ಅಡ್ಡ ಹೆಸರಾಗುತ್ತವೆ. ದೊಡ್ಡಮನಿ, ಹುಣಸೀಮರದ, ಬೇವಿನಮರದ ಇತ್ಯಾದಿಗಳು ವಸತಿ ಸಂಬಂಧಸೂಚಿಯಾಗಿ ಬಂದುವು. ಮಯೂರವರ್ಮನ ಮನೆತನಕ್ಕೆ 'ಕದಂಬ' ಹೆಸರು ಬರಲು ಮನೆಯ ಮುಂದಿನ ಕದಂಬವೃಕ್ಷವೇ ಕಾರಣವಾಗಿರಬಹುದೆಂಬುದನ್ನು ಇಲ್ಲಿ ನೆನೆಯಬಹುದು. ಮೇಲೆ ಹೇಳಿದ ಬಳ್ಳೊಳ್ಳಿ, ಉಳ್ಳಾಗಡ್ಡಿ, ಕುದರಿ ಇತ್ಯಾದಿ ಅಡ್ಡ ಹೆಸರುಗಳು ಆ ವಸ್ತುವನ್ನು ಅವರು ಪ್ರಧಾನವಾಗಿ ಬಳಸುವುದರಿಂದಲೂ ಬಂದುವಾಗಿರಬಹುದು. ಶೆಟ್ಟರೊಬ್ಬರು ಕತ್ತೆಗಳ ಮೇಲೆ ಸಾರಿಗೆ ವ್ಯಾಪಾರ ಮಾಡುತ್ತಿದ್ದುದರಿಂಸದ ಅವರಿಗೆ ಕತ್ತಿಶೆಟ್ಟರು ಹೆಸರು ಬಂದಿತು. ಊರಿಗೆ ಮೊದಲಿಗರಾಗಿ ಗೋಡೆಗಡಿಯಾರ ಖರೀದಿಸಿ ತಮ್ಮ ಮಠದಲ್ಲಿ ತೂಗುಹಾಕಿದುದುರಿಂದ ಕಲ್ಯಾಣದಲ್ಲಿಯ ಒಂದು ಜಂಗಮ ಮನೆತನಕ್ಕೆ "ಗಡಿಯಾರಮಠ" ಎಂಬುದು ಅಡ್ಡ ಹೆಸರಾಗಿ ಬಳಕೆಗೊಂಡಿತು. ಅಂದರೆ ಮಿಕ್ಕ ಶೆಟ್ಟರಿಂದ, ಮಿಕ್ಕ ಮಠದವರಿಂದ ಅವರನ್ನು ಬೇರೆಮಾಡಿ ತೋರಿಸಲು ಆ ವಸ್ತುಗಳು ಆ ಜನರಿಗೆ ಅನುಕೂಲವಾಗಿ ಕಂಡು, ಅಡ್ಡ ಹೆಸರಿನಲ್ಲಿ ಸೇರಿಕೊಂಡವು. ಹೀಗೆ 'ವಸ್ತು ಪ್ರಧಾನತೆ'ಯೂ ಅಡ್ಡ ಹೆಸರಿನ ಸೃಷ್ಟಿಗೆ ಕಾರಣವಾಗುತ್ತದೆ.

ಇತರ ನಾಮವಾಚಿ : ಚಾಲುಕ್ಯ ಮೊದಲಾದುವುಗಳಂತೆ ಕೆಲವು ವಂಶನಾಮ, ಜನಾಂಗನಾಮಗಳು ಅಡ್ಡ ಹೆಸರಾಗಿ ನಿಲ್ಲುತ್ತವೆ. ಉದಾ : ರಜಪೂತ, ಮರಾಠಾ, ರೆಡ್ಡಿ, ರಾಠೋಡ, ಬಲ್ಲಾಳ, ಆಳ್ವಾ ಇತ್ಯಾದಿ.

ಕೆಲವು ಮನೆತನಗಳಲ್ಲಿ ಆಗಿಹೋದ ಪ್ರಸಿದ್ಧ ಪುರುಷ ಇಲ್ಲವೆ ಸ್ತ್ರೀಯರು ಮನೆತನದ ಅಡ್ಡಹೆಸರಾಗಿ ಪರಿಣಮಿಸುತ್ತಾರೆ. ಉದಾ : ಬಾಲಪ್ಪಗೋಳ, ಬಂದಮ್ಮನವರ, ಕೆಂಚರೆಡ್ಡೇರ, ಸಣ್ಣಕ್ಕನವರ ಇತ್ಯಾದಿ.

ವ್ಯಕ್ತಿಗಳ ರೂಪ, ಗುಣ ಇತ್ಯಾದಿಗಳೂ ಅಡ್ಡಹೆಸರಾಗಿ ರೂಢಿಗೊಳ್ಳುತ್ತವೆ. ಕ್ರಿಸ್ತಶಕ ೧೧೬೧ರ ಮನಗೂಳಿ ಸಾಸನ 'ಹುರ್ವ್ವಿನವರು' ಹೆಸರಿನ ಮನೆತನವನ್ನು ಸೂಚಿಸುತ್ತಿದ್ದು, ದಟ್ಟವಾದ ಹುಬ್ಬು ಇವರಿಗಿದ್ದುದೇ ಈ ಅಡ್ಡಹೆಸರಿನ ಉಗಮಕ್ಕೆ ಕಾರಣವಾಗಿರಬಹುದೆಂದು ಶ್ರೀ ಮೇವುಂಡಿ ಊಹಿಸುತ್ತಾರೆ.[೧] ಇಂದಿನ ದಾಡಿ, ಗಡತರಣ್ಣವರ, ಅವಧಾನಿ, ಪಂಡಿತ ಇತ್ಯಾದಿ ಅಡ್ಡ ಹೆಸರುಗಳು ಇದೇ ಬಗೆಯವು.

೩. ಇತರ ಸಂಗತಿಗಳು :

ಒಬ್ಬ ವ್ಯಕ್ತಿ ಒಂದು ಮನೆತನಕ್ಕೆ ದತ್ತುಹೋದರೆ, ಒಬ್ಬ ಹೆಣ್ಣುಮಗಳು ಗಂಡನ ಮನೆಗೆ ಬಂದರೆ ಮೊದಲಿನ ಅಡ್ಡ ಹೆಸರನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಸಮಾಜಕ್ಕೆ ಇದು ಸಮ್ಮತವಾಗಿರುವುದರಿಂದ ಇಂಥ ಪ್ರಸಂಗಗಳಲ್ಲಿ ಅಡ್ಡ ಹೆಸರು ತೀವ್ರ ಬದಲಾಗುತ್ತದೆ. ಆದರೆ ಅಕಾರಣ ಬದಲಿಸಲು ಮುಖ್ಯ ಕಾರಣ ಅದು ಸುಂದರವಾಗಿಲ್ಲದಿರುವುದು. ಹೀಗೆ ಅಂದವಾಗಿರದ ಅಡ್ಡ ಹೆಸರನ್ನು ಇಡಿಯಾಗಿ ಬದಲಾಯಿಸಿಕೊಳ್ಳುವುದರ ಜೊತೆ ಒಮ್ಮೊಮ್ಮೆ ಕತ್ತಿ>ಕಟ್ಟಿ, ಗುದ್ದೀನ>ಗುಡ್ಡೀನ ಎಂಬಂತೆ ಅಲ್ಪ ವ್ಯತ್ಯಾಸಗೊಳಿಸಿಕೊಳ್ಳುವುದುಂಟು. ಇಂಥ ಸಂದರ್ಭದಲ್ಲಿ ಕೆಲವೊಮ್ಮೆ ಅದನ್ನು ಸಂಕ್ಷಿಪ್ತಗೊಳಿಸಿಕೊಳ್ಳುವುದುಂಟು. ಉದಾ : ಕರಿಗೌಡೆ ಈಶ್ವರ>ಕೆ.ಈಶ್ವರನ್, ಕೋಣದ ಚೆನ್ನಬಸಪ್ಪ>ಕೋ.ಚೆನ್ನಬಸಪ್ಪ. ಹೀಗಾಗಿ ಸುಂದರವಾದ ಅಡ್ಡ ಹೆಸರು ವ್ಯಕ್ತಿಗೆ ಸಂತೋಷವನ್ನುಂಟುಮಾಡುತ್ತಿದ್ದರೆ, ಸುಂದರವಲ್ಲದ ಅಡ್ಡ ಹೆಸರು ಆ ವ್ಯಕ್ತಿಯ ಜೀವನದುದ್ದಕ್ಕೂ ಮನಸ್ಸನ್ನು ಕೊರೆಯುತ್ತಿದ್ದು, ಈ ಕೊರಗನ್ನು ತಪ್ಪಿಸಿಕೊಳ್ಳಬೇಕೆನ್ನುವವರಿಗೆ ಸಂಕ್ಷೇಪೀಕರಣವೊಂದು ವರದಾನವೆಂದೇ ಹೇಳಬೇಕು. ಕಾನೂನುಬದ್ಧವಾಗಿಯೂ ಕೆಲವು ಇಂಥ ವ್ಯತ್ಯಾಸಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಸರಕಾರಿ ದಫ್ತರದಲ್ಲಿ ಅವರು ಏನೇ ವ್ಯತ್ಯಾಸ ಮಾಡಿಕೊಂಡರೂ ಸಾಮಾಜಿಕ ಜೀವನದಲ್ಲಿ ತೀವ್ರ ಬದಲಾವಣೆಯಾಗದಿರುವುದನ್ನು ಗಮನಿಸಿದಲ್ಲಿ, ಅಡ್ಡಹೆಸರು ವ್ಯಕ್ತಿಯೊಂದಿಗೆ ಎಂಥ ಅವಿನಾಸಂಬಂಧ ಹೊಂದಿರುವುದೆಂಬುದು ಸ್ಪಷ್ಟವಾಗುತ್ತದೆ.

ಸಾಮಾನ್ಯವಾಗಿ ಯಾವುದೇ ಜಾತಿಯವರಿಗೆ ಯಾವುದೇ ಗ್ರಾಮನಾಮ (ಧಾರವಾಡ, ಧರ್ಮಸ್ಥಳ), ಯಾವುದೇ ವಸ್ತುನಾಮ (ಕುದರಿ, ಮೆಣಸಿನಕಾಯಿ), ಯಾವುದೇ ವೃತ್ತಿನಾಮ (ಕಂಬಾರ, ಸಿಂಪಿ) ಅಡ್ಡ ಹೆಸರಾಗಿ ಬರಬಹುದು. ಆದರೆ ಧಾರ್ಮಿಕ ಹುದ್ದೆ (ಮಠ, ಆಚಾರ್ಯ, ಮುಲ್ಲಾ), ಧಾರ್ಮಿಕ ವಸ್ತು (ನಂದಿಕೋಲ, ಕಂಬಿ), ಜಾತಿ (ಸಮಗಾರ, ಗೊಲ್ಲರ)ಗಳನ್ನು ಸೂಚಿಸುವ ಪ್ರಸಂಗದಲ್ಲಿ ಇಂಥ ಐಚ್ಛಿಕತೆಗೆ ಅವಕಾಶವಿರುವುದಿಲ್ಲ. ಇಂಥಲ್ಲಿ ಅಡ್ಡ ಹೆಸರು ಕೆಲವೊಮ್ಮೆ ಜಾತಿಯನ್ನು ನಿರ್ಧರಿಸುವ ಸಾಧನವೂ ಆಗಬಹುದು.

---

೧. ಶಾಸನಸಾಹಿತ್ಯ ಸಂಚಯ (ಪುಟ ೧೮, ಆ.ಟಿ)

ಏಕಕಾಲಕ್ಕೆ ಒಬ್ಬರಿಗೆ ಅನೇಕ ಅಡ್ಡಹೆಸರುಗಳು ರೂಢಿಯಲ್ಲಿರಬಹುದು. ಉದಾ: ನನ್ನ ಅಡ್ಡಹೆಸರು ಕಲಬುರ್ಗಿ, ಹಳ್ಳಿಯಲ್ಲಿ ನಮ್ಮದು ಅಂಗಡಿ ಇರುವುದರಿಂದ ಅಂಗಡಿಯವರೆಂದೂ ಕರೆಯುತ್ತಾರೆ. ನಮ್ಮ ತಂದೆ ಪವಾಡಶೆಟ್ಟರ ಮನೆಗೆ ಅಳಿಯತನಕ್ಕೆ ಬಂದ ಕಾರಣ ಪವಾಡಿ ಎಂಬುದು ರೂಢಿಯಲ್ಲಿದೆ. ನಮ್ಮ ಹಳ್ಳಿಯಲ್ಲಿ ನಮ್ಮದೊಂದೇ ವೀರಶೈವ ಬಣಜಿಗ ಮನೆತನವಿರುವುದರಿಂದ ಕ್ವಚಿತ್ತಾಗಿ 'ಬಣಜಿಗರು' ಎಂದೂ ಕರೆಯುತ್ತಾರೆ.

ಸಮೂಹವಾಚಿಯಾಗಿರುವ ಮೇಲುವರ್ಗದ ಗೌಡ, ಶೆಟ್ಟಿ, ಮಠ ಇತ್ಯಾದಿ ಅಡ್ಡಹೆಸರುಗಳಲ್ಲಿ ಪ್ರತಿಷ್ಠಾಮೂಲ ಇಲ್ಲವೆ ವೃತ್ತಿಮೂಲ ತಾರತಮ್ಯಗಳು ಏರ್ಪಟ್ಟಿರುತ್ತವೆ. ಉದಾ : ಗೌಡರ ಎನ್ನುವುದು ದೊಡ್ಡಗೌಡರ, ಹಿರೇಗೌಡರ, ಹೊಸಗೌಡರ, ಪೋಲೀಸಗೌಡರ ಎಂದು, ಶೆಟ್ಟರ ಎನ್ನುವುದು ಪಟ್ಟಣಶೆಟ್ಟರ, ಮಹಾಶೆಟ್ಟರ, ಮಾಜನ ಶೆಟ್ಟರ, ಕೋರಿಶೆಟ್ಟರ, ಬಂಗಾರ ಶೆಟ್ಟರ ಎಂದು, ಮಠ ಎಂಬುದು ಹಿರೇಮಠ, ಚಿಕ್ಕಮಠ, ವಿರಕ್ತಮಠ ಎಂದು ತಾರತಮ್ಯಗಳನ್ನು ಸೃಷ್ಟಿಸಿಕೊಂಡಿವೆ. ಆದರೆ ಸಮೂಹವಾಚಿಯಾಗಿದ್ದರೂ ಕೆಳವರ್ಗದ ಹೊಲೆಯ, ಮಾದಿಗ, ಕುಂಬಾರ ಜನಾಂಗಗಳ ಅಡ್ಡಹೆಸರಿನಲ್ಲಿ ಇಂಥ ತಾರತಮ್ಯ ತೋರಿಬರುವುದಿಲ್ಲ. ಈ ಸಂಗತಿ ಮೇಲುವರ್ಗದಲ್ಲಿ "ಸಾಮಾಜಿಕ ಶ್ರೇಣಿ ಮತ್ತು ಪ್ರತಿಷ್ಠೆ"ಗಳು ಏರ್ಪಟ್ಟಿರುತ್ತವೆ, ಕೆಳವರ್ಗದಲ್ಲಿ ಏರ್ಪಟ್ಟಿರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಭಾಷೆಯ ರೂಪವ್ಯತ್ಯಾಸಕ್ರಿಯೆ ಅದರ ಒಂದು ಅಂಗವಾದ ಅಡ್ಡ ಹೆಸರುಗಳಲ್ಲಿಯೂ ಸ್ವಾಭಾವಿಕಾವಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಇವುಗಳ ಉಚ್ಚಾರದಲ್ಲಿಯೂ ಸಂಕ್ಷೇಪೀಕರಣ, ಸುಲಭೀಕರಣ, ಅಕ್ಷರಪಲ್ಲಟ, ಸಮರೂಪಧಾರಣೆ ಮೊದಲಾದ ಕ್ರಮಬದ್ಧವ್ಯತ್ಯಾಸಗಳು ತಲೆದೋರುತ್ತವೆ. ಕನ್ನಡ ಹೆಸರುಗಳು ಮಹಾರಾಷ್ಟ್ರದಲ್ಲಿ ಎಕಾರಾಂತ ಹೊಂದಿವೆ. ಉದಾ : ಕೋರೆ(ಕೋರಿ), ಸಾಖರೆ(ಸಕ್ಕರಿ), ಅಡಕೆ(ಅಡಕಿ), ಲೋಖಂಡೆ(ಲಕ್ಕುಂಡಿ). ಕೆಲವೊಮ್ಮೆ ಹೆಸರಿನ ಅನುವಾದವನ್ನೂ ಕಾಣುತ್ತೇವೆ. ಉದಾ: ಹತ್ತಿ=ಕಪಾಸ>ಕಾಪಸೆ.

ಕರ್ನಾಟಕದಲ್ಲಿ 'ಅಡ್ಡಹೆಸರು' ಅಧ್ಯಯನದ ವಸ್ತುವಾಗಿ ವಿದ್ವಾಂಸರ ಲಕ್ಷ್ಯವನ್ನು ಅಷ್ಟಾಗಿ ಸೆಳೆದಿಲ್ಲವೆಂದೇ ಹೇಳಬೇಕು. ಈಗ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಎಲ್ಲ ಲಕ್ಷೋಪಲಕ್ಷ ಅಡ್ಡಹೆಸರುಗಳನ್ನು ಪಟ್ಟಿಮಾಡಿ, ಬಳಸುವ ವಿಧಾನ-ಸ್ವರೂಪ ಇತ್ಯಾದಿ ದೃಷ್ಟಿಗಳಿಂದ ಅವುಗಳನ್ನು ವರ್ಗೀಕರಿಸಿ ವಿವೇಚಿಸಿದಲ್ಲಿ ಅದು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಜನಾಂಗ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ; ನಮ್ಮ ಸಂಸ್ಕೃತಿಯ ಅಧ್ಯಯನವೇ ಆಗುತ್ತದೆ.

ಸಮಾರೋಪ :

ಅಡ್ಡಹೆಸರು ಗ್ರಾಮವಾಚಿ, ವೃತ್ತಿವಾಚಿ, ವಸ್ತುವಾಚಿ ಇತ್ಯಾದಿ ರೂಪಗಳದ್ದಾಗಿರುವುದರಿಂದ ಇದರ ಅಧ್ಯಯನ ಆ ನಾಡಿನ ಗ್ರಾಮ, ವೃತ್ತಿ, ವಸ್ತು ಮುಂತಾದುವುಗಳ ಮತ್ತು ಅವು ಆ ಕುಟುಂಬಕ್ಕೆ ಅಂಟಿಕೊಂಡ ಔಚಿತ್ಯಗಳ ತಿಳುವಳಿಕಯನ್ನು ನೀಡುತ್ತದೆ.

ಕುಟುಂಬಗಳು ವಲಸೆಹೋದ ಚಲನವಲನವನ್ನೂ ಗ್ರಾಮವಾಚಿ ಅಡ್ಡಹೆಸರುಗಳು ಸೂಚಿಸುತ್ತವೆ. ಮಾನ್ವಿ, ಭೂಸನೂರ, ಮಾಗಾವಿ, ಕಿಣಗಿ, ಅಳಗುಂಡಗಿ -ಇವು ನಿಜಾಂ ಪ್ರಾಂತದ

ಗ್ರಾಮಗಳು. ಈ ಅಡ್ಡಹೆಸರಿನ ಕುಟುಂಬಗಳು ಮುಂಬಯಿ ಕರ್ನಾಟಕದ ಅನೇಕ ಕಡೆಗಳಲ್ಲಿ ನೆಲೆಸಿವೆ. ಇವೆಲ್ಲ ಸಾಮಾನ್ಯವಾಗಿ ಬಣಜಿಗ ಕುಟುಂಬ ಗಳಾಗಿರುವುದರಿಂದ ವ್ಯಾಪಾರಕ್ಕಾಗಿ ಬಂದು ಅಲ್ಲಲ್ಲಿ ನೆಲೆ ನಿಂತಿರಬಹುದಾದರೂ ಉಳಿದ ಪ್ರಾಂತಗಳ ಬಣಜಿಗರು ಏಕೆ ಹೀಗೆ ವಲಸೆ ಬಂದಿಲ್ಲ? ಎಂಬ ಪ್ರಶ್ನೆ ಏಳುತ್ತದೆ. ಬಹುಶಃ ಮುಸಲ್ಮಾನರ ಆಡಳಿತಕ್ಕೆ ಬೇಸತ್ತು, ಮೇಲೆ ಹೇಳಿದ ಗ್ರಾಮಗಳನ್ನು ಬಿಟ್ಟು ಬಂದಿರಬಹುದಾದ ಶ್ರೀಮಂತ ಕುಟುಂಬಗಳಿವು. ಇವರು ವರುಷಕ್ಕೊಮ್ಮೆ ಇಲ್ಲವೆ ವಿಶೇಷ ಸಂದರ್ಭಗಳಲ್ಲಿ ತಮ್ಮ ಮೂಲಗ್ರಾಮಗಳಿಗೆ ಹೋಗಿ ಅಲ್ಲಿಯ ಮನೆದೇವರಿಗೆ ಪೂಜೆ ಸಲ್ಲಿಸುವುದುಂಟು. ಈ ವ್ಯಾಪಾರಿ ವರ್ಗದವರಲ್ಲದೆ ಆಡಳಿತಕ್ಕೆ ಸಂಬಂಧಿಸಿದ ದೇಸಾಯಿ, ದೇಶಮುಖ, ಗೌಡ ಮೊದಲಾದವರು ಆಕ್ರಮಣಕ್ಕೆ ಬೇಸತ್ತು ಬೇರೆಡೆ ಬಂದಾಗ, ಬಿಟ್ಟುಬಂದ ಆ ಊರು ಅಡ್ಡ ಹೆಸರಾಗಿ ನಿಲ್ಲುತ್ತದೆ. ಹೀಗಾಗಿ ಗ್ರಾಮವಾಚಿ ಅಡ್ಡ ಹೆಸರುಗಳು ವಾಣಿಜ್ಯ, ಆಡಳಿತಗಳಿಗೆ ಸಂಬಂಧಿಸಿದ ಕುಟುಂಗಳಿಗೆ ಮಾತ್ರ ಪ್ರಧಾನವಾಗಿ ತೋರಿಬರುತ್ತವೆ.

ವೃತ್ತಿವಾಚಿ, ಜಾತಿವಾಚಿ ಅಡ್ಡಹೆಸರುಗಳು ಆಯಾ ಮನೆತನಗಳ, ಪ್ರದೇಶಗಳ ಪ್ರಾಚೀನ ವೃತ್ತಿವಿವರ. ಜಾತವ್ಯವಸ್ಥೆಗಳನ್ನು ತಿಳಿಸಿಕೊಡುತ್ತವೆ. ಶಾಸನಗಳಲ್ಲಿ ಗ಼ವಱೆಗಳು, ಗಾತ್ರಿಗಳು ಎಂಬ ಎರಡು ವ್ಯಾಪಾರಿವರ್ಗಗಳು ಪದೇಪದೇ ಗೋಚರಿಸುತ್ತವೆ. ಇಷ್ಟು ಪ್ರಸಿದ್ಧವಾಗಿದ್ದ ಈ ಗ಼ವಱೆಗಳು ಯಾರು? ಗಾತ್ರಿಗಳು ಯಾರು? ಅವರು ಈಗ ಯಾವ ಹೆಸಸರುಗಳಿಂದ ಕರೆಸಿಕೊಳ್ಳುತ್ತಾರೆ? ಎಂಬುದು ಕುತೂಹಲ ಕೆರಳಿಸುವ ಪ್ರಶ್ನೆ. ಇಂದು ಉತ್ತರ ಕರ್ನಾಟಕದ ಒಂದೇ ಮತಕ್ಕೆ ಸಂಬಂಧಿಸಿದ ಕೋರಿ ಹೆಸರಿನ ವ್ಯಾಪರಿ ಮನೆತನಗಳು ದೊಡ್ಡ ಸಂಖ್ಯೆಯಲ್ಲಿ; ಗವರಿ (ಗೌರಿ), ಗವರಶೆಟ್ಟಿ ಹೆಸರಿನ ವ್ಯಾಪರಿ ಮನೆತನಗಳು ಕ್ವಚಿತ್ತಾಗಿ ಸಿಗುತ್ತವೆ. ಪ್ರಾಚೀನ ಗ಼ವಱೆ ಎಂಬುದೇ ಒಂದು ಕಡೆ ಗ಼ವಱೆ>ಕೋಱೆ>ಕೋರಿ ಎಂದೂ ಇನ್ನೊಂದು ಕಡೆ ಗ಼ವಱೆಯಾಗಿ ಮುನ್ನಡೆದು ಗ಼ವಱೆ>ಗೌಱೆ>ಗೌರಿ ಎಂದೂ ರೂಪ ವ್ಯತ್ಯಾಸ ಮಾಡಿಕೊಂಡಂತಿದೆ. ಇದು ನಿಜವಿದ್ದರೆ ಇಂದಿನ 'ಕೋರಿ'ಗಳಿಗೂ ಪ್ರಾಚೀನ ಗ಼ವಱೆಗಳಿಗೂ ಸಂಬಂಧ ಕಲ್ಪಿತವಾಗಿ, ಒಂದು ಜನಾಂಗದ ಕಳಚಿ ಹೋದ ಇತಿಹಾಸದ ಕೊಂಡಿ ಮತ್ತೆ ಬೆಸೆದುಕೊಳ್ಳುತ್ತದೆ. ಕೋರಿ ಎಂದರೆ ಕಂಬಳಿ ಎಂದು ಅರ್ಥವಿರುವುದರಿಂದ ಇವರು ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ವ್ಯವಹರಿಸುತ್ತಿದ್ದ ವ್ಯಾಪಾರಿಗಳೆಂದು ಕೆಲವರು ಹೇಳುತ್ತಾರೆ. ಆದರೆ ಹೆಗಲ ಮೇಲೆ ಕಂಬಳಿ ಹಾಕಿಕೊಂಡ ಮಾತ್ರಕ್ಕೆ 'ಕೋರಿ' ಅಡ್ಡಹೆಸರು ಬರುವುದು ಅಸಂಭವ. ಇವರು ಕಂಬಳಿಯ ವ್ಯಾಪಾರ ಮಾಡುವವರೂ ಆಗಿರಲಿಕ್ಕಿಲ್ಲ. ಏಕೆಂದರೆ ಇಂದಿನ 'ಕೋರಿ'ಯವರಲ್ಲಿ ಅಂಥ ವ್ಯಾಪಾರದ ಕುರುಹು ಸ್ವಲ್ಪವೂ ಇಲ್ಲ. ಕಂಬಳಿಯದು ಶಾಸನಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವಷ್ಟು ದೊಡ್ಡ ವ್ಯಾಪಾರವೂ ಅಲ್ಲ. ಕಾರಣ ಇದಕ್ಕೆ ಬೇರೆ ಅರ್ಥ ಹುಡುಕಬೇಕು. ಬಹಶಃ ಇವರದು 'ಕವಿಲೆ'(ಕವಲೆತ್ತು)ಯ ಮೇಲೆ ವ್ಯಾಪಾರಮಾಡುವ ವೃತ್ತಿ. ಕವಿಲೆ>ಕವರೆ>ಗವರೆ ರೂಪವ್ಯತ್ಯಾಸವಾಗುವ ಸಾಧ್ಯತೆಯಿದೆ, ಕವಳಿ, ಕವದಿ, ಕವಲಿ ಇವೆಲ್ಲ ಇದೇ ಬೇರಿನಿಂದ ಚಿಗುರೊಡೆದ ಅಡ್ಡಹೆಸರುಗಳಾಗಿರಬೇಕು. ಕವಲೆದುರ್ಗ ಮೊದಲಾದ ಊರುಗಳು ಈ ವ್ಯಾಪಾರಿಗಳ ನೆಲೆಗಳೇ ಆಗಿರಬೇಕು. ಶಾಸನಗಳು ತಿಳಿಸುವಂತೆ ಗವಱೇಶ್ವರ ದೇವಾಲಯಗಳನ್ನು ಕಟ್ಟಿಸಿದ ಇವರೇ ಕಪಿಲಸಿದ್ಧ, ಕಪಿಲೇಶ್ವರ ಮೊದಲಾದ ದೇವಾಲಯಗಳನ್ನೂ ಕಟ್ಟಿಸಿರುವ ಸಾಧ್ಯತೆಯಿದೆ, ಇದೆಲ್ಲವನ್ನು ನೋಡಿದರೆ ಅಡ್ಡಹೆಸರು ಸಂಸ್ಕೃತಿಯ ಪುನರ್ರಚನೆಯಲ್ಲಿ ಎಂಥ ಮಹತ್ವದ ಪಾತ್ರವಹಿಸಬಲ್ಲುದೆಂದು ಸ್ಪಷ್ಟವಾಗುತ್ತದೆ. ಶಾಸನೋಕ್ತ ಗ಼ವಱೆಗಳು ಇಂದಿನ ಕೋರಿಯವರಾದರೆ,

ಅಲ್ಲಿಯೇ ಈ ಪದದ ಜೊತೆ ಬರುವ ಗಾತ್ರಿಗ ಪದ ಇಂದಿನ ಯಾರನ್ನು ಸೂಚಿಸುತ್ತದೆ? ಬಹುಶಃ ಅವರು ಇಂದಿನ 'ಕತ್ತಿ'ಯವರೇ ಆಗಿರಬೇಕು. ಗ\ವಜಿೆಗಳು ಎತ್ತಿನ ಮೇಲೆ ಸಾಗಾಣಿಕೆ ಮಾಡುವವರಾದರೆ, ಗಾತ್ರಿಗರು ಕತ್ತೆಯ ಮೇಲೆ ಸಾಗಾಣಿಕೆ ಮಾಡುವವರಾಗಿರಬೇಕು. 'ಗಾತ್ರಿಗ' 'ಕತ್ತಿ' ರೂಪಗಳಲ್ಲಿ ಭಾಷಿಕ ಸಂಬಂಧ ಕಲ್ಪಿಸುವ ಸಾಧ್ಯತೆಯಿದೆ.

ಕರ್ನಾಟಕದ ಇನ್ನೊಂದು ವ್ಯಾಪಾರಿ ವರ್ಗ ಪಟ್ಟಣಶೆಟ್ಟಿ, ಇದಕ್ಕೆ ಅನೇಕರು ಅನೇಕ ಅರ್ಥ ಹೇಳಿದ್ದಾರೆ. ಆದರೆ ಪ್ರಾಚೀನ ಕಾಲದಲ್ಲಿ ಒಂದು ಗ್ರಾಮವು ಸಂತೆ ನೆರೆಯುವಿಕೆಯಿಂದ ಪಟ್ಟಣವೆನಿಸಿಕೊಳ್ಳುತ್ತಿತ್ತು. ಹೀಗೆ ಸಂತೆ ನೆರೆಯಿಸುವ ಹೊಣೆ ಹೊತ್ತ ವ್ಯಾಪಾರಿಯೇ ಪಟ್ಟಣಶೆಟ್ಟಿ ಅಂದರೆ ಸಂತೆಶೆಟ್ಟಿ. ಲಿಂಗಾಯತ ಹೂಗಾರರಿಗೆ ಜೀರ್‍ರು ಎಂಬ ಅಡ್ಡಹೆಸರಿದೆ. ಇದರ ಹಳೆಯ ರೂಪ ಜೀಯರ್, ಶಾಸನಗಳಲ್ಲಿ ಕಾಳಾಮುಖವ್ಯಕ್ತಿಗಳಿಗೆ ಬಳಸಲಾಗುವ ಕಾಳಜೀಯರ್, ಅಮೃತಜೀಯರ್ ಹೆಸರುಗಳಿಗೂ ಇವರಿಗೂ ಸಂಬಂಧವಿರಬಹುದೆನಿಸುತ್ತದೆ. ಇಂದಿನ ಹೂಗಾರ ಪಂಗಡದ ಇನ್ನೊಂದು ಅಡ್ಡಹೆಸರು ಗುರವ. ಇದು ಪ್ರಾಚೀನ ಕಾವ್ಯ-ಶಾಸನಗಳಲ್ಲಿ ಕಂಡು ಬರುವ ಗೊರವರನ್ನು ನೆನಪಿಸುತ್ತದೆ. ಈಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 'ಕೆಲ್ಲ' ಅಡ್ಡಹೆಸರಿನವರಿಗೂ ಹಲ್ಮಿಡಿಶಾಸನದ "ಸರಕ್ಕೆಲ್ಲ" ಹೆಸರಿಗೂ ಸಂಬಂಧ ಕಲ್ಪಿಸಬಹುದಾಗಿದೆ. ಮಹಾರಾಷ್ಟ್ರದಲ್ಲಿಯ 'ಸಾಳುಂಕೆ' ಅಡ್ಡಹೆಸರಿನವರು ತಮ್ಮನ್ನು ಚಾಳುಕ್ಯರೊಂದಿಗೆ, ಆಂಧ್ರಪ್ರದೇಶದ ರಡ್ಡಿಗಳು ರಾಷ್ಟ್ರಕೂಟರೊಂದಿಗೆ, ದಕ್ಷಿಣ ಕನ್ನಡ ಜಿಲ್ಲೆಯ ಆಳ್ವಾ ಅಡ್ಡಹೆಸರಿನವರು ಪ್ರಾಚೀನ ಅಳುಪರೊಂದಿಗೆ, ಬಲ್ಲಾಳರು ಹೊಯ್ಸಳರೊಂದಿಗೆ ತಮ್ಮ ಸಂಬಂಧ ಕಲ್ಪಿಸಿಕೊಳ್ಳುತ್ತಾರೆ.

ಅಳ್ವಾ, ಬಲ್ಲಾಳ, ಪಟ್ಟಣಶೆಟ್ಟಿ, ಕೋರಿ, ಕತ್ತಿ ಇವೇ ಮೊದಲಾದ ಅಡ್ಡಹೆಸರಿನ ಮನೆತನಗಳು ಸಾವಿರ ಸಂಖ್ಯೆಯಲ್ಲಿ ಸಿಗುವುದರಿಂದ ಇವು ಮೊದಲಿನಿಂದ ಇಂದಿನ ವರೆಗೂ ವಿಸ್ತಾರದಿಂದ ವಿಸ್ತಾರಕ್ಕೆ ಬೆಳೆದು ಬಂದ ಬಹುದೊಡ್ಡ ಕುಟುಂಬವರ್ಗಗಳೆಂದೂ ಪ್ರಾಚೀನತಮ ಪಂಗಡಗಳೆಂದೂ ಹೇಳಬಹುದು. ಕಾರವಾರ ಜಿಲ್ಲೆಯ ಹವ್ಯಕಬ್ರಾಹ್ಮಣರಲ್ಲಿ ಹೆಗಡೆ, ಭಟ್ಟ; ಗೌಡಸಾರಸ್ವತಬ್ರಾಹ್ಮಣರಲ್ಲಿ ಶಾನಭಾಗ, ನಾಯಕ ; ದಕ್ಷಿಣ ಕನ್ನಡ ಜಿಲ್ಲೆಯ ಬಂಟರಲ್ಲಿ ನಾಯಕ, ಶೆಟ್ಟಿ ; ಗೌಡಸಾರಸ್ವತ ಬ್ರಾಹ್ಮಣರಲ್ಲಿ ಪ್ರಭು, ಶೆಣೈ ಅಡ್ಡಹೆಸರುಗಳು ಬಹು ದೊಡ್ಡ ಗುಂಪನ್ನು ಪ್ರತಿನಿಧಿಸುತ್ತವೆ.

ಅಡ್ಡಹೆಸರುಗಳಾಗಿ ಕಾಣಿಸಿಕೊಳ್ಳುವ ಎಲ್ಲ ಬಗೆಯ ವೃತ್ತಿ (ಗಾಣಗೇರ, ಪತ್ತಾರ, ನಾವಿದ ಇತ್ಯಾದಿ)ಗಳನ್ನು ಒಂದೂ ಬಿಡದಂತೆ ಸಂಗ್ರಹಿಸಿದರೆ ಕರ್ನಾಟಕದ ಉದ್ಯೋಗ, ವೃತ್ತಿಗಳ ಮೇಲೆ ಬೆಳಕು ಬೀಳುವುದರಲ್ಲಿ ಸಂದೇಹವಿಲ್ಲ. ವೀರಶೈವ ಮಠಗಳ ಹೆಸರುಗಳನ್ನೇ ಪಟ್ಟಿಮಾಡಿ, ವರ್ಗೀಕರಿಸಿ, ವಿಶ್ಲೇಷಿಸಿ ಅಧ್ಯಯನ ನಡೆಸಿದಲ್ಲಿ ಅನೇಕ ರಹಸ್ಯಗಳು ಪ್ರಕಟವಾಗುತ್ತವೆ. ಜಂಗಮರಾಗಿರುವ ವೀರಶೈವ ಒಡೆಯರ್ ಅವರಿಗೂ ಕುರುಬ ಗುರುವರ್ಗದವರಾದ ಒಡೆಯರಿಗೂ ಏನು ಸಂಬಂಧ? ಎಂಬಂಥವು ಇನ್ನೂ ಪ್ರಶ್ನೆಗಳಾಗಿಯೇ ಉಳಿದಿವೆ.

ಸಮಗಾರ, ಹೊಲೇರ, ಮಾದರ ಮೊದಲಾದ ವೃತ್ತಿವಾಚಿ-ಜಾತಿವಾಚಿ ಅಡ್ಡ ಹೆಸರುಗಳು ಕೆಳವರ್ಗದವರಲ್ಲಿ ದಟ್ಟವಾಗಿ ಬಳಕೆಯಲ್ಲಿವೆ. ಮೇಲುವರ್ಗಕ್ಕೆ ಬಂದಂತೆ ಬ್ರಾಹ್ಮಣ, ಲಿಂಗಾಯತ ಎಂಬಂತಹ ಜಾತಿವಾಚಿ ಅಡ್ಡಹೆಸರುಗಳು ಕಾಣಿಸಿಕೊಳ್ಳುವುದಿಲ್ಲ. ಜಾಡರ, ಗಾಣಿಗ, ದೀಕ್ಷಿತ ಎಂಬಂತಹ ವೃತ್ತಿವಾಚಿಗಳು ಮಾತ್ರ ಆಗಾಗ ಕಾಣಿಸಿಕೊಳ್ಳುತ್ತವೆ; ಒಮ್ಮೊಮ್ಮೆ ಇವೂ ಕಾಣಿಸಿಕೊಳ್ಳುವುದಿಲ್ಲ.

ಇದನ್ನು ನೋಡಿದರೆ ಕೆಳವರ್ಗದಿಂದ ಮೇಲುವರ್ಗಕ್ಕೆ ಹೋದಂತೆ ನಮ್ಮ ಜನಾಂಗಗಳು ಜನಾಂಗಗಳಾಗಿ ಉಳಿಯದೆ, ಕುಟುಂಬಗಳಾಗಿ ಒಡೆದುಕೊಳ್ಳುತ್ತ ಬಂದಿವೆಯೆಂದು ವಿದಿತವಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ದ್ಯಾವಮ್ಮನವರ, ಕೆಂಚವ್ವಗೋಳ ಎಂದು ಮುಂತಾಗಿ ಸ್ತ್ರೀನಾಮವಾಚಿ ಅಡ್ಡಹೆಸರುಗಳು ಸಿಗುತ್ತವೆ. ಈ ಮನೆತನಗಳಲ್ಲಿ ಈ ಹೆಸರಿನ ಪ್ರಸಿದ್ಧ ಸ್ತ್ರೀಯರು ಆಗಿಹೋಗಿರಬಹುದೆಂದು ಹೇಳಬಹುದಾದರೂ ಇವು ದ್ರಾವಿಡದ ಮಾತೃಪ್ರಧಾನ ಕುಟುಂಬಪದ್ಧತಿಯ ಕುರುಹುಗಳೆಂದು ಶ್ರೀ ಬೆಂಗೇರಿ ಹೇಳುತ್ತಾರೆ. "ಮುಂಬಯಿ ಕರ್ನಾಟಕದ ಬ್ರಾಹ್ಮಣ ಮನೆತನಗಳಲ್ಲಿ ಈ ಬಗೆಯ ಹೆಸರು ಒಂದಾದರೂ ಔಷಧಕ್ಕಾದರೂ ನನಗೆ ಸಿಕ್ಕಿಲ್ಲ. ಲಿಂಗಾಯತರಲ್ಲಿ ನೂರಕ್ಕೆ ೪-೫, ಬಾರಿಕಾರ ಮುಂತಾದವರಲ್ಲಿ ನುರಕ್ಕೆ ೨೦-೩೦ ಸಿಗುತ್ತವೆ. ಹರಿಜನರಲ್ಲಿಯಂತೂ ಈ ಮಿತಿ ೬೦ಕ್ಕೆ ಏರುತ್ತದೆ"[೨] ಎಂಬ ವಿವರಣೆ ಮೂಲತಃ ಬ್ರಾಹ್ಮಣರಲ್ಲಿ ಪಿತೃಪ್ರಧಾನ, ಬ್ರಾಹ್ಮಣೇತರರಲ್ಲಿ ಮಾತೃಪ್ರಧಾನ ಕುಟುಂಬಪದ್ಧತಿ ಅಸ್ತಿತ್ವದಲ್ಲಿದ್ದುದನ್ನು ಸೂಚಿಸುತ್ತದೆ.

ವೇಶ್ಯೆಯರ ಮಕ್ಕಳ ಹೆಸರಿನ ಮುಂದೆ ತಾಯಿ ಹೆಸರು ಕಾಣಿಸಿಕೊಳ್ಳುತ್ತಿದ್ದರೂ ಇದು ಮಾತೃಪ್ರಧಾನ ಪದ್ಧತಿಗಿಂತ ಭಿನ್ನವೆಂಬುದನ್ನು ಮರೆಯಲಾಗದು.

ಅಡ್ಡಹೆಸರನ್ನು ರೂಪಿಸುವ ವಾರ್ಗಿಕಗಳಲ್ಲಿ ಕೇಶಿರಾಜ ಹೇಳುವ ವಾಳ (ಮಡಿವಾಳ), ಕಾರ (ಬಣ್ಣಕಾರ), ಗಾರ (ಮಾಲೆಗಾರ), ಅಡಿಗ (ಹಾವಾಡಿಗ), ಅಟಿಗ (ದೇವಟಿಗ), ವಂತ (ಸಿರಿವಂತೆ), ಇತಿ (ಗಾಣಿಗಿತಿ) ಇತ್ಯಾದಿ ತದ್ಧಿತಪ್ರತ್ಯಯಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಆದರೆ ಕೇಶಿರಾಜನು ತದ್ಧತಪದಗಳಿಂದ ಈ ಪ್ರತ್ಯಯಗಳನ್ನು ಸರಿಯಾಗಿ ಬಿಡಿಸಿಕೊಂಡಿಲ್ಲವೆನಿಸುತ್ತದೆ. ಏಕೆಂದರೆ ೧. ಮಾಲೆ+ಗ=ಮಾಲೆಗ(ಏ.ವ)+ಅರ್(ಬ.ವ)=ಮಾಲೆಗರ್>ಮಾಲೆಗಾರ-ಈ ರೀತಿ ಹೇಳುವುದೇ ನಿಜವಾದ ನಿಷ್ಪತ್ತಿಯೆಂದು ತೋರುತ್ತದೆ. ಹೀಗಾಗಿ ಕೇಶಿರಾಜ ಇಲ್ಲಿ ಗಾರ ಎಂದು ಬಿಡಿಸಿಕೊಂಡುದು ಸರಿಯಲ್ಲ. ಈ ಒಂದೇ ಪ್ರತ್ಯಯವು ಗಾರ (ಮಾಲೆಗಾರ), ಕಾರ (ಬಣಕಾರ), ಗೇರ (ಬಡಿಗೇರ), ಕೇರಿ (ಬಾರಕೇರಿ), ಕರು (ಬಾರಿಕರು) ಇಷ್ಟು ಭಿನ್ನರೂಪಗಳಲ್ಲಿ ಸಿಗುವುದನ್ನು ಇಲ್ಲಿ ಗಮನಿಸಬೇಕು. ೨. ಹಾವಡಿಗ ಪದವನ್ನು ಕೇಶಿ ರಾಜ ಹಾವು+ಅಡಗ ಎಂದು ಬಿಡಿಸಿದುದು ತಪ್ಪು. ಇದರ ಸರಿಯಾದ ವಿಗ್ರಹ ಹಾವು+ಆಡು+ಇಗ=ಹಾವಾಡಿಗ>ಹಾವಡಿಗ. ೩. ಗಾಣ+ಗೆಯ್ತ (ಪು)>ಗೆಯ್ತಿ (ಸ್ತ್ರೀ)=ಗಾಣಗಿತಿ. ಬಹುಶಃ ಇದೇ ಸರಿಯಾದ ವಿಗ್ರಹ. ಕೇಶಿರಾಜ ಹೇಳುವ ಗಾಣಿಗ+ಇತಿ ಬಹುಶಃ ಸರಿಯಲ್ಲ. ಈ ವಿವರಗಳನ್ನು ನೋಡಿದರೆ ಇವು ಗಾರ, ಅಡಿಗ, ಇತಿಗಳಿಂದ ಬಂದಿಲ್ಲವೆಂದು ಸ್ಪಷ್ಟವಾಗುವುದರಿಂದ, ನಮ್ಮ ತದ್ಧಿತರೂಪದ ವ್ಯಕ್ತಿನಾಮಗಳ ಅಧ್ಯಯನವನ್ನು ಕೇಶಿರಾಜನಿಗೆ ಬೇರೆಯಾದ ರೀತಿಯಲ್ಲಿ ಕೈಕೊಳ್ಳಬಹುದಾಗಿದೆ.

ಇದೆಲ್ಲವನ್ನು ಗಮನಿಸಿದರೆ, ಅಡ್ಡಹೆಸರಿನ ಅಧ್ಯಯನವು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಡೆಯುವುದು ಮಹತ್ವಪೂರ್ಣವಾದುದೆಂದು ಮನವರಿಕೆಯಾಗುತ್ತದೆ.

❖❖

---

೨. ಬೆಂಗೇರಿಯವರ ಬರಹಗಳು:(ಪುಟ ೪)

೪

❖

ಗ್ರಾಮನಾಮ

ಸ್ಥಳನಾಮದ ಅಧ್ಯಯನದಲ್ಲಿ ವಸತಿಸ್ಥಳನಾಮ, ನಿರ್ವಸತಿಸ್ಥಳನಾಮಗಳ ವಿವೇಚನೆಗೆ ಅವಕಾಶವಿದೆ. ಇವುಗಳಲ್ಲಿ ವಸತಿಸ್ಥಳನಾಮವಿಜ್ಞಾನವನ್ನು Toponomastics, Toponomy, Toponymy ಎಂದೂ ನಿರ್ವಸತಿಸ್ಥಳನಾಮವಿಜ್ಞಾನವನ್ನು Microtoponyme ಎಂದೂ ಕರೆಯುತ್ತಾರೆ. ನಾಮವಿಜ್ಞಾನಿಗಳು ಇವುಗಳಲ್ಲಿ ವಸತಿಸ್ಥಳನಾಮದ ಅಂದರೆ ಗ್ರಾಮನಾಮದ ಅಧ್ಯಯನಕ್ಕೆ ಹೆಚ್ಚು ಒಲವು ತೋರುತ್ತ ಬಂದಿದ್ದಾರೆ. ನಾಮಶಾಸ್ತ್ರ (Onomastics)ವೆಂದರೆ ವಸತಿಸ್ಥಳನಾಮಶಾಸ್ತ್ರವೆಂಬಷ್ಟರ ಮಟ್ಟಿಗೆ ಇದರ ವ್ಯಾಪಕ ಅಧ್ಯಯನ ಜಗತ್ತಿನಲ್ಲಿ ನಡೆದಿದೆ. ಅದು ವ್ಯಕ್ತಿನಾಮ, ಕುಟುಂಬನಾಮಗಳಿಗಿಂತ ಹೆಚ್ಚು ಜನಪ್ರಿಯ ಅಧ್ಯಯನವಾಗಿ ಮಾರ್ಪಟ್ಟಿದೆ.

ಅಧ್ಯಯನದ ಇತಿಹಾಸ :

ಸ್ಥಳನಾಮಗಳ ಅಧ್ಯಯನದ ಮಹತ್ವವನ್ನು ಮೊದಲು ಗುರುತಿಸಿದವನು ಗಾತ್ ಫ್ರೀಡ್ ವಿಲ್ಹೆಲ್ಮ್ ಲೀಬ್ನಿಜ್ (೧೭೬೮). ಈ ಕಾರಣದಿಂದಾಗಿ ಇವನನ್ನು ಸ್ಥಳನಾಮಶಾಸ್ತ್ರದ ಮೂಲಪುರುಷನೆಂದು ಕರೆಯಲಾಗುತ್ತದೆ. ಹೀಗಿದ್ದೂ ಪಶ್ಚಿಮ ರಾಷ್ಟ್ರಗಳಲ್ಲಿ ಈ ಬಗ್ಗೆ ಶಾಸ್ತ್ರಶುದ್ಧ ಅಧ್ಯಯನ ಬೆಳೆಯತೊಡಗಿದುದು ೧೮೪೦ರ ತರುವಾಯ. ಫಾಯರ್ ಸ್ಟೆಮ್ಯಾನ್ ರಚಿಸಿದ "Altdeutches Nemen Buch", ಐಸಾಕ್ ಟೇಲರ್ ರಚಿಸಿದ "Words and Places" ಈ ಅವಧಿಯ ಗಮನಾರ್ಹ ಕೃತಿಗಳೆನಿಸಿವೆ, ಕಾಲಕ್ರಮದಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗಣನೀಯ ಕೆಲಸ ಮಾಡಿದವ ಜಿ.ಜಿ.ಎಗ್ಲಿ. ಈತ ಇಂಗ್ಲಿಷ್ ಸ್ಥಳನಾಮಾಧ್ಯಯನದ ಮಹಾಪುರುಷನೆಂದು ಪ್ರಸಿದ್ಧನಾಗಿದ್ದಾನೆ. ಆಮೇಲೆ ಈ ಕ್ಷೇತ್ರದ ಅಧ್ಯಯನ ತುಂಬ ವ್ಯವಸ್ಥಿತವಾಗಿ, ವ್ಯಾಪಕವಾಗಿ, ಆಳವಾಗಿ ಯುರೋಪಖಂಡದಲ್ಲಿ ಬೆಳೆದು ಬಂದಿದೆ. ಅಲ್ಲಿ ವ್ಯಕ್ತಿಗಳಲ್ಲದೆ ಸರಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಲಿವೆ. ಆಗಾಗ ಈ ಬಗ್ಗೆ ವಿಚಾರ ಸಂಕಿರಣ, ಪಿಎಚ್.ಡಿ. ಅಧ್ಯಯನಗಳು ನಡೆಯುತ್ತಲಿವೆ. ಇದರಿಂದಾಗಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೆರಿಕಾ, ಸ್ಕಾಟ್‌ಲ್ಯಾಂಡ್ ಮೊದಲಾದ ರಾಷ್ಟ್ರಗಳಲ್ಲಿ ಈ ವ್ಯಾಸಂಗ ದಿನೇ ದಿನೇ ಹೆಚ್ಚುತ್ತಲಿದೆ.

ಭಾರತದಲ್ಲಿ ಮೊದಲಿನಿಂದಲೂ ಸ್ಥಳಪುರಾಣಗಳೇನೋ ಹುಟ್ಟಿಕೊಂಡಿವೆ. ಆದರೆ ಇವು ಬಹಳ ಸಲ ಆ ಸ್ಥಳವನ್ನು ವೈಭವೀಕರಿಸುವ ಕಟ್ಟುಕಥೆಗಳಾಗಿವೆ, ಇಲ್ಲವೆ ಸ್ಥಳನಾಮವನ್ನು ಸಂಸ್ಕೃತಕರಣಗೊಳಿಸಿ ಅವುಗಳನ್ನು ಯಾವುದೋ ದೇವತೆ, ಇಲ್ಲವೆ ಋಷಿಮೂಲಕ್ಕೆ ಅಂಟಿಸುವ ತಪ್ಪು ವಿವರಣೆಗಳಾಗಿವೆ. ಆದುದರಿಂದ ಅನೇಕ ಸಂಖ್ಯೆಯಲ್ಲಿ ಸಿಗುತ್ತಿದ್ದರೂ ಈ ಕೃತಿಗಳು ಸ್ಥಳನಾಮಶಾಸ್ತ್ರಜ್ಞರಿಗೆ ನಿರಾಶೆ ಹುಟ್ಟಿಸುತ್ತವೆ. ಮೇಲಾಗಿ ಪ್ರಾಚೀನರು ಸ್ಥಳನಾಮಗಳನ್ನು ಅಂಕಿತನಾಮವರ್ಗದಲ್ಲಿ ಸೇರಿಸಿ ನಿಂತುಬಿಟ್ಟಿದ್ದರು. ಇಂದು ಈ ಕ್ಷೇತ್ರವು ಭಾಷೆ, ಸಂಸ್ಕೃತಿ, ಇತಿಹಾಸ ಮತ್ತು ಜಾನಪದ ವ್ಯಾಸಂಗಗಳ ಸಾಧನವಾಗಿ ತನ್ನ ಪದರುಗಳನ್ನು ಬಿಚ್ಚಿಕೊಳ್ಳುತ್ತಲಿದೆ.

ನಮ್ಮ ದೇಶದಲ್ಲಿ ಆಧುನಿಕ ಸ್ಥಳನಾಮಶಾಸ್ತ್ರದ ಅಧ್ಯಯನ ತೀರ ಇತ್ತೀಚೆ, ಅದೂ ಆಧುನಿಕ ಎಲ್ಲ ಶಾಸ್ತ್ರಗಳಂತೆ ಪಶ್ಚಿಮದ ಪ್ರಭಾವದಿಂದಲೇ ಪ್ರಾರಂಭವಾಗಿದೆ. ಈ ದಿಶೆಯಲ್ಲಿ ಎತ್ತಿ ಹೇಳಬೇಕಾದ ಪ್ರಥಮ ಹೆಸರುಗಳೆಂದರೆ ಬಿ.ಸಿ.ಲಾ. ಮತ್ತು ಸಂಕಾಲಿಯಾ. ಇವರ ಪ್ರಬಂಧಗಳು ಈ ಶಾಸ್ತ್ರದ ಇತಿಹಾಸದಲ್ಲಿ ಮೈಲಿಗಲ್ಲೆನಿಸಿವೆ. ಇತ್ತೀಚೆ ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಲ್ಲಿಯೂ ಈ ಅಧ್ಯಯನಕ್ಕೆ ಒಂದು ವಿಶೇಷಗತಿ ಪ್ರಾಪ್ತವಾಗಿದೆ.

ಕರ್ನಾಟಕದ ಸ್ಥಳನಾಮಗಳನ್ನು ಕುರಿತಂತೆ ವಿದ್ವಾಂಸರು ಅಧ್ಯಯನ ನಡೆಸಿದುದು ನಿನ್ನೆ ಮೊನ್ನೆ. ೧೯ನೇ ಶತಮಾನದಲ್ಲಿ ಕರ್ನಲ್ ಮೆಕೆಂಝಿ ಗ್ರಾಮಚರಿತ್ರೆಗಳಾದ ಕೈಫಿಯತ್ತುಗಳನ್ನು ಬರೆಸಿದರೂ ಇವು ಅಲ್ಲಿಯ ಶಾನುಭೋಗರೋ ಅಕ್ಷರಜ್ಞರೋ ಬರೆದುಕೊಟ್ಟವುಗಳಾಗಿದ್ದು, ಅವರು ಅಲ್ಲಿಯ ಸ್ಥಳಪುರಾಣಗಳನ್ನೋ ಪ್ರಚಲಿತ ವದಂತಿಗಳನ್ನೋ ಅವಲಂಬಿಸಿರುವುದರಿಂದ, ಈ ಘಟ್ಟದಲ್ಲಿಯೂ ಗ್ರಾಮನಾಮವ್ಯಾಸಂಗಕ್ಕೆ ಉಪಯೋಗ ಬೀಳುವ ಮಾಹಿತಿ ಹುಟ್ಟಲಿಲ್ಲವೆಂದೇ ಹೇಳಬೇಕು. ಹೀಗಾಗಿ ಸಿ. ಹಯವದನರಾಯರ "The Place names of Mysore State",[೧] ಆರ್.ಸಿ.ಹಿರೇಮಠ ಅರ "Place names in Kannada"[೨]ಗಳು ಪ್ರಾರಂಭಿಕ ದೆಸೆಯ ಗಮನಾರ್ಹ ಲೇಖನಗಳೆನಿಸಿವೆ. ಇವುಗಳ ತರುವಾಯ ಶ್ರೀ ಕೆಮ್ತೂರು ರಘುಪತಿಭಟ್ಟ ಬರೆದ ಕೆಲವು ಲೇಖನಗಳು ಈ ಅಭ್ಯಾಸಕ್ಕೆ ಹೊಸ ಮುಖವನ್ನು, ಆಕರ್ಷಣೆಯನ್ನು ಒದಗಿಸಿದವು.[೩] ಈ ಅವಧಿಯಲ್ಲಿ ಡಾ. ಜವರೇಗೌಡ ಅವರು ಒಂದೆರಡು ಮೂಲಭೂತ ಲೇಖನಗಳನ್ನು ಬರೆದಿದ್ದಾರೆ.[೪] ಡಾ. ಎಂ.ಚಿದಾನಂದ ಮೂರ್ತಿಯವರ "ಕರ್ನಾಟಕದ ಸ್ಥಳನಾಮಗಳು"[೫] ಈ ದಿಸೆಯಲ್ಲಿ ಒಂದು ಬೆಲೆಯುಳ್ಳ ಲೇಖನವಾಗಿದೆ.

---

೧. Quarterly Journal of the mythic society. VI-4

೨. Indian Lniguistics. Vol-I.

೩. 'ತುಳುನಾಡಿನ ಸ್ಥಳನಾಮಗಳು' ಗ್ರಂಥದ ಅನುಬಂಧ ನೋಡಿರಿ.

೪. Methodology of Place name study -Studies in INdian place names Vol. IV.

೫. ವಾಗರ್ಥ-ಪು.೯.

ಗ್ರಂಥರೂಪದ ಪ್ರಯತ್ನಗಳಲ್ಲಿ ಡಾ. ಶಂ.ಬಾ.ಜೋಶಿಯವರ 'ಎಡೆಗಳು ಹೇಳುವ ಕನ್ನಾಡ ಕಥೆ' ಕಾಲದ ದೃಷ್ಟಿಯಿಂದ ಐತಿಹಾಸಿಕ ಮಹತ್ವದ ಕೃತಿಯಾದರೂ ಶಾಸ್ತ್ರದೃಷ್ಟಿಯಿಂದ ಅದನ್ನು ಗಂಭೀರವಾಗಿ ಪರಿಗಣಿಸುವಂತಿಲ್ಲ. ಈ ದಿಸೆಯಲ್ಲಿ ಶ್ರೀ ಕೆಮ್ತೂರು ರಘುಪತಿಭಟ್ಟರ "ತುಳುನಾಡಿನ ಸ್ಥಳನಾಮ ಅಧ್ಯಯನಗಳು" (೧೯೭೯) ಸಣ್ಣದಾದರೂ ಸ್ಥಳನಾಮವನ್ನು ಕುರಿತ ಪ್ರಥಮ ವೈಜ್ಞಾನಿಕ ಕೃತಿ. ಇತ್ತೀಚೆ ಶ್ರೀ ವಿ.ಗೋಪಾಲಕೃಷ್ಣ ಅವರು "ಸ್ಥಳನಾಮ ಅಧ್ಯಯನಗಳು" ಹೆಸರಿನ ಲೇಖನ ಸಂಕಲನವನ್ನು ಪ್ರಕಟಿಸಿದ್ದಾರೆ (೧೯೮೭).

ಈ ಎಲ್ಲ ಪ್ರಯತ್ನಗಳ ನಡುವೆ ೧೯೭೯ರಲ್ಲಿ "Place name Society of India" ಹೆಸರಿನ ಸಂಸ್ಥೆಯೊಂದು ಮೈಸೂರಿನಲ್ಲಿ ಸ್ಥಾಪಿತವಾಗಿ, ಪ್ರತಿವರ್ಷ ರಾಜ್ಯದ ಒಳಹೊರಗೆ ವಾರ್ಷಿಕಾಧಿವೇಶನವನ್ನು ನಡೆಸುವುದರೊಂದಿಗೆ"Studies in Indian Place names" ಹೆಸರಿನ ಪತ್ರಿಕೆಯನ್ನೂ ಪ್ರಕಟಿಸುತ್ತದೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸ್ಥಳನಾಮವನ್ನು ಕುರಿತು ಪಿಎಚ್.ಡಿ. ಅಧ್ಯಯನಗಳೂ ನಡೆಯುತ್ತಿವೆ.

ಒಟ್ಟಿನಲ್ಲಿ ಮೈಸೂರು, ಧಾರವಾಡ, ಮಂಗಳೂರು–ಈ ಮೂರು ಕೇಂದ್ರಗಳಲ್ಲಿ ಸ್ಥಳನಾಮಗಳ ಅಧ್ಯಯನ ಮೂರ್ತರೂಪ ಪಡೆಯುತ್ತಲಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಹೀಗೆ ಕರ್ನಾಟಕದಲ್ಲಿ ಹೊಸ ಆಕರ್ಷಣೆಯಾಗಿ ಬೆಳೆಯುತ್ತಲಿರುವ ಈ ಅಧ್ಯಯನಕ್ಕೆ ಪ್ರಾರಂಭದಲ್ಲಿಯೇ ವೈಜ್ಞಾನಿಕ ತಳಹದಿಯನ್ನು ಒದಗಿಸುವುದು, ಶಾಸ್ತ್ರಪರಿಭಾಷೆಯನ್ನು ರೂಪಿಸುವುದು ಅತ್ಯವಶ್ಯವಾಗಿದೆ. ಏಕೆಂದರೆ ಒಬ್ಬಿಬ್ಬರನ್ನು ಬಿಟ್ಟರೆ ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಲಿರುವ ಬಹಳಷ್ಟು ಜನರಿಗೆ ಈ ಶಾಸ್ತ್ರದ ಜೀವನಾಡಿಯೇ ಗೊತ್ತಿಲ್ಲವೆಂಬ ಅನುಮಾನ ಅವರ ಲೇಖನಗಳಿಂದ ಹುಟ್ಟುತ್ತಿದೆ.

ಆಕರ ಸಾಮಗ್ರಿ :

ಗ್ರಾಮ ನಾಮವ್ಯಾಸಂಗಕ್ಕೆ ಬೇಕಾಗುವ ಸಹಾಯಕ ಸಾಹಿತ್ಯ, ಕನ್ನಡದಲ್ಲಿ ಈಗಾಗಲೇ ತಕ್ಕಮಟ್ಟಿಗೆ ಹುಟ್ಟಿಕೊಂಡಿದೆ. ಮೇಲೆ ಹೇಳಿದಂತೆ ಈ ಶಾಸ್ತ್ರವನ್ನು ಕುರಿತು ಹುಟ್ಟಿರುವ ಒಂದೆರಡು ಪುಸ್ತಕಗಳು, ಹತ್ತಾರು ಲೇಖನಗಳು ದಿಕ್ಸೂಚಿಯಂತೆ ನೆರವಾಗುತ್ತವೆ.

ಇದನ್ನು ಬಿಟ್ಟರೆ ಆಕರಸಾಮಗ್ರಿರೂಪದ ಗ್ರಂಥಗಳ ರಚನೆಯೂ ತಕ್ಕಮಟ್ಟಿಗೆ ನಡೆದಿದೆ. ಕರ್ನಾಟಕದ ಗ್ರಾಮನಾಮಗಳನ್ನೊಳಗೊಂಡ ತಾಲ್ಲೂಕುವಾರ್, ಜಿಲ್ಲಾವಾರ್ ನಕಾಶೆಗಳು ಸಿಗುತ್ತವೆ. ನಮ್ಮ ರಾಜ್ಯಸರಕಾರ ಈಗ ಅಸ್ತಿತ್ವದಲ್ಲಿರುವ ಗ್ರಾಮಗಳನ್ನು ಪಟ್ಟಿಮಾಟಿ "A List of Villages in the Mysore State" (೧೯೬೮) ಮತ್ತು "ಕರ್ನಾಟಕ ಗ್ರಾಮಸೂಚಿ" (೧೯೮೫) ಎಂಬ ಎರಡು ಗ್ರಾಮನಾಮಕೋಶಗಳನ್ನು ಪ್ರಕಟಿಸಿದೆ. ಆದರೆ ಈ ಗ್ರಂಥಗಳಲ್ಲಿ ಕೆಲವು ಗ್ರಾಮಗಳ ನಾಮ ಸದ್ಯದ ಉಚ್ಚಾರವನ್ನು ಪ್ರಾಮಾಣಿಕವಾಗಿ ದಾಖಲಿಸಿಲ್ಲ. ಕೆಲವು ಗ್ರಾಮಗಳಿಗೆ ಇರುವ ಎರಡು ಹೆಸರುಗಳನ್ನು ದಾಖಲಿಸಿದರೂ ಈ ಕೆಲಸ ಸಮರ್ಪಕವಾಗಿಲ್ಲ. ಇದಲ್ಲದೆ ಯರಗಲ್ಲ–ಎರಗಲ್ಲ, ಬಾಗಿಲಕೋಟ–ಬಾಗಲಕೋಟ, ನವಿಲುಗುಂದ–ನವಲಗುಂದ ಎಂಬಂತೆ ಒಂದು ಊರಿನ ಹೆಸರನ್ನು ಎರಡು ರೀತಿಯಲ್ಲಿ ಬರೆಯುತ್ತಿರುವುದನ್ನು ನಮೂದಿಸಿಲ್ಲ. ಒಂದು ಊರಿಗೆ ಬಾಗಿಲಕೋಟ–ಕ್ವಾಟಿ ಎಂಬಂತೆ ಇರುವ ಪೂರ್ಣ ಮತ್ತು ಅಪೂರ್ಣ ಹೆಸರುಗಳನ್ನು ಸೂಚಿಸಿಲ್ಲ. ಇದಕ್ಕಿಂತ ದೊಡ್ಡ ದೋಷವೆಂದರೆ

ರೋಮನ್ ಲಿಪಿಯಲ್ಲಿ ಪ್ರಕಟವಾದ ಹೆಸರುಗಳನ್ನು ನಾಗೈ (ನಾಗಾಯಿ) ಎಂಬಂತೆ ತಪ್ಪು ತಪ್ಪಾಗಿ ರೂಪಾಂತರಿಸಿದ್ದಾರೆ. ಆದುದರಿಂದ ಗ್ರಾಮನಾಮಾಧ್ಯಯನವಿದ್ವಾಂಸರಿಗೆ ಈ ಗ್ರಂಥಗಳು ದಾರಿ ತಪ್ಪಿಸುವ ಸಂಭವವಿದೆ. ಹೀಗಾಗಿ ಪ್ರಾಮಾಣಿಕವಾದ ಗ್ರಾಮನಾಮಕೋಶಗಳ ರಚನೆ ಇಂದು ತೀರ ಅಗತ್ಯವಾಗಿದೆ.

ಈಗ ಅವಶ್ಯವಿರುವ ಇನ್ನೊಂದು ಕೆಲಸವೆಂದರೆ, ಕರ್ನಾಟಕದ ಗ್ರಾಮಗಳಿಗೆ ಇದ್ದ ಪ್ರಾಚೀನ ನಾಮಗಳ ಪಟ್ಟಿ ರಚನೆ. ಇದನ್ನು ಒದಗಿಸುವ ಮುಖ್ಯ ಗಣಿಗಳೆಂದರೆ ಶಾಸನಗಳು. ಕೆಲವೊಮ್ಮೆ ಶಾಸನದಲ್ಲಿ ಮೂಲ ಹೆಸರು, ಲಿಪಿಕಾರನ ಅಜ್ಞಾನದಿಂದುಂಟಾದ ದೋಷರೂಪ, ಪಂಡಿತರು ಅನುವಾದಿಸಿದ ಅಥವಾ ತಿದ್ದಿದ ರೂಪ, ಹಳೆಯದರ ಸ್ಥಾನದಲ್ಲಿ ಬಂದ ಹೊಸ ಹೆಸರು ಏನೆಲ್ಲ ಸಿಗುತ್ತವೆ. ಅವಸ್ಥಾಭೇದ-ಪ್ರಾಂತಭೇದದಿಂದಲೋ, ಲಿಪಿಕಾರನ ಅಜ್ಞಾನದಿಂದಲೋ ಒಂದು ಗ್ರಾಮದ ಹೆಸರು ಅರಕುತಾರ, ಅರೆಕುತಾರ, ಅರಕೊಟ್ಟಾರ, ಅರೆಕುತಾರ, ಅರೆಕೊಟಾರ, ಅರಕೊತಾರ, ಅರಿಕುತಾರ, ಅರಿಗೊಟಾರ, ಅರೆಕೊತಾರ-ಹೀಗೆ ೯ ರೂಪಗಳಿಂದ ಶಾಸನಗಳಲ್ಲಿ ಸಿಗುತ್ತದೆ. ಹೀಗಾಗಿ ಶಾಸನದಲ್ಲಿ ಸಿಗುವ ಹೆಸರೂ ಕೆಲವೊಮ್ಮೆ ಸರಿಯಾದ ನೆಲೆ ಮುಟ್ಟಿಸುವುದಿಲ್ಲವೆಂದು ಬೇರೆ ಹೇಳಬೇಕಿಲ್ಲ. ಹಿಗಿದ್ದೂ ಶಾಸನಗಳೇ ನಮಗೆ ಅನಿವಾರ್ಯ ಆಕರವಾಗಿರುವುದರಿಂದ, ಇವುಗಳ ಸಹಾಯದಿಂದಲೇ ಪ್ರಾಚೀನ ಗ್ರಾಮನಾಮಗಳ ಯಾದಿ ಸಿದ್ಧಪಡಿಸಬೇಕಾಗಿದೆ. ಎಪಿಗ್ರಫಿಯಾ ಕರ್ನಾಟಿಕದಂಥ ಶಾಸನಸಂಪುಟಗಳ ಅನುಬಂಧಗಳಲ್ಲಿ ಇಂಥ ಪಟ್ಟಿ ಸಿಗುತ್ತದೆ. ಆದರೆ ಶಾಸನೋಕ್ತ ಗ್ರಾಮಗಳ ಸಮಗ್ರ ಪಟ್ಟಿಯೊಂದು ಸ್ವತಂತ್ರ ಪುಸ್ತಕರೂಪದಲ್ಲಿ ಪ್ರಕಟವಾಗಬೇಕಾಗಿದೆ. ಅದರಲ್ಲಿ ಪ್ರತಿಯೊಂದು ಗ್ರಾಮದ ಹೆಸರಿನ ಪ್ರಾಚೀನತಮರೂಪ, ಕಾಲಕ್ರಮದಲ್ಲಿ ಅದು ಪಡೆದ ವ್ಯತ್ಯಸ್ತರೂಪವನ್ನು, ಶಾಸನ, ವದಂತಿ, ಸ್ಥಳಪುರಾಣಗಳಲ್ಲಿ ಸಿಗುವ ಅದರ ಬೇರೆ ಹೆಸರುಗಳನ್ನು ದಾಖಲಿಸಬೇಕು. ಒಂದುವೇಳೆ ಒಂದು ಗ್ರಾಮನಾಮ ಬೇರೆ ಬೇರೆ ಪ್ರದೇಶಗಳಲ್ಲಿ ಕಂಡುಬಂದರೆ ಅಲ್ಲಿ ಆಂತರಿಕ ಸೂಚನೆಯನ್ನು ಕೊಡಬೇಕು.

ಕೆಲವು ಸಲ ಶಾಸನಸಂಪಾದಕರು ಗ್ರಾಮನಾಮವನ್ನು ತಪ್ಪಾಗಿ ಓದಿರುವ ಸಾಧ್ಯತೆಯಿದೆ. ಉದಾ : ಶಾಸನಸಂಪಾದಕರು ಓದಿರುವಂತೆ ಚಿತ್ರದುರ್ಗದ ಪ್ರಾಚೀನ ಹೆಸರು ಬೆಮ್ಮತ್ತನಕಲ್ಲು ಅಲ್ಲ, ಚಿಮ್ಮತ್ತನಕಲ್ಲು. ಇದೇ ರೀತಿ ಚಟ್ಟರಹಳ್ಳಿ-ಭಟ್ಟರಹಳ್ಳಿಗಳಂಥ ಪ್ರಮಾದಗಳು ಶಾಸನವಾಚನದಲ್ಲಿ ಜರುಗಿರುವ ಸಂಭವವಿದೆ.

ಒಟ್ಟಿನಲ್ಲಿ ಆಕರ ಸಾಮಗ್ರಿಗೆ ಸಂಬಂಧಪಟ್ಟ ಈ ಎರಡು ಅಭ್ಯಾಸಗಳು (ಹೆಸರಿನ ಪ್ರಾಚೀನರೂಪ, ಆಧುನಿಕರೂಪಗಳ ಪಟ್ಟಿ) ಪ್ರಧಾನವಾಗಿ ನಡೆಯಬೇಕು. ಇದಲ್ಲದೆ ಪ್ರತಿಯೊಂದು ಗ್ರಾಮದ ರಾಜಕೀಯ, ಭೌಗೋಲಿಕ, ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ ಅಧ್ಯಯನ ನಡೆದು, ಸ್ಥಳನಾಮ ಅಧ್ಯಯನ ಮಾಡುವವರಿಗೆ ವಿಷಯ ಸುಲಭಸಾಧ್ಯವಾಗಬೇಕು. ಏಕೆಂದರೆ ಯಾವುದೇ ಗ್ರಾಮನಾಮ ತನ್ನ ಐತಿಹಾಸಿಕ, ಭೌಗೋಲಿಕ ಆವರಣದಲ್ಲಿಯೇ ಅಂಕುರಿಸಿರುತ್ತದೆ.

ಇಷ್ಟು ವೈವಿಧ್ಯಪೂರ್ಣ, ಪರಿಪೂರ್ಣ ಆಕರಗ್ರಂಥಗಳು ನಮ್ಮಲ್ಲಿ ಇನ್ನೂ ಹುಟ್ಟಿಲ್ಲವಾದುದರಿಂದ ಕರ್ನಾಟಕದ ಸ್ಥಳನಾಮವಿಜ್ಞಾನಿ ತುಂಬ ಕಷ್ಟಪಡಬೇಕಾಗುತ್ತದೆ.

ನಾಮನಿಷ್ಪತ್ತಿ :

ವ್ಯಕ್ತಿನಾಮ, ಕುಟುಂಬನಾಮ, ಗ್ರಾಮನಾಮಗಳಲ್ಲಿ ಅಧಿಕತಮ ರೂಪಾಂತರ, ನಾಮಾಂತರ ಕ್ರಿಯೆಗಳಿಗೆ ಗುರಿಯಾದುದು ಗ್ರಾಮನಾಮ. ವೈಯಕ್ತಿಕ ಆಸ್ತಿಯಾಗಿರದೆ ಸಾರ್ವಜನಿಕ ಆಸ್ತಿಯಾಗಿರುವ ಇದರ ಬಗ್ಗೆ ಸಹಜವಾಗಿಯೇ ಎಲ್ಲರೂ ಉಪೇಕ್ಷೆ ತೋರಿಸುವುದು, ಮಿಕ್ಕ ನಾಮಗಳಿಗಿಂತ ಇದು ಜನರ ಬಾಯಿಯಲ್ಲಿ ಹೆಚ್ಚು ವ್ಯವಹರಿಸುವುದು, ಈ ಅಧಿಕ ವ್ಯತ್ಯಾಸಕ್ಕೆ ಮುಖ್ಯಕಾರಣವೆನಿಸಿದೆ. ಹೀಗೆ ರೂಪ ದೃಷ್ಟಿಯಿಂದ ಅಧಿಕ ವ್ಯತ್ಯಾಸಕ್ಕೆ ಗುರಿಯಾಗಿ ಅರ್ಥವನ್ನು ಕಳೆದುಕೊಂಡಿರುವುದರಿಂದ, ಸಹಜವಾಗಿಯೇ ಕಳೆದುಕೊಂಡ ಅರ್ಥವನ್ನು ಹುಡುಕಲು ಅಧಿಕ ಕುತೂಹಲ ಕೆರಳುತ್ತದೆ. ಆಗ ಕೆಲವರುಈ ಕುತೂಹಲದ ಸೆಳವಿಗೆ ಸಿಕ್ಕು ತಮತಮಗೆ ತಿಳಿದಂತೆ, ಹೊಳೆದಂತೆ ಗ್ರಾಮನಾಮನಿಷ್ಪತ್ತಿ ಹೇಳುವ ಸಾಹಸಮಾಡುತ್ತಾರೆ. ಇಂಥವರು ಮಂಡಿಸುವ ನಿಷ್ಪತ್ತಿಗಳ ಸ್ವರೂಪವನ್ನು ಹೀಗೆ ವಿವರಿಸಬಹುದು:

ಯಾವುದೇ ಗ್ರಾಮನಾಮದ ವಿಷಯವಾಗಿ ಮೂರು ಬಗೆಯ ನಿಷ್ಪತ್ತಿಗಳು ಕೇಳಿಬರುತ್ತವೆ. ಅವು : ೧. ಪಾಮರನಿಷ್ಪತ್ತಿ, ೨. ಪಂಡಿತನಿಷ್ಪತ್ತಿ. ೩. ನಿಜನಿಷ್ಪತ್ತಿ. ಇವುಗಳಲ್ಲಿ ಪಂಡಿತ ಮನಸ್ಸಿನ ವಿವರಣೆಯಾದ ಪಂಡಿತ ನಿಷ್ಪತ್ತಿ, ಪಾಮರ ಮನಸ್ಸಿನ ವಿವರಣೆಯಾದ ಪಾಮರನಿಷ್ಪತ್ತಿಗಳು ಆಭಾಸಗಳಾದರೆ ನಿಜನಿಷ್ಪತ್ತಿ ಸತ್ಯವಾದುದು. ಈ ಸಂಗತಿಯನ್ನು ಚೆನ್ನಮ್ಮನ ಕಿತ್ತೂರಿನ ವಿಷಯವಾಗಿ ಕೇಳಿಬರುವ ವಿಭಿನ್ನ ನಿಷ್ಪತ್ತಿಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಚೆನ್ನಮ್ಮನ ಕಿತ್ತೂರು ಬೆಳಗಾಂ ಜಿಲ್ಲೆಯ ಒಂದು ಗ್ರಾಮ. ಒಂದೆಡೆಯಿಂದ ಕಿತ್ತಿ ಬಂದು ಬೇರೊಂದೆಡೆ ನೆಲೆಗೊಂಡ ಊರು "ಕಿತ್ತೂರು" ಎಂಬ ನಿಷ್ಪತ್ತಿಯನ್ನು ಅಲ್ಲಿಯ ಸಾಮಾನ್ಯಜನರು ಹೇಳುತ್ತಾರೆ. ಇದು ಪಾಮರನಿಷ್ಪತ್ತಿ, "ಕೀರ್ತಿಪುರ"ವೇ ಆಡುಮಾತಿನಲ್ಲಿ "ಕಿತ್ತೂರು" ಎಂದಾಯಿತು ಎಂಬ ನಿಷ್ಪತ್ತಿಯನ್ನು ಅಲ್ಲಿಯ ವಿದ್ವಾಂಸರು ಹೇಳುತ್ತಾರೆ. ಇದು ಪಂಡಿತನಿಷ್ಪತ್ತಿ. ಇವೆರಡೂ ಸತ್ಯಕ್ಕೆ ದೂರವಾದುವು. "ನಿಜನಿಷ್ಪತ್ತಿ" ಬೇರೆಯೇ ಇದೆ. ಅದು : ಕಿರಿದು>ಕಿತ್+ಉರು=ಕಿತ್ತೂರು(ಸಣ್ಣೂರು). ಹೀಗೆ ಸಾಮಾನ್ಯವಾಗಿ ಯಾವುದೇ ಊರಿನ ವಿಷಯವಾಗಿ ಮೂರು ಬಗೆಯ ನಿಷ್ಪತ್ತಿಗಳು ರೂಢಿಯಲ್ಲಿರುತ್ತಿದ್ದು ಅವುಗಳ ಸ್ವರೂಪ ಹೀಗಿರುತ್ತದೆ.

೧. ಪಾಮರನಿಷ್ಪತ್ತಿ ಮತ್ತು ಪಂಡಿತನಿಷ್ಪತ್ತಿಗಳನ್ನು ಬೇರ್ಪಡಿಸಿ ಹೇಳುವುದು ಕೆಲವೊಮ್ಮೆ ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಧಾರವಾಡ ಜಿಲ್ಲೆಯ ಒಂದು ಗ್ರಾಮ ಅಮ್ಮಿನಭಾವಿ. ಈ ಊರಿನ ಮುಸಲ್ಮಾನರು ಅಮೀನ ಹೆಸರಿನ ಮುಸಲ್ಮಾನನೊಬ್ಬನು ಇಲ್ಲಿ ಭಾವಿ ಕಟ್ಟಿಸಿದ ಕಾರಣ ಈ ಹೆಸರು ಬಂದಿತೆಂದು ಹೇಳಿದರೆ, ಅಮ್ಮನವರು ಹೆಸರಿನ ಜೈನ ಪದ್ಮಾವತಿ ಹೆಸರಿನಿಂದಾಗಿ ಅಮ್ಮನವರ ಭಾವಿ>ಅಮ್ಮಿನಭಾವಿ ಆಗಿದೆಯೆಂದು ಅಲ್ಲಿಯ ಜೈನರು ಹೇಳುತ್ತಾರೆ. ಇವೆರಡೂ ಪಾಮರನಿಷ್ಪತ್ತಿಗಳಾಗಿದ್ದರೂ ಮುಸಲ್ಮಾನರದು ಪಾಮರನಿಷ್ಪತ್ತಿ, ಜೈನರದು ಪಂಡಿತನಿಷ್ಪತ್ತಿಯೆಂದು ಹೇಳಲು ಮನಸ್ಸಾಗುತ್ತದೆ. ಇದಲ್ಲದೆ ಗ್ರಾಮನಾಮನಿಷ್ಪತ್ತಿ ಜಾತಿಯಿಂದ ಜಾತಿಗೆ ಬೇರೆಯಾಗುವುದನ್ನೂ ಇಲ್ಲಿ ಲಕ್ಷಿಸಬೇಕು. ಇದು ಆಯಾ ಜಾತಿಯವರು ಆ ಊರಿನ ಸಾಂಸ್ಕೃತಿಕ ಪರಂಪರೆಯ ಮೇಲೆ ತಮ್ಮ ಹಕ್ಕು ಸಾಧಿಸಲು ಮಾಡುವ ಪ್ರಯತ್ನವಾಗಿದೆ.

೨. ಪಾಪರ, ಪಂಡಿತ, ನಿಜನಿಷ್ಪತ್ತಿಗಳು ಶಬ್ದಾರ್ಥರೂಪ ಮತ್ತು ವಿವರಣೆ ರೂಪವೆಂದು ಎರಡು ತೆರನಾಗಿರಬಹುದು. ಹಿಂದೆ ಕಿತ್ತೂರನ್ನು ಕುರಿತು ಹೇಳಿದ ಕಿತ್ತಿದ ಊರು, ಕೀರ್ತಿಪುರ, ಕಿರಿದು ಊರು ಎಂಬಿವು ಕ್ರಮವಾಗಿ ಶಬ್ದಾರ್ಥರೂಪದ ಪಾಮರ, ಪಂಡಿತ ಮತ್ತು ನಿಜನಿಷ್ಪತ್ತಿಗಳಾದರೆ, ಅಮ್ಮಿನಭಾವಿಯನ್ನು ಕುರಿತು ಹೇಳಿದ ಅಮೀನ್ ಹೆಸರಿನವನು ಇಲ್ಲಿ ಭಾವಿಕಟ್ಟಿಸಿದನೆಂಬುದು, ಯಕ್ಷಿ ಪದ್ಮಾವತಿಯು ಭಾವಿಯ ಸಮೀಪ ನೆಲಸಿರುವಳೆಂಬುದು, ಅಮ್ಮಯ್ಯನೆಂಬವನು ಭಾವಿಯನ್ನು ಕಟ್ಟಿಸಿದನೆಂಬುದು ವಿವರಣೆರೂಪದ ಪಾಪರ, ಪಂಡಿತ ಮತ್ತು ನಿಜನಿಷ್ಪತ್ತಿಗಳಾಗಿವೆ.

೩. ವಿವರಣೆರೂಪದ ಪಾರನಿಷ್ಪತ್ತಿಯ ಹಿಂದೆ ಕಟ್ಟುಕಥೆ ಇರಬಹುದು. ಪಂಡಿತ ನಿಷ್ಪತ್ತಿಯ ಹಿಂದೆ ಪುರಾಣಕಥೆ ಇರಬಹುದು. ನಿಜನಿಷ್ಪತ್ತಿಯ ಹಿಂದೆ ಕಟ್ಟು ಕಥೆಯಾಗಲೀ ಪುರಾಣ ಕಥೆಯಾಗಲೀ ಇರಲಾರವು, ಐತಿಹಾಸಿಕ ಘಟನೆ ಇರಬಹುದು. ಹೀಗಾಗಿ ಇವುಗಳನ್ನು ಸ್ಥೂಲವಾಗಿ ಐತಿಹ್ಯ (Legend), ಪುರಾಣ (myth), ಇತಿಹಾಸ (History)ಗಳೆಂದು ಕರೆಯಬಹುದು.

೪. ಒಂದು ಗ್ರಾಮನಾಮವನ್ನು ಕುರಿತಂತೆ ಅನೇಕ ಕಟ್ಟುಕಥೆ, ಪುರಾಣ ಕಥೆಗಳಿರುತ್ತಿದ್ದರೂ ಅವುಗಳಲ್ಲಿ ಒಂದು ಪ್ರಧಾನ, ಮಿಕ್ಕುವು ಗೌಣ. ಇವು ನಿಜವೆಂದೇ ಅಲ್ಲಿಯವರು ನಂಬಿರುತ್ತಿದ್ದು, ಊರಲ್ಲಿಯ ಯಾರೋ ಒಬ್ಬರು ಮಾತ್ರ ಈ ಬಗ್ಗೆ ಅಧಿಕೃತ ವಕ್ತಾರರು ಎಂಬ ಭಾವನೆ ಅವರಿಗಿರುತ್ತದೆ. ಉದಾ · ಚಿತ್ರದುರ್ಗವನ್ನು ಕುರಿತ ಪಾಮರನಿಷ್ಪತ್ತಿಗಳು ಅನೇಕ, ಹರಿಹರಗ್ರಾಮವನ್ನು ಕುರಿತ ಪಂಡಿತನಿಷ್ಪತ್ತಿಗಳು ಅನೇಕ. ಹೀಗಿದ್ದೂ ಇವುಗಳಲ್ಲಿ ಒಂದು ಮಾತ್ರ ಹೆಚ್ಚು ಪ್ರಚಲಿತ. ಮದಕರಿನಾಯಕನ ಮನೆತನದವರು ಹೇಳುವ ಚಿತ್ರದುರ್ಗದ ನಿಷ್ಪತ್ತಿ, ಹರಿಹರೇಶ್ವರ ದೇವಾಲಯದ ಅರ್ಚಕರು ಹೇಳುವ ಹರಿಹರದ ನಿಷ್ಪತ್ತಿಗಳು ಹೆಚ್ಚು ವಿಶ್ವಾಸಾರ್ಹವೆಂದು ಇಲ್ಲಿಯ ಜನರ ಭಾವನೆ. ಆದರೆ ಅಸತ್ಯಕ್ಕೆ ಅನೇಕ ಹಾದಿಯೆಂಬಂತೆ ಒಂದು ಊರಿಗೆ ಪಾಮರನಿಷ್ಪತ್ತಿ, ಪಂಡಿತನಿಷ್ಪತ್ತಿಗಳು ಅನೇಕವಿದ್ದರೂ, ಸತ್ಯಕ್ಕೆ ಒಂದೆ ಹಾದಿ ಎಂಬಂತೆ ನಿಜನಿಷ್ಪತ್ತಿ ಒಂದೇ ಇರುತ್ತದೆ. ಸ್ಥಳನಾಮವಿಜ್ಞಾನಿ ಮೊದಲು ಗ್ರಾಮನಾಮದ ನಿಜರೂಪವನ್ನು ಕಂಡುಹಿಡಿಯಬೇಕು. ಆಮೇಲೆ ಅರ್ಥಶೋಧ, ಸಂಸ್ಕೃತಿಶೋಧಗಳಿಗೆ ತೊಡಗಬೇಕು.

೫. ಸತ್ಯವಲ್ಲದ ವಿವರಗಳಿಂದ ಕೂಡಿದ್ದರೂ ಕೆಲವೊಮ್ಮೆ ಐತಿಹ್ಯ ಮತ್ತು ಪುರಾಣಗಳ ಹಿಂದೆ ಸತ್ಯದ ಸಣ್ಣ ಎಳೆ ಉಳಿದುಕೊಂಡಿರಬಹುದು. ಉದಾ : ಅಮ್ಮಿನಭಾವಿಯನ್ನು ಕುರಿತ ಮುಸಲ್ಮಾನರ ಪಾಮರನಿಷ್ಪತ್ತಿ, ಜೈನರ ಪಂಡಿತ ನಿಷ್ಪತ್ತಿಗಳಲ್ಲಿ "ಭಾವಿ" ಎಂಬ ಸತ್ಯ ತಪ್ಪದೇ ಉಳಿದುಕೊಂಡುದನ್ನು ಗಮನಿಸಬೇಕು.

೬. ಪಾಮರನಿಷ್ಪತ್ತಿಯ ಹಿಂದೆ ಸ್ವಾರ್ಥವಾಗಲೀ, ದುರುದ್ದೇಶವಾಗಲೀ ಇರುವುದಿಲ್ಲ. ಹೆಸರನ್ನು ಅರ್ಥೈಸಲು ಜಾನಪದರು ಮಾಡಿದ ಮುಗ್ಧಪ್ರಯತ್ನ ಅಲ್ಲಿರುತ್ತದೆ. ಅರ್ಥರೂಪದ ನಿಷ್ಪತ್ತಿಗಿಂತ ವಿವರಣೆರೂಪದ ನಿಷ್ಪತ್ತಿಯಲ್ಲಿ ಕಲ್ಪನಾವಿಲಾಸ ತುಂಬ ಸೊಗಸಾಗಿ ಬೆಳೆದಿರುತ್ತದೆ. ಬೆಂಗಳೂರು ವಿಷಯವಾಗಿ ಹೇಳುವ ಬೆಂದಕಾಳಿನ ಕಥೆ. ಚೌಡದಾನಪುರ ವಿಷಯವಾಗಿ ಹೇಳುವ ಅಂಬಿಗರ ಚೌಡಯ್ಯನ ಕಥೆಗಳು ಇದಕ್ಕೆ ನಿದರ್ಶನವೆನಿಸಿವೆ. ಇಂಥಲ್ಲಿ ಕಲ್ಪನೆ ಮತ್ತು ಸಂಬಂಧಿಸಿರದ ಇತಿಹಾಸ ಸೇರಿಕೊಂಡಿರುತ್ತದೆ. ಕೆಲವು ಸಲ ಒಂದು ಕಥೆ ಸುತ್ತಲಿನ ಹಳ್ಳಿಗಳ ಹೆಸರುಗಳನ್ನು ಬಳಸಿಕೊಂಡು ಬೆಳೆದಿರುತ್ತದೆ. ಉದಾ : ಉಡುಮರಡಿ (ಚೆನ್ನಗಿರಿ ತಾಲ್ಲೂಕು) ಗ್ರಾಮದಲ್ಲಿ

ರಂಗನಾಥಸ್ವಾಮಿಯ ದೇವಾಲಯ ಸ್ಥಾಪನೆ ಕಾರಣವಾಗಿ ಅದಕ್ಕೆ ದೇವರಹಳ್ಳಿ ಎಂಬ ಹೆಸರು ರೂಢವಾಯಿತು. ಒಂದು ಉಡುಪ್ರಾಣಿಯೇ ರಂಗನಾಥಸ್ವಾಮಿ ರೂಪಪಡೆಯಿತೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಹುಟ್ಟಿದ, ಈ ಪ್ರದೇಶದ ಹೆಸರುಗಳನ್ನು ಬಳಸಿಕೊಂಡು ಕಟ್ಟಿದ ಒಂದು ದಂತಕಥೆ ಹೀಗಿದೆ : ವಿಜಯನಗರದ ದೊರೆಗಳ ಕಾಲದಲ್ಲಿ ಬೇಟೆಗಾರರಿಗೆ ಧೂಪದ ಮರಡಿ ಹತ್ತಿರ ಒಂದು ಉಡು ಕಾಣಿಸಿತು. ಅದು ಬೆಳ್ಳಿಗನೂರಲ್ಲಿ ಬೆಳ್ಳಿಯಂತೆ, ಚನ್ನಾಪುರದಲ್ಲಿ ಚಿನ್ನದಂತೆ, ಚಿಕ್ಕೂಡದಲ್ಲಿ ಚಿಕ್ಕದಾಗಿ, ಹಿರೇವುಡದಲ್ಲಿ ದೊಡ್ಡದಾಗಿ, ಕಗತೂರಿನಲ್ಲಿ ಕಾದಾಡಿ, ರಾಮಗೊಂಡನಹಳ್ಳಿಯಲ್ಲಿ 'ರಾಮ' ಎಂದು, ನಿಂತಾಪುರದಲ್ಲಿ ಸ್ವಲ್ಪ ಹೊತ್ತು ನಿಂತು, ನೀತಿಗೆರೆಗೆ ಹೋಗಿ, ಅಲ್ಲಿಂದ ದೇವರಹಳ್ಳಿಗೆ ಬಂದು ಮರೆಯಾಯ್ತು. ಆ ಉಡ ಯಾರೂ ಅಲ್ಲ ದೇವರಾದ ರಂಗನಾಥಸ್ವಾಮಿಯೇ. ಈ ಕಾರಣದಿಂದ ಉಡುಗಳನ್ನು ಕೊಲ್ಲಬಾರದೆಂಬ ನಂಬಿಕೆ (ಅಲ್ಲಿ) ಉಂಟು. ಇಲ್ಲಿ ಊರ ಹೆಸರಿಗೂ (ಉಡುಮರಡಿ), ದೇವರ ಹೆಸರಿಗೂ, ಉಡ ಕೊಲ್ಲದಿರುವುದಕ್ಕೂ ಕಥೆಯ ಮೂಲಕ ಸೊಗಸಾಗಿ ತಳುಕು ಹಾಕಿದ್ದಾರೆ.[೬]

೭. ಪಂಡಿತನಿಷ್ಪತ್ತಿ "ಸಂಸ್ಕೃತಪ್ರಕೃತಿಮೂಲ"ದ್ದು ಇಲ್ಲವೆ "ಪುರಾಣ ಕಥಾಮೂಲ"ದ್ದು ಇರುತ್ತದೆ. ಶಬ್ದರೂಪವನ್ನು ಗಮನಿಸಿ ವಿದ್ವಾಂಸರು ಹೇಳಿದ ಧಾರವಾಡದ ಮೂಲರೂಪ ದ್ವಾರವಾಟ ಎಂಬುದು "ಸಂಸ್ಕೃತಪ್ರಕೃತಿಮೂಲ"ಕ್ಕೆ ಉದಾಹರಣೆಯಾಗಿದೆ. ಪುರಾಣಮೂಲನಿಷ್ಪತ್ತಿ ಒಂದು ಪೌರಾಣಿಕ ಕಥೆಯಾಗಿ ಬೆಳೆದಿರುತ್ತಿದ್ದು, ಪುರೋಹಿತರು ಇಂಥ ಕಥೆಗಳನ್ನು ರೂಪಿಸಿರುತ್ತಾರೆ. ಸ್ಥಳೀಯ ವಾತಾವರಣವನ್ನು ಆರ್ಯೀಕರಿಸಲು ಮಾಡಿದ ಪ್ರಯತ್ನಗಳಿವು. ಊರಲ್ಲಿ ಪಂಡಿತರೆಂದು ಪ್ರಸಿದ್ಧರಾಗಿರುವ ಇವರ ಹೇಳಿಕೆಯನ್ನು ಸಾಮಾನ್ಯರು ನಿಜವೆಂದೇ ನಂಬುತ್ತಾರೆ. ಇಂಥ ಪುರಾಣಕಥೆಗಳು ಬ್ರಾಹ್ಮಣರ ಪ್ರಸಿದ್ಧ ದೇವಾಲಯವಿರುವ ಊರುಗಳ ವಿಷಯವಾಗಿ ತಪ್ಪದೇ ಕೇಳಿಬರುತ್ತವೆ. 'ಏಕೆಂದರೆ ದೇವಾಲಯವನ್ನು ಶೋಷಣೆಯ ಕೇಂದ್ರವನ್ನಾಗಿ ಬೆಳೆಸುವುದಕ್ಕಾಗಿ ಇಂಥ ವೈಭವಯುತ ಕಥೆಗಳನ್ನು ಸೃಷ್ಟಿಸುವುದು ಅವರಿಗೆ ಅವಶ್ಯವಾಗಿರುತ್ತದೆ. ಗೋಕರ್ಣದ ಮಹಾಬಳೇಶ್ವರಲಿಂಗವನ್ನು ರಾವಣ ಸ್ಥಾಪಿಸಿದನೆಂಬ ಕಥೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ಪಂಡಿತನಿಷ್ಪತ್ತಿಗಳು ಪ್ರಾಚೀನಕಾಲದಲ್ಲಿಯೂ ಕೇಳಿಬರುತ್ತಿದ್ದುದಕ್ಕೆ ಸಿರಸಂಗಿ ಸಾಸನ[೭](ಕ್ರಿ.ಶ. ೧೧೮೬)ದಲ್ಲಿ ಋಷ್ಯಶೃಂಗ ಕಥೆಯೊಂದಿಗೆ ಆ ಊರಿನ ಸಂಬಂಧ ಕಲ್ಪಿಸಿರುವುದು ಉದಾಹರಣೆಯಾಗಿದೆ. 'ಹೊಯ್ಸಳ' ಪದವನ್ನು ಹೊಯ್+ಸಳ ಎಂದು ಶಾಸನಗಳು ಬಿಡಿಸಿ ಹೇಳುವ ಕಥೆಯೂ ಪಂಡಿತನಿಷ್ಪತ್ತಿಯೇ ಆಗಿರಬೇಕು. ಬಹುಶಃ ಹೊಯ್ಸಳವೆಂಬುದು ಈ ಅರಸರ ಮೂಲಗ್ರಾಮನಾಮವೇ ಆಗಿರಬೇಕು. ಅದರ ಇನ್ನೊಂದು ರೂಪವಾದ ಹೊಯ್ಸಣದಲ್ಲಿರುವ 'ಅಣ್' ಎಂಬ ಸ್ಥಾನವಾಚಿಯು ಹೊಯ್ಸಳವೆಂಬುದು ಗ್ರಾಮನಾಮವೆಂಬುದಕ್ಕೆ ಆಧಾರವಾಗಿ ನಿಲ್ಲಬಹುದಾಗಿದೆ. ಕಾರ್ತಿಕ ಮಾಸದ ಚತುರ್ದಶಿ ದಿನದಂದು ಕಾಗೆ ಗುಹಾಮೃತ್ತಿಕೆ ತಿಂದು ಬಿಳಿದಾದುದರಿಂದ ಕಾಗಿನೆಲೆ ಎಂಬ ಗ್ರಾಮನಾಮ ರೂಢವಾಯಿತೆಂದು ಕಾಗಿನೆಲೆಯ ಒಂದು ಶಾಸನ ಹೇಳುತ್ತದೆ.[೮] ಇದೂ ಪಂಡಿತನಿಷ್ಪತ್ತಿಯೇ.

೬. ಡಾ. ಎಂ.ಚಿದಾನಂದಮೂರ್ತಿ, ವಾಗರ್ಥ. ಪು.೩೮-೩೯.
೭. KI-I.No.25.
೮. ಬೆಂಗೇರಿಯವರ ಬರಹಗಳು. ಪು.೨೦೭.

೮. ನಿಜನಿಷ್ಪತ್ತಿ ಹೇಳುವುದೇ ಗ್ರಾಮನಾಮವಿಜ್ಞಾನಿಯ ಪರಮಗುರಿ. ಆದರೆ ಲೀಲಾಜಾಲವಾಗಿ ವ್ಯವಹರಿಸುತ್ತಿರುವ ಪಾಮರನಿಷ್ಪತ್ತಿ ಮತ್ತು ಪಂಡಿತನಿಷ್ಪತ್ತಿಗಳ ಮಧ್ಯೆ ನಿಜನಿಷ್ಪತ್ತಿಯನ್ನು ಹುಡುಕುವುದು ಕೆಲವು ವೇಳೆ ತೊಂದರೆಯಾಗುತ್ತದೆ. ಸಾಲದುದಕ್ಕೆ ಯಾವುದೇ ಗ್ರಾಮನಾಮ ಅವನ ಅಭ್ಯಾಸಕ್ಕೆ ಸಿಗುವುದು ವಿಕೃತರೂಪದಲ್ಲಿ ಅಥವಾ ವ್ಯತ್ಯಸ್ತರೂಪದಲ್ಲಿ. ಈ ಪ್ರಸಂಗದಲ್ಲಿ ಸಂಶೋಧಕ ಅದರ ಪ್ರಾಚೀನತಮವಾದ ಮತ್ತು ನಿಜವಾದ ರೂಪವನ್ನು ಮೊದಲು ಹುಡುಕಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಶಾಸನಗಳಿಗೆ ಮೊರೆಹೋಗುವುದು ಅವಶ್ಯವಾದರೂ ಕೆಲವೊಮ್ಮೆ ಅಲ್ಲಿಯೂ ಆ ಗ್ರಾಮನಾಮದ ಸಂಸ್ಕೃತರೂಪ (ಬಾರಕೂರು–ಬಾರಹಕನ್ಯಾಪುರ) ಇಲ್ಲವೆ ಸಂಸ್ಕೃತ ಭಾಷಾಂತರ ರೂಪ (ಗುಡಿಗೆರೆ–ಧ್ವಜತಟಾಕ)ಗಳನ್ನು ದಾಖಲಿಸಲಾಗಿರುತ್ತದೆ. ಹೀಗೆ ಶಾಸನೋಕ್ತ ಹಳೆಯ ರೂಪಗಳೂ ಕೆಲವೊಮ್ಮೆ ಅಡ್ಡದಾರಿ ತೋರಿಸುವ ಸಂಭವವಿರುವುದರಿಂದ ಯಾವುದೇ ಗ್ರಾಮನಾದ ನಿಜರೂಪವನ್ನು ನಿರ್ಧರಿಸಿಕೊಂಡು, ಆಮೇಲೆ ನಿಷ್ಪತ್ತಿ ಹೇಳುವುದು ಸರಿಯಾದ ಕ್ರಮವೆನಿಸುತ್ತದೆ.

ಗ್ರಾಮ : ಸೃಷ್ಟಿ–ನಿರ್ಮಾಣ :

ಭೂಮಿಯ ಮೇಲೆ ಹಿರಿ–ಕಿರಿಯ ಅಂತರದಲ್ಲಿ ಇಂದು ಲಕ್ಷೋಪಲಕ್ಷ ಗ್ರಾಮ, ನಗರ, ಪಟ್ಟಣಗಳು ತಲೆಯೆತ್ತಿನಿಂತಿವೆ. ಈ ಗ್ರಾಮಗಳು ಅಸ್ತಿತ್ವಕ್ಕೆ ಬಂದ ಬಗೆ, ಅವುಗಳಿಗೆ ನಾಮಗಳು ಅಂಟಿಕೊಂಡ ರೀತಿ, ಅವುಗಳ ನಾಮ–ರೂಪ–ಕ್ರಿಯೆಗಳಲ್ಲಿ ವ್ಯತ್ಯಾಸವಾಗುತ್ತ ಬಂದ ವಿಷಯ ಇವೆಲ್ಲ ಅಭ್ಯಾಸಯೋಗ್ಯವೆನಿಸಿವೆ.

ಇತಿಹಾಸಪೂರ್ವಕಾಲದಲ್ಲಿ ವ್ಯಕ್ತಿಯು ಕುಟುಂಬವಾಗಿ ಬೆಳೆದ ಬಳಿಕ, ಅಂಥ ಕುಟುಂಬಗಳು ಆಹಾರಕ್ಕಾಗಿ ಸಂಚರಿಸುತ್ತಿದ್ದವು. ಆ ಪ್ರಸಂಗದ ಅವರ ತಾತ್ಪೂರ್ತಿಕ ನೆಲೆಗಳನ್ನು 'ಸಂಚಾರಿಗ್ರಾಮ'ಗಳೆಂದು ಕರೆಯಬಹುದು. ಹಣ್ಣು ಹಂಪಲ–ಗಡ್ಡೆಗೆಣಸು–ಬೇಟೆಗಳೆಂಬ ಆಹಾರಗಳಿಂದ ಜೀವನ ಸಾಗಿಸುತ್ತಿದ್ದ ಕಾಲವದು. ಕಾಲಗತಿಸಿದಂತೆ ಆಹಾರಕ್ಕಾಗಿ ಒಕ್ಕಲುತನವನ್ನು ಕಂಡುಹಿಡಿದು, ಬಿತ್ತುವುದು, ಬೆಳೆಯುವುದು ಪ್ರಾರಂಭವಾದಂದಿನಿಂದ ಬೆಳೆಯ ರಕ್ಷಣೆಗಾಗಿ ಭೂಮಿಗೆ ಅಂಟಿಕೊಂಡು ಒಂದೆಡೆ ನಿಲ್ಲುವುದು ಅವನಿಗೆ ಅನಿವಾರ್ಯವಾಯಿತು. ಈ ಸ್ಥಾಯಿ ನೆಲೆಗಳೇ ಗ್ರಾಮಗಳಾಗಿ ಬೆಳೆಯತೊಡಗಿದವು. ಹೀಗಾಗಿ ಗ್ರಾಮಪರಿಕಲ್ಪನೆಗೆ ಒಕ್ಕಲುತನವೇ ಮೂಲಕಾರಣವೆಂದು ಹೇಳಬಹುದು. ಆಮೇಲೆ ಒಕ್ಕಲಿಗರು ಫಲವತ್ತಾದ ನದೀ ತೀರದಲ್ಲಿ, ಕ್ಷತ್ರಿಯರು ಅರಣ್ಯ ಪರ್ವತಗಳಂಥ ಇಕ್ಕಟ್ಟಾದ ಪ್ರದೇಶಗಳಲ್ಲಿ, ಬ್ರಾಹ್ಮಣರು ಪವಿತ್ರಕ್ಷೇತ್ರಗಳಲ್ಲಿ ನಿಂತ ನೆಲೆಗಳೇ ಬೇರೆಬೇರೆ ವಾತಾವರಣದ ಗ್ರಾಮಗಳಾಗಿ ಬೆಳೆದವು. ತರುವಾಯ ಉದ್ಯೋಗದ ಅನುಕೂಲಕ್ಕಾಗಿ ಒಂದೊಂದು ವೃತ್ತಿಯನ್ನು ಅವಲಂಬಿಸಿದವರು ಒಂದೊಂದು ಕಡೆಗೆ, ಸಾಮಾಜಿಕ ಸಂರಕ್ಷಣೆ ದೃಷ್ಟಿಯಿಂದ ಒಂದೊಂದು ಪಂಥದವರು ಒಂದೊಂದು ಕಡೆಗೆ ಒಟ್ಟಾಗಿ ಬಾಳುವಲ್ಲಿ ಇನ್ನೂ ಬೇರೆ ಬೇರೆ ಸ್ವರೂಪದ ಗ್ರಾಮಗಳು ಹುಟ್ಟಿಕೊಂಡವು.

ಗ್ರಾಮಗಳ ಉದಯವನ್ನು ಎರಡು ಬಗೆಯಲ್ಲಿ ವರ್ಗೀಕರಿಸಬಹುದು. ಒಂದು; ಸೃಷ್ಟಿ, ಇನ್ನೊಂದು; ನಿರ್ಮಾಣ. ಸಂಚಾರಿ ಕುಟುಂಗಳು ಒಂದೆಡೆ ನೀರು–ನೆರಳು ನೋಡಿ ಬೀಡು ಬಿಡುವುದು, ಆ ಪರಿಸರವನ್ನು ತಮ್ಮ ಬದುಕಿಗೆ ಬಳಸಿಕೊಳ್ಳುವುದು, ಅದು ಹಿತವೆನಿಸಿದಾಗ

ತಮಗರಿಯದಂತೆ ಅಲ್ಲಿಯೇ ನೆಲೆ ನಿಲ್ಲುವುದು, ಆ ಪ್ರದೇಶಕ್ಕೆ ಅನ್ಯಕುಟುಂಬಗಳು ಬಂದು ಸೇರುವುದು, ಅವರೂ-ಇವರೂ ಸೇರುವಲ್ಲಿ ಬೀಡು ನೆಲೆಯ ರೂಪ ಪಡೆಯುವುದು, ಅದಕ್ಕೆ ಆ ಪ್ರದೇಶ ಅಥವಾ ಆ ಜನಾಂಗವನ್ನು ಪ್ರತಿನಿಧಿಸುವ ಹೆಸರು ತಾನಾಗಿಯೇ ಹುಟ್ಟಿ ಅಂಟಿಕೊಳ್ಳುವುದು – ಹೀಗೆ ಅನುದ್ದೇಶಿತ ರೀತಿಯಲ್ಲಿ ಹುಟ್ಟಿದ ಗ್ರಾಮಗಳು ಸೃಷ್ಟಿವರ್ಗಕ್ಕೆ ಉದಾಹರಣೆಯಾಗಿವೆ. ಒಂದು ನೆಲೆಯನ್ನು ಗ್ರಾಮವನ್ನಾಗಿ ಬೆಳೆಸಬೇಕೆಂಬ ಉದ್ದೇಶವಿಲ್ಲದೆ ಬೆಳೆದ ಗ್ರಾಮಗಳಿವು.

ಕಾಲ ಗತಿಸಿದಂತೆ ಗ್ರಾಮನಿರ್ಮಾಣ ಜೀವನಕ್ಕೆ ಪ್ರಯೋಜನಕಾರಿಯೆಂದು ಮನವರಿಕೆಯಾಗುವಲ್ಲಿ, ಉದ್ದೇಶಪೂರ್ವಕವಾಗಿ ಜನರು ಗ್ರಾಮಗಳನ್ನು ನಿರ್ಮಿಸಹತ್ತಿದರು. ಈಗ 'ಸೃಷ್ಟಿ' ಘಟ್ಟ ಕಳೆದು 'ನಿರ್ಮಾಣ' ಘಟ್ಟ ಪ್ರಾರಂಭವಾಯಿತು. ಹೀಗಾಗಿ ಬದುಕಿಗೆ ಅತ್ಯವಾದ ನೀರು, ಫಲವತ್ತಾದ ನೆಲವುಳ್ಳ, ರಕ್ಷಣೆಗಾಗಿ ಬೆಟ್ಟ-ಅರಣ್ಯ ಇತ್ಯಾದಿ ಸೌಕರ್ಯವುಳ್ಳ, ತಮ್ಮ ಉದ್ಯೋಗಗಳಿಗೆ ಅನುಕೂಲತೆಯುಳ್ಳ, ದೇವತಾಕ್ಷೇತ್ರ-ನದೀತೀರ ಇತ್ಯಾದಿ ಪಾವಿತ್ರ್ಯಗಳಿಂದ ಕೂಡಿದ ಸ್ಥಳಗಳನ್ನು ಆರಿಸಿಕೊಳ್ಳುವ ಮತ್ತು ನಿರ್ಮಾಣ ಕಾಲದಲ್ಲಿ ಕೆಲವು ವಿಧಿವಿಧಾನಗಳನ್ನು ಆಚರಿಸುವ ಅಂಶಗಳು ಈ ಘಟ್ಟದಲ್ಲಿ ತಲೆದೋರಿದವು. "ನೆಗ್ಗಿಲ ಸವರಿ, ಹುಗ್ಗಿ ಹೊಯ್ದು, ಊರು ಕಟ್ಟಿದಾಗ ಬಂದಂಥ ಒಕ್ಕಲು"[೯] ಎಂಬ ಹೇಳಿಕೆ ಗ್ರಾಮ ನಿರ್ಮಾಣ ಸಂದರ್ಭದ ಕ್ರಿಯೆ-ವಿಧಿಗಳನ್ನು ಸೂಚಿಸುವಂತಿದೆ.

ಹೀಗೆ ಎರಡು ಬಗೆಗಳಲ್ಲಿ ತಲೆಯೆತ್ತಿದ ಊರುಗಳನ್ನು ಅವುಗಳ ಸ್ಥಳ, ಉದ್ಯೋಗ, ವಿಸ್ತಾರಗಳನ್ನು ಗಮನಿಸಿ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳೆಂದು ನಮ್ಮ ಪ್ರಾಚೀನರು ಹೆಸರಿಟ್ಟು ಕರೆದ ವಿಷಯ ಸಾಹಿತ್ಯಕೃತಿಗಳಿಂದ ತಿಳಿದುಬರುತ್ತದೆ. ಇಂದು ಗ್ರಾಮಗಳನ್ನು ಬೇರೊಂದು ರೀತಿಯಲ್ಲಿ Town, Municipality, Corporation ಎಂದು ಶ್ರೇಣಿಗೊಳಿಸಿರುದನ್ನು ಇಲ್ಲಿ ನೆನೆಯಬಹುದು.

ನಾಮಕರಣ ನಡೆದು ಬಂದ ದಾರಿ :

ಭೂಮಿಯ ಮೇಲ್ಮೈಯನ್ನು ವಸತಿಸ್ಥಳ, ನಿರ್ವವಸತಿಸ್ಥಳವೆಂದು ವರ್ಗೀಕರಿಸಿದರೆ, ನಿರ್ವಸತಿಸ್ಥಳಗಳಾದ ದಿನ್ನೆ ಬಯಲು ಹಳ್ಳ ಕೊಳ್ಳ ಗಿರಿ ಕಂದರಗಳಲ್ಲಿ ವಿಶಿಷ್ಟವಾದವುಗಳಿಗೆ ಮಾತ್ರ ಮನುಷ್ಯ ಹೆಸರಿಟ್ಟು ಕರೆದಿದ್ದಾನೆ. ವಸತಿವರ್ಗದ ಗ್ರಾಮಗಳೆಲ್ಲ ವಿಶಿಷ್ಟಗಳೇ ಆಗಿರುವುದರಿಂದ ಅವುಗಳಿಗೆ ತಪ್ಪದೇ ಹೆಸರಿಟ್ಟಿದ್ದಾನೆ. ಆದುದರಿಂದ ಈ ಲೋಕದಲ್ಲಿ ನಾಮವಿಲ್ಲದ ಗ್ರಾಮಗಳು ಹಿಂದೂ ಇರಲಿಲ್ಲ, ಇಂದೂ ಎಲ್ಲ, ಮುಂದೂ ಇರಲಾರವು.

ಗ್ರಾಮಗಳಿಗೆ ಹೆಸರಿಡುವ ಇತಿಹಾಸದ ಮೊದಲ ಘಟ್ಟದಲ್ಲಿ ಅಂದರೆ 'ಸೃಷ್ಟಿ' ಘಟ್ಟದಲ್ಲಿ ಅಲ್ಲಿಯ ನೈಸರ್ಗಿಕ ಸ್ಥಿತಿಯನ್ನೇ ಗ್ರಾಮಕ್ಕೆ ನಾಮವೆಂದು ಇಡಲಾಗುತ್ತಿತ್ತು. ಆಗ ಅನ್ವರ್ಥಕನಾಮ ಪದ್ಧತಿಯೇ ಬಳಕೆಯಲ್ಲಿದ್ದಿತು. ಉದಾ : ಕಲ್ಲು, ಗುಡ್ಡ ಎಂದೋ, ಹುಲಿಕಲ್ಲು, ಕರಡಿಗುಡ್ಡ ಎಂದೋ, ಕಲ್ಲು ಪ್ರಧಾನವಾಗಿದ್ದುದಕ್ಕೆ ಕಲ್ಲೂರು, ಮಣ್ಣು ಪ್ರಧಾನವಾಗಿದ್ದುದಕ್ಕೆ ಮಣ್ಣೂರು ಎಂದೋ ಹೆಸರಿಡುತ್ತಿರಬೇಕು. ನಿಸರ್ಗವಾಚಿಯು ನಿರ್ದಿಷ್ಟ ಮತ್ತು ವಾರ್ಗಿಕ ಎರಡೂ ಸ್ಥಾನಗಳಲ್ಲಿ

೯. ಬಸವಣ್ಣನವರ ಟೀಕಿನ ವಚನಗಳು-I-೧೪೯.

(ಕರಡಿ+ಗುಡ್ಡ), ಇಲ್ಲವೆ ನಿಸರ್ಗವಾಚಿಯು ನಿರ್ದಿಷ್ಟಸ್ಥಾನದಲ್ಲಿ (ನಿರ್ಮಾಣವಾಚಿ, ವ್ಯಕ್ತಿವಾಚಿಗಳಲ್ಲಿ ಈ ಅವಕಾಶವಿರುವುದಿಲ್ಲ) ಅಥವಾ ವಾರ್ಗಿಕಸ್ಥಾನದಲ್ಲಿ ಬಳಕೆಯಾಗುತ್ತಲಿದ್ದ ಕಾಲವಿದು. ಇದು ನಾಮ-ಗ್ರಾಮಗಳಲ್ಲಿ ಅಂದರೆ ನಾಮ-ನಾಮಿಗಳಲ್ಲಿ ಬಿಂಬ-ಪ್ರತಿಬಿಂಬ ಸಂಬಂಧವಿದ್ದ ಘಟ್ಟ, ನಾಮದರ್ಪಣದಲ್ಲಿ ಗ್ರಾಮಪರಿಸರ ಪ್ರತಿಬಿಂಬಿಸುತ್ತಿದ್ದ ಅವಧಿಯಿದು. ಈ ಕಾಲಘಟ್ಟದಲ್ಲಿ ಊರನ್ನು ನಿರ್ದೇಶಿಸಿ ಮಾತನಾಡುವ ನೆರೆಯ ಊರಿನವರಿಂದ ಒಂದು ಊರಿಗೆ ಹೆಸರು ಬಂದಿರುತ್ತದೆಯೇ ಹೊರತು, ಆ ಊರಿನವರಿಂದಲ್ಲ.

ಆಮೇಲೆ ಗ್ರಾಮಗಳಿಗೆ ಹೆಸರಿಡುವ ಎರಡನೆಯ ಘಟ್ಟದ ಅಂದರೆ 'ನಿರ್ಮಾಣ' ಘಟ್ಟದ ಅವಧಿಯಲ್ಲಿ ಗ್ರಾಮನಾಮಗಳ 'ನಿರ್ದಿಷ್ಟ' ಸ್ಥಾನದಲ್ಲಿ ನಿಸರ್ಗವಾಚಿಪದಕ್ಕೆ ಬದಲು ಜನಾಂಗವಾಚಿಪದ, ಆಮೇಲೆ ವ್ಯಕ್ತಿವಾಚಿಪದ, ಕೊನೆಗೆ ಆದರ್ಶವಾಚಿಪದ ಬಳಕೆಗೊಳ್ಳುವುದು ರೂಢಗೊಂಡಿರಬೇಕು. ಈಗ ಜನಾಂಗವಾಚಿ ನಿರ್ದಿಷ್ಟದ ಮುಂದೆ ನಿಸರ್ಗವಾಚಿ ಇಲ್ಲವೆ ವಸತಿವಾಚಿ ಇಲ್ಲವೆ ನಿರ್ಮಾಣವಾಚಿ ವಾರ್ಗಿಕಗಳು ಸೇರುವ ಕ್ರಿಯೆ ಪ್ರಾರಂಭವಾಯಿತು. ಆಮೇಲೆ ಆದರ್ಶವಾಚಿ ನಿರ್ದಿಷ್ಟದ ಮುಂದೆ ನಿಸರ್ಗವಾಚಿ ಇಲ್ಲವೆ ವಸತಿವಾಚಿ ಇಲ್ಲವೆ ನಿರ್ಮಾಣವಾಚಿ ವಾರ್ಗಿಕಗಳು ಸೇರುವ ಕ್ರಿಯೆ ಪ್ರಾರಂಭವಾಯಿತು. ಈ ವರೆಗಿನ ವಿವರಣೆಯನ್ನು ಹೀಗೆ ರೇಖಿಸಬಹುದು :

ಸೃಷ್ಟಿ ಘಟ್ಟ

ನಿಸರ್ಗವಾಚಿ
- ನಿಸರ್ಗವಾಚಿ : ಕಲ್ಲು+ಗುಡ್ಡ=ಕಲ್ಲಗುಡ್ಡ
- ವಸತಿವಾಚಿ : ಕಲ್ಲು+ಹಳ್ಳಿ=ಕಲ್ಲಹಳ್ಳಿ
- ನಿರ್ಮಾಣವಾಚಿ : (ಸೃಷ್ಟಿ ಘಟ್ಟದಲ್ಲಿ ನಿರ್ಮಾಣವಾಚಿ ಗ್ರಾಮ ಹುಟ್ಟುವುದಿಲ್ಲ)

ನಿರ್ಮಾಣ ಘಟ್ಟ

೧. ಜನಾಂಗವಾಚಿ
- ನಿರ್ಮಾಣವಾಚಿ : ಬೇಡರ+ಕೋಟೆ=ಬೇಡರಕೋಟೆ
- ವಸತಿವಾಚಿ : ಬೇಡರ+ಹಳ್ಳಿ=ಬೇಡರಹಳ್ಳಿ
- ನಿಸರ್ಗವಾಚಿ : ಬೇಡರ+ಕಲ್ಲು=ಬೇಡರಕಲ್ಲು

೨. ವ್ಯಕ್ತಿವಾಚಿ
- ನಿಸರ್ಗವಾಚಿ : ಕೆಂಗನ+ಕಲ್ಲು=ಕೆಂಗನಕಲ್ಲು
- ವಸತಿವಾಚಿ : ಕೆಂಗನ+ಹಳ್ಳಿ=ಕೆಂಗನಹಳ್ಳಿ
- ನಿರ್ಮಾಣವಾಚಿ : ಕೆಂಗನ+ಕೋಟೆ=ಕೆಂಗನಕೋಟೆ

ಆದರ್ಶವಾಚಿ	ನಿಸರ್ಗವಾಚಿ : ಶಾಂತ+ಗಿರಿ=ಶಾಂತಗಿರಿ
	ವಸತಿವಾಚಿ : ಶಾಂತ+ನಗರ=ಶಾಂತನಗರ
	ನಿರ್ಮಾಣವಾಚಿ : ಶಾಂತ+ತಟಾಕ=ಶಾಂತತಟಾಕ

ಮೇಲಿನ ಕೋಷ್ಟಕದಿಂದ ಕೆಲವು ಅಂಶಗಳು ಧ್ವನಿತವಾಗುತ್ತವೆ : ಇಲ್ಲಿ ಸೃಷ್ಟಿಘಟ್ಟದವುಗಳನ್ನು ಸ್ವಾಭಾವಿಕನಾಮ, ನಿರ್ಮಾಣಘಟ್ಟದವುಗಳನ್ನು ಕೃತಕನಾಮಗಳೆಂದು ಕರೆಯಬಹುದು. ಯಾವುದೇ ಗ್ರಾಮನಾಮ ಸಾಮಾನ್ಯವಾಗಿ ಈ ಕೋಷ್ಟಕದ ೧೨ ಬಗೆಗಳಲ್ಲಿ ಒಂದು ಬಗೆಯಾಗಿರುತ್ತದೆ. ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ಆದರ್ಶವಾಚಿ–ಇವು ಗ್ರಾಮಗಳಿಗೆ ನಾಮಗಳನ್ನಿಡುತ್ತ ಬಂದ ಇತಿಹಾಸದ ಹೆಜ್ಜೆ ಗುರುತುಗಳಾಗಿವೆ. ಅಂದರೆ ತೀರ ಪ್ರಾಚೀನವಾದುವು ನಿಸರ್ಗವಾಚಿನಾಮಗಳು, ಆಮೇಲಿನವು ಜನಾಂಗವಾಚಿ ನಾಮಗಳು, ತರುವಾಯದವು ವ್ಯಕ್ತಿವಾಚಿನಾಮಗಳು, ಇತ್ತೀಚಿನವು ಆದರ್ಶವಾಚಿನಾಮಗಳು ಎಂದು ಹೇಳಬಹುದಾಗಿದೆ.

ನಾಮ ಸೀಮಾರೇಖೆ :

ಕಾಲ ದೇಶ ಪರಿಸರಕ್ಕೆ ತಕ್ಕಂತೆ ಮಾನವಜನಾಂಗದ ಆಲೋಚನಾವಿಧಾನ, ಜೀವನಕ್ರಮಗಳು ಬದಲಾಗುತ್ತ ಬರುವುದು ಸಹಜ. ಇವುಗಳಿಗೆ ಅನುಗುಣವಾಗಿ ಗ್ರಾಮನಾಮದ ಆಶಯ (Content) ಮತ್ತು ಆಕೃತಿ (Form)ಗಳಲ್ಲಿ ಬದಲಾವಣೆ ಕಂಡುಬರುವುದರಿಂದ ಯಾವುದೇ ದೇಶದ ಗ್ರಾಮಗಳಲ್ಲಿ ಕಾಲವಾಚಿ, ದೇಶವಾಚಿ, ಶ್ರೇಣಿವಾಚಿ, ಸೀಮಾರೇಖೆಗಳನ್ನು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಗ್ರಾಮನಾಮಗಳನ್ನು ಇಲ್ಲಿ ಅವಲೋಕಿಸಬಹುದು.

ಕಾಲವಾಚಿ ಸೀಮಾರೇಖೆ : ಪ್ರಾಚೀನಕಾಲದಿಂದ ಇಂದಿನ ವರೆಗೆ ಊರಿಗೆ ಹೆಸರಿಡುವ ವಿಷಯವಾಗಿ ಮಾನವನ ಮನಸ್ಸು ಹಲವು ಬದಲಾವಣೆಗಳನ್ನು ಅಪೇಕ್ಷಿಸುತ್ತ, ರೂಢಿಗೊಳಿಸುತ್ತ ಬಂದಂತಿದೆ. ಈ ಒಲವುಗಳನ್ನು ಐತಿಹಾಸಿಕವಾಗಿ ಅವಲೋಕಿಸಿ ಅಲ್ಲಿ ಕೆಲವು ಮುಖ್ಯಘಟ್ಟಗಳನ್ನು ಗುರುತಿಸಬಹುದಾಗಿದೆ. ಇದರಿಂದ ಯಾವುದೇ ಊರು ಮಾನವ ಮನೋಧರ್ಮದ ಯಾವ ಘಟ್ಟದಲ್ಲಿ ಹುಟ್ಟಿತು? ಆ ಘಟ್ಟದ ಕಾಲಾವಧಿ ಯಾವುದು? ಇತ್ಯಾದಿ ಪ್ರಶ್ನೆಗಳಿಗೆ ತಕ್ಕಮಟ್ಟಿಗೆ ಉತ್ತರಿಸಲು ಸಾಧ್ಯವಾಗುತ್ತದೆ.

ನಿಸರ್ಗದೊಂದಿಗೆ ಸರಳವಾಗಿ ಬದುಕುಮಾಡುತ್ತ, ಕುಟುಂಬ ಕಟ್ಟಿಕೊಂಡು ಅಲೆಯುತ್ತಲಿದ್ದ ಮನುಷ್ಯ ಒಕ್ಕಲುತನವನ್ನು ಕಂಡುಹಿಡಿದು, ಬೆಳೆಯ ರಕ್ಷಣೆಗಾಗಿ ಒಂದೆಡೆ ನೆಲೆ ನಿಲ್ಲುವಲ್ಲಿ 'ಗ್ರಾಮ' ಪರಿಕಲ್ಪನೆ ಹುಟ್ಟಿಕೊಂಡಿತೆಂದು ಹಿಂದೆ ನೋಡಿದ್ದೇವೆ. ಈ ಸಂದರ್ಭದಲ್ಲಿ ಆತನು ನೈಸರ್ಗಿಕ ರಕ್ಷಣೆಗಳಾದ ಕಲ್ಲು, ಗುಡ್ಡಗಳ ನೆರೆಯಲ್ಲಿ ನೆಲೆ ಮಾಡಿಕೊಂಡನು. ಆಗ ಆ ನೆಲೆಗಳನ್ನು ಆ ವಿಶಿಷ್ಟ ಕಲ್ಲುಗಡ್ಡಗಳ ಗುರುತಿನಿಂದಲೇ ಹೆಸರಿಟ್ಟು ಕರೆಯುವುದು ರೂಢವಾಯಿತು. ಆದುದರಿಂದ ಗ್ರಾಮನಾಮಗಳ ಇತಿಹಾಸದಲ್ಲಿ 'ನಿಸರ್ಗವಾಚಿ' ಹೆಸರುಗಳೇ ಮೊದಲು ಹುಟ್ಟಿದವೆಂದು ಹೇಳಬಹುದು, ಇದು ಗ್ರಾಮನಾಮದ ಇತಿಹಾಸದಲ್ಲಿ ತಲೆದೋರಿದ ಪ್ರಥಮ ಘಟ್ಟವಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಲ್ಲೂರು, ಮಣ್ಣೂರು, ಗುಡದೂರು, ಹುಲಿಕುಂದ, ತೊರ್ಕೆ (ತೊರೆಯ+ಕೆಯ್)–ಈ ಮತ್ತು ಈ ಮಾದರಿಯವು ಪ್ರಥಮ ಘಟ್ಟದಲ್ಲಿ ಹುಟ್ಟಿದ ತುಂಬ

ಹಳೆಯ ಊರುಗಳಾಗಿವೆ. ಅಥವಾ ಅವು ನಿಸರ್ಗಪ್ರಜ್ಞೆ ಅಂದರೆ ಜಾನಪದಪ್ರಜ್ಞೆ ಪ್ರಧಾನವಾಗಿದ್ದ ಇತ್ತೀಚಿನವರು ಇಟ್ಟ ಹೆಸರುಗಳಾಗಿವೆ. ಇಲ್ಲಿ ನಿಸರ್ಗವಾಚಿ ಪದಗಳು ಕೇವಲ ನಿರ್ದಿಷ್ಟ ಇಲ್ಲವೆ ನಿರ್ದಿಷ್ಟ ಮತ್ತು ವಾರ್ಗಿಕ ಸ್ಥಾನಗಳಲ್ಲಿ ಬರಬಹುದು. ಇಂಥ ಹೆಸರುಗಳು ಸಹಜವಾಗಿಯೇ ಆ ಊರಿನ ಭೌಗೋಲಿಕ ಸ್ವರೂಪವನ್ನು ತಿಳಿಸಿಕೊಡುತ್ತವೆ.

ಕಾಲಕ್ರಮದಲ್ಲಿ ಜನಾಂಗಗಳು ನಿಸರ್ಗಕ್ಕಿಂತ ತಮ್ಮ ತಮ್ಮ ಜನಾಂಗಗಳ ಬಗೆಗೆ ವಿಶೇಷ ಮೋಹ ಬೆಳೆಸಿಕೊಂಡವು. ಜನಾಂಗನಿಷ್ಠೆ ಗಟ್ಟಿಗೊಂಡ ಈ ಎರಡನೆಯ ಘಟದಲ್ಲಿ 'ನಿಸರ್ಗವಾಚಿ'ಗೆ ಬದಲು ಕ್ರಮೇಣ 'ಜನಂಗವಾಚಿ' ಗ್ರಾಮನಾಮಗಳು ತಲೆದೋರಲಾರಂಭಿಸಿದವು. ಈ ಮನೋಧಮಕ್ಕೆ ತಕ್ಕಂತೆ ಕನ್ನಡ ನಾಡಿನಲ್ಲಿ ಸಾವಿರಾರು ಊರುಗಳು ಹುಟ್ಟಿಕೊಂಡಿದ್ದು, ಅವುಗಳ ಸಹಾಯದಿಂದ ಒಂದು ಕಾಲಕ್ಕೆ ಇಲ್ಲಿ ನೆಲೆನಿಂತಿದ್ದ ಪ್ರಾಚೀನ ಜನಾಂಗಗಳ ದೊಡ್ಡ ಯಾದಿಯನ್ನೇ ಸಿದ್ಧಪಡಿಸಬಹುದಾಗಿದೆ. ಸಾಮಾನ್ಯವಾಗಿ ಗ್ರಾಮನಾಮಗಳ ಮಧ್ಯಬರುವ 'ರ' (=ಅರ್+ಅ) ಇಂಥ ಜನಾಂಗಗಳನ್ನು ಸೂಚಿಸುತ್ತಿದ್ದು, ಮುಂಡರ+ಗಿ, ಹತ್ತರ+ಕಿ, ಕಾದರ+ಹಳ್ಳಿ, ಚಿತ್ತರ+ಕಲ್ಲು ಗ್ರಾಮಗಳಲ್ಲಿ ಒಂದು ಕಾಲಕ್ಕೆ ಮುಂಡರು, ಹತ್ತರು, ಕಾದರು, ಚಿತ್ತರು ಹೆಸರಿನ ಜನಾಂಗಗಳು ವಾಸಿಸುತ್ತಿದ್ದವೆಂದು ಹೇಳಬಹುದಾಗಿದೆ. ಹೀಗೆಯೇ ಪ್ರಾಚೀನ ಕರ್ನಾಟಕದಲ್ಲಿ ಕಲಂಬರು (ಕಲಂಬರಗೆ>ಕಲಬುರ್ಗಿ), ಯರಂಬರು (ಯರಂಬರಗೆ>ಯಲಬುರ್ಗಿ), ಜೇವರು (ಜೇವರಗಿ), ಹಿಪ್ಪರು (ಹಿಪ್ಪರಗಿ), ನಿಂಬರು(ನಿಂಬರಗಿ), ನೇಸರು (ನೇಸರ್ಗಿ), ಕಾತರು (ಕತರಕಿ), ಹಾವರು (ಹಾವರಗಿ), ಹಾಗರು (ಹಾಗರಗಿ), ಹಂಗರು (ಹಂಗರಗಿ), ಹಂದರು (ಹಂದ್ರಾಳ), ಕುಂದರು (ಕಂದುರಗಿ), ಘತ್ತರು (ಘತ್ತರಗಿ), ಗುತ್ತರು (ಗುತ್ತರಗಿ), ಉಂಬರು (ಉಂಬರವಾಡಿ>ಉಮ್ರಾಣಿ), ಗಾವರು (ಗಾವರವಾಡ) ಇತ್ಯಾದಿ ಜನಾಂಗಗಳಿದ್ದವೆಂದು ತೋರುತ್ತದೆ. ಇಲ್ಲಿಯ ಬಹುವಚನವಾಚಿ 'ಅರ್' ಅನ್ನು ತೆಗೆದರೆ ಉಳಿಯುವ ಕಲಂಬ, ಯರಂಬ, ಜೇವ, ಹಿಪ್ಪ, ನಿಂಬ ಇತ್ಯಾದಿಗಳು ಆಯಾ ಜನಾಂಗಗಳ ಮೂಲಪ್ರದೇಶ ಅಥವಾ ಮೂಲಪುರುಷನ ಹೆಸರುಗಳಾಗಿರುವ ಸಾಧ್ಯತೆಯಿದೆ, ಕೆಲವು ಸಲ ಒಂದೇ ಹೆಸರಿನ ಇಂಥ ಊರುಗಳು ಅನೇಕ ಕಡೆ ಸಿಗುತ್ತಿದ್ದು, ಇದು ಆ ಜನಾಂಗ ಹಲವು ಕಡೆಗಳಲ್ಲಿ ಹಂಚಿಹೋದುದರ ಕುರುಹಾಗಿದೆ, ಉದಾ: ಚಿತ್ತರ+ಗಿ, ಚಿತ್ತರ+ಕಲ್ಲು, ಚಿತ್ತರ+ಹಳ್ಳಿ ಮತ್ತು (ದೇವರ) ಹಿಪ್ಪರ+ಗಿ, (ಮಾದನ) ಹಿಪ್ಪರ+ಗಿ, (ಹೂವಿನ) ಹಿಪ್ಪರ+ಗಿ ಇತ್ಯಾದಿ. ಕೋಲಾರ ಜಿಲ್ಲೆಯಲ್ಲಿ ಸುಮಾರು ೧೯೫ ಜನಾಂಗವಾಚಿ ಗ್ರಾಮಗಳಿವೆಯೆಂದು, ಈ ಜನಾಂಗಗಳ ಭಾಷೆ ಸಾಮಾನ್ಯವಾಗಿ ತೆಲುಗೆಂದು ತಿಳಿಸುತ್ತ ಶ್ರೀ ವಿ.ಗೋಪಾಲಕೃಷ್ಣ ಅವರು "ತೆಲುಗು ಜನಾಂಗದ ವಲಸೆ ಹೇಗೆ? ಯಾವ ದಿಕ್ಕಿನಲ್ಲಿ? ಎಷ್ಟು ಪ್ರಮಾಣದಲ್ಲಿ ನಡೆದಿದೆ"[೧೦] ಎಂದು ಹೇಳಬಹುದಾಗಿದೆ, ಎನ್ನುತ್ತಾರೆ, ಹೀಗೆ ಕರ್ನಾಟಕದ ಎಲ್ಲ ಜಿಲ್ಲೆಗಳ ಜನಾಂಗವಾಚಿ ಗ್ರಾಮನಾಮಗಳನ್ನು ಸಂಗ್ರಹಿಸಿ ಅವುಗಳ ಮೂಲ, ಪ್ರಸಾರ ಇತ್ಯಾದಿಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಜನಾಂಗವಾಚಿ ಪದವು ಗ್ರಾಮ ನಾಮದ 'ನಿರ್ದಿಷ್ಟ' ಸ್ಥಾನದಲ್ಲಿರುತ್ತದೆ.

ಮೂರನೆಯ ಘಟ್ಟ ವ್ಯಕ್ತಿನಾಮವಾಚಿ ಗ್ರಾಮನಾಮಗಳು. ನಿಸರ್ಗ ನಿಷ್ಠತೆಯಿಂದ ಜನಾಂಗನಿಷ್ಠತೆಗೆ ಸರಿದ ಮನುಷ್ಯ, ಕಾಲಕ್ರಮದಲ್ಲಿ ವ್ಯಕ್ತಿನಿಷ್ಠತೆಯ ಅಂಚನ್ನು ತಲುಪಿದ. ಈ ಅವಧಿಯಲ್ಲಿ ಅವನು ಊರುಗಳಿಗೆ ಗತಿಸಿಹೋದ ತನ್ನ ಕುಟುಂಬದ ಹಿರಿಯರ

---

೧೦. ಸ್ಥಳನಾಮ ಅಧ್ಯಯನ, ಪು.೬೬

'ಪರೋಕ್ಷವಿನಯ'ಕ್ಕೋಸುಗ ಅವರ ಹೆಸರನ್ನು, ಆಮೇಲೆ ಜೀವಂತವಿರುವ ತನ್ನ ಸಂಬಂಧಿಕರ ಇಲ್ಲವೆ ತನ್ನ ಹೆಸರನ್ನು ಇಡತೊಡಗಿದೆ, ಈ ಅಹಂಮೂಲ ಧೋರಣೆಯಿಂದಾಗಿ ಪ್ರಾಚೀನ ಕರ್ನಾಟಕದಲ್ಲಿ ದೇವಣಗಾವ (ದೇವಣ್ಣ+ಗ್ರಾಮ), ಮಾರ್ಸನಳ್ಳಿ (ಮಾರಸಿಂಗನ+ಹಳ್ಳಿ), ಮುದ್ದೇಬಿಹಾಳ (ಮುದ್ದಬ್ಬೆ+ಪಾಳ್ಯ), ಸೊನ್ನಲಿಗೆ (ಸೊನ್ನಲಾ+ಕೆಯ್), ದೇವಲಾಪುರ (ದೇವಲಾ+ಪುರ), ಅಬ್ಬಲೂರು (ಅಬ್ಬಲಾ+ಊರು) ಇತ್ಯಾದಿ ಊರುಗಳು ಹುಟ್ಟಿಕೊಂಡಿವೆ. ಇತ್ತೀಚೆ ಇಡುತ್ತಲಿರುವ ಇಂದಿರಾ(ಗಾಂಧಿ) ನಗರ, ದೇವರಾಜ (ಅರಸು) ನಗರ ಇತ್ಯಾದಿಗಳೆಲ್ಲ ಈ ಘಟ್ಟದ ಮುಂದುವರಿದ ಉದಾಹರಣೆಗಳಾಗಿವೆ. ಕೆಲವು ಸಲ ದೇವರ ಹೆಸರಿನಲ್ಲಿ ಇಂಥ ಊರುಗಳು ಅಸ್ತಿತ್ವಕ್ಕೆ ಬಂದಿದ್ದರೂ ಮೂಲತಃ ಆ ದೇವರ ಹೆಸರುಗಳು ದೇವತಾಪ್ರತಿಷ್ಠಾಪನೆ ಮಾಡಿದ ವ್ಯಕ್ತಿಯ ಹೆಸರುಗಳೇ ಆಗಿರುವವೆಂದುದನ್ನು ಗಮನಿಸಬೇಕು. ಇಲ್ಲಿ ವ್ಯಕ್ತಿವಾಚಿಪದ 'ನಿರ್ದಿಷ್ಟ' ಸ್ಥಾನದಲ್ಲಿರುತ್ತದೆ.

ಒಟ್ಟಿನಲ್ಲಿ ಊರುಗಳಿಗೆ ಹೆಸರಿಡುತ್ತ ಬಂದ ಇತಿಹಾಸದಲ್ಲಿ ಕ್ರಮವಾಗಿ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ ಹೆಸರಿನ ಘಟ್ಟಗಳು ತಲೆದೋರುತ್ತ ಬಂದಂತಿವೆ. ಈ ತಿಳುವಳಿಕೆಯ ಆಧಾರದಿಂದ ಯಾವುದೇ ಗ್ರಾಮದ ಹೆಸರನ್ನು ಪರೀಕ್ಷಿಸಿ, ಕಾಲ ದೃಷ್ಟಿಯಿಂದ ಅದು ಈ ಮೂರರಲ್ಲಿ ಯಾವ ಘಟ್ಟಕ್ಕೆ ಸೇರಿದೆಯೆಂದು ಸ್ಥೂಲವಾಗಿ ನಿರ್ಣಯಿಸಬಹುದಾಗಿದೆ.

ಇವುಗಳಲ್ಲಿ ಮನುಷ್ಯ 'ನಿಸರ್ಗವಾಚಿ ಗ್ರಾಮನಾಮ'ಗಳಿಗಿಂತ 'ಜನಾಂಗವಾಚಿ ಗ್ರಾಮನಾಮ'ಗಳನ್ನು ಹೆಚ್ಚು ಬದಲಿಸಿದ್ದಾನೆ, 'ವ್ಯಕ್ತಿವಾಚಿ ಗ್ರಾಮನಾಮ'ಗಳನ್ನು ಇನ್ನೂ ಹೆಚ್ಚು ಬದಲಿಸಿದ್ದಾನೆ. ಇದಕ್ಕೆ ಕಾರಣ ಒಂದುಜನಾಂಗವನ್ನು ಇನ್ನೊಂದು ಜನಾಂಗ ಸೋಲಿಸಿ, ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಸೋಲಿಸಿ, ಆ ನೆಲೆಗೆ ಹೊಸದಾಗಿ ತನ್ನ ಜನಾಂಗದ ಇಲ್ಲವೆ ತನ್ನ ಹೆಸರನ್ನು ಇಟ್ಟುದು. ಕೆಲವೊಮ್ಮೆ ಕೊನೆಯ ಎರಡು ಬಗೆಯ (ಜನಾಂಗವಾಚಿ, ವ್ಯಕ್ತಿವಾಚಿ) ಇಲ್ಲವೆ ಮೂರೂ ಬಗೆಯ (ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ) ಹೆಸರುಗಳನ್ನು ಬದಲಿಸಿ, ಒಬ್ಬ ವ್ಯಕ್ತಿ ತನ್ನ ಹೆಸರನ್ನಿಟ್ಟ ಉದಾಹರಣೆಗಳೂ ಸಿಗುತ್ತವೆ.

ದೇಶವಾಚಿ ಸೀಮಾರೇಖೆ: ಯಾವುದೇ ದೇಶದ ಗ್ರಾಮನಾಮಗಳಲ್ಲಿ ಆಶಯ–ಆಕೃತಿ ಎರಡೂ ದೃಷ್ಟಿಯಿಂದಲೂ ಪ್ರಾದೇಶಿಕ ವೈಶಿಷ್ಟ್ಯ ತೋರಿ ಬರುತ್ತದೆ. ಜನರ ಭಾವನೆ ಮತ್ತು ನದಿ, ಬೆಟ್ಟ, ಅರಣ್ಯಗಳೆಂಬ ನೈಸರ್ಗಿಕ ಪ್ರತಿಬಂಧಗಳು ಇಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕರಾವಳಿ ತೀರದ ಉತ್ತರಕನ್ನಡ ಜಿಲ್ಲೆ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ನಿಸರ್ಗವಾಚಿ ಗ್ರಾಮನಾಮಗಳು ಅಧಿಕ. ಉತ್ತರ ಕರ್ನಾಟಕದಲ್ಲಿ ಜನಾಂಗವಾಚಿ ಗ್ರಾಮನಾಮಗಳು ಅಧಿಕ. ದಕ್ಷಿಣಕರ್ನಾಟಕದಲ್ಲಿ ವ್ಯಕ್ತಿವಾಚಿ ಗ್ರಾಮನಾಮಗಳು ಅಧಿಕ. ಇದು ಕ್ರಮವಾಗಿ ಈ ಪ್ರದೇಶಗಳ ಜನತೆಯ ನಿಸರ್ಗನಿಷ್ಠತೆ, ಜನಾಂಗನಿಷ್ಠತೆ ಮತ್ತು ವ್ಯಕ್ತಿನಿಷ್ಠತೆಗಳನ್ನೂ, ಇವು ಹಳೆಯ, ಹೊಸ, ಇನ್ನೂ ಹೊಸ ನಾಮಗಳೆಂಬುದನ್ನೂ ಸೂಚಿಸುತ್ತದೆ. ಜಾನಪದ, ಅರೆಜಾನಪದ, ಶಿಷ್ಟಪದ ಮನೋಧರ್ಮವನ್ನೂ ಈ ಮೂರು ವಲಯಗಳು ಕ್ರಮವಾಗಿ ಪ್ರತಿನಿಧಿಸುತ್ತವೆ. ಇಲ್ಲಿ ಹೆಸರಿನ ರೂಪಗಳು ಅಪರಿಚಿತ, ಅರೆಪರಿಚಿತ, ಪರಿಚಿತಗಳೆಂಬಂತೆ (ಬಡಕ್ಕಿಲ, ಮುಂಡರಗಿ, ಚಮರಾಜನಗರ) ತೋರುತ್ತವೆ. ದ್ರಾವಿಡ, ಕನ್ನಡ, ಸಂಸ್ಕೃತ ಭಾಷಾರೂಪಗಳನ್ನೂ ಇಲ್ಲಿ ಕ್ರಮವಾಗಿ ಗುರುತಿಸಬಹುದಾಗಿದೆ.

ರೂಪದೃಷ್ಟಿಯಿಂದಲೂ ಗ್ರಾಮನಾಮಗಳಿಗೆ ಪ್ರಾದೇಶಿಕ ಮುದ್ರೆ ಕಂಡುಬರುತ್ತದೆ. ಉದಾ: ದಕ್ಷಿಣ ಕರ್ನಾಟಕದಲ್ಲಿ ಮಂಗಲ, ಸಂದ್ರ, ಪಾಳ್ಯ ಎಂಬ, ಮಲೆನಾಡು ಕರ್ನಾಟಕದಲ್ಲಿ ಮನೆ, ಬೈಲು, ಗದ್ದೆ ಎಂಬ, ಉತ್ತರ ಕರ್ನಾಟಕದಲ್ಲಿ ಕೆ(ಗೆ), ಕಿ(ಗಿ) ಕಲ್ಲು ಎಂಬ ವಾರ್ಗಿಕಗಳುಳ್ಳ ನಾಮಗಳು ಹೆಚ್ಚು. ಇದೇ ರೀತಿ ನಿರ್ದಿಷ್ಟಗಳೂ ಒಂದೊಂದು ಪ್ರವೇಶಕ್ಕೆ ಕೆಲವು ಮಟ್ಟಿಗೆ ವಿಶಿಷ್ಟವಾಗಿರುತ್ತವೆ. ಕರ್ನಾಟಕ ಮಹಾರಾಷ್ಟ್ರದ ಸೀಮೆಯಲ್ಲಿರುವ ಗ್ರಾಮನಾಮಗಳ ವಾರ್ಗಿಕಗಳಲ್ಲಿ ದೀರ್ಘೀಕರಣ ಕಂಡುಬರುತ್ತದೆ. (ಕುರುಬೆಟ್ಟ–ಕುರುಬೇಟ, ಯಾದಗುಡ್ಡ–ಯಾದಗೂಡ ಇತ್ಯಾದಿ).

ಶ್ರೇಣಿವಾಚಿ ಸೀಮಾರೇಖೆ: ಮೇಲೆ ಹೇಳಿದಂತೆ ಒಂದೊಂದು ಪ್ರದೇಶದಲ್ಲಿ ವಿಶಿಷ್ಟ ಗ್ರಾಮನಾಮಗಳು ಕಂಡುಬರುತ್ತಿದ್ದರೂ ಅಲ್ಲಿಯೇ ಮೇಲುವರ್ಗ ಕೆಳವರ್ಗಗಳನ್ನು ಗುರುತಿಸಬಹುದಾಗಿದೆ. ಮೇಲು ವರ್ಗದವರಾದ ರಾಜರು–ವಿದ್ವಾಂಸರು, ಮೇಲು ವರ್ಣದವರಾದ ಬ್ರಾಹ್ಮಣರು ಪ್ರಧಾನವಾಗಿದ್ದಲ್ಲಿ ಸಂಸ್ಕೃತ ಮೂಲದ, ಕೆಳವರ್ಗದ ಪ್ರಜೆಗಳು, ಕೆಳವರ್ಣದ ಶೂದ್ರರು ಪ್ರಧಾನವಾಗಿದ್ದಲ್ಲಿ ದ್ರಾವಿಡ ಮತ್ತು ಕನ್ನಡ ಮೂಲದ ಹೆಸರುಗಳು ಹೆಚ್ಚು ಕಂಡುಬರುತ್ತವೆ. ತುಳುನಾಡಿನಲ್ಲಿ ತುಳುನಾಮಗಳು ಹೆಚ್ಚು, ಕನ್ನಡ ನಾಮಗಳು ಕಡಿಮೆ, ಸಂಸ್ಕೃತನಾಮಗಳು ಇನ್ನೂ ಕಡಿಮೆ. (ನೋಡಿ: ತುಳುನಾಡಿನ ಸ್ಥಳನಾಮಗಳು ಪುಟ ೧೦೨). ಉತ್ತರ ಕರ್ನಾಟಕದಲ್ಲಿ ಕನ್ನಡ ಹೆಚ್ಚು, ಸಂಸ್ಕೃತ ಕಡಿಮೆ. ದಕ್ಷಿಣ ಕರ್ನಾಟಕದಲ್ಲಿ ಕನ್ನಡದ ಪ್ರಮಾಣದೊಂದಿಗೆ ಸಂಸ್ಕೃತದ ಪ್ರಮಾಣವೂ ಹೆಚ್ಚು. ಮೇಲೆ ನೋಡಿದಂತೆ ಉತ್ತರ ಕರ್ನಾಟಕದಕ್ಕಿಂತ ದಕ್ಷಿಣ ಕರ್ನಾಟಕದಲ್ಲಿ ವ್ಯಕ್ತಿವಾಚಿ 'ನಿರ್ದಿಷ್ಟ'ವುಳ್ಳ ಗ್ರಾಮಗಳು ಅಧಿಕ ಸಂಖ್ಯೆಯಲ್ಲಿವೆ. ಅಲ್ಲಿ ಸ್ತ್ರೀವಾಚಿ 'ನಿರ್ದಿಷ್ಟ'ವುಳ್ಳ ಗ್ರಾಮನಾಮಗಳೂ ಅಧಿಕವಾಗಿರುವುದು ಗಮನಿಸತಕ್ಕ ಅಂಶವಾಗಿದೆ. ಹೀಗೆ ಕರ್ನಾಟಕದ ಗ್ರಾಮನಾಮಗಳಲ್ಲಿ ಸೀಮಾರೇಖೆಗಳನ್ನು ಎಳೆಯಬಹುದಾಗಿದೆ.

ನಾಮದ ರಾಚನಿಕ ಸ್ವರೂಪ:

ಗ್ರಾಮನಾಮ ಅನೇಕ ಪದಪ್ರತ್ಯಯಗಳಿಂದ ಕೂಡಿದ ಒಂದು ಕಟ್ಟಡ. ಅದರ ರಚನೆಯಲ್ಲಿ ಒಂದು ಸಕ್ರಮತೆಯಿರುತ್ತದೆ. ಅದನ್ನು ಶಾಸ್ತ್ರಶುದ್ಧವಾಗಿ ಬಿಚ್ಚಿ ನೋಡುವ ಸಾಧ್ಯತೆಯಿದೆ. ಆದುದರಿಂದ ಗ್ರಾಮನಾಮದ ಅರ್ಥ ತಿಳಿವಳಿಕೆಗೆ ರಚನೆಯ ತಿಳಿವಳಿಕೆ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಸಾಮಾನ್ಯವಾಗಿ ಗ್ರಾಮನಾಮಗಳು ಪೂರ್ವ ಮತ್ತು ಉತ್ತರವೆಂಬ ಉಭಯ ಘಟಕಗಳ್ನೊಳಗೊಂಡಿರುತ್ತವೆ, ಉದಾ: ವಿಜಯ+ಪುರ).

ಉತ್ತರ ಘಟಕವು ಗ್ರಾಮವನ್ನು ಸೂಚಿಸುವ ಒಂದು ಸಾಧನವೆಂಬಂತೆ ಹಲವಾರು ಗ್ರಾಮನಾಮಗಳಿಗೆ ಅಂಟಿಕೊಂಡಿರುತ್ತದೆ. ಉದಾ: ವಿಜಯ+ಪುರ, ಖಾನಾ+ಪುರ, ಸೊಲ್ಲಾ+ಪುರ, ದೇವ+ಪುರ ಇತ್ಯಾದಿಗಳಿಗೆ 'ಪುರ'ವೆಂಬ ಉತ್ತರಘಟಕ ವಿಶೇಷತೆಯಿಲ್ಲದೆ ಅಂಟಿಕೊಂಡಿದೆ. ಹೀಗೆ ಗ್ರಾಮನಾಮಗಳನ್ನು ವರ್ಗಗೊಳಿಸುವ ಇದನ್ನು ವಾರ್ಗಿಕ (Generic) ವೆಂದು ಕರೆಯುತ್ತಾರೆ. ಇಲ್ಲಿ ಪೂರ್ವಘಟಕ ಮಾತ್ರ ಆ ಊರನ್ನು ನಿರ್ದಿಷ್ಟವಾಗಿ ಸೂಚಿಸುತ್ತದೆ. ಹೀಗಾಗಿ ಪೂರ್ವ ಘಟಕವನ್ನು ನಿರ್ದಿಷ್ಟ (Specific) ವೆಂದು ಕರೆಯುತ್ತಾರೆ. ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ಗ್ರಾಮನಾಮಗಳಲ್ಲಿ ಆರು ರೂಪ (Pattern)ಗಳು ಕಂಡುಬರುತ್ತವೆ:

೧. ನಿರ್ದಿಷ್ಟವಾಚಿನಾಮ,

೨. ನಿರ್ದಿಷ್ಟ–ವಾರ್ಗಿಕ ವಾಚಿನಾಮ,

೩. ವಿಸ್ತೃತ ನಿರ್ದಿಷ್ಟ ವಾಚಿನಾಮ,

೪. ವಿಸ್ತೃತ ನಿರ್ದಿಷ್ಟ–ಅವಿಸ್ತೃತವಾರ್ಗಿಕ ವಾಚಿನಾಮ,

೫. ಅವಿಸ್ತೃತ ನಿರ್ದಿಷ್ಟ–ವಿಸ್ತೃತ ವಾರ್ಗಿಕವಾಚಿ ನಾಮ,


೬. ವಿಸ್ತೃತ ನಿರ್ದಿಷ್ಟ – ವಿಸ್ತೃತ ವಾರ್ಗಿಕವಾಚಿನಾಮ.

ಇವುಗಳಿಂದ ವ್ಯಕ್ತವಾಗುವ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು:

೧. ನಿರ್ದಿಷ್ಟವಾಚಿನಾಮ: ಸಾಮಾನ್ಯವಾಗಿ ನಿರ್ದಿಷ್ಟ ಒಂದನ್ನೇ ಗ್ರಾಮಕ್ಕೆ ನಾಮವಾಗಿ ಇಡುವುದಿಲ್ಲ. ಅದರೆ ಗುಬ್ಬಿ, ಛತ್ರ, ಬಸ್ತಿ ಎಂಬಂಥ ನಿರ್ದಿಷ್ಟಗಳು ಸ್ವತಂತ್ರನಾಮವಾಗಿ ವ್ಯವಹರಿಸುತ್ತಿರುವುದು ಅಪರೂಪವೆಂದೇ ಹೇಳಬೇಕು. ಬಹುಶಃ ಇವುಗಳ ಮುಂದೆ ಇದ್ದರಬಹುದಾದ –ಪುರ,–ಪಟ್ಟಣದಂಥ ವಾರ್ಗಿಕಗಳು ಲೋಪವಾಗಿರಬಹುದು. ಇಂಥ ನಿರ್ದಿಷ್ಟ ವಾಚಿನಾಮಗಳು ಕರಾವಳಿ ಪ್ರದೇಶದಲ್ಲಿ ವಿಪುಲಸಂಖ್ಯೆಯಲ್ಲಿ ಸಿಗುತ್ತವೆ. (ನೋಡಿ: ತುಳುನಾಡಿನ ಸ್ಥಳನಾಮಗಳು–೧೮)

೨. ನಿರ್ದಿಷ್ಟ–ವಾರ್ಗಿಕ ವಾಚಿನಾಮ: ಸಾಮಾನ್ಯವಾಗಿ ಗ್ರಾಮನಾಮ ನಿರ್ದಿಷ್ಟ, ವಾರ್ಗಿಕವೆಂಬ ಉಭಯಘಟಕಯುಕ್ತವಾಗಿರುತ್ತದೆ. ಇಲ್ಲಿ ನಿರ್ದಿಷ್ಟ ವಿಶೇಷಣದಂತೆ ವಾರ್ಗಿಕ ವಿಶೇಷ್ಯದಂತೆ ವರ್ತಿಸುತ್ತವೆ. ಉದಾ: ಅರಸಿಯ+ಕೆರೆ=ಅರಸಿಕೆರೆ. ಇಲ್ಲಿ ನಿರ್ದಿಷ್ಟವು ಪ್ರಕೃತಿರೂಪ ಇಲ್ಲವೆ ಪದರೂಪದಲ್ಲಿರುತ್ತದೆ. ಕೆಲವೊಮ್ಮೆ ಪದರೂಪದ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿ ಕಾಣಬಹುದು. ಇಲ್ಲವೆ ಅವ್ಯಕ್ತವಾಗಿರಬಹುದು. ವ್ಯಕ್ತಪ್ರತ್ಯಯದಲ್ಲಿ ಏಕವಚನ, ಬಹುವಚನಗಳನ್ನು ಗುರುತಿಸಬಹುದು. ಏಕವಚನದಲ್ಲಿ ಪು,ಸ್ತ್ರೀ, ನಪುಂಸಕ ಲಿಂಗಗಳನ್ನು ಗುರುತಿಸಬಹುದು.

ಪ್ರಕೃತಿರೂಪದ ನಿರ್ದಿಷ್ಟಕ್ಕೆ ಉದಾ: ಹೊಸ+ಕೋಟೆ, ಮೂಡಲ+ಗಿ. ಇಲ್ಲಿ ಹೊಸ, ಮೂಡಲ ಪ್ರಕೃತಿರೂಪದಲ್ಲಿರುವುದನ್ನು ಗಮನಿಸಬಹುದು. ಪದರೂಪದ ನಿರ್ದಿಷ್ಟಕ್ಕೆ ಉದಾ:



೩. ವಿಸ್ತೃತ ನಿರ್ದಿಷ್ಟವಾಚಿನಾಮ: ನಿರ್ದಿಷ್ಟವಾಚಿನಾಮಗಳು ಸಂಖ್ಯೆಯಲ್ಲಿ ಕಡಿಮೆ; ವಿಸ್ತೃತ ನಿರ್ದಿಷ್ಟವಾಚಿನಾಮಗಳು ಇನ್ನೂ ಕಡಿಮೆ. ಉದಾ: ಸಂಕೇಶ್ವರ, ನರೇಂದ್ರ, ಬಹುಶಃ ಇವುಗಳ ಮುಂದೆ ಇದ್ದರಬಹುದಾದ ಪುರ, ಪಟ್ಟಣಗಳಂಥ ವಾರ್ಗಿಕಗಳು ಲೋಪವಾಗಿರಬಹುದು.

೪. ವಿಸ್ತೃತ ನಿರ್ದಿಷ್ಟ-ಅವಿಸ್ತೃತ ವಾರ್ಗಿಕವಾಚಿನಾಮ: ಇಲ್ಲಿಯ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿರಬಹುದು, ಇಲ್ಲವೆ ಅವ್ಯಕ್ತವಾಗಿರಬಹುದು.

ವ್ಯಕ್ತಪ್ರತ್ಯಯ : ಆದಿ+ಚುಂಚ+ನ+ಗಿರಿ

ಅವ್ಯಕ್ತಪ್ರತ್ಯಯ : ಚೆನ್ನ+ರಾಯ+ಪಟ್ಟಣ

೫. ಅವಿಸ್ತೃತ ನಿರ್ದಿಷ್ಟ-ವಿಸ್ತೃತ ವಾರ್ಗಿಕವಾಚಿನಾಮ: ನಿರ್ದಿಷ್ಟದಷ್ಟು ವಾರ್ಗಿಕವು ವಿಸ್ತಾರವಾಗುವುದಿಲ್ಲ. ಒಂದು ಗ್ರಾಮಕ್ಕೆ ಕಾಲಕ್ರಮದಲ್ಲಿ ಸುಪ್ರಸಿದ್ಧ ರಚನೆಯೊಂದು ಜೋಡಣೆಯಾದರೆ ಮಾತ್ರ ಅದು ವಿಸ್ತಾರಗೊಳ್ಳುತ್ತದೆ. ಉದಾ: ಚಿತ್ರ+ಕಲ್ಲು. ಕಾಲಕ್ರಮದಲ್ಲಿ ಈ ಊರಿಗೆ ಕಟ್ಟಿದ ಕೋಟೆಯಿಂದಾಗಿ ಚಿತ್ರ+ಕಲ್ಲು+ದುರ್ಗ ಎಂಬ ರೀತಿಯಲ್ಲಿ ವಾರ್ಗಿಕ ವಿಸ್ತಾರಗೊಂಡಿದೆ. ಇದೇ ರೀತಿ ಬಾಗಡ+ಗೆ ಗ್ರಾಮಕ್ಕೆ ಕೋಟೆ ಕಟ್ಟಿದ ಸಂದರ್ಭದಲ್ಲಿ ಬಾಗಡಗೆಕೋಟೆಯೆನಿಸಿ, ಬಾಗಿಲಕೋಟೆ ರೂಪಕ್ಕೆ ತಿರುಗಿದೆ. ಈಗ ಉಚ್ಚಾರ ಸೌಲಭ್ಯಕ್ಕಾಗಿ ಮೊದಲಿನ ವಾರ್ಗಿಕ ಲೋಪಗೊಳ್ಳುತ್ತದೆ. ಉದಾ: ಚಿತ್ರ+ಕಲ್ಲು+ದುರ್ಗ=ಚಿತ್ರದುರ್ಗ.

೬. ವಿಸ್ತೃತ ನಿರ್ದಿಷ್ಟ-ವಿಸ್ತೃತ ವಾರ್ಗಿಕವಾಚಿನಾಮ: ಗ್ರಾಮನಾಮ ಎರಡೂ ಘಟಕದಲ್ಲಿ ವಿಸ್ತೃತವಾದರೆ ಉಚ್ಚಾರಕ್ಕೆ ತೊಂದರೆಯಾಗುವುದರಿಂದ ಇಂಥ ಗ್ರಾಮನಾಮಗಳು ಅಪರೂಪವೆಂದೇ ಹೇಳಬೇಕು. ಹೀಗಿದ್ದೂ ಕ್ವಚಿತ್ತಾಗಿ ಹಿರೇ+ನಲ್ಲ+ಊರು+ಕಾವಲು (ಕಡೂರು ತಾಲೂಕು), ನಲ್ಲ+ರೆಡ್ಡಿ+ಕೊಂಡಾ+ಪುರ (ಮೊಳಕಾಲ್ಮೂರು ತಾಲೂಕು) ಎಂಬಂಥ ಹೆಸರುಗಳು ಕ್ವಚಿತ್ತಾಗಿ ಸಿಗುತ್ತವೆ.

ಸಾಮಾನ್ಯವಾಗಿ ಗ್ರಾಮನಾಮಗಳಲ್ಲಿ ಒಂದು ನಿರ್ದಿಷ್ಟ, ಒಂದು ವಾರ್ಗಿಕ ಗಳಿರುತ್ತಿದ್ದು, ಅವುಗಳಲ್ಲಿ ವಿಸ್ತಾರವಾಗುವ ಅವಕಾಶ ನಿರ್ದಿಷ್ಟದಲ್ಲಿ ಹೆಚ್ಚು, ವಾರ್ಗಿಕದಲ್ಲಿ ಕಡಿಮೆ. ಆದರೆ ಯಾವುದೇ ದೇಶದಲ್ಲಿ ಕಡಿಮೆ ಘಟಕಗಳುಳ್ಳ ಗ್ರಾಮನಾಮಗಳು ಹೆಚ್ಚು, ಹೆಚ್ಚು ಘಟಕಗಳುಳ್ಳ ಗ್ರಾಮನಾಮಗಳು ಕಡಿಮೆ. ಜನಸಾಮಾನ್ಯರು ಉಚ್ಚಾರಸೌಲಭ್ಯ ಬಯಸುವುದೇ ಇದಕ್ಕೆ ಕಾರಣ.

ವ್ಯಕ್ತಿನಾಮದಲ್ಲಿ ವಾರ್ಗಿಕವನ್ನು ಬಿಟ್ಟು ನಿರ್ದಿಷ್ಟದಿಂದಲೇ ಅವನನ್ನು ಕರೆಯಬಹುದು. ಉದಾ: ಗುರುರಾಜ-ಗುರು. ಗುರ್‍ಯಾ. ಆದರೆ ಗ್ರಾಮನಾಮದಲ್ಲಿ ವಾರ್ಗಿಕವನ್ನು ಬಿಡುವುದಿಲ್ಲ. ಉದಾ: ಗುರುಪುರ. ಇಲ್ಲಿ ಪುರವನ್ನು ಬಿಟ್ಟು ಆ ಊರನ್ನು ಗುರು ಎಂದು ಕರೆಯಲಾಗದು. ಒಂದು ವೇಳೆ ಹೆಚ್ಚು ಘಟಕಗಳಿದ್ದರೆ ಆ ನಾಮವನ್ನು ಸಂಕ್ಷೇಪಿಸಿಕೊಳ್ಳುತ್ತಾರೆ. ಮಾರಸಿಂಗನಪಳ್ಳಿ-ಮಾರ್ಸನಳ್ಳಿ, ವಿಜಯಾದಿತ್ಯಮಂಗಲ-ಬೇತಮಂಗಲ. ಕೈಬಿಡುವ ಸಂದರ್ಭ ಬಂದರೆ ಗ್ರಾಮನಾಮದಲ್ಲಿ ಕೈಬಿಡಬೇಕಾದುದು ನಿರ್ದಿಷ್ಟವೇ. ಉದಾ: ಬಾಗಿಲಕೋಟೆ-ಕ್ವಾಟಿ, ಚಿತ್ರದುರ್ಗ-ದುರ್ಗ. ಇತ್ತೀಚೆ ಇಂಗ್ಲೀಷಿನ ಪ್ರಭಾವದಿಂದಾಗಿ ತಿರುಮಕೂಡಲು ನರಸಿಪುರ-ಟಿ. ನರಸಿಪುರ ಎಂಬಂತೆ ಸಂಕ್ಷಿಪ್ತ ಮಾಡುತ್ತಿದ್ದಾರೆ.

ನಿರ್ದಿಷ್ಟದ ಪ್ರಾರಂಭದಲ್ಲಿ ಚಿಕ್ಕ, ದೊಡ್ಡ (ದೊಡ್ಡಬಳ್ಳಾಪುರ), ಸಣ್ಣ, ಕಿರಿಯ, ಹಿರಿಯ, ಹೊಸ (ಹೊಸರಿತ್ತಿ), ಹಳೆಯ (ಹಳೇ ಹುಬ್ಬಳ್ಳಿ), ಮುದಿ, ಮೂಡ, ಪಡುವ, ತಗ್ಗು (ತೆಗ್ಗಿನಬಾವೂರು), ತೆವರು (ತೆವರು ಮೆಳ್ಳಳ್ಳಿ), ಕುಣಿ (ಕುಣಿ ಮೆಳ್ಳಳ್ಳಿ), ತೆಳಗಿನ, ಮೇಲಿನ ಎಂಬ ವಿಶೇಷಣಗಳನ್ನು ಬಳಸುವಲ್ಲಿ ಆ ನಿರ್ದಿಷ್ಟದ ಸಂಖ್ಯೆ ಒಂದರಿಂದ ವರ್ಧಿಸುತ್ತದೆ. ಇವು ಸಮೀಪದ ಜೋಡಿ ಊರುಗಳಾಗಿರುತ್ತಿದ್ದು ಸಾಪೇಕ್ಷ ಗ್ರಾಮನಾಮ (Relative Place name) ಗಳೆನಿಸುತ್ತವೆ.

ಒಂದೇ ಹೆಸರಿನ ಅನೇಕ ಊರುಗಳಿದ್ದರೆ ನೆರೆಯ ಗ್ರಾಮ, ಗ್ರಾಮದ ಪ್ರತಿಷ್ಠಿತ ವ್ಯಕ್ತಿ, ದೇವತೆ, ಅಲ್ಲಿಯ ಪ್ರಸಿದ್ಧ ವಸ್ತುಗಳಿಂದ ಅವು ಗುರುತಿಸಲ್ಪಡುತ್ತದೆ. ಉದಾ:

ಗದಗ+ಬೆಟಗೇರಿ=ಗದಗ ಬೆಟಗೇರಿ

ಮುಗಟಖಾನ+ಹುಬ್ಬಳ್ಳಿ=ಮುಗಟಖಾನಹುಬ್ಬಳ್ಳಿ.

ದೇವರ+ನಾವದಗಿ=ದೇವರನಾವದಗಿ

ಬೆಲ್ಲದ+ಬಾಗೇವಾಡಿ=ಬೆಲ್ಲದ ಬಾಗೇವಾಡಿ

ಇವೂ ಸಾಪೇಕ್ಷ ಗ್ರಾಮನಾಮಗಳು (Relative Place Name).

ಕೆಲವೊಮ್ಮೆ ಒಂದೇ ಹೆಸರಿನ ಗ್ರಾಮನಾಮಗಳು ಬೇರೆ ಬೇರೆ ಕಡೆಗೆ ಕಂಡು ಬರುತ್ತವೆ. ಇದಕ್ಕೆ ಅಲ್ಲಲ್ಲಿಯ ಸಮಾನ ಭೂಸ್ಥಿತಿ (ಕಲ್ಲೂರು), ದೇವಾಲಯ (ಶಿವಪುರ), ಘಟನೆ (ವಿಜಯಪುರ) ಗಳು ಕಾರಣವಾಗಿರಬಹುದು. ಇಂಥವುಗಳನ್ನು ಪ್ರತಿಕರಣ ಗ್ರಾಮನಾಮಗಳೆಂದು (Duplicative Place Name) ಕರೆಯಬಹುದು. ಅಮೇರಿಕೆಯಲ್ಲಿ ಬರ್ಲಿನ್ ಹೆಸರಿನ ಮೂವತ್ತೇಳು, ರೋಮ್ ಹೆಸರಿನ ಇಪ್ಪತ್ತೊಂದು, ವಿಯೆನ್ನಾ ಹೆಸರಿನ ಹತ್ತೊಂಬತ್ತು ಪ್ರತಿಕರಣನಾಮದ ಗ್ರಾಮಗಳು ಕಂಡುಬರುತ್ತವೆ.

ಮೇಲೆ ಸೂಚಿಸಿದ ಪ್ರಕಾರ ನಿರ್ದಿಷ್ಟವು ಸ್ವತಂತ್ರನಾಮವಾಗಿ ನಿಲ್ಲದಂತೆ, ವಾರ್ಗಿಕವೂ ಸ್ವತಂತ್ರನಾಮವಾಗಿ ನಿಲ್ಲುವುದಿಲ್ಲ. ಆದರೆ ಕೆಲವೊಮ್ಮೆ ಹಳ್ಳಿ, ಪಟ್ಟಣ, ಪುರ, ನಗರ, ದುರ್ಗ, ಕ್ವಾಟಿ, ಬಾಡ, ಹಿತ್ತಲ, ಹೊಳಲ, ಖೇಡ, ಸಾಗರ, ಅಗರ, ಪಾಳ್ಯ, ಗೊಂದಿ ಎಂಬಂಥ ವಾರ್ಗಿಕಗಳು (ಬಹುಶಃ ಲೋಪಗೊಂಡಿರುವ ತಮ್ಮ ನಿರ್ದಿಷ್ಟದ ಸ್ಥಾನದಲ್ಲಿ ನಿಂತು) ಸ್ವತಂತ್ರನಾಮಗಳಂತೆ ವ್ಯವಹರಿಸುತ್ತವೆ. ಇಂಥ ವರ್ಗಿಕಗಳು ಕರಾವಳಿ ಪ್ರದೇಶದಲ್ಲಿ ವಿಪುಲ ಸಂಖ್ಯೆಯಲ್ಲಿ ಸಿಗುತ್ತವೆ. (ನೋಡಿ: ತುಳುನಾಡಿನ ಸ್ಥಳನಾಮಗಳು–೧೫)

ಕೆಲವೊಮ್ಮೆ ವಾರ್ಗಿಕಗಳು ನಿರ್ದಿಷ್ಟಗಳಾಗಬಹುದು (ಹಳ್ಳಿಗುಡಿ). ನಿರ್ದಿಷ್ಟಗಳು ವಾರ್ಗಿಕಗಳಾಗಬಹುದು (ಗಿರಿಯಾಪುರ>ದೇವಗಿರಿ). ಎರಡು ವಾರ್ಗಿಕಗಳು ಸೇರಬಹುದು (ಕಲ್ಲೂರ, ಗದ್ದೆಮನೆ). ಕೆಲವು ಸಲ ಗ್ರಾಮನಾಮಗಳ ನಿರ್ದಿಷ್ಟಗಳು ಒಂದೇ ಬಗೆಯಾಗಿರುತ್ತವೆ. ಉದಾ: ದೇವ+ಪುರ, ದೇವ+ಗಿರಿ, ದೇವ+ನಗರ, ದೇವ+ಗಿ, ದೇವ+ದುರ್ಗ. ವಾರ್ಗಿಕಗಳು ಅನೇಕ ಸಲ ಒಂದೇ ಬಗೆಯಾಗಿರುವುದು ಸಹಜವಾಗಿದೆ. ಶಿವ+ಪುರ, ದೇವ+ಪುರ, ವಿಜಯ+ಪುರ.

ಗ್ರಾಮನಾಮಗಳು ತಮ್ಮ ಸ್ವರೂಪವನ್ನು ಪೂರ್ವಘಟಕದಿಂದ ತಪ್ಪದೇ ತಿಳಿಸುತ್ತವೆ. ಉತ್ತರ ಘಟಕದಿಂದಲೂ ತಿಳಿಸುತ್ತವೆ. ಪೂರ್ವ ಘಟಕ, ಉತ್ತರ ಘಟಕ ಈ ಎರಡರಿಂದಲೂ ಕೆಲವೊಮ್ಮೆ ತಿಳಿಸುತ್ತವೆ. ಉದಾ:

ಪೂರ್ವಘಟಕ: ಇಲ್ಲಿ ಪೂರ್ವಘಟಕ ನಿರ್ದಿಷ್ಟ, ಉತ್ತರಘಟಕ ವಾರ್ಗಿಕ ರೂಪದ್ದಿರುತ್ತವೆ. ಉದಾ: ರಟ್ಟಿಹಳ್ಳಿ, ಇಲ್ಲಿಯ ಉತ್ತರ ಘಟಕ 'ಹಳ್ಳಿ' ಎಂಬುದಕ್ಕೆ ವಿಶೇಷ ಅರ್ಥವಿಲ್ಲ. ಆದುದರಿಂದ ಗ್ರಾಮದ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಪೂರ್ವಘಟಕ ಮಹತ್ವದ ಅಂಶವಾಗಿ ವ್ಯವಹರಿಸುತ್ತದೆ.

ಉತ್ತರಘಟಕ: ಉತ್ತರಘಟಕಗಳಾದ ಪುರ, ನಗರ, ಪಟ್ಟಣ ಮೊದಲಾದವು ಮೂಲತಃ ಆ ಗ್ರಾಮದ ಖಚಿತ ಸ್ವರೂಪವನ್ನು ತಿಳಿಸುತ್ತಿರಬೇಕು. ಆಮೇಲೆ ಇವು ಗ್ರಾಮನಾಮವನ್ನು ಪೂರ್ಣಗೊಳಿಸುವ ಸಾಧನಗಳೆಂಬಂತೆ ಬಳಕೆಗೊಳ್ಳ ತೊಡಗಿದವು. ಅದುದರಿಂದ ಉತ್ತರಘಟಕ ಯಾವಾಗಲೂ ಗ್ರಾಮದ ಸ್ವರೂಪವನ್ನು ತಿಳಿಸುವುದೆಂದು ಹೇಳಲು ಬರುವುದಿಲ್ಲ. ಆದರೆ ಕೋಟೆ, ಕೆರೆ ಎಂಬಂಥ ಉತ್ತರ ಘಟಕಗಳು ಮಾತ್ರ ತಿಳಿಸುತ್ತವೆ.

ಪೂರ್ವಘಟಕ–ಉತ್ತರ ಘಟಕ: ಬುಕ್ಕಸಾಗರ, ಇಲ್ಲಿ ಕೆರೆ ಇದೆ ಎಂದು ಉತ್ತರ ಘಟಕ ತಿಳಿಸಿದರೆ, ಇದನ್ನು ಕಟ್ಟಿಸಿದವನು ಬುಕ್ಕರಾಯನೆಂದು ಪೂರ್ವಘಟಕ ಸೂಚಿಸುತ್ತದೆ. ಈ ಸಾಲಿನಲ್ಲಿ ವಿಜಯಾದಿತ್ಯಮಂಗಲ, ಮಲ್ಲಸಂದ್ರ, ಹೊಸಪೇಟೆ ಇತ್ಯಾದಿಗಳು ಸೇರುತ್ತವೆ.

ನಾಮದ ಅರ್ಥಸ್ವರೂಪ:

ಈ ಹಿಂದೆ ಗ್ರಾಮನಾಮದ ರಾಚನಿಕ ಸ್ವರೂಪವನ್ನು ಅಂದರೆ ಅದರ ಅಂಗಗಳಾದ ನಿರ್ದಿಷ್ಟ ಮತ್ತು ವಾರ್ಗಿಕಗಳ ರಾಚನಿಕ ಸ್ವರೂಪವನ್ನು ವಿವರಿಸಲಾಗಿದ್ದು, ಈಗ ಗ್ರಾಮನಾಮದ ಅರ್ಥಸ್ವರೂಪವನ್ನು ಅಂದರೆ ಅದರ ಅಂಗಗಳಾದ ನಿರ್ದಿಷ್ಟ ಮತ್ತು ವಾರ್ಗಿಕಗಳ ಅರ್ಥಸ್ವರೂಪವನ್ನು ಗಮನಿಸಬಹುದು.

ನಿರ್ದಿಷ್ಟದ ಅರ್ಥಸ್ವರೂಪ: ೧. ನಿರ್ದಿಷ್ಟಗಳು ಸಾಮಾನ್ಯವಾಗಿ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ನಿರ್ಮಾಣವಾಚಿ, ಆದರ್ಶವಾಚಿಯಾಗಿರುತ್ತವೆ.

ಉದಾ:

ನಿಸರ್ಗವಾಚಿ	:	ಮಣ್ಣು+ಊರು=ಮಣ್ಣೂರು
ಜನಾಂಗವಾಚಿ	:	ಮುಂಡರ+ಕೆಯ್=ಮುಂಡರಗಿ
ವ್ಯಕ್ತಿವಾಚಿ	:	ಕಾಳನ+ಹಳ್ಳಿ=ಕಾಳನಹಳ್ಳಿ
ನಿರ್ಮಾಣವಾಚಿ	:	ಕೆರೆ+ಊರು+ಕೆರೆಯೂರು
ಆದರ್ಶವಾಚಿ	:	ಕಲ್ಯಾಣ+ನಗರ=ಕಲ್ಯಾಣನಗರ

೨. ನಿರ್ದಿಷ್ಟದ ಅಂತ್ಯದಲ್ಲಿ ನ, ಣ, ಗ ಗಳಿದ್ದರೆ ಅದು ಒಬ್ಬ ಪುರುಷ ವ್ಯಕ್ತಿಯ ಹೆಸರು ಹೊತ್ತ ಗ್ರಾಮವಾಗಿರುತ್ತದೆ. ನಿರ್ದಿಷ್ಟದ ಅಂತ್ಯದಲ್ಲಿ ಏಕಾರವಿದ್ದರೆ ಅದು ಅಯ್ಯ ಎಂಬುದರ ಸವೆದ ರೂಪವಿರುತ್ತದೆ.

ಅ. ಮಾಚನ+ಊರು=ಮಾಚನೂರು

ಹಲಸನ+ಕೆಯ್ = ಹಲಸಂಗಿ

(ಕೆಲವೊಮ್ಮೆ ನಿರ್ದಿಷ್ಟದ ಕೊನೆಯ ನಕಾರವು ಸ್ತ್ರೀಯನ್ನು ಸೂಚಿಸುತ್ತದೆ.
ಉದಾ : ಮಾಚಿಯಕ್ಕನ + ಊರು = ಮಾಚಿಯಕ್ಕನೂರು)

ಆ. ದೇವಣ್ಣ+ಗಾವೆ=ದೇವಣಗಾವೆ.

ಅಮ್ಮಣ+ಗಿ=ಅಮ್ಮಣಗಿ.

ಇ. ಮಲ್ಲಿಗ+ವಾಡ=ಮಲ್ಲಿಗವಾಡ

ಗಳ್ದುಗ+ಕೆಯ್=ಗಳ್ದುಗು>ಗದಗು

ಈ. ಬಾಗಯ್ಯ>ಬಾಗಯ>ಬಾಗೇ+ವಾಡಿ=ಬಾಗೇವಾಡಿ.

ಕಾಟಯ್ಯನ>ಕಾಟೆಯನ>ಕಾಟೇನ+ಹಳ್ಳಿ=ಕಾಟೇನಹಳ್ಳಿ

೩. ನಿರ್ದಿಷ್ಟದ ಅಂತ್ಯಕ್ಕೆ ಲಾ, ಳ, ಬ್ಬೆ, ಕ್ಕ ಇದ್ದರೆ ಅದು ಒಬ್ಬ ಸ್ತ್ರೀಯ ಹೆಸರನ್ನು ಹೊತ್ತ ಗ್ರಾಮವಾಗಿರುತ್ತದೆ.

ಅ. ದೇವಲಾ+ಪುರ=ದೇವಲಾಪುರ

ಸೊನ್ನಲಾ+ಕೆಯ್=ಸೊನ್ನಲಿಗೆ

ಆ. ಸಾವಳಾ+ಕೆಯ್ = ಸಾವಳಗಿ

ಇ. ಮುದ್ದಬ್ಬೆ+ಪಾಳ್ಯ–ಮುದ್ದೇಬಿಹಾಳ

ಈ. ಬಮ್ಮಕ್ಕ+ಊರು=ಬಮ್ಮಕೂರು (>ಬಂಕೂರು)

೪. ನಿರ್ದಿಷ್ಟದ ಅಂತ್ಯದಲ್ಲಿ ದ, ಯ ಇದ್ದರೆ ಆ ಗ್ರಾಮನಾಮ ಯಾವುದೋ ನಪುಂಸಕವಾಚಿ ವಸ್ತುವಿನಿಂದ ಬಂದಿರುತ್ತದೆ.

ಅ. ಗುಡ್ಡದ+ಊರು=ಗುಡ್ಡದೂರು.

ಆ. ತೊರೆಯ+ಕೆಯ್=ತೊರ್ಕೆ

೫. ನಿರ್ದಿಷ್ಟದ ಅಂತ್ಯದಲ್ಲಿ ರ ಇದ್ದರೆ ಅದು ಜನಾಂಗವಾಚಿ ಗ್ರಾಮನಾಮವಾಗಿರುತ್ತದೆ.

ಮುಂಡರ+ಕೆಯ್=ಮುಂಡರಗಿ

ಕಾದರ+ಪಳ್ಳಿ=ಕಾದ್ರೊಳ್ಳಿ

ಈ ಪ್ರಸಂಗದಲ್ಲಿ ಕೆಲವು ಸಂದೇಹಗಳು ಎದುರಾಗುತ್ತವೆ. ಉದಾ:

I. ಸ್ತ್ರೀವಾಚಿಯಾದ ಲಾ>ಲ>ಳ>ಣ (ಅಬ್ಬಲಾ+ಅಬ್ಬೆ=ಅಬ್ಬಲಬ್ಬೆ>ಅಬ್ಬಳಬ್ಬೆ>ಅಬ್ಬಣಬ್ಬೆ)– ಹೀಗೆ ಣ ರೂಪ ಪಡೆದಿದ್ದರೆ ಇದು 'ಲಾ'ದ ಸವೆದ ರೂಪವೋ 'ಅಣ್ಣ'ದ ಸವೆದ ರೂಪವೋ ಎಂಬ ಸಂದೇಹ ಹುಟ್ಟುತ್ತದೆ.

II. ನಿರ್ದಿಷ್ಟದ ಕೊನೆಯ ನ ಎಂಬುದು ಷಷ್ಠೀರೂಪವೋ ಅಣ್ಣ>ಅಣ>ಣ>ನ ಎಂಬಂತೆ ಅಣ್ಣಯೆಂಬುದರ ಸವೆದ ರೂಪವೋ ಎಂಬ ಸಂದೇಹ ಹುಟ್ಟಿಸುತ್ತದೆ. ಉದಾ: ಕಂಕನವಾಡಿ – ಕಂಕಣವಾಡಿ.

III. ಕ>ಗ ವ್ಯತ್ಯಾಸ ಕಾರಣವಾಗಿ ಇದು ಪುರುಷವಾಚಿಯೋ ಸ್ತ್ರೀವಾಚಿಯೋ ಎಂಬ ಸಂದೇಹ ಹುಟ್ಟುತ್ತದೆ. ತುಮಕೂರು–ತುಮ್ಮಕ್ಕನೂರು, ತುಮ್ಮಗನೂರು (ಇವುಗಳಲ್ಲಿ ಕೊನೆಯದು ನಿಜವಾದ ರೂಪ).

ವಾರ್ಗಿಕದ ಅರ್ಥಸ್ವರೂಪ: ಈ ಹಿಂದೆ ಗ್ರಾಮನಾಮದ ಅಂಗಗಳಾದ ನಿರ್ದಿಷ್ಟ ಮತ್ತು ವಾರ್ಗಿಕಗಳ ರಾಚನಿಕ ಸ್ವರೂಪವನ್ನು, ನಿರ್ದಿಷ್ಟದ ಅರ್ಥಸ್ವರೂಪವನ್ನು ವಿವರಿಸಲಾಗಿದ್ದು, ಈಗ ವಾರ್ಗಿಕದ ಅರ್ಥಸ್ವರೂಪವನ್ನು ಗಮನಿಸಬಹುದು. ವಾರ್ಗಿಕದ ಆಧಾರದಿಂದ ಒಂದು ನಾಡಿನ ಗ್ರಾಮಗಳನ್ನು ಕೆಲವೇ ಗುಂಪುಗಳಾಗಿ ವರ್ಗೀಕರಿಸಬಹುದು. ಅಂದರೆ –'ಊರು' ಅಂತ್ಯದಲ್ಲಿ ಉಳ್ಳುವು, '–ಕಲ್ಲು' ಅಂತ್ಯದಲ್ಲಿ ಉಳ್ಳುವು ಎಂದು ಮುಂತಾಗಿ ಗ್ರಾಮಗಳನ್ನು ಗುಂಪುಗೊಳಿಸಬಹುದು. ಇದಕ್ಕಿಂತ ಸ್ಥೂಲವಾಗಿ ವಾರ್ಗಿಕಗಳನ್ನು ನಿಸರ್ಗವಾಚಿ, ವಸತಿವಾಚಿ ಮತ್ತು ನಿರ್ಮಾಣವಾಚಿ ಎಂದು ಮೂರು ಗುಂಪುಗೊಳಿಸಬಹುದು.

ನಿಸರ್ಗವಾಚಿ:

– ಕಲ್ಲು (ಕೊಡೆಕಲ್ಲು)>ಕಲ್ಲ>ಗಲ್ಲ>(ಎರಗಲ್ಲ)

– ಗುಡ್ಡ (ಚೊಳಚಗುಡ್ಡ)

– ಕುಂದ (ಒಕ್ಕುಂದ)>ಗುಂದ(ನರಗುಂದ), ಕುಂದಿ(ಬಲಕುಂದಿ)

– ಕೋಡ>ಗೋಡ (ಮುರಗೋಡ)

– ದಿನ್ನಿ (ಜಂಬಲದಿನ್ನಿ)

– ಗುತ್ತಿ (ಹಿಕ್ಕಣಗುತ್ತಿ)

– ಮರಡಿ (ಯಮಕನಮರಡಿ)>ಮಡ್ಡಿ

– ಕಣಿ (ಮಂಕಣಿ)>ಗಣಿ (ಉಡುಗಣಿ)

– ಕಾಡು (ತಲಕಾಡು)

– ಕುದುರು (ಪೀಕುದುರು)>ಕುದ್ರು (ಅಂಕುದ್ರು)

– ಕುಟ್ಟ>ಗುಟ್ಟ

- ಕುಪ್ಪಿ (ಹರಳಿಕುಪ್ಪಿ)>ಗುಪ್ಪಿ (ಶಿರಗುಪ್ಪಿ)
- ಕೊಪ್ಪ (ಗೋಪನಕೊಪ್ಪ)
- ಕೋಣೆ (ಪಡುಕೋಣೆ)> ಕೋಣಿ (ಅಕ್ಕೋಣಿ)
- ಘಟ್ಟ (ಸಿಡ್ಲಘಟ್ಟ)
- ಗಿರಿ (ದೇವಗಿರಿ)
- ಗೊಂದೆ (ಆನೆಗೊಂದೆ)
- ಬಂಡೆ (ಗುಡಿಬಂಡೆ)>ಬಂಡಿ
- ಬೆಟ್ಟ (ಕುರುಬೆಟ್ಟ)
- ಬಯಲು (ಹೆಬ್ಬಯಲು)
- ಮಟ್ಟಿ (ಕೆರಕಲಮಟ್ಟಿ)
- ಹಳ್ಳ (ನಿಂಬಹಳ್ಳ>ನಿಂಬಾಳ)
- ಹೊಳೆ (ಮಾಸ್ತಿ ಹೊಳೆ)>ಹೊಳಿ (ಹಂಪಿಹೊಳಿ)
- ಕುಂಡ>ಗುಂಡ(ಬಂಗಾರಗುಂಡ)>ಗುಂಡಿ(ಚಿನಗುಂಡಿ), ಕುಂಡಿ (ಲಕ್ಕುಂಡಿ)
- ತೊರೆ (ಮುಡುಕುತೊರೆ)
- ನೀರು (ಎಡನೀರು)
- ಹುಂಡಿ (ದೊಡ್ಡ ಹುಂಡಿ)

ಇಲ್ಲಿಯ ನಿರ್ದಿಷ್ಟವು ಯಾವುದೇ ಇದ್ದರೂ ಮೇಲೆ ಸೂಚಿಸಿದ ವಾರ್ಗಿಕವುಳ್ಳುವು ನಿಸರ್ಗದ ಮಡಿಲಲ್ಲಿರುವ ಗ್ರಾಮಗಳಾಗಿರುತ್ತವೆ. (ಅಥವಾ ಪ್ರಾಕೃತಿಕ ಮನೋಧರ್ಮದವರಿಟ್ಟ ಹೆಸರುಗಳು, ಇಲ್ಲವೆ ಇವುಗಳನ್ನು ಬಳಸಿ ಒಂದು ಪದ್ಧತಿ ಬೆಳೆದ ಬಳಿಕ ಅನುಕರಣದಿಂದ ಇಟ್ಟ ಹೆಸರುಗಳಗಿರುತ್ತವೆ.) ಸಾಮಾನ್ಯವಾಗಿ ಈ ಹೆಸರುಗಳು ಅಲ್ಲಿಯ ನಿಸರ್ಗವನ್ನು ಪ್ರತಿನಿಧಿಸುತ್ತವೆ. ಇವುಗಳನ್ನು ಗಮನಿಸಿ ಆ ಗ್ರಾಮಗಳ ಭೌಗೋಲಿಕತೆಯನ್ನು ಹೇಳಬಹುದಾಗಿದೆ.

ವಸತಿವಾಚಿ:

- ಊರು (ಸೊರಟೂರು)
- ಪಳ್ಳಿ (ಚಿಂಚನಪಳ್ಳಿ) > ಹಳ್ಳಿ (ಸಿಂಗನಹಳ್ಳಿ)
- ಆಹಾರ > ಹಾರ (ಗಣಿಹಾರ)
- ಅಂಬಲ (ಪೊನ್ನಾಂಬಲ)

– ಕೆಯ್> ಕೆ–ಕಿ–ಸೆ–ಸಿ–ಜೆ–ಜಿ (ಕುಕ್ಕೆ, ಕಾತರಿಕಿ, ಬನವಸೆ, ಸಿರಸಿ, ಪುಳುಜೆ, ಚಿಕ್ಕಜಾಜಿ) ಗೆ–ಗಿ (ಮೊಗೆ, ಸಿಂದಗಿ)

– ಇಕ್ಕೆ> ಕ್ಕೆ – ಕೆ–ಕಿ (ಬಂದಣಿಕೆ, ಬತಗುಣಿಕಿ)

ಗೆ–ಗಿ (ರೂವಿಗೆ, ರೂಗಿ)

– ಗ್ರಾಮ>ಗಾವ (ಬೆಳಗಾವ)>ಗಾ(ಸದಲಗಾ)>ಗಿ (ಜಂಬಗಿ)

– ನಗರ (ಹೊಸನಗರ)

– ಪಟ್ಟಣ (ಹೊಸಪಟ್ಟಣ)

– ಪಟ್ಟಿ>ಹಟ್ಟಿ (ಬ್ಯಾಹಟ್ಟ)

– ಪುರ (ಸಿದ್ದಾಪುರ)>ಊರ (ದೇವೂರ)

– ಪಾಳ್ಯ >ಪಾಳ>ವಾಳ>ಹಾಳ(ಹಂಚಿನಾಳ)

– ಹಾಳು>ಪಾಳ(ಭಾವಿಹಾಳ)

– ಬೀಡು (ಅರಸಿಬೀಡು)>ಬೀಡ (ಬಾಳಂಬೀಡ)

– ಮಂಗಲ (ನೆಲಮಂಗಲ)>ಗಾಲ (ಕೊಳ್ಳೆಗಾಲ)>ಗಲ

– ಮನೆ>ಮನಿ (ಸೀತಿಮನಿ)

– ಬಾಡ>ವಾಡ (ಧಾರವಾಡ) >ವಾಳ (ಸಿರಿವಾಳ)

– ಹಿತ್ತಲು

– ಪೊಳಲು>ಹೊಳಲು>ಳ (ಹೊಂಬಳ)

– ಠಾಣ (ನಾಗಠಾಣ)

– ದಡ್ಡಿ (ತಮದಡ್ಡಿ)

ಇವುಗಳ ನಿರ್ದಿಷ್ಟವು ನಿಸರ್ಗಸೂಚಿಯಾಗಿದ್ದರೆ ಮಾತ್ರ ಅಂಥ ಗ್ರಾಮ ನಿಸರ್ಗದ ಮಡಿಲಲ್ಲಿ ಇರುತ್ತದೆ. ಹಾಗಿಲ್ಲದಿದ್ದರೆ ಇವು ವಸತಿಗಾಗಿ ಕಟ್ಟಿದ ಗ್ರಾಮಗಳೆಂದು ಹೇಳಬಹುದು. ಈ ವಾರ್ಗಿಕಗಳು ಆಯಾ ಗ್ರಾಮಗಳ ಗಾತ್ರವನ್ನು ಸೂಚಿಸವುದು ಗಮನಾರ್ಹ. ಉದಾ: ಹಳ್ಳಿ (ಸಣ್ಣದು), –ನಗರ (ದೊಡ್ಡದು).

ನಿರ್ಮಾಣವಾಚಿ:

– ಕೆರೆ>ಕೆರಿ>ಕೇರಿ (ಕುರಡಿಕೇರಿ) > ಗೇರಿ (ಅಬ್ಬಿಗೇರಿ)

– ಅಂಬುಧಿ (ಬುಕ್ಕಾಂಬುಧಿ)

– ಸಮುದ್ರ (ದೋರಸಮುದ್ರ) > ಸಂದ್ರ (ಮಲ್ಲಸಂದ್ರ)

– ಏರಿ (ಹಾವೇರಿ)

– ಕಟ್ಟೆ (ಗೂಗಿಕಟ್ಟೆ)

– ಕೊಳ > ಕೋಳ (ಕಡಕೋಳ) > ಗೋಳ (ಅಮರಗೋಳ)

– ಕುಂಡಿ (ಲಕ್ಕುಂಡಿ) > ಗುಂಡಿ (ಮನಗುಂಡಿ)

– ಬೆಂಚೆ (ಏಳುಬೆಂಚೆ)

– ಸಾಗರ (ಹಂಪಸಾಗರ)

– ಹೊಂಡ (ಅಕ್ಕಿಹೊಂಡ)

– ಕುಳಿ (ಕೆಂಪನಕುಳಿ)

– ಬಾವಿ (ಅಮ್ಮಿನಬಾವಿ) >ವಾವಿ>(ನಾಗಾವಿ)>ಯಿ (ನಾಗಾಯಿ)

– ಕೋಡಿ (ಪಟ್ಟಣಕೋಡಿ)*

– ಕೋಟೆ (ತಾಳಿಕೋಟೆ)

– ದುರ್ಗ (ಹೊಸದುರ್ಗ)

– ಗಡ (ಗಜೇಂದ್ರಗಡ)

– ಗುಡಿ (ಮುದೇನಗುಡಿ)

– ಮಠ (ಉಲ್ಲೂರಮಠ)

ಇವು ಮನುಷ್ಯ ನಿರ್ಮಿತ ಕಟ್ಟಡಗಳನ್ನು ಸೂಚಿಸುತ್ತಿದ್ದು, ಇವುಗಳಿಂದಾಗಿ ಊರಿಗೆ ವೈಶಿಷ್ಟ್ಯ ಪಾಪ್ತವಾಗಿರುತ್ತದೆ. ಉದಾ: ಚಿತ್ರದುರ್ಗ. ಇಲ್ಲಿ ದುರ್ಗವಿಲ್ಲದಿದ್ದರೆ ಈ ಹೆಸರಿಗೆ ಅರ್ಥವೇ ಇಲ್ಲ. ಮೇಲಿನ ೧೮ ನಿರ್ಮಾಣವಾಚಿ ವಾರ್ಗಿಕಗಳ ಯಾದಿಯಲ್ಲಿ ಮೊದಲಿನ ೧೨ ವಾರ್ಗಿಕಗಳು ಜಲಸಂಬಂಧಿಯಾಗಿವೆ. ಇದು ಗ್ರಾಮ ಜೀವನಕ್ಕೆ ಇರುವ ನೀರಿನ ಮಹತ್ವವನ್ನು ಸೂಚಿಸುವ ಅಂಶವಾಗಿದೆ.

ಈ ಮೂರು ಬಗೆಗಳಲ್ಲಿ ಒಂದು ವರ್ಗದ ವಾರ್ಗಿಕ ಇನ್ನೊಂದು ವರ್ಗದಲ್ಲಿ ಸೇರಿಕೊಂಡಿರುವ ಸಾಧ್ಯತೆಯಿದೆ. ಉದಾ: ಮೇಲೆ ಸೂಚಿಸಿದ 'ಹೊಂಡ' ಮನುಷ್ಯ ನಿರ್ಮಿತವಾಗಿರದೆ, ನೈಸರ್ಗಿಕವಾಗಿದ್ದರೆ ಇದನ್ನು ನಿಸರ್ಗವಾಚಿಗೆ ವರ್ಗಾಯಿಸ ಬೇಕಾಗುತ್ತದೆ. ನಿಸರ್ಗವಾಚಿ, ನಿರ್ಮಾಣವಾಚಿ ನಾಮಗಳು ಬಹಳಷ್ಟು ಸಲ ತಮ್ಮ ತಮ್ಮ ಪರಿಸರವನ್ನು ಸೂಚಿಸುತ್ತದೆ. ವಸತಿವಾಚಿನಾಮಗಳಿಗೆ ಈ ಮಾತು ಅಷ್ಟಾಗಿ ಅನ್ವಯವಾಗುವುದಿಲ್ಲ.

* ಇದರ ಪ್ರಾಚೀನ ರೂಪ ಪಟ್ಟಣ ಕುಹುಂಡಿ. ಅಂದರೆ ಇಂದಿನ ಪಟ್ಟಣಕೋಡಿ ಗ್ರಾಮ ಕುಹುಂಡಿ–೩೦೦೦ ಪ್ರಾಂತದ ರಾಜಧಾನಿಯಾಗಿದ್ದಿತು.

ಯಾವುದೇ ದೇಶದ ಗ್ರಾಮನಾಮ ವಾರ್ಗಿಕಗಳನ್ನು ಪಟ್ಟಿ ಮಾಡಿ, ಅವುಗಳ ಒಟ್ಟು ಸಂಖ್ಯೆಯನ್ನು ಸ್ಥೂಲವಾಗಿಯಾದರೂ ಹೇಳಬಹುದು. ಕರ್ನಾಟಕದ ಗ್ರಾಮನಾಮಗಳಿಗೆ ಸಂಬಂಧಪಟ್ಟಂತೆ ಡಾ. ಚಿದಾನಂದಮೂರ್ತಿಗಳು-೧೦೦ ವಾರ್ಗಿಕಗಳನ್ನು,[೧] ತುಳುನಾಡಿಗೆ ಸಂಬಂಧಪಟ್ಟಂತೆ ಡಾ. ಕೆಮ್ತೂರು, ರಘುಪತಿಭಟ್ಟ ಅವರು ೧೫೦ ವಾರ್ಗಿಕಗಳನ್ನು ಪಟ್ಟಿಮಾಡಿದ್ದಾರೆ.[೨] ಎರಡೂ ಪಟ್ಟಿಗಳಲ್ಲಿ ಕಾಣಿಸಿಕೊಂಡ ಕೆಲವನ್ನು ತೆಗೆದುಹಾಕಿ, ಇನ್ನಷ್ಟನ್ನು ಶೋಧಿಸಿ ಕೂಡಿಸಿದರೂ ಕರ್ನಾಟಕದ ವಾರ್ಗಿಕಗಳ ಸಂಖ್ಯೆ ೩೦೦ನ್ನು ಮಿಕ್ಕಲಾರದು. ಇವುಗಳಲ್ಲಿ ಮೂಲ ಮತ್ತು ನಿಷ್ಪನ್ನ ಎಂದು ಎರಡು ವರ್ಗವಾಡಬಹುದು. (ಕೆರೆ>ಕೇರಿ, ಗೇರಿ). ನಿರ್ದಿಷ್ಟಗಳಲ್ಲಿಯೂ ವಾರ್ಗಿಕಗಳಲ್ಲಿಯಂತೆ ಎಷ್ಟೋ ಸಲ ಪುನರುಕ್ತಿ (ದೇವ+ದುರ್ಗ, ದೇವ+ಗಿರಿ) ಕಂಡುಬಂದರೂ ಅವುಗಳ ಒಟ್ಟು ಸಂಖ್ಯೆ ದೊಡ್ಡದಿರುತ್ತಿದ್ದು, ಹಿಡಿತಕ್ಕೆ ಸಿಗುವುದು ಕಷ್ಟ.

ದ್ರಾವಿಡ ವಾರ್ಗಿಕವುಳ್ಳ ಗ್ರಾಮಗಳು ಪ್ರಾಚೀನ ಇಲ್ಲವೆ ಗ್ರಾಮೀಣ, ಸಂಸ್ಕೃತ ವಾರ್ಗಿಕವುಳ್ಳ ಗ್ರಾಮಗಳು ಅರ್ವಾಚೀನ ಇಲ್ಲವೆ ನಾಗರಿಕ. ಅವುಗಳ ಸಂಖ್ಯೆ ಹೆಚ್ಚು, ಇವುಗಳ ಸಂಖ್ಯೆ ಕಡಿಮೆ.

ವಾರ್ಗಿಕಗಳ ಸ್ವರೂಪ ಬಹಳಷ್ಟು ಗ್ರಾಮನಾಮಗಳಲ್ಲಿ ಸ್ಪಷ್ಟವಗಿ ಕಾಣುತ್ತಿದ್ದರೂ (ಪಟ್ಟದ+ಕಲ್ಲು, ವಿಜಯ+ನಗರ) ಬೇರೆ ಬೇರೆ ಮೂಲದ ವಾರ್ಗಿಕಗಳು ಕೆಲವೆಡೆ ಸಂಧಿಕ್ರಿಯೆಯಲ್ಲಿ ಸವೆದುಹೋಗಿ, ಒಂದೇ ರೂಪಕ್ಕೆ ಹೊರಳಿರುತ್ತವೆ. ಇಂಥ ಪ್ರಸಂಗದಲ್ಲಿ ಅವುಗಳ ಮೂಲರೂಪ ಹೇಳುವಲ್ಲಿ ನಾಮವಿಜ್ಞಾನಿ ತುಂಬ ಎಚ್ಚರ ವಹಿಸಬೇಕಾಗುತ್ತದೆ. ಹೀಗೆ ಸಂದೇಹ ಹುಟ್ಟಿಸುವ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

(೧) ಕೆಯ್>ಗೆಯ್>ಗೆ>ಗಿ

ಕೆ>ಕಿ>ಗಿ

ಗ್ರಾಮ>ಗಾವ>ಗಾ>ಗೆ>ಗಿ

ಇಕ್ಕೆ>ಕ್ಕೆ>ಕೆ>ಕಿ>ಗಿ

ಹಕ್ಕೆ>ಕೆ>ಕಿ>ಕಿ>ಗಿ

(೨) ಪಾಳ್ಯ>ಪಾಳೆ>ಬಾಳ>ವಾಳ>ಳ

ಹಾಳ>ವಾಳ>ಳ

ಪೊಳಲ್>ಬೊಳ>ಬಳ>ವೊಳ>ಓಳ>ವಾಳ>ಳ

ಬಾಡ>ಬಾಳ>ವಾಳ>ಳ

ಹಳ್ಳಿ>ಹಳ>ಳ

---

೧. ವಾಗರ್ಥ-ಪು. ೧೫-೨೦

೨. ತುಳುನಾಡಿನ ಸ್ಥಳನಾಮಗಳು-ಕೆಮ್ತೂರ ರಘುಪತಿ ಭಟ್ಟ

ಸ್ಥಾನ>ತಾಣ>ತಾಳ>ಳ

ಹೊಳೆ>ಳೆ>ಳ

(೩) ಕೆರೆ>ಕೆರಿ

ಕೇರಿ>ಕೆರಿ

(೪) ಕುಂದ>ಗುಂದ

ಕುಂಡ>ಗುಂಡ>ಗುಂದ

(೫) ಊರು > ಊರ > ರ

ಪುರ>ವೂರ>ರ

ಆಹಾರ>ಹಾರ>ಆರ>ರ

ವಾಡ>ವಾರ>ರ (ಕಡವಾಡ>ಕಾರವಾರ)

(೬) ಕೋಟೆ>ಕೋಟಿ>ಕೋಟ>ಟ

ವಾಟೆ>ವಾಟ>ಟ

ಕೊಂಟೆ>ಕೋಟೆ>ಟ

(೭) ಗಡ>ಡ

ವಾಡ>ಡ

ಬೀಡು>ಬೀಡ>ಡ

ಕಾಡು>ಕಾಡ>ಡ

ಕೋಡು>ಡ

ಇಂಥ ಸಂದರ್ಭದಲ್ಲಿ ನಿರ್ದಿಷ್ಟದಿಂದ ವಾರ್ಗಿಕವನ್ನು ಕತ್ತರಿಸಿಕೊಳ್ಳುವ ಬಗ್ಗೆ ನಾಮವಿಜ್ಞಾನಿ ತುಂಬ ಎಚ್ಚರವಹಿಸಬೇಕಾಗುತ್ತದೆ. ಉದಾ: ಮುರಗೋಡ ಎಂಬುದರ ಉತ್ತರಘಟಕ ಕೋಡು ಎಂದು ಇಲ್ಲವೆ (ಮುರಗ+) ವಾಡ ಎಂದು ವಾದಿಸಬಹುದು.

ಗ್ರಾಮನಾಮದ ವಾರ್ಗಿಕವು ಮೇಲಿನಂತೆ ಸವಕಳಿ ಹೊಂದಿರುವುದಲ್ಲದೆ ಕೆಲವು ಸಲ ಉದುರಿಹೋಗಿರುತ್ತದೆ. ಇಂಥಲ್ಲಿ ಮೂಲರೂಪ ಹುಡುಕಿ ನಿಷ್ಪತ್ತಿ ಹೇಳಬೇಕು. ಉದಾ: ನಿಷ್ಪಣಗೆ>ನಿಪ್ಪಣಿ, ಸಂಬರಗೆ>ಸಾಂಬ್ರಾ, ಎಕ್ಕಸಂಬುಗೆ>ಎಕ್ಸಂಬಾ.

ಹಿಂದೆ ಹೇಳಿದಂತೆ ವಾರ್ಗಿಕದಲ್ಲಿ ಒಂದೇ ಆಕೃತಿಮಾ ಇರುತ್ತಿದ್ದರೂ ಕ್ವಚಿತ್ತಾಗಿ ಎರಡು ಆಕೃತಿಮಾ ಇರುತ್ತವೆ. ತಂಗ+ವಾಡಿ+ಗೆಯ್=ತಂಗಡಿಗೆ. ಮುಂಡೆಯ+ ವಡಿ+ಗೆಯ್= ಮುಂಡೇವಾಡಿಗೆ>ಮುಂಡೇವಾಡ. ಸಾಮಾನ್ಯವಾಗಿ ಗ್ರಾಮನಾಮಗಳ ನಿರ್ದಿಷ್ಟವು ಬೆಳವಣಿಗೆ

ಹೊಂದುತ್ತಿದ್ದರೂ ಕ್ವಚಿತ್ತಾಗಿ ವಾರ್ಗಿಕವೂ ಬೆಳವಣಿಗೆ ಹೊಂದುತ್ತದೆ. ಉದಾ: ಚಿತ್ತರಕಲ್ಲು, ಇದಕ್ಕೆ ದುರ್ಗ ಕಟ್ಟಿದಾಗ ಚಿತ್ರಕಲ್ಲುದುರ್ಗ ಎಂದು ಈ ಹೆಸರು ಬೆಳೆಯಿತು. ಇದೇ ರೀತಿ ಬಾಗಡಗೆ ಗ್ರಾಮಕ್ಕೆ ಕೋಟೆ ಕಟ್ಟುವಲ್ಲಿ ಬಾಗಡಕೋಟೆ>ಬಾಗಿಲಕೋಟೆ ಆಯಿತು.

ನಾಮವ್ಯತ್ಯಾಸ:

ವ್ಯತ್ಯಾಸ ನಿಸರ್ಗನಿಯಮ. ವಯೋಮಾನಕ್ಕೆ ಅನುಗುಣವಾಗಿ ಯಾವುದೇ ವಸ್ತು, ವ್ಯಕ್ತಿಗಳಲ್ಲಿ ತೋರುವ ವ್ಯತ್ಯಾಸದಂತೆ ಕಾಲಕ್ರಮದಲ್ಲಿ ಗ್ರಾಮನಾಮಗಳಲ್ಲಿಯೂ ತೋರುವ ವ್ಯತ್ಯಾಸವನ್ನು ಹೀಗೆ ವರ್ಗೀಕರಿಸಬಹುದು.

ಗ್ರಾಮನಾಮಗಳ ವ್ಯತ್ಯಾಸ

- ರೂಪಾಂತರ
  - ಸಹಜ
    - ಅಧಿಕ
    - ಅಲ್ಪ
  - ಅಸಹಜ
- ಭಾಷಾಂತರ
- ನಾಮಾಂತರ
  - ದಾನ
  - ಯುದ್ಧವಿಜಯ

ಕರ್ನಾಟಕದ ಗ್ರಾಮನಾಮಗಳನ್ನು ಗಮನಿಸಿ ಮಾಡಿರುವ ಈ ವರ್ಗೀಕರಣವನ್ನು ಹೀಗೆ ಸ್ಪಷ್ಟಪಡಿಸಬಹುದು.

ರೂಪಾಂತರ: ಭಾಷೆ ಒಂದು ಜೀವಂತಕ್ರಿಯೆ. ಅದು ಕಾಲ–ದೇಶ–ಪರಿಸರಗಳಿಗೆ ತಕ್ಕಂತೆ ಪರಿವರ್ತನೆಗೊಳ್ಳುತ್ತ ಬರುವುದು ಸ್ವಾಭಾವಿಕ. ಇದೇ ರೀತಿ ಭಾಷೆಯ ಘಟಕವಾಗಿರುವ ಗ್ರಾಮನಾಮಗಳೂ ಪರಿವರ್ತನೆಗೊಳ್ಳುತ್ತ ಬರುತ್ತವೆ. ಈ ಕ್ರಿಯೆ ಬಹುಮಟ್ಟಿಗೆ ಒಂದು ವಿಶಿಷ್ಟಕ್ರಮದಲ್ಲಿ ಸಂಭವಿಸುವುದರಿಂದ ವೈಜ್ಞಾನಿಕ ವಿಧಾನದ ಮೂಲಕ ಯಾವುದೇ ಗ್ರಾಮನಾಮದ ಮೂಲಸ್ವರೂಪವನ್ನು ಕಂಡುಹಿಡಿಯಬಹುದಾಗಿದೆ.

ಗ್ರಾಮನಾಮದ ವಿಷಯವಾಗಿ ನಡೆಯುವ ರೂಪಾಂತರ ಕ್ರಿಯೆಯನ್ನು ೧. ಅಧಿಕ ರೂಪಾಂತರಿತ, ೨. ಅಲ್ಪ ರೂಪಾಂತರಿತ ಎಂದು ಸ್ಥೂಲವಾಗಿ ವರ್ಗೀಕರಿಸಬಹುದು. ಏಕೆಂದರೆ ಕೆಲವು ಗ್ರಾಮನಾಮಗಳು ಮೂಲಕ್ಕೆ ತುಂಬ ಬೇರೆಯಾಗಿರುತ್ತವೆ; ಇನ್ನು ಕೆಲವು ಸ್ವಲ್ಪ ಬೇರೆಯಾಗಿರುತ್ತವೆ. ಗ್ರಾಮನಾಮ ತೀರ ಪ್ರಾಚೀನವಾಗಿದ್ದಲ್ಲಿ, ಗ್ರಾಮೀಣ ಪರಿಸರದ್ದಾಗಿದ್ದಲ್ಲಿ, ದೀರ್ಘವಾಗಿದ್ದಲ್ಲಿ, ಅನ್ಯ ಭಾಷಾಪ್ರಭಾವಕ್ಕೆ ಗುರಿಯಾಗಿದ್ದಲ್ಲಿ ಅಧಿಕ ರೂಪಾಂತರ ಸಂಭವಿಸಿರುತ್ತದೆ. ಉದಾ: ಕಿಗ್ಗ, ಇದು ಹಳೆಯ ಕಡೂರಜಿಲ್ಲೆಯ ಒಂದು ಊರು. ಮೇಲುನೋಟಕ್ಕೆ ಇದರ ಮೂಲಸ್ವರೂಪ ಸ್ಪಷ್ಟವಾಗುವುದೇ ಇಲ್ಲ. ಇದರ ಪ್ರಾಚೀನ ರೂಪ ಕಿರ್ಗ ಇಲ್ಲವೆ ಕಿಟ್ಗಿ ಇರಬಹುದು. ಗ್ರಾಮನಾಮಾಂತ್ಯದ 'ಗ' ಎಂದುದು 'ಕೆಯ್' ಎಂಬುದರ ಸವೆದ ರೂಪವಾಗಿರುವುದರಿಂದ

ಇದರ ಮೂಲ ರೂಪ ಕಿರಿ+ಕೆಯ್ ಇಲ್ಲವೆ ಕಿಟ್+ಕೆಯ್ ಇರಬಹುದು. ಕಿರಿಯ ನೆಲೆ (ಊರು) ಇಲ್ಲವೆ ಕೆಳಗಿನ ನೆಲೆ (ಊರು) ಎಂದು ಇವುಗಳ ಅರ್ಥ. (ಇದು ಕಿರಿಯ ನೆಲೆಯಾಗಿದ್ದರೆ ಇದರ ಮಗ್ಗುಲಲ್ಲಿ ಹಿರಿಯ ನೆಲೆ ಅರ್ಥದ ಊರು ಪೆಗ್ಗ (ಹೆಗ್ಗ) ಎಂಬುದು, ಕೆಳಗಿನ ನೆಲೆಯಾಗಿದೆದ್ದರೆ ಅದರ ಮಗ್ಗುಲಲ್ಲಿ ಮೇಗಣ ನೆಲೆ ಅರ್ಥದ ಊರು ಮೆಗ್ಗ ಎಂಬುದು ಇರಬಹುದು). ಇದೇ ರೀತಿ ವ್ಯತ್ಯಾಸಕ್ಕೆ ಗುರಿಯಾದುವು ಕಲಂಬರಗೆ>ಗುಲಬರ್ಗಾ, ಬೆನಕನಕವಿಟ್ಟಗೆ>ಬೆನಕೊಟಗಿ ಇತ್ಯಾದಿ.

ಇಂಥ ಕನ್ನಡ ಗ್ರಾಮನಾಮಗಳಿಲ್ಲದೆ ಸಂಸ್ಕೃತ ಗ್ರಾಮನಾಮಗಳೂ ತದ್ಭವ ರೀತಿಯಲ್ಲಿ ಅಧಿಕ ರೂಪಾಂತರ ಹೊಂದುವುದುಂಟು. ಉದಾ: ಶ್ರೋತ್ರಿಯೂರು> ಸೊತ್ತಿಯೂರು>ಸುತ್ತೂರು. ಶಾಸನಗಳಲ್ಲಿ ಶ್ರೋತ್ರಿಯೂರು ಎಂಬ ರೂಪ ಸಿಗುವುದರಿಂದ ಈ ಗ್ರಾಮ ಹುಟ್ಟಿದಾಗ, ಇಲ್ಲವೆ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಾಗ ಈ ಹೆಸರನ್ನು ಹೊತ್ತಿರಬಹುದು. ಈ ಬಗೆಯ ಅರ್ಥಪ್ರಸಂಗದಲ್ಲಿ ಒಂದು ಎಚ್ಚರವಹಿಸಬೇಕು. ಮೂಲತಃ ಇದ್ದ ದ್ರಾವಿಡ ಗ್ರಾಮನಾಮವನ್ನೇ ಸಂಸ್ಕೃತ ರೂಪಕ್ಕೆ ತಿರುಗಿಸಿ ವಿದ್ವಾಂಸಲೇಖಕರು ಕೆಲವೊಮ್ಮೆ ಶಾಸನಗಳಲ್ಲಿ ಬಳಸಿರುತ್ತಾರೆ. ಉದಾ: ಬಾರಹ ಕನ್ಯಾಪುರ (ಬಾರಕೂರು), ಅನ್ಯತಟಾಕ (ಅಣ್ಣಿಗೆರೆ). ಆದುದರಿಂದ ಯಾವುದೇ ಗ್ರಾಮನಾಮವನ್ನು ಸಂಸ್ಕೃತಮೂಲದಿಂದ ಸಾಧಿಸುವಲ್ಲಿ ಎಚ್ಚರ ಅತ್ಯವಶ್ಯ. ಇದೇ ತೀರಿ ಉರ್ದು ಮೂಲ, ಇಂಗ್ಲೀಷ್ ಮೂಲ ಹೇಳುವಾಗಲೂ ಲಕ್ಷ್ಯವಹಿಸಬೇಕು. ಗ್ರಾಮನಾಮ ದೊಡ್ಡದಾಗಿದ್ದಲ್ಲಿ ಅಧಿಕ ರೂಪಾಂತರ ಹೊಂದುವುದಕ್ಕೆ ವಿಜಯಾದಿತ್ಯಮಂಗಲ>ಬೇತಮಂಗಲ, ಮಾರಸಿಂಗನಪಳ್ಳಿ>ಮಾರ್ಸನಳ್ಳಿ ಉದಾಹರಣೆಗಳಾಗಿವೆ. ಅನ್ಯಭಾಷಾ ಪ್ರಭಾವಕ್ಕೆ ಸಾಂಬ್ರಾ (ಸಂಬರಗೆ) ಇತ್ಯಾದಿಗಳು ಉದಾಹರಣೆಯಾಗಿವೆ.

ಅಲ್ಪ ರೂಪಾಂತರಿತ ಗ್ರಾಮನಾಮಗಳೂ ಅಧಿಕಸಂಖ್ಯೆಯಲ್ಲಿ ಸಿಗುತ್ತವೆ. ಸಂಸ್ಕೃತನಾಮಗಳು ಅಲ್ಪವ್ಯತ್ಯಾಸದಿಂದ ಸಮಸಂಸ್ಕೃತವಾಗುವುದುಂಟು. ಸಾಮಾನ್ಯವಾಗಿ ಸರಳರಚನೆಯುಳ್ಳ, ಕಡಿಮೆ ಅಕ್ಷರವುಳ್ಳ, ನಾಗರಿಕ ಪರಿಸರಕ್ಕೆ ಸಂಬಂಧಿಸಿದ ಗ್ರಾಮನಾಗಳಿವು. ಉದಾ: ಕಲ್ಲೂರ್–ಕಲ್ಲೂರು–ಕಲ್ಲೂರ, ಮುಳ್ಳೂರ್–ಮುಳ್ಳೂರು–ಮುಳ್ಳೂರ, ಧರ್ಮಸ್ಥಳ–ಧರ್ಮಸ್ತಳ, ನರಿಗುಂದ–ನರಗುಂದ ಇತ್ಯಾದಿ.

ಸಾಮಾನ್ಯವಾಗಿ ಸರಳ ರೂಪಾಂತರಕ್ರಿಯೆಯಲ್ಲಿ ಭಾಷಾ ಬದಲಾವಣೆಯ ಎಲ್ಲ ಪ್ರಭಾವಗಳೂ ವ್ಯಕ್ತವಾಗಿ ತೋರುವುದುಂಟು. ಪ>ಹ>ಅ : ಪಸುಂಡಿ>ಹಸುಂಡಿ>ಅಸುಂಡಿ, ಬಿಂದು ಲೋಪ: ಮುಗುಂದ>ಮುಗದ, ಡ>ಳ: ಕೋಡಿವಾಡ>ಕೋಳಿವಾಡ, ಮಹಾಪ್ರಾಣ>ಅಲ್ಪಪ್ರಾಣ: ಜಂಬುಖಂಡಿ>ಜಮಕಂಡಿ. ಸ>ಚ: ಸಿದ್ದರಕಲ್ಲು>ಚಿತ್ತರಕಲ್ಲು, ಬ>ವ: ಮರೆಯಬಾಡ>ಮರೇವಾಡ, ಅಂಶಗಣೋಚ್ಚಾರ: ಸುಂಕಪುರ>ಸುಂಕಾಪುರ, ಅರ್ಧಸ್ವರ ಲೋಪ: ಕಲ್ಲಹಳ್ಳಿ>ಕಲ್ಲಳ್ಳಿ. ಕೆಲವೊಮ್ಮೆ ಎರಡು ಬೇರೆ ಬೇರೆ ಮೂಲದ ನಾಮಗಳು ಒಂದೇ ರೂಪಕ್ಕೆ ಹೊರಳಿರಬಹುದು. ಉದಾ: ದೇವರ ಹುಬ್ಬಳ್ಳಿಯ ಮೂಲನಾಮ ಉಪ್ಪವಳ್ಳಿ, ಪ್ರಸಿದ್ಧ ಹುಬ್ಬಳ್ಳಿಯ ಮೂಲನಾಮ ಪೂರ್ವದಳ್ಳಿ. (ಗದಗ) ಬೆಟಗೇರಿಯ ಮೂಲನಾಮ ಬಟ್ಟ+ಕೆಗೆ, ಉಪ್ಪಿನ ಬೆಟಗೇರಿಯ ಮೂಲನಾಮ ಬೆಟ್ಟ+ಕೆರೆ. ಜಮಖಂಡಿ ತಾಲೂಕಿನ ಕೊಣ್ಣೂರು ಎಂಬುದರ ಮೂಲರೂಪ ಕೋಣೆಗನೂರು, ನವಲಗುಂದ ತಾಲೂಕಿನ ಕೊಣ್ಣೂರು ಎಂಬುದರ ಮೂಲರೂಪ ಕೊಳನೂರು, ಇದಕ್ಕೆ ವಿರುದ್ಧವೆನ್ನುವಂತೆ

ಒಂದೇ ಮೂಲದ ನಾಮ ಎರಡು ಬೇರೆ ರೂಪಗಳಿಗೆ ಹೊರಳಬಹುದು: ಕನ್ನ+ವಾಡ=ಕನ್ನಡ ಅಥವಾ ಕನವಾಡ. ಇದನ್ನು ನೋಡಿದರೇ ಗ್ರಾಮನಾಮಗಳಲ್ಲಿ ವ್ಯತ್ಯಾಸಕ್ರಿಯೆ ಅಷ್ಟು ಯಾಂತ್ರಿಕವಾಗಿ ನಡೆಯುವುದಿಲ್ಲವೆಂದು ಹೇಳಬೇಕಾಗುತ್ತದೆ.

ಅಸಹಜ ರೂಪಾಂತರಗಳು ಅನ್ಯಥಾಜ್ಞಾನಮೂಲವಾದುವು ಇಲ್ಲವೆ ಉದ್ದೇಶ ಪೂರ್ವಕವಾದುವು. ಪೊರಿಗೆರೆ>ಪುರಿಗೆರೆ>ಪುಲಿಗೆರೆ – ಇದು ಅನ್ಯಥಾಜ್ಞಾನಕ್ಕೆ ಉದಾಹರಣೆ. ಮಸೂಡಗಿ>ಮಹೀಶವಾಡಗಿ, ಮಂಚಾಲೆ>ಮಂತ್ರಾಲಯ. ಹುಬ್ಬಳ್ಳಿ>ಹೂಬಳ್ಳಿ– ಇವು ಉದ್ದೇಶಪೂರ್ವಕ ಮಾಡಿದ ರೂಪಾಂತರಗಳು. ಉದ್ದೇಶಪೂರ್ವಕ ರೂಪಾಂತರಕ್ಕೆ ಕಾರಣ, ಅಂದವಾಗಿರದವುಗಳನ್ನು ಅಂದಗೊಳಿಸುವುದು, ಇಲ್ಲವೆ ಮತೀಯ ಪ್ರಭಾವನ್ನು ಹೆಚ್ಚಿಸುವುದು.

ಭಾಷಾಂತರ: ಕೆಲವು ಸಲ ಗ್ರಾಮನಾಮಗಳು ಭಾಷಾಂತರವಾಗುವುದುಂಟು. ಇದಕ್ಕೆ ಕಾರಣ ಕನ್ನಡದ ಬಗೆಗಿರುವ ಮೈಲಿಗೆ ಮನೋಭಾವ, ಸಂಸ್ಕೃತ ವ್ಯಾಮೋಹ ಮತ್ತು ಪಾಂಡಿತ್ಯ ಪ್ರದರ್ಶನ. ಹುಬ್ಬಳ್ಳಿ–ಭ್ರೂಲತಾಪುರ, ಪುಲಿಗೆರೆ–ವ್ಯಾಘ್ರಪುರ, ಮೂಗೂರು–ನಾಸಿಕಪುರ, ಎಳಂದೂರು–ಬಾಲೇಂದುಪುರ, ಕೋಳಿವಾಡ–ಕುಕ್ಕುಟಪುರ, ಅಣ್ಣೀಗೆರೆ–ಅನ್ಯತಟಾಕ. ಬಹಳಷ್ಟು ಸಲ ಈ ಅನುವಾದಗಳು ಗ್ರಾಮನಾಮದ ವರ್ತಮಾನರೂಪವನ್ನು ಗಮನಿಸಿ ಮಾಡಿದುವಾಗಿರುತ್ತದೆ. ಉದಾ: 'ಹುಬ್ಬಳ್ಳಿ'ಯಲ್ಲಿ 'ಹುಬ್ಬು' ಪದವನ್ನು ಗಮನಿಸಲಾಗಿದೆ. ಆದರೆ ಶಾಸನದ ಪ್ರಕಾರ ಇದರ ನಿಜರೂಪ ಪೂರ್ವದಹಳ್ಳಿ. ಕೆಲವೊಮ್ಮೆ ಒಂದು ಗ್ರಾಮನಾಮ ಒಂದಕ್ಕಿಂತ ಹೆಚ್ಚು ಸಲ ಅನುವಾದಗೊಂಡಿರುತ್ತದೆ. ಉದಾ: ಧಾರವಾಡ=ತುಂತುಪುರಿ, ಧಾರಾನಗರಿ. ಇಲ್ಲಿ ಎರಡೂ ತಪ್ಪು ಅನುವಾದಗಳು. ಮುಳಬಾಗಿಲು=ಕಂಟಕದ್ವಾರ, ಪೂರ್ವಕವಾಟ ಪುರಿ. ಇಲ್ಲಿ ಮೊದಲನೆಯದು ಸರಿಯಲ್ಲದ ಎರಡನೆಯದು ಸರಿಯಾದ ಅನುವಾದ. ಮದ್ರಾಸ್‌ನಲ್ಲಿ ಹ್ಯಾಮಿಲ್ಟನ್ ಎಂಬುವನು ಕಟ್ಟಿಸಿದ "ಹ್ಯಾಮಿಲ್ಟನ್ ಬ್ರಿಜ್" ತಮಿಳರ ಬಾಯಲ್ಲಿ "ಅಂಬಟ್ಟನ್ ಬ್ರಿಜ್" ಎಂದಾಯಿತು. ತಮಿಳಿನಲ್ಲಿ ಅಂಬಟ್ಟನ್ ಎಂದರೆ ಹಜಾಮ. ಹೀಗಾಗಿ ಅದು ಭಾಷಾಂತರಗೊಂಡು ಇಂದು "ಬಾರ್ಬರ್ಸ್ ಬ್ರಿಜ್" ಎಂದು ಕರೆಯಲ್ಪಡುತ್ತದೆ. ಹ್ಯಾಮಿಲ್ಟನ್ ಹಜಾಮನಾದ ಭಾಷಾಂತರವನ್ನು ನೋಡಿದರೆ ಬಹಳಷ್ಟು ಸಲ ಅನುವಾದಗಳಿಗೂ ಆ ಗ್ರಾಮನಾಮದ ಅರ್ಥಕ್ಕೂ ಸಂಬಂಧವಿರುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಇಂಥ ಅನುವಾದಗಳು ಕಾವ್ಯಗಳಲ್ಲಿ, ಇಲ್ಲವೆ ಇತರ ಬರವಣಿಗೆಯಲ್ಲಿ ಮಾತ್ರ ಕಾಣಿಸಿಕೊಳ್ಳುವತ್ತವೆಯೇ ಹೊರತು ದಿನನಿತ್ಯದ ಬಳಕೆಯಲ್ಲಲ್ಲ.

ನಾಮಾಂತರ: ರೂಪಾಂತರ, ಭಾಷಾಂತರಗಳ ಹಿಂದೆ ಆ ಹೆಸರಿನ ಬಗ್ಗೆ ಪ್ರೀತಿಯಿರುತ್ತದೆ. ನಾಮಾಂತರದ ಹಿಂದೆ ಆ ಹೆಸರನ್ನು ಮೂಲೋತ್ಪಾಟನೆ ಮಾಡುವ ಉದ್ದೇಶವಿರುತ್ತದೆ. ಈ ಹಿಂದೆ ವಿವೇಚಿಸಿದ ಮೇರೆಗೆ ಕ್ರಮವಾಗಿ ಹುಟ್ಟಿಬಂದ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿಗ್ರಾಮನಾಮಗಳಲ್ಲಿ ನಿಸರ್ಗವಾಚಿ ಗ್ರಾಮನಾಮಗಳನ್ನು ಜನಾಂಗವಾಚಿ ಗ್ರಾಮನಾಗಳು, ಇವೆರಡನ್ನೂ ವ್ಯಕ್ತಿವಾಚಿ ಗ್ರಾಮನಾಮಗಳು ಆಕ್ರಮಿಸುತ್ತ ಬಂದಿವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ನಿಸರ್ಗವಾಚಿ ಗ್ರಾಮನಾಮಗಳನ್ನು ಜನಾಂಗವಾಚಿ ಗ್ರಾಮನಾಮಗಳು ಆಕ್ರಮಿಸುದುದಕ್ಕೆ ನಮಗೆ ಉದಾಹರಣೆಗಳು ತಿಳಿದುಬಂದಿಲ್ಲ. ನಿಸರ್ಗವಾಚಿ, ಜನಾಂಗವಾಚಿಗಳನ್ನು ವ್ಯಕ್ತಿವಾಚಿ ಆಕ್ರಮಿಸಿದುದಕ್ಕೆ, ವ್ಯಕ್ತಿವಾಚಿಯನ್ನು ವ್ಯಕ್ತಿವಾಚಿ ಆಕ್ರಮಿಸಿದುದಕ್ಕೆ ಉದಾಹರಣೆಗಳು ಸಿಗುತ್ತವೆ. ಇತರ ಉದಾಹರಣೆಗಳೂ ಸಿಗುತ್ತದೆ

ಉದಾ: ನಿಸರ್ಗವಾಚಿ>ವ್ಯಕ್ತಿವಾಚಿ : ಕಲ್ಲಹಳ್ಳಿ>ದೇವಲಾಪುರ

ಜನಾಂಗವಾಚಿ>ವ್ಯಕ್ತಿವಾಚಿ : ಹೊಲೇರಹಳ್ಳಿ>ವೇಣುಗೋಪಾಲಪುರ

ವ್ಯಕ್ತಿವಾಚಿ>ವ್ಯಕ್ತಿವಾಚಿ : ಹೊಣಕನಹಳ್ಳಿ>ಚಿಕ್ಕರಾಯಪುರ

ಮಾಚನಹಳ್ಳಿ>ನಂಜರಾಜಸಮುದ್ರ

ಇತರ : ಹಳ್ಳವೂರ>ವಿಜಯಸಮುದ್ರ, ಹಳೇಬೀಡು>ತಿಮ್ಮಸಮುದ್ರ

ದೇಸಿನಾಯಕಹಳ್ಳಿ > ಕಲ್ಯಾಣಪುರ, ಏಟಿಕಾಲುವೆ >ಲಕ್ಷ್ಮೀಪುರ.

ಈ ನಾಮಾಂತರ ಉಪಕ್ರಮಕ್ಕೆ ಮುಖ್ಯ ಕಾರಣ ರಾಜನ ದಾನ ಮತ್ತು ಯುದ್ಧ ವಿಜಯ. ಕರ್ನಾಟದಲ್ಲಿ ಒಂದು ಹಳ್ಳಿಯನ್ನು ಅಗ್ರಹಾರವಾಗಿ ಬ್ರಾಹ್ಮಣರಿಗೆ ಕೊಡುವಾಗ ಇಲ್ಲವೆ ದೇವರ ಉಪಭೋಗಕ್ಕೆ ಕೊಡುವಾಗ ದಾನಿಯು ಆ ಊರ ಹೆಸರನ್ನು ತೆಗೆದುಹಾಕಿ ತನ್ನ ಇಲ್ಲವೆ ತನ್ನ ಸಂಬಂಧಿಕರ ಇಲ್ಲವೆ ದೇವರ ಹೆಸರನ್ನಿಡುತ್ತಿದ್ದನು.

ಉದಾ: ೧. "ಶ್ರೀಮನುಮಹಾಪ್ರಧಾನ ಆದಿ ಸಿಂಗೆಯದಣ್ಣಾಯಕ....ರುಮ ರಾಣಿವಾಸ [ದೇ]ಮಲಾದೇವಿಯ ಹೆಸರಲು ಮಾಡಿದ ಅಗ್ರಹಾರವ....(ಕಲ)ಕಲಹಳಿಯನು ಶ್ರೀ [ದೇವಲಾ]ಪುರವಾಗಿ ಮಾಡಿದ...." (Ec. VI ಕೃಪೇ.೧೦೮ ವರಾಹನಾಥ ಕಲ್ಲಹಳ್ಳಿ)

೨. "ಹಳೆಯಬೀಡಿಗೆ ಪ್ರತಿನಾಮಧೇಯವಾದ ತಿಂಮಸಮುದ್ರವನು....ಕೊಟ್ಟ ಶಿಲಾಶಾಸನಪ್ರತಿ" (Ec.VI ಪಾಂಪು. ೨೩೪. ಹಳೇಬೀಡು).

೩. ವೀರನರಸಿಂಹಪುರವಾದ ಅರಕೆರೆಯ ಶ್ರೀಮದಶೇಷ ಮಹಾಜನಂಗಳು ಕೊಟ್ಟ" (Ec.VI ಶ್ರೀರಂಗಪಟ್ಟಣ ೮. ಶ್ರೀರಂಗಪಟ್ಟಣ).

೪. ದೇವಪುರಿಯೆಂದ ಗ್ರಾಮವನ್ನು ಕೃಷ್ಣರಾಯನಾಯಕರ ಅನುಮತ್ಯ....ವ ಮಾರಾಯಗಳು ನಾಗಾಂಬಾ ಅಮ್ಮನವರ ಹೆಸರಿನಲ್ಲಿ ನಾಗಲಾಪುರವೆಂಬ ಪ್ರತಿ ನಾಮವನ್ನು ಮಾಡಿ ಶ್ರೀ ರಂಗನಾಯಕಿದೇವಿಯರ... ನಿತ್ಯನೈವೇದ್ಯ ಕರನಾಯ ನಂದಾ ದೀಪ ಇದಕ್ಕೆ ಫಲವಾಗಿ ಈ ನಾಲಾಪುರವೆಂಬ ಗ್ರಾಮವನ್ನು....ಸ(ಮ)ರ್ಪಿಸಿದೆವಾಗಿ...." (Ec.VI ಶ್ರೀರಂಗಪಟ್ಟಣ.೮. ಶ್ರೀರಂಗಪಟ್ಟಣ).

ಶಾನಸಗಳಲ್ಲಿ ಇಂಥ ಉದಾಹರಣೆಗಳು ಸಾವಿರಸಂಖ್ಯೆಯಲ್ಲಿ ಸಿಗುತ್ತವೆ. ಅಗ್ರಹಾರ ಪರಿಕಲ್ಪನೆ ಕದಂಬರ ಕಾಲದಿಂದ ನಮ್ಮಲ್ಲಿ ಅಸ್ತಿತ್ವಕ್ಕೆ ಬಂದರೂ ಅದು ಹೊಯ್ಸಳ, ವಿಜಯನಗರ, ಮೈಸೂರು ಒಡಯರ ಕಾಲದಲ್ಲಿ ವಿಪುಲವಾಗಿ ಬೆಳೆದು, ನಾಮಾಂತರ ಕ್ರಿಯೆಯೂ ವ್ಯಾಪಕವಾಗಿ ನಡೆಯಿತು. ತಮ್ಮ ಹೆಸರಿನ ಮುಂದೆ ಪುರ, ಪಟ್ಟಣ, ನಗರ, ಮಂಗಲ ಪದ ಜೋಡಿಸುವುದು ಇಲ್ಲಿ ಕಂಡುಬರುವ ಉಪಕ್ರಮ. ಈ ಪ್ರತಿನಮಧೇಯ ಉಪಕ್ರಮ ದಕ್ಷಿಣಕರ್ನಾಟಕದಲ್ಲಿ ಹೆಚ್ಚು, ಉತ್ತರಕರ್ನಾಟಕದಲ್ಲಿ ಕಡಿಮೆ. ಮಂಗಲಾಂತ್ಯ ಪ್ರತಿನಾಮಧೇಯವಂತೂ ಉತ್ತರ ಕರ್ನಾಟಕದಲ್ಲಿ ಇಲ್ಲವೇ ಇಲ್ಲ.

ನಾಮವ್ಯತ್ಯಾಸಕ್ಕೆ ಚಕ್ರವರ್ತಿ ಮೊದಲಾದ ಆಡಳಿತವರ್ಗದವರು ಕಾರಣವಾಗಿದ್ದರೂ ಸ್ವನಾಮದಿಂದ ನೀಡಿದ ದಾನ/ಶ್ರೇಷ್ಠವೆಂಬ ವಿಚಾರವನ್ನು ಅವರ ತಲೆಯಲ್ಲಿ ಹಾಕಿದವರು ಪುರೋಹಿತರೆಂದು ಇಲ್ಲಿ ಮರೆಯಲಾಗದು. ಸಾಮಾನ್ಯವಾಗಿ ಇಂಥ ಪರಿವರ್ತಿತ ಅಗ್ರಹಾರನಾಮಗಳು ಸಂಸ್ಕೃತವಾಗಿರುವುದೇ ಹೆಚ್ಚು. ದಾನಿಗಳ ಹೆಸರು ಸಂಸ್ಕೃತವಾಗಿಲ್ಲದಿದ್ದರೆ ಕೊನೆಯ ಪಕ್ಷ ಅವರ ಬಿರುದು ಸಂಸ್ಕೃತವಾಗಿದ್ದುದೇ ಇದಕ್ಕೆ ಕಾರಣ.

ಹೀಗೆ ದಾನಸಂದರ್ಭದಲ್ಲಲ್ಲದೆ ಅರಸರು ತಮ್ಮ ಆಡಳಿತ ಮತ್ತು ಯುದ್ಧ ವಿಜಯ ಸಂದರ್ಭದಲ್ಲಿಯೂ ತಮ್ಮ ಹೆಸರನ್ನು, ಬಿರುದನ್ನು ಗ್ರಾಮಗಳಿಗೆ ಇಡುತ್ತಿದ್ದರು. ಲಕ್ಷಣನೆಂಬವನು ತಾನು ಆಳುತ್ತಲಿದ್ದ ಪುಲಿಗೆರೆಗೆ ಲಕ್ಷ್ಮೇಶ್ವರ ಎಂದು ಹೆಸರಿಟ್ಟುದನ್ನು, ಯುದ್ಧವಿಜಯಿಯಾದ ಹೊಯ್ಸಳ ಬಲ್ಲಾಳ ಹಳ್ಳವುರಕ್ಕೆ ವಿಜಯಸಮುದ್ರವೆಂದು ಹೆಸರಿಟ್ಟುದನ್ನು ಇಲ್ಲಿ ಉದಾಹರಿಸಬಹುದು.

ನಮ್ಮ ನಾಡಿನ ಗ್ರಾಮನಾಮಗಳು ಬದಲಾಗುತ್ತ ಬಂದ ಇತಿಹಾಸದ ಮೊದಲ ಘಟ್ಟದಲ್ಲಿ ಸಂಸ್ಕೃತ ಹೆಸರುಗಳು ಕಂಡುಬರುತ್ತವೆ. ಮಂಚಾಲೆಯನ್ನು ಮಂತ್ರಾಲಯ ಮಾಡುವುದು ಒಂದು ಬಗೆಯ ಆರ್ಯೀಕರಣವಾದರೆ, ಕೋಳಿವಾಡವನ್ನು ಕುಕ್ಕುಟಪುರವಾಗಿಸುವುದು ಇನ್ನೊಂದು ಬಗೆಯ ಆರ್ಯೀಕರಣವಾದರೆ, ಕೊಡುಗನಹಳ್ಳಿ ಎಂಬುದನ್ನು ಆಳಿಸಿ ರಾಮಾನುಜಪುರಾಗಿಸುವುದು ಬೇರೊಂದು ಬಗೆಯ ಆರ್ಯೀಕರಣವಾಗಿದೆ.

ನಾಮಾಂತರ ಇತಿಹಾಸ ಎರಡನೆಯ ಘಟ್ಟ ಮುಸಲ್ಮಾನರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದೆ. ಮುಸಲ್ಮಾರ ಉರ್ದುಭಾಷೆಯ ಉಚ್ಚಾರದ ಪ್ರಭಾವ ನಮ್ಮ ಗ್ರಾಮನಾಮಗಳ ಮೇಲಾಗಲಿಲ್ಲ. ಆದರೆ ಮುಸಲ್ಮಾನರು ನಮ್ಮ ಎಷ್ಟೋ ಗ್ರಾಮಗಳ ಹೆಸರನ್ನು ಕಿತ್ತಿಹಾಕಿ ತಮ್ಮ ಇಲ್ಲವೆ ತಮ್ಮ ಸಂಬಂಧಿಕರ ಹೆಸರನ್ನಿಟ್ಟರು. ಇಲ್ಲಿ ದಾನಕಾರ್ಯಕ್ಕಿಂತ ಯುದ್ಧವಿಜಯ ಮತ್ತು ಆಡಳಿತಗಳೇ ಹೆಚ್ಚು ಪಾತ್ರವಹಿಸಿದವು. ಕುರುಬೆಟ್ಟ>ಮುಮುದಾಪುರ, ಹುಲಗಿ>ಮುನಿರಾಬಾದ, ಚಿತ್ರದುರ್ಗ>ಫರೂಕಬಾದ, ಬಿದನೂರು>ಹೈದರ್ ನಗರ ಇತ್ಯಾದಿ. ಇಲ್ಲಿ ಹೆಸರಿನ ಎರಡೂ ಘಟಗಳಲ್ಲಿ ಉರ್ದು ತೋರುತ್ತದೆ. (ಉದಾ: ಶಹಾ+ಬಾದ. ಜಮಾಲಾ+ಬಾದ). ಇಲ್ಲವೆ ಪೂರ್ವಘಟಕ ಮಾತ್ರ ಉರ್ದುವಾಗಿರುತ್ತದೆ. (ಉದಾ: ಹೈದರ+ನಗರ, ಪಾಚ್ಚಾ+ಪುರ, ಅಬ್ದುಲ್+ಪುರ, ಇಸ್ಲಾಂ+ಪುರ). ಹೀಗೆ ಪರಿವರ್ತಿತ ಮುಸಲ್ಮಾನ ಹೆಸರುಗಳು ಅನೇಕ ಸಂಖ್ಯೆಯಲ್ಲಿ ಸಿಗುತ್ತಿದ್ದು, ಪ್ರಮಾಣದಲ್ಲಿ ಇವು ಪರಿವರ್ತಿತ ಸಂಸ್ಕೃತ ಹೆಸರುಗಳಿಗಿಂತ ಕಡಿಮೆಯಾಗಿವೆ.

ಈ ತರುವಾಯ ಆಳಿದವರು ಮರಾಠರು ಮತ್ತು ಪೇಶ್ವೆಯವರು. ಇವರು ನಮ್ಮ ಗ್ರಾಮನಾಮಗಳನ್ನು ಪರಿವರ್ತಿಸಲಿಲ್ಲವಾದರೂ ಅವರ ಮರಾಠಿ ಭಾಷೆಯ ಉಚ್ಚಾರದ ಪ್ರಭಾವ ಗಡಿ ಪ್ರದೇಶದ ಗ್ರಾಮನಾಮಗಳ ಮೇಲೆ ದಟ್ಟವಾಗಿ ಬಿದ್ದಿದೆ. ಉದಾ: ಕುರುಬೆಟ್ಟ>ಕುರುಬೇಟ, ಹತ್ತಿಕಣಗಿಲೆ>ಹಾತ್‌ಕಣಗಿಲಿ, ಸಂಗವಳ್ಳಿ>ಸಾಂಗಲಿ, ಸಂಬರಗೆ>ಸಾಂಬ್ರಾ ಇತ್ಯಾದಿ.

ಇಂಗ್ಲೀಷರ ಆಳ್ವಿಕೆಯಲ್ಲಿ ಮುರಮುಟ್ಲ>ಬೌರಿಂಗಪೇಟೆ, ಹಿರೋಡೆ>ಫ್ರಂಚ್‌ರಾಕ್ಸ ಹೀಗೆ ೮–೧೦ ಗ್ರಾಮನಾಮಗಳು ಮಾತ್ರ ಪರಿವರ್ತನೆಯಾಗಿವೆ. ಆದರೆ ಅವರ ಉಚ್ಚಾರಕ್ಕೆ ಸಿಕ್ಕು ನಮ್ಮ ದೊಡ್ಡ ದೊಡ್ಡ ನಗರನಾಮಗಳು ತುಂಬಾ ವಿಕಾರಗೊಂಡಿವೆ. ಮೊದಮೊದಲು ಈ ಹೆಸರುಗಳನ್ನು

ಇವರು ತೀರಾ ವಿಕಾರವಾಗಿ ಉಚ್ಚರಿಸಿದ್ದಾರೆ. ಕನ್ನಡವನ್ನು Canarese ಎಂದು, ಹರಿಹರವನ್ನು Hurry-hur ಎಂದು ವಿರೂಪಗೊಳಿಸಿದುದನ್ನು ಇಲ್ಲಿ ನೆನೆಯಬಹುದು. ಇವು ಈ ಹಿಂದೆ ಚೀನಿ ಮತ್ತು ಗ್ರೀಕ್ ಪ್ರವಾಸಿಗಳು ಬಾದಾಮಿ, ಮಳಖೇಡ ಮೊದಲಾದ ಹೆಸರುಗಳನ್ನು ವಿರೂಪಗೊಳಿಸಿದುದನ್ನು ನೆನಪಿಗೆ ತರುತ್ತದೆ. ಆದರೆ ಕ್ರಮೇಣ ಇವರ ಬಾಯಿಯಿಂದ ಈ ವಿಕಾರವಾದ ಪ್ರಮಾಣ ಕಡಿಮೆಯಾಗುತ್ತದೆ ಬಂದಿದೆ. ಈಗಲೂ ಚಿತ್ರದುರ್ಗ>ಚಿಟಲ್‌ಡ್ರುಗ್, ಮಡಕೇರಿ>ಮರ್ಕೆರಾ, ಕಲಬುರ್ಗಿ>ಗುಲಬುರ್ಗಾ, ವಿಜಯಪುರ>ಬಿಜಾಪುರ, ಸುರಪುರ>ಷೋರಾಪುರ ಎಂಬಂತೆ ಅವರು ಮಾಡಿದ ವ್ಯತ್ಯಸ್ತ ರೂಪಗಳು ಚಲಾವಣೆಯಲ್ಲಿವೆ. ಇವರಿಂದಾದ ಬದಲಾವಣೆಯಲ್ಲಿ ಎರಡು ಲಕ್ಷಣಗಳು ತೋರಿ ಬಂದವು (೧) ಉಚ್ಚಾರ, ಬರವಣಿಗೆ ಎರಡೂ ಒಂದೇ ರೀತಿಯಲ್ಲಿ ಬದಲಾದುದು. ಉದಾ: Bijapur ಬಿಜಾಪುರ, Gulbaraga ಗುಲ್ಬರ್ಗಾ (೨) ಉಚ್ಚಾರವೇ ಬೇರೆ, ಬರವಣಿಗೆಯ ಬೇರೆ. ಉದಾ: Mysore ಮೈಸೂರು, Bangalore ಬೆಂಗಳೂರು.

ಇತ್ತೀಚೆ ಸ್ವಾತಂತ್ರ್ಯಾನಂತರದಲ್ಲಿ ಇಂಗ್ಲಿಷ್ ಹೆಸರುಗಳನ್ನು ತೆಗೆದುಹಾಕಿ ಕನ್ನಡ ಹೆಸರುಗಳನ್ನಿಡುತ್ತಿದ್ದಾರೆ. ಉದಾ: ಕ್ಲೋಸಪೇಟೆ>ರಾಮನಗರ, ಬೌರಿಂಗಪೇಟೆ> ಬಂಗಾರುಪೇಟೆ, ಫ್ರೆಂಚರಾಕ್ಸ್>ಪಾಂಡವಪುರ. ಇಂಥ ಬದಲಾವಣೆ ಬೀದಿ, ಉಪವನಗಳ ವಿಷಯವಾಗಿ ವಿಶೇಷ ಕಂಡುಬರುವುದೇ ಹೊರತು ಊರ ವಿಷಯವಾಗಿ ಅಲ್ಲ, ಉದಾ: ಧಾರವಾಡದಲ್ಲಿಯ ಥ್ಯಾಕರೆ ಉಪವನ>ಕಿತ್ತೂರ ಚೆನ್ನಮ್ಮ ಉಪವನ, ವಿಜಾಪುರದಲ್ಲಿ ರಾಣಿ ಬಗೀಚ>ಸುಭಾಷ್ ಉಪವನ. ಇದಲ್ಲದೆ ಇಂಗ್ಲಿಷ್ ಉಚ್ಚಾರವನ್ನೂ ಕನ್ನಡೀಕರಿಸುತ್ತಲಿದ್ದಾರೆ. ಉದಾ: ಧಾರವಾರ್> ಧಾರವಾಡ.

ಗ್ರಾಮನಾಮ ಪರಿವರ್ತನ ಕ್ರಿಯೆ ಇತ್ತೀಚಿನ ರಾಜಕಾರಣಗಳಿಂದ ಅಷ್ಟಾಗಿ ನಡೆಯದಿದ್ದರೂ ಬೀದಿಗಳಿಗೆ, ಸಂಸ್ಥೆಗಳಿಗೆ, ಜಲಾಶಯಗಳಿಗೆ ಹಳೆಯ ಹೆಸರುಗಳನ್ನು ತೆಗೆದುಹಾಕಿ ತಮ್ಮ ಹೆಸರನ್ನು, ತಮಗೆ ಬೇಕಾದವರ ಹೆಸರನ್ನು ಇಡಿಸುವ ಅನಿಷ್ಟ ಪದ್ಧತಿಗಳು ಅಲ್ಲೊಂದು ಇಲ್ಲೊಂದು ಜರುಗುತ್ತಲಿವೆ. ಉದಾ: ರೇಣುಕ ಸಾಗರ>ಇಂದಿರಾಸಾಗರ.* ಪಶ್ಚಿಮದೇಶಗಳಲ್ಲಿ ತಮ್ಮ ಹಳೆಯ ಗ್ರಾಮನಾಮಗಳ ಬಗೆಗೆ ಬೇಸರ ಬಂದು ಅಕಾರಣ ಪರಿವರ್ತನಮಾಡುವುದು ಪ್ರಾರಂಭವಾಗಿದೆ. ಈ ಕ್ರಿಯೆ ಪದೇ ಪದೇ ಜರುಗಿ, ಇದ್ದ ಹೆಸರಿನ ಅಕ್ಷರಗಳನ್ನು ಪಲ್ಲಟಿಸುವಷ್ಟು ಅವರಿಗೆ ಬೇಸರ ಬಂದಿದೆ. ಉದಾ: Range>Egnar . ಈ ಕೆಟ್ಟ ಸಂಪ್ರದಾಯ ನಮ್ಮಲ್ಲಿ ಇನ್ನೂ ಪ್ರಾರಂಭವಾಗದುದು ಸಂತೋಷದ ಸಂಗತಿ. ಇಷ್ಟೇ ಏಕೆ ಕಾರಣವಿಲ್ಲದೆ ಗ್ರಾಮನಾಮಗಳನ್ನು ಬದಲಿಸಬಾರದೆಂದು ೧೯೫೨ರಷ್ಟು ಪೂರ್ವದಲ್ಲಿಯೇ ನಮ್ಮ ದೇಶದ ಒಂದು ರಾಜ್ಯಸರ್ಕಾರ ಕಾನೂನು ಜಾರಿಗೆ ತಂದಿದೆ.

ಹೀಗೆ ಅಸಹಜ ರೂಪಾಂತರ, ಭಾಷಾಂತರ, ನಾಮಾಂತರ ಕ್ರಿಯೆಗಳಿಗೆ ಊರ ಹೆಸರುಗಳು ಗುರಿಯಾಗುತ್ತಿದ್ದರೂ ಹಳ್ಳಿಗರು ಮಾತ್ರ ಊರಿನ ಹಳೆಯ ಹೆಸರುಗಳನ್ನು ತೀವ್ರ ಬಿಟ್ಟು ಕೊಡುವುದಿಲ್ಲ. ಇದರಿಂದಾಗಿ ಒಂದೊಂದು ಊರಿಗೆ ಎರಡು ಹೆಸರುಗಳು ಬಳಕೆಯಲ್ಲಿರುತ್ತವೆ. ಉದಾ: ಎಳಮೇಲ–ಆಲಮೇಲ, ಹುಲಗಿ–ಮುನಿರಾಬಾದ. ೧೯೫೮ರ ರಜಾಕಾರ ದಂಗೆಯಲ್ಲಿ ಸಿಂದಗಿ ತಾಲೂಕಿನ

* ಸವದತ್ತಿ ಹತ್ತಿರ ಕಟ್ಟಲಾದ ಜಲಾಶಯಕ್ಕೆ ರೇಣುಕಸಾಗರ ಎಂಬ ಹೆಸರನ್ನು ಪ್ರಚಾರಮಾಡಿ ಆಮೇಲೆ ಇಂದಿರಾಸಾಗರ ಎಂದು ಬದಲಿಸುವ ಪ್ರಯತ್ನ ನಡೆಯಿತು.

ಕಕ್ಕಳಮೇಲಿಗೆ ವಿಜಯನಗರ ಎಂದು ಹೆಸರಿಟ್ಟರು. ಆದರೆ ಅದು ಬಹಳದಿನ ನಿಲ್ಲಲಿಲ್ಲ, ಹಳೆಯದೇ ಮುಂದುವರೆಯಿತು. ಲಕ್ಷೇಶ್ವರದ ಒಂದು ಓಣಿಗೆ ಇನ್ನೂ ಪುಲಿಗೆರೆ ಎಂಬ ಹಳೆಯ ಹೆಸರು ಉಳಿದುಕೊಂಡಿದೆ.

ಸಮಾರೋಪ:

ಗ್ರಾಮನಾಮಗಳಲ್ಲಿ ನಿಸರ್ಗವಾಚಿಗಳು ಅಲ್ಲಿಯ ಭೌಗೋಳಿಕ ಪರಿಸರವನ್ನು, ವಸತಿವಾಚಿಗಳು ಅಲ್ಲಿ ವಾಸಿಸಿದ ಜನಾಂಗದ ಇತಿಹಾಸವನ್ನು, ನಿರ್ಮಾಣ ವಾಚಿಗಳು ಅಲ್ಲಿ ತಲೆಯೆತ್ತಿದ್ದ ಬೃಹತ್ ನಿರ್ಮಾಣ (Constuction) ವನ್ನು ತಿಳಿಸುತ್ತವೆ. ವ್ಯಕ್ತಿನಾಮವಾಚಿಗಳು ಆ ಗ್ರಾಮನಿರ್ಮಾತೃವಿನ ಅಥವಾ ಅವನ ಸಂಬಂಧಿಯ ಅಥವಾ ಆ ಪ್ರದೇಶದ ಪ್ರಮುಖನ ವಿಷಯವನ್ನು ತಿಳಿಸಿದರೆ, ಬದಲಾದ ಹೆಸರು ಆ ಗ್ರಾಮದ ಇತಿಹಾಸದಲ್ಲಿಯ ತಿರುವನ್ನು ಸೂಚಿಸುತ್ತದೆ. ಕಾರಣ, ಗ್ರಾಮನಾಮಗಳು ಸಂಸ್ಕೃತಿಯ ಅಧ್ಯಯನಕ್ಕೆ ಅನೇಕ ದೃಷ್ಟಿಯಿಂದ ಉಪಯುಕ್ತ ಸಾಮಗ್ರಿಯೆನಿಸಿವೆ. ವ್ಯಕ್ತಿನಾಮ, ಕುಟುಂಬನಾಮಗಳಿಗಿಂತ ಗ್ರಾಮನಾಮ ಹೆಚ್ಚು ಪ್ರಾಚೀನವೂ, ಹೆಚ್ಚು ಅನ್ವರ್ಥಕವೂ ಆಗಿರುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಅದು ಹೆಚ್ಚು ಮಹತ್ವದ ಪಾತ್ರ ವಹಿಸುತ್ತದೆ.

ಈಗ ತಿಳಿದ ಮಟ್ಟಿಗೆ ಅಶೋಕನ ಶಾಸನದಲ್ಲಿ ಬರುವ 'ಇಸಿಲಿ' ಎಂಬುದೇ ನಮ್ಮ ನಾಡಿನ ಕಾಲನಿರ್ದೇಶಿತ ಪ್ರಥಮ ಗ್ರಾಮನಾಮ. ಕೋಟೆಯುಳ್ಳ ಗ್ರಾಮವೆಂದು ಇದಕ್ಕೆ ಅರ್ಥ.* ಅಶೋಕನ ಶಾಸನಗಳಲ್ಲಿ ಕಂಡುಬರುವ ಮಿಕ್ಕುವೆಲ್ಲ ಸಂಸ್ಕೃತ ಗ್ರಾಮನಾಮಗಳು. ಆದುದರಿಂದ ಕ್ರಿ.ಪೂ. ೩ನೇ ಶತಮಾನದ ಹೊತ್ತಿಗೆ ನಮ್ಮ ನೆಲದ ಮೇಲೆ ಸಂಸ್ಕೃತವು ಗ್ರಾಮನಾಮವಾಗುವಷ್ಟರ ಮಟ್ಟಿಗೆ ದಟ್ಟವಾಗಿ. ಆಳವಾಗಿ ನೆಲೆ ಪಡೆದ ಅಂಶ ಸ್ಪಷ್ಟವಾಗುತ್ತದೆ.

ಬೌದ್ಧಧರ್ಮ ಕರ್ನಾಟಕದ ಪ್ರಾಚೀನತಮ ಧರ್ಮಗಳಲ್ಲಿ ಒಂದು. ಭಾರತದ ಇತರೆಡೆಗಳಲ್ಲಿಯಂತೆ ಕರ್ನಾಟದಕಲ್ಲಿಯೂ ನಾಮಾವಶೇಷವಾಗಿರುವ ಇದರ ಶೋಧಕ್ಕೆ ಇತರ ಸಾಮಗ್ರಿಯಂತೆ ಗ್ರಾಮನಾಮಗಳೂ ನೆರವಾಗುತ್ತವೆ. ಉದಾ: ಬುದ್ಧನ ಹಳ್ಳಿ, ಬೌದ್ಧವಾಡಿಗೆ, ಬಸವನಬಾಗೇವಾಡಿ ತಾಲೂಕಿನ ಭೈರವಾಡಿಗೆಯೇ ಪ್ರಾಚೀನ ಬೌದ್ಧವಾಡಿಗೆಯಾಗಿದೆ.

ಕರ್ನಾಟಕದ ಇನ್ನೊಂದು ಪ್ರಮುಖಧರ್ಮ ಜೈನ. ಜಿನನಾಥಪುರ, ಶ್ರವಣೇರಿ, ಸವನಹಳ್ಳಿ, ಜೈನಾಪುರ, ಬಸ್ತಿಕಟ್ಟೆ, ಅರುವನಹಳ್ಳಿ, ವರ್ಧಮಾನಪುರ ಮುಂತಾದ ನಾಮಗಳು ಈ ಧರ್ಮದ ಅಸ್ತಿತ್ವವನ್ನು ಸಾರುತ್ತವೆ. ಲೊಕ್ಕಿಗುಂಡಿ ಹೆಸರೇ ಸೂಚಿಸುವಂತೆ ಲೊಕ್ಕಿ ಅಂದೆ ಪದ್ಮಾವತಿಯಕ್ಷಿಯ ನೆಲೆಯಾಗಿದ್ದಿತು.

ವಿಷ್ಣು, ಶಿವ ಸಂಪ್ರದಾಯಗಳಿಗೆ ಸಂಬಂಧಿಸಿದ ಗ್ರಾಮನಾಮಗಳಿಗೆ ನಮ್ಮಲ್ಲಿ ಲೆಕ್ಕವಿಲ್ಲ. ಕೌಲಗುಡ್ಡ, ಕೌಲಗಿ, ಕೌಲೂರುಗಳು ಕೌಲಪಂಥದ ನೆಲೆಯಾಗಿರಬೇಕು.

–ಮಂಗಲ, –ಗಾಲ ಎಂಬ ವಾರ್ಗಿಕಗಳುಳ್ಳ, ಮಹಾಜನ–, ಬ್ರಾಹ್ಮಣ–, ಶ್ರೋತ್ರಿಯ–, ಹಾರೋ–, ಹಾರನ–, ಪಾರ್ವನ– ಎಂಬ ನಿರ್ದಿಷ್ಟಗಳುಳ್ಳ, ಅಗ್ರಹಾರ, ಅಗರ ಎಂಬ ನಿರ್ದಿಷ್ಟ

---

* ಋಷಿ> ಇಸಿ+ಇಲ್=ಇಸಿಲ್>ಇಸಿಲ ಎಂದೂ ಬಿಡಿಸಬಹುದು.

ಅಲ್ಲವೆ ವಾರ್ಗಿಕ ಇಲ್ಲವೆ ಸ್ವತಂತ್ರ ರೂಪವುಳ್ಳ ಗ್ರಾಮನಾಮಗಳು ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳಾಗಿರುತ್ತವೆ.

ವ್ಯಕ್ತಿನಾಮವಾಚಿ ಗ್ರಾಮಸಂಖ್ಯೆ ನಮ್ಮಲ್ಲಿ ವಿಪುಲವಾಗಿದೆ. ಚೆನ್ನರಾಯ ಪಟ್ಟಣ, ಬುಕ್ಕಸಾಗರ, ವಿಜಯಾದಿತ್ಯಮಂಗಲ, ಮಾರಸಿಂಗನಹಳ್ಳಿ, ದೇವಣಗಾವ, ಅರಸಿಕೆರೆ, ವೀರವ್ವನಾಗತಿಹಳ್ಳಿ, ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು.

–ಕೋಟೆ, –ಗಡ ಎಂಬವಾರ್ಗಿಕವುಳ್ಳ ಗ್ರಾಮನಾಮಗಳು ಕೋಟೆಯ ರಚನೆಯನ್ನು ಸೂಚಿಸುತ್ತಿದ್ದು. –ಕೋಟೆ ವಾರ್ಗಿಕ ಊರುಗಳು ಪ್ರಾಚೀನ, –ಗಡ ವಾರ್ಗಿಕ ಊರುಗಳು ಆಧುನಿಕ. ಕೆರೆ. ಕುಳಿ, ಏರಿ, ಕೊಳ, ಕುಂಟೆ, ಗುಂಡಿ, ಬೆಂಚೆ, ಕುಳಿ, ಕೋಡಿ ಎಂಬ ದ್ರಾವಿಡ ವಾರ್ಗಿಕ, ಅಬುಂಧಿ, ಸಾಗರ, ಸಮುದ್ರ, ಕುಂಡ, ಸಂದ್ರ ಎಂಬ ಸಂಸ್ಕೃತ ವಾರ್ಗಿಕಗಳಿಂದ ಕೂಡಿದುವು ಜಲವಾಚಿ ಸ್ಥಳಗಳಾಗಿವೆ. ಕೋಲಾರ ಜಿಲ್ಲೆಯಲ್ಲಿ ಜಲವಾರ್ಗಿಕಯುಕ್ತ ಗ್ರಾಮಗಳು ಅತ್ಯಂತ ಅಧಿಕ. ಲೊಕ್ಕಿಗುಂಡಿ (ಲಕ್ಕುಂಡಿ) ಎಂಬ ಜಲವಾಚಿವಾಚಿನಾಮವು ಇಲ್ಲಿ ಕೆರೆ ಇರುವುದನ್ನೂ, ಕೆರೆಯ ದಂಡೆಯ ಮೇಲೆ ಪದ್ಮಾವತಿ (ಲೊಕ್ಕಿ) ದೇವಾಲಯವಿರುವುದನ್ನೂ ಆ ಕಾಲಕ್ಕಾಗಲೇ ಜೈನಯಕ್ಷಿ ಸಂಪ್ರದಾಯ ಈ ಪ್ರದೇಶದಲ್ಲಿ ಗಾಢವಾಗಿ ನೆಲೆಯೂರಿದ್ದ ಚಾರಿತ್ರಿಕ ಸತ್ಯವನ್ನೂ ಸೂಚಿಸುತ್ತದೆ. ಹೀಗೆ ಭೌಗೋಳಿಕ, ಧಾರ್ಮಿಕ ಮತ್ತು ಚಾರಿತ್ರಿಕ ಅಂಶಗಳನ್ನು ಏಕಕಾಲಕ್ಕೆ ಕೆಲವು ಗ್ರಾಮನಾಮಗಳು ಸೂಚಿಸುತ್ತವೆ.

ಕಲಬುರ್ಗಿಯಿಂದ ಬಿಜಾಪುರಕ್ಕೆ ಬರುವ ಮಾರ್ಗದ ಗುಂಟ ಕಲಬುರಗಿ, ಗೋಗಿ, ಜೇವರಗಿ, ನೇದಲಗಿ, ಜೇರಟಗಿ, ಮೋರಟಗಿ, ಗಬ್ಬಸಾವಳಿಗಿ, ಸಿಂದಗಿ, ಚಿಕ್ಕಸಿಂದಗಿ, ಹಿಪ್ಪರಗಿ, ಹೊನ್ನುಟಗಿ, ಕುಮಟಗಿ, ಶಿವಣಗಿ ಮುಂತಾದ ಊರುಗಳಿವೆ. ಇಲ್ಲಿಯ ಅತ್ಯಂದ 'ಗಿ' ಎಂಬುದು ಕೆಯ್ವ್ ಎಂಬುದರಿಂದ ಬಂದಿದ್ದರೆ ಅದು ಈ ಪ್ರದೇಶ ಬಯಲುನಾಡೆಂಬುದರ ಸೂಚನೆಯೆಂದಿಟ್ಟುಕೊಳ್ಳಬಹುದು.

ಕರಾವಳಿ ಪ್ರದೇಶದಲ್ಲಿ ನಿಸರ್ಗವಾಚಿ ನಾಮಗಳು (ಕಲ್ಲಡ್ಕ, ಕುಂಜಿಬೆಡ್ಡು) ಉತ್ತರ ಕರ್ನಾಟಕದಲ್ಲಿ ಜನಾಂಗವಾಚಿ ನಾಮಗಳು (ಕಲಂಬರಗೆ, ಹಿಪ್ಪರಗೆ, ಕುಂದರಗೆ), ದಕ್ಷಿಣ ಕರ್ನಾಟಕದಲ್ಲಿ ವ್ಯಕ್ತಿವಾಚಿನಾಮಗಳು (ಚಾಮರಾಜನಗರ, ಚೆನ್ನರಾಯಪಟ್ಟಣ) ಅಧಿಕ ಪ್ರಮಾಣದಲ್ಲಿವೆ. ಕರಾವಳಿ ಪ್ರದೇಶ ನಿಸರ್ಗಪ್ರಭಾವಿತ, ಉತ್ತರ ಕರ್ನಾಟಕ ಜನಾಂಗಗಳ ನೆಲೆ, ದಕ್ಷಿಣ ಕರ್ನಾಟಕ ಪಾಳೆಯಗಾರರ ಪ್ರದೇಶವಾಗಿರುವುದೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ "ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು (ಮತ್ತು ಸುಳ್ಯ) ತಾಲೂಕಿನ ಒಟ್ಟು ೧೦೮ ಸ್ಥಳನಾಮಗಳಲ್ಲಿ ಒಂದು ಮಾತ್ರ ವ್ಯಕ್ತ್ಯಂಶವನ್ನು ಹೊಂದಿದ್ದು, ಉಳಿದವು ಭೂವಾಚಕ ಹೆಸರುಗಳಾಗಿವೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಒಟ್ಟು ೯೩ ಸ್ಥಳನಾಮಗಳಿದ್ದು ಅವುಗಳ ಪೈಕಿ ಮೂರು ಮಾತ್ರ ವ್ಯಕ್ತಿಸೂಚಕವಾದವು. ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲೂಕಿನ ೨೮೦ ಸ್ಥಳನಾಮಗಳಲ್ಲಿ ೧೫೨ ವ್ಯಕ್ತ್ಯಂಶವುಳ್ಳವು"[೧] ಎಂಬ ಹೇಳಿಕೆಯನ್ನು ಗಮನಿಸಬೇಕು. ಅಧ್ಯಯನದ ದೃಷ್ಟಿಯಿಂದ ಕರಾವಳಿ ಕರ್ನಾಟಕದ

೧. ಕೆಮ್ತೂರ ರಘುಪತಿಬೆಟ್ಟ–ಹರತಿಸಿರಿ ೪೧೪.

ಗ್ರಾಮನಾಮಗಳು ಜಟಿಲ, ಉತ್ತರ ಕರ್ನಾಟಕದ ಗ್ರಾಮನಾಮಗಳು ಸರಳ, ದಕ್ಷಿಣ ಕರ್ನಾಟಕದ ಗ್ರಾಮನಾಮಗಳು ಇನ್ನೂ ಸರಳವೆನಿಸುತ್ತವೆ. ಇವು ಕ್ರಮವಾಗಿ ಕಾಲದೃಷ್ಟಿಯಿಂದ ಪ್ರಾಚೀನತಮ, ಪ್ರಾಚೀನತರ, ಪ್ರಾಚೀನವಾಗಿರುವುದೇ ಇದಕ್ಕೆ ಕಾರಣವಾಗಿದೆ. ಮಧ್ಯ ಕರ್ನಾಟಕದಲ್ಲಿ ಸ್ತ್ರೀವಾಚಿ ಗ್ರಾಮನಾಗಳು ವಿಪುಲ ಸಂಖ್ಯೆಯಲ್ಲಿವೆ. ಅಲ್ಲಿ ಆಳಿದ ಹೊಯ್ಸಳ ಅರಸರು ಶೃಂಗಾರಪ್ರಿಯರು, ವಿಜಯನಗರದ ಪಾಳೆಯಗಾರರು ವಿಷಯಲೋಲುಪರಾಗಿದ್ದ ಕಾರಣ ಇವರು ಸಹಜವಾಗಿ ತಮ್ಮ ಧರ್ಮಪತ್ನಿ, ಪ್ರೇಯಸಿಯರ ಹೆಸರಿನಲ್ಲಿ ಗ್ರಾಮಗಳನ್ನು ಕಟ್ಟಿಸಿದಂತಿದೆ; ಗ್ರಾಮಗಳಿಗೆ ಪುನರ್ನಾಮಕರಣ ಮಾಡಿದಂತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ "ನಾಗತಿಯರ ಹೆಸರುಗಳನ್ನು ಹೊತ್ತ ಊರುಗಳು ಈ ಮುಂದನಂತೆ ಸಾಲಾಗಿ ನಿಲ್ಲುತ್ತವೆ. ಚೆನ್ನಮ್ಮ ನಾಗತಿಹಳ್ಳಿ (ಚಳ್ಳಕೆರೆ ತಾಲ್ಲೂಕು), ವೀರವ್ವನಾಗತಿಹಳ್ಳಿ (ಹೊಸದುರ್ಗ), ವೀರವ್ವನಾಗತಿಹಳ್ಳಿ (ಹಿರಿಯೂರು), ಕಲ್ಲವ್ವನಾಗತಿಹಳ್ಳಿ (ಹೊಳಲ್ಕೆರೆ), ಕೆಂಚವ್ವನಾಗತಿಹಳ್ಳಿ (ಜಗಳೂರು), ಹನುಮವ್ವ ನಾಗತಿಹಳ್ಳಿ (ಜಗಳೂರು), ವೀರವ್ವನಾಗತಿಹಳ್ಳಿ (ಜಗಳೂರು), ಓಬವ್ವನಾಗತಿಹಳ್ಳಿ (ಚಿತ್ರದುರ್ಗ), ಕೆಂಚವ್ವನಾಗತಿಹಳ್ಳಿ (ಚಿತ್ರದುರ್ಗ), ಲಿಂಗವ್ವನಾಗತಿಹಳ್ಳಿ (ಚಿತ್ರದುರ್ಗ), ಬೊಮ್ಮವ್ವನಾಗತಿಹಳ್ಳಿ (ಚಿತ್ರದುರ್ಗ), ವೀರವ್ವನಾಗತಿಹಳ್ಳಿ (ಚಿತ್ರದುರ್ಗ)."*

ಮಾಸ್ತಿ, ಮಾಸ್ತಮರಡಿ, ಮಾಸ್ತಕೊಂಡ, ಮಾಸ್ತಿಹೊಳೆ ಇತ್ಯಾದಿಗಳು ಸ್ತ್ರೀಯೊಬ್ಬಳು ಮಾಸ್ತಿಯಾದ ಘಟನೆಯನ್ನು ಸೂಚಿಸುತ್ತವೆ. ಲೆಂಕನಹಳ್ಳಿ, ಗರುಡನಹಳ್ಳಿಗಳು ವೇಳೆವಾಳಿ ಸಂಪ್ರದಾಯವನ್ನು ಸೂಚಿಸುತ್ತವೆ. ಗುಂಡಬ್ರಹ್ಮನ ಹಳ್ಳಿ, ಉಗುರಗೋಳ, ಕಬ್ಬಿಗರಹಳ್ಳಿ, ಮಲ್ಲಿತಮ್ಮನಹಳ್ಳಿಗಳು ಇತಿಹಾಸ ಕಟ್ಟುವಲ್ಲಿ ನೆರವಾಗುತ್ತವೆ.

ಗ್ರಾಮನಾಮಗಳನ್ನು ಆಯಾ ಮತೀಯರು ತಮ್ಮ ಸಂಸ್ಕೃತಿ ಪ್ರಸಾರದ ಮಾಧ್ಯಮವನ್ನಾಗಿಸಿಕೊಳ್ಳುತ್ತ ಬಂದ ಅಂಶವೂ ಗಮನಾರ್ಹವಾಗಿದೆ. ತಮ್ಮ ಭಾಷೆ, ವ್ಯಕ್ತಿನಾಮ, ದೇವರನಾಮಗಳಿಂದ ತಮ್ಮ ಸಂಸ್ಕೃತಿ ಅಂಶಗಳನ್ನು ಗ್ರಾಮಗಳಿಗೆ ಬೆಸೆದು, ಈ ಕೆಲಸವನ್ನು ನಂಬುಗೆ ಹುಟ್ಟುವಂತೆ ಮಾಡಿಕೊಂಡು ಬರಲಾಗಿದೆ. ಉದಾ: ಮಂಚಾಲೆ--ಮಂತ್ರಾಲಯ, ಕೋಳಿವಾಡ-ಕುಕ್ಕುಟಪುರ, ಗಿಡದ ಹುಬ್ಬಳ್ಳಿ--(ರಂಗನಾಥ) ದೇವರಹುಬ್ಬಳ್ಳಿ, ಕೊಡುಗನಹಳ್ಳಿ--ರಾಮಾನುಜಪುರ ಎಂಬಲ್ಲಿ ಆರ್ಯಸಂಸ್ಕೃತಿಯ ಪ್ರಸಾರವನ್ನು ಗಮನಿಸಬಹುದು. ಮುಸಲ್ಮಾನರೂ, ಇಂಗ್ಲೀಷರೂ ಈ ಕೆಲಸವನ್ನು ತಕ್ಕ ಪ್ರಮಾಣದಲ್ಲಿ ಮಾಡಿದುದನ್ನು ಈ ಹಿಂದೆ ಗಮನಿಸಿದ್ದೇವೆ.

ಪುರ, ಪಟ್ಟಣ, ನಗರ- ಇವು ಮೂಲತಃ ವಿಶಿಷ್ಟ ಅರ್ಥವುಳ್ಳ ವಾರ್ಗಿಕ ಗಳಾಗಿರಬೇಕು. ದೇವಾಲಯದ ಅನುಕೂಲಕ್ಕಾಗಿ ಅದರ ಸುತ್ತು ಕಟ್ಟಿದ ಬಡಾವಣೆಯೇ ಪುರ. ಇಲ್ಲಿ ಪೂಜಾರಿ, ವಾದ್ಯ-ಓಲಗದವರು, ಹೂಗಾರರು, ಕಸಗುಡಿಸುವ ಸೇವಕರು, ಬಂದ ಭಕ್ತರಿಗೆ ಪೂಜಾಸಾಮಗ್ರಿ ಒದಗಿಸುವ ಅಂಗಡಿ ಇತ್ಯಾದಿಗಳು ಇರುತ್ತಿದ್ದವು. ದೇವಾಲಯಕ್ಕೆ ಪುರವನ್ನು ಕಟ್ಟಿಸಿದ ವಿಷಯ ಅನೇಕ ಶಾಸನಗಳಲ್ಲಿ ಬರುತ್ತದೆ. ಮುಂದೆ ಇದು ಒಂದು ಸಾಮಾನ್ಯ ವಾರ್ಗಿಕವೆಂಬಂತೆ ಬಳಕೆಗೊಳ್ಳತೊಡಗಿದೆ.

---

* ಚಿತ್ರದುರ್ಗ ಜಿಲ್ಲೆಯ ಸ್ಥಳನಾಮಗಳು: ಒಂದು ಅಧ್ಯಯನ (ಹರಿತಿಸಿರಿ) ಪುಟ ೪೨೩.

ಯಾವುದೇ ಗ್ರಾಮವು ಸಂತೆ ನೆರೆಯುವಿಕೆಯಿಂದ 'ಪಟ್ಟಣ'ವೆನಿಸಿಕೊಳ್ಳುತ್ತಿದ್ದಿತು. ಈ ಪಟ್ಟಣ ಅಂದರೆ ಸಂತೆ ನೆರೆಯಿಸುವ ವ್ಯವಸ್ಥೆ ನೋಡಿಕೊಳ್ಳುತ್ತದ್ದವರು ಪಟ್ಟಣಶೆಟ್ಟಿಗಳು. ಇದರಿಂದಾಗಿಯೇ "ಸೆಟ್ಟಿ ಸಿಂಗಾರ ಆಗೋದರಲ್ಲಿ ಪಟ್ಟಣ ಹಾಳಾಯಿತು". "ಸೆಟ್ಟಿ ಇಳಿದಲ್ಲಿ ಪಟ್ಟಣ" ಎಂಬ ಗಾದೆ ಮಾತುಗಳು ಹುಟ್ಟಿಕೊಂಡಿವೆ. ಅದರೆ ಕಾಲಕ್ರಮದಲ್ಲಿ ಪಟ್ಟಣವೆಂಬುದೂ ಸಾಮಾನ್ಯ ವಾರ್ಗಿಕವಾಗಿ ಬಳಕೆಯಾಗತೊಡಗಿತೆಂದು ತೋರುತ್ತದೆ. ಹೊಸಪಟ್ಟಣ ಎಂಬಂಥ ಹೆಸರುಗಳು ಸಂತೆಗಾಗಿ ಹೊಸದಾಗಿ ಕಟ್ಟಿದ ನೆಲೆಗಳೇ ಆಗಿದ್ದು, ಮುಂದೆ ಅವು ಗ್ರಾಮಗಳಾಗಿ ಬೆಳೇದಿರಬೇಕು. ಶಾಸನಗಳಲ್ಲಿ ಬರುವ ನಖರವೆಂಬ ವ್ಯಾಪಾರಿ ವರ್ಗವನ್ನು ನೆನಪಿಸುವ 'ನಗರ' ಎಂಬುದೂ ಬಳಿಕ ಸಾಮಾನ್ಯ ಅರ್ಥಕ್ಕೆ ಹೊರಳಿರಬಹುದಾಗಿದೆ. ಹೀಗೆ ಅನ್ವರ್ಥಕತೆ ಅಳಿದು, ಕೇವಲ ಅಂಕಿತ ನಾಮಗಳಾಗಿ ಉಳಿಯುವಿಕೆಯು ಅಪರೂಪವಾಗಿ ನಿಸರ್ಗವಾಚಿ ಗ್ರಾಮಗಳಲ್ಲಿಯೂ ಕಾಣಿಸಿಕೊಳ್ಳಬಹುದು. 'ಹಳ್ಳ' ಕಾರಣವಾಗಿ 'ಹಳ್ಳೂರ' ಎಂಬ, ದಿನ್ನಿ ಕಾರಣವಾಗಿ 'ದೇವರದಿನ್ನಿ' ಎಂಬ ಹೆಸರುಗಳು ಹುಟ್ಟಿರಬಹುದು. ಕಾಲಕ್ರಮೇಣ ಹಳ್ಳ ಪಾತ್ರ ಬದಲಿಸಿಕೊಂಡಿದ್ದಲ್ಲಿ, ದಿನ್ನೆ ಹಾಳಾಗಿದ್ದಲ್ಲಿ ಅವುಗಳಲ್ಲಿಯ ಪರಸ್ಪರ ಅನ್ವರ್ಥ ಸಂಬಂಧವೇ ತಪ್ಪಿಹೋಗುತ್ತದೆ. ಇಂದು ಅಂಥ ಗ್ರಾಮನಾಮಗಳ ಸಹಾಯದಿಂದ ಮರೆಯಾಗಿರುವ ಅಲ್ಲಿಯ ಭೌಗೋಳಿಕ ಸ್ಥಿತಿಯನ್ನು ಗುರುತಿಸಬಹುದಾಗಿದೆ.

ಲಿಖಿತ ಸಾಮಗ್ರಿಗಳು ನಿಂತಲ್ಲಿಂದ ಒಂದು ಗ್ರಾಮದ ಇತಿಹಾಸವನ್ನು ಅದರ ನಾಮಗಳು ಹಿಂದಕ್ಕೆ ಒಯ್ಯುತ್ತವೆಯೆಂದಯು ಹೇಳುವುದುಂಟು. ಇದಕ್ಕೆ ಉಡುಮರಡಿ ಗ್ರಾಮ ಉದಾಹರಣೆಯಾಗಿದೆ: ಚೆನ್ನಗಿರಿ ತಾಲ್ಲೂಕಿನ ಉಡುಮರಡಿ ಗ್ರಾಮಕ್ಕೆ ರಂತನಾಥಸ್ವಾಮಿಯ ಸ್ಥಾಪನೆಯಿಂದಾಗಿ ದೇವರಹಳ್ಳಿ ಎಂಬ ಹೆಸರು ರೂಢಿಯಾಯಿತು. ಉಡುವಿನ ಇನ್ನೊಂದು ರೂಪ ಈ ರಂಗನಾಥಸ್ವಾಮಿ; ಆದುದರಿಂದ ಇಲ್ಲಿ 'ಉಡು'ಗಳನ್ನು ಕೊಲ್ಲುವುದು ನಿಷಿದ್ಧ. ಇಷ್ಟು ಈ ಊರನ್ನು ಕುರಿತ ಕಥೆ. ಊರಿನ ಇತಿಹಾಸ ಕಟ್ಟಲು ಒಂದೂ ಶಾಸನವಿಲ್ಲ. ಗ್ರಾಮದ ಹೆಸರಿನಿಂದ ಅಲ್ಲಿ ಕೇಳಿಬರುವ ಕಥೆಯಿಂದ ಅದರ ಬೆಳವಣಿಗೆಯನ್ನು ಡಾ: ಚಿದಾನಂದಮೂರ್ತಿ ಅವರು ಹೀಗೆ ವಿವರಿಸುತ್ತಾರೆ. "೧. ಅಲ್ಲಿ ಮೊದಲಿನಿಂದ 'ಮರಡಿ' ಅಥವಾ ಮೊರಡಿ (ಗುಡ್ಡ) ಇತ್ತು. ೨.ಅಲ್ಲಿ ಒಂದು ಹುಡೇವು ಕಟ್ಟಿದ್ದರಿಂದ ಅದು 'ಹುಡೇವು ಮರಡಿ' ಅಥವಾ 'ಉಡುಮರಡಿ' ಎನ್ನಿಸಿಕೊಂಡಿತು. ೩. ನಂತರ ಅಲ್ಲಿ ಕಟ್ಟಿದ ರಂಗನಾಥದೇವಾಲಯದಿಂದ ಅದಕ್ಕೆ ದೇವರಹಳ್ಳಿ ಎಂದು ಹೆಸರಾಯ್ತು. ಜನರ ಬಾಯಿಯಿಂದ 'ಉಡುಮರಡಿ' ಎಂಬ ಹೆಸರು ಮಾಯವಾಗಲಿಲ್ಲ. ೪. ದೇವರು ಉಡದ ಆಕಾರವನ್ನು ತಾಳಿಕೊಂಡು ಬಂದ ಕಥೆ ಹುಟ್ಟಿಕೊಂಡಿತು (ಉಡುಮರಡಿ ಹೆಸರಿನ ಮೇಲೆ) ಉಡುಗಳು ಬದುಕಿಕೊಂಡವು"[೧] ಈ ವಿವರಣೆ, ಗ್ರಾಮನಾಮವನ್ನು ಸರಿಯಾಗಿ ಬಳಸಿಕೊಂಡು ನಿಜವಾದ ಇತಿಹಾಸವನ್ನು ಹೇಗೆ ಕಟ್ಟಬೇಕೆಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

---

೧. ವಾಗರ್ಥ: ಪುಟ.೩೮–೩೯.

ಗ್ರಾಮನಾಮಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಒಂದು ವೇಳೆ ಜನಾಂಗ ಸ್ಥಳಾಂತರಗೊಂಡರೂ ಆ ಬೇರುಗಳು ಅದರ ಮೂಲ ಅಸ್ತಿತ್ವವನ್ನು ಎತ್ತಿ ಹೇಳುತ್ತವೆ. ಉದಾ: ಮುಂಬೈನಗರದ ನಿಜವಾದ ರೂಪ ಬಹುಶಃ ಮುಂಬಾಯಿ. ಇದು ಕನ್ನಡದ 'ಬಾವಿ' ವಾರ್ಗಿಕವನ್ನು ಸೂಚಿಸುತ್ತದೆ. ಈ ಪಟ್ಟಣದ ಬಡಾವಣೆಗಳಾದ ಬೋರಿಬೇಲ, ಕಾಂದಿವೇಲ, ಡೊಂಬಿವೇಲಗಳು ಮೂಲತಃ ಕನ್ನಡಿಗರ ಬೋರಿವಳ್ಳಿ, ಕಾಂದಿವಳ್ಳಿ, ಡೊಂಬವಳ್ಳಿಗಳಾಗಿವೆ. ಮಹಾರಾಷ್ಟ್ರದಲ್ಲಿಯ ಲೋಖಂಡೆಯೆಂಬುದರ ನಿಜ ರೂಪ ಲಕ್ಕುಂಡಿ. ಇದು ಕನ್ನಡ ಹೆಸರು. ಈಗಿನ ಮಹಾರಾಷ್ಟ್ರದಲ್ಲಿಯ ಬಹುಪಾಲು ಗ್ರಾಮಗಳಿಗೆ ಹೀಗೆಯೇ ಕನ್ನಡ ನಿಷ್ಪತ್ತಿ ಹೇಳ ಬಹುದಾಗಿದೆ. ಹೀಗೆ ಗ್ರಾಮನಾಗಳು ಭೌಗೋಳಿಕ, ಧಾರ್ಮಿಕ, ವಾಣಿಜ್ಯ, ರಾಜಕೀಯ, ಸಾಮಾಜಿಕ, ಜಾನಾಂಗಿಕ ಚಟುವಟಿಕೆಗಳ ಹಿನ್ನಲೆಯಲ್ಲಿ ಹರಳುಹಟ್ಟಿದ ಪದಗಳಾಗಿವೆ.

ಈಗ ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಗ್ರಾ,ಮಗಳನ್ನು ಗಮನಿಸಿ Case Study ಮಾಡಬಹುದು. ಈ ತಾಲೂಕಿನಲ್ಲಿ ೧೨೨ ಹಳ್ಳಿಗಳಿವೆ, ಇವುಗಳ ಸ್ವರೂಪ, ಸ್ಥೂಲ ವರ್ಗೀಕರಣ ಹೀಗಿದೆ.

೧. I. ನಿಂಬರಗಿ, ಕಪ್ಪನಿಂಬರಗಿ, ನಂದರಗಿ, ನಿವರಗಿ, ಚೋರಗಿ, ಕೊಳುರಗಿ, ಮಿರಗಿ, ಹತ್ತರಕಿ=೮.

II. ಹಲಸಂಗಿ, ಅಹಿಸರಸಂಗಿ, ಹಡಲಸಂಗಿ, ಲಾಳಸಂಗಿ, ಸಾವಳಸಂಗಿ=೫.

III. ಹಂಜಗಿ, ರೂಗಿ, ಸಾಲೊಟಗಿ, ಬ್ಯಾಡಗಿ, ಕೂಡಗಿ, ರೋಡಗಿ, ಸಂಗೋಗಿ, ಯಾಳಗಿ=೮.

IV. ಝಳಕಿ, ಟಕ್ಕಳಕಿ, ಹಳಗುಣಕಿ, ಭತ್ತಗುಣಕಿ=೪

V. ತಡವಲಗಾ, ಗಣವಲಗಾ, ಜೀರಅಂಕಲಗಿ, ಮಾನಂಕಲಗಿ, ಇಂಗಳಗಿ, ಅರಜುಣಗಿ–I, ಅರಜುಣಗಿ–II, ಬೈರವಣಿಗಿ, ಅಂಜುಟಗಿ=೯

ಮೂಲತಃ ಇವು ಕೆಯ್, ಇಕ್ಕೆ, ಹಕ್ಕೆ, ಗ್ರಾಮ – ಈ ವಾರ್ಗಿಕಗಳಿಂದ ಕೂಡಿದ ಗ್ರಾಮನಾಮಗಳು.

೨. I. ಬೂದ್ಯಾಳ, ನಿಂಬಾಳ–I, ನಿಂಬಾಳ–II, ಚವಡಿಹಾಳ, ಗೋಡಿಹಾಳ, ಗೋಟ್ಯಾಳ, ನಂದ್ಯಾಳ, ಕಾತರಾಳ, ಬರಡೋಲ=೯

II. ಅಗಸನಾಳ, ಬಂಥನಾಳ, ಹಂಚಿನಾಳ, ಹಾವಿನಾಳ, ಕೆಂಗನಾಳ, ಅರಜನಾಳ, ಬಿಸನಾಳ, ದೇಗಿನಾಳ, ಡುಮಕನಾಳ, ಗೋರನಾಳ. ಕನಕನಾಳ, ಹಂಚಿನಾಳ, ಕೋಟನಾಳ, ರಾಜನಾಳ, ಶಿರನಾಳ=೧೫.

೩. ತೆನಿಹಳ್ಳಿ, ತೆಗ್ಗಿಹಳ್ಳಿ, ನಾಗರಹಳ್ಳಿ, ಮಾವಿನಹಳ್ಳಿ, ಮಾರಸನಹಳ್ಳಿ, ಲಿಂಗದಳ್ಳಿ, ಹಾಲಳ್ಳಿ, ಬೆನಕನಹಳ್ಳಿ, ಶಿರಕನಹಳ್ಳಿ, ಸೊನಕನಹಳ್ಳಿ, ಹತ್ತಳ್ಳಿ, ಮಸಳಿ–I, ಮಸಳಿ–II, ಬಳ್ಳೊಳ್ಳಿ=೧೪.

೪. ಮಣ್ಣೂರು, ಪಡನೂರ, ಆಲೂರ, ದಾಸೂರ, ಜೇವೂರ, ಕೆರೂರ, ಮರಗೂರ, ಶ್ರಾಗೂರ, ಬೇನೂರ–I, ಬೇನೂರ–II, ಶಿರಗೂರ=೧೧.

೫. ಚೆನ್ನಗಾವ, ಸಾತಲಗಾವ–I, ಸಾತಲಗಾವ–II, ರೇವತಗಾವ, ಬೋಳಗಾವ=೫.

೬. ಶಿವಪುರ–I, ಶಿವಪುರ–II, ಶಿಗಾನಪುರ, ಗೋವಿಂದಪುರ=೪.

೭. ಧೂಳಖೆಡ, ಅಗರಖೇಡ=೨.

೮. ಚಡಚಣ, ಹಿಂಗಣಿ, ಶಿರಡೋಣಿ, ಲಚ್ಯಾಣ, ಲೋಟಿ–I, ಲೋಣಿ–II=೬.

೯. ಶಿರಸ್ಯಾಡ, ತದ್ದೆವಾಡಿ, ವಾಡೆ, ಬಬಲಾದಿ, ಉಮ್ರಾಣಿ–೫.

೧೦. ಭೂಯಾರ, ಮೈಲಾರ, ಗ್ವಾಳಸಾರ=೩.

೧೧. ಇಂಚಗೇರಿ, ಕ್ಯಾರನಕೇರಿ=೨.

೧೨. ಬನ್ನಿಹಟ್ಟಿ, ಬಾರಾಗುಡಿ, ಕೊನಕಗೊಡ, ಗುಂಡವಾನ, ಜಿಗಜೀವನಿ, ಉಮರ್ಜಿ, ಅಣಚಿ, ಹೊರತಿ, ತಂಬ, ನಾದ, ಇಂಡಿ–I, ಇಂಡಿ–II, ಸಂಖ=೧೩.

ಪ್ರಚಲಿತ ಉಚ್ಚಾರವನ್ನು ಗಮನಸಲ್ಲಿಟ್ಟುಕೊಂಡು. ಈ ಗ್ರಾಮಗಳ ವಾರ್ಗಿಕರವನ್ನು ಆಧರಿಸಿ ೧೨ ಬಗೆಗಳಲ್ಲಿ ಮಾಡಿದ ಸ್ಥೂಲ ವರ್ಗೀಕರಣವಿದು. ಇದರಿಂದ ವ್ಯಕ್ತಿವಾಗುವುದು ಇಷ್ಟು:

೧. ಈ ತಾಲೂಕು ಬಯಲು ಪ್ರದೇಶವಾಗಿವೆ. ಏಕೆಂದರೆ ಬಹುಶಃ ಕೆಯ್ (=ಬಯಲುಭೂಮಿ) ಎಂಬುದರ ಸವೆದ ರೂಪಗಳಾದ ಕಿ,ಗಿ,ಗಾ ಕೊನೆಯುಳ್ಳ ಗ್ರಾಮಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಹೆಸರಿನ ಕೊನೆಗೆ ಗುಡ್ಡ, ದಿನ್ನೆ, ಕುಂದ ಇತ್ಯಾದಿ ಪದಗಳಿಲ್ಲದುದು., ಇದು ಬಯಲು ಪ್ರದೇಶವೆಂಬುದನ್ನು ಇನ್ನೂ ಸ್ಪಷ್ಟಪಡಿಸುತ್ತದೆ.

೨. ಇಲ್ಲಿ ನಿಂಬರು, ನಂದರು, ನೀವರು, ಚೋರರು, ಅತ್ತರು, ಹೆಸರಿನ ಜನಾಂಗಗಳು ನೆಲೆಸಿದ್ದವು.

೩. ಬೂದೆಯ, ನಿಂಬೆಯ, ಚವಡೆಯ, ಗೋಡೆಯ, ನಂದೆಯ, ಹಾವ,ಕೆಂಗ, ಅರಜ(ಸ?), ಬಿಸ, ಹೇಗ, ಡುಮುಕ, ಹಂಚ, ಬಂಟ, ಅಗಸ, ಗೋರ, ಕನಕ, ರಾಜ ಹೆಸರಿನ ವ್ಯಕ್ತಿಗಳು ಪಾಳೆಯ ಕಟ್ಟಿಕೊಂಡಿದ್ದರು.

೪. ಹಳ್ಳಿ (೧೩), ಊರು(೧೦), ಗಾವ(೪) ಅಂತ್ಯದ ಗ್ರಾಮಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ.

೫. ಪುರ(೩) ಅಂತ್ಯದ ಗ್ರಾಮಗಳು ಬಹುಶಃ ದೇವಾಲಯದ ಸುತ್ತು ಬೆಳೆದುವಾಗಿರಬೇಕು.

೬. ಇಂಚಗೇರಿ, ಕ್ಯಾತನಕೇರಿ ಎಂಬ ಎರಡೇ ಉಲ್ಲೇಖಗಳಿರುವುದರಿಂದ ಈ ತಾಲೂಕಿನಲ್ಲಿ ಕೆರೆ (>ಕೇರಿ)ಗಳು ಕಡಿಮೆ.

೭. ಭೂಯಾರ, ಮೈಲಾರ, ಗ್ವಾಳಸಾರ, ಅಗರಖೇಡ ಇವು ಅಗ್ರಹಾರಗಳಾಗಿರಬಹುದು. ಅಗರಖೇಡವಂತೂ 'ಅಗ್ರಹಾರಖೇಡ'ವೇ ಆಗಿದೆ. ಇವೆಲ್ಲ ನದಿದಂಡೆಯ ಮೇಲಿರುವುದು ವಿಶೇಷ. ಬ್ರಾಹ್ಮಣರ ಸ್ನಾನ–ಪಾನಾದಿಗಳಗೆ ನೀರು ಬೇಕು. ಮೇಲಾಗಿ ನದಿತೀರದ ಊರುಗಳ

ಉತ್ಪನ್ನ ಅಧಿಕ. ಹೀಗಾಗಿ ದಾನ ಪಡೆಯುವುದಾದಲ್ಲಿ, ಹೆಚ್ಚು ಉತ್ಪನ್ನದ ಗ್ರಾಮವನ್ನು ಪಡೆಯುವ ಜಾಣತನ ಮಾಡಿರುವರೆಂದು ಬೇರೆ ಹೇಳಬೇಕಾಗಿಲ್ಲ.

೮. ಕೋಟೆ, ಕೊಪ್ಪ ಇತ್ಯಾದಿಗಳಿಂದ ಕೊನೆಯಾಗುವ ಗ್ರಾಮಗಳಿಲ್ಲದುದರಿಂದ, ಇಲ್ಲಿ ಕೋಟೆಗಳು ಇಲ್ಲ, ಇದ್ದರೂ ವೈಶಿಷ್ಟ್ಯಪೂರ್ಣವಾಗಿಲ್ಲ.

೯. ಜನಾಂಗನಾಮ, ವ್ಯಕ್ತಿನಾಮಗಳೇ ಬಹಳ ಇರುವುದರಿಂದ ಈ ಗ್ರಾಮಗಳಿಗೆ ನಾಮಗಳನ್ನಿಡುವಲ್ಲಿ ನಿಸರ್ಗ ಅಷ್ಟಾಗಿ ಪ್ರಭಾವ ಮಾಡಿಲ್ಲ. ಅಂದರೆ, ಬೆಟ್ಟ, ನದಿ ಅರಣ್ಯಗಳ ಬಾಹುಳ್ಯ-ವೈವಿಧ್ಯತೆಯಿಲ್ಲ.

– ಹೀಗೆ ಗ್ರಾಮನಾಮಗಳು ಒಂದು ಪ್ರದೇಶದ ಭೌಗೋಳಿಕತೆಯನ್ನು, ಅಲ್ಲಿಯ ಜನತೆಯ ಇತಿಹಾಸ, ಸಂಸ್ಕೃತಿಗಳ ಸ್ವರೂಪವನ್ನು ತಿಳಿಸಿಕೊಡುವ ಉತ್ತಮ ಸಾಧನವೆನಿಸುತ್ತವೆ.

❖❖

ಕನ್ನಡ ಸಂಶೋಧನಶಾಸ್ತ್ರ

"ಸತ್ಯವನ್ನು ಸಮಗ್ರವಾಗಿ ಕಾಣುವುದು ಸಾಧ್ಯವಿಲ್ಲ"–ಪ್ಲೇಟೋ

ಎಂ. ಎಂ. ಕಲಬುರ್ಗಿ

೧೯೯೨

ಸೌಜನ್ಯ ಪ್ರಕಾಶನ

ಕಲ್ಯಾಣ ನಗರ, ಧಾರವಾಡ

ಮಕ್ಕಳು

ಪೂರ್ಣಿಮ, ಪ್ರತಿಮಾ, ರೂಪದರ್ಶಿ

ಶ್ರೀವಿಜಯ

ಇವರ ಪ್ರೀತಿಪೂರ್ವಕ ಪ್ರೀತಿಗೆ

*

ಅರಿಕೆ

(ಪ್ರಥಮ ಮುದ್ರಣ)

ಸಂಶೋಧನೆ ಮಾಡುವುದು ಕಷ್ಟ, ಸಂಶೋಧನೆಯ ಬಗ್ಗೆ ಬರೆಯುವುದು ಇನ್ನೂ ಕಷ್ಟ–ಎಂಬ ಸ್ಥಿತಿಯಲ್ಲಿ ನಿಂತು ಈ ಪುಸ್ತಕವನ್ನು ರಚಿಸಿದ್ದೇನೆ. ಕನ್ನಡದಲ್ಲಿ ಈವರೆಗೆ ಬಂದ ಇಂಥ ಪುಸ್ತಕಗಳು ಪಾಶ್ಚಿಮಾತ್ಯ ಸಂಶೋಧನಶಾಸ್ತ್ರದ ವಿಚಾರಗಳನ್ನು ಬೆರೆಸಿ ವಿಜ್ಞಾನ–ಸಮಾಜವಿಜ್ಞಾನ ನಿಕಾಯ(Faculty)ಗಳಿಗೆ ಸಂಬಂಧಿಸಿದ ಸಂಶೋಧನ ವಿಧಾನಗಳನ್ನು ಬಳಸಿ, ವಿಷಯವನ್ನು ಗೋಜಲುಗೊಳಿಸಿವೆ. ಇಂಥ ಗೊಂದಲಗಳಿಂದ ದೂರ ಉಳಿದು, ಕಲಾನಿಕಾಯ (Faculty) ದ ಪರಿಧಿಗೆ ಒಳಪಡುವ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನಕ್ಷೇತ್ರಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ಇಲ್ಲಿಯ ಬರವಣಿಗೆಗೆ ಏಕಮುಖತೆಯನ್ನು ಒದಗಿಸಲಾಗಿದೆ. ಇದು 'ಆವಿಷ್ಕರಣಾತ್ಮಕ ಸಂಶೋಧನಶಾಸ್ತ್ರ'ವಲ್ಲ 'ಅನ್ವೇಷಣಾತ್ಮಕ ಸಂಶೋಧನಶಾಸ್ತ್ರ'ವೆಂಬ ಸ್ಪಷ್ಟ ತಿಳುವಳಿಕೆಯಂತೂ ಈ ಬರಹದ ಹಿಂದೆ ಉದ್ದಕ್ಕೂ ಕೆಲಸ ಮಾಡಿದೆ.

ಕಳೆದ ೨೫ ವರ್ಷಗಳಿಂದ ನಾನು ಸಂಶೋಧನ ಕಾರ್ಯದಲ್ಲಿ ನಿರತನಾಗಿದ್ದೇನೆ. ಈವರೆಗಿನ ನನ್ನ ಅನುಭವಗಳನ್ನೇ ನಿಯಮ ಮಾಡಿಕೊಂಡು, ಮುಖ್ಯವಾಗಿ ನನ್ನ ಸಂಶೋಧನೆಯನ್ನೇ ನಿದರ್ಶನ ಮಾಡಿಕೊಂಡು ಈ ಪುಸ್ತಕ ರಚಿಸಿದ್ದೇನೆ. ಹೀಗಾಗಿ ಬಹಳಷ್ಟು ಸಲ ಇಲ್ಲಿ ನಿಯಮವೂ ನಾನೇ, ನಿದರ್ಶನವೂ ನಾನೇ ಆಗಿದ್ದೇನೆ.

ಈ ಕೃತಿಗೆ ಕನ್ನಡ ಸಂಶೋಧನಶಾಸ್ತ್ರ ಎಂದು ಹೆಸರಿಟ್ಟಿದ್ದೇನೆ. ಹೀಗೆ ಹೆಸರಿಡುವಾಗ ನಾನು ರಚಿಸಿದ 'ಕನ್ನಡ ಗ್ರಂಥಸಂಪಾದನಶಾಸ್ತ್ರ' ಎಂಬ ಕೃತಿನಾಮ ನನ್ನ ಮನಸ್ಸಿನಲ್ಲಿದೆ. ಇಲ್ಲಿ ಕನ್ನಡ ಮತ್ತು ಶಾಸ್ತ್ರ ಎಂಬ ಪದಗಳನ್ನು ಉದ್ದೇಶಪೂರ್ವಕ ಬಳಸಿದ್ದೇನೆ. ಕನ್ನಡಕ್ಕೆ ಅಗತ್ಯವಿಲ್ಲದ ವಿಚಾರಗಳನ್ನು ಕೈಬಿಟ್ಟು, ಕನ್ನಡನಿಷ್ಠ ಸಂಶೋಧನೆಯನ್ನೇ ಈ ಗ್ರಂಥದಲ್ಲಿ ಘನೀಭೂತ ಗೊಳಿಸಿರುವುದರಿಂದ 'ಕನ್ನಡ' ಎಂಬ ವಿಶೇಷಣ ಇಲ್ಲಿ ಸೂಕ್ತವಾಗಿದೆ. ಸಂಶೋಧನಶಾಸ್ತ್ರವೆಂಬುದು ಭೌತವಿಜ್ಞಾನ (Physics) ದಂತೆ ಒಂದು ವಿಜ್ಞಾನವಲ್ಲ, ಸಮಾಜಶಾಸ್ತ್ರ (Sociology) ದಂತೆ ಒಂದು ಶಾಸ್ತ್ರವಲ್ಲ, ಅವುಗಳ ಅಧ್ಯಯನದ ಒಂದು ವಿಧಾನ. ಅವು ಒಂದು ಜ್ಞಾನಘಟಕವನ್ನು ವಿವೇಚಿಸುತ್ತಿದ್ದರೆ, ಇದು ಆ ವಿವೇಚನೆಯ ವಿಧಾನವನ್ನು ಒಂದು ವಿಶಿಷ್ಟ ಕ್ರಮಕ್ಕೆ, ಶಿಸ್ತಿಗೆ ಅಳವಡಿಸಿ ಪ್ರತಿಪಾದಿಸುವುದರಿಂದ 'ಸಂಶೋಧನ ವಿಧಾನಶಾಸ್ತ್ರ'ವೆಂಬುದೇ ಸೂಕ್ತವಾಗಿದ್ದರೂ ರೂಢಿಕಾರಣವಾಗಿ 'ಸಂಶೋಧನಶಾಸ್ತ್ರ' ಎಂಬ ಶೀರ್ಷಿಕೆಯನ್ನು ಇಲ್ಲಿ ಬಳಸಿದ್ದೇನೆ. ಒಟ್ಟಿನಲ್ಲಿ ಅನ್ವೇಷಣಾತ್ಮಕ ಸಂಶೋಧನೆಯನ್ನು ಕುರಿತು ಒಂದು ತತ್ತ್ವಶಾಸ್ತ್ರವನ್ನು ರೂಪಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

ಹತ್ತು ವರ್ಷಗಳಷ್ಟು ಹಿಂದೆಯೇ ಕನ್ನಡ ಪಠ್ಯಕ್ರಮದಲ್ಲಿ 'ಸಂಶೋಧನಶಾಸ್ತ್ರ' ವಿಷಯವನ್ನು ಅಳವಡಿಸುವುದು, ಅಲ್ಲಿ ಒಂದು ಪುಸ್ತಕವ್ಯಾಪ್ತಿಯ ನೀಲನಕ್ಷೆ ಬಿಡಿಸುವುದು ನನ್ನ ಪಾಲಿಗೆ ಬಂದಿದ್ದಿತು. ಕೆಲವು ವರ್ಷ ಈ ವಿಷಯವನ್ನು ಬೋಧಿಸುವ ಅವಕಾಶವೂ ನನಗೆ ಒದಗಿದ್ದಿತು. ಆಗ ಡಿಸ್ಕವರಿ,

ಇನ್‌ವೆನ್‌ಶನ್, ರಿಸರ್ಚ್ ಇತ್ಯಾದಿಗಳ ಮೂಲಭೂತ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿ, ಡಿಸ್ಕವರಿ–ಅನ್ವೇಷಣ, ಇನ್‌ವೆನ್‌ಶನ್–ಆವಿಷ್ಕರಣ ಇತ್ಯಾದಿ ಪಾರಿಭಾಷಿಕ ಪದಗಳನ್ನು ಟಂಕಿಸಿ, ಸೂಕ್ತ ಉದಾಹರಣೆಗಳಿಂದ ವಿದ್ಯಾರ್ಥಿಗಳಿಗೆ ವಿಷಯವನ್ನು ಬೋಧಿಸುವ ಮೂಲಕ, ನನ್ನಿಂದ ಒಂದು ಬಗೆಯ "ಮೌಖಿಕ ಕನ್ನಡ ಸಂಶೋಧನಶಾಸ್ತ್ರ" ಅಸ್ತಿತ್ವಕ್ಕೆ ಬಂದು, ಈ ಭಾಗದಲ್ಲಿ ಪ್ರಚಾರದಲ್ಲಿದ್ದಿತು. ಸಿದ್ಧಾಂತ (Theory) ಮತ್ತು ಕಾರ್ಯವಿಧಾನ (Method) ಗಳ ಪಾಕವಾಗಿದ್ದ ಆ ಮೌಖಿಕ ಶಾಸ್ತ್ರವನ್ನು ಇಲ್ಲಿ ಲಿಖಿತಗೊಳಿಸಿದ್ದೇನೆ. ಹೀಗಾಗಿ ಈ ಗ್ರಂಥರಚನೆ ಒಂದು ಅರ್ಥದಲ್ಲಿ ಹತ್ತು ವರುಷಗಳಷ್ಟು ಹಳೆಯದೆಂದೇ ಹೇಳಬೇಕು.

ಈವರೆಗೆ ಕನ್ನಡದಲ್ಲಿ ಸಂಶೋಧನೆಯನ್ನು ಕುರಿತು ಕೆಲವು ಗ್ರಂಥಗಳು ಪ್ರಕಟವಾಗಿವೆ. ಅವುಗಳಿಗಿಂತ ಅನೇಕ ಅರ್ಥಗಳಲ್ಲಿ ಇದು ಭಿನ್ನವಾಗಿದ್ದರೆ, ವೈಜ್ಞಾನಿಕವಾಗಿದ್ದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ನನ್ನ ಶೈಕ್ಷಣಿಕ ಜೀವನವನ್ನು ಪೂರ್ಣಗೊಳಿಸುತ್ತಿರುವ ಒಂದು ತುದಿ ಡಾ. ಆರ್. ಸಿ. ಹಿರೇಮಠ ಅವರು, ಇನ್ನೊಂದು ತುದಿ ನನ್ನ ವಿದ್ಯಾರ್ಥಿಗಳು. ಆ ಗುರುಗಳಿಗೂ, ಈ ವಿದ್ಯಾರ್ಥಿಗಳಿಗೂ ನಾನು ಕೃತಜ್ಞನಾಗಿದ್ದೇನೆ.

೧೯೯೧ ಫೆಬ್ರುವರಿ ತಿಂಗಳಲ್ಲಿ ದಿಲ್ಲಿಯ 'ಕರ್ನಾಟಕ ಭವನ'ದಲ್ಲಿ ಮೂರು ದಿನ ಉಳಿದುಕೊಳ್ಳುವ ಸಂದರ್ಭ ಒದಗಿದ್ದಿತು. ಆಗ ಸಮಯದ ಸದುಪಯೋಗವನ್ನು ಚಿಂತಿಸಿದ ಫಲವಾಗಿ ಈ ಪುಸ್ತಕ ಅಲ್ಲಿ ರೂಪುಗೊಂಡಿತು. ಮುಂದಿನ ತಿಂಗಳಲ್ಲಿಯೇ, ಅಂದರೆ ೧೯೯೧ ಮಾರ್ಚ ೨, ೩ ರಂದು ಮುಂಬಯಿ ವಿಶ್ವವಿದ್ಯಾಲಯದ ಕನ್ನಡವಿಭಾಗದಲ್ಲಿ 'ಕನ್ನಡ ಸಂಶೋಧನಶಾಸ್ತ್ರ' ಹೆಸರಿನಲ್ಲಿ ಮೂರು ವಿಶೇಷೋಪನ್ಯಾಸ ನೀಡಿದೆ. ಆಮಂತ್ರಿಸಿದ ವಿಭಾಗದ ಮುಖ್ಯಸ್ಥ ಡಾ. ತಾಳ್ತಜೆ ವಸಂತಕುಮಾರ ಅವರಿಗೂ, ಅಂದಿನ ಶ್ರೋತೃವರ್ಗಕ್ಕೂ ನನ್ನ ವಂದನೆಗಳು. ಶ್ರದ್ಧೆ, ಪ್ರೀತಿಗಳಿಂದ ಮುದ್ರಿಸಿದ ಗದುಗಿನ ಅಲ್ಲಮ ಮುದ್ರಣಾಲಯದ ಶ್ರೀ. ಪಿ. ಆರ್. ಜಂಗಮನಿ ಅವರಿಗೂ, ಅಂದವಾಗಿ ಬೆರಳಚ್ಚು ಕಾರ್ಯವನ್ನು ಪೂರೈಸಿದ ಶ್ರೀ ಗಿರೀಶ ಕುಲಕರ್ಣಿಯವರಿಗೂ, ಕರಡಚ್ಚು ತಂದುಕೊಡುವಲ್ಲಿ ನೆರವಾದ ಶ್ರೀ ಸಿ. ಆರ್. ಕಾಡಪ್ಪನವರ ಅವರಿಗೂ ನನ್ನ ಅಭಿನಂದನೆಗಳು.

೧೯೯೨ — ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

೧

❖

ಸಂಶೋಧನೆ–ಸಂಶೋಧಕ

ಸಂಶೋಧನೆ: ಸಂಶೋಧನೆಯ ಅರ್ಥ, ಸಂಶೋಧನೆಯ ವ್ಯಾಪ್ತಿ/ ಸಂಶೋಧಕ; ಸಂಶೋಧಕನ ಅರ್ಹತೆಗಳು–ಕುತೂಹಲ, ಪ್ರಾಮಾಣಿಕತೆ, ಧೈರ್ಯ, ವ್ಯುತ್ಪತ್ತಿ, ಕ್ರಿಯಾಶೀಲತೆ.

ಸಂಶೋಧನೆ

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಆರ್ಯರ ಆಗಮನ, ಮುಸಲ್ಮಾನರ ದಾಳಿ ಮತ್ತು ಆಂಗ್ಲರ ಪ್ರವೇಶಗಳು ಚರಿತ್ರಾರ್ಹ ಘಟನೆಗಳೆನಿಸಿವೆ. ಇವರ ಸಂಪರ್ಕದಿಂದಾಗಿ ಭಾರತೀಯರ ಜೀವನ ವಿಧಾನ, ಆಲೋಚನಾಪದ್ಧತಿಗಳಲ್ಲಿ ಬಹುದೊಡ್ಡ ಬದಲಾವಣೆಗಳು ಸಂಭವಿಸಿದವು. ಇವುಗಳಲ್ಲಿ ಯುದ್ಧಸಂಸ್ಕೃತಿಯ ಮುಸಲ್ಮಾನರಿಗಿಂತ ಕೃಷಿಸಂಸ್ಕೃತಿಯ ಆರ್ಯರ ಮತ್ತು ಯಂತ್ರಸಂಸ್ಕೃತಿಯ ಆಂಗ್ಲರ ಪ್ರವೇಶಗಳು ಹೆಚ್ಚು ಮಹತ್ವಪೂರ್ಣವಾದುವು. ಆಂಗ್ಲರು ಈ ಯಂತ್ರಸಂಸ್ಕೃತಿಯನ್ನು ಮಾಧ್ಯಮವನ್ನಾಗಿಟ್ಟುಕೊಂಡು ನಮ್ಮ ಭೌತಿಕ ಮತ್ತು ಬೌದ್ಧಿಕ ಬದುಕಿನಲ್ಲಿ ಹೊಸ ಹೊಸ ಬದಲಾವಣೆಗಳನ್ನು ರೂಢಿಸಿದರು. ಈ ಯಂತ್ರಸಂಸ್ಕೃತಿಯ ಒಂದು ಭಾಗ ಮುದ್ರಣಯಂತ್ರ. ಇದರ ಶೋಧದಿಂದಾಗಿ ಅಕ್ಷರಜಗತ್ತಿನಲ್ಲಿ ಅದ್ಭುತವಾದ ಕ್ರಾಂತಿ ತಲೆದೋರಿತು. ಆಗ ಭಾರತೀಯ ಜ್ಞಾನವಾಹಿನಿ, ಹಸ್ತಪ್ರತಿಯ ಮಾಧ್ಯಮವನ್ನು ತೊರೆದು, ಯಂತ್ರಪ್ರತಿಯ ಮಾಧ್ಯಮವನ್ನು ಅವಲಂಬಿಸುವಲ್ಲಿ, ಅದಕ್ಕೆ ವೇಗ ವಿಸ್ತಾರಗಳು ಪ್ರಾಪ್ತವಾದವು. ಜೊತೆಗೆ ನಮ್ಮ ಹಳೆಯ ಜ್ಞಾನಶಾಖೆಗಳು ಹೊಸ ರೂಪ ಪಡೆದವು. ಪಶ್ಚಿಮದ ಹೊಸ ಜ್ಞಾನಶಾಖೆಗಳೂ ನಮ್ಮಲ್ಲಿ ಅಸ್ತಿತ್ವಕ್ಕೆ ಬಂದವು. ಹೀಗೆ ಅಸ್ತಿತ್ವಕ್ಕೆ ಬಂದವುಗಳಲ್ಲಿ ಬಹುಮುಖ್ಯ ಜ್ಞಾನಶಾಖೆಯಾಗಿದೆ, "ಸಂಶೋಧನೆ."

೧೯ನೆಯ ಶತಮಾನದಲ್ಲಿ ಭಾರತವನ್ನು ಪ್ರವೇಶಿಸಿದ ಈ ಶಾಖೆಯ ಎಲ್ಲ ತತ್ತ್ವಗಳನ್ನು ಎಲ್ಲಾ ಕಾರ್ಯವಿಧಾನಗಳನ್ನು ಪ್ರತಿಪಾದಿಸುವುದಾಗಿದೆ "ಸಂಶೋಧನಶಾಸ್ತ್ರ." ಇದು ಭಾಷಾಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರಗಳಂತೆ ಒಂದು ಶಾಖೆಯಲ್ಲ. ಈ ಎಲ್ಲ ಶಾಖೆಗಳ ಅರ್ಥಮಾಡಿಕೊಳ್ಳುವಿಕೆ, ಮುಂದುವರಿಕೆಗಳ ತತ್ವ ಮತ್ತು ವಿಧಾನಗಳನ್ನು ಪ್ರತಿಪಾದಿಸುವ ಒಂದು ಶಾಸ್ತ್ರವಾಗಿದೆ.

ಸಂಶೋಧನೆಯ ಅರ್ಥ:

"ಸಂಶೋಧನೆ" ಎಂಬುದರ ಮೂಲಸಂವಾದಿ ಇಂಗ್ಲಿಷಿನ Research ಎಂಬ ಪದ. ಅದು Re–ಎಂಬ ಪೂರ್ವಪ್ರತ್ಯಯ ಮತ್ತು Search ಎಂಬ ಪ್ರಕೃತಿಗಳ ಸಂಯುಕ್ತ ರೂಪವಾಗಿದೆ. Re-

ಎಂಬುದಕ್ಕೆ ಅನೇಕ ಅರ್ಥಗಳಿದ್ದರೂ ಪ್ರಸ್ತುತದಲ್ಲಿ ಚೆನ್ನಾಗಿ, ಸರಿಯಾಗಿ ಎಂಬ ಅರ್ಥಗಳು ಮುಖ್ಯವಾದುವು. ಆಮೇಲಿನ Search ಎಂಬುದಕ್ಕೆ "ಹುಡುಕು" ಎಂದು ಅರ್ಥ. ಆದುದರಿಂದ Research ಎಂಬುದು ಚೆನ್ನಾಗಿ ಹುಡುಕು. ಸರಿಯಾಗಿ ಹುಡುಕು ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. ಇದಕ್ಕೆ ನಾವು ಬಳಸುತ್ತಲಿರುವ ಪರ್ಯಾಯ ಪದ "ಸಂಶೋಧನೆ."

ಸಂಶೋಧನೆ ಎಂಬುದಕ್ಕೆ ಮೂಲ ಸಂಸ್ಕೃತದ ಶುಧ್ (=ಶುದ್ಧ ಮಾಡು) ಎಂಬ ಧಾತು. ಇದರಿಂದ ಶೋಧ (=ಶುದ್ಧ ಮಾಡಿದುದು), ಶೋಧನ (=ಶುದ್ಧ ಮಾಡುವುದು) ರೂಪಗಳು ಸಿದ್ಧವಾಗುತ್ತವೆ. ಶೋಧನ ಎಂಬುದಕ್ಕೆ ಸಂ (=ಚೆನ್ನಾಗಿ, ಸರಿಯಾಗಿ) ಎಂಬ ಪೂರ್ವಪ್ರತ್ಯಯ ಸೇರಿ, ಸಂಶೋಧನೆ (=ಚೆನ್ನಾಗಿ ಶುದ್ಧ ಮಾಡುವುದು, ಸರಿಯಾಗಿ ಶುದ್ಧ ಮಾಡುವುದು) ಎಂಬ ಪದ ಸಿದ್ಧವಾಗಿದೆ. ಇದು ಕನ್ನಡದಕ್ಕೆ ಬರುವಾಗ ಸಂಶೋಧನೆ ಎಂಬ ಸಮಸಂಸ್ಕೃತರೂಪ ತಾಳುತ್ತದೆ. ಈವರೆಗಿನ ವಿವೇಚನೆಯನ್ನು ಹೀಗೆ ರೇಖಿಸಬಹುದು:

ಶುಧ್(ಧಾತು) = ಶುದ್ಧ ಮಾಡು.

ಶೋಧ = ಶುದ್ಧ ಮಾಡಿದುದು.

ಶೋಧನ = ಶುದ್ಧ ಮಾಡುವುದು.

ಸಂಶೋಧನ = ಚೆನ್ನಾಗಿ ಶುದ್ಧ ಮಾಡುವುದು, ಸರಿಯಾಗಿ ಶುದ್ಧ ಮಾಡುವುದು.

ಸಂಶೋಧನೆ = ಸಂಶೋಧನ ಎಂಬುದರ ಸಮಸಂಸ್ಕೃತ ರೂಪ.

ಇಲ್ಲಿಯ Research ಮತ್ತು ಸಂಶೋಧನ ಪದಗಳ ಆದಿಪ್ರತ್ಯಯಗಳಾದ Re, ಸಂ-ಎಂಬಿವು ಕ್ರಿಯೆಯ ಗಾಢತೆಯನ್ನು, ನಿರ್ದಿಷ್ಟತೆಯನ್ನು ಸೂಚಿಸುತ್ತಿರುವುದು ಮಹತ್ವದ ಅಂಶವಾಗಿದೆ. ಈ ಪ್ರತ್ಯಯಗಳನ್ನು ಬಿಟ್ಟರೆ ಉಳಿಯುವ ಸಂಸ್ಕೃತದ ಶೋಧನ ಎಂಬುದಕ್ಕೆ ಶುದ್ಧ ಮಾಡುವುದು ಎಂಬ ಅರ್ಥ, ಇಂಗ್ಲೀಷಿನ Search ಎಂಬುದಕ್ಕೆ ಹುಡುಕು ಎಂಬ ಅರ್ಹಗಳಿದ್ದರೂ ಇವುಗಳ ಅಂತಿಮ ಉದ್ದೇಶ ಒಂದೇ ಆಗಿರುವುದರಿಂದ Re+Search ಎಂಬುದಕ್ಕೆ ಸಂ-ಶೋಧನ ಎಂಬುದನ್ನು ಸಂವಾದಿ ಪದವೆಂದು ಇಟ್ಟುಕೊಂಡುದು ಯೋಗ್ಯವಾಗಿದೆ.

ಒಟ್ಟಿನಲ್ಲಿ, 'ಶುದ್ಧೀಕರಿಸು' ಎಂಬ ವಾಚ್ಯಾರ್ಥದಲ್ಲಿ, 'ಹುಡುಕು' ಎಂಬ ವಿಶೇಷಾರ್ಥದಲ್ಲಿ "ಸಂಶೋಧನೆ" ಎಂಬ ಪದ ಮೊದಲಿನಿಂದಲೂ ನಮ್ಮಲ್ಲಿ ಬಳಕೆಯಲ್ಲಿದ್ದಿತು. ಆದರೆ ಇಂಗ್ಲೀಷ್‌ರಿಂದಾಗಿ ಒಂದು ಶೈಕ್ಷಣಿಕ ಶಿಸ್ತನ್ನು ಪ್ರತಿಪಾದಿಸುವ, ಪ್ರತಿನಿಧಿಸುವ ಪದವಾಗಿ ಅದು ಬೆಳೆದುನಿಂತಿತು.

ಸಂಶೋಧನೆಯ ವ್ಯಾಪ್ತಿ :

ಇನ್‌ವೆನ್‌ಶನ್, ಡಿಸ್ಕವರಿ, ರೀಸರ್ಚ್-ವಿಭಿನ್ನ ಅರ್ಥದ ಈ ಇಂಗ್ಲಿಷ್ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ ಸಂಶೋಧನೆ ಎಂಬ ಒಂದೇ ಪದವನ್ನು ಬಳಸುತ್ತಲಿದ್ದೇವೆ. ಹೀಗೆ ಭಿನ್ನಪ್ರಕ್ರಿಯೆಗಳಿಗೆ ಒಂದು ಪದವನ್ನು ಬಳಸುವುದು ಸಂಶೋಧನೆಯ ಪರಿಕಲ್ಪನೆಯನ್ನೇ ಗೋಜಲುಗೊಳಿಸುತ್ತಲಿದೆ. ಆದುದರಿಂದ ಇನ್‌ವೆನ್‌ಶನ್, ಡಿಸ್ಕವರಿ ಮತ್ತು ರೀಸರ್ಚ್ ಪದಗಳ ನಿರ್ದಿಷ್ಟ ಅರ್ಥವನ್ನು, ಅವುಗಳ ಪರಸ್ಪರ ಸಂಬಂಧ-ವ್ಯತ್ಯಾಸಗಳನ್ನು ಸ್ಪಷ್ಟಪಡಿಸುತ್ತ, ಅವುಗಳಿಗೆ ಸಂವಾದಿಯಾದ ಸ್ವತಂತ್ರ

ಹೊಸ ಪದಗಳನ್ನು ಕನ್ನಡದಲ್ಲಿ ಸೃಷ್ಟಿಸುವುದು ಅವಶ್ಯವಿದೆ. ಈ ದಿಸೆಯಲ್ಲಿ ಹೀಗೆ ಸಮಾಲೋಚಿಸಬಹುದು:

Discovery ಎಂಬ ನಾಮಪದ Discover ಎಂಬ ಕ್ರಿಯಾಪದದಿಂದ ಬಂದುದಾಗಿದೆ. ಇಲ್ಲಿ Dis ಎಂಬುದು ನಿಷೇದಾರ್ಥಕ ಪ್ರತ್ಯಯ, Cover ಎಂದರೆ ಆವರಣ. ಹೀಗಾಗಿ Discover ಎಂಬುದಕ್ಕೆ ಆವರಿಸಿರುವ ತೆರೆ (Cover) ಯನ್ನು ಸರಿಸು, ಸತ್ಯವನ್ನು ಅನಾವರಣ (Uncover) ಗೊಳಿಸು ಎಂದೂ discovery ಎಂಬುದಕ್ಕೆ ಆವರಿಸಿರುವ ತೆರೆಯನ್ನು ಸರಿಸುವುದು, ಸತ್ಯವನ್ನು ಅನಾವರಣಗೊಳಿಸುವುದು ಎಂದೂ ಅರ್ಥ. ಇದು ಇದ್ದೂ ಕಣ್ಮರೆಯಲ್ಲಿ ಉಳಿದಿರುವುದನ್ನು ಹುಡುಕುವುದಾಗಿದೆ. ಉದಾ: ಅಮೇರಿಕೆಯ ಶೋಧ, ಹಲ್ಮಿಡಿ ಶಾಸನದ ಶೋಧ, ಹಲ್ಮಿಡಿ ಶಾಸನದ 'ಪ್ರೇಮಾಲಯಸುತನ್' ಶಬ್ದದ ಅರ್ಥಶೋಧ ಮತ್ತು ಸಬ್ಬಿಂಗದರ್ ಪದದ ರೂಪಶೋಧ ಇತ್ಯಾದಿ. ಇದು ವಿಜ್ಞಾನೇತರ ಕ್ಷೇತ್ರದಲ್ಲಿ (ಸಮಾಜ, ಸಂಸ್ಕೃತಿ, ಕಲೆ, ಸಾಹಿತ್ಯ) ನಡೆಯುವ ಕ್ರಿಯೆಯಾಗಿದೆ.

Invention ಎಂಬ ನಾಮಪದ Invent ಎಂಬ ಧಾತುವಿನಿಂದ ನಿಷ್ಪನ್ನವಾದುದದಾಗಿದೆ. ಇಲ್ಲಿ Invent ಎಂಬುದಕ್ಕೆ ಸೃಷ್ಟಿಸು, ನಿರ್ಮಿಸು ಎಂದೂ Invention ಎಂಬುದಕ್ಕೆ ಸೃಷ್ಟಿಸುವುದು, ನಿರ್ಮಿಸುವುದು ಎಂದೂ ಅರ್ಥ. ಒಟ್ಟಿನಲ್ಲಿ Invention ಎಂಬುದಕ್ಕೆ ಹೊಸ ಸೃಷ್ಟಿ ಅಥವಾ ಹೊಸ ನಿರ್ಮಿತಿ ಎಂದು ಅರ್ಥ. ಎಡಿಸನ್‌ನ ವಿದ್ಯುತ್ ಶೋಧ, ರೈಟ್ ಸಹೋದರರ ವಿಮಾನಶೋಧ ಮುಂತಾದವು Inventionಗಳಾಗಿವೆ. ಇದು ವಿಜ್ಞಾನಕ್ಷೇತ್ರದಲ್ಲಿ ನಡೆಯುವ ಕ್ರಿಯೆಯಾಗಿದೆ.

ಈವರೆಗಿನ ವಿವೇಚನೆಯಿಂದ ಹುಡುಕುವಿಕೆಯ ಎರಡು ತೆರನಾಗಿದೆ ಎಂದು ಸ್ಪಷ್ಟವಾಗುತ್ತದೆ. ಒಂದು ಇದ್ದೂ ಕಣ್ಮರೆಯಾಗಿರುವ ಹಳೆಯದನ್ನು ಹುಡುಕುವುದು, ಭೂತಕಾಲಕ್ಕೆ ಸಂಬಂಧಿಸಿದುದು, ಇದು ಡಿಸ್ಕವರಿ. ಇನ್ನೊಂದು : ಈವರೆಗೆ ಇಲ್ಲದ ಹೊಸದನ್ನು ಹುಡುಕುವುದು, ಭವಿಷ್ಯತ್ ಕಾಲಕ್ಕೆ ಸಂಬಂಧಿಸಿದುದು, ಇದು ಇನ್‌ವೆನ್‌ಶನ್. ಇಂಗ್ಲೀಷ್‌ಭಾಷೆಯಲ್ಲಿ ಈ ಪದಗಳು ಹೀಗೆ ನಿರ್ದಿಷ್ಟ ಅರ್ಥದಲ್ಲಿ ಬಳಕೆಯಾಗುತ್ತಿವೆ. ನಾವು ಮಾತ್ರ ಈ ಎರಡನ್ನೂ 'ಸಂಶೋಧನೆ' ಎಂಬ ಒಂದೇ ಪದದಿಂದ ಕರೆಯುವುದರಿಂದ ವಿಷಯ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಇನ್ನು ಮೇಲಾದರೂ ಹಳೆಯದನ್ನು ಹುಡುಕುವ ಡಿಸ್ಕವರಿಗೆ 'ಅನ್ವೇಷಣ'ವೆಂಬ, ಹೊಸದನ್ನು ಹುಡುಕುವ ಇನ್‌ವೆನ್‌ಶನ್‌ಕ್ಕೆ 'ಆವಿಷ್ಕರಣ'ವೆಂಬ ಪದಗಳನ್ನು ಕಟ್ಟುನಿಟ್ಟಾಗಿ ಬಳಸಬೇಕಾಗಿದೆ.

ಮೇಲೆ ಹೇಳಿದ ಡಿಸ್ಕವರಿ ಪ್ರಕಾರದ ಹಿಂದೆಯೂ ರೀಸರ್ಚ್ ಇರುತ್ತದೆ. ಇನ್‌ವೆನ್‌ಶನ್ ಪ್ರಕಾರದ ಹಿಂದೆಯೂ ರೀಸರ್ಚ್ ಇರುತ್ತದೆ. ಆದುದರಿಂದ ಡಿಸ್ಕವರಿ, ಇನ್‌ವೆನ್‌ಶನ್‌ಗಳಂತೆ ರೀಸರ್ಚ್ ಎಂಬುದು ಒಂದು ಸಂಶೋಧನ ಪ್ರಕಾರವಲ್ಲ, ಅವುಗಳ ಹಿಂದೆ ನಡೆಯುವ ಒಂದು ಪ್ರಕ್ರಿಯೆ. ಇಲ್ಲಿ ಡಿಸ್ಕವರಿಯ ಹಿಂದೆ ನಡೆಯುವ ಶೋಧಪ್ರಕ್ರಿಯೆಯನ್ನು ಅನ್ವೇಷಣಾತ್ಮಕ ಸಂಶೋಧನೆಯೆಂದೂ, ಇನ್‌ವೆನ್‌ಶನ್‌ದ ಹಿಂದೆ ನಡೆಯುವ ಶೋಧಪ್ರಕ್ರಿಯೆಯನ್ನು 'ಆವಿಷ್ಕರಣಾತ್ಮಕ ಸಂಶೋಧನೆ' ಎಂದೂ, ಈ ಕ್ರಿಯೆಯಲ್ಲಿ ತೊಡಗಿರುವವರನ್ನು ಕ್ರಮವಾಗಿ 'ಅನ್ವೇಷಣಾತ್ಮಕ ಸಂಶೋಧಕ' 'ಆವಿಷ್ಕರಣಾತ್ಮಕ ಸಂಶೋಧಕ'ರೆಂದೂ ಕರೆಯಬಹುದಾಗಿದೆ.

ಆವಿಷ್ಕರಣಾತ್ಮಕ ಸಂಶೋಧನೆಯಲ್ಲಿ ವಿದ್ವಾಂಸನಾದವನು ವಸ್ತುಗಳೊಂದಿಗೆ ವ್ಯವಹರಿಸುತ್ತಾನೆ. ಅವುಗಳಿಗೆ ಭಾವನೆಗಳಿರುವುದಿಲ್ಲ. ಅವನು ಬಳಸಿಕೊಂಡಂತೆ ಸುಮ್ಮನೆ ಅವು ಒಪ್ಪಿಕೊಳ್ಳುತ್ತವೆ.

ಅನ್ವೇಷಣಾತ್ಮಕ ಸಂಶೋಧನೆಯಲ್ಲಿ ವಿದ್ವಾಂಸನಾದವನು ಇಂದಿನ ವ್ಯಕ್ತಿ-ಸಮಾಜ-ಸಂಸ್ಕೃತಿಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಗತಕಾಲದ ವಿಷಯಗಳೊಂದಿಗೆ ವ್ಯವಹರಿಸುತ್ತಾನೆ. ಇವುಗಳಿಗೆ ಭಾವನೆಗಳಿರುವುದರಿಂದ ಸಂಶೋಧಕನಿಗೆ ಇವು ಪ್ರತಿಕ್ರಿಯೆಯನ್ನು ಸೂಚಿಸುತ್ತವೆ. ಈ ದೃಷ್ಟಿಯಿಂದ ನೋಡಿದರೆ ಅನ್ವೇಷಣಾತ್ಮಕ ಸಂಶೋಧಕ ತುಂಬ ಎಚ್ಚರಿಕೆಯಿಂದ ವ್ಯವಹರಿಸಬೇಕೆನಿಸುತ್ತದೆ.

ಆವಿಷ್ಕರಣಾತ್ಮಕ ಸಂಶೋಧನೆ ವಿಜ್ಞಾನನಿಕಾಯ (Science faculty)ದಲ್ಲಿ ನಡೆಯುವ ಕ್ರಿಯೆಯಾಗಿದ್ದರೂ ಪ್ರಾಚೀನರು ಕಂಡುಹಿಡಿದಿದ್ದ, ಆದರೆ ಕಾಲಕ್ರಮದಲ್ಲಿ ಅಜ್ಞಾತವಾಗಿದ್ದ ವಿಷಯದ ಶೋಧಕ್ಕೆ ಅಲ್ಲಿ ಅವಕಾಶವಿರುವುದರಿಂದ ಗೌಣವಾಗಿಯಾದರೂ ವಿಜ್ಞಾನಕ್ಷೇತ್ರದಲ್ಲಿ ಅನ್ವೇಷಣಾತ್ಮಕ ಸಂಶೋಧನೆಗೆ ಸ್ಥಾನವಿದೆಯೆಂದು ಹೇಳಬಹುದಾಗಿದೆ. ಇದಕ್ಕೆ ವಿರುದ್ಧವೆಂಬಂತೆ ಅನ್ವೇಷಣಾತ್ಮಕ ಸಂಶೋಧನೆ ಸಾಮಾನ್ಯವಾಗಿ ಕಲೆ, ಸಮಾಜವಿಜ್ಞಾನ ವಿಭಾಗಗಳಲ್ಲಿ ನಡೆಯುವ ಕ್ರಿಯೆಯಾಗಿದ್ದರೂ ನಮ್ಮ ಕವಿಗಳು ಶೋಧಿಸಿದ ಚಂಪೂ-ಮಹಾಛಂದಸ್ಸು ಮೊದಲಾದ ಸಾಹಿತ್ಯ ಪ್ರಕಾರಗಳು, ಕಲಾವಿದರು ಶೋಧಿಸಿದ ವಿನೂತನ ರಾಗಶೈಲಿ-ಚಿತ್ರಶೈಲಿಗಳು ಕಲಾನಿಕಾಯ (Arts faculty)ದ ಆವಿಷ್ಕರಣಾತ್ಮಕ ಸಂಶೋಧನೆಗಳಾಗಿವೆ. ಅದೇ ರೀತಿ ಶರಣರು ಶೋಧಿಸಿದ ಕಾಯಕ, ದಾಸೋಹ, ಮಾರ್ಕ್ಸನ ಆರ್ಥಿಕ ಸಿದ್ಧಾಂತ, ಗಾಂಧೀಜಿಯವರ ಸತ್ಯಾಗ್ರಹಗಳು ಸಮಾಜವಿಜ್ಞಾನನಿಕಾಯ (Social Science faculty)ದ ಆವಿಷ್ಕರಣಾತ್ಮಕ ಸಂಶೋಧನೆಗಳಾಗಿವೆ. ಕಾಲಗತಿಸಿದಂತೆ ಇವು ಪೂರ್ಣ ಇಲ್ಲವೆ ಅಪೂರ್ಣ ರೂಪದಲ್ಲಿ ಮರೆಯಾದಪಕ್ಷದಲ್ಲಿ ಬೆಳಕಿಗೆ ತಂದರೆ, ಇವೂ ಅನ್ವೇಷಣಾತ್ಮಕ ಸಂಶೋಧನೆ ಎನಿಸುತ್ತವೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ, ಮೊದಲಿನಿಂದಲೂ ಭೂಮಿಯಲ್ಲಿ ಇರುವ ಗುರುತ್ವಾಕರ್ಷಣಶಕ್ತಿಯನ್ನು ವಿಜ್ಞಾನಿ ಕಂಡುಹಿಡಿದುದಕ್ಕೂ, ಈ ಮೊದಲು ಇದ್ದು ಮರೆಯಾಗಿದ್ದ ಅಜಂತಾಗುಹೆಗಳನ್ನು ವಿದ್ವಾಂಸ ಕಂಡುಹಿಡಿದುದಕ್ಕೂ ವ್ಯತ್ಯಾಸವಿದೆ. ಒಂದು ನೈಸರ್ಗಿಕವಾಗಿ ಇದ್ದುದು, ಇನ್ನೊಂದು ಮಾನವ ನಿರ್ಮಿತಿಯಾಗಿದ್ದುದು. ಹೀಗಿದ್ದೂ ಇಲ್ಲಿ ಕಂಡು ಹಿಡಿದ ಇವೆರಡೂ ಅನ್ವೇಷಣೆಗಳೇ (Discover) ಆಗಿವೆ.

ಒಟ್ಟಿನಲ್ಲಿ ಈ ಎರಡೂ ಕ್ಷೇತ್ರ (ಅನ್ವೇಷಣಾತ್ಮಕ ಸಂಶೋಧನೆ. ಆವಿಷ್ಕರಣಾತ್ಮಕ ಸಂಶೋಧನೆ)ಗಳಲ್ಲಿ ಕ್ರಮವಾಗಿ ಹಳೆಯದನ್ನು ಮತ್ತು ಹೊಸದನ್ನು ಶೋಧಿಸುವುದು, ಶೋಧಿಸಿದುದನ್ನು ಪರಿಷ್ಕರಿಸುವುದು. ಆ ಮೂಲಕ ಜ್ಞಾನದಿಗಂತಗಳನ್ನು ಕ್ರಮವಾಗಿ ವಿಸ್ತಾರ ಮಾಡುತ್ತ ಹೋಗುವುದು ಉದ್ದಕ್ಕೂ ನಡೆದಿರುತ್ತದೆ.

ಅನ್ವೇಷಣಾತ್ಮಕ ಸಂಶೋಧನೆ ಎಂಬುದು ಕಳೆದುಹೋಗಿರುವ ಇಲ್ಲವೆ ವ್ಯತ್ಯಸ್ತ ಸ್ಥಿತಿಯಲ್ಲಿ ಉಳಿದುಕೊಂಡಿರುವ ವಸ್ತು ಅಥವಾ ಘಟನೆಗಳ ರೂಪಾತ್ಮಕ (Fact) ಅಥವಾ ಇನ್ನೂ ಮುಂದುವರಿದು ಅದರ ಗುಣಾತ್ಮಕ (Truth) ಸ್ವರೂಪವನ್ನು ಕಂಡುಹಿಡಿಯುವುದಾಗಿದೆ. ರೂಪಸತ್ಯವನ್ನು ಸರಿಯಾಗಿ ಶೋಧಿಸಿದರೆ ಮಾತ್ರ ಗುಣಸತ್ಯದ ಶೋಧ ಸರಿಯಾಗಿ ಜರುಗುತ್ತದೆ ಎಂಬುದನ್ನು ಮರೆಯಬಾರದು. ಸಂಶೋಧಕನ ಶಕ್ತಿ ಸಂಸ್ಕಾರಗಳಿಗೆ ತಕ್ಕಂತೆ ಗುಣಾತ್ಮಕ ಸಂಶೋಧನೆಯು ಭಿನ್ನವಾಗುತ್ತ ಹೋಗಬಹುದು. ಆದುದರಿಂದ ರೂಪಾತ್ಮಕ ಸಂಶೋಧನೆಗೆ ಕೊನೆಯುಂಟು, ಗುಣಾತ್ಮಕ ಸಂಶೋಧನೆಗೆ ಕೊನೆಯಿಲ್ಲವೆಂದು ಹೇಳಬಹುದು.

ಎರಡನೆಯದಾಗಿ, ಅನ್ವೇಷಣಾತ್ಮಕ ಸಂಶೋಧನೆ ಎರಡು ಹಂತಗಳಲ್ಲಿ ಪೂರ್ಣತೆಯನ್ನು ಪಡೆಯುತ್ತದೆ. ಒಂದು ಆಕರಶೋಧನ, ಇನ್ನೊಂದು ಶೋಧಿತ ಆಕರಗಳ ಸಹಾಯದಿಂದ ಪೂರೈಸುವ ಅನ್ವೇಷಣಾತ್ಮಕ ಸಂಶೋಧನೆ. ಈ ಎರಡೂ ಕ್ರಿಯೆಗಳಿಗಾಗಿ ನಾವು 'ಸಂಶೋಧನೆ' ಎಂಬ ಒಂದೇ ಪದವನ್ನು ಬಳಸುವ ತಪ್ಪು ಮಾಡುತ್ತಲಿದ್ದೇವೆ. ಅಂದರೆ, ವಡ್ಡಾರಾಧನೆಯ ಹಸ್ತಪ್ರತಿ ಹುಡುಕಿದುದನ್ನೂ, ವಡ್ಡಾರಾಧನೆಯನ್ನು ಕುರಿತು ಮಾಡಿದ ಆಳವಾದ ಅಧ್ಯಯನವನ್ನೂ 'ಸಂಶೋಧನೆ' ಎಂಬ ಒಂದೇ ಹೆಸರಿನಿಂದ ಕರೆಯುತ್ತಲಿದ್ದೇವೆ. ಸಾಮಾನ್ಯವಾಗಿ ಸಹಾಯಕ ಸಂಶೋಧಕರು (Research Assistants) ಶಾಸನ, ಹಸ್ತಪ್ರತಿ ಇತ್ಯಾದಿಗಳನ್ನು ಹುಡುಕಿದ ಮಾತ್ರಕ್ಕೆ ಅದನ್ನು 'ಅನ್ವೇಷಣಾತ್ಮಕ ಸಂಶೋಧನೆ' ಎನ್ನಲು ಬರುವುದಿಲ್ಲ. ಏಕೆಂದರೆ, ಅಲ್ಲಿ ಸಂಶೋಧನೆಯ 'ರೀಸರ್ಚ್' ಪ್ರಕ್ರಿಯೆ ಜರುಗಿರುವುದಿಲ್ಲ. ಆಕಸ್ಮಿಕ ಶೋಧನದ (Search) ಅಂಶ ಮಾತ್ರ ಇರುತ್ತವೆ. ಆದುದರಿಂದ ಇಂಥ ಹುಡುಕುವಿಕೆಯನ್ನು ಶೋಧನ ಇಲ್ಲವೆ ಆಕರಶೋಧನವೆಂದೂ, ಹೀಗೆ ಹುಡುಕುವವರನ್ನು ಶೋಧಕ ಇಲ್ಲವೆ ಆಕರಶೋಧಕರೆಂದೂ, ಈ ಶೋಧಿತ ಆಕರವನ್ನವಲಂಬಿಸಿ ಮುಂದುವರಿಸುವ ಶೋಧವನ್ನು ಸಂಶೋಧನವೆಂದೂ, ಹೀಗೆ ಮುಂದುವರಿಸುವವರನ್ನು ಸಂಶೋಧಕರೆಂದೂ ಕಟ್ಟುನಿಟ್ಟಾಗಿ ಕರೆಯುವುದು ಸರಿಯೆನಿಸುತ್ತದೆ.

* * *

ಕನ್ನಡ ಭಾಷೆ-ಸಾಹಿತ್ಯ-ಇತಿಹಾಸ-ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ನಡೆಯುವ ಅನ್ವೇಷಣಾತ್ಮಕ ಸಂಶೋಧನೆಯ ಸಂದರ್ಭದಲ್ಲಿ ಪ್ರಾಚ್ಯಶೋಧ ಶಾಸ್ತ್ರ (Orientology) ಪುರಾತತ್ವಶೋಧ ಶಾಸ್ತ್ರ (Archaeology), ಜಾನಪದ (Folklore) ಎಂಬ ಪಾರಿಭಾಷಿಕ ಪದವನ್ನು ಪರಿಶೀಲಿಸಬಹುದು. ೧೮ನೆಯ ಶತಮಾನದಲ್ಲಿ ಪಾಶ್ಚಿಮಾತ್ಯರು ಪೂರ್ವದಿಕ್ಕಿನ (East) ಏಶಿಯಾ ಖಂಡವನ್ನು ಕುರಿತ ಅನ್ವೇಷಣಾತ್ಮಕ ಸಂಶೋಧನೆಯನ್ನು (Oriental Research) ಎಂದು ಕರೆದರು. ಇದಕ್ಕೆ ಸಂವಾದಿಯಾಗಿ ಭಾರತೀಯರು ಬಳಸುತ್ತ ಬಂದ ಪದ 'ಪ್ರಾಚ್ಯಶೋಧ.' ಆದರೆ ಅನ್ವೇಷಣಾತ್ಮಕ ಸಂಶೋಧನೆಯೂ ಪೂರ್ವಕಾಲೀನ (Ancient) ಅರ್ಥದ ಪ್ರಾಚ್ಯವನ್ನು ಕುರಿತ ಅಧ್ಯಯನವಾಗಿರುವುದರಿಂದ ನಾವು ಅನ್ವೇಷಣಾತ್ಮಕ ಸಂಶೋಧನೆ ಮತ್ತು ಪ್ರಾಚ್ಯಶೋಧಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಬಳಸುತ್ತಲಿದ್ದೇವೆ.

ಇಂಥದೇ ಇನ್ನೊಂದು ಪದ ಪುರಾತತ್ತ್ವಶೋಧ ಶಾಸ್ತ್ರ (Archaeology). ಇದನ್ನು ಸಾಮಾನ್ಯವಾಗಿ ಪುರಾ+ತತ್ವ ಎಂದೇ ಬಿಡಿಸುತ್ತೇವೆ. ಪುರಾ ಎಂದರೆ ಪ್ರಾಚೀನ. ತತ್ತ್ವ ಎಂಬುದು ಇಲ್ಲಿ ಅರ್ಥದೃಷ್ಟಿಯಿಂದ ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ಹೀಗಾಗಿ ಕಳೆದ ಶತಮಾನದ ವಿದ್ವಾಂಸರು ಇದನ್ನು ಪುರಾತ+ತ್ವ ಎಂದೇ ಟಂಕಿಸಿರಬೇಕು. ಪುರಾತ ಎಂದರೆ ಪುರಾತನ. ತ್ವ ಎಂದರೆ ಸಂಬಂಧಿಸಿದುದು. ಇಲ್ಲಿ ಗುರು+ತ್ವ, ಶಿವ+ತ್ವ ಇತ್ಯಾದಿಗಳನ್ನು ನೆನಪಿಸಿಕೊಳ್ಳಬಹುದು. ಈ ಪುರಾತತ್ವ ಶೋಧವೆನ್ನುವುದು ಪ್ರಾಚೀನಕಾಲಕ್ಕೆ (ಪ್ರಾಕ್ ಚಾರಿತ್ರಿಕ=ಬರವಣಿಗೆ ಪೂರ್ವಕಾಲೀನ ಮತ್ತು ಚಾರಿತ್ರಿಕ-ಬರವಣಿಗೆ ಉತ್ತರಕಾಲೀನ) ಸಂಬಂಧಿಸಿದ ಮಾನವಕೃತ ಎಲ್ಲ ವಿಷಯಗಳ ಅಧ್ಯಯನವೆನಿಸಿದೆ. ಪ್ರಾಚೀನ ಮಾನವಕೃತವಾದುದನ್ನು ಅವಶೇಷ (Relic) ಕಟ್ಟಡ (Monument) ಎಂದು ವರ್ಗೀಕರಿಸಿ ವಿದ್ವಾಂಸರು ಅಭ್ಯಾಸ ಮಾಡುತ್ತಾರೆ. ಈ ಅಭ್ಯಾಸವನ್ನೊಳಗೊಂಡ

ಶಾಸ್ತ್ರವನ್ನು Archaeology ಎಂದು ಕರೆಯುತ್ತಾರೆ. ಇಲ್ಲಿ Archaeo (<Archaic=Ancient things) ಅಂದರೆ ಪುರಾತತ್ವ, (logy) (<Logos) ಎಂದರೆ ಶಾಸ್ತ್ರ. ಹೀಗಾಗಿ Archaeology ಎಂಬುದಕ್ಕೆ ಪುರಾತತ್ವಶಾಸ್ತ್ರವೆಂಬ ಪದವನ್ನು ಪರ್ಯಾಯವಾಗಿ ಬಳಸುತ್ತಾರೆ. ಅದೇನೇ ಇದ್ದರೂ ಪುರಾತತ್ವಶೋಧವೆಂಬುದು ಅನ್ವೇಷಣಾತ್ಮಕ ಶೋಧ ಎಂಬ ಅರ್ಥ ಕೊಡುತ್ತಿದ್ದು, ಇದು ಭೂಶೋಧ (Excavation Exploration) ಕ್ಕೆ ಮಾತ್ರ ಇಂದು ಸೀಮಿತವಾಗಿ ನಿಂತಿದೆ.

ಇತ್ತೀಚೆಗೆ ಜಾನಪದ (Folklore) ಅಧ್ಯಯನ ನಮ್ಮಲ್ಲಿ ಹೆಚ್ಚು ಚಲಾವಣೆಯಲ್ಲಿದೆ. ಜಾನಪದಕ್ಕೆ ಎರಡು ಲಕ್ಷಣಗಳಿವೆ: ಒಂದು ಗ್ರಾಮೀಣತ್ತ, ಇನ್ನೊಂದು ಸಂಪ್ರದಾಯತ್ವ, ಇಲ್ಲಿ ಸಂಪ್ರದಾಯತ್ವೆನ್ನುವುದು ನಿನ್ನೆಗೆ ಸಂಬಂಧಿಸಿದುದಾಗಿದೆ. ನಿಜಅರ್ಥದಲ್ಲಿ ಪುರಾತತ್ವಶಾಸ್ತ್ರವು ನಿನ್ನೆಗೆ ಸಂಬಂಧಿಸಿದ ಈ ಗ್ರಾಮೀಣ ಸಂಪ್ರದಾಯವನ್ನೂ ಒಳಗೊಂಡು, ಶಿಷ್ಟಸಂಪ್ರದಾಯವನ್ನೂ ಅಭ್ಯಸಿಸುವುದರಿಂದ ಜಾನಪದಶಾಸ್ತ್ರ (Flokoristics) ಕ್ಕಿಂತ ಇದು ವಿಸ್ತಾರವಾದ ಅರ್ಥವನ್ನೊಳಗೊಂಡಿದೆ ಎಂದು ಹೇಳಬಹುದು. ಪುರಾತತ್ವಶಾಸ್ತ್ರಜ್ಞರಾದ ಫ್ಲೀಟರು ಶಾಸನ, ಹಸ್ತಪ್ರತಿ, ವಾಸ್ತು, ವಿಗ್ರಹಗಳೊಂದಿಗೆ ಲಾವಣಿಗಳನ್ನು ಸಂಗ್ರಹಿಸಿದುದು, ಕಿಟೆಲ್‌ರು ಛಂದೋಂಬುಧಿ, ಶಬ್ದಮಣಿದರ್ಪಣಗಳ ಪರಿಷ್ಕರಣ, ಶಾಸನಗಳ ಶೋಧನ, Old Canarese Literature[೧] ಮೊದಲಾದ ಸಂಶೋಧನಾತ್ಮಕ ಬರವಣಿಗೆಗಳೊಂದಿಗೆ Coorga Superstitions, Seven Lingayat Legends, Bitteru and Barika[೨] ಎಂಬಂಥ ಜಾನಪದೀಯ ಲೇಖನ ಬರೆದುದು, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಹಸ್ತಪ್ರತಿ–ಶಾಸನಗಳ ಸಂಗ್ರಹ ಮತ್ತು ಪ್ರಕಟನೆ, ಭೂಶೋಧನೆಗಳೊಂದಿಗೆ ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದುದು ಇಲ್ಲಿ ಗಮನಿಸಬೇಕಾದ ಅಂಶವೆನಿಸಿದೆ. ಪುರಾತತ್ವದ ತೆಕ್ಕೆಯಲ್ಲಿ ಜಾನಪದವೂ ಸೇರುವುದೆಂದು ಇವರು ತಿಳಿದಿದ್ದರೆಂದೂ ಇದು ನ್ಯಾಯಸಮ್ಮತವೆಂದೂ ಹೇಳಬೇಕಾಗುತ್ತದೆ. ಆದುದರಿಂದ ಶಿಷ್ಟಪದವೇ ಇರಲಿ, ಜಾನಪದವೇ ಇರಲಿ, ಪ್ರಾಚೀನತೆಗೆ ಸಂಬಂಧಪಟ್ಟ ಯಾವುದೇ ರೀತಿಯ ಜ್ಞಾನ ಮತ್ತು ಅದರ ಅಧ್ಯಯನ ಪುರಾತತ್ವ ವಲಯಕ್ಕೆ ಸಂಬಂಧಿಸಿದುದೆಂಬ ಪರಿಕಲ್ಪನೆಯನ್ನು ರೂಢಿಸುವುದೂ, ತನ್ಮೂಲಕ ಇಂದು ಭೂಶೋಧಕ್ಕೆ ಮಾತ್ರ ಸೀಮಿತವಾಗಿರುವ ಅದರ ಅರ್ಥಕ್ಕೆ ವಿಸ್ತಾರತೆಯನ್ನೂ ಒದಗಿಸುವುದೂ ಈ ಕಾಲದ ಬಹುಮುಖ್ಯ ಅವಶ್ಯಕತೆಯಾಗಿದೆ.

* * *

'ಸಂಶೋಧನೆ' ಎನ್ನುವುದು ಹೆಸರೇ ಸೂಚಿಸುವಂತೆ ಅನ್ವೇಷಣರೂಪದ ಬೌದ್ಧಿಕ ಕ್ರಿಯೆಯಾಗಿದೆ. ಮಾನವನ ಸಾಮಾನ್ಯ ಪ್ರವೃತ್ತಿಯಾಗಿರುವ ಇದು ಇಪ್ಪತ್ತನೆಯ ಶತಮಾನದ ಮಾನವನ ಅಸಾಮಾನ್ಯ ಲಕ್ಷಣವಾಗಿದೆ. ಕಲೆ, ವಿಜ್ಞಾನ, ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಹಳೆಯದರ ಅನ್ವೇಷಣೆ, ಹೊಸದರ ಆವಿಷ್ಕರಣ ಕಾರ್ಯಗಳು ಇಂದು ವ್ಯಕ್ತಿ ಮತ್ತು ಸಂಸ್ಥೆಗಳ ಮಟ್ಟದಲ್ಲಿ ಜಗತ್ತಿನಾದ್ಯಂತ ಸ್ಪರ್ಧಾತ್ಮಕ ರೀತಿಯಿಂದ ಮುನ್ನಡೆದಿವೆ. ಆದರೆ ಒಂದು ನಿರ್ದಿಷ್ಟ ಜ್ಞಾನಶಾಖೆಯಲ್ಲಿ ಸಂಶೋಧನೆ ನಡೆಸುವ

---

೧. Indian Antiquary Vol IV-5

೨. Indian Antiquary Vol II-47 & 211

ವಿದ್ವಾಂಸರು ತಮತಮಗೆ ತಿಳಿದ ವಿಧಾನಗಳಲ್ಲಿ ಹೆಜ್ಜೆ ಹಾಕದೆ, ಏಕಮುಖ ವಿಧಾನವನ್ನು ಅವಲಂಬಿಸಿದರೆ ಆ ಅಭ್ಯಾಸಕ್ಕೆ ನಿರ್ದಿಷ್ಟ ಶಿಸ್ತು ಪ್ರಾಪ್ತವಾಗುತ್ತದೆ ಮತ್ತು ಆ ಜ್ಞಾನಶಾಖೆಯನ್ನು ಕ್ರಮಬದ್ಧವಾಗಿ ಮುಂದುವರಿಸಲು ಸಾಧ್ಯವಾಗುತ್ತದೆ.

ಎಲ್ಲ ಬಗೆಯ ಸಂಶೋಧನೆಗಳಲ್ಲಿ ವಿಷಯ ಸಂಗ್ರಹ, ವಿಶ್ಲೇಷಣೆ, ಸಂಯೋಜನೆ ಹೀಗೆ ಮೂಲಭೂತ ಕಾರ್ಯವಿಧಾನಗಳು ಒಂದೇ ಬಗೆಯಾಗಿದ್ದರೂ ಆವಿಷ್ಕರಣಾತ್ಮಕ ಸಂಶೋಧನ ಕಾರ್ಯವಿಧಾನವು ಅನ್ವೇಷಣಾತ್ಮಕ ಸಂಶೋಧನ ಕಾರ್ಯವಿಧಾನಕ್ಕೆ ಇಡಿಯಾಗಿ ಅನ್ವಯವಾಗುವುದಿಲ್ಲ. ಅದೇ ರೀತಿ 'ಪಾಶ್ಚಾತ್ಯ ಸಂಶೋಧನ ಕಾರ್ಯವಿಧಾನ'ವೂ ಕನ್ನಡ ಸಂಶೋಧನ ಕಾರ್ಯವಿಧಾನಕ್ಕೆ ಅಷ್ಟಾಗಿ ಹೊಂದಿಕೊಳ್ಳುವುದಿಲ್ಲ. ಏಕೆಂದರೆ, ಕನ್ನಡದ ಸಮಸ್ಯೆಗಳೇ ಬೇರೆ, ಇಲ್ಲಿಯ ಆಕರಗಳ ಸ್ವರೂಪಗಳೇ ಬೇರೆ. ಕೆಲವೊಮ್ಮೆ ಸಮಸ್ಯೆ ಬಿಡಿಸುವ ಕಾರ್ಯವಿಧಾನಗಳೇ ಬೇರೆಯಾಗಬೇಕಾಗುತ್ತದೆ. ಆದುದರಿಂದ ಕನ್ನಡ ಸಂದರ್ಭದಲ್ಲಿ ಅವಶ್ಯವಿರುವ ಕಾರ್ಯವಿಧಾನಗಳನ್ನೂ, ಕನ್ನಡದ ಉದಾಹರಣೆಗಳನ್ನೂ ಒಳಗೊಂಡ ಕನ್ನಡಪರ ಸಂಶೋಧನವಿಧಾನಶಾಸ್ತ್ರ ಮಾತ್ರ ನಮಗೆ ಪ್ರಯೋಜನಕವೆನಿಸುತ್ತದೆ-ಎಂಬ ತಿಳಿವಳಿಕೆ ವಿದ್ವಾಂಸರಿಗಿರಬೇಕಾಗುತ್ತದೆ. ಈ ಎಲ್ಲ ಮೂಲಭೂತ ತಿಳುವಳಿಕೆ ಸ್ಪಷ್ಟವಾಗಿದ್ದಷ್ಟೂ ಈ ಕ್ಷೇತ್ರದ ಮತ್ತು ಈ ಕ್ಷೇತ್ರದಲ್ಲಿ ದುಡಿಯುವವನ ದಾರಿ ಸ್ಪಷ್ಟಗೊಳ್ಳುತ್ತದೆ. ಇಲ್ಲದಿದ್ದರೆ ಒಂದು ಬಗೆಯ ಗೋಜಲು ಗೊಂದಲಗಳಲ್ಲಿಯೇ ಅವನು ಮುನ್ನಡೆಯಬೇಕಾಗುತ್ತದೆ.

* * *

ಯಾವುದೇ ಅಧ್ಯಯನ ಸಂದರ್ಭದಲ್ಲಿ ಶಾಸ್ತ್ರ ಮತ್ತು ವಿಜ್ಞಾನ ಎಂಬ ಪದಗಳನ್ನು ಪರ್ಯಾಯಗಳೆಂಬಂತೆ ಬಳಸಲಾಗುತ್ತದೆ. ಉದಾ: ಭಾಷಾಶಾಸ್ತ್ರ-ಭಾಷಾವಿಜ್ಞಾನ, ಸಮಾಜಶಾಸ್ತ್ರ-ಸಮಾಜವಿಜ್ಞಾನ, ಭೌತಶಾಸ್ತ್ರ-ಭೌತವಿಜ್ಞಾನ. ಇವುಗಳಲ್ಲಿ ಕಲಾನಿಕಾಯ (Arts faculty), ಸಮಾಜಶಾಸ್ತ್ರನಿಕಾಯ (Socail Science faculty) ಗಳಲ್ಲಿ ಇದ್ದು ಮರೆಯಾದುದರ ಶೋಧವನ್ನು, ವಿಜ್ಞಾನನಿಕಾಯ (Science faculty)ದಲ್ಲಿ ಹೊಸ ವಸ್ತುವಿನ ಶೋಧವನ್ನು ಕೈಕೊಳ್ಳಲಾಗುತ್ತದೆ. ಇವುಗಳಲ್ಲಿ ಒಂದು ಅನ್ವೇಷಣ, ಇನ್ನೊಂದು ಆವಿಷ್ಕರಣವೆಂದು ಈ ಹಿಂದೆ ವಿವರಿಸಲಾಗಿದೆ. ಇಲ್ಲಿ ಅನ್ವೇಷಣ (Discovery) ಸಂಬಂಧಿ ಸಂಶೋಧನೆಯ ಸ್ವರೂಪವನ್ನು ವಿವೇಚಿಸುವುದು ಶಾಸ್ತ್ರವೆಂದೂ, ಆವಿಷ್ಕರಣ (Invention) ಸಂಬಂಧಿ ಸಂಶೋಧನೆಯ ಸ್ವರೂಪವನ್ನು ವಿವೇಚಿಸುವುದು 'ವಿಜ್ಞಾನ'ವೆಂದೂ ಕರೆಯುವುದು ಲೇಸು. ಇದನ್ನು ನೋಡಿದರೆ ಮೇಲಿನ ಎರಡೂ ನಿಕಾಯ (Arts faculty, Social science faculty) ಗಳಿಗೆ ಸಂಬಂಧಪಟ್ಟ ಸಂಶೋಧನೆಯ ವಿಧಾನ, ಸ್ವರೂಪಗಳನ್ನು ವಿವೇಚಿಸುತ್ತಿರುವುದಕ್ಕೆ 'ಸಂಶೋಧನಶಾಸ್ತ್ರ'ವೆಂದು ಕರೆಯುವುದೇ ಸೂಕ್ತವೆನಿಸುತ್ತದೆ. ಏಕೆಂದರೆ ಯಾವುದೇ ಹೊಸ ಸೃಷ್ಟಿಕಾರ್ಯ ಇಲ್ಲಿ ನಡೆಯುವುದಿಲ್ಲ.

ಇಂದು 'ರೀಸರ್ಚ್ ಮೆಥಡಾಲಜಿ'ಯೆಂಬುದಕ್ಕೆ ಪರ್ಯಾಯವಾಗಿ 'ಸಂಶೋಧನ ಶಾಸ್ತ್ರ' ಪದವನ್ನು ಬಳಸಲಾಗುತ್ತಿದೆ. 'ಮೆಥಡಾಲಜಿ' ಎಂಬುದರ 'ಸಂವಾದಿಪದ ವಿಧಾನಶಾಸ್ತ್ರ.' ಸಂಶೋಧನೆಗೆ ಸಂಬಂಧಪಟ್ಟಂತೆ ಇದನ್ನು ಸಂಶೋಧನ ವಿಧಾನಶಾಸ್ತ್ರ ಎಂಬ ಹೆಸರಿನಿಂದ ಕರೆಯುವುದು ಸೂಕ್ತವೇ ಆಗಿದೆ. ಇಲ್ಲಿಯ 'ವಿಧಾನ' ಎಂಬ ಪದ ಆನ್ವಯಿಕತೆಯ ಮೇಲೆ, 'ಶಾಸ್ತ್ರ' ಎಂಬ ಪದ

ಸಿದ್ಧಾಂತದ ಮೇಲೆ ಒತ್ತುಕೊಡುವುದರಿಂದ ಆನ್ವಯಿಕ-ಸೈದ್ಧಾಂತಿಕಗಳ ಸಂಗಮವಾದ ಈ ಬರವಣಿಗೆಯನ್ನು "ಸಂಶೋಧನ ವಿಧಾನಶಾಸ್ತ್ರ"ವೆಂಬ ಹೆಸರಿನಿಂದ ಕರೆಯುವುದೇ ಸೂಕ್ತವೆನಿಸುತ್ತದೆ. ಆದರೆ ನಿತ್ಯ ಬಳಕೆಯ ದೃಷ್ಟಿಯಿಂದ ಸಂಶೋಧನಶಾಸ್ತ್ರವೆಂಬ ಸಂಕ್ಷಿಪ್ತತೆ ಪ್ರಯೋಜಕವೆನಿಸುತ್ತದೆ. ಇನ್ನೊಂದು ವಿಷಯವೆಂದರೆ ಈ ಶಾಸ್ತ್ರ ಕೇವಲ ವಿಧಾನವನ್ನಷ್ಟೇ ಅಲ್ಲ, ಸಂಶೋಧನೆಯ ವ್ಯಾಖ್ಯೆ, ವ್ಯಾಪ್ತಿ, ಪ್ರಯೋಜನ ಇತ್ಯಾದಿಗಳನ್ನೂ ಒಳಗೊಳ್ಳುವುದರಿಂದ, ಮಿತಿಯನ್ನು ಕಲ್ಪಿಸುವ 'ವಿಧಾನ' ಎಂಬುದನ್ನು ಕೈಬಿಟ್ಟು, ಬೇರೆ ಬೇರೆ ಆಶಯಗಳೂ ಸೇರಿಕೊಳ್ಳಲು ಅವಕಾಶ ಕಲ್ಪಿಸಿಕೊಡುವ 'ಸಂಶೋಧನಶಾಸ್ತ್ರ' ಎಂಬ ವ್ಯಾಪಕ ಅರ್ಥದ ಹೆಸರನ್ನೇ ಇಟ್ಟುಕೊಳ್ಳುವುದು ಯೋಗ್ಯವೆನಿಸುತ್ತದೆ. ಇಲ್ಲಿ ಹಾಗೆ ಇಟ್ಟುಕೊಳ್ಳಲಾಗಿದೆ.

ಸಂಶೋಧಕ

ಸಂಶೋಧನಕ್ರಿಯೆ-ಪ್ರಕ್ರಿಯೆಗಳಲ್ಲಿ ನಿತ್ಯ ಚಿಂತನಶೀಲನಾಗಿರುವವ, ಕ್ರಿಯಾಶೀಲನಾಗಿರುವವ ಸಂಶೋಧಕ. ಈ ಕ್ರಿಯೆ-ಪ್ರಕ್ರಿಯೆಗಳು ಆಕರ ಶೋಧ. ಆಕರ ವಿಶ್ಲೇಷಣೆ, ಆಕರ ವ್ಯಾಖ್ಯಾನ ಇತ್ಯಾದಿ ಚಟುವಟಿಕೆಗಳ ನೆಲೆಯಾಗಿರುತ್ತವೆ. ಈ ನೆಲೆಗಳಲ್ಲಿ ದುಡಿದು ಗತಕಾಲೀನ ರೂಪ (Fact) ಮತ್ತು ಅದರ ಹಿಂದಿರುವ (Truth) ಗುಣಗಳನ್ನು ಕಂಡುಹಿಡಿಯುವುದು, ತನ್ಮೂಲಕ ಸಾಧ್ಯವಿದ್ದಲ್ಲಿ ವರ್ತಮಾನವನ್ನು ಪ್ರಭಾಸುವುದು ಇವನ ಕ್ರಿಯೆ. ಈ ಸಂದರ್ಭದಲ್ಲಿ ಶಾಸ್ತ್ರಶಿಸ್ತಿನಿಂದ ಮುನ್ನಡೆಯುವುದು ಇವನ ಕ್ರಿಯಾವಿಧಾನ. ಈ ಎಲ್ಲ ಲಕ್ಷಣಗಳುಳ್ಳವನು (ಅನ್ವೇಷಣಾತ್ಮಕ) ಸಂಶೋಧಕನೆನಿಸಿಕೊಳ್ಳುತ್ತಾನೆ.

ಸಂಶೋಧಕನ ಅರ್ಹತೆಗಳು:

ಅರ್ಹತೆ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುವವನಿಗೆ ಇರಬೇಕಾದ ಮುಖ್ಯ ಲಕ್ಷಣವಾಗಿದೆ. ಅಂಥವನು ಮಾತ್ರ ಅಧಿಕೃತ ವ್ಯಕ್ತಿಯೆನಿಸುತ್ತಾನೆ. ಅವನದು ಮಾತ್ರ ಅಧಿಕೃತ ಬರವಣಿಗೆಯೆನಿಸುತ್ತದೆ. ಈ ದೃಷ್ಟಿಯಿಂದ ಸಂಶೋಧಕನಿಗಿರಬೇಕಾದ ಅರ್ಹತೆಗಳು ಆರು : ಕುತೂಹಲ, ಪ್ರಾಮಾಣಿಕತೆ, ಧೈರ್ಯ, ವ್ಯುತ್ಪತ್ತಿ, ಪ್ರತಿಭೆ ಮತ್ತು ಕ್ರಿಯಾಶೀಲತೆ. ಇವು ಅವನಲ್ಲಿ ಪೂರ್ಣಪ್ರಮಾಣದಲ್ಲಿದ್ದು, ಸ್ಪರ್ಧಾತ್ಮಕ ರೀತಿಯಲ್ಲಿ ಜಾಗೃತವಾಗಿರಬೇಕಾಗುತ್ತದೆ.

ಕುತೂಹಲ : ಸಂಶೋಧಕನ ಪ್ರಥಮ ಅರ್ಹತೆ ಕುತೂಹಲ. ಇದು ಅನೇಕ ಪ್ರಶ್ನೆ, ಉಪಪ್ರಶ್ನೆಗಳ ಉತ್ಪತ್ತಿ ಭೂಮಿಕೆಯಾಗಿರುತ್ತದೆ. ಲವಲವಿಕೆ, ಆಸಕ್ತಿ, ತವಕಗಳು ಇವರಲ್ಲಿ ತುಂಬಿಕೊಂಡಿರುತ್ತವೆ. ವಿಷಯವನ್ನು ಮೈಯೆಲ್ಲ ಕಣ್ಣಾಗಿ ಹುಡುಕುವ, ಕಿವಿಯಾಗಿ ಕೇಳುವ ಉತ್ಕಟ ಆಸಕ್ತಿಯೇ ಈ ಪ್ರವೃತ್ತಿಯ ಸ್ಥಾಯೀಭಾವ. 'ದೇವರು ದಿಂಡರಿಗೆ ನೈವೇದ್ಯವಾದ ಬಳಿಕ ಊಟ ಮಾಡಿರಿ' ಎಂದು ನುಡಿದ ಹೆಂಡತಿಯ ಸಹಜ ಮಾತಿನಲ್ಲಿಯ 'ದಿಂಡರು' ಎಂಬ ಪದವನ್ನು ಕುತೂಹಲಿಯಾದ ಮನಸ್ಸು ಮಾತ್ರ ಹಿಡಿದುಕೊಳ್ಳುತ್ತದೆ. ದೇವರು ಪದಕ್ಕೆ ಅರ್ಥವಿದೆ. ದಿಂಡರು ಪದಕ್ಕೆ ಏನು ಅರ್ಥ? ಎಂಬ ಚಿಂತನೆಯಲ್ಲಿ ಮುಳುಗುತ್ತದೆ. ಕೋಶಗಳನ್ನು ಹುಡುಕಹಚ್ಚುತ್ತದೆ. ಅನ್ಯಭಾಷೆಗಳಲ್ಲಿಯ ಜ್ಞಾತಿಪದಗಳಿಗಾಗಿ ತಡಕಾಡಲು, ಕಾವ್ಯ-ಶಾಸ್ತ್ರಗಳಲ್ಲಿಯ ಪ್ರಯೋಗಗಳನ್ನು ಶೋಧಿಸಲು ತೊಡಗಿಸುತ್ತದೆ. 'ದಿಂಡ' ಎಂಬುದಕ್ಕೆ ಉದ್ಧಟ ಎಂಬ ಅರ್ಥವಿದ್ದರೂ ದೇವರನೆತ್ತ ಬಲ್ಲವರೊತ್ತಿನ ದಿಂಡರನೆತ್ತ ಬಲ್ಲ'[೩] ಎಂಬ ಉದಾಹರಣೆಯಿಂದ ದಿಂಡರೆಂದರೆ ಕೇವಲ ಉದ್ಧಟರಲ್ಲ, ದೇವರ

ಸಂದರ್ಭದ ಉದ್ಧಟರು, ಅಂದರೆ ರಾಕ್ಷಸರೆಂಬ ಅರ್ಥವಿರಬಹುದು. ದೇವರನ್ನು ಜಗುಲಿಯ ಮಧ್ಯದಲ್ಲಿ, ದಿಂಡರನ್ನು ಅವರ ಒತ್ತಿನಲ್ಲಿ ಸ್ಥಾಪಿಸುತ್ತಿರಬಹುದೆನಿಸುತ್ತದೆ. ಪ್ರಾಚೀನ ಕಾಲದಲ್ಲಿ ಕೇವಲ ಕಾಯುವ ದೇವರನ್ನಲ್ಲದೆ, ಕಾಡುವ ದೈತ್ಯರನ್ನೂ ಸುಪ್ರೀತಗೊಳಿಸುತ್ತಿದ್ದ ಪೂಜಾಕ್ರಿಯೆಯನ್ನು 'ದೇವರು ದಿಂಡರು' ಎಂಬ ಕೂಡುನುಡಿ ಸೂಚಿಸುತ್ತಿರಬಹುದು.

ಹೀಗೆ, ಶ್ರುತಿಮಾಡಿ ಇಟ್ಟ ವೀಣೆಯಂತೆ ಸಂಶೋಧಕನ ಮನಸ್ಸು ಸದಾ ಎಚ್ಚರವಾಗಿರಬೇಕಾಗುತ್ತದೆ. ಒಮ್ಮೆ ಇಂಥ ವ್ಯಸನಕ್ಕೆ ವಶವಾದರೆ ಮುಗಿಯಿತು, ಅವನಿಗೆ ಕವಿಯ ಹಾಗೆ ಎಲ್ಲದಕ್ಕೂ ಮಿಡಿಯುವ ಸ್ಪಂದನಶೀಲವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಇಂಥ ಕುತೂಹಲ ಅವನನ್ನು ಓದಿಸುತ್ತದೆ, ಪ್ರಯಾಣ ಮಾಡಿಸುತ್ತದೆ, ಪತ್ರವ್ಯವಹಾರಕ್ಕೆ ಪ್ರಚೋದನೆ ನೀಡುತ್ತದೆ. ಹೀಗೆ ಸಂಶೋಧಕ ಯಾವಾಗಲೂ ಅಸಮಾಧಾನಚಿತ್ತವುಳ್ಳವನಾಗಿರುವನೆಂದು ಹೇಳಬಹುದಾಗಿದೆ. ಇದನ್ನೇ ಕುತೂಹಲವೆಂದು ಕರೆಯುವುದು.

ಕುತೂಹಲವು ಪ್ರಶ್ನೆಯನ್ನು ಎತ್ತುತ್ತದೆ. ಉತ್ತರ ಸಿಗದಿದ್ದರೂ ಎತ್ತಿದ ಪ್ರಶ್ನೆ ಒಂದು ಶೋಧವೇ ಎನಿಸುತ್ತದೆ. ಉದಾ: ಪಂಪನು ತನ್ನ ನಾಲ್ವತ್ತನೆಯ ವರ್ಷಕ್ಕೆ ಎರಡೂ ಕಾವ್ಯಗಳನ್ನು ಬರೆದು ಮುಗಿಸಿದನೆಂದು ಆಂತರಿಕ, ಬಾಹ್ಯ ಆಧಾರಗಳಿಂದ ಸ್ಪಷ್ಟವಾಗುತ್ತದೆ. ಆಮೇಲೆ ಆತ ಕಾವ್ಯವನ್ನೇಕೆ ಬರೆಯಲಿಲ್ಲ? ಇದು ಪ್ರಶ್ನೆಯೂ ಹೌದು, ಶೋಧವೂ ಹೌದು. ಇನ್ನೂ ಮುಂದುವರಿದು, ಆತ ನಡುವಯಸ್ಸಿನಲ್ಲಿಯೇ ತೀರಿಕೊಂಡನೆ? ಒಂದು ವೇಳೆ ತೀರಿಕೊಂಡಿದ್ದರೆ ಅದರ ಕಾರಣಗಳೇನು? ಹೀಗೆ ತೀರಿಕೊಳ್ಳುವುದರಿಂದ ಅವನ ಒಡೆತನದ ಅಗ್ರಹಾರದ ಮೇಲೆ ಆಗಿರಬಹುದಾದ ಸಾಮಾಜಿಕ ಪರಿಣಾಮಗಳೇನು?[೪] ಇತ್ಯಾದಿ ಪ್ರಶ್ನೆಗಳನ್ನು ಎತ್ತುತ್ತ ಹೋಗುವುದರ ಮೂಲ ಕುತೂಹಲವೇ ಆಗಿದೆ. ಇದು ಜಾಗೃತವಾಗಿದ್ದಷ್ಟೂ ಸಂಶೋಧಕನ ವ್ಯಕ್ತಿತ್ವಕ್ಕೆ ಹೆಚ್ಚು ಸ್ಪಂದನಶೀಲತೆ ಪ್ರಾಪ್ತವಾಗುತ್ತದೆ.

ಪ್ರಾಮಾಣಿಕತೆ : 'ಕುತೂಹಲ'ದಂತೆ 'ಪ್ರಾಮಾಣಿಕತೆ'ಯೂ ಸಂಶೋಧಕನ ಮುಖ್ಯ ಲಕ್ಷಣವಾಗಿದೆ. ಸಂಶೋಧಕನ ಪ್ರಥಮ, ಅಂತಿಮ ಗುರಿ ಸತ್ಯಶೋಧ. 'ಸತ್ಯವನ್ನು ಹೇಳುತ್ತೇನೆ. ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳುವುದಿಲ್ಲ' ಎಂಬ ವ್ರತ ಅವನದಾಗಿರುತ್ತದೆ. ಇಂಥ ಸತ್ಯ ಸಹಜವಾಗಿ ಪ್ರಾಮಾಣಿಕತೆಯನ್ನು ಬಯಸುತ್ತಿದ್ದು, ಇದು ಅವನ ಜೀವದ್ರವ್ಯವಾಗಿರುತ್ತದೆ.

ಶ್ಲಾಘ್ಯಸ್ಸಯೇವ ಗುಣವಾನ್ ರಾಗದ್ವೇಷಬಹಿಷ್ಕೃತಃ ।
ಭೂತಾರ್ಥ ಕಥನೇ ಯಸ್ಯ ಸ್ಥೇಯಸ್ಯೇವ ಸರಸ್ವತೀ ॥

ಅಂದರೆ "ನಡೆದುಹೋದ ಸಂಗತಿಯನ್ನು ಹೇಳುವಲ್ಲಿ ನ್ಯಾಯಾಧೀಶನಂತೆ ರಾಗದ್ವೇಷರಹಿತವಾಗಿ ವರ್ತಿಸುವವನೇ ಶ್ಲಾಘ್ಯನು" ಎಂಬ ರಾಜತರಂಗಿಣಿಯ ಈ ಮಾತು, ಸಂಶೋಧಕನಲ್ಲಿರಬೇಕಾದ

---

೩. ಕನ್ನಡ ನಿಘಂಟು ಸಂಪುಟ ೪ – ಕನ್ನಡ ಸಾಹಿತ್ಯ ಪರಿಷತ್ತು (ಮ. ೩೮೮೯)

೪. ಪಂಪನ ಪರಿಸರಗಳು – ಎಂ. ಎಂ. ಕಲಬುರ್ಗಿ (ಮಾರ್ಗ I–೩೩)

ಪ್ರಾಮಾಣಿಕತೆಯ ಮಹತ್ವವನ್ನು ಸೂಚಿಸುತ್ತದೆ. ಭೂತಾರ್ಥ ಕಥನಪ್ರಸಂಗದಲ್ಲಿ ವಿಷಯವನ್ನು ರಾಗದಿಂದ ವೈಭವೀಕರಿಸುವುದಾಗಲಿ, ದ್ವೇಷದಿಂದ ವಿಕೃತಗೊಳಿಸುವುದಾಗಲಿ ಸಂಶೋಧಕನಿಂದ ಜರುಗಬಾರದು. ಇಂಥ ಪ್ರಾಮಾಣಿಕತೆಯನ್ನು ಸಂಶೋಧನ ಕಾರ್ಯದ ಎಲ್ಲ ಘಟ್ಟಗಳಲ್ಲಿ, ಎಲ್ಲ ಸಂದರ್ಭಗಳಲ್ಲಿ ಅವನು ಪಾಲಿಸುವುದು ಅವಶ್ಯ. ಕೆಲವು ಉದಾಹರಣೆಗಳಿಂದ ಈ ಮಾತನ್ನು ಸ್ಪಷ್ಟಪಡಿಸಬಹುದು.

ಬಸವಣ್ಣನವರ ಜೀವನಚರಿತ್ರೆಗೆ ಸಂಬಂಧಪಟ್ಟ ಆಕರಗಳಲ್ಲಿ ಪ್ರಾಮಾಣಿಕವಾದುವು ಕೆಲವು. ಅಪ್ರಾಮಾಣಿಕವಾದುವು ಕೆಲವು. ಅಪ್ರಾಮಾಣಿಕವೆಂದು ಗೊತ್ತಿದ್ದೂ ಬಿಜ್ಜಳರಾಯ ಚರಿತೆ, ಬಿಜ್ಜಣಾಂಕ ಪುರಾಣಗಳನ್ನು ಬಳಸಿದಲ್ಲಿ ಸಂಶೋಧಕನ ಪ್ರಾಮಾಣಿಕತೆ ಪ್ರಶ್ನಾರ್ಹವೆನಿಸುತ್ತದೆ.

ಜಿನವಲ್ಲಭನಿಗೆ ಸಂಬಂಧಪಟ್ಟ ಕುರ್ಕಿಯಾಲ್ ಶಾಸನದ "ಮರ್ಮ[ಂ] ವಬ್ಬಣಬ್ಬೆ" ಎಂಬುದು ದೋಷಪಾಠವೆಂದು ಹೇಳಿ, 'ಮರ್ಮಳಬ್ಬಣಬ್ಬೆ' ಎಂಬುದೇ ನಿಜಪಾಠವಿರಬಹುದೆಂದು ನಾನು ಪ್ರಕಟಿಸಿದಾಗ, ಡಾ. ಪಿ. ಬಿ. ದೇಸಾಯಿಯವರು 'ಮರ್ಮ[ಂ] ವಬ್ಬಣಬ್ಬೆ' ಎಂಬುದೇ ಸರಿಯಾದ ಪಾಠವೆಂದು ವಾದಹೂಡಿ, ಕೊನೆಗೆ ಈ ಶಾಸನದ ಪಡಿಯಚ್ಚನ್ನು ತರಿಸಿ, ಅಲ್ಲಿಯ ಪಾಠವನ್ನು ತಮಗೆ ಅನುಕೂಲವಾಗುವಂತೆ ಬಿಳಿಯ ಬಣ್ಣದಿಂದ ತಿದ್ದಿ ಪ್ರಕಟಿಸಿದರು.[೫] ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಮಾಡಿದ ಈ ಪ್ರಯತ್ನ ಪ್ರಾಮಾಣಿಕ ಆಕರವನ್ನು ಅಪ್ರಾಮಾಣಿಕಗೊಳಿಸಿದುದ್ದಕ್ಕೆ ಉದಾಹರಣೆಯಾಗಿದೆ. ಇನ್ನೊಬ್ಬರ ಅಭಿಪ್ರಾಯವನ್ನು ನಾವು ಒಪ್ಪದಿರಬಹುದು. ಆದರೆ ಇನ್ನೊಬ್ಬರ ಅಭಿಪ್ರಾಯವನ್ನು ಸಹನೆಯಿಂದ ಕೇಳುವ ಮನೋಧರ್ಮ, ಇನ್ನೊಬ್ಬರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ ಎಂಬ ಮೂಲಭೂತಪ್ರಜ್ಞೆ ಸಂಶೋಧಕನಿಗೆ ಅವಶ್ಯ ಬೇಕು. "ನೀನು ಹೇಳುವ ಸಾವಿರ ಮಾತಿನಲ್ಲಿ ಒಂದನ್ನೂ ನಾನು ಒಪ್ಪಲಾರೆ. ಆದರೆ ಹೇಳುವ ನಿನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ನಾನು ನನ್ನ ಪ್ರಾಣವನ್ನು ಪಣಕ್ಕಿಟ್ಟು, ಜೀವದ ಹಂಗು ತೊರೆದು ಹೋರಾಡಿ ನಿನ್ನ ಅಭಿವ್ಯಕ್ತಿಸ್ವಾತಂತ್ರ್ಯವನ್ನು ರಕ್ಷಿಸುತ್ತೇನೆ"[೬] ಎಂಬ ವಾಲ್ಟೇರನ ಮಾತು ಸಂಶೋಧಕನಿಗೆ ಮಾರ್ಗದರ್ಶಿಯಾಗದ ಹೊರತು ಅವನೂ ಬೆಳೆಯುವುದಿಲ್ಲ, ಸಂಶೋಧನೆಯೂ ಬೆಳೆಯುವುದಿಲ್ಲ.

ಪ್ರಾಮಾಣಿಕತೆಯ ಇನ್ನೊಂದು ಲಕ್ಷಣವೆಂದರೆ, ಮೊದಲು ಪ್ರಕಟಿಸಿದ್ದ ತನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಅಂಶಗಳು ಆಮೇಲೆ ತನ್ನ ಗಮನಕ್ಕೆ ಬಂದರೆ ಇಲ್ಲವೆ ಇನ್ನೊಬ್ಬರ ಮೂಲಕ ಪ್ರಕಟವಾದರೆ, ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳುವುದು. ಬಾಬಾನಗರದಲ್ಲಿರುವ ಶಾಸನವನ್ನು ವಿವೇಚಿಸುತ್ತ, "ನಾಗಚಂದ್ರ ಬಸದಿ ಕಟ್ಟಿಸಿದ್ದು ಈ ಊರಿನಲ್ಲಿಯೇ"[೭] ಎಂದು ಬರೆದಿದ್ದ ನಾನು, ಕೆಲವು ವರ್ಷಗಳ ಬಳಿಕ ಆ ಶಾಸನವನ್ನು ಮತ್ತೊಮ್ಮೆ ಸೂಕ್ಷ್ಮವಾಗಿ ಓದಿ, ನನ್ನ ಹೇಳಿಕೆಯನ್ನು ಹಿಂತೆಗೆದುಕೊಂಡ ಪ್ರಸಂಗವನ್ನು ಇಲ್ಲಿ ನೆನೆಯಬಹುದು.[೮] ಗದಾಯುದ್ಧದ "ಪಸಿವಿನೊಳನ್ನಮಂ..."

---

೫. ಗಂಗಾಧರಂ ಶಾಸನ ಕೈಗೆ ಕನ್ನಡಿ – ಪಿ. ಬಿ. ದೇಸಾಯಿ (ಕನ್ನಡ ನುಡಿ, ಎಪ್ರಿಲ್-ಮೇ ೧೯೬೯)

೬. ಕವಿಮಾರ್ಗ ೪-೧ ಪು.೬

೭. ಬಾಬಾನಗರದಲ್ಲಿ ನಾಗಚಂದ್ರ ಕಟ್ಟಿಸಿದ ಬಸದಿ – ಎಂ. ಎಂ. ಕಲಬುರ್ಗಿ, (ಮಾರ್ಗ II-೧೭೬)

೮. ವಿಜಾಪುರದಲ್ಲಿ ನಾಗಚಂದ್ರನ ಮಲ್ಲಿನಾಥ ಬಸದಿ – ಎಂ. ಎಂ. ಕಲಬುರ್ಗಿ, (ಮಾರ್ಗ II-೧೭೮)

ಎಂಬ ಪದ್ಯವನ್ನು ಪರಿಷ್ಕರಿಸುತ್ತ, ಪಸಿವು ಎಂಬುದಕ್ಕೆ ಹಸಿವು ಎಂದು ಅರ್ಥ ಬರೆದಿದ್ದೆನು.[೯] ಆದರೆ ಡಾ. ಎಂ. ಚಿದಾನಂದಮೂರ್ತಿ ಅವರು 'ಇದರ ನಿಜವಾದ ಪಾಠ ಪಸವು, ಇದರ ಅರ್ಥ ಬರಗಾಲ'[೧೦] ಎಂದು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನನ್ನ ಇನ್ನೊಂದು ಲೇಖನದಲ್ಲಿ ಒಪ್ಪಿಕೊಂಡುದನ್ನು[೧೧] ಇಲ್ಲಿ ಸ್ಮರಿಸಬಹುದು. ಒಬ್ಬರ ಶೋಧ ಇನ್ನೊಬ್ಬರ ಹೆಸರಿನಲ್ಲಿ ಪ್ರಚಾರವಾಗುವುದೂ ಅಪ್ರಾಮಾಣಿಕತೆಯೇ. ಕುರ್ಕಿಯಾಲ್ ಶಾಸನದ ನಿಜಪಾಠ 'ಮರ್ಮಳಬ್ಬಣಬ್ಬೆ' ಎಂದು ವಾದ–ಪ್ರತಿವಾದಗಳ ಮೂಲಕ ನಾನು ಸ್ಥಾಪಿಸಿದ್ದ ಶೋಧ, ಈಗ ಡಾ. ಜಿ. ಎಸ್. ಗಾಯಿ ಅವರ ಹೆಸರಿನಲ್ಲಿ ಪ್ರಚಾರವಾಗುತ್ತಿರುವುದು ಪ್ರಾಮಾಣಿಕ ರೀತಿಯಲ್ಲ.[೧೨] ಇಂಥ ಯಾವುದೇ ಸಲ್ಲದ ಕ್ರಮಗಳು ಸಂಶೋಧಕನಲ್ಲಿ ಇರಬಾರದು. ಇದು ಸಂಶೋಧನೆಯಲ್ಲಿ ಪಾಪವೆನಿಸುತ್ತದೆ.

ಪ್ರಾಮಾಣಿಕ ನಿರ್ಣಯವೆನ್ನುವುದು ಅಂದಂದು ಲಭ್ಯವಾದ ಆಕರ ಸಾಮಗ್ರಿಗೆ ಮತ್ತು ಸಂಶೋಧಕನ ಅಂದಂದಿನ ಪರಿಜ್ಞಾನಕ್ಕೆ ಸೀಮಿತವಾಗಿರುತ್ತದೆ. ಹೊಸ ಆಕರಗಳು ಸಿಕ್ಕು ಹೊಸ ವಿಷಯಗಳು ಪ್ರಕಟವಾದ ಸಂದರ್ಭದಲ್ಲಿ "ಅವನು ಮೊದಲು ಪ್ರಕಟಿಸಿದುದು ತಪ್ಪು" ಎಂದು ನಾವು ಹೇಳಬಹುದೇ ಹೊರತು, ಸುಳ್ಳು ಎಂದು ಹೇಳಲಾಗದು. 'ನಿಜವಾದ ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ತಪ್ಪು ಹೇಳುವುದು ಬೇರೆ, ಸುಳ್ಳು ಹೇಳುವುದು ಬೇರೆ. ಇವುಗಳಲ್ಲಿ ಒಂದು ಸಂದರ್ಭ–ಸನ್ನಿವೇಶ ಕಾರಣವಾಗಿ ಪ್ರಕಟವಾದುದು. ಇನ್ನೊಂದು ಅಂಥ ಯಾವ ಕಾರಣವೂ ಇಲ್ಲದೆ ತಿಳಿದೂ ತಿಳಿದೂ ಪ್ರಕಟಿಸಿದ್ದು. ಒಂದು ಕ್ಷಮ್ಯ, ಇನ್ನೊಂದು ಅಕ್ಷಮ್ಯ. ನಿಜವಾದ ಸಂಶೋಧಕನಿಗೆ ತಪ್ಪು ತಿದ್ದಿಕೊಳ್ಳುವಲ್ಲಿ ಅಭಿಮಾನ ಕಾಡುವುದಿಲ್ಲ. ಉದಾ: ತಮಗೆ ಲಭ್ಯವಿದ್ದ ಆಧಾರಗಳನ್ನು ಅವಲಂಬಿಸಿ ಡಾ. ಡಿ. ಎಲ್. ಎನ್. ಅವರು 'ಸಿದ್ಧರಾಮ ವೀರಶೈವನಲ್ಲ, ಶೈವ' ಎಂಬ ವಾದವನ್ನು ಹೂಡಿದ್ದರು.[೧೩] ಇದನ್ನು ಅನೇಕ ಜನ ವಿದ್ವಾಂಸರು ಅನೇಕ ವರ್ಷಗಳ ವರೆಗೆ ವಿರೋಧಿಸಿದರು, ಖಂಡಿಸಿದರು.[೧೪] ಡಿ. ಎಲ್. ಎನ್. ಒಂದು ಅಂಗುಲವೂ ಹಿಂದೆ ಸರಿಯಲಿಲ್ಲ. ಆದರೆ ಸಕಲೇಶ ಮಾದರಸನ ವಚನದಲ್ಲಿ ಹೊಸ ಆಧಾರ ಸಿಗುತ್ತಲೇ 'ಸಿದ್ಧರಾಮನು ವೀರಶೈವ' ಎಂದು ತಾವೇ ಲೇಖನವೊಂದನ್ನು ಬರೆದು ಪ್ರಕಟಿಸಿದರು.[೧೫] "ನಿಜವಾದ ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ" ಎಂಬುದಕ್ಕೆ ಇದು ಒಳ್ಳೆಯ ಉದಾಹರಣೆಯಾಗಿದೆ.

---

೯. ಗದಾಯುದ್ಧದ ಒಂದು ಪದ್ಯ – ಎಂ. ಎಂ. ಕಲಬುರ್ಗಿ, (ಮಾರ್ಗ I–೧೦೪)

೧೦. ಆಸ್ವಾದ – ಎಂ. ಚಿದಾನಂದಮೂರ್ತಿ (ಎಂ.ವಿ.ಸೀ. ಅಭಿನಂದನ ಗ್ರಂಥ. ಪು. ೩೭)

೧೧. ರನ್ನನ ಒಂದು ಪದ್ಯದ ಅರ್ಥಸಮಸ್ಯೆ – ಎಂ. ಎಂ. ಕಲಬುರ್ಗಿ, (ಮಾರ್ಗ II–೧೦೮)

೧೨. ಪಂಪಭಾರತ ದೀಪಿಕೆ : ಡಿ. ಎಲ್. ನರಸಿಂಹಾಚಾರ್ (ಪು.೫೭ ಅ.ಟಿ.)

೧೩. ಸಿದ್ಧರಾಮ ಚರಿತೆ – ಸಂ. ಡಿ. ಎಲ್. ನರಸಿಂಹಾಚಾರ್ (ಪ್ರಸ್ತಾವನೆ : ಒಂದು ಸಮಸ್ಯೆ ೯೪೧)

೧೪. ಸೊನ್ನಲಿಗೆಯ ಸಿದ್ಧರಾಮನು ಶೈವನೇ? – ಆರ್. ಸಿ. ಹಿರೇಮಠ (ಶಿವಾನುಭವ ೨೦–೮)

೧೫. ಸಿದ್ಧರಾಮನ ವೀರಶೈವತ್ವ (ಪುನರವಲೋಕನ) – ಡಿ. ಎಲ್. ನರಸಿಂಹಾಚಾರ್ (ಪ್ರ. ಕ. ೪೫–೩)

ಒಂದು ಮಾತು : ಸಂಶೋಧನೆಯಲ್ಲಿ ಸತ್ಯವನ್ನೇ ಬರೆಯಬೇಕು ಎಂಬ ಪ್ರಜ್ಞೆ ಗಟ್ಟಿಗೊಳ್ಳುತ್ತ ಹೋಗಿ, ಜೀವನದಲ್ಲಿಯೂ ಸತ್ಯವನ್ನೇ ಬಾಳಬೇಕೆಂಬ ನಿಲವು ಸಂಶೋಧಕನಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಸಂಶೋಧನೆಯ ಸಹಬಾಳ್ವೆ ಪ್ರಭಾವವಿದು. ಇವನು ಸಂಶೋಧನೆಯನ್ನು ರೂಪಿಸಿದರೆ, ಸಂಶೋಧನೆಯೇ ಮರಳಿ ಇವನನ್ನು ರೂಪಿಸುತ್ತದೆ. ಜೀವನದಲ್ಲಿ ಅಳವಡಿಸಿಕೊಂಡ ಈ ಪ್ರಾಮಾಣಿಕತೆ ಕಾರಣವಾಗಿ ಸಂಶೋಧಕ ನಿತ್ಯ ಬದುಕಿನಲ್ಲಿಯೂ 'ಲೋಕವಿರೋಧಿ'ಯಾಗಿ ಪರಿಣಮಿಸುತ್ತಾನೆ. ಸತ್ಯದ ಸಂರಕ್ಷಣೆಗಾಗಿ ಆ ವಿರೋಧವನ್ನು ಎದುರಿಸುವ ದೃಶ್ಯ ಅವನಲ್ಲಿ ಬೆಳೆದು ಬರಬೇಕಾಗುತ್ತದೆ. ಆಗ ಮಾತ್ರ ನ್ಯಾಯವಾದುದನ್ನು ಬರೆಯಲು, ನ್ಯಾಯವಾದುದನ್ನು ಬದುಕಲು ಅವನಿಗೆ ಸಾಧ್ಯವಾಗುತ್ತದೆ.

ಧೈರ್ಯ: ಪ್ರಾಮಾಣಿಕತೆ ತೀಕ್ಷ್ಣವಾಗಿದ್ದಷ್ಟೂ ಸಂಶೋಧನೆ ಪರಿಸರಕ್ಕೆ ಹೆಚ್ಚು ಕಹಿಯೆನಿಸುತ್ತದೆ. "ಅದನ್ನು ಸಿಹಿಯಾಗಿಸಲು ನಮಗೆ ಅಧಿಕಾರ ಇಲ್ಲ."[೧೬] ಹೀಗಾಗಿ ಅಂಥ ಸತ್ಯವನ್ನು ವ್ಯಕ್ತಪಡಿಸುವ ಮನೋಧೈರ್ಯ ಸಂಶೋಧಕನಿಗೆ ಅವಶ್ಯವೆನಿಸುತ್ತದೆ. ಇದು ಮೊಂಡ ಧೈರ್ಯವಲ್ಲ, ಸಾತ್ವಿಕ ಧೈರ್ಯವಾಗಿದೆ.

ವಿದ್ವತ್ತಿನ ಬೆಳವಣಿಗೆ, ಸಾಮಾಜಿಕ ಸುಧಾರಣೆ–ಹೀಗೆ ಎರಡು ಉದ್ದೇಶಗಳನ್ನಿಟ್ಟುಕೊಂಡು ಸಂಶೋಧನಕ್ರಿಯೆ ಮುನ್ನಡೆಯುತ್ತದೆ. ಆದುದರಿಂದ ವಿದ್ವಾಂಸರ ಪ್ರತಿಕ್ರಿಯೆಯನ್ನು ಎದುರಿಸುವ ಧೈರ್ಯ, ಸಾಮಾಜಿಕರ ಪ್ರತಿಭಟನೆಯನ್ನು ಎದುರಿಸುವ ಧೈರ್ಯ–ಹೀಗೆ ಎರಡು ಬಗೆಯ ಧೈರ್ಯಗಳು ಸಂಶೋಧಕನಿಗೆ ಅವಶ್ಯ ಬೇಕಾಗುತ್ತವೆ. ಕವಿಗಳ ಕಾಲ ನಿರ್ಣಯವನ್ನು ಕುರಿತು ಆರ್. ನರಸಿಂಹಾಚಾರ್ ಮತ್ತು ಎ. ವೆಂಕಟಸುಬ್ಬಯ್ಯನವರಲ್ಲಿ ನಡೆದ ವಾದ–ಪ್ರತಿವಾದಗಳು,[೧೭] ಕವಿರಾಜಮಾರ್ಗದ ಕರ್ತೃವಿಚಾರ,[೧೮] ಪಂಪನ ತಾಯಿಯ ನಿಜನಾಮ ವಿಚಾರ[೧೯] ಇತ್ಯಾದಿಗಳಿಗಾಗಿ ವಿದ್ವಾಂಸರಲ್ಲಿ ನಡೆದ ಕತ್ತಿವರಸೆಗಳು, ಆಯಾ ವಿದ್ವಾಂಸರು ಎದುರಿಸಿದ ಧೈರ್ಯಗಳಿಗೆ ಉದಾಹರಣೆಯೆನಿಸಿವೆ. ಇದಕ್ಕಿಂತ ಘೋರವಾದುದು ಸಾಮಾಜಿಕರನ್ನು ಎದುರಿಸುವ ಧೈರ್ಯ. ಇಲ್ಲಿ ಪರಂಪರೆಯ ಬಗ್ಗೆ ಕುರುಡು ವ್ಯಾಮೋಹ ಬೆಳೆಸಿಕೊಂಡ ಮನಸ್ಸುಗಳಿಗೆ ಚುರುಕು ಮುಟ್ಟಿಸುವ ಶೋಧವನ್ನು ವಿದ್ವಾಂಸ ಧೈರ್ಯದಿಂದ ಪ್ರಕಟಿಸಬೇಕು. ಆಗ ಸಮಾಜದಲ್ಲಿ ಹೊಸ ಚಿಂತನೆ, ವೈಜ್ಞಾನಿಕ ಮನೋಭಾವ ಹುಟ್ಟಲು ದಾರಿಗಳು ತೆರೆದುಕೊಳ್ಳುತ್ತವೆ. ಈ ನಿಲವಿನಿಂದ ಸಂಶೋಧನೆಯನ್ನು ಪ್ರಕಟಿಸಿದ ಅವನ ಸುತ್ತ ಕೆಲವೊಮ್ಮೆ ಕ್ರೂರಹಿಂಸೆ, ಒತ್ತಡ ಇತ್ಯಾದಿಗಳು ನಿರ್ಮಾಣವಾಗುತ್ತವೆ. ವೈಯಕ್ತಿಕ ದ್ವೇಷದ ವ್ಯಕ್ತಿಗಳೂ ಸತ್ಯಸಂರಕ್ಷಣೆಯ ಸೋಗುಹಾಕಿ ಅವನನ್ನು ಹಿಂಸಿಸುತ್ತಾರೆ. ಆಗ ಸಂಶೋಧಕ ತನ್ನ ಒಳದನಿಗೆ ಬದ್ಧನಾಗಬೇಕೋ, ಹೊರಗಿನ ಒತ್ತಡಕ್ಕೆ ಮಣಿಯಬೇಕೋ ಎಂಬ ಉಭಯಸಂಕಟವನ್ನು ಅನುಭವಿಸಬೇಕಾಗುತ್ತದೆ. ಜಗತ್ತಿನ ಇತಿಹಾಸದಲ್ಲಿ ಅಧಿಕಾರಿಗಳು ಮತ್ತು ಧರ್ಮಾಧಿಕಾರಿಗಳು ಯಾವಾಗಲೂ ಸತ್ಯವನ್ನು ಹತ್ತಿಕ್ಕುತ್ತ, ಸತ್ಯವಾದಿಗಳನ್ನು ದಂಡಿಸುತ್ತ ಬಂದಿದ್ದಾರೆ. ಯೇಸು, ಹ್ಯಾಲಿ,

---

೧೬. ನೆನಪುಗಳು ಸಾಯುವುದಿಲ್ಲ – ಸಂ. ಆರ್. ರಾಜಪ್ಪ ದಳವಾಯಿ (ಪು. ೧೦)

೧೭. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ – ಎ. ವೆಂಕಟಸುಬ್ಬಯ್ಯ.

೧೮. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ – ಎಂ. ಎಂ. ಕಲಬುರ್ಗಿ (ಪು.೨೫)

೧೯. ಮಾರ್ಗ II – ಎಂ. ಎಂ. ಕಲಬುರ್ಗಿ (ಪು.೫೧–೬೦ ಅಡಿಟಿಪ್ಪಣಿ ಸಹಿತ.)

ಸಾಕ್ರೆಟಿಸ್, ಕೋಪರ್ನಿಕಸ್, ಗೆಲಿಲಿಯೋ, ಕಾರ್ಲಮಾರ್ಕ್ಸ್, ಬಸವಣ್ಣ ಮೊದಲಾದವರನ್ನು ವಿಷಪ್ರಾಶನ, ಶಿಲುಬೆ, ಗಡಿಪಾರು, ಶಿರಚ್ಛೇದನ, ಜೀವಾವಧಿ ಶಿಕ್ಷೆ, ಜೀವಂತ ದಹನ, ಗ್ರಂಥ ದಹನ ಮೊದಲಾದ ಚಿತ್ರಹಿಂಸೆಗೆ ಗುರಿಮಾಡಿದ ಘಟನೆಗಳು ಸತ್ಯ ಹೇಳಿದುದರ, ಸತ್ಯಸ್ಥಾಪನೆಗೆ ಪ್ರಯತ್ನಿಸಿದುದರ ಪರಿಣಾಮವೆನಿಸಿವೆ. ಸಣ್ಣಪುಟ್ಟ ಶೋಧಗಳ ಸಂದರ್ಭದಲ್ಲಿ ಇಷ್ಟು ಕ್ರೂರ ಸನ್ನಿವೇಶಗಳು ನಿರ್ಮಾಣವಾಗದಿದ್ದರೂ, ಕಿರುಕುಳ ತಪ್ಪಿದಲ್ಲ. ಆಗ ಸಂಶೋಧಕ ಒಂದು ಪರಿಮಿತಿಯಲ್ಲಿ ಶಿಲುಬೆಶಿಕ್ಷೆ, ವಿಷಪ್ರಾಶನದಂಥ ಕ್ರೂರವಿರೋಧಗಳಿಗೆ ಗುರಿಯಾಗಬೇಕಾಗುತ್ತದೆ. ಭಾರತದಂಥ ಜಾತಿವಾದಿ ರಾಷ್ಟ್ರಗಳಲ್ಲಿ ಜಾತಿ ಮತಗಳ ವಿಷಯವಾಗಿ ಮಾಡಿದ ಸಂಶೋಧನೆ ಅನೇಕ ಪ್ರತಿಭಟನೆಗಳಿಗೆ ಗುರಿಯಾಗುತ್ತದೆ. ವ್ಯಕ್ತಿ ವಿರೋಧ, ಸಾಮಾಜಿಕ ವಿರೋಧ, ಧಾರ್ಮಿಕ ವಿರೋಧ, ರಾಜಕೀಯ ವಿರೋಧಗಳನ್ನು ಸಂಶೋಧಕ ಎದುರಿಸಬೇಕಾಗಿ ಬರುವುದರಿಂದ, ಈ ದೇಶದಲ್ಲಿ ಅವನು ಒಂದು ಬಗೆಯ ಸಂರಕ್ಷಣಾತ್ಮಕ ನಿಲುವಿಲ್ಲಿಯೇ ತನ್ನ ಬರವಣಿಗೆಯನ್ನು ಮುಂದುವರಿಸುವ ಪರಿಸ್ಥಿತಿಯಿದೆ. ಇದನ್ನು ಲೆಕ್ಕಿಸದೆ ಆಕರ ಸಾಮಗ್ರಿಯ ಆಧಾರದಲ್ಲಿ ಹೊರಹೊಮ್ಮಿದ ಶೋಧವನ್ನು ಪ್ರಕಟಿಸಿದ ಡಾ. ಡಿ. ಎಲ್. ಎನ್. ಪ್ರೊ. ಎಸ್. ಎಸ್. ಬಸವನಾಳ, ಡಾ. ಶಂ. ಬಾ. ಜೋಶಿ ಅವರ ಮೇಲಾದ ದಾಳಿ, ಡಾ. ಎಂ. ಎಂ. ಕಲಬುರ್ಗಿ ಅವರ ಮೇಲಾದ ಚಾರಿತ್ರಿಕ ಹಿಂಸೆ ಸರ್ವವೇದ್ಯವೆನಿಸಿವೆ.

ಇನ್ನೂ ಒಂದು ವಿಚಾರ. ಮಾಡಿದ ಸಂಶೋಧನೆ ದಾರಿ ಸಿಗದೆ ಅರ್ಧಕ್ಕೆ ನಿಂತರೆ, ಅಥವಾ ಫಲಿತಾಂಶ ಇಡಿಯಾಗಿ ವ್ಯರ್ಥವೆನಿಸಿದರೆ ಸಂಶೋಧಕ ಧೈರ್ಯ ಕಳೆದುಕೊಳ್ಳಬಾರದು. ಅನೇಕ ಜನ ವಿಜ್ಞಾನಿಗಳು ತಮ್ಮ ಪ್ರಯೋಗಪ್ರಸಂಗದಲ್ಲಿ ನೂರು ಸಲ ವಿಫಲಗೊಂಡು ನೂರೊಂದನೆಯ ಸಲ ಸಫಲರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಮೊದಲಿನ ನೂರು ಪ್ರಯೋಗಗಳು ವ್ಯರ್ಥವಲ್ಲ, "ಆ ನೂರು ದಾರಿಗಳು ದೋಷಯುಕ್ತ" ಎಂದು ಸಂಶೋಧನೆ ಮಾಡಿದಂತೆಯೆ. ಇದರಿಂದ ಇನ್ನೊಮ್ಮೆ ಆ ದಾರಿಗಳನ್ನು ತುಳಿಯದೆ ಅವನು ಸಂಶೋಧನೆಯಲ್ಲಿ ಮುನ್ನಡೆಯುತ್ತಾನೆ.

ವ್ಯುತ್ಪತ್ತಿ : ಕುತೂಹಲ – ಪ್ರಾಮಾಣಿಕತೆ – ಧೈರ್ಯಗಳು ಸಂಶೋಧಕನ 'ಸ್ವಭಾವ ವಲಯ'ಕ್ಕೆ ಸಂಬಂಧಪಟ್ಟ ಅರ್ಹತೆಗಳಾದರೆ, ವ್ಯುತ್ಪತ್ತಿ – ಪ್ರತಿಭೆ – ಕ್ರಿಯಾಶೀಲತೆಗಳು ಅವನ 'ಸಂಶೋಧನ ವಲಯ'ಕ್ಕೆ ಸಂಬಂಧಪಟ್ಟ ಅರ್ಹತೆಗಳಾಗಿವೆ. ಇವುಗಳಲ್ಲಿ ವ್ಯುತ್ಪತ್ತಿ ಎನ್ನುವುದು ಸಂಶೋಧನ ವ್ಯವಸಾಯದ ಮೂಲಧನ. ಈ ಮೂಲಧನ ಅಧಿಕವಾಗಿದ್ದಷ್ಟೂ ಅವನ ಸಂಶೋಧನೆಯ ಲಾಭ ವರ್ಧಿಸುತ್ತ ಹೋಗುತ್ತದೆ. 'ಬಹುಜ್ಞತಾ ವ್ಯುತ್ಪತ್ತಿಃ' ಎಂದು ನಮ್ಮ ಕಾವ್ಯಮೀಮಾಂಸಕರು ವ್ಯುತ್ಪತ್ತಿಯನ್ನು ವ್ಯಾಖ್ಯಾನಿಸಿದ್ದಾರೆ. ಸಂಶೋಧಕನಿಗೆ ಇದು ಅಧ್ಯಯನದಂಥ 'ಬೌದ್ಧಿಕ ಪರಿಶ್ರಮ', ಕ್ಷೇತ್ರಕಾರ್ಯಗಳಂಥ 'ದೈಹಿಕ ಪರಿಶ್ರಮ'ಗಳಿಂದ ಸಾಧ್ಯವಾಗುವ ಸಂಪತ್ತು. ಸಾಮಾಜಿಕ ಸಂಪರ್ಕ, ವಿದ್ವಾಂಸರ ಸಮಾಗಮ, ನಿರಂತರ ಅಧ್ಯಯನ, ಅವಿಶ್ರಾಂತ ಸಂಶೋಧನಕ್ರಿಯೆ – ಇವುಗಳಿಂದ ಇದು ವರ್ಧಿಸುತ್ತ ಹೋಗುತ್ತದೆ. ಒಂದು ವಿಷಯವನ್ನು ಕುರಿತು ಸಂಶೋಧನೆಯಲ್ಲಿ ತೊಡಗಿರುವಾಗ ಅದಕ್ಕೆ ಸಂಬಂಧಪಟ್ಟ ಆಕರಸಾಮಗ್ರಿ ಯಾವ ಪುಸ್ತಕದಲ್ಲಿ, ಯಾವ ಶಾಸನದಲ್ಲಿ ಸಿಗುತ್ತದೆ? ಯಾವ ಪ್ರದೇಶದಲ್ಲಿ, ಯಾವ ಜನಾಂಗದಲ್ಲಿ ಜೀವಂತವಾಗಿದೆ? ಈ ವಿಷಯವನ್ನು ಕುರಿತು ಈವರೆಗೆ ನಡೆದ ಸಂಶೋಧನೆಯ ಸ್ವರೂಪವೇನು? ಇನ್ನು ಮೇಲೆ ನಡೆಯಬೇಕಾಗಿರುವುದರ ಸ್ವರೂಪವೇನು? ಇತ್ಯಾದಿಗಳ ತಿಳಿವಳಿಕೆ ಬೆರಳಿನ ತುದಿಯ ಮೇಲಿರಬೇಕಾಗುತ್ತದೆ. ಒಟ್ಟಿನಲ್ಲಿ ಸಂಶೋಧನೆಯು ಅಂಕುರಿಸಿ, ಚಿಗುರಿ,

ಹೂವು ಹಣ್ಣು ಬಿಡುವುದೇ ವ್ಯುತ್ಪತ್ತಿ ಎಂಬ ನೀರು ಗೊಬ್ಬರಗಳ ಭೂಮಿಕೆಯಲ್ಲಿ. ಇದು ಎಷ್ಟು ಸತ್ವಯುತವಾಗಿರುವುದೋ, ಎಷ್ಟು ವೈವಿಧ್ಯಪೂರ್ಣವಾಗಿರುವುದೋ ಸಂಶೋಧನೆ ಅಷ್ಟು ಸಶಕ್ತವಾಗುತ್ತದೆ; ಪರಿಪೂರ್ಣವಾಗುತ್ತದೆ. ಈಗಾಗಲೇ ಅವನಲ್ಲಿ ಇದ್ದಿರಬಹುದಾದ ವ್ಯುತ್ಪತ್ತಿಯನ್ನು ಹೊಸ ಹೊಸ ಜ್ಞಾನಸಂಗ್ರಹದಿಂದ ಬೆಳೆಸಿಕೊಂಡು ಹೋಗದಿದ್ದರೆ ಸಂಶೋಧನಕ್ಷೇತ್ರದಲ್ಲಿ ಯಾವುದೇ ವಿದ್ವಾಂಸ ಬಹಳ ದಿನ ತಾಳಲಾರ, ಬಾಳಲಾರ. ಕೆಲವೇ ದಿನಗಳಲ್ಲಿ ಬೇರು ಮೇಲೆ ಬಂದ ಮರದಂತೆ ಒಣಗಿ ನಿಲ್ಲುತ್ತಾನೆ. ಕನ್ನಡದಕ್ಕೆ ಬಂದರೆ ಆರ್. ನರಸಿಂಹಾಚಾರ್ ಅವರು ಕನ್ನಡ ಸಂಸ್ಕೃತ ತಮಿಳು ಭಾಷೆಗಳನ್ನೂ ಸಾಹಿತ್ಯ, ಶಾಸ್ತ್ರ, ಹಸ್ತಪ್ರತಿ, ಶಿಲ್ಪ, ಇತಿಹಾಸ ಕ್ಷೇತ್ರಗಳನ್ನೂ ಲೀಲಾಜಾಲವಾಗಿ ಈಸುವ ಸಾಮರ್ಥ್ಯ ಹೊಂದಿದ್ದುದನ್ನು, ಗೋವಿಂದ ಪೈ , ಎ. ಎನ್. ಉಪಾಧ್ಯೆ, ಕನ್ನಡ, ಸಂಸ್ಕೃತ, ಪ್ರಾಕೃತ, ಮರಾಠಿ ಹೀಗೆ ಹಲವು ಭಾಷೆ ಸಾಹಿತ್ಯಗಳಲ್ಲಿ ಸಿದ್ಧಿ ಪಡೆದಿದ್ದುದನ್ನು, ಇತಿಹಾಸ ಪ್ರಾಧ್ಯಾಪಕರಾಗಿದ್ದ ಪ್ರೊ. ಶಿ. ಶಿ. ಬಸವನಾಳರು ಕವಿಸಾಹಿತ್ಯ, ವ್ಯಾಕರಣ, ಧರ್ಮ, ವಚನಸಾಹಿತ್ಯ ಹೀಗೆ ಮೇಲುನೋಟಕ್ಕೆ ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳಲ್ಲಿ ಪಾರಂಗತರಾಗಿದ್ದುದನ್ನು ಇಲ್ಲಿ ನೆನೆಯಬಹುದು. ಡಾ. ಶಂ. ಬಾ ಅವರು ಕರ್ನಾಟಕದ ಚರಿತ್ರೆಯಿಂದ ಅಭ್ಯಾಸವನ್ನು ಪ್ರಾರಂಭಿಸಿ, ಭಾರತದ ಸಂಸ್ಕೃತಿ ಶೋಧಕ್ಕಿಳಿದು, ಮಾನವ ಸಂಸ್ಕೃತಿಗೆ ಹೊರಳಿದರು. ಈ ಮೂರು ನೆಲೆಗಳನ್ನು ಏರುವುದಕ್ಕಾಗಿ ಅವರು ವಸ್ತು, ಭಾಷೆ, ನಂಬಿಕೆ, ಆಚರಣೆ, ಪುರಾಣ ಇತ್ಯಾದಿ ರೂಪದ ಸಾಮಗ್ರಿಯನ್ನೆಲ್ಲ ಜಾಲಾಡಿದುದು ವ್ಯುತ್ಪತ್ತಿಗೆ ದೊಡ್ಡ ನಿದರ್ಶನವೇ ಸರಿ. ಈ ರೀತಿಯ ಅಂತರ್‌ಶಿಸ್ತೀಯತೆಯನ್ನು ಸಂಶೋಧಕ ಬೆಳೆಸಿಕೊಳ್ಳಬೇಕಾಗುತ್ತದೆ. ಸಂಶೋಧನೆಯಲ್ಲಿ ಇಂಥ ವ್ಯುತ್ಪತ್ತಿ ಅಧಿಕವಾಗಿದ್ದಷ್ಟೂ ಅವನ ಕ್ಷಿತಿಜ ವಿಸ್ತಾರವಾಗುತ್ತ ಹೋಗುತ್ತದೆ. ಇದಕ್ಕೆ ವಿರುದ್ಧವೆಂಬಂತೆ ಇಂದು ಅನೇಕ ಕ್ಷೇತ್ರಗಳು ಹೋಗಲಿ, ಒಂದು ಕ್ಷೇತ್ರದ ವಿಶೇಷತಜ್ಞತೆ (Specialization) ಯೂ ಸಂಶೋಧನೆಯ ಶಿಸ್ತಾಗಿ ಬೆಳೆಯುತ್ತಲಿದೆ. ಕ್ಷೇತ್ರವೊಂದರಲ್ಲಿ ಮತ್ತೆ ಒಂದು ಶಾಖೆಯನ್ನೋ, ಒಂದು ಉಪಶಾಖೆಯನ್ನೋ ತಜ್ಞತೆಯ ವರ್ತುಲವನ್ನಾಗಿಸಿಕೊಳ್ಳುತ್ತಿದ್ದಾರೆ. ಆದರೆ ಸಂಶೋಧನೆಗೆ ವಸ್ತುವಾಗುವ ಬದುಕು ಬರಹಗಳು ತುಂಬ ವೈವಿಧ್ಯಪೂರ್ಣವಾಗಿರುವುದರಿಂದ ಶಾಖೆ, ಉಪಶಾಖೆಗಳ ವಿಶೇಷತಜ್ಞತೆ (Specialization) ಗಿಂತ, ಅನೇಕ ಶಾಖೆಗಳ ಬಹುಜ್ಞತೆಯೇ ಸರಿಯಾದ ಕ್ರಮವೆಂದು ಹೇಳಬಹುದು.

ಪ್ರತಿಭೆ : ಕವಿಯಂತೆ ಸಂಶೋಧಕನಿಗೂ ಪ್ರತಿಭೆ ಅಗತ್ಯವೆಂದು ತೋರುತ್ತದೆ. 'ಪ್ರತಿಭಾ' ಎಂಬುದನ್ನು 'ಪ್ರತಿ+ಭಾ' ಎಂದು ಬಿಡಿಸಿ, ಹೊಳೆದು ಮತ್ತೆ ಮತ್ತೆ ಹೊಳೆಯುತ್ತ ಹೋಗುವುದು ಎಂದು ಇದಕ್ಕೆ ಅರ್ಥ ಹೇಳುತ್ತಾರೆ. ಯಾರಿಗೂ ಹೊಳೆಯದ ಒಂದು ವಿಷಯ ಕವಿಯಂತೆ ಸಂಶೋಧಕನಿಗೂ ಹೊಳೆದು, ಹೊಳೆಯುತ್ತ ಹೋಗುತ್ತದೆ. ಅಂದರೆ, ಕವಿಯಲ್ಲಿ 'ಮೂಲಕಲ್ಪನೆ' (Imagination) ಹೊಳೆದು ಮತ್ತೆ ಹೊಸ ಹೊಸ ಕಲ್ಪನೆಗಳು ಮಿಂಚಿ ಸೃಜನದಲ್ಲಿ ವಿರಮಿಸುವಂತೆ, ಸಂಶೋಧಕನಲ್ಲಿಯೂ 'ಮೂಲ ಊಹೆ' (Hypothesis) ಹೊಳೆದು, ಮತ್ತೆ ಹೊಸ ಹೊಸ ಸತ್ಯಗಳು ಮಿಂಚಿ ಸಂಯೋಜನೆಯಲ್ಲಿ ವಿರಮಿಸುತ್ತವೆ. ಆದರೆ ಅಭಿವ್ಯಕ್ತಿಯ ಸಂದರ್ಭದಲ್ಲಿ ಕವಿ ವಾಚ್ಯ, ಲಕ್ಷ್ಯ, ವ್ಯಂಗ್ಯ ಪಾತಳಿಗಳ ಭಾಷೆಯನ್ನು ಬಳಸಿದರೆ ಸಂಶೋಧಕ ವಾಚ್ಯ ಪಾತಳಿಯ ಭಾಷೆಯನ್ನು ಮಾತ್ರ ಬಳಸುತ್ತಾನೆ. ಇದರಿಂದಾಗಿ ಕವಿಯ ರಚನೆ ಸೃಜನವಾಗಿ ಬೆಳೆದರೆ, ಸಂಶೋಧಕನ ರಚನೆ ಸಂಯೋಜನೆಯಾಗಿಯೇ ಉಳಿಯುತ್ತದೆ. ಇಲ್ಲಿ ಒಬ್ಬನದು ಸೃಜನಪ್ರತಿಭೆಯೆನಿಸಿದರೆ,

ಇನ್ನೊಬ್ಬನದು ಸಂಯೋಜನ ಪ್ರತಿಭೆ ಎನಿಸಿಕೊಳ್ಳುತ್ತದೆ. ಹೀಗಿದ್ದೂ ಕಥನಕವನದಂಥ ರಚನೆಗಳಲ್ಲಿ, ಸೃಜನಪ್ರತಿಭೆಯು ಸಂಯೋಜನಪ್ರತಿಭೆಯ ರೂಪಕ್ಕೆ, ವ್ಯಾಖ್ಯಾನಮುಖಿಶೋಧದಂಥ ಸಂಶೋಧನೆಗಳಲ್ಲಿ ಸಂಯೋಜನಪ್ರತಿಭೆಯು ಸೃಜನಪ್ರತಿಭೆಯ ರೂಪಕ್ಕೆ ಹೊರಳಬಹುದಾಗಿದೆ.

ಪ್ರತಿಭೆಯಲ್ಲಿ ಕಾಣುವುದೂ ಕಟ್ಟುವುದೂ–ಹೀಗೆ ಎರಡು ಕ್ರಿಯೆಗಳು ನಡೆಯುತ್ತವೆ. ಇವುಗಳಲ್ಲಿ ಸಂಶೋಧನೆಯು ಕಾಣುವ ಕ್ರಿಯೆಯ ಮೇಲೆ ಒತ್ತು ಕೊಟ್ಟರೆ, ಸೃಜನವು ಕಾಣುವುದರೊಂದಿಗೆ ಕಟ್ಟುವ ಕ್ರಿಯೆಯ ಮೇಲೆಯೂ ಒತ್ತುಕೊಡುತ್ತದೆ.

ಕ್ರಿಯಾಶೀಲತೆ : ಮೇಲೆ ಹೇಳಿದ ಐದು ಗುಣಗಳಿದ್ದೂ ನಿರಂತರ ಕ್ರಿಯಾಶೀಲತೆ, ನಿಮಗ್ನತೆ ಇಲ್ಲದಿದ್ದರೆ ವಿದ್ವಾಂಸನ ಸಂಶೋಧನಪ್ರಜ್ಞೆ ಹರಿತವಾಗದು, ನವೀಕರಣಗೊಳ್ಳದು. ವ್ಯುತ್ಪತ್ತಿಗಿಂತ ಭಿನ್ನವಾದುದಾಗಿದೆ, ಈ ಕ್ರಿಯಾಶೀಲತೆ. ವ್ಯುತ್ಪತ್ತಿ ಗಳಿಕೆಗೆ ಸಂಬಂಧಿಸಿದ್ದು, ದೈಹಿಕವಾಗಿ–ಬೌದ್ಧಿಕವಾಗಿ ದುಡಿದು ವಿಷಯವನ್ನು ಶೇಖರಿಸಿಕೊಳ್ಳುವುದು ಅಲ್ಲಿ ನಡೆದರೆ, ಕ್ರಿಯಾಶೀಲತೆಯು ಬಳಕೆಗೆ ಸಂಬಂಧಿಸಿದ್ದು, ಶೇಖರಿಸಿದ ವಿಷಯವನ್ನು ದುಡಿಸಿಕೊಳ್ಳುವುದು, ಅಭಿವ್ಯಕ್ತಿಗೊಳಿಸುವುದು ಇಲ್ಲಿ ನಡೆಯುತ್ತದೆ. ಖಡ್ಗ ಬಳಸಿದಷ್ಟೂ ಹರಿತವಾಗುವ, ಬಳಸದಿದ್ದರೆ ಜಂಗು ಹಿಡಿಯುವ ರೀತಿ ಇಲ್ಲಿಯದಾಗಿದೆ. ವ್ಯುತ್ಪತ್ತಿಯಿಂದ ಸಂಶೋಧನೆಯ ಅನೇಕ ನೆಲೆಗಳು ಗೊತ್ತಾಗುವಂತೆ ಕ್ರಿಯಾಶೀಲತೆಯಿಂದಲೂ ಸಂಶೋಧನೆಯ ಹೊಸ ಹೊಸ ಒಳನೋಟಗಳು ಗೊತ್ತಾಗುತ್ತವೆ. 'ಅರಿತವನಿಗಿಂತ ನುರಿತವ ಶ್ರೇಷ್ಠ' ಎಂಬಂತೆ ನಿರಂತರ ಕ್ರಿಯಾಶೀಲತೆಯಿಂದಾಗಿ ಅವನು ಪಳಗುತ್ತಾನೆ. ಅವನ ಸಂಶೋಧನೆ ಪಲ್ಲವಿಸುತ್ತ ಹೋಗುತ್ತದೆ. ಈ ಕ್ರಿಯಾಶೀಲತೆ ಅನುಭೂತಿ, ಅಭಿವ್ಯಕ್ತಿ ಎರಡೂ ನೆಲೆಗಳಲ್ಲಿ ಕೊರತೆಗಳನ್ನು ಕಾಣಿಸಿಕೊಡುತ್ತದೆ ಮತ್ತು ಆ ಕೊರತೆಗಳನ್ನು ತುಂಬಿಕೊಳ್ಳುವ ರೀತಿಗಳನ್ನು ತಿಳಿಸಿಕೊಡುತ್ತದೆ. ಇದರಿಂದ ಅವನ ಸಂಶೋಧನಕ್ರಿಯೆ ನವೀಕರಣಗೊಳ್ಳುವುದಲ್ಲದೆ, ಕಾಲಕಾಲಕ್ಕೆ ಸಂಭವಿಸಿದ ಸಂಶೋಧನಕ್ಷೇತ್ರದ ಹೊಸ ಹೊಸ ಪ್ರಯೋಗಗಳಿಗೆ ಮೈವೊಡ್ಡಿ, ಅದರ ಎಲ್ಲ ಘಟ್ಟಗಳಿಗೂ ಅವನು ಪ್ರಸ್ತುತನಾಗುತ್ತಾನೆ; ಹರಿಯುವ ನೀರಿನಂತೆ ಚಲನಶೀಲ ಸಂಶೋಧಕನಾಗುತ್ತಾನೆ.

ಇನ್ನೂ ಒಂದು ಮುಖ್ಯ ಸಂಗತಿಯೆಂದರೆ, ಸಂಶೋಧನೆಯ ಕ್ರಮ (method)ವೂ ಅವನಿಗೆ ರಕ್ತಗತವಾಗುತ್ತದೆ. ಯಾವುದೇ ಸಮಸ್ಯೆ ಕಣ್ಣಿಗೆ ಬಿದ್ದರೆ ಸಾಕು, ಅದನ್ನು ಪ್ರವೇಶಿಸುವ ವಿಧಾನ, ಕಾರ್ಯ–ಕಾರಣ ಸಂಬಂಧಗಳನ್ನು ಬೆಸೆಯುತ್ತ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವ ರೀತಿ ಅವನಿಗೆ ಕರಗತವಾಗುತ್ತದೆ. ಅಂದರೆ ನಿರಂತರವಾಗಿ ತೊಡಗಿಕೊಳ್ಳುವುದರಿಂದ ಅವನ ವ್ಯಕ್ತಿತ್ವಕ್ಕೆ "ಸಂಶೋಧನೆಯ ಶಿಸ್ತು" ಪ್ರಾಪ್ತವಾಗುತ್ತದೆ. ಅವನು ಒಬ್ಬ 'Methodist' ಆಗಿ ರೂಪುಗೊಳ್ಳುತ್ತಾನೆ.

ಮೇಲೆ ಹೇಳಿದ ಈ ಎಲ್ಲ ಲಕ್ಷಣಗಳನ್ನು ಉತ್ತಮ ಸಂಶೋಧಕನಲ್ಲಿ ಅಪೇಕ್ಷಿಸಬಹುದಾಗಿದೆ. ಇವು ಹೆಚ್ಚು ನಿಖರವಾಗಿದ್ದಷ್ಟೂ ಅವನ ಸಂಶೋಧನೆ ಹೆಚ್ಚು ಅರ್ಥ ಪಡೆಯುತ್ತದೆ.

❖❖

೨

❖

ಆಕರಗಳು

ಆಕರಗಳ ಸ್ವರೂಪ: ಆಕರಗಳ ಪ್ರಮಾಣ, ಆಕರಗಳ ಪ್ರಾಮಾಣಿಕತೆ/ ಆಕರಗಳ ಪ್ರಕಾರ : ವಸ್ತುಸಾಮಗ್ರಿ, ಭಾಷಾಸಾಮಗ್ರಿ, ಕ್ರಿಯಾಸಾಮಗ್ರಿ, ಜ್ಞಾನಸಾಮಗ್ರಿ / ಪ್ರಾಮಾಣಿಕ ಆಕರ-ಅಪ್ರಾಮಾಣಿಕ ಆಕರ/ಪ್ರಧಾನ ಆಕರ-ಪೋಷಕ ಆಕರ-ಪೂರಕ ಆಕರ/ಪ್ರತ್ಯಕ್ಷ ಆಕರ-ಪರೋಕ್ಷ ಆಕರ/ಆಕರದ ನೆಲೆಗಳು : ಕೇಂದ್ರಿಯ ನೆಲೆಗಳು, ಕ್ಷೇತ್ರೀಯ ನೆಲೆಗಳು / ಆಕರಶೋಧ ಕ್ರಿಯೆ.

ಆಕರಗಳ ಸ್ವರೂಪ :

ಭಾಷೆ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ನಡೆಯುವ ಸಂಶೋಧನೆಯು ಗತಕಾಲದ ವಿಷಯವನ್ನು ಕುರಿತು ಅನ್ವೇಷಣೆಯಾಗಿದೆ. ಇಂಥ ವಿಷಯಗಳ ಅನ್ವೇಷಣೆಗೆ ನಾವು ಅವಲಂಬಿಸಬೇಕಾದುದು, ಆ ಕಾಲ ನಮಗಾಗಿ ಬಿಟ್ಟು ಹೋಗಿರುವ ಆಕರಸಾಮಗ್ರಿಯನ್ನು, ಅದಕ್ಕಾಗಿಯೆ 'No Source no History' ಎಂದು ಹೇಳುತ್ತಾರೆ. ಇತಿಹಾಸವನ್ನು ಕುರಿತ ಸಂಶೋಧನೆಯಲ್ಲಿ ಆಕರಗಳಿಗೆ ಇಷ್ಟು ಮಹತ್ವವಿರುವುದರಿಂದ 'No Source no Research' ಎಂದು ಹೇಳಬೇಕಾಗುತ್ತದೆ.

ಈ ಆಕರಗಳು ಪ್ರಮಾಣದೃಷ್ಟಿಯಿಂದ ಅಧಿಕವಾಗಿದ್ದಷ್ಟೂ, ಗುಣದೃಷ್ಟಿಯಿಂದ ಪ್ರಾಮಾಣಿಕವಾಗಿದ್ದಷ್ಟೂ ಸಂಶೋಧನೆ ಉತ್ತಮ ಫಲಿತಾಂಶ ನೀಡುತ್ತದೆ. ಆದರೆ ಭಾರತದಲ್ಲಿ ಅದರ ಭೌಗೋಲಿಕ ವ್ಯಾಪ್ತಿ, ಐತಿಹಾಸಿಕ ದೀರ್ಘತೆಗಳಿಗೆ ತಕ್ಕ ಪ್ರಮಾಣದಲ್ಲಿ ಆಕರಸಾಮಗ್ರಿ ಸಿಗುವುದಿಲ್ಲ. ಎರಡನೆಯದಾಗಿ ಲಭ್ಯವಿರುವ ಆಕರಸಾಮಗ್ರಿಯೂ ಕೆಲವೊಮ್ಮೆ ಪ್ರಾಮಾಣಿಕವಾಗಿರುವುದಿಲ್ಲ, ಹೀಗಾಗಿ ಭಾರತದ, ಅದರ ಭಾಗವಾಗಿರುವ ಕರ್ನಾಟಕದ ಆಕರಗಳ ಸ್ವರೂಪವನ್ನು 'ಆಕರಗಳ ಪ್ರಮಾಣ' ಮತ್ತು 'ಆಕರಗಳ ಪ್ರಾಮಾಣಿಕತೆ'ಗಳ ದೃಷ್ಟಿಯಿಂದ ವಿವೇಚಿಸಬೇಕಾಗುತ್ತದೆ.

ಆಕರಗಳ ಪ್ರಮಾಣ :

೧. ಭಾರತೀಯರದು ಆಧ್ಯಾತ್ಮಿಕ ಮನಸ್ಸು. ಈ ಮನಸ್ಸು ತಾನು ಮಾಡಿದ ಸಾಧನೆ, ಪಡೆದ ಸಿದ್ಧಿಗಳ ವಿಷಯವಾಗಿ ಒಂದು ಬಗೆಯ ನಿರ್ಲಿಪ್ತರೀತಿಯಿಂದ ವರ್ತಿಸುತ್ತ ಬಂದಿತು. ಯಾವುದೇ ಕೆಲಸವನ್ನು ನಾನು ಮಾಡಿದೆನೆಂದು ದಾಖಲಿಸುವುದಕ್ಕಿಂತ, ದೇವರು ನನ್ನಿಂದ ಮಾಡಿಸಿದನೆಂದು

ಭಾವಿಸುವ ಮನೋಧರ್ಮ ಇವರದಾಯಿತು. ಇದರಿಂದಾಗಿ ತಾವು ಪೂರೈಸಿದ ಸಣ್ಣಪುಟ್ಟ ಕಾರ್ಯಗಳು ಹೋಗಲಿ, ಲೋಕೋತ್ತರ ಕಾರ್ಯಗಳಿಗೂ ತಮ್ಮ ಹೆಸರನ್ನು ಅವರು ಅಂಟಿಸಲಿಲ್ಲ. ಲೋಕಪ್ರಸಿದ್ಧ ಮಹಾಕಾವ್ಯ ಬರೆದರೂ ಹೆಸರನ್ನು ಕೈಬಿಟ್ಟು, ತಾನು ವೀರನಾರಾಯಣನ ಲಿಪಿಕಾರನೆಂದೋ, ವ್ಯಾಸನ ಕುಮಾರನೆಂದೋ ಕನ್ನಡ ಭಾರತದ ಕರ್ತೃ ಹೇಳಿದರೆ, ಪ್ರಭುಲಿಂಗಲೀಲೆಯ ಕರ್ತೃ ಇಷ್ಟನ್ನೂ ಹೇಳಲಿಲ್ಲ. ಗೊಮ್ಮಟೇಶನ ಶಿಲ್ಪಿ ತನ್ನ ವಿಷಯವಾಗಿ ದಿವ್ಯನಿರಪೇಕ್ಷಭಾವ ತಾಳಿದ. ಈ ನಿಲವು ಕಾರಣವಾಗಿ ನಮ್ಮ ದೇಶದಲ್ಲಿ ಪರಂಪರೆಯನ್ನು ಕಟ್ಟಲು, ಆ ಪರಂಪರೆಯ ಹಿಂದಿರುವ ಪುರುಷಪ್ರಯತ್ನವನ್ನು ಗುರುತಿಸಲು ಸಿಗುವ ಆಕರಸಾಮಗ್ರಿಗಳು ವಿರಳವೆಂದೇ ಹೇಳಬೇಕು.

೨. ಹೀಗೆ ನಮಗೆ ಮೂಲತಃ ಆಕರ ಸಾಮಗ್ರಿಗಳು ಸಿಗುವುದೂ ವಿರಳ, ದುರ್ದೈವದ ಸಂಗತಿಯೆಂದರೆ ಅದು ಕಾಲಕ್ರಮದಲ್ಲಿ ಹಾಳಾದುದೂ ವಿಪುಲ. ಇದಕ್ಕೆ ಕಾರಣಗಳು ಹೀಗಿವೆ:

(ಅ) ಆಧ್ಯಾತ್ಮಿಕ ಒಲವು ಕಾರಣವಾಗಿ ಕನ್ನಡಿಗರು ಧಾರ್ಮಿಕ ಆಕರಗಳನ್ನು ಉಳಿಸಿಕೊಂಡಷ್ಟು ಲೌಕಿಕ ಆಕರಗಳನ್ನು ಉಳಿಸಿಕೊಳ್ಳಲಿಲ್ಲ. ಪಂಪನ ಆದಿ ಪುರಾಣ, ರನ್ನನ ಅಜಿತಪುರಾಣಗಳ ಪ್ರತಿಗಳಷ್ಟು ಅದೇ ಕವಿಗಳ ಭಾರತ, ಗದಾಯುದ್ಧದ ಪ್ರತಿಗಳು ಸಿಗದಿರುವುದು ಈ ಕಾರಣಕ್ಕಾಗಿ. ಸೂಕ್ತಿಸುಧಾರ್ಣವದಲ್ಲಿ ಅಜಿತಪುರಾಣದ ಪದ್ಯಗಳಿದ್ದರೂ ಗದಾಯುದ್ಧದ ಒಂದೂ ಪದ್ಯವಿಲ್ಲದುದನ್ನು ನೆನೆದರೆ, ಆ ಕಾಲಕ್ಕಾಗಲೇ ಅದರ ಪ್ರತಿಗಳು ದುರ್ಲಭವಾಗಿರಬಹುದೆನಿಸುತ್ತದೆ. ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿದ ಅತ್ತಿಮಬ್ಬೆ, ಅದೇ ಕವಿಯ ಭುವನೈಕರಾಮಾಭ್ಯುದಯದ ಒಂದೂ ಪ್ರತಿ ಬರೆಯಿಸಲಿಲ್ಲ. ಆ ಕೃತಿ ಕಳೆದೇ ಹೋಯಿತು. ರಾಜರು ಕಟ್ಟಿಸಿದ ದೇವಾಲಯಗಳು ಉಳಿದುಬಂದವು. ಅವರೇ ಕಟ್ಟಿಸಿದ ರಾಜಾಲಯಗಳು ಅಳಿದುಹೋದವು. ಕೆಳದಿ ಅರಸರು ಕಟ್ಟಿಸಿದ ಅಘೋರೇಶ್ವರ ದೇವಾಲಯ ಉಳಿದು, ಅವರೇ ಕಟ್ಟಿಸಿದ ನಾಟ್ಯಗೃಹ ಅಳಿದುದನ್ನು ಇಲ್ಲಿ ಉದಾಹರಿಸಬಹುದು. ಇಂಥ ಅನೇಕ ಉದಾಹರಣೆಗಳು ಕರ್ನಾಟಕದಲ್ಲಿ ಸಿಗುತ್ತವೆ.

(ಆ) ಪ್ರಾಚೀನ ಅವಶೇಷಗಳನ್ನು ಉಳಿಸಿಕೊಳ್ಳುವ ಸಲುವಾಗಿ ಆಗಿನ ಸರಕಾರವಾಗಲಿ, ಸಾರ್ವಜನಿಕರಾಗಲಿ ಒಂದು ವ್ಯವಸ್ಥಿತ ಯೋಜನೆಯನ್ನು ರೂಪಿಸಿರಲಿಲ್ಲ. ಹೀಗಾಗಿ ಲೌಕಿಕ ಕೃತಿಗಳು ಹೋಗಲಿ, ಶ್ರೀವಿಜಯನ ರಘುವಂಶ ಮಹಾಪುರಾಣ, ಗುಣವರ್ಮನ ಹರಿವಂಶ ಇತ್ಯಾದಿ ಧಾರ್ಮಿಕ ಕೃತಿಗಳೂ ಕಳೆದುಹೋದವು. 'ತೈಲಾದ್ರಕ್ಷೇತ್ ಜಲಾದ್ರಕ್ಷೇತ್...' ಎಂಬಂಥ ಹಸ್ತಪ್ರತಿ ಸಂರಕ್ಷಣ ಪರವಾದ ಹೇಳಿಕೆಗಳು ವೈಯಕ್ತಿಕ ಧ್ವನಿಗಳಾಗಿ ಉಳಿದವೇ ಹೊರತು, ಸಾಮಾಜಿಕ ಆದೇಶಗಳಾಗಿ, ಸರಕಾರಿ ಕಾನೂನುಗಳಾಗಿ ರೂಪಗೊಳ್ಳಲಿಲ್ಲ. ಆಕರ ಸಾಮಗ್ರಿಗಳಾದ ದೇವಾಲಯಗಳ 'ಖಂಡಸ್ಫುಟಿತ' (Repair) 'ಜೀರ್ಣೋದ್ಧಾರ' (Renovation)ಗಳಿಗೆ ಬಿಟ್ಟ ದತ್ತಿಗಳು ವೈಯಕ್ತಿಕ, ಸಾಮಾಜಿಕ ಮಟ್ಟದವೇ ಹೊರತು ಒಂದು ಸರಕಾರಿ ವ್ಯವಸ್ಥೆಯಲ್ಲ. ಹೀಗಾಗಿ ದೇವಾಲಯದ ಆಸ್ತಿ ಅರ್ಚಕರ ಕುಟುಂಬದಲ್ಲಿ, ಮಠದ ಆಸ್ತಿ ಸ್ವಾಮಿಯ ಕುಟುಂಬದಲ್ಲಿ ಕರಗಿಹೋದವು.

(ಇ) ಅನೇಕ ಮತಸಂಪ್ರದಾಯಗಳ, ಅನೇಕ ರಾಜವಂಶಗಳ ನೆಲೆಯಾದ ಕರ್ನಾಟಕದಲ್ಲಿ ಮತಮತ್ಸರ, ರಾಜ್ಯಮತ್ಸರ ಕಾರಣವಾಗಿ ಹಲವಾರು ಆಕರ ಸಾಮಗ್ರಿಗಳು ವಿನಾಶಕ್ಕೆ ಗುರಿಯಾದವು. ಇದಲ್ಲದೆ–

ಬಾಣ ಪೇಳಿದ ಕಾದಂಬರಿ ಕಾವ್ಯವ
ಕ್ಷೋಣಿಯರಿಕೆಯೊಳು ಸುಡಿಸಿ ।
ಮಾಣದೆ ಲೀಲಾವತಿಗೆ ಕಪ್ಪಿಡಿಸಿದ
ಜಾಣ ನೇಮಿಯ ಬಲಗೊಂಬೆ ॥[೧]

ಎಂಬಂಥ ಪದ್ಯಗಳು ವೈಯಕ್ತಿಕ ಪ್ರತಿಷ್ಠೆ, ಈರ್ಷೆ ಕಾರಣವಾಗಿ ಹಸ್ತಪ್ರತಿಗಳು ನಾಶವಾದುದನ್ನು ಸೂಚಿಸುತ್ತವೆ. ಇಂಥ ಹಲವಾರು ನಿದರ್ಶನಗಳು ನಮ್ಮ ಚರಿತ್ರೆಯಲ್ಲಿ ಸಿಗುತ್ತವೆ. ಇವೆಲ್ಲ ಕಾರಣಗಳಿಂದಾಗಿ ನಮ್ಮಲ್ಲಿ ಆಕರಗಳ ಮೊತ್ತ ಕರಗುತ್ತ ಬಂದುದರಿಂದ ಅಪೇಕ್ಷಿತ ಪ್ರಮಾಣದಲ್ಲಿ ಅವು ಸಿಗುತ್ತಿಲ್ಲವೆಂದು ಹೇಳಬೇಕು.

ಆಕರಗಳ ಪ್ರಾಮಾಣಿಕತೆ :

೧. ಧಾರ್ಮಿಕ ಮನಸ್ಸು ಕಾರಣವಾಗಿ ನಮ್ಮಲ್ಲಿ 'ಇತಿಹಾಸ' ಗೌಣಸ್ಥಾನಕ್ಕೆ ಸರಿದು, 'ಪುರಾಣ' ಪ್ರಮುಖಸ್ಥಾನ ಪಡೆಯಿತು. 'ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು'[೨] ಎಂಬ ನಿಲುವು ನಮ್ಮ ಸಾಹಿತ್ಯಲೋಕವನ್ನು ಉದ್ದಕ್ಕೂ ಆಳಿ, ಅದು ಪುರಾಣಪುರುಷರ ಆದರ್ಶ ಜೀವನವನ್ನು ಚಿತ್ರಿಸಿತೇ ಹೊರತು, ವಾಸ್ತವ ವ್ಯಕ್ತಿಗಳ ಬದುಕನ್ನು ಬರೆದಿಡಲಿಲ್ಲ. ಅರಿಕೇಸರಿಯಂಥ ವಾಸ್ತವ ರಾಜನನ್ನು ನಾಯಕನೆಂದು ಇಟ್ಟುಕೊಂಡರೂ ಪುರಾಣಪುರುಷ ಅರ್ಜುನನೊಂದಿಗೆ ಸಮನ್ವಯ ಮಾಡಿ, ಚರಿತ್ರೆಯನ್ನು ಮತ್ತೂ ಗೌಣಗೊಳಿಸಲಾಯಿತು. ನಮ್ಮ ಸಾಹಿತ್ಯಚರಿತ್ರೆಯ ಮೊದಲ ಬರವಣಿಗೆಯಾದ ಜೈನರ ರಚನೆಗಳಲ್ಲಿ ಇಂಥ ಪುರಾಣಗಳೂ ಪುರಾಣೀಕೃತ ಇತಿಹಾಸಗಳೂ ಬೆಳೆದು ಬಂದು, ಆಕರಗಳ ಪ್ರಾಮಾಣಿಕತೆ ಸಂದೇಹಕ್ಕೆ ಗುರಿಯಾಯಿತು. ಹೀಗೆ 'ವೀರಯುಗ'ದಲ್ಲಿ ರಾಜಕೀಯ ವ್ಯಕ್ತಿಗಳ ಬೆನ್ನುಬಿಡದ ಪುರಾಣವು 'ಭಕ್ತಿಯುಗ'ದಲ್ಲಿ ಧಾರ್ಮಿಕ ವ್ಯಕ್ತಿಗಳ ಬೆನ್ನನ್ನೂ ಬಿಡಲಿಲ್ಲ. ಒಟ್ಟಾರೆ ಎರಡೂ ಯುಗಗಳಲ್ಲಿ ಈ ಪುರಾಣಪ್ರಜ್ಞೆ ಕ್ರಮೇಣ ಇತಿಹಾಸಪ್ರಜ್ಞೆಯನ್ನೇ ಹಾಳು ಮಾಡಿತು.

ಪುರಾಣದಂತೆ ಇತಿಹಾಸದ ಬೆನ್ನುಬಿಡದ ಇನ್ನೊಂದು ಅಂಶ ಪವಾಡ. ನಮ್ಮ ಅನೇಕ ಕವಿಗಳು ಸಿದ್ಧಪವಾಡಗಳನ್ನು ಇತಿಹಾಸಕ್ಕೆ ತೊಡಿಸಿ, ಅದರ ಮೂಲಸ್ವರೂಪವನ್ನೇ ನಾಶ ಮಾಡಿದರು. ಈ ಪುರಾಣ ಮತ್ತು ಪವಾಡಗಳ ಮೂಲಕ ವ್ಯಕ್ತಿಮಹತ್ವ, ಸ್ಥಳಮಹತ್ವಗಳನ್ನು ಸ್ಥಾಪಿಸುವ ಧೋರಣೆ ಮಧ್ಯಕಾಲೀನ ಕರ್ನಾಟಕದಲ್ಲಿ ದಟ್ಟವಾಗಿ ಬೆಳೆದುಬಂದಿತು. ಹರಿಹರ ರಾಘವಾಂಕಾದಿಗಳು–

---

೧. ಚಂದ್ರಪ್ರಭ ಪುರಾಣ–ದೊಡ್ಡಯ್ಯ (ಕಕಚ–೨೯೨).
೨. ರಾಮಚಂದ್ರಚರಿತ ಪುರಾಣ–ನಾಗಚಂದ್ರ (೧–೩೬).

ಸಲ್ಲಲಿತವಹ ಪುಣ್ಯ ಕಾವ್ಯಕಥನದೊಳು ಮು
ನ್ನಿಲ್ಲದುದ ನುಡಿದುಳ್ಳುದಂ ಪೊಳ್ದು ಹುಲ್ಲ ಹೊಲ
ನೆಲ್ಲಮಂ ಪೊಗಳಿ ಸುಧೆಯೊಳಗೆ ನಂಜಿಡುವಂತೆ ಮೇಳವಿಸಿ ಪೇಳೆ... ॥[೩]

ಎಂದು ಪೀಠಿಕೆ ಹಾಕಿಕೊಂಡರೂ ಶುದ್ಧಚರಿತ್ರೆ ಬರೆಯುವ ಕೆಲಸ ಇವರಿಂದಲೂ ಸಾಧ್ಯವಾಗಲಿಲ್ಲ. ಹೀಗಿದ್ದೂ ಇವರ ಕಥಾನಾಯಕರು ಕೃತಿಯ ಎಲ್ಲ ಆಶ್ವಾಸಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವುದನ್ನು, ರಾಘವಾಂಕನು ತನ್ನ ರಚನೆಗಳಿಗೆ ಸಿದ್ಧರಾಮ ಚಾರಿತ್ರ, ಸೋಮನಾಥ ಚಾರಿತ್ರ ಎಂದು ಶೀರ್ಷಿಕೆ ಕೊಟ್ಟಿರುವುದನ್ನು ಗಮನಿಸಿದರೆ ವೀರಶೈವ ಕವಿಗಳಿಗೆ ಜೈನ–ಬ್ರಾಹ್ಮಣ ಕವಿಗಳಿಗಿಂತ ಚಾರಿತ್ರಿಕ ಪ್ರಜ್ಞೆ ಅಧಿಕವಾಗಿದ್ದಿತೆಂದು ವಿಧಿತವಾಗುತ್ತದೆ. ಆದರೆ ಆಂಧ್ರಪ್ರದೇಶದಲ್ಲಿ ಬಲವಾಗಿದ್ದ 'ಪುರಾಣಪ್ರಜ್ಞೆ'ಯನ್ನು ಮೈಗೂಡಿಸಿಕೊಂಡು ಹುಟ್ಟಿದ ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು ಭೀಮಕವಿಯ ಮೂಲಕ ಕನ್ನಡಕ್ಕೆ ಬರುವಲ್ಲಿ, ಚಾರಿತ್ರಿಕಪ್ರಜ್ಞೆ ಹಿಂದೆ ಸರಿದು, ಪುರಾಣಪ್ರಜ್ಞೆ ಇಲ್ಲಿಯೂ ಮುಂದು ಬಂದಿತು. ಈ ಪರಂಪರೆಯ ಕೃತಿಗಳಲ್ಲಿ ಕಥಾನಾಯಕರಾದ ಬಸವಣ್ಣ, ಚೆನ್ನಬಸವಣ್ಣ ಆಗೊಮ್ಮೆ ಈಗೊಮ್ಮೆ ಕಾಣಿಸುವುದೂ, ಇವುಗಳನ್ನು ಪುರಾಣವೆಂದೇ ವ್ಯಕ್ತವಾಗಿ ಕರೆದುದೂ ವೀರಶೈವದಲ್ಲಿ ಚರಿತ್ರೆಯ ಧೋರಣೆಯನ್ನು ಹಿಂದೆ ತಳ್ಳಿ ಪುರಾಣಧೋರಣೆ ಬೆಳೆದುಬಂದುದರ ದ್ಯೋತಕವೆನಿಸಿದೆ. ಆದುದರಿಂದ ವಿಶ್ವಾಸಾರ್ಹ ಆಕರಸಾಮಗ್ರಿ ಇಲ್ಲಿಯೂ ಕಡಿಮೆಯೆಂದೇ ಹೇಳಬೇಕು.

ವಿಜಯನಗರ ಪತನಾನಂತರ ಕರ್ನಾಟಕದ ಬೇರೆ ಬೇರೆ ಭಾಗಗಳು ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟವು. ಇವರನ್ನು ಕುರಿತು ಕುಮಾರರಾಮನ ಸಾಂಗತ್ಯ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮನ ಸಾಂಗತ್ಯ, ಕೆಳದಿ ನೃಪವಿಜಯ, ಚಿಕದೇವರಾಯ ವಂಶಾವಳಿ ಇತ್ಯಾದಿ ಚಾರಿತ್ರಿಕ ಕೃತಿಗಳು ಹುಟ್ಟಿದ್ದರೂ ಈ ಹಿಂದಿನ ಪುರಾಣ–ಪವಾಡಗಳ ಕಾಟ ತಪ್ಪಲಿಲ್ಲ; ಉತ್ಪ್ರೇಕ್ಷೆಯ ಕಾಟ ಬೆನ್ನುಬಿಡಲಿಲ್ಲ. ಹೀಗೆ ಕವಿಸಾಹಿತ್ಯದಲ್ಲದೆ ಶಾಸನಗಳಂಥ ದಾಖಲೆಗಳಲ್ಲಿಯೂ ಈ ಉತ್ಪ್ರೇಕ್ಷೆ ತಲೆಹಾಕಿತು. ಕೆಲವೊಮ್ಮೆ ಕೂಟಶಾಸನಗಳೂ ಹುಟ್ಟಿಕೊಂಡು ಕೃತಕತೆ ನೆಲೆಯೂರಿ ನಿಂತಿತು.

ಜನಪದಸಾಹಿತ್ಯಕ್ಕೆ ಬಂದರೆ, ಐತಿಹ್ಯೀಕರಣ, ವದಂತೀಕರಣ ಸೇರಿಕೊಂಡು ಅಲ್ಲಿಯೂ ಪ್ರಾಮಾಣಿಕತೆ ಪ್ರಶ್ನಾರ್ಹವಾಗಿ ಬಿಟ್ಟಿತು. ಒಟ್ಟಿನಲ್ಲಿ ಧಾರ್ಮಿಕರ ಪುರಾಣದೃಷ್ಟಿ ಮತ್ತು ಪವಾಡದೃಷ್ಟಿ, ಪಂಡಿತರ ಉತ್ಪ್ರೇಕ್ಷಾದೃಷ್ಟಿ, ಗ್ರಾಮೀಣರ ಐತಿಹ್ಯದೃಷ್ಟಿ ಮತ್ತು ವದಂತಿ ದೃಷ್ಟಿಗಳಿಂದಾಗಿ ನಮ್ಮ ಇತಿಹಾಸದ ಆತ್ಮ ನಾಶವಾಯಿತೆಂದೇ ಹೇಳಬೇಕು.

೨. ಮೇಲೆ ಹೇಳಿದ ಹಲವು ಕಾರಣಗಳಿಂದಾಗಿ ಪ್ರಾಮಾಣಿಕತೆಯಿಂದ ದೂರವಾದ ನಮ್ಮ ಆಕರಗಳು ಹೆಚ್ಚಿನದಾಗಿ ಪಾಠಾಂತರದ ದಾಳಿಗೆ ಗುರಿಯಾಗುತ್ತ ಬಂದವು. ಹೊಣೆಗೇಡಿ ಲಿಪಿಕಾರರಿಂದಾಗಿ ಮೂಲಪಾಠದಲ್ಲಿ ಅಕ್ಷರ, ಶಬ್ದ, ವಾಕ್ಯ, ಪದ್ಯಪ್ರಮಾಣದ ವ್ಯತ್ಯಾಸಗಳುಂಟಾದವು. ಕೆಲವೊಮ್ಮೆ ಇದು ಅನುದ್ದೇಶಿತವಾಗಿರುವಂತೆ ಉದ್ದೇಶಿತವೂ ಆಗಿರುವುದುಂಟು. ಪಂಪ ತನ್ನ ತಂದೆಯನ್ನು ಕುರಿತು 'ಅಜ್ಞಾನತಮೋನೀಕರಪರಂ ಭೀಮನಾಮಧೇಯಂ'[೪] ಎಂದು ಹೇಳಿದ್ದರೂ

---

೩. ಸಿದ್ಧರಾಮ ಪುರಾಣ–ರಾಘವಾಂಕ (೧–೫).
೪. ವಿಕ್ರಮಾರ್ಜುನ ವಿಜಯಂ–ಪಂಪ (೧೪–೪೭).

ಪಾಠಾಂತರಗಳ ದಾಳಿಗೆ ಗುರಿಯಾಗಿ ಇಲ್ಲಿಯ 'ಭೀಮನಾಮಧೇಯಂ' ಎಂಬುದು 'ಅಭಿರಾಮ ದೇವರಾಯಂ' ಎಂಬ ರೂಪ ತಾಳಿಬಿಟ್ಟಿತು. ಇದು ಅನುದ್ದೇಶಿತ ಪಾಠವ್ಯತ್ಯಾಸ. ಇವಲ್ಲದೆ 'ಗೊರವನಲ್ಲ ಪೊಗಳೆಂ>ಜಿನನಲ್ಲ ಪೊಗಳೆಂ"[೫] 'ಹರಹರಾ ಶ್ರೀ ಚೆನ್ನ ಸೋಮೇಶ್ವರಾ > ನರನೆಲಾ ಕೇಳ್ವಿಪುದೀ ಬುದ್ಧಿಯಾ'[೬] ಎಂಬಂಥ ಪಾಠಾಂತರಗಳೂ ತಲೆದೋರಿದವು. ಇದು ಉದ್ದೇಶಿತ ವ್ಯತ್ಯಾಸ. ಇವುಗಳಿಂದಾಗಿ ಆಕರಗಳಲ್ಲಿಯ ಮೂಲಪಾಠಕ್ಕೆ ಭಂಗಬಂದಿತು.

ಶಿಷ್ಟಸಾಹಿತ್ಯವನ್ನು ಬಿಟ್ಟರೂ ಜನಪದಸಾಹಿತ್ಯದಲ್ಲಿ ಪಾಠಾಂತರ (Variation) ರೂಪಾಂತರ (Version) ಕ್ರಿಯೆ ಉದ್ದಕ್ಕೂ ನಡೆದಿರುತ್ತದೆ. ಒಂದು ರಚನೆಗೆ ಹುಟ್ಟಿದ ಬೇರೆ ಬೇರೆ ಭಾಷಿಕ ವ್ಯತ್ಯಾಸಗಳು ಪಾಠಾಂತರವಾದರೆ, ಒಂದು ವಸ್ತುವಿಗೆ ಹುಟ್ಟಿದ ಬೇರೆ ಬೇರೆ ರಚನೆಗಳು ರೂಪಾಂತರ. ಕೆಲವೊಮ್ಮೆ ಜನಪದದಲ್ಲಿ ಪಾಠಾಂತರವೇ ಬೆಳೆದು ರೂಪಾಂತರವೆನಿಸಬಹುದು. ಅದೇನೇ ಇದ್ದರೂ ಈ ಎರಡೂ ಕ್ರಿಯೆಗಳಿಂದಾಗಿ ಈ ಸಾಹಿತ್ಯದ ಮೂಲಪಾಠ ರೂಪವ್ಯತ್ಯಾಸಗೊಳ್ಳುತ್ತ ಬಂದಿರುತ್ತದೆ.

ಸ್ಮಾರಕ ರೂಪದ ಆಕರಗಳಿಗೆ ಬಂದರೆ ಬಸದಿಗಳು ದೇವಾಲಯಗಳಾದುದು, ದೇವಾಲಯಗಳು ಮಸೀದಿಗಳಾದುದು ಆಕರಗಳ ರೂಪವ್ಯತ್ಯಾಸವೆಂದೇ ಹೇಳಬಹುದು. ವಿಜಾಪುರದಲ್ಲಿ ನಾಗಚಂದ್ರ ಕಟ್ಟಿಸಿದ ಮಲ್ಲಿನಾಥ ಬಸದಿ ಬಹುಶಃ ಕರೀಮುದ್ದೀನ ಮಸೀದೆಯಾಗಿದೆ. ಸವದತ್ತಿಯಲ್ಲಿ ಪಾರ್ಶ್ವನಾಥ ಬಸದಿ ಎಲ್ಲಮ್ಮನ ದೇವಸ್ಥಾನವಾಗಿದೆ.[೭] ಪುಲಿಗೆರೆಯಲ್ಲಿ ಸುರಹೊನ್ನೆಬಸದಿ ಸೋಮೇಶ್ವರ ದೇವಾಲಯವಾದುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಇವೆಲ್ಲವನ್ನೂ ನೋಡಿದರೆ, ನಮ್ಮಲ್ಲಿ ಚರಿತ್ರೆಗೆ ಸಂಬಂಧಿಸಿದ ಆಕರಗಳು ಕೆಲವೊಮ್ಮೆ ನೋಡಲಿಕ್ಕೆ ವಿಪುಲವಾಗಿದ್ದರೂ ಅದರಲ್ಲಿ ಉಪಯೋಗಕ್ಕೆ ಬಾರದ ಸಾಮಗ್ರಿಯೇ ಹೆಚ್ಚು. ಉಪಯೋಗಕ್ಕೆ ಬರುವ ಸಾಮಗ್ರಿ ಕಡಿಮೆ ಎಂದು ಸ್ಪಷ್ಟವಾಗುತ್ತದೆ. ಉದಾ: ಬಸವಣ್ಣನವರಿಗೆ ಸಂಬಂಧಿಸಿದ ಸಾಮಗ್ರಿ. ಇದಕ್ಕೆ ವಿರುದ್ಧವೆನ್ನುವಂತೆ ಕೆಲವೊಮ್ಮೆ ಏನೂ ಆಕರ ಸಾಮಗ್ರಿ ಸಿಗುವುದಿಲ್ಲ. ಉದಾ: ಕುಮಾರವ್ಯಾಸನಿಗೆ ಸಂಬಂಧಿಸಿದ ಸಾಮಗ್ರಿ. ಹೀಗಾಗಿ ಕರ್ನಾಟಕದಲ್ಲಿ ಆಕರಗಳ ಪ್ರಮಾಣವೂ ಕಡಿಮೆ. ಪ್ರಾಮಾಣಿಕತೆಯೂ ಕಡಿಮೆಯೆಂದು ಹೇಳಬೇಕಾಗುತ್ತದೆ.

ಆಕರಗಳ ಪ್ರಕಾರ :

ಆಕರಗಳ ಸ್ವರೂಪದಂತೆ ಅವುಗಳ ಪ್ರಕಾರದ ತಿಳುವಳಿಕೆಯೂ ಸಂಶೋಧಕನಿಗೆ ಅಗತ್ಯವಾಗಿದೆ. ಈ ಮೊತ್ತವನ್ನು ೧. ವಸ್ತುಸಾಮಗ್ರಿ, ೨. ಭಾಷಾಸಾಮಗ್ರಿ, ೩. ಕ್ರಿಯಾ ಸಾಮಗ್ರಿ, ೪. ಜ್ಞಾನಸಾಮಗ್ರಿ –ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಮುಖ್ಯವಾದುದು ಜ್ಞಾನ. ಅದು ಕ್ರಿಯೆಯಲ್ಲಿ ಘಟಿಸುತ್ತದೆ ಮತ್ತು ವಸ್ತು, ಭಾಷೆಗಳಲ್ಲಿ ಘನೀಭೂತಗೊಳ್ಳುತ್ತದೆ. ಹೀಗಾಗಿ ಜ್ಞಾನವೂ ಒಳಗೊಂಡಂತೆ ಅದರ ಶೋಧಕ್ಕೆ ನೆರವಾಗುವ ವಸ್ತು, ಭಾಷೆ, ಕ್ರಿಯೆಗಳೆಂಬ ಆಕರ ಸಾಮಗ್ರಿಯನ್ನು ಕುರಿತು ಇಲ್ಲಿ ವಿವೇಚಿಸಬಹುದು.

---

೫. ಶಬ್ದಮಣಿದರ್ಪಣಂ–ಕೇಶಿರಾಜ (ಸೂತ್ರ–೫೭).

೬. ಶಬರಶಂಕರ ವಿಳಾಸ–ಸಂ. ಶಿ. ಶಿ. ಬಸವನಾಳ ಪೀಠಿಕೆ (೩೩–೩೪).

೭. ಎಕ್ಕಲಮ್ಮ–ಎಲ್ಲಮ್ಮ–ಎಂ. ಎಂ. ಕಲಬುರ್ಗಿ (ಮಾರ್ಗ–II, ಪುಟ ೩೪೧).

ವಸ್ತುಸಾಮಗ್ರಿ :

ವ್ಯಕ್ತಿ, ಸಮಾಜಗಳ ಬದುಕಿನಲ್ಲಿ ಸೇರಿಕೊಂಡಿರುವ ವಸ್ತುಸಾಮಗ್ರಿ ಅಪಾರವಾದುದು. ವ್ಯಕ್ತಿಯು ವಸ್ತುಗಳನ್ನು ರೂಪಿಸಿದರೆ, ತಿರುಗಿ ಆ ವಸ್ತುಗಳು ವ್ಯಕ್ತಿ-ಸಮಾಜಗಳನ್ನು ರೂಪಿಸುತ್ತ ಬಂದಿವೆ. ಇವುಗಳನ್ನು ಉಪಕರಣಾತ್ಮಕ ವಸ್ತುಗಳು, ಕಲಾತ್ಮಕ ವಸ್ತುಗಳು ಎಂದು ವರ್ಗೀಕರಿಸಬಹುದು. ಈವರೆಗೆ ವಿದ್ವಾಂಸರು ಆಕರ ಸಾಮಗ್ರಿಯಾಗಿ ಕೇವಲ ಕಲಾತ್ಮಕ ವಸ್ತುಗಳನ್ನು ಬಳಸಿದ್ದು, ಇಂದು ಉಪಕರಣಾತ್ಮಕ ವಸ್ತುಗಳನ್ನೂ ಬಳಸುತ್ತಲಿದ್ದಾರೆ. ಪ್ರಧಾನವಾಗಿ ಪುರಾತತ್ತ್ವ ವಿದ್ವಾಂಸರು ಮತ್ತು ಜಾನಪದ ವಿದ್ವಾಂಸರು ಇವುಗಳ ವಿಷಯವಾಗಿ ಕ್ಷೇತ್ರಕಾರ್ಯ ನಡೆಸುತ್ತಾರೆ.

ಪುರಾತತ್ತ್ವಶೋಧ Exploration ಮತ್ತು Excavation ಎಂದು ಎರಡು ತೆರನಾಗಿದೆ. ಭೂಮಿಯ ಮೇಲಿನ ವಸ್ತುಗಳ ಶೋಧ Exploration, ಭೂಮಿಯ ಒಳಗಿನ ವಸ್ತುಗಳ ಶೋಧ Excavation. ಭೂಮಿಯ ಒಳಗಿನ ಹಾಗೂ ಹೊರಗಿನ ವಸ್ತುಗಳ ಶೋಧವನ್ನು ಇತಿಹಾಸಕಾಲೀನ, ಇತಿಹಾಸ ಪೂರ್ವಕಾಲೀನವೆಂದು ವಿಭಾಗಿಸುತ್ತಾರೆ. ಇದನ್ನು ಅಶೋಕನ ಪೂರ್ವಕಾಲ, ಅಶೋಕನ ಉತ್ತರಕಾಲವೆಂದೂ ಅಥವಾ ಬರವಣಿಗೆಯ ಪೂರ್ವಕಾಲ, ಬರವಣಿಗೆಯ ಉತ್ತರಕಾಲವೆಂದೂ ಕರೆಯುತ್ತಾರೆ. ಇವು ಕ್ರಿಸ್ತಪೂರ್ವ ೩೦೦ಕ್ಕೆ ಮೊದಲಿನ ಅವಧಿ, ಆಮೇಲಿನ ಅವಧಿಗಳಾಗಿವೆ. ಇವುಗಳಲ್ಲಿ ಚಂದ್ರವಳ್ಳಿ, ಸನ್ನತಿ, ಬನವಾಸಿ, ವಡಗಾವ, ಮಾಧವಪುರ ಇತ್ಯಾದಿ ನೆಲೆಗಳನ್ನು ಕುರಿತುದು ಇತಿಹಾಸಕಾಲೀನ ಅಧ್ಯಯನವಾದರೆ, ಬ್ರಹ್ಮಗಿರಿ, ಮಸ್ಕಿ, ಸಂಗನಕಲ್ಲು, ಹಳ್ಳೂರು, ಹುಣಸಗಿ ಮೊದಲಾದ ನೆಲೆಗಳನ್ನು ಕುರಿತುದು ಇತಿಹಾಸ ಪೂರ್ವಕಾಲೀನ ಅಧ್ಯಯನವಾಗಿದೆ.

ಜಾನಪದ ಬದುಕಿಗೆ ಸಂಬಂಧಿಸಿದ ಬಗೆಬಗೆಯ ವಸ್ತುಗಳು ಯಾವುದೇ ನಾಡಿನಲ್ಲಿ ಸಿಗುತ್ತಿದ್ದು, "ಸಂಗ್ರಹಪ್ರಧಾನ" ಕ್ಷೇತ್ರಕಾರ್ಯದ ಮೂಲಕ ಇವುಗಳನ್ನು ಸಂಗ್ರಹಿಸಿ, ಆಕರಸಾಮಗ್ರಿಯಾಗಿ ಸಂಶೋಧನೆಗೆ ಬಳಸಿಕೊಳ್ಳಬೇಕಾಗುತ್ತದೆ.

ಭಾಷಾಸಾಮಗ್ರಿ :

ಮನುಷ್ಯ ತನ್ನ ಜ್ಞಾನ ಮತ್ತು ಕ್ರಿಯೆಗಳನ್ನು ಭಾಷೆಯಲ್ಲಿ ಮೂರ್ತಗೊಳಿಸುವುದರಿಂದ ಸಂಶೋಧನ ಸಂದರ್ಭದಲ್ಲಿ ಭಾಷಾಕ್ಷೇತ್ರವು ಬಹುಮುಖ್ಯ ಆಕರಸಾಮಗ್ರಿಯೆನಿಸುತ್ತದೆ. ಈ ಸಾಮಗ್ರಿಯನ್ನು ಲಿಖಿತ, ಮೌಖಿಕ ಎಂದು ವರ್ಗೀಕರಿಸಬಹುದು.

ಲಿಖಿತ ಸಾಮಗ್ರಿ : ಕರ್ನಾಟಕದಲ್ಲಿ ಸಿಗುವ ಲಿಖಿತ ಭಾಷಾಸಾಮಗ್ರಿಯನ್ನು ೧. ದಾಖಲು ಸಾಮಗ್ರಿ, ೨. ಸಾಹಿತ್ಯ ಸಾಮಗ್ರಿ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ದಾಖಲು ಸಾಮಗ್ರಿಯನ್ನು ಶಾಸನ ಮತ್ತು ದಾಖಲೆಯೆಂದು, ಸಾಹಿತ್ಯವನ್ನು ಕಾವ್ಯ ಮತ್ತು ಶಾಸ್ತ್ರವೆಂದೂ ಮತ್ತೆ ವರ್ಗೀಕರಿಸಬಹುದು.

ದಾಖಲು ಸಾಮಗ್ರಿ : ಶಾಸನಗಳು ಕನ್ನಡನಾಡಿನ ತುಂಬ ಸಿಗುವ ಅಪೂರ್ವ ಲಿಖಿತ ದಾಖಲು ಸಾಮಗ್ರಿಯೆನಿಸಿವೆ. ಇವುಗಳ ಸಂಖ್ಯೆ ಸುಮಾರು ೨೫,೦೦೦. ಇವುಗಳನ್ನು ಶಿಲಾಶಾಸನ, ತಾಮ್ರಶಾಸನ ಎಂದು ವರ್ಗೀಕರಿಸುತ್ತಾರೆ. ಶಿಲಾಶಾಸನಗಳು ಸಾರ್ವಜನಿಕ ದಾಖಲೆಗಳಾದರೆ, ತಾಮ್ರಶಾಸನಗಳು ವೈಯಕ್ತಿಕ ದಾಖಲೆಗಳಾಗಿವೆ. ಧಾರ್ಮಿಕ ಕ್ಷೇತ್ರಕ್ಕೆ ಬಂದರೆ, ಅವು ದೇವಾಲಯ ಸಂಸ್ಕೃತಿಯನ್ನು, ಇವು ಅಗ್ರಹಾರ ಸಂಸ್ಕೃತಿಯನ್ನು ಸೂಚಿಸುತ್ತವೆ ಎಂದು ಹೇಳಬಹುದು. ವೈಯಕ್ತಿಕ

ದಾಖಲೆಗಳಾದುದರಿಂದ ತಾಮ್ರಶಾಸನಗಳು ದೇವಾಲಯಗಳ ಮಠಗಳ ಒಡೆಯರಲ್ಲಿ, ದೇಶಮುಖರ ಪಾಳೆಯಗಾರರ ಮನೆಗಳಲ್ಲಿ ಸಿಗುತ್ತದೆ. ಸಾರ್ವಜನಿಕ ದಾಖಲೆಗಳಾದುದರಿಂದ ಶಿಲಾಶಾಸನಗಳು ಬಂಡೆಗಲ್ಲು, ಶಿಲಾಫಲಕ, ದೇವಾಲಯದ ಗೋಡೆ, ಕಂಬ, ವಿಗ್ರಹದ ಪಾದಪೀಠಗಳ ಮೇಲೆ ಕಂಡುಬರುತ್ತವೆ ಮತ್ತು ಸಾರ್ವಜನಿಕ ಸ್ಥಳಗಳಾದ ದೇವಾಲಯ, ಚಾವಡಿ ಪ್ರದೇಶಗಳಲ್ಲಿರುತ್ತವೆ.

ಶಿಲಾಶಾಸನಗಳು ಶಾಸನಕ್ಷೇತ್ರದ ಬೆಲೆಯುಳ್ಳ ಭಾಗವೆಂದು ಹೇಳಬೇಕು. ಕಪ್ಪೆ ಅರಭಟ್ಟನ ಶಾಸನದಂಥ ಕೆಲವು ಪ್ರಶಸ್ತಿಗಳನ್ನು ಬಿಟ್ಟರೆ, ಇವು ದಾನಶಾಸನ, ವೀರಶಾಸನಗಳೆಂದು ಸ್ಥೂಲವಾಗಿ ಎರಡು ಬಗೆಯಾಗಿವೆ. ದಾನಶಾಸನದ ತಲೆಯ ಮೇಲೆ ಸೂರ್ಯ, ಚಂದ್ರ, ಆಕಳು, ಕರು, ಶಿಲ್ಪ ಸಾಮಾನ್ಯ. ಹೆಚ್ಚಿನದಾಗಿ ಶಿವಲಿಂಗ, ಇಲ್ಲವೆ ಜಿನ, ಇಲ್ಲವೆ ವಿಷ್ಣುವಿಗ್ರಹಗಳನ್ನು ಕೆತ್ತಲಾಗಿರುತ್ತದೆ. ಇದರ ಕೆಳಗೆ ಕ್ರಮಬದ್ಧವಾದ, ವಿಸ್ತಾರವಾದ ಬರವಣಿಗೆ ಇರುತ್ತದೆ. ಕುಂಭದ ಚಿತ್ರವನ್ನೊಳಗೊಂಡ ಸ್ತಂಭಶಾಸನವು ಗೋಸಾಸ ದಾನಶಾಸನವಾಗಿರುತ್ತದೆ. ವೀರಶಾಸನಗಳಲ್ಲಿ ವೀರಗಲ್ಲು, ಮಾಸ್ತಿಕಲ್ಲು, ಆತ್ಮಬಲಿದಾನ ಕಲ್ಲುಗಳು ಪರಿಗಣಿತವಾಗುತ್ತವೆ. ಇವು ಬಹಳಷ್ಟು ಸಲ ಕೇವಲ ಶಿಲ್ಪರೂಪದವುಗಳಾಗಿದ್ದು, ಕೆಲವೊಮ್ಮೆ ಬರಹವನ್ನೂ ಒಳಗೊಂಡಿರುತ್ತವೆ. ವೀರಗಲ್ಲುಗಳ ಮೇಲೆ ಮೂರು ಪಟ್ಟಿಕೆಗಳಿದ್ದು ಕೆಳಗಿನ ಪಟ್ಟಿಕೆಯಲ್ಲಿ ಹೋರಾಡುವ ವೀರನ ಚಿತ್ರ, ಎರಡನೆಯ ಪಟ್ಟಿಕೆಯಲ್ಲಿ ಮಡಿದ ವೀರನ ಸ್ವರ್ಗಾರೋಹಣ ಚಿತ್ರ, ಮೂರನೆಯ ಪಟ್ಟಿಕೆಯಲ್ಲಿ ವೀರನ ಸ್ವರ್ಗವಾಸದ ಚಿತ್ರಗಳನ್ನು ಕೆತ್ತಿರುತ್ತಾರೆ. ಇದಾವುದೂ ಇರದೆ, ಕೆಲವೊಮ್ಮೆ ನಿಂತ ವೀರನ ಚಿತ್ರವಿರಬಹುದಾಗಿದೆ. ಮಾಸ್ತಿಕಲ್ಲು, ಸ್ತ್ರೀಯ ಎತ್ತಿದ ಬಲಗೈ ಚಿತ್ರವನ್ನೊಳಗೊಂಡಿರುತ್ತದೆ. ಕೆಲವೊಮ್ಮೆ ಅವಳು ಗಂಡನೊಂದಿಗೆ ನಿಂತ ಚಿತ್ರವೂ ಇರುತ್ತದೆ. ರುಂಡ ಕತ್ತರಿಸಿಕೊಳ್ಳುವ, ಚಿತಾಪ್ರವೇಶ ಮಾಡುವ ಚಿತ್ರಗಳಿದ್ದರೆ ಅವು ಆತ್ಮಬಲಿದಾನ ಕಲ್ಲುಗಳಾಗಿರುತ್ತವೆ. ನಿಷಿಧಿಕಲ್ಲು ಸಲ್ಲೇಖನವ್ರದಿಂದ ಮಡಿದ ಜೈನವ್ಯಕ್ತಿಯ ಸ್ಮಾರಕವಾಗಿರುತ್ತದೆ. ಅಲ್ಲಿ ವ್ಯಾಸಪೀಠ, ಅದರ ಒಂದು ಬದಿ ವ್ರತಧಾರಿಯ ವಿಗ್ರಹ-ಇನ್ನೊಂದು ಬದಿ ಗುರುವಿನ ವಿಗ್ರಹ ಈ ಚಿತ್ರಗಳಿರುತ್ತವೆ. ತಾಮ್ರಶಾಸನ ಒಂದು ಫಲಕದ್ದಾಗಿರಬಹುದು, ಅನೇಕ ಫಲಕದ್ದಾಗಿರಬಹುದು. ಅನೇಕ ಫಲಕದ್ದಾಗಿದ್ದರೆ ಉಂಗುರದಲ್ಲಿ ಅವುಗಳನ್ನು ಪವಣಿಸಿ, ಮೇಲೆ ರಾಜಮುದ್ರೆ ಹಾಕಿರುತ್ತಾರೆ. ಮನೆಯಲ್ಲಿ ಸಿದ್ಧಪಡಿಸುವುದರಿಂದ ಇವು ಕೆಲವೊಮ್ಮೆ ಕೃತಕವೂ ಇರಬಹುದು.

ಭಾಷಿಕವಾಗಿ ಕನ್ನಡವನ್ನು ಬಿಟ್ಟರೆ ಸಂಸ್ಕೃತ, ತೆಲಗು, ತಮಿಳು, ಮಲಯಾಳಂ, ಮರಾಠಿ, ಪರ್ಷಿಯನ್ ಶಾಸನಗಳೂ, ಅಶೋಕನ ಮತ್ತು ಬೇರೆಯವರ ಒಂದಿಷ್ಟು ಪ್ರಾಕೃತ ಶಾಸನಗಳೂ ನಮ್ಮಲ್ಲಿ ಕಂಡುಬರುತ್ತವೆ. ನಾಣ್ಯ-ವಸ್ತು-ಉಪಕರಣಗಳ ಮೇಲಿನ ಬರಹಗಳೂ ಈ ವರ್ಗದಲ್ಲಿ ಪರಿಗಣಿಸಲ್ಪಡುತ್ತದೆ.

ಇವುಗಳನ್ನು ಬಿಟ್ಟರೆ ನಮ್ಮಲ್ಲಿ ೧೫ನೆಯ ಶತಮಾನದಿಂದ ಕಾಗದಪತ್ರ ರೂಪದ ದಾಖಲೆಗಳ ಪ್ರಮಾಣವೂ ವಿಪುಲವಾಗಿದೆ. ವಿಜಯನಗರದ ವರೆಗೆ ಭಾಷಾಸಾಮಗ್ರಿ ಕನ್ನಡ ಸಂಸ್ಕೃತ ಭಾಷೆಗಳಿಗೆ ಸೀಮಿತವಾಗಿದ್ದರೆ, ಆ ತರುವಾಯ ಉರ್ದು, ಮರಾಠಿ, ಡಚ್, ಪೋರ್ತುಗೀಜ್, ಇಂಗ್ಲಿಷ್, ಫ್ರೆಂಚ್ ಭಾಷೆಗಳಲ್ಲಿ ಬೆಳೆಯುತ್ತ ಬಂದಿದೆ. ವಿದೇಶೀ ಪ್ರವಾಸಿಗರ ದಿನಚರಿ, ಕೈಫಿಯತ್ತು, ಬಖೈರು,

ನಿರೂಪ, ಪತ್ರಗಳು ಈ ವರ್ಗದಲ್ಲಿ ಪರಿಗಣಿತವಾಗುತ್ತವೆ. ಪ್ರಾಚೀನ ದೇವಾಲಯ, ಮಠ, ವತನದಾರರ ಮನೆತನ, ಆಧುನಿಕ ಪತ್ರಾಗಾರ ಇಲಾಖೆ, ಸಂಶೋಧನ ಸಂಸ್ಥೆಗಳಲ್ಲಿ ಇವು ಸಿಗುತ್ತವೆ.

ಸಾಹಿತ್ಯ ಸಾಮಗ್ರಿ : ಸಾಹಿತ್ಯಕ್ಕೆ ಬಂದರೆ ಕನ್ನಡದಲ್ಲಿ ಈ ಸಾಮಗ್ರಿಗೆ ಸುಮಾರು ೧೫೦೦ ವರ್ಷಗಳ ಇತಿಹಾಸವಿದೆ. ಕವಿರಾಜಮಾರ್ಗ ಪೂರ್ವದ ಕೃತಿಗಳು ಕಣ್ಮರೆಯಾಗಿದ್ದು, ಆ ಬಳಿಕ ಉಳಿದು ಬಂದ ೧೦೦೦ ವರ್ಷಗಳ ಸಾಹಿತ್ಯ ವಿಪುಲವಾಗಿದೆ. ಇದನ್ನು ಕಾವ್ಯ, ಶಾಸ್ತ್ರವೆಂದು ವರ್ಗೀಕರಿಸಬಹುದು. ಇವುಗಳನ್ನು ಓಲೆಪ್ರತಿ ಕಾಗದಪ್ರತಿಗಳಲ್ಲಿ ಬರೆಯುಲಾಗಿರುತ್ತದೆ. ಸಾಮಾನ್ಯವಾಗಿ ಮಠ, ಮಂದಿರ, ಸಾಂಪ್ರದಾಯಿಕ ಮನೆತನ, ವಿದ್ವಾಂಸರ ವಸತಿಗಳಲ್ಲಿ ಇವು ಸಿಗುತ್ತವೆ. ಆಯಾ ಮತೀಯ ನೆಲೆಗಳಲ್ಲಿ ಆಯಾ ಮತೀಯ ಹಸ್ತಪ್ರತಿಗಳು ಸಿಗುವುದು ಸಹಜ. ಜೈನ ಹಸ್ತಪ್ರತಿಗಳು "ಶ್ರೀ ವೀತರಾಗಾಯ ನಮಃ" ವಾಕ್ಯದಿಂದ, ವೀರಶೈವ ಹಸ್ತಪ್ರತಿಗಳು "ಶ್ರೀ ಗುರುಬಸವಲಿಂಗಾಯ ನಮಃ" ಎಂಬ ವಾಕ್ಯದಿಂದ ಪ್ರಾರಂಭವಾಗುತ್ತವೆ. ವೈದಿಕ ಹಸ್ತಪ್ರತಿಗಳು ಪ್ರಾರಂಭವಾಗುವುದು ಹರಿನಾಮಸ್ಮರಣೆಯಿಂದ. ಕೆಲವೊಮ್ಮೆ ಈ ವಿಭಾಗದಲ್ಲಿ ಇಷ್ಟದೇವತೆ, ಕುಲಗುರು ಸ್ಮರಣೆ ಎಡೆಪಡೆದಿರುತ್ತದೆ. ಈ ಬಳಿಕ ಮತ್ತು ಹಸ್ತಪ್ರತಿಯ ಕೊನೆಯಲ್ಲಿ ಕೃತಿನಾಮವಿರುತ್ತದೆ. ಇನ್ನೂ ಕೊನೆಗೆ ಕೆಲವೊಮ್ಮೆ ಲಿಪಿಕಾರನ ಹೆಸರು, ಲಿಪಿಸಲ್ಪಟ್ಟ ಕಾಲ ದಾಖಲಾಗಿರುತ್ತದೆ. ಇದೆಲ್ಲ ಪ್ರತಿಗೆ ಸಂಬಂಧಿಸಿದ ಪಠ್ಯ, ಈ ಸಾಮಗ್ರಿಯನ್ನು ಭಾಷಿಕ, ಸಾಹಿತ್ಯಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಶೋಧನೆಗಾಗಿ ಬಳಸಿಕೊಳ್ಳಬಹುದಾಗಿದೆ. ದಾಖಲುಸಾಮಗ್ರಿ ಒಂದೇ ಪ್ರತಿಯಲ್ಲಿ ಸಿಗುತ್ತಿದ್ದರೆ ಈ ಸಾಹಿತ್ಯಸಾಮಗ್ರಿ ಅನೇಕ ಪ್ರತಿಗಳಲ್ಲಿ ಸಿಗುತ್ತದೆ.

ಮೌಖಿಕ ಸಾಮಗ್ರಿ : ಭಾರತ ನಿರಕ್ಷರಿಗಳ ದೇಶ. ನೂರಕ್ಕೆ ತೊಂಬತ್ತೈದರಷ್ಟು ಪ್ರಾಚೀನ ಪರಂಪರೆ ಬರಹಕ್ಕಿಂತ ಇವರ ಬಾಯಿಯಲ್ಲಿಯೇ ಬದುಕಿಬಂದಿದೆ. ಇದನ್ನು ನಿರಾಕರಿಸುವುದೆಂದರೆ, ಅನಿವಾರ್ಯತೆಯಿಂದ ಜನಸಮೂಹ ಬಾಯಿಯಲ್ಲಿಟ್ಟುಕೊಂಡು ಬಂದಿರುವ ಇವರ ಇತಿಹಾಸವನ್ನು ಸಾರಾಸಗಟು ನಿರಾಕರಿಸಿದಂತಾಗುತ್ತದೆ. ಹೀಗಾಗಿ ಇತ್ತೀಚೆಗೆ ಲಿಖಿತ ಸಾಮಗ್ರಿಯಂತೆ ಮೌಖಿಕ ಸಾಮಗ್ರಿಯನ್ನೂ ವಿದ್ವಾಂಸರು ಆಕರ ಸಾಮಗ್ರಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂಥ ಕಂಠಸ್ಥ ಇತಿಹಾಸಕಾರರ (Oral historians) ಸಂಖ್ಯೆ ಇಂದು ವರ್ಧಿಸುತ್ತಿರುವುದು ಶುಭಾರಂಭವೇ ಸರಿ. ಈ ಸಂದರ್ಭದಲ್ಲಿ ರಿಚರ್ಡ್ ಡಾಸನ್ ಮಂಡಿಸಿದ ಅಧ್ಯಯನ ವಿಧಾನಗಳನ್ನು ವಿದ್ವಾಂಸರು ಅನುಸರಿಸಬಹುದಾಗಿದೆ.[೮]

ಈ ಸಾಮಗ್ರಿಯನ್ನು ಭಾಷೆ, ವದಂತಿ-ಐತಿಹ್ಯ, ನಾಮ, ಜನಪದಸಾಹಿತ್ಯವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಭಾಷೆಯನ್ನು ಭಾಷಾವಿಜ್ಞಾನದ ಸಾಮಗ್ರಿಯಾಗಿಯೂ, ಸಂಸ್ಕೃತಿ ಅಧ್ಯಯನದ ಸಾಮಗ್ರಿಯಾಗಿಯೂ ಬಳಸಬಹುದಾಗಿದೆ.

ಭಾಷೆ : ಪ್ರಾಚೀನ ಕಾಲದಲ್ಲಿ ಲಿಖಿತ ಭಾಷೆ ಮಾತ್ರ ಅಧ್ಯಯನಕ್ಕೆ ಯೋಗ್ಯವೆಂಬ ಭಾವನೆ ಇದ್ದಿತೆಂದು ಕಾಣುತ್ತದೆ. ಕೇಶಿರಾಜನ ಶಬ್ದಮಣಿದರ್ಪಣ ಇತ್ಯಾದಿಗಳು ಈ ಧೋರಣೆಯ ಫಲಗಳೆನಿಸಿವೆ. ಇಂದು ಮೌಖಿಕ ಭಾಷೆಯೂ ಅಧ್ಯಯನಕ್ಕೆ ಯೋಗ್ಯವೆಂಬ ಭಾವನೆ ಬೆಳೆದು "ಭಾಷಾವಿಜ್ಞಾನ"

---

೮. ಇತಿಹಾಸ-ಜಾನಪದ : ಬಿ. ಎ. ವಿವೇಕ ರೈ (ಅನ್ವಯಿಕ ಜಾನಪದ-ಪು.೬೮).

ಕ್ಷೇತ್ರದಲ್ಲಿ ಅದನ್ನೂ ಆಕರ ಸಾಮಗ್ರಿಯಾಗಿ ಬಳಸುತ್ತಲಿದ್ದಾರೆ. ನನ್ನ "ಕೇಸಿ,-ಕೇರಿ" ಲೇಖನ,[೯] ಡಾ. ಎಂ. ಚಿದಾನಂದಮೂರ್ತಿ ಅವರ "ಕನ್ನಡದ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ"[೧೦] ಇತ್ಯಾದಿ ಲೇಖನಗಳು ಇದಕ್ಕೆ ಉದಾಹರಣೆಯೆನಿಸಿವೆ. ಇತ್ತೀಚಿನ ಭಾಷೆಯನ್ನು ಪ್ರಾದೇಶಿಕವಾಗಿ, ಸಾಮಾಜಿಕವಾಗಿ, ಜನಾಂಗಿಕವಾಗಿ, ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲು ಬಳಸುತ್ತಲಿರುವುದನ್ನು ಇಲ್ಲಿ ನೆನೆಯಬೇಕು.

ವದಂತಿ-ಐತಿಹ್ಯ : ಇವುಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲವೆಂದು ಕಾಣುತ್ತದೆ. ಎರಡೂ ಖಚಿತ ಆಧಾರಗಳಿಲ್ಲದ ಪರಂಪರಾಗತ ಹೇಳಿಕೆಗಳೇ ಆಗಿರುತ್ತವೆ. ಬಹಳೆಂದರೆ ವದಂತಿ ಸಾಮಾನ್ಯರ, ಐತಿಹ್ಯ ಪ್ರತಿಷ್ಠಿತರ ಸೃಷ್ಟಿಗಳೆಂದು ಹೇಳಬಹುದು. ಸತ್ಯ ಇಲ್ಲವೆ ಅಸತ್ಯದ ನೆಲೆಯ ಮೇಲೆ ನಿಂತಿರುವ ಇವುಗಳನ್ನು ವಿದ್ವಾಂಸರು ೧. ವ್ಯಕ್ತಿಪ್ರಧಾನ, ೨. ಸ್ಥಳಪ್ರಧಾನ, ೩. ಘಟನಾಪ್ರಧಾನವೆಂದು ವಿಂಗಡಿಸುತ್ತಾರೆ.

ಪಂಪನ ತಾಯಿಯ ತವರೂರು ಅಣ್ಣಿಗೆರೆ. ಅವನ ತಂದೆಯ ಹೆಸರು ಭೀಮಪಯ್ಯ. ಇಂದಿಗೂ ಅಣ್ಣಿಗೆರೆಯ ಜೈನಮತೀಯ ದೇಶಪಾಂಡೆ ಮನೆತನದಲ್ಲಿ ಭೀಮಪಯ್ಯ ಎಂಬ ಹೆಸರನ್ನು ತಲೆಮಾರಿನಿಂದ ತಲೆಮಾರಿಗೆ ತಪ್ಪದೇ ಇಡುತ್ತ ಬರಲಾಗಿದೆ. ಬ್ರಾಹ್ಮಣಧರ್ಮದಿಂದ ಜೈನಧರ್ಮಕ್ಕೆ ಮತಾಂತರಗೊಂಡವ ಈ ಭೀಮಪಯ್ಯ. ಈತ ಈ ಮನೆತನದ ಮೂಲಪುರುಷನಾಗುತ್ತಾನೆ. ಆದುದರಿಂದ ಮಗ ಪಂಪ ಮಹಾಕವಿಯಾಗಿದ್ದರೂ ಈ ಹೆಸರನ್ನು ಉಪೇಕ್ಷಿಸಿ, ಮೂಲಪುರುಷನ ಹೆಸರನ್ನು ಕಳೆದ ಸಾವಿರ ವರುಷಗಳಿಂದ ತಮ್ಮ ಮನೆತನದ ವ್ಯಕ್ತಿಗಳಿಗೆ ಇಡುತ್ತ ಬಂದಿದ್ದಾರೆ. ಇದು ವ್ಯಕ್ತಿಪ್ರಧಾನ ಐತಿಹ್ಯವಾಗಿದೆ. ಇದೇ ರೀತಿ ಅನೇಕ ರಾಜರು, ಶರಣರು, ದಾಸರು ಮೊದಲಾದವರಿಗೆ ಸಂಬಂಧಿಸಿದಂತೆ ಕೇಳಿ ಬರುತ್ತಿರುವುವು ವ್ಯಕ್ತಿಪ್ರಧಾನ ಐತಿಹ್ಯಗಳು.

ಬೆಂಗಳೂರು ನಗರ ಪ್ರಾಚೀನ ಹೆಸರು ಬೆಂದಕಾಳೂರು. ಹಸಿದು ಬಂದ ಹೊಯ್ಸಳ ವೀರಬಲ್ಲಾಳನಿಗೆ ಮುದುಕಿಯೊಬ್ಬಳು ಬೆಂದಕಾಳುಗಳನ್ನು ನೀಡಿ ಹಸಿವು ಹಿಂಗಿಸಿದ ಕಾರಣ, ಈ ಸ್ಥಳಕ್ಕೆ ಬೆಂದಕಾಳೂರು ಎಂದು ಹೆಸರಿಟ್ಟನು. ಅದು ಕಾಲಕ್ರಮದಲ್ಲಿ ಬೆಂಗಳೂರು ರೂಪವನ್ನು ಪಡೆಯಿತು. ಇದೇ ರೀತಿ ಕೋಟೆ, ದೇವಾಲಯ, ಕೆರೆ, ಬಾವಿಗಳಿಗೆ ಸಂಬಂಧಿಸಿದಂತೆ ಬಗೆಬಗೆಯ ಹೇಳಿಕೆಗಳು ಕೇಳಿಬರುತ್ತಿದ್ದು, ಇವು ಸ್ಥಳಪ್ರಧಾನ ಐತಿಹ್ಯಗಳೆನಿಸಿವೆ.

ವೀರನಾರಾಯಣನು ಹೇಳುತ್ತಲಿದ್ದ ಭಾರತಕಥೆಯನ್ನು ಕುಮಾರವ್ಯಾಸನು ಲಿಪಿಕಾರನಾಗಿ ಬರೆದುಕೊಳ್ಳುತ್ತಲಿದ್ದನು. ಇಬ್ಬರ ನಡುವೆ ತೆರೆಯಿದ್ದಿತು. ಕುಮಾರವ್ಯಾಸನಿಗೆ ಕಾಣದಂತೆ ತೆರೆಯ ಆಚೆ ಕಥೆಯ ನಿರೂಪಣೆಗೆ ತಕ್ಕಂತೆ ಮಹಾಭಾರತದ ಘಟನೆಗಳು ಜರುಗುತ್ತಿದ್ದವು. ಬರೆಯುವುದನ್ನು ಬಿಟ್ಟು ತೆರೆಯ ಈಚೆಗೆ ಬಂದು ಈ ಘಟನೆಗಳನ್ನು ನೋಡಬಾರದೆಂದು ವೀರನಾರಾಯಣನು ಕುಮಾರವ್ಯಾಸನಿಗೆ ಕಟ್ಟಪ್ಪಣೆ ಮಾಡಿದ್ದನು. ಕವಿಗಾದರೋ ಸಾಕ್ಷಾತ್ ಮಹಾಭಾರತದ ವ್ಯಕ್ತಿ-

---

೯. -ಕೇಸಿ,-ಕೇರಿ-ಎಂ. ಎಂ. ಕಲಬುರ್ಗಿ (ಮಾರ್ಗ-II, ಪುಟ೫೬೦).

೧೦. ಕನ್ನಡದ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ-ಎಂ. ಚಿದಾನಂದಮೂರ್ತಿ (ವಾಗರ್ಥ, ಪುಟ ೧೪೯).

ಘಟನೆಗಳನ್ನು ನೋಡಬೇಕೆಂಬ ಹಂಬಲ. ಭೀಮ-ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ಬರೆದುಕೊಳ್ಳುತ್ತಲಿದ್ದ ಕುಮಾರವ್ಯಾಸನಿಗೆ ಕುತೂಹಲ ತಡೆದುಕೊಳ್ಳಲಾಗಲಿಲ್ಲ. ಎದ್ದು ತೆರೆಯಾಚೆ ಹೋಗಿ ನೋಡಿಯೇ ಬಿಟ್ಟ. ಒಮ್ಮೆಲೇ ಬೆಳಕು ಕಣ್ಣಿಗೆ ಅಪ್ಪಳಿಸಿ, ಕವಿ ಕಣ್ಣು ಕಳೆದುಕೊಂಡ. ಹೀಗಾಗಿ ಅವನ ಭಾರತ ಗದಾಪರ್ವಕ್ಕೇ ನಿಂತುಬಿಟ್ಟಿತು. ಇದು ಘಟನಾಪ್ರಧಾನ ಐತಿಹ್ಯವಾಗಿದೆ.

ಹಳ್ಳಿಪಳ್ಳಿಗಳಲ್ಲಿ, ಹಾದಿಬೀದಿಗಳಲ್ಲಿ, ಕೇಳಿಬರುವ ಇಂಥ ಐತಿಹ್ಯಗಳು ಕೆಲವೊಮ್ಮೆ ಸಂಶೋಧಕನಿಗೆ ಉತ್ತಮ ಸಾಮಗ್ರಿಯಾಗುತ್ತವೆ. ಇವುಗಳನ್ನು ಸ್ಥಳೀಯ ಐತಿಹ್ಯ, ವಲಸೆ ಐತಿಹ್ಯಗಳೆಂದೂ ವರ್ಗೀಕರಿಸಬಹುದು.

ಸ್ಥಳೀಯ ಐತಿಹ್ಯಕ್ಕೆ ಬೆಳ್ಗೊಳ ಬೆಟ್ಟದ ಗುಳ್ಳೇಕಾಯಿ ಅಜ್ಜಿಯ ಕಥೆ, ವಲಸೆ ಬಂದ ಐತಿಹ್ಯಕ್ಕೆ ಪಾಳೆಯಗಾರನ ಪೂರ್ವಜರಿಗೆ ನಿದ್ರೆಯ ಸಂದರ್ಭದಲ್ಲಿ ಹಾವು ಹೆಡೆಬಿಚ್ಚಿ ನೆರಳು ಮಾಡಿತೆಂಬ, ರಾಜಧಾನಿ ಸ್ಥಳದ ಮಹತ್ವ ಸೂಚಿಸಲು ಮೊಲವು ನಾಯಿಯನ್ನು ಬೆನ್ನಟ್ಟಿತೆಂಬ ಕಥೆಗಳು ಉದಾಹರಣೆಯೆನಿಸಿವೆ. ಮೇಲೆ ವಿವರಿಸಿದ ಕೆಲವು ಐತಿಹ್ಯಗಳು ಸತ್ಯವನ್ನು ನೇರವಾಗಿ ಇಲ್ಲವೆ ಪರ್ಯಾಯವಾಗಿ ತಿಳಿಸಿದರೆ, ಇನ್ನು ಕೆಲವು ಅಪ್ಪಟ ಅಸತ್ಯವೇ ಆಗಿರುತ್ತವೆ. ಹೀಗಾಗಿ ಐತಿಹ್ಯದ ಬಳಕೆಯಲ್ಲಿ ಸಂಶೋಧಕನಾದವನು ತುಂಬ ಎಚ್ಚರವಹಿಸಬೇಕಾಗುತ್ತದೆ.

ನಾಮ : ಮೌಖಿಕ ಸಾಮಗ್ರಿಗೆ ಸಂಬಂಧಪಟ್ಟ ಇತರ ಅಂಶಗಳೆಂದರೆ ಗ್ರಾಮನಾಮ, ಕುಟುಂಬನಾಮ ಮತ್ತು ವ್ಯಕ್ತಿನಾಮ. ಗ್ರಾಮ. ಕುಟುಂಬ, ವ್ಯಕ್ತಿಗಳ ಇತಿಹಾಸವನ್ನು ಹಿಂದಕ್ಕೆ ಒಯ್ಯುವಲ್ಲಿ ಇತಿಹಾಸ ಸಾಮಗ್ರಿಗಳು ಸೋತು ನಿಂತಲ್ಲಿಂದ, ಅದನ್ನು ಇನ್ನೂ ಹಿಂದಕ್ಕೆ ಒಯ್ಯಲು ಇವು ನೆರವಾಗುತ್ತದೆ. ಶಿವಮೊಗ್ಗೆಯ ಹಳೆಯ ಹೆಸರು ಸೀಮಗೆ. ಬಹುಶಃ ಸೀಮ (ಸೀಯಮ?) ಹೆಸರಿನ ವ್ಯಕ್ತಿಯ ಕೆಯ್ ಅಂದರೆ ಸ್ಥಳ, ಪ್ರದೇಶ ಎಂಬ ಅರ್ಥ ಇಲ್ಲಿದೆ. ಹೀಗೆ ಶಿವಮೊಗ್ಗೆಯ ಇತಿಹಾಸದ ತಾಯಿಬೇರೆನಿಸುವ ಮೂಲ ಇತಿಹಾಸವನ್ನೇ ಅದರ ಹೆಸರು ಬಿಚ್ಚಿಕೊಡುತ್ತದೆ.

ಶಿವಮೊಗ್ಗೆಯಲ್ಲಿ ಬೆಕ್ಕಿನಕಲ್ಮಠ ಹೆಸರಿನ ವೀರಶೈವ ಮಠವಿದೆ. ಅಲ್ಲಿ ಬೆಕ್ಕಿಗೂ ಈ ಮಠಕ್ಕೂ ಸಂಬಂಧಿಸಿದಂತೆ ರೋಚಕವಾದ ಕಥೆಗಳುಂಟು. ಬಹುಶಃ ನಿಜಸ್ಥಿತಿಯೇ ಬೇರೆಯಿದೆ. ಇದರ ಸರಿಯಾದ ಹೆಸರು ಬೆಕ್ಕನಕಲ್ಮಠ. ಬೆಕ್ಕ ಹೆಸರಿನ ವ್ಯಕ್ತಿ ಕಟ್ಟಿಸಿಕೊಟ್ಟ ಕಲ್ಲುಮಠ ಅಥವಾ ಬೆಕ್ಕನಕಲ್ಲು ಹೆಸರಿನ ಗ್ರಾಮಕ್ಕೆ ಸಂಬಂಧಪಟ್ಟ ಮಠವೆಂದು ಇದರ ಅರ್ಥ. ಬೆಕ್ಕ ಹೆಸರಿನ ವ್ಯಕ್ತಿಯ, ಬೆಕ್ಕನಕಲ್ಲು ಹೆಸರಿನ ಗ್ರಾಮಗಳ ಉಲ್ಲೇಖ ಈ ಪ್ರದೇಶದ ಶಾಸನಗಳಲ್ಲಿ ಕಂಡುಬರುವುದನ್ನು ಇಲ್ಲಿ ನೆನೆಯಬಹುದು. ಹೀಗೆ ಇಂದಿನ ಬೆಕ್ಕಿನಕಲ್ಮಠದ ಚರಿತ್ರೆಯ ಬುನಾದಿಯನ್ನೇ ಈ ಹೆಸರು ತೆರೆದುತೋರಿಸುತ್ತದೆ.

ಮನೆತನದ ಹೆಸರುಗಳಾದ ಕೆಂಚವ್ವಗೋಳ, ತಿಮ್ಮಕ್ಕನವರ-ಇತ್ಯಾದಿಗಳು ಮಾತೃಪ್ರಧಾನ ಕುಟುಂಬಪದ್ಧತಿಯ ಸೂಚನೆಗಳಾಗಿರಬಹುದು. ವ್ಯಕ್ತಿನಾಮಗಳಲ್ಲಿ ನೆಟ್ಟಕಲ್ಲಪ್ಪ, ಭೈರೇಗೌಡ, ಮಾಗುಂಡಪ್ಪ, ಮಂಟೇಸ್ವಾಮಿ, ಹಂಡೀಬಡಿಗನಾಥ, ಪೋಲಕೇಸಿ, ಹುಕ್ಕ ಬುಕ್ಕ ಮೊದಲಾದವು ಪರಂಪರೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಅಮೂಲ್ಯ ಆಕರಗಳಾಗಿ ಪರಿಣಮಿಸುತ್ತವೆ.

ಜನಪದ ಸಾಹಿತ್ಯ : ಮೌಖಿಕ ಸಾಮಗ್ರಿಯ ಇನ್ನೊಂದು ಮುಖ್ಯ ಭಾಗ ಜನಪದ ಸಾಹಿತ್ಯ. ಇದರ ಅಂಗಗಳಾದ ಹಾಡು, ಕಥೆ, ಗಾದೆ, ಒಗಟು, ಬಯಲಾಟ ಕೃತಿಗಳು ನಮ್ಮಲ್ಲಿ ದೊಡ್ಡ

ಪ್ರಮಾಣದಲ್ಲಿ ಸಿಗುತ್ತವೆ. ವ್ಯಕ್ತಿ-ಘಟನೆಗೆ ಸಂಬಂಧಿಸಿದ, ಕೋಟೆ-ದೇವಾಲಯ-ಮಾಸ್ತಿ-ವೀರಗಲ್ಲುಗಳಿಗೆ ಸಂಬಂಧಿಸಿದ ಇವುಗಳ ಸಮಗ್ರ ಅಧ್ಯಯನ ನಡೆಯಬೇಕಾಗಿದೆ. ಫ್ಲೀಟರು ಸಂಗ್ರಹಿಸಿದ ಲಾವಣಿಗಳು, 'ಕತ್ತಲು ದಾರಿ ಬಲುದೂರ' ಸಂಗ್ರಹದ ಹಾಡುಗಳು, 'ಪಿರಿಯಾಪಟ್ಟಣ ಕಾಳಗ', 'ಪಾಳೆಯಗಾರನ ಪದಗಳು' ಇತ್ಯಾದಿ ಸಂಕಲನಗಳು ಇಲ್ಲಿ ಗಮನಾರ್ಹವೆನಿಸುತ್ತವೆ. ಶಿಷ್ಟಸಾಹಿತ್ಯ ತಾಳಿದ ಮೌನವನ್ನು ಈ ಸಾಹಿತ್ಯ ಕೆಲವೊಮ್ಮೆ ಮುರಿಯುತ್ತದೆ. ಕಾರ್ಕಳದ ಗೊಮ್ಮಟನನ್ನು ಕೆತ್ತಿದ ಶಿಲ್ಪಿಯ ಹೆಸರು ಯಾವ ಆಕರಗಳಲ್ಲಿಯೂ ದಾಖಲಾಗಿಲ್ಲ. ಸ್ಥಳೀಯ ಜನಪದ ಗೀತೆ ಮಾತ್ರ ಅವನನ್ನು ಬೀರ ಕಲ್ಲುಕುಟಿಗ ಎಂದು ಗುರುತಿಸಿದೆ. ಇಂಥ ಅನೇಕ ಅಂಶಗಳನ್ನು ಜನಪದ ಸಾಹಿತ್ಯ ಒದಗಿಸಬಹುದಾಗಿದೆ. ಇದಲ್ಲದೆ, "ಸಮಗಾರ ದೇವರಿಗೆ ಮಚ್ಚಿ ಪೆಟ್ಟು",[೧೧] "ಗುಡ್ಡ ಸುತ್ತಿ ಮೈಲಾರಕ್ಕೆ ಹೋಗು"[೧೨] ಇತ್ಯಾದಿ ಗಾದೆಗಳಲ್ಲಿ ಅಡಗಿರುವ ಚಾರಿತ್ರಿಕ-ಸಾಂಸ್ಕೃತಿಕ ಎಳೆಗಳು ಸಂಶೋಧನೆಗೆ ಆಕರಗಳಾಗಿ ನಿಲ್ಲುತ್ತವೆ.

ಕ್ರಿಯಾಸಾಮಗ್ರಿ :

'ಕ್ರಿಯೆ' ಎನ್ನುವುದು ೧. ದೈನಂದಿನ ಕ್ರಿಯೆ ೨. ಆಚರಣಾತ್ಮಕ ಕ್ರಿಯೆ ೩. ಘಟಕ ಕ್ರಿಯೆ ಎಂದು ಬಗೆಯಾಗಿದೆ. ಇವುಗಳಲ್ಲಿ ಪ್ರಯೋಜನಾತ್ಮಕವಾದ ಜೀವನ ಚಟುವಟಿಕೆಗಳು ದೈನಂದಿನ ಕ್ರಿಯೆಗಳು, ಉದಾ: ಕೃಷಿಕಾರ್ಯ, ಅಡಿಗೆ ಕಾರ್ಯ, ಇತ್ಯಾದಿ. ಇವು ಆಯಾ ಪ್ರದೇಶ, ಆಯಾ ಕಾಲ, ಆಯಾ ಸಮಾಜಗಳಲ್ಲಿ ವಿಶಿಷ್ಟ ರೂಪದಲ್ಲಿವೆ. ಹೀಗಾಗಿ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಸಹಜವಾಗಿಯೇ ಇವು ಆಕರ ಸಾಮಗ್ರಿಯಾಗಿ ನಿಲ್ಲುತ್ತವೆ.

ಅನುಕರುಣಾತ್ಮಕವಾಗಿ ಆಚರಿಸುವ ಕ್ರಿಯೆ ಆಚರಣೆಯೆನಿಸುತ್ತದೆ. ಇದು ಎರಡು ಬಗೆಯಾಗಿದೆ. ಒಂದು ಅರ್ಥಸಹಿತ ಆಚರಣೆ, ಇನ್ನೊಂದು ಅರ್ಥರಹಿತ ಆಚರಣೆ. ಮೂಲತಃ ಪರಿಸರದ ಅಗತ್ಯವೆನಿಸಿದ್ದ ಒಂದು ಕ್ರಿಯೆ, ಬದಲಾದ ಸಂದರ್ಭದಲ್ಲಿ ಕುರುಡು ಅನುಕರಣೆಯಾದರೆ ಅದು ಅರ್ಥಸಹಿತ ಆಚರಣೆಯೆನಿಸುತ್ತದೆ. ಉದಾ: ಮದುವೆಯಲ್ಲಿ ಸುರಿಗೆ ಸುತ್ತುವುದು. ಇದು ವಧೂವರರ ಸುತ್ತಲೂ ಚೌಕಾಕಾರದಲ್ಲಿ ದಾರ ಸುತ್ತುವುದಾಗಿದೆ. ಇಂದು ಇದು ಆಚರಣೆಯಾಗಿದ್ದರೂ, ಮದುವೆ ಪ್ರಸಂಗದಲ್ಲಿ ಕನ್ಯೆಯನ್ನು ಅಪಹರಿಸುವುದು ಪ್ರಾಚೀನ ಕಾಲದಲ್ಲಿ ಸಾಮಾನ್ಯ ಕ್ರಿಯೆಯಾಗಿದ್ದುದರಿಂದ ಸುತ್ತಲೂ ಖಡ್ಗ (ಸುರಿಗೆ) ಹಿಡಿದು ನಿಲ್ಲುತ್ತಿದ್ದುದನ್ನು ಇದು ಸೂಚಿಸುತ್ತಿರಬಹುದು. ಕೇವಲ ಅಜ್ಞಾನ ಜನ್ಮವಾದವುಗಳನ್ನು ಅಥವಾ ಶೋಷಣೆಗಾಗಿ ಅತಿಜಾಣರು ಸೃಷ್ಟಿಸಿದುವುಗಳನ್ನು ಅರ್ಥರಹಿತ ಆಚರಣೆಗಳೆಂದು ಕರೆಯಬಹುದು. ಧಾರ್ಮಿಕ ವಲಯದಲ್ಲಿ ಇವುಗಳ ಹಾವಳಿ ಹೆಚ್ಚು. ಇವುಗಳನ್ನು ಆಯ್ದುಕೊಳ್ಳುವಾಗ, ಆಯ್ದುಕೊಂಡು ಅರ್ಥ ಹಚ್ಚುವಾಗ ಅಭ್ಯಾಸಿ ಎಚ್ಚರ ವಹಿಸಬೇಕಾಗುತ್ತದೆ.

ಜರುಗಿಹೋದ ನಿರ್ದಿಷ್ಟ ಘಟನೆಯನ್ನೂ ಕ್ರಿಯೆಯೆಂದೇ ಪರಿಗಣಿಸಬೇಕಾಗುತ್ತದೆ. ವ್ಯಕ್ತಿಯ ಜೀವನ, ಸಮಾಜಗಳಲ್ಲಿ ಅನೇಕ ಘಟನೆಗಳು ಜರುಗಿರುತ್ತಿದ್ದು, ಇವುಗಳನ್ನು ಆಕರ ಸಾಮಗ್ರಿಯಾಗಿ

---

೧೧. ಸಮಗಾರ ದೇವರಿಗೆ ಮಚ್ಚಿ ಪೆಟ್ಟು ಇತ್ಯಾದಿ-ಎಂ. ಎಂ. ಕಲಬುರ್ಗಿ (ಮಾರ್ಗ-II, ಪು. ೩೨೯).

೧೨. ಮೈಲಾರ-ಮಾಳಚಿ-ಎಂ. ಎಂ. ಕಲಬುರ್ಗಿ (ಮಾರ್ಗ-II, ಪು. ೩೩೧).

ಬಳಸಿಕೊಳ್ಳಬಹುದಾಗಿದೆ. ಕಲ್ಯಾಣಕ್ರಾಂತಿಯ ಸನ್ನಿವೇಶವನ್ನು ಶೋಧಿಸಲು ಹರಳಯ್ಯ-ಮಧುವಯ್ಯಗಳ ಮಕ್ಕಳ ಮದುವೆಯ ಘಟನೆಯನ್ನು ಆಕರವಾಗಿ ಇಟ್ಟುಕೊಳ್ಳುವುದು ಇಲ್ಲಿ ಉದಾಹರಣೆಯೆನಿಸುತ್ತದೆ.

ಜ್ಞಾನಸಾಮಗ್ರಿ :

ಒಂದು ಸಮಾಜದಲ್ಲಿ ತನ್ನದೇ ಆದ ಜ್ಞಾನಸಂಪತ್ತು ಇರುತ್ತಿದ್ದು, ಅದನ್ನು ವಿಶಿಷ್ಟ ಮತ್ತು ಅನುಸರಣಾತ್ಮಕ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ವೀರಶೈವ ಕಾಯಕ, ಜಂಗಮತತ್ವ ಮೊದಲಾದವು ವಿಶಿಷ್ಟ ಜ್ಞಾನವೆನಿಸುತ್ತವೆ. ಅನುಸರಣಾತ್ಮಕ ಜ್ಞಾನವೇ ನಂಬಿಕೆ. ಇದು ಅರ್ಥ ಸಹಿತ ನಂಬಿಕೆ, ಅರ್ಥರಹಿತ ನಂಬಿಕೆ ರೂಪಗಳಲ್ಲಿರುತ್ತದೆ. ಅನುಸರಣೆಯಿಂದ ಪ್ರಯೋಜನವುಳ್ಳದ್ದು ಅರ್ಥಸಹಿತ ನಂಬಿಕೆ, ಪ್ರಯೋಜನವಿಲ್ಲದುದು ಅರ್ಥರಹಿತ ನಂಬಿಕೆ. ಉದಾ: "ರಾತ್ರಿ ಹೊತ್ತು ಕಸ ಚೆಲ್ಲಿದರೆ ಲಕ್ಷ್ಮಿ ಮನೆ ಬಿಡುತ್ತಾಳೆ" ಎಂಬುದು ಅರ್ಥಸಹಿತ ನಂಬಿಕೆ. ಕತ್ತಲ್ಲಿ ಕಸದ ಜೊತೆ ಕಣ್ತಪ್ಪಿ ವಸ್ತುಗಳು ಚೆಲ್ಲಿ ಹೋಗಬಾರದೆಂಬ ಉದ್ದೇಶದ ಹಿನ್ನೆಲೆಯಲ್ಲಿ ಇದು ಹುಟ್ಟಿರಬಹುದು. "ಬೆಕ್ಕು ಅಡ್ಡ ಬಂದರೆ ಅಶುಭ" ಎಂಬುದು ಅರ್ಥರಹಿತ ನಂಬಿಕೆ. ಇಂಥವು ದುರ್ಬಲ ಮನಸ್ಸಿನವರು ಇಲ್ಲವೆ ಶೋಷಣೆಗಾಗಿ ಅತಿಜಾಣರು ಸೃಷ್ಟಿಸಿದವು. ಇಂಥವುಗಳನ್ನು ಕೈಬಿಡುವುದು ಲೇಸು. ಅಥವಾ ನಾಗರಿಕತೆ, ಸಾಕ್ಷರತೆ ಬೆಳೆದಂತೆ ಇವು ತಾವಾಗಿಯೇ ನಾಶವಾಗಿಹೋಗುತ್ತವೆ.

ಭಾರತ ಬಹುಸಂಸ್ಕೃತಿಗಳ ದೇಶ. ಇಲ್ಲಿ ಸಣ್ಣ ದೊಡ್ಡ ಜನಾಂಗಗಳು ಸಂಘರ್ಷ-ಸ್ನೇಹರೂಪದಿಂದ ಸಂಗಮಿಸುತ್ತ ಬಂದಿವೆ. ಇದರ ಫಲವಾಗಿ ನಮ್ಮ ಭೌತಿಕ, ಸಾಂಸ್ಕೃತಿಕ ಪರಂಪರೆ ಶುದ್ಧವಾಗಿ ಉಳಿದಿಲ್ಲ. ಹಾಗೆ ನೋಡಿದರೆ ಯಾವುದೇ ದೇಶದಲ್ಲಿ ಶುದ್ಧ ಸಂಸ್ಕೃತಿಯೆನ್ನುವುದು ಇರುವುದಿಲ್ಲ. ಇರುವುದೆಲ್ಲ ಮಿಶ್ರಸಂಸ್ಕೃತಿಯೇ. ಭಾರತ ಇದಕ್ಕೆ ಪರಮಾವಧಿ ನಿದರ್ಶನವಾಗುವುದರಿಂದ ಇಲ್ಲಿಯ ಜ್ಞಾನವನ್ನಾಗಲೀ, ಕ್ರಿಯೆಯನ್ನಾಗಲಿ ಆಕರವೆಂದು ಗ್ರಹಿಸುವಲ್ಲಿ ಹೆಚ್ಚು ಜಾಗರೂಕತೆ ವಹಿಸಬೇಕಾಗುತ್ತದೆ, ಹೆಚ್ಚು ವಸ್ತುನಿಷ್ಠರಾಗಬೇಕಾಗುತ್ತದೆ.

ಕೊನೆಯದಾಗಿ ಒಂದು ಮಾತು : ಮೇಲೆ ವಿವರಿಸಿದ ನಾಲ್ಕೂ ಬಗೆಯ ಆಕರಗಳು "ಯಾವುದೇ ಸಂಶೋಧನೆಗೆ ಆಕರವೂ" ಆಗಬಹುದು, "ಯಾವುದೇ ಸಂಶೋಧನೆಯ ವಸ್ತುವೂ" ಆಗಬಹುದು. ಉದಾ: ಕುರ್ಕಿಯಾಲದಲ್ಲಿ ಸಿಕ್ಕ ಜಿನವಲ್ಲಭನ ಶಾಸನ ಪಂಪನ ಬಗಗಿನ ಸಂಶೋಧನೆಗೆ ಆಕರವೂ ಹೌದು. ಅದು ನೇರವಾಗಿ ಸಂಶೋಧನ ವಸ್ತುವೂ ಹೌದು.

ಪ್ರಾಮಾಣಿಕ ಆಕರ-ಅಪ್ರಾಮಾಣಿಕ ಆಕರ

ಆಕರಸಾಮಗ್ರಿಯೆನ್ನುವುದು ಗಣಿಯಿಂದ ಹೊರತೆಗೆದ ಅದಿರು ಸ್ವರೂಪದ್ದಿರುತ್ತದೆ. ಸಂಗ್ರಹಿಸಿದ ಎಲ್ಲ ಅದಿರೂ ಶುದ್ಧವಾಗಿರುವುದಿಲ್ಲ. ಇದೇ ರೀತಿ ಸಂಗ್ರಹಿಸಿದ ಆಕರಸಾಮಗ್ರಿಯಲ್ಲಿ ಎಲ್ಲವೂ ಪ್ರಾಮಾಣಿಕವಾಗಿರುವುದಿಲ್ಲ. ಏಕೆಂದರೆ, ಎಲ್ಲ ಆಕರಸೃಷ್ಟಿಕಾರರೂ ಪ್ರಾಮಾಣಿಕ ವ್ಯಕ್ತಿಗಳಾಗಿರುವುದಿಲ್ಲ.

ಎರಡನೆಯದಾಗಿ ಮೂಲತಃ ಆಕರ ಪ್ರಾಮಾಣಿಕವೇ ಇರಲಿ, ಅಪ್ರಾಮಾಣಿಕವೇ ಇರಲಿ ಬದಲಾಗದೇ ಉಳಿದು ಬಂದ ಆಕರ, ಬದಲಾಗುತ್ತ ಬೆಳೆದುಬಂದ ಆಕರವೆಂದು ಅದನ್ನು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಬದಲಾಗುತ್ತ ಬಂದ ಪ್ರಾಮಾಣಿಕ ಆಕರ ಸತ್ಯದಿಂದ

ವಂಚಿತವಾದರೆ, ಬದಲಾಗುತ್ತ ಬಂದ ಅಪ್ರಾಮಾಣಿಕ ಆಕರ ಅಸತ್ಯದ ಪುನರುಕ್ತಿಯಾಗಿರುತ್ತದೆ. ಹೀಗಾಗಿ ಬದಲಾಗುತ್ತ ಬಂದ ಪ್ರಾಮಾಣಿಕ ಆಕರವನ್ನಾಗಲಿ, ಬದಲಾಗುತ್ತ ಬಂದ ಅಪ್ರಾಮಾಣಿಕ ಆಕರವನ್ನಾಗಲಿ ಮುಟ್ಟದಿರುವುದೇ ಲೇಸು. ಒಂದು ವೇಳೆ ಬದಲಾದ ಪ್ರಾಮಾಣಿಕ ಆಕರವನ್ನು ಶುದ್ಧಿಕರಿಸಿ ಬಳಸಬಹುದು. ಬದಲಾದ ಅಪ್ರಾಮಾಣಿಕ ಆಕರವನ್ನು ಶುದ್ಧೀಕರಿಸುವುದೆಂದರೆ ಮಣ್ಣುಗೋಡೆಯನ್ನು ತೊಳೆದಂತೆ. ಇದನ್ನು ದೂರವಿಡುವುದೇ ಕ್ಷೇಮ.

ಆಕರ ಪ್ರಾಮಾಣಿಕವಾಗಿದ್ದಷ್ಟೂ ಫಲಿತಾಂಶ ಸತ್ಯರೂಪದ್ದಾಗಿರುತ್ತದೆ. ಅಪ್ರಾಮಾಣಿಕವಾಗಿದ್ದಷ್ಟೂ ಫಲಿತಾಂಶ ಸತ್ಯದೂರವಾಗಿರುತ್ತದೆ. ಕಾರಣ, ಸಂಶೋಧಕ ಆಕರಸಾಮಗ್ರಿಯನ್ನು ಸಂಗ್ರಹಿಸುವಲ್ಲಿ ತುಂಬಾ ಎಚ್ಚರವಹಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಆಕರ ಸಾಮಗ್ರಿಯನ್ನು "ಪ್ರಾಮಾಣಿಕ ಆಕರ", "ಅಪ್ರಾಮಾಣಿಕ ಆಕರ" ಎಂದು ವರ್ಗೀಕರಿಸಬಹುದಾಗಿದೆ. ಯಾವುದು ಪ್ರಾಮಾಣಿಕ? ಯಾವುದು ಅಪ್ರಾಮಾಣಿಕ? ಎಂದು ನಿರ್ಧರಿಸುವುದು ಕೆಲವೊಮ್ಮೆ ಕಷ್ಟದ ಕೆಲಸವಾದರೂ ಇದು ಸಂಶೋಧಕ ಮಾಡಲೇಬೇಕಾದ ಪ್ರಥಮ ಕರ್ತವ್ಯವಾಗಿದೆ. ಇಲ್ಲದೆ ಹೋದರೆ ಬಿಡಿ ಉಪ್ಪು, ಕೊಡ ಹಾಲನ್ನು ಕೆಡಿಸಿದಂತಾಗುತ್ತದೆ.

ಭಾಷೆ ಸಾಹಿತ್ಯ – ಸಮಾಜ–ಚರಿತ್ರೆ – ಸಂಸ್ಕೃತಿಗಳಿಗೆ ಸಂಬಂಧಪಟ್ಟ ಆಕರಗಳಲ್ಲಿ ೧. ವಸ್ತು ಸಾಮಗ್ರಿಯು ಸಾಮಾನ್ಯವಾಗಿ ಪ್ರಾಮಾಣಿಕವೇ ಆಗಿರುತ್ತದೆ. ಏಕೆಂದರೆ ವಸ್ತು ಬದಲಾಗುತ್ತ ಬರುವುದಿಲ್ಲ. ೨. ಭಾಷಾ ಸಾಮಗ್ರಿ, ಕ್ರಿಯಾಸಾಮಗ್ರಿ, ಜ್ಞಾನಸಾಮಗ್ರಿಗಳು ಮಾತ್ರ ಬದಲಾಗುತ್ತ ಬರುತ್ತಿದ್ದು ಇವು ಪ್ರಾಮಾಣಿಕ, ಅಪ್ರಮಾಣಿಕವಾಗಿರುತ್ತವೆ. ಹೀಗಾಗಿ ಸಂಶೋಧನೆಯ ಪೂರ್ವದಲ್ಲಿ ಅವುಗಳ ಸ್ವರೂಪದ ಸಾಮಾನ್ಯ ತಿಳಿವಳಿಕೆ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಕನ್ನಡ ಸಂಶೋಧಕನಿಗಿರಬೇಕಾದ ತಿಳುವಳಿಕೆಯ ಕೆಲವು ವಿವರಗಳನ್ನು ಇಲ್ಲಿ ನಮೂದಿಸಬಹುದು.

ಶಾಸನಗಳಲ್ಲಿ ಶಿಲಾಶಾಸನಗಳಿಗಿಂತ ತಾಮ್ರಶಾಸನಗಳು ಕೃತಕವಾಗಿರುವುದು ವಿಶೇಷ. ಆಸ್ತಿ ಇಲ್ಲವೆ ವಸ್ತುವಿನ ಮೇಲೆ ಹಕ್ಕನ್ನು ಸ್ಥಾಪಿಸಿಕೊಳ್ಳುವ ದುರಾಸೆ ಇಲ್ಲವೆ ಸಾಮಾಜಿಕ ಗೌರವ ಸ್ಥಾಪಿಸಿಕೊಳ್ಳುವ ಒಣಪ್ರತಿಷ್ಠೆಗಳು ಕಾರಣವಾಗಿ ಇವು ಹುಟ್ಟಿಕೊಳ್ಳುತ್ತವೆ. ಕರ್ನಾಟಕಕ್ಕೆ ಬಂದರೆ ಗಂಗರ ತಾಮ್ರಶಾಸನಗಳನ್ನು ವಿದ್ವಾಂಸರು ಸಂದೇಹದಿಂದ ನೋಡುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಈವರೆಗೆ ಲಭ್ಯವಿರುವ ಅವರ ೬೮ ತಾಮ್ರಶಾಸನಗಳಲ್ಲಿ ೧೯ ಕೂಟಶಾಸನಗಳೆಂದು ತಿಳಿದುಬಂದಿದೆ.[೧೩] ಇದೇ ರೀತಿ ಹೆಳವರು ತೋರಿಸುವ ತಾಮ್ರಶಾಸನ, ಕಂಚಿನ ಪತ್ರಗಳು ಸಾಮಾನ್ಯವಾಗಿ ಕೃತಕವೇಕೆ, ಜನರನ್ನು ಮೋಸಗೊಳಿಸಲು ಯಾವುಯಾವುದೋ ಅಕ್ಷರ ಇಲ್ಲವೆ ಗೆರೆ ಕೊರೆದವುಗಳಾಗಿರುತ್ತವೆ. ಒಂದು ಶಾಸನ ಪ್ರಾಮಾಣಿಕವೋ, ಅಪ್ರಾಮಾಣಿಕವೋ ಎಂಬುದನ್ನು ಲಿಪಿಯ ಸ್ವರೂಪ, ಭಾಷಾ ಸ್ವರೂಪ, ಕಾಲಮಾನದ ಹೊಂದಾಣಿಕೆ, ಐತಿಹಾಸಿಕ ಘಟನೆಗಳ ಹೊಂದಾಣಿಕೆ ಇವೇ ಮೊದಲಾದ ಒರೆಗಲ್ಲಿಗೆ ಹಚ್ಚಿ ತಿಳಿದುಕೊಳ್ಳಬೇಕು.

ವಚನಕಾರರಲ್ಲಿ ಸುಮಾರು ೩೦೦ ಜನ ನಿಜವಚನಕಾರರಿದ್ದಾರೆ. ೧೧೦ ಜನ ಪ್ರಕ್ಷಿಪ್ತ ವಚನಕಾರರಿದ್ದಾರೆ.[೧೪] ಈ ಹೆಸರಿನ ವಚನಕಾರರೇ ಹುಟ್ಟಿಲ್ಲವೆಂದು ಹೇಳಬಹುದು. ಸಾಮಾನ್ಯವಾಗಿ

---

೧೩. ತಳಕಾಡು ಗಂಗರ ಕೃತಕ ತಾಮ್ರಶಾಸನಗಳು–ಎಚ್. ಎಸ್. ಗೋಪಾಲರಾವ್ (ಹರತಿಸಿರಿ, ೨೬೩).

೧೪. ಪ್ರಕ್ಷಿಪ್ತ ವಚನಕಾರರು–ಎಂ. ಎಂ. ಕಲಬುರ್ಗಿ, (ಕ.ಭಾ. ೨೪–೧೬).

ಇವರು ಮುಕ್ತಿಕಂಠಾಭರಣ, ಅಲ್ಲಮಪ್ರಭು–ಸಿದ್ಧರಾಮನ ವಾದದ ವಚನ, ಅಲ್ಲಮಪ್ರಭು–ಶಾಂತಿಶೆಟ್ಟಿಯ ವಾದದ ವಚನ ಮೊದಲಾದ ಕೃತಿಗಳಲ್ಲಿ ಕಂಡು ಬರುತ್ತಾರೆ. ಇದೇ ರೀತಿ ನಿಜಶರಣರ ಹೆಸರಿನಲ್ಲಿ ಪ್ರಕ್ಷಿಪ್ತ ವಚನಗಳು ಹುಟ್ಟಿಕೊಂಡಿವೆ. ಸಕಲ ಪುರಾತನರ ವಚನ ಕಟ್ಟುಗಳಂತಹ ಸಂಗ್ರಹಗಳು ಪ್ರಾಮಾಣಿಕವಾಗಿದ್ದು, ಗಣಭಾಷಿತ ರತ್ನಮಾಲೆಯಂತ ಸಂಕಲನ ಕೃತಿಗಳಲ್ಲಿ, ಶೂನ್ಯಸಂಪಾದನೆಯಂಥ ಸಂಪಾದಿತ ಕೃತಿಗಳಲ್ಲಿ ಅಪ್ರಾಮಾಣಿಕತೆಯ ಪಾಲು ಕೆಲಮಟ್ಟಿಗಾದರೂ ಇರುವ ಸಾಧ್ಯತೆಯಿದೆ.

ಶಿವಶರಣರನ್ನು ಕುರಿತು ಹರಿಹರ–ರಾಘವಾಂಕರು ಬರೆದ ಚರಿತ್ರೆ, ಭೀಮಕವಿ–ವಿರೂಪಾಕ್ಷ ಪಂಡಿತರು ಬರೆದ ಪುರಾಣ, ಧರಣಿಪಂಡಿತ ಮೊದಲಾದ ಜೈನಕವಿಗಳು ಬರೆದ ಹೊಣೆಗೇಡಿ ಕೃತಿಗಳಲ್ಲಿ ಪ್ರಾಮಾಣಿಕತೆಯ ಪ್ರಮಾಣ ಕ್ರಮವಾಗಿ ಕಡಿಮೆಯೆಂದೇ ಹೇಳಬೇಕು. ಇವುಗಳಲ್ಲಿ ಜೈನಕೃತಿಗಳನ್ನು ಮುಟ್ಟದಿರುವುದೇ ಲೇಸು. ದಾಸರ ಹಾಡುಗಳಂತಹ ಜನಪ್ರಿಯ ಗೀತಸಾಹಿತ್ಯದಲ್ಲಿ, ಕುಮಾರವ್ಯಾಸ ಭಾರತ, ಕುಮಾರರಾಮನ ಸಾಂಗತ್ಯಗಳಂತಹ ಜನಪ್ರಿಯ ಕಾವ್ಯಗಳಲ್ಲಿ ಪ್ರಕ್ಷಿಪ್ತತೆ ಅಧಿಕ ಪ್ರಮಾಣದಲ್ಲಿ ತಲೆಹಾಕಿದೆ.

ನಮ್ಮಲ್ಲಿ ಸಿಗುವ ವಿದೇಶೀ ಪ್ರವಾಸಿಗರ ದಿನಚರಿ, ಕೈಫಿಯತ್ತು, ಬಖೈರುಗಳನ್ನು ಕಣ್ಣುಮುಚ್ಚಿ ನಂಬಲೇಬಾರದು. ಏಕೆಂದರೆ, ಇತಿಹಾಸ ಪ್ರಜ್ಞೆಯಿಲ್ಲದವರ, ಸ್ಥಳೀಯ ಅಕ್ಷರಸ್ಥರ ಬರವಣಿಗೆಗಳಿವು. ಕೆಲವೊಮ್ಮೆ ಇತಿಹಾಸವನ್ನು ವೈಭವೀಕರಿಸುವ ಇಲ್ಲವೆ ಪರಿವರ್ತಿಸುವ ಹಿನ್ನೆಲೆಯಲ್ಲಿ ಹುಟ್ಟಿದ ದಾಖಲೆಗಳಿವು.

ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮ, ಧರ್ಮಕ್ಷೇತ್ರಗಳ ಬಗ್ಗೆ ರಾಮಾಯಣ ಮಹಾಭಾರತಗಳ ಕಥೆ ಹೇಳುತ್ತಾರೆ. ಅವು ಋಷಿಗಳ ನೆಲೆಯೆಂಬ ವದಂತಿ ಹುಟ್ಟಿಸಿರುತ್ತಾರೆ. ಅರ್ಯೀಕರಣದ ದಾಳಿ ಕಾರಣವಾಗಿ ಹುಟ್ಟಿದ ಇಂಥ ಹೇಳಿಕೆಗಳನ್ನು ಉಪೇಕ್ಷಿಸುವುದೇ ಲೇಸು. ಹಂಪೆಯ ವಿಷಯದಲ್ಲಿ ಕೇಳಿಬರುವ ಋಷ್ಯಮೂಕ, ಮಾಲ್ಯವಂತ, ಮತಂಗಮುನಿಗಳ ಹೆಸರು, ವಾಲಿ, ಸುಗ್ರೀವ, ಕಿಷ್ಕಿಂಧೆ ಎಂಬ ರಾಮಾಯಣ ಸಂಬಂಧಿ ಹೆಸರು, ಸವದತ್ತಿ ಎಲ್ಲಮ್ಮನ ಬಗ್ಗೆ ಕೇಳಿಬರುವ ರೇಣುಕೆ ಜಮದಗ್ನಿ ಪರಶುರಾಮ ಹೆಸರುಗಳೆಲ್ಲ ಇತಿಹಾಸದ ಮೇಲೆ ಆರೋಪಿಸಲ್ಪಟ್ಟ ಪುರಾಣಗಳಾಗಿವೆ.

ಹೀಗೆ ಆಕರಸಾಮಗ್ರಿ ಸೃಷ್ಟಿಯಾಗುವ ಸಂದರ್ಭದಲ್ಲಿಯೇ ಅಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳುವುದಲ್ಲದೆ, ಆಮೇಲೆ ಲೋಪ, ಆಗಮ, ಆದೇಶ, ಪಲ್ಲಟ ರೂಪದ ಪಾಠಾಂತರವೆಂಬ ಅಪ್ರಾಮಾಣಿಕತೆಯನ್ನೂ ಸೇರಿಸಿಕೊಳ್ಳುತ್ತ ಬರುವುದು ಸಹಜ. ಹೊಣೆಗೇಡಿತನವೊ, ಕಿಡಿಗೇಡಿತನವೊ ಕಾರಣವಾಗಿ ಈ ಪ್ರಕ್ರಿಯೆ ಇನ್ನೂ ಬೆಳೆದುಬಂದಿರುತ್ತದೆ. ಇಂಥ ಆಕರಗಳನ್ನು ಕಣ್ಣುಮುಚ್ಚಿ ಸ್ವೀಕರಿಸಿದರೆ ಸತ್ಯಶೋಧನ ಗುರಿ ಸಹಜವಾಗಿಯೇ ತಪ್ಪುತ್ತದೆ. ಡಾ. ಡಿ. ಎಲ್. ನರಸಿಂಹಾಚಾರ್ ಅವರು 'ಕ' ಹೆಸರಿನ ಮಿಶ್ರಪ್ರತಿಯನ್ನು ಬಳಸಿದ ಕಾರಣ ಅವರ ಶಬ್ದಮಣಿದರ್ಪಣದ ಸಂಪಾದನೆ ತನ್ನ ಶುದ್ಧಿಯನ್ನು ಕಳೆದುಕೊಂಡಿತೆಂಬುದನ್ನು ಇಲ್ಲಿ ನೆನೆಯಬಹುದು. ಕೆಲವೊಮ್ಮೆ ಶಾಸನವಾಚನದಲ್ಲಿಯೂ ತಪ್ಪು ನುಸುಳಿರುವ ಸಂಭವವುಂಟು. ಗಂಗ ದುರ್ವಿನೀತರಿಗೆ ಸಂಬಂಧಪಟ್ಟ, ಹೆಬ್ಬೂರು ಶಾಸನೋಕ್ತ "ಬೃಹತ್ಕಥಃ" ಪಾಠವನ್ನು "ಬೃಹತ್ಪಥಃ" ಎಂದು ಬಿ.ಎಲ್.ರೈಸ್ ಓದಿದ್ದರಿಂದ ದುರ್ವಿನೀತನು ಪೂಜ್ಯಪಾದನ ಶಿಷ್ಯನೆಂದು ತಪ್ಪುಭಾವಿಸಲಾಗಿದ್ದಿತು. ಇವನು ಬೃಹತ್‌ಕಥೆ ಹೆಸರಿನ

ಕೃತಿಕರ್ತೃವೆಂಬುದೂ ಮರೆಯಾಗಿದ್ದಿತು. ೬೯ ವರ್ಷಗಳ ಬಳಿಕ ರಾ, ನರಸಿಂಹಾಚಾರ್ ಅವರು ಗುಮ್ಮರೆಡ್ಡಿಪುರ ಶಾಸನದ ಸಹಾಯದಿಂದ ಈ ತಪ್ಪನ್ನು ತಿದ್ದಿದರು.[೧೫]

ಜ್ಞಾನ ಮತ್ತು ಕ್ರಿಯಾರೂಪದ ಆಕರಗಳಲ್ಲಿ ಕ್ರಮವಾಗಿ ಸಮಾವೇಶವಾಗುವ ಅರ್ಥರಹಿತ ನಂಬಿಕೆ, ಅರ್ಥರಹಿತ ಆಚರಣೆಗಳು ನಮ್ಮ ನಾಡಿನಲ್ಲಿ ವಿಪುಲ ಪ್ರಮಾಣದಲ್ಲಿ ಸಿಗುತ್ತಿದ್ದು, ಅತಿಬುದ್ಧಿವಂತರು ಇವುಗಳಿಗೆ ಇಲ್ಲದ ಅರ್ಥ ಹೇಳುತ್ತಾರೆ. ಇವುಗಳ ಬಗೆಗಿನ ತಿಳುವಳಿಕೆಯು ಆಕರಗಳ ಸ್ವೀಕರಣೆ, ನಿರಾಕರಣೆಯ ವಿಷಯದಲ್ಲಿ ಬಹುಮುಖ್ಯವೆನಿಸುತ್ತದೆ. ಅದು, ಯಾವ ಆಕರಕ್ಕೆ ಎಷ್ಟು ಮಹತ್ವ ಕೊಡಬೇಕು? ಎಂಬುದನ್ನು ನಿರ್ಧರಿಸುತ್ತದೆ. ಹಾಗೆ ನೋಡಿದರೆ, "ಆಕರಗಳ ಶೋಧ–ಆಕರಗಳ ಪರೀಕ್ಷೆ–ಉಚಿತ ಆಕರಗಳ ಆಯ್ಕೆ" ಎಂಬುದು ಮೊದಲ ಹಂತದ ಸಂಶೋಧನೆಯೇ ಆಗಿದೆ. ಇದನ್ನು ಬಾಹ್ಯಸಂಶೋಧನೆ (External Research) ಎಂದೂ, ಆಮೇಲೆ ನಡೆಯುವುದನ್ನು ಆಂತರಿಕ ಸಂಶೋಧನೆ (Internal Research) ಎಂದೂ ಕರೆಯುತ್ತಾರೆ. ಒಂದು ಮಾತು : ಆಕರಗಳ ಆಯ್ಕೆಯಲ್ಲಿ ಸೋತರೆ, ಸಂಶೋಧನೆ ಪೂರ್ಣ ಸೋತಂತೆ, ಗೆದ್ದರೆ ಸಂಶೋಧನೆ ಅರ್ಧ ಗೆದ್ದಂತೆ.

ಪ್ರಧಾನ ಆಕರ–ಪೋಷಕ ಆಕರ–ಪೂರಕ ಆಕರ

ಸಂಶೋಧನ ಪ್ರಸಂಗದಲ್ಲಿ ಆಯಾ ವಿಷಯಗಳಿಗೆ ಸಂಬಂಧಪಟ್ಟ ಎಲ್ಲ ಬಗೆಯ ಆಕರಗಳ ಸಂಗ್ರಹ ಅತ್ಯವಶ್ಯವಾಗಿರುತ್ತಿದ್ದು, ಸಣ್ಣದು–ದೊಡ್ಡದು ಎಂಬ ಭೇದವಿಲ್ಲದೆ ಅವುಗಳನ್ನು ಆಯ್ದುಕೊಳ್ಳಬೇಕಾಗುತ್ತದೆ. ಒಂದು ದೊಡ್ಡ ಸಮಸ್ಯೆ ಸಣ್ಣ ಆಕರದಿಂದ ಬಗೆಹರಿಯುವ ಸಾಧ್ಯತೆಯಿರುವುದರಿಂದ ಯಾವುದಕ್ಕೂ ಉಪೇಕ್ಷಿಸುವಂತಿಲ್ಲ. ಹೀಗೆ ಸಂಗ್ರಹಿಸಿದ ಸಾಮಗ್ರಿಯನ್ನು ಪ್ರಧಾನ ಆಕರ, ಪೋಷಕ ಆಕರ, ಪೂರಕ ಆಕರ ಎಂದು ವರ್ಗೀಕರಿಸಬಹುದಾಗಿದೆ.

ಸಂಶೋಧನೆಗಾಗಿ ಕೈಗೆತ್ತಿಕೊಂಡ ಸಮಸ್ಯೆಯನ್ನು ಬಿಡಿಸುವಲ್ಲಿ ಬಳಸುವ ನೇರ ಸಾಮಗ್ರಿಯೇ ಪ್ರಧಾನ ಆಕರ. ಇದನ್ನು ಪೋಷಿಸುವ ಸಮಾನ ಸಾಮಗ್ರಿಯೇ ಪೋಷಕ ಆಕರ. ಒಂದು ಸಮಸ್ಯೆಗೆ ಸಂಬಂಧಪಟ್ಟಂತೆ ಹೆಚ್ಚಿನದಾಗಿ ವಿಶಿಷ್ಟ. ಅಂಶವನ್ನು ಒದಗಿಸುವುದೇ ಪೂರಕ ಆಕರ.

ಪ್ರಧಾನ ಆಕರ, ಪೋಷಕ ಆಕರಗಳು ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದು, ಒಂದು ಇನ್ನೊಂದನ್ನು ಬೆಂಬಲಿಸುತ್ತದೆ. ಇಲ್ಲಿ ಒಂದು ಸಾಮಗ್ರಿ ಯಾವ ಕಾಲಕ್ಕೂ ಪ್ರಧಾನ, ಇನ್ನೊಂದು ಸಾಮಗ್ರಿ ಯಾವ ಕಾಲಕ್ಕೂ ಪೋಷಕವಾಗಿರುವುದಿಲ್ಲ. ಅವು ಸಾಪೇಕ್ಷವಾಗಿರುತ್ತದೆ. ಅಂದರೆ ಈ ಸಾಮಗ್ರಿಗಳು ಸಂದರ್ಭಕ್ಕೆ ತಕ್ಕಂತೆ ಪ್ರಧಾನವೂ ಆಗಬಹುದು, ಪೋಷಕವೂ ಆಗಬಹುದು. ಉದಾ: ಸಾಹಿತ್ಯ ಚರಿತ್ರೆಯನ್ನು ಬರೆಯುವಲ್ಲಿ ಪಂಪಭಾರತ ಪ್ರಧಾನ ಆಕರ, ಕುರ್ಕಿಯಾಲ್ ಶಾಸನ ಪೋಷಕ ಆಕರ. ಏಕೆಂದರೆ "ಪಂಪನಿಗೆ ಅರಿಕೇಸರಿಯು ಧರ್ಮಪುರವನ್ನು ಅಗ್ರಹಾರವಾಗಿ ಕೊಟ್ಟನೆಂದು ಪಂಪಭಾರತ ಹೇಳುತ್ತದೆ. ಇದನ್ನು ಕುರ್ಕಿಯಾಲ್ ಶಾಸನವೂ ಪೋಷಿಸುತ್ತದೆ" ಎಂದು ನಾವು ವಾಕ್ಯವನ್ನು ವಿನ್ಯಾಸಗೊಳಿಸಿಕೊಳ್ಳುತ್ತೇವೆ. ಶಾಸನ ಸಾಹಿತ್ಯವನ್ನು ಕುರಿತು ಬರೆಯುವಲ್ಲಿ

೧೫. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ–ಎಂ. ಎಂ. ಕಲಬುರ್ಗಿ, ಪು.೬೯.

ಕುರ್ಕಿಯಾಲ್ ಶಾಸನ ಪ್ರಧಾನ ಆಕರ, ಪಂಪಭಾರತ ಪೋಷಕ ಆಕರ. ಏಕೆಂದರೆ, "ಪಂಪನಿಗೆ ಅರಿಕೇಸರಿಯು ಧರ್ಮಪುರವನ್ನು ಅಗ್ರಹಾರವಾಗಿ ಕೊಟ್ಟನೆಂದು ಕುರ್ಕಿಯಾಲ್ ಶಾಸನ ಹೇಳುತ್ತದೆ. ಇದನ್ನು ಪಂಪಭಾರತವೂ ಪೋಷಿಸುತ್ತದೆ" ಎಂದು ನಾವು ವಾಕ್ಯವನ್ನು ವಿನ್ಯಾಸಗೊಳಿಸಿಕೊಳ್ಳುತ್ತೇವೆ. ಇಲ್ಲಿ ಕಾವ್ಯ, ಶಾಸನಗಳು ಒಂದು ಇನ್ನೊಂದು ಪೋಷಿಸುವುದನ್ನೂ, ಒಮ್ಮೆ ಪ್ರಧಾನ, ಒಮ್ಮೆ ಪೋಷಕ ಆಕರವಾಗುವುದನ್ನೂ ಗಮನಿಸಬೇಕು.

ಇವೆರಡಕ್ಕಿಂತ ಪೂರಕ ಆಕರದ ಸ್ವರೂಪ ಬೇರೆ. ಇದು ಮೇಲೆ ಹೇಳಿದ ಎರಡೂ ಬಗೆಯ ಆಕರಗಳೂ ಪೂರೈಸದ ಹೆಚ್ಚಿನ ಸಂಗತಿಯನ್ನು ಒದಗಿಸಿ, ನಮ್ಮ ಜ್ಞಾನದ ವರ್ತುಲವನ್ನು ವಿಸ್ತರಿಸುತ್ತದೆ. ಉದಾ. ಪಂಪನ ತಂದೆ ಭೀಮಪಯ್ಯ, ತಾಯಿ ಅಬ್ಬಣಬ್ಬೆ, ತಮ್ಮ ಜಿನವಲ್ಲಭ ಇತ್ಯಾದಿಗಳು ಈ ಮೊದಲು ತಿಳಿದುಬಂದಿರದ ವಿಷಯಗಳಾಗಿದ್ದು, ಕುರ್ಕಿಯಾಲ್ ಶಾಸನ ಈ ಹೆಚ್ಚಿನ ವಿಷಯಗಳನ್ನು ತಿಳಿಸುವುದರಿಂದ ಇದನ್ನು ಪೂರಕ ಆಕರವೆಂದು ಗುರುತಿಸಬೇಕಾಗುತ್ತದೆ. ಇದೇ ರೀತಿ ಕಾವ್ಯ-ಪುರಾಣಗಳಿಗಿಂತ ಬೇರೆಯಾಗಿ, ಬಸವಣ್ಣನಿಗೆ ದೇವರಾಜ ಹೆಸರಿನ ಅಣ್ಣನಿದ್ದನೆಂಬ ಹೊಸ ಸಂಗತಿಯನ್ನು ಒದಗಿಸುವ ಅರ್ಜುನವಾಡ ಶಾಸನವೂ ಪೂರಕ ಆಕರವೆನಿಸುತ್ತದೆ.

ಪೋಷಕ ಆಕರವು ಸಂಶೋಧನೆಯನ್ನು ದೃಢಪಡಿಸಿದರೆ, ಪೂರಕ ಆಕರ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ವಿಸ್ತರಿಸುತ್ತದೆ. ಪೋಷಕ ಆಕರ ಅನೇಕ ಇರಬಹುದು. ಪೂರಕ ಆಕರ ಒಂದೇ ಇರುತ್ತದೆ. ಹೀಗಾಗಿ ಪೂರಕ ಆಕರವನ್ನು 'ವಿಶಿಷ್ಟ ಆಕರ'ವೆಂದೂ ಕರೆಯಬಹುದು. ಒಂದು ವೇಳೆ ಪೂರಕ ಆಕರಕ್ಕೆ ಸಮಾನವಾದ ಅಭಿಪ್ರಾಯವುಳ್ಳ ಇನ್ನೊಂದು ಆಕರ ಸಿಕ್ಕರೆ, ಅವು ಸಂದರ್ಭಾನುಸಾರವಾಗಿ ಒಂದು ಇನ್ನೊಂದಕ್ಕೆ ಪ್ರಧಾನ ಆಕರವೊ, ಪೋಷಕ ಆಕರವೊ ಎನಿಸುತ್ತದೆ. ಉದಾ: ೩೫ ವರ್ಷಗಳ ಹಿಂದೆ ಸಿಕ್ಕ ಅರ್ಜುನವಾಡ ಶಾಸನ "ಬಸವಣ್ಣನವರ ವಂಶಜರಿಗೆ ಆ ಪ್ರದೇಶ ನೆಲೆಯಾಗಿದ್ದಿತು" ಎಂಬ ಹೊಸ ಅಂಶವನ್ನು ಪೂರೈಸುವ ಮೂಲಕ ಪೂರಕ ಆಕರವೆನಿಸಿದ್ದಿತು. ಆಮೇಲೆ, ಅಲ್ಲಿಯೇ "ಬಸವರಾಜ ದಣ್ಣಾಯಕರ ಕೆಯ್"[೧೬] ಹೆಸರಿನ ಸೀಮೆಕಲ್ಲು ಸಿಕ್ಕ ಕಾರಣ, ಮೊದಲಿನದು ಪೂರಕ ಆಕರ ಸ್ಥಾನವನ್ನು ಕಳೆದುಕೊಂಡಿತು. ಎರಡೂ ಪರಸ್ಪರ ಪ್ರಧಾನ ಇಲ್ಲವೆ ಪೋಷಕ ಆಕರಗಳೆನಿಸಿದವು.

ಇಲ್ಲಿ ಒಂದು ವಿಷಯವನ್ನು ನೆನಪಿಡಬೇಕು. ಅದು ಆಕರಗಳಲ್ಲಿ ಯಾವುದು ಪ್ರಧಾನ, ಯಾವುದು ಪೋಷಕ, ಯಾವುದು ಪೂರಕವೆಂಬುದು ಅವುಗಳನ್ನು ಬಳಸುವ ಸಂದರ್ಭವನ್ನು ಅವಲಂಬಿಸಿರುತ್ತದೆ.

ಪ್ರತ್ಯಕ್ಷ ಆಕರ-ಪರೋಕ್ಷ ಆಕರ

ಆಕರ ಪ್ರಧಾನವೇ ಇರಲಿ, ಪೋಷಕವೇ ಇರಲಿ, ಪೂರಕವೇ ಇರಲಿ, ಸಂಶೋಧಕ ಅದರೊಂದಿಗೆ ಇಟ್ಟುಕೊಂಡ ಸಂಬಂಧ ಮುಖ್ಯವಾದುದು. ಈ ಸಂಬಂಧ ಎರಡು ಬಗೆಯಾಗಿದೆ. ಒಂದು ಪ್ರತ್ಯಕ್ಷ, ಇನ್ನೊಂದು ಪರೋಕ್ಷ.

---

೧೬. ಬಸವಣ್ಣನವರ ವಂಶಜರ ಕವಿಳಾಸಪುರ-ಎಂ. ಎಂ. ಕಲಬುರ್ಗಿ (ಮಾರ್ಗ-I, ಪು. ೨೫೭).

ಪ್ರಧಾನ, ಪೋಷಕ ಮತ್ತು ಪೂರಕ ಆಕರವನ್ನು ಕೈಮುಟ್ಟಿ ಪಡೆದು, ಕಣ್ಮುಟ್ಟಿ ನೋಡಿ ಬಳಸಿಕೊಳ್ಳುವುದೇ ಪ್ರತ್ಯಕ್ಷ ಆಕರ. ಹಾಗೆ ಮಾಡದೆ ಇನ್ನೊಬ್ಬರ ಪ್ರತ್ಯಕ್ಷ ಆಕರವನ್ನು ತಾನು ಕೃತಜ್ಞತೆಯಿಂದ ಬಳಸಿಕೊಳ್ಳುವುದು ಪರೋಕ್ಷ ಆಕರವೆನಿಸುತ್ತದೆ. ಇವುಗಳಲ್ಲಿ ಸಂಶೋಧಕನಾದವನು ಪ್ರತ್ಯಕ್ಷ ಆಕರವನ್ನು ಬಳಸಿಕೊಳ್ಳುವುದು ಕ್ಷೇಮಕರ. ಇದರ ಅರ್ಥ ಬೇರೊಬ್ಬ ವಿದ್ವಾಂಸರ ಪ್ರತ್ಯಕ್ಷ ಆಕರವನ್ನು ಅಮಾನ್ಯ ಮಾಡಬೇಕೆಂದಲ್ಲ. ಅವರ ಅನವಧಾನ, ಅನ್ಯಥಾಜ್ಞಾನದಿಂದ ಮೂಲ ಆಕರ ಭಾಗಶಃ ಬಿಟ್ಟುಹೋಗಿರುವ ಇಲ್ಲವೆ ತಪ್ಪಾಗಿ ನಮೂದಾಗಿರುವ ಸಾಧ್ಯತೆ ಇರುತ್ತದೆ. ಹೀಗಾಗಿ ಪ್ರತ್ಯಕ್ಷದಿಂದ ಖಂಡಿತ ಲಾಭವುಂಟು, ಪರೋಕ್ಷದಿಂದ ಕೆಲವೊಮ್ಮೆ ಹಾನಿಯುಂಟು ಎಂದು ಹೇಳಬಹುದಾಗಿದೆ.

ಸಂಶೋಧಕನಾದವನಿಗೆ ಕೆಲವೊಮ್ಮೆ ಪ್ರತ್ಯಕ್ಷ ಆಕರವನ್ನು ಬಳಸಿಕೊಳ್ಳುವುದು ಸಾಧ್ಯವಾಗಲಿಕ್ಕಿಲ್ಲ. ಸಾಧ್ಯವಿದ್ದರೂ ಅಲಸ್ಯ ಕಾರಣವಾಗಿ ಅದನ್ನು ಬಳಸಿಕೊಳ್ಳದೆ, ಅನ್ಯರು ಬಳಸಿದ ಆಕರವನ್ನೇ ಆತ ಸ್ವೀಕರಿಸುವುದುಂಟು. ಇದರಿಂದ ಆಗುವ ಹಾನಿಗೆ ಉತ್ತಮ ನಿದರ್ಶನವೆಂದರೆ ಮಯೂರವರ್ಮನ ಚಂದ್ರವಳ್ಳಿ ಶಾಸನ. ೧೯೨೭ರಲ್ಲಿ ಶ್ರೀ ಎಂ. ಎಚ್. ಕೃಷ್ಣ ಅವರು ಈ ಶಾಸನವನ್ನು ಶೋಧಿಸಿ, ಪ್ರಾಕೃತ ಭಾಷೆಯದೆಂದು ಪ್ರಕಟಿಸಿದ ಅದರ ಪಾಠ ಹೀಗಿದೆ.[೧೭]

೧. ಕದಂಬಾಣಂ ಮಯೂರಶಮ್ಮಣಾ ವಿಣಮ್ಮಿ ಅಂ

೨. ತಟಾಕಂ ದೂಭ ತ್ರೇಕೂಟ ಅಭೀರ ಪಲ್ಲವ ಪಾರಿ

೩. ಯಾತ್ರಿಕ ಸಕಸ್ಥಾ[ಣ] ಸಯಿನ್ದಕ ಪುಣಾಟ ಮೋಕರಿ।ಣಾ।

"ತ್ರೈಕೂಟ, ಅಭೀರ, ಪಲ್ಲವ, ಪಾರಿಯಾತ್ರಿಕ, ಸಕಸ್ಥಾನ, ಸಯಿನ್ದಕ, ಪುಣಾಟ, ಮೋಕರಿಗಳನ್ನು ಸೋಲಿಸಿದ ಕದಂಬರ ಮಯೂರಶರ್ಮನಿಂದ (ಈ) ಕೆರೆ ನಿರ್ಮಿತ(ವಾಯಿತು)" ಎಂದು ಇದರ ಅರ್ಥ. ಈ ಪಾಠವನ್ನು ಆಕರವಾಗಿಟ್ಟುಕೊಂಡು ಅನೇಕರು ಹೊಸ ಹೊಸ ವಿವರಣೆಗಳನ್ನು ಮಂಡಿಸಿದರು. ಆದರೆ ೫೫ ವರ್ಷಗಳ ತರುವಾಯ, ಅಂದರೆ ೧೯೮೪ರಲ್ಲಿ ಚಿತ್ರದುರ್ಗದ ಶ್ರೀ ಬಿ. ರಾಜಶೇಖರಪ್ಪ ಅವರು ಈ ಶಾಸನವನ್ನು ಇನ್ನೊಮ್ಮೆ ಓದಿ ಇದು ಪ್ರಾಕೃತಶಾಸನವಲ್ಲ, ಸಂಸ್ಕೃತಶಾಸನವೆಂದು ಹೇಳಿದರು. ಇದು ಸಂಶೋಧನಾ ಕ್ಷೇತ್ರದ ಒಂದು ಅಪೂರ್ವ ವಿಸ್ಮಯ. ಶ್ರೀ ರಾಜಶೇಖರಪ್ಪ ಓದಿದ ಸಂಸ್ಕೃತ ಪಾಠ ಹೀಗಿದೆ.[೧೮]

೧. ಕದಂಬಾಣಂ ಮಯೂರವರ್ಮ್ಮಣಾ

೨. ತಟಾಕಂ ದೃಢಂ ಕೃತಂ ಅಬಿರುಪಂ ರ[ಚ]ಯಿತ್ವಾ

೩. ವಾನ[ವಾ]ಸಕಂ ಸ್ಥಾಪಯಿತ್ವಾ ಕುಪಣ ಚ[ಮೋ]...

---

೧೭. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ (೧೯೨೬).
೧೮. ಶಾಸನಗಳ ಮರುಪರಿಶೀಲನೆ : ಒಂದು ತೀವ್ರ ಅಗತ್ಯ-ಬಿ. ರಾಜಶೇಖರಪ್ಪ (ಹರತಿಸಿರಿ, ೬೪೫).

"ಕದಂಬ ಮಯೂರವರ್ಮನಿಂದ (ಈ) ಕೆರೆಯು ಬಲಪಡಿಸಲ್ಪಟ್ಟಿತು. (ಇದಕ್ಕೆ) ಸುಂದರ ರೂಪವನ್ನು ರಚಿಸಿ, ಕಾಡಿನ ವಾಸದ ನೆಲೆಯನ್ನೂ ಸ್ಥಾಪಿಸಿ, ಕುಪಣಚಮ..." ಎಂದು ಇದರ ಅರ್ಥ. ಪರೋಕ್ಷ ಆಕರವನ್ನು ನಂಬಿದರೆ ಸಂಶೋಧನೆ ಎಷ್ಟು ದೂರ ದಾರಿತಪ್ಪಬಹುದೆಂಬುದಕ್ಕೆ ಇದು ಪರಮಾವಧಿ ಉದಾಹರಣೆಯಾಗಿದೆ.

ವಚನಗಳ ಅಧ್ಯಯನದಲ್ಲಿ ಪ್ರಾಮಾಣಿಕ ಆಕರವಾದ ಸಕಲಪುರಾತನರ ವಚನ ಕಟ್ಟುಗಳನ್ನು ನೇರವಾಗಿ ಬಳಸದೆ, ಪ್ರಕಟಿತ ಗ್ರಂಥಗಳೆಂಬ ಪರೋಕ್ಷ ಆಕರಗಳನ್ನು ಬಳಸುವುದರಿಂದ ಉದ್ಭವಿಸಿದ ದೋಷಕ್ಕೆ ಒಂದು ಉದಾಹರಣೆ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ 'ಸಕಲಪುರಾತನರ ವಚನಗಳು-೩'ರಲ್ಲಿ ಅಮರಗುಂಡದ ಮಲ್ಲಿಕಾರ್ಜುನ ತಂದೆಯ ಹೆಸರಿನ ಕೆಳಗೆ ಒಂದು ವಚನವಿದ್ದು, ಅದಕ್ಕೆ 'ಅಮರಗುಂಡದ ಮಲ್ಲಿಕಾರ್ಜುನ' ಎಂಬ ಮುದ್ರಿಕೆಯಿದೆ. ಅಲ್ಲಿಯ ಪುರದ ನಾಗಣ್ಣನ ವಚನದ ಮುದ್ರಿಕೆಯೂ ಇದೇ ಆಗಿದೆ. ಹೀಗಾಗಿ, ಇದು ಯಾರ ಮುದ್ರಿಕೆ? ಎಂಬ ಸಂದೇಹ ಹುಟ್ಟುತ್ತಿದೆ. ಈಗ 'ಪ್ರತ್ಯಕ್ಷ ಆಕರ'ವನ್ನು ಬಳಸಿಕೊಳ್ಳುವ ದೃಷ್ಟಿಯಿಂದ 'ಸಕಲ ಪುರಾತನರ ವಚನ' ಹಸ್ತಪ್ರತಿಯನ್ನು ಪರಿಶೀಲಿಸಿದರೆ, ಅಲ್ಲಿ ಅಮರಗುಂಡದ ಮಲ್ಲಿಕಾರ್ಜುನ ತಂದೆಯ ಮುದ್ರಿಕೆ 'ಮಾಗುಡದ ಮಲ್ಲಿಕಾರ್ಜುನ' ಎಂದು ಇರುವುದು ಗಮನಕ್ಕೆ ಬರುತ್ತದೆ. ಈ ವಚನ 'ಮಹಾಮಹಿಮಾ ಮಾಗುಡದ ಮಲ್ಲಿಕಾರ್ಜುನ' ಎಂದು ಮುಗಿಯುತ್ತಿದ್ದು, ಪ್ರಾಚೀನ ಲಿಪಿಕಾರನೊಬ್ಬ ಇಲ್ಲಿಯ ಎರಡು 'ಮಾ'ಗಳಲ್ಲಿ ಒಂದನ್ನು ಅನವಧಾನದಿಂದ ಕೈಬಿಟ್ಟ ಕಾರಣ 'ಮಹಾಮಹಿಮಾ ಗುಡದ ಮಲ್ಲಿಕಾರ್ಜುನ' ಎಂಬ ಪಾಠ ಮೊದಲು ಸಿದ್ಧವಾಗಿರಬಹುದು. ಮುಂದೆ ಇದನ್ನು ಬೇರೊಬ್ಬ ಲಿಪಿಕಾರ 'ಮಹಾಮಹಿಮಾ ಗುಡ್ಡದ ಮಲ್ಲಿಕಾರ್ಜುನ' ಎಂದು ತಿದ್ದಿಕೊಂಡಿರಬಹುದು. ಬಳಿಕ ಬಿಂದುವಿನಿಂದ ಒತ್ತಕ್ಷರ ರೂಪಿಸಿಕೊಳ್ಳುವ ಪದ್ಧತಿಯನ್ನು ಅನುಸರಿಸಿ ಅದನ್ನು 'ಮಹಾಮಹಿಮಾ ಗುಂಡದ ಮಲ್ಲಿಕಾರ್ಜುನಾ' ಎಂದು ಬೇರೊಬ್ಬ ಬರೆದಂತಿದೆ. ಕೊನೆಗೆ ಇನ್ನೂ ಒಬ್ಬ ಲಿಪಿಕಾರ ಈ ಶರಣನ ಹೆಸರನ್ನು ಗಮನಿಸಿ 'ಮಹಾಮಹಿಮಾ + ಅಮರ + ಗುಂಡದ ಮಲ್ಲಿಕಾರ್ಜುನಾ' ಎಂದು ತಿರುಗಿಸಿಕೊಂಡಿರಬೇಕು. ಈ ಎಲ್ಲ ವಿವರಗಳನ್ನು ನೋಡಿದರೆ ಇನ್ನು ಮೇಲೆ ಅಮರಗುಂಡದ ಮಲ್ಲಿಕಾರ್ಜುನ ತಂದೆಯ ಮುದ್ರಿಕೆಯು 'ಮಾಗುಡದ ಮಲ್ಲಿಕಾರ್ಜುನ', ಪುರದ ನಾಗಣ್ಣನ ಮುದ್ರಿಕೆ 'ಅಮರಗುಂಡದ ಮಲ್ಲಿಕಾರ್ಜುನ' ಎಂದು ಇಟ್ಟುಕೊಳ್ಳಬೇಕಾಗುತ್ತದೆ. ಆಕರವನ್ನು ಪ್ರತ್ಯಕ್ಷವಾಗಿ ಬಳಸದೆ ಪರೋಕ್ಷವಾಗಿ ಬಳಸಿದರೆ ಘಟಿಸುವ ದೋಷಕ್ಕೆ ಇದು ಉದಾಹರಣೆ. ಮೇಲಿನ ವಿವರಗಳನ್ನು ನೋಡಿದರೆ ಪರೋಕ್ಷ ಆಕರಕ್ಕಿಂತ ಪ್ರತ್ಯಕ್ಷ ಆಕರದ ಬಳಕೆಯ ಮಹತ್ವ ಮನದಟ್ಟಾಗುತ್ತದೆ.

ಆಕರದ ನೆಲೆಗಳು

ಸಂಶೋಧಕ ಒಂದು ವಿಷಯವನ್ನು ಕುರಿತು ಶೋಧ ನಡೆಸುವ ಸಂದರ್ಭದಲ್ಲಿ ಪ್ರಥಮ ಹಂತವೆಂಬಂತೆ, ಅದಕ್ಕೆ ಸಂಬಂಧಪಟ್ಟ ಆಕರ ಸಾಮಗ್ರಿಯನ್ನು ಶೋಧಿಸಬೇಕಾಗುತ್ತದೆ. ಒಂದು ಸಾಮಗ್ರಿ ಇನ್ನೊಂದು ಸಾಮಗ್ರಿಯತ್ತ ಬೆರಳು ನೀಡುವ ಮೂಲಕ ಈ ಸಂಪತ್ತು ವರ್ಧಿಸುತ್ತಲೇ ಹೋಗುತ್ತದೆ. ಈ ಅವಧಿಯಲ್ಲಿ ಅವನು ಸಾಮಾನ್ಯವಾಗಿ ಕೇಂದ್ರರೂಪದ ಮತ್ತು ಕ್ಷೇತ್ರರೂಪದ ಈ ಎರಡು ಪ್ರಮುಖ ನೆಲೆಗಳನ್ನು ಬಳಸಿಕೊಳ್ಳುತ್ತಾನೆ. ಅವುಗಳನ್ನು ಕೇಂದ್ರೀಯ ನೆಲೆ ಮತ್ತು ಕ್ಷೇತ್ರೀಯ ನೆಲೆ ಎಂದು ಕರೆಯಬಹುದಾಗಿದೆ.

ಕೇಂದ್ರೀಯ ನೆಲೆಗಳು :

ಆಕರಗಳನ್ನು ಬೇರೆ ಬೇರೆ ಕಡೆಗಳಿಂದ ತಂದು ಅಭ್ಯಾಸದ ಸೌಲಭ್ಯಕ್ಕಾಗಿ ಒಂದು ಸಂಸ್ಥೆಯಲ್ಲಿ ಸಂಗ್ರಹಿಸಿದ್ದರೆ ಅದು ಆಕರಗಳ "ಕೇಂದ್ರೀಯ ನೆಲೆ" ಎನಿಸುತ್ತದೆ. ಮುದ್ರಿತ ಗ್ರಂಥಭಾಂಡಾರಗಳು, ಹಸ್ತಪ್ರತಿಭಾಂಡಾರಗಳು, ಪತ್ರಾಗಾರಗಳು, ವಸ್ತು ಪ್ರದರ್ಶನಾಲಯಗಳು "ಕೇಂದ್ರೀಯ ನೆಲೆ" ವರ್ಗಕ್ಕೆ ಸಂಬಂಧಪಟ್ಟ ಆಕರಭಾಂಡಾರಗಳೆನಿಸಿವೆ. ಈ ನೆಲೆಗಳಲ್ಲಿ ಮುದ್ರಿತ ಪುಸ್ತಕಗಳನ್ನು ಸಂಗ್ರಹಿಸುವುದರಿಂದ ಸಂಶೋಧನೆಗೆ ಲಾಭ ಹೆಚ್ಚು. ಆದರೆ ಮಿಕ್ಕ ವಸ್ತುಗಳಾದ ಶಿಲ್ಪ, ಜನಪದ ವಸ್ತು, ಹಸ್ತಪ್ರತಿಗಳನ್ನು ಸಂಗ್ರಹಿಸುವುದರಿಂದ ಲಾಭವಾಗುತ್ತಿದ್ದರೂ, ಆವರಣದಿಂದ ವಂಚಿತವಾದ ಅವುಗಳ ಅಧ್ಯಯನ ಅಷ್ಟರಮಟ್ಟಿಗೆ ಕೊರತೆಯೆಂದೇ ಹೇಳಬೇಕು.

ಮುದ್ರಿತ ಗ್ರಂಥಭಾಂಡಾರಗಳ ಸಂಖ್ಯೆ ಇಂದು ವಿಶೇಷವಾಗಿದ್ದರೂ ಸಂಶೋಧನೆಗೆ ಅವಶ್ಯವಾದ ಪ್ರೌಢಗ್ರಂಥಭಾಂಡಾರಗಳ ಸಂಖ್ಯೆ ಕರ್ನಾಟಕದಲ್ಲಿ ಕಡಿಮೆಯೆಂದೇ ಹೇಳಬೇಕು. ಇವುಗಳನ್ನು ಸರಕಾರೀ ಭಾಂಡಾರ, ಸಾರ್ವಜನಿಕ ಭಾಂಡಾರ, ವೈಯಕ್ತಿಕ ಭಾಂಡಾರಗಳೆಂದು ವರ್ಗೀಕರಿಸಬಹುದು. ವಿಶ್ವವಿದ್ಯಾಲಯಗಳ ಗ್ರಂಥಭಾಂಡಾರ, ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳ ಗ್ರಂಥಭಾಂಡಾರ, ಮೈಸೂರ 'ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಇತ್ಯಾದಿಗಳು ಸರಕಾರೀ ಭಾಂಡಾರಗಳಾದರೆ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಮಿಥಿಕ್ ಸೊಸೈಟಿ ಮೊದಲಾದವುಗಳಲ್ಲಿಯವು ಸಾರ್ವಜನಿಕ ಗ್ರಂಥಭಾಂಡಾರಗಳಾಗಿವೆ. ಮೈಸೂರ ಅರಮನೆ ಮತ್ತು ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿಯವು ವೈಯಕ್ತಿಕ ಗ್ರಂಥಭಾಂಡಾರಗಳೆನಿಸುತ್ತವೆ.

ಕೆಲವೊಮ್ಮೆ ಒಂದೊಂದು ಗ್ರಂಥಭಾಂಡಾರದಲ್ಲಿ ವಿಶಿಷ್ಟ ವಿಷಯದ ಗ್ರಂಥಗಳು ಅಧಿಕ ಸಂಖ್ಯೆಯಲ್ಲಿರುತ್ತವೆ. ಪಾಂಡಿಚೇರಿಯಲ್ಲಿ ಆಗಮಗ್ರಂಥಗಳ, ಪುಣೆಯ ಭಂಡಾರಕರ ರೀಸರ್ಚ್ ಇನ್‌ಸ್ಟಿಟ್ಯೂಟ್‌ದಲ್ಲಿ ಮಹಾಭಾರತ, ರಾಮಾಯಣ ಗ್ರಂಥಗಳ ವಿಪುಲ ಸಂಪತ್ತಿರುವುದನ್ನು ಇಲ್ಲಿ ನೆನೆಯಬಹುದು. ಧಾರ್ಮಿಕ ಕೇಂದ್ರಗಳಲ್ಲಿ ಆಯಾ ಧರ್ಮದ ಗ್ರಂಥಗಳು ಅಧಿಕ ಸಂಖ್ಯೆಯಲ್ಲಿರುತ್ತವೆ.

ಸಂಶೋಧಕನಾದವನಿಗೆ ತನಗೆ ಅವಶ್ಯವಿರುವ ಗ್ರಂಥ ಯಾವ ಭಾಂಡಾರದಲ್ಲಿರಬಹುದೆಂಬ ಸ್ಥೂಲಕಲ್ಪನೆ ಅಗತ್ಯ. ಗ್ರಂಥಾಲಯದಲ್ಲಿರುವ ಗ್ರಂಥಗಳ ಕೆಟಲಾಗ್ ಪ್ರಕಟವಾಗಿದ್ದರೆ ಅವನಿಗೆ ಇನ್ನೂ ಅನುಕೂಲ. ಲಂಡನ್ನಿನ ಬ್ರಿಟಿಷ್ ಲೈಬ್ರರಿ ರೆಫರೆನ್ಸ್ ಡಿವಿಜನ್ ಪ್ರಕಟಿಸಿದ "ಎ ಕ್ಯಾಟಲಾಗ್ ಆಫ್ ದಿ ಕನ್ನಡ ಬಡಗ ಎಂಡ್ ಕೂರ್ಗ್ ಬುಕ್ಸ್ ಇನ್ ದಿ ಲೈಬ್ರರಿ ಆಫ್ ದಿ ಬ್ರಿಟಿಷ್ ಮ್ಯೂಜಿಯಂ" (೧೯೧೦) ಮತ್ತು "ಸಪ್ಲಿಮೆಂಟರಿ ಕ್ಯಾಟಲಾಗ್ ಆಫ್ ಕನ್ನಡ ಬುಕ್ಸ್ ಇನ್ ದಿ ಬ್ರಿಟಿಷ್ ಲೈಬ್ರರಿ" (೧೯೮೫)ಯಂಥ ಕ್ಯಾಟಲಾಗ್‌ಗಳು ದೂರದ ಗ್ರಂಥಾಲಯಗಳ ಪುಸ್ತಕಗಳನ್ನು ಬಳಸಿಕೊಳ್ಳಲು ಎಂಥ ದೊಡ್ಡ ಸಹಾಯ ನೀಡುತ್ತವೆಯೆಂಬುದನ್ನು ಬಲ್ಲವರೇ ಬಲ್ಲರು. ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ೧೯೧೭ ರಿಂದ ೧೯೬೮ರ ವರೆಗಿನ ಅವಧಿಯಲ್ಲಿ ಮುದ್ರಿತವಾದ ಕನ್ನಡ ಕೃತಿಗಳ ಸಮಗ್ರಸೂಚಿ ಯೋಜನೆಯ ಅಡಿಯಲ್ಲಿ "ಕನ್ನಡ ಗ್ರಂಥಸೂಚಿ" ಹೆಸರಿನ ಏಳು ಸಂಪುಟಗಳನ್ನು ಪ್ರಕಟಿಸಿದ್ದು, ಇನ್ನೂ ಮೂರು ಪ್ರಕಟವಾಗಬೇಕಿದೆ. ಹೆಚ್ಚಿನದಾಗಿ ೧೯೬೪-೭೯, ೧೯೭೨-೭೩, ೧೯೭೪-೭೬ನೆಯ ವರ್ಷಗಳ ಮೂರು ಸಂಪುಟಗಳು ಬೆಳಕು ಕಂಡಿವೆ. ಇಲ್ಲಿಂದ

ಮುಂದಿನ ಸಂಪುಟಗಳ ಪ್ರಕಟನೆಗಾಗಿ ಒಂದು ಶಾಶ್ವತ ಯೋಜನೆಯೇ ಅಸ್ತಿತ್ವಕ್ಕೆ ಬಂದಿವೆ. ಕನ್ನಡದ ಪ್ರಕಟಿತ ಕೃತಿಗಳ ತಿಳುವಳಿಕೆಗಾಗಿ ಇವು ಅಮೂಲ್ಯ ಗಣಿಗಳಂತೆ ನೆರವಾಗುತ್ತದೆ. ಇಂಥ ಕ್ಯಾಟಲಾಗ್‌ಗಳು ಅಪರೂಪದ ಗ್ರಂಥಗಳತ್ತ ಬೆರಳು ನೀಡುತ್ತವೆ. ಕ್ಯಾಟಲಾಗ್ ಪ್ರಕಟಿಸುವುದು ಸಾಧ್ಯವಾಗದಿದ್ದರೆ ಕನಿಷ್ಠಪಕ್ಷ ಪ್ರತಿಯೊಂದು ಗ್ರಂಥಾಲಯದಲ್ಲಿ ಆಥರ್ ಕ್ಯಾಟಲಾಗ್, ಟೈಟಲ್ ಕ್ಯಾಟಲಾಗ್, ಸಬ್ಜಕ್ಟ್ ಕ್ಯಾಟಲಾಗ್‌ಗಳ ಕ್ಯಾಬಿನೆಟ್ಟ ಇರುವುದು ಅವಶ್ಯ.

ಮುದ್ರಿತ ಗ್ರಂಥಭಾಂಡಾರಗಳಿಗಿಂತ ಮಹತ್ವದವು ಹಸ್ತಪ್ರತಿಭಾಂಡಾರಗಳು ಮತ್ತು ಪತ್ರಾಗಾರಗಳು. ಒಂದು ಪುಸ್ತಕ ಕಡಿಮೆಯೆಂದರೆ ಸಾವಿರ ಸಂಖ್ಯೆಯಲ್ಲಿ ಅಚ್ಚುಗೊಳ್ಳುವುದರಿಂದ ಅದರ ಪ್ರತಿಗಳು ಬೇರೆ ಬೇರೆ ಗ್ರಂಥಭಾಂಡಾರಗಳಲ್ಲಿ ಸಿಗಬಹುದು. ಹಸ್ತಪ್ರತಿಗಳ ವಿಷಯ ಹೀಗಲ್ಲ, ಎಲ್ಲ ಹಸ್ತಪ್ರತಿ ಭಾಂಡಾರಗಳು ಸೇರಿ ಒಂದು ಕೃತಿಯ ಹಸ್ತಪ್ರತಿಗಳು ಹತ್ತರಷ್ಟು ಸಿಕ್ಕರೆ ಪುಣ್ಯ. ಇವುಗಳಿಗಿಂತ ದಾಖಲೆಗಳು ಒಂದೇ ಪ್ರತಿಯಲ್ಲಿ ಸಿಗುವದರಿಂದ ಇವುಗಳ ಭಾಂಡಾರ ಇನ್ನೂ ಮಹತ್ವದ್ದೆನಿಸುತ್ತದೆ.

ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿರುವ ಹಸ್ತಪ್ರತಿಭಾಂಡಾರಗಳು ಪ್ರಾಚೀನ ಮತ್ತು ಆಧುನಿಕವೆಂದು ಎರಡು ಬಗೆಯಾಗಿವೆ. ಶ್ರವಣಬೆಳಗೊಳ ಮೂಡಬಿದರೆ ಜೈನಮಠಗಳಲ್ಲಿ, ಚಿತ್ರದುರ್ಗ ಹುಬ್ಬಳ್ಳಿ ಗದಗ ವೀರಶೈವಮಠಗಳಲ್ಲಿ, ಉಡುಪಿ ಶೃಂಗೇರಿ ಮೇಲುಕೋಟೆ ವೈದಿಕಮಠಗಳಲ್ಲಿ, ಮೈಸೂರು ಅರಮನೆಯಲ್ಲಿ ಇರುವ ಹಸ್ತಪ್ರತಿಭಾಂಡಾರಗಳು ಪ್ರಾಚೀನ ಕಾಲದಲ್ಲಿಯೇ ಅಸ್ತಿತ್ವಕ್ಕೆ ಬಂದು, ವೈಯಕ್ತಿಕ ಒಡೆತನಕ್ಕೆ ಒಳಪಟ್ಟಿರುತ್ತವೆ. ಇವುಗಳನ್ನು ಬಿಟ್ಟರೂ, ಇತ್ತೀಚೆಗೆ ಸರಕಾರ, ವಿಶ್ವವಿದ್ಯಾಲಯಗಳು ಸ್ಥಾಪಿಸಿದ ಹಸ್ತಪ್ರತಿಕೇಂದ್ರಗಳು ಅಲ್ಲಲ್ಲಿ ಕಂಡುಬರುತ್ತವೆ. ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮೈಸೂರು ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಗಳ ಹಸ್ತಪ್ರತಿ ಭಾಂಡಾರಗಳು, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಲ್ಲಿಯ ಹಸ್ತಪ್ರತಿಭಾಂಡಾರಗಳು ಎತ್ತಿ ಹೇಳಬೇಕಾದುದಾಗಿವೆ. ಇವುಗಳಲ್ಲಿ ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ–ಇವುಗಳಲ್ಲಿಯ ಎಲ್ಲ ಹಸ್ತಪ್ರತಿಗಳ ಸೂಚಿಗಳು ಪ್ರಕಟವಾಗಿವೆ. ಧಾರವಾಡದ ಕನ್ನಡ ಅಧ್ಯಯನಪೀಠ ಇತ್ತೀಚೆಗೆ ೭ ಸೂಚಿ ಸಂಪುಟಗಳನ್ನು ಬೆಳಕಿಗೆ ತಂದಿದೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಒಂದು ಸೂಚಿ ಸಂಪುಟವನ್ನು ಪ್ರಕಟಿಸಿದೆ. ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿಸೂಚಿ ಕೆಲವು ವರ್ಷಗಳ ಹಿಂದೆಯೇ ಪ್ರಕಟವಾಗಿದೆ. ಮೂಡಬಿದರೆ ಶ್ರವಣ ಬೆಳಗೊಳ ಕೊಲ್ಲಾಪುರ ಜೈನಮಠಗಳು, ಹುಬ್ಬಳ್ಳಿ ಗದಗ ಚಿತ್ರದುರ್ಗ ವೀರಶೈವಮಠಗಳ ಹಸ್ತಪ್ರತಿಸೂಚಿಗಳು ಪ್ರಕಟವಾಗಿವೆ. ಒಂದು ಅಂದಾಜಿನ ಪ್ರಕಾರ, ಈವರೆಗೆ ಪ್ರಕಟವಾದ ಗ್ರಂಥರೂಪದ ಸೂಚಿಗಳು ೫೦, ಲೇಖನರೂಪದ ಸೂಚಿಗಳು ೧೨.

ಪತ್ರಾಗಾರ (Archive) ಗಳಿಗೆ ಬಂದರೆ, ಕರ್ನಾಟಕದಲ್ಲಿ ಉನ್ನತವ್ಯಾಸಂಗಕ್ಕೆ ಅವಶ್ಯವಿರುವ ಆಕರಗಳನ್ನು ಹೊಂದಿದುವು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ. ಕರ್ನಾಟಕ ಸರಕಾರ ವಿಧಾನಸೌಧದಲ್ಲಿ ಸ್ಥಾಪಿಸಿರುವ ಪತ್ರಾಗಾರ ಇಲಾಖೆಯು ಕಚೇರಿಯ ಕಾಗದಪತ್ರ ಸಂಗ್ರಹಕ್ಕೆ ಆದ್ಯಗಮನ ಕೊಟ್ಟರೂ, ಪಾಳೆಯಗಾರರ, ದೇಶಗತಿಗಳ ದಾಖಲೆಗಳ ಸಂಗ್ರಹಕ್ಕೂ ಲಕ್ಷ್ಯವಹಿಸಿದೆ. ಮದ್ರಾಸ್ ಓರಿಯಂಟಲ್

ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿ ದಾಖಲೆಗಳಿಗಾಗಿ ಒಂದು ಪ್ರತ್ಯೇಕ ವಿಭಾಗವನ್ನೇ ಕಲ್ಪಿಸಲಾಗಿದೆ. ಭಾರತೀಯ ಇತಿಹಾಸ ಸಂಶೋಧನ ಮಂಡಲ (ಪುಣೆ), ಡಿಪಾರ್ಟ್‌ಮೆಂಟ್ ಆಫ್ ಅರ್ಕಾವಿಸ್ ಎಲ್‌ಫಿನ್‌ಸ್ಟನ್ ಕಾಲೇಜು (ಮುಂಬೈ), ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ, ಅರ್ಕಾವಿಸ್ ಆ್ಯಂಡ್ ಮ್ಯೂಜಿಯಂ (ಪಣಜಿ)–ಈ ಪತ್ರಾಗಾರ ಇಲಾಖೆಗಳಲ್ಲಿ ಕರ್ನಾಟಕದ ಸಂಸ್ಥಾನಿಕರಿಗೆ ಸಂಬಂಧಪಟ್ಟ ದಾಖಲಾತಿಗಳು ವಿಪುಲ ಸಂಖ್ಯೆಯಲ್ಲಿ ಸಿಗುತ್ತವೆ. ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿ ಕೈಫಿಯತ್ತುಗಳು ದೊಡ್ಡ ಪ್ರಮಾಣದಲ್ಲಿ ಸಿಗುವುದು ಅದರ ವೈಶಿಷ್ಟ್ಯವಾಗಿದೆ.

ಸಂಶೋಧಕರಿಗೆ ನೆರವಾಗುವ ಇನ್ನೊಂದು ನೆಲೆಯೆಂದರೆ ವಸ್ತುಪ್ರದರ್ಶನಾಲಯ (Musium), ಬೇರೆ ಬೇರೆ ಪ್ರದೇಶಗಳಲ್ಲಿರುವ ಮಹತ್ವಪೂರ್ಣ ಅವಶೇಷಗಳನ್ನು, ವಸ್ತುಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಈವರೆಗೆ ಅಸ್ತಿತ್ವಕ್ಕೆ ಬಂದ ವಿಗ್ರಹ, ನಾಣ್ಯ, ಶಾಸನ, ಚಿತ್ರಗಳನ್ನೊಳಗೊಂಡ ಪ್ರಾಚ್ಯವಸ್ತು ಪ್ರದರ್ಶನಾಲಯಗಳ ಜೊತೆಗೆ ಈಗ ವಿಜ್ಞಾನ, ಸಮಾಜವಿಜ್ಞಾನ, ಕೃಷಿವಿಜ್ಞಾನ, ಜಾನಪದಗಳಿಗೆ ಸಂಬಂಧಪಟ್ಟ ವಸ್ತು ಪ್ರದರ್ಶನಾಲಯಗಳು ಅಸ್ತಿತ್ವಕ್ಕೆ ಬರುತ್ತಲಿವೆ. ಇದರಿಂದಾಗಿ ಬೇರೆ ಬೇರೆ ಪ್ರದೇಶಕ್ಕೆ ಹೋಗುವ ಬದಲು, ಸಂಶೋಧಕನಿಗೆ ಅವಶ್ಯವಿರು ಆಕರಗಳು ಒಂದೇ ಕೇಂದ್ರದಲ್ಲಿ ಸಿಗುತ್ತವೆ. ಬೆಂಗಳೂರಿನ ರಾಜ್ಯ ಪುರಾತತ್ವ ಇಲಾಖೆಯ ವಸ್ತುಪ್ರದರ್ಶನಾಲಯದಲ್ಲಿ ದೂರದ ಹಲ್ಮಿಡಿ ಶಾಸನ, ದೊಡ್ಡಹುಂಡಿ ಶಾಸನ, ಬೇಗೂರ ಶಾಸನ, ಸಾವಿನಿಮ್ಮಡಿ ಶಾಸನ, ಆತ್ಕೂರ ಶಾಸನಗಳನ್ನು ಸಂಗ್ರಹಿಸಲಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಪ್ರದರ್ಶನಾಲಯದಲ್ಲಿ ಬಸವಣ್ಣನವರಿಗೆ ಸಂಬಂಧಿಸಿದ ಅರ್ಜುನವಾಡ ಶಾಸನ, ಸೂರ್ಯಗ್ರಹಣ ಸಂದರ್ಭದಲ್ಲಿ ಅಗ್ನಿಪ್ರವೇಶ ಮಾಡಿದವರ ವಿವರಗಳನ್ನೊಳಗೊಂಡ ತಿಳವಳ್ಳಿ, ಬಾಳೂರು ಗ್ರಾಮಗಳ ಶಾಸನಗಳಿವೆ. ಮೈಸೂರಿನ ರಾಜ್ಯ ಪುರಾತತ್ವ ಇಲಾಖೆಯಲ್ಲಿ ಅಕ್ಕಿ ಆಲೂರಿನಲ್ಲಿ ಲಭ್ಯವಾದ ರೋಮನ್ ಅರಸರ ನಾಣ್ಯ, ಸನ್ನತಿಯ ಸುಟ್ಟ ಮಣ್ಣಿನ ವಿಗ್ರಹಗಳು, ಮಾಲಿಂಗಿ ಪ್ರದೇಶದ ಮಹಾಕಾಳಿ ವಿಗ್ರಹ ಮೊದಲಾದ ಅವಶೇಷಗಳನ್ನು ಸಂಗ್ರಹಿಸಲಾಗಿದೆ. ಇತ್ತೀಚೆಗೆ ಕರ್ನಾಟಕದಲ್ಲಿ ಕಾಣಿಸಿಕೊಂಡ ಒಂದು ವಿಶಿಷ್ಟ ಕೇಂದ್ರವೆಂದರೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಪ್ರದರ್ಶನಾಲಯ. ಕರ್ನಾಟಕದ ಸರ್ವಪ್ರದೇಶಗಳನ್ನು ಪ್ರತಿನಿಧಿಸುವ ಜಾನಪದರ ಬದುಕಿನ ಎಲ್ಲ ಬಗೆಯ ವಸ್ತುಗಳ ಸಂಗ್ರಹಿವಿದು. ಬೆಂಗಳೂರು ಸಮೀಪದ ರಾಮನಗರದಲ್ಲಿ ಕರ್ನಾಟಕದ ಜಾನಪದ ಟ್ರಸ್ಟ್ ವತಿಯಿಂದ ಇಂಥದೇ ಇನ್ನೊಂದು ಜಾನಪದ ಮ್ಯೂಜಿಯಂ ಅಸ್ತಿತ್ವಕ್ಕೆ ಬಂದಿದೆ. ಧರ್ಮಸ್ಥಳದ "ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ" ಸಂಸ್ಥೆಯ ಆಶ್ರಯದಲ್ಲಿ ಹಸ್ತಪ್ರತಿ, ಅವಶೇಷ, ಜಾನಪದ ವಸ್ತುಗಳಿಗೆ ಸಂಬಂಧಪಟ್ಟ ಬಹು ದೊಡ್ಡ ವಸ್ತುಪ್ರದರ್ಶನಾಲಯ ರೂಪುಗೊಳ್ಳುತ್ತಲಿದೆ. ಬೆಂಗಳೂರಿನ ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಮ್ಯೂಜಿಯಂ, ನ್ಯಾಚುರಲ್ ಮ್ಯೂಜಿಯಂ, ವೆಂಕಟಪ್ಪ ಆರ್ಟ್ ಗ್ಯಾಲರಿ ಇತ್ಯಾದಿಗಳನ್ನು ಇಲ್ಲಿ ಅವಶ್ಯ ಸ್ಮರಿಸಬೇಕು.

ಹೀಗೆ ದೂರದೂರದ ಆಕರಗಳನ್ನೊಳಗೊಂಡ ಇಂಥ ಭಾಂಡಾರಗಳನ್ನು ಬಳಸಿಕೊಳ್ಳುವುದಲ್ಲದೆ, ಸಂಶೋಧಕನು ಆಕರಗಳ ನೇರ ಅಧ್ಯಯನಕ್ಕಾಗಿ ಕೆಲವೊಂದು ಸಂಬಂಧಪಟ್ಟ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಕೊಳ್ಳಬೇಕಾಗುತ್ತದೆ.

ಕ್ಷೇತ್ರೀಯ ನೆಲೆಗಳು :

ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ಅನ್ವೇಷಣಾತ್ಮಕ ಸಂಶೋಧನಕ್ರಿಯೆಯು ಗ್ರಂಥಾಲಯ ಮೊದಲಾದ "ಕೇಂದ್ರೀಯ ನೆಲೆ"ಗಳೊಂದಿಗೆ "ಕ್ಷೇತ್ರೀಯ ನೆಲೆ"ಗಳನ್ನೂ ಅಪೇಕ್ಷಿಸುತ್ತದೆ. ಇಲ್ಲಿ ಆಕರಗಳು ತಮ್ಮ ಮೂಲ ಆವರಣದಲ್ಲಿ ಸಿಗುವುದರಿಂದ ಕೇಂದ್ರೀಯ ನೆಲೆಗಳಿಗಿಂತ ಇವು ಹೆಚ್ಚು ಮಹತ್ವಪೂರ್ಣವೆನಿಸುತ್ತವೆ. ಏಕೆಂದರೆ ಇಲ್ಲಿ ಇಡಿ ಕ್ಷೇತ್ರವೇ ಆಕರಗಳ "ಜೀವಂತ ಪುಸ್ತಕ"ವಾಗಿರುತ್ತದೆ. ಸಂಸ್ಕೃತಿಯ ತಾಜಾ ತುಣುಕುಗಳು, ರಾಶಿರಾಶಿಯಾಗಿ ಇಲ್ಲಿ ಬಿದ್ದುಕೊಂಡಿರುತ್ತವೆ. ಇದನ್ನು ಸಂಶೋಧಕನು ಪ್ರಯೋಗಶಾಲೆಯನ್ನಾಗಿ ಮಾರ್ಪಡಿಸಿಕೊಳ್ಳುತ್ತಾನೆ. ಹೀಗಾಗಿ ಕ್ಷೇತ್ರಾಧ್ಯಯನ (Field Study)ದ ನೆಲೆಗಳನ್ನು ಗೋಡೆಗಳಿಲ್ಲದ ಪ್ರದರ್ಶನಾಲಯ ಅಥವಾ ಪ್ರಯೋಗಶಾಲೆಯೆಂದು ಕರೆಯುತ್ತಾರೆ. ಪ್ರತಿಯೊಬ್ಬ ಸಂಶೋಧಕನ ಜ್ಞಾನಶಾಖೆಗೆ ತಕ್ಕಂತೆ, ಅದರಲ್ಲಿಯೂ ಅವನ ವಿವಿಧ ಅಧ್ಯಯನಗಳಿಗೆ ತಕ್ಕಂತೆ, ಯಾವುದೇ ಒಂದು ಕೇಂದ್ರೀಯ ನೆಲೆ ಬೇರೆ ಬೇರೆ ಮೈಗಳನ್ನು ತೋರಿಸುವುದರಿಂದ ಅದು ವೈವಿಧ್ಯಪೂರ್ಣ ವಲಯವಾಗಿಯೂ ಪರಿಣಮಿಸುತ್ತದೆ.

ಇಲ್ಲಿ ಕ್ಷೇತ್ರ ಮತ್ತು ಕ್ಷೇತ್ರಕಾರ್ಯಕರ್ತ ಎರಡು ಧ್ರುವಗಳು. ಇವು ಅರ್ಥಪೂರ್ಣವಾಗಿ ಸಂಧಿಸುವಲ್ಲಿ ಜರುಗುವುದು, ಕ್ಷೇತ್ರಕಾರ್ಯ. ಇಂದು ಕಲೆ, ವಿಜ್ಞಾನ, ಸಮಾಜವಿಜ್ಞಾನ ವಲಯಗಳಲ್ಲಿ ಇದೂ ಒಂದು "ಶೈಕ್ಷಣಿಕ ಶಿಸ್ತು" ಆಗಿ ಬೆಳೆದಿದೆ. ಕ್ಷೇತ್ರಕಾರ್ಯಗಳೇ ಆಗಿದ್ದರೂ ಪ್ರಾಣಿಶಾಸ್ತ್ರಜ್ಞ ಜೀವಪ್ರಕಾರಗಳನ್ನು ಸಂಗ್ರಹಿಸುವುದಕ್ಕೂ, ಭಾಷಾವಿಜ್ಞಾನಿ ಮಾತಿನ ಘಟನಕಗಳನ್ನು ಸಂಗ್ರಹಿಸುವುದಕ್ಕೂ, ಮನೋವಿಜ್ಞಾನಿ ಮಾನವನ ಆಲೋಚನೆಗಳನ್ನು ಸಂಗ್ರಹಿಸುವುದಕ್ಕೂ ಅಂತರವಿದ್ದು, ಇವರ ಕ್ಷೇತ್ರಕಾರ್ಯಗಳನ್ನು ಕ್ರಮವಾಗಿ ಕಾಯಿಕ, ವಾಚಿಕ, ಮಾನಸಿಕ ಎಂಬ ಮೂರು ಪದಗಳಿಂದ ಗುರುತಿಸಬಹುದಾಗಿದೆ. ಈ ಮೂರು ಕ್ಷೇತ್ರಗಳಲ್ಲಿ ನಡೆಯುವ ಕ್ಷೇತ್ರಕಾರ್ಯವು ಕ್ರಮವಾಗಿ ಸಂಗ್ರಹ (Collection), ಸಂದರ್ಶನ (Interview), ನಿರೀಕ್ಷಣ (Observation) ರೂಪದ್ದಾಗಿರುತ್ತದೆ. ಇವುಗಳಲ್ಲಿ ನಮಗೆ ಪ್ರಸ್ತುತವಿರುವ ಅನ್ವೇಷಣಾತ್ಮಕ ಸಂಶೋಧನೆಗೆ ಸಂಬಂಧಪಟ್ಟ ಕ್ಷೇತ್ರಕಾರ್ಯವು ಪ್ರಧಾನವಾಗಿ ಸಂಗ್ರಹವರ್ಗಕ್ಕೆ ಸೇರುತ್ತಿದ್ದು, ಗೌಣವಾಗಿ ಸಂದರ್ಶನ, ನಿರೀಕ್ಷಣಗಳನ್ನೂ ಒಳಗೊಳ್ಳುತ್ತದೆ.

ಕ್ಷೇತ್ರಕಾರ್ಯದ ಫಲಿತಾಂಶ ಎರಡು ತೆರನಾಗಿರುತ್ತದೆ. ಒಂದು: ಈ ಮೊದಲು ಲಭ್ಯವಿಲ್ಲದ ಹೊಚ್ಚ ಹೊಸದರ ಅನ್ವೇಷಣೆ, ಎರಡು: ಈ ಮೊದಲು ಲಭ್ಯವಿದ್ದುದರ ಪುನರುಕ್ತ ಅನ್ವೇಷಣೆ. ಇವುಗಳಲ್ಲಿ ಒಂದನ್ನು ಶೋಧ, ಇನ್ನೊಂದನ್ನು ಸಂಗ್ರಹವೆಂದು ಕರೆಯಬಹುದು. ಉದಾ: ಶ್ರೀ ಬಿ. ಎಸ್. ಸಣ್ಣಯ್ಯನವರಿಗೆ ಲಭ್ಯವಾದ ನಾಗವರ್ಮನ ವರ್ಧಮಾನಪುರಾಣದ ಹಸ್ತಪ್ರತಿ 'ಶೋಧ.' ನನಗೆ ಲಭ್ಯವಾದ ಕವಿರಾಜಮಾರ್ಗದ ಹಸ್ತಪ್ರತಿ 'ಸಂಗ್ರಹ.' ಇದನ್ನು ನೋಡಿದರೆ ಈ ಎರಡೂ ಬಗೆಗಳನ್ನು ನಾವು ಶೋಧ ಶಬ್ದದಿಂದ ಕರೆಯುತ್ತಿರುವುದು ತಪ್ಪೆನಿಸುತ್ತದೆ.

ಕ್ಷೇತ್ರಕಾರ್ಯವು ಪ್ರತ್ಯಕ್ಷ (Directive field work) ಪರೋಕ್ಷ (Non-directive field work) ಎಂದು ಎರಡು ತೆರನಾಗಿದೆ. ಸ್ಥಳ, ವ್ಯಕ್ತಿ, ಕಲಾಕೃತಿ ಮೊದಲಾದವುಗಳನ್ನು ನೇರವಾಗಿ ಸಂದರ್ಶಿಸಿ, ಅಧ್ಯಯನ ನಡೆಸುವುದು ಪ್ರತ್ಯಕ್ಷ ಕ್ಷೇತ್ರಕಾರ್ಯ; ಹೀಗೆ ಮಾಡುವ ಬದಲು ಅಂಚೆ ಮೂಲಕ, ಅನ್ಯವ್ಯಕ್ತಿಯ ಮೂಲಕ ನಡೆಸುವುದು ಪರೋಕ್ಷ ಕ್ಷೇತ್ರಕಾರ್ಯ. ಇವುಗಳಲ್ಲಿ ಪರೋಕ್ಷ ಕ್ಷೇತ್ರಕಾರ್ಯ

ಅಷ್ಟೇನೂ ಸಮರ್ಪಕವೆನಿಸುವುದಿಲ್ಲ. ನಮ್ಮ ದೃಷ್ಟಿ ಧೋರಣೆಗಳಿಗೆ ತಕ್ಕ ವಿಷಯಗಳನ್ನು ಅಂಚೆ ಮೂಲಕ, ಅನ್ಯರ ಮೂಲಕ ಪಡೆಯುವುದು ಎಷ್ಟೇ ಎಚ್ಚರ ವಹಿಸಿದರೂ ಅಸಮರ್ಪಕವೇ. ಕೆಲವೊಮ್ಮೆ ಈ ಮೊದಲು ಯೋಚಿಸದ ಹೊಸ ಹೊಸ ಅಂಶಗಳು, ಕ್ಷೇತ್ರವನ್ನು ಪ್ರವೇಶಿಸಿದ ಕ್ಷಣದಲ್ಲಿ ಹೊಳೆಯುವ ಕಾರಣ, ಪ್ರತ್ಯಕ್ಷ ಕ್ಷೇತ್ರಕಾರ್ಯವೇ ಸಮರ್ಪಕವಾದುದು.

ಅನ್ವೇಷಣಾತ್ಮಕ ಸಂಶೋಧನೆಯಲ್ಲಿ ಪ್ರತ್ಯಕ್ಷ ಕ್ಷೇತ್ರಕಾರ್ಯವು ಪ್ರಾಚೀನ ನಿವೇಶನ, ವಾಸ್ತು–ವಿಗ್ರಹ, ಶಾಸನ, ಹಸ್ತಪ್ರತಿ, ಜಾನಪದ ಮತ್ತು ಆಚರಣೆಗಳಿಗೆ ಸಂಬಂಧಪಟ್ಟಂತೆ ಜರಗುತ್ತದೆ. ಇವುಗಳ ವಿಷಯದಲ್ಲಿ ಕೈಕೊಳ್ಳಲಿರುವ ಕ್ಷೇತ್ರಕಾರ್ಯಗಳಿಗಾಗಿ ಸರ್ವಸಾಮಾನ್ಯ (General) ನಿಯಮ–ವಿಧಾನಗಳಿದ್ದರೂ ಆಯಾ ಜ್ಞಾನಶಾಖೆಗಳಿಗನುಗುಣವಾಗಿ ಅವು ಕೆಲಮಟ್ಟಿಗೆ ಬೇರೆ ಬೇರೆಯಾಗುವುದು ಅನಿವಾರ್ಯ. ಹೀಗಿದ್ದೂ, ಈ ಕಾರ್ಯದಲ್ಲಿ ತೊಡಗುವ ವಿದ್ವಾಂಸರಿಗೆ ವಿಷಯಜ್ಞಾನ, ಪ್ರಾಯೋಗಿಕ ಜ್ಞಾನ, ತಾಂತ್ರಿಕಜ್ಞಾನ ಎಂಬ ಅರ್ಹತೆಗಳು ಅಗತ್ಯ.

ವಿಷಯಜ್ಞಾನವೆನ್ನುವುದು ಆಯಾ ಜ್ಞಾನಕ್ಷೇತ್ರಗಳ ಮೂಲಭೂತ ತಿಳಿವಳಿಕೆಯಾಗಿದೆ. ಈ ತಿಳಿವಳಿಕೆ ಗಾಢವಿದ್ದಷ್ಟೂ ಕ್ಷೇತ್ರಕಾರ್ಯದಲ್ಲಿ ಏನೇನು ಪಡೆಯಬೇಕೆಂಬುದು ಸ್ಪಷ್ಟವಾಗುತ್ತದೆ ಮತ್ತು ಅದು ಸಾಧ್ಯವಾಗುತ್ತದೆ.

ವಿಷಯದ ಬಗ್ಗೆ ಮೂಲಭೂತ ತಿಳಿವಳಿಕೆ ಇದ್ದ ಮಾತ್ರಕ್ಕೆ ಕ್ಷೇತ್ರಕಾರ್ಯದಲ್ಲಿ ಅದನ್ನು ಸಹಜವಾಗಿ ಅನ್ವಯಮಾಡಲು ಬರುವುದೆಂದು ಹೇಳುವಂತಿಲ್ಲ. ತಿಳಿವಳಿಕೆಯ ಆನ್ವಯಿಕ ತರಬೇತಿಯೂ ಅವಶ್ಯ. ಪ್ರಾಚೀನ ನಿವೇಶನ, ವಾಸ್ತುವಿಗ್ರಹಗಳ ಕ್ಷೇತ್ರಕಾರ್ಯಗಳಲ್ಲಿಯಂತೂ ಆನ್ವಯಿಕ ತರಬೇತಿ ಇರದಿದ್ದರೆ ನಡೆಯುವುದೇ ಇಲ್ಲ.

ಇಂದು ಕ್ಷೇತ್ರಕಾರ್ಯಕ್ಕಾಗಿ ಅನೇಕ ಹೊಸ ಹೊಸ ಯಂತ್ರೋಪಕರಣಗಳನ್ನು ಬಳಸುವುದು ಅನಿವಾರ್ಯವಾಗಿದೆ. ಕ್ಯಾಮರಾ, ಟೇಪರೆಕಾರ್ಡರ್ ಇತ್ಯಾದಿಗಳನ್ನು ಬಳಸುವ ರೀತಿ ಗೊತ್ತಿಲ್ಲದಿದ್ದರೆ, ಅವುಗಳಿಗೆ ಸಂಬಂಧಪಟ್ಟ ಸಣ್ಣಪುಟ್ಟ ರಿಪೇರಿ ಮಾಡುವ ತಿಳಿವಳಿಕೆ ಇಲ್ಲದಿದ್ದರೆ, ಕ್ಷೇತ್ರಕಾರ್ಯ ಮುಂದುವರಿಯವುದೇ ಇಲ್ಲ. ಪ್ರಾಚ್ಯವಸ್ತು–ಜಾನಪದಗಳ ಕ್ಷೇತ್ರಕಾರ್ಯಕ್ಕಂತೂ ಇವು ಅತ್ಯಗತ್ಯವೆನಿಸಿವೆ.

ಈ ಅರ್ಹತೆಯ ಸಂಶೋಧಕನು ಕೈಕೊಳ್ಳಲಿರುವ ಪ್ರತ್ಯಕ್ಷ ಕ್ಷೇತ್ರಾಧ್ಯಯನವು ಪೂರ್ವಸಿದ್ಧತೆ ಮತ್ತು ಕ್ಷೇತ್ರಕಾರ್ಯವೆಂಬ ಎರಡು ಹಂತಗಳಲ್ಲಿ ಜರುಗುತ್ತದೆ. ಪೂರ್ವ ಸಿದ್ಧತೆಯೆನ್ನುವುದು ತಾನು ಸಂದರ್ಶಿಸಲಿರುವ ಪ್ರದೇಶ, ಪರಿಸರಗಳ ಸ್ಥೂಲ ಪರಿಚಯ, ಅಲ್ಲಿ ಲಭಿಸುವ ವಿಷಯದ ಸ್ವರೂಪಜ್ಞಾನ, ತನ್ನ ಕ್ಷೇತ್ರಕಾರ್ಯಕ್ಕೆ ಅವಶ್ಯವಿರುವ ಉಪಕರಣ, ಪ್ರಶ್ನಾವಳಿ–ನಕ್ಷೆಗಳ ಸಂಗ್ರಹ ಇತ್ಯಾದಿಗಳನ್ನೊಳಗೊಂಡಿರುತ್ತದೆ. ಹಿಂದೆ ಹೇಳಿದಂತೆ ಸಂಗ್ರಹ ನಿರೀಕ್ಷಣ, ಸಂದರ್ಶನಗಳೆಂಬ ಕ್ಷೇತ್ರಕಾರ್ಯವಿಧಾನಗಳಲ್ಲಿ ಸಂದರ್ಶನವು ಪ್ರಶ್ನೋತ್ತರ ಸ್ವರೂಪದ್ದಾಗಿರುತ್ತದೆ. ಇದು ಮೌಖಿಕ ರೂಪ (Oral)ದ್ದಾಗಿರಬಹುದು. ಇಲ್ಲವೆ ಪ್ರಶ್ನಾವಳಿ (Questioneer) ರೂಪದ್ದಾಗಿರಬಹುದು. ಮೌಖಿಕ ರೂಪದ ಸಂದರ್ಶನ ಪ್ರಸಂಗದಲ್ಲಿಯೂ ಪೂರ್ವಭಾವಿಯಾಗಿ ಒಂದಿಷ್ಟು ಮುಖ್ಯ ಪ್ರಶ್ನೆಗಳನ್ನು ಗುರುತುಹಾಕಿಕೊಂಡಿರುವುದು ಅಧ್ಯಯನದ ಸಮಗ್ರತೆಯ ದೃಷ್ಟಿಯಿಂದ ಒಳ್ಳೆಯದು. ಹೀಗಿದ್ದೂ ಗೌಣಪ್ರಶ್ನೆಗಳು ಕ್ಷೇತ್ರದಲ್ಲಿಯೇ ಉತ್ಪನ್ನವಾಗುವುದು ಇದ್ದೇ ಇರುತ್ತದೆ. ಪ್ರಶ್ನಾವಳಿ ಎಂಬುದು

ಮುದ್ರಿತ ಪ್ರತಿಯಲ್ಲಿರುವುದು ಲೇಸು. ಇದು ನಿರ್ಬಂಧಿತ (Open) ಮತ್ತು ಬಂಧಿತ (Closed) ಎಂದು ಸಾಮಾನ್ಯವಾಗಿ ಎರಡು ಬಗೆಯಾಗಿರುತ್ತದೆ. ನಿರ್ಬಂಧಿತದಲ್ಲಿ ಕೇವಲ ಪ್ರಶ್ನೆಗಳನ್ನು ಮುದ್ರಿಸಲಾಗಿರುತ್ತದೆ. ನಿವೇದಕನ ಹೇಳಿಕೆ ಇಲ್ಲಿ ಉತ್ತರವಾಗಿ ಲಿಖಿತಗೊಳ್ಳುತ್ತದೆ. ಬಂಧಿತದಲ್ಲಿ ಇಲ್ಲ ಹೌದು ಇತ್ಯಾದಿ ಉತ್ತರಗಳನ್ನು ಮುದ್ರಿಸಲಾಗಿದ್ದು, ಇವುಗಳಲ್ಲಿ ಸೂಕ್ತ ಉತ್ತರಗಳನ್ನು ಗುರುತುಮಾಡುವ ಅವಕಾಶವಿರುತ್ತದೆ.

ಈ ಎಲ್ಲ ಪೂರ್ವಸಿದ್ಧತೆಯೊಂದಿಗೆ ಅನ್ವೇಷಣಾತ್ಮಕ ಕ್ಷೇತ್ರಕಾರ್ಯಕರ್ತ ಹಿಂದೆ ಹೇಳಿದ ವಸ್ತು–ಭಾಷೆ–ಕ್ರಿಯೆ–ಜ್ಞಾನಗಳೆಂಬ ಕ್ಷೇತ್ರಗಳಲ್ಲಿ ಯೋಧನಂತೆ ಆತ್ಮವಿಶ್ವಾಸದೊಂದಿಗೆ ಇಳಿಯಬೇಕು. ಈಗ ವಸ್ತುಸಾಮಗ್ರಿಗಾಗಿ "ಸಂಗ್ರಹ" ಪ್ರಧಾನವಾದ, ಭಾಷಾ ಸಾಮಗ್ರಿಗೆ ಸಂಬಂಧಿಸಿದ ಲಿಖಿತ ಸಾಹಿತ್ಯಕ್ಕಾಗಿ "ಸಂಗ್ರಹ" ಪ್ರಧಾನವಾದ, ಮೌಖಿಕ ಸಾಹಿತ್ಯಕ್ಕಾಗಿ "ಸಂಗ್ರಹ" ಪ್ರಧಾನ ಮತ್ತು "ಸಂದರ್ಶನ" ಪ್ರಧಾನವಾದ, ಜ್ಞಾನಸಾಮಗ್ರಿಗಾಗಿ "ನಿರೀಕ್ಷಣ" ಪ್ರಧಾನವಾದ ಕ್ಷೇತ್ರಕಾರ್ಯ ನಡೆಸಬೇಕಾಗುತ್ತದೆ. ಹೀಗಿದ್ದೂ ಯಾವುದೇ ಕ್ಷೇತ್ರಕಾರ್ಯದಲ್ಲಿ ಬಿಡಿಬಿಡಿಯಾಗಿ ಸಂಗ್ರಹ, ಸಂದರ್ಶನ, ನಿರೀಕ್ಷಣ – ಈ ಪ್ರಕ್ರಿಯೆಗಳನ್ನು ಬಳಕೆಮಾಡದೆ, ಒಂದು ಪ್ರಕ್ರಿಯೆಯನ್ನು ಪ್ರಧಾನವಾಗಿ, ಮಿಕ್ಕವುಗಳನ್ನು ಗೌಣವಾಗಿ ಪ್ರಯೋಗಿಸುವುದು ಸೂಕ್ತವೆನಿಸುತ್ತದೆ.

ಒಂದು ಮಾತು : ಕ್ಷೇತ್ರಕಾರ್ಯವು ವಸ್ತುಶೋಧ, ಭಾಷಾಶೋಧ, ಕ್ರಿಯಾಶೋಧ ಮತ್ತು ಜ್ಞಾನಶೋಧ – ಇವುಗಳಲ್ಲಿ ಯಾವುದೇ ಬಗೆಯದಾಗಿರಲಿ, ಅದರ ಸಂದರ್ಭ ವಿಧಾನ, ಆಚರಿಸುವ ವ್ಯಕ್ತಿ–ಉಪಕರಣ–ಆವರಣ, ಅದರ ಬಗ್ಗೆ ಈ ಪರಿಸರದಲ್ಲಿ ಹಬ್ಬಿರುವ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಅವಶ್ಯ. ಪರಿಸರದ ಹೊರಗೆ ಇಟ್ಟು ಒಂದು ವಿಷಯದ ಕ್ಷೇತ್ರಕಾರ್ಯ ಮಾಡುವುದು ಅಪೂರ್ಣವೆನಿಸುತ್ತದೆ. ಇಲ್ಲೆಲ್ಲ "ವಿಷಯಶೋಧ" ಮತ್ತು "ಪರಿಸರಶೋಧ" ಎರಡೂ ಕೆಲಸಗಳು ನಡೆಯಬೇಕಾಗುತ್ತದೆ. ಈ ಪರಿಸರನಿಷ್ಠ ಶೋಧವನ್ನೇ ಜಾನಪದದಲ್ಲಿ Contexual Theory ಎಂದು ಕರೆಯುತ್ತಾರೆ.

ಆಕರಶೋಧಕ್ರಿಯೆ

"ಆಕರಶೋಧ"ವೆಂಬುದು ಸಂಶೋಧನ ಕಟ್ಟಡಕ್ಕೆ ಕಲ್ಲು, ಮಣ್ಣು, ಇಟ್ಟಿಗೆ ಸಂಗ್ರಹಿಸುವಂಥ ಕೆಲಸ. ಸಾಮಗ್ರಿ ದುರ್ಬಲವಾಗಿದ್ದರೆ, ಕೊರತೆಯಿಂದ ಕೂಡಿದ್ದರೆ ಕಟ್ಟಡ ಅಷ್ಟರಮಟ್ಟಿಗೆ ದುರ್ಬಲ, ಅಸಮರ್ಪಕವಾದಂತೆಯೇ. ಆದುದರಿಂದ ಎಲ್ಲ ಮೂಲಗಳಿಂದ ಎಲ್ಲ ಆಕರಗಳನ್ನು ಶೋಧಿಸುವುದು ಸಂಶೋಧಕನ ಪ್ರಥಮ ಕರ್ತವ್ಯವಾಗಿದೆ. ಸಾಮಾನ್ಯವಾಗಿ ಸಂಶೋಧನೆಗೆ ಎತ್ತಿಕೊಂಡ ಒಂದು ವಿಷಯ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ಬಯಸುತ್ತದೆ. ಕೆಲವು ವಿಷಯಗಳಂತೂ ಬಹುಕ್ಷೇತ್ರೀಯ ಸಂಬಂಧ ಪಡೆದಿರುತ್ತವೆ. ಇಂಥಲ್ಲಿ ಆಕರಶೋಧ ಬಹುಮುಖಿಯಾಗಬೇಕಾಗುವುದರಿಂದ ಬಹುಶ್ರುತತ್ವ, ಶ್ರಮ, ಸಹನೆ ಸಂಶೋಧಕನಿಗೆ ಅವಶ್ಯವೆನಿಸುತ್ತದೆ. ಇದಕ್ಕಾಗಿ ಗ್ರಂಥಭಾಂಡಾರ ಮತ್ತು ಹಸ್ತಪ್ರತಿ ಭಾಂಡಾರಗಳ ಸಂದರ್ಶನ, ಕ್ಷೇತ್ರಕಾರ್ಯ ಇತ್ಯಾದಿ ಚಟುವಟಿಕೆಗಳಲ್ಲಿ ಸಂಶೋಧಕ ತೊಡಗಬೇಕಾಗುತ್ತದೆ. ಒಂದು ಆಕರ, ಇನ್ನೊಂದು ಆಕರಕ್ಕೆ ಸೂಚನೆ ನೀಡುತ್ತ ಸಂಶೋಧಕನನ್ನು ಇಲ್ಲಿಂದ ಅಲ್ಲಿಗೆ ಮುನ್ನಡೆಸುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಸವದತ್ತಿ ಎಲ್ಲಮ್ಮನನ್ನು ಕುರಿತ ಶೋಧವು

ಕವಿಸಾಹಿತ್ಯ, ಶಾಸನಸಾಹಿತ್ಯ, ಜನಪದಸಾಹಿತ್ಯ, ವದಂತಿ, ಪುರಾಣ, ಇತಿಹಾಸ, ಆಚರಣೆ, ನಂಬಿಕೆ – ಹೀಗೆ ಅನೇಕ ಆಕರಗಳನ್ನು ಬಯಸುತ್ತದೆ.[೧೯]

ಮನೆಯ ಬಾಗಿಲಿಗೆ ಬಂದ ಸವದತ್ತಿ ಎಲ್ಲಮ್ಮನ ಜೋಗಿತಿ ನುಡಿದ "ಎಕ್ಕಲದೋ ಉಧೋ" ಎಂಬ ಉದ್ಘೋಷದಲ್ಲಿಯ 'ಎಕ್ಕಲದೋ' ಶಬ್ದ ಸಂಶೋಧಕನ ಗಮನ ಸೆಳೆಯುತ್ತದೆ. ಎಲ್ಲಮ್ಮನ ಸಂದರ್ಭದಲ್ಲಿ ಬಳಕೆಯಾದ ಈ ಹೆಸರಿನ ಮೂಲರೂಪ 'ಎಕ್ಕಲದೇವಿ' ಎಂಬ ಅಂಶ ಮಿಂಚಿದಾಗ, ಎಲ್ಲಮ್ಮನಿಗೂ ಎಕ್ಕಲದೇವಿಗೂ ಇರುವ ಸಂಬಂಧದತ್ತ ಅವನ ಗಮನ ಹರಿಯುತ್ತದೆ. ಈ ಎಕ್ಕಲದೇವಿ ಎಂಬುದಕ್ಕೆ ಏನು ಅರ್ಥ? ಎಂಬ ಚಿಂತನೆಯಲ್ಲಿ ಮುಳುಗುತ್ತದೆ. ಆತ ಕಾವ್ಯ, ಶಾಸನಗಳಲ್ಲಿ ಸಿಗುವ ಎಕ್ಕಲದೇವಿಯ ಉಲ್ಲೇಖಗಳ ಸಂಗ್ರಹಕ್ಕೆ ತೊಡಗುತ್ತಾನೆ. ಯಕ್ಷಿ – ಜಕ್ಕಿ – ಜಕ್ಕಲಾ – ಯಕ್ಕಲಾ ಎಂದು ನಿಷ್ಪತ್ತಿ ಕಂಡುಕೊಂಡು, ಜೈನ ಯಕ್ಷ – ಯಕ್ಷಿ ಸಂಪ್ರದಾಯದತ್ತ ತಿರುವು ಪಡೆದು, ಸವದತ್ತಿ ದೇವಾಲಯ ಮೂಲತಃ ಜೈನಬಸದಿಯೇ? ಎಂಬ ಕುತೂಹಲ ತಾಳುತ್ತಾನೆ. ವಿವರವಾಗಿ ದೇವಾಲಯವನ್ನು ಪರೀಕ್ಷಿಸುವಲ್ಲಿ ಅದರ ಗೋಡೆಯ ಹಿಂದೆ, ಮಗ್ಗಲು, ಶಿಖರದ ಗೂಡು–ಹೀಗೆ ಮೂರುಕಡೆಗಳಲ್ಲಿ ಸಣ್ಣ ಜೈನವಿಗ್ರಹಗಳಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಗರ್ಭಗುಡಿಯ ಬಾಗಿಲ ಚೌಕಟ್ಟು ಈಗ ಬೆಳ್ಳಿಯ ತಗಡಿನಿಂದ ಮುಚ್ಚಿದ್ದರೂ ಬಾಗಿಲ ಮೇಲೆ ಯಾವ ಚಿಹ್ನೆ ಇದ್ದೀತು? ಎಂಬ ಪ್ರಶ್ನೆ ಹಾಕಿಕೊಳ್ಳುತ್ತಾನೆ. ತಗಡನ್ನು ಕಿತ್ತಿ ತೆಗೆಯಿಸುವುದು ಅಸಾಧ್ಯವೆನಿಸಿದಾಗ, ತಗಡು ಹೊದಿಸುವ ಮೊದಲು ತೆಗೆದುಕೊಂಡ ಫೋಟೋಗಳಿದ್ದರೆ ಹುಡುಕಲು ತೊಡಗುತ್ತಾನೆ. ಲಭ್ಯ ಹಳೆಯ ಫೋಟೋದಲ್ಲಿ ಬಾಗಿಲ ಮೇಲೆ ತೀರ್ಥಂಕರ ವಿಗ್ರಹವಿರುವುದರಿಂದ ಇದು ಮೂಲತಃ ಬಸದಿಯೆಂಬ ನಂಬುಗೆ ಇನ್ನೂ ಗಟ್ಟಿಯಾಗುತ್ತದೆ. ಹಾಗಿದ್ದರೆ ಇದು ಯಾವ ತೀರ್ಥಂಕರನ ಬಸದಿ? ಎಂಬ ವಿಷಯವಾಗಿ ತಲೆ ಕೆಡಿಸಿಕೊಳ್ಳುತ್ತಾನೆ. ಎಲ್ಲಮ್ಮ ವಿಗ್ರಹದ ಹಿಂದೆ ಲೊಕ್ಕಿಗಿಡದ ಬೊಡ್ಡೆಯಿದೆಯೆಂದು ಹೇಳುವುದರಿಂದ, ಲೊಕ್ಕಿಗಿಡದಲ್ಲಿ ವಾಸವಾಗಿರುವ ಪದ್ಮಾವತಿಯಕ್ಷಿಯ ಪಾರ್ಶ್ವನಾಥ ತೀರ್ಥಂಕರನ ಬಸದಿ ಇದಾಗಿರಬಹುದೆಂದು ಊಹಿಸುತ್ತಾನೆ. ಸವದತ್ತಿಯ ರಟ್ಟರ ಆಸ್ಥಾನದಲ್ಲಿ ಪಾರ್ಶ್ವನಾಥ ಕವಿಯಿದ್ದು, ಅವನು ಪಾರ್ಶ್ವನಾಥ ಪುರಾಣ ಬರೆದಿರುವುದನ್ನು ನೆನಪಿಸಿಕೊಳ್ಳುತ್ತಾನೆ. ಸ್ಥಳೀಯ ತೀರ್ಥಂಕರನ ಮೇಲಿನ ಭಕ್ತಿ ಕಾರಣವಾಗಿ ಈ ಪುರಾಣವನ್ನು ಪಾರ್ಶ್ವಕವಿ ಬರೆದಿರಬೇಕು. ಹಾಗಿದ್ದರೆ ಈ ಪುರಾಣ ಹುಟ್ಟಿದ ಕಾಲವಾದ ೧೨೨೦ರಲ್ಲಿ ಇದು ಇನ್ನೂ ಜೈನಬಸದಿಯೇ ಆಗಿದ್ದಿರಬೇಕು. ಆಮೇಲೆ ತೀರ್ಥಂಕರನನ್ನು ನಾಶಮಾಡಿ, ಮಗ್ಗುಲಿನ ಪದ್ಮಾವತಿಯಕ್ಷಿಯನ್ನೇ ಕೇಂದ್ರದಲ್ಲಿ ಸ್ಥಾಪಿಸಿ, ಅವಳನ್ನೇ ಅಂದರೆ ಪದ್ಮಾವತಿ ಯಕ್ಷಿಯ (ಯಕ್ಕಲಮ್ಮ)ನ್ನೇ ಯಲ್ಲಮ್ಮನೆಂದು ಪೂಜಿಸಲು ಪ್ರಾರಂಭಿಸಿರಬೇಕು. ಹಾಗಿದ್ದರೆ ಈ ಕ್ರಿಯೆ ಮಾಡಿದ ಎಲ್ಲಮ್ಮನ ಭಕ್ತರು ಯಾರು? ಎಂದು ಪ್ರಶ್ನೆ ಹಾಕಿಕೊಳ್ಳುತ್ತಾನೆ. ಇಂದಿಗೂ ಎಲ್ಲಮ್ಮನ ಹೆಸರಿನಲ್ಲಿ ಜೋಗಿತಿಯಾಗುವವಳಿಗೆ ದೀಕ್ಷೆಕೊಡುವ ಮುಖ್ಯ ಕೆಲಸ ಮಾಡುವವನನ್ನು 'ತಾನಿಕ'* ಎಂದು ಕರೆಯುತ್ತಾರೆ. ಇದು ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ಸ್ಥಾನಿಕ ಶಬ್ದದ ಸವೆದರೂಪ. ಸವದತ್ತಿಯ ಈ 'ತಾನಿಕ' ಭಾವಸಾರ ಕ್ಷತ್ರಿಯನಾಗಿದ್ದಾನೆ. ಇಂದಿಗೂ ಸವದತ್ತಿಯ ಸುತ್ತಮುತ್ತಲಿನ

---

೧೯. ಎಕ್ಕಲಮ್ಮ–ಎಲ್ಲಮ್ಮ–ಎಂ. ಎಂ. ಕಲಬುರ್ಗಿ (ಮಾರ್ಗ–II, ಪು. ೩೪೧).

* ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ – ಎನ್. ಕೆ. ಕಡೆತೋಟದ (ಪು.೧೮).

ಹುಬ್ಬಳ್ಳಿ, ಗದಗದಲ್ಲಿ ಈ ಜನ ಅಧಿಕ ಸಂಖ್ಯೆಯಲ್ಲಿದೆ. ಇವರ ಆರಾಧ್ಯ ದೈವತ ಸಹಸ್ರಾರ್ಜುನ ಕಾರ್ತವೀರ್ಯ. ಸವದತ್ತಿ ರಟ್ಟರಲ್ಲಿ ಕಾರ್ತವೀರ್ಯ ಹೆಸರಿನ ಅರಸರಿದ್ದಾರೆ. ಇದು ಸವದತ್ತಿ ಮತ್ತು ಭಾವಸಾರಕ್ಷತ್ರಿಯರ ಸಂಬಂಧವನ್ನು ಬಲಪಡಿಸುವ ಅಂಶವಾಗಿದೆ. ಈ ಎಲ್ಲಮ್ಮ ಭಾವಸಾರಕ್ಷತ್ರಿಯರ ದೇವತೆಯಾಗಿರುವುದರಿಂದ ರಟ್ಟರು ಪಾರ್ಶ್ವನಾಥನನ್ನು ಭಗ್ನಗೊಳಿಸಿ ಎಲ್ಲಮ್ಮನನ್ನು ಸ್ಥಾಪಿಸಿರಬೇಕೆನಿಸುತ್ತದೆ. ಬಹುಶಃ ಪುರಾಣ ಕಾರ್ತವೀರ್ಯನನ್ನು ಜಮದಗ್ನಿಯು ಕೊಂದ ಕಥೆಯನ್ನು ಪ್ರಚಾರಮಾಡುತ್ತ, ಈ ಭಾವಸಾರರನ್ನು ತಳ್ಳಿ ಬ್ರಾಹ್ಮಣರು ಅರ್ಚಕರಾದರೆಂದು ತೋರುತ್ತದೆ. ಆಗ ರೇಣುಕೆ, ಜಮದಗ್ನಿ – ಕಾರ್ತವೀರ್ಯ – ಪರಶುರಾಮರ ಕಥೆಯ ದಾಳಿಯಿಂದಾಗಿ ಎಲ್ಲಮ್ಮನ ಕಥೆ ಮಾಯವಾಗಿ, ರೇಣುಕೆಯ ಕಥೆ ಪ್ರಚಾರಕ್ಕೆ ಬಂದಿರಬೇಕು. ಸವದತ್ತಿ ಗುಡ್ಡದಲ್ಲಿ ವೈದಿಕವನ್ನು ಸೂಚಿಸುವ ಪರಶುರಾಮ ದೇವಾಲಯದ ಮೊದಲಾದವುಗಳೆಲ್ಲ ೧೫ನೆಯ ಶತಮಾನದವುಗಳಾಗಿರುವುದರಿಂದ ಬ್ರಾಹ್ಮಣ ಅರ್ಚಕರು ಈ ಸುಮಾರಿಗೆ ಇಲ್ಲಿ ಪ್ರಭುತ್ವ ಪಡೆದಿರಬೇಕು. ಆಮೇಲೆ ಲಿಂಗಾಯತರು ಪ್ರಬಲರಾಗಿ, ಬ್ರಾಹ್ಮಣರನ್ನು ತಳ್ಳಿ, ತಾವು ಅರ್ಚಕರಾಗಿರಬೇಕು. ಈ ಲಿಂಗಾಯತ ಅರ್ಚಕರ ಹೆಸರು ಇಂದು 'ಋಷಿ' ಎಂದು ಕೊನೆಗೊಳ್ಳುತ್ತವೆ, ಬಹುಶಃ ಇವು ಪ್ರಾಚೀನ ಶಾಸನೋಕ್ತ ಕಾಳಾಮುಖರ ಅಮೃತರಾಶಿ, ತೇಜೋರಾಶಿ ಎಂಬ ಹೆಸರುಗಳನ್ನು ನೆನಪಿಗೆ ತರುತ್ತದೆ.

ಹೀಗೆ ಒಂದು ವಿಷಯವನ್ನು ಎತ್ತಿಕೊಂಡು, ಸರಿಯಾಗಿ ಎಳೆ ಜಗ್ಗಿದರೆ ಇಡೀ ವಸ್ತ್ರವೇ ಬಿಚ್ಚಿಕೊಳ್ಳುವಂತೆ ಅಧ್ಯಯನ ನಡೆಸಿದಾಗ, ವಿಷಯ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇದಕ್ಕೆ ಅಲ್ಲಿಯ ಜಾನಪದ ನಂಬಿಕೆ ಆಚರಣೆಗಳನ್ನು ಜೋಡಿಸಿದರೆ ಈ ಶೋಧ ಇನ್ನೂ ವಿಸ್ತಾರವಾಗುತ್ತದೆ, ಅರ್ಥವತ್ತಾಗುತ್ತದೆ. ಇಲ್ಲಿ ಪುಸ್ತಕದಿಂದ ಪುಸ್ತಕಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಸಾಗುವ ಕ್ರಿಯೆ ನಡೆದೇ ಇರುತ್ತದೆ. ಹೀಗೆ ಎಲ್ಲ ದಿಕ್ಕುಗಳಿಂದ ದಾಳಿಮಾಡುವ ಯೋಧನಂತೆ ಕಾರ್ಯಕಾರಣ ಭಾವದಿಂದ ಸಂಬಂಧ ಕಲ್ಪಿಸುತ್ತ ಹೋಗುವಲ್ಲಿ ಸಂಶೋಧಕನಿಗೆ ಅನೇಕ ವಿಧದ, ಅಪಾರ ಮೊತ್ತದ ಆಕರಸಾಮಗ್ರಿ ತೆಕ್ಕೆಗೆ ಒದಗುತ್ತ ಹೋಗುತ್ತದೆ. ಕೊನೆಗೆ ಉತ್ತಮ ಫಲಿತಾಂಶ ಅವನ ಹಸ್ತದಲ್ಲಿ ಹುಟ್ಟುಪಡೆಯುತ್ತದೆ. ಇದನ್ನು ನೋಡಿದರೆ ಒಂದು ವಿಷಯಕ್ಕಾಗಿ ಸಂಶೋಧಕ ಎಷ್ಟು ಬಗೆಯ ಆಕರಗಳನ್ನು ಬಳಸಿಕೊಳ್ಳಬೇಕಾಗುತ್ತದೆ, ಅದಕ್ಕಾಗಿ ಅವನು ಎಷ್ಟು ಶ್ರಮ, ಎಷ್ಟು ತಾಳ್ಮೆ ವಹಿಸಬೇಕಾಗುತ್ತದೆಂಬುದು ವಿದಿತವಾಗುತ್ತದೆ. ಹೀಗೆ ಆಕರದಿಂದ ಆಕರಕ್ಕೆ ಹೋಗುವುದು ನಿಜವಾದ ಸಂಶೋಧಕನಿಗೆ ಉತ್ಸಾಹದ ವಿಷಯವೇ ಹೊರತು, ಬೇಸರದ ಕೆಲಸವಲ್ಲ.

ಈ ಪ್ರಕರಣವನ್ನು ಮುಗಿಸುವ ಮೊದಲು ಒಂದು ಮಾತು. ಈವರೆಗೆ ವಿವರಿಸಿದಂತೆ ಕರ್ನಾಟಕದ ಪರಂಪರೆಗೆ ಸಂಬಂಧಪಟ್ಟ ಎಲ್ಲ ಬಗೆಯ ಆಕರಗಳನ್ನು ಸಮಗ್ರವಾಗಿ ಶೋಧಿಸುವುದು, ಅವುಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಪಡಿಸುವುದು ಅವಶ್ಯವಿದೆ. ಈ ದಿಶೆಯಲ್ಲಿ Sources of Karnataka History (S. Shrikantasastri-1940), Sources of Vijayanagar History (S. Krishnaswamy Ayyangar), Further Sources of Vijayanagar History (K. A. Nilakantha Sastri, N. Venkataramanaya) ಮೊದಲಾದ ಕೃತಿಮಾದರಿಗಳು ನಮ್ಮ ಕಣ್ಣು ಮುಂದಿವೆ. ಹಸ್ತಪ್ರತಿಸೂಚಿ, ಶಾಸನಸಂಪುಟಗಳು ಕೆಲವು ಸಂಖ್ಯೆಯಲ್ಲಿ ಪ್ರಕಟವಾಗಿವೆ. The Jain

Sources of the History of Ancient India (Jyothiprasad Jain) ಮೊದಲಾದ ದೊಡ್ಡ ಪ್ರಯತ್ನಗಳು ಬೆಳಕು ಕಂಡಿವೆ. ಇದೇ ರೀತಿ ಉತ್ತರ ಕರ್ನಾಟಕ, ಹೊರನಾಡುಗಳ ಶಾಸನ ಸಂಪುಟಗಳನ್ನೂ, ಕಾವ್ಯೋಕ್ತ ಚಾರಿತ್ರಿಕ ಸಂಗತಿಗಳ ಕೋಶಗಳನ್ನೂ ಸಿದ್ಧಪಡಿಸಬಹುದಾಗಿದೆ. ಹಸ್ತಪ್ರತಿಗಳಿಗೆ ಸಂಬಂಧಿಸಿದಂತೆ ಮದ್ರಾಸ್ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ, ಮೈಸೂರು ಗರ್ವನಮೆಂಟ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳು, ಮೈಸೂರು, ಬೆಂಗಳೂರು, ಧಾರವಾಡ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸೂಚಿಗಳನ್ನು ಪ್ರಕಟಿಸಿದ್ದು, ಮಿಕ್ಕ ಕನ್ನಡ ವಿಭಾಗಗಳು ಇಂಥ ಕೆಲಸವನ್ನು ಪೂರೈಸಬೇಕಾಗಿದೆ. ಅಂತಿಮವಾಗಿ New Catalogus Catalogorum (V. Raghavan-1949) ಮೊದಲಾದವುಗಳ ಮಾದರಿಯಲ್ಲಿ ಕನ್ನಡ ಹಸ್ತಪ್ರತಿಗಳ Catalogus Catalogorumನ್ನು ರೂಪಿಸಬೇಕಾಗಿದೆ. ಒಟ್ಟಿನಲ್ಲಿ, ಕರ್ನಾಟಕದ ಅಧ್ಯಯನಕ್ಕೆ ಸಂಬಂಧ ಪಟ್ಟ ಸಮಗ್ರ ಆಕರಗಳನ್ನು ಶೋಧಿಸಿ, ಅವುಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಪಡಿಸುವುದು ಅವಶ್ಯವಿದೆ.

❖❖

೩

❖

ಸಂಶೋಧನ : ಕ್ರಿಯೆ ಪ್ರಕಾರ

ಸಂಶೋಧನ ಕ್ರಿಯೆ : ಮೂಲ ಊಹನ / ಆಕರ–ಆಕರಸಾಮಗ್ರಿ–ದತ್ತ ಸಾಮಗ್ರಿ ಸಂಗ್ರಹಣ/ ವಿಶ್ಲೇಷಣ ಕ್ರಿಯೆ–ವ್ಯಾಖ್ಯಾನ ಕ್ರಿಯೆ / ಸಂಭಾವ್ಯ ಸಂಶೋಧನೆ–ಸತ್ಯ ಸಂಶೋಧನೆ / ಸಂಶೋಧನೆಯ ಪ್ರಕಾರಗಳು: ವಿಷಯನಿಷ್ಠ ಪ್ರಕಾರ, ಉದ್ದೇಶನಿಷ್ಠ ಪ್ರಕಾರ, ವಿಧಾನನಿಷ್ಠ ಪ್ರಕಾರ, ಸ್ವರೂಪನಿಷ್ಠ ಪ್ರಕಾರ / ಆನ್ವಯಿಕ ಸಂಶೋಧನೆ / ಬಹು ಶಿಸ್ತೀಯ ಸಂಶೋಧನೆ / ಸಂಖ್ಯಾನಿಷ್ಠ ಸಂಶೋಧನೆ / ಮಾದರಿನಿಷ್ಠ ಸಂಶೋಧನೆ / ಘಟಕನಿಷ್ಠ ಸಂಶೋಧನೆ / ಸಾಂಸ್ಕೃತಿಕ ಸಂಶೋಧನೆ.

ಸಂಶೋಧನ ಕ್ರಿಯೆ

ಸಂಶೋಧನೆಯೆನ್ನುವುದು ಕಳೆದುಕೊಂಡ ಇತಿಹಾಸವನ್ನು ಕಾಣಿಸಿಕೊಡುವುದು ಮತ್ತು ಕಟ್ಟಿಕೊಡುವುದಾಗಿದೆ. ಈ ಸಂದರ್ಭದಲ್ಲಿ ಕಾವ್ಯಕಟ್ಟುವ ಕವಿಯಂತೆ ಸಂಶೋಧಕನೂ ಹಲವು ಹಂತಗಳನ್ನು ದಾಟಬೇಕಾಗುತ್ತದೆ. ಅವುಗಳನ್ನು ೧. ಮೂಲ ಊಹನ* ೨. ಆಕರ–ಆಕರ ಸಾಮಗ್ರಿ–ದತ್ತ ಸಾಮಗ್ರಿಗಳ ಸಂಗ್ರಹಣ, ೩. ವಿಶ್ಲೇಷಣಕ್ರಿಯೆ–ವ್ಯಾಖ್ಯಾನಕ್ರಿಯೆ, ೪. ಸಂಭಾವ್ಯ ಸಂಶೋಧನೆ–ಸತ್ಯಸಂಶೋಧನೆ ಎಂದು ವರ್ಗೀಕರಿಸಬಹುದು.

ಮೂಲ ಊಹನ:

ಕವಿಯಂತೆ ಸಂಶೋಧಕನೂ ಶ್ರುತಿಮಾಡಿ ಇಟ್ಟ ವೀಣೆ. ಕವಿಯದು 'ಪ್ರತ್ಯುತ್ಪನ್ನಮತಿ'ಯಾದರೆ, ಇವನದು 'ಪ್ರಶ್ನೋತ್ಪನ್ನಮತಿ.' ಇವನ ಕಣ್ಣು, ಕಿವಿ, ಮನಸ್ಸು, ಪ್ರಜ್ಞೆ ಸದಾ ಜಾಗ್ರತವಾಗಿರುತ್ತವೆ. ಹೀಗಾಗಿ ಓದುವಾಗ, ಕೇಳುವಾಗ, ನೋಡುವಾಗ ಅಥವಾ ಆಲೋಚಿಸುವಾಗ ಅವನಿಗಿರುವ ವ್ಯುತ್ಪತ್ತಿಯ ಹಿನ್ನೆಲೆಯಲ್ಲಿ ಯಾವುದೋ ಒಂದು ಅಸ್ಪಷ್ಟ ವಿಷಯ ಅವನ ಮನಸ್ಸಿಗೆ ಪಕ್ಕನೆ ಹೊಳೆಯುತ್ತದೆ. ಇದು ಮೂಲ ಊಹನ. ಸಂಶೋಧನೆಯಲ್ಲಿ ಈ ಹೊಳೆಯುವಿಕೆ ಮೂಲ ಸೆಲೆಯಾಗಿರುವಂತೆ, ಮುಖ್ಯ ನೆಲೆಯೂ ಆಗಿದೆ. ಹೀಗೆ ಹೊಳೆಯಬೇಕಾದರೆ ಅದಕ್ಕೆ ಸಂಬಂಧಪಟ್ಟ ಮಾನಸಿಕ ಹದ ಅವಶ್ಯವಿರುತ್ತದೆ. ಉದಾ: ಉತ್ತರ ಕರ್ನಾಟಕದಲ್ಲಿ 'ವಾರದ' ಹೆಸರಿನ ವೀರಶೈವ ವ್ಯಾಪಾರಿವರ್ಗವಿದೆ. ಬೇರೆ ಬೇರೆ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಇರುವ ಕಾರಣ ಈ

* ಇದನ್ನು 'ಮೂಲಗ್ರಹಿಕೆ' 'ಅನುಮಾನಿತ ಸತ್ಯ' ಎಂದೂ ಕರೆಯಬಹುದು.

ಕುಟುಂಬವರ್ಗಕ್ಕೆ ಪ್ರಾಚೀನ ಪರಂಪರೆ ಇರಲೇಬೇಕು. ಏಳು ದಿನಗಳ ವಾರಕ್ಕೂ, ಈ ಹೆಸರಿಗೂ ಸಂಬಂಧವಿರಲಿಕ್ಕಿಲ್ಲ. ವ್ಯಾಪಾರವೇ ಇದರ ಮುಖ್ಯ ಲಕ್ಷಣವಾಗಿರುವುದರಿಂದ ಪ್ರಾಚೀನ ವಾಣಿಜ್ಯದ ಆವರಣದಲ್ಲಿಯೇ ಇದರ ನಿಷ್ಪತ್ತಿ ಹುಡುಕಬೇಕಾಗುತ್ತದೆ ಎಂಬ 'ಅಸ್ಪಷ್ಟ' ವಿಚಾರ ನನ್ನನ್ನು ಕಾಡುತ್ತಲಿದ್ದಿತು. ಒಂದು ದಿನ ಬಂಗಾರದ ವ್ಯಾಪಾರಿ ಅರ್ಥದ 'ಚಿನಿವಾಲದ' ಅಡ್ಡಹೆಸರಿನಲ್ಲಿಯ 'ವಾಲದ'ದ ಪದಕ್ಕೂ ನನ್ನ ಮನಸ್ಸಿನಲ್ಲಿ ಕೇಳುತ್ತಿದ್ದ 'ವಾರದ' ಪದಕ್ಕೂ ಸಂಬಂಧವಿರಬಹುದೆಂಬ ಅಂಶ ಪಕ್ಕನೇ ಹೊಳೆಯಿತು. ಹೀಗೆ ಹೊಳೆಯುವುದು. ಸಂಶೋಧನೆಯಲ್ಲಿ 'ಮೂಲ ಊಹನ' ವೆನಿಸಿಕೊಳ್ಳುತ್ತದೆ. ಈ ಚಿನಿವಾಲದ ಎಂಬ ಹೆಸರು 'ಚಿನಿವಾರದ' ರೂಪದಿಂದಲೂ ಸಿಗುವುದೆಂದು ತಿಳಿದು ಬರುವಲ್ಲಿ, ಈ ವಿಷಯದ ಅಸ್ಪಷ್ಟತೆಗೆ ಒಂದಿಷ್ಟು ಸ್ಪಷ್ಟತೆ ಪ್ರಾಪ್ತವಾಯಿತು. ಚಿನಿವಾರದ ಎಂಬಲ್ಲಿ ಚಿನ್ನ + ಪರದ (=ವ್ಯಾಪಾರಿ) ಎಂಬ ಎರಡು ಪದಗಳಿದ್ದು, ಇದು ಬಂಗಾರದ ವ್ಯಾಪಾರ ವೃತ್ತಿಯನ್ನು ಸೂಚಿಸುತ್ತದೆ. ಹೀಗೆ ಚಿನ್ನಪರದ ವೃತ್ತಿಯನ್ನೋ, ಇನ್ನಾವುದೋ ಪರದ ವೃತ್ತಿಯನ್ನೋ ಮಾಡುತ್ತಿದ್ದುದನ್ನು ಸೂಚಿಸುವ ಅಡ್ಡಹೆಸರಿನ ಪೂರ್ವಪದ ಕಳೆದುಹೋಗಿ 'ವಾರದ' ಎಂಬುದು ಮಾತ್ರ ಉಳಿದಂತಿದೆ.

ವಾರದ, ಚಿನಿವಾಲದ ನನಗೆ ಮೊದಲಿನಿಂದಲೂ ಗೊತ್ತಿದ್ದ ಅಡ್ಡಹೆಸರುಗಳು. ಆದರೆ ಇವೆರಡಕ್ಕೂ ನನ್ನ ಮನಸ್ಸು ಸಂಬಂಧ ಕಲ್ಪಿಸಿದ 'ಮೂಲ ಊಹನ' ಈ ಸಂಶೋಧನೆಯ ಬೀಜಾರೋಪಣ ಮುಹೂರ್ತವೆಂದೇ ಹೇಳಬೇಕು. ಆಮೇಲೆ ಪಸಾರದ (ಪಸು+ಪರದ) ಇತ್ಯಾದಿ ಅಡ್ಡಹೆಸರುಗಳ ಅರ್ಥವೂ ಸ್ಪಷ್ಟವಾಗಿ, ಬಹುದಿನಗಳಿಂದ ನನ್ನನ್ನು ಬಾಧಿಸುತ್ತಲಿದ್ದ 'ವಾರದ' ಸಮಸ್ಯೆ ಬಗೆಹರಿಯಿತು.[೧] ಹೀಗೆ ಸ್ವಯಂಸ್ಫುರಣೆಯಿಂದಲ್ಲದೆ ಇನ್ನೊಬ್ಬರ ಸಂಶೋಧನೆಯಿಂದಲೂ 'ಮೂಲ ಊಹನ' ಮೂಡಿ ನಿಲ್ಲಬಹುದು. ಉದಾ: "ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ, ಬಾಳುವೆಣನ, ಬೀಳುವೆಣನ, ಸಂಸಾರವೇನವನ" ಎಂಬ ವಚನವಾಕ್ಯದ 'ದೃಷ್ಟಿಯಾರೆ ನೋಡದವನ' ಎಂಬುದಕ್ಕೆ ಎಲ್ಲರಂತೆ ನಾನೂ 'ಕಣ್ತುಂಬ ನೋಡದವನ' ಎಂಬ ಸರಳ ಅರ್ಥ ಗ್ರಹಿಸಿದ್ದೆನು. ಇತ್ತೀಚೆಗೆ ಡಾ. ಚಿದಾನಂದಮೂರ್ತಿಯವರು ಬರೆದ 'ದಿಟ್ಟವಾರಿ–ಒಂದು ವಿಶಿಷ್ಟ ವರ್ಗದ ಶೂರರು ಶಬ್ದದ ಅರ್ಥ ಮತ್ತು ನಿಷ್ಪತ್ತಿ'[೨] ಎಂಬ ಲೇಖನ ಓದುತ್ತಲೇ ಮೇಲಿನ ವಚನದ 'ದೃಷ್ಟಿಯಾರೆ' ಎಂಬುದರ ನಿಜಪಾಠ 'ದೃಷ್ಟಿವಾರಿ'[೩] ಇರಬಹುದೆ? ಎಂಬ 'ಮೂಲ ಊಹನ' ನನ್ನಲ್ಲಿ ಮೂಡಿತು. ಹುಡುಕಿ ನೋಡಲಾಗಿ 'ದೃಷ್ಟಿವಾರಿ' ಎಂಬ ಪಾಠಾಂತರವೂ ಸಿಕ್ಕಿತು. ಇದು ಇಲ್ಲಿ ಸಮಂಜಸ ಅರ್ಥವೂ ಎನಿಸಿತು. ದೃಷ್ಟಿವಾರಿ ಎಂದರೆ ದೇವಾಲಯದಲ್ಲಿ ಶಿವಲಿಂಗವನ್ನು ರೆಪ್ಪೆ ಮಿಳುಕಿಸದೆ ನೋಡುವ ಭಕ್ತ ಎಂದು ಅರ್ಥ. ಇದು ಪ್ರಾಚೀನ ಕಾಲದಲ್ಲಿ ಒಂದು ಶೈವವ್ರತವಾಗಿದ್ದಿತು.

---

೧. ವೀರಶೈವ ವರ್ತಕವರ್ಗದ ಅಡ್ಡಹೆಸರುಗಳು – ಎಂ. ಎಂ. ಕಲಬುರ್ಗಿ (ಮಾರ್ಗ–II ಪು.೫೪೪)

೨. ದಿಟ್ಟವಾರಿ–ಒಂದು ವಿಶಿಷ್ಟವರ್ಗದ ಶೂರರು : ಶಬ್ದದ ಅರ್ಥ ಮತ್ತು ನಿಷ್ಪತ್ತಿ – ಎಂ. ಚಿದಾನಂದ ಮೂರ್ತಿ ಸಾಧನೆ, (೧೦–೧).

೩. ದೃಷ್ಟಿಯಾರೆ, ದೃಷ್ಟಿವಾರಿ–ಎಂ. ಎಂ. ಕಲಬುರ್ಗಿ (ಮಾರ್ಗ–I ಪು.೨೬೧).

ಹೀಗೆ ಸಂಶೋಧನೆಯ ಪ್ರಥಮ ಹಂತದಲ್ಲಿ ಒಂದು ಅಸ್ಪಷ್ಟ 'ಮೂಲ ಊಹನ' ಮೂಡುತ್ತದೆ. ಆಮೇಲೆ ಅದನ್ನು 'ಸಂಭಾವ್ಯತೆ'ಯ ಹಂತಕ್ಕೆ, ಕೊನೆಗೆ 'ಸತ್ಯ'ದ ಹಂತಕ್ಕೆ ತರಲು ಹೆಣಗಬೇಕಾಗುತ್ತದೆ. ಈ ರೀತಿ ಪ್ರಾಥಮಿಕ ಹಂತದಲ್ಲಿ ಹೊಳೆಯುವ ಅಸ್ಪಷ್ಟ ವಿಷಯವನ್ನು ಇಂಗ್ಲೀಷಿನಲ್ಲಿ Hypothesis ಎಂದು ಕರೆಯುತ್ತಾರೆ. Hypo ಅಂದರೆ ಕಡಿಮೆಯ, ಕೆಳಸ್ತರದ, thesis ಅಂದರೆ ಪ್ರಮೇಯ, ಸಿದ್ಧಾಂತ. ಇದಕ್ಕೆ ಸಮಾನವಾಗಿ ಕನ್ನಡದಲ್ಲಿ 'ಪ್ರಾಕ್ ಕಲ್ಪನೆ', 'ಪೂರ್ವಕಲ್ಪನೆ' ಪದಗಳನ್ನು ಬಳಸುತ್ತಲಿದ್ದರೂ, 'ಮೂಲ ಊಹನ' ಎಂಬುದನ್ನು ಇಟ್ಟುಕೊಳ್ಳುವುದು ಸೂಕ್ತವೆನಿಸುತ್ತದೆ.

ಎಲ್ಲ ಸಂಶೋಧನೆಗಳು 'ಮೂಲ ಊಹನ'ದಿಂದಲೇ ಪ್ರಾರಂಭವಾಗಬೇಕೆಂಬ ಕಡ್ಡಾಯವೇನೂ ಇಲ್ಲ. ಒಮ್ಮೊಮ್ಮೆ ಒಂದು ಶೋಧ ಆಕಸ್ಮಿಕವಾಗಿ ಪ್ರಕಟಗೊಳ್ಳಬಹುದಾಗಿದೆ. ರಾಯಚೂರು ಜಿಲ್ಲೆಯ ದೇವರಗುಡಿ ಗ್ರಾಮದಲ್ಲಿರುವ ಉಳಿಯುಮೇಶ್ವರ (ಹುಳಿಯಮೇಶ್ವರ) ಚಿಕ್ಕಯ್ಯನ ಶಾಸನ ನನ್ನಿಂದ ಬೆಳಕಿಗೆ ಬರುವಲ್ಲಿ ಮೂಲ ಊಹೆಯ ಅಂಶ ಸ್ವಲ್ಪೂ ಇಲ್ಲ. ಒಂದು ಆಕಸ್ಮಿವೆಂಬಂತೆ ಪ್ರಕಟಗೊಂಡಿತು.[೪]

ಈ 'ಮೂಲ ಊಹನ'ವೆನ್ನುವುದು ಸಾಮಾನ್ಯವಾಗಿ ಒಂದು ಅಸ್ಪಷ್ಟ ಸಂಶೋಧನೆಯಾಗಿರುತ್ತದೆ. ಇದು ತಕ್ಷಣ ಸಂಶೋಧನ ಮುಂದುವರಿಸಲು ಪ್ರಚೋದನೆ ನೀಡಬಹುದು. ಇಲ್ಲವೆ ಸಂಶೋಧಕನ ತಲೆಯನ್ನು ಪ್ರವೇಶಿಸಿ ತೇಲುತ್ತಲೇ ಇರಬಹುದು. ಇದನ್ನು ಅವಲಂಬಿಸಿ ಮಾಡಬೇಕಾದ ಸಂಶೋಧನೆಗೆ ಮೊದಲು ಕೈಕೊಳ್ಳಬೇಕಾದುದು 'ಆಕರ ಸಾಮಗ್ರಿ' ಸಂಗ್ರಹವನ್ನು.

ಆಕರ–ಆಕರಸಾಮಗ್ರಿ–ದತ್ತ ಸಾಮಗ್ರಿ ಸಂಗ್ರಹಣ :

ಹೊಳೆದ Hypothesis (ಮೂಲ ಊಹೆ)ನ್ನು Thesis ಮಾಡುವಲ್ಲಿ ಸಂಶೋಧಕ ಈ ಹಿಂದೆ ಹೇಳಿದ ವಸ್ತು, ಭಾಷೆ, ಕ್ರಿಯೆ ಮತ್ತು ಜ್ಞಾನಕ್ಷೇತ್ರಗಳನ್ನು ಮೊರೆಹೋಗಬೇಕಾಗುತ್ತದೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಗ್ರಂಥ ಮೊದಲಾದವುಗಳಿಗೆ 'ಆಕರ' (Source) ಎನ್ನುತ್ತಾರೆ. ಈ ಆಕರಗಳಿಂದ ತನ್ನ ವಿಷಯಕ್ಕೆ ಬೇಕಾದ ಒಂದು ನಿರ್ದಿಷ್ಟ ಸಾಮಗ್ರಿಯನ್ನು ಪ್ರಾಮಾಣಿಕವೋ, ಅಪ್ರಾಮಾಣಿಕವೋ ಸಂಶೋಧಕ ಸಂಗ್ರಹಿಸುತ್ತಾನೆ. ಈ ನಿರ್ದಿಷ್ಟ ಸರಕನ್ನು 'ಆಕರಸಾಮಗ್ರಿ' (Source material) ಎನ್ನುತ್ತಾರೆ. ಸಂಶೋಧಕ ಈ ಆಕರಸಾಮಗ್ರಿ ಸಂಗ್ರಹಕ್ಕಾಗಿ ತನಗೆ ಗೊತ್ತಿರುವ ಆಕರವನ್ನು ಇಲ್ಲವೆ ಆಕರಗಳನ್ನು ಮೊದಲು ಶೋಧಿಸುತ್ತಾನೆ. ಕೆಲವೊಮ್ಮೆ ತಾನು ಶೋಧಿಸಿದ ಒಂದು ಆಕರದಿಂದ ಸೂಚಿತವಾಗುವ ಇನ್ನೊಂದು ಆಕರಕ್ಕೆ, ಅಲ್ಲಿಂದ ಮತ್ತೊಂದು ಆಕರಕ್ಕೆ ಸಾಮಗ್ರಿ ಸಂಗ್ರಹಕ್ಕಾಗಿ ಸಾಗುತ್ತಲೇ ಇರುತ್ತಾನೆ. ಈ ಸಾಮಗ್ರಿ ರಾಜಕೀಯ, ಧಾರ್ಮಿಕ, ಸಾಮಾಜಿಕ – ಹೀಗೆ 'ಬಹುಕ್ಷೇತ್ರೀಯ'ವಾಗಿರಬಹುದು. ಇಲ್ಲವೆ ಅನೇಕ ಸ್ಥಳಗಳಿಂದ ಆಯ್ದುಕೊಳ್ಳುವ ಮೂಲಕ 'ಬಹುಕೇಂದ್ರೀಯ'ವಾಗಿರಬಹುದು. ಇದನ್ನು ಪಟ್ಟಿಕೆಯ ಮೇಲೆ ನಮೂದಿಸಿಕೊಳ್ಳಬಹುದು. ಇಲ್ಲವೆ ತನಗೆ ಅನುಕೂಲವೆನಿಸುವ ರೀತಿಯಲ್ಲಿ ಟಿಪ್ಪಣಿಸಿಕೊಳ್ಳಬಹುದು. ಈ ರೀತಿ ಸಂಗ್ರಹಿಸಿದ ಆಕರಸಾಮಗ್ರಿಯನ್ನು ಪರೀಕ್ಷೆಗೆ ಗುರಿಪಡಿಸಿ, ಸಂಶೋಧಕನು ಅಪ್ರಾಮಾಣಿಕತವಾದುದನ್ನು ಬಿಟ್ಟು, ಪ್ರಾಮಾಣಿಕವಾದುದನ್ನು ಸ್ವೀಕರಿಸಬೇಕು. ಹೀಗೆ ಒಟ್ಟು ಆಕರಸಾಮಗ್ರಿ (Source material)ಯಿಂದ

---

೪. ಉಳಿಯು(=ಹುಳಿಯು)ಮೇಶ್ವರ ಚಿಕ್ಕಯ್ಯನ ಶಾಸನ–ಎಂ. ಎಂ. ಕಲಬುರ್ಗಿ (ಮಾರ್ಗ–II, ಪು.೧೫೦)

ತನಗೆ ಪ್ರಾಮಾಣಿಕವೆನಿಸಿದ್ದನ್ನು, ಅವಶ್ಯವೆನಿಸಿದ್ದನ್ನು ಆಯ್ದುಕೊಳ್ಳುತ್ತಾನೆ. ಇದನ್ನು 'ದತ್ತ-ಸಾಮಗ್ರಿ' (Data) ಎಂದು ಕರೆಯಬಹುದು.

ಸಾಮಾನ್ಯವಾಗಿ ಆಕರಸಾಮಗ್ರಿ (Source material)ಯನ್ನು ಸಹಾಯ ಸಂಶೋಧಕರು ಸಂಗ್ರಹಿಸಿದರೆ, ಇದನ್ನು ತೀವ್ರ ಪರೀಕ್ಷೆಗೆ ಗುರುಪಡಿಸಿ ದತ್ತಸಾಮಗ್ರಿ (Data)ಯಾಗಿಸುವವನು ಸಂಶೋಧಕ. ಕೆಲವೊಮ್ಮೆ ಸಹಾಯಕ ಸಂಶೋಧಕ ದಾಖಲಿಸಿಕೊಂಡುಬಂದ ವಿವರವನ್ನೂ ನಾವು ಸಂಶೋಧನೆಯೆಂದೇ ಕರೆಯುವ ತಪ್ಪು ಮಾಡುತ್ತಲಿದ್ದೇವೆ. ಉದಾ: ಬಹುಜನ ವಿದ್ವಾಂಸರಿಗೆ ಗೊತ್ತಿರದ ಒಂದು ಪ್ರಚಲಿತ ಹಬ್ಬದ ಆಚರಣೆಯನ್ನು ಅವನು ವಿವರವಾಗಿ ಬರೆದುಕೊಂಡು ಬಂದರೆ ಅದು ಸಂಶೋಧನೆಯೆನಿಸುವುದಿಲ್ಲ. ಏಕೆಂದರೆ ಇದರ ಹಿಂದೆ ಸಂಶೋಧನೆಯ ಪ್ರಕ್ರಿಯೆ ನಡೆದಿರುವುದಿಲ್ಲ. ಬಹಳೆಂದರೆ ಇದನ್ನು ಆಕರಸಾಮಗ್ರಿನಿಷ್ಠ ಶೋಧನ (Source material oriented Research) ಎಂದು ಕರೆಯಬಹುದು. ಇಂದು ಜನಪದದ ಹೆಸರಿನಲ್ಲಿ ನಡೆಯುವ ಜನಾಂಗಿಕ ಸಂಶೋಧನೆಗಳೆಲ್ಲ ಈ ಬಗೆಯ 'ಆಕರಸಾಮಗ್ರಿನಿಷ್ಠ ಶೋಧನ'ವೇ ಆಗಿವೆ. ಇಂಥ ಬರವಣಿಗೆಗಳು ವಿಶ್ಲೇಷಣಾತ್ಮಕ ಇಲ್ಲವೆ ವ್ಯಾಖ್ಯಾನಾತ್ಮಕವಾದರೆ ಮಾತ್ರ ಅವುಗಳನ್ನು ಸಂಶೋಧನೆಯ ಕಕ್ಷೆಯಲ್ಲಿ ಪರಿಗಣಿಸಬಹುದಾಗಿದೆ. 'ಕರ್ನಾಟಕದ ಜನಪದಕಲೆಗಳು' ಪುಸ್ತಕದಲ್ಲಿ ಬರುವ 'ಜೋಕುಮಾರ ಲೇಖನ'[೫] 'ಆಕರಸಾಮಗ್ರಿನಿಷ್ಠ ಶೋಧನ'ವೆನಿಸಿದರೆ, ಜೋಕುಮಾರನನ್ನು ಕುರಿತ ಡಾ. ಚಿದಾನಂದಮೂರ್ತಿ ಅವರ ಲೇಖನ[೬] ನಿಜವಾದ (ವಿಶ್ಲೇಷಣಾತ್ಮಕ) ಸಂಶೋಧನವೆನಿಸುತ್ತದೆ.

ವಿಶ್ಲೇಷಣಕ್ರಿಯೆ-ವ್ಯಾಖ್ಯಾನಕ್ರಿಯೆ:

ದತ್ತ ಸಾಮಗ್ರಿಯನ್ನು ಕಣ್ಣಮುಂದಿಟ್ಟುಕೊಂಡು ಸಂಶೋಧಕ, ತನ್ನ ಸಂಶೋಧನ ಕಾರ್ಯವನ್ನು ಮುನ್ನಡೆಸುತ್ತಾನೆ. ಈ ಸಂದರ್ಭದಲ್ಲಿ ವಸ್ತು, ಭಾಷೆ, ಕ್ರಿಯೆ ಮತ್ತು ಜ್ಞಾನಗಳೆಂಬ ನಾಲ್ಕು ಬಗೆಯ ಕ್ಷೇತ್ರಗಳು ವಿಷಯವಾಗಬಹುದು. ಇಲ್ಲಿ ಸಂಶೋಧನೆಯನ್ನು ರೂಪನಿಷ್ಠವಾಗಿ ಇಲ್ಲವೆ ಗುಣನಿಷ್ಠವಾಗಿ ಮುನ್ನಡೆಸಬಹುದು. ಈ ಗುಣನಿಷ್ಠ ಸಂಶೋಧನವೆಂಬುದು ಬಲಪಂಥೀಯವಾಗಿರಬಹುದು. ಇಲ್ಲವೆ ಎಡಪಂಥೀಯವಾಗಿರಬಹುದು. ಸಂಶೋಧನೆಯ ಸಂದರ್ಭದಲ್ಲಿ ಇಷ್ಟು ದಾರಿಗಳು ಅವನ ಕಣ್ಣಮುಂದೆ ತೆರೆದುಕೊಳ್ಳುತ್ತವೆ. ಇಲ್ಲಿ ರೂಪನಿಷ್ಠ ಸಂಶೋಧನೆಯೇ 'Fact Finding', ಗುಣನಿಷ್ಠ ಸಂಶೋಧನೆಯೇ 'Truth Finding'. ಇವುಗಳಲ್ಲಿ ಒಂದು, ವಿಶ್ಲೇಷಣಾತ್ಮಕ ಕ್ರಿಯೆಗಳನ್ನು ಅವಲಂಬಿಸಿ ಕಾರ್ಯಸತ್ಯ(Fact)ವನ್ನು ಬೆಳಕಿಗೆ ತಂದರೆ, ಇನ್ನೊಂದು ವ್ಯಾಖ್ಯಾನಾತ್ಮಕ ಕ್ರಿಯೆಯನ್ನು ಅವಲಂಬಿಸಿ ಆ ಕಾರ್ಯಸತ್ಯದ ಹಿಂದೆ ನಿಗೂಢವಾಗಿರುವ ಕಾರಣಸತ್ಯ(Truth)ವನ್ನು ಬೆಳಕಿಗೆ ತರುವುದಾಗಿದೆ.

ಕವಿ ರನ್ನನು ತನ್ನ ತಾಯಿ ಅಬ್ಬಲಬ್ಬೆ, ಮಗಳು ಅತ್ತಿಮಬ್ಬೆ ಎಂದು ಹೇಳುತ್ತ, ಹೆಂಡಂದಿರು ಶಾಂತಿ, ಜಕ್ಕಿ ಎಂದು ತಿಳಿಸುತ್ತಾನೆ. ಇಲ್ಲಿ ಹೆಂಡಂದಿರ ಹೆಸರನ್ನು ವಿರೂಪಗೊಳಿಸಿ ಹೇಳಿದ್ದಾನೆ. ಇಂದಿಗೂ ಹೆಂಡತಿಯ ಹೆಸರನ್ನು ವಿರೂಪಗೊಳಿಸಿ ಹೇಳುವ ಪದ್ಧತಿ ಉತ್ತರ ಕರ್ನಾಟಕದಲ್ಲಿ

---

೫. ಕರ್ನಾಟಕ ಜನಪದ ಕಲೆಗಳು – ಸಂ. : ಗೊ. ರು. ಚೆನ್ನಬಸಪ್ಪ (ಪು. ೧೫).
೬. ಜೋಕುಮಾರ-ಎಂ. ಚಿದಾನಂದಮೂರ್ತಿ (ಪ್ರ. ಕ. ೪೬-೪).

ರೂಢಿಯಲ್ಲಿರುವುದರಿಂದ ಇದು ರನ್ನನಷ್ಟು ಹಳೆಯ ಪದ್ಧತಿಯೆಂದು ತಿಳಿದುಬರುತ್ತದೆ. ಈ ಬಗೆಯ ಸಂಶೋಧನೆ ವಿಶ್ಲೇಷಣಾತ್ಮಕವೆನಿಸಿಕೊಳ್ಳುತ್ತದೆ. ಈ ಹಿಂದೆ ಪಂಪನ ಜೀವಿತಾವಧಿ ಮತ್ತು ಅವನ ಅಗ್ರಹಾರಗಳನ್ನು ಕುರಿತು ಮಾಡಿದ ಚರ್ಚೆ ವ್ಯಾಖ್ಯಾನಾತ್ಮಕ ಸಂಶೋಧನೆಯೆನಿಸುತ್ತದೆ. ಇನ್ನೂ ಮುಂದುವರಿದು ಹೇಳುವುದಾದರೆ ಬ್ರಾಹ್ಮಣರಾಗಿದ್ದ ಪಂಪನ ಪೂರ್ವಜರು ದೊಡ್ಡ ವಿದ್ವಾಂಸರೆಂದು ತಿಳಿದುಬರುತ್ತದೆ. ಈ ಕುಟುಂಬದಲ್ಲಿ ಪಂಪನೇ ಮೊದಲನೆಯ ಕವಿ. ಈತ ಕವಿಯಾಗಲು ಕಾರಣ ಅವನ ತಂದೆ ಬ್ರಾಹ್ಮಣ್ಯದಿಂದ ಜೈನಕ್ಕೆ ಮತಾಂತರಗೊಂಡುದು. ಅಂದರೆ ತಂದೆ ಭೀಮಪಯ್ಯ ಮತಾಂತರಗೊಂಡಿರದಿದ್ದರೆ ಪಂಪ ವಿದ್ವಾಂಸನಾಗುತ್ತಿದ್ದನೇ ಹೊರತು ಕವಿಯಾಗುತ್ತಿರಲಿಲ್ಲ. ಏಕೆಂದರೆ ಪ್ರಾಚೀನಕಾಲದಲ್ಲಿ ಬ್ರಾಹ್ಮಣರ ಅಗ್ರಹಾರ ಸಂಸ್ಕೃತಿಯು ವಿದ್ವಾಂಸರನ್ನು ಸೃಷ್ಟಿಸುತ್ತಿದ್ದಿತೇ ಹೊರತು ಕವಿಗಳನ್ನಲ್ಲ. ಉದಾ. ಪ್ರಾಚೀನ ಕರ್ನಾಟಕದ ನಾಗವರ್ಮ (ಛಂದೋಂಬುಧಿ), ಚಾವುಂಡರಾಯ (ಲೋಕೋಪಕಾರ), ಶ್ರೀಧರಾಚಾರ್ಯ (ಜಾತಕತಿಲಕ) ಮೊದಲಾದ ಬ್ರಾಹ್ಮಣ ಕವಿಗಳು ಶಾಸ್ತ್ರ ಬರೆದರೇ ಹೊರತು ಕಾವ್ಯ ಬರೆಯಲಿಲ್ಲ. ಈ ರೀತಿ ಶೋಧ ನಡೆಸುವುದು ವ್ಯಾಖ್ಯಾನವೆನಿಸುತ್ತದೆ.

ಇಲ್ಲಿ ವಿಶ್ಲೇಷಣಾತ್ಮಕವು ಸಂಶೋಧನೆಗೆ ಸೀಮಿತವಾದರೆ, ವ್ಯಾಖ್ಯಾನಾತ್ಮಕವು ವಿಮರ್ಶೆಯ ವಿಸ್ತಾರ ಪಡೆಯುತ್ತದೆ. ಅದಕ್ಕಾಗಿಯೇ ಕೆಲವೊಮ್ಮೆ ವ್ಯಾಖ್ಯಾನಾತ್ಮಕ ಲೇಖನವು ಸಂಶೋಧನೆಯೋ, ವಿಮರ್ಶೆಯೋ ಎಂಬ ಅನುಮಾನವನ್ನುಂಟುಮಾಡುತ್ತದೆ.

ಮೇಲಿನ ವಿವರಣೆಯಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಅದು: ಸಂಶೋಧನ ಸಂದರ್ಭದಲ್ಲಿ ಆಧಾರವಾಗಿ ಬರುವ ದತ್ತಸಾಮಗ್ರಿಯನ್ನು ವಿಶ್ಲೇಷಣಾತ್ಮಕವಾಗಿ ಬಳಸಬಹುದು. ಇಲ್ಲವೆ ವ್ಯಾಖ್ಯಾನಾತ್ಮಕವಾಗಿ ಬಳಸಬಹುದು. ಇಲ್ಲಿ ದತ್ತಸಾಮಗ್ರಿಯನ್ನು ಸಂವೇದನರಹಿತವಾಗಿ ಬಳಸಿದರೆ ವಿಶ್ಲೇಷಣೆಯೆನ್ನಿಸಿಕೊಳ್ಳುತ್ತದೆ. ಸಂವೇಧನಸಹಿತವಾಗಿ ಬಳಸಿದರೆ ವ್ಯಾಖ್ಯಾನವೆನಿಸಿಕೊಳ್ಳುತ್ತದೆ. ಇವುಗಳಿಂದ ಕ್ರಮವಾಗಿ 'ವಿಶ್ಲೇಷಣಮುಖಿ ಸಂಶೋಧನೆ' (Analysis Oriented Research)[೭] ಮತ್ತು 'ವ್ಯಾಖ್ಯಾನಮುಖಿ ಸಂಶೋಧನೆ' (Interpritation Oriented Research) ಪ್ರಕಟವಾಗುತ್ತದೆ. ಇಲ್ಲಿ ಕ್ರಮವಾಗಿ ಏನನ್ನು ಬಳಸಿದ್ದಾನೆ? ಮತ್ತು ಹೇಗೆ ಬಳಸಿದ್ದಾನೆ? ಎಂಬುದು ಮುಖ್ಯವಾಗುತ್ತದೆ. ಹೀಗಾಗಿ ವಿಶ್ಲೇಷಣನಿಷ್ಠತೆಯಿಂದ ನಿರ್ದಿಷ್ಟವಾದ ಒಂದು ಫಲಿತಾಂಶ ಪ್ರಕಟವಾಗುತ್ತದೆ. ವ್ಯಾಖ್ಯಾನನಿಷ್ಠತೆಯಿಂದ ಒಂದಕ್ಕಿಂತ ಹೆಚ್ಚು ಫಲಿತಾಂಶಗಳು ಪ್ರಕಟವಾಗಬಹುದು. ಇವುಗಳಲ್ಲಿ ವಿಶ್ಲೇಷಣನಿಷ್ಠವಾದುದು ವಾಚ್ಯಾರ್ಥದ ಕವಿತೆಯನ್ನು, ವ್ಯಾಖ್ಯಾನನಿಷ್ಠವಾದುದು ಧ್ವನ್ಯರ್ಥದ ಕವಿತೆಯನ್ನು ಹೋಲುತ್ತದೆ. ಈ ಸಂಶೋಧಕರನ್ನು ಕ್ರಮವಾಗಿ ಪೊಸಿಟಿವಿಸ್ಟ್ (Positivists) ಮತ್ತು ಐಡಿಯಾಲಿಸ್ಟ್ (Idealists) ಎಂದು ಕರೆಯಲಾಗುತ್ತದೆ. ಪೊಸಿಟಿವಿಸ್ಟರು ಆಕರಸಾಮಗ್ರಿ ಇಟ್ಟುಕೊಂಡು ಅದರಿಂದ ಹೊರಡುವ ಚರಿತ್ರೆಯನ್ನು ಮಾತ್ರ ಕೊಡಬೇಕೆನ್ನುತ್ತಾರೆ. ಐಡಿಯಾಲಿಸ್ಟರು ಆ ಚರಿತ್ರೆಯನ್ನು ವ್ಯಾಖ್ಯಾನಿಸಿ ಅದನ್ನು ಚಲನಶೀಲಗೊಳಿಸಬೇಕೆನ್ನುತ್ತಾರೆ. ಆದರೆ ಹಾಗೆ ವ್ಯಾಖ್ಯಾನಿಸುವಲ್ಲಿ ವ್ಯಾಖ್ಯಾನಿಸುವವರ

೭. Analysis Oriented Research ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಮೂಲಗಳಿಂದ ತಂದ ದತ್ತವನ್ನು ತರ್ಕಬದ್ಧವಾಗಿ ಸಂಯೋಜಿಸಿ, ಫಲಿತಾಂಶವನ್ನು ಕಂಡುಹಿಡಿಯುವುದರಿಂದ ಈ ವಿಧಾನವನ್ನು Assimilation Oriented Research ಎಂಬ ಪರ್ಯಾಯನಾಮದಿಂದಲೂ ಕರೆಯುತ್ತಾರೆ.

ವಿಚಾರ ಧೋರಣೆಗಳು ಸೇರಿಕೊಂಡು ಅಪವ್ಯಾಖ್ಯಾನವಾಗುವ ಭಯವಿದೆಯೆನ್ನುತ್ತಾರೆ ಪೊಸಿಟಿವಿಸ್ಟರು[೮] ಇಲ್ಲಿ ಒಂದು ಮಾತನ್ನು ಗಮನಿಸಬೇಕು: "ವಿಶ್ಲೇಷಣೆ ಬೇರೆ, ವ್ಯಾಖ್ಯಾನ ಬೇರೆ. ಮೊದಲನೆಯದು ವಸ್ತುನಿಷ್ಠವಾಗಿದ್ದು, ಎರಡನೆಯದು ಹೆಚ್ಚಿನದಾಗಿ ವ್ಯಕ್ತಿನಿಷ್ಠತೆಯನ್ನೊಳಗೊಳ್ಳುತ್ತದೆ. ಆದರೆ ಎಷ್ಟು ಕಡಿಮೆ ಪ್ರಮಾಣದಲ್ಲಿ ಇತಿಹಾಸದ ಮೇಲೆ ನಮ್ಮ ಅಭಿಪ್ರಾಯಗಳನ್ನು ಹೇರುತ್ತೇವೆ, ಅಷ್ಟರಮಟ್ಟಿಗೆ ಇತಿಹಾಸ ನೈಜವಾದುದಾಗಿರುತ್ತದೆ."[೯] ಹೀಗಿದ್ದೂ ಅನೇಕ ವೇಳೆ ಇತಿಹಾಸದ ಮೌನದಿಂದ ಮಾತು ಹೊರಡಿಸಬೇಕಾಗುತ್ತದೆ. ಆಗ ವ್ಯಾಖ್ಯಾನ ಅವಶ್ಯವೆನಿಸುತ್ತದೆ. ಇದರ ದಾರಿ ತರ್ಕಬದ್ಧ, ಗುರಿ ಸತ್ಯಶುದ್ಧವಾಗಿರಬೇಕಾಗುತ್ತದೆ.

ಸಂಭಾವ್ಯ ಸಂಶೋಧನೆ-ಸತ್ಯಶೋಧನೆ :

ಅನ್ವೇಷಣಾತ್ಮಕ ಸಂಶೋಧನೆಯೆನ್ನುವುದು ಕಳೆದುಹೋದ ವಸ್ತು, ಭಾಷೆ, ಕ್ರಿಯೆ, ಜ್ಞಾನಗಳನ್ನು ದತ್ತಸಾಮಗ್ರಿಗಳ ಸಹಾಯದಿಂದ ಕಟ್ಟಿಕೊಡುವುದಾಗಿದೆ. ತತ್ವಶಾಸ್ತ್ರ (Philosophy) ದಲ್ಲಿ ಒಂದು ಸಿದ್ಧಾಂತವನ್ನು ಸ್ಥಾಪಿಸಲು ಬಳಸುವ ಪ್ರತ್ಯಕ್ಷ ಪ್ರಮಾಣ, ಶಬ್ದ(=ಭಾಷೆ) ಪ್ರಮಾಣ, ಅನುಮಾನ ಪ್ರಮಾಣ(=ಆಧಾರ)ಗಳೆಂಬ ದತ್ತಸಾಮಗ್ರಿಯನ್ನೇ ಸಂಶೋಧಕ ಇಲ್ಲಿ ಬಳಸಬೇಕಾಗುತ್ತದೆ. ದತ್ತಾಂಶವು ಪ್ರತ್ಯಕ್ಷ ಇಲ್ಲವೆ ಶಬ್ದಪ್ರಮಾಣದ್ದಾಗಿದ್ದರೆ ಅವುಗಳ ತಾರ್ಕಿಕ ಸಂಯೋಜನೆಯಿಂದ ಸತ್ಯವನ್ನು ಸುಲಭವಾಗಿ ಸ್ಥಾಪಿಸಬಹುದು. ಇದು ಸತ್ಯಸಂಶೋಧನೆ.

ಕೆಲವೊಮ್ಮೆ ಪ್ರತ್ಯಕ್ಷಪ್ರಮಾಣ ಇಲ್ಲವೆ ಶಬ್ದಪ್ರಮಾಣಗಳ ಅಭಾವ ಸಂದರ್ಭದಲ್ಲಿ 'ಅನುಮಾನ'ವನ್ನು ಪ್ರಮಾಣವಾಗಿ ಹಿಡಿಯಬೇಕಾಗುತ್ತದೆ. ಹೊಗೆಯನ್ನು ನೋಡಿ ಅಲ್ಲಿ ಬೆಂಕಿ ಇರಬಹುದೆಂಬ ನಿರ್ಣಯಕ್ಕೆ ಬರುವ ರೀತಿಯಿದು. ಸಂಶೋಧನೆಯಲ್ಲಿ ಈ ಅನುಮಾನವನ್ನೂ ದತ್ತಾಂಶದಂತೆ ಬಳಸಿ, ತರ್ಕದ ದಾರಿಯಲ್ಲಿ ಬೆಳೆಸಿ, 'ಸಂಭಾವ್ಯತೆ'ಯನ್ನು ಸ್ಥಾಪಿಸುವುದು ಈಗ ನಡೆಯುವ ಕ್ರಿಯೆಯಾಗಿರುತ್ತದೆ. ಹೀಗಾಗಿ 'ಅನುಮಾನ'ವೆನ್ನುವುದು ಪ್ರಮಾಣ, 'ಸಂಭಾವ್ಯತೆ' ಎನ್ನುವುದು ಫಲಿತಾಂಶವಾಗಿದೆ. ಅಂದರೆ 'ಅನುಮಾನ'ವೆನ್ನುವುದು 'ಸಂಭಾವ್ಯತೆ'ಯ ಹಿಂದೆ ಪಾತ್ರವಾಡುವ ದತ್ತಾಂಶರೂಪದ ಕ್ರಿಯೆಯಾಗಿದೆ. ಇದನ್ನೇ ಹೀಗೆ ಹೇಳಬಹುದು:

ಸಂಶೋಧಕನಿಗೆ ಒಂದಿಷ್ಟು ದತ್ತಾಂಶ ಕೊರತೆಯೆನಿಸಿದ ಪಕ್ಷದಲ್ಲಿ ಒಟ್ಟು ದತ್ತಾಂಶಕ್ಕೆ ಅನುಗುಣವಾಗಿ ಆ ಕೊರತೆಯ ಸ್ವರೂಪವನ್ನು ಆತ ಪರಿಭಾವಿಸಿಕೊಳ್ಳುತ್ತಾನೆ. ದತ್ತಾಂಶದ ಪೂರ್ತಿಗಾಗಿ ಪರಿಭಾವಿಸಿಕೊಳ್ಳುವ ಈ ಅಜ್ಞಾತ ಸಾಮಗ್ರಿಯೇ ಅನುಮಾನ. ಇದು ಮೂಲೆ ಮುರಿದುಹೋಗಿದ್ದ ಶಿಲ್ಪದ ಭಾಗವನ್ನು ಒಟ್ಟು ಶಿಲ್ಪದ ವಿನ್ಯಾಸ, ಶೈಲಿಯ ತಿಳುವಳಿಕೆಯ ಹಿನ್ನೆಲೆಯಲ್ಲಿ ಪರಿಭಾವಿಸುವಂತಹ ಕ್ರಿಯೆಯಾಗಿದೆ. ಈ ಅನುಮಾನವೆನ್ನುವುದು ಊಹೆಯೇ ಆಗಿದ್ದು, ಸಂಶೋಧನೆಯಲ್ಲಿ ಊಹೆ ಸ್ಥೂಲವಾಗಿ ಮೂರು ಹಂತಗಳಲ್ಲಿ ಮುನ್ನಡೆಯುತ್ತದೆ. ಈ ಮೊದಲು ಹೇಳಿದ "ಮೂಲ ಊಹೆ" (Hypothesis) ಯೆನ್ನುವುದೂ 'ಊಹೆ'ಯೇ ಆಗಿದ್ದು, ಮೊದಲ ಹಂತವೆಂಬ ಕಾರಣಕ್ಕಾಗಿ ಅದನ್ನು 'ಮೂಲ ಊಹೆ'ಯೆಂದು ಕರೆಯಬಹುದು. ಆಮೇಲೆ ವಿಶ್ಲೇಷಣಕ್ರಿಯೆಯನ್ನೋ,

---

೮. ಮಧ್ಯಕಾಲೀನ ಭಕ್ತಿ ಮತ್ತು ಅನುಭವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ-ಬಸವರಾಜ ಕಲ್ಗುಡಿ (ಪು.೯)
೯. ನೆನಪುಗಳು ಸಾಯುವುದಿಲ್ಲ - ಸಂ. ಆರ್. ರಾಜಪ್ಪ ದಳವಾಯಿ (ಪು. ೧೦).

ವ್ಯಾಖ್ಯಾನಕ್ರಿಯೆಯನ್ನೋ ಕೈಗೆತ್ತಿಕೊಂಡಾಗ, ಅಗತ್ಯವೆನಿಸುವ ಆಕರರೂಪದ ಊಹೆಯನ್ನು 'ಅನುಮಾನ'ವೆಂದು ಕರೆಯಬಹುದು. ಪ್ರತ್ಯಕ್ಷ, ಇಲ್ಲವೆ ಶಬ್ದವೆಂಬ ಪ್ರಮಾಣ (ದತ್ತಾಂಶ)ದೊಂದಿಗೆ ಈ ಅನುಮಾನವನ್ನು ಬೆರಸಿದಾಗ ಪ್ರಕಟವಾಗುವುದು ಊಹೆಯೇ ಆಗಿದ್ದರೂ ಫಲಿತಾಂಶ ರೂಪದ್ದೆಂಬ ಕಾರಣಕ್ಕಾಗಿ ಅದನ್ನು 'ಸಂಭಾವ್ಯ'ವೆಂದು ಕರೆಯಬಹುದು. ಹೀಗೆ ಊಹೆಯೆನ್ನುವುದು ಮೂಲ ಊಹೆ, ಅನುಮಾನ ಮತ್ತು ಸಂಭಾವ್ಯ ಎಂಬ ಮೂರು ರೂಪಗಳಲ್ಲಿ ಮೂರು ಹಂತಗಳಲ್ಲಿ ಪಾತ್ರವಾಡುವ ಸಾಧ್ಯತೆಯಿದೆ. ಇದೆಲ್ಲವನ್ನೂ 'ಊಹನಸಿದ್ಧಾಂತ'ವೆಂದು ಕರೆಯಬಹುದು.

ಸಂಶೋಧನೆಯಲ್ಲಿ ಊಹನಸಿದ್ಧಾಂತ ಅನಿವಾರ್ಯವೆನಿಸುತ್ತದೆ. ಅದರಲ್ಲಿಯೂ ಆಕರಸಾಮಗ್ರಿಯ ಅಭಾವವುಳ್ಳ ಭಾರತದಂಥ ರಾಷ್ಟ್ರದಲ್ಲಿ ಇನ್ನೂ ಅನಿವಾರ್ಯ. ಇಂಥ ಊಹೆಯ ಬಲದಿಂದ ಪ್ರಕಟವಾಗುವ ಸಂಭಾವ್ಯತೆಯು ಇನ್ನೊಬ್ಬ ಸಂಶೋಧಕನು ಚಿಂತನ ನಡೆಸಲು ಆಸ್ಪದ ಮಾಡಿಕೊಡುತ್ತದೆ, ಸಂಶೋಧನೆಯನ್ನು ಮುಂದುವರಿಸಲು ಕಾರಣವಾಗುತ್ತದೆ. ಉದಾ:

> ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪು ಮೊ ।
> ನನ್ನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ ।
> ದ್ರನ ರಸಭಾವಮಗ್ಗಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ ।
> ಣನ ಮೃದುಬಂಧಮೀ ಕವಿಗಳಲ್ತೆ ಜಿನೇಂದ್ರಪುರಾಣಕರ್ತೃಗಳ್ ॥

ಅನಂತನಾಥಪುರಾಣದ[೧೦] ಈ ಪದ್ಯದಲ್ಲಿ ನಾಗವರ್ಮನು 'ಜಿನೇಂದ್ರಪುರಾಣ ಕರ್ತೃ'ವೆಂದು ಸೂಚಿತವಾಗಿದೆ. ಇದನ್ನು ಅವಲಂಬಿಸಿ, ಆರ್. ನರಸಿಂಹಾಚಾರ್ ಅವರು ಕನ್ನಡದಲ್ಲಿ ಯಾವನೋ ಒಬ್ಬ ನಾಗವರ್ಮನೆಂಬ ಕವಿ ಯಾವುದೋ ಒಂದು ಜೈನಪುರಾಣ ಕೃತಿ ಬರೆದಿರುವನೆಂದು ಕವಿ ಮತ್ತು ಕೃತಿ ವಿಷಯವಾಗಿ ಎರಡು ಸಂಭಾವ್ಯತೆಗಳನ್ನು ಮಂಡಿಸಿದರು.[೧೧] ಆಮೇಲೆ, ಎಚ್. ಶೇಷಯ್ಯಂಗಾರ್ ಅವರು ಆರಾ ಹಸ್ತಪ್ರತಿ ಭಾಂಡಾರದಲ್ಲಿರುವ ಅಚಣ್ಣನ ವರ್ಧಮಾನಪುರಾಣದ –

> ಪದಿನಾಲ್ಕು ಸಾಗರೋಪಮ ।
> ಮದು ಪರಮಾಯುಃ ಪ್ರಮಾಣಮನಿತೆ ಸಹಸ್ರಾ ।
> ಬ್ದದೊಳೊರ್ಮೆ ನೆನೆವನುಣಿಸಂ ।
> ಮುದದೊದವಿರೆ ಸುಯ್ದನಾರು ತಿಂಗಳ್ಗಮರಂ ॥

ಎಂಬ ಪದ್ಯದ ಮಗ್ಗುಲಿನಲ್ಲಿ "ನಾಗವರ್ಮಕೃತ ವರ್ಧ=" ಎಂದು ಬರೆದುದನ್ನು ಗಮನಿಸಿ. ಜನ್ನ ಸೂಚಿಸುವ ನಾಗವರ್ಮನ ಜಿನೇಂದ್ರಪುರಾಣವು 'ವರ್ಧಮಾನಪುರಾಣ'ವಾಗಿರಬಹುದೆಂಬ ಸಂಭಾವ್ಯತೆಯನ್ನು ಕೃತಿಗೆ ಸಂಬಂಧಿಸಿದಂತೆ ಮಂಡಿಸಿದರು. ಆಮೇಲೆ, ಎರಡನೆಯ ನಾಗವರ್ಮನು ತನ್ನ ಎಲ್ಲಾ ಶಾಸ್ತ್ರಕೃತಿಗಳ ಪ್ರಾರಂಭದಲ್ಲಿ ವರ್ಧಮಾನಜಿನನನ್ನು ಸ್ತುತಿಸಿರುವುದರಿಂದ ಈ ವರ್ಧಮಾನಪುರಾಣ ಬರೆದವನು ೨ನೆಯ ನಾಗವರ್ಮನಾಗಿರಬಹುದೆಂದು ಶ್ರೀ ಮರಿಯಪ್ಪಭಟ್ಟ,

---

೧೦. ಅನಂತನಾಥ ಪುರಾಣಂ – ಜನ್ನ (೧–೩೫).

೧೧. ಕರ್ನಾಟಕ ಕವಿಚರಿತೆ I–ಆರ್. ನರಸಿಂಹಾಚಾರ್ (ಪು. ೧೫೪). ೧೯೬೧.

ಶ್ರೀ ಗೋಪಿಂದರಾವ್ ಅವರು ತಾವು ಸಂಪಾದಿಸಿದ ಅಚಣ್ಣನ ಪುರಾಣದ ಮುನ್ನುಡಿಯಲ್ಲಿ (ಪುಟ VIII) ಹೇಳಿ, ಕರ್ತೃಪಿಗೆ ಸಂಬಂಧಪಟ್ಟಂತೆ ಒಂದು ಸಂಭಾವ್ಯತೆಯನ್ನು ಮುಂದುಮಾಡಿದರು. ಎರಡನೆಯ ನಾಗವರ್ಮನು "ಲಾಕ್ಷಣಿಕನಾಗಿದ್ದರೂ ಕವಿಕರ್ಣಪೂರ, ಕವಿತಾಗುಣೋದಯ, ಕವಿ ಕಂಠಾಭಾರಣ ಎಂಬ ಬಿರುದುಗಳು ಈತನ ಕವಿಮನಸ್ಸನ್ನು ಪ್ರತಿನಿಧಿಸುತ್ತವೆ"[೧೨] ಎಂದೂ, ಅನಂತನಾಥ ಪುರಾಣದ ಪದ್ಯದಲ್ಲಿ 'ನಾಗವರ್ಮನ ಬಹುಜ್ಞತೆ'ಯೆನ್ನುವುದು ವ್ಯಾಕರಣ, ಅಲಂಕಾರ, ನಿಘಂಟು, ಛಂದಸ್ಸು– ಎಂಬ ಬಹುಜ್ಞತೆಯುಳ್ಳ ಎರಡನೆಯ ನಾಗವರ್ಮನನ್ನೇ ಸೂಚಿಸಬಹುದಾದ ಕಾರಣ, ಇವನೇ ವರ್ಧಮಾನಪುರಾಣದ ಕರ್ತೃವಾಗಿರಬಹುದೆಂದೂ ಹೇಳಿ, ಕರ್ತೃಪಿಗೆ ಸಂಬಂಧಿಸಿದ ಸಂಭಾವ್ಯತೆಯನ್ನು ನಾನು ಇನ್ನೂ ಬಲಪಡಿಸಿದೆನು.[೧೩] ಆಮೇಲೆ ಶ್ರೀ ಬಿ. ಎಸ್. ಸಣ್ಣಯ್ಯ ಅವರು ಮೂಡಬಿದರೆ ಜೈನಸಿದ್ಧಾಂತ ಬಸದಿಯಲ್ಲಿ ನಾಗವರ್ಮನ ವರ್ಧಮಾನಪುರಾಣವನ್ನೇ ಶೋಧಿಸಿ (೧೯೭೬) ಸಂಭಾವ್ಯತೆಯನ್ನು ಸತ್ಯಗೊಳಿಸಿದರು. ಈ ಎಲ್ಲ ಘಟ್ಟಗಳಲ್ಲಿ ಪರಿಭಾವಿಸುತ್ತ ಬಂದುದು ಊಹೆಯಾಗಿದ್ದು, ಅದನ್ನು ಇಲ್ಲಿ ತರ್ಕಬದ್ಧವಾಗಿ ಮುನ್ನಡೆಸುತ್ತ, ಅದರ ಬಲದಿಂದ ಸಂಭಾವ್ಯತೆಯನ್ನು ಕ್ರಮಕ್ರಮವಾಗಿ ಸಬಲಗೊಳಿಸಿ ಸತ್ಯವನ್ನು ಸ್ಥಾಪಿಸಲಾಗಿದೆ. ಊಹೆಯೆನ್ನುವುದು ಸಂಶೋಧನೆಯನ್ನು ಹೇಗೆ ಮುನ್ನಡೆಸುತ್ತದೆಯೆಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆಯೇ ಸರಿ. ಇಲ್ಲಿ 'ಊಹೆ'ಯನ್ನು 'ಸತ್ಯ'ಗೊಳಿಸುವುದಕ್ಕಾಗಿ ದುಡಿದವರು ಐದು ಜನ. ಕೊನೆಗೆ ಸತ್ಯ ಸ್ಥಾಪಿಸಿದವರು ಸಣ್ಣಯ್ಯನವರಾದರೂ, ಈ ಮೊದಲಿನ ನಾಲ್ವರ ಪ್ರಯತ್ನ ಸಣ್ಣದೇನಲ್ಲ. ಸಮಸ್ಯೆಯನ್ನು ಕ್ರಮವಾಗಿ ಕತ್ತಲೆಯಿಂದ ಬೆಳಕಿನೆಡೆಗೆ ನಡೆಸಿಕೊಂಡು ಬಂದ ಅವರ ಕಾರ್ಯವೂ ಸಂಶೋಧನೆಯೇ. ಅವರ ಪಾಲೂ ಪರಿಗಣನಾರ್ಹವೇ ಆಗಿದೆ. ಮೊದಲಿನವರು ಊಹೆ ಮಾಡಿರದಿದ್ದರೆ ಎರಡನೆಯವರು, ಬಳಿಕ ಮೂರನೆಯವರು ಹೀಗೆ ಪ್ರಯತ್ನವನ್ನೇ ಮಾಡುತ್ತಿರಲಿಲ್ಲ. ಆದುದರಿಂದ 'ಊಹೆ'ಯನ್ನು ಒಂದರ್ಥದಲ್ಲಿ 'ಸಂಶೋಧನೆ'ಯೆಂದೇ ಕರೆಯಬಹುದಾಗಿದೆ.

ಒಂದು ಮಾತು : ಯಾವುದೇ ಸಂಭಾವ್ಯತೆ ಸತ್ಯವಾಗಿ ಪರಿಣಮಿಸಿಯೇ ತೀರುವುದೆಂದು ಹೇಳುವಂತಿಲ್ಲ. ಹೊಸ ಪೂರಕ ಸಾಮಗ್ರಿ ಸಿಕ್ಕರೆ ಸತ್ಯವಾಗಿ ಪರಿಣಮಿಸಬಲ್ಲ, ಅದು ಸಿಗದಿದ್ದರೆ ಸಂಭಾವ್ಯತೆಯ ಮಟ್ಟದಲ್ಲಿಯೇ ನಿಲ್ಲಬಹುದು. ಶತಪ್ರಯತ್ನ ಮಾಡಿದರೂ ಕೆಲವು ಶಾಶ್ವತ ಸಂಭಾವ್ಯತೆಯಾಗಿಯೇ ಉಳಿಯಬಹುದು. ಇಂಥವು 'ಎನಿತು ಕಾಲ ಕಲ್ಲು ನೀರೊಳಿದ್ದರೇನು ನೆನೆದು ಮೃದುವಾಗಬಲ್ಲುದೇ?' ಎಂಬಂಥ ಉದಾಹರಣೆಗಳು. ಇವುಗಳಿಗೆ ಪರಿಹಾರ ದೊರಕಬಹುದೆಂಬ ಆಸೆಯನ್ನು ಇಟ್ಟುಕೊಳ್ಳುವುದೂ ವ್ಯರ್ಥವೆಂದು ಕಾಣುತ್ತದೆ. ಕನ್ನಡದಲ್ಲಿ ಬೌದ್ಧರು ಸಾಹಿತ್ಯ ಬರೆದಿರುವರೇ? ಎಂಬ ಟಿ. ಎಸ್. ವೆಂಕಣ್ಣಯ್ಯ ಅವರ ಅನಿಸಿಕೆ ಇಂದಿನ ವರೆಗೂ ಒಂದು ಶಾಶ್ವತ 'ಸಂಭಾವ್ಯತೆ'ಯಾಗಿಯೇ ಉಳಿದುದನ್ನು ಇಲ್ಲಿ ನೆನೆಯಬಹುದು.*

ಒಟ್ಟಿನಲ್ಲಿ ಸಂಶೋಧಕನು 'ಮೂಲ ಊಹೆ'ಯನ್ನು ಕೈಗೆತ್ತಿಕೊಂಡು, ಸಾಮಗ್ರಿಯ ಪರ ವಿರೋಧ ಪಕ್ಷವಹಿಸಿ, ಅದನ್ನು ತಾರ್ಕಿಕ ಚರ್ಚೆಯಲ್ಲಿ ಮುನ್ನಡೆಸಿ, ಸತ್ಯವನ್ನು ಸ್ಥಾಪಿಸುತ್ತಾನೆ.

---

೧೨. Annals of Oriental Research of the University, Madras. Vol. VII-1.

೧೩. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ–ಎಂ. ಎಂ. ಕಲಬುರ್ಗಿ (ಪು. ೨೭೩–೭೪).

* ಕನ್ನಡದಲ್ಲಿ ಬೌದ್ಧರೂ ಗ್ರಂಥಗಳನ್ನು ಬರೆದಿದ್ದಾರೆ – ಟಿ. ಎಸ್. ವೆಂಕಣ್ಣಯ್ಯ, (ಪ್ರ. ಕ. ೨–೩).

ಸಾಮಗ್ರಿಯ ಕೊರತೆ ಸಂಭವಿಸಿದಲ್ಲಿ 'ಸಂಭಾವ್ಯತೆ'ಯನ್ನು ಮಂಡಿಸುತ್ತಾನೆ. ಈ ಸಂಭಾವ್ಯತೆಯು ಒಂದಿಷ್ಟು ಹೊಸ ಸಾಮಗ್ರಿ ಲಭಿಸಿದರೆ ಸ್ವಲ್ಪ ಸಬಲವಾಗಬಹುದು. ಅವಶ್ಯವಿರುವಷ್ಟು ಸಾಮಗ್ರಿ ಲಭಿಸಿದರೆ ಸತ್ಯವಾಗಿಯೇ ಪರಿಣಮಿಸಬಹುದು. ಅದಕ್ಕಾಗಿಯೇ 'ಸಂಶೋಧನೆಯೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ' ಎಂದು ಹೇಳುವುದು.

ಸಂಶೋಧನೆಯ ಪ್ರಕಾರಗಳು

ಒಂದು ಕ್ಷೇತ್ರದಲ್ಲಿ ನಡೆಯುವ ಚಟುವಟಿಕೆಗಳ ವರ್ಗೀಕರಣದ ಉದ್ದೇಶ ಅದರ ಲಕ್ಷಣವಿಶೇಷತೆಯನ್ನು ಬಿಡಿಸಿ ನೋಡುವುದಾಗಿದೆ. ಈ ಲಕ್ಷಣವಿಶೇಷತೆಗೆ ಅನೇಕ ಮುಖಗಳಿರುವುದರಿಂದ ವರ್ಗೀಕರಣವೂ ಅನೇಕ ಬಗೆಗಳನ್ನು ಪಡೆಯುತ್ತದೆ. ಈ ಹಿಂದೆ ಹೇಳಿದಂತೆ ಆಕರಶೋಧನೆ, ಸಂಶೋಧನೆ–ಎಂಬ ಎರಡು ಘಟ್ಟಗಳಲ್ಲಿ ಸಂಶೋಧನೆ ಪೂರ್ಣಗೊಳ್ಳುತ್ತಿದ್ದು, ಇವುಗಳಲ್ಲಿ ಆಕರಶೋಧವು ವಸ್ತು, ಭಾಷೆ, (ಲಿಖಿತ. ಅಲಿಖಿತ) ಕ್ರಿಯೆ, ಜ್ಞಾನ ಹೀಗೆ ನಾಲ್ಕು ಬಗೆಯಾಗಿದೆ. ಸಂಶೋಧನೆಗೆ ಬೇಕಾಗುವ ಮೂಲಸಾಮಗ್ರಿಯ ಹುಡುಕುವಿಕೆಯಾಗಿರುವ ಇದನ್ನು ಸಂಶೋಧನ ಮಟ್ಟಕ್ಕಿಂತ ಶೋಧಮಟ್ಟಕ್ಕೆ ಮಾತ್ರ ಪರಿಗಣಿಸಬಹುದಾಗಿದೆ. ಹೀಗಾಗಿ ಆಕರಶೋಧವನ್ನು ಹೊರತುಪಡಿಸಿ, ಸಂಶೋಧನೆಯನ್ನು ವಿಷಯ, ಉದ್ದೇಶ, ವಿಧಾನ, ಸ್ವರೂಪಗಳನ್ನವಲಂಬಿಸಿ ಹೀಗೆ ವರ್ಗೀಕರಿಸಬಹುದಾಗಿದೆ:

ವಿಷಯನಿಷ್ಠ ಪ್ರಕಾರ :

ಸಂಶೋಧನ ಕ್ಷೇತ್ರದ ಪ್ರಾಥಮಿಕ ಸ್ವರೂಪದ ವರ್ಗೀಕರಣವಿದು. ಇಲ್ಲಿ ಯಾವುದನ್ನು ಕುರಿತು ಸಂಶೋಧನೆ ನಡೆಸಲಾಗಿದೆಯೆಂಬುದು ಮುಖ್ಯವಾಗಿರುತ್ತದೆ. ಈ ಹಿಂದೆ ಹೇಳಿದಂತೆ ವಸ್ತು, ಭಾಷೆ, ಕ್ರಿಯೆ, ಜ್ಞಾನ–ಈ ಆಕರ ಸಾಮಗ್ರಿಗಳು ಸಂಶೋಧನೆಯ ವಿಷಯಗಳೂ ಆಗುತ್ತವೆ. ಇವುಗಳನ್ನು ಕುರಿತ ವಸ್ತುಸಂಬಂಧಿ ಸಂಶೋಧನೆ, ಭಾಷಾ ಸಂಬಂಧಿ ಸಂಶೋಧನೆ, ಕ್ರಿಯಾಸಂಬಂಧಿ ಸಂಶೋಧನೆ ಮತ್ತು ಜ್ಞಾನಸಂಬಂಧಿ ಸಂಶೋಧನೆಯೆಂಬ ಪ್ರಕಾರಗಳು ಸಂಶೋಧನ ಕಾಂಡದ ಮೊದಲ ನಾಲ್ಕು ಕವಲುಗಳೆಂದು ಹೇಳಬಹುದು. ಕನ್ನಡ ಸಂಶೋಧನ ಇತಿಹಾಸದ ಪ್ರಥಮ ಘಟ್ಟದಲ್ಲಿ ವಸ್ತು(ಆಕರ)ಶೋಧದೊಂದಿಗೆ ವಸ್ತುಸಂಬಂಧಿ ಸಂಶೋಧನೆ, ದ್ವಿತೀಯ ಘಟ್ಟದಲ್ಲಿ ಹೆಚ್ಚಿನದಾಗಿ ಭಾಷಾಸಂಬಂಧಿ ಮತ್ತು ಕ್ರಿಯಾಸಂಬಂಧಿ ಸಂಶೋಧನೆ, ತೃತೀಯ ಘಟ್ಟದಲ್ಲಿ ಇನ್ನೂ ಹೆಚ್ಚಿನದಾಗಿ ಜ್ಞಾನಸಂಬಂಧಿ ಸಂಶೋಧನೆಗಳು ಪ್ರಧಾನವಾಗಿ ಜರುಗುತ್ತ ಬಂದಿರುವುದನ್ನು ಗಮನಿಸಬಹುದು. ಈಗ ಈ ನಾಲ್ಕೂ ಬಗೆಯ ಸಂಶೋಧನೆಗಳನ್ನು ಉದಾಹರಣೆಯಿಂದ ಸ್ಪಷ್ಟಪಡಿಸಬಹುದು.

೧. **ವಸ್ತುಸಂಬಂಧಿ ಸಂಶೋಧನೆ :** ಬಳರಿ ಹೆಸರಿನ ದೇವತೆಯ ಉಲ್ಲೇಖ ಕಾವ್ಯ, ಶಾಸನಗಳಲ್ಲಿ ಆಗಾಗ ಕಂಡುಬರುತ್ತದೆ. ಇದು ಒಂದು ಕ್ಷುದ್ರದೇವತೆಯೆಂದು ಅಲ್ಲಲ್ಲಿಯ ವರ್ಣನೆಯಿಂದ ಸ್ಪಷ್ಟವಾಗುತ್ತದೆ. ಆದರೆ ಈ ದೇವತೆಯ ಸ್ವರೂಪ ಅಸ್ಪಷ್ಟವಾಗಿದ್ದಿತು. ಚಿಕ್ಕಕೆರೂರ ಶಾಸನದಲ್ಲಿ (ಕ್ರಿ. ಶ. ೯೫೪) ಕೊಂಡವಣಿಗರ ಪಳ್ಳಿಗನ ಹೆಂಡತಿ ಅರಸಕ್ಕ ಎಂಬುವಳು "...ಏಕ ಸುಟ್ಟುಗಮನುಂಡು

ಬಳರಿಯಂ ಪ್ರತಿಷ್ಠೆಗೆಯಿಸಿದಳ್” ಎಂಬ ಉಲ್ಲೇಖವಿದ್ದು, ಇದರ ಆಧಾರದಿಂದ ನಾನು ಆ ದೇವತಾವಿಗ್ರಹವನ್ನು ಶೋಧಿಸಿ, ಅವಳ ವಾಹನ ಗೂಗೆಯಾಗಿದೆ ಎಂಬ ಅಂಶವನ್ನು ಪ್ರಥಮಸಲ ಗಮನಿಸಿ, ಆಮೇಲೆ ಕೌಜಗೇರಿ–ಗದಗ ಮೊದಲಾದ ಊರುಗಳಲ್ಲಿ ಬಳರಿ ವಿಗ್ರಹವನ್ನು ಶೋಧಿಸಿದೆ.”[೧೪] ಇದು ವಸ್ತುರೂಪದ ವಿಷಯ ಸಂಶೋಧನೆಗೆ ಉತ್ತಮ ಉದಾಹರಣೆಯಾಗಿದೆ.

೨. ಭಾಷಾಸಂಬಂಧಿ ಸಂಶೋಧನೆ : ಸಾಮಾಜಿಕ ನಿಷ್ಪತ್ತಿ (Social Product) ಆಗಿರುವ ಭಾಷೆಯು ರೂಪ ಮತ್ತು ಅರ್ಥ ಈ ಎರಡೂ ನೆಲೆಗಳಲ್ಲಿ ಬದಲಾಗುತ್ತ ಬರುತ್ತದೆ. ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಶಂಶೋಧನೆ ಅನೇಕ ಬಗೆಯಾಗಿದೆ. ಮೇಣಬಸದಿ ಎಂಬುದು ಲೇಣಬಸದಿಯೆಂಬುದರ ವ್ಯಕ್ತರೂಪ;[೧೫] ವಡ್ಡಾರಾಧನೆಯಲ್ಲಿ ಬರುವ ‘ನೆಲವತ್ತಿ ಅಡಕೆ’ ಎನ್ನುವುದು ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಗ್ರಾಮದ ಅಡಕೆಯನ್ನು ಸೂಚಿಸುತ್ತದೆ,[೧೬] ಇತ್ಯಾದಿಗಳು ಪದಗಳ ರೂಪಶೋಧಕ್ಕೆ ಉದಾಹರಣೆಯೆನಿಸುತ್ತವೆ. ಪಂಪಭಾರತ, ವಡ್ಡಾರಾಧನೆ, ವಚನಸಾಹಿತ್ಯ, ಹರಿಹರನ ರಗಳೆಗಳ ಭಾಷೆಯನ್ನು ಕುರಿತ ಮತ್ತು ಹವ್ಯಕ, ಕೊಂಕಣಿ, ಎರವ ಮೊದಲಾದ ಆಡುಭಾಷೆಗಳನ್ನು ಕುರಿತ ಸಂಶೋಧನೆಗಳನ್ನು ಈ ವಲಯದಲ್ಲೇ ಪರಿಗ್ರಹಿಸಬಹುದಾಗಿದೆ. ಕೂಸು, ಕುನ್ನಿ ಪದಗಳಿಗೆ ಪ್ರಾಚೀನ ಕಾಲದಲ್ಲಿ ಹೆಣ್ಣುಮಗು, ಗಂಡುಮಗು ಎಂಬ ನಿರ್ದಿಷ್ಟ ಅರ್ಥಗಳಿದ್ದವು. ಪೆದ್ದ ಎಂಬುದಕ್ಕೆ ಪಂಡಿತ ಎಂಬ ಅರ್ಥವಿದ್ದಿತು. ಇವು ಅರ್ಥವ್ಯತ್ಯಾಸಕ್ಕೆ ಉದಾಹರಣೆ ಎನಿಸಿವೆ.

೩. ಕ್ರಿಯಾಸಂಬಂಧಿ ಸಂಶೋಧನೆ : ಕ್ರಿಯೆಯೆನ್ನುವುದು ದೈನಂದಿನ ಕ್ರಿಯೆ, ಘಟಿತಕ್ರಿಯೆ, ಆಚರಣಾತ್ಮಕ ಕ್ರಿಯೆ–ಹೀಗೆ ಮೂರು ಆಯಾಮಗಳನ್ನು ಹೊಂದಿದೆ. ಯಾವುದೇ ದೇಶದಲ್ಲಿ ನೈಸರ್ಗಿಕ ಪರಿಸರಕ್ಕೆ ಅನುಗುಣವಾಗಿ ದೈನಂದಿನ ಕೃಷಿ, ಅಡುಗೆ ಇತ್ಯಾದಿ ಕ್ರಿಯೆಗಳು ಆಚರಣೆಗೆ ಬಂದಿರುತ್ತವೆ. ರೂಢಿ ಕಾರಣವಾಗಿ ಅವುಗಳಿಗಿರುವ ಕಾರ್ಯ–ಕಾರಣ ಸಂಬಂಧ ವಿಸ್ಮರಣವಾಗಿರುತ್ತದೆ. ಇದನ್ನು ಕಂಡುಹಿಡಿಯಲು ನಡೆಸುವುದು ದೈನಂದಿನ ಕ್ರಿಯಾಶೋಧವೆನಿಸುತ್ತದೆ.

ಎರಡನೆಯದಾಗಿ ಘಟಿತ ಕ್ರಿಯೆಯ ಅಧ್ಯಯನ ಮೊದಲಿನಿಂದಲೂ ನಮ್ಮಲ್ಲಿ ನಡೆದುಬಂದಿದೆ. ಕನ್ನಡ ಸಾಹಿತ್ಯಕ್ಕೆ ಬಂದರೆ ಕವಿಗಳ ಜೀವನ–ಕಾಲ ವಿಚಾರಗಳು ಘಟನಾಶೋಧಕ್ಕೆ ಉದಾಹರಣೆಯೆನಿಸಿವೆ. ತೋಂಟದ ಸಿದ್ಧಲಿಂಗಯತಿಗಳ ಕಾಲ ೧೪೭೦ ಎಂದು ಕವಿ ಚರಿತೆಕಾರರು ಭಾವಿಸಿ, ಈ ಯತಿಯನ್ನು ಸ್ಮರಿಸಿದ ಅನೇಕ ಜನ ಕವಿಗಳ ಕಾಲವನ್ನು ನಿರ್ಧರಿಸಿದ್ದರು. ಇತ್ತೀಚೆಗೆ ಡಾ. ಎಲ್. ಬಸವರಾಜು,[೧೭] ಶ್ರೀ. ಎಸ್. ಶಿವಣ್ಣ[೧೮] ಮತ್ತು ನನ್ನ[೧೯] ಲೇಖನಗಳಿಂದಾಗಿ ತೋಂಟದಾರ್ಯರ ಕಾಲ ೧೦೦ ವರ್ಷದಷ್ಟು ಮುಂದೆ ಬಂದಿದೆ. ಅವರನ್ನು ಸ್ಮರಿಸಿದ ಎಲ್ಲ ಕವಿಗಳ ಕಾಲವೂ ಅಷ್ಟು

---

೧೪. ಬಳರಿ ದೇವತೆ–ಎಂ. ಎಂ. ಕಲಬುರ್ಗಿ (ಮಾರ್ಗ–II, ೩೬೪.)

೧೫. ಮೇಣ ಬಸದಿ–ಎಂ. ಎಂ. ಕಲಬುರ್ಗಿ (ಸಂಯುಕ್ತ ಕರ್ನಾಟಕ ೮–೧೧–೧೯೮೧).

೧೬. ಅಡಕೆಗೆ ಪ್ರಸಿದ್ಧವಾದ ನೆಲವತ್ತಿ ಗ್ರಾಮ ಯಾವುದು? – ಎಂ. ಚಿದಾನಂದಮೂರ್ತಿ (ಸಾಧನೆ, ೧೧–೨).

೧೭. ವಚನಕಾರ ಶ್ರೀ ಸಿದ್ಧಲಿಂಗಯತಿ (ಬೆಂ.ವಿ.ವಿ. ಪ್ರಕಟಣೆ, ಪು.೧೭).

೧೮. ತೋಂಟದ ಸಿದ್ಧಲಿಂಗೇಶ್ವರರ ಕಾಲ ವಿಚಾರ : ಒಂದು ಮರುಪರಿಶೀಲನೆ–ಶ್ರೀಕಂಠತೀರ್ಥ, (ತೀ.ನಂ.ಶ್ರೀ. ಸ್ಮರಣಗ್ರಂಥ, ಪು.೩೦೮).

೧೯. ತೋಂಟದ ಸಿದ್ಧಲಿಂಗಯತಿಗಳ ಕಾಲ–ಎಂ. ಎಂ. ಕಲಬುರ್ಗಿ (ಮಾರ್ಗ–I, ಪು.೩೮೨).

ಮುಂದುವರಿದು, ಕರ್ನಾಟಕ ಕವಿಚರಿತೆಯ ಎರಡನೆಯ ಸಂಪುಟದ ಬಹುಭಾಗ ತಿದ್ದುಪಡಿಗೆ ಗರಿಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಘಟನಾಶೋಧಕ್ಕೆ ನಿದರ್ಶನವೆನಿಸಿದೆ.

ಆಚರಣಾತ್ಮಕ ಕ್ರಿಯೆಯ ಸಂಶೋಧನೆಗೆ ಮೈಲಾರನ ಭಕ್ತರು ನಾಯಿಯಂತೆ ಬೊಗಳುವ ಕ್ರಿಯೆ ಉತ್ತಮ ಉದಾಹರಣೆಯೆನಿಸಿದೆ. ಮೈಲಾರ ಪಶ್ಚಿಮಬೆಟ್ಟದ ದೇವತೆ, ಮಲ್ಲಿಕಾರ್ಜುನ ಪೂರ್ವಬೆಟ್ಟದ ದೇವತೆ. ಒಂದರ ನಿಷ್ಪತ್ತಿ ಮಲೆಯ+ಅರಸ=ಮಲೆಯರ–ಮಯಲಾರ–ಮೈಲಾರ. ಇನ್ನೊಂದರ ನಿಷ್ಪತ್ತಿ ಮಲೈಕ್ಕು+ಅರಸನ್=ಮಲೈಕ್ಕರಸನ್–ಮಲ್ಲಿಕಾರ್ಜುನ. ಒಬ್ಬನ ವಾಹನ ನಾಯಿ, ಇನ್ನೊಬ್ಬನದು ನಂದಿ. ನಾಯಿ ವಾಹನವುಳ್ಳವನು ಬೇಟೆಯ ಸಂಸ್ಕೃತಿಯ ದೇವತೆ, ನಂದಿ ವಾಹನವುಳ್ಳವನು ಕೃಷಿಸಂಸ್ಕೃತಿಯ ದೇವತೆ. ಕೃಷಿಸಂಸ್ಕೃತಿಯ ದೇವತೆಯಾದ ಮಲ್ಲಿಕಾರ್ಜುನನಿಗಿಂತ ಬೇಟೆ ಸಂಸ್ಕೃತಿಯ ದೇವತೆಯಾದ ಮೈಲಾರನ ಕಲ್ಪನೆ ಹಳೆಯದು. ಇವನ ವಾಹನ ನಾಯಿಯಾಗಿರುವ ಕಾರಣ, ಮೈಲಾರನ ಭಕ್ತರು ತಾವು ತಮ್ಮ ದೇವರ ವಾಹನವೆಂಬ ಭಕ್ತಿಭಾವದಿಂದ ಅವನ ಎದುರಿನಲ್ಲಿ ನಾಯಿಯಂತೆ ಅನ್ನ ಸ್ವೀಕರಿಸುವ, ನಾಯಿಯಂತೆ ಬೊಗಳುವ ಆಚರಣೆ ಮಾಡುತ್ತಾರೆ. "ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ" ಎಂದು ಬಸವಣ್ಣ ಹೇಳುವುದನ್ನು ಇಲ್ಲಿ ಗಮನಿಸಬಹುದು. ಇದು ಆಚರಣಾತ್ಮಕ ಕ್ರಿಯಾಸಂಶೋಧನೆಗೆ ಉದಾಹರಣೆ.

೪. ಜ್ಞಾನಸಂಬಂಧಿ ಸಂಶೋಧನೆ : ಈ ಶೋಧವು ಸಿದ್ಧಾಂತ, ಜೀವನಮೌಲ್ಯ, ನಂಬಿಕೆ, ಮೂಢನಂಬಿಕೆಗಳನ್ನೊಳಗೊಳ್ಳುತ್ತದೆ. ಕರ್ನಾಟಕದ ಜೈನ, ವೀರಶೈವ, ವೈದಿಕ ಧರ್ಮಗಳ ಸಿದ್ಧಾಂತ, ಪ್ರಾಚೀನರ ಜೀವನಮೌಲ್ಯ, ಜನಸಾಮಾನ್ಯರ ನಂಬಿಕೆ, ಮೂಢನಂಬಿಕೆ–ಇವುಗಳ ಶೋಧ ಇಲ್ಲಿ ಉದಾಹರಣೆಯೆನಿಸುತ್ತವೆ.

ಕುಡುಮಿಂಚಿನ ಸಿಡಿಲುರುಳಿಯೊ
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್ ।
ನಡೆ ನೋಡೆ ನೋಡೆ ದಿನಪ
ನೊಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ॥

ಇದು ಪಂಪಭಾರತದಲ್ಲಿ ಬರುವ ಕರ್ಣನ ಅವಸಾನದ ಚಿತ್ರ. ಇಲ್ಲಿ ಕರ್ಣನ ಒಡಲಿನಿಂದ ಒಂದು ತೇಜೋರೂಪ ಸೂರ್ಯನನ್ನು ಸೇರಿತು–ಎಂದು ಹೇಳಲಾಗಿದೆ. ತಂದೆಯಾದ ಸೂರ್ಯನ ಹತ್ತಿರ ಮಗನಾದ ಕರ್ಣನ ತೇಜೋರೂಪ ಸೇರಿಕೊಂಡಿತೆಂದು ಸಾಮಾನ್ಯವಾಗಿ ಎಲ್ಲರೂ ಹೇಳುತ್ತಾರೆ. ಇಲ್ಲಿ ಇನ್ನೂ ವಿಶಿಷ್ಟ ಅರ್ಥ ಹುದುಗಿದೆ. ಅದು ಪ್ರಾಚೀನರ ಪ್ರಕಾರ ಮರಣಾಂತ್ಯದಲ್ಲಿ ಯೋಧ ಮತ್ತು ಯೋಗಿಗಳು ಸೂರ್ಯಮಂಡಲದಲ್ಲಿ ದಹನಗೊಳ್ಳುವರೆಂಬ, ಇವರಲ್ಲಿ ಯೋಧನು ವೀರಸ್ವರ್ಗಕ್ಕೆ ಸೂರ್ಯಮಂಡಲ ದ್ವಾರದಿಂದ ಪ್ರಯಾಣ ಬೆಳೆಸುವನೆಂಬ ನಂಬಿಕೆಗಳು ಅಸ್ತಿತ್ವದಲ್ಲಿದ್ದವು. ವೀರಮೌಲ್ಯ, ಅದಕ್ಕೆ ಸಂಬಂಧಪಟ್ಟ ಈ ನಂಬಿಕೆಗಳನ್ನು ಪ್ರಸ್ತುತ ಪದ್ಯದಲ್ಲಿ ನಿಕ್ಷಿಪ್ತಗೊಳಿಸಲಾಗಿದೆ ಎಂದು ಹುಡುಕಿ ಹೇಳುವುದು ಜ್ಞಾನಸಂಬಂಧಿ ಶೋಧವೆನಿಸುತ್ತದೆ. ಇದೇ ರೀತಿ ಪ್ರಾಚೀನಕಾಲದಲ್ಲಿ ಪ್ರಜಾಶೋಷಣೆಯಾಗಿ ಬೆಳೆದಿದ್ದ 'ದಾನ'ವನ್ನು ನಿರಾಕರಿಸಲು ವೀರಶೈವದಲ್ಲಿ 'ದಾಸೋಹ' ಹುಟ್ಟಿಕೊಂಡಿತೆಂಬುದೂ 'ಜ್ಞಾನಸಂಬಂಧಿಶೋಧ'ವೇ ಆಗಿದೆ.

ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಕೈಗೆತ್ತಿಕೊಂಡ ಒಂದು ಸಂಶೋಧನೆ ವಸ್ತುಶೋಧದಲ್ಲಿ ಸೆಲೆಯೊಡೆದು, ಭಾಷಾಶೋಧ-ಕ್ರಿಯಾಶೋಧಗಳನ್ನು ಒಳಗೊಂಡು, ಜ್ಞಾನಶೋಧದಲ್ಲಿ ಪರ್ಯವಸಾನ ಹೊಂದಬಹುದು. ಇದಕ್ಕೆ ಮೇಲೆ ಹೇಳಿದ ಮೈಲಾರನ ವಿವೇಚನೆ[೨೦] ಮತ್ತು ಎಲ್ಲಮ್ಮನನ್ನು[೨೧] ಕುರಿತು ನನ್ನ ಸಂಶೋಧನೆಗಳು ನಿದರ್ಶನವಾಗಬಹುದಾಗಿದೆ.

ಉದ್ದೇಶನಿಷ್ಠ ಪ್ರಕಾರ :

ಸಂಶೋಧನಕಾರ್ಯದಲ್ಲಿ ವಿದ್ವಾಂಸರು ಇಟ್ಟುಕೊಂಡಿರುವ ಉದ್ದೇಶವನ್ನು ಗಮನಿಸಿ ಮಾಡುವ ವರ್ಗೀಕರಣವಿದು. ಇದು ಮೇಲೆ ಹೇಳಿದ ವಸ್ತು, ಭಾಷೆ, ಕ್ರಿಯೆ, ಜ್ಞಾನಗಳೆಂಬ ವಿಷಯಗಳನ್ನು ವಸ್ತುವಾಗಿಟ್ಟುಕೊಂಡು ರೂಪ, ಗುಣ ದೃಷ್ಟಿಯಿಂದ ಕವಲೊಡೆಯುವುದಾಗಿದೆ. ಇವುಗಳಲ್ಲಿ ರೂಪನಿಷ್ಠಶೋಧವು ವಸ್ತು, ಭಾಷೆ, ಕ್ರಿಯೆ, ಜ್ಞಾನವೆಂಬ ಸಾಮಗ್ರಿಯನ್ನು ಮುಖಬೆಲೆಯ ಮಟ್ಟದಲ್ಲಿ ವಿಶ್ಲೇಷಿಸಿ ಕಾರ್ಯಸತ್ಯ(Fact)ವನ್ನು ಕಂಡುಹಿಡಿಯುವುದಾಗಿದೆ. ಹೀಗಾಗಿ ಇದು ಕಾವ್ಯದ ವಾಚ್ಯಾರ್ಥಸ್ವರೂಪದ ಪ್ರಯತ್ನವಾಗಿದೆ. ಕನ್ನಡ ಸಂಶೋಧನ ಇತಿಹಾಸದ ಎರಡನೆಯ ಘಟ್ಟದಲ್ಲಿ ಈ ರೂಪನಿಷ್ಠ ಸಂಶೋಧನೆ ಮುಖ್ಯವಾಗಿದ್ದಿತು.*

ಈ ರೂಪನಿಷ್ಠಸಂಶೋಧನೆಯಂತೆ ಗುಣನಿಷ್ಠಸಂಶೋಧನೆಯೂ ಸಂಶೋಧನೆಯ ಇನ್ನೊಂದು ಶಾಖೆಯಾಗಿದೆ. ಇದು ವಸ್ತು, ಭಾಷೆ, ಕ್ರಿಯೆ, ಜ್ಞಾನವೆಂಬ ಸಾಮಗ್ರಿಯನ್ನು ಮುಖಬೆಲೆಯ ಮಟ್ಟದಲ್ಲಿ ವಿಶ್ಲೇಷಿಸದೆ, ಅದರ ಹಿಂದಿರುವ ಕಾರಣ, ಒತ್ತಡ, ಪರಿಣಾಮಗಳನ್ನು ವ್ಯಾಖ್ಯಾನಿಸುವುದಾಗಿದೆ. ಕೇವಲ ಕಾರ್ಯಸತ್ಯ(Fact)ವನ್ನಲ್ಲ, ಕಾರಣಸತ್ಯ (Truth)ವನ್ನೇ ಕಂಡುಹಿಡಿಯುವುದಾಗಿದೆ. ಈ ಗುಣನಿಷ್ಠಸಂಶೋಧನೆಯು ಸಂಶೋಧಕನ ದೃಷ್ಟಿಕೋನಕಾರಣವಾಗಿ ಎಡಪಂಥೀಯ ಇಲ್ಲವೆ ಬಲಪಂಥೀಯ ಸ್ವರೂಪ ಪಡೆಯುತ್ತದೆ. ಇವುಗಳಲ್ಲಿ ಎಡಪಂಥೀಯವು ಜನಪರವಾಗಿದ್ದರೆ, ಬಲಪಂಥೀಯವು ವ್ಯವಸ್ಥೆಯ ಪರವಾಗಿರುತ್ತದೆ.

ಇದೆಲ್ಲವನ್ನು ಗಮನಿಸಿದರೆ ರೂಪನಿಷ್ಠಶೋಧ (Fact finding)ಕ್ಕಿಂತ ಗುಣನಿಷ್ಠ ಶೋಧ (Truth finding)ವು ತುಂಬ ಆಳವಾದುದೆಂದು ಸ್ಪಷ್ಟವಾಗುತ್ತದೆ. ಇದು ಸಾಮಗ್ರಿಯನ್ನು ಆಕೃತಿ ಮಟ್ಟದಲ್ಲಿ ಅಲ್ಲ, ಸಂಸ್ಕೃತಿ ಮಟ್ಟದಲ್ಲಿ ವ್ಯಾಖ್ಯಾನಿಸಿ, ಸತ್ಯವನ್ನು ಕಂಡುಹಿಡಿಯುವುದಾಗಿದೆ. ಹೀಗಾಗಿ ಇದು ಕಾವ್ಯದ ಧ್ವನ್ಯರ್ಥಪಾತಳಿ ರೂಪದ ಪ್ರಯತ್ನವೆನಿಸುತ್ತದೆ.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕು. ಯಾವುದೇ ಸಮಾಜದಲ್ಲಿ ಒಂದು ವಿಚಾರ ಅಥವಾ ಆಚಾರ ಸಾಮೂಹಿಕ ಒಪ್ಪಿಗೆ ಪಡೆದು ಮುಂದುವರಿದಾಗ ಸಂಪ್ರದಾಯವೆನಿಸಿಕೊಳ್ಳುತ್ತದೆ. ಇದನ್ನೇ ನಾವು ಸಂಸ್ಕೃತಿಯೆನ್ನುತ್ತೇವೆ. ಇದನ್ನು ಕುರಿತ ರೂಪನಿಷ್ಠ ಅಧ್ಯಯನವನ್ನು 'ಸಾಂಸ್ಕೃತಿಕ ಅಧ್ಯಯನ'ವೆಂದು ಕರೆಯುತ್ತಲಿದ್ದೇವೆ. ಡಾ. ಎಂ. ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ

---

೨೦. ಮೈಲಾರ-ಮಾಳಚಿ (ಮಾರ್ಗ-II, ಪು. ೩೪೯).
೨೧. ಎಕ್ಕಲಮ್ಮ-ಎಲ್ಲಮ್ಮ (ಮಾರ್ಗ-II, ಪು.೩೪೧).
* ಮೊದಲ ಘಟ್ಟವು ಆಕರಸಾಮಗ್ರಿ ಶೋಧವಾಗಿದೆ.

ಸಾಂಸ್ಕೃತಿಕ ಅಧ್ಯಯನ ಈ ರೂಪನಿಷ್ಠ ಅಧ್ಯಯನಕ್ಕೆ ಉದಾಹರಣೆಯಾಗಿದೆ. ಆದರೆ ಇಂಥ ಅಧ್ಯಯನ ಗುಣನಿಷ್ಠವೂ ಆಗಬೇಕು. ಅಂದರೆ ಅಲ್ಲಿ ಜನಪರ ವಿವೇಚನೆ ನಡೆಯಬೇಕು. ಆಗ ಮಾತ್ರ ಸಾಂಸ್ಕೃತಿಕ ಅಧ್ಯಯನವೆಂದು ಕರೆಯುವುದು ಸೂಕ್ತವೆನಿಸುತ್ತದೆ.

ವಿಧಾನನಿಷ್ಠ ಪ್ರಕಾರ :

ಮೇಲೆ ಹೇಳಿದ ವಸ್ತುಶೋಧ, ಭಾಷಾಶೋಧ, ಕ್ರಿಯಾಶೋಧ ಮತ್ತು ಜ್ಞಾನಶೋಧಗಳ ಹಿಂದೆ ನಡೆಯುವ 'ಕಾರ್ಯವಿಧಾನ'ಗಳನ್ನವಲಂಬಿಸಿ ಮಾಡುವ ವರ್ಗೀಕರಣವೇ ವಿಧಾನನಿಷ್ಠ ವರ್ಗೀಕರಣವೆನಿಸುತ್ತದೆ.

ಈ ಪ್ರಕಾರದಲ್ಲಿ ಸಮಾವೇಶವಾಗುವುದೆಂದರೆ ಸಾಮಗ್ರಿಯ ವಿಶ್ಲೇಷಣಮುಖಿ ವಿಧಾನ ಮತ್ತು ಸಾಮಗ್ರಿಯ ವ್ಯಾಖ್ಯಾನಮುಖಿವಿಧಾನ.* ವಸ್ತು, ಭಾಷೆ, ಕ್ರಿಯೆ ಮತ್ತು ಜ್ಞಾನಗಳ 'ರೂಪಶೋಧ' ಸಂದರ್ಭದಲ್ಲಿ 'ಸಾಮಗ್ರಿ ವಿಶ್ಲೇಷಣಮುಖಿ' ವಿಧಾನವನ್ನವಲಂಬಿಸಬೇಕಾಗುತ್ತದೆ. ಇದನ್ನೇ 'Analysis Oriented Research' ಎನ್ನುವುದು. ಕರ್ನಾಟಕದ ಸಂಶೋಧನ ಇತಿಹಾಸದ ಎರಡನೆಯ ಘಟ್ಟದಲ್ಲಿ ಈ ವಿಧಾನ ಪ್ರಮುಖವಾಗಿದ್ದಿತು. ವ್ಯಕ್ತಿಚರಿತ್ರೆ, ಸಾಹಿತ್ಯಚರಿತ್ರೆ, ರಾಜಕೀಯಚರಿತ್ರೆ ಇತ್ಯಾದಿಗಳನ್ನು ರಚಿಸಲು ಈ ವಿಧಾನ ಅಗತ್ಯವೆನಿಸುತ್ತದೆ. ಚರಿತ್ರೆಯ ಕ್ರಮವತ್ತತೆಯು ಕಳೆದುಹೋಗಿರುವ ನಮ್ಮ ನಾಡಿನಲ್ಲಿ ಈ ವಿಧಾನವನ್ನವಲಂಬಿಸಿ, ಅದನ್ನು ಪುನರ್‌ರಚಿಸುವ ಕೆಲಸ ವಿಪುಲವಾಗಿ ನಡೆಯಿತು. ಆರ್. ನರಸಿಂಹಾಚಾರ್, ಗೋವಿಂದ ಪೈ ಇತ್ಯಾದಿ ವಿದ್ವಾಂಸರು ಅನುಸರಿಸಿದುದು, ರೂಪಿಸಿ ಕೊಟ್ಟುದು, ಈ ವಿಧಾನವನ್ನು.

ವಸ್ತು, ಭಾಷೆ, ಕ್ರಿಯೆ ಮತ್ತು ಜ್ಞಾನಗಳ 'ಗುಣಶೋಧ' ಸಂದರ್ಭದಲ್ಲಿ 'ಸಾಮಗ್ರಿ ವ್ಯಾಖ್ಯಾನಮುಖಿ' ವಿಧಾನವನ್ನವಲಂಬಿಸಬೇಕಾಗುತ್ತದೆ. ಇದನ್ನೇ 'Interpritation Oriented Research' ಎನ್ನುವದು, ಇಲ್ಲಿ ಬಲಪಂಥೀಯ, ಎಡಪಂಥೀಯ ಫಲಿತಾಂಶಗಳನ್ನು ಪ್ರಕಟಿಸಬಹುದಾಗಿದೆ. ಕನ್ನಡದಲ್ಲಿ ಈ ಬಗೆಯ ವಿಧಾನಕ್ಕೆ ಡಾ. ಶಂಬಾ ಜೋಶಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ವೀರಣ್ಣ ಮತ್ತು ನನ್ನ ಬರವಣಿಗೆಗಳು ಉದಾಹರಣೆಯೆನಿಸಿವೆ. ವ್ಯಾಖ್ಯಾನಮುಖಿಗೆ ಹೊರಳಿದಲ್ಲಿ ಸಂಶೋಧನೆ ವಿಮರ್ಶೆಯ ಸ್ವರೂಪ ಪಡೆಯುವುದನ್ನು ಇಲ್ಲಿ ನೆನೆಯಬೇಕು.

ಸಂಶೋಧನೆಗಾಗಿ ಕೈಗೆತ್ತಿಕೊಂಡ ಒಂದು 'ವಿಷಯ'ವನ್ನು ಮುನ್ನಡೆಸಲು ಇಟ್ಟುಕೊಂಡ 'ಉದ್ದೇಶ'ಗಳಿಗೆ ಅನುಗುಣವಾಗಿ ಕ್ರಿಯಾ 'ವಿಧಾನ'ಗಳು ಬೇರೆಯಾಗುತ್ತವೆ. ಅಂದರೆ 'ವಿಷಯ'ವನ್ನು 'ರೂಪನಿಷ್ಠ' ಉದ್ದೇಶಕ್ಕೆ ಒಳಪಡಿಸಿದರೆ 'ವಿಶ್ಲೇಷಣಮುಖಿ ವಿಧಾನ', 'ಗುಣನಿಷ್ಠ' ಉದ್ದೇಶಕ್ಕೆ ಒಳಪಡಿಸಿದರೆ 'ವ್ಯಾಖ್ಯಾನಮುಖಿ ವಿಧಾನ' ಅನಿವಾರ್ಯವಾಗುತ್ತದೆ. ಆದುದರಿಂದ ಮೇಲೆ ವಿವರಿಸಿದ ಮೂರೂ ಪ್ರಕಾರಗಳು (ವಿಷಯನಿಷ್ಠ, ಉದ್ದೇಶನಿಷ್ಠ, ವಿಧಾನನಿಷ್ಠ) ಒಂದಕ್ಕೊಂದು ಸಂಬಂಧವುಳ್ಳವಾಗಿವೆಯೆಂಬುದನ್ನು ಮರೆಯಬಾರದು.

---

* ಇವುಗಳಿಗಿಂತ ಕೆಳಹಂತದಲ್ಲಿ ನಡೆಯುವ 'ಆಕರಸಾಮಗ್ರಿನಿಷ್ಠಶೋಧ' (Source Material Oriented Research) ವನ್ನು ಶುದ್ಧ ಸಂಶೋಧನೆಯ ಕಕ್ಷೆಯಿಂದ ಹೊರಗೆ ಇಡಬೇಕಾಗುತ್ತದೆ.

ಸ್ವರೂಪನಿಷ್ಠ ಪ್ರಕಾರ:

ಸಂಶೋಧನೆಯನ್ನು ಸ್ವರೂಪದೃಷ್ಟಿಯಿಂದ ವರ್ಗೀಕರಿಸುವಲ್ಲಿ ಭಾಷಾಶಾಸ್ತ್ರೀಯ ವರ್ಗೀಕರಣ ವಿಧಾನವನ್ನು ಆದರ್ಶವಾಗಿಟ್ಟುಕೊಂಡು ೧. ವಿವರಣಾತ್ಮನಕ ಸಂಶೋಧನೆ, ೨. ಐತಿಹಾಸಿಕ ಸಂಶೋಧನೆ, ೩. ತೌಲನಿಕ ಸಂಶೋಧನೆ ಎಂದು ಮೂರು ವಿಧಗಳನ್ನು ಕಲ್ಪಿಸಬಹುದಾಗಿದೆ.

ವಿವರಣಾತ್ಮಕ ಸಂಶೋಧನೆಯೆಂದರೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ನಡೆಸುವ ನೇರ ಅಧ್ಯಯನವಾಗಿದೆ. ಇದನ್ನು ಬಿಡಿರೂಪದ ಶೋಧವೆಂದು ಕರೆಯಬಹುದು. ಈ ಬಗೆಯ ಶೋಧ ಸಣ್ಣದಾಗಿದ್ದರೂ ಅದು ಉಪಯುಕ್ತ ಕೀಲಿಕೈ ಇದ್ದಂತೆ. ಬಾದಾಮಿ ಚಾಲುಕ್ಯರ ಗುಹಾಂತರ್ಗತ ದೇವಾಲಯಗಳಿಗೆ ಇರುವ 'ಮೇಣಬಸದಿ' ಎಂಬುದು ನಿಜವಾದ ಅರ್ಥಶೋಧವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಸಾಮಾನ್ಯವಾಗಿ 'ಕಲ್ಲನ್ನು ಮೇಣದಂತೆ ಉಪಯೋಗಿಸಿ ಮಾಡಿದ ಕಲೆ' ಎಂದು ಇದಕ್ಕೆ ಎಲ್ಲರೂ ಅರ್ಥ ಹೇಳುತ್ತಾರೆ. ಹಾಗಿದ್ದರೆ ಅಜಂತಾ ಇತ್ಯಾದಿ ಗುಹಾಂತರ್ಗತ ದೇವಾಲಯಗಳಿಗೆ ಮೇಣಬಸದಿ ಎಂದು ಏಕೆ ಕರೆಯುವುದಿಲ್ಲ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮೇಗಣ ಬಸದಿಯೆಂಬುದೇ ಜನಬಳಕೆಯಲ್ಲಿ ಮೇಣಬಸದಿಯೆಂದಾಗಿದೆಯೆಂದರೆ ಕೆಳಗೆ ಬಸದಿಯೊಂದಿರಬೇಕಾಗುತ್ತದೆ. ಆದರೆ, ಕೆಳಗೆ ಅಂಥ ಪ್ರಸಿದ್ಧ ಬಸದಿ ಕಂಡುಬರುವುದಿಲ್ಲ. ಈ ಏಕಶಿಲಾ ಬೆಟ್ಟದಲ್ಲಿ ತುಂಬಾ ಪ್ರಸಿದ್ಧವಾದುವು ಹಿಂದೂ ಗುಹಾಂತರ್ಗತ ದೇವಾಲಯಗಳು. ಹೀಗಿರುವಾಗ ಇರುವ ಒಂದೇ ಒಂದು, ಅಷ್ಟು ಕಲಾತ್ಮಕವೂ ಅಲ್ಲದ ಬಸದಿಯನ್ನು ಗಮನಿಸಿ ಇಡೀ ಬೆಟ್ಟವನ್ನು (ಮೇಣ) ಬಸದಿಯೆಂದು ಜೈನ ಹೆಸರಿನಲ್ಲಿ ಕರೆದುದೇಕೆ? ಎಂಬ ಪ್ರಶ್ನೆಯೂ ಎದುರಾಗುತ್ತದೆ. ಈ ರೀತಿ ಮುತ್ತುವ ಎಲ್ಲ ಪ್ರಶ್ನೆಗಳಿಗೂ ಸಮಾಧಾನಕರ ಉತ್ತರವನ್ನು ಹೀಗೆ ನೀಡಬಹುದು :

ಬಾದಾಮಿ ತೀರ ಪ್ರಾಚೀನಕಾಲದಲ್ಲಿ ಬೌದ್ಧರ ನೆಲೆಯಾಗಿದ್ದಿತೆಂದು ಹುಯೆನ್‌ತ್ಸಾಂಗ್ ಹೇಳುತ್ತಾನೆ. ಇಂದಿಗೂ ಬುದ್ಧನ ಅಸ್ಪಷ್ಟ ವಿಗ್ರಹದ ಒಂದು ಗವಿ ಅಲ್ಲಿದೆ. ಬೌದ್ಧ ಸನ್ಯಾಸಿಗಳ ಗವಿಗಳಿಗೆ ಲಯಣ ಎಂದು ಹೆಸರು. ಇದು ಆಡುಮಾತಿನಲ್ಲಿ ಲೇಣ ಎಂದಾಗುತ್ತದೆ. ಈ ಗುಡ್ಡದ ಮೇಲೆ ಪ್ರಪ್ರಥಮವಾಗಿ ಕೊರೆದುದು (ಅಥವಾ ಕೊರೆದುವು) ಬೌದ್ಧರ ಲೇಣವಾಗಿರಬೇಕು. ಇದರಿಂದಾಗಿ ಇಡೀ ಗುಡ್ಡವನ್ನು ಪ್ರಾರಂಭದಲ್ಲಿ ಲೇಣ ಎಂದೇ ಕರೆಯುತ್ತಿರಬಹುದು. ಇಂದಿಗೂ ಅಜಂತಾ, ಎಲ್ಲೋರ ಗುಹೆಗಳಿಗೆ ಲೇಣೆ ಎನ್ನುವುದನ್ನೂ, ಅಲ್ಲಿಯ ಪ್ರಾಕೃತ ಬರಹಗಳಿಗೆ ಲೇಣಾ ಡೈಲೆಕ್ಟ್ ಎಂದು ಕರೆಯುವುದನ್ನೂ ಇಲ್ಲಿ ನೆನೆಯಬಹುದು. ಬಾದಾಮಿಯಲ್ಲಿ ಬೌದ್ಧರ ಪ್ರಾಬಲ್ಯ ಕಡಿಮೆಯಾದ ಬಳಿಕ ಬೆಟ್ಟದ ಮೇಲೆ ಜೈನರು ಬಸದಿಯನ್ನು ಕಂಡರಿಸಿರಬೇಕು. ರವಿಕೀರ್ತಿ ಮೊದಲಾದ ಪ್ರಸಿದ್ಧ ಜೈನಕವಿಗಳು ಅಂದು ಈ ಪರಿಸರದಲ್ಲಿದ್ದುದನ್ನು ಇಲ್ಲಿ ನೆನೆಯಬಹುದು. ಹೀಗೆ ಬೌದ್ಧರ ಲೇಣಗಳ ಬಳಿಕ ಜೈನರ ಬಸದಿಗಳು ನಿರ್ಮಾಣವಾಗಿದ್ದು, ಇವೆರಡನ್ನೂ ಸೇರಿಸಿ 'ಲೇಣಬಸದಿ' ಎಂದೇ ಕರೆಯಲು ಪ್ರಾರಂಭಿಸಿರಬೇಕು. ಆಮೇಲೆ, ಹಿಂದುಗಳಾದ ಚಾಲುಕ್ಯರ ಕಾಲದಲ್ಲಿ ಬೌದ್ಧರ ಅಸ್ತಿತ್ವ ಮರೆಯಾದ ಬಳಿಕ, ಲೇಣವೆಂಬುದರ ಅರ್ಥವೂ ಮರೆಯಾಗಿ ಹೋಗಲು 'ಕಲ್ಲನ್ನು ಮೇಣದಂತೆ ಉಪಯೋಗಿಸಿ ಮಾಡಿದ ಕಲಾಕೃತಿ' ಎಂಬ ಅರ್ಥವನ್ನು ಭ್ರಮಿಸಿ, ಮೇಣಬಸದಿಯೆಂಬ ಸಮೀಪ ಉಚ್ಚಾರದ ಪದವನ್ನು ಜನತೆ ಸೃಷ್ಟಿಸಿಕೊಂಡಿರಬಹುದು. ಕಾಲಕ್ರಮದಲ್ಲಿ ಹಿಂದೂ ಗುಹಾಂತರ್ಗತ

ದೇವಾಲಯಗಳು ಅಲ್ಲಿ ಹುಟ್ಟಿಕೊಂಡಿದ್ದರೂ ಆಗಲೇ ಬಳಕೆಯಲ್ಲಿದ್ದ 'ಲೇಣಬಸದಿ'ಯೆಂಬುದಕ್ಕೆ ಮೂರನೆಯದಾಗಿ, 'ದೇವಾಲಯ'ವೆಂಬ ಹಿಂದೂ ಪದವನ್ನು ಜೋಡಿಸಿಕೊಂಡರೆ ಹೆಸರು ದೀರ್ಘವಾಗುವದೆಂಬ ಕಾರಣವಾಗಿ, ಲೇಣಬಸದಿ (ಮೇಣಬಸದಿ) ಅಷ್ಟನ್ನೇ ಹೆಸರಿಗೆ ಬಳಸುತ್ತ ಬಂದರೆಂದು ಕಾಣುತ್ತದೆ. ಇದರಿಂದ ಪ್ರಕಟವಾಗುವ ಅಂಶವೆಂದರೆ, ೧. ಬೆಟ್ಟದ ಮೇಲೆ ಮೊದಲು ಕೊರೆದುದು ಬೌದ್ಧಸನ್ಯಾಸಿಗಳ 'ಲೇಣ'. ೨. ಆಮೇಲೆ ಕೊರೆದುವು 'ಜೈನ ಬಸದಿ.' ೩. ತರುವಾಯ ಕಾಣಿಸಿಕೊಂಡುವು ಹಿಂದು 'ದೇವಾಲಯ'ಗಳು. ೪.ಲೇಣ ಬಸದಿಯೆಂಬುದರ ಭ್ರಾಮಕ ರೂಪ ಮೇಣಬಸದಿ.[೨೨]

ಹೀಗೆ ಒಂದು ವಿಷಯವನ್ನು ಗುರಿಯಾಗಿಟ್ಟುಕೊಂಡು ನಡೆಸಿದ ನೇರ ಶೋಧ ವಿವರಣಾತ್ಮಕ ಸಂಶೋಧನೆಯೆನಿಸುತ್ತದೆ. ಈ ವಿವರಣಾತ್ಮಕ ಸಂಶೋಧನೆ ಗ್ರಂಥವ್ಯಾಪ್ತಿಯದಿರಬಹುದಾದರೂ, ಲೇಖನರೂಪದಲ್ಲಿಯೇ ಈ ಕ್ರಿಯೆ ಹೆಚ್ಚು ನಡೆಯುತ್ತದೆ. ಹೀಗಾಗಿ ಸಂಶೋಧನಕ್ಷೇತ್ರದಲ್ಲಿ ಇದರ ಸೃಷ್ಟಿ ಚಟುವಟಿಕೆ ಬಹಳ. ಈ ಬಿಡಿಬಿಡಿ ಶೋಧಗಳೇ ಒಂದು ಇಡೀ ಕ್ಷೇತ್ರವನ್ನು ತೆರೆತೆರೆದು ತೋರಿಸುತ್ತದೆ. ಉದಾ: ಮೊದಮೊದಲು ಆದಿಪುರಾಣ-ವಿಕ್ರಮಾರ್ಜುನ ವಿಜಯಗಳನ್ನು ಆಧಾರವಾಗಿಟ್ಟುಕೊಂಡು ಪಂಪನ ಜೀವನವನ್ನು ಕುರಿತು ಭಾಗಶಃ ಸಂಶೋಧನೆ ನಡೆಯಿತು. ಆಮೇಲೆ ಅರಿಕೇಸರಿಯು ಬೋಧನದ ಚಾಲುಕ್ಯನೆಂಬ ಶೋಧ ಪ್ರಕಟಗೊಂಡು ಪಂಪನ ವಿಷಯದಲ್ಲಿ ಇನ್ನೊಂದು ಪುಟ ತೆರೆದುಕೊಂಡಿತು. ಕುರ್ಕಿಯಾಲ್ ಶಾಸನ ಲಭಿಸಿ ಬೇರೊಂದು ಮುಖ ಪ್ರಕಟವಾಯಿತು. ಇತ್ತೀಚೆಗೆ ಅಣ್ಣಿಗೇರಿಯಲ್ಲಿ ಪಂಪನ ವಂಶಜರು ಇನ್ನೂ ಇರುವ ಅಂಶ ಬೆಳಕಿಗೆ ಬಂದಿತು. ಹೀಗೆ ಬಿಡಿಬಿಡಿಯಾಗಿ ನಡೆದ ವಿವರಣಾತ್ಮಕ ಸಂಶೋಧನೆ ಕ್ರಮವಾಗಿ ಪಂಪನ ಚರಿತ್ರೆಯನ್ನು ಕತ್ತಲೆಯಿಂದ ಬೆಳಕಿಗೆ ತಂದಿತು. ಆದುದರಿಂದ, ವಿವರಣಾತ್ಮಕ ಸಂಶೋಧನೆಯು ಗಾತ್ರದಲ್ಲಿ ಸಣ್ಣದಾದರೂ ಪ್ರಯೋಜನ ದೃಷ್ಟಿಯಿಂದ ಮಹತ್ವದ್ದೆಂದೇ ಹೇಳಬೇಕು.

ವಿವರಣಾತ್ಮಕ ಸಂಶೋಧನೆ ಒಂದು ನಿರ್ದಿಷ್ಟ ವಿಷಯದ ಇಲ್ಲವೆ ಒಂದು ನಿರ್ದಿಷ್ಟ ಸಮಸ್ಯೆಯ ಶೋಧವಾಗಿದ್ದರೆ, ಐತಿಹಾಸಿಕ ಸಂಶೋಧನೆಯು ಹೆಸರೇ ಸೂಚಿಸುವಂತೆ ಒಂದು ವಿಷಯದ ಅಥವಾ ಒಂದು ಸಮಸ್ಯೆಯ ಕಾಲಕ್ರಮಾನುಗತ ಅಭ್ಯಾಸವಾಗಿದೆ. ಅಂದರೆ, ಒಂದು ವಿಷಯ ಕಾಲಕಾಲಕ್ಕೆ ಲೋಪ ಆಗಮ ಆದೇಶಗಳಿಗೆ ತುತ್ತಾಗುತ್ತ ಬಂದುದರ ಶೋಧವಾಗಿರುತ್ತದೆ. ವಿವರಣಾತ್ಮಕ ಸಂಶೋಧನೆ ಒಂದು ಹಂತದ ಅಭ್ಯಾಸವಾಗಿದ್ದರೆ, ಇಂಥ ಅನೇಕ ಹಂತಗಳ ಅಭ್ಯಾಸದ ಸರಮಾಲೆಯಾಗಿದೆ, ಐತಿಹಾಸಿಕ ಸಂಶೋಧನೆ. ಉದಾ: ಚಿತ್ರದುರ್ಗ ಹೆಸರಿನ ಐತಿಹಾಸಿಕತೆ.[೨೩]

ಇಂದು ಚಿತ್ರದುರ್ಗ, ಚಿಟ್ರಕಲ್‌ಡ್ರುಗ್ ಎಂದು ಕರೆಯಿಸಿಕೊಳ್ಳುವ ಈ ಹೆಸರಿನ ಪ್ರಾಚೀನ ಹೆಸರು 'ಬೆಮ್ಮತ್ತನಕಲ್ಲು' ಎಂದು ವಿದ್ವಾಂಸರು ಹೇಳುತ್ತಿದ್ದರು. ಆದರೆ ಇದರ ನಿಜವಾದ ರೂಪ 'ಚಿಮ್ಮತ್ತನಕಲ್ಲು' ಎಂದು ನಾನು ಬೇರೊಂದೆಡೆ ಪ್ರತಿಪಾದಿಸಿದ್ದೇನೆ. ಇಷ್ಟರಮಟ್ಟಿಗೆ ಇದು ವಿವರಣಾತ್ಮಕ ಸಂಶೋಧನೆ. ಇನ್ನು ಐತಿಹಾಸಿಕ ಸಂಶೋಧನೆ: ಚಿತ್ರದುರ್ಗದ ಒಂದು ಗುಡ್ಡದ ಮೇಲಿನ ಶಾಸನಗಳು

---

೨೨. ಮೇಣಬಸದಿ-ಎಂ. ಎಂ. ಕಲಬುರ್ಗಿ (ಸಂಯುಕ್ತ ಕರ್ನಾಟಕ. ೮-೧೧-೧೯೮೧).
೨೩. ಚಿತ್ರದುರ್ಗದ ಪ್ರಾಚೀನ ಹೆಸರು-ಎಂ. ಎಂ. ಕಲಬುರ್ಗಿ (ಮಾರ್ಗ-II, ಪು.೧೮೩).


ಚಿಮ್ಮತ್ತನಕಲ್ಲು, ಚಿಮ್ಮತ್ತನೂರು ಕಲ್ಲು ಹೆಸರುಗಳನ್ನು, ಇನ್ನೊಂದು ಗುಡ್ಡದ ಮೇಲಿನ ಶಾಸನಗಳು ಸೂಳ್ಗಲ್ಲು ಎಂಬ ಹೆಸರನ್ನು ಹೊತ್ತು ನಿಂತಿವೆ. ಇದರಿಂದ ಮೂಲತಃ ಇವೆರಡು ಸ್ವತಂತ್ರ ಊರುಗಳೆಂದು ಹೇಳಬಹುದಾಗಿದೆ. ಇದು ಚಿತ್ರದುರ್ಗ ಹೆಸರಿನ ಇತಿಹಾಸದಲ್ಲಿ ಪ್ರಥಮ ಘಟ್ಟ. ಕಾಲಕ್ರಮದಲ್ಲಿ ಈ ಊರುಗಳು ಬೆಳೆದು ಒಂದರಲ್ಲಿ ಒಂದು ಬೆರೆತುಹೋದವು. ಆಗ ಚಿಮ್ಮತ್ತನೂರು ಕಲ್ಲು ಎಂಬ ಹೆಸರು ಇನ್ನೊಂದು ಹೆಸರನ್ನು ನುಂಗಿಹಾಕಿತು. ಒಂದರೊಳಗೊಂದು ಸೇರಿಕೊಳ್ಳುವುದರಿಂದ ರೂಪತಾಳಿದ ದೊಡ್ಡ ಊರಿಗೆ ಚಿಮ್ಮತ್ತನೂರುಕಲ್ಲು ಎಂಬುದೇ ಹೆಸರಾಗಿ ಬಳಕೆಗೊಳ್ಳತೊಡಗಿತು. ಇದೇ ಮುಂದೆ ಜನತೆಯ ಬಾಯಿಯಲ್ಲಿ ಚಿಮ್ಮತ್ತನ ಕಲ್ಲು, ಚಿತ್ತರಕಲ್ಲು, ಚಿತ್ರಕಲ್ಲು ಎಂದೂ ಬಳಕೆಯಾಗುತ್ತಿತ್ತು. ಇದು ಈ ಊರ ಹೆಸರಿನ ಇತಿಹಾಸದಲ್ಲಿ ಎರಡನೆಯ ಘಟ್ಟ, ಕಾಲಕ್ರಮದಲ್ಲಿ ಈ ಊರು ರಾಜಕೀಯ ನೆಲೆಯಾಗಿ ಪರಿಣಮಿಸಲು ಇದಕ್ಕೆ ಒಂದು ಕೋಟೆ. ಅಂದರೆ ದುರ್ಗವನ್ನು ಕಟ್ಟಿದರು. ಆಗ ಇದನ್ನು ಚಿತ್ರಕಲ್ಲುದುರ್ಗ ಎಂದು ಕರೆಯತೊಡಗಿದರು. ಮಾತಿನ ಸೌಲಭ್ಯ ಕಾರಣವಾಗಿ ಇದು ಒಂದು ಕಡೆ ದೇಶೀಯರ ಬಾಯಿಯಲ್ಲಿ ಚಿತ್ರದುರ್ಗವೆಂದು ಕರೆಯಿಸಿಕೊಂಡಿತು. ಇನ್ನೊಂದು ಕಡೆ ವಿದೇಶೀಯರ ಬಾಯಿಯಲ್ಲಿ ಚಿಟ್ರಕಲ್‌ಡ್ರುಗ್ ಎಂದಾಯಿತು. ಇದು ಈ ಊರಿನ ಇತಿಹಾಸದಲ್ಲಿ ಮೂರನೆಯ ಘಟ್ಟವಾಗಿದೆ. ಹೀಗೆ ಯಾವುದೇ ವಿಷಯವನ್ನು ಕುರಿತು ಎಳೆ ಕಡಿದು ಹೋಗದಂತೆ ಇತಿಹಾಸವನ್ನು ಘಟ್ಟ ಘಟ್ಟವಾಗಿ ತೋರಿಸುವುದು ಐತಿಹಾಸಿಕ ಸಂಶೋಧನೆ ಎನಿಸುತ್ತದೆ.

ಈ ವಿವರಣಾತ್ಮಕ ಸಂಶೋಧನೆ ಮತ್ತು ಇತಿಹಾಸಿಕ ಸಂಶೋಧನೆಗಳಿಗಿಂತ ಭಿನ್ನವಾದುದು ತೌಲನಿಕ ಸಂಶೋಧನೆ. ಇಲ್ಲಿ ತುಲನೆ ಮೂರು ಬಗೆಯಾಗಿರಬಹುದು. ೧. ಒಂದು ಸಮಸ್ಯಾತ್ಮಕ ವಿಷಯದದೊಂದಿಗೆ ಅದೇ ಬಗೆಯ ಇನ್ನೊಂದು ವಿಷಯದ ತುಲನೆ. ೨. ಒಂದು ಸಮಸ್ಯಾತ್ಮಕ ವಿಷಯದ ಒಂದು ಘಟ್ಟದೊಂದಿಗೆ ಅದೇ ಬಗೆಯ ಇನ್ನೊಂದು ವಿಷಯ ಘಟ್ಟದ ತುಲನೆ. ೩. ಒಂದು ಸಮಸ್ಯೆಯ ಸಮಸ್ತ ಘಟ್ಟಗಳೊಂದಿಗೆ ಅದೇ ಬಗೆಯ ಇನ್ನೊಂದು ಸಮಸ್ಯೆಯ ಸಮಸ್ತ ಘಟ್ಟಗಳ ತುಲನೆ. ಈ ಮೂರು ರೀತಿಯ ತುಲನಾತ್ಮಕ ಸಂಶೋಧನೆಗೆ 'ಸತಿಪದ್ಧತಿ' ಉತ್ತಮ ಉದಾಹರಣೆಯಾಗಿದೆ. ಕರ್ನಾಟಕದಲ್ಲಿ, ಅದೇ ರೀತಿ ಅನೇಕ ಪ್ರಾಂತಗಳಲ್ಲಿ ಈ ಪದ್ಧತಿ ಹಲವು ಘಟ್ಟಗಳನ್ನು ರೂಪಿಸಿಕೊಂಡು ಬೆಳೆದುಬಂದಿದೆ. ಇದನ್ನು ಕುರಿತು ಮೇಲೆ ಹೇಳಿದ ಮೂರು ಬಗೆಯ ತೌಲನಿಕ ಅಧ್ಯಯನ ನಡೆಸಬಹುದಾಗಿದೆ. ಸುಧಾರಣಾವಾದಿಗಳಾದ ಶರಣರು ಕಾರಣವಾಗಿ ಇದು ಮಿಕ್ಕ ಪ್ರದೇಶಗಳಿಗಿಂತ ಅವರ ಚಳವಳಿಯ ಪ್ರದೇಶವಾದ ಉತ್ತರ ಕರ್ನಾಟಕದಲ್ಲಿ ಕಡಿಮೆ ಪ್ರಮಾಣದಲ್ಲಿ ಜರುಗಿದಂತಿದೆ. ವಿಜಯನಗರದ ಕಾಲದಲ್ಲಿ ಇದು ಮತ್ತೆ ವರ್ಧಿಸಲು ಮುಸಲ್ಮಾನರ ದಾಳಿ ಹಾಗೂ ಬಹುಸಂಖ್ಯೆಯಲ್ಲಿ ಹುಟ್ಟಿಕೊಂಡ ಪಾಳೆಯಗಾರರ ಪರಸ್ಪರ ಘರ್ಷಣೆ ಕಾರಣವಾಗಿರಬೇಕು. ಜೈನರ ದೃಷ್ಟಿಯಲ್ಲಿ ಇದು ದುರ್ಮರಣ. ಹೀಗಿದ್ದೂ ಹತ್ತನೆಯ ಶತಮಾನದಷ್ಟು ಪೂರ್ವದಲ್ಲಿಯೇ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ಮೊದಲಾದವರು ಸತಿಹೋದುದಕ್ಕೆ ಹಿಂದುಗಳ ಪ್ರಭಾವವೇ ಕಾರಣವೆಂದು ತೋರುತ್ತದೆ. ಸತ್ತವರನ್ನು ಸುಡುವ ಸಮಾಜದಲ್ಲಿ ಚಿತಾಪ್ರವೇಶ ರೂಪದ ಸತಿಪದ್ಧತಿ ರೂಢಿಯಲ್ಲಿದ್ದರೆ, ಹೂಳುವ ಸಮಾಜದಲ್ಲಿ ಜೀವಂತ ಹುಗಿಯುವ ರೂಪದ ಸತಿಪದ್ಧತಿ ರೂಢಿಯಲ್ಲಿದ್ದ ಬಗೆಗೆ ದಾಖಲೆಗಳಿವೆ.

ಹೂಳುವ, ಸುಡುವ ಸತಿಪದ್ಧತಿಗಳ ಬಗ್ಗೆಯೂ ತೌಲನಿಕ ಅಧ್ಯಯನ ನಡೆಸಬಹುದಾಗಿದೆ. ಬಹುಕಾಲದ ಹಿಂದೆಯೇ ಕಂಡುಬರುವ ಕಿಳ್ಗುಂಟೆ ಎಂಬುದು ಹೂಳುವ ಸಂಪ್ರದಾಯವನ್ನೂ, ಬೆಳಾವಡಿಚ (ವೇಳೆವಾಳಿ) ಎಂಬುದು ಸುಡುವ ಪದ್ಧತಿಯನ್ನೂ ಸೂಚಿಸುವಂತಿವೆ. ಇವೆರಡರಲ್ಲಿ ಕಿಳ್ಗುಂಟೆಯ ಪ್ರಯೋಗ ಪ್ರಾಚೀನತಮವಾಗಿರುವುದರಿಂದ ಶೈವರಾದ ದ್ರಾವಿಡರ ಈ ಪ್ರದೇಶದಲ್ಲಿ ಪತಿಯೊಡನೆ ಸತಿಯರನ್ನು ಹೂಳುವುದೇ ಮೂಲತಃ ಅಸ್ತಿತ್ವದಲ್ಲಿದ್ದು, ಆಮೇಲೆ ಆರ್ಯರಿಂದ ಸುಡುವುದು ಪ್ರಚಾರದಲ್ಲಿ ಬಂದ ಕಾರಣ ಬೆಳಾವಡಿಚ (ಬೇಳ್=ಸುಡು) ಎಂಬ ಪದ ಹುಟ್ಟಿಕೊಂಡಿರಬಹುದು.[೨೪] ಹೀಗೆ ಒಂದು ಪ್ರಾಂತದ ಒಂದು ವಿಷಯವನ್ನು ಕುರಿತು ಇಷ್ಟು ಬಗೆಯಾಗಿ ತೌಲನಿಕ ಅಧ್ಯಯನ ನಡೆಸುವುದಾದರೆ ಒಂದಕ್ಕಿಂತ ಹೆಚ್ಚು ಪ್ರಾಂತಗಳನ್ನು ಗಮನದಲ್ಲಿಟ್ಟುಕೊಂಡು ನಡೆಸುವ ತೌಲನಿಕ ಅಭ್ಯಾಸವು ಅನೇಕ ಬಗೆಯದೂ, ಸಂಕೀರ್ಣ ಸ್ವರೂಪದ್ದೂ ಆಗುವುದೆಂದು ಬೇರೆ ಹೇಳಬೇಕಿಲ್ಲ.

ಈವರೆಗೆ ವಿವರಿಸಿದ ಮೂರು ಬಗೆಗಳಲ್ಲಿ ವಿವರಣಾತ್ಮಕಕ್ಕಿಂತ ಐತಿಹಾಸಿಕ, ಐತಿಹಾಸಿಕಕ್ಕಿಂತ ತೌಲನಿಕ ಸಂಶೋಧನೆ ಶ್ರಮದಾಯವೆಂದು ಸಹಜವಾಗಿ ತಿಳಿದುಬರುತ್ತದೆ. ಇವುಗಳಲ್ಲಿ ವಿದ್ವಾಂಸರು ಪ್ರಧಾನವಾಗಿ ಕೈಕೊಳ್ಳುವುದೆಂದರೆ ವಸ್ತು, ಭಾಷೆ, ಕ್ರಿಯೆ, ಜ್ಞಾನಗಳ ರೂಪವಿವರಣಾತ್ಮಕ ಸಂಶೋಧನೆಯೇ. ಇದು ಇತ್ತೀಚೆಗೆ ಗುಣವಿವರಣಾತ್ಮಕವಾಗಿ ಬಿಚ್ಚಿಕೊಳ್ಳುತ್ತಲಿದೆ.

ಈ ಪ್ರಕರಣದಲ್ಲಿ ವಿವರಿಸಿದ ಎಲ್ಲ ಬಗೆಯ ಸಂಶೋಧನೆಗಳ ಅಂತರ್‌ಸಂಬಂಧೀಯತೆಯಿಂದ ಸಂಶೋಧನೆಯ ಬಗೆಗಳು ಅನೇಕ ಆಗುತ್ತವೆ ಎಂಬುದನ್ನು ಇಲ್ಲಿ ನೆನಪಿಡಬೇಕು. ಈ ವರೆಗಿನ ವಿವೇಚನೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಸಂಶೋಧನೆಗಾಗಿ ಒಂದು 'ವಸ್ತು'ವನ್ನು ಆಯ್ದುಕೊಂಡು, ಅದನ್ನು ರೂಪನಿಷ್ಠ–ಗುಣನಿಷ್ಠವೆಂಬ ಉದ್ದೇಶ, ವಿಶ್ಲೇಷಣ–ವ್ಯಾಖ್ಯಾನವೆಂಬ ವಿಧಾನ ಮತ್ತು ವಿವರಣಾತ್ಮಕ–ಐತಿಹಾಸಿಕ–ತುಲನಾತ್ಮಕವೆಂಬ ಸ್ವರೂಪ ನೆಲೆಗಳಲ್ಲಿ ಸಂಶೋಧನೆಗೆ ಗುರಿಪಡಿಸಿದರೆ, ಈ ಕೆಳಗಿನಂತೆ ಆರು ಬಗೆಯ ಸಂಶೋಧನೆಗಳಿಗೆ ಅಲ್ಲಿ ಅವಕಾಶ ಸಿಗುತ್ತದೆ.



೨೪. ಕಿಟ್ಟುಂಟೆ–ವೇಳೆವಾಟಿ–ಲೆಂಕವಾಟಿ–ಗರುಡ : ಎಂ.ಎಂ. ಕಲಬುರ್ಗಿ(ಮಾರ್ಗ II ಪು.೮೧)

ಇದರಿಂದ ಸಿದ್ಧವಾಗುವ ಆರು ಬಗೆಗಳು ಹೀಗಿವೆ.

೧. ವಸ್ತು ಆಧಾರಿತ ರೂಪನಿಷ್ಠ ವಿಶ್ಲೇಷಣವಿಧಾನದ ವಿವರಣಾತ್ಮಕ ಸಂಶೋಧನೆ.

೨. ವಸ್ತು ಆಧಾರಿತ ರೂಪನಿಷ್ಠ ವಿಶ್ಲೇಷಣವಿಧಾನದ ಐತಿಹಾಸಿಕ ಸಂಶೋಧನೆ.

೩. ವಸ್ತು ಆಧಾರಿತ ರೂಪನಿಷ್ಠ ವಿಶ್ಲೇಷಣವಿಧಾನದ ತೌಲನಿಕ ಸಂಶೋಧನೆ.

೪. ವಸ್ತು ಆಧಾರಿತ ಗುಣನಿಷ್ಠ ವ್ಯಾಖ್ಯಾನವಿಧಾನದ ವಿವರಣಾತ್ಮಕ ಸಂಶೋಧನೆ.

೫. ವಸ್ತು ಆಧಾರಿತ ಗುಣನಿಷ್ಠ ವ್ಯಾಖ್ಯಾನವಿಧಾನದ ಐತಿಹಾಸಿಕ ಸಂಶೋಧನೆ.

೬. ವಸ್ತು ಆಧಾರಿತ ಗುಣನಿಷ್ಠ ವ್ಯಾಖ್ಯಾನವಿಧಾನದ ತೌಲನಿಕ ಸಂಶೋಧನೆ.

'ವಸ್ತು'ವಿಗೆ ಅನ್ವಯಿಸಿದ ಈ ಮಾದರಿಯನ್ನು ಮಿಕ್ಕ ಭಾಷೆ, ಕ್ರಿಯೆ, ಜ್ಞಾನಗಳಿಗೂ ಅನ್ವಯಿಸಿದರೆ ಒಟ್ಟು ಸಂಶೋಧನೆಯಲ್ಲಿ (೬x೪=)೨೪ ಬಗೆಗಳು ಬಿಚ್ಚಿಕೊಳ್ಳುತ್ತವೆಯೆಂದು ಹೇಳಬಹುದು. ಇವು ಸಂಶೋಧನೆಯ ಮುಖ್ಯ ಪ್ರಕಾರಗಳು. ಇತರ ಪ್ರಕಾರಗಳು ಹೀಗಿವೆ:

ಆನ್ವಯಿಕ ಸಂಶೋಧನೆ :

ಕವಿಯ ಒಳಗಿರುವ ಕಲಾವಿದ ಕಾವ್ಯರಚಿಸುವುದು ಮಾನವೀಯ ಪ್ರಜ್ಞೆಯ (Humanism) ಜಾಗ್ರತಿಗಾಗಿ ಮತ್ತು ಸಾಮಾಜಿಕ ನ್ಯಾಯದ (Social Justice) ಅನುಷ್ಠಾನಕ್ಕಾಗಿ – ಎಂಬ ಧೋರಣೆ ಇಂದು ಬೆಳೆಯುತ್ತಲಿದೆ. ಈ ಧೋರಣೆಯ ಪ್ರಸಾರಕ್ಕಾಗಿ ಪರಿಸರವನ್ನು ವಿಮರ್ಶಿಸುವ, ಪರಿಸರಕ್ಕೆ ಸಂವಹನಗೊಳ್ಳುವಂತೆ ಹೇಳುವ ಕೆಲಸಗಳಲ್ಲಿ ಸಾಹಿತ್ಯ ಇಂದು ನಿರತವಾಗಿದೆ. ಪರಿಸರದ ತಿದ್ದುಪಡಿಗಾಗಿ ನಿರ್ಮಾಣವಾಗುವ ಈ ಬಗೆಯದು (ಉದಾ: ವಚನ ಸಾಹಿತ್ಯ) ಆನ್ವಯಿಕ ಸಾಹಿತ್ಯ (Applied Literature) ಎನಿಸಿಕೊಳ್ಳುತ್ತದೆ. ಇಂದು ವಿಜ್ಞಾನ, ಸಮಾಜವಿಜ್ಞಾನ ನಿಕಾಯಗಳಿಗೆ ಸಂಬಂಧಿಸಿದ ಸಂಶೋಧನೆಯಲ್ಲಿ 'ವಿದ್ವತ್ತಿನ ಬೆಳವಣಿಗೆ'ಗಾಗಿ ಎಂಬ ಅಕಾಡೆಮಿಕ್ ನಿಲುವಿನೊಂದಿಗೆ 'ಸಾಮಾಜಿಕ ಪ್ರಗತಿ'ಗಾಗಿ ಎಂಬ ಅಪ್ಲಾಯಿಡ್ ನಿಲುವೂ ಬೆಳೆದುಬರುತ್ತಲಿವೆ. ಇದೇ ರೀತಿ ಕಲಾ ನಿಕಾಯದ ಸಂಶೋಧನೆಯೂ ಅಕಾಡೆಮಿಕ್ ಧೋರಣೆಯುಳ್ಳುದಲ್ಲದೆ ಪರಿಸರವನ್ನು ತಿದ್ದುವ ಧೋರಣೆಯುಳ್ಳದೂ ಆಗಿರಬೇಕೆನ್ನುವುದು ಆನ್ವಯಿಕ ಸಂಶೋಧನೆಯೆನಿಸುತ್ತದೆ.

Paulo De Carvalho-Neto ಅವರ History of Ibero American Folklore Mestizo Cultures (೧೯೬೯) ಗ್ರಂಥದಲ್ಲಿ ಅಪ್ಲಾಯಿಡ್ ಪೋಕಲೋರನ್ನು ಕುರಿತು ಹೀಗೆ ಅಭಿಪ್ರಾಯಪಡಲಾಗಿದೆ: "ಒಂದು ಸಮಾಜವನ್ನು ಉತ್ತಮಪಡಿಸುವ ದೃಷ್ಟಿಯಿಂದ ಅದನ್ನು ಪ್ರಭಾವಿಸುವ ಗುರಿಯುಳ್ಳ ಪ್ರಾದೇಶಿಕ, ಶೈಕ್ಷಣಿಕ ಜಾನಪದವೇ ಆನ್ವಯಿಕ ಜಾನಪದ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಂರಕ್ಷಿಸಲು ಮತ್ತು ಮರು ಸ್ಥಾಪಿಸಲು ಯೋಗ್ಯವಾದ ಅಂಶಗಳನ್ನು ಆಯ್ಕೆಮಾಡುವುದು ಮತ್ತು ನಾಶಮಾಡಬೇಕಾದ ಅಂಶಗಳನ್ನು ಗುರುತಿಸುವುದು, ಈ ಮೂಲಕ ಆನ್ವಯಿಕ ಜಾನಪದದ ಉದ್ದೇಶಗಳನ್ನು ಈಡೇರಿಸಬಹುದು."[೨೫] ಆನ್ವಯಿಕ ಜಾನಪದವನ್ನು ಕುರಿತ ಈ ವಿಚಾರವನ್ನು ಗಮನಿಸಿದರೆ, ಆನ್ವಯಿಕ ಸಂಶೋಧನೆ ಎಂದರೇನೆಂಬುದು ಸ್ಪಷ್ಟವಾಗುತ್ತದೆ. ಪರಿಸರವನ್ನು ವಿಚಾರ

---

೨೫. ಆನ್ವಯಿಕ ಜಾನಪದ – ಬಿ. ಎ. ವಿವೇಕ ರೈ. (ಪು.೯೦)

ಮಾಡಲು ಹಚ್ಚದೆ, ತಿದ್ದಿಕೊಳ್ಳಲು ಪ್ರೇರೇಪಿಸದೆ, ಕೇವಲ ವಿದ್ವಾಂಸರ ಮಟ್ಟದಲ್ಲಿ ಜ್ಞಾನದ ಮುಂದುವರಿಕೆಗಾಗಿ ನಡೆಸಲು ಅಕೆಡೆಮಿಕ್ ರೀಸರ್ಚ್‌ಗಿಂತ ಈ ಅಪ್ಲಾಯಿಡ್ ರೀಸರ್ಚ್ ಭಿನ್ನವಾದುದು. ಉದ್ದೇಶ, ಸಂವಹನ ಎರಡೂ ನೆಲೆಗಳಲ್ಲಿ ಜನಪರವಾಗಿ ದುಡಿಯುವುದು ಆನ್ವಯಿಕ ಸಂಶೋಧನೆಯ ಹೃದಯವಾಗಿದೆ. ಒಂದರ್ಥದಲ್ಲಿ ಸಂಶೋಧನೆಯ ಸಾಮಾಜೀಕರಣ ಇದರ ಗುರಿಯಾಗಿದೆ. ಹಳೆಯ ಪರಿಸರವನ್ನು ಶೋಧಿಸುವುದರೊಂದಿಗೆ ಹೊಸ ಪರಿಸರವನ್ನು ಹುಟ್ಟುಹಾಕುವ ರೀತಿಯಲ್ಲಿ ಇದು ಕೆಲಸಮಾಡುತ್ತದೆ. ಅಂದರೆ, ಮಾಡುವ ಸಂಶೋಧನೆಯು ಭೂತಸಂಬಂಧಿ (Past Oriented) ಆಗಿ ಉಳಿಯದೆ, ವರ್ತಮಾನ ಸಂಬಂಧಿ (Present Oriented) ಆಗಿಯೂ ಇರಬೇಕೆಂಬುದು ಈ ವಿಧಾನದ ಉದ್ದೇಶವಾಗಿರುತ್ತದೆ. ಇದರಿಂದ ಸಂಶೋಧನೆಗೆ ಪ್ರಸ್ತುತತೆ ಪ್ರಾಪ್ತವಾಗುತ್ತದೆ. ಈ ಬಗೆಯ ಸಂಶೋಧನೆಗೆ ಕೇವಲ ಸಾಹಿತ್ಯಜ್ಞಾನ ಸಾಲದು. ಸಮಾಜವಿಜ್ಞಾನ ಮೊದಲಾದ ಕ್ಷೇತ್ರಗಳ ತಿಳುವಳಿಕೆಯೂ ಅಗತ್ಯ. ಆಗ ಮಾತ್ರ ಗತಕಾಲದ ಒಂದು ವಿಷಯವನ್ನು ಘಟಕದಂತೆ ಎತ್ತಿಕೊಂಡು. ಅದರ ಸಂದರ್ಭವನ್ನು (Context) ಶೋಧಿಸುವುದು, ಆ ಸಂದರ್ಭದಲ್ಲಿ ಅದು ನಿರ್ವಹಿಸುತ್ತಿದ್ದ ಕ್ರಿಯೆಯನ್ನು (Function) ಪತ್ತೆಹಚ್ಚಿ, ಅದರ 'ಮೂಲಗುಣ'ವನ್ನು ಕಂಡುಹಿಡಿದು, ಅದು ತನ್ನ ವಿಕಾಸಕ್ರಮದಲ್ಲಿ ಮೈಗೂಡಿಸಿಕೊಳ್ಳುತ್ತ ಬಂದ ಒಳಿತು-ಕೆಡಕುಗಳನ್ನು ಎತ್ತಿತೋರಿಸಿ, ಅದರ ವರ್ತಮಾನ ರೂಪದಲ್ಲಿರುವ ನಿಷೇಧಾತ್ಮಕ ಅಂಶಗಳನ್ನು ಬೆರಳುಮಾಡಿ ಹೇಳುವುದು 'ಆನ್ವಯಿಕ ಸಂಶೋಧನೆ'ಯಲ್ಲಿ ನಡೆಯಬೇಕಾಗುತ್ತದೆ. ಒಂದು ನಿರ್ದಿಷ್ಟ ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸಬಹುದು. ವೀರಶೈವರಲ್ಲಿ ಇಂದು 'ಜಂಗಮ' ಎಂಬ ಪುರೋಹಿತ ಜಾತಿಯಿದೆ. ಮೂಲತಃ ಇದು ಗುಣವಾಚಿಯಾಗಿದ್ದಿತೆಂದು ಶೋಧಿಸಿಕೊಳ್ಳುವುದು, ಈ ವೀರಪರಂಪರೆಯ ಪ್ರಥಮ ಘಟ್ಟದ ಮೂಲಪುರುಷ ಅಲ್ಲಮಪ್ರಭು ಅಂತ್ಯಜನಾಗಿದ್ದನೆಂದು, ದ್ವಿತೀಯ ಘಟ್ಟದ ಮೂಲಪುರುಷ ತೋಂಟದ ಸಿದ್ಧಲಿಂಗ ಭಕ್ತನಾಗಿದ್ದನೆಂದು ಉದಾಹರಣೆಯಿಂದ ಖಚಿತಪಡಿಸುವುದು. ತನ್ಮೂಲಕ ಇಂದು ಜಾತಿಜಂಗಮರೇ ವಿರಕ್ತಪೀಠವೇರುವುದು ಸತ್ಯದ ವಿಪರ್ಯಾಸವೆಂದು ತೋರಿಸಿಕೊಡುವುದು ಆನ್ವಯಿಕ ಸಂಶೋಧನೆ ಎನಿಸುತ್ತದೆ. ಇತರ ಕ್ಷೇತ್ರಗಳಿಗಿಂತ ಸಂಸ್ಕೃತಿ ಶೋಧದ ಕ್ಷೇತ್ರದಲ್ಲಿ ಈ ಬಗೆಯ ಸಂಶೋಧನೆಗೆ ಹೆಚ್ಚಿನ ಅವಕಾಶವಿರುತ್ತಿದ್ದು, ಇದು ವ್ಯಾಖ್ಯಾನಮುಖಿಯಾಗಿ ನಡೆಯುವುದೇ ಹೆಚ್ಚು.

ಕನ್ನಡಕ್ಕೆ ಬಂದರೆ ಇಂಥ ಸಂಶೋಧನೆಗೆ ಅನೇಕ ತೊಂದರೆಗಳಿವೆ. ಮೊದಲನೆಯದಾಗಿ ಆಕರಗಳ ಕೊರತೆ, ಎರಡನೆಯದಾಗಿ ಆಕರಗಳ ಪ್ರಾಮಾಣಿಕತೆಯ ಕೊರತೆ. ಇದರಿಂದಾಗಿ ಒಂದು ವಿಚಾರದ ಮೂಲಸ್ವರೂಪವನ್ನೂ ಅದರ ವಿಕಾಸಕ್ರಮವನ್ನೂ ಅರಿಯುವುದು ಅವಶ್ಯವಾಗಿದೆ. ವಿಚಾರವೊಂದರ ಮೂಲಸ್ವರೂಪವನ್ನು ನಿರ್ಧರಿಸುವ ವಿವರಣಾತ್ಮಕ ಸಂಶೋಧನೆ ಮತ್ತು ಅದರ ವಿಕಾಸಸ್ವರೂಪವನ್ನು ಹೇಳುವ ಐತಿಹಾಸಿಕ ಸಂಶೋಧನೆ – ಈ ಎರಡು ಕೆಲಸಗಳು ನಿರ್ದಿಷ್ಟವಾಗಿ, ನಿರ್ದುಷ್ಟವಾಗಿ ಜರುಗದ ಹೊರತು 'ಆನ್ವಯಿಕ ಸಂಶೋಧನೆ'ಯ ಸರಿಯಾದ ಫಲಿತಾಂಶ ಪ್ರಕಟವಾಗದು. ಈ ಸಂದರ್ಭದಲ್ಲಿ ಹೇಳಲೇಬೇಕಾದ ಒಂದು ಮಾತೆಂದರೆ ಆನ್ವಯಿಕದ ಅವಸರದಲ್ಲಿ ನಮ್ಮ ಪರಂಪರೆಯ ಅಪವ್ಯಾಖ್ಯಾನ ನಡೆಯಬಾರದು. ಇಂದಿಗೂ ಅನೇಕ ಜನ ಉತ್ಸಾಹಿ ವಿದ್ವಾಂಸರು ಪ್ರಾಚೀನ ಕಾಳಾಮುಖರು ಸುರಾಪಾನ, ಮೈಥುನ ಮೊದಲಾದ ವಾಮಾಚಾರಗಳಲ್ಲಿ ತೊಡಗಿದ್ದರೆಂದು

ಬರೆಯುತ್ತಾರೆ. ನಿಜಸ್ಥಿತಿಯೆಂದರೆ, ಈ ಸಂಪ್ರದಾಯದ ಪೀಠಾಧಿಕಾರಿಗಳು ಸದಾಚಾರಿಗಳೂ ಸಮಾಜದಲ್ಲಿ ದೊಡ್ಡ ಗೌರವ ಪಡೆದವರೂ ಆಗಿದ್ದರು. ಇದೆಲ್ಲವನ್ನು ನೋಡಿದರೆ ಇತಿಹಾಸದ ಕೊಂಡಿಗಳು ಹಿಂದು ಮುಂದಾಗಿರುವ ಭಾರತದಂಥ ದೇಶದಲ್ಲಿ ಆನ್ವಯಿಕ ಸಂಶೋಧನೆಯು ತುಂಬ ಕಠಿಣವೆಂದೇ ಹೇಳಬೇಕಾಗುತ್ತದೆ.

ಎರಡನೆಯದಾಗಿ, ಭಾರತ ಭಾವನಿಷ್ಠ ರಾಷ್ಟ್ರ, ಭಾರತೀಯರಿಗೆ ತಮ್ಮ ಪರಂಪರೆಯ ಬಗ್ಗೆ ಮುಕ್ತಮನಸ್ಸಿಗಿಂತ ಸಾಂಪ್ರದಾಯಿಕ ಕುರುಡುಭಕ್ತಿ ಹೆಚ್ಚು. ಸಂಶೋಧನೆಯನ್ನು ಸರಿಯಾದ ರೀತಿಯಿಂದ ನೋಡುವ ದೃಷ್ಟಿಕೋನ ಸಮಾಜಕ್ಕೆ ಇನ್ನೂ ಪ್ರಾಪ್ತವಾಗಿಲ್ಲ. ಇಂಥಲ್ಲಿ 'ಆನ್ವಯಿಕ ಸಂಶೋಧನೆ' ನಡೆಸುವುದು ಅಪಾಯಕಾರಿ. ಅದನ್ನು 'ನಿರ್ದಿಷ್ಟ ರೂಪ'ದಲ್ಲಿ ಎತ್ತಿ ಹೇಳುವ ಸಂಶೋಧಕ ಅರಕ್ಷಿತನಾಗಿದ್ದಾನೆ.

ಹೀಗಿದ್ದೂ ಇಂದು ಬಂಡಾಯ ಸಾಹಿತ್ಯವು ಆನ್ವಯಿಕ ಧೋರಣೆಯಲ್ಲಿ ಸೃಷ್ಟಿಯಾಗುತ್ತಿರುವುದು ಸಂತೋಷದ ವಿಷಯ. ಗತಕಾಲೀನ ಸಾಮಾಜಿಕ ನ್ಯಾಯಾನ್ಯಾಯಗಳನ್ನು ಶೋಧಿಸಿ, ವರ್ತಮಾನಕಾಲದಲ್ಲಿ ಅದು ಪಡೆದಿರುವ ಸ್ವರೂಪವನ್ನು ಪರ್ಯಾಯವಾಗಿ ಪ್ರತಿಪಾದಿಸುವ ಕ್ರಿಯೆ ಅಲ್ಲಿ ನಡೆದಿರುತ್ತದೆ. ಹೀಗಾಗಿ ನಿಜವಾದ ಬಂಡಾಯಸಾಹಿತಿ ಪರ್ಯಾಯ ಸಂಶೋಧನ ಸಾಹಿತಿ ಎಂದೇ ಹೇಳಬೇಕು.

ಅದೇನೇ ಇದ್ದರೂ ಅಕೆಡೆಮಿಕ್ ಮತ್ತು ಅಪ್ಲಾಯಿಡ್ ಎನ್ನುವವು ಗತಕಾಲವನ್ನು ಗುರಿಯಾಗಿಟ್ಟು ನಡೆಯುವ ಅನ್ವೇಷಣಾತ್ಮಕ ಸಂಶೋಧನೆಯ ಎರಡು ದೃಷ್ಟಿಕೋನಗಳಾಗಿವೆ. ಇವುಗಳಲ್ಲಿ, ವಿಷಯವನ್ನು ಚರಿತ್ರೆನಿಷ್ಠವಾಗಿ ಸ್ಪಷ್ಟಪಡಿಸಿಕೊಂಡು, ವಸ್ತುನಿಷ್ಠವಾಗಿ ವ್ಯಾಖ್ಯಾನಿಸಿ, ಸ್ವೀಕಾರಾತ್ಮಕ-ತಿರಸ್ಕಾರಾತ್ಮಕ ಅಂಶಗಳನ್ನು ಪ್ರಕಟಿಸುವ ಮೂಲಕ ವರ್ತಮಾನವನ್ನು ತಿದ್ದುವ ಅಪ್ಲಾಯಿಡ್ ಸಂಶೋಧನೆಗೆ ಸ್ವಾಗತವಿದೆಯೆಂದೇ ಹೇಳಬೇಕು. ಇಂಥದು ನಿನ್ನೆ, ಇಂದು, ನಾಳೆಗಳಿಗೆ ಪ್ರಸ್ತುತವಾಗುವ ಸಂಶೋಧನೆಯೆನಿಸುತ್ತದೆ.

ಬಹುಶಿಸ್ತೀಯ ಸಂಶೋಧನೆ :

ವಸ್ತುಶೋಧ, ಭಾಷಾಶೋಧ, ಕ್ರಿಯಾಶೋಧ, ಜ್ಞಾನಶೋಧ - ಯಾವುದೇ ಸಂಶೋಧನೆಯನ್ನು ಏಕಶಿಸ್ತೀಯ ಇಲ್ಲವೆ ಬಹುಶಿಸ್ತೀಯವೆಂಬ ಎರಡು ರೀತಿಗಳಲ್ಲಿ ಪೂರೈಸಬಹುದಾಗಿದೆ. ಇದು ಸಮಸ್ಯೆಯ ಸ್ವರೂಪ ಮತ್ತು ಸಂಶೋಧಕನ ಶಕ್ತಿಗಳನ್ನು ಅವಲಂಬಿಸಿರುತ್ತದೆ.

ಸಮಾಜದಲ್ಲಿ ಯಾವುದೇ ವಿಷಯ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿರುವುದಿಲ್ಲ. ಅದು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳ ಸಂಬಂಧವನ್ನು ಹೊಂದಿರುತ್ತದೆ. ಹೀಗಾಗಿ ಅಧ್ಯಯನ ಪ್ರಸಂಗದಲ್ಲಿ ಎತ್ತಿಕೊಂಡ ಸಮಸ್ಯೆಯನ್ನು ಅನೇಕ ಮುಖಗಳಿಂದ ಪರಿಶೀಲಿಸಬೇಕಾಗುತ್ತದೆ. ಅಂದರೆ ವಿಷಯದ ಎಲ್ಲ ಆಯಾಮಗಳನ್ನು, ಆಕರದ ಎಲ್ಲ ನೆಲೆಗಳನ್ನು ಮತ್ತು ಸಂಶೋಧನ ವಿಧಾನದ ಎಲ್ಲ ಬಗೆಗಳನ್ನು ಬಳಸಬೇಕಾಗುತ್ತದೆ. ಇದು ಬಹುಶಿಸ್ತೀಯ ಅಧ್ಯಯನ ಇಲ್ಲವೆ ಅಂತರ್‌ಶಿಸ್ತೀಯ ಅಧ್ಯಯನವಾಗಿದೆ. ಬೇಡವೆನಿಸಿದರೆ ಆ ವಿಷಯವನ್ನು ಒಂದೇ ಒಂದು ದೃಷ್ಟಿಕೋನದಿಂದ ಪ್ರತಿಕ್ರಿಯಿಸಿದರೆ ಅದು ಏಕಶಿಸ್ತೀಯ ಅಧ್ಯಯನವೆನಿಸುತ್ತದೆ. ಏಕಶಿಸ್ತೀಯ ಅಧ್ಯಯನ ಒಂದು ಅರ್ಥದಲ್ಲಿ ಭಾಗಶಃ

ಸಂಶೋಧನೆಯೇ ಸರಿ. ಆದುದರಿಂದ ಬಹುಶಿಸ್ತೀಯ ಅಧ್ಯಯನವನ್ನು 'ಸಮಗ್ರ ಸಂಶೋಧನೆ' ಎಂದು ಕರೆಯಬಹುದು.

ಕನ್ನಡ ಸಾಹಿತ್ಯಕ್ಕೆ ಬಂದರೆ, ಸಮಕಾಲೀನ ಮೌಲ್ಯಗಳ ಧ್ವನಿಯೆನಿಸಿರುವ ಪಂಪ ಭಾರತ, ಬಸವಣ್ಣನವರ ವಚನಗಳು ಬಹುಶಿಸ್ತೀಯ ಅಧ್ಯಯನಕ್ಕೆ ಹೇಳಿಮಾಡಿಸಿದ ಕೃತಿಗಳೆನಿಸಿವೆ. ಜೀವನದ ಸಮಗ್ರವೇ ಸಾಹಿತ್ಯದ ಮೈಪಡೆದಿರುವ ಇಂಥ ಕೃತಿಗಳನ್ನು ಸಮಗ್ರ ಶೋಧಕ್ಕೆ ಅಳವಡಿಸಿಕೊಳ್ಳುವುದು, ಸಮಗ್ರ ಜೀವನಾಭ್ಯಾಸ ಮತ್ತು ಆಳವಾದ ವಿಮರ್ಶಾಪ್ರಜ್ಞೆಯುಳ್ಳವರಿಗೆ ಮಾತ್ರ ಸಾಧ್ಯವಾಗುತ್ತದೆ. ಉದಾ:

ಒತ್ತಿ ತರುಂಬಿ ನಿಂದ ರಿಪುಭೂಜಸಮಾಜದ ಬೇರ್ಗಳಂ ನಭ ।
ಕ್ಕೆತ್ತದೆ ತನ್ನ ಬಂದು ಮೊರೆವೊಕ್ಕಡೆ ಕಾಯದೆ ಚಾಗದೊಳ್ಪನ ।
ಚ್ಚೊತ್ತದೆ ⁽ಪೂಣ್ದುಬಾಳ್ವ⁾ ಪುಳುವಾಸನವೆಂಬನಜಾಂಡಮೆಂಬುದೊಂ ।
ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮುರಾಂತಕಾ ॥

(೧-೧ ಮಾಣ್ದು ಬಾಳ್ವ)

ಈ ಪದ್ಯವನ್ನು ಪಾಠಪರಿಷ್ಕರಣ, ಕಾವ್ಯಸೌಂದರ್ಯ, ಸಮಕಾಲೀನ ಜೀವನಮೌಲ್ಯ, ಜಾನಪದ ನಂಬಿಕೆ– ಹೀಗೆ ಕನಿಷ್ಠ ನಾಲ್ಕು ಶಿಸ್ತುಗಳಿಂದ ಅಭ್ಯಸಿಸಬಹುದು. ಇವುಗಳಲ್ಲಿ ಒಂದರ ಅಧ್ಯಯನ ಏಕಶಿಸ್ತೀಯದು, ಎಲ್ಲವುಗಳ ಅಧ್ಯಯನ ಬಹುಶಿಸ್ತೀಯದು.

ಈ ನಾಲ್ಕರಲ್ಲಿ ಮೊದಲಿನ ಎರಡು ಸಾಹಿತ್ಯ ವಿದ್ಯಾರ್ಥಿಯ ವಿಷಯ, ಆಮೇಲಿನವು ಸಂಸ್ಕೃತಿ ವಿದ್ಯಾರ್ಥಿಯ ವಿಷಯ. 'ಪೂಣ್ದು ಬಾಳ್ವ' ಪಾಠಕ್ಕಿಂತ 'ಮಾಣ್ದು ಬಾಳ್ವ' ಸರಿಯಾದ ಪಾಠ. 'ಅಜಾಂಡಮೆಂಬುದೊಂದತ್ತಿಯ ಪಣ್ಣೊಳಿರ್ಪ ಪುಳು' ಎಂಬುದು ಭವ್ಯರೂಪಕ. ಈ ಎರಡೂ ಕ್ರಮವಾಗಿ ವಿದ್ವಾಂಸರ, ವಿಮರ್ಶಕರ ಕ್ಷೇತ್ರದ ವಿಷಯಗಳು.

ಇವುಗಳನ್ನು ಬಿಟ್ಟರೆ ವೀರ, ದಾನ, ಶರಣಾಗತರಕ್ಷಣೆಗಳೆಂಬ ಸಮಕಾಲೀನ ಜೀವನದ ಮೂರು ಮೌಲ್ಯಗಳ ಪ್ರತಿಪಾದನೆ ಇಲ್ಲಿಯ ಮುಖ್ಯವಿಷಯವಾಗಿದೆ. ರನ್ನನೂ "ಈಯಲ್ ಇರಿಯಲ್ ಶರಣ್ಬುಗೆ ಕಾಯಲ್" ಎಂದು ಇವೇ ಮೌಲ್ಯಗಳನ್ನು ಘೋಷಿಸುತ್ತಾನೆ. ಇಲ್ಲಿ ವೈರಿಗಳನ್ನು ನಿರ್ಮೂಲನಗೊಳಿಸಬೇಕೆಂಬುದನ್ನು "ವೈರಿವೃಕ್ಷದ ಬೇರನ್ನು ಮುಗಿಲಿಗೆ ತೋರಿಸಬೇಕು" ಎಂಬ ಮಾತಿನ ಮೂಲಕ ಅಭಿವ್ಯಕ್ತಿಸುತ್ತಾನೆ, ಪಂಪ. ಸಸಿಯ ಬೇರು ಮುಗಿಲಿಗೆ ತೋರಿಸಿದರೆ ಹತ್ತಿಕೊಳ್ಳುವುದಿಲ್ಲವೆಂಬುದು ಇಂದಿಗೂ ಪ್ರಚಲಿತದಲ್ಲಿರುವ ಜಾನಪದ ನಂಬಿಕೆಯಾಗಿದೆ. ಪಂಪ ಈ ಜಾನಪದ ನಂಬಿಕೆಯನ್ನು ಇಲ್ಲಿ ಬಳಸಿದ್ದು, ಇದು ಸಾವಿರ ವರ್ಷದಷ್ಟು ಹಳೆಯದೆಂದು ಹೇಳುವುದೂ ಒಂದು ಸಂಶೋಧನೆಯೇ ಆಗಿದೆ.[೨೬]

ಇಂಥ ವಿಧಾನದಿಂದ ಒಂದು ಕೃತಿಯ ಅಧ್ಯಯನವು 'ಸಾಹಿತ್ಯಿಕ' 'ಸಾಹಿತ್ಯೇತರ'ವೆಂಬ ಎರಡು ಕವಲುಗಳನ್ನು ಪಡೆಯುತ್ತದೆ. ಇಂದು ಸಾಹಿತ್ಯೇತರ ಅಧ್ಯಯನವೇ 'ಸಾಂಸ್ಕೃತಿಕ ಅಧ್ಯಯನ'

---

೨೬. ಪಂಪಭಾರತ ಒಂದು ನಂಬಿಕೆ–ಒಂದು ಮೌಲ್ಯ–ಎಂ. ಎಂ. ಕಲಬುರ್ಗಿ (ಮಾರ್ಗ–I , ಪು.೭೪).

ಹೆಸರಿನಿಂದ ಕನ್ನಡದಲ್ಲಿ ದಿನವೂ ಬಿಚ್ಚಿಕೊಳ್ಳುತ್ತ ಬೆಳೆಯುತ್ತಲಿದೆ. ಅನೇಕ ಶಾಖೆಗಳ ಈ ಸಂಕೀರ್ಣಶೋಧ ಇನ್ನೂ ಆಳವಾಗಿ ನಡೆಯಬೇಕಾಗಿದೆ.

ಸಮಾಜವೆನ್ನುವುದು ವೈವಿಧ್ಯಪೂರ್ಣ ಚಟುವಟಿಕೆಗಳ ಒಂದು ಸಂಸ್ಥೆ. ಇದರ ಪ್ರತಿಬಿಂಬವಾದ ಸಾಹಿತ್ಯದಲ್ಲಿಯೂ ವೈವಿಧ್ಯಪೂರ್ಣವಾದ ಅಂಶಗಳು ಸೇರಿಕೊಂಡಿರುತ್ತವೆ. ಹೀಗಾಗಿ ಸಾಹಿತ್ಯಕ್ಷೇತ್ರದ ವಿದ್ಯಾರ್ಥಿ ಬಹುಕ್ಷೇತ್ರಗಾಮಿಯಾಗುವುದು ಅಪೇಕ್ಷಣೀಯವಾಗಿದೆ. ಜಾನಪದದಿಂದ ಪ್ರಾರಂಭವಾಗಿ, ಶಿಷ್ಟಪದವನ್ನೂ ಒಳಗೊಂಡು, ಪುರಾಣದವರೆಗೂ ಬೆಳೆದ ಶ್ರೀಶೈಲ ಮಲ್ಲಿಕಾರ್ಜುನದೇವತೆಯ ಅಧ್ಯಯನ ಬಹುಕ್ಷೇತ್ರೀಯವಾಗದಿದ್ದರೆ, ಪೂರ್ಣತೆಯನ್ನು ಪಡೆಯುವುದೇ ಇಲ್ಲ. ಕ್ಷೇತ್ರಕಾರ್ಯ, ಗ್ರಂಥಾಲಯ ಇವೆರಡರ ಪ್ರಯೋಜನ ಇಲ್ಲಿ ಅವಶ್ಯ. ಆಚರಣೆ, ಜನಪದಸಾಹಿತ್ಯ, ಶಿಷ್ಟಸಾಹಿತ್ಯ, ಶಿಲ್ಪ, ಇತಿಹಾಸ, ಶಾಸನ, ಜನಾಂಗ ಇತ್ಯಾದಿಗಳು ನಾ ಮುಂದು, ತಾ ಮುಂದು ಎಂದು ಈ ಅಂತರ್ ಸಂಬಂಧೀಯ ಅಧ್ಯಯನಕ್ಕೆ ಆಕರವಾಗಿ ನಿಂತರೆ ಮಾತ್ರ ಸಂಶೋಧನೆ ಎಲ್ಲ ಮಗ್ಗಲುಗಳಲ್ಲಿಯೂ ಬಿಚ್ಚಿಕೊಳ್ಳುತ್ತದೆ. ಇದು ಜಾನಪದಕ್ಷೇತ್ರದಲ್ಲಿ ನಡೆಯುವ 'ವಿಷಯನಿಷ್ಠ ಜಾನಪದ' (Thematic Folklore) ವನ್ನು,[೨೭] ವಿಮರ್ಶಾವಲಯದ 'ಪ್ರಾಯೋಗಿಕ ವಿಮರ್ಶೆ' (Applied Criticism)ಯನ್ನು ಹೋಲುವ ಅಧ್ಯಯನವಾಗಿದೆ.

ಸಂಖ್ಯಾನಿಷ್ಠ ಸಂಶೋಧನೆ :

ಸಂಶೋಧನೆಯ ಮುಖ್ಯ ಶಾಖೆಗಳಾದ ವಸ್ತುಶೋಧ, ಭಾಷಾಶೋಧ, ಕ್ರಿಯಾಶೋಧ ಮತ್ತು ಜ್ಞಾನಶೋಧದ ಸಂದರ್ಭಗಳಲ್ಲಿ ಸಂಖ್ಯಾನಿಷ್ಠ ವಿಧಾನದ ಮೂಲಕ ಗುಣಾತ್ಮಕ ಫಲಿತಾಂಶವನ್ನು ಪ್ರಕಟಿಸುವುದು ಇತ್ತೀಚೆಗೆ ಬೆಳೆದು ಬಂದಿದೆ. ಇದನ್ನು 'ಮೊತ್ತದಿಂದ ಮೌಲ್ಯಶೋಧ'ವೆಂದು ಕರೆಯಬಹುದು.

ಸಂಖ್ಯಾನಿಷ್ಠ ಶೋಧವಿಧಾನವೆನ್ನುವುದು ಅಧ್ಯಯನಕ್ಕೆ ಆಯ್ದುಕೊಂಡ ವಿಷಯವೊಂದರ ಭೌಗೋಲಿಕ ಪ್ರಸಾರದ ವಿರಳತೆ–ಸಾಂದ್ರತೆ, ಐತಿಹಾಸಿಕ ಬೆಳವಣಿಗೆಯ ವಿರಳತೆ–ಸಾಂದ್ರತೆಗಳನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳುವುದು, ಸ್ವರೂಪದ ಸ್ಥಿರತೆ–ಬದಲಾವಣೆಗಳನ್ನು ಗುರುತಿಸುವುದು ಮತ್ತು ಅವುಗಳ ಹಿಂದಿರುವ ಕಾರಣಗಳನ್ನು ಕಂಡುಹಿಡಿಯುವುದಾಗಿದೆ. ಉದಾ:

ಪ್ರಾಚೀನ ತಾಂತ್ರಿಕ ಪಂಥಗಳಲ್ಲಿ ಸೌರಪಂಥವೂ ಒಂದು. ಸೂರ್ಯವಿಗ್ರಹಗಳೂ, ಸೂರ್ಯಗ್ರಹಣ ಸಂದರ್ಭದಲ್ಲಿ ಚಿತಾಪ್ರವೇಶಮಾಡಿದ ಉಲ್ಲೇಖವುಳ್ಳ ಶಾಸನಗಳೂ ಅಲ್ಲಲ್ಲಿ ಸಿಗುವುದರಿಂದ, ಈ ಪಂಥ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದಿತೆಂಬುದು ಪ್ರಶ್ನಾತೀತವಾದುದು. ಇದು ರೂಪಾತ್ಮಕ ಶೋಧ. ಆದರೆ ಯಾವ ಯಾವ ಪ್ರದೇಶದಲ್ಲಿ? ಯಾವ ಯಾವ ಶತಮಾನಗಳಲ್ಲಿ? ಎಷ್ಟು ಸಂಖ್ಯೆಯಲ್ಲಿ ಸೂರ್ಯವಿಗ್ರಹಗಳಿವೆ? ಎಷ್ಟು ಚಿತಾಪ್ರವೇಶ ಘಟನೆಗಳು ಜರುಗಿವೆ? ಎಂಬ ಕೋಷ್ಟಕ ಸಿದ್ಧಪಡಿಸಿ, ಅದರಿಂದ ಈ ಉಪಾಸನೆಯ ಭೌಗೋಲಿಕ ಪ್ರಸಾರ, ಐತಿಹಾಸಿಕ ಬೆಳವಣಿಗೆಯನ್ನು ಗುರುತಿಸುವುದು, ಸ್ವರೂಪವ್ಯತ್ಯಾಸವನ್ನು ಕಂಡುಹಿಡಿಯುವುದು, ಅದರ ಹಿಂದಿರುವ ಕಾರಣಗಳನ್ನು ಶೋಧಿಸುವುದು ಸಂಖ್ಯಾನಿಷ್ಠ ವಿಧಾನವಾಗಿದೆ.

---

೨೭. ವಿಷಯನಿಷ್ಠ ಜಾನಪದ – ಬಿ. ಎ. ವಿವೇಕ ರೈ (ಆನ್ವಯಿಕ ಜಾನಪದ, ಪು.೬೫).

ಸೂರ್ಯಗ್ರಹಣ ಸಮಯದ ಚಿತಾಪ್ರವೇಶವನ್ನೇ ಗಮನಿಸಿದರೆ, ಒಟ್ಟು ೧೦ ಶಾಸನಗಳಲ್ಲಿ ೭ ಶಾಸನಗಳು ಹಾನಗಲ್ಲು ತಾಲೂಕಿನ ನೆರೆಹೊರೆಯಲ್ಲಿಯೇ ಸಿಗುವುದರಿಂದ ಈ ಪ್ರದೇಶದಲ್ಲಿ ಸೌರಪಂಥದ ಸಂಪ್ರದಾಯ ಸಾಂದ್ರವಾಗಿದ್ದಿತೆಂಬ ಅಂಶ ವ್ಯಕ್ತವಾಗುತ್ತದೆ. ಅದರಲ್ಲಿಯೂ ೧೨ನೆಯ ಶತಮಾನದಲ್ಲಿಯೇ ಈ ದಾಖಲೆಗಳು ಹುಟ್ಟಿರುವುದರಿಂದ ಆ ಅವಧಿ ಈ ಸಂಪ್ರದಾಯದ ಅಸ್ತಿತ್ವದ ಯೌವನಕಾಲವೆಂಬ ಅಂಶವೂ ಸ್ಪಷ್ಟವಾಗುತ್ತದೆ.[೨೮] ಹೀಗೆಯೇ ಕರ್ನಾಟಕದ ಮಾಸ್ತಿಕಲ್ಲು, ವೀರಗಲ್ಲು, ನಿಷಿಧಿಕಲ್ಲು ಮೊದಲಾದ ಸ್ಮಾರಕಶಿಲೆಗಳ ಭೌಗೋಲಿಕ ಪ್ರಸರಣ, ಐತಿಹಾಸಿಕ ಬೆಳವಣಿಗೆಗಳ ಅಂಕಿ-ಅಂಶಗಳನ್ನು ಸಂಗ್ರಹಿಸಿ, ಅಲ್ಲಿ ತೋರುವ ಸಂಖ್ಯಾವ್ಯತ್ಯಾಸದ ಹಿಂದಿರುವ ಕಾರಣಗಳನ್ನು, ಸಾಮಾಜಿಕ ಒತ್ತಡಗಳನ್ನು ಶೋಧಿಸಬಹುದು. ಸ್ಮಾರಕಶಿಲೆಗಳ ವಿಷಯವಾಗಿ ಡಾ. ಎಸ್. ಶೆಟ್ಟರ ಅವರು ವ್ಯಕ್ತಪಡಿಸಿದ ಕೆಳಗಿನ ಅಭಿಪ್ರಾಯ ಸಂಖ್ಯಾನಿಷ್ಠ ಸಂಶೋಧನೆಗೆ ಉತ್ತಮ ಉದಾಹರಣೆಗಾಗಿದೆ.[೨೯] ಕರ್ನಾಟಕದಲ್ಲಿ ಲಭ್ಯವಿರುವ ೨೬೫೦ ಲಿಖಿತ ಸ್ಮಾರಕ ಶಿಲೆಗಳಲ್ಲಿ ವೀರಗಲ್ಲು ೨೨೦೦, ನಿಷಿಧಿಕಲ್ಲು ೩೦೦, ಸತಿಗಲ್ಲು ೧೫೦, ಉಳಿದವು ಸಿಡಿತಲೆ, ಗರುಡ (?) ಇತ್ಯಾದಿ. ಈ ಸ್ಮಾರಕ ಶಿಲೆಗಳು ಕದಂಬರ ಕಾಲವಾದ ೫ನೆಯ ಶತಮಾನದಿಂದ ಒಡೆಯರ ಕಾಲವಾದ ೧೯ನೆಯ ಶತಮಾನದವರೆಗೆ ಬೆಳೆದುಬಂದಿವೆ. ೧೦ ರಿಂದ ೧೩ನೆಯ ಶತಮಾನದಲ್ಲಿ ಈ ಸಂಖ್ಯೆ ೧೧೦೦ನ್ನು ತಲುಪಿದ್ದು, ಇವುಗಳಲ್ಲಿ ಹೊಯ್ಸಳರಿಗೆ ಸಂಬಂಧಿಸಿದವು ೩೭೫. ಬಾದಾಮಿ ಚಾಲುಕ್ಯರ ಕಾಲದಲ್ಲಿ ಒಂದೇ ಒಂದು ಲಿಖಿತ ಸ್ಮಾರಕ ಶಿಲೆ ಸಿಕ್ಕರೆ, ಕದಂಬ, ರಾಷ್ಟ್ರಕೂಟ, ಗಂಗ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕ್ರಮವಾಗಿ ೯೫, ೩೫, ೧೫೦ ಮತ್ತು ೧೨೫ ಸಿಕ್ಕಿವೆ. ಈ ಲಿಖಿತ ಸ್ಮಾರಕಶಿಲೆಗಳನ್ನು ಪ್ರದೇಶ ದೃಷ್ಟಿಯಿಂದ ನೋಡಿದರೆ ಕುತೂಹಲಕಾರಿ ಅಂಶಗಳು ವ್ಯಕ್ತವಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೭೫೦, ಹಾಸನ ಜಿಲ್ಲೆಯಲ್ಲಿ ೪೭೦, ಮಂಡ್ಯ ಮೈಸೂರು ಜಿಲ್ಲೆ ಸೇರಿ ೩೭೫, ತುಮಕೂರು ಜಿಲ್ಲೆಯಲ್ಲಿ ೨೪೦, ಧಾರವಾಡ ಜಿಲ್ಲೆಯಲ್ಲಿ ೧೮೦, ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೫೦ (ಮಿಕ್ಕ ಜಿಲ್ಲೆಗಳನ್ನು ಪರಿಗಣಿಸಿಲ್ಲ) ಸಿಗುತ್ತವೆ. ಇಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿಯೇ ಹೆಚ್ಚು ಸಂಖ್ಯೆಯ ಸ್ಮಾರಕಗಳಿರುವುದಕ್ಕೆ ಈ ಪ್ರದೇಶ ಕದಂಬ-ಗಂಗ, ಚಾಲುಕ್ಯ-ಹೊಯ್ಸಳ, ಹೊಯ್ಸಳ-ಕಲಚೂರಿ, ಹೊಯ್ಸಳ-ಸೇವುಣರ ಸೀಮಾಪ್ರದೇಶವಾಗಿದ್ದು, ಇಲ್ಲಿ ಸಹಜವಾಗಿಯೇ ಯುದ್ಧಗಳು ಪದೇ ಪದೇ ಸಂಭವಿಸಿರಬಹುದು, ಇತ್ಯಾದಿ ಶೋಧಗಳು ಸಂಖ್ಯಾನಿಷ್ಠ ಸಂಶೋಧನೆಯ ಸ್ವರೂಪ ಮತ್ತು ಮಹತ್ವಗಳನ್ನು ಕಣ್ಣಿಗೆ ಹಿಡಿಯುತ್ತವೆ. ಹೀಗೆಯೇ ಡಾ. ಬಿ. ಎಸ್. ಶೇಠೆ ಅವರು 'ಕರ್ನಾಟಕದಲ್ಲಿ ಸತಿಪದ್ಧತಿ' ಹೆಸರಿನ ತಮ್ಮ ಪಿ.ಎಚ್‌ಡಿ. ಪ್ರಬಂಧದಲ್ಲಿ 'ಕರ್ನಾಟಕದಲ್ಲಿ ಸತಿಘಟನೆಗಳು' ಪ್ರಕರಣದ ಕೆಳಗೆ ಐತಿಹಾಸಿಕ ಬೆಳವಣಿಗೆ, ಭೌಗೋಲಿಕಪ್ರಸಾರ, ಸಾಮಾಜಿಕ ಶ್ರೇಣಿ ದೃಷ್ಟಿಯಿಂದ ಸತಿಘಟನೆಗಳನ್ನು ವಿವೇಚಿಸಿದ್ದು, ಇದು ಸಂಖ್ಯಾನಿಷ್ಠ ಸಂಶೋಧನೆಗೆ ಉತ್ತಮ ನಿದರ್ಶನವೆನಿಸಿದೆ.

ಇಂಥದೇ ಇನ್ನೊಂದು ಉದಾಹರಣೆ ಮಹಾರಾಷ್ಟ್ರದ ಕನ್ನಡ ಶಾಸನಗಳ ಅಧ್ಯಯನ. ಇಲ್ಲಿಯ ಶಾಸನಗಳ ವಿಷಯವನ್ನು ಬೆರಳಿಟ್ಟು ಹೇಳಿದರೆ ಅದು ರೂಪಾತ್ಮಕ ಸಂಶೋಧನೆ. ಆದರೆ ಅವುಗಳನ್ನು

---

೨೮. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ-ಚೆನ್ನಕ್ಕ ಎಲಿಗಾರ. (ಪು.೨೧೪-೧೫).

೨೯. Memorial Stones in South India, Momorial Stones-S. Settar, P.193.

ಭೌಗೋಳಿಕವಾಗಿ, ಐತಿಹಾಸಿಕವಾಗಿ ಸಮೀಕ್ಷೆ ಮಾಡಿದಾಗ ಹೊಳೆಯುವ ಅಂಶಗಳಿವು: ಕರ್ನಾಟಕದಲ್ಲಿ ಒಟ್ಟು ೨೫೦೦೦ ಶಾಸನಗಳಿದ್ದರೆ, ಮಹಾರಾಷ್ಟ್ರದಲ್ಲಿರುವವು ಕೇವಲ ೧೦೦೦. ಇವುಗಳಲ್ಲಿ ಪ್ರಾಚೀನ ಶಾಸನಗಳೆಲ್ಲ ಸಂಸ್ಕೃತ ಭಾಷೆಯ ತಾಮ್ರಪಟಗಳು. ಆಮೇಲಿನವು ಕನ್ನಡಭಾಷೆಯ ಶೀಲಾಶಾಸನಗಳು. ಹೀಗಾಗಿ ಅಲ್ಲಿ ಮೊದಲು ಅಸ್ತಿತ್ವಕ್ಕೆ ಬಂದುದು ವೈದಿಕರ ಅಗ್ರಹಾರ ಸಂಸ್ಕೃತಿ. ಆಮೇಲೆ ಬೆಳೆದು ಬಂದುದು ಶೈವರ ದೇವಾಲಯ ಸಂಸ್ಕೃತಿ–ಎಂದು ಹೇಳಬಹುದು. ಒಟ್ಟು ಸಾವಿರ ಶಾಸನಗಳಲ್ಲಿ ಪ್ರಾಕೃತ ೩೦೦. ಸಂಸ್ಕೃತ ೩೦೦, ಕನ್ನಡ ೩೦೦. ಮರಾಠಿ ೧೦೦ನ್ನು ಮಿಕ್ಕಿರಲಾರದು. ೩೦೦ ಪ್ರಾಕೃತಶಾಸನಗಳಾದರೋ ಕೇವಲ ಪಟ್ಟಿಕೆಗಳು. ೩೦೦ ಸಂಸ್ಕೃತ ಶಾಸನಗಳಾದರೋ ಅಗ್ರಹಾರದ ದತ್ತಿದಾಖಲೆಗಳು. ಕನ್ನಡದವು ಮಾತ್ರ ದೇವಾಲಯದ ದತ್ತಿದಾಖಲೆಗಳಾಗಿದ್ದರೂ ಸಾಹಿತ್ಯ ಸೌಂದರ್ಯದಿಂದ ಕೂಡಿದವು. ಈ ಕನ್ನಡ ಶಾಸನಗಳು ಕರ್ನಾಟಕದ ಹೊರಗೆ ಸುತ್ತಲೂ ಅಂಟಿಕೊಂಡಿರುವ ಕೊಲ್ಲಾಪುರ, ಸಾಂಗಲಿ, ನಾಂದೇಡ, ಸೊಲ್ಲಾಪುರ, ಉಸ್ಮಾನಾಬಾದ ಜಿಲ್ಲೆಗಳಲ್ಲಿ ದಟ್ಟವಾಗಿದ್ದು, ಮರಾಠಿ ಭಾಷೆಯ ಶಾಸನಗಳು ಇಲ್ಲವೆನ್ನುವಷ್ಟು ಅಲ್ಲಿ ವಿರಳವಾಗಿರುವುದರಿಂದ ಈ ಜಿಲ್ಲೆಗಳ ಪ್ರದೇಶ ಮೂಲತಃ ಕನ್ನಡವೆಂದು ಸ್ಪಷ್ಟವಾಗುತ್ತದೆ. ಕನ್ನಡ ಶಾಸನಗಳು ಪಶ್ಚಿಮದಲ್ಲಿ ಸಹ್ಯಾದ್ರಿ ಘಟ್ಟದವರೆಗೆ ಉತ್ತರದಲ್ಲಿ ಗೋದಾವರಿಯ ವರೆಗೆ ಮಾತ್ರ ಕಂಡುಬಂದು ನಿಂತುಬಿಡುವುದರಿಂದ, ಪ್ರಾಚೀನ ಕರ್ನಾಟಕದ ಭೌಗೋಲಿಕ ವಿಸ್ತಾರ ಅಷ್ಟು ವ್ಯಾಪಕವಾಗಿದ್ದಿತೆಂದೂ, "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ" ಎಂಬ ಕವಿರಾಜಮಾರ್ಗದ ಉಕ್ತಿಯನ್ನು ಈ ಶಾಸನಗಳು ಪುಷ್ಟೀಕರಿಸುವುದೆಂದೂ ಹೇಳಬಹುದು.[೩೦]

ಸಾಹಿತ್ಯದಿಂದ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಬಸವಣ್ಣನವರು ಜೇಡರ ದಾಸಿಮಯ್ಯನನ್ನು ಅನೇಕ ಸಲ ಸ್ಮರಿಸಿದ್ದಾರೆ. ಇದರಿಂದ ದಾಸಿಮಯ್ಯನ ಬಗ್ಗೆ ಅವರಿಗೆ ಅಪಾರಭಕ್ತಿಯೆಂದು ಹೇಳುವುದು ರೂಪಾತ್ಮಕಶೋಧ. ಹೀಗೆ ಸ್ಮರಿಸಿದ ಒಟ್ಟು ವಚನಗಳ ಸಂಖ್ಯೆ ೧೮. ನೋಡಲಿಕ್ಕೆ ೧೮ ವಚನಗಳಾದರೂ ವಸ್ತುತಃ ಎರಡೇ ವಚನಗಳೆಂಬಂತೆ ಇವು ವಿಷಯ ದೃಷ್ಟಿಯಿಂದ ಎರಡು ಗುಂಪುಗಳಲ್ಲಿ ಹಂಚಿಹೋಗುತ್ತವೆ. ಇವುಗಳಲ್ಲಿ ಮೊದಲಿನ ಗುಂಪು ಸತಿಸುತರನ್ನು ಕೊಟ್ಟು ಅಘಟಿತಭಕ್ತಿಯನ್ನು ಮೆರೆದ ಸಿಂಧುಬಲ್ಲಾಳ–ಸಿರಿಯಾಳರ ಜೊತೆ, ಎರಡನೆಯ ಗುಂಪು ಕೀಳುಕುಲದವರಾಗಿದ್ದ ಕಕ್ಕಯ್ಯ–ಚೆನ್ನಯ್ಯರ ಜೊತೆ ದಾಸಿಮಯ್ಯನನ್ನು ಉಲ್ಲೇಖಿಸುತ್ತವೆ. ಈ ಮೊತ್ತ ರೂಪದ ಅಭ್ಯಾಸದಿಂದ ೧. ದಾಸಿಮಯ್ಯನ ಭಕ್ತಿ ಅಘಟಿತಘಟನಾಸ್ವರೂಪದ್ದಾಗಿದ್ದಿತು. ೨. ದಾಸಿಮಯ್ಯ ಮೂಲತಃ ಕೀಳುಕುಲದವ, ಅದನ್ನು ಭಕ್ತಿಮಾರ್ಗದ ಮೂಲಕ ಕಳಚಿಕೊಂಡ – ಎಂಬ ಅಂಶಗಳು ವ್ಯಕ್ತವಾಗುತ್ತವೆ.[೩೧] ಇದರಿಂದ ಸಂಖ್ಯಾತ್ಮಕ ಶೋಧವಿಧಾನಕ್ಕೆ ಸಂಶೋಧನೆಯಲ್ಲಿ ಮಹತ್ವದ ಸ್ಥಾನವಿರುವುದು ತಿಳಿದುಬರುತ್ತದೆ.

---

೩೦. ಮಹಾರಾಷ್ಟ್ರದ ಕನ್ನಡ ಶಾಸನಗಳು–ಎಂ. ಎಂ. ಕಲಬುರ್ಗಿ, (ಪು.೧೦–೧೪).

೩೧. ಬಸವಣ್ಣನವರು ಗಮನಿಸಿದ ಜೇಡರ ದಾಸಿಮಯ್ಯನ ಎರಡು ವಿಶೇಷ ಅಂಶಗಳು–ಎಂ. ಎಂ. ಕಲಬುರ್ಗಿ (ಮಾರ್ಗ–I, ಪು.೧೭೭).

ಮಾದರಿನಿಷ್ಠ ಸಂಶೋಧನೆ:

ಎಲ್ಲ ಆಕರ ಸಾಮಗ್ರಿಯನ್ನು ಸಂಗ್ರಹಿಸಿ ಮಾಡುವುದು ಸಂಖ್ಯಾನಿಷ್ಠ ಶೋಧವಾದರೆ, ಪ್ರಾತಿನಿಧಿಕವೆನಿಸುವ ಕೆಲವು ಮಾದರಿ ಆಕರಗಳನ್ನು ಸಂಗ್ರಹಿಸಿ ಮಾಡುವುದು ಮಾದರಿನಿಷ್ಠ (Sample) ಶೋಧವಾಗಿದೆ. ಸಂಶೋಧನಾಕ್ಷೇತ್ರ ತುಂಬ ವ್ಯಾಪಕವಾಗಿದ್ದರೆ, ಅದರ ಎಲ್ಲ ಆಕರಗಳನ್ನು ಸಂಗ್ರಹಿಸುವುದು ಕಷ್ಟದ ಕೆಲಸ. ಈಗ ಹಣ–ಶ್ರಮ–ಸಮಯಗಳ ಉಳಿತಾಯ ದೃಷ್ಟಿಯಿಂದ ಈ ವಿಪುಲಸಂಖ್ಯೆಯಿಂದ ಮಾದರಿಯೆಂಬಂತೆ ಅಲ್ಲಲ್ಲಿ ಕೆಲವು ಆಕರಗಳನ್ನು ಮಾತ್ರ ಆಯ್ದುಕೊಂಡು, ಒಟ್ಟು ವಿಷಯದ ಸ್ವರೂಪವನ್ನು ಶೋಧಿಸಬಹುದು. ಈ ವಿಧಾನವನ್ನು Sampling Method ಎಂದು ಕರೆಯುತ್ತಾರೆ. ಸಂಖ್ಯಾನಿಷ್ಠ ಸಂಶೋಧನೆಯು ಮೊತ್ತದಿಂದ ಮೌಲ್ಯ ಶೋಧವೆನಿಸಿದರೆ, ಇದು ಮಾದರಿಯಿಂದ ಮೌಲ್ಯಶೋಧವೆನಿಸಿದೆ.

ಈ ವಿಧಾನದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಎರಡು ಸಂಗತಿಗಳೆಂದರೆ, ಆಯ್ದುಕೊಳ್ಳುವ ಮಾದರಿಗಳು ಮೂಲ ಮೊತ್ತವನ್ನು ಎಲ್ಲ ರೀತಿಯಿಂದ ಪ್ರತಿನಿಧಿಸಬೇಕು. ಹೀಗೆ ಮಾಡದೆ, ಯಾವುದೋ ಒಂದಿಷ್ಟು ಮೊತ್ತವನ್ನು ಆಯ್ದುಕೊಂಡರೆ ಸರಿಯಾದ ಫಲಿತಾಂಶ ಪ್ರಕಟವಾಗದೆ ಹೋಗುತ್ತದೆ. ಎರಡನೆಯದಾಗಿ, ಮಾದರಿಯ ಸಂಖ್ಯಾಪ್ರಮಾಣ ತೀರ ಕಡಿಮೆ ಇರಬಾರದು. ತೀರ ಹೆಚ್ಚೂ ಇರಬಾರದು. ಆಯ್ದುಕೊಂಡ ಮಾದರಿಗಳು ಮೂಲದ ಎಲ್ಲ ಸ್ವರೂಪವನ್ನು ಪ್ರತಿನಿಧಿಸುವ ಪ್ರಮಾಣದಲ್ಲಿರಬೇಕು. ಈ ಎರಡೂ ರೀತಿಗಳನ್ನು ಕ್ರಮವಾಗಿ Representativeness ಮತ್ತು Adequancy ಎಂದು ಕರೆಯುತ್ತಾರೆ. ಭಾಷೆಯ ಅವಸ್ಥಾಭೇದ ಮತ್ತು ಪ್ರಾಂತಭೇದಗಳನ್ನು ಕುರಿತು ಅಭ್ಯಸಿಸುವಲ್ಲಿ ಈ ವಿಧಾನವನ್ನು ಅನ್ವಯಿಸಬಹುದಾಗಿದೆ.

ಘಟಕನಿಷ್ಠ ಸಂಶೋಧನೆ :

ಮಾದರಿನಿಷ್ಠ ಸಂಶೋಧನೆಯಲ್ಲಿ ಒಂದು ಮೊತ್ತದಿಂದ ಅಲ್ಲಿಷ್ಟು ಇಲ್ಲಿಷ್ಟು ಮಾದರಿಗಳನ್ನು ಸಂಗ್ರಹಿಸಿ, ಅದರ ಅಧ್ಯಯನದಿಂದ ಒಂದು ಫಲಿತಾಂಶವನ್ನು ಪ್ರಕಟಿಸುತ್ತಿದ್ದರೆ, ಘಟಕನಿಷ್ಠ ಸಂಶೋಧನೆ (case study)ಯಲ್ಲಿ ಒಂದು ಪರಿಮಿತ ಕ್ಷೇತ್ರವನ್ನು ಒಂದು ಘಟಕವನ್ನಾಗಿ ಇಟ್ಟಿಕೊಂಡು, ಅದರ ಬಹುಮುಖಿ ಅಧ್ಯಯನ ನಡೆಸಿ, ಅಲ್ಲಿ ಪ್ರಕಟವಾದ ಫಲಿತಾಂಶವನ್ನು ಸಮಗ್ರ ಕ್ಷೇತ್ರಕ್ಕೆ ಅನ್ವಯಿಸಿಕೊಳ್ಳಲಾಗುತ್ತದೆ. ಘಟಕನಿಷ್ಠ ಅಧ್ಯಯನ ಬಹುಶಿಸ್ತೀಯ ಅಧ್ಯಯನವಾಗಿದ್ದರೂ, ಇದು ಘಟಕದಿಂದ ಸಮಗ್ರಕ್ಕೆ ಅನ್ವಯಿಸಿಕೊಳ್ಳುವ ಸ್ವರೂಪದ್ದಾಗಿರುತ್ತದೆ. ಹೀಗಾಗಿ ಘಟಕನಿಷ್ಠ ಸಂಶೋಧನೆ ಮತ್ತು ಬಹುಶಿಸ್ತೀಯ ಸಂಶೋಧನೆಗಳ ಗ್ರಹಿಕೆಯಲ್ಲಿ ಸೂಕ್ಷ್ಮ ವ್ಯತ್ಯಾಸವಿದೆಯೆಂದೇ ಹೇಳಬೇಕು. ಒಟ್ಟಿನಲ್ಲಿ ಇದು ಅಗುಳಿನ ಪರೀಕ್ಷೆಯನ್ನು ಅನ್ನಕ್ಕೆ ಅನ್ವಯಿಸಿಕೊಳ್ಳುವ ರೀತಿಯದ್ದಾಗಿರುತ್ತದೆ.

ಸಾಂಸ್ಕೃತಿಕ ಸಂಶೋಧನೆ :

ಯಾವುದೇ ಜನಾಂಗ ಕಾಲ, ದೇಶ, ಪರಿಸರಬದ್ಧವಾಗಿರುತ್ತದೆ. ಈ ತ್ರಿಕೋನ ನಿಯಂತ್ರಣದಲ್ಲಿ ಅದು ತನ್ನ ಬದುಕನ್ನು ರೂಪಿಸಿಕೊಂಡಿರುತ್ತದೆ. ಹೀಗಾಗಿ ವೈಯಕ್ತಿಕ ವೈಶಿಷ್ಟ್ಯಗಳನ್ನು ಬಿಟ್ಟರೂ ಸರ್ವರಿಗೆ ಸಮಾನವಾಗಿರುವ ಅನೇಕ ಅಂಶಗಳನ್ನು ಆ ಜನಾಂಗದವರು ಬಾಳುತ್ತಿರುತ್ತಾರೆ. ಅನಧಿಕೃತ ಶಾಸನಗಳಂತಿರುವ ಈ ಸಮಾನ ಅಂಶಗಳ ಬಿಡಿರೂಪವೂ, ಇಡಿ ಮೊತ್ತವೂ ಸಮಾಜದ ಸಂಸ್ಕೃತಿಯೆನಿಸುತ್ತದೆ.

ಕರ್ನಾಟಕವನ್ನು ಕುರಿತು ಹೇಳುವುದಾದರೆ ಸತಿಪದ್ಧತಿ, ವೀರಮರಣ, ವೇಳೆವಾಳಿ, ಅಗ್ರಹಾರ, ಘಟಿಕಾಸ್ಥಾನ ಇವೇ ಮೊದಲಾದ 'ಶಿಷ್ಟಸಂಸ್ಕೃತಿ'ಯ ಸಿಡಿಯಾಟ, ಪಶುಬಲಿ, ದೇವದಾಸಿ ಪದ್ಧತಿ, ಇವೇ ಮೊದಲಾದ 'ಜಾನಪದ ಸಂಸ್ಕೃತಿ'ಯ 'ಮಾದರಿ'ಗಳು ನಮ್ಮ ಪ್ರಾಚೀನ ಸಮಾಜದಲ್ಲಿ ಕಂಡುಬರುತ್ತವೆ. ಕೆಲವು ಈಗಲೂ ಮುಂದುವರಿದಿವೆ. ಕಾವ್ಯ ಶಾಸನಗಳ ಅಧ್ಯಯನದಿಂದ, ಜನಾಂಗಗಳ ಕ್ಷೇತ್ರಕಾರ್ಯದಿಂದ ಇಂಥ 'ಸಮಾಜಸಮ್ಮತ', ಆಚಾರ-ವಿಚಾರಗಳ ಅಧ್ಯಯನವು ಇಂದು ವಿದ್ವತ್‌ಲೋಕದಲ್ಲಿ ತೆರೆದುಕೊಂಡಿದೆ. 'ಸಾಂಸ್ಕೃತಿ ಅಧ್ಯಯನ' ಹೆಸರಿನ ಇದು ಮೇಲೆ ಹೇಳಿದಂತೆ ಬಿಡಿ ರೂಪದಲ್ಲಿ ಇಲ್ಲವೆ ಇಡಿ ರೂಪದಲ್ಲಿ ಜರುಗುವುದಾಗಿದೆ. ಪ್ರಾಚೀನಕಾಲದಲ್ಲಿ ಶಿವಭಕ್ತರು ಮುಖಕ್ಕೆ ನಂದಿಮೊಗವಾಡ ಧರಿಸಿಕೊಂಡು ತಿರುಗುತ್ತಿದ್ದರು.[೩೨] 'ದೃಷ್ಟಿವಾರಿ' ವ್ರತದ ಭಕ್ತರು ಕಣ್ಣು ಪಿಳುಕಿಸದೆ ಶಿವಲಿಂಗವನ್ನು ನೋಡುತ್ತ ಕುಳಿತುಕೊಳ್ಳುತ್ತಿದ್ದರು-ಇತ್ಯಾದಿ ಬಿಡಿ ಅಂಶಗಳನ್ನು ಕುರಿತು ಸಂಶೋಧನೆಯೂ 'ಸಾಂಸ್ಕೃತಿಕ ಅಧ್ಯಯನ'ವೆನಿಸುತ್ತದೆ.[೩೩] 'ಕರ್ನಾಟಕದಲ್ಲಿ ಸತಿಪದ್ಧತಿ' (ಬಿ.ಎಸ್. ಶೇಠೆ) ಇತ್ಯಾದಿ ರೀತಿಯಲ್ಲಿ ವ್ಯಾಪಕವಾಗಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (ಚಿದಾನಂದಮೂರ್ತಿ) ಇತ್ಯಾದಿ ರೀತಿಯಲ್ಲಿ ಇನ್ನೂ ವ್ಯಾಪಕವಾಗಿ ನಡೆದ ಸಂಶೋಧನೆಗಳೂ ಸಾಂಸ್ಕೃತಿಕ ಅಧ್ಯಯನವೆನಿಸುತ್ತವೆ. ಇತ್ತೀಚೆ ಸಾಹಿತ್ಯ ಕೃತಿಗಳನ್ನು, ಇನ್ನೂ ಇತ್ತೀಚೆ ಜಾನಪದ ಸಮುದಾಯಗಳನ್ನು ಅವಲಂಬಿಸಿ ಮಾಡುವ ಇಂಥ ಅಧ್ಯಯನ ನಮ್ಮಲ್ಲಿ ಕಾಣಿಸಿಕೊಂಡಿದೆ.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ 'ಸಾಂಸ್ಕೃತಿಕ ಅಧ್ಯಯನ' ಹೆಸರಿನಲ್ಲಿ ಈವರೆಗೆ ಆಕರ ಸಾಮಗ್ರಿಯನ್ನು ವಿಶ್ಲೇಷಣಾತ್ಮಕವಾಗಿ ಅಭ್ಯಸಿಸಿ ಒಂದು ವಿಷಯದ ಅಥವಾ ಸಮಗ್ರ ಬದುಕಿನ 'ರೂಪನಿಷ್ಠ ಶೋಧ' ನಡೆಸಿದ್ದೇವೆಯೇ ಹೊರತು, ವ್ಯಾಖ್ಯಾನಾತ್ಮಕವಾಗಿ ಅಭ್ಯಸಿಸಿ 'ಗುಣನಿಷ್ಠ ಶೋಧ' ನಡೆಸುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಅಂದರೆ ಪ್ರಾಚೀನ ಕಾಲದಲ್ಲಿ ಸತಿಪದ್ಧತಿ, ವೀರಮರಣಗಳು ಪ್ರಚಲಿತವಿದ್ದವೆಂಬುದನ್ನು ತೋರಿಸಿ ಕೊಟ್ಟಿದ್ದೇವೆ. ಅವುಗಳ ಆಚರಣೆಯ ವಿಧಾನ-ಐತಿಹಾಸಿಕ ಬೆಳವಣಿಗೆ-ಪ್ರಾದೇಶಿಕ ಪ್ರಸಾರಗಳನ್ನು ಪ್ರಕಟಿಸಲು ಕೆಲವೊಮ್ಮೆ ಪ್ರಯತ್ನಿಸಿದ್ದೇವೆ. ಆದರೆ ಈ ಪದ್ಧತಿಗಳು ಅಸ್ತಿತ್ವಕ್ಕೆ ಬರಲು ಇದ್ದ ಒತ್ತಡಗಳು, ಜನರು ಅವುಗಳಿಗೆ ತೋರಿಸುತ್ತಲಿದ್ದ ನಿಜವಾದ ಪ್ರತಿಕ್ರಿಯೆಗಳು, ಅವುಗಳ ಒಳಿತು-ಕೆಡಕುಗಳು ಇತ್ಯಾದಿಯಾಗಿ 'ಸಾಮಾಜಿಕ ನ್ಯಾಯ'ದ ದೃಷ್ಟಿಯಿಂದ ಸಂಬಂಧಪಟ್ಟ ಆಕರಗಳನ್ನು ವ್ಯಾಖ್ಯಾನಿಸಿಲ್ಲ. ಮೊದಲು ವಿಶ್ಲೇಷಿಸಿ ಆಮೇಲೆ ವ್ಯಾಖ್ಯಾನಿಸಿದರೆ ಮಾತ್ರ ಈ ಅಧ್ಯಯನಕ್ಕೆ ಪೂರ್ಣತೆ ಒದಗುತ್ತದೆ. ಈ ದಿಸೆಯಲ್ಲಿ ನಮ್ಮ 'ಸಾಂಸ್ಕೃತಿಕ ಅಧ್ಯಯನ' ಮುಂದುವರಿಯಬೇಕಾಗಿದೆ.

❖❖

೩೨. ನಂದಿಮೊಗವಾಡ-ಎಂ. ಎಂ. ಕಲಬುರ್ಗಿ (ಸಂಶೋಧನ ವ್ಯಾಸಂಗ, ೩-೧).

೩೩. ದೃಷ್ಟಿಯಾರೆ-ದೃಷ್ಟಿವಾರಿ-ಎಂ. ಎಂ. ಕಲಬುರ್ಗಿ (ಮಾರ್ಗ-I, ಪು.೨೬೧)

೪

❖

ಪ್ರಬಂಧ

ಸಂಪ್ರಬಂಧ–ಮಹಾಪ್ರಬಂಧ / ಮಹಾಪ್ರಬಂಧದ ಕಟ್ಟಡ

ಸಂಪ್ರಬಂಧ–ಮಹಾಪ್ರಬಂಧ

ಸಂಶೋಧನಕ್ಷೇತ್ರದ ಮುಖ್ಯ ರಚನೆಗಳು ಎರಡು. ಒಂದು ಲೇಖನರೂಪದ್ದು, ಇನ್ನೊಂದು ಗ್ರಂಥರೂಪದ್ದು (ಪಿಎಚ್.ಡಿ.). ಇವುಗಳಲ್ಲಿ ಸಂಶೋಧನರೂಪದ ಲೇಖನವನ್ನು ಸಂಪ್ರಬಂಧವೆಂದೂ, ಸಂಶೋಧನರೂಪದ ಗ್ರಂಥವನ್ನು ಮಹಾಪ್ರಬಂಧವೆಂದೂ ಕರೆಯಲಾಗುತ್ತದೆ. ಸಂಪ್ರಬಂಧ ರಚನೆಯಲ್ಲಿ ಸಂಶೋಧಕನದೇ ನೇರ ಹೊಣೆ. ಮಹಾಪ್ರಬಂಧರಚನೆಯಲ್ಲಿ ಹೊಣೆ ಸಂಶೋಧಕನಾದರೂ ಮಾರ್ಗದರ್ಶಕ ಉದ್ದಕ್ಕೂ ನೆರವಾಗಿರುತ್ತಾನೆ.

ಸಂಶೋಧನೆಯೆನ್ನುವುದು ದತ್ತಾಂಶವನ್ನು ತರ್ಕಬದ್ಧವಾಗಿ ಬಳಸಿಕೊಂಡು, ಸತ್ಯವನ್ನು ಅನ್ವೇಷಿಸುವ ಕ್ರಿಯೆಯಾಗಿದೆ. ಇಲ್ಲಿ ದತ್ತಾಂಶ ಎಷ್ಟು ಮುಖ್ಯವೋ ತರ್ಕಬದ್ಧತೆಯೂ ಅಷ್ಟೇ ಮುಖ್ಯವಾದುದು. ಈ ದತ್ತಾಂಶಸಂಗ್ರಹ ಮತ್ತು ತರ್ಕಬದ್ಧ ವಿವೇಚನೆಗಳು ಉಭಯ ಪ್ರಬಂಧಗಳ ಅಂತರಂಗ ಬಹಿರಂಗಗಳಲ್ಲಿಯೂ ಅಪೇಕ್ಷಣಿಯವಾಗಿದೆ.

ಸಂಶೋಧನೆಯಲ್ಲಿ ಸಮಸ್ಯೆಯ ಆಯ್ಕೆ, ಪ್ರಥಮ ಹೆಜ್ಜೆ. ಸಂಪ್ರಬಂಧ ನೇರವಾಗಿ ಏಕಸಮಸ್ಯೆಯನ್ನು ಗುರಿಯಿಟ್ಟು ನಡೆದರೆ, ಮಹಾಪ್ರಬಂಧ ಅನೇಕ ಸಮಸ್ಯೆಗಳನ್ನು ಗರ್ಭೀಕರಿಸಿಕೊಂಡ ಏಕಮುಖ ಅಧ್ಯಯನವಾಗಿರುತ್ತದೆ. ಆದುದರಿಂದ, ತಾನು ಕೈಗೆತ್ತಿಕೊಳ್ಳಲಿರುವ ವಿಷಯ ಸಂಪ್ರಬಂಧ ಮಿತಿಯದೋ, ಮಹಾಪ್ರಬಂಧ ವ್ಯಾಪ್ತಿಯದೋ ಎಂಬ ಪ್ರಾಥಮಿಕ ತಿಳಿವಳಿಕೆ ಸಂಶೋಧಕನಿಗೆ ಅಗತ್ಯ. ಲೇಖನರೂಪದ ಸಂಶೋಧನೆಗೆ ತೊಡಗಿ ಗ್ರಂಥಗಾತ್ರಕ್ಕೆ ವಿಸ್ತಾರಗೊಂಡ, ಗ್ರಂಥರೂಪದ ಸಂಶೋಧನೆಗೆ ತೊಡಗಿ ಲೇಖನ ಗಾತ್ರಕ್ಕೆ ಸಂಕೋಚಗೊಂಡ ಅನೇಕ ಉದಾಹರಣೆಗಳು ನಮ್ಮ ಕಣ್ಣಮುಂದಿವೆ. ಇದಕ್ಕೆ ಕಾರಣ, ಸಂಶೋಧಕನಿಗೆ ವಿಷಯದ ಆಯ್ಕೆಯಲ್ಲಿ ಸ್ಪಷ್ಟ ತಿಳಿವಳಿಕೆ ಇಲ್ಲದಿರುವುದು. ಕೆಲವೊಮ್ಮೆ ತಿಳಿವಳಿಕೆ ಇದ್ದರೂ ಅಧ್ಯಯನ ಸಂದರ್ಭದಲ್ಲಿ ಲಭ್ಯವಾದ ಅನಿರೀಕ್ಷಿತ ವಿಷಯ ಬಾಹುಳ್ಯದಿಂದಾಗಿ ಅಪವಾದವೆಂಬಂತೆ ಸಂಪ್ರಬಂಧ ಮಹಾಪ್ರಬಂಧ ವ್ಯಾಪ್ತಿಗೆ ಹಿಗ್ಗಬಹುದು. ಇಲ್ಲವೆ ಒಂದು ಮಹಾಪ್ರಬಂಧ ಒಂದಕ್ಕಿಂತ ಹೆಚ್ಚು ಮಹಾಪ್ರಬಂಧಗಳಿಗೆ ಗ್ರಾಸ ಒದಗಿಸಬಹುದು. ಆದರೆ ಒಂದು ಮಹಾಪ್ರಬಂಧ ಒಂದು ಸಂಪ್ರಬಂಧದ ಮಿತಿಗೆ ಇಳಿದರೆ, ವಿಷಯದ ಆಯ್ಕೆಯಲ್ಲಿ ಸಂಶೋಧಕ–ಮಾರ್ಗದರ್ಶಕ ಇಬ್ಬರೂ ವಿಫಲರಾಗಿರುವರೆಂದೇ ಹೇಳಬೇಕು.

ಹೀಗೆ ಸಂಶೋಧನೆಗೆ ತೊಡಗುವ ಮೊದಲು, ಕೈಗೆತ್ತಿಕೊಳ್ಳಲಿರುವ ಸಮಸ್ಯೆಯು ಸಂಪ್ರಬಂಧ ಮಿತಿಯದೋ ಮಹಾಪ್ರಬಂಧ ಮಿತಿಯದೋ ಎಂಬ ತಿಳಿವಳಿಕೆಯಂತೆ, ಆ ವಿಷಯವನ್ನು ಕುರಿತು ಈ ಮೊದಲು ಸಂಶೋಧನೆ ಆಗಿದೆಯೋ ಇಲ್ಲವೋ ಎಂಬ ತಿಳಿವಳಿಕೆಯೂ ಅಗತ್ಯ. ದೇವರ ದಾಸಿಮಯ್ಯ, ಜೇಡರದಾಸಿಮಯ್ಯ ಭಿನ್ನರೆಂದು ೫೦ ವರ್ಷಗಳಷ್ಟು ಹಿಂದೆ ಗೋವಿಂದ ಪೈಗಳೇ ಹೇಳಿದ್ದಾರೆ. ಆದರೆ ಇದನ್ನು ಮೊದಲ ಸಲ ಹೇಳುತ್ತಿರುವವರು ತಾವು ಎನ್ನುವಂತೆ ಇತ್ತೀಚೆಗೆ ಒಬ್ಬರು ಲೇಖನ ಬರೆದಿದ್ದಾರೆ. ಇದು ಈ ಮೊದಲಿನ ಸಂಶೋಧನೆಯ ಪರಿವೆಯಿಲ್ಲದುದರ ಫಲವಾಗಿದೆ. ಇದಲ್ಲದೆ ತಾನು ಬಿಡಿಸಲಿರುವ ಸಮಸ್ಯೆಗೆ ಸಂಬಂಧಪಟ್ಟ ಆಕರ ಸಾಮಗ್ರಿ ಲಭ್ಯವೋ ಅಲಭ್ಯವೋ ಎಂಬ ತಿಳಿವಳಿಕೆಯೂ ಅತ್ಯವಶ್ಯ. ಇಂಥ ತಿಳಿವಳಿಕೆ ಇಲ್ಲದೆ ಅನೇಕ ಸಂಶೋಧನ ವಿದ್ಯಾರ್ಥಿಗಳು ಆಕರ ಕೊರತೆಯಿಂದ ಬಳಲಿ, ಪಿಎಚ್.ಡಿ. ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸಿದ ಹಲವು ಉದಾಹರಣೆಗಳು ಸಿಗುತ್ತವೆ. ಇದಕ್ಕೆ ಹೆಚ್ಚಿನದಾಗಿ ಮಹಾಪ್ರಬಂಧ ಸಂದರ್ಭದಲ್ಲಿ ಆ ಸಮಸ್ಯೆಯನ್ನು ನಿರ್ವಹಿಸುವ ಶಕ್ತಿ ತನಗೆ ಇದೆಯೋ ಇಲ್ಲವೋ ಎಂಬ ಪ್ರಶ್ನೆಯನ್ನು ಸಂಶೋಧಕ, ಮಾರ್ಗದರ್ಶಕ ಹಾಕಿಕೊಳ್ಳಬೇಕು. ದುರ್ದೈವದ ಸಂಗತಿಯೆಂದರೆ ಬಹಳಷ್ಟು ಸಲ ಸ್ನಾತಕೋತ್ತರ ಪದವಿ ಪಡೆದ ಮರುದಿನವೇ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನಕ್ಕೆ ಧಾವಿಸುತ್ತಾರೆ. ತಮ್ಮ ಶಕ್ತಿ-ಆಸಕ್ತಿಗಳ ಪ್ರಜ್ಞೆಯಿಲ್ಲದೆ, ವಿಷಯದ ತುದಿ-ಮೊದಲುಗಳ ಪರಿಚಯವಿಲ್ಲದೆ ಅಧ್ಯಯನಕ್ಕೆ ಹೆಸರು ನೋಂದಾಯಿಸುತ್ತಾರೆ. ಇದಕ್ಕಿಂತ ವಿಷಾದದ ಸಂಗತಿಯೆಂದರೆ ಮೇಲೆ ಹೇಳಿದ ಪ್ರಶ್ನೆಗಳನ್ನು ಹಾಕಿಕೊಳ್ಳದೆ, ಕೊನೆಯ ಪಕ್ಷ ತಮ್ಮ ಶಕ್ತಿ-ಆಸಕ್ತಿಗಳನ್ನೂ ಗಮನಿಸಿದೆ ಅನೇಕ ಜನ ಮಾರ್ಗದರ್ಶಕರು ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ವಿಷಯ ಕೊಡುವ ಸಾಹಸಮಾಡುವುದು. ಇದರಿಂದ ಕುರುಡನ ಕೈ ಕುರುಡ ಹಿಡಿದು ದಾರಿ ಕ್ರಮಿಸಿದಂತಾಗುತ್ತದೆ. ಆದುದರಿಂದ ಸಂಪ್ರಬಂಧಕ್ಕೆ ಉತ್ತಮ ವಿಷಯವನ್ನು, ಮಹಾಪ್ರಬಂಧಕ್ಕೆ ಉತ್ತಮ ವಿಷಯ, ಉತ್ತಮ ಮಾರ್ಗದರ್ಶಕರನ್ನು ಆಯ್ಕೆಮಾಡಿಕೊಂಡರೆ, ವಿದ್ಯಾರ್ಥಿ ಅರ್ಧ ಗೆದ್ದಂತೆ. ಇದೇ ರೀತಿ ಉತ್ತಮ ವಿದ್ಯಾರ್ಥಿಗೆ, ಉತ್ತಮ ವಿಷಯಕ್ಕೆ ಮಾರ್ಗದರ್ಶನ ನೀಡುವುದೆಂದರೆ, ಮಾರ್ಗದರ್ಶಕನಿಗೆ ಉತ್ತಮ ಮಾರ್ಗದರ್ಶನ ನೀಡುವ ತರಬೇತಿ ಲಭಿಸಿದಂತೆ.

ಸಂಶೋಧನೆಯ ಸಂದರ್ಭದಲ್ಲಿ ವಿಷಯ "ಸಂ+ಶೋಧನೆ" ಹೆಸರಿಗೆ ತಕ್ಕುದಾಗಿರಬೇಕು. ಜ್ಞಾನಕ್ಷೇತ್ರಕ್ಕೆ ಹೊಸ ಕೊಡುಗೆ ರೂಪದ್ದು, ಆಹ್ವಾನರೂಪದ್ದು, ಉಪೇಕ್ಷಿತವಾದದ್ದು ಇರಬೇಕು. ಕನ್ನಡದಲ್ಲಿ ಈವರೆಗೆ ಕವಿ-ಕೃತಿ ಅಧ್ಯಯನ, ಕೃತಿಯ ಸಾಂಸ್ಕೃತಿಕ ಅಧ್ಯಯನ, ಜನಪದೀಯ ಅಧ್ಯಯನ-ಇಂಥ ವಿಷಯಗಳ ಆಯ್ಕೆ ಒಂದು ಬಗೆಯ ಕ್ಷೀಷೆಯಾಗಿಬಿಟ್ಟಿದೆ, ಪ್ರಬಂಧದ ಅಸ್ಥಿಪಂಜರವೆನಿಸುವ "ಸಿದ್ಧಪಡಿಯಚ್ಚು" ನಿರ್ಮಾಣಗೊಂಡಿದೆ. ಕಣ್ಣುಮುಚ್ಚಿಕೊಂಡು ಬರೆಯುವ "ಶೈಲಿಯ ಸರಳದಾರಿ" ಸಿದ್ಧವಾಗಿದೆ. ಪ್ರಬಂಧರಚನೆ "ವ್ಯಾಖ್ಯಾನಮುಖಿ ಸಂಶೋಧನೆ" ಹೋಗಲಿ, "ವಿಶ್ಲೇಷಣಮುಖಿ ಸಂಶೋಧನೆ"ಯೂ ಅಲ್ಲದ "ಸಾಮಗ್ರಿಮುಖಿ ಶೋಧನೆ"ಯ ಮಟ್ಟಕ್ಕೆ ಇಳಿದಿದೆ. ಇಂಥ ಸಂದರ್ಭದಲ್ಲಿ ನಾವು ಹೊಸ ಹೊಸ ವಿಷಯಗಳನ್ನು ಆಯ್ದುಕೊಳ್ಳುವ, ಹೊಸ ಹೊಸ ರಚನಾವಿಧಾನಗಳನ್ನು ತೆರೆಯುವ ಕೆಲಸ ಮಾಡಬೇಕಾಗಿದೆ. ಅನ್ಯಭಾಷೆ-ಅನ್ಯದೇಶಗಳ ಶೈಕ್ಷಣಿಕ ಸಂಪರ್ಕದಿಂದ, ವ್ಯಾಪಕವಾದ ಅಧ್ಯಯನದಿಂದ, ನಿರಂತರ ಚಿಂತನೆಯಿಂದ ಮಾತ್ರ ಹೊಸ ವಿಷಯಗಳು ಕಣ್ಣಿಗೆ ಬೀಳುತ್ತವೆ. ಹೊಸ ಕನ್ನೆ ನೆಲಗಳು ಕಾಣಿಸಿಕೊಳ್ಳುತ್ತವೆ. India as known to Panini (Dr. V. S. Agarawala). Yashastitaka and Indian Culture (K. K.

Handiqui), ಹರ್ಷಚರಿತ ಏಕ ಸಾಂಸ್ಕೃತಿಕ ಅಧ್ಯಯನ (ಡಾ. ವಿ. ಎಸ್. ಅಗರವಾಲಾ) ಕೃತಿಗಳು ಕನ್ನಡದಲ್ಲಿ ಶಾಸನ ಮತ್ತು ಸಾಹಿತ್ಯಕೃತಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ದಾರಿಮಾಡಿಕೊಟ್ಟುದನ್ನು ಇಲ್ಲಿ ನೆನೆಯಬೇಕು. ಕೆಲವೊಮ್ಮೆ ಎಲ್ಲರಿಗೂ ಕಾಣುವ Great tradition ದ ವಿಷಯಗಳನ್ನಲ್ಲದೆ ಉಪೇಕ್ಷೆಗೆ ಗುರಿಯಾದ Little tradition ವಿಷಯಗಳನ್ನೂ ಆಯ್ದುಕೊಂಡರೆ ಒಂದು ದೇಶದ ಸಂಶೋಧನಕ್ಷೇತ್ರಕ್ಕೆ ಸಮಗ್ರತೆಯನ್ನೊದಗಿಸಿದಂತಾಗುತ್ತದೆ. ಡಾ. ಶ್ರೀ. ನಂ. ಶಂಕರನಾರಾಯಣ ಅವರ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಡಾ. ಬಸವಲಿಂಗ ಸೊಪ್ಪಿಮಠ ಅವರ 'ಕೊಡೇಕಲ್ಲು ಬಸವಣ್ಣ : ಒಂದು ಅಧ್ಯಯನ' ಮೊದಲಾದ ಪಿಎಚ್.ಡಿ. ಪ್ರಬಂಧಗಳನ್ನು ಇಲ್ಲಿ ನೆನೆಯಬಹುದು.

ಸಂಪ್ರಬಂಧವೇ ಇರಲಿ ಮಹಾಪ್ರಬಂಧವೇ ಇರಲಿ, ವಿಷಯದ ಆಯ್ಕೆಯ ಬಳಿಕ ಸಂಶೋಧಕ ತುಳಿಯಬೇಕಾದುದು ಶ್ರಮ-ಶ್ರದ್ಧೆಯ ದಾರಿಯನ್ನು. ಈಗ ಆಕರಗಳ ಶೋಧ ಒಂದು ಹಂತವಾದರೆ, ಆಕರಗಳ ಅಭ್ಯಾಸ ಇನ್ನೊಂದು ಹಂತವೆನಿಸುತ್ತದೆ. ಸಾಮಾನ್ಯವಾಗಿ ಆಕರಗಳ 'ಶೋಧ'ದ ಬಳಿಕ ಅವುಗಳ 'ಅಭ್ಯಾಸ' ನಡೆಯುತ್ತಿದ್ದರೂ ಕೆಲವೊಮ್ಮೆ ಇವು ಜೊತೆಜೊತೆಯಾಗಿಯೇ ಸಾಗುತ್ತವೆ. ಈ ಹಿಂದೆ ಹೇಳಿದಂತೆ ವಸ್ತುಸಾಮಗ್ರಿ, ಭಾಷಾಸಾಮಗ್ರಿ, ಕ್ರಿಯಾಸಾಮಗ್ರಿ, ಜ್ಞಾನಸಾಮಗ್ರಿ ರೂಪದ ಆಕರಗಳನ್ನು ಸಂಶೋಧಕ ಮೊದಲ ಹಂತದಲ್ಲಿ ಸಂಗ್ರಹಿಸಿಕೊಳ್ಳಬೇಕು. ಇದರ ಅಂಗವಾಗಿ ಕೇಂದ್ರೀಯ, ಕ್ಷೇತ್ರೀಯ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕು.

ಈಗ ಕೇಂದ್ರೀಯ ವಿಷಯವನ್ನು ಟಿಪ್ಪಣಿಸಿಕೊಳ್ಳುವ, ಕ್ಷೇತ್ರೀಯ ವಿಷಯವನ್ನು ಸಂಗ್ರಹಿಸಿಕೊಳ್ಳುವ ಇಲ್ಲವೆ ಪ್ರಶ್ನಾವಳಿಯನ್ನು ದಾಖಲಿಸಿಕೊಳ್ಳುವ ಕೆಲಸಮಾಡಬೇಕಾಗುತ್ತದೆ. ಟಿಪ್ಪಣಿಸಿಕೊಳ್ಳುವ ರೀತಿ ಅವರವರಿಗೆ ಬಿಟ್ಟರೂ, ತುಂಡು ತುಂಡು ಸಾಮಗ್ರಿ ಒದಗಿಸುವ ಶಾಸನ ಮೊದಲಾದ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯವನ್ನು ಸಂಗ್ರಹಿಸುವಲ್ಲಿ 'ಪಟ್ಟಿಕೆ ವಿಧಾನ' ಪ್ರಯೋಜಕವೆನಿಸುತ್ತದೆ. ಇಲ್ಲಿ ತನಗೆ ಸೂಕ್ತವೆನಿಸುವ ಆಕಾರದಲ್ಲಿ (ಸಾಮಾನ್ಯವಾಗಿ ಅಂಚೆ ಕಾರ್ಡಿನ ಅಳತೆ) ಬಣ್ಣ ಬಣ್ಣದ ಕಾಗದ ಪಟ್ಟಿಕೆಗಳಿದ್ದಷ್ಟೂ ಅನುಕೂಲ. ಒಂದು ವಿಷಯಕ್ಕೆ ಸಂಬಂಧಪಟ್ಟ ಉಲ್ಲೇಖಗಳನ್ನು ಒಂದು ಬಣ್ಣದ ಪಟ್ಟಿಕೆಗಳಲ್ಲಿ, ಬೇರೊಂದು ವಿಷಯಕ್ಕೆ ಸಂಬಂಧಪಟ್ಟ ಉಲ್ಲೇಖಗಳನ್ನು ಬೇರೊಂದು ಬಣ್ಣದ ಪಟ್ಟಿಕೆಗಳಲ್ಲಿ ಬರೆದುಕೊಳ್ಳಬೇಕು. ಅಧ್ಯಯನಕ್ಕೆ ತಕ್ಕಂತೆ ಮತ್ತೆ ಮತ್ತೆ ಜೋಡಿಸಿಕೊಳ್ಳಲು ಪಟ್ಟಿಕೆಗಳೂ, ವಿಷಯಕ್ಕೆ ತಕ್ಕಂತೆ ವರ್ಗೀಕರಿಸಿಕೊಳ್ಳಲು ಅವುಗಳ ಬಣ್ಣವೂ ಅನುಕೂಲಕರವೆನಿಸುತ್ತವೆ. ಈ ಪಟ್ಟಿಕೆಗಳ ಮೇಲೆ ವಿಷಯ ಬರೆದುಕೊಳ್ಳುವಾಗ ಅದರ ಆಕರವನ್ನು ತಪ್ಪದೇ ದಾಖಲಿಸಬೇಕು. ಅವಶ್ಯವೆನಿಸಿದಲ್ಲಿ ಆಗ ಹೊಳೆದ ಹೊಸ ವಿಚಾರವನ್ನೂ ಹೆಚ್ಚಿನದಾಗಿ ಮಗ್ಗುಲಲ್ಲಿ ನಮೂದಿಸಬೇಕು.

ಆಕರಸಾಮಗ್ರಿ ಸಂಗ್ರಹದ ಬಳಿಕ ಕೈಕೊಳ್ಳಬೇಕಾದುದು ಅದರ ವರ್ಗೀಕರಣ. ಮಹಾಪ್ರಬಂಧವಾಗಿದ್ದರೆ ಪ್ರಕರಣ-ಉಪಪ್ರಕರಣಗಳ ಅಳವಡಿಕೆ, ಅವುಗಳಿಗೆ ಸೂಕ್ತ ಶೀರ್ಷಿಕೆ ಕೊಡುವಿಕೆ ಮೊದಲಾದ ಚಟುವಟಿಕೆಗಳು ನಡೆಯಬೇಕು. ಇದು ಸಂಪ್ರಬಂಧ ಇಲ್ಲವೆ ಮಹಾಪ್ರಬಂಧಗಳ ನೀಲನಕ್ಷೆ. ಇಲ್ಲಿ ಸಾಧಿಸಬೇಕಾದುದು ಕ್ರಮಬದ್ಧತೆ ಮತ್ತು ಪ್ರಮಾಣ ಬದ್ಧತೆ. "ಸೂಕ್ತ ಸ್ಥಳದಲ್ಲಿ ಸೂಕ್ತ ಪ್ರಕರಣ" ಎಂಬುದು ಕ್ರಮಬದ್ಧತೆಯಾದರೆ, ಎಲ್ಲ ಪ್ರಕರಣಗಳಲ್ಲಿ "ಅಂಗೋಪಾಂಗದಂತಹ ಸಮತೋಲನ" ಎಂಬುದು ಪ್ರಮಾಣ ಬದ್ಧತೆಯೆನಿಸುತ್ತದೆ. ಇದು ಒಟ್ಟು ಬರವಣಿಗೆಗೆ ಸಾವಯವ

ಸಂಬಂಧವನ್ನು, ಸುಸಂಬದ್ಧತೆಯನ್ನು ಒದಗಿಸಬೇಕು. ಒಂದು ಇತ್ತಮ ಕಾವ್ಯದಂತೆ, ಒಂದು ಉತ್ತಮ ಶಿಲ್ಪದಂತೆ ಒಟ್ಟು ಪ್ರಬಂಧವನ್ನು ಕಲಾತ್ಮಕವಾಗಿ ಸಂಯೋಜಿಸಬೇಕು, ಸೃಷ್ಟಿಸಬೇಕು.

ಪ್ರಕರಣ ಮತ್ತು ಉಪಪ್ರಕರಣಗಳ ಒಡಲಲ್ಲಿ ವಿಷಯದ ವಿಭಜನೆ–ಸಂಯೋಜನೆ ನಡೆದರೆ, ಇನ್ನೂ ಒಳಗೆ ವಿಷಯದ ವಿಶ್ಲೇಷಣೆ–ಸಂಶ್ಲೇಷಣೆಗಳು ನಡೆಯುತ್ತವೆ. ಸಂಶೋಧಕನ ವಿದ್ವತ್ತಿಗೆ ಸವಾಲು ಪ್ರಾಪ್ತವಾಗುವುದು ಇಲ್ಲಿ. ಆಕರಗಳ ಅಂತರಂಗವನ್ನು ಭೇದಿಸಿ, ಸಂಯೋಜಕ ಪ್ರತಿಭೆಯನ್ನು ದುಡಿಸಿ, ಉತ್ತಮೋತ್ತಮ ಫಲಿತಾಂಶವನ್ನು ಪ್ರಕಟಿಸುತ್ತ ಹೋಗುವುದು ಇಲ್ಲಿ ಮುಖ್ಯವಾಗುತ್ತದೆ. ಒಟ್ಟು ವಿಷಯವನ್ನು ಸತ್ಯದ ನೆಲೆಯಲ್ಲಿ ಸಂಘಟಿಸಿ, ಸರಿಯಾಗಿ ವ್ಯಾಖ್ಯಾನಿಸಬೇಕಾಗುತ್ತದೆ.

ಈ ಸಂದರ್ಭದಲ್ಲಿ ಅಮೂರ್ತವಾಗಿರುವ ಫಲಿತಾಂಶವನ್ನು ಭಾಷೆಯಲ್ಲಿ ಮೂರ್ತಗೊಳಿಸುವುದೆಂದರೆ, ನಿತ್ಯಜೀವನದಲ್ಲಿ ವಿಚಾರವನ್ನು ಆಚಾರಕ್ಕೆ ತರುವಂಥ ಪ್ರಯೋಗ. ಫಲಿತಾಂಶಗಳೇನೋ ಒಳ್ಳೆಯವು, ಪೂರ್ಣಪ್ರಮಾಣದಿಂದ ಅವು ಭಾಷೆಯಲ್ಲಿ ಅವತರಿಸದಿದ್ದರೆ, ಅವತರಿಸಿದರೂ ವಾಚಕರಿಗೆ ಸಂವಹನಗೊಳ್ಳದಿದ್ದರೆ, ಎಲ್ಲ ಸಾಮಗ್ರಿ ಸಲಕರಣೆ ಇದ್ದೂ ಸರಿಯಾದ ಪಾಕ ಸಿದ್ಧವಾಗದ ಸ್ಥಿತಿ ನಿರ್ಮಾಣವಾಗುತ್ತದೆ. ಕಾರಣ, ಫಲಿತಾಂಶಗಳು ಪೂರ್ಣಪ್ರಮಾಣದಲ್ಲಿ ವಾಚಕನಿಗೆ ಸಂವಹನಗೊಳ್ಳುವಂತೆ ಭಾಷೆಯನ್ನು ದುಡಿಸಿಕೊಳ್ಳಬೇಕು.

* * *

ಕನ್ನಡದಲ್ಲಿ ಪಿಎಚ್.ಡಿ. ಮಹಾಪ್ರಬಂಧದ ರಚನೆಗೆ ಹಲವು ದಶಕಗಳ ಇತಿಹಾಸವಿದೆ. ಈ ಅಧ್ಯಯನ ಆರಂಭವಾದುದು ಇಂಗ್ಲಿಷ್ ಮಾಧ್ಯಮದ ಮೂಲಕ. ಸುಮಾರು ೬೦ ವರ್ಷಗಳಷ್ಟು ಹಿಂದೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಎಲ್. ಡಿ. ಬಾರ್ನೆಟ್ ಅವರ ಮಾರ್ಗದರ್ಶನದಲ್ಲಿ ಡಾ. ಎಸ್. ಸಿ. ನಂದೀಮಠ ಅವರೂ (೧೯೩೦). ಆರ್. ಎಲ್. ಟರ್ನರ್ ಅವರ ಮಾರ್ಗದರ್ಶನದಲ್ಲಿ ಡಾ. ಎ. ಎನ್. ನರಸಿಂಹಯ್ಯನವರೂ (೧೯೩೩) ವಿದ್ಯಾರ್ಥಿಯಾಗಿ ತಮ್ಮ ಅಧ್ಯಯನವನ್ನು ಪೂರೈಸಿದರು.

ಆಮೇಲೆ ಮುಂಬೈ ವಿಶ್ವವಿದ್ಯಾಲಯದಲ್ಲಿ ಈ ಅಧ್ಯಯನ ಆರಂಭವಾಯಿತು. ಆಗ ಶ್ರೀ. ಆರ್. ಎಸ್. ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಶ್ರೀ. ಎನ್. ಕೆ. ಕುಲಕರ್ಣಿ ಅವರು ಪ್ರಥಮ ವಿದ್ಯಾರ್ಥಿಯಾಗಿ ಕುಮಾರವ್ಯಾಸನ್ನು ಕುರಿತು ಅಧ್ಯಯನ ಕೈಗೊಂಡರಾದರೂ ಅಭ್ಯಾಸ ಪೂರ್ಣಗೊಳ್ಳಲಿಲ್ಲ. ಹೀಗಾಗಿ ಅದೇ ಪಂಚಮುಖಿಯವರ ಮಾರ್ಗದರ್ಶನದಲ್ಲಿ ಡಾ. ಎ. ಟಿ. ಪಾಟೀಲ ಅವರೂ (ಪ್ರಸನ್ನ ವೆಂಕಟದಾಸರು, ೧೯೪೭), ಪ್ರೊ. ಕೆ. ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಡಾ. ಡಿ. ಸ್. ಕರ್ಕಿ ಅವರೂ (ಕನ್ನಡ ಛಂದೋವಿಕಾಸ, ೧೯೪೯) ಪ್ರಥಮ ವಿದ್ಯಾರ್ಥಿಯಾಗಿ ಪಿಎಚ್.ಡಿ. ಪದವಿ ಪಡೆದರು. ಇವರಿಗೆ ಬರವಣಿಗೆಯ ಮಾಧ್ಯಮವಾದುದು, ಕನ್ನಡ.

ಲಂಡನ್, ಮುಂಬಯಿಗಳ ತರುವಾಯ ಈ ಅಧ್ಯಯನ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಈ ಪ್ರಾಂತದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೇ ಮೊದಲು ಪಿಎಚ್.ಡಿ. ಪದವಿ ನೀಡಿದ್ದು. ಅದನ್ನು

ಪಡೆದ ಕೀರ್ತಿ ಪ್ರೊ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ ಡಾ. ಬಿ. ಎಸ್. ಗದ್ದಗಿಮಠ ಅವರಿಗೆ (ಕನ್ನಡ ಜನಪದ ಗೀತೆಗಳು-೧೯೫೫) ಸಲ್ಲುತ್ತದೆ.

ಆಮೇಲೆ ಕರ್ನಾಟಕದ ಒಳಹೊರಗಿನ ವಿಶ್ವವಿದ್ಯಾಲಯಗಳ ಮೂಲಕ ಪಿಎಚ್.ಡಿ. ಪ್ರಬಂಧರಚನೆಯ ಪರಂಪರೆ ಮುಂದುವರಿದಿದ್ದು, ಒಂದು ಅಂದಾಜಿನ ಪ್ರಕಾರ, ಈ ಸಂಖ್ಯೆ ೩೦೦. ಇಲ್ಲಿ ಕವಿ-ಕಾವ್ಯ ವಿವೇಚನೆ, ಆಮೇಲೆ ಶಾಸನ ಕಾವ್ಯಗಳ ಸಾಂಸ್ಕೃತಿಕ ಅಧ್ಯಯನ ಜನಾಂಗ-ಪ್ರದೇಶಗಳ ಭಾಷಿಕ ಅಧ್ಯಯನ, ಜಾನಪದ ಸಾಹಿತ್ಯಿಕ-ಜನಾಂಗಿಕ ಅಧ್ಯಯನಗಳ ಮೇಲೆ ಒತ್ತು ಬೀಳುತ್ತಲಿದೆ. ಇದೇ ೪-೫ ಕ್ಷೇತ್ರಗಳನ್ನು ಮತ್ತೆ ಮತ್ತೆ ಆಯ್ದುಕೊಳ್ಳುತ್ತಲಿರುವುದರಿಂದ ಈ ಅಧ್ಯಯನಕ್ಕೆ ಒಂದು ಮಿತಿ ಪ್ರಾಪ್ತವಾಗಿದೆ. ಈಗ ಮಾರ್ಗದರ್ಶಕನಾದವನು ಹೊಸ ಹೊಸ ಕ್ಷೇತ್ರಗಳನ್ನು ವಿದ್ಯಾರ್ಥಿಗಳಿಗೆ ಹುಡುಕಿ ಕೊಡುವ ಪ್ರಯತ್ನ ಮತ್ತು ಪ್ರಬಂಧದ ಗುಣಮಟ್ಟವನ್ನು ಎತ್ತಿಹಿಡಿಯುವ ಸಂಕಲ್ಪ ಮಾಡಬೇಕಾಗಿದೆ.

ಇಂದು ಪಿಎಚ್.ಡಿ. ಪ್ರಬಂಧಗಳ ಗುಣಮಟ್ಟ ಕುಸಿದಿದೆಯೆಂಬ ಮಾತುಗಳು ಕೇಳಿ ಬರುತ್ತಿವೆ. ಇದಕ್ಕೆ ಹೊಣೆ ವಿದ್ಯಾರ್ಥಿಯಲ್ಲ, ದಾಕ್ಷಿಣ್ಯಕ್ಕೋ ಆಮಿಷಕ್ಕೋ ಒಳಗಾಗುವ ಮಾರ್ಗದರ್ಶಕ. ಹೆಸರನ್ನು ನೋಂದಣಿ ಮಾಡಿಸಿದ ವಿದ್ಯಾರ್ಥಿ ಮೊದಮೊದಲು ವ್ಯರ್ಥಸಮಯ ಕಳೆಯುವುದು, ಬಡಿತಿ ಸಂದರ್ಭ ಇಲ್ಲವೆ ಕಾಲಾವಧಿ ಮುಗಿಯುವ ಸಂದರ್ಭ ಉದ್ಭವಿಸಿದರೆ ತಟ್ಟನೇ ಎಚ್ಚರಾಗಿ, ಅವಸರವಸರದಿಂದ ನೂರಾರು ಪುಟ ಬರೆದು ಮಾರ್ಗದರ್ಶಕರಿಗೆ ಒಪ್ಪಿಸಿ, ಅವನನ್ನು ಇಕ್ಕಟ್ಟಿನಲ್ಲಿ ನಿಲ್ಲಿಸಿ, ಅವನಿಂದ ಅನುಮತಿ ದೊರೆಯುವಂತೆ ಮಾಡುವುದು ಇಂದು ಸಾಮಾನ್ಯವಾಗಿದೆ. ಮಾರ್ಗದರ್ಶಕರು ಇದಕ್ಕೆ ಅವಕಾಶ ಸಿಗದಂತೆ ವಿದ್ಯಾರ್ಥಿಯನ್ನು ಕಾಲಬದ್ಧವಾಗಿ ದುಡಿಸಬೇಕು. ಕಾಲಬದ್ಧವಾಗಿ ಬರವಣಿಗೆ ಮಾಡಿಸಬೇಕು. ಅಂದರೆ ಆಸಕ್ತ ವಿದ್ಯಾರ್ಥಿಯನ್ನು ಆಯ್ದುಕೊಂಡು, ಸರಿಯಾಗಿ ದುಡಿಸಿ, ಪ್ರಬಂಧವನ್ನು ಸಮರ್ಥಕವಾಗಿ ಬರೆಯಿಸಿದ ಹೊರತು ಪದವಿಗಾಗಿ ಅರ್ಪಿಸಲು ಮಾರ್ಗದರ್ಶಕ ಅನುಮತಿ ಕೊಡಲೇಬಾರದು. ಆಗ ಮಾತ್ರ ಪ್ರಬಂಧಗಳ ಗುಣಮಟ್ಟ ವರ್ಧಿಸುವ ಸಾಧ್ಯತೆಯಿದೆ. ಈ ಸಂದರ್ಭದಲ್ಲಿ ಮಾರ್ಗದರ್ಶಕನಾದವ ವಿದ್ಯಾರ್ಥಿಯಲ್ಲಿ ಆಸಕ್ತಿಯನ್ನು ಕುದುರಿಸುತ್ತ ಹೋಗಬೇಕೇ ಹೊರತು, ಕೃತಕಪೋಷಣೆ (spoon feeding)ಗೆ ಅವಕಾಶ ಮಾಡಿಕೊಡಬಾರದು. ಪ್ರಬಂಧ ಪರಿಶೀಲನೆಯ ಸಂದರ್ಭದಲ್ಲಿ ಮಾರ್ಗದರ್ಶಕನು ತನ್ನ ವಿಚಾರ, ತನ್ನ ವಾಕ್ಯಗಳನ್ನೇ ಸೇರಿಸುತ್ತ ಹೋದರೆ ವಿದ್ಯಾರ್ಥಿಯಲ್ಲಿ ಪರಾವಲಂಬನ ಪ್ರವೃತ್ತಿ ಬೆಳೆಯುತ್ತದೆ. ಇಂದು ಇದು ಅನಿವಾರ್ಯವೇನೋ ನಿಜ. ಈ ಅನಿವಾರ್ಯತೆಗೂ ಒಂದು ಮಿತಿಯಿದೆ ಎಂಬುದನ್ನು ಮರೆಯಬಾರದು. ಇದಕ್ಕೆ ವಿರುದ್ಧವೆಂಬಂತೆ ವಿದ್ಯಾರ್ಥಿ ಬರೆದು ಕೊಟ್ಟುದೆಲ್ಲವನ್ನು ಕಣ್ಣುಮುಚ್ಚಿ ಸಮ್ಮತಿಸಲೂಬಾರದು. ಇಲ್ಲಿ ಅವಶ್ಯ ಗಮನಿಸಬೇಕಾದ ಇನ್ನೊಂದು ವಿಚಾರವೆಂದರೆ, ವಿದ್ಯಾರ್ಥಿಯ ಸೂಕ್ತ ಅಭಿಪ್ರಾಯ ಸ್ವಾತಂತ್ರ್ಯವನ್ನು ಮಾರ್ಗದರ್ಶಕ ಮನ್ನಿಸಬೇಕು. ಒಟ್ಟಿನಲ್ಲಿ ಪಿಎಚ್.ಡಿ. ಅಧ್ಯಯನವು ಮುಕ್ತವಾತಾವರಣದಲ್ಲಿ ಪ್ರಬಂಧದೊಂದಿಗೆ ವಿದ್ಯಾರ್ಥಿಯನ್ನೂ ಬೆಳೆಸುತ್ತ ಸಾಗುವ ಕ್ರಿಯೆಯಾಗಬೇಕು.

ಮಹಾಪ್ರಬಂಧದ ಕಟ್ಟಡ

ಮಹಾಪ್ರಬಂಧ ಒಂದು ಕಲಾತ್ಮಕ ವಾಸ್ತುವಿದ್ದಂತೆ. ಪರಿವಿಡಿ, ಪ್ರಸ್ತಾವನೆ, ಪ್ರಕರಣ-ಉಪಪ್ರಕರಣಗಳ ವಿಭಜನೆ ಮತ್ತು ಸಂಯೋಜನೆಗಳಲ್ಲದೆ ಅಡಿಟಿಪ್ಪಣಿ, ಸಂಕೇತ-ಸಂಕ್ಷೇಪ, ಲೇಖನ-ಗ್ರಂಥರೂಪದ

ಸಹಾಯಕ ಸಾಹಿತ್ಯಗಳನ್ನೊಳಗೊಂಡ ಅನುಬಂಧಗಳು ಮಹಾಪ್ರಬಂಧಕ್ಕೆ ಶಾರೀರಿಕ ಶಿಸ್ತನ್ನು ಒದಗಿಸುತ್ತದೆ. ಇವುಗಳನ್ನು ರಚಿಸುವ, ವಿನ್ಯಾಸಗೊಳಿಸುವ ತರಬೇತಿ ಸಂಶೋಧಕನಿಗೆ ಅವಶ್ಯಬೇಕು.

ಪಿಎಚ್.ಡಿ. ಮಹಾಪ್ರಬಂಧವೇ ಇರಲಿ, ಸಂಶೋಧನಾತ್ಮಕ ಗ್ರಂಥವೇ ಇರಲಿ, "ಪರಿವಿಡಿ" ಇಡೀ ಪುಸ್ತಕದ ಸಂಕ್ಷಿಪ್ತರೂಪದಂತಿರಬೇಕು. ಬೇಕಿದ್ದ ವಿಷಯದ ಸ್ಥಳಕ್ಕೆ ಪ್ರವೇಶಿಸಲು ಇದು ಅನುಕೂಲತೆಯನ್ನುಂಟುಮಾಡಬೇಕು. ಆ ಬೇಕಿದ್ದ ಭಾಗ ಮುಖ್ಯವೂ ಇರಬಹುದು, ಗೌಣವೂ ಇರಬಹುದು. ಇವೆಲ್ಲ ಎದ್ದುಕಾಣುವಂತೆ, ಪರಿವಿಡಿಯಲ್ಲಿ ಮುಖ್ಯ ಪ್ರಕರಣದ ಕೆಳಗೆ ಉಪಪ್ರಕರಣಗಳನ್ನೂ ಅಳವಡಿಸಬೇಕು. ಇವುಗಳ ಮುಂದೆ ನಮೂದಿಸಿದ ಪುಟಸಂಖ್ಯೆ ಓದುಗನಿಗೆ ಬೇಕಾಗಿರುವ ವಿಷಯವನ್ನು ತಕ್ಷಣ ಒದಗಿಸುವಂತಿರಬೇಕು. ಪರಿವಿಡಿಯ ತರುವಾಯ ಬರುವುದು ಪ್ರಸ್ತಾವನೆ. ವಿಷಯದ ಆಯ್ಕೆಗೆ ಕಾರಣ, ಅಧ್ಯಯನದ ರೀತಿ, ಅಧ್ಯಯನಸಂದರ್ಭದ ವಿಶಿಷ್ಟ ಅನುಭವ, ನೆನೆಯಲೇಬೇಕಾದ ಸಂಸ್ಥೆ–ವ್ಯಕ್ತಿಗಳ ಹೆಸರು ಇಲ್ಲಿ ಅಡಕಗೊಳ್ಳಬೇಕು. ಆತ್ಮಪ್ರಶಂಸೆಗಾಗಲಿ, ವ್ಯಕ್ತಿ ಪ್ರಶಂಸೆಗಾಗಲಿ ಇಲ್ಲಿ ಅವಕಾಶ ಕೊಡಬಾರದು.

ಪ್ರಕರಣ–ಉಪಪ್ರಕರಣಗಳ ಸಂಯೋಜನೆ ಮತ್ತು ಅವುಗಳ ಶೀರ್ಷಿಕೆಯ ನಾಮಕರಣ ತುಂಬ ಮುಖ್ಯವಾದುದು. ಒಂದು ನಿರ್ದಿಷ್ಟ ವಿಚಾರದ ವಿಷಯವನ್ನು ಕ್ರೋಡೀಕರಿಸಿ ಪ್ರಕರಣಗಳನ್ನು ರೂಪಿಸಿಕೊಳ್ಳುವುದು, ಒಟ್ಟು ಪ್ರಬಂಧ ಕ್ರಮ ಕ್ರಮವಾಗಿ ತೆರೆದುಕೊಳ್ಳುವಂತೆ ಆ ಪ್ರಕರಣಗಳನ್ನು ಅನುಕ್ರಮಗೊಳಿಸುವುದು, ಅವುಗಳ ಗರ್ಭದಲ್ಲಿ ಅಗತ್ಯವಿದ್ದ ಉಪಪ್ರಕರಣಗಳನ್ನು ಅಳವಡಿಸುವುದು, ಅಲ್ಲಲ್ಲಿಯೇ ವಿಚಾರದ ಸಣ್ಣ ಸಣ್ಣ ಘಟಕಗಳಂತೆ ಪ್ಯಾರಾಗಳನ್ನು ಕಲ್ಪಿಸುವುದು–ವೈಜ್ಞಾನಿಕ ಮನಸ್ಸು ಮಾತ್ರ ಇದನ್ನು ಸಾಧಿಸುತ್ತದೆ. ವಾಚನದಿಂದಲ್ಲ, ಕೇವಲ ಶೀರ್ಷಿಕೆಯ ಮೇಲೆ ಕಣ್ಣಾಡಿಸುವುದರಿಂದಲೇ ಪ್ರಕರಣ ಉಪಪ್ರಕರಣಗಳ ಪರಸ್ಪರ ಬಾಹ್ಯ ಸಂಬಂಧ, ಅಂತರ್‌ಸಂಬಂಧಗಳು ಹೊಳೆಯುವಂತೆ ಅವುಗಳಿಗೆ ಹೆಸರು ಕೊಡಬೇಕು. ಅವುಗಳನ್ನು ಸರಿಯಾದ ಸ್ಥಳದಲ್ಲಿ, ಸರಿಯಾದ ಪ್ರಮಾಣದ ಅಕ್ಷರಗಳಲ್ಲಿ ಬರೆಯಬೇಕು. ಅಂದರೆ ಪ್ರಕರಣ ಶೀರ್ಷಿಕೆಯ ಕೆಳಗೆ ಉಪಪ್ರಕರಣ ಶೀರ್ಷಿಕೆ ಬರಬಾರದು. ಇದನ್ನು ತಪ್ಪಿಸುವುದಕ್ಕಾಗಿ ಇವುಗಳ ನಡುವೆ ಕನಿಷ್ಠ ಪಕ್ಷ ಒಂದು ಪ್ಯಾರಾದಷ್ಟು ಬರವಣಿಗೆಯನ್ನು ಅಳವಡಿಸಬೇಕು. ಪ್ರಕರಣ, ಉಪಪ್ರಕರಣ–ಎರಡೇ ಇದ್ದರೆ ಪ್ರಕರಣದ ಹೆಸರನ್ನು ಪುಟದ ಮಧ್ಯಭಾಗದಲ್ಲಿ ಬರೆದು, ಕೆಳಗಿನ ಸಾಲಿನಿಂದ ಪಾಠ(Text)ವನ್ನು ಪ್ರಾರಂಭಿಸಬೇಕು. ಉಪಪ್ರಕರಣದ ಹೆಸರನ್ನು ಪುಟದ ಮಗ್ಗುಲಿನಲ್ಲಿ ಬರೆದು, ಅದರ ಮುಂದೆಯೇ ಪಾಠ(Text)ವನ್ನು ಪ್ರಾರಂಭಿಸಬೇಕು. ಉಪಪ್ರಕರಣದಲ್ಲಿಯೇ ಮತ್ತೆ ಉಪಪ್ರಕರಣವಿದ್ದರೆ, ಮೊದಲಿನ ಉಪಪ್ರಕರಣದ ಶೀರ್ಷಿಕೆಯ ಕೆಳಗೆ, ಎರಡನೆಯ ಉಪಪ್ರಕರಣದ ಶೀರ್ಷಿಕೆಯ ಮುಂದೆ ಪಾಠ(Text)ವನ್ನು ಪ್ರಾರಂಭಿಸಬೇಕು. ಇಂಥ ಪ್ರಸಂಗಗಳಲ್ಲಿ ಈ ಶೀರ್ಷಿಕೆಗಳಿಗೆ, ಅವುಗಳ ಮಹತ್ವಕ್ಕೆ ತಕ್ಕಂತೆ ದೊಡ್ಡ, ಸಣ್ಣ, ಮತ್ತೂ ಸಣ್ಣ ಪ್ರಮಾಣದ ಅಕ್ಷರಗಳನ್ನು ಬಳಸಬೇಕು. ಕಲಾತ್ಮಕ ಮನಸ್ಸು ಮಾತ್ರ ಇವೆಲ್ಲವನ್ನೂ ಸಾಧಿಸುತ್ತದೆ. ಒಟ್ಟಿನಲ್ಲಿ ಮಹಾಪ್ರಬಂಧದ "ರಾಚನಿಕ ಸ್ವರೂಪ" ಒಂದು ವೈಜ್ಞಾನಿಕ ಮತ್ತು ಕಲಾತ್ಮಕ ಕಟ್ಟಡದಂತೆ ಆಕಾರ ಪಡೆಯಬೇಕು. ಯಾವುದು ವೈಜ್ಞಾನಿಕವಾಗಿರುತ್ತದೆಯೋ ಅದು ಕಲಾತ್ಮಕವಾಗಿರುತ್ತದೆ. ಯಾವುದು ಕಲಾತ್ಮಕವಾಗಿರುತ್ತದೆಯೋ ಅದು ವೈಜ್ಞಾನಿಕವಾಗಿರುತ್ತದೆ ಎಂಬುದನ್ನು ಮರೆಯಬಾರದು.

ಸಂಶೋಧನ ಪ್ರಬಂಧದಲ್ಲಿ ಅವತರಣಿಕೆ (Quotation) ಅನಿವಾರ್ಯ. ಇದು ಪದ್ಯ ಇಲ್ಲವೆ ಗದ್ಯವಾಗಿರಬಹುದು. ದೊಡ್ಡದಿದ್ದರೆ ಸಂಶೋಧನ ಬರವಣಿಗೆಯಲ್ಲಿ ಅದು ಪ್ರತ್ಯೇಕ ಒಡೆದು ಕಾಣಬೇಕು. ಸಣ್ಣತುಂಡು ರೂಪದಿದ್ದರೆ ಸಾಲುಗಳ ಒಡಲಲ್ಲಿಯೇ ಅದನ್ನು ಅವತರಣಿಕೆ ಚಿಹ್ನೆಯಿಂದ ಬಳಸಿಕೊಳ್ಳಬೇಕು. ಪೂರ್ಣ ಪದ್ಯವಿದ್ದರೆ, ವಿಸ್ತಾರವಾದ ಗದ್ಯವಿದ್ದರೆ ಪ್ರತ್ಯೇಕವಾಗಿ ಒಡೆದು ಕಾಣುತ್ತದೆ ಮತ್ತು ಸಂದರ್ಭವಶಾತ್ ಅದು ಅನ್ಯರದೆಂದು ಓದುಗರಿಗೆ ಸ್ಪಷ್ಟವಾಗುತ್ತದೆ. ಇನ್ನು ಪದ್ಯವನ್ನು ಇಡಿಯಾಗಿ ಅವತರಿಸಿಕೊಳ್ಳುವಾಗ ಅದು ಆ ಪುಟದಲ್ಲಿಯ ಒಟ್ಟು ಬರಹವಿನ್ಯಾಸದ ಸೌಂದರ್ಯಕ್ಕೆ ಭಂಗತರಬಾರದು. ಅಂದರೆ ಪದ್ಯದ ಒಂದು ಚರಣವನ್ನು ಒಂದು ಪುಟಕ್ಕೆ, ಮಿಕ್ಕ ಚರಣವನ್ನು ಇನ್ನೊಂದು ಪುಟಕ್ಕೆ ಹಂಚಿಹಾಕಬಾರದು ಮತ್ತು ಅದರ ಒಂದು ಚರಣವನ್ನು ಎರಡಾಗಿ ಯೋಜಿಸಬಾರದು. ಗದ್ಯವೇ ಇರಲಿ, ಪದ್ಯವೇ ಇರಲಿ ಆಕರದ ಹೆಸರು, ಪುಟ ಸಂಖ್ಯೆ ಇತ್ಯಾದಿಗಳನ್ನು ಅದರ ಮುಂದೆಯೇ ಸೂಚಿಸುವ ಬದಲು, ಅಡಿಯಲ್ಲಿ ದಾಖಲಿಸಬೇಕು. ಉದ್ಧರಣೆಯ ಮುಂದೆಯೇ ದಾಖಲಿಸಿದರೆ ಪಠ್ಯದ ಅಕ್ಷರಗಳ ನಡುವೆ ಅನವಶ್ಯ ಅಂಕಿಗಳು, ಅನವಶ್ಯ ಶೀರ್ಷಿಕೆಗಳು ಸೇರಿ ಅಂದ ಹಾಳಾಗುತ್ತದೆ. ಹೀಗಾಗಿ ಅವತರಣಿಕೆಯ ಸಂದರ್ಭದಲ್ಲಿಯೂ ಒಂದು ಶಿಸ್ತು ಅಗತ್ಯವೆನಿಸುತ್ತದೆ. ಹೊಸಗನ್ನಡ ಅವತರಣಿಕೆಯ ವಿಷಯದಲ್ಲಿ ಒಂದು ಎಚ್ಚರ ಅಗತ್ಯವಾಗಿದೆ. ಇಲ್ಲಿ ಇನ್ನೊಬ್ಬರ ವಿಚಾರಗಳನ್ನು ಸ್ವೀಕರಿಸುವುದು, ಇನ್ನೊಬ್ಬರ ವಾಕ್ಯಗಳನ್ನು ಸ್ವೀಕರಿಸುವುದು-ಎಂದು ಅವತರಣಿಕೆ ಎರಡು ಬಗೆಯಾಗಿದೆ. ಹೀಗೆ ಸ್ವೀಕರಿಸುವುದು ಮಹಾಪ್ರಬಂಧ ಸಂದರ್ಭದಲ್ಲಿ ಅನಿವಾರ್ಯ, ತನ್ನ ವಿಚಾರದ ಸಮರ್ಥನೆಗಾಗಿ ಇಲ್ಲವೆ ಮುಂದುವರಿಕೆಗಾಗಿ ವಿದ್ಯಾರ್ಥಿ ಈ ಕಾರ್ಯ ಮಾಡಬೇಕಾಗುತ್ತದೆ. ಹೀಗೆ ಸ್ವೀಕರಿಸುವಾಗ ಅವತರಣಿಕೆ ಚಿಹ್ನೆ, ಆಕರ ಸೂಚನೆ ಬಳಸುವದು ಅಗತ್ಯ. ಕೆಲವರು ಹೀಗೆ ಮಾಡುವುದಿಲ್ಲ. ಕೆಲವರಂತೂ ಇನ್ನೊಬ್ಬರ ವಾಕ್ಯಗಳನ್ನು ಹಿಂದು ಮುಂದೆ ಮಾಡುತ್ತಾರೆ ಇಲ್ಲವೆ ಅನಾಮತ್ತಾಗಿ ಸ್ವೀಕರಿಸಿಯೂ ತಮ್ಮದೆಂಬಂತೆ ನಟಿಸುತ್ತಾರೆ. ಇದು ಖಂಡನೀಯವಾಗಿದ್ದು, ಸತ್ಯಶೋಧ ಸಂದರ್ಭದಲ್ಲಿ ಪಾಪವೆನಿಸುವ ಇಂಥ ದುಸ್ಸಾಹಸಕ್ಕೆ ಸಂಶೋಧಕ ಇಳಿಯಲೇಬಾರದು.

ಅಡಿಟಿಪ್ಪಣಿಯು ಸಂಶೋಧನ ಪ್ರಬಂಧದ ಅನಿವಾರ್ಯ ಅಂಗ. ಇದು ಸೂಚಕ ಅಡಿಟಿಪ್ಪಣಿ, ಉದ್ಧೃತ ಅಡಿಟಿಪ್ಪಣಿ ಎಂದು ಎರಡು ಬಗೆಯಾಗಿದೆ. ಉದ್ಧರಣೆಯನ್ನು ಕುರಿತ ಪುಸ್ತಕ-ಪತ್ರಿಕೆಗಳ ಹೆಸರು ಮತ್ತು ಪುಟ ಸಂಖ್ಯೆಯನ್ನು ಅಡಿಯಲ್ಲಿ ಸೂಚಿಸುವುದು ಸೂಚಕ ಅಡಿಟಿಪ್ಪಣಿ. ಪಠ್ಯಭಾಗಕ್ಕೆ ಪೂರಕವಾದ ವಿಚಾರವನ್ನೊಳಗೊಂಡ ಇನ್ನೊಬ್ಬರ ವಾಕ್ಯಗಳನ್ನು ಅಡಿಯಲ್ಲಿ ಉದ್ಧರಿಸಿಕೊಳ್ಳುವುದು ಉದ್ಧೃತ ಅಡಿಟಿಪ್ಪಣಿ. ಸೂಚಕವೇ ಇರಲಿ, ಉದ್ಧೃತವೇ ಇರಲಿ, ಇವನ್ನು ಪಠ್ಯದ ಒಡಲಲ್ಲಿ, ಪುಟದ ಅಡಿಯಲ್ಲಿ ಇಲ್ಲವೆ ಪ್ರತಿಯೊಂದು ಪ್ರಕರಣದ ಕೊನೆಯಲ್ಲಿ-ಹೀಗೆ ಮೂರು ಬಗೆಯಾಗಿ ಕೊಡುವರಾದರೂ ಅಡಿಯಲ್ಲಿ ಕೊಡುವುದೇ ಸೂಕ್ತಕ್ರಮವಾಗಿದೆ. ಪಠ್ಯದ ಒಡಲಲ್ಲಿ ಕೊಟ್ಟರೆ ಕಂಸಚಿಹ್ನೆ ಮರೆತುಹೋದ ಪಕ್ಷದಲ್ಲಿ ಪಠ್ಯಭಾಗ ಮತ್ತು ಅಡಿಟಿಪ್ಪಣಿ ಭಾಗ ಒಂದುಗೂಡುವ ಅಪಾಯವಿರುತ್ತದೆ. ಉದ್ಧರಣೆಯು ಅಡಿಯಲ್ಲಿ ಪ್ರತ್ಯೇಕ ಅಡಕಗೊಳ್ಳುವಂತೆ ಪಠ್ಯಭಾಗದಲ್ಲಿ ಅಡಕಗೊಳ್ಳದೆ, ತನ್ನ ವ್ಯಾಪ್ತಿ ಕಾರಣವಾಗಿ ವಾಚನಕ್ಕೆ ಅಡ್ಡಿಯನ್ನುಂಟುಮಾಡುವ ಸಾಧ್ಯತೆಯಿದೆ. ಇನ್ನು ಪ್ರಕರಣದ ಕೊನೆಗೆ ಕೊಡುವುದರಿಂದ ಪ್ರತಿಸಲವೂ ಪುಟಗಳನ್ನು ಹೊರಳಿಸಿ ನೋಡುವ ಶ್ರಮವುಂಟಾಗುತ್ತದೆ. ಪ್ರಕರಣರದ ಕೊನೆಯಲ್ಲಿ ನೋಡಿ ಪಠ್ಯಕ್ಕೆ ತಿರುಗಿ ಬರುವಲ್ಲಿ ವಾಚನಗತಿಗೂ ಭಂಗವುಂಟಾಗುತ್ತದೆ. ಮುದ್ರಣಾಲಯದವರು ತಮ್ಮ ಅನುಕೂಲಕ್ಕಾಗಿ ಪ್ರಕರಣದ ಕೊನೆಗೆ ಕೊಡುವ

ಕ್ರಮವನ್ನು ಒತ್ತಾಯಿಸುವವರಾದರೂ ಅವರ ಅನುಕೂಲಕ್ಕಾಗಿ ವಾಚಕರ ಅನುಕೂಲತೆಯನ್ನು, ಪ್ರಬಂಧದ ಶಿಸ್ತನ್ನು ಕಡೆಗಣಿಸಬಾರದು. ಮೇಲಾಗಿ, 'ಅಡಿಟಿಪ್ಪಣಿ' ಹೆಸರು ಸಾರ್ಥಕವಾಗುವಂತೆ ಅದು ಪುಟದ ಅಡಿಯಲ್ಲಿಯೇ ಬರಬೇಕು. ಪುಸ್ತಕ, ಪತ್ರಿಕೆಗಳ ಪೂರ್ಣ ಹೆಸರಿಗೆ ಬದಲು ಸಂಕ್ಷಿಪ್ತ ಹೆಸರುಗಳನ್ನು ಇಲ್ಲಿ ಬಳಸಬೇಕು.

ಅಡಿಟಿಪ್ಪಣಿಯಲ್ಲಿ ವಿದ್ವಾಂಸರಿಂದ ಒಪ್ಪಿತವಾದ ಕ್ರಮವನ್ನು ಪರಿಪಾಲಿಸುವುದು ಸೂಕ್ತ. ಇತ್ತೀಚೆಗೆ ಲೇಖಕನ ಹೆಸರು ಮೊದಲು ಬಂದು, ಆಮೇಲೆ ಇತರ ವಿವರಗಳನ್ನು ಕೊಡುವ ಪದ್ಧತಿ ಪ್ರಚಲಿತವಾಗಿದೆ. ಆದರೆ ವ್ಯಕ್ತಿಗಿಂತ ಲೇಖನ, ಗ್ರಂಥ ಮಹತ್ವದ್ದೆನಿಸುವುದರಿಂದ, ಇಲ್ಲಿ ಗ್ರಂಥ ಅಥವಾ ಲೇಖನದ ಹೆಸರು ಮೊದಲು ಬಂದು ಆಮೇಲೆ ಇತರ ವಿವರಗಳನ್ನು ಕೊಡುವುದೇ ಯೋಗ್ಯಕ್ರಮವಾಗಿದೆ. ಈ ಕ್ರಮವನ್ನು ಒಪ್ಪಿಕೊಳ್ಳುವುದಾದರೆ ಮೊದಲು ಪುಸ್ತಕದ ಹೆಸರು. ಆಮೇಲೆ ಲೇಖಕನ ಹೆಸರು, ಕೊನೆಗೆ ಪುಟ ಸಂಖ್ಯೆ ಇಷ್ಟು ಸಾಕು. ಆವೃತ್ತಿ ಸಂಖ್ಯೆಯ, ಪ್ರಕಟಿತ ವರುಷ, ಪ್ರಕಾಶಕರು ಇತ್ಯಾದಿಗಳನ್ನು ಗ್ರಂಥಋಣ ಭಾಗದಲ್ಲಿ ಕೊಡಬೇಕು. ಲೇಖನಗಳ ಸಂಕಲನ ಮತ್ತು ಪತ್ರಿಕೆ–ಇವು ಸಂಗ್ರಹಗಳಾಗಿರುವುದರಿಂದ ಅಡಿಟಿಪ್ಪಣಿಗಾಗಿ ಇವೆರಡಕ್ಕೂ ಒಂದೇ ವಿಧಾನ ಬಳಸಬೇಕು. ಮೊದಲು ಲೇಖನದ ಹೆಸರು, ಆಮೇಲೆ ಲೇಖಕನ ಹೆಸರು, ಬಳಿಕ ಪುಸ್ತಕ ಇಲ್ಲವೆ ಪತ್ರಿಕೆಯ ಹೆಸರು. ಕೊನೆಗೆ ಪುಟ ಸಂಖ್ಯೆ (ಪತ್ರಿಕೆಯಾಗಿದ್ದರೆ ಸಂಪುಟ, ಸಂಚಿಕೆಗಳ ನಂಬರು ಮತ್ತು ಪುಟಸಂಖ್ಯೆ)– ಇಷ್ಟು ಸಾಕು. ಇಲ್ಲಿ ಆ ಪುಸ್ತಕ ಇಲ್ಲವೆ ಪತ್ರಿಕೆಯ ಸಂಪಾದಕರ ಹೆಸರು, ಆವೃತ್ತಿ ಸಂಖ್ಯೆ, ಪ್ರಕಟಿತ ವರ್ಷ, ಪ್ರಕಾಶಕರು ಇತ್ಯಾದಿಗಳನ್ನು ಸೇರಿಸಬಾರದು. ಅದನ್ನು 'ಗ್ರಂಥ ಋಣ'ದಲ್ಲಿ ಸೇರಿಸಬೇಕು. ಇಲ್ಲಿ ಪುಸ್ತಕದ ಹೆಸರು, ಪತ್ರಿಕೆಯ ಹೆಸರು ಇತ್ಯಾದಿಗಳನ್ನು ಪ್ರ.ಕ. (ಪ್ರಬುದ್ಧ ಕರ್ನಾಟಕ) ಪಂ. ಭಾ. (ಪಂಪಭಾರತ) ಎಂಬಂತೆ ಸಂಕ್ಷಿಪ್ತರೂಪದಲ್ಲಿ ದಾಖಲಿಸಬೇಕು.

ಪಿಎಚ್.ಡಿ. ಪ್ರಬಂಧಕ್ಕೆ ಅನುಬಂಧಗಳು ಅನಿವಾರ್ಯ. ಗ್ರಂಥವಿವರಕ, ಗ್ರಂಥಪೂರಕ ಎಂದು ಎರಡು ಬಗೆಯಾಗಿರುವ ಇವುಗಳನ್ನು ಪ್ರಾಮುಖ್ಯತೆಗನುಗುಣವಾಗಿ ಜೋಡಿಸಬೇಕು. ಗ್ರಂಥದಲ್ಲಿಯ ಗಮನಾರ್ಹಪದ, ಉದ್ಧೃತ ಪದ್ಯ, ಪಾರಿಭಾಷಿಕ ಪದ, ವ್ಯಕ್ತಿನಾಮ, ಸ್ಥಳನಾಮ, ಶಬ್ದಕೋಶ, ಗ್ರಂಥಋಣ, ಸಂಕ್ಷೇಪ ಸಂಕೇತಸೂಚಿ ಇತ್ಯಾದಿಗಳು ಗ್ರಂಥ ವಿವರಕಗಳಾದರೆ, ಗ್ರಂಥಸ್ಥ ಜ್ಞಾನವನ್ನು ವರ್ಧಿಸಲು ನೆರವಾಗುವ ಅನ್ಯಗ್ರಂಥಸ್ಥ ಸಮಾನ–ಭಿನ್ನ ವಿಷಯಗಳೂ, ಪ್ರಭಾವ ಪಡೆದ–ಪ್ರಭಾವ ಬೀರಿದ ಕೃತಿಭಾಗಗಳು ಗ್ರಂಥಪೂರಕವೆನಿಸುತ್ತವೆ. ಇವು ಆಯಾ ಪ್ರಬಂಧದ ಅವಶ್ಯಕತೆಗನುಗುಣವಾಗಿ ಸ್ವರೂಪದೃಷ್ಟಿಯಿಂದ ಬೇರೆಬೇರೆಯಾಗುವುದು, ಸಂಖ್ಯಾದೃಷ್ಟಿಯಿಂದ ಹೆಚ್ಚು ಕಡಿಮೆಯಾಗುವುದು ಸ್ವಾಭಾವಿಕ. ಪ್ರಬಂಧದ ಪುಟಗಳ ಅಡಿಯಲ್ಲಿ ಪುಸ್ತಕ, ಪತ್ರಿಕೆಗಳ ಹೆಸರನ್ನು ಪಂ. ಭಾ. EC ಎಂಬಂತೆ ಸಂಕ್ಷಿಪ್ತ ರೂಪದಿಂದ ಬಳಸಲಾಗಿರುತ್ತದೆ. ಇಂಥ ಎಲ್ಲ ಸಂಕ್ಷಿಪ್ತಗಳ ವಿಸ್ತೃತರೂಪಗಳನ್ನು ಪಂ. ಭಾ.–ಪಂಪಭಾರತ, EC-Epigraphia Carnatica ಎಂಬಂತೆ ಪರಿಚಯಿಸಬೇಕು. ಇದಲ್ಲದೆ ಪ್ರಬಂಧದಲ್ಲಿ ಬಳಸಲಾದ ಅನೇಕ ಬಗೆಯ ಕಂಸ, ಸಂಕೇತ ಮೊದಲಾದವುಗಳು ಏನನ್ನು ಸೂಚಿಸುವುವೆಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕು.

ಕೊನೆಯಲ್ಲಿ "ಗ್ರಂಥಋಣ" ಭಾಗವಿರುತ್ತದೆ. ಇಲ್ಲಿ ಸಹಾಯ ಪಡೆದ ಗ್ರಂಥಗಳನ್ನು ಅವಶ್ಯವೆನಿಸಿದರೆ ಅವುಗಳಲ್ಲಿಯೇ ಪ್ರಾಚೀನ ಗ್ರಂಥಗಳು ಆಧುನಿಕ ಗ್ರಂಥಗಳು, ಕನ್ನಡ ಗ್ರಂಥಗಳು–ಕನ್ನಡೇತರ

ಗ್ರಂಥಗಳು, ಮುದ್ರಿತ ಗ್ರಂಥಗಳು–ಹಸ್ತಪ್ರತಿಗಳು ಎಂದು ವಿಂಗಡಿಸಿಕೊಳ್ಳಬೇಕು. ಈ ಗ್ರಂಥಗಳ ಹೆಸರು, ಲೇಖಕ/ಸಂಪಾದಕ, ಆವೃತ್ತಿ, ಪ್ರಕಟಿತ ವರ್ಷ, ಪ್ರಕಾಶನ ಸಂಸ್ಥೆಗಳನ್ನು ಇದೇ ಕ್ರಮದಲ್ಲಿ ಯೋಜಿಸಬೇಕು. ಪ್ರಾಚೀನ ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದರೆ ಗ್ರಂಥದ ಹೆಸರು, ನಂಬರು, ಸಂಸ್ಥೆಯ ಹೆಸರು ನಮೂದಿಸಬೇಕು. ಇವೆಲ್ಲವುಗಳನ್ನು ಅಕಾರಾದಿಯಲ್ಲಿ ಅಳವಡಿಸಬೇಕು.

ಇಲ್ಲಿಯ ಇನ್ನೊಂದು ವಿಭಾಗ ಪತ್ರಿಕೆಗಳಿಗೆ ಸಂಬಂಧಪಟ್ಟದ್ದು. ಪತ್ರಿಕೆಗಳನ್ನು ವರ್ಗೀಕರಿಸಿ, ಅವುಗಳ ಶೀರ್ಷಿಕೆಯ ಕೆಳಗೆ ಲೇಖನಗಳ ಶೀರ್ಷಿಕೆ, ಲೇಖಕರ ಹೆಸರು, ಸಂಪುಟ–ಸಂಚಿಕೆಗಳ ಸಂಖ್ಯೆ ನಮೂದಿಸಬೇಕು. ಅವಶ್ಯ ಗಮನಿಸಲೇಬೇಕಾದ ಇನ್ನೊಂದು ಸಂಗತಿಯೆಂದರೆ, ತಮ್ಮ ಪ್ರಬಂಧಕ್ಕೆ ನೇರವಾಗಿ ಬಳಸಿಕೊಂಡಿರುವ ಪುಸ್ತಕ, ಪತ್ರಿಕೆಗಳನ್ನು ಇಲ್ಲಿ ಅಳವಡಿಸಬೇಕೇ ಹೊರತು, ತಾವು ಓದಿದ, ತಾವು ನೋಡಿದ ಎಲ್ಲ ಕೃತಿಗಳನ್ನಲ್ಲ; ಎಲ್ಲ ಪತ್ರಿಕೆಗಳನ್ನಲ್ಲ.

ಇತ್ತೀಚೆಗೆ ಮಹಾಪ್ರಬಂಧಗಳನ್ನು ಬೆರಳಚ್ಚು ಮಾಡಿಸುವುದು ರೂಢಿಯಲ್ಲಿದೆ. ಈಗ ಒಂದು ಪ್ರತಿಯನ್ನು ಬೆರಳಚ್ಚು ಮಾಡಿಸಿ, ಇದರ ಝೆರಾಕ್ಸ್ ಪ್ರತಿ ಸಿದ್ಧಪಡಿಸಿದರೆ ಬರವಣಿಗೆ ಸ್ಫುಟವಾಗಿ, ಆಕರ್ಷಕವಾಗಿ ಕಾಣುತ್ತದೆ. ವಿಶ್ವವಿದ್ಯಾಲಯಕ್ಕೆ ಪದವಿಗಾಗಿ ಅರ್ಪಿಸುವ ಮೊದಲು ಬೆರಳಚ್ಚಿನ ದೋಷವನ್ನು ಸರಿಪಡಿಸಬೇಕೆಂದು ಬೇರೆ ಹೇಳಬೇಕಿಲ್ಲ.

ಪಿಎಚ್.ಡಿ. ಪ್ರಬಂಧದಲ್ಲಿ ಚಿತ್ರಗಳ ಸೇರ್ಪಡೆ ಇಂದು ಅವಶ್ಯವೆನಿಸಿದೆ. ಇಲ್ಲಿಯೂ ಅಗತ್ಯ ಚಿತ್ರಗಳಿಗೆ ಮಾತ್ರ ಅವಕಾಶಕೊಡಬೇಕು. ಅವು ಸ್ಫುಟವಾಗಿರಬೇಕು. ಸ್ಫುಟವಾಗಿರದ ಫೋಟೋ ಹಾಕಿ, ಆ ಚಿತ್ರದಲ್ಲಿರುವುದು ಏನು ಎಂಬುದನ್ನು ಶೀರ್ಷಿಕೆಯಿಂದ ಸೂಚಿಸುವುದು ಯೋಗ್ಯರೀತಿಯಲ್ಲ. ಇವುಗಳ ವಿನ್ಯಾಸ–ಸೇರ್ಪಡೆ ಆಕರ್ಷಕ, ಸೂಕ್ತವಾಗಿರಬೇಕು. ಪ್ರತಿಯೊಂದು ಫೋಟೋ ಕೆಳಗೆ ಶೀರ್ಷಿಕೆಯಲ್ಲದೆ ಅದಕ್ಕೆ ಸಂಬಂಧಪಟ್ಟ ವಿಷಯವನ್ನೊಳಗೊಂಡಿರುವ ಪುಟ ಸಂಖ್ಯೆಯನ್ನೂ ಸೂಚಿಸಬೇಕು. ಹೀಗೆ ಪಿಎಚ್.ಡಿ. ಮಹಾಪ್ರಬಂಧವನ್ನು ವಿಷಯದೃಷ್ಟಿಯಿಂದ ಪರಿಪೂರ್ಣವಾಗಿ, ವಿನ್ಯಾಸದೃಷ್ಟಿಯಿಂದ ಕಲಾತ್ಮಕವಾಗಿ ಸಂಯೋಜಿಸಬೇಕು.

❖❖

೫

❖

ಪೂರಕ ವಿಚಾರಗಳು

ಸೃಜನ-ವಿಮರ್ಶನ-ಸಂಶೋಧನ ಕ್ರಿಯೆ / ಸಂಶೋಧನೆಯ ಭಾಷೆ / ವೈಯಕ್ತಿಕ ಸಂಶೋಧನೆ-ಜಂಟಿಸಂಶೋಧನೆ-ಸಾಂಸ್ಥಿಕ ಸಂಶೋಧನೆ / ಸಂಶೋಧನ-ಸಹಾಯ/ಸಂಶೋಧನೆಯ ಅವಶ್ಯಕತೆ.

ಸೃಜನ-ವಿಮರ್ಶನ-ಸಂಶೋಧನ ಕ್ರಿಯೆ

ಸಾಹಿತ್ಯವನ್ನು ಸೃಜನ-ವಿಮರ್ಶನ-ಸಂಶೋಧನವೆಂದು ವರ್ಗೀಕರಿಸಲಾಗುತ್ತದೆ. ಇವುಗಳಲ್ಲಿ ಸೃಜನಪ್ರಕಾರಕ್ಕೆ ನಮ್ಮಲ್ಲಿ ಸುದೀರ್ಘ ಇತಿಹಾಸವಿದೆ. ಈ ಪ್ರಕಾರವನ್ನು ಕುರಿತು ಪ್ರಾಚೀನ ಕಾಲದಿಂದಲೂ ನಮ್ಮ ಕಾವ್ಯಮೀಮಾಂಸಕರು ಸಿದ್ಧಾಂತರೂಪದ ವಾದ-ಪ್ರತಿವಾದಗಳನ್ನು ಮಂಡಿಸುತ್ತ ಬಂದಿದ್ದಾರೆ. ಈ ಮಾತು ಸಂಶೋಧನೆ, ವಿಮರ್ಶೆಗಳಿಗೆ ಅನ್ವಯಿಸುವುದಿಲ್ಲ. ಇದಕ್ಕೆ ಕಾರಣ, ಇವು ಕನ್ನಡದಲ್ಲಿ ಕೇವಲ ನೂರಿನ್ನೂರು ವರ್ಷಗಳ ಹಿಂದೆ ತೆರೆದುಕೊಂಡ ಅಧ್ಯಯನವಾಗಿವೆ. ಇವುಗಳಲ್ಲಿ ಸಂಶೋಧನೆಗಿಂತ ಇತ್ತಿಚಿನ ಕ್ಷೇತ್ರವಾಗಿದೆ ವಿಮರ್ಶೆ. ಹೀಗಿದ್ದೂ ವಿಮರ್ಶೆಯು ಸಂಶೋಧನೆಯನ್ನೂ ಮೀರಿ ಗುಣಾತ್ಮಕವಾಗಿ, ಸಂಖ್ಯಾತ್ಮಕವಾಗಿ ನಮ್ಮಲ್ಲಿ ಬೆಳೆದಿದೆ. ಸಂಶೋಧನೆಯಂತೆ ನಿರ್ದಿಷ್ಟ ಆಧಾರಗಳು ಇಲ್ಲಿ ಅನಪೇಕ್ಷಣೀಯವಾಗಿರುವುದೂ ಅದು ವಿಸ್ತಾರವಾಗಿ ಬೆಳೆಯಲು ಕಾರಣವಾಗಿರಬೇಕು.

ಈ ಮೂರು ಕ್ರಿಯೆಗಳ ಸ್ವರೂಪ-ಸಂಬಂಧ-ವ್ಯತ್ಯಾಸಗಳ ನಿರೂಪಣೆ ತುಂಬ ಜಟಿಲವೆನಿಸಿದರೂ ಇವುಗಳ ಲಕ್ಷಣವನ್ನು "ಸೃಜನ ಕರ್ತೃಪ್ರಧಾನ, ಸಂಶೋಧನ ವಸ್ತುಪ್ರಧಾನ, ವಿಮರ್ಶನ ಉಭಯಪ್ರಧಾನ"ವೆಂದು ಸೂತ್ರೀಕರಿಸಬಹುದು.

ಕವಿಯು ಕೃತಿನಿರ್ಮಾಣ ಪ್ರಸಂಗದಲ್ಲಿ ಭಾಷೆಯನ್ನು ಮೈಯಾಗಿ, ವಸ್ತುವನ್ನು ಮನವಾಗಿ ಬಳಸಿಕೊಳ್ಳುತ್ತಾನೆ. ಇವುಗಳಲ್ಲಿ ಭಾಷೆಯು ಸಂಖ್ಯೆಯಂತೆ ನಿರ್ದಿಷ್ಟ ಮಾಧ್ಯಮವಲ್ಲ. ಅನಿರ್ದಿಷ್ಟ ಮಾಧ್ಯಮ. ಕವಿಯ ಸಾಮರ್ಥ್ಯಕ್ಕೆ ತಕ್ಕಂತೆ ಅದು ವಾಚ್ಯ, ಲಕ್ಷ್ಯ, ವ್ಯಂಗ್ಯ, ಬೆಡಗು ಇತ್ಯಾದಿಯಾಗಿ ಮಣಿಯಬಲ್ಲುದು.

ಸೃಜನ ಸಾಹಿತ್ಯಕ್ಕೆ ವಸ್ತುವಾಗುವುವು ಪರಿವರ್ತನಶೀಲವಾದ ಸೃಷ್ಟಿ, ಸಮಾಜ ಮತ್ತು ವ್ಯಕ್ತಿ. ಇವುಗಳನ್ನು ಗ್ರಹಿಸುವ ಕವಿ ಮನಸೂ ಚಲನಶೀಲ. ಹೀಗೆ ಪರಿವರ್ತನಶೀಲ ವಸ್ತು (Theme)ವನ್ನು

ಚಲನಶೀಲ ಮನಸ್ಸು ಗ್ರಹಿಸುವುದು ಅನಿರ್ದಿಷ್ಟ ಭಾಷೆಯ ಮೂಲಕ. ಹೀಗಾಗಿ ಕವಿಗೆ ಕಟ್ಟುವ ಕ್ರಿಯಯಲ್ಲಿ ಪ್ರತಿಸಲವೂ ಹೊಸ ಹೊಸ ರೂಪಿಕೆ(Pattern)ಗಳು ಹೊಳೆಯುತ್ತವೆ; ಭಾಷೆಯಲ್ಲಿ ಮೂರ್ತಗೊಳ್ಳುತ್ತವೆ. ಇದೇ ನವನವೋನ್ಮೇಷಶಾಲಿನಿ ಕ್ರಿಯೆ, ನವನವೋಲ್ಲೇಖ ಶಾಲಿನಿ ಕ್ರಿಯೆ.

ಎರಡನೆಯದಾಗಿ, ಸೃಜನಪ್ರಸಂಗದಲ್ಲಿ 'ವಸ್ತು' ಕವಿಯ ಮನಸ್ಸಿನಂತೆ ವರ್ತಿಸುತ್ತದೆ. ಆದುದರಿಂದ ಈ ಪ್ರಕ್ರಿಯೆಯನ್ನು ಕರ್ತೃಪ್ರಧಾನವೆನ್ನಬೇಕಾಗುತ್ತದೆ. ಇಲ್ಲಿ ಕವಿಯ ವಶವರ್ತಿಯಾಗುವ ವಸ್ತು ಅವನ ಸನ್ನಿವೇಶಕ್ಕೆ ನಿರ್ಬಂಧಿತವಾಗಿರುತ್ತದೆ. ಅಂದರೆ ವಸ್ತು ಬದಲಾಗಬಹುದು–ಬಿಡಬಹುದು, ಕರ್ತೃವಿನ ಮನಸ್ಸು ಬದಲಾಗುತ್ತಲೇ ಇರುತ್ತವೆ. ಅದು ಚರವಸ್ತು ಹೋಗಲಿ, ಸ್ಥಿರವಸ್ತುವನ್ನೂ ಕ್ಷಣಕ್ಷಣವೂ ಬೇರೆಬೇರೆಯಾಗಿ ಗ್ರಹಿಸುತ್ತದೆ. ಒಂದೇ ವಸ್ತುವನ್ನು ಕುರಿತು ಒಬ್ಬನೇ ಕವಿ ಬಗೆಬಗೆಯಾಗಿ ಬರೆಯುವುದು ಈ ಕಾರಣಕ್ಕಾಗಿ, ಕವಿಯ ಪ್ರತ್ಯುತ್ಪನ್ನಮತಿ, ವ್ಯುತ್ಪತ್ತಿ ಮತ್ತು ಬರವಣಿಗೆಯ ತರಬೇತಿ – ಇವು ಗಾಢವಿದ್ದಷ್ಟೂ ಅವನ ಸೃಜನಕ್ರಿಯೆ ಹೊಸತನ್ನೂ, ಪರಿಣಾಮಗಾಢತೆಯನ್ನೂ ಪಡೆಯುತ್ತದೆ. ಇವನ್ನು ಸಾಧಿಸುವುದಕ್ಕಾಗಿ ಕವಿ ಅನುಸರಿಸುವ ಕಲಾವಿಧಾನಗಳನ್ನು ವಿವೇಚಿಸುವುದೇ ಕಾವ್ಯ(ತತ್ವ) ಮೀಮಾಂಸೆ.

ಹೀಗೆ ಸೃಜನಸಾಹಿತ್ಯದಲ್ಲಿ ವಸ್ತುವು ಕರ್ತೃವಶವರ್ತಿಯಾಗಿದ್ದರೆ, ಸಂಶೋಧನ ಸಾಹಿತ್ಯದಲ್ಲಿ ಕರ್ತೃವು ವಸ್ತುವಶವರ್ತಿಯಾಗಬೇಕಾಗುತ್ತದೆ. ಇಲ್ಲಿ ಅವನಿಗೆ ಸ್ವಾತಂತ್ರ್ಯವಿರುವುದಿಲ್ಲ, ಆಕರಗಳಿಂದ ಪಡೆದ ಸಾಮಗ್ರಿಯನ್ನು ಆಧಾರವಾಗಿಸಿಕೊಳ್ಳುವಲ್ಲಿ ಪ್ರಕಟವಾಗುತ್ತ ನಡೆಯುವ ಸತ್ಯಕ್ಕೆ ಭಾಷಿಕ ರೂಪಕೊಡುವುದು ಇವನ ಕೆಲಸವಾಗಿರುತ್ತದೆ. ಕವಿಯಂತೆ ವಸ್ತುವಿನ ಮೇಲೆ ತನ್ನ ಅಭಿಪ್ರಾಯ ಹೇರಲು ಇಲ್ಲಿ ಅವಕಾಶವೇ ಇರುವುದಿಲ್ಲ. ಏಕೆಂದರೆ ಈತನು ಶೋಧಮಾಡುವ "Past is perfect." ಕಳೆದುಹೋದ ಆ ನಿರ್ದಿಷ್ಟ (perfect)ವನ್ನು ಶೋಧಿಸುವುದೇ ಇವನ ಕರ್ತವ್ಯವಾಗಿರುವುದರಿಂದ ಸಂಶೋಧಕ 'ಸಾಕ್ಷಿ ಪುರುಷ'ನಂತೆ ದುಡಿಯಬೇಕಾಗುತ್ತದೆ. ಅದು ವಸ್ತುಶೋಧವೇ ಇರಲಿ, ಭಾಷಾಶೋಧವೇ ಇರಲಿ, ಕ್ರಿಯಾಶೋಧವೇ ಇರಲಿ, ಜ್ಞಾನಶೋಧವೇ ಇರಲಿ, ಕಳೆದುಹೋದ ಆ ನಿರ್ದಿಷ್ಟವನ್ನು ಅನಿರ್ದಿಷ್ಟಭಾಷೆಯಲ್ಲಿ ಅವನು ನಿರ್ದಿಷ್ಟಗೊಳಿಸುತ್ತಾನೆ. ಹೀಗಾಗಿ ಅನಿರ್ದಿಷ್ಟ ಸ್ವರೂಪದ ಸೃಜನಸಾಹಿತ್ಯ ಮತ್ತೆ ಮತ್ತೆ ಓದಿಸಿಕೊಳ್ಳುವಂತೆ ನಿರ್ದಿಷ್ಟ ಸ್ವರೂಪದ ಸಂಶೋಧನ ಸಾಹಿತ್ಯ ಮತ್ತೆ ಮತ್ತೆ ಓದಿಸಿಕೊಳ್ಳುವುದಿಲ್ಲ. ಆದರೆ ಅನಿರ್ದಿಷ್ಟರೂಪದ ವ್ಯಾಖ್ಯಾನಮುಖಿ ಸಂಶೋಧನೆ ಮಾತ್ರ ವಿಮರ್ಶೆಯಂತೆ ಮತ್ತೆ ಮತ್ತೆ ಓದಿಸಿಕೊಳ್ಳಬಹುದಾಗಿದೆ.

ಹೀಗೆ ಸೃಜನ ಕರ್ತೃಪ್ರಧಾನ, ಸಂಶೋಧನ ವಸ್ತುಪ್ರಧಾನವಾಗಿದ್ದರೆ, ವಿಮರ್ಶೆ ಮಾತ್ರ ಉಭಯಪ್ರಧಾನವಾಗಿರುತ್ತದೆ. ಇಲ್ಲಿ ವಸ್ತುವನ್ನು ಅವಲಂಬಿಸಿಯೇ ಕರ್ತೃ ತನ್ನ ವೈಯಕ್ತಿಕ ನಿಲವನ್ನು ಪ್ರತಿಪಾದಿಸಬೇಕಾಗುತ್ತದೆ. ಹೀಗೆ ವಸ್ತುವಿಗೆ ಪ್ರತಿಕ್ರಿಯೆ ತೋರಿಸುತ್ತ ಹೋಗುವಾಗ ಎಷ್ಟೇ ಸ್ವಾತಂತ್ರ್ಯವಹಿಸಿದರೂ ಅದು ಅವನನ್ನು ಆಳುತ್ತಲೇ ಇರುತ್ತದೆ. ಅದು ಎಷ್ಟೇ ಆಳಿದರೂ ಅವನು ತನ್ನ ಅಭಿಪ್ರಾಯವನ್ನು ಅದರ ಮೇಲೆ ಸ್ಥಾಪಿಸುತ್ತಲೇ ಹೋಗುತ್ತಾನೆ. ಹೀಗಾಗಿ ವಿಮರ್ಶೆಯನ್ನು ಉಭಯಪ್ರಧಾನ ಪ್ರಕ್ರಿಯೆಯೆನ್ನಬೇಕಾಗುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ದೃಶ್ಯವೇ ಇರಲಿ, ಅದನ್ನು "ಕಲೆ"ಯ ಅಂಗವಾದ ಕಾವ್ಯವನ್ನಾಗಿಸುವಲ್ಲಿ ಜರುಗುವ ಕ್ರಿಯೆ, ಅನುಸರಿಸುವ ವಿಧಾನ ಇತ್ಯಾದಿಗಳ ವಿವೇಚನೆ–ವಿವರಣೆಗಳು

ಕಾವ್ಯಮೀಮಾಂಸೆಯ ಉದ್ದೇಶವಾಗಿರುತ್ತವೆ. ಅಂದರೆ ಬರಹದ ಕಲಾತ್ಮಕತೆಯ ಕಾರಣ-ಸ್ವರೂಪ-ಪರಿಣಾಮ ಇತ್ಯಾದಿಗಳಿಗೆ ಸಂಬಂಧಿಸಿದ ಮೂಲಭೂತ ವಿಚಾರಗಳನ್ನು ಅದು ವಿವೇಚಿಸುತ್ತದೆ. ವಿಮರ್ಶೆಯಲ್ಲಿ ಜರುಗುವ ಈ ವಿವೇಚನೆ ಎರಡು ಬಗೆಯಾಗಿದೆ. ಒಂದು: ಕೃತಿಯೊಂದರ ಕಲಾತ್ಮಕತೆಯ ಸ್ವರೂಪವನ್ನು ವಿವೇಚಿಸುವುದು. ಇಲ್ಲಿ ಕೃತಿಯ 'ಸಾಹಿತ್ಯಿಕ ಮೌಲ್ಯಶೋಧ' ನಡೆಯುತ್ತದೆ. ಎರಡು: ಆ ಕೃತಿ ಪ್ರತಿಪಾದಿಸುವ ಜೀವನ ಮೌಲ್ಯವೇನು?-ಎಂಬುದನ್ನು ವಿವೇಚಿಸುವುದು. ಇಲ್ಲಿ ಕೃತಿಯ 'ಸಾಹಿತ್ಯೇತರ ಮೌಲ್ಯಶೋಧ' ನಡೆಯುತ್ತದೆ. ಎರಡೂ ಶೋಧಗಳೇ ಆಗಿದ್ದರೂ ಎರಡನೆಯದು ಖಂಡಿತವಾಗಿಯೂ ಸಂಶೋಧನಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಇಲ್ಲಿ ವಿಮರ್ಶೆಯು ತನ್ನ 'ಕಲಾ'ಕ್ಷೇತ್ರದೊಂದಿಗೆ ತನ್ನದಲ್ಲದ ಸಂಶೋಧನಕ್ಷೇತ್ರವನ್ನೂ ಒಳಗೊಳ್ಳುತ್ತಲಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸತ್ಯದ ಪ್ರತಿಪಾದನೆಯಾದ ಸಂಶೋಧನೆ ಇಂದು 'ವ್ಯಾಖ್ಯಾನ'ಮುಖಿಯಾಗಿ ಬೆಳೆಯುತ್ತಲಿದೆ. ಸೌಂದರ್ಯದ ಪ್ರತಿಪಾದನೆಯಾದ ವಿಮರ್ಶೆ ಮೂಲತಃ 'ವ್ಯಾಖ್ಯಾನ' ಧೋರಣೆಯದಾಗಿದೆ. ಹೀಗಾಗಿ "ವ್ಯಾಖ್ಯಾನ ಭೂಮಿಕೆ"ಯಲ್ಲಿ ಸಂಶೋಧನೆ ಮತ್ತು ವಿಮರ್ಶೆಗಳು ಇಂದು ಪರಸ್ಪರ ಸಂಧಿಸುತ್ತಲಿವೆ. ಈ ಕಾರಣದಿಂದಾಗಿಯೇ ಕೆಲವೊಮ್ಮೆ ಒಂದು ಲೇಖನ ಅಥವಾ ಗ್ರಂಥ ಸಂಶೋಧನಾತ್ಮಕವೋ? ವಿಮರ್ಶಾತ್ಮಕವೋ? ಎಂಬ ಸಂದೇಹ ಹುಟ್ಟುತ್ತದೆ. ಸಂಶೋಧನೆಯೂ ಹೌದು ವಿಮರ್ಶೆಯೂ ಹೌದು ಎನಿಸುತ್ತದೆ.

ಸಂಶೋಧನೆಯಂತೆ ವಿಮರ್ಶೆಯೂ ಸತ್ಯಶೋಧನೆಯಾಗಿದೆ. ಇವೆರಡೂ ಸತ್ಯವನ್ನು ಕಾಣುವ ಎರಡು ಮಾರ್ಗಗಳು. ಆದರೆ ಗತಕಾಲದಲ್ಲಿ ಘಟಿಸಿದುದರ ಅನ್ವೇಷಣೆಯು ಸಂಶೋಧನೆ, ಅದರ ಗುಣಾವಗುಣಗಳ ಅನ್ವೇಷಣೆ-ಚರ್ಚೆ ವಿಮರ್ಶೆ, ಒಂದು Fact finding, ಇನ್ನೊಂದು ಅದರ ಹಿಂದಿರುವ Truth finding. ಈ Truth finding ಎಂಬುದು ಆ ವಸ್ತುಸ್ಥಿತಿಯ ಗುಣಾವಗುಣಗಳನ್ನು ಶೋಧಿಸಿ-ಚರ್ಚಿಸಿ, ಮೂಲಸತ್ಯವನ್ನು ಕಂಡುಹಿಡಿಯುವುದಾಗಿದೆ. ಆದುದರಿಂದ ಆತ್ಯಂತಿಕ ಸತ್ಯವನ್ನು ಹೇಳಹೊರಟವನು ಮೊದಲ ಘಟ್ಟದಲ್ಲಿ ವಿಶ್ಲೇಷಣಾತ್ಮಕ ಮಾರ್ಗದಲ್ಲಿ ನಡೆದು ಸಂಶೋಧಕನಾಗಿ, ಎರಡನೆಯ ಘಟ್ಟದಲ್ಲಿ ವ್ಯಾಖ್ಯಾನಾತ್ಮಕ ಮಾರ್ಗದಲ್ಲಿ ಮುಂದುವರಿದು ವಿಮರ್ಶಕನಾಗಿ ತೋರುತ್ತಾನೆ.

ಸಂಶೋಧನೆಯ ಭಾಷೆ

ಸಂವಹನಕ್ರಿಯೆಯ ಅನೇಕ ಮಾಧ್ಯಮಗಳಲ್ಲಿ ಭಾಷೆ ಮುಖ್ಯವಾದುದು. ಅಭಿಪ್ರಾಯವನ್ನು ಧ್ವನಿಯಲ್ಲಿ ನಿರ್ದಿಷ್ಟಗೊಳಿಸಿ ಇನ್ನೊಬ್ಬರಿಗೆ ಮುಟ್ಟಿಸುವುದೇ ಇದರ ಉದ್ದೇಶವಾಗಿದೆ. ಸಾಮಾಜಿಕ ಪರಿವರ್ತನೆಗೆ ತಕ್ಕಂತೆ ಇದು ಅವಸ್ಥಾಭೇದಗಳನ್ನಾಗಲಿ, ಪ್ರಾಂತ ಭೇದಗಳನ್ನಾಗಲೀ ಪಡೆಯುವುದಕ್ಕೆ ತಾನು ಸಂವಹನಯೋಗ್ಯವಾಗಬೇಕೆಂಬುದೇ ಕಾರಣವಾಗಿದೆ. ಇದಕ್ಕೆ ವಿರುದ್ಧವೆಂಬಂತೆ ಒಬ್ಬ ಲೇಖಕ ಈ ಅವಸ್ಥಾಭೇದ-ಪ್ರಾಂತಭೇದಗಳನ್ನು ಮೀರಿ ಪ್ರಮಾಣಭಾಷೆ (Standard language)ಯನ್ನು ಬಳಸುವುದಕ್ಕೂ ಸಂವಹನಯೋಗ್ಯವಾಗಬೇಕೆಂಬ ಹಂಬಲವೇ ಕಾರಣವಾಗಿದೆ. ಹೀಗಾಗಿ, ಒಂದು ಭಾಷೆಯ ಅಥವಾ ಒಬ್ಬನ ಬರವಣಿಗೆಯ ಸಾರ್ಥಕತೆ ಇರುವುದು ಅದರ ಸಂವಹನಶೀಲತೆಯ ಪ್ರಮಾಣದಲ್ಲಿ, ಭಾವನೆಯ ಪದರುಗಳನ್ನು, ಬದುಕಿನ ವೈವಿಧ್ಯತೆಗಳನ್ನು ಸಂವಹನಗೊಳಿಸುವುದಕ್ಕಾಗಿಯೇ ಅದು ಬೆಳೆಯುತ್ತಲಿರುತ್ತದೆ. ಶಬ್ದ-ಅರ್ಥ ಎರಡೂ ಮುಖಗಳಲ್ಲಿ ರೂಪಾಂತರಗೊಳ್ಳುತ್ತಲಿರುತ್ತದೆ. ಇಷ್ಟರಮಟ್ಟಿಗೆ ಸಾಮಾಜಿಕ ಉತ್ಪಾದನೆ (Social product)ಯಾಗಿ, ಸಂವಹನದ ಸಾರ್ಥಕತೆಗಾಗಿ ಅದು ಪ್ರವಹಿಸುತ್ತಿರುತ್ತದೆ.

ಹೀಗೆ ಸಂವಹನಶೀಲವಾಗಬೇಕೆಂದು ಹಂಬಲಿಸುವ ಭಾಷೆ, ಶಾಸ್ತ್ರ ಸಂದರ್ಭದಲ್ಲಿ ಬಹಳಷ್ಟು ಬದ್ಧವಾಗಿ, ಶಾಸ್ತ್ರೇತರ ಸಂದರ್ಭದಲ್ಲಿ ಬಹಳಷ್ಟು ಮುಕ್ತವಾಗಿ ವ್ಯವಹರಿಸುತ್ತದೆ. ಈ ಎರಡೂ ನೆಲೆಗಳಲ್ಲಿ ದುಡಿಯುವಾಗಲೂ ಅದು ಸಂವಹನಗೊಳ್ಳಬೇಕೆಂಬುದು ಬರಹಗಾರನಿಗೆ ಮುಖ್ಯವಾಗಿರುತ್ತದೆ. ಶಾಸ್ತ್ರವಿಷಯ ತನ್ನ ಪರಿಭಾಷ್ಯಾಮಾಧ್ಯಮದಲ್ಲಿ ಮಾತ್ರ ಸರಿಯಾಗಿ ಬಿಚ್ಚಿಕೊಳ್ಳುತ್ತದೆ. ಶಾಸ್ತ್ರೇತರ ವಿಷಯಕ್ಕೆ ಈ ಬಂಧನವಿರುವುದಿಲ್ಲ. ಈ ಹಿನ್ನೆಲೆಯಲ್ಲಿ 'ಸಂಶೋಧನಶಾಸ್ತ್ರ ಭಾಷೆ' ಬೇರೆ, 'ಸಂಶೋಧನ ಬರಹ ಭಾಷೆ' ಬೇರೆ ಎಂದು ಹೇಳಬಹುದಾಗಿದೆ. ಆದರೆ ವ್ಯಾಕರಣ, ಛಂದಸ್ಸು, ಕಾವ್ಯಶಾಸ್ತ್ರಗಳಿಗಿಂತ ಸಂಶೋಧನ ಶಾಸ್ತ್ರದಲ್ಲಿ ಪರಿಭಾಷೆಯ ನಿಬಿಡತೆ ಕಡಿಮೆ. ಅಲ್ಲಲ್ಲಿ ಆಕರ, ಊಹೆ, ಅಡಿಟಿಪ್ಪಣಿ ಇತ್ಯಾದಿ ಅರೆತಾಂತ್ರಿಕ ಪದಗಳನ್ನು ಮಾತ್ರ ಬಳಸಬೇಕಾಗುವುದರಿಂದ ಇಲ್ಲಿ ಪರಿಭಾಷಾ ದಾಳಿ ಬಹಳ ಕಡಿಮೆ. ಹೀಗಾಗಿ ಸಂಶೋಧನಶಾಸ್ತ್ರ ಭಾಷೆ ಅಷ್ಟಾಗಿ ತಾಂತ್ರಿಕವೆನಿಸುವುದಿಲ್ಲ. ಹೀಗೆ ಸಂಶೋಧನಶಾಸ್ತ್ರ ಭಾಷೆಯೇ ಅಷ್ಟು ತಾಂತ್ರಿಕವಾಗಿಲ್ಲದಿರುವಾಗ, ಸಂಶೋಧನ ಬರಹದ ಭಾಷೆ ಇನ್ನೂ ತಾಂತ್ರಿಕವಲ್ಲವೆಂದೇ ಹೇಳಬೇಕು. ಆದುದರಿಂದ ಒಟ್ಟು ಭಾಷಾ ಬಳಕೆಯ ಬಗೆಗೆ ಹೇಳಬೇಕಾದ ಸಾಮಾನ್ಯ ವಿಚಾರಗಳನ್ನು ಸಂಶೋಧನಬರಹ ಭಾಷೆಗೂ ಅನ್ವಯಿಸಬಹುದು. ಆದರೆ ಇದು 'ವಾದಶೈಲಿ'ಯ ಗತಿಯಲ್ಲಿ ಅಂದರೆ ಚರ್ಚೆಯ ಧಾಟಿಯಲ್ಲಿ ಮುಂದುವರಿಯುವುದಾಗಿದೆ. ವಿರೋಧವಾಗಬಹುದಾದ ಪ್ರಶ್ನೆಗಳನ್ನು ತಾನೇ ಹಾಕಿಕೊಳ್ಳುವುದು, ಅವುಗಳಿಗೆ ಸಮಾಧಾನಕರ ಉತ್ತರಗಳನ್ನು ತಾನೇ ಕೊಡುವುದು ಇಲ್ಲಿ ಉದ್ದಕ್ಕೂ ನಡೆದಿರುತ್ತದೆ. ಪ್ರಾಚೀನಕಾಲದ ಪೂರ್ವಪಕ್ಷ, ಉತ್ತರಪಕ್ಷದ ಶೈಲಿ ಇಲ್ಲಿಯದಾಗಿರುತ್ತದೆ. ಪ್ರಾಚೀನ 'ಭಾಷಾಶೈಲಿ'ಯನ್ನು ಹೋಲುವ ಈ ವಾದಶೈಲಿಯ ಭಾಷೆ ಸರಳವಾಗಿರಬೇಕು. ನೇರವಾಗಿರಬೇಕು, ನಿರ್ದಿಷ್ಟವಾಗಿರಬೇಕು, ಕ್ರಮಬದ್ಧವಾಗಿರಬೇಕು ಮತ್ತು ಇವೆಲ್ಲವುಗಳನ್ನು ಅಳವಡಿಸಿಕೊಂಡು ಪರಿಣಾಮಕಾರಿಯಾಗಿರಬೇಕು. ಇಲ್ಲಿ ಪರಿಣಾಮಕಾರಿ ಎಂಬ ಮಾತು ಸ್ವಲ್ಪ ವಿವರಣೆಯನ್ನು ಬಯಸುತ್ತದೆ. ಯಾವುದೇ ಬರವಣಿಗೆಯನ್ನು ಅನೇಕ ರೀತಿಗಳಿಂದ ಪರಿಣಾಮಕಾರಿಗೊಳಿಸಬಹುದು. ಕವಿಯು ಈ ಪರಿಣಾಮ ತೀವ್ರತೆಗಾಗಿ ಭಾಷೆಯ ಮೂರು ಸ್ವರಗಳಾದ ವಾಚ್ಯ, ಲಕ್ಷ್ಯ, ವ್ಯಂಗ್ಯಗಳನ್ನು ಬಳಸುತ್ತಾನೆ. ಸಂಶೋಧಕ ಮಾತ್ರ ವಾಚ್ಯ ಪಾತಳಿಯ ಭಾಷೆಯನ್ನೇ ಬಳಸಬೇಕು. ಒಂದು ವೇಳೆ ಕವಿಯ ಹಾಗೆ ಬಳಸಿದರೆ ಅಲ್ಲಿಯ ಭಾಷಾಸೌಂದರ್ಯವು ವಿಷಯದತ್ತ ಹರಿಯಬೇಕಾದ ವಾಚಕನ ಮನಸ್ಸನ್ನು ತನ್ನೆಡೆಗೆ ಸೆಳೆಯುತ್ತದೆ. ಹೀಗಿದ್ದೂ ಪರಿಣಾಮದ ಗಾಢತೆಗಾಗಿ ವಿರಳವಾಗಿಯಾದರೂ ಉಪಮೆ, ದೃಷ್ಟಾಂತಗಳನ್ನು ಬಳಸಿದರೆ ತಪ್ಪೇನಲ್ಲ. ಒಟ್ಟಿನಲ್ಲಿ ಭಾಷೆ, ಸಿದ್ಧರೂಪದ್ದಾಗಿರಬಾರದು. ಫಾರ್ಮುಲಾ ಸ್ಥಿತಿಗಿಳಿಯದೆ ವಾಚ್ಯದ ಪಾತಳಿಯಲ್ಲಿಯೇ ಸೃಜನಶೀಲವಾಗಿ ಮುಂದುವರಿಯಬೇಕು. ಕಣ್ಣಿಗೆ ಕಟ್ಟುವಂತೆ ಸ್ವಭಾವೋಕ್ತಿ ಅಲಂಕಾರದ ಮಟ್ಟದಲ್ಲಿ ದುಡಿಯಬೇಕು.

ವೈಯಕ್ತಿಕ ಸಂಶೋಧನೆ–ಜಂಟಿ ಸಂಶೋಧನೆ–ಸಾಂಸ್ಥಿಕ ಸಂಶೋಧನೆ

ಸಂಶೋಧನೆ ಗಾತ್ರದಲ್ಲಿ ಸಣ್ಣದು–ದೊಡ್ಡದು ಇರುವಂತೆ ಗುಣದಲ್ಲಿ ಒಂದಕ್ಕಿಂತ ಹೆಚ್ಚು ಶಿಸ್ತುಗಳನ್ನು ಒಳಗೊಂಡಿರುತ್ತದೆ. ಕಾರಣ, ವ್ಯಕ್ತಿಮಟ್ಟದಿಂದ ಸಂಸ್ಥೆ ಮಟ್ಟದವರೆಗಿನ ದುಡಿತಗಳನ್ನೂ, ಒಂದು ಶಿಸ್ತಿನಿಂದ ಅನೇಕ ಶಿಸ್ತುಗಳ ವ್ಯಕ್ತಿಗಳನ್ನೂ ಅದು ಅಪೇಕ್ಷಿಸುತ್ತದೆ. ಹೀಗಾಗಿ ವೈಯಕ್ತಿಕ ಸಂಶೋಧನೆ, ಜಂಟಿ ಸಂಶೋಧನೆ, ಸಾಂಸ್ಥಿಕ ಸಂಶೋಧನೆಗಳು ಅಸ್ತಿತ್ವಕ್ಕೆ ಬಂದಿವೆ.

ವೈಯಕ್ತಿಕ ಸಂಶೋಧನೆಯು ವ್ಯಕ್ತಿಯ ಶ್ರಮ ಮತ್ತು ಜ್ಞಾನಗಳಿಗೆ ನಿರ್ಬಂಧಿತವಾಗಿರುತ್ತದೆ. ಇದು ಲೇಖನರೂಪದ್ದಿರಬಹುದು, ಗ್ರಂಥವ್ಯಾಪ್ತಿಯದಿರಬಹುದು, ಏಕಶಿಸ್ತೀಯವಾಗಿರಬಹುದು – ಅನೇಕಶಿಸ್ತೀಯವಾಗಿರಬಹುದು. ಅದೆಲ್ಲವನ್ನೂ ಒಬ್ಬನೇ ನಿರ್ವಹಿಸುತ್ತಾನೆ. ಇಲ್ಲಿ ಸಂಶೋಧನ ಬರವಣಿಗೆಗೆ ಆಶಯ (Content), ಆಕೃತಿ (form) ದೃಷ್ಟಿಯಿಂದ ಸಹಜವಾಗಿಯೇ ಏಕಮುಖತೆ ಪ್ರಾಪ್ತವಾಗುತ್ತದೆ. ಕನ್ನಡ ಮತ್ತು ಇತರ ಭಾಷೆಗಳಲ್ಲಿ ನಿತ್ಯಪ್ರಕಟವಾಗುವ ಸಂಶೋಧನೆ ಈ ವರ್ಗಕ್ಕೆ ಸಂಬಂಧಪಟ್ಟುದಾಗಿದೆ.

ಒಂದು ಸಂಶೋಧನೆ ಒಬ್ಬ ವ್ಯಕ್ತಿಯ ಶ್ರಮವನ್ನು ಮೀರಿದ್ದರೆ, ಇಲ್ಲವೆ ಒಬ್ಬ ವ್ಯಕ್ತಿಯ ಜ್ಞಾನವನ್ನು ಮೀರಿದ್ದರೆ, ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಸೇರಿ ಮಾಡುವುದು ಜಂಟಿಸಂಶೋಧನೆ ಯೆನಿಸಿಕೊಳ್ಳುತ್ತದೆ. ಇದು ಸಾಮಾನ್ಯವಾಗಿ ವಿಜ್ಞಾನ, ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚು. ಕನ್ನಡಕ್ಕೆ ಬಂದರೆ ಆರ್. ನರಸಿಂಹಾಚಾರ್ ಮತ್ತು ಎಸ್. ಜಿ. ನರಸಿಂಹಾಚಾರ್ ಇವರು ಜಂಟಿಯಾಗಿ ರಚಿಸಿದ ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟದ ಪ್ರಥಮ ಆವೃತ್ತಿ ಒಬ್ಬ ವ್ಯಕ್ತಿಯ ಶ್ರಮವನ್ನು ಮೀರಿದ ಜಂಟಿ ಸಂಶೋಧನೆಗೆ ಉದಾಹರಣೆಯಾಗಿದೆ. ಕ್ಷೇತ್ರಕಾರ್ಯದ ನೆರವು ಇತ್ಯಾದಿ ಕಾರಣಗಳಿಗಾಗಿ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ – ಇವು ಡಾ. ಬಿ. ಆರ್. ಹಿರೇಮಠ ಮತ್ತು ನನ್ನ ಜಂಟಿ ಸಂಪಾದಕತ್ವದಲ್ಲಿ ಪ್ರಕಟವಾದುದು ಇದಕ್ಕೆ ಇತರ ಉದಾಹರಣೆಯೆನಿಸಿದೆ. ಒಬ್ಬ ವ್ಯಕ್ತಿಯ ಜ್ಞಾನವನ್ನು ಮೀರಿದ ಜಂಟಿ ಸಂಶೋಧನೆಗೆ ಒಂದು ಉದಾಹರಣೆಯನ್ನು ಕೊಡಬಹುದು. ಶ್ರೀ ಎಸ್. ಶಿವಣ್ಣ ಅವರು ಬ್ರಹ್ಮದ್ವೈತಸಿದ್ಧಾಂತ ಷಟ್ಸ್ಥಲಾಭರಣದಲ್ಲಿ ಅಜಗಣ್ಣನ ವಚನಗಳಿರುವುದನ್ನು, ಅದರ ಪೀಠಿಕಾ ಪದ್ಯದಲ್ಲಿಯ ಸೂಚನೆಯಿಂದ ಮೊಟ್ಟಮೊದಲು ಗ್ರಹಿಸಿದರು. ಆದರೆ ಇಲ್ಲಿ ಅಜಗಣ್ಣನವು ಯಾವುವು? ಎಂಬುದನ್ನು ಪತ್ತೆ ಮಾಡಲು ಬೇರೆ ಶೈಕ್ಷಣಿಕ ಆಯಾಮದ ಡಾ. ಚಿದಾನಂದಮೂರ್ತಿಗಳ ನೆರವು ಅವರಿಗೆ ಅಗತ್ಯವೆನಿಸಿತು. ಇಬ್ಬರೂ ಸೇರಿ 'ಅಜಗಣ್ಣನ ವಚನಗಳ ಅಭಿಜ್ಞೆ' ಎಂಬ ಲೇಖನ ಪ್ರಕಟಿಸಿದರು.[೧] ಒಬ್ಬರನ್ನು ಬಿಟ್ಟು ಒಬ್ಬರು ಈ ಕಾರ್ಯವನ್ನು ಮಾಡುವಂತಿಲ್ಲ ಎಂಬಷ್ಟರ ಮಟ್ಟಿಗೆ ಇಬ್ಬರೂ ಲೇಖನದ ಪೂರಕ ಘಟಕಗಳಾಗಿ ಕಾಣಿಸಿಕೊಂಡರು. ಆದರೆ ಕೆಲವೊಮ್ಮೆ ಒಬ್ಬರ ಶ್ರಮ, ಜ್ಞಾನಗಳಲ್ಲಿ ಇನ್ನೊಬ್ಬರು ಅನಾಯಾಸ ಸೇರಿಕೊಳ್ಳುವ ಅಪಾಯ ಈ ಜಂಟಿ ಸಂಶೋಧನೆಯಲ್ಲಿರುತ್ತದೆ. ಇದು ಸಂಶೋಧನಕ್ಷೇತ್ರವನ್ನು ಅಪವಿತ್ರಗೊಳಿಸುವ ಪಾಪದ ಕೆಲಸವೆಂದು ಬೇರೆ ಹೇಳಬೇಕಿಲ್ಲ.

ಸಂಶೋಧನೆಯು ವ್ಯಕ್ತಿವ್ಯಾಪ್ತಿಗೆ ಜಂಟಿವ್ಯಾಪ್ತಿಗೆ ಮೀರಿದ್ದರೆ, ಒಂದಕ್ಕಿಂತ ಹೆಚ್ಚು ಬಗೆಯ ಶ್ರಮ–ಹೆಚ್ಚು ಬಗೆಯ ಜ್ಞಾನವನ್ನು ಅಪೇಕ್ಷಿಸುತ್ತಿದ್ದರೆ ಮತ್ತು ದೀರ್ಘಕಾಲೀನವಾಗಿದ್ದರೆ ಅದನ್ನು ಸಂಸ್ಥೆಯ ಆಶ್ರಯದಲ್ಲಿ ನಡೆಸುವುದು ಅನಿವಾರ್ಯವೂ, ಸೂಕ್ತವೂ ಆಗಿದೆ. ಈ ಬೃಹತ್ ಸಂಶೋಧನೆಯ ಕನಸು ಕಂಡವನು, ಅದರ ಮೈ–ಮನಸ್ಸುಗಳನ್ನು ಅರ್ಥ ಮಾಡಿಕೊಂಡವನು ಇಲ್ಲಿ ಪ್ರಮುಖ ಸಂಶೋಧಕನಾಗಿರುತ್ತಾನೆ. ಒಂದು ದೊಡ್ಡ ಯೋಜನೆಯೆಂಬಂತೆ ಇದಕ್ಕೆ ಬೇಕಾಗುವ ಕಾಲ–ಹಣ–ಶ್ರಮ–ಜ್ಞಾನಗಳ ಬಜೆಟ್ಟನ್ನು ಇವನು ಸಿದ್ಧಪಡಿಸುತ್ತಾನೆ. ವೈವಿಧ್ಯಪೂರ್ಣ ವ್ಯಕ್ತಿಗಳನ್ನು,

---

೧. ಶೂನ್ಯಸಂಪಾದನೆಯನ್ನು ಕುರಿತು : ಅನುಬಂಧ–ಎಂ. ಚಿದಾನಂದಮೂರ್ತಿ.

ಯಂತ್ರಗಳನ್ನು, ಗ್ರಂಥಗಳನ್ನು, ಅಗತ್ಯ ಸಾಮಗ್ರಿಗಳನ್ನು ಇಲ್ಲಿ ಸಂಗ್ರಹಿಸುತ್ತಾನೆ. ಅವನ ನಿರ್ದೇಶಕತ್ವದಲ್ಲಿ ಇದು ಅಮೂರ್ತದಿಂದ ಮೂರ್ತಕ್ಕೆ ಬರುತ್ತಿರುತ್ತದೆ. ಆಯಾ ಸಂಸ್ಥೆಗಳ ನಿರ್ದೇಶಕರ ಸಾಮರ್ಥ್ಯಕ್ಕೆ ತಕ್ಕಂತೆ ಈ ಯೋಜನೆಗಳ ಪ್ರಮಾಣವಿರುತ್ತದೆ. ಇಲ್ಲಿ ನಿರ್ದೇಶಕನಾದವನು ಸಣ್ಣಪುಟ್ಟ ದೈಹಿಕ ಮತ್ತು ಬೌದ್ಧಿಕ ಶ್ರಮದ ಮಟ್ಟಿಗೆ ಮಿಕ್ಕಿ ವ್ಯಕ್ತಿಗಳನ್ನು ಬಳಸಿಕೊಂಡು ಸತ್ಯಗಳನ್ನು ಪ್ರಕಟಿಸಬೇಕಾಗುತ್ತದೆ. ಸಣ್ಣ ಸಣ್ಣ ಶಿಲ್ಪಿಗಳನ್ನು ಬಳಸಿಕೊಂಡು ಒಬ್ಬ ಮಹಾಶಿಲ್ಪಿ ಒಂದು ಭವ್ಯ ಸ್ಮಾರಕವನ್ನು ನಿರ್ಮಿಸುವ ರೀತಿಯಿದು. ಇಂಥದಲ್ಲಿ ಅವರವರ ಪಾಲನ್ನು, ದುಡಿಮೆಯ ರೀತಿಯಲ್ಲಿ ಸೂಚಿಸಬೇಕಾಗುತ್ತದೆ. ಸೂಚಿಸಿದರೂ ನಿರ್ದೇಶಕನ ಹೆಸರೇ ಇತಿಹಾಸದಲ್ಲಿ ಎದ್ದು ಕಾಣುತ್ತದೆ. ಇದು ಮಹಾಯುದ್ಧದಲ್ಲಿ ಸೇನಾಪತಿ ವಹಿಸುವಂಥ ಹೊಣೆಯಾಗಿದೆ.

ಸಾಂಸ್ಥಿಕ ಸಂಶೋಧನೆಯಲ್ಲಿ ಕೆಲವೊಮ್ಮೆ ನಿರ್ದೇಶಕ ಅಲಂಕಾರವೆಂಬಂತೆ "ಪ್ರಧಾನ ಸಂಪಾದಕ"ನಾಗಿ ಉಳಿಯಬಹುದು. ಎಲ್ಲ ಭೌತಿಕ ಸೌಕರ್ಯಗಳನ್ನು ಮಾತ್ರ ಒದಗಿಸಿಕೊಟ್ಟು, ಯೋಜನೆ ಮುನ್ನಡೆಯುವಂತೆ ಮಾಡುವುದು ಇವನ ಕೆಲಸ. ಇದು ಮಹಾಯುದ್ಧದಲ್ಲಿ ರಾಜನಂಥ ಹೊಣೆ.

ಈ ಎರಡೂ ಬಗೆಯ ಸಾಂಸ್ಥಿಕ ಯೋಜನೆಗಳಿಗೆ ಎಪಿಗ್ರಾಫಿಯ ಕರ್ನಾಟಿಕಾ ಸಂಪುಟಗಳ ಪ್ರಕಟನೆ ನಿದರ್ಶನವೆನಿಸಿದೆ. ೧೮೮೪ರಲ್ಲಿ ಮೈಸೂರು ಸರಕಾರ ಅಸ್ತಿತ್ವಕ್ಕೆ ತಂದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಬಿ. ಎಲ್. ರೈಸ್ ಅವರು ಶಾಸನ ಸಂಪುಟ ಮಾಲೆಯ ಅಂಗವಾಗಿ ೧೮೮೬ ರಲ್ಲಿ ಪ್ರಥಮ ಸಂಪುಟ ಹೊರತಂದು, ೧೯೦೭ರ ವರೆಗಿನ ಅವಧಿಯಲ್ಲಿ ಅಂದರೆ ೨೨ ವರ್ಷಗಳ ಆಡಳಿತದಲ್ಲಿ ಒಟ್ಟು ೧೨ ಶಾಸನ ಸಂಪುಟಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಸಂಗ್ರಹಿತವಾದ ಶಾಸನ ಸಂಖ್ಯೆ ೮೮೬೯. ಈ ದೈತ್ಯ ಯೋಜನೆಯಲ್ಲಿ ಅನೇಕ ಸಿಬ್ಬಂದಿಗಳೊಂದಿಗೆ ಶಾಸನ ವಿದ್ವಾಂಸರಾದ ಶ್ರೀ ರೈಸ್ ಅವರೂ ನೇರವಾಗಿ ಸೇರಿಕೊಂಡಿರುವುದರಿಂದ ಇದು ಮೇಲೆ ಹೇಳಿದ ಮೊದಲ ರೀತಿ–ಸೇನಾಪತಿಯ ಸಾಂಸ್ಥಿಕ ಸಂಶೋಧನೆಗೆ ಉದಾಹರಣೆಯಾಗಿದೆ. ಮುಂದೆ ೧೯೭೨ರಲ್ಲಿ ಈ ಸಂಪುಟಗಳನ್ನು ಪರಿಷ್ಕರಿಸಿ ಪುನಃ ಪ್ರಕಟಿಸುವ ಯೋಜನೆಯನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಗೆತ್ತಿಕೊಂಡಿತು. ಅಧ್ಯಯನ ಸಂಸ್ಥೆಯ ನಿರ್ದೇಶಕರು ಒಟ್ಟು ಯೋಜನೆಯ ಅಧ್ಯಕ್ಷರಾಗಿ ಸಂಪುಟಗಳು ಹೊರಬರುವ ಅನುಕೂಲತೆಗಳನ್ನು ಮಾತ್ರ ಕಲ್ಪಿಸಿಕೊಟ್ಟರು. ಇದು ಮೇಲೆ ಹೇಳಿದ ಎರಡನೆಯ ರೀತಿ(ರಾಜ)ಯ ಸಾಂಸ್ಥಿಕ ಸಂಶೋಧನೆಗೆ ಉದಾಹರಣೆಯಾಗಿದೆ. ಈ ಎರಡೂ ಬಗೆಯ ಸಾಂಸ್ಥಿಕ ಸಂಶೋಧನೆಗಳಲ್ಲಿ ಸಹಭಾಗಿಗಳ ಪಾಲನ್ನು ಸೂಚಿಸುವುದು ನ್ಯಾಯಸಮ್ಮತವಾಗಿದೆ.

ವೈಯಕ್ತಿಕ ಸಂಶೋಧನೆ, ಜಂಟಿ ಸಂಶೋಧನೆಗಳಲ್ಲಿ ಸಂಶೋಧಕರ ಹೊಣೆಗಾರಿಕೆ ನೇರವಾಗಿದ್ದರೆ, ಸಾಂಸ್ಥಿಕ ಸಂಶೋಧನೆಯಲ್ಲಿ ಪರ್ಯಾಯವಾಗಿರುತ್ತದೆ. ಹೀಗಾಗಿ ಸಾಂಸ್ಥಿಕ ಸಂಶೋಧನೆಯಲ್ಲಿ ನಿರ್ದೇಶಕ ಎಷ್ಟೇ ಸಮರ್ಥನಾಗಿದ್ದರೂ ಸದಸ್ಯರು ಅಸಮರ್ಥರಿದ್ದರೆ ಸಂಶೋಧನೆ ಅಷ್ಟರಮಟ್ಟಿಗೆ ಅರ್ಥ ಕಳೆದುಕೊಳ್ಳುತ್ತದೆ, ಸಮರ್ಥರಿದ್ದರೆ ಅಷ್ಟರಮಟ್ಟಿಗೆ ಅರ್ಥಪಡೆಯುತ್ತದೆ.

ಕರ್ನಾಟಕದಲ್ಲಿ ಐತಿಹಾಸಿಕವೆನಿಸುವ ಕೆಲವು ಸಾಂಸ್ಥಿಕ ಸಂಶೋಧನಕಾರ್ಯಗಳು ಜರುಗಿವೆ. ಅವು 'ಎಪಿಗ್ರಾಫಿಯ ಕರ್ನಾಟಿಕಾ ಸಂಪುಟಗಳ ಪ್ರಕಟನೆ–ಬಿ. ಎಲ್. ರೈಸ್ (೧೮೮೬–೧೯೦೭).

'ಕನ್ನಡ ಕನ್ನಡ ಡಿಕ್ಸನರಿ- ಎಫ್. ಕಿಟೆಲ್ (೧೮೯೪) ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' (೧೯೪೪), ಕರ್ನಾಟಕ ವಿಶ್ವವಿದ್ಯಾಲಯದ 'ಸಮಗ್ರ ವಚನವಾಙ್ಮಯದ ಸಂಗ್ರಹ-ಸಂಸ್ಕರಣ-ಪ್ರಕಟನೆ ಯೋಜನೆ.' (೧೯೬೨-೭೮), ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಗ್ರಂಥಸೂಚಿ' (೧೯೬೭), ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯ 'ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯದ ಪ್ರಕಟನೆ ಯೋಜನೆ' (೧೯೮೨), ಕರ್ನಾಟಕ ಸರಕಾರದ ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ (೧೯೯೩) ಇತ್ಯಾದಿಗಳು.

ಸಾಂಸ್ಥಿಕ ಸಂಶೋಧನೆಯಲ್ಲಿಯೇ ಇನ್ನೊಂದು ಪ್ರಕಾರವನ್ನು ಸೂಚಿಸಬಹುದು. ಅದು ಸಂಸ್ಥೆಯಲ್ಲಿ ಜರುಗುವ 'ಶಾಶ್ವತ ಸಂಶೋಧನೆ', ಮೇಲೆ ಹೇಳಿದವುಗಳಲ್ಲಿ ಬಹಳಷ್ಟು ಶಾಶ್ವತ ಸಂಶೋಧನ ಸ್ವರೂಪದವು. ಪುರಾತತ್ವ ಇಲಾಖೆಯನ್ನು ಗಮನಿಸಿ ಹೇಳುವುದಾದರೆ ಇಲ್ಲಿ ಹೊಸ ಹೊಸ ಶಾಸನಗಳು ಸಿಗುವುದು, ಪ್ರಕಟವಾದ ಶಾಸನಗಳನ್ನು ಪರಿಷ್ಕರಿಸುವುದು, ಪ್ರಕಟಿಸುವುದು ನಡದೇ ಇರುತ್ತದೆ. ಇದೇ ರೀತಿ ನಿಘಂಟು ಯೋಜನೆ, ಗ್ರಂಥಸೂಚಿ ಯೋಜನೆಗಳಲ್ಲಿ ಅವುಗಳನ್ನು ಆಗಾಗ ಪರಿಷ್ಕರಿಸುತ್ತಲೇ ಹೋಗಬೇಕಾಗುತ್ತದೆ. ಹಸ್ತಪ್ರತಿ ಭಾಂಡಾರದಲ್ಲಿ ಕೈಕೊಳ್ಳುವ ಸೂಚೀರಚನಾಕಾರ್ಯ, ಗ್ರಂಥಪರಿಷ್ಕರಣಕಾರ್ಯಗಳು ಸಂಸ್ಥೆಯಲ್ಲಿ ಜರುಗುವ ಶಾಶ್ವತ ಸಂಶೋಧನೆಗಳೇ ಆಗಿವೆ.

ಸಂಶೋಧನೆ-ಸಹಾಯ

ಶ್ರಮ ಮತ್ತು ಸಮಯಗಳ ಉಳಿತಾಯ, ಕೈಗೆತ್ತಿಕೊಂಡ ಸಮಸ್ಯೆಯ ಸಮಗ್ರ ಅಧ್ಯಯನಗಳಿಗಾಗಿ ಸಂಸ್ಥೆಗಳ ಸಹಕಾರ ಮತ್ತು ಧನಸಹಾಯ ಅತ್ಯವಶ್ಯ.

ಕನ್ನಡ ಸಂಶೋಧನ ಇತಿಹಾಸಕ್ಕೆ ಸಂಬಂಧಪಟ್ಟಂತೆ ಮೊದಲ ಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಮದ್ರಾಸಿನ ಗವ್ಹರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ (೧೮೫೮), ಮೈಸೂರಿನ ಪುರಾತತ್ವ ಇಲಾಖೆ (೧೮೮೪) ಮತ್ತು ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ (೧೮೯೧), ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ (೧೯೩೯)ಗಳು ಆಕರಗಳ ಸಂಗ್ರಹ, ಗ್ರಂಥಗಳ ಪ್ರಕಟನೆಯ ದಿಕ್ಕುಗಳಲ್ಲಿ ದುಡಿದು, ಸಂಶೋಧನೆಯ ಬೆಳವಣಿಗೆಗೆ ಕಾರಣೀಭೂತವಾಗಿವೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು ಭೂಶೋಧ, ವಾಸ್ತು-ನಿಗ್ರಹ ಪರಿಶೀಲನೆ, ಶಾಸನ-ನಾಣ್ಯ ಶೋಧಮಾರ್ಗಗಳಲ್ಲಿ ದುಡಿದು, ನಮ್ಮ ನಾಡಿನ ಸಂಶೋಧನೆಯನ್ನು ಇನ್ನೊಂದು ಬಗೆಯಲ್ಲಿ ಬೆಳೆಸಿವೆ.

ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೧), ಕನ್ನಡ ಸಾಹಿತ್ಯ ಪರಿಷತ್ತು (೧೯೧೫), ಮಿಥಿಕ್ ಸೊಸೈಟಿ (೧೯೧೯), ಬಿ.ಎಂ.ಶ್ರೀ. ಪ್ರತಿಷ್ಠಾನ (೧೯೮೦)ಗಳಂಥ ಸಾರ್ವಜನಿಕ ಸಂಸ್ಥೆಗಳು, ಧಾರವಾಡದ ಮುರುಘಾಮಠ, ಚಿತ್ರದುರ್ಗದ ಮುರುಘಾಮಠ, ಸಿರಿಗೆರೆಯ ತರಳಬಾಳುಮಠ, ಮೈಸೂರಿನ ಸುತ್ತೂರುಮಠ, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರಮಠ, ವಿಜಾಪುರ ಜಿಲ್ಲೆಯ ಶಿವಯೋಗ ಮಂದಿರ, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಮೊದಲಾದ ವೀರಶೈವ ಧಾರ್ಮಿಕ, ಸಾಮಾಜಿಕ ಸಂಸ್ಥೆಗಳು ಸಂಶೋಧನೆಯ ಸಂವರ್ಧನೆಗೆ

ವಿಶೇಷ ರೀತಿಯಲ್ಲಿ ದುಡಿಯುತ್ತ ಬಂದಿವೆ. ಈ ದಿಶೆಯಲ್ಲಿ ಕರ್ನಾಟಕದ ಜೈನ ಮತ್ತು ಬ್ರಾಹ್ಮಣ ಮಠಗಳು ಮಾಡಿದ ಕೆಲಸ ಸಾಲದೆಂದೇ ಹೇಳಬೇಕು. ಇದಲ್ಲದೆ ಪೊಳಲಿ ಸೀನಪ್ಪ ಹೆಗ್ಗಡೆ, ಚಿತ್ರದುರ್ಗದ ಶ್ರೀನಿವಾಸ ಜೋಯಿಸರು, ಬೆಂಗಳೂರಿನ ಎ. ಶಾಂತರಾಜಶಾಸ್ತ್ರೀಗಳು, ಹಾವೇರಿಯ ಚೆನ್ನಮಲ್ಲಿಕಾರ್ಜುನರು, ವಿಜಾಪುರದ ಹಳಕಟ್ಟಿಯವರು, ಗುಲಬರ್ಗಾದ ಕಪಟರಾಳ್ ಕೃಷ್ಣರಾಯರು, ಲಿಂಗಸುಗೂರಿನ ಗೋರೆಬಾಳ ಹನುಮಂತರಾಯರ ಪ್ರಕಟನಮಾಲೆ, ಪತ್ರಿಕೆಗಳು ಸಂಶೋಧನ ಜನಸಮ್ಮುಖವಾಗುವಂತೆ ಶ್ರಮಿಸಿವೆ.

೧೮೫೭ರಲ್ಲಿ ಏಕಕಾಲಕ್ಕೆ ಮುಂಬೈ, ಮುದ್ರಾಸ್, ಕಲಕತ್ತಾ ವಿಶ್ವವಿದ್ಯಾಲಯಗಳು ನಮ್ಮ ದೇಶದಲ್ಲಿ ಅಸ್ತಿತ್ವಕ್ಕೆ ಬಂದುದು ಐತಿಹಾಸಿಕ ಘಟನೆಯೆನಿಸಿದೆ. ಇವುಗಳಲ್ಲಿ ಮುಂಬೈ ವಿಶ್ವವಿದ್ಯಾಲಯ, ಮದ್ರಾಸ್ ವಿಶ್ವವಿದ್ಯಾಲಯಗಳು ಸಂಶೋಧನೆಯ ವಿಷಯವಾಗಿ ಕನ್ನಡಿಗರ ಕಣ್ಣು ತೆರೆಯಿಸಿದುವು. ಆಮೇಲೆ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾಲಯ (೧೯೧೬), ಕರ್ನಾಟಕ ವಿಶ್ವವಿದ್ಯಾಲಯ (೧೯೪೯)ಗಳು ಕರ್ನಾಟಕದ ಸಂಶೋಧನೆಗೆ ಪ್ರತ್ಯಕ್ಷ ಉತ್ತೇಜನ ಕೊಟ್ಟು ಬಹುದೊಡ್ಡ ನೆರವು, ತಿರುವು ನೀಡಿದವು. ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯಸಾಹಿತ್ಯ ಅಕಾಡೆಮಿ ಸಂಶೋಧನೆಯ ಬೆಳವಣಿಗೆಗಾಗಿ ಗಮನ ಕೊಡಬೇಕಾಗಿದೆ. ಈ ದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ವಲ್ಪ ಉತ್ತಮವೆಂದೇ ಹೇಳಬೇಕು.

ಈ ವರೆಗೆ ವಿವರಿಸಿದವುಗಳಲ್ಲಿ ಕೆಲವು ಸಂಶೋಧನೆಗಾಗಿ ಒಂದಲ್ಲ ಒಂದು ರೀತಿಯಲ್ಲಿ ನೆರವಾಗುತ್ತಿದ್ದರೂ, ತಾವೇ ಸಂಶೋಧನಕಾರ್ಯ ನಡೆಸುವುದು ಇವುಗಳ ಮುಖ್ಯ ಉದ್ದೇಶವಾಗಿದೆ. ಹೀಗಾಗಿ ಇವು ಅನ್ವೇಷಣಾತ್ಮಕ ಸಂಶೋಧನೆಗಾಗಿ ಆರ್ಥಿಕ ನೆರವು ನೀಡುವ ಕೇಂದ್ರಗಳಲ್ಲ. ಹೀಗೆ ಧನಸಹಾಯ ಮಾಡುವ ಸಂಸ್ಥೆಗಳೆಂದರೆ ರಾಜ್ಯ ಮತ್ತು ಕೇಂದ್ರ ಶಿಕ್ಷಣ ಸಚಿವಾಲಯಗಳು, ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರೀಸರ್ಚ್ (ಆಯ್.ಸಿ.ಎಚ್.ಆರ್.) ಇಂಡಿಯನ್ ಕೌನ್ಸಿಲ್ ಆಫ್ ಸೋಸಿಯಲ್ ಸೈನ್ಸ್ ರೀಸರ್ಚ್ (ಆಯ್.ಸಿ.ಎಸ್.ಎಸ್.ಆರ್.) ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.). ಇವು ಸಣ್ಣ–ದೊಡ್ಡ ಯೋಜನೆಗಳಿಗಲ್ಲದೆ ಸೆಮಿನಾರ್, ಓರಿಯಂಟೇಶನ್ ಕೋರ್ಸ್, ರಿಫ್ರೆಶರ್ ಕೋರ್ಸ್, ವರ್ಕ್‌ಶಾಪ್ ಇತ್ಯಾದಿಗಳಿಗಾಗಿ ಹಣವನ್ನು ಅನುದಾನಿಸುತ್ತಲಿವೆ. ಒಂದು ಮಾತು ಈ ಹಣ ಸದುಪಯೋಗವಾಗುವುದೇ ಕಡಿಮೆ. ವಿಷಯದ ಬಗ್ಗೆ ಕಳಕಳಿ–ತಜ್ಞತೆ ಇಲ್ಲದೆ, ಯೋಜನೆಗಳ ವ್ಯವಸ್ಥಾಪನೆ ಮತ್ತು ವಿಚಾರಸಂಕಿರಣಗಳ ನಿರ್ವಹಣೆಗಳನ್ನು ಲಾಭದಾಯಕ ಉದ್ಯೋಗ ಮಾಡಿಕೊಂಡಿರುವ "ವಿದ್ವಾಂಸ ನಾಮಧಾರಕರು" ಅಲ್ಲಲ್ಲಿ ವಿಜೃಂಭಿಸುತ್ತಲಿದ್ದಾರೆ. ಇಂಥವರ ಸಂಖ್ಯೆ ಕಡಿಮೆಯಾದಷ್ಟು ಸರಿಯಾದ ಸಂಶೋಧನೆ ನಡೆಯುತ್ತವೆ, ನಿಜವಾದ ಸಂಶೋಧಕರಿಗೆ ಅವಕಾಶಗಳು ಸಾಧ್ಯವಾಗುತ್ತವೆ. ಕಸದಿಂದ ಮುಕ್ತವಾದ ಸಸಿಯಂತೆ ಸಂಶೋಧನೆ ಸುಳಿಬಿಚ್ಚಿ ಬೆಳೆಯುತ್ತದೆ.

ಸಂಶೋಧನೆಯ ಅವಶ್ಯಕತೆ

ಕೆಲವು ದಿನಗಳ ಹಿಂದೆ ಸ್ನಾತಕೋತ್ತರ ಕನ್ನಡವರ್ಗದ ವಿದ್ಯಾರ್ಥಿಗಳಿಗೆ ಬೋಧಿಸುತ್ತ, "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ..." ಎಂಬ ಪ್ರಸಿದ್ಧ ಪದ್ಯವನ್ನು ಉಚ್ಚರಿಸುತ್ತಲೇ ಎಲ್ಲರೂ ಮೆತ್ತಗೆ ನನ್ನ ಕೂಡ ದನಿಗೂಡಿಸುತ್ತಿದ್ದಾಗ, ತಮಗೆ ಆ ಪದ್ಯ ಗೊತ್ತಿದೆ

ಎಂಬ ಹೆಮ್ಮೆ ಅವರ ಮುಖದಲ್ಲಿ ಮೂಡಿತ್ತು. ನಾನು ತಕ್ಷಣ ತಡೆದು, ಕಾವೇರಿ ಎಲ್ಲಿದೆ? ಗೋದಾವರಿ ಎಲ್ಲಿದೆ? ಎಂದು ಕೇಳಿದೆ. ಯಾರಿಗೂ ಉತ್ತರಿಸುವ ಧೈರ್ಯ ಬರಲಿಲ್ಲ. ಈ ಸಂದರ್ಭ ನನ್ನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿತು. ನಾವು ಕಲಿಸುವುದಕ್ಕೆ ಏನು ಅರ್ಥ? ಎಂಬ ಜಿಗುಪ್ಸೆಯುಂಟಾಯಿತು. ನಾವು ತಿಳಿಸಿಕೊಡುವುದು ಕವಿರಾಜಮಾರ್ಗದಲ್ಲಿ ಪ್ರತಿಪಾದಿತವಾದ ದೊಡ್ಡ ನಾಡಿನ ದೊಡ್ಡ ಪ್ರಜೆಗಳೆಂಬ 'ಪರಂಪರೆಯ ಜ್ಞಾನ'ವನ್ನಲ್ಲ, ಕಾವೇರಿ ಎಲ್ಲಿದೆ? ಗೋದಾವರಿ ಎಲ್ಲಿದೆ? ಎಂಬ 'ಭೌಗೋಲಿಕ ಜ್ಞಾನ'ವನ್ನೂ ಅಲ್ಲ, ಕೇವಲ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ...' ಎಂಬ ಪದ್ಯದ ಪರಿಚಯವನ್ನು ಎನಿಸಿತು. ಇದರಿಂದ ವಿದ್ಯಾರ್ಥಿಗಳ ಜ್ಞಾನವನ್ನು ಬೆಳೆಸಲಾರೆವು. ಅವರ ಪರಂಪರೆಯ ಪ್ರಜ್ಞೆಯನ್ನೂ ಎತ್ತರಿಸಲಾರೆವು ಎನಿಸಿತು.

ಇಂಥ ಸಂದರ್ಭಗಳನ್ನು ನೆನೆದಾಗ ನಾವು ಉಪೇಕ್ಷಿಸಿರುವ ಪರಂಪರೆಯ ಪ್ರಜ್ಞೆಯ ಪ್ರಮಾಣ ಸ್ಪಷ್ಟವಾಗುತ್ತದೆ. ಸಂಶೋಧನೆಯೆನ್ನುವುದು ಮತ್ತೇನೂ ಆಗಿರದೆ, ಉಪೇಕ್ಷೆಯಿಂದಾಗಿ ಕಳೆದು ಹೋಗಿರುವ ಪರಂಪರೆಯನ್ನು ಶೋಧಿಸಿ ಜನತೆಯ ಮುಂದೆ ಮಂಡಿಸುವುದಾಗಿದೆ ಮತ್ತು ಅವರ ಪರಂಪರೆಯ ಅವಜ್ಞೆಯ ಸ್ಥಾನದಲ್ಲಿ ಪ್ರಜ್ಞೆಯನ್ನು ಸ್ಥಾಪಿಸುವುದಾಗಿದೆ. ಆ ಬೆಳಕು ಖಂಡಿತವಾಗಿಯೂ ವರ್ತಮಾನ ಬದುಕನ್ನು ತಿದ್ದುತ್ತದೆ, ಉದ್ದೀಪನಗೊಳಿಸುತ್ತದೆ. ಒಟ್ಟಿನಲ್ಲಿ ಗತಕಾಲದ ಶೋಧವೆನ್ನುವುದು ವರ್ತಮಾನಕಾಲದ ತಿದ್ದುವಿಕೆಗಾಗಿ, ನಿರ್ಮಾಣಕ್ಕಾಗಿ ಎಂದೇ ಹೇಳಬೇಕು.

ಭೂತ, ವರ್ತಮಾನ, ಭವಿಷತ್ತುಗಳು ನೋಡಲಿಕ್ಕೆ ಮೂರು ಪ್ರತ್ಯೇಕ ಕಾಲ ಖಂಡಗಳಾಗಿ ಕಂಡರೂ ಅವು ಮೂಲತಃ ಒಂದು ಅಖಂಡ ಕಾಲಪ್ರವಾಹ. ಇಲ್ಲಿ ಭೂತದ ಮಗುವಾದ ವರ್ತಮಾನ, ಭವಿಷ್ಯದ ತಂದೆಯಾಗಿದೆ. ಹೀಗಾಗಿ ಇಂದಿನ ಅಸ್ತಿತ್ವಕ್ಕಾಗಿ, ಮುಂದಿನ ನಿರ್ಮಾಣಕ್ಕಾಗಿ, ಹಿಂದಿನ ತಿಳಿವಳಿಕೆಯು ಪಾಠವಾಗಿ ಪರಿಣಮಿಸುತ್ತದೆ. ಇದರಿಂದ ತಿಳಿಯುವಿಕೆ ಮತ್ತು ಬೆಳೆಯುವಿಕೆಗಳು ಸಾಧ್ಯವಾಗುತ್ತವೆ. 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂದು ಡಾ. ಅಂಬೇಡ್ಕರ ಹೇಳುವುದು ಈ ಕಾರಣಕ್ಕಾಗಿ. ಇತಿಹಾಸವೆನ್ನುವುದು ಅವಮಾನದ್ದಿರಬಹುದು. ಅಭಿಮಾನದ್ದಿರಬಹುದು. ಅವಮಾನದ ನೆನಪು ಸ್ವಾಭಿಮಾನವನ್ನು ಸೃಷ್ಟಿಸುತ್ತದೆ. ಅಭಿಮಾನದ ನೆನಪು ಸ್ವಾಭಿಮಾನವನ್ನು ಪೋಷಿಸುತ್ತದೆ.

ಒಟ್ಟಿನಲ್ಲಿ 'ಚಾರಿತ್ರಿಕ ಪ್ರಜ್ಞೆಯ ಜಾಗೃತಿ'ಯೇ ಸಂಶೋಧನೆಯ ಅಂತಿಮ ಗುರಿಯಾಗಿದೆ. ಸಿಂಹದ ಮರಿಯೊಂದು ಶೈಸವದಿಂದಲೂ ಕುರಿಗಳ ಮಧ್ಯದಲ್ಲಿ ಬದುಕಿದರೆ ತನ್ನ 'ಸಿಂಹತ್ವ'ವನ್ನೇ ಮರೆತು ಕುರಿಯ ಹಾಗೆ ವರ್ತಿಸುತ್ತದೆ. ಅದಕ್ಕೆ ತನ್ನ ಜನ್ಮೇತಿಹಾಸದ ಅರಿವು ಇರುವುದಿಲ್ಲ. ಸಿಂಹವೊಂದು ಅದಕ್ಕೆ ನಿಜಸ್ಥಿತಿಯನ್ನು ತಿಳಿಸಿದಾಗ ಕುರಿಹಿಂಡಿನಿಂದ ಸರಿದು, ಅದು ಕೇಸರಿಯ ಮುಖಂಡನಾದ ಕಥೆ ಎಲ್ಲರಿಗೂ ಗೊತ್ತು. ಈ ವಿವರವನ್ನು ಗಮನಿಸಿದಾಗ, ಪರಂಪರೆಯ ಪ್ರಜ್ಞೆಯು ವ್ಯಕ್ತಿಯ ಬದುಕನ್ನು ರೂಪಿಸುವ ಒಂದು ಮುಖ್ಯ ಸಾಧನವೆಂದು ಸ್ಪಷ್ಟವಾಗುತ್ತದೆ. 'ಕನ್ನಡಿಗರಿಗೆ ಸ್ವಾಭಿಮಾನ ಕಡಿಮೆ' ಎಂಬ ಮಾತೊಂದಿದೆ. ದೊಡ್ಡ ಸಾಮ್ರಾಜ್ಯ, ದೊಡ್ಡ ಸಾಹಿತ್ಯ, ದೊಡ್ಡ ಧರ್ಮ ಇತ್ಯಾದಿಗಳನ್ನು ಕಟ್ಟಿದ ಈ ಜನಾಂಗ ಆಗಾಗ ಸ್ವಾಭಿಮಾನದ ಕೊರತೆಯಿಂದ ಬಳಲಿದುದಕ್ಕೆ ಮುಖ್ಯ ಕಾರಣ ಐತಿಹಾಸಿಕ ಪ್ರಜ್ಞೆಯ ಕೊರತೆ. ಈ ಪ್ರಜ್ಞೆಯ ಕಾವು ಆರದಂತೆ

ನೋಡಿಕೊಳ್ಳುತ್ತ ಬಂದಾಗ ಮಾತ್ರ, ಜನಾಂಗದ ವೀರ್ಯವತ್ತಾದ ಬದುಕು ತಲೆಮಾರಿನಿಂದ ತಲೆಮಾರಿಗೆ ಮುಂದುವರಿಯುತ್ತದೆ.

ಇದು ಕೇವಲ ಅಭಿಮಾನದ ಪರಂಪರೆಯನ್ನಲ್ಲ, ಅನುಭವದ ಪರಂಪರೆಯನ್ನೂ ಜಾಗ್ರತಗೊಳಿಸಿ ನಮ್ಮ ಹೊಸ ಅನುಭವಗಳನ್ನು ಸರಿಯಾಗಿ ರೂಪಿಸಲು ನೆರವಾಗುತ್ತದೆ. ಹೀಗೆ ಜನಾಂಗವು ಅಭಿಮಾನದಿಂದ ಬದುಕಲು, ಅನುಭವಗಳನ್ನು ರೂಪಿಸಿಕೊಳ್ಳಲು ಸಂಶೋಧನೆ ಸಹಾಯವಾಗುತ್ತದೆ. ಆದುದರಿಂದ ಸಂಶೋಧಕರ ಗುರಿ 'ಸಂಶೋಧನೆಗಾಗಿ ಸಂಶೋಧನೆ'ಯಾಗಿರಬಾರದು. 'ಸಾಮಾಜಿಕ ಪರಿವರ್ತನೆಗಾಗಿ ಸಂಶೋಧನೆ'ಯಾಗಿರಬೇಕು. ಅವರು ಮಾಡುವ ಸಂಶೋಧನೆ ಜನರ ಚಿಂತನ ಕ್ರಮವನ್ನು ತಿದ್ದಬೇಕು. ಬದಲಿಸಬೇಕು–ಸೃಜನಸಾಹಿತ್ಯದಂತೆ. ಆನ್ವಯಿಕ ಸಂಶೋಧನೆ ಪ್ರಧಾನವಾದಷ್ಟೂ ಚಿಂತನಕ್ರಮದಲ್ಲಿ ಬದಲಾವಣೆ ಬೇಗ ಸಾಧ್ಯವಾಗುತ್ತದೆಯೆಂಬುದನ್ನು ಮರೆಯಬಾರದು.

ಸೃಜನಶೀಲ ಸಾಹಿತ್ಯ ಸಂದರ್ಭದಲ್ಲಿಯೂ ಸಂಶೋಧನೆ ಮುಖ್ಯವೆನಿಸುತ್ತದೆ. ಏಕೆಂದರೆ, ಸಾಹಿತ್ಯಕ್ಕೆ ವಸ್ತು ವರ್ತಮಾನವೇ ಆಗಿರಬೇಕೆಂದೇನೂ ಇಲ್ಲ. ಸೃಜನಶೀಲ ಮನಸ್ಸಿಗೆ ಗತಕಾಲದ ಘಟನೆಯೂ ವಸ್ತುವಾಗುತ್ತದೆ. ಅಂಥ ಸಂದರ್ಭದಲ್ಲಿ ಸಾಹಿತಿಯಾದವನಿಗೆ 'ಚಾರಿತ್ರಿಕ ಪ್ರಜ್ಞೆ' ಅತ್ಯಗತ್ಯ. 'ಮೃತ್ಯುಂಜಯ' ಕಾದಂಬರಿಯ ಮುನ್ನುಡಿಯಲ್ಲಿ ಶ್ರೀ ನಿರಂಜನರು ಹೇಳಿದ ಮಾತು ಹೀಗಿದೆ "ಆ ಕಾಲದ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಅರಿಯಲು ಶ್ರಮಿಸಿದೆ. ಪುರಾತತ್ವ ಶಾಸ್ತ್ರಜ್ಞನನ್ನು ಊರುಗೋಲಾಗಿ ಬಳಸಿ, ಕಾಲದ ಅಂತರವನ್ನು ದಾಟಿ ಪ್ರಾಚೀನ ಇಜಿಪ್ತಿನ ಮೇಲೆ ಗೋರಿಗಳ ನಡುವೆ ಓಡಾಟ. ಸತ್ತವರ ಸಂಗ, ನೀಲನದಿಯ ದೋಣಿ ಪ್ರವಾಸ, ರೈತನಾದೆ, ಕುಶಲಕರ್ಮಿಯಾದೆ, ಪುರೋಹಿತನಾದೆ... ಒಂಬತ್ತು ತಿಂಗಳ ಯತ್ನ, ನಾನು ಸಿದ್ಧ ಎನ್ನಿಸಿತು." ಯಾವುದೇ ಕೃತಿಗೆ ಅಧಿಕೃತತೆ (Authenticity)ಯನ್ನು ತಂದುಕೊಳ್ಳಲು ಚರಿತ್ರೆಯ ಅಧ್ಯಯನ ಎಷ್ಟು ಅಗತ್ಯವೆಂಬುದಕ್ಕೆ ಈ ಮಾತುಗಳು ಸಾಕ್ಷಿಯಾಗಿದೆ.

ಇತಿಹಾಸವೆನ್ನುವುದು ಸಂಪ್ರದಾಯಗಳ ಸರಮಾಲೆ. ಈ ಸಂಪ್ರದಾಯದ ಒಂದು ಭಾಗ ಸಾಹಿತ್ಯ. ಸಾಮಾನ್ಯವಾಗಿ ಇಂತಹ ಕೃತಿಗಳನ್ನು ಸಾಹಿತ್ಯಿಕ ಕಾವ್ಯ, ಸಾಂಸ್ಕೃತಿಕ ಕಾವ್ಯವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಪಂಪಭಾರತ, ಬಸವಣ್ಣನವರ ವಚನಗಳಂಥ ಸಾಂಸ್ಕೃತಿಕ ಕೃತಿಗಳ ಅಭ್ಯಾಸಕ್ಕೆ ಅವು ಹುಟ್ಟಿದ ಪರಿಸರದ ತಿಳುವಳಿಕೆ ಅಗತ್ಯ. ಈ ಪರಿಸರದ ಶೋಧ ಸರಿಯಾಗದೆ ಅದನ್ನು ಅವಲಂಬಿಸಿದ ವಿಮರ್ಶೆಯು ಸರಿಯಾಗದು. ಪರಿಸರ ಪ್ರಜ್ಞೆ ಹೆಚ್ಚಿದ್ದಷ್ಟೂ ಇವುಗಳ ಅಧ್ಯಯನಕ್ಕೆ ಆಳ ಪ್ರಾಪ್ತವಾಗುತ್ತದೆ. ಅಂದರೆ ಆ ಕೃತಿಗಳನ್ನು ಹಿಡಿದುಕೊಂಡು ಅವು ಹುಟ್ಟಿದ ಆವರಣಕ್ಕೆ ಹೋಗಬೇಕು. ಅಲ್ಲಿ ಬಿಚ್ಚಿ, ಆ ಬೆಳಕಿನಲ್ಲಿ ವಿಮರ್ಶಿಸಬೇಕು. ಇದನ್ನೇ ಕಾವ್ಯ ಮೀಮಾಂಸೆಯಲ್ಲಿ 'ಚಾರಿತ್ರಿಕವಿಮರ್ಶೆ' ಎನ್ನುವುದು. ಚಾರಿತ್ರಿಕಪ್ರಜ್ಞೆ ಜಾಗ್ರತವಿದ್ದಷ್ಟೂ ಒಂದು ಪ್ರಾಚೀನ ಕೃತಿಯ ವಿಮರ್ಶೆ ಹೆಚ್ಚು ಸಾರ್ಥಕತೆ ಪಡೆಯುತ್ತದೆ. ಹೀಗಾಗಿ ಪ್ರಾರಂಭದಲ್ಲಿ ಹೇಳಿದ ಜೀವನಕ್ಷೇತ್ರ ಮತ್ತು ಈಗ ಹೇಳಿದ ಸಾಹಿತ್ಯಕ್ಷೇತ್ರಗಳ ಅರ್ಥಪೂರ್ಣತೆಗೆ ನೆರವಾಗುವ ಸಾಧನಗಳಲ್ಲಿ ಸಂಶೋಧನೆಯೂ ಒಂದು ಎಂದು ಹೇಳಬಹುದು.

❖❖

೬

❖

ಕನ್ನಡ ಸಂಶೋಧನೆ

ಕನ್ನಡ ಸಂಶೋಧನೆಯ ಇತಿಹಾಸ : ಆಕರಶೋಧ-ಆಕರಗಳ ರೂಪನಿಷ್ಠ ಶೋಧ-ಆಕರಗಳ ಗುಣನಿಷ್ಠಶೋಧ-ಕನ್ನಡ ಸಂಶೋಧನೆಯ ಭವಿಷ್ಯ.

ಕನ್ನಡ ಸಂಶೋಧನೆಯ ಇತಿಹಾಸ

ಆಂಗ್ಲರು ಪಶ್ಚಿಮದಿಂದ ಪೂರ್ವಕ್ಕೆ ಸಾಗಿಬಂದುದರಿಂದ, ಏಶಿಯಾಖಂಡದಲ್ಲಿ ಸಂಭವಿಸಿದ ಬೌದ್ಧಿಕ ಚಟುವಟಿಕೆಗಳು ಅನೇಕ. ಅವುಗಳಲ್ಲಿ ಏಶಿಯಾಖಂಡವನ್ನು ಕುರಿತ ಸಾಂಸ್ಕೃತಿಕ ಅಧ್ಯಯನವನ್ನು (Orientology)ಎಂದು, ಅದರ ಭಾಗವಾದ ಭರತಖಂಡವನ್ನು ಕುರಿತ ಸಾಂಸ್ಕೃತಿಕ ಅಧ್ಯಯನವನ್ನು Indology ಎಂದು ಕರೆಯುತ್ತಾರೆ. Indologyಗೆ ಭಾರತಶಾಸ್ತ್ರವೆಂಬ ಪರ್ಯಾಯ ಪದವನ್ನು ಬಳಸಲಾಗುತ್ತಿದ್ದು, ಈ ಅಧ್ಯಯನ ಪ್ರಾರಂಭವಾದುದು ವಾರನ್ ಹೇಸ್ಟಿಂಗ್ಸ್‌ನ ಕಾಲದಲ್ಲಿ. ಈ ಅವಧಿಯಲ್ಲಿ "ಗ್ಲಾಡವಿನ್‌ನು ಅಕಬರನ ಆಸ್ಥಾನದಲ್ಲಿಯ ಸುಪ್ರಸಿದ್ಧ ವಿದ್ವಾಂಸನಾದ ಅಬುಲ್‌ಫಜಲ್‌ನ ಕೃತಿಯನ್ನು ಇಂಗ್ಲೀಷಿನಲ್ಲಿ ಸಂಗ್ರಹರೂಪದಲ್ಲಿ ಪ್ರಕಟಿಸಿದನು. ಹತ್ತು ಸಂಸ್ಕೃತ ಪಂಡಿತರ ಸಹಾಯದಿಂದ ಮನುಸ್ಮೃತಿಯ ಮುಖ್ಯಭಾಗಗಳನ್ನು ಮೊದಲು ಪಾರ್ಸಿ ಭಾಷೆಗೆ, ನಂತರ ಇಂಗ್ಲಿಷ್ ಭಾಷೆಗೆ ಅನುವಾದಿಸಿ ಹಾಲ್‌ಹೆಡ್‌ನೆಂಬುವನು ೧೭೭೬ರಲ್ಲಿ ಪ್ರಕಟಿಸಿದನು. ಎರಡು ವರುಷಗಳ ನಂತರ ಅವನು ಬಂಗಾಲೀ ಭಾಷೆಯ ವ್ಯಾಕರಣವನ್ನು ತಯಾರಿಸಿದನು. ವಿಲ್ಕಿನ್ಸನು ಒಂದು ಶಿಲಾಲೇಖವನ್ನು ಭಾಷಾಂತರಿಸಿದ್ದಲ್ಲದೆ ಭಗವದ್ಗೀತೆಯನ್ನು ಇಂಗ್ಲಿಷಿಗೆ ಅನುವಾದಿಸಿದನು. ಅದು ೧೭೮೫ರಲ್ಲಿ ಲಂಡನ್ನಿನಲ್ಲಿ ಪ್ರಕಟವಾಯಿತು."[೧]

ಇದೇನೇ ನಡೆದರೂ, 'ಭಾರತಶಾಸ್ತ್ರ" (Indology)ದ ಅಧ್ಯಯನಕ್ಕೆ ನಿರ್ದಿಷ್ಟ ಶ್ರೀಕಾರ ಬರೆದವ ಸರ್ ವಿಲಿಯಂ ಜೋನ್ಸ್. ನ್ಯಾಯಾಧೀಶನಾಗಿದ್ದ ಇವನು ೧೭೮೪ರಲ್ಲಿ ಕಲಕತ್ತೆಯಲ್ಲಿ ಸ್ಥಾಪಿಸಿದ 'ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಹೆಸರಿನ ಸಂಸ್ಥೆ, ಭಾರತಶಾಸ್ತ್ರದ ವ್ಯಾಸಂಗಕ್ಕೆ ಪ್ರಾರಂಭದ ಬಿಂದು(Starting point)ವಾಗಿ ಪರಿಣಮಿಸಿತು. ಅಂದಿನಿಂದ ನಮ್ಮ ಅಧ್ಯಯನದಲ್ಲಿ ವಿವರಣಾತ್ಮಕ, ಐತಿಹಾಸಿಕ, ತೌಲನಿಕ ತಂತ್ರಗಳು ತಲೆದೋರಿದವು. ಈ ಸಂಸ್ಥೆ ೧೭೮೬ರಲ್ಲಿ ಪ್ರಾರಂಭಿಸಿದ 'ಏಸಿಯಾಟಿಕ್ ರೀಸರ್ಚ್‌ಸ್' ಹೆಸರಿನ ಸಂಶೋಧನ ಪತ್ರಿಕೆ ಒಂದು ಮಹತ್ವಪೂರ್ಣ

೧. ಸರ್. ವಿಲಿಯಂ ಜೋನ್ಸ್ - ಚಿದಂಬರ ಕುಲಕರ್ಣಿ (ಪು.೮೨-೮೩).

ವಿದ್ವತ್ ಮಾಧ್ಯಮವಾಗಿ ಪರಿಣಮಿಸಿತು. ಈ ಪತ್ರಿಕೆಯ ಮೂರನೆಯ ಸಂಪುಟದಲ್ಲಿ (೧೭೯೩) ವಿಜಯನಗರದ ಅರಸರ ಶಾಸನ ಪ್ರಕಟವಾಗುವ ಮೂಲಕ, ಕರ್ನಾಟಕದ ಸಂಶೋಧನೆಗೆ ನಾಂದಿ ಹಾಡಲ್ಪಟ್ಟಿತು. ಅಂದಿನಿಂದ ಬೆಳೆದುಬಂದ ಕನ್ನಡ ಸಂಶೋಧನೆಗೆ ಇಂದು ಇನ್ನೂರು ವರ್ಷ ತುಂಬಿದವು.

ಆಡಳಿತ ನಿಯಂತ್ರಣ ಮತ್ತು ಕ್ರೈಸ್ತಮತ ಪ್ರಸಾರ–ಇವುಗಳ ಸಾರ್ಥಕತೆಗಾಗಿ ಕನ್ನಡ ಭಾಷೆಯ ತಿಳವಳಿಕೆ, ಶಿಕ್ಷಣಪ್ರಸಾರಗಳು ಅವಶ್ಯವೆನಿಸಿದಾಗ, ಆಂಗ್ಲರು ಮೊದಲು ಭಾಷೆಗೆ ಸಂಬಂಧಿಸಿದ, ಬಹುಶಃ ವ್ಯಾಕರಣ ಇತ್ಯಾದಿ ಪೂರಕ ಗ್ರಂಥಗಳ ರಚನಾ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಮಣ್ಣಿನಲ್ಲಿ ಬಿದ್ದ ಮಾಣಿಕ್ಯದಂತೆ ಕರ್ನಾಟಕದ ಹಾದಿಬೀದಿಗಳಲ್ಲಿ ಬಿದ್ದಿದ್ದ ಪ್ರಾಚೀನ ಅವಶೇಷ, ಶಾಸನ, ಹಸ್ತಪ್ರತಿಗಳಿಂದ ಆಕರ್ಷಿತರಾಗಿ, ಅವುಗಳ ಸಂಗ್ರಹ–ಅಧ್ಯಯನದತ್ತ ಧಾವಿಸಿದರು. ಹೀಗಾಗಿ ಏಕಕಾಲಕ್ಕೆ ಕ್ಷೇತ್ರಕಾರ್ಯ, ಪೂರಕ ಗ್ರಂಥಗಳ ರಚನೆ ನಡೆಯುವುದರ ಮೂಲಕ ಕನ್ನಡದಲ್ಲಿ ಸಂಶೋಧನೆ ಕುಡಿಯಿಟ್ಟಿತು. ಅಂದಿನಿಂದ ಇಂದಿನ ವರೆಗೆ ಬೆಳೆದುಬಂದ ಸಂಶೋಧನೆಯಲ್ಲಿ ೧. ಆಕರಶೋಧ, ೨. ಆಕರಗಳ ರೂಪನಿಷ್ಠಶೋಧ, ೩. ಆಕರಗಳ ಗುಣನಿಷ್ಠಶೋಧ ಎಂದು ಮೂರು ಘಟ್ಟಗಳನ್ನು ಕಲ್ಪಿಸಬಹುದಾಗಿದೆ.

೧. ಆಕರಶೋಧ :

ಕರ್ನಾಟಕಕ್ಕೆ ೨೦೦೦ ವರ್ಷಗಳ ವೈವಿಧ್ಯಪೂರ್ಣ ಸಾಂಸ್ಕೃತಿಕ ಪರಂಪರೆ ಇದ್ದರೂ ಅದರ ಕ್ರಮಬದ್ಧ ಚರಿತ್ರೆಯ ಸ್ವರೂಪ ಅಜ್ಞಾತವಾಗಿದ್ದಿತು. "ಆ್ಯನ್ ಎಸ್ಸೆ ಆನ್ ಕೆನರೀಜ ಲಿಟರೇಚರ್" ಎಂಬ ಲೇಖನದಲ್ಲಿ (೧೮೭೫) ಕಿಟೆಲ್ ಅವರು ಕೊಂಡಗುಳಿ ಕೇಶಿರಾಜ ಮತ್ತು ಶಬ್ದಮಣಿ ದರ್ಪಣದ ಕೇಶಿರಾಜ ಒಬ್ಬನೇ, ಸೂಕ್ತಿಸುಧಾರ್ಣವದ ಮಲ್ಲಿಕಾರ್ಜುನ ಮತ್ತು ಮಲ್ಲಿಕಾರ್ಜುನ ಪಂಡಿತಾರಾಧ್ಯ ಒಬ್ಬನೇ, ಕರ್ನಾಟಕ ಶಬ್ದಮಂಜರಿಯ ವಿರಕ್ತ ತೋಂಟದಾರ್ಯ ಮತ್ತು ತೋಂಟದ ಸಿದ್ಧಲಿಂಗಯತಿ ಅಭಿನ್ನರು, ರುದ್ರಭಟ್ಟನೆಂದರೆ ಕಾಕತೀಯ ಪ್ರತಾಪರುದ್ರ, ನೇಮಿಚಂದ್ರನ ಕಾಲ ಕ್ರಿ. ಶ. ೮೭೩, ಆದಿಪಂಪನು ತಮಿಳು ರಾಮಾಯಣದ ಕಂಬನಾಗಿರುವ ಸಾಧ್ಯತೆಯಿದೆ–ಎಂದು ಮುಂತಾಗಿ ಬರೆದುದನ್ನು ನೋಡಿದರೆ, ನಮ್ಮ ಚಾರಿತ್ರಿಕ ಅವಜ್ಞೆಯ ಪ್ರಮಾಣ ಅರ್ಥವಾಗುತ್ತದೆ. ೧೯೦೭ರಲ್ಲಿ ಪ್ರಕಟವಾದ ಕರ್ನಾಟಕ ಕವಿಚರಿತೆಯಲ್ಲಿಯೇ 'ಪಂಪನು ಪುಲಿಗೆರೆ ಅರಸನಾದ ಅರಿಕೇಸರಿಯ ಆಸ್ಥಾನ ಪಂಡಿತನಾಗಿದ್ದನು' ಎಂದು ಹೇಳಿದುದನ್ನು ನೋಡಿದರೆ ಘಟನೆಗಳ ಸ್ವರೂಪದ ಬಗೆಗೆ ನಮಗಿದ್ದ ಅಜ್ಞಾನದ ಅರಿವಾಗುತ್ತದೆ. ಇದಕ್ಕೆ ಹೆಚ್ಚಿನದಾಗಿ, ಕೆಲವು ಘಟನೆಗಳು ಕಳೆದೇ ಹೋಗಿದ್ದವು. ಗೊತ್ತಿರುವುವೆಲ್ಲ ಕಾಲಕ್ರಮದ ಕೊಂಡಿ ಕಳಚಿ ಬಿದ್ದಿದ್ದವು. ಮತ್ತು ಹಿಂದುಮುಂದಾಗಿದ್ದವು, ಘಟನೆ ಮತ್ತು ಸಂಸ್ಕೃತಿಗಳ ಕ್ರಮಬದ್ಧ ವಿಕಾಸವನ್ನು ಅರ್ಥಮಾಡಿಕೊಳ್ಳುವುದೇ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದ್ದಿತು. ಈ ಎಲ್ಲ ವಿಪರ್ಯಾಸಗಳನ್ನು ಕಾಲದೇಶಾತ್ಮಕವಾಗಿ ಕ್ರಮಬದ್ಧಗೊಳಿಸುವುದು ಅಂದಿನ ಪ್ರಥಮ ಅಗತ್ಯವಾಗಿದ್ದಿತು. ಇದಕ್ಕೋಸುಗ ಅವಶ್ಯವಾಗಿದ್ದ ಆಕರಸಾಮಗ್ರಿಯ ಸಂಗ್ರಹಕಾರ್ಯ ಮೊದಲ ಘಟ್ಟದಲ್ಲಿ ಜರುಗಿತು.

ಕರ್ನಾಟಕಕ್ಕೆ ಸಂಬಂಧಪಟ್ಟ ಆಕರಸಾಮಗ್ರಿ ಅನೇಕ ಪ್ರಕಾರವಾಗಿದೆ, ಅಪಾರ ಸಂಖ್ಯೆಯಲ್ಲಿದೆ. ವಸ್ತು, ಭಾಷೆ, ಕ್ರಿಯೆ, ಜ್ಞಾನ – ಹೀಗೆ ಆಕರ ಸಂಗ್ರಹಕ್ಕೆ ನಾಲ್ಕು ನೆಲೆಗಳಿವೆ ಎಂದು ಕಂಡುಕೊಂಡು,

ಈ ಕ್ಷೇತ್ರದಲ್ಲಿ ದುಡಿಯಲು ಅಂದಿನ ವಿದ್ವಾಂಸರು ಪ್ರಾರಂಭಿಸಿದುದು ಒಂದು ಶುಭಾರಂಭವೆಂದೇ ಹೇಳಬೇಕು. ಹಸ್ತಪ್ರತಿ, ಶಾಸನ, ವಿಗ್ರಹ, ಕಟ್ಟಡ, ನಾಣ್ಯಗಳನ್ನಲ್ಲದೆ ಶಿಲೆ, ಲೋಹ, ಕಾಗದ ಇತ್ಯಾದಿ ಮಾಧ್ಯಮದ ಕಲಾಕೃತಿಗಳನ್ನು, ಅವುಗಳಲ್ಲಿಯೇ ಲಲಿತಕಲೆ, ಪ್ರಯೋಜಕ ಕಲೆಗಳಿಗೆ ಸಂಬಂಧಿಸಿದ ವಸ್ತುಗಳನ್ನು, ವೈಯಕ್ತಿ-ಸಾಂಸ್ಥಿಕ ಮಟ್ಟದಲ್ಲಿ ಸಂಗ್ರಹಿಸುವುದು ನಿಧಾನವಾಗಿಯಾದರೂ ಅಂದು ನಡೆಯಿತು. ಈ ಕೆಲಸ ಮಾಡಿದ ಪಾಶ್ಚಿಮಾತ್ಯರಲ್ಲಿ ಕರ್ನಲ್ ಮೆಕೆಂಝಿ, ವಾಲ್ಟರ್ ಇಲಿಯೆಟ್, ಬಿ.ಎಲ್. ರೈಸ್, ಜೆ.ಎಫ್.ಫ್ಲೀಟ್, ಮೊಗ್ಲಿಂಗ್ ಮತ್ತು ಕಿಟೆಲ್ ಮುಖ್ಯರು. ಇವರನ್ನು ಹೊರಗೆ ಇಟ್ಟರೆ ಈ ಅವಧಿ ಬಂಜರು ಕಾಣುವುದೆನ್ನುವಷ್ಟರ ಮಟ್ಟಿಗೆ ಇವರು ರಾಶಿ ರಾಶಿಯಾಗಿ ಆಕರ ಸಾಮಗ್ರಿಯನ್ನು ಸಂಗ್ರಹಿಸಿದರು. ಕೆಲವೊಮ್ಮೆ ಲೇಖನ-ಗ್ರಂಥರೂಪಗಳಲ್ಲಿ ಆ ಸಂಗ್ರಹವನ್ನು ಪ್ರಕಟಿಸಿದರು. ಇವರಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟ ಆಕರ ಸಾಮಗ್ರಿಗಳ ಸಂಗ್ರಹಕಾರ್ಯವನ್ನು ಕೈಕೊಂಡ ಪ್ರಥಮವ್ಯಕ್ತಿ ೧೭೮೩ರಲ್ಲಿ ಭಾರತಕ್ಕೆ ಬಂದ ಕರ್ನಲ್ ಮೆಕೆಂಝಿ. ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಹುದ್ದೆಗಳನ್ನು ವಹಿಸಿಕೊಂಡು ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿ ದುಡಿದ ಈತನ ಪ್ರಾಚೀನ ವಸ್ತು ಮತ್ತು ಅರ್ವಾಚೀನ ಗ್ರಂಥಸಂಗ್ರಹ ವೈವಿಧ್ಯಮಯವಾಗಿದ್ದಿತು. "ಹದಿನಾಲ್ಕು ಭಾಷೆ, ಹದಿನೇಳು ಲಿಪಿಗಳಲ್ಲಿ ಬರೆಯಲ್ಪಟ್ಟ ಹಲವಾರು ವಿಷಯಗಳ ಗ್ರಂಥ ಮತ್ತು ಶಾಸನಗಳನ್ನಲ್ಲದೆ ವಿಗ್ರಹ, ನಾಣ್ಯ, ಭೂಪಟಗಳನ್ನೊಳಗೊಂಡ ಈತನ ಸಂಗ್ರಹ ಸಂಪತ್ತು ೧೮೨೩-೧೮೨೫ ಮತ್ತು ಇನ್ನೊಮ್ಮೆ ಹೀಗೆ ಮೂರು ಸಲ ಮದ್ರಾಸ್ ಬಂದರದಿಂದ ಇಂಗ್ಲೆಂಡ್‌ಗೆ ಹೋಯಿತು. ಅಳಿದುಳಿದ ಸಂಪತ್ತು ಎಂದರೆ ಬೇರೆ ಬೇರೆ ಭಾಷೆಗೆ ಸೇರಿದ ಸುಮಾರು ೮೦೦ ಗ್ರಂಥಗಳು ೧೮೨೮ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರಯರಿಯನ್ನು ಸೇರಿದವು. ತರುವಾಯ, ೧೮೫೮ರಲ್ಲಿ ಸ್ಥಾಪನೆಗೊಂಡ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ ವಶಕ್ಕೆ ಹೋಯಿತು." ಇವುಗಳಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟ ಆಕರದ ಪ್ರಮಾಣವು ಗಣ್ಯವಾಗಿದ್ದಿತು.

ಮದ್ರಾಸ್ ಸಿವಿಲ್ ಸರ್ವಿಸಿನಲ್ಲಿದ್ದ ಸರ್. ವಾಲ್ಟರ್ ಇಲಿಯಟ್ಟ ಮುಂಬೈ ಕರ್ನಾಟಕ, ನಿಜಾಮ ಕರ್ನಾಟಕ ಪಶ್ಚಿಮ ಭಾಗ, ಹಳೆಯ ಮೈಸೂರು ಪ್ರಾಂತದ ಉತ್ತರ ಭಾಗಗಳಿಂದ ೧೩೦೦ ಶಾಸನಗಳನ್ನು ಸಂಗ್ರಹಿಸಿ, ಇವುಗಳಲ್ಲಿ ೫೯೫ನ್ನು ಆಯ್ದು 'Karnataka Desh Inscriptions' ಹೆಸರಿನ ಕೈಬರಹದ ಪ್ರತಿಗಳನ್ನು ಸಿದ್ಧಪಡಿಸಿದನು. ತನ್ನ ಶಾಸನಾಧ್ಯಯನದ ಸಮಗ್ರ ಕೃಷಿಯನ್ನು "Hindu Inscriptions" ಎಂಬ ಲೇಖನದಲ್ಲಿ (JRAS IV. P.೧-೧೧, ೧೮೩೭) ಪ್ರಕಟಿಸಿದನು.

ಬಿ. ಎಲ್. ರೈಸ್ ಮೈಸೂರಿನ ಪುರಾತತ್ವ ಇಲಾಖೆಯ (೧೮೮೪) ಡೈರೆಕ್ಟರ್ ಆಗಿ ಹಳೆಯ ಮೈಸೂರು ಪ್ರದೇಶದ ೯ ಜಿಲ್ಲೆಗಳ ೮೮೬೯ ಶಾಸನಗಳನ್ನು ಸಂಗ್ರಹಿಸಿ, ಎಪಿಗ್ರಾಫಿಯ ಕರ್ನಾಟಿಕಾ ಹೆಸರಿನಲ್ಲಿ ೧೨ ಸಂಪುಟಗಳನ್ನು ಪ್ರಕಟಿಸಿದನು. ಇವುಗಳ ಮುನ್ನುಡಿಯಲ್ಲಿ ಮತ್ತು ಪ್ರತ್ಯೇಕವಾಗಿ ಇವನು ರಾಜಕೀಯ ಚರಿತ್ರೆಯನ್ನು ಬರೆಯುವ ಕೆಲಸವನ್ನೂ ಮಾಡಿದನು. ಇವನ ಇನ್ನೊಂದು ಸಾಧನೆಯೆಂದರೆ "ಬಿಬ್ಲಿಯಾಥಿಕಾ ಕರ್ನಾಟಿಕ" ಮಾಲೆಯ ಅಡಿಯಲ್ಲಿ ಪ್ರಾಚೀನ ಗ್ರಂಥಗಳಾದ ಪಂಪಭಾರತ, ಆದಿಪುರಾಣ, ಪಂಪರಾಮಾಯಣ, ಕಾವ್ಯಾವಲೋಕನ, ಭಾಷಾಭೂಷಣ, ಕವಿರಾಜಮಾರ್ಗ (ಸಂ. ಕೆ. ಬಿ. ಪಾಠಕ)ಗಳನ್ನು ಪ್ರಕಟಿಸಿದುದು. ಹೀಗೆ ಶಾಸನ, ಸಾಹಿತ್ಯಕೃತಿಗಳ

ಪ್ರಕಟನೆಯಿಂದಾಗಿ ಇವನಿಂದ ಸವ್ಯಸಾಚಿ ಕೊಡುಗೆ ಕನ್ನಡಕ್ಕೆ ಸಂದಿತು. ಈ ಅವಧಿಯಲ್ಲಿ ಈ ಸಂಸ್ಥೆ ಶಾಸನಗಳೊಂದಿಗೆ ಅನೇಕ ಕನ್ನಡ-ಸಂಸ್ಕೃತ ಹಸ್ತಪ್ರತಿಗಳನ್ನೂ ಸಂಗ್ರಹಿಸಿತು. ಮುಂದೆ ಹಸ್ತಪ್ರತಿಗಳನ್ನು ಪ್ರತ್ಯೇಕಿಸಿ, ಅವುಗಳಿಗಾಗಿಯೇ ೧೯೧೧ರಲ್ಲಿ 'ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್' ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯಲ್ಲಿ ೧೯೫೪ರ ವರೆಗೆ ಸಂಗ್ರಹಿಸಿದ್ದ ಹಸ್ತಪ್ರತಿಗಳು "ಕನ್ನಡ ಹಸ್ತಪ್ರತಿಗಳ ವರ್ಣಸಾತ್ಮಕ ಸೂಚಿ" ಹೆಸರಿನ ನಾಲ್ಕು ಸಂಪುಟಗಳಲ್ಲಿ (೧೯೬೨-೬೩) 'ಪ್ರಾಚ್ಯವಿದ್ಯಾ ಸಂಶೋಧನೆ ಮಾಲೆ'ಯಲ್ಲಿ ಪ್ರಕಟವಾದವು. ಆಮೇಲೆ ೧೯೬೬ರಲ್ಲಿ ಇಲ್ಲಿಯ ಕನ್ನಡ ಹಸ್ತಪ್ರತಿಗಳು ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾವಣೆ ಹೊಂದಿದವು.

ಈ ಸಂದರ್ಭದಲ್ಲಿ ಜೆ. ಎಫ್. ಫ್ಲೀಟ್ ಅವರು ಕರ್ನಾಟಕಕ್ಕೆ ಸಂಬಂಧಪಟ್ಟ ಅನೇಕ ಶಾಸನಗಳನ್ನು 'ಇಂಡಿಯನ್ ಆ್ಯಂಟಿಕ್ವೆರಿ' ಪತ್ರಿಕೆಯ ಮೂಲಕ ಪ್ರಕಟಿಸಿದುದಲ್ಲದೆ, ಉತ್ತಮೋತ್ತಮ ಲೇಖನಗಳನ್ನು ಬರೆದು, ಚರಿತ್ರೆಯ ಅಸ್ಪಷ್ಟ ಅಂಶಗಳನ್ನು ಸ್ಪಷ್ಟಪಡಿಸಿದರು. ಇವರ 'ಡೈನಾಸ್ಟೀಸ್ ಆಫ್ ಕೆನರೀಜ ಡಿಸ್ಟ್ರಿಕ್ಟ್ಸ್' ಗ್ರಂಥ ಒಂದು ಕಾಲಕ್ಕೆ ಬೆಲೆಯುಳ್ಳ ಆಕರಗ್ರಂಥವಾಗಿ ಪರಿಣಮಿಸಿದ್ದಿತು. ಲಂಡನ್ನಿನ ಬ್ರಿಟಿಷ್ ಲೈಬ್ರರಿ ರೆಫರೆನ್ಸ್ ಡಿವಿಜನ್‌ದಲ್ಲಿರುವ ಇವರ 'ಕೆನರೀಜ್ ಆ್ಯಂಡ್ ಮರಾಠಿ ಬ್ಯಾಲೆಡ್ಸ್' ಹೆಸರಿನ ಕೈಬರಹ ಪ್ರತಿ ಜನಪದಸಾಹಿತ್ಯ ಸಂಕಲನದ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಕೆಲಸವೆಂದೇ ಹೇಳಬೇಕು.

ಮೊಂಗ್ಲಿಂಗ್ ಅವರ ಕಾಣಿಕೆ ಇನ್ನೊಂದು ಬಗೆಯದು. ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯ ಮೂಲಕ ಕುಮಾರವ್ಯಾಸ ಭಾರತ, ಬಸವಪುರಾಣ, ಚೆನ್ನಬಸವ ಪುರಾಣಗಳಂಥ ಪ್ರಾಚೀನ ಮಹತ್ವದ ಕೃತಿಗಳನ್ನು ಕಲ್ಲಚ್ಚಿನಲ್ಲಿ ಪ್ರಕಟಿಸುವ ಮೂಲಕ ಸಾಹಿತ್ಯಿಕ ಆಕರ ಸಾಮಗ್ರಿಯ ಸಂಪತ್ತನ್ನು ಹೆಚ್ಚಿಸಿದರು.

ರೀವ್, ಗೆರೆಟ್, ಝಿಗ್ಲರ್ ಮೊದಲಾದವರು ಕೋಶ, ವ್ಯಾಕರಣಗಳನ್ನು ರಚಿಸಿ ವಿದ್ವತ್ತಿಗೆ ಇನ್ನೊಂದು ಆಯಾಮವನ್ನು ಜೋಡಿಸಿದರು. ಈ ದಿಶೆಯಲ್ಲಿ ಕಿಟೆಲ್ ಅವರ ಕೋಶರಚನೆ, ಶಬ್ದಮಣಿದರ್ಪಣ ಸಂಪಾದನೆ, ಎ. ಗ್ರಾಮರ್ ಆಫ್ ಕೆನರಿಜ್ ಲ್ಯಾಂಗ್ವೇಜ್ ಹೆಸರಿನ ವ್ಯಾಕರಣ- ಇವು ಉತ್ತಮ ಕೊಡುಗೆಗಳಾಗಿವೆ. ನಾಗವರ್ಮನ ಛಂಧೋಂಬುಧಿಯ ಪರಿಷ್ಕರಣ-ಪ್ರಕಟನೆ ಕಿಟೆಲ್ ಅವರ ಇನ್ನೊಂದು ಕೊಡುಗೆ. ಇವನು 'ಓಲ್ಡ್ ಕೆನರೀಜ್ ಲಿಟರೇಚರ್' ಹೆಸರಿನ ಲೇಖನವನ್ನು ಈ ಮೊದಲು ಬರೆದಿದ್ದರೂ, ಛಂದೋಂಬುಧಿಗೆ ಬರೆದ 'ಆ್ಯನ್ ಎಸ್ಸೆ ಆನ್ ಕೆನರೀಜ್ ಲಿಟರೇಚರ್' (೧೮೭೫) ಕನ್ನಡದ ಪ್ರಥಮ ಸಾಹಿತ್ಯ ಚರಿತ್ರೆ ಎಂಬ ಹೆಸರು ಗಳಿಸಿದೆ. ಇವರ ಬಳಿಕ ಬಿ. ಎಲ್. ರೈಸ್ ಅವರು 'ದಿ ಪೊಯೆಟ್ ಪಂಪ' (೧೮೮೨). 'ಅರ್ಲೀ ಕನ್ನಡ ಆಥರ್ಸ್' (೧೮೮೩), 'ಅರ್ಲೀ ಹಿಸ್ಟರಿ ಆಫ್ ಕನ್ನಡ ಲಿಟರೇಚರ್' (೧೮೯೦) ಹೆಸರಿನಿಂದ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದಂತೆ ಲೇಖನಗಳನ್ನು ಬರೆದಿದ್ದಾರೆ.

ಈ ಘಟ್ಟದಲ್ಲಿ ಆಕರಗಳ ಶೋಧ ಮತ್ತು ಪ್ರಕಟನೆಯೇ ಮುಖ್ಯವಾಗಿ ನಡೆದುದು ಗಮನಿಸತಕ್ಕ ಸಂಗತಿಯಾಗಿದೆ. ಮದ್ರಾಸ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ ಮತ್ತು ಮೈಸೂರು ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ಗಳು ಹಸ್ತಪ್ರತಿಗಳೆಂಬ, ರಾಜ್ಯ-ಕೇಂದ್ರ ಪುರಾತತ್ವ ಇಲಾಖೆಗಳು ಶಾಸನ- ಅವಶೇಷಗಳೆಂಬ ಆಕರಸಂಗ್ರಹದಲ್ಲಿ ತೋರಿಸಿದ ಆಸಕ್ತಿ ಅನನ್ಯವಾಗಿದೆ. ರಾಯಲ್ ಏಶಿಯಾಟಿಕ್

ಸೊಸೈಟಿ ಜರ್ನಲ್‌ಗಳು, ಇಂಡಿಯನ್ ಆ್ಯಂಟಿಕ್ವರಿ, ಎಪಿಗ್ರಾಫಿಯ ಇಂಡಿಕಾ ಇತ್ಯಾದಿ ಪತ್ರಿಕೆಗಳು ಆಕರಗಳನ್ನು ಪ್ರಕಟಿಸುವ, ಅವುಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸುವ ಮೂಲಕ ವಿದ್ವತ್ ಪ್ರಪಂಚದಲ್ಲಿ ಪರಂಪರೆಯ ಪ್ರಜ್ಞೆಯನ್ನು ಜಾಗ್ರವಾಗಿಸುವ ವಾತಾವರಣವನ್ನು ನಿರ್ಮಾಣಮಾಡಿದವು. ಶಾಸನ, ಹಸ್ತಪ್ರತಿ, ದಾಖಲೆ, ವಾಸ್ತು, ನಾಣ್ಯ, ವಿಗ್ರಹ, ವದಂತಿ, ಜನಪದ ಹಾಡು, ಆಚರಣೆ ಇತ್ಯಾದಿಗಳು ಆಕರಸಾಮಗ್ರಿಗಳೆಂಬ ಗ್ರಹಿಕೆ ಗಟ್ಟಿಯಾಗುತ್ತ ಬಂದ ಕಾಲವಿದು. ಈ ಅವಧಿಯಲ್ಲಿ ಸತ್ಯಸಂಗತಿಗಳೊಂದಿಗೆ ಗ್ರಾಮೀಣರು ಹೇಳುವ ಕಟ್ಟುಕತೆಗಳು, ಬ್ರಾಹ್ಮಣ, ವಿದ್ವಾಂಸರು ಬರೆದ ಆರ್ಯೀಕರಣದ ಕಥೆಗಳು ಬೆರೆತುಹೋದವು. ಬ್ರಿಟಿಷರು ಸಂಶೋಧನಾಧಿಕಾರಿಗಳಾಗಿ, ದೇಶಿಯ ವಿದ್ವಾಂಸರು ಸಂಶೋಧನ ಸಹಾಯಕರಾಗಿ ದುಡಿದ ಕಾಲವಿದು.

೨. ಆಕರಗಳ ರೂಪನಿಷ್ಠ ಶೋಧ :

ಬ್ರಿಟಿಷರು ಆಕರಶೋಧದೊಂದಿಗೆ ಅವುಗಳ ಸಹಾಯದಿಂದ, ವಸ್ತು, ಭಾಷೆ, ಕ್ರಿಯೆ, ಜ್ಞಾನ– ಈ ವಿಷಯಗಳನ್ನು ಕುರಿತು ಬಿಡಿಯಾಗಿ ಇಲ್ಲವೆ ಇಡಿಯಾಗಿ ಸಂಶೋಧನ ಕಾರ್ಯವನ್ನೂ ಪ್ರಾರಂಭಿಸಿದ್ದರು. ಅವರ ಪ್ರಭಾವ ಕಡಿಮೆಯಾಗುತ್ತಲೇ ಅವರ ಕೈಕೆಳಗೆ ಅಧಿಕಾರಿಗಳಾಗಿದ್ದ ದೇಶೀಯ ವಿದ್ವಾಂಸರು ಅಧಿಕಾರಕ್ಕೆ ಬಂದು, ಆಕರಗಳನ್ನು ಬಳಿಸಿಕೊಂಡು ಈಗಾಗಲೇ ಪ್ರಾರಂಭವಾಗಿದ್ದ ಸಂಶೋಧನಕಾರ್ಯವನ್ನು ಮುಂದುವರಿಸಿದರು. ಸಂಶೋಧನ ವಿಧಾನ ದೃಷ್ಟಿಯಿಂದ ಈ ಹಿಂದಿನದನ್ನು 'ಆಕರಶೋಧ ಯುಗ' ಎಂದು ಕರೆದರೆ, ಇದನ್ನು 'ಆಕರಗಳಿಂದ ವ್ಯಕ್ತವಾಗುವ ರೂಪನಿಷ್ಠಶೋಧ ಯುಗ' ಎಂದು ಕರೆಯಬಹುದು. ಅಂದರೆ ಅನೇಕ ಮೂಲಗಳಿಂದ ಆಯ್ದ ಆಕರಗಳನ್ನು ಕಣ್ಣೆದುರು ಹರಡಿಕೊಂಡು, ಕಳೆದುಹೋದ ಚರಿತ್ರೆಯನ್ನು ಪ್ರತ್ಯಕ್ಷ–ಶಬ್ದ– ಅನುಮಾನಪ್ರಮಾಣಗಳಿಂಧ ಬಿಡಿಯಾಗಿ ಕಟ್ಟುವ ಮತ್ತು ಕಟ್ಟಿದ ಆ ಚರಿತ್ರೆಯನ್ನು ಇತಿಹಾಸಕ್ರಮದಲ್ಲಿ ಇಡಿಯಾಗಿ ವಿನ್ಯಾಸಗೊಳಿಸುವ ಕೆಲಸ ಮೊದಲಿಗಿಂತ ವೇಗವಾಗಿ, ವ್ಯಾಪಕವಾಗಿ ಈಗ ನಡೆಯಿತು. ರಾಜಕೀಯ ಚರಿತ್ರೆಯನ್ನು ಹಯವದನರಾವ್, ಆರ್. ನರಸಿಂಹಾಚಾರ್; ಸಾಹಿತ್ಯ ಚರಿತ್ರೆಯನ್ನು ಆರ್. ನರಸಿಂಹಾಚಾರ್, ಗೋವಿಂದ ಪೈ, ಎ. ವೆಂಕಟಸುಬ್ಬಯ್ಯ, ಕೆ. ಜಿ. ಕುಂದಣಗಾರ, ಧಾರ್ಮಿಕ ಚರಿತ್ರೆಯನ್ನು ಡಾ. ಎಸ್. ಸಿ. ನಂದೀಮಠ, ಸಾಂಸ್ಕೃತಿಕ ಚರಿತ್ರೆಯನ್ನು ಶಂ.ಬಾ. ಜೋಶಿ, ಭಾಷಾಚರಿತ್ರೆಯನ್ನು ಎ. ಎನ್. ನರಸಿಂಹಯ್ಯ, ಜಿ. ಎಸ್. ಗಾಯಿ, ಕಲೆಗಳ ಚರಿತ್ರೆಯನ್ನು ಎಂ. ಎಚ್. ಕೃಷ್ಣ, ಆರ್. ನರಸಿಂಹಾಚಾರ್ ಅವರು ಪೂರೈಸಿದರು. ಜೊತೆಗೆ ಎ. ಶಾಂತರಾಜಶಾಸ್ತ್ರೀ, ಫ. ಗು. ಹಳಕಟ್ಟಿ, ಎಸ್. ಎಸ್. ಬಸವನಾಳರಂಥವರು ತಲೆಯೆತ್ತಿ ತಮ್ಮ ತಮ್ಮ ಧಾರ್ಮಿಕ ಸಾಹಿತ್ಯದಲ್ಲಿ ಗಣ್ಯ ಕೆಲಸಮಾಡಿದರು. ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳು ಈ ಕಾಲದ ಬೆಲೆಯುಳ್ಳ ಕೊಡುಗೆಗಳೆನಿಸಿದವು.

ಈ ಅವಧಿಯ ಉತ್ತರಾರ್ಧದಲ್ಲಿ ಡಾ. ಡಿ. ಎಲ್. ನರಸಿಂಹಾಚಾರ್ ಅವರು ಪಾಠ ನಿರ್ಣಯ, ಶಬ್ದ ನಿಷ್ಪತ್ತಿಗಳಂಥ ವಿದ್ವತ್ತಿನ ಸೂಕ್ಷ್ಮ ವಿಷಯಗಳ ಬಗ್ಗೆ ಮಾಡಿದ ಕಾರ್ಯ, ಡಾ. ಆರ್. ಸಿ. ಹಿರೇಮಠ ಅವರು ವಚನಸಾಹಿತ್ಯದ ಪರಿಷ್ಕರಣದ ವಿಷಯವಾಗಿ ಮಾಡಿದ ಕಾರ್ಯ ಗಣ್ಯವಾದುದು. ಈ ಸಂದರ್ಭದಲ್ಲಿ ಸಂಸ್ಕೃತಿಯ ರೂಪನಿಷ್ಠಶೋಧದಿಂದ ಗುಣನಿಷ್ಠ ಶೋಧಕ್ಕೆ ಹೊರಳಿದ ಡಾ. ಶಂ. ಬಾ. ಜೋಶಿಯವರು ಹಿಂಡನಗಲಿದ ಗಜದಂತೆ ಪ್ರತ್ಯೇಕವಾಗಿ ಕಾಣುತ್ತಾರೆ. ಇದೇ

ಅವಧಿಯಲ್ಲಿ ಪ್ರವೇಶಿಸಿದ ಭಾಷಾಶಾಸ್ತ್ರದ ಅಧ್ಯಯನ ತೀ. ನಂ. ಶ್ರೀಕಂಠಯ್ಯ, ಆರ್. ಸಿ. ಹಿರೇಮಠರ ಮೂಲಕ ಕರ್ನಾಟಕದಲ್ಲಿ ಬೇರೂರಿತು. ನಮ್ಮ ನಾಡಿನಲ್ಲಿ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯಗಳು ಭಾಷಾಶಾಸ್ತ್ರದಲ್ಲಿ ಎಂ. ಎ. ಮತ್ತು ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಿದ್ದರೂ, ಮಿಕ್ಕ ವಿಶ್ವವಿದ್ಯಾಲಯಗಳು ಅಭ್ಯಾಸಪತ್ರಿಕೆಯಲ್ಲಿ ಅವಕಾಶ ಮಾಡಿಕೊಟ್ಟರೂ ಈ ಕ್ಷೇತ್ರ ನಮ್ಮಲ್ಲಿ ನಿರೀಕ್ಷಿಸಿದಷ್ಟು ಬೆಳೆಯುತ್ತಿಲ್ಲವೆಂದೇ ಹೇಳಬೇಕು. ಹೀಗಿದ್ದೂ ಕೆ. ಕುಶಾಲಪ್ಪಗೌಡ, ವಿಲ್ಯಂ ಮಾಡ್ತ ಮೊದಲಾದವರ ಕಾಣಿಕೆ ಗಮನಾರ್ಹವಾಗಿದೆ. ಭಾಷಾವಿಜ್ಞಾನದ ಬಳಿಕ ಕನ್ನಡದಲ್ಲಿ ಕಣ್ಣು ತೆರೆದ ಶಾಖೆಯೆಂದರೆ ಗ್ರಂಥಸಂಪಾದನೆ. ಕೇವಲ ಗ್ರಂಥಸಂಪಾದನ ಚಟುವಟಿಕೆಯಲ್ಲಿ ತೊಡಗಿದ್ದ ಈ ಕ್ಷೇತ್ರಕ್ಕೆ ಡಾ. ಡಿ. ಎಲ್. ನರಸಿಂಹಾಚಾರ್ ಮತ್ತು ಡಾ. ಕಲಬುರ್ಗಿಯವರು ನೀಡಿದ ಗ್ರಂಥಸಂಪಾದನಶಾಸ್ತ್ರ ಕೃತಿಗಳು ತಮ್ಮ ವಿಭಿನ್ನ ದೃಷ್ಟಿಕೋನದಿಂದಾಗಿ ಗಮನಾರ್ಹವೆನಿಸಿವೆ. ಎಚ್. ದೇವೀರಪ್ಪ ಅವರ ಕನ್ನಡ ಹಸ್ತಪ್ರತಿಗಳ ಇತಿಹಾಸ, ಬಿ. ಎಂ. ಶ್ರೀ. ಪ್ರತಿಷ್ಠಾನದ 'ಮಣಿಹ' ಮತ್ತು 'ಹಸ್ತಪ್ರತಿಶಾಸ್ತ್ರ'ಗಳು ಉತ್ತಮ ಕೊಡುಗೆಯೆನಿಸಿವೆ. ಇತ್ತೀಚೆಗೆ ಡಾ. ಬಿ. ಕೆ. ಹಿರೇಮಠ ಅವರು ಪ್ರಕಟಿಸಿದ "ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ" ಹೆಸರಿನ ಪಿಎಚ್.ಡಿ. ಪ್ರಬಂಧ ಬಹುಶಃ ನಮ್ಮ ರಾಷ್ಟ್ರದಲ್ಲಿಯೇ ಒಂದು ಪ್ರಾಂತದ ಹಸ್ತಪ್ರತಿಗಳನ್ನು ಆಧರಿಸಿ ಮಾಡಿದ ಪ್ರಥಮ ಸಮಗ್ರ ಅಧ್ಯಯನವಾಗಿದೆ. ಒಟ್ಟಿನಲ್ಲಿ ಈ ಅವಧಿಯನ್ನು ವಿಧಾನದೃಷ್ಟಿಯಿಂದ ವಿಶ್ಲೇಷಣಮುಖಿ ಸಂಶೋಧನೆ, ಉದ್ದೇಶ ದೃಷ್ಟಿಯಿಂದ ರೂಪನಿಷ್ಠ ಸಂಶೋಧನೆಯ ಕಾಲವೆಂದು ಹೇಳಬಹುದು.

ಕನ್ನಡದಲ್ಲಿ ಬೆಳೆದುಬರುತ್ತಲಿದ್ದ ಘಟನೆಯ ರೂಪನಿಷ್ಠ ಶೋಧಪರಂಪರೆಯನ್ನು ಮುಂದುವರಿಸಿದರು ಡಾ. ಎಂ. ಚಿದಾನಂದಮೂರ್ತಿ, ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರಿ, ಡಾ. ಎಂ. ಎಂ. ಕಲಬುರ್ಗಿ ಅವರು. ಮೂಲತಃ ಸಂಶೋಧಕರಾದರೂ ಡಾ. ಹಂಪನಾ ಸಾಂಸ್ಥಿಕ ಕಾರ್ಯಕಲಾಪಗಳಲ್ಲಿ ಸಮಯ ವ್ಯಯಿಸಿದ ಕಾರಣ ಅವರ ಹೆಸರು ಸಂಶೋಧನೆಯಿಂದ ಒಂದಿಷ್ಟು ದೂರ ಸರಿದುದು ವಿಷಾದದ ಸಂಗತಿಯಾಗಿದೆ. ಇವರನ್ನು ಬಿಟ್ಟರೆ ಮೇಲೆ ಹೇಳಿದವರಲ್ಲಿ ಡಾ. ಶಾಸ್ತ್ರಿ ಅವರು ಘಟನೆಯ ರೂಪನಿಷ್ಠ ಶೋಧಪರಂಪರೆಯಲ್ಲಿಯೇ ಮುನ್ನಡೆದರೆ, ಡಾ. ಚಿದಾನಂದಮೂರ್ತಿಯವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯ ಮೂಲಕ ಸಂಸ್ಕೃತಿಯ ರೂಪನಿಷ್ಠಶೋಧಕ್ಕೆ ಹೊರಳಿದರು. ಇದೇ ಕಾಲದಲ್ಲಿ ಕಾಣಿಸಿಕೊಂಡ ಡಾ. ಎಂ. ಎಂ. ಕಲಬುರ್ಗಿ ಅವರೂ ಸಾಹಿತ್ಯದೊಂದಿಗೆ ಬೆಳೆಸಿಕೊಂಡ ಶಾಸನಾಧ್ಯಯನದಿಂದಾಗಿ ಸಂಸ್ಕೃತಿಯ ರೂಪನಿಷ್ಠಶೋಧದಲ್ಲಿ ಮುನ್ನಡೆದರು.

ಕನ್ನಡ ಅಧ್ಯಾಪಕರು ಇಂದು ಮಾಡಿದ, ಮಾಡುತ್ತಲಿರುವ ಈ ಸಂಸ್ಕೃತಿಶೋಧದ ಕೆಲಸ ಗಮನಾರ್ಹವಾಗಿದೆ. ಅದರಲ್ಲಿಯೂ ಇತಿಹಾಸ ಪ್ರಾಧ್ಯಾಪಕರು ಶಾಸನಗಳನ್ನು ಬಳಸಿಕೊಂಡು, ರಾಜಕೀಯ ಚಾರಿತ್ರೆಯ ನಿರ್ಮಾಣಕ್ಕೆ ಮಾತ್ರ ಸೀಮಿತವಾಗಿದ್ದ ಸಂದರ್ಭದಲ್ಲಿ, ಕನ್ನಡ ಅಧ್ಯಾಪಕರು ಸಾಂಸ್ಕೃತಿಕ ಅಧ್ಯಯನಕ್ಕೆ ಅವುಗಳನ್ನು ಬಳಸಿಕೊಂಡ ಕಾರಣ, ಒಂದು ವಿಶಿಷ್ಟ ಶೈಕ್ಷಣಿಕ ಶಿಸ್ತು ಇದರಿಂದ ರೂಪಪಡೆದಿದೆ. ಈಗ ಕಾಣಿಸಿಕೊಂಡಿರುವ ಇನ್ನೊಂದು ಧೋರಣೆಯೆಂದರೆ ಅಂತರ್‌ಶಿಸ್ತೀಯ ಅಧ್ಯಯನ. ಕನ್ನಡ ಭಾಷೆ-ಸಾಹಿತ್ಯ-ಶಾಸ್ತ್ರಗಳ ಅಂತರ್‌ಶಿಸ್ತೀಯವಂತೂ ಸರಿಯೇ, ಇವುಗಳ ಜೊತೆ ಶಾಸನ, ಆಮೇಲೆ ಜಾನಪದಗಳೂ ಸೇರಿಕೊಂಡು, ಒಂದು ವಿಷಯದ ಎಲ್ಲ

ಆಯಾಮಗಳನ್ನು ಶೋಧಿಸುವ ಈ ವಿಧಾನದಿಂದಾಗಿ 'ಸಮಗ್ರ ಸಂಶೋಧನೆ' ಕರ್ನಾಟಕದಲ್ಲಿ ಅವತರಿಸುತ್ತಲಿದೆ. ಏನೇ ನಡೆದರೂ ಇದು ಆಕರಗಳಿಂದ ಹೊರಡಿಸಿದ ರೂಪನಿಷ್ಠ ಶೋಧವೇ ಆಗಿದೆ. ಇದರ ಫಲವಾಗಿ ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ (ಪಿ. ವಿ. ನಾರಾಯಣ), ಶಾಸನಗಳಲ್ಲಿ ಕರ್ನಾಟಕದ ವರ್ತಕರು (ಬಿ. ಆರ್. ಹಿರೇಮಠ), ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ (ಚೆನ್ನಕ್ಕ ಎಲಿಗಾರ), ತರ್ದವಾಡಿ ನಾಡು ಒಂದು ಅಧ್ಯಯನ (ಎಸ್. ಕೆ. ಕೊಪ್ಪ), ಕರ್ನಾಟಕದಲ್ಲಿ ಸತಿಪದ್ಧತಿ (ಬಿ. ಎಸ್. ಶೇಠೆ), ಕರ್ನಾಟಕದ ವೀರಗಲ್ಲುಗಳು ಒಂದು ಅಧ್ಯಯನ (ಆರ್. ಶೇಷಶಾಸ್ತ್ರಿ) ಮೊದಲಾದ ಕೃತಿಗಳು ಕನ್ನಡದಲ್ಲಿ ಹುಟ್ಟಿಕೊಂಡಿದೆ.

೩. ಆಕರಗಳ ಗುಣನಿಷ್ಠ ಶೋಧ:

ಇದೇ ಕಾಲದಲ್ಲಿ ಒಂದು ಕೃತಿಯ ಸಾಹಿತ್ಯೇತರ ಅಂಶವನ್ನು ಬಲಪಂಥೀಯವಾಗಿ ವ್ಯಾಖ್ಯಾನಿಸುವ ಗುಣನಿಷ್ಠಶೋಧ ಧೋರಣೆಯೂ ಸಂಶೋಧನೆಯಲ್ಲಿ ಸುಳಿಬಿಚ್ಚಿತು. ಈ ಸಂದರ್ಭದಲ್ಲಿ ವಿಮರ್ಶೆಯೂ, ಒಂದು ಕೃತಿಯ ಸಾಹಿತ್ಯಿಕ ಅಂಶದ ಜೊತೆಗೆ ಸಾಹಿತ್ಯೇತರ ಅಂಶವನ್ನೂ ವ್ಯಾಖ್ಯಾನಿಸುವ ನೆಲೆಗೆ ಹೊರಳಿತು. ವಿಮರ್ಶಕರ ಸಾಹಿತ್ಯೇತರ ಶೋಧ ಮತ್ತು ಸಂಶೋಧಕರ ವ್ಯಾಖ್ಯಾನಾತ್ಮಕ ವಿಮರ್ಶೆ ಕಾರಣವಾಗಿ ಈಗ ವಿಮರ್ಶೆ ಮತ್ತು ಸಂಶೋಧನೆಗಳ ಅಂತರ ಕಡಿಮೆಯಾಗತೊಡಗಿತು. ಇದು ಸಂಶೋಧನೆಯೋ? ವಿಮರ್ಶೆಯೋ? ಎನ್ನುವಂಥ ಮಧ್ಯಮಮಾರ್ಗ ಸಿದ್ಧವಾಯಿತು. ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ. ಎಂ. ಕಲಬುರ್ಗಿಯವರ ಸಂಶೋಧನ ಬರಹಗಳಲ್ಲಿ ಈ ಧೋರಣೆಯನ್ನು ಕಾಣಬಹುದು.

ಈ ಬಲಪಂಥೀಯ ಗುಣನಿಷ್ಠಸಂಶೋಧನೆಯು ಇತ್ತೀಚೆಗೆ ಮಾರ್ಕ್ಸ್‌ವಾದ. ಲೋಹಿಯಾ ವಾದ, ಅಂಬೇಡ್ಕರ ವಾದ ಕಾರಣವಾಗಿ ಎಡಪಂಥೀಯ ಗುಣನಿಷ್ಠ ಸಂಶೋಧನೆಗೆ ಹೊರಳತೊಡಗಿದೆ. ಒಂದು ಕ್ರಿಯೆಯನ್ನು ಯಜಮಾನಪರದೃಷ್ಟಿಯಿಂದ ನೋಡದೆ ಜನಪರದೃಷ್ಟಿಯಿಂದ ಶೋಧಿಸುವ, ಅಂದರೆ ಆ ಕ್ರಿಯೆಯ ಹಿಂದೆ ಸ್ಪಂದಿಸುವ ನೋವು, ಮುಚ್ಚಿಕೊಂಡಿರುವ ಕಪ್ಪು ಎಳೆಗಳನ್ನು ಗುರುತಿಸುವ ಕೆಲಸ ಪ್ರಾರಂಭವಾಗಿದೆ. ಮೇಲೆ ಹೇಳಿದ ಬಲಪಂಥೀಯ ದೃಷ್ಟಿಗೆ ಮುಗಳಿಯವರ "ಕನ್ನಡ ಸಾಹಿತ್ಯ ಚರಿತ್ರೆ", ಇಲ್ಲಿ ಹೇಳುತ್ತಲಿರುವ ಎಡಪಂಥೀಯ ದೃಷ್ಟಿಗೆ ಸಿ. ವೀರಣ್ಣ ಅವರ 'ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ'ಗಳನ್ನು ಉದಾಹರಣೆಯಾಗಿ ಕೊಡಬಹುದು. ಈ ವಿಚಾರಧಾರೆಯ ತೀಕ್ಷ್ಣ ಶೋಧಗಳೆಂದರೆ ಶ್ರೀ ಪೋಲಂಕಿ ರಾಮಮೂರ್ತಿ ಅವರ ಸೀತಾಯಣ, ಶ್ರೀ ಭಗವಾನ್ ಅವರ ಶಂಕರಾಚಾರ್ಯ ಮತ್ತು ಪ್ರತಿಗಾಮಿತನ, ಶ್ರೀ ಪಿ. ಎಸ್. ಪಾಟೀಲ ಅವರ "ಬಸವಾದಿ ಪ್ರಥಮರ ಭಕ್ತಿ ಚಳುವಳಿಯ ಭೌತಿಕವಾದೀ ಅಧ್ಯಯನಗಳು" ಮೊದಲಾದವು.

ವ್ಯಾಖ್ಯಾನಮುಖಿ ವಿಧಾನ ಕಾರಣವಾಗಿ ಇಲ್ಲಿ ಸಂಶೋಧನೆ ವಿಮರ್ಶೆಯ ಹತ್ತಿರ ಬರುತ್ತಲಿರುವುದೂ, ವೈಚಾರಿಕ ಶೋಧಕ್ಕೆ ಅವಕಾಶ ಸಿಗುತ್ತಲಿರುವುದೂ ಇಂದಿನ ಸಂಶೋಧನೆಯ ಮುಖ್ಯ ಲಕ್ಷಣವಾಗಿದೆ.

* * *

ಈ ಅವಧಿಯ ಇನ್ನೆರಡು ಬೆಳವಣಿಗೆಗಳೆಂದರೆ ಜಾನಪದವಿಜ್ಞಾನ ಮತ್ತು ನಾಮವಿಜ್ಞಾನ. ಜಾನಪದ ಅಧ್ಯಯನದ ಇತಿಹಾಸವನ್ನು ಹಲಸಂಗಿ ಗೆಳೆಯರ ಪೂರ್ವಘಟ್ಟ–ಹಲಸಂಗಿ ಗೆಳೆಯರ

ಘಟ್ಟ, ಗದ್ದಿಗಿಮಠ, ಕ. ರಾ. ಕೃ. ಘಟ್ಟ, ಆಧುನಿಕ ಘಟ್ಟವೆಂದು ವಿಂಗಡಿಸಬಹುದಾಗಿದೆ. [illegible] ಮೊದಲಿನ ಮೂರು ಘಟ್ಟಗಳು ಜನಪದ ಸಾಹಿತ್ಯ, ಅದರಲ್ಲಿಯೂ ಪದ್ಯಸಾಹಿತ್ಯದ [illegible] ಪರಿಚಯಗಳನ್ನೊಳಗೊಂಡಿದೆ. ೧೯೬೬ ರಿಂದ 'ಜನಪದ ವಿಜ್ಞಾನ'ದ ಆಧುನಿಕ ಘಟ್ಟ ತೆರೆದುಕೊಂಡಿದೆ. Folklore ಎಂಬುದಕ್ಕೆ 'ಜಾನಪದ' ಎಂಬುದನ್ನು ಸಂವಾದಿಯಾಗಿ ರೂಪಿಸಿ ಈ ಕ್ಷೇತ್ರದ ವೈಜ್ಞಾನಿಕತೆಯನ್ನು ಡಾ. ಹಾ. ಮಾ. ನಾಯಕ ಅವರು ಗುರುತಿಸಿಕೊಟ್ಟರೆ, ತಕ್ಕ ಅವಶ್ಯಕತೆಗಳನ್ನು ಒದಗಿಸಿ ಅದು ಗಟ್ಟಿಯಾಗಿ, ವ್ಯಾಪಕವಾಗಿ ನೆಲೆಯೂರುವಂತೆ ಡಾ. ಜವರೇಗೌಡ ಅವರು ಮಾಡಿದರು. ಭಾರತದಲ್ಲಿಯೇ ಪ್ರಥಮವೆಂಬಂತೆ ಇವರು ಪ್ರಾರಂಭಿಸಿದ ಜಾನಪದ ಎಂ. ಎ. ಕೋರ್ಸ್, ಸ್ಥಾಪಿಸಿದ ಜಾನಪದ ಮ್ಯೂಜಿಯಂ ಗಮನಾರ್ಹವೆನಿಸಿವೆ. ಈ ಹಿನ್ನೆಲೆಯಲ್ಲಿ ಮೂಡಿ ಒಂದ ಡಾ. ಜೀ. ಶಂ. ಪರಮಶಿವಯ್ಯ ಅವರು ಈ ಕ್ಷೇತ್ರದ ಅನೇಕ ಆಯಾಮಗಳಲ್ಲಿ ದುಡಿದು ಅದರ ಪ್ರಸಾರಕಾರ್ಯವನ್ನು ಪೂರೈಸಿದರು. ಇಂದು ಈ ವಲಯದಲ್ಲಿ ಶಾಸ್ತ್ರೀಯ ನೆಲೆಯಿಂದ ಕೆಲಸ ಮಾಡುತ್ತಲಿರುವವರೆಂದರೆ ಡಾ. ಬಿ. ಎ. ವಿವೇಕ ರೈ, ಅಂಬಳಿಕೆ ಹಿರಿಯಣ್ಣ ಮತ್ತು ವೀರಣ್ಣ ದಂಡೆ. ಮಿಕ್ಕವರು ಏನೇ ಮಾಡಿದರೂ ಅದು ಸಂಗ್ರಹ, ವಿವರಣರೂಪದ ಪ್ರಯತ್ನವೆನಿಸಿದೆ. ಮಂಗಳೂರಿನ ಗೋವಿಂದ ಪೈ ಸ್ಮಾರಕ ಸಂಶೋಧನ ಸಂಸ್ಥೆ, ಬೆಂಗಳೂರು ನೆರೆಯ ರಾಮನಗರದ ಕರ್ನಾಟಕ ಜಾನಪದ ಟ್ರಸ್ಟ್‌ಗಳು ಈ ಕ್ಷೇತ್ರದಲ್ಲಿ ಪರಿವೀಕ್ಷಣಾತ್ಮಕ, ಪ್ರಸಾರಾತ್ಮಕ ಕೆಲಸಗಳಲ್ಲಿ ನಿರತವಾಗಿದೆ. ಹೀಗಿದ್ದೂ ಈ ಕ್ಷೇತ್ರ ಎರವಲು ವಿಚಾರದಲ್ಲಿ ಬೆಳೆಯುತ್ತಲಿದೆ ಎಂಬ ಅಪವಾದದಿಂದ ಮುಕ್ತವಾಗಬೇಕಾಗಿದೆ.

ನಾಮವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಡಾ. ಶಂಬಾ. ಜೋಶಿಯವರು ಬಹಳ ವರ್ಷಗಳ ಹಿಂದೆಯೇ 'ಎಡೆಗಳು ಹೇಳುವ ಕನ್ನಾಡ ಕಥೆ' ಗ್ರಂಥವನ್ನು ಪ್ರಕಟಿಸಿದ್ದರೂ, ಡಾ. ಆರ್. ಕೆ. ಮಣಿಪಾಲ್, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ. ಎಂ. ಕಲಬುರ್ಗಿಯವರು ಆಧುನಿಕ ದೃಷ್ಟಿಕೋನದಿಂದ ಅಭ್ಯಸಿಸಿ ಇದಕ್ಕೆ ವೈಜ್ಞಾನಿಕ ಸ್ವರೂಪ ಕೊಡುವಲ್ಲಿ ಸಫಲರಾಗಿದ್ದಾರೆ. ಮೈಸೂರಿನ 'ಪ್ಲೇಸ್ ನೇಮ ಸೊಸೈಟಿ ಆಫ್ ಇಂಡಿಯಾ' ಡಾ. ದೇ. ಜ. ಗೌ. ಅವರ ನೇತೃತ್ವದಲ್ಲಿ ಈ ಅಧ್ಯಯನಕ್ಕೆ ಸ್ಥಿರವಾದ ಅಸ್ತಿತ್ವ ಕೊಡುವ ಪ್ರಯತ್ನಮಾಡುತ್ತಲಿದೆ. ಇವುಗಳಲ್ಲದೆ ನಿಘಂಟುಶಾಸ್ತ್ರ, ಭಾಷಾಂತರಶಾಸ್ತ್ರ, ಶೈಲಿಶಾಸ್ತ್ರ, ರಂಗಕಲೆ ಮೊದಲಾದ ಕ್ಷೇತ್ರಗಳನ್ನು ಇನ್ನೂ ಗಾಢವಾಗಿ ಅಧ್ಯಯನಕ್ಕೆ, ಸಂಶೋಧನೆಗೆ ಅಳವಡಿಸಿಕೊಳ್ಳಬೇಕಾಗಿದೆ.

ಹೀಗೆ ಶಾಖೋಪಶಾಖೆಯಾಗಿ ಬೆಳೆಯುತ್ತಲಿದ್ದರೂ ಆಕರಗಳ ಶೋಧ ಮತ್ತು ಸಂಶೋಧನ ಮಾರ್ಗಗಳಲ್ಲಿ ಇದನ್ನು ಮುಂದುವರಿಸಲು ಸಂಶೋಧಕರ ಒಂದು ದೊಡ್ಡ ಪಡೆಯೇ ಸಿದ್ಧವಾಗಬೇಕಾಗಿದೆ. ಈಗಾಗಲೇ ಬಿ. ವಿ. ಮಲ್ಲಾಪುರ, ಎಂ. ಬಿ. ನೇಗಿಹಾಳ, ಸೀತಾರಾಮ ಜಾಗೀರದಾರ, ಆರ್. ಶೇಷಶಾಸ್ತ್ರಿ, ಬಿ. ಆರ್. ಹಿರೇಮಠ, ವ್ಹಿ. ಬಿ. ರಾಜೂರ, ಎನ್. ಎಸ್. ತಾರಾನಾಥ, ಬಿ. ವ್ಹಿ. ಶಿರೂರ, ಎಸ್. ವಿದ್ಯಾಶಂಕರ, ಬಸವರಾಜ ಕಲ್ಗುಡಿ, ಬಿ. ರಾಜಶೇಖರಪ್ಪ, ಎಸ್. ಶಿವಣ್ಣ, ಚೆನ್ನಕ್ಕ ಎಲಿಗಾರ, ಹನುಮಾಕ್ಷಿ ಗೋಗಿ ಮೊದಲಾದ ವಿದ್ವಾಂಸರು ಕನ್ನಡದ ನೆಲೆಯಿಂದ ಕರ್ನಾಟಕದ ಸಂಶೋಧನೆಯನ್ನು ಮುನ್ನಡೆಸುತ್ತಲಿದ್ದಾರೆ. ಇದಲ್ಲದೆ ಇತಿಹಾಸ, ಜನಪದ, ಭಾಷಾಶಾಸ್ತ್ರ, ಮಾನವಶಾಸ್ತ್ರ ನೆಲೆಗಳಿಂದಲೂ ಅನೇಕ ಜನ ವಿದ್ವಾಂಸರು ಈ ಅಧ್ಯಯನಕ್ಕೆ

ವಿಸ್ತಾರ-ವೈವಿಧ್ಯಗಳನ್ನು ಒದಗಿಸುತ್ತಲಿದ್ದಾರೆ. ಈ ಅಂತರ್‌ಸಂಬಂಧೀಯತೆಯಿಂದಾಗಿ ಕನ್ನಡ ಸಂಶೋಧನೆಗೆ ಸಂಕೀರ್ಣತೆ ಮತ್ತು ಆಳಗಳು ಪ್ರಾಪ್ತವಾಗುತ್ತಲಿವೆ.

ಕನ್ನಡ ಸಂಶೋಧನೆಯ ಭವಿಷ್ಯ

ಕನ್ನಡ ಸಂಶೋಧನೆಯು ಕ್ರಮವಾಗಿ ಆಕರಶೋಧ, ಆಕರಗಳ ರೂಪನಿಷ್ಠಶೋಧ ಮತ್ತು ಆಕರಗಳ ಗುಣನಿಷ್ಠಶೋಧ ಮಾರ್ಗಗಳನ್ನು ಕ್ರಮಿಸುತ್ತ ಸಾಗಿಬಂದಿದೆ. ಈ ಸಂಶೋಧನೆಗೆ ಆಕರಶೋಧ ಮುಖ್ಯ ಮತ್ತು ಮೂಲಧನವೆನಿಸಿದೆ. ಹೀಗಾಗಿ ಅಪೂರ್ಣ ಸ್ಥಿತಿಯಲ್ಲಿ ಉಳಿದು ಬಿಟ್ಟಿರುವ ಆಕರಗಳ ಶೋಧ, ಪ್ರಕಟನೆ ಇನ್ನೂ ವೇಗವಾಗಿ ಕರ್ನಾಟಕದಲ್ಲಿ ಜರುಗಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು, ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಗಳಂಥ ಸರಕಾರಿ ಸಂಸ್ಥೆಗಳು, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಗಳಂತಹ ಸಾರ್ವಜನಿಕ ಸಂಸ್ಥೆಗಳು, ಮೈಸೂರು, ಕರ್ನಾಟಕ, ಬೆಂಗಳೂರು, ಮಂಗಳೂರು, ಗುಲಬರ್ಗಾ, ಕುವೆಂಪು ವಿಶ್ವವಿದ್ಯಾಲಯಗಳು, ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯ ಇವೆಲ್ಲ ಕರ್ನಾಟಕಕ್ಕೆ ಸಂಬಂಧಪಟ್ಟ ಆಕರಗಳ ರಕ್ಷಣೆ, ಸಂಗ್ರಹ, ಪರಿಶೀಲನೆ, ಪ್ರಕಟನೆಗಳಿಗೆ ಆದ್ಯಗಮನ ಕೊಡಬೇಕಾಗಿದೆ. ಈ ದಿಶೆಯಲ್ಲಿ ಗೆಜೆಟಿಯರ್ ಮಾಡುತ್ತಿರುವ ಕೆಲಸಕ್ಕೆ ಭಿನ್ನವಾಗಿ ಒಂದು ತಾಲೂಕಿಗೆ ಒಂದರಂತೆ ೧೭೫ ಸಂಪುಟಗಳಲ್ಲಿ ಗ್ರಾಮಚರಿತ್ರಕೋಶಗಳನ್ನು ಸಿದ್ಧಪಡಿಸಬೇಕಾಗಿದೆ. ಅಮುಖ್ಯ ಸಾಹಿತ್ಯ ಕೃತಿಗಳು, ಗೀತಸಾಹಿತ್ಯ ಸಂಪುಟಗಳು, ಟೀಕೆ-ವ್ಯಾಖ್ಯಾನಸಾಹಿತ್ಯ ಸಂಪುಟಗಳು, ಸಾಹಿತ್ಯೇತರ ಶಾಸ್ತ್ರ ಸಂಪುಟಗಳು- ಈ ಹೆಸರುಗಳಲ್ಲಿ ಪ್ರಾಚೀನ ಕನ್ನಡಸಾಹಿತ್ಯ ಪ್ರಕಟವಾಗಬೇಕಾಗಿದೆ. ಕರ್ನಾಟಕದ ಜನಾಂಗಗಳ ಕೋಶ, ಉಪಭಾಷಾ ಪರಿವೀಕ್ಷಣೆ, ಗ್ರಾಮೀಣ ಪದಕೋಶ, ಶಾಸನ-ಹಸ್ತಪ್ರತಿ-ದಾಖಲೆ-ಜನಪದಸಾಹಿತ್ಯ ಇವುಗಳ ಪರಿವೀಕ್ಷಣೆ, ವಾಸ್ತು-ವಿಗ್ರಹ-ಜನಪದ ಸಾಮಗ್ರಿಗಳ ಕ್ಷೇತ್ರಕಾರ್ಯ ಇತ್ಯಾದಿ ಪ್ರಾಥಮಿಕ ಕೆಲಸಗಳು ಕೈಗೂಡದಿದ್ದರೆ ಸಂಶೋಧನೆ ಮುಂದುವರಿಯುವುದೇ ಇಲ್ಲ, ಹೀಗಾಗಿ ಆಕರಶೋಧ ಬೃಹತ್‌ಪ್ರಮಾಣದಲ್ಲಿ ತಕ್ಷಣ ಪ್ರಾರಂಭವಾಗುವುದು ಅವಶ್ಯವಿದೆ.

ಈ ಆಕರಗಳನ್ನು ಬಳಸಿಕೊಂಡು ಮಾಡಿದ ಘಟನಾಶೋಧ ಕರ್ನಾಟಕದಲ್ಲಿ ಈವರೆಗೆ ತಕ್ಕಮಟ್ಟಿಗೆ ಎಲ್ಲ ಕ್ಷೇತ್ರಗಳಲ್ಲಿ ನಡೆದಿದ್ದರೂ, ಪ್ರಮುಖ ವಿಷಯಗಳಿಗೆ ಮಾತ್ರ ಒತ್ತುಕೊಟ್ಟು, ಗೌಣ ವಿಷಯಗಳನ್ನು ಕಡೆಗಣಿಸಿದ್ದೇವೆ. ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ದೊಡ್ಡ ರಾಜಮನೆತನಗಳ ಚರಿತ್ರೆ ಕೆಲಮಟ್ಟಿಗೆ ಬೆಳಕು ಕಂಡಿದೆ. ಸಣ್ಣಪುಟ್ಟ ಮನೆತನಗಳ ಚರಿತ್ರೆಯ ಬರವಣಿಗೆ ತುಂಬ ಉಪೇಕ್ಷೆಗೆ ಗುರಿಯಾಗಿದೆ. ಜೈನ, ವೀರಶೈವ, ವೈದಿಕಧರ್ಮಗಳ ಅಭ್ಯಾಸಕ್ಕೆ ಗಮನಕೊಟ್ಟು ಸಣ್ಣ ಪಂಥಗಳಾದ ಸೌರ, ಗಾಣಪತ್ಯ, ಕೌಳ, ಕಾಪಾಲಿಕ, ನಾಥ ಮೊದಲಾದವುಗಳನ್ನು ಅಲಕ್ಷಿಸಿದ್ದೇವೆ. ಸಾಹಿತ್ಯಕ್ಕೆ ಬಂದರೂ ಇದೇ ಸ್ಥಿತಿ ನಿರ್ಮಾಣವಾಗಿದೆ. ಇಂದು ಅನೇಕ ಗೌಣ ಸಾಹಿತ್ಯಪ್ರಕಾರಗಳ, ಗೌಣ ಕವಿಗಳ ಬಗ್ಗೆ ಸಂಶೋಧನೆಯನ್ನು ಕೈಗೆತ್ತಿಕೊಳ್ಳುವುದು ಅವಶ್ಯವಿದೆ. ದೊಡ್ಡ ಸಾಹಿತ್ಯ ಪ್ರಕಾರ, ಸಣ್ಣ ಕವಿಗಳು ಪರಂಪರೆಯ ಮುಂದುವರಿಕೆಗೆ ಕೊಂಡಿಯಾಗಿರುತ್ತಾರೆಂಬುದನ್ನು ಮರೆಯಬಾರದು. ರಾಜಪ್ರಭುತ್ವದ ಕಾಲ ಮುಗಿದು ಪ್ರಜಾಪ್ರಭುತ್ವದ ಕಾಲ ತೆರೆದುಕೊಂಡಿರುವ

ಇಂದಿನ ಸಂದರ್ಭದಲ್ಲಿ ಈ ಮತ್ತು ಇಂಥ ಗೌಣ ಸಂಗತಿಗಳ ವಿಷಯವಾಗಿಯೂ ಅಧ್ಯಯನ ನಡೆದರೆ ಸಂಶೋಧನೆಗೆ ಸಮಗ್ರತೆ ಪ್ರಾಪ್ತವಾಗುತ್ತದೆ.

ಈ ಸಂದರ್ಭದಲ್ಲಿ ಸಂಶೋಧನೆಯ ವಿಧಾನದಲ್ಲಿಯೂ ಹೊಸ ದೃಷ್ಟಿಕೋನ ಮೂಡಬೇಕಾಗಿದೆ. ಘಟನೆ ಮತ್ತು ಸಂಸ್ಕೃತಿಗಳ ರೂಪನಿಷ್ಠ ಸಂಶೋಧನೆ ಇಂದು ಗುಣನಿಷ್ಠ ಸಂಶೋಧನೆಗೆ ಹೊರಳಿದೆ. ಇದು ವ್ಯಾಖ್ಯಾನಮುಖಿ ವಿಧಾನದಿಂದ ಮಾತ್ರ ಸಾಧ್ಯ. ಇಲ್ಲಿ ನಡೆಯುವುದು ವಿಷಯದ ರೂಪಶೋಧವಲ್ಲ, ಅರ್ಥಶೋಧ. ಇದು ಘಟನೆ, ಸಂಸ್ಕೃತಿ (ಸಂಪ್ರದಾಯ)ಗಳ ಹಿಂದಿನ ಕಾರಣಗಳನ್ನು, ಅವುಗಳ ಪ್ರಭಾವಗಳನ್ನು ಕಂಡುಹಿಡಿಯುವ ಶೋಧವಾಗಿದೆ. ಒಂದು ಅರ್ಥದಲ್ಲಿ ಗತಕಾಲದ ಸ್ಥೂಲತನು, ಸೂಕ್ಷ್ಮತನುಗಳಿಂತ ಕಾರಣತನುವಿನ ಶೋಧವಾಗಿದೆ. ಈ ಬಗೆಯ ಶೋಧಕ್ಕೆ ಜನಪರಧೋರಣೆಯನ್ನು ಅನುಸರಿಸಿದರೆ ಅನೇಕ ಬಿಡಿ ಘಟನೆಗಳನ್ನಲ್ಲ, ಇಡಿ ಸಂಸ್ಕೃತಿಯ ಮನಸ್ಸನ್ನೇ ಚಿತ್ರಿಸಬಹುದಾಗಿದೆ. ಒಂದು ಎಚ್ಚರ: ಈ ವ್ಯಾಖ್ಯಾನಮುಖಿ ಸಂಶೋಧನೆ ಆಧಾರಗಳನ್ನು ಆಶ್ರಯಿಸಿದರೂ ವ್ಯಾಖ್ಯಾನಮಾಡುವವನ ಅಭಿಪ್ರಾಯವೂ ಇಲ್ಲಿ ಸೇರಿಕೊಳ್ಳುವುದರಿಂದ ಸತ್ಯ ವಿಪರ್ಯಾಸಗೊಳ್ಳುವ ಸಂಭವವೂ ಉಂಟು, ವಿವಾದಾತ್ಮಕವಾಗುವುದೂ ಉಂಟು. ಕಾರಣ, ಈ ಬಗೆಯ ಸಂಶೋಧಕ ಮೈತುಂಬ ಕಣ್ಣಾಗಿ ಕೆಲಸ ಮಾಡಬೇಕಾಗುತ್ತದೆ. ಶಂ. ಬಾ. ಜೋಶಿಯವರು ತಮ್ಮ ಉತ್ತರಾರ್ಧ ಜೀವನದಲ್ಲಿ ಸಂಸ್ಕೃತಿಯ ಗುಣನಿಷ್ಠಶೋಧಕ್ಕೆ ಹೊರಟು, ಜನಾಂಗ, ಐತಿಹ್ಯ, ಪುರಾಣ, ಭಾಷಿಕ ಸಂಕೇತಗಳನ್ನು ಆಧಾರಸಾಮಗ್ರಿಯಾಗಿ ಬಳಸಿಕೊಂಡು ಸಾಮಾಜಿಕ ಸಂಸ್ಕೃತಿ, ಅದರ ಆಚೆಗಿನ ಮಾನವಸಂಸ್ಕೃತಿಯ ಶೋಧಕಾರ್ಯವನ್ನು ಪೂರೈಸಿದ್ದಾರೆ. ಮಿಕ್ಕವರು ಕರ್ನಾಟಕ ವ್ಯಾಪ್ತಿಯಲ್ಲಿ ಘಟನಾಶೋಧ, ಸಂಸ್ಕೃತಿ ಶೋಧಗಳಲ್ಲಿ ದುಡಿಯುತ್ತಲಿದ್ದಾರೆ. ಇವರೂ ಶಂ. ಬಾ. ಅವರಂತೆ ಸೀಮೋಲ್ಲಂಘನ ಮಾಡುವುದು ಅವಶ್ಯವಿದೆ. ಇದು ಸಾಲದೆಂಬಂತೆ, ಕನ್ನಡದ ಪ್ರಜ್ಞೆ ಜಾಗೃತವಾಗುತ್ತಲಿರುವ ಇಂದಿನ ಸಂದರ್ಭದಲ್ಲಿ ನಮ್ಮ ಪರಂಪರೆಯನ್ನು ಕುರಿತ ಸಂಶೋಧನೆ ಎಲ್ಲ ನೆಲೆಗಳಲ್ಲಿ ನಡೆಯಬೇಕಾಗಿದೆ. 'ಕರ್ನಾಟಕಾಲಜಿ' ಶಬ್ದಕ್ಕೆ ಅರ್ಥ ತುಂಬುವಂತೆ ಬಹು ದೊಡ್ಡ ಆರ್ಥಿಕ ಸಹಾಯದಿಂದ ಬಹುಮುಖಿ ಸಂಶೋಧನೆ ಆರಂಭವಾಗಬೇಕಾಗಿದೆ.

ಈ ಬಹುಮುಖಿ ಅಧ್ಯಯನದಂತೆ ಈಗಾಗಲೇ ಆರಂಭವಾಗಿರುವ ಬಹುಶಿಸ್ತೀಯ ಅಧ್ಯಯನದ ಕಡೆಗೆ ವಿದ್ವಾಂಸರು ಹೆಚ್ಚು ಗಮನಕೊಡುವುದು ಅವಶ್ಯವಿದೆ. ಸಂಶೋಧನೆಯ ವಿಷಯಗಳು ಬಾಹ್ಯದಲ್ಲಿ ಬೇರೆ ಬೇರೆ ಕಂಡರೂ ಆಂತರ್ಯದಲ್ಲಿ ಪರಸ್ಪರ ಸಂಬಂಧ ಹೊಂದಿರುತ್ತವೆ. ಸಂಶೋಧನೆಗೆ ಮುನ್ನ ಆ ವಿಷಯಕ್ಕೆ ಸಂಬಂಧಪಟ್ಟವು ಯಾವ ಯಾವ ಅಂಶಗಳೆಂಬುದನ್ನು ಪಟ್ಟಿಮಾಡಿ, ಅವೆಲ್ಲ ಅಂಶಗಳನ್ನು ಬಿಚ್ಚಿನೋಡುವ, ಅವುಗಳ ಅಂತರ್‌ಸಂಬಂಧೀಯತೆಯನ್ನು ಕಂಡುಹಿಡಿಯುವ ಕೆಲಸ ಇಲ್ಲಿ ನಡೆಯಬೇಕಾಗಿದೆ. ಈ ಬಗೆಯ ಸಂಶೋಧನೆಯ ಮುನ್ನಡೆಗಾಗಿ ವಿದ್ವಾಂಸ ಏಕಕಾಲಕ್ಕೆ ಅನೇಕ ವಿಷಯಗಳ ಅಧ್ಯಯನದ ಆಸಕ್ತಿ ಬೆಳೆಸಿಕೊಂಡಿರಬೇಕಾಗುತ್ತದೆ. ಭಾಷೆ, ಸಾಹಿತ್ಯ, ಶಾಸ್ತ್ರಗಳನ್ನಲ್ಲದೆ ಶಾಸನ, ಜಾನಪದ, ಸಮಾಜವಿಜ್ಞಾನ, ಧರ್ಮ ಒಂದೇ ಎರಡೆ, ಏನೆಲ್ಲ ಕ್ಷೇತ್ರಗಳ ರೂಪಾತ್ಮಕ ಮತ್ತು ಗುಣಾತ್ಮಕ ಅಧ್ಯಯನ ಅಧಿಕವಾದಷ್ಟೂ ಅವನ ಸಂಶೋಧನೆಗೆ ಸಮಗ್ರತೆ ಪ್ರಾಪ್ತವಾಗುತ್ತದೆ. ಕನ್ನಡ ಸಂಶೋಧನೆ ಮೇಲೆ ಹೇಳಿದ ವ್ಯಾಖ್ಯಾನಾತ್ಮಕದಂತೆ ಹೀಗೆ ಅಂತರ್‌ಶಿಸ್ತೀಯಾತ್ಮಕವೂ ಆಗಬೇಕಾಗಿದೆ.

ಇನ್ನೊಂದು ವಿಷಯವೆಂದರೆ, ಹೊಸ ಶೋಧ ಮಾಡುವಷ್ಟೆ ಮುಖ್ಯವಾದುದು. ಆಕರಗಳು ಸಿಗುತ್ತ ಹೋದಂತೆ ಹಳೆಯ ಶೋಧಗಳನ್ನು ತಿದ್ದುತ್ತ ಹೋಗುವುದು. ಹೆಬ್ಬೂರು ಶಾಸನದಿಂದಾಗಿ ದುರ್ವಿನೀತನು ಪೂಜ್ಯಪಾದನ ಶಿಷ್ಯನೆಂದು ಸ್ಥಾಪಿತವಾಗಿದ್ದ ಶೋಧ, ಗುಮ್ಮರೆಡ್ಡಿಪುರ ಶಾಸನಶೋಧದಿಂದ ಬಿದ್ದುಹೋದರೂ ಹಳೆಯ ಅಭಿಪ್ರಾಯವನ್ನೇ ನಾವು ಪುನರುಚ್ಚರಿಸುತ್ತಲಿದ್ದೇವೆ. ಕರ್ನಾಟಕ ಕವಿಚರಿತೆ ಈ ದೃಷ್ಟಿಯಿಂದ ಬಹಳಷ್ಟು ತಿದ್ದುಪಡಿಗೆ ಗುರಿಯಾಗಬೇಕಾಗಿದೆ. ಈ ಹಿಂದೆ ಸಂಶೋಧನೆಯ ಹೊಸದರಲ್ಲಿ ಪ್ರತಿಷ್ಠಿತರ ಪುರಾಣಗಳನ್ನೂ, ಸಾಮಾನ್ಯರ ಐತಿಹ್ಯಗಳನ್ನೂ ಆಕರಸಾಮಗ್ರಿಯಾಗಿ ಕಣ್ಣುಮುಚ್ಚಿ ಬಳಸಿಕೊಳ್ಳುವ ಎರಡು ತಪ್ಪುಗಳು ಘಟಿಸಿದವು. ಮೈಲಾರನನ್ನು ಕುರಿತು ಮಲ್ಹಾರಿಮಾರ್ತಾಂಡನ ಕಥೆ, ಶ್ರವಣಬೆಳ್ಗೊಳದ ಗುಳ್ಳೆಕಾಯಿ ಅಜ್ಜಿ ಕಥೆಗಳು ಇದಕ್ಕೆ ಉದಾಹರಣೆಯೆನಿಸಿವೆ. ಎರಡನೆಯದಾಗಿ ದುರುದ್ದೇಶಪೂರ್ವಕ ಸೃಷ್ಟಿಯಾದ ಕೃತಕ ಆಕರಗಳನ್ನು ಸತ್ಯವೆಂದು ನಂಬಿ ಬಳಸಿಕೊಳ್ಳಲಾಯಿತು. ಬಸವಣ್ಣನವರ ಚರಿತ್ರೆಗೆ ಈ ಹಿಂದೆ ಬಳಸಿಕೊಳ್ಳಲಾದ ಬಿಜ್ಜಳರಾಯ ಪುರಾಣವನ್ನು ಇಲ್ಲಿ ಉದಾಹರಿಸಬಹುದು. ಇನ್ನೂ ಒಂದು ದೋಷವೆಂದರೆ, ಸ್ಥಳೀಯ ಸಂಸ್ಕೃತಿಯನ್ನು ಸ್ವತಂತ್ರವಾಗಿಟ್ಟು ಅಭ್ಯಸಿಸದೆ, ಕೌಟಿಲ್ಯನ ಅರ್ಥಶಾಸ್ತ್ರಗಳಿಂದ ಪ್ರಾಚೀನ ಸಂಸ್ಕೃತ ಕೃತಿಗಳ ಮತ್ತು ಆಧುನಿಕ ಆಂಗ್ಲಪದ್ಧತಿಯ ಆವರಣದಲ್ಲಿಟ್ಟು ಅಭ್ಯಸಿಸಿದ ಕಾರಣ, ಅನೇಕ ತಪ್ಪುಗಳು ನುಸುಳಿದವು. ಉದಾ: ನಮ್ಮ ಶಾಸನಗಳಲ್ಲಿ ಬರುವ ಸಳ್ಬಂಗ ಪದವನ್ನು ಷಡ್ಭಾಗ ರೂಪದ ಸುಂಕವೆಂದು ಅರ್ಥ ಹೆಚ್ಚಿದುದು ಮತ್ತು ಸಾಮಂತ, ಮಾಂಡಲಿಕ ಪದಗಳಿಗೆ Chieftain ಎಂಬ ಒಂದೇ ಇಂಗ್ಲಿಷ್ ಶಬ್ದ ಬಳಿಸಿದುದು. ಇಂಥ ಆರ್ಯವಾದರಿ ಮತ್ತು ಆಂಗ್ಲಮಾದರಿಗಳಿಂದಾಗಿ ನಮ್ಮ ಇತಿಹಾಸದಲ್ಲಿ ಅಸತ್ಯದ ಅಂಶಗಳು ಸೇರಿಕೊಂಡವು. ಇವೆಲ್ಲವನ್ನು ಹೊರಹಾಕಿ ಇತಿಹಾಸವನ್ನು ಶುದ್ಧೀಕರಿಸುವ ಕಾರ್ಯ ನಡೆಯಬೇಕಾಗಿದೆ.

ಈಗ ಸಂಶೋಧನಕ್ಷೇತ್ರ, ಕೇವಲ ವಿದ್ವಾಂಸರಿಗೆ ಸಂಬಂಧಪಟ್ಟ ಚಟುವಟಿಕೆ ಎಂಬ ಹಣೆಪಟ್ಟಿ ಹಚ್ಚಿಕೊಂಡಿದೆ. ವಿದ್ವಾಂಸರಿಂದ ವಿದ್ವಾಂಸರಿಗೆ ಅಥವಾ ಪುಸ್ತಕದಿಂದ ಪುಸ್ತಕಕ್ಕೆ ಜಾರುತ್ತ ನಡೆದಿರುವ ಅವರ ಸ್ಥಿತಿ ಆಸ್ಥಾನವಿದ್ವಾಂಸರ ಮಧ್ಯದ ಚಂಪೂವಿನಂತಾಗಿದೆ. ಮುಕ್ತಸಂವಹನಕ್ಕೆ ಮುಖಕೊಡದ ಕಾರಣ ಅದು ಹೊಸ ಹೊಸ ಸಾಧ್ಯತೆಗಳನ್ನು ಬಿಚ್ಚಿ ತೋರಿಸುತ್ತಿಲ್ಲ. ಇದಕ್ಕೆ ಬದಲು "ಸಾಮಾಜಿಕ ಬದಲಾವಣೆಯಲ್ಲಿ ಸಂಶೋಧನೆಯ ಪಾತ್ರ"ವೇನೆಂಬುದನ್ನು ಅರ್ಥಮಾಡಿಕೊಂಡು ಬಹುಜನ ಸಹೃದಯರನ್ನು ಒಳಗೊಳ್ಳುವ ಪರಿಸರವನ್ನು ಅದು ನಿರ್ಮಿಸಿಕೊಳ್ಳಬೇಕಾಗಿದೆ. ಆಗ ಸಂಶೋಧನೆ–ಸಹೃದಯರು ಮುಖಾಮುಖಿಯಾಗುತ್ತಾರೆ. ಸಂಶೋಧನಕ್ಷೇತ್ರ ಜನರೊಂದಿಗೆ ಪ್ರತಿಕ್ರಿಯಿಸುತ್ತ ಜೀವಂತವಾಗಿ ಬೆಳೆಯುತ್ತದೆ ಮತ್ತು ಸಂಶೋಧನೆಯನ್ನು ಗ್ರಹಿಸುವ ಸರಿಯಾದ ದೃಷ್ಟಿಕೋನವು ಜನರಲ್ಲಿ ಮೂಡುತ್ತದೆ. ಇದರಿಂದ ಸಂಶೋಧನೆಯೂ ಬೆಳೆಯುತ್ತದೆ. ಜನತೆಯಲ್ಲಿ ಸಂಶೋಧನ ಪ್ರಜ್ಞೆಯೂ ಬೆಳೆಯುತ್ತದೆ. ನಾವು ಯಾವ ಪ್ರದೇಶದ, ಯಾವ ಸಮಾಜದ ವಿಷಯವನ್ನು ಕುರಿತು ಬರೆಯುತ್ತೇವೆಯೋ ಅದು ಆ ಪ್ರದೇಶಕ್ಕೆ, ಆ ಸಮಾಜಕ್ಕೆ ಗೊತ್ತಾಗದಿದ್ದರೆ ಅಂಥ ಸಂಶೋಧನೆಯ ಪ್ರಯೋಜನವೇನು? ಆದುದರಿಂದ ಸಂಶೋಧನೆಯನ್ನು ಸೃಜನ–ವಿಮರ್ಶನ ಸಾಹಿತ್ಯದಂತೆ ಜನಪ್ರಿಯ ಇಲ್ಲವೆ ಸರಳ ಶೈಲಿಯಲ್ಲಿ ಬರೆಯುವುದು, ಜನಾಭಿಮುಖಿಗೊಳಿಸುವುದು ನಮ್ಮ ಸಧ್ಯದ ಅಗತ್ಯವಾಗಿದೆ.

ಇದರ ಸಾಧ್ಯತೆಗಾಗಿ ಕವಿಸಮ್ಮೇಳನದಂತೆ ಸಂಶೋಧನ ಸಮ್ಮೇಳನಗಳೂ ನಡೆಯಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಜನರಲ್ಲಿ ಸಂಶೋಧನಪ್ರಜ್ಞೆ ಜಾಗ್ರತವಾಗಬಹುದಾಗಿದೆ. ಆಗಾಗ ವಿರೋಧಗಳಿಗೆ ತುತ್ತಾಗುತ್ತಲಿರುವ ಸಂಶೋಧನೆಗೆ 'ಸಾಮಾಜಿಕ ನ್ಯಾಯ' ಸಿಗಬಹುದಾಗಿದೆ.

ಇಂದಿನದು ಯಂತ್ರಯುಗ, ಯಂತ್ರದ ವ್ಯವಸ್ಥೆ-ವೇಗಗಳಿಗೆ ಹೊಂದಿಕೊಳ್ಳದಿದ್ದರೆ ನಿತ್ಯಜೀವನ ಸಾಧ್ಯವೆ ಇಲ್ಲವೆಂಬ ಪರಿಸ್ಥಿತಿ ಈಗ ನಿರ್ಮಾಣವಾಗಿದೆ. ಅಷ್ಟರಮಟ್ಟಿಗೆ ಯಂತ್ರಜಗತ್ತು ನಮ್ಮ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದೆ. ಬೌದ್ಧಿಕ ಜೀವನದ ಭಾಗವಾಗಿರುವ ಸಂಶೋಧನೆಯೂ ಈ ಮಾತಿಗೆ ಅಪವಾದವಾಗಲಾರದು, ಅಪವಾದವಾಗಬಾರದು. ಅಂದರೆ ಸಂಶೋಧನೆ ಇಂದು ಯಂತ್ರಗಳನ್ನು ಅವಲಂಬಿಸಿ ಹೆಜ್ಜೆ ಹಾಕುವುದು ಅನಿವಾರ್ಯವಾಗಿದೆ. ಹೀಗೆ ಮಾಡದಿದ್ದರೆ ಇಂಥ ಅವಕಾಶಗಳನ್ನು ಬಳಸಿಕೊಳ್ಳುತ್ತಲಿರುವ ಸಂಶೋಧಕರಿಗಿಂತ ನಾವು ಖಂಡಿತ ಹಿಂದೆ ಬೀಳುತ್ತೇವೆ. ಇಲ್ಲಿ ಯಂತ್ರ ಬಳಕೆಯ ಪ್ರಯೋಜನ ಎರಡು ತೆರನಾಗಿದೆ. ಶ್ರಮ-ಸಮಯಗಳ ಉಳಿತಾಯ, ಸಂಶೋಧನೆಯ ಸಮಗ್ರತೆಯ ಸಾಧನೆ. ಶ್ರಮ-ಸಮಯಗಳ ಉಳಿತಾಯದ ದೃಷ್ಟಿಯಿಂದ ಗ್ರಂಥಾಲಯ ಸಂದರ್ಶನ, ಕ್ಷೇತ್ರಕಾರ್ಯನಿರ್ವಾಹಣೆಗಳಿಗಾಗಿ ವಾಹನದ ಅನುಕೂಲತೆ, ಟೇಪ್‌ರೆಕಾರ್ಡರ್-ಕ್ಯಾಮರ್ ಬಳಕೆ, ಬೆರಳಚ್ಚು-ಝೆರಾಕ್ಸ್ ಯಂತ್ರಗಳ ಸಹಾಯ ಮೊದಲಾದವು ಅವಶ್ಯಬೇಕು. ಕಂಪ್ಯೂಟರ್ ಬಳಕೆ ಕನ್ನಡದಲ್ಲಿ ಸಾಧ್ಯವಾದರೆ ನಾಳೆ ಮುಗಿಯುವ ಸಂಶೋಧನೆ ಇಂದು, ಇಂದು ಮುಗಿಯುವ ಸಂಶೋಧನೆ ಈ ಕ್ಷಣ ಮುಗಿಯುತ್ತದೆ. ಎರಡನೆಯದಾಗಿ, ಸಂಶೋಧನೆಯನ್ನು ಪೂರ್ಣಪ್ರಮಾಣದಲ್ಲಿ ಪೂರೈಸಲು ಅನೇಕ ಉಪಕರಣಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಫೋಟೋ ತೆಗೆದುಕೊಂಡು ಸೇರಿಸದಿದ್ದರೆ ಲೇಖನವು ವಾಚನ ಮಾಧ್ಯಮಕ್ಕೆ ಮಾತ್ರ ಸೀಮಿತವಾಗಿ ಅಪೂರ್ಣವೆನಿಸುತ್ತದೆ. ಫೋಟೋ ಸೇರ್ಪಡೆಯಿಂದಾಗಿ ಅದಕ್ಕೆ ಚಾಕ್ಷುಷ ಮಾಧ್ಯಮವೂ ಸಾಧ್ಯವಾಗಿ, ಸಂಶೋಧನೆಯು ಪೂರ್ಣರೂಪದಲ್ಲಿ ಸಂವಹನಗೊಳ್ಳುತ್ತದೆ. ಉಪನ್ಯಾಸಗಳ ಸಾರ್ಥಕತೆಗಾಗಿ ಸ್ಲೈಡ್ಸ್ ಬಳಸುವದು ಇಂದು ಸಾಮಾನ್ಯ ಕ್ರಿಯೆಯಾಗಿದೆ. ಇತ್ತೀಚೆಗೆ ಟೇಪ್‌ರೆಕಾರ್ಡರ್‌ಗಳ ಬಳಕೆ ಸಂಶೋಧನೆಗೆ ಅನಿವಾರ್ಯವಾಗಿದೆ. ಮೌಖಿಕ ಕ್ಷೇತ್ರಕಾರ್ಯಕ್ಕಂತೂ ಇದು ಇರದಿದ್ದರೆ ಒಂದು ಹೆಜ್ಜೆ ಇಡಲೂ ಸಾಧ್ಯವಿಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಜಾನಪದ-ಶಿಷ್ಟಪದಗಳ ಸಂಶೋಧನೆಗಳಲ್ಲಿಯೂ ಇದರ ಉಪಯೋಗ ಹೆಚ್ಚಿದೆ. ಇನ್ನೂ ಇತ್ತೀಚೆಗೆ ಚಿತ್ರೀಕರಣಕ್ಕಾಗಿ ವೀಡಿಯೋದಂಥ ಮಾಧ್ಯಮಗಳನ್ನು ಬಳಸಲಾಗುತ್ತಿದೆ. ಇದು ಏಕಕಾಲಕ್ಕೆ ಶ್ರವ್ಯ-ದೃಶ್ಯಗಳಂಥ ಉಭಯ ಸಾಧ್ಯತೆಗಳನ್ನು ಹಿಡಿದಿಟ್ಟುಕೊಳ್ಳಲು ತುಂಬ ಉಪಯುಕ್ತವೆನಿಸಿದೆ. ಹೀಗೆ ಶ್ರಮ ಸಮಯಗಳ ಉಳಿತಾಯ, ಸಂಶೋಧನೆಯ ಪೂರ್ವಪ್ರಮಾಣತೆಯ ದೃಷ್ಟಿಯಿಂದ ಕನ್ನಡ ಸಂಶೋಧನೆ ಆಧುನಿಕ ಯಂತ್ರಸಾಮಗ್ರಿಗಳನ್ನು ಆದಷ್ಟು ಬೇಗ ಅಳವಡಿಸಿಕೊಳ್ಳಬೇಕಾಗಿದೆ. ಜಾಗತಿಕ ಅನ್ವೇಷಣಾತ್ಮಕ ಸಂಶೋಧನ ಮಹಾಪ್ರವಾಹಕ್ಕೆ ಸಮಾನಾಂತರವಾಗಿ ಹೆಜ್ಜೆ ಹಾಕಬೇಕಾದರೆ ಇವುಗಳ ಸೌಲಭ್ಯ ಕನ್ನಡ ಸಂಶೋಧಕನಿಗೆ ಅಗತ್ಯವೆಂದೇ ಹೇಳಬೇಕು.

ಸಂಶೋಧಕ ಎಷ್ಟೇ ಶ್ರದ್ಧಾವಂತನಾಗಿದ್ದರೂ, ಇಂದು ಅವನ ಜೀವನ ತುಂಬ ಸಂಕೀರ್ಣವಾಗಿದೆ. ಇದರಿಂದ ಬಿಡಿಸಿಕೊಂಡು ಸಂಶೋಧನೆಗಾಗಿ ಓಡಾಡುವುದೇ ದೊಡ್ಡ ತೊಂದರೆ. ಬಿಡಿಸಿಕೊಂಡರೂ ಸೌಕರ್ಯಗಳಿಲ್ಲದಿದ್ದರೆ ಕೈಕಾಲು ಮುರಿದುಕೊಂಡ ಪರಿಸ್ಥಿತಿ ನಿರ್ಮಾಣವಾಗುತ್ತದೆ. ರಾಣೇಬೆನ್ನೂರ

ನೆರೆಯ ಅಸುಂಡಿ ಶಾಸನದ ಮೇಲ್ಭಾಗದಲ್ಲಿ 'ಸಿಂಘ ಪರೀಷೆಯ ಮಟ'[೨] ಎಂದು ಬರೆಯಲಾಗಿದೆ. ಶ್ರೀಶೈಲ ಸಮೀಪದ ನಾಗಲೋಟಿ ಶಾಸನದಲ್ಲಿ 'ಕಲ್ಯಾಣ ಬಸವೇಶ್ವರುನಿ ಪ್ರತಿಷ್ಠಂ ಚೇಸಿ'[೩] ಎಂಬ ತೆಲುಗು ವಾಕ್ಯ ಬರುತ್ತದೆ. ಕುಹುಂಡಿ ೩೦೦೦ ಪ್ರಾಂತದ ರಾಜಧಾನಿಪಟ್ಟಣವಾದ ಕುಹುಂಡಿಗ್ರಾಮ ಯಾವುದೆಂಬುದು ಇನ್ನೂ ಗೊತ್ತಾಗಿಲ್ಲ. ಈ ಗ್ರಾಮದಲ್ಲಿ ಸೂರ್ಯದೇವಾಲಯ ಇರುವ ಸೂಚನೆ ಕೊಲ್ಹಾಪುರ ಶಾಸನದಲ್ಲಿ ಸಿಗುತ್ತದೆ.[೪] ಬೆಳಗಾವಿ ಜಿಲ್ಲೆಯ ಪಟ್ಟಣಕೊಂಡಿ ಇತ್ಯಾದಿ ಗ್ರಾಮಗಳಲ್ಲಿ ಶೋಧ ನಡೆಸಿ, ರಾಜಧಾನಿ ಕುಹುಂಡಿಯನ್ನು ಹುಡುಕಬೇಕಾಗಿದೆ. ವಾಹನ, ಕ್ಯಾಮರಾಗಳಂಥ ಕನಿಷ್ಠ ಸೌಕರ್ಯಗಳೂ ಇಲ್ಲದ ಕಾರಣ ನನಗೆ ೬-೮ ವರ್ಷ ಗತಿಸಿದರೂ ಈ ಸ್ಥಳಗಳ ಕ್ಷೇತ್ರಕಾರ್ಯ ಸಾಧ್ಯವಾಗಿಯೇ ಇಲ್ಲ. ಅನೇಕ ಜನ ಸಂಶೋಧಕರಿಗೆ ಇಂಥ ಹಲವಾರು ತುರ್ತು ಸಂಶೋಧನಕಾರ್ಯಗಳು ಕೈಗೂಡದೇ ಇರುವುದು ಸಹಜ. ಕಾರಣ, ಸಮಯೋಚಿತ ಸೌಲಭ್ಯಗಳ ತೀವ್ರ ಪೂರೈಕೆಯ ವ್ಯವಸ್ಥೆ ನಮ್ಮ ಸಂಸ್ಥೆಗಳಲ್ಲಿ ಬೇಗ ಅಸ್ತಿತ್ವಕ್ಕೆ ಬರಬೇಕಾಗಿದೆ.

ಸಂಶೋಧನೆಯ ಪ್ರಸಾರ ಮತ್ತು ಪ್ರಗತಿಗಾಗಿ ಪತ್ರಿಕೆ ಇತ್ಯಾದಿ ಪ್ರಸಾರ ಮಾಧ್ಯಮಗಳು ಹೆಚ್ಚು ಸಂಖ್ಯೆಯಲ್ಲಿ ದುಡಿಯಬೇಕಾಗಿದೆ. ಈ ದೃಷ್ಟಿಯಿಂದ ಕನ್ನಡ ಸಂಶೋಧನೆ ಒಂದು ದುರ್ದೈವೀ ಜ್ಞಾನಶಾಖೆಯೆಂದೇ ಹೇಳಬೇಕು. ಸಾರ್ವಜನಿಕ ವ್ಯಕ್ತಿ-ಸಂಸ್ಥೆಗಳು ಪ್ರಕಟಿಸಲು ಮುಂದೆ ಬರುವುದು ಜನಪ್ರಿಯ ಪತ್ರಿಕೆಗಳನ್ನೇ ಹೊರತು, ಸಂಶೋಧನ ಪತ್ರಿಕೆಗಳನ್ನಲ್ಲ. ತಮ್ಮ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವುದು ಜನಪ್ರಿಯ ಲೇಖನಗಳನ್ನೇ ಹೊರತು, ಸಂಶೋಧನ ಲೇಖನಗಳನ್ನಲ್ಲ. ಆದುದರಿಂದ ಸರಕಾರಿ ಸಂಸ್ಥೆಗಳೇ ಇಂಥ ಪತ್ರಿಕೆಗಳನ್ನು ನಡೆಸುವುದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ಮೈಸೂರು, ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾಲಯಗಳು ಪ್ರಬುದ್ಧ ಕರ್ನಾಟಕ, ಕರ್ನಾಟಕ ಭಾರತಿ, ಸಾಧನೆ ಹೆಸರಿನ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದರೂ ಇತ್ತೀಚಿನ ದಿನಗಳಲ್ಲಿ ಇವು ತುಂಬ ಅನಿಯತವಾಗಿ ಹೊರಬರುತ್ತಲಿವೆ. ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳು ವಿಜ್ಞಾನ, ಸಮಾಜವಿಜ್ಞಾನಗಳಿಗಾಗಿ ಹೊರಡಿಸುತ್ತಿದ್ದ ಸಂಶೋಧನ ಪತ್ರಿಕೆಗಳಂತೂ ಅನಾಥ ಸ್ಥಿತಿಯನ್ನು ಅನುಭವಿಸುತ್ತಲಿವೆ. ಸಾಹಿತ್ಯ ಪರಿಷತ್ತಿನ ಪತ್ರಿಕೆಗೂ ಈ ಮಾತು ಅನ್ವಯಿಸುತ್ತದೆ. ಇದಕ್ಕೆ ಕಾರಣ ಆಯಾ ಸಂಸ್ಥೆಗಳಲ್ಲ. 'ಹೆಸರು ಬೇಕು, ಕೆಲಸ ಬೇಡ' ಎಂಬ ಧೋರಣೆಯ ಸಂಪಾದಕರು. ಈಗ ಈ ದೋಷವನ್ನು ತಿದ್ದುವುದು ಅವಶ್ಯವಿದೆ.

ಗ್ರಂಥಪ್ರಕಟನೆಗೆ ಬಂದರೆ ಇಲ್ಲಿಯೂ ಸಾರ್ವಜನಿಕ ಪ್ರಕಾಶಕರಿಗಿಂತ ವಿಶ್ವವಿದ್ಯಾಲಯ ಮತ್ತು ಪರಿಷತ್ತುಗಳಂಥ ಸಂಸ್ಥೆಗಳೇ ಈ ಕಾರ್ಯ ಮಾಡಬೇಕಾಗುತ್ತದೆ. ಆದರೆ ಇವುಗಳ ಕಾರ್ಯವಿಧಾನದ ಆಮೆಗತಿ, ಪುಸ್ತಕ ಪ್ರಸಾರದ ನಿರಾಸಕ್ತಿ ಕಾರಣವಾಗಿ ಕಳೆದ ಒಂದೆರಡು ದಶಕಗಳಲ್ಲಿ ಸಂಶೋಧನಕೃತಿಗಳ ಪ್ರಕಟನೆ ಮಂದವಾಗಿದೆ. ಈ ಪರಿಸ್ಥಿತಿ ಸುಧಾರಿಸುವುದು ಅಗತ್ಯವಿದೆ.

---

೨. SII XVII ಅಸುಂಡಿ (ರಾಣೆಬೆನ್ನೂರ ತಾ. ಧಾರವಾಡ ಜಿ.).

೩. SII XVI ೩೧೮, ನಾಗಲೋಟಿ.

೪. ಕೊಲ್ಲಾಪುರ-ಗ್ರಾಹಮ್, ಪು. ೩೫೭, ನಂ. ೩.

ಕರ್ನಾಟಕದಲ್ಲಿ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯಗಳನ್ನು ಬಿಟ್ಟರೆ ಸಾಹಿತ್ಯಿಕ ಚಟುವಟಿಕೆಗಳಿಗಾಗಿ ಅಸ್ತಿತ್ವಕ್ಕೆ ಬಂದ ಸಂಸ್ಥೆಗಳೆಂದರೆ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆ. ಅಕಾಡೆಮಿಯಂತೂ ಸಾಹಿತ್ಯವನ್ನು ಸೃಜನ–ಸೃಜನೇತರ ಎಂದು ಎರಡು ಭಾಗಮಾಡಿ ಸೃಜನವನ್ನು ಮಗನಂತೆ, ಸೃಜನೇತರವನ್ನು ಮಲಮಗನಂತೆ ನೋಡುತ್ತ ಬಂದಿವೆ. ಸೃಜನೇತರದಲ್ಲಿಯೇ ವಿಮರ್ಶೆಗೆ ಪ್ರಥಮ ಸ್ಥಾನ, ಸಂಶೋಧನೆಗೆ ದ್ವಿತೀಯ ಸ್ಥಾನ ನೀಡಿದೆ. ವಿದ್ವತ್ತಿನ ಕ್ರಮಬದ್ಧವಾದ ಬೆಳವಣಿಗೆಗೆ ಈ ಸಂಸ್ಥೆಗಳು ಇನ್ನುಮೇಲಾದರೂ ಗಮನಕೊಡಬೇಕಾಗಿದೆ. ಇಲ್ಲದಿದ್ದರೆ ಸಾಮಾಜಿಕ ನ್ಯಾಯದಿಂದ ವಂಚಿತವಾಗಿರುವ ಸಂಶೋಧನೆ 'ಸಾಹಿತ್ಯಿಕ ನ್ಯಾಯ'ದಿಂದಲೂ ವಂಚಿತವಾಗುತ್ತದೆ.

❖❖

ಕನ್ನಡ ಹಸ್ತಪ್ರತಿಶಾಸ್ತ್ರ

ಎಂ. ಎಂ. ಕಲಬುರ್ಗಿ

೧೯೯೩

ಸ್ನೇಹ ಪ್ರಕಾಶನ, ಬೆಂಗಳೂರು

ಡಾ. ಎಂ. ಚಿದಾನಂದಮೂರ್ತಿ
ಅವರ
ಸ್ನೇಹಕ್ಕೆ–ಶೋಧಕ್ಕೆ

*

ಅರಿಕೆ

ಗ್ರಂಥಸಂಪಾದನಶಾಸ್ತ್ರ, ನಾಮಶಾಸ್ತ್ರ, ಸಂಶೋಧನಶಾಸ್ತ್ರ – ಈ ಆಧುನಿಕ ಶಾಸ್ತ್ರಗಳನ್ನು ಕನ್ನಡಕ್ಕೆ ನೀಡಿದ ನಾನು, ಈ ಕೃತಿಯ ಮೂಲಕ 'ಹಸ್ತಪ್ರತಿಶಾಸ್ತ್ರ'ವನ್ನು ನೀಡುತ್ತಲಿದ್ದೇನೆ. ಇಂಥ ಪುಸ್ತಕಗಳನ್ನು ಬರೆಯುವಾಗ ನಾನು ಇನ್ನೊಬ್ಬರ ಬರವಣಿಗೆಯನ್ನು ಅವಲಂಬಿಸುವುದು ಇಲ್ಲವೆನ್ನುವಷ್ಟು ಕಡಿಮೆ. ನನ್ನ 'ಅನುಭವ'ವೇ ನನಗೆ ಆಕರ, ಆಧಾರ. ಇದನ್ನು ಬಳಸಿಕೊಂಡು ಸಿದ್ಧಾಂತಗಳನ್ನು ಬೆಳೆಸಿಕೊಳ್ಳುವುದು ನನ್ನ ನಿಲವು. ಈ ನಿಲವಿನ ನೆಲೆಯಲ್ಲಿ ನನ್ನ ಶಾಸ್ತ್ರಕೃತಿಗಳು ಸೃಷ್ಟಿಯಾಗುತ್ತವೆ. ಇವು ಬೇರೆಯವರ ಇಂಥ ಕೃತಿಗಳಿಂದ ಭಿನ್ನವಾಗುವುದು, ಈ ಕಾರಣಕ್ಕಾಗಿ.

೧೯೭೫ರಲ್ಲಿ ನಾನು ಬರೆದ 'ಕನ್ನಡ ಗ್ರಂಥಸಂಪಾದನಶಾಸ್ತ್ರ'ದ ಒಡಲಲ್ಲಿ 'ಹಸ್ತಪ್ರತಿಶಾಸ್ತ್ರದ' ಬೀಜ ಬಿತ್ತಲಾಗಿದ್ದಿತು. ೧೯೮೧ರಲ್ಲಿ ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನ ಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ್ದ 'ಹಸ್ತಪ್ರತಿಶಾಸ್ತ್ರ: ವಿವಿಧ ಮುಖಗಳು' ಹೆಸರಿನ ನನ್ನ ಲೇಖನದಲ್ಲಿ ಈ ಶಾಸ್ತ್ರದ ಭ್ರೂಣ ಆಕಾರ ಪಡೆದಿದ್ದಿತು. ಅದು ಈಗ ಸ್ವತಂತ್ರ ಕೃತಿರೂಪದಲ್ಲಿ ಅವತರಿಸುತ್ತಿದೆ. "ಈ ವರೆಗೆ (ಹಸ್ತಪ್ರತಿ)ಶಾಸ್ತ್ರರೂಪದ ಪೂರ್ಣಪ್ರಮಾಣದ ಗ್ರಂಥ ಪ್ರಕಟಗೊಂಡಿಲ್ಲ" ಎಂಬ ವಿದ್ವಾಂಸರ ವಿಷಾದಕ್ಕೆ ಉತ್ತರವಾಗಿ ಹೊರಬರುತ್ತಲಿರುವ ಈ ಕೃತಿ, ಕನ್ನಡದಲ್ಲಿ ಪ್ರಥಮ ಪ್ರಯತ್ನವೆಂದೇ ಹೇಳಬೇಕು.

ಯಂತ್ರಪತ್ರಿಗಳ ಉತ್ಥಾನೆ ಕಾರಣವಾಗಿ ಹಸ್ತಪ್ರತಿಗಳ ಲೇಖನ ಮತ್ತು ವಾಚನಕಾರ್ಯ ಮೂಲೆಗುಂಪಾಯಿತು. ಈ ಸಂಪತ್ತಿನ ಸೃಷ್ಟಿಸ್ವರೂಪ, ಮಹತ್ವಗಳನ್ನಲ್ಲದೆ ಅದನ್ನು ವೈಜ್ಞಾನಿಕವಾಗಿ ರಕ್ಷಿಸುವ–ಬಳಸಿಕೊಳ್ಳುವ ತಿಳಿವಳಿಕೆ, ಅವುಗಳ ಬಳಕೆ ತಪ್ಪಿದ ಇಂದಿನ ಸಂದರ್ಭದಲ್ಲಿ ಮೊದಲಿನಕ್ಕಿಂತ ಹೆಚ್ಚು ಅಗತ್ಯವಾಗಿದೆ.

ನಮ್ಮ ನಾಡಿನಲ್ಲಿ ಏಕಕಾಲಕ್ಕೆ ಅವಳಿ ಮಕ್ಕಳಾಗಿ ಹುಟ್ಟಿದ್ದರೂ 'ಪುರಾತತ್ವ ಇಲಾಖೆ' ಸರಕಾರದ ನೇರ ಆಡಳಿತಕ್ಕೆ ಒಳಪಟ್ಟು ವಿಸ್ತಾರವಾಗಿ ಬೆಳೆಯಿತು. 'ಹಸ್ತಪ್ರತಿ ಇಲಾಖೆ' ಮಾತ್ರ ವಿಶ್ವವಿದ್ಯಾಲಯಗಳ ಆಡಳಿತಕ್ಕೆ ಸಿಕ್ಕು, ಒಂದು ಮಿತಿಯಲ್ಲಿ ಉಳಿಯಿತು. ಈ ತಪ್ಪನ್ನು ತಿದ್ದುವ ರೀತಿಯಲ್ಲಿ ಈಗ 'ರಾಜ್ಯ ಕೇಂದ್ರ ಹಸ್ತಪ್ರತಿ ಇಲಾಖೆ'ಯನ್ನು ಕರ್ನಾಟಕ ಸರಕಾರ ಅಸ್ತಿತ್ವಕ್ಕೆ ತರಬೇಕಾಗಿದೆ; ಇದಲ್ಲದೆ ಗ್ರಂಥಾಲಯಶಾಸ್ತ್ರ (Library Science)ದಂತೆ ಹಸ್ತಪ್ರತಿಶಾಸ್ತ್ರ (Manuscriptology)ವೂ ಒಂದು ಶಾಸ್ತ್ರವಾಗಿ ನವೀಕರಣಗೊಳ್ಳಬೇಕಾಗಿದೆ; ಸಾಮಾಜಿಕ–ಶೈಕ್ಷಣಿಕ ಪ್ರತಿಷ್ಠೆ ಪಡೆಯಬೇಕಾಗಿದೆ. ಈ ಎಲ್ಲ ಆಸೆಗಳನ್ನು ಮುಂದುಮಾಡಿಕೊಂಡು 'ಕನ್ನಡ ಹಸ್ತಪ್ರತಿಶಾಸ್ತ್ರ' ಹೆಸರಿನ ಈ ಪುಸ್ತಕ ಹೊರಬರುತ್ತಲಿದೆ.

ಈ ವರೆಗೆ ಹಸ್ತಪ್ರತಿಯನ್ನು ಕುರಿತು, ಲೇಖನ, ಗ್ರಂಥ ಮತ್ತು ಪಿಎಚ್.ಡಿ. ಪ್ರಬಂಧಗಳು ಪ್ರಕಟವಾಗಿವೆ. ಇವುಗಳಿಗಿಂತ ಭಿನ್ನವಾದ ಉದ್ದೇಶವನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಕೃತಿ

ರೂಪಗೊಂಡಿದೆ. ಹಸ್ತಪ್ರತಿಯ ಹುಟ್ಟಿನಿಂದ ಹಿಡಿದು, ಅದು ಹಸ್ತಪ್ರತಿ ಭಾಂಡಾರದಲ್ಲಿ ವಿದ್ವಾಂಸರಿಗೆ ಉಪಯುಕ್ತವಾಗುವ ವರೆಗಿನ ಎಲ್ಲ ನೆಲೆಗಳ ಅಧ್ಯಯನ ಅಂದರೆ ಹಸ್ತಪ್ರತಿಗಳ ಉತ್ಪಾದನೆ, ಪ್ರಸರಣ, ಸಂಗ್ರಹಣ, ವ್ಯವಸ್ಥಾಪನ ಮತ್ತು ಪ್ರಯೋಜನಗಳ ಅಧ್ಯಯನ ಇಲ್ಲಿದೆ. ಕರ್ನಾಟಕದಲ್ಲಿ ಇನ್ನು ಮುಂದೆ ಈ ಅಧ್ಯಯನ ಹೇಗೆ ಬೆಳೆಯಬೇಕು–ಎನ್ನುವುದರ ವಿಚಾರ ವಿನ್ಯಾಸವೂ ಇಲ್ಲಿದೆ. ಹೀಗಾಗಿ ವಿದ್ವಾಂಸರು ಪ್ರಸ್ತುತ ಕೃತಿಯನ್ನು ಆಧರಿಸಿ, ಈ ಶಾಸ್ತ್ರವನ್ನು ಇನ್ನೂ ವಿಸ್ತಾರವಾಗಿ ಬೆಳೆಸುವರೆಂದು ಆಶಿಸುತ್ತೇನೆ.

ತಮ್ಮ ಪ್ರಕಾಶನದ ಮೂಲಕ ಈ ಪುಸ್ತಕವನ್ನು ಪ್ರೀತಿಯಿಂದ ಪ್ರಕಟಿಸಿದ, ಬೆಂಗಳೂರಿನ ಸ್ನೇಹ ಪ್ರಕಾಶನದ ಮಿತ್ರರಿಗೆ, ಉತ್ತಮ ಪ್ರತಿ ಸಿದ್ಧಪಡಿಸುವಲ್ಲಿ ನೆರವಾದ ಡಾ.ಬಿ.ವಿ.ಯಕ್ಕುಂಡಿಮಠ ಅವರಿಗೆ, ಕರಡುಪ್ರತಿಗಳನ್ನು ಮುಟ್ಟಿಸುವಲ್ಲಿ ಸಹಕರಿಸಿದ ಶ್ರೀ ಸಿ.ಆರ್.ಕಾಡಪ್ಪನವರ ಅವರಿಗೆ, ವಿಶ್ವಾಸದಿಂದ ಅಂದವಾಗಿ ಮುದ್ರಿಸಿದ ಗದುಗಿನ ಅಲ್ಲಮ ಮುದ್ರಣಾಲಯದ ಶ್ರೀ ಪಿ.ಆರ್.ಜಂಗಮನಿ ಅವರಿಗೆ ಕೃತಜ್ಞನಾಗಿದ್ದೇನೆ.

೧೯೯೩ –ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

*

ಪೀಠಿಕೆ

ಹಸ್ತಪ್ರತಿ / ಹಸ್ತಪ್ರತಿಶಾಸ್ತ್ರ

ಮುದ್ರಣಯಂತ್ರದ ಆವಿಷ್ಕರಣ(೧೪೫೦)ದಿಂದಾಗಿ ಪಶ್ಚಿಮದೇಶಗಳಲ್ಲಿ ಗ್ರಂಥವನ್ನು ಕೈಯಿಂದ ಬರೆಯುವುದು ತಪ್ಪಿ, ಯಂತ್ರದಿಂದ ಮುದ್ರಿಸುವುದು ಆರಂಭವಾಯಿತು.[೧] ಯಂತ್ರ ಉತ್ಪಾದಿಸುವ ಈ ಹೊಸ ಬಗೆಯ ಗ್ರಂಥಗಳಿಂದ ಪ್ರತ್ಯೇಕಿಸಿ ಕರೆಯುವುದರ ಸಲುವಾಗಿ, ಈ ಮೊದಲು ಕೈಯಿಂದ ಬರೆಯುತ್ತಲಿದ್ದ ಗ್ರಂಥಗಳಿಗಾಗಿ Manuscript ಎಂಬ ಪದವನ್ನು ಪಾಶ್ಚಿಮಾತ್ಯರು ಸೃಷ್ಟಿಸಿದರು. ಕೈಯಿಂದ ಬರೆಯುವ ಮೂಲಕ ಏಕಪ್ರತಿಯಾಗಿ ಸೃಷ್ಟಿಯಾಗುತ್ತಲಿದ್ದ ಗ್ರಂಥಗಳು ಈಗ ಯಂತ್ರದಿಂದಾಗಿ ಬಹುಪ್ರತಿರೂಪದಲ್ಲಿ ಬೆಳಕು ಕಾಣತೊಡಗಿದವು. ಈ ಕ್ರಿಯೆ ಪ್ರಾಚೀನ ಗ್ರಂಥಗಳ ಪ್ರಸಾರದ ವೇಗ–ವ್ಯಾಪ್ತಿಗಳನ್ನು ಹೆಚ್ಚಿಸಿತು. ಇದರ ಫಲವಾಗಿ ಪ್ರಾಚೀನ ಕೈಬರಹಗಳ ಶೋಧ, ಸಂಗ್ರಹ, ರಕ್ಷಣೆ ಮತ್ತು ಅಧ್ಯಯನಗಳಿಗೆ ಬಹುದೊಡ್ಡ ತಿರುವು ಅಲ್ಲಿ ಪ್ರಾಪ್ತವಾಯಿತು. ಮುದ್ರಣಯಂತ್ರ ಕರ್ನಾಟಕವನ್ನು ಪ್ರವೇಶಿಸುವಲ್ಲಿ ಆ ತಿರುವು ಇಲ್ಲಿಯೂ ತಲೆದೋರಿತು.

ಹಸ್ತಪ್ರತಿ :

ಸ್ವೀಕರಣವೆಂಬುದು ಭಾಷಾಪ್ರಪಂಚದ ಅನಿವಾರ್ಯಕ್ರಿಯೆ. ಇಲ್ಲಿ ತದ್ಭವೀಕರಣ ಕ್ರಿಯೆ ಮತ್ತು ಭಾಷಾಂತರೀಕರಣಕ್ರಿಯೆ ಮುಖ್ಯವಾದುವು. ಈ ಮೇರೆಗೆ ಲ್ಯಾಟಿನ್ನಿನ Manus(= ಕೈ) ಮತ್ತು Scriptum (=ಬರವಣಿಗೆ)ಯೆಂಬ ಪದಗಳ ಸಂಯುಕ್ತ ರೂಪವಾದ Manuscriptus (= ಕೈಬರವಣಿಗೆ) ಎಂಬುದನ್ನು ಇಂಗ್ಲಿಷ್ ಭಾಷೆ Manuscript ಎಂದು ತದ್ಭವೀಕರಿಸಿಕೊಂಡಿತು. ಇದನ್ನು ನಮ್ಮ ವಿದ್ವಾಂಸರು ಕೈಬರೆವಣಿಗೆ, ಹಸ್ತಪ್ರತಿ ಎಂದು ಭಾಷಾಂತರಿಸಿಕೊಂಡರು. ಇವುಗಳಲ್ಲಿ ಸಾರ್ವತ್ರಿಕ ಪ್ರಚಾರ ಪಡೆದ ಪದ 'ಹಸ್ತಪ್ರತಿ'.

ಹಸ್ತಪ್ರತಿಯೆಂದರೆ ಕೈಯಿಂದ ರೂಪಪಡೆದ ಬರವಣಿಗೆಯೆಂದು ಸಾಮಾನ್ಯ ಅರ್ಥ. ಈ ಅರ್ಥದಲ್ಲಿ ಕೈಯಿಂದ ಬರೆದ ಪ್ರಾಚೀನಕಾಲದ ಗ್ರಂಥ, ದಾಖಲೆ, ಶಾಸನಗಳಲ್ಲದೆ, ಅಚ್ಚಿಗಾಗಿ ಸಿದ್ಧಪಡಿಸುವ ಇಂದಿನ ಯಾವುದೇ ಬರವಣಿಗೆ (press copy)ಗಳು ಹಸ್ತಪ್ರತಿಗಳೇ ಆಗಿವೆ. ಈ ನಾಲ್ಕರಲ್ಲಿ ಪ್ರಾಚೀನಕಾಲದ ಗ್ರಂಥಗಳು ಮಾತ್ರ 'ಹಸ್ತಪ್ರತಿ' ಎನಿಸಿಕೊಳ್ಳುತ್ತವೆ. ಮಿಕ್ಕವುಗಳನ್ನು ಕ್ರಮವಾಗಿ ದಾಖಲುಪ್ರತಿ, ಶಾಸನಪ್ರತಿ, ಮುದ್ರಾಪ್ರತಿ ಎಂದು ಕರೆಯಬಹುದು. 'ಹಸ್ತಪ್ರತಿ' ಎಂಬುದು ಬಹುಪ್ರತಿರೂಪದಲ್ಲಿ ಸಿಗುತ್ತದೆ ಮತ್ತು ಸಾಮಾನ್ಯೀಕೃತ ಬರವಣಿಗೆಯಾಗಿರುತ್ತದೆ. ದಾಖಲೆ ಮತ್ತು

---

೧. ಜರ್ಮನಿಯ ಜಾನ್ ಗುಟನ್‌ಬರ್ಗ್ ಎಂಬವನು ೧೪೫೦ರಲ್ಲಿ ಮುದ್ರಣಯಂತ್ರವನ್ನು ಮೊದಲು ಶೋಧಿಸಿದ. ೧೪೫೬ ರಲ್ಲಿ ಯುರೋಪಿನಲ್ಲಿ ಮೊದಲು ಪ್ರಕಟವಾದ ಪುಸ್ತಕ ಬೈಬಲ್, 'ಗುಟನ್‌ಬರ್ಗನ ಬೈಬಲ್' ಎಂದೇ ಇದು ಮೊದಲು ಪ್ರಸಿದ್ಧವಾಯಿತು. ಭಾರತಕ್ಕೆ ಮುದ್ರಣಯಂತ್ರ ಬಂದುದು ೧೫೫೬ ರಲ್ಲಿ.

ಶಾಸನಗಳು ಏಕಪ್ರತಿರೂಪದಲ್ಲಿ ಸಿಗುತ್ತವೆ. ಮತ್ತು ಘಟನೆಯ ನಿರ್ದಿಷ್ಟ ನಿರೂಪಣೆಯಾಗಿರುತ್ತವೆ. ಮುದ್ರಾಪ್ರತಿ (press copy) ಅಚ್ಚಿಗಾಗಿ ಸಿದ್ಧಪಡಿಸಿದ ಯಾವುದೇ ಬಗೆಯ ನಕಲುಪ್ರತಿಯಾಗಿರುತ್ತದೆ. ಈ ವಿಭಿನ್ನ ಲಕ್ಷಣಗಳನ್ನು ಗಮನಿಸಿದರೆ ಯಾವ ಕಾರಣಕ್ಕಾಗಿ ಪ್ರಾಚೀನಗ್ರಂಥಗಳನ್ನು ಮಾತ್ರ 'ಹಸ್ತಪ್ರತಿ' ಎಂದು ಕರೆಯಬೇಕೆಂಬುದು ಸ್ಪಷ್ಟವಾಗುತ್ತದೆ.

ಪ್ರಾಚೀನಕಾಲದಲ್ಲಿ ಈ ಹಸ್ತಪ್ರತಿಗೆ ಬಳಸುತ್ತಲಿದ್ದ ವಸ್ತುವನ್ನು ಗಮನಿಸಿ, ಅದನ್ನು ತಾಳೆಗರಿ, ಕೋರಿಕಾಗದ ಎಂದೂ, ಕಟ್ಟುರೂಪವನ್ನು ಗಮನಿಸಿ ಕಟ್ಟು, ಕವಳಿಗೆ, ಹೊತ್ತಗೆ, ಗ್ರಂಥವೆಂದೂ ಕರೆಯುತ್ತಿದ್ದರು. ಇಂದು Manuscript ಪರಿಕಲ್ಪನೆಯ ಪ್ರಭಾವದಿಂದಾಗಿ ಇವೆಲ್ಲವುಗಳನ್ನು 'ಹಸ್ತಪ್ರತಿ' ಎಂಬ ಒಂದೇ ಹೆಸರಿನಿಂದ ಗುರುತಿಸ ಲಾಗುತ್ತದೆ.

ಹಸ್ತಪ್ರತಿಶಾಸ್ತ್ರ :

"ಹಸ್ತಪ್ರತಿಶಾಸ್ತ್ರ" ಎಂಬ ಪದವಾಗಲೀ, ಇದರ ಇಂಗ್ಲಿಷ್ ಸಂವಾದಿಯಾದ "Manuscriptoloy" ಎಂಬ ಪದವಾಗಲೀ ಇತ್ತೀಚಿನ ಸೃಷ್ಟಿಯಾಗಿವೆ. ಬಹುಶಃ ಮಂಡ್ಯದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ (೧೯೭೪) ಡಾ. ಆರ್.ಸಿ.ಹಿರೇಮಠ ಅವರು "ಹಸ್ತಪ್ರತಿ ಸಂಗ್ರಹ, ಅವುಗಳ ಸೂಚೀಕರಣ, ಮೊದಲಾದವುಗಳನ್ನೊಳಗೊಂಡ Manuscriptoloy ಎಂಬ ಹೊಸ ಶಾಸ್ತ್ರವೇ ಬೆಳೆದು ಬರಬೇಕಾಗಿದೆ" ಎಂದು ಹೇಳುವ ಮೂಲಕ, ಈ ಎರಡೂ ಪದ (Manuscriptoloy, ಹಸ್ತಪ್ರತಿಶಾಸ್ತ್ರ)ಗಳನ್ನು ಮೊದಲ ಸಲ ಪ್ರಯೋಗಿಸಿದರೆಂದು ತೋರುತ್ತದೆ. ಕಾರಣ ಕನ್ನಡ, ಸಂಸ್ಕೃತ ಶಬ್ದಕೋಶಗಳಿಗೆ, ಅದೇ ರೀತಿ ಇಂಗ್ಲಿಷ್ ಶಬ್ದಕೋಶಕ್ಕೆ ಇವು ಕನ್ನಡಗರ ಕಾಣಿಕೆಯೆನಿಸಿವೆ. ಮತ್ತು ಈ ಪದಗಳು ಆಯಾ ಕೋಶಗಳಲ್ಲಿ ಇನ್ನು ಮೇಲೆ ಸೇರಬೇಕಾಗಿದೆ.

೧೯೮೧ ಫ.ಗು.ಹಳಕಟ್ಟಿ ಅವರ ಜನ್ಮಶತಮಾನೋತ್ಸವ ವರ್ಷ. ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ಅತಿಥಿಯಾಗಿ ಮಾತನಾಡುತ್ತ ಡಾ. ಹಾ.ಮಾ.ನಾಯಕ ಅವರು "೧೯೮೧ನೆಯ ಇಸ್ವಿಯನ್ನು ಹಸ್ತಪ್ರತಿ ವರ್ಷವೆಂದು ಸರಕಾರ ಘೋಷಿಸಬೇಕು" ಎಂದು ಹೇಳಿದರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ಈ ಶತಮಾನೋತ್ಸವದ ಅಂಗವಗಿ 'ಹಸ್ತಪ್ರತಿ'ಗಳನ್ನು ಕುರಿತು ವಿಚಾರ ಸಂಕಿರಣ ಏರ್ಪಡಿಸಿ (೧೯೮೧), ಅಲ್ಲಿ ಮಂಡಿಸಿದ ಲೇಖನಗಳನ್ನು 'ಕರ್ನಾಟಕ ಭಾರತಿ'ಯ ಮೂಲಕ ಪ್ರಕಟಿಸಿತು. ಅದೇ ವರ್ಷ (೧೯೮೧) ಬೆಂಗಳೂರಿನ ಬಿಂ.ಎಂ.ಶ್ರೀ ಪ್ರತಿಷ್ಠಾನ 'ಹಸ್ತಪ್ರತಿಶಾಸ್ತ್ರ' ಹೆಸರಿನ ವಿಚಾರ ಸಂಕಿರಣ ನಡೆಸಿ, ಗ್ರಂಥರೂಪದಲ್ಲಿ ಪ್ರಕಟಿಸಿತು. ಹಳಕಟ್ಟಿಯವರ ಜನ್ಮಶತಮಾನೋತ್ಸವದ ನೆನಪಿಗಾಗಿಯೇ ಹಸ್ತಪ್ರತಿ ವಿಷಯಕ್ಕೆ ಸಂಬಂಧಿಸಿದ 'ಮಣಿಹ' ಹೆಸರಿನ ಗ್ರಂಥವನ್ನೂ ಹೊರತಂದಿತು. ಹೀಗೆ ಹಸ್ತಪ್ರತಿಶಾಸ್ತ್ರ ಮೈಕೊಡವಿ ಬಿಚ್ಚಿಕೊಂಡುದು ೧೯೮೧ ರಲ್ಲಿ; ಹಳಕಟ್ಟಿಯವರ ಜನ್ಮಶತಮಾನೋತ್ಸವ ವರ್ಷದಲ್ಲಿ ಎಂದೇ ಹೇಳಬೇಕು.

ಕೈಬರವಣಿಗೆಯಾದ ಶಾಸನಪ್ರತಿಗಳನ್ನು ಕುರಿತ 'ಶಾಸನಶಾಸ್ತ್ರ' ಹೆಸರಿನ ಅಧ್ಯಯನಶಾಖೆಯು ಕಳೆದ ಎರಡನೂರು ವರ್ಷಗಳಿಂದ ನಮ್ಮಲ್ಲಿ ಬೆಳೆದುಬಂದಿದೆ. ಅನೇಕ ಅರ್ಥಗಳಲ್ಲಿ ತುಂಬ ಭಿನ್ನವಾಗಿರುವ ಇದು, 'ಹಸ್ತಪ್ರತಿಶಾಸ್ತ್ರ' (Manuscriptoloy) ದ ರಚನೆಗೆ ಆದರ್ಶವಾಗಲಾರದು. ದಾಖಲುಪ್ರತಿಗಳನ್ನು ಕುರಿತ 'ದಾಖಲುಶಾಸ್ತ್ರ', ಮುದ್ರಾಪ್ರತಿ(press copy)ಯನ್ನು ಕುರಿತ

'ಮುದ್ರಾಪ್ರತಿಶಾಸ್ತ್ರ'ಗಳು ಇನ್ನೂ ಸ್ಪಷ್ಟ ಆಕಾರ ಪಡೆದಿಲ್ಲವೆಂದೇ ಹೇಳಬೇಕು. ಒಂದು ವೇಳೆ ಆಕಾರ ಪಡೆದರೂ ಆ ಶಾಸ್ತ್ರಗಳು ಹಸ್ತಪ್ರತಿಶಾಸ್ತ್ರಕ್ಕೆ ಏನೂ ನೆರವು ನೀಡುವಂತಿಲ್ಲ. ಒಟ್ಟಿನಲ್ಲಿ ಈ ನಾಲ್ಕೂ ಸ್ವತಂತ್ರ ಸ್ವರೂಪದ ಕ್ಷೇತ್ರಗಳಾಗಿವೆ.

ಈ ವರೆಗೆ ನಮ್ಮಲ್ಲಿ ಹಸ್ತಪ್ರತಿಶಾಸ್ತ್ರವು ಗ್ರಂಥಸಂಪಾದನಾಶಾಸ್ತ್ರದ ಭಗವಾಗಿ ಬೆಳೆದಿದೆ. ಈಗ ಅದರಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆಯಬೇಕಾಗಿರುವ ಈ ಶಾಸ್ತ್ರಕ್ಕೆ 'ಗ್ರಂಥಸಂಪಾದನಾಶಾಸ್ತ್ರ' ದಿಂದಲೂ ಅಷ್ಟಾಗಿ ನೆರವು ಸಿಗುವುದಿಲ್ಲವೆಂದೇ ಹೇಳಬೇಕು. ಏಕೆಂದರೆ ಹಸ್ತಪ್ರತಿಯಲ್ಲಿ ಕೃತಿ ಮತ್ತು ಪ್ರತಿ ಅಡಗಿದ್ದು, 'ಪ್ರತಿ'ಯ ಅಧ್ಯಯನ ಹಸ್ತಪ್ರತಿಶಾಸ್ತ್ರದ ವಿಷಯವಾದರೆ, 'ಕೃತಿ'ಯ ಅಧ್ಯಯನ ಗ್ರಂಥಸಂಪಾದನಾ ಶಾಸ್ತ್ರದ ವಿಷಯವಾಗಿದೆ. 'ಪ್ರತಿ'ಯ ಉತ್ಪಾದನೆ, ಪ್ರಸರಣ, ಸಂಗ್ರಹಣ, ವ್ಯವಸ್ಥಾಪನ, ಪ್ರಯೋಜನ ಈ ದಿಕ್ಕಿನಲ್ಲಿ ಹಸ್ತಪ್ರತಿಶಾಸ್ತ್ರ ಬೆಳೆದರೆ, 'ಕೃತಿ'ಯ ಭಿನ್ನಪಾಠಸ್ವರೂಪ, ಪಾಠಸಂಕಲನ, ಅವುಗಳ ನಿಜಪಾಠನಿರ್ಣಯ ಇತ್ಯಾದಿ ದಿಕ್ಕಿನಲ್ಲಿ ಗ್ರಂಥಸಂಪಾದನಾಶಾಸ್ತ್ರ ಬೆಳೆಯಬೇಕಾಗುತ್ತದೆ. ಆದುದರಿಂದ ಇನ್ನು ಮೇಲೆ ಗ್ರಂಥಸಂಪಾದನಾಶಾಸ್ತ್ರದಿಂದ ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವನ್ನು ಪ್ರತ್ಯೇಕಿಸಿ, ಎರಡೂ ಶಾಸ್ತ್ರಗಳೂ ಸ್ವತಂತ್ರವಾಗಿ ಬೆಳೆಯುವುದರತ್ತ ನಾವು ಗಮನ ಕೊಡಬೇಕಾಗಿದೆ.

ಇತ್ತೀಚೆ ಗ್ರಂಥತ್ವದ ಅಧ್ಯಯನ ಮತ್ತು ಪ್ರಯೋಜನ ದೃಷ್ಟಿಯಿಂದ ಗ್ರಂಥಾಲಯಶಾಸ್ತ್ರ (Library Science) ಹೆಸರಿನ ಹೊಸ ಶಾಸ್ತ್ರವೇ ಆಕಾರ ಪಡೆದಿದೆ. ದೇಶ–ವಿದೇಶಗಳ ಖ್ಯಾತ ವಿದ್ವಾಂಸರು ಹೊಸ ಹೊಸ ಸಿದ್ಧಾಂತಗಳನ್ನು ಶೋಧಿಸಿ, ಗ್ರಂಥಾಲಯಶಾಸ್ತ್ರವನ್ನು 'ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ' (Library and information science) ಅರ್ಥಕ್ಕೆ ಮುಟ್ಟಿಸಿದ್ದಾರೆ. ಈ ಶಾಸ್ತ್ರದ ಮುಖ್ಯ ಉದ್ದೇಶ ಯಾವುದೇ ಬಗೆಯ ಗ್ರಂಥತ್ವದ ಅಧ್ಯಯನವಾಗಿದ್ದರೂ ಅದು ಯಂತ್ರಪ್ರತಿರೂಪದ ಗ್ರಂಥಗಳಿಗೆ ಮಾತ್ರ ಹೆಚ್ಚು ಒತ್ತುಕೊಟ್ಟು, ಹಸ್ತಪ್ರತಿ ರೂಪದ ಗ್ರಂಥಗಳಣ್ನು ಉಪೇಕ್ಷಿಸುತ್ತ ಬಂದಿದೆ. ಹೀಗಾಗಿ ಆಧುನಿಕ ಗ್ರಂಥಾಲಯ ಶಾಸ್ತ್ರದಿಂದಲೂ ಹಸ್ತಪ್ರತಿಶಾಸ್ತ್ರ ಉದ್ಧಾರ ಹೊಂದಲಾರದೆಂದೇ ತೋರುತ್ತದೆ. ಈ ವರೆಗೆ ಗ್ರಂಥಾಲಯಶಾಸ್ತ್ರಜ್ಞರು ಯಂತ್ರಪ್ರತಿಗಳನ್ನು ಖಾಸಾಮಗನಂತೆ, ಹಸ್ತಪ್ರತಿಗಳನ್ನು ಮಲಮಗನಂತೆ ನೋಡುತ್ತ ಬಂದಿರುವುದು ಇದಕ್ಕೆ ನಿದರ್ಶನವೆನಿಸಿದೆ. ಹಾಗೆ ನೋಡಿದರೆ ಇವೆರಡೂ ಕ್ಷೇತ್ರಗಳ ಲಕ್ಷಣ ವಿಭಿನ್ನವಾಗಿರುವುದರಿಂದ ಗ್ರಂಥಾಲಯಶಾಸ್ತ್ರದಿಂದ ಹಸ್ತಪ್ರತಿಶಾಸ್ತ್ರ ಪ್ರತ್ಯೇಕವಾಗಿ ಬೆಳೆಯುವುದೇ ನ್ಯಾಯ ಸಮ್ಮತವೆನಿಸುತ್ತದೆ.

ಇಲ್ಲಿ ಇನ್ನೊಂದು ಪ್ರಶ್ನೆ. 'ವಿಜ್ಞಾನ' ಮತ್ತು 'ಶಾಸ್ತ್ರ' ಪದಗಳ ಬಳಕೆ. ಇಂದು ಸಮಾಜಶಾಸ್ತ್ರ–ಸಮಾಜವಿಜ್ಞಾನ, ಭಾಷಾಶಾಸ್ತ್ರ–ಭಾಷಾವಿಜ್ಞಾನ ಹೀಗೆ ಈ ಪದಗಳನ್ನು ತುಂಬ ಸಡಿಲಾಗಿ ಬಳಸುತ್ತಲಿದ್ದೇವೆ. ಪ್ರಾಚೀನ ಭಾರತದಲ್ಲಿ ಅಲಂಕಾರ ಮೊದಲಾದ ಸಾಹಿತ್ಯಿಕ ವಿಷಯಗಳ ಮತ್ತು ವೈದ್ಯ ಮೊದಲಾದ ಸಾಹಿತ್ಯೇತರ ವಿಷಯಗಳ ಸ್ವರೂಪ–ಲಕ್ಷಣಗಳನ್ನು ಕುರಿತ ಅಧ್ಯಯನಗಳಿಗೆ ಶಾಸ್ತ್ರವೆಂದೇ ಕರೆಯುತ್ತ ಬಂದಿದಾರೆ. ಉದಾ: ಅಲಂಕಾರಶಾಸ್ತ್ರ, ವೈದ್ಯಶಾಸ್ತ್ರ ಇತ್ಯಾದಿ. ನಮ್ಮಲ್ಲಿ ವಿಜ್ಞಾನವೆಂದರೆ ಮೂಲತಃ ಅಧ್ಯಾತ್ಮಜ್ಞಾನವೆಂದೇ ಅರ್ಥ. ಇಂದು ಈ ಪದ ತಾಂತ್ರಿಕ ಕ್ಷೇತ್ರದ ಅಧ್ಯಯನಕ್ಕೆ ವಿಶೇಷವಾಗಿ ಬಳಕೆಯಾಗುತ್ತಲಿದೆ. ಯಂತ್ರಪ್ರತಿಗಳಿಗೆ ಸಂಬಂಧಪಟ್ಟ ಅಧ್ಯಯನವನ್ನು 'ಗ್ರಂಥಾಲಯವಿಜ್ಞಾನ'ವೆಂದು ಕರೆಯುತ್ತಲಿರುವುದರಿಂದ ಹಸ್ತಪ್ರತಿಗಳಿಗೆ ಸಂಬಂಧಪಟ್ಟ ಅಧ್ಯಯನವನ್ನೂ 'ಹಸ್ತಪ್ರತಿ ವಿಜ್ಞಾನ'ವೆಂದು ಕರೆಯಬಹುದೆ? ಎಂಬ ಸಂದೇಹ ಕಾಡುತ್ತದೆ. ಈ ಸಂದರ್ಭದಲ್ಲಿ ಕೆಲವು ವಿವರಗಳನ್ನು ಇಲ್ಲಿ ಕೊಡಬಹುದು.

Research (ಸಂಶೋಧನೆ) ಎನ್ನುವುದು Discovery (ಅನ್ವೇಷಣ) ಮತ್ತು Invention (ಆವಿಷ್ಕರಣ) ಎಂದು ಎರಡು ತೆರನಾಗಿದೆ. ಇವುಗಳಲ್ಲಿ ಒಂದು ಗತಕಾಲಕ್ಕೆ ಸಂಬಂಧಿಸಿದ ಶೋಧವಾದರೆ, ಇನ್ನೊಂದು ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ ಶೋಧವಾಗಿದೆ. ಇಲ್ಲಿ ಅನ್ವೇಷಣರೂಪದ ಚಟುವಟಿಕೆಗೆ ಸಂಬಂಧಿಸಿದ ಸಂಶೋಧನೆಯನ್ನು 'ಶಾಸ್ತ್ರ'ವೆಂದೂ, ಆವಿಷ್ಕರಣ ರೂಪದ ಚಟುವಟಿಕೆಗೆ ಸಂಬಂಧಿಸಿದ ಸಂಶೋಧನೆಯನ್ನು 'ವಿಜ್ಞಾನ'ವೆಂದೂ ಕಟ್ಟುನಿಟ್ಟಾಗಿ ಕರೆಯುವುದು ವಿಷಯದ ನಿರ್ದಿಷ್ಟ ತಿಳುವಳಿಕೆಯ ದೃಷ್ಟಿಯಿಂದ ಹೆಚ್ಚು ಯೋಗ್ಯವೆನಿಸುತ್ತದೆ.[೨] ಯಂತ್ರಪ್ರತಿಗಳ ಮತ್ತು ಹಸ್ತಪ್ರತಿಗಳ ಕ್ಷೇತ್ರದಲ್ಲಿ ನಡೆಯುವ ಚಟುವಟಿಕೆಳಲ್ಲಿ Discovery ರೂಪದ ಅಂಶವೇ ಇರುವುದರಿಂದ ಇವುಗಳನ್ನು ಕುರಿತ ಲಕ್ಷಣ ಗ್ರಂಥಗಳಿಗೆ ವಿಜ್ಞಾನವೆಂದು ಕರೆಯದೆ, ಶಾಸ್ತ್ರವೆಂದೇ ಕರೆಯಬೇಕೆನಿಸುತ್ತದೆ. ಆದುದರಿಂದ, ಇಲ್ಲಿ ಉದ್ದಕ್ಕೂ, 'ಹಸ್ತಪ್ರತಿಶಾಸ್ತ್ರ'ವೆಂಬ ಪದವನ್ನೇ ಪ್ರಯೋಗಿಸಲಾಗಿದೆ.

ಹಸ್ತಪ್ರತಿಶಾಸ್ತ್ರದ ವ್ಯಾಪ್ತಿಯು ಹಸ್ತಪ್ರತಿಯ ಉತ್ಪಾದನೆಯಿಂದ ಮೊದಲು ಮಾಡಿ, ಅನೇಕ ಘಟ್ಟಗಳಲ್ಲಿ ಮುನ್ನಡೆದು, ಪ್ರಯೋಜನೆಯಲ್ಲಿ ಸಾರ್ಥಕತೆ ಪಡೆಯುತ್ತದೆ. ಸೂಕ್ಷ್ಮವಾಗಿ ನೋಡಿದರೆ ಇಲ್ಲಿ ಉತ್ಪಾದನ, ಪ್ರಸರಣ, ಸಂಗ್ರಹಣ, ವ್ಯವಸ್ಥಾಪನ ಮತ್ತು ಪ್ರಯೋಜನ-ಎಂಬ ಐದು ಘಟ್ಟಗಳು ಕಂಡುಬರುವುದರಿಂದ ಪ್ರಸ್ತುತ ಕೃತಿ ಈ ಕ್ರಮದಲ್ಲಿ ಮುಂದುವರಿದಿದೆ.

❖❖

---

೨. "Science" ಎಂಬುದು ಸೈರ್ (Scire) ಎಂಬ ಲ್ಯಾಟಿನ್ ಕ್ರಿಯಾಪದದಿಂದ ವ್ಯುತ್ಪನ್ನವಾಗಿರುವ ಶಬ್ದ. ಇದರ ಅರ್ಥ ತಿಳಿಯುವುದು (to know) ಎಂದು, ಇದರ ನಾಮ ರೂಪವಾದ "Scientia" ಎಂಬುದಕ್ಕೆ ಜ್ಞಾನ (Knowledge) ಎಂದು ಅರ್ಥ", ನೋಡಿ- ಭಾಷಾಂತರ ಕಲೆ ಪುಟ ೧೪.(ಡಾ. ಪ್ರಧಾನ ಗುರುದತ್ತ)

೧

❖

ಉತ್ಪಾದನ

ಕೃತಿ–ಪ್ರತಿ–ಕಟ್ಟು, ಲೇಖನಸಾಮಗ್ರಿ: ತಾಳೆಗರಿ–ಕಾಗದ–ಅರಿವೆ–ಹಲಗೆ–ಚರ್ಮ, ಕಂಠ–ಲೇಖನಿ, ಕಪ್ಪು–ಮಸಿ–ಬಳಪ, ಲಿಪಿಕಾರ–ಲಿಪಿ–ಭಾಷೆ, ಗ್ರಂಥವಿನ್ಯಾಸ–ಗ್ರಥನವಿನ್ಯಾಸ.

ಕೃತಿ–ಪ್ರತಿ–ಕಟ್ಟು

ಕೈಬರಹದ ಗ್ರಂಥವನ್ನು ನಾವು 'ಹಸ್ತಪ್ರತಿ'ಯೆಂದು ಕರೆಯುತ್ತೇವೆ. ಈ ಹಸ್ತಪ್ರತಿಯಲ್ಲಿ ಕವಿನಿರ್ಮಿತ 'ಕೃತಿ' ಲಿಪಿಕಾರನಿರ್ಮಿತ 'ಪ್ರತಿ' ಎಂಬ ಎರಡು ಘಟಕಗಳು ಸೇರಿಕೊಂಡಿರುತ್ತವೆ. ಕವಿ ಒಂದು ಕೃತಿಯನ್ನು ರಚಿಸಿರುತ್ತಾನೆ. ಕಾಲಕ್ರಮದಲ್ಲಿ ಲಿಪಿಕಾರರು ಅದನ್ನು ಅನೇಕ ಪ್ರತಿಗಳಾಗಿ ಬೆಳೆಸಿಕೊಂಡು ಬಂದಿರುತ್ತಾರೆ. ಹಸ್ತಪ್ರತಿಯೇ ಆಗಿದ್ದರೂ ಕವಿಯ ಮೂಲನಿರ್ಮಿತಿಯನ್ನು 'ಕೃತಿ' ಎಂದೂ, ಆಮೇಲಿನ ಲಿಪಿಕಾರರ ನಿರ್ಮಿತಿಗಳನ್ನು 'ಪ್ರತಿ' ಎಂದೂ ಕರೆಯುವುದು ನ್ಯಾಯಸಮ್ಮತವೆನಿಸುತ್ತದೆ. ಇವುಗಳಲ್ಲಿ ಕೃತಿ ಎನ್ನುವುದು 'ಸೃಷ್ಟಿ' ಯಾದರೆ, ಪ್ರತಿ ಎನ್ನುವುದು 'ಉತ್ಪಾದನೆ'ಯಾಗಿರುತ್ತದೆ. ಹೀಗೆ ಸಿದ್ಧವಾದ ಕೃತಿ ಅಥವಾ ಪ್ರತಿ ಅಥವಾ ಪ್ರತಿಗಳ ಸಿವುಡು, ಕೃತಿ–ಪ್ರತಿಗಳ ಸಿವುಡು, 'ಕಟ್ಟು' ಎನಿಸುತ್ತದೆ. ಕವಿ ಬರೆದ ಒಂದು ಕೃತಿಗೆ, ಲಿಪಿಕಾರ ಉತ್ಪಾದಿಸಿದ ಒಂದು ಪ್ರತಿಗೆ, ಇಲ್ಲವೆ ಒಂದಕ್ಕಿಂತ ಹೆಚ್ಚು ಪ್ರತಿಗಳಿಗೆ ಫಲಕ ಹೊದಿಸುವಲ್ಲಿ 'ಕಟ್ಟು' (Bundle) ಸಿದ್ಧವಾಗುತ್ತದೆ. ಅಂದರೆ ಒಂದು ಕಟ್ಟಿನಲ್ಲಿ ಒಂದು ಕೃತಿಯ ಪ್ರತಿ ಇರಬಹುದು, ಒಂದಕ್ಕಿಂತ ಹೆಚ್ಚು ಕೃತಿಗಳ ಪ್ರತಿಗಳಿರಬಹುದು. ಆದುದರಿಂದ ಕೃತಿ ಬೇರೆ, ಪ್ರತಿ ಬೇರೆ, ಕಟ್ಟು ಬೇರೆಯೆಂಬುದನ್ನು ಅವಶ್ಯ ಗಮನಿಸಬೇಕು. ಇದನ್ನು ಒಂದು ಉದಾಹರಣೆಯಿಂದ ಇನ್ನೂ ಸ್ಪಷ್ಟಗೊಳಿಸಬಹುದು. ಒಬ್ಬನ ಹತ್ತಿರ ಎರಡು ಕಟ್ಟುಗಳಿವೆಯೆಂದು ಇಟ್ಟುಕೊಳ್ಳಿ. ಮೊದಲನೆಯ ಕಟ್ಟಿನಲ್ಲಿ ಜೈಮಿನಿಭಾರತ, ಪ್ರಭುಲಿಂಗಲೀಲೆ, ನಳಚರಿತ್ರೆ; ಎರಡನೆಯ ಕಟ್ಟಿನಲ್ಲಿ ಗದಾಯುದ್ಧ, ಹರಿಶ್ಚಂದ್ರಕಾವ್ಯ, ಪ್ರಭುಲಿಂಗಲೀಲೆ–ಹೀಗೆ ಪ್ರತಿಗಳಿದ್ದರೆ ಅವನ ವಶದಲ್ಲಿ ಇರುವ ಕಟ್ಟುಗಳು ಎರಡು; ಕೃತಿಗಳು ಐದು, ಪ್ರತಿಗಳು ಆರುಯೆಂದು ಹೇಳಬೇಕಾಗುತ್ತದೆ. ಈ ಕೃತಿ, ಪ್ರತಿ, ಕಟ್ಟು ಪದಗಳನ್ನು ಇಂದು ನಿರ್ದಿಷ್ಟ ಅರ್ಥದಲ್ಲಿ ಬಳಸಬೇಕಾಗಿದೆ. ಏಕೆಂದರೆ ಕೆಲವು ಹಸ್ತಪ್ರತಿ ಭಾಂಡಾರದವರಿಗೆ ನಿಮ್ಮಲ್ಲಿ ಇರುವ ಕಟ್ಟುಗಳ ಸಂಖ್ಯೆ ಎಷ್ಟು? ಎಂದು ಕೇಳಿದರೆ ಪ್ರತಿಗಳ ಸಂಖ್ಯೆಯನ್ನು ತಿಳಿಸುತ್ತಾರೆ. ಇದರಿಂದಾಗಿ ಹಸ್ತಪ್ರತಿ ಭಾಂಡಾರಗಳಲ್ಲಿರುವ ಒಟ್ಟು ಕಟ್ಟುಗಳ ಸಂಖ್ಯೆಯ ವಿಷಯವಾಗಿ ತಪ್ಪು ತಪ್ಪು ವಿರಗಳು ಲಭ್ಯವಾಗುತ್ತಲಿವೆ. ಇನ್ನು ಮೇಲಾದರೂ ಕೃತಿ, ಪ್ರತಿ, ಕಟ್ಟು ಪದಗಳನ್ನು ನಿರ್ದಿಷ್ಟ ಅರ್ಥದಲ್ಲಿ ಬಳಸಬೇಕಾಗಿದೆ.

ಹೀಗಿದ್ದೂ ಒಟ್ಟು ಗ್ರಂಥರಾಶಿಯಲ್ಲಿ ಕವಿಯ 'ಸೃಷ್ಟಿ' ಭಾಗಕ್ಕಿಂತ ಲಿಪಿಕಾರನ 'ಉತ್ಪಾದನಾ' ಭಾಗವೇ ಅಧಿಕ ಪ್ರಮಾಣದಲ್ಲಿರುವುದರಿಂದ ಈ ಅಧ್ಯಾಯಕ್ಕೆ 'ಉತ್ಪಾದನ' ಎಂದೇ ಹೆಸರಿಡಲಾಗಿದೆ.

ಪ್ರಾಚೀನ ಕಾಲದಲ್ಲಿ ರಾಜರು, ಸಾರ್ವಜನಿಕರು ಆಶ್ರಯ ನೀಡುವ ಮೂಲಕ, ಕೃತಿಗಳ ಸೃಷ್ಟಿಗೆ ಕಾರಣರಾದ ಅನೇಕ ಉದಾಹರಣೆಗಳು ನಮ್ಮಲ್ಲಿ ಸಿಗುತ್ತವೆ. ಜೈನಕವಿಗಳಂತೂ ರಾಜಾಶ್ರಯದಲ್ಲಿಯೇ ಕೃತಿನಿರ್ಮಾಣಕಾರ್ಯವನ್ನು ಪೂರೈಸಿದರು. ರಾಜನು ನಿರ್ವಹಿಸಬೇಕಾದ ಕರ್ತವ್ಯಗಳನ್ನು 'ಸಪ್ತಸಂತಾನ'ವೆಂದು ಕರೆಯುತ್ತಿದ್ದು, ಇವುಗಳಲ್ಲಿ 'ಗ್ರಂಥೋತ್ಪಾದನೆಯ'ಯೂ ಸೇರಿದ್ದರಿಂದ ರಾಜನ ಕರ್ತವ್ಯದ ಭಾಗವೆಂಬಂತೆ, ಕೆಲವು ಜನ ಅರಸರು ಗ್ರಂಥಗಳನ್ನು ಬರೆದರು, ಬರೆಯಿಸಿದರು. ಇವರ ಆದರ್ಶದಲ್ಲಿ ಕೆಲವು ಜನ ಮಂತ್ರಿಗಳೂ, ಸಾಮಂತರೂ ಈ ಕರ್ತವ್ಯವನ್ನು ನಿರ್ವಹಿಸಿದರು. ಸಾರ್ವಜನಿಕರಿಗೆ ಸಂಬಂಧಿಸಿದಂತೆ ರನ್ನನಿಂದ ಅಜಿತಪುರಾಣ ಬರೆಸಿದ ಅತ್ತಿಮಬ್ಬೆ, ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ ತನ್ನ ಮನೆಯಲ್ಲಿ ರೂಪಗೊಳ್ಳಲು ಕಾರಣಳಾದ ಜ್ಯೋತಿಯಮ್ಮ ಮೊದಲಾದ ಮಹಿಳೆಯರನ್ನು ಇಲ್ಲಿ ಸ್ಮರಿಸಬಹುದು. ಇದಲ್ಲದೆ, ಲಕ್ಕಣ್ಣದಣ್ಣಾಯಕ, ಭಂಡಾರಿ ಜಕ್ಕಪ್ಪ, ಕಲ್ಲೆಹದ ಕೇತಿಶೆಟ್ಟಿಗಳು ಲಕ್ಷಸಂಖ್ಯೆಯ ವಿತ್ತವನ್ನು ಸಾಹಿತ್ಯೋದ್ಧಾರಕ್ಕಾಗಿ ವೆಚ್ಚಿಸಿದ ವಿಷಯ ಗಮನಾರ್ಹವೆನಿಸಿದೆ.[೩] ಇಂಥ ನೆರವುಗಳು ಕಾರಣವಾಗಿ ಕವಿಕೃತಿಗಳು ಕರ್ನಾಟಕದಲ್ಲಿ ಹುಟ್ಟಿಬಂದವು.

ಕವಿಯು ಕೃತಿ ರಚನೆಯನ್ನು ಪೂರೈಸಿ ಸಮಾಜಕ್ಕೆ ಒಪ್ಪಿಸುವ ಸಂದರ್ಭದಲ್ಲಿ ಇಂದಿನ ಬಿಡುಗಡೆ ಸಮಾರಂಭವನ್ನು ಹೋಲುವ ಕಾರ್ಯಕ್ರಮವನ್ನು, ಆ ಕಾಲದಲ್ಲಿಯೂ ಏರ್ಪಡಿಸುತ್ತಿದ್ದರೆಂದು ತೋರುತ್ತದೆ. ಮಹಾಕವಿ, ಮಹಾಕೃತಿಗಳ ವಿಷಯವಾಗಿಯಾದರೂ ಇಂಥ ಸಮಾರಂಭ ಜರುಗುತ್ತಿರಬಹುದು. ಜನ್ನನ ಅನಂತನಾಥಪುರಾಣ ಈ ಬಗೆಯ ಮರ್ಯಾದೆಗೆ ಪಾತ್ರವಾದ ಕೃತಿಯಾಗಿದೆ. ಗಂಡರಾದಿತ್ಯನ ಪೊಳಲಿನ ಅನಂತನಾಥ ತೀರ್ಥಂಕರ ಬಸದಿಯಲ್ಲಿ ತನ್ನ ಪುರಾಣಕೃತಿಯ ನಾಂದೀ ಪದ್ಯವನ್ನು ರಚಿಸಿದ ಕವಿ ಜನ್ನನು–

ದೋರಸಮುದ್ರದೊಳ್ ವಿಜಯಪಾರ್ಶ್ವಜಿನೇಶ್ವರ ದಿವ್ಯಮಂದಿರ।
ದ್ವಾರದ ಮುಂತೆ ಮಾಡಿಸಿದ ಶಾಂತಿಜಿನಾಲಯದೊಳ್ನಮೇರು ಮಂ।
ದಾರದ ಕೊಂಬನರ್ತಿಯಿನಲಂಬಿದವೋಲ್ ಕವಿ ಭಾಳಲೋಚನಂ।
ಧಾರಣಿಗಿಂತು ಮಾಡಿದನನಂತಪುರಾಣದ ಸುಪ್ರತಿಷ್ಠೆಯಂ ॥

ಎಂದು ಹೇಳುತ್ತಾನೆ.[೪] ದೋರಸಮುದ್ರದೊಳ್ ವಿಜಯಪಾರ್ಶ್ವ ಜಿನಬಸಿಯ ಮುಂದಿನ ಶಾಂತಿಜಿನಾಲಯದಲ್ಲಿ ಆತನ ಅನಂತನಾಥಪುರಾಣವು 'ಸುಪ್ರತಿಷ್ಠ'ವಾಯಿತೆಂದು ಈ ಪದ್ಯ ತಿಳಿಸುತ್ತದೆ. ಇಲ್ಲಿಯೇ ಹಿಂದುಮುಂದಿನ ಪದ್ಯಗಳಲ್ಲಿ 'ಸ್ಥಾಪಿಸಿದಂ' 'ಮಾಡಿಸಿದ ಪ್ರತಿಷ್ಠೆಯಂ' ಎಂಬ ಉಲ್ಲೇಖಗಳಿವೆ. ಹೀಗಾಗಿ ಈ ಸಮಾರಂಭವು ಸ್ಥಾಪನೆ, ಪ್ರತಿಷ್ಠಾ, ಸುಪ್ರತಿಷ್ಠಾ ಎಂಬ ಪರ್ಯಾಯನಾಮಗಳಿಂದ

---

೩. ವೀ.ಮ. ಪು.೮–೨೨–೫೨

೪. ಅನಂತನಾಥ ಪುರಾಣ ೧೪–೮೩

ಕರೆಯಿಸಿಕೊಳ್ಳುತ್ತಿದ್ದಿತೆಂದು ತಿಳಿದುಬರುತ್ತದೆ. ಹೀಗೆ ಕೃತಿಯೊಂದು ಹುಟ್ಟಿ ಪ್ರತಿಷ್ಠೆಗೊಂಡ ಬಳಿಕ, ಪ್ರತಿರೂಪದಲ್ಲಿ ಸಂಖ್ಯಾವರ್ಧಿಸಿಕೊಳ್ಳುತ್ತ ಹೋಗುತ್ತಲಿದ್ದಿತು.

ಈ ರೀತಿ ಕೃತಿರಚನೆ ಸಮಾಪ್ತಿಯಾದ ಬಳಿಕ 'ಪ್ರತಿಷ್ಠೆ'ಯ ಹೆಸರಿನಿಂದ ಅದರ ಬಿಡುಗಡೆ ಸಮಾರಂಭವನ್ನು ಇಟ್ಟುಕೊಳ್ಳುವಂತೆ, ಪ್ರತಿರಚನೆಯ ಪ್ರಾರಂಭ–ಮುಕ್ತಾಯ, ಅದರ ಪ್ರತಿಯೊಂದು ಸಂಧಿಯ ಪ್ರಾರಂಭ–ಮುಕ್ತಾಯ ಸಂದರ್ಭಗಳಲ್ಲಿಯೂ ಸಮಾರಂಭ, ಪೂಜೆಗಳು ಆಗಾಗ ನೆರವೇರುತ್ತಿದ್ದವೆಂದು ತೋರುತ್ತದೆ. ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣವನ್ನು ಮುದ್ದೇಬಿಹಾಳದ ಚಿನಿವಾರ ಅವರ ಮನೆಯಲ್ಲಿ ನಕಲುಮಾಡಿದ ಸನ್ನಿವೇಶವನ್ನು ಆ ಹಸ್ತಪ್ರತಿ ಹೀಗೆ ವಿವರಿಸುತ್ತದೆ. "ಈ ವೀರಶೈವಾಮೃತ ಮಹಾಪುರಾಣವು ಬಹು ಜಾಗ್ರತೆಯಿಂದ। ಕಾಂಡಕಾಂಡಕ್ಕೆ ಗಣಾರಾಧನೆಯಿಂದ। ಆದ್ಯ ಆದ್ಯಕ್ಕೆ ಕರ್ಪುರಕಾಯಿಗಳಿಂದ ನಂದಾ ಜ್ಯೋತಿಯಿಂದ। ಮಹಾಶಾಂತಿಯಿಂದ ಸಮಾಪ್ತವಾಗಿರುವುದು"[೫] ಎಂಬ ವಿವರವನ್ನು ನೋಡಿದರೆ, ಹಸ್ತಪ್ರತಿಯ ಬರವಣಿಗೆ ಸಮಾರಂಭಪೂರ್ವಕ ಜರುಗುತ್ತಿದ್ದುದು ಸ್ಪಷ್ಟವಾಗುತ್ತದೆ. ಗ್ರಾತ್ರಬಾಹುಳ್ಯದ ಈ ಪುಸ್ತಕದ ಬರವಣಿಗೆಗೆ ಒಂದು ವರ್ಷ ಕಾಲವಾದರೂ ಹಿಡಿದಿರಬಹುದು. ಅಷ್ಟು ದೀರ್ಘ ಅವಧಿಯಲ್ಲಿ ಆಗಾಗ ಗಣಾರಾಧನೆ, ಪೂಜೆ ಇತ್ಯಾದಿಗಳು ಜರುಗಿದುದು ಗಮನಿಸಬೇಕಾದ ಅಂಶವಾಗಿದೆ.

ಕೃತಿಯೇ ಇರಲಿ, ಪ್ರತಿಯೇ ಇರಲಿ, ಅದರ ಉತ್ಪಾದನಾಕಾರ್ಯವು ಅಲೇಖನ ಹಂತ, ಲೇಖನಹಂತ, ಗ್ರಥನಹಂತ–ಎಂಬ ಮೂರು ಹಂತಗಳಲ್ಲಿ ಮುಕ್ತಾಯವಾಗುತ್ತಿದ್ದಿತು. ಅಲೇಖನ ಹಂತವೆಂಬುದು ತಾಳೆಗರಿ ಮತ್ತು ಕಾಗದಗಳನ್ನು ಸಂಗ್ರಹಿಸಿಕೊಳ್ಳುವುದು ಮತ್ತು ಬರವಣಿಗೆಗೆ ಯೋಗ್ಯವಾಗುವಂತೆ ಮಾಡಿಕೊಳ್ಳುವುದಾಗಿದೆ. ಓಲೆಯ ವ್ಯಾಪಾರಿ, ಕವಿ ಇಲ್ಲವೆ ಲಿಪಿಕಾರರು ತೊಡಗಿಕೊಳ್ಳುವ ಹಂತವಿದು. ಆಮೇಲಿನ ಲೇಖನಹಂತವು ಲೇಖನಕಾರ್ಯವಾಗಿದ್ದು, ಇಲ್ಲಿ ಕವಿ ಇಲ್ಲವೆ ಲಿಪಿಕಾರರು ಕಂಟ–ಮಸಿ ಬಳಸಿಕೊಂಡು ಲೇಖನಕಾರ್ಯ, ಮಸಿಲೇಪನಕಾರ್ಯವನ್ನು ಪೂರೈಸುತ್ತಾರೆ. ಗ್ರಥನಹಂತವೆಂಬುದು ಇಂದಿನ ಬೈಂಡಿಂಗ್ ರೀತಿಯದು. ಕಟ್ಟಿಗೆ ಫಲಕಗಳ ಸಿದ್ಧತೆ, ಬಣ್ಣಲೇಪನ, ಚಿತ್ರಬಿಡಿಸುವಿಕೆ, ದಾರ ಪವಣಿಸುವಿಕೆ, ಅರಿವೆ ಹೊದಿಸುವಿಕೆ ಇತ್ಯಾದಿ ಕೆಲಸಗಳು ಈ ಹಂತದಲ್ಲಿ ನಡೆಯುತ್ತವೆ. ಈ ಮೂರೂ ಪ್ರಯತ್ನಗಳನ್ನು ಒಳಗೊಳ್ಳುವ ಉತ್ಪಾದನಾಹಂತದ ಘಟಕವೆನಿಸುವ ಲೇಖನ ಸಾಮಗ್ರಿ, ಲಿಪಿಕಾರ–ಲಿಪಿ–ಭಾಷೆ, ಗ್ರಂಥವಿನ್ಯಾಸ–ಗ್ರಥನಕ್ರಿಯೆಗಳನ್ನು ಇಲ್ಲಿ ವಿವೇಚಿಸಬಹುದಾಗಿದೆ.

ಲೇಖನ ಸಾಮಗ್ರಿ :

ಲೇಖನ ಸಾಮಗ್ರಿ ಆಧಾರ, ಆಧೇಯ, ಲೇಪನವಸ್ತು–ಎಂದು ಮೂರು ಬಗೆಯಾಗಿದೆ. ಹಸ್ತಪ್ರತಿಗೆ ಸಂಬಂಧಿಸಿದಂತೆ ಬರೆಯಲು ಆಧಾರವಾಗಿರುವ ತಾಳೆಗರಿ, ಕಾಗದ, ಅರಿವೆ, ಹಲಗೆ, ಚರ್ಮಗಳು ಆಧಾರ. ಬರೆಯುವ ಸಾಧನಗಳಾದ ಕಂಟ, ಲೇಖನಿ ಇತ್ಯಾದಿಗಳು ಆಧೇಯ. ಕಪ್ಪು, ಮಸಿ, ಬಳಪಗಳು ಲೇಪನವಸ್ತುಗಳೆನಿಸುತ್ತವೆ.

---

೫. ಧಾವಭಾಂ ೧೩೩೭

೧. ಅಲೇಖನ ಹಂತ

I.ಆಧಾರ

ಅ. ತಾಳೆಗರಿ : ತಾಳೆಗರಿಯು ತಾಳೆ ಮರದ ಎಲೆಯಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಈ ಮರಗಳು ಪಶ್ಚಿಮಘಟ್ಟದಲ್ಲಿ ಬೆಳೆಯುತ್ತವೆ. ಇದಕ್ಕೆ 'ಪಡುವಣ ದೆಸೆಯಿಂದೊಪ್ಪುತ್ತಿರ್ಪ ಲವಣಾಂಬುಧಿಗೆ ಪುರ್ಬುಂ ಪುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದರಿದ ಮಂಡೆ ಮೌನವ್ರತದಿಂದೊಪ್ಪುತ್ತಿರ್ದ ದಿವ್ಯತಾಳಪತ್ರಮಂ ತಂದು'[೬] ಎಂಬ ಮಾತು ಪೂರಕವಾಗಿದೆ. ಕುಂಭಕೋಣಂ ಊರಿನ ಅರುಣಾಚಲಂ ಎಂಬ ಕವಿ ತಾಳೆಗರಿಯ ಮಹತ್ವವನ್ನು ಕುರಿತು 'ತಾಳವಿಲಾಸ' ಹೆಸರಿನ ತಮಿಳು ಪದ್ಯಕೃತಿಯನ್ನೇ ರಚಿಸಿದ್ದಾನೆ. ತಮಿಳುನಾಡನ್ನು "ತಾಳೆಮರಗಳ ತೊಟ್ಟಿಲು" ಎಂದು ಕರೆದ ಈತನು ತಾಳೆಯಲ್ಲಿ ೮೦೧ ಗುಣಗಳನ್ನು ಪಟ್ಟಿಮಾಡಿದ್ದಾನೆ. ತಾಳೆಯಲ್ಲಿ ತಾಳ, ಶ್ರೀತಾಳ ಎಂದು ಎರಡು ವಿಧ. ಇವುಗಳಲ್ಲಿ ತಾಳದ ಆಕಾರ ಸಣ್ಣದು, ಬಿರುಸು. ಇದು ಬಗ್ಗಿಸಿದರೆ ಮುರಿಯುತ್ತದೆ. ಶ್ರೀತಾಳದ ಆಕಾರ ದೊಡ್ಡದು, ಮೃದು. ಬಗ್ಗಿಸಿದರೆ ಮಣಿಯುತ್ತದೆ. ಪ್ರಾಚೀನ ಕರ್ನಾಟಕದ ಬರವಣಿಗೆಯಲ್ಲಿ ಶ್ರೀತಾಳದ ಬಳಕೆ ಹೆಚ್ಚು. ಕವಿರಾಜಮಾರ್ಗ ಕಾಲದಿಂದಲೂ ನಮ್ಮಲ್ಲಿ ತಾಳೆಮರದ ಉಲ್ಲೇಖ ಕಂಡುಬರುತ್ತದೆ. ತಾಳ, ಶ್ರೀತಾಳ, ತಾಳೆ, ಹಿಂತಾಳ, ಕರತಾಳ, ತಾಲ–ಎಂಬ ಪದಗಳು ನಮ್ಮ ಸಾಹಿತ್ಯದಲ್ಲಿ ಬಳಕೆಯಗಿವೆ.

ಅರಬ ಪ್ರವಾಸಿ ಅಲ್ಬೆರುನಿ (೧೦ನೆಯ ಶತಮಾನ), ನಿಕೋಲೋ ಕೊಂತಿ (೧೫ನೆಯ ಶತಮಾನ), ಅಬ್ದುಲ್‌ರಜಾಕ, ದುಆರ್ತ ಬಾರ್ಬೋಸಾ (೧೬ನೆಯ ಶತಮಾನ), ಪೀಟರ್ ಮಂಡಿ (೧೭ನೆಯ ಶತಮಾನ), ನಿಕೋಲೋ ಮನೂಚಿ ಇವರು ತಾಳೆಗರಿಯ ಉಲ್ಲೇಖ ಮಾಡುತ್ತಾರೆ. ಇದನ್ನು ರಾಜನ ಕರಣಿಕರು ಬಳಸುತ್ತಿದ್ದುದನ್ನು ಬಾರ್ಬೋಸಾ, ಪೀಟರ್‌ಮಂಡಿ ಹೇಳುತ್ತಾರೆ. ಅಬ್ದುಲ್ ರಜಾಕ ಈ ಬರವಣಿಗೆ ವರ್ಣರಹಿತವೆನ್ನುವುದನ್ನು ನೋಡಿದರೆ, ಕಪ್ಪುಲೇಪನ ಮಾಡದ ತಾಳೆಗರಿಯನ್ನೇ ಇವನು ಸೂಚಿಸುವಂತಿದೆ. ಬಾರ್ಬೋಸಾ "ಬರೆಯುವ ಮೊದಲು ಗರಿಯ ಮೂಲೆಯನ್ನು ಕೊಯ್ದು ಆ ತುಂಡಿನ ಮೇಲೆ ದೇವರ ಹೆಸರು ಬರೆದು ಒಗೆಯುತ್ತಾರೆ" ಎಂದು ತಿಳಿಸುತ್ತಾನೆ. ಮನೂಚಿಯು ಹೆಣ್ಣು ಋತುಮತಿಯಾದ ಸುದ್ದಿಯನ್ನು ಅರಿಷಿಣ ಹಚ್ಚಿದ ತಾಳೆಯ ಮೇಲೆ ಬರೆದು ತಿಳಿಸುತ್ತಾರೆ ಎನ್ನುತ್ತಾನೆ.[೭] ಇಂದಿಗೂ ಪತ್ರ(Letter)ಗಳಿಗೆ ಓಲೆಯೆಂಬುದು ಬಳಕೆಯಾಗುವುದನ್ನು ನಾವು ಸ್ಮರಿಸಬಹುದು. ದಲೆವಾಲೆ ಇಟಲಿಯ ಗ್ರಂಥಭಾಂಡಾರದಲ್ಲಿ ಇಡಲು ತಾನು ಒಂದೆರಡು ತಾಳೆ ಗ್ರಂಥಗಳನ್ನು ಸಂಗ್ರಹಿಸಿದುದಾಗಿ ಹೇಳುತ್ತಾನೆ. ಹೀಗೆ ಹೆಚ್ಚು ಪ್ರಯೋಜನಕಾರಿಯಾಗಿರುವುದರಿಂದ ಇದರ ಬಗ್ಗೆ ಜನರಲ್ಲಿ ಭಕ್ತಿ ಹೆಚ್ಚು. ಈಗಲೂ ವೀರಶೈವ ವ್ಯಕ್ತಿಯ ಅಂತ್ಯಕ್ರಿಯಾ ಸಂದರ್ಭದಲ್ಲಿ ಮಂತ್ರಾಕ್ಷರಗಳನ್ನು ಗರಿಯ ಮೇಲೆಯೇ ಬರೆದು ಸಮಾಧಿಯಲ್ಲಿಡುವುದನ್ನು ಇಲ್ಲಿ ನೆನೆಯಬಹುದು.

"೧೯ನೆಯ ಶತಮಾನದಲ್ಲಿ ಕೂಡ ತಾಳಪತ್ರದ ಮೇಲೆ ಬರೆಯುವುದು ನಿಂತು ಹೋಗಿರಲಿಲ್ಲ. ಕ್ರಿ.ಶ.೧೮೨೨ ರಲ್ಲಿ ಶ್ರೀರಾಮಾಚಾರ್ಯರಿಂದ ಕರ್ನಾಟಕ ಕಾದಂಬರಿಯ ಓಲೆಯೆ ಪ್ರತಿ ಲಿಖಿತವಾದಂತೆ

೬. ಮೈಹಸೂ I ಪೀಠಿಕೆ X
೭. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ (ಬಿ.ಕೆ. ಹಿರೇಮಠ) ಪುಟ ೨೨–೨೫.

ತಿಳಿದುಬರುತ್ತದೆ. ಅಚ್ಚಾದ ಗ್ರಂಥಗಳನ್ನು ಕೂಡ ಓಲೆಗಳ ಮೇಲೆ ಬರೆದಿರುವುದು ಕಂಡುಬರುತ್ತದೆ. ಶ್ರೀಮತ್ ಚನ್ನಪುರಿ (ಮದ್ರಾಸ) ಹಿಂದೂಭಾಷಾಸಂಜೀವಿನಿ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾದ ಜೈಮಿನೀಭಾರತದ ಒಂದು ಪ್ರತಿಯನ್ನು ತಾಳಪತ್ರದ ಮೇಲೆ ಎರಡು ಸಂಪುಟಗಳಲ್ಲಿ ಲಿಖಿಸಿದೆ"* ಎಂಬ ಡಿ.ಎಲ್.ಎನ್.ಮಾತು ಗಮನಾರ್ಹವಾಗಿದೆ. ಸರಿಯಾಗಿ ಬಳಸಿದರೆ ಈ ಓಲೆ ಪ್ರತಿಗಳ ಆಯುಷ್ಯ ಒಂದು ಸಾವಿರ ವರ್ಷ.

ಬೆಳಗಾವಿ ಶಾಸನದಲ್ಲಿ ಬರುವ "ಓಲೆಯ ಹೇರಿಂಗೆ ಓಲೆಯ ಸೂಡೆರಡು, ಆ ಹೊರೆಗೆ ಸೂಡೊಂದು"[೮] ಎಂಬ ಮಾತು, ಇಂದಿನ ಕಾಗದ ವ್ಯಾಪಾರಿಗಳಂತೆ ಪ್ರಾಚೀನ ವ್ಯಾಪಾರಿಗಳೂ ಘಟ್ಟದಿಂದ ಈ ಓಲೆಗಳನ್ನು ತಂದು, ಮಾರಾಟಮಾಡುತ್ತಿದ್ದರೆಂದು ತಿಳಿಸುತ್ತದೆ. 'ಪತ್ರಿಕ ಓಲೆಯ ಮಾಳ್ಪವಂ' ಎಂದು ಮಂಗರಾಜ ಹೇಳುವುದನ್ನು ನೋಡಿದರೆ, ಬಹುಶಃ ವೀರಶೈವ ವರ್ತಕ ವರ್ಗದ 'ವಾಲಿ' ಅಡ್ಡಹೆಸರಿನ ಮನೆತನದವರು ಮೂಲತಃ ಈ ಉದ್ಯೋಗವನ್ನೇ ಮಾಡುತ್ತಿದ್ದರೆಂದು ಭಾವಿಸಬಹುದಾಗಿದೆ. ಇವರು ಉರುಟು ಎಲೆಗಳನ್ನು ಇಲ್ಲವೆ ಬರೆಯಲು ಹದಮಾಡಿದ ಎಲೆಗಳನ್ನು ಮಾರಾಟ ಮಾಡುತ್ತಿರಬಹುದು. ೧೨ನೆಯ ಶತಮಾನದಲ್ಲಿ ಓಲೆಯ ರಾಮಯ್ಯ, ಓಲೆಯ ಶಾಂತಯ್ಯ ಎಂಬ ಶರಣರು, ಆಮೇಲೆ ಕಡವೂರು ಓಲೆಯ ರಾಮಣಯ್ಯ, ತಿರುವಾರೂರು ಓಲೆಯ ತಮ್ಮಣ್ಣ, ತಿರುಚಿಟ್ಟಪಳ್ಳಿಯ ಓಲೆಯ ತಿಪ್ಪಣ್ಣ ಎಂಬವರು ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುತ್ತಾರೆ.

> ತಾಡಪತ್ರಂ ದೃಢಂ ಸೌಮ್ಯಂ ಋಜುಸಾಗ್ರಂ ದ್ವಿಧಾಕೃತಂ।
> ಮೃದುಲಂ ಯತ್ಪ್ರಶಸ್ತಂ ತತ್ ಮತಂ ಲೇಖಾವಿಲೇಖನೆ॥
> ಕರ್ಕಶಂ ಕಲ್ಮಷಂ ವಕ್ರಂ ಹೀನಾಗ್ರಂ ಸ್ಫುಟಿತಂ ಯುಗಂ।
> ತಾಲಪತ್ರಂ ನ ತತ್ ಶ್ರೇಷ್ಠಂ ಮತಂ ಲೇಖಾವಿಲೇಖನೇ॥

ಎಂಬ ಉಲ್ಲೇಖ ಉತ್ತಮ-ಅನುತ್ತಮ ಗರಿಗಳ ಬಗ್ಗೆ ವಿವರಣೆ ನೀಡುತ್ತದೆ. "ತಾಳೆ ಯೋಲೆಗಳು ಭದ್ರವಾಗಿ, ನಯವಾಗಿ, ನೇರವಾಗಿ, ಅಂಚು ತುದಿಗಳು ಸರಿಯಾಗಿರಬೇಕು, ಮೃದುವಾಗಿರಬೇಕು. ಇಂತಹವು ಲೇಖನಕ್ಕೆ ಪ್ರಶಸ್ತವಾದುವು. ಒರಟೊರಟಾಗಿ ಕೊಳಕುಳ್ಳುವಾಗಿ, ಸೊಟ್ಟಸೊಟ್ಟವಾಗಿ, ತುದಿ ಅಂಚುಗಳು ಸರಿಯಾಗಿಲ್ಲದ, ಸೀಳಿಕೊಂಡಿರುವ ತಾಳಪತ್ರಗಳು ಲೇಖನಕ್ಕೆ ಶ್ರೇಷ್ಠವಾದುವಲ್ಲ** ಎಂದು ಈ ಶ್ಲೋಕಗಳ ಅರ್ಥ.

ತಾಳೆಗರಿಗಳನ್ನು ಬರವಣಿಗೆಗೆ ಸಿದ್ಧಮಾಡುವ ವಿಧಾನದ ಬಗ್ಗೆ ಬಹುಶಃ ಖಚಿತವಾಗಿ ತಿಳಿದುಬಂದಿಲ್ಲ. "ಮರದಿಂದ ಎಲೆಯ ಮೋತೆ ಹೊರಟು, ಇನ್ನೇನು ಎಲೆ ಬಿಚ್ಚಿ ಹರಡಿಕೊಳ್ಳುತ್ತದೆ ಎನ್ನುವಷ್ಟರಲ್ಲಿ ಅವುಗಳನ್ನು ಕತ್ತರಿಸಿ ತಂದು, ಒಂದು ವಾರ ಕಾಲ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಅನಂತರ ಅವುಗಳನ್ನು ೪ ತಿಂಗಳ ವರೆಗಾದರೂ ನೆಲದಲ್ಲಿ ಹೂಳಿ, ಮತ್ತೆ ತೆಗೆದು ಶುದ್ಧಗೊಳಿಸಿ, ಬೇಕಾದ ಅಳತೆಗೆ ಕತ್ತರಿಸಿ, ಅಡಿಗೆ ಮನೆಯ ಅಟ್ಟಗಳಲ್ಲಿ ಇಡುತ್ತಿದ್ದರು. ಅವುಗಳು ಅಡಿಗೆಮನೆಯ ಹೊಗೆಯಿಂದ ಹದಗೊಳ್ಳುತ್ತಿದ್ದವು. ಹೀಗೆ ಹದಗೊಂಡುವನ್ನು ತಮಗೆ ಬೇಕಾದಾಗ ತೆಗೆದು

---

* ಕ.ಗ್ರ.ಸಂ. (ಡಿ.ಎಲ್.ಎನ್) ೨೮, ೩೯

೮. ಶಾಸನ ಸಾಹಿತ್ಯ ಸಂಚಯ (ಅಣ್ಣಿಗೇರಿ- ಮಲ್ಲಾರಿ). ಪು-೧೫೨

** ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಮೇಲ್ಮೆ (ಕೆ.ಎಸ್. ಮಹಂತದೇವರು) ಪ್ರ.ಕ.ಸಂ. ೧೮೪

ಉಪಯೋಗಿಸುತ್ತಿದ್ದರು"* ಎಂದು ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನ ಡೈರೆಕ್ಟರ್ ಬಿ.ಭಟ್ಟಾಚಾರ್ಯ ಹೇಳಿದರೆ, "ಗರಿಗಳನ್ನು ಬಿಸಿಲಿನಲ್ಲಿ ಒಣಗಿಸಬೇಕು. ಅನಂತರ ಬಿಸಿನೀರಿನಲ್ಲಿ ಕುದಿಸಿ ಒಣಗಿಸಬೇಕು. ಅವು ಚೆನ್ನಾಗಿ ಒಣಗಿದ ಮೇಲೆ ಗಾರೆಯ ಕಲ್ಲಿನಿಂದಲೋ ಶಂಖದಿಂದಲೋ ಉಜ್ಜಿ ನುಣುಪುಮಾಡಬೇಕು. ಅನಂತರ ಅವನ್ನು ತಕ್ಕಂತಹ ಅಳತೆಗೆ ಕತ್ತರಿಸಬೇಕು" ಎಂದು ಬಿಮಲ್‌ಕುಮಾರ ದತ್ತ ಹೇಳುತ್ತಾರೆ. ಅದೇನೇ ಇರಲಿ, ಬರೆವಣಿಗೆಗೆ ಹದಮಾಡಿದ ಪತ್ರವನ್ನು 'ಅಳಕ' (ಅಲೇಖ)ವೆಂದೂ ಕರೆಯುತ್ತಿರಬಹುದು. ಪಂಪನಲ್ಲಿ ಬರುವ 'ನುಣ್ಣನಪ್ಪಳಕದ ಕೇಡು' (ಪಂಭಾ ೧-೧೨) ಎಂಬುದು ಇದನ್ನೇ ಸೂಚಿಸುತ್ತಿರಬಹುದು.

ಬರೆಯುವ ಮೊದಲು ಕಟ್ಟುವುದಕ್ಕೆ ಅನುಕೂಲವಾಗುವುದರ ಸಲುವಾಗಿ ಪತ್ರಗಳ ಉದ್ದಳತೆ ಕಡಿಮೆಯಿದ್ದರೆ ಮಧ್ಯದಲ್ಲಿ ಒಂದು ರಂಧ್ರ, ಹೆಚ್ಚು ಇದ್ದರೆ ಎರಡು ರಂಧ್ರ, ಇನ್ನೂ ಹೆಚ್ಚು ಇದ್ದರೆ ಮೂರು ರಂಧ್ರಗಳನ್ನು ಮಾಡುತ್ತಾರೆ. ಈ ಗರಿಗಳ ಅಗಲಳತೆ ಅರ್ಧ ಅಂಗುಲದಿಂದ ಮೂರು ಅಂಗುಲ, ಉದ್ದಳತೆ ಹೆಚ್ಚೆಂದರೆ ಮೂರು ಅಡಿ ಇರಬಹುದು. ತಾನು ಲಿಪಿಸಲಿರುವ ಕೃತಿ ಅಥವಾ ಕೃತಿಗಳಿಗೆ ಸಾಲುವಷ್ಟು ಗರಿಗಳನ್ನು ಲಿಪಿಕಾರರು ಏಕಕಾಲಕ್ಕೆ ಸಂಗ್ರಹಿಸುತ್ತಿದ್ದರೆಂದು ಕಾಣುತ್ತದೆ. ಈ ವರೆಗಿನ ಹಸ್ತಪ್ರತಿ ಕಟ್ಟುಗಳಲ್ಲಿ ಬೇರೆ ಬೇರೆ ಸ್ವರೂಪದ ಎಲೆಗಳ ಕಲಬೆರಕೆ ಸಾಮಾನ್ಯವಾಗಿ ಕಂಡುಬರುವುದಿಲ್ಲ ವಾದುದರಿಂದ ಹೀಗೆ ಹೇಳಬಹುದಾಗಿದೆ. ಈ ಎಲೆಯ ಕಟ್ಟುಗಳು ಬರವಣಿಗೆಗೆ ಅಣಿಯಾಗುವ ಸ್ವರೂಪವನ್ನು "ದಿವ್ಯತಾಳಪತ್ರಮಂ ತಂದು, ದ್ವಿತೀಯ ರಂಧ್ರಮಂ ಮಾಡಿ, ಬಿಂಗದ ಹೊರೆಯಂತೊಂದೊಂದಂ ಪೊಂದಿಸಿಕ್ಕೆಲದಲುಭಯಂ ಪಲಗೆಯುಷ್ಟಲೋವೆಯುಷ್ಟ ಮೂಲೆಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯಶಿವಾಲಯ"[೯]ವೆಂದು ಒಬ್ಬ ಲಿಪಿಕಾರ ವರ್ಣಿಸಿದುದನ್ನು ಗಮನಿಸಬಹುದು.

ಬ. ಕಾಗದ : ಬರೆಯಲು ತಾಳೆಗರಿಯಂತೆ ಉಪಯೋಗಿಸಲ್ಪಡುತ್ತಿದ್ದ ಇನ್ನೊಂದು ಸಾಧನವೆಂದರೆ ಕಾಗದ. ಅಭಿನವ ಮಂಗರಾಜನ (೧೩೯೮) 'ಪತ್ತಳಿಕೆಯೆನಲು ಕಾಗದಮಕ್ಕುಂ'[೧೦] ಎಂಬ ಉಲ್ಲೇಖ, ಇದು ೧೪ನೇ ಶತಮಾನದಷ್ಟು ಪೂರ್ವದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ್ದಿತೆಂದು ಸ್ಪಷ್ಟಪಡಿಸುತ್ತದೆ. ಕ್ರಿ.ಶ. ೧೦೨ ರಲ್ಲಿ ತ್ಸಾಯ್‌ಲುಪ್ ಎಂಬ ಚೀನೀ ವ್ಯಕ್ತಿಯಿಂದ ಕಂಡುಹಿಡಿಯಲ್ಪಟ್ಟ ಇದು, ಮಹಮ್ಮದೀಯರ ಮೂಲಕ ಕಾಗಜ್ ಹೆಸರಿನಿಂದ ಭಾರತವನ್ನು, ಬಳಿಕ ಕರ್ನಾಟಕವನ್ನು ಪ್ರವೇಶಿಸಿತು.[೧೧]

ಕಾಗದಪ್ರತಿಗಳನ್ನು ಸ್ವದೇಶಿಕಾಗದ ಮತ್ತು ವಿದೇಶಿಕಾಗದವೆಂದು ವರ್ಗೀಕರಿಸಬಹುದು. ಸ್ವದೇಶಿ ಕಾಗದ ಬೆಳೆದುಬರುತ್ತಿದ್ದಂತೆ ೧೮ನೆಯ ಶತಮಾನದ ಸುಮಾರಿಗೆ ನುಣುಪಾದ ವಿದೇಶಿ ಕಾಗದ ಬಳಕೆಯಾಗತೊಡಗಿತು. ಸ್ವದೇಶಿ ಕಾಗದವನ್ನು ಗೃಹ ಕೈಗಾರಿಕೆ ಎಂಬಂತೆ ಹತ್ತಿಬಟ್ಟೆಯ ಚೂರುಗಳನ್ನು ನೀರಿನಲ್ಲಿ ನೆನೆಹಾಕಿ ತಯಾರಿಸುತ್ತಿದ್ದರು. ಬಟ್ಟೆಯ ತುಂಡಿಗೆ ಕೋರಿ ಎಂದು ಹೆಸರು. ಹೀಗಾಗಿ

---

* ಕನ್ನಡ ಹಸ್ತಪ್ರತಿಗಳ ಇತಿಹಾಸ (ಎಚ್. ದೇವೀರಪ್ಪ). ಪು-೧೪

೯. ಮೈಹಸೂ I ಪೀಠಿಕೆ X

೧೦. ಅಭಿನವಾಭಿಧಾನ ೧೦೫- ೧೫.

೧೧. ಭಾರತೀಯ ಗ್ರಂಥಸಂಪಾದನ ಪರಿಚಯ ೧೯ (ಅ.ಟಿ.)

ಇಂಥ ಕಾಗದವನ್ನು ಕೋರಿಕಾಗದ ಎಂದು ಕರೆಯುತ್ತಿದ್ದರು. ದಪ್ಪನೆಯ ಇದು ಕಂದುಬಣ್ಣದ್ದಾಗಿದ್ದು ೬ ಅಂಗುಲ ಅಗಲ, ೧೨ ಅಂಗುಲ ಉದ್ದದ ವರೆಗಿನ ಸಣ್ಣ ದೊಡ್ಡ ಆಕಾರಗಳಲ್ಲಿ ಸಿಗುತ್ತದೆ. ಕಟ್ಟಲು ಅನುಕೂಲವಾಗುವಂತೆ ಕೋರಿ ಕಾಗದಗಳ ಮಧ್ಯದಲ್ಲಿ ರಂಧ್ರಮಾಡಿ ದಾರದಿಂದ ಪವಣಿಸುತ್ತಿದ್ದರು. ಕೆಲವೊಮ್ಮೆ ಮಗ್ಗುಲಿಗೆ ಹೊಲಿಗೆ ಹಾಕುತ್ತಿದ್ದು, ಇಂಥವುಗಳನ್ನು ವಹಿ ಎಂದು ಕರೆಯುತ್ತಿದ್ದರು. ವಿದೇಶಿಕಾಗದವು ಕೋರಿಕಾಗದಕ್ಕಿಂತ ತೆಳ್ಳಗೆ ಮತ್ತು ನುಣುಪು ಇದ್ದು, ಸರಾಗವಾಗಿ ಬರೆಯಲು ಅನುಕೂಲವಾಗಿರುತ್ತದೆ. ನೀಲಿ ಬಣ್ಣದ ವಿದೇಶಿಕಾಗದಗಳನ್ನೂ ಬರವಣಿಗೆಗಾಗಿ ಪ್ರಾಚೀನರು ಬಳಸುತ್ತಿದ್ದರು. ಇವುಗಳನ್ನು 'ನೀಲಿಹೊತ್ತಿಗೆ' ಎಂದು ಕರೆಯುತ್ತಿದ್ದರು. ಬಹುಶಃ ವೈರಾಗ್ಯ ವಿಷಯದ ಕೃತಿಗಳಿಗಾಗಿ ಈ ಕಾಗದ ಉಪಯೋಗಿಸುವ ಪದ್ಧತಿ ಬಳಕೆಯಲ್ಲಿದ್ದಿತು. ಅದಕ್ಕಾಗಿಯೇ ಯುವಕರಿಗೆ ನೀಲಿಹೊತ್ತಿಗೆ ಓದಬಾರದೆಂದು ಹೇಳುತ್ತಿದ್ದರೆಂದು ಕಾಣುತ್ತದೆ.

ಸಾಲುಗಳು ವಕ್ರವಾಗಬಾರದೆಂದು ಬರೆಯುವ ಮೊದಲು ಕಾಗದದ ಮೇಲೆ ದಾರದ ರೇಖೆಗಳನ್ನು ಮೂಡಿಸುತ್ತಿದ್ದರು, ಮತ್ತು ಹುಳು ಮುಟ್ಟಬಾರದೆಂದು ಪಟಕದ ನೀರಿನಲ್ಲಿ ಅದ್ದುತ್ತಿದ್ದರು. ಈ ವಿಷಯ "ಮೊದಲು ಪಟಕದ ನೀರಿನಲ್ಲಿ ಎದ್ದಿ ಒಣಗಿಸಬೇಕು. ನಂತರ ಒಂದೊಂದು ಓಲೆಗೆ ಎಷ್ಟೆಷ್ಟು ವಳಿಗಳನ್ನು ಬರೆಯಬೇಕೊ, ಅಷ್ಟು ದಾರದ ಸುತ್ತುಗಳನ್ನು ವಾಲಿಗೆ ಸರಿಯಗಿ ಹಲಗೆಯಲ್ಲಿ ಸುತ್ತಿ, ಆ ದಾರ ಸುತ್ತಿದ ಹಲಗೆಯ ಮೇಲೆ ಎಳೆಯಬೇಕು (ವತ್ತಬೇಕು). ಅಂದರೆ ಗೆರೆಗಳು ಮೂಡುವವು. ಆ ಗೆರೆಗಳ ಮೇಲೆ ಬರೆದರೆ ವಳಿಗಳು ಸೊಟ್ಟಾಗುವದಿಲ್ಲ. ಪಟಕದ ನೀರಿನಲ್ಲಿ ತೋಯಿಸುವುದರಿಂದ ವಾಲಿಗಳಿಗೆ ಎಷ್ಟು ದಿವಸಗಳಿಗಾದರೂ ನುಶಿ ಮುಟ್ಟುವದಿಲ್ಲ. ನಂತರ ಅಲತೆಯ ಮಸಿಯಿಂದ ಬರೆಯಬೇಕು. ಅಂದರೆ ಅಕ್ಷರಗಳು ತೊಳೆದರೆ ಸಹ ಹೋಗುವುದಿಲ್ಲ." "ಇನ್ನು ಪಟಕದ ನೀರು: ಅಂದರೆ ಪಾವಸೇರು ಪಟಕವನ್ನು ಒಂದು ಧಡೆ ನೀರಿನಲ್ಲಿ ಪುಡಿಮಾಡಿ ಹಾಕಬೇಕು. ಈ ನೀರನ್ನು ಪರಾತದಲ್ಲಿ ಹಾಕಿ ಹಾಳಿಯನ್ನು ಎದ್ದಿ ತೆಗೆದು ಒಣಗಿಸಬೇಕು. ಈ ನೀರನ್ನು ಹೆಚ್ಚಿಗೆ ಬೇಕಾದರೆ ಈ ಪ್ರಮಾಣದಂತೆ ಹೆಚ್ಚಿಗೆ ಮಾಡಿಕೊಳ್ಳಬೇಕು"[೧೨] ಎಂಬ ಉದ್ಧರಣೆಗಳಿಂದ ತಿಳಿದುಬರುತ್ತದೆ.

ಕ. ಅರಿವೆ : ತಾಳೆಗರಿ, ಸ್ವದೇಶಿಕಾಗದ, ವಿದೇಶಿ ಕಾಗದಗಳನ್ನು ಬಿಟ್ಟರೆ ನಿರೂಪ ಮೊದಲಾದವುಗಳ ಬರವಣಿಗೆಗಾಗಿ ಕೆಲವೊಮ್ಮೆ ಅರಿವೆಯನ್ನು ಬಳಸುತ್ತಿದ್ದರೂ, ಗ್ರಂಥಲೇಖನಕ್ಕೆ ಬಳಸಿಲ್ಲವೆಂದು ತೋರುತ್ತದೆ. 'ಶರಮೊಂದಂ ತೆಗೆದು ನಿಜೋದರದಿಂ ಲೆಕ್ಕಣಿಕೆ ಮಾಡಿ, ಗಜಮದ ಮಸಿಯಂ ತರಿಸಿ, ಪತಾಕಾಪಟದೊಳ್ ಬರೆದಟ್ಟಿದನ್'[೧೩] ಎಂಬ ಗದಾಯುದ್ಧದ ಮಾತನ್ನು ಇಲ್ಲಿ ಗಮನಿಸಬಹುದು.

ಇದಲ್ಲದೆ ಅರಿವೆಯಿಂದ ಮಾಡಿದ 'ಕಡತ, ತಾತ್ಪೂರ್ತಿಕ ಬರವಣಿಗೆಗಾಗಿ ಬಳಕೆಯಾಗುತ್ತಿತ್ತೇ ಹೊರತು, ಬಹುಕಾಲ ಉಳಿಯುವ ಗ್ರಂಥಲೇಖನಕ್ಕೆ ಅಲ್ಲ. ದಪ್ಪನೆಯ ಅರಿವೆಗೆ ಕರಿಯ ಬಣ್ಣದ ಸರಿ ಸವರಿ ಸಿದ್ಧಮಾಡುತ್ತಿದ್ದ ಇದನ್ನು, ಸುತ್ತಿ ಇಲ್ಲವೆ ಮಡಿಸಿ ಇಡುತ್ತಿದ್ದರು. ಅಳಿಸಿ ಮತ್ತೆ ಬರೆಯಲು ಅನುಕೂಲವಾಗುತ್ತಿದ್ದ ಇದರ ಉಲ್ಲೇಖ ಕರ್ನಾಟಕದಲ್ಲಿ ಮಧ್ಯಯುಗದಷ್ಟು ಪ್ರಾಚೀನ.

---

೧೨. ಕನ್ನಡ ಗ್ರಂಥಸಂಪಾದನ ಶಾಸ್ತ್ರ (ಎಂ.ಎಂ. ಕಲಬುರ್ಗಿ). ಅನುಬಂಧ
೧೩. ಗದಾಯುದ್ಧ, ೬-೨.

"ಅಂತು ಭರತಾವನೀಮಂಡಳ ಷಟ್ಖಂಡಮಂ ಕಡತಕ್ಕೆ ತಂದು"[೧೪]

"ಕಡತಕ್ಕೇರಿತ್ತು ನಾಲ್ಕುಂ ಕಡಲ ಕಡೆವರಂ ಧಾತ್ರಿ"[೧೫]

".... ಚೇರಮನ ಚೋಳನ ಪಾಂಡ್ಯನ ನಾಡೆ ಕೈಗೆವಂ

ದುದು ಕಡತಕ್ಕಮುಂಡಿಗೆಗಮೋಲೆಗಮೀ ಶುಭತುಂಗದೇವನಾ"[೧೬]

ಎಂಬ ಇಲ್ಲೇಖಗಳು ಕರ್ನಾಟಕದಲ್ಲಿ ಬಳಕೆಯಾಗುತ್ತಲಿದ್ದ ಕಡತಗಳ ಪ್ರಾಚೀನತೆಯನ್ನು ಸೂಚಿಸುತ್ತವೆ. ಶಾಸನಗಳಲ್ಲಿ ಕಡತವೆರ್ಗ್ಗಡೆ ಪದವಿದೆ. ಕಡತದ ಚಾವಡಿಯ ಉಲ್ಲೇಖವೂ ಕೆಲವೆಡೆ ಬರುತ್ತದೆ. ಕನ್ನಡ ಕವಿಗಳೂ ಈ ಪದವನ್ನು ಆಗಾಗ ಬಳಸಿದ್ದಾರೆ. ಮಕ್ಕಳು ಸಾಲೆಗೆ ಹೋಗುವಾಗ ಕಡತವನ್ನು ಒಯ್ಯುತ್ತಿದ್ದರೆಂದು ಪಾಯಣವರ್ಣಿ ಹೇಳುತ್ತಾನೆ.[೧೭] ಕಾವ್ಯದ ಕಚ್ಚಾ ಬರವಣಿಗೆಗೂ ಇದನ್ನು ಬಳಸುತ್ತಿರಬೇಕು. "ಬರಹವನರಿಯೆನಾ ಪದವಿಟ್ಟು ಕಡತದೊಳು ಮಾಡಿದ ಕೃತಿಯಲ್ಲ" ಎಂಬ ಕನಕದಾಸನ ಮಾತು ಇದನ್ನೇ ಸೂಚಿಸುತ್ತದೆ.[೧೮] ಮದ್ರಾಸ ಪ್ರಾಚ್ಯಸಂಶೋಧನಾಲಯದಲ್ಲಿ ಕೆಳದಿನೃಪವಿಜಯವನ್ನು ಬರೆದ ಒಂದು ಕಡತವಿದೆಯೆಂದು ಆ ಸಂಸ್ಥೆಗೆ ಸಂಬಂಧಿಸಿದ ಹಸ್ತಪ್ರತಿ ಸೂಚಿ VI–೧೧೨೪ದಿಂದ ತಿಳಿದುಬರುತ್ತದೆ. ಇಲ್ಲಿಯೇ ೧೧೨೫ನೆಯ ನಂಬರಿನ ಪ್ರತಿಯಲ್ಲಿ ಕೆಳದಿನೃಪವಿಜಯವನ್ನು ಕುರಿತಂತೆ "ಶಕವರ್ಷ ೧೬೨೭ ನೆಯ ಕ್ರೋಧನ ಸಂ॥ ದ ಬ॥ ೧೨ ಉ ಈ ವಂಶಾವಳಿ ಪ್ರತಿಯನ್ನು ಫರಂಜಿ ಮೇಜರ್ ಮಕ್ಕಂಜಿ ಸಾಹೇಬರ ಕಡೆ ನಾರಾಯಣರಾಯರು ಕಡತದ ಮೇಲೆ ಬರೆಯಿಸಿಕೊಂಡು ಹೋದರು" ಎಂಬ ಸೂಚನೆ ಸಿಗುತ್ತದೆ. ಇಂದಿಗೂ ಮಠ–ಮಾನ್ಯಗಳಲ್ಲಿ, ದೇಶಮುಖ ಮೊದಲಾದ ಮನೆತನಗಳಲ್ಲಿ, ಪ್ರಾಚ್ಯಸಂಶೋಧನ ಸಂಸ್ಥೆಗಳಲ್ಲಿ ಕಡತಗಳನ್ನು ಕಾಣಬಹುದು.

ಡ. ಹಲಗೆ : ಕೆಲವೊಮ್ಮೆ ಕಪ್ಪುಬಣ್ಣ ಬಳಿದ ಕಟ್ಟಿಗೆಯ ಹಲಗೆಯನ್ನು ತಾತ್ಪೂರ್ತಿಕ ಬರವಣಿಗೆಗಾಗಿ ಬಳಸುತ್ತಿದ್ದರು. ಬಹುಶಃ ಪದ್ಯಗಳನ್ನು ರಚಿಸುವ ಮೊದಲ ಹಂತದಲ್ಲಿ ಇದನ್ನು ಬಳಸಿ, ಪೂರ್ಣವಾದ ಬಳಿಕ ಎರಡನೆಯ ಹಂತದಲ್ಲಿ ಅವುಗಳನ್ನು ಇಲ್ಲಿಂದ ಹಸ್ತಪ್ರತಿಗೆ ವರ್ಗಾಯಿಸುತ್ತಿರಬಹುದು. ಕುಮಾರವ್ಯಾಸನ 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ', 'ಬಳಸಿ ಬರೆಯಲು ಕಂಠ ಪತ್ರದ ಉಲುಹುಗೆಡದಗ್ಗಳಿಕೆ" ಎಂಬ ಎರಡು ಮಾತುಗಳು ಈ ಎರಡು ಹಂತಗಳನ್ನೇ ಸೂಚಿಸುತ್ತಿರಬಹುದು. ಇಲ್ಲಿಯ ಹಲಗೆ–ಬಳಪ, ಕಂಠ–ಪತ್ರ ಎಂಬ ನಾಲ್ಕು ಶಬ್ದಗಳು ಅಥವಾ ಎರಡು ಜೋಡಿಗಳು ಗಮನಾರ್ಹವೆನಿಸಿವೆ.

ಗ. ಚರ್ಮ : ತೀರ ಪ್ರಾಚೀನಕಾಲದಲ್ಲಿ ಚರ್ಮವನ್ನು ಬರವಣಿಗೆಗಾಗಿ ಬಳಸುತ್ತಿರುವ ಸಂಭವವಿದೆ. ಏಕೆಂದರೆ 'ಪುಸ್ತಕ' ಎಂಬುದು 'ಪೋಸ್ತು' ಎಂಬ ಪದದಿಂದ ನಿಷ್ಪನ್ನವಾಗಿದೆಯೆಂದೂ, ಇದರ ಅರ್ಥ ಚರ್ಮವೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಸುಬಂಧುವಿನ ವಾಸವದತ್ತಾದಲ್ಲಿ

---

೧೪. ಶಾಂತಿಪುರಾಣ (ಪೊನ್ನ) XI-೮೪ ಗ

೧೫. S.I.I. IX-i- ೨೪೨ (೧೨೨೬)

೧೬. ಸೂಕ್ತಿ ಸುಧಾರ್ಣವ (ಮಲ್ಲಿಕಾರ್ಜುನ) ೫–೭.

೧೭. ಜ್ಞಾನಚಂದ್ರಚರಿತೆ (ಪಾಯಣವರ್ಣಿ) II–೨.

೧೮. ಮೋಹನ ತರಂಗಿಣಿ (ಕನಕದಾಸ) I–೨೧.

ನಕ್ಷತ್ರಗಳನ್ನು ವರ್ಣಿಸುವಾಗ 'ವಿಶ್ವಂಗಣಯತೋ ಧಾತುಶ್ಯಶಿಕಠಿನೀ ಖಂಡೇನ ತವೋ ಮಷೀ ಶ್ಯಾಮೇ ಅಜಿನ ಇವ ವಿಯತಿ ಸಂಸಾರಸ್ಯಾತಿಶೂನ್ಯತ್ವಾತ್ ಶೂನ್ಯ ಬಿಂದವ ಇವ ವಿಲಿಖಿತಾಃ... ತಾರಾವ್ಯರಾಜನ್ತ"[೧೯] ಎಂದು ಹೇಳಿರುವುದನ್ನು ಇಲ್ಲಿ ನೆನೆಯಬೇಕು. ಆದರೆ ಇದನ್ನು ಗ್ರಂಥಗಳಂಥ ದೊಡ್ಡ ಕೃತಿಗೆ ಬಳಸಿರಲಾರರು.

ಇವುಗಳನ್ನು ಬಿಟ್ಟರೆ ಬಿರುಸು ವಸ್ತುಗಳಾದ ಕಲ್ಲು, ಸುಟ್ಟ ಮಣ್ಣುಗಳನ್ನು ಬರವಣಿಗೆಗೆ ಬಳಸಿದ್ದರೂ ಗ್ರಂಥಗಳಿಗಾಗಿ ಬಳಸಿಲ್ಲ. ಹೀಗಿದ್ದೂ ಶ್ರವಣಬೆಳಗೊಳದಲ್ಲಿ ಶಿಲೆಯ ಮೇಲೆ ಬರೆದ ಬೊಪ್ಪಣ ಪಂಡಿತನ 'ನಕ್ಷತ್ರಮಾಲಿಕೆ' ಹೆಸರಿನ ೨೭ ಪದ್ಯಗಳ ಗುಚ್ಛ ಕರ್ನಾಟಕದಲ್ಲಿ ಸಿಗುವ ಏಕೈಕ ಕೃತಿಯಾಗಿದೆ.[೨೦] ಅದೇನೇ ಇದ್ದರೂ ಅರಿವೆ, ಕಡತ, ಹಲಗೆ, ಚರ್ಮ, ಕಲ್ಲು, ಸುಟ್ಟಮಣ್ಣಗಳ ಮೇಲೆ ಬರೆದುವು ಬಹುಪ್ರತಿರೂಪದಲ್ಲಿ ಸಿಗುವುದಿಲ್ಲವಾಗಿ ಮತ್ತು ಇವುಗಳಲ್ಲಿ ಕೆಲವು ಹಗುರಾದ ವಸ್ತುವಲ್ಲವಾಗಿ ಇವುಗಳ ಮೇಲೆ ಬರೆದವುಗಳನ್ನು 'ಹಸ್ತಪ್ರತಿ' ಎನ್ನುವಂತಿಲ್ಲ.

೨. ಲೇಖನ ಹಂತ

II.ಆಧೇಯ

ಅ. ಕಂಟ : ಲಿಪಿಕಾರರು ತಾಳೆಗರಿಯ ಮೇಲೆ ಬರೆಯಲು ಡಬ್ಬಣದಂಥ ಉಪಕರಣವಾದ ಕಂಟವನ್ನು ಬಳಸುತ್ತಿದ್ದರು. ಇದರ ತುದಿಯು ಮುಳ್ಳಿನಂತೆ (ಕಂಟ–ಮುಳ್ಳು) ಇದ್ದುದರಿಂದ ಕಂಟವೆಂದು ಕರೆಯುತ್ತಿದ್ದರೆಂದು ತೋರುತ್ತದೆ. ಇದು ಕಂಠ ಎಂಬ ಪರ್ಯಾಯ ರೂಪದಲ್ಲಿಯೂ ಸಿಗುತ್ತದೆ. 'ಕಂಟಮೊನೆ ಬಾಳ್ಮೊನೆಯಾಗಿರೆ'[೨೧] ಎಂಬ ಜನ್ನನ ಉಲ್ಲೇಖವೂ, 'ಬಳಸಿ ಬರೆಯಲು ಕಂಟ ಪತ್ರದ ಉಲುಹುಗೆಡದಗ್ಗಳಿಕೆ' ಎಂಬ ಕುಮಾರವ್ಯಾಸನ ಹೇಳಿಕೆಗಳೂ ಕಂಟದ ಪ್ರಾಚೀನತೆ–ಪ್ರಸಿದ್ಧಿಗೆ ಉದಾಹರಣೆಯೆನಿಸಿವೆ. ಕಬ್ಬಿಣ, ಕಂಚು, ಹಿತ್ತಾಳೆಗಳಿಂದ ಇವುಗಳನ್ನು ಸಿದ್ಧಮಾಡುತ್ತಿದ್ದರೂ ತುದಿ ಮಾತ್ರ ಕಬ್ಬಿಣ ಇಲ್ಲವೆ ಉಕ್ಕಿನದಾಗಿರುತ್ತಿತ್ತು. ಇಟ್ಟಿಗೆ, ದಂತ, ಚಿತ್ರ, ಶಿಲ್ಪ, ಕಮ್ಮರ ಕೆಲಸ ಮಾಡುವ ಅಯ್ಯಣನನ್ನು ಕುರ್ತಕೋಟಿ ಶಾಸನ 'ಕಂಟದ ಬೊಮ್ಮ' ಎಂದು ಕರೆದಿದೆ.[೨೨] ಬಹುಶಃ ಸುಂದರ ಮತ್ತು ಉತ್ತಮಗುಣ ಮಟ್ಟದ ಕಂಟಗಳನ್ನು ಸಿದ್ಧಪಡಿಸುತ್ತಿದ್ದ ಕಾರಣ ಇವನಿಗೆ ಈ ವಿಶೇಷಣ ಬಂದಿರಬೇಕು. ಈ ಕಂಟವನ್ನು ನಾವು ಇಂದು ಲೆಕ್ಕಣಿಕೆ ಹಿಡಿಯುವ ರೀತಿಯಲ್ಲಿಯೇ ಹಿಡಿದು ಬರೆಯುತ್ತಿದ್ದರೆಂದು ಸೋಮನಾಥಪುರ ದೇವಾಲಯದ ಬರೆಹಗಾರನ ಶಿಲ್ಪದಿಂದ ವ್ಯಕ್ತವಾಗುತ್ತದೆ. ಈ ಕಂಟಕ್ಕೆ ಕೆಲವೊಮ್ಮೆ ಗೆಜ್ಜೆಯನ್ನೂ ಅಳವಡಿಸುತ್ತಿದ್ದರು. ಬರೆಯುವಾಗ ಇದರ ಧ್ವನಿ ಕಿವಿಗೆ ಹಿತವೆನಿಸುತ್ತಿದ್ದಿತು. ಕುಮಾರವ್ಯಾಸ ಹೇಳುವ 'ಬಳಸಿ ಬರೆಯಲು ಕಂಠಪತ್ರದ ಉಲುಹುಗೆಡದಗ್ಗಳಿಕೆ' ಎಂಬುದು ಇದನ್ನೇ ಸೂಚಿಸುತ್ತಿರಲೂಬಹುದು. ಕೆಲವೊಮ್ಮೆ ಇದನ್ನು ಸುಂದರವಾಗಿ ಗೋಪುರದಂತೆ ಅಲಂಕರಿಸುತ್ತಿದ್ದರು. ಇದರ ಒಂದು ತುದಿ ಇಲ್ಲವೆ ಎರಡೂ ತುದಿ ಚೂಪಾಗಿರುತ್ತಿದ್ದವು. ಒಂದು ತುದಿ ಮೊಂಡಾದರೆ ಇನ್ನೊಂದು ತುದಿಯನ್ನು ಬಳಸುತ್ತಿದ್ದರು.

---

೧೯. ಕ.ಗ್ರ.ಸಂ. (ಡಿ.ಎಲ್.ಎನ್) ೩೬.

೨೦. E.C. -II ೩೩೬ (ಹೊಸ ಅವೃತಿ)

೨೧. ಅನಂತನಾಥಪುರಾಣ (ಜನ್ನ) II–೨೪.

೨೨. S.I.I. -IX-ii–೧೨೭

ಇವು ಮೊಂಡಾಗದಂತೆ ಬಿದಿರಿನ ಕೊಳವೆಯಲ್ಲಿ ರಕ್ಷಿಸುತ್ತಿದ್ದರು. ಇದರ ಉಲ್ಲೇಖ ನಮ್ಮ ಸಾಹಿತ್ಯದಲ್ಲಿ, ಪ್ರವಾಸಿಗಳ ವರದಿಯಲ್ಲಿ ಆಗಾಗ ಕಂಡುಬರುತ್ತದೆ. 'ನಾರಾಚಮೆನೆ ಕಂಠ' ಎಂದು ಮಂಗರಾಜ ಹೇಳುತ್ತಾನೆ.[೨೩] ಮುಳವಳ್ಳಿ ಮಠದಲ್ಲಿರುವ ಪುಸ್ತಕಪಟ್ಟಿಯ ಜೊತೆ 'ಕಂಥಪರ್ನಯರಡು', 'ನಾರಂಜಕಂಠ' ಎಂಬ ಉಲ್ಲೇಖಗಳಿವೆ.[೨೪] ಇಲ್ಲಿ ಎಲೆಯ ಮೇಲೆ ಬರೆಯಲೂ ಎಲೆಗಳನ್ನು ಕೊರೆಯಲೂ ಉಪಯೋಗಿಸುತ್ತಿದ್ದುದು ಕಂಠಪರ್ನ, ಕೇವಲ ಬರೆಯಲು ಬಳಸುವುದು 'ನಾರಂಜ (ನಾರಾಚ=ಬಾಣ) ಕಂಠ'ವಾಗಿರಬಹುದು. ತಮಿಳಿನಲ್ಲಿ ಕಂಠ ಎಂಬುದಕ್ಕೆ 'ಅಣಿ' ಎನ್ನುತ್ತಾರೆ. ಗುಂಡೆಳುತ್ತಾಣಿ, ವಾರೆಳುತ್ತಾಣೆ, ಮಡಕ್ಕೇಳುತ್ತಾಣಿ ಇತ್ಯಾದಿ ಕಂಠಪ್ರಕಾರಗಳ ಉಲ್ಲೇಖ ಅಲ್ಲಿ ಸಿಗುತ್ತದೆ.[೨೫] ಈ ಕಂಠಗಳಿಂದ ತಾಳೆಗರಿಗಳ ಮೇಲೆ ಅಕ್ಷರಗಳನ್ನು ಕೊರೆಯುತ್ತಿದ್ದರು.

ಬ. ಲೇಖನಿ : ತಾಳೆ ಪ್ರತಿಯ ಮೇಲೆ ಬರೆಯಲು ಉಪಯೋಗಿಸುವುದನ್ನು ಕಂಠವೆಂದು ಕರೆಯುತ್ತಿದ್ದರೆ, ಕಾಗದ ಪ್ರತಿಯ ಮೇಲೆ ಬರೆಯಲು ಉಪಯೋಗಿಸುತ್ತಿದ್ದುದನ್ನು ಲೇಖನಿಯೆನ್ನುತ್ತಿದ್ದರು. 'ಕಲಾಮು ಲೇಖನಿಯಕ್ಕುಂ' ಎನ್ನುತ್ತ ಮಂಗರಾಜ ನಿಘಂಟು[೨೬] ಇದರ ಪರ್ಯಾಯನಾಮ ಕಲಾಮು ಎಂದೂ ತಿಳಿಸುತ್ತದೆ. ಇದಕ್ಕೆ ಲೆಕ್ಕಣಿಕೆಯೆಂಬ ಇನ್ನೊಂದು ಹೆಸರೂ ಬಳಕೆಯಲ್ಲಿದ್ದಿತು. ಬಿದಿರಿನ ಗಲಗನ್ನು, ನವಿಲುಗರಿಯನ್ನು ಇಲ್ಲವೆ ಮುಳ್ಳಹಂದಿಯ ಮುಳ್ಳನ್ನು ಇದಕ್ಕಾಗಿ ಬಳಸುತ್ತಿದ್ದರು. ಮುಳ್ಳು (ಕಂಟಕ) ಕಾರಣವಾಗಿ 'ಕಂಟ' ಎಂಬ ಹೆಸರೂ ಇದಕ್ಕೆ ರೂಢವಾದಂತೆ ತೋರುತ್ತದೆ. ಧವಲಾ, ಜಯಧವಲಾ, ಮಹಾಧವಲಾ ತಾಳೆಗ್ರಂಥಗಳಾಗಿದ್ದರೂ ಇವುಗಳ ಮೇಲೆ ಅರಗಿನ ಮಸಿ ಬಳಸಿ, ಲೆಕ್ಕಣಿಕೆಯಿಂದ ಬರೆದುದು ವಿಶೇಷವೆಂದೇ ಹೇಳಬೇಕು.

ಲೇಪನ ವಸ್ತು

ಕ. ಕಪ್ಪು-ಮಸಿ-ಬಳಪ : ಬರವಣಿಗೆಗಾಗಿ ಬಳಸುವ ಲೇಪನಸಾಮಗ್ರಿಗಳಲ್ಲಿ ಓಲೆಗೆ ಲೇಹ್ಯ, ಕಾಗದಕ್ಕೆ ದ್ರವ, ಕಡತ ಹಲಗೆಗಳಿಗೆ ಘನರೂಪದ ವಸ್ತುಗಳನ್ನು ಬಳಸುತ್ತಿದ್ದರು. ತಾಳೆಗರಿಯ ಮೇಲೆ ಅಕ್ಷರಗಳನ್ನು ಕೊರೆದ ಬಳಿಕ ಕಪ್ಪು ಲೇಹ್ಯವನ್ನು ಒರೆಸುತ್ತಿದ್ದು, ಕೊರೆದ ಭಾಗದಲ್ಲಿ ಕಪ್ಪು ಸೇರಿ ಅಕ್ಷರ ಸ್ಫುಟವಾಗಿ ಕಾಣಿಸುತ್ತವೆ. ಹೀಗೆ ಲೇಪಿಸುವುದನ್ನು 'ಕಪ್ಪನಿಡುವುದು' ಎಂದು ಕರೆಯುತ್ತಿದ್ದರು. 'ಯಿ ಪುಸ್ತಕದಲ್ಲಿ ಬರೆದು ಕಪ್ಪನಿಟ್ಟು ಯಿರುವ ವಾಲೆ ೨೫೩ ನಿಧಾನವಾಗಿದೆ' ಎಂಬ ಉಲ್ಲೇಖ ಇದಕ್ಕೆ ಆಧಾರವಾಗಿದೆ.[೨೭] ನೇಮಿಚಂದ್ರನು ಬಾಣಕಾದಂಬರಿಯನ್ನು ಸುಡಿಸಿ ಅದರ ಕಪ್ಪನ್ನು ತನ್ನ ಲೀಲಾವತಿ ಕೃತಿಗೆ ಲೇಪಿಸಿದನೆಂದು

> ಬಾಣಪೇಳಿದ ಕಾದಂಬರಿಕಾವ್ಯವ । ಕ್ಷೋಣಿಯರಿಕೆಯೊಳು ಸುಡಿಸಿ ।
> ಮಾಣದೆ ಲೀಲಾವತಿಗೆ ಕಪ್ಪಿಡಿಸಿದ । ಜಾಣ ನೇಮಿಯ ಬಲಗೊಂಬೆ ॥[೨೮]

---

೨೩. ಅಭಿನವಾಭಿಧಾನ (ಮಂಗರಾಜ) ೧೦೬-೧೫.
೨೪. ಬೆಂಹಸೂ- ೨೬೮.
೨೫. ಮಹಣಿ. ಪು-೧೮೩.
೨೬. ಅಭಿವನಾಭಿದಾನ (ಮಂಗರಾಜ) ೧೦೫-೧೫
೨೭. ಮೈಹಸೂ I-೨೭೬ (ಕಾಲಜ್ಞಾನ)
೨೮. ಚಂದ್ರಪ್ರಭಚರಿತೆ (ದೊಡ್ಡಯ್ಯ) ಕಕಚ II-೨೯೨.

ಎಂದು ದೊಡ್ಡಯ್ಯ ತನ್ನ ಚಂದ್ರಪ್ರಭಚರಿತೆಯಲ್ಲಿ ಹೇಳುತ್ತಾನೆ. ಈ ಕಪ್ಪನ್ನು ಹೇಗೆ ಸಿದ್ಧಪಡಿಸುತ್ತಿದ್ದರೆಂಬ ಬಗ್ಗೆ 'ಬಿಳಿಯ ದಾಸಿವಾಣದ ಬಡಗ ಹರಿದ ಬೇರಂ ತಂದು, ಹೊಸ ಹಂಚಿಗೆ ಹೂಡಿ, ಅಲತೆಗೆಯ ಬತ್ತಿಯು ಮಾಡಿ, ಅಮುದಮ(ನು)ಡಿ ಕಾಳಿ ಆವಿನ ತುಪ್ಪದಲಿ ಕಾಡಿಗೆವಿಡಿದು ಮದು ಕರ್ಪುರದಿಂದಮರ್ದಿ" ಎಂಬ ಒಂದೇ ಒಂದು ಅಸ್ಪಷ್ಟ ಉಲ್ಲೇಖ ಜ್ವಾಲಾಮಾಲಿನೀ ಕಲ್ಪದ ಹಸ್ತಪ್ರತಿಯಲ್ಲಿ ದೊರೆಯುತ್ತದೆ. ಇಲ್ಲಿಯೇ ತಾಳೆಪ್ರತಿಗಳಿಗೆ ಲೇಪಿಸುವ "ಕಪ್ಪನಿಡು" ಎಂಬುದಕ್ಕೆ ಬದಲು "ಹಸ್ತಾಂಜನ"ವೆಂದೂ ಕರೆಯುತ್ತಿದ್ದರೆಂದು ಸೂಚಿಸುವ ಶ್ರೀಮತು ದೇವೇಂದ್ರಕೀರ್ತಿ ಹಸ್ತಾಂಜನ' ಎಂಬ ಉಲ್ಲೇಖವಿದೆ.[೨೯]

ಕಾಗದದ ಮೇಲೆ ಬರೆಯಲು ದ್ರವರೂಪದ ಬೇರೆ ಬೇರೆ ಬಣ್ಣದ ಮಸಿ ಬಳಸುತ್ತಿದ್ದರೂ ಕಪ್ಪು ಮಸಿ ಬಳಕೆಯೇ ಸಾಮಾನ್ಯವಾಗಿದ್ದಿತು. ಈ ಮಸಿಯನ್ನು ಸಿದ್ಧಪಡಿಸುತ್ತಿದ್ದ ವಿಧಾನವನ್ನು ಬಸವಪುರಾಣದ ಒಂದು ಹಸ್ತಪ್ರತಿ ಹೀಗೆ ತಿಳಿಸುತ್ತದೆ: "ಆರು ದುಡ್ಡಿನ ತೂಕ ಕಡ್ಡಿ ಅರಗು (ಬಂಗಾರದ ಅರಗು ಅಲ್ಲ), ಎರಡು ಪೈ ತೂಕ ಅಲೀಕನ ತೊಪ್ಪಲ, ಒಂದು ಪೈ ತೂಕ ಪೂರ್ತಿ ಬಳಿಗಾರ–ಇವು ಮೂರೂ ಜೀನಸುಗಳನ್ನು ಬೇರೆ ಬೇರೆ ಸಣ್ಣಾಗಿ ಅರೆದು, ಬೇರೆ ಬೇರೆಯಾಗಿ ಇಟ್ಟು, ಒಂದೂವರೆ (ದೀಡು) ಸೇರು ನೀರನ್ನು ಕುದಿಯಲಿಕ್ಕೆ ಇಡಬೇಕು. ಒಂದು ಉಕ್ಕು ಚೆನ್ನಾಗಿ ಬಂದ ನಂತರ ಅದರಲ್ಲಿ ಮೊದಲು ಅರಗಿನ ಪುಡಿಯನ್ನು ಹಾಕಿ ಕಡಚಿಗೆಯಿಂದ ತಿರುವಬೇಕು. ಕೂಡಲೇ ಅಲೀಕನ ತೊಪ್ಪಲು ಹಾಕಿ ತಿರುವಬೇಕು ಮತ್ತು ಅದರ ಹಿಂದೆ ಪೂರ್ತಿ ಬಳಿಗಾರದ ಪುಡಿಹಾಕಿ ತಿರುವಬೇಕು. ಈ ರೀತಿ ಮೂರು ಜೀನಸುಗಳನ್ನು ಒಂದರ ಹಿಂದೊಂದು ಹಾಕಿ ತಿರುವಿದ ನಂತರ ಮತ್ತೊಂದು ಕುದಿ ವರೆಗೆ ಉರಿ ಹಚ್ಚಬೇಕು. ಕುದಿ ಬಂದ ನಂತರ ಇಳುಹಿ ಕಂಬಳಿಯಲ್ಲಿ ಹಾಕಿ ಸೋಸಬೇಕು. ಅಂದರೆ ಕೆಂಪು ಸಾದಾ ಆಗುವುದು. ಅದಕ್ಕೆ ಕಾಡಿಗೆಯನ್ನು ತಕ್ಕಷ್ಟು ತಿಕ್ಕಿದರೆ ಮಸಿ ಆಗುವುದು. ಇನ್ನು ಮಸಿ ಹೆಚ್ಚು ಬೇಕಾದಲ್ಲಿ ಮೇಲೆ ಬರೆದ ಪ್ರಮಾಣದಂತೆ ಎಲ್ಲ ಜೀನಸುಗಳನ್ನು ಹೆಚ್ಚಿಗೆ ಹಾಕಿದರೆ ತೀರಿತು"[೩೦] ಎಂಬ ಉಲ್ಲೇಖವನ್ನು ನೋಡಬಹುದು. ಡಾ. ಡಿ.ಎಲ್.ಎನ್.ಅವರು "ಮಸಿಯನ್ನು ಮಾಡುವ ವಿಧಾನಗಳು ಬಗೆಬಗೆಯಾಗಿವೆ. ರಾಗಿಯನ್ನು ಹುರಿದು ಸೀಯಿಸಿ ಪುಡಿಮಾಡಿ ನೀರಿನಲ್ಲಿ ಕಲಿಸಿ ಅದಕ್ಕೆ ಗೋಂದನ್ನೋ ಸಕ್ಕರೆಯನ್ನೋ ಅಂಟಿಗಾಗಿ ಸ್ವಲ್ಪ ಮಿಶ್ರಮಾಡಿ ಅದನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದರು. ಇದಕ್ಕೆ ರಾಗಿ ಮಸಿ ಎಂದು ಹೆಸರು. ಕಾಗದದ ಮೇಲೆ ಬರೆಯಲು ಇದನ್ನು ಬಳಸುತ್ತಿದ್ದರು. ಅಳಲೆಕಾಯಿ ಅನ್ನಭೇದಿ ಮುಂತಾದವುಗಳಿಂದ ಮಸಿಯನ್ನು ತಯಾರಿಸುತ್ತಿದ್ದರು. ಇದೇ ಅಳಲೆಕಾಯಿ ಮಸಿ, ಮಸಿಯೆಂಬರ್ಥದಲ್ಲಿ ಮೇಲಾ ಎಂಬೊಂದು ಸಂಸ್ಕೃತ ಶಬ್ದವಿದೆ. ಇದನ್ನು ಸುಬಂಧು ತನ್ನ ಗ್ರಂಥದಲ್ಲಿ ಪ್ರಯೋಗಿಸಿದ್ದಾನೆ. ಈ ಶಬ್ದದ ಪ್ರಾಕೃತರೂಪ ಮಯಿಲಾ; ಅರ್ಥ ಕರಿಯದು, ಕೊಳಕಾದುದು ಎಂದು. ಇದಕ್ಕೆ ಬಹುಶಃ ಮಯಿಲ ತುತ್ತವನ್ನು (copper sulphate) ಸ್ವಲ್ಪ ಬೆರಕೆ ಮಾಡುತ್ತಿದ್ದಿರಬಹುದು. ಬರಿ ಇದ್ದಲಿನ ಪುಡಿಯನ್ನು ವಸ್ತ್ರಗಾಲಿತಮಾಡಿ ಅದಕ್ಕೆ ನೀರು, ಗೋಂದು, ಸಕ್ಕರೆ ಮುಂತಾದವನ್ನು ಹದವರಿತು ಬೆರಸಿ ಮಸಿಯನ್ನು ಮಾಡುತ್ತಿದ್ದುದೂ ಉಂಟು. ಇದಲ್ಲದೆ ಬಗೆಬಗೆಯ ಬಣ್ಣದ ಮಸಿಗಳೂ ಇದ್ದವು. ಚಂದ್ರ, ಹಿಂಗುಲ, ಅರಿದಾಳ ಮುಂತಾದವುಗಳಿಂದ

---

೨೯. ಜ್ವಾಲಾಮಲಿನೀ ಕಲ್ಪದ ಅಂತ್ಯ (ಕೆ,ಆರ.ಐ.ಪ್ರತಿ. ೮೫೧)
೩೦. ಕನ್ನಡ ಗ್ರಂಥಸಂಪಾದನಶಾಸ್ತ್ರ (ಎಂ.ಎಂ. ಕಲಬುರ್ಗಿ) ಅನುಬಂಧ.

ಬಣ್ಣದ ಮಸಿಗಳಾಗುತ್ತಿದ್ದವು"[೩೧] ಎಂದು ಹೇಳುವುದನ್ನು ಇಲ್ಲಿ ಗಮನಿಸಬಹುದು. "ಕಷಾಯದಿಂ ಬರೆದೋಲೆ"ಯೆಂಬ ಉಲ್ಲೇಖ ಮಸಿಯ ಪರ್ಯಾಯ ನಮ ಕಷಾಯವೆಂದೂ ತಿಳಿಸುತ್ತದೆ.[೩೨] ಮಸಿ ಸಂಗ್ರಹಿಸುವ ಪಾತ್ರೆಯನ್ನು ದೌತಿಯೆನ್ನುತ್ತಿದ್ದರೆಂದು "ದೌತಿ ಮಸಿಪಾತ್ರೆಯಕ್ಕುಂ" ಎಂದು ಮಂಗರಾಜನ ನಿಘಂಟು ತಿಳಿಸುತ್ತದೆ.[೩೩]

ಕಡತ, ಹಲಗೆಗಳ ಮೇಲೆ ಬರೆಯಲು ಸೀಮೆಸುಣ್ಣ ಇಲ್ಲವೆ ಬಳಪ ಬಳಸುತ್ತಿದ್ದರು. ಬಳಪದ ಉಲ್ಲೇಖ ಅನೇಕ ಕಾವ್ಯಗಳಲ್ಲಿ ಬಂದಿದೆ. "ಪಡೆದ ಧನಕ್ಕೆ ಲೆಕ್ಕಮಿಡಲಿಂದ್ರನಗಂ ಬಳಪಂ, ಧರಾತಳಂ ಕಡತಂ" ಎಂಬ ಪೊನ್ನನ ಉಲ್ಲೇಖದಷ್ಟು ಇದರ ಬಳಕೆ ಪ್ರಾಚೀನವಾಗಿದೆ.[೩೪] ಕರ್ನಾಟಕದ ಪ್ರಾಚೀನ ಮಠಗಳಲ್ಲಿ, ಪಾಳೆಗಾರ ಮನೆತನಗಳಲ್ಲಿ ಹೀಗೆ ಬಳಪದಿಂದ ಬರೆದ ಅನೇಕ ಕಡತಗಳು ಸಿಗುತ್ತವೆ.

ಕ. ಲಿಪಿಕಾರ–ಲಿಪಿ–ಭಾಷೆ :

ಲೇಖನ ಹಂತದಲ್ಲಿ ನೇರವಾಗಿ ತೊಡಗಿಕೊಳ್ಳುವವ ಲಿಪಿಕಾರ. ಕಂಟ, ಬಣ್ಣ ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಲಿಪಿಮಾಧ್ಯಮದ ಮೂಲಕ ಭಾಷೆಯನ್ನು ಬಳಸಿ, ಅಲೇಖರೂಪದ ಹಸ್ತಪ್ರತಿಗೆ ಈತ ಲೇಖನ ರೂಪಕೊಡುತ್ತಾನೆ. ಆದುದರಿಂದ ಲಿಪಿಕಾರ, ಲಿಪಿ, ಭಾಷೆ ಈ ಮೂರನ್ನೂ ಇಲ್ಲಿ ವಿವೇಚಿಸಬಹುದು.

೧. ಲಿಪಿಕಾರ : ಈ ವರೆಗೆ ಸಿಕ್ಕ, ಸಿಗಬಹುದಾದ ಸುಮಾರು ೪೦ ಸಾವಿರ ಕನ್ನಡ ಹಸ್ತಪ್ರತಿ ಕಟ್ಟುಗಳನ್ನು ಶ್ರಮ, ಶ್ರದ್ಧೆಗಳಿಂದ ಬರೆದವರು ಲಿಪಿಕಾರರು. ಅಳಿದುಹೋಗಿಯೂ ಉಳಿದುನಿಂದ ಇಷ್ಟು ದೊಡ್ಡ ಸಂಖ್ಯೆಯ ಹಸ್ತಪ್ರತಿಗಳನ್ನು ಉತ್ಪಾದಿಸುವಲ್ಲಿ ದುಡಿದ ಇವರನ್ನು –

೧. ನಿಯುಕ್ತಲಿಪಿಕಾರರು

೨. ವೃತ್ತಿಲಿಪಿಕಾರರು

೩. ಹವ್ಯಾಸಿ ಲಿಪಿಕಾರರು

ಎಂದು ವರ್ಗೀಕರಿಸಬಹುದು. ೧.ಇವರಲ್ಲಿ ನಿಯುಕ್ತಲಿಪಿಕಾರರು ಸಂಬಳ ತೆಗೆದುಕೊಂಡು ಸರಕಾರದಲ್ಲಿ ಲೇಖನವೃತ್ತಿ ಮಾಡುವವರೇ ಹೊರತು, ಹಸ್ತಪ್ರತಿ ನಕಲುಕಾರ್ಯಕ್ಕಾಗಿಯೇ ನೇಮಿಸಲ್ಪಟ್ಟವರಲ್ಲ. ಇವರಿಗೆ 'ರಾಯಸದವರು' ಎಂದು ಹೆಸರು. ತೆಲುಗಿನಲ್ಲಿ ವ್ರಾಯಟ ಎಂದರೆ ಬರೆವಣಿಗೆ, ವ್ರಾಯಸ ಕಾಂಡ್ರು ಎಂದರೆ ಬರೆಯುವವರು. ಇದರ ಕನ್ನಡ ಸಂವಾದಿ ರಾಯಸದವರು. ಮೈಸೂರು ಅರಸರ ಕಾಲಕ್ಕೆ ಇವರನ್ನು 'ಲೇಖರೀ' ಎಂದು ಕರೆಯುತ್ತಿದ್ದರು. ಕನ್ನಡ ಹಸ್ತಪ್ರತಿಗಳಲ್ಲಿ ಬರುವ

೩೧, ಕನ್ನಡ ಗ್ರಂಥಸಂಪಾದನೆ (ಡಿ.ಎಲ್.ಎನ್) ೪೩–೪೪.
೩೨. ಧರ್ಮಾಮೃತ (ನಯಸೇನ) X–೧೬೨.
೩೩. ಅಭಿನವಾಭಿಧಾನ (ಮಂಗರಾಜ) ೧೦೫–೧೫.
೩೪. ಶಾಂತಿಪುರಣ (ಪೊನ್ನ) IX–೧೪೭.

"ಆದಿತ್ಯಪುರಾಣ ಬರೆಯುವುದಕ್ಕೆ ನಿರ್ವಿಘ್ನಮಸ್ತು . . . ಅರಮನೆ ಲೇಖರೀ ಕಾನಕಾನಹಳ್ಳಿ ದಾಸಪ್ಪನ ಬರಹಾ"*

"ಸುಬೇದಾರ ವೀರಣ್ಣನವರ ರಾಯಸ್ತ ವೆಂಕಟರಮಣಯ್ಯನ ಕೈಲಿ ಬರೆಸಿದ ಅಂಬಿಕಾ ವಿಜಯಕೆ ನಿತ್ಯ ಜಯಮಂಗಳಮಹ".[೩೫]

"ಪದಮಣಯ್ಯನವರಿಗೆ ಅನಂತಶೇನಬೋವನು ಬರೆದ ರುಕ್ಮಾಂಗದ ಚರಿತ್ರೆಗೆ ಶುಭಮಸ್ತು"[೩೬] – ಇತ್ಯಾದಿ ಉದ್ಧರಣೆಳಲ್ಲಿ ಬರುವ ಲೇಖರಿ, ರಾಯಸ್ತ, ಶೇನಬೋವ ಪದಗಳು ನಿಯಕ್ತಲಿಪಿಕಾರರನ್ನು ಸೂಚಿಸುತ್ತವೆ.

೨. ವೃತ್ತಿಲಿಪಿಕಾರರೆಂದರೆ ಬರವಣಿಗೆಯನ್ನು ಉಪಜೀವನದ ಸಾಧನಮಾಡಿಕೊಂಡವರು. ಇವರು ಹಣ, ಬಟ್ಟೆ, ಮೊದಲಾದವುಗಳನ್ನು ಪಡೆದು ಹಸ್ತಪ್ರತಿ ಬರೆದುಕೊಟ್ಟ ಬಗ್ಗೆ ಕೆಳಗಿನ ಉದಾಹರಣೆಗಳನ್ನು ನೋಡಬಹುದು:

"ಈ ರಾಮಾಯಣ ಪುಸ್ತಕ ಕಿದುವಿನಕೋಟೆ ಗೋಪಾಲಯ್ಯನ ತಮ್ಮ ನೀಲಯ್ಯನಿಗೆ ಬರೆದು, ಕಾಣಿಕೆ ತೆಗೆದುಕೊಂಡು ಕೊಟ್ಟೆವು"[೩೭]

"ಬರೆದಾತ ...... ರಾಮಂಣನು ......। ಈ ಪುಸ್ತಕಕ್ಕೆ ಪಾದಗಾಣಿಕೆ ಉಡುಗರೆ ಸಹಾ ತೆಗೆದುಕೊಂಡು .... ಪರಮಂಣಗೆ ಬರೆದುಕೊಟ್ಟಿದೆ......"[೩೮]

"ತೋಟದ ಸ್ವಾಮಿಗಳ ಮುಳ್ಳೆಯ ಬರದ ಕುಲ(ಕೂಲಿ?) ಪುಸ್ತಕ ೧ ವರ, ಬೇಕಾದವರು ಬರಿಸಿರಿ"[೩೯]

ಈ ಬಗೆಯ ವೃತ್ತಿಲಿಪಿಕಾರರಲ್ಲಿ ಕೆಲವರ ಹೆಸರಿನ ಹಿಂದೆ "ಬರಹದ" ಎಂಬ ವಿಶೇಷಣ ಆಗಾಗ ಕಂಡುಬರುತ್ತದೆ :

"ಚೆನ್ನಮ(ಪುರ)ದ ಬಸವಪ್ಪಯ್ಯನವರಿಗೆ ಪ್ರಸಾದಿ ಮಹದೇವಯ್ಯನ ಶೂನ್ಯ ಸಂಪಾದನೆಯನ್ನು ಬರೆದುಕೊಟ್ಟ ಗುಮ್ಮಳಾಪುರದ ಬರಹದ ಬಸವಣ್ಣೊಡೆಯ"[೪೦]

"ಬಿದುರೆಯ ಅಂತಣ್ಣಗಳ ಜೀಯನವರುಗಳಿಗೆ ಪೊನ್ನನ ಶಾಂತಿಪುರಾಣವನ್ನು ಬರೆದುಕೊಟ್ಟ ಬೆಳತಂಗಡಿಯ ಬರಹದ ಸೆಟ್ಟಿ ಶಾಂತು"[೪೧]

---

* ಮೈಹಸೂ I–೧೨೨ ಆದಿತ್ಯಪುರಾಣ

೩೫. ಮಹಸೂ II–೧೯೯. ಅಂಬಿಕಾವಿಜಯ

೩೬. ಮಹಸೂ II–೨೨೭. ರುಕ್ಮಾಂಗದ ಚರಿತ್ರೆ

೩೭. ಮಹಸೂ I–೧೨೬. ತೊರೆವ ರಾಮಾಯಣ.

೩೮. ಬೆಂಹಸೂ ೩೧೪.

೩೯. ಮೈಹಸೂ VIII–೧೪೧.

೪೦. ಮಹದೇವಯ್ಯಗಳ ಶೂನ್ಯಸಂಪಾದನೆ: (ಸಂ: ಆರ್.ಸಿ. ಹಿರೇಮಠ) ಪ್ರಸ್ತಾವನೆ ೧೦೧.

೪೧. ಶಾಂತಿಪುರಾಣ (ಪೊನ್ನ) ಪರಿಶಿಷ್ಟ ಪು–೩೩.

ಬರವಣಿಗೆಯನ್ನೇ ಉಪಜೀವನದ ಸಾಧನಮಾಡಿಕೊಂಡ ಕಾರಣ, ಇವರ ಹೆಸರಿನ ಹಿಂದೆ 'ಬರಹದ' ಎಂಬ ಉಪಾಧಿ ಅಂಟಿಕೊಂಡಂತೆ ಕಾಣುತ್ತದೆ. ಇಂಥ ಅನೇಕ ಜನ ವೃತ್ತಿಲಿಪಿಕಾರರು ಪ್ರಾಚೀನಕಾಲದಲ್ಲಿ ಇದ್ದು, ಇಂದಿನ ಬೆರಳಚ್ಚುಗಾರರಂತೆ, ಮುದ್ರಣಾಲಯದವರಂತೆ ಗ್ರಂಥೋತ್ಪಾದನ ಕೆಲಸದಲ್ಲಿ ನಿರತರಾಗಿದ್ದರು. ಕುಮಾರರಾಮನ ಸಾಂಗತ್ಯವನ್ನು ಲಿಪಿಸಿದ ವೃತ್ತಿಲಿಪಿಕಾರನೊಬ್ಬ "ಸಾವಿರ ೧ಕ್ಕೆ ೫ ಹಣ ಪ್ರಕಾರಕ್ಕೆ"[೪೨] ಎಂದು ಹೇಳಿದುದು, ಅಂದಿನ ಬರಹದ ಕೂಲಿಯ ಪ್ರಮಾಣವನ್ನು ಸೂಚಿಸುತ್ತದೆ.

೩. ಮೇಲೆ ಹೇಳಿದ ನಿಯುಕ್ತಲಿಪಿಕಾರರು, ವೃತ್ತಿಲಿಪಿಕಾರರಿಗಿಂತ ಹವ್ಯಾಸಿ ಲಿಪಿಕಾರರ ಸಂಖ್ಯೆ ದೊಡ್ಡದು. ಇವರು ಸ್ವಪ್ರಯೋಜನ, ಪರಪ್ರಯೋಜನಕ್ಕಾಗಿ ಬರವಣಿಗೆ ಕಾರ್ಯವನ್ನು ಪೂರೈಸಿದ್ದಾರೆ. ಉದಾ :

"ಬರದಾತ ಮಹಿಶೂರನಗರದ ಲಕ್ಷ್ಮೀರಮಣಸ್ವಾಮಿಯವರ ದೇವಸ್ಥಾನದ ಸ್ಥಾನಿಕ ಲಕ್ಷ್ಮೀರಮಣಪ್ಪನವರ ಮಗ ಕೃಷ್ಣಯ್ಯನು ತಾನು ತನಗೆ ಬರೆದ ಭಾರತ ಪುಸ್ತಕ"[೪೩] – ಇಲ್ಲಿ ಗ್ರಂಥಪ್ರೇಮಿ ಲಿಪಿಕಾರ ಸ್ವಪ್ರಯೋಜನಾರ್ಥ ಲೆಖನಕಾರ್ಯ ಮಾಡಿದ್ದಾನೆ.

"ಅನುಭವವಾಮೃತವಂನ್ನು ಜವಳಿ ಅಂಗಡಿ ಕಾಳಿದಾಸೈಯ್ಯನಿಗೆ ವುಪಾದ್ಯ ವೆಂಕಟೈಯ್ಯನು ಬರದುಕೊಟ್ಟಂತಾ ಪುಸ್ತಕಾ"[೪೪] – ಇಲ್ಲಿ ಪರಪ್ರಯೋಜನಾರ್ಥ ಹಸ್ತಪ್ರತಿಯನ್ನು ನಕಲುಮಾಡಲಾಗಿದೆ. ಅನೇಕ ಸಲ ಈ ಪರಪ್ರಯೋಜನಾರ್ಥವೆಂಬುದು ತಂದೆ–ಮಕ್ಕಳ ಸಂಬಂಧ, ಗುರು–ಶಿಷ್ಯ ಸಂಬಂಧ, ಸ್ನೇಹ ಸಂಬಂಧವನ್ನು ವ್ಯಾಪಿಸಿದೆ.

"ಚೆನ್ನಪಟ್ಟಕೆ ವಳಿತವಾದ ಹೊಂಗನೂರು ನಾರಣೈಯ್ಯನು ತನ್ನ ಮಗನಿಗೆ ಬರೆದುಕೊಟ್ಟ, ಮೂಲಪ್ರತಿಯನ್ನು ನೋಡಿ ಬರೆದದ್ದು"[೪೫]

"...ಪುರಾಣದ ಕಲ್ಲಯ್ಯದೇವರ ಕುಮಾರನಾದ ಗುರುವರ್ಯದೇವರು ತಮ್ಮ ಸ್ವಹಸ್ತದಿಂದ ತಮ್ಮ ತಂದೆಗೆ ಈ ಶಾಸ್ತ್ರ ಬರೆದುಕೊಟ್ಟ"[೪೬]

"ರಾಯದುರ್ಗದ ಪುಷ್ಪಗಿರಿಮಠದ ಚಂದ್ರಶೇಖರಯ್ಯನವರು ಮೈಸೂರು ಯೀರನಗೆರೆಯಲ್ಲಿ ಯಿರುವ ನಂಜಪ್ಪಯೆಂಬುವ ಭಕ್ತನಿಗೆ ಬರದುಕೊಡೋಣವಾಗಿದೆ."[೪೭]

"ಶ್ರೀಮದ್ಬೆಳ್ಗುಳ ಸಿಂಧಸಿಂಹಾಸನಾಧೀಶ್ವಸರರುಮಪ್ಪ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರ (ತತ್ಸಿ) (ಶಿ)ಷ್ಯನಾದ ಭಂಡಾರಿಬಸದಿಯ ಯಿಂದ್ರವರ್ಗದ ಪದಮಯ್ಯನು ಬರೆದ."[೪೮]

---

೪೨. ಮಹಸೂ VI–೧೨೨೧.

೪೩. ಮಹಸೂ I–೬೦ ಭಾರತ ಕಥಾಮಂಜರಿ.

೪೪. ಮೈಹಸೂ I–೫೬.

೪೫. ಮೈಹಸೂ III–೧೪೭೦ ರುಕ್ಮಾಂಗದ ಚರಿತ್ರೆ.

೪೬. ಮಹಸೂ IV–೬೦೮.

೪೭. ಮೈಹಸೂ III–೧೦೨೧.

೪೮. ಮಹಸೂ III–೩೬೬.

"ಅರಳಗುಪ್ಪಿ ವೆಂಕಟನ ಮಗ ದಾಸಪ್ಪನು ಸ್ನೇಹಾರ್ಥವಾಗಿ ಬರಕೊಟ್ಟ ಶಂಕರ ರಾಮಾಯಣ".[೪೯] ಇಲ್ಲಿ ನಾರಣಯ್ಯನು ಮಗನಿಗೆ, ಗುರುವರ್ಯದೇವ ತಂದೆಗೆ, ಚಂದ್ರಶೇಖರಯ್ಯನವರು ಭಕ್ತನಿಗೆ, ಪದುಮಯ್ಯನೆಂಬ ಭಕ್ತ ಗುರುವಿಗೆ, ದಾಸಪ್ಪನು ಸ್ನೇಹಿತನಿಗೆ ಹಸ್ತಪ್ರತಿ ಬರೆದುಕೊಟ್ಟುದನ್ನು ಕಾಣುತ್ತೇವೆ.

ಇನ್ನೂ ಒಂದು ವಿಶೇಷವೆಂದರೆ, ಸ್ತ್ರೀಲಿಪಿಕಾರರು. ವೈದಿಕ ಸಂಪ್ರದಾಯದಲ್ಲಿ ಸ್ತ್ರೀಲಿಪಿಕಾರರಿಗೆ ಅನುತ್ತೇಜಕ ವಾತಾವರಣವಿದ್ದಿತು, ಬೌದ್ಧರಲ್ಲಿ ಧಾರ್ಮಿಕ ಪವಿತ್ರಗ್ರಂಥಗಳ ನಕಲುಕಾರ್ಯವನ್ನು ಒಂದು ವೃತ್ತಿಯಾಗಿ ಸ್ತ್ರೀಯರು ಕೈಕೊಳ್ಳಬೇಕೆಂದು ಹೇಳಲಾಗಿದೆ. ಜೈನ ವೀರಶೈವಗಳಲ್ಲಿಯಂತೂ ಸ್ತ್ರೀಲಿಪಿಕಾರರು ಆಗಾಗ ಹೀಗೆ ಕಂಡುಬರುತ್ತಾರೆ :

"ಭೂಕೈಲಾಸ ವುಳುವೆ ಮಹಾಮನೆ ಸೂತ್ರಾನುವರ್ತಿಗಳಾದ ಬಾಳಪ್ಪಸ್ವಾಮಿಗಳ ಕರಸಂಜಾತಳಾದ ಪುಟ್ಟನಂಜಮ್ಮ."[೫೦]

"ಸಿಗ್ಗಾವಿಯ ಚೆನ್ನಗವುಡರ ಸೊಸಿ ಬೈರಾಜಿ ತಂಮ ಶ್ರೀಗುರುವಿನ ಕೃಪೆಯಿಂದ ಲಿಂಗಲೀಲಾವಿಲಾಸ ಪುಸ್ತಕವನ್ನು ಪ್ರತಿಮಾಡಿ ಮಹಾಗಣಂಗಳು ಕೇಳಿ ಓದಿ ನಂಮ ಕೃತಾರ್ಥಮಾಡಿ(ರಿ) ಎಂದು ಮಹಾಗಣಂಗಳಿಗೆ ಪ್ರತಿಮಾಡುತ್ತಿರ್ದೆನು. ಮಹಾಗಣಂಗಳಿಗೆ ಸ್ತುತಿಮಾಡುತ್ತಿರ್ದೆನು....."[೫೧] ಇವು ವೀರಶೈವ ಸ್ತ್ರೀಲಿಪಿಕಾರರನ್ನು ಉಲ್ಲೇಖಿಸುತ್ತವೆ.

"ಲಲಿತಕೀರ್ತಿಭಟ್ಟಾರಕ ದೇವರುಗಳ ಪಾದಪದ್ಮಕ್ಕೆ ತುಂಬಿಯೆನಿಸಿದ ವರ್ಧಮಾನಕ್ಕಗಳು ಸೇನಗಣದ ನೇಮಕ್ಕಗಳಿಗೆ ಶಾಸ್ತ್ರದಾನವಾಗಿ ಬರೆದುಕೊಟ್ಟ ಧನ್ಯಕುಮಾರ ಚರಿತೆ"[೫೨]

"ಪೆನುಗೊಂಡೆಯ ಶಾಂತಿಮತಿ ಅವ್ವಗಳ ಜೀಯನವರು ತಮಗೆ ಕೇವಲ ಜ್ಞಾನಪ್ರಾಪ್ತಿ ನಿಮಿತ್ತವಾಗಿ ಬರೆದಂಥಾ"[೫೩]

"ಶ್ರೀಮತಿ ಅಕ್ಕಗಳು ಬರದರು ಜೀನಮುನಿತನಯಾ"[೫೪]

"ಧರೆನುತ ಬೆಳ್ಗುಳಗ್ರಾಮದೊಳೊಪ್ಪುವ ಶ್ರೀಗೊಮ್ಮಟೇಶಲಾಯುಳೂ ಗುರು ಪ್ರಭಾಚಂದ್ರಸ್ವಾಮಿಯವರ ಸಿಷ್ಯ ಪಾರಿಶ್ವ ಅಜ್ಜಿಗಳು"[೫೫]

"ಕೊಲ್ಲಾಪುರದ ಶ್ರೀ ಜಿನಸೇನಭಟ್ಟಾರಕಸ್ವಾಮಿ ಸಂಜಾತ ಗುಣಭದ್ರಸ್ವಾಮಿಗಳ ಸಿಷ್ಯರು ಶಾಂತಿಮತಿ ಕಂತಿಯರು ಅಷ್ಟಗೆಪುರದ ಶ್ರೀ ಅಜಿತನಾಥನ ದಿವ್ಯಚೈತ್ಯಾಲಯದಲ್ಲಿ ಪ್ರತಿನೋಡಿ ಬರೆದೆವು"[೫೬]

---

೪೯. ಮೈಹಸೂ IV–೧೬೬೮ ಶಂಕರರಾಮಾಯಣ.
೫೦. ಮೈಹಸೂ II–೧೦೦೧.
೫೧. ಧಾವಭಾ ೧೪೦೩, ಲಿಂಗಲೀಲಾವಿಲಾಸಚಾರಿತ್ರ.
೫೨. ಕೊಲ್ಲಾಪುರ ಲಕ್ಷೀಸೇನ ವಸದಿಯ ತಾಪ್ರ. ೧೫೭/೨
೫೩. ಕೊಲ್ಲಾಪುರ ಲಕ್ಷೀಸೇನ ಬಸದಿಯ ತಾಪ್ರ. ೨೫೩.
೫೪. ಕೊಲ್ಲಾಪು ಲಕ್ಷೀಸೇನ ಬಸದಿಯ ಕಾಪ್ರ. ೧೭೭/೫.
೫೫. ಮೈಹಸೂ VI–೧೫೦.
೫೬. ನಿಂಬಸಾಮಂತ ಚರಿತೆ (ಸಂ: ಎಂ.ಎಂ. ಕಲಬುರ್ಗಿ) ಪು ೧೨೮. ಅ.ಟಿ.

ಈ ಉದಾಹರಣೆಗಳು ಜೈನ ಸ್ತ್ರೀಲಿಪಿಕಾರರನ್ನು ಸೂಚಿಸುತ್ತವೆ. "ರಕ್ತಾಕ್ಷಿ ಸಂವತ್ಸರದ ಚೈತ್ರ ಬಹುಳ ೧೦ ಯಲ್ಲಣ್ಣನ ಪುತ್ರಿ ಕಾಳವ್ವೆ."[೫೭] ಈಕೆ ಯಾವ ಮತದವಳೊ ಗೊತ್ತಿಲ್ಲ. ಇದರಿಂದ ಪ್ರಾಚೀನಕಾಲದಲ್ಲಿ ಮಹಿಳೆಯರೂ ಅಕ್ಷರಾಭ್ಯಾಸದ ಅವಕಾಶ ಪಡೆದಿದ್ದರೆಂದು ತಿಳಿದುಬರುತ್ತದೆ.

ಇದಲ್ಲದೆ, "ಕೆಸ್ತೂರು ಉಪಾಧ್ಯರ ಮಗ ರಂಗಪ್ಪ ಬರೆದುಕೊಟ್ಟುದು, ತಳಕಾಡು ನಾಯಿಕಶಾನಿ ಕೆಂಪಿ ಮಗಳು ನಂಜಿಗೆ ಬರೆದುಕೊಟ್ಟದು",[೫೮] "ಅಕ್ಕನೂರು ಸಿರಗಪನು ಮುಂಡಿಗೆಯ ಪಾಯಣನ ಮಗಳು ಪದುಮಾಯಿಗೆ ಬರೆದುಕೊಟ್ಟ ಸುಕುಮಾರಚರಿತ್ರೆಯು",[೫೯] "ಅಮರೇಂದ್ರವಂದಿತ ಶ್ರೀ ಸುಕುಮಾರನ ಚಾರುಚರಿತದ ಪ್ರತಿಯನೂ ಜಿನಚಂದ್ರನು ತನ್ನ ಪುತ್ರೀತ್ರಯಂಗಳನೋದಿಸಲೆಂದು ಬರೆದನು".[೬೦] ಈ ಹೇಳಿಕೆಗಳಿಂದ ಸುಕುಮಾರಚರಿತೆಯಂಥ ಚಂಪೂಗ್ರಂಥ ಓದುವಷ್ಟು ಭಾಷಾ ತಿಳಿವಳಿಕೆಯನ್ನು ಮಹಿಳೆಯರು ಸಂಪಾದಿಸಿಕೊಳ್ಳಲು ಅವಕಾಶವಿದ್ದಿತೆನಿಸುತ್ತದೆ. ಬಹುಶಃ ಇವರಿಗೆ ತಂದೆಯೇ ಅಕ್ಷರಾಭ್ಯಾಸ ಮಾಡಿಸುತ್ತಿದ್ದ. ಜೈನ, ವೀರಶೈವವೆಂಬ ಪ್ರತಿಷ್ಠಿತ ಧರ್ಮಗಳ ಮಹಿಳೆಯರಂತೆ ಬಹುಶಃ ನಾಯಕಶಾನಿ ಕಂಪಿಯ ಮಗಳು ನಂಜಿಯಂಥ ವೇಶ್ಯೆಯರೂ ಓದುಬರಹದ ಅವಕಾಶ ಪಡೆದಿದ್ದರೆಂದು ಗೊತ್ತಾಗುತ್ತದೆ. ಮನೆಯಲ್ಲಿ ಗೋಷ್ಠಿ ನಡೆಸುತ್ತಿದ್ದ ವೇಶ್ಯೆಯರಿಗೆ ಅಕ್ಷರಜ್ಞಾನ ಅಪೇಕ್ಷಣೀಯವೆಂದು ಬೇರೆ ಹೇಳಬೇಕಿಲ್ಲ. ಇಲ್ಲಿ ಪುಟ್ಟನಂಜಮ್ಮ, ಭೈರಾಜಿ, ಪದುಮಾಯಿ, ಶ್ರೀಮತಿ ಅಕ್ಕ, ಶಾಂತಿಮತಿಕಂತಿ ಮೊದಲಾದವರು ಧಾರ್ಮಿಕ ಗ್ರಂಥಗಳನ್ನು ಓದುವುದು ಅವರವರ ಅಸಕ್ತಿ ವಿಶೇಷತೆಗಳನ್ನು ತಿಳಿಸಿಕೊಡುತ್ತವೆ.

ಮೇಲೆ ಹೇಳಿದಂತೆ ನಿಯುಕ್ತ, ವೃತ್ತಿ ಹವ್ಯಾಸಿ ಯಾವುದೇ ಲಿಪಿಕಾರರಿರಲಿ, ಕೆಲವು ಅಪವಾದಗಳನ್ನು ಬಿಟ್ಟರೆ ಇವರು ಸಾಮಾನ್ಯವಾಗಿ ತಮ್ಮ ತಮ್ಮ ಧರ್ಮದ ಕೃತಿಗಳನ್ನೇ ಲಿಪಿಸುತ್ತಿದ್ದರು. ಇವರಲ್ಲಿ ವೃತ್ತಿಲಿಪಿಕಾರರು ಮಾತ್ರ ಉಪಜೀವನವನ್ನೇ ಗುರಿಯಾಗಿಟ್ಟುಕೊಂಡ ಕಾರಣ, ಆಗಾಗ ಅನ್ಯಮತೀಯ ಗ್ರಂಥಗಳನ್ನೂ ಲಿಪಿಸುತ್ತಿದ್ದಿರ ಬಹುದು. ಒಮ್ಮೊಮ್ಮೆ ಅಧಿಕಾರಿಗಳ ಸುಪ್ರೀತಿಗಾಗಿ ಬೇರೆ ಮತದ ಗ್ರಂಥಗಳನ್ನೂ ಹವ್ಯಾಸಿ ಲಿಪಿಕಾರರು ನಕಲು ಮಾಡುತ್ತಿರುವುದಕ್ಕೆ "ಶ್ರೀಮನ್ಮಹಾನಾಡಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡರು ಬರೆಸಿದ ಸಾನಂದಪುರಾಣಂ. ಇದನು ಬರೆದಾತನು ಯಜ್ಞನಾರಾಯಣದೀಕ್ಷಿತರ ಮಗ ವಿಶ್ವನಾಥನು"[೬೧] ಎಂಬುದನ್ನು ಇಲ್ಲಿ ಗಮನಿಸಬಹುದು.

ಹಸ್ತಪ್ರತಿಗಳನ್ನು ಅಕ್ಷರಸ್ಥ ಸಮಾಜದವರೇ ಬರೆಯುವುದು ಸಹಜ. ನಿಯುಕ್ತರನ್ನು ಬಿಟ್ಟರೆ, ಮಿಕ್ಕವರಲ್ಲಿ ಮಠ-ದೇವಾಲಯಗಳ ಪುರೋಹಿತ ವರ್ಗದವರು, ಬರಹದವರು, ಓದಿಸುವವರು, ಪುರಾಣ ಪ್ರವಚನಕಾರರು ಅಧಿಕಸಂಖ್ಯೆಯಲ್ಲಿ ಕಂಡುಬರುತ್ತಾರೆ.

---

೫೭. ಕೊಲ್ಲಪುರ ಲಕ್ಷೀಸೇನ ಬಸದಿ ತಾಪ್ರ. ೨೦೩.

೫೮. ಮೈಹಸೂ I-೧೮೭ ಐರಾವತ.

೫೯. ಮೈಹಸೂ IV-೧೯೩೨ ಸುಕುಮಾರಚರಿತೆ.

೬೦. ಮೈಹಸೂ IV-೧೯೩೨ ಸುಕುಮಾರಚರಿತೆ.

೬೧. ಮಹಾಸೂ VI-೧೦೭೦

ಹಸ್ತಪ್ರತಿಲಿಪಿಕಾರರು ಲೇಖನಕಾರ್ಯದಿಂದ ತಮಗೂ, ಲಿಖಿಸಿಕೊಂಡವರಿಗೂ ಕಲ್ಯಾಣವಾಗುವುದೆಂದು ನಂಬಿದ ವಿಷಯ ಹಲವು ಉದಾಹರಣೆಗಳಿಂದ ತಿಳಿದುಬರುತ್ತದೆ: "ಬಸ್ತಿಯ ಕಂಬದ ಬ್ರಹ್ಮದೇವರ ಪಾದಸನ್ನಿಧಿಯಲ್ಲಿ ಕುಳಿತು ಜ್ಞಾನಾವರಣೀಯ ನಿರ್ನಿಮಿತ್ತ ಪರಿಹಾರಾರ್ಥವಾಗಿ ಬರೆದುಕೊಟ್ಟ."[೬೨]

"ಪೊರಮಾವ ತಿಮ್ಮಪ್ಪನ ಮಗ ವೆಂಕಟಯ್ಯನು ಚಿಕ್ಕ ಕುಪ್ಪಕ್ಕಗೆ ಆಯುರಾರೋಗ್ಯ ಐಶ್ವರ್ಯಧನಕನಕ ವಸ್ತುವಾಹನ ಪುತ್ರಪೌತ್ರಾಭಿವೃದ್ಧಿಯಾಗಿ, ಶೀಘ್ರದಲ್ಲಿ ಗಂಡುಸಂತಾನವಾಗಲಿಯೆಂದು ತ್ರಿಸಂಧ್ಯಾಕಾಲದಲ್ಲೂ ಹರಸಿ ಬರೆದುಕೊಟ್ಟ ಬಿಡುಪದದ ಪುಸ್ತಕ".[೬೩]

ಇತ್ಯಾದಿ ಹೇಳಿಕೆಗಳು ಲೇಖನಕಾರ್ಯದ ಬಗ್ಗೆ ಅವರಿಗಿದ್ದ ಭಕ್ತಿಭಾವವನ್ನು ವ್ಯಕ್ತಪಡಿಸುತ್ತವೆ. ಇದಕ್ಕೆ ಪೂರಕವೆಂಬಂತೆ ಹಸ್ತಪ್ರತಿಗಳ ಪ್ರಾರಂಭ, ಅಂತ್ಯಗಳಲ್ಲಿ ತಪ್ಪದೇ ಬರುವ ಗುರುಸ್ತೋತ್ರ, ದೇವತಾಸ್ತುತಿಗಳನ್ನು ಇಲ್ಲಿ ನೆನೆಯಬಹುದು. ಈ ಭಾವನೆಗೆ ಪೂರಕವೆಂಬಂತೆ ಯೋಗ್ಯ ಪರಿಸರ ನಿರ್ಮಾಣವಾಗುವ ಸಲುವಾಗಿ ಲಿಪಿಕಾರರು ಆಗಾಗ ಬಸದಿ, ದೇವಾಲಯ, ಮಠಗಳಲ್ಲಿ ಕುಳಿತು ಲೇಖನಕಾರ್ಯ ಮಾಡಿದ್ದಾರೆ.

ಒಂದು ಹಸ್ತಪ್ರತಿಯಲ್ಲಿ ಕವಿಯ ಪಾಠ ಮತ್ತು ಲಿಪಿಕಾರನ ಪಾಠ ಸೇರಿಕೊಂಡಿರುತ್ತವೆ. ಲಿಪಿಕಾರನ ಈ ಪಾಠವನ್ನು 'ಪ್ರಶಸ್ತಿ'ಯೆಂದು ಕರೆಯಲಾಗುತ್ತಿದ್ದು, ಇದು ಅವನ ಚರಿತ್ರೆ ಮತ್ತು ಪರಿಸರಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಒದಗಿಸುತ್ತದೆ.

"ಕಲ್ಯಾಣಪಟ್ಟಣದ ಹಾಳಿನ ಹರೆಯ (ಹಿರಿಯ) ಹಂಪಯ್ಯ, ಚಿಕ್ಕಹಂಪಯ್ಯ ಅಯ್ಯನವರು ಗುಮ್ಮಳಾಪುರದ ಚನ್ನಮಲ್ಲಿಕಾರ್ಜುನದೇವರ ಶಿಷ್ಯರು ವಿರಕ್ತ ಜೆಡೆಸಿದ್ಧಲಿಂಗದೇವರು ಅಯ್ಯನವರಿಗೆ ಬರೆಯಿಸಿ ಭಕ್ತಿಮಾಡಿದ ಲಿಂಗಲೀಲಾ ವಿಲಾಸಚಾರಿತ್ರ".[೬೪]

"ತೋಂಟದ ಸಿದ್ಧಲಿಂಗೇಶ್ವರನ ಸಂಪ್ರದಾಯಕರಾದ . . . . ಪರಬ್ರಹ್ಮಿ ಕಟ್ಟಿಗೆ ಹಳ್ಳಿ ಸಿದ್ಧಲಿಂಗೇಶ್ವರನ ಚಿತ್ಕರಕಮಲೋದಯ . . . . ಬಸವಪ್ರಭು ಚೀಲಾಳಸ್ವಾಮಿಗಳ ಪಾದಾರವಿಂದಕ್ಕೆ ಈ ವೀರಶೈವಾಮೃತ ಪುರಾಣವನ್ನು . . . . ಅರ್ಪಿಸಿದರು.. . . ಪುನರಪಿ ಈ ಶಾಸಮಂ ಚೀಲಾಳೇಶ್ವರನು ತಮ್ಮ ಕರಸರಸೀಜಾತ ಕಪಿಲಸಿದ್ದಸ್ವಾಮಿಗಳಿಗೆ ಪಾಲಿಸಿದರು . . . . ."[೬೫]

"ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೫೦೨ನೆಯ ವಿಕ್ರಮ ಸಂವತ್ಸರದ ಕಾರ್ತಿಕ ಬಹುಳ ೩ ಮಂಗಳವಾರದಲ್ಲು ...... ಸರ್ವಾಚಾರಸಂಪನ್ನ ಏಕ ಲಿಂಗನಿಷ್ಠಾಪರ ವೀರಶೈವಸಂಪನ್ನ ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ವಿರಕ್ತಸಿದ್ಧಲಿಂಗದೇವರಿಗೆ ಹದಿನಾಡ ಯಳವಂದೂರ ಅರಸು ಚೆನ್ನೊಡೆಯರು ಈ ಶೂನ್ಯಸಂಪಾದನೆಯ ವಚನಸಂಗ್ರಹವನ್ನು ಬರೆಸಿ ಶಿವಾರ್ಪಿತವಾಗಿ ನಮಸ್ಕರಿಸಿದರು"[೬೬]

---

೬೨. ಕೊಲ್ಲಾಪುರ ಲಕ್ಷೀಸೇನ ಬಸದಿ ತಾಪ್ರ. ೩೩೦.

೬೩. ಮಹಾಸೂ VII–೧೨೬೪.

೬೪. ಮೈಹಸೂ VII– ೭೩೯,

೬೫. ಧಾವಭಾ ೧೬೪೯, ವೀರಶೈವಾಮೃತ ಮಹಾಪುರಾಣ.

೬೬. ಗುಮ್ಮಳಾಪುರ ಸಿದ್ದಲಿಂಗದೇವರ ಶೂನ್ಯಸಂಪಾದನೆ (ಸಂ. ಆರ್.ಸಿ. ಹೀರೆಮಠ) ಪ್ರಸ್ತಾವನೆ.

"ಶ್ರೀ ವಿಜಯಾಭ್ಯುದಯ ಸಾಲಿವಾಹನ ಶಕವರುಷ ೧೫೩೮ನೆಯ ನಳ ಸಂವತ್ಸರದ ಮಾಘ ಬಹುಳ ೧ಳಿಯು ಸೋಮವಾರದಲ್ಲು ಗೂಳೂರ ಸಿದ್ಧ ವೀರಣ್ಣೊಡೆಯ ದೇವರಿಗೆ ನಂದಿಯಪುರದ ಪರ್ವತದೇವರ ಶಿಷ್ಯರು ತೋಟದ ದೇವರು ಲೇಖನಮಾಡಿದ ಪ್ರಭುದೇವರ ಶೂನ್ಯಸಂಪಾದನೆ"[೬೭]

ಈ ಪ್ರಶಸ್ತಿಗಳಲ್ಲಿ ಬರುವ ಹೋಳಿನ ಹಿರಿಯ ಹಂಪಯ್ಯ, ಚಿಕ್ಕಹಂಪಯ್ಯ ಸುಪ್ರಸಿದ್ಧ ದಾಸೋಹಿಗಳೆಂಬುದು ಸರ್ವವಿದಿತ. ಇಲ್ಲಿಯ ಕಲ್ಯಾಣಪುರವೆಂದರೆ ಬೆಂಗಳೂರು ಎಂಬುದನ್ನು ಅವಶ್ಯ ಗಮನಿಸಬೇಕು. ಎರಡನೆಯ ಪ್ರಶಸ್ತಿಯು ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನಿಗೆ ಚೀಲಾಳಸ್ವಾಮಿಯು ಶಿಷ್ಯನಾಗಿದ್ದನೆಂದೂ, ಬಸವಪ್ರಭು ಎಂಬುದು ಆತನ ಪರ್ಯಾಯನಾಮವೆಂದೂ, ಕಪಿಲಸಿದ್ಧಸ್ವಾಮಿಯು ಆತನ ಶಿಷ್ಯನೆಂದೂ ತಿಳಿಸಿಕೊಡುವ ಅಪೂರ್ವ ಆಕರವಾಗಿದೆ. ಗುಮ್ಮಳಾಪುರದ ಸಿದ್ಧಲಿಂಗದೇವರ ಕಾಲ ಶಾಲಿವಾಹನ ಶಕವರುಷ ೧೫೦೨ ಎಂದು ಮೂರನೆಯ ಪ್ರಶಸ್ತಿ ಏಕೈಕ ಆಧಾರವಾಗಿ ತಿಳಿಸಿಕೊಡುತ್ತದೆ. ನಾಲ್ಕನೆಯ ಪ್ರಶಸ್ತಿಯಲ್ಲಿ ಬರುವ ತೋಂಟದದೇವರೆಂದರೆ ಸಿದ್ಧೇಶ್ವರಪುರಾಣದ ಕರ್ತೃವಾದ ವಿರಕ್ತ ತೋಂಟದಾರ್ಯನಾಗಿದ್ದು, ಇವರ ಕಾಲ ಶಾಲಿವಾಹನ ಶಕವರುಷ ೧೫೩೮ ಎಂದು ಪ್ರಥಮಬಾರಿ ಗೊತ್ತಾಗುತ್ತದೆ. ಇವೇ ಮೊದಲಾದ ಆದ್ಯಂತ್ಯ ಪ್ರಶಸ್ತಿಗಳು. ಕೃತಿಯನ್ನು ಬರೆದವರ, ಬರೆಯಿಸಿದವರ ಚರಿತ್ರೆ ಮತ್ತು ಇತರ ವಿಷಯಗಳನ್ನೂ ಪೂರೈಸುತ್ತವೆ.*

ವೆಂಕಟರಾಜು ಎಂಬ ಲಿಪಿಕಾರನು ಕುಮಾರವ್ಯಾಸ ಭಾರತದ ಪ್ರತಿಯೊಂದು ಪರ್ವದ ಕೊನೆಗೆ ಮುಕ್ತಾಯದ ದಿನವನ್ನು ಸೂಚಿಸಿದ್ದು, ಇದರಿಂದ ೯,೦೦೦ ಭಾಮಿನಿಷಟ್ಪದಿಗಳನ್ನು ೨೨ ತಿಂಗಳಲ್ಲಿ ಲಿಪಿಸಿರುವುದಾಗಿ ತಿಳಿದುಬರುತ್ತದೆ.[೬೮] "ಒಂದು ದಿನಕ್ಕೆ ೧೦೦ ಪದ ಬರದ್ದು, ಮಳ್ಯೆಯ ಬರದ,"[೬೯] "ಯೀ ಕವಿಕಂಠಹಾರ ನಿಘಂಟನ್ನು ೨ ದಿವ್ಸದಲ್ಲಿ ನಿಶ್ಚಯವಾಗಿ ಪೂರೈಸಿಯಿರುತ್ತೇನೆ";[೭೦] ಇತ್ಯಾದಿ ಮಾತುಗಳು ಅಂದಿನ ಬರೆವಣಿಗೆಯ ವೇಗವನ್ನು ತಿಳಿಸುತ್ತವೆ. ಬೋಳಮಲ್ಲಿಕಾರ್ಜುನ ದೇವರು ೧೦, ವಟ್ಟಕ್ಕಿ ಬಸ್ತಿ ಪದುಮಯ್ಯ ೧೦, ದಿಗ್ಗಾವಿಪುರದ ಅಂಬಾಜಯ್ಯ ೯, ಪುರಾಣದ ರುದ್ರಯ್ಯ ೭, ಉತ್ತಂಗಿ ಕೆಂಪಯ್ಯ ೬, ಅಮ್ಮಿನಭಾವಿ ಯಳವತ್ತಿಮಠದ ಸಾಲಿ ಚೆನ್ನಯ್ಯ ೫ – ಹೀಗೆ ತಮ್ಮ ಜೀವಮಾನದಲ್ಲಿ ಹಸ್ತಪ್ರತಿ ಲೇಖನಕಾರ್ಯ ಮಾಡಿದ್ದಾರೆ. ಇವರಲ್ಲಿ ಬೋಳ ಮಲ್ಲಿಕಾರ್ಜುನದೇವ ಸೋಮಯ್ಯ, ಅಂಬಾಜಯ್ಯ ಕೇವಲ ತಾಳೆಪ್ರತಿಗಳನ್ನು ಪುರಾಣದ ರುದ್ರಯ್ಯ, ಸಾಲಿ ಚೆನ್ನಯ್ಯ ಕೇವಲ ಕಾಗದ ಪ್ರತಿಗಳನ್ನು ಲಿಪಿಗೊಳಿಸಿದ್ದಾರೆ.[೭೧]

---

೬೭. ಬೆಂಹಸೂ ೨೭೨ ಗೊಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ.
(ನೋಡಿ: ಮಹಸೂ VIII–೫೧೦)

* ಹೆಚ್ಚಿನ ವಿವರಗಳಿಗಾಗಿ "ಆಕರ ಸಾಮಗ್ರಿಯಾಗಿ ಹಸ್ತ ಪ್ರಶಸ್ತಿಗಳು" (ಬಿ.ಆರ್. ಹಿರೇಮಠ) ಚಿನ್ಮೂಲಾದ್ರಿ ಚೇತನ ಪು.೧೭೦. ನೋಡಿರಿ.

೬೮. ಮೈಹಸೂ III–೧೧೫೭.

೬೯. ಮೈಹಸೂ IX–೧೨೧

೭೦. ಮೈಹಸೂ I–೨೬೧ ಕವಿಕಂಠಹಾರ.

೭೧. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ಪು– ೮೨– ೭೩. (ಡಾ. ಬಿ.ಕೆ. ಹಿರೇಮಠ)

ಹೀಗೆ ಒಬ್ಬನೇ ಹಲವು ಕೃತಿಗಳನ್ನು ನಕಲುಮಾಡಿದರೆ, ಇದಕ್ಕೆ ವಿರುದ್ಧವೆನ್ನುವಂತೆ ಒಬ್ಬನಿಗಿಂತ ಹೆಚ್ಚು ಜನ ಸೇರಿ ಒಂದು ಕೃತಿಯನ್ನು ಲಿಪಿಸಿರುವುದೂ ಉಂಟು. ಅಖಂಡೇಶ್ವರ ವಚನ ಕಟ್ಟಿನ ಆರಂಭದಲ್ಲಿ "ಸಾಧಾರಣ ಸಂವತ್ಸರದ ಕಾರ್ತೀಕ ಬಹುಳ ೧೩ ಭಾನುವಾರದಲ್ಲು ಕೊರಟಗೆರೆ ಬಳೇಸಾಲೆ ಚಿಕ್ಕನಂಜುಂಡಪ್ಪಗೆ ವುಪಾದ್ಯ ತಂಮ್ಮೈಯ್ಯನವರ ಕುಮಾರ ಭಾಸ್ಕರೈಯನು ಬರೆದುಕೊಟ್ಟ ಅಖಂಡೇಶ್ವರ ವಚನಕ್ಕೆ ಶುಭಮಸ್ತು" ಎಂದೂ, ಕೊನೆಯಲ್ಲಿ "ಆನಂದನಾಮ ಸಂವತ್ಸರದ ಕಾರ್ತಿಕ ಶು ಭಾನುವಾರ ೧ ತೋಂಟದಮಠದ ಚಿಕ್ಕಯ್ಯನವರು ಬಳೇಸಾಲ ನಂಜುಂಡಪ್ಪಗೆ ಅರಸಿ ಬರದುಕೊಟ್ಟ ಅಖಂಡೇಶ್ವರನ ವಚನ ಸಮಾಪ್ತ" ಎಂದೂ ಉಲ್ಲೇಖಿಸಲಾಗಿದೆ.[೨೨] ಇಲ್ಲಿ ಬಾಸ್ಕರಯ್ಯ ಪ್ರಾರಂಭಿಸಿದ್ದ ಪ್ರತಿಯನ್ನು ಚಿಕ್ಕಯ್ಯ ಮುಕ್ತಾಯಗೊಳಿಸಿದ್ದಾನೆ. "ಐದು ಗಣಂಗಳು ಬರದುಕೊಟ್ಟ ನೂರೊಂದುಸ್ಥಲ ಪುಸ್ತಕ"[೨೩] ಎಂಬುದು ೫ ಜನ ಲಿಪಿಕಾರರ ದುಡಿಮೆಯನ್ನು ಸೂಚಿಸುತ್ತದೆ.

ಹಸ್ತಪ್ರತಿಗಳನ್ನು ಶುದ್ಧವಾಗಿ ಬರೆಯಬೇಕೆಂಬುದು ನಮ್ಮ ಒಟ್ಟು ಲಿಪಿಕಾರರ ಆದರ್ಶ. ಅದಕ್ಕಾಗಿಯೇ –

> ಯಾದೃಶಂ ಪುಸ್ತಕಂ ದೃಷ್ಟ್ವಾ। ತಾದೃಶಂ ಲಿಖಿತಂ ಮಯಾ ॥
> ಅಬದ್ಧೋವಾ ಸುಬದ್ಧೋ ವಾ । ಮಮದೋಷೋ ನ ವಿದ್ಯತೇ ॥
> ತಪ್ಪಂ ಬರೆದಾತಂ ಜಡ । ನಪ್ಪಾತಂ ಬರೆದನೆಂದು ಬಯ್ಯಲ್ವೇಡಿಂ ।
> ತಪ್ಪಿಲ್ಲ ಶುದ್ಧಮಕ್ಕುಂ । ತಪ್ಪಿಲ್ಲದೆ ಪ್ರತಿಸಮಾನವಾಗಿಯೆ ಬರೆದೆಂ ॥

ಎಂಬಂಥ ಹೇಳಿಕೆಗಳೂ ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳ ಕೊನೆಯಲ್ಲಿ ಕಂಡುಬರುತ್ತವೆ. ಹೀಗಿದ್ದೂ ಕೈತಪ್ಪು, ಕಣ್ತಪ್ಪು, ಕಿವಿತಪ್ಪುಗಳು ಜರುಗುವವೆಂಬ ಅರಿವು ಅವರಿಗಿದ್ದಿತು. ಆದುದರಿಂದ ಆಗಾಗ "ಇದರಲ್ಲಿ ತಪ್ಪುಯಿದ್ದರೆ ಬುದ್ಧಿವಂತರು ತಿದ್ದಿಕೊಂಬುದು. ಬೇಸರವ ಮಾಡಲಿಕಾಗದು । ನಿಂಮ ತೊತ್ತಿನ ತೊತ್ತು ಪಡಿದೊತ್ತು ನಂನ ಕೃಪಾಕಟಾಕ್ಷದಿಂದ ಪರಿಪಾಲಿಸೂದು"[೨೪] ಎಂದು ಕೇಳಿಕೊಂಡ ಅನೇಕ ಉದಾಹರಣೆಗಳು ಸಿಗುತ್ತವೆ.

ಲಿಪಿಕಾರರಿಗೆ ಕೆಲವು ಅರ್ಹತೆಗಳು ಅವಶ್ಯ. ಕೆಲವರ ಅಕ್ಷರ ಸುಂದರ, ಭಾಷೆ ಅಶುದ್ಧ. ಕೆಲವರು ಇದಕ್ಕೆ ವಿರುದ್ಧ. ಕೆಲವರು ಎರಡರಲ್ಲಿಯೂ ಶ್ಲಾಘ್ಯರು; ಮತ್ತೆ ಕೆಲವರು ಇದಕ್ಕೆ ವಿರುದ್ಧ. ಹೀಗಿದ್ದೂ ಸಾಮಾನ್ಯವಾಗಿ ಅರ್ಹಪ್ರತಿಕಾರರನ್ನೇ ಬರೆಯಲು ಆಯ್ದುಕೊಳ್ಳುತ್ತಿದ್ದರು.

"ಎರಡು ಮೂಲಪ್ರತಿಗಳನ್ನು ಇಟ್ಟುಕೊಂಡು ಸಮಗ್ರವಾಗಿ ಬರೆಯಲ್ಪಟ್ಟಿದೆ"[೨೫]

"ಬಸವಪುರಾಣದ ಪ್ರತಿಗಳಲ್ಲಿ ಷಟ್ಪದಂಗಳು ಸೂತ್ರ ತಪ್ಪಿ ಹಿಂಚುಮುಂಚಾಗಿಯೂ, ಪೂರ್ವಾರ್ಧಪರಾರ್ಧಗಳು ಹಿಂಚುಮುಂಚಾಗಿಯೂ ಕಥೆಯೂ ಕಾಂಡಗಳೂ ಹಿಂಚುಮುಂಚಾಗಿಯೂ ಇವೆ. ಕಾಂಡಗಳಲ್ಲಿ ಬಂದ ನಾಂದಿಯೇ ಪುನರಪಿ ಬಂದಿದೆ. ಕೆಲವು

---

೨೨. ಮೈಹಸೂ V–೩೩.
೨೩. ಮೈಹಸೂ V–೨೮೧.
೨೪. ಬೆಂಹಸೂ– ೩೧೦, ವೀರಮಾಹೇಶ್ವರಾಚಾರ ಸಂಗ್ರಹ.
೨೫. ಮೈಹಸೂ III–೧೫೦೮ ಲೀಲಾವತಿ.

ಪದ್ಯಗಳು ಹೆಚ್ಚಿಗೆ. ಅಂತು ಕಾಂಡ ೮ಕ್ಕೆ ಸಂಧಿ ೬೦ ಕ್ಕೆ ಪದ ೩೬೨೧ಕ್ಕಂ ಹೆಚ್ಚಾಗಿದ್ದರೆ, ಹೆಚ್ಚಿಗೆಯೆಂದು ತಿಳಿವುದು. ಕಡಿಮೆಯಾಗಿದ್ದರೆ ಲೇಖನದೋಷವೆನ್ನುವುದು. ಕೆಲವು ಪದ್ಯಗಳನ್ನು ಸರ್ವಲಕ್ಷಣಪೂರ್ಣವಾಗಿ ತಿರ್ದಿ ನೇರ್ಪಡಿಸಿದರು ನೀಲಕಂಠಾಚಾರ್ಯರು"[೭೬] ಎಂಬಂಥ ವಿವರಗಳೂ, ಅಕ್ಷರಗಳ ರೂಪಸಾದೃಶ್ಯಕ್ಕೆ ಮೋಸ ಹೋಗದೆ ನಕಲುಕಾರ್ಯ ಮಾಡಿರುವುದನ್ನು ತಿಳಿಸುವ –

ಘುಪ ದಡ ತಕ ನಿಗಿ ಗೊಣಂ ಸಪ ಯಮ ಬಿಖಿ ಭಿಜು
ರಿಲಿಯೆಂಬ ವಿಪುಳಕ್ಷರಂ ಭೇದಿಸಿ ಬರದ ಬರಹ ದೂಷಣಮಿಲ್ಲಂ"[೭೭]

ಎಂಬ ಉಲ್ಲೇಖಗಳೂ ಈ ಲಿಪಿಕಾರರು ಇಂದಿನ ಸಂಪಾದನಶಾಸ್ತ್ರ ವಿದ್ವಾಂಸರು ಮನೋಧರ್ಮದವರಾಗಿದ್ದರೆಂದು ಸೂಚಿಸುತ್ತವೆ.

ತಾಳೆಗರಿ/ಕಾಗದ/ಕಂಟ/ಲೆಕ್ಕಣಿಕೆ/ಕಪ್ಪು/ಮಸಿ–ಇವುಗಳನ್ನು ಬಳಸಿಕೊಂಡು ಕವಿ/ಲಿಪಿಕಾರ ರೂಪಿಸಿದ ಗ್ರಂಥವನ್ನು ಓದುವಾಗ, ಸಾಮಾನ್ಯವಾಗಿ ಕೈಯಲ್ಲಿ ಹಿಡಿಯದೆ, ವ್ಯಾಸಪೀಠದ ಮೇಲಿಡುತ್ತಿದ್ದರು. ಕನ್ನಡಿಗರು ಇದನ್ನು 'ಅಟ್ಟವಣೆ' ಎಂದು ಕರೆಯುತ್ತಿದ್ದರು. 'ಅಟ್ಟವಣೆ ಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂ ಬರೆದ ಪೊತ್ತಗೆಯಂತೆ'[೭೮] ಎಂಬ ಪಂಪನ ವಾಕ್ಯ ಇದನ್ನು ತಿಳಿಸುತ್ತದೆ. ಅಟ್ಟಮಣೆ ಎಂದು ಇದರ ನಿಜರೂಪ. ಇದನ್ನು ಕಟ್ಟಿಗೆಯಂತೆ ಬಿದಿರಿನಿಂದಲೂ ಮಾಡುತ್ತಿರಬಹುದು. ಪಂಪ ಇಲ್ಲಿ 'ಕೋಲ್' ಎಂಬ ಪದ ಬಳಸಿದುದೇ ನಾವು ಹೀಗೆ ಊಹಿಸಲು ಕಾರಣ.

II–ಲಿಪಿ: ಹಸ್ತಪ್ರತಿಗಳು ಹೊಸದಾಗಿ ಹುಟ್ಟುತ್ತ ಬಂದಂತೆ ಹಳೆಯವು ನಾಶವಾಗುತ್ತ ಹೋಗುವುದರಿಂದ ಇಲ್ಲಿಯ ಅಕ್ಷರಗಳ "ಐತಿಹಾಸಿಕ ಬೆಳವಣಿಗೆ"ಯನ್ನೂ, ಕೆಲವೊಮ್ಮೆ ಹಸ್ತಪ್ರತಿಗಳು ಪ್ರದೇಶದಿಂದ ಪ್ರದೇಶಕ್ಕೆ ಪರಿಚಲನಗೊಳ್ಳುತ್ತ ಬಂದುದರಿಂದ ಅಕ್ಷರಗಳ "ಪ್ರಾದೇಶಿಕ ಸ್ವರೂಪ"ವನ್ನೂ ಅರ್ಥಮಾಡಿಕೊಳ್ಳುವುದು ಕಠಿಣವಾಗುತ್ತದೆ. ಹೀಗಿದ್ದೂ ಕಾಲ, ದೇಶ ನಮೂದಿತ ಹಸ್ತಪ್ರತಿಗಳನ್ನು ಕಣ್ಣೆದುರಿಗೆ ಇಟ್ಟುಕೊಂಡು ಅವುಗಳ ಲಿಪಿಯ ಐತಿಹಾಸಿಕ ಬೆಳವಣಿಗೆ, ಪ್ರಾದೇಶಿಕ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.

ಕನ್ನಡ ಹಸ್ತಪ್ರತಿಗಳಿಗಾಗಿ ಕನ್ನಡ ಲಿಪಿಯನ್ನೇ ಬಳಸಿರುವುದು ಸಹಜವಾಗಿದ್ದರೂ. ಕೆಲವೊಮ್ಮೆ ತಿಗಳಾರಿ, ಮೋಡಿ, ಗ್ರಂಥಲಿಪಿ, ನಂದಿನಾಗರಿಲಿಪಿ ಬಳಸಿದ್ದಾರೆ. ಸಂಸ್ಕೃತಭಾಷೆಯ ನಾಗವರ್ಮನ ಕರ್ಣಾಟ ಭಾಷಾಭೂಷಣ ಮಲೆಯಾಳಿ, ಮೋಡಿ, ಗ್ರಂಥ, ಕನ್ನಡ–ಇಷ್ಟು ಲಿಪಿಗಳಲ್ಲಿ ಸಿಗುತ್ತದೆ.[೭೯] ಕನ್ನಡ ಭಾಷೆಯ ಪ್ರತಿಭಾಗೀ ಕನ್ನಡ ವ್ಯಾಖ್ಯಾನ, ಪ್ರಾಕೃತಮಂಜರಿ, ಭಾಗವತ ಟೀಕೆಗಳು ನಂದಿನಾಗರಿ ಲಿಪಿಯಲ್ಲಿವೆ.[೮೦] ಕುಮಾರವ್ಯಾಸ ಭಾರತ ತೆಲುಗು ಲಿಪಿಯಲ್ಲಿದೆ.[೮೧] ಇದಕ್ಕೆ ವಿರುದ್ಧವೆನ್ನುವಂತೆ

---

೭೬. ಕಕಚ I–೪೮೨ (೧೯೬೧)

೭೭. ಮೈಹಸೂ I-೨೪೧, ೪೨, ೪೩.

೭೮. ಪಂಭಾ XI–೪೯

೭೯. ಮೈಹಸೂ I–೨೪೧ (ಮಲೆಯಾಳಿ ಲಿಪಿ), ೨೪೨ (ಗ್ರಂಥಲಿಪಿ), ೨೪೩ (ಮೋಡಿ ಲಿಪಿ), ೨೪೪ (ಕನ್ನಡ ಲಿಪಿ).

೮೦. ಮೈಹಸೂ II–೯೩೦, ೨೧, III–೧೧೫೪

೮೧. ಮೈಹಸೂ III–೧೧೮೦, ೧೧೮೧,

ಕರ್ನಾಟಕದಲ್ಲಿ ಸಿಗುವ ಅನ್ಯಭಾಷೆಯ ಕೃತಿಗಳಿಗಾಗಿ ಕನ್ನಡ ಲಿಪಿಯನ್ನು ಬಳಸಿದುದು ಕಂಡುಬರುತ್ತದೆ. ಸಾಮಾನ್ಯವಾಗಿ ಇಲ್ಲಿಯ ಸಂಸ್ಕೃತಕೃತಿಗಳೆಲ್ಲ ಕನ್ನಡ ಲಿಪಿಯಲ್ಲಿಯೇ ಇವೆ. ಪ್ರಾಕೃತ-ಸಂಸ್ಕೃತ ಮಿಶ್ರಭಾಷೆಯ ಸುಪ್ರಸಿದ್ಧ ಧವಲಾ, ಜಯಧವಲಾ, ಮಹಾಧವಲಾ ಪ್ರತಿಗಳು ಕನ್ನಡ ಲಿಪಿಯಲ್ಲಿರುವುದು ಗಮನಿಸತಕ್ಕ ಸಂಗತಿಯಾಗಿದೆ.

ಈ ಸಂದರ್ಭದಲ್ಲಿ ಕನ್ನಡ ಹಸ್ತಪ್ರತಿಗಳಿಗೆ ಬಳಸಲಾದ ತಿಗಳಾರಿ, ಗ್ರಂಥ, ಅರವ, ಮೋಡಿ,ನಂದಿನಾಗರಿಗಳೆಂಬ ವಿಶಿಷ್ಟಲಿಪಿಗಳ ವಿವೇಚನೆ ಅಗತ್ಯ. ತಿಗಳಾರಿಯೆಂಬುದು ತಿಗಳು+ಆರಿ ಎಂಬಿವುಗಳ ಸಮಸ್ತರೂಪವಾಗಿದೆ. ಇದರ ನಿಜರೂಪ ತಮಿಳು ಆರ್ಯ. ಪ್ರಾಚೀನಕಾಲದಲ್ಲಿ ತಮಿಳರನ್ನು ತಿಗುಳರೆಂದೇ ಕರೆಯುತ್ತಿದ್ದರು. ದ್ರಾವಿಡ ಪ್ರಾಂತದಲ್ಲಿ ನೆಲೆನಿಂತ ಬ್ರಾಹ್ಮಣರು ಬಳಸುತ್ತಿದ್ದ ಲಿಪಿಯಿದು. ಕರ್ನಾಟಕಕ್ಕೆ ಬಂದರೆ ಕರಾವಳಿ ತೀರ, ಮಲೆನಾಡು ಮತ್ತು ದಕ್ಷಿಣಕನ್ನಡ-ಉತ್ತರಕನ್ನಡ ಜಿಲ್ಲೆಗಳ ಬ್ರಾಹ್ಮಣರು ಮಾತ್ರ ಇದನ್ನು ಬಳಸುತ್ತಿದ್ದರು. ಹೀಗಾಗಿ ಇದು ಸಾಮಾಜಿಕ ಲಿಪಿ (Social Script) ಮತ್ತು ಪ್ರಾದೇಶಿಕಲಿಪಿ (Regional Script) ಎರಡೂ ಲಕ್ಷಣಗಳನ್ನು ಹೊಂದಿದೆ. ಬಹುಶಃ ಸಂಸ್ಕೃತ ಸಾಹಿತ್ಯವನ್ನು ಕರ್ನಾಟಕದಲ್ಲಿ ರಕ್ಷಿಸಲು ಈ ಲಿಪಿಯನ್ನು ರೂಢಿಸಿಕೊಂಡಂತಿದೆ. ಇದರ ಸ್ವರೂಪ ತಮಿಳಿಗಿಂತ ಮಲೆಯಾಳಿ ಲಿಪಿಗೆ ಹೆಚ್ಚು ಸಮೀಪವಿದೆ. ಕೇರಳ ದೇಶದ ಗಾಢಸಂಪರ್ಕದಿಂದ ಇದು ಹುಟ್ಟದೆಯೆಂದೂ ವೇದಶಾಸ್ತ್ರಾದಿಗಳು ಕನ್ನಡ ಲಿಪಿಯ ಮೂಲಕ ಸಾಮಾನ್ಯರ ಕೈಸೇರಿ, ಅವುಗಳ ಪಾಠ ಹಾಳಾಗಬಾರದೆಂಬ ಉದ್ದೇಶದಿಂದ ಈ ರಹಸ್ಯಲಿಪಿ ಬೆಳೆಸಿದರೆಂದೂ ವಿದ್ವಾಂಸರು ಹೇಳುತ್ತಾರೆ. ೧೨೯೦ರ ಮೈಸೂರು ಜಿಲ್ಲೆಯ ಮಾಲಿಂಗ ಅಗ್ರಹಾರದ ಶಾಸನದಲ್ಲಿ "ನಾಗರ ಕನ್ನಡ ತಿಗುಳಾರ್ಯಮನೋದಿಸುವ ಬಾಲಶಿಕ್ಷೆ"ಯ ಶಿಕ್ಷಕರಿಗೆ ದಾನನೀಡಿದ ಉಲ್ಲೇಖವಿದ್ದು, ಇಲ್ಲಿಯ ತಿಗುಳಾರ್ಯ ಎಂಬುದು ತಿಗುಳಾರಿಯೇ ಆಗಿರಬಹುದು. ಕರ್ನಾಟಕದಲ್ಲಿ ಸಂಸ್ಕೃತಭಾಷೆಯಂತೆ ಕನ್ನಡಭಾಷೆಯ ಕೃತಿಗಳನ್ನೂ ಈ ಲಿಪಿಯಲ್ಲಿ ಬರೆದುದಕ್ಕೆ ಅನೇಕ ಉದಹರಣೆಗಳಿವೆ. ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ ನಳೋದಯ ಕಾವ್ಯ, ಅಗಸ್ತ್ಯಾಶ್ರಮ ವರ್ಣನೆ, ನರ್ಮದಾ ಮಹಾತ್ಮೆ, ಶೈವ ಕರುಣಾಮೃತ ಸಿದ್ಧಾಂತ, ಶಿವತತ್ವ ವಿವೇಕಾಖ್ಯಾನ, ಸಾಂಖ್ಯಯೋಗ, ವೈದ್ಯಸಾರ, ಮಂತ್ರಸಾರ ಮೊದಲಾದ ಕೃತಿಗಳು ತಿಗಳಾರಿ ಲಿಪಿಯಲ್ಲಿವೆ. ಸಾಳ್ವ ಭಾರತದ ಒಂದೇ ಒಂದು ಪ್ರತಿ ಕನ್ನಡ ಲಿಪಿಯಲ್ಲಿದೆ. ಆದರೆ ಇದರ ಬೇರೆ ಪ್ರತಿಗಳು ತಿಗಳಾರಿಯಲ್ಲಿರುವುದಾಗಿ ತಿಳಿದುಬರುತ್ತದೆ.

ಗ್ರಂಥಲಿಪಿ ತಮಿಳುನಾಡಿನ ಉತ್ತರ ಅರ್ಕಾಡು, ದಕ್ಷಿಣ ಅರ್ಕಾಡು, ಸೇಲಂ, ತಿರುಚಿನಾಪಳ್ಳಿ, ಮಧುರೆ, ತಿರುನೇಲ್ವೇಲಿ ಜಿಲ್ಲೆಗಳಲ್ಲಿ ಬಳಕೆಯಾಗುತ್ತಲಿದ್ದಿತು. ಮಲೆಯಾಳಂ ಲಿಪಿಗೆ ಮೂಲ ಈ ಗ್ರಂಥಲಿಪಿಯಾಗಿದೆ. ಮಲೆಯಾಳಿ ಭಾಷೆಯಲ್ಲಿ ಇದಕ್ಕೆ 'ಆರ್ಯ ಎಟುತ್ತು (ಎಟುತ್ತು=ಲಿಪಿ) ಎಂದು ಕರೆಯುತ್ತಾರೆ. ಮಲೆಯಾಳಿಗಳು ಬಿಡಿಸಿಕೊಳ್ಳದಷ್ಟು ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಸಂದರ್ಭದಲ್ಲಿ, ಆ ಭಾಷೆಯ ಗ್ರಂಥಗಳನ್ನು ಬರೆಯಲು ತಮ್ಮ ಲಿಪಿಸಂಖ್ಯೆ ಸಾಲದಿರಲು, ಅನಿವಾರ್ಯವಾಗಿ ಈ ಲಿಪಿಯನ್ನು ರೂಪಿಸಿ ಕೊಳ್ಳಬೇಕಾಯಿತು. ಸಂಸ್ಕೃತದಲ್ಲಿ ಸಾಹಿತ್ಯಕೃತಿಗೆ 'ಗ್ರಂಥ' ಎಂದು ಹೆಸರು. ಹೀಗೆ ಗ್ರಂಥಗಳನ್ನು ಬರೆಯಲು ಬಳಸುತ್ತಿದ್ದ ಕಾರಣ ಈ ಲಿಪಿಗೆ "ಗ್ರಂಥಲಿಪಿ' ಎಂಬ ಹೆಸರು ಪ್ರಚಲಿತವಾಯಿತು. ೭ರಿಂದ ೧೫ನೆಯ ಶತಮಾನದ ವರೆಗೆ ರೂಪಾಂತರಗೊಳ್ಳುತ್ತ ಬಂದ ಈ ಲಿಪಿ ಮೊದಮೊದಲು ಕನ್ನಡ-ತೆಲುಗು ಲಿಪಿಗಳನ್ನೂ, ಪಲ್ಲವರ ತರುವಾಯ ಮಲೆಯಾಳಿ

ಲಿಪಿಯನ್ನೂ ಹೋಲುವಂತೆ ಬೆಳೆಯಿತು. ತಮಿಳಿನ ಶಾಸನಲಿಪಿಗೂ ಇದಕ್ಕೂ ಹೋಲಿಕೆ ಇದೆ. ಅದಕ್ಕಾಗಿಯೇ ತಮಿಳುಲಿಪಿಯನ್ನು ವಿದ್ವಾಂಸರು 'ಗ್ರಂಥ ತಮಿಳುಲಿಪಿ' ಎಂದು ಕರೆಯುತ್ತಾರೆ. ತುಳುವಿನ ಕೆಲವು ಶಾಸನಗಳೂ ಈ ಲಿಪಿಯಲ್ಲಿ ಸಿಗುತ್ತವೆ.

ಕನ್ನಡ ಹಸ್ತಪ್ರತಿಗಳಿಗೆ ಬಳಸಿದ ಇನ್ನೊಂದು ಬಗೆಯ ಲಿಪಿ 'ಅರವ ಲಿಪಿ'ಯಾಗಿದೆ. ಅರವವೆಂದರೆ ತಮಿಳು. ಹೀಗಾಗಿ ಇದನ್ನು ಒಂದು ಕಾಲಘಟ್ಟದ ತಮಿಳುಲಿಪಿಯೆಂದೇ ಹೇಳಬಹುದು.

ಕನ್ನಡ ಹಸ್ತಪ್ರತಿಗಳು ಮೋಡೀ ಲಿಪಿಯಲ್ಲಿಯೂ ಸಿಗುತ್ತವೆ. ಇವು ಸಾಮಾನ್ಯವಾಗಿ ಮರಾಠಾ ಕಾಲದ ಪ್ರತಿಗಳು. ಕನ್ನಡ ಲಿಪಿಮಾಲೆಯನ್ನೇ ಒಳಗೊಂಡಿರುವ ಇದು, ಒಂದು ವಿಧವಾದ ಸಂಕ್ಷಿಪ್ತ ಹಾಗೂ ಸೇರಿಸಿ ಲಿಪಿಸುವ ಬರೆವಣಿಗೆಯಾಗಿದೆ.

ನಂದಿನಾಗರಿ ಲಿಪಿಯಲ್ಲಿಯೂ ಕೆಲವು ಕನ್ನಡ ಕೃತಿಗಳು ಬರಯಲ್ಪಟ್ಟಿವೆ. ಗುಜರಾಥ ಪ್ರಾಂತದ ನಾಗರಖಂಡದಲ್ಲಿ ರೂಪಗೊಂಡ ಬ್ರಾಹ್ಮೀಲಿಪಿಯೇ ನಾಗರಿಲಿಪಿಯಾಗಿದೆ. 'ದೇವ' ಬಿರುದಿನ ಗುಪ್ತ ಮನೆತನದ ಸ್ಕಂದಗುಪ್ತನ ಕಾಲದಲ್ಲಿ ಈ ನಾಗರೀ ಲಿಪಿಗೆ ತಲಿಕಟ್ಟು ಕೊಡುವ ಪದ್ಧತಿ ರೂಢವಾಗಿ ಅದಕ್ಕೆ 'ದೇವನಾಗರಿ' ಎಂಬ ಹೆಸರು ಬಳಕೆಗೆ ಬಂದಿತು. ಯಾದವ, ವಿಜಯನಗರ ಕಾಲದಲ್ಲಿ ಒಂದಿಷ್ಟು ಬದಲಾವಣೆ ಹೊಂದಿದ ಈ ಲಿಪಿಯನ್ನು 'ನಂದಿನಾಗರ' ಎಂದು ಕರೆಯುತ್ತಾರೆ.[೮೨]

ಕೊಡೆಕಲ್ಲು ಗ್ರಾಮದಲ್ಲಿ ೧೧ ಪ್ರಕಾರದ ಲಿಪಿಗಳಿದ್ದು, ೧೫ ನೆಯ ಶತಮಾನದ ಬಸವಣ್ಣನೆಂಬ ಸಂತನ ವಚನಗಳನ್ನು ಈ ಲಿಪಿಗಳಲ್ಲಿ ಬರೆಯಲಾಗಿದೆ. ಇದಕ್ಕೆ 'ಅಮರಗನ್ನಡಲಿಪಿ' ಎಂದು ಕರೆಯುತ್ತಾರೆ.[೮೩]

ಇವುಗಳನ್ನು ಬಿಟ್ಟರೆ ಗಡಿಪ್ರದೇಶಗಳಲ್ಲಿ ತೆಲುಗು, ತಮಿಳು, ಮಲೆಯಾಳಂ, ಮರಾಥಿ ಭಾಷೆಯ ಕೃತಿಗಳನ್ನು ಕನ್ನಡ ಲಿಪಿಯಲ್ಲಿಯೂ, ಕನ್ನಡ ಭಾಷೆಯ ಕೃತಿಗಳನ್ನು ಈ ಭಾಷಾಲಿಪಿಗಳಲ್ಲಿಯೂ ಬರೆದುದಕ್ಕೆ ಅನೇಕ ನಿದರ್ಶನಗಳು ಸಿಗುತ್ತವೆ.

ಶಾಸನಕಾರರಂತೆ ಹಸ್ತಪ್ರತಿಕಾರರೂ ಕೆಲವೊಮ್ಮೆ ತಮ್ಮ ಅಕ್ಷರಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಇದರಿಂದ ಸುಂದರ ಬರಹ, ಸಣ್ಣಬರಹ ಎಂಬ ಎರಡು ರೀತಿಗಳ ಬಗ್ಗೆ ಅವರು ಆಸಕ್ತಿ ವಹಿಸುತ್ತಿದ್ದರೆಂದು ತಿಳಿದುಬರುತ್ತದೆ.

ಸುಂದರ ಬರಹ : ಸೌಂದರ್ಯ ಮನುಷ್ಯನ ಮೂಲಭೂತಪ್ರಜ್ಞೆಯಾಗಿದೆ. ಅಕ್ಷರಗಳ ವಿಷಯವಾಗಿಯೂ ಈ ಪ್ರಜ್ಞೆಯನ್ನು ನಮ್ಮ ಲಿಪಿಕಾರರು ಬೆಳೆಸಿಕೊಂಡುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಅವುಗಳಲ್ಲಿ ಪುಷ್ಪದಂತ ಪುರಾಣವನ್ನು ಬರೆದ ನವಿಲುಗುಂದದ ಮಾದಿರಾಜನ ಹೇಳಿಕೆ ಸುಪ್ರಸಿದ್ಧವಾದುದು:

---

೮೨. ಮಣಿಹ. ೩೮೫–೪೦೦.

೮೩. ಕೊಡೆಕಲ್ಲ ಬಸವಣ್ಣ. ಒಂದು ಅಧ್ಯಯನ (ಅಪ್ರಕಟಿತ) ಪು. ೫೩೨

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳ ಚೆಲ್ವು ಮಾತ್ರೆಯೊಳ್ ।
ನಿಂದ ಬೆಡಂಗು ಬಳ್ಳಿಯೊಳೊಡಂಬಡುತಿರ್ಪ ನಯಂ ವಿಸರ್ಗದೊ ॥
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜವಿಬುಧಂ ಬಿಬುಧೋದಿತ ನವ್ಯಕಾವ್ಯಮಂ ॥[೮೪]

ಎಂಬ ಪದ್ಯ ನಮ್ಮ ಪ್ರಾಚೀನರ ಅಕ್ಷರಸೌಂದರ್ಯಪ್ರಜ್ಞೆಗೆ ನಿದರ್ಶನವಾಗಿದೆ. "…. ದಿವ್ಯತಾಳಪತ್ರಮಂ ತಂದು …. ಅಲಂಕಾರಮಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯಶಿವಾಲಯವಂ ನಿರ್ಮಿಸಿದಂತಿಬಾರದೆಂದು, ಬಿಂದು ವಿಸರ್ಗಂ ದಡ್ಡತೆ ಹೊಂದಿ ದಾವ್ಯತೋರ್ಧ್ವರೇಫ ದೀರ್ಘಹ್ರಸ್ವದಿಂದೊಪ್ಪುತ್ತಿರ್ದ ಅಕ್ಕರಮೂರ್ತಿಗಳಂ ಲೇಖನವಂ ಮಾಡೆಂದು"[೮೫] ಚಿಕ್ಕಯ್ಯನವರು ತನಗೆ ತಾಳೆಪ್ರತಿ ಕಟ್ಟನ್ನು ಕೊಟ್ಟರೆಂದು ಹೇಳಿದ ಅನ್ನದಾನದೇವರ ಈ ವಿವರ, ಅವರು ಅಕ್ಷರಗಳನ್ನು ದೇವತಾ ವಿಗ್ರಹಗಳೆಂದು ಪರಿಗಣಿಸಿದ್ದ ಪವಿತ್ರಭಾವನೆಯನ್ನು ತಿಳಿಸುತ್ತದೆ.

ಸಣ್ಣ ಬರಹ : ಕೆಲವು ಲಿಪಿಕಾರರು ತಮ್ಮ ಸಣ್ಣ ಗಾತ್ರದ ಲಿಪಿಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಪುಟಗಳ ಉಳಿತಾಯಕ್ಕಿಂತ ಇದನ್ನು ಒಂದು ಕಲೆಯಾಗಿ ಇವರು ಬೆಳೆಸಿಕೊಂಡಿದ್ದರೆಂದು ತಿಳಿದುಬರುತ್ತದೆ.

"ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು ಸೇರಿಸಿದ ಶರಣ ಚಾರಿತ್ರದ ವಚನ."[೮೬]

"ಸಂಣಬರಹದ ಗುರುಬಸವರಾಜದೇವರ ಶ್ರೀಪಾದಕಟಾಕ್ಷದಿಂದ ಶಿವಲಿಂಗ ದೇವರಿಗೆ ಟೀಕು ಯೇಕೋತ್ತರ ಸಮಾಪ್ತಿ"[೮೭]

ಇತ್ಯಾದಿ ಹೇಳಿಕೆಗಳು 'ಸಣ್ಣ ಬರಹ'ದ ಬಗ್ಗೆ ಸೂಚನೆ ನೀಡುತ್ತವೆ. ಇವರ ಬರವಣಿಗೆಗಳನ್ನು ಸೂಕ್ಷ್ಮದರ್ಶಕದ ಸಹಾಯದಿಂದ ಮಾತ್ರ ಓದಲು ಸಾಧ್ಯ. ೧೮" ಉದ್ದನೆಯ ಒಂದು ಚರಣದಲ್ಲಿ ೪೨೦ ದೇವನಾಗರಿ ಅಕ್ಷರ ಬರೆದ ಹಸ್ತಪ್ರತಿಯ ಒಂದು ಗರಿ, ಮೈಸೂರು ಪ್ರಾಚ್ಯಸಂಶೋಧನ ಸಂಸ್ಥೆಯಲ್ಲಿದೆ.[೮೮] ಈ ಮಾದರಿಯ ಕೆಲವು ಪ್ರತಿಗಳು ಬೇರೆ ಬೇರೆ ಭಾಂಡಾರಗಳಲ್ಲಿಯೂ ಸಿಗುತ್ತವೆ. ಇದಲ್ಲದೆ ಅಕ್ಷರಗಳಲ್ಲಿ ಆನೆ ಸಿಂಹಗಳನ್ನು ಅಳವಡಿಸುವವರೂ, ಶೀಘ್ರಲಿಪಿಕಾರರೂ, ಬಹುಲಿಪಿ ಲೇಖಕರೂ, ಅವಧಾನಲೇಖಕರೂ ತಾವು ಆಗಿದ್ದ ಬಗ್ಗೆ ಶಾಸನಲಿಪಿಕಾರರು ಹೇಳುವರಾದರೂ ಹಸ್ತಪ್ರತಿಲಿಪಿಕಾರರು ಹೀಗೆ ಹೇಳಿಕೊಂಡುದಕ್ಕೆ ಉದಾಹರಣೆಗಳಿಲ್ಲ. ಆದರೆ ಶಬ್ದಮಣಿದರ್ಪಣದ ಲಿಪಿಕಾರ ಯ, ಮತ್ತು ಲ ಒತ್ತುಗಳನ್ನು ಉದ್ದೇಶಪೂರ್ವಕ ವಾಗಿಯೇ ಕೆಳಗಿನ ಮೂರು ಸಾಲುಗಳ ವರೆಗೆ ಬೆಳೆಸಿ. ಗರಿಯ ಮೇಲೆ ಅಲ್ಲಲ್ಲಿ ಬಲ್ಬು ಇಳಿಬಿಟ್ಟ ರೀತಿಯನ್ನು

---

೮೪. ಕಕಚ I–೪೬೨.
೮೫. ಮೈಹಸೂ I–ಪ್ರಸ್ತಾವನೆ.
೮೬. ಧಾವಾಭಾಂ–೩೨೭.
೮೭. ಧಾವಾಭಾಂ–೩೨೮.
೮೮. ಕನ್ನಡ ಹಸ್ತಪ್ರತಿಗಳ ಇತಿಹಾಸ. ಪು–೩೫.

ನೆನಪಿಸುತ್ತಾನೆ.[೮೯] ವಿದುರನೀತಿಯ ಒಂದು ಹಸ್ತಪ್ರತಿಯಲ್ಲಿ (ಮೈಹಸೂ. ೧೧೫೭) ಅಕ್ಷರಗಳನ್ನು ಬಗೆ ಬಗೆಯ ಚೌಕ ಮನೆಗಳ ರೀತಿಯಲ್ಲಿ ವಿನ್ಯಾಸಗೊಳಿಸುತ್ತ ಹೋಗಲಾಗಿದೆ.[೯೦]

III ಭಾಷೆ : ಕರ್ನಾಟಕದಲ್ಲಿ ಕನ್ನಡಭಾಷೆಯ ಕೃತಿಗಳೇ ಅಧಿಕವಾಗಿರುವುದು ಸಹಜ. ಕನ್ನಡವನ್ನು ಬಿಟ್ಟರೆ ಇಲ್ಲಿ ಸಂಸ್ಕೃತಭಾಷೆಯ ಪ್ರತಿಗಳು ಸಿಗುತ್ತವೆ. ವೈದಿಕ ಪರಿಸರದಲ್ಲಿ ಇವು ಇನ್ನೂ ಹೆಚ್ಚು. ಜೈನಮಠಗಳಲ್ಲಿ ಪ್ರಾಕೃತ ಕೃತಿಗಳು ಲಭ್ಯವಾಗುತ್ತವೆ. ಇವುಗಳನ್ನು ಬಿಟ್ಟರೆ ಗಡಿನಾಡಿನಲ್ಲಿ ತಮಿಳು, ತೆಲುಗು, ಮಲಯಾಳಂ, ಮರಾಠಿ ಭಾಷೆಯ ಪ್ರತಿಗಳು ಅಲ್ಪಸಂಖ್ಯೆಯಲ್ಲಿ ಸಿಗುತ್ತವೆ. ಕೆಲವೊಮ್ಮೆ ವೀರಶೈವ ಹಸ್ತಪ್ರತಿಗಳಲ್ಲಿ ಜೈನ ಬ್ರಾಹ್ಮಣ ಹಸ್ತಪ್ರತಿಗಳಿಗಿಂತ ಭಾಷಾದೋಷ ಅಧಿಕ ಕಂಡುಬರುತ್ತದೆ. ಇದಕ್ಕೆ ಕಾರಣ ಒಕ್ಕಲುತನ, ವ್ಯಾಪಾರ ವೃತ್ತಿಯ ವೀರಶೈವರಿಗೆ ಲೇಖನ ಕಲೆ, ಪ್ರಥಮ ಹವ್ಯಾಸವಲ್ಲ, ದ್ವಿತೀಯ ಹವ್ಯಾಸವಾಗಿರುವದು. ಈ ಎಲ್ಲ ಕಾರಣಗಳಿಂದಾಗಿ ಹಸ್ತಪ್ರತಿಗಳು, ಲಿಪಿಕಾರನ ವ್ಯಕ್ತಿತ್ವಕ್ಕೆ ಕನ್ನಡಿಯಾಗಿ ಉಳಿದಿವೆ.

ಕನ್ನಡದಲ್ಲಿ ಹಳಗನ್ನಡ, ನಡುಗನ್ನಡ ಅವಸ್ಥೆಯ ಪ್ರತಿಗಳಿದ್ದು, ಇವುಗಳಲ್ಲಿ ನಡುಗನ್ನಡ ಅವಸ್ಥೆಯ ಪ್ರತಿಗಳು ವಿಪುಲ. ಇದಕ್ಕೆ ಕಾರಣ, ನಡುಗನ್ನಡದ ಕಾಲವ್ಯಾಪ್ತಿ ದೊಡ್ಡದು, ಕವಿಗಳ ಸಂಖ್ಯೆಯೂ ದೊಡ್ಡದು. ಅದು ಸರಳ ಶೈಲಿಯಲ್ಲಿರುವುದರಿಂದ ಸಾಮಾನ್ಯರೂ ಸ್ವ-ಪರ ಪ್ರಯೋಜನಾರ್ಥ ಇವುಗಳನ್ನು ಬರೆದಿದ್ದಾರೆ, ಬರೆಯಿಸಿದ್ದಾರೆ.

ಭಾಷೆ, ಲಿಪಿಗಳೇ ಹಸ್ತಪ್ರತಿಯ ಜೀವ-ಉಸಿರು. ಇವುಗಳ ಬಳಕೆ ಶುದ್ಧವಾಗಿದ್ದಷ್ಟೂ ಹಸ್ತಪ್ರತಿಗೆ ಉತ್ಕೃಷ್ಟತೆ ಪ್ರಾಪ್ತವಾಗುತ್ತದೆ. ದುರ್ದೈವದ ಸಂಗತಿಯೆಂದರೆ ಕರ್ನಾಟಕದಲ್ಲಿ ಅವುಗಳ ಉತ್ಕೃಷ್ಟತೆ ನಿರೀಕ್ಷಿತ ಎತ್ತರದಲ್ಲಿ ಸಾಗಿಬರಲಿಲ್ಲ. ಹೊಣೆಗೇಡಿ ಲಿಪಿಕಾರರು, ಕಿಡಿಗೇಡಿ ಲಿಪಿಕಾರರು ಹಸ್ತಪ್ರತಿಗಳ ಕೂಡ ಲಘುವಾಗಿ ವರ್ತಿಸಿರುವುದಕ್ಕೆ ಕೆಲವು ಉದಾಹರಣೆಗಳು ಸಿಗುತ್ತವೆ. ಕೂಲಿಗಾಗಿ ಬರೆದ ಹಸ್ತಪ್ರತಿಗಳಲ್ಲಿ ಈ ಧೋರಣೆ ವರ್ಧಿಸಿರುವುದು ಸಹಜ. ಇದಲ್ಲದೆ, ಧಾರ್ಮಿಕ ಕೃತಿಗಳಿಗಿಂತ ಲೌಕಿಕ ಕೃತಿಗಳ ಬಗ್ಗೆ, ಮಾರ್ಗಕೃತಿಗಳಿಗಿಂತ ದೇಶಿಕೃತಿಗಳ ಬಗ್ಗೆ, ಸಣ್ಣ ಗಾತ್ರದ ಕೃತಿಗಳಿಗಿಂತ ದೊಡ್ಡ ಗಾತ್ರದ ಕೃತಿಗಳ ಬಗ್ಗೆ ಇವರು ಲಘುವಾಗಿ ವರ್ತಿಸಿದ್ದಾರೆ. ಅಂದರೆ ವೈಯಕ್ತಿಕ ಹೊಣೆಗಾರಿಕೆ ಮತ್ತು ಹೊಣೆಗೇಡಿತನಗಳು ಕಾರಣವಾಗಿ ಹಸ್ತಪ್ರತಿಯ ಗುಣಮಟ್ಟದಲ್ಲಿ ವ್ಯತ್ಯಾಸ ತೋರಿಬಂದಿದೆ, "ಒಟ್ಟು ಪ್ರತಿಯ ಮೇಲೆ ಕಣ್ಣಾಡಿಸಿದಾಗ ಲಿಪಿಕಾರನ ಭಾಷಾಜ್ಞಾನ, ಲಿಪಿ ಪರಿಣತಿ, ಓರಣದ ಒಲವು, ಸೌಂದರ್ಯಪ್ರಜ್ಞೆಗಳೂ ಇವುಗಳಿಗೆ ವ್ಯತಿರಿಕ್ತವಾಗಿ ಗುಣದೋಷಗಳೂ ಕಂಡುಬಂದು, ದೈಹಿಕವಾಗಿ ಗತಿಸಿಹೋದ ಲಿಪಿಕಾರನ ವ್ಯಕ್ತಿತ್ವ ಹಸ್ತಪ್ರತಿಯ ಮೂಲಕ ಅರಿತಕ್ಕೆ ಬರುತ್ತದೆ. ಅವನ ಬದುಕಿನ ಶಿಸ್ತು-ಅಶಿಸ್ತು, ಹೊಣೆಗಾರಿಕೆ-ಹೊಣೆಗೇಡಿತನ, ಗಂಭೀರ-ಲಘುಸ್ವಭಾವಗಳೆಲ್ಲ ವೇದ್ಯವಾಗುತ್ತವೆ. ಅದಕ್ಕಾಗಿ ಒಂದರ್ಥದಲ್ಲಿ ಹಸ್ತಪ್ರತಿಗಳ ಅಭ್ಯಾಸವೆಂದರೆ ಪ್ರಾಚೀನ ಲಿಪಿಕಾರರ ಮನೋಧರ್ಮದ ಅಭ್ಯಾಸವೆನಿಸುತ್ತದೆ"[೯೧] ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

---

೮೯. ಶಬ್ದಮಣಿದರ್ಪಣ (ಕನ್ನಡ ಸಂಶೋಧನ ಸಂಸ್ಥೆ) ಹ.ಪ್ರನಂ. ೪೪.
೯೦. ಕನ್ನಡ ಹಸ್ತಪ್ರತಿಗಳ ಇತಿಹಾಸ. ಪು-೩೬.
೯೧. ಕನ್ನಡ ಗ್ರಂಥ ಸಂಪಾದನಶಾಸ್ತ್ರ (ಎಂ.ಎಂ. ಕಲಬುರ್ಗಿ, ೧೯೮೬) ಪು ೬೧.

೩. ಗ್ರಂಥವಿನ್ಯಾಸ-ಗ್ರಥನವಿನ್ಯಾಸ :

ಗ್ರಂಥವಿನ್ಯಾಸವನ್ನು ಕುರಿತು ಹೇಳುವುದಾದರೆ, ಹಸ್ತಪ್ರತಿಯ ಆದಿ-ಅಂತ್ಯದಲ್ಲಿಯ ಒಂದೆರಡು ಗರಿಗಳ ಮೇಲೆ ಬರೆಯುತ್ತಿರಲಿಲ್ಲ. ಪಠ್ಯಭಾಗದ ರಕ್ಷಣೆಗಾಗಿ ಈ ವ್ಯವಸ್ಥೆ ಮಾಡುತ್ತಿದ್ದುದರಿಂದ ಈ ಗರಿಗಳನ್ನು "ರಕ್ಷಾಪುಟ" ಎಂದು ಕರೆಯುತ್ತಿದ್ದರು. ಒಂದು ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಅವುಗಳ ಯಾದಿಯನ್ನು ಆ ಕಟ್ಟಿನ ಆದಿ ಇಲ್ಲವೆ ಅಂತ್ಯ ಪುಟದ ಮೇಲೆ ಬರೆಯುತ್ತಿದ್ದರು. ಇದರಿಂದ ವಾಚಕರಿಗೆ ತಮಗೆ ಬೇಕಾದ ಕೃತಿಯನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುತ್ತಿತ್ತು.

ಬರವಣಿಗೆಯ ಪ್ರಾರಂಭದಲ್ಲಿ ಶ್ರೀಕಾರ ಇಲ್ಲವೆ ಪುಷ್ಪರೂಪದ ನಕ್ಷೆ ಬಿಡಿಸುತ್ತಿದ್ದರು. ಆಮೇಲೆ ಸಾಮಾನ್ಯವಾಗಿ ದೇವತಾಸ್ತುತಿ, ಗುರುಸ್ತುತಿ, ಮತ್ತು ಗ್ರಂಥದ ಹೆಸರುಗಳನ್ನು ಬರೆಯುತ್ತಿದ್ದರು. ಜೈನಕೃತಿಗಳು 'ಶ್ರೀವೀತರಾಗಾಯನಮಃ' ಸ್ತುತಿಯಿಂದ, ವೀರಶೈವ ಕೃತಿಗಳು 'ಶ್ರೀಗುರು ಬಸವಲಿಂಗಾಯನಮಃ' ಸ್ತುತಿಯಿಂದ ಪ್ರಾರಂಭವಾಗುತ್ತವೆ. ಪ್ರತಿಯೊಂದು ಸಂಧಿಯ ಅಂತ್ಯಕ್ಕೆ ಸಂಧಿಯ ಹೆಸರು-ಸಂಖ್ಯೆ-ಅದರಲ್ಲಿಯ ಪದ್ಯಸಂಖ್ಯೆ ಹೇಳಿ, ಶ್ರೀಕಾರವನ್ನೋ ಗುರು-ದೇವತಾ ಸ್ತುತಿಯನ್ನೋ ಬರೆಯುತ್ತಿದ್ದರು. ಕೆಲವೊಮ್ಮೆ ಸುಳುಹು, ರೇಖಾಚಿತ್ರ ಬಿಡಿಸುತ್ತಿದ್ದರು, ಮುಂದಿನ ಸಂಧಿಯನ್ನು ಅಲ್ಲಿಯೇ ಪ್ರಾರಂಭಿಸಿದ ಇಲ್ಲವೆ ಹೊಸ ಪುಟದಿಂದ ಪ್ರಾರಂಭಿಸಿದ ಉದಾಹರಣೆಗಳು ಸಿಗುತ್ತವೆ. ಗ್ರಂಥದ ಕೊನೆಗೆ ಪ್ರತಿಯೊಂದು ಸಂಧಿಯಲ್ಲಿಯ ಪದ್ಯಸಂಖ್ಯೆ, ಒಟ್ಟು ಪದ್ಯಸಂಖ್ಯೆ, ಲಿಪಿಕಾರನ-ಪ್ರತಿ ಬರೆಯಿಸಿದವನ ಹೆಸರು, ಲೇಖನಮಿತಿ ಇವುಗಳನ್ನು ಕೆಲವೊಮ್ಮೆ ಕಾಣಿಸುತ್ತಾರೆ. ತೀರ ಕೊನೆಯಲ್ಲಿ ಸುಳುಹು, ರೇಖಾಚಿತ್ರ ಬಿಡಿಸಿದ ಉದಾಹರಣೆಗಳಿವೆ. ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಆಯಾ ಕೃತಿ ಪ್ರಾರಂಭವಾಗುವ ಪುಟದ ಮಾರ್ಜಿನ್ನಿನಲ್ಲಿ ಅವುಗಳ ಹೆಸರು ಬರೆದಿರುತ್ತಾರೆ. ಗ್ರಂಥಪ್ರಮಾಣ ದೊಡ್ಡದಿದ್ದರೆ ಮಾರ್ಜಿನ್ನಿನಲ್ಲಿ ಪ್ರಕರಣಗಳ ಹೆಸರನ್ನು ಬರೆದ ನಿದರ್ಶನಗಳಿವೆ. ಕೆಲವೊಮ್ಮೆ ತಾಳೆಪ್ರತಿ, ಕಾಗದ ಪ್ರತಿಗಳಲ್ಲಿ ಕೃತಿಯ ಸಂದರ್ಭಗಳನ್ನು ರೇಖಾಚಿತ್ರ, ವರ್ಣಚಿತ್ರಗಳಿಂದ ಚಾಕ್ಷುಷ ಗೊಳಿಸಿರುತ್ತಾರೆ. ಇಂಥ ಹಸ್ತಪ್ರತಿಗಳು ಹಲವು ಸಿಗುತ್ತವೆ.

ಗ್ರಂಥವಿನ್ಯಾಸ ಹಂತದ ಬಳಿಕ ನಡೆಯುವುದು ಗ್ರಥನವಿನ್ಯಾಸ ಹಂತದ ಕೆಲಸ. ಈ ಸಂದರ್ಭದಲ್ಲಿ ಪತ್ರಗಳ ಜೋಡಣೆ, ಕಂಬಿ ಅಳವಡಿಸುವಿಕೆ, ದಾರ ಪವಣಿಸುವಿಕೆ, ಫಲಕಗಳ ಸಿದ್ಧತೆ, ಫಲಕದ ಮೇಲೆ ಚಿತ್ರ ಬಿಡಿಸುವಿಕೆ, ಬಣ್ಣ ಲೇಪಿಸುವಿಕೆ, ಗರಿ-ಕಾಗದ ಪುಟಗಳ ಮೇಲೆ ಚಿತ್ರ ಬಿಡಿಸುವಿಕೆ, ವಸ್ತ್ರ ಹೊದಿಸುವಿಕೆ ಇತ್ಯಾದಿ ಚಟುವಟಿಕೆಗಳು ಜರುಗುತ್ತವೆ. ಇದು ಒಂದು ರೀತಿ, ಇಂದಿನ ಮುದ್ರಿತ ಪುಸ್ತಕಗಳಿಗೆ ಬೈಂಡ್ ಮಾಡುವುದಕ್ಕೆ ಸಮಾನವಾದುದು, ಈಗ ನೇಕಾರ, ಬಡಿಗ, ಚಿತ್ರಕಲಾವಿದರ ನೆರವು ಕವಿಗೆ-ಲಿಪಿಕಾರನಿಗೆ ಅಗತ್ಯವಾಗುತ್ತಿದ್ದಿತು. ಪತ್ರಗಳ ಜೋಡಣೆಯಿಂದ ತಮ್ಮ ಹಸ್ತಪ್ರತಿಯು "ದಿವ್ಯ ತಾಳಪತ್ರಮಂ ತಂದು, ದ್ವಿತೀಯ ರಂಧ್ರಮಂ ಮಾಡಿ, ಬಿಂಗದ ಹೊರೆಯಂತೊಂದೊಂದಂ ಪೊದಿಸಿಕ್ಕೆಲದಲುಭಯಂ ಪಲಗೆಯುಷ್ಟ ಲೋವೆಯುಷ್ಟ ಮೂಲೆಗಳಿಂದತ್ಯಂತಲಂಕಾರಮಾಗಿ, ಕಣ್ಣಿಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯಶಿವಾಲಯ"[೯೨]ದಂತೆ ಕಾಣಬೇಕೆಂಬ

---

೯೨. ಮೈಹಸೂ I ಪ್ರಸ್ತಾವನೆ.

ಆದರ್ಶ ಅವರದಾಗಿದ್ದಿತು. ಈ ಆದರ್ಶಕ್ಕೆ ಅರ್ಥ ತುಂಬುವಂತೆ ಕುಮಾರವ್ಯಾಸಭಾರತದ ಒಂದು ಪ್ರತಿಯಲ್ಲಿ ಪ್ರತಿಯೊಂದು ಗರಿಯ ರಂಧ್ರಗಳಿಗೂ ಬೆಳ್ಳಿಯ ಕಟ್ಟು ಜೋಡಿಸಲಾಗಿದೆ. ದಾರ ಜಗ್ಗುವಿಕೆಯಿಂದ ಗರಿಗೆ ಪೆಟ್ಟು ತಾಗಬಾರದೆಂದು ಹೀಗೆ ಮಾಡಿದುದು ಅಪರೂಪದ ಉದಾಹರಣೆಯಾಗಿದೆ.[೯೩] ಕೆಲವೊಮ್ಮೆ ಗರಿಸಂಖ್ಯೆ ಬಹಳವಿದ್ದರೆ ಕೈಯಲ್ಲಿ ಎತ್ತಿ ಹಿಡಿದು ಓದುವಾಗ ಗರಿ ಜಾರಬಾರದೆಂದು ರಂಧ್ರದಲ್ಲಿ ದಾರಕ್ಕೆ ಬದಲು ಕಬ್ಬಿಣದ ಅಥವಾ ಮರದ ಕಟ್ಟಿ ಬಳಸುತ್ತಿದ್ದರು, ಇದಕ್ಕೆ ಕಂಬಿಯೆಂದು ಕರೆಯುತ್ತಿದ್ದು, "ಕಾಮನ ಕಾರ್ಮುಕವ ಕತ್ತರಿಸಿ ಪುಸ್ತಕಕೆಸೆವ ಕಂಬಿಯ ಮಾಡಿ"[೯೪] ಎಂಬ ಭಾಸ್ಕರಕವಿಯ ಹೇಳಿಕೆಯನ್ನು ಇಲ್ಲಿ ಸ್ಮರಿಸಬಹುದು.

ಗ್ರಥನ ಸಂದರ್ಭದಲ್ಲಿ ಚಿತ್ರಕಲಾವಿದನ ಪಾತ್ರ ಮಿಗಿಲಾದುದು. ತಾಳೆಪ್ರತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವುಗಳ ಗರಿಗಳ ಮೇಲೆ ಈ ಹಿಂದೆ ಹೇಳಿದಂತೆ ಸುಳುಹು, ರೇಖಾಚಿತ್ರ, ತ್ರಿಜ್ಯಚಿತ್ರ ಬಿಡಿಸುತ್ತಿದ್ದರೇ ಹೊರತು ಬಣ್ಣದ ಚಿತ್ರಗಳನ್ನು ಸಾಮಾನ್ಯವಾಗಿ ಬಿಡಿಸುತ್ತಿರಲಿಲ್ಲ. ಇದಕ್ಕೆ ಅಪವಾದವೆಂಬಂತೆ ತಾಳೆಪ್ರತಿಗಳಾದ ಧವಲಾ, ಜಯಧವಲಾ ಮಹಾಧವಲಾದಂಥ ಕೆಲವೇ ಪ್ರತಿಗಳಲ್ಲಿ ಬಣ್ಣದ ಚಿತ್ರಗಳನ್ನು ಬಿಡಿಸಿದ್ದಾರೆ. ಕಾಗದಪ್ರತಿಯ ಪುಟಗಳ ಮೇಲೆ ಮತ್ತು ತಾಳೆ-ಕಾಗದ ಪ್ರತಿಗಳ ಫಲಕಗಳ ಮೇಲೆ ಬಣ್ಣದ ಚಿತ್ರ ಬಿಡಿಸುವುದು ಸಾಮಾನ್ಯವಾಗಿದ್ದಿತು. ಒಟ್ಟಿನಲ್ಲಿ ಹಸ್ತಪ್ರತಿ ಜಗತ್ತಿನ ಈ ಚಿತ್ರಗಳನ್ನು ೧. ತ್ರಿಜ್ಯ ಚಿತ್ರ (Geometrical designs) ೨. ಸುಳುಹು ಚಿತ್ರ ೩. ಸಾಮಾನ್ಯಚಿತ್ರ, ೪. ಸಾಂದರ್ಭಿಕ ಚಿತ್ರಗಳೆಂದು ವರ್ಗೀಕರಿಸಬಹುದು.

ತ್ರಿಜ್ಯವನ್ನು ಬಳಸಿ ಅನೇಕ ತಾಳೆಪ್ರತಿಗಳ ಆದ್ಯಂತ್ಯ ಗರಿಗಳ ಮೇಲೆ ಬಗೆ-ಬಗೆಯ ವರ್ತುಲಾಂತರ್ಗತವರ್ತುಲ ಚಿತ್ರಗಳನ್ನು ಬಿಡಿಸುತ್ತಿದ್ದರು. ಧಾರವಾಡದ ಕನ್ನಡ ಸಂಶೋಧನಸಂಸ್ಥೆಯ ಶಬ್ದಮಣಿದರ್ಪಣದಲ್ಲಿ (ಹಸ್ತಪ್ರತಿ ನಂ.೪೪) ಇಂಥ ಸುಂದರ ಚಿತ್ರಗಳನ್ನು ಕಾಣಬಹುದು,[೯೫] ತಾಳೆ ಪ್ರತಿಗಳ ಮೇಲೆ ಈ ಬಗೆಯ ಚಿತ್ರಗಳು ಸರ್ವೇಸಾಮಾನ್ಯವೆನಿಸಿವೆ.

'ಸುಳುಹ'ನ್ನು ಕೆಲವೊಮ್ಮೆ ಕಾಗದಪ್ರತಿಯ ಪ್ರತಿಯೊಂದು ಪುಟದ ಸುತ್ತಲೂ ಫಲಕದ ಹೊರ ಬದಿಯ ಮೇಲೂ ಬಿಡಿಸುತ್ತಿದ್ದರು. ರೇಖೆ-ಪುಷ್ಪಾಕೃತಿಗಳಿಂದ ಕಂಗೊಳಿಸುವ ಇವುಗಳನ್ನು ಬಣ್ಣದಿಂದಲೂ ತುಂಬುತ್ತಿದ್ದರು. ಬಸವಪುರಾಣದ (ಮೈ.ಹ.ಸೂ III–೧೦೨೬) ಒಂದು ಕಾಗದ ಪ್ರತಿಯಲ್ಲಿ ಪ್ರತಿಯೊಂದು ಪುಟದ ಮೇಲೆ ಎಲೆ, ಹೂವು, ಬಳ್ಳಿಗಳ ವರ್ಣರಂಜಿತ ಚೌಕಟ್ಟನ್ನು ಚಿತ್ರಿಸಲಾಗಿದೆ. ಒಂದು ವರ್ಣರಂಜಿತ ಚೌಕಟ್ಟಿನಿಂದ ಇನ್ನೊಂದು ವರ್ಣರಂಜಿತ ಚೌಕಟ್ಟು ಭಿನ್ನವಾಗಿರುವುದು ಇಲ್ಲಿಯ ವೈಶಿಷ್ಟ್ಯ. ಇಂಥ ಅನೇಕ ಕಾಗದ ಪ್ರತಿಗಳು ಅಲ್ಲಲ್ಲಿ ಸಿಗುತ್ತವೆ. ಕೆಲವೊಮ್ಮೆ ಬಣ್ಣರಹಿತ ಸುಳುಹುಗಳನ್ನು ತಾಳೆಪ್ರತಿಯ ಪ್ರತಿಯೊಂದು ಗರಿಯ ಮೇಲೆಯೂ ಬರೆದಿರುವುದು ಕಂಡುಬರುತ್ತದೆ.

೯೩, ಮೈಹಸೂ III–೧೧೬೨.

೯೪. ಜೀವಂಧರ ಚರಿತೆ I–೧೩.

೯೫. ಈ ಚಿತ್ರಗಳು "ಮುಂಬಯಿ ರಜ್ಯದ ಕನ್ನಡ ಸಂಶೋಧನೆ (೧೯೪೬–೧೯೫೧) ಈ ಪುಸ್ತಕದಲ್ಲಿ ಅಚ್ಚಾಗಿವೆ. ಸಧ್ಯ ಹಸ್ತಪ್ರತಿಯಲ್ಲಿ ಇವು ಇಲ್ಲ. ಬಹುಶಃ ಬ್ಲಾಕ್ ಮಾಡಲು ಹೊರತೆಗೆದ ಆ ಗರಿಗಳನ್ನು ಮತ್ತೆ ಹಸ್ತಪ್ರತಿಗೆ ಸೇರಿಸಲಿಲ್ಲವೆಂದು ತೋರುತ್ತದೆ.

'ಸಾಮಾನ್ಯಚಿತ್ರ'ಗಳು ಆಯಾ ಧರ್ಮಗಳಿಗೆ ತಕ್ಕವುಗಳಾಗಿರುತ್ತಿದ್ದವು. ಶೈವ ಹಸ್ತಪ್ರತಿಗಳಲ್ಲಿ ನಂದಿ, ಶಿವಲಿಂಗ, ಶಿವ-ಪಾರ್ವತಿ ಇತ್ಯದಿ; ಜೈನಹಸ್ತಪ್ರತಿಗಳಲ್ಲಿ ಜಿನ, ಮಾನಸ್ತಂಭ ಇತ್ಯಾದಿ; ವೈಷ್ಣವ ಹಸ್ತಪ್ರತಿಗಳಲ್ಲಿ ವಿಷ್ಣು ಮತ್ತು ಅವನ ದಶಾವತಾರ ಇತ್ಯಾದಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಕೆಲವೊಮ್ಮೆ ಇವುಗಳನ್ನು ಬಣ್ಣಗಳಿಂದ ತುಂಬುತ್ತಿದ್ದರು.

ಬೆಲೆಯುಳ್ಳ ಚಿತ್ರಕಲಾ ಕಾಣಿಕೆಯೆಂದರೆ 'ಸಾಂದರ್ಭಿಕ ಚಿತ್ರ'ಗಳೇ, ರಾಮಾಯಣ ಮಹಾಭಾರತ ಕೃತಿಗಳಲ್ಲಿ ಸನ್ನಿವೇಶಕ್ಕೆ ತಕ್ಕ ಚಿತ್ರ ಬಿಡಿಸಿದುದನ್ನು ಕೆಲವೆಡೆ ನೋಡುತ್ತೇವೆ. ಜೈನಪುರಾಣಗಳಲ್ಲಿ ಸನ್ನಿವೇಶಕ್ಕೆ ತಕ್ಕ ಚಿತ್ರ ಬಿಡಿಸಿದುದನ್ನು ಕೆಲವೆಡೆ ಕಾಣುತ್ತೇವೆ. ಜೈನಪುರಾಣಗಳಲ್ಲಿ ತೀರ್ಥಂಕರನ ಪಂಚಕಲ್ಯಾಣಗಳನ್ನು ಅಂದವಾಗಿ ಬಿಡಿಸಿದ ಅನೇಕ ಉದಾಹರಣೆಗಳಿವೆ. ರಾಘವಾಂಕಚರಿತೆಯ ಒಂದು ಕಾಗದ ಪ್ರತಿಯಲ್ಲಿ ಪ್ರಭುದೇವ-ಸಿದ್ಧರಾಮ, ರಾಘವಾಂಕ-ಹರಿಹರ, ಚಿಕ್ಕನಂಜಾರ್ಯ-ಚೆನ್ನವೀರಾಂಬಿಕೆ, ಮಹಾದೇವ-ರುದ್ರಾಣಿ, ಮೂರುಮಂದಿ (ಏಕ, ದ್ವಿ ಮತ್ತು ತ್ರಿದಂಡಿ) ಕವಿಗಳು-ಪ್ರತಾಪರುದ್ರ, ವಿರೂಪಾಕ್ಷಪಂಡಿತ, ಕೆರೆಯ ಪದ್ಮರಸರ ಚಿತ್ರಗಳಿವೆ.[೯೬]

ಅಳಿಯ ಲಿಂಗರಾಜನ 'ಚಂದ್ರಾವಳಿ ಕಥೆ' ಹೆಸರಿನ ಯಕ್ಷಗಾನ ಸಚಿತ್ರಹಸ್ತಪ್ರತಿ ಯಾಗಿದೆ. ಇಲ್ಲಿಯ ಒಂದು ಪುಟದಲ್ಲಿ ರಾಜಠೀವಿಯ ವ್ಯಕ್ತಿ ಕುಳಿತಿದ್ದು, ಎದುರಿನಲ್ಲಿ ಕಲಾವಿದನೊಬ್ಬ ಮೊಳಕಾಲ ಮೇಲೆ ಚಿತ್ರ ಹಲಗೆ ಇಟ್ಟುಕೊಂಡು, ಅವನ ಚಿತ್ರ ಬಿಡಿಸುವ ದೃಶ್ಯವಿದೆ. ಇದು ಚಿತ್ರಕ್ಕೆವಸ್ತುವಾದ ವ್ಯಕ್ತಿ ಮತ್ತು ಅವನ ಚಿತ್ರ ಬಿಡಿಸುವ ಕ್ರಿಯೆಗಳನ್ನು ಸೂಚಿಸುವ ಅಪೂರ್ವ ಉದಾಹರಣೆಯಾಗಿದೆ.[೯೭] ವೃಷಭೇಂದ್ರವಿಲಾಸ ಹೆಸರಿನ ಯಕ್ಷಗಾನದ ಪುಟಪುಟಗಳಲ್ಲಿ ಬಸವಣ್ಣನವರ ಜೀವನಕ್ಕೆ ಸಂಬಂಧಪಟ್ಟ ಅನೇಕಾನೇಕ ವರ್ಣಚಿತ್ರಗಳಿವೆ.[೯೮] ಇವಲ್ಲದೆ ಅಲ್ಲಮಪ್ರಭು, ತೋಂಟದ ಸಿದ್ಧಲಿಂಗ, ಮಾಚಿದೇವ ಮೊದಲದವರ ಚಿತ್ರಗಳು ಅಲ್ಲಲ್ಲಿ ಸಿಗುತ್ತವೆ. ಇವುಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿಯಲ್ಲಿರುವ ತೋಂಟದ ಸಿದ್ಧಲಿಂಗಯತಿಯ ವರ್ಣಚಿತ್ರ ಅಪೂರ್ವವೂ ಅರ್ಥಪೂರ್ಣವೂ ಆಗಿದೆ.[೯೯] ಈ ದೃಷ್ಟಿಯಿಂದ ಎತ್ತಿಹೇಳಬೇಕಾದುವು ಧವಲಾ, ಜಯಧವಲಾ, ಮಹಾಧವಲಾ ತಾಳೆಪ್ರತಿಗಳು.[೧೦೦] ಇಲ್ಲಿ ಬಿಡಿಸಲಾದ ಪರ್ಶ್ವನಾಥ, ಬಾಹುಬಲಿ ಮೊದಲಾದವರ ವರ್ಣಚಿತ್ರಗಳು ಅಭ್ಯಾಸಯೋಗ್ಯವಾಗಿವೆ. ವರ್ಣಸಂಯೋಜನೆಯೂ ಆಕರ್ಷಕವಾಗಿದೆ.

ಈ ನಾಲ್ಕು ಬಗೆಯ ಚಿತ್ರಗಳಲ್ಲದೆ, 'ಚಿತ್ರಪ್ರಧಾನ ಹಸ್ತಪ್ರತಿ'ಯೆಂಬ ಬೇರೊಂದು ವರ್ಗವನ್ನು ಕಲ್ಪಿಸಬಹುದಾಗಿದೆ. ಈ ವರ್ಗದಲ್ಲಿ ವೀರಶೈವ ಉದ್ಧರಣೆ ಗ್ರಂಥಗಳು, ಜೈನ ಪ್ರತಿಷ್ಠಾತಿಲಕಗಳು, ವೈಷ್ಣವ ಶ್ರೀತತ್ವನಿಧಿ ಪರಿಗಣಿತವಾಗುತ್ತವೆ. ಉದ್ಧರಣೆಗಳು ಯೋಗಕ್ಕೆ ಸಂಬಂಧಪಟ್ಟ ಚಿತ್ರಪಟಗಳಾಗಿದ್ದು, ಇವುಗಳದೇ ಒಂದು ಸ್ವತಂತ್ರ ಅಭ್ಯಾಸವಾಗಿದೆ. ಕನ್ನಡ ಅಧ್ಯಯನಪೀಠ, ಕನ್ನಡ ಅಧ್ಯಯನಸಂಸ್ಥೆ ಮತ್ತು ಅನೇಕ ವೈಯಕ್ತಿಕ ಭಂಡಾರಗಳಲ್ಲಿ ವೃಷಭೋದ್ಧರಣೆ ಮೊದಲಾದ ಚಿತ್ರಗಳಿವೆ. ಇಲ್ಲಿ

---

೯೬. ಧಾವಭಾ ೧೧೭೪.

೯೭. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ (ಡಾ. ಬಿ.ಕೆ. ಹಿರೇಮಠ) ೨೦೬.

೯೮. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪು ೭೬೬-೮೬.

೯೯. ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ (ಡಾ. ಬಿ.ಕೆ. ಹಿರೇಮಠ ೧೭೮)

೧೦೦. ಮಣೀಹ-೪೧೩.

ಬಿಡಿಸಿದ ಚಿತ್ರಗಳ ಕಲಾವಂತಿಕೆ, ವೈಜ್ಞಾನಿಕತೆ, ಬಣ್ಣಗಾರಿಕೆಗಳು ಬೆರಗುಗೊಳಿಸುತ್ತವೆ. ಜೈನ 'ಪ್ರತಿಷ್ಠಾ' ಗ್ರಂಥಗಳು ಬಸದಿ, ಪೂಜಾ ವಿಧಿ-ವಿಧಾನಗಳ ಬಣ್ಣ ಬಣ್ಣದ ಚಿತ್ರಗಳಿಂದ ಗಮನಸೆಳೆಯುತ್ತವೆ. ಇಂಥ ಅನೇಕ ಪ್ರತಿಗಳು ಕೊಲ್ಲಾಪುರ ಮೊದಲಾದ ಜೈನಮಠಗಳಲ್ಲಿ ಸಿಗುತ್ತವೆ. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ವೈಷ್ಣವ ಪರಂಪರೆಗೆ ಸೇರಿದ, ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ರಚಿತವಾದ ಶ್ರೀತತ್ವನಿಧಿ ಹೆಸರಿನ ೧೧೪೬ ಪುಟಗಳ ಗ್ರಂಥದಲ್ಲಿ ೨೦೦೦ಕ್ಕೂ ಮೇಲ್ಪಟ್ಟು ಸುಂದರ ವರ್ಣಚಿತ್ರಗಳಿವೆ. ಇವುಗಳನ್ನು ಬಿಡಿಸಿದವನು ತಿಪ್ಪಯ್ಯನೆಂಬ ಕಲಾವಿದನೆಂದು ತಿಳಿದುಬರುತ್ತದೆ.[೧೦೧] ಇದಲ್ಲದೆ ಕನ್ನಡ ಅಧ್ಯಯನ ಸಂಸ್ಥೆಯ, ಚದುರಂಗಚಕ್ರ ಗಂಜೀಪು ಆಟಗಳು ಇತ್ಯಾದಿ, ಹೆಸರಿನ ಹಸ್ತಪ್ರತಿಯಲ್ಲಿ ನಂದಿ, ಬಾಲಗೋಪಾಲ, ಬ್ರಹ್ಮ, ಲಕ್ಷ್ಮಿ, ಗಿರಿಜೆ, ಗಣಪತಿ, ಸರಸ್ವತಿ, ಕಾಮಧೇನು ಮೊದಲಾದ ಅಪೂರ್ವ ವರ್ಣಚಿತ್ರಗಳು ಕಂಡುಬರುತ್ತವೆ.

ಇನ್ನೂ ಒಂದು ವರ್ಗವೆಂದರೆ 'ಶಾಸ್ತ್ರಸಂಬಂಧಿ ಹಸ್ತಪ್ರತಿ'ಗಳು. ಇಲ್ಲಿ ಗೆರೆಮನೆ, ವೈವಿಧ್ಯಪೂರ್ಣ ಚಿತ್ರಗಳಿದ್ದು, ಅವುಗಳದೇ ಒಂದು ಪ್ರತ್ಯೇಕ ಅಭ್ಯಾಸವಾಗಿದೆ. ಜ್ಯೋತಿಷ, ಶಿಲ್ಪ, ಯಂತ್ರ-ಮಂತ್ರ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಇಂಥ ಚಿತ್ರಗಳನ್ನು ಕಾಣಬಹುದಾಗಿದೆ.

* * *

ಹಸ್ತಪ್ರತಿಗಳ ಪ್ರಾಚೀನತೆಯನ್ನು ಕುರಿತು ಹೇಳುವುದಾದರೆ, ಕವಿರಾಜ ಮಾರ್ಗಪೂರ್ವದ ಕೃತಿಗಳು ಸಿಕ್ಕಿಲ್ಲ. ಈ ತರುವಾಯದ ಗುಣವರ್ಮ, ಅಸಗ ಮೊದಲಾದ ಕವಿಗಳ ಕೃತಿಗಳ ಆಸೆ ಬಿಟ್ಟಂತೆಯೇ. ೧೦ ನೆಯ ಶತಮಾನದ ಕೃತಿಗಳಲ್ಲಿ ಪೊನ್ನನ ಭುವನೈಕಸರಾಮಾಭ್ಯುದಯ, ರನ್ನನ ಪರುಶರಾಮಚರಿತೆ, ಚಕ್ರೇಶ್ವರ ಚರಿತೆಗಳು ಸಿಕ್ಕಿಲ್ಲ. ಕರ್ಣಾಟ ಕಾದಂಬರಿಯ ಒಂದು ಪ್ರತಿ, ಗದಾಯುದ್ಧದ ಒಂದೂ ವರೆಪ್ರತಿ, ವಿಕ್ರಮಾರ್ಜುನವಿಜಯದ ಎರಡೂವರೆ ಪ್ರತಿ ಸಿಕ್ಕಿವೆ. ಈ ದೃಷ್ಟಿಯಿಂದ ಈ ಶತಮಾನದ ಪೊನ್ನನ ಶಾಂತಿಪುರಾಣ, ಪಂಪನ ಆದಿಪುರಾಣ, ಚಾವುಂಡರಾಯನ ಚಾವುಂಡರಾಯ ಪುರಾಣ, ರನ್ನನ ಅಜಿತ ಪುರಾಣ, ನಾಗವರ್ಮ ಛಂದೋಂಬುಧಿಗಳ ಲಭ್ಯ ಪ್ರತಿಸಂಖ್ಯೆ ವಾಸಿ.

೧೧ನೆಯ ಶತಮಾನದಿಂದ ಮುಂದೆ ಹುಟ್ಟಿ ಕೃತಿಗಳ ಹಸ್ತಪ್ರತಿಗಳು ಸೂಕ್ತ ಸಂಖ್ಯೆಯಲ್ಲಿ ಸಿಗುತ್ತವೆ. ಹೀಗಿದ್ದೂ, ರಾಘವಾಂಕನ ಹರಿಹರಮಹತ್ವ, ಶರಭಚಾರಿತ್ರ, ಕೇಶಿರಾಜನ ಶ್ರೀಚಿತ್ರಮಾಲೆ, ಸುಭದ್ರಾಹರಣ, ಪ್ರಬೋಧಚಂದ್ರೋದಯ ಕೃತಿಗಳಂಥವು ಸಿಗಬೇಕಾಗಿದೆ.

ಕವಿಗಳೇ ಕೈಮುಟ್ಟಿ ಬರೆದ ತಾಳೆಪ್ರತಿ, ಕಾಗದಪ್ರತಿಗಳು ಸಿಗುವುದು ಕಡಿಮೆ. ಈಗ ತಿಳಿದ ಮಟ್ಟಿಗೆ ಮುದ್ದಣ, ಬಸವಪ್ಪಶಾಸ್ತ್ರಿ ಇಂಥ ಕೆಲವರನ್ನು ಬಿಟ್ಟರೆ, ೧೯ ನೆಯ ಶತಮಾನದ ಕವಿಗಳ ಸ್ವಹಸ್ತಾಕ್ಷರ ಪ್ರತಿಗಳೂ ಸಿಗುವುದಿಲ್ಲವೆಂದ ಮೇಲೆ, ಈ ಹಿಂದಣ ಕವಿಗಳ ಸ್ವಹಸ್ತಾಕ್ಷರ ಪ್ರತಿಗಳನ್ನು ಬಯಸುವುದು ವ್ಯರ್ಥ ಆಸೆಯೇ ಸರಿ. ಹೀಗಿದ್ದೂ "ಆನಂದ ಸಂವತ್ಸರದ ಮಾರ್ಗಶಿರ ಸು. ೫ ಬುಧವಾರ ಬೆಳಗುಳದ ಸ್ಥಾನಿಕ ಚೆನ್ನಪ್ಪಯ್ಯನ ಮಗ ಕವಿ ಪಂಚಬಾಣನು ಕವಿತ್ವವ ಹೇಳಿ ತನ್ನ

---

೧೦೧. ಕನ್ನಡ ಹಸ್ತಪ್ರತಿಗಳ ಇತಿಹಾಸ (ಎಚ್. ದೇವೀರಪ್ಪ)-೩೪.

ಸ್ವಹಸ್ತದಲ್ಲಿ ಬರೆದ ಪುಸ್ತಕಕ್ಕೆ ಮಂಗಳಮಹಾಶ್ರೀ"[೧೦೨] ಎಂಬ ಮಾತಿನಿಂದ ೧೬೧೪ ರಲ್ಲಿ ಲಿಪಿಸಲ್ಪಟ್ಟ ಭುಜಬಲಚರಿತ ಈಗಿನ ಮಟ್ಟಿಗೆ ಕನ್ನಡದ ಪ್ರಾಚೀನತಮ ಕವಿಹಸ್ತಾಕ್ಷರ ಪ್ರತಿಯೆಂದು ತಿಳಿದುಬರುತ್ತದೆ.

ಈಗ ಲಭ್ಯವಿರುವ ಹಸ್ತಪ್ರತಿಗಳಲ್ಲಿ ಯಾವುದು ತೀರ ಪ್ರಾಚೀನ? ಎಂಬುದೂ ಚರ್ಚಾಸ್ಪದವಾಗಿದೆ. ಸಂಸ್ಕೃತಪಾಠ ಕನ್ನಡಟೀಕೆಯುಳ್ಳ ನಾಮಲಿಂಗಾನುಶಾಸನ ಕೃತಿಯನ್ನು ತಾಳೆಗರಿಯಲ್ಲಿ ನಕಲು ಮಾಡಲಾದ ಕಾಲ ೧೧೩೦. ಬಹುಶಃ ಇದೇ ಪ್ರಾಚೀನತಮ ತಾಳೆಪ್ರತಿಯಾಗಿದೆ.[೧೦೩]

ಇದನ್ನು ಬಿಟ್ಟರೆ ಇಡಿಯಾಗಿ ಕನ್ನಡ ಭಾಷೆಯಲ್ಲಿಯೇ ಬರೆಯಲ್ಪಟ್ಟ ಪ್ರಾಚೀನ ತಮ ತಾಳೆಪ್ರತಿಯೆಂದರೆ ೧೩೭೯ ರಲ್ಲಿ ಪ್ರತಿಮಾಡಲ್ಪಟ್ಟ ಪಂಪನ ಆದಿಪುರಾಣವೆಂದು ಡಿ.ಎಲ್.ಎನ್.ಹೇಳುತ್ತಾರೆ.೧೦೪ ಆದರೆ ರನ್ನನ ಗದಾಯುದ್ಧವನ್ನು ೧೩೪೨ ರಲ್ಲಿ ಪ್ರತಿಮಾಡಲಾದ ಸೂಚನೆಯೊಂದು ಸಿಗುತ್ತದೆ ಎಂಬುದರ ಕಡೆಗೆ ನಾನು ವಿದ್ವಾಂಸರ ಗಮನ ಸೆಳೆಸಿದ್ದೇನೆ. ಆದರೆ ಈ ಪ್ರತಿಯಲ್ಲಿಯ ಕಾವ್ಯಪಾಠದ ಬರವಣಿಗೆಗೂ, ಕಾಲ ನಮೂದಿತ ಪಾಠದ ಬರವಣಿಗೆಗೂ ಅಕ್ಷರ ವ್ಯತ್ಯಾಸ ಕಂಡು ಬರುವುದರಿಂದ, ಶ್ರೀ ಬಿ.ಎಸ್.ಸಣ್ಣಯ್ಯ ಅವರು ಈ ಹಸ್ತಪ್ರತಿಯ ಕಾಲದ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದಾರೆ.[೧೦೫] ಆದರೆ ಕಾಲ ನಮೂದಿತ ಪದ್ಯಕ್ಕೆ ಬಳಿಸಿದ ಅಕ್ಷರ ಮತ್ತು ಅದನ್ನು ಗದ್ಯದಲ್ಲಿ ವಿವರಿಸಿ ಬರೆದ ಪಾಠದ ಅಕ್ಷರಗಳಲ್ಲಿ ಭಿನ್ನತೆ ಇದೆಯೇ ಹೊರತು ಕಾಲ ನಮೂದಿತ ಪದ್ಯಕ್ಕೆ ಬಳಸಿದ ಅಕ್ಷರ ಮತ್ತು ಕಾವ್ಯ ಅಕ್ಷರಗಳಲ್ಲಿ ವ್ಯತ್ಯಾಸವಿಲ್ಲ. ಕಾರಣ ಇಲ್ಲಿಯ ಕಾಲವನ್ನು ಒಪ್ಪಿಕೊಳ್ಳಲು ಯಾವ ತೊಂದರೆಯೂ ಇಲ್ಲವೆನಿಸುತ್ತದೆ. ಹೀಗಾಗಿ ಗದಾಯುದ್ಧದ ತಾಳೆಪ್ರತಿಯೇ ಕನ್ನಡದಲ್ಲಿ ಲಭ್ಯವಾದ ಪ್ರಾಚೀನ ಉದಾಹರಣೆಯೆಂದು ಇಟ್ಟುಕೊಳ್ಳಬಹುದು.

ಕಾಗದ ಪ್ರತಿಯ ವಿಷಯಕ್ಕೆ ಬಂದರೆ ೧೫೫೭ ರಲ್ಲಿ ಬರೆದ ನಾಗವರ್ಮನ ವರ್ಧಮಾನ ಪುರಾಣವೇ ತೀರ ಪ್ರಾಚೀನಪ್ರತಿಯೆಂದು ಶ್ರೀ ಬಿ.ಎಸ್.ಸಣ್ಣಯ್ಯ ಹೇಳಿದರೆ, ೧೫೦೦ ರಲ್ಲಿ ಹುಟ್ಟಿದ 'ಏಕೋತ್ತರ ಶತಸ್ಥಲಿ ಟೀಕು' ಪ್ರಾಚೀನ ಕಾಗದ ಪ್ರತಿಯೆಂದು ಶ್ರೀ ಎಚ್.ದೇವೀರಪ್ಪ ಹೇಳುತ್ತಾರೆ. ಆದರೆ ಈ ಏಕೋತ್ತರಶತಸ್ಥಲಿ ಟೀಕೆಗೆ ಬಳಸಿದ ಕಾಗದ ಆಧುನಿಕ ಕಾಲಕ್ಕೆ ಸೇರಿರುವುದರಿಂದ ಇಲ್ಲಿಯು ತೇದಿ ಈ ಪ್ರತಿಗೆ ಮೂಲವಾಗಿದ್ದ ಹಸ್ತಪ್ರತಿಗೆ ಸಂಬಂಧಿಸಿದುದಾಗಿರಬಹುದೆಂದು ಶ್ರೀ ಸಣ್ಣಯ್ಯ ಹೇಳುತ್ತಾರೆ.[೧೦೬] ಆದುದರಿಂದ ಸಧ್ಯದ ಮಟ್ಟಿಗೆ ೧೫೫೭ರಲ್ಲಿ ಲಿಪಿಸಲ್ಪಟ್ಟ ನಾಗವರ್ಮನ ವರ್ಧಮಾನ ಪುರಾಣವೇ ಲಭ್ಯ ಪ್ರಾಚೀನತಮ ಕಾಗದ ಪ್ರತಿಯೆಂದು ಇಟ್ಟುಕೊಳ್ಳಬಹುದಾಗಿದೆ.

೧೦೨. ಕಕಚ II–೩೧೧.
೧೦೩. ಮೈಹಸೂ II–೨೬೮.
೧೦೪. ಕನ್ನಡ ಗ್ರಂಥಸಂಪಾದನೆ (ಡಿ.ಎಲ್.ಎನ್) ೩೮–೩೯
೧೦೫. ಹಸ್ತಪ್ರತಿಶಾಸ್ತ್ರ–೯೦.
೧೦೬. ಹಸ್ತಪ್ರತಿಶಾಸ್ತ್ರ–೯೧.

೨

❖

ಪ್ರಸರಣ

ವೈದಿಕ–ಜೈನ–ವೀರಶೈವ/ಪ್ರಾಚೀನ ಕನ್ನಡ ಹಸ್ತಪ್ರತಿ ಭಾಂಡಾರಗಳು : ಜೈನ ಹಸ್ತಪ್ರತಿ ಭಾಂಡಾರಗಳು, ವೀರಶೈವ ಹಸ್ತಪ್ರತಿ ಭಾಂಡಾರಗಳು/ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು.

ಕೃತಿಯ ಸೃಷ್ಟಿ ಮತ್ತು ಪ್ರತಿಯ ಉತ್ಪಾದನೆಗಳಷ್ಟೇ ಅವುಗಳ ಪ್ರಸರಣ ಮತ್ತು ಸಂರಕ್ಷಣಗಳು ಮುಖ್ಯವಾದುವು. 'ದೇವಾಲಯವನ್ನು ನಿರ್ಮಿಸಿದವನಿಗಿಂತ ಅದನ್ನು ರಕ್ಷಿಸಿದವನು ಪುಣ್ಯಶಾಲಿ' ಎಂಬಂತೆ, ಕೃತಿ ಬರೆದವನಿಗಿಂತ ಅದನ್ನು ಪ್ರಸಾರ ಮಾಡಿದ ಸಹೃದಯರು ಪುಣ್ಯಶಾಲಿಗಳೇ ಸರಿ. ಒಂದರ್ಥದಲ್ಲಿ ಗತಿಸಿಹೋದ ಕವಿಯನ್ನು ಇವರು ಕೃತಿರೂಪದಲ್ಲಿ ಬದುಕಿಸಿದ ಪುಣ್ಯಭಾಜನರೆನಿಸುತ್ತಾರೆ. ಹೀಗೆ ಕೃತಿ ಪ್ರಸರಣಕ್ಕೆ ಲಿಪಿಕಾರರು, ಅಭ್ಯಾಸಿಗಳು, ಮೋಕ್ಷಾಪೇಕ್ಷಿಗಳು, ಧರ್ಮಾಧಿಕಾರಿಗಳು, ಧರ್ಮಾಭಿಮಾನಿಗಳು, ರಾಜಕೀಯ ವ್ಯಕ್ತಿಗಳು, ಗಮಕಿಗಳು, ಪುರಾಣಕಾರರು, ಪ್ರವಚನಕಾರರು, ಉಪಾಧ್ಯಾಯರು, ವಿದ್ಯಾರ್ಥಿಗಳು ಕಾರಣರಾದರೂ ಈ ಪ್ರಸರಣದ ಮುಖ್ಯ ಮಾಧ್ಯಮ ನಿಯುಕ್ತ, ಹವ್ಯಾಸಿ, ವೃತ್ತಿ ಲಿಪಿಕಾರರಾಗಿದ್ದು, ಸ್ವಪ್ರಯೋಜನ–ಪರಪ್ರಯೋಜನಾರ್ಥ ಇವರು ಕೆಲಸ ಮಾಡಿದ್ದಾರೆ. ಇವುಗಳಲ್ಲಿ ಸ್ವಪ್ರಯೋಜನಾರ್ಥ ಬರೆದುಕೊಳ್ಳುವುದು, ಪರಪ್ರಯೋಜನಾರ್ಥ ಬರೆದುಕೊಡುವುದು ಮತ್ತು ಬರೆಯಿಸಿಕೊಡುವು ಎಂಬಿವು ಮೂರು ಮುಖ್ಯ ದಾರಿಗಳಾಗಿವೆ. ಈ ಮೂರು ದಾರಿಗಳ ಹಿಂದಿರುವ ಉದ್ದೇಶಗಳೂ ನೂರು ದಾರಿಗಳನ್ನು ತೆರೆಯುತ್ತವೆ. ಈ ನೂರಾರು ದಾರಿಗಳಲ್ಲಿ ಕರ್ನಾಟಕದ ಹಸ್ತಪ್ರತಿಗಳು ಹುಟ್ಟಿ ಬೆಳೆದುಬಂದಿವೆ.

ವ್ಯಕ್ತಿಯ ಬೌದ್ಧಿಕ ಹಸಿವುಗಳು ಹಲವು. ಈ ಹಸಿವನ್ನು ಹಿಂಗಿಸುವ ಸಾಮಗ್ರಿಗಳಲ್ಲಿ ಸಾಹಿತ್ಯ ಮುಖ್ಯವಾದುದು. ಈ ಕಾರಣಕ್ಕಾಗಿ ಕೆಲವು ಅಭ್ಯಾಸಿಗಳು ಕೃತಿಗಳನ್ನು ನಕಲು ಮಾಡಿಕೊಂಡಿದ್ದಾರೆ:

"ಪುರಾಣದ ವಿರೂಪಾಕ್ಷದೇವರ ಮಗ ವೀರಣ್ಣೊಡೆಯದೇವರು ತಮಗೆ ಬರೆದ ಸೋನೆಯ ಪುಸ್ತಕ".[೧]

"ಶ್ರೀ ಶಾಂತಿಮತಿ ಅವ್ವಗಳ ಜೀಯನವರು ತಮಗೆ ಕೇವಲಜ್ಞಾನಪ್ರಾಪ್ತಿ ನಿಮಿತ್ತವಾಗಿ ಬರೆದಂತಾ ಹಿರೇಪಂಚಪರಮೇಷ್ಠಿಗಳ ವ್ಯಾಖ್ಯಾನ"[೨]

---

೧. ಮಹಸೂ VI–೧೯೭೫.

೨. ಕೊಲ್ಲಾಪುರ ಲಕ್ಷೀಸೇನ ಬಸದಿಯ ಹಸ್ತಪ್ರತಿ, ೨೫೩.

ಇಲ್ಲಿ ಸಾಹಿತ್ಯಕ ಆಸಕ್ತಿ ಮತ್ತು ಅಧ್ಯಾತ್ಮಿಕ ಹಸಿವು ಕಾರಣವಾಗಿ ಹಸ್ತಪ್ರತಿಗಳನ್ನು ಬರೆದುಕೊಂಡುದನ್ನು ಗಮನಿಸಬಹುದು. ಹೀಗೆ ಸ್ವಪ್ರಯೋಜನಾರ್ಥ ಬರೆದುಕೊಂಡ ಹಸ್ತಪ್ರತಿಗಳು ಸಹಜವಾಗಿಯೇ ಪ್ರಾಮಾಣಿಕವಾಗಿರುತ್ತವೆ. ಇವುಗಳ ಸಂಖ್ಯೆಯೂ ತಕ್ಕ ಪ್ರಮಾಣದಲ್ಲಿದೆ. ಇದಕ್ಕಿಂತ ಪರಪ್ರಯೋಜನಕ್ಕಾಗಿ ಬರದುಕೊಟ್ಟ ಹಸ್ತಪ್ರತಿಗಳ ಸಂಖ್ಯೆ ತುಂಬ ದೊಡ್ಡದು. ಇವರು ನಿಯುಕ್ತ ಲಿಪಿಕಾರರಿರಬಹುದು, ಹವ್ಯಾಸಿ ಲಿಪಿಕಾರರಿರಬಹುದು, ವೃತ್ತಿಲಿಪಿಕಾರರಿರಬಹುದು. ವ್ಯಕ್ತಿಗಳ ಅಧ್ಯಯನಕ್ಕಾಗಿ, ಸಮುದಾಯದ ಪ್ರಯೋಜನಕ್ಕಾಗಿ ಇವರು ಬರೆದುಕೊಟ್ಟಿರುತ್ತಾರೆ:

"............ ಸಿದ್ಧಲಿಂಗದೇವರಿಗೆ .... ಪರ್ವತದೇವರು ಕೃಪೆಯಿಂದ ಬರೆದ ಬಸವೇಶ್ವರದೇವರ ವಚನ"[೩]

"ಸ್ವಾಮಿಯವರ ಅಪ್ಪಣೆಯಿಂದ ಚಂದ್ರಸಾಗರವರ್ಣಿ ಬೆಳ್ಗೊಳಮಠಕ್ಕೆ ಬರೆದು ಒಪ್ಪಿಸಿದ ಚಂಪೂಭಾರತ ಸಂಪೂರ್ಣ............."[೪]

ತಮಗೆ ಬರೆದುಕೊಡುವುದು ಸಾಧ್ಯವಾಗದ ಸಂದರ್ಭದಲ್ಲಿ ಕೆಲವರು ಇನ್ನೊಬ್ಬರಿಂದ ಬರೆಯಿಸಿ ಕೊಡುತ್ತಿದ್ದರು. ಸಾಮಾನ್ಯವಾಗಿ ಗುರುಗಳಿಗೆ, ಮಠಕ್ಕೆ ಅರ್ಪಿಸುವಾಗ ಈ ಕೆಲಸ ನಡೆಯುತ್ತಿದ್ದಿತು:

"ವಿಕಾರಿ ಸಂವತ್ಸರದ ಜೇಷ್ಠ ಬ ೭ ಯಲ್ಲು ಹಂಪಯ್ಯನ ಮಟದ ಕಾಶಿದೇವರು ಭೋಗದೇವರು ಮಟದ ಕಂಥೆ ಸಂಗ್ಯೆಯ್ಯನವರಿಗೆ ಅಂಬಿಗರ ಹಳ್ಳಿಯ ಸಂಗನಬಸವನ ಕೈಯ್ಯ ಬರೆಯಿಸಿಕೊಟ್ಟ ಲೀಲೆ ಪುಸ್ತಕ"[೫]

ಈ ಬಗೆಯ ಲೇಖನ ಚಟುವಟಿಕೆ ಕಾರಣವಾಗಿ ಹಸ್ತಪ್ರತಿಗಳು ಬೆಳೆದು ವೈಯಕ್ತಿಕ-ಸಾರ್ವಜನಿಕ ಗ್ರಂಥಭಾಂಡಾರಗಳು ಅಸ್ತಿತ್ವಕ್ಕೆ ಬರುತ್ತಿದ್ದವು. ಇವುಗಳಲ್ಲಿ ಕವಿಗಳ, ಶಾಸ್ತ್ರಜ್ಞರ, ಧರ್ಮಾಧಿಕಾರಿಗಳ, ರಾಜರ ಹತ್ತಿರ ದೊಡ್ಡ ವೈಯಕ್ತಿಕ ಭಾಂಡಾರಗಳೇ ಇದ್ದಿರಬೇಕು. ಗದಾಯುದ್ಧ ಬರೆಯುವ ಕಾಲಕ್ಕೆ ರನ್ನನ ಹತ್ತಿರ ವ್ಯಾಸಭಾರತ, ವೇಣೀಸಂಹಾರ, ಊರುಭಂಗ, ಪಂಪಭಾರತ ಮೊದಲಾದ ಕೃತಿಗಳ ಸಂಗ್ರಹವಿರಲೇಬೇಕು. ಮಲ್ಲಿಕಾರ್ಜುನ ಸೂಕ್ತಿಸುಧಾರ್ಣವನ್ನು ರೂಪಿಸುವ ಕಾಲಕ್ಕೆ ಅವನ ಮನೆಯಲ್ಲಿ ನೂರಾರು ಹಸ್ತಪ್ರತಿಗಳ ದೊಡ್ಡ ಸಂಗ್ರಹ ಇರುವುದು ಸಹಜ. ಅಜಿತಪುರಾಣದ ಪದ್ಯಗಳನ್ನೊಳಗೊಂಡ ಸೂಕ್ತಿ ಸುಧಾರ್ಣವದಲ್ಲಿ ಗದಾಯುದ್ಧದ ಪದ್ಯಗಳಿಲ್ಲದುದನ್ನು ನೋಡಿದರೆ, ಮಲ್ಲಿಕಾರ್ಜುನನ ಭಾಂಡಾರದಲ್ಲಿ ಆ ಕೃತಿಯ ಪ್ರತಿ ಇರಲಿಕ್ಕಿಲ್ಲವೆನಿಸುತ್ತದೆ. ಅಜಿತಪುರಾಣವು ಧಾರ್ಮಿಕ ಕಾವ್ಯವೆಂಬ ಕಾರಣದಿಂದ ಅನೇಕ ನಕಲುಗಳಾಗಿ ಬೆಳೆದಿರಬಹುದು. ಗದಾಯುದ್ಧ ಆ ಕಾಲಕ್ಕಾಗಲೇ ವಿರಳಪ್ರತಿಗಳನ್ನು ಹೊಂದಿರಬಹುದು. ಇಂದಿಗೂ ಅದರ ಒಂದೂವರೆ ಪ್ರತಿಗಳು ಸಿಗುವುದನ್ನು ಇಲ್ಲಿ ಸ್ಮರಿಸಬಹುದು. ಈ ಭಾಂಡಾರವನ್ನು ಅವನ ಮಗನಾದ ಕೇಶಿರಾಜ ಬಳಸಿಕೊಂಡು ಶಬ್ದಮಣಿದರ್ಪಣವನ್ನು ರಚಿಸಿದ. ತಂದೆಯ ಭಂಡಾರ ಇವರ ಕಾಲಕ್ಕೆ ಇನ್ನೂ ದೊಡ್ಡದಾಗಿರಬಹುದು. ಗದಾಯುದ್ಧದ ಪದ್ಯಗಳು ದರ್ಪಣದಲ್ಲಿರುವುದರಿಂದ ಕೇಶಿರಾಜ ಅದರ ಒಂದು ಪ್ರತಿಯನ್ನು

---

೩. ಮೈಹಸೂ VII-೨೩.

೪. ಶ್ರವಂಬೆಳ್ಗೊಳ ಶ್ರೀ ಜೈನ ಮಠದ ತಾಡಪತ್ರೀಯ ಗ್ರಂಥಗಳ ವಿವರ-೧೬೭.

೫. ಶ್ರೀ ಜಗದ್ಗುರು ಮುರುಘರಾಜೇಂದ್ರ ಬ್ರಹನ್ಮಠದ ಹಸ್ತಪ್ರತಿಸೂಚೀ I-೩೮೬.

ದೊರಕಿಸಿಕೊಂಡಿರಬಹುದು. ಹೀಗೆ ಕವಿಗಳು, ಶಾಸ್ತ್ರಜ್ಞರಲ್ಲದೆ ಬಹಿರಂಗ ಆಹ್ವಾನ ಒಡ್ಡುತ್ತಿದ್ದ ವಾದಿಗಳ ವಶದಲ್ಲಿಯೂ ಬಹುದೊಡ್ಡ ವೈಯಕ್ತಿಕ ಗ್ರಂಥಭಾಂಡಾರ ಇರುವುದು ಸಹಜ. ಪಾಲ್ಕುರಿಕೆ ಸೋಮನಾಥನನ್ನು ಎದುರಿಸಿದ ಚಕ್ರಪಾಣಿ ರಂಗನಾಥನಲ್ಲಿ ಬಹುದೊಡ್ಡ ಸ್ವಧರ್ಮಗ್ರಂಥಭಂಡಾರವೇ ಇರಬಹುದು. ಕೆರೆಯ ಪದ್ಮರಸನನ್ನು ವಾದಕ್ಕೆ ಆಹ್ವಾನಿಸಿದೆ ತ್ರಿಭುವನತಾತ "ಆನೆಯೊಳ್ ಸಕಲಶಾಸ್ತ್ರ ಪರಿಮಿತೋರು ಪುಸ್ತಕ ನಿಚಯಮಂ ಹೇರಿಕೊಂಡು"[೬] ಬಂದಿದ್ದನೆಂದು ಪದ್ಮರಾಜಪುರಾಣ ತಿಳಿಸುತ್ತದೆ. ಇದಲ್ಲದೆ, ಕೆಲವುಜನ ಪುಸ್ತಕಪ್ರಿಯರು ಅಧ್ಯಯನ ಮಾಡದಿದ್ದರೂ ಬಹುದೊಡ್ಡ ಭಾಂಡಾರವನ್ನು ಪ್ರತಿಷ್ಠೆಗಾಗಿ ಬೆಳೆಸಿಕೊಳ್ಳುತ್ತಿರಬಹುದು. ರತ್ನಾಕರ ವರ್ಣಿಯ ಭರತೇಶ ವೈಭವದಲ್ಲಿ ಬರುವ "ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ। ಗುರುಗಳಂತವರಾಡುತಿಹರು"[೭] ಎಂಬ ಹೇಳಿಕೆ ಅಂಥ ವ್ಯಕ್ತಿಗಳನ್ನು ಸೂಚಿಸುತ್ತದೆ. ಹೀಗೆ ಕವಿ, ಶಾಸ್ತ್ರಜ್ಞ, ಪುಸ್ತಕಪ್ರಿಯ ವ್ಯಕ್ತಿಗಳ ವಶದಲ್ಲಿ ಹಸ್ತಪ್ರತಿಗಳ ದೊಡ್ಡ ಭಾಂಡಾರಗಳೇ ಇದ್ದಿರಬಹುದು. ಇವುಗಳಿಗೆ ಶಾರದಾಭಾಂಡಾರ, ಸರಸ್ವತಿ ಭಾಂಡಾರ, ಶ್ರುತಭಾಂಡಾರ, ವಚನಭಾಂಡಾರ, ಪುಸ್ತಕಭಾಂಡಾರ ಎನ್ನುತ್ತಿದ್ದರು. "ಹದಿನಾಡ ಸೀಮೆಯ ಯಳವಂದೂರ ಸ್ಥಳಕ್ಕೆ ಪೂರ್ವಿಕರಾದ ಕಾಸ್ಯಪಗೋತ್ರದ ತಮ್ಮಣ್ಣ ಪಂಡಿತರ ಕುಮಾರರಾದ ಸೂರಿಪಂಡಿತರ ಕಿರಿಯಮಗ ಬೊಮ್ಮರಸ ಪಂಡಿತನು ನಮ್ಮ ಶಾರದಾ ಭಾಂಡಾರಕ್ಕೆ ಪೊಸ್ತುಕವಾಗಬೇಕುಯೆಂದು ಬರೆದಂಥ ಸನತ್ಕುಮಾರನ ಕೃತಿಯ ಪೊಸ್ತುಕಕ್ಕೆ"[೮] ಎಂಬ ಮಾತನ್ನು ಇಲ್ಲಿ ಗಮನಿಸಬಹುದು.

ಹೀಗೆ ವಿದ್ವಾಂಸ ವ್ಯಕ್ತಿಗಳ ಮನೆಗಳಲ್ಲಲ್ಲದೆ, ರಾಜಮನೆತನಗಳಲ್ಲಿಯೂ ವೈಯಕ್ತಿಕ ಭಾಂಡಾರಗಳು ಬೆಳೆದುಬಂದ ಬಗ್ಗೆ ಅನೇಕ ಉದಾಹರಣೆಗಳು ಸಿಗುತ್ತವೆ:

"ರೌದ್ರಿ ಸಂವತ್ಸರದ ಶ್ರಾವಣಶುದ್ಧ ೧೧ಲು ಶ್ರೀಮನ್ಮಹಾನಾಡಪ್ರಭು ಬಿಜ್ಜವರದ ಇಮ್ಮಡಿ ಚಿಕ್ಕಪ್ಪಗೌಡರಯ್ಯನವರ ಶಾರದಾಭಾಂಡಾರಕ್ಕೆ ಅನುಭವದ ಸೊಂಪದೇವರ ಮಕ್ಕಳು ವೀರಸೊಂಪದೇವರು ಬರೆದ ಸ್ತೋತ್ರಭಾಷ್ಯಗಳ ಪುಸ್ತಕ".[೯]

"ಶ್ರೀಮನ್‌ಮಹಾನಾಡಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗೌಡರು ಬರೆಸಿದ ಸಾನಂದ ಪುರಾಣ. ಇದನು ಬರೆದಾತನು ಯಜ್ಞನಾರಾಯಣ ದೀಕ್ಷಿತರ ಮಗ ವಿಶ್ವನಾಥನು".[೧೦]

ಈ ಹೇಳಿಕೆಗಳು ಬಿಜ್ಜಾವರದ ಅರಸರ ಮನೆಯಲ್ಲಿ ಬೆಳೆಯುತ್ತಲಿದ್ದ 'ಶಾರದಾ ಭಾಂಡಾರ'ದತ್ತ ಬೆರಳು ನೀಡುತ್ತವೆ. ಮೈಸೂರು ಅರಮನೆಯಲ್ಲಿ ಇಂಥ ಹಸ್ತಪ್ರತಿ ಭಾಂಡಾರ ಈಗಲೂ ಇದ್ದು, ಅದು ಬೆಳೆದುಬಂದ ಬಗೆಯನ್ನು ಅನೇಕ ಹೇಳಿಕೆಗಳು ಹೀಗೆ ತಿಳಿಸುತ್ತವೆ :

---

೬. ಪದ್ಮರಾಜಪುರಾಣ (ಪದ್ಮಣಾಂಕ) IX–೯
೭. ಭರತೇಶ ವೈಭವ (ರತ್ನಾಕರವರ್ಣಿ) ೮೦–೧೦೨
೮. ಮೈಹಸೂ X–೪೯.
೯. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಪೀಠಿಕೆ XXIII
೧೦. ಮಹಸೂ VI–೧೦೭೦

"ಚಿಕ್ಕದೇವರಾಯಸ್ವಾಮಿಯವರ ಕುಮಾರಿತಿ ಆದ ಚಿಕ್ಕ ಅಮೃತಾಜಮ್ಮಣ್ಣಿಯವರ ಪಾದದ ದಯಕ್ಕೆ ಪಾತ್ರನಾದ ಬೊಕ್ಕಸ ಬಾಳಯ್ಯನವರ ಮಕ್ಕಳು ಚೆನ್ನ ರಾಜಯ್ಯನವರ ಮಗ ಮ(ಮಾ)ರಯ್ಯನು ಬರೆದು ಒಪ್ಪಿಸಿದ ಕನ್ನಡ ಕಾದಂಬರಿ ಪುಸ್ತಕ".[೧೧]

"ಅಳಿದ ಮಹಾಸ್ವಾಮಿಯವರ ಮಹಾಸನ್ನಿಧಾನದ ರಾಯಸದ ಭಾಗವತದ ಕೃಷ್ಣಪ್ಪನು ಶಾಲಿವಾಹನ ಶಕೆ ವರ್ಷಂಗಳು ೧೭೬೪ ಸಂದ ವರ್ತಮಾನವಾದ ಶುಭಕೃತ್ಸರದ ಚೈತ್ರಶುದ್ಧ ೮ ಯಲ್ಲು ಶ್ರೀಕೃಷ್ಣ ಕಥಾಸಾರಸಂ".[೧೨]

"ಅರಮನೆಗೆ ಮದ್ದಗಿರಿ ಹನುಮಂತಯ್ಯನು ಬರೆದು ವಪ್ಪಿಸಿದ ಕೃಷ್ಣರಾಜ ವಿಳಾಸ"[೧೩]

"ಚಿಕ್ಕೇಂದ್ರಭೂಮೀಶಂಗೆಂದಾ ಲಕ್ಷ್ಮಾಖ್ಯಬುಧೋತ್ತಮಂ ಬರೆದುಕೊಟ್ಟ"[೧೪]

"ಶ್ರೀಮದ್ರಾಜಾಧಿರಾಜರಾದ ಬೆಟ್ಟದ ಚಾಮರಸು ವೊಡೆಯವರ ಕುಮಾರಕರಾದ ಕಂಠೀರವ ನರಸರಾಜೇಂದ್ರಂಗೆ .... ಭಾರತಿ ಅಯಣ್ಣನು ಬರೆದುಕೊಟ್ಟಂತಾ".[೧೫]

ಇತ್ಯಾದಿ ಹೇಳಿಕೆಗಳು ರಾಜರ ವೈಯಕ್ತಿಕ ಗ್ರಂಥಭಾಂಡಾರಗಳನ್ನು, ಅವರ ಅಭಿರುಚಿಗಳನ್ನು ತಿಳಿಸಿಕೊಡುತ್ತವೆ. ರಾಜರಂತೆ ರಾಜಕುಮಾರರೂ, ಕುಮಾರಿತಿಯರೂ ಗ್ರಂಥದ ವಿಷಯವಾಗಿ ತೋರುತ್ತಲಿದ್ದ ಆಸಕ್ತಿಗಳು ಇಲ್ಲಿ ವೇದ್ಯವಾಗುತ್ತವೆ. ಆಕಾಶಭೈರವಕಲ್ಪ (೧೫ ನೆಯ ಶತಮಾನ) ಹೆಸರಿನ ಹಸ್ತಪ್ರತಿಯ ೩೨ನೆಯ ಪಟಲದಲ್ಲಿ ಅರಮನೆಯಲ್ಲಿರಬೇಕಾದ ಹಸ್ತಪ್ರತಿ ಭಂಡಾರದ ನೆಲೆ, ಸ್ವರೂಪಗಳನ್ನು ಕುರಿತು ಹೇಳಲಾಗಿದೆ.

ಸಾರ್ವಜನಿಕ ಭಾಂಡಾರಗಳನ್ನು ಕುರಿತು ಹೇಳುವುದಾದರೆ ವೈದಿಕ, ಜೈನ, ವೀರಶೈವ ಪರಿಸರಗಳಲ್ಲಿ ಆಯಾ ಧರ್ಮಗಳಿಗೆ ಸಂಬಂಧಪಟ್ಟ ಗ್ರಂಥಸಂಗ್ರಹಗಳು ಹೀಗೆ ಬೆಳೆದು ಬರುತ್ತಿದ್ದವು:

ವೈದಿಕ : ಈ ಧರ್ಮದಲ್ಲಿ ಘಟಿಕಾಸ್ಥಾನ ಮತ್ತು ಮಠಗಳು ಪುಸ್ತಕಗಳನ್ನು ಬೆಳೆಸಿಕೊಂಡು ಬಂದವು. ಇವುಗಳಲ್ಲಿ ಘಟಿಕಾಸ್ಥಾನಗಳು ಸಾರ್ವಜನಿಕ ವಿದ್ಯಾಕೇಂದ್ರಗಳಾಗಿದ್ದು, ಇಲ್ಲಿ ಧಾರ್ಮಿಕ ಗ್ರಂಥಗಳ, ವ್ಯಾಕರಣಾದಿ ಶಾಸ್ತ್ರಗಳ, ಸುಪ್ರಸಿದ್ಧ ಕಾವ್ಯಗಳ ಪ್ರೌಢ ಅಧ್ಯಯನಕ್ಕೆ ಅವಕಾಶವಿದ್ದಿತು. ಅದೂ ಸಂಸ್ಕೃತ ಕೃತಿಗಳ ಅಭ್ಯಾಸವೇ ಇಲ್ಲಿ ನಡೆಯುತ್ತಿದ್ದಿತು. ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲೂಕಿನ ನಾಗಾವಿಯ ಘಟಿಕಾಸ್ಥಾನದಲ್ಲಿ ಓದುವ "ವೇದಾಧ್ಯಾಯಿಗಳಿನ್ನೂರ್ವರ್ಗಂ, ಶಾಸ್ತ್ರಾಧ್ಯಾಯಿಗಳಯ್ದುದಿಂಬರ್ಗಂ, ತದುಪಾಧ್ಯಾಯಿಗಳು ೩ ಭಟ್ಟದರ್ಶನ ನ್ಯಾ(ಸ) ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗ್ಗಂ ವೇದಮನೋದಿಸು ಪಾಧ್ಯಾಯಮ್ಮೂವರ್ಗ್ಗಂ ಶಾಲೆಯ ಸರಸ್ವತೀಭಣ್ಡಾರಿಗರಾ (=ರೊ)ವ್ವರ್ಗ್ಗಮನ್ನು ೨೫೭ ಮಾನಸ"ರಿಗೆ ದತ್ತಿಬಿಟ್ಟ ವಿಷಯ ಶಾಸನದಲ್ಲಿದೆ.[೧೬] ಇಲ್ಲಿಯ ವಿಷಯ

---

೧೧. ಮೈಹಸೂ V–೩೩೨.
೧೨. ಮೈಹಸೂ V–೫೨೩.
೧೩. ಮೈಹಸೂ V–೫೨೯.
೧೪. ಮೈಹಸೂ I–೨೮.
೧೫. ಮೈಹಸೂ III–೧೫೦೨.
೧೬. A.P.G.A.S. No. 3. Gb.2 ನಾಗಾವಿ ಶಾಸನ (೧೦೫೮)

ವೈವಿಧ್ಯಕ್ಕನುಗುಣವಾಗಿ ಗ್ರಂಥಸಂಗ್ರಹ ಬೆಳೆದಿರುವದು ಸಹಜ. ಈ ಸಂಗ್ರಹವನ್ನು 'ಸರಸ್ವತೀ ಭಾಂಡಾರ' ಎಂದು ಕರೆದಿದ್ದು, ನೋಡಿಕೊಳ್ಳು ಒಬ್ಬ ಗ್ರಂಥ ಪಾಲನಿದ್ದನು. ಅವನಿಗೆ ಸ್ವಲ್ಪ ಹೆಚ್ಚು ಕಡಿಮೆ ಭಾಟ್ಟದರ್ಶನವ್ಯಾಖ್ಯಾತೃ, ನ್ಯಾಸವ್ಯಾಖ್ಯಾತೃ, ಪ್ರಭಾಕರ ವ್ಯಾಖ್ಯಾತೃಗಳಿಗೆ ಸಮಾನವಾಗಿ ೩೦ ಮತ್ತರು ಭೂಮಿಯನ್ನು ನೀಡಲಾಗಿದೆ. ಕರ್ನಾಟಕದಲ್ಲಿ ಸಾಲೊಟಗಿ, ಹೂವಿನಬಾಗೆ, ಹೆಂಜೇರು, ಹೊಟ್ಟೂರು ಮೊದಲಾದವು ಇಂಥ ಘಟಿಕಾಸ್ಥಾನಗಳಾಗಿದ್ದವು.

ಘಟಿಕಾಸ್ಥಾನಗಳನ್ನು ಬಿಟ್ಟರೆ ವೈದಿಕ ಮಠಗಳು ಹಸ್ತಪ್ರತಿ ಉತ್ಪಾದನೆ ಮತ್ತು ಪ್ರಸಾರಕಾರ್ಯವನ್ನು ಪೂರೈಸಿವೆ, ಆದರೆ ಬ್ರಾಹ್ಮಣರಿಗೆ ಕನ್ನಡ ಅಸ್ಪೃಶ್ಯ ಭಾಷೆಯಾಗಿದ್ದುದರಿಂದ ಇವರು ಮೊದಲು ಕನ್ನಡ ಹಸ್ತಪ್ರತಿಗಳನ್ನು ನಕಲು ಮಾಡಿಸಲಿಲ್ಲವೆಂದು ತೋರುತ್ತದೆ. ಹೀಗಾಗಿ ವೈದಿಕ ಮಠಗಳಲ್ಲಿ ಸಂಸ್ಕೃತ ಹಸ್ತಪ್ರತಿಗಳೇ ಹೆಚ್ಚು ಸಂಗ್ರಹವಾದವು. ಬಹಳೆಂದರೆ ಮಠಗಳನ್ನು ಹೊರತುಪಡಿಸಿ, ಸಾಮಾನ್ಯರ ವಶದಲ್ಲಿ ದಾಸರ ಕೀರ್ತನೆ, ಕುಮಾರವ್ಯಾಸ ಭಾರತದಂಥ ಕಾವ್ಯಗಳನ್ನು ಆಗಾಗ ನಕಲು ಮಾಡಿಸುತ್ತ ಬಂದ್ದಾರೆ.

ಮಠಗಳಲ್ಲಿ ಸಂಗ್ರಹಿತವಾದ ಸಂಸ್ಕೃತ ಹಸ್ತಪ್ರತಿಗಳನ್ನು ವಿದ್ಯಾಪ್ರೇಮಿಗಳಾದ ಇವರು ತುಂಬ ಎಚ್ಚ ಗೌರವದಿಂದ ರಕ್ಷಿಸರಲು ಸಾಕು. ಶೃಂಗೇರಿ ವೈದಿಕ ಧರ್ಮದ ಕೇಂದ್ರಪೀಠ, ನರಸಿಂಹಭಾರತಿ ಒಡೆಯರ ಆದೇಶದ ಮೇರೆಗೆ ಇಲ್ಲಿ 'ಪೊಸ್ತಕ ಭಾಂಡಾರದ ಸಂರಕ್ಷಣಾರ್ಥವಾಗಿ, ಬೆಳಂಜಿ ಗ್ರಾಮದ ಉತ್ಪನ್ನವನ್ನು ಕವಿ ಕೃಷ್ಣಭಟ್ಟನಿಗೆ ದತ್ತಿಯಾಗಿ ಕೊಟ್ಟರೆಂದು ಪೆರ್ದೂರಿನ ಒಂದು ಶಾಸನ ಹೇಳುತ್ತದೆ'.[೧೭] ಬುಕ್ಕರಾಯನ ಆಳಿಕೆಗೆ ಸಂಬಂಧಪಟ್ಟ ಈ ಶಾಸನದ ಕಾಲ ಕ್ರಿ.ಶ.೧೪೦೬. ಇದಲ್ಲದೆ ಮೇಲುಕೋಟೆಯ ಶ್ರೀ ವೈಷ್ಣವಮಠ, ಉಡುಪಿಯ ಅಷ್ಟಮಠ, ಸ್ವಾದಿಯ ವಾದಿರಾಜಮಠ, ಮುಳುಬಾಗಿಲನ ಶ್ರೀಪಾದರಾಯರ ಮಠದಲ್ಲಿ ಅನೇಕ ಹಸ್ತಪ್ರತಿಗಳ ಸಂಗ್ರಹವಿದೆ. ಇವೆಲ್ಲ ಸಾಮಾನ್ಯವಾಗಿ ಸಂಸ್ಕೃತ ಹಸ್ತಪ್ರತಿಗಳು.[೧೭ಅ] ಇವುಗಳನ್ನು ಬಿಟ್ಟರೆ ಬಳ್ಳಾರಿ, ಲಿಂಗಸಗೂರು, ಮಾನ್ವಿ, ರಾಯಚೂರುಗಳಲ್ಲಿ ಹರಿದಾಸರ ಕೀರ್ತನಸಾಹಿತ್ಯ ಸಿಗುವುದು ಸರ್ವವಿದಿತವಾಗಿದೆ.

ಜೈನ : ಜೈನರಲ್ಲಿ 'ಚತುರ್ವಿಧದಾನ' ಸುಪ್ರಸಿದ್ಧವಾದುದು. ನಯಸೇನನು ರಾಜ್ಯಕ್ಕೆ ಚತುರಂಗಮುಂ, ಮಂತ್ರಕ್ಕೆ ಚತುರ್ವಿಧೋಪಾಯಮುಮೊಪ್ಪುವಂತಾ ದಾನಕ್ಕೆ ಶಾಸ್ತ್ರಾದಿ ದಾನಚತುಷ್ಟಯಮೊಪ್ಪುಗುಮಿಂತು:

ಪರಮಾಗಮದಿಂದಲ್ಲದೆ ।
ಪರತ್ರೆಯಂ ಪಡೆವುಪಾಯಮಿಲ್ಲದರಿಂದಂ ।
ವರಶಾಸ್ತ್ರಂ ಮಿಗಿಲೆಂದಾ ।
ದರದಿಂ ಮಾಡುವುದು ಶಾಸ್ತ್ರದಾನಮನಳಿಪಿಂ ॥
ಶ್ರುತವನಿತೆಯ ಮುಕ್ತಿಶ್ರೀ ।
ಸತಿಯಲ್ಲಿಗೆ ಬೇಗಮುಯ್ವ ದೂದವಿಯೆಂಬೀ ।
ಮತಮನರಿದೋತು ಮಾಡುವು ।
ದತಿಶಯದಿಂ ಶಾಸ್ತ್ರದಾನಮಂ ಪದಪಿಂದಂ ॥
ಶ್ರುತಭಾವನೆಯೊಳಮತಿಮನ ।

ಶ್ರುತಿ ನಿರ್ಮಲಮನದಿನಘಹರಂ ತದ್ದುರಿತ ।
ಕ್ಷತಿಯಿಂ ಕೈವಲ್ಯಶ್ರೀ ।
ಸತಿ ಸಾರ್ಗುಂ ಶಾಸ್ತ್ರದಾನದುನ್ನತಿ ಕಿರಿದೇ ॥[೧೮]

ಎನ್ನುವ ಶಾಸ್ತ್ರ, ಅನ್ನ, ಅಭಯ, ಭೈಷಜ-ಎಂಬ ನಾಲ್ಕು ದಾನಗಳಲ್ಲಿ ಶಾಸ್ತ್ರದಾನದ ಮಹತ್ವೇನೆಂಬುದನ್ನು ಈ ಪದ್ಯಗಳಲ್ಲಿ ಸ್ಪಷ್ಟಪಡಿಸುತ್ತಾನೆ. "ಧರ್ಮಶಾಸ್ತ್ರದಿಂದಲ್ಲದೆ ಮೋಕ್ಷಸಾಧ್ಯವಿಲ್ಲ. ಕಾರಣ ಶಾಸ್ತ್ರಗಳೇ ಶ್ರೇಷ್ಠವೆಂದು ತಿಳಿದು, ಶಾಸ್ತ್ರದಾನ ಮಾಡಬೇಕು. ಈ ಶಾಸ್ತ್ರವನಿತೆಯೇ ನಮ್ಮನ್ನು ಮುಕ್ತಿಸ್ತ್ರೀ ಹತ್ತಿರ ಒಯ್ಯುತ್ತಾಳೆ. ಶ್ರುತಭಾವನೆಯಿಂದ ಮನಶುದ್ಧಿ, ಮನಶುದ್ದಿಯಿಂದ ಪಾಪನಿವಾರಣೆ, ಪಾಪನಿವಾರಣೆಯಿಂದ ಕೈವಲ್ಯಸಿದ್ಧಿ. ಹೀಗಾಗಿ ಶಾಸ್ತ್ರದಾನ ಸರ್ವಶ್ರೇಷ್ಠವಾದುದು" ಎಂದು ಈ ಪದ್ಯಗಳಲ್ಲಿ ಹೇಳಲಾಗಿದೆ. ಈ ಮೇರೆಗೆ ಜೈನಪುರುಷರೂ ಮಹಿಳೆಯರೂ ಶಾಸ್ತ್ರದಾನಕಾರ್ಯವನ್ನು ಭಕ್ತಿಯಿಂದ ಪೂರೈಸುತ್ತ ಬಂದಿದಾರೆ. "ಅಹಾರಾಭಯ ಭೈಷಜ್ಯಶಾಸ್ತ್ರದಾನವಿನೋದೆಯುಂ".[೧೯] 'ಆಹಾರಾಭಯ ಭೈಷಜ್ಯಶಾಸ್ತ್ರದಾನ ದತ್ತಾವಧಾನನುಂ"[೨೦] ಎಂಬಂಥ ವಿಶೇಷಣಗಳನ್ನು ಹೊತ್ತ ನೂರಾರು ಸ್ತ್ರೀ-ಪುರುಷರು ಶಾಸನಗಳಲ್ಲಿ ಕಂಡುಬರುತ್ತಾರೆ. ಈ ಶಾಸ್ತ್ರದಾನವನ್ನು ವ್ಯಕ್ತಿಗಳಿಗೂ ಬಸದಿಗಳಿಗೂ ಮಾಡಿದ ಅನೇಕ ಉದಾಹರಣೆಗಳು ಸಿಗುತ್ತವೆ. "ವರ್ಧಮಾನಕ್ಕಗಳು ಸೇನಗಣದ ನೇಮಕ್ಕಗಳಿಗೆ ಶಾಸ್ತ್ರದಾನವಾಗಿ ಬರೆದುಕೊಟ್ಟ ಧನ್ಯಕುಮಾರಚರಿತೆ"[೨೧] ಎಂಬಂಥ ಉಲ್ಲೇಖಗಳು ವ್ಯಕ್ತಿಗೆ ನೀಡಿದ ಶಾಸ್ತ್ರದಾನಕ್ಕೆ ಉದಾಹರಣೆ ಎನಿಸಿವೆ. "ಚಂದ್ರಸಾಗರವರ್ಣಿ ಬೆಳಗುಳಮಠಕ್ಕೆ ಬರೆದು ಒಪ್ಪಿಸಿದ ಚಂಪೂಭಾರತ ಸಂಪೂರ್ಣ"[೨೨] ಎಂಬಂಥ ನೂರಾರು ಹೇಳಿಕೆಗಳು ಬಸದಿಗಳಿಗೆ ನೀಡಿದ ಗ್ರಂಥದಾನವನ್ನು ತಿಳಿಸುತ್ತವೆ. ಕರ್ನಾಟಕದ ಹೆಮ್ಮೆಯ ಹಸ್ತಪ್ರತಿಗಳಾದ ಧವಲಾ, ಜಯಧವಲಾ, ಮಹಾಧವಲಾಗಳು ಗ್ರಂಥದಾನಕ್ಕೆ ಪರಮಾವಧಿ ನಿದರ್ಶನವೆನಿಸಿವೆ. ದೇವಿಯಕ್ಕನು ಶ್ರುತಪಂಚಮಿ ನೋಂಪಿಯುನ್ನು ನೋಂತು, ಬನ್ನಿಗೆರೆಯ ಉತ್ತುಂಗ ಚೈತ್ಯಾಲಯದ ಆಚಾರ್ಯ ಶುಭಚಂದ್ರಸಿದ್ಧಾಂತದೇವರಿಗೆ ಧವಲಗ್ರಂಥದ ಪ್ರತಿಯನ್ನು, ಅಣ್ಣಿಶ್ರೇಷ್ಠಿಯ ಪದ್ಮಸೇನಮುನಿಂದ್ರರಿಗೆ ಜಯಧವಲದ ಪ್ರತಿಯನ್ನು, ಶ್ರೀಮತಿಯು ಶ್ರೀಪಂಚಮಿ ಉದ್ಯಾಪನಾ ಸಂದರ್ಭದಲ್ಲಿ ಮಾಘನಂದಿ ಆಚಾರ್ಯರಿಗೆ ಮಹಾಧವಲಾ ಪ್ರತಿಯನ್ನು ಗ್ರಂಥದಾನವಾಗಿ ಅರ್ಪಿಸಿದ್ದಾರೆ.[೨೩] ಮುನಿಗಳಿಗೆ ನೀಡಲಾಗಿದ್ದರೂ ಇವು ಬಸದಿಗಳ ಭಂಡಾರಕ್ಕೆ ಅರ್ಪಿಸಿದುವಾಗಿವೆ. ಹೀಗೆ ಅರ್ಪಿತವಾದ ಹಸ್ತಪ್ರತಿಗಳಿಂದ ಬೆಳೆದ ಪ್ರಾಚೀನ ಜೈನ ಹಸ್ತಪ್ರತಿಭಂಡಾರಗಳೆಂದರೆ ಮೂಡಬಿದರಿಯ ಸಿದ್ಧಾಂತ ಬಸದಿ ಮತ್ತು ಜೈನಮಠ, ವರಾಂಗ, ಕಾರ್ಕಳ, ನರಸಿಂಹರಾಜಪೇಟೆ, ಹುಂಬಚ, ಶ್ರವಣಬೆಳ್ಗೊಳ, ಅಲಿಯೂರು, ಕೊಲ್ಲಾಪುರ ಜೈನಮಠಗಳಿಗೆ ಸಂಬಂಧಿಸಿದುವು.

---

೧೭. A.R.S.I.E. ೨೮೩ (೧೯೩೬-೩೭)

೧೭ಅ . ಕರ್ನಾಟಕದಲ್ಲಿ ಸಿದ್ಧವಾದ ಸಂಸ್ಕೃತ ಹಸ್ತಪ್ರತಿಗಳು ಬಿಕಾನೇರ ಭಾಂಡಾರದಲ್ಲಿವೆಯೆಂದು ತಿಳಿದು ಬರುತ್ತದೆ. (ಸಂಯುಕ್ತ ಕರ್ನಾಟಕ ಪತ್ರಿಕೆ ೨೯-೬-೧೯೮೬)

೧೮. ಧರ್ಮಾಮೃತ (ನಯನಸೇನ) IV -೩೩, ೩೪, ೩೫,

೧೯. E.C. II- ೧೪೩ (ಕ್ರಿ.ಶ. ೧೧೩೧)

೨೦. ಮೈಹಸೂ II- ೭೦೮, ಧರ್ಮನಾಥ ಪುರಾಣ

೨೧. ಕೊಲ್ಲಾಪುರ ಲಕ್ಷ್ಮೀಸೇನ ಬಸದಿ ಹಸ್ತಪ್ರತಿ. ೧೫೭/೨.

೨೨. ಶ್ರವಣಬೆಳ್ಗೊಳ ಶ್ರೀ ಜೈನಮಠದ ತಾಡಪ್ರತೀಯ ಗ್ರಂಥಗಳ ವಿವರ-೧೬೭.

೨೩. ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ (ಕೆ. ಭುಜಬಲಿಶಾಸ್ತ್ರಿ) ೨೫೫-೫೬-೫೭.

ಗ್ರಂಥಸಂಪತ್ತನ್ನು ಬೆಳೆಯಿಸುವ ಇಂತಹದೇ ಇನ್ನೊಂದು ಕಡ್ಡಾಯವೆನ್ನಬಹುದಾದ ಸಂದರ್ಭವೆಂದರೆ ಮೃತರು ಮೋಕ್ಷಕ್ಕೆ ಹೋಗಬೇಕೆಂಬ ಉದ್ದೇಶದಿಂದ ಗ್ರಂಥದಾನ ಮಾಡುವುದು. ಇದನ್ನು 'ಪರೋಕ್ಷವಿನಯ' ಎಂದು ಕರೆಯುತ್ತಿದ್ದರು. ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿದುದು 'ಪರೋಕ್ಷವಿನಯ'ಕ್ಕೆ ಉತ್ತಮ ಉದಾಹರಣೆಯಾಗಿದೆ.

ಎಸೆಯದೆ ಪೊಳ್ದು ಕೆಟ್ಟಪುದು ಶಾಂತಿಪುರಾಣಮದಂ ನೆಗಳ್ಚುವೆಂ ।
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೆಂದು ಸಹಸ್ರ ಪುಸ್ತಕ ।
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇಳ್ದ ಪೆಂ ।
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥[೨೪]

ಎಂಬ ಪದ್ಯ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ.

ಇಂಥದೇ ಗ್ರಂಥೋತ್ಪಾದನೆಯ ಇನ್ನೊಂದು ಕಾರಣವೆಂದರೆ ಕರ್ಮೋಪಶಮನ. ಜ್ಞಾನವನ್ನು ಮುಚ್ಚಿ ಹಾಕುವ ಜ್ಞಾನಾವರಣೀಯ ಕರ್ಮವನ್ನು ನಾಶಮಾಡುವುದಕ್ಕಾಗಿ ಧರ್ಮಗ್ರಂಥಗಳನ್ನು ಪ್ರತಿಮಾಡಿಕೊಳ್ಳುವ, ಪ್ರತಿಮಾಡಿಸಿಕೊಳ್ಳುವ, ಪ್ರತಿಮಾಡಿಕೊಡುವ ಸಂಪ್ರದಾಯ ಜೈನಸಮಾಜದಲ್ಲಿದೆ.

"ಶ್ರೀಮದಲಂಕದೇವರ ಶಿಷ್ಯರಾದ ಜಯಕೀರ್ತಿದೇವರು ಹನ್ನಾವರದ ಚಂದ್ರಕೀರ್ತಿದೇವರಿಗೆ ಜ್ಞಾನಾವರಣೀಯ ಕರ್ಮದುಪಶಮನ ನಿಮಿತ್ತವಾಗಿ . . . . ಬರೆದು ಕೊಟ್ಟರು".[೨೫]

"ಶ್ರೀ ಜ್ಞಾನಸಾಗರವರ್ಣಿಯವರು ತಮ್ಮ ಜ್ಞಾನಾವರಣೀ ಕರ್ಮೋಪಶಮನ ನಿಮಿತ್ಯವಾಗಿ .... ಸಂಪೂರ್ಣವಾಗಿ ಬರೆದ ಶ್ರೀ ಪದ್ಮಾವತಿ ಅಮ್ಮನವರ ಚರಿತೆ".[೨೬]

ಕರ್ಮನಾಶನದಿಂದ ಕೇವಲಜ್ಞಾನ ಪ್ರಾಪ್ತಿಯಾಗುತ್ತದೆ. ಇಂಥ ಜ್ಞಾನಪ್ರಾಪ್ತಿಗಾಗಿಯೂ ನಕಲುಮಾಡಿಕೊಂಡುದಕ್ಕೆ "ಶ್ರೀ ಶಾಂತಿಮತಿ ಅವ್ವಗಳ ಜೀಯನವರು ತಮಗೆ ಕೇವಲಜ್ಞಾನಪ್ರಾಪ್ತಿ ನಿಮಿತ್ತವಾಗಿ ಬರದಂಥ ಹಿರೆಪಂಚವರಮೇಷ್ಠಿಗಳ ವ್ಯಾಖ್ಯಾನ ಸಮಾಪ್ತ"[೨೭] ಎಂಬ ಪ್ರಶಸ್ತಿ ಉದಾಹರಣೆಯಾಗಿದೆ.

ಲೋಕಪರ್ಯಟನ ಮಾಡುವ ಮುನಿಗಳು ಮಳೆಗಾಲದಲ್ಲಿ ಒಂದೆಡೆ ನೆಲೆನಿಂತು ಚಾತುರ್ಮಾಸ ಆಚರಿಸುವ ಸಂದರ್ಭದಲ್ಲಿಯೂ ಹಸ್ತಪ್ರತಿ ರಚನಾಕಾರ್ಯ ನಡೆಯುತ್ತಿದ್ದುದನ್ನು "೧೬೮೩ನೆಯ ದುರ್ಮುಖಿ ಸಂವತ್ಸರದ ಶ್ರಾವಣ ಬಹುಳದಲ್ಲೂ ನೇಮಿನಾಥಸ್ವಾಮಿಯ ಚೈತ್ಯಾಲಯದಲ್ಲಿ ಅಣ್ಣಗಳ ಜೀಯನವರು ನೇಮಿಸಾಗರ ವರ್ಣಿಜೀಯವರು ಚಾತುರ್ಮಾಸ ಮಾಡುವಾಗ ಚಂದಯ್ಯ ಬರೆದ ಪರಮಾತ್ಮಪ್ರಕಾಶ ಎಂಬ ಗ್ರಂಥ"[೨೮] ಎಂಬ ಪ್ರಶಸ್ತಿ ತಿಳಿಸುತ್ತದೆ. ಹೀಗೆ ಹಲವು ಕಾರಣಗಳಿಂದಾಗಿ ಜೈನರಲ್ಲಿ ಹಸ್ತಪ್ರತಿಗಳು ಬೆಳೆದು ಬರುತ್ತಿದ್ದವು.

---

೨೪. ಶಾಂತಿಪುರಾಣ (ಪೊನ್ನ), ಪರಿಶಿಷ್ಟ
೨೫. ಕೊಲ್ಲಾಪುರ ಲಕ್ಷೀಸೇನ ಬಸದಿ, ಹ. ಪ್ರ.. ೨೩/೧
೨೬. ಕೊಲ್ಲಾಪುರ ಲಕ್ಷೀಸೇನ ಬಸದಿ, ಹ. ಪ್ರ.. ೧೪೪/೩
೨೭. ಕೊಲ್ಲಾಪುರ ಲಕ್ಷೀಸೇನ ಬಸದಿ, ಹ. ಪ್ರ.. ೨೫೩.
೨೮. ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಗಳ ವಿವರ ಪು ೧೧-೧೧.

ವೀರಶೈವ : ಕರ್ನಾಟಕದಲ್ಲಿ ಜೈನರಂತೆ ಕನ್ನಡ ಹಸ್ತಪ್ರತಿಗಳನ್ನು ಇನ್ನೂ ಅಧಿಕವಾಗಿ ಬೆಳೆಸಿದವರು ವೀರಶೈವರು. ವೀರಶೈವಕ್ಕೆ ಹಿನ್ನೆಲೆಯಾಗಿರುವ ಮತ್ತು ೧೫ನೆಯ ಶತಮಾನದ ವರೆಗೆ ಬದುಕಿ ಬಂದಿದ್ದ ಕಾಳಾಮುಖಯತಿಗಳು ಬಹುದೊಡ್ಡ ವಿದ್ವಾಂಸರಾಗಿದ್ದರು. ಅವರ ಮಠಗಳು ವಿದ್ಯಾಕೇಂದ್ರಗಳಾಗಿದ್ದ ಕಾರಣ ಅಲ್ಲಿ ದೊಡ್ಡ ಗ್ರಂಥಭಾಂಡಾರಗಳಿರುವುದು ಸಹಜ. ಬಳ್ಳಿಗಾವಿಯ ಕೇದಾರೇಶ್ವರಮಠವನ್ನು ಕುರಿತ "ಋಗ್ಯಜಸ್ಸಾಮಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ ಅಷ್ಟಾದಶಪುರಾಣ ಧರ್ಮಶಾಸ್ತ್ರ ಸಕಳ ಕಾವ್ಯನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ. . . ."[೨೯] ಎಂಬ ಹೇಳಿಕೆ ಅಂದಿನ ಕಾಳಾಮುಖಮಠಗಳ ವಿದ್ವತ್ತಿನ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಈ ಬಗೆಯ ಘನತೆಯುಳ್ಳ ಮಠಗಳು ಕರ್ನಾಟಕದ ತುಂಬ ಹರಡಿದ್ದವು. ಇವುಗಳನ್ನು ಬಿಟ್ಟರೆ ಶಿವಶರಣರ ಅನುಭವಮಂಟಪದಲ್ಲಿ ಓಲೆಭಾಂಡಾರವಿದ್ದಿತೆಂದು, ಭಾಂಡಾರಿ ಶಾಂತರಸನೆಂಬ ಶರಣ ಅದರ ವ್ಯವಸ್ಥಾಪಕನಾಗಿದ್ದನೆಂದು ತಿಳಿದುಬರುತ್ತದೆ. ಜೈನರಂತೆ ವೀರಶೈವರಲ್ಲಿಯೂ ಗ್ರಂಥದಾನ ಸಂಪ್ರದಾಯ ಅಸ್ತಿತ್ವದಲ್ಲಿದ್ದಿತು. ಕೆಳದಿಯ ಅರಸು ಬಸವರಾಜನ ಗ್ರಂಥದಾನವನ್ನು ಇಲ್ಲಿ ಉಲ್ಲೇಖಿಸಬಹುದು. "ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳಿಗೆ ನಾನಾವಿಧ ಭಕ್ಷ್ಯ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾ ಪದಾರ್ಥಂಗಳಂ ನೀಡಿಸಿ, ಸಂತುಷ್ಟಿಪಡಿಸಿಯವರಿಗೆ ನಾನಾವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿಯಾಧಾರ ಭಸ್ಮರುದ್ರಾಕ್ಷಿ ಆಗಮಶಿವಶಾಸ್ತ್ರ ಲಿಖಿತ ಪುಸ್ತಕ ಪವಾಡ ಛತ್ರ ಪಾದುಕೆ ಹಸ್ತಾಧಾರ ದಂಡ ಮುಂತಾದ ಇಚ್ಛಾಪದಾರ್ಥಂಗಳಂ ಕೊಡಿಸಿ, ಪೇಟೆಯಲ್ಲಿ ಆರಾಧನಾಪೂರ್ವಕಂ ಮಹೋತ್ಸವ ಮೆರವಣಿಗೆಗಳಂ ಮಾಡಿಸಿ, ಶಾಶ್ವತಧರ್ಮಕೀರ್ತಿಗಳಂ ಸಮಪಾದಿಸಿ, ರಾಜ್ಯಂಗೆಯ್ಯುತಿರ್ದ ಬಸವನರೇಂದ್ರಂ"[೩೦] ಎಂಬಲ್ಲಿ "ಆಗಮಶಿಶಾಸ್ತ್ರಲಿಖಿತ ಪುಸ್ತಕ"ಗಳ ದಾನ ಮುಖ್ಯವಾದುದು. ಅದರಲ್ಲಿಯೂ "ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳಿಗೆ" ಎಂಬುದು ಗಮನ ಸೆಳೆಯುವ ಅಂಶವಾಗಿದೆ.

ವೀರಶೈವ ಮಠಾಧೀಶರಿಗೆ ದೀಕ್ಷಾಪ್ರಸಂಗದಲ್ಲಿ ಕೆಲವು ಧಾರ್ಮಿಕ ಗ್ರಂಥಗಳನ್ನು ಕೊಡುವುದು ಆಚರಣೆಯ ಒಂದು ಭಾಗವಾಗಿದ್ದಿತು. "ಪ್ರಭು ಚನ್ನಬಸವರಾಜೇಂದ್ರರು ಶಿವಮೂರ್ತಿಯಾದ ಸೊನ್ನಲಿಗೆಯ ಸಿದ್ಧರಾಮೇಶಂಗೆ ನಿರೂಪಿಸಿದ ಗೋಹೇಶ್ವರನ ವಚನ, ಕರಣಹಸಿಗೆ, ಮಿಶ್ರಾರ್ಪಣ, ಸಿದ್ಧರಾಮೇಶಂಗೆ ನಿರೂಪಿಸಿದ ಗೋಹೇಶ್ವರನ ವಚನ, ಕರಣಹಸಿಗೆ, ಮಿಶ್ರಾರ್ಪಣ, ಸಿದ್ಧರಾಮೇಶ್ವರ ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಸಿದ್ಧೇಶ್ವರ ವಚನ, ಹಿರಿಯ ಮಂತ್ರಗೋಪ್ಯ, ಶೂನ್ಯಸಂಪಾದನೆ ಮುಂತಾದವುಗಳ ಸಂಗ್ರಹಿಸಿದ ಪುಸ್ತಕವ, ಸಭಾಮಧ್ಯದಲ್ಲಿ ಆ ಶಿವಾನುಭವ ಚರಂತಿಗೆ ತೆಗೆದುಕೊಂಡ ಗುರುವರನ ಕಡೆಯಿಂದ ಆ ಶಾಸ್ತ್ರವಂ ಶಿಷ್ಯೋತ್ತಮನು ಶಿವಮಂತ್ರ ಗುರುಪ್ರಸಾದಮುಖವಾದ (೧), ಅಂಗಲಿಂಗ ಸಾಮರಸ್ಯ ಮುಂತಾಗಿ . . . ತತ್ವಂಗಳಂ ತಿಳಿದಾತನು ಶಾಸ್ತ್ರವಂ ಗುರುಗಳಿಂ ಶ್ರವಣಗೊಂಡಾತನಾದ ವಿರಕ್ತನೆ ಶಾಸ್ತ್ರದ ಕಟ್ಟು ಹಿಡಿಯಬೇಕು

---

೨೯. E.C. VII, ಶಿಕಾರಿಪುರ ೧೦೨ ಬೆಳ್ಳಗಾವಿ, ೧೧೬೨

೩೦. ಕೆಳದಿ ನೃಪವಿಜಯ, ೧೧–೩೫ ಗ.

. . . ಈತನಿಗೆ ಶಿವಾನುಭವಶಾಸ್ತ್ರವೆ ಆಗಲಿ, ಪುರಾಣ ಪುಸ್ತಕವೆ ಆಗಲಿ, ಇವುಗಳನ್ನು ಗುರುಗಳಾದ ಚರಮೂರ್ತಿಗಳು ಸಭೆಯಲ್ಲಿ ಕೊಟ್ಟು ತಮ್ಮಾಸನದಲ್ಲಿ ಕುಳ್ಳಿರಿಸಿಕೊಳ್ಳಲು ಆ ಗಣವರನೆ ಚರಮೂರ್ತಿ ಎನಿಸುವನು"[೩೧] ಎಂಬ ನಿರಂಜನವಂಶರತ್ನಾಕರ ಗ್ರಂಥದ ಹೇಳಿಕೆಯಲ್ಲಿ ಸೂಚಿಸಲಾದ ಗ್ರಂಥಗಳು ಪಟ್ಟಾಧಿಕಾರ ಸಂದರ್ಭದಲ್ಲಿ ಕಡ್ಡಾಯವೆನಿಸಿದ್ದವೆಂದು ತಿಳಿದುಬರುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ವೀರಶೈವಮಠಗಳಲ್ಲಿ ಕರಣಹಸಿಗೆ, ಮಿಶ್ರಾರ್ಪಣ, ಮಂತ್ರಗೋಪ್ಯ, ಸೃಷ್ಟಿಯವಚನ ಗ್ರಂಥಗಳು ಬಹುಸಂಖ್ಯೆಯಲ್ಲಿ ಸಿಗುತ್ತವೆ ಎಂದು ಕಾಣುತ್ತದೆ.

ಇವುಗಳಿಗಿಂತ ಎತ್ತಿ ಹೇಳಲೇಬೇಕಾದ ವಿಷಯವೆಂದರೆ ೧೨ನೆಯ ಶತಮಾನದಲ್ಲಿ ಉದ್ಭವಿಸಿದ ಶರಣರ ಜನಪರ ಚಳುವಳಿಯಿಂದಾಗಿ ಜ್ಞಾನ, ಅಕ್ಷರಜ್ಞಾನ ಸಾಮಾನ್ಯರ ಬಾಗಿಲ ವರೆಗೂ ಬಂದುದು. ಸ್ತ್ರೀ–ಪುರುಷ, ವಿಪ್ರ–ಶೂದ್ರ ಮೊದಲಾದವರೆಲ್ಲ ಈಗ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿದ ಕಾರಣ, ಹಸ್ತಪ್ರತಿಗಳ ಉತ್ಪಾದನೆ ವರ್ಧಿಸಿತು.

ಕಾಲಜ್ಞಾನ ಸಾಹಿತ್ಯದಲ್ಲಿ ವಚನಗಳನ್ನು 'ಮುಚ್ಚಿ ಇಡಿರಿ' ಎಂಬ ಮಾತು ಪದೇ ಪದೇ ಬರುತ್ತಿದ್ದು, ಇದು ಕಲ್ಯಾಣಕ್ರಾಂತಿಯಿಂದಾಗಿ ಅದಕ್ಕೆ ಬಹಿಷ್ಕಾರದ ಗಂಡಾಂತರ ಒದಗಿದುದನ್ನು ಸೂಚಿಸುವಂತಿದೆ. ಹೀಗಾಗಿ ಅವರು ವಚನಸಾಹಿತ್ಯದ ಬಹುದೊಡ್ಡ ಭಾಗವನ್ನು ಹಂಪೆಯಲ್ಲಿ ಅಡಗಿಸಿಟ್ಟರೆಂದು ಕಾಣುತ್ತದೆ. ಕಾಲಜ್ಞಾನ ವಚನದಲ್ಲಿ ಬರುವ ಹಂಪೆಯಲ್ಲಿ ಮುಚ್ಚಿಟ್ಟ ವಾಲಿಭಂಡಾರವು ರಾಮಾಯಣ ಕಾಲದ ವಾಲಿಯ ದ್ರವ್ಯಭಾಂಡಾರವಲ್ಲ; ವಚನಗಳ ತಾಳೆ ಓಲೆಯ ಭಾಂಡಾರವೇ ಆಗಿರಬಹುದು. ಹಂಪೆ ಆ ಕಾಲದಲ್ಲಿ ಕುರುಗೋಡು ಸಿಂದರ ವಶದಲ್ಲಿದ್ದಿತು. ಪರಮ ಶಿವಭಕ್ತರಾದ ಇವರಲ್ಲಿ ರಕ್ಷಣೆಯನ್ನು ಬಯಸಿ, ಶರಣರು ಅಲ್ಲಿಗೆ ಹೋದಂತೆ ಕಾಣುತ್ತದೆ.

ಶರಣರ ಇನ್ನೊಂದು ತಂಡ ಬಿಜ್ಜಳನ ವಿರೋಧಿಗಳಾದ ಗೋವೆ ಕದಂಬರ ಅಧಿಪತ್ಯಕ್ಕೆ ಒಳಪಟ್ಟ ಉಳಿವೆಗೆ ಹೋಯಿತು. ಆದರೆ ಅಲ್ಲಿ ಅವರು ಮಾಡಿದ ವಚನ ಪ್ರಸಾರದ ಬಗ್ಗೆ ಏನೂ ತಿಳಿದುಬಂದಿಲ್ಲ. ಆಂಧ್ರಪ್ರದೇಶ ಬಿಜ್ಜಳನ ಆಳಿಕೆಗೆ ಹೊರಗಾಗಿದ್ದುದರಿಂದ ಶರಣರ ಮತ್ತೊಂದು ತಂಡ ಅಲ್ಲಿಗೆ ಹೋಯಿತು. ಗುರುರಾಜನ 'ಮಲ್ಲಿಕಾರ್ಜುನಪಂಡಿತಾರಾಧ್ಯ ಚರಿತ್ರೆ'ಯಲ್ಲಿ ಶ್ರೀಶೈಲಕ್ಕೆ ಹೊರಟ ಭಕ್ತರನ್ನು ಕುರಿತು–

> "ಗಾಯಂತೋ ಬಸವೇಶಸ್ಯ ಗೀತಾನ್ಯಪಿ"
> "ಪ್ರಭು ಸತ್ಯೇಶ ಚಾಮಯ್ಯ ಮಡಿವಳಮಾಚಯ್ಯ ಜಂಗಮೈಸ್ತಥಾ ।
> ವರದ ಶಂಕರದಾಸಯ್ಯ ದಾಸ ಕೇತೋದ್ಭಟೈರಪಿ ।
> ಕಕ್ಕಯ್ಯ ಚೆನ್ನಬಸವ ಕಲ್ಲಿದೇವ ಹಲಾಯುಧೈಃ ॥
> ಶ್ರೀ ಕೇಶಿರಾಜ ಚಿಕ್ಕಾರ್ಯಾ ಮಸಣಾರ್ಯೈರ್ಮಹಾತ್ಮಭಿಃ
> ಸಿದ್ಧರಾಮಾಭಿಧಾನೇನ ಮಹಾದೇವ್ಯಾ ಪ್ರಸಿದ್ಧಯಾ ॥
> ಭವ್ಯ ಸೊಡ್ಡಲಬಾಚಾರ್ಯ ಬಸವೇಶ ಪುರಸ್ಸರೈಃ ।
> ಕೃತೇಷು ಗೀತೇಷ್ವಪಿಚ ಗೀಯಮಾನೇಷು ಗಾಯಕೈಃ ॥
> "ಬಸವೇಶೋಪರಚಿತಾ ಗೀತಾಂ .... ಗಾಯಂತಃ"[೩೨]

ಎಂದು ಹೇಳಿದ ಈ ಮಾತುಗಳು ವಚನಸಾಹಿತ್ಯದ ಪ್ರಸಾರವನ್ನು ಸೂಚಿಸುತ್ತವೆ. ೧೩ ನೆಯ ಶತಮಾನದಲ್ಲಿ ಕೆರೆಯ ಪದ್ಮರಸನು ತ್ರಿಭುವನತಾತನ ಜೊತೆ ವಾದಕ್ಕೆ ನಿಂತ ಸಂದರ್ಭದಲ್ಲಿ ದೇಶದ ಬೇರೆ ಬೇರೆ ಭಾಗಗಳಿಂದ ಹೊರಟ ವಿದ್ವಾಂಸರು 'ಬಸವೇಶ್ವರಾದಿಗಳ ಗೀತಂಗಳಂ'[೩೩] ಹಾಡುತ್ತ ನಡೆದರೆಂದು ಪದ್ಮರಾಜಪುರಾಣ ತಿಳಿಸುತ್ತದೆ. ಹೀಗೆ ಹಂಪೆ, ಉಳಿವೆ, ಆಂಧ್ರಪ್ರದೇಶ, ಹಳೇಬೀಡುಗಳಲ್ಲಿ ವಚನಸಾಹಿತ್ಯ ಪ್ರಚಾರ ಪಡೆದಿದ್ದಿತು. ಬಳಿಕ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದು ಪ್ರೌಢದೇವರಾಯನು ಸಿಂಹಾಸನವೇರುತ್ತಲೇ ಹಂಪೆ ವಚನಸಾಹಿತ್ಯದ ಪುನರುಜ್ಜೀವನಕ್ಕೆ ನೆಲೆಯಾಗಿ ಪರಿಣಮಿಸಿತು. ರಾಜನಲ್ಲದೆ–

ಲಕ್ಕಣ್ಣದಣ್ಣಾಯಕರು ಮುನ್ನ ಭಂಡಾರಿ
ಜಕ್ಕಪ್ಪ ಕಲ್ಲೆಹದ ಕೇತಿಶೆಟ್ಟಿಯರಿವರು
ಲಕ್ಕಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ....[೩೪]

ವೀರಶೈವ ಧರ್ಮ–ಸಾಹಿತ್ಯೋದ್ಧಾರಕಾರ್ಯವನ್ನು ಕೈಕೊಂಡರೆಂದು ತಿಳಿದುಬರುತ್ತದೆ. ಗುರುವರ್ಗಪರಂಪರೆಯ ಏಕೋತ್ತರ ಶತಸ್ಥಲ, ವಿರಕ್ತವರ್ಗಪರಂಪರೆಯ ಲಿಂಗ ಲೀಲಾವಿಲಾಸ ಚಾರಿತ್ರಗಳು ಆಕಾರ ಪಡೆದುದು ಈ ಸಂದರ್ಭದಲ್ಲಿ. ಶೈವರಾದ ಸಂಗಮವಂಶದವರ ಆಳಿಕೆ ಮುಗಿದು, ವೈಷ್ಣವರಾದ ಸಾಳ್ವ–ತುಳುವರು ಅಧಿಕಾರಕ್ಕೆ ಬರುತ್ತಲೇ ವೀರಶೈವದ ಸಾಹಿತ್ಯಿಕ ಚಟುವಟಿಕೆ ಅಲ್ಲಿ ನಿಂತುಬಿಟ್ಟಿತು. ಈಗ ಬಹುಶಃ ಆಂಧ್ರದ ಕಡೆಯ ಆರಾಧ್ಯವೀರಶೈವರು ಕರ್ನಾಟಕದ ಗುಮ್ಮಳಾಪುರ–ಗುಬ್ಬಿಗಳನ್ನು ನೆಲೆಮಾಡಿಕೊಂಡರು. ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥರ ಪ್ರಭಾವದಿಂದಾಗಿ ಇಲ್ಲಿ ತಲೆಯೆತ್ತಿದ್ದ ವೀರಶೈವರಲ್ಲಿ ಗುಬ್ಬಿಯ ಮಲ್ಲಣಾರ್ಯ (ಮಲ್ಲಣಾರಾಧ್ಯ)ನ ಸಂತತಿಯವರು ಉತ್ಸಾಹದಿಂದ ದುಡಿದರು. ಹಲಗೆಯಾರ್ಯ, ಕೆಂಚವೀರಣ್ಣ, ಗುಬ್ಬಿಯ ಮಲ್ಲಣ್ಣರು ಇಲ್ಲಿಯ ಜ್ಯೋತಿಯಮ್ಮನ ಮನೆಯಲ್ಲಿ ವೀರಶೈವಾಮೃತ ಮಹಾಪುರಾಣ ರಚಿಸಿದುದು ಬಹು ದೊಡ್ಡ ಘಟನೆಯೆಂದೇ ಹೇಳಬೇಕು.

ಈ ಸಂದರ್ಭದಲ್ಲಿ ತಲೆಯೆತ್ತಿದ ಹರದನಹಳ್ಳಿಯ ತೋಂಟದ ಸಿದ್ಧಲಿಂಗನಿಂದಾಗಿ ವಚನಸಂಪಾದನ ಕಾರ್ಯಕ್ಕೆ ವೇಗ, ವ್ಯಾಪ್ತಿ ಪ್ರಾಪ್ತವಾಯಿತು. ಶೂನ್ಯಸಂಪಾದನೆಗಳು ಈ ಕಾಲದಲ್ಲಿ ಸೃಷ್ಟಿಯಾದವು. ಮುಂದೆ ಈ ಸಂಪ್ರದಾಯದಲ್ಲಿ 'ಸಂಪಾದನ ಸಮಯ' ಹೆಸರಿನ ಒಂದು ಶಾಖೆಯೇ ಬೆಳೆಯಿತು. ಇದು ಹೊಸ ಗ್ರಂಥಗಳ ರಚನೆಗಿಂತ ಹಳೆಯ ಗ್ರಂಥಗಳ ಸಂಗ್ರಹ, ಸಂಕಲನ, ಸಂಪಾದನ ಕೆಲಸದಲ್ಲಿ ತೊಡಗಿ, ಹೊಸ ಸಾಹಿತ್ಯ ಪ್ರಕಾರವನ್ನೇ ಸೃಷ್ಟಿಸಿತು. ಈ ಪರಂಪರೆಯಲ್ಲಿ ಬಂದ

---

೩೧. ನಿರಂಜನ ಜಂಗಮವಂಶ ರತ್ನಾಕರ. ೪೦–೪೨.
೩೨. ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ (ಗುರುರಾಜ), ಪು.೧೭೪, ೪೫೬, ೬೨೦
೩೩. ಪದ್ಮರಾಜಪುರಾಣ (ಪದ್ಮಣಾಂಕ) IX–೩೫
೩೪. ವೀರಶೈವಾಮೃತ ಮಹಾಪುರಾಣ, VIII–೨೨–೫೨

ಸಂಪಾದನೆಯ (ಹರತಾಳ) ಚೆನ್ನಂಜೇದೇವ

- ಸಂಪಾದನೆಯ ಪರ್ವತೇಂದ್ರ
  - ಸಂಪಾದನೆಯ ವಿರಕ್ತ ತೋಂಟದಾರ್ಯ
- ಸಂಪಾದನೆಯ (ಎಳಮಲಿ) ಗುರುಶಾಂತದೇವ
  - ಸಂಪಾದನೆಯ ಸಿದ್ಧವೀರಣಾಚಾರ್ಯ
    - ಸಂಪಾದನೆಯ ಬೋಳಬಸವೇಶ
      - ಸಂಪಾದನೆಯ ಗುರುಲಿಂಗದೇವ
    - ಸಂಪಾದನೆಯ ಚೆನ್ನಮಲ್ಲಿಕಾರ್ಜುನ
      - ಸಂಪಾದನೆಯ ಪರ್ವತೇಶ

ಇವರೆಲ್ಲ ವಚನಸಾಹಿತ್ಯವನ್ನು ಕಣ್ಣುಮುಂದಿಟ್ಟುಕೊಂಡು ಅನೇಕ ಬಗೆಯ ಕೃತಿಗಳನ್ನು ಸಂಯೋಜಿಸಿದರು. ಇವರಿಂದಾಗಿ ಸೃಷ್ಟಿಯಾದ ಸಂಗ್ರಹ, ಸಂಕಲನ, ಸಂಪಾದನ ಕೃತಿಗಳ ಸಂಖ್ಯೆ ಸುಮಾರು ೧೩೦. ಸಂಕಲನಗಳಲ್ಲಿಯ ಅನೇಕರ ವಚನಗಳ ಆಯ್ಕೆಗಾಗಿ ಇವರು ನೂರಾರು ಕೃತಿಗಳನ್ನು ಸಂಗ್ರಹಿಸಿರಬೇಕು. ಇವರು ಸಂಯೋಜಿಸಿದ ಒಂದೊಂದು ಕೃತಿಯ ಹಲವಾರು ಪ್ರತಿಗಳು ಸಿಗುವದನ್ನು ನೋಡಿದರೆ ಇವರಿಂದ ನಡೆದ ಹಸ್ತಪ್ರತಿ ಲೇಖನ-ಪ್ರಸಾರಕಾರ್ಯದ ಬಾಹುಳ್ಯ ಅರ್ಥವಾಗುತ್ತದೆ. ವೀರಶೈವ ಹಸ್ತಪ್ರತಿ ಭಾಂಡಾರಕ್ಕೆ ಉಕ್ಕು ಬಂದಿರುವುದೇ ಈ ಸಂಪಾದನ ಸಮಯದಿಂದ. ಗ್ರಂಥಗಳ ಪ್ರತಿಲೇಖನ-ಪ್ರಸಾರಗಳು ಧಾರ್ಮಿಕ ಚಟುವಟಿಕೆಯ ಒಂದು ಭಾಗವೆಂಬ ಇವರ ಭಾವನೆ ಶ್ಲಾಘನೀಯವಾದುದು. ಈ ಪರಂಪರೆ ಪ್ರಾಚೀನ ಇಜಿಪ್ತದ ಸುಪ್ರಸಿದ್ಧ ಗ್ರಂಥ ಸಂಪಾದಕರಾದ ಜೀನೋಡೋಟಿಸ್, ಶಿಷ್ಯ ಅರಿಸ್ಟೋಫೇನಿಸ್, ಶಿಷ್ಯ ಅರಿಸ್ಟಾರ್ಕಸ್‌ಯೆಂಬ ಗುರು-ಶಿಷ್ಯ ಪರಂಪರೆಯನ್ನು ನೆನಪಿಗೆ ತರುತ್ತದೆ. ಇದಲ್ಲದೆ ಈ ಮಠಗಳು ಹಸ್ತಪ್ರತಿಯ ಉತ್ಪಾದನೆ, ಪ್ರಸಾರಕಾರ್ಯಗಳಲ್ಲಿ ಗಾಢವಾಗಿ ನಿರತವಾದುದನ್ನು ನೋಡಿದರೆ, ಪ್ರಾಚೀನ ಬ್ರಿಜಾಂಟಿಯಂ ಪ್ರದೇಶದ ಕ್ರೈಸ್ತಮಠಗಳ ಗ್ರಂಥಪ್ರಸಾರ ಚಟುವಟಿಕೆಗಳು ನೆನಪಾಗುತ್ತವೆ. ಈ ಬಗೆಯ ದೃಷ್ಟಿ-ಧೋರಣೆಯಿಂದಾಗಿ ಮಠಗಳು ಗ್ರಂಥೋತ್ಪಾದನೆಯ ಕೇಂದ್ರಗಳಾಗಿ ಪರಿಣಮಿಸಿದವು.

"ಓದಿಸುವ ಬಿದರಹಳ್ಳಿ ಮಠದಲ್ಲಿ ಕುಳಿತು ಮುಗಿಯ ಬರದ ಮಲ್ಲಪ್ಪದೇವರ ಹಸ್ತಾಂತರ ......"[೩೫]

"ಜಂಬುಕಂಡಿಯ ಬದಿಯ ತೇರದಳವೆಂಬ ಗಾಳಿಪೇಟೆಯಲ್ಲಿ ವಿರಕ್ತಮಠದಲ್ಲಿ .... ಬರದ ಪುಸ್ತಕವು"[೩೬]

---

೩೫. ಮೈಹಸೂ III-೧೨೩೨, ಭೈರವೇಶ್ವರ ಕಾವ್ಯದ ಕಥೆಗಳು
೩೬. ಮೈಹಸೂ V-೧೯೨

"...... ಮಂಗಳದೇಶದ ಲಕ್ಷ್ಮಣೇಶ್ವರ ತೋಂಟಸ್ವಾಮಿಗಳ ಮಠದಲ್ಲಿ ಬರೆದ ಬಸವೇಶ್ವರನ ಪುರಾಣ ....."[೩೭]

ಈ ಮೊದಲಾದ ಹೇಳಿಕೆಗಳನ್ನು ಗಮನಿಸಿದರೆ ಮಠಗಳು ಗ್ರಂಥಗಳ ಲೇಖನ ಕಾರ್ಯಕ್ಕೆ ನೀಡಿದ ಆಶ್ರಯ ಸ್ಪಷ್ಟವಾಗುತ್ತದೆ.

ಹೀಗೆ ವೀರಶೈವಮಠಗಳು ಕರ್ನಾಟಕದ ತುಂಬ ಗ್ರಂಥೋತ್ಪಾದನೆಯಲ್ಲಿ ತೊಡಗಿದ ಕಾರಣ, ಬೀದರ ಜಿಲ್ಲೆಯ ಬಸವತೀರ್ಥ ಹುಮ್ನಾಬಾದ್, ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಗುಲ್ಬರ್ಗಾ, ವಿಜಾಪೂರ ಜಿಲ್ಲೆ ಇಳಕಲ್ ಗುಳೇದಗುಡ್ಡ ಶಿವಯೋಗ ಮಂದಿರ, ಧಾರವಾಡ ಜಿಲ್ಲೆಯ ಗದಗ, ಹುಬ್ಬಳ್ಳಿ, ಹಾವೇರಿ, ಬೆಳಗಾಂವ ಜಿಲ್ಲೆಯ ನಾಗನೂರು ಮುರಗೋಡ ಅರಭಾವಿ, ರಾಯಚೂರು ಜಿಲ್ಲೆಯ ಕೊಪ್ಪಳ, ಬಳ್ಳಾರಿ ಜಿಲ್ಲೆಯ ಕೊಟ್ಟೂರು, ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಚಿತ್ರದುರ್ಗ, ಉತ್ತರ ಕನ್ನಡ ಜಿಲ್ಲೆಯ ಇಸಳೂರು ಸಿರಸಿ, ದಕ್ಷಿಣ ಕನ್ನಡ ಜಿಲ್ಲೆಯ ಗುರುಪುರ, ಚಿಕ್ಕಮಗಳೂರು ಜಿಲ್ಲೆಯ ರಂಭಾಪುರಿ, ಶಿವಮೊಗ್ಗ ಜಿಲ್ಲೆಯ ಆನಂದಪುರ ಜಡೆ, ತುಮಕೂರು ಜಿಲ್ಲೆಯ ಗುಬ್ಬಿ ಹೊನ್ನವಳ್ಳಿ ಕಂಬಾಳ, ಮೈಸೂರು ಜಿಲ್ಲೆಯ ಪಡಗೂರು ಸುತ್ತೂರು, ಹಾಸನ ಜಿಲ್ಲೆಯ ಹಾರ್ನಹಳ್ಳಿ, ಬೆಂಗಳೂರು ಜಿಲ್ಲೆಯ ರಾಜಾಪೂರ ಹುಣಸಮಾರನಹಳ್ಳಿ –ಮೊದಲಾದ ಧಾರ್ಮಿಕ ಕೇಂದ್ರಗಳಲ್ಲಿ ಹಸ್ತಪ್ರತಿಗಳು ಸಿಗುತ್ತವೆ.

ಮಠಗಳಂಥ ಧಾರ್ಮಿಕ ಕೇಂದ್ರಗಳಲ್ಲಿ ಒಂದು ಕೃತಿಯ ಒಂದಕ್ಕಿಂತ ಹೆಚ್ಚು ಪ್ರತಿಗಳು ಸಿಗುತ್ತವೆ. ಬಹುಶಃ ಭಕ್ತರು ತಮ್ಮ ಇಚ್ಛಾನುಸಾರ ಕಾಲಕಾಲಕ್ಕೆ ಬರೆದು ಅರ್ಪಿಸಿದುದು, ಇಲ್ಲವೆ ಈ ಸಾರ್ವಜನಿಕ ಭಾಂಡಾರಗಳಲ್ಲಿ ಓದಲು ಏಕಕಾಲಕ್ಕೆ ಹಲವು ಪ್ರತಿಗಳು ಬೇಕೆಂಬುದು ಇದಕ್ಕೆ ಕಾರಣವಾಗಿರಬಹುದು. ಚಿತ್ರದುರ್ಗ ಬೃಹನ್ಮಠದ ೩೬೦೦ ಕನ್ನಡ ಹಸ್ತಪ್ರತಿಗಳಲ್ಲಿ ಅಕ್ಕಗಳ ಸೃಷ್ಟಿಯ ವಚನ ೩೫, ಅಕ್ಷರಮಾಲಿಕಾ ಗದ್ಯ ೩೨, ಅಕರಾಂಕನ ಗದ್ಯ ೩೪, ಅನುಭವಸಾರ ೧೯, ಅಷ್ಟಾವರಣ ಸ್ತೋತ್ರದ ತ್ರಿವಿಧಿ ೩೧, ಏಕೋತ್ತರ ಶತಸ್ಥಲ (ಜಕ್ಕಣ) ೨೫, ಕರ್ನಾಟಕ ಶಬ್ದಮಂಜರಿ ೧೬, ಕರಣಹಸಿಗೆ (ಚೆನ್ನಬಸವಣ್ಣ) ೪೭, ಕೈವಲ್ಯಪದ್ಧತಿ ೧೩, ಗಿರಿಜಾಕಲ್ಯಾಣ ೮, ಪ್ರಭುದೇವರ ಟೀಕಿನ ವಚನ ೭, ಪ್ರಭುಲಿಂಗಲೀಲೆ ೧೫, ಬಸವಪುರಾಣ ೬, ಮಂತ್ರ ಮಹತ್ವಕಂದ ೨೮, ರಾಜಶೇಖರ ವಿಳಾಸ ೭, ವಿವೇಕಚಿಂತಾಮಣಿ ೧೨, ಶಬರಶಂಕರ ವಿಳಾಸ ೭, ಷಟ್‌ಸ್ಥಲಜ್ಞಾನ ಸಾರಾಮೃತ ೧೦ – ಹೀಗೆ ಪ್ರತಿಗಳು ಸಿಗುವುದು ಗಮನಿಸಬೇಕಾದ ಸಂಗತಿಯಾಗಿದೆ. ಇದೇ ರೀತಿ ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಬಸದಿಯಲ್ಲಿ ಅಪರಾಜಿತೇಶ್ವರ ಶತಕ ೭, ಅಮರಕೋಶ ೬, ಕರ್ಮಪ್ರಕೃತಿ ವ್ಯಾಖ್ಯಾನ ೨೦, ಜಿನಮುನಿ ತನಯ ೭, ಜ್ಞಾನಭಾಸ್ಕರ ಚರಿತೆ ೯, ದ್ವಾದಶಾನುಪ್ರೇಕ್ಷೆ ೧೪, ಧರ್ಮಪರೀಕ್ಷೆ ೫, ನೇಮಿಜಿನೇಶ ಸಂಗತಿ ೮, ಪಂಚಪರಮೇಷ್ಠಿಗಳ ಬೊಲ್ಲೆ ೮, ಭರತೇಶ ವೈಭವ ೬, ರತ್ನಕರಂಡಕ ಶ್ರಾವಕಾಚಾರ ೧೯ – ಹೀಗೆ ಸಿಗುವುದನ್ನೂ ಇಲ್ಲಿ ನೆನೆಯಬಹುದು.

ಈ ವರೆಗಿನ ವಿವೇಚನೆಯನ್ನು ಹಸ್ತಪ್ರತಿಗಳ ಭೌಗೋಲಿಕ ಪರಿಚಲನೆಯ ದೃಷ್ಟಿಯಿಂದಲೂ ಅಭ್ಯಸಿಸಬಹುದು. ಕರ್ನಾಟಕದಲ್ಲಿ ಮೊದಲು ತಲೆಯೆತ್ತಿದುದು ಜೈನಸಾಹಿತ್ಯ, ಆಮೇಲೆ ವೀರಶೈವ,

---

೩೭. ಬೆಂಹಸೂ–೩೧೭

ಕೊನೆಗೆ ಬ್ರಾಹ್ಮಣಸಾಹಿತ್ಯ. ಈ ನಾಡಿನಲ್ಲಿ ಇದೇ ಕಾಲಕ್ರಮದಲ್ಲಿ ಹಸ್ತಪ್ರತಿಗಳು ಹುಟ್ಟಿ ಬೆಳೆದುಬಂದುದು ಸಹಜ.

ಜೈನಕವಿಗಳು ಸಾಮಾನ್ಯವಾಗಿ ರಾಜಾಶ್ರಯದಲ್ಲಿ ಬೆಳೆದರು. ಪ್ರಾಚೀನ ಪ್ರಮುಖ ರಾಜಮನೆತನಗಳು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದುವು. ಹೀಗಾಗಿ ನಮ್ಮ ಹಸ್ತಪ್ರತಿಗಳು ಉತ್ತರ ಕರ್ನಾಟಕದಲ್ಲಿಯೇ ಮೊದಲು ವಿಪುಲ ಸಂಖ್ಯೆಯಲ್ಲಿ ಬೆಳೆದಿರಬೇಕು. ಆಮೇಲೆ ಬಂದ ವೀರಶೈವರ, ಇನ್ನೂ ಆಮೇಲೆ ಬಂದ ಬ್ರಾಹ್ಮಣರ ಚಟುವಟಿಕೆಗಳು ಉತ್ತರ ಕರ್ನಾಟಕದ ಕೊಡುಗೆಗಳೇ ಆಗಿವೆ. ಈ ಮೂರೂ ಧರ್ಮಗಳಿಗೆ ಸಂಬಂಧಪಟ್ಟ ಹಸ್ತಪ್ರತಿಗಳು ಮೊದಲು ಇಲ್ಲಿಯೇ ಕಣ್ಣು ತೆರೆದವೆಂದು ಇದರಿಂದ ತಿಳಿದುಬರುತ್ತದೆ.

ಉತ್ತರದಲ್ಲಿ ವೀರಶೈವ ತಲೆಯೆತ್ತುತ್ತಲೇ, ೧೨ನೆಯ ಶತಮಾನದ ಹೊತ್ತಿಗೆ ಹೊಯ್ಸಳರ ದಂಡನಾಯಕರಾದ ಗಂಗ, ಹುಳ್ಳ, ಭರತ ಮೊದಲಾದವರ ಆಶ್ರಯ ಬಯಸಿ ಜೈನರು ದಕ್ಷಿಣ ಕರ್ನಾಟಕಕ್ಕೆ ಹೋದರು. ಬಳಿಕ ಕರಾವಳಿ ತೀರದ ಸಾಂತರಸರು-ಭೈರಸರನ್ನು, ಕೊಲ್ಲಾಪುರದ ಶಿಲಾಹಾರರನ್ನು ಆಶ್ರಯಿಸಲು ತೆರಳಿದರು. ಇದರಿಂದಾಗಿ ಜೈನಹಸ್ತಪ್ರತಿ ಉತ್ಪಾದನಕಾರ್ಯ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ, ಆಮೇಲೆ ಪಶ್ಚಿಮ ಕರ್ನಾಟಕಕ್ಕೆ ವಲಸೆ ಹೋಗಿರಬಹುದು. ಇಂದಿಗೂ ಬೆಳ್ಗೊಳ ಹುಂಬಚ, ಕಾರ್ಕಳ, ಮೂಡಬಿದಿರೆ, ಕೊಲ್ಲಾಪುರ ಮೊದಲಾದ ಕೇಂದ್ರಗಳಲ್ಲಿ ಜೈನ ಹಸ್ತಪ್ರತಿಗಳು ವಿಪುಲ ಸಂಖ್ಯೆಯಲ್ಲಿ ಸಿಗುತ್ತಿರುವುದು ಇದಕ್ಕೆ ನಿದರ್ಶನವೆನಿಸಿದೆ.

ವಚನಕಾರರು ಹರಿಹರಾದಿ ಕವಿಗಳು ಕಾರಣವಾಗಿ ವೀರಶೈವ ಹಸ್ತಪ್ರತಿಗಳು ಉತ್ತರ ಕರ್ನಾಟಕದಲ್ಲಿ ಬೆಳೆದುಬಂದವು. ಮುಂದೆ ಮುಸಲ್ಮಾನರ ದಾಳಿ, ವೈಷ್ಣವರಾದ ಸಾಳ್ವ-ತುಳು ಅರಸರ ಅಧಿಕಾರ ಕಾರಣವಾಗಿ ಇವರ ಸಾಹಿತ್ಯಕ ಚಟುವಟಿಕೆ ದಕ್ಷಿಣದ ಗುಮ್ಮಳಾಪುರ, ಗುಬ್ಬಿ, ಎಡೆಯೂರುಗಳಿಗೆ ನಡೆಯಿತು. ಈಗ ಸಹಜವಾಗಿಯೇ ವೀರಶೈವ ಹಸ್ತಪ್ರತಿ ಉತ್ಪಾದನಕಾರ್ಯಗಳು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ವಲಸೆಹೋಯಿತು. ವಚನಸಾಹಿತ್ಯದ ಸೃಷ್ಟಿಕಾರ್ಯ ಉತ್ತರಕರ್ನಾಟಕದಲ್ಲಿ ಜರುಗಿದರೆ, ಸಂಗ್ರಹ-ಸಂಕಲನ-ಸಂಪಾದನ ಕಾರ್ಯಗಳೆಲ್ಲ ದಕ್ಷಿಣಕರ್ನಾಟಕದಲ್ಲಿ ಜರುಗಿದುದು ಈ ಕಾರಣಕ್ಕಾಗಿ. ಹೀಗೆ ಉತ್ತರ ಕರ್ನಾಟಕದ ಮೇಲಿನ ತುದಿಯಲ್ಲಿರುವ ಕಲ್ಯಾಣ, ಕೆಳತುದಿಯಲ್ಲಿರುವ ಗುಮ್ಮಳಾಪುರ-ಗುಬ್ಬಿ-ಎಡೆಯೂರುಗಳ ವರೆಗೆ ವೀರಶೈವರು ಉದ್ದಕ್ಕೂ ವ್ಯಾಪಿಸಿದ ಕಾರಣ, ಇವರ ಹಸ್ತಪ್ರತಿಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿ ಹುಟ್ಟಿ ಬೆಳೆದವು.

ಬ್ರಾಹ್ಮಣ ಸಾಹಿತ್ಯದ ಪ್ರಮುಖ ಪ್ರಕಾರವಾದ ದಾಸಸಾಹಿತ್ಯ ಹಂಪೆಯ ಸುತ್ತುಮುತ್ತ ಹುಟ್ಟಿದ ಕಾರಣ, ಆ ಹಸ್ತಪ್ರತಿಗಳು ಅಲ್ಲಿ ವಿಶೇಷ ಪ್ರಮಾಣದಿಂದ ಬೆಳೆದುಬಂದವು. ಮುಂದೆ ಸಾಳ್ವ, ತುಳು ಅರಸರ ಅವನತಿಯಿಂದಾಗಿ ದಾಸ ಆಂದೋಲನ ಹಂಪೆಯಿಂದ ರಾಯಚೂರು ಪ್ರದೇಶದ ಪಾಳೆಗಾರರ ಆಶ್ರಯಕ್ಕೆ ಹೋಗುವಲ್ಲಿ, ಕೀರ್ತನೆಗಳ ಸೃಷ್ಟಿಕಾರ್ಯವೂ ಅಲ್ಲಿಗೆ ವರ್ಗಾವಣೆ ಹೊಂದಿತು. ಕೀರ್ತನ ಸಾಹಿತ್ಯದ ಹಸ್ತಪ್ರತಿಗಳು ಇಲ್ಲಿ ವಿಪುಲಪ್ರಮಾಣದಲ್ಲಿ ಸಿಗುವುದು ಈ ಕಾರಣಕ್ಕಾಗಿ.

ಕರ್ನಾಟಕದ ಇನ್ನೊಂದು ಮತವೆಂದರೆ ೧೨ನೆಯ ಶತಮಾನದಲ್ಲಿ ಇಲ್ಲಿ ಕಾಣಿಸಿಕೊಂಡ ಶ್ರೀವೈಷ್ಣವ, ನಾಲ್ಕುನೂರು ವರ್ಷದಷ್ಟು ತಡವಾಗಿ, ಅಂದರೆ ೧೬ ನೆಯ ಶತಮಾನದಲ್ಲಿ ಮೈಸೂರು

ಅರಸರ ಆಶ್ರಯ ಸಿಗುತ್ತಲೇ ಆ ಪ್ರದೇಶದಲ್ಲಿ ಇವರ ಸಾಹಿತ್ಯಸೃಷ್ಟಿ, ಹಸ್ತಪ್ರತಿ ಉತ್ಪಾದನಾಕಾರ್ಯಗಳು ಕಣ್ಣುತೆರೆದವು. ಇದರ ಫಲವಾಗಿ ಮೇಲುಕೋಟೆ ಮೊದಲಾದ ಕೇಂದ್ರಗಳಲ್ಲಿ ಸಂಸ್ಕೃತ, ತಮಿಳು, ಹಸ್ತಪ್ರತಿಗಳು ಸಂಗ್ರಹಿತವಾದವು.

ಹೀಗೆ ಕರ್ನಾಟಕದಲ್ಲಿ ಹಸ್ತಪ್ರತಿಗಳ ಐತಿಹಾಸಿಕ ಬೆಳವಣಿಗೆ, ಭೌಗೋಲಿಕ ಪ್ರಸಾರ ಚಟುವಟಿಕೆ, ಹಸ್ತಪ್ರತಿ ಸೃಷ್ಟಿಕಾರ್ಯದ ಸಂಘಟನೆ-ವಿಘಟನೆಗಳು ಕಂಡುಬರುತ್ತವೆ.

ಪ್ರಾಚೀನ ಹಸ್ತಪ್ರತಿಭಾಂಡಾರಗಳು :

ಕನ್ನಡ ಹಸ್ತಪ್ರತಿಗಳನ್ನು ಅಲ್ಲಲ್ಲಿ ಚದರಿಹೋದ "ಅರಕ್ಷಿತ ಹಸ್ತಪ್ರತಿಗಳು", ಅಧ್ಯಯನ-ಧರ್ಮಪ್ರಸಾರಗಳ ಉದ್ದೇಶಕ್ಕಾಗಿ ಶೇಖರಿಸಲ್ಪಟ್ಟ "ಸಂಗ್ರಹಿತ ಹಸ್ತಪ್ರತಿಗಳು" ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಸಂಗ್ರಹಿತ ಹಸ್ತಪ್ರತಿಭಾಂಡಾರಗಳು ಸಾರ್ವಜನಿಕ ಗ್ರಂಥಾಲಯಗಳಂತೆ ಕೆಲಸ ಮಾಡಿದವು.

ಈ ಮೊದಲು ತಿಳಿಸಿದ ಮೇರೆಗೆ ಬ್ರಾಹ್ಮಣರು ಶೂದ್ರಭಾಷೆಯೆನಿಸಿದ ಕನ್ನಡದ ಹಸ್ತಪ್ರತಿಗಳನ್ನು ಅಷ್ಟಾಗಿ ಸಂಗ್ರಹಿಸಲೇ ಇಲ್ಲ. ಹೀಗಾಗಿ ಪ್ರಾಚೀನ ಕರ್ನಾಟಕದ ಕನ್ನಡ ಹಸ್ತಪ್ರತಿ ಭಾಂಡಾರಗಳೆಂದರೆ ಜೈನ-ವೀರಶೈವ ಭಾಂಡಾರಗಳೇ ಆಗಿದ್ದು, ಅಂಥ ಕೆಲವು ಪ್ರಾಚೀನ ಕೇಂದ್ರಗಳನ್ನು ಇಲ್ಲಿ ಪರಿಚಯಿಸಬಹುದು.

ಜೈನ ಹಸ್ತಪ್ರತಿ ಭಾಂಡಾರಗಳು : ಶ್ರವಣಬೆಳ್ಗೊಳ ಭಾರತಪ್ರಸಿದ್ಧಿಯ ಒಂದು ಜೈನಕೇಂದ್ರ. ಭದ್ರಬಾಹುಮುನಿಯು ಚಂದ್ರಗುಪ್ತನೊಂದಿಗೆ ಇಲ್ಲಿಗೆ ಬಂದುದು, ಚಾವುಂಡರಾಯ ಇಲ್ಲಿ ಗೊಮ್ಮಟೇಶ ವಿಗ್ರಹ ನಿಲ್ಲಿಸಿದುದು ಬಹು ಮುಖ್ಯವಾದ ಎರಡು ಘಟನೆಗಳು. ಚಾವುಂಡರಾಯನ ಗುರು ನೇಮಿಚಂದ್ರಭಟ್ಟಾರಕರು ಇಲ್ಲಿ ಸ್ಥಾಪಿಸಿದ ಜೈನಮಠದಲ್ಲಿ ಹಸ್ತಪ್ರತಿಭಾಂಡಾರವನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬರಲಾಗಿದೆ. ಭಾಷಾದೃಷ್ಟಿಯಿಂದ ಕನ್ನಡ ಕೃತಿಗಳಿಗೆ ಅವಕಾಶ ಅಷ್ಟಾಗಿ ಸಿಕ್ಕಿಲ್ಲವೆಂಬಂತೆ ಇಲ್ಲಿ ಸಂಸ್ಕೃತ, ಪ್ರಾಕೃತ ಕೃತಿಗಳು ಅಧಿಕ, ಇದು ಧಾರ್ಮಿಕ ಕೇಂದ್ರವಾಗಿರುವುದೇ ಇದಕ್ಕೆ ಕಾರಣವೆಂದು ತೋರುತ್ತಿದ್ದು, ಧರ್ಮಾಧಿಕಾರಿಗಳ ಮನೋಧರ್ಮವನ್ನೂ ಸೂಚಿಸುತ್ತದೆ. ಇವುಗಳಲ್ಲಿಯೇ ಸಂಸ್ಕೃತ, ಪ್ರಾಕೃತ ಕೃತಿಗಳಿಗೆ ಬರೆದ ಕನ್ನಡ ಟೀಕೆಗಳು ವಿಪುಲವಾಗಿದ್ದು, ಇದು ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡುದರ ನಿದರ್ಶನವಾಗಿದೆ. ಚಾವುಂಡರಾಯ ಪುರಾಣ, ಅಗ್ಗಳನ ಚಂದ್ರಪ್ರಭಪುರಾಣ, ನಯಸೇನನ ಧರ್ಮಾಮೃತ, ಪೊನ್ನನ ಶಾಂತಿಪುರಾಣ, ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣ, ಬ್ರಹ್ಮಶಿವನ ಸಮಯ ಪರೀಕ್ಷೆ, ವೃತ್ತವಿಲಾಸನ ಧರ್ಮ ಪರೀಕ್ಷೆ, ನಾಗರಾಜನ ಪುಣ್ಯಾಸ್ರವ ಕಥಾಕೋಶ, ರತ್ನಾಕರವರ್ಣಿಯ ಭರತೇಶವೈಭವ, ನಾಗಚಂದ್ರನ ಪಂಪರಾಮಾಯಣ, ಅಂಡಯ್ಯನ ಕಬ್ಬಿಗರ ಕಾವ - ಮೊದಲಾದ ಕೃತಿಗಳು ಇಲ್ಲಿವೆ. ಸಂಸ್ಕೃತ ವಾದಿರಾಜಸೂರಿ, ದೇವವರ್ಣಿಗಳ ಯಶೋಧರ ಚರಿತೆಯ ಹಸ್ತಪ್ರತಿಗಳಿವೆಯೇ ಹೊರತು ಜನ್ನನ ಯಶೋಧರ ಚರಿತೆ ಇಲ್ಲ. ನೇಮಿಜಿನೇಶನ ಸಂಗತಿ, ಧರ್ಮಾಮೃತ ಹಲವು ಹತ್ತು ಪ್ರತಿಗಳಲ್ಲಿ ಸಿಗುತ್ತವೆ. ಶಾಕಟಾಯನ, ಕೌಮಾರ ಮೊದಲಾದ ಸಂಸ್ಕೃತ ವ್ಯಾಕರಣ ಗ್ರಂಥಗಳಿವೆ. ಕನ್ನಡದ ಪ್ರಸಿದ್ಧ ವ್ಯಾಕರಣವಾದ ಶಬ್ದಮಣಿದರ್ಪಣ ಇದ್ದಂತಿಲ್ಲ. ಇಲ್ಲಿ ಒಟ್ಟು ೫೮೮ ಪ್ರತಿಗಳಿದ್ದು, ಶ್ರವಣಬೆಳಗೊಳದ ಕೀರ್ತಿಗೆ ತಕ್ಕ

ಸಂಖ್ಯೆಯೂ ಇದಲ್ಲ. ಇಲ್ಲಿ ತಾಳೆಪ್ರತಿಗಳು ನೂರಕ್ಕೆ ೯೫ ರಷ್ಟು, ಕಾಗದ ಪ್ರತಿ ಕಡಿಮೆ. ಬಹಳೆಂದರೆ ೧೪ ನೆಯ ಶತಮಾನದ ತಾಳೆಪ್ರತಿಯೇ ಪ್ರಾಚೀನವಾದುದು. ಇಲ್ಲಿ ಗ್ರಂಥದಾನದಿಂದ ಬಂದುವು, ಸ್ವತಃ ಮಠದವರೇ ಬರೆಯಿಸಿಕೊಂಡವು, ಆಕಸ್ಮಿಕವಾಗಿ ಸ್ವಾಮಿಗಳ ಕೈಗೆ ಬಂದುವು - ಹೀಗೆ ಸಂಗ್ರಹಗೊಂಡ ಹಸ್ತಪ್ರತಿಗಳಿವೆ. ಈ ಕಾರಣಗಳಿಂದಾಗಿ ಶ್ರವಣಬೆಳಗೊಳದಲ್ಲಿಯೇ ಬರೆದುವಲ್ಲದೆ, ದೂರದ ತೋವಿನಕೆರೆ, ಬಿದುರೆ, ಅಮ್ಮಯ್ಯನಭಾವಿ, ತೇರದಾಳಗಳಿಂದ ಬಂದ ಹಸ್ತಪ್ರತಿಗಳೂ ಇಲ್ಲಿವೆ. ಈ ಹಸ್ತಪ್ರತಿಗಳ ಸೂಚಿಯೊಂದು ದೇವಕುಮಾರಶಾಸ್ತ್ರಿ ಅವರಿಂದ ರಚಿತವಾಗಿ, 'ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಸೂಚಿ' ಹೆಸರಿನಿಂದ ಪ್ರಕಟವಾಗಿದೆ (೧೯೮೦).

ಜೈನಹಸ್ತಪ್ರತಿಗಳ ದೃಷ್ಟಿಯಿಂದ ಮೂಡಬಿದಿರೆ ಒಂದು ಅಪರೂಪದ ಊರು. ಮಠ-ಬಸದಿಗಳಲ್ಲಿ, ವ್ಯಕ್ತಿವಶದಲ್ಲಿ ನೂರಾರು ಜೈನಹಸ್ತಪ್ರತಿಗಳಿವೆ. ಇವುಗಳಲ್ಲಿ ಮೂಡಬಿದಿರೆಯ ಜೈನಮಠದ ಹಸ್ತಪ್ರತಿ ಭಾಂಡಾರ ತುಂಬ ಮಹತ್ವದ್ದಾಗಿದೆ. ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಯ ವಿಪುಲ ಗ್ರಂಥಗಳನ್ನು ಹೊಂದಿರುವ ಈ ಮಠದಲ್ಲಿ ಪ್ರಾಚೀನಕಾಲದಿಂದಲೂ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತ ಬರಲಾಗಿದ್ದು, ಈ ಹಿಂದಿನ ಸ್ವಾಮೀಜಿಯವರ ಕಾಲದಲ್ಲಿ ಈ ಸಂಪತ್ತು ವಿಶೇಷ ವರ್ಧಿಸಿತೆಂದು ತಿಳಿದುಬರುತ್ತದೆ. ಪ್ರಕಟಿತ ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥ ಸೂಚಿಯ ಪ್ರಕಾರ ಇಲ್ಲಿ ಸಿದ್ಧಾಂತ ೧೬೪, ಆಧ್ಯಾತ್ಮ ೧೧೯, ಧರ್ಮ ೪೭೮, ಯೋಗಶಾಸ್ತ್ರ ೧೬, ಪ್ರತಿಷ್ಠಾ ೨೪, ವ್ರತವಿಧಾನ ೭೫, ನ್ಯಾಯ ೧೬೦, ವ್ಯಾಕರಣ ೧೧೨, ಕೋಶ ೫೪, ಕಾವ್ಯ ೧೬೧, ನಾಟಕ ೫, ಅಲಂಕಾರ ೩೦, ಛಂದಸ್ಸು ೧೭, ನೀತಿ-ಸುಭಾಷಿತ ೨೪, ಪುರಾಣ ೮೬, ಚರಿತ್ರ ೮೭, ಕಥಾ ೫೫, ಇತಿಹಾಸ ೯, ಆಯುರ್ವೇದ ೧೬, ಜ್ಯೋತಿಷ ೨೧, ಗಣಿತ ೯, ಮಂತ್ರಶಾಸ್ತ್ರ ೧೪, ಲೋಕವಿಜ್ಞಾನ ೨೫, ಶಿಲ್ಪಶಾಸ್ತ್ರ ೪, ಲಕ್ಷಣ ಕ್ರಿಯಾಕಾಂಡ ೬೯, ಸ್ತೋತ್ರ ೧೮೨, ಭಜನ-ಗೀತ ೧೫, ಪ್ರಕೀರ್ಣ ೨೦ - ಹೀಗೆ ಒಟ್ಟು ೨೦೬೯ ಪ್ರತಿಗಳಿವೆ. ಈ ಕೇಂದ್ರಕ್ಕೆ 'ಜೈನಧರ್ಮಶಾಲಾ' ಎಂಬುದು ಪರ್ಯಾಯನಾಮ. ಕೆಲವು ವರ್ಷಗಳ ಹಿಂದೆ ಇಮ್ಮಡಿ ನಾಗವರ್ಮನ ವರ್ಧಮಾನಪುರಾಣ ಈ ಸಂಸ್ಥೆಯಲ್ಲಿ ಲಭ್ಯವಾಗಿದ್ದು, ಬಹುಶಃ ಜೈನಹಸ್ತಪ್ರತಿಭಾಂಡಾರಗಳಲ್ಲಿಯೇ ಇದು ದೊಡ್ಡದೆಂದು ಕಾಣುತ್ತದೆ.

ಮೂಡಬಿದಿರೆಯ ಇನ್ನೊಂದು ಜೈನ ಹಸ್ತಪ್ರತಿಭಾಂಡಾರ "ಶ್ರೀ ವೀರವಾಣೀ ವಿಲಾಸ ಜೈನಸಿದ್ಧಾಂತ ಭವನ". ಇದು ೧೯೩೩ರಲ್ಲಿ ಶ್ರೀ ಲೋಕನಾಥಶಾಸ್ತ್ರಿ ಅವರಿಂದ ಸ್ಥಾಪಿಸಲ್ಪಟ್ಟಿತು. ತಮ್ಮ ವಶದಲ್ಲಿದ್ದ ಹಸ್ತಪ್ರತಿಗಳನ್ನಲ್ಲದೆ, ಅನ್ಯರಿಂದ ಪಡೆದವುಗಳನ್ನೂ ಸೇರಿಸಿ, ಈ ಸಂಖ್ಯೆಯನ್ನು ಶ್ರೀ ಶಾಸ್ತ್ರಿ ಅವರು ಬೆಳೆಸಿದ್ದಾರೆ. ಇಲ್ಲಿ ಸಿದ್ಧಾಂತ ೨೬, ಅಧ್ಯಾತ್ಮ ೧೩, ಧರ್ಮ ೭೮, ಪ್ರತಿಷ್ಠಾ ೧೬, ಪೂಜಾಪಾಠ-ಆರಾಧನಾ-ವ್ರತವಿಧಾನ ೪೩, ನ್ಯಾಯ ೧೩, ವ್ಯಾಕರಣ ೮, ಕಾವ್ಯ ೧೨, ಅಲಂಕಾರ - ಛಂದಸ್ಸು ೨, ನೀತಿಸುಭಾಷಿತ ೪, ಪುರಾಣ ೨೮, ಚರಿತ್ರ ೬೫, ಕಥಾ ೨೯, ಇತಿಹಾಸ ೮, ಆಯುರ್ವೇದ ೨೩, ಜೋತಿಷ ೩೧, ಗಣಿತ ೨, ಮಂತ್ರಶಾಸ್ತ್ರ ೨೩, ಲೋಕ ವಿಜ್ಞಾನ ೩, ಲಕ್ಷಣ ೪, ಕ್ರಿಯಾಕಾಂಡ ೧೭, ಸ್ತೋತ್ರ ೨೩, ಭಜನ-ಗೀತ ೧೩, ಪ್ರಕೀರ್ಣಕ ೧ - ಹೀಗೆ ಒಟ್ಟು ೪೮೭ ಪ್ರತಿಗಳಿವೆಯೆಂದು ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿಯಿಂದ ತಿಳಿದುಬರುತ್ತದೆ.

"ಸಿದ್ಧಾಂತಬಸದಿ" ಪರ್ಯಾಯನಾಮದ ಪಾರ್ಶ್ವಜಿನಬಸಿಯಲ್ಲಿ ಗೊಮ್ಮಟಸಾರ (ಕರ್ಮಕಾಂಡ), ಗೊಮ್ಮಟಸಾರ (ಜೀವಕಾಂಡ), ಗೊಮ್ಮಟಸಾರಾದಿ ಸಂಗ್ರಹ, ತತ್ವಾರ್ಥರಾಜವಾರ್ತಿಕ, ಲಬ್ಧಸಾರ, ಸತ್ತಕಮ್ಮಪಂಜಿಅ, ಸಿದ್ಧಾಂತಾಲಾವ, ಕಾಶಿಕಾ ವೃತ್ತಿವಿವರಣ ಪಂಚಿಕಾ, ಶಾಕಟಾಯನ ಪ್ರಕ್ರಿಯಾಸಂಗ್ರಹ. ಉತ್ತರಪುರಾಣ, ತಿಲೋಯಸಾರ ಗ್ರಂಥಗಳಿವೆ. ಇವುಗಳಿಗೆ ತಿಲಕಪ್ರಾಯವಾಗಿ ಧವಲಾ, ಜಯಧವಲಾ ಮಹಾಧವಲಾ ಹೆಸರಿನ ಅಪೂರ್ವ ಸಿದ್ಧಾಂತಗ್ರಂಥಗಳಿವೆ. ಇಲ್ಲಿ ಪೂಜೆಗೊಳ್ಳುತ್ತಲಿರುವ ಈ ಸಿದ್ಧಾಂತಗ್ರಂಥಗಳು ಕಾರಣವಾಗಿ ಈ ಬಸದಿಗೆ 'ಸದ್ಧಾಂತಬಸದಿ' ಎಂಬ ಹೆಸರು ಬಳಕೆಯಲ್ಲಿದೆ. ಜೈನಮಠದ ಚಾರುಕೀರ್ತಿಸ್ವಾಮೀಜಿಯವರ ಪಟ್ಟಾಧಿಕಾರ ಇಲ್ಲಿ ಜರುಗುವದರಿಂದ 'ಗುರುಬಸದಿ'ಯೆಂದೂ ಇದನ್ನು ಕರೆಯುತ್ತಾರೆ. ಈ ಧವಲಾ ಗ್ರಂಥಗಳನ್ನು ತಾಳೆಗರಿಗಳ ಮೇಲೆ ಬಹುಶಃ ಅರಗಿನ ಮಸಿಯಿಂದ ಬರೆದಿರುವುದು ಒಂದು ಅಪವಾದಾತ್ಮಕ ವಿಶೇಷತೆಯೆಂದೇ ಹೇಳಬೇಕು. ಚಾವುಂಡರಾಯನ ಗುರು ನೇಮಿಚಂದ್ರಸಿದ್ಧಾಂತಿಗಳು "ಇಂತು ಮಹಾಧವಲಸಿದ್ಧಾಂತಮಂ ರಚಿಸಿರ್ದ ಪುಸ್ತಕಂಗಳಂ ರಕ್ಷಿಸಲ್ ಸಿದ್ಧಾಂತಬಸ್ತಿಯಂ ಮಾಡಿಸಿ, ಅಲ್ಲಿ ಸ್ಥಾಪಿಸಿ, ಪೂಜಿಸುತ್ತಂ" ಎಂಬ ದೇವಚಂದ್ರನ ರಾಜಾವಳಿ ಕಥೆಯ ಹೇಳಿಕೆಯಿಂದ ಈ ಗ್ರಂಥಗಳು ೧೧ನೆಯ ಶತಮಾನದಲ್ಲಿ ಬೆಳ್ಗೊಳದಿಂದ ಮೂಡಬಿದರಿಗೆ ಸಾಗಿಸಲ್ಪಟ್ಟವೆಂದು ಊಹಿಸಬಹುದಾಗಿದೆ. ಆದರೆ ವೀರಸೇನಾಚಾರ್ಯರು ಧವಲಾಗ್ರಂಥವನ್ನು ಕರಹಾಡದಲ್ಲಿ ರಚಿಸಿ, ಕೊಲ್ಲಾಪುರದಲ್ಲಿ ಬಸದಿ ಕಟ್ಟಿಸಿ ರಕ್ಷಿಸಿದರೆಂದೂ ಇದಕ್ಕೆ "ಸಿದ್ಧಾಂತಬಸದಿ"ಯೆಂದು ಕರೆಯುತ್ತಿದ್ದರೆಂದೂ ಶ್ರೀ ಕುಂದಣಗಾರ ಅವರು ಹೇಳುತ್ತ, ಅಲ್ಲಿಯ ಮಂಗಳವಾರ ಪೇಟೆಯ ಬಸದಿಯೇ ಸಿದ್ಧಾಂತಬಸದಿಯೆಂದು ತಿಳಿಸುತ್ತಾರೆ. ಮುಂದೆ ಮುಸಲ್ಮಾನರ ದಾಳಿ ಸಂದರ್ಭದಲ್ಲಿ ಧವಲಗ್ರಂಥವನ್ನು ಮೂಡಬಿದರಿಗೆ ಸಾಗಿಸಿರೆಂದು ಅಭಿಪ್ರಾಯ ಪಡುತ್ತಾರೆ. ಸ್ಥಳೀಯ ಜನವದಂತಿಯ ಪ್ರಕಾರ ಈ ಗ್ರಂಥಗಳು ಧಾರವಾಡ ಜಿಲ್ಲೆಯ ಬಂಕಾಪುರದಿಂದ ದೇವತಾ ಪ್ರತಿಮಾ ಸಹಿತ ಮೂಡಬಿದರಿಗೆ ಬಂದವೆಂದು ತಿಳಿದುಬರುತ್ತದೆ. ಅರ್ಧಮಾಗಧಿ–ಸಂಸ್ಕೃತಭಾಷೆಯ ಈ ಕೃತಿಗಳು ಕನ್ನಡ ಲಿಪಿಯಲ್ಲಿವೆ.

'ಧವಲಾ'ಗ್ರಂಥದ ಮೂರು ತಾಳೆಪ್ರತಿಗಳಿದ್ದು, ಕ್ರಮವಾಗಿ ೧೪೧೭, ೬೦೫, ೫೯೨ ಪತ್ರಗಳನ್ನೊಳಗೊಂಡಿವೆ. ಇವುಗಳಲ್ಲಿ ಒಂದು ಪ್ರತಿಯನ್ನು ಗಂಡರಾದಿತ್ಯ ಅರಸನ ಸೇನಾಪತಿ ಮಲ್ಲಿದೇವನು ಬರೆಯಿಸಿ ಸಿದ್ಧಾಂತಮುನಿ ಶ್ರೀ ಕುಲಭೂಷಣರಿಗೆ ಶಾಸ್ತ್ರದಾನವಾಗಿ ಕೊಟ್ಟಿದ್ದಾನೆ. ಇನ್ನೊಂದು ಪ್ರತಿಯ ದಾನಿ ಇತ್ಯಾದಿ ತಿಳಿದುಬರುವುದಿಲ್ಲ. ಮತ್ತೊಂದು ಪ್ರತಿಯನ್ನು ಮಂದಲಿನಾಡ ಭುಜಬಲಿ ಗಂಗ ಪೆರ್ಮಾಡಿಯ ಅತ್ತೆ ದೇಮಿಯಕ್ಕನು ಕೊಪಣತೀರ್ಥದ ಪ್ರಸಿದ್ಧ ದಾನಿ ಜಿನ್ನಪ್ಪನ ಮೂಲಕ ಪ್ರತಿಮಾಡಿಸಿ, ಬನ್ನಿಕೆರೆಯ ಉತ್ತುಂಗ ಜಿನಚೈತ್ಯಾಲಯದ ಸಿದ್ದಾಂತಮುನಿ ಶ್ರೀ ಶುಭಚಂದ್ರದೇವರಿಗೆ ಶ್ರುತಪಂಚಮಿ ವ್ರತಸಂದರ್ಭದಲ್ಲಿ ಶಾಸ್ತ್ರದಾನವಾಗಿ ನೀಡಿದ್ದಾಳೆ. ಇತ್ತೀಚೆ ಈ ಮೂರು ಪ್ರತಿಗಳ ಕಾಗದ ಪ್ರತಿಗಳನ್ನು ಕ್ರಮವಾಗಿ ಮಿರಜದ ಗಣಪತಿಶಾಸ್ತ್ರಿ, ಮೂಡಬಿದರಿಯ ಕಲ್ಲುಬಸದಿ ಶಾಂತಪ್ಪ, ಮೂಡಬಿದರಿಯ ದೇವರಾಜಶೆಟ್ಟಿ ನಕಲುಮಾಡಿದ್ದಾರೆ.

'ಜಯಧವಲಾ' ಗ್ರಂಥದ ಒಂದು ತಾಳೆಪ್ರತಿ ಇದ್ದು, ೫೧೮ ಪತ್ರಗಳಿವೆ. ಚಿಕ್ಕಮಯ್ಯನ ಬಲ್ಲಿಸೆಟ್ಟಿ ಬರೆಯಿಸಿ ಸಿದ್ಧಾಂತಮುನಿ ಪದ್ಮಸೇನನಿಗೆ ಶಾಸ್ತ್ರದಾನ ಮಾಡಿದ್ದಾನೆ. ಲಿಪಿಕಾರ ಭುಜಬಲಿ ಅಣ್ಣ. ಇದರ ಮೂರು ಕಾಗದಪ್ರತಿಗಳನ್ನು ಮಿರಜದ ಗಣಪತಿಶಾಸ್ತ್ರಿ, ಮೂಡಬಿದರಿಯ ಕಲ್ಲು ಬಸದಿ ಶಾಂತಪ್ಪ, ಮೂಡಬಿದರಿಯ ದೇವರಾಜಶೆಟ್ಟಿ ಸಿದ್ಧಪಡಿಸಿದ್ದಾರೆ.

'ಮಹಾಧವಲಾ' (ಮಹಾಬಂಧ)ದ ಒಂದು ತಾಳೆಪ್ರತಿಯಿದ್ದು, ೧೭೬ ಪತ್ರಗಳಿವೆ. ಇದರ ಲಿಪಿಕಾರ ಉದಯಾದಿತ್ಯ. ರಾಜನಾದ ಶಾಂತಿಸೇನನ ಪತ್ನಿ ಮಲ್ಲಿಕಬ್ಬೆದೇವಿ ಬರೆಯಿಸಿ ಪಂಚಮಿವ್ರತ ಸಂದರ್ಭದಲ್ಲಿ ಸಿದ್ಧಾಂತಮುನಿ ಮಾಘನಂದಿಗೆ ಶಾಸ್ತ್ರದಾನ ಮಾಡಿದ್ದಾಳೆ. ಇತ್ತೀಚೆ ಇದರ ಇನ್ನೆರಡು ಕಾಗದ ಪ್ರತಿಗಳನ್ನು ಮೂಡಬಿದರಿಯ ಲೋಕನಾಥಶಾಸ್ತ್ರಿ, ಮೂಡಬಿದರಿಯ ನೇಮಿರಾಜಶೆಟ್ಟಿ ನಕಲು ಮಾಡಿದ್ದಾರೆ. ಸಂರಕ್ಷಣೆಯ ದೃಷ್ಟಿಯಿಂದ ಈ ಮೂರೂ ಕೃತಿಗಳ ಮೂಲಪ್ರತಿಗಳನ್ನು ಲ್ಯಾಮಿನೇಶನ್ ಮಾಡಿಸಿ ಇಡಲಾಗಿದೆ.

ಇದಲ್ಲದೆ ಮೂಡಬಿದರೆಯ ನೇಮಿರಾಜಶೆಟ್ಟಿ, ದೇವರಾಜಶೆಟ್ಟಿ, ಪದ್ಮನಾಭಶಾಸ್ತ್ರಿ, ಶಾಂತಿರಾಜ ಇಂದ್ರ ಹೊಸಬಸದಿ, ಜಿನರಾಜ ಇಂದ್ರ ಬೈಕಣತಿಕಾರಿ ಬಸದಿ, ಅನಂತರಾಜ ಇಂದ್ರ ಪಡುಬಸದಿ, ಚೌಟರ ಧರ್ಮಸಾಮ್ರಾಜ್ಯಯ್ಯ ಅವರ ವಶದಲ್ಲಿ ಕೆಲವು ಹಸ್ತಪ್ರತಿಗಳಿವೆ. ಮೇಲೆ ಹೇಳಿದ ಸಿದ್ಧಾಂತ ಬಸದಿ ಮತ್ತು ಈ ವ್ಯಕ್ತಿಗಳ ಭಂಡಾರ ಸೇರಿ ಸಿದ್ಧಾಂತ ೨೯, ಅಧ್ಯಾತ್ಮ ೧, ನ್ಯಾಯ ೪, ಧರ್ಮ ೧೯, ಯೋಗಶಾಸ್ತ್ರ ೩, ಪ್ರತಿಷ್ಠಾ ೧೦, ಆರಾಧನಾ-ಪೂಜಾಪಾಠ-ವ್ರತವಿಧಾನ ೧೨, ವ್ಯಾಕರಣ ೩, ಕೋಶ ೬, ಕಾವ್ಯ ೨, ಛಂದಸ್ಸು ೧, ನೀತಿ ಸುಭಾಷಿತ ೫, ಪುರಾಣ ೪, ಚರಿತ್ರೆ ೧೪, ಕಥಾ ೫, ಇತಿಹಾಸ ೨; ಆಯುರ್ವೇದ ೨೬, ಜ್ಯೋತಿಷ ೧೫, ಗಣಿತ ೧, ಮಂತ್ರಶಾಸ್ತ್ರ ೫, ಲೋಕವಿಜ್ಞಾನ ೨, ಶಿಲ್ಪ ೧, ಲಕ್ಷಣ-ಸಮೀಕ್ಷಾ-ಪಾಕಶಾಸ್ತ್ರ ೩, ಕ್ರಿಯಾಕಾಂಡ ೩, ಸ್ತೋತ್ರ ೧೯, ಭಜನೆ-ಗೀತ ೬, ಪ್ರಕೀರ್ಣಕ ೩ - ಹೀಗೆ ಒಟ್ಟು ೨೦೪ ಪ್ರತಿಗಳಿವೆಯೆಂದು 'ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥ ಸೂಚಿ' ಕೃತಿಯ 'ಮೂಡಬಿದ್ರಿಕೇ ಅನ್ಯಗ್ರಂಥಭಾಂಡಾರ' ಪ್ರಕರಣದಲ್ಲಿ ಹೇಳಲಾಗಿದೆ.

ಕಾರ್ಕಳ ಜೈನಮಠದಲ್ಲಿ ಹಸ್ತಪ್ರತಿ ಭಾಂಡಾರವಿದ್ದು, ಪ್ರಕಟಿತ 'ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ' ಪ್ರಕಾರ ಸಿದ್ಧಾಂತ ೧೯, ಆಧ್ಯಾತ್ಮ ೧, ಧರ್ಮ ೨೫, ಪ್ರತಿಷ್ಠಾ ೮, ಆರಾಧನಾ-ಪೂಜಾಪಾಠ-ವ್ರತವಿಧಾನ ೯, ನ್ಯಾಯದರ್ಶನ ೪, ವ್ಯಾಕರಣ ೧೦, ಕೋಶ ೮, ಕಾವ್ಯ ೧೮, ಅಲಂಕಾರ ೧, ನೀತಿ-ಸುಭಾಷಿತ ೩, ಪುರಾಣ ೧೦, ಚರಿತ್ರೆ ೨೦, ಕಥಾ ೧೧, ಇತಿಹಾಸ ೩, ಆಯುರ್ವೇದ ೫, ಜ್ಯೋತಿಷ ೫, ಗಣಿತ ೪, ಮಂತ್ರಶಾಸ್ತ್ರ ೧೦, ಲೋಕವಿಜ್ಞಾನ ೯, ಲಕ್ಷಣ-ಸಮೀಕ್ಷಾ-ಪಾಕಶಾಸ್ತ್ರ ೪, ಕ್ರಿಯಾಕಾಂಡ ೧೦, ಸ್ತೋತ್ರ ೧೦, ಭಜನಾಗೀತ ೧೧, ಪ್ರಕೀರ್ಣ ೬- ಹೀಗೆ ಒಟ್ಟು ೨೨೪ ಪ್ರತಿಗಳು ಇಲ್ಲಿವೆ. ಈ ಭಾಂಡಾರದಲ್ಲಿ ಮೈಸೂರಿನ ನೇಮಿಸಾಗರ ವರ್ಣಿಯವರ 'ಲಲಿತನೇಮಿ ಗ್ರಂಥಸಂಗ್ರಹ'ದ ಕೆಲವು ಹಸ್ತಪ್ರತಿಗಳು ಸೇರಿಕೊಂಡಿರಬಹುದು.

ಇದೇ ಪ್ರದೇಶದ ಅಲಿಯೂರು ಗ್ರಾಮದ 'ಆದಿನಾಥ ಗ್ರಂಥಭಾಂಡಾರ'ದಲ್ಲಿಯೂ ಕೆಲವು ಹಸ್ತಪ್ರತಿಗಳಿವೆ. ಧರ್ಮ ೩, ಪ್ರತಿಷ್ಠಾ ೧, ಆರಾಧಾನ-ಪೂಜಾಪಾಠ ೧೧, ಕೋಶ ೧, ಕಾವ್ಯ ೧, ಪುರಾಣ ೧, ಚರಿತ್ರೆ ೩, ಕಥಾ ೨, ಜ್ಯೋತಿಷ್ಯ ೨, ಮಂತ್ರಶಾಸ್ತ್ರ ೧, ಲೋಕವಿಜ್ಞಾನ ೧, ಶಿಲ್ಪಶಾಸ್ತ್ರ ೧, ಸ್ತೋತ್ರ ೩, ಗೀತ-ಭಜನಾ ೩, ಪ್ರಕೀರ್ಣಕಾ ೨ - ಹೀಗೆ ಒಟ್ಟು ೩೬ ಪ್ರತಿಗಳು ಈ ಭಾಂಡಾರದಲ್ಲಿವೆಯೆಂದು 'ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ'ಯಿಂದ ತಿಳಿದುಬರುತ್ತದೆ.

ಈ ವರೆಗೆ ವಿವೇಚಿಸಿದ ಮೂಡಬಿದರೆ ಪ್ರದೇಶದ ಭಾಂಡಾರಗಳಲ್ಲಿ ಅಗ್ಗಳನ ಚಂದ್ರಪ್ರಭ ಪುರಾಣ, ನಾಗಚಂದ್ರನ ಪಂಪರಾಮಾಯಣ, ನಾಗವರ್ಮನ ವರ್ಧಮಾನ ಪುರಾಣ, ಕರ್ಣಪಾರ್ಯನ ನೇಮಿನಾಥಪುರಾಣ, ಗುಣವರ್ಮನ ಪುಷ್ಪದಂತಪುರಾಣ, ಚಾವುಂಡರಾಯನ ಚಾವುಂಡರಾಯ

ಪುರಾಣ, ಜನ್ನನ ಅನಂತನಾಥ ಪುರಾಣ, ದುರ್ಗಸಿಂಹನ ಪಂಚತಂತ್ರ, ನಯಸೇನನ ಧರ್ಮಾಮೃತ, ನಾಗರಾಜನ ಪುಣ್ಯಾಸ್ರವ ಕಥಾ, ನಾಗವರ್ಮನ ಅಭಿಧಾನರತ್ನಮಾಲಾ, ಕರ್ಣಾಟ ಭಾಷಾಭೂಷಣ ಮತ್ತು ಕಾವ್ಯಾವಲೋಕನ, ನಾನಾರ್ಥರತ್ನಾಕರ, ನೇಮಿಚಂದ್ರನ ಅರ್ಧನೇಮಿಪುರಾಣ, ಪಂಪನ ಆದಿಪುರಾಣ, ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣ, ಪೊನ್ನನ ಜಿನಾಕ್ಷರ ಮಾಲೆ, ಬಂಧುವರ್ಮನ ಜೀವಸಂಬೋಧನೆ, ಬ್ರಹ್ಮಶಿವನ ಸಮಯಪರೀಕ್ಷೆ, ರತ್ನಾಕರನ ಭರತೇಶ ವೈಭವ ಮತ್ತು ಶತಕತ್ರಯ, ರನ್ನನ ಅಜಿತ ಪುರಾಣ, ರಾಜಾದಿತ್ಯನ ಗಣಿತವಿಲಾಸ–ಗಣಿತ ಸಂಗ್ರಹ, ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಇತ್ಯಾದಿ ಕನ್ನಡ ಕೃತಿಗಳಿವೆ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಹೊಂಬುಜದ ಜೈನಮಠದಲ್ಲಿ ಧರ್ಮಪರೀಕ್ಷೆ, ಕರ್ಣಪಾರ್ಯನ ನೇಮಿನಾಥಪುರಾಣ, ಪುಣ್ಯಾಸ್ರವ, ಸಾಳ್ವಭಾರತ ಮೊದಲಾದ ಹಸ್ತಪ್ರತಿಗಳಿವೆ. ವರಾಂಗದ ಜೈನಮಠದಲ್ಲಿ ಆದಿಪುರಾಣ, ಚಾವುಂಡರಾಯಪುರಾಣ, ಕರ್ಣಪಾರ್ಯನ ನೇಮಿನಾಥಪುರಾಣ, ಪಾರ್ಶ್ವನ ಪಾರ್ಶ್ವನಾಥಪುರಾಣ, ಮಲ್ಲಿನಾಥ ಪುರಾಣ, ವಡ್ಡಾರಾಧನೆ ಇತ್ಯಾದಿ ಹಸ್ತಪ್ರತಿಗಳಿವೆ.

ಕೊಲ್ಲಾಪುರದ ಲಕ್ಷ್ಮೀಸೇನಭಟ್ಟಾರಕ ಬಸದಿಯಲ್ಲಿ ಕನ್ನಡ–ಸಂಸ್ಕೃತ–ಪ್ರಾಕೃತ ಭಾಷೆಗಳಿಗೆ ಸಂಬಂಧಿಸಿದಂತೆ ಒಟ್ಟು ೬೪೬ ಕಟ್ಟುಗಳಿವೆ (ತಾಳೆಪ್ರತಿ ೩೫೭, ಕಾಗದ ಪ್ರತಿ ೨೮೯). ತಾಳೆಪ್ರತಿ, ಕಾಗದಪ್ರತಿಗಳಲ್ಲಿರುವ ಕನ್ನಡ ಕೃತಿಗಳ ಸಂಖ್ಯೆ–೮೫೧. ಇವುಗಳಲ್ಲಿ ಆದಿಪುರಾಣ, ಚಾವುಂಡರಾಯ ಪುರಾಣ, ಧರ್ಮಾಮೃತ, ವಡ್ಡಾರಾಧನೆ (ಉಪಸರ್ಗಕೇವಲಿಗಳ ಕಥೆ), ಭರತೇಶವೈಭವ, ಪಾರ್ಶ್ವನಾಥಪುರಾಣ, ಜೀವ ಸಂಬೋಧನೆ, ಯಶೋಧರಚರಿತೆ, ಪಂಪರಾಮಾಯಣ, ಲೀಲಾವತಿ, ಸುಕುಮಾರ ಚರಿತೆಯಂಥ ಕೃತಿಗಳಿವೆ. ಈ ವರೆಗೆ ಹೆಸರು ಸಹ ಗೊತ್ತಿರದ ವಜ್ರಭಟ್ಟನ ವೀರಾವಳಿ ಇಲ್ಲಿದೆ. ಕಾವ್ಯಶಾಸ್ತ್ರಗಳಲ್ಲಿ ರನ್ನನಿಘಂಟುವಿನ ಪೂರ್ಣಕೃತಿ, ಶಬ್ದಮಣಿದರ್ಪಣ, ಅಭಿನವನಿಘಂಟು, ಶಬ್ದಾನುಶಾಸನಗಳು ಇಲ್ಲಿವೆ. ಜೈನಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಷಶಾಸ್ತ್ರಗಳ ಸಂಖ್ಯೆ ಗಮನಾರ್ಹವಾಗಿದೆ. ರಯಣಸಾರ, ಗೊಮ್ಮಟಸಾರ, ಸಮಯಸಾರ, ಪಂಚಾಸ್ತಿಕಾಯ ಮೊದಲಾದವುಗಳಿಗೆ ಬರೆದ ಕನ್ನಡ ಟೀಕಾಕೃತಿಗಳೂ ನೋಂಪಿಯ ಕಥೆಗಳೂ ಜೈನ ಹಾಡುಗಳೂ ಸ್ವತಂತ್ರ ಅಧ್ಯಯನದಷ್ಟು ವಿಪುಲವಾಗಿದೆ. ಇಲ್ಲಿಯ ಪ್ರತಿಷ್ಠಾಕಲ್ಪದ ಹಸ್ತಪ್ರತಿಗಳಲ್ಲಿ ಸುಂದರ ವರ್ಣಚಿತ್ರಗಳನ್ನು ಕಾಣಬಹುದು. ಇಲ್ಲಿಯೂ ಶಾಸ್ತ್ರದಾನ, ಕರ್ಮನಿವಾರಣೆ ಮೊದಲಾದ ಉದ್ದೇಶಗಳಿಂದ ಬರೆದು ಒಪ್ಪಿಸಿದ ಪ್ರತಿಗಳಿವೆ. ಮಿಕ್ಕ ಜೈನಕೇಂದ್ರಗಳಿಗಿಂತ ಇಲ್ಲಿ ಅಭ್ಯಾಸಕ್ಕಾಗಿ ಬರೆಯಿಸಿಕೊಂಡ, ಬರೆದುಕೊಂಡ ಜೈನಮಹಿಳೆಯರ ಸಂಖ್ಯೆ ಹೆಚ್ಚು ಕಾಣುತ್ತದೆ. ಸ್ಥಳೀಯ ವ್ಯಕ್ತಿಗಳಲ್ಲದೆ ಉದಗಾವಿ, ಕೌಲಗಿ, ಸಮಡೋಳಿ, ಪೆನುಗೊಂಡೆ, ಶ್ರವಣಬೆಳ್ಗೊಳ, ಸದಲಗಿ, ಸಂಗೀತಪುರ, ಬೋಗೋದಿ, ಹಂಗರಿಕೆ, ಗುಮ್ಮಳಾಪುರ, ರತ್ನಗಿರಿ, ಹಂಗುಳ, ಬೇಲೂರುಗಳ ಭಕ್ತರು ಅರ್ಪಿಸಿದ ಹಸ್ತಪ್ರತಿಗಳಿವೆ. ಚಂದ್ರಸಾಗರವರ್ಣಿ, ತೆರಕಣಾಂಬಿ ಬೊಮ್ಮರಸರಂಥ ಕವಿಗಳೂ ಕೆಲವು ಪ್ರತಿಗಳನ್ನು ಬರೆದುಕೊಟ್ಟಿದ್ದಾರೆ. ಇಲ್ಲಿಯ ಹಸ್ತಪ್ರತಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಬಹಳಷ್ಟು ಪ್ರತಿಗಳಿಗೆ ನಕಲು ಮಾಡಿದ ಮಿತಿಗಳಿವೆ. ಬಹುಶಃ ಶಕವರ್ಷ ೧೪೫೧ ರಲ್ಲಿ ನಕಲು ಮಾಡಿದ ಧರ್ಮಾಮೃತವೇ ಇಲ್ಲಿಯ ಪ್ರಾಚೀನತಮ ಹಸ್ತಪ್ರತಿಯಾಗಿದೆ.

ಒಟ್ಟು ಪ್ರತಿಗಳ ಮೇಲೆ ಕಣ್ಣಾಡಿಸಿದರೆ ಸಾಮಾನ್ಯರು ಓದಲು ಅನುಕೂಲವಾದ ಸ್ತೋತ್ರ, ಹಾಡು, ಮಂತ್ರ, ಸಾಂಗತ್ಯ, ಗದ್ಯ, ಜ್ಯೋತಿಷ, ಅಷ್ಟಕ, ಶತಕ, ಯಕ್ಷಗಾನ, ವ್ಯಾಖ್ಯಾನಗಳದೇ ಸಿಂಹಪಾಲು. ಈ ಭಾಂಡಾರದ ಸೂಚಿಯೊಂದು ದೇವನಾಗರಿ ಲಿಪಿಯಲ್ಲಿ ಬಹಳ ವರ್ಷಗಳ ಹಿಂದೆಯೇ ಪ್ರಕಟವಾಗಿದ್ದಿತು. 'ಇತ್ತೀಚೆ ಕೊಲ್ಲಾಪುರ ಶ್ರೀ ಲಕ್ಷ್ಮೀಸೇನಭಟ್ಟಾರಕ ಜೈನಬಸದಿಯ ಹಸ್ತಪ್ರತಿಸೂಚಿ' ಹೆಸರಿನ ಸೂಚಿಯೊಂದು ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಬೆಳಕಿಗೆ ಬಂದಿದೆ.

ಇಂಥದೇ ಇನ್ನೊಂದು ಕೇಂದ್ರ ಮಹಾರಾಷ್ಟ್ರದ ಬಾಹುಬಲಿ ಆಶ್ರಮ. ಇಲ್ಲಿ ಕನ್ನಡ ಹಸ್ತಪ್ರತಿಗಳಲ್ಲದೆ ಸಂಸ್ಕೃತ, ಪ್ರಾಕೃತ ಕೃತಿಗಳಿಗೆ ಕನ್ನಡ ಟೀಕು ಬರೆದ ಕೃತಿ ಸಂಖ್ಯೆ ಅಧಿಕ–ತ್ರಿಪುರದಹನ ಸಾಂಗತ್ಯ, ವಡ್ಡಾರಾಧನೆ, ನಿಂಬಸಾಮಂತಚರಿತೆ ಮೊದಲಾದ ಹಸ್ತಪ್ರತಿಗಳು ಇಲ್ಲಿವೆ.

ವೀರಶೈವ ಹಸ್ತಪ್ರತಿ ಭಾಂಡಾರಗಳು : ವೀರಶೈವ ಹಸ್ತಪ್ರತಿಭಾಂಡಾರಗಳು ಇವುಗಳಿಗಿಂತ ವಿಪುಲಸಂಖ್ಯೆಯಲ್ಲಿವೆ. ಇದಕ್ಕೆ ಕಾರಣ ಕರ್ನಾಟಕದ ಜೈನರ ಧರ್ಮ ಭಾಷೆ ಪ್ರಾಕೃತ, ಮಾತೃಭಾಷೆ ಕನ್ನಡ. ಬ್ರಾಹ್ಮಣರ ಧರ್ಮಭಾಷೆ ಸಂಸ್ಕೃತ, ಮಾತೃಭಾಷೆ ಕನ್ನಡ. ಆದರೆ ವೀರಶೈವರ ಧರ್ಮಭಾಷೆಯೂ ಕನ್ನಡ, ಮಾತೃಭಾಷೆಯೂ ಕನ್ನಡವಾಗಿರುವುದು. ಹೀಗಾಗಿ ವೀರಶೈವಧರ್ಮ ತನ್ನ ಲೌಕಿಕ, ಧಾರ್ಮಿಕ ಎರಡೂ ಕ್ಷೇತ್ರಗಳ ಅಭಿವ್ಯಕ್ತಿಗಾಗಿ ಕನ್ನಡವನ್ನೇ ಅವಲಂಬಿಸಿತು. ಇದರಿಂದಾಗಿ ಕನ್ನಡ ಕೃತಿಗಳು, ಪ್ರತಿಗಳು ವಿಪುಲ ಪ್ರಮಾಣದಲ್ಲಿ ಹುಟ್ಟಿದವು. ಮೇಲಾಗಿ ಕರ್ನಾಟಕದ ತುಂಬ ವ್ಯಾಪಿಸಿದ ಈ ಜನಾಂಗ ಅಲ್ಲಲ್ಲಿ ಮಠಸಂಸ್ಥೆಯ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂದಿರವುದರಿಂದಲೂ ಸಣ್ಣಮಟ್ಟ ಹಸ್ತಪ್ರತಿಭಾಂಡಾರಗಳು ವೀರಶೈವ ಮಠಗಳಲ್ಲಿ, ಅದರಲ್ಲಿಯೂ ವಿರಕ್ತ ಮಠಗಳಲ್ಲಿ ಬೆಳೆದುಬಂದವು. ಇವುಗಳಲ್ಲಿ ಮುಖ್ಯಭಾಂಡಾರಗಳನ್ನು ಇಲ್ಲಿ ಗಮನಿಸಬಹುದು.

ಚಿತ್ರದುರ್ಗದ ಬೃಹನ್ಮಠಕ್ಕೆ ವೀರಶೈವ ಮಠಪರಂಪರೆಯಲ್ಲಿ ವಿಶಿಷ್ಟಸ್ಥಾನವಿದೆ. ಇದಕ್ಕೆ ತಕ್ಕಂತೆ ವಿಪುಲಸಂಖ್ಯೆಯ ಗ್ರಂಥಗಳನ್ನುಳ್ಳ ಭಾಂಡಾರವನ್ನು ಅದು ಬೆಳೆಸಿಕೊಂಡು ಬಂದಿದೆ. ಇಲ್ಲಿ ಒಟ್ಟು ೭೧೫ ಹಸ್ತಪ್ರತಿ ಕಟ್ಟುಗಳಿವೆ. ಇವುಗಳ ಒಡಲಲ್ಲಿ ಕನ್ನಡ ಭಾಷೆಯ ಪ್ರತಿ ೩೬೦೦, ಸಂಸ್ಕೃತ ಭಾಷೆ ಕನ್ನಡಲಿಪಿಯ ಪ್ರತಿ ೧೦೩೭, ತೆಲುಗುಭಾಷೆ ಕನ್ನಡ ಲಿಪಿಯ ಪ್ರತಿ ೧, ಹಿಂದಿ ಭಾಷೆ ಕನ್ನಡಲಿಪಿಯ ಪ್ರತಿ ೧, ಸಂಸ್ಕೃತಭಾಷೆ ದೇವನಾಗರಿಲಿಪಿಯ ಪ್ರತಿ ೧೨ – ಹೀಗೆ ಒಟ್ಟು ೪೬೬೧ ಪ್ರತಿಗಳು ಅಡಕವಾಗಿವೆ. ರಾಘವಾಂಕನ ಹರಿಶ್ಚಂದ್ರಕಾವ್ಯ, ಸಿದ್ಧರಾಮಚಾರಿತ್ರ, ಮಗ್ಗೆಯ ಮಾಯಿದೇವನ ಕೃತಿಗಳು ಇಲ್ಲವೆಂಬುದನ್ನು ಬಿಟ್ಟರೆ ವಚನಸಾಹಿತ್ಯ, ಸ್ವರವಚನ ಸಾಹಿತ್ಯದಂಥ ಮೌಲಿಕ ವಾಙ್ಮಯ; ಗಿರಿಜಾಕಲ್ಯಾಣ, ಚನ್ನಬಸವಪುರಾಣ, ಬಸವಪುರಾಣ, ಪ್ರಭುಲಿಂಗಲೀಲೆ, ರಾಜಶೇಖರವಿಳಾಸ ಮೊದಲಾದ ವೀರಶೈವ ಮುಖ್ಯ–ಅಮುಖ್ಯಕೃತಿಗಳು ಇಲ್ಲಿ ಕಂಡುಬರುತ್ತವೆ. ಇತ್ತೀಚೆ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬ್ರಹನ್ಮಠದ ಹಸ್ತಪ್ರತಿಸೂಚಿ' ಹೆಸರಿನ ಗ್ರಂಥ ಪ್ರಕಟವಾಗಿದ್ದು, ಸಂಪಾದಕರಾದ ಶ್ರೀ ಎಸ್.ಶಿವಣ್ಣ ಅವರ ಪ್ರಕಾರ ಕವಿಚರಿತೆಯಲ್ಲಿ ಉಕ್ತರಾಗದ ಹೊಸ ಲೇಖಕರು ೬೫ ಜನ, ಕವಿಚರಿತೆಯಲ್ಲಿ ಉಕ್ತರಾಗಿರುವ ಲೇಖಕರ ಹೆಚ್ಚಿನ ಕೃತಿಗಳು ೨೫, ಕವಿಚರಿತೆಯಲ್ಲಿ ಉಕ್ತವಾಗದ ಕೃತಿಗಳು ೮೨–ಎಂದು ತಿಳಿದುಬರುತ್ತದೆ. ಇಲ್ಲಿಯ ಹಸ್ತಪ್ರತಿಗಳ ಆದ್ಯಂತ್ಯದಲ್ಲಿರುವ ಲಿಪಿಕಾರ ಪ್ರಶಸ್ತಿಯಿಂದ ಅನೇಕ ಚಾರಿತ್ರಿಕ ವಿಚಾರಗಳು ಬೆಳಕಿಗೆ ಬರುತ್ತಿರುವದು ವಿಶೇಷ ಸಂಗತಿಯಾಗಿದೆ.

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠದ ಹಸ್ತಪ್ರತಿಭಾಂಡಾರದಲ್ಲಿ ೪೩೩ ಓಲೆಯ ಹಾಗೂ ಕಾಗದದ ಕಟ್ಟುಗಳಿವೆ. ಇವುಗಳಲ್ಲಿ ಅಡಕವಾಗಿರುವ ಕನ್ನಡ ಪ್ರತಿಸಂಖ್ಯೆ ೧೧೪೧. ಸಂಸ್ಕೃತ, ತೆಲುಗು, ಮರಾಠಿ ಹಿಂದೀಭಾಷೆಯ ಆದರೆ ಕನ್ನಡ ಲಿಪಿಯ ಪ್ರತಿ ಸಂಖ್ಯೆ ೨೫೬. ಒಟ್ಟು ಪ್ರತಿ ಸಂಖ್ಯೆ ೧೩೯೭, ನಿಜಗುಣ ಶಿವಯೋಗಿಗಳ ಅನುಭವಸಾರ, ಕೈವಲ್ಯಕಲ್ಪವಲ್ಲರಿ, ಪರಮಾರ್ಥಗೀತೆ, ಪರಮಾರ್ಥಪ್ರಕಾಶಿಕೆ, ಪರಮಾನುಭವ ಬೋಧೆ ವಿವೇಕಚಿಂತಾಮಣಿಗಳಲ್ಲದೆ, ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮಾವಳಿ, ಹರಿಹರನ ಗಿರಿಜಾಕಲ್ಯಾಣ, ಚಾಮರಸನ ಪ್ರಭುಲಿಂಗಲೀಲೆ, ಅದ್ರೀಶಕವಿಯ ಪ್ರೌಢರಾಯನ ಕಾವ್ಯ, ಭೀಮಕವಿಯ ಬಸವಪುರಾಣ, ಮಲ್ಲಣಾರ್ಯನ ಭಾವಚಿಂತಾರತ್ನ, ಷಡಕ್ಷರದೇವನ ಶಬರಶಂಕರ ವಿಳಾಸ ಮೊದಲಾದ ಕಾವ್ಯಗಳು ಬಹು ಪ್ರತಿಯಲ್ಲಿವೆ. ಎಲ್ಲ ಮಠಗಳಂತೆ ಇಲ್ಲಿಯೂ ಕರಣ ಹಸಿಗೆ, ಮಿಶ್ರಾರ್ಪಣ, ಸೃಷ್ಟಿಯ ವಚನ ಪ್ರತಿಗಳೂ ವಚನಸಂಕಲನ ಪ್ರತಿಗಳೂ ಸಹಜವಾಗಿಯೇ ಬಹುಸಂಖ್ಯೆಯಲ್ಲಿವೆ. ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ (ಸಿದ್ಧನಂಜೇಶ), ಸಿದ್ಧೇಶ್ವರ ಪುರಾಣ (ವಿರಕ್ತತೋಂಟದಾರ್ಯ)ಗಳಂಥ ಅಪರೂಪದ ಹಸ್ತಪ್ರತಿಗಳು ಇಲ್ಲಿವೆ. ಹಾಡುಗಳ ದೊಡ್ಡ ಸಂಗ್ರಹ ಇಲ್ಲಿ ಕಂಡುಬರುತ್ತಿದ್ದು, ಅದು ಪ್ರತ್ಯೇಕ ಅಭ್ಯಾಸದ ವಿಷಯವೆನಿಸಿದೆ. ಇತ್ತೀಚೆ ಈ ಭಾಂಡಾರದ ಸೂಚಿಯೊಂದು "ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಹಸ್ತಪ್ರತಿ ಸೂಚಿ" ಹೆಸರಿನಿಂದ (ಸಂಪಾಕರು: ಎಸ್.ಶಿವಣ್ಣ) ಪ್ರಕಟವಾಗಿದೆ. ವೀರಶೈವಮಠಗಳು ಪ್ರಕಟಿಸಿದ ಸೂಚಿಗಳಲ್ಲಿ ಇದು ಮೊದಲಿನದಾಗಿದೆ.

ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರಮಠದ ಹಸ್ತಪ್ರತಿಭಾಂಡಾರದಲ್ಲಿ ತಾಳೆಗರಿ, ಕಾಗದ ಹಸ್ತಪ್ರತಿಗಳಿವೆ. ಭಾಷೆಯ ದೃಷ್ಟಿಯಿಂದ ಕನ್ನಡ ಹೆಚ್ಚು, ಸಂಸ್ಕೃತ ಕಡಿಮೆ. ಒಂದೆರಡು ತೆಲುಗು ಹಸ್ತಪ್ರತಿಗಳೂ ಇಲ್ಲಿವೆ. ಪುರಾಣ, ವಚನ, ಗದ್ಯ, ಪದ್ಯ, ಧರ್ಮಶಾಸ್ತ್ರ, ಸಾಹಿತ್ಯಶಾಸ್ತ್ರ, ಲೋಕೋಪಕಾರಶಾಸ್ತ್ರ, ಯಕ್ಷಗಾನ ಇತ್ಯಾದಿ ರೂಪದ ಕೃತಿಗಳ ಭಾಂಡಾರವಿದು. ಕೆಲವು ಉದ್ಧರಣೆಯ ಕೃತಿಗಳೂ ಇಲ್ಲಿವೆ. ಈ ಭಾಂಡಾರದ ಒಟ್ಟು ಕಟ್ಟುಗಳ ಸಂಖ್ಯೆ ಸುಮಾರು ೨೨೪. 'ಶ್ರೀ ಜಗದ್ಗುರು ಮೂರುಸಾವಿರಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ' ಹೆಸರಿನ ಕೃತಿ ಪ್ರಕಟವಾಗಿದ್ದು, (ಸಂ: ಕೆಳದಿ ಗುಂಡಾಜೋಯಿಸ್) ಈ ಭಾಂಡಾರದ ಒಂದು ಸ್ಥೂಲ ಚಿತ್ರವನ್ನು ಇದು ಒದಗಿಸುತ್ತದೆ.

ನಮ್ಮ ಅನೇಕಜನ ಅರಸರು ಹಸ್ತಪ್ರತಿ ಭಾಂಡಾರಗಳನ್ನು ಅರಮನೆಯಲ್ಲಿ ಬೆಳೆಸಿಕೊಂಡು ಬಂದಿದ್ದರು. ಇವುಗಳಲ್ಲಿ ಮೈಸೂರು ಅರಮನೆ ಭಾಂಡಾರ ಮಾತ್ರ ಈಗಲೂ ಉಳಿದುಬಂದಿದೆ. ಈ ರಾಜರ ಶ್ರೀರಂಗಪಟ್ಟಣದ ಅರಮನೆಯಲ್ಲಿ ಮೊದಲಿನಿಂದಲೂ ಹಸ್ತಪ್ರತಿಗಳನ್ನು ಬೆಳೆಸಿಕೊಂಡು ಬರಲಾಗಿದ್ದಿತು. ಟಿಪ್ಪು ಇಲ್ಲಿಯ ಅನೇಕ ಹಸ್ತಪ್ರತಿಗಳನ್ನು ನಾಶಮಾಡಿದನೆಂದು ಇತಿಹಾಸಕಾರರು ಹೇಳುತ್ತಾರೆ. ೧೮೯೯ ರಲ್ಲಿ ರಾಜಧಾನಿ ಮೈಸೂರಿಗೆ ವರ್ಗಾಯಿಸಲ್ಪಟ್ಟು, ಬಳಿಕ ಬ್ರಿಟಿಷರ ಕೈವಶವಾಯಿತು. ವಿದ್ಯಾವಿನೋದಿಗಳಾಗಿದ್ದ ಮುಮ್ಮಡಿ ಕೃಷ್ಣರಾಜರು ಇಲ್ಲಿಯ ಹಸ್ತಪ್ರತಿಗಳನ್ನು ಬೆಳೆಸಿದರು. ನಾಲ್ಮಡಿ ಕೃಷ್ಣರಾಜ ಒಡೆಯರ ತಂಗಿಯ ಮದುವೆ ಸಂದರ್ಭದಲ್ಲಿ ಅರಮನೆ ಸುಟ್ಟು (೧೮೯೭) ಅಲ್ಲಿದ್ದ ಹಸ್ತಪ್ರತಿ ಭಾಂಡಾರವೂ ಕೆಲಮಟ್ಟಿಗೆ ಬೆಂಕಿ ಪಾಲಾಯಿತು. ಹೀಗಿದ್ದೂ ಇಲ್ಲಿ ಹಸ್ತಪ್ರತಿ ಸಂಗ್ರಹ ಉಳಿದು ಬೆಳೆದುಬಂದಿದೆ. ೧೯೧೮ರ ವೇಳೆಗೆ ೧೬೭೧, ೧೯೫೯-೬೦ ರಲ್ಲಿ ೨೭೨೪ ಹಸ್ತಪ್ರತಿಗಳಿದ್ದವು. ಪಂಪಭಾರತದ ಪೂರ್ಣಪ್ರತಿ ಬಿ.ಎಲ್. ರೈಸ್ ಅವರಿಗೆ ಸಿಕ್ಕಿದ್ದು

ಇಲ್ಲಿಯೇ. ಬಹುಕಾಲದ ಹಿಂದೆ ಇಲ್ಲಿಯ ಹಸ್ತಪ್ರತಿಗಳನ್ನು ಕುರಿತು "ಎ ಕ್ಲಾಸಿಫಾಯ್ಡ ಕೆಟಲಾಗ್ ಆಫ್ ಸಂಸ್ಕೃತ ಆ್ಯಂಡ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಸರಸ್ವತೀ ಭಂಡಾರಮ್ (ಪ್ಯಾಲೇಸ್ ಸಂಸ್ಕೃತ ಲೈಬ್ರರಿ) ಆಫ್. ಎಚ್.ಎಚ್.ಮಹಾರಾಜ ಆಫ್ ಮೈಸೂರು, ಕಲೆಕ್ಸನ್ ಆಫ್ ೧೯೦೦-೧೯೦೫" ಎಂಬ ಸೂಚಿ ಪ್ರಕಟವಾಗಿದೆ.

ಅರಮನೆಯ ವೈಯಕ್ತಿಕ ಭಾಂಡಾರವಲ್ಲದೆ ಅನೇಕ ವ್ಯಕ್ತಿಗಳ ವಶದಲ್ಲಿ ಗಣನೀಯ ಪ್ರಮಾಣದಲ್ಲಿ ಹಸ್ತಪ್ರತಿಗಳು ಸಿಗುತ್ತವೆ. ಬೆಳ್ಗೊಳದ ರಾಜೇಂದ್ರಕುಮಾರ, ಮೂಡಬಿದಿರೆಯ ನೇಮಿರಾಜಶೆಟ್ಟಿ, ದೇವರಾಜಶೆಟ್ಟಿ, ಪದ್ಮನಾಭಶಾಸ್ತ್ರಿ, ಶಾಂತಿರಾಜ ಇಂದ್ರ ಹೊಸಬಸದಿ, ಜಿನರಾಜೇಂದ್ರ ಬೈಕಣತಿ ಬಸದಿ, ಅನಂತರಾಜ ಇಂದ್ರ ಪಡುಬಸದಿ, ಚೌಟರ ಧರ್ಮಸಾಮ್ರಾಜ್ಯಯ್ಯ ಮೊದಲಾದವರ ವಶದಲ್ಲಿ ಹಸ್ತಪ್ರತಿಗಳಿದ್ದುದನ್ನು ಗಮನಿಸಬಹುದು.

ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು :

ಕನ್ನಡ ಸಾಹಿತ್ಯವನ್ನು ಅಜ್ಞಾತಯುಗ, ಜ್ಞಾತಯುಗವೆಂದು ವರ್ಗೀಕರಿಸಬಹುದಾಗಿದೆ. ಇದನ್ನು ಪಂಪಪೂರ್ವಯುಗ, ಪಂಪೋತ್ತರಯುಗವೆಂದೂ ಕರೆಯಬಹುದು. ಅಜ್ಞಾತಯುಗದ ಒಂದು ಕೃತಿಯೂ ಸಿಕ್ಕಿಲ್ಲ. ಆದರೆ ಆ ಹೊತ್ತಿಗಾಗಲೇ ಟೀಕೆ-ವ್ಯಾಖ್ಯಾನಯುಗ ಭಾಷಾಂತರಯುಗಗಳೆಂಬ ಎರಡು ಘಟ್ಟಗಳು ಉರುಳಿ, ಗುಣವರ್ಮ ಮೊದಲಾದವರಿಂದ ಮೂರನೆಯ ಘಟ್ಟದಿಂದ ಸೃಜನಶೀಲಭಾಷಾಂತರಯುಗ - ರೂಪಾಂತರಯುಗ ತೆರೆದುಕೊಂಡಿದ್ದಿತು. ಟೀಕೆ-ವ್ಯಾಖ್ಯಾನಗಳಿಗೆ ಉದಾಹರಣೆಯಾಗಿ ಶ್ಯಾಮಕುಂದಾಚಾರ್ಯ, ತೊಂಬಳೂರಾಚಾರ್ಯರ ಉಭಯಸಿದ್ಧಾಂತ ವ್ಯಾಖ್ಯಾನ, ಅನಾಮಧೇಯನ ತತ್ವಾರ್ಥ ಸೂತ್ರವ್ಯಾಖ್ಯಾನಗಳೆಂಬ ಹೆಸರುಗಳು ಕೇಳಿ ಬರುತ್ತವೆಯೇ ಹೊರತು, ಹಸ್ತಪ್ರತಿಗಳು ಸಿಕ್ಕಿಲ್ಲ. ಆ ಮೇಲಿನ ಭಾಷಾಂತರಯುಗದಲ್ಲಿ ಕನ್ನಮಾರ್ಯನ ಕರ್ಣಾಟಮಾಲತೀ ಮಾಧವ, ಅಸಗನ ಕರ್ಣಾಟಕುಮಾರಸಂಭವಗಳು ಸೃಷ್ಟಿಯಾಗಿದ್ದ ಬಗ್ಗೆ ಸೂಚನೆಗಳಿವೆಯೇ ಹೊರತು ಒಂದೂ ಪ್ರತಿ ಲಭ್ಯವಾಗಿಲ್ಲ. ಹೀಗಾಗಿ ಈ ಎರಡೂ ಘಟ್ಟಗಳ ಅನೇಕ ಟೀಕೆ ವ್ಯಾಖ್ಯಾನಗಳು, ಭಾಷಾಂತರ ಕೃತಿಗಳು ನಾಶವಾಗಿ ಹೋದವೆಂದೇ ಹೇಳಬಹುದು.

ಮೂರನೆಯ ಘಟ್ಟದಲ್ಲಿ ಸೃಜನಶೀಲ ಭಾಷಾಂತರಕ್ಕೆ ಆಗಮಿಕ ಕಾವ್ಯ, ರೂಪಾಂತರಕ್ಕೆ ಲೌಕಿಕ ಕಾವ್ಯಗಳನ್ನು ಬರೆದ ಗುಣವರ್ಮಾದಿಗಳ ಕೃತಿಗಳು ಸಿಕ್ಕಿಲ್ಲವಾದುದರಿಂದ ಈ ಪ್ರಯೋಗದ ಆರಂಭ ದೆಸೆಯ ಹಸ್ತಪ್ರತಿಗಳು ನಾಶವಾದವೆಂದೇ ಹೇಳಬಹುದು. ಆದರೆ ಉತ್ತರಾರ್ಧದ ಪಂಪ-ಪೊನ್ನರ ಕೃತಿಗಳಿಂದಾಗಿ ಹಸ್ತಪ್ರತಿ ಲಭ್ಯತೆಯ ಶ್ರೀಕಾರ ನಮ್ಮಲ್ಲಿ ಪ್ರಾರಂಭವಾಯಿತು. ಇಲ್ಲಿಂದ ಮುಂದೆ ಲಭ್ಯವಾದ ಹಸ್ತಪ್ರತಿ ಕಟ್ಟುಗಳ ಸಂಖ್ಯೆ ಸುಮಾರು ೨೫ ಸಾವಿರ. ಹುಡುಕಿದರೆ ಇನ್ನೂ ೧೫ ಸಾವಿರ ಸಿಗಬಹುದಾಗಿದೆ. ಈ ಸಂಪತ್ತು ಸಾಹಿತ್ಯಕೃತಿ, ಸಾಹಿತ್ಯಶಾಸ್ತ್ರಕೃತಿ, ಸಾಹಿತ್ಯೇತರ ಶಾಸ್ತ್ರಕೃತಿಗಳನ್ನು ಪ್ರತಿನಿಧಿಸುತ್ತದೆ.

ಸಾಹಿತ್ಯಕೃತಿಗಳು ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ಪ್ರಕಾರಗಳಲ್ಲಿ ಮೈದೋರಿವೆ. ಕರ್ಣಾಟಕ ಕಾದಂಬರಿ ಒಂದು ಪ್ರತಿ, ಗದಾಯುದ್ಧ ಒಂದೂವರೆ ಪ್ರತಿ, ಪಂಪಭಾರತ ಎರಡೂವರೆ ಪ್ರತಿಗಳು ಲಭಿಸಿವೆ. ಇಷ್ಟೂ ಲಭಿಸದಿದ್ದರೆ ೧೦ನೆಯ ಶತಮಾನದ ಸುವರ್ಣಯುಗವೇ ಅಜ್ಞಾತವಾಗುತ್ತಿದ್ದಿತು.

ತಮ್ಮ ಶ್ರಮದ ಮೂಲಕ ಇವುಗಳನ್ನು ಉಳಿಸಿಕೊಟ್ಟ ನಮ್ಮ ಲಿಪಿಕಾರರಿಗೆ ಕೃತಜ್ಞತೆ ಹೇಳಲೇಬೇಕು. ಈ ಮಾರ್ಗದಲ್ಲಿ ಹುಟ್ಟಿದ ನಾಗಚಂದ್ರ, ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ರತ್ನಾಕರ, ನಂಜುಂಡ, ಲಕ್ಷ್ಮೀಶರ ಕೃತಿಯ ಪ್ರತಿಗಳು ಕನ್ನಡಿಗರ ಸೃಜನಶೀಲತೆಗೆ ಉದಾಹರಣೆಯಾಗಿ ನಿಂತಿವೆ ಮತ್ತು ಸಾಹಿತ್ಯದ ಪ್ರಸರಣ ಕಾರ್ಯವನ್ನು ಪೂರೈಸಿವೆ. ಈ ಸಂಪತ್ತಿನ ಭಾಗವಾಗಿರುವ ಪುರಾಣ, ಚರಿತ್ರೆ, ಕಾವ್ಯ, ಕಥೆ ಇತ್ಯಾದಿಗಳು ಕನ್ನಡಿಗರ ಮನೋಧರ್ಮ ಮತ್ತು ಕಾವ್ಯಧರ್ಮಗಳನ್ನು ಪ್ರತಿನಿಧಿಸುತ್ತವೆ.

ಇವುಗಳನ್ನು ಬಿಟ್ಟರೆ ಸಾಹಿತ್ಯ ಶಾಸ್ತ್ರಗಳಾದ ಅಲಂಕಾರ ಛಂದಸ್ಸು, ವ್ಯಾಕರಣ, ನಿಘಂಟುಗಳು ತಕ್ಕ ಪ್ರಮಾಣದಲ್ಲಿ ಹುಟ್ಟಿದ್ದು, ಇವೆಲ್ಲ ಸಾಮಾನ್ಯವಾಗಿ ಸಂಸ್ಕೃತ ಸಾಹಿತ್ಯಶಾಸ್ತ್ರಕೃತಿಗಳ ಅನುವಾದವೋ ಅನುಕರಣವೋ ಎನಿಸಿವೆ. ಹೀಗಿದ್ದೂ ಕವಿರಾಜಮಾರ್ಗ, ಶಬ್ದಮಣಿದರ್ಪಣದಂಥ ಕನ್ನಡದ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡ ಕೃತಿಗಳನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ. ರನ್ನ ನಿಘಂಟು ಮೊದಲಾದವು ಅಪರೂಪದ ಕನ್ನಡ ಪದಗಳನ್ನೂ, ಅರ್ಥಗಳನ್ನೂ ಉಳಿಸಿಕೊಡಲು ಪ್ರಯತ್ನಮಾಡಿವೆ.

ಸಾಹಿತ್ಯೇತರಶಾಸ್ತ್ರಗಳಲ್ಲಿ ಧಾರ್ಮಿಕ ಕೃತಿಗಳದೇ ಮೇಲುಗೈ. ಈ ದಿಕ್ಕಿನಲ್ಲಿ ಜೈನ, ವೀರಶೈವ, ಬ್ರಾಹ್ಮಣ ಧರ್ಮಗಳಿಗೆ ಸಂಬಂಧಿಸಿದ ನೂರಾರು ಅಲ್ಲ, ಸಾವಿರಾರು ಕೃತಿಗಳೂ ಅವುಗಳ ಅನೇಕಾನೇಕ ಹಸ್ತಪ್ರತಿಗಳೂ ಹುಟ್ಟಿ, ಹಸ್ತಪ್ರತಿಭಾಂಡಾರ ತುಂಬಿ ತುಳುಕುವಂತೆ ಮಾಡಿವೆ. ವಚನಸಾಹಿತ್ಯವು ಈ ಕ್ಷೇತ್ರದ ಅನರ್ಘ್ಯನಿಧಿಯೆನಿಸಿದೆ. ಇವುಗಳ ಹಸ್ತಪ್ರತಿಗಳೂ ವಿಪುಲಪ್ರಮಾಣದಲ್ಲಿ ಸಿಗುತ್ತವೆ. ದಾಸರ ಕೀರ್ತನೆ, ಸರ್ವಜ್ಞನ ವಚನಗಳು ನೀತಿ ಪ್ರತಿಪಾದಕ ಕೃತಿಗಳಾಗಿವೆ. ಈ ಕೃತಿಗಳನ್ನು ಬಿಟ್ಟರೆ ವೈದ್ಯಶಾಸ್ತ್ರ, (ಬಾಲವೈದ್ಯ, ನರವೈದ್ಯ, ಸ್ತ್ರೀವೈದ್ಯ, ಅಶ್ವವೈದ್ಯ, ಗೋವೈದ್ಯ) ಖಡ್ಗಶಾಸ್ತ್ರ, ಕೃಷಿಶಾಸ್ತ್ರ, ಪಾಕಶಾಸ್ತ್ರ, ಕಾಮಶಾಸ್ತ್ರ, ಶಿಲ್ಪಶಾಸ್ತ್ರ, ಗಣಿತಶಾಸ್ತ್ರ ಮೊದಲಾದ ಶಾಸ್ತ್ರ ಕೃತಿಗಳ ಹಲವು ಹಸ್ತಪ್ರತಿಗಳು ಸಿಗುತ್ತವೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಒಟ್ಟು ನಮ್ಮ ಪ್ರಾಚೀನ ಕೃತಿಗಳು ಒಂದಲ್ಲ ಒಂದು ರೀತಿಯಲ್ಲಿ ಸಂಸ್ಕೃತದ ಪ್ರಭಾವದಲ್ಲಿಯೇ ಬೆಳೆದುಬಂದಿವೆ. ಸಂಸ್ಕೃತಮೂಲ ಅಜ್ಞಾತವಾಗಿರುವ ದುರ್ಗಸಿಂಹನ ಪಂಚತಂತ್ರದಂತಹ ಕೃತಿಗಳಿಗೆ ಭಾರತೀಯ ಮಹತ್ವವಿದೆ. ಇದಲ್ಲದೆ ಸಂಸ್ಕೃತ, ಪ್ರಾಕೃತ ಕೃತಿಗಳಿಗೆ ಬರೆದ ಟೀಕೆ–ವ್ಯಾಖ್ಯಾನಗಳು ಸ್ವತಂತ್ರ ಅಭ್ಯಾಸದಷ್ಟು ಗಣ್ಯವಾಗಿವೆ. ಕನ್ನಡ ಹಸ್ತಪ್ರತಿಗಳಲ್ಲದೆ ಸಂಸ್ಕೃತ ಹಸ್ತಪ್ರತಿಗಳೂ ಗಮನ ಸೆಳೆಯುವ ಸಂಖ್ಯೆಯಲ್ಲಿವೆ. ಮೈಸೂರು ಪ್ರಾಚ್ಯ ಸಂಶೋಧನ ಸಂಸ್ಥೆಯಲ್ಲಿ ೩೦ ಸಾವಿರ ಸಂಸ್ಕೃತ ಕಟ್ಟುಗಳಿರುವುದನ್ನು ಇಲ್ಲಿ ನೆನೆಯಬಹುದು. ಜೈನಮಠಗಳಲ್ಲಿ ಪ್ರಾಕೃತ ಕಟ್ಟುಗಳಿದ್ದು, ಮೂಡಬಿದಿರೆಯಲ್ಲಿಯ ಧವಲಾ, ಜಯಧವಲಾ, ಮಹಾಧವಲಾಗಳಂತೂ ನಮ್ಮ ರಾಷ್ಟ್ರದ ಹೆಮ್ಮೆಯ ಹಸ್ತಪ್ರತಿಗಳಾಗಿವೆ.

ಈ ಹಸ್ತಪ್ರತಿಗಳಲ್ಲಿ ಬಿಡಿಸಲಾದ ಚಿತ್ರಕಲೆಯೂ ಅಪೂರ್ವಸಂಪತ್ತು ಎನಿಸಿದೆ. ಇದಕ್ಕೆ ಮೇಲೆ ಹೇಳಿದ ಧವಲಾಕೃತಿ, ಪ್ರತಿಷ್ಠಾಕಲ್ಪ, ಉದ್ಧರಣೆ, ಶ್ರೀತತ್ವನಿಧಿ ಕೃತಿಗಳನ್ನು ಉದಾಹರಿಸಬಹುದಾಗಿದೆ.

❖❖

೩

❖

ಸಂಗ್ರಹಣ

ಸಂಗ್ರಹ ವಿಧಾನ/ಸಂಗ್ರಹದ ಇತಿಹಾಸ/ಆಧುನಿಕ ಹಸ್ತಪ್ರತಿ ಭಾಂಡಾರಗಳು/ಕನ್ನಡ ಹಸ್ತಪ್ರತಿ ಸೂಚಿಗಳು.

ಕರ್ನಾಟಕದಲ್ಲಿ ೧೦೦೦ ವರ್ಷಗಳಿಂದಲೂ ಹುಟ್ಟುತ್ತ, ಪ್ರಸರಣಗೊಳ್ಳುತ್ತ ಬಂದ ಹಸ್ತಪ್ರತಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿಹೋಗವೆ. ಇವುಗಳನ್ನು "ಅರಕ್ಷಿತ ಹಸ್ತಪ್ರತಿ"ಗಳು ಮತ್ತು "ಸಂಗ್ರಹಿತ ಹಸ್ತಪ್ರತಿ"ಗಳು ಎಂದು ವರ್ಗೀಕರಿಸಬಹುದು. ಯಾವುದೇ ಮನೆಯಲ್ಲಿ ಇಲ್ಲವೆ ಮಠ-ದೇವಾಲಯಗಳಲ್ಲಿ ಬಹುಕಾದಿಂದಲೂ ಬಿಡಿಬಿಡಿ ರೂಪದಲ್ಲಿ ಬಿದ್ದುಕೊಂಡಿರುವುವು ಅರಕ್ಷಿತ ಹಸ್ತಪ್ರತಿಗಳು. ವಾಚನ-ಪ್ರವಚನ-ಅಧ್ಯಯನ ಪ್ರಯೋಜನಾರ್ಥ ಮಠ, ದೇವಾಲಯ, ಅರಮನೆಗಳೆಂಬ ಪ್ರಾಚೀನ ಸಂಸ್ಥೆಗಳಲ್ಲಿ ಬಹಳ ಕಾಲದ ಹಿಂದೆಯೇ ಶೇಖರಿಸಲ್ಪಟ್ಟುವು ಸಂಗ್ರಹಿತ ಹಸ್ತಪ್ರತಿಗಳು. ಅರಕ್ಷಿತ ಹಸ್ತಪ್ರತಿಗಳು ಉಪೇಕ್ಷೆಗೆ ಗುರಿಯಾಗಿದ್ದರೆ, ಸಂಗ್ರಹಿತ ಹಸ್ತಪ್ರತಿಗಳು ಸ್ವಲ್ಪಮಟ್ಟಿಗೆ ಉತ್ತಮಸ್ಥಿತಿಯಲ್ಲಿರುತ್ತವೆ. ಈ ಹಿಂದೆ ನೋಡಿದಂತೆ ರಾಜ್ಯದ ಒಳಹೊರಗೆ ಇರುವ ಈ ಎರಡೂ ಬಗೆಯ ಹಸ್ತಪ್ರತಿಗಳನ್ನೂ ಸಂಗ್ರಹಿಸುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ಏಕೆಂದರೆ ಹಿಂದಿನ ಕಾಲದಲ್ಲಿ ಅಧ್ಯಯನದ ಹಸಿವನ್ನು ಹಿಂಗಿಸಿಕೊಳ್ಳಲು ಹಸ್ತಪ್ರತಿಗಳೇ ಏಕೈಕ ಸಾಧನಗಳಾಗಿದ್ದವು. ಹೀಗಾಗಿ ಅಮುಖ್ಯವೆನಿಸಿದವುಗಳನ್ನೂ, ತಮತಮಗೆ ಮುಖ್ಯವೆನಿಸಿದವುಗಳನ್ನೂ ಅಭ್ಯಾಸಿಗಳು ರಕ್ಷಿಸಿಕೊಳ್ಳುತ್ತಿದ್ದರು. ಇಂದು ಕಾಲಪರಿಸ್ಥಿತಿ ಬದಲಾಗಿದೆ. ಹಸ್ತಪ್ರತಿಗಳು ಎರಡು ದೃಷ್ಟಿಯಿಂದ ಅಲಕ್ಷ್ಯಕ್ಕೆ ವೇಗವಾಗಿ ಗುರಿಯಾಗುತ್ತ ನಡೆದಿವೆ. ೧. ಧಾರ್ಮಿಕ ಮತ್ತು ಲೌಕಿಕ ಕ್ಷೇತ್ರಗಳಲ್ಲಿ ವಿಶೇಷ ಬದಲಾವಣೆ ಇಂದು ಸಂಭವಿಸಿದೆ. ಈ ಹಿಂದೆ ಧರ್ಮ ಬಹು ದೊಡ್ಡ ವ್ಯವಸ್ಥೆಯಾಗಿದ್ದಿತು. ಆಗ ಧಾರ್ಮಿಕ ಕಾವ್ಯಗಳ ರಚನೆ, ರಕ್ಷಣೆಯ ಕಡೆಗೆ ವಿಶೇಷ ಗಮನ ಕೊಡುತ್ತಿದ್ದರು. ಪಂಪಭಾರತದ ಎರಡೂವರೆ ಹಸ್ತಪ್ರತಿ ಸಿಕ್ಕರೆ, ಆದಿಪುರಾಣದ ಹತ್ತರಷ್ಟು ಹಸ್ತಪ್ರತಿ ಸಿಗುವುದು, ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿ ಬರೆಯಿಸಿದುದು ಅಂದಿನ ಧಾರ್ಮಿಕ ಶ್ರದ್ಧೆಗೆ ನಿದರ್ಶನಗಳೆನಿಸಿವೆ. ಆದರೆ ಇಂದು ಧಾರ್ಮಿಕ ಶ್ರದ್ಧೆ ಅಷ್ಟಾಗಿ ಉಳಿದಿಲ್ಲ. ಇದರಿಂದಾಗಿ ಈ ಕ್ಷೇತ್ರದ ಕೃತಿಗಳು ಇಂದು ವಿಪುಲಸಂಖ್ಯೆಯಲ್ಲಿ ಉಪೇಕ್ಷೆಗೆ ಗುರಿಯಾಗುತ್ತಲಿವೆ. ಲೌಕಿಕ ಕೃತಿಗಳಾದ ಸಾಹಿತ್ಯಶಾಸ್ತ್ರ, ಸಾಹಿತ್ಯೇತರ ಶಾಸ್ತ್ರಗಳು ಹೊಸಹೊಸ ಶೋಧ ಕಾರಣವಾಗಿ ವಿಶಿಷ್ಟ ಬೆಳವಣಿಗೆ ಸಾಧಿಸಿವೆ. ವ್ಯಾಕರಣ ಭಾಷಾಶಾಸ್ತ್ರವಾಗಿ, ಕಾವ್ಯಮೀಮಾಂಸೆ ವಿಮರ್ಶೆಯಾಗಿ ಬಿಚ್ಚಿಕೊಂಡಿವೆ. ಆಧುನಿಕ ವೈದ್ಯಶಾಸ್ತ್ರ ಮೊದಲಾದುವೆಲ್ಲ ಈ ಬಗೆಯ ಪ್ರಾಚೀನ ಶಾಸ್ತ್ರಕೃತಿಗಳನ್ನು

ಮೂಲೆಗೆ ತಳ್ಳಿವೆ. ಇದರಿಂದಾಗಿ ಈ ಎರಡೂ ಬಗೆಯ ಹಸ್ತಪ್ರತಿಗಳು ಇಂದಿನವರ ದೃಷ್ಟಿಯಲ್ಲಿ ಅಪ್ರಯೋಜಕವೆನಿಸಹತ್ತಿವೆ. ೨. ಮುದ್ರಿತಗ್ರಂಥ, ಟೇಪರೆಕಾರ್ಡರ್, ವ್ಹಿಡಿಯೋ ಮೊದಲಾದ ಪ್ರಸಾರಮಾಧ್ಯಮಗಳು ಇಂದು ಅಸ್ತಿತ್ವಕ್ಕೆ ಬಂದು, ಹಸ್ತಪ್ರತಿಗಳು ಬಿಚ್ಚಿ ಓದುವ ಗ್ರಂಥಗಳಾಗಿ ಉಳಿದಿಲ್ಲ. ಈ ಪರ್ಯಾಯ ವಾಚನ-ಶ್ರವಣ ಸಾಮಗ್ರಿಯಿಂದಾಗಿ ಹಸ್ತಪ್ರತಿಗಳು ಅಭ್ಯಾಸಿಗಳ ವಶದಲ್ಲಿಯೇ ಉಪೇಕ್ಷೆಗೆ ಗುರಿಯಾಗಿವೆ. ಹೀಗೆ ಬದಲಾದ ಜೀವನವ್ಯಾಪಾರ ಮತ್ತು ಸಂವಹನಮಾಧ್ಯಮ ಕಾರಣವಾಗಿ ಮೂಲೆ ಹಿಡಿದು ಕುಳಿತಿರುವ ಇವು ಖಿಲವಾಗುತ್ತ ನಡೆದಿವೆ. ಈ ಹಿಂದೆ ಸರಸ್ವತೀಪೂಜೆಯ ನೆಪದಲ್ಲಿಯಾದರೂ ಪಂಚಮಿ ಹಬ್ಬದಂದು ಬಿಚ್ಚಿ ಪೂಜೆಗೊಳ್ಳುತ್ತಿದ್ದ ಅವು, ಇಂದು ಅಷ್ಟೂ ಆರೈಕೆ-ಗೌರವ ಪಡೆಯುತ್ತಿಲ್ಲ. ಈ ಕಾರಣದಿಂದಾಗಿ ಉಪೇಕ್ಷೆ-ನಾಶಗಳಿಗೆ ಗುರಿಯಾಗುತ್ತ ನಡೆದಿರುವ ಹಸ್ತಪ್ರತಿಗಳನ್ನು ಬಹು ಬೇಗ ಸಂಗ್ರಹಿಸುವ ಹೊಣೆ ನಮ್ಮ ಮೇಲಿದೆ. ಇಲ್ಲಿ ಈ ಹಸ್ತಪ್ರತಿಗಳನ್ನು ಸಂಗ್ರಹಿಸಿವ ವಿಧಾನ, ಸಂಗ್ರಹಿಸುತ್ತ ಬಂದ ಇತಿಹಾಸ, ಸಂಗ್ರಹಿಸಿದ ಸಂಸ್ಥೆಗಳು ಮತ್ತು ಅವು ಪ್ರಕಟಿಸಿದ ಸೂಚಿಗಳನ್ನು ಕುರಿತು ವಿವೇಚಿಸಬಹುದಾಗಿದೆ.

ಸಂಗ್ರಹವಿಧಾನ :

ಕ್ಷೇತ್ರಕಾರ್ಯವೆಂಬ ಶೈಕ್ಷಣಿಕ ಶಿಸ್ತು ಇಂದು ಅಧ್ಯಯನದ ಬಹುಮುಖ್ಯ ಅಂಗವಾಗಿ ಬೆಳೆಯುತ್ತಲಿದೆ. ಗ್ರಂಥದಲ್ಲಿ ದಾಖಲಿಸಿದುದನ್ನು, ಪ್ರದರ್ಶನಾಲಯದಲ್ಲಿ ಸಂಗ್ರಹಿಸಿದುದನ್ನು ಬಿಟ್ಟು, ಮೂಲ ನೆಲೆಗೇ ಹೋಗಿ ವಸ್ತು-ಭಾಷೆ-ಕ್ರಿಯೆ-ಜ್ಞಾನಗಳಿಗೆ ಸಂಬಂಧಿಸಿದ ವಿಷಯರಾಶಿಯನ್ನು ನೇರವಾಗಿ ಅಭ್ಯಸಿಸುವುದು ಇದರ ಉದ್ದೇಶವಾಗಿದೆ. ಈ ನೆಲೆಯೆನ್ನುವುದು ವಿಷಯದ ಪ್ರಾಮಾಣಿಕ ಕ್ಷೇತ್ರವಾಗಿದ್ದು, ಅಲ್ಲಿ ಅಧ್ಯಯನಕ್ಕೆ ಮೂಲ (original) ಸಾಮಗ್ರಿ ಸಿಗುತ್ತದೆ. ಹೀಗಾಗಿ ಈ ನೆಲೆಯನ್ನು 'ಗೋಡೆ ಕಂಬಗಳಿಲ್ಲದ ಪ್ರಯೋಗಶಾಲೆ'ಯೆಂದು ವಿದ್ವಾಂಸರು ವರ್ಣಿಸಿದ್ದಾರೆ. ಮತ್ತು ಕ್ಷೇತ್ರಕಾರ್ಯವನ್ನು ಕ್ಷೇತ್ರಾಧ್ಯಯನವೆಂದು ಸರಿಯಾಗಿಯೇ ಕರೆದಿದ್ದಾರೆ.


ಕ್ಷೇತ್ರಕಾರ್ಯಗಳೇ ಆಗಿದ್ದರೂ ಪ್ರಾಣಿಶಾಸ್ತ್ರಜ್ಞ ಜೀವಪ್ರಕಾರಗಳನ್ನು ಸಂಗ್ರಹಿಸುವುದಕ್ಕೂ ಭಾಷಾವಿಜ್ಞಾನಿ ಮಾತಿನ ಘಟಕಗಳನ್ನು ಸಂಗ್ರಹಿಸುವುದಕ್ಕೂ ಮನೋವಿಜ್ಞಾನಿ ಮಾನವನ ಆಲೋಚನೆಗಳನ್ನು ಸಂಗ್ರಹಿಸುವುದಕ್ಕೂ ಅಂತರವಿದ್ದು, ಇವರ ಕ್ಷೇತ್ರಕಾರ್ಯಗಳನ್ನು ಕ್ರಮವಾಗಿ ಕಾಯಿಕ-ವಾಚಿಕ-ಮಾನಸಿಕ ಎಂಬ ಮೂರು ಹೆಸರುಗಳಿಂದ ಗುರುತಿಸಬಹುದಾಗಿದೆ. ಈ ಮೂರು ಬಗೆಯ ಕ್ಷೇತ್ರಕಾರ್ಯಗಳ ವಿಧಾನಗಳು ಕ್ರಮವಾಗಿ Collection (ಸಂಗ್ರಹ), Interview (ಸಂದರ್ಶನ), Observation (ನಿರೀಕ್ಷಣೆ) ರೂಪದ್ದಾಗಿರುತ್ತವೆ. ಇವುಗಳಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯವು ಪ್ರಧಾನವಾಗಿ Collection ವರ್ಗಕ್ಕೆ ಸೇರುತ್ತಿದ್ದು, ಗೌಣವಾಗಿ Observation ಮತ್ತು Interviewಗಳನ್ನೂ ಒಳಗೊಳ್ಳುತ್ತದೆ.

ಸಂಶೋಧನಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್‌ಭಾಷೆ Research, Invention, Discovery ಎಂಬ ಪದಗಳನ್ನು ಬಳಸುತ್ತದೆ. ಮರೆಯಲ್ಲಿ ಉಳಿದುಕೊಂಡಿರುವ ಒಂದು ವಸ್ತುವಿನ ಪ್ರಜ್ಞಾಪೂರ್ವಕ ಅಥವಾ ಆಕಸ್ಮಿಕ ಅನ್ವೇಷಣೆ ಮತ್ತು ಅಧ್ಯಯನ Discovery. ಹಸ್ತಪ್ರತಿ ವಿಷಯವಾಗಿ ನಡೆಸುವಕ್ಷೇತ್ರಕಾರ್ಯ Discovery ವರ್ಗಕ್ಕೆ ಸೇರುತ್ತದೆಯಾದರೂ ಅಧ್ಯಯನವನ್ನು ಹೊರತುಪಡಿಸುವುದರಿಂದ ಇದನ್ನು ಸಂಶೋಧನೆಯೆನ್ನುವುದಕ್ಕಿಂತ "ಶೋಧ" ಎನ್ನುವುದೇ ಸರಿ.

ಹೀಗಿದ್ದೂ ಈ ಮೊದಲು ಸಿಗದಿದ್ದ ಕೃತಿಯ ಹಸ್ತಪ್ರತಿ ಹುಡುಕುವಿಕೆಗೆ 'ಶೋಧ' (Discovery) ಪದವನ್ನು, ಈ ಮೊದಲು ಸಿಕ್ಕ ಕೃತಿಯ ಹಸ್ತಪ್ರತಿ ಹುಡುಕುವಿಕೆಗೆ 'ಸಂಗ್ರಹ' (Collection) ಪದವನ್ನು ಬಳಸುವುದು ಲೇಸು. ಆದುದರಿಂದ ಹಸ್ತಪ್ರತಿ ಕ್ಷೇತ್ರಕಾರ್ಯವು 'ಶೋಧ' ಮತ್ತು 'ಸಂಗ್ರಹ'ಗಳ ಸಂಯುಕ್ತಕ್ರಿಯೆಯಾಗಿದೆ.

'ವಸ್ತು'ವಿನ ಶೋಧ ಮತ್ತು ಸಂಗ್ರಹರೂಪದ ಕಾರ್ಯಕ್ಕೆ ಸರ್ವಸಾಮಾನ್ಯ ಸೂತ್ರಗಳಿರುವುದಾದರೂ ಇವು ಆಯಾ ಜ್ಞಾನಶಾಖೆಗಳಿಗೆ ಅನುಗುಣವಾಗಿ ಕೆಲವೊಮ್ಮೆ ಬೇರೆ ಬೇರೆಯಾಗುವುದರಿಂದ 'ಹಸ್ತಪ್ರತಿ ಕ್ಷೇತ್ರಕಾರ್ಯ'ಕ್ಕೆ ಸಂಬಂಧಿಸಿದ ವಿಶಿಷ್ಟ ವಿಧಾನ-ವಿಚಾರಗಳನ್ನು ಇಲ್ಲಿ ಮಂಡಿಸಬಹುದು.

ಕ್ಷೇತ್ರಕಾರ್ಯಕರ್ತ, ಹಸ್ತಪ್ರತಿ ಮತ್ತು ಹಸ್ತಪ್ರತಿಗಳ ಒಡೆಯ-ಈ ಮೂರು ಘಟಕಗಳನ್ನೊಳಗೊಂಡಿದೆ, ಹಸ್ತಪ್ರತಿ ಕ್ಷೇತ್ರಕಾರ್ಯ. ಅದು 'ಒಡೆಯ'ನಿಂದ 'ಹಸ್ತಪ್ರತಿ'ಯನ್ನು 'ಕ್ಷೇತ್ರಕಾರ್ಯಕರ್ತ' ದೊರಕಿಸಿಕೊಳ್ಳುವ ಕ್ರಿಯೆಯಾಗಿದೆ. ಈ ತ್ರಿಕೋನದಲ್ಲಿ 'ಹಸ್ತಪ್ರತಿ' ಶಿರೋಕೇಂದ್ರವಾಗಿದ್ದು, ಅದನ್ನು ಒಂದು ಕೇಂದ್ರದಲ್ಲಿ ನಿಂತು 'ಒಡೆಯ' ಉಳಿಸಿಕೊಳ್ಳಲು, ಇನ್ನೊಂದು ಕೇಂದ್ರದಲ್ಲಿ ನಿಂತು 'ಕ್ಷೇತ್ರಕಾರ್ಯಕರ್ತ' ದೊರಕಿಸಿಕೊಳ್ಳಲು ಪ್ರಯತ್ನ ನಡೆಸುತ್ತಾರೆ.



ಒಡೆಯನನ್ನು ಕ್ಷೇತ್ರಕಾರ್ಯಕರ್ತ ಜಯಿಸುವುದೇ ಈ ಸಂದರ್ಭದ ಕ್ರಿಯಯಾಗಿರುವುದರಿಂದ, ಇಲ್ಲಿಯ ಪ್ರಧಾನಘಟಕ ಕ್ಷೇತ್ರಕಾರ್ಯಕರ್ತನಾಗಿದ್ದಾನೆ. ಈತನಿಗೆ ಹಸ್ತಪ್ರತಿ ಸಂಗ್ರಹದ ೧. ಸೈದ್ಧಾಂತಿಕಜ್ಞಾನ, ೨. ಪ್ರಾಯೋಗಿಕಜ್ಞಾನ, ೩. ತಾಂತ್ರಿಕಜ್ಞಾನಗಳ ಅರ್ಹತೆ ಅವಶ್ಯಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯದ 'ಸೈದ್ಧಾಂತಿಕ ಜ್ಞಾನ' ಎಂಬ ಮಾತು ತುಂಬ ವ್ಯಾಪಕವಾದುದು. ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಶಾಸ್ತ್ರಗಳ ಸಂಲಗ್ನ ಪರಿಜ್ಞಾನವಿದು. ಈ ಉಭಯಶಾಸ್ತ್ರಗಳಿಗೆ ಸಂಬಂಧಿಸಿದ ಹಸ್ತಪ್ರತಿಯ ಸ್ವರೂಪ, ಪ್ರಕಾರ, ಭಾಷೆ, ಅಕ್ಷರ, ಬರವಣಿಗೆಯ ರೀತಿ, ವಿಷಯ ಸಂಪತ್ತು, ಮಹತ್ವ ಇತ್ಯಾದಿಗಳ ತಿಳಿವಳಿಕೆಯಾದ ಇದು, ಕ್ಷೇತ್ರಕಾರ್ಯಕರ್ತನ ಮೂಲಧನ.

ಆದುದರಿಂದ ಕ್ಷೇತ್ರಕಾರ್ಯಕರ್ತ ಗ್ರಂಥಸಂಪಾದನಶಾಸ್ತ್ರ, ಹಸ್ತಪ್ರತಿಶಾಸ್ತ್ರಗಳ ಪರಿಜ್ಞಾನಗಳೆಂಬ ಉಭಯ ಅರ್ಹತೆಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ.

ಈ ಸೈದ್ಧಾಂತಿಕ ಜ್ಞಾನದಷ್ಟೇ ಪ್ರಾಯೋಗಿಕ ಪರಿಜ್ಞಾನವೂ ಕ್ಷೇತ್ರಕಾರ್ಯಕರ್ತನಿಗೆ ಬೇಕು. ದೈಹಿಕ ಶ್ರಮ-ಆರ್ಥಿಕ ತೊಂದರೆಗಳನ್ನೂ ಮೀರಿದ ಆನ್ವಯಿಕ ಪರಿಣತಿಯಿದು. ಇಲ್ಲಿ ಸೈದ್ಧಾಂತಿಕ ಮತ್ತು ಪ್ರಯೋಗಿಕಗಳದು ಜ್ಞಾನ-ಕ್ರಿಯೆಗಳ ಸಂಬಂಧದಂತಿದೆ. ಸೈದ್ಧಾಂತಿಕವಲ್ಲದ ಪ್ರಾಯೋಗಿಕ ಕುರುಡ, ಪ್ರಯೋಗಿಕವಲ್ಲದ ಸೈದ್ಧಾಂತಿಕ ಹೆಳವ. ಆದುದರಿಂದ ಕುರುಡನೂ ಅಲ್ಲದ ಹೇಳವನೂ ಅಲ್ಲದ ವ್ಯಕ್ತಿತ್ವ ಕ್ಷೇತ್ರಕಾರ್ಯಕರ್ತನದಾಗಿದೆ.

ಇತ್ತೀಚಿನ ದಿನಗಳಲ್ಲಿ ಯಾವುದೇ ಕ್ಷೇತ್ರಕಾರ್ಯಕ್ಕೆ ಯಂತ್ರೋಪಕರಣದ ಬಳಕೆ ಅನಿವಾರ್ಯವೆನಿಸಿದೆ. ಹಸ್ತಪ್ರತಿ ಕ್ಷೇತ್ರಕಾರ್ಯಕರ್ತನಿಗೆ ಕ್ಯಾಮರಾ, ಟೇಪರೆಕಾರ್ಡರ್ ಇವುಗಳಿಗಿಂತ ಮೈಕ್ರೊಫಿಲ್ಮ, ಫೋಟೋಸ್ಟ್ಯಾಟ್, ವೀಡಿಯೋ ಯಂತ್ರಗಳನ್ನು ನಿಯಂತ್ರಿಸುವ, ಪ್ರಸಂಗಬಂದರೆ ಸಣ್ಣಪುಟ್ಟ ರಿಪೇರಿ ಮಾಡುವ ತಾಂತ್ರಿಕಜ್ಞಾನ ಇಂದು ಅವಶ್ಯವೆಂದು ಹೇಳಬೇಕು.

ಈ ತ್ರಿವಿಧ ಅರ್ಹತೆಗಳ ಬಲದಿಂದ ಈತನು ನಡೆಸುವ ಕ್ಷೇತ್ರಕಾರ್ಯವು ಪರೋಕ್ಷ ಕ್ಷೇತ್ರಕಾರ್ಯ (Non directive field work) ಮತ್ತು ಪ್ರತ್ಯಕ್ಷ ಕ್ಷೇತ್ರಕಾರ್ಯ (Directive field work) ಎಂದು ಎರಡು ತೆರನಾಗಿದೆ. ಸ್ಥಳವನ್ನು ಪ್ರತ್ಯಕ್ಷ ಸಂದರ್ಶಿಸಿ, ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಪ್ರತ್ಯಕ್ಷ ಕ್ಷೇತ್ರಕಾರ್ಯವಾದರೆ, ಹೀಗೆ ಮಾಡುವ ಬದಲು ಅಂಚೆ ಮೂಲಕ, ಅನ್ಯವ್ಯಕ್ತಿ ಮೂಲಕ ಈ ಕಾರ್ಯವನ್ನು ಕೈಗೂಡಿಸಿಕೊಳ್ಳುವುದು ಪರೋಕ್ಷ ಕ್ಷೇತ್ರಕಾರ್ಯ. ಹಸ್ತಪ್ರತಿ ಒಡೆಯರು ತಿಳಿವಳಿಕೆಯವರಿದ್ದರೆ, ಹಸ್ತಪ್ರತಿಗಳು ಸಾರ್ವಜನಿಕ ಸಂಪತ್ತು ಎಂಬ ಪ್ರಜ್ಞೆಯವರಾಗಿದ್ದರೆ ಅವುಗಳ "ಪರೋಕ್ಷಕ್ಷೇತ್ರಕಾರ್ಯ" ಸಾಧ್ಯವಾಗುತ್ತದೆ. ಆದರೆ ಮೇಲೆ ಹೇಳಿದ ಪ್ರಜ್ಞೆಯ ಅಭಾವದ ಭಾರತೀಯ ಪರಿಸರದಲ್ಲಿ ಇದು ಅಸಾಧ್ಯವೇ ಸರಿ. ಅಲ್ಲದೆ "ಪ್ರತ್ಯಕ್ಷ ಕ್ಷೇತ್ರಕಾರ್ಯ"ದಿಂದ 'ಪಠ್ಯಶೋಧ'ದೊಂದಿಗೆ 'ಪರಿಸರಶೋಧ'ವೂ ಸಾಧ್ಯವಾಗುವುದರಿಂದ ಪರೋಕ್ಷ ಕ್ಷೇತ್ರಕಾರ್ಯಕ್ಕಿಂತ ಪ್ರತ್ಯಕ್ಷ ಕ್ಷೇತ್ರಕಾರ್ಯವೇ ಲೇಸು. ಇದರಿಂದ ಹಸ್ತಪ್ರತಿಶಾಸ್ತ್ರ ಕೇವಲ "ಪ್ರಯೋಗಶಾಲೆ" ಅಥವಾ "ಗ್ರಂಥಾಲಯ"ಗಳಂಥ ಜ್ಞಾನಶಾಖೆಯಾಗಿರದೆ, ಅದು ಪ್ರದೇಶ ಪರ್ಯಟನವನ್ನೂ ಬಯಸುತ್ತದೆಯೆಂದು ಸ್ಪಷ್ಟವಾಗುತ್ತದೆ.

ಪ್ರತ್ಯಕ್ಷ ಕ್ಷೇತ್ರಕಾರ್ಯವು ೧. ಪೂರ್ವಸಿದ್ಧತೆ ೨. ಕ್ಷೇತ್ರಕಾರ್ಯ-ಎಂದು ಎರಡು ಹಂತಗಳನ್ನೊಳಗೊಂಡಿದೆ.

ಪೂರ್ವಸಿದ್ಧತೆಗೆ ಮಾನಸಿಕ ಪೂರ್ವಸಿದ್ಧತೆಯೇ ಮುಖ್ಯ. ಇಲ್ಲದಿದ್ದರೆ ಒಲ್ಲದ ಕುದುರೆಗೆ ನೀರು ಕುಡಿಸುವ ವ್ಯರ್ಥಪ್ರಯತ್ನವಾಗಿಬಿಡುತ್ತದೆ. ಮಾನಸಿಕ ಸಿದ್ಧತೆಯ ತರುವಾಯ ತನ್ನ ಕ್ಷೇತ್ರಕಾರ್ಯ ವಿಷಯ, ಪ್ರದೇಶ ಇವುಗಳಿಗೆ ಸಂಬಂಧಪಟ್ಟ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ತಾನು ಕೈಗೆತ್ತಿಕೊಂಡ ಭಾಷೆ, ವಿಷಯಗಳಲ್ಲಿ ಹುಟ್ಟಿದ ಕೃತಿಗಳ ವಸ್ತು (Subject), ಅವುಗಳ ಪ್ರಕಟಿತ ಅಪ್ರಕಟಿತ ಸ್ಥಿತಿ, ಹಸ್ತಪ್ರತಿ-ಕ್ಯಾಟಲಾಗಗಳ ಸವಿವರ ಅಭ್ಯಾಸ, ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಪ್ರದೇಶದ ಭೌಗೋಲಿಕ ತಿಳಿವಳಿಕೆ, ಮಾರ್ಗವ್ಯವಸ್ಥೆ, ವಾಹನಸೌಕರ್ಯ, ಅಲ್ಲಿಯ ಸ್ನೇಹಿತರ, ಅಧಿಕಾರಿಗಳ, ಪ್ರತಿಷ್ಠಿತರ, ಹಸ್ತಪ್ರತಿ ಒಡೆಯರ ವಿವರ- ಇತ್ಯಾದಿಗಳ ತಿಳಿವಳಿಕೆಯೊಂದಿಗೆ ಪ್ರಯಾಣ ಪ್ರವೃತ್ತನಾಗಬೇಕು.

ಇದಲ್ಲದೆ ಹಸ್ತಪ್ರತಿಗಳು ಪ್ರತಿಷ್ಠಿತರ-ಪಂಡಿತರ ವಂಶಜರಲ್ಲಿ, ದೇವಾಲಯ-ಮಠಗಳಲ್ಲಿ ಸಿಗುವುವೆಂಬುದನ್ನೂ, ಆಯಾ ಮತೀಯರಲ್ಲಿ ಸ್ವಮತೀಯ ಗ್ರಂಥಗಳೇ ಸಾಮಾನ್ಯವಾಗಿ ಲಭಿಸುವವೆಂಬುದನ್ನೂ ಅರಿತಿರಬೇಕು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಜೈನ-ವೀರಶೈವ ವ್ಯಕ್ತಿಗಳಲ್ಲಿ ಕನ್ನಡ ಹಸ್ತಪ್ರತಿ, ಬ್ರಾಹ್ಮಣ ವ್ಯಕ್ತಿಗಳಲ್ಲಿ ಸಂಸ್ಕೃತ ಹಸ್ತಪ್ರತಿ ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ವೀರಶೈವಸಾಹಿತ್ಯ, ರಾಯಚೂರು ಜಿಲ್ಲೆಯಲ್ಲಿ ದಾಸಸಾಹಿತ್ಯ, ಕರಾವಳಿ ಪ್ರದೇಶದಲ್ಲಿ ಭಾಗವತ, ಯಕ್ಷಗಾನ ಹಸ್ತಪ್ರತಿಗಳೇ ವಿಪುಲವಾಗಿ ಸಿಗುತ್ತವೆ. ಇಂಥ ವೈಷಯಿಕ ಮತ್ತು ವ್ಯಾವಹಾರಿಕ ತಿಳಿವಳಿಕೆ ಕ್ಷೇತ್ರಕಾರ್ಯಕರ್ತನಿಗೆ ಇರಬೇಕು.

ಗೊತ್ತಾದ ಸ್ಥಳವನ್ನು ತಲುಪಿ, ಕಾರ್ಯನಿರತನಾಗುವಲ್ಲಿಯೇ ಈತನ ಅಗ್ನಿ ಪರೀಕ್ಷೆ ಆರಂಭವಾಗುವುದು. ಕ್ಷೇತ್ರಕಾರ್ಯವೆಂದರೆ ಒಡೆಯನ ವಶದಲ್ಲಿರುವ ಹಸ್ತಪ್ರತಿಯನ್ನು ಪಡೆಯುವುದೇ ಆಗಿದೆ. ಸಾಮಾನ್ಯವಾಗಿ ಒಡೆಯ ಮತ್ತು ಕ್ಷೇತ್ರಕಾರ್ಯಕರ್ತರು ಪರಸ್ಪರ ಅಪರಿಚಿತರು. ಆದುದರಿಂದ ಕಾರ್ಯಕರ್ತ ತನ್ನ ಸಮಯೋಚಿತ ಮಾತು-ರೀತಿಗಳಿಂದ ಅವನ ಮನಸ್ಸನ್ನು ಗೆಲ್ಲಬೇಕು. ಅವನಿಗೆ ತನ್ನ ಬಗೆಗೆ, ತನ್ನ ಕಾರ್ಯದ ಬಗೆಗೆ, ಹಸ್ತಪ್ರತಿಗಳನ್ನು ಭಾಂಡಾರದಲ್ಲಿ ರಕ್ಷಿಸುವ ಬಗೆಗೆ ವಿಶ್ವಾಸ ಹುಟ್ಟುವಂತೆ ವರ್ತಿಸಬೇಕು. ವೈಯಕ್ತಿಕ ಪ್ರಭಾವ, ಸಾರ್ವಜನಿಕ ಪ್ರಚಾರದಿಂದ ತಕ್ಕ ವಾತಾವರಣವನ್ನು ನಿರ್ಮಿಸಬೇಕು. ಈ ವಾತಾವರಣ ನಿರ್ಮಾಣಕ್ಕಾಗಿ ಹಸ್ತಪ್ರತಿಯ ಮಹತ್ವವನ್ನು ಪ್ರತಿಪಾದಿಸುವ ಉಪನ್ಯಾಸಗಳನ್ನು, ಹಸ್ತಪ್ರತಿಯ ಮಹತ್ವ-ಅವುಗಳ ಸಂರಕ್ಷಣೆಯ ಮಹತ್ವಗಳನ್ನು ಬಿಂಬಿಸುವ ವೀಡಿಯೋ ಪ್ರದರ್ಶನ ಇತ್ಯಾದಿಗಳನ್ನು ಏರ್ಪಾಡು ಮಾಡಬಹುದು.

ಯಾವುದೇ ವಸ್ತುವಿಗೂ ಅದರ ಒಡೆಯನಿಗೂ ಇರುವ ಭೌತಿಕ ಸಂಬಂಧವು ನಿತ್ಯಸಂಪರ್ಕ ಕಾರಣವಾಗಿ ಭಾವನಾತ್ಮಕ ಸಂಬಂಧವಾಗಿ ಬೆಳೆದಿರುತ್ತದೆ; ದೇವರ ಜೊತೆ ಜಗುಲಿಯ ಮೇಲೆ ಪೂಜಿಸುವ ಹಸ್ತಪ್ರತಿಗಳ ವಿಷಯವಾಗಿಯಂತೂ ದೈವೀ ಸಂಬಂಧ ಬೆಳೆದುಕೊಂಡಿರುತ್ತದೆ. ಈಗ ಕ್ಷೇತ್ರಕಾರ್ಯಕರ್ತ ಕ್ರಮೇಣವಾಗಿ ಒಡೆಯನ ದೈವಿಕ, ಭಾವನಾತ್ಮಕ, ಭೌತಿಕ ಸಂಬಂಧಗಳೆಂಬ ಸಂಕೋಲೆಗಳಿಂದ ಹಸ್ತಪ್ರತಿಯನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ಕೆಲವು ಸಲ ಅವರು ತಮ್ಮ ವಶದಲ್ಲಿರುವುದು ಅಸಾಮಾನ್ಯಕೃತಿಯೆಂಬ, ಹಸ್ತಪ್ರತಿಯನ್ನು ಹಸ್ತಾಂತರಿಸುವುದರಿಂದ ತಮಗೆ ಕೇಡೆಂಬ ಭ್ರಮೆಯಲ್ಲಿರುತ್ತಾರೆ. ಕೆಲವರಂತೂ ಹಸ್ತಪ್ರತಿ ಇಟ್ಟುಕೊಳ್ಳುವುದು ಪ್ರತಿಷ್ಠೆಯೆಂದು ಭಾವಿಸಿರುತ್ತಾರೆ. ಕ್ಷೇತ್ರಕಾರ್ಯಕರ್ತ ಮೊದಲು ಒಡೆಯನನ್ನು ಈ ಭ್ರಮೆಗಳಿಂದ ಮುಕ್ತಮಾಡಿ, ಅವನನ್ನು ವಾಸ್ತವ ನೆಲೆಗೆ ತಂದು ನಿಲ್ಲಿಸಬೇಕು. ಆಮೇಲೆ ಹಸ್ತಪ್ರತಿಯನ್ನು ದಾನವಾಗಿಯೋ ಹಣ ಕೊಟ್ಟೋ ಪಡೆಯಬಹುದು. ಹಣಕ್ಕೆ ದೇವರನ್ನೂ ಮಾರುವ ದ್ರವ್ಯಭಕ್ತರ ಇಂದಿನ ಸಮಾಜದಲ್ಲಿ, ಹಸ್ತಪ್ರತಿಗಳ ಖರೀದಿ ೨೦ನೆಯ ಶತಮಾನದ ಪೂರ್ವಾರ್ಧಕ್ಕಿಂತ ಉತ್ತರಾರ್ಧದಲ್ಲಿ ಸರಳ ಕಾರ್ಯವಾಗಿದೆ. ಆದುದರಿಂದ ಹಣದ ಆಸೆ ಆಮಿಷಗಳನ್ನು ಒಡ್ಡಿ ಹಸ್ತಪ್ರತಿಗಳನ್ನು ಖರೀದಿ ಮಾಡುವುದೇ ಇಂದು ಯೋಗ್ಯವಾಗಿ ತೋರುತ್ತದೆ. ಆದರೆ ಈ ವಿಧಾನದಿಂದಾಗಿ ಹಸ್ತಪ್ರತಿ ಒಡೆಯರು ಬಾಯಿಗೆ ಬಂದಷ್ಟು ಹಣ ಕೇಳುವ ಚಟಕ್ಕೆ ಬೀಳದಂತೆ ಎಚ್ಚರವಹಿಸಬೇಕು.

ಯಾವುದೇ ಕೃತಿ ಅಚ್ಚಾಗಿದ್ದರೆ ಅದರ ಹಸ್ತಪ್ರತಿಗೆ ಬದಲು ಅಚ್ಚಿನ ಪ್ರತಿಕಳಿಸಿ ಕೊಡುವ, ಹಸ್ತಾಂತರಿಸಲು ಒಪ್ಪದ ಪಕ್ಷದಲ್ಲಿ ಬೆಲೆಯುಳ್ಳ ಹಸ್ತಪ್ರತಿಯಿದ್ದರೆ ಅದನ್ನು ಪ್ರತಿಮಾಡಿಕೊಂಡು

ಹಿಂದಿರುಗಿಸುವ ಭರವಸೆ ನೀಡಬೇಕು. ಇಷ್ಟಾಗಿಯೂ ಒಪ್ಪದಿದ್ದರೆ ಸ್ನೇಹಿತರಿಂದ, ಪ್ರತಿಷ್ಠಿತರಿಂದ, ಅಧಿಕಾರಿಗಳಿಂದ ಅವನ ಮೇಲೆ ಒತ್ತಾಯ ತರಬೇಕು. ಒಂದು ರೀತಿ ಸಾಮ, ದಾನ, ಭೇದ, ದಂಡ ಕ್ರಮ ಇಲ್ಲಿ ನಡೆಯಬೇಕು. ಮೂಡಬಿದರೆ ಜೈನಮಠದ ಶ್ರುತಭಾಂಡಾರದಿಂದ ಧವಲಾ, ಜಯಧವಲಾ, ಮಹಾಧವಲಾ ಹಸ್ತಪ್ರತಿಗಳನ್ನು ಪಡೆಯಲು ಜೈನವಿದ್ವಾಂಸರು ವಹಿಸಿದ ಶ್ರಮ, ವ್ಯಯಿಸಿದ ಹಣ-ಸಮಯಗಳು ಕ್ಷೇತ್ರಕಾರ್ಯಕರ್ತನಿಗೆ ಆದರ್ಶವಾಗಬೇಕು. ಒಂದು ವೇಳೆ ಹಸ್ತಪ್ರತಿ ಕೈವಶವಾಗುವುದೇ ಅಸಾಧ್ಯವೆನಿಸಿದಾಗ ಅದರ ಟಿಪ್ಪಣಿ ಬರೆದುಕೊಳ್ಳುವ, ಇದಕ್ಕಿಂತ ಮೈಕ್ರೋಫಿಲ್ಮ ಪ್ರತಿ ಮಾಡಿಕೊಳ್ಳುವುದರೊಂದಿಗೆ ಅದರ ಆದ್ಯಂತ್ಯ ಗರಿಗಳ ಫೋಟೋ ತೆಗೆದುಕೊಳ್ಳುವ ಕೆಲಸ ಮಾಡಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯವೆಂದರೆ ಪಠ್ಯವನ್ನು ಸಂಗ್ರಹಿಸುವುದಾಗಿರುವಂತೆ, ಅದರ ಪರಿಸರವನ್ನು ಸಂಗ್ರಹಿಸುವುದೂ ಆಗಿದೆ. ಇವುಗಳನ್ನು 'ಪಠ್ಯಶೋಧ' 'ಪರಸರಶೋಧ' ಎಂದು ಕರೆಯಬಹುದು. ಈವರೆಗೆ ಕೇವಲ ಪಠ್ಯಶೋಧ ಮತ್ತು ಒಡೆಯನ ವಿಳಾಸದ ಧಾಖಲೆಗಳಿಗೆ ಮಾತ್ರ ಮೀಸಲಾಗಿರುವ ಕ್ಷೇತ್ರಕಾರ್ಯ ಇನ್ನು ಮೇಲೆ 'ಪರಿಸರಶೋಧ'ವನ್ನೂ ಮೈಗೂಡಿಸಿಕೊಂಡು ಮುನ್ನಡೆಯಬೇಕಾಗಿದೆ. ಏಕೆಂದರೆ ಯಾವುದೇ ಹಸ್ತಪ್ರತಿ ತನ್ನ ಪರಿಸರದ ಉಪೇಕ್ಷೆಗೆ ಗುರಿಯಾಗಿರಬಹುದು. ಇಲ್ಲವೆ ತನ್ನ ಪರಿಸರದಲ್ಲಿ ತುಂಬ ಪ್ರಭಾವಶಾಲಿಯಾಗಿ ವ್ಯವಹರಿಸುತ್ತಿರಬಹುದು. ಈ ಆವರಣವನ್ನು ಅಂದರೆ ಅದರ ಉಗಮ, ಆಗಮ, ಅದು ಆ ಮನೆತನ-ಆ ಪರಿಸರದೊಂದಿಗೆ ಹೊಂದಿದ ಸಂಬಂಧ, ಗಳಿಸಿದ ಪ್ರತಿಷ್ಠೆ ಇತ್ಯಾದಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಜೈನ ಹಸ್ತಪ್ರತಿಗಳು ಬೆಳ್ಗೊಳದಿಂದ ಬಿಹಾರದ ಆರಾಪಟ್ಟಣಕ್ಕೆ ಮತ್ತು ಜರ್ಮನಿಯ ಸ್ಟ್ರಾಟ್ಸ್‌ಬರ್ಗಕ್ಕೆ ವಲಸೆಹೋದ ಸಂಗತಿಗಳು ನಿಜಕ್ಕೂ ದಾಖಲಾರ್ಹವಾಗಿವೆ. ಹಸ್ತಪ್ರತಿಯನ್ನು ಸ್ನಾನಮಾಡಿಯೇ ಮುಟ್ಟುವ, ವರ್ಷಕ್ಕೊಮ್ಮೆ ಜಾತ್ರೆಯಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಿಚ್ಚಿ ಓದುವ, ಮಳೆ ಬರಲೆಂದು ಐರಾವತ ನೋಂಪಿ, ವಿರಾಟಪರ್ವ, ರೇವಣಸಾಂಗತ್ಯ ಓದಿಸುವ, ಗ್ರಂಥದಿಂದ ರೋಗನಿವಾರಣೆ ಮಾಡುವ, ಜ್ಞಾನಸಿಂಧುವನ್ನು ವೃದ್ಧರಿಗೆ ಮಾತ್ರ ಓದಲು ಹೇಳುವ, ಹಸ್ತಪ್ರತಿಯನ್ನು ಜೋತಿಷ್ಯ ಶಕುನಗ್ರಂಥಗಳಂತೆ ಬಳಸುವ ರೋಮಾಂಚಕ, ಭಾವನಾತ್ಮಕ ಸಂಬಂಧಗಳು ಕೆಲವು ಹಸ್ತಪ್ರತಿಗಳ ಸುತ್ತ ಬೆಳೆದಿರುತ್ತವೆ. ಹಳ್ಳಿಯಿಂದ ದಿಲ್ಲಿಯ ವರೆಗೆ ಪ್ರಚಾರಪಡೆದ ಹಾರನಹಳ್ಳಿ ಕೋಡಿಮಠದ ಗ್ರಂಥ, ಬೀಗ ಬಂಧನದಲ್ಲಿರುವ ಹೊಕ್ಕರಾಣಿ ಗ್ರಾಮದ ವಚನಗ್ರಂಥ 'ಪರಿಸರಶೋಧ'ಕ್ಕೆ ಒಳ್ಳೆಯ ಉದಾಹರಣೆಯಾಗಿವೆ. ಹೀಗೆ ಕೆಲವು ಹಸ್ತಪ್ರತಿ ಇಲ್ಲವೆ ಹಸ್ತಪ್ರತಿ ಭಾಂಡಾರಗಳ ಸುತ್ತ ಇಂಥ ಭಾವಪರಿವೇಷ ಬೆಳೆದಿರುತ್ತದೆ. ಕಾರಣ ಯಾವುದೇ ಹಸ್ತಪ್ರತಿಯನ್ನು ಅದರ ಸುತ್ತ ಹೆಣೆದಿರುವ ಭಾವಕೋಶದೊಂದಿಗೆ ಸಂಗ್ರಹಿಸಬೇಕು.

ಕವಿಯ ಮತ್ತು ಕಥಾನಾಯಕರ ವಂಶಸ್ಥರಲ್ಲಿ ಸಿಗುವ ಹಸ್ತಪ್ರತಿಗೆ ಮಿಕ್ಕೆಡೆಗಳಲ್ಲಿ ಸಿಗುವ ಹಸ್ತಪ್ರತಿಗಿಂತ ವಿಶೇಷ ಮಹತ್ವವಿರುತ್ತದೆ. ಕವಿಯ ಸ್ವಹಸ್ತಾಕ್ಷರ ಪ್ರತಿ ಇದಕ್ಕಿಂತ ಬೆಲೆಯುಳ್ಳುದು. ಮುದ್ದಣ, ಪಂಚಬಾಣರು ಕೈಮುಟ್ಟಿ ಬರೆದ ರಾಮಾಶ್ವಮೇಧ, ಭುಜಬಲಿ ಚರಿತೆಯ ಪ್ರತಿಗಳು ಈ ಸಾಲಿನಲ್ಲಿ ನಿಲ್ಲುತ್ತವೆ. "ಎಲ್ಲಾ ಗ್ರಂಥ ಬಗಲಾಗ ಪ್ರಭುಲಿಂಗ ಲೀಲೆ ತಲೆಮ್ಯಾಗ" ಎನ್ನುತ್ತಿದ್ದ ಮುಸಲ್ಮಾನ ಶಿಶುನಾಳ ಶರೀಫಸಾಹೇಬರು ಸ್ವಹಸ್ತದಿಂದ ಬರೆದ ಪ್ರಭುಲಿಂಗಲೀಲೆ ಹಸ್ತಪ್ರತಿಗೆ

ಇರುವ ಸಾಂಸ್ಕೃತಿಕ ಮಹತ್ವವನ್ನು ಬೇರೆ ಹೇಳಬೇಕಿಲ್ಲ. ಆದುದರಿಂದ ಹಸ್ತಪ್ರತಿಯ ಆತ್ಮಚರಿತ್ರೆ ರೂಪದ ಇಂಥ ಸಂಗತಿಗಳ ಸಂಗ್ರಹದ ಕಡೆಗೂ ಕಾರ್ಯಕರ್ತ ಅವಶ್ಯ ಗಮನ ಕೊಡಬೇಕು. ಕೆಲವೊಮ್ಮೆ ಆ ಹಸ್ತಪ್ರತಿಗಳನ್ನು ಇಟ್ಟ ಸ್ಥಳ, ಕಟ್ಟಲು ಉಪಯೋಗಿಸಿದ ವಸ್ತ್ರ, ಬಳಸಲಾದ ಕ್ರಿಮಿನಿರೋಧಕವಸ್ತು ಇತ್ಯಾದಿಗಳೂ ವಿಶೇಷ ಮಾಹಿತಿ ಒದಗಿಸುವ ಸಂಭವವಿರುತ್ತದೆ. ಸಾಮಾನ್ಯವಾಗಿ ಹಸ್ತಪ್ರತಿಗಳನ್ನು ಕಟ್ಟಲು ಕೆಂಪು ವಸ್ತ್ರವನ್ನು, ಒಳಗೆ ಹಾವಿನ ಪೊರೆಯನ್ನು ಬಳಸುವುದರ ಔಚಿತ್ಯ ಇತ್ಯಾದಿಗಳನ್ನೂ ಲಕ್ಷಿಸಬೇಕು.

ಕೃತಿಯೊಂದನ್ನು 'ಹಸ್ತಪ್ರತಿರೂಪ'ದ ಜೊತೆ, ಪಾರಂಪರಿಕವಾಗಿ 'ಮೌಖಿಕ ರೂಪ'ದಲ್ಲಿಯೂ ಕೆಲವೆಡೆ ಉಳಿಸಿಕೊಂಡು ಬಂದಿರುತ್ತಾರೆ. ಸಾಲೊಟಗಿಯಲ್ಲಿ ಡಂಗುರ ಪದಗಳನ್ನು, ಕೊಡೇಕಲ್ಲದಲ್ಲಿ ಕಾಲಜ್ಞಾನ ವಚನಗಳನ್ನು ವಿಶಿಷ್ಟ ಬಗೆಯಲ್ಲಿ, ವಿಶಿಷ್ಟವಾದ್ಯಗಳೊಂದಿಗೆ ಹಾಡುತ್ತಿದ್ದು, ಇಂಥಲ್ಲಿ ಹಸ್ತಪ್ರತಿ ಸಂಗ್ರಹದೊಂದಿಗೆ ಧ್ವನಿಮುದ್ರಣಕಾರ್ಯವನ್ನೂ ಪೂರೈಸಿಕೊಳ್ಳಬೇಕು. ಕೆಲವೆಡೆ ಹಸ್ತಪ್ರತಿ ಎಂದೋ ಹಾಳಾಗಿ ಕೇವಲ ಅದರ ಪದ್ಯಗಳನ್ನು ಪರಂಪರಾಗತವಾಗಿ ಹಾಡುತ್ತಿರಬಹುದು. ರಾಘವಾಂಕನ ಅನುಪಲಬ್ಧ ಶರಭಚಾರಿತ್ರದ ಬಿಡಿಪದ್ಯಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಾಡುವುದಾಗಿ ತಿಳಿದುಬಂದಿದೆ. ಉಳಿದುನಿಂತ ಈ ಮತ್ತು ಇಂಥ ಸಂಪತ್ತನ್ನು ಕಷ್ಟ ಪಟ್ಟು ರಕ್ಷಿಸಿಕೊಳ್ಳಬೇಕು.

ಅನುಪಲಬ್ಧ ಕೃತಿಗಳ ಹಸ್ತಪ್ರತಿ ಇಲ್ಲವೆ ಅಪರೂಪ ಹಸ್ತಪ್ರತಿಗಳ ಶೋಧಕ್ಕೆ ಕ್ಷೇತ್ರಕಾರ್ಯದಲ್ಲಿ ಬಹುದೊಡ್ಡ ಮಹತ್ವವಿದೆ. ಆದುದರಿಂದ ಕ್ಷೇತ್ರಕಾರ್ಯಕರ್ತ ಅಂಥವುಗಳನ್ನು ನಿರಂತರ ಬೆನ್ನಟ್ಟಿ ನಡೆಯಬೇಕು. ಕವಿರಾಜಮಾರ್ಗ ಹಸ್ತಪ್ರತಿಯ ಸುಳುಹು ಹಿಡಿದು, ಬೀದರ ಜಿಲ್ಲೆಯ ಐನೂಲಿಯಲ್ಲಿ ಅದನ್ನು ಪತ್ತೆ ಹಚ್ಚಲು ನಾನು ೧೦ ವರ್ಷ ನಿರಂತರ ಪ್ರಯತ್ನ ಮಾಡಬೇಕಾಯಿತು. ಧಾರವಾಡ ಪ್ರದೇಶದಲ್ಲಿ 'ಗಂಧಹಸ್ತಿ ಮಹಾಭಾಷ್ಯ' ಹಸ್ತಪ್ರತಿಯಿದೆಯೆಂಬ ವದಂತಿಯನ್ನು ಹಿಂಬಾಲಿಸುವ ಪ್ರಯತ್ನ ಇಂದು ನಡೆಯಬೇಕಾಗಿದೆ.

ಹಸ್ತಪ್ರತಿ ಸಣ್ಣದಿರಲಿ, ದೊಡ್ಡದಿರಲಿ, ಉಪಯುಕ್ತವಿರಲಿ, ನಿರುಪಯುಕ್ತವಿರಲಿ, ಅಲಕ್ಷಿಸದೆ ಅವೆಲ್ಲವನ್ನೂ ಸಂಗ್ರಹಿಸಬೇಕು. ಏಕೆಂದರೆ ಒಂದು ದೃಷ್ಟಿಯಿಂದ ನಿರುಪಯುಕ್ತವೆನಿಸಿದರೂ ಇನ್ನೊಂದು ದೃಷ್ಟಿಯಿಂದ ಅದು ತುಂಬ ಉಪಯುಕ್ತ ವಾಗಿರುತ್ತದೆ. ಆರಾ ಹಸ್ತಪ್ರತಿ ಭಾಂಡಾರದಲ್ಲಿಯ ಆಚಣ್ಣನ ವರ್ಧಮಾನ ಪುರಾಣದ ಗರಿಯ ಮೇಲಿನ ಒಂದು ಕಂದಪದ್ಯ ನಾಗವರ್ಮನ ವರ್ಧಮಾನಪುರಾಣ ಶೋಧನೆಗೆ ಎಂಥ ಬೆಲೆಯುಳ್ಳ ಸೂಚನೆ ನೀಡಿತೆಂಬುದನ್ನು ಇಲ್ಲಿ ನೆನೆಯಬಹುದು.

ಹಸ್ತಪ್ರತಿಯನ್ನು ಅವಲೋಕಿಸುವಲ್ಲಿ ಅವಸರ ಎಷ್ಟೂ ಸಲ್ಲದು. ಇದರಿಂದಾಗಿ ಕೃತಿಗಳು ಕಣ್ತಪ್ಪಿ ಮರೆಯಲ್ಲುಳಿಯಬಹುದು. ಶ್ರೀ ಭುಜಬಲಿಶಾಸ್ತ್ರಿಗಳ ಕಣ್ತಪ್ಪಿಸಿ ಮೂಡಬಿದರೆಯಲ್ಲಿ ಉಳಿದಿದ್ದ ನಾಗವರ್ಮನ ವರ್ಧಮಾನಪುರಾಣ ಶ್ರೀ ಸಣ್ಣಯ್ಯನವರಿಂದ ಬೆಳಕಿಗೆ ಬಂದುದನ್ನು ಇಲ್ಲಿ ನೆನೆಯಬೇಕು. ಹಳಕಟ್ಟಿಯವರು "ವಿಜಾಪೂರ ಜಿಲ್ಲೆಯಲ್ಲಿದ್ದಾಗ ನಾನು ಹೋದ ಗ್ರಾಮಗಳಲ್ಲಿ ಅವುಗಳ (ವಚನಗಳ) ವಿಷಯವಾಗಿ ನಾನು ಶೋಧ ಮಾಡುತ್ತಿದ್ದು, ನನಗೆ ದೊರೆತ ವಚನಗಳಲ್ಲಿ ನನಗೆ ಮಹತ್ವದ್ದೆಂದು ಕಂಡ ವಚನಗಳನ್ನಷ್ಟೇ ನಾನು ಬರೆದುಕೊಳ್ಳುತ್ತ ಬಂದೆನು" ಎಂದೂ,

ಆರ್.ನರಸಿಂಹಾಚಾರ್ ಅವರು"ಹಿಂದೆ ಮದರಾಸ್ ಪ್ರಾಚ್ಯಕೋಶಾಲಯ ಮುಂತಾದ ಸ್ಥಳಗಳಲ್ಲಿ ಪುಸ್ತಕಗಳನ್ನು ಪರಿಶೀಲಿಸಿದಾಗ ಪ್ರಥಮ ಸಂಪುಟಕ್ಕೆ ಬೇಕಾದ ವಿಷಯಗಳನ್ನು ಮಾತ್ರ ವಿಸ್ತಾರವಾಗಿ ಗುರುತು ಹಾಕಿಕೊಂಡು, ಅವಶ್ಯಕತೆ ಬಿದ್ದಾಗ ಪುನಃ ಹೋಗಿ ನೋಡಬಹುದೆಂಬ ಭಾವನೆಯಿಂದ ಮಿಕ್ಕ ವಿಷಯಗಳನ್ನು ಬಹಳ ಸಂಗ್ರಹವಾಗಿ ಗುರುತು ಹಾಕಿದ್ದೆನು. ಮತ್ತೊಂದಾವೃತ್ತಿ ಹೋಗಿ ನೋಡಿದಾಗ ಹಿಂದೆ ನೋಡಿದ್ದ ಪುಸ್ತಕಗಳಲ್ಲಿ ಹಲವು ನನ್ನ ದುರಾದೃಷ್ಟದಿಂದ ಹುಳುಗಳ ಬಾಯಿಗೆ ತುತ್ತಾಗಿ ನಾಶವಾಗಿ ಹೋಗಿದ್ದವು. ಹೀಗೆ ನಷ್ಟವಾದ ಪುಸ್ತಕಗಳ ಪ್ರತ್ಯಂತರಗಳು ಬೇರೆಕಡೆ ಎಷ್ಟು ಹುಡುಕಿದರೂ ದೊರೆಯದೆ ಹೋದುವೆಂದೂ" ಹೇಳಿದ ಮಾತುಗಳಿಂದ ಕ್ಷೇತ್ರಕಾರ್ಯದಲ್ಲಿ ಇವರು ತೋರಿದ ಉದಾಸೀನತೆ ಕಾರಣವಾಗಿ ನಮಗಾದ ನಷ್ಟವನ್ನು ಊಹಿಸಿಕೊಳ್ಳಬಹುದು.

ಸಂಗ್ರಹಿತ ಅಥವಾ ಸಂದರ್ಶಿತ ಹಸ್ತಪ್ರತಿಗಳ ಸರಿಯಾದ ಸವಿವರ ಮಾಹಿತಿ ಬರೆದುಕೊಳ್ಳಲು ಕಾರ್ಯಕರ್ತ ತಪ್ಪಬಾರದು. ಇಲ್ಲದಿದ್ದರೆ ಮುಂದಿನ ಕಾಲಾವಧಿಯಲ್ಲಿ ಸಂಶೋಧಕ ತುಂಬ ತೊಂದರೆಪಡಬೇಕಾಗುತ್ತದೆ. ಶ್ರೀ ಕೆ.ಬಿ.ಪಾಠಕ ಅವರು ನೋಡಿದ್ದ, ಫ್ಲೀಟರೂ ಬಳಸಿದ್ದ "ಉಪಸರ್ಗಕೇವಲಿಗಳ ಕಥೆ" ಶೀರ್ಷಿಕೆಯ ವಡ್ಡಾರಾಧನೆಯ ಹಸ್ತಪ್ರತಿ ಕೊಲ್ಲಾಪೂರ ಲಕ್ಷ್ಮೀಸೇನಭಟ್ಟಾರಕ ಬಸದಿಗೆ ಸೇರಿದುದೆಂಬುದನ್ನು ಪತ್ತೆಹಚ್ಚಲು ಡಾ. ಎ.ಎನ್.ಉಪಾಧ್ಯೆ ಅವರಿಗೆ ಹಲವು ದಶಕಗಳೇ ಬೇಕಾದವು. ಹುಲ್ಲೂರು ಶ್ರೀನಿವಾಸ ಜೋಯಿಸರು ನೋಡಿದ್ದ ಹಂಪೆಯ ಮಹಾಲಿಂಗಸ್ವಾಮಿಯ ಬಾಲರಾಮನ ಸಾಂಗತ್ಯ, ಕೆಂಚಶೆಟ್ಟಿಸುತ ರಾಮಕೃತ ಸಿರುಮನ ಸಾಂಗತ್ಯದ ಏಕೈಕ ಹಸ್ತಪ್ರತಿಗಳು ಸಂಶೋಧಕರು ಜಾಲವೊಡ್ಡಿ ಹುಡುಕಿದರೂ ಅನೇಕವರ್ಷ ಸಿಗಲೇ ಇಲ್ಲ. ಇತ್ತೀಚೆ ಮಾತ್ರ ಲಭ್ಯವಾದವು. ಹಳಕಟ್ಟಿಯವರ "ವಚನಾಶಾಸ್ತ್ರಸಾರ"ದಲ್ಲಿಯ ಎಷ್ಟೋ ವಚನಗಳಿಗೆ ಇದ್ದ ಮೂಲ ಆಕರಗ್ರಂಥಗಳು ಇಂದು ನಮಗೆ ಸಿಗುತ್ತಿಲ್ಲ. "ಮೂವರ್ರಾಯರನೆ ಮಾರುವಂತೆಸೆದಿರ್ಕುಂ" ಎಂಬ ಪದ್ಯವನ್ನೊಳಗೊಂಡ ಗಿರಿಜಾಕಲ್ಯಾಣ ಹಸ್ತಪ್ರತಿಯನ್ನು ಕವಿಚರಿತೆಕಾರರು ಎಲ್ಲಿ ನೋಡಿದ್ದರೆಂಬುದು, ಇದಲ್ಲದೆ ಕವಿಚರಿತೆಯನ್ನು ಬರೆಯುವಲ್ಲಿ ಅವರು ಬಳಸಿದ್ದ ಕೆಲವು ಹಸ್ತಪ್ರತಿಗಳು ಎಲ್ಲಿಯವು ? ಎಂಬುದು, ಇನ್ನೂ ಸಮಸ್ಯೆಯಗಿ ಉಳಿದಿವೆ. ಕ್ಷೇತ್ರಕಾರ್ಯಕರ್ತನು ಈ ಎಲ್ಲ ತಿಳಿವಳಿಕೆಯ ಹಿನ್ನೆಲೆಯಲ್ಲಿ, ತಾನು ಸಂಗ್ರಹಿಸಿದ ಹಸ್ತಪ್ರತಿಗಳ ಗಂಟು ಕಟ್ಟುವ, ಗ್ರಂಥಾಲಯಕ್ಕೆ ರವಾನಿಸುವ ಇತ್ಯಾದಿ ಸಾಮಾನ್ಯವೆನಿಸಬಹುದಾದ ಕೆಲಸಗಳನ್ನೂ ತುಂಬ ಜಾಗರೂಕತೆಯಿಂದ ಮಾಡಬೇಕೆಂದು ಬೇರೆ ಹೇಳಬೇಕಿಲ್ಲ. ಒಡೆಯನ ವಶದಿಂದ ಕ್ಷೇತ್ರಕಾರ್ಯಕರ್ತನಿಗೆ ಹಸ್ತಾಂತರವಾಗಿಯೂ "ಮೂರ್ಖಹಸ್ತೇ ನದಾತವ್ಯಂ" ಎಂದು ಹಸ್ತಪ್ರತಿ ಹಲುಬುವಂತಾಗಬಾರದು.

ಕರ್ನಾಟಕದಲ್ಲಿ ಹಸ್ತಪ್ರತಿಗಳು ಹಾಳಾಗಿ ಹೋದುದೂ ಹೇರಳ, ಉಳಿದು ಬಂದುದೂ ಹೇರಳ. ನಮ್ಮ ನಾಡಿನಲ್ಲಿ ಇವುಗಳ ಪರಿವೀಕ್ಷಣೆ ನೂರು ವರ್ಷಗಳಿಂದ ನಡೆದರೂ ಸರಕಾರವಾಗಲೀ, ವಿಶ್ವವಿದ್ಯಾಲಯದಂಥ ಸಂಸ್ಥೆಗಳಾಗಲೀ ವ್ಯವಸ್ಥಿತವಾಗಿ, ಕ್ರಮವತ್ತಾಗಿ ಈ ಕಾರ್ಯಮಾಡುವ ಗೋಜಿಗೆ ಹೋಗದೆ, ಮನಸ್ಸು ಬಂದಾಗ ಆಗಿಷ್ಟು ಈಗಿಷ್ಟು ಮಾಡಿ ಮುಗಿಸುತ್ತಲಿವೆ. ಹೀಗಾಗಿ ಹಸ್ತಪ್ರತಿಗಳನ್ನು ಮನೆಯಲ್ಲಿ ಮಡಗಿಕೊಳ್ಳುವ ಸಾಮಾನ್ಯರು, ಭಾಂಡಾರದಲ್ಲಿ ರಕ್ಷಿಸಬೇಕಾದ ಅಧಿಕಾರಿಗಳು–ಈ ಇಬ್ಬರಿಂದಲೂ ಹಸ್ತಪ್ರತಿಗಳಿಗೆ ಅನ್ಯಾಯವಾಗುತ್ತಲಿದೆಯೆನ್ನಬೇಕು.

ಸಂಗ್ರಹದ ಇತಿಹಾಸ :

ಕರ್ನಾಟಕದಲ್ಲಿ ಕನ್ನಡ ಹಸ್ತಪ್ರತಿಗಳು, ಇವುಗಳಿಗೆ ಎರಡನೆಯದಾಗಿ ಸಂಸ್ಕೃತ ಹಸ್ತಪ್ರತಿಗಳು ಹೇರಳವಾಗಿವೆ. ಪ್ರಾಕೃತ, ಮರಾಠಿ, ತೆಲುಗು, ತಮಿಳು, ಮಲಯಾಳಿ ಹಸ್ತಪ್ರತಿಗಳು ವಿರಳವಾಗಿವೆ. ಧಾರ್ಮಿಕ ಕೇಂದ್ರಗಳಲ್ಲಿ ಪ್ರತಿಷ್ಠಿತ-ಸಾಹಿತ್ಯಾಭ್ಯಾಸಿಗಳ ಮನೆತನಗಳಲ್ಲಿ ಚದರಿಹೋದ ಇವುಗಳ ಕ್ಷೇತ್ರಕಾರ್ಯ ಕೈಕೊಂಡ ಪ್ರಥಮವ್ಯಕ್ತಿ ಕರ್ನಲ್ ಮೆಕೆಂಝಿ. ಇವನ ಕೆಲಸವನ್ನು ಸಿ.ಪಿ.ಬ್ರೌನ್ ಮೊದಲಾದವರು ಮುಂದುವರಿಸಿದರು. ಮದ್ರಾಸ ಪ್ರಾಚ್ಯ ಸಂಶೋಧನಾಲಯ (೧೮೫೮) ದಲ್ಲಿ ಸಂಗ್ರಹಿಸಲಾದ ಈ ಸಂಪತ್ತಿನ ಕೆಲಭಾಗವನ್ನು ೧೯೬೦ರಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಮೈಸೂರಿನ ರಾಜ್ಯಪುರಾತತ್ವ ಇಲಾಖೆಗಳಿಗೆ ಹಂಚಿಕೊಡಲಯಿತು. ಒಟ್ಟಿನಲ್ಲಿ ನಮ್ಮ ಹಸ್ತಪ್ರತಿಗಳ ಸಂಗ್ರಹಕಾರ್ಯ ಮೊಟ್ಟಮೊದಲು ಮದ್ರಾಸ ನೆಲೆಯಿಂದಲೇ ಆರಂಭವಾಯಿತೆಂದು ತಿಳಿದುಬರುತ್ತದೆ.

ಆಮೇಲೆ ಅಸ್ತಿತ್ವಕ್ಕೆ ಬಂದ ಮೈಸೂರಿನ ಪುರಾತತ್ವ ಇಲಾಖೆ (೧೮೮೪), ಮುಖ್ಯಸ್ಥರಾದ ಬಿ.ಎಲ್.ರೈಸ್ ಅವರ ಮೂಲಕ ಹಸ್ತಪ್ರತಿ ಸಂಗ್ರಹಕಾರ್ಯವನ್ನೂ ಪ್ರಾರಂಭಿಸಿತು. ೧೮೯೧ರಲ್ಲಿ ಇದರಿಂದ ಹಸ್ತಪ್ರತಿ ಭಾಂಡಾರವೇ ಬೇರೆಯಾಗಿ "ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ" ಹೆಸರು ಹೊತ್ತು, ಅನೇಕ ಸಂಸ್ಕೃತ, ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿತು. ೧೯೬೦ರಲ್ಲಿ ಇಲ್ಲಿಯ ಕನ್ನಡ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲಾಯಿತು.

ಮೂರನೆಯ ಘಟ್ಟದಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯ ಆರಂಭವಾದುದು ಉತ್ತರ ಕರ್ನಾಟಕದಲ್ಲಿ. ಈ ಕಾರ್ಯವನ್ನು ನೇರವಾಗಿ ಕೈಗೆತ್ತಿಕೊಂಡ ಪ್ರಥಮ ಶ್ರೇಯಸ್ಸು ೧೯೩೯ರಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಶೋಧನ ಸಂಸ್ಥೆಗೆ ಸಲ್ಲುತ್ತದೆ. ಇದೇ ಸಮಯದಲ್ಲಿ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿತಾದರೂ ಈಗ ಅಲ್ಲಿ ಒಂದೂ ಪ್ರತಿ ಉಳಿದಿಲ್ಲ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿಯೂ ಈ ಕಾಲದಲ್ಲಿ ಕೆಲವು ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟವು. ೧೯೭೦ರಲ್ಲಿ ಡಾ. ಆರ್.ಸಿ.ಹರೇಮಠ ಅವರ ನೇತೃತ್ವದಲ್ಲಿ ಕನ್ನಡ ಅಧ್ಯಯನಪೀಠ ಕೈಗೆತ್ತಿಕೊಂಡ "ಸಮಗ್ರ ವಚನವಾಙ್ಮಯ ಸಂಗ್ರಹ, ಸಂಸ್ಕರಣ ಮತ್ತು ಪ್ರಕಟಣ ಯೋಜನೆ"ಯ ಅಂಗವಾಗಿ ಅಲ್ಲಿ ಹಸ್ತಪ್ರತಿ ಸಂಗ್ರಹಶಾಖೆ ಅಸ್ತಿತ್ವಕ್ಕೆ ಬಂದಿತು. ಇದರಲ್ಲಿ ಡಾ. ಹಳಕಟ್ಟಿಯವರು ಸಂಗ್ರಹಿಸಿದ್ದ ೧೦೦೦೦ ಹಸ್ತಪ್ರತಿಗಳೂ ಸೇರಿವೆಯೆಂಬುದನ್ನು ಗಮನಿಸಬೇಕು. ಈ ಘಟ್ಟದಲ್ಲಿ ಬಾದಾಮಿ ತಾಲೂಕಿನ ಶಿವಯೋಗ ಮಂದಿರ, ಬಾಗಿಲುಕೋಟೆಯ ಉಮಾಪತಿಶಾಸ್ತ್ರಿಗಳಿಂದ ಅನೇಕ ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟವು.

ನಾಲ್ಕನೆಯ ಹಂತದಲ್ಲಿ ಬೆಂಗಳೂರು ಪ್ರದೇಶದಲ್ಲಿ ಈ ಚಟುವಟಿಕೆ ಕಾಣಿಸಿಕೊಂಡಿತು. ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ. ಪ್ರತಿಷ್ಠಾನಗಳ ಪ್ರಯತ್ನವನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ಈ ಕಾರ್ಯವನ್ನು ಐದನೆಯ ಹಂತವೆಂದು ಗುರುತಿಸಬಹುದು. ಇದೇ ಸುಮಾರಿಗೆ ಮಂಗಳೂರು ವಿಶ್ವವಿದ್ಯಾಲಯ. ಧರ್ಮಸ್ಥಳದ

ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನಗಳು ಹಸ್ತಪ್ರತಿ ಸಂಗ್ರಹದತ್ತ ಆಸಕ್ತಿವಹಿಸಿವೆ. ಹೀಗೆ ಒಳನಾಡಿನಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯದಲ್ಲಿ ೫ ಹಂತಗಳು ಕಂಡುಬರುತ್ತಿದ್ದು, ಬೆಂಗಳೂರಿನ ಸಿ.ಮಹಾದೇವಪ್ಪ, ತಿಪಟೂರಿನ ಎಂ.ಎಸ್.ಬಸವರಾಜಯ್ಯ, ಮೈಸೂರಿನ ಪಿ.ಎಂ.ಗಿರಿರಾಜು ಮೊದಲಾದವರೂ ತಕ್ಕಮಟ್ಟಿಗೆ ಹಸ್ತಪ್ರತಿಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ. ಇದು ನಮ್ಮ ಹಸ್ತಪ್ರತಿಶೋಧದ ಆಧುನಿಕ ಇತಿಹಾಸ.

ಇವುಗಳಲ್ಲದೆ ಈ ಹಿಂದೆ ವಿವರಿಸಿದ ಒಳನಾಡಿನ ಧಾರ್ಮಿಕ ಕೇಂದ್ರಗಳಾದ ಶ್ರವಣಬೆಳ್ಗೊಳ, ಮೂಡಬಿದರೆ, ಹುಮ್ಮಚ, ವರಾಂಗ, ಕಾರ್ಕಳ, ಹೊಸಪೇಟೆಯ ಕೊಟ್ಟೂರುಸ್ವಾಮಿಮಠ, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಚಿತ್ರದುರ್ಗದ ಬೃಹನ್ಮಠ, ಸಿರಿಗೆರೆಯ ಮಠ ಇತ್ಯಾದಿ ಧಾರ್ಮಿಕ ಸಂಸ್ಥೆಗಳಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಹಸ್ತಪ್ರತಿ ಭಾಂಡಾರಗಳಿವೆ. ಹೊರನಾಡಿನಲ್ಲಿ ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಜೈನಮಠ, ಕಾರಾಂಜಾ, ಬಾಹುಬಲಿ ಕ್ಷೇತ್ರ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ, ಬಿಹಾರದ ಆರಾಪಟ್ಟಣ ಮೊದಲಾದವುಗಳಲ್ಲಿ ಬೆಳೆದುಬಂದ ಭಾಂಡಾರಗಳಿವೆ. ಇವೆಲ್ಲ ಕೂಡಿಸಿದರೆ ಒಟ್ಟು ಕಟ್ಟುಗಳ ಸಂಖ್ಯೆ ೨೫ ಸಾವಿರವನ್ನು ಸಮೀಪಿಸುತ್ತದೆ. ಹುಡುಕಿದರೆ ಇನ್ನೂ ೧೫ ಸಾವಿರ ಕಟ್ಟುಗಳು ಸಿಗಬಹುದು. ಇಷ್ಟು ಹಿನ್ನೆಲೆಯಲ್ಲಿ ಆಧುನಿಕ ಹಸ್ತಪ್ರತಿಭಾಂಡಾರಗಳನ್ನು ಕುರಿತು ಹೀಗೆ ವಿವರಿಸಬಹುದು.

ಆಧುನಿಕ ಹಸ್ತಪ್ರತಿಭಾಂಡಾರಗಳು :

ಕರ್ನಾಟಕದ ಹಸ್ತಪ್ರತಿಗಳ ಪರಿವೀಕ್ಷಣ ಮತ್ತು ಸಂಗ್ರಹಕಾರ್ಯಕ್ಕೆ ಶ್ರೀಕಾರ ಹಾಕಿದವ ಕರ್ನಲ್ ಮೆಕೆಂಝಿ. ಲೆವಿಸ್ ದ್ವೀಪದಲ್ಲಿ ೧೭೫೪ ರಲ್ಲಿ ಜನಿಸಿದ ಈತ ೧೭೮೨ ರಲ್ಲಿ ಭಾರತಕ್ಕೆ ಬಂದು, ಈಸ್ಟ ಇಂಡಿಯಾ ಕಂಪನಿಯಲ್ಲಿ (ಮದ್ರಾಸ) ಮಿಲಿಟರಿ ಎಂಜನೀಯರ್ ಹುದ್ದೆ ಸ್ವೀಕರಿಸಿದ. ೧೭೯೬ ರಿಂದ ಹವ್ಯಾಸವೆಂಬಂತೆ ಪ್ರಾಚ್ಯವಸ್ತುಗಳ ಸಂಗ್ರಹಕಾರ್ಯವನ್ನು ಕೈಕೊಂಡ ಇವನು, ಹಸ್ತಪ್ರತಿಗಳ ಸಂಗ್ರಹಕಾರ್ಯಕ್ಕೂ ಗಮನಕೊಟ್ಟನು. ಅಂದಿನಿಂದ ಇಂದಿನ ವರೆಗೆ ೨೦೦ ವರ್ಷಗಳ ಅವಧಿಯಲ್ಲಿ ಈ ಕಾರ್ಯವನ್ನು ಪೂರೈಸಿದ ಆಧುನಿಕ ಹಸ್ತಪ್ರತಿಭಾಂಡಾರಗಳನ್ನು ಕುರಿತು ಇಲ್ಲಿ ವಿವೇಚಿಸಬಹುದು.

೧. ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ : ಮೇಲೆ ಹೇಳಿದ ಕರ್ನಲ್ ಮೆಕೆಂಝಿ ೧೭೯೬ ರಿಂದಲೂ ಸಂಗ್ರಹಿಸಿದ್ದ ಪ್ರಾಚ್ಯವಸ್ತುಗಳ ಬಹು ದೊಡ್ಡ ಸಂಗ್ರಹವನ್ನು ಈಸ್ಟ ಇಂಡಿಯಾ ಕಂಪನಿ ಖರೀದಿಸಿ ೧೮೨೩, ೧೮೨೫, ಮತ್ತೊಮ್ಮೆ ಹೀಗೆ ಮೂರು ಸಲ ಲಂಡನ್ನಿಗೆ ರವಾನಿಸಿತು. ಇವುಗಳಲ್ಲಿ ಬಹಳಷ್ಟು ಲಂಡನ್ನಿನ ವಿಕ್ಟೋರಿಯಾ ಆಲ್ಬರ್ಟ ವಸ್ತುಸಂಗ್ರಹಾಲಯ, ಮತ್ತು ಇಂಡಿಯಾ ಆಫೀಸ್ ಲೈಬ್ರರಿಗಳಲ್ಲಿ ರಕ್ಷಿಸಲ್ಪಟ್ಟವು. ಹೀಗೆ ವಲಸೆಹೋಗಿ ಮದ್ರಾಸದಲ್ಲಿ ಉಳಿದಿದ್ದ ಸಂಗ್ರಹ ಅಲ್ಲಿಯ ಕಾಲೇಜು ಲೈಬ್ರರಿಗೆ, ಆಮೇಲೆ ಲಿಟರರಿ ಸೊಸೈಟಿಗೆ, ಕೊನೆಗೆ ೧೮೫೮ ರಲ್ಲಿ ಸ್ಥಾಪಿತವಾದ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿಗೆ ವರ್ಗಾಯಿಸಲ್ಪಟ್ಟಿತು.[೧]

---

೧. ಕಲಕತ್ತೆಯಲ್ಲಿ ಇನ್ನೆರಡು ಕಡೆಗೆ ಇವನ ಸಂಗ್ರಹವನ್ನು ರಕ್ಷಿಸಲಾಗಿದೆ ಎಂದು An alphabetical index of Kannada manuscripts in the government Oriental Manuscripts Library Madras (T.chandrashekhar 1952) ಕೃತಿಯಿಂದ ತಿಳಿದುಬರುತ್ತದೆ.

೧೮೦೩ರಿಂದ ೧೮೧೧ರ ವರೆಗೆ ಭಾರತದಲ್ಲಿದ್ದ ಡಾ. ಲೇಡನ್ ಸಂಗ್ರಹಿಸಿದ್ದ ಕನ್ನಡ, ತೆಲುಗು ಮತ್ತು ತಮಿಳು ಭಾಷೆಯ ಹಸ್ತಪ್ರತಿಗಳನ್ನು ಮದ್ರಾಸ್ ಇಂಡಿಯಾ ಹೌಸ್ ಲೈಬ್ರರಿಯಲ್ಲಿ ರಕ್ಷಿಸಲಾಗಿತ್ತು. ಈ ಹಸ್ತಪ್ರತಿಗಳನ್ನು ೧೮೪೪ರಲ್ಲಿ ಮದ್ರಾಸ ಲಿಟರರಿ ಸೊಸೈಟಿಗೆ ವರ್ಗಾಯಿಸಲ್ಪಟ್ಟಿತು. ಸಿ.ಪಿ.ಬ್ರೌನ್ ಇದರ ಸೂಚಿಯನ್ನು ಜರ್ನಲ್ ಆಫ್ ದಿ ಲಿಟರರಿ ಸೊಸೈಟಿಯ ೩೩ ನೆಯ ನಂಬರಿನ ಜರ್ನಲ್‌ದಲ್ಲಿ ಪ್ರಕಟಿಸಿದ್ದಾನೆ. ಈ ಸಂಗ್ರಹ ೧೮೪೭ ರಲ್ಲಿ ಮದ್ರಾಸಿನ ಕಾಲೇಜು ಲೈಬ್ರರಿಗೆ, ಕೊನೆಗೆ ಮೇಲೆ ಹೇಳಿದ ಮದ್ರಾಸ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿಗೆ ವರ್ಗಾಯಿಸಲ್ಪಟ್ಟಿತು.

ಸಿ.ಪಿ.ಬ್ರೌನ್ ವೈ;ಯಕ್ತಿಕವಾಗಿ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು ಅವುಗಳೆಲ್ಲ ಪ್ರಧಾನವಾಗಿ ತೆಲುಗು, ಸಂಸ್ಕೃತ ಭಾಷೆಗಳಿಗೆ ಸಂಬಂಧಿಸಿದುವು. ಈ ಸಂಗ್ರಹವೂ ಕೊನೆಗೆ ಮದ್ರಾಸ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿಗೆ ವರ್ಗಾಯಿಸಲ್ಪಟ್ಟಿತು.[೨]

ಹೀಗೆ ಮೂರು ಬಗೆಯ (ಮೆಕೆಂರ್ಝಿ, ಲೇಡನ್, ಬ್ರೌನ್) ಸಂಗ್ರಹಗಳನ್ನೊಳಗೊಂಡು ಬೆಳೆದ ಈ ಸಂಸ್ಥೆಯಲ್ಲಿ ಕವಿರಾಜಮಾರ್ಗ, ಲಿಂಗಣಾರಾಧ್ಯನ ವೃತ್ತಿಯುಳ್ಳ ಶಬ್ದಮಣಿದರ್ಪಣ, ಸಾಹಸಭೀಮವಿಜಯ ಮೊದಲಾದವುಗಳಿಗೆ ಸಂಬಂಧಿಸಿದ ಉತ್ತಮೋತ್ತಮ ಹಸ್ತಪ್ರತಿಗಳೂ ಬಹುಸಂಖ್ಯೆ ಕೈಫಿಯತ್ತುಗಳೂ ಹಾಡುಗಳೂ ಕಂಡುಬರುತ್ತವೆ. ೧೯೬೭ ರಲ್ಲಿ ಮೆಕೆಂರ್ಝಿ ಸಂಗ್ರಹವನ್ನು ಹೊರತುಪಡಿಸಿ ಎಲ್ಲ ಕನ್ನಡ ಹಸ್ತಪ್ರತಿಗಳನ್ನು ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಪುರಾತತ್ವ ಇಲಾಖೆ ಮತ್ತು ಧಾರವಾಡ ಕನ್ನಡ ಸಂಶೋಧನ ಸಂಸ್ಥೆಗಳಿಗೆ ಹಂಚಿಕೊಡಲಾಯಿತು.

ಹಸ್ತಪ್ರತಿ ಸಂಗ್ರಹದಂತೆ ಹಸ್ತಪ್ರತಿ ಸೂಚಿಯ ರಚನೆಯಲ್ಲಿಯೂ ಇದೇ ಸಂಸ್ಥೆ ಹೊಸ ಹೆಜ್ಜೆ ಇಟ್ಟಿತು. ಇದು ಪ್ರಕಟಿಸಿದ 'ಮೆಕೆಂರ್ಝಿ ಕಲೆಕ್ಷನ್: ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ. ಮ್ಯಾನ್ಯುಸ್ಕ್ರಿಪ್ಟ್ಸ' ಹೆಸರಿನ ಸೂಚಿ (೧೮೨೮), ಹೆಸರೇ ಸೂಚಿಸುವಂತೆ ವಿವರಣಾತ್ಮಕವಾಗಿದ್ದು, ಕನ್ನಡ ಹಸ್ತಪ್ರತಿ ಸೂಚಿ ಪರಂಪರೆಯ ಪ್ರಥಮಕೃತಿಯಾಗಿದೆ. ಈ ಬಳಿಕ 'ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿ ಮದ್ರಾಸ' (೧೮೮೩) ಮತ್ತು 'ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ' (೧೯೨೯) ಮತ್ತು 'ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರರಿ ಮದ್ರಾಸ' (೧೯೫೨) ಹೆಸರಿನ ಸೂಚಿಗಳನ್ನು ಈ ಸಂಸ್ಥೆ ಪ್ರಕಟಿಸಿತು. ಇವೆಲ್ಲವುಗಳಿಗಿಂತ ಮಿಗಿಲಾದ ಕೆಲಸವೆಂದರೆ 'ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ ಲೈಬ್ರಿರಿ, ಮದ್ರಾಸ' ಈ ಹೆಸರಿನಲ್ಲಿ ಏಳು ಸಂಪುಟಗಳನ್ನು ಪ್ರಕಟಿಸಿದುದು. ಮೊದಲನೆಯ ಸಂಪುಟ: ವ್ಯಾಕರಣ ೧–೧೨, ನಿಘಂಟು ೧೩–೨೧, ಛಂದಸ್ಸು ೨೩–೨೭, ಇತಿಹಾಸ ಮತ್ತು ಪುರಾಣ ೨೮–೧೩೮, ಎರಡನೆಯ ಸಂಪುಟ:

---

೨. An alphabetical index of Kannada manuscripts in the government Oriental Manuscripts Library Madras (T.chandrashekhar 1952) ಕೃತಿಯ ಪ್ರಸ್ತಾವನೆಯಿಂದ ಸಂಗ್ರಹಿಸಲಾಗಿದೆ.

ಪುರಾಣ ೧೩೯-೨೭೮, ಅರ್ಥಶಾಸ್ತ್ರ ೨೭೯-೨೯೦, ಕಾಮಶಾಸ್ತ್ರ ೨೯೧-೨೯೭, ಯೋಗ ೨೯೮-೩೦೧, ವೇದಾಂತ ೩೦೨-೩೧೭, ಮೂರನೆಯ ಸಂಪುಟ: ಜೈನ ಆಗಮ ೩೧೮-೪೩೪, ವೀರಶೈವ ಆಗಮ ೪೩೫-೪೭೬, ನಾಲ್ಕನೆಯ ಸಂಪುಟ: ವೀರಶೈವ ಆಗಮ ೪೭೭, ೬೧೦, ಕ್ರೈಸ್ತ ಕೃತಿ ೬೧೧-೬೧೪, ಸ್ತೋತ್ರ ಮತ್ತು ವೀರಶೈವ ಕೃತಿ ೬೧೫-೮೨೫, ಐದನೆಯ ಸಂಪುಟ: ಶ್ರೀವೈಷ್ಣವಮತ ೮೨೬-೮೩೧, ಸ್ತೋತ್ರಗಳು ೮೩೨-೮೬೭, ಕಾವ್ಯ (ಪದ್ಯಕಾವ್ಯ) ೮೬೮-೧೦೩೮, ಆರನೆಯ ಸಂಪುಟ: ಪದ್ಯಕಾವ್ಯ ೧೦೩೯-೧೧೨೧, ಚಂಪೂ ೧೧೨೨-೧೧೬೭, ಯಕ್ಷಗಾನ ೧೧೬೮-೧೨೨೦, ಗದ್ಯಕಾವ್ಯ ೧೨೨೧-೧೨೩೮, ಕಥೆಗಳು ೧೨೩೯-೧೨೪೮, ಅಲಂಕಾರ ೧೨೪೯-೧೨೬೧, ಏಳನೆಯ ಸಂಪುಟ : ಸಂಗೀತ ೧೨೬೨-೧೩೩೪, ಶಿಲ್ಪಶಾಸ್ತ್ರ ೧೩೩೫, ಪಾಕಶಾಸ್ತ್ರ ೧೩೩೬-೧೩೪೨, ವೈದ್ಯ ೧೩೪೩-೧೪೦೫ ಹೀಗೆ ಇಷ್ಟು ಪ್ರತಿಗಳ ವಿವರವಾದ ಪರಿಚಯ ಮಾಡಿಕೊಡುತ್ತವೆ.

ಈ ಏಳೂ ಸಂಪುಟಗಳಲ್ಲಿ ಅಡಕವಾದ ಪ್ರತಿಗಳಿಗೆ ಉದ್ದಕ್ಕೂ ನಂಬರ ಕೊಡಲಾಗಿದ್ದು, ಒಟ್ಟು ೧೪೦೫ ಪ್ರತಿಗಳ ಪರಿಚಯವಿಲ್ಲಿದೆ. ಕನ್ನಡ ಹಸ್ತಪ್ರತಿಸೂಚಿ ಗ್ರಂಥಗಳಲ್ಲಿಯೇ ವಿವರಣೆ ದೃಷ್ಟಿಯಿಂದ ತುಂಬ ಉಪಯುಕ್ತ ಸಂಪುಟಗಳಿವು.

ಹಸ್ತಪ್ರತಿಗಳ ಸಂಗ್ರಹ ಮತ್ತು ಸೂಚಿರಚನೆಯೊಂದಿಗೆ ಸಂಪಾದನ ಕೆಲಸವನ್ನೂ ಪೂರೈಸಿದುದು, ಈ ಸಂಸ್ಥೆಯ ವೈಶಿಷ್ಟ್ಯವಾಗಿದೆ. ಲೋಕೋಪಕಾರಂ, ರಟ್ಟಮತಂ, ಅಶ್ವಶಾಸ್ತ್ರ, ವಿವಿಧ ವೈದ್ಯ ವಿಷಯಗಳು, ಸೂಪಶಾಸ್ತ್ರ, ವ್ಯವಹಾರ ಗಣಿತಂ ಮೊದಲಾದ ಲೋಕಕಲ್ಯಾಣಶಾಸ್ತ್ರಗಳನ್ನೂ, ಜೀವಸಂಬೋಧನ, ಸದ್ಗುರು ರಹಸ್ಯ ಮೊದಲಾದ ಕಾವ್ಯಗಳನ್ನೂ, ಅಭಿಧಾನರತ್ನಮಾಲಾ, ಸಂಗೀತ ರತ್ನಾಕರ ಮೊದಲಾದ ಶಾಸ್ತ್ರಕೃತಿಗಳನ್ನೂ ಇದು ಪರಿಷ್ಕರಿಸಿ, ಪ್ರಕಟಿಸಿದೆ.

ಈ ಭಂಡಾರದ ಹಸ್ತಪ್ರತಿಗಳನ್ನು ಬಳಸಿಕೊಂಡು ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಲಿಂಗಣಾರಾಧ್ಯವೃತ್ತಿಯ ಶಬ್ದಮಣಿದರ್ಪಣಂ, ಕರ್ನಾಟಕ ಕವಿರಾಜಮಾರ್ಗಂ, ಮಂಗರಾಜನ ಅಭಿನವಾಭಿಧಾನಂ, ಓಷಧಿಕೋಶಂ, ಕರ್ಣಪಾರ್ಯನ ನೇಮಿನಾಥಪುರಾಣಂ, ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣಂ, ಆಚಣ್ಣನ ವರ್ಧಮಾನಪುರಾಣಂ, ಇತ್ಯಾದಿ ಕೃತಿಗಳನ್ನು ಪರಿಷ್ಕರಿಸಿ, ಬೆಳಕಿಗೆ ತಂದಿದೆ.

೨. ಗವರ್ನಮೆಂಟ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ, ಮೈಸೂರು : ಈ ಸಂಸ್ಥೆ ನಾಮಾಂತರ ಮತ್ತು ಹಸ್ತಾಂತರಗೊಳ್ಳುತ್ತ ಸಾಗಿಬಂದಿದೆ. ೧೮೮೪ ರಲ್ಲಿ ಮೈಸೂರಿನಲ್ಲಿ ಪುರಾತತ್ವ ಇಲಾಖೆ ಅಸ್ತಿತ್ವಕ್ಕೆ ಬಂದಿತು. ಶಾಸನ ಸಂಗ್ರಹ, ಭೂಶೋಧ, ವಾಸ್ತುಪರಿಶೀಲನೆ, ಹಸ್ತಪ್ರತಿ ಸಂಗ್ರಹ ಇದರ ಉದ್ದೇಶವಾಗಿದ್ದಿತು. ೧೮೯೧ ರಲ್ಲಿ 'ಪುರಾತತ್ವ ಇಲಾಖೆ' ಮತ್ತು 'ಓರಿಯಂಟಲ್ ಲೈಬ್ರರಿ' ಪ್ರತ್ಯೇಕಗೊಂಡು ಸ್ವತಂತ್ರ ಶಾಖೆಗಳಾದವು. ಹಸ್ತಪ್ರತಿಗಳ ಸಂಗ್ರಹ, ಸಂಸ್ಕರಣ, ಪ್ರಕಟನ ಉದ್ದೇಶವುಳ್ಳ ಈ 'ಓರಿಯಂಟಲ್ ಲೈಬ್ರರಿ'ಯ ಪ್ರಥಮ ಕ್ಯೂರೇಟರ್ ಎ.ಮಹಾದೇವ ಶಾಸ್ತ್ರಿಗಳು. ಆಮೇಲೆ ಆರ್.ರಾಘವೇಂದ್ರಾಚಾರ್, ಆರ್.ಶಾಮಶಾಸ್ತ್ರಿ, ಡಿ.ಶ್ರೀನಿವಾಸಾಚಾರ್, ಎಂ.ಎಸ್.ಬಸಲಿಂಗಯ್ಯ, ಎಚ್.ಆರ್.ರಂಗಸ್ವಾಮಿ ಅಯ್ಯಂಗಾರ, ಎಚ್.ದೇವೀರಪ್ಪ (೧೯೫೪-೬೦) ನಿರ್ದೇಶಕರಾದರು. ದೇವೀರಪ್ಪ ಅವರ ಅವಧಿಯಲ್ಲಿ ಈ ಸಂಸ್ಥೆಯ ಕನ್ನಡ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ಸ್ಥಳಾಂತರಿಸಲಾಯಿತು.

೧೯೧೬ ರಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾಲಯದ ಆಡಳಿತಕ್ಕೆ ಅದೇ ವರ್ಷ ಈ ಸಂಸ್ಥೆಯನ್ನು ಒಪ್ಪಿಸಲಾಯಿತು. ೧೯೪೩ ರಲ್ಲಿ ಇದರ ಹೆಸರನ್ನು 'ಪ್ರಾಚ್ಯವಿದ್ಯಾ ಸಂಶೋಧನಾಲಯ'ವೆಂದು ಬದಲಿಸಲಾಯಿತು. ಈಗ ಇಲ್ಲಿ ಒಂದು ಸಾವಿರದಷ್ಟು ಉರ್ದು-ಪರ್ಶಿಯನ್ ಕಟ್ಟುಗಳೂ ಮಿಕ್ಕ ಸಂಸ್ಕೃತ ಕಟ್ಟುಗಳೂ ಸೇರಿ ಒಟ್ಟು ೨೦೭೦೮ ಕಟ್ಟುಗಳಿವೆ.

ಈ ಸಂಸ್ಥೆ 'ಮೈಸೂರು ಗವರ್ನ್‌ಮೆಂಟ ಓರಿಯಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರಹದ ಪುಸ್ತಕಗಳ ಪಟ್ಟಿ' (೧೯೨೧), ಮೈಸೂರು ಗವರ್ನ್‌ಮೆಂಟ ಓರಿಯಂಟಲ್ ಲೈಬ್ರರಿ ೧೯೨೨ ರಿಂದ ೧೯೨೯ರ ವರೆಗಿನ ಅವಧಿಯಲ್ಲಿ ಸಂಗ್ರಹಿಸಿದ 'ಅಚ್ಚಿನ ಮತ್ತು ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ' (೧೯೩೦), 'ಮೈಸೂರು ಯುನಿವರ್ಸಿಟಿ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟದಲ್ಲಿ ೧೯೪೧ ರಿಂದ ೧೯೫೪ರ ವರೆಗೆ ಸಂಗ್ರಹಿಸಿರುವ ಕೈಬರಹದ ಪುಸ್ತಕಗಳ ಪಟ್ಟಿ' (೧೯೫೫) ಮತ್ತು 'ಮೈಸೂರು ಪ್ರಾಚ್ಯವಿದ್ಯಾ ಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚನೀ-೧೮೯೧ ರಿಂದ ೧೯೫೧ರ ವರೆಗೆ' (೧೯೫೫) ಎಂಬ ನಾಲ್ಕು ಸೂಚಿಗಳನ್ನು ಹೊರತಂದಿದೆ. ಬಳಿಕ ನೇರವಾಗಿ ಕನ್ನಡ ಹಸ್ತಪ್ರತಿಗಳಿಗೆ ಸಂಬಂಧಪಟ್ಟಂತೆ 'ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ' ಹೆಸರಿನಲ್ಲಿ ನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಈ ಸಂಪುಟಗಳು ೧೯೫೪ರ ವರೆಗೆ ಸಂಗ್ರಹಿಸಿರುವ ಕನ್ನಡ ಹಸ್ತಪ್ರತಿಗಳ ಪರಿಚಯವನ್ನೊಳಗೊಂಡ ವಿವರಣಾತ್ಮಕ ಸೂಚಿಗಳಾಗಿವೆ. ಇವುಗಳ ಸಂಪಾದಕರು ಶ್ರೀ ಬಿ.ಎಸ್.ಸಣ್ಣಯ್ಯ ಅವರು. ಇಲ್ಲಿ ಜೈನ, ವೀರಶೈವ, ಬ್ರಾಹ್ಮಣ ಧರ್ಮಗಳಿಗೆ ಮತ್ತು ಕಾವ್ಯಶಾಸ್ತ್ರಗಳಿಗೆ, ಲೋಕಕಲ್ಯಾಣಶಾಸ್ತ್ರಗಳಿಗೆ ಸಂಬಂಧಪಟ್ಟ ಅಪರೂಪದ ಕೃತಿಗಳ ಪರಿಚಯವನ್ನು ಕಾಣಬಹುದು.

ಬಿ.ಎಲ್.ರೈಸ ಅವರು ಶಿಕ್ಷಣ ಇಲಾಖೆಯಲ್ಲಿರುವಾಗಲೇ ಪ್ರಾರಂಭಿಸಿದ್ದ 'ಬಿಬ್ಲಿಯಾಥಿಕಾ ಕರ್ನಾಟಿಕ' ಗ್ರಂಥಮಾಲೆಯನ್ನು ಪುರಾತತ್ವ ಇಲಾಖೆಯ ನಿರ್ದೇಶಕರಾದ ಬಳಿಕವೂ ಮುಂದುವರಿಸಿ, ಪಂಪರಾಮಾಯಣ (೧೮೭೪), ಕರ್ನಾಟ ಭಾಷಾಭೂಷಣಂ (೧೮೮೪), ಕರ್ಣಾಟಕ ಶಬ್ದಾನುಶಾಸನಂ (೧೮೯೦) ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದರು. ೧೮೯೧ ರಲ್ಲಿ ಈ ಓರಿಯಂಟಲ್ ಲೈಬ್ರರಿ ಅಸ್ತಿತ್ವಕ್ಕೆ ಬಂದ ಬಳಿಕವೂ ಅವರು 'ಬಿಬ್ಲಿಯಾಥಿಕಾ ಕರ್ನಾಟಿಕ' ಮಾಲೆಯ ಹೆಸರಿನಲ್ಲಿ ಪಂಪಭಾರತ (೧೮೯೧), ಕವಿರಾಜಮಾರ್ಗಂ (ಸಂ.ಕೆ.ಬಿ.ಪಾಠಕ ೧೮೯೧) ಕೃತಿಗಳನ್ನು ತಂದಿದ್ದರು. ಬಳಿಕ ಈ ಮಾಲೆಯನ್ನು ಓರಿಯಂಟಲ್ ಲೈಬ್ರರಿ ಬಳಸಿಕೊಂಡು ಆದಿಪುರಾಣ (೧೯೦೦) ವನ್ನು ಪ್ರಥಮ ಕೃತಿಯಾಗಿ ಪ್ರಕಟಿಸಿತು. ಆಮೇಲೆ 'ಕನ್ನಡ ಗ್ರಂಥಮಾಲೆ' ಹೆಸರಿನಲ್ಲಿ ದಶಪರ್ವಭಾರತ, ಜಗನ್ನಾಥ ವಿಜಯ, ಧರ್ಮಾಮೃತ, ಅನಂತನಾಥಪುರಾಣ, ಸೂಕ್ತಿಸುಧಾರ್ಣವ, ಸಿಂಗಿರಾಜಪುರಾಣ, ರಾಮನಾಥಚರಿತೆ, ಶಿವತತ್ವಚಿಂತಾಮಣಿ, ತೊರವೆರಾಮಾಯಣ ಮೊದಲಾದ ಕೃತಿಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಇದಲ್ಲದೆ 'ಬಿಬ್ಲಿಯಾಥಿಕಾ ಸಂಸ್ಕೃತ' ಹೆಸರಿನ ಮಾಲೆಯಲ್ಲಿ ಆಪಸ್ತಂಭ ಗೃಹ್ಯಸೂತ್ರವನ್ನು ಮೊದಲ ಕೃತಿಯಾಗಿ ಪ್ರಕಟಿಸಿ, ಆಮೇಲೆ ಕೌಟಿಲ್ಯನ ಅರ್ಥಶಾಸ್ತ್ರದಂತಹ ಜಗದ್ವಿಖ್ಯಾತ ಕೃತಿಗಳನ್ನು ಬೆಳಕಿಗೆ ತಂದಿದೆ.

೩. ಕನ್ನಡ ಅಧ್ಯಯನಸಂಸ್ಥೆ, ಮೈಸೂರು : ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯಾಗಿ ಮಾರ್ಪಟ್ಟುದು (೧೯೬೬) ಚರಿತ್ರಾರ್ಹ ಘಟನೆ. ಕನ್ನಡದ ಚಟುವಟಿಕೆಗಳನ್ನೆಲ್ಲ ಕೇಂದ್ರೀಕರಿಸಲು ಕೈಕೊಂಡ ಈ ಪ್ರಯತ್ನದ ಫಲವಾಗಿ ಹೊಸ

ಹೊಸ ಶಾಖೆಗಳು ಹುಟ್ಟಿಕೊಂಡುವಲ್ಲದೆ ಅಲ್ಲಲ್ಲಿ ಅಸ್ತಿತ್ವದಲ್ಲಿದ್ದ ಕನ್ನಡಪರ ಶಾಖೆಗಳು ಒಂದುಗೂಡಿದವು. ಇದರ ಅಂಗವಾಗಿ ೧೯೬೬ ರಲ್ಲಿ ಗವರ್ನ್‌ಮೆಂಟ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟದಿಂದ ಕನ್ನಡ ಹಸ್ತಪ್ರತಿಗಳನ್ನು ಈ ಸಂಸ್ಥೆಗೆ ವರ್ಗಾಯಿಸಲಾಯಿತು. ಆಮೇಲೆ ಪ್ರತಿವರ್ಷ ಕೈಕೊಂಡ ಕ್ಷೇತ್ರಕಾರ್ಯದ ಫಲವಾಗಿ ಈಗ ಸುಮಾರು ೫೦೦೦ ಕಟ್ಟುಗಳು ಇಲ್ಲಿ ಶೇಖರಿಸಲ್ಪಟ್ಟಿವೆ. ಈ ಅವಧಿಯಲ್ಲಿ ಅನೇಕ ಪ್ರಸಿದ್ಧ ಹಸ್ತಪ್ರತಿಗಳನ್ನು ಶೋಧಿಸಿ ಸಂಗ್ರಹಿಸಲಾಗಿದ್ದು, ಎರಡನೆಯ ನಾಗವರ್ಮನ ವರ್ಧಮಾನಪುರಾಣದ ಶೋಧ, ಈ ಸಂಸ್ಥೆಯ ಒಂದು ಅಪೂರ್ವ ಕಾಣಿಕೆಯೆಂದೇ ಹೇಳಬೇಕು.

ಗವರ್ನ್‌ಮೆಂಟ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ ಈ ಮೊದಲು ನಾಲ್ಕು ಸೂಚಿಸಂಪುಟಗಳನ್ನು ಪ್ರಕಟಿಸಿದ್ದಿತು. ಅವುಗಳ ಮುಂದುವರಿದ ಸಂಪುಟಗಳನ್ನು ಕನ್ನಡ ಅಧ್ಯಯನಸಂಸ್ಥೆ ಸಿದ್ಧಪಡಿಸಿ ಪ್ರಕಟಿಸಿತು. ಇಲ್ಲಿಯೂ ಶ್ರೀ ಬಿ.ಎಸ್.ಸಣ್ಣಯ್ಯ ಅವರು ಸಂಪಾದಕರಾಗಿ ಕೆಲಸ ನಿರ್ವಹಿಸಿ ೧೯೫೪ ರಿಂದ ೧೯೭೮ ರ ವರೆಗಿನ ಅವಧಿಯಲ್ಲಿ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ೫ ಸೂಚಿ ಸಂಪುಟಗಳನ್ನು (೫,೬,೭,೮,೯) ಸಂಪಾದಿಸಿ ಬೆಳಕಿಗೆ ತಂದರು. ಇವರೇ 'ಕನ್ನಡ ಹಸ್ತಪ್ರತಿಗಳ ಮೈಕ್ರೊಫಿಲ್ಮಸೂಚಿ' ಹೆಸರಿನ ಕೃತಿಯನ್ನು ಹೊರತಂದಿದ್ದು, ಆರಾ, ಹೈದ್ರಾಬಾದ, ಬಾಹುಬಲಿ, ಮದ್ರಾಸ, ಕೊಲ್ಲಾಪೂರ ಮೊದಲಾದ ಅನ್ಯಪ್ರಾಂತಗಳಲ್ಲಿರುವ ಮತ್ತು ಮೂಡಬಿದಿರೆ, ಬೆಳ್ಗೊಳ, ವರಾಂಗ, ಸಾಲಿಗ್ರಾಮ, ಮಂಡ್ಯ, ಹೊಂಬುಜ, ಧಾರವಾಡ, ಮೈಸೂರುಗಳಲ್ಲಿರುವ ಅಪೂರ್ವ ಕನ್ನಡ ಹಸ್ತಪ್ರತಿಗಳ ವಿವರ ಇಲ್ಲಿದೆ, ಹಸ್ತಪ್ರತಿಗಳ ಪ್ರಶಸ್ತಿಗಳನ್ನು ಇಡಿಯಾಗಿ ಕೊಟ್ಟುದು ಇಲ್ಲಿಯ ಒಂದು ವೈಶಿಷ್ಟ್ಯ. ೧೩೨೪ ಕೃತಿಗಳ ಪರಿಚಯವನ್ನೊಳಗೊಂಡ ಇದು, ಕನ್ನಡದಲ್ಲಿ ಒಂದು ಹೊಸ ಉಪಕ್ರಮವೆನಿಸಿದೆ.

ಈ ಸಂಸ್ಥೆ ೧೯೬೬ ರಿಂದ ಈ ವರೆಗೆ ೧೨೦ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದೆ. ಇವುಗಳಲ್ಲಿ ದೀಕ್ಷಾಬೋಧೆ, ವರ್ಧಮಾನಪುರಾಣ, ಹರಿವಂಶಾಭ್ಯುದಯ, ಶಬ್ದಮಣಿದರ್ಪಣ, ಪುಣ್ಯಾಸ್ರವ, ನೇಮಿನಾಥ ಪುರಾಣ, ಚತುರಾಚಾರ್ಯಚಾರಿತ್ರ, ಆರಾಧ್ಯಚಾರಿತ್ರ್ಯ, ರಾಜಾವಳಿ ಕಥಾಸಾರ, ಬತ್ತೀಸಪುತ್ಥಳಿ ಕಥೆ ಮುಖ್ಯವಾದುವು. ಎಚ್.ದೇವೀರಪ್ಪ. ಎನ್.ಬಸವಾರಾಧ್ಯ, ಬಿ.ಎಸ್.ಸಣ್ಣಯ್ಯ, ಜಿ.ಜಿ.ಮಂಜುನಾಥ, ವೈ.ಸಿ.ಭಾನುಮತಿ, ಮಂಜಪ್ಪಶೆಟ್ಟಿ ಮೊದಲಾದವರ ಪ್ರಕಟನೆಗಳು ಗಮನಾರ್ಹವೆನಿಸಿವೆ.

೪. ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ : ಮುಂಬೈ ಸರಕಾರ ತನ್ನ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಪ್ರದೇಶದ ಸಂಶೋಧನೆಗಾಗಿ ೧೯೩೮ ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಸ್ಥಾಪನೆಗೆ ಸಂಬಂಧಪಟ್ಟ ನಿರ್ಣಯವನ್ನು ಸ್ವೀಕರಿಸಿತು. ೧೯೩೯ ರಲ್ಲಿ ಶ್ರೀ ಆರ್.ಎಸ್.ಪಂಚಮುಖಿಯವರು ಪ್ರಥಮ ನಿರ್ದೇಶಕರಾಗಿ ಅಧಿಕಾರವಹಿಸಿಕೊಂಡರು. ಅಂದಿನಿಂದಲೇ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಅನ್ಯ ಭಾಂಡಾರಗಳಲ್ಲಿರುವ ಪ್ರಸಿದ್ಧ ಹಸ್ತಪ್ರತಿಗಳನ್ನು ನಕಲುಮಾಡಿಸಿ ಸಂರಕ್ಷಿಸುವ ಕೆಲಸವನ್ನು ಪ್ರಾರಂಭಿಸಲಾಯಿತು. ಈ ವರೆಗೆ ಇಲ್ಲಿ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ಸುಮಾರು ೩೦೦೦.

ಈ ಸಂಸ್ಥೆ 'ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ' ಹೆಸರಿನಲ್ಲಿ ೧೪ ಸಂಪುಟಗಳನ್ನು ಪ್ರಕಟಿಸಿದ್ದು, ಇವೆಲ್ಲ ಸೇರಿ ೮೮೮ ಪ್ರತಿಗಳ ವಿವರ ಒದಗಿಸುತ್ತವೆ. ೫೦ ವರ್ಷಗಳ ಅವಧಿಯಲ್ಲಿ ಇಷ್ಟು ಕೃತಿಗಳ ಸೂಚಿಯನ್ನು ರಚಿಸಿದುದು ಕಡಿಮೆಯೆಂದೇ ಹೇಳಬೇಕು.

ಇದು ಕವಿಜಿಹ್ವಾಬಂಧನ, ಮದನತಿಲಕ, ಸಮಯಪರೀಕ್ಷೆ, ಚಾವುಂಡರಾಯ ಪುರಾಣ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದರೂ ಕಾಲಮಾನ ದೃಷ್ಟಿಯಿಂದ ಈ ಸಂಖ್ಯಾಪ್ರಮಾಣ ಕಡಿಮೆಯೆನಿಸುತ್ತದೆ. ಇವುಗಳ ಸಂಪಾದನೆಯಲ್ಲಿಯೂ ಶಾಸ್ತ್ರೀಯತೆಯ ಕೊರತೆ ಕಂಡುಬರುತ್ತದೆ. ೧೯೭೨ ರಲ್ಲಿ ಈ ಸಂಸ್ಥೆಯ ಹಸ್ತಪ್ರತಿಗಳನ್ನು ಡಾ.ಎಂ.ಎಂ.ಕಲಬುರ್ಗಿಯವರ ಪ್ರಯತ್ನದಿಂದಾಗಿ ಕನ್ನಡ ಅಧ್ಯಯನ ಪೀಠಕ್ಕೆ ವರ್ಗಾಯಿಸಲಾಗಿದೆ.

೫. ಕನ್ನಡ ಅಧ್ಯಯನಪೀಠ, ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ವಿಭಾಗವಾಗಿ ಅಸ್ತಿತ್ವಕ್ಕೆ ಬಂದ ಈ ಇಲಾಖೆ, ೧೯೬೨ ರಲ್ಲಿ "ಸಮಗ್ರ ವಚನ ವಾಙ್ಮಯದ ಪರಿವೀಕ್ಷಣೆ, ಪರಿಷ್ಕರಣ, ಪ್ರಕಟನ ಯೋಜನೆ"ಯನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ಕೈಗೆತ್ತಿಕೊಂಡಿತು. ಡಾ. ಆರ್.ಸಿ.ಹಿರೇಮಠ ಅವರ ನಿರ್ದೇಶನದಲ್ಲಿ ಮುನ್ನಡೆದ ಈ ಯೋಜನೆಯ ಅಂಗವಾಗಿ ಹಸ್ತಪ್ರತಿ ಸಂಗ್ರಹ, ಸಂಸ್ಕರಣ, ಪ್ರಕಟನ ಕೆಲಸಗಳು ಇಲ್ಲಿ ಮುನ್ನಡೆದವು. ಮುಂದೆ ಕೆಲಕಾಲದಲ್ಲಿ ವೀರಶೈವ, ಜೈನ, ಬ್ರಾಹ್ಮಣಶಾಖೆಗಳೂ, ಬಸವೇಶ್ವರಪೀಠವೂ ಅಸ್ತಿತ್ವಕ್ಕೆ ಬಂದು, ಈ ಕಾರ್ಯಗಳ ವ್ಯಾಪ್ತಿ ವರ್ಧಿಸಿತು.

೧೯೬೨ ರಿಂದ ೧೦ ವರ್ಷಗಳ ಕಾಲ ಹಸ್ತಪ್ರತಿ ಸಂಗ್ರಹದ ಕೆಲಸ ರಭಸದಿಂದ ನಡೆದು, ಮುಂದೆ ನಿಧಾನವಾಯಿತು. ಈ ಅವಧಿಯಲ್ಲಿ ಅಧ್ಯಾಪಕವರ್ಗದವರೂ, ಸಹಾಯಕ ಸಂಶೋಧಕರೂ ಶ್ರಮವಹಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ವಿಭಾಗದ ಮುಖ್ಯಸ್ಥರಾಗಿ ಡಾ.ಆರ್.ಸಿ.ಹಿರೇಮಠ, ಡಾ.ಎಂ.ಎಸ್.ಸುಂಕಾಪೂರ, ಡಾ.ಎಂ.ಎಂ.ಕಲಬುರ್ಗಿ ಇವರು ಇಲ್ಲಿ ಸಲ್ಲಿಸಿದ ಸೇವೆ ಗಣ್ಯವಾದುದು. ಇವರಿಗೆ ಗ್ರಂಥಸಂಪಾದನೆಯ ಬಗೆಗೆ ಇದ್ದ ಆಸಕ್ತಿ ಇದಕ್ಕೆ ಕಾರಣವಾಯಿತು. ಈವರೆಗೆ ಇಲ್ಲಿ ಸಂಗ್ರಹಿತವಾದ ಹಸ್ತಪ್ರತಿ ಕಟ್ಟುಗಳ ವಿವರ ಹೀಗದೆ: ಕನ್ನಡ ೪೩೬೦, ಸಂಸ್ಕೃತ ೫೬೫, ಮರಾಠಿ ೩೫, ತೆಲುಗು ೩೮, ತಮಿಳು ೬. ಇವುಗಳಲ್ಲಿ ವೀರಶೈವ ಸಾಹಿತ್ಯಕ್ಕೆ ಅದರಲ್ಲೂ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳ ಸಂಖ್ಯೆ ದೊಡ್ಡದು. ಜೈನ, ಬ್ರಾಹ್ಮಣ ಶಾಖೆಗಳ ಸಿಬ್ಬಂದಿಯವರ ಪ್ರಯತ್ನದಿಂದಾಗಿ ಆ ಮತದ ಕೃತಿಗಳೂ ತಕ್ಕ ಸಂಖ್ಯೆಯಲ್ಲಿ ಸಂಗ್ರಹಿಸಲ್ಪಟ್ಟಿವೆ. ಹಸ್ತಪ್ರತಿಗಳಲ್ಲದೆ, ಕಡತ, ಲೇಖನಸಾಮಗ್ರಿಗಳೂ ಇಲ್ಲಿವೆ. ಡಾ.ಫ.ಗು.ಹಳಕಟ್ಟಿ ಅವರ ಮಕ್ಕಳಿಂದ ಖರೀದಿಸಿದ ೧೦೦೦ ಕಟ್ಟುಗಳೂ ಈ ಸಂಗ್ರಹದಲ್ಲಿ ಸೇರಿಕೊಂಡಿವೆ. ೧೯೭೨ ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಎಲ್ಲ ಕಟ್ಟುಗಳು (ಸುಮಾರು ೩೦೦೦) ಇಲ್ಲಿಗೆ ಬಂದವು. ಹೀಗಾಗಿ ಈಗ ಇಲ್ಲಿರುವ ಒಟ್ಟು ಕಟ್ಟುಗಳ ಸಂಖ್ಯೆ ಸುಮಾರು ೮೦೦೦ ಎಂದು ಹೇಳಬಹುದು.

ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಯನ್ನು ರಚಿಸಬೇಕೆಂಬ ಕನಸು ತುಂಬ ಹಳೆಯದಾದರೂ ಈ ಸಂಸ್ಥೆಯಲ್ಲಿ ಅದು ನನಸಾದುದು, ಡಾ.ಎಂ.ಎಂ.ಕಲಬುರ್ಗಿ ಅವರು ಮುಖ್ಯಸ್ಥರಾಗಿದ್ದ ಕಾಲದಲ್ಲಿ. ೧-೧೦೦ ಕಟ್ಟು, ೧೦೧-೨೦೦ ಕಟ್ಟು ಹೀಗೆ ಒಂದು ಸಾವಿರ ಕಟ್ಟುಗಳ ಹತ್ತು ವಿವರಣಾತ್ಮಕ ಸೂಚಿಗಳು ಈ ಕಾಲದಲ್ಲಿ ಸಿದ್ಧವಾದುವು. ಇವುಗಳಲ್ಲಿ ೨, ೩, ೪, ೫ ನೆಯ ಸಂಪುಟಗಳನ್ನು ಹೊರತುಪಡಿಸಿ ಮಿಕ್ಕವು ೧೯೭೨ ರಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ೧ ನೆಯ ಸಂಪುಟದ ಸಂಪಾದಕರು ಡಾ.ಬಿ.ಆರ್.ಹಿರೇಮಠ, ೬ರಿಂದ ೧೦ ಸಂಪುಟಗಳ ಸಂಪಾದಕರು,

ಡಾ.ವಿ.ಬಿ.ರಾಜೂರ, ಮುಂದಿನ ೧೦೦೧ ರಿಂದ ೪೦೦೦ ವರೆಗಿನ ಕಟ್ಟುಗಳ ಸೂಚೀಕಾರ್ಯ ಮುಗಿದಿದ್ದು, ಇನ್ನೊಮ್ಮೆ ಪರಿಶೀಲಿಸಿ ಮುದ್ರಣಕ್ಕೆ ಕಳಿಸಬೇಕಾಗಿದೆ.

ಈ ಹಸ್ತಪ್ರತಿಗಳಭಾಂಡಾರ ಹುಟ್ಟಿದುದು 'ವಚನಸಾಹಿತ್ಯ ಪ್ರಕಟನ ಯೋಜನೆ'ಯ ಆಶ್ರಯದಲ್ಲಿ. ಹೀಗಾಗಿ ಈ ಸಾಹಿತ್ಯಪ್ರಕಟನೆ ಒಂದು ಚಾರಿತ್ರಿಕ ಘಟನೆಯೆಂಬಂತೆ ಇಲ್ಲಿ ಜರುಗಿತು. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ ಇವರ ವಚನಗಳ ಸಮಗ್ರ ಸಂಪುಟಗಳು, ಶಿವಶರಣೆಯರ ವಚನಗಳ ಸಮಗ್ರ ಸಂಪುಟ, ಸಕಲಪುರಾತನರ ವಚನಗಳು ಸಂಪುಟ ೧-೨-೩, ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಗುಮ್ಮಳಾಪುರ ಸಿದ್ಧಲಿಂಗದೇವನ ಶೂನ್ಯಸಂಪಾದನೆ ಮೊದಲಾದ ೨೦ ರಷ್ಟು ಪ್ರಾಚೀನ ವಚನಸಂಕಲನಗಳು ಇಲ್ಲಿ ಪ್ರಕಟವಾದವು.

ಇವುಗಳ ಜೊತೆಗೆ ಹರಿಹರನ ರಗಳೆಗಳ ಸಮಗ್ರ ಸಂಪುಟ, ತ್ರಿಷಷ್ಠಿ ಪುರಾತನ ಚರಿತ್ರೆ, ಬಸವರಾಜವಿಜಯ, ರಾಜಶೇಖರವಿಳಾಸ, ಅನಂತನಾಥಪುರಾಣ, ಮಲ್ಲಿನಾಥಪುರಾಣ, ಧರ್ಮಾಮೃತ, ಮೋಹನತರಂಗಿಣಿ ಮೊದಲಾದ ಪ್ರಾಚೀನ ಕೃತಿಗಳು ಬೆಳಕು ಕಂಡವು. ಬಸವೇಶ್ವರ ಪೀಠದ ವತಿಯಿಂದ ಬಸವಣ್ಣವರ ಟೀಕಿನ ವಚನಗಳ ಎರಡು ಸಂಪುಟಗಳು ಪ್ರಕಟವಾದುದು ಎತ್ತಿ ಹೇಳಬೇಕಾದ ಸಂಗತಿಯಾಗಿದೆ.

೬. ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು : ಶ್ರೀ ಬಿ.ಶಿವಮೂರ್ತಿಶಾಸ್ತ್ರಿಗಳು ಕೊಡಮಾಡಿದ ಕೆಲವು ಹಸ್ತಪ್ರತಿಗಳ ಮೂಲಕ ೧೯೭೧ ರಲ್ಲಿ ಅಸ್ತಿತ್ವಕ್ಕೆ ಬಂದ ಈ ಭಾಂಡಾರದ ಬೆಳವಣಿಗೆಗೆ ಮುಖ್ಯ ಕಾರಣರು, ಅದರ ಕ್ಯೂರೇಟರ್ ಶ್ರೀ ಎಸ್.ಶಿವಣ್ಣ ಅವರು. ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಂ.ಚಿದಾನಂದಮೂರ್ತಿಯವರ ಬೆಂಬಲದಿಂದ ಮುನ್ನಡೆದ ಈ ಸಂಸ್ಥೆಯಲ್ಲಿ ಈ ವರೆಗೆ ೧೭೫೩ ಓಲೆಕಟ್ಟು ಮತ್ತು ಕಾಗದಕಟ್ಟುಗಳನ್ನು ಸಂಗ್ರಹಿಸಲಾಗಿದೆ. ಇವುಗಳಲ್ಲಿಯ ಪ್ರತಿ ಸಂಖ್ಯೆ ೫೭೪೫. ಕನ್ನಡ, ತೆಲುಗು, ತಮಿಳು, ಸಂಸ್ಕೃತ, ಪ್ರಾಕೃತ, ಹಿಂದಿ, ಉರ್ದು ಭಾಷೆಗಳಿಗೆ ಸಂಬಂಧಿಸಿದ ಈ ಹಸ್ತಪ್ರತಿಗಳಲ್ಲಿ ಮುದ್ದಣನ ರಾಮಾಶ್ವಮೇಧ, ಬಸವಪ್ಪಶಾಸ್ತ್ರಿಗಳ ಶಂಕರಶತಕಗಳು ಕವಿಯ ಸ್ವಹಸ್ತಪ್ರತಿಗಳಾಗಿರುವುದು ಒಂದು ವಿಶೇಷ.

ಈ ಸಂಸ್ಥೆ ೧೯೮೨ ರಲ್ಲಿ ಒಂದು ವಿವರಣಾತ್ಮಕ ಸೂಚಿಯನ್ನು (ಸಂ.ಎಸ್.ಶಿವಣ್ಣ) ಪ್ರಕಟಿಸಿದೆ. ಇಷ್ಟು ವರ್ಷ ಗತಿಸಿದರೂ ಸಂಪಾದನಕಾರ್ಯ ಇಲ್ಲಿ ಜರುಗದಿರುವುದು ವಿಷಾದದ ಸಂಗತಿಯಾಗಿದೆ.

೭. ಕನ್ನಡ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ : ೧೯೭೦ ರಷ್ಟು ಪೂರ್ವದಲ್ಲಿ ಕನ್ನಡ ವಿಭಾಗ ಅಸ್ತಿತ್ವಕ್ಕೆ ಬಂದರೂ, ಹಸ್ತಪ್ರತಿಗಳ ಸಂಗ್ರಹಕಾರ್ಯ ಇಲ್ಲಿ ಪ್ರಾರಂಭವಾದುದು ೧೯೮೫ರಲ್ಲಿ. ಅಲ್ಲಿಂದ ಈಚೆ ಕೆಲವೆ ವರ್ಷಗಳಲ್ಲಿ ೧೭೩೫ ಹಸ್ತಪ್ರತಿಗಳನ್ನು ಸಂಗ್ರಹಿಸಿದುದು ಒಂದು ಸಾಧನೆಯೆಂದೇ ಹೇಳಬೇಕು. ೨೦೦೦ ಪ್ರತಿಗಳ ವಿವರಣಾತ್ಮಕ ಸೂಚಿ ಸಿದ್ಧವಾಗಿದ್ದು, ಪ್ರಕಟಣೆಯ ದಾರಿ ಕಾಯುತ್ತಲಿದೆ. 'ಕುಮಾರವಿಜಯ ವಿಳಾಸ' ಹೆಸರಿನ ಕಾವ್ಯ ಸಂಪಾದಿತವಾಗಿ ಪ್ರಕಟಗೊಂಡಿದ್ದು, ಸಂಪಾದನವಿಭಾಗ ಸಬಲಗೊಳ್ಳುವುದು ಅವಶ್ಯವಿದೆ.

೮. ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು : ಈ ಸಂಸ್ಥೆ ೧೯೮೨ ರಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯವನ್ನು ಪ್ರಾರಂಭಿಸಿ ಈಗಾಗಲೇ ಸುಮಾರು ೩೦೦ ಕಟ್ಟುಗಳನ್ನು ಕಲೆಹಾಕಿದೆ.

ಕನ್ನಡ, ಸಂಸ್ಕೃತ, ತುಳು ಭಾಷೆಯ ಪ್ರತಿಗಳ ಈ ಸಂಗ್ರಹದಲ್ಲಿ ತೊರವೆ ರಾಮಾಯಣ, ಜೈಮಿನಿಭಾರತ, ಕುಮಾರವ್ಯಾಸಭಾರತ, ಭಾಗವತ ಕೃತಿಗಳಲ್ಲದೆ, ಕೆಲವು ಯಕ್ಷಗಾನ ಕೃತಿಗಳೂ ಇವೆ. ೧೭ ನೆಯ ಶತಮಾನದ ವಿಷ್ಣುತುಂಗನ 'ಶ್ರೀ ಭಾಗವತೋ' ಕೃತಿಯನ್ನು ಸಂಪಾದಿಸಿ ಪ್ರಕಟಿಸಲಾಗಿದ್ದು, ಇನ್ನೂ ಸೂಚಿಯನ್ನು ಸಿದ್ಧಪಡಿಸಿಲ್ಲ.

೯. ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದ್ರಾಬಾದ : ಈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಡಿ.ಕೆ.ಭೀಮಸೇನರಾವ್ ಅವರ ಪ್ರಯತ್ನದ ಫಲವಾಗಿ ಇಲ್ಲಿ ಕೆಲವು ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟವು. ಇವುಗಳಲ್ಲಿ ಬಹುಪಾಲು ಹೈದ್ರಾಬಾದಕ್ಕೆ ವಲಸೆ ಹೋಗಿದ್ದ ಸವಣೂರು ನವಾಬರ ಸಂಗ್ರಹಕ್ಕೆ ಸಂಬಂಧಿಸಿದುದಾಗಿದೆ. ಇಲ್ಲಿ ಶಬ್ದಮಣಿದರ್ಪಣದ ವಿಶಿಷ್ಟ ಹಸ್ತಪ್ರತಿ ಇದ್ದು, ಇತ್ತೀಚೆಗೆ ಇದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟವಾಗಿದೆ. ಡಾ. ಬಿ.ರಾಮಚಂದ್ರರಾವ್, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಈ ಪ್ರತಿಗಳ ಸೂಚಿಯನ್ನು ಪ್ರಕಟಿಸಿದ್ದಾರೆ.

೧೦. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ಆಧುನಿಕ ಕರ್ನಾಟಕವನ್ನು ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ ಈ ಸಂಸ್ಥೆ, ಮೊದಮೊದಲು ಹಸ್ತಪ್ರತಿ ಸಂಗ್ರಹಕಾರ್ಯವನ್ನು ಉಪೇಕ್ಷಿಸಿತೆಂದೇ ಹೇಳಬೇಕು. ಇತ್ತೀಚೆಗೆ ೧೯೭೫ರ ಸುಮಾರಿಗೆ ಈ ಕಾರ್ಯವನ್ನು ಪ್ರಾರಂಭಿಸಿ, ಈಗಾಗಲೇ ಸುಮಾರು ೫೦೦ ಕಟ್ಟುಗಳನ್ನು ಸಂಗ್ರಹಿಸಿದೆ. ಇವುಗಳಲ್ಲಿ ವಡ್ಡಾರಾಧನೆ, ರಾಮಚಂದ್ರ ಚರಿತಪುರಾಣ, ಭರತೇಶ ವೈಭವ, ಪ್ರಭುಲಿಂಗಲೀಲೆ, ಕುಮಾರವ್ಯಾಸಭಾರತ ಮೊದಲಾದ ಹಸ್ತಪ್ರತಿಗಳು ಸೇರಿಕೊಂಡಿವೆ. ಇಲ್ಲಿಯ ಆದಿಪುರಾಣದ ಒಂದು ಹಸ್ತಪ್ರತಿಯಲ್ಲಿ ಆರು ಹೊಸ ಪದ್ಯಗಳಿರುವುದು ವಿಶೇಷ. ಈ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸಿದ್ದರೂ ಅದು ಇನ್ನೂ ಪ್ರಕಟವಾಗಿಲ್ಲ. ಮೊದಲಿನಿಂದಲೂ ಪಂಪಭಾರತ, ಪಂಪ ರಾಮಾಯಣ, ಶಬ್ದಮಣಿದರ್ಪಣಗಳಂಥ ಕೃತಿಗಳನ್ನು ಪರಿಷ್ಕರಿಸಿದ ಪರಿಷತ್ತು, ತನ್ನ ಭಾಂಡಾರದ ನೆರವಿನಿಂದ ಹೊಸ ಹೊಸ ಕೃತಿಗಳ ಪರಿಷ್ಕರಣಕಾರ್ಯಾವನ್ನು ಕೈಕೊಳ್ಳಬೇಕಿದೆ.

೧೦. ಸಂಸ್ಕೃತ ಮಹಾಪಾಠಶಾಲೆ, ಮೈಸೂರು : ಇಲ್ಲಿಯ ಹಸ್ತಪ್ರತಿಗಳು ಮೂಲತಃ ಮೈಸೂರು ಅರಮನೆಗೆ ಸಂಬಂಧಿಸಿದುವು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಗೆ ಬೆಂಕಿಬಿದ್ದ ಸಮಯದಲ್ಲಿ ಉಳಿದುಕೊಂಡಿದ್ದ ಕೆಲವು ಹಸ್ತಪ್ರತಿಗಳನ್ನು ಜಗನ್ಮೋಹನ ಅರಮನೆಯಲ್ಲಿ ಇಡಲಾಗಿದ್ದಿತು. ೧೮೭೬ರಲ್ಲಿ ಚಾಮರಾಜ ಒಡೆಯರ್ ಅವರ ಪೋಷಕನಗಿದ್ದ ಕರ್ನಲ್ ಬಿ.ಬಿ.ಮ್ಯಾರಿಸನ್ ಇವುಗಳನ್ನು ಸಂಸ್ಕೃತ ಮಹಾಪಾಠಶಾಲೆಗೆ ವರ್ಗಾಯಿಸಿದ. ಇಲ್ಲಿಯ ಹಸ್ತಪ್ರತಿ ಸಂಖ್ಯೆ ೨೫೦೦. ಇವುಗಳಲ್ಲಿ ಸುಮಾರು ೨೫೦ ಕನ್ನಡ ಕೃತಿಗಳಿವೆ. ಇವುಗಳಲ್ಲಿ ವಚನಸಾಹಿತ್ಯಕ್ಕೆ ಸಂಬಂಧಪಟ್ಟವು ಅಧಿಕ. ಏಕೋತ್ತರ ಶತಸ್ಥಲ, ಗಣಭಾಷ್ಯರತ್ನಮಾಲೆ, ದೀಕ್ಷಾಬೋಧೆ, ಪ್ರಭುಲಿಂಗಲೀಲೆ ಮೊದಲಾದ ಕೃತಿಗಳೂ, ಜ್ಞಾನಯ್ಯನ ಪದಗಳು, ಶಿವಯ್ಯನ ಪದಗಳು, ಪದಗಳ ಸಂಗ್ರಹ ಹೆಸರಿನ ಹಾಡಿನ ಸಂಕಲನಗಳೂ ಇಲ್ಲಿ ಕಂಡು ಬರುತ್ತವೆ. ಈ ಮೊದಲು ಸಿದ್ಧಪಡಿಸಿದ್ದ ವರ್ಣನಾತ್ಮಕ ಹಸ್ತಪ್ರತಿಸೂಚಿ ಅರಮನೆಗೆ ಬೆಂಕಿಬಿದ್ದ ಸಂದರ್ಭದಲ್ಲಿ ಸುಟ್ಟುಹೋಯಿತೆಂದು ತಿಳಿದುಬರುತ್ತದೆ. ಅರಮನೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಇದು ಅರಮನೆಯಿಂದಲೂ, ಸರಕಾರದಿಂದಲೂ ನೆರವು ಇಲ್ಲದೆ ಸೊರಗಿಹೋಗುತ್ತಲಿದೆ. "ದಿ ಲಿಸ್ಟ ಆಫ್ ದಿ ಅನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ

ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸರಸ್ವತೀ ಭಾಂಡಾರ (ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು)" ಹೆಸರಿನ ಸೂಚಿಯನ್ನು ಈ ಸಂಸ್ಥೆ ಪ್ರಕಟಿಸಿದೆ.

೧೨. ದಿ ಅಕಾಡೆಮಿ ಸಂಸ್ಕೃತ ರೀಸರ್ಚ, ಮೇಲುಕೋಟೆ : ಸರಕಾರದಿಂದ ಅನುದಾನಿತವಾದ ಈ ಸಂಸ್ಥೆ ೧೯೭೭ ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಹೆಸರೇ ಸೂಚಿಸುವಂತೆ ಇದು ಸಂಸ್ಕೃತ ಸಾಹಿತ್ಯ ಸಂಶೋಧನೆಯ ಸಂಸ್ಥೆಯಾಗಿದ್ದು, ಇಲ್ಲಿ ಸುಮಾರು ೮೦೦೦ ಸಂಸ್ಕೃತ ಹಸ್ತಪ್ರತಿಗಳಿವೆ. ಇವುಗಳಲ್ಲಿ ಸುಮಾರು ೭೫ ಕನ್ನಡ ಪ್ರತಿಗಳೂ ಸೇರಿಕೊಂಡಿವೆ. ಕುಮಾರವ್ಯಾಸಭಾರತ, ಜೈಮಿನಿಭಾರತದ ಪ್ರತಿಗಳೇ ಅಧಿಕಸಂಖ್ಯೆಯಲ್ಲಿದ್ದು, ಗಿರಿಜಾಕಲ್ಯಾಣ, ಅನಂತನಾಥ ಪುರಾಣ ಪ್ರತಿಗಳಿರುವದು ವಿಶೇಷ.

೧೩. ಶ್ರೀಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ : ಈ ಸಂಸ್ಥೆ ೧೯೮೮ ರಲ್ಲಿ ಪ್ರಾರಂಭವಾಯಿತು. ಶ್ರೀ ಎಸ್.ಉಮಾಪತಿ ಶಾಸ್ತ್ರಿ ಅವರ ವಶದಲ್ಲಿದ್ದ ಹಸ್ತಪ್ರತಿಗಳನ್ನು ಒಳಗುಮಾಡಿಕೊಂಡು ಇಲ್ಲಿ ೨೦೦೦ ತಾಳೆಗರಿ ಕಟ್ಟುಗಳು, ೧೦೦೦ ಕಾಗದಪ್ರತಿಗಳು ಸಂಗ್ರಹಿಸಲ್ಪಟ್ಟಿವೆ. ತಾಳೆಪ್ರತಿಗಳ ವಿವರಣಾತ್ಮಕ ಸೂಚಿ, ಯಕ್ಷಗಾನಗಳ ವಿವರಣಾತ್ಮಕ ಸೂಚಿ (ಕನ್ನಡ, ಹಿಂದಿ, ಇಂಗ್ಲೀಷ್) ಅಚ್ಚಿಗಾಗಿ ದಾರಿ ಕಾಯುತ್ತಲಿವೆ. ಈ ಸಂಸ್ಥೆ ಪ್ರಾಚೀನ ಕೃತಿಗಳ ಪರಿಷ್ಕರಣ ಮತ್ತು ಪ್ರಕಟನಕಾರ್ಯವನ್ನು ಕೈಗೆತ್ತಿಕೊಳ್ಳಬೇಕಿದೆ.

೧೪. ಕೆಳದಿ ವಸ್ತುಸಂಗ್ರಹಾಲಯ : ಪ್ರಾಚೀನ ಅವಶೇಷ, ಹಸ್ತಪ್ರತಿಗಳನ್ನು ವ್ಯಕ್ತಿಮಟ್ಟದಲ್ಲಿ ಸಂಗ್ರಹಿಸತೊಡಗಿದ ಶ್ರೀ ಕೆಳದಿ ಗುಂಡಾಜೋಯಿಸರು ೧೯೬೦ ರಲ್ಲಿ ಕೆಳದಿ ಮ್ಯೂಜಿಯಂನ್ನು ಅಸ್ತಿತ್ವಕ್ಕೆ ತಂದರು. ಈಗ ಇಲ್ಲಿ ೭೭೦ ತಾಳೆಗರಿಕಟ್ಟು, ೮೫೦ ಕಾಗದ ಕಟ್ಟುಗಳಿವೆ. ಕನ್ನಡ, ಸಂಸ್ಕೃತ, ತೆಲುಗು ಭಾಷೆಯ ಕೃತಿಗಳಾಗಿರುವ ಇವು ಕನ್ನಡ, ದೇವನಾಗರಿ, ತೆಲುಗು, ತಿಗಳಾರಿ ಲಿಪಿಯಲ್ಲಿ ಬರೆಯಲ್ಪಟ್ಟಿವೆ. ಕೆಳದಿ ವೆಂಕಣ್ಣ ಕವಿಯ ಕೃತಿಗಳು, ತುರಂಗ ಭಾರತ, ಬಸಪ್ಪನಾಯಕನ ಶಿವತತ್ವರತ್ನಾಕರ ಮೊದಲಾದುವು ಇಲ್ಲಿಯ ಮಹತ್ವದ ಕೃತಿಗಳಾಗಿವೆ. ಈ ಸಂಸ್ಥೆ "ವರ್ಣನಾತ್ಮಕ ಹಸ್ತಪ್ರತಿ ಸೂಚಿ" ಹೆಸರಿನ ಒಂದು ಸಂಪುಟವನ್ನು ಪ್ರಕಟಿಸಿದೆ (ಸಂ.ಡಾ.ಎಸ್.ಆರ್.ರಾವ್ ೧೯೮೫). "ಕೆಳದಿ ವೆಂಕಣ್ಣನ ಕೃತಿಗಳು" ಹೆಸರಿನ ಕೃತಿ ಈ ಕೇಂದ್ರದಿಂದ ಪ್ರಕಟವಾಗಿದೆ.

೧೫. ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು : ೧೯೭೯ ರಲ್ಲಿ ಪ್ರಾರಂಭವಾದ ಈ ಸಂಸ್ಥೆ, ಸಂಸ್ಥಾಪಕ ಅಧ್ಯಕ್ಷ ಶ್ರೀ ಎಂ.ವಿ.ಸೀತಾರಾಮಯ್ಯ ಅವರ ಆಸಕ್ತಿ ಕಾರಣವಗಿ ಈ ವರೆಗೆ ಸುಮಾರು ೧೦೦೦ ಹಸ್ತಪ್ರತಿ ಕಟ್ಟುಗಳನ್ನು ಸಂಗ್ರಹಿಸಿದೆ, "ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ-೧" ಹೆಸರಿನ ಸೂಚಿಯನ್ನು ಪ್ರಕಟಿಸಲಾಗಿದೆ. ೯೬ ಪ್ರತಿಗಳ ವಿವರಣೆಯನ್ನೊಳಗೊಂಡ ಇದರ ಸಂಪಾದಕರು ಶ್ರೀ ಕೆಳದಿ ಗುಂಡಾಜೋಯಿಸ್ ಮತ್ತು ನಾ.ಗೀತಾಚಾರ್ಯ. ಈ ಸಂಸ್ಥೆ ಸೂತಭಾರತ, ಶ್ರೀ ಕೃಷ್ಣದೇವರಾಯ ದಿನಚರಿ, ಕೀರ್ತನ ಕುಸುಮಾಂಜಲಿ ಮೊದಲಾದ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದೆ.

೧೬. ಶಿವಯೋಗ ಮಂದಿರ : ಈ ಶತಮಾನದ ಮೊದಲ ದಶಕದಲ್ಲಿ ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ಕೈಕೊಂಡ ಈ ಸಂಸ್ಥೆ, ೧೯೬೧ರ ಹೊತ್ತಿಗೆ ಸುಮಾರು ೧೦೦೦ ದಷ್ಟು ತಾಳೆಪ್ರತಿ, ೫೦೦ ರಷ್ಟು ಕಾಗದ ಪ್ರತಿಗಳನ್ನು ಸಂಗ್ರಹಿಸಿದ್ದಿತು. ಡಾ.ಫ.ಗು.ಹಳಕಟ್ಟಿ ಮೊದಲಾದವರು ಈ ಹಸ್ತಪ್ರತಿಗಳ

ಪ್ರಯೋಜನ ಪಡೆದಿದ್ದಾರೆ. ಕೆಲವು ಹಸ್ತಪ್ರತಿಗಳು ವಿದ್ವಾಂಸರ ವಶದಲ್ಲಿ ಉಳಿದು, ಈ ಭಾಂಡಾರದ ಸಂಪತ್ತು ಕೆಲಮಟ್ಟಿಗೆ ಕರಗಿ ಹೋಯಿತು. ನೋಡಿಕೊಳ್ಳುವ ಸೂಕ್ತ ವ್ಯಕ್ತಿಗಳಿಲ್ಲದೆ ಹಸ್ತಪ್ರತಿಗಳು ಉಪೇಕ್ಷೆಗೆ ಗುರಿಯಾಗಿವೆ. ಇವುಗಳ ರಕ್ಷಣೆ, ಸೂಚೀಕರಣ ಇಂದಿನ ಬಹುಮುಖ್ಯ ಕೆಲಸವಾಗಿದೆ.

ಕನ್ನಡ ಹಸ್ತಪ್ರತಿಸೂಚಿಗಳು :

ಆಧುನಿಕ ಹಸ್ತಪ್ರತಿ ಭಾಂಡಾರಗಳು ಸೂಚೀರಚನೆಯನ್ನು ಒಂದು ಶಿಸ್ತನ್ನಾಗಿ ಬೆಳೆಸಿವೆ. ಒಂದು ಶೈಕ್ಷಣಿಕ ಶಿಸ್ತಾಗದಿದ್ದರೂ, ಓದುಗರ ಪ್ರಯೋಜನ ದೃಷ್ಟಿಯಿಂದ ಸೂಚಿಯನ್ನು ರಚಿಸುವುದು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಅದು, ಒಂದು ಕಟ್ಟಿನಲ್ಲಿ ಅಡಕವಾಗಿರುವ ಕೃತಿಗಳ ಪಟ್ಟಿಯನ್ನು ಅದರ ಮೊದಲಿನ ಇಲ್ಲವೆ ಕೊನೆಯ ಪುಟದಲ್ಲಿ ಬರೆಯುವ ರೂಪದ್ದಾಗಿರುತ್ತಿದ್ದಿತ್ತು. ಕಟ್ಟು ಕಳೆದುಹೋಗಿ ಉಳಿದುಕೊಂಡಿರಬಹುದಾದ ಇಂಥ ಯಾದಿ ಕೆಲವೊಮ್ಮೆ ಅಪೂರ್ವ ಸಂಗತಿಯನ್ನು ಹೊರಗೆಡಹುವುದು ಸಹಜ. ಐನೂಲಿಯಲ್ಲಿ ಸಿಕ್ಕ ಇಂಥ ಒಂದು ಪುಟ ನನಗೆ ಕವಿರಾಜಮಾರ್ಗ ಹಸ್ತಪ್ರತಿಯ ಶೋಧಕ್ಕೆ ಸಹಾಯ ಮಾಡಿತೆಂಬುದನ್ನು ಇಲ್ಲಿ ನೆನೆಯಬಹುದು.[೩] ಬೆಂಗಳೂರು ವಿಶ್ವವಿದ್ಯಾಲಯದ ಕೆ. ೧೨೮:೧೧ ಸಂಖ್ಯೆಯ ಕಟ್ಟಿನಲ್ಲಿ "ಶ್ರೀ ಶುಭಮಸ್ತು । ಮುಳುವಳ್ಳಿ ಮಠದಲ್ಲಿಹ ಪುಸ್ತಕದ ವಿವರ" ಎಂದು ಹೇಳಿ, ಅಲ್ಲಿಯ ಪುಸ್ತಕಗಳ ಯಾದಿಯನ್ನು ಕೊಡಲಾಗಿದೆ. ಇದಲ್ಲದೆ ಜೈಮಿನಿ ಭಾರತದ ತಾಳೆಪ್ರತಿ (ಮಹಸೂ V-೯೫೬) ಯಲ್ಲಿ ೬೦೦ ಗ್ರಂಥಗಳ ಹೆಸರಿರುವ ಸೂಚೀಪತ್ರವಿರುವ ವಿಷಯ ತಿಳಿದುಬರುತ್ತದೆ.

ಆಧುನಿಕ ಕಾಲಕ್ಕೆ ಬಂದರೆ, ಸೂಚಿ ರಚಿಸುವ ಕ್ರಿಯೆ ಭಾರತದಲ್ಲಿ ಸರ್ ವಿಲಿಯಂ ಜೋನ್ಸ್ (೧೮೦೭) ಅವರಿಂದ ಪ್ರಾರಂಭವಾಯಿತು. ಕನ್ನಡಕ್ಕೆ ಬಂದರೆ ೧೮೨೮ರಲ್ಲಿ ಪ್ರಕಟವಾದ 'ಮೆಕೆಂಝಿ ಕಲೆಕ್ಷನ್: ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಮ್ಯಾನ್ಯುಸ್ಕ್ರಿಪ್ಟ್ಸ್' ಎಂಬುದೇ ಪ್ರಥಮಸೂಚಿಯಾಗಿದೆ. ಆ ಮೇಲೆ ಮೈಸೂರು, ಧಾರವಾಡ, ಬೆಂಗಳೂರು, ಹೈದ್ರಾಬಾದ ವಿಶ್ವವಿದ್ಯಾಲಯಗಳು, ಕರ್ನಾಟಕದ ಒಳಹೊರಗಿನ ವೈಯಕ್ತಿಕ ಸಂಸ್ಥೆಗಳು ಹಸ್ತಪ್ರತಿಸೂಚಿಗಳನ್ನು ಪ್ರಕಟಿಸಿವೆ.[೪] ಇವುಗಳನ್ನು ಯಾದಿರೂಪದ ಸೂಚಿ, ವಿವರಣಾತ್ಮಕ ಸೂಚಿ, ಲೇಖರೂಪದ ಸೂಚಿಯೆಂದು ವರ್ಗೀಕರಿಸಬಹುದು. ಕನ್ನಡ ಹಸ್ತಪ್ರತಿಗಳನ್ನು ಕುರಿತು ಈ ವರೆಗೆ ಪ್ರಕಟವಾದ ಈ ಎಲ್ಲ ಬಗೆಯ ಸೂಚಿಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ೧. ಮದ್ರಾಸ ಹಸ್ತಪ್ರತಿ ಸೂಚಿಗಳು ೨. ಮೈಸೂರು ಹಸ್ತಪ್ರತಿ ಸೂಚಿಗಳು ೩. ಧಾರವಾಡ ಹಸ್ತಪ್ರತಿ ಸೂಚಿಗಳು ೪. ಬೆಂಗಳೂರು ಮತ್ತು ಹೈದ್ರಾಬಾದ ಹಸ್ತಪ್ರತಿ ಸೂಚಿಗಳು ೫. ಇತರ ಸೂಚಿಗಳು ೬. ಲೇಖನರೂಪದ ಸೂಚಿಗಳು ಎಂದು ವರ್ಗೀಕರಿಸಿ ಈ ಕೆಳಗಿನಂತೆ ಕೊಡಬಹುದು :

---

೩. ನೃಪತುಂಗಾಭ್ಯುದಯ-ಮಾರ್ಗ I ೧೨

೪. ಮೈಹಸೂ I-೨೯೩

ಕನ್ನಡ ಹಸ್ತಪ್ರತಿಸೂಚಿಗಳು

ಕ್ರ.ಸಂ.	ಸೂಚಿಯ ಹೆಸರು	ಸಂಪಾದಕರು	ಪ್ರಕಟನೆ–ಇಸ್ವಿ	ಪ್ರತಿಸಂಖ್ಯೆ
೧	೨	೩	೪	೫
	೧). ಮದ್ರಾಸ ಹಸ್ತ ಪತ್ರಿಸೂಚಿಗಳು			
೧.	ದಿ ಮೆಕೆಂಝಿ ಕಲೆಕ್ಶನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್.	ಎಚ್.ಎಚ್. ವಿಲನ್ಸ್	೧೮೨೮	೧೫೨
೨.	ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಒರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ್	–	೧೮೯೩	–
೩.	ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ್	ಎಸ್. ಕುಪ್ಪುಸ್ವಾಮಿಶಾಸ್ತ್ರಿ	೧೯೨೯	೧೫೪೦
೪.	ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕಿರಿಪ್ಟ್ ಲೈಬ್ರರಿ, ಮದ್ರಾಸ	ಟಿ. ಚಂದ್ರಶೇಖರನ್	೧೯೫೨	೧೮೨೯
೫.	ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ. ಸಂಪುಟ–೧	ಕುಪ್ಪುಸ್ವಾಮಿಶಾಸ್ತ್ರಿ	೧೯೩೪	೧೩೮
೬.	ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ್. ಸಂಪುಟ–೨	ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಪಿ.ಪಿ.ಎಸ್. ಶಾಸ್ತ್ರಿ	೧೯೩೭	೨೭೮
೭.	ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ. ಸಂಪುಟ–೩	ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಪಿ.ಪಿ.ಎಸ್. ಶಾಸ್ತ್ರಿ	೧೯೩೯	೧೫೮

೮.	ಎ ಡಿಸ್ಕ್ರಿಪ್ಟಿವ್ ಕೆಟಲಾಗ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ. ಸಂಪುಟ–೪	ಎ. ಶಂಕರನ್	೧೯೪೬	೩೪೮
೯.	ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ. ಸಂಪುಟ–೫	ಟಿ. ಚಂದ್ರಶೇಖರನ್	೧೯೫೧	೨೧೩
೧೦.	ಎ ಡಿಸ್ಕ್ರಿಪ್ಟಿವ್ ಕೆಟಲಾಗ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ. ಸಂಪುಟ–೬	ಟಿ. ಚಂದ್ರಶೇಖರನ್	೧೯೫೨	೨೩೩
೧೧.	ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ್. ಸಂಪುಟ–೭	ಟಿ. ಚಂದ್ರಶೇಖರನ್	೧೯೫೮	೧೪೪
೧೨.	Mackenzie Manuscripts : Summaries of the Historical Manuscripts in the Mackenzie collecion Vol. II (Telugu, kannads, Marathi)	T.V. Mahalingam	1976	-
	೨) ಮೈಸೂರು ಹಸ್ತ ಪ್ರತಿಸೂಚಿಗಳು			
೧೩.	ಮೈಸೂರು ಗವರ್ನಮೆಂಟ ಓರಿಯೆಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರಹದ ಪುಸ್ತಕಗಳ ಪಟ್ಟಿ	–	೧೯೨೧	೧೫೧೧
೧೪.	ಮೈಸೂರು ಗವರ್ನಮೆಂಟ ಓರಿಯೆಂಟಲ್ ಲೈಬ್ರರಿ ೧೯೨೨ ರಿಂದ ೧೯೨೯ರ ವರೆಗಿನ ಅವಧಿಯಲ್ಲಿ ಸಂಗ್ರಹಿಸಿದ ಅಚ್ಚಿನ ಮತ್ತು ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ.	–	೧೯೩೦	೧೬೪
೧೫.	ಮೈಸೂರು ಯುನಿವರ್ಸಿಟಿ ಓರಿಯೆಂಟಲ್ ರೀಸರ್ಚ ಇನ್‌ಸ್ಟಿಟ್ಯೂಟದಲ್ಲಿ ೧೯೪೧ರಿಂದ ೧೯೫೪ರ ವರೆಗೆ	–	೧೯೫೫	೧೪೪

	ಸಂಗ್ರಹಿಸಿರುವ ಕೈಬರಹದ ಪುಸ್ತಕಗಳ ಪಟ್ಟಿ			
೧೬.	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚಿನೀ (೧೮೯೧ರಿಂದ ೧೯೫೧ರ ವರೆಗೆ)	–	೧೯೫೫	೧೮೨೭
೧೭.	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪತ್ರಿಗಳ ವರ್ಣನಾತ್ಮಕ ಸೂಚಿ. ಸಂಪುಟ–೧	ಬಿ.ಎಸ್. ಸಣ್ಣಯ್ಯ	೧೯೭೨	೪೯೭
೧೮.	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ. ಸಂಪುಟ–೨	ಬಿ.ಎಸ್. ಸಣ್ಣ ಯ್ಯ	೧೯೭೨	೫೧೪
೧೯.	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ. ಸಂಪುಟ–೩	ಬಿ.ಎಸ್. ಸಣ್ಣಯ್ಯ	೧೯೭೩	೪೧೪
೨೦.	ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂಪುಟ–೪	ಬಿ.ಎಸ್. ಸಣ್ಣಯ್ಯ	೧೯೭೩	೫೪೮
೨೧.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ–೫	ಬಿ.ಎಸ್. ಸಣ್ಣಯ್ಯ	೧೯೮೦	೭೩೫
೨೨.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂಪುಟ–೬	ಬಿ.ಎಸ್. ಸಣ್ಣಯ್ಯ	೧೯೮೦	೭೪೪
೨೩.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂಪುಟ–೭	ಬಿ.ಎಸ್. ಸಣ್ಣಯ್ಯ	೧೯೮೦	೮೦೨
೨೪.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂಪುಟ–೮	ಬಿ.ಎಸ್. ಸಣ್ಣಯ್ಯ	೧೯೮೦	೬೨೬
೨೫.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಸಂಪುಟ–೯	ಬಿ.ಎಸ್. ಸಣ್ಣಯ್ಯ	೧೯೮೧	೩೨೮+೧೩೮
೨೬.	ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲ್ಮ ಸೂಚಿ	ಬಿ.ಸ್. ಸಣ್ಣ ಯ್ಯ	೧೯೮೮	೧೩೨೪

೩) ಧಾರವಾಡ ಹಸ್ತ ಪತ್ರಿ ಸೂಚಿಗಳು

೨೭.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೧	ಆರ್.ಎಸ್. ಪಂಚಮುಖಿ	೧೯೫೩	೫೭
೨೮.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೨	ಎಸ್.ಎಸ್. ಮಾಳವಾಡ ಬಿ.ಎಸ್. ಕುಲಕರ್ಣಿ	೧೯೫೫	೪೪
೨೯.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೩	ಬಿ.ಎಸ್. ಕುಲಕರ್ಣಿ	೧೯೫೭	೪೮
೩೦.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೪	ವಿ.ಎಂ ಅಣ್ಣಿಗೇರಿ ಎಸ್.ಬಿ. ಪುರೋಹಿತ	೧೯೬೧	೮೫
೩೧.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೫	ಬಿ.ಎಸ್. ಕುಲಕರ್ಣಿ	೧೯೬೪	೮೦
೩೨.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೬	ಬಿ.ಎಸ್. ಕುಲಕರ್ಣಿ	೧೯೬೫	೮೫
೩೩.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೭	ಬಿ.ಎಸ್. ಕುಲಕರ್ಣಿ ಎಸ್.ಬಿ. ಪುರೋಹಿತ	೧೯೬೨	೮೩
೩೪.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೮	ಬಿ.ಎಸ್. ಕುಲಕರ್ಣಿ ಎಸ್.ಬಿ. ಪುರೋಹಿತ	೧೯೬೮	೭೮
೩೫.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೯	ಬಿ.ಎಸ್. ಕುಲಕರ್ಣಿ ಎಸ್.ಬಿ. ಪುರೋಹಿತ	೧೯೭೦	೭೨
೩೬.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೧೦	ಬಿ.ಎಸ್. ಕುಲಕರ್ಣಿ	೧೯೭೬	೫೧
೩೭.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೧೧	ಬಿ.ಎಸ್. ಕುಲಕರ್ಣಿ	೧೯೮೨	೬೮
೩೮.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೧೨	ಬಿ.ಎಸ್. ಕುಲಕರ್ಣಿ	೧೯೮೩	೬೫
೩೯.	ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ ಸಂಪುಟ–೧೩	ಸಿ.ಬಿ. ಕಡಕೋಳ ಕೆ.ಪಿ. ಈರಣ್ಣ	೧೯೯೦	೮೨
೪೦.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ–೧	ಡಾ.ಬಿ.ಆರ್. ಹೀರೆಮಠ	೧೯೯೨	ಕಟ್ಟು ೧ ರಿಂದ ೧೦೦ (೩೫೪ ಪ್ರತಿ)
೪೧.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ–೨	ಡಾ. ಬಿ.ಆರ್. ಹೀರೆಮಠ	ಅಚ್ಚಿನಲ್ಲಿ	ಕಟ್ಟು ೧೦೧–೨೦೦
೪೨.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ–೩	ಡಾ. ಬಿ.ಆರ್. ಹೀರೆಮಠ	ಅಚ್ಚಿನಲ್ಲಿ	೨೦೧–೩೦೦

೪೩.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೪	ಡಾ. ಬಿ.ಆರ್. ಹೀರೆಮಠ	ಅಚ್ಚಿನಲ್ಲಿ	ಕಟ್ಟು ೩೦೧-೪೦೦
೪೪.	ಕನ್ನಸ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೫	ಡಾ. ಬಿ.ಆರ್. ಹೀರೆಮಠ	ಅಚ್ಚಿನಲ್ಲಿ	ಕಟ್ಟು ೪೦೧-೫೦೦
೪೫.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೬	ಡಾ. ವಿ.ಬಿ. ರಾಜೂರ	೧೯೯೨	೫೦೧-೬೦೦ (೩೬೭ ಪ್ರತಿ)
೪೬.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೭	ಡಾ. ವಿ.ಬಿ. ರಾಜೂರ	೧೯೯೨	೬೦೧-೭೦೦ (೩೦೬ ಪ್ರತಿ)
೮೭.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೮	ಡಾ. ವಿ.ಬಿ. ರಾಜೂರ	೧೯೯೨	೭೦೧-೮೦೦ (೨೭೯ ಪ್ರತಿ)
೪೮.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೯	ಡಾ. ವಿ.ಬಿ. ರಾಜೂರ	೧೯೯೨	೮೦೧-೯೦೦ (೩೯೭ ಪ್ರತಿ)
೪೯.	ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ-೧೦	ಡಾ. ವಿ.ಬಿ. ರಾಜೂರ	೧೯೯೨	೯೦೧-೧೦೦೦ (೨೪೫ ಪ್ರತಿ)
	೪) ಬೆಂಗಳೂರು ಮತ್ತು ಹೈದ್ರಾಬಾದ ಹಸ್ತಪ್ರತಿಸೂಚಿಗಳು			
೫೦.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ-೧ (ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರ)	ಎಸ್. ಶಿವಣ್ಣ	೧೯೮೨	೪೪೯
೫೧.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ-೨ (ಬೆಂಗಳೂರು ಬಿ.ಎಂ.ಶ್ರೀ. ಪ್ರತಿಷ್ಠಾನ)	ಕೆಳದಿ ಗುಂಡಾಜೋಯಿಸ ನಾ.ಗೀತಾಚಾರ್ಯ	೧೯೮೭	೯೬
೫೨.	ಎ ಡಿಸ್ಕ್ರಿಪ್ಟಿವ್ ಕ್ಯಾಟಲಾಗ ಆಫ್ ದಿ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಉಸ್ಮಾನಿಯಾ ಯುನಿವ್ಹರ್ಸಿಟಿ ಲೈಬ್ರರಿ	ಬಿ. ರಾಮಚಂದ್ರ ರಾವ್ ಟಿ.ವಿ. ವೆಂಕಟಾಚಲಶಾಸ್ತ್ರಿ	೧೯೬೬	೨೯೪
	೫) ಇತರ ಸೂಚಿಗಳು			
೫೩.	ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ	ಕೆ. ಭುಜಬಲಿಶಾಸ್ತ್ರಿ	೧೯೪೮	೩೫೨೮
೫೪.	ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಗಳ ವಿವರ	ದೇವಕುಮಾರಶಾಸ್ತ್ರಿ	೧೯೮೦	೪೪೮+೧೯
೫೫.	A Devanagari Printed Catalogue of	-	ಸಂ. ೧೯೦೦	-

	of the manuscriots in the Mutt of Shri Lakshmisena Bhattaraka Mahaswamin, Kolhapur.			
೫೬.	ಕೊಲ್ಲಾಪೂರ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿಯ ಹಸ್ತಪ್ರತಿ ಸೂಚಿ	ಎಂ.ಎಂ.ಕಲಬುರ್ಗಿ ಬಿ.ಆರ್. ಹಿರೇಮಠ ಎಸ್.ವಿ. ಅಯ್ಯನಗೌಡರ್	೧೯೮೮	೮೫೧
೫೭.	ಗದುಗಿನ ತೋಂಟದಾರ್ಯ ಮಠದ ಹಸ್ತಪ್ರತಿಸೂಚಿ	ಎಸ್. ಶಿವಣ್ಣ	೧೯೮೫	ಕನ್ನಡ ೧೧೪೧ ಇತರ ೨೫೬
೫೮.	ವೀರಶೈವ ಅಪ್ರಕಟಿತ ಗ್ರಂಥಸೂಚಿ	ಎಸ್. ಶಿವಣ್ಣ	೧೭೮೨	೧೨೧೨
೫೯.	ಎ ಕ್ಲಾಸಿಫೈಡ್ ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಸರಸ್ವತೀ ಭಂಡಾರಾಮ್ (ಪ್ಯಾಲೇಸ್ ಸಂಸ್ಕೃತ ಲೈಬ್ರರಿ) ಆಫ್ ಎಚ್.ಎಚ್. ಮಹಾರಾಜಾ ಅಫ್ ಮೈಸೂರು ಕಲೆಕ್ಯನ್ ಆಫ್ ೧೯೦೦–೧೯೦೫	ಎಸ್. ಶಿವಣ್ಣ	೧೯೦೫	೩೦೦
೬೦.	ದಿ ಲಿಸ್ಟ್ ಆಫ್ ದಿ ಆನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸರಸ್ವತಿ ಭಂಡಾರ (ಮಹಾರಾಜಾ ಸಂಸ್ಕೃತ ಕಾಲೇಜು ಮೈಸೂರು)	ಎಸ್. ಶಿವಣ್ಣ	೧೯೪೩	೧೦೩
೬೧.	ಎ ಕೆಟಲಾಗ್ ಆಫ್ ಸಂಸ್ಕೃತ ಪ್ರಾಕೃತ ಆ್ಯಂಡ್ ಹಿಂದಿ ವರ್ಕ್ಸ್ ಇನ್ ದಿ ಜೈನ ಸಿದ್ಧಾಂತಭವನ ಆರಾ.	ಸುಪಾರ್ಶದಾಸ ಗುಪ್ತ ಮೂಲಚಂದ್ರ ಜೈನ	೧೯೧೯	೫೦೦
೬೨.	ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಪ್ರಾಕೃತ ಮ್ಯಾನ್ಯುಸ್ಕಿರಿಪ್ಟ್ಸ್ ಇನ್ ದಿ ಸೆಂಟ್ರಲ್ ಪ್ರಾವಿನ್ಸಿಸ್ ಆ್ಯಂಡ್ ಬೆರಾರ್ (ಅನುಬಂಧ)	ರಾವಬಹದ್ದೂರ ಹೀರಾಲಾಲ	೧೯೨೬	೪೩
೬೩.	ದಿ ಅನ್‌ನೋನ್ ಪೇಜಿಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್	ಸಿ. ಮಹಾದೇವಪ್ಪ	೧೯೬೦	೧೩

೬೪.	ಶ್ರೀ ಜಗದ್ಗುರು ಮೂರುಸಾವಿರಮಠದ ವರ್ಣನಾತ್ಮಕ ಹಸ್ತಪ್ರತಿಸೂಚಿ	ಕೆಳದಿ ಗುಂಡಾಜೋಯಿಸ್	೧೯೮೯	೩೯೦
೬೫.	ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿಸೂಚಿ	ಎಸ್. ಶಿವಣ್ಣ	೧೯೯೧	೪೬೬೧
೬೬.	ಕೆಳದಿ ಸಂಗ್ರಹಾಲಯ ಮತ್ತು ಐತಿಹಾಸಿಕ ಸಂಶೋಧನ ಕೇಂದ್ರ ವರ್ಣನಾತ್ಮಕ ಹಸ್ತಪ್ರತಿಸೂಚಿ	ಎಸ್. ಆರ್. ರಾವ್ ಕೆಳದಿ ಗುಂಡಾಜೋಯಿಸ್		
	೬) ಲೇಖನ ರೂಪದ ಸೂಚಿಗಳು			
೬೭.	ಅ) ಸ್ವಾದಿಯ ಜೈನಮಠದೊಳಗಿರುವ ಕನ್ನಡ ಗ್ರಂಥಗಳು	ಕೆ.ಜಿ. ಕುಂದಣಗಾರ	ಜ.ಕ. ೭–೩	೨೮
	ಆ) ಧರಣೇಂದ್ರಪ್ಪ ಅಣ್ಣ ಆಲೂರ ಸಿರ್ಸಿ, ಇವರಲ್ಲಿನ ತಾಡಪತ್ರ ಗ್ರಂಥಗಳು		೧೯೨೯	೦೮+೨
	ಇ) ಇಸ್ಲೂರ ಮಠದಲ್ಲಿರು ವೀರಶೈವ ಗ್ರಂಥಗಳು			೨೭
೬೮.	ಕೈಬರಹದ ಗಂಥಗಳ ಶೋಧನೆಯು	ಎಸ್.ಸಿ. ನಂದಿಮಠ	ಶಿ.ವಾ. ೭–೧ (೧೯೩೨)	೨೧೫
೬೯.	ಹೈದರಾಬಾದು ಪ್ರಾಂತದಲ್ಲಿ ಕನ್ನಡ ಗ್ರಂಥಗಳ ಸಂಶೋಧನೆ	ಡಿ.ಕೆ. ಭೀಮಸೇನರಾವ್	ಕ.ಸಾ.ಪ ೨೧–೮ (೧೯೩೬)	೨೦
೭೦.	ಐನೂಲಿ ಗುಂಡಯ್ಯನ ಮನೆಯ ಸಂಗ್ರಹ	ಕಪಟರಾಳ ಕೃಷ್ಣರಾಯ	ಶ.ಸಾ. ೪–೭ (೧೯೪೧)	೮೩
೭೧.	ಹುಬಂಜ ಮಠದ ಗ್ರಂಥಗಳ ಪಟ್ಟಿ	–	ಜೈನ ಸಿದ್ಧಾಂತ ಭಾಸ್ಕರ ೧೪–೨ (೧೯೪೮)	–

೭೨.	ಕಂಚಗಲ್ಲ-ಬಿದಿರೆ ದೊಡ್ಡ ಮಠದಲ್ಲಿ ದೊತೆರ ತಾಡವೋಲೆ ಗ್ರಂಥಗಳು	ಜಿ.ಎಂ ಉಮಾಪತಿಶಾಸ್ತ್ರಿ	ಸುಕುಮಾರ ೪-೩, ೪-೯	-
೭೩.	ಗದಗ ತೋಂಟದಾರ್ಯಮಠದ ತಾಡೋಲೆ	ಜಿ.ಎಂ. ಉಮಾಪತಿಶಾಸ್ತ್ರಿ	ಸುಕುಮಾರ ೫-೩,೪ (೧೯೫೪-೫೫)	-
೭೪.	ಹಾವೇರಿ ಹಕ್ಕೇರಿಮಠದ ಓಲೆ ಸಂಗ್ರಹ	ಜಿ.ಎಂ. ಉಮಾಪತಿಶಾಸ್ತ್ರಿ	ಸುಕುಮಾರ ೫-೫ (೧೯೫೫)	-
೭೫.	ಹಾರ್ನಹಳ್ಳಿ ಕೋಡಿಮಠದ ಓಲೆಗಳು	ಜಿ.ಎಂ. ಉಮಾಪತಿಶಾಸ್ತ್ರಿ	ಸುಕುಮಾರ ೫-೮,೯ (೧೯೫೫)	-
೭೬.	ಮದರಾಸು ಅಡಿಯಾರು ಪುಸ್ತಕಾಲಯದಲ್ಲಿರುವ ಕನ್ನಡ ಗ್ರಂಥಗಳು	--	ಶ.ಸಾ. ೨೦-೬ (೧೯೫೭)	೫೬
೭೭.	ಶರಣ ಸಾಹಿತ್ಯ ಕಾರ್ಯಾಲಯದಲ್ಲಿರುವ ತಾಳೆಯೋಲೆ ಹಾಗೂ ಕಾಗದ ಪ್ರತಿಗಳು	--	ಶ.ಸಾ. ೨೧-೫ (೧೯೫೮)	-
೭೮.	ಬಳ್ಳಾರಿ ಹೊಸಪೇಟೆ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಗ್ರಂಥಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿ ಗ್ರಂಥಗಳ ಸೂಚಿ	ಜಿ.ಎಂ. ಉಮಾಪತಿ ಶಾಸ್ತ್ರಿ	ಹೇಮಕೂಟ ೧-೨ (೧೯೭೫)	೧೧೬

೭೯.	ಬಳ್ಳಾರಿ ಹೊಸಪೇಟೆ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನಮಠದ ಗ್ರಂಥಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿ ಗ್ರಂಥಗಳ ಸೂಚಿ	ಎಸ್.ಎಸ್. ಹಿರೇಮಠ	ಹೇಮಕೂಟ ೧–೧೧ (೧೯೭೬)	೧೧೬
೮೦.	ಶ್ರೀ ಬಾಹುಬಲಿ ಬ್ರಹ್ಮಚಾರ್ಯಾಶ್ರಮದಲ್ಲಿ ಮೈಕ್ರೋಫಿಲ್ಮ ಮಾಡಿರುವ ಗ್ರಂಥಗಳು	ಬಿ.ಎಸ್. ಸಣ್ಣಯ್ಯ	ಸನ್ಮತಿ ೨೨–೧ (೧೯೭೮)	೩೭
೮೧.	ಶ್ರೀ ತಾತನವರ ಮಠದ ಗ್ರಂಥಭಂಡಾರ ಸೂಚಿ	ಜಿ.ಎಂ. ಉಮಾಶಾಸ್ತ್ರಿ	ಹೇಮಕೂಟ ೪–೧೨ (೧೯೭೯)	೧೪
೮೨.	ಇಂಗ್ಲೆಂಡಿನಲ್ಲಿರುವ ಕನ್ನಡ ಹಸ್ತಪ್ರತಿಗಳು	ಎಂ.ಎಂ. ಕಲಬುರ್ಗಿ	ಮಾರ್ಗ II	೮೦

ಈ ಹಿಂದೆ ಹೇಳಿದ ಮತ್ತು ಇಲ್ಲಿಯ ವಿವರಗಳನ್ನು ನೋಡಿದರೆ ಧಾರವಾಡದ ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರಿನ ಕನ್ನಡ ಅಧ್ಯಯನ ಕೇಂದ್ರ, ಗುಲ್ಬರ್ಗಾದ ಕನ್ನಡ ವಿಭಾಗಗಳಲ್ಲಿ ಸೂಚೀರಚನಾ ಕೆಲಸ ತೀರ ಹಿಂದೆ ಬಿದ್ದಿದೆಯೆಂದು ಸ್ಪಷ್ಟವಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನ, ಶಿವಯೋಗಮಂದಿರಗಳಂಥ ಸಂಸ್ಥೆಗಳೂ ಸೂಚಿ ರಚಿಸಬೇಕೆಂಬುದು ವ್ಯಕ್ತವಾಗಿಯೇ ಗೋಚರಿಸುತ್ತದೆ.

❖❖

೪

❖

ವ್ಯವಸ್ಥಾಪನ

ಆಕರಣ ವಿಭಾಗ–ತಾಂತ್ರಿಕ ವಿಭಾಗ–ಸಂರಕ್ಷಣ ವಿಭಾಗ–ಗ್ರಂಥಸಂಪಾದನ ವಿಭಾಗ–ಗ್ರಂಥ ಪರಿಚಲನ ವಿಭಾಗ–ಅಧ್ಯಯನ ವಿಭಾಗ–ಗ್ರಂಥಾಲಯ ವಿಭಾಗ–ಯಂತ್ರೋಪಕರಣ ವಿಭಾಗ–ಪ್ರದರ್ಶನ ವಿಭಾಗ–ಸಮಾಲೋಚನ ವಿಭಾಗ–ಸಭಾಗೃಹ ವಿಭಾಗ–ವಿಶ್ರಾಂತಿ ವಿಭಾಗ.

"ಕಷ್ಟೇನ ಲಿಖಿತಂ ಮಯಾ, ಯತ್ನೇನ ಪರಿಪಾಲಯೇತ್" ಎಂದು ನಮ್ಮ ಹಸ್ತಪ್ರತಿ ಲಿಪಿಕಾರರು ಆಗಾಗ ಹೇಳಿದುದುಂಟು. 'ಕಷ್ಟಪಟ್ಟು ಬರೆದಿದ್ದೇನೆ, ಪ್ರಯತ್ನಪೂರ್ವಕ ರಕ್ಷಿಸಿರಿ' ಎಂದು ಸಮಸ್ತ ಲಿಪಿಕಾರರ ಪ್ರತಿನಿಧಿಯಾಗಿ ಈ ಲಿಪಿಕಾರರು ಇಲ್ಲಿ ಹೇಳಿದ್ದಾರೆ. ಇವರಂತೆ ಕೃತಿಕಾರರೂ –

"........ಒರೆದಂಗೆ ಬರೆದಂಗೆ ವಾಚಿಪಂ ।
ಗುರುತರಾನಂದದಿಂದಿದರ ತಾತ್ಪರ್ಯಮಂ ವಿಸ್ತರಿಸಿ ಪೇಳ್ದವಂಗೆ ।
ಪರಮಸದ್ಭಕ್ತಿಯಿಂದಾದರಿಸಿ ಕೇಳ್ದಂಗೆ .....[೧]

ಸಕಲಸೌಭಾಗ್ಯಗಳು ಒದಗಿಬರಲಿ–ಇಂದು ಹಾರೈಸಿದ್ದಾರೆ. ಪ್ರತಿಗಳ ರಕ್ಷಣೆಯೆಂದರೆ ಕೃತಿಗಳ ರಕ್ಷಣೆ, ಕೃತಿಗಳ ರಕ್ಷಣೆಯೆಂದರೆ ಅಕ್ಷರರೂಪದಲ್ಲಿ ಸಂಸ್ಕೃತಿಯನ್ನು ಸಂರಕ್ಷಿಸುವುದಾಗಿದೆ. ಹೀಗಾಗಿ ದೇಶದ ತುಂಬ ಚದರಿಹೋಗಿರುವ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುವಷ್ಟೇ ಮುಖ್ಯವಾದುದು, ಅವುಗಳ ವ್ಯವಸ್ಥಾಪನ. "ಇಂದು ಭಾರತದಲ್ಲಿ ೨೦೦ಕ್ಕೂ ಮಿಕ್ಕಿದ ಪೌರ್ವಾತ್ಯ ಸಂಶೋಧನ ಸಂಸ್ಥೆಗಳ ಹಾಗೂ ಇನ್ನಿತರ ಸಾಂಸ್ಕೃತಿಕ ಸಂಸ್ಥೆಗಳ ಗ್ರಂಥಾಲಯಗಳಲ್ಲಿ ೧೦ ಲಕ್ಷಕ್ಕೂ ಮಿಕ್ಕಿ ಹಸ್ತಪ್ರತಿಗಳಿವೆ ಎಂದು ಅಂದಾಜು ಮಾಡಲಾಗಿದೆ. ಅಚ್ಚರಿಯ ಮಾತೆಂದರೆ ಪರದೇಶಗಳ ಗ್ರಂಥಾಲಯಗಳಲ್ಲಿಯೇ ಒಂದು ಲಕ್ಷಕ್ಕೂ ಮಿಕ್ಕಿ ಭಾರತೀಯ ಹಸ್ತಪ್ರತಿಗಳಿವೆ"[೨] ಎಂಬ ಮಾತನ್ನು ನೆನೆದರೆ ಈ ಅಪೂರ್ವ ಸಂಪತ್ತಿನ ಸಂರಕ್ಷಣೆಯ ಜವಾಬ್ದಾರಿ ಬಹುಮುಖ್ಯವಾದುದೆಂದು ಸ್ಪಷ್ಟವಾಗುತ್ತದೆ.

ಹಸ್ತಪ್ರತಿಗಳ ರಕ್ಷಣೆಯ ನೆಲೆಗಳಾದ ಹಸ್ತಪ್ರತಿ ಭಾಂಡಾರಗಳನ್ನು ನೆನೆದಾಗ ಪತ್ರಾಗಾರ (Archieves) ನಮ್ಮ ಕಣ್ಣು ಮುಂದೆ ಬರುತ್ತದೆ. ಇವುಗಳಲ್ಲಿ ರಕ್ಷಿಸಲ್ಪಡುವ ಹಸ್ತಪ್ರತಿ ಮತ್ತು

೧. ಶಿವತತ್ವ ಚಿಂತಾಮಣಿ, ೫೪–೫೫
೨. ಹಸ್ತಪ್ರತಿಗಳ ವರ್ಗೀಕರಣ ಹಾಗೂ ಸೂಚೀಕರಣ (ಕೆ.ಎಸ್. ದೇಶಪಾಂಡೆ) ಕ.ಭಾ.೧೬–೧, ೨

ದಾಖಲೆಗಳ ವ್ಯತ್ಯಾಸವನ್ನು "The chief difference is that archieves are 'received' from one's parentbody where as manuscripts are 'collected' whether by gift or deposit or purchase"[೩] ಎಂದು ರಾಬರ್ಟ ಡಬ್ಲ್ಯೂ ಲೋವೆಟ್ ಹೇಳುವನಾದರೂ "ಹಸ್ತಪ್ರತಿ ಬಹುಪ್ರತಿ ರೂಪದಲ್ಲಿ ಸಿಗುವ ಸಾಮಾನ್ಯೀಕೃತ ಬರವಣಿಗೆಯಾಗಿದ್ದರೆ, ದಾಖಲೆ ಏಕಪ್ರತಿ ರೂಪದಲ್ಲಿ ಸಿಗುವ ನಿರ್ದಿಷ್ಟ ಬರವಣಿಗೆಯಾಗಿರುತ್ತದೆ" ಎಂದು ಹೇಳುವುದೇ ಸೂಕ್ತವೆಂದು ತೋರುತ್ತದೆ. ಹೀಗೆ ಭಿನ್ನ ದೃಷ್ಟಿಕೋನಗಳಲ್ಲಿ ಬೆಳೆದ ಈ ಉಭಯ ಬರೆವಣಿಗೆಗಳನ್ನು ಸಂಗ್ರಹಿಸುವ, ಸಂರಕ್ಷಿಸುವ ಕೇಂದ್ರಗಳನ್ನು ಪ್ರತ್ಯೇಕವಾಗಿಯೇ ಬೆಳೆಸುವುದು ಸರಿಯಾದ ಉಪಕ್ರಮವಾಗಿದೆ.

ಈ ಸಂದರ್ಭದಲ್ಲಿ ಸ್ಮರಣೆಗೆ ಬರುವ ಇನ್ನೊಂದು ಬಗೆಯ ಸಂಸ್ಥೆಯೆಂದರೆ ಯಂತ್ರಪ್ರತಿ ಗ್ರಂಥಭಾಂಡಾರ (Printed books library). ಹಸ್ತಪ್ರತಿಗಳಾಗಲಿ, ಯಂತ್ರಪ್ರತಿಗಳಾಗಲಿ ಗ್ರಂಥಗಳೇ ಆಗಿದ್ದ ಇವೆರಡರ ಸ್ವರೂಪ, ಪ್ರಯೋಜನ ವಿಧಾನ ಬೇರೆಯಾಗಿರುವುದರಿಂದ ಯಂತ್ರಪ್ರತಿ ಗ್ರಂಥಾಲಯದಲ್ಲಿಯ ವ್ಯವಸ್ಥೆಯನ್ನೇ ಹಸ್ತಪ್ರತಿ ಗ್ರಂಥಾಲಯಕ್ಕೂ ಇಡಿಯಾಗಿ ಅನ್ವಯಿಸುವುದು ಸೂಕ್ತ ಕಾಣುವುದಿಲ್ಲ. ಹೀಗಾಗಿ ಯಂತ್ರಪ್ರತಿ ಗ್ರಂಥಾಲಯದಿಂದ ಪ್ರತ್ಯೇಕವಾಗಿಯೇ ಹಸ್ತಪ್ರತಿ ಗ್ರಂಥಾಲಯವನ್ನು ಬೆಳೆಸಬೇಕಾಗಿದೆ.

ಹಸ್ತಪ್ರತಿ ಗ್ರಂಥಾಲಯಗಳನ್ನು ವೈಯಕ್ತಿಕ ಸಂಸ್ಥೆ, ಸಾರ್ವಜನಿಕ ಸಂಸ್ಥೆ ಮತ್ತು ಸರಕಾರಿ ಸಂಸ್ಥೆ ಎಂದು ಮೂರು ವಿಭಾಗಗಳಲ್ಲಿ ವರ್ಗೀಕರಿಸಬಹುದು. ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಸಂಸ್ಥೆ, ಮಠ–ಮಾನ್ಯಗಳ ಹಸ್ತಪ್ರತಿ ಭಾಂಡಾರಗಳು ವೈಯಕ್ತಿಕ ಸಂಸ್ಥೆಯಾದರೆ, ಕನ್ನಡ ಸಾಹಿತ್ಯ ಪರಿಷತ್ತು, ಬಸವಸಮಿತಿ ಮೊದಲಾದುವು ಸಾರ್ವಜನಿಕ ಸಂಸ್ಥೆಗಳಾಗಿವೆ. ಹಸ್ತಪ್ರತಿ ವ್ಯವಸ್ಥಾಪನೆ ಅಧಿಕ ಮೊತ್ತದ ಹಣವನ್ನು ಅಪೇಕ್ಷಿಸುವುದರಿಂದ ಇಂಥ ಭಾಂಡಾರಗಳಿಗೆ ತುಂಬ ಶ್ರೀಮಂತ ಹಿನ್ನೆಲೆ ಬೇಕಾಗುತ್ತದೆ; ಮುದ್ರಿತ ಗ್ರಂಥಾಲಯ ಸಿಬ್ಬಂದಿಯಿಂದ ಭಿನ್ನ ಮನೋಧರ್ಮದ ಸಿಬ್ಬಂದಿ ಬೇಕಾಗುತ್ತದೆ; ಹಸ್ತಪ್ರತಿ ಭಾಂಡಾರದ ಕಟ್ಟಡ ಮುದ್ರಿತ ಪ್ರತಿ ಗ್ರಂಥಭಾಂಡಾರಕ್ಕಿಂತ ಭಿನ್ನವಾಗಿರಬೇಕಾಗುತ್ತದೆ. ಈ ಎಲ್ಲ ಬಗೆಯ ಅನುಕೂಲತೆಗಳನ್ನೊಳಗೊಂಡ ಕಟ್ಟಡದಲ್ಲಿ ೧೨ ವಿಭಾಗಗಳನ್ನು ಕಲ್ಪಿಸಬಹುದಾಗಿದೆ. ೧. ಆಕರಣ ವಿಭಾಗ, ೨. ತಾಂತ್ರಿಕ ವಿಭಾಗ, ೩. ಸಂರಕ್ಷಣ ವಿಭಾಗ, ೪. ಗ್ರಂಥಸಂಪಾದನ ವಿಭಾಗ, ೫. ಗ್ರಂಥಪರಿಚಲನ ವಿಭಾಗ, ೬. ಅಧ್ಯಯನ ವಿಭಾಗ, ೭. ಗ್ರಂಥಾಲಯ ವಿಭಾಗ, ೮. ಯಂತ್ರೋಪಕರಣ ವಿಭಾಗ, ೯. ಪ್ರದರ್ಶನ ವಿಭಾಗ, ೧೦. ಸಮಾಲೋಚನ ವಿಭಾಗ, ೧೧. ಸಭಾಗೃಹ ವಿಭಾಗ, ಮತ್ತು ೧೨. ವಿಶ್ರಾಂತಿ ವಿಭಾಗ. ಈ ಎಲ್ಲ ವಿಭಾಗಗಳನ್ನೊಳಗೊಂಡುದು ಪರಿಪೂರ್ಣ 'ಹಸ್ತಪ್ರತಿವಾಸ್ತು' ಎನಿಸುತ್ತದೆ.

೧. ಆಕರಣ ವಿಭಾಗ

ಕ್ಷೇತ್ರಕಾರ್ಯಕರ್ತರು ಬೇರೆ ಬೇರೆ ಪ್ರದೇಶಗಳಿಂದ ಸಂಗ್ರಹಿಸಿ ತಂದ ಹಸ್ತಪ್ರತಿಗಳನ್ನು ಗ್ರಂಥಭಾಂಡಾರದಲ್ಲಿ ಸ್ವೀಕರಿಸುವ ವಿಭಾಗವಿದು. ಇಲ್ಲಿ ಪ್ರತಿಗಳನ್ನು ಎಣಿಸಿ ತೆಗೆದುಕೊಳ್ಳುವುದು,

---

3. Robert W. Lovertt of Aanuscript and Archieves (Special Libraries, Vol.64, p.415)

ಕೊಟ್ಟವರ-ತಂದವರ ವಿಳಾಸ-ದಿನಾಂಕಗಳನ್ನು ದಾಖಲಿಸಿಕೊಳ್ಳುವುದು, ಹಿಂದುಮುಂದಾಗಿದ್ದರೆ ಪುಟಗಳನ್ನು ಕ್ರಮವಾಗಿ ಹೊಂದಿಸುವುದು, ಮುರಿದ ತುಂಡುಗಳನ್ನು ಗಮ್‌ಟೇಪಿನಿಂದ ದುರಸ್ತಿ ಮಾಡುವುದು, ಅವಶ್ಯವೆನಿಸಿದಲ್ಲಿ ಹೊಸ ದಾರ, ಹೊಸ ಫಲಕಗಳನ್ನು ಅಳವಡಿಸುವುದು, ಹಸ್ತಪ್ರತಿಯನ್ನು ಕಟ್ಟಲು ಉಪಯೋಗಿಸಿದ್ದ ಯಾವುದೋ ಕಾಲದ ಧೂಳುತುಂಬಿದ್ದ ಅರಿವೆಯನ್ನು ತೆಗೆದುಹಾಕುವುದು, ಧೂಳು-ಬೂಷ್ಟ-ಕ್ರಿಮಿಗಳನ್ನು ದೂರಮಾಡುವುದು, ಕ್ರಿಮಿನಾಶಕ ತೈಲವನ್ನು ಲೇಪಿಸುವುದು ಈ ವಿಭಾಗದ ಕೆಲಸವಾಗಿದೆ. ಈ ಎಲ್ಲ ಕಾರ್ಯಗಳಿಗೆ ಅವಶ್ಯವಾದ ಟೇಪು, ಕತ್ತರಿ, ಅಂಟು, ದಾರ, ಫಲಕ, ಕ್ರಿಮಿನಾಶಕ ತೈಲ ಇತ್ಯಾದಿ ಸಣ್ಣಪುಟ್ಟ ಸಾಮಗ್ರಿಗಳು ಇಲ್ಲಿ ಬೇಕಾಗುತ್ತವೆ. ಒಟ್ಟಾಗಿ ಹಸ್ತಪ್ರತಿಯ ಜೀರ್ಣೋದ್ಧಾರಕಾರ್ಯ ಇಲ್ಲಿ ನಡೆಯುತ್ತದೆ. ಇವುಗಳಲ್ಲಿ ಬಹುಮುಖ್ಯ ಕೆಲಸವೆಂದರೆ ಧೂಳು, ಬೂಷ್ಟ, ಕ್ರಿಮಿ ಮತ್ತು ದಂಶಕ ಪ್ರಾಣಿಗಳ ನಿವಾರಣೆ ಮತ್ತು ಕ್ರಿಮಿನಾಶಕ ತೈಲಲೇಪನ.

ಹಸ್ತಪ್ರತಿಗಳನ್ನು ಹಾಳುಮಾಡಲು ಧೂಳು ಬೂಷ್ಟಗಳೂ ಕಾರಣವಾಗುತ್ತವೆ. ಧೂಳು ಕಾರಣವಾಗಿ ಹಸ್ತಪ್ರತಿಯಲ್ಲಿ ಸೇರಿಕೊಳ್ಳುವ ಅಂಡಾಣುಗಳಿಂದ ಕ್ರಿಮಿಗಳು ಹುಟ್ಟಿಕೊಳ್ಳುತ್ತವೆ. ಮಳೆಗಾಲದ ತೇವಾಂಶದಿಂದಾಗಿ ಧೂಳು ಕೆಸರಿನಂತಾಗಿ ಅಕ್ಷರ ಮಸಕಾಗುತ್ತವೆ. ಈ ಅಪಾಯವನ್ನು ತಪ್ಪಿಸುವ ಸಲುವಾಗಿ ಧೂಳನ್ನು ಸರಿಯಾಗಿ ಜಾಡಿಸಿ, ಒರೆಸಿ ತೆಗೆಯಬೇಕು, ಮಳೆಗಾಲದಲ್ಲಿ ಹಸ್ತಪ್ರತಿಗಳ ಮೇಲ್ಭಾಗದಲ್ಲಿ ಬಿಳಿಯ ಬೂಷ್ಟ ಆವರಿಸುತ್ತದೆ. ಇದು ಗ್ರಂಥದಿಂದ ಗ್ರಂಥಕ್ಕೆ ಹರಡುವ ಸಾಧ್ಯತೆಯುಂಟು. ಇದರಿಂದಾಗಿ ಎಲೆಗಳು ಒಂದಕ್ಕೊಂದು ಬಿಡಿಸಲಾರದಂತೆ ಅಂಟಿಕೊಳ್ಳುತ್ತವೆ. ಬಿಡಿಸಲು ಹೋದರೆ ಮುರಿದು ಹಾಳಾಗುವ ಸಂಭವವೇ ಹೆಚ್ಚು. ಆದುದರಿಂದ ಬೂಷ್ಟ ಬೆಳೆಯದಂತೆ ನೋಡಿಕೊಳ್ಳುವುದು, ಬೆಳೆದ ಬೂಷ್ಟನ್ನು ಒರೆಸಿ ತೆಗೆಯುವುದು ಇಲ್ಲಿ ಮೊದಲು ನಡೆಯಬೇಕಾಗುತ್ತದೆ.

ಇವೆರಡಕ್ಕಿಂತ ಹಸ್ತಪ್ರತಿಗಳನ್ನು ರಾಕ್ಷಸನಂತೆ ಹಾಳು ಮಾಡುವುವು ಕ್ರಿಮಿಗಳು. ಇಂದು ಗ್ರಂಥಗಳು ಒಂದು ಗ್ರಂಥಾಲಯದಿಂದ ಇನ್ನೊಂದು ಗ್ರಂಥಾಲಯಕ್ಕೆ ಎರವಲು ಹೋಗುವ ಸವಲತ್ತು ಇರುವ ಕಾರಣವಾಗಿ ಅವುಗಳ ಜೊತೆ ಕ್ರಿಮಿಗಳೂ ಪ್ರಾಂತದಿಂದ ಪ್ರಾಂತಕ್ಕೆ, ದೇಶದಿಂದ ದೇಶಕ್ಕೆ ವಲಸೆ ಹೋಗುತ್ತವೆ. ಇವುಗಳಲ್ಲಿ ಜಿರಲೆ ಪುಸ್ತಕವನ್ನು ತಿನ್ನುವುದಲ್ಲದೆ ತಾನು ಹೊರಬಿಡುವ ಕಪ್ಪುದ್ರವದಿಂದ ಪುಸ್ತಕದ ಬಣ್ಣವನ್ನು ನಾಶಗೊಳಿಸುತ್ತದೆ. ಇದಕ್ಕಿಂತ ಭಯಾನಕವಾದುದು ಪುಸ್ತಕ ಕ್ರಿಮಿ (ಬುಕ್‌ವರ್ಮ್). ಇದು ಕಾಗದ ಪ್ರತಿಯ ಅಂಟನ್ನು ತಿನ್ನುವುದಲ್ಲದೆ, ತಾಳೆ ಮತ್ತು ಕಾಗದ ಪ್ರತಿಗಳಲ್ಲಿ ಅನೇಕ ರೀತಿಯ ರಂಧ್ರ ಕೊರೆಯುತ್ತದೆ ಮತ್ತು ಹೊರಬಿಡುವ ದ್ರವದಿಂದ ಪುಸ್ತಕದ ಪುಟಗಳು ಅಂಟಿಕೊಳ್ಳುವಂತೆ ಮಾಡುತ್ತದೆ. ಬುಕ್‌ಲೈಸ ಹೆಸರಿನ ಬಿಳಿಯ ಹಾಗೂ ಬೂದು ಬಣ್ಣದ ಈ ಕ್ರಿಮಿಯು ಅಂಟು ತಿನ್ನುವುದಲ್ಲದೆ. ತಾಳೆಪ್ರತಿಗಿಂತ ಕಾಗದಪ್ರತಿಯನ್ನು ಹೆಚ್ಚು ನಾಶಮಾಡುತ್ತದೆ. ಸಿಲ್ವರ್‌ಫಿಶ್ ಹೆಸರಿನ ಕ್ರಿಮಿ ತೇವು ಕತ್ತಲೆ ಇರುವಲ್ಲಿ ಸೇರಿ, ಗ್ರಂಥವನ್ನು ತಿಂದು ಹಾಕುತ್ತದೆ. ಇನ್ನೊಂದು ಗ್ರಂಥವೈರಿಯೆಂದರೆ ಗೆದ್ದಲು. ಇದು ಪುಸ್ತಕವಲ್ಲದೆ ಪೀಠೋಪಕರಣ ಮೊದಲಾದುವನ್ನೂ ನಾಶಮಾಡುತ್ತವೆ. ಈ ಕ್ರಿಮಿಗಳಿಗೆ ಸೇರಿಕೊಳ್ಳಲು ಅವಕಾಶ ಕೊಡಲೇಬಾರದು. ಒಂದು ವೇಳೆ ಸೇರಿದ್ದರೆ ತೀವ್ರ ದೂರ ಮಾಡಬೇಕು. ಬಳಿಕ ಮೇಲುಕೋಟೆ, ಮೈಸೂರು ಹಸ್ತಪ್ರತಿ ಭಾಂಡಾರಗಳಲ್ಲಿ ಬಳಸುವ ದೇಶೀತೈಲವನ್ನೋ, ಇತ್ತೀಚೆ ಉಪಯೋಗಿಸುತ್ತಿರುವ ಸಿಟ್ರೋನೆಲ್ ತೈಲವನ್ನೋ ಗರಿಗಳಿಗೆ ಲೇಪಿಸಬೇಕು. ಇದಕ್ಕಿಂತ, ಕೀಟಗಳ ನಾಶಕ್ಕಾಗಿ ಪ್ರಧೂಮನಕ್ರಿಯೆ

(Fumigation) ಕೈಕೊಳ್ಳುವುದು ಲೇಸು. ಇದು ಘನ, ದ್ರವ ಇಲ್ಲವೆ ಅನಿಲರೂಪದ ರಸಾಯನ ವಸ್ತುಗಳನ್ನು ಹವೆಯ ಮೂಲಕ ಹಸ್ತಪ್ರತಿಗಳ ಮೇಲೆ ಪ್ರಸರಿಸುವುದಾಗಿದೆ. ಇದಕ್ಕಾಗಿ ಕನಿಷ್ಠ ಪಕ್ಷ ಒಂದಾದರೂ ಪ್ರಧೂಮನ ಕಪಾಟು (Fumigation Chamber) ಸಂಸ್ಥೆಗೆ ಅವಶ್ಯ.

ಈ ಕ್ರಿಮಿಗಳಲ್ಲದೆ ದಂಶಕ ಪ್ರಾಣಿಗಳು ಅಂದರೆ ಇಲಿ, ಹೆಗ್ಗಣ ಮೊದಲಾದವುಗಳಿಂದಲೂ ಹಸ್ತಪ್ರತಿಗಳನ್ನು ರಕ್ಷಿಸಬೇಕು. ಹಸ್ತಪ್ರತಿಗಳನ್ನು ಕಡಿದು ಚೂರು ಚೂರು ಮಾಡುವ ಇವು, ಒಳಗೆ ಬರದಂತೆ ಎಚ್ಚರವಹಿಸಬೇಕು; ಬಂದಿದ್ದರೆ ತೀವ್ರ ನಾಶಮಾಡಬೇಕು.[೪]

೨. ತಾಂತ್ರಿಕ ವಿಭಾಗ :

ಜೀರ್ಣೋದ್ಧಾರದ ಬಳಿಕ ಹಸ್ತಪ್ರತಿಗಳು ಈ ವಿಭಾಗಕ್ಕೆ ವರ್ಗಾಯಿಸಲ್ಪಡುತ್ತವೆ. ಇಲ್ಲಿ ಹಸ್ತಪ್ರತಿವಿಷಯಜ್ಞಾನ, ಹಸ್ತಪ್ರತಿಶಾಸ್ತ್ರಜ್ಞಾನವುಳ್ಳ ವಿಶಿಷ್ಟ ಸಿಬ್ಬಂದಿವರ್ಗ ಇರುತ್ತದೆ. ಕೃತಿ ಮತ್ತು ಪ್ರತಿಗಳ ಅಧ್ಯಯನದ ಬಲದಿಂದ ಸೂಚೀಕರಣ, ವರ್ಗೀಕರಣ ಕ್ರಿಯೆಗಳನ್ನು ಇಲ್ಲಿ ಮಾಡಲಾಗುತ್ತದೆ. ಕ್ಷೇತ್ರಕಾರ್ಯಕರ್ತ ಹಸ್ತಪ್ರತಿಯಲ್ಲಿಯ ಕೃತಿನಾಮಗಳನ್ನು ಯಾದಿಮಾಡಿಕೊಂಡು ಬಂದಿದ್ದರೂ ಅದು ಪರಿಪೂರ್ಣವಾಗಿರುವುದೆಂದು ಹೇಳಲು ಬರುವುದಿಲ್ಲ. ಏಕೆಂದರೆ ಅಲ್ಲಿ ಅವನಿಗೆ ಸಮಯವೂ ಇರುವುದಿಲ್ಲ, ಅನುಕೂಲತೆಯೂ ಇರುವುದಿಲ್ಲ. ಹೀಗಾಗಿ ಈ ವಿಭಾಗದ ಸಿಬ್ಬಂದಿ ಮಾತ್ರ ಎಲ್ಲ ಪುಟಗಳನ್ನು ಬಿಚ್ಚಿ, ಕೃತಿಗೆ ಸಂಬಂಧಪಟ್ಟಂತೆ ಕೃತಿನಾಮ, ವಿಷಯ, ಪ್ರಕಾರ, ಕವಿನಾಮ, ಕಾಲ ಇತ್ಯಾದಿ ವಿವರಗಳನ್ನೂ, ಪ್ರತಿಗೆ ಸಂಬಂಧಪಟ್ಟಂತೆ ಬಳಸಿದ ವಸ್ತು, ಆಕಾರ, ಪುಟಸಂಖ್ಯೆ, ಹಸ್ತಪ್ರತಿಸಂಖ್ಯೆ, ಲಿಪಿಸ್ವರೂಪ, ಭಾಷಾಸ್ವರೂಪ ಆದಿ-ಅಂತ್ಯ ಇತ್ಯಾದಿ ವಿವರಗಳನ್ನೂ ಟಿಪ್ಪಣಿ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿಯೇ ಸಿದ್ಧಪಡಿಸಿರುವ ಮುದ್ರಿತ ನಮೂನೆಗಳಲ್ಲಿ ಈ ವಿವರಗಳನ್ನು ತುಂಬುವ ಕೆಲಸ ಇಲ್ಲಿ ಜರಗುತ್ತದೆ. ಹೀಗೆ ಪ್ರತಿಯೊಂದು ಹಸ್ತಪ್ರತಿಯಲ್ಲಿಯ ಕೃತಿಪರಿಚಯ, ಪ್ರತಿಪರಿಚಯಗಳ ಸೂಚೀಕರಣದ ಬಳಿಕ ವರ್ಗೀಕರಣ ಕ್ರಿಯೆಯನ್ನು ಅವನು ಪೂರೈಸಬೇಕಾಗುತ್ತದೆ.

ಇಂದು ಮುದ್ರಿತ ಗ್ರಂಥ ಒಂದು ನಿರ್ದಿಷ್ಟ ಆಕಾರ ಪಡೆದಿದ್ದು ಅದರ ಸ್ವರೂಪ, ಪುಟಸಂಖ್ಯಾಕ್ರಮ, ಶೀರ್ಷಿಕೆ, ಲೇಖಕರ ಹೆಸರು, ಪ್ರಕಟಿತ ವರ್ಷ, ಬೆಲೆ, ಪ್ರಕಾಶನ ಇತ್ಯಾದಿ ವಿವರಗಳು ನಿರ್ದಿಷ್ಟವಾಗಿವೆ. ಹಸ್ತಪ್ರತಿಗಳಿಗೆ ಇಂಥ ನಿರ್ದಿಷ್ಟತೆ ಕಡಿಮೆ. ಅವು ಯಾವುಯಾವುದೋ ಆಕಾರ, ಎಲ್ಲಿ ಎಲ್ಲಿಯೋ ಪುಟಸಂಖ್ಯೆ, ಶೀರ್ಷಿಕೆ ಮತ್ತು ಲೇಖಕನ ಹೆಸರು ಹೊಂದಿರುವುದರಿಂದ ಅವುಗಳಲ್ಲಿ ಪುಸ್ತಕದ ಅಚ್ಚುಕಟ್ಟುತನ ಕಂಡುಬರುವುದಿಲ್ಲ. ಲೇಖನ ಮಿತಿ, ಲಿಪಿಕಾರರ ಹೆಸರು ಇತ್ಯಾದಿಗಳೂ ಅನಿಯತವಾಗಿರುತ್ತವೆ. ಆದುದರಿಂದ ಸೂಚೀಕರಣವು ಮುದ್ರಿತ ಗ್ರಂಥಾಲಯ ಶಾಸ್ತ್ರದಲ್ಲಿ ಸರಳ, ಹಸ್ತಪ್ರತಿ ಶಾಸ್ತ್ರದಲ್ಲಿ ಜಟಿಲವೆಂದೇ ಹೇಳಬೇಕು.

ಸೂಚೀಕರಣ : ಹಸ್ತಪ್ರತಿಸೂಚಿಯೆನ್ನುವುದು ಒಂದು ಹಸ್ತಪ್ರತಿಯ ವಿವರಗಳನ್ನು ತಿಳಿಸಿ ಕೊಡುವುದಾಗಿದೆ. ಇಲ್ಲಿ ಕೆಲವೇ ವಿವರಗಳನ್ನು ತೋರಿಸಿಕೊಡುವುದು 'ಸೂಚಿ', ಎಲ್ಲ ವಿವರಗಳನ್ನು

---

೪. ಹಸ್ತಪ್ರತಿಗಳ ರಕ್ಷಣೆ ಮತ್ತು ಪರಿಚಲನೆ (ಬಿ.ಎಸ್. ಸಣ್ಣಯ್ಯ) ಕ.ಭಾ.೧೬-೧,೨

ತೋರಿಸಿಕೊಡುವುದು 'ವಿವರಣಾತ್ಮಕ ಸೂಚಿ' ಎಂದು ಎರಡು ಮುಖ್ಯ ಬಗೆಗಳಿವೆ. ಇನ್ನೊಂದು ಬಗೆಯೆಂದರೆ ಒಂದು ಕೃತಿಯ ಪ್ರತಿಗಳು ಯಾವ ಯಾವ ಸ್ಥಳದಲ್ಲಿವೆಯೆಂಬುದನ್ನು ವಿಶಿಷ್ಟ ವಿವರಗಳೊಂದಿಗೆ ತೋರಿಸಿಕೊಡುವ 'ಸಮಗ್ರ ವಿವರಣಾತ್ಮಕ ಸೂಚಿ'.

ಈ ಮೂರರಲ್ಲಿ ಪಟ್ಟಿರೂಪದ 'ಸೂಚಿ'ಯೆನ್ನುವುದು ಹಸ್ತಪ್ರತಿಯ ನಂಬರು, ಕೃತಿಯ ಶೀರ್ಷಿಕೆ, ಕವಿನಾಮ, ಪ್ರಕಾರ-ಇಷ್ಟು ವಿರಗಳ ಕಾಲಂಗಳನ್ನೊಳಗೊಂಡಿರುತ್ತದೆ; ಇಲ್ಲಿ ಶೀರ್ಷಿಕೆಗಳನ್ನು ಅಕಾರಾದಿಯಲ್ಲಿ ಹೊಂದಿಸಲಾಗಿರುತ್ತದೆ. ಇದಕ್ಕೆ ಬದಲು ಕವಿನಾಮಗಳನ್ನು ಅಕಾರಾದಿಯಾಗಿ ಹೊಂದಿಸಬಹುದು. ಬಳಿಕ ಕವಿನಾಮದ ಕೆಳಗೆ ಅವನ ಎಲ್ಲ ಕೃತಿಗಳನ್ನು ಅಕಾರಾದಿಯಾಗಿ ಹೊಂದಿಸಬೇಕು. ಮೂರನೆಯದಾಗಿ ಈ ಕೃತಿಗಳನ್ನು ಪ್ರಕಾರವಾಗಿ ವರ್ಗೀಕರಿಸಿ, ಆಯಾ ಪ್ರಕಾರದ ಕೆಳಗೆ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಜೋಡಿಸಬೇಕು. ಇದು ತೀರ ಸಾಮಾನ್ಯಸೂಚಿಯಾಗಿದ್ದು, 'ದರ್ಶಕಸೂಚಿ'ಯೆಂದು ಇಂಥವುಗಳನ್ನು ಕರೆಯಬಹುದು.

ಇದನ್ನು ಬಿಟ್ಟರೆ ತುಂಬ ವಿವೇಚಿಸಬೇಕಾದುದು 'ವಿವರಣಾತ್ಮಕ ಸೂಚಿ.' ಇಂದು ವ್ಯವಸ್ಥಿತ ರಚನೆಯಿಂದಾಗಿ ವಿವರಣಾತ್ಮಕ ಸೂಚೀಸಾಹಿತ್ಯಕ್ಕೆ ವಿಜ್ಞಾನ ಮರ್ಯಾದೆ ಪ್ರಾಪ್ತವಾಗಿದೆ. ಪ್ರಯೋಜನ, ಮಹತ್ವ ಹೆಚ್ಚುತ್ತ ನಡೆದಂತೆ ತಕ್ಕ ತಂತ್ರಗಳು ಆವಿಷ್ಕಾರಗೊಂಡು ಅದು ವೈವಿಧ್ಯಪೂರ್ಣವಾಗಿ ಬೆಳೆಯತೊಡಗಿದೆ. ಈವರೆಗೆ ಮದ್ರಾಸ ಪ್ರಾಚ್ಯಹಸ್ತಪ್ರತಿಭಂಡಾರ, ಮೈಸೂರಿನ ಪ್ರಾಚ್ಯ ವಿದ್ಯಾಸಂಸ್ಥೆ -ಕನ್ನಡ ಅಧ್ಯಯನಸಂಸ್ಥೆ, ಧಾರವಾಡದ ಕನ್ನಡ ಸಂಶೋಧನಸಂಸ್ಥೆ-ಕನ್ನಡ ಅಧ್ಯಯನಪೀಠ, ಬೆಂಗಳೂರಿನ ಕನ್ನಡ ಅಧ್ಯಯನ ಕೇಂದ್ರ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ವಿವರಣಾತ್ಮಕ ಸೂಚೀ ಗ್ರಂಥವನ್ನು ಪ್ರಕಟಿಸಿವೆ. ಇಲ್ಲೆಲ್ಲ ಹಸ್ತಪ್ರತಿಯನ್ನು ಕುರಿತು ಅಡಕಗೊಳಿಸಿದ ವಿವರಗಳಲ್ಲಿ ಒಂದಿಷ್ಟು ವ್ಯತ್ಯಾಸ ಕಂಡುಬರುತ್ತದೆ. ಬಹುಶಃ ಇವರ್‍ಯಾರೂ ಒಂದು ಮೂಲಭೂತ ವಿಷಯವನ್ನೇ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಂತಿಲ್ಲ. ಅದು : ಯಾವುದೇ ಹಸ್ತಪ್ರತಿಯಲ್ಲಿ ಕೃತಿ ಮತ್ತು ಪ್ರತಿ ಎಂಬ ಎರಡು ಘಟಕಗಳು ಸೇರಿರುತ್ತವೆ. ಇವುಗಳಲ್ಲಿ ಕೃತಿಯೆನ್ನುವುದು ಕವಿ ಬರೆದ ಪಾಠ, ಪ್ರತಿಯೆನ್ನುವುದು ಲಿಪಿಕಾರ ಬರೆದ ಪಾಠ ಮತ್ತು ಬಳಸಿದ ವಸ್ತುವಾಗಿದೆ. ಆದುದರಿಂದ ಕೃತಿಪರಿಚಯ, ಪ್ರತಿಪರಿಚಯ ಎಂದು ಎರಡು ಹಂತಗಳಲ್ಲಿ ಹಸ್ತಪ್ರತಿಗಳ ವಿವರವನ್ನು ಬರೆಯಬೇಕು. ಇದಕ್ಕಾಗಿ ೪"x೬" ಆಕಾರದ ಕಾರ್ಡಿನಲ್ಲಿ ಕೆಳಗಿನಂತೆ ವಿವರಗಳನ್ನು ಮುದ್ರಿಸಬೇಕು.

ಕೃತಿ ಪರಿಚಯ

ಶೀರ್ಷಿಕೆ :	ಕವಿ:	ವಿಷಯ:
ಪ್ರಕಾರ :	ಕಾಲ:	ಪ್ರಕಟಿತ/ಅಪ್ರಕಟಿತ:
ವಿಶೇಷ :		

ಪ್ರತಿ ಪರಿಚಯ

ಬರೆಯಲು ಬಳಸಿದ ವಸ್ತು/ನಂ:	ಆಕಾರ :	ಪುಟ:
ಹಸ್ತಪ್ರತಿಸ್ವರೂಪ:	ಲಿಪಿಸ್ವರೂಪ:	ಭಾಷಾಸ್ವರೂಪ:

ಆದಿ :

ಅಂತ್ಯ :

ವಿಶೇಷ :

ಕಟ್ಟಿನಲ್ಲಿರುವ ಕೃತಿಗಳು :

ಹಸ್ತಪ್ರತಿಯ ವಿವರಣಾತ್ಮಕ ಸೂಚಿ ಸಿದ್ಧಮಾಡುವಾಗ ಮೊದಲು ಇಲ್ಲಿಯ ಶೀರ್ಷಿಕೆಗಳ ಮುಂದೆ ಕಟ್ಟಿನ ವಿವರಗಳನ್ನು ತುಂಬಬೇಕು. ಪ್ರತಿಯೊಂದು ಕಾರ್ಡನ್ನು ಮೂರು ಪ್ರತಿಗಳಾಗಿ ಸಿದ್ಧಪಡಿಸಬೇಕು. ಇವುಗಳಲ್ಲಿ ಒಂದು ಕಾರ್ಡನ್ನು ಶೀರ್ಷಿಕೆ (Title) ವರ್ಗೀಕರಣಕ್ಕೆ ಬಳಸುತ್ತಿದ್ದರೆ ಅಲ್ಲಿಯ 'ಶೀರ್ಷಿಕೆ'ಯ ಕೆಳಗೆ ಗೆರೆ ಎಳೆಯಬೇಕು, ಇನ್ನೊಂದು ಕಾರ್ಡನ್ನು (Author) ವರ್ಗೀಕರಣಕ್ಕೆ ಸೇರಿಸುತ್ತಿದ್ದರೆ, ಅಲ್ಲಿಯ 'ಕವಿ' ಹೆಸರಿನ ಕೆಳಗೆ ಗೆರೆ ಎಳೆಯಬೇಕು. ಇನ್ನೊಂದು ಕಾರ್ಡನ್ನು ವಿಷಯ (Subject) ವರ್ಗೀಕರಣಕ್ಕೆ ಸೇರಿಸುತ್ತಿದ್ದರೆ ಅಲ್ಲಿಯ 'ವಿಷಯ'ದ ಕೆಳಗೆ ಗೆರೆ ಎಳೆಯಬೇಕು. ಈ ಉದ್ದೇಶದ ಸಫಲತೆಗಾಗಿಯೇ ಕಾರ್ಡಿನಲ್ಲಿ ಶೀರ್ಷಿಕೆ, ಲೇಖಕ, ವಿಷಯಗಳಿಗೆ ಮೊದಲ ಸಾಲಿನಲ್ಲಿ ಸ್ಥಳಾವಕಾಶ ಕಲ್ಪಿಸಿಕೊಡಲಾಗಿದೆ.

ಹೀಗೆ ಸೂಚೀಕಾರ್ಡುಗಳನ್ನು ಸಿದ್ಧಪಡಿಸಿ, ನೋಂದಣಿ ಪುಸ್ತಕದಲ್ಲಿ ವಿವರಗಳನ್ನು ಬರೆದುಕೊಂಡು, ಕಟ್ಟುಗಳಿಗೆ ನಂಬರು–ಹೆಸರುಗಳನ್ನು ಅಂಟಿಸಿ, ಅವುಗಳನ್ನು ಸಂರಕ್ಷಣ ವಿಭಾಗಕ್ಕೆ ಕಳಿಸಬೇಕು. ಒಟ್ಟಿನಲ್ಲಿ ಸೂಚಿಗಳು ರೈಲು ವೇಳಾಪತ್ರಿಕೆಯಂತೆ ಹಸ್ತಪ್ರತಿ ಅಭ್ಯಾಸಿಗಳಿಗೆ ನಿರ್ದಿಷ್ಟ ಮಾರ್ಗದರ್ಶನ ನೀಡಬೇಕು. ಈ ರೀತಿ ಕಾರ್ಡಿನ ಮೇಲೆ ಅಡಕಗೊಂಡುದನ್ನೇ ಸೂಚೀಗ್ರಂಥರೂಪದಲ್ಲಿ ಪ್ರಕಟಿಸಬಹುದಾಗಿದೆ. ಬಳಿಕ ಹೀಗೆ ತುಂಬಿದ ಕಾರ್ಡುಗಳನ್ನು ಬಳಸಿಕೊಂಡು ಸೂಚೀಪುಸ್ತಕವನ್ನು ಮುದ್ರಿಸುವಾಗ ಇಲ್ಲಿಯ ಎರಡನೆಯ ಹಂತದಲ್ಲಿಯ ಆದಿ ಅಂತ್ಯ ಈ ಶೀರ್ಷಿಕೆಗಳನ್ನು ಕಡ್ಡಾಯವಾಗಿ ಉಳಿಸಿಕೊಂಡು, ಅವಶ್ಯವೆನಿಸಿದಲ್ಲಿ ಮಾತ್ರ ಎರಡೂ ಹಂತಗಳಲ್ಲಿಯ 'ವಿಶೇಷ' ಎಂಬುದನ್ನೂ, ಎರಡನೆಯ ಹಂತದಲ್ಲಿಯ 'ಕಟ್ಟಿನಲ್ಲಿರುವ ಪ್ರತಿಗಳು' ಎಂಬುದನ್ನೂ ಉಳಿಸಿಕೊಂಡು, ಇವುಗಳ ಮುಂದೆ ಸಂಬಂಧಪಟ್ಟ ವಿವರ ಮುದ್ರಿಸಬೇಕು. ಮಿಕ್ಕ ಶೀರ್ಷಿಕೆಗಳನ್ನು ತೆಗೆದುಹಾಕಿ ಅವುಗಳ ಸ್ಥಾನದಲ್ಲಿ ಸಂಬಂಧಪಟ್ಟ ವಿವರಗಳನ್ನು ಮುದ್ರಿಸಬೇಕು. 'ವಿಷಯ' ಎಂಬಲ್ಲಿ ಪುರಾಣ, ಚರಿತ್ರೆ, ಛಂದಸ್ಸು ಇವುಗಳಲ್ಲಿ ಸಂಬಂಧಪಟ್ಟ ಯಾವುದಾದರೂ ಒಂದನ್ನು ಮುದ್ರಿಸಬೇಕು. 'ಪ್ರಕಾರ' ಎಂಬಲ್ಲಿ ಗದ್ಯ, ಚಂಪೂ, ರಗಳೆ, ಷಟ್ಪದಿ ಇತ್ಯಾದಿಗಳಲ್ಲಿ ಸಂಬಂಧಪಟ್ಟ ಒಂದನ್ನು ಮುದ್ರಿಸಬೇಕು. ಕೃತಿ ಪ್ರಕಟವಾಗದಿದ್ದಲ್ಲಿ ಅಪ್ರಕಟಿತವೆಂದು, ಪ್ರಕಟವಾಗಿದ್ದರೆ ಸಂಪಾದಕರ ಹೆಸರು, ವರ್ಷಗಳನ್ನು ನಮೂದಿಸಬೇಕು. 'ವಸ್ತು/ನಂ' ಎಂಬಲ್ಲಿ ಬರೆಯಲು ಬಳಸಿದುದು ತಾಳೆಪ್ರತಿಯೋ? ಸ್ವದೇಶಿ ಕಾಗದ ಪ್ರತಿಯೋ? ವಿದೇಶೀ ಕಾಗದಪ್ರತಿಯೋ? ಎಂಬ ಸೂಚನೆ ಮತ್ತು ಆ ಹಸ್ತಪ್ರತಿಯ ನಂಬರು ಬರೆಯಬೇಕು, ಉದಾ : ತಾಪ್ರ/ ೪೫, ಸ್ವಕಾಪ್ರ/ ೪೫, ವಿಕಾಪ್ರ/೪೫, 'ಆಕಾರ' ಎಂಬಲ್ಲಿ ಪ್ರತಿಯ ಉದ್ದಗಲಗಳನ್ನು ಅಂಗುಲಗಳಲ್ಲಿ ಬರೆಯಬೇಕು. ಪುಟದ ಸ್ಥಾನದಲ್ಲಿ ಪ್ರಸ್ತುತ ಕೃತಿ ಹಸ್ತಪ್ರತಿಯ ಯಾವ ಪುಟದಿಂದ ಯಾವ ಪುಟದ ವರೆಗೆ ವ್ಯಾಪಿಸಿದೆಯೆಂಬುದನ್ನು ಸೂಚಿಸಬೇಕು. ಉದಾ : ಪು. ೨೫–೭೫. ಹಸ್ತಪ್ರತಿ ಸ್ವರೂಪ, ಲಿಪಿಸ್ವರೂಪ, ಭಾಷಾಸ್ವರೂಪಗಳ ವಿಷಯವಾಗಿ,

ಉತ್ತಮ, ಮಧ್ಯಮ, ಕನಿಷ್ಠ ಇವುಗಳಲ್ಲಿ ಒಂದನ್ನು ಬಳಸಿದರೆ ಸಾಕು. ಒಂದು ಕಟ್ಟಿನಲ್ಲಿ ಅನೇಕ ಕೃತಿಗಳು ಅಡಕವಾಗಿದ್ದರೆ, ಮೊದಲಿನ ಕೃತಿಯ ಸೂಚೀಕಾರ್ಡಿನಲ್ಲಿ ಮಾತ್ರ 'ಕಟ್ಟಿನಲ್ಲಿರುವ ಕೃತಿಗಳು' ಶೀರ್ಷಿಕೆಯ ಮುಂದೆ ಅದರಲ್ಲಿಯ ಎಲ್ಲ ಕೃತಿಗಳ ಯಾದಿ ಕೊಡಬೇಕು. ಆ ಕಟ್ಟಿನಲ್ಲಿಯ ಪ್ರಥಮೇತರ ಕೃತಿಗಳನ್ನು ಪರಿಚಯಿಸುವಾಗ ಹೀಗೆ ಯಾದಿ ಕೊಡದೆ 'ಕಟ್ಟಿನಲ್ಲಿರುವ ಕೃತಿಗಳು' ಕಾಲಂ ಮುಂದೆ 'ನೋಡಿ : ಕ್ರಮಾಂಕ.....' ಎಂದು ಪ್ರಥಮ ಕೃತಿಯ ಕ್ರಮಾಂಕ ಸೂಚಿಸಿದರೆ ಸಾಕು. ಕೃತಿಯ ಬಗ್ಗೆ, ಪ್ರತಿಯ ಬಗ್ಗೆ ವಿಶೇಷ ಹೇಳಬೇಕಿದ್ದ ಸಂದರ್ಭದಲ್ಲಿ 'ವಿಶೇಷ' ಶೀರ್ಷಿಕೆಯ ಮುಂದೆ ಸೂಚಿಸಬೇಕು. ಇಷ್ಟು ಅಂಶಗಳು ಪುಸ್ತಕದಲ್ಲಿ ಅಡಕಗೊಳ್ಳಬೇಕು. ಹಸ್ತಪ್ರತಿ ಕೊಟ್ಟವರು –ತಂದವರು, ತಂದ ದಿನಾಂಕಗಳು, ಸ್ವೀಕೃತಿ ಪುಸ್ತಕಗಳಲ್ಲಿ ದಾಖಲಾಗಿರುವುದರಿಂದ ಇಲ್ಲಿ ಅವುಗಳನ್ನು ಕೈಬಿಡಬೇಕು. ಅನ್ಯಭಾಷೆಯ ಹಸ್ತಪ್ರತಿಗಳನ್ನು ಹೊರಗಿಟ್ಟು ಕನ್ನಡ ಭಾಷೆಯ ಹಸ್ತಪ್ರತಿಗಳನ್ನೇ ಕುರಿತು ಸೂಚಿಯನ್ನು ರಚಿಸುತ್ತಿರುವುದರಿಂದ ಭಾಷೆಯೆಂಬ ಶೀರ್ಷಿಕೆ ಇಲ್ಲಿ ಅನವಶ್ಯ.

ಈ ವಿವರಣಾತ್ಮಕ ಸೂಚಿಗಿಂತ ತುಂಬ ಭಿನ್ನವಾದುದು Catalogus Catalogorum. ಇದರ ಸಂವಾದಿಪದ 'ಸಮಗ್ರ ವಿವರಣಾತ್ಮಕ ಸೂಚಿ'. ಈ ಸೂಚಿಯ ಜನಕ ಜರ್ಮನ್ ವಿದ್ವಾಂಸ ಆಫ್ರೆಕ್ಟ್. ಬೇರೆ ಬೇರೆ ಹಸ್ತಪ್ರತಿಭಾಂಡಾರಗಳ ಸೂಚಿಗಳಲ್ಲಿಯ ಮಾಹಿತಿಯನ್ನು ಕ್ರೋಡೀಕರಿಸಿ catalogus Catalogorum ಹೆಸರಿನ ಸಂಸ್ಕೃತ ಹಸ್ತಪ್ರತಿಗಳ ಸಮಗ್ರ ಸೂಚಿಯನ್ನು ಈತ ಸಿದ್ಧಪಡಿಸಿದ (೧೮೯೧). ಇದರ ಮುಂದುವರಿಕೆಯಾಗಿ New Catalogus Catalogorum ಹೆಸರಿನ ಎಂಟು ಸಂಪುಟಗಳು ಈಗ ಪ್ರಕಟವಾಗಿವೆ. ಡಾ. ಎಚ್. ಡಿ. ವೇಲಂಕರ ಅವರು 'ಜಿನರತ್ನಕೋಶ' ಹೆಸರಿನಲ್ಲಿ ಜೈನಹಸ್ತಪ್ರತಿಗಳ ಒಂದು ಸಮಗ್ರಸೂಚಿಯನ್ನು ರಚಿಸಿ ಪ್ರಕಟಿಸಿದ್ದಾರೆ.

'ಸಮಗ್ರ ವಿವರಣಾತ್ಮಕ ಸೂಚಿ'ಯೆನ್ನುವುದು ಕೃತಿಶೀರ್ಷಿಕೆಯ ಸೂಚಿಯಾಗಿದ್ದು, ಇಲ್ಲಿ ಎಲ್ಲ ಶೀರ್ಷಿಕೆಗಳನ್ನು ಅಕಾರಾದಿಯಲ್ಲಿ ಹೊಂದಿಸಲಾಗಿರುತ್ತದೆ. ಒಂದು ಕೃತಿಯ ಶೀರ್ಷಿಕೆ ಬರೆದು, ಅದರ ಪ್ರತಿಗಳನ್ನು ಎಲ್ಲೆಲ್ಲ ದೊರೆಯುತ್ತವೆಯೆಂಬ ವಿವರಗಳನ್ನು ಸೂಕ್ತ ಸಂಕೇತಗಳೊಂದಿಗೆ ಕೊಡಲಾಗಿರುತ್ತದೆ. ಲಭ್ಯಕೃತಿಗಳೊಂದಿಗೆ ಅಲಭ್ಯಕೃತಿಗಳ ಉಲ್ಲೇಖವೂ ಇಲ್ಲಿ ಸೇರಿಕೊಂಡಿರುತ್ತವೆ. ಸೂಚಿಯಿಂದ ವಿವರವನ್ನು ಸ್ವೀಕರಿಸಿದ್ದರೆ ಆ ಸೂಚಿಯ ಹೆಸರನ್ನು ಸಂಕೇತದೊಂದಿಗೆ ದಾಖಲಿಸಲಾಗಿರುತ್ತದೆ. ಕೃತಿ ಪ್ರಕಟವಾಗಿದ್ದರೆ ಆ ಪ್ರಕಟನೆಯ ವಿವರಗಳನ್ನು, ಪ್ರಕಟವಾಗದೆ ಪರಿಚಯಾತ್ಮಕ ಲೇಖನ ಬೆಳಕು ಕಂಡಿದ್ದರೆ ಆ ಲೇಖನದ ವಿವರಗಳನ್ನು ಕೊಡಲಾಗುತ್ತದೆ. ಕೃತಿ ಬೇರೆ ಭಾಷೆಯಿಂದ ಅನುವಾದಗೊಂಡಿದ್ದರೆ, ಬೇರೆ ಭಾಷೆಗಳಿಗೆ ಅನುವಾದಗೊಂಡಿದ್ದರೆ ಆ ಸೂಚನೆಯನ್ನೂ ಇದು ಒಳಗೊಂಡಿರುತ್ತದೆ. ಕವಿಯ ಬಗ್ಗೆ ಗ್ರಂಥ ಮತ್ತು ಲೇಖನ ರೂಪದ ವಿವರಗಳಿದ್ದಲ್ಲಿ ಅವುಗಳನ್ನೂ ಸೂಚಿಸಲಾಗುತ್ತದೆ. ಹೀಗೆ ಅಂಗೈ ಮೇಲೆ ಒಂದು ಕೃತಿಯ ಸಮಸ್ತ ಪ್ರತಿಗಳ, ಅವುಗಳ ಅಧ್ಯಯನದ ಬಗ್ಗೆ ತಿಳುವಳಿಕೆ ಮಾಡಿಕೊಡುವುದೇ ಈ ಸಮಗ್ರ ಸೂಚಿಯ ಮುಖ್ಯ ಗುರಿಯಾಗಿರುತ್ತದೆ. ಈ ಗುರಿಯನ್ನು ಮುಟ್ಟಬೇಕಾದರೆ ಒಂದು ಭಾಷೆಯಲ್ಲಿ ಸಿಗುವ ಎಲ್ಲ ಹಸ್ತಪ್ರತಿಗಳ ವಿರವರಣಾತ್ಮಕ ಸೂಚಿಗಳು ಮೊದಲು ಪ್ರಕಟವಾಗಬೇಕಾಗುತ್ತದೆ.

ವರ್ಗೀಕರಣ : ವರ್ಗೀಕರಣವು ಅನೇಕ ಬಗೆಯಾಗಿದೆ. ಹಸ್ತಪ್ರತಿಗಳಿಗೆ ಬಳಸಿದ ವಸ್ತುಗಳನ್ನಾಧರಿಸಿ ತಾಳೆಪ್ರತಿ, ಕಾಗದಪ್ರತಿ ಎಂದು ಸಾಮಾನ್ಯವಾಗಿ ವರ್ಗೀಕರಿಸುತ್ತಾರೆ. ಆದರೆ ಕಾಗದಪ್ರತಿಯನ್ನು

ಸ್ವದೇಶೀ ಕಾಗದಪ್ರತಿ (ಕೋರೀಕಾಗದ ಪ್ರತಿ) ವಿದೇಶಿ ಕಾಗದ ಪ್ರತಿ ಎಂದು ವರ್ಗೀಕರಿಸದಿದ್ದರೆ, ಕೆಲವೊಮ್ಮೆ ಪ್ರತಿಯ ಕಾಲನಿರ್ಣಯಕ್ಕೆ ತೊಂದರೆಯಾಗುವ ಸಂಭವವುಂಟು. ಉದಾ: ಕರ್ನಾಟಕದಲ್ಲಿ ಲಭ್ಯವಾದ ಪ್ರಾಚೀನತಮ ಕಾಗದಪ್ರತಿ ಎಂದರೆ ಕ್ರಿ. ಶ. ೧೫೦೦ರಲ್ಲಿ ಹುಟ್ಟಿದ 'ಏಕೋತ್ತರ ಶತಸ್ಥಲೀ ಟೀಕು' ಎಂದು ಶ್ರೀ ಎಚ್. ದೇವೀರಪ್ಪ ಹೇಳುತ್ತಾರೆ. ಆದರೆ ಇದಕ್ಕೆ ಬಳಸಿದುದು ವಿದೇಶೀ ಕಾಗದವಾದುದರಿಂದ ಅವರ ಅಭಿಪ್ರಾಯ ಬಿದ್ದುಹೋಗುತ್ತದೆ. ಆದುದರಿಂದ ಹಸ್ತಪ್ರತಿಗಳಿಗೆ ಬಳಸಿದ ವಸ್ತುಗಳನ್ನು ಇನ್ನುಮುಂದೆ ತಾಳೆಪ್ರತಿ, ಸ್ವದೇಶೀ ಕಾಗದಪ್ರತಿ ಮತ್ತು ವಿದೇಶೀ ಕಾಗದಪ್ರತಿ ಎಂದು ಹೆಸರಿಸುವುದೇ ಸರಿಯಾದ ಕ್ರಮವಾಗಿದೆ.

ಇದನ್ನು ಬಿಟ್ಟರೆ ಧರ್ಮವನ್ನಾಧರಿಸಿ ಜೈನ, ವೀರಶೈವ, ಬ್ರಾಹ್ಮಣ, ಇತರವೆಂದೂ, ಭಾಷೆಯನ್ನಾಧರಿಸಿ ಕನ್ನಡ, ಸಂಸ್ಕೃತ, ಇತರವೆಂದೂ, ಪ್ರಕಾರವನ್ನಾಧರಿಸಿ ಗದ್ಯ, ಪದ್ಯ, ಮಿಶ್ರವೆಂದೂ ಹಸ್ತಪ್ರತಿಗಳನ್ನು ವರ್ಗೀಕರಿಸಬಹುದು. ಆದರೆ ಇವುಗಳಿಗಿಂತ ಕಾವ್ಯ, ಪುರಾಣ, ಇತಿಹಾಸ, ಲೌಕಿಕಶಾಸ್ತ್ರ, ಕಾವ್ಯಶಾಸ್ತ್ರ, ತತ್ವಶಾಸ್ತ್ರ ಮತ್ತು ಇತರವೆಂದು ವಿಷಯದೃಷ್ಟಿಯಿಂದ ವರ್ಗೀಕರಿಸುವುದೇ ಹೆಚ್ಚು ಪ್ರಯೋಜಕ. ವರ್ಗೀಕರಣವೆಂದರೆ ವಿಷಯ ವರ್ಗೀಕರಣ (subject cataloge)ವೆಂದೇ ಪ್ರಸಿದ್ಧಿಪಡೆದಿದೆ. ನಿತ್ಯ ಹುಟ್ಟುವ ಗ್ರಂಥಗಳಲ್ಲವಾದುದರಿಂದ ಹಸ್ತಪ್ರತಿಗಳ ಸಂಖ್ಯೆಯೂ ಪರಿಮಿತ, ಇಂದಿನ ಜ್ಞಾನಕ್ಷೇತ್ರಗಳೊಂದಿಗೆ ಹೋಲಿಸಿದರೆ ನಮ್ಮ ಪ್ರಾಚೀನರ ಜ್ಞಾನದ ಹರಹು–ಪ್ರಕಾರಗಳೂ ಪರಿಮಿತ. ಆದುದರಿಂದ ಮುದ್ರಿತ ಗ್ರಂಥಾಲಯ ಶಾಸ್ತ್ರದೊಂದಿಗೆ ಹೋಲಿಸಿದರೆ ಹಸ್ತಪ್ರತಿಶಾಸ್ತ್ರದಲ್ಲಿ ಮೇಲೆ ಹೇಳಿದಂತೆ ವರ್ಗಗಳು ಕಡಿಮೆ, ಈ ಕಾರಣದಿಂದಾಗಿ ಇಲ್ಲಿ ವರ್ಗೀಕರಣ ಕ್ರಿಯೆ ಸರಳ. ಬಹಳೆಂದರೆ ಮೇಲೆ ಸೂಚಿಸಿದ ಕಾವ್ಯ, ಪುರಾಣ, ಇತಿಹಾಸ, ಲೌಕಿಕಶಾಸ್ತ್ರ, ಕಾವ್ಯಶಾಸ್ತ್ರ, ತತ್ವಶಾಸ್ತ್ರ ಮತ್ತು ಇತರವೆಂಬ ವಿಷಯ ವರ್ಗೀಕರಣದಲ್ಲಿ ಮತ್ತೆ ಕೆಲವು ಉಪವರ್ಗಗಳನ್ನು ಮಾಡಬಹುದಾದರೂ ಅದು ಅವಶ್ಯವಿಲ್ಲವೆಂದೇ ಹೇಳಬೇಕು. ಹೀಗೆ ವರ್ಗಗಳ ಸಂಖ್ಯೆ ಪರಿಮಿತ ವಾಗಿರುವುದರಿಂದ ಮುದ್ರಿತ ಗ್ರಂಥಾಲಯ ಶಾಸ್ತ್ರದಂತೆ ಇವುಗಳನ್ನು ಸಂಕೇತಗಳಿಂದ ಸೂಚಿಸುವುದು ಅನವಶ್ಯವೆನಿಸುತ್ತದೆ.

ಮೂಲತಃ ವರ್ಗೀಕರಣವೆಂಬುದು ಕಾರ್ಡು, ಕಪಾಟು ಮತ್ತು ಮುದ್ರಿತ ಸೂಚಿಗ್ರಂಥಗಳಲ್ಲಿ ಜರುಗುವ ಕ್ರಿಯೆಯಾಗಿದೆ. ಮುದ್ರಿತ ಕೃತಿ (Printed Book)ಗಳ ವರ್ಗೀಕರಣವನ್ನು ಕಾರ್ಡು, ಕಪಾಟು, ಸೂಚೀಗ್ರಂಥಗಳಲ್ಲಿ ಅನುಷ್ಠಾನಕ್ಕೆ ತರಬಹುದು. ಆದರೆ ಹಸ್ತಪ್ರತಿಗಳ ವರ್ಗೀಕರಣವನ್ನು ಕಾರ್ಡು, ಸೂಚೀಗ್ರಂಥಗಳಲ್ಲಿ ಅಳವಡಿಸಬಹುದೇ ಹೊರತು, ಕಪಾಟುಗಳಲ್ಲಿ ಅಳವಡಿಸುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ಒಂದು ಕಟ್ಟಿನಲ್ಲಿ ಒಂದು ಕಾವ್ಯ, ಒಂದು ಶಾಸ್ತ್ರ, ಒಂದು ಧಾರ್ಮಿಕ ಕೃತಿ ಇರಬಹುದು, ಇಲ್ಲವೆ ಒಂದು ಕನ್ನಡ ಕೃತಿ, ಒಂದು ಸಂಸ್ಕೃತ ಕೃತಿ ಇರಬಹುದು. ಇಂತಹ ಸಂಯುಕ್ತ ಕಟ್ಟುಗಳೇ ಅಧಿಕ ಸಂಖ್ಯೆಯಲ್ಲಿ ಸಿಗುವುದರಿಂದ, ಅವುಗಳನ್ನು ಬೇರ್ಪಡಿಸಿ ಕಪಾಟಿನಲ್ಲಿ ಬೇರೆಬೇರೆ ಕಡೆ ಇಡಲು ಸಾಧ್ಯವಾಗುವುದಿಲ್ಲ. ಕಟ್ಟುಗಳು ಬಂದಬಂದಂತೆ ಕಪಾಟಿನಲ್ಲಿ ಒಂದರ ಬಳಿಕ ಒಂದನ್ನು ಕ್ರಮವಾಗಿ ಜೋಡಿಸುತ್ತ ಹೋಗುವುದೇ ಸರಿಯಾದ ಕ್ರಮವಾಗಿದೆ. ಬಹಳೆಂದರೆ ಒಂದು ಹಸ್ತಪ್ರತಿ ಇಡಿಯಾಗಿ ಕನ್ನಡೇತರ ಭಾಷಿಕವಾಗಿದ್ದರೆ ಅಂಥವುಗಳನ್ನು ಬೇರೆ ಕಪಾಟಿನಲ್ಲಿ ಜೋಡಿಸುತ್ತ ಹೋಗಬಹುದಾಗಿದೆ. ಒಂದೇ ಕಪಾಟಿನಲ್ಲಿ ಎಲ್ಲ ಭಾಷೆಯ ಕೃತಿಗಳನ್ನು ಮಿಶ್ರಮಾಡಿ ಇಟ್ಟರೆ ಸೂಚೀಕರಣ ಸಂದರ್ಭದಲ್ಲಿ ಕನ್ನಡ ಕೃತಿಗಳ ಜೊತೆ ಕನ್ನಡೇತರ ಪ್ರತಿಗಳು ಸೇರಿಕೊಳ್ಳುತ್ತವೆ.

ಒಂದುವೇಳೆ ಆಗ ಕನ್ನಡೇತರ ಕೃತಿಗಳನ್ನು ಬಿಟ್ಟರೆ, ಅಷ್ಟು ನಂಬರುಗಳು ಹೊರಗುಳಿದು, ಸೂಚಿಯಲ್ಲಿಯ ದಾಖಲು ಕ್ರಮಸಂಖ್ಯೆ ತುಂಡುತುಂಡಾಗುತ್ತದೆ. ಒಟ್ಟಿನಲ್ಲಿ ಹಸ್ತಪ್ರತಿಗಳಿಗೆ ಸಂಬಂಧಪಟ್ಟಂತೆ ವರ್ಗೀಕರಣ ಕ್ರಿಯೆ ಕಪಾಟನಲ್ಲಿ ಸಾಧ್ಯವಿಲ್ಲ. ಸೂಚೀಗ್ರಂಥ ಮತ್ತು ಕಾರ್ಡುಗಳಲ್ಲಿ ಮಾತ್ರ ಸಾಧ್ಯವೆಂದು ಹೇಳಬೇಕು.

ಮೂರು ಪ್ರತಿಗಳಾಗಿ ಮುದ್ರಿಸಿದ ಸೂಚೀಕೃತ ಕಾರ್ಡುಗಳನ್ನು ವಿಷಯನಿಷ್ಠ, ಲೇಖಕ ನಿಷ್ಠ, ಶೀರ್ಷಿಕೆನಿಷ್ಠ – ಹೀಗೆ ಮೂರು ಬಗೆಯಾಗಿ ವರ್ಗೀಕರಿಸಿ, ಅಕಾರಾದಿಯಲ್ಲಿ ಹೊಂದಿಸಿ, ಇವುಗಳಿಗಾಗಿ ಹಸ್ತಪ್ರತಿ ಭಾಂಡಾರದಲ್ಲಿ ಮೂರು ಪ್ರತ್ಯೇಕ ಕ್ಯಾಬಿನೆಟ್‌ಗಳನ್ನು ಸ್ಥಾಪಿಸಬೇಕು, ಇದರಿಂದ ಅಭ್ಯಾಸಿಯ ಬೇಡಿಕೆ ಸಿಬ್ಬಂದಿಯ ಪೂರೈಕೆಗಳಿಗೆ ಅನುಕೂಲವಾಗುತ್ತದೆ. ಹೀಗಿದ್ದೂ ಹಸ್ತಪ್ರತಿಭಾಂಡಾರದಲ್ಲಿ ಶೀರ್ಷಿಕೆ ವರ್ಗೀಕರಣ ಹೆಚ್ಚು ಪ್ರಯೋಜಕ, ವಿಷಯ ವರ್ಗೀಕರಣ ಕಡಿಮೆ ಪ್ರಯೋಜಕ, ಲೇಖಕ ವರ್ಗೀಕರಣ ಇನ್ನೂ ಕಡಿಮೆ ಪ್ರಯೋಜಕವೆಂದೇ ಹೇಳಬಹುದು.

* * *

ಮೇಲೆ ಹೇಳಿದ 'ಸೂಚಿ' ಮತ್ತು 'ವಿವರಣಾತ್ಮಕ ಸೂಚಿ'ಗಳಲ್ಲಿ 'ಸೂಚಿ' ಎನ್ನುವುದು ಸಾಮಾನ್ಯ ಸ್ವರೂಪದ್ದು, 'ವಿವರಣಾತ್ಮಕ ಸೂಚಿ'ಯೇ ಹೆಚ್ಚು ಪ್ರಯೋಜಕವೆನಿಸುತ್ತದೆ. ಇದನ್ನು ಶೀರ್ಷಿಕೆನಿಷ್ಠ, ವಿಷಯನಿಷ್ಠ ಮತ್ತು ಲೇಖಕನಿಷ್ಠ ದೃಷ್ಟಿಯಿಂದ ರಚಿಸಬಹುದಾಗಿದೆ.

ಮೈಸೂರು ಕನ್ನಡ ಅಧ್ಯಯನಸಂಸ್ಥೆ ಶೀರ್ಷಿಕೆನಿಷ್ಠ ವಿವರಣಾತ್ಮಕ ಸೂಚಿಗಳನ್ನು, ಮದ್ರಾಸ ಪ್ರಾಚ್ಯ ಹಸ್ತಪ್ರತಿ ಭಂಡಾರ ವಿಷಯವರ್ಗೀಕೃತ ಶಿರ್ಷಿಕೆನಿಷ್ಠ ವಿವರಣಾತ್ಮಕ ಸೂಚಿಗಳನ್ನು ರಚಿಸಿವೆ. ಈ ಎರಡೂ ಬಗೆಗಳಲ್ಲಿ ವಿಷಯ ವರ್ಗೀಕೃತ ಶೀರ್ಷಿಕೆನಿಷ್ಠ ವಿವರಣಾತ್ಮಕಸೂಚಿ ಸ್ವಲ್ಪ ಗೊಂದಲವನ್ನುಂಟುಮಾಡುತ್ತದೆ. ಏಕೆಂದರೆ ಯಾವುದೇ ಕೃತಿ ಧಾರ್ಮಿಕ ವರ್ಗದ್ದೋ, ಧಾರ್ಮಿಕದಲ್ಲಿ ಪುರಾಣ ವರ್ಗದ್ದೋ ಚರಿತ್ರೆವರ್ಗದ್ದೋ ಎಂದು ಬಿಡಿಸಿಹೇಳಲಾರದಂಥ ತೊಡಕುಗಳಿರುತ್ತವೆ. ಇಂಥ ಸಂದರ್ಭದಲ್ಲಿ ಸೂಚೀ ಸಂಪಾದಕ ಗ್ರಹಿಸಿದ ವರ್ಗವೇ ಬೇರೆ, ಓದುಗ ಗ್ರಹಿಸುವ ವರ್ಗವೇ ಬೇರೆಯಾದರೆ ಕೃತಿಗಳನ್ನು ಸೂಚಿ ಸಂಪುಟದಲ್ಲಿ ಹುಡುಕುವದು ಕಷ್ಟವಾಗುತ್ತದೆ. ಹೀಗಾಗಿ ಶಿರ್ಷಿಕೆನಿಷ್ಠ ವಿವರಣಾತ್ಮಕ ಸೂಚಿಯೇ ಹೆಚ್ಚು ಪ್ರಯೋಜಕವೆನಿಸುತ್ತದೆ. ಆದರೆ ಇಲ್ಲಿ ಕೆಲವು ಸೂಚನೆಗಳು ಅವಶ್ಯ.

೧. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಕನ್ನಡ ಅಧ್ಯಯನ ಸಂಸ್ಥೆಗಳು ಕ್ರಮವಾಗಿ ೧೯೫೪ರ ವರೆಗೆ ಸಂಗ್ರಹಿಸಿದ ಹಸ್ತಪ್ರತಿಗಳಿಗಾಗಿ ನಾಲ್ಕು, ೧೯೫೫ರಿಂದ ೭೮ರ ವರೆಗೆ ಸಂಗ್ರಹಿಸಿದ ಹಸ್ತಪ್ರತಿಗಳಿಗಾಗಿ ಐದು, ಶೀರ್ಷಿಕೆನಿಷ್ಠ ವಿವರಣಾತ್ಮಕ ಸೂಚಿ ಸಂಪುಟಗಳನ್ನು ಸಿದ್ಧಪಡಿಸಿ, ಪ್ರಕಟಿಸಿವೆ. ಈ ರೀತಿ ಮಾಡದೆ ೧–೧೦೦ ಕಟ್ಟು, ೧೦೧–೨೦೦ ಕಟ್ಟು – ಹೀಗೆ ೧೦೦ ಕಟ್ಟುಗಳಿಗೆ ಒಂದರಂತೆ ಸೂಚೀ ಸಂಪುಟಗಳನ್ನು ರೂಪಿಸಿಕೊಳ್ಳುವುದು ಸೂಕ್ತ. ಈ ನೂರು ಕಟ್ಟುಗಳಲ್ಲಿ ಅಡಕವಾದ ಕೃತಿಗಳನ್ನು ಅಕಾರಾದಿಯಾಗಿ ಹೊಂದಿಸಿಕೊಂಡು ಇಲ್ಲಿ ಸೂಚಿಗಳನ್ನು ರಚಿಸಬೇಕಾಗುತ್ತದೆ. ಹಸ್ತಪ್ರತಿಗಳು ಭಂಡಾರಕ್ಕೆ ಆಕರಣೆಯಾಗುತ್ತ ಹೋದಂತೆ ಈ ಸೂಚೀ ಸಂಪುಟಗಳನ್ನು ಕ್ರಮವಾಗಿ ಬೆಳೆಸಲು ಇದರಿಂದ ಅನುಕೂಲವಾಗುತ್ತದೆ. ಪ್ರತಿಯೊಂದು ಸೂಚೀಸಂಪುಟದ ಕೊನೆಗೆ

'ವಿಷಯವರ್ಗೀಕೃತಸೂಚಿ', 'ಅನುಬಂಧ', 'ಲೇಖಕ ವರ್ಗೀಕೃತಸೂಚಿ', ಅನುಬಂಧಗಳನ್ನು ಜೋಡಿಸಬೇಕು. ಇದರಿಂದ ಒಂದೇ ಸಂಪುಟದಲ್ಲಿ ಮೂರೂ ಬಗೆಯ (ಶೀರ್ಷಿಕೆ, ವಿಷಯ, ಲೇಖಕ) ಸೂಚಿಗಳು ಅಳವಟ್ಟಂತಾಗುತ್ತದೆ.

೨. ಹತ್ತು 'ವಿವರಣಾತ್ಮಕಸೂಚಿ' ಸಂಪುಟಗಳಿಗೆ ಒಂದು 'ಸಂಯುಕ್ತ ಸೂಚಿ' ಸಂಪುಟ ರೂಪಿಸಬೇಕು. ಕೇವಲ ಪಟ್ಟಿರೂಪದ ಇದು ಶೀರ್ಷಿಕೆಸೂಚಿ, ವಿಷಯಸೂಚಿ, ಲೇಖಕಸೂಚಿಗಳನ್ನೊಳಗೊಂಡ ಸಂಯುಕ್ತ ಸಂಪುಟವಾಗಿರಬೇಕು. 'ಮಹಾದರ್ಶಕ ಸೂಚಿ' ಎಂದು ಇದನ್ನು ಕರೆಯಬಹುದಾಗಿದೆ. ಕಾಲಕಾಲಕ್ಕೆ ಈ ಮಾಲೆಯನ್ನು ಸಂಪುಟ-೧, ಸಂಪುಟ-೨, ಹೀಗೆ ಬೆಳೆಸುತ್ತ ಹೋಗಬೇಕು.

ಇವೇ ಹತ್ತು 'ವಿವರಣಾತ್ಮಕಸೂಚಿ' ಸಂಪುಟಗಳಿಗೆ ಒಂದರಂತೆ 'ಸಮಗ್ರವಿವರಣಾತ್ಮಕಸೂಚಿ' (Catalogus Catalogorum)ಯನ್ನು ಸಿದ್ಧಪಡಿಸಬೇಕು. ಇದನ್ನು ಸಂಪುಟ-೧, ಸಂಪುಟ-೨ ಎಂದು ಬೆಳೆಸುತ್ತ ಹೋಗಬಹುದಾಗಿದೆ. ಈ ಕ್ರಮದಲ್ಲಿ ಮುನ್ನಡೆದರೆ ಹಸ್ತಪ್ರತಿಸೂಚಿಗಳಿಗೆ ಒಂದು ಕ್ರಮಬದ್ಧತೆ ಪ್ರಾಪ್ತವಾಗುತ್ತದೆ.

೩. ಸಂರಕ್ಷಣ ವಿಭಾಗ

ಗ್ರಂಥಾಲಯದ ಹೃದಯಸ್ಥಾನವಿದು. ಯಾವ ವಸ್ತುವಿಗಾಗಿ ಇಷ್ಟೆಲ್ಲಾ ಪ್ರಯತ್ನ, ವ್ಯವಸ್ಥೆ ಮಾಡಲಾಗುತ್ತಿದೆಯೋ ಅದರ ರಕ್ಷಣಾ ನೆಲೆ ಇದು. ಬ್ಯಾಂಕಿನಲ್ಲಿಯ ದ್ರವ್ಯ ಭಾಂಡಾರದಂತಹ ಮಹತ್ವದ ವಿಭಾಗವಿದು. ಯಾವಾಗಲೂ ಬೀಗ ಮುದ್ರೆಯಲ್ಲಿದ್ದು ಅಧಿಕೃತ ಇಬ್ಬರು ಮೂವರು ಮಾತ್ರ ಪ್ರವೇಶ ಮಾಡುವ ಕೇಂದ್ರಸ್ಥಾನವಿದು. ತುಂಬಾ ಮಹತ್ವದ ಇದನ್ನು ರಹಸ್ಯಸ್ಥಾನ, ಪವಿತ್ರಸ್ಥಾನದಂತೆ ಭಾವಿಸಬೇಕಾಗುತ್ತದೆ.

ಕನ್ನಡ, ಕನ್ನಡೇತರ ಹಸ್ತಪ್ರತಿಗಳನ್ನು ಇಡಲು ಎರಡು ಪ್ರತ್ಯೇಕ ವಿಭಾಗಗಳು ಇಲ್ಲಿ ಇರಬೇಕು. ಸೂಕ್ತ ಗಾಳಿ-ಬೆಳಕುಗಳ ವ್ಯವಸ್ಥೆಯುಳ್ಳ ಈ ವಿಭಾಗದಲ್ಲಿರುವ ಕಪಾಟಿನಲ್ಲಿ ಪ್ರತಿಗಳನ್ನು ಅನುಕ್ರಮವಾಗಿ ಹೊಂದಿಸಬೇಕು. ಕೆಲವೆಡೆ ಗಾಜಿನ ಬಾಗಿಲುಗಳುಳ್ಳ ಕಪಾಟು ಬಳಸುವದಾದರೂ ಹವೆಯಾಡದೆ ಪ್ರತಿಗಳು ಕೆಡುವ ಕಾರಣ ಬಾಗಿಲುಗಳಿಲ್ಲದ ಕಪಾಟುಗಳನ್ನೇ ಉಪಯೋಗಿಸಬೇಕೆಂದು ತೋರುತ್ತದೆ.

ಹಸ್ತ ಪ್ರತಿಗಳು ಬದುಕಲು ಅವಶ್ಯವಿರುವ ಹವೆಯನ್ನು ಇಲ್ಲಿ ನಿರ್ಮಾಣಮಾಡಬೇಕು. ಅಂದರೆ ಹವಾನಿಯಂತ್ರಣ ಕೊಠಡಿಯನ್ನು ರೂಪಿಸಬೇಕು. ಇದು ಸಾಧ್ಯವಿಲ್ಲದ ಪ್ರಸಂಗಗಳಲ್ಲಿ ಚಳಿಗಾಲ ಮತ್ತು ಮಳೆಗಾಲ ಸಂದರ್ಭಗಳಲ್ಲಿ ವಿದ್ಯುತ್ ಶಾಖದಿಂದ ಹವೆಯನ್ನು ನಿಯಂತ್ರಿಸಬೇಕು. ಇಷ್ಟೆಲ್ಲ ಕಾಳಜಿ ವಹಿಸಿದರೂ ಧೂಳು, ಬೂಷ್ಟ ಆವರಿಸುವ ಸಂಭವವಿರುತ್ತದೆ. ಕಾರಣ ಆಗಾಗ ಹಸ್ತಪ್ರತಿಗಳನ್ನು, ಕಪಾಟುಗಳನ್ನು, ಒಟ್ಟು ಪರಿಸರವನ್ನು ಸ್ವಚ್ಛಗೊಳಿಸುತ್ತ ಹೋಗಬೇಕು. ಹಸ್ತ ಪ್ರತಿಯನ್ನು ನಾಶಮಾಡುವ ಇಲಿ ಮೊದಲಾದುವು ಪ್ರವೇಶಿಸದಂತೆ ನೋಡಿಕೊಳ್ಳಬೇಕೆಂದು ಮತ್ತೆ ಹೇಳಬೇಕಿಲ್ಲ.

ಅನ್ಯ ಸಂಸ್ಥೆ ಮತ್ತು ವ್ಯಕ್ತಿಗಳ ವಶದಲ್ಲಿರುವ ಅಪೂರ್ವ ಕೃತಿಗಳ ನಕಲು ಪ್ರತಿಗಳನ್ನು ಸಂರಕ್ಷಿಸುವುದೂ ಹಸ್ತಪ್ರತಿಕ್ಷೇತ್ರದ ಬಹು ಮುಖ್ಯ ಅಂಶವಾಗಿದೆ. ಈ ಹಿಂದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಮೈಸೂರಿನ ಪ್ರಾಚ್ಯ ವಿದ್ಯಾ ಸಂಸ್ಥೆಗಳಲ್ಲಿ ಹೀಗೆ ಸಂಗ್ರಹಿಸಿದ ನೂರಾರು ವಹಿಗಳಿರುವುದನ್ನು ನೆನೆಯಬಹುದು. ಇಂಥ ಪ್ರತಿಗಳನ್ನು ಇಲ್ಲಿಯೇ ರಕ್ಷಿಸಬೇಕಾಗುತ್ತದೆ.

ಇತ್ತೀಚೆಗೆ ಮೈಕ್ರೋಫಿಲ್ಮ್ ಪ್ರತಿ, ಫೋಟೋ ಸ್ಟ್ಯಾಟ್ ಪ್ರತಿ, ಝೆರಾಕ್ಸ್ ಪ್ರತಿ, ಬೆರಳಚ್ಚು ಪ್ರತಿಗಳನ್ನು ಸಿದ್ಧಪಡಿಸುವ ಚಟುವಟಿಕೆ ತೀವ್ರ ಗತಿಯಿಂದ ಬೆಳೆಯುತ್ತಿಲಿರುವ ಮೂಲಕ ಹಸ್ತಪ್ರತಿ ಬಗೆಗೆಳು (Types) ವರ್ಧಿಸುತ್ತಲಿವೆ. ಇದಲ್ಲದೆ ಕಳೆದ ಶತಮಾನದ ಕಲ್ಲಚ್ಚಿನ ಪ್ರತಿಗಳು, ಪ್ರಾಚ್ಯ ಲೇಖನದ ಮೌಲ್ಯ ಪಡೆಯುತ್ತಲಿವೆ. ಹೀಗೆ ಹಸ್ತಪ್ರತಿ ಜಗತ್ತು ವಿಸ್ತರಿಸಿಕೊಳ್ಳುತ್ತಿದ್ದು ಈ ಸಂರಕ್ಷಣ ವಿಭಾಗದಲ್ಲಿ ಇವುಗಳಿಗಾಗಿ ಪ್ರತ್ಯೇಕ ವ್ಯವಸ್ಥೆಗಳನ್ನು ಕಲ್ಪಿಸಿಕೊಡಬೇಕಾದ ಅವಶ್ಯಕತೆಗಳು ತೋರಿಬರುತ್ತಿವೆ.

ಅಭ್ಯಾಸಿ ಅಪೇಕ್ಷಿಸಿದ ಪ್ರಸಂಗದಲ್ಲಿ, ಸಂಪಾದನ ವಿಭಾಗಕ್ಕೆ ಬೇಕಾದ ಪಕ್ಷದಲ್ಲಿ ಮತ್ತು ಝೆರಾಕ್ಸ್ ಮೊದಲಾದ ನಕಲು ಮಾಡಿಸಬೇಕಾದ ಸಂದರ್ಭದಲ್ಲಿ ಮಾತ್ರ ಹಸ್ತ ಪ್ರತಿ ಈ ವಿಭಾಗದಿಂದ ಹೊರಗೆ ಹೋಗಬೇಕು. ಮಿಕ್ಕ ಸಂದರ್ಭಗಳಲ್ಲಿ ಪ್ರತಿಗಳನ್ನು ಮುಟ್ಟಲೇಬಾರದು. ಕೆಲವು ಸಂಸ್ಥೆಗಳಲ್ಲಿ ಈ ವಿಭಾಗವನ್ನು ಪ್ರವೇಶಿಸಲು ಸಂದರ್ಶಕರಿಗೆ ಮುಕ್ತ ಅವಕಾಶ ಕಲ್ಪಿಸಿರುವುದುಂಟು. ಇದರಿಂದ ಧೂಳು, ಹೊಲಸು ಪ್ರವೇಶಿಸಲು, ತಿಳಿಗೇಡಿಗಳು ಮುಟ್ಟಿ ನೋಡಲು, ದುಷ್ಟರು ಕಳುವು ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಕಾರಣ ಇದನ್ನು ಪ್ರದರ್ಶನೀಯ ವಿಭಾಗವಾಗಿ ಪರಿವರ್ತಿಸದೆ, ಕೇವಲ ಸಂಬಂಧ ಪಟ್ಟ ಅಧಿಕೃತ ಸಿಬ್ಬಂದಿಗೆ ಮಾತ್ರ ಪ್ರವೇಶವಿರುವ ಸ್ಥಳವಾಗಿ ರೂಪಿಸಬೇಕು.

೪. ಗ್ರಂಥಸಂಪಾದನ ವಿಭಾಗ

ತಾಂತ್ರಿಕ ವಿಭಾಗವು ಗ್ರಂಥಾಲಯ ವಿಜ್ಞಾನಿಗಳ ಕೇಂದ್ರವಾದರೆ, ಇದು ಗ್ರಂಥ ಜ್ಞಾನಿಗಳ ಕೇಂದ್ರವಾಗಿದೆ. ಹಸ್ತಪ್ರತಿ ಭಾಂಡಾರಕ್ಕೆ ವಿದ್ವತ್ತಿನ ಕೀರ್ತಿತರುವ ವಿಭಾಗವಿದು. ಮೈಸೂರಿನ ಓರಿಯಂಟಲ್ ರೀಸರ್ಚ ಇನ್ಸ್ಟಿಟ್ಯೂಟ್ ಕೌಟಿಲ್ಯನ ಅರ್ಥಶಾಸ್ತ್ರವನ್ನು, ಪುಣೆಯ ಭಾಂಡಾರಕರ ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟ್ ಮಹಾಭಾರತವನ್ನು, ಬರೋಡಾದ ಮಹಾರಾಜಾ ಸಯ್ಯಾಜಿರಾವ್ ವಿಶ್ವವಿದ್ಯಾಲಯ ರಾಮಾಯಣವನ್ನು ಪರಿಷ್ಕರಿಸಿ ಪ್ರಕಟಿಸುವ ಮೂಲಕ ಬಹುದೊಡ್ಡ ಹೆಸರು ಗಳಿಸಿದುದನ್ನು ಇಲ್ಲಿ ಸ್ಮರಿಸಬೇಕು. ಈ ಬಗೆಯ ಉನ್ನತ ಮಟ್ಟದ ಕೆಲಸ ನಡೆಯುವ ಈ ವಿಭಾಗದಲ್ಲಿ ಸಂಪಾದಕ ವಿದ್ವಾಂಸರು, ಹಸ್ತಪ್ರತಿಕಾರರು, ಪಾಠಸಂಗ್ರಹ–ಪಾಠನಿರ್ಣಯ–ಪ್ರೆಸ್‌ಕಾಪಿ ಸಿದ್ಧಪಡಿಸುವವರು, ಕರಡಚ್ಚು ಪರಿಶೀಲಿಸುವವರು ಇರುತ್ತಾರೆ. ಇವರಲ್ಲಿ ಪ್ರತಿಕಾರರು, ಪಾಠಸಂಗ್ರಹಕಾರರು ಹಸ್ತಪ್ರತಿವಾಚನದಲ್ಲಿ ತುಂಬ ದಕ್ಷವಾಗಿರಬೇಕಾಗುತ್ತದೆ. ತಪ್ಪು ವಾಚನ ಅನೇಕ ಅಪಯಗಳಿಗೆ ದಾರಿಮಾಡಿಕೊಡುವ ಸಂಭವವಿರುವುದರಿಂದ ಇವರಿಗೆ ಪ್ರಾಚೀನ ಅಕ್ಷರಜ್ಞಾನದಲ್ಲಿ ತಜ್ಞತೆ ಅವಶ್ಯ. ದುರ್ಗಸಿಂಹನ ಪಂಚತಂತ್ರವನ್ನು ತಿದ್ದಿದವನು ಮಾದಿರಾಜನಲ್ಲ, ವಾದಿರಾಜ. ಸಮಯಪರೀಕ್ಷೆಯ ಕರ್ತೃ ಬ್ರಹ್ಮಶಿವನಲ್ಲ, ಬ್ರಹ್ಮದೇವ, ಪಂಪನ ತಂದೆಯ ಹೆಸರಿನ ಪಾಠ ಅಭಿರಾಮ ದೇವರಾಯ ಅಲ್ಲ, ಭೀಮನಾಮಧೇಯ. ವಡ್ಡಾರಾಧನೆಯ ಕರ್ತೃ ರೇವಾಕೋಟ್ಯಾಚಾರ್ಯನಲ್ಲ, ಶಿವಕೋಟ್ಯಾಚಾರ್ಯ– ಇತ್ಯಾದಿಗಳೆಲ್ಲ ಪ್ರಾಚೀನ ಮತ್ತು ಆಧುನಿಕ ಲಿಪಿಕಾರರ ಅವಜ್ಞೆಯಿಂದ ಘಟಿಸಿದ ದೋಷಗಳೆಂಬುದನ್ನು ನೆನೆದರೆ ಲಿಪಿಕಾರರ, ಭಿನ್ನಪಾಠಸಂಗ್ರಾಹಕರ ಹೊಣೆ ಅರ್ಥವಾಗುತ್ತದೆ. ಇವರೆಲ್ಲರಿಗಿಂತ ಸಂಪಾದಕ ವಿದ್ವಾಂಸನ ಹೊಣೆ ದೊಡ್ಡದು. ಪ್ರತಿಭೆ, ಪಾಂಡಿತ್ಯಗಳ ಸಂಗಮವಾಗಿರುವ ಈತನು ಲೇಖನಸಂಭಾವ್ಯತೆ, ಅಂತಃಸಂಭಾವ್ಯತೆಗಳ ಬಲದಿಂದ ಮೂಲಪಾಠವನ್ನು ನಿರ್ಣಯಿಸಬೇಕಾಗುತ್ತದೆ.

ವೈಯಕ್ತಿಕ, ಜಂಟಿ, ಸಾಂಸ್ಥಿಕ – ಹೀಗೆ ಮೂರು ಬಗೆಯ ಸಂಪಾದನಕಾರ್ಯ ಇಲ್ಲಿ ಜರುಗಬಹುದಾಗಿದೆ. ಒಬ್ಬ ವಿದ್ವಾಂಸ ಇಲ್ಲವೆ ಒಬ್ಬನಿಗಿಂತ ಹೆಚ್ಚು ಜನ ವಿದ್ವಾಂಸರು ಇಲ್ಲವೆ ಇಡೀ ಸಂಸ್ಥೆ ಇಲ್ಲಿ ಕ್ರಮವಾಗಿ ಸಂಪಾದನಾಕಾರ್ಯದ ಜವಾಬ್ದಾರಿ ಹೊತ್ತಿರುತ್ತಾರೆ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶ್ರೀ ಎನ್. ಬಸವಾರಾಧ್ಯ, ಶ್ರೀ ಬಿ.ಎಸ್. ಸಣ್ಣಯ್ಯ ಮಾಡಿದ ಸಂಪಾದನಕಾರ್ಯ ವೈಯಕ್ತಿಕ ಸಂಪಾದನೆಗೆ, ಮದ್ರಾಸ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿಯ ಹಸ್ತಪ್ರತಿಗಳನ್ನು ಬಳಸಿ ಎ. ಎಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ ಬೆಳಕಿಗೆ ತಂದ ಅನೇಕ ಕೃತಿಗಳು ಜಂಟಿ ಸಂಪಾದನೆಗೆ ನಿದರ್ಶನವೆನಿಸಿದೆ. ಕನ್ನಡ ಅಧ್ಯಯನ ಪೀಠದ "ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ" ಸಾಂಸ್ಥಿಕ ಸಂಪಾದನೆಗೆ ಉತ್ತಮ ನಿದರ್ಶನ.

ಪ್ರತಿಯೊಂದು ಹಸ್ತಪ್ರತಿ ಭಾಂಡಾರವು ಸಂಪಾದನವಿಭಾಗವನ್ನು ಬೆಳಸಲೇ ಬೇಕು. ತಮ್ಮ ಸಂಸ್ಥೆಯಲ್ಲಿರುವ ಶ್ರೇಷ್ಠ ಗ್ರಂಥಗಳನ್ನು ಆಗಾಗ ಪರಿಷ್ಕರಿಸಿ ಪ್ರಕಟಿಸುವ ಕಾರ್ಯದಲ್ಲಿ ಅಲ್ಲಿಯ ವಿದ್ವಾಂಸರು ತೊಡಗಿರಬೇಕು. ತಾವು ಸಂಪಾದಿಸಲಿರುವ ಕೃತಿಯ ಹಸ್ತಪ್ರತಿಗಳನ್ನೊಳಗೊಂಡ ಬೇರೆ ಭಾಂಡಾರಗಳ ತಿಳಿವಳಿಕೆ ಇವರಿಗೆ ಅವಶ್ಯ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವುದೂ, ಭಿನ್ನಪಾಠಗಳನ್ನು ಕಲೆಹಾಕುವುದೂ, ಶುದ್ಧಪಾಠವನ್ನು ನಿರ್ಣಯಿಸುವುದೂ ಇಲ್ಲಿ ಉದ್ದಕ್ಕೂ ನಡೆಯಬೇಕು. ವಿದ್ವತ್ತಿನ ವರಸೆಯೆಂಬಂತೆ 'ಪ್ರತಿ'ಗಳ ಸಹಾಯದಿಂದ ವೈಜ್ಞಾನಿಕ ವಿಧಾನದಲ್ಲಿ 'ಕೃತಿ'ಯ ಮರುರಚನೆ ಕೆಲಸ ನಡೆಯುವ ವಿಭಾಗವಿದು.

೫. ಗ್ರಂಥಪರಿಚಲನ ವಿಭಾಗ

ಒಂದು ಕಡೆಯಿಂದ ಗ್ರಂಥಭಾಂಡಾರ, ಇನ್ನೊಂದು ಕಡೆಯಿಂದ ವಾಚಕವರ್ಗ ಸಂಧಿಸುವ ಕೇಂದ್ರಸ್ಥಾನವಿದು. ಹೀಗಾಗಿ ಇದು ತುಂಬ ಸೂಕ್ತ ಸ್ಥಳದಲ್ಲಿ ಅಸ್ತಿತ್ವಕ್ಕೆ ಬರಬೇಕು. ಅನ್ಯವಸ್ತುಗಳನ್ನು ತೆಗೆದಿಟ್ಟು, ಗುರುತಿನ ಕಾರ್ಡು ತೋರಿಸಿ, ಬಳಿಕ ಸಹಿಮಾಡಿ, ಅಭ್ಯಾಸಿಯು ಈ 'ಪರಿಚಲನ ವಿಭಾಗ'ಕ್ಕೆ ಬರುತ್ತಾನೆ. ಹೀಗೆ ಬರುತ್ತಲೇ ಅವನನ್ನು ಲೇಖಕಸೂಚಿ, ಶೀರ್ಷಿಕೆಸೂಚಿ, ವಿಷಯಸೂಚಿಯ ಕ್ಯಾಬಿನೆಟ್ ಎದುರುಗೊಳ್ಳುತ್ತವೆ. ಈ ಕ್ಯಾಬಿನೆಟ್ ಪರಿಶೀಲಿಸಿ ತನಗೆ ಬೇಕಾದ ಹಸ್ತಪ್ರತಿಯ ವಿವರಗಳನ್ನು, ಅಲ್ಲಿಯೇ ಇರುವ ಬೇಡಿಕೆ ಪತ್ರದ ಮೇಲೆ ದ್ವಿಪ್ರತಿಯಲ್ಲಿ ನಮೂದಿಸಬೇಕು. ಈ ಬೇಡಿಕೆ ಪತ್ರದ ಮಾದರಿ ಹೀಗಿರಬೇಕು :

ಹಸ್ತಪ್ರತಿ ಭಾಂಡಾರ

ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಗ್ರಂಥದ ಹೆಸರು :

ಕರ್ತೃ :

ನಂಬರು :

ಅಭ್ಯಾಸಿಯ ಹೆಸರು/ಸಹಿ :

ಸಹಾಯಕ ಗ್ರಂಥಪಾಲಕನ ಸಹಿ:

ಈ ವಿವರಗಳನ್ನು ತುಂಬಿ, ಎರಡೂ ಬೇಡಿಕೆ ಪತ್ರಗಳನ್ನು ಕೌಂಟರ್‌ನಲ್ಲಿರುವ ಸಹಾಯಕ ಗ್ರಂಥಪಾಲಕನಿಗೆ ಕೊಡಬೇಕು. ಅವನು ಎರಡೂ ಪತ್ರಗಳಿಗೆ ಸಹಿ ಮಾಡಿ ಒಂದನ್ನು ತಾನು ಇಟ್ಟುಕೊಂಡು ಇನ್ನೊಂದು ಪತ್ರವನ್ನು ಹಸ್ತಪ್ರತಿ ಸಂರಕ್ಷಣ ವಿಭಾಗಕ್ಕೆ ಕಳಿಸಿ, ಹಸ್ತಪ್ರತಿ ಪಡೆದು, ಅಭ್ಯಾಸಿಗೆ ಒದಗಿಸಬೇಕು. ಹೀಗೆ ಒದಗಿಸುವಾಗ ಅಭ್ಯಾಸಿಯಿಂದ ಗುರುತಿನ ಪತ್ರ(Identity Card)ವನ್ನು ಪಡೆದು, ಅದಕ್ಕೆ ಬೇಡಿಕೆ ಚೀಟಿಯನ್ನು ಅಳವಡಿಸಿ ತನ್ನ ಹತ್ತಿರ ಇಟ್ಟುಕೊಳ್ಳಬೇಕು.

ಈ ಎಲ್ಲ ಕಾರ್ಯಮಾಡುವಲ್ಲಿ ಪರಿಚಲನಕಾರ ಸಹನೆ ಕಳೆದುಕೊಳ್ಳಬಾರದು, ಆಲಸ್ಯ ತೋರಬಾರದು. ಸ್ನೇಹ, ಸಹಕಾರ ಭಾವದಿಂದ ಅಭ್ಯಾಸಿಯನ್ನು ಸ್ವಾಗತಿಸಿ, ಅಲ್ಪಾವಧಿಯಲ್ಲಿ ಹಸ್ತಪ್ರತಿಯನ್ನು ಅವನಿಗೆ ಒಪ್ಪಿಸಬೇಕು. ಅವನು ಕೇಳಿದ ಇತರ ವಿವರಗಳಿಗೂ ಸೂಕ್ತ ಮಾರ್ಗದರ್ಶನ ನೀಡಬೇಕು.

೬. ಅಧ್ಯಯನ ವಿಭಾಗ

ಹಸ್ತಪ್ರತಿಯನ್ನು ಪಡೆದು, ಅಭ್ಯಾಸಿಯು ಅಧ್ಯಯನಕ್ಕೆ ಕುಳಿತುಕೊಳ್ಳುವ ವಿಭಾಗವಿದು. ಗಾಳಿ-ಬೆಳಕುಗಳ ವ್ಯವಸ್ಥೆ, ಶಾಂತ ವಾತಾವರಣ ಇಲ್ಲಿ ಅಗತ್ಯ. ಸೂಕ್ತ ಪೀಠೋಪಕರಣಗಳಿಂದ ಸುಸಜ್ಜಿತವಾದ ಇಲ್ಲಿ, ಭೂತಗನ್ನಡಿ-ಮೈಕ್ರೋಫಿಲ್ಮ ರೀಡರ್‌ಗಳ ಅನುಕೂಲತೆಯೂ ಇರಬೇಕು. ಮುದ್ರಿತ ಗ್ರಂಥಾಲಯದ ವಾಚನವ್ಯವಸ್ಥೆಗಿಂತ ಈ ವಿಭಾಗದ ವ್ಯವಸ್ಥೆ ಭಿನ್ನವಾಗಿರಬೇಕೆಂಬ ತಿಳಿವಳಿಕೆಯ ಹಿನ್ನೆಲೆಯಲ್ಲಿ ಈ ಪರಿಸರವನ್ನು ಸಜ್ಜುಗೊಳಿಸಬೇಕು. ಒಬ್ಬ ವಿದ್ಯಾರ್ಥಿಗೆ ಒಂದು ಟೇಬಲ್ಲಿನಂತೆ ಪೀಠಾವಕಾಶ ಕಲ್ಪಿಸಬೇಕು. ಏಕೆಂದರೆ ಮುದ್ರಿತ ಪುಸ್ತಕಗಳ ಅಧ್ಯಯನಕ್ಕಿಂತ ಹಸ್ತಪ್ರತಿಗಳ ಅಧ್ಯಯನಕ್ಕೆ ಏಕಾಗ್ರತೆ ಅಧಿಕ ಬೇಕಾಗುತ್ತದೆ. ಅಲ್ಲದೆ ಹಸ್ತಪ್ರತಿಯನ್ನು ಅನೇಕ ರೀತಿಯಾಗಿ ಹಿಡಿದು ಆಗಾಗ ಅಕ್ಷರಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹೆಚ್ಚಿನ ಬೆಳಕಿಗಾಗಿ ಸಣ್ಣ ಟ್ಯೂಬಲಾಯಿಟ್ ಪ್ರತಿಯೊಂದು ಮೇಜಿಗೂ ಅವಶ್ಯ.

ಅಭ್ಯಾಸಿ ಹಸ್ತಪ್ರತಿಗಳನ್ನು ತುಂಬಾ ಕಾಳಜಿಯಿಂದ ಉಪಯೋಗಿಸಬೇಕು. ಕಟ್ಟನ್ನು ಬಿಚ್ಚುವಲ್ಲಿ, ಓದಲು ವ್ಯವಸ್ಥೆಗೊಳಿಸುವಲ್ಲಿ, ಪುಟಗಳನ್ನು ಬಿಡಿಸುವಲ್ಲಿ ಸದಾ ಕಾಳಜಿ ವಹಿಸಬೇಕು. "ಮೂರ್ಖಹಸ್ತೇ ನದಾತವ್ಯಂ" ಎಂದು ಹಸ್ತಪ್ರತಿ ಹಲುಬಬಾರದು. ಹಸ್ತಪ್ರತಿಗಳಲ್ಲಿ ಮಸಿಯಿಂದ ಗುರುತು ಮಾಡುವದಾಗಲಿ, ಬೇಕಾದ ಗರಿಗಳನ್ನು ಕಳವು ಮಾಡುವದಾಗಲಿ ಸಲ್ಲದ ಕೆಲಸವೇ ಸರಿ. ಅಭ್ಯಾಸ ಮುಗಿದ ಬಳಿಕ ಅದನ್ನು ಮತ್ತೆ ಸರಿಯಾಗಿ ಕಟ್ಟಬೇಕು. "ರಕ್ಷೇತ್ ಶಿಥಿಲಬಂಧನಾತ್" ಎಂದು ಹಸ್ತಪ್ರತಿ ಪ್ರಾರ್ಥಿಸಿಕೊಳ್ಳುವಂತಾಗಬಾರದು. ಬಳಿಕ ಅಭ್ಯಾಸಿ ಹಸ್ತಪ್ರತಿಯನ್ನು ಪರಿಚಲನವಿಭಾಗದಲ್ಲಿ ಮರಳಿಸಿ, ತನ್ನ ಗುರುತಿನ ಪತ್ರ ಒಯ್ಯಬೇಕು. ಅಭ್ಯಾಸಿಗೆ ಅನ್ಯಗ್ರಂಥಾಲಯದಿಂದ ಹಸ್ತಪ್ರತಿ ಎರವಲು ಬೇಕಾಗಿದ್ದರೆ, ಎರವಲು ಪಡೆದಿದ್ದ ಹಸ್ತಪ್ರತಿಯನ್ನು ರವಾನಿಸುವುದಿದ್ದರೆ, ಅದನ್ನು ಇಲ್ಲಿಯೇ ಜರುಗಿಸಬೇಕಾಗುತ್ತದೆ.

೭. ಗ್ರಂಥಾಲಯ ವಿಭಾಗ

ಹಸ್ತಪ್ರತಿ ಅಧ್ಯಯನಕ್ಕೆ ಬಂದ ಅಭ್ಯಾಸಿಗಳಿಗೆ ಆನುಷಂಗಿಕವಾಗಿ ಮುದ್ರಿತ ಗ್ರಂಥಗಳನ್ನು ಪರಿಶೀಲಿಸುವ ಅಗತ್ಯ ಒದಗುತ್ತದೆ. ಇದರ ಪೂರೈಕೆಗಾಗಿ ಒಂದು ಸುಸಜ್ಜಿತ ಗ್ರಂಥಾಲಯವನ್ನು ಹಸ್ತಪ್ರತಿ ಭಾಂಡಾರಕ್ಕೆ ಸಂಲಗ್ನಿಸಿಕೊಳ್ಳುವುದು ಅವಶ್ಯವಿದೆ. ಇದು ಸಾಮಾನ್ಯವಾಗಿ ಸಂಪಾದಿತ ಕೃತಿ, ಹಸ್ತಪ್ರತಿಸೂಚಿ ಮೊದಲಾದವು ಪ್ರಧಾನವಾಗಿರುವ ಕೇಂದ್ರವಾಗಿರಬೇಕು. ಬೇರೆಬೇರೆ ಸಂಸ್ಥೆಗಳು

ಪ್ರಕಟಿಸಿದ ಎಲ್ಲ ಹಸ್ತಪ್ರತಿಸೂಚಿ ಗ್ರಂಥಗಳಂತೂ ಅವಶ್ಯಬೇಕು. ಏಕೆಂದರೆ. ತಾನು ಅಭ್ಯಾಸ ಮಾಡಲಿರುವ ಹಸ್ತಪ್ರತಿಯು ಬೇರೆ ಪ್ರದೇಶದ ಯಾವ ಹಸ್ತಪ್ರತಿ ಭಾಂಡಾರದಲ್ಲಿದೆ? ಎಂಬುದನ್ನು ಅಭ್ಯಾಸಿ ತಿಳಿದುಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಸಂಪಾದನ ವಿಭಾಗ, ತಾಂತ್ರಿಕ ವಿಭಾಗಗಳಿಗೂ ಈ ಗ್ರಂಥಾಲಯ ಅವಶ್ಯವೆನಿಸುತ್ತದೆ. ಹೀಗಾಗಿ ಪ್ರೌಢ ವ್ಯಾಸಂಗಕ್ಕೆ ಬೇಕಾಗುವ ವಿದ್ವತ್‌ಗ್ರಂಥಗಳ ಸುಸಜ್ಜಿತ ಕೇಂದ್ರವಾಗಿರುವ ಇಲ್ಲಿ, ಅಭ್ಯಾಸಿಗೆ ಅನುಕೂಲವೆನಿಸುವ ಪೀಠೋಪಕರಣ, ಗಾಳಿ-ಬೆಳಕಿನ ವ್ಯವಸ್ಥೆ, ಪ್ರಶಾಂತ ವಾತಾವರಣ ಅಪೇಕ್ಷಣೀಯವೆನಿಸಿದೆ. ಸಾಮಾನ್ಯವಾಗಿ ಮುದ್ರಿತ ಪುಸ್ತಕಗಳ ಗ್ರಂಥಭಾಂಡಾರದಲ್ಲಿಯಂತೆ ಓಪನ್ ಸಿಸ್ಟಮ್‌ಕ್ಕೆ ಬದಲು ಕ್ಲೋಸ್ ಸಿಸ್ಟಮ್ ಇಲ್ಲಿ ಬೇಕು. ಅಭ್ಯಾಸಿ ತನಗೆ ಬೇಕಾದ ಗ್ರಂಥವನ್ನು ಕೆಟಲಾಗ್ ಕ್ಯಾಬಿನೆಟ್ ನೋಡಿ, ಬೇಡಿಕೆ ಪತ್ರದಲ್ಲಿ ನಮೋದಿಸಿ, ಪರಿಚಲನ ವಿಭಾಗದ ಸಿಬ್ಬಂದಿ ವರ್ಗದಿಂದ ಪಡೆಯುವ ವ್ಯವಸ್ಥೆ ಇಲ್ಲಿ ಇರಬೇಕಾಗುತ್ತದೆ.

೮. ಯಂತ್ರೋಪಕರಣ ವಿಭಾಗ

ಈ ವಿಭಾಗದಲ್ಲಿ ಮೈಕ್ರೋಫಿಲ್ಮ್, ಫೋಟೋಸ್ಟ್ಯಾಟ್, ಝೆರಾಕ್ಸ್, ಬೆರಳಚ್ಚುಯಂತ್ರ ಮೊದಲಾದ ಸೌಕರ್ಯಗಳು ಇರಬೇಕು. ಹಸ್ತಪ್ರತಿ ಇಲ್ಲವೆ ಯಂತ್ರಪ್ರತಿಗಳ ನಕಲನ್ನು ತಯಾರಿಸಿಕೊಳ್ಳಲು ಅಭ್ಯಾಸಿಗೆ ಇವು ನೆರವಾಗಬೇಕು. ಕೆಲವೊಮ್ಮೆ ಪ್ರತಿಮಾಡಿಕೊಡುವ ವೃತ್ತಿ ಲಿಪಿಕಾರರೂ ಇಲ್ಲಿ ಇರಬೇಕಾಗುತ್ತದೆ. ಹಸ್ತಪ್ರತಿಭಾಂಡಾರಕ್ಕೆ ಬಂದ ಅಭ್ಯಾಸಿಗಳಿಗಲ್ಲದೆ ದೂರದ ಅಭ್ಯಾಸಿಗಳ ಬೇಡಿಕೆಯನ್ನೂ ಪೂರೈಸುವ ಕೆಲಸ ಇಲ್ಲಿ ನಡೆಯಬೇಕಾಗುತ್ತದೆ.

೯. ಪ್ರದರ್ಶನ ವಿಭಾಗ

ಇಲ್ಲಿಯೇ ಇನ್ನೊಂದು ಮಗ್ಗುಲಿಗೆ ಒಂದು ಸಣ್ಣ ಪ್ರದರ್ಶನ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಬೇಕು. ಅಪರೂಪದ ಹಸ್ತಪ್ರತಿಗಳು, ಹಸ್ತಪ್ರತಿಗಳಲ್ಲಿಯ ಚಿತ್ರಗಳು, ಬರವಣಿಗೆಯ ಪ್ರಾಚೀನ ಸಾಧನಗಳು ಇಲ್ಲಿ ಪ್ರದರ್ಶನಗೊಳ್ಳಬೇಕು. ಈ ಪ್ರದರ್ಶನವನ್ನು ಇವುಗಳ ಬೆಳವಣಿಗೆಯ ಕ್ರಮದಲ್ಲಿ ಸಂಯೋಜಿಸಿದರೆ ಇನ್ನೂ ಲೇಸು. ಸಾಮಾನ್ಯರಿಗೆ 'ಹಸ್ತಪ್ರತಿ ಜಗತ್ತು' ಎಂದರೆ ಏನು? ಎಂಬುದರ ಸ್ಥೂಲ ತಿಳುವಳಿಕೆಯನ್ನು ಇದು ಒದಗಿಸಿಕೊಡುವಂತಿರಬೇಕು.

ಇಲ್ಲಿಯೇ ಸಂಸ್ಥೆ ಸಂಪಾದಿಸಿ ಪ್ರಕಟಿಸಿರುವ ಎಲ್ಲ ಗ್ರಂಥಗಳ, ಅನ್ಯವ್ಯಕ್ತಿ ಇಲ್ಲವೆ ಸಂಸ್ಥೆ ಸಂಪಾದಿಸಿ ಪ್ರಕಟಿಸಿರುವ ಇತ್ತೀಚಿನ ಗ್ರಂಥಗಳ ಪ್ರದರ್ಶನವೂ ಅಗತ್ಯಬೇಕು. ಇದಲ್ಲದೆ ಸಂಸ್ಥೆ ಸದ್ಯ ಕೈಗೆತ್ತಿಕೊಂಡಿರುವ ಯೋಜನೆಯ ವಿವರವಾದ ಪಟಗಳನ್ನೂ ಇಲ್ಲಿ ಪ್ರದರ್ಶಿಸಬಹುದು.

೧೦. ಸಮಾಲೋಚನ ವಿಭಾಗ

ಹಸ್ತಪ್ರತಿ ಭಾಂಡಾರ ಕೇವಲ ವಿದ್ವಾಂಸ ಮತ್ತು ಹಸ್ತಪ್ರತಿಗಳ ನಡುವೆ ಸಂಪರ್ಕ ಕಲ್ಪಿಸುವ ಸಂಸ್ಥೆಯಲ್ಲ. ಅದು ವಿದ್ವಾಂಸ -ವಿದ್ವಾಂಸರಲ್ಲಿಯೂ ಸಂಪರ್ಕ ಕಲ್ಪಿಸುವ ಕೇಂದ್ರವಾಗಿ ಪರಿಣಮಿಸಬೇಕು. ಹೀಗಾಗಿ ಅವರು ಪರಸ್ಪರ ವಿಚಾರಗಳನ್ನು ವಿನಿಮಯಿಸಿಕೊಳ್ಳಲು ಒಂದು ತಕ್ಕ ವ್ಯವಸ್ಥೆ ಇಲ್ಲಿ ಅವಶ್ಯವೆನಿಸುತ್ತದೆ. ಚಕ್ರಗೋಷ್ಠಿಗೆ ಅನುಕೂಲವಾಗುವ ಸೂಕ್ತ ಪೀಠೋಪಕರಣ, ನಿಯಂತ್ರಿತ ಗಾಳಿ-ಬೆಳಕುಗಳ ಪೂರೈಕೆ, ಆಹ್ಲಾದಕರ ವಾತಾವರಣದಿಂದ ಕೂಡಿದ ಈ ಸ್ಥಳ ವಿದ್ವತ್‌ಗೋಷ್ಠಿಗೆ ಹೇಳಿಮಾಡಿಸಿ ದಂತಿರಬೇಕು. ವಿದ್ವಾಂಸರು ತಮ್ಮ ಸಂದೇಹ ನಿವಾರಣೆ ಮಾಡಿಕೊಳ್ಳಲು ಇಲ್ಲಿ

ತಾವಾಗಿಯೇ ಸೇರಬಹುದು ಇಲ್ಲವೆ ಗ್ರಂಥಪಾಲಕನೇ ಇಂಥ ಸನ್ನಿವೇಶ ನಿರ್ಮಾಣಮಾಡಬಹುದು. ಇದರಿಂದ ಮುಕ್ತಚರ್ಚೆ ನಡೆದು, ವಿದ್ವಾಂಸರ ಜ್ಞಾನ ವರ್ಧಿಸುತ್ತದೆ. ಯೋಗ್ಯ ಸೂಚನೆಗಳು ಲಭ್ಯವಾಗಿ, ಗ್ರಂಥಾಲಯವೂ ಬೆಳೆಯುತ್ತದೆ. ಸಿಬ್ಬಂದಿವರ್ಗದವರ ಸಾಂಸ್ಥಿಕ, ಶೈಕ್ಷಣಿಕ ಸಮಾಲೋಚನೆಗೂ ಇದು ಅನುಕೂಲ ಸ್ಥಳವಾಗಿರುತ್ತದೆ.

೧೧. ಸಭಾಗೃಹ ವಿಭಾಗ

ಹಸ್ತಪ್ರತಿಭಾಂಡಾರವು ಸೂಚೀಕರಣ, ಅಧ್ಯಯನ, ಗ್ರಂಥಸಂಪಾದನಗಳೆಂಬ ಶೈಕ್ಷಣಿಕ ಚಟುವಟಿಕೆಗಳ ವಿಭಾಗವಾಗಿದ್ದರೂ ಕೆಲವೊಮ್ಮೆ ವಿಚಾರಸಂಕಿರಣ, ವಿಶೇಷೋಪನ್ಯಾಸ, ಪ್ರಾತ್ಯಕ್ಷಿಕೆಗಳನ್ನೂ ಏರ್ಪಡಿಸಬೇಕಾಗುತ್ತದೆ. ಇದು ಹಸ್ತಪ್ರತಿಶಾಸ್ತ್ರವನ್ನು ಕುರಿತಾಗಿರಬಹುದು ಇಲ್ಲವೆ ಹಸ್ತಪ್ರತಿಯಲ್ಲಿ ಅಡಕವಾಗಿರುವ ಜ್ಞಾನಕ್ಕೆ ಸಂಬಂಧಿಸಿರಬಹುದು. ವಿದೇಶದಲ್ಲಿಯ ಕನ್ನಡ ಹಸ್ತಪ್ರತಿಗಳು, ಕಳೆದುಹೋದ ಕನ್ನಡ ಹಸ್ತಪ್ರತಿಗಳು, ಪ್ರಾಚೀನ ವೈಯಕ್ತಿಕ ಹಸ್ತಪ್ರತಿಭಾಂಡಾರಗಳು, ಪ್ರಾಚೀನ ಸಾರ್ವಜನಿಕ ಹಸ್ತಪ್ರತಿಭಾಂಡಾರಗಳು, ಹಸ್ತಪ್ರತಿಶಾಸ್ತ್ರದ ಇತ್ತೀಚಿನ ಬೆಳವಣಿಗೆ, ಪ್ರಕ್ಷಿಪ್ತ ಹಸ್ತಪ್ರತಿಗಳು, ಅಪ್ರಕಟಿತ ಹಸ್ತಪ್ರತಿಗಳು, ಅಮೂಲ್ಯ ಹಸ್ತಪ್ರತಿಗಳು, ಅಲಕ್ಷಿತ ಹಸ್ತಪ್ರತಿಗಳು – ಇತ್ಯಾದಿ ಮಹತ್ವದ ವಿಷಯಗಳನ್ನು ಕುರಿತು ಕಾಲಕಾಲಕ್ಕೆ ವಿಚಾರಸಂಕಿರಣ, ಉಪನ್ಯಾಸ ಏರ್ಪಡಿಸುವುದು ತೀರ ಅಗತ್ಯ. ಈ ಉಪನ್ಯಾಸಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕವೂ ಸ್ಪಷ್ಟಪಡಿಸುವ ಅವಕಾಶ ಇಲ್ಲಿ ಇರಬೇಕು.

೧೨. ವಿಶ್ರಾಂತಿ ವಿಭಾಗ

ಸಿಬ್ಬಂದಿ ವರ್ಗದವರಿಗೆ ಬಿಡುವಿನ ವೇಳೆಯಲ್ಲಿ, ಅಭ್ಯಾಸಿಗಳಿಗೆ ಬೇಸರ ಸಮಯದಲ್ಲಿ ವಿರಾಮ ಪಡೆಯುವುದಕ್ಕಾಗಿ ಇರುವ ವಿಭಾಗವಿದು. ವಿರಾಮಕ್ಕೆ ಅವಶ್ಯವೆನಿಸುವ, ಮುಖಾಮುಖಿ ಕುಳಿತು ಹರಟೆ–ಚರ್ಚೆಗಳಿಗೆ ಅನುಕೂಲವೆನಿಸುವ ರೀತಿಯಲ್ಲಿ ಪೀಠೋಪಕರಣಗಳಿರಬೇಕು. ಬಿಸಿ–ತಂಪುಪಾನೀಯ ಮತ್ತು ಅಲ್ಪೋಪಹಾರಗಳನ್ನು ಪೂರೈಸುವ ಅನುಕೂಲತೆಯೂ ಇಲ್ಲಿ ಅವಶ್ಯಬೇಕು.

ಹೀಗೆ ಹಸ್ತಪ್ರತಿಗಳ ವ್ಯವಸ್ಥೆ ಮತ್ತು ಅಭ್ಯಾಸಿಗಳ ವ್ಯಾಸಂಗಕ್ರಿಯೆಗಳಿಗೆ ತಕ್ಕ ನೆಲೆಯಾಗುವಂತೆ ಹಸ್ತಪ್ರತಿಭಾಂಡಾರವನ್ನು ಅಸ್ತಿತ್ವಕ್ಕೆ ತರಬೇಕು.

❖❖

೫

❖

ಪ್ರಯೋಜನ

ಸಾರ್ಥಕ ಸೇವೆ; ಮುಂದೇನು?: ಸಂಗ್ರಹಣ–ಸಂರಕ್ಷಣೆ–ಹಸ್ತಪ್ರತಿಶಾಸ್ತ್ರದ ಅಳವಡಿಕೆ–ಗ್ರಂಥ ಸಂಪಾದನೆ, ಪ್ರಶಸ್ತಿ ಸಂಗ್ರಹ, ಹಸ್ತಪ್ರತಿ ಭಾಂಡಾರದ ನವೀಕರಣ–ಹಸ್ತಪ್ರತಿ ಅಧ್ಯಯನ ತರಬೇತಿ–ರಾಜ್ಯ, ಹಸ್ತಪ್ರತಿ ಇಲಾಖೆಯ ಸ್ಥಾಪನೆ.

ಸಾರ್ಥಕ ಸೇವೆ

ಗ್ರಂಥಾಲಯಗಳನ್ನು ಸಾಮಾನ್ಯ ಮತ್ತು ವಿಶಿಷ್ಟ ಎಂದು ವರ್ಗೀಕರಿಸಿದರೆ, ಹಸ್ತಪ್ರತಿ ಗ್ರಂಥಾಲಯ ವಿಶಿಷ್ಟ ವರ್ಗಕ್ಕೆ ಒಳಪಡುತ್ತದೆ. ಈ ವೈಶಿಷ್ಟ್ಯ ಕಾರಣವಾಗಿ ಹಸ್ತಪ್ರತಿಶಾಸ್ತ್ರದಲ್ಲಿ ಪರಿಣಿತರಾದ ಸಿಬ್ಬಂದಿವರ್ಗ, ಹಸ್ತಪ್ರತಿನಿಷ್ಠ ವಿಷಯದ ಬಗ್ಗೆ ಆಸಕ್ತಿಯುಳ್ಳ ವಿದ್ವಾಂಸವರ್ಗ ಈ ಭಾಂಡಾರಕ್ಕೆ ನ್ಯಾಯ ಒದಗಿದುತ್ತಾರೆ. ಗ್ರಂಥಾಲಯಕ್ಕೆ ಆಗಮಿಸಿದ ಅಭ್ಯಾಸಿಗಳಿಗೆ ಪರಮಾವಧಿ ಸೇವೆ ಸಲ್ಲಿಸುವಲ್ಲಿಯೇ ತಮ್ಮ ವೃತ್ತಿಯ ಸಾರ್ಥಕತೆಯಿದೆಯೆಂಬ ಭಾವ ಸಿಬ್ಬಂದಿಯಲ್ಲಿ ಜಾಗ್ರತವಾಗಿದ್ದಷ್ಟೂ ಅವರ ಭಾಂಡಾರದ ಪ್ರಯೋಜನ ವರ್ಧಿಸುತ್ತದೆ. ಈ ಹಿಂದೆ ಹೇಳಲಾದ ಹನ್ನೆರಡು ವಿಭಾಗಗಳಲ್ಲಿ ತಾಂತ್ರಿಕ ವಿಭಾಗ, ಪರಿಚಲನ ವಿಭಾ, ಸಂಪಾದನ ವಿಭಾಗಗಳು ಮಾತ್ರ ಅಭ್ಯಾಸಿಗೆ ನೇರವಾಗಿ ನೆರವಾಗುವ ನೆಲೆಗಳಾಗಿವೆ. ಇವು ಜಾಗೃತವಾಗಿದ್ದಷ್ಟೂ ಗಂಥಾಲಯದ ಪ್ರಯೋಜನ, ಪ್ರಸಿದ್ಧಿ ಬೆಳೆಯುತ್ತದೆ.

ತಾಂತ್ರಿಕ ವಿಭಾಗದ ಸಿಬ್ಬಂದಿಯು ವರ್ಗೀಕರಣ, ಸೂಚೀಕರಣ ಕಾರ್ಯವನ್ನು ಸಕಾಲದಲ್ಲಿ ಮತ್ತು ಸಮರ್ಪಕವಾಗಿ ಮಾಡಿ ಮುಗಿಸಬೇಕು. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿ ತಂದ ಹಸ್ತಪ್ರತಿಗಳು ಅಭ್ಯಾಸಿಗಳ ವ್ಯಾಸಂಗಕ್ಕೆ ಒದಗದೆ ಮೂಲೆಯಲ್ಲಿ ಕೊಳೆಯಬಾರದು. ಪ್ರತಿಯೊಂದು ಪುಟ ಬಿಚ್ಚಿ ಓದಿ, ವಿಷಯವನ್ನು ತಿಳಿದುಕೊಂಡು ಪೂರೈಸುವ ಸೂಚೀಕರಣ–ವರ್ಗೀಕರಣ ಕೆಲಸಗಳು ಶ್ರಮದಾಯಕವಾದುವು, ಬೇಸರ ಹುಟ್ಟಿಸುವಂಥವು. ಇದಾವುದನ್ನೂ ಲೆಕ್ಕಿಸದೆ ಸಕಾಲದಲ್ಲಿ ಈ ಎರಡೂ ಕೆಲಸಗಳನ್ನು ಮಾಡಿಮುಗಿಸಬೇಕು. ಹಸ್ತಪ್ರತಿಯಲ್ಲಿ ಸೂಚೀಕರಣ ತಪ್ಪಿದರೆ ಕ್ಯಾಬಿನೆಟ್‌ನಲ್ಲಿ ಯಾವುದೋ ವಿಷಯದ ಕೆಳಗೆ ಯಾವುದೋ ವಿಷಯದ ಕಾರ್ಡು ಸೇರಿಸಿಕೊಂಡು ಅಭ್ಯಾಸಿಗೆ ಅಡ್ಡದಾರಿ ತೋರಿಸುತ್ತದೆ. ಉದಾ: ಕನ್ನಡ ಅಧ್ಯಯನಪೀಠದ ಹಸ್ತಪ್ರತಿಸೂಚಿ I–೩೫ರಲ್ಲಿ "ಇಪ್ಪತ್ತೊಂದು ಯುಗದ ವಚನ"ವನ್ನು ಹೆಸರಿಸಿ, ಕೆಳಗೆ "ಕ್ರಿಯಾಶಕ್ತಯ್ಯಗಳ ವಾರ್ಧಕ"ದ ಪರಿಚಯ ಕೊಡಲಾಗಿದೆ. VII–೨೪೫ ರಲ್ಲಿ ವೈದ್ಯರತ್ನಾಕರ ಹೆಸರಿನ ಗ್ರಂಥ ಶೀರೋನಾಮೆಯನ್ನು ಶೈವರತ್ನಾಕರವೆಂದು ಓದಿದ್ದಾರೆ. ಇದರಿಂದ ವೈದ್ಯ ಪುಸ್ತಕದ ಈ ಕಾರ್ಡು ಶೈವಧರ್ಮ ವರ್ಗೀಕರಣದಲ್ಲಿ ಸೇರಿಸಿಕೊಳ್ಳುವುದು

ಸಹಜ, ಸೂಚೀಕರಣ ಸಂದರ್ಭದಲ್ಲಿ ಮೇಲೆ ಹೇಳಿದ ಸೂಚಿ VII –೭ ರಲ್ಲಿ ಅಖಂಡೇಶ್ವರ ವಚನದ ಕರ್ತೃ ಶಿವಯೋಗಿಯೆಂದು ಹೇಳಿದುದು, VII–೧೧೪ರಲ್ಲಿ ಪಂಚಾಂಗದ ವಚನ ಎಂಬುದನ್ನು ಪಂಚಲಿಂಗದ ವಚನವೆಂದು ಓದಿದುದು ಗಮನಾರ್ಹ ದೋಷವೇ ಸರಿ. VII–೧೨೯ ರಲ್ಲಿ ಪುಷ್ಪಾಂಜಲಿ ಹೆಸರಿನ ಕೃತಿಯಿದೆ. ಇದು ಸಮಾಧಿಕ್ರಿಯಾ ಸಂದರ್ಭದಲ್ಲಿ ಹೇಳುವ ಪುಷ್ಪಾಂಜಲಿ ವಿಷಯವನ್ನೊಳಗೊಂಡಿದೆ. ಆದರೆ ಈ ಗ್ರಂಥದ ಬಗ್ಗೆ "ಪುಷ್ಪಗಳಿಂದ ಶಿವ, ಗುರು, ಲಿಂಗ, ಜಂಗಮ ಪೂಜೆ ಮಾಡಿ ಭಾವವನ್ನು ಗೆಲಿಯಲು ಬೋಧಿಸಲಾಗಿದೆ" ಎಂಬ ವಿವರಣೆ ಕೊಡಲಾಗಿದೆ. VII–೧೭೭ರಲ್ಲಿ 'ಮಹಂತ ನಿಜಲೀನಾನುಭವ' ಕೃತಿಯ ಕರ್ತೃಸ್ಥಾನದಲ್ಲಿ ಪ್ರಶ್ನೆಚಿಹ್ನೆ ಹಾಕಲಾಗಿದೆ. ಆದರೆ ಇದರ ಕರ್ತೃ ಕಡಕೋಳ ಮಡಿವಾಳಪ್ಪ ಎಂಬುದು ಪ್ರಸಿದ್ಧವಾಗಿಯೇ ಇದೆ. ಎಚ್.ಡಿ. ವೆಲಂಕರ ಅವರ ಜಿನರತ್ನಕೋಶದಲ್ಲಿ ನಾಗಾರ್ಜುನ ಹೆಸರಿನಲ್ಲಿ 'ಕರ್ನಾಟಮಣಿದರ್ಪಣ' ಹೆಸರಿನ ಗ್ರಂಥವನ್ನು ಸೂಚಿಸುತ್ತ, ಇದು ಕೊಲ್ಲಾಪುರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿಯಲ್ಲಿದೆಯೆಂದು ಹೇಳಲಾಗಿದೆ. ನಾನು ಕೊಲ್ಲಾಪುರ ವರೆಗೂ ಹೋಗಿ ನೋಡಿದರೆ, ಮೊದಲಿನಿಂದಲೂ ಆ ಹೆಸರಿನ ಹಸ್ತಪ್ರತಿ ಅಲ್ಲಿ ಇಲ್ಲವೆಂಬುದು ಖಚಿತವಾಯಿತು. ಬಹುಶಃ ನಾಗವರ್ಮ, ಕರ್ಣಾಟ ಭಾಷಾಭೂಷಣ, ಕೇಶಿರಾಜನ ಶಬ್ದಮಣಿದರ್ಪಣ ಇವೆಲ್ಲ ಸೇರಿ ಈ ಗೊಂದಲ ನಿರ್ಮಾಣವಾಗಿರಬೇಕು. ಇಂಥ ದೋಷಗಳು ಸೂಚಿಯಲ್ಲಿ ಕಂಡುಬರಬಾರದು. ಎಷ್ಟೋ ಸಲ ಇದು ಅಭ್ಯಾಸಿಗೆ ತಲೆಬೇನೆಯನ್ನುಂಟುಮಾಡುತ್ತದೆ.

ಇದಕ್ಕಿಂತ ಮುಖ್ಯವಾದುದು ಪರಿಚಲನ ವಿಭಾಗ, ವಿದ್ವಾಂಸನಿಗೂ, ಗ್ರಂಥಾಲಯಕ್ಕೂ ಸಂಪರ್ಕ ಕಲ್ಪಿಸುವ ಪ್ರಥಮ ನೆಲೆಯಿದು. ಹೀಗೆ ಸಂಬಂಧ ಕಲ್ಪಿಸುವ ಸೇತುವೆಯಾಗಬೇಕಾದ ಇದು ಅಡ್ಡ ಗೋಡೆಯಾಗಿ ನಿಲ್ಲಬಾರದು. ೧. ಹಸ್ತಪ್ರತಿ ಪೂರೈಕೆ, ೨. ಹಸ್ತಪ್ರತಿಯ ನಕಲು ಪೂರೈಕೆ, ೩. ದೂರದ ವಿದ್ವಾಂಸರಿಗೆ ಹಸ್ತಪ್ರತಿಯ ಎರವಲು ಪೂರೈಕೆ, ೪. ಸ್ಥಳೀಯ ವಿದ್ವಾಂಸರಿಗೆ ಅನ್ಯಸ್ಥಳದ ಹಸ್ತಪ್ರತಿ ತರಿಸಿಕೊಡುವಿಕೆ–ಹೀಗೆ ನಾಲ್ಕು ಬಗೆಗಳಲ್ಲಿ ಇಲ್ಲಿಯ ಸಿಬ್ಬಂದಿ ಕೆಲಸ ಮಾಡಬೇಕಾಗುತ್ತದೆ. ಹಸ್ತಪ್ರತಿ ಪೂರೈಕೆ ಎನ್ನುವುದು ಭಂಡಾರಕ್ಕೆ ಬಂದ ವಿದ್ವಾಂಸರಿಗೆ ಹಸ್ತಪ್ರತಿಯನ್ನು ಪೂರೈಸುವುದಾಗಿದೆ. ಮೇಲೆ ಹೇಳಿದ ನಾಲ್ಕೂ ಬಗೆಗಳಲ್ಲಿ ಇದು ಬಹುಮುಖ್ಯ ಸೇವೆಯಾಗಿದ. ವಿದ್ವಾಂಸನ ಮನಸ್ಸಿಗೆ ಬೇಸರವಾಗದಂತೆ ಎಲ್ಲ ಬಗೆಗಳಿಂದಲೂ ಆತನು ಮೃದುವಾಗಿ ನಡೆದುಕೊಳ್ಳಬೇಕು. ಸಂಭಾಷಣೆ, ಸಮಯದ ಉಳಿತಾಯ, ಸರಿಯಾದ ಗ್ರಂಥಪೂರೈಕೆ, ಸಣ್ಣಪುಟ್ಟ ಸಹಾಯ ಇತ್ಯಾದಿ ಹಂತಗಳಲ್ಲಿ ಅವನು ಉತ್ಸಾಹಶಾಲಿಯಾಗಿರಬೇಕು. ವಿದ್ವಾಂಸರು ಅಪೇಕ್ಷಿಸಿದಲ್ಲಿ ಹಸ್ತಪ್ರತಿಯ ಝರಾಕ್ಸ, ಫೋಟೋಸ್ಟ್ಯಾಟ್, ಮೈಕ್ರೋಫಿಲ್ಮ್, ಇನ್ನೂ ಅವಶ್ಯವೆನಿಸಿದರೆ ಕೈಬರಹದ ಪ್ರತಿಯನ್ನು ಮಾಡಿಸಿಕೊಡುವ ಕೆಲಸ ಇವನದಾಗಿರುತ್ತದೆ. ಹಸ್ತಪ್ರತಿಯನ್ನು ಬೇರೆ ಊರಿಗೆ ಕಳಿಸುವ ವಿಷಯದಲ್ಲಿ ತುಂಬ ಎಚ್ಚರವಹಿಸುವುದು ಅವಶ್ಯವಿದೆ. ಒಂದೇ ಹಸ್ತಪ್ರತಿ ಇದ್ದರೆ ಕಳಿಸಲೇಬಾರದು. ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳಿದ್ದರೆ ಅಪೇಕ್ಷಿಸುವ ವಿದ್ವಾಂಸನು ದುಡಿಯುತ್ತಿರುವ ಸಂಸ್ಥೆಯನ್ನು ಜವಾಬ್ದಾರಿ ಮಾಡಿ, ಹಸ್ತಪ್ರತಿಯನ್ನು ಕಳಿಸಬೇಕು. ಹಾಗೆ ಕಳಿಸುವಾಗ ಹಸ್ತಪ್ರತಿಯ ಪುಟಸಂಖ್ಯೆ, ಸ್ಥಿತಿ ಇತ್ಯಾದಿ ವಿವರಗಳನ್ನು ಪರಿಶೀಲಿಸುವುದು ಅವಶ್ಯವಿದೆ. ಈಗ ಇನ್‌ಶೂರ ಮಾಡಿಸಿ ಕಳಿಸುವುದು ಸರಿಯಾದ ಕ್ರಮವೆನಿಸುತ್ತದೆ. ಈ ಸಂದರ್ಭದಲ್ಲಿ ಮರಳಿಸುವ ನಿರ್ದಿಷ್ಟ ಅವಧಿಯನ್ನು ಸೂಚಿಸಬೇಕು. ಇಲ್ಲದಿದ್ದರೆ ವಿದ್ವಾಂಸರು ಬೇರೆ ಕೆಲಸಗಳಲ್ಲಿ ತೊಡಗಿ, ತಮಗೆ ಬಿಡುವು ದೊರೆತಾಗ ಇಲ್ಲವೆ

ಅಗತ್ಯವೆನಿಸಿದಾಗ ಆ ಕಟ್ಟನ್ನು ಬಿಚ್ಚುತ್ತಾರೆ. ಹೀಗೆ ಹಸ್ತಪ್ರತಿ ಹೊರಗೆ ಹೋಗಿ ನಿಷ್ಪ್ರಯೋಜಕ ದಿನಗಳನ್ನು ಕಳೆಯದಂತೆ ಎಚ್ಚರವಹಿಸಬೇಕು. ಅವಧಿ ಮೀರುವ ಮೊದಲೇ ಓಲೆ ಬರೆದು, ಮೊದಲು ಸೂಚಿಸಿದ ದಿನವನ್ನು ನೆನಪಿಸಬೇಕು. ಪದೇಪದೇ ಪತ್ರ ಬರೆದು ಹಸ್ತಪ್ರತಿಯನ್ನು ಮರಳಿ ಪಡೆಯಬೇಕು.

ತನ್ನ ಸಂಸ್ಥೆಯ ವಿದ್ವಾಂಸರು ಬೇರೆ ಸಂಸ್ಥೆಯ ಹಸ್ತಪ್ರತಿಯನ್ನು ಅಪೇಕ್ಷಿಸಿದ ಪಕ್ಷದಲ್ಲಿ ಬರೆದು ತರಿಸಿಕೊಡುವ ವ್ಯವಸ್ಥೆ ಮಾಡಬೇಕು. ಈ ಸಂದರ್ಭದಲ್ಲಿ ಸಿಬ್ಬಂದಿಗೆ ಯಾವ ಹಸ್ತಪ್ರತಿ ಯಾವ ಸಂಸ್ಥೆಯಲ್ಲಿದೆ? ಯಾವ ಸೂಚಿ ಈ ಸಂದರ್ಭದಲ್ಲಿ ನೆರವಾಗುತ್ತದೆ? ಎಂಬ ತಿಳುವಳಿಕೆ ಅಗತ್ಯ. ಉದಾ: ವಿದೇಶದಲ್ಲಿರುವ ಕನ್ನಡ ಹಸ್ತ ಪ್ರತಿಗಳನ್ನು ಹುಡುಕಿಕೊಡುವಲ್ಲಿ ವಿಂಟರ್‌ನಿಝು ಅವರ "A Catalogue of South Indian manuscripts", ಜೆ.ಬಿ.ಪಿಯರ್‌ಸನ್ ಅವರ "Oriental manuscripts in Europe and North America" ಮೊದಲಾದ ಸೂಚಿಗಳು ನೆರವಾಗುತ್ತವೆ ಎಂಬಂಥ ವಿಷಯಗಳು ಇವನಿಗೆ ಗೊತ್ತಿರಬೇಕು ಮತ್ತು ಇವುಗಳ ಸಹಾಯದಿಂದ ಅಷ್ಟು ದೂರದ ಹಸ್ತಪ್ರತಿಗಳ ಝೆರಾಕ್ಸ್, ಫೋಟೋಸ್ಟ್ಯಾಟ್, ಮೈಕ್ರೋಫಿಲ್ಮ್ ಪ್ರತಿಗಳನ್ನು ತರಿಸಿಕೊಡುವ ಪ್ರಯತ್ನ ಮಾಡಬೇಕು.

ಹೀಗೆ ಹಸ್ತಪ್ರತಿಗಳನ್ನು ಪೂರೈಸುವುದಲ್ಲದೆ ಅಭ್ಯಾಸಿಗೆ ಬೇಕಾಗುವ ಮುದ್ರಿತ ಗ್ರಂಥ ಮತ್ತು ಅಗತ್ಯ ವಿಷಯಗಳನ್ನು ಪೂರೈಸುವ ಸಾಮರ್ಥ್ಯವಿದ್ದರೆ ಇನ್ನೂ ಅನುಕೂಲ, ಉದಾ: ಒಬ್ಬ ಸಂಶೋಧಕನಿಗೆ ತಿಗಳಾರಿಲಿಪಿ, ಮೋಡಿಲಿಪಿಯ ಬಗ್ಗೆ ವಿವರ ಬೇಕಿದ್ದರೆ ತನ್ನ ಭಾಂಡರದಲ್ಲಿರುವ ಅಂಥ ಲಿಪಿಯಲ್ಲಿ ಬರೆದ ಹಸ್ತಪ್ರತಿಯನ್ನು ಹುಡುಕಿಕೊಡುವ, ಪತ್ರಿಕೆ-ಪುಸ್ತಕಗಳಲ್ಲಿ ಈ ಬಗ್ಗೆ ಬಂದಿರುವ ಲೇಖನ ಮಾಹಿತಿ ಪೂರೈಸುವ ಕೆಲಸ ಮಾಡಬೇಕು.

ಸೂಚಿಕಾರ್ಡು, ಸೂಚಿಗ್ರಂಥಗಳನ್ನು ಸಿದ್ಧಪಡಿಸುವ ತಾಂತ್ರಿಕ ವಿಭಾಗದಂತೆ ನಿರಂತರ ವಿದ್ವತ್‌ಕಾರ್ಯದಲ್ಲಿ ತೊಡಗುತ್ತಿರುವುದೆಂದರೆ ಸಂಪಾದನ ವಿಭಾಗ. ಅದು ಗ್ರಂಥಾಲಯಜ್ಞಾನದ ಶೈಕ್ಷಣಿಕ ಶಾಖೆಯಾಗಿದೆ. ಇವೆರಡೂ ಸಬಲವಾದಷ್ಟೂ ಹಸ್ತಪ್ರತಿಭಂಡಾರ ಸಿದ್ಧಿ-ಪ್ರಸಿದ್ಧಿ ಪಡೆಯುತ್ತದೆ. ಇವುಗಳಲ್ಲಿ ಸಂಪಾದನ ವಿಭಾಗವೆಂಬುದು ಗ್ರಂಥಸಂಪಾದನ ಶಾಸ್ತ್ರದ ಆನ್ವಯಿಕ ಚಟುವಟಿಕೆಯಲ್ಲಿ ತೊಡಗಿರುವ ವಿದ್ವಾಂಸರ ನೆಲೆಯಾಗಿರುತ್ತದೆ. ಇವರು ತಮ್ಮ ಸಂಸ್ಥೆಯಲ್ಲಿರುವ ಉತ್ತಮೋತ್ತಮ ಗ್ರಂಥಗಳ ಹಸ್ತಪ್ರತಿಗಳನ್ನು ಆಯ್ದುಕೊಂಡು ಪರಿಷ್ಕರಣಕಾರ್ಯ ಮುನ್ನಡೆಸಬೇಕಾಗುತ್ತದೆ. ಕೆಲವು ಭಾಂಡಾರಗಳು ಕೇವಲ ಹಸ್ತಪ್ರತಿ ಸಂಗ್ರಹಕಾರ್ಯಕ್ಕೆ ಸೀಮಿತವಾಗಿರುತ್ತವೆ. ಇವು ಸಂಗ್ರಹಿಸಿದ ಪ್ರತಿಗಳನ್ನು ಬಳಸಿಕೊಂಡು ಅನ್ಯಸಂಸ್ಥೆಗಳು, ಅನ್ಯವ್ಯಕ್ತಿಗಳು ಸಂಪಾದನಕಾರ್ಯ ನಿರ್ವಹಿಸಿ ಖ್ಯಾತಿಪಡೆಯುತ್ತಿವೆ. ಉದಾ: ಪಂಪಭಾರತದ ಹಸ್ತಪ್ರತಿ ಮೈಸೂರು ಅರಮನೆ ಭಾಂಡಾರ, ಪುಣೆಯ ಭಾಂಡಾರಕರ ಓರಿಯೆಂಟಲ್ ರಿಸರ್ಚ ಇನ್ಸ್ಟಿಟ್ಯೂಟ್, ಆರಾಪಟ್ಟಣದ ಜೈನಸಿದ್ಧಾಂತ ಭವನಗಳಲ್ಲಿದ್ದವು. ಇವುಗಳನ್ನು ಎರವಲು ಪಡೆದು ಕನ್ನಡ ಸಾಹಿತ್ಯಪರಿಷತ್ತು ಪಂಪಭಾರತದ ಪರಿಷ್ಕರಣ ಕಾರ್ಯವನ್ನು ಪೂರೈಸಿತು. ಇದಕ್ಕೆ ವಿರುದ್ಧವೆನ್ನುವಂತೆ ಮದ್ರಾದ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿ ತನ್ನಲ್ಲಿರುವ ಹಸ್ತಪ್ರತಿಗಳನ್ನು ಬಳಸಿಕೊಂಡು ಲೋಕೋಪಕಾರ ಮೊದಲಾದ ಕೃತಿಗಳನ್ನು ಪ್ರಕಟಿಸಿತು. ಇದರ ಅರ್ಥ ಅನ್ಯರಿಗೆ ಹಸ್ತಪ್ರತಿ ಎರವಲು ಕೊಡಬಾರದೆಂದಲ್ಲ, ತಾನೇ ವಿದ್ವಾಂಸರನ್ನು ನಿಯಮಿಸಿಕೊಂಡು,

ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆಯೊಂದಿಗೆ ಸಂಸ್ಕರಣಕಾರ್ಯವನ್ನೂ ಜೊತೆಜೊತೆಗೆ ಮಾಡಬೇಕು. ಇದರಿಂದ ಹಸ್ತಪ್ರತಿಭಾಂಡಾರ ಕೇವಲ ಸಂಗ್ರಹಾಲಯವಾಗಿ ಉಳಿಯದೆ, ಜೀವಂತ ವಿದ್ಯಾಕೇಂದ್ರವಾಗಿ ಬೆಳೆಯುತ್ತದೆ. ಇಲ್ಲಿ ವ್ಯಕ್ತಿ, ಜಂಟಿ, ಸಂಸ್ಥೆ-ಹೀಗೆ ಮೂರು ಬಗೆಯ ಸಂಪಾದನ ಕೆಲಸ ನಡೆಸಬಹುದು. ಮದ್ರಾಸದ ಪ್ರಾಚ್ಯ ಹಸ್ತಪ್ರತಿಭಂಡಾರ, ಮೈಸೂರಿನ ಪ್ರಾಚ್ಯಸಂಶೋಧನ ಸಂಸ್ಥೆ ಮತ್ತು ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಅಧ್ಯಯನಪೀಠ ಮತ್ತು ಕನ್ನಡ ಸಂಶೋಧನ ಸಂಸ್ಥೆಗಳು ಈ ಕೆಲಸವನ್ನು ಮಾಡುತ್ತಲಿರುವುದು ಸಾರ್ಥಕ ಪ್ರಯತ್ನವೆಂದೇ ಹೇಳಬೇಕು. ಮಿಕ್ಕ ಭಾಂಡಾರಗಳು ಸೂಕ್ತ ಸಂಪಾದಕರನ್ನು ನಿಯಮಿಸಿಕೊಂಡು, ತಮ್ಮ ಹಸ್ತಪ್ರತಿ ಸಂಪತ್ತಿನ ಪ್ರಯೋಜನ ವರ್ಧಿಸಿವುದರ ಕಡೆಗೆ ಗಮನಕೊಡಬೇಕಾಗಿದೆ.

ಮೇಲೆ ವಿವರಿಸಿದ ತಾಂತ್ರಿಕ, ಪರಿಚಲನ ಮತ್ತು ಸಂಪಾದನ-ಮೂರು ಶಾಖೆಗಳು ಸಾಮಾಜಿಕ ಪ್ರಯೋಜನ ದೃಷ್ಟಿಯಿಂದ ಮುಖ್ಯವಾದುವು. ಇವೂ ಒಳಗೊಂಡಂತೆ ಮಿಕ್ಕವುಗಳ ಕಡೆಗೆ ವಿಶೇಷ ಗಮನ ಕೊಟ್ಟರೆ ಹಸ್ತಪ್ರತಿ ಭಾಂಡಾರದ ಪ್ರಯೋಜನ ಖಂಡಿತ ವರ್ಧಿಸುತ್ತದೆ.

ಮುಂದೇನು?

ಇಂದು ಜ್ಞಾನದ ನವೀಕರಣ ಮತ್ತು ಮುದ್ರಿತ ಪುಸ್ತಕಗಳ ಸೌಲಭ್ಯದಿಂದಾಗಿ ಹಸ್ತಪ್ರತಿಗಳಲ್ಲಿಯ ಜ್ಞಾನದ ಬಗ್ಗೆ, ಹಸ್ತಪ್ರತಿಕಟ್ಟುಗಳ ಅಭ್ಯಾಸದ ಬಗ್ಗೆ ಜನರಲ್ಲಿ ದಿನೇದಿನೇ ನಿರಾಸಕ್ತಿ ಬೆಳೆಯುತ್ತಲಿದೆ. ಈ ಬಗೆಯ ತೀವ್ರ ನಿರಾಸಕ್ತಿ ಕಾರಣವಾಗಿ ಬೇಡಾದ ವಸ್ತುಗಳಂತೆ ಅವು ಸಾಮಾನ್ಯರ ವಶದಲ್ಲಿ ಹಾಳಾಗುತ್ತ ನಡೆದಿವೆ.

ವಿದ್ವಾಂಸರ ವಲಯಕ್ಕೆ ಬಂದರೆ, ಹಸ್ತಪ್ರತಿಗಳನ್ನು ಓದುವವರ ಸಂಖ್ಯೆ ಕ್ಷೀಣಿಸುತ್ತ ನಡೆದಿದೆ, ಮುದ್ರಿತ ಪುಸ್ತಕಗಳನ್ನು ಓದಿಯೇ ಬೆಳೆದ ಇವರಿಗೆ ಹಸ್ತಪ್ರತಿ ವಾಚನದ ತರಬೇತಿ ಯಾವ ಹಂತದಲ್ಲಿಯೂ ಸಾಧ್ಯವಾಗಲಿಲ್ಲ. ಪ್ರೌಢಾವಸ್ಥೆಯಲ್ಲಿ ಈ ಕ್ಷೇತ್ರಕ್ಕೆ ಇವರು ಆಕರ್ಷಿತರಾಗುವುದು ಕಡಿಮೆ. ಹೀಗಾಗಿ ಶ್ರಮವಹಿಸಿ, ನಕಲುಪ್ರತಿ ಸಿದ್ಧಮಾಡಲು ಲಿಪಿಕಾರರು ಮುಂದೆಬರುತ್ತಿಲ್ಲ. ಭಿನ್ನಪಾಠಗಳನ್ನು ಸಂಗ್ರಹಿಸಿ ಶುದ್ಧಪಾಠ ನಿರ್ಣಯಿಸಲು ಬಹುಜನ ವಿದ್ವಾಂಸರೂ ಸಿದ್ಧರಿಲ್ಲ.

'ಗ್ರಂಥಾಲಯ ವಿಜ್ಞಾನ' ಇಲಾಖೆಯವರು ಮುದ್ರಿತ ಗ್ರಂಥಗಳ ಕಡೆಗೆ ಹೆಚ್ಚು ಒತ್ತುಕೊಟ್ಟ ಕಾರಣ, ಗಮನ ಕೊಡಬೇಕಾದ ಇವರಿಂದಲೂ ಅವು ಕಡೆಗಣಿಸಲ್ಪಟ್ಟಿವೆ. ಬಹಳೆಂದರೆ ಇವುಗಳನ್ನು ಕಾಯಲು ಒಬ್ಬ ಜವಾನ ಇಲ್ಲವೆ ಒಬ್ಬ ಕಾರಕೂನ, ಬಹಳೆಂದರೆ ಅಪ್ರಯೋಜಕ ಜ್ಞಾನದ ಒಬ್ಬ ಪಂಡಿತ ಸಾಕೆಂಬ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ 'ಸಂಪ್ರದಾಯಸ್ಥ ಪಂಡಿತರ ಜಗತ್ತು' ಎಂಬ ಟೀಕೆಗೆ ಒಳಗಾಗಿ, ಈ ಶೈಕ್ಷಣಿಕ ಚಟುವಟಿಕೆ ಒಂದು ದ್ವೀಪದಂತೆ ಉಳಿದುಬಿಟ್ಟಿದೆ.

ಹೀಗೆ ಜನತೆ, ವಿದ್ವಜ್ಜನತೆ, ಗ್ರಂಥಾಲಯ ವಿಜ್ಞಾನಿ – ಈ ಮೂವರಿಂದಲೂ ಈ ಪರಂಪರಾಗತ ಸಂಪತ್ತು ಅಲಕ್ಷ್ಯಕ್ಕೆ ಗುರಿಯಾಗಿದೆ. ಈಗ ಈ ಮೂವರೂ ಏಕಕಾಲಕ್ಕೆ ಎಚ್ಚರಾಗಿ, ಈ ಹಿಂದೆ 'ಗ್ರಂಥಾಲಯ ಚಳುವಳಿ' ಅಸ್ತಿತ್ವಕ್ಕೆ ಬಂದು, ಗ್ರಂಥಾಲಯದ ಸ್ಥಿತಿಯನ್ನು ಎತ್ತರಿಸಿದಂತೆ, ಅದಕ್ಕೆ ಜಾಗತಿಕ ಪ್ರತಿಷ್ಠೆಯನ್ನು ತಂದುಕೊಟ್ಟಂತೆ, ಈ ಕ್ಷೇತ್ರದ ಬಗ್ಗೆಯೂ ಒಂದು ಚಳುವಳಿ ನಡೆಯಬೇಕಾಗಿದೆ.

ಇದರ ಅಂಗವಾಗಿ ಹಸ್ತಪ್ರತಿ ಸಂಗ್ರಹಣ, ಸಂರಕ್ಷಣ, ಹಸ್ತಪ್ರತಿಶಾಸ್ತ್ರದ ಅಳವಡಿಕೆ, ಗ್ರಂಥಸಂಪಾದನಕಾರ್ಯ, ಯಂತ್ರೋಪಕರಣಗಳ ಬಳಕೆ, ಹಸ್ತಪ್ರತಿಭಾಂಡಾರದ ನವೀಕರಣ, ಹಸ್ತಪ್ರತಿ ಅಧ್ಯಯನ ತರಬೇತಿ ವರ್ಗ, ರಾಜ್ಯ ಹಸ್ತಪ್ರತಿ ಇಲಾಖೆಯ ಸ್ಥಾಪನೆ–ಈ ಕೆಲಸಗಳು ನಡೆಯುವುದು ಅವಶ್ಯವಿದೆ.

ಸಂಗ್ರಹಣ

ಬೇರೆ ಬೇರೆ ಪ್ರದೇಶಗಳಲ್ಲಿ ಉಪೇಕ್ಷಿತ ಇಲ್ಲವೆ ಸಂರಕ್ಷಿತ ರೂಪದಲ್ಲಿ ಉಳಿದುಕೊಂಡಿರುವ ಹಸ್ತಪ್ರತಿಗಳನ್ನು ಊರಿಂದೂರಿಗೆ ಸಂಚರಿಸಿ ಒಂದೂ ಬಿಡದಂತೆ ಸಂಗ್ರಹಿಸುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ಈ ಮೊದಲು ಜರಗುತ್ತಲಿದ್ದ ಸಂಗ್ರಹಕಾರ್ಯ ತನ್ನ ಉತ್ಸಾಹ ಕಳೆದುಕೊಳ್ಳುತ್ತ ನಡೆದುದು ವಿಷಾದದ ಸಂಗತಿಯೇ ಸರಿ. ಕೇವಲ ಕರ್ನಾಟಕಕ್ಕೆ ಸೀಮಿತವಾಗಿ ಅಲ್ಲ, ಹೊರನಾಡಿನಲ್ಲಿಯೂ ಉಳಿದುಕೊಂಡಿರುವ ಹಸ್ತಪ್ರತಿಗಳ ಸಂಗ್ರಹದ ಕಡೆಗೂ ನಾವು ಕೈಚಾಚಬೇಕಾಗಿದೆ. ಇದಕ್ಕಾಗಿ ಒಂದು ವ್ಯಾಪಕವಾದ ಯೋಜನೆಯನ್ನು ಸಿದ್ಧಪಡಿಸಬೇಕು. ವಾಹನ, ಸಿಬ್ಬಂದಿ ಸೌಲಭ್ಯದಿಂದ ಮಾತ್ರ ಕ್ಷೇತ್ರಕಾರ್ಯ ಸಾಧ್ಯ. ವಾಹನದಲ್ಲಿ ಕ್ಯಾಮರಾ, ಮೈಕ್ರೋಫಿಲ್ಮ್ ಇತ್ಯಾದಿ ಸೌಲಭ್ಯ ಇರುವುದು ಅವಶ್ಯ. ಸರಕಾರವು ಈ ಕೆಲಸಕ್ಕೆ ಪೂರಕವೆನ್ನುವಂತೆ 'ಹಸ್ತಪ್ರತಿಗಳು ಸರಕಾರದ ಆಸ್ತಿ' ಎಂಬ ಆದೇಶವನ್ನು ಹೊರಡಿಸಬೇಕು.

ವ್ಯಕ್ತಿಗಳ ವಶದಲ್ಲಿ, ಸಾಮಾಜಿಕ–ಧಾರ್ಮಿಕ ಕೇಂದ್ರಗಳಲ್ಲಿ ಬಹುಕಾಲದ ಹಿಂದೆಯೇ ಸಂಗ್ರಹಿಸಲ್ಪಟ್ಟು, ಸಂರಕ್ಷಣರೂಪದಲ್ಲಿರುವ ಹಸ್ತಪ್ರತಿಗಳನ್ನೂ ಸಂಗ್ರಹಿಸಬೇಕು.. ಅವರು ಕೊಡಲು ನಿರಾಕರಿಸಿ ಇಟ್ಟುಕೊಳ್ಳುವುದಿದ್ದರೆ, ಅವುಗಳ ರಕ್ಷಣೆ– ಸೂಚೀಕರಣ–ಸಂಪಾದನ ಕಾರ್ಯ ಮೊದಲಾದ ನಿಯಮಗಳಿಗೆ ಒಪ್ಪಿ ಸರಕಾರಕ್ಕೆ ಮುಚ್ಚಳಿಕೆ ಬರೆದುಕೊಡಬೇಕು. ಹೀಗೆ ಮುಚ್ಚಳಿಕೆ ಬರೆಯಿಸಿಕೊಂಡ ಬಳಿಕವೂ ಈ ಹಸ್ತಪ್ರತಿಗಳ ಫೋಟೋ ಇಲ್ಲವೆ ಮೈಕ್ರೋಫಿಲ್ಮ್ ಪ್ರತಿ ಮಾಡಿಸಿಕೊಳ್ಳಬೇಕು.

ಇದಲ್ಲದೆ ಹೊರನಾಡಿನ ಸರಕಾರಿ ಸಂಸ್ಥೆಗಳಾದ ಮದ್ರಾಸಿನ 'ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ– ಆಡ್ಯಾರ ಪುಸ್ತಕಾಲಯ, ತಂಜಾವೂರಿನ ಮಹಾರಾಜಾ ಸರ್ಫೋಜಿ ಸರಸ್ವತಿಭಾಂಡಾರ, ಹೈದರಾಬಾದಿನ ಸರಕಾರೀ ಪ್ರಾಚ್ಯ ಹಸ್ತಪ್ರತಿ ಭಾಂಡಾರ ಹಾಗೂ ಸಂಶೋಧನ ಕೇಂದ್ರ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಪುಣೆಯ ಭಾಂಡಾರಕರ ರೀಸರ್ಚ ಇನ್‌ಸ್ಟಿಟ್ಯೂಟ್, ಕೊಲ್ಲಾಪೂರ ರಾಜಾರಾಮ ಕಾಲೇಜುಗಳಲ್ಲಿರುವ ಸಾರ್ವಜನಿಕ ಸಂಸ್ಥೆಗಳಾದ ಆರಾ ಪಟ್ಟಣದ ದೇವಕುಮಾರ ಓರಿಯೆಂಟಲ್ ರೀಸರ್ಚ ಇನ್‌ಸ್ಟಿಟ್ಯೂಟ್, ಮಹಾರಾಷ್ಟ್ರದ ಬಾಹುಬಲಿ ಬ್ರಹ್ಮಚರ್ಯಾಶ್ರಮ, ಕಾರಂಜಾ, ಮುಂಬೈಯ ಪನ್ನಾಲಾಲ ದಿಗಂಬರ ಜೈನ ಸರಸ್ವತಿಭಂಡಾರ ಈ ಮೊದಲಾದ ಕೇಂದ್ರಗಳಲ್ಲಿ ರಕ್ಷಿಸಲ್ಪಟ್ಟಿರುವ ಕನ್ನಡ ಪ್ರತಿಗಳನ್ನು ಪಡೆಯಬೇಕು. ಇಲ್ಲವೆ ಫೋಟೋ ತೆಗೆದುಕೊಳ್ಳಬೇಕು. ವಿದೇಶಕ್ಕೆ ಸಂಬಂಧಪಟ್ಟಂತೆ ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿ, ಬ್ರಿಟಿಷ್ ರೆಫರೆನ್ಸ್ ಡಿವಿಜನ್, ಬೈಬಲ್ ಸೊಸೈಟಿ, ವೆಲ್‌ಕಮ್ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟರಿ ಆಫ್ ಮೆಡಿಸಿನ್, ರಾಯಲ್ ಏಸಿಯಾಟಿಕ್ ಸೊಸೈಟಿ, ಸೂಲ್ಕ್ ಆಫ್ ಓರಿಯಂಟಲ್ ಆ್ಯಂಡ್ ಆಫ್ರಿಕನ್ ಸ್ಟಡೀಜ್, ಆಕ್ಸಫರ್ಡ್ ವಿಶ್ವವಿದ್ಯಾಲಯ, ಕೆಂಬ್ರಿಜ್ ವಿಶ್ವವಿದ್ಯಾಲಯ, ಅಬರ್ಡಿನ್ ವಿಶ್ವವಿದ್ಯಾಲಯ, ಮೆಂಚೆಸ್ಟರದ ದಿ ಜಾನ್ ರೆಲ್ಯಾಂಡ್ಸ್ ಲೈಬ್ರರಿ, ಬಹುಶಃ ಜರ್ಮನಿಯ ಬಾಸೆಲ್ ಮಿಶನ್‌ದಲ್ಲಿ ಇರುವ ಕನ್ನಡ

ಹಸ್ತಪ್ರತಿಗಳನ್ನು ಮರಳಿ ಪಡೆಯಬೇಕು. ಸಾಧ್ಯವಾಗದಿದ್ದರೆ ಇವುಗಳ ಫೋಟೋ ತೆಗೆದುಕೊಳ್ಳಬೇಕು. ಇದರಿಂದ ಬೇರೆ ಬೇರೆಡೆಯಲ್ಲಿ ಉಳಿದಿರುವ ಹಸ್ತಪ್ರತಿಗಳ ನಕಲುಪ್ರತಿಗಳನ್ನು ನಮ್ಮಲ್ಲಿ ಉಳಿಸಿಕೊಂಡು, ಅವುಗಳಿಗೆ ರಕ್ಷಣೆ ಒದಗಿಸಿದಂತಾಗುತ್ತದೆ. ಹಸ್ತಪ್ರತಿಗಳಿಗೆ ಸಂಬಂಧಿಸಿದಂತೆ ನಡೆಯಬೇಕಾದ ಪ್ರಥಮಕಾರ್ಯವಿದು.

ಸಂರಕ್ಷಣೆ

ಹಸ್ತಪ್ರತಿಗಳನ್ನು ಸಂಗ್ರಹಿಸಿದ ಬಳಿಕ ಮಾಡಬೇಕಾದ ಕಾರ್ಯವೆಂರೆ ಸಂರಕ್ಷಣೆ. ಬಹಳವೆಂದರೆ ಕಪಾಟುಗಳಲ್ಲಿ ಡಾಂಬರ ಗೋಲಿ ಸುರಿದರೆ ಸಂರಕ್ಷಣೆಯ ಕಾರ್ಯ ಮುಗಿಯಲಿಲ್ಲ. ಈ ದೃಷ್ಟಿಯಿಂದ ಮೈಸೂರಿನ ಕನ್ನಡ ಅಧ್ಯಯನಸಂಸ್ಥೆ ಮತ್ತು ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ತುಂಬ ಎಚ್ಚರವಹಿಸುತ್ತಿವೆ. ಇವು ಒಂದು ಬಗೆಯ ದೇಶಿಯ ತೈಲ ಬಳಸುತ್ತಲಿದ್ದು, ಇದು ಎಷ್ಟರಮಟ್ಟಿಗೆ ಪರಿಣಾಮಕಾರಿ ಎಂಬುದರ ಬಗ್ಗೆ ಸಂದೇಹವಿದೆ. ಆದುದರಿಂದ ಇದನ್ನು ವಿಜ್ಞಾನಿಗಳಿಂದ ಪರೀಕ್ಷೆಗೆ ಗುರಿಪಡಿಸುವುದು ಲೇಸು. ಇಂಥದೇ ಬೇರೊಂದು ದೇಶಿಯ ತೈಲವನ್ನು ಮೇಲುಕೋಟೆಯ ಸಂಸ್ಕೃತ ಅಕಾಡೆಮಿ ಬಳಸುತ್ತಲಿದ್ದಿತು. ಇತ್ತೀಚೆಗೆ ಇದಕ್ಕಿಂತ ಉತ್ತಮವಾದ ಸಿಟ್ರೋನೆಲ್ ತೈಲ (Cetronell Oil) ವನ್ನು ಬಳಸುತ್ತಿದೆ, ಹೀಗಿದ್ದೂ ಎಲ್ಲರೂ ವಿಚಾರಮಾಡಿ ಒಂದು ಅಧಿಕೃತ ತೈಲ ಬಳಸುವುದು ಅವಶ್ಯವಿದೆ. ಇದಲ್ಲದೆ, ಧೂಳು-ಬೂಷ್ಟ, ಕ್ರಿಮಿಗಳ ನಿರ್ಮೂಲನ, ಹವಾನಿಯಂತ್ರಣ ಇತ್ಯಾದಿಗಳೆಲ್ಲ ವೈಜ್ಞಾನಿಕವಾಗಿ ಜರುಗಬೇಕಾಗಿದೆ. ಒಬ್ಬೊಬ್ಬರು ತಮತಮಗೆ ತಿಳಿದ ಸರಿಯೋ ತಪ್ಪೋ ವಿಧಾನಗಳನ್ನು ಕೈಬಿಟ್ಟು, ಎಲ್ಲರೂ ಒಂದೇ ಬಗೆಯ ವೈಜ್ಞಾನಿಕ ವಿಧಾನವನ್ನು ಅನುಸರಿಸುವುದು ಅವಶ್ಯವಿದೆ.

ಇದೇ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ಅಂಶವೆಂದರೆ, ರಕ್ಷಣೆಯ ದೃಷ್ಟಿಯಿಂದ ಏಕಪ್ರತಿರೂಪದಲ್ಲಿರುವ ಎಲ್ಲ ಹಸ್ತಪ್ರತಿಗಳನ್ನು ಮೈಕ್ರೋಫಿಲ್ಮ್, ಫೋಟೋಸ್ಟ್ಯಾಟ್ ಇಲ್ಲವೆ ಝೆರಾಕ್ಸ್ ಮಾಡಿಸಬೇಕು. ಇಲ್ಲದಿದ್ದರೆ ಇದ್ದೊಂದು ಪ್ರತಿಯೂ ನಾಶವಾಗಿ ಒಂದು ಕೃತಿಯನ್ನು ಶಾಶ್ವತ ಕಳೆದುಕೊಂಡಂತಾಗುತ್ತದೆ. ಮೊದಲನೆಯ ನಾಗವರ್ಮನ ಕಾದಂಬರಿ, ಎರಡನೆಯ ನಾಗವರ್ಮನ ವರ್ಧಮಾನ ಪುರಾಣ, ಚೌಂಡರಸನ ನಳಚರಿತೆ, ಮಧುರನ ಧರ್ಮನಾಥಪುರಾಣ, ಮಹಾಲಿಂಗಸ್ವಾಮಿಯ ಬಾಲರಾಮನ ಸಾಂಗತ್ಯ, ಲಿಂಗಣಾರಾಧ್ಯನ ವೃತ್ತಿಯನ್ನೊಳಗೊಂಡ ಶಬ್ದಮಣಿ ದರ್ಪಣಗಳಂಥ ಪ್ರಸಿದ್ಧಕೃತಿಗಳನ್ನು ಬಿಟ್ಟರೆ, ಅನೇಕ ಅಪ್ರಸಿದ್ಧ ಕೃತಿಗಳೂ ಏಕಪ್ರತಿ ರೂಪದಲ್ಲಿ ಸಿಗುತ್ತವೆ. ಇವುಗಳನ್ನು ಕಂಡುಹಿಡಿದು, ದ್ವಿಪ್ರತಿಯಲ್ಲಿ ರಕ್ಷಿಸಬೇಕು.

ಹಸ್ತಪ್ರತಿಶಾಸ್ತ್ರದ ಅಳವಡಿಕೆ

ಇಂದು ಗ್ರಂಥಾಲಯವಿಜ್ಞಾನ ಬೆಳೆದು, ಹೊಸ ಹೊಸ ವಿಧಾನಗಳನ್ನು ಅಲ್ಲಿ ಅಳವಡಿಸಲಾಗುತ್ತಿದೆ. ಅದರಂತೆ ಹಸ್ತಪ್ರತಿಭಾಂಡಾರದಲ್ಲಿಯೂ ಸೂಚೀಕರಣ ಕ್ರಿಯೆ, ವರ್ಗೀಕರಣಕ್ರಿಯೆಗಳಿಗಾಗಿ ಕಾರ್ಡುಗಳನ್ನು ಬಳಸುವುದು; ಇವುಗಳನ್ನು ಲೇಖಕಸೂಚಿ, ಶೀರ್ಷಿಕೆಸೂಚಿ, ವಿಷಯಸೂಚಿಯೆಂದು ಕ್ಯಾಬಿನೆಟ್‌ದಲ್ಲಿ ಹೊಂದಿಸುವುದು, ಈ ಮೂಲಕ ಅಭ್ಯಾಸಿಗಳಿಗೆ ತಕ್ಷಣ ಗ್ರಂಥ ಸಿಗುವ

ಅನುಕೂಲತೆಯನ್ನುಂಟು ಮಾಡುವುದು; ಇಲ್ಲಿ ಮೊದಲು ನಡೆಯಬೇಕಾಗಿದೆ. ಒಂದು ಕೃತಿ ಬೇಕಾದರೆ ದೊಡ್ಡ ಕಡತವನ್ನು ತಿರುವಿ ಹಾಕುವ ವಿಧಾನ ತಕ್ಷಣ ನಿಲ್ಲಬೇಕು.

ಹಸ್ತಪ್ರತಿಭಾಂಡಾರಗಳು ಆಗೊಮ್ಮೆ ಈಗೊಮ್ಮೆ ಸೂಚಿಗ್ರಂಥಗಳನ್ನು ಪ್ರಕಟಿಸುತ್ತವೆ. ೪೦ ವರ್ಷಗಳಷ್ಟು ಪೂರ್ವದಲ್ಲಿ ಪ್ರಕಟವಾದ ಮದ್ರಾಸ್ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಸ್ ಲೈಬ್ರರಿಯ ೭ ಕೆಟಲಾಗಗಳನ್ನು ನೋಡಿದರೆ, ಈಗ ಇಂಥ ಕೆಲಸ ತನ್ನ ವೇಗವನ್ನು ಕಳೆದುಕೊಳ್ಳುತ್ತಲಿದೆಯೆಂದೇ ಹೇಳಬೇಕು. ಇತ್ತೀಚೆ ವೀರಶೈವಮಠಗಳು ಈ ಬಗ್ಗೆ ಗಮನಕೊಟ್ಟಿರುವುದು ಸಂತೋಷದ ಸಂಗತಿಯಾದರೂ ಇತರ ಸಾರ್ವಜನಿಕ ಸಂಸ್ಥೆಗಳೂ, ಸರಕಾರಿ ಸಂಸ್ಥೆಗಳೂ ಹೊಸ ಉತ್ಸಾಹದಿಂದ ಈ ಕೆಲಸ ಮಾಡಬೇಕಾಗಿದೆ. ಕಾಲಬದ್ಧ ಯೋಜನೆ ಹಾಕಿಕೊಂಡು ತಮ್ಮ ವಶದಲ್ಲಿರುವ ಎಲ್ಲ ಹಸ್ತಪ್ರತಿಗಳ "ವಿವರಣಾತ್ಮಕ ಸೂಚಿ"ಯನ್ನು, ಸಾಧ್ಯವಾಗದಿದ್ದರೆ ಯಾದಿ ರೂಪದ 'ಸೂಚಿ'ಯನ್ನು ಪ್ರಕಟಿಸಬೇಕು. ಈ ಸೂಚಿಗಳ ಸಹಾಯದಿಂದ 'ಸಮಗ್ರಸೂಚಿ' (Catalogus Catalogorum) ಯನ್ನು ರೂಪಿಸುವ ಬೃಹತ್ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳಬೇಕಾಗಿದೆ.

ಈಗ ಒಂದೊಂದು ಸಂಸ್ಥೆಯ ಸೂಚಿಸ್ವರೂಪ ಒಂದೊಂದು ಬಗೆಯಾಗಿದೆ. ಎಲ್ಲ ಸಂಸ್ಥೆಗಳು ಸಾಮೂಹಿಕವಾಗಿ, ಅದಕ್ಕೆ ಸರ್ವಮಾನ್ಯ ಸ್ವರೂಪವನ್ನು ನಿರ್ದಿಷ್ಟಪಡಿಸಬೇಕು. ಆಗ ಮಾತ್ರ ಇದು ಒಂದು ವಿಜ್ಞಾನವಾಗಿ, ಕ್ರಮಬದ್ಧ ರೀತಿಯಲ್ಲಿ ಬೆಳೆಯುತ್ತದೆ.

ಗ್ರಂಥಸಂಪಾದನ – ಪ್ರಶಸ್ತಿ ಸಂಗ್ರಹ ;

ಇಂದು ಆಧುನಿಕ ಸಾಹಿತ್ಯದ ಆಕರ್ಷಣೆ ಕಾರಣವಾಗಿ ಪ್ರಾಚೀನ ಸಾಹಿತ್ಯದ ಅಧ್ಯಯನ, ಅದಕ್ಕಿಂತ ಪ್ರಾಚೀನ ಕೃತಿಗಳ ಪರಿಷ್ಕರಣ ತೀರ ಅಲಕ್ಷಕ್ಕೆ ಗುರಿಯಾಗಿದೆ. ಸಾಹಿತ್ಯದೃಷ್ಟಿಯಿಂದ ಮುಖ್ಯವಾಗಿರುವ ಹರಿಶ್ಚಂದ್ರ ಕಾವ್ಯ, ಜೈಮಿನಿಭಾರತಗಳಂತಹ ಕೃತಿಗಳು ಅನೇಕ ಆವೃತ್ತಿಗಳಾಗಿ ಪ್ರಕಟಗೊಂಡಿವೆ. ಅವುಗಳ ಸಂಗ್ರಹಗಳೂ ಬೆಳಕು ಕಂಡಿವೆ. ಸಾಹಿತ್ಯೇತರ ಕೃತಿಗಳಿಗೆ ಈ ಪುಣ್ಯ ಇನ್ನೂ ಪ್ರಾಪ್ತವಾಗಿಲ್ಲ. ವೈದ್ಯಶಾಸ್ತ್ರ, ಕೃಷಿಶಾಸ್ತ್ರ, ಜೋತಿಷ್ಯಶಾಸ್ತ್ರಗಳಂತಹ ಶಾಸ್ತ್ರ ಕೃತಿಗಳೂ ಟೀಕೆ–ವ್ಯಾಖ್ಯಾನ ಗ್ರಂಥಗಳೂ ಹಸ್ತಪ್ರತಿಯಲ್ಲಿ ಕೊಳೆಯುತ್ತ ಬಿದ್ದಿವೆ. ಇವೆಲ್ಲ ಬೆಳಕು ಕಾಣುವುದಕ್ಕಾಗಿ ಪ್ರಾಚೀನ ಕೃತಿಗಳನ್ನು ಒಂದೂ ಬಿಡದಂತೆ ಅಚ್ಚಿಸುವ ಬೃಹತ್ ಯೋಜನೆಯನ್ನು ಕರ್ನಾಟಕ ಸರ್ಕಾರ ರೂಪಿಸಬೇಕಾಗಿದೆ. ಸಣ್ಣ ಸಣ್ಣ ಕೃತಿಗಳನ್ನು ಬಿಡಿ ಬಿಡಿಯಾಗಿ ಅಚ್ಚಿಸದೆ, ಸೂಕ್ತ ರೀತಿಯಲ್ಲಿ ವರ್ಗೀಕರಿಸಿ, ಸಂಯುಕ್ತ ಸಂಪುಟಗಳಾಗಿ ಮುದ್ರಿಸುವ ಕೆಲಸ ಕೈಗೊಂಡರೆ ಕೆಲವೇ ಸಂಪುಟಗಳಲ್ಲಿ ಎಲ್ಲ ಕೃತಿಗಳು ಬೆಳಕಿಗೆ ಬರುತ್ತವೆ. ಉದಾ : ಭಾಮಿನೀ ಷಟ್ಪದಿ ಸಂಪುಟ, ಸಾಂಗತ್ಯ ಕೃತಿ ಸಂಪುಟ, ವೀರಶೈವ ಲಘುಸಾಹಿತ್ಯ ಸಂಪುಟ, ಜೈನ ಲಘುಸಾಹಿತ್ಯ ಸಂಪುಟ, ವೈದಿಕ ಲಘುಸಾಹಿತ್ಯ ಸಂಪುಟ– ಹೀಗೆ ಈ ಕೆಲಸವನ್ನು ಪೂರೈಸಬಹುದಾಗಿದೆ. ಕರ್ನಾಟಕದ ಎಲ್ಲ ಸ್ನಾತಕೋತ್ತರ ವಿಭಾಗಗಳು ಈ ಕೆಲಸವನ್ನು ಹಂಚಿಕೊಂಡು ಕಾಲಬದ್ಧ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಸಾರ್ವಜನಿಕ ವಿದ್ವಾಂಸರನ್ನೂ ಈ ಕಾರ್ಯದಲ್ಲಿ ತೊಡಗಿಸಿಕೊಂಡು, ನಾಶವಾಗುವ ಮುನ್ನ ಇವುಗಳನ್ನು ಒಮ್ಮೆ ಮುದ್ರಿಸಿ ತೆಗೆಯಬೇಕು. ಸಾವಿರ ಪ್ರತಿಗೆ ಬದಲು ಐದುನೂರು ಪ್ರತಿಗಳನ್ನಾದರೂ ಮುದ್ರಿಸಬೇಕು.

ಗ್ರಂಥ ಸಂಪಾದನೆಯ ಜೊತೆ ಮಾಡಬೇಕಾದ ಇನ್ನೊಂದು ಕಾರ್ಯವೆಂದರೆ 'ಪ್ರಶಸ್ತಿ ಸಂಗ್ರಹ' ಮತ್ತು ಪ್ರಕಟಣೆ. ಹಸ್ತಪ್ರತಿಗಳ ಆದಿ ಮತ್ತು ಅಂತ್ಯ ಭಾಗಗಳಲ್ಲಿ ಲಿಪಿಕಾರ ಅನೇಕ ಉಪಯುಕ್ತ ಅಂಶಗಳನ್ನು ದಾಖಲಿಸಿರುತ್ತಾನೆ. ಆಯಾ ಕೃತಿ ಪರಿಚಯ ತಿಳಿದುಕೊಳ್ಳಲು, ಸಾಹಿತ್ಯಕ-ಧಾರ್ಮಿಕ-ರಾಜಕೀಯ-ಸಾಮಾಜಿಕ ಚರಿತ್ರೆಗಳನ್ನು ಬರೆಯಲು ಇವು ಬೆಲೆಯುಳ್ಳ ಆಕರ ಸಾಮಗ್ರಿಯಾಗಿ ಪರಿಣಮಿಸುತ್ತವೆ. ಉದಾ:

"ಯೀ ಯೇಕೋತ್ತರ ಶತಸ್ತಲವನೂ ಭಂಡಾರಿ ಜಕ್ಕಂಣಗಳು ಸೇರುವೆಯ ಮಾಡಿದ ದಿನ ಪ್ರಮಾಣವೆಂತೆಂದೊಡೆ ಶಕ ವರ್ಷ ೧೩೩೪ ವರ್ಷದ ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಬ ೫ ಗುರುವಾರದಲ್ಲೂ ಭಂಡಾರಿ ಜಕ್ಕಂಣಗಳು ಸೇರಿಸಿದ ಏಕೋತ್ತರ ಶತಸ್ಥಲ ಸಮಾಪ್ತ....." ಎಂಬ ಅಂತ್ಯ ಪ್ರಶಸ್ತಿಯ ಪ್ರಕಾರ ಭಂಡಾರಿ ಜಕ್ಕಣ್ಣನು ತನ್ನ ಏಕೋತ್ತರ ಶತಸ್ಥಲ ಕೃತಿಯನ್ನು ಕ್ರಿ. ಶ. ೧೪೧೨ ರಲ್ಲಿ ಪೂರ್ತಿಗೊಳಿಸಿದನೆಂದು ತಿಳಿದುಬರುತ್ತದೆ. ಕವಿಚರಿತೆಕಾರರು ಸು. ೧೪೩೦ ಎಂದು ಕಾಲ ಸೂಚಿಸಿದ್ದು, ಇಲ್ಲಿ ಅದು ಇನ್ನೂ ನಿರ್ದಿಷ್ಟವಾಗಿ ಗೊತ್ತಾಗುತ್ತದೆ. ಹೀಗೆ ಹಸ್ತಪ್ರತಿಗಳ ಆದಿ-ಅಂತ್ಯಗಳಲ್ಲಿರುವ ಪ್ರಶಸ್ತಿಗಳನ್ನು ಒಂದೆಡೆ ಸಂಗ್ರಹಿಸಿ, ಪ್ರಕಟಿಸುವುದು ಅನೇಕ ದೃಷ್ಟಿಗಳಿಂದ ಉಪಯುಕ್ತವೆನಿಸುತ್ತದೆ.

ಈ ಅಂಶಗಳನ್ನು ಮನಗಂಡು ಜೈನ ಪ್ರಾಕೃತ, ಸಂಸ್ಕೃತ ಹಸ್ತಪ್ರತಿಗಳ ಪ್ರಶಸ್ತಿಗಳನ್ನು ಸಂಗ್ರಹಿಸಿ "ಜೈನ ಪ್ರಶಸ್ತಿ ಸಂಗ್ರಹ" ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಈ ಮಾದರಿಯಲ್ಲಿ ಕನ್ನಡದ ಸಮಗ್ರ ಹಸ್ತಪ್ರತಿಗಳಿಂದ ಪ್ರಶಸ್ತಿಗಳನ್ನು ಆಯ್ದುಕೊಂಡು 'ಪ್ರಶಸ್ತಿ ಸಂಗ್ರಹ' ಸಂಪುಟಗಳನ್ನು ಪ್ರಕಟಿಸುವುದು ಅವಶ್ಯವಿದೆ.

ಹಸ್ತಪ್ರತಿ ಭಾಂಡಾರದ ನವೀಕರಣ :

ಇಂದು ಜ್ಞಾನದ ರಕ್ಷಣೆ, ಪ್ರಸಾರಗಳಿಗೆ ಯಂತ್ರೋಪಕರಣಗಳ ಸಹಾಯ ಅನಿವಾರ್ಯವಾಗಿದೆ. ಜಗತ್ತಿನ ಬೇರೆ ಬೇರೆ ಹಸ್ತಪ್ರತಿ ಭಾಂಡಾರಗಳು ಈ ಉಪಕರಣಗಳನ್ನು ಬಳಸಿ, ಹಸ್ತಪ್ರತಿ ಕ್ಷೇತ್ರವನ್ನು ನವೀಕರಣಗೊಳಿಸುತ್ತಿವೆ. ಈ ಸ್ಪರ್ಧೆಯಲ್ಲಿ ಕನ್ನಡಿಗರು ಹಿಂದೆ ಬೀಳಬಾರದು. ಕಾರಣ ಪ್ರತಿಯೊಂದ ಹಸ್ತಪ್ರತಿ ಭಾಂಡಾರಕ್ಕೆ ಝುರಾಕ್ಸ್, ಫೋಟೋಸ್ಟಾಟ್, ಮೈಕ್ರೋಫಿಲ್ಮ್ ಇತ್ಯಾದಿ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಗ್ರಂಥಾಲಯದ ಸ್ವಪ್ರಯೋಜನಕ್ಕಾಗಿ ಮತ್ತು ವಿದ್ವಾಂಸರ ಪರ ಪ್ರಯೋಜನಕ್ಕಾಗಿ ಇವುಗಳನ್ನು ಸ್ಥಾಪಿಸಬೇಕು.

ಮುದ್ರಿತ ಗ್ರಂಥಗಳ ಭಾಂಡಾರ ತನ್ನ ದುಸ್ಥಿತಿಯನ್ನು ನೀಗಿಕೊಂಡು ಇಂದು ಜಾಗತಿಕ ಪ್ರತಿಷ್ಠೆಯನ್ನು ಪಡೆದಿದೆ. ಇದೇ ರೀತಿ ಹಸ್ತಪ್ರತಿ ಭಾಂಡಾರಗಳಿಗೂ ಅಲ್ಲಿ ದುಡಿಯುವ ಸಿಬ್ಬಂದಿಗೂ ಪ್ರತಿಷ್ಠೆ ಪ್ರಾಪ್ತವಾಗಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಅದರ ಒಟ್ಟು ವ್ಯವಸ್ಥೆಯ ನವೀಕರಣ (Modernization) ಅಗತ್ಯ. ಅಂದರೆ ಹಸ್ತ ಪ್ರತಿ ಭಾಂಡಾರದ ಪೀಠೋಪಕರಣದ ವ್ಯವಸ್ಥೆ, ಆಧುನಿಕ ಯಂತ್ರೋಪಕರಣಗಳ ಅಳವಡಿಕೆ, ವೈಜ್ಞಾನಿಕ ವಿಧಾನ ಮೊದಲಾದುವು ಇಲ್ಲಿ ನೆಲೆಗೊಳ್ಳಬೇಕು.

ಮುದ್ರಿತ ಗ್ರಂಥಭಾಂಡಾರದಲ್ಲಿ ಪುಸ್ತಕಗಳ ಸಂಖ್ಯಾಪ್ರಮಾಣಕ್ಕನುಸಾರವಾಗಿ ಸಿಬ್ಬಂದಿಯನ್ನು ನೇಮಿಸುವ ರೂಢಿ ಇದೆ. ಅಂಥದೇ ರೂಢಿ ಇಲ್ಲಿಯೂ ಪ್ರಾರಂಭವಾಗಬೇಕು ; ಸಿಬ್ಬಂದಿಯ ವೇತನಶ್ರೇಣಿಯು ಸುಧಾರಣೆ ಹೊಂದಬೇಕು.

ಯಾವುದೇ ಜ್ಞಾನಸಂಪತ್ತು ಜನಾಭಿಮುಖಿಯಾದಾಗ ಮಾತ್ರ ಅದಕ್ಕೆ ಗೌರವ–ಪ್ರತಿಷ್ಠೆ–ನವೀಕರಣ ಪ್ರಾಪ್ತವಾಗುತ್ತದೆ. ಈ ದೃಷ್ಟಿಯಿಂದ ಹಸ್ತಪ್ರತಿಗಳ ಬಗ್ಗೆ ಆಗಾಗ ಸಾರ್ವಜನಿಕ ವಿಚಾರ ಸಂಕಿರಣ, ಉಪನ್ಯಾಸ ಏರ್ಪಡಿಸಬೇಕು. ಇದರಿಂದ ಬಹು ಸಂಖ್ಯೆ ಸಹೃದಯರನ್ನು ಒಳಗೊಂಡು, ಅದು ಜನರ ನಡುವೆ ಜೀವಂತ ಜ್ಞಾನ ಶಾಖೆಯಾಗಿ ಬೆಳೆಯುತ್ತದೆ.

ಹಸ್ತಪ್ರತಿ ಅಧ್ಯಯನ ತರಬೇತಿ

ಪ್ರಾಚೀನಕಾಲದಲ್ಲಿ ಬುದ್ಧಿಜೀವಿಗಳಿಗೆ ಹಸ್ತಪ್ರತಿಗಳೇ ಪ್ರಧಾನ ವಾಚನ ಮಾಧ್ಯಮವಾಗಿದ್ದವು. ಬಾಲ್ಯದಿಂದಲೂ ಅವುಗಳ ವಾಚನದಲ್ಲಿ ತೊಡಗಿಕೊಂಡ ವ್ಯಕ್ತಿಗೆ ಅಲ್ಲಿಯ ಅಕ್ಷರ, ಭಾಷೆ, ವಿನ್ಯಾಸಗಳೆಲ್ಲ ಪರಿಚಿತವಾಗಿದ್ದವು. ಇಂದು ಬಾಲ್ಯದಿಂದಲೂ ಯಂತ್ರಪ್ರತಿಗಳನ್ನು ಓದುವ ವ್ಯಕ್ತಿಗೆ ಹಸ್ತಪ್ರತಿಯ ಲಿಪಿ, ಭಾಷೆ, ವಿನ್ಯಾಸಗಳೆಲ್ಲ ಪರಕೀಯವೆನಿಸುವುದು ಸಹಜ. ಇವನ್ನು ತಿಳಿದುಕೊಳ್ಳಬೇಕೆಂದರೆ ಅವನು ಪ್ರಯತ್ನಪೂರ್ವಕವಾಗಿ ಈ ಹೊತ್ತಿಗೆಗಳ ಅಧ್ಯಯನವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಹೀಗೆ ರೂಢಿಸಿಕೊಳ್ಳುವ ಅವಶ್ಯಕತೆಯೇ ಇಲ್ಲವೆನ್ನುವಷ್ಟು ಅನ್ಯ ಅವಕಾಶಗಳು ತೆರೆದುಕೊಂಡಿರುವಾಗ, ಅವನು ಇವುಗಳ ಕಡೆಗೆ ಹೊರಳಿ ನೋಡದಿರುವುದು ಸಹಜವೇ ಆಗಿದೆ. ಇಂಥ ಸಂದರ್ಭದಲ್ಲಿ ಪ್ರೌಢ ವಿದ್ಯಾರ್ಥಿದೆಸೆಯಿಂದಲೇ ಹಸ್ತಪ್ರತಿ ಅಧ್ಯಯನ ತರಬೇತಿ ನೀಡುವ ವ್ಯವಸ್ಥೆ ನಮ್ಮ ಶಿಕ್ಷಣಕ್ರಮದಲ್ಲಿ ಅಳವಡಿಸುವುದು ಸೂಕ್ತವಾಗಿದೆ. ಈಗ ಸ್ನಾತಕೋತ್ತರವರ್ಗದಲ್ಲಿ ಗ್ರಂಥಸಂಪಾದನಶಾಸ್ತ್ರದ ಭಾಗವಾಗಿ ಹಸ್ತಪ್ರತಿಶಾಸ್ತ್ರವನ್ನು ಬೋಧಿಸಲಾಗುತ್ತಿದ್ದರೂ, ಕೇವಲ ತಾತ್ವಿಕ ಬೋಧನೆಗೆ ಅಲ್ಲಿ ಅವಕಾಶವಿದೆ. ಇನ್ನುಮೇಲೆ ವಾಚನ–ಸಂಪಾದನ ತರಬೇತಿರೂಪದ ಅಧ್ಯಯನಕ್ಕೂ ಅವಕಾಶ ಕಲ್ಪಿಸಬೇಕಾಗಿದೆ. ಇದಲ್ಲದೆ ಹಸ್ತಪ್ರತಿ, ಶಾಸನ, ದಾಖಲುಗಳ ತಾತ್ವಿಕ–ಆನ್ವಯಿಕ ಅಧ್ಯಯನಕ್ಕಾಗಿ 'ಪ್ರಾಚ್ಯಲೇಖ ಅಧ್ಯಯನ ಡಿಪ್ಲೋಮಾ' ಹೆಸರಿನ ಕೋರ್ಸ್ ಪ್ರಾರಂಭಿಸಿದರೆ, ಪ್ರಾಚೀನಕಾಲದ ಯಾವುದೇ ರೂಪದ ಬರವಣಿಗೆಯನ್ನು ಓದುವವರ ಒಂದು ತಂಡವನ್ನೇ ಪ್ರತಿವರ್ಷ ಸಿದ್ಧಪಡಿಸಿದಂತಾಗುತ್ತದೆ. ಹೀಗೆ ಮಾಡದಿದ್ದರೆ ಕರ್ನಾಟಕದ ೪೦,೦೦ ಹಸ್ತಪ್ರತಿ ಕಟ್ಟು, ೨೫,೦೦೦ ಶಾಸನ, ಅಸಂಖ್ಯಾತ ದಾಖಲುಗಳು ವಾಚನವಿದೂರವಾಗುವ ಬಹುದೊಡ್ಡ ಭಯ ನಮ್ಮ ಮುಂದೆ ಸೃಷ್ಟಿಯಾಗಬಹುದಾಗಿದೆ. ಇದನ್ನು ತಪ್ಪಿಸುವುದಕ್ಕಾಗಿ ಈ ಬಗೆಯ ಬೋಧನ ವ್ಯವಸ್ಥೆಯನ್ನು ತೀವ್ರ ಅಸ್ತಿತ್ವಕ್ಕೆ ತರಬೇಕಾಗಿದೆ.

ರಾಜ್ಯ ಹಸ್ತಪ್ರತಿ ಇಲಾಖೆಯ ಸ್ಥಾಪನೆ


'ಓರಿಯಂಟಲ್ ಸ್ಟಡೀಸ್' ಹೆಸರಿನಲ್ಲಿ ಇನ್ನೂರು ವರ್ಷಗಳ ಹಿಂದೆಯೇ ನಮ್ಮಲ್ಲಿ ಪ್ರಾಚ್ಯ ಅಧ್ಯಯನ ಚಟುವಟಿಕೆ ತೆರೆದುಕೊಂಡಿತು. ಈ ಅಧ್ಯಯನದ ಪರಿಧಿಯಲ್ಲಿ 'ಪುರಾತತ್ವ ಇಲಾಖೆ' (Department of Archaeology) ಹೆಸರಿನ ಇಲಾಖೆ ಶಾಸನ – ಹಸ್ತಪ್ರತಿಗಳ ಶೋಧ ಮತ್ತು ಅವಶೇಷಗಳ ಉತ್ಖನನಗಳಿಗಾಗಿ ಮೈಸೂರಿನಲ್ಲಿ ಹುಟ್ಟಿಕೊಂಡಿತು (೧೮೮೪). ಮುಂದೆ ಕೆಲವೇ ದಿನಗಳಲ್ಲಿ ಇದರಿಂದ ಪ್ರತ್ಯೇಕಗೊಂಡು, 'ಸರಕಾರಿ ಪ್ರಾಚ್ಯ ಸಂಶೋಧನಾಲಯ' (Government Oriental Research Institute) ಹೆಸರಿನ ಸಂಶೋಧನ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು (೧೮೯೧). ಇವುಗಳಲ್ಲಿ 'ಪುರಾತತ್ವ ಇಲಾಖೆ' ರಾಜ್ಯದ ತುಂಬ ತನ್ನ ಶಾಖೆಗಳನ್ನು ಪ್ರಾರಂಭಿಸಿ, ನೇರವಾಗಿ ಸರಕಾರದ ಆಡಳಿತಕ್ಕೆ ಒಳಪಟ್ಟು ಬೆಳೆದರೆ, 'ಪ್ರಾಚ್ಯ ಸಂಶೋಧನ ಸಂಸ್ಥೆ' ಸರಕಾರದಿಂದ ಅನುದಾನ ಪಡೆಯುವ ಒಂದು ಸಂಸ್ಥೆಯಾಗಿ ಉಳಿಯಿತು. ೧೯೧೭ರಲ್ಲಿ ಮೈಸೂರು ವಿಶ್ವವಿದ್ಯಾಲಯದ

ಭಾಗವಾಗಿಬಿಟ್ಟಿತು. ೧೯೬೬ರಲ್ಲಿ ತನ್ನಲ್ಲಿರುವ ಕನ್ನಡ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ನೀಡಿ ಅರ್ಧ ಶಕ್ತಿಯ ಸಂಸ್ಥೆಯಾಯಿತು. ಇದೇ ರೀತಿ ಉತ್ತರಕರ್ನಾಟಕದಲ್ಲಿ ೧೯೩೯ರಲ್ಲಿ ಹುಟ್ಟಿದ ಮುಂಬೈ-ಕರ್ನಾಟಕ ಸರಕಾರದ 'ಕನ್ನಡ ಸಂಶೋಧನ ಸಂಸ್ಥೆ'ಯು ಮುಂದೆ ೧೯೫೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಭಾಗವಾಗಿ ೧೯೯೨ರಲ್ಲಿ ತನ್ನ ಎಲ್ಲ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನಪೀಠಕ್ಕೆ ವರ್ಗಾಯಿಸಿತು.

ಹೀಗಾಗಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನ ಕೆಲಸಗಳು ರಾಜ್ಯ ಸರಕಾರದ ನೇರ ಹೊಣೆಯಾಗದೆ ಮೈಸೂರಿನ ಸರಕಾರಿ ಪ್ರಾಚ್ಯ ಸಂಶೋಧನಾಲಯದ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಮತ್ತು ರಾಜ್ಯದ ಸ್ನಾತಕೋತ್ತರ ಕನ್ನಡ ವಿಭಾಗಗಳ ಹೊಣೆಯಾಗಿಬಿಟ್ಟಿತು. ಈಗಲಾದರೂ 'ರಾಜ್ಯ ಪುರಾತತ್ವ ಇಲಾಖೆ'ಯಂತೆ 'ರಾಜ್ಯ ಹಸ್ತಪ್ರತಿ ಇಲಾಖೆ'ಯೊಂದು ಅಸ್ತಿತ್ವಕ್ಕೆ ಬಂದು, ಕನಿಷ್ಠಪಕ್ಷ ರಾಜ್ಯದ ಆಡಳಿತ ವಿಭಾಗಕ್ಕೆ (Administrative Division) ಒಂದರಂತೆ ಶಾಖೆಗಳನ್ನು ತೆರೆಯಬೇಕಾಗಿದೆ; ಈ ವಿಭಾಗಗಳು ತಮ್ಮ ಪ್ರದೇಶದಲ್ಲಿ ಮತ್ತು ತಮಗೆ ಹೊಂದಿಕೊಂಡಿರುವ ಹೊರನಾಡುಗಳಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯವನ್ನು ನಡೆಸಿ, ಅವುಗಳ ರಕ್ಷಣೆ, ಸಂಸ್ಕರಣ, ಪ್ರಕಟಣೆ ಇತ್ಯಾದಿ ಕೆಲಸಗಳನ್ನು ಮುಂದುವರಿಸುವುದು ಅವಶ್ಯವಿದೆ.

'ರಾಜ್ಯ ಪುರಾತತ್ವ ಇಲಾಖೆ'ಯ ಮಾದರಿಯಲ್ಲಿ 'ರಾಜ್ಯ ಪತ್ರಾಗಾರ ಇಲಾಖೆ'ಯನ್ನು ಸ್ಥಾಪಿಸಿದ ಕರ್ನಾಟಕ ಸರಕಾರ, 'ರಾಜ್ಯ ಹಸ್ತಪ್ರತಿ ಇಲಾಖೆ'ಯನ್ನೂ ಸ್ಥಾಪಿಸಿದರೆ ಪ್ರಾಚ್ಯಲೇಖನಕ್ಷೇತ್ರದ ವರ್ತುಲ ಪೂರ್ಣವಾಗುತ್ತದೆ. ಈ ಪೂರ್ಣತೆಗಾಗಿ ಅಂಥ ಹೊಸ ಇಲಾಖೆಯೊಂದು ಅಸ್ತಿತ್ವಕ್ಕೆ ಬರುವ ದಿಸೆಯಲ್ಲಿ ಎಲ್ಲ ಕನ್ನಡಿಗರು ಪ್ರಯತ್ನಿಸಬೇಕಾಗಿದೆ.

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ
ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359